Registered No. M. 3618

೨೦ ಪುಟಗಳು--ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak

FOR RATES OF ADVT Etc
APPLY TO THE MANAGER

ವಾಚಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟ
ಜನಪ್ರಿಯವಾದ ನಾಟಕ

ವ್ಯಭಿಚಾರಿಣಿ ಯಾರು?

ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯರ ಪ್ರಪಂಚ, ಉಡುಪಿ.

VOL XVI-NO. 31

1- 4- 1937

ಮೂಡ ಬಾನಿನ ಕಣ್ಣು ಕೆಂಗಿಡಿಯ್ನ್ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ,

ವಾರಪತ್ರಿಕೆ

ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧ ಏಪ್ರಿಲ್, ೧೯೩೭ [ಸಂಚಿಕೆ ೩೧

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS
UDIPI, (S. I)

BRANCHES:

1 BANGALORE CITY	16 HUBLI
2 BELGAUM	17 GADAG
3 BYADGI	18 KARWAR
4 BELLARY	19 KUMTA
5 ADONI	20 ANKOLA
6 HOSPET	21 HONAVAR
7 TALIPARAMBA	22 BHATKAL
8 UPPINANGADI	23 BRAHMAVAR
9 KASARGODE	24 HUNGARCUTTA
10 PAYYANUR	25 SIRSI
11 KANHANGAD	26 SAGAR
12 KARKALA	27 COONDAPOOR
13 NANDYAL	28 UDIPI
14 PRODATTUR	29 MANGALORE
15 TADPATRI	30 CANNANORE

Beg to announce
The Opening of their Branch at
BOMBAY
on Friday, the 23rd April 1937
IN
"Premchand House"
AT
Sir Pherozshah Mehta Road.

Paid up Capital	Rs. 3,45,580
Reserves	„ 1,92,390
Deposits exceed	„ 22 lakhs
Total Working Funds exceed	„ 40 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕನಾಸ್ಕಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳುಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ಪಿಚಾರ!
ಕಾಯಂ ಉಳುಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಬಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ನೇಕಡ 5½ರ ವರೇಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದ ಸಾಲಗಾರರ ಹಿತವು ಸದಾ ನಮ್ಮ ಚಿಂತನಯಾಗಿರುವುದು

M. R Punja, *President & Manager,*

ಯಂ. ಆರ್. ಪೂಂಜ, ಪ್ರಸಿಡೆಂಟ್ ಮತ್ತು ಮೆನೇಜರ್.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ ಎಲ್ ಗುಂಡಪ್ಪ, ಎಂ ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು ಪ್ರೊ ಎಸ್. ಎಸ್. ಮಾಳವಾಡ, ಎಂ ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ — ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ¼ ದಲ್ಲಿ) ಹೊರಡುವುದು!

ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ, ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್

ಕೊಲೆರಾ ರೋಗಕ್ಕೆ ರಾಮಬಾಣ ಔಷಧ

೧೦೦ ಮಾತ್ರೆಗಳಿಗೆ ರೂ ೩—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು. ಪಿ. ಮೇಸ್ತ್ರಿ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ

ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ವರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ

ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ— ಭವಾನಿ ಅಂಡ್ ಕಂಪೆನಿ,

ಪೋಸ್ಟು ಬಾಕ್ಸ್ ನಂ. 237, ಜಿ ಟಿ. ಮದರಾಸ್

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಷೇಶ ಪೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಫಿಕೇಟ ಮ. ರಾ ಎ. ಎಮ್ ಇನ್ಸ್‌ಪೆಕ್ಟರ ಬೆಳಗಾವ —ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ.ಖ, ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ. ಪಿ ಖರ್ಚು ಆಣೆ ೮,

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಫಿಕೇಟ ಡಾಕ್ಟರ ಬಿ. ಎ ವೈದ್ಯ ಎಲ್ ಸಿ. ಪಿ. ಎಸ್. ಮು। ಕಳವಾ ಮಾಹಿಮಾ ಜಿ ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸಃ—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ಸಮಾಚಾರ ಸಂಗ್ರಹ.

5 ಲಕ್ಷ ಮುಸಲ್ಮಾನರು ಕಾಂಗ್ರೆಸಿಗೆ ಸೇರುವರು

ನಲ್ವತ್ತಾರು ಮಂದಿ ಅಧ್ಯಾಪಕರ ಕೆಲಸಹೋಯಿತು

5 ಲಕ್ಷ ಮುಸಲ್ಮಾನರು ಕಾಂಗ್ರೆಸಿಗೆ ಸೇರುವರು

ಪಂಡಿತ ಜವಾಹರಲಾಲರು ಕಾಂಗ್ರೆಸ್ ಪ್ರೆಸಿಡೆಂಟರಾದಂದಿನಿಂದ ಕಾಂಗ್ರೆಸನ್ನು ದೇಶದ ನಿಜವಾದ ಪ್ರಾತಿನಿಧಿಕ ಸಂಸ್ಥೆಯನ್ನಾಗಿ ಮಾಡಲು ಪ್ರಯತ್ನಿಸುತ್ತಿರುವರು. ಈ ಸಲದ ಚುನಾವಣೆಯಲ್ಲಿ ಉತ್ತರಹಿಂದುಸ್ಥಾನದಲ್ಲಿ, ವಿಶೇಷವಾಗಿ ಪಂಜಾಬು ಮತ್ತು ಸಂಯುಕ್ತ ಪ್ರಾಂತದಲ್ಲಿ ನಾಕಷ್ಟು ಮಂದಿ ಮುಸಲ್ಮಾನರು ಕಾಂಗ್ರೆಸಿನ ಪರವಾಗಿ ಆರಿಸಿ ಬಾರದುದರಿಂದ ಅವರು ಸಂತಾಪಗೊಂಡಿರುವರು. ಮತ್ತು ಹೆಚ್ಚಿಚ್ಚು ಮುಸಲ್ಮಾನರು ಕಾಂಗ್ರೆಸಿಗೆ ಸೇರುವಂತೆ ಪ್ರಚಾರಕಾರ್ಯ ನಡಿಸಲು ತಕ್ಕ ಏರ್ಪಾಡು ಮಾಡಹತ್ತಿರುವರು. ಈಗ ದೇಶದಲ್ಲಿ ಹಿಂದುಗಳ ಹಾಗೂ ಮುಸಲ್ಮಾನರ ಏಕರೀತಿಯ ವಿಶ್ವಾಸಕ್ಕೊಳಗಾಗಿರುವ ಕಾಂಗ್ರೆಸ್ ಮುಖಂಡರೆಂದರೆ ಪಂಡಿತ ಜವಾಹರಲಾಲರೇ ಸರಿ. ಗಾಂಧಿಜಿಯವರು ಕೂಡಾ ಅಲ್ಲ. ಪಂಡಿತರ ಸಂಚಾರ, ಭಾಷಣಗಳು ಸಾವಿರಾರು ಮಂದಿ ಮುಸಲ್ಮಾನರಲ್ಲಿ ಜಾಗೃತಿಯನ್ನುಂಟುಮಾಡಿರುವುವು. ಅತಿ ಬೇಗನೆ 6 ಲಕ್ಷ ಮುಸಲ್ಮಾನರು ಒಮ್ಮೆಯೇ ಕಾಂಗ್ರೆಸಿಗೆ ಸೇರಲಿರುವರೆಂದು ಅಖಿಲ ಭಾರತ ಅಹ್ರಾರ್ ಕಮಿಟಿಯ ಪ್ರೆಸಿಡೆಂಟರಾದ ಮೌಲಾನ ಹಬಿಬುಲ್ ರಹ್ಮಾನರು ಪ್ರಕಟಗೊಳಿಸಿರುವರು. ಈ ಕುರಿತೇ ಅವರ ಕಮಿಟಿಯವರೀಗ ತ್ವರ್ಯದಿಂದ ಕೆಲಸಮಾಡುತ್ತಿರುವರು. ಅವರು, ವಾಯವ್ಯ ಗಡಿನಾಡಿನ ರೆಡ್‌ಶರ್ಟರಂತೆ, ಮುಸಲ್ಮಾನರಲ್ಲಿ ಪೃಥಕವಾಗಿ ಕಠಿಣ ಶಿಸ್ತನ್ನು ಮತ್ತು ಸೇವಾಭಾವವನ್ನುಂಟುಮಾಡಿ ಆ ಮೇಲೆ ಅವರನ್ನು ಕಾಂಗ್ರೆಸಿಗೆ ಸೇರಿಸಿ ಸಂಘಟನೆಯಿಂದ ದೇಶಸೇವಾನಿರತರಾಗುವಂತೆ ಮಾಡಲಾಗುವುದು. ಇಷ್ಟರಲ್ಲೇ ಪಂಜಾಬಿನಲ್ಲಿ 50,000 ಮಂದಿ ಸರಿಯಾದ ಪೋಷಾಕು ಮತ್ತು ಶಿಸ್ತುಳ್ಳ ಸ್ವಯಂಸೇವಕರಿರುವರು. ಶಕೊನಿಟ್ ಜಿಲ್ಲೆಯೊಂದರಲ್ಲೇ 10,000 ಮಂದಿ ಇರುವರು. ರಾಷ್ಟ್ರೀಯಭಾವನಾ ಪ್ರೇರಿತರಾಗಿ ಕೆಲಸಮಾಡಿಕೊಂಡು ಬಂದಿರುವ ಅಹ್ರಾರರು ಕಾಂಗ್ರೆಸಿಗೆ ಸೇರಿದರೆ ಪಂಜಾಬಿನಲ್ಲಿ ಕಾಂಗ್ರೆಸಿನ ಬಲವು ಬಹಳವಾಗಿ ಹೆಚ್ಚುವುದೆಂದು ನಿರೀಕ್ಷಿಸಲಾಗಿದೆ.

46 ಮಂದಿ ಅಧ್ಯಾಪಕರ ಕೆಲಸ ಹೋಯಿತು

ಸಂಯುಕ್ತ ಪ್ರಾಂತದ ಶಹಜಾನಪುರ ಡಿಸ್ಟ್ರಿಕ್ಟ್ ಬೋರ್ಡಿನ 46 ಮಂದಿ ಅಧ್ಯಾಪಕರು, ಕಳೆದ ಚುನಾವಣೆಯಲ್ಲಿ ಕಾಂಗ್ರೆಸಿನ ಪರವಾಗಿ ಕೆಲಸ ಮಾಡಿದರೆಂಬ ಆರೋಪದಿಂದ ಕೆಲಸದಿಂದಲೇ ತೆಗೆದುಹಾಕಲ್ಪಟ್ಟಿರುವರೆಂದು ತಿಳಿದುಬರುತ್ತದೆ. ಈ ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರಾದ ಪೋವೈನ ರಾಜಾ ಸಾಹೇಬರೂ, ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ಶ್ರೀ. ಶಿವರಾಜ ಸಿಂಘರೂ ಎಸೆಂಬ್ಲಿ ಚುನಾವಣೆಯಲ್ಲಿ ಪರಾಜಿತರಾಗಿ ಕಾಂಗ್ರೆಸ್ ಪಕ್ಷದಿಂದ ಅವರ ಪ್ರತಿಸ್ಪರ್ಧಿಗಳಾಗಿ ನಿಂತ ಶ್ರೀ. ಗಣಪತಿದೇವ್ ನಾರಾಯಣ್ ಮತ್ತು ಸಾಧುಸಿಂಘರು ಆರಿಸಿಬಂದಿರುವರು. ರಾಜಾಸಾಹೇಬರು ಇದೇ ರೀತಿ ಅವರ ಪರವಾಗಿ ಕೆಲಸ ಮಾಡಿದವರನ್ನೂ ಕೆಲಸದಿಂದ ತೆಗೆದುಹಾಕುತ್ತಿದ್ದರೆ ಅವರಲ್ಲೊಂದು ನ್ಯಾಯವಿದ್ದಿತು. ಕೇವಲ ಕಾಂಗ್ರೆಸ್ ಪರವಾಗಿ ಕೆಲಸಮಾಡಿದವರನ್ನೇ ತೆಗೆದುಹಾಕಿದುದರಿಂದ, ಅದು ಕೇವಲ ದ್ವೇಷಸಾಧನೆಯಿಂದಾಗಿ ಈ ಅಧ್ಯಾಪಕರಿಗೆ ಸರಕಾರವು ತಕ್ಕ ನ್ಯಾಯವನ್ನೀಯದಿರದು.

ಶ್ರೀ. ಎಮ್. ಎನ್. ರೈಗಳು

ಸದ್ಯದಲ್ಲಿಯೇ ಬೊಂಬಾಯಿಯಿಂದ ಇಂಡಿಪೆಂಡೆಂಟ್ ಇಂಡಿಯಾ ಎಂದೊಂದು ವಾರಪತ್ರಿಕೆಯನ್ನು ಹೊರಡಿಸಲಿರುವರು. ಅವರು ಈಗತಾನೆ ವಿವಾಹವಾಗಿರುವ ಶ್ರೀಮತಿ ಎಲ್ಲೆನ್ ರೈ, ಎಂಬ ಅಮೇರಿಕಾನ ಸ್ತ್ರೀಯು ಹಲವು ವರ್ಷಗಳಿಂದ ಶ್ರೀ. ರೈಗಳ ಮಿತ್ರಳಾಗಿದ್ದು, ಸಾಮ್ಯವಾದ ಪ್ರಚಾರಕ್ಕಾಗಿ ಬಹಳ ಕೆಲಸಮಾಡಿದವಳಿರುವಳು. ಅವಳೀಗ ಶ್ರೀ. ರೈಗಳ ಪತ್ನಿಯೂ ಪ್ರೈವೆಟ್ ಸೆಕ್ರೆಟರಿಯೂ ಆಗಿ ಅತ್ಯುತ್ಸಾಹದಿಂದ ಕೆಲಸ ಮಾಡತೊಡಗಿರುವಳು. ಹಿಂದುಪದ್ಧತಿಯಂತೆಯೇ ಜೀವನ ನಡಿಸುತ್ತಿರುವರು. ಶ್ರೀ. ಎಮ್. ಎನ್. ರೈಗಳು ಕೆಲ ಸಮಯ ಬೊಂಬಾಯಿಯಲ್ಲೇ ವಾಸಿಸಲಿರುವರೆಂದು ತಿಳಿದುಬರುತ್ತದೆ.

ವಿದೇಶಿ ಅಧಿಕಾರಿಗಳು ಬೇಡ.

ಐಗುಪ್ತವು ಇಂಗ್ಲಂಡಿನೊಂದಿಗೆ ಇತ್ತಲಾಗಿ ಮಾಡಿಕೊಂಡ ಒಡಂಬಡಿಕೆಯ ಮೇರೆಗೆ ಅಲ್ಲಿ ಪೋಲೀಸ್ ಫೌಜಿನಲ್ಲಿರುವ ವಿದೇಶಿ ಅಧಿಕಾರಿಗಳನ್ನೆಲ್ಲಾ 5 ವರ್ಷಗಳೊಳಗೆ ತೆಗೆಯತಕ್ಕದಾಗಿದೆ. ಆ ಪ್ರಕಾರ ಈಗ 10ಮಂದಿ ಮೇಲಧಿಕಾರಿಗಳೂ 111 ಮಂದಿ ಕನ್‌ಸ್ಟೆಬ್ಲರೂ ತೆಗೆದುಹಾಕಲ್ಪಟ್ಟಿರುವರು. ಇವರಲ್ಲ ಕೆಲವರು ಐಗುಪ್ತದ ರಾಷ್ಟ್ರೀಯ ಪಕ್ಷವನ್ನು ಅಡಗಿಸುವುದರಲ್ಲಿ ಭಾಗಿಯಾದವರು.

ಡ್ಯೂಕ್ ಆಫ್‌ವಿಂಡ್ಸರರ ವಿವಾಹ

ಮಿಸೆಸ್ ಸಿಮ್ಸನಳ ಪ್ರಣಯಕ್ಕಾಗಿ ಬ್ರಿಟಿಷ್ ಸಾಮ್ರಾಟಪದವನ್ನೇ ತ್ಯಜಿಸಿಬಿಟ್ಟು ಈಗ ಡ್ಯೂಕ್ ಆಫ್ ವಿಂಡ್ಸರ್ ಎಂಬ ಹೆಸರಿನಿಂದ ವಿಯನ್ನದಲ್ಲಿರುವ ಎಡ್ವರ್ಡರ ವಿವಾಹವು, ಆರನೇ ಜೋರ್ಜರ ಪಟ್ಟಾಭಿಷೇಕವು ಬರುವ ಮೇ ತಿಂಗಳಲ್ಲಿ ಜರಗಿದ ಮೇಲೆ ನಡೆಯುವುದೆಂದು ತಿಳಿದುಬರುತ್ತದೆ. ಡ್ಯೂಕ್ ಆಫ್ ವಿಂಡ್ಸರರ ವಿವಾಹವು ಫ್ರಾನ್ಸಿನ ಟೋಯೆನ್ ಎಂಬಲ್ಲಿ ನಡೆಯುವುದು. ಬ್ರಿಟಿಷ್ ರಾಜಮನೆತನದ ಪರವಾಗಿ ಡ್ಯೂಕ್ ಮತ್ತು ಡಚ್ಚೆಸ್ ಆಫ್ ಕೆಂಟರು ಈ ವಿವಾಹದಲ್ಲಿ ಭಾಗಿಯಾಗಲಿರುವರೆಂದು ಸುದ್ದಿ. ಅಮೆರಿಕದಿಂದ ಅನೇಕ ಮಂದಿ ಪ್ರೇಕ್ಷಕರು ಬರುವರೆಂದು ನಿರೀಕ್ಷಿಸಲಾಗಿದೆ.

ರಷ್ಯದಲ್ಲಿ ನಾಸ್ತಿಕ ಧರ್ಮ

ರಷ್ಯದಲ್ಲಿ ನಾಸ್ತಿಕ ಧರ್ಮವು ಪ್ರಬಲವಾಗಿ ಪ್ರಚಾರ ಹೊಂದಿರುವುದಷ್ಟೆ. ಆದರೆ ಇತ್ತಲಾಗಿ ಆ ಕುರಿತು ಜನರ ಉತ್ಸಾಹವು ಕಡಿಮೆಯಾಗಿರುವಂತಿದೆ. ರಷ್ಯದ ನಾಸ್ತಿಕ ಸಂಘದ ಸದಸ್ಯರ ಸಂಖ್ಯೆಯು 1933ರಲ್ಲಿ 6 ಮಿಲ್ಯ ಇದ್ದುದು ಈಗ 2 ಮಿಲ್ಯಕ್ಕಿಳಿದು ಹೋಗಿದೆ. ಧರ್ಮೋಪದೇಶಿಗಳು, ಹೊಸ ರಾಜ್ಯ ಸೂತ್ರದ ಉಪಯೋಗ ಪಡೆದು ನಾಸ್ತಿಕತನವನ್ನು ಮೂಲೆಗೊತ್ತಲು ಜನತೆಯಲ್ಲಿ ಪ್ರಚಾರಕ್ಕಾರಂಭಿಸಿರುವರು.

ಹರಿಜನರ ಮೇಲೆ ಸಾಮಾಜಿಕ ಬಹಿಷ್ಕಾರ

ಗುಜರಾಥಿನ ಬ್ರೋಚ್ ಜಿಲ್ಲೆಯ ಅತಿಯಸ್ ಎಂಬ ಹಳ್ಳಿಯ ಶಾಲೆಯೊಂದಕ್ಕೆ ಹರಿಜನ ವಿದ್ಯಾರ್ಥಿಗಳನ್ನು ಸೇರಿಸಿದುದಕ್ಕಾಗಿ ಅಲ್ಲಿಯ ಮೇಲ್ಜಾತಿಯ ಹಿಂದುಗಳು ತಮ್ಮ ಮಕ್ಕಳನ್ನು ಸದ್ರಿ ಶಾಲೆಗೆ ಕಳುಹಿಸುವುದನ್ನು ನಿಲ್ಲಿಸಿರುವರು. ಇದು ಹೊರತು ಹರಿಜನ ವಿದ್ಯಾರ್ಥಿಗಳ ಹೆತ್ತವರಿಗೆ ಬೆದರಿಕೆ ಹಾಕಿ ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದಂತೆ ಬಲವಂತ ಪಡಿಸುತ್ತಿರುವರು. ಅವರ ಜಾನುವಾರುಗಳನ್ನು ಹುಲ್ಲುಗಾವಲಲ್ಲಿ ಮೇಯಬಿಡುವುದಿಲ್ಲ. ಇನ್ನೊಂದು ಹಳ್ಳಿಯಲ್ಲಿ ಹರಿಜನರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ. ಅಹಮ್ಮದಾಬಾದ್ ಜಿಲ್ಲೆಯ ಧನ್ವಾಡ ಎಂಬ ಹಳ್ಳಿಯಲ್ಲಿ ಹರಿಜನರಿಗೂ ಮೇಲ್ಜಾತಿಯ ಹಿಂದುಗಳಿಗೂ ಜಗಳವಾಗಿ ಹಲವು ಮಂದಿ ಹರಿಜನರಿಗೆ ಪೆಟ್ಟಾಗಿರುವುದು. 3 ಮಂದಿಗೆ ಬಹಳ ಪೆಟ್ಟಾಗಿದೆ. ಬಯಲಾಟವೊಂದನ್ನು ನೋಡುವಾಗ ಹರಿಜನರು ಚಾಪೆಯ ಮೇಲೆ ಕುಳಿತುದೇ ಈ ಜಗಳಕ್ಕೆ ಕಾರಣ.

ಪಂಡಿತ ಜವಾಹರಲಾಲರು

ಡಿಲ್ಲಿಯಿಂದ ಹೊರಟುಹೋಗುವ ಮೊದಲು ಮಾರ್ಚಿ ತಾ ೩೧ರಲ್ಲು, ಲೋಕಪ್ರಸಿದ್ಧ ವೈಮಾನಿಕರಾದ ಕರ್ನೆಲ್ ಮತ್ತು ಮಿಸೆಸ್ ಲಿಂಡ್‌ಬರ್ಗರೊಡನೆ ಮಾತಾಡಿ ವೈಮಾನಿಕ ಸಂಚಾರದ ಕುರಿತು ತಮ್ಮ ಆಸಕ್ತಿ ತೋರಿಸಿದರು. ಮತ್ತು ಸು. ೧೫ ಮಿನಿಟುಗಳವರೆಗೆ ವಿಮಾನದಲ್ಲಿ ಹಾರಾಡಿದರು. ಕರ್ನೆಲ್ ಲಿಂಡ್‌ಬರ್ಗರು ತನ್ನ ಪತ್ನಿಯೊಂದಿಗೆ ಕಲ್ಕತ್ತ ಡಿಲ್ಲಿ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ಹಿಂದುದೇಶದಲ್ಲಿ ವಿಮಾನ ಸಂಚಾರದ ಸ್ಥಿತಿಗತಿಗಳನ್ನು ಪರಿಶೀಲಿಸಿ ಹಿಂತಿರುಗಿರುವರು.

ರಂಗೂನಿನಲ್ಲಿ ಬೆಂಕಿಯ ಹಾವಳಿ

ಮಾರ್ಚಿ ತಾ. ೨೨ರಲ್ಲು ರಂಗೂನಿನ ಸೂರ್ತಿಬಿಜಾರ್ ಎಂಬಲ್ಲುಂಟಾದ ಪ್ರಚಂಡ ಬೆಂಕಿಯಲ್ಲಿ ಸುಮಾರು 600 ಸ್ಟೋಲುಗಳು ಮತ್ತು 5 ಅಂಗಡಿಗಳು ಸುಟ್ಟುಹೋಗಿರುವವು. ಹೆಚ್ಚಿನ ಹಾನಿಯಾಗಿರುವುದೆಂದರೆ ಹಿಂದೀಯರಿಗೆ. ವಸ್ತ್ರ, ಕಟ್ಲೆರಿ, ಚರ್ಮದ ಸಾಮಾನು, ಪೈಂಟು, ಎಣ್ಣೆ ಮೊದಲಾದ ಸಾಮಾನುಗಳ ಅಂಗಡಿಗಳು ಈಗ ಸುಟ್ಟು ನಾಶವಾಗಿರುವವು.

ಜರ್ಮನಿಯ ಅಪಾರ ಸೇನಾವೆಚ್ಚ

ಕಳೆದ 4 ವರ್ಷಗಳಲ್ಲಿ ಜರ್ಮನಿಯು ಯುದ್ಧೋಪಕರಣಗಳಿಗಾಗಿ 2500 ಮಿಲಿಯ ಪವನು ಉಪಯೋಗಿಸಿರುವುದೆಂಬ ವಿಸ್ಮಯಕರ ಸಂಗತಿಯನ್ನು 'ಬೇಂಕರ್' ಎಂಬ ಪತ್ರಿಕೆಯು ಅಧಿಕಾಂಕವಾಗಿ ತಿಳಿದು ಪ್ರಕಟಿಸಿರುವುದು. ಹಿಟ್ಲರರು ಕೂಡಲೆ ಈ ಪತ್ರಿಕೆಯನ್ನು ಜರ್ಮನಿಯಿಂದ ನಿಷೇಧಿಸಿರುವರು. 1934ರಿಂದ ಜರ್ಮನಿಯು ತನ್ನ ಆಯವ್ಯಯ ಪಟ್ಟಿಯನ್ನು ಪ್ರಕಟಿಸದಿರುವುದರಿಂದ ರಹಸ್ಯವಾಗಿದ್ದ ಅವರ ಸೇನಾವೆಚ್ಚದ ಗುಟ್ಟನ್ನು 'ಬೇಂಕರ' ಪತ್ರಿಕೆಯು ಬಯಲಿಗೆಳೆದಿರುವುದು. ಜರ್ಮನಿಯು ಪ್ರತಿವರ್ಷ 625 ಮಿಲ್ಯ ಪವನುಗಳನ್ನು ಯುದ್ಧೋಪಕರಣಗಳಿಗಾಗಿ ವ್ಯಯಿಸುತ್ತಿರುವುದು. 1933ರಲ್ಲಿ ಯುದ್ಧೋಪಕರಣ ವೆಚ್ಚವನ್ನು 1932ಕ್ಕಿಂತ 250 ಮಿಲ್ಯ ಪವನುಗಳಷ್ಟು ಹೆಚ್ಚಿಸಲಾಯಿತು. 1934ರಲ್ಲಿ ಅದನ್ನು 450 ಮಿಲ್ಯಕ್ಕೂ, 1935ರಲ್ಲಿ 830 ಮಿಲ್ಯಕ್ಕೂ, 1936ರಲ್ಲಿ 1000 ಮಿಲ್ಯಕ್ಕೂ ಹೆಚ್ಚಿಸಲಾಯಿತು. ಈ ಹಣವನ್ನು ಪಡೆದ ರೀತಿಯೆಂದರೆ ಅಲ್ಪಾವಧಿಯ ಸಾಲದಿಂದ. ಜರ್ಮನಿಯ ಜನರೆಲ್ಲಾ ಯುದ್ಧಕ್ಕೆ ಸಿದ್ಧಗೊಳಿಸಲ್ಪಟ್ಟಿದ್ದಾರೆ. ಯುದ್ಧ ಸಮಯದಲ್ಲಿ ಜನರೆಲ್ಲಾ ಹೊಸ ವಸ್ತ್ರ ತೆಗೆದುಕೊಳ್ಳದೆ ಹಳೆಯದನ್ನೇ ಉಪಯೋಗಿಸಬೇಕೆಂಬ ಆಜ್ಞೆ ಹೊರಡಿಸಲಾಗಿದೆ. ಜರ್ಮನಿಯು ಅಪಾರ ಯುದ್ಧೋಪಕರಣಗಳನ್ನು ಸಂಗ್ರಹಿಸಿರುವುದಾದರೂ, ಆಹಾರಸಾಮಗ್ರಿಗಳ ಕೊರತೆಯು ಅದಕ್ಕೆ ದೊಡ್ಡ ತಡೆಯಾಗಿದೆ. ಆದುದರಿಂದ ಈಗ ಸಾಮೂಹಿಕ ಹೊಲಗೇರಿಗಳನ್ನು ಸ್ಥಾಪಿಸಿ ಆದಷ್ಟು ದವಸ ಧಾನ್ಯಗಳನ್ನು ಬೆಳೆಸುವ ಪ್ರಯತ್ನ ನಡೆಸಲ್ಪಡುತ್ತಿದೆ. ಪ್ರಕೃತದ ಪರಿಸ್ಥಿತಿಯಲ್ಲಿ ಜರ್ಮನಿಗೆ ದೀರ್ಘಕಾಲ ಯುದ್ಧ ಮಾಡಲು ಬೇಕಷ್ಟು ಆಹಾರಸಾಮಗ್ರಿಗಳಿರುವುದಿಲ್ಲ.

ಶ್ರೀ. ಸುಭಾಸಚಂದ್ರರು

ಆರೋಗ್ಯಲಾಭಕ್ಕಾಗಿ ಪೂರಿಯ ಆರೋಗ್ಯವಸತಿಗೆ ಹೋಗಿ, ಕೆಲ ಸಮಯ ನಿಲ್ಲುವ ಆಲೋಚನೆ ನಡೆದಿದೆ. ಅವರಿಗೆ ಸಾರ್ವಜನಿಕವಾಗಿ ಸ್ವಾಗತವನ್ನೀಯುವುದನ್ನು ಮತ್ತು ಬಂಗಾಳದಲ್ಲೆಲ್ಲಾ ಅವರ ದಿನಾಚರಣೆಯನ್ನು ಮುಂದುವರಿಸಲಾಗಿಯದೆ. ಮಾರ್ಚಿ ತಾ. ೨೯ರಲ್ಲು ನಡೆದ ಕಲ್ಕತ್ತ ಕೋರ್ಪರೇಶನಿನ ಸಭೆಯಲ್ಲಿ ಶ್ರೀ ಸುಭಾಸಚಂದ್ರಬೋಸರಿಗೆ ಮಾನಪತ್ರವೀಯಬೇಕೆಂದೂ, ಅದಕ್ಕಾಗಿ ರೂ. 1000 ವ್ಯಯಿಸಬೇಕೆಂದೂ ನಿರ್ಣಯವಾಗಿರುವುದು. ಈ ಸೂಚನೆಯನ್ನು, ಈಗ ಮಂತ್ರಿಗಳಾಗಿ ಚುನಾಯಿಸಲ್ಪಟ್ಟಿರುವ ಶ್ರೀ. ಎನ್. ಎನ್. ಸರ್ಕಾರರು ಸಮರ್ಥಿಸಿರುವರು. ಇವರು ಕಾಂಗ್ರೆಸ್ ಕಡೆಯಿಂದ ಚುನಾವಣೆಗೆ ನಿಂತು ಆರಿಸಲ್ಪಟ್ಟು, ಈಗ ಕಾಂಗ್ರೆಸನ್ನು ಬಿಟ್ಟು, ಬಂಗಾಳದ ಮುಖ್ಯಮಂತ್ರಿಗಳಾಗಲಿರುವ ಮಿ. ಫಜ್ಲುಲ್ ಹಕ್ಕರೊಂದಿಗೆ ಸೇರಿರುವರು.

ರಸ್ಯದ ನೂತನ ನಿರ್ಮಾಣ

ಧರ್ಮದ ಪತನಕ್ಕೆ ಕಾರಣವೇನು ?

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಸ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿವೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡುವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ 'ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.]

—ಸಂ. ನ.

"ಜೀವಿಸು ಸಲು ಬೇಕು ಬಷ್ಟು ಧಾರ್ಮಿಕ ಪ್ರಸಂಗಗಳ ಅತಿ ವಿಶೇಷವಾದ ಚಾಟಿ ಕೆಶಿಸನೇ ನಮ್ಮ ಅತಿ ಮುಖ್ಯ ವಿಷಯವಾಗಿ ಬುದ್ಧಿಯು. ನಮ್ಮ ದೇವಾಲಯವು, ಅಂತರಿಕ ಪಾವಿತ್ರ್ಯವನ್ನು ಕಡೆಗಣಿಸಿ, ಬಾಹ್ಯವೈಭವವನ್ನೂ, ಧಾರ್ಮಿಕ ಸಂಪೂರ್ಣತೆಯನ್ನೂ ಬಿಟ್ಟು ಆಡಂಬರದ ಪ್ರದರ್ಶನಕ್ಕೆ ಪ್ರಯತ್ನಿಸಿರುವುದು. ಅದು ವೈಭವ, ಅಧಿಕಾರ ಮತ್ತು ಐಶ್ವರ್ಯವನ್ನೇನೋ ಪಡೆಯಿತು. ಆದರೆ ಆತ್ಮವನ್ನು ಕಳಕೊಂಡಿತು. ನಮ್ಮ ಪೂರ್ವಾಚಾರನಿಷ್ಠ ದೇವಾಲಯವು ಅದೆಷ್ಟು ದುರ್ಬಲ ಕೂಸಾಗಿದ್ದಿತೆಂಬುದು ಈಗ ಮಾತ್ರ ನಮಗೆ ಮನವರಿಕೆಯಾಗಹತ್ತಿದೆ. ಈ ಕಾರಣದಿಂದಲೇ ಅದು ಶಿಥಿಲವಾಗುತ್ತಿದೆ" ಎಂದು ರಸ್ಯದ ಅತ್ಯಂತ ಮೇಧಾವಿ ಧರ್ಮಾಧಿಕಾರಿಗಳಾದ ಆರ್ಚ್‌ಬಿಶೋಪ್ ವೆಡೆನ್‌ಸ್ಕಿಯವರು ಮೋಸ್ಕೋವಲ್ಲಿನ ತನ್ನ ಭಾಷಣದಲ್ಲಿ ಕೊಟ್ಟ ಅಭಿಪ್ರಾಯವು ನಿಜವಾಗಿದೆ. ಪೂರ್ವಾಚಾರನಿಷ್ಠ ದೇವಾಲಯಗಳು ಅರ್ಥರಹಿತ ಆಚಾರಾಂಧತೆಯಿಂದ ಹೊರಗಿನ ಥಳಕಿಗಷ್ಟೇಲಕ್ಷ್ಯಕೊಡುತ್ತಿದ್ದುವು. ಧರ್ಮವು ಅಪಾರ ಸಂಪತ್ತನ್ನೊಟ್ಟುಗೂಡಿಸುವ ವ್ಯಾಪಾರದಂತಾಗಿ ಆಳರಸರ ಕೈಗೊಂಬೆಯಾಗಿ ಕುಣಿಯುತ್ತಿತ್ತು; ಕಾಲಸ್ಥಿತಿಯು ಬದಲಾವಣೆ ಹೊಂದಿ, ನಾಗರಿಕತೆಯು ವ್ಯಾಪಿಸಿ, ಮಾನವನ ಮನಸ್ಸಿನಲ್ಲಿ ಮೂಡುವ ಹೊಸಹೊಸ ಭಾವನೆ, ಬೆಳೆಯುವ ಹೊಸ ಮನೋವೃತ್ತಿಗನುಗುಣವಾಗಿ ಮಾ ಪಾ ರ್ಟ ಹೊಂದದೆ ಜಡವಾಗಿ ಬಿದ್ದಿತ್ತು. ವಿಜ್ಞಾನದ ಧಾಳಿಯನ್ನಾಗಲಿ, ಸಾಮಾಜಿಕ ಚಳವಳಗಳ ಪ್ರಭಾವವನ್ನಾಗಲಿ ಅದು ಒಂದಿಷ್ಟು ಗಣಿಸದೆ ಕಣ್ಮುಚ್ಚಿಕೊಂಡಿತ್ತು. ಅದು ತನ್ನ ಧಾರ್ಮಿಕ ಮತ್ತು ದಾರ್ಶನಿಕ ವಿರೋಧಿಗಳನ್ನು ಪ್ರತಿಭಟಿಸುವ ಗೊಡವೆಗೇನೇ ಹೋಗಲಿಲ್ಲ. ಅದಕ್ಕೆ ಆ ಆವಶ್ಯಕತೆಯೂ ಇರಲಿಲ್ಲ. ಯಾಕಂದರೆ ಸರಕಾರದ ಪ್ರಬಲ ಹಸ್ತವು ಅದು ಹೊರಗಣ ಧಾಳಿ ಆಕ್ರಮಣಗಳಿಗೊಳಗಾಗದಂತೆ ಸದಾ ಆಶ್ರಯ ವೀಯುತ್ತಿತ್ತು. ಆದುದರಿಂದ ಅದು ಭೌತಿಕ ಜೀವನದಿಂದ, ರಸ್ಯದ ಮಾನವ ಕೋಟಿಯ ಜೀವನ ಸಮಸ್ಯೆ, ಸಂಕಷ್ಟ, ಪೀಡೆಗಳಿಂದ ದೂರವಾಗಿಯೇ ಇದ್ದಿತು.

ಅದಕ್ಕೆ ಆಂತರಿಕ ಶುದ್ಧೀಕರಣಕ್ಕು ಆಸ್ಪದವಿರಲಿಲ್ಲ. ಯಾಕಂದರೆ ಆತ್ಮಶೋಧೆ, ಸಂದೇಹಗಳು ತಲೆಯೆತ್ತಿದೊಡನೆಯೇ ಅಣಗಿಸಲ್ಪಡುತ್ತಿದ್ದುವು. ಸರ್ವ ಮಾನವ ಕೋಟಿಗೆ ಸದಾ ಕಾಲಕ್ಕೆ ಬೇಕಾದ ಧಾರ್ಮಿಕ ಜ್ಞಾನದ ಆದಿಯೂ ಅಂತ್ಯವೂ ಎಲ್ಲವೂ ತನ್ನಲ್ಲೇ ಇದೆ ಎಂಬ ಆತ್ಮತೃಪ್ತಿಯಿಂದ ರಸ್ಯದ ಧರ್ಮವು ತಾನೇ ತಾನಾಗಿದ್ದಿತು. ಯಾರಾದರೊಬ್ಬ ಕ್ರೈಸ್ತ ಸನ್ಯಾಸಿಯಲ್ಲಿ ಅಥವಾ ಧರ್ಮಾನುಯಾಯಿಯಲ್ಲಿ ಸ್ವತಂತ್ರ ವಿಚಾರೋದಯವಾಗಿ ಅವನೇನಾದರೂ ಆಕ್ಷೇಪವೆತ್ತಿದರೆ, ಯಾವುದಾದರೊಂದು ಸನ್ಯಾಸಾಶ್ರಮ ಅಥವಾ ಹಳ್ಳಿಯಲ್ಲಿ ಅತೃಪ್ತಿಯ ಶ್ವಾಸವೆದ್ದಿತೆಂದರೆ ಅದು ಕೂಡಲೆ ಕತ್ತುಹಿಸುಕಲ್ಪಡುತ್ತಿತ್ತು. ಯಾವುದಾದರೊಂದು ಧಾರ್ಮಿಕ ಸಂಪ್ರದಾಯದ ಆಚರಣೆ, ಧರ್ಮಗ್ರಂಥಗಳ ಶಬ್ದೋಚ್ಚಾರಣೆ ಅಥವಾ ಕ್ರೂಜೆಯನ್ನು ಎರಡು ಬೆರಳಲ್ಲಿ ಹಿಡಿಯಬೇಕೋ ಇಲ್ಲವೆ ಇಡೀ ಕೈಯಲ್ಲೋ ಎಂಬ ಕುರಿತೆಲ್ಲಾ ತರ್ಕದ ದೊಡ್ಡ ಬಿರುಗಾಳಿಯೆದ್ದಿರಬಹುದು. ಆದರೆ ಹೊರಗಣ ಲೋಕದ ಧಾರ್ಮಿಕ ಚಳವಳಗಳ ಗೊಡವೆಯೇ ಅದಕ್ಕಿರಲಿಲ್ಲ. ಆದುದರಿಂದ ಅದಕ್ಕೆ ಧಾರ್ಮಿಕ ಬೆಳವಣಿಗೆಯೇ ಇರಲಿಲ್ಲ. ಕೇವಲ ಯಾಂತ್ರಿಕ ತಾಂತ್ರಿಕ ತನವೇ ಅದರ ಜೀವಾಳವಿದ್ದಿತು. ಪೀಟರ್ ದಿ ಗ್ರೇಟ್ ಎಂಬ ಅರಸನ ಕಾಲದಲ್ಲಿ ರಸ್ಯದ ಧರ್ಮವು ಸರಕಾರದ ಅಧೀನ ಸಂಸ್ಥೆಯಾಗಿ ತನ್ನ ಸಂಪೂರ್ಣ ಸ್ವಾತಂತ್ರ್ಯವನ್ನು ಕಳಕೊಂಡು ಝಾರರಾ ಕೈಯ ಆಯುಧವಾಯಿತು. ಹೊರಗಣ ಭಾವನೆಗಳಿಗೆ ಅದರ ದ್ವಾರಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟುವು. ಇಂತಹ ಧರ್ಮದ ಕುರಿತು ರಸ್ಯದ ಸುಪ್ರಸಿದ್ಧ ಗ್ರಂಥಕರ್ತರೂ ವೇದಾಂತಿಯೂ ಆದ ಟೋಲ್‌ಸ್ಟೋಯಿಯವರು, "ಈ ಹಾನಿಕರ ಪಂಥಕ್ಕೆ ನಾನು ವಿರೋಧಿಯಾಗದಿರಲು ಸಾಧ್ಯವಿಲ್ಲ. ಅದು ದೇವರ ಮತ್ತು ಆತನ ನಿಯಮದ ಸುಳ್ಳು ಭಾವನೆಗಳನ್ನು ತರುಣ ಜನಾಂಗದವರಲ್ಲಿ ಮತ್ತು ಮೂಢ ಜನರಲ್ಲಿ ತುಂಬಿ ಅವರನ್ನು ಕೆಡಿಸಲೆತ್ನಿಸುತ್ತದೆ" ಎಂದು ಬರೆದುದೇನೂ ಆಶ್ಚರ್ಯವಲ್ಲ. "ರಸ್ಯದ ದೇವಾಲಯವು ಪ್ರಾಚೀನ ಧಾರ್ಮಿಕ ವಸ್ತು ಸಂಗ್ರಹಾಲಯವಾಗಿದೆ" ಎಂದು ಪ್ರಸಿದ್ಧ ತತ್ವಜ್ಞರಾದ ಡಾಕ್ಟರ್ ಇ. ಜೆ. ಡಿಲ್ಲಿಸ್‌ರವರು ಹೇಳಿರುವರು.

ಪೂರ್ವಾಚಾರಸಂಪನ್ನ ಬಡದೇವಾಲಯದ ಧಾರ್ಮಿಕ ಸೇವೆಯ ಪರಿಣಾಮವಾಗಿ ರಸ್ಯದ ಒಕ್ಕಲಿಗರ ಆತ್ಮಿಕ ಜೀವನವು ಬರಡಾಗಿ ಹೋಗಿದ್ದಿತು. ಅದು ಜೀವಂತ ಭಕ್ತಿಭಾವ, ಶ್ರದ್ಧೆಯ ನಿಜವಾದ ಉದ್ದೇಶ ಮತ್ತು ಧಾರ್ಮಿಕ ಪ್ರಸಂಗಗಳ ಅಧುನಿಕ ತಿಳುವಳಿಕೆಯಬದಲಿಗೆ ಅದ್ಭುತವಾದಮಂತ್ರತಂತ್ರ ಮತ್ತು ವಿಧಿನಿಯಮಗಳ ಮೇಲೆ ಆಧರಿಸಿಕೊಂಡಿತ್ತು. ಯಾವಾಗಲೂ ತಿರುಳಿಗಿಂತಲೂ ಸಿಪ್ಪೆಗೆ, ಅಂತರ್ಭಾವಕ್ಕಿಂತಲೂ ಬಾಹ್ಯ ವಿಧಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವಸೀಯುತ್ತಿತ್ತು. ಧಾರ್ಮಿಕ ಪ್ರವಚನವು ಬಾಹ್ಯ ಥಳಕು ಮಿಣಿಕಿನಿಂದ ಕಣ್ಣಿಗೆ ರಮ್ಯವೂ ಕಿವಿಗೆ ಇಂಪೂ ಆಗಿದ್ದಿತು. ಅದೊಂದು ನಾಟಕ ಪ್ರದರ್ಶನದಂತೆ ನಡೆಯುತ್ತಿದ್ದಿತು. ಮಂಜುಲಗಾನ ರತ್ನಖಚಿತ ಪ್ರತಿಮೆಗಳ ಮತ್ತು ಸಂಕೇತಗಳ ಆಕರ್ಷಣೀಯ ಉಡಿಗೆ ತೊಡಿಗೆಗಳ ಮೆರುಗು ಇವೇ ದೇವಾಲಯದ ಆರಾಧನೆಯ ಪ್ರಾಮುಖ್ಯ ವಿಷಯವಾಗಿದ್ದುವು. ಆದರೆ ದೇವಾಲಯದ ಬೆನ್ನೆಲುಬಿನಂತಿದ್ದ ಒಕ್ಕಲಿಗನ ಜೀವನಕ್ಕೂ ಈ ವಿಜೃಂಭಣೆಯ ವಿಧಿ ಪೂಜಾದಿಗಳಿಗೂ ಯಾವ ಸಂಬಂಧವೂ ಇರಲಿಲ್ಲ. ಅವನ ಮೂಢನಂಬಿಕೆಗಳು ದೃಢವಾಗಿದ್ದು ಹಳ್ಳಿಗಳಲ್ಲಿ ನೆಲೆನಿಂತು ಒಕ್ಕಲಿಗನನ್ನು ಸೂರೆಮಾಡುತ್ತಿದ್ದ ಮಂತ್ರತಂತ್ರ ಮಾಟಮಾಯಾದಿಗಳನ್ನೆಲ್ಲಾ ದೇವಾಲಯವು ಸಹಿಸುತ್ತಿದ್ದಿತು. ಒಕ್ಕಲಿಗನು ವಿಪರೀತ ಕುಡಿದು ಕದ್ದು ಕ್ರೂರನಾಗಿ ವರ್ತಿಸಿ ನಾನಾ ದುರ್ಗುಣಗಳ ಕೆಸರಲ್ಲಿ ಬಿದ್ದು ನರಳುವದನ್ನು ಕಂಡು ಅವನನ್ನು ಉದ್ಧರಿಸಲಿಕ್ಕೆ ಯಾವಪ್ರಯತ್ನವನ್ನೂ ನಡಿಸಲಿಲ್ಲ. ಕ್ರೈಸ್ತ ಧರ್ಮವು ಎಂದೂ ಒಕ್ಕಲಿಗರ ಆಂತರಿಕ ಜೀವನದ ಒಂದು ಭಾಗವಾಗಿರಲಿಲ್ಲ. ಅದು ಅವನಲ್ಲಿ ಧರ್ಮಸ್ಫೂರ್ತಿಯನ್ನುಂಟುಮಾಡುವುದೇ ಅಪರೂಪ. ಬೈಬಲ್ ಎಂದರೆ ಅವನಿಗೇನೆಂದು ತಿಳಿದಿರಲಿಲ್ಲ. ಹೆಚ್ಚಿನ ಒಕ್ಕಲಿಗರು ನಿರಕ್ಷರ ಕುಕ್ಷಿಗಳಾದ್ದರಿಂದ ಬೈಬಲನ್ನು ಓದಿದವರೇ ಅಲ್ಲ. ಅವರು ಧರ್ಮದೇವರುಗಳ ವಿಷಯ ತಿಳಿದುದೆಂದರೆ ರಸ್ಯದ ಪೂರ್ವಾಚಾರನಿಷ್ಠ ದೇವಾಲಯದಿಂದ ಅದು ಈ ಮೊದಲೇ ಸೂಚಿಸಿರುವಂತೆ ಅಂತರ್ಯಕ್ಕಿಂತ ಬಾಹ್ಯಕ್ಕೇನೇ ಹೆಚ್ಚಿನ ಲಕ್ಷ್ಯ ಕೊಡುತ್ತಿತ್ತು. ಇದರ ಪರಿಣಾಮವಾಗಿ ಒಕ್ಕಲಿಗನು ಧರ್ಮವೆಂದರೆ ಕೇವಲ ಬಾಹ್ಯ ಆಚರಣೆಯಲ್ಲದೆ, ಆಂತರಿಕ ಬೆಳವಣಿಗೆಯೆಂದು ಭಾವಿಸಿರಲಿಲ್ಲ. ಆತ್ಮಿಕಭಾವನೆ ಬೆಳವಣಿಗೆ ಎಂಬುದೇನೆಂದು ಅವನಿಗೆ ತಿಳಿದಿರಲಿಲ್ಲ.ಧಾರ್ಮಿಕಆದರ್ಶಆತ್ಮಜ್ಞಾನ ಮತ್ತು ಪರಮಾತ್ಮ ಸಾಕ್ಷಾತ್ಕಾರ ವೆಂಬುದರ ಅರಿವೇ ಅವನಿಗಿಲ್ಲದೆ ಕೇವಲ ಶುಷ್ಕ ಆಚಾರ ವಿಧಿಗಳೇ ಧರ್ಮ ಸರ್ವಸ್ವವೆಂದು ಭಾವಿಸಿ ಕೊಂಡಿದ್ದನು. ಕ್ರಮ ಪ್ರಕಾರ ದೇವಾಲಯಕ್ಕೆ ಹೋಗಿ ಉಪವಾಸ ವ್ರತವನ್ನಾಚರಿಸಿ ತನ್ನ ಪ್ರೀತಿಯ ದೇವತೆಯ ಪೀಠದಮುಂದೆ ಮೇಣದಬತ್ತಿಗಳನ್ನು ಹತ್ತಿಸಿ, ಘನರೋಗ ರುಜೆಗಳನ್ನು ನಿವಾರಿಸಿ, ಮಕ್ಕಳಿಲ್ಲದವರಿಗೆ ಮಕ್ಕಳುಂಟಾಗುವಂತೆ ಹರಸುವುದೇ ಮೊದಲಾದ ವರಪ್ರದಾನ ಮಾಡುತ್ತಿದ್ದ ಸನ್ಯಾಸಿಗಳನ್ನು ಪೂಜಿಸುವುದೇ ರಸ್ಯದ ಒಕ್ಕಲಿಗನ ಧರ್ಮಸರ್ವಸ್ವವಾಗಿದ್ದಿತು. ಅವನು ದೂರದ ತೀರ್ಥಕ್ಷೇತ್ರಗಳಿಗೆ ಪುಣ್ಯಸಂಪಾದನೆಗಾಗಿ ಯಾತ್ರೆ ಮಾಡುತ್ತಿದ್ದನೇ ಹೊರತು ಆತ್ಮಾನಂದಕ್ಕಲ್ಲ. ನ್ಯಾಯನೀತಿಯ ಪರಿವೆಯು ಅವನಿಗೆ ಅಷ್ಟೇನೂ ಇರಲಿಲ್ಲ. ಕೊಲೆ ದರೋಡೆ ಕಳವುಗಳಲ್ಲಿ ಜಯ ಹೊಂದುವುದಕ್ಕಾಗಿ ಒಕ್ಕಲಿಗರು ದೇವರ ಸಹಾಯವನ್ನು ಪ್ರಾರ್ಥಿಸಿಕೊಳ್ಳುವುದೂ ಇದ್ದಿತು. ಇಂತಹ ತಾಮಸಿಕ ಭಾವನಾಪ್ರಧಾನವಾದಧರ್ಮವು ಕ್ರಾಂತಿಯ ಧಾಳಿಯ ಮುಂದೆ ಶಿಥಿಲವಾಗದೆ ಉಳಿಯುವುದಾದರೂ ಹೇಗೆ? ರಸ್ಯದ ಒಕ್ಕಲಿಗನ ದೃಷ್ಟಿಯಲ್ಲಿ ಶ್ರದ್ಧಾಳು ದೇವಾಲಯವೆಂಬುದು ಅಭೇದ್ಯವೂಗಂಭೀರವೂ ಪವಿತ್ರವೂ ಆದ ಕೋಟೆಯಂತಿತ್ತು. ಅದನ್ನು ವಿರೋಧಿಸುವುದು ದೊಡ್ಡಪಾಪವಾಗಿತ್ತು. ದೇವಾಲಯಗಳ ಉಚ್ಚಅಧಿಕಾರಿಗಳಾದ ಬಿಶಪರು ಆರ್ಚ್ ಬಿಶಪರು, ಗಳನ್ನು ಅವನುಅಸಾಧಾರಣ ಮನುಷ್ಯರೆಂದು ಭಾವಿಸಿಕೊಂಡಿದ್ದನು. ಕೇವಲ ಮನುಷ್ಯನಿಂದ ಅವರಿಗೆ ಯಾವತರದ ಹಾನಿ ಮಾಡಲೂ ಅಸಾಧ್ಯವೆಂದು ನಂಬಿದ್ದನು. ಆದರೆ ಕ್ರಾಂತಿಯುಂಟಾದಾಗ ರಸ್ಯದ ಅತ್ಯಂತ ಪವಿತ್ರರಾಗೂ ಅತ್ಯುಚ್ಚಧರ್ಮಾಧಿಕಾರಿಯಾದ ಪೇಟ್ರಿಯಾರ್ಕ್ ಟಿಕೋನ್ ರವರು ಕೈದುಮಾಡಲ್ಪಟ್ಟು ಸೆರೆಯಲ್ಲಿರಿಸಲ್ಪಟ್ಟರು. ಪರಂತು ಅವರನ್ನು ಕೈದುಮಾಡಿದ ಜನರೇನೂ ಕಲ್ಲಾಗಿಹೋಗಲಿಲ್ಲ. ಪವಿತ್ರ ಧರ್ಮಪೀಠಗಳಿಂದ ಚಿನ್ನಾಭರಣಗಳನ್ನು ತೆಗೆಯಲಾಯ್ತು. ಅವನ್ನು ತೆಗೆದವರ ಕೈಗಳು ಮರಕಟ್ಟಿ ಹೋಗಲಿಲ್ಲ. ಸಾಧು ಸಂತರುಗಳ ಅದ್ಭುತ ಶಕ್ತಿಯುಳ್ಳವೆನಿಸುವ ಗೋರಿಗಳು ಅಗೆದು ತೆಗೆಯಲ್ಪಟ್ಟವು ಆಗ ಹಾರೆ ಪಿಕ್ಕಾಸುಗಳನ್ನು ಉಪಯೋಗಿಸಿದವರು ಸತ್ತುಬೀಳಲಿಲ್ಲ. ಬಿಶಪರು ಆರ್ಚ್‌ಬಿಶಪರು, ಪವಿತ್ರಸನ್ಯಾಸಿಗಳು, ಅದ್ಭುತಮಂತ್ರಗಾರರು ಮೊದಲಾದವರೆಲ್ಲಾ ಸಾಮಾನ್ಯತಕ್ಷೀರುಗಾರರಂತೆಮನೆಗಳಿಂದ ಹೊರದೊಬ್ಬಲ್ಪಟ್ಟು ಕೆಲವರು ಸೆರೆಯಲ್ಲಿರಿಸಲ್ಪಟ್ಟರು, ಕೆಲವರು ಗಡಿಪಾರಾದರು, ಕೆಲವರ ತಲೆಕಡಿಯಲಾಯ್ತು. ಅವರನ್ನು ಶಿಕ್ಷಿಸಿದವರಿಗೆ ಯಾವ ಅನಾಹುತವೂ ಆಗಲಿಲ್ಲ. ರಸ್ಯದ ಒಕ್ಕಲಿಗನು ಯಾರ ಉಪದೇಶಕ್ಕಾಗಿ ಹೋಗುತ್ತಿದ್ದನೋ, ಯಾರ ದೈವ ಸಾಕ್ಷಾತ್ಕಾರಕ ಶಕ್ತಿಯಲ್ಲಿ ಅವನಿಗೆ ಸಂಪೂರ್ಣವಿಶ್ವಾಸವಿತ್ತೋ ಅವರೇ ಈಗ ತಮಗೆ ಬಂದಿರುವ ದುರ್ದೈವದಿಂದ ತಮ್ಮನ್ನು ರಕ್ಷಿಸಿಕೊಳ್ಳದಾದರು. ಅವರ ಅದ್ಭುತಶಕ್ತಿಯ ಗುಟ್ಟು ರಟ್ಟಾಯಿತು ಸಂತಸಾಧುಗಳು ಅಸಹಾಯಕರಾದರು ಅವರ ಮಂತ್ರ, ತಂತ್ರ, ಪೂಜೆ, ಕೋಪ, ಶಾಪ, ವೆಲ್ಲವೂ ನಿರರ್ಥಕವಾಯಿತು. ದುಷ್ಟ ಕ್ರಾಂತಿಕಾರರೂ ದೇವಾಲಯ, ಮಂತ್ರವಾದ ಅದ್ಭುತ ವಾದ, ಮತ್ತು ಬಿಶಪ ಆರ್ಚ್‌ಬಿಶಪರ ಮೇಲೆ ಮಾತ್ರವಲ್ಲದೆ ರಸ್ಯದ ಒಕ್ಕಲಿಗನ ಭಕ್ತಿಯ ದೇವರಮೇಲೆಯೇ ತಮ್ಮ ವಿಜಯ ಪತಾಕೆಯನ್ನೂರಿಬಿಟ್ಟರು. ಇಂತಹ ವಿದ್ಯಮಾನಗಳು ರಸ್ಯದ ಒಕ್ಕಲಿಗನ ಶ್ರದ್ಧೆಯನ್ನು ಕಿತ್ತುಹಾಕಿ ಪೂರ್ವಾಚಾರ ನಿಷ್ಠದೇವಾಲಯಕ್ಕಿದ್ದ ಪ್ರಭಾವವನ್ನು ನಿರ್ನಾಮಗೊಳಿಸಿಬಿಟ್ಟವು.

(ಮುಂದುವರಿಯುವುದು)

ಮಧ್ಯ ಯೂರೋಪಿನಲ್ಲಿ ಮತ್ತೊಂದು ಯುದ್ಧವೇ?

ಹಿಟ್ಲರನ ಸನ್ನಾಹ

ಇಂದು ಜೆಕೊಸ್ಲೆವೇಕಿಯಾ ಒಂದು ಸಣ್ಣ ಸ್ವತಂತ್ರ ರಾಜ್ಯ. ಆದರೆ ಯುದ್ಧ ಕಾಲಕ್ಕೆ ಪೂರ್ವ ಅದು ಜರ್ಮನ್ ಎಲ್ಲೆಯ ಒಳಗೇ ಇತ್ತು. ಈಚೆಗೆ ಅವರು ಸ್ವಾತಂತ್ರ್ಯ ಚಳವಳಿ ಹೂಡಿ ಜರ್ಮನಿಯಿಂದ ಪ್ರತ್ಯೇಕರಾದರು. ಡಿಕ್ಟೇಟರ್ ಹಿಟ್ಲರಿಗೆ ಈಗ ಅವರಮೇಲೆ ಕಣ್ಣು.

ಯೂರೋಪಿನ ರಾಷ್ಟ್ರಗಳ ಕಣ್ಣಿನಲ್ಲಿ ಹಿಟ್ಲರನು ಒಂದು ಮರಳುಕಾಳಿನಂತೆ ಒತ್ತುತ್ತಿದ್ದಾನೆ. ಅವನಿಂದ ಯಾವತ್ತೂ ಅವರಿಗೆ ಕಣ್ಣುಬೇನೆ ತಪ್ಪುವಂತಿಲ್ಲ. ಆತನು ಒಂದಲ್ಲದಿದ್ದರೊಂದು ಮಾರ್ಗದಲ್ಲಿ ಇಡೀ ಯೂರೋಪಿನ ರಾಷ್ಟ್ರಗಳ ನಡುವೆ ತಾನು ಅಸಮಾನನೆನ್ನಿಸಿಕೊಳ್ಳಲು ಹೊಂಚು ಹಾಕುತ್ತಿದ್ದಾನೆ. ಇದು ಯಾವತ್ತೂ ಗುಟ್ಟೇನೂ ಅಲ್ಲ. ಆದರೆ ಆ ಗುರಿಯನ್ನು ಸಾಧಿಸಲು ಅವನು ಏನುಮಾರ್ಗ ಅನುಸರಿಸುವನೆಂಬುದೇ ಅದರಲ್ಲಿರುವ ಐತಿಹ್ಯ.

ಅವನ ಗುಪ್ತಸಂಧಾನಗಳನ್ನು ಬಯಲಿಗೆಳೆಯಲು ಸದಾ ಗೂಢಚಾರರ ಸೈನ್ಯವೇ ಒಂದಿದೆ. ಎತ್ತು ಹಾರಲಿ ಹಾರದಿರಲಿ ಕೊಬ್ಬಿದಗೂಳಿ, ಯಾವಕಡೆಗೆ ನೋಡಿದರೆ ಆ ಕಡೆ ನುಗ್ಗಿ ಹಾರಾಡಲೇ ಬಹುದು-ಕವುದಿ (ಗೌಳಿ) ಕುಣಿಯಲು ಮೊದಲು ಮಾಡಿಯೇ ಬಿಟ್ಟೀತು. ಎಂದು ಹೇಳಿದಂತೆ ಆತನ ಪ್ರತಿಯೊಂದು ಇಂಕಾರ ಹುಂಕಾರಕ್ಕೂ ಭಾಷ್ಯಮಾಡುತ್ತಿದ್ದಾರೆ.

ಕಳೆದ ವಾರಗಳಲ್ಲಿ ತಮ್ಮ ಗಡಿನಾಡಾದ ಜೆಕೊಸ್ಲೊವೇಕಿಯಾದಲ್ಲಿ ಜರ್ಮನ್ ಹಿತಚಿಂತನೆಗಾಗಿ ಒಂದು ಸೈನ್ಯವಿರಬೇಕೆಂದು ಹಿಟ್ಲರನು ತಿರ್ಮಾನಿಸಿದನು. ಇದಕ್ಕೆ ಸ್ಲೊವೇಕಿಯಾದ ಆಂತರ್ಯದ ಪರಿಸ್ಥಿತಿಗಳೇ ಕಾರಣ. ೧೯೩೭ನೇ ಮೇ ೧೨ರಿಂದ ಜೂನ್ ೫ರ ಒಳಗಾಗಿ ಜೆಕೋ ಸರಕಾರವನ್ನು ಪ್ರತಿಭಟಿಸಿ ದಂಗೆಯೇಳಲು ಆ ಸೀಮೆಯ ದಕ್ಷಿಣಭಾಗದ ನಿವಾಸಿಗಳಾಗಿರುವ ಹಂಗೇರಿಯನ್ ಜನರು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ ಇದು ಸರಕಾರಕ್ಕೂ ತಿಳಿಸಲ್ಪಟ್ಟಿದೆ. ಆ ದಂಗೆಯನ್ನೆದುರಿಸಲು ಜೆಕೋ ಸರಕಾರವು ತನ್ನ ಶಕ್ತಿ ಯುಕ್ತಿಗಳ ಸಂಗ್ರಹಮಾಡಿಕೊಳ್ಳುತ್ತಾ ಇದೆ. ಇದು ದಕ್ಷಿಣ ಜೆಕೊಸ್ಲೊವೇಕಿಯಾದ ಸ್ಥಿತಿ.

ಈ ಸೀಮೆಯ ಉತ್ತರಗಡಿಯೇ ಜರ್ಮನಿ. ಆ ಎಲ್ಲೆಕಟ್ಟಿನ ಜಿಲ್ಲೆಗಳಲ್ಲಿ ಜರ್ಮನ್ ಜನರು ಅಲ್ಪ ಸಂಖ್ಯಾತರಾಗಿ ಇರತಕ್ಕವರು. ಅವರು ಅಲ್ಪ ಸಂಖ್ಯೆಯ ಪ್ರಜೆಗಳಾದ ತಮ್ಮ ಹಕ್ಕುಗಳಿಗೆ ತಾಪತ್ರಯ ಬಾರದಂತೆ ತಾವೂ ಅದೇ ಕಾಲದಲ್ಲಿ ದಂಗೆಯೊಂದನ್ನು ಉತ್ತರ ಮೇರೆಯಲ್ಲಿ ಎಬ್ಬಿಸಲು ಸನ್ನಾಹ ಮಾಡುತ್ತಿದ್ದಾರೆ. ಈ ದಂಗೆಯು ಜರ್ಮನ್ ನಾಜೀನಾಯಕ ಹೇರ್ ಹೆನ್‌ಲೀನ್ ಎಂಬವನ ಕೈಕೆಳಗೆ ನಡೆಸಲ್ಪಡಬೇಕೆಂದೂ ಗೊತ್ತಾಗಿದೆ. ಈತನ ನಾಜೀಪಡೆಗೆ ಶಸ್ತ್ರಾಸ್ತ್ರಗಳನ್ನೊದಗಿಸಲು ಜರ್ಮನಿಯು ಒಪ್ಪಿಕೊಂಡಿದೆ. ಅದರ ಜೊತೆಗೆ ಹಿಟ್ಲರನ ಸೈನ್ಯಗಳು ತಮ್ಮ ನಾಡಿನ ಹಿತಸಾಧನೆಗೆಂಬ ನೆವದಿಂದ ಈ ರಾಜ್ಯದೊಳಗೆ ಬಂದು ಠಿಕಾಣಿ ಹಾಕಲವಕಾಶವಾಗುವುದು.

ಸಣ್ಣರಾಜ್ಯವಾದ ಜೆಕೊಸ್ಲೊವೇಕಿಯದಲ್ಲಿ ಜರ್ಮನರ ಕೈವಾಡ ಬಲು ಬಲವಾಗಿಯೇ ಇದ್ದೇ ಇದೆ. ಇದರ ಜೊತೆಗೆ ಮೊದಲೇ ಮುಳಿ, ಅದರಮೇಲೆ ಕೊಳಿ ಎಂದಹಾಗೆ ಹಿಟ್ಲರನ ಸೈನ್ಯವೂ ಬಂದು ಕೂತರೆ ಕೇಳಬೇಕೆ? ಅವರ ಸ್ಥಿತಿಯು ಹುಣ್ಣುಮೇಲೆ ಬೊಕ್ಕೆ ಎದ್ದ ಹಾಗಾಗುತ್ತದೆ. ಈ ಆಲೋಚನೆ ಹೇಗೋ ಹೊರಬಿದ್ದು ಜೆಕೋ ಸರಕಾರಕ್ಕೆ ಚಳಿಜ್ವರ ತಂದಿಟ್ಟಿತು. ಕೂಡಲೇ ಅವರು ಯೂರೋಪಿನ ಎಲ್ಲಾ ರಾಷ್ಟ್ರಗಳಿಗೂ ತಮ್ಮ ಪ್ರಾರ್ಥನೆ ಕಳುಹಿಸಿದರು. ಕೂಡಲೇ ಫ್ರಾನ್ಸ್, ಮತ್ತು ರಷ್ಯಾ ಸರಕಾರಗಳು ಜರ್ಮನಿಯೇನಾದರೂ ಪುಂಡಾಟ ಎತ್ತಿದರೆ ನಾವು ಬಂದು ಅವರನ್ನು ಮಟ್ಟಹಾಕಿ ನಿಮ್ಮನ್ನು ಉದ್ಧಾರ ಮಾಡುತ್ತೇವೆಂದು ಮಾತು ಕೊಟ್ಟಿದ್ದಾರೆ. ಅಂತೂ ಯುದ್ಧವೇಳುವ ಪ್ರಸಂಗ ಹತ್ತಿರವಾಗುತ್ತಾ ಇದೆ.

ಈ ನಡುವೆ ಈ ದಂಗೆಗಳನ್ನು ಎಬ್ಬಿಸುವುದಕ್ಕೂ ಜರ್ಮನಿಯು ಜೆಕೊಸ್ಲೊವೇಕಿಯವನ್ನು ಆಕ್ರಮಿಸುವುದಕ್ಕೂ ಮೇ ೧೨ರ ಲಾಗ್ಯಾತು ಜೂನ್ ೫ರ ವರೆಗಿನ ದಿನಗಳನ್ನೇ ಏಕೆ ಲಗ್ನ ಕಟ್ಟಿದ್ದಾರೆಂಬುದೂ ಒಂದು ಮಹಾ ಪ್ರಶ್ನೆ. ಮೇ ತಿಂಗಳು ಆರನೆ ಜಾರ್ಜ್ ಪ್ರಭುಗಳ ಕಿರೀಟಧಾರಣೆಯ ಮಹಾಯೋಗ. ಇಂಗ್ಲೆಂಡ್ ಮತ್ತು ಮಿತ್ರರಾಷ್ಟ್ರಗಳ ಪ್ರಧಾನ ರಂಗಸ್ಥಾನ ಲಂಡನ್ ಪಟ್ಟಣವಾಗಿರುತ್ತೆ. ಮದುವೆ ಗಂಡನ್ನು ಮೆರವಣಿಗೆಗೆ ಹೊರಡಿಸಿ ಮನೆಯವರೆಲ್ಲಾ ಮೋಟಾರು ಹಿಂದೆ ಮೆರವಣಿಗೆಗೆ ಹೋದ ಹಾಗಿರುತ್ತೆ. ಮನೆ ದೋಚಬೇಕೆಂದು ಹೊಂಚು ಹಾಕುವವನಿಗೆ ಇನ್ನೆಂತಹ ಸಂಧಿಬೇಕು? ಅದೇ ರೀತಿಯಲ್ಲಿ ಯುರೋಪಿನ ಮಹಾ ಶಕ್ತಿಯೆನಿಸಿಕೊಂಡ ಇಂಗ್ಲೆಂಡಿಗೆ ಅತ್ತಕಡೆ ಇತ್ತಕಡೆ ನೋಡುವುದಕ್ಕಾಗಲಿ ತಲೆ ತುರಿಸಿಕೊಳ್ಳುವುದಕ್ಕಾಗಲಿ ಪುರಸತ್ತಿಲ್ಲದಿರುವಾಗ ತಾವು ಈ ತುಳಿದಾಟ ಎತ್ತಿದರೆ ತಮ್ಮ ಉದ್ದಿಶ್ಯ ಸುಲಭವಾಗುವುದೆಂದು ಹಿಟ್ಲರ್ ಪಕ್ಷದವರು ಈ ನಿರ್ಧಾರಮಾಡಿದ್ದಾರೆ, ಎಂಬುದೇ ಇಡೀ ಯುರೋಪಿನಲ್ಲಿ ಎದ್ದಿರುವ ಕೂಗು. ಇಂಗ್ಲೆಂಡೊಂದು ಪ್ರತ್ಯಕ್ಷವಾಗಿ ಕತ್ತಿಕಟ್ಟದೆ ಹೊರಗಿದ್ದರೆ ಸಾಕು-ಜೆಕೊಸ್ಲೊವೇಕೀಯವು ಜರ್ಮನಿಯ ಜೋಳಿಗೆಯಲ್ಲಿ ಬಿದ್ದ ಹಾಗೆಯೇ. ಇದು ಜರ್ಮನಿಯ ಸವಿಗನಸು ಮಾತ್ರವೇ ಅಲ್ಲ-ಎಲ್ಲ ಯೂರೋಪೂ ಮನಗಂಡಿದೆ.

ಇದಕ್ಕಾಗಿ ಎಲ್ಲ ಕಡೆಯಿಂದಲೂ ಪರಿಹಾರಗಳ ಮತ್ತು ತಡೆಕಟ್ಟುಗಳ ಯೋಚನೆಗಳನ್ನು ಮಾಡುತ್ತಿದ್ದಾರೆ. ಜೆಕೊಸ್ಲೋವೇಕಿಯಾದ ಇಡೀ ಪ್ರಜಾ ಸಂಖ್ಯೆಯೇ ೧½ ಕೋಟಿ ಜನರು. ಅದರಲ್ಲಿ ೩೦ ಲಕ್ಷ ಜನರು ಜರ್ಮನರು. ಈ ಮೂವತ್ತು ಲಕ್ಷ ಜರ್ಮನರಲ್ಲಿ ಪೂರಾ ೨೦ಲಕ್ಷ ಜನರು ಹರ್ ಹೆನ್‌ಲೀನ್ ನಾಯಕನ ಕೂಗಿಗೆದ್ದು ನಿಲ್ಲುವವರಾಗಿದ್ದಾರೆ. ಇವರನ್ನು ನಾಡಿನ ಒಳಗೇ ಹತೋಟಿಗೆ ತರಬೇಕಾದುದು ಮೊದಲನೆಯ ಕರ್ತವ್ಯ. ಹೊರಗಿನಿಂದ-ಎಂದರೆ ಜರ್ಮನಿಯಿಂದ ಅವರಿಗೆ ಯುದ್ಧ ಸಾಮಾಗ್ರಿಗಳ ಸರಬರಾಜು ಸಾಧ್ಯವಾಗದಂತೆ ತಡೆಗಟ್ಟಲು ತಕ್ಕ ಏರ್ಪಾಡುಗಳನ್ನು ಉತ್ತರ ಮೇರೆಯಲ್ಲಿ ಮಾಡಬೇಕು. ಸಂಭವಕ್ಕೆ ಅವಶ್ಯ ತೋರಿದ ಕೂಡಲೆ ತಮಗೆ ಯುದ್ಧ ಸಾಮಾಗ್ರಿಗಳೂ ಸೈನ್ಯ ಸಹಾಯವೂ ಸಕಾಲದಲ್ಲಿ ಒದಗುವಂತೆ ಏರ್ಪಡಿಸಿಕೊಳ್ಳಬೇಕು. ಇವು ಜೆಕೋ ಸರ್ಕಾರದ ಅವಶ್ಯಕ ಏರ್ಪಾಡುಗಳು. ಅವರಿಗೆ ಬೆಂಬಲಕ್ಕೆ, ಮೊದಲೇ ಹೇಳಿದಂತೆ ಫ್ರಾನ್ಸ್, ರಷ್ಯಾಗಳು ಸಿದ್ಧವಾಗಿ ನಿಲ್ಲುವುವು. ಅವುಗಳು ವಾಗ್ದಾನ ಮಾಡಿರುವುದು ಮಾತ್ರವಲ್ಲದೆ, ಇಂತಹ ಸಂಧಿ ಸಿಕ್ಕೀತೇ ಎಂದು ಎಷ್ಟೋ ದಿನದಿಂದ ಕಾದಿದ್ದು ಸಿಕ್ಕಿದ ಈ ಅವಕಾಶವನ್ನು, ಇಲಿಯನ್ನು ಹುಲಿ ಮಾಡಿಯಾದರೂ ತಮ್ಮ ಸೇಡಿಗೆ ಅವಕಾಶ ಮಾಡಿಕೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಇನ್ನು ಇಂಗ್ಲಂಡು ತನ್ನ ಸಂಭ್ರಮದ ಪಟ್ಟಾಭಿಷೇಕ ಮಹೋತ್ಸವದ ನಡುವೆ ವಿಶೇಷ ಏರ್ಪಾಡುಗಳೇನಾದರೂ ಮಾಡುವುದೋ ನೋಡಬೇಕು.

ಹಿಟ್ಲರನು ಜರ್ಮನಿಯಲ್ಲೆಲ್ಲಾ ವೃತ್ತಪತ್ರಿಕೆಗಳು ಮತ್ತು ರೇಡಿಯೋಗಳ ಮುಖಾಂತರ ದೊಡ್ಡ ಪ್ರಚಾರವನ್ನು ಮಾಡುತ್ತಿದ್ದಾನೆ. ಬವೇರಿಯದ ಜರ್ಮನ್ ಸೈನ್ಯಗಳು ಅವಶ್ಯಕ ಬಿದ್ದಲ್ಲಿ ಯುದ್ಧಕ್ಕೆ ಯಾವ ಕ್ಷಣವೂ ಸಿದ್ಧವಾಗಿದ್ದು ತೀರಬೇಕೆಂದೂ ಆರ್ಡರು ಮಾಡಿದ್ದಾನೆ. ಅಲ್ಲದೆ ಜರ್ಮನಿ-ಜೆಕೋ ಎಲ್ಲೆ ಕಟ್ಟಿನಲ್ಲಿ ಉದ್ದಕ್ಕೂ ವಿಮಾನ ಪಡೆಗಳನ್ನು ತಂದಿಳಿಸಿ ವ್ಯೂಹ ರಚನೆಗೆ ಅವಕಾಶಮಾಡುತ್ತಿದ್ದಾನೆ. ಮಧ್ಯ ಯೂರೋಪೇ ರಣಾಂಗಣವಾಗುವ ಯೋಗವಿದ್ದಲ್ಲಿ, ಮುಂದಿನ ತಿಂಗಳ ಮಧ್ಯಭಾಗದಲ್ಲಿ ಉರಿಯೇಳುವುದಂತೂ ಸಿದ್ಧ. (ಪ್ರಜಾಮತ)

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

ಜಗತ್ಪ್ರಸಿದ್ಧ

“ಗೊನೊಕಿಲರ್” (ರಿಜಿಸ್ಟರ್ಡ್)

GONO KILLER ORIGINAL TRADE MARK

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಚುಚುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪.

Sole Manufacturer: Dr. D. N. JASANI, Vittalbhai Patel Road, BOMBAY 4

ರಷ್ಯದ ನೂತನ ನಿರ್ಮಾಣ

ಧರ್ಮದ ಪತನಕ್ಕೆ ಕಾರಣವೇನು ?

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿವೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡುವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ 'ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.]

—ಸಂ. ನ.

"ಹಳೆಯ ಸಂಪ್ರದಾಯ ಬದ್ಧ ಧಾರ್ಮಿಕ ಪ್ರಸಂಗಗಳ ಅತಿ ವಿಶೇಷವಾದ ಡಾಂಬಿಕತನವೇ ನಮ್ಮ ಅತಿ ದೊಡ್ಡ ಪಾಪವಾಗಿರುವುದು. ನಮ್ಮ ದೇವಾಲಯವು, ಆಂತರಿಕ ಸದ್ಗುಣವನ್ನು ಕಡೆಗಣಿಸಿ, ಬಾಹ್ಯ ವೈಭವವನ್ನೂ, ಧಾರ್ಮಿಕ ಸಂಪೂರ್ಣತೆಯನ್ನೂ ಬಿಟ್ಟು ಆಡಂಬರದ ಪ್ರದರ್ಶನಕ್ಕೆ ಪ್ರಯತ್ನಿಸಿರುವುದು. ಅದು ವೈಭವ, ಅಧಿಕಾರ ಮತ್ತು ಐಶ್ವರ್ಯವನ್ನೇನೋ ಪಡೆಯಿತು. ಆದರೆ ಆತ್ಮವನ್ನು ಕಳಕೊಂಡಿತು ನಮ್ಮ ಪೂರ್ವಾಚಾರನಿಷ್ಠ ದೇವಾಲಯವು ಅದೆಷ್ಟು ದುರ್ಬಲ ಕೂಸಾಗಿದ್ದಿತೆಂಬುದು ಈಗ ಮಾತ್ರ ನಮಗೆ ಮನವರಿಕೆಯಾಗಹತ್ತಿದೆ. ಈ ಕಾರಣದಿಂದಲೇ ಅದು ಶಿಥಿಲವಾಗುತ್ತಿದೆ" ಎಂದು ರಷ್ಯದ ಅತ್ಯಂತ ಮೇಧಾವಿ ಧರ್ಮಾಧಿಕಾರಿಗಳಾದ ಆರ್ಚ್‌ಬಿಶೋಪ್ ವೆದೆನ್‌ಸ್ಕಿಯವರು ಮೋಸ್ಕೋದಲ್ಲಿನ ತನ್ನ ಭಾಷಣದಲ್ಲಿ ಕೊಟ್ಟ ಅಭಿಪ್ರಾಯವು ನಿಜವಾಗಿದೆ. ಪೂರ್ವಾಚಾರನಿಷ್ಠ ದೇವಾಲಯಗಳು ಅರ್ಥರಹಿತ ಆಚಾರಾಂಧತೆಯಿಂದ ಹೊರಗಿನ ಥಳಕಿಗಷ್ಟೇ ಲಕ್ಷ್ಯಕೊಡುತ್ತಿದ್ದುವು. ಧರ್ಮವು ಅಪಾರ ಸಂಪತ್ತನ್ನೊಟ್ಟುಗೂಡಿಸುವ ವ್ಯಾಪಾರದಂತಾಗಿ ಆಳರಸರ ಕೈಗೊಂಬೆಯಾಗಿ ಕುಣಿಯುತ್ತಿತ್ತು, ಕಾಲಸ್ಥಿತಿಯು ಬದಲಾವಣೆ ಹೊಂದಿ, ನಾಗರಿಕತೆಯು ವ್ಯಾಪಿಸಿ, ಮಾನವನ ಮನಸ್ಸಿನಲ್ಲಿ ಮೂಡುವ ಹೊಸಹೊಸ ಭಾವನೆ, ಬೆಳೆಯುವ ಹೊಸ ಮನೋವೃತ್ತಿಗನುಗುಣವಾಗಿ ಮಾರ್ಪಾಟ ಹೊಂದದೆ ಜಡವಾಗಿ ಬಿದ್ದಿತ್ತು. ವಿಜ್ಞಾನದ ಧಾಳಿಯನ್ನಾಗಲಿ, ಸಾಮಾಜಿಕ ಚಳವಳಗಳ ಪ್ರಭಾವವನ್ನಾಗಲಿ ಅದು ಒಂದಿಷ್ಟು ಗಣಿಸದ ಕಣ್ಮುಚ್ಚಿಕೊಂಡಿತ್ತು. ಅದು ತನ್ನ ಧಾರ್ಮಿಕ ಮತ್ತು ದಾರ್ಶನಿಕ ವಿರೋಧಿಗಳನ್ನು ಪ್ರತಿಭಟಿಸುವ ಗೊಡವೆಗೇನೇ ಹೋಗಲಿಲ್ಲ. ಅದಕ್ಕೆ ಆ ಆವಶ್ಯಕತೆಯೂ ಇರಲಿಲ್ಲ. ಯಾಕಂದರೆ ಸರಕಾರದ ಪ್ರಬಲ ಹಸ್ತವು ಅದು ಹೊರಗಣ ಧಾಳಿ ಆಕ್ರಮಣಗಳಿಗೊಳಗಾಗದಂತೆ ಸದಾ ಆಶ್ರಯ ನೀಯುತ್ತಿತ್ತು. ಆದುದರಿಂದ ಅದು ಭೌತಿಕ ಜೀವನದಿಂದ, ರಷ್ಯದ ಮಾನವ ಕೋಟಿಯ ಜೀವನ ಸಮಸ್ಯೆ, ಸಂಕಷ್ಟ, ಪೀಡೆಗಳಿಂದ ದೂರವಾಗಿಯೇ ಇದ್ದಿತು.

ಅದಕ್ಕೆ ಆಂತರಿಕ ಶುದ್ಧೀಕರಣಕ್ಕೂ ಆಸ್ಪದವಿರಲಿಲ್ಲ. ಯಾಕಂದರೆ ಆತ್ಮರೋಧ, ಸಂದೇಹಗಳು ತಲೆಯೆತ್ತಿದೊಡನೆಯೇ ಅಣಗಿಸಲ್ಪಡುತ್ತಿದ್ದುವು ಸರ್ವ ಮಾನವ ಕೋಟಿಗೆ ಸದಾ ಕಾಲಕ್ಕೆ ಬೇಕಾದ ಧಾರ್ಮಿಕ ಜ್ಞಾನದ ಆದಿಯೂ ಅಂತ್ಯವೂ ಎಲ್ಲವೂ ತನ್ನಲ್ಲೇ ಇದೆ ಎಂಬ ಆತ್ಮತೃಪ್ತಿಯಿಂದ ರಷ್ಯದ ಧರ್ಮವು ತಾನೇ ತಾನಾಗಿದ್ದಿತು ಯಾರಾದರೊಬ್ಬ ಕ್ರೈಸ್ತ ಸನ್ಯಾಸಿಯಲ್ಲಿ ಅಥವಾ ಧರ್ಮಾನುಯಾಯಿಯಲ್ಲಿ ಸ್ವತಂತ್ರ ವಿಚಾರೋದಯವಾಗಿ ಅವನೇನಾದರೂ ಆಕ್ಷೇಪವೆತ್ತಿದರೆ, ಯಾವುದಾದರೊಂದು ಸನ್ಯಾಸಾಶ್ರಮ ಅಥವಾ ಹಳ್ಳಿಯಲ್ಲಿ ಅತೃಪ್ತಿಯ ಶ್ವಾಸವೆದ್ದಿತೆಂದರೆ ಅದು ಕೂಡಲೆ ಕತ್ತುಹಿಸುಕಲ್ಪಡುತ್ತಿತ್ತು. ಯಾವುದಾದರೊಂದು ಧಾರ್ಮಿಕ ಸಂಪ್ರದಾಯದ ಆಚರಣೆ, ಧರ್ಮಗ್ರಂಥಗಳ ಶಬ್ದೋಚ್ಚಾರಣೆ ಅಥವಾ ಕ್ರೂಜೆಯನ್ನು ಎರಡು ಬೆರಳಲ್ಲಿ ಹಿಡಿಯಬೇಕೋ ಇಲ್ಲವೆ ಇಡೀ ಕೈಯಲ್ಲೋ ಎಂಬ ಕುರಿತೆಲ್ಲಾ ತರ್ಕದ ದೊಡ್ಡ ಬಿರುಗಾಳಿಯೆದ್ದಿರಬಹುದು ಆದರೆ ಹೊರಗಣ ಲೋಕದ ಧಾರ್ಮಿಕ ಚಳವಳಗಳ ಗೊಡವೆಯೇ ಅದಕ್ಕಿರಲಿಲ್ಲ ಆದುದರಿಂದ ಅದಕ್ಕೆ ಧಾರ್ಮಿಕ ಬೆಳವಣಿಗೆಯೇ ಇರಲಿಲ್ಲ ಕೇವಲ ಯಾಂತ್ರಿಕ ತಾಂತ್ರಿಕ ತನವೇ ಅದರ ಜೀವಾಳವಿದ್ದಿತು ಪೀಟರ್ ದಿ ಗ್ರೇಟ್ ಎಂಬ ಅರಸನ ಕಾಲದಲ್ಲಿ ರಷ್ಯದ ಧರ್ಮವು ಸರಕಾರದ ಅಧೀನ ಸಂಸ್ಥೆಯಾಗಿ ತನ್ನ ಸಂಪೂರ್ಣ ಸ್ವಾತಂತ್ರ್ಯವನ್ನು ಕಳಕೊಂಡು ಝಾರರಾ ಕೈಯ ಆಯುಧವಾಯಿತು. ಹೊರಗಣ ಭಾವನೆಗಳಿಗೆ ಅದರ ದ್ವಾರಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟುವು. ಇಂತಹ ಧರ್ಮದ ಕುರಿತು ರಷ್ಯದ ಸುಪ್ರಸಿದ್ಧ ಗ್ರಂಥಕರ್ತರೂ ವೇದಾಂತಿಯೂ ಆದ ಟೋಲ್‌ಸ್ಟೋಯಿಯವರು, "ಈ ಹಾನಿಕರ ಪಂಥಕ್ಕೆ ನಾನು ವಿರೋಧಿಯಾಗದಿರಲು ಸಾಧ್ಯವಿಲ್ಲ. ಅದು ದೇವರ ಮತ್ತು ಆತನ ನಿಯಮದ ಸುಳ್ಳು ಭಾವನೆಗಳನ್ನು ತರುಣ ಜನಾಂಗದವರಲ್ಲಿ ಮತ್ತು ಮೂಢ ಜನರಲ್ಲಿ ತುಂಬಿ ಅವರನ್ನು ಕೆಡಿಸಲೆತ್ನಿಸುತ್ತದೆ" ಎಂದು ಬರೆದುದೇನೂ ಆಶ್ಚರ್ಯವಲ್ಲ. "ರಷ್ಯದ ದೇವಾಲಯವು ಪ್ರಾಚೀನ ಧಾರ್ಮಿಕ ವಸ್ತು ಸಂಗ್ರಹಾಲಯವಾಗಿದೆ" ಎಂದು ಪ್ರಸಿದ್ಧ ತತ್ವಜ್ಞರಾದ ಡಾಕ್ಟರ್ ಇ. ಜೆ. ಡಿಲ್ಲಿನ್‌ರವರು ಹೇಳಿರುವರು.

ಪೂರ್ವಾಚಾರಸಂಪನ್ನ ಬಡದೇವಾಲಯದ ಧಾರ್ಮಿಕ ಸೇವೆಯ ಪರಿಣಾಮವಾಗಿ ರಷ್ಯದ ಒಕ್ಕಲಿಗರ ಆತ್ಮಿಕ ಜೀವನವು ಬರಡಾಗಿ ಹೋಗಿದ್ದಿತು ಅದು ಜೀವಂತ ಭಕ್ತಿಭಾವ, ಶ್ರದ್ಧೆಯ ನಿಜವಾದ ಉದ್ದೇಶ ಮತ್ತು ಧಾರ್ಮಿಕ ಪ್ರಸಂಗಗಳ ಆಧುನಿಕ ತಿಳುವಳಿಕೆಯಬದಲಿಗೆ ಅದ್ಭುತವಾದ ಮಂತ್ರತಂತ್ರ ಮತ್ತು ವಿಧಿನಿಯಮಗಳ ಮೇಲೆ ಅವಲಂಬಿಸಿಕೊಂಡಿತ್ತು. ಯಾವಾಗಲೂ ತಿರುಳಿಗಿಂತಲೂ ಸಿಪ್ಪೆಗೆ, ಅಂತರ್ಭಾವಕ್ಕಿಂತಲೂ ಬಾಹ್ಯ ವಿಧಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವೆನೀಯುತ್ತಿತ್ತು. ಧಾರ್ಮಿಕ ಪ್ರವಚನವು ಬಾಹ್ಯ ಥಳಕು ಮಿಣಿಕಿನಿಂದ ಕಣ್ಣಿಗೆ ರಮ್ಯವೂ ಕಿವಿಗೆ ಇಂಪೂ ಆಗಿದ್ದಿತು ಅದೊಂದು ನಾಟಕ ಪ್ರದರ್ಶನದಂತೆ ನಡೆಯುತ್ತಿದ್ದಿತು. ಮಂಜುಲಗಾನ ರತ್ನಖಚಿತ ಪ್ರತಿಮೆಗಳ ಮತ್ತು ಸಂಕೇತಗಳ ಆಕರ್ಷಣೀಯ ಉಡಿಗೆ ತೊಡಿಗೆಗಳ ಮೆರುಗು ಇವೇ ದೇವಾಲಯದ ಆರಾಧನೆಯ ಪ್ರಾಮುಖ್ಯ ವಿಷಯವಾಗಿದ್ದುವು. ಆದರೆ ದೇವಾಲಯದ ಬೆನ್ನೆಲುಬಿನಂತಿದ್ದ ಒಕ್ಕಲಿಗನ ಜೀವನಕ್ಕೂ ಈ ವಿಜೃಂಭಣೆಯ ವಿಧಿ ಪೂಜಾದಿಗಳಿಗೂ ಯಾವ ಸಂಬಂಧವೂ ಇರಲಿಲ್ಲ, ಅವನ ಮೂಢನಂಬಿಕೆಗಳು ದೃಢವಾಗಿದ್ದು ಹಳ್ಳಿಗಳಲ್ಲಿ ನೆಲೆಸಿಂತು ಒಕ್ಕಲಿಗನನ್ನು ಸೂರೆಮಾಡುತ್ತಿದ್ದ ಮಂತ್ರತಂತ್ರ ಮಾಟಮಾಯಾದಿಗಳನ್ನೆಲ್ಲಾ ದೇವಾಲಯವು ಸಹಿಸುತ್ತಿದ್ದಿತು. ಒಕ್ಕಲಿಗನು ವಿಪರೀತ ಕುಡಿದು ಕದ್ದು ಕ್ರೂರವಾಗಿ ವರ್ತಿಸಿ ನಾನಾ ದುರ್ಗುಣಗಳ ಕೆಸರಲ್ಲಿ ಬಿದ್ದು ನರಳುವದನ್ನು ಅದು ಕಂಡು ಅವನನ್ನು ಉದ್ಧರಿಸಲಿಕ್ಕೆ ಯಾವಪ್ರಯತ್ನವನ್ನೂ ನಡಿಸಲಿಲ್ಲ. ಕ್ರೈಸ್ತ ಧರ್ಮವು ಎಂದೂ ಒಕ್ಕಲಿಗರ ಆಂತರಿಕ ಜೀವನದ ಒಂದು ಭಾಗವಾಗಿರಲಿಲ್ಲ. ಬಿದು ಅವನಲ್ಲಿ ಧರ್ಮಸ್ಫೂರ್ತಿಯನ್ನುಂಟುಮಾಡುವುದೇ ಅಪರೂಪ ಬೈಬಲ್ ಎಂದರೆ ಅವನಿಗೇನೆಂದು ತಿಳಿದಿರಲಿಲ್ಲ. ಹೆಚ್ಚಿನ ಒಕ್ಕಲಿಗರು ನಿರಕ್ಷರ ಕುಕ್ಷಿಗಳಾದ್ದರಿಂದ ಬೈಬಲನ್ನು ಓದಿದವರೇ ಅಲ್ಲ. ಅವರು ಧರ್ಮದೇವರುಗಳ ವಿಷಯ ತಿಳಿದುದೆಂದರೆ ರಷ್ಯದ ಪೂರ್ವಾಚಾರನಿಷ್ಠ ದೇವಾಲಯದಿಂದ ಅದು ಈ ಮೊದಲೇ ಸೂಚಿಸಿರುವಂತೆ ಅಂತರ್ಯಕ್ಕಿಂತ ಬಾಹ್ಯಕ್ಕೇನೇ ಹೆಚ್ಚಿನ ಲಕ್ಷ್ಯ ಕೊಡುತ್ತಿತ್ತು. ಇದರ ಪರಿಣಾಮವಾಗಿ ಒಕ್ಕಲಿಗನು ಧರ್ಮವೆಂದರೆ ಕೇವಲ ಬಾಹ್ಯ ಆಚರಣೆಯಲ್ಲದೆ, ಆಂತರಿಕ ಜೀವಣಿವಣಿಗೆಯೆಂದು ಭಾವಿಸಿರಲಿಲ್ಲ. ಆತ್ಮಿಕಭಾವನೆ ಬೆಳವಣಿಗೆ ಎಂಬುದೇನೆಂದು ಅವನಿಗೆ ತಿಳಿದಿರಲಿಲ್ಲ. ಧಾರ್ಮಿಕ ಆದರ್ಶ ಆತ್ಮಜ್ಞಾನ ಮತ್ತು ಪರಮಾತ್ಮ ಸಾಕ್ಷಾತ್ಕಾರ ವೆಂಬುದರ ಅರಿವೇ ಅವನಿಗಿಲ್ಲದೆ ಕೇವಲ ಶುಷ್ಕ ಆಚಾರ ವಿಧಿಗಳೇ ಧರ್ಮ ಸರ್ವಸ್ವವೆಂದು ಭಾವಿಸಿ ಕೊಂಡಿದ್ದನು. ಕ್ರಮ ಪ್ರಕಾರ ದೇವಾಲಯಕ್ಕೆ ಹೋಗಿ ಉಪವಾಸ ವ್ರತವನ್ನಾಚರಿಸಿ ತನ್ನ ಪ್ರೀತಿಯ ದೇವತೆಯ ಪೀಠದಮುಂದೆ ಮೇಣದಬತ್ತಿಗಳನ್ನು ಹಚ್ಚಿಸಿ, ಘನರೋಗ ರುಜಗಳನ್ನು ನಿವಾರಿಸಿ, ಮಕ್ಕಳಿಲ್ಲದವರಿಗೆ ಮಕ್ಕಳುಂಟಾಗುವಂತೆ ಹರಸುವುದೇ ಮೊದಲಾದ ವರಪ್ರದಾನ ಮಾಡುತ್ತಿದ್ದ ಸನ್ಯಾಸಿಗಳನ್ನು ಪೂಜಿಸುವುದೇ ರಷ್ಯದ ಒಕ್ಕಲಿಗನ ಧರ್ಮಸರ್ವಸ್ವವಾಗಿದ್ದಿತು. ಅವನು ದೂರದ ತೀರ್ಥಕ್ಷೇತ್ರಗಳಿಗೆ ಪುಣ್ಯಸಂಪಾದನೆಗಾಗಿ ಯಾತ್ರೆ ಮಾಡುತ್ತಿದ್ದನೇ ಹೊರತು ಆತ್ಮಾನಂದಕ್ಕಲ್ಲ. ನ್ಯಾಯನೀತಿಯ ಪರಿವೆಯು ಅವನಿಗೆ ಅಷ್ಟೇನೂ ಇರಲಿಲ್ಲ. ಕೊಲೆ ದರೋಡೆ ಕಳವುಗಳಲ್ಲಿ ಜಯ ಹೊಂದುವುದಕ್ಕಾಗಿ ಒಕ್ಕಲಿಗರು ದೇವರ ಸಹಾಯವನ್ನು ಪ್ರಾರ್ಥಿಸಿಕೊಳ್ಳುವುದೂ ಇದ್ದಿತು. ಇಂತಹ ತಾಮಸಿಕ ಭಾವನಾಪ್ರಧಾನವಾದಧರ್ಮವು ಕ್ರಾಂತಿಯ ಧಾಳಿಯ ಮುಂದೆ ಶಿಥಿಲವಾಗದೆ ಉಳಿಯುವುದಾದರೂ ಹೇಗೆ? ರಷ್ಯದ ಒಕ್ಕಲಿಗನ ದೃಷ್ಟಿಯಲ್ಲಿ ಶ್ರದ್ಧಾಳು ದೇವಾಲಯವೆಂಬುದು ಅಭೇದ್ಯವೂಗಂಭೀರವೂ ಪವಿತ್ರವೂ ಆದ ಕೋಟೆಯಂತಿತ್ತು. ಅದನ್ನು ವಿರೋಧಿಸುವುದು ದೊಡ್ಡಪಾಪವಾಗಿತ್ತು. ದೇವಾಲಯಗಳ ಉಚ್ಚಅಧಿಕಾರಿಗಳಾದ ಬಿಶಪರು ಆರ್ಚ್ ಬಿಶಪರು, ಗಳನ್ನು ಅವನು ಅಸಾಧಾರಣ ಮನುಷ್ಯರೆಂದು ಭಾವಿಸಿಕೊಂಡಿದ್ದನು. ಕೇವಲ ಮನುಷ್ಯನಿಂದ ಅವರಿಗೆ ಯಾವತರದ ಹಾನಿ ಮಾಡಲೂ ಅಸಾಧ್ಯವೆಂದು ನಂಬಿದ್ದನು. ಆದರೆ ಕ್ರಾಂತಿಯುಂಟಾದಾಗ ರಷ್ಯದ ಅತ್ಯಂತ ಪವಿತ್ರರೂ ಅತ್ಯುಚ್ಚಧರ್ಮಾಧಿಕಾರಿಯಾದ ಪೇಟ್ರಿಯಾರ್ಕ್ ಟಿಕೊನ್‌ರವರು ಕೈದುಮಾಡಲ್ಪಟ್ಟು ಸೆರೆಯಲ್ಲಿರಿಸಲ್ಪಟ್ಟರು ಪರಂತು ಅವರನ್ನು ಕೈದುಮಾಡಿದ ಜನರೇನೂ ಕಲ್ಲಾಗಿಹೋಗಲಿಲ್ಲ ಪವಿತ್ರ ಧರ್ಮಪೀಠಗಳಿಂದ ಚಿನ್ನಾಭರಣಗಳನ್ನು ತೆಗೆಯಲಾಯ್ತು. ಅವನ್ನು ತೆಗೆದವರ ಕೈಗಳು ಮರಕಟ್ಟಿ ಹೋಗಲಿಲ್ಲ. ಸಾಧು ಸಂತರುಗಳ ಅದ್ಭುತ ಶಕ್ತಿಯುಳ್ಳವೆನಿಸುವ ಗೋರಿಗಳು ಅಗೆದು ತೆಗೆಯಲ್ಪಟ್ಟವು ಆಗ ಹಾರೆ ಪಿಕ್ಕಾಸುಗಳನ್ನು ಉಪಯೋಗಿಸಿದವರು ಸತ್ತುಬೀಳಲಿಲ್ಲ. ಬಿಶಪರು ಆರ್ಚ್‌ಬಿಶಪರು, ಪವಿತ್ರಸನ್ಯಾಸಿಗಳು, ಅದ್ಭುತಮಂತ್ರಗಾರರು ಮೊದಲಾದವರೆಲ್ಲಾ ಸಾಮಾನ್ಯತಕ್ಷೀರುಗಾರರಂತೆಮನೆಗಳಿಂದ ಹೊರದೂಡಲ್ಪಟ್ಟು ಕೆಲವರು ಸೆರೆಯಲ್ಲಿರಿಸಲ್ಪಟ್ಟರು, ಕೆಲವರು ಗಡಿಪಾರಾದರು, ಕೆಲವರ ತಲೆಕಡಿಯಲಾಯ್ತು. ಅವರನ್ನು ಶಿಕ್ಷಿಸಿದವರಿಗೆ ಯಾವ ಅನಾಹುತವೂ ಆಗಲಿಲ್ಲ. ರಷ್ಯದ ಒಕ್ಕಲಿಗನು ಯಾರ ಉಪದೇಶಕ್ಕಾಗಿ ಹೋಗುತ್ತಿದ್ದನೋ, ಯಾರ ದೈವ ಸಾಕ್ಷಾತ್ಕಾರಕ ಶಕ್ತಿಯಲ್ಲಿ ಅವನಿಗೆ ಸಂಪೂರ್ಣವಿಶ್ವಾಸವಿತ್ತೋ ಅವರೇ ಈಗ ತಮಗೆ ಬಂದಿರುವ ದುರ್ದೈವದಿಂದ ತಮ್ಮನ್ನು ರಕ್ಷಿಸಿಕೊಳ್ಳದಾದರು. ಅವರ ಅದ್ಭುತಶಕ್ತಿಯ ಗುಟ್ಟು ರಟ್ಟಾಯಿತು ಸಂತಸಾಧುಗಳು ಅಸಹಾಯಕರಾದರು ಅವರ ಮಂತ್ರ, ತಂತ್ರ, ಪೂಜೆ, ಕೋಪ, ಶಾಪ, ವೆಲ್ಲವೂ ನಿರರ್ಥಕವಾಯಿತು ದುಷ್ಟ ಕ್ರಾಂತಿಕಾರರೂ ದೇವಾಲಯ, ಮಂತ್ರವಾದ ಅದ್ಭುತವಾದ, ಮತ್ತು ಬಿಶಪ ಆರ್ಚ್‌ಬಿಶಪರ ಮೇಲೆ ಮಾತ್ರವಲ್ಲದೆ ರಷ್ಯದ ಒಕ್ಕಲಿಗನ ಭಕ್ತಿಯ ದೇವರಮೇಲೆಯೇ ತಮ್ಮ ವಿಜಯ ಪತಾಕೆಯನ್ನೂರಿಬಿಟ್ಟರು ಇಂತಹ ವಿದ್ಯಮಾನಗಳು ರಷ್ಯದ ಒಕ್ಕಲಿಗನ ಶ್ರದ್ಧೆಯನ್ನು ಕಿತ್ತುಹಾಕಿ ಪೂರ್ವಾಚಾರ ನಿಷ್ಠ ದೇವಾಲಯಕ್ಕಿದ್ದ ಪ್ರಭಾವವನ್ನು ನಿರ್ನಾಮಗೊಳಿಸಿಬಿಟ್ಟವು.

(ಮುಂದುವರಿಯುವುದು

ಮಧ್ಯ ಯೂರೋಪಿನಲ್ಲಿ ಮತ್ತೊಂದು ಯುದ್ಧವೇ?

ಯೂರೋಪಿನ ರಾಷ್ಟ್ರಗಳ ಕಣ್ಣಿನಲ್ಲಿ ಹಿಟ್ಲರನು ಒಂದು ಮುಳ್ಳುಕಾಳಿನಂತೆ ಒತ್ತುತ್ತಿದ್ದಾನೆ. ಅವನಿಂದ ಯಾವತ್ತೂ ಅವರಿಗೆ ಕಣ್ಣುಬೇನೆ ತಪ್ಪುವಂತಿಲ್ಲ. ಆತನು ಒಂದಲ್ಲದಿದ್ದರೊಂದು ಮಾರ್ಗದಲ್ಲಿ ಇಡೀ ಯೂರೋಪಿನ ರಾಷ್ಟ್ರಗಳ ನಡುವೆ ತಾನು ಅಸಮಾನನೆನ್ನಿಸಿಕೊಳ್ಳಲು ಹೊಂಚು ಹಾಕುತ್ತಿದ್ದಾನೆ. ಇದು ಯಾವತ್ತೂ ಗುಟ್ಟೇನೂ ಅಲ್ಲ. ಆದರೆ ಆ ಗುರಿಯನ್ನು ಸಾಧಿಸಲು ಅವನು ಏನುಮಾರ್ಗ ಅನುಸರಿಸುವನೆಂಬುದೇ ಅದರಲ್ಲಿರುವ ಐತಿಹ್ಯ.

ಅವನ ಗುಪ್ತಸಂಧಾನಗಳನ್ನು ಬಯಲಿಗೆಳೆಯಲು ಸದಾ ಗೂಢಚಾರರ ಸೈನ್ಯವೇ ಒಂದಿದೆ. ಎತ್ತು ಹಾರಲಿ ಹಾರದಿರಲಿ ಕೊಬ್ಬಿನಗೂಳಿ, ಯಾವಕಡೆಗೆ ನೋಡಿದರೆ ಆ ಕಡೆ ನುಗ್ಗಿ ಹಾರಾಡಲೇ ಬಹುದು-ಕವ್ವದಿ (ಗೌಳಿ) ಕುಣಿಯಲು ಮೊದಲು ಮಾಡಿಯೇ ಬಿಟ್ಟೀತು. ಎಂದು ಹೇಳಿದಂತೆ ಆತನ ಪ್ರತಿಯೊಂದು ಇಂಕಾರ ಹುಂಕಾರಕ್ಕೂ ಭಾಷ್ಯಮಾಡುತ್ತಿದ್ದಾರೆ.

ಕಳೆದ ವಾರಗಳಲ್ಲಿ ತಮ್ಮ ಗಡಿನಾಡಾದ ಜೆಕೊಸ್ಲೊವೇಕಿಯಾದಲ್ಲಿ ಜರ್ಮನ್ ಹಿತಚಿಂತನೆಗಾಗಿ ಒಂದು ಸೈನ್ಯವಿರಬೇಕೆಂದು ಹಿಟ್ಲರನು ತೀರ್ಮಾನಿಸಿದನು. ಇದಕ್ಕೆ ಸ್ಲೊವೇಕಿಯಾದ ಆಂತರ್ಯದ ಪರಿಸ್ಥಿತಿಗಳೇ ಕಾರಣ. ೧೯೩೮ನೇ ಮೇ ೧೨ರಿಂದ ಜೂನ್ ೫ರ ಒಳಗಾಗಿ ಜೆಕೋ ಸರಕಾರವನ್ನು ಪ್ರತಿಭಟಿಸಿ ದಂಗೆಯೇಳಲು ಆ ಸೀಮೆಯ ದಕ್ಷಿಣಭಾಗದ ನಿವಾಸಿಗಳಾಗಿರುವ ಹಂಗೇರಿಯನ್ ಜನರು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ ಇದು ಸರಕಾರಕ್ಕೂ ತಿಳಿಸಲ್ಪಟ್ಟಿದೆ. ಆ ದಂಗೆಯನ್ನೆದುರಿಸಲು ಜೆಕೋ ಸರಕಾರವು ತನ್ನ ಶಕ್ತಿ ಯುಕ್ತಿಗಳ ಸಂಗ್ರಹಮಾಡಿಕೊಳ್ಳುತ್ತಾ ಇದೆ. ಇದು ದಕ್ಷಿಣ ಜೆಕೊಸ್ಲೊವೇಕಿಯಾದ ಸ್ಥಿತಿ.

ಈ ಸೀಮೆಯ ಉತ್ತರಗಡಿಯೇ ಜರ್ಮನಿ. ಆ ಎಲ್ಲೆಕಟ್ಟಿನ ಜಿಲ್ಲೆಗಳಲ್ಲಿ ಜರ್ಮನ್ ಜನರು ಅಲ್ಪ ಸಂಖ್ಯಾತರಾಗಿ ಇರತಕ್ಕವರು. ಅವರು ಅಲ್ಪ ಸಂಖ್ಯೆಯ ಪ್ರಜೆಗಳಾದ ತಮ್ಮ ಹಕ್ಕುಗಳಿಗೆ ತಾಪತ್ರಯ ಬಾರದಂತೆ ತಾವೂ ಅದೇ ಕಾಲದಲ್ಲಿ ದಂಗೆಯೊಂದನ್ನು ಉತ್ತರ ಮೇರೆಯಲ್ಲಿ ಎಬ್ಬಿಸಲು ಸನ್ನಾಹ ಮಾಡುತ್ತಿದ್ದಾರೆ. ಈ ದಂಗೆಯು ಜರ್ಮನ್ ನಾಜೀನಾಯಕ ಹೇರ್ ಹೆನ್‌ಲೀನ್ ಎಂಬವನ ಕೈಕೆಳಗೆ ನಡೆಸಲ್ಪಡಬೇಕೆಂದೂ ಗೊತ್ತಾಗಿದೆ. ಈತನ ನಾಜೀಪಡೆಗೆ ಶಸ್ತ್ರಾಸ್ತ್ರಗಳನ್ನೊದಗಿಸಲು ಜರ್ಮನಿಯು ಒಪ್ಪಿಕೊಂಡಿದೆ. ಅದರ ಜೊತೆಗೆ ಹಿಟ್ಲರನ ಸೈನ್ಯಗಳು ತಮ್ಮ ನಾಡಿನ ಹಿತಸಾಧನೆಗೆಂಬ ನೆವದಿಂದ ಈ ರಾಜ್ಯದೊಳಗೆ ಬಂದು ಠಿಕಾಣಿ ಹಾಕಲವಕಾಶವಾಗುವುದು.

ಸಣ್ಣರಾಜ್ಯವಾದ ಜೆಕೊಸ್ಲೊವೇಕಿಯದಲ್ಲಿ ಜರ್ಮನರ ಕೈವಾಡ ಬಲು ಬಲವಾಗಿಯೇ ಇದ್ದೇ ಇದೆ. ಇದರ ಜೊತೆಗೆ ಮೊದಲೇ ಮಳೆ, ಅದರಮೇಲೆ ಕೊಳೆ ಎಂದಹಾಗೆ ಹಿಟ್ಲರನ ಸೈನ್ಯವೂ ಬಂದು ಕೂತರೆ ಕೇಳಬೇಕೆ? ಅವರ ಸ್ಥಿತಿಯು ಹುಣ್ಣುಮೇಲೆ ಬೊಕ್ಕೆ ಎದ್ದ ಹಾಗಾಗುತ್ತದೆ. ಈ ಆಲೋಚನೆ ಹೇಗೋ ಹೊರಬಿದ್ದು ಜೆಕೋ ಸರಕಾರಕ್ಕೆ ಚಳಿಜ್ವರ ತಂದಿಟ್ಟಿತು.

ಹಿಟ್ಲರನ ಸನ್ನಾಹ

ಇಂದು ಜೆಕೊಸ್ಲೆವೇಕಿಯಾ ಒಂದು ಸಣ್ಣ ಸ್ವತಂತ್ರ ರಾಜ್ಯ. ಆದರೆ ಯುದ್ಧ ಕಾಲಕ್ಕೆ ಪೂರ್ವ ಅದು ಜರ್ಮನ್ ಎಲ್ಲೆಯ ಒಳಗೇ ಇತ್ತು. ಈಚೆಗೆ ಅವರು ಸ್ವಾತಂತ್ರ್ಯ ಚಳವಳಿ ಹೂಡಿ ಜರ್ಮನಿಯಿಂದ ಪ್ರತ್ಯೇಕವಾದರು. ಡಿಕ್ಟೇಟರ್ ಹಿಟ್ಲರಿಗೆ ಈಗ ಅವರಮೇಲೆ ಕಣ್ಣು.

ಕೂಡಲೇ ಅವರು ಯೂರೋಪಿನ ಎಲ್ಲಾ ರಾಷ್ಟ್ರಗಳಿಗೂ ತಮ್ಮ ಪ್ರಾರ್ಥನೆ ಕಳುಹಿಸಿದರು. ಕೂಡಲೇ ಫ್ರಾನ್ಸ್, ಮತ್ತು ರಷ್ಯಾ ಸರಕಾರಗಳು ಜರ್ಮನಿಯೇನಾದರೂ ಪುಂಡಾಟ ಎತ್ತಿದರೆ ನಾವು ಬಂದು ಅವರನ್ನು ಮಟ್ಟಹಾಕಿ ನಿಮ್ಮನ್ನು ಉದ್ಧಾರ ಮಾಡುತ್ತೇವೆಂದು ಮಾತು ಕೊಟ್ಟಿದ್ದಾರೆ. ಅಂತೂ ಯುದ್ಧವೇಳುವ ಪ್ರಸಂಗ ಹತ್ತಿರವಾಗುತ್ತಾ ಇದೆ.

ಈ ನಡುವೆ ಈ ದಂಗೆಗಳನ್ನು ಎಬ್ಬಿಸುವುದಕ್ಕೂ ಜರ್ಮನಿಯು ಜೆಕೊಸ್ಲೊವೇಕಿಯವನ್ನು ಆಕ್ರಮಿಸುವುದಕ್ಕೂ ಮೇ ೧೨ರ ಲಾಗಾಯ್ತು ಜೂನ್ ೫ರ ವರೆಗಿನ ದಿನಗಳನ್ನೇ ಏಕೆ ಲಗ್ನ ಕಟ್ಟಿದ್ದಾರೆಂಬುದೂ ಒಂದು ಮಹಾ ಪ್ರಶ್ನೆ. ಮೇ ತಿಂಗಳು ಆರನೆ ಜಾರ್ಜ್ ಪ್ರಭುಗಳ ಕಿರೀಟಧಾರಣೆಯ ಮಹಾಯೋಗ. ಇಂಗ್ಲೆಂಡ್ ಮತ್ತು ಮಿತ್ರರಾಷ್ಟ್ರಗಳ ಪ್ರಧಾನ ರಂಗಸ್ಥಾನ ಲಂಡನ್ ಪಟ್ಟಣವಾಗಿರುತ್ತೆ. ಮದುವೆ ಗಂಡನ್ನು ಮೆರವಣಿಗೆಗೆ ಹೊರಡಿಸಿ ಮನೆಯವರೆಲ್ಲಾ ಮೋಟಾರು ಹಿಂದೆ ಮೆರವಣಿಗೆಗೆ ಹೋದ ಹಾಗಿರುತ್ತೆ. ಮನೆ ದೋಚಬೇಕೆಂದು ಹೊಂಚು ಹಾಕುವವನಿಗೆ ಇನ್ನೆಂತಹ ಸಂಧಿಬೇಕು? ಅದೇ ರೀತಿಯಲ್ಲಿ ಯುರೋಪಿನ ಮಹಾ ಶಕ್ತಿಯೆನಿಸಿಕೊಂಡ ಇಂಗ್ಲೆಂಡಿಗೆ ಅತ್ತಕಡೆ ಇತ್ತಕಡೆ ನೋಡುವುದಕ್ಕಾಗಲಿ ತಲೆ ತುರಿಸಿಕೊಳ್ಳುವುದಕ್ಕಾಗಲಿ ಪುರಸತ್ತಿಲ್ಲದಿರುವಾಗ ತಾವು ಈ ತುಳಿದಾಟ ಎತ್ತಿದರೆ ತಮ್ಮ ಉದ್ದಿಶ್ಯ ಸುಲಭವಾಗುವುದೆಂದು ಹಿಟ್ಲರ್ ಪಕ್ಷದವರು ಈ ನಿರ್ಧಾರಮಾಡಿದ್ದಾರೆ; ಎಂಬುದೇ ಇಡೀ ಯುರೋಪಿನಲ್ಲಿ ಎದ್ದಿರುವ ಕೂಗು. ಇಂಗ್ಲೆಂಡೊಂದು ಪ್ರತ್ಯಕ್ಷವಾಗಿ ಕತ್ತಿಕಟ್ಟದೆ ಹೊರಗಿದ್ದರೆ ಸಾಕು-ಜೆಕೊಸ್ಲೊವೇಕಿಯವು ಜರ್ಮನಿಯ ಜೋಳಿಗೆಯಲ್ಲಿ ಬಿದ್ದ ಹಾಗೆಯೇ. ಇದು ಜರ್ಮನಿಯ ಸವಿಗನಸು ಮಾತ್ರವೇ ಅಲ್ಲ–ಎಲ್ಲ ಯೂರೋಪೂ ಮನಗಂಡಿದೆ.

ಇದಕ್ಕಾಗಿ ಎಲ್ಲ ಕಡಯಿಂದಲೂ ಪರಿಹಾರಗಳ ಮತ್ತು ತಡೆಕಟ್ಟುಗಳ ಯೋಜನೆಗಳನ್ನು ಮಾಡುತ್ತಿದ್ದಾರೆ. ಜೆಕೊಸ್ಲೊವೇಕಿಯಾದ ಇಡೀ ಪ್ರಜಾ ಸಂಖ್ಯೆಯೇ ೧|| ಕೋಟಿ ಜನರು. ಅವರಲ್ಲಿ ೩೦ ಲಕ್ಷ ಜನರು ಜರ್ಮನರು. ಈ ಮೂವತ್ತು ಲಕ್ಷ ಜರ್ಮನರಲ್ಲಿ ಪೂರಾ ೨೦ಲಕ್ಷ ಜನರು ಹೆರ್ ಹೆನ್‌ಲೀನ್ ನಾಯಕನ ಕೂಗಿಗೆದ್ದು ನಿಲ್ಲುವವರಾಗಿದ್ದಾರೆ. ಇವರನ್ನು ನಾಡಿನ ಒಳಗೇ ಹತೋಟಿಗೆ ತರಬೇಕಾದುದು ಮೊದಲನೆಯ ಕರ್ತವ್ಯ. ಹೊರಗಿನಿಂದ–ಎಂದರೆ ಜರ್ಮನಿಯಿಂದ ಅವರಿಗೆ ಯುದ್ಧ ಸಾಮಾಗ್ರಿಗಳ ಸರಬರಾಜು ಸಾಧ್ಯವಾಗದಂತೆ ತಡೆಗಟ್ಟಲು ತಕ್ಕ ಏರ್ಪಾಡುಗಳನ್ನು ಉತ್ತರ ಮೇರೆಯಲ್ಲಿ ಮಾಡಬೇಕು. ಸಂಭವಕ್ಕೆ ಅವಶ್ಯ ತೋರಿದ ಕೂಡಲೆ ತಮಗೆ ಯುದ್ಧ ಸಾಮಾಗ್ರಿಗಳೂ ಸೈನ್ಯ ಸಹಾಯವೂ ಸಕಾಲದಲ್ಲಿ ಒದಗುವಂತೆ ಏರ್ಪಡಿಸಿಕೊಳ್ಳಬೇಕು. ಇವು ಜೆಕೋ ಸರ್ಕಾರದ ಅವಶ್ಯಕ ಏರ್ಪಾಡುಗಳು. ಅವರಿಗೆ ಬೆಂಬಲಕ್ಕೆ, ಮೊದಲೇ ಹೇಳಿದಂತೆ ಫ್ರಾನ್ಸ್, ರಷ್ಯಾಗಳು ಸಿದ್ಧವಾಗಿ ನಿಲ್ಲುವುವು. ಅವುಗಳು ವಾಗ್ದಾನ ಮಾಡಿರುವುದು ಮಾತ್ರವಲ್ಲದೆ, ಇಂತಹ ಸಂಧಿ ಸಿಕ್ಕೀತೇ ಎಂದು ಎಷ್ಟೋ ದಿನದಿಂದ ಕಾದಿದ್ದು ಸಿಕ್ಕಿದ ಈ ಅವಕಾಶವನ್ನು, ಇಲಿಯನ್ನು ಹುಲಿ ಮಾಡಿಯಾದರೂ ತಮ್ಮ ಸೇಡಿಗೆ ಅವಕಾಶ ಮಾಡಿಕೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಇನ್ನು ಇಂಗ್ಲೆಂಡು ತನ್ನ ಸಂಭ್ರಮದ ಪಟ್ಟಾಭಿಷೇಕ ಮಹೋತ್ಸವದ ನಡುವೆ ವಿಶೇಷ ಏರ್ಪಾಡುಗಳೇನಾದರೂ ಮಾಡುವುದೋ ನೋಡಬೇಕು.

ಹಿಟ್ಲರನು ಜರ್ಮನಿಯಲ್ಲೆಲ್ಲಾ ವೃತ್ತಪತ್ರಿಕೆಗಳು ಮತ್ತು ರೇಡಿಯೋಗಳ ಮುಖಾಂತರ ದೊಡ್ಡ ಪ್ರಚಾರವನ್ನು ಮಾಡುತ್ತಿದ್ದಾನೆ. ಬವೇರಿಯದ ಜರ್ಮನ್ ಸೈನ್ಯಗಳು ಅವಶ್ಯಕ ಬಿದ್ದಲ್ಲಿ ಯುದ್ಧಕ್ಕೆ ಯಾವ ಕ್ಷಣವೂ ಸಿದ್ಧವಾಗಿದ್ದು ತೀರಬೇಕೆಂದೂ ಆರ್ಡರು ಮಾಡಿದ್ದಾನೆ. ಅಲ್ಲದೆ ಜರ್ಮನಿ–ಜಕೋ ಎಲ್ಲೆ ಕಟ್ಟಿನಲ್ಲಿ ಉದ್ದಕ್ಕೂ ವಿಮಾನ ಪಡೆಗಳನ್ನು ತಂದಿಳಿಸಿ ವ್ಯೂಹ ರಚನೆಗೆ ಅವಕಾಶಮಾಡುತ್ತಿದ್ದಾನೆ. ಮಧ್ಯ ಯೂರೋಪೇ ರಣಾಂಗಣವಾಗುವ ಯೋಗವಿದ್ದಲ್ಲಿ, ಮುಂದಿನ ತಿಂಗಳ ಮಧ್ಯಭಾಗದಲ್ಲಿ ಉರಿಯೇಳುವುದಂತೂ ಸಿದ್ಧ. (ಪ್ರಜಾಮತ)

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.

“ಗೊನೊಕಿಲರ್” (ರಿಜಿಸ್ಟರ್ಡ್)

ಡಾ. ಜಸಾನಿಯವರ ಜಗತ್ಪ್ರಸಿದ್ಧ

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗದೆಯಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, Vittalbhai Patel Road, BOMBAY 4

ಕಸ್ತೂರಿ ಮಿಶ್ರಣ ಪಶಮೂಲವೆಂಬ

ಸೂತಿಕಾ ರಸಾಯನ

ಇವರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು, ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ. ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-15	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-30	ಸಂಜೆ 6-15
ಶಟಲ್	ಸಂಜೆ 5-25	ಬೆಳಿಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**

ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಷ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಆಕ್ಟಿಂಗ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸ್ಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ಬೊಂಬೈಯಿಂದ ಬರುವದು	ಬೊಂಬೈಗೆ ತೆರಳುವದು
ಮಂಗಳೂರು	ಗುರುವಾರ ಬೆಳಿಗ್ಗೆ 8 ಗಂಟೆ	ಶನಿವಾರ ಬೆಳಿಗ್ಗೆ 9 ಗಂಟೆ
	ಸೋಮವಾರ ಬೆಳಿಗ್ಗೆ 7 ಗಂಟೆ	ಮಂಗಳವಾರ ಬೆಳಿಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 2-30	ಶನಿವಾರ ಮಧ್ಯಾಹ್ನ 12
	ಆದಿತ್ಯವಾರ ಹಗಲು 3 ಗಂಟೆ	ಮಂಗಳವಾರ ಮಧ್ಯಾಹ್ನ 12
ಕುಂದಾಪುರ	ಶನಿವಾರ ಹಗಲು 1 ಗಂಟೆ	ಶನಿವಾರ ಸಂಜೆ ಗಂಟೆ 3-30
		ಮಂಗಳವಾರ ಮಧ್ಯಾಹ್ನ 3-30

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ, ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರಂಪರೆಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ

ಕಾಸರಗೋಡು, ದಕ್ಷಿಣಕನ್ನಡ

THE

Vijaya Bank, Ltd.

Head Office: MANGALORE. Branch Offices: UDIPI, KAUP.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು. ಉಡುಪಿ, ಕಾಪು

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3¼

6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ವರೆಗೆ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೋ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ, ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 100ರ ವರೆಗೆ ಸಾ. ಶೆ. 9. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್ ಮೇನ್. **K. Gopalakrishna Shetty.** ಸಕ್ರಿಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ ಬ್ರದರ್ಸ್,

ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ರೋಗಿಗಳಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು: ಗಿಡ ಒಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದೇಶೀ ಡಿಪೋ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋಸ್ ಸ್ಟೋರ್‌ಗಳಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಸ್. ಶೆಟ್ಟಿ, ಕೆನರಾ ನರ್ಸರಿ,

ಪೋಸ್ಟ್ ಕಾಪು, ದ. ಕನ್ನಡ

ಗವರ್ನರರು ಆಶ್ವಾಸನೆ ಕೊಡಲೊಪ್ಪಲಿಲ್ಲ

ಕಾಂಗ್ರೆಸಿನವರು ಮಂತ್ರಿಮಂಡಲವನ್ನು ರಚಿಸಲು ನಿರಾಕರಿಸಿದರು. * * ಶ್ರೀ. ಸಿ. ರಾಜಗೋಪಾಲಾಚಾರ್ಯರ ಹೇಳಿಕೆ.

ಮಾರ್ಚಿ ತಾ. ೨೭ರ ವರೆಗೆ ಮದ್ರಾಸು, ಬೊಂಬಾಯಿ ಮತ್ತು ಒರಿಸ್ಸ ಪ್ರಾಂತ್ಯಗಳ ಗವರ್ನರರುಗಳು ಕಾಂಗ್ರೆಸ್ ಪಕ್ಷದ ನಾಯಕರಿಗೆ ಬೇಕಾದ ಆಶ್ವಾಸನೆಯನ್ನು ಕೊಡಲೊಪ್ಪಿರುವುದಿಲ್ಲ. ಆದುದರಿಂದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯದ ಮೇರೆಗೆ ಕಾಂಗ್ರೆಸ್ ಪಕ್ಷೀಯರು ಮಂತ್ರಿ ಮಂಡಲಿಯನ್ನು ರಚಿಸಲು ನಿರಾಕರಿಸಿರುವರು. ಇದೇ ತಾ ೨೭ರಲ್ಲು ಶ್ರೀ. ಸಿ. ರಾಜಗೋಪಾಲಾಚಾರ್ಯರು ಕೊನೆಯ ಸಲ ಮಾನ್ಯ ಗವರ್ನರರನ್ನು ಕಂಡರು. ಯಾವ ಪಕ್ಷದ ಮಂತ್ರಿ ಮಂಡಳಿಗಾದರೂ ತಾನು ಸೌಹಾರ್ದದಿಂದ ಸಹಕಾರ ನೀಯುವೆನೆಂಬ ಮಾತಲ್ಲದೆ, ಕಾಂಗ್ರೆಸಿನ ನಿರ್ಣಯದಂತೆ ತಾವು ತಮ್ಮ ವಿಶಿಷ್ಟಾಧಿಕಾರಗಳನ್ನು ಸರ್ವಸಾಮಾನ್ಯ ಸಂದರ್ಭಗಳಲ್ಲಿ ಉಪಯೋಗಿಸಲಿಕ್ಕಿಲ್ಲ ಮತ್ತು ಆಡಳಿತ ವಿಷಯದಲ್ಲಿ ಮಂತ್ರಿಗಳ ಸಲಹೆ ಮೇರೆಗೆ ನಡೆಯುವೆನೆಂಬ ಯಾವ ಭರವಸೆಯನ್ನೂ ಗವರ್ನರರು ಕೊಡಲಾರದಾದರು.

ಈ ಸಂಬಂಧವಾಗಿ ಶ್ರೀ. ಸಿ. ರಾಜಗೋಪಾಲಾಚಾರ್ಯರು ಈಗ ಮದ್ರಾಸಿಗೆ ಹಿಂದೀ ಸಮ್ಮೇಳನಕ್ಕಾಗಿ ಬಂದಿರುವ ಮಹಾತ್ಮ ಗಾಂಧಿಯವರೊಡನೆ ಕೂಡಾ ಮಾತಾಡಿ ಮಂತ್ರಿಮಂಡಲಿಯನ್ನು ನಿರಾಕರಿಸುವ ನಿರ್ಧಾರಕ್ಕೆ ಬಂದಿರುವರು, ತಾವೆಷ್ಟರ ಮಟ್ಟಿಗೆ ಕಾಂಗ್ರೆಸ್ಸಿನ ಬೆಂಬಲದಲ್ಲಿರುವೆವೆಂಬುದನ್ನು ಜನರು ಇನ್ನೂ ಸಾಕಷ್ಟು ಸರಕಾರಕ್ಕೆ ತೋರಿಸಿರುವಂತೆ ತೋರುವುದಿಲ್ಲ. ಓಟುಗಳಿಂದ ಕಾಂಗ್ರೆಸಿನ ಪ್ರಭಾವವು ಹೆಚ್ಚಿರುವುದೆಂಬುದೇನೋ ನಿಜ. ಆದರೆ ಕಾಂಗ್ರೆಸು ಅಪ್ರತಿಹತವಾದ ಶಕ್ತಿ ಪಡೆದು ಸರಕಾರವು ಅದರ ಸ್ಥಾನವನ್ನು ಸ್ವಾಭಾವಿಕವಾಗಿ ಅಂಗೀಕರಿಸುವಂತಾಗಲು ಇನ್ನೂ ಹೆಚ್ಚಿನ ಕೆಲಸಮಾಡಲಿದೆಯೆಂದೇ ಶ್ರೀ. ಸಿ. ರಾಜಗೋಪಾಲಾಚಾರ್ಯರ ಅಭಿಮತ. ನಮ್ಮ ಜನ್ಮ ಹಕ್ಕಾದ ಸ್ವಾತಂತ್ರ್ಯ ಮತ್ತು ನಮ್ಮ ನಡುವೆ ಲೋಕದ ಯಾವ ಶಕ್ತಿಗೂ ಇನ್ನು ಹೆಚ್ಚು ಕಾಲ ನಿಲ್ಲಲು ಸಾಧ್ಯವಿಲ್ಲೆಂಬುದನ್ನು ಮದ್ರಾಸ್ ಪ್ರಾಂತ್ಯದ ಜನರೆಲ್ಲಾ ಮನಗಂಡುಕೊಳ್ಳಬೇಕೆಂಬೇ ಅವರ ವಿನಂತಿ. ಅವರು ಈ ಸಂದರ್ಭದಲ್ಲಿ ಕೊಟ್ಟಿರುವ ಹೇಳಿಕೆಯ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

ಆಶ್ವಾಸನೆ ಕೊಡಲು ಸಾಧ್ಯವಿಲ್ಲ

ಮಂತ್ರಿಮಂಡಲಿಯನ್ನು ರಚಿಸಲು ಮದ್ರಾಸಿನ ಮಾನ್ಯ ಗವರ್ನರರಿಂದ ಆಮಂತ್ರಿತನಾಗಿ ನಾನು ಮಾರ್ಚಿ ತಾ. 25, 26 ಮತ್ತು 27ರಲ್ಲಿ ಅವರನ್ನು ಕಂಡು ಕಾಂಗ್ರೆಸಿನ ಧೋರಣೆಯನ್ನವರಿಗೆ ವಿವರಿಸಿ ತಿಳಿಸಿದೆನು. ನನಗೆ ಮತ್ತು ನನ್ನ ಮಂತ್ರಿಮಂಡಲಕ್ಕೆ, ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಕೊಡಲ್ಪಟ್ಟಿರುವದೆಷ್ಟುವ ಸಂಪೂರ್ಣ ಪ್ರಾಂತಿಕ ಸ್ವಾತಂತ್ರ್ಯದ ವ್ಯಾಪನೆಯೊಳಗೆ ಪೂರ್ಣ ಆಡಳಿತ ಸ್ವಾತಂತ್ರ್ಯವು ಕೊಡಬೇಕು; ಮತ್ತು ನಾವು ಅಧಿಕಾರದಲ್ಲಿದ್ದು, ಪ್ರಾಂತದ ರಾಜ್ಯಭಾರ ನಡಿಸುವ ಜವಾಬ್ದಾರಿ ಹೊರುವಾಗ, ಮಾನ್ಯ ಗವರ್ನರರು ನಮ್ಮ ಆಡಳಿತದಲ್ಲಿ ಕೈಹಾಕಲು ತನ್ನ ವಿಶೇಷಾಧಿಕಾರಗಳನ್ನು ಉಪಯೋಗಿಸುವುದಿಲ್ಲೆಂಬ ಮತ್ತು ಮಂತ್ರಿಗಳ ಸಲಹೆಯನ್ನು ಮೂಲೆಗೊತ್ತುವುದಿಲ್ಲೆಂಬ ಆಶ್ವಾಸನೆಯನ್ನವರು ಕೊಡಬೇಕೆಂದು ನಾನು ಕೇಳಿಕೊಂಡೆ. ಸರ್ವಸಾಮಾನ್ಯವಾದ ಸೌಹಾರ್ದ ಮತ್ತು ಸಹಕಾರದ ಹೊರತು, ಅವರು ತನ್ನ ವಿಶೇಷಾಧಿಕಾರಗಳ ಉಪಯೋಗದ ಕುರಿತು ಯಾವತರದ ಆಶ್ವಾಸನೆಯನ್ನೂ ಕೊಡದಿರುವುದು ಶೋಚನೀಯವಿದೆ. ಆದುದರಿಂದ ನನಗೆ ಮಂತ್ರಿಮಂಡಲಿಯನ್ನು ರಚಿಸಬೇಕೆಂಬ ಗವರ್ನರರ ಆಮಂತ್ರಣವನ್ನು ನಿರಾಕರಿಸದೆ ನಿರ್ವಾಹವಿಲ್ಲವಾಯಿತು.

ನಾನು ಅಧಿಕಾರ ವಹಿಸಬೇಕಾದರೆ, ಈಗಣ ಆಕ್ಟು ಕೂಡಲೆ ತಿದ್ದುವಡಿಯಾಗಬೇಕು' ಅಥವಾ ಅತ್ಯಂತ ಮಿತವಾಗಿರುವ ಪ್ರಾಂತಿಕಾಧಿಕಾರದ ವ್ಯಾಪನೆಯಾಗಬೇಕೆಂದೇನೂ ಕೇಳುವುದಲ್ಲ. ಪ್ರಾಂತಿಕ ಆಡಳಿತದಲ್ಲಿ ಕೈಹಾಕುವ ವೈಸರಾಯರ ಮತ್ತು ಇಂಡಿಯಾ ಸೆಕ್ರೆಟರಿಗಳ ವಿಶಿಷ್ಟಾಧಿಕಾರವು ಯಥಾ ಪ್ರಕಾರವಿರುತ್ತಾ, ಗವರ್ನರರ ವಿಶೇಷಾಧಿಕಾರಗಳ ಪ್ರಯೋಗದ ಕುರಿತು, ಅವರು ಮಂತ್ರಿಮಂಡಲಿ ರಚನೆ ಬೇಕೆಂದು ಆಮಂತ್ರಿಸಿರುವ ನನಗೂ ಅವರಿಗೂ ಯೋಗ್ಯವಾದ ಒಡಂಬಡಿಕೆಯಾಗಬೇಕೆಂದಿಷ್ಟೇ ನನ್ನ ಅಪೇಕ್ಷೆಯೆಂಬುದನ್ನು ನಾನು ಮಾನ್ಯ ಗವರ್ನರರಿಗೆ ತಿಳಿಸಿದೆನು. ಆಡಳಿತವು ಉತ್ತಮ ರೀತಿಯಲ್ಲಿ ದಕ್ಷತೆಯಿಂದ ನಡೆಸಲ್ಪಡಬೇಕಾದರೆ ಇದು ಅವಶ್ಯವೆಂದು ಹೇಳಿದೆನು. ವಿಶೇಷಾಧಿಕಾರಗಳನ್ನು ತನ್ನ ವಿವೇಚನೆಯಂತೆ ಉಪಯೋಗಿಸುವ ಸ್ವಾತಂತ್ರ್ಯವು ಗವರ್ನರರಿಗೆ ನಿಜವಾಗಿಯೂ ಇರುವುದಾದರೆ, ಮಂತ್ರಿಮಂಡಳಿಯ ಜವಾಬ್ದಾರಿಯು ಸಮರ್ಥವಾಗಿ ನಡಿಸಲ್ಪಡಲು ಆವಶ್ಯವಾದ ವಾತಾವರಣ ಮತ್ತು ಮನೋವೃತ್ತಿಯನ್ನುಂಟುಮಾಡಲು ತನ್ನ ವಿಶೇಷಾಧಿಕಾರಗಳನ್ನು ಉಪಯೋಗಿಸುವುದಿಲ್ಲೆಂಬ ಆಶ್ವಾಸನೆಯನ್ನೀಯುವ ಸ್ವಾತಂತ್ರ್ಯವು ಅವರಿಗಿರಬೇಕು. ಪ್ರಾಂತಿಕ ಗವರ್ನರರಿಗೆ ಇದನ್ನು ನಿರಾಕರಿಸುವುದೆಂದರೆ, ಪ್ರಾಂತಿಕ ಸ್ವಾತಂತ್ರ್ಯವನ್ನು ನಿರಾಕರಿಸಿದಂತೆಯೇ ಸರಿ. ಇದರ ಅರ್ಥವೆಂದರೆ, ಹೊಸ ಸುಧಾರಣಾ ಆಕ್ಟು ಜ್ಯಾರಿಗೆ ಬಂದರೂ, ಹಿಂದು ದೇಶವನ್ನು ಹಳೆಯ ನೌಕರ ಶಾಹಿಯ ಮೂಲಕ ಲಂಡನಿನಿಂದಲೇ ಆಳುವದೆಂದು.

ಮದ್ರಾಸ್ ಪ್ರಾಂತದಲ್ಲಿ ಜಾತೀಯ ಮತ್ತು ಪ್ರತ್ಯೇಕ ಸೀಟುಗಳ ಏರ್ಪಾಡಿದ್ದರೂ ಕಾಂಗ್ರೆಸು ಎಸೆಂಬ್ಲಿಯ 215ರಲ್ಲಿ 159ರಷ್ಟು ಸೀಟುಗಳ ಪ್ರಚಂಡ ಬಹುಪಕ್ಷ ಪಡೆದು ಜನತೆಯ ನಿಸ್ಸಂದೇಹವಾದ ವಿಶ್ವಾಸಕ್ಕೆ ಪಾತ್ರವಾಗಿರುವುದು ಮಾತ್ರವಲ್ಲದೆ ಕೌನ್ಸಿಲಿನಲ್ಲಿಯೂ ಬಹುಪಕ್ಷ ಪಡೆದಿದೆ. ಹೊಸ ಸುಧಾರಣಾ ಆಕ್ಟಿನ ವ್ಯಾಪನೆಯೊಳಗೆ ನಾವು ಕೇಳಿರುವ ಆಶ್ವಾಸನೆಯ ಗೃಹಸ್ಥಿಕೆಯ ಒಪ್ಪಂದವನ್ನು ನಿರಾಕರಿಸುವುದೆಂದರೆ, ಪ್ರಾಂತಿಕ ಗವರ್ನರರು ಸಂಪೂರ್ಣ ಜವಾಬ್ದಾರಿಯುಳ್ಳವರಾಗಿ ನೇಮಿಸಲ್ಪಟ್ಟಿರುವರು; ಅಂಥವರ ಪ್ರಾಂತಿಕ ಆಡಳಿತದೊಳಗೆ ನಾವು ಪೂರ್ಣ ಸ್ವಾತಂತ್ರ್ಯ ಮತ್ತು ಪ್ರಗತಿ ಹೊಂದಬಹುದೆಂಬ ಗಂಭೀರ ವಚನಗಳನ್ನು ನಿರಾಕರಿಸಿದಂತೆಯೇ ಸರಿ. ಅಂತಹ ಆಶ್ವಾಸನೆ ದೊರೆಯದೆ ನಮಗೆ ಅಧಿಕಾರ ನಡಿಸುವುದೇ ಅಸಾಧ್ಯವಾಗಿದೆ. ಯಾಕೆಂದರೆ ಜನರಿಂದ ಆರಿಸಲ್ಪಡುವ ಸರಕಾರವು ನಮ್ರವಾಗಿ ನಡೆಸಲ್ಪಡಬೇಕಾದರೆ ಅದರ ನೌಕರರೆಲ್ಲರೂ ಅದಕ್ಕೆ ಸಂಪೂರ್ಣ ವಿಧೇಯರಾಗಿ ನಡೆಯುವುದು ಅತ್ಯಾವಶ್ಯಕವಿದೆ. ಹಾಗಾಗದೆ ಅವರು ಮಂತ್ರಿಗಳಿಗೆ ವಿರೋಧವಾಗಿ ಗವರ್ನರರು ವಿಶೇಷಾಧಿಕಾರಗಳ ಆಶ್ರಯ ಪಡೆಯಲೆತ್ನಿಸಿದರೆ ಮಂತ್ರಿಗಳು ಅವಮಾನ್ಯಕ್ಕೊಳಗಾಗಬೇಕಾಗುವುದು. ಇಂತಹ ಪರಿಸ್ಥಿತಿಯಲ್ಲಿ ಗವರ್ನರರ ನಿಶ್ಚಿತವಾದ ಆಶ್ವಾಸನೆ ಮಾತ್ರ ನಮ್ಮ ಸಂಶಯ ಭೀತಿಗಳನ್ನು ನಿವಾರಿಸಬಲ್ಲದು. ಅಂತಹ ಆಶ್ವಾಸನೆಯಿಲ್ಲದೆ ಮಂತ್ರಿಪದವಿ ಸ್ವೀಕರಿಸಿ, ಆನಂತರ ಮುಂದೆ ಅಂತಹ ತಿಕ್ಕಾಟದ ಸಂದರ್ಭ ಬರುವಾಗ ಬಿಟ್ಟುಬಿಡುವುದು ವಿವೇಕವೂ ಯುಕ್ತವೂ ಆಗಲಾರದು. ಪ್ರಾಂತದ ಮಟ್ಟಿಗಾದರೂ ಆಳರಸರು ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಸಿದ್ಧರಿರುವರೆಂದು ತಿಳಿದರೆ ಮಾತ್ರ ನಾವು ಅಧಿಕಾರ ಸ್ವೀಕಾರದ ಪ್ರಯೋಗಮಾಡಿ ನೋಡಬಹುದು. ಈಗ ಆರಂಭದಲ್ಲೇ ಗವರ್ನರರಿಂದ ನಮಗೆ ಆ ಆಶ್ವಾಸನೆ ದೊರೆಯದೆ ಹೋದುದು ರಾಷ್ಟ್ರದ ದೃಷ್ಟಿಯಿಂದ ಒಳ್ಳೇದು. ಇಲ್ಲವಾದರೆ ನಾವು ಕೆಲ ಸಮಯದ ವರೆಗೆ ಮೌನವಾಗಿ ಅವಮಾನವನ್ನು ಸಹಿಸಿಕೊಂಡು ಪರೀಕ್ಷಿಸಿ ಆ ಮೇಲೆ ನಮ್ಮ ಪದವಿಗೆ ರಾಜಿನಾಮೆ ಕೊಡಬೇಕಿತ್ತು.

ಮದ್ರಾಸ್ ಪ್ರಾಂತದ 6 ಮಿಲ್ಯ ಓಟರರು, ಯಾವರೀತಿಯ ಸಂದೇಹವೂ ಇಲ್ಲದ ಬಹುಪಕ್ಷದಿಂದ ನಮ್ಮನ್ನು ಚುನಾಯಿಸಿರುವರು. ಈಗ ಜನತೆಯು ನಮ್ಮ ಮೇಲೆ ತೋರಿಸಿರುವ ವಿಶ್ವಾಸವನ್ನು ನಾವು ನಮ್ಮ ಪಕ್ಷದ ಸ್ವಾರ್ಥಕ್ಕಾಗಿ ಉಪಯೋಗಿಸದೆ ರಾಷ್ಟ್ರದ ಮಾನವನ್ನು ಹೆಚ್ಚಿಸಲು ಉಪಯೋಗಿಸಿರುವೆವು. ಅಧಿಕಾರವು ನಮ್ಮ ದಾರಿಯಲ್ಲಿ ಬಿದ್ದುಕೊಂಡಿದ್ದು ಅದನ್ನು ಹೆಕ್ಕುವುದೊಂದೇ ನಮ್ಮ ಕೆಲಸವಿತ್ತು. ಆದರೆ ಆ ಅಧಿಕಾರವನ್ನು ನಾವು ರಾಷ್ಟ್ರದ ಶಾಶ್ವತ ಪ್ರಯೋಜನಕ್ಕಾಗಿ ವಿನಿಯೋಗಿಸಬಗೆದು ಹೊಸರಾಜ್ಯಾಂಗ ರಚನೆಯನ್ನು ಒಳಗಿಂದ ಸುಧಾರಿಸುವ ಶಕ್ತಿಕೋಲಾಗಿ ಪ್ರಯೋಗಿಸಿರುವೆವು. ಇದನ್ನು ಸಿವಿಲ್ ಸರ್ವೀಸಿನವರು ವಿರೋಧಿಸಿ, ಎಲ್ಲಾ ಪ್ರಾಂತಿಕ ಗವರ್ನರರುಗಳು ಒಂದೇ ರೀತಿಯ ಹಳೆಯ ಗೊಡ್ಡು ಸೂತ್ರಹೇಳುವ ಧೋರಣೆ ವಹಿಸಿರುವಂತೆ ಮಾಡಿರಬೇಕು. ನಮ್ಮ ಸ್ವಾವಲಂಬನೆಯ ಮಾರ್ಗವು ಸ್ಪಷ್ಟವಾಗಿ

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,53,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

ನ್ಮ ನಮುಂದಿದೆ. ಯಾವ ರಾಜ್ಯಸೂತ್ರವೂ ಇಲ್ಲದೆ ರಾಜ್ಯ ಭಾರನಡಿಸುವ ನಿರಂಕುಶ ಅಧಿಕಾರವು ಬ್ರಿಟಿಷ್ ಸರಕಾರಕ್ಕಿದೆ. ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟಿನ ೯೩ನೆ ಸೆಕ್ಷನ್ ಪ್ರಕಾರ ರಾಜಸೂತ್ರದ ಸೋಗನ್ನು ಕೊನೆಗೊಳಿಸಿ ಗವರ್ನರರ ಅಂದರೆ ನೌಕರಶಾಹಿಯ ಸರ್ವಾಧಿಕಾರವನ್ನು ಸ್ಥಾಪಿಸಬಹುದಾಗಿದೆ. ನನ್ನ ಮತ್ತು ಮಾನ್ಯ ಗವರ್ನರರ ಮಾತುಕತೆಯು ಅತ್ಯಂತ ವಿನಯ ಮತ್ತು ಮೈತ್ರಿಭಾವದಿಂದ ನಡೆದಿರುವುದು. ಅದು ನಿಷ್ಫಲವಾಗಲು ಯಾರೊಬ್ಬರ ಅಸಹನೀಯತೆಯಾಗಲಿ, ಅಸಹಾನುಭೂತಿಯಾಗಲಿ ಕಾರಣವಲ್ಲ. ಇಂತಹ ಪರಿಣಾಮಕ್ಕಾಗಿ ನಾವಿಬ್ಬರೂ ವಿಷಾದಪಡುತ್ತೇವೆಂದು ನನ್ನ ನಂಬಿಕೆ.

ನಮ್ಮ ಜನ್ಮ ಸಿದ್ಧಹಕ್ಕಾದ ಸ್ವಾತಂತ್ರ್ಯ ಮತ್ತು ನಮ್ಮ ನಡುವೆ ಲೋಕದ ಯಾವ ಶಕ್ತಿಯಾದರೂ ಒಹಳ ಕಾಲ ಇರಲಾರದೆಂಬುದನ್ನು ಮದ್ರಾಸು ಪ್ರಾಂತದ ಜನರು ಮನಗಂಡುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇಂದೀಗ ಕಾಂಗ್ರೆಸಿನ ಅಪ್ರತಿಹತ ಶಕ್ತಿಯ ಪ್ರದರ್ಶನವಾಗಿರುವುದು. ಅದರ ಪ್ರಮುಖರ ನಿಸ್ವಾರ್ಥತೆಯು ಅವರ ಬದ್ಧವೈರಿಗಳೂ ನಿರಾಕರಿಸದ ರೀತಿಯಲ್ಲಿ ಸಿದ್ಧಗೊಳಿಸಲ್ಪಟ್ಟಿರುವುದು. ಭಗವಂತನು ನಮಗೆ ಇನ್ನೂ ಹೆಚ್ಚಿನ ನಿರ್ಧಾರ ಶಕ್ತಿಯನ್ನಿತ್ತು ನಮ್ಮ ಗುರಿಮುಟ್ಟಿಸಲಿ.

ಕಾಂಗ್ರೆಸಿನವರು ಈಗ ಮಂತ್ರಿಪದವಿ ಸ್ವೀಕರಿಸದಿರುವುದರಿಂದ ಸರಕಾರವು ಜನತೆಯ ಮನಸ್ಸನ್ನೊಲಿಸಿಕೊಳ್ಳಲು ಅವರಿಗೆ ಏನಾದರೂ ಸಹಾಯಮಾಡಲೆತ್ನಿಸಬಹುದು. ನೌಕರಶಾಹಿಯ ಸರ್ವಾಧಿಕಾರತ್ವದಲ್ಲಿ ಜನತೆಗೇನಾದರೂ ಸಾಕಷ್ಟು ಸಹಾಯ ದೊರೆತಲ್ಲಿ ನಮಗದು ಸಂತೋಷವೇ ಸರಿ. ನಾವು ಅಧಿಕಾರದಲ್ಲಿರದಿದ್ದರೆ ನಮಗೇನೂ ಚಿಂತೆಯಿಲ್ಲ. ನಾವು ಹೊರಗಿರುವುದರಿಂದಾಗಿ ನೌಕರಶಾಹಿಯು ಅವರ ಸಹಾಯಕರೂ ಹುರುಪುಗೊಂಡು ಪ್ರಾಂತದ ಕಂದಾಯವನ್ನು ನ್ಯಾಯವಾಗಿ ವಿನಿಯೋಗಿಸುವಂತಾದರೆ, ಬೇಸಾಯಗಾರರ ಸಾಲದ ಮತ್ತು ತೆರಿಗೆಯ ಹೊರೆಯು ಕಡಿಮೆಯಾಗುವಂತಾದರೆ ನಾನು ಈ ಸಹಾಯದ ಬುಗ್ಗೆಯು ಎಲ್ಲಿಂದ ಉಂಟಾಯಿತೆಂಬ ಕುರಿತು ಜನರನ್ನೇನೂ ವಂಚಿಸಲು ಸಾಧ್ಯವಿಲ್ಲೆಂದು ನಾವು ನಂಬುತ್ತೇವೆ. ಕಾಂಗ್ರೆಸಿನ ಬಲವೇ ಅವರ ಬಲ. ಆದುದರಿಂದ ಜರೂರಿನ ಅಲ್ಪಸ್ವಲ್ಪಸಹಾಯಕ್ಕಾಗಿ ಮಾತ್ರವಲ್ಲದೆ ಕೊನೆಯಗುರಿಯಾದ ರಾಷ್ಟ್ರೀಯ ಗೌರವ ಮತ್ತು ಸ್ವಾತಂತ್ರ್ಯಕ್ಕಾಗಿ ಜನರು ಕಾಂಗ್ರೆಸನ್ನು ಮತ್ತಷ್ಟು ಬಲಗೊಳಿಸಬೇಕು

ಸರಕಾರದ ಪ್ರಕಟಣೆ

ಶ್ರೀ ರಾಜಗೋಪಾಲಾಚಾರ್ಯರು ಮತ್ತು ಮಾನ್ಯ ಗವರ್ನರರೊಳಗೆ ನಡೆದ ಮಾತುಕತೆಯ ಕುರಿತು ಸರಕಾರವು ಒಂದು ಪ್ರಕಟಣೆ ಹೊರಡಿಸಿರುವುದು. ಮಾನ್ಯ ಗವರ್ನರರು ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀ.ಸಿ ರಾಜಗೋಪಾಲಾಚಾರ್ಯರನ್ನು ಮಂತ್ರಿಮಂಡಲಿ ರಚಿಸಲು ಆಮಂತ್ರಿಸಿದರು. ಅವರು ಗವರ್ನರರು ತನ್ನ ವಿಶೇಷಾಧಿಕಾರಗಳನ್ನು ಉಪಯೋಗಿಸುವುದಿಲ್ಲೆಂದು ಆಶ್ವಾಸನೆ ಕೊಡಬೇಕೆಂದು ಕೇಳಿದರು. ಗವರ್ನರರು ಪಾರ್ಲಿಮೆಂಟಿನವರು ಶಾಸನಬದ್ಧವಾಗಿ ತನಗಿತ್ತಿರುವ ಹಕ್ಕು ಮತ್ತು ಕರ್ತವ್ಯಗಳನ್ನು ಬಿಟ್ಟುಕೊಡುವುದು ಅವ್ಯವಹಾರ್ಯವೆಂದು ಸೂಚಿಸಿ ಶ್ರೀ ಆಚಾರ್ಯರು ಕೇಳುವ ಆಶ್ವಾಸನೆಯೀಯುವುದು ತನ್ನ ಅಧಿಕಾರದೊಳಗಿನವಲ್ಲೆಂದರು. ಮತ್ತು ಶ್ರೀ ಸಿ. ರಾಜಗೋಪಾಲಾಚಾರ್ಯರು ಮಂತ್ರಿಮಂಡಲಿ ರಚಿಸಿದರೆ ತಾನು ತನ್ನಿಂದ ಸಾಧ್ಯವಾದ ಸಹಾಯ ಮತ್ತು ಸಹಾನುಭೂತಿಯೀಯುವೆನೆಂದರು. ಬಹಳ ಮೈತ್ರಿಭಾವದ ಮಾತುಕತೆಗಳ ಅನಂತರ ಶ್ರೀ ಆಚಾರ್ಯರು ಮಂತ್ರಿಪದವಿ ಸ್ವೀಕರಿಸಲು ತನ್ನಿಂದ ಸಾಧ್ಯವಿಲ್ಲೆಂದು ತಿಳಿಸಿದರು. ಈ ಪರಿಣಾಮಕ್ಕಾಗಿ ಮಾನ್ಯ ಗವರ್ನರರು ವಿಷಾದಪಡುತ್ತಾರೆ. ಮತ್ತು ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಒಂದುವೇಳೆ ತನಗಿಚ್ಛೆಯಿದ್ದರೂ, ಕಾಂಗ್ರೆಸ್ಸಿನವರು ಕೇಳುವಂತಹ ಆಶ್ವಾಸನೆಯೀಯಲು ತಾನು ಶಕ್ತನಲ್ಲೆಂಬುದನ್ನು ಜನತೆಗೆ ತಿಳಿಸಲೆಳಸುತ್ತಾರೆ. ಗವರ್ನರರು ಪಕ್ಷಾತೀತರಿದ್ದು ಯಾವ ಪಕ್ಷದವರು ಮಂತ್ರಿಮಂಡಲಿಯನ್ನೇರ್ಪಡಿಸಿದರೂ ಅವರಿಗೆ ಬೇಕಾದ ಸಹಾಯವೀಯಲು ಸಿದ್ಧರಿದ್ದಾರೆ. ಪ್ರಕೃತದ ಪರಿಸ್ಥಿತಿಯಲ್ಲಿ ಸಂಗತಿಗಳನ್ನು ಪುನಃ ಪರ್ಯಾಲೋಚಿಸಲು ಸಮಯ ಬೇಕಾಗಿದೆ. ಆ ವರೆಗೆ ಚಕ್ರವರ್ತಿಗಳು ಸರಕಾರವನ್ನು ನಡಿಸಲು ತಾತ್ಕಾಲಿಕ ಮಂತ್ರಿಮಂಡಲಿಯೊಂದನ್ನು ರಚಿಸಬೇಕಾಗಿದೆ. ಪುನರಾಲೋಚನೆಗೆ ಕೆಲಸಮಯ ದೊರೆತ ಮೇಲೆ, ಈಗಣ ಕೌನ್ಸಿಲುಗಳ ವಿಶ್ವಾಸಕ್ಕೆ ಪಾತ್ರವಾದ ಮಂತ್ರಿಮಂಡಲವೊಂದನ್ನೇರ್ಪಡಿಸಲು ಸಾಧ್ಯವಾಗುವುದೆಂದು ಮಾನ್ಯ ಗವರ್ನರರ ಆಶೆ.

ಸ್ವೀಕಾರ ಮತ್ತು ವಿಮರ್ಶೆ

ವೇದಗಳ ಮಹತ್ವ--ಲೇಖಕ ಸೈಂಟ್ ಎಲೋಸಿಯಸ್ ಕಾಲೇಜಿನ ಕನ್ನಡ ಪಂಡಿತರಾದ ಶ್ರೀ. ನಿಡ್ಡೋಡಿ ಅನಂತ ಉಪಾಧ್ಯಾಯರು. ಮಂಗಳೂರಿನ ವೈದಿಕ ಧರ್ಮ ಪ್ರಚಾರ ಸಂಘದವರಿಂದ ಪ್ರಕಟಿಸಲ್ಪಡುವ ವೈದಿಕ ಧರ್ಮ ಗ್ರಂಥ ಮಾಲೆಯ ಪ್ರಥಮ ಪುಷ್ಪ. ಲೇಖಕರು ಹಲವು ಶ್ಲೋಕಗಳ ನಿದರ್ಶನ ಕೊಟ್ಟು ವೇದಗಳ ಮಹತ್ವವನ್ನು ಸಾರಿದ್ದಾರೆ. ಪೂರ್ವಕಾಲೀನ ಮತ್ತು ಆಧುನಿಕ ತತ್ವಜ್ಞಾನಿಗಳ ಉಲ್ಲೇಖನಗಳನ್ನು ಆಯ್ದುಕೊಂಡು ವೇದಗಳ ಮೇಲಿನ ಗೌರವವು ಹೆಚ್ಚಲನುಕೂಲವಾಗುವಂತೆ ವಿಮರ್ಶಿಸಿದ್ದಾರೆ. ಪುಸ್ತಕವು ಸರಳವಾದ ಕನ್ನಡದಲ್ಲಿ ಬರೆಯಲ್ಪಟ್ಟು ವಾಚನೀಯವಿದೆ.

ಪಶು ರಕ್ಷಾ ಸಂಗ್ರಹ--ಲೇಖಕ—ಶ್ರೀ. ಎಮ್. ಎಚ್. ನಾರಾಯಣ ಸೆಟ್ಟಿ. ಈ ಪುಸ್ತಕದಲ್ಲಿ ಜಾನುವಾರುಗಳನ್ನು ಸಾಕುವರೀತಿ, ಅವುಗಳವೃದ್ಧಿಗಾಗಿ ಮಾಡಬೇಕಾದ ಪ್ರಯತ್ನ, ಕರುಗಳ ಕುರಿತು ತೆಗೆದುಕೊಳ್ಳಬೇಕಾದ ಜಾಗ್ರತೆಯ ಕ್ರಮ, ಎಲ್ಲಾ ರೋಗಗಳಿಗೆ ಮಾಡಬೇಕಾದ ಚಿಕಿತ್ಸೆಯ ಕ್ರಮ—ಇವೆಲ್ಲಾ ಇವೆ. ದನಕರುಗಳಿರುವವರೆಲ್ಲಾ ಅನುಭವ ಮಾಡಿಕೊಳ್ಳಲರ್ಹವಾಗಿದೆ.

The Combined Booking Agency

AND

The Joint Booking Office

MANGALORE, SOUTH KANARA.

ಪ್ರಯಾಣದ ಅಪೂರ್ವ ವ್ಯವಸ್ಥೆಯೇ ನಮ್ಮ ಜಿಲ್ಲೆಯು ಸಂಪಾದಿಸಿರುವ ಗೌರವಗಳಲ್ಲೊಂದಾಗಿದೆ. ಈ ತರದ ವ್ಯವಸ್ಥೆಯನ್ನು ಇನ್ನೆಲ್ಲಿಯೂ ಕಾಣಲಾರಿರಿ.

ಉತ್ತರದಿಂದ: ಭಟ್ಕಳ, ಗೋಕರ್ಣ, ಶಿರ್ಸಿ, ಅಂಕೋಲಾ, ಕಾರವಾರ ಅಲ್ಲದೆ ಗೋವಾ ವರೆಗೂ ಹೋಗಲಿಕ್ಕಾಗುತ್ತದೆ.

ಪೂರ್ವದಿಂದ: ಹುಲಿಕಲ್-ಶಿಮೊಗ್ಗಾ, ಆಗುಂಬೆ-ಶಿಮೊಗ್ಗಾ, ಚಾರ್ಮಾಡಿ, ಕಡೂರು, ಶಿರಾಡಿ, ಸಕಲೇಶಪುರ, ಹಾಸನ, ಮಡಿಕೇರಿ, ಮೈಸೂರು ಮೊದಲಾದ ಕಡೆಗಳಿಗೆ ಹೋಗಿ ಮುಂಬ್ಯಾಗೂ, ಮುಂಬ್ಯಾ ಪ್ರಾಂತ್ಯದ ಎಲ್ಲಾ ಭಾಗಗಳಿಗೂ, ಬೆಂಗಳೂರಿಗೂ, ಮದ್ರಾಸಿಗೂ ರೈಲು ಮೂಲಕ ಪ್ರಯಾಣಿಸಬಹುದಾಗುತ್ತದೆ.

ದಕ್ಷಿಣದಲ್ಲಿ: ಕಾಸರಗೋಡು ವರೆಗೆ ಸರ್ವಿಸುಗಳು ಇವೆ.

ಬಸ್ಸು ಸರ್ವಿಸುಗಳ ನೌಕರರೆಲ್ಲರೂ ಅತೀ ಸಭ್ಯರೀತಿಯಿಂದ ವರ್ತಿಸಬೇಕಾಗಿ ಎಚ್ಚರಿಸಲ್ಪಟ್ಟಿದ್ದಾರೆ.

ಪ್ರಯಾಣಿಕರು ತಮ್ಮ ಅನುಭವದ ಕುರಿತು ಬರೆಯುವ ಕಾಗದಗಳ ಮೇಲೆ ತುಂಬಾ ಲಕ್ಷ್ಯವಿಡಲಾಗುವುದು.

Joint Managers.

ಮಂಗಳೂರು

ಶಂಕರ ರಾವ್ ಎನ್. ಕಾರ್ನಾಡು ಕಪ್

ದೇಶೀಯ ಸಂಗೀತಕ್ಕಾಗಿ ಇಟ್ಟಿದ್ದ ಮೇಲಿನ ಕಪ್ಪಿನ ಬಗ್ಗೆ ಬರುವ ಎಪ್ರಿಲ್ ತಾ ೧೭ರಲ್ಲಿ ಸಂಗೀತ ಸ್ಪರ್ಧೆಯು ನಡೆಯಲಿರುವದು. ಸ್ಪರ್ಧೆಗೆ ಸೇರಲಿಚ್ಛಿಸುವವರು ಎಪ್ರಿಲ್ ತಾ ೮ರೊಳಗೆ ಅರ್ಜಿಹಾಕಬೇಕಾಗಿದೆ. ಶಾಲೆಗಳು ಮಾತ್ರವಲ್ಲ ವಯಸ್ಸು ೧೫ಕ್ಕೆ ಕಡಿಮೆಯಿರುವ ಕಲಿಯುತ್ತಿರುವ ವಿದ್ಯಾರ್ಥಿನಿಯರೂ ಸ್ಪರ್ಧೆಗೆ ಸೇರಬಹುದು. ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿ ಶ್ರೀ ಯಸ್. ಮಾಧವರಾಯರಿಂದ ತಿಳಿಯಬಹುದು.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು

ಸಿಲೋನಿನ ಹಲವು ಸಾರ್ವಜನಿಕ ಸಂಘಗಳ ಆಮಂತ್ರಣದ ಮೇರೆಗೆ ಸಿಲೋನಿಗೆ ತೆರಳಿರುವರು ಶ್ರೀಮತಿಯವರು ಅಲ್ಲಿ ಬೇರೆ ಬೇರೆ ಕಡೆಗಳಲ್ಲಿ ಹಲವು ರಾಜಕೀಯ ಭಾಷಣಗಳನ್ನು ಕೊಡುವ ಏರ್ಪಾಡಾಗಿದೆ.

ಹರಿಕಥೆ

ಮಂಗಳೂರಿನವರಾಗಿದ್ದು ಬೊಂಬಾಯಿಯಲ್ಲಿದ್ದ ಮೊಗವೀರ ಸಮಾಜದ ಶ್ರೀ ಐತಪ್ಪ ತಿಂಗಳಾಯರು ಇಲ್ಲಿಗೆ ಬಂದಿದ್ದು ಹಲವು ಹರಿಕಥೆಗಳನ್ನು ನಡೆಸಿ ಜನಪ್ರೀತಿಗೆ ಪಾತ್ರರಾಗಿರುವರು. ಇವರ ಕಲಾನೈಪುಣ್ಯಕ್ಕೆ ಮೆಚ್ಚಿ ಇಲ್ಲಿಯ ಗೃಹಸ್ಥರು ಕೆಲವರು 'ಶ್ರೀ. ಎಚ್. ಎ ಹರಿದಾಸ' ಎಂಬ ಗೌರವ ನಾಮಧೇಯವನ್ನಿತ್ತಿರುವರು.

ಭಸ್ಮವಿಧಿ ಸಂಸ್ಕಾರ.

ಪಾಲ್ಘಾಟಿನಲ್ಲಿ ಕಳೆದ ತಾ ೧೩ರಲ್ಲಿ ಮೃತರಾಗಿದ್ದ ಶ್ರೀ. ಎಂ. ಎನ್ ಬಂಗೇರರ ಭಸ್ಮವಿಧಿ ಸಂಸ್ಕಾರವು ಕಳೆದ ತಾ. ೨೮ರಲ್ಲಿ ಸಂಜೆ ೫ ಘಂಟೆಗೆ ನಡೆಯಿತು ದಿವಾನ್ ಬಹದೂರು ಬಂಗೇರರ ಮನೆಯಿಂದ ಮೆರವಣಿಗೆಯೊಂದು ಹೊರಟು ಕುಟುಂಬದ ಸಮಾಧಿಸ್ಥಾನವನ್ನು ಸೇರಿ ಅಲ್ಲಿ ಈ ಭಸ್ಮವನ್ನು ಸ್ಥಾಪನ ಮಾಡಲಾಯಿತು. ಪಟ್ಟಣದ ಹಲವು ಪ್ರಮುಖರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಉಡುಪಿ

ನಗರ ಸಭೆಯ ಕುರಿತು ಸಾರ್ವಜನಿಕ ಸಭೆ

ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯವರ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ನಗರ ಸಭೆಯ ವಿದ್ಯಮಾನಗಳ ಕುರಿತು ವಿಚಾರಿಸುವರೆ ಕಳೆದ ತಾ ೨೪-೩ ೩೭ನೇ ಸಂಜೆ ಘಂಟೆ ೫ಕ್ಕೆ ಅಜ್ಜರಕಾಡಿನ ಮೈದಾನಿನಲ್ಲಿ ನೆರೆಯಿತು. ಶ್ರೀ ಎಮ್ ವಿಟ್ಠಲ ಹೆಗ್ಗಡೆಯವರು ಸಭೆಯನ್ನು ಕರೆದ ಉದ್ದೇಶವನ್ನು ತಿಳಿಸಿದರು. ನಗರ ಸಭಾಧ್ಯಕ್ಷರಾದ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ ನಂತರ ಶ್ರೀ ಕೆ ಕೆ ಸೆಟ್ಟರು ಉಡುಪಿಯ ಮುನಿಸಿಪಾಲಿಟಿಯ ರಚನೆ, ಅದರಿಂದ ಜನರಲ್ಲುಂಟಾಗಿರುವ ಅತೃಪ್ತಿ, ಸದ್ಯಸ್ಥಿತಿಯಲ್ಲಿ ಜನಪ್ರತಿನಿಧಿಗಳು ಮಾಡಬೇಕಾದ ಹಾಗೂ ಮಾಡಲು ಸಾಧ್ಯವಿರುವ ಕಾರ್ಯ ಕಲಾಪಗಳ ಕುರಿತು ಭಾಷಣವಿತ್ತರು ಶ್ರೀ. ಕೆ ಶೀನಸೆಟ್ಟರೂ, ಶ್ರೀ. ಯು. ಬಾಲಕೃಷ್ಣಾಚಾರ್ಯರೂ, ಶ್ರೀ ಯು. ನಾಗಪ್ಪ ಕಾಮತರೂ ಉಡುಪಿ ನಗರ ಸಭೆಯಿಂದುಂಟಾದ ವಿದ್ಯಮಾನಗಳನ್ನು ವಿವರಿಸಿದರು ಶ್ರೀ ಬಡಾನಿಡಿಯೂರು ವಾಸುದೇವ ರಾಯರು ತನ್ನ ಸ್ಫೂರ್ತಿಯುಕ್ತ ಭಾಷಣದಲ್ಲಿ ಡಾ ಪಿ ಎ ಆಚಾರ್ಯರ ಧೋರಣೆಯನ್ನು ಖಂಡಿಸಿದರು. ಡಾ. ಪಿ ಜಿ ಆಚಾರ್ಯರು ತನ್ನ ಧೋರಣೆ ಮತ್ತು ನಗರ ಸಭೆಗೆ ಸಂಬಂಧ ಪಟ್ಟ ವಿಷಯಗಳ ಕುರಿತು ಭಾಷಣವಿತ್ತರು ಉಡುಪಿ ಮುನಿಸಿಪಾಲಿಟಿಯನ್ನು ರದ್ದು ಮಾಡಿ ಪಂಚಾಯತ ಬೋರ್ಡನ್ನು ಸ್ಥಾಪಿಸಬೇಕೆಂದು ಶ್ರೀ ವಾಸುದೇವ ಶೆಣೈಯವರು ತಂದರರುವ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು ಅಧ್ಯಕ್ಷರು ತನ್ನ ಸುರಸ ಭಾಷಣದಲ್ಲಿ ನಗರ ಸಭೆಯು ಆಗಮನವಾದಂದಿನಿಂದ ಈ ವರೆಗಣ ವಿದ್ಯಮಾನಗಳನ್ನು ಸವಿಸ್ತಾರವಾಗಿ ವರ್ಣಿಸಿ ಉಡುಪಿಯ ಸಾರ್ವಜನಿಕರಿಗೆ ಬೇಡವಾದ ಮುನಿಸಿಪಾಲಿಟಿಯ ರದ್ಧತಿಗಾಗಿ ತಾನೂ ಇತರ ಕೌನ್ಸಿಲರೂ ಸಿದ್ಧರಿರುವೆವೆಂದೂ ಎರಡು ಕಂತುಗಳ ತೆರಿಗೆ ವಸೂಲಿಯು ಒಮ್ಮೆಗೆ ನಡೆಯುವಾಗ ಜನರಿಗೆ ವಿಶೇಷ ತೊಂದರೆಗೊಳಗಾಗುವದು ಸ್ವಾಭಾವಿಕವೆಂದೂ ತೆರಿಗೆದಾರರು ಕಮಿಶನರೊಡನೆ ವಾಯಿದೆ ಕೇಳದಲ್ಲಿ ಅವರು ಕೊಡದಿರಲಾರರೆಂದೂ, ತಾನೂ ಆ ಕೆಲಸದಲ್ಲಿ ಸಹಕರಿಸುವೆನೆಂದು ತಿಳಿಸಿದರು ಮುನಿಸಿಪಾಲಿಟಿಯ ರದ್ದತಿಗಾಗಿ ಬಿನ್ನವಿಸಿಕೊಳ್ಳಲು ಮದ್ರಾಸಿಗೆ ಹೋಗಬೇಕೆಂದು ನಿರ್ಣಯವಾದ ಡೆಪ್ಯುಟೇಶನನ್ನು ಸೇರಿ ತಾನು ಸ್ವಂತ ಖರ್ಚಿನಿಂದ ಹೋಗುವೆನೆಂದರು ವಕೀಲ್ ಶ್ರೀ ಬಿ ವಾಸುದೇವರಾಯರೂ, ಶ್ರೀ. ಯು. ನಾಗಪ್ಪ ಕಾಮತರೂ ಡೆಪ್ಯುಟೇಶನಿನ ಮೆಂಬರರಾಗುವ ಮಾತಿತ್ತರು. ಕೊನೆಗೆ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯು ಗೋಕಾಕದ ಗಿರಣಿ ಮುಷ್ಕರಕ್ಕೆ ಸಹಾಯ ಪ್ರಾರ್ಥನೆ, ಕಾಂಗ್ರೆಸ್ ಮೆಂಬರರಾಗಲು ಮತ್ತು ಎಪ್ರಿಲ್ ತಾ ೧ರ ಕಾರ್ಯಕ್ರಮವನ್ನು ಜಯಶೀಲಗೊಳಿಸಲು ವಿನಂತಿ ಮಾಡಿಕೊಂಡು ಅಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದಗಳನ್ನಿತ್ತರು

ಶಿರಿಬೀಡು ತೆರಿಗೆದಾರರ ಸಭೆ

ಶಿರಿಬೀಡು ವಾರ್ಡಿನ ತೆರಿಗೆದಾರರ ಸಭೆಯು ತಾ. ೨೬ ೩ ೩೭ರಲ್ಲಿ ಶಿರಿಬೀಡು ಛತ್ರದಲ್ಲಿ ಶ್ರೀ ಕೆ. ಗುರುರಾಜರಾಯರ ಅಧ್ಯಕ್ಷತೆಯಲ್ಲಿ ಜರಗಿತು ಉಡುಪಿ ಮುನ್ಸಿಪಾಲಿಟಿಯನ್ನು ರದ್ದು ಮಾಡಬೇಕೆಂಬ ಠರಾವೂ ಅದಕ್ಕಾಗಿ ಮದ್ರಾಸಿಗೆ ತೆರಳಲಿರುವ ಡೆಪ್ಯುಟೇಶನೊಡನೆ ಸಹಕರಿಸುವ ಠರಾವೂ ಮಂಜೂರಾಯಿತು ಸದ್ಯಕ್ಕೆ ಮುನಿಸಿಪಲ್ ತೆರಿಗೆಯನ್ನು ತಗ್ಗಿಸಬೇಕೆಂದೂ, ವಿಶೇಷ ಸಾಮಾನುಗಳು, ಬಾಡಿಗೆಯ ಕಟ್ಟೋಣ ಮೊದಲಾದವು ಅಗತ್ಯವಿಲ್ಲವೆಂದೂ ನಿರ್ಣಯಗಳಾದವು ತೆರಿಗೆದಾರರ ಹಲವು ಸಂಕಷ್ಟಗಳ ಕುರಿತು ವಿಚಾರ ವಿನಿಮಯ ನಡೆದು ಜಪ್ತಿ ಮಾಡುವಾಗ ಅನ್ಯಾಯಗಳಾಗದಂತೆ ನೋಡಬೇಕೆಂದು ಕಮಿಶನರರನ್ನು ಕೇಳಿಕೊಳ್ಳಲಾಯಿತು

ತೆರಿಗೆದಾರರ ಸಂಘ

ಮುಂದುವರಿಸಲ್ಪಟ್ಟಿದ್ದ ಮುನಿಸಿಪಲ್ ತೆರಿಗೆದಾರ ಸಂಘದ ಸಭೆಯು ೨೮-೩-೩೭ರಲ್ಲಿ ಬಡಗಬೆಟ್ಟು ಕೋಪರೇಟಿವ್ ಸೊಸೈಟಿಯ ಆಫೀಸಿನಲ್ಲಿ ನಡೆಯಿತು ಶ್ರೀ ಕೆ ಎ ಬಲ್ಲಾಳರು ಅಧ್ಯಕ್ಷರಾಗಿದ್ದರು ಸಂಘದ ಘಟನೆಯಲ್ಲಿ ಉಡುಪಿ ಮುನಿಸಿಪಾಲಿಟಿಯ ರದ್ದತಿಗಾಗಿ ಪ್ರಯತ್ನಿಸುವ ನಿಯಮವನ್ನು ಸೇರಿಸಿಕೊಳ್ಳಲಾಯಿತಲ್ಲದೆ, ಕಾಂಗ್ರೆಸಿನ ಆಶ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯ ಮತ್ತು ಬೇರೆ ಬೇರೆ ಕಡೆಗಳಲ್ಲಿ ನಡೆದ ತೆರಿಗೆದಾರರ ಸಭೆಗಳ ಅಭಿಪ್ರಾಯವನ್ನು ಸಮರ್ಥಿಸಿ ನಿರ್ಣಯವಾಯಿತು. ೨೪ ಮಂದಿ ಮೆಂಬರರುಳ್ಳ ಕಾರ್ಯಕಾರಿ ಸಮಿತಿಯ ರಚನೆಯಾಗಿ ಶ್ರೀ ವಾಸುದೇವ ಶೆಣೈಯವರನ್ನು ಕಾರ್ಯದರ್ಶಿಯವರನ್ನು ಕಪ್ಪೀನರರಾಗಿ ನಿಯಮಿಸಲಾಯಿತು

ಮೊಹರಮ್ ಹಬ್ಬ

ಈ ವರ್ಷ ಮೊಹರಮ್ ಹಬ್ಬದ ವಿಶೇಷ ಪ್ರದರ್ಶನ ಯಾವುದೂ ಇರಲಿಲ್ಲ. ಸ್ಥಳೀಯ ಮುಸಲ್ಮಾನರೊಳಗುಂಟಾಗಿರುವ ಭಿನ್ನಾಭಿಪ್ರಾಯವೇ ಇದಕ್ಕೆ ಕಾರಣವೆಂದು ತಿಳಿದುಬರುತ್ತದೆ

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ 'ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಸಿಂಡಿಕೇಟ್' ಇದರ ಬೊಂಬಾಯಿ ಶಾಖೆಯು ತಾ ೨೩ ೩ ೩೭ರಲ್ಲಿ ತೆರೆಯಲ್ಪಡುವದೆಂದು ಪ್ರಕಟವಾಗಿತ್ತು. ಅದು ೨೩ ೪ ೩೭ಕ್ಕೆ ತೆರೆಯಲ್ಪಡುವದೆಂದಾಗಬೇಕು

ಎಪ್ರಿಲ್ ತಾ. ೧ರ ಹೊಸ ರಾಜ್ಯಾಂಗ ರಚನೆಯ ನಿಷೇಧ ದಿನಾಚರಣೆ

ಇದೇ ತಾ ೧-೪-೩೭ನೇ ಗುರುವಾರ ಸಂಪೂರ್ಣ ಹರತಾಳವನ್ನಾಚರಿಸಬೇಕಾಗಿಯೂ ಸಂಜೆ ೫ ಘಂಟೆಗೆ ರಥಬೀದಿಯಿಂದ ಹೊರಡಲಿರುವ ಕರಿಪತಾಕೆಯ ಮೆರವಣಿಗೆಯಲ್ಲಿ ಮತ್ತು ಸಂಜೆ ೬ ಘಂಟೆಗೆ ರಥಬೀದಿಯಲ್ಲಿ ನೆರೆಯಲಿರುವ ಸಾರ್ವಜನಿಕ ಸಭೆಯಲ್ಲಿ ಮಹಾಜನರೆಲ್ಲಾ ಭಾಗವಹಿಸಬೇಕಾಗಿಯೂ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯವರು ವಿನಂತಿಸಿರುವರು

ದಕ್ಷಿಣ ಕನ್ನಡ

ಕಟಪಾಡಿ

ಕಳೆದ ೨೮-೩-೩೭ರಲ್ಲಿ ಶ್ರೀ ಎಸ್. ಎಸ್. ಯುವಕ ಸಂಘದವರ ಆಶ್ರಯದಲ್ಲಿ ಬೊಂಬಾಯಿ ಕೊಲಾಬದ ಮುಂದಾಳುಗಳಲ್ಲೊಬ್ಬರಾದ ಶ್ರೀ. ಎಸ್. ಮದನ ಶೆಟ್ಟರು 'ಹಿಂದೀ ಸ್ವಾತಂತ್ರ್ಯವೂ ತರುಣರೂ ಎಂಬ ವಿಷಯದಲ್ಲಿ ಭಾಷಣವಿತ್ತರು. ಶ್ರೀಯುತ ಪಾಂಗಾಳ ಲಕ್ಷ್ಮೀನಾರಾಯಣ ನ್ಯಾಕರು ಅಧ್ಯಕ್ಷರಾಗಿದ್ದರು. ಭಾಷಣಗಾರರು ಹಿಂದೂದೇಶದ ಶೋಚನೀಯಾವಸ್ಥೆಯನ್ನು ವಿವರಿಸಿ, ತರುಣರೇ ದೇಶದ ಬಡತನವನ್ನು ನಿವಾರಿಸಿ ಸ್ವಾತಂತ್ರ್ಯವನ್ನು ಸಂಪಾದಿಸುವ ಅರ್ಹತೆಯುಳ್ಳವರೆಂದೂ, ನೂರರಲ್ಲಿ ತೊಂಭತ್ತೊಂಭತ್ತು ಮಂದಿಯನ್ನು ಉಪವಾಸ ಹಾಕಿ ಒಬ್ಬನ ಬೊಕ್ಕಸ ತುಂಬಿಸುವ ಹಳೆಯ ಆರ್ಥಿಕ ಸಂಪ್ರದಾಯವು ಹೋಗದೆ ದೇಶಕ್ಕೆ ಸುಖವಿಲ್ಲವೆಂದೂ, ಯುವಕ ಸಂಘವು ಹಳ್ಳಿಯಲ್ಲಿ ಸರಿಯಾದ ಪ್ರಚಾರ ಕಾರ್ಯವನ್ನಾರಂಭಿಸಬೇಕೆಂದೂ ಮನದಟ್ಟಾಗುವಂತೆ ತಿಳಿಸಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಶ್ರೀ ಮದನಶೆಟ್ಟರ ಅಭಿಪ್ರಾಯಗಳನ್ನು ಸಮರ್ಥಿಸಿದರು. ಸಂಘದ ಕಾರ್ಯದರ್ಶಿಯಾದ ಶ್ರೀ ಕಟಪಾಡಿ ದೇಜಪ್ಪ ಶೆಟ್ಟರು ಭಾಷಣಕಾರರ ಪರಿಚಯವನ್ನು ಮಾಡಿಕೊಟ್ಟು ಧನ್ಯವಾದಗಳನ್ನಿತ್ತರು.

"ಮೂಲ್ಕಿ ಗ್ರೇಂಡ್ ರೇಫಲ್" ಮೂಲ್ಕಿ ದ. ಕನ್ನಡ.

ವಂದನೋಕ್ತಿಗಳು

ಸ್ಥಳೀಕ ಹೈಸ್ಕೂಲಿನ ಸಹಾಯಾರ್ಥವಾಗಿ ಏರ್ಪಡಿಸಿದ ಸೋಡ್ತಿಯನ್ನು ಯಶಸ್ವಿಯಾಗಿ ಕೊನೆಗಾಣಿಸುವಲ್ಲಿ ಸಂಪೂರ್ಣ ಸಹಕಾರ ಪ್ರೋತ್ಸಾಹಗಳನ್ನು ಕೊಟ್ಟು ನಡಿಸಿದ ಎಲ್ಲಾ ಮಹಾಶಯರಿಗೂ, ಟಿಕೇಟು ಮಾರಾಟದಲ್ಲಿ ಹೆಚ್ಚಿನ ತಾತ್ಪರ್ಯವಿಟ್ಟು ಕೆಲಸಮಾಡಿದ ಸಕಲ ವಿದ್ಯಾಪ್ರೇಮಿಗಳಿಗೂ, ಟಿಕೇಟು ಪಡಕೊಂಡು ಸಹಾಯವಿತ್ತ ಸಮಸ್ತರಿಗೂ, ಸೋಡ್ತಿ ತೆಗೆಯುವ ಹಿಂದಿನ ದಿನ ಹಗಲು ರಾತ್ರಿಯೂ ವಿರಾಮವಿಲ್ಲದೆ ಸಹಾಯಕೊಟ್ಟು ನಡಿಸಿದ ಮಹನೀಯರೆಲ್ಲರಿಗೂ, ಸೋಡ್ತಿ ತೆಗೆಯುವ ದಿನಗಳಲ್ಲಿ ಸಹಕರಿಸಿದ ಎಲ್ಲಾ ವಿದ್ಯಾಭಿಮಾನಿಗಳಿಗೂ ಕಾರ್ಯಕಾರಿ ಮಂಡಳಿಯವರು ತಮ್ಮ ಹೆಚ್ಚಿನ ಆಭಾರವನ್ನು ಸೂಚಿಸುತ್ತಾರೆ ಸೋಡ್ತಿಯಲ್ಲಿ ವಸೂಲಾದ ಮೊತ್ತ ರೂ. 28600-0 ರಲ್ಲಿ ಇನಾಮು ಹಂಚೋಣದ ಬಗ್ಗೆ ಮತ್ತು ಖರ್ಚಿನ ಬಗ್ಗೆ ರೂ. 15400-0-0 ಹೋಗಲಾಗಿ ಶಾಲಾ ಫಂಡಿಗೆ ರೂ. 13200-0-0 ದೊರೆಯ ಬಹುದಾಗಿ ಅಂದಾಜು ಮಾಡಲಾಗಿದೆ. ಸೋಡ್ತಿಯ ಲೆಕ್ಕಪತ್ರಗಳು ಸರ್ಟಿಫೈಡ್ ಆಡಿಟರರಿಂದ ತನಿಖೆ ನಡಿಸಿ ವಿವರಾರಿಪಟ್ಟಿಯನ್ನು ಮುಂದೆ ಪ್ರಕಟಿಸಲಾಗುವದು.

ಬಿ. ಭೋಜರಾವ್,

ತಾ 21-3-'37 ಕಾರ್ಯದರ್ಶಿ.

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 357 Mount Road, Madras.	Visveswarapuram Circle, Bangalore City	Soumyalayam Puthiyara, Calicut
Car Street, Mangalore.	Udipi, S India.	Charni Road, Bombay No 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs. 80,00,000
Life Funds Over	Rs 68,00,000
Premium Income Over	Rs 22,54,000
Interest Income ..	Rs. 3,10,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs. 1,4251.200

TOTAL BUSINESS IN FORCE Rs. 4,42,51,200

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಲಿಮಿಟೆಡ್, ಉಡುಪಿ
(೧೯೦೬ರಲ್ಲು ಸ್ಥಾಪಿತವಾದದ್ದು)

ಪ್ರಕಟಣೆ

ಇದರ ಶಾಖೆಗಳು ತಾ. 19–3–1937ರಲ್ಲು

(1) **ವೆಲ್ಲೂರು** (ಉತ್ತರ ಆರ್ಕಾಡು ಜಿಲ್ಲೆ) ಮತ್ತು (2) **ಬೈಂದೂರು** (ದಕ್ಷಿಣ ಕನ್ನಡ ಜಿಲ್ಲೆ) ಈ ಸ್ಥಳಗಳಲ್ಲಿ ತೆರೆಯಲ್ಪಟ್ಟಿರುವುವು.

ಈ ಬ್ಯಾಂಕಿನ ರಿಜಿಸ್ಟರ್ಡ್ ಆಫೀಸನ್ನು ತಾ. 19–3–1937ನೇ ಶುಕ್ರವಾರ ಇಡೀ ಪಟ್ಟಣದ ಮಧ್ಯ ಸ್ಥಳವಾದ **ಮಸೀದಿ ರಸ್ತೆಯಲ್ಲಿರುವ** (ದಿವಂಗತ ಖಾನ್ ಬಹದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮು ಸಾಹೇಬರು ವಾಸ್ತವಿಸಿದ್ದ) **ಭವ್ಯವಾದ ಕಟ್ಟಡಕ್ಕೆ ಒಯ್ಯಲ್ಪಟ್ಟಿರುವುದು.**

ಎಮ್. ಶ್ರೀನಿವಾಸ ಪ್ರಭು,
MANAGER.

ನವಯುಗ

ಉಡುಪಿ, ತಾ. ೧-೪-'೩೭ ಗುರುವಾರ

ನಿಜವೇಷ ಬಯಲಾಯಿತು

ಹೊಸ ಸುಧಾರಣಾ ಆಕ್ಟಿನಲ್ಲಿ ಹಿಂದೀಯರಿಗೆ ಪೂರ್ಣ ಪ್ರಾಂತಿಕ ಸ್ವಾತಂತ್ರ್ಯ ಮತ್ತು ನಿಜವಾದ ಪ್ರಜಾ ಜವಾಬ್ದಾರಿ ರಾಜ್ಯಭಾರವೀಯಲ್ಪಟ್ಟಿದೆಯೆಂಬ ಬ್ರಿಟಿಷ್ ಮುತ್ಸದ್ದಿಗಳ ಪಲ್ಲವಿಯು ಅದೆಷ್ಟು ಸತ್ಯವಾದುದೆಂದೀಗ ಲೋಕವಿಖ್ಯಾತವಾಯಿತು. ಪ್ರಜಾ ಜವಾಬ್ದಾರಿಯ ಸೋಗಿನಿಂದ ಗವರ್ನರರ ನಿರಂಕುಶ ಅಧಿಕಾರವನ್ನು ಸರ್ವಸ್ವವಾಗಿರಿಸಿರುವ ಸುಧಾರಣಾ ಆಕ್ಟಿನ ನಿಜವೇಷವು ಬಟ್ಟಬಯಲಾಗಿರುವುದು. ಇದಕ್ಕೆ ಸ್ವಲ್ಪ ಸಮಯತಾಗುವುದೆಂದು ನಾವೆಣಿಸಿದ್ದೆವು. ಅದು ಹಾಗಾಗದೆ ಆರಂಭದಲ್ಲೀ ನಡೆದುಹೋದುದು ಸಂತೋಷವೇ ಸರಿ. ನಮ್ಮ ಪೂರ್ಣ ಸಹಾನುಭೂತಿ ಸಹಕಾರವಿದೆಯೆಂಬ ಬ್ರಿಟಿಷ್ ಮುತ್ಸದ್ದಿಗಳ ಯುಕ್ತಿಯ ಮಾತಿಗೆ ಮರುಳಾಗುವ ದಿನವು ಸಂದುಹೋಗಿರುವುದು. ಅದು ಯಾವ ಅರ್ಥವೂ ಇಲ್ಲದ ಉಪಚಾರದ ಮಾತೆಂಬುದನ್ನು ಈಗ ಎಲ್ಲರೂ ತಿಳಿದಿರುವರು. ಆಳರಸರಿಗೆ ಪ್ರಾಂತದಲ್ಲಿ ಕೂಡ ತಮ್ಮ ಅಧಿಕಾರದ ಹಿಡಿತವನ್ನು ಸಡಿಲು ಮಾಡಲು ಮನಸ್ಸಿಲ್ಲೆಂಬುದೀಗ ಸಿದ್ಧವಾಗಿರುವುದು. ಅವರು ಇನ್ನು ಮುಂದಾದರೂ ಪ್ರಾಂತಿಕ ಸ್ವಾತಂತ್ರ್ಯ, ಪ್ರಜಾಜವಾಬ್ದಾರಿ ಸರಕಾರವೆಂಬ ದೊಡ್ಡ ದೊಡ್ಡ ಮಾತುಗಳನ್ನಾಡದಂತಾಗಿರುವುದು. ಅವರ ಆಳ್ವಿಕೆಯು ಇಷ್ಟರವರೆಗಣಂತೆ ಪ್ರಜಾ ಎಂಬ ಲವ ಸೋಗು ಕೂಡಾ ಇಲ್ಲದೆ ಬತ್ತಲೆಯಾಗಿ ನಡೆಯಬೇಕಾಗಿರುವುದು. ಇಂತಹ ಪರಿಸ್ಥಿತಿಯಲ್ಲಿ ತಮ್ಮ ಮುಂದಿನ ಕರ್ತವ್ಯವೇನೆಂದು ತೋರದಿರುವುದು ಕಾಂಗ್ರೆಸಿಗಲ್ಲ ಸರಕಾರಕ್ಕೆ. ಕಾಂಗ್ರೆಸಿನ ಮುಂದಿನ ಮಾರ್ಗವು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಿದೆ ಅದರ ಹೊಸ ಸುಧಾರಣಾ ಆಕ್ಟಿನ ನಿಷೇಧಕ್ಕೆ ಮತ್ತಷ್ಟು ಬಲದೊರೆತಿದೆ. ಹೊಸ ರಾಜ್ಯಾಂಗ ರಚನೆಯನ್ನು ಸಂಪೂರ್ಣವಾಗಿ ಉಗ್ರವಾಗಿ ವಿರೋಧಿಸಿ ಮುರಿದು ಹಾಕುವುದೇ ಅದರ ಪ್ರಕೃತದ ಕರ್ತವ್ಯವಾಗಿ ನಿಂತಿದೆ. ಕಾಂಗ್ರೆಸಿನ ಈ ಉದ್ದೇಶ ಸಾಧನೆಗಾಗಿ ಜನರೆಲ್ಲರೂ ಉತ್ಸಾಹದಿಂದ ಅದಕ್ಕೆ ಸಹಾಯ ಮಾಡಿ ಅದರ ಕಾರ್ಯಕ್ರಮವನ್ನು ಜಯಶೀಲವಾಗಿ ನೆರವೇರಿಸುವರೆಂದು ನಾವು ನಂಬುತ್ತೇವೆ. ಇಂದು ಹೊಸಸುಧಾರಣೆಯ ವಿರೋಧವಾಗಿ ದೇಶದಲ್ಲೆಲ್ಲಾ ನಡೆಯುವ ಹರತಾಳದ ಜಯಶೀಲತೆಯ ಕುರಿತು ನಮಗೆ ಒಂದಿಷ್ಟು ಸಂದೇಹವಿರುವುದಿಲ್ಲ.

ಕಾಂಗ್ರೆಸಿನವರನ್ನು ಇಷ್ಟೊಂದು ಕಷ್ಟಪಟ್ಟು ತಾವು ಆರಿಸಿ ಕಳುಹಿಸಿದರೂ ಅವರು ಅಧಿಕಾರವಹಿಸಿ ತಮಗೇನಾದರೂ ಸಾಧ್ಯವಾದ ಮಟ್ಟಿಗೆ ಸಹಾಯಮಾಡಲಾರದಾದರಲ್ಲಾ ಎಂಬ ಒಂದು ಬಗೆಯ ಆತ್ಮಸ್ತಿಯು ಅನೇಕರಲ್ಲುಂಟಾಗಬಹುದು. ಜಸ್ಟಿಸ್ ಪಕ್ಷದ ಇತಿಹಾಸವನ್ನು ಪುನರಾವರ್ತಿಸುವವರು ಕಾಂಗ್ರೆಸಿನವರಲ್ಲ. ಅವರಿಗೆ ಅಧಿಕಾರ ಬೇಕಾಗಿರುವುದು ಸ್ವಾರ್ಥ ಸಾಧನೆಗಲ್ಲ; ಪ್ರಜಾಹಿತ ಸಾಧನೆಗೆ. ಅಂತಹ ಪ್ರಜಾಹಿತಸಾಧನೆಯನ್ನು ಗವರ್ನರರ ಕೈಗೊಂಬೆಗಳಾಗಿ ನಡಿಸಲು ಸಾಧ್ಯವಿಲ್ಲ. ಕಾಂಗ್ರೆಸಿನವರಿಗೆ ಅವರಿಚ್ಛೆ ಪ್ರಕಾರ ಕೆಲಸ ಮಾಡಿ ಜನರಿಗೆ ಹಿತವನ್ನುಂಟುಮಾಡುವ ಸ್ವತಂತ್ರವೂ ಅನುಕೂಲತೆಯೂ ಇಲ್ಲದೆ ಅವರೆಂದಿಗೂ ಅಧಿಕಾರ ಸ್ವೀಕರಿಸುವ ಗೊಡವೆಗೆ ಹೋಗಲಾರರು. ಅವರು ಅಧಿಕಾರ ನಿರಾಕರಿಸುವುದೆಂದರೆ, ಪ್ರಕೃತದ ಪರಿಸ್ಥಿತಿಯಲ್ಲಿ ಹೊಸಸುಧಾರಣೆಯಿಂದ ಯಾವತರದ ಪ್ರಯೋಜನವನ್ನು ಜನರಿಗೆ ಮಾಡಲು ಸಾಧ್ಯವಿಲ್ಲೆಂದು ಮನಗಂಡೇ ಎಂಬದನ್ನು ಎಲ್ಲರೂ ತಿಳಕೊಳ್ಳಬೇಕು. ಅವರಿಗೆ ದುರಭಿಮಾನವಿಲ್ಲ, ವೈಯಕ್ತಿಕ ಪ್ರತಿಷ್ಠೆಯಿಲ್ಲ ಬೇಕಾದುದು ಜನಹಿತವೊಂದೇ. ಅದಕ್ಕೆ ತಕ್ಕ ಸ್ವಾತಂತ್ರ್ಯವನ್ನು ಗವರ್ನರರು ಕೊಡಲಾರರೆಂದ ಮೇಲೆ ಯಾವ ಸ್ಥಾನಮಾನವಾದರೂ ತೃಣಸಮಾನ ಅವರಿಗೆ. ಆದುದರಿಂದಲೇ ಅವರು ತಮ್ಮ ಕೈಯಲ್ಲಿದ್ದ ತುತ್ತನ್ನು ತೆಗೆದು ಬಿಸಾಡಿ ಬಿಟ್ಟಿರುವರು. ಇದರಿಂದ ಜನರೆಲ್ಲಾ ಆನಂದಗೊಳ್ಳಬೇಕು. ತಮ್ಮ ಹಿತವೇ ಸರ್ವಸ್ವವಾಗಿರುವ ಪ್ರತಿನಿಧಿಗಳನ್ನು ತಾವು ಆರಿಸಿ ಕಳುಹಿಸಿದುದಕ್ಕಾಗಿ ಅಭಿಮಾನಪಡಬೇಕೇ ಹೊರತು ಯಾವರೀತಿಯಿಂದಲೂ ಪಶ್ಚಾತ್ತಾಪಪಡಬಾರದು.

ಗವರ್ನರರು ಇನ್ನು ಹೇಗಾದರೂ ಮಂತ್ರಿಮಂಡಲವೊಂದನ್ನು ರಚಿಸಲು ತನ್ನಿಂದ ಸಾಧ್ಯವಾದ ಪ್ರಯತ್ನವನ್ನೆಲ್ಲಾ ನಡಿಸುವರು. ಈ ಪ್ರಯತ್ನವು ಈಗಾಗಲೇ ಆರಂಭವಾಗಿ ಕೆಲವು ಸ್ವಪ್ರತಿಷ್ಠಾಕಾಮಿಗಳು ಬೇರೆ ಬೇರೆ ರೀತಿಯ ಸೂತ್ರಚಾಲನೆ ನಡಿಸತೊಡಗಿರುತ್ತಾರೆ. ಇದರಿಂದ ಆಳರಸರು ತಾವಾಗಿಯೇ ಸುಧಾರಣಾ ಆಕ್ಟನ್ನು ಉಲ್ಲಂಘಿಸಿ ನಡೆದಂತಾಗುವುದು. ಬಹು ಪಕ್ಷದ ಪ್ರಜಾ ಪ್ರತಿನಿಧಿಗಳ ವಿಶ್ವಾಸವನ್ನು ಸ್ಥಿರವಾಗಿ ಪಡೆಯುವವರನ್ನು ಮಂತ್ರಿಗಳಾಗಿ ಆರಿಸುವ ಬದಲಿಗೆ, ತನ್ನ ಕೈಗೊಂಬೆಗಳಾಗಿ ಕುಣಿಯಬಲ್ಲ ಕೆಲವರನ್ನು ಮಂತ್ರಿಗಳಾಗಿ ಆರಿಸಿದರೆ ಸುಧಾರಣಾ ಆಕ್ಟೇ ಬರಿಯ ನಕಲಿಯೆಂಬುದನ್ನು ಋಜುಪಡಿಸಿದಂತಾಗುವುದು. ಒಂದಿಷ್ಟು ಸ್ವಾಭಿಮಾನವುಳ್ಳ ಹಿಂದೀಯನಾರೂ ಇಂತಹ ಗೊಂಬೆಯಾಟ ನಡಿಸಲು ಮುಂದೆ ಬರಲಿಕ್ಕಿಲ್ಲ. ಅಂತಹ ದೇಶಘಾತುಕರಾರಾದರೂ ಮುಂದೆ ಬಂದಲ್ಲಿ ಅವರ ಕುರಿತು ಜನತೆಯ ಕರ್ತವ್ಯವು ಸ್ಪಷ್ಟವಿದೆ. ಅವರಿಗೆ ಯಾವ ತರದ ಸಹಕಾರವನ್ನೂ ಜನರು ಕೊಡಬಾರದು. ಗವರ್ನರರು ಈಗ ಎಸೆಂಬ್ಲಿಯನ್ನು ಮುಕ್ತಾಯಮಾಡಿ ಇನ್ನೊಮ್ಮೆ ಚುನಾವಣೆ ನಡಿಸುವ ಕ್ರಮಬದ್ಧವಾದ ಕೆಲಸ ಮಾಡಿದರೂ ಆಗಲೂ ಜನರೇನು ಮಾಡಬೇಕೆಂಬುದು ಅವರಿಗೆ ತಿಳಿದೇ ಇದೆ. ಪುನಹ ಕಾಂಗ್ರೆಸಿನವರನ್ನು ಮತ್ತಷ್ಟು ದೊಡ್ಡ ಬಹುಪಕ್ಷದಿಂದ ಆರಿಸಬೇಕು. ಆಗ ಮಾತ್ರ ಆಳರಸರು ತಮ್ಮ ಆಟವು ಎಷ್ಟಕ್ಕೂ ನಡೆಯುವುದಿಲ್ಲೆಂದು ಕಂಡುಕೊಂಡು ದಾರಿಗೆ ಬರಬಹುದು.

ಮದ್ರಾಸಿನಲ್ಲಿ ಹಿಂದೀಪ್ರಚಾರ

ಮದ್ರಾಸಿನಲ್ಲಿ ಜರಗಿದ ಹಿಂದೀ ಸಾಹಿತ್ಯಸಮ್ಮೇಲನವು ದಕ್ಷಿಣಭಾರತದ ಹಿಂದೀ ಪ್ರಚಾರದ ಇತಿಹಾಸದಲ್ಲಿ ಅದೊಂದು ಹೊಸ ಯುಗವನ್ನೇ ಆರಂಭಿಸುವಂತಹದಾಗಿದೆ. ಇದರಿಂದ 18 ವರ್ಷಗಳ ಮೊದಲು ಹುಟ್ಟಿದ ಶಿಶುವಿನ ಪ್ರೌಢತನವನ್ನು ಅಂಗೀಕರಿಸಿ ಅದಕ್ಕೆ ತಕ್ಕ ಸ್ಥಾನ ಮತ್ತು ಮಾನವಿತ್ತಂತಾಗಿರುವುದು. ಈ 18 ವರ್ಷಗಳಲ್ಲಿ, ಹಿಂದಿಗೂ ತಮ್ಮ ಮಾತೃಭಾಷೆಗೂ ನಿಕಟ ಸಂಬಂಧವಾವುದೂ ಇಲ್ಲದ 50 ಸಾವಿರಕ್ಕಿಂತಲೂ ಮಿಕ್ಕಿದ ಜನರು ದಕ್ಷಿಣ ಭಾರತ ಹಿಂದೀಪ್ರಚಾರ ಸಭೆಯವರು ನಡಿಸಿರುವ ಬೇರೆಬೇರೆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಈ ಹಿಂದೀ ಸಮ್ಮೇಳನದ ಅಧ್ಯಕ್ಷರಾದ ಶೇಟ್ ಜಮುನಾಲಾಲ್ ಬಜಜರು ತನ್ನ ಭಾಷಣದಲ್ಲಂದಂತೆ ಸುಮಾರು 5 ಲಕ್ಷ ಜನರು, ಅಲ್ಪಾವಧಿಯಲ್ಲಿ ಕೇವಲ 4⅓ ಲಕ್ಷ ರೂ.ಗಳ ವೆಚ್ಚದಿಂದ ವ್ಯವಹಾರಕ್ಕೆ ಸಾಕಷ್ಟು ಹಿಂದಿಯ ಜ್ಞಾನ ಪಡೆಯುವಂತಾಗಿದೆ. ಇದಕ್ಕೆ ಹಿಂದೀಪ್ರಚಾರಕರ ಉತ್ಸಾಹ, ನಿಸ್ವಾರ್ಥ ಸೇವಾಬುದ್ಧಿ ಮತ್ತು ಎಡೆಬಿಡದ ಪರಿಶ್ರಮವೇ ಕಾರಣ. ಭಾರತೀಯರಿಗೆಲ್ಲಾ ಹಿಂದಿಯೆಂಬುದು ಏಕ ರಾಷ್ಟ್ರೀಯತೆಯ ಹೆಗ್ಗುರುತು. ಮತ್ತು ಅಂತರ ಪ್ರಾಂತೀಯ ವ್ಯವಹಾರಸಂಬಂಧದ ಉತ್ತಮೋಪಾಯವಾಗಿದೆ. ಹಿಂದೀಯರೆಲ್ಲರೂ ಏಕಭಾವ ಮತ್ತು ಮನೋವೃತ್ತಿಯುಳ್ಳವರಾಗಿ ಅಖಿಲ ಭಾರತವಾದೊಂದು ಸಂಸ್ಕೃತಿಯು ಬೆಳೆದು ಬರಬೇಕಾದರೆ ಸಾಮಾನ್ಯವಾಗಿ ಭಾಷೆಯೇ ಮುಖ್ಯ ಸಾಧನವೆಂದರೆ ಅತಿಶಯೋಕ್ತಿಯಾಗದು. ಈ ಉದ್ದೇಶ ಸಾಧನೆಗೆ ದಕ್ಷಿಣಭಾರತದಲ್ಲಿ ಇನ್ನೂ ಹೆಚ್ಚಿನ ಕೆಲಸವಾಗಬೇಕಾಗಿದೆ. ಆದರೆ ಅದು ಕಾಲಾನುಭಾಗದಲ್ಲಿ ನಡದೇ ತೀರುವುದೆಂಬ ಭರವಸೆಗೆ ಈಗ ಆಸ್ಪದವುಂಟಾಗಿದೆ. ದಕ್ಷಿಣ ಹಿಂದುಸ್ಥಾನದಲ್ಲಿ ಹಿಂದಿಯು ಎಲ್ಲಾ ಮನೆಗಳಲ್ಲಿಯೂ ಪ್ರಚಾರವಾಗುವ, ಪ್ರತಿಯೊಬ್ಬನೂ ಹಿಂದಿಯಲ್ಲಿ ಮಾತಾಡುವುದೆಂದರೆ ಅಭಿಮಾನ ತಾಳುವ ಆ ಸುಯೋಗವು ಇನ್ನು ಮುಂದೆ ಬೇಗನೆ ಉಂಟಾಗುವುದೆಂದು ಆಶಿಸಬಹುದಾಗಿದೆ.

ಉಡುಪಿ ಮುನಿಸಿಪಾಲಿಟಿ

ಕಾಂಗ್ರೆಸಿನವರು ಮಂತ್ರಿಪದವಿ ಸ್ವೀಕರಿಸುತ್ತಿದ್ದರೆ, ಉಡುಪಿಯ ಬಡಜನರಿಗೆ ಮಹಾಮಾರಿ ಸ್ವರೂಪವಾಗಿರುವ ಈ ಮುನಿಸಿಪಾಲಿಟಿಯನ್ನು ತೆಗೆದು ಹಾಕಿ ಅದರ ಬದಲಿಗೆ ಯೂನಿಯನ್ ಪಂಚಾಯತನ್ನು ಸ್ಥಾಪಿಸುವ, ಅದು ಅಸಾಧ್ಯವಾದರೆ, ಕರದ ಭಾರವನ್ನಾದರೂ ಇಳಿಸುವ ಏರ್ಪಾಡು ಮಾಡುವ ಆಶಾಕಿರಣವೊಂದು ಕೆಲವರ ಹೃದಯದಲ್ಲಿ ಮೂಡಿತ್ತು. ಆದರೆ ಈಗ ಕಾಂಗ್ರೆಸಿನವರು ಮಂತ್ರಿ ಪದವಿಯನ್ನೇ ನಿರಾಕರಿಸಿ ಬಿಟ್ಟಿರುವುದರಿಂದ ಆ ಆಶೆ ನಿರಾಶೆಯಾಗಿರುವುದು. ಈ ಪರಿಸ್ಥಿತಿಯಲ್ಲಿ ಉಡುಪಿಯ ನಾಗರಿಕರ ಕರ್ತವ್ಯವಾದರೂ ಏನು? ನಾವು ನಿಸ್ಸಂದೇಹವಾದ ರುಜುವಾತುಗಳಿಂದ ತಿಳಿದುಕೊಂಡಿರುವಂತೆ, ವೈಯಕ್ತಿಕ ಉದ್ದೇಶ ಅಥವಾ ಸಂಕುಚಿತ ಸ್ವಾರ್ಥದಿಂದ ಮುನಿಸಿಪಾಲಿಟಿಯ ಈಗಣ ಆಡಳಿತದ ಕುರಿತು ನಾನಾ ರೀತಿಯ ದುರಭಿಪ್ರಾಯ ಹಬ್ಬಿಸಿ ಜನತೆಯನ್ನು ವಂಚಿಸಿ, ಅವರು ಕರಕೊಡದಂತೆ ಎತ್ತಿ ಕಟ್ಟುವುದೇ? ಇದರಿಂದ ಯಾವ ತರದ ಪ್ರಯೋಜನವಾದರೂ ಆಗುವ ಬದಲಿಗೆ ಹಾನಿಯೇ ಉಂಟಾಗುವ ಸಂಭವ ಹೆಚ್ಚೆಂದು ನಾವು ಎಚ್ಚರಿಸಿ ತಿಳಿಸುತ್ತೇವೆ. ಮುನಿಸಿಪಾಲಿಟಿಯು ಸ್ಥಾಪಿತವಾಗಿ ಕರ ವಸೂಲು ಮಾಡಲಾರಂಭಿಸಿದಾಗಲೆ, ಎಲ್ಲಾ ಏರ್ಪಾಡುಗಳಲ್ಲಿಯೂ ಎಡೆಬಿಡದ ಚಳವಳ ನಡೆದು ನೇಕಡ 60–70ರಷ್ಟರ ಜನರಾದರೂ ಕರ ನಿರಾಕರಿಸಿ ತಮಗುಂಟಾಗಿರುವ ಅನ್ಯಾಯ ನಿವಾರಣೆಗಾಗಿ ಯಾವ ತ್ಯಾಗಮಾಡುವುದಕ್ಕೂ ಒಂದೊಮ್ಮೆ ಸಿದ್ಧರಿದ್ದರೆ ಏನಾದರೂ ಫಲ ದೊರೆಯಬಹುದಿತ್ತು. ಆದರೆ ಆ ಕುರಿತು ಜಾಹೀರಾಗಿ ಯಾವ ಚಳವಳವಾಗಲಿ, ಸಂಘಟನೆಯ ಕೆಲಸವಾಗಲಿ ನಡೆಯದೆ ಒಂದೆರಡು ವಾರ್ಡುಗಳಲ್ಲಿ ಬರೇ ಕೆಲವು ಮಂದಿ ಕರಕೊಡದೆ ತಮ್ಮ ಸಾಮಾನುಗಳ ಜಪ್ತಿ ಮತ್ತು ಏಲಮ್ ಮಾಡಿಸಿಕೊಳ್ಳುವುದರಿಂದ ಅವರೇ ವೃಥಾ ನಷ್ಟಕ್ಕೊಳಗಾಗುವರು. ಮುನಿಸಿಪಾಲಿಟಿಯು ಯಾರಿಗೂ ಬೇಕಾಗಿಲ್ಲ. ಅದರ ಆರಂಭದಲ್ಲಿ ಕಮಿಶನರೂ ಅಗತ್ಯವಿಲ್ಲ. ಆದರೆ ಅದಕ್ಕೆ ಕಾರಣ ಸರಕಾರವೇ ಹೊರತು ಮತ್ತಾರೂ ಅಲ್ಲ. ಆದುದರಿಂದ ಮುನಿಸಿಪಲ್ ನೌಕರರ ಮೇಲೆ ಸಿಟ್ಟೇಳಿ ಫಲವಿಲ್ಲ. ಅವರು ತಮ್ಮ ಕರ್ತವ್ಯ ಮಾಡಲೇ ಬೇಕಾಗಿದೆ. ಮುನಿಸಿಪಲ್ ಅಧಿಕಾರಿಗಳನ್ನು ವಿರೋಧಿಸಿ ಪರಿಸ್ಥಿತಿಯನ್ನು ಮತ್ತೂ ಕೆಡಿಸಿಕೊಳ್ಳುವ ಬದಲಿಗೆ ಸಾಧ್ಯವಾದಮಟ್ಟಿಗೆ ಅವರ ಸಹಾನುಭೂತಿ ಪಡೆದು, ನಿಜವಾದ ಅನ್ಯಾಯವಾಗಿರುವಲ್ಲಿ ಅದನ್ನು ಯಾವ ಬಗೆಯಿಂದಾದರೂ ನಿವಾರಿಸಲಾಗುವುದೋ ಎಂಬ ಕುರಿತು ಪ್ರಯತ್ನಿಸುವುದು ಮೇಲು. ಇದಕ್ಕೆ ಚೆಯರ್‌ಮೆನರೂ ಕಮಿಶನರೂ ಬೇಕಾದ

ಸಹಾಯಮಾಡಲು ಸಿದ್ಧರೇ ಇರುವರು. ವೃಥಾ ಆಡಳಿತವನ್ನು ದೂರಿ ದೂಷಿಸಿ ಜನರನ್ನು ತಪ್ಪುದಾರಿ ಹಿಡಿಸುವುದರಿಂದ ಅಗ್ಗವಾದ ಜನಪ್ರೀತಿಯು ತಾತ್ಕಾಲಿಕವಾಗಿ ದೂರೆಯಬಹುದಾದರೂ ಕಟ್ಟಕಡೆಗೆ ಅದರ ಪರಿಣಾಮವು ಪ್ರತಿವಿರುದ್ಧವಾಗದಿರದು. ಇದರಿಂದ ದೊರೆಯುವ ಲಾಭವೆಂದರೆ ಮುನಿಸಿಪಲ್ ಆಡಳಿತದ ಪ್ರತಿಷ್ಠೆಗೆ ಹಾನಿ, ಅದರ ಕುರಿತು ಜನರ ಅಲಕ್ಷ್ಯ ಮತ್ತು ತಾತ್ಸಾರ. ಇದು ಯಾವಾಗಲೂ ಒಳ್ಳೆಯ ಮನೋವೃತ್ತಿಯಲ್ಲ. ಆದುದರಿಂದ ಮುನಿಸಿಪಲ್ ಮೆಂಬರರು ಜನರಲ್ಲಿ ಇಂತಹ ಮನೋವೃತ್ತಿಯನ್ನು ಬೆಳಸುವುದು ಪುರುಷಾರ್ಥವೆಂದು ಭಾವಿಸಿಕೊಳ್ಳದೆ ತಾವು ಮೆಂಬರರಾಗಿರುವ ಸಂಸ್ಥೆಯ ಆಡಳಿತವು ತಕ್ಕ ಗೌರವ ಮತ್ತು ಪ್ರತಿಷ್ಠೆಯಿಂದ ನಡೆಸಲ್ಪಟ್ಟು ಜನಹಿತಕಾರಿಯಾಗುವಂತೆ ಬೇಕಾದ ವಿಧಾಯಕ ಸೂಚನೆಗಳನ್ನಿತ್ತು ಸಹಕರಿಸುವುದು ಅವರ ಕರ್ತವ್ಯವಿದೆ.

ವಿದೇಶ.

ವಿಚಿತ್ರರೀತಿಯ ತಾಟಸ್ಥ್ಯ!

ಇಟಲಿಯು ಸ್ಪೈನಿಗೆ ಬರೇ ಒಲಂಟೀಯರ್ದರನ್ನು ಮಾತ್ರವಲ್ಲದೆ ಸೈನಿಕ ಪಟಾಲ್ಮಗಳನ್ನೇ ಕಳುಹಿಸಿ ಅವರೇ ಮುಂದಾಳುಗಳಾಗಿ ಸ್ಪೈನಿನ ಪ್ರಾಮುಖ್ಯ ರಣರಂಗಗಳಲ್ಲಿ ಕಾದಾಡುತ್ತಿರುವರಾದರೂ, ಇಟಲಿಯ ಪ್ರತಿನಿಧಿಯಾದ ಸೀನರ್ ಗ್ರಾಂಡಿಯವರು, ಸ್ಪೈನಿನ ಕ್ರಾಂತಿಕಾರಕ ಸರಕಾರವನ್ನು ಇಟಲಿಯು ಅಡಗಿಸದೆ ಬಿಡದೆಂದು ಕಂಠೋಕ್ತವಾಗಿ ಹೇಳಿರುವರಾದರೂ, ಸ್ಪೈನಿನ ತಾಟಸ್ಥ್ಯದ ಒಪ್ಪಂದವನ್ನು ಉಲ್ಲಂಘಿಸಿ ಯಾವ ದೇಶವಾದರೂ ಒಲಂಟೀಯರರನ್ನು ಸ್ಪೈನಿಗೆ ಕಳುಹಿಸುವ ಸಂಗತಿ ತಿಳಿದು ಬಂದಿಲ್ಲೆಂದೂ ತಾಟಸ್ಥ್ಯದ ಒಪ್ಪಂದವನ್ನು ಶೀಘ್ರವಾಗಿ ಜಯಶೀಲವಾಗಿ ಜ್ಯಾರಿಗೆ ತರಲಾಗುವುದೆಂದೂ, ಸ್ಪೈನಿಗೆ ಇನ್ನು ಮುಂದೆ ಒಲಂಟೀಯರರು ಕಳುಹಿಸಲ್ಪಡದಂತೆ ಇನ್ನೇನೂ ಮಾಡಬೇಕಾಗಿಲ್ಲೆಂದೂ, ಲಂಡನಿನ ತಾಟಸ್ಥ್ಯ ಸಾಧಕ ಕಮಿಟಿಯವರ ಅಭಿಪ್ರಾಯವಿರುವುದು

ಇಂಜನೀಯರುಗಳ ಮುಷ್ಕರ

ಇಂಗ್ಲೆಂಡಿನ ಗ್ಲಾಸ್ಗೋ ಪಟ್ಟಣದಲ್ಲಿ ವಿಲಿಯಮ್ ಬೀಯರ್ಡ್‌ಮೋರ್ ಕಂಪೆನಿಯಲ್ಲಿ ಕೆಲಸಮಾಡುತ್ತಿದ್ದ 2000 ಮಂದಿ ಇಂಜನೀಯರರು, ತಮಗೆ ಸಂಬಳ ಹೆಚ್ಚು ಕೊಡಬೇಕೆಂದು ಮುಷ್ಕರ ಹಿಡಿಯುವ ನಿರ್ಧಾರಮಾಡಿರುವರು ಇದರಿಂದ ಸರಕಾರದ ನಾವೆಗಳನ್ನು ಕಟ್ಟುವ ಕೆಲಸಕ್ಕೆ ತೊಂದರೆಯುಂಟಾಗುವಂತಾಗಿದೆ

ಅಬ್ಸಿನಿಯ ಅಬಾಬದ ಕೊಲೆ.
ಲ್ಯೊಡ್ ಜೋರ್ಜರ ತೀವ್ರ ನಿಷೇಧ

ಮಾರ್ಚಿ ತಾ ೨೫ರಲ್ಲಿ ಪಾರ್ಲಿಮೆಂಟಿನಲ್ಲಿ ಅಡ್ಡಿಸ್ ಅಬಾಬದಲ್ಲಿ ಇಟಲಿಯಾನರು ಮಾರ್ಶಲ್ ಗ್ರೇಜ್‌ಯಾನಿಯವರಿಗೆ ಬೊಂಬೆಸೆದ ವಿಷ್ಯಮಾನದಿಂದ ರೇಗಿಬಿದ್ದು ನಾವಿರಾರು ಮಂದಿ ಅಬಿಸೀನಿಯರನ್ನು ನರಿನಾಯಿಗಳಂತೆ ಕೊಂದ ಕುರಿತು ಚರ್ಚೆ ನಡೆದಾಗ ಮಿ ಲ್ಯೊಡ್ ಜೋರ್ಜರು ಇಟಲಿಯಾನರ ಅತ್ಯಾಚಾರವನ್ನು ತೀವ್ರವಾಗಿ ನಿಷೇಧಿಸಿ ಕಳೆದ ೫೦ ವರ್ಷಗಳಿಂದ ಇಂತಹ ಭೀಷಣ ಕೊಲೆಯು ನಡೆದಿರುವುದಿಲ್ಲೆಂದರು ಈ ಕೊಲೆಯ ಸಂದರ್ಭದಲ್ಲಿ ಅಡ್ಡಿಸ್ ಅಬಾಬದಲ್ಲಿರುವ ಅಮೆರಿಕಾನ ಪ್ರತಿನಿಧಿಯು ೩೦೦ ಮಂದಿ ಅಬಿಸೀನಿಯರಿಗೆ ೩ ದಿವಸಗಳವರೆಗೆ ಆಶ್ರಯವಿತ್ತಿದ್ದರು ಆ ಮೇಲೆ ಅವರಿಗೇನೂ ಹಾನಿಮಾಡುವುದಿಲ್ಲೆಂದು ಇಟಲಿಯಾನರಿಂದ ವಚನಪಡೆದು ಅವರನ್ನು ಬಿಟ್ಟರು ಬಿಟ್ಟ ಕೂಡಲೆ ಅವರನ್ನೆಲ್ಲಾ ಒಬ್ಬರನ್ನೂ ಬಿಡದೆ ಜಾನುವಾರುಗಳಂತೆ ಕೊಂದು ಹಾಕಲಾಯಿತು ಈ ಸಂಗತಿಯನ್ನು ಪಾರ್ಲಿಮೆಂಟಿನಲ್ಲಿ ವಿವರಿಸಲಾಯಿತು. ರಾಸ್ ಡೆಸ್ಟರಂತಹ ವೀರಯೋಧರನ್ನು ಸೆರೆಹಿಡಿದು ಯಾವ ರೀತಿಯ ವಿಚಾರಣೆಯೂ ಇಲ್ಲದೆ ನಾಯಿಯಂತೆ ಗುಂಡೆಸೆದು ಕೊಂದ ಅನ್ಯಾಯವನ್ನು ಕೂಡ ಲ್ಯೊಡ್‌ಜೋರ್ಜರು ಖಂಡಿಸಿದರು

ವಿಮಾನ ಧಾಳಿ

ಮಾರ್ಚಿ ತಾ ೨೬ನೇ ರಾತ್ರಿ ಇಂಗಳ ಬೆಳಕಿನಲ್ಲಿ ಗೊಡಲಜಾರ ಮತ್ತು ಮೇದ್ರಿದಿನ ಮೈಲೆ ಬಂಡಾಯಗಾರರು ಪ್ರಬಲ ವಿಮಾನಧಾಳಿ ನಡಿಸಿ ಹಾವಳಿ ಮಾಡಿರುವರೆಂದೂ, ಬ್ರಹ್ಮೂಗ ಗುಡ್ಡದ ತುದಿಯಲ್ಲಿ ೩೦೦ ಮಂದಿ ಸರಕಾರದ ಕಡೆಯ ಸೈನಿಕರು ಸೆರೆಹಿಡಿಯಲ್ಪಟ್ಟಿರುವರೆಂದೂ ಸರಕಾರದ ಕಡೆಯ ಸುದ್ದಿ

ಸರಕಾರದವರಿಗೆ ಒವೆಡೋ ಪಟ್ಟಣವನ್ನು ವಶಮಾಡಿಕೊಳ್ಳಲು ಎಷ್ಟಕ್ಕೂ ಸಾಧ್ಯವಿಲ್ಲೆಂದೂ, ಅಲ್ಲಿ ಬಂಡಾಯಗಾರರ ಸೇನಾನಾಯಕರಾಗಿರುವ ಜನರಲ್ ಅರಂದರವರು ಜನರಲ್ ಫ್ರಾಂಕೋರವರಿಗಿಂತಲೂ ಉತ್ತಮಯೋಧರೆಂದೂ ಅವರ ಸೇನೆ ಮತ್ತು ಕಂದಕಗಳೆಲ್ಲಾ ಉತ್ತಮವಿರುವವೆಂದೂ ತಿಳಿದುಬರುತ್ತದೆ ಆದರೆ ಸರಕಾರದ ಕಂದಕ ಅಷ್ಟು ಒಳ್ಳೆಯವಾಗಿಲ್ಲ ಸೈನಿಕರಿಗೆ ಸರಿಯಾಗಿ ಆಹಾರವಿಲ್ಲ, ಆದುದರಿಂದ ಒವೆಡೋ ಪಟ್ಟಣವನ್ನು ವಶಮಾಡಿಕೊಳ್ಳಲೆತ್ನಿಸುವುದರಿಂದ ವೃಥಾ ಪ್ರಾಣಹಾನಿಮಾಡಿಕೊಂಡಂತಾಗುವುದೆಂದು ಪ್ರಯತ್ನವನ್ನೇ ನಿಲ್ಲಿಸಲಾಗಿದೆಯೆಂದು ಸುದ್ದಿ

ಸ್ವದೇಶ

ಲೋರ್ಡ್ ಬೇಡೆನ್ ಪವೆಲರು

ತನ್ನ ಪತ್ನಿಯೊಂದಿಗೆ ಮಾರ್ಚಿ ತಾ ೨೭ರಲ್ಲಿ ಮುಂಬಾಯಿಂದ ಇಂಗ್ಲೆಂಡಿಗೆ ಹೊರಟುಹೋಗಿರುವರು ಸ್ಕೌಟ್ ಚಳವಳದ ಜನಕರಾದ ಇವರು ಹಿಂದು ದೇಶದ ೬ ಮಿಲ್ಯ ಹುಡುಗರನ್ನು ಆಶೀರ್ವದಿಸಿ ಅವರೆಲ್ಲರು ಸ್ಕೌಟ್ ಚಳವಳಕ್ಕೆ ಸೇರಿ ಜೀವನದ ಆನಂದ ಮತ್ತು ಬಂಧುತ್ವದ ಪ್ರೇಮವನ್ನು ಅನುಭವಿಸುವರೆಂಬ ನಿರೀಕ್ಷೆ ಸೂಚಿಸಿರುವರು ಲೇಡಿ ಬೇಡೆನ್ ಪವೆಲರು ಹಿಂದುದೇಶದ 'ಗರ್ಲ್‌ಗೈಡ್' ಚಳವಳದ ಕುರಿತು ತನ್ನ ಮೆಚ್ಚಿಗೆ ತೋರಿರುವರು.

ಹಳ್ಳಿ ತರುಣನೊಬ್ಬನ ಸಾಹಸ

ಪಂಜಾಬಿನ ಮಾನಕ್‌ಮಾಲಾ ಎಂಬ ಹಳ್ಳಿಯಲ್ಲಿ ಮಾರ್ಚ ತಾ ೨೬ನೇ ರಾತ್ರಿ ೪ ಮಂದಿ ದರೋಡೆಗಾರರು ಪಿಸ್ತೂಲು ಮತ್ತು ಇತರ ಆಯುಧ ಹಿಡಿದುಕೊಂಡು ಒಬ್ಬ ಚಿನಿವಾರನ ಮನೆಯ ಮೇಲೆ ಧಾಳಿ ನಡಿಸಿದರು ಆಗ ಚಿನಿವಾರನು ಅವರಿಗೆ ಆಭರಣಗಳನ್ನು ತಂದು ತೋರಿಸುವ ನೆವದಿಂದ ಕೋಣೆಯೊಳಗೆ ಹೋಗಿ ಬಾಗಿಲು ಹಾಕಿ ಕುಳಿತು ಬಿಟ್ಟ ಆಗ ದರೋಡೆಗಾರರು ಇನ್ನೊಂದು ಕೋಣೆಯ ಬಾಗಿಲು ಮುರಿದು ಮನೆಯ ಹೆಂಗಸರನ್ನೆಲ್ಲಾ ಹಿಡಿದು ಹೊಡೆದು ಅವರ ಆಭರಣಗಳನ್ನು ಕಿತ್ತುಕೊಂಡರು ಈ ಸ್ತ್ರೀಯರ ಕೂಗು ಕೇಳಿ ವೀರ ತರುಣನೊಬ್ಬನು ಮನೆಯ ಅಂಗಳಕ್ಕೆ ಹಾರಿ ದರೋಡೆಗಾರರೊಡನೆ ಒಬ್ಬನೇ ಆಗಿ ಹೋರಾಡಿ ಅವರಲ್ಲೊಬ್ಬನನ್ನು ಕೊಂದುಬಿಟ್ಟ ಉಳಿದವರು ಪಲಾಯನಮಾಡಿದರು ಸತ್ತ ದರೋಡೆಗಾರನ ಹಸ್ತ ೧೨ ಬೋರಿನ ರಿವಾಲ್ವರ್ ಮತ್ತು ಗುಂಡಿದ್ದಿತ್ತು.

ಹಿಂದು ಮುಸಲ್ಮಾನರ ಜಗಳ

ರತ್ನಗಿರಿಯಲ್ಲಿ ಮಾರ್ಚಿ ತಾ ೨೭ರಲ್ಲಿ ಒಂದು ಮಸೀದಿಯ ಹತ್ತಿರ ವಾದ್ಯ ನಿಲ್ಲಿಸಬೇಕೆಂಬ ನಿಮಿತ್ತ ಹಿಂದುಮುಸಲ್ಮಾನರಿಗೆ ಜಗಳವಾಗಿ ೬ ಮಂದಿ ಹಿಂದುಗಳು ಮತ್ತು ೧೩ ಮಂದಿ ಮುಸಲ್ಮಾನರು ಗಾಯಗೊಂಡಿರುವರು ಹಿಂದುಗಳು ಢೋಲು ಮೆರವಣಿಗೆ ಒಯ್ಯುವಾಗ ಕಿಲ್ಲೆ ಮಸೀದಿಯ ಬಳಿ ಮುಸಲ್ಮಾನರು ವಾದ್ಯ ನಿಲ್ಲಿಸಬೇಕೆಂದು ಆಕ್ಷೇಪಿಸಿ ಜಗಳವಾಗಿ ದೊಣ್ಣೆ, ಲಾತಿಗಳಿಂದ ಇತ್ತಂಡದವರೂ ಹೊಡಕೊಂಡರು ಕಲ್ಲು ಬಿಸಾಡಿಕೊಂಡರು. ಆಗ ಪೋಲೀಸರು ಬಂದು ಕೆಲವರನ್ನು ದಸ್ತಗಿರಿಮಾಡಿ ದೊಣ್ಣೆ ಕಸಕೊಂಡು ಜಗಳ ನಿಲ್ಲಿಸಿದರು. ಮೆಜಿಸ್ಟ್ರೇಟರು ಈಗ ಈ ಸ್ಥಳದವನ್ನು ರಾತ್ರಿಯಿಂದ ತೀರ್ಮಾನಿಸಿರುವರು

ಮದ್ರಾಸಿನ ಹೊಸ ಮಂತ್ರಿಮಂಡಲಿ

ಮದ್ರಾಸಿನಲ್ಲಿ ಗವರ್ನರರು ಪ್ರಕೃತ ಆಡಳಿತ ನಡಿಸಲು ಒಂದು ತಾತ್ಕಾಲಿಕ ಮಂತ್ರಿಮಂಡಲವನ್ನು ರಚಿಸುವ ನಿರ್ಧಾರಮಾಡಿರುವರಷ್ಟೆ ಇದು ಹೊಸ ಸುಧಾರಣಾ ಆಕ್ಟಿಗೆ ಪ್ರತಿಕೂಲವಾದ ಕೆಲಸವೆಂದು ಕೆಲವರ ಅಭಿಪ್ರಾಯವಿದೆ ಹೊಸ ಮಂತ್ರಿಮಂಡಲದಲ್ಲಿ ೫ ಮಂದಿ ಮಂತ್ರಿಗಳಿರುವರೆಂದೂ, ಸರ್ ಮಹಮ್ಮದ್ ಉಸ್ಮಾನ್, ಸರ್, ಕೆ ವಿ ರೆಡ್ಡಿ ಮತ್ತು ಸರ್ ಪನ್ನೀರ್ ಸೆಲ್ವಮರು ಮಂತ್ರಿಗಳಾಗಬಹುದೆಂದೂ ಸುದ್ದಿಯುಂಟಾಗಿದೆ ಒಬ್ಬ ಯುರೋಪಿಯನನೂ ಮಂತ್ರಿಯಾಗಿ ನೇಮಿಸಲ್ಪಡಬಹುದಂತೆ ಮದ್ರಾಸ್ ಎಸಂಬ್ಲಿ ಸಭೆ ನೆರೆಯುವುದನ್ನು ಕೂಡಾ ಕೆಲವು ತಿಂಗಳು ಮುಂದೆ ಹಾಕಬಹುದೆಂದು ನಂಬಲಾಗಿದೆ ಮಾರ್ಚಿ ತಾ ೨೮ರಲ್ಲು ಮದ್ರಾಸಿನ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಮಂಡಲಿಯ ಸಭೆಯೊಂದು ಕಾಂಗ್ರೆಸ್ ಸದನದಲ್ಲಿ ಶ್ರೀ ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದು ಪ್ರಕೃತದ ಪರಿಸ್ಥಿತಿಯನ್ನು ಪರಿಶೀಲಿಸಲಾಯಿತು

ಮುಂಬಾಯಿಯಲ್ಲಿ ಶ್ರೀ ಬಿ ಜಿ ಖೇರರು ಮಂತ್ರಿಮಂಡಲಿಯನ್ನು ರಚಿಸಲು ನಿರಾಕರಿಸಿರುವುದರಿಂದ ಗವರ್ನರರು ಸರ್ ಎ ಎಮ್ ಕೆ ದೆಹಲಿಯವರನ್ನು ಆಮಂತ್ರಿಸಿ ಮಂತ್ರಿಮಂಡಲಿಯ ರಚನೆಯ ಕುರಿತು ಮಾತಾಡಿರುವರು ಈಗ ಮಂತ್ರಿಗಳಾಗಿರುವ ಸರ್ ಟಿ ಬಿ ಕೂಪರ್, ಸರ್ ಅಲಿ, ಆಹಮ್ಮದ್‌ಖಾನ್ ಮತ್ತು ಸರ್ ಎಸ್ ಟಿ ಕಂಬ್ಲಿಯವರು ಕಾಂಗ್ರೆಸ್ ಪಕ್ಷಕ್ಕೆ ಸೇರದವರನ್ನೆಲ್ಲಾ ಒಟ್ಟುಗೂಡಿಸಿ ಮಂತ್ರಿಮಂಡಲಿಯನ್ನು ರಚಿಸಲೆತ್ನಿಸುತ್ತಿರುವರು. ಡಾಕ್ಟರ್ ಅಂಬೇಡ್ಕರರು ಇವರೊಂದಿಗೆ ಸೇರದೆ ಪ್ರತಿ ಪಕ್ಷೀಯರಾಗಿಯೇ ಇರುವ ನಿರ್ಧಾರಮಾಡಿರುವರೆಂದು ತಿಳಿದುಬರುತ್ತದೆ ೬ ಮಂದಿ ಮೆಂಬರರಿರುವ ಡೆಮಾಕ್ರೆಟಿಕ್ ಸ್ವರಾಜ್ಯ ಪಕ್ಷದ ನಾಯಕರಾದ ಶ್ರೀ ಜಮ್ನಾದಾಸ್ ಮೇಧಾರವರು ಮಂತ್ರಿಮಂಡಲದ ರಚನೆಯಲ್ಲಿ ಸಹಕಾರಮಾಡುವ ಸಂಭವವಿದೆ

ಬಿಹಾರಿನ ಮಂತ್ರಿಮಂಡಲದ ಕುರಿತು ಇಷ್ಟರವರೆಗೆ ಯಾವುದೂ ನಿಶ್ಚಯವಾಗಿರುವುದಿಲ್ಲ ಅಲ್ಲಿಯ ಗವರ್ನರರು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೃಷ್ಣಸಿಂಹರೊಡನೆ ಮಾರ್ಚಿ ತಾ ೩೦ರಲ್ಲಿ ಪುನಃ ಮಾತಾಡಲಿರುವರು ಮಧ್ಯಪ್ರಾಂತದ ಕಾಂಗ್ರೆಸ್ ಪಕ್ಷದ ನಾಯಕರಾದ ಡಾಕ್ಟರ್ ಖಾರೆಯವರು ಮಾರ್ಚಿ ತಾ ೨೭ರಲ್ಲಿ ಬೊಂಬಾಯಿಗೆ ಹೋಗಿ ಸರ್ದಾರ್ ವಲ್ಲಭಾಯಿಯವರೊಡನೆ ಮಾತಾಡಿರುವರು ಅಲ್ಲಿಯ ಪರಿಸ್ಥಿತಿಯೂ ಬೊಂಬಾಯಿ ಮದ್ರಾಸ್‌ಗಳಿಗಿಂತ ಭಿನ್ನವಾಗಿಲ್ಲೆಂದು ತಿಳಿದುಬರುತ್ತದೆ ಒರಿಸ್ಸದ ಗವರ್ನರರು ಕಾಂಗ್ರೆಸ್ ಪಕ್ಷದ ನಾಯಕರಿಗೆ ಆಶ್ವಾಸನ ಕೊಡಲೊಪ್ಪದುದರಿಂದ ಅವರು ಮಂತ್ರಿಮಂಡಲವನ್ನು ರಚಿಸಲು ನಿರಾಕರಿಸಿರುವರು ಗಡಿನಾಡಿನ ಕಾಂಗ್ರೆಸ್ ಪಕ್ಷದ ಹೊರಗಿರುವವರನ್ನೆಲ್ಲಾ ಒಟ್ಟು ಸೇರಿಸಿ ಮಂತ್ರಿಮಂಡಲವನ್ನು ರಚಿಸುವ ಪ್ರಯತ್ನ ನಡಿಯುತ್ತಿದೆ

ಸರ್ದಾರ್ ವಲ್ಲಭಾಯಿಯವರು

ಈಗ ತನ್ನ ಚಿಂತೆಯೆಲ್ಲಾ ಹೋಯಿತು ಬ್ರಿಟಿಷ್ ಮುತ್ಸದ್ದಿಗಳು ಹಾಡುತ್ತಿದ್ದ ಪಲ್ಲವಿಯ ತಾಳವನ್ನು ಕಾಂಗ್ರೆಸಿನವರು ಪುನಃ ಒರೆಗೆ ಹಚ್ಚಿ ಅದು ಟೊಳ್ಳೆಂದು ಲೋಕವಿಖ್ಯಾತಗೊಳಿಸಿರುವರು ಹೊಸ ರಾಜ್ಯಾಂಗ ರಚನೆಯ ನಕಲಿಯು ಬಟ್ಟಬಯಲಾಗಿರುವುದು ಜನತೆಯ ಬೆಂಬಲವಿಲ್ಲದ ಜನರು ಕೆಲವರು ಮಂತ್ರಿಮಂಡಲಿಗಳನ್ನು ರಚಿಸುವಂತೆ ಬಹಳ ಪ್ರಯತ್ನ ನಡಿಸುತ್ತಿರುವರು ಹಿಂದುದೇಶವು ಈಗ ಸಂಪೂರ್ಣ ಎಚ್ಚರದಿಂದಿರುವುದು ಯಾವ ಸ್ವಾಭಿಮಾನಿ ಹಿಂದೀಯನಾದರೂ ತಲೆತಿರುಕನಂತೆ ನಡೆಯಲೊಪ್ಪನೆಂದು ನಾನೆಣಿಸುತ್ತೇನೆ ಹಿಂದೀಯರನ್ನು ದಾಸ್ಯದಲ್ಲಿಡಲೆತ್ನಿಸುವ ವಿದೇಶಿ ರಾಜ್ಯಭಾರದ ಏಜೆಂಟರಾಗಿ ನಡೆಯಲು ಹಿಂದೀಯರಾರೂ ದೊರೆಯದೆ ಗವರ್ನರರೇ ಆಡಳಿತ ನಡಿಸಲೆಂದು ಹೇಳಿಕೆಯಿತ್ತಿರುವರು ಪಂಡಿತ ಜವಾಹರಲಾಲರು ಕಾಂಗ್ರೆಸ್ ಪಕ್ಷೀಯರು ಮಂತ್ರಿಮಂಡಲ ರಚಿಸಲು ನಿರಾಕರಿಸಿದುದರಿಂದ ಬಹಳ ಸಂತೋಷಗೊಂಡಿರುವರು

ಮೂರ್ತೆಗಾರರ ಮುಷ್ಕರ

ತೆಂಗಿನ ಮರದ ಮೇಲೆ ಹೆಚ್ಚಿನ ಸಿ ಸ ಹೇರಿಸಲಾಯಿತೆಂದು ಮದ್ರಾಸಿನ ಮೂರ್ತೆಗಾರರನೇಕರು ಈಗ ಕೆಲಸಮಯದಿಂದ ಮುಷ್ಕರಹಿಡಿದು ಕೆಲಮಂದಿ ಕೈದುಮಾಡಲ್ಪಟ್ಟಿರುವರು ಮಾರ್ಚಿ ತಾ 28ರಲ್ಲು ಮದ್ರಾಸಿನ ಮೈಲಾಪುರದಲ್ಲಿ 6 ಮಂದಿ ಮೂರ್ತೆಗಾರರು, ತೆಂಗಿನ ತೋಟ ಒಂದಕ್ಕೆ ಹೊಕ್ಕು ಅಬ್ಕಾರಿ ಪೇದೆಯೊಬ್ಬನಿಗೆ ಹೊಡೆದು, ಹೊಸದಾಗಿ ಕಳ್ಳು ತೆಗೆಯುವ ಕೆಲಸಮಾಡುತ್ತಿದ್ದವರ ಹತ್ಯಾರುಗಳನ್ನು ಸೆಳಕೊಂಡರೆಂಬ ಆರೋಪದಿಂದ ಕೈದುಮಾಡಲ್ಪಟ್ಟಿರುವರು

ಹೊಸರಾಜಕೀಯ ಘಟನೆಯ ನಿಷೇಧ

ಮುಸಲ್ಮಾನರಿಗೆ ಪಂಜಾಬಿನ ಉಲೇಮಗಳ ವಿನಂತಿ.

ಎಪ್ರಿಲ್ ತಾ ೧ನೇ ಗುರುವಾರ ದಿನವನ್ನು ಹೊಸ ರಾಜಕೀಯ ಘಟನೆಯ ನಿಷೇಧ ದಿನವಾಗಿ ಆಚರಿಸಿ ಹರತಾಳಮಾಡಬೇಕೆಂದು ಪಂಜಾಬಿನ ಪ್ರಮುಖ ಉಲೇಮರೂ, ನೇಷನಲಿಸ್ಟ್ ಮುಸಲ್ಮಾನರೂ ವಿನಂತಿ ಮಾಡಿಕೊಂಡಿರುವರು ಮಿ ಜಿನ್ನಾರವರು ಈ ಹರತಾಳದಲ್ಲಿ ಮುಸಲ್ಮಾನರು ಸಹಕರಿಸಕೂಡದೆಂದು ಮಾಡಿಕೊಂಡಿರುವ ವಿನಂತಿಯ ಕುರಿತು ಸಂಯುಕ್ತ ಪ್ರಾಂತದ ಮುಸ್ಲಿಮ್ ಲೀಗಿನವರು ಸಿಟ್ಟುತಾಳಿರುವರು. ಅವರು ಅದಕ್ಕೆ ಯಾವ ಗಮನವನ್ನೂ ಕೊಡದೆ ಅಲಕ್ಷಿಸುವ ನಿರ್ಧಾರಮಾಡಿರುವಂತೆ ತೋರುತ್ತದೆ ಮುಸಲ್ಮಾನರು ಹರತಾಳದಲ್ಲಿ ಭಾಗಿಯಾಗಬೇಕೆಂದೇ ಸಂಯುಕ್ತ ಪ್ರಾಂತದ ಮುಸ್ಲಿಮ್‌ಲೀಗ್ ಪಾರ್ಲಿಮೆಂಟರಿ ಬೋರ್ಡಿನ ಕಾರ್ಯ ನಿರ್ವಾಹಕ ಕಮಿಟಿಯವರ ಅಭಿಪ್ರಾಯವಿದೆ ಅವರು ಸಂಯುಕ್ತ ಪ್ರಾಂತದಲ್ಲಿ ಬಾಸ್ತ್ರೈಟ್ ಎಂಬಲ್ಲಿ ಎಸಂಬ್ಲಿಯ ಮುಸಲ್ಮಾನ ಸೀಟೊಂದಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರಿಯಾದ ಮಿ ರಾಫಿ ಅಹಮ್ಮದ್ ಕಿದ್ವಾಯಿಗಳ ಎದುರಾಗಿ ತಮ್ಮ ಉಮೇದುವಾರಿಯನ್ನು ನಿಲ್ಲಿಸಕೂಡದೆಂದು ನಿರ್ಧರಿಸಿರುವರು. ಮಿ ಜಿನ್ನಾರವರು ಮಿ ಕಿದ್ವಾಯಿಗಳ ಎದುರಾಗಿ ಮುಸ್ಲಿಮ್ ಲೀಗಿನವರು ತಮ್ಮ ಉಮೇದುವಾರಿಯನ್ನು ನಿಲ್ಲಿಸಬೇಕೆಂದು ಹಟಹಿಡಿದಿದ್ದರು

ಕಲ್ಕತ್ತದಲ್ಲಿ ಮಾರ್ಚ ತಾ ೨೯ರಿಂದ ಎಪ್ರಿಲ್ ತಾ. ೪ರ ವರೆಗೆ ಸಭೆ, ಮೆರವಣಿಗೆ ಹರತಾಳಗಳನ್ನು ನಡಿಸಬಾರದೆಂದು ಅಲ್ಲಿಯ ಪೋಲೀಸ್ ಕಮಿಶನರರು ನಿಷೇಧ ಹುಕುಮನ್ನು ಜ್ಯಾರಿಮಾಡಿರುವರು ಇದಕ್ಕೆ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಕಾರ್ಯದರ್ಶಿಯು ಹರತಾಳವಾಚರಿಸಬೇಕೆಂದು ಹೊರಡಿಸಿದ ಉಗ್ರವಾದೊಂದು ವಿನಂತಿಯೇ ಕಾರಣವಂತೆ ಈ ಕುರಿತು ಪಂಡಿತ ಜವಾಹರಲಾಲರು ತೀವ್ರ ನಿಷೇಧ ವ್ಯಕ್ತಪಡಿಸಿ, ಅದರಿಂದ ಹೊಸ ರಾಜ್ಯಾಂಗ ರಚನೆಯು ವಿಶೇಷವಾಗಿ ಬಂಗಾಳದಲ್ಲಿ ಪೋಲೀಸ್ ರಾಜ್ಯವನ್ನು ಕೊನೆಗೊಳಿಸಲ್ಲೆಂಬ ದು ವ್ಯಕ್ತವಾಗುವುದು ಹಳೆಯ ರಾಜ್ಯಭಾರ ಯಂತ್ರವೂ ಇದನ್ನೇ ಅದೇ ರೀತಿ ನಡಿಸಲ್ಪಡುತ್ತಿರುವುದು ಅದನ್ನೇ ತಾವೀಗ ಕೊನೆಗೊಳಿಸಲೆತ್ನಿಸುವುದೆಂದು ಅಭಿಪ್ರಾಯಪಿತ್ತಿರುವರು. ಎಪ್ರಿಲ್ ತಾ ೧ನ್ನು ದೇಶದಲ್ಲೆಲ್ಲಾ ಹರತಾಳ ದಿನವಾಗಿ ಆಚರಿಸಲು ತಕ್ಕ ವ್ಯವಸ್ಥೆಯು ಎಲ್ಲೆಡೆಯಿಂದ ನಡೆಯುತ್ತಿರುವುದು

ಮದ್ರಾಸಿನ ಮಂತ್ರಿಮಂಡಲ

ಮಾನ್ಯ ಗವರ್ನರರು ಮದ್ರಾಸಿನಲ್ಲಿ ಮಂತ್ರಿಮಂಡಲವನ್ನು ರಚಿಸಲು ಶ್ರೀ ಶ್ರೀನಿವಾಸ ಶಾಸ್ತ್ರಿಗಳನ್ನು ಕೇಳಿಕೊಂಡಾಗ ಅವರು ನಿರಾಕರಿಸಿರುವರು ಸರ್ ಕೆ ವಿ. ರೆಡ್ಡಿಯವರು ಮಂತ್ರಿಮಂಡಲವನ್ನು ರಚಿಸಲೊಪ್ಪಿರುವರು ಸರ್ ಪಿ ಟಿ ಪನ್ನೀರ್ ಸೆಲ್ವಮ್, ಕುಮಾರ ರಾಜ ಮುತ್ತಯ್ಯ ಚೆಟ್ಟಿಯಾರ್, ಜಿ ಕೃಷ್ಣರಾವ್, ಎಮ್ ಸಿ ರಾಜ, ಮತ್ತು ಆರ್ ಎಮ್ ಪಾಲತರು, ಮಂತ್ರಿಗಳಾಗಬಹುದೆಂದು ಸುದ್ದಿಯಾಗಿದೆ ಬೊಂಬಾಯಿಯಲ್ಲಿ ಸರ್ ಡಿ ಹಲವಿಯವರು ಮಂತ್ರಿಮಂಡಲ ರಚಿಸಲು ನಿರಾಕರಿಸಿರುವರು ಸರ್ ಡಿ ಬಿ ಕೂಪರರು ಆ ಜವಾಬ್ದಾರಿ ವಹಿಸಿರುವರು ಮಧ್ಯಪ್ರಾಂತದಲ್ಲಿ ಡಾಕ್ಟರ್ ಖಾರೆಯವರು ಮಂತ್ರಿಪದವಿ ಸ್ವೀಕರಿಸಲೊಪ್ಪದುದರಿಂದ ಸರ್ ರಾಘವೇಂದ್ರ ರಾಯರು ಜವಾಬ್ದಾರಿ ವಹಿಸಿಕೊಂಡಿರುವರು

ಮಹಾತ್ಮಾ ಗಾಂಧಿಯವರು

ಈಗ ಮದ್ರಾಸಿಗೆ ಬಂದಿರುವರು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪದವಿದಾನ ಸಮಾರಂಭವು ಅವರ ಅಧ್ಯಕ್ಷತೆಯಲ್ಲಿ ಜರಗಿತು ಹಿಂದೀ ಸಮ್ಮೇಳನವು ಮದ್ರಾಸಿನಲ್ಲಿ ಇದೀಗ ಪ್ರಥಮವಾಗಿ ಶೇಟ್ ಜಮುನಾಲಾಲ್ ಬಜಾಜರ ಅಧ್ಯಕ್ಷತೆಯಲ್ಲಿ ಜರಗಿತು ಮಾರ್ಚ ತಾ 29ರಲ್ಲಿ ಭಾರತೀಯ ಸಾಹಿತ್ಯ ಪರಿಷತ್ತಿನ ಎರಡನೇ ಅಧಿವೇಶನವು ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಮದ್ರಾಸಿನಲ್ಲಿಯೇ ಜರಗಿತು

ದಕ್ಷಿಣಕನ್ನಡ

ಡಿಸ್ಟ್ರಿಕ್ಟ್‌ಬೋರ್ಡು ಪ್ರಾಥಮಿಕ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ

ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ೧೮ ೩ ೩೭ರಲ್ಲಿ ಜರಗಿದ ಬಜೆಟ್ ಮೀಟಿಂಗಿನಲ್ಲಿ ಉಪಾಧ್ಯಾಯ ಉಪಾಧ್ಯಾಯಿನಿಯರ ಸಂಬಳದ ಕಡಿತವನ್ನು ಸಂಪೂರ್ಣ ತೆಗೆದು ಹಾಕುವುದಾಗಿಯೂ ಉಪಾಧ್ಯಾಯಿನಿಯರ ಸಂಬಳ ಸ್ಕೇಲನ್ನು ಕಡಿಮೆಮಾಡದೆ ಪ್ರಕೃತ ಇರುವ ಸಂಬಳದ ಸ್ಕೇಲನ್ನೇ ಊರ್ಜಿತ ಇಡುವುದಾಗಿಯೂ ನಿರ್ಣಯವಾಗಿರುತ್ತದೆ. ಮಾನ್ಯ ಬೋರ್ಡಿನವರ ಉದಾರ ಭಾವವನ್ನು ಎಷ್ಟು ಕೊಂಡಾಡಿದರೂ ಸಾಲದು. ಬೋರ್ಡಿನವರು ಉಪಾಧ್ಯಾಯ ವರ್ಗಕ್ಕೆ ಎಷ್ಟು ಸಹಾಯವಾದರೂ ಬೇಕೋ ಅಷ್ಟೆಲ್ಲಾ ಸಹಾಯ ಮಾಡಿರುತ್ತಾರೆ. ಮೇಲಿನ ಸೂಚನೆಯನ್ನು ಬೋರ್ಡು ಮೀಟಿಂಗಿನ ಮುಂದೆ ತಂದವರು ಶ್ರೀಮಾನ್ ಫಾಕ್ಟರ್ ಪಿ ಜಿ ಆಚಾರ್ಯರವರು. ಅನುಮೋದಿಸಿದವರು ಶ್ರೀಮತಿ ಮನೋರಮಾ ಬಾಯಿಯವರು, ಉಳಿದ ಎಲ್ಲಾ ಮಾನ್ಯ ಮೆಂಬರರೂ, ಮಾನ್ಯ ಪ್ರೆಸಿಡೆಂಟರೂ ಏಕ ಕಂಠರಾಗಿ ಅನುಮತಿಯನ್ನು ಕೊಟ್ಟಿರುವರು. ಈ ಬಗ್ಗೆ ಬೋರ್ಡಿನ ಪ್ರತಿಯೊಬ್ಬ ಮೆಂಬರರೂ ಸ್ತುತಿಗೆ ಅರ್ಹರು. ಉಪಾಧ್ಯಾಯ ಉಪಾಧ್ಯಾಯಿನಿಯರೇ, ಮೇಲಿನ ಜಯಕ್ಕಾಗಿ ಹಿಗ್ಗಬೇಡಿರಿ. ಇದರ ಫಲಿತಾಂಶವು ನಮಗೆ ಸಿಕ್ಕಬೇಕಾದರೆ ನಮ್ಮ ಪ್ರಯತ್ನದ ಅಂಶವು ಬಾಕಿಯಿದೆ. ಬೋರ್ಡಿನ ಬಜೆಟನ್ನು ಮಾನ್ಯ ಸರಕಾರವು ಮಂಜೂರು ಮಾಡುವುದು ಅಸಂಭವ. ಎಲಿಮೆಂಟರಿ ಎಜ್ಯುಕೇಶನ್ ಫಂಡಿನಲ್ಲಿ ಸುಮಾರು ಒಂದು ಲಕ್ಷ ರೂಪಾಯಿ ಡಿಫಿಸಿಟ್ ನಿಂತಿದೆ. ಸರಕಾರದವರು ಇಷ್ಟು ಹೆಚ್ಚಿನ ಹಣವನ್ನು ನಮ್ಮ ಬೋರ್ಡಿಗೆ ಬಿಡಬಹುದಾಗಿ ಎಂದು ಊಹಿಸಲಾಗುವದಿಲ್ಲ. ಬೋರ್ಡಿನ ಬಜೆಟ್ ಸರಕಾರದಿಂದ ವಾಪಾಸು ಬೋರ್ಡಿಗೆ ಬರುವುದು ಖಂಡಿತ. ಈ ಸಂದರ್ಭದಲ್ಲಿ ಮೊದಲು ಬಂದೊದಗಿದ ಕಷ್ಟಗಳೇ ತಿರುಗಿ ಬರುವುವೆಂಬದರಲ್ಲಿ ಸಂಶಯವಿಲ್ಲ. ಆದ ಕಾರಣ ಬೋರ್ಡಿನ ಬಜೆಟನ್ನು ಸರಕಾರವು ಮಂಜೂರು ಮಾಡುವ ಹಾಗೆ ನಾವು ಕೂಡ ಪ್ರತ್ಯೇಕವಾಗಿ ಪ್ರಯತ್ನಮಾಡುವುದು ಅಗತ್ಯ. ಈ ಪ್ರಯತ್ನಗಳ ಪೈಕಿ ಮೊದಲನೆಯದಾಗಿ ಬೋರ್ಡಿನ ಬಜೆಟನ್ನು ಸರಕಾರವು ಮಂಜೂರು ಮಾಡುವ ಹಾಗೆ ಪ್ರತಿ ಒಬ್ಬ ಉಪಾಧ್ಯಾಯ ಉಪಾಧ್ಯಾಯಿನಿಯು ಮನವಿಯನ್ನು ಸರಕಾರಕ್ಕೆ ಮಾಡಿಕೊಳ್ಳುವುದು ಅಗತ್ಯವೆಂದು ನನ್ನ ಬಯಕೆ. ಬೋರ್ಡಿನ ಬಜೆಟು ಸರಕಾರಕ್ಕೆ ತಲುಪುವ ಮೊದಲು ೧೦೦೦ ಮನವಿಗಳು ಸರಕಾರಕ್ಕೆ ಮುಟ್ಟಬೇಕು. ಒಂದು ಕಡೆಯಿಂದ ಮಾನ್ಯ ಬೋರ್ಡು, ಇನ್ನೊಂದು ಕಡೆಯಿಂದ ಉಪಾಧ್ಯಾಯ ವರ್ಗವು ಪ್ರಯತ್ನಿಸಿದರೆ ಹೊಸ ಗವರ್ನ್‌ಮೆಂಟಿನ ಈ ಕಾಲದಲ್ಲಿ ನಮಗೆ ಪ್ರಯೋಜನ ದೊರೆಯಲು ಬಹುದು. ಮನವಿ ಫಾರ್ಮುಗಳನ್ನು ತಯಾರಿಸಿ ಛಾಪೆ ಮಾಡಿ ನಿಮಗೆ ಕಳುಹಿಸಲು ನಾನು ಸಿದ್ಧನಿದ್ದೇನೆ. ಖರ್ಚಿನ ಬಗ್ಗೆ ಪ್ರತಿ ಒಬ್ಬನು ೧ ಆಣೆಯಂತೆ ಕಳುಹಿಸಿಕೊಟ್ಟು ನಿಮ್ಮ ಅಭಿಪ್ರಾಯವನ್ನು ಸೂಚಿಸಿರಿ. ಈ ಸಂದರ್ಭವನ್ನು ಕಳೆದುಕೊಳ್ಳಬೇಡಿರಿ. ಪ್ರತಿ ಒಬ್ಬನಿಗೂ ಪ್ರತ್ಯೇಕ ತಿಳಿಸುವುದು ಪ್ರಕೃತದ ಸ್ಥಿತಿಯಲ್ಲಿ ಅಸಾಧ್ಯವಾದುದರಿಂದ ಪತ್ರಿಕೆಗಳಲ್ಲಿ ಪ್ರಕಟಿಸಿರುವೆನು. ಇವನ್ನೋದಿದ ಉಪಾಧ್ಯಾಯರು ಎಲ್ಲಾ ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ತಿಳಿಸುವುದು. ಖರ್ಚಿನ ಹಣವು ತಲ್ಪಿದ ಕೂಡಲೇ ಕೆಲಸಕ್ಕೆ ಕೈಹಚ್ಚುತ್ತೇನೆ.

ಪಿ. ಬಾಬುಶೆಟ್ಟಿ,
ಕಾರ್ಯದರ್ಶಿ.

ಮೂಲ್ಕಿ

ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ ೨೦-೩ ೩೭ನೇ ಶನಿವಾರ ಅಪರಾಹ್ನ ಘಂಟೆ ೩ಂ ಕ್ಕೆ ಹೆಜಮಾಡಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಕೂಡಿಬಂತು. ಮೂಲ್ಕಿ ಬೋ॥ ಎಲಿಮೆಂಟರಿ ಶಾಲೆಯ ಸಹಾಯಕ ಉಪಾಧ್ಯಾಯ ಶ್ರೀ ಬಿ. ಬೋಜರಾಯರು ಅಂದು ಸಭಾಧ್ಯಕ್ಷರಾಗಿದ್ದರು. ಸಭೆಯು ಬಹಳಷ್ಟು ಸಮಾಧಾನಕರವಾಗಿತ್ತು. ಶ್ರೀ ದೇವತಾಪ್ರಾರ್ಥನೆ, ವರದಿ ಓದೋಣ, ಕೋಲಾಟ, ಕದಾನಟನೆ, "ಮಕ್ಕಳ ಶಿಕ್ಷಣದಲ್ಲಿ ಹೆತ್ತವರ ಕರ್ತವ್ಯ" ಎಂಬ ವಿಷಯದ ಮೇಲೆ ಉಪನ್ಯಾಸ, (ಶ್ರೀ॥ ಎಚ್ ಕೆ ಗೋವಿಂದರಾಯರಿಂದ) ಸರ್ಕ್ಯುಲರ್ ಇತ್ಯಾದಿ ವಾಚನ, ಸಂಘದ ಲೆಕ್ಕಪತ್ರ ವಿಚಾರ, ಸಭಾಧ್ಯಕ್ಷರ ಭಾಷಣ, ಉಪಕಾರಸ್ಮರಣೆ ಇತ್ಯಾದಿ ಕಾರ್ಯಭಾಗಗಳು ನಡೆದುವು. ಮುಂದಿನ ಸಭೆಯು ಇದೇ ಬರುವ ತಾ ೧೦-೪-೩೭ನೇ ಶನಿವಾರ ನಿರ್ದಿಷ್ಟ ಸಮಯಕ್ಕೆ ಸೆಂಟರ್ ಸ್ಕೂಲಲ್ಲಿ ಜರಗಲಿರುವುದು.

ಸ್ಥಳೀಕ ಶ್ರೀ ದುರ್ಗಾದೇವಿ ಪರ್ವಾರ್ಥ ರಾತ್ರಿ ಶಾಲೆಯಲ್ಲಿ ಎಂದಿನಂತೆ ಈ ವರ್ಷವೂ ಮಹಾಶಿವರಾತ್ರಿ ಸಂಬಂಧ ಭಜನೆ, ಪೂಜೆ ಇತ್ಯಾದಿಗಳು ನಡೆದುವು. ಸದ್ರಿ ಶಾಲೆಯ ವರ್ಷಾವಧಿ ಪರೀಕ್ಷೆಯು ಇದೇ ಕಳೆದ ತಾ ೧೬-೩-೩೭ರಲ್ಲಿ ಮಂಗಳೂರು ರೇಂಜ್ ಶಾಲೆಗಳ ಎಡಿಶನಲ್ ಜೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಮ ರಾ. ಬಿ ಟಿ ಕೃಷ್ಣ ಅನಗ್ರ್ ಬಿ ಎ, ಎಲ್. ಟಿ ರವರಿಂದ ಜರಗಿಸಲ್ಪಟ್ಟಿತು. ಶಾಲಾಭಿವೃದ್ಧಿಯು ಚೆನ್ನಾಗಿದೆ ಎಂದು ಸದ್ರಿಯವರು ಅಭಿಪ್ರಾಯಪಟ್ಟಿರುವದಾಗಿ ತಿಳಿದುಬರುತ್ತದೆ. ಮುಂಬೈಯಲ್ಲಿರುವ ಶೆಣೈ ಬ್ರದರ್ಸ್ರು ಸದ್ರಿ ಶಾಲೆಗೆ (ಮೂಲ್ಕಿ ಸೋಡ್ತಿಯಲ್ಲಿ ತಮಗೆ ಸಿಕ್ಕಿದ ಹಣದಲ್ಲಿ) ರೂ ೧೫ ೮-೦ನ್ನು ಒಂದು ಪೆಟ್ರೋಮೆಕ್ಸ್ ದೀಪದ ಬಗ್ಗೆ ದಾನಮಾಡಿರುವುದು ಸ್ತುತ್ಯವಾಗಿದೆ. ಸದ್ರಿಯವರಿಗೆ ಶ್ರೀ ಸಂಚೆದುರ್ಗೆಯು ಶ್ರೇಯೋಭಿವೃದ್ಧಿಯನ್ನು ಕರುಣಿಸಲಿ.

ಕರ್ನಾಟಕ

ಅಂಕೋಲಾ

ಉತ್ತರಕನ್ನಡ ಜಿಲ್ಲೆಯ ರಾಮಾಭಟ್ಟನಾಯಕ ಅಗ್ಸರಗೋಣ ಇವರು ತಾ. ೧೬-೩-೧೯೩೭ನೇ ದಿನ ದೈವಾಧೀನರಾದರು. ಇವರು ನಿರಭಿಮಾನಿ ಸಾತ್ವಿಕ-ಮುಂದಾಳುಗಳೂ ಸತ್ಯ ಮತ್ತು ಶಾಂತತಾಪ್ರಿಯರಿದ್ದು ಒಳ್ಳೇ ಕನ್ನಡ ಸಾಹಿತಿಗಳಾಗಿದ್ದರು. ಮನೆಯಲ್ಲೇ ಓದು ಬರಹವನ್ನು ಕಲಿತವರಿದ್ದು ಬರಬರುತ್ತ ಕನ್ನಡ ಕವಿಮಾಲಿಕೆಯಲ್ಲಿ ಸೇರುವಷ್ಟು ಪ್ರವೀಣತೆಯನ್ನು ಪಡೆದರು. ರಸಭರಿತವಾದ ಕನ್ನಡ ಕಾವ್ಯಗಳ ರಸವನ್ನು ಅರಿತುಕೊಳ್ಳುವ ರಸಿಕರಾಗಿದ್ದರು.

ಕಾರವಾರ ಸಾಹಿತ್ಯ ಸಮ್ಮೇಲನದ ಸಮಯ ಕನ್ನಡ ತಾಯಿಬಗ್ಗಾಗಿ, ತಾವು ಬರೆದ ಪದ್ಯಗಳನ್ನು ಹೇಳಿ ತೋರಿಸಿ-ಮಾಗ ಮುಪ್ಪಿನಕಾಲದಲ್ಲಿ ಸಹಾ ಸಾಹಿತ್ಯದ ವಿಷಯವಾಗಿ ಇವರಿಗಿರುವ ಪ್ರೀತಿ ಮತ್ತು ಅಭಿಮಾನಗಳು ಎದ್ದು ಕಾಣುವಂತಿತ್ತು.

ಬಭ್ರುವಾಹನ ಚರಿತ್ರೆ, ಸೀತಾವನವಾಸ, ಪುರೂರವ ಚರಿತ್ರೆ, ಶ್ರೀ ಕೃಷ್ಣ ಸಂಧಾನ, ಮುಂತಾದ ಎಷ್ಟೋ ಯಕ್ಷಗಾನ ಪ್ರಸಂಗಗಳನ್ನೂ ಇನ್ನು ಎಷ್ಟೋ ಇತರ ಪದ್ಯಗಳನ್ನೂ ಬರೆದಿರುವರು.

ಇವರು ಬರೆದ ಯಕ್ಷಗಾನ ಪ್ರಸಂಗಗಳು ರಂಗಸ್ಥಳದಲ್ಲಿ ಆಡಿತೋರಿಸಲು ತಕ್ಕವುಗಳಾಗಿದ್ದು ಅಚ್ಚಾಗದ ಮೂಲಕ ಎಷ್ಟೋ ಮೇಳದವರು ಹಸ್ತಪ್ರತಿಗಳನ್ನು ಒಯ್ದು ಆಟವಾಡುತ್ತಲಿರುವರು. ಹಾಸ್ಯಗಾರರಿಗಾಗಿ ಬರೆದ ಕೆಲವು ಲಾವಣಿಗಳಂತೂ ಜನಪದ ಸಾಹಿತ್ಯವಾಗಿ ಜನಪ್ರಿಯವಾಗಿವೆ.

ಈ ರೀತಿ ೫೦-೬೦ ವರುಷಗಳಿಂದ ಕನ್ನಡ ಸಾಹಿತ್ಯಸೇವೆಯನ್ನು ಮಾಡುತ್ತ ನಾಮಾಂಕಿತರಾಗಿದ್ದರಲ್ಲದೆ ನಾಡವರ ಸಮಾಜದಲ್ಲಿ ಮುಂಚಿನ ಕವಿಗಳು ಗಿದ್ದರು. ಕನ್ನಡ ಪ್ರಕ್ಷುಬ್ಧ ವಾತಾವರಣದಲ್ಲಿ ನಿರಭಿಮಾನಿ ಸಾಹಿತ್ಯಸೇವಕರಿಂದ ಕನ್ನಡನಾಡಿಗಾದ ಉಪಕಾರವು ಹೇಳತೀರದಷ್ಟಾಗಿದೆ. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೀಯಬೇಕೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

B B NAIK

ಗೋಕಾಕದಲ್ಲಿ 144ನೇ ಸೆಕ್ಷನು

ಗೋಕಾಕದ ಗಿರಣಿಯ ಕೂಲಿಗಾರರ ಮುಷ್ಕರವನ್ನು ನಿರ್ನಾಮಗೊಳಿಸಲು ಅಧಿಕಾರಿಗಳು ಶತಪ್ರಯತ್ನಮಾಡುತ್ತಿರುವರು. ಗೋಕಾಕ ಮೆಜಿಸ್ಟ್ರೇಟರು ಕ್ರಿ. ಪ್ರೊ. ಕೋಡಿನ ೧೪೪ನೆಯ ಕಲಮಿನ ಮೇರೆಗೆ ಗೋಕಾಕ ಜೋಗು ಮತ್ತು ಕೊಣ್ಣೂರ, ಸಿಂದಿಪುರ ಪೇಟೆಗಳ ಎಲ್ಲೆಯೊಳಗೆ ಮೆರವಣಿಗೆ ಮಾಡಬಾರದಾಗಿಯೂ ಸಭೆ ಕೂಡಬಾರದಾಗಿಯೂ ನಿಷೇಧಿಸಿರುವರು. ಕೆಲಸಗಾರರಲ್ಲಿ ಇದರಿಂದ ಅತೃಪ್ತಿ ಬೆಳೆದಿದೆ.

ಹಜಾಮರ ಮುಷ್ಕರ

ಅಥಣಿ ನಗರದ ಕ್ಷೌರಿಕರು ಮುಷ್ಕರವನ್ನಾರಂಭಿಸಿರುವರು, ನಗರ ಸಭೆಯವರು ತೆರಿಗೆ ಹೊರಿಸಿದುದನ್ನು ನಿಷೇಧಿಸಲು ಕ್ಷೌರಿಕರ ಸಭೆಯೊಂದು ನಡೆದು ಆಕ್ರಮವನ್ನು ಹಿಂದೆಗೆವವರೆಗೆ ಮುಷ್ಕರಮಾಡಬೇಕೆಂಬ ನಿರ್ಣಯವಾಗಿದೆ.

ಬೆಳಗಾವಿಯಲ್ಲಿ ನೀರಿನ ಅಭಾವ

ಬೆಳಗಾವಿಯಲ್ಲಿ ನೀರಿನ ಅಭಾವವು ಹೆಚ್ಚಿದೆ. ಜನರಲ್ಲಿ ಹಾಹಾಕಾರವೆದ್ದಿದೆ.

ಮೈಸೂರು

ಶ್ರೀ ಎಂ ಎಸ್. ದೇವೇಗೌಡರು ಕಟ್ಟಿಸಿರುವ 'ಸಿದ್ದೇಗೌಡ ಮೆಮೋರಿಯಲ್ ಹಾಲ್' ಎಂಬ ಕಟ್ಟಡದ ತೆರೆಯೋಣ ಸಮಾರಂಭವನ್ನು ತಾ ೩೧ಕ್ಕೆ ದಿವಾನರವರು ನೆರವೇರಿಸುವರು.

ಮೈಸೂರು ಯುವರಾಜರು

ಮೈಸೂರಿನ ಶ್ರೀಮದ್ಯುವರಾಜರವರು, ಪರಿವಾರ ಸಹಿತವಾಗಿ, ಕಳೆದವಾರ ವಿಲಾಯಿತಿಗೆ ತೆರಳಿರುವರು. ಸಾರ್ವಭೌಮರ ಕಿರೀಟಧಾರಣೋತ್ಸವದಲ್ಲಿ ಭಾಗಿಗಳಾಗುವರೆಂದು ಪ್ರಕಟವಾಗಿದೆ.

ವರ್ಗಾವರ್ಗಿ

ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ಮಾ॥ ಮೆಟ್ಕಾಫ಼್‌ರವರು ರಜೆಯ ಮೇಲೆ ತೆರಳುವುದರಿಂದ ಅವರ ಸ್ಥಾನಕ್ಕೆ ಶ್ರೀ ಎನ್. ಎಸ್. ಸುಬ್ಬರಾಯರೂ, ರಾಯರ ಶಿಕ್ಷಣ ಶಾಖೆಯ ಡೈರೆಕ್ಟರರ ಸ್ಥಾನಕ್ಕೆ ಶ್ರೀ ಎ ಆರ್. ವಾಡಿಯಾರರೂ ಬರುವರು.

ವಂಚನೆಗಾಗಿ ಶಿಕ್ಷೆ

ಮೈಸೂರಿನ ವಿದ್ಯುಚ್ಛಕ್ತಿ ಶಾಖೆಯ ವಂಚನೆಯ ಮೊಕದ್ದಮೆಯಲ್ಲಿ ಕಂಟ್ರಾಕ್ಟರ್ ಎನ್. ದೊಡ್ಡಯ್ಯನವರಿಗೂ, ಆ ಶಾಖೆಯ ಕ್ಲಾರ್ಕ್ ಡಿ ರಾಮಚಂದ್ರ ಆಚಾರ್ಯರಿಗೂ ಕಲು ೨ ವರ್ಷಗಳ ಸಜೆ ಎಂದು ಬೆಂಗಳೂರಿನ ಅ॥ ಸೆಷನ್ ಜಡ್ಜರು ವಿಧಿಸಿದ್ದಾರೆ.

ನಂಜನಗೂಡು ರಥೋತ್ಸವ

ಸಾವಿರಾರು ಮಂದಿ ಯಾತ್ರಿಕರ ಸಮ್ಮೇಳನದಿಂದ ವರ್ಷಂಪ್ರತಿ ನಡೆಯುವ ನಂಜನಗೂಡು ರಥೋತ್ಸವವು, ಈ ಸಲ, ಕೊಲೇರಾದ ಭೀತಿಯಿಂದ, ಬರೇ ೫೦೦ ಮಂದಿ ಜನಸ್ತೋಮದೊಡನೆ ಶಾಂತವಾಗಿ ಒರಗಿತು. ಹೆಚ್ಚು ಜನ ಸೇರದಂತೆ ಸರಕಾರದ ನಿರ್ಬಂಧವೂ ಇದ್ದಿತು.

—•— ನೋಟೀಸು —•—

ಕುಂದಾಪುರ ದಿ. ಮು ಕೋರ್ಟಿನಲ್ಲಿ

O. S. No. 468/36.

ವಾದಿಳು—ಪುಟ್ಟಮ್ಮ ಸೆಡ್ತಿ
ಪ್ರತಿವಾದಿರು—ಶ್ರೀನಿವಾಸ ಭಟ್ಟ
ಕೂಡ

ಉತ್ತರ ಕನ್ನಡಾ ಜಿಲ್ಲಾ ಕಾರವಾರದಲ್ಲಿರುವ ಹೊಲ್ಲಮನೆ ಸೀತಾರಾಮ ಭಟ್ಟರ ಮಕ್ಕಳು ಸದರಿ ದಾವೆಯ 7ನೇ ಪ್ರತಿವಾದಿ ಶೇಶ ಭಟ್ಟ 1, 10ನೇ ಪ್ರತಿವಾದಿ ಕೃಷ್ಣ ಭಟ್ಟ 1, ಕೂಡ 2 ಜನರಿಗೆ ಈ ಮೂಲಕ ತಿಳಿಯ ಪಡಿಸುವದೇನೆಂದರೆ

ಮೇಲ್ಕಾಣುವ ವಾದಿಳು ನೀವು ವಗೈರ ಪ್ರತಿವಾದಿರಿಂದ ಬರತಕ್ಕ ಈಡುವನ್ನಾನೇಜಿನ ಬಾಬ್ತು ಬಾಕಿಯಿರುವ ಹಣ ಬಡ್ಡಿ ವಗೈರೆ ವಸೂಲಿಕುರಿತು ನೀವು ವಗೈರೆರ ಮೇಲೆ ಮೇಲಿನಕೋರ್ಟಿನಲ್ಲಿ ದಾಖಲ್ಲು ಮಾಡಿದ ಈ ದಾವೆಯು ಸದ್ರಿ ಕೋರ್ಟಿನಲ್ಲಿ ತಾ. 3-4-37ಕ್ಕೆ ತಕ್ಕಿಗೆ ಇದೋಣಾಗಿಯದೆ. ಆಕುರಿತು ನಿಮ್ಮ ಆಕ್ಷೇಪಣೆಗಳಿದ್ದರೆ ಸದರಿ ದಿವಸ ಮೇಲ್ಕಂಡಕೋರ್ಟಿನಲ್ಲಿ ಜಾಹೀರುಮಾಡಿಕೊಳ್ಳತಕ್ಕದ್ದು.

K. Venkappa Shetty,
Pleader for Plaintiff.
ಕುಂದಾಪುರ, 29 3—'37.

ಮಂಗಳೂರು.

(ನಮ್ಮ ಸ್ವಂತ ಬಾತ್ಮಿದಾರರಿಂದ)

ಮಾಸಿಕ ಧ್ವಜವಂದನೆ.

ಕಳೆದ ತಾ ೨೫ನೇ ಗುರುವಾರ ದಿನ ಬೆಳಗ್ಗೆ ಕಾಂಗ್ರೆಸ್ ಕಚೇರಿಯಿಂದ ಸ್ವಯಂಸೇವಕರು ಮೆರವಣಿಗೆಯಲ್ಲಿ ಹೊರಟು ಸುಮಾರು ೮ ಘಂಟೆ ಸಮಯಕ್ಕೆ ಮೈದಾನಕ್ಕೆ ಬಂದು ಸೇರಿದರು. ಅಲ್ಲಿ ರಾಷ್ಟ್ರಧ್ವಜ ವಂದನೆಯ ಸಮಾರಂಭವು ನಡೆಯಿತು. ಶ್ರೀಮಾನ್ ಯು. ಕೃಷ್ಣನವರು ರಾಷ್ಟ್ರಧ್ವಜವನ್ನೇರಿಸಿದರು.

ಅಂದೇ ಸಾಯಂಕಾಲ ಮೈದಾನದಲ್ಲಿ ಸಾರ್ವಜನಿಕ ಸಭೆಸೇರಿತು. ಶ್ರೀ॥ ಹಿ ರಾಮರಾಯ ಮಲ್ಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ॥ ಕೆ. ಕೃಷ್ಣರಾಯರು ಮೊದಲು ಮಾತಾಡುತ್ತಾ ನಾಡದು ಒಂದನೆಯ ತಾರೀಕಿನ ದಿವಸ ಭರತ ಖಂಡದಲ್ಲಿ ಹೊಸ ಮಸೂದೆಯು ಜಾರಿಗೆ ಬರುವ ದಿವಸವೆಂದೂ, ಆ ಮಸೂದೆಯನ್ನು ಭರತಖಂಡದ ಸರ್ವಜನರೂ ಖಂಡಿಸಿದ್ದರೂ ಸರಕಾರದವರು ದರ್ಪದಿಂದ ಜನರಮೇಲೆ ಅದನ್ನು ಹೊರಿಸುವುದಕ್ಕೆ ಅಣಿಮಾಡಿರುವರೆಂದೂ, ಆದಕಾರಣ ಅದನ್ನು ನಿರಾಕರಿಸುವ ಹಕ್ಕು ನಮಗಿದೆಯೆಂದೂ, ಹಾಗೆ ನಾವು ಅದನ್ನು ತಿರಸ್ಕರಿಸಿದ್ದೇವೆಂಬುದನ್ನು ಸೂಚಿಸುವುದಕ್ಕಾಗಿ ಒಂದನೇ ತಾರೀಕಿನ ದಿವಸ ಹರತಾಳವನ್ನು ಮಂಗಳೂರಿನ ಕಾಂಗ್ರೆಸ್ ಭಕ್ತರಾದ ಪುರಜನರು ಶ್ರದ್ಧೆಯಿಂದ ಯಶಸ್ವಿಗೊಳಿಸಬೇಕೆಂದೂ ವಿನಂತಿಮಾಡಿಕೊಂಡರು. ಶ್ರೀ॥ ಸುಬ್ಬಯ್ಯನವರು ರಾಷ್ಟ್ರಭಾಷೆಯೊಂದು ಹಿಂದುಸ್ಥಾನಕ್ಕೆ ಅತ್ಯಗತ್ಯವೆಂದೂ, ಅಂತಹ ರಾಷ್ಟ್ರಭಾಷೆಯು ಹಿಂದಿ ಆಗಿರುವುದೆಂದೂ ಆದಕಾರಣ ಎಲ್ಲರೂ ಹಿಂದಿಯನ್ನು ಕಲಿಯಬೇಕೆಂದೂ ಹೇಳಿದ್ದಲ್ಲದೆ ಖಾದಿಯ ಮಹತ್ವವನ್ನೂ ವಿವರಿಸಿಹೇಳಿದರು.

ಅಧ್ಯಕ್ಷರು ಮೇಲಿನ ಭಾಷಣ ಕರ್ತರ ಅಭಿಪ್ರಾಯಗಳನ್ನು ಸಮರ್ಥಿಸಿ, ಮದ್ರಾಸಿನಲ್ಲಿಯೂ, ಮುಂಬಾಯಿಯಲ್ಲಿಯೂ, ಮಂತ್ರಿಮಂಡಲಗಳನ್ನು ಕಾಂಗ್ರೆಸಿನವರು ಸ್ಥಾಪಿಸುವುದಕ್ಕೆ ನಿರಾಕರಿಸಿದ ಕಾರಣಗಳನ್ನು ಸವಿಸ್ತಾರವಾಗಿ ವಿವರಿಸಿ, ಹೇಳಿದರು. ಮತ್ತೊಂದಾವೃತ್ತಿ ಹರತಾಳವನ್ನು ಯಶಸ್ವಿಗೊಳಿಸಬೇಕೆಂದೂ, ಪುರಜನರು ಹೆಚ್ಚು ಸಂಖ್ಯೆಯಲ್ಲಿ ಕಾಂಗ್ರೆಸ್ ಸದಸ್ಯರಾಗಬೇಕೆಂದೂ ಪ್ರಾರ್ಥಿಸಿದರು. ಶ್ರೀ॥ ಹೈದರರು ವಂದನೆಗಳನ್ನರ್ಪಿಸಿದ ಅನಂತರ ಸಭಾಂತ್ಯವಾಯಿತು.

ಹರತಾಳ ಆಚರಣೆ

ಮಂಗಳೂರು ನಗರ ಕಾಂಗ್ರೆಸ್ ಸಮಿತಿಯವರು ಒಂದು ಪ್ರಕಟಣೆಯನ್ನು ಹೊರಡಿಸಿ ಅದರಲ್ಲಿ ತಾ. ೧ರಲ್ಲಿ ಆಚರಿಸಬೇಕಾದ ಹರತಾಳವನ್ನು ಯಶಸ್ವಿಗೊಳಿಸಬೇಕೆಂದು ಪುರಜನರನ್ನು ಪ್ರಾರ್ಥಿಸಿರುವರು. ಸಾಯಂಕಾಲ ಮೆರವಣಿಗೆ ಮತ್ತು ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಯಲಿರುವುದು.

ಹಿಂದಿರುಗಿದರು

ಕಾಂಗ್ರೆಸ್ ಪಾರ್ಟಿ ಮೀಟಿಂಗಿನ ಸಂಬಂಧ ಮದ್ರಾಸಿಗೆ ಹೋಗಿದ್ದ ಶ್ರೀ. ಕೋಟ ರಾಮಕೃಷ್ಣ ಕಾರಂತ ಎಂ. ಎಲ್. ಎ ಇವರು ಮದ್ರಾಸಿನಿಂದ ಹಿಂತಿರುಗಿದರು.

ರೈತರಿಗೆ ರಿಯಾಯಿತಿ

ಅಡಿಕೆ ಕೊಳೆ ರೋಗದಿಂದ ನಷ್ಟ ಹೊಂದಿದ ರೈತರಿಗೆ ಅನುಕೂಲವಾಗುವಂತೆ ತೀರ್ವೆಯಲ್ಲಿ ರಿಯಾಯತಿಯನ್ನು ಸರಕಾರದವರು ಮಾಡುವುದಾಗಿ ತಿಳಿಸಿರುವರೆಂದೂ ಆ ಹುಕುಮು ಬಂದ ಕೂಡಲೆ ಅದನ್ನು ಪ್ರಕಟಿಸುವುದಾಗಿಯೂ ಶ್ರೀ ಕಾರಂತರು ತಿಳಿಸಿದ್ದಾರೆ.

ಗ್ರಾಮ ಉದ್ಯೋಗ ಸಂಘ

ಈ ಸಂಘದ ಒಂದು ಸಭೆಯು ಕಳೆದ ತಾ ೨೫ರಲ್ಲಿ ನಡೆಯಿತು. ಸಭೆಯ ಕಾರ್ಯಕಲಾಪಗಳನ್ನು ಮುಂದುವರಿಸಿಟ್ಟರು.

ದೇಶಭಕ್ತ ಕಾರ್ನಾಡು ಸದಾಶಿವರಾಯರ ಸ್ಮಾರಕನಿಧಿ

ನಿಧಿಗೆ ಹಣ ಸಂಗ್ರಹಿಸುವುದಕ್ಕಾಗಿ ಮಂಗಳೂರಿನ ಸೇವಾದಳ ನಾಟಕ ಮಂಡಳಿಯವರು ಇದೇ ಎಪ್ರಿಲ್ ಎರಡನೆಯ ವಾರದಲ್ಲಿ 'ನವಚೇತನ' ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸಲಿರುವರು.

ನಗರ ಸಭೆ

ಮಂಗಳೂರು ನಗರ ಸಭೆಯ ಮೀಟಿಂಗು ಇದೇ ತಾ ೩೧ಕ್ಕೆ ನಡೆಯುವುದು. ಅನೇಕ ಚರ್ಚಾಸ್ಪದವಾದ ವಿಷಯಗಳು ಸಭೆಯ ಮುಂದೆ ಬರಲಿವೆಯೆಂದು ತಿಳಿದುಬರುತ್ತದೆ.

ಸ್ಪೈನಿನ ಅಂತಃಕಲಹ

ಬಂಡಾಯಗಾರರಿಗೆ ಇಟೆಲಿಯ ಸೇನಾ ಸಹಾಯ
ಸರಕಾರದ ಕಡೆಯ ಸೈನಿಕರ ವಿಜಯ

ಮಾರ್ಚ್ 27ರಲ್ಲಿ ನಡೆದ ಸ್ಪೈನಿನ ಅಂತಃಕಲಹದ ಕುರಿತು ತಾಟಸ್ಥ್ಯ ಸ್ಥಾಪಿಸುವ ಕಮಿಟಿಯ ಸಭೆಯಲ್ಲಿ ಇಟೆಲಿಯ ಪ್ರತಿನಿಧಿಯಾದ ಸಿಂನರ್ ಗ್ರಾಂಡಿಯವರು ಸ್ಪೈನಿಗೆ ಸಂದೇಶಗಳಿಂದ ಕಳುಹಿಸಲ್ಪಟ್ಟಿರುವ ವಲಂಟೀಯರನ್ನು ಹಿಂದೆ ಕರೆಸುವ ವಿಷಯವನ್ನು ಚರ್ಚಿಸಲು ತಾನು ಸಿದ್ಧನಿಲ್ಲವೆಂದರು. ಇದರಿಂದ ಇಂಗ್ಲೆಂಡು ಫ್ರಾನ್ಸ್ ಮೊದಲಾದ ರಾಷ್ಟ್ರಗಳು ಅತೃಪ್ತಿಗೊಂಡಿರುವವು. ರಶ್ಯವು ಅದನ್ನು ತೀವ್ರವಾಗಿ ನಿಷೇಧಿಸಿರುವುದು. ಇಟೆಲಿಯ ದೊಡ್ಡ ಸೇನೆಯೊಂದು ಸ್ಪೈನಿನಲ್ಲಿ ಹೋರಾಡುತ್ತಿರುವುದೆಂಬುದು ಈಗ ಸಿದ್ಧವಾಗಿರುವುದು. ಸಾಮ್ಯವಾದಿಯಾಗಿರುವ ಸ್ಪೆನಿಶ್ ಸರಕಾರವನ್ನು ನಿವಾಳಿಸಬೇಕೆಂದೇ ಮುಸಲೋನಿಯವರ ಸ್ಪಷ್ಟ ಧ್ಯೇಯವಿರುವುದು. ಇದಕ್ಕೆ ಜರ್ಮನಿಯ ಸಹಾಯವೂ ಇರುವುದು ಆದುದರಿಂದ ಸ್ಪೈನಿನ ಕುರಿತು ಯುರೋಪಿನ ಇತರ ರಾಷ್ಟ್ರಗಳ ತಾಟಸ್ಥ್ಯವೆಂಬುದು ಕೇವಲ ಹೆಸರಿಗೆ ಮಾತ್ರವಾಗಿದೆ. ಸ್ಪೈನಿನಲ್ಲೀಗ ಸೂಕ್ಷ್ಮ ರೀತಿಯಲ್ಲಿ ಅದೊಂದು ಲೋಕಯುದ್ಧವೇ ನಡೆಯುತ್ತಿರುವುದೆಂದು ಹೇಳಬಹುದು. ಇಟೆಲಿಯು ಬಂಡಾಯಗಾರರಿಗೆ ಸಹಾಯಮಾಡಿ ಭೂಮಧ್ಯ ಸಾಗರದ ಫ್ರಾನ್ಸ್ ಮತ್ತು ಇಂಗ್ಲೆಂಡುಗಳ ವ್ಯಾಪಾರ ವಹಿವಾಟದ ಮಾರ್ಗಕ್ಕೆ ತೊಡಕುಂಟುಮಾಡಿದಲ್ಲಿ, ಫ್ರೆಂಚ್ ಮತ್ತು ಬ್ರಿಟಿಷ್ ಸರಕಾರಗಳು ಆ ಕುರಿತು ಅಸಡ್ಡೆಯಿಂದಿರಲು ಸಾಧ್ಯವಿಲ್ಲೆಂದು ಫ್ರಾನ್ಸಿನ ವಿದೇಶ ಮಂತ್ರಿಗಳಾದ ಎಮ್. ಡೆಲ್ಬೋಸರು ಎಚ್ಚರಿಸಿರುವರು.

ಗೊಡಲಜಾರ ರಣರಂಗದಲ್ಲಿ ಸರಕಾರದ ಪಕ್ಷೀಯರು ಮುಂದೊತ್ತಿ ಕೆಲವು ಹಳ್ಳಿಗಳನ್ನು ವಶಮಾಡಿಕೊಂಡಿರುವರು. ವೈರಿಗಳ ವಿರೋಧವು ದುರ್ಬಲವಾಗಿರುವುದು. ಜನರಲ್ ಫ್ರೆಂಕೋರವರ ಕಡೆಯಿಂದ ಹೋರಾಡುವ ಸ್ಪನಿಶ್ ಸೇನೆಯ ವಿಧೇಯತೆಯನ್ನು ನಂಬಲು ಸಾಧ್ಯವಿಲ್ಲದಂತಾಗಿದೆ. ಒವೀಡೋದಲ್ಲಿ ಫ್ರೆಂಕೋರವರ ಸೈನಿಕರು ಬಂಡಾಯವೆಬ್ಬಿಸಿರುವರೆಂದು ತಿಳಿದುಬಂದಿದೆ. ಕೆಲವು ಸೈನಿಕರು ಸರಕಾರದ ಕಡೆಯ ಸೈನಿಕರಿಗೆ ಗುಂಡು ಬಿಡುವಾಗ ಅವುಗಳೊಂದಿಗೆ ಕಲ್ಲು ಮತ್ತು ಹೊಯಿಗೆ ಸೇರಿಸಿ ಅವು ಸ್ಫೋಟವಾಗದಂತೆ ಮಾಡಿರುವರೆಂದು ಸುದ್ದಿಯುಂಟಾಗಿದೆ. ಗೊಡಲಜಾರ ರಣರಂಗದಲ್ಲಿ ಸರಕಾರದ ಕಡೆಯ ಸೈನಿಕರ ವಿಜಯವು ಬಂಡಾಯಗಾರರಿಗೆ ದೊಡ್ಡ ಹಾನಿಯೆಂದು ಅವರ ಸೇನಾನಾಯಕರೇ ಒಪ್ಪಿರುವರು.

ಮಾರ್ಚ ತಾ. 25ರಲ್ಲು ಕೋಡೋರ್ಬಾ ಪ್ರಾಂತದ ಪ್ರೋಜೋಬೇಂಕೋ ಎಂಬ ಸ್ಥಳದ ಬಳಿ ಸರಕಾರದ ಕಡೆಯ ಸೈನಿಕರು ಅನಿರೀಕ್ಷಿತವಾಗಿ ಬಂಡಾಯಗಾರರ ಸೇನೆಯ ಮೇಲೆ ಬಿದ್ದು ಅವರನ್ನು 2 ಮೈಲು ಹಿಂದಕ್ಕೋಡಿಸಿರುವರು. ಅನೇಕ ಮಂದಿ ಬಂಡಾಯಗಾರ ಸೈನಿಕರು ಕೊಲ್ಲಲ್ಪಟ್ಟಿರುವರು. ಹವಾಗುಣವು ಪ್ರತಿಕೂಲವಿದ್ದುದರಿಂದ ಸರಕಾರದ ಕಡೆಯ ಸೈನಿಕರು ಈ ಭಾಗದಲ್ಲಿ ಕಳೆದ 15 ದಿನಗಳಿಂದ ವೈರಿಗಳ ಧಾಳಿಯನ್ನು ತಡೆಗಟ್ಟುವದರಲ್ಲೇ ನಿರತರಾಗಿದ್ದರು.

ಸ್ಪೆನಿಶ್ ಸರಕಾರದವರು ವಿಮಾನಧಾಳಿ ನಡಿಸಿದ ನಿಮಿತ್ತ ಗೊಡಲಜಾರ ರಣರಂಗದ ಪಶ್ಚಿಮಪ್ರಾಂತ್ಯದ ಪೆರಲ್ ಎಂಬ ಸ್ಥಳವನ್ನು ಬಂಡಾಯಗಾರ ಸೈನಿಕರು ಬಿಟ್ಟು ಹೋಗಿರುವರು. ಸ್ಪೆನಿಶ್ ಸರಕಾರದ ಕಡೆಯ ಸ್ಟೀಮರೊಂದರಮೇಲೆ ಬಂಡಾಯಗಾರ ವಿಮಾನವೊಂದು ಬೋಂಬನ್ನೆಸೆದು ಹಡಗದ ಕೆಪ್ಟನರು ಸಮುದ್ರಕ್ಕೆಸೆಯಲ್ಪಟ್ಟು ಮುಳುಗಿಹೋಗಿರುವರು. ಕೆಲವು ಮಂದಿ ಕರಾನಿಗಳು ಗಾಯಗೊಂಡಿರುವರು. ಮಜೋರ್ಕ ಎಂಬಲ್ಲಿ ಸೆರೆ ಸಿಕ್ಕಿರುವ ಸ್ಪನಿಶ್ ಸರಕಾರದ ಕಡೆಯ ಹಲವು ಮಂದಿ ಮುಖ್ಯಸ್ಥರನ್ನು ಬಂಡಾಯಗಾರರು ಗುಂಡು ಹೊಡೆದು ಕೊಂದು ಹಾಕಿರುವರು. ಪೋಜೊಬ್ಲಾಂಕೋ ರಣಕ್ಷೇತ್ರದ ಬಳಿ ಇಡೀ ಲೋಕದಲ್ಲೇ ಮೊದಲನೇದಾದ ಪಾದರಸಗನಿ ಇರುವುದು. ಅದನ್ನು ವಶಪಡಿಸಿಕೊಳ್ಳಲು ಬಂಡಾಯಗಾರರು ಪ್ರಬಲ ಯುದ್ಧ ಹೂಡಿರುವರು. ಅದರಲ್ಲಿಯೂ ಕಟ್ಟಕಡೆಗೆ ಬಂಡಾಯಗಾರರೇ ಪರಾಜಿತರಾಗಿ ಅನೇಕ ಮಂದಿ ಇಟೆಲಿಯಾನರು ಕೊಲ್ಲಲ್ಪಟ್ಟಿರುವರೆಂದು ತಿಳಿದುಬರುತ್ತದೆ.

• ವಿಚಿತ್ರ ಪ್ರಪಂಚ •

ಮೂರುತಲೆಯ ಮಗು

ಫೀಜ ದ್ವೀಪದಲ್ಲೊಂದೆಡೆ ಒಬ್ಬ ಸ್ತ್ರೀಯು 3ತಲೆಯ ಕೂಸೊಂದನ್ನು ಹೆತ್ತಾಗ ಸೂಲಗಿತ್ತಿಯು ಅದನ್ನು ಕಂಡು ಹೆದರಿ ಕಿರುಚಿ ಓಡಿಹೋದಳಂತೆ. ಮಗು ಹುಟ್ಟುವಾಗಲೇ ಸತ್ತು ಹೋಗಿತ್ತು. ಅದಕ್ಕೊಂದು ಬಾಲವಿತ್ತು.

ಬಗುಳಲಾರದ ನಾಯಿ

ಆಫ್ರಿಕದ ಕಾಡುಜನರು ಒಂದು ಜಾತಿಯ ನಾಯಿಗಳನ್ನು ಸಾಕುತ್ತಾರೆ. ಅವಕ್ಕೆ ಬಗುಳುವುದಕ್ಕೆ ಬರುವುದೇ ಇಲ್ಲ. ಅವಕ್ಕೆ "ಬಾಸೆಂಜೆ" ನಾಯಿಗಳೆಂದು ಹೆಸರು.

ಪ್ರಪಂಚದಲ್ಲೆಲ್ಲಾ ದೊಡ್ಡ ಮಗು

ಲೋಯೋನ್ಸಾಫ್ ಎಂಬಲ್ಲಿ ಬೊವೆಲ್ಸ್ ಎಂಬ ಹೆಸರಿನ ದಂಪತಿಗಳಿಗೆ ಹುಟ್ಟಿರುವ ಮಗುವೊಂದಕ್ಕೆ ಈಗ 2ವರ್ಷ 9 ತಿಂಗಳು ಅದರ ಭಾರ 105ರಾತ್ಲ, ಎತ್ತರ 3 ಅಡಿ, ಯಷ್ಟು. ಇದು ಪ್ರಪಂಚದಲ್ಲೆಲ್ಲಾ ಅತೀ ದೊಡ್ಡ ಆಕಾರದ ಮಗುವಾಗಿರುತ್ತದೆ. ಈ ಮಗುವು ಹುಟ್ಟುವಾಗ ಕೇವಲ 7ರಾತಲು ಭಾರವಿತ್ತು. 6 ತಿಂಗಳಲ್ಲಿ 30 ರಾತಲಾಯಿತು. 2 ವರ್ಷದಲ್ಲಿ 67 ರಾತಲು ಭಾರವಾಯಿತು. ಅನಂತರ 9 ತಿಂಗಳಲ್ಲಿ ಈ ಮಗುವಿನ ತೂಕವು 38 ರಾತ್ಲು ಹೆಚ್ಚಿರುವುದು.

೭೦ ವರ್ಷದ ವಿಧವೆಯ ವರಾನ್ವೇಷಣ!

ಇಂಗ್ಲೆಂಡಿನ ಬ್ಯಾಟರ್ಲಿ ಎಂಬಲ್ಲಿ ೭೦ ವರ್ಷದ ವಿಧವೆಯೊಬ್ಬಳು ೯ ವರ್ಷಗಳ ಹಿಂದೆ ಗಂಡನನ್ನು ಕಳಕೊಂಡಿದ್ದಳು. ಆ ಮೇಲೆ ಒಬ್ಬಂಟಿಗಳಾಗಿರಲು ಅಸಾಧ್ಯವಾಗಿ ಪುನಃ ಮದುವೆಮಾಡಿಕೊಳ್ಳುವ ಅಪೇಕ್ಷೆಯಿಂದ ಅಲ್ಲಿನ ನಗರ ಸಭಾಧ್ಯಕ್ಷರಿಗೆ ತಾನಿನ್ನೂ ಗಟ್ಟಿಮುಟ್ಟಾಗಿದ್ದೇನೆ, ಪ್ರಾಯದ ಹುಡುಗಿಯರಂತೆ ಮನೆಗೆಲಸವೆಲ್ಲಾ ಮಾಡಬಲ್ಲೆ; ಏಕಾಂಗಿಯಾಗಿ ಜೀವಿಸಲು ತನ್ನಿಂದ ಸಾಧ್ಯವಾಗುವುದಿಲ್ಲ, ಆದುದರಿಂದ ತನಗೆ ಸಮವಯಸ್ಸಿನ ಗಂಡನೊಬ್ಬನನ್ನು ಒದಗಿಸಿಕೊಡಬೇಕೆಂದು ಅರ್ಜಿಮಾಡಿಕೊಂಡಳು. ಈ ನಡವಳಿಯು ಮಾಮೂಲಾದರೆ ನಗರ ಸದನವು ಮದುವೆಯ ಏಜನ್ಸಿ ಕಛೇರಿಯಾದೀತೆಂದು ನಗರ ಸಭಾಧ್ಯಕ್ಷರು ಮುದುಕಿಯ ಮನವಿಯನ್ನು ನಿರಾಕರಿಸಿಬಿಟ್ಟರು.

ಕಿವುಡರು ಸಂಗೀತ ಕೇಳಬಹುದು.

ಕಿವುಡರು ಹಲ್ಲಿನ ಮೂಲಕ ಸಂಗೀತ ಕೇಳುವಂತೆ ಒಂದು ಯಂತ್ರವನ್ನು ವಿಜ್ಞಾನ ಶಾಸ್ತ್ರಜ್ಞರು ಕಂಡುಹಿಡಿದಿರುವರು. ಈ ಯಂತ್ರವು ಅದೊಂದು ಗ್ರಾಮಫೋನಿನಂತಿರುವುದು. ಇದರ ಶಬ್ದವು ವಿದ್ಯುಚ್ಛಕ್ತಿ ಮೂಲಕವಾಗಿ ಒಂದು ಸೂಕ್ಷ್ಮ ತಂತುವಿಗೆ ಹೋಗುತ್ತದೆ. ಅದನ್ನು ಹಲ್ಲಿಗೆ ಊರಿಟ್ಟರೆ ಕಿವುಡರು ಇತರರಂತೆಯೇ ಸರಿಯಾಗಿ ಸಂಗೀತ ಕೇಳಬಹುದು.

ಮಗನೇ ತಂದೆಯ ಮಾವ!

೧೯೩೦ರಲ್ಲಿ ೭೭ವರ್ಷಪ್ರಾಯದ ಪಡ್ಡನೊಬ್ಬನು ೧೮ವರ್ಷದ ತರುಣಿಯೊಬ್ಬಳನ್ನು ವಿವಾಹವಾದನು. ಆ ವಿವಾಹ ಸಮಾರಂಭದಲ್ಲಿ ವರನ ಮಗನು ವಧುವಿನ ತಾಯಿಯ ಪರಿಚಯ ಮಾಡಿಕೊಂಡು ೧೯೩೧ರಲ್ಲಿ ತನ್ನಷ್ಟೇ ಪ್ರಾಯದವಳಾಗಿರುವ ಅವಳನ್ನು ಮದುವೆಯಾದನು. ಇದರಿಂದಾಗಿ ಮಗನೇ ತಂದೆಯ ಮಾವನಾದನು.

ದಿವಸಕ್ಕೆ ಹಲವು ಬಣ್ಣವಾಗುವ ಹೂ

ಮೆಕ್ಸಿಕೋ ದೇಶದಲ್ಲಿ ಕಾಡು ಹೂ ಒಂದಿದೆ. ಅದು ಸೂರ್ಯೋದಯ ಸಮಯದಲ್ಲಿ ಬೆಳ್ಳಗಿರುತ್ತದೆ. ಬಿಸಿಲೇರಿದಂತೆ ಗುಲಾಬಿ ಬಣ್ಣವಾಗಿ ಮಧ್ಯಾಹ್ನ ಹೊತ್ತಿಗೆ ರಕ್ತಕಾವಿ ಬಣ್ಣಕ್ಕೆ ಬರುತ್ತದೆ, ಮಧ್ಯಾಹ್ನದಾಟಿದಂತೆ ಎಳೆ ನೀಲಿಯಾಗಿ ಮೂರನೇ ಘಂಟೆಯ ಸುಮಾರಕ್ಕೆ ನೇರಳೆ ಬಣ್ಣವಾಗಿ ಸೂರ್ಯಾಸ್ತಮಯಕ್ಕೆ ಅಚ್ಚನೀಲಿಯಾಗಿ ಮುಚ್ಚಿಕೊಳ್ಳುತ್ತದೆ.

ಕಂಬಹಾಯ್ದು ಕಣ್ಣುಬಂತು

ಒಬ್ಬ ಸೈನಿಕನು ಕಳೆದ ಯುದ್ಧದಲ್ಲಿ ಕಣ್ಣು ಕಳಕೊಂಡು ಕುರುಡನಾಗಿದ್ದ. ಒಂದು ದಿನ ಒಬ್ಬ ದರ್ಜಿಯ ಅಂಗಡಿಯೊಳಕ್ಕೆ ತಡವರಿಸುತ್ತಾ ಹೋಗುವಾಗ ಕಂಬಕ್ಕೆ ತಲೆಹೊಡೆದು ಮೂರ್ಛೆಬಂದು ಬಿದ್ದು ಬಿಟ್ಟ. ಸ್ವಲ್ಪ ಸಮಯದಲ್ಲಿ ಎಚ್ಚರವಾಗಿ ನೋಡುತ್ತಾನೆ, ದೃಷ್ಟಿಬಂದಿತ್ತು!

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
Head Office: UDIPI.
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ!

ಪತ್ರವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮೀಗಳು ಆದಷ್ಟು ಸಂಕ್ಷೇಪವಾಗಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ.

ಕಾಪಿನ ಮಾರಿಪೂಜೆಯೂ ಕಟಪಾಡಿ ಧೊರೆ ಬಲ್ಲಾಳರೂ

ಕಾಪಿನಲ್ಲಿ ಒಂದಲ್ಲ 3 ಮಾರಿಗುಡಿಗಳು ಕೇವಲ ವೈಯಕ್ತಿಕ ಅಥವಾ ಜಾತಿ ವೈಷಮ್ಯದ ನಿಮಿತ್ತ ಸ್ಥಾಪಿಸಲ್ಪಟ್ಟು ಒಬ್ಬಳೇ ಮಾರಿಯ 3 ಮಾರಿಗುಡಿಗಳಲ್ಲಿ ಏಕಪ್ರಕಾರವಾಗಿ ವರ್ಷಂಪ್ರತಿ ಸಾವಿರಗಟ್ಲೆ ಕುರಿ ಕೋಳಿಗಳ ಆಹುತಿ ತೆಗೆದುಕೊಳ್ಳುತ್ತಿರುವವು. ಒಂದಿಷ್ಟು ವಿಚಾರವಂತನಾದವನು ಈ 3 ಮಾರಿಗಳ ನಿರ್ಮಾಣಕನು ಮಾನವನೆಂಬುದನ್ನು ಮನಗಂಡು, ಮಹಾ ಮಾರಿಗಿಂತಲೂ ದೊಡ್ಡ ಮಾರಿಯು ನರಮಾರಿಯೆಂದು, ಮಾರಿಯ ಹೆಸರಲ್ಲಿ ನಡೆಯುವ ಘೋರ ಹಿಂಸೆಯ ಕುರಿತು ಜುಗುಪ್ಸೆಗೊಳ್ಳದಿರನು. ಜನರಲ್ಲಿ ಹೆಚ್ಚಿನವರು ಈ ಗುಟ್ಟನ್ನು ತಿಳಿದರೂ ಕೇವಲ ಅದೊಂದು ಅಂಧರೂಢಿಯ ದಾಸರಾಗಿ ಯಂತ್ರದಂತೆ ನಡೆಯುವರು. ಮೂಢ ಜನರ ಮಾತಂತಿರಲಿ, ಇಂತಹ ಭಯಾನಕ ಹಿಂಸೆಗೆ ವಿದ್ಯಾವಂತರೂ ಪ್ರತಿಷ್ಠಿತರೂ ಎನಿಸಿಕೊಳ್ಳುವವರೇ ಪ್ರತ್ಯಕ್ಷ ಪ್ರೋತ್ಸಾಹವೀಯುವುದು ಅತ್ಯಂತ ಶೋಚನೀಯವಿದೆ. ಉದಾಹರಣೆಗಾಗಿ ಈಗಣ ಕಟಪಾಡಿ ಬೀಡಿನ ಧೊರೆಬಲ್ಲಾಳರು ಇಂಟರ್ ಮಿಡಿಯೇಟಿನವರೆಗೆ ಕಲಿತವರು; ಸುಧಾರಣೆಯ ಮನೋವೃತ್ತಿಯುಳ್ಳ ತರುಣರು. ಇಂಥವರೇ ಅದೊಂದು ಹಳೆಯಪದ್ಧತಿಗೆ ಬಲಿಬಿದ್ದು ಕಾಪಿನ ಮಾರಿಗುಡಿಗಳಲ್ಲಿ ನಡೆಯುವ ಭೀಭತ್ಸ ಪ್ರಾಣಿ ಹಿಂಸೆಯನ್ನು ವಿರೋಧಿಸಲು ಶಕ್ತರಿದ್ದೂ ವಿರೋಧಿಸದಿರುವದು ಆಶ್ಚರ್ಯ. ಕಟಪಾಡಿಯ ಪಟ್ಟವು ಜೈನಪಟ್ಟವಂತೆ. ಆ ಪಟ್ಟಕ್ಕೇರಿದವರು. ಮಧುಮಾಂಸ ವರ್ಜಿಸಿ ಕುಂಟುಂಬದ ಸಂಬಂಧ ಕಡಿಮೆ ಅದೊಂದು ನಿಷ್ಠೆಯಲ್ಲಿರಬೇಕಂತೆ ಇಂತಹ ಪಟ್ಟಕ್ಕೇರಿದವರು ಘೋರ ಹಿಂಸಾಕೃತ್ಯಕ್ಕೆ ನಿಷೇಧ ಸೂಚಿಸದಿರುವದು ವಿಪರ್ಯಾಸವಲ್ಲವೆ? ಕಟಪಾಡಿಯ ಧೊರೆಬಲ್ಲಾಳರು ಊರು ಕೂಡಿಕೊಂಡು ಮೆರವಣಿಗೆಯಿಂದ ಕಾಪಿನ ಮಾರಿಗುಡಿಯೊಂದಕ್ಕೆ ಚಿತ್ತೈಸಿ ಆ ಅಮಾನುಷ ಪ್ರಾಣಿ ಬಲಿಗೆ ಪ್ರೋತ್ಸಾಹವೀಯುವಷ್ಟರ ಅಸಂಸ್ಕೃತರೂ, ಅವಿಚಾರಿಯೂ, ಅಪ್ರಾಗತಿಕರೂ ಇರುವರೆಂದು ನಾನೆಣಿಸುವುದಿಲ್ಲ. ಆದರೆ, 'ಗತಾನುಗತಿಕೋ ಲೋಕಃ' ಎಂಬಂತೆ ಈ ಕುರಿತು ವಿಚಾರಿಸದೆ ಹಳೆಯ ಸಂಪ್ರದಾಯವೊಂದನ್ನು ಅನುಸರಿಸುತ್ತಿರಬೇಕು. ಸರ್ವತೋಮುಖವಾದ ಜಾಗ್ರತಿ, ಪ್ರಗತಿ ಮಾತ್ರವಲ್ಲ, ಕ್ರಾಂತಿಯ ಈ ಕಾಲದಲ್ಲಿ ಶ್ರೀಮಾನ್ ಧೊರೆಬಲ್ಲಾಳರು ಇಂತಹ ದುಷ್ಕೃತ್ಯಗಳಿಗೆ ಯಾವ ತರದ ಪ್ರೋತ್ಸಾಹವನ್ನೂ ಕೊಡದೆ ಅದನ್ನು ಜನರು ಬಿಟ್ಟುಬಿಟ್ಟು ಸುಧಾರಣೆಯ ದಾರಿಹಿಡಿಯುವಂತೆ ಮಾದರಿಹಾಕಿ ಕೊಟ್ಟು ತನ್ನ ಧೊರೆಬಲ್ಲಾಳತನವನ್ನು ಸಾರ್ಥಕಗೊಳಿಸುವಷ್ಟರ ಧೈರ್ಯ ಹಾಗೂ ವಿವೇಕವು ಅವರಲ್ಲುಂಟಾಗಲೆಂದು ಹಾರೈಸುವ,

ಹಿತೇಚ್ಛು.

ಡಾಕ್ಟರ್ ಆಚಾರ್ಯರೂ ಉಡುಪಿಯ ಸಾರ್ವಜನಿಕ ಸಭೆಯೂ

ಕಳದ ಬುಧವಾರ ಉಡುಪಿಯ ಗಾಂಧಿ ಮೈದಾನಿನಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡದೊಂದು ಸಾರ್ವಜನಿಕ ಸಭೆಯಲ್ಲಿ ಡಾಕ್ಟರ್ ಪಿ. ಜಿ. ಆಚಾರ್ಯರು ಮಾತಾಡುವಾಗ ಸಂಭಾವಿತತನ ತೋರಿಸಿರುವರು. ತಾನು ಬಹು ಬುದ್ಧಿವಂತಿಕೆಯಿಂದ ನಡಿಸುವ ಆಟವನ್ನು ಕಂಡುಕೊಳ್ಳುವಷ್ಟರ ಬುದ್ಧಿಶಕ್ತಿಯು ಜನತೆಯಲ್ಲಿಲ್ಲ; ಜನತೆಯೆಂಬುದು ಅದೊಂದು ಮಂಕುಪ್ರಾಣಿ; ಅದನ್ನು ತನ್ನಿಚ್ಛಾನುಸಾರ ನಡಿಸಬಹುದೆಂದು ಡಾಕ್ಟರ್ ಆಚಾರ್ಯರು ಭಾವಿಸಿಕೊಂಡಿದ್ದರೆ ಅವರು ಅದೊಂದು ದೊಡ್ಡಭ್ರಾಂತಿಲೋಕದಲ್ಲಿರುವರೆಂದೇ ಹೇಳಬೇಕು. ಅವರು ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ, ಡಿಸ್ಟ್ರಿಕ್ಟ್ ಬೋರ್ಡಿನ ಕಾಂಗ್ರೆಸ್ ಪಕ್ಷಕ್ಕೆ ಸೇರಿ ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸಿನ ಯಶಸ್ಸಿಗುಂಟಾದ ದೊಡ್ಡ ಕೊರತೆಯ ವಿದ್ಯಮಾನಗಳನ್ನೆಲ್ಲಾ ಜನರು ಎಂದಿಗೂ ಮರೆಯಲಾರರು. ಅಷ್ಟೊಂದು ಅಲ್ಪ ಸ್ಮರಣೆಗಳಲ್ಲ ಜನಸಾಮಾನ್ಯರು. ಆದರೆ ಡಾಕ್ಟರ್ ಆಚಾರ್ಯರು ಇಷ್ಟರಿಂದಲೇ ಸುಮ್ಮನಾಗದೆ ಕಳೆದ ಎಸೆಂಬ್ಲಿ ಚುನಾವಣೆಯ ತನ್ನ ವರ್ತನೆಯಿಂದ ಉರಿವ ಗಾಯಕ್ಕೆ ಉಪ್ಪು ಹಾಕಿರುವರು. ಅವರು ಮೇಲಿನ ಸಾರ್ವಜನಿಕ ಸಭೆಯಲ್ಲಿ ಮಾತಾಡುವಾಗ ತಾನು ಜಸ್ಟೀಸ್ ಪಕ್ಷೀಯರಿಗೆ ಆತಿಥ್ಯವಿತ್ತುದು; ಡಾಕ್ಟರ್ ರಾಮರಾಯರ ಕೈಕೆಳಗೆ 5 ವರ್ಷದ ತರಬೇತಿ ಪಡೆದವ ತಾನು; ಎಂದು ಏನೇನೆಲ್ಲಾ ಹೇಳ ಹೊರಟಾಗ ಜನತೆಯು ಅದನ್ನು ಅರ್ಧದಲ್ಲೇ ಮುಗಿಸಿಬಿಟ್ಟುದು ತಪ್ಪಾಯಿತು. ಡಾಕ್ಟರರ ಬಾಯಿಯಿಂದ ಇನ್ನೇನೆಲ್ಲಾ ಬುದ್ಧಿವಂತಿಕೆಯ ಮಾತುಗಳು ಹೊರಡುತ್ತಿದ್ದವೆಂದು ನೋಡಬಹುದಿತ್ತು. ಇಂತಹ ಬುದ್ಧಿವಂತಿಕೆಗೆ ಡಾಕ್ಟರ್ ಆಚಾರ್ಯರಂತಹ ಬುದ್ಧಿವಂತರೇ ಬೇಕಾಗಿಲ್ಲ. ಎಂತಹ ಹೆಡ್ಡನಿಗಾದರೂ ಅದು ಸಾಧ್ಯ. ಡಾಕ್ಟರ್ ಆಚಾರ್ಯರು ಕಳದ ಸಲದ ಎಸೆಂಬ್ಲಿ ಚುನಾವಣೆಯಲ್ಲಿ ಜಸ್ಟೀಸ್ ಪಕ್ಷದ ಪರವಾಗಿ ಕೆಲಸಮಾಡಿರುವರೆಂಬುದನ್ನು ನಾನು ಜಾಹೀರಾಗಿ ರುಜುವಾತು ಸಮೇತವಾಗಿ ಎಲ್ಲಿ ಬೇಕಾದರೂ ಸಿದ್ಧಗೊಳಿಸಲು ತಯಾರಿರುವೆನು. ನನ್ನೀ ಆಹ್ವಾನವನ್ನವರು ಸ್ವೀಕರಿಸಿ ಸಾರ್ವಜನಿಕವಾಗಿ ತನ್ನ ನಿರ್ದೋಷತನವನ್ನು ಸಿದ್ಧಗೊಳಿಸುವ ಸಂದರ್ಭವನ್ನು ಉಪಯೋಗಿಸಿಕೊಳ್ಳುವರೇ?

ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಯು ಸಮೀಪಿಸುತ್ತಾ ಬಂತು. ಈ ಸಂದರ್ಭದಲ್ಲಿ ಯಾವ ರೀತಿಯಿಂದಾದರೂ ಜನತೆಯ ವಿಶ್ವಾಸವನ್ನು ಪಡೆಯುವ ಪ್ರಯತ್ನವನ್ನವರು ನಡಿಸಲೇ ಬೇಕು. ಆದುದರಿಂದ ಉಡುಪಿ ಮುನಿಸಿಪಾಲಿಟಿಯೆಂಬ ಮಹಾ ಭೂತವನ್ನು ತನಗೆ ಬೇಕಾದಂತೆ ಆಹ್ವಾನಿಸಿಕೊಂಡು ಉಪಯೋಗಿಸ ಹೊರಟಿರುವಂತಿದೆ. ಒಮ್ಮೆ ಅವರಿಗೆ ಮುನಿಸಿಪಲ್ ಆಫೀಸಿಗೆ ಒಳ್ಳೇ ಕಟ್ಟಡ ಬೇಕು, ಅದಕ್ಕೆ ರೂ. 10,000 ವ್ಯಯಿಸಿದರೂ ಚಿಂತೆಯಿಲ್ಲ,—ಒಳ್ಳೊಳ್ಳೇ ಸಾಮಾನು, ಮಂಕ ಮೊದಲಾದುವು ಅಗತ್ಯವಾಗುತ್ತವೆ. ಇನ್ನೊಮ್ಮೆ ಅವೇನೂ ಬೇಡ; ವರ್ಷಕ್ಕೆ ರೂ. 200 ಬಾಡಿಗೆಯ ಕಟ್ಟಡ ಕೂಡಾ ಅವಶ್ಯವಿಲ್ಲ. ಒಮ್ಮೆ ಮುನಿಸಿಪಲ್ ತೆರಿಗೆ ಕಡಿಮೆಮಾಡುವ ಆವಶ್ಯ ಅಷ್ಟೇನೂ ತೋರುವುದಿಲ್ಲ ಅವರಿಗೆ. ಮತ್ತೊಮ್ಮೆ ಸೇಕಡಾ 2ರಷ್ಟನ್ನಾದರೂ ಇಳಿಸಿಯೇ ಬಿಡಬೇಕೆಂಬ ಛಲದಂಕರಾಗಿ ಹೋಗುತ್ತಾರವರು. ಒಮ್ಮೆ ಎಲ್ಲಾ ಖಾತೆಯಲ್ಲಿಯೂ ವೆಚ್ಚ ಕಡಿಮೆ ಮಾಡಬೇಕೆಂದು ತೋರುತ್ತದೆ; ಮತ್ತೊಮ್ಮೆ ಅಧ್ಯಾಪಕರ ಸಂಬಳ ಕಡಿತವನ್ನು ಕೂಡಲೇ ನಿಲ್ಲಿಸಬೇಕೆಂದು ಉಮೇದಾಗಿ ಬಿಡುತ್ತದೆ. ಒಂದೊಮ್ಮೆ ಜನರು ಕರ ಕೊಡುವುದನ್ನು ನಿಲ್ಲಿಸಿದರಾಯಿತೆಂದು ತೋರುತ್ತದೆ. ಮತ್ತೊಮ್ಮೆ ನಾಯಿದತೆಗೆದುಕೊಳ್ಳುವ ಎಂದು ತೋರುತ್ತದೆ. ಒಮ್ಮೆ ಮುನಿಸಿಪಲ್ ಮೆಂಬರಿಕೆಯೇ ಬೇಡವೆಂಬಂತೆ ತೋರುತ್ತದೆ, ಮತ್ತೊಮ್ಮೆ ಅದನ್ನು ಬಿಡಬಾರದೆಂದಾಗುತ್ತದೆ.

ಇಂತಹ ಇಕ್ಕಡೆಯ ಜಗ್ಗಾಟದಲ್ಲಿ ಸಿಕ್ಕಿಬಿದ್ದು ನಜ್ಜುಗುಜ್ಜಾಗುತ್ತಿರುವ ಅವರ ಕುರಿತು ಯಾರಾದರೂ ಸಹಾನುಭೂತಿ ತೋರಿಸಲೇ ಬೇಕು. ಸಹಾನುಭೂತಿ ಮಾತ್ರವಲ್ಲ, ನಾನೂ ನನ್ನ ಮಿತ್ರರೂ ಅವರನ್ನು ಎಲ್ಲಿವರೆಗೂ ಅನುಸರಿಸಲು ಸಿದ್ಧರಿರುವೆವು. ಅವರು ಮಾತ್ರ ತನ್ನ ಬುದ್ಧಿವಂತಿಗೆ ಬಿಟ್ಟು ಯಥಾರ್ಥವಾಗಿ ತನ್ನ ಮನಸ್ಸನ್ನು ತಿಳಿಸಬೇಕು. ಒಂದೋ ಕಾಂಗ್ರೆಸು, ಇಲ್ಲವೆ ಜಸ್ಟಿಸ್ ಪಾರ್ಟಿಯವರೆಂದಾಗಬೇಕು. ಇವೆರಡುಗಳ ನಡುವೆ ಅತ್ತಿತ್ತ ನಲಿದಾಡಬಾರದು. ಮುನಿಸಿಪಾಲಿಟಿಯ ವಿಷಯದಲ್ಲಿಯೂ, ಅವರು ಅದಕ್ಕೆ ವಿರೋಧಿಯಿದ್ದರೆ ಅದರ ಕರವು ವಿಪರೀತವಾಗಿದೆ, ಅದನ್ನು ವಿರೋಧಿಸಿಯೇ ಸಿದ್ಧವೆಂಬ ಭಾವನೆಯುಳ್ಳವರಿದ್ದರೆ ಮುನಿಸಿಪಾಲಿಟಿಯಿಂದ ಹೊರಬಂದು ಜನತೆಯಲ್ಲೆಲ್ಲಾ ಉಗ್ರಚಳವಳ ಹೂಡಬೇಕು. ಜನರಲ್ಲಿ ಸಂಘಟನೆಯನ್ನು ಉಂಟುಮಾಡಬೇಕು. ತಾನು ಮುಂದಾಳಾಗಿ ಜನರನ್ನು ಮುನ್ನಡೆಸಬೇಕು. ಅದರಿಂದ ಎಂತಹ ಪರಿಣಾಮವುಂಟಾದರೂ ಎದೆಗೊಡಲು ಸಿದ್ಧರಿರಬೇಕು. ಅಷ್ಟಕ್ಕವರು ಸಿದ್ಧನಿರುವೆನೆಂದು ಸಾರ್ವಜನಿಕವಾಗಿ ಪ್ರತಿಜ್ಞೆ ಮಾಡಿದಲ್ಲಿ ನಾನೂ ನನ್ನ ಮಿತ್ರರೂ ಆಗಲೇ ಅವರ ಅನುಯಾಯಿಗಳಾಗಿ ಸೇರುವೆವು. ಅವರು ಇನ್ನಾದರೂ ತನ್ನ ಬುದ್ಧಿವಂತಿಕೆಯ ಹೆಡ್ಡುತನ ತೋರಿಸಹೋಗಬಾರದು. ಹಾಗೆ ಮಾಡಿದರೆ ಶ್ರೀ ಬಿ. ವಾಸುದೇವರಾಯರಂತಹ ಧೈರ್ಯಶಾಲಿ ತರುಣರು ಅವರನ್ನು ಜಾಹೀರಾಗಿ ನಿಷೇಧಿಸಲು ಸಿದ್ಧರೇ ಇರುವರೆಂಬುದನ್ನು ತಿಳಿದುಕೊಳ್ಳಬೇಕು.

K. Sarvothuma Shetty,
Udipi.

ಭಾರತ ಸ್ವರೂಪರು

ದಿಲ್ಲಿಯಲ್ಲಿ ಅನ್ಸಾರಿ ನಗರದಲ್ಲಿ ಕಾಂಗ್ರೆಸ್ ಸಭೆ ನಡೆಯುತ್ತಿದ್ದ ಚಪ್ಪರಕ್ಕೆ ಸಾವಿರಾರು ಜನ ರೈತರು ಮೆರವಣಿಗೆ ಮಾಡಿಕೊಂಡು ಜಯಕಾರಮಾಡುತ್ತಾ ಬಂದು ನಿಂತರು. ಕೂಡಲೇ ಅಧ್ಯಕ್ಷ ಜವಹರಲಾಲರೇ ಸ್ವತಃ ಬಂದು ಅವರನ್ನು ಸಂಧಿಸಿ, 'ಭರತಖಂಡದ ಬೆನ್ನು ಮೂಳೆಯೇ ರೈತ-ಕೈತನ ನಿಜವಾದ ಕಷ್ಟಗಳೇನಿವೆ ಎಂಬುದನ್ನೆಲ್ಲಾ ನನ್ನ ಸಂಚಾರದಲ್ಲಿ ನಾನು ತಿಳಿದುಕೊಂಡಿದ್ದೇನೆ. ಕಾಂಗ್ರೆಸ್ಸು ಭಾರತದ ಪುತ್ರರೆಲ್ಲರ ಕ್ಷೇಮ ಮತ್ತು ಸ್ವಾತಂತ್ರ್ಯಗಳಿಗಾಗಿ ತನ್ನ ಸರ್ವಶಕ್ತಿಯನ್ನೂ ವಿನಿಯೋಗಿಸುತ್ತದೆ. ನಿಜಭಾರತ ಭೂಮಿಯ ಸ್ವರೂಪವಾದ ನಿಮಗೆ ಕಾಂಗ್ರೆಸ್ಸಿನ ಪರವಾಗಿ ಸ್ವಾಗತ ಕೊಡುವೆನು. ನಿಮ್ಮಲ್ಲಿ ಶಿಸ್ತು ಮತ್ತು ಪ್ರಾಪಂಚಿಕ ಜ್ಞಾನಗಳೆರಡೂ ಹೆಚ್ಚುಮಾಡಿಕೊಂಡು ನಮ್ಮ ರಾಷ್ಟ್ರಕ್ಕೆ ಕಲ್ಯಾಣವಾಗುವಂತೆ ಮಾಡಿರಿ. ಎಂದು ಹೇಳಿ ಅವರನ್ನು ಮಂಟಪದೊಳಕ್ಕೆ ಕರೆದುಕೊಂಡು ಹೋದರು.

ನೋಟೀಸು

ದಿ. ಕುಂದಾಪುರ ಬ್ಯಾಂಕ್ ಲಿಮಿಟೆಡ್ ಕುಂದಾಪುರ.

1. ಕುಂದಾಪುರ ಬ್ಯಾಂಕಿನ ಸೆಕ್ರಿಟರಿಯು ಈ ಮೂಲಕ ಸರ್ವಜನರಿಗೂ ತಿಳಿಸುವದೇನೆಂದರೆ—ಈ ಬ್ಯಾಂಕಿನ ಇನ್ನುಳಿದ ಶ್ಯಾರುಗಳನ್ನು ಮಾರುವ ಹಕ್ಕು ಈ ಕೆಳಗೆ ಕಾಣಿಸಿದ ಐದು ಜನರಿಗೆ ಮಾತ್ರ ಇರುತ್ತದೆ.

1. M. R. Ry. H. Soorappayya Avl., (*Chairman*)
2. " A. Krishnaraya Kodgi Avl., (*Director*)
3. " H. Ramananda Rao, Avl., (do.)
4. " The Secretary of the Head Office
5. " The Agent at the Branch

2. ಕಳದ 17ನೆ ತಾರೀಕಿಗೆ ನೆರದ ಬೋರ್ಡ್ ಆಫ್ ಡೈರೆಕ್ಟರರ ಮೀಟಿಂಗಿನಲ್ಲಿ ಪಿ. ವೆಂಕಟರಾಯರ ಮೆನೇಜಿಂಗ್ ಡೈರೆಕ್ಟರ್ ಶಿಪ್ಪು, ವಜಾ ಆಗಿರುವ ಪ್ರಯುಕ್ತ, ಇನ್ನುಮುಂದೆ ಈ ಬ್ಯಾಂಕಿನ ಸಕಲ ವಹಿವಾಟುಗಳು ಸೆಕ್ರೆಟರಿಯ ಹೆಸರಿನಲ್ಲಿಯೇ ನಡಿಯತಕ್ಕದ್ದು.

Coondapoor,
23-3-1937.

ಸೆಕ್ರೆಟರಿ.

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೆಜರ್, **'ನವಯುಗ'**

ದಕ್ಷಿಣ ಕನ್ನಡ ಜಿಲ್ಲಾ ಭೂಸ್ವಾಮಿಕರ ಸಂಘ, ಮಂಗಳೂರು.

ಪ್ರಕಟಣೆ.

ಈ ಜಿಲ್ಲೆಯಲ್ಲಿ ಕೊಳೆರೋಗ ಸಂಬಂಧ ಬೆಳೆ ನಷ್ಟವಾದ ಬಾಬಿನಲ್ಲಿ ಜಾಸ್ತಿ ಫಸ್ಲಿಯಲ್ಲಿ ತೀರ್ವೆ ಮಾಫಿಮಾಡುವ ಬಗ್ಗೆ ಮಾನ್ಯ ರೆವಿನ್ಯೂ ಮೆಂಬರರಿಗೆ ಕಾಗದಬರೆಕೊಂಡಲ್ಲಿ ಆ ಸಂಬಂಧ ಯೋಗ್ಯವಾದ ರಿಯಾಯಿತಿ ಮಾಡುವರೆ ಇದೇ ಮಾರ್ಚ ತಾ. 3ರಲ್ಲಿ ಗವರ್ನಮೆಂಟ್ ಹುಕುಂ ಮಾಡಿದ್ದಾರಾಗಿ ತಿಳಿದು ಬರುತ್ತದೆ. ಆ ಹುಕುಮಿ ನಕಲು ಸಿಕ್ಕಿದ ಕೂಡಲೇ ಅದರ ಅಭಿಪ್ರಾಯವನ್ನು ತಿಳಿಸುತ್ತೇನೆ.

ಮಂಗಳೂರು,
26—3—1937.

ಕೋಟ ರಾಮಕೃಷ್ಣ ಕಾರಂತ,
ಗೌರವಕಾರ್ಯದರ್ಶಿ.

ನೋಟೀಸು

ತಾರೀಕು 23—3—37

ಕುಂದಾಪುರ ತಾಲೂಕು ನಂಬ್ರ 94ನೇ ಮೊಳಹಳ್ಳಿ ಗ್ರಾಮದ ರುಜನ್‌ಕೊಡ್ಲು ನೇಸಿ ಆಚಾರ್ಿ ಮಂಗಳು ಸಾವಿತ್ರಿ ಆಚಾರ್ತಿಯು ಈ ಮೂಲಕ ಸರ್ವ ಜನರಿಗೆ **ತಿಳಿಯಪಡಿಸುವದೇನೆಂದರೆ—**

ಅಕ್ಟೋಬರ ತಿಂಗಳು 22ನೇ ತಾರೀಕಿನ ನವಯುಗ ಪತ್ರಿಕೆಯಲ್ಲಿ ಮೊಳಹಳ್ಳಿ ಗ್ರಾಮದ ಹೆಸಿನಕಟ್ಟೆ ಮುತ್ತಕ್ಕ ಹೆಗ್ಗಡ್ತಿಯ ಅಣ್ಣ ತೇಜಪ್ಪ ಹೆಗ್ಗಡೆರು ನನಗೆ ಕೋರ್ಟು ನೋಟೀಸು ತಂದು ನನ್ನಿಂದ ಖಾಲಿ ಕಾಗದದ ಮೇಲೆ ಅಕ್ರಮ ಲಾಭ ಪಡಿಯುವ ಇರಾಧೆಯಿಂದ ಎಂತಲೂ ರಿಕಾರ್ಡು ವಗೈರೆ ತಯಾರಿಸಬೇಕೆಂತಲೂ ಮೂರು ಹೆಬ್ಬೆಟ್ಟು ಗುರುತುಗಳನ್ನು ಪಡಕೊಂಡು ಹೋಗಿರುತ್ತಾರೆಂತಲೂ ಸಹ ಕಾಣಿಸಿಬಿಟ್ಟ ನೋಟೀಸಿನ ಸಂಗ್ತಿ ನನ್ನ ತಿಳುವಳಿಕೆಗೆ ಬಂದು, ಆ ಕುರಿತು, ನಾನು ತಿಳಿಯಪಡಿಸುವದೇನೆಂದರೆ—ಸದ್ರಿ ತೇಜಪ್ಪ ಹೆಗ್ಗಡೇರು ನನ್ನ ಮನೆಗೆ ಬಂದು ನನ್ನ ಹೆಬ್ಬೆಟ್ಟು ಗುರ್ತು ಪಡೆದುದೆಂಬುದು ಕೇವಲ ಸುಳ್ಳು; ಗಜೇಟು ನೋಟೀಸಿನಲ್ಲಿ ತೋರುವ ಯಾವ ಸಂಗತಿಯೂ ನಡದದ್ದೂ ಇಲ್ಲ. ಸದ್ರಿ ನೋಟೀಸು ನಾನು ದಸ್ಕತು ಮಾಡಿಬಿಟ್ಟದ್ದೂ ಅಲ್ಲ. ಯಾವ ಸಂಗತಿಯನ್ನೂ ನಾನು ಅರಿತವಳಲ್ಲ. ಇದು ನನ್ನ ದ್ವೇಷಿಕರ್ಲ್ಯಾರೋ ಕಲ್ಪಿಸಿಬಿಟ್ಟದ್ದಾಗಿರಬೇಕು. ಇದರಿಂದ ನನಗೆ ಯ ತೇಜಪ್ಪ ಹೆಗ್ಗಡೇರಿಗೆ ಬಾಧಿಸತಕ್ಕದ್ದಲ್ಲ ಎಂಬ ಸಂಗ್ತಿಯನ್ನು ವ್ಯಕ್ತಪಡಿಸಿರುತ್ತೇನೆ.

§ || **ಈ ಗೆರೆ ಮತ್ತು ಎಡಗೈ ಹೆಬ್ಬೆಟ್ಟು ಸದ್ರಿ ಸಾವಿತ್ರಿ ಆಚಾರ್ತಿಯದ್ದಾಗಿರುತ್ತದೆ.**

ಲಾ ಇದು ಹೆಬ್ಬೆಟ್ಟಿನ ಗುರುತು.

ಪ್ರಕಟಣೆ

'ಬೆಂಗಳೂರು ಪಟ್ಟಣದ ಸುಮಾರು 20 ಮೈಲು ದೂರವಿರುವ ದೊಡ್ಡ ಬಳ್ಳಾಪುರ ಎಂಬ ಊರಿನಲ್ಲಿ ವ್ಯಾ. ಯಮ್. ಸಿ. ಎ. (Y. M. C. A.)ಯವರು ಇದೇ ಬರುವ ಎಪ್ರಿಲ್ 29ನೇ ತಾರೀಕಿನಿಂದ ಮೇ 31ರ ವರೆಗೆ ಗ್ರಾಮ ಉದ್ಯೋಗಗಳನ್ನು ಕಲಿಸುವ ಒಂದು ಶಾಲೆಯನ್ನು ತೆರೆಯುವರು. ಅದನ್ನು ಸೇರಲಿಕ್ಕೆ ಇಚ್ಛಿಸುವವರು ಯಾವ ಜಾತಿ ಮತದವರೂ ಆಗಬಹುದು. ಹೆಂಗಸರಿಗೆ ಪ್ರತ್ಯೇಕ ವಿಲೆವಾರಿ ಮಾಡುವರು. ಶಾಲೆಯಲ್ಲಿ ಈ ಕೆಳಗಿನ ವ ಇನ್ನಿತರ ವಿಷಯಗಳನ್ನು ಕಲಿಸುವರು. (೧) ಹಳ್ಳಿ ಪುನರ್ಜೀವನ (೨) ಹಳ್ಳಿ ಆರೋಗ್ಯ (೩) ಪ್ರಾಥಮಿಕ ಕೃಷಿ (೪) ಜಾನುವಾರುಗಳ ಸಾಮಾನ್ಯ ರೋಗಗಳು ವ ಅವಕ್ಕೆ ಮದ್ದು (೫) ಕೋಳಿ ಸಾಕುವುದು (೬) ಜೇನು ನೊಣ ಸಾಕುವುದು (೭) ಸಹಕಾರಿ ಸಂಘ (೮) ಗ್ರಾಮ ಪಂಚಾಯತು (೯) ತಾಯಿ ಮತ್ತು ಮಕ್ಕಳನ್ನು ಸಾಕುವಿಕೆ (೧೦) ವಸ್ತ್ರಕ್ಕೆ ಬಣ್ಣ ಹಾಕುವುದು (೧೧) ಪಟ್ಟಿ (Tape) ಜಮ್ಖಾನ ಮತ್ತು ಕೆನ್‌ವಾಸ್ ನೆಯ್ಯುವುದು. (೧೨) ತೋಟದ ಕೆಲಸ (೧೩) ಬೆತ್ತದ ಕೆಲಸ ವಗೈರೆ.

ಈ ಶಾಲೆಗೆ ಸೇರಬೇಕೆಂತ ಇರುವವರು T. Stephen, Esq. *Secretary*, The Y. M. C. A. Rural Development Centre Doddaballapur, (Mysore State) ಇವರಿಗೆ ಎಪ್ರಿಲು ತಾ. 1ರ ಒಳಗೆ ತಲಪುವಂತೆ ರೂ. 5/- (ಐದು)ರ ಸಮೇತ ಅರ್ಜಿ ಬರಕೊಳ್ಳಬೇಕಾಗಿ ಸದರಿಯವರು ನನಗೆ ತಿಳಿಸಿರುವರು. ಅಲ್ಲಿ ಇರುವ ವ ಊಟದ ಬಗ್ಗೆ ರೂ. 20 ನ್ನು ಸೇರುವ ಮೊದಲು ಮುಂಗಡವಾಗಿ ಕೊಡಬೇಕು. ಇರಲಿಕ್ಕೆ ಇಲೆಕ್ಟ್ರಿಕ್ ದೀಪ ಒಳ್ಳೆ ನೀರು, ಸ್ಥಳ ವಗೈರೆ ಸೌಕರ್ಯಗಳೂ ಬ್ರಾಹ್ಮಣ ವ ಇತರರಿಗೆ ಪ್ರತ್ಯೇಕ ಊಟದ ವಿಲೆವಾರಿ ಕೂಡಾ ಇರುವುದಲ್ಲದೆ ಪಾಠ ಕಲಿಸುವರೆ ಮೇಲೆ ಕಾಣಿಸಿದ ವಿಷಯಗಳಲ್ಲಿ ಅನುಭವವುಳ್ಳ ಸರ್ಕಾರಿ ವ Y. M. C. A. ನೌಕರರೂ ಮಿಶನರಿಗಳೂ ಇರುವುದಾಗಿ ತಿಳಿಸಿರುವರು. ಶಾಲೆ ನಡಿಯುವ ತನ್ಮಧ್ಯ ಅಲ್ಲಲ್ಲಿ ಕೆಲವು ವಿಶೇಷ ಸ್ಥಳಗಳನ್ನು ಫಾರ್ಮುಗಳನ್ನೂ ನೋಡಲಿಕ್ಕೆ ಸಂಚಾರವಿರುವುದು. ಇದರ ಖರ್ಚು ವಿದ್ಯಾರ್ಥಿಗಳೇ ವಹಿಸಬೇಕು. ಹೆಚ್ಚಿನ ಮಾಹಿತಿಯನ್ನು ಮೇಲೆ ಬರದ ಮಹನೀಯರಿಂದ ಪಡಿಯಬಹುದು.

ಕೋಟ ರಾಮಕೃಷ್ಣ ಕಾರಂತ,
ವಕೀಲ, ಮಂಗಳೂರು

ಬಾಲಸಾಹಿತ್ಯದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ

ಬಾ ಲ ಸಾ ಹಿ ತ್ಯ

ಬೆಲೆ ಮೂರಾಣೆ
ಉಪಾಧ್ಯಾಯರ ಪ್ರಕಟನ ಸಮಿತಿ
ಉಡುಪಿ.

To

A WOULD BE LIFE AGENT.

Have you considered the multifold advantages gained by representing the East & West ? An East & West Policy is the key-note of stability and prosperity. It affords equal protection to the Policy-holder as well as the Agent. An Agent who works solidly for the "East & West" is ever successful in establishing himself on a permanently profitable basis.

Join its Field Force to-day and assist us in building up a record business. It will bring you every credit in your latter years and make us feel proud of you.

No need to worry if you are a beginner. Every facility and personal training given to new entrants to our field.

JUST A POST-CARD WILL BRING YOU FULL PARTICULARS FROM—

Messrs. Padubidri Bros.,
Chief Agents,
Karnataka and Maharashtra,

EAST & WEST INSURANCE CO., LTD.,
40 Narayanlal Bansilal Mansions, Bellasis Road, Bombay 8.

ನಾರದನ ತಂಬೂರಿ

ಸುಂವಾನಿಸನೆಲ್ಲ ತೀವ್ರವು ಸುಲಭವಲ್ಲ ಸೋಯಿಸಲು ಬಲ್ಲವರು ಆದರ ಪರಿಯ. ನಾನಾರಾಯಣ! ಬಹುಮತವಿದ್ದನಲ್ಲಿ ಪದವೀ ಸ್ವೀಕರಿಸಬೇಕೆಂದು ಕೊಂಗ್ರೆಸು ನಿರ್ಧರಿಸಿತಷ್ಟೆ! ಬಹುಮತವಿದ್ದರೂ ಗವರ್ನರರ ಮತವಿಲ್ಲದಿದ್ದಲ್ಲಿ ಪದವೀ ಸ್ವೀಕಾರವು ಅಸಾಧ್ಯವಾಗಿ ಕಂಡು ಬಂದಿದೆ.

●

ಮದ್ರಾಸು, ಬೊಂಬಾಯಿ, ಒರಿಸ್ಸಾ, ಸಂಯುಕ್ತಪ್ರಾಂತ್ಯ ಮೊದಲಾದ ಕಡೆಗಳ ಗವರ್ನರರು ಕೊಂಗ್ರೆಸ್ ಪಕ್ಷದ ನಾಯಕರುಗಳನ್ನು ಕರೆಸಿದರು; ಮಂತ್ರಿಮಂಡಲಗಳನ್ನು ರಚಿಸಿಕೊಳ್ಳಿರೆಂದು ಹೇಳಿದರು. ನಾಯಕರು "ನೀವು ನಿಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವದಿಲ್ಲವೆಂದು ಮಾತುಕೊಡಿರಿ" ಎಂದು ಕೇಳಿದರು. ಕೊಂಗ್ರೆಸಿನವರಿಗೆ ಮಂತ್ರಿತ್ವದ ವಿಶೇಷಾಧಿಕಾರವನ್ನು ಕೊಡುತ್ತಾರೆ. ಗವರ್ನರರು ಪ್ರತಿಯಾಗಿ ಗವರ್ನರರ ವಿಶೇಷಾಧಿಕಾರವನ್ನು ಕಡಿಮೆಮಾಡಲು ನೋಡುತ್ತಾರೆ ಕೊಂಗ್ರೆಸಿನವರು!—ಗವರ್ನರರು ಹೀಗೆ ತಿಳಿದಿರಬಹುದು. 'ಇದು ಉಪಕಾರಕ್ಕೆ ಪ್ರತಿಯಾಗಿ ಅಪಕಾರ ಮಾಡುವ ಬುದ್ಧಿ!'

●

ಹೊಸ ಸುಧಾರಣೆಯಲ್ಲಿ ಹಿಂದೀಯರಿಗೆ ದೊರೆಯುವ ಅಧಿಕಾರದ ಮೇಲೆ ಅಧಿಕಾರ ನಡೆಸಲು ಗವರ್ನರರಿಗೆ ವಿಶೇಷಾಧಿಕಾರವು ಕೊಡಲ್ಪಟ್ಟಿದೆ. ಆ ವಿಶೇಷಾಧಿಕಾರವನ್ನು ನೀವು ಪ್ರಯೋಗಿಸುವದಿಲ್ಲವೆಂದು ಮಾತುಕೊಟ್ಟರೆ ನಾವು ಪದವೀ ಸ್ವೀಕರಿಸುತ್ತೇವೆಂದು ಕೊಂಗ್ರೆಸಿನವರೆಂದರು. ಅದಾಗುವದಿಲ್ಲವೆಂದು ಗವರ್ನರರೆಂದರು. ಅಧಿಕಾರವಿಲ್ಲದ ಸ್ಥಾನವೇಕೆಂದು ಕೊಂಗ್ರೆಸಿನವರ ಪ್ರಶ್ನೆ—ಗವರ್ನರರಿಗೂ ಹಾಗೆಯೇ ಕಂಡು ಬಂದುದರಿಂದ ತನ್ನ ಅಧಿಕಾರವನ್ನು ಬಿಟ್ಟುಕೊಡಲೊಪ್ಪಲಿಲ್ಲ!

●

ಕೊಂಗ್ರೆಸಿನವರು ಜನತೆಯ ಹಿತಸಾಧಿಸುವ ಜವಾಬ್ದಾರಿ ಹೊತ್ತುಕೊಂಡು ಎಸೆಂಬ್ಲಿ ಪ್ರವೇಶಿಸಿದ್ದಾರೆ. ಆದ್ದರಿಂದ ಅಧಿಕಾರ ವಿಲ್ಲದ ಜೀರೆ ಜವಾಬ್ದಾರಿಯು ಅವರಿಗೆ ಬೇಡವಾಗಿದೆ. ಗವರ್ನರರು ರಾಜಪ್ರತಿನಿಧಿಯಾಗಿ ಬಂದವರು; ಅವರಿಗೆ ಅವರ ಜವಾಬ್ದಾರಿಯೇ ಇದೆ. ಹೀಗಾಗಿ ಅವರೊಳಗೆ ಸಂಧಾನವು ಅಸಾಧ್ಯವಾಯಿತು. ಒಂದೆ ಕಡೆಯ ಹಿತವಿರುವಲ್ಲಿಯೇ ಇನ್ನೊಂದು ಪಕ್ಷದ ಅಹಿತವಿರುವಾಗ ಹೀಗಾಗುವದು ಸ್ವಾಭಾವಿಕ!

●

"ಹೊಸ ಸುಧಾರಣೆಯ ನೀತಿಯ ಪ್ರಕಾರ ನಮಗೆ ಈ ಆಶ್ವಾಸನೆ ಕೊಡಲು ಸಾಧ್ಯವಿಲ್ಲ" ಎಂದು ಗವರ್ನರರುಗಳ ಪ್ರಕಟಣೆ ಹೇಳುತ್ತದೆ. ಹೊಸ ಸುಧಾರಣೆಯಲ್ಲಿ ಇಂತಹ 'ಸಾಧ್ಯವಿಲ್ಲ' ಗಳೇ ತುಂಬಿವೆ. ಆದ್ದರಿಂದ ಅದು ಜಯಶೀಲವಾಗಲೂ ಸಾಧ್ಯವಿಲ್ಲ!

●

"ನಾವು ಸಹಕಾರ ಮತ್ತು ಸಹಾನುಭೂತಿ ಪೂರ್ವಕವಾಗಿ ನಡೆದುಕೊಳ್ಳುವೆವು." ಎಂದು ವೈಸರಾಯರಾದ ಲೋರ್ಡ್ ಲಿನ್ ಲಿತ್ ಗೋರವರ ಆಶ್ವಾಸನೆ. ಈ ಆಶ್ವಾಸನೆಯು ಜನ್ಮಲ್ಲಿಯೇ ವೈಸರಾಯರು ಎಸೆಂಬ್ಲಿಯು ತಿರಸ್ಕರಿಸಿದ ಆರ್ಥಿಕ ಮಸೂದೆಯನ್ನು ಇದ್ದಕ್ಕಿದ್ದಂತೆ ಮಂಜೂರು ಮಾಡಿರುವರು! ಎಸೆಂಬ್ಲಿಯ ಕೈಯಿಂದ ಕೂಡದುದನ್ನು ವೈಸರಾಯರು ಸ್ವತಃ ಮಾಡಿ ಸಹಕಾರ ಪೂರ್ವಕವಾಗಿ ನಡಕೊಂಡರು, ಹಿಂದೂ ದೇಶದಲ್ಲಿ ಬ್ರಿಟಿಷ್ ಪ್ರಭುಗಳು ಆಗಾಗ ಹೇಳುತ್ತಿರುವ 'ಸಹಕಾರ' ಶಬ್ದದ ಅರ್ಥವು ಇದೆ!

●

ಅಬಿಸೀನಿಯದಲ್ಲಿ ಇಟಲಿಯವರು ಮಾಡುತ್ತಿರುವ ಅನಾಚಾರಗಳನ್ನು ಖಂಡಿಸಿ ಲೋರ್ಡ್ ಜೋರ್ಜರು "ಎಲ್ಲಾ ರಾಷ್ಟ್ರಗಳು ಒಟ್ಟಾಗಿ ಈ ಅನ್ಯಾಯವನ್ನು ನಿಲ್ಲಿಸಬೇಕು" ಎಂದು ಪಾರ್ಲಿಮೆಂಟಿನಲ್ಲಿ ಅರ್ಭಟಿಸಿದರು. ಎಲ್ಲಾ ರಾಷ್ಟ್ರಗಳು ಒಟ್ಟಾದರೆ ಈ ಅನ್ಯಾಯವೊಂದನ್ನೇ ಅಲ್ಲ—'ಅನ್ಯಾಯ' ಶಬ್ದವನ್ನೇ ಅಂತರ್ರಾಷ್ಟ್ರೀಯ ಸಂಬಂಧಗಳ ಮಟ್ಟಿಗೆ ನಿವಾರಿಸಬಹುದು. ಆದರೇನುಮಾಡಲಿ? ಲ್ಯೊಡ್ ಜೋರ್ಜರಂತೆ ಗಟ್ಟಿಯಾಗಿ ಹೇಳುವವರು ಹಲವರಿರುವಾಗ ಮೆಲ್ಲಗಾದರೂ ಮಾಡುವವರಿಲ್ಲದೆ ಹೋದರಲ್ಲ!

●

ತಮಿಳುನಾಡು ಕೊಂಗ್ರೆಸ್ ಕಮಿಟಿಯವರು ತಮ್ಮದೊಂದು ಠರಾವಿನಲ್ಲಿ—ಕೊಂಗ್ರೆಸ್ ಕಡೆಯಿಂದ ನಾಯವಿಧಾಯಕ ಸಭೆಗಳ ಮೆಂಬರನಾಗಿ ಆರಿಸಲ್ಪಟ್ಟ ಪ್ರತಿಯೊಬ್ಬನೂ ಐದು ಸಾವಿರ ಕೊಂಗ್ರೆಸ್ ಮೆಂಬರರನ್ನು ಮಾಡಿಕೊಡಬೇಕು ಎಂದು ಕೇಳಿಕೊಂಡಿದ್ದರು. "ಜನರೆಲ್ಲಾ ಸೇರಿ ತಮ್ಮನ್ನು ಮೆಂಬರರಾಗಿ ಆರಿಸಿದರು—ತಾವಿನ್ನು ಜನರನ್ನೇ ಕೊಂಗ್ರೆಸ್ ಮೆಂಬರರಾಗಿ ಮಾಡಲು ಹೊರಟರೆ ಮುಯ್ಯಿಗೆ ಮುಯ್ಯಿ ಕೊಟ್ಟಹಾಗಬಂದೀತು"ಎಂದು ಎಂ. ಎಲ್. ಎ. ಗಳು ಹೆದರಲಾರರಷ್ಟೆ!

●

"ದಾರಿದ್ರ್ಯ, ಮತ್ತು ಬಡತನವು ಹಿಂದೂ, ಮುಸ್ಲೀಮ್, ಸಿಖ್ಖರೆಂಬ ಭೇದವಿಡದೆ ಎಲ್ಲರನ್ನೂ ಒಂದೇ ರೀತಿ ಪೀಡಿಸುತ್ತಿದೆ. ಆದ್ದರಿಂದ ಮುಸ್ಲೀಮರೆಲ್ಲಾ ಕೊಂಗ್ರೆಸಿಗೆ ಸೇರಿ ದೇಶದ ದಾರಿದ್ರ್ಯ ನಿವಾರಣೆಗೆ ಹೋರಾಡಬೇಕು" ಎಂದು ಪಂಡಿತ ನೆಹರುಗಳ ಆಗ್ರಹದ ವಿನಂತಿ. ಬಡತನವು ಹಿಂದೂ-ಮುಸ್ಲೀಮರಲ್ಲಿ ಭೇದವನ್ನಿಟ್ಟಿಲ್ಲ—ಬಡತನದ ವೈರಿ ಪಂಡಿತ ನೆಹರುಗಳಂಥವರಲ್ಲಿಯೂ ಆ ಭೇಧಭಾವವಿಲ್ಲ. ಈ ಭೇದವನ್ನು ಬೆಳೆಸಿಯೇ ದೊಡ್ಡವರಾಗುವವರಿದ್ದಾರೆ--ಅವರು (ತಮ್ಮ) ಬಡತನದ ವಿರುದ್ಧವಾಗಿಯೇ ಈ ಕೆಲಸವನ್ನು ಕೈಕೊಂಡಿದ್ದಾರೆ!

●

ಜಾತೀಯ ಭಾವವು ದೇಶದಲ್ಲಿ ಮಾಯವಾಗುತ್ತಾ ಬರುತ್ತಿದೆ. ಈ ಸಮಯದಲ್ಲಿ ಜಾತೀಯ ಮುಖಂಡರು ಕೆಲವರು ಹೇಗಾದರೂ ಒದ್ದಾಡಿ ಈ ಒಳ ಜಗಳವನ್ನು ಉಳಿಸಲು ಯತ್ನಿಸುತ್ತಿರುವಂತಿದೆ. ತಮಗೆ ಪ್ರತಿಷ್ಠೆಯನ್ನು ತಂದೊಡ್ಡಿದ ಜಾತೀಯ ಭೇದಭಾವದ ಅಂತಿಮ ಕಾಲದಲ್ಲಿ ಇಷ್ಟಾದರೂ ಸುಶ್ರೂಷೆಯನ್ನು ಮಾಡದಿದ್ದಲ್ಲಿ ಈ ಮುಖಂಡರು ಕೃತಘ್ನರೆಂದಾಗದೆ?

ನಾರದ.

ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**

೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,

ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.



ಧರ್ಮಾರ್ಥ ಬಹುಮಾನಗಳು

1-4-0ಗೆ !

--- ಯಾರಿಗೆ? ---

ರೂಪಾಯಿ 1—4—0 ಕೊಟ್ಟು 14ಸೀಸೆ ಒಟ್ಟೊ ರೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3ಡಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೆಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್ ; 1 ಜತೆ ಗುಬ್ಬಿಗಳು; 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬುಸಮೇತ; 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶನೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. **ಇಂದೇ ಆರ್ಡರುಕೊಡಿರಿ.**

Bengal Watch Co.,

Post Box No. 12214, CALCUTTA.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು. ಪರೀಕ್ಷಿಸಲಪೇಕ್ಷಿಸುವವರು

"ಯೋಗೀಶ್ವರರ ಶಕ್ತಿಸಾಹಸ"

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುಗಮ್

ಚಿಕಾಕೋಲ್

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತವೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಶ್ವಾಸ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

ಚೈನು ಕದ್ದವರಾರು?

[ಕತೆಗಾರ—ಬನ್ನಂಜ P. N ರಾಮಾಚಾರ್ಯ, ಉಡುಪಿ]

"ಗೃಯಾಳಿ! ನಿನ್ನನ್ನು ಮನೆಯಲ್ಲಿಟ್ಟು ಕೊಂಡರೆ ಮನೆ ಉಳಿಯುವ ಬಗೆ ಹೇಗೆ? ಮನೆಗೊಂದು ಮಾರಿ"

"ಇಲ್ಲ ಚಿಕ್ಕಮ್ಮ! ನಾನು ತೀರಾ ನಿರಪ ರಾಧಿಯಿದ್ದೇನೆ. ಸುಮ್ಮ ಸುಮ್ಮನೆ ನನ್ನ ಮೇಲೆ ದೋಷವನ್ನು ಆರೋಪಿಸಲಾಗದು!"

"ಥೂ, ನಿನ್ನ ಮುಖಕ್ಕೆ ಬೆಂಕಿ ಬೀಳ-! ನಾಯಿಗೂದಂತೆ ವರ್ಷವಾಯಿತು. ಇನ್ನೂ ಸುಳ್ಳು ಹೇಳುತ್ತೀಯೆ? ನಾಚಿಕೆಯಾಗುವುದಿಲ್ಲವೆ ನಿನಗೆ?"

"ಅಯ್ಯೋ ಚಿಕ್ಕಮ್ಮ! ನಾನು ಒಂದನ್ನೂ ಅರಿಯದವಳಿದ್ದೇನೆ. ಬೇಡಿ, ಬೇಡಿ, ನನ್ನ ಬಿಸಿ ಕರುಳಿಗೆ ಮತ್ತಷ್ಟು ದುಃಖವನ್ನೀಯಬೇಡಿ!"

"ಇಲ್ಲ, ನೀನೀ ರೀತಿ ನಾಯಿಯಂತೆ ವಿನಯವನ್ನು ಅಭಿನಯಿಸಿದರೆ ನಾನು ಕೇಳಲೊಲ್ಲೆ! ತಿಪ್ಪ ಜೋಯಿಸರನ್ನು ಪ್ರಶ್ನೆ ಕೇಳಿದಾಗಲೂ ನೀನೇ ತೆಗೆದಿರುವಿಯೆಂದು ಕಾಣುತ್ತಿದೆಯಂತೆ. ಇನ್ನೂ ಇಲ್ಲವೆನ್ನುವೆಯಾ? ಛಿ!.. .!"

"ಅಹಹ! ಚಿಕ್ಕಮ್ಮ ಆ ಕಾಮುಕ, ನೀಚ ಸ್ವಾರ್ಥಪರ ಜೋಯಿಸನ ಮಾತನ್ನು ನೀವು ನಂಬುವಿರಾ? ಹಾಯ್ .....!'

"ಧೂಗಯ್ಯಾಳಿ! ಜೋಯಿಸರನ್ನೂ ತೆಗಳಹತ್ತುವೆಯಾ? ನನ್ನ ಚೈನನ್ನು ಕದ್ದಿರುವವಳು ನೀನೆಂಬುವುದಕ್ಕೆ ಇನ್ನು ಸಂಶಯವಿಲ್ಲ. ಯಾವುದಕ್ಕೂ ಅವರು ಬರಲಿ. ನಿನ್ನನ್ನು ಮನೆಯಿಂದ ಹೊರಗೆ ಹಾಕಿಸುತ್ತೇನೆ ನೋಡು!"

"ನಿರಪರಾಧಿಯಾದ ನನ್ನನ್ನು ಮನೆಯಿಂದ ಹೊರಗೆಹಾಕಿದರೆ ನೀನು ಹಾಳಾಗಿ ಹೋಗುವೆ ಚಿಕ್ಕಮ್ಮ!"

"ಎಷ್ಟು ಧೈರ್ಯವೇ ನಿನಗೆ ನಾಯಿ!"

"ವಿವೇಕವಿಲ್ಲದ ಪ್ರಾಣಿಗಳ ಎದುರು ಇಷ್ಟು ಧೈರ್ಯವು ಇರಬೇಕಾದ್ದಮ್ಮ!"

"ವಿಮಲೆ ಇದು ನಿನಗೆ ವಿನಾಶಕಾಲ!"

"ಜತೆಗೆ ನಿನಗೂ ವಿನಾಶಕಾಲ ಚಿಕ್ಕಮ್ಮ!"

"ಕೆಟ್ಟ ಹುಡುಗಿ ಮುಚ್ಚು ಬಾಯಿ!"

"ಇದೋ ಮುಚ್ಚಿದೆ!"

X X \ \

ಶ್ರೀನಾಥರಾಯರ ಹೆಸರನ್ನು ಕೇಳದವರು ನಮ್ಮೂರಲ್ಲಿಲ್ಲ. ಅವರು ನಮ್ಮೂರ ಹೆಸರುವಾಸಿಯಾದ ವಕೀಲರು. ಅವರ ಮೊದಲ ಪತ್ನಿಯು ಹೆಣ್ಣು ಕೂಸನ್ನೊಂದು ಹೆತ್ತು ಕೈಲಾಸವಾಸಿಯಾಗಿದ್ದಳು. ರಾಯರಿಗೆ ಕೂಸನ್ನು ಸಾಕಲು ಜನವಿಲ್ಲದೆ ಕೊನೆಗೊಂದು ಎರಡನೆ ಹೆಂಡತಿಯ ಕೈ ಹಿಡಿದರು. ಪ್ರಥಮ ಪತ್ನಿಯ ಸುಕುಮಾರಿಯಾದ ವಿಮಲೆಯು ಇದೀಗ S.S.L C ಕ್ಲಾಸಿನಲ್ಲಿ ಓದುತ್ತಿದ್ದಳು. ವಿಮಲೆಯು ತುಂಬಾ ಸುಂದರಿ! ಬಲು ಜಾಣೆ'ಸುಗುಣೆ; ಆದರೆ ರಾಯರ ದ್ವಿತೀಯ ಪತ್ನಿಯೋ? ಮಹಾಕಾಳಿಯ ಅಪರಾವತಾರ! ವಿಮಲೆಯಂತಹ ಸಾಧು ಬಾಲಿಕೆಯನ್ನೂ ಕಲ್ಯಾಣಿಯು ತಿರಸ್ಕಾರ ದೃಷ್ಟಿಯಿಂದ ನೋಡುತ್ತಿದ್ದಳು. ರಾಯರಾದರೂ ಕಲ್ಯಾಣಿಯ ವಿಕ್ರೀತ ದಾಸರಾಗಿಹೋಗಿದ್ದರು. ಆಕೆಯ ಭೀತಿಯಿಂದ ರಾಯರು ವಿಮಲೆಯನ್ನೂ ಉಪೇಕ್ಷಿಸುತ್ತಿದ್ದರು. ಕಲ್ಯಾಣಿ ಎದುರು ವಿಮಲೆಯು ಹುಲಿಯ ಕೈಗೆ ಸಿಕ್ಕ ಹುಲ್ಲೆಯಂತಾಗಿದ್ದಳು. ಇಂದು ಕಲ್ಯಾಣಿಯ ಚೈನೊಂದು ಕಾಣೆಯಾಗಿತ್ತು. ಕಲ್ಯಾಣಿಯ ದುರಾಗ್ರಹವು ವಿಮಲೆಯ ಮೇಲೆ ಆಧಿಕಾರವಾಡಲಾರಂಭಿಸಿತು!

ಶ್ರೀನಾಥರಾಯರ ನೆರೆಮನೆಯಲ್ಲೇ ತಿಪ್ಪ ಜೋಯಿಸರು ಒಂದು ಮನೆಯನ್ನು ಬಾಡಿಗೆಗೆ ತಕ್ಕೊಂಡು ವಾಸಿಸುತ್ತಿದ್ದರು. ಜೋಯಿಸರು ಮಂದಿಗೆ ಬೇಕಾದಂತೆ ವರ್ತಿಸುವ ವಿದ್ಯೆಯನ್ನು ಕಲಿತಿದ್ದುದರಿಂದ ಅವರೆಲ್ಲರಿಗೂ ಅಚ್ಚುಮೆಚ್ಚಿನವರಾಗಿದ್ದರು. ನಮ್ಮ ರಾಯರ ಮನೆಯಲ್ಲೂ ಜೋಯಿಸರ ಆಗಮನ ನಿರ್ಗಮನಗಳಿಗೆ ಕೊರತೆಯಿದ್ದಿಲ್ಲ ಇಂದು ಚೈನು ಕಾಣೆಯಾದೊಡನೆ ಕಲ್ಯಾಣಿಯು ಅವರೊಡನೆ ಪ್ರಶ್ನೆಯನ್ನು ಕೇಳಿದಳು. ಚೈನು ಕದ್ದವಳು ವಿಮಲೆಯೆಂದು ಜೋಯಿಸರ ತೀರ್ಮಾನ ಸರಿ, ಇನ್ನು ಕೇಳಬೇಕೇ? ವಿಮಲೆಯನ್ನು ತಿಂದುಬಿಡೋಣವೊ ಎಂದೆನಿಸಿತು ಕಲ್ಯಾಣಿಗೆ! ಶಾಲೆಯಿಂದ ವಿಮಲೆಯು ಬಂದೊಡನೆಯೇ ಕಲ್ಯಾಣಿಗೂ ವಿಮಲೆಗೂ ಈ ವಿಷಯದಲ್ಲಿ ಮೇಲಿನ ವಾಗ್ವಾದವಾಯಿತು!

ಇಷ್ಟು ಹೊತ್ತಿನಲ್ಲಿ ಶ್ರೀನಾಥರಾಯರೂ ಬಂದರು. ಕಲ್ಯಾಣಿಯು ವೃತ್ತಾಂತವೆಲ್ಲವನ್ನೂ ಉಪ್ಪು ಖಾರ ಹಚ್ಚಿ ಹೇಳಿದಳು ಇದನ್ನು ಕೇಳಿ ರಾಯರಿಗೂ ಮೇರೆಯಿಲ್ಲದ ಸಿಟ್ಟುಬಂದಿತು. ಅವರ ಕೆಂಗಣ್ಣು ವಿಮಲೆಯ ಕಡೆಗೆ ಉರುಳಿತು! ವಿಮಲೆಯು ತಂದೆಯ ಕಾಲಿಗೆ ಬಿದ್ದಳು.

"ಅಪ್ಪಾ ಈ ವಿಷಯದಲ್ಲಿ ನಾನು ತೀರಾ ನಿರಪರಾಧಿಯಿದ್ದೇನೆ. ಚಿಕ್ಕಮ್ಮನನ್ನು ವುದು ಸುಳ್ಳು.—ಹಿಂದೊಮ್ಮೆ ನೀವಾರೂ ಇದ್ದಿಲ್ಲ ಆ ಸಮಯ ಆ ಜೋಯಿಸರು ಇಲ್ಲಿಗೆ ಬಂದಿದ್ದರು ತನ್ನ ಕಾಮದಾಹವನ್ನು ತೀರಿಸಿಕೊಳ್ಳುವ ಹವ್ಯಾಸದಿಂದ ಆತನ ತಂಗಿಯಂತಿದ್ದ ನನ್ನನ್ನು ಕೆಡಿಸಬಂದಿದ್ದಾನೆ! ನಾಚಿಗೇಡಿ! ನಾನಂದು ಸಿರಾಕರಿಸಿದ್ದೆ, ಅಂದಿನಿಂದ ಆತನು ನನ್ನನ್ನು ಸಾಪದೃಷ್ಟಿಯಿಂದ ನೋಡುತ್ತಿದ್ದಾನೆ ನಾನು ತಿರಸ್ಕಾರದೃಷ್ಟಿಯಿಂದಲೇ ನೋಡುತ್ತಿದ್ದೇನೆ. ಆ ನೀಚನು ಅದೇ ಸಿಟ್ಟಿನಿಂದ ನನ್ನ ಮೇಲೆ ಅಪರಾಧವನ್ನು ಹೊರಿಸಿದ್ದಾನೆ ಅಪ್ಪಾ! ನಾನು ಹೇಳುತ್ತಿರುವುದು ನಿಜವೇ ಯಾ ಸುಳ್ಳೇ ಎಂಬುವುದು ಆ ಭಗವಂತನಿಗೆ ಗೊತ್ತಿದೆ. ಯೋಚಿಸಿರಿ! ವಿಚಾರಿಸಿರಿ! ಹ್ಯಾ, ಲೋಕದಲ್ಲಿ ತಾಯಿಯಿಲ್ಲದ ಮಕ್ಕಳು ಚಿಕ್ಕತಾಯಿಯ ಆರೈಕೆಯಲ್ಲಿರುವುದೆಂದರೆ ಅದು ನರಕಕುಂಡದಲ್ಲಿದ್ದಂತೆಯೇ! ನನ್ನ ಮೊರೆಯನ್ನು ನೀವೂ ಕೇಳದಿದ್ದರೆ ಕೇಳುವವರಾರು?. .

ಇಂತಹ ಸಂದರ್ಭದಲ್ಲಿ ನಾನು ಬದುಕಿರುವುದಕ್ಕಿಂತಲೂ ಸಾಯುವುದೇ ಲೇಸಲ್ಲವೇ?" ಎಂದು ವಿಮಲೆಯು ಆಳಹತ್ತಿದಳು. ಶ್ರೀನಾಥ ರಾಯರಿಗೆ ಈ ದೀನ ವಾಣಿಯನ್ನು ಕೇಳಿ ಮನಸ್ಸು ಕರಗಿತು. ಆದರೆ ಕಲ್ಯಾಣಿಯ ಭೈರವೀ ಮೂರ್ತಿಯನ್ನು ನೋಡಿ ಆ ಮನಸ್ಸು ಪುನಃ ಕಲ್ಲಾಯಿತು! "ಛಿ! ವಿಮಲೆ! ನೀನಿಂತಹ ಛಿನಾಲಿಣಿಯೆಂದು ನಾನು ತಿಳಿದಿರಲಿಲ್ಲ. ನನ್ನ ಮರ್ಯಾದೆ ತೆಗೆಯಲು ಹುಟ್ಟಿರುವೆಯೆಂದು ತೋರುತ್ತದೆ! ಛಿ " ಎಂದು ರಾಯರು ಅಲ್ಲಿಂದ ನಡೆದುಬಿಟ್ಟರು!

ಪ್ರಗಾಢವಾದ ರಾತ್ರಿ. ಎಲ್ಲೆಲ್ಲೂ ನೀರವತೆಯ ಸಾಮ್ರಾಜ್ಯ. 'ಧನ್—ಧಂ! ಅಂದೊಂದು ಶಬ್ದವು ನೀರವತೆಯನ್ನು ಛೇದಿಸಿಕೊಂಡು ಅನಂತ ಆಕಾಶದಲ್ಲಿ ವಿಲೀನವಾಯಿತು ನಿದ್ರಾವಿಮಗ್ನರಾದ ಶ್ರೀನಾಥರಾಯರಿಗೆ ಈಸದ್ದಿನಿಂದ ನಿದ್ರಾಭಂಗವಾಯಿತು ಅವರು ಎಚ್ಚೆತ್ತು ಓಡಿ ಬಂದರು. ಬಾವಿಯಲ್ಲೇನೋ ಸದ್ದಾಗುತ್ತಿತ್ತು. ರಾಯರು ಬಾವಿಯ ಕಡೆ ಸಾರಿದರು. ಇನ್ನೂ ಸದ್ದಾಗುತ್ತಿದೆ. 'ಬಾವಿಗಾರೋ ಬಿದ್ದಿರುವ'ರೆಂದು ರಾಯರು ಕೂಗಿಕೊಂಡರು. ಕೂಡಲೇ ನೆರೆಹೊರೆಯ ಜನರೆಲ್ಲರೂ ಕೂಡಿಕೊಂಡರು. ಸಾಹಸಿಯೊಬ್ಬನು ಕೂಡಲೇ ಬಾವಿಗೆ ಇಳಿದು ಮರುಕ್ಷಣದಲ್ಲಿಯೇ ಒಂದು ವ್ಯಕ್ತಿಯನ್ನು ಮೇಲಕ್ಕೆತ್ತಿ ತಂದನು. ಬೆಳಕಿನಲ್ಲಿ ನೋಡಿದಾಗ ಬಾವಿಗೆ ಬಿದ್ದ ವ್ಯಕ್ತಿಯು ರಾಯರ ಏಕ ಮಾತ್ರ ಪುತ್ರಿ, ವಿಮಲೆಯಾಗಿದ್ದಳು ವಿಮಲೆಯ ಮುಖದಲ್ಲಿ ಮಿನುಗುತ್ತಿದ್ದ ದೈವೀ ಜ್ಯೋತಿಯೊಂದು ಆ ದೀಪದ ಮಂದ ಪ್ರಕಾಶದೊಡನೆ ಸ್ಪರ್ಧಿಸುತ್ತಿತ್ತು! ಪರೀಕ್ಷಿಸಿದಾಗ ವಿಮಲೆಯು ಉಸಿರಾಡುತ್ತಿದ್ದಳು. ಅವಳನ್ನು ಒಳಕ್ಕೆ ಕರತಂದು ಉಪಚರಿಸಿದರು ಕೆಲಹೊತ್ತಿನಲ್ಲೇ ವಿಮಲೆಯು ನೆಟ್ಟಗಾದಳು. ನೆರೆಹೊರೆಯವರೆಲ್ಲಾ ಹೋ। ಮಲಗಿಕೊಂಡರು.

'ವಿಮಲೆ!' ಕಂಬನಿದುಂಬಿ ರಾಯರು ಪ್ರಶ್ನಿಸಿದರು, 'ಏಕಮ್ಮಾ ಬಾವಿಗೆ ಬಿದ್ದೆ?' ವಿಮಲೆಯು ನಕ್ಕಳು. 'ತಂದೆಯವರೇ! ನನ್ನ ಮೊರೆಯನ್ನು ನೀವು ಕೇಳಲಿಲ್ಲ ದೇವರಲ್ಲಾದರೂ ಹೇಳಿಕೊಳ್ಳೋಣವೆಂದು, ನಾನು ತೆರಳಿದೆ, ನನ್ನನ್ನೀ ಪಾಪಿ ಪ್ರಪಂಚಕ್ಕೆ ಏತಕ್ಕೆ ಎಳತಂದಿರಿ? ನನ್ನನ್ನು ಸಾಯಗೊಡಿರಿ!' ವಿಮಲೆಯಂದಳು. 'ಇಲ್ಲ ನನ್ನ ಮುದ್ದು ವಿಮಲೆ! ನೀನು ನಿರಪರಾಧಿಯೆಂಬುದನ್ನು ಗೊತ್ತು ಹಚ್ಚಬೇಕಾದರೆ ಈ ಪಾಪಿಗೆ ಇಷ್ಟು ಹೊತ್ತುಬೇಕಾಯಿತು... ನೀನು ಚಿರಂಜೀವಿಯಾಗಿ ಬಾಳು!' ರಾಯರೆಂದರು.

\ \ \ \ \

ಮರುದಿನ ಬೆಳಗಾದಾಗ ಸರಾಫ ನಂಜಯ್ಯನು ಶ್ರೀನಾಥರಾಯರನ್ನು ಕಾಣಲು ಬಂದಿದ್ದನು. ರಾಯರು ನಂಜಯ್ಯನು ಬಂದ ಕಾರಣವನ್ನು ಕೇಳಿದರು. "ಸ್ವಾಮಿ" ನಂಜಯ್ಯನು ಮಾತಿಗೆ ಮೊದಲುಮಾಡಿದನು. "ನಾನು ಕಳೆದ ವರ್ಷ ನಿಮಗೆ ಮಾಡಿಕೊಟ್ಟಿದ್ದ ಚೈನನ್ನು ಮಾರಬೇಕೆಂದು ತಿಪ್ಪಾ ಜೋಯಿಸರ ಹತ್ತಿರ ಕೊಟ್ಟಿದ್ದೀರಾ? ಹಾಗೆಂದು ಜೋಯಿಸರ ಮಗನು ಈ ಚೈನನ್ನು ನಿನ್ನೆ ರಾತ್ರಿ ನನ್ನಬಳಿ ತಂದಿದ್ದ ನನಗೇಕೋ ಸಂಶಯವಾಯಿತು. ಹಣವನ್ನು ನಾಳೆ ಕೊಡುವೆನೆಂದು ಹೇಳಿ ಕಳುಹಿಸಿ ಚೈನನ್ನು ಇಟ್ಟುಕೊಂಡೆ. ಆದರೆ ಹುಡುಗನು ಹೋಗಿ ಸ್ವಲ್ಪ ಹೊತ್ತಿನಲ್ಲೇ ಜೋಯಿಸರ ಹೆಂಡತಿಯೇ ಬಂದು ಆ ಚೈನನ್ನು ವಾಪಾಸುಕೊಡಹೇಳಿದಳು. ನಾನು ಹೇಗೋ ಉಪಾಯಮಾಡಿ ಚೈನನ್ನು ಕೊಡದೆ ಅವಳನ್ನು ವಾಪಾಸು ಕಳುಹಿಸಿದ್ದೇನೆ — ಇದೋ ಚೈನು ಇಲ್ಲಿದೆ!" ಎಂದು ಚೈನನ್ನು ರಾಯರ ಮುಂದಿಟ್ಟನು. ಅಷ್ಟರಲ್ಲಿ ವಿಮಲಾ-ಕಲ್ಯಾಣಿಯರೂ ಅಲ್ಲಿಗೆ ಬಂದರು. ಚೈನನ್ನು ನೋಡಿದೊಡನೆಯೇ ವಿಮಲೆಯ ಮಾತಿನ ಸತ್ಯಾಂಶವು ರಾಯರಿಗೆ ತಿಳಿದು ಬಂತು "ನಂಜಯ್ಯ, ಬಹಳ ಉಪಕಾರಮಾಡಿದೆ. ಈ ಚೈನು ನಿನ್ನೆಯ ದಿನ ಕಾಣೆಯಾಗಿತ್ತು ಆಜೋಯಿಸನನ್ನು ಪ್ರಶ್ನೆ ಕೇಳಿದಾಗ, ಮನೆಯವರ ಪೈಕಿಯೇ ಯಾರೋ ತೆಗೆದಿರುವರೆಂದು ಹೇಳಿದ್ದಾನೆ. ಆದರೆ........ಜೋಯಿಸನು ಇಂತಹ ಮುಟ್ಠಾಳನೆಂದು ನನಗೆ ತಿಳಿದಿಲ್ಲ." ರಾಯರು ಸಿಟ್ಟಿನ ಭರದಿಂದ ಹೇಳಿದರು· ಕೆಲ ಮಾತುಕತೆಗಳಾದ ಬಳಿಕ ನಂಜಯ್ಯನು ಹೊರಟುಹೋದನು. ರಾಯರು ಸಿಟ್ಟಿನಿಂದ ಜೋಯಿಸರನ್ನು ಹುಡುಕ ಹೋದಾಗ ಜೋಯಿಸರ ಮನೆ ಬರಿದಾಗಿತ್ತು!

\ \ X \ \

ಸತ್ಯಶೋಧನೆಗಾಗಿ ಆತ್ಮೋತ್ಸರ್ಗವನ್ನು ಮಾಡಲೆಳಸಿದ ಮೇಲೆಯೇ ಕಲ್ಯಾಣಿಗೆ ವಿಮಲೆಯಲ್ಲಿ ಒಂದು ತೆರನಾದ ವಿಶ್ವಾಸವುಂಟಾಯಿತು! ಜೋಯಿಸರು ಪರಾರಿಯಾದ ಮೇಲಂತೂ ಆಕೆಯ ಸಂಶಯ ಪಿಶಾಚಿಯು ಹೇಳ ಹೆಸರಿಲ್ಲದೆ ಹೊರಟುಹೋಯಿತು. ವಿಮಲೆಯಲ್ಲಿ ನಿಶ್ಚಲವಾದ ಮಮತೆಯು ಉಂಟಾಯಿತು! "ವಿಮಲೆ ಒಂದು ದಿನ ಏಕಾಂತದಲ್ಲಿರುವಾಗ ಕಲ್ಯಾಣಿಯು ವಿಮಲೆಯೊಡನೆ ಮಾತಿಗೆ ಮೊದಲು ಮಾಡಿದಳು.'ಏನೋ ಗೊತ್ತುಗುರಿಯಿಲ್ಲದೆ ನಿನ್ನನ್ನು ಪೀಡಿಸಿದೆ! ನನ್ನನ್ನು ಕ್ಷಮಿಸಲಾರೆಯಾ?' "ಚಿಕ್ಕಮ್ಮ" ವಿಮಲೆಯಂದ ಳುನಿಮ್ಮನ್ನು ಕ್ಷಮಿಸಲು ನಾನಾರು? ಎಲ್ಲಕ್ಕೂ ದೇವರಿದ್ದಾನೆ. ಇದೆಲ್ಲಾ ಆತನ ಬರಿಯ ಲೀಲೆ"

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ ೩೩೬

ವಾದಿಳು ಪುಟ್ಟಮ್ಮ ಶೆಡ್ತಿ,

ಪ್ರತಿವಾದಿರು . ಶ್ರೀನಿವಾಸ ಭಟ್ಟ ಕೂಡಾ

ಕಾರವಾರ ಡಿಸ್ಟ್ರಿಕ್ಟ್ ಕಾರವಾರದಲ್ಲಿರುವ ಹೊಲ್ಲಮನೆ ಸೀತಾರಾಮ ಭಟ್ಟರ ಮಕ್ಕಳು ಸದ್ರಿ ದಾವೆಯ 7ನೇ ಪ್ರತಿವಾದಿ ಗಣಪಭಟ್ಟ 1, 10ನೇ ಪ್ರತಿವಾದಿ ಕೃಷ್ಣ ಭಟ್ಟ 1, ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ —

ವಾದಿ ಪುಟ್ಟಮ್ಮ ಶೆಡ್ತಿಯು ಪ್ರತಿವಾದಿರ ಮೇಲೆ ಜನರಿಂದ ಬರತಕ್ಕ ಕುಡು ದಸ್ತಾವೇಜಿನ ಬಾಬ್ತು ಹಣ ಬಡ್ಡಿ ವಗೈರೆಯ ನಿವೃತ್ತಿ ಬಗ್ಗೆ ಮಾಡಿದ ಮೇಲಿನ ದಾವೆಯು ತಾರೀಕು ೨೯—೩—37ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇದ್ದೋಣಾಗಿಯದೆ. ಆ ಕುರಿತು ನಿಮ್ಮ ಆಕ್ಷೇಪಗಳಿದ್ದರೆ ಸದ್ರಿ ದಿವಸ ಸದ್ರಿ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು.

ತಾರೀಕು. ೨೨—೩—'೩೭
ಕುಂದಾಪುರ.

K. Venkappa Shetty,
Vakil for plaintiff.

ತುಸು ವಿನೋದ

ರಾಮು—ಹೌದೇನೇ ಲಕ್ಷ್ಮೀ! ನೀನು ರಾಮಾಯಣ ಕೇಳಿದಿಯಲ್ಲೇ! ಸೀತೆಯ ಗಂಡ ಯಾರೇ?

ಲಕ್ಷ್ಮಿ—ರಾಮ!

ರಾಮು—ಹೌದೇನೇ! ನನ್ನ ಹೆಸರು ಹೇಳಿದಿಯೇನ?

ಲಕ್ಷ್ಮಿ—ಅಯ್ಯೊ! ನಿಮ್ಮ ಹೆಸರೂ ರಾಮನೆಂದು ತಾನೇ? ಇನ್ನು ಯಾರೊಡನಯೂ ರಾಮನೆಂದು ಹೇಳೋಕೆನೇ ಇಲ್ಲಾಂದ್ರೆ!

x x x

ಟೀಚರ್—ಅಂಗಗಳಲ್ಲಿ ಎಷ್ಟು ವಿಧವೋ?

ಹುಡುಗ—ಒಂದೇ ಸರ್.

ಟೀಚರ್—ಯಾವುದೋ ಅದು?

ಹುಡುಗ—ಶಿವಲಿಂಗ ಸರ್.

x x x

ಮೇಸ್ತ್ರು—ಲೋ! "ನ್ಯುಮೋನಿಯಾ" ಸ್ಪೆಲ್ಲಿಂಗ್ ಹೇಳೋ!

ವಿದ್ಯಾರ್ಥಿ—ನ್ಯು. .....ಮೋ . ನಿ . ಯಾ . .ಇಂಗ್ಲಿಷ್ ಪ್ಲೊಕೆಟ್ ಆಕ್ಸ್‌ಫರ್ಡ್ ಡಿಕ್ಷ್ನರೀ ಆರುನೂರವಳನೇ ಪೇಜ್ ಇಪ್ಪತ್ತೇಳನೇ ಲೈನಿನಲ್ಲಿದೆ ಸಾರ್

x x x

ಒಬ್ಬ—ಏನು ಶಾಸ್ತ್ರಿಗಳೇ! ನಿಮ್ಮ ಶಿಷ್ಯ ಚನ್ನಾಗಿ ಹಾರ್ಮೋನಿಯಂ ಬಾರಿಸುತ್ತಾನಲ್ಲಾ?

ಶಾಸ್ತ್ರಿ—ಹೂಂ! ಪುರಾಣಕ್ಕೇ! ಚೆನ್ನಾಗಿ ಬಾರ್ಸ! ಚನ್ನಾಗಿ ಬಾರ್ಸುತ್ತಿರೋತ್ತೀಲೀ ನನ್ನೆನ್ನೇಗೆ ಎರಡೇಟು ಕೊಟ್ಬಿಟ್ಟಿಂದ್ರೆ! ಒಳ್ಳೇ ಶಿಷ್ಯ ಕಂಡ್ರಿ!

ಸಂಗೀತ ಮೇಸ್ತ್ರು—ಶಂಕರಾ, ಕೃತಿಯ ಸ್ವರಗಳನ್ನು ಕೇಳು. ಹಾಡುತ್ತೇನೆ.

ಶಂಕರ. ಆದೀತು ಸರ್.

ಸಂ. ಮೇಸ್ತ್ರು—' ನಿಧಪ ಧಪಮಾ ಸರಿಸನಿ ಧಪಮಾ, ॥ ಸ ॥ " ನಿಮಮ ಧಪಧಪಮ ॥ ಸರೋಜಾಕ್ಷ॥ " ನಿಪ್ಪಪ ಧಪಾ ಸನಿಸನಿ ಪಸ್ಸಾ ನಿನ್ನೀ ಸನಿಪನಿ ಪಮಾ....

ಶಂಕರ—ಸಂಗೀತ! ಮರ್ಯ್ಯಾದಿಯಿಲ್ಲ!! ಮೇಸ್ತ್ರಂತೆ!!! ಹೊರಡಿ ಸಾರ್

ಸಂ. ಮೇಸ್ತ್ರು—(ತಬ್ಬಿಬ್ಬಾಗಿ) ಅದೇನೋ ಶಂಕರಾ?

ಶಂಕರ—ಏನಂತೆ! ಅಲ್ಲ ಸಾರ್! ಮೊದಲು ನೀಧಪ್ಪಾ ಅಂದಿರಿ, ಮಾತಾಡ್ಲಿಲ್ಲ ಆಮೇಲೆ ನಿಮ್ಮಮ್ಮಧಪ್ಪಂದಿರಿ. ಅದಕ್ಕೂ ಸುಮ್ಮನಿದ್ದೆ. ಕಡೆಗೆ ನಿಮ್ಮಪ್ಪಗೂ ಅದೇ ಟೈಟಲ್ ಬಂದದ್ದಲ್ಲದೆ ನಮ್ಮೆಲ್ಲರಿಗೂ ಶನಿಶನಿ ಅಂತೀರಲ್ಲಾ? ನೀವು ದಪ್ಪಲ್ವಾ? ನಿಮಗೆ ಶನಿಹಿಡಿಯೋಲ್ವಾ? ನನಗೆ ಹೇಳಿದ್ರೂ ಪರವಾಯಿಲ್ಲ. ನಮ್ಮಪ್ಪ ಅಮ್ಮಗೂ ಹೇಳ್ಬೇಕಾ? ನಿಮಗೂ ನಾ ಹಾಗಂದ್ರೆ ನೀವು ಕೇಳ್ತೀರಾಂಡೆ?

x x x

ಉಪಾಧ್ಯಾಯ—ವಿಕೃತ ಭೂತರೂಪಗಳು ಯಾವುವು?

ವಿದ್ಯಾರ್ಥಿ—ಭೂತ, ಪ್ರೇತ, ಪಿಶಾಚಿ, ಮುನಿ, ಮೋಹಿನಿ, ಡಾಕಿನಿ, ಶಾಕಿನಿ, ಬ್ರಹ್ಮರಾಕ್ಷಸ, ಭೇತಾಳ

ಉಪಾಧ್ಯಾಯ—ಸಾಕು, ಮುಚ್ಚು ಬಾಯಿ.

x x x

ಅಧ್ಯಾಪಕ—ಲೋ ಕರ್ಮಣಿ ಪ್ರಯೋಗವೆಂದರೇನೂ?

ವಿದ್ಯಾರ್ಥಿ—ಮದುವೆ ದಿನ ಕರಿಮಣಿ ತಾಳಿ ಕಟ್ಟುವುದೂಂತ ಸರ್.

x x x

ಆಕೆ—ಅಯ್ಯೋ ಕುತ್ತಿಗೆ ಹಾಯ್

ಮುದುಕಿ—ಅದ್ಯಾಕೋ? ಅವಳ ಕುತ್ತಿಗೆ ಬಿಡಬಾರ್ದೇನೋ? ಕೊಲ್ತೀಯೇನೋ ಮಗನೇ?

ಆತ—ಅಮ್ಮಾ ನೀನು ಯಾವಾಗ್ಲೂ ಅಪ್ಪನ ಮಾತು ಕೇಳ್ಬೇಕೂಂತ ಹೇಳುತ್ತಿದ್ದಿಯಾ. ನಿನ್ನೆ ಅಪ್ಪ ಹೇಳಿದ್ದ. ಪರರ ಹುಡುಗಿಯನ್ನು ನೋಡಬೇಡಾ, ನಿನ್ನ ಹೆಂಡತೀನ ಬಿಡಬೇಡಾ ಅಂತ,

ಆಕೆ—ಅಯ್ಯೋ! ಸತ್ತೆ.

ಆತ—ಲೇ ಕಣ್ಣೇಗಿಣ್ಣೇ ಅಡ್ಡೀಂದ್ರೆ ನೋಡ್ಕೊ! ಅಪ್ಪನ ಮಾತು.

ಮುದುಕಿ—ಹುಚ್ಚ! ಕೊಲ್ತೀಯೇನೋ. ಅಪ್ಪ ಹಾಗೆಹೇಳಿದ್ರೆ ಅವಳ ಕುತ್ತಿಗೆ ಹಿಡೀಬೇಕೇನೋ?

ಆತ—ಹಾಗಲ್ಲವಮ್ಮಾ! ಅದಕ್ಕೇನೇ ನೆರೆಮನೆಯ ವೆಂಕೂನ ಹೊಡದೋಡಿಸಿ ನನ್ನವಳನ್ನ ಹಿಡ್ಕೊಂಡದ್ದು.

x x x

ಟೀಚರ್—ಗ್ರಾಮ್ಯವೆಂದರೇನೋ?

ಹುಡುಗ—ನಾನು ಪಟ್ಟಣದವ, ಗ್ರಾಮ್ಯ ಗೊತ್ತಿಲ್ಲಸಾರ್.

x x

ವೆಂಕಟ್ರಾವ್ ಉದ್ಯಾವರ. (F. T.)

ಅಲ್ಪಾವಧಿ ಶಿಕ್ಷೆ

ಬರೇ ಅಲ್ಪಾವಧಿಯ ಶಿಕ್ಷೆಕೊಟ್ಟು ಹೆಚ್ಚಿನ ಜನರನ್ನು ಜೈಲಿಗೆ ಕಳುಹಿಸುವುದಕ್ಕೆ ಸರಕಾರವು ವಿರುದ್ಧವಿರುವುದು. ಆದುದರಿಂದ ಅದು ಅಲ್ಪಾವಧಿಶಿಕ್ಷೆ ಕೊಡುವುದು ಅನಪೇಕ್ಷಣೀಯವೆಂದೂ, ಕಾರಾಗೃಹಗಳಿಗೆ ಆದಷ್ಟು ಕಡಿಮೆ ಮಂದಿ ಹೋಗುವಂತಾಗಬೇಕೆಂದೂ ಮೆಜಿಸ್ಟ್ರೇಟರುಗಳಿಗೆಲ್ಲಾ ಸರ್ಕಿಲರ್ ಕೊಟ್ಟಿರುವುದೆಂದು ತಿಳಿದು ಬರುತ್ತದೆ. ಅಲ್ಪಾವಧಿ ಶಿಕ್ಷೆಯು ಅನಿವಾರ್ಯವಾದಲ್ಲಿ ಮೆಜಿಸ್ಟ್ರೇಟರು ಕೋರ್ಟು ಮುಗಿಯುವನಕ ಶಿಕ್ಷೆ ಕೊಡಬಹುದು ಕೂಡಲು ಶಕ್ತರಾಗಿದ್ದವರಿಗೆ ಮಾತ್ರ ಜುಲ್ಮಾನ ವಿಧಿಸಬೇಕು. ಸುಮ್ಮನೆ ಜುಲ್ಮಾನೆ ವಿಧಿಸಿ ಅದಕ್ಕಾಗಿಯೂ ಜೈಲಿಗೆ ಹೋಗುವಂತಾಗುವುದರಿಂದ ಫಲವಿಲ್ಲ. ಜುಲ್ಮಾನೆ ತೆರುವಂತೆ ಮಾಡುವ ರೀತಿಯ ಶಿಕ್ಷೆ ವಿಧಿಸಬೇಕೆಂದು ಸರಕಾರದ ಅಭಿಪ್ರಾಯವಿದೆ.

ಕಿರೀಟಧಾರಣೋತ್ಸವ

6ನೇ ಜೋರ್ಜರ ಕಿರೀಟಧಾರಣೋತ್ಸವವು ಬರುವ ಮೇ ತಾ. 11ರಲ್ಲು ಜರಗಲಿರುವುದಷ್ಟೆ. ಈ ಸಮಾರಂಭಕ್ಕೆ ಹೊರ ದೇಶಗಳಿಂದ ಕಾಲು ಮಿಲ್ಯ ಜನರು ಮತ್ತು ಬ್ರಿಟನಿನ ಬೇರೆಬೇರೆ ಭಾಗಗಳಿಂದ 2 ಮಿಲ್ಯ ಜನರು ಬರಬಹುದೆಂದು ನಿರೀಕ್ಷಿಸಲಾಗಿದೆ. ಈ ಸಂದರ್ಭದಲ್ಲಿ ಲಂಡನಿನಲ್ಲಿ ಉಳಕೊಳ್ಳಲು ಸ್ಥಳ ಸಿಗುವುದೇ ಅಸಾಧ್ಯವಾಗಿದೆ. ಇಷ್ಟರಲ್ಲೇ ಹೋಟೆಲುಗಳಲ್ಲಿರುವ ಜಾಗವೆಲ್ಲಾ ರಿಸರ್ವ್ ಮಾಡಲ್ಪಟ್ಟಿವೆ. ಸರಕಾರವು ಪ್ರೇಕ್ಷಕರಿಗೆ ನಿವಾಸದ ಏರ್ಪಾಡು ಮಾಡಲು, ವಿಶೇಷವಾಗಿ ಮೆರವಣಿಗೆಯ ರಸ್ತೆಯಲ್ಲಿ ನೆರೆಯುವ ಲಕ್ಷಗಟ್ಲೆ ಜನರಿಗೆ ನಾಕಷ್ಟು ಸ್ಥಳದ ಏರ್ಪಾಡು ಮಾಡಲು ಕಮಿಟಿಗಳನ್ನು ಸ್ಥಾಪಿಸಿರುತ್ತದೆ.

ಬಂಗಾಳದ ಮಂತ್ರಿಮಂಡಲ

ಕ್ಕೆ 6 ಮಂದಿ ಮುಸಲ್ಮಾನರು ಮತ್ತು 5 ಮಂದಿ ಹಿಂದುಗಳು ಆರಿಸಲ್ಪಟ್ಟಿರುವರು. ಮಿ. ಫಜ್ಲುಲ್ ಹಕ್ಕರು ಮುಖ್ಯ ಮಂತ್ರಿಗಳು. ಹಿಂದುಗಳಲ್ಲಿ ಇಬ್ಬರು ಹರಿಜನರು. ಮಿ. ಹಕ್ಕರು, ತಾನು ತನ್ನಿಂದ ಸಾಧ್ಯವಾದ ಮಟ್ಟಿಗೆ ನ್ಯಾಯ ಮಾಡಲೆತ್ನಿಸಿರುವೆನೆಂದೂ, ಹೊಸಮಂತ್ರಿಮಂಡಲದೊಡನೆ ಎಲ್ಲರೂ ಸಹಕರಿಸಿ ಸಹಾಯ ಮಾಡಬೇಕೆಂದೂ ಕೇಳಿಕೊಂಡಿರುವರು. ಕೆಲವೊಂದು ಪ್ರೆಸ್‌ಕಾನೂನುಗಳನ್ನು ತೆಗೆದುಹಾಕಲಾಗದಿದ್ದರೂ ಕೂಡಲೆ ತೆಗೆದುಹಾಕುವ ಅವಶ್ಯವಿದೆಯೆಂದೂ, ಈಗಣ ಮಹತ್ತಾದ ಸಮಸ್ಯೆಯೆಂದರೆ ಬಡಜನರ ಹೊಟ್ಟೆಪಾಡಿನದೆಂದೂ ಮಿ. ಫಜ್ಲುಲ್ ಹಕ್ಕರು ಅಭಿಪ್ರಾಯವಿತ್ತಿರುವರು.

ಗಂಡಸರನ್ನೇ ಕದ್ದೊಯ್ದರು!

ಮೊನ್ನಮೊನ್ನೆ ಬನ್ನುವಿನ ಬಳಿ ನಡೆದ ಕೆಲವು ಪುರುಷಾಪಹಾರಗಳು ಎಂಥವರನ್ನಾದರೂ ಮೂಗಿನ ಮೇಲ ಬೆರಳಿಟ್ಟುಕೊಳ್ಳುವಂತೆ ಮಾಡಿವೆ. ದಕ್ಕಿಬಜಾರ್ ಎಂಬಲ್ಲಿ ಕೆಲವು ಮಂದಿ ಪುಂಡರು ಬಂದು ಆಕಸ್ಮಾತ್ತಾಗಿ ನಾಲ್ಕು ಮಂದಿ ಹಿಂದೂ ಗಂಡಸರನ್ನೆತ್ತಿಕೊಂಡು ಹೋದರೆಂದು ತಿಳಿದು ಬಂದಿದೆ. ಈ ಪುಂಡರೆ ಪುನಃ ಬನ್ನುವಿನ ಬಳಿಯಿರುವ ಬಾರತ್ ಎಂಬಲ್ಲಿ ಒಬ್ಬ ಹಿಂದೂವನ್ನು ಕೊಂದು ಇನ್ನೊಬ್ಬನನ್ನು ಹಾರಿಸಿಕೊಂಡು ಹೋಗಿರುತ್ತಾರೆ. ಇದಕ್ಕೆ ಕಾರಣವೇ ಗೊತ್ತಿಲ್ಲ.

ಕರ್ಣಾಟಕ ಸಾಹಿತ್ಯಪರಿಷತ್ತು

ಇವರ ೪ನೇ ವಿಶೇಷ ಸಾಹಿತ್ಯೋತ್ಸವವು ಮೈಸೂರಿನ ಯುವರಾಜರಾದ ಶ್ರೀ. ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರರ ಅಧ್ಯಕ್ಷತೆಯಲ್ಲಿ ಮೇ ತಾ. ೨ರಿಂದ ೯ರ ವರೆಗೆ ಬೆಂಗಳೂರಿನಲ್ಲಿ ನಡೆಯಲಿರುವದು. ವಿಶೇಷೋಪನ್ಯಾಸಗಳು, ಗ್ರಂಥಪ್ರದರ್ಶನ, ಗಮಕಾಭ್ಯಾಸ, ಗಾನಸ್ಪರ್ಧೆ, ಕಂಠಪಾಠಸ್ಪರ್ಧೆ, ವಿಚಾರಗೋಷ್ಠಿ, ಸಭೆ ಸಮ್ಮೇಲನ, ಪರಿಷತ್ತಿನ ವಿಶೇಷಾಧಿವೇಶನ ಮೊದಲಾದ ಕಾರ್ಯಕ್ರಮಗಳಿರುವವು.

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ದರ	ಉಡುಪಿ ವರೆಗೆ
ರಾಶಿ ಅಕ್ಕಿ ...	3— 6	3—10	3— 0	3— 2
ಮುಕ್ಕತಿ ...	3— 8	4 4	3 – 4	3—14
ಗುಡ್ಡ ಸುಗ್ಗಿ ...	3—10	3 - 14	3 – 0	3— 2
ಬೂರ ಅವ್ವಲ್ ಬೆಳ್ತಿಗೆ ...	4— 0	4 — 4	4— 4	4— 8
ರಂಗೂನು ಬೆ. ಗೋ. ೧ಕ್ಕೆ	7— 0	7— 4	6—14	7— 8
ಗೋಧಿ ಗೋಣಿ ೧ಕ್ಕೆ ...	11— 0	13— 0	12—0	14— 0
ತೊಗರಿ ಗೋಣಿ ೧ಕ್ಕೆ ..	9— 8	12— 8	12— 8	13— 0
ಹುರುಳಿ ಗೋಣಿ ೧ಕ್ಕೆ ...	5 – 0	5 – 6	4— 0	5— 8
ಕಡಲೆ ಗೋಣಿ ೧ಕ್ಕೆ ...	8— 0	12— 8	8 - 8	8 - 12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17— 0
ಉದ್ದು ಗೋಣಿ ೧ಕ್ಕೆ ..	9— 0	9 — 8	9— 0	8— 8
ಹೆಸರು ಗೋಣಿ ೧ಕ್ಕೆ ...	7 —12	8— 0	10— 0	9— 8
ಊರುಬೆಲ್ಲ ಖಂಡಿ ೧ಕ್ಕೆ...	30— 0	32— 8	20— 0	30— 0
ಉಪ್ಪು ಗೋಣಿ ೧ಕ್ಕೆ ..	4 2	5— 4	5— 2	5— 4
ಕೊಬ್ರಿ ಖಂಡಿ ೧ಕ್ಕೆ ...	75— 0	84— 0	90— 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	26— 8	28 – 8	18—12	20— 0
ಎಳ್ಳಿಂಡಿ ಖಂಡಿ ೧ಕ್ಕೆ ...	26 — 4	27— 8	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	6 — 0	7— 0	6— 8	6—12
ಎಳ್ಳೆಣ್ಣೆ ಮಣ ೧ಕ್ಕೆ ..	7 — 0	. .	6— 0	6— 4
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	6 — 5	7 – 5	6— 8	6—12
ಮೋರಿಸ ಸಕ್ಕರೆ ಮ. ೧ಕ್ಕೆ	3 — 2	3— 4	2 - 14	2—15
ಮೆಣಸು ...	2— 8	5-- 0	3 – 1	3— 6
ಸಾಸಿವೆ ಮುಡಿ ೧ಕ್ಕೆ ..	5— 4	5- 8	5— 8	5—12
ಕೊತ್ತಂಬರಿ ಮುಡಿ ೧ಕ್ಕೆ	2— 8	3 – 0	2 — 8	3— 4
ಕಾಳುಮೆಣಸು ಖ ೧ಕ್ಕೆ..	100— 0	120 – 0	110– 0	120 – 0
ಗೇರುಬೀಜ ಮು ೧ಕ್ಕೆ ...	3 - 4	3 – 8	4 – 6	4— 8
ಕಬ್ಬಿಣ ಖಂಡಿ ೧ಕ್ಕೆ .	35— 0	37— 8	55— 0	60— 0
ತಾಂಬ್ರ ತಗಡು ಮ ೧ಕ್ಕೆ	12— 4	12— 8	17— 8	...
,, ಪಾತ್ರಗಳು ಮ ೧ಕ್ಕೆ	12 — 8	14— 0	18— 8	19— 0
ಚೀನಿ ಬೆಳ್ಳಿ ಸೇರು ೧ಕ್ಕೆ ..	13— 8	15— 0	13 –14	...
ಹಿತ್ತಾಳೆ ತಗಡು ಮ ೧ಕ್ಕೆ	10 — 0	10— 8	13 — 0	...
ಪವನು ೧ಕ್ಕೆ ...	22— 7	22— 8	22 —12	...
ಹುಣಸೆ ಹುಳಿ ಖಂಡಿ ೧ಕ್ಕೆ	40-- 0	45-- 0	45-- 0	50— 0
ನೇಟಿವ್ ಕಾಫಿ ಖಂಡಿ ೧ಕ್ಕೆ	170— 0	180 0	180 – 0	220— 0
ಫಿಬೇರಿ ಕಾಫಿ ಖಂಡಿ ೧ಕ್ಕೆ	175— 0	195— 0	210 — 0	220— 0
ಮಡಿಕೇರಿ ಏಲಕ್ಕಿ ...	50— 0	55— 0	70— 0	75— 0
ತುಪ್ಪ ಮಣ ೧ಕ್ಕೆ ...	17 — 0	18 — 0	14— 0	15— 0
ಏಲಕ್ಕಿ ಬೀಜ ಮಣ ೧ಕ್ಕೆ	80— 0	85 — 0	70— 0	80 – 0

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಡಿಸೆಂಬರ ದಲ್ಲಿ ೩ನೆಯ ವರುಷದ ೧ನೆಯ ಸಂಚಿಕೆಯು ಪ್ರಕಟವಾಗುವದು. ಅದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು.

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ.

ಇಳಿಸಿದ ಚಂದಾ ೧-೮-೦ (ಅಂಚವೆಚ್ಚ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦

ಮೈಸೂರು, ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು ಎಲ್ಲಾ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ.

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಜುಸ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,

ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು

ಕಿರಿಯರ ಪ್ರಪಂಚ

೧ ನಾಡಕಥೆ	೦	೨	೦
೨ ಮುಂದಿನ ದೇವರು	೦	೨	೦
೩ ಸ್ವತಂತ್ರ ಜೀವನೋಪಾಯ	೦	೨	೬
೪ ಕುಶ-ಲವ	೦	೪	೦
೫ ಸಂಶಯ ಪಿಶಾಚಿ	೦	೬	೦
೬ ಕಾವ್ಯಸಾಮ್ರಾಜ್ಯ	೦	೧೨	೦
೭ ಮಧುವನ	೧	೮	೦
೮ ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್, ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸ ಮೊದಲನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. 3—0—0 ಮಾತ್ರ. ವಿ. ಪಿ. ಹಾಸಲು ಬೇರೆ.

ಸರಸ್ವತಿ ಕಾರ್ಯಾಲಯ,

ಚಾಮರಾಜಪೇಟೆ, ಬೆಂಗಳೂರು ನಗರ

ದಿ ನ್ಯೂ ಗ್ಲಾಸ್ ಎಂಪೋರಿಯಮ್

ಫೋರ್ಟ್‌ಫೇನ್ ರೋಡ್. ಉಡುಪಿ

ನಮ್ಮಲ್ಲಿ ಎಲ್ಲಾ ತರದ ಗ್ಲಾಸ್‌ವೇರ್, ಎನಾಮಲ್‌ವೇರ್ ಸ್ಟೋರ್‌ಲಿನ್‌ವೇರ್, ಲೇಂಪ್ಸ್ ಲಾಟೀನು, ಪೆಟ್ರೊಮೆಕ್ಸ್ ಇತ್ಯಾದಿ ಎಲ್ಲಾ ತರದ ಸಾಮಾಗ್ರಿಗಳು ಮತ್ತು ಹೊಟೇಲು ಹೊಸ್ಟೆಲುಗಳಿಗೆ ಉಪಯುಕ್ತವಾದ 'ಟೀಸೆಟ್' ಕಪ್ಸ್ ಸಾಸರ್, ಪ್ಲೇಟ್ಸ್, ಥರ್ಮಸ್ ಫ್ಲಾಸ್ಕ್, ಜಗ್, ಟ್ರೇಪ್ಲವರ್ ವೇಜ್, ಮತ್ತು ಪ್ರಜಂಟೇಶನ್ ಬಗ್ಗೆ ನಾನಾತರದ ಚಲೋ ಫೇನ್ಸಿ, ಗ್ಲಾಸ್‌ವೇರ್ ಸಾಮಾನುಗಳೂ ಸದಾ ಕಡಿಮೆ ಬೆಲೆಗೆ ಸಿಕ್ಕುವುವ

ನಾವು ಹೊಸತಾಗಿ ಎಲ್ಲಾ ಸಾಮಾನುಗಳನ್ನು ಡ್ಯರೆಕ್ಟ್ ತರಿಸಿರುವುದರಿಂದ ಯಾವತ್ತೂ ಸಾಮಾನುಗಳು ಕಡಿಮೆ ಬೆಲೆಗೆ ಕೊಡಲು ಅನುಕೂಲವಿದೆ. ಕಾರಣ ಗ್ರಾಹಕರು ಸ್ವತಹಾ ನಮ್ಮ 'ಶೋರೂಮ್'ನ್ನು ಸಂದರ್ಶಿಸಿ ಮಾಲನ್ನು, ದರಗಳನ್ನೂ ಪರಿಶೀಲಿಸಿ ಕೊಂಡುಕೊಳ್ಳಬೇಕಾಗಿ ವಿನಂತಿ.

THE GENERAL STORES, UDIPI

The only Reliable House for quality goods of every description

---

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮಧ್ವವನೇಂದ್ರ ಮಹೌಷಧಾಲಯ,

ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ— ಗುಡಪಿಪ್ಪಲಿ (ಲೀವರ್ ರೋಗಕ್ಕೆ) — ಗರ್ಭಪಾಲ (ಗರ್ಭಕೋಲೆ, ಗರ್ಭಸ್ರಾವಕ್ಕೆ) — ಚಂದ್ರಮುಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ. **ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು!** ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಹೆಚ್ಚಿನ ಮಾಹಿತಿಗೂ ಸೂಚೀಪತ್ರಿಕೆಗೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರಾಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| ಸುಮತಿಬಾಯಿ,

ಬಿ ಎ. ಎಲ್. ಟಿ., ಎಫ್. ಪಿ. ಎಮ್. ಎಸ್. ಭಿಷಗ್ರತ್ನ, ರಿಜಿಸ್ಟ್ರಾರ್-

The Coondapoor Bank, Ltd.,

Head Office:- **Coondapoor.** Branch Office.-**Brahmavar.**

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ.ಶೆ 4,
ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ 4
6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ 5%,
1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ 5½%
2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ಸಾಲಕೊಡಲಾಗುತ್ತವೆ ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರೆಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. N. Sheshagiri Rao, ಸಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,

ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮಾಸ] [ಪತ್ರಿಕೆ.

ವಿಶ್ವವಾಣಿ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮಾಸಲು

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	...	...	...	ರೂ. ೩—೮—೦
,, ,, (೬ ತಿಂಗಳಿಗೆ)	...	...	...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)				ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚಾರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ನೂರು ಇನಾಮುಗಳು.

THIS MAN
WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ದೇಶಿ ಮಾಲುಗಳ ಕೆಟಲಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆಸೀರೆಗಳೂ, ಖಣ, ಮಡಿ ಕದಪಾಮ್ನಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಳಿ, ನಾಮರ್ದಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ, ಈಗಿನ ಹೊಸನಮೂನೆಯ ಪದಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವರೆಗೂ ಸಾದಾ 16ಮೊಳದ ಶೀರೆ 1ಕ್ಕೆ ರೂ. 16 ರಿಂದ ರೂ. ೩೫ರ ವರೆಗೆ. ಅರೆ ಕಡಮೆ 16ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ 16. ಖಣ 1ಕ್ಕೆ ರೂ 1½ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂ. ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ

WANTED

Educated, accomplished and beautiful Shivalli Brahmin Brides between 14 and 16 to marry educated youths between 23 and 25 of the same cast, well settled in life. Also a Shivalli Brahmin bridegroom to marry a girl of nearly 14. No personal interview granted. Apply with photo and horoscope to

PS
C/o Navayuga, *UDIPI*

USE

Suvasini Agarbathies

(REGD.)

SRI BHARATHA VASTU MANDIRA, UDIPI

Consult
for
Neat Printing
Wall Posters
Calendars
Colour Printing
Book Work
Job Work

MANIPAL POWER PRESS

(Proprietors: SUPPLY AGENCY, LTD.)

WANTED
Compositors
in
Telugu, Malalayalam & Tamil
Please apply to:
The Managing Director,
SUPPLY AGENCY, Ltd., UDIPI

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H SHETTY at "NAVAYUGA" OFFICE, UDIPI.

Registered No. M. 3618

೨೦

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc
APPLY TO THE MANAGER

ವಾಚಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟ
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯರ ಪ್ರಪಂಚ, ಉಡುಪಿ

VOL XVI-NO 32

8- 4-1937

ಮೂಡ ಬಾನಿನ ಕಣ್ಣು ಕೆಂಗಿಡಿಯ್ಗಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬]　　ಉಡುಪಿ, ಗುರುವಾರ ೮ ಎಪ್ರಿಲ್, ೧೯೩೭　　[ಸಂಚಿಕೆ ೩೨

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office
"MUKUNDA NIVAS"
UDIPI, (S. I.)

BRANCHES:

1 BANGALORE CITY	16 HUBLI
2 BELGAUM	17 GADAG
3 BYADGI	18 KARWAR
4 BELLARY	19 KUMTA
5 ADONI	20 ANKOLA
6 HOSPET	21 HONAVAR
7 TALIPARAMBA	22 BHATKAL
8 UPPINANGADI	23 BRAHMAVAR
9 KASARGODE	24 HUNGARCUTTA
10 PAYYANUR	25 SIRSI
11 KANHANGAD	26 SAGAR
12 KARKALA	27 COONDAPOOR
13 NANDYAL	28 UDIPI
14 PRODATTUR	29 MANGALORE
15 TADPATRI	30 CANNANORE

Beg to announce
The Opening of their Branch at
BOMBAY
on *Friday, the 23rd April 1937*
IN
"Premchand House"
AT
Sir Pherozshah Mehta Road.

Paid up Capital	Rs. 3,45,580
Reserves	„ 1,92,390
Deposits exceed	„ 22 lakhs
Total Working Funds exceed	„ 40 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ—　　ಕೆ. ವಿ. ರಾವ್, ಮೆನೇಜರ್.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಿಮು ರೀವಸಾತಿ ನೇಕಡ ೬ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ ಬ್ಯಾಂಕ್ ನೇಕಡ ೩½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja,	ಯಂ. ಆರ್. ಪೂಂಜ,
President & Manager,	ಪ್ರೆಸಿಡೆಂಟ್ ಮತ್ತು ಮನೇಜರ್.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ. ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ — ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ¼ ದಲ್ಲಿ) ಹೊರಡುವುದು!

ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೇರಾ ಪಿಲ್ಸ್	**ಭೈರವ ಮಾತ್ರೆಗಳು**
ಕೋಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ. ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ

ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ವರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ

ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. ಕ್ರಯ ಡಬ್ಬಿ **1ಕ್ಕೆ 1-8-0.**

ವಿಳಾಸ— **ಭವಾನಿ ಅಂಡ್ ಕಂಪೆನಿ,**

ಪೋಸ್ಟು ಬಾಕ್ಸ್ ನಂ. 237, ಜೆ. ಟಿ. ಮದರಾಸ್.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — ## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಫಿಕೇಟ ಮ. ರಾ ಎ. ಎಮ್ ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

[ವಿ. ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ **ಸೇವನೆಯಿಂದ** ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. **ಕೂಡಲೇ ಗರ್ಭಧಾರಣ ಬಂದಾಗುವುದು.** ತದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು॥ ಕೇಳವಾ ಮೊಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಸಮಾಚಾರ ಸಂಗ್ರಹ :

ಬೆಂಕಿಯ ಹಾವಳಿಯಿಂದ ರೂ. ಒಂದು ಲಕ್ಷ ನಷ್ಟ, ವಿಶ್ವಭಾರತದಲ್ಲಿ ಚೀನಿಯ ಸದನ, ಗಾಂಧಿಯವರಿಗೆ ನೋಬೆಲ್ ಇನಾಮು.

ಬೆಂಕಿಯ ಹಾವಳಿಯಿಂದ ರೂ. 1ಲಕ್ಷ ನಷ್ಟ.

ಕಳದ ಮಾರ್ಚಿ ತಿಂಗಳ ತಾ. 31ರಲ್ಲು ಬರ್ಮದ ಬೊಗಾಲೆ ಎಂಬಲ್ಲಿ ಆಕಸ್ಮಾತ್ತಾಗಿ ಬೆಂಕಿಯೆದ್ದು 3 ದೇವಸ್ಥಾನಗಳೂ 5 ಒಳ್ಳೆಯ ಕಟ್ಟಡಗಳೂ, 52 ಮನೆಗಳೂ ಸುಟ್ಟುಹೋಗಿರುವವು. ಈ ಬೆಂಕಿಯೆದ್ದುದು ಪಟ್ಟಣದ ಮಧ್ಯ ಭಾಗದಲ್ಲಿ. 5ಘಂಟೆಯ ಮೇಲೆ ಬೆಂಕಿಯನ್ನು ನೊಂದಿಸಲಾಯಿತು. ಇಷ್ಟರಲ್ಲಿ ಪಟ್ಟಣದ 2 ಸಾಲು ಕಟ್ಟಡಗಳು ಸುಟ್ಟು ಹೋಗಿ ಇನ್ನೊಂದು ಸಾಲು ಅರೆವಾಸಿ ಧ್ವಂಸವಾಗಿತ್ತು. ಒಟ್ಟು ರೂ. 10ಲಕ್ಷದಷ್ಟರ ನಷ್ಟವಾಗಬಹುದೆಂದು ನಂಬಲಾಗಿದೆ.

5ಲಕ್ಷ ಹೊಟ್ಟು ರೂಪಾಯಿಗಳು

ಸಂಯುಕ್ತಪ್ರಾಂತದ ಬರಬಾಂಕಿ ಎಂಬಲ್ಲಿ ಹೊಟ್ಟು ರೂಪಾಯಿಗಳನ್ನು ತಯಾರಿಸುತ್ತಿದ್ದ ಒಂದು ಪಂಗಡವನ್ನು ಪೋಲೀಸರು ಕೈದುಮಾಡಿರುವರು. ಈ ಪಂಗಡದವರು 50,000 ಹೊಟ್ಟು ನಾಣ್ಯಗಳನ್ನು ಚಲಾವಣೆಗೆ ತಂದಿರುವರು. ಈ ನಾಣ್ಯಗಳನ್ನು ತಯಾರಿಸುವ ಯಂತ್ರವೂ, ಕೆಲವು ಹೊಟ್ಟು ನಾಣ್ಯಗಳೂ ದೊರೆತಿವೆ. ಪೋಲೀಸರು 5ಮಂದಿಯನ್ನು ದಸ್ತಗಿರಿಮಾಡಿದ್ದಾರೆ. ಈ ಪಂಗಡದವರು ಕಳದ 16 ವರ್ಷಗಳಿಂದ ಹೊಟ್ಟು ನಾಣ್ಯಗಳನ್ನು ತಯಾರುಮಾಡುತ್ತಿದ್ದು ಸುಮಾರು 5 ಲಕ್ಷ ರೂ. ಗಳನ್ನು ಚಲಾವಣೆಗೆ ತಂದಿರುವರೆಂದು ತಿಳಿದುಬರುತ್ತದೆ. ತಜ್ಞರ ಅಭಿಪ್ರಾಯದಂತೆ ಈಗ ಸಂಯುಕ್ತಪ್ರಾಂತದಲ್ಲೇ ಒಂದು ಲಕ್ಷಕ್ಕಿಂತಲೂ ಮಿಕ್ಕಿದ ಹೊಟ್ಟು ರೂಪಾಯಿ ನಾಣ್ಯಗಳು ಚಲಾವಣೆಯಲ್ಲಿವೆಯಂತೆ.

ವಿಶ್ವ ಭಾರತಿಯಲ್ಲಿ ಚೀನೀಯ ಸದನ

ಕವಿ ರವೀಂದ್ರರ ಶಾಂತಿನಿಕೇತನದ ವಿಶ್ವ ಭಾರತಿಯಲ್ಲಿ ಚೀನೀಯ ಸದನವೊಂದನ್ನು ತೆರೆಯುವ ಸಮಾರಂಭವನ್ನು ಪಂಡಿತ ಜವಾಹರಲಾಲ ನೆಹರುಗಳು ಇದೇ ತಾ. 14ನೇ ಯುಗಾದಿಯ ದಿನ ನಡಿಸಲಿರುವರು. ಈ ಸದನವು ಚೀನ ಮತ್ತು ಹಿಂದು ದೇಶಗಳ ಸಾಂಸ್ಕೃತಿಕ ಸಂಬಂಧವನ್ನು ಬೆಳಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿರುವುದು. ಇದಕ್ಕೆ ಸಹಾಯಮಾಡಿದವರು ಕವಿ ರವೀಂದ್ರರ ಮಿತ್ರರಾದ ಚೀನದ ಮುಖ್ಯ ಮಂತ್ರಿ ಮಾರ್ಶಲ್ ಚಿಯಾಂಗ್ ಕೈಶೆಕ್ಕರು, ಪ್ರೆಸಿಡೆಂಟರಾದ ಡಾಕ್ಟರ್ ಟ್ಯಾಚಿ. ತಾವೋರವರೇ ಮೊದಲಾದವರು. ಚೀನದಲ್ಲಿ ಚೀನೀ ಹಿಂದೀ ಸಂಸ್ಕೃತಿಕ ಸಂಘವೊಂದು ಸ್ಥಾಪಿಸಲ್ಪಟ್ಟು ಈ ಸಂಘದವರು 2ವರ್ಷಗಳ ಮೊದಲು ವಿಶ್ವ ಭಾರತಿಗೆ ದೊಡ್ಡದಾದೊಂದು ಪುಸ್ತಕ ಭಂಡಾರವನ್ನೂ, ಅದರ ವೆಚ್ಚಕ್ಕೆ ಬೇಕಾದಷ್ಟು ಹಣವನ್ನೂ ಕೊಟ್ಟಿದ್ದರು. ಪ್ರೊಫೆಸರ್ ಚಾನ್. ಯನ್ ಶಾನ್ ಎಂಬವರು ಈ ಚೀನೀಯ ಸದನದ ಮೇಲ್ವಿಚಾರಕರಾಗಿ ಕೆಲಸ ಮಾಡುವರು.

ಗಾಂಧಿಯವರಿಗೆ ನೋಬೆಲ್ ಇನಾಮು?

ಲೋಕದಲ್ಲಿ ಶಾಂತಿಸ್ಥಾಪನೆಗಾಗಿ ಹೆಚ್ಚಿನ ಕೆಲಸಮಾಡಿದವರಿಗೆ ಕೊಡಲ್ಪಡುವ ನೋಬೆಲ್ ಇನಾಮನ್ನು 1937ನೇ ವರ್ಷದಲ್ಲಿ ಮಹಾತ್ಮ ಗಾಂಧಿಯವರಿಗೆ ಕೊಡುವ ಆಲೋಚನೆ ನಡೆದಿದೆ. ಈ ಇನಾಮನ್ನು ಕೊಡಲು ಒಂದು ಕಮಿಟಿಯು ಸ್ಥಾಪಿಸಲ್ಪಟ್ಟಿರುವುದು. ಈ ಕಮಿಟಿಯವರಿಗೆ ಹೆಸರನ್ನು ಸೂಚಿಸುವ ಹಕ್ಕುಳ್ಳ ಮಹನೀಯರೊಬ್ಬರು ಮಹಾತ್ಮ ಗಾಂಧಿಯವರ ಹೆಸರನ್ನು ಸೂಚಿಸಲೊಪ್ಪಿರುವರೆಂದು ತಿಳಿದುಬರುತ್ತದೆ. ಈ ಇನಾಮಿನ ಐವೇಜು ಸುಮಾರು ರೂ 1ಲಕ್ಷವಿರುವುದು.

ಬರೋಡದಲ್ಲಿ ತೀವ್ರ ಬರಗಾಲ

ಬರೋಡ ಸಂಸ್ಥಾನದ ಮೇಹಾನಾ ತಾಲೂಕಿನಲ್ಲಿ ತೀವ್ರ ಬರಗಾಲವುಂಟಾಗಿರುವುದರಿಂದ ಸರಕಾರವು ರೈತರಿಗೆ ರೂ. 7 ಲಕ್ಷ ಕಂದಾಯವನ್ನು ಮಾಫಿಬಿಟ್ಟು ರೂ. 26 ಲಕ್ಷವನ್ನು ಪ್ರಕೃತ ವಸೂಲುಮಾಡುವುದನ್ನು ನಿಲ್ಲಿಸಿರುವುದು. ಸರಕಾರವು ದವಸಧಾನ್ಯಗಳು ಅಗ್ಗವಾಗಿರುವ ಅಂಗಡಿಗಳನ್ನು ತೆರೆದಿರುವುದು. ಹಲವು ಸಾರ್ವಜನಿಕ ಕೆಲಸಗಳನ್ನು ಕೈಕೊಂಡು ಜನರಿಗೆ ಉದ್ಯೋಗ ಕೊಡುತ್ತಿರುವುದು.

ರೂ 5ಕ್ಕೆ ಸಹೋದರನ ವಿಕ್ರಯ

ದೋಹದಿನ ಬರಗಾಲ ಪೀಡಿತ ಪ್ರದೇಶದಲ್ಲಿ ಸಂಚೀದಲಾಲನೆಂಬ ಭಿಲ್ಲನೊಬ್ಬನು ಹೊಟ್ಟೆಪಾಡಿನ ಗತಿಯೇ ತೋರದೆ ಉಪವಾಸವಿದ್ದು ಕಡೆಗೆ ನಿರಾಶಾಭರದಿಂದ ತನ್ನ 5ವರ್ಷದ ತಮ್ಮನನ್ನು ರೂ. 5ಕ್ಕೆ ಒಬ್ಬ ಹೆಂಗಸಿಗೆ ಮಾರುವ ನಿಶ್ಚಯಮಾಡಿ ವಿಕ್ರಯ ಕರಾರು ಮಾಡಲು ಸ್ಟಾಂಪುಸಹ ತೆಗೆದುಕೊಂಡಿದ್ದನು. ಇಷ್ಟರಲ್ಲಿ ಈ ಸಂಗತಿಯು ಅಲ್ಲಿಯ ತಹಸಿಲ್ದಾರರಿಗೆ ತಿಳಿಸಲ್ಪಟ್ಟು ಅವರು ಎರಡೂ ಕಡೆಯವರ ಹೇಳಿಕೆಗಳನ್ನು ತೆಗೆದುಕೊಂಡು ವಿಕ್ರಯ ನಿಲ್ಲಿಸಿರುವರು.

ರಶ್ಯದ ಸ್ತ್ರೀಯರು

ಈಗ ಪುರುಷರಂತೆಯೇ ಎಲ್ಲಾ ಉದ್ಯೋಗಗಳನ್ನೂ ಕೈಕೊಂಡಿರುವರು. ಸೋವಿಯೆಟ್ ಸರಕಾರದ ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ 2,908,000 ಮಂದಿ ಸ್ತ್ರೀ ಕೆಲಸಗಾರರಿರುವರು ಇವರಲ್ಲಿ 15,338 ಮಂದಿ ವೈಜ್ಞಾನಿಕರಾಗಿ ಕೆಲಸಮಾಡುತ್ತಿರುವರು. ವಿಶ್ವ ವಿದ್ಯಾಲಯಗಳಲ್ಲಿ ಮತ್ತು ಉದ್ಯೋಗ ಶಾಲೆಗಳಲ್ಲಿ 5,75,975 ಮಂದಿ ಇರುವರು, ರಶ್ಯದ ಅರೆವಾಸಿ ಮಂದಿ ಡಾಕ್ಟರರು ಸ್ತ್ರೀಯರು. ಅಲ್ಲಿ ಒಟ್ಟು 42,353 ಮಂದಿ ಸ್ತ್ರೀ ಡಾಕ್ಟರರಿರುವರು. ರಾಜಕೀಯದಲ್ಲಿಯೂ ಹಲವು ಮಂದಿ ಭಾಗಿಯಾಗಿ 49ಮಂದಿ ಪಾರ್ಲಿಮೆಂಟ್ ಮೆಂಬರರಿರುವರು.

ಲಕ್ನೋ ಮುನಿಸಿಪಲ್ ಆಫೀಸಿನ ಮೇಲೆ ರಾಷ್ಟ್ರೀಯ ಧ್ವಜ

ಲಕ್ನೋ ಮುನಿಸಿಪಲ್ ಆಫೀಸಿನ ಮೇಲೆ ಮೊದಲು ಮಹಾತ್ಮ ಗಾಂಧಿಯವರು ರಾಷ್ಟ್ರೀಯ ಧ್ವಜವೇರಿಸಿದುದನ್ನು ಡಿಪ್ಯುಟಿ ಕಮಿಶನರರ ಹುಕುಮಿನಂತೆ ತೆಗೆಯಲಾಗಿತ್ತು. ಈಗ ಈ ಮುನಿಸಿಪಾಲಿಟಿಯವರು ಡಿಪ್ಯುಟಿ ಕಮಿಶನರರ ಹುಕುಮನ್ನು ಉಲ್ಲಂಘಿಸಿ ಪುನಹ ರಾಷ್ಟ್ರೀಯ ಧ್ವಜವೇರಿಸುವ ನಿರ್ಧಾರಮಾಡಿ ಸದ್ರಿ ಸಮಾರಂಭವನ್ನು ಇದೇ ತಾ 11ರಲ್ಲು ನಡೆಸಲು ಶ್ರೀ ಪಂಡಿತ ಗೋವಿಂದ ವಲ್ಲಭ ಪಂತರನ್ನು ತಂತಿ ಮೂಲಕ ಕೇಳಿಕೊಂಡಿರುವರು.

ಎಸೆಂಬ್ಲಿಯಲ್ಲಿ ರಾಷ್ಟ್ರೀಯ ಧ್ವಜ

ಇದೇ ತಾ. 1ರಲ್ಲು ಹೊಸ ಸುಧಾರಣಾ ಆಕ್ಟಿನ ನಿಷೇಧಾರ್ಥವಾಗಿ ಡಿಲ್ಲಿ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರಾರೂ ಸಭೆಗೆ ಹೋಗಲಿಲ್ಲ. ಸಭೆಯಾದರೋ ಕಟ್ಟಕಡೆಗೆ ಕೋರಮ್ ಇಲ್ಲದೆ ಮುಂದುವರಿಸಲ್ಪಟ್ಟಿತು. ತಾ. 2ರಲ್ಲು ಕಾಂಗ್ರೆಸ್ ಪಕ್ಷೀಯರು ಎಸೆಂಬ್ಲಿ ಸಭಾಸದನಕ್ಕೆ ಹೋಗುವಾಗ ರಾಷ್ಟ್ರೀಯ ಧ್ವಜಗಳನ್ನು ಹಿಡಕೊಂಡು ಹೋಗಿ ತಮ್ಮ ಮುಂದಿನ ಡೆಸ್ಕುಗಳ ಮೇಲೆ ಕೂಡಾ ಅವನ್ನು ಪ್ರದರ್ಶಿಸಿದರು. ಆಗ ಹೋಮ್ ಮೆಂಬರರಾದ ಸರ್ ಫ್ರೇಂಕ್ ನ್ಯೊಯ್ಸರು ಆ ಕುರಿತು, ಆಕ್ಷೇಪವೆತ್ತಿದರು. ಪ್ರೆಸಿಡೆಂಟರು ಅವರ ಆಕ್ಷೇಪವನ್ನು ಸಮರ್ಥಿಸಿ ಕಾಂಗ್ರೆಸು ಮೆಂಬರರು ಡೆಸ್ಕುಗಳ ಮೇಲೆ ರಾಷ್ಟ್ರೀಯ ಧ್ವಜಗಳನ್ನು ಪ್ರದರ್ಶಿಸಕೂಡದೆಂದರು. ಆಗ ಕಾಂಗ್ರೆಸ್ ಮೆಂಬರರೆಲ್ಲಾ ತಮ್ಮ ನಾಯಕರ ಅನುಜ್ಞೆಯಂತೆ ಧ್ವಜಗಳನ್ನು ತಮ್ಮ ಉಡುಗೆಗಳಿಗೆ ಸಿಕ್ಕಿಸಿಕೊಂಡರು. ಇದಕ್ಕೆ ಸರಕಾರಕ್ಕೆ ಯಾವ ಆಕ್ಷೇಪವೆತ್ತಲೂ ಅಸಾಧ್ಯವಾಯಿತು.

ಡಿಲ್ಲಿ ಪೋಲೀಸರ ವರ್ತನೆಯ ನಿಷೇಧ

ಎಪ್ರಿಲ್ ತಾ. 1ರಲ್ಲು ಹೊಸ ರಾಜ್ಯಾಂಗ ರಚನೆಯ ನಿಷೇಧ ದಿನಾಚರಣೆಯು ಡಿಲ್ಲಿಯಲ್ಲಿ ಆಚರಿಸಲ್ಪಟ್ಟಾಗ ಡಿಲ್ಲಿಯ ಪೋಲೀಸರು ಕೆಲವರು ಕಾಂಗ್ರೆಸ್ ಕೆಲಸಗಾರರೊಬ್ಬರ ಮೋಟಾರ್‌ಕಾರಿನಿಂದ ರಾಷ್ಟ್ರೀಯ ಧ್ವಜವನ್ನು ಕಿತ್ತು ತೆಗೆದು ಅದರ ಕೋಲನ್ನು ಮುರಿದು ನೆಲಕ್ಕೆ ಹಾಕಿ ತುಳಿದುದನ್ನು ಮತ್ತು ದಿವಂಗತ ಶ್ರದ್ಧಾನಂದಜೀಯವರ ಮೊಮ್ಮಗಳು ಶ್ರೀಮತಿ ಸತ್ಯವತಿ ದೇವಿಯವರ ಭುಜದ ಮೇಲೆ ಪೋಲೀಸ್ ಅಸಿಸ್ಟಾಂಟ್ ಸುಪರಿಂಟೆಂಡೆಂಟ್ ಮತ್ತು ಟ್ರೆಫಿಕ್ ಇನ್ಸ್‌ಪೆಕ್ಟರರು ಕೈಹಾಕಿದುದನ್ನು ತೀವ್ರವಾಗಿ ನಿಷೇಧಿಸಿ ಮಿ. ಆಸಫಾಲಿಯವರು ಇದೇ ತಾ. 2ರಲ್ಲಿ ಎಸೆಂಬ್ಲಿಯಲ್ಲಿ ತಂದ ಎಜರ್ನ್‌ಮೆಂಟ್ ಸೂಚನೆಯು 61 ಅನುಕೂಲ ಮತ್ತು 40 ಪ್ರತಿಕೂಲ ಮತಗಳಿಂದ ಮಂಜೂರಾಗಿರುವುದು.

ವಾಯವ್ಯ ಗಡಿನಾಡಿನ ಗಲಾಟೆ ಪಂಗಡಿಗರಿಗೆ ಮತ್ತು ಸೈನಿಕರಿಗೆ ತೀವ್ರ ಹೋರಾಟೆ

ಮಾರ್ಚಿ ತಾ. 29ರಲ್ಲಿ ವಾಯವ್ಯ ಗಡಿನಾಡಿನ ವಜೀರಿಸ್ಥಾನದಲ್ಲಿ ಡಪ್ಲಿಲ್ ಎಂಬ ಸ್ಥಳದ ಬಳಿ ಇಂಡಿಯಾ ಸರಕಾರದ ಸೈನಿಕರಿಗೂ ವಜೀರಿಸ್ಥಾನದ ಪಂಗಡಿಗರಿಗೂ ತೀವ್ರ ಕದನವಾಗಿ ಇಕ್ಕಡೆಯಲ್ಲಿಯೂ ಹೆಚ್ಚಿನ ಪ್ರಾಣಹಾನಿಯಾಗಿರುವುದೆಂದು ತಿಳಿದುಬರುತ್ತದೆ ಹಿಂದೀ ಸೇನೆಯಲ್ಲಿ ಲೆಫ್ಟಿನೆಂಟ್ ಮಾರ್ಕ್ಸ್, ಕೆಪ್ಟನ್ ಬೆತ್ಯೂನ್, ಸುಬೇದಾರ್ ಸಿಂಗ್‌ಬೀರ್ ಥಾಪ, ಜಮಾದಾರ್ ಥಾಗ್ ಬಹದೂರು ಥಾಪೆ ಎಂಬ ಸೈನ್ಯಾಧಿಕಾರಿಗಳಲ್ಲದೆ ಇತರ ಸೈನಿಕರು 19 ಮಂದಿ ಕೊಲ್ಲಲ್ಪಟ್ಟಿರುವರು. ಲೆಫ್ಟಿನೆಂಟ್ ನಿಕೊಲ್ಸನ್, ಜಮಾದಾರ್ ಹರಕ್ ಬಹದೂರು ಗುರುಂಗ್ ಮತ್ತು ಇತರ 38 ಮಂದಿ ಸೈನಿಕರು ಗಾಯಗೊಂಡಿರುವರು. ವಜೀರಿಸ್ಥಾನದ ಪಂಗಡಿಗರು ಮೊದಲು 300 ಮಂದಿ ಇದ್ದು ಆ ಮೇಲೆ 700 ಮಂದಿ ಸೇರಿದ್ದರು. ಇವರೆಲ್ಲಾ ಇಪ್ಪಿಯ ಫಕೀರರ ಕಡೆಯವರು. ಇದೇ ತಾ 2ರಲ್ಲು ಪರಿಸ್ಥಿತಿಯು ಶಾಂತವಾಗಿರುವುದು. ಇಪ್ಪಿಯ ಫಕೀರರಿಗೂ ಸರಕಾರಕ್ಕೂ ಸಂಧಿ ಪ್ರಸ್ತಾಪ ನಡೆಯುತ್ತಿರುವಾಗ ಮಾರ್ಚಿ ತಾ. 29ರ ಹೋರಾಟವು ಆಶ್ಚರ್ಯಕರವಿರುವುದು.

ಮಿ. ಮೆಹರಲ್ಲಿಯವರ ದಸ್ತಗಿರಿ

ಬೊಂಬಾಯಿ ಕೋರ್ಪರೇಶನಿನ ಮೆಂಬರರೂ, ಕಾಂಗ್ರೆಸ್ ಸೋಸಿಯಲಿಸ್ಟ ಪಕ್ಷದ ಪ್ರಮುಖ ಮೆಂಬರರಲ್ಲೊಬ್ಬರೂ ಆದ ಮಿ ಯೂಸುಫ್ ಮೆಹರಲ್ಲಿಯವರೂ ಬೊಂಬಾಯಿಯ ವಿದ್ಯಾರ್ಥಿ ಸಂಘದ 5 ಮಂದಿ ಮೆಂಬರರೂ ಇದೇ ತಾ. 2ನೇ ಸಂಜೆ ಬೊಂಬಾಯಿಯ ಮುನಿಸಿಪಲ್ ಹೋಲಿನ ಎದುರುಗಡೆ, ವಾಹನ ಸಂಚಾರಕ್ಕೆ ತೊಡಕುಂಟುಮಾಡಿ ಅಕ್ರಮವಾಗಿ ನಡೆದರೆಂಬ ಆರೋಪದಿಂದ ಕೈದುಮಾಡಲ್ಪಟ್ಟಿರುವರು. ಮಂತ್ರಿಪದವಿ ಸ್ವೀಕರಿಸಿರುವ ಶ್ರೀ ಜಮ್ನಾದಾಸ್ ಮೇಥಾರವರ ಕುರಿತು ವಿರೋಧ ಪ್ರದರ್ಶನಮಾಡುವುದೇ ಮಿ. ಮೆಹರಲ್ಲಿಯವರ ಮತ್ತು ಅವರ ಅನುಯಾಯಿಗಳ ಉದ್ದೇಶವಿದ್ದಿತ್ತು. ಅವರು ಬೊಂಬಾಯಿ ಕೋರ್ಪರೇಶನಿನ ಅಧ್ಯಕ್ಷತನದಿಂದ ಮಿ. ಮೇಥಾರವರು ನಿವೃತ್ತಿಹೊಂದುವ ಸಂದರ್ಭದಲ್ಲಿ ಅವರಿಗೆ ಕೊಡಲ್ಪಟ್ಟ ವಿದಾಯ ಸತ್ಕಾರದ ಸಂದರ್ಭದಲ್ಲಿ ಈ ವಿರೋಧ ಪ್ರದರ್ಶನ ನಡಿಸಿರುವರು.

ಮುಸಲ್ಮಾನ ಸಿಖ್ಖ ಜಗಳ

ಪಂಜಾಬಿನ ಅಟ್ಟೊಕ್ ಜಿಲ್ಲೆಯ ಕೋಟ್ ಫತೇಖಾದ್ ಎಂಬಲ್ಲಿ ಎಪ್ರಿಲ್ ತಾ. 1ರಲ್ಲಿ ಸಿಖ್ಖರು ಮತ್ತು ಮುಸಲ್ಮಾನರೊಳಗೆ ಜಗಳವಾಗಿ ಪೋಲೀಸರು ಗುಂಡು ಹಾರಿಸಬೇಕಾಗಿ ಬಂದಿರುವರು. 13ಮಂದಿ ಸಿಖ್ಖರಿಗೆ ಹೆಚ್ಚಿನ ಪೆಟ್ಟಾಗಿರುವುದು. ಇವರಲ್ಲಿ ಒಬ್ಬನು ಕೊಲ್ಲಲ್ಪಟ್ಟಿರುವನು. ಇನ್ನಾರು ಮಂದಿ ಕಂಟಕಾವಸ್ಥೆಯಲ್ಲಿರುವರು. ಮುಸಲ್ಮಾನರಲ್ಲಿ 10 ಮಂದಿಗೆ ಸ್ವಲ್ಪ ಸ್ವಲ್ಪ ಗಾಯವಾಗಿದೆ. ಕೆಲಮಂದಿ ಪೋಲೀಸರಿಗೂ ಪೆಟ್ಟಾಗಿರುವುದು; ಸಿಖ್ಖರು ತಮ್ಮ ಗುರುದ್ವಾರದಲ್ಲಿ ಬಹಳ ರಾತ್ರಿಯ ವರೆಗೆ ಕೀರ್ತನೆ ನಡಿಸುತ್ತಿರಲು

(ಮುಂದೆ ನೋಡಿರಿ)

ರಸ್ಯದ ನೂತನ ನಿರ್ಮಾಣ

ಯಾಂತ್ರಿಕ ಮಂತ್ರ-ತಂತ್ರ ವಾದವೇ ರಸ್ಯದ ಧರ್ಮದ ಪತನಕ್ಕೆ ಕಾರಣವಾಯಿತು

[ರಸ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನ ವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು ರಸ್ಯದ ಇಂದಿನ ಪರಿಸ್ಥಿತಿ ಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡುವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ, ವಿಮರ್ಶಕ ದೃಷ್ಟಿಯಿಂದ 'ಮಾನವ ಸಮಾಜದ ಮೂಲೋತ್ಪಾಟನ' **(Humanity uprooted)** ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.]

—ಸಂ. ನ.

ರಸ್ಯದ ಪೂರ್ವಾಚಾರನಿಷ್ಠ ದೇವಾಲಯದ ಕೇವಲ ಯಾಂತ್ರಿಕ ಮಂತ್ರತಂತ್ರವಾದವೇ ಅದರ ಪತನಕ್ಕೆ ಕಾರಣವಾಯಿತು. ಕ್ರಾಂತಿಯ ಧಾಳಿಯನ್ನು ತಡೆಗಟ್ಟುವಷ್ಟರ ಆರ್ಥಿಕ ಪ್ರಭಾವವು ಅದಕ್ಕಿಲ್ಲದಾಯಿತು ಅದರ ಆಧಾರಸ್ತಂಭವೆಂತಿದ್ದ ಒಕ್ಕಲಿಗನಿಂದ ಅದು ತನ್ನ ಆಪತ್ಕಾಲದಲ್ಲಿ ಯಾವ ಸಹಾಯವನ್ನೂ ಪಡೆಯದಾಯಿತು. ಯಾಕೆಂದರೆ ಅದು ತನ್ನ ಲೌಕಿಕ ಬಲದಿಂದ ಆತನಲ್ಲಿ ಭೀತಿಯನ್ನುಂಟುಮಾಡಿ ಮಂತ್ರತಂತ್ರಾದಿಗಳ ಪ್ರದರ್ಶನದಿಂದ ಮುಗ್ಧಗೊಳಿಸಿದ್ದಿತೇ ಹೊರತು, ನಿಕಟ ಬಾಂಧವ್ಯದ, ಆತ್ಮ ಸಂಬಂಧದ ನಿರ್ಭಯತೆಯನ್ನು, ಸ್ಫೂರ್ತಿಯನ್ನು ಆತನಲ್ಲೆಬ್ಬಿಸಲಿಲ್ಲ ಆದುದರಿಂದ ಒಕ್ಕಲಿಗನು ತನ್ನ ಸುಖ ಸುರಕ್ಷಿತತೆಯ ದೃಷ್ಟಿಯುಳ್ಳವನಾಗಿ ಧರ್ಮದೇವರುಗಳನ್ನು ಅವುಗಳ ಪಾಡಿಗೇನೇ ಬಿಟ್ಟುಬಿಟ್ಟನು. ದೇವಾಲಯಗಳಿಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟನು ಇದರಿಂದ ಅವನಿಗೇನೂ ಅನಿಷ್ಟ ಉಂಟಾಗಲಿಲ್ಲ. ಅವನು ಯಥಾ ಪ್ರಕಾರ ಉಂಡು ತಿಂದು ದುಡಿದು, ಮಲಗಿ ಸೌಖ್ಯವಾಗಿದ್ದನು. ದೇವಾಲಯಕ್ಕೆ ಹೋಗಲಿಲ್ಲೆಂದು ಅವನಲ್ಲೇನೂ ಪಶ್ಚಾತ್ತಾಪವುಂಟಾಗಲಿಲ್ಲ ಅವನ ಜೀವನ ಪ್ರವಾಹವು, ಯಾವ ತರದ ಬದಲಾವಣೆಯೂ ಇಲ್ಲದೆ ಹಿಂದಿನಂತೆಯೇ ಅಂದರೆ ಅವನು ದೇವಾಲಯಕ್ಕೆ ಹೋಗಿ ಪೂಜೆಪ್ರಾರ್ಥನಾದಿಗಳನ್ನು ನಡಿಸುತ್ತಿದ್ದಾಗಿನಂತೆಯೇ ಸರಾಗವಾಗಿ ಹರಿಯುತ್ತಿತ್ತು. ಮೊದಲಿನಂತೆ ಅವನು ದೇವಾಲಯಕ್ಕೂ ಅದರ ಅಧಿಕಾರಿಗಳಿಗೂ ಹಣ, ದವಸ ಧಾನ್ಯ, ರೊಟ್ಟಿ, ಮೇಣದಬತ್ತಿ, ವಸ್ತ್ರಾದಿಗಳನ್ನು ವಂತಿಕೆ ಕಾಣಿಕೆಯಾಗಿ ಕೊಡಬೇಕಾದುದೇನೂ ಇಲ್ಲ ಅವನ ಭೌತಿಕ ಸುಖವು ಮೊದಲಿಗಿಂತಲೂ ಹೆಚ್ಚಿನಂತಾಯಿತು. ಹಾಗಾದರೆ ಅವನೇಕೆ ಧರ್ಮ ದೇವರುಗಳಿಗೆ ಶರಣು ಹೊಡೆಯಬೇಕು?

ಪವಿತ್ರ ರಸ್ಯ, ರಸ್ಯದ ಒಕ್ಕಲಿಗನ ಕ್ರೈಸ್ತ ಸಮಾನ ಜೀವನ, ಆತನ ಅಚಲ ಧರ್ಮನಿಷ್ಠೆ, ಅಸಾಧಾರಣ ತಾಳ್ಮೆ ಸಹನೆಯೆಂಬುದೆಲ್ಲಾ ಕೆಲವುಮಂದಿ ಗ್ರಂಥಕರ್ತರ ಮನಸ್ಸಿನ ಮಂಡಿಗೆ. ಅವನು ಹೊರಗೆ ಬಹಳ ಧರ್ಮನಿಷ್ಠ ಮತ್ತು ಭಕ್ತಿವಂತನಾಗಿ ಕಾಣುತ್ತಿದ್ದರೂ ಅವನ ಹೃದಯವು ಯಾವ ತರದ ಮಾರ್ಪಾಟನ್ನೂ ಹೊಂದಿರಲಿಲ್ಲ ತಾನು ಆಚರಿಸುವ ಧರ್ಮ, ವಿಶ್ವಾಸಗಳ ಅರ್ಥವೇನೆಂದು ಅವನಿಗೆ ತಿಳಿದೇ ಇರಲಿಲ್ಲ. ಅವನು ಅಂತರಿಕವಾಗಿ ಕೇವಲ ಭೌತಿಕವಾದಿಯೇ ಆಗಿದ್ದನು. ರಸ್ಯದ ದೇವಾಲಯವು ಕೂಡಾ ಕೇವಲ ಬಾಹ್ಯ ವಿಧಿನಿಯಮಗಳೇ ಸರ್ವಸ್ವವೆಂದು ಭಾವಿಸಿ ಒಕ್ಕಲಿಗನ ಆತ್ಮಿಕೋನ್ನತಿಗೆ ಒಂದಿಷ್ಟು ಗಮನಕೊಟ್ಟಿರಲಿಲ್ಲ.

ಹಳ್ಳಿಯ ಸಾರ್ವಜನಿಕ ಸಭೆಯೊಂದರಲ್ಲಿ ಹಲವು ಸಹಸ್ರಮಂದಿ ಒಕ್ಕಲಿಗರು ನೆರೆದು ಬಂದಿದ್ದರು. "ನಿಮ್ಮಲ್ಲಿ ಯಾರ ಮನೆಯಲ್ಲಾದರೂ 'ಬೈಬಲ್' ಇದೆಯೋ" ಎಂದು ನಾನು ಕೇಳಿದೆ. ಒಬ್ಬನೇನಾದರೂ ಕೈಯೆತ್ತಲಿಲ್ಲ. "ಮೊದಲು ನಿಮ್ಮಲ್ಲಿ 'ಬೈಬಲ್' ಇದ್ದಿತೇ ಎಂದು ಪ್ರಶ್ನಿಸಿದಾಗ ಬರೇ ಆರೇಳು ಮಂದಿ ಮಾತ್ರ ಕೈ ಎತ್ತಿದರು. "ಅವನ್ನೀಗ ಏನುಮಾಡಿರುವಿರಿ? ಮಾರಿರುವಿರೇ?" ಎಂದು ನಾನು ಕೇಳಿದಾಗ, ಜನಗಳಿಂದಿನಲ್ಲೊಬ್ಬನು " ಇಲ್ಲ, ಹಾಗೇನಿಲ್ಲ ರಸ್ಯದ ಅಂತಃಕಲಹದ ಸಮಯದಲ್ಲಿ ನಮಗೆ ಪಟ್ಟಣಗಳಿಂದ ಏನನ್ನೂ ಸಿಗರೆಟ್ ಪೇಪರನ್ನು ಕೂಡಾ ಪಡೆಯಲು ಸಾಧ್ಯವಾಗಲಿಲ್ಲ. ಆಗ ನಾವು ಬೈಬಲನ್ನೇ ಹರಿದು ಹೊಗೆಯೆಳೆದೆವು" ಎಂದು ಉತ್ತರವಿತ್ತನು ಈ ಕುರಿತು ನಾನು ಮತ್ತೂ ವಿಚಾರಿಸಿದಾಗ, ಅನೇಕ ಹಳ್ಳಿಗಳವರು ತಮ್ಮ ಬೈಬಲುಗಳನ್ನು ಸಿಗರೆಟ್ ಪೇಪರಾಗಿ ಉಪಯೋಗಿಸಿದ್ದರೆಂಬುದು ಸ್ಪಷ್ಟವಾಯಿತು. ಇನ್ನೊಮ್ಮೆ ನಾನೊಂದು ಹಳ್ಳಿಯ ಮಾರ್ಗವಾಗಿ ಹೋಗುತ್ತಿದ್ದಾಗ, ಮಹತ್ತಾದೊಂದು ಇಟ್ಟಿಗೆಯ ಕಟ್ಟಡವು ಕೆತ್ತು ಹಾಕಲ್ಪಡುವಂತೆ ತೋರುತ್ತಿತ್ತು. ಅದರ ಟಿನ್ನಿನ ಮಾಡು, ಬಾಗಿಲು ಕಿಟಕಿಗಳೆಲ್ಲಾ ತೆಗೆಯಲ್ಪಟ್ಟಿದ್ದುವು ಮೇಲಿನ ಹಲವು ಪದರು ಇಟ್ಟಿಗೆ ಕೂಡಾ ಕೀಳಲ್ಪಟ್ಟಿತ್ತು ಅದು ಸಂಜೆಯ ಸಮಯವಾಗಿತ್ತು. ಪೋಲೀಸನೊಬ್ಬನು ಬಂದೂಕು ಹಿಡಕೊಂಡು ಕಟ್ಟಡವನ್ನು ಕಾಯುತ್ತಿದ್ದನು. ಅದು ಕ್ರಾಂತಿಗಿಂತ ಸ್ವಲ್ಪ ಸಮಯದ ಮೊದಲು ಕಟ್ಟಲ್ಪಟ್ಟ ದೇವಾಲಯವಾಗಿತ್ತು. ಅದಕ್ಕಾರೂ ಬರುವವರಿಲ್ಲದ ಕಾರಣ ಮುಚ್ಚಬೇಕಾಯಿತು. ಅದನ್ನು ಕೂಡಲೆ ಆ ಹಳ್ಳಿಯ ಒಕ್ಕಲಿಗರು ಕಿತ್ತು ಅದರ ಸಾಮಾನುಗಳನ್ನು ತಮ್ಮ ಉಪಯೋಗಕ್ಕಾಗಿ ಒಯ್ಯಲಾರಂಭಿಸಿದರು. ದೇವಾಲಯಗಳು ಮುಚ್ಚಲ್ಪಟ್ಟಿರುವ ಇತರ ಹಳ್ಳಿಗಳಿಗೂ ನಾನು ಹೋಗಿ ನೋಡಿದಾಗ, ಒಕ್ಕಲಿಗರು ಅವುಗಳನ್ನೆಲ್ಲಾ ಕಿತ್ತು ತಮಗೆಬೇಕಾದ ಸಾಮಾನುಗಳನ್ನು ಒಯ್ಯಲಾರಂಭಿಸಿದ್ದರು. ಸ್ಥಳೀಯ ಸೋವಿಯಟ್ ಸಂಘದವರು ಈ ದೇವಾಲಯಗಳನ್ನು ಕಾಯಲು ಸಶಸ್ತ್ರ ಪೋಲೀಸರನ್ನು ನಿಲ್ಲಿಸಿದಾಗ ಮಾತ್ರ ಈ ಕೊಳ್ಳೆಯು ನಿಲ್ಲಿಸಲ್ಪಟ್ಟಿತು. ಕ್ರಾಂತಿಯ ಸಂದರ್ಭದಲ್ಲಿ ಕ್ರೈಸ್ತಪಾದ್ರಿ ಸನ್ಯಾಸಿಗಳೆಲ್ಲಾ ಬಿಟ್ಟೋಡಿದಾಗ ಎಷ್ಟು ಸನ್ಯಾಸಾಶ್ರಮ ಮತ್ತು ದೇವಾಲಯಗಳನ್ನು ಒಕ್ಕಲಿಗರು ಸುಲಿಯಲಿಲ್ಲ! ಆ ಮೇಲೆ ಸೋವಿಯೆಟ್ ಸರಕಾರವು ಬಂದೋಬಸ್ತನ್ನಿಟ್ಟಮೇಲೆ ಮಾತ್ರ ಈ ಸುಲಿಗೆಯು ತಡೆಗಟ್ಟಲ್ಪಟ್ಟಿತು. ಇನ್ನೊಮ್ಮೆ ನಾನು ದೂರದ ಹಳ್ಳಿಯೊಂದಕ್ಕೆ ಹೋಗುತ್ತಿದ್ದಾಗ, ಗಾಡಿಯವನು ರಸ್ತೆಯ ಸಂದೊಂದರಲ್ಲಿ ತನ್ನ ಕುದುರೆಗೆ ನೀರು ಕುಡಿಸಲು ಗಾಡಿನಿಲ್ಲಿಸಿದನು. ನೀರಿನ ಮರಿಗೆಯು ದೊಡ್ಡ ಮತ್ತು ನಾಜೂಕಾದ ಶ್ವೇತ ಶಿಲಾಹಲಿಗೆಯ ಮೇಲೆ ಇಡಲ್ಪಟ್ಟಿತ್ತು. ಅದನ್ನು ಪರೀಕ್ಷಿಸಿದಾಗ ಘೋರಿಯ ಕಲ್ಲೆಂದು ತಿಳಿದು ಬಂತು ಯಾರೋ ಒಬ್ಬ ದೊಡ್ಡ ಜಮೀನ್ದಾರನ ಘೋರಿಯ ಕಲ್ಲನ್ನು ಒಕ್ಕಲಿಗರು ಯಾವ ಭಾವನೆಯೂ ಇಲ್ಲದ ಎಳೆತಂದು ನೀರಿನ ಮರಿಗೆಯ ಅಡಿಗಲ್ಲಾಗಿ ಉಪಯೋಗಿಸಿರಬೇಕು. ಇನ್ನೊಂದು ಸಂದರ್ಭದಲ್ಲಿ, ಪ್ರಾಯಸಂದ ಒಕ್ಕಲಿಗನೊಬ್ಬನು ಆತನ ಕಣಜದಂಗಳವನ್ನು ನನಗೆ ತೋರಿಸುತ್ತಿದ್ದಾಗ, ಎರಡು ದೊಡ್ಡ ತೂತುಗಳನ್ನು ಶ್ವೇತಶಿಲೆಯ ಹಲಿಗೆಗಳಿಂದ ಮುಚ್ಚಿರುವುದನ್ನು ಕಂಡು ಅವೆಲ್ಲಿ ಸಿಕ್ಕಿದುವೆಂದು ಕೇಳಿದನು. ಅದನ್ನು ಆವನ ಹುಡುಗರು ಮನೆ ಬಿಟ್ಟು ಪರದೇಶಕ್ಕೆ ಓಡಿ ಹೋಗಿರುವ ಜಮೀನುದಾರನೊಬ್ಬನ ಖಾಸಗಿ ಸ್ಮಶಾನದಿಂದ ತಂದು ಹಾಕಿರುವರೆಂದು ಆತನೆಂದನು ಘೋರಿಯ ಕಲ್ಲನ್ನು ಈ ರೀತಿ ಉಪಯೋಗಿಸುವುದು ಪಾಪವಲ್ಲವೇ ಎಂದುನಾನುಬಿರುನುಡಿದೆ. ಆಗಲೆ ಒಕ್ಕಲಿಗನು "ಅದು ಪಾಪವಿದ್ದಿರಬಹುದು. ಆದರೆ ಅದನ್ನು ಮಾಡಿದವರು ನನ್ನ ಹುಡುಗರು. ರಸ್ಯದ ಹುಡುಗರು ಪಾಪ ಪುಣ್ಯವನ್ನು ನಂಬುವುದೇ ಇಲ್ಲ." ಎಂದನು

ಇಂತಹ ಅನೇಕ ವಿದ್ಯಮಾನಗಳು, ಕ್ರೈಸ್ತ ಧರ್ಮ ಮತ್ತು ಪೂರ್ವಾಚಾರವಾದಿ ದೇವಾಲಯದ ಕುರಿತು ರಸ್ಯದ ಒಕ್ಕಲಿಗನಿಗೆ ಅದೆಷ್ಟು ದೃಢವಾದ ಶ್ರದ್ಧೆ ಮತ್ತು ಪೂಜ್ಯಭಾವವಿದ್ದಿತೆಂಬುದನ್ನು ಸಿದ್ಧಪಡಿಸುವವು. ರಸ್ಯದ ಕೆಲವುಮಂದಿ ಗ್ರಂಥಕರ್ತರು ಚಿತ್ರಿಸಿರುವಂತೆ, ರಸ್ಯದ ಒಕ್ಕಲಿಗನು ಕ್ರೈಸ್ತ ಧರ್ಮದ ಕುರಿತು ಅಷ್ಟೊಂದು ಪವಿತ್ರ ಭಾವವುಳ್ಳವನಾಗಿದ್ದರೆ, ಬೈಬಲನ್ನು ಬತ್ತಿಸೇದುವ ಕಾಗದವಾಗಿ ಉಪಯೋಗಿಸಲೆದೆಗೊಳ್ಳುತ್ತಿದ್ದನೇ? ರಸ್ಯದ ದೇವಾಲಯದ ಕುರಿತು ಅಷ್ಟೊಂದು ಭಕ್ತಿ ವಿಶ್ವಾಸವುಳ್ಳವನಿದ್ದರೆ ಸ್ಮಶಾನಗಳ ಘೋರಿ ಕಲ್ಲುಗಳನ್ನು ನೀರಮರಿಗೆಯ ಅಡಿಗಲ್ಲಾಗಿಯಾಗಲಿ, ಕಣಜದಂಗಳದ ತೂತುಮುಚ್ಚುವುದಕ್ಕಾಗಲಿ, ಉಪಯೋಗಿಸುತ್ತಿದ್ದನೇ? ಮುಚ್ಚಲ್ಪಟ್ಟಿರುವ ದೇವಾಲಯವನ್ನೊಡೆದು ಅವುಗಳ ಸಾಮಾನುಗಳನ್ನು ತನ್ನ ಮನೆಗಾಗಿ ಉಪಯೋಗಿಸುವಷ್ಟರ ಧೈರ್ಯವು ಅವನಿಗೆ ಬರುತ್ತಿತ್ತೇ?

ಒಕ್ಕಲಿಗರು ಕೆಲವುವೇಳೆ ಮಾಡಿದಂತೆ, ಕೊಲೆ ಕಳವು ದರೋಡೆಗಳಲ್ಲಿ ಜಯವಾಗುವಂತೆ ಮಾಡಬೇಕೆಂದು ದೇವರನ್ನು ಪ್ರಾರ್ಥಿಸುತ್ತಿದ್ದನೇ? ರಸ್ಯದ ಸುಪ್ರಸಿದ್ಧ ದೇವಾಲಯಗಳ ಪವಿತ್ರ ಗರ್ಭಗುಡಿಗಳ ಚಿನ್ನಾಭರಣ ತೆಗೆಯುವದನ್ನು ಅವನು ಅಷ್ಟೊಂದು ಅಲಕ್ಷ್ಯದಿಂದ ಸಹಿಸಿಕೊಳ್ಳುತ್ತಿದ್ದನೇ? (ಮುಂದುವರಿಯುವುದು)

ತಿರಸ್ಕೃತ ಪತಿಯ ಬೇಡಿಕೆ

ಲೇಖಕ: ಸುಬ್ಬಣ್ಣ ಹೆಗ್ಡೆ
ಬನ್ನಾಡಿ ಶಾಂಭವಿ ಹಾಯರ್ ಎಲಿಮೆಂಟರಿ ಶಾಲೆ ಕೋಟ.

ಅಂದು ನಿನ್ನ ತಂದೆ ತಾಯಿ |
ತಂದು ನಿನ್ನ ನನ್ನ ಕರದಿ |
ಹೊಂದಿಸಿದರು ಮರೆತೆಯೇನು
ಮುಂದಗಾಮಿನಿ? ||
ಬಂದ ಬಂಧುಬಳಗ ಹರಸಿ |
ತಂದು ಭಾಮಿನಿ ||
ಚಂದದಗ್ನಿಯೆದಿರು ನೀನು |
ನಿಂದೆ ಕಾಮಿನಿ ||
ಸಂದ ವಿಭವ ನೆನೆದು ಮೋಹ |
ಹೊಂದು ಮೋಹಿನಿ || ೧ ||

ಉರಿಯುತಿದ್ದ ಅಗ್ನಿಸಾಕ್ಷಿ ||
ನೆರೆದ ಬಂಧು ಬಳಗ ಸಾಕ್ಷಿ! |
ಹರಸಿದಂಥ ದ್ವಿಜರು ಸಾಕ್ಷಿ !
ಮುಡದಿತನಕಿದೊ ||
ಧರವೆ ಮರವೆ ಪತಿಯನೆನ್ನ |
ಜರೆದು ನುಡಿವುದೊ? ||
ಜರದು ಎದೆಯ ಕ್ರೂರತನದೆ
ಇರಿಯುತಿರುವುದೊ? ||
ಇರಿದು ಮೋಹ ಕುಡಿಯ ಹುಟ್ಟಿ |
ಹರಿಸುತಿರುವುದೊ? || ೨ ||

ಮುಡಿದು ಮುಡಿದು ಮುಗಡವಾಂತೆ |
ಪಡಿನೆ ನಿನಗೆ ಹರುಷ ಕಾಂತೆ |
ಸಡಿಸು ನೇಹಗೊಳ್ಳು ಬೀರು
ಪ್ರೇಮ ಕಿರಣವಾ ||
ಬಿಡಿಸು ಮನದ ಬೇಸರವನು |
ಬಡಿಸು ಮೋದವಾ ||
ನುಡಿಯ ಸುಧೆಯ ಸವಿಸಿತೋರು |
ಮುಡದಿ ಪ್ರೇಮವಾ ||
ಬಡಿವ ಎದೆಯ ತಂತಿಗಳಲಿ |
ನುಡಿಸು ನೇಹವಾ || ೩ ||

ರಮಣಿ ನಿನ್ನ ವರಿಸಿದೆನಗೆ |
ಗಮನಕೊಡದೆ ಪ್ರಣಯ ವಿಡದೆ |
ಗಮಿಸುತಿರುವುದೇನು |
ಹಾಳು ಮುನಿಸು ನಿನ್ನದೂ ||
ಶಮೆಯ ವಹಿಸು ಸರಸವಿರಿಸು |
ಕ್ಷಮಿಸು ಕಾಮಿಸು ||
ವಿಮಲ ಮಮತೆಯಿಂದ ಮನದ |
ಭ್ರಮೆಯ ನೀಗಿಸು ||
ಭ್ರಮಿತ ಹೃದಯ ತಳಮಳದ |
ತುಮುಲವಡಗಿಸು || ೪ ||

ಆರುತಿಹುದು ಪ್ರೀತಿ ದೀಪ |
ಏರುತಿಹುದು ಮನದ ತಾಪ |
ಮೀರುತಿಹುದು ಮೇರೆ ನೋಹ
ತೋರು ಕರುಣೆಯ |
ಧಾರೆಯಾಗಿ ಸುರಿವ ಕಣ್ಣ |
ನೀರನೊರಸಿಯಾ ,
ನೀರನೊರಸಿ ಚುಂಬಿಸುತಲಿ |
ನೀರೆ ಸ್ಪುರಿಸಿಯಾ ||
ನೀರೆ ಸ್ಪುರಿಸಿ ಮುದದೊಳೊಮ್ಮೆ
"ನೀರ"ನನ್ನಯಾ? || ೫ ||

ಸ್ಪೈನಿನ ಯುದ್ಧದ ಪರಿಸ್ಥಿತಿ:

ವಿಮಾನ ಧಾಳಿಯ ಪೈಶಾಚಿಕ ಅತ್ಯಾಚಾರ, ಸ್ಪೈನಿಶ್ ಸರಕಾರದ ವಿಜಯ

ಮಾರ್ಚಿ ತಾ. ೩೦ರಲ್ಲು ಸ್ಪೈನಿಶ್ ಸರಕಾರದ ಯುದ್ಧನಾವೆಗಳು ಬಂಡಾಯಗಾರರ ಅಧೀನವಿರುವ ಬೆಲಿಯಾರಿಕ್ಸ್, ಮೆಜೋರಕನ್ ಮತ್ತು ಐದೀಜ ಬಂದರುಗಳಿಗೆ ಗುಂಡೆಸೆದು ಹಲವು ಸೇನಾ ಕಟ್ಟಡಗಳಿಗೆ ಹಾವಳಿಯಾಗಿರುವುದು. ಮೇದ್ರಿದಿನ ಉತ್ತರದಲ್ಲ ಸರಕಾರದ ಕಡೆಯ ಸೇನೆಯು ಮಿಬಲ್ರಿಯೊ ಎಂಬ ಹಳ್ಳಿಯನ್ನು ವಶಮಾಡಿಕೊಂಡು ಒಟ್ಟು ೧೦ ಮೈಲು ಮುಂದೊತ್ತಿರುವುದು. ಇದರಿಂದ ಬಂಡಾಯಗಾರರು ವಶಪಡಿಸಿಕೊಳ್ಳಲು ಪ್ರಬಲ ಯತ್ನ ನಡಿಸುತ್ತಿದ್ದ ಅಲ್ಮಿಡೆನಿನ ಅಮೂಲ್ಯವಾದ ಪಾದರಸಗನಿಗಳಿಗೆ ಅಪಾಯ ತಪ್ಪಿರುವುದು. ಆದರೆ ಬಂಡಾಯಗಾರರ ಸೇನಾನಾಯಕರು, ಈ ವರ್ತಮಾನವನ್ನು ಅಲ್ಲಗಳೆದು ಮೇದ್ರಿದಿನ ರಣರಂಗಗಳಲ್ಲಿ ತಾವೇ ಜಯಶೀಲರಾಗಿರುವೆವೆಂದು ಪ್ರಕಟಿಸಿರುವರು. ಆರ್ಗಾಂಡ ಎಂಬ ಸ್ಥಳದ ದಕ್ಷಿಣದಲ್ಲಿ ಹಲವು ಮೈಲು ಸ್ಥಳದ ಮೇಲೆ ಸರಕಾರದ ಕಡೆಯವರು ಬೇಕೆಂದು ನದಿಯ ನೀರು ಬಿಟ್ಟು ಮುಳುಗಿಸಿದುದರಿಂದ ಅಲ್ಲಿಂದ ಬಂಡಾಯಗಾರಸೇನೆಯು ಉತ್ತರ ಸ್ಥಳಕ್ಕೆ ಹೋಗಬೇಕಾಗಿ ಮೇದ್ರಿಡ್ ವೆಲೆನ್ಸಿಯಾರಸ್ತೆಯ ಭಾಗದಲ್ಲ ಹೋರಾಟವೇ ನಡೆಯುವಂತಾಗಿದೆ. ಈ ರಸ್ತೆಯನ್ನು ಕಡಿಯಲು ಬಂಡಾಯಗಾರರು ಪ್ರಬಲ ಯತ್ನ ಮಾಡಿದ್ದರು.

ಬಂಡಾಯಗಾರರ ವಿರುದ್ಧ ಸಂಚು

ಸ್ಪೈನಿನ ಬಂಡಾಯಗಾರ ಸೇನಾನಾಯಕರ ವಿರೋಧವಾಗಿ ಒಳಸಂಚು ನಡಿಸಿದರೆಂಬ ಸಂಶಯದಿಂದ ೨೦ ಮಂದಿ ಇಟೆಲಿಯಾನ ಕಾರ್ಜನೀಯರ್ ಮತ್ತು ಹಲವು ಮಂದಿ ಸಾರ್ಜಂಟರು, ಕೋರ್ಪೊರಲರು ಗುಂಡುಹಾಕಿ ಕೊಲ್ಲಲ್ಪಟ್ಟಿರುವರೆಂದು ಮರಾಗದಿಂದ ಸುದ್ದಿ ಬಂದಿದೆ. ಈ ಒಳಸಂಚು ನಡಿಸಿದವರು ಇಟೆಲಿಯಾನರಲ್ಲಿ ಸ್ಪನಿರರೇ ಎಂದೂ, ಅವರನ್ನೆಲ್ಲ ಗುಂಡುಹಾಕಿ ಕೊಲ್ಲಲಾಗಿದೆಯೆಂದೂ ಬಂಡಾಯಗಾರರ ಕಡೆಯ ಸುದ್ದಿ.

ಗೊಡಲಜಾರ ರಣರಂಗದಲ್ಲಿ ಇಟೆಲಿಯಾನ ಸೇನೆಯ ದೊಡ್ಡ ಅಪಜಯದ ವಿದ್ಯಮಾನಗಳನ್ನು ಲಂಡನಿನ ಟೆಲಿಗ್ರಾಫ್ ಪತ್ರಿಕೆಯ ಪ್ರತಿನಿಧಿಯು ಸ್ವತಃ ಹೋಗಿ ಕಂಡು ಈ ರೀತಿ ವಿವರಿಸಿರುವನು. ಈ ರಣರಂಗದಲ್ಲಿ ಇನ್ನು ಕೆಲಸಮಯದನಕ ದೊಡ್ಡ ಸಮರವು ನಿಲ್ಲಿಸಲ್ಪಡುವಂತಾಗಿರುವುದು. ಇಟೆಲಿಯಾನರು ದೊಡ್ಡ ಅಪಜಯ ಪಡೆದು ಗುಡ್ಡಪ್ರದೇಶದಲ್ಲಿ ಬಿಟ್ಟು ಹೋಗಿರುವ ಯುದ್ಧಸಾಮುಗ್ರಿ, ಪೋಷಾಕು ಮೊದಲಾದುವನ್ನು ಸಂಗ್ರಹಿಸಲು ಹಲವು ಲೋರಿಗಳು ಮತ್ತು ನೂರಾರು ಸೈನಿಕರು ಉಪಯೋಗಿಸಲ್ಪಟ್ಟಿರುವರು. ಯೋವಾ ಎಂಬಲ್ಲಿ 10,000 ಜತೆ ಬೂಟ್ಸಿಗಳು ಸಿಕ್ಕಿರುವವು. ಮೇದ್ರಿಡ್ ಸರಗೋಸ ರಸ್ತೆಯಲ್ಲಿ 1000 ಕಂಬಳಿಗಳು ದೊರೆತಿರುವವು. ಇಟೆಲಿಯಾನರ ಅನೇಕ ಲೋರಿಗಳು ಈಗ ಸರಕಾರದ ಕಡೆಯಲ್ಲಿ ಕೆಲಸ ಮಾಡುತ್ತಿರುವವು. ಅನೇಕ ಮಂದಿ ಸ್ಪೈನಿಶ್ ಸರಕಾರದ ಸೈನಿಕರು ಇಟೆಲಿಯಾನ ಪೋಷಾಕುಗಳನ್ನು ಧರಿಸಿಕೊಂಡಿರುವರು ನೂರಾರು ಶವಗಳು ಹೂಳಲ್ಪಟ್ಟಿರುವವು ಆದರೆ ಇನ್ನೂ ಶವಗಳು ರಸ್ತೆಬದಿಗಳಲ್ಲಿ ಬಿದ್ದಿರುವವು ಸುಮಾರು ೧೫ ದಿವಸಗಳವರೆಗೆ ಭೀಷಣವಾಗಿ ನಡೆದ ಈ ಯುದ್ಧದ ವಿದ್ಯಮಾನಗಳನ್ನು ಕೆಲವೇ ಶಬ್ದಗಳಲ್ಲಿ ಹೇಳಬಹುದು. ಇಟೆಲಿಯಾನರು ಒಂದೇ ಸವನೆ ಮುಂದೊತ್ತಿ ಹೋದರು ತಾವು ಗೆದ್ದ ಸ್ಥಳಗಳನ್ನು ಭದ್ರಗೊಳಿಸುವ ಕಡೆಗೆ ಲಕ್ಷ್ಯ ಕೊಡಲಿಲ್ಲ ಮುಂದೆ ಸ್ಪೆನಿಶ್‌ಸರಕಾರದ ಸೈನಿಕರು ಪ್ರಬಲವಾಗಿ ವಿರೋಧಿಸಿದಾಗ ಅವರು ಸಂಪೂರ್ಣ ಧೈರ್ಯಗುಂದಿಹೋದರು ಅವರ ಅಧಿಕಾರಿಗಳಿಗೂ ಕೆಲಮಂದಿ ಸೈನಿಕರಿಗೂ ತಾವು ಸ್ಪೈನಿಗೆ ಹೋಗುವುದೆಂದು ತಿಳಿದಿದ್ದರೂ, ಹಲವು ಮಂದಿ ಖಾಸಗಿ ಸೈನಿಕರು ವಂಚಿತರಾಗಿ ಯುದ್ಧೋತ್ಸಾಹವುಳ್ಳವರಾಗಿರಲಿಲ್ಲ ಇದರ ಪರಿಣಾಮವಾಗಿ ಇಟೆಲಿಯಾನರ ದೊಡ್ಡ ಸೇನೆಯು ಅದಕ್ಕಿಂತ ಚಿಕ್ಕದಾದ ಮತ್ತು ಕಡಿಮೆ ಸಿದ್ಧತೆಯ ಸ್ಪೆನಿಶ್‌ಸರಕಾರದ ಸೇನೆಯಿಂದ ಪ್ರಬಲ ಅಪಜಯ ಹೊಂದಿತು ಸರಕಾರದ ಸೇನೆಯನ್ನು ನಡಿಸಿದ ನಾಯಕನು ಕೇವಲ ೨೯ ವರ್ಷ ಪ್ರಾಯದ ಮೇಜರ್ ವಿಸ್ಟರ್ ಎಂಬವನು.

ಬಂಡಾಯಗಾರರ ವಿಮಾನಧಾಳಿ ಪ್ರಾರ್ಥನೆಮಾಡುತ್ತಿದ್ದಾಗಲೆ ಅನೇಕರ ವಧೆ!

ಡುರಿಂಗೋ ಎಂಬ ಸ್ಥಳದ ಮೇಲೆ ಬಂಡಾಯಗಾರರು ವಿಮಾನಧಾಳಿನಡಿಸಿ ೨೦೦ ಮಂದಿ ಕೊಲ್ಲಲ್ಪಟ್ಟಿರುವರು. ಇವರಲ್ಲಿ ೧೩ ಮಂದಿ ಕ್ರೈಸ್ತ ಸನ್ಯಾಸಿನಿಯರು. ೧೫೦ ಮಂದಿ ಗಾಯಗೊಂಡಿರುವರು ಹಲವು ಇಗರ್ಜಿಗಳ ಮೇಲೆ ಬೋಂಬೆಸೆಯಲ್ಪಟ್ಟು ೩ ಮಂದಿ ಪಾದ್ರಿಗಳು, ಧರ್ಮವೇದಿಕೆಯ ಮೇಲೆ ನಿಂತಿದ್ದಂತೆಯೇ ಕೊಲ್ಲಲ್ಪಟ್ಟಿರುವರು. ಧಾರ್ಮಿಕ ಪ್ರವಚನ ಕೇಳಲು ನೆರೆದಿದ್ದ ಅನೇಕ ಮಂದಿ ಸ್ತ್ರೀಯರೂ ಮಕ್ಕಳೂ ಕೊಲ್ಲಲ್ಪಟ್ಟಿರುವರು. ಈ ವಿಮಾನಧಾಳಿಯಲ್ಲಿ ೯ ವಿಮಾನಗಳು ಭಾಗಿಯಾಗಿದ್ದವು ಮಿಶನ್ ತೋಪುಗಳ ಮೂಲಕ ರಸ್ತೆಗಳ ಮೇಲೆ ಗುಂಡೆಸದು ಹಲವು ಹೆಣಗಳು ಬಿದ್ದಿರುವವು. ಸಾಂತಾಮೇರಿಯಾ ಇಗರ್ಜಿಗೆ ಬೋಂಬು ಬಿದ್ದು ೧೬ ಮಂದಿ ಕೊಲ್ಲಲ್ಪಟ್ಟಿರುವರು ಸ್ತ್ರೀಯೊಬ್ಬಳ ಸತ್ಯ ಕೇಳುತ್ತಿದ್ದ ಪಾದ್ರಿಯೊಬ್ಬನು ಕೊಲ್ಲಲ್ಪಟ್ಟಿರುವನು. ನೆರೆಯ ಕ್ರೈಸ್ತಸನ್ಯಾಸಿನಿ ಆಶ್ರಮದಲ್ಲಿನ ೨೦ ಮಂದಿ ಸನ್ಯಾಸಿನಿಯರಲ್ಲಿ ೧೫ ಮಂದಿ ಹತರಾಗಿರುವರು. ಕಂಗೆಟ್ಟು ಪಟ್ಟಣ ಬಿಟ್ಟು ಹೊರಗೋಡುತ್ತಿದ್ದವರ ಮೇಲೆ ಮಿಶನ್ ತೋಪುಗಳಿಂದ ಗುಂಡೆಸೆಯಲಾಯಿತು.

ಸಾಂಟೆಂಡರ್ ರಣರಂಗದ ಸರಕಾರದ ಕಡೆಯ ಸೈನಿಕರು 12 ಮೈಲು ಮುಂದೊತ್ತಿ ಬಂಡಾಯಗಾರರ ಕೇಂದ್ರವಾದ ಬರ್ಗೋಸಿನಿಂದ 30ಮೈಲು ಉತ್ತರದ ಸಾರ್ಜೆಂಟಿಸ್ ಎಂಬ ಸ್ಥಳವನ್ನು ವಶಮಾಡಿಕೊಂಡಿರುವರು. ಬರ್ಗೋಸಿನ ಕಡೆಗೆ ಮುಂದೊತ್ತಲು ಸರಕಾರದ ಕಡೆಯ ಸೈನಿಕರು ನಡಿಸಿದ ಪ್ರಯತ್ನವು ನಿರರ್ಥಕವಾಗಿ ಅವರು ಸಂಪೂರ್ಣ ಪರಾಜಯ ಹೊಂದಿರುವರೆಂದು ಬಂಡಾಯಗಾರರ ಕಡೆಯ ಸುದ್ದಿ.

ಕೊಡೋಬದ ಬಳಿ ತೀವ್ರ ಹೋರಾಟ!

ಸರಕಾರದ ಪ್ರಬಲ ವಿಜಯ.

ಲೋಕದಲ್ಲೇ ಅಮೂಲ್ಯವಾದ ಪಾದರಸಗನಿಯಿರುವ ಅಲ್ಮಡೆನಿನ ಬಳಿಯ ಕೊರ್ಡೋಬ ರಣರಂಗದಲ್ಲಿ ತೀವ್ರ ಹೋರಾಟವುಂಟಾಗಿರುವುದು ಈ ಗನಿಯನ್ನು ಹೇಗಾದರೂ ವಶಪಡಿಸಿಕೊಳ್ಳಬೇಕೆಂದೇ ಬಂಡಾಯಗಾರರ ಯತ್ನ ಇಲ್ಲಿ ಬಂಡಾಯಗಾರರು ಪರಾಜಿತರಾಗಿ ೧೦೦ ಮಂದಿ ಸೆರೆಸಿಕ್ಕಿರುವರು. ಹೆಚ್ಚಿನ ಯುದ್ಧಸಾಮಾಗ್ರಿಗಳನ್ನು ಬಿಟ್ಟು ಹೋಗಿರುವರು. ರಣರಂಗವು ಹೆಣಗಳಿಂದ ತುಂಬಿರುವುದು. ಹಲವು ಮಂದಿ ಸೈನಿಕರು ಬಂಡಾಯಗಾರ ಸೇನೆಯನ್ನು ಬಿಟ್ಟು ಹೋಗಿರುವರು.

ಕೊರ್ಡೋಬ ರಣರಂಗದಲ್ಲಿ ಮಾರ್ಚಿ ತಾ. ೩೧ರಲ್ಲು ತೀವ್ರ ಹೋರಾಟ ನಡೆದು ಬಂಡಾಯಗಾರರು ಪರಾಜಿತರಾಗಿರುವರು ವಿಲನೋವ ಜಂಕ್ಷನನ್ನು ಸರಕಾರದ ಕಡೆಯ ಸೈನಿಕರು ವಶಮಾಡಿಕೊಂಡಿರುವರು. ಇಲ್ಲಿ ಬಂಡಾಯಗಾರ ಕಡೆಯಿಂದ ಹೋರಾಡಿದ ಮೂರಿಶ್ ಸೈನಿಕರಲ್ಲಿ ಹೆಚ್ಚಿನವರು ಸೆರೆಹಿಡಿಯಲ್ಪಟ್ಟಿರುವರು ಸೈನಿಕರನ್ನೂ ಸಾಮಾಗ್ರಿಗಳನ್ನೂ ತರುತ್ತಿದ್ದ ಬಂಡಾಯಗಾರರ ಕಡೆಯ ೩೧೦ ಲೋರಿಗಳಲ್ಲಿ ಕೆಲವು ವಿಮಾನ ಧಾಳಿಯಿಂದ ನಾಶಗೊಳಿಸಲ್ಪಟ್ಟಿರುವವು, ಇನ್ನು ಕೆಲವು ಸರಕಾರದ ವಶವಾಗಿರುವವು. ಬಂಡಾಯಗಾರರ ಅಧೀನದಲ್ಲಿರುವ ಸಾನ್ ಸೆಬಾಸ್ಟಿಯನಿನಲ್ಲಿ ಆಹಾರದ ಕೊರತೆಯುಂಟಾಗಿರುವುದೆಂದೂ, ಅಲ್ಲಿಂದ ೩೦೦ ಮಂದಿ ಸ್ತ್ರೀಯರು ಸ್ಪನಿಶ್ ಸರಕಾರದ ಅಧೀನವಿರುವ ಪ್ರದೇಶಕ್ಕೆ ಕಳುಹಿಸಲ್ಪಟ್ಟಿರುವರೆಂದೂ ತಿಳಿದು ಬರುತ್ತದೆ. ಜನರಲ್ ಫ್ರೇಂಕೋರವರು ಹೆಚ್ಚಿನ ಸ್ಪನಿಶ್ ಸೇನೆಯನ್ನು ಸಂಗ್ರಹಿಸುವ ಏರ್ಪಾಡುಮಾಡಿರುವರು

ಬಾಸ್ಕ್ ಪ್ರಾಂತದಲ್ಲಿ ಬಂಡಾಯಗಾರರು ಮಾರ್ಚಿ ತಾ. ೩೧ರಲ್ಲು ಅಲ್ಬಟೆಯ ಎಂಬ ಪಟ್ಟಣವನ್ನೂ ೩ ಹಳ್ಳಿಗಳನ್ನೂ ವಶಮಾಡಿಕೊಂಡಿರುವರು. ಈ ಸಂದರ್ಭದಲ್ಲಿ ನಡೆದ ಭೀಷಣ ಸಮರದಲ್ಲಿ ನೂರಾರು ಮಂದಿ ಬಾಸ್ಕ್ ಸೈನಿಕರು ಕೊಲ್ಲಲ್ಪಟ್ಟಿರುವರೆಂದೂ, ಸಾವಿರಾರು ಮಂದಿ ಗಾಯಗೊಂಡಿರುವರೆಂದೂ ಬಂಡಾಯಗಾರರ ಕಡೆಯ ಸುದ್ದಿ ಬಂಡಾಯಗಾರ ಕಡೆಯಿಂದ ಸಿಡಿಮದ್ದಿನ ಟಾಂಕಿ, ೩೦ ಬೋಂಬೆಸೆವ ವಿಮಾನ ಮತ್ತು ೧೦ ಯುದ್ಧ ವಿಮಾನಗಳು ಕೆಲಸಮಾಡಿರುವವು. ಈ ಯುದ್ಧದಲ್ಲ ಸರಕಾರದ ಕಡೆಯ ಸೈನಿಕರು ಮೊದಲು ಸ್ವಲ್ಪ ಹಿಂದೆ ಸರಿದು ಆ ಮೇಲೆ ಫಕ್ಕನೆ ವೈರಿಗಳ ಮೇಲೇರಿ ಹೋಗಿ ಅವರನ್ನು ಹಿಂದಕ್ಕಟ್ಟಿರುವರೆಂದೂ, ೨,೫೦೦ ಮಂದಿ ಬಂಡಾಯಗಾರ ಸೈನಿಕರು ಕೊಲ್ಲಲ್ಪಟ್ಟಿರುವರೆಂದೂ ಸರಕಾರದ ಕಡೆಯ ವಾರ್ತೆ. ಬಂಡಾಯಗಾರಸೇನೆಯಲ್ಲಿ ಸುಮಾರು ೨೦,೦೦೦ ಮಂದಿ ಇದ್ದರಂತೆ. ತಾ. ೩ರಲ್ಲಿ ಬಂದ ವಾರ್ತೆಯಮೇರೆಗೆ ಬಾಸ್ಕ್ ಪ್ರಾಂತೀಯ ಸೇನೆಯು ಹಿಂದಕ್ಕಟ್ಟಲ್ಪಟ್ಟು ಪ್ರಾಮುಖ್ಯ ಸ್ಥಳಗಳು ಕೆಲವನ್ನು ಬಂಡಾಯಗಾರರು ವಶಪಡಿಸಿಕೊಂಡಿರುವುದು ನಿಜವೆಂದು ತಿಳಿದು ಬರುತ್ತದೆ. ಆದರೆ ಬಾಸ್ಕ್ ಸೈನಿಕರು ಬಂಡಾಯಗಾರರನ್ನು ತಡೆಗಟ್ಟಿರುವರು.

ಬಂಡಾಯಗಾರ ವಿಮಾನಗಳು ಪುನಃ ಇದೇ ತಾ. ೩ರಲ್ಲು ಡುರಿಂಗೋ ಪಟ್ಟಣದ ಮೇಲೆ ಬೋಂಬೆಸೆದು ೩೦೦ ಮಂದಿಯವರೆಗೆ ಕೊಲ್ಲಲ್ಪಟ್ಟಿರುವರು. ಜೇನ್ ಎಂಬ ಸ್ಥಳದ ಮೇಲೆ ನಡೆದ ವಿಮಾನ ಧಾಳಿಯಲ್ಲಿ 70 ಮಂದಿ ಮೃತರಾಗಿರುವರು, ಇವರಲ್ಲಿ 7 ಮಂದಿ ಮಕ್ಕಳು,ಒಬ್ಬ ಮುದುಕ.

(೩ನೇ ಪುಟದಿಂದ)

ಮುಸಲ್ಮಾನರು ಆದಕ್ಕೆ ಆಕ್ಷೇಪಿಸಿದರು. ಸಿಖ್ಖರು ಅದಕ್ಕೆ ಲಕ್ಷಕೊಡಲಿಲ್ಲ, ಮುಸಲ್ಮಾನರು ಗುರುದ್ವಾರದ ಮೇಲೆ ಕಲ್ಲೆಸೆದರು ಆದರಿಂದ ದೊಡ್ಡ ಜಗಳವುಂಟಾಯಿತು, ಈ ಗುರುದ್ವಾರವು ಕಳದ 2 ವರ್ಷಗಳಿಂದ ಹಲವು ಗಲಾಟೆಯ ಸ್ಥಳವಾಗಿರುವುದು. ಈಗ ಪೋಲೀಸರು ಶಾಂತಿ ಸ್ಥಾಪಿಸಿರುವರು. ಗುರುದ್ವಾರವನ್ನು ಪೋಲೀಸರು ಕಾಯುತ್ತಿರುವರು.

ಮುಸಲ್ಮಾನರು ಮತ್ತು ಕಾಂಗ್ರೆಸು

ಪಂಡಿತ ಜವ್ಹಾರಲಾಲರು ಮುಸಲ್ಮಾನರನ್ನು ಕಾಂಗ್ರೆಸ್ಸಿಗೆ ಸೇರಿಸಿ ಕಾಂಗ್ರೆಸ್ಸನ್ನು ನಿಜವಾದ ರಾಷ್ಟ್ರೀಯಸಂಸ್ಥೆಯನ್ನಾಗಿ ಮಾಡಲು ಎಡೆಬಿಡದೆ ಪ್ರಯತ್ನಿಸುತ್ತಿರುವರು. ನಿರುದ್ಯೋಗ ದಾರಿದ್ರ್ಯವೇ ಮೊದಲಾದ ದೇಶದ ಮಹತ್ವಾದ ಸಮಸ್ಯೆಗಳನ್ನಿದಿರಿಸುವ ವಿಷಯದಲ್ಲಿ ಹಿಂದು, ಮುಸಲ್ಮಾನ ಮತ್ತು ಕ್ರೈಸ್ತಜನ ಸಾಮಾನ್ಯರೊಳಗೆ ಯಾವ ಭೇದವೂ ಇಲ್ಲ. ಆದುದರಿಂದ ಪ್ರಥಮವಾಗಿ ಈಗ ಮಾಡಬೇಕಾದುದೆಂದರೆ ಮುಸಲ್ಮಾನರನ್ನು ಆದಷ್ಟು ಹೆಚ್ಚಿಗೆಯಾಗಿ ಕಾಂಗ್ರೆಸ್ ಮೆಂಬರರಾಗಿ ಸೇರಿಸಿಕೊಳ್ಳುವದು. ಈ ವಿಷಯದಲ್ಲಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ಹೆಚ್ಚಿನ ಗಮನಕೊಟ್ಟು ಕೂಡಲೆ ಕಾರ್ಯಕ್ಕೆ ತೊಡಗಬೇಕು. ಮುಸಲ್ಮಾನಜನಸಾಮಾನ್ಯರ ಸಂಪರ್ಕವನ್ನು ಬೆಳಸಿ ಅವರು ಕಾಂಗ್ರೆಸ್ಸಿನ ಕಾರ್ಯಕಲಾಪಗಳಲ್ಲಿ ಇತರರಂತೆಯೇ ಭಾಗಿಯಾಗುವಂತೆಮಾಡಲು ಪ್ರತಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಸ್ಪೆಶಲ್ ಕಮಿಟಿಗಳನ್ನು ನೇಮಿಸಬೇಕು. ಇದಕ್ಕಾಗಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಪ್ರತ್ಯೇಕ ಖಾತೆಯೊಂದನ್ನು ತೆರೆಯಲಾಗುವುದೆಂದು ಪಂಡಿತ ಜವ್ಹಾರಲಾಲರು ಸರ್ಕ್ಯುಲರು ಕೊಟ್ಟಿರುವರು ಮೌಲಾನ ಅಬ್ದುಲ್ ಕಲಮ್ ಆಜದರು ಮತ್ತು ಪಂಡಿತ ಜವ್ಹಾರಲಾಲರು ಸಂಯುಕ್ತಪ್ರಾಂತದ ಕೆಲಮಂದಿ ಮುಸಲ್ಮಾನ ಮುಖಂಡರರೊಡನೆ ನಡಿಸಿದ ಮಾತುಕತೆಯ ಪರಿಣಾಮವಾಗಿ ಸಂಯುಕ್ತ ಪ್ರಾಂತದ ಕಾಂಗ್ರೆಸ್ ಮುಸಲ್ಮಾನರ ಪರಿಷತ್ತೊಂದು ಬೇಗನೆ ಅಲಹಾಬಾದಿನಲ್ಲಿ ಕರೆಯಲ್ಪಡಲಿರುವುದೆಂದು ತಿಳಿದುಬರುತ್ತದೆ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನುಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ. ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-35	ಬೆಳಿಗ್ಗೆ 9-20

ಜನರಲ್ ಎಶ್ಶೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25**,

ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ **20**,

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಶೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಆಕ್ಟಿಂಗ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ಬೋಂಬೈಯಿಂದ ಬರುವದು	ಬೋಂಬೈಗೆ ತೆರಳುವದು
ಮಂಗಳೂರು	ಗುರುವಾರ ಬೆಳಿಗ್ಗೆ 8 ಗಂಟೆ	ಶನಿವಾರ ಬೆಳಿಗ್ಗೆ 9 ಗಂಟೆ
	ಸೋಮವಾರ ಬೆಳಿಗ್ಗೆ 7 ಗಂಟೆ	ಮಂಗಳವಾರ ಬೆಳಿಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 2-30	ಶನಿವಾರ ಮಧ್ಯಾಹ್ನ 12
	ಆದಿತ್ಯವಾರ ಹಗಲು 3 ಗಂಟೆ	ಮಂಗಳವಾರ ಮಧ್ಯಾಹ್ನ 12
ಕುಂದಾಪುರ	ರವಿವಾರ ಹಗಲು 1 ಗಂಟೆ	ಶನಿವಾರ ಸಂಜೆ ಗಂಟೆ 3-30
		ಮಂಗಳವಾರ ಮಧ್ಯಾಹ್ನ 3-30

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವದು.

ಸದ್ಧರ್ಮ ಪ್ರಚಾರಕ, ಕಾರ್ಯಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ

THE
Vijaya Bank, Ltd.

Head Office. MANGALORE. **Branch Offices: UDIPI, KAUP.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3¾

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ – ಅಂದರೆ—ಪ್ರೊ ನೋಟು, ಹುಂಡಿ, ಸರಳು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವದು.
ರೂ. 1ರಿಂದ 100ರ ವರೆಗೆ ಸಾ. ಶೆ. 8 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ವಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B Shetty, ಚೆಯರ್ ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯಾಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಆದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಪಡುವುದು. ವರ್ಷದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ಟ್ಯಾಡ ಶೋಪು, ಬಂದರಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೋ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋ‌ನ್ ಸ್ಟೋರಲ್ಲಿಯೂ ಮೇಲಿನ ಎಲ್ಲ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

ದೇಶದಲ್ಲೆಲ್ಲಾ ಹರತಾಳ

* ಹೊಸ ರಾಜ್ಯಾಂಗರಚನೆಗೆ ಕರಿನಿಶಾನೆಯ ಮಂಗಳಾರತಿ.
* ಪಾಟ್ನಾ ಮತ್ತು ಡಿಲ್ಲಿಯಲ್ಲಿ ದಸ್ತಗಿರಿ.

ದೇಶವಲ್ಲಿ ಯಾರಿಗೂ ಬೇಡವಾದ ಹೊಸ ರಾಜ್ಯಾಂಗ ರಚನೆಯು ಜ್ಯಾರಿಗೆ ಬರುವ ಎಪ್ರಿಲ್ ತಾ. 1ನೇ ದಿನವನ್ನು ಇಡೀ ಭರತ ಖಂಡವು ಅದೊಂದು ನೂತನ ದಿನವಾಗಿ ಆಚರಿಸಿರುವುದು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರವಲ್ಲದೆ ಹಳ್ಳಿ ಮೂಲೆಗಳಲ್ಲಿಯೂ ಹರತಾಳ, ಕರಿನಿಶಾನಿಗಳ ಮೆರವಣಿಗೆ ಮತ್ತು ಸಾರ್ವಜನಿಕ ಸಭೆಗಳು ನಡೆದು ಹೊಸ ಸುಧಾರಣೆಯು ನಿಷೇಧಿಸಲ್ಪಟ್ಟಿರುವುದು. ಈ ದಿನವು ಜಯಶೀಲವಾಗಿ ಆಚರಿಸಲ್ಪಡದಂತೆ, ಕಲ್ಕತ್ತಾ, ಡಿಲ್ಲಿ, ಪಾಟ್ನ ಮೊದಲಾದ ಹಲವು ಕಡೆಗಳಲ್ಲಿ ಪೋಲೀಸರು ತಮಗೆ ಸಾಧ್ಯವಾದಷ್ಟು ಪ್ರಯತ್ನ ನಡಿಸಿದ್ದರು. ಸರಕಾರದ ಅಭಿಪ್ರಾಯವನ್ನು ಗಣಿಸದೆ ದೇಶದ ಅನೇಕ ಮುನಿಸಿಪಾಲಿಟಿಗಳೂ ಡಿಸ್ಟ್ರಿಕ್ಟ್ ಬೋರ್ಡುಗಳೂ, ಈ ದಿನ ತಮ್ಮ ಆಫೀಸು, ಶಾಲೆಗಳೇ ಮೊದಲಾದ ತಮ್ಮ ಅಧೀನವಿರುವ ಸಂಸ್ಥೆಗಳನ್ನು ಮುಚ್ಚಿರುವವು. ಮಿ. ಜಿನ್ನಾರವರೇ ಮೊದಲಾದವರು, ಮುಸಲ್ಮಾನರು ಕಾಂಗ್ರೆಸಿನ ಈ ಹರತಾಳದಲ್ಲಿ ಭಾಗಿಯಾಗಕೂಡದೆಂದು ಆಜ್ಞೆಯಿತ್ತಿದ್ದರೂ ಅದನ್ನು ಒಂದಿಷ್ಟು ಗಮನಿಸದೆ, ಅದರಿಂದ ಸಿಟ್ಟಿಗೆದ್ದು, ಸಂಯುಕ್ತಪ್ರಾಂತ ಮತ್ತು ಪಂಜಾಬಿನ ಅನೇಕಮಂದಿ ಮುಸಲ್ಮಾನರು ಕಾಂಗ್ರೆಸಿನೊಂದಿಗೆ ಸಹಕರಿಸಿರುವರು.

ಮದ್ರಾಸ್ ಪಟ್ಟಣದಲ್ಲಿ ಹರತಾಳವು ಅತ್ಯಂತ ಜಯಶೀಲವಾಗಿ ಆಚರಿಸಲ್ಪಟ್ಟಿದ್ದಿತು. ಅಂಗಡಿ ಬೀದಿಗಳೆಲ್ಲಾ ಮುಚ್ಚಲ್ಪಟ್ಟಿದ್ದುವು. ಮದ್ರಾಸ್ ಮೇಯರರಾದ ಶ್ರೀ. ಕೆ. ಶ್ರೀರಾಮುಲುರವರ ನೇತೃತ್ವದಲ್ಲಿ ದೊಡ್ಡ ಮೆರವಣಿಗೆಯೊಂದು ಕಾಂಗ್ರೆಸ್ ಸದನದಿಂದ ಹೊರಟು ತಿಲಕಘಾಟಿಗೆ ನಡೆದು ಅಲ್ಲಿ ಪ್ರಚಂಡ ಸಾರ್ವಜನಿಕ ಸಭೆ ನಡೆಯಿತು. ವಿದ್ಯಾರ್ಥಿಗಳು ಬೇರೆ ಬೇರೆ ವಿಧದ ನಿಷೇಧ ವಾಕ್ಯಗಳ ಪತಾಕೆ ಹಿಡಕೊಂಡು ಸ್ಟ್ರೈಕ್ ಮೆರವಣಿಗೆ ನಡಿಸಿದರು. ಹ್ಯಾಕೊರ್ಟ್, ಬೀಚು, ವಾಡಿಯಾ ಪಾರ್ಕ್‌ಗಳಲ್ಲಿ ಮೆರವಣಿಗೆ ಸಾರ್ವಜನಿಕ ಸಭೆಗಳು ನಡೆದಿದ್ದುವು. ಮದ್ರಾಸ್ ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷೀಯರು ತಮ್ಮದೇ ಅದೊಂದು ಮೆರವಣಿಗೆ ನಡೆಸಿ, ಹೊಸ ಸುಧಾರಣೆಯ ಕಾಪಿಯೊಂದನ್ನೊಯ್ದು ಸುಟ್ಟು ಹಾಕಿದರು.

ಜೈಪ್ರಕಾಶ್ ನಾರಾಯಣರ ದಸ್ತಗಿರಿ

ಪಾಟ್ನದಲ್ಲಿ ಎಪ್ರಿಲ್ ತಾ. 1ರಲ್ಲು ಮೆರವಣಿಗೆ ಕೊಂಡೊಯ್ಯಬಾರದೆಂದು ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷದ ಜನರಲ್ ಸೆಕ್ರಿಟರಿಗಳಾದ ಶ್ರೀ. ಜೈಪ್ರಕಾಶ್ ನಾರಾಯಣರೇ ಮೊದಲಾದ ಪ್ರಮುಖರ ಮೇಲೆ ಮುಂಚಿನ ದಿನವೇ ನಿಷೇಧ ಹುಕುಮು ಜ್ಯಾರಿಮಾಡಲ್ಪಟ್ಟಿತ್ತು. ತಾ. 1ರಲ್ಲು ಪ್ರಚಂಡ ಮೆರವಣಿಗೆಯೊಂದು ಪಾಟ್ನ ಕೋಲೇಜಿನ ಬಳಿಯಲ್ಲಿ ಹೋಗುವಾಗ ಪೋಲೀಸರು ಧಾವಿಸಿ ಹೋಗಿ ಶ್ರೀಗಳಾದ ಜೈ ಪ್ರಕಾಶ್ ನಾರಾಯಣ್, ರಾಮವೃಕ್ಷ ಬೆನಿಪುರಿ, ಚಂದ್ರಾವತಿದೇವಿ, ಅಬ್ದುಲ್ ಬಾಸಿ, ಬಸವನ್ ಸಿಂಘ್, ಶಾ ಮಹಮ್ಮದ್ ಹಬಬ್, ಅನಿಸೂರ್ ರಹಮಾನ್, ಕಾಮ್ತ ಪ್ರಸಾದ್, ಮುಂಸೂರ್ ಅಹ್ಸನ್ ಮತ್ತು ರಾಮವತಾರರನ್ನು ದಸ್ತಗಿರಿ ಮಾಡಿರುವರು ಸಂಜೆ ಇನ್ನೂ ಕೆಲವರ ದಸ್ತಗಿರಿಯಾಗಿರುತ್ತದು. ಒಟ್ಟು 25 ಮಂದಿ ಕೈದುಮಾಡಲ್ಪಟ್ಟಿರುವರು. ಬಿಹಾರಿನ ಚಪ್ರ ಎಂಬಲ್ಲಿ ಸರಕಾರದ ಹುಕುಮಿಗೆ ವಿರುದ್ಧವಾಗಿ ಮೆರವಣಿಗೆ ನಡಿಸಿದುದಕ್ಕಾಗಿ 13 ಮಂದಿ ಕೈದುಮಾಡಲ್ಪಟ್ಟಿರುವರು. ಪಾಟ್ನದಲ್ಲಿ ಸಾರ್ವಜನಿಕ ಸಭೆ ಮುಗಿದ ಮೇಲೆ ಜನರು ಪುನಹ ಮೆರವಣಿಗೆ ನಡಿಸಿ ಹೊಸ ಪ್ರಧಾನ ಸಚಿವರಾದ ಮಿ. ಎಮ್. ಯೂನುಸರ ಮನೆಯ ಸಮೀಪಕ್ಕೆ ಹೋಗಿ ಅವರ ವಿರೋಧವಾಗಿ ಪ್ರದರ್ಶನ ನಡಿಸಿದಾಗ ಪೋಲೀಸರು ಬಂದು 11 ಮಂದಿಯನ್ನು ದಸ್ತಗಿರಿ ಮಾಡಿದರು. ಅನಂತರ ಮೆರವಣಿಗೆಯ ಜನರು ಚದರಿಹೋದರು.

ನ್ಯೂ ಡಿಲ್ಲಿಯಲ್ಲಿ 13 ಮಂದಿಯ ದಸ್ತಗಿರಿ

ನ್ಯೂ ಡಿಲ್ಲಿಯಲ್ಲಿ ಹರತಾಳ ಆಚರಿಸಬಾರದೆಂದು ಪೋಲೀಸರು ಕೆಲವರಿಗೆ ಅಭಯಕೊಟ್ಟು ಪುಸಲಾಯಿಸಿದರು. ಹಿಂದು ಮುಸಲ್ಮಾನ ವ್ಯಾಪಾರಿಗಳೆಲ್ಲಾ ತಮ್ಮ ಅಂಗಡಿ ಮುಚ್ಚಿದ್ದರು. ಪೋಲೀಸರು 15 ಮಂದಿ ಕಾಂಗ್ರೆಸ್ ಕೆಲಸಗಾರರನ್ನು ದಸ್ತಗಿರಿ ಮಾಡಿರುವರು. ಮಿ. ಆಸಫಾಲಿಯವರ ಮುಂದಾಳುತ್ವದಲ್ಲಿ ದೊಡ್ಡ ಮೆರವಣಿಗೆಯೊಂದು ನಡೆಯಿತು. ಇದರಲ್ಲಿ ಸುಮಾರು 10,000 ಮಂದಿ ಭಾಗಿಯಾಗಿದ್ದರು ಇವರಲ್ಲಿ ಸುಮಾರು 3,000 ಮಂದಿ ಮುಸಲ್ಮಾನರು, ಜಮಿಯತ್-ಉಲ್ ಉಲೇಮ ಸಂಘದವರು ಇಂದಿನ ದಿನಾಚರಣೆಯಲ್ಲಿ ಭಾಗಿಯಾಗಿದ್ದರು. ಸೆಂಟ್ರಲ್ ಪೋಲೀಸ್ ಸ್ಟೇಶನಿನ ಬಳಿ ಕೆಲ ಮಂದಿ ಸವಾರರು ಮತ್ತು ಅಶ್ವಾರೋಹಿ ಪೋಲೀಸರು ಜನರ ನಡುವೆ ನುಗ್ಗಿ ಅನಾವಶ್ಯಕವಾಗಿ ಕೆಲವರನ್ನು ದೂಡಿ ಗಲಾಟೆ ಮಾಡಿದರು. ಶ್ರೀ ಭೂಲಭಾಯಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ದೊಡ್ಡ ಸಾರ್ವಜನಿಕ ಸಭೆ ನಡೆದು, ಶ್ರೀಮತಿ ಸರೋಜಿನಿ ದೇವಿ, ಪಂಡಿತ ಗೋವಿಂದಪಂತ್, ಡಾಕ್ಟರ್ ಭಗವನ್ದಾಸ್, ಮೌಲಾನ ಅಬ್ದುಲ್ ಮಾಜಿದ್, ಮಿ. ಫರಿದ್ ಅನ್ಸಾರಿಗಳು ಭಾಷಣವಿತ್ತರು.

ಕಲ್ಕತ್ತದಲ್ಲಿ ಮಾರ್ಚ್ ತಾ. 31ರಲ್ಲು ಹಲವು ಮಂದಿ ಮಜೂರ ಮುಖಂಡರ ಮೇಲೆ ಮೆರವಣಿಗೆಯಲ್ಲಿ ಭಾಗಿಯಾಗಕೂಡದು, ಸಭೆ ನಡಿಸಬಾರದು, ಭಾಷಣ ಕೊಡಬಾರದು ಎಂಬ ನಾನಾವಿಧದ ನಿಷೇಧ ಹುಕುಮುಗಳು ಜಾರಿಮಾಡಲ್ಪಟ್ಟಿದ್ದುವು ಆದರೂ ಕಲ್ಕತ್ತದಲ್ಲಿಯೂ, ಬಂಗಾಳದ ಇತರ ಕಡೆಗಳಲ್ಲಿಯೂ ಹರತಾಳವು ಜಯಶೀಲವಾಗಿ ಆಚರಿಸಲ್ಪಟ್ಟಿದ್ದಿತು ಚಿತ್ತಗೋಂಗಿನಲ್ಲಿ ಹಿಂದು ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ಆದರೆ ಮುಸಲ್ಮಾನರು ಹೊಸರಾಜ್ಯಾಂಗ ರಚನೆಯನ್ನು ಸ್ವಾಗತೀಕರಿಸಲು ಮೆರವಣಿಗೆ ನಡಿಸಿದ್ದರು.

ಸಂಯುಕ್ತ ಪ್ರಾಂತದಲ್ಲೆಲ್ಲಾ ಹರತಾಳವು ಅತ್ಯಂತ ಜಯಶೀಲವಾಗಿ ಆಚರಿಸಲ್ಪಟ್ಟಿರುವುದು. ಹಲವು ಕಡೆ ಮುಸಲ್ಮಾನರೇ ಇದರಲ್ಲಿ ಅಗ್ರಭಾಗವಹಿಸಿದ್ದರು ಲಕ್ನೋ ಮುನಿಸಿಪಲ್ ಆಫೀಸು ಮತ್ತು ಶಾಲೆಗಳು ಮುಚ್ಚಲ್ಪಟ್ಟಿದ್ದುವು. ಇಂದು ಯುನಿವರ್ಸಿಟಿ ಪರೀಕ್ಷೆಗೆ ನಿಂತಿದ್ದ ವಿದ್ಯಾರ್ಥಿಗಳು 8 ಘಂಟೆ ಸಮಯಕ್ಕೆ ಎಲ್ಲರೂ ಒಂದು ಮಿನಿಟು ನಿಂತು ಹೊಸ ರಾಜ್ಯಾಂಗ ರಚನೆಯ ಕುರಿತು ತಮ್ಮ ನಿಷೇಧ ವ್ಯಕ್ತಪಡಿಸಿದರು. ಮಜೂರರ 2 ದೊಡ್ಡ ಮೆರವಣಿಗೆಗಳು ನಡೆದಿದ್ದುವು. ಇಂದಿನ ಹರತಾಳದ ಜಯಶೀಲತೆಗೆ ಅಹ್ರಾರರೇ ಕಾರಣರೆನ್ನಬಹುದು. ಅಲಹಾಬಾದಿನಲ್ಲಿ ಹಿಂದು ಮುಸಲ್ಮಾನರೆಲ್ಲರೂ ಹರತಾಳ ಆಚರಿಸಿದ್ದರು. ಶಾಲಾ ಕೊಲೆಜುಗಳೂ ಮುಚ್ಚಲ್ಪಟ್ಟಿದ್ದುವು. ಸಂಜೆ ಸುಮಾರು 10,000 ಮಂದಿ ಹಿಂದುಗಳ ಮತ್ತು ಮುಸಲ್ಮಾನರ ಮೆರವಣಿಗೆ ನಡೆದು ಪುರುಷೋತ್ತಮದಾಸ್ ಪಾರ್ಕಿನಲ್ಲಿ ಪ್ರಚಂಡ ಸಾರ್ವಜನಿಕ ಸಭೆನಡೆಯಿತು. ಪಂಡಿತ ಜವಾಹರಲಾಲರು ಅಸ್ವಸ್ಥದಲ್ಲಿದ್ದರೂ ಡಾಕ್ಟರರ ಸಲಹೆಯನ್ನುಲ್ಲಂಘಿಸಿ ಸಭೆಗೆ ಹೋಗಿ ಅಲಹಾಬಾದಿನ ನಾಗರಿಕರು ಹರತಾಳವನ್ನು ಜಯಶೀಲವಾಗಿ ಆಚರಿಸಿದುದಕ್ಕಾಗಿ ಅಭಿನಂದಿಸಿದರು. ಮೌಲಾನ ಅಬ್ದುಲ್ ಕಲಮ್ ಅಜದರು ಹೊಸ ರಾಜ್ಯಾಂಗ ರಚನೆಯನ್ನು ನಿಷೇಧಿಸಿ ಮಾತಾಡಿದರು. ಕೋಸಪುರದಲ್ಲಿ ಅಂಗಡಿಬೀದಿ, ಶಾಲೆ ಕೊಲೆಜುಗಳೆಲ್ಲಾ ಮುಚ್ಚಲ್ಪಟ್ಟಿದ್ದುವು. ಬೆನಾರೀಸಿನಲ್ಲಿ ಹರತಾಳ ಮತ್ತು ಪಂಡಿತ ಮಾಲವೀಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆನಡೆಯಿತು. ಅಲಿಘರ್, ಮೊರದಾಬಾದ್, ಮೀರತ್ ಮೊದಲಾದ ಪಟ್ಟಣಗಳಲ್ಲೆಲ್ಲಾ ಹಿಂದು ಮುಸಲ್ಮಾನರು ಒಕ್ಕಟ್ಟಿನಿಂದ ಹರತಾಳ ಆಚರಿಸಿರುವರು.

ಪಂಜಾಬ್ ಪ್ರಾಂತದಲ್ಲಿಯೂ ಹಿಂದು ಮುಸಲ್ಮಾನರು ಒಟ್ಟಾಗಿ ಹರತಾಳ ಮತ್ತು ಸಾರ್ವಜನಿಕ ಸಭೆನಡಿಸಿ ಹೊಸ ರಾಜ್ಯಾಂಗ ರಚನೆಯನ್ನು ನಿಷೇಧಿಸಿರುವರು. ಲಾಹೋರಿನಲ್ಲಿ ಕಾಂಗ್ರೆಸ್ ಎಸೆಂಬ್ಲಿ ಮೆಂಬರರಾದ ಮಿಯಾಸಾಸ್ ಇಫ್ತಿಕಾರುದ್ದೀನರು ಡಿಲ್ಲಿ ಗೇಟಿನ ಹೊರಗೆ ರಾಷ್ಟ್ರೀಯ ಧ್ವಜಾರೋಹಣಮಾಡಿ, ಮುಸಲ್ಮಾನರು ಸಾವಿರಗಟ್ಟಲೆಯಲ್ಲ ಕಾಂಗ್ರೆಸ್ ಮೆಂಬರರಾಗಿ ಸೇರಬೇಕೆಂದು ವಿನಂತಿಮಾಡಿಕೊಂಡರು. ರೋಪಿಂಡಿಯಲ್ಲಿ ಮೋಟರ್ ಸರ್ವಿಸುಗಳೆಲ್ಲಾ ನಿಲ್ಲಿಸಲ್ಪಟ್ಟಿದ್ದುವು. ಲ್ಯಾಲಪುರದಲ್ಲಿ ಸುಮಾರು ೩೦೦೦ ಮಂದಿ ಕೆಲಸಗಾರರು ಗಣೇಶ್ ಹಿಟ್ಟಿನ ಗಿರಣಿಗೆ ಹೋಗಿ ಅಲ್ಲಿಯ ಕೆಲಸಗಾರರು ಹರತಾಳ ಆಚರಿಸುವಂತೆ ಪ್ರಯತ್ನಿಸಿದರು. ಗಿರಣಿ ಮಾಲಿಕರು ಗಿರಣಿಯ ಗೇಟ್ ಹಾಕಿದರು. ಆಗ ಜನರು ಉದ್ವೇಗಗೊಂಡರು. ಅಷ್ಟರಲ್ಲಿ ಪೋಲೀಸರು ಬಂದರು. ಆಗ ಜನರು ಚದರಿ ಹೋದರು.

ಬೊಂಬಾಯಿಯಲ್ಲಿ 4 ದೊಡ್ಡ ಮೆರವಣಿಗೆಗಳು ಹೊರಟು ಚೌಪಾಟಿಯಲ್ಲಿ ಒಟ್ಟಾಗಿ ಶ್ರೀ. ನರಿಮನರ ಅಧ್ಯಕ್ಷತೆಯಲ್ಲಿ ಪ್ರಚಂಡಸಾರ್ವಜನಿಕ ಸಭೆನಡೆದು ಹೊಸ ರಾಜ್ಯಾಂಗರಚನೆಯನ್ನು ನಿಷೇಧಿಸಲಾಯಿತು. ಪೂನದಲ್ಲಿ ಬರಿತಲೆ ವ ಸ್ತ್ರ ಕರಿನಿಶಾನಿಯ ದೊಡ್ಡ ಮೆರವಣಿಗೆ ನಡೆದು ಸಾರ್ವಜನಿಕ ಸಭೆಯಲ್ಲಿ, ಸುಧಾರಣಾ ಆಕ್ಟನ್ನು ಕಪ್ಪು ವಸ್ತ್ರದಲ್ಲಿ ಸುತ್ತಿ ಸುಟ್ಟುಹಾಕಲಾಯಿತು.

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

ವೈಸರಾಯರು ಗಾಂಧಿಜಿಯವರೊಡನೆ ಮಾತಾಡಬೇಕು

ಸುಧಾರಣಾ ಆಕ್ಟನ್ನು ಗವರ್ನರರೇ ಮುರಿದರು
ಕಾಂಗ್ರೆಸಿನ ನಿರಾಕರಣೆ ಮತ್ತು ಗೊಂಬೆ ಮಂತ್ರಿಗಳ ನೇಮಕದ ಕುರಿತು ಮುಖಂಡರ ಅಭಿಪ್ರಾಯ

ಮಹಾತ್ಮ ಗಾಂಧಿಯವರು

ಗವರ್ನರರುಗಳು ಕಾಂಗ್ರೆಸ್ ಪಕ್ಷೀಯರಿಗೆ ಆಶ್ವಾಸನೆ ಕೊಡಲು ನಿರಾಕರಿಸಿದ ಕುರಿತು ಹೇಳಿಕೆಯೊಂದನ್ನು ಪ್ರಕಟಿಸಿರುವರು. ಅದರ ಸಾರಾಂಶವು ಈ ಕೆಳಗಣಂತಿರುವುದು. ಕಾಂಗ್ರೆಸಿನ ಅಧಿಕಾರ ಸ್ವೀಕಾರ ನಿರ್ಣಯದ ಮೂಲಕರ್ತನು ತಾನು. ಅದಕ್ಕೆ ಶರ್ತಹಾಕುವ ಅಭಿಪ್ರಾಯ ಹುಟ್ಟಿಸಿದವನೂ ತಾನೇ. ಹೊಸ ಸುಧಾರಣಾ ಆಕ್ಟನ್ನೆ ಬದಲುಮಾಡುವಂತಹ ಅಸಾಧ್ಯವಾದ ಶರ್ತಗಳನ್ನು ಹಾಕುವುದು ತನ್ನಿಚ್ಛೆಯಾಗಿರಲಿಲ್ಲ. ಅಧಿಕಾರ ಸ್ವೀಕರಿಸುವುದರಿಂದ ಸುಧಾರಣಾ ಆಕ್ಟನ್ನು ಮುರಿಯಲು ಅಥವಾ ಸಂಪೂರ್ಣ ಬದಲುಮಾಡಲು ಸಾಧ್ಯವಿಲ್ಲೆಂಬುದನ್ನು ಕಾಂಗ್ರೆಸಿನವರು ಬಲ್ಲರು. ಆದರೆ ಅಧಿಕಾರವು ಸಂಪೂರ್ಣವಾಗಿ ಜನತೆಯ ಹಸ್ತಗತವಾಗುವ ಪರಿಸ್ಥಿತಿಯುಂಟಾಗುವ ವರೆಗೆ, ಕಾಂಗ್ರೆಸನ್ನು ಬಲಪಡಿಸುವುದಕ್ಕಾಗಿ ಮಂತ್ರಿಪದವಿ ಸ್ವೀಕರಿಸಬೇಕೆಂದು ಮಾತ್ರ ಕಾಂಗ್ರೆಸಿನೊಳಗಣ ಕೆಲವರ ಅಭಿಪ್ರಾಯವಿರುವುದು. ಕಾಂಗ್ರೆಸ್ ಮತ್ತು ಗವರ್ನರರೊಳಗೆ ಗೃಹಸ್ಥಿಕೆಯ ಒಡಂಬಡಿಕೆಯಾಗದೆ ಇದು ಸಾಧ್ಯವಿಲ್ಲೆಂದು ನನ್ನ ಭಾವನೆಯಾಗಿದ್ದಿತು. ಮಂತ್ರಿಗಳು ಸುಧಾರಣಾ ಆಕ್ಟಿಗನುಸಾರವಾಗಿ ಆಡಳಿತ ನಡಿಸುವಾಗ ಗವರ್ನರರು ನಿತ್ಯ ಆಡಳಿತದಲ್ಲಿ ಕೈಹಾಕದೆ ಅವರಿಗೆ ಸ್ವತಂತ್ರವೀಯಬೇಕೆಂಬುದು ಪ್ರತಿಯೊಬ್ಬ ಸ್ವಾಭಿಮಾನಿಯಾದ ಮಂತ್ರಿಯೂ ಕೇಳುವುದು ನ್ಯಾಯವಾದುದೇ ಸರಿ. ಸರ್ವಸಾಧಾರಣವಾಗಿ ಗವರ್ನರರು ತಮಗೆ ವಿಪುಲವಾಗಿರುವ ವಿಶೇಷಾಧಿಕಾರಗಳನ್ನು ಉಪಯೋಗಿಸಲಾರರೆಂದು ಸರ್ ಸಾಮುವೇಲ್ ಹೋರರೇ ಮೊದಲಾದವರು ಹೇಳಿರುವುದು ತನಗೆ ನೆನಪಿದೆ. ಕಾಂಗ್ರೆಸಿನವರು ಕೇಳಿರುವುದಾದರೂ ಅದನ್ನೇ. ಹೊಸ ಸುಧಾರಣಾ ಆಕ್ಟಿನ ಪ್ರಕಾರ ಪ್ರಾಂತಗಳಿಗೆ ಸ್ವತಂತ್ರ ಆಡಳಿತನೀಯಲ್ಪಟ್ಟಿದೆ. ಹಾಗಾದರೆ ಪ್ರಾಂತದ ಆಡಳಿತಕ್ಕೆ ಜವಾಬ್ದಾರರು ಮಂತ್ರಿಗಳಲ್ಲದೆ ಗವರ್ನರರಲ್ಲ. ಪ್ರಜಾ ಜವಾಬ್ದಾರಿಯುಳ್ಳ ಮಂತ್ರಿಗಳು, ತಮ್ಮ ಅನುನಿತ್ಯದ ಕರ್ತವ್ಯ ನಿರ್ವಹಣದಲ್ಲಿ ಗವರ್ನರರು ಕೈಹಾಕುವುದನ್ನು ಸಹಿಸಿಕೊಳ್ಳಲಾರರು. ಬ್ರಿಟಿಷ್ ಸರಕಾರವು ಇನ್ನೊಮ್ಮೆ ಮಾತಿನಲ್ಲಿ ಕೊಟ್ಟುದನ್ನು ಕಾರ್ಯದಲ್ಲಿ ನಿರಾಕರಿಸಿರುವುದು, ತಾವೇ ನಡಿಸಿರುವ ಚುನಾವಣೆಯ ಮೂಲಕ ಬಹುಪಕ್ಷ ದೊರೆತ ಕಾಂಗ್ರೆಸ್ ಪಕ್ಷೀಯರಿಗೆ ಆಳರಸರು ಅಧಿಕಾರ ನಿರಾಕರಿಸಿ, ತಾವು ಹೊಸ ಸುಧಾರಣೆಯ ಮೇರೆಗೆ ಕೊಟ್ಟಿರುವೆನೆನ್ನುವ ಪ್ರಾಂತಿಕ ಸ್ವಾತಂತ್ರ್ಯವನ್ನೇ ಮೂಲೆಗೊತ್ತಿರುವರು. ಆದುದರಿಂದ ಇನ್ನೀಗ ರಾಜ್ಯಭಾರವೆಂದರೆ ಲೇಖನಿ ಅಥವಾ ಬಹುಪಕ್ಷದ್ದಲ್ಲ, ಖಡ್ಗದ್ದು! ಇಂತಹ ಅರ್ಥವನ್ನೇ ತಾನು ಸರಕಾರದ ಕಾರ್ಯಕ್ಕೆ ಮಾಡಬೇಕಾಗಿದೆ. ತಾನು ತ್ರಿಕರಣ ಶುದ್ಧವಾಗಿ ಅಧಿಕಾರ ಸ್ವೀಕಾರದ ನಿರ್ಣಯವನ್ನು ರಚಿಸಿದುದಾಗಿದೆ. ಅದನ್ನು ಆಳರಸರು ಸ್ವೀಕರಿಸುತ್ತಿದ್ದರ ತಿಕ್ಕಾಟವು ನಿವಾರಿಸಲ್ಪಟ್ಟು ಕ್ರಮವಾಗಿ ಶಾಂತ ರೀತಿಯಲ್ಲಿ ಅಧಿಕಾರವು ನೌಕರಶಾಹಿಯಿಂದ ಪ್ರಜಾಸತ್ತೆಯ ಕೈವಶವಾಗುತ್ತಿತ್ತು.

ಶ್ರೀ ಶ್ರೀನಿವಾಸ ಶಾಸ್ತ್ರಿಗಳು

ಗವರ್ನರರು ಆಶ್ವಾಸನೆ ಕೊಡಬೇಕೆಂಬ ಕಾಂಗ್ರೆಸಿನವರ ಕೇಳಿಕೆಯ ಕುರಿತು ಭಿನ್ನಾಭಿಪ್ರಾಯವುಳ್ಳವರಾದರೂ ಸರಕಾರವು ತತ್ಕಾಲಿಕ ಮಂತ್ರಿಗಳನ್ನು ನೇಮಿಸಿ ಆಡಳಿತ ನಡಿಸುವುದನ್ನು ತೀವ್ರವಾಗಿ ನಿಷೇಧಿಸಿ, ಅದು ನಾಚಿಕೆಕರ ಮತ್ತು ದುಷ್ಪರಿಣಾಮಕಾರಿಯೆಂದು ಹೇಳಿರುವರು. 3ನೇ ರೌಂಡ್ ಟೇಬಲ್ ಪರಿಷತ್ತು ನಂತರ ಅಧಿಕಾರಕ್ಕೆ ಬಂದ ಇಂಗ್ಲೆಂಡಿನ ನೆಶನಲ್ ಸರಕಾರವು ಹಿಂದೂದೇಶದ ಕುರಿತು ಅನಾಹುತಕಾರಕ ತಪ್ಪುಗಳನ್ನು ಮಾಡುತ್ತಾ ಬಂದಿರುವುದು. ಐರ್ಲೆಂಡಿನ ಇತಿಹಾಸದಿಂದ ಅದೇನೂ ಪಾಠ ಕಲಿಯಲಿಲ್ಲ. ಹಿಂದೂದೇಶದಕುರಿತಾದ ಸರಕಾರದ ಧೋರಣೆಯು ಜನತೆಯನ್ನು ದೂರಮಾಡಿದೆಯೆಂಬುದನ್ನು ಮುಂದಿನ ಲೋಕಯುದ್ಧವು ಮನಗಾಣಿಸದಿರದೆಂದು ಎಚ್ಚರವಿತ್ತಿರುವರು.

ಸುಧಾರಣಾ ಆಕ್ಟು ಮುರಿಯಲ್ಪಟ್ಟಿತು.

ಪ್ರಜಾಪ್ರತಿನಿಧಿ ಸಭೆಯ ವಿಶ್ವಾಸದ ಒಂದಿಷ್ಟು ಸಂಬಂಧವೂ ಇಲ್ಲದೆ ಸರ್. ಕೆ. ವಿ. ರೆಡ್ಡಿಯವರು ಮಂತ್ರಿಮಂಡಲಿಯನ್ನು ರಚಿಸುವ ಜವಾಬ್ದಾರಿ ಹೊತ್ತಿರುವರು. ಹೊಸ ಇಂಡಿಯಾ ಆಕ್ಟಿನಲ್ಲಿ ಎಂತಹ ಭದ್ರತೆ ಮತ್ತು ವಿಶೇಷಾಧಿಕಾರಗಳು ಬೇಕಾದರೂ ಇರಲಿ; ಅದು ಪ್ರಜಾಜವಾಬ್ದಾರಿಯನ್ನೀಯುತ್ತದೆ-ದು ವಾದಿಸುತ್ತಿದ್ದ ಕೆಲವರೀಗ ಬಾಯಿಮುಚ್ಚಬೇಕಾಗಿರುವುದು. ಸರ್. ಕೆ. ವಿ. ರೆಡ್ಡಿಯವರ ಮಂತ್ರಿ ಮಂಡಲವು ಸಂಪೂರ್ಣವಾಗಿ ಪ್ರಜಾ ಜವಾಬ್ದಾರಿಯ ನಿರಾಕರಣೆ. ಇದರಿಂದಾಗಿ ಎಪ್ರಿಲ್ ತಾ. 1ರಲ್ಲೇ ಇಂಡಿಯಾ ಆಕ್ಟು ಸಂಪೂರ್ಣವಾಗಿ ಮುರಿದುಹೋಗುವಂತಾಗಿರುವುದು. ಸರ್. ಕೆ. ವಿ. ರೆಡ್ಡಿಯವರೂ ಮಾನ್ಯ ಗವರ್ನರರೂ ಇಂಡಿಯಾ ಆಕ್ಟಿನ ವಿರೋಧವಾಗಿ ಅದೊಂದು ಒಳಸಂಚುನಡಿಸಿ ಪ್ರಜಾ ಜವಾಬ್ದಾರಿ ಪದ್ಧತಿಯನ್ನೇ ಮೂಲೆಗೊತ್ತಿರುವ

The Combined Booking Agency

AND

The Joint Booking Office

MANGALORE, SOUTH KANARA.

ಪ್ರಯಾಣದ ಅಪೂರ್ವ ವ್ಯವಸ್ಥೆಯೇ ನಮ್ಮ ಜಿಲ್ಲೆಯು ಸಂಪಾದಿಸಿರುವ ಗೌರವಗಳಲ್ಲೊಂದಾಗಿದೆ. ಈ ತರದ ವ್ಯವಸ್ಥೆಯನ್ನು ಇನ್ನೆಲ್ಲಿಯೂ ಕಾಣಲಾರಿರಿ.

ಉತ್ತರದಿಂದ: ಭಟ್ಕಳ, ಗೋಕರ್ಣ, ಶಿರ್ಸಿ, ಅಂಕೋಲಾ, ಕಾರವಾರ ಅಲ್ಲದೆ ಗೋವಾ ವರೆಗೂ ಹೋಗಲಿಕ್ಕಾಗುತ್ತದೆ.

ಪೂರ್ವದಿಂದ: ಹುಲಿಕಲ್-ಶಿಮೊಗ್ಗಾ, ಆಗುಂಬೆ-ಶಿಮೊಗ್ಗಾ, ಚಾರ್ಮಾಡಿ, ಕಡೂರು, ಶಿರಾಡಿ, ಸಕಲೇಶಪುರ, ಹಾಸನ, ಮಡಿಕೇರಿ, ಮೈಸೂರು ಮೊದಲಾದ ಕಡೆಗಳಿಗೆ ಹೋಗಿ ಮುಂಬ್ಬಾಯಿಗೂ, ಮುಂಬ್ಬಾ ಪ್ರಾಂತ್ಯದ ಎಲ್ಲಾ ಭಾಗಗಳಿಗೂ, ಬೆಂಗಳೂರಿಗೂ, ಮದ್ರಾಸಿಗೂ ರೈಲು ಮೂಲಕ ಪ್ರಯಾಣಿಸಬಹುದಾಗುತ್ತದೆ.

ದಕ್ಷಿಣದಲ್ಲಿ: ಕಾಸರಗೋಡು ವರೆಗೆ ಸರ್ವಿಸುಗಳು ಇವೆ.

ಬಸ್ಸು ಸರ್ವಿಸುಗಳ ನೌಕರರೆಲ್ಲರೂ ಅತೀ ಸಭ್ಯರೀತಿಯಿಂದ ವರ್ತಿಸಬೇಕಾಗಿ ಎಚ್ಚರಿಸಲ್ಪಟ್ಟಿದ್ದಾರೆ.

ಪ್ರಯಾಣಿಕರು ತಮ್ಮ ಅನುಭವದ ಕುರಿತು ಬರೆಯುವ ಕಾಗದಗಳ ಮೇಲೆ ತುಂಬಾ ಲಕ್ಷ್ಯವಿಡಲಾಗುವುದು.

Joint Managers.

ರೆಂದು ಶ್ರೀ ರಾಜಗೋಪಾಲಾಚಾರ್ಯರು ಅಭಿಪ್ರಾಯವಿತ್ತಿರುವರು

ಸರ್. ತೇಜ ಬಹದೂರು ಸಪ್ರುಗಳು

ಗವರ್ನರರು ತನ್ನ ವಿಶೇಷಾಧಿಕಾರ ಉಪಯೋಗಿಸಬಾರದು, ತಮಗೆ ಸಂಪೂರ್ಣ ಆಡಳಿತ ಸ್ವಾತಂತ್ರ್ಯವೀಯಬೇಕು, ತಮ್ಮ ಆಡಳಿತದಲ್ಲಿ ಕೈಹಾಕಬಾರದೆಂದೇ ಅವರಿಂದ ಮೊದಲಾಗಿ ಆಶ್ವಾಸನ ಪಡೆಯುವ ಕಾಂಗ್ರೆಸಿನ ನಿರ್ಣಯವು ಅಯುಕ್ತವಾದುದು. ಯಾಕೆಂದರೆ ಗವರ್ನರರಿಗೆ ಹೊಸಸುಧಾರಣಾ ಆಕ್ಟು ಪ್ರಕಾರ ಆ ಭರವಸೆ ಕೊಡುವ ಅಧಿಕಾರವಿಲ್ಲ. ಅದಕ್ಕೆ ಆಕ್ಟನ್ನೇ ಬದಲಾಯಿಸಬೇಕಾಗುವುದು ಎಂದು ಸರ್. ತೇಜ ಬಹುದೂರು ಸಪ್ರುಗಳು ಅಭಿಪ್ರಾಯವಿತ್ತು, ವೈಸರಾಯರು ಗಾಂಧಿಜಿಯವರೇ ಮೊದಲಾದ ಕಾಂಗ್ರೆಸ್ ಮುಖಂಡರೊಡನೆ ಮಾತುಕತೆ ನಡಿಸಿ ಪ್ರಕೃತದ ದೊಡ್ಡ ಸಮಸ್ಯೆಯನ್ನು ನಿವಾರಿಸಲೆತ್ನಿಸಬೇಕೆಂದಿರುವರು.

ವೈಸರಾಯರು ಕಾಂಗ್ರೆಸ್ ಮುಖಂಡರನ್ನು ಆಮಂತ್ರಿಸಬೇಕು

ಇಂಗ್ಲೆಂಡಿನ ಲೇಬರ್ ಪಕ್ಷದ ಮಾಜಿ ನಾಯಕರಾದ ಮಿ. ಲೇನ್ಸ್‌ಬರಿಯವರು, ಲೋರ್ಡ್ ಲ್ಲಿಸಿತ್ ಗೋರರವರು ಕಾಂಗ್ರೆಸ್ ಮುಖಂಡರೊಡನೆ ಮಾತಾಡುವ ಏರ್ಪಾಡುಮಾಡಿ ಪ್ರಕೃತ ಉಪಸ್ಥಿತವಾಗಿರುವ ವಿಷಮ ಪರಿಸ್ಥಿತಿಯನ್ನು ನಿವಾರಿಸಬೇಕೆಂದು ವಿನಂತಿಸಿ ಕೇಬ್ಲು ಬಿಟ್ಟಿರುವರು "ಕಾಂಗ್ರೆಸ್ ಮುಖಂಡರು ವೈಸರಾಯರು ಆಮಂತ್ರಿಸಿದರೆ ಬಂದು ಮಾತಾಡಲೊಪ್ಪದಿರರು. ಪ್ರಕೃತದ ಸಮಸ್ಯೆಯನ್ನು ವೈಸರಾಯರು ಹೇಗಾದರೂ ತೃಪ್ತಿಕರವಾಗಿ ಬಿಡಿಸಲೆತ್ನಿಸಬೇಕೆಂದು ಬೇರೆಬೇರೆ ಪಕ್ಷಗಳ ಆಂಗ್ಲೇಯರ ಆಶೆಯಿದೆ ನಾನು ಗಾಂಧಿಜಿಯವರ ಮತ್ತು ಶ್ರೀ ಶಾಸ್ತ್ರಿಗಳ ಹೇಳಿಕೆಗಳನ್ನೋದಿದೆನು. ಇಕ್ಕಡೆಯವರೂ ಒಂದು ಒಡಂಬಡಿಕೆಗೆ ಯಾಕೆ ಬರಲಿಲ್ಲೆಂದು ನನಗಂತೂ ಹೊಳೆಯುವುದಿಲ್ಲ"ಎಂದು ಮಿ. ಲೇನ್ಸ್‌ಬರಿಯವರ ಹೇಳಿಕೆ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು, ಸರಕಾರವು ತನ್ನ ಧೋರಣೆಯನ್ನು ಬದಲಾಯಿಸಿ ಹಿಂದೀಯರ ಆಕಾಂಕ್ಷೆಯನ್ನು ಮನ್ನಿಸಿ ಅವರನ್ನು ತೃಪ್ತಿಪಡಿಸಲೆತ್ನಿಸಬೇಕೆಂದು ಕೇಳಿಕೊಂಡಿರುವುದು. ಕಾಂಗ್ರೆಸಿನ ಕುರಿತು ಇಂಗ್ಲೆಂಡಿನ ಪತ್ರಿಕೆಗಳ ಧೋರಣೆಯು ಈಗ ಬದಲಾಗ ಹತ್ತಿರುವುದು. ಅವು ಕಾಂಗ್ರೆಸ್ಸನ್ನು ಮೊದಲಿನಷ್ಟು ಉಗ್ರವಾಗಿ ಟೀಕಿಸುವುದನ್ನು ನಿಲ್ಲಿಸಿರುವವು. ಹಿಂದೂದೇಶದಲ್ಲೀಗ ಬಹಳ ಕಷ್ಟ ಪರಿಸ್ಥಿತಿಯುಂಟಾಗಿದೆ; ಅದನ್ನು ಸರಿಪಡಿಸಲು ಅಲ್ಲಿಯ ಜನರಿಗೇನೇ ಬಿಟ್ಟುಬಿಡುವದು ಲೇಸೆಂದು ಲೋರ್ಡ್ ವೆಲ್ಲಿಂಗ್ಟನರೆಂದಿರುವರು.

ವೈಸರಾಯರು ಗಾಂಧಿಜೀಯವರನ್ನು ಕಾಣಬೇಕು

ಪ್ರಕೃತ ಅಭೂತಪೂರ್ವವಾದ ರಾಜಕೀಯ ಪರಿಸ್ಥಿತಿಯುಂಟಾಗಿರುವುದು. ಈ ಸಂದರ್ಭದಲ್ಲಿ ವೈಸರಾಯರು ಗಾಂಧಿಜೀಯವರನ್ನು ಮತ್ತು ಇತರ ಕಾಂಗ್ರೆಸ್ ಪಕ್ಷೀಯರನ್ನು ಕಂಡು ಮಾತಾಡುವುದು ನ್ಯಾಯವೂ ಕ್ರಮಬದ್ಧವೂ ಆಗಿರುವುದು. ಇಲ್ಲವಾದರೆ ಇಂಡಿಯಾ ಆಕ್ಟು ನಿಸ್ಸಾರವಾಗುವುದು. ಕಾಂಗ್ರೆಸಿನವರನ್ನು ಕಾಯಿದೆ ಭಂಗ ಚಳವಳಮಾಡಲು ಬಿಟ್ಟಂತಾಗುವುದೆಂದು ಯಾವಾಗಲೂ ಸರಕಾರದ ಪಕ್ಷಪಾತಿಯಾದ ಕಲ್ಕತ್ತದ ಸ್ಟೇಟ್ಸ್‌ಮೇನ್ ಪತ್ರಿಕೆಯು ಅಗ್ರಲೇಖ ಬರೆದಿರುವದು ಕಾಂಗ್ರೆಸ್ ಪಕ್ಷೀಯರು ಅಧಿಕಾರ ಸ್ವೀಕರಿಸದಿದ್ದರೆ ಹೊಸ ಸುಧಾರಣಾ ಆಕ್ಟನ್ನು ಜಯಶೀಲವಾಗಿ ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ. ಮತ್ತು ರಾಜ್ಯಾಂಗ ರಚನೆಯ ಮುಖ್ಯ ಉದ್ದೇಶಕ್ಕೇನೇ ಭಂಗ ಬರುವುದು. ಈಗ ಗವರ್ನರರು ಪ್ರಾಂತಿಕ ಮುಖಂಡರುಗಳೊಡನೆ ಮಾತಾಡಿ ಮುಗಿಸಿರುವುದರಿಂದ ಇನ್ನು ಮುಂದೆ ವೈಸರಾಯರು ಗಾಂಧಿಯವರೊಡನೆ ಮಾತಾಡಿ ನೋಡಬೇಕು. ಇದನ್ನು ಬಿಟ್ಟು ಸರಕಾರವು ಪುನಹ ಚುನಾವಣೆನಡಿಸುವ ಹವ್ಯಾಸಕ್ಕೆ ಹೋದರೆ ಕಾಂಗ್ರೆಸಿನವರು ಇನ್ನಷ್ಟು ಬಹುಪಕ್ಷದಿಂದ ಆರಿಸಿಬಂದು ಯಥಾ ಪ್ರಕಾರ ಅಧಿಕಾರ ಸ್ವೀಕರಿಸಲು ನಿರಾಕರಿಸುವರು. ಆಗ ಗವರ್ನರರೇ ರಾಜ್ಯಭಾರದ ಜವಾಬ್ದಾರಿ ಹೊರಬೇಕಾಗುವುದು ಇದರಿಂದ ಸುಧಾರಣಾ ಆಕ್ಟಿನ ಉದ್ದೇಶಕ್ಕೇನೇ ಭಂಗತಂದಂತಾಗುವುದು. ಆದುದರಿಂದ ಪ್ರತಿಷ್ಠೆ ಗೌರವಾದಿಗಳನ್ನು ಪರಿಗಣಿಸದೆ ಯಾವುದಾದರೊಂದು ಬಗೆಯಿಂದ ಪ್ರಕೃತದ ಸಮಸ್ಯೆಯನ್ನು ಬಿಡಿಸಲು ಕೊನೆಯ ಪ್ರಯತ್ನವನ್ನು ವೈಸರಾಯರು ಮಾಡಿ ನೋಡಬೇಕೆಂದೇ ಸ್ಟೇಟ್ಸ್‌ಮೆನ್ ಪತ್ರಿಕೆಯು ಆಗ್ರಹದ ಕೇಳಿಕೆ.

ಮಂಗಳೂರು

(ನಮ್ಮ ಸ್ವಂತವಾರ್ತಾದಾರರಿಂದ)

ಬೇಗಮ್ ಅಮೀರುದ್ದೀನರಿಗೆ ಧನ್ಯವಾದ

ಕಳೆದ ತಾ ೨೯ರಲ್ಲಿ ಮಹಿಳಾಸಭೆಯ ಒಂದು ವಿಶೇಷ ಸಭೆಯು ಜರಗಿಸಲ್ಪಟ್ಟಿತು, ಅಂದಿನ ಸಮಾರಂಭದಲ್ಲಿ ಶ್ರೀಮತಿ ಪಂಡಿತ ಕಲ್ಯಾಣಿ ಬಾಯಿಯವರು ಅಧ್ಯಕ್ಷತೆ ವಹಿಸಿದ್ದರು ಬೇಗಮ್ ಸುಲ್ತಾನ್ ಅಮೀರುದ್ದೀನ್(ಜಿಲ್ಲಾ ಜಡ್ಜರಾದ ಮಿ|ಮೀರ್ ಅಮೀರುದ್ದೀನರ ಧರ್ಮಪತ್ನಿಯವರ)ರವರು ಬರುವ ಜುಲೈ ತಿಂಗಳಲ್ಲಿ ಆಕ್ಸ್‌ಫರ್ಡಿನಲ್ಲಿ ನಡೆಯಲಿರುವ ವಿವಿಧ ಧರ್ಮಗಳ ಪರಿಷತ್ತಿನಲ್ಲಿ ಭಾಷಣಮಾಡುವುದಕ್ಕಾಗಿ ಆಹ್ವಾನಿಸಲ್ಪಟ್ಟ ಕಾರಣ ಸಭೆಯವರಿಗುಂಟಾದ ಅತ್ಯಂತಸಂತೋಷವನ್ನು ವ್ಯಕ್ತಗೊಳಿಸುವುದಕ್ಕಾಗಿ ಈ ಸಭೆಯು ಜರಗಿಸಲ್ಪಟ್ಟಿತು ಶ್ರೀಮತಿ ಬಿಂಭವಿ ಆರ್. ಪ್ರಾಂಜ ಬಿ.ಎ, ಶ್ರೀಮತಿ ಆನಂದಿ ಬಾಯಿ ಮತ್ತು ಇನ್ನಿತರ ಸದಸ್ಯೆಯರೂ ಅಧ್ಯಕ್ಷೆಯೂ ಬೇಗಮ್ ಅಮೀರುದ್ದೀನರನ್ನು ಪ್ರಶಂಸಿಸಿ ಭಾಷಣ ಮಾಡಿದರು ಕೊನೆಗೆ ಬೇಗಮರಿಗೆ ಈ ಗೌರವವು ದೊರೆತುದಕ್ಕೆ ಆನಂದಿಸಿಯೂ ಇಂಗ್ಲೆಂಡಿನ ಪ್ರಯಾಣವು ಸುಖಮಯ ವಾಗಲೆಂದೂ ಬಯಸಿ ಠರಾವುಮಾಡಿದರು ಬೇಗಮ್ ಅಮೀರುದ್ದೀನರು ತಮ್ಮನ್ನು ಈರೀತಿ ಗೌರವಿಸಿದಕ್ಕೂ ಮತ್ತು ತಮ್ಮವಿಷಯದಲ್ಲಿ ಇಷ್ಟು ಒಳ್ಳೆಯ ಅಭಿಪ್ರಾಯಗಳನ್ನು ಪ್ರೀತಿಯಿಂದ ಮಾತಾಡಿದುದಕ್ಕೂ ತಮ್ಮ ವಂದನೆಗಳನ್ನು ಅರ್ಪಿಸಿದರು.

ಆಟಗಳ ಸ್ಪರ್ಧೆಯಲ್ಲಿ ಗೆದ್ದವರಿಗೆ ಪಾರಿತೋಷಕ

ಕಳೆದ ತಾ ೨೯ರಲ್ಲಿ ಮಹಿಳಾ ಸಭೆಯವರು ಜರಗಿಸಿದ ಆಟಗಳ ಸ್ಪರ್ಧೆಯಲ್ಲಿಗೆದ್ದವರಿಗೆ ಪಾರಿತೋಷಕಗಳನ್ನು ಹಂಚುವ ಸಮಾರಂಭವು ಮಹಿಳಾಸಭೆಯಲ್ಲಿ ನಡೆಯಿತು ಸಭೆಯ ಪೋಷಕರಾದ (ಪೇಟ್ರನ್) ಬೇಗಮ್ ಸುಲ್ತಾನಾ ಅಮೀರುದ್ದೀನರು ಅಧ್ಯಕ್ಷತೆಯನ್ನು ವಹಿಸಿ ಪಾರಿತೋಷಕಗಳನ್ನು ಹಂಚಿದರು ಟೆನ್ನಿಸ್ ಸಿಂಗಲ್ಸ್, ಟೆನ್ನಿಸ್ ಡಬ್ಬಲ್ಸ್ ಮತ್ತು ಬ್ಯಾಡ್‌ಮಿಂಟನ್—ಈ ಆಟಗಳಲ್ಲಿ ಹಲವರು ಗೆದ್ದಿದ್ದರು. ಅವರೆಲ್ಲರಿಗೂ ಪಾರಿತೋಷಕಗಳು ಹಂಚಲ್ಪಟ್ಟವು ಆಟಗಳ ಸಮಿತಿಯ ಕಾರ್ಯದರ್ಶಿಗಳು ಅಧ್ಯಕ್ಷೆಯರಿಗೆ ಈ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದುದಕ್ಕಾಗಿ ಧನ್ಯವಾದಗಳನ್ನರ್ಪಿಸಿದರು. ಇದು ವನೋಲೆ ನೆರೆದಿದ್ದ ಸಭಿಕರಿಗೆ ಲಘೂಪಲಾಹಾರವು ಸಮರ್ಪಿಸಲ್ಪಟ್ಟಿತು ಅನಂತರ ಸಭಾಂತ್ಯವಾಯಿತು.

ಮಂಗಳೂರು ಲೇಡಿಸ್ ಕ್ಲಬ್

ಈ ಸಂಸ್ಥೆಯ ವಾರ್ಷಿಕ ಜನರಲ್ ಮೀಟಿಂಗು ಕಳೆದ ತಾ. ೩೧ನೇ ಸಾಯಂಕಾಲ ಜರಗಿತು. ಮಿಸೆಸ್ ಎನ್ ವೆಂಕಟರಾಯರು ಅಧ್ಯಕ್ಷತೆ ವಹಿಸಿದ್ದರು ಸದಸ್ಯೆಯರು ತುಂಬಾ ಸಂಖ್ಯೆಯಲ್ಲಿ ಬಂದಿದ್ದರು ಮಿಸಸ್ ಯಂ. ಎಸ್ ಪ್ರೇಸ್ತರು ಗತವರ್ಷದವರದಿಯನ್ನೂ, ಲೆಕ್ಕಪತ್ರವನ್ನೂ ಸಭೆಯ ಮುಂದಿರಿಸಿದರು ಅವು ಮಂಜೂರಾದವು. ಮುಂದಿನ ವರ್ಷದ ಕಾರ್ಯನಿರ್ವಾಹಕ ಮಂಡಲಿಗೆ ಸದಸ್ಯೆಯರ ಚುನಾವಣೆಯಾಯಿತು ಮಿಸೆಸ್. ಎನ್. ವೆಂಕಟರಾಯರು ಅಧ್ಯಕ್ಷೆಯರಾಗಿಯೂ ಮಿಸೆಸ್ ಜಿ. ಸರ್ಲ್‌ರವರು ಉಪಾಧ್ಯಕ್ಷೆಯರಾಗಿಯೂ ಮಿಸಸ್ ಯಂ ಎಸ್ ಪ್ರೇಸ್ತರ, ಕಾರ್ಯದರ್ಶಿ, ಖಜಾಂಚಿಯವರಾಗಿಯೂ ಆರಿಸಲ್ಪಟ್ಟದ್ದಲ್ಲದೆ ಕಾರ್ಯಕಾರಿಮಂಡಲಿಗೆ ಇತರ ಸದಸ್ಯೆಯರ ಚುನಾವಣೆಯಾದ ಅನಂತರ ಸಭೆಯು ಮುಗಿಯಿತು.

ಅಮೇರಿಕದ ಸಂಚಾರಿಗಳು

ತಾ ೩೧ನೇ ಬುಧವಾರ ದಿವಸ ಅಮೇರಿಕದ ಹಲವು ಮಂದಿ ಸ್ತ್ರೀ ಪುರುಷರು (ಸುಮಾರು ೧೦೦ಕ್ಕಿಂತಲೂ ಹೆಚ್ಚಾಗಿ)ಮಂಗಳೂರಿಗೆ ಹಡಗಿನಲ್ಲಿ ಬಂದಿಳಿದರು ಇವರುಗಳು ಪ್ರಪಂಚವನ್ನೆಲ್ಲಾ ಸಂದರ್ಶಿಸುವ ಸಲುವಾಗಿಬಂದಿರುವರು. ಅವರಲ್ಲಿ ಕೆಲವರು ಅಲೋಶಿಯಸ್ ಕಾಲೇಜಿನ ಇಗರ್ಜಿಯ ಚಿತ್ರಕೆಲಸಗಳನ್ನು ನೋಡುವುದಕ್ಕಾಗಿ ಹೋಗಿದ್ದರು. ಇನ್ನು ಕೆಲವರು ಕಾರ್ಕಳ ಮೂಡಬಿದ್ರೆಗಳಿಗೆ ಹೋಗಿ ಅಲ್ಲಿ ಗೋಮಟೇಶ್ವರನ ಪ್ರತಿಮೆ ಮತ್ತು ಸಾವಿರಕಂಬಗಳ ಜೈನ ದೇವಸ್ಥಾನವೇ ಮೊದಲಾದ ಶಿಲ್ಪ ಕಲಾಕೌಶಲ್ಯಗಳನ್ನು ನೋಡಿಕೊಂಡುಬಂದರು.

ಜಿಲ್ಲಾ ವಿದ್ಯಾಸಮಿತಿ

ದಕ್ಷಿಣ ಕನ್ನಡ ಜಿಲ್ಲಾ ಎಜುಕೇಶನ್ ಕೌನ್ಸಿಲ್ ಸಭೆಯು ನಿನ್ನೆ ಅಪರಾಹ್ನ ೬ ಘಂಟೆಗೆ ಶ್ರೀ| ಯನ್ ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಂಕನಾಡಿ ಹಿಂದೂ ಎಲಿಮೆಂಟರಿ ಶಾಲೆಯ ಹತ್ತಿರದಲ್ಲಿ ಕಾನ್ವೆಂಟಿನವರು ಒಂದು ಶಾಲೆಯನ್ನು ಸ್ಥಾಪಿಸಿ ಅದಕ್ಕೆ ಮಂಜೂರಾತಿ ಕೊಡಬೇಕೆಂದು ಕೌನ್ಸಿಲಿಗೆ ಬರೆದಿದ್ದರು. ಇದರ ಮೇಲೆ ದೀರ್ಘಚರ್ಚೆಯು ನಡೆಯಿತು ಹಿಂದೂ ಶಾಲೆಯವರು ಹಾಗೆ ಅಷ್ಟು ಹತ್ತಿರದಲ್ಲಿ ಶಾಲೆಯನ್ನು ಸ್ಥಾಪಿಸಲು ಅಪ್ಪಣೆಕೊಡಬಾರದಾಗಿ ತಿಳಿಸಿದರು ವಿದ್ಯಾಧಿಕಾರಿಗಳು ಹೊಸ ಶಾಲೆಯು ಅಗತ್ಯವೆಂದು ವಾದಿಸಿದರು ಶ್ರೀಯುತ ಯಂ ಶಿವರಾಯರು ಅದನ್ನು ಪ್ರತಿಭಟಿಸಿದರು. ಕೊನೆಗೆ ಈ ಪ್ರಕಾರ ತೀರ್ಮಾನವಾಯಿತು ಹಿಂದೂ ಶಾಲೆಯಿಂದ ಐದು ಫರ್ಲಾಂಗು ದೂರದಲ್ಲಿ ಶಾಲೆಯನ್ನು ಸ್ಥಾಪಿಸಬೇಕು ಮತ್ತು ಮಂಜೂರಾತಿಗೆ ಪ್ರತ್ಯೇಕವಾಗಿ ಬರೆದುಕೊಳ್ಳಬೇಕು.

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries

BRANCHES AT:		
P. B. 337 Mount Road, Madras	Visveswarapuram Circle, Bangalore City	Soumyalayam Puthiyara, Calicut.
Car Street, Mangalore.	Udipi, S. India	Chuni Road, Bombay No. 4.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs. 80,00,000
Life Funds Over .. .	Rs 68,00,000
Premium Income Over	Rs 22,54,000
Interest Income ..	Rs 3,16,000
Claims Paid	Rs. 5,75,000

Total Claims paid Over Rs. 58,50,000

Total Business in Force Over Rs 4,4251,200,

TOTAL BUSINESS IN FORCE Rs. 4,42,51,200

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಲಿಮಿಟೆಡ್, ಉಡುಪಿ

(೧೯೦೬ರಲ್ಲಿ ಸ್ಥಾಪಿತವಾದದ್ದು)

ಪ್ರಕಟಣೆ

ಇವರ ಶಾಖೆಗಳು ತಾ 19-3-1937ರಲ್ಲಿ

(1) ವೆಲ್ಲೂರು (ಉತ್ತರ ಆರ್ಕಾಟು ಜಿಲ್ಲೆ) ಮತ್ತು (2) ಬೈಂದೂರು (ದಕ್ಷಿಣ ಕನ್ನಡ ಜಿಲ್ಲೆ) ಈ ಸ್ಥಳಗಳಲ್ಲಿ ತೆರೆಯಲ್ಪಟ್ಟಿರುವುವು.

ಈ ಬ್ಯಾಂಕಿನ ರಿಜಿಸ್ಟರ್ಡ್ ಆಫೀಸನ್ನು ತಾ 19-3-1937ನೇ ಶುಕ್ರವಾರ ಇಡೀ ಪಟ್ಟಣದ ಮಧ್ಯ ನಡುವಾದ ಮಸೀದಿ ರಸ್ತೆಯಲ್ಲಿರುವ (ದಿವಂಗತ ಖಾನ್ ಬಹದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ ಸಾಹೇಬರು ಪಾಸ್ತವಿಸಿದ್ದ) ಭವ್ಯವಾದ ಕಟ್ಟಡಕ್ಕೆ ಒಯ್ಯಲ್ಪಟ್ಟಿರುವುದು

ಎಮ್. ಶ್ರೀನಿವಾಸ ಪ್ರಭು,
MANAGER.

ಉಡುಪಿ, ತಾ ೮-೪-'೩೭ ಗುರುವಾರ

ಆದಿಯಲ್ಲೇ ಅಂತ್ಯಕ್ರಿಯೆ.

ಮೊದಲು ಸುಮಾರು 7 ಮಿಲ್ಯವಿದ್ದ ಓಟರರ ಸಂಖ್ಯೆಯನ್ನು 30 ಮಿಲ್ಯದವರೆಗೇರಿಸಿ, ಇಡೀ ಹಿಂದುದೇಶದಲ್ಲೆಲ್ಲಾ ಚುನಾವಣೆಯ ಪ್ರಚಂಡ ಗೊಂದಲವಬ್ಬಿಸಿ, ಜನ್ಮಕ್ಕೆ ತಂದ ಪ್ರಜಾ ಜವಾಬ್ದಾರಿಯ ಹೊಸ ಸುಧಾರಣಾ ಆಕ್ಟಿನ ಪ್ರಾಣವು ಹುಟ್ಟುವಾಗಲೇ ಹಾರಿ ಹೋಗುವಂತಾಯಿತು ಪ್ರಾಂತಿಕ ಗವರ್ನರರುಗಳು ಬಲು ಚಂದವಾಗಿ ಅದರ ಸಮಾಧಿ ಮಾಡಿರುವರು ಪ್ರಾಂತಿಕ ಸ್ವಾತಂತ್ರ್ಯಪ್ರಜಾಜವಾಬ್ದಾರಿಕೆಯೆಂಬುದು ಲೋಕದ ಕಣ್ಣಿಕಟ್ಟಿಗಾದರೂ ಇಲ್ಲದಂತಾಗಿದೆ, ಆ ಸೋಗು ಕೂಡಾ ಹರಿದು ನಿರಂಕುಶತನದ ಸಂಪೂರ್ಣ ನಗ್ನತೆಯು ಬಯಲಾಗಿರುವುದು. ಇನ್ನಾದರೂ ಬಂದೆ, ತಮ್ಮ ಆಳ್ವಿಕೆಗೆ ಹಿಂದೀ ಪ್ರಜೆಗಳ, ಮಿಲ್ಯಾಂತರ ಹಳ್ಳಿಗರ ಬೆಂಬಲವಿದೆ, ಕಾಂಗ್ರೆಸೆಂಬುದು ಕೇವಲ ಕೆಲ ಮಂದಿ ಶಿಕ್ಷಿತರ ಕೈಗೊಂಬೆಯೆಂದು ಆಳರಸರಿಗೆ ಲೋಕದ ಕಣ್ಣಿಗೆ ಮಣ್ಣು ಹಾಕಲು ಸಾಧ್ಯವಿಲ್ಲ ಇದೀಗ ಚುನಾವಣೆಯಿಂದಾದ ಮಹತ್ತಾದ ಪರಿಣಾಮ. ಜನತೆಯು ಕಾಂಗ್ರೆಸಿಗೆ ಕೊಟ್ಟ ಬೆಂಬಲದ ಸತ್ಫಲ ಇದರಿಂದಾಗಿ ಹಿಂದೀಯರು ತಮ್ಮ ಸ್ವಾತಂತ್ರ್ಯ ಸಮರದಲ್ಲಿ ಒಂದು ಹೆಜ್ಜೆ ಮುಂದಿಟ್ಟಂತಾಗಿರುವುದು.

ತಾವೇ ಮಾಡಿದ ಆಕ್ಟಿನ ಪ್ರಕಾರ ನಡೆಯುವುದಾದರೆ, ಯಾವಾಗ ಬಹು ಪಕ್ಷೀಯರು ಮಂತ್ರಿಪದವಿ ಸ್ವೀಕರಿಸಲು ಒಪ್ಪುವುದಿಲ್ಲವೋ ಆಗ ಗವರ್ನರರು ತಾವೇ ಆಡಳಿತದ ಸರ್ವ ಜವಾಬ್ದಾರಿ ವಹಿಸಬೇಕಿತ್ತು. ಇಲ್ಲವೆ ಇನ್ನೊಮ್ಮೆ ಚುನಾವಣೆ ನಡಿಸಬೇಕಿತ್ತು. ಅವರು ಹಾಗೇನೂ ಮಾಡದೆ ತಮ್ಮ ಕೈಗೊಂಬೆಗಳನ್ನು ಮಂತ್ರಿಗಳಾಗಿ ನೇಮಿಸಿಕೊಂಡಿರುವರು. ಇವರಿಗೆ ಯಾವ ತರದ ಪ್ರಜಾ ಬೆಂಬಲವೂ ಇರುವುದಿಲ್ಲ ಕೇವಲ 'ಡಮ್ಮಿ'ಮಂತ್ರಿಗಳಿವರು. ಯಾವ ತರದ ಜವಾಬ್ದಾರಿಯಾಗಲಿ ಸ್ವಾಭಿಮಾನವಾಗಲಿ ಇಲ್ಲದ ಸ್ವಪ್ರತಿಷ್ಠಾಕಾಮಿಗಳು.

ಹೇಗಾದರೂ ಎಪ್ರಿಲ್ ತಾ. 1ರಲ್ಲಿ ಹೊಸ ಸುಧಾರಣೆಯು ಜ್ಯಾರಿಗೆ ಬರುವಾಗ ಹೊಸ ಮಂತ್ರಿಮಂಡಲವನ್ನು ರಚಿಸಲೇಬೇಕೆಂಬ ಆತುರದಿಂದ ಗವರ್ನರರುಗಳು ತಮ್ಮ ಕೈಯಿಂದ ತಮ್ಮ ಸುಧಾರಣಾ ಕೂಸಿನ ಕೊಲೆ ಮಾಡಿ ತಮ್ಮ ಹಸ್ತ ರಾದ ಮಂತ್ರಿಗಳ ಗಡಣದಿಂದ ಬಲು ಸಂಭ್ರಮದಿಂದ ಅದರ ಶವಸಂಸ್ಕಾರ ಮಾಡಿರುವರು ಆ ಸೂತಕವನ್ನೇ ಎಪ್ರಿಲ್ ತಾ. 1ರಲ್ಲಿ ಕೇವಲ ಪಟ್ಟಣಿಗರು ಮಾತ್ರವಲ್ಲ, ಹಳ್ಳಿಮೂಲೆಯ ಜನರೂ, ಹಿಂದು-ಮುಸಲ್ಮಾನ-ಕ್ರೈಸ್ತರೆನ್ನದೆ ಸರ್ವರೂ ಅಭೂತಪೂರ್ವ ಐಕ್ಯತೆಯಿಂದ ಆಚರಿಸಿದರು.

ಹೊಸಸುಧಾರಣೆಯನ್ನು ಹಿಂದೀಯರು ಎಷ್ಟೊಂದು ವಿರೋಧಿಸುತ್ತಾರೆ, ಕಾಂಗ್ರೆಸಿಗೆ ಎಷ್ಟರ ಮಟ್ಟಿನ ಜನಬೆಂಬಲವಿದೆಯೆಂಬುದೀಗ ಲೋಕವಿಶ್ರುತವಾಯಿತು. ಸದಾ ಕಾಂಗ್ರೆಸನ್ನು ತೃಣಸಮಾನವಾಗಿ ಹಳಿಯುವ ಬ್ರಿಟಿಷ್ ಪತ್ರಿಕೆಗಳು ಕೂಡಾ ಈಗ ಸ್ವಲ್ಪ ಕಣ್ಣು ತೆರೆದಿವೆ ಕಾಂಗ್ರೆಸಿನ ರೀತಿನೀತಿಗೊಪ್ಪದ ಸರ್ ತೇಜಬಹದೂರು ಸಪ್ರು, ನಾಮಧಾರ ಶ್ರೀನಿವಾಸಶಾಸ್ತ್ರಿ, ಸರ್ ಕೃಷ್ಣನ್ ನಾಯರ್ ಮೊದಲಾದ ಮಂದ ಪಕ್ಷೀಯರು ಕೂಡಾ, ಆಳರಸರು ಕಾಂಗ್ರೆಸಿನೊಡನೆ ಸಂಧಿಪ್ರಸ್ತಾಪ ಮಾಡಬೇಕು, ವೈಸರಾಯರು ಗಾಂಧಿಜಿಯವರೇ ಮೊದಲಾದ ಕಾಂಗ್ರೆಸ್ ಮುಖಂಡರನ್ನು ಕಂಡು ಮಾತಾಡಬೇಕೆಂದು ಅಭಿಪ್ರಾಯಪಟ್ಟು, ಈಗ ಗವರ್ನರರು ರಚಿಸಿರುವ ಡಮ್ಮಿ ಮಂತ್ರಿಮಂಡಲಗಳು ಸುಧಾರಣಾ ಆಕ್ಟಿಗೇನೇ ವಿರೋಧವಾದ ವಿಪರ್ಯಾಸವೆಂದು ಅವನ್ನು ತೀವ್ರವಾಗಿ ನಿಷೇಧಿಸಿರುವರು. ಇಂಗ್ಲೆಂಡಿನ ಮೆಂಚೆಸ್ಟರ್ ಗಾರ್ಡಿಯನ್ನಿನಂತಹ ಪತ್ರಿಕೆಗಳೂ, ಲೋಸ್ಪಾಬರಿಯಪರಂತಹ ಉದಾರಬುದ್ಧಿಯ ಮುತ್ಸದ್ದಿಗಳೂ, ವೈಸರಾಯರು ಕಾಂಗ್ರೆಸ್ ಮುಂದಾಳುಗಳೊಡನೆ ಮಾತಾಡಿ ಪ್ರಕೃತ ಉಂಟಾಗಿರುವ ದೊಡ್ಡ ಸಮಸ್ಯೆಯನ್ನು ಬಗೆಹರಿಸಲೆತ್ನಿಸಬೇಕೆಂದು ಸೂಚಿಸಿರುವರು. ಸದಾ ಸರಕಾರದ ಪಕ್ಷವನ್ನೇ ಹಿಡಿದು ಕಾಂಗ್ರೆಸೆಂದರ ಉರಿದು ಬೀಳುತ್ತಿದ್ದ ಕಲ್ಕತ್ತದ ಸ್ಟೇಟ್ಸ್‌ಮೆನ್ ಪತ್ರಿಕೆಯು ಕೂಡಾ ಗವರ್ನರರುಗಳ ಪ್ರಕೃತದ ಧೋರಣೆಯಿಂದ ಸುಧಾರಣಾ ಆಕ್ಟನ್ನೇ ಮಣ್ಣುಗೂಡಿಸಿದಂತಾಗಿರುವುದೆಂಬ ಅಭಿಮತವಿತ್ತು, ವೈಸರಾಯರು ಯಾವ ತರದ ಪ್ರತಿಜ್ಞೆಯನ್ನೂ ಕಟ್ಟಿಕೊಳ್ಳದ ಕಾಂಗ್ರೆಸ್ ಮುಂದಾಳುಗಳನ್ನು ಆ ಮಂತ್ರಿಸಿ ಮಾತಾಡಬೇಕೆಂದು ಸೂಚಿಸಿರುವರು. ಗವರ್ನರರು ಪುನಃ ಚುನಾವಣೆ ನಡಿಸಿದರೆ ಇನ್ನೂ ಹೆಚ್ಚಿನ ಬಹುಪಕ್ಷವು ಕಾಂಗ್ರೆಸಿಗೆ ಸಿಕ್ಕುವುದು ನಿಶ್ಚಯವೆಂದೂ, ಅದರಿಂದ ಮತ್ತೂ ಮತ್ತೂ ಮೊದಲಿನ ಸಮಸ್ಯೆಯೇ ಉಪಸ್ಥಿತವಾಗುವುದೆಂದೂ ಸರಕಾರದ ಹಿತಾಕಾಂಕ್ಷಿಗಳೇ ಆದವರು ಎಚ್ಚರಿಕೆಯಿತ್ತಿರುವರು ಆದರೆ ಈ ಹಿತವಚನವು ಆಳರಸರ ಕಿವಿಗೆ ನಾಟುವದೇ? ಅವರಲ್ಲಿ ಅಂತಹ ವಿವೇಕವಿದ್ದಿದ್ದರೆ ದೇಶದಲ್ಲಿ ಪ್ರಕೃತದ ಪರಿಸ್ಥಿತಿಯು ಎಂದಿಗೂ ಉಂಟಾಗುತ್ತಿದ್ದಿಲ್ಲ ಅವರು ಅನುಸರಿಸುವುದು ನೌಕರಶಾಹಿಯ ಹಿತಬೋಧೆಯನ್ನು.

ಮುಂದೇನು?

ಎಂತಹ ಪರಿಸ್ಥಿತಿಯಲ್ಲಿಯೂ ಆಳರಸರ ಕೈಗೊಂಬೆಗಳಾಗಿ ಕುಣಿವ ದೇಶಹಿತಶತ್ರುಗಳು, ಸ್ವಾರ್ಥಸಾಧಕರುಗಳು ಇದ್ದೇ ಇರುವರೆಂಬುದು ಒತ್ತಂ ಖೇದಕರ ವಿಷಯವಿದೆ ಇಂತಹ ಸಂದಿಗ್ಧ ಸಮಯದಲ್ಲಿ ಒರೇ ಕೆಲ ಮಂದಿಯ ಇಂತಹ ದ್ರೋಹಬುದ್ಧಿಯೇ ಹಿಂದೀಯರನ್ನು ಈ ಅವಸ್ಥೆಗೀಡುಮಾಡಿರುವುದು. ಆದರೆ ಈ ಕುಹಕಿಗಳು ಎಂತಹ ಸೋಗುಹಾಕಿಕೊಂಡು ಆಳರಸರಿಗೆ ತಾತ್ಕಾಲಿಕವಾಗಿ ನೆರವಾದರೂ ಅವರ ಆಟವು ದೀರ್ಘಕಾಲ ನಡಿಯುವ ಹಾಗಿಲ್ಲ. ಗವರ್ನರರು ತಮ್ಮ ಹಸ್ತಕರನ್ನು ಹೆಚ್ಚೆಂದರೆ ಆರು ತಿಂಗಳು ಅಧಿಕಾರದಲ್ಲಿರಿಸಬಹುದು ಆ ಮೇಲೆ ಅವರು ಒಂದೋ ಪುನಃ ಚುನಾವಣೆ ನಡಿಸಬೇಕು, ಇಲ್ಲವೆ ತಾನೇ ಸರ್ವಜವಾಬ್ದಾರಿ ವಹಿಸಿ ನಿರಂಕುಶ ಪ್ರಭುವಾಗಿ ಆಳಬೇಕು. ಆದರೆ ಕೂಡಲೆ ಇನ್ನೊಂದು ಚುನಾವಣೆ ನಡಿಸಲಿಕ್ಕಾಗಲಿ, ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ತಾವೇ ಹೊತ್ತು ಹೊಸ ಸುಧಾರಣಾ ಆಕ್ಟಿನ ಆದಿಯಲ್ಲೇ ಅಂತ್ಯಸಂಸ್ಕಾರ ಮಾಡುವುದಕ್ಕಾಗಲಿ ಆಳರಸರು ಸಿದ್ಧರಿಲ್ಲ ಆದುದರಿಂದ ಅವರು ಈ ಡಮ್ಮಿ ಮಂತ್ರಿಗಳನ್ನು ನೇಮಿಸಿ, ಕಾಂಗ್ರೆಸ್ ಪಕ್ಷೀಯರಲ್ಲಿ ಒಡಕುಂಟಾಗಿ ಈ ಮಂತ್ರಿಗಳಿಗೆ ಕೌನ್ಸಿಲುಗಳಲ್ಲಿ ಬೆಂಬಲ ಸಿಗುವುದೋ ನೋಡುವರು. ಅಂದರೆ ಈ ಮಂತ್ರಿಗಳ ಮೂಲಕ ತಮ್ಮ ಸ್ವಭಾವ ಸಹಜವಾದ ಭೇದ ನೀತಿಯನ್ನು ಪಯೋಗಿಸಿ ನೋಡುವರು ಅದು ಜಯಶೀಲವಾಗದಿದ್ದಲ್ಲಿ ಇನ್ನಾರು ತಿಂಗಳಲ್ಲಿ ಪುನಃ ಚುನಾವಣೆ ನಡಿಸುವರು. ಆರುತಿಂಗಳ ಆಡಳಿತದಲ್ಲ ಆದಷ್ಟು ಪ್ರಜಾಹಿತ ಸಾಧನೆಯ ಕಲವು ಕೆಲಸಗಳನ್ನು ನಡಿಸಿ ಜನತೆಯನ್ನು ತಮ್ಮ ಕಡೆಗೆ ಒಲಿಸಿಕೊಳ್ಳ ನೋಡುವರು ಕಾಂಗ್ರೆಸಿನ ಮಡೀವಂತಿಕೆಯ ಅವಿವೇಕವನ್ನು ಶ್ರುತಪಡಿಸಲೆತ್ನಿಸುವರು. ಈ ಕುಟಿಲ ನೀತಿಯ ಹೊರತು, ಮೇಲಿನ ನಿಜವಾದ ಅವರ ಹಿತಾಕಾಂಕ್ಷಿಗಳ ಸಲಹೆಯಂತ ಅವರು ಎಂದೂ ನಡೆಯಲಾರರು.

ಜನತೆಯ ಕರ್ತವ್ಯ

ಎಂತಹ ಪರಿಸ್ಥಿತಿಯಲ್ಲಿಯೂ ಕಾಂಗ್ರೆಸ್ ಪಕ್ಷದೊಳಗೆ ಒಡಕುಂಟಾಗುವ ಹಾಗಿಲ್ಲ, ಒಬ್ಬನೇ ಒಬ್ಬ ಕಾಂಗ್ರೆಸ್ ಪಕ್ಷೀಯನಾದರೂ ತನ್ನ ಪಕ್ಷಬಿಟ್ಟು ಈ 'ಡಮ್ಮಿ' ಮಂತ್ರಿಗಳ ಬೆನ್ನು ಹಿಡಿಯುವ ಸಂಭವವಿಲ್ಲ ಅವರಿಗೆ ಮತ್ತಷ್ಟು ವಿರೋಧವೇ ಹೊರತು ಅವರ ಪಕ್ಷಕ್ಕೆ ಹೆಚ್ಚಿಗೆಯಾಗಿ ಯಾರೂ ಸೇರುವ ಹಾಗಿಲ್ಲ ಅಂದಮೇಲೆ ಇನ್ನಾರು ತಿಂಗಳ ನಂತರ ಪುನಃ ಚುನಾವಣೆಯು ನಿಶ್ಚಯವೆಂದೇ ಈಗಣ ಪರಿಸ್ಥಿತಿಯ ದೃಷ್ಟಿಯಿಂದ ಹೇಳಬಹುದು ಅಂತಹ ಸಂದರ್ಭದಲ್ಲಿ ಜನತೆಯ ಕರ್ತವ್ಯವೆಂದರೆ ಕಾಂಗ್ರೆಸ್ ಪಕ್ಷೀಯರನ್ನು ಮೊದಲಿಗಿಂತಲೂ ಹೆಚ್ಚಿನ ಬಹುಪಕ್ಷದಿಂದ ಕಳುಹಿಸುವುದು. ಜನರು, ಸರಕಾರದ ಪ್ರಚಾರದಿಂದಾಗಲಿ, ಅವರು ಮಾಡುವ ಅಲ್ಪಸ್ವಲ್ಪನಾದ ಉಪಕಾರದಿಂದಾಗಲಿ ವಂಚಿತರಾಗಬಾರದು. ಆ ಅಲ್ಪ ಲಾಭಕ್ಕಾದರೂ ಕಾಂಗ್ರೆಸಿನವರೇ ಕಾರಣರೆಂದು ಅವರಿಗೆ ಮತ್ತಷ್ಟು ಹೆಚ್ಚಿನ ಬೆಂಬಲವೀಯಬೇಕು. ಯಾಕಂದರೆ ಈಗಣ ಆಡಳಿತ ಯಂತ್ರವು ಸಂಪೂರ್ಣ ಬದಲಾವಣೆಯಾಗದೆ ಜನತೆಯ ನಿಜವಾದ ಯಾವ ಹಿತವೂ ಸಾಧ್ಯವಿಲ್ಲ ಏನು ಮಾಡುವುದಕ್ಕಾದರೂ ಮೊದಲು ಸ್ವಾತಂತ್ರ್ಯಬೇಕು, ಜವಾಬ್ದಾರಿ ಬೇಕು. ಅದನ್ನೇ ಆಳರಸರು ನಿರಾಕರಿಸಿರುವಾಗ ಅವರಿಗೆ ಜನ ಹಿತಕ್ಕಿಂತಲೂ ತಮ್ಮ ಸ್ವಾರ್ಥವೇ ಹೆಚ್ಚಿನದೆಂಬುದು ಸಿದ್ಧವಾಗುವುದು ಆದುದರಿಂದ ಅವರ ಬೆಕ್ಕು ಸನ್ಯಾಸಿಯಂತಹ ವರ್ತನೆಯಿಂದ ಯಾರೂ ಮೋಸಹೋಗಬಾರದು

ಕಾಂಗ್ರೆಸ್ ಪಕ್ಷೀಯರೇನು ಮಾಡಬೇಕು?

ಕಾಂಗ್ರೆಸ್ ಪಕ್ಷದಿಂದ ಆರಿಸಿಬಂದವರು ಕೈಕಟ್ಟಿ ಸುಮ್ಮನಿರಬಾರದು ಈಗಲೇ ಪ್ರಚಾರಕ್ಕಾರಂಭಿಸಬೇಕು. ಶ್ರೀ. ಸಿ ರಾಜಗೋಪಾಲಾಚಾರ್ಯರು ಮತ್ತು ಶ್ರೀ. ಪ್ರಕಾಶಮ್‌ರವರು ಇಷ್ಟರಲ್ಲೇ ಇಡೀ ಪ್ರಾಂತದಲ್ಲಿ ತಿರುಗಾಡಿ ಜನಜಾಗ್ರುತಿಯನ್ನುಂಟುಮಾಡುವ ಕಾರ್ಯಕ್ರಮವನ್ನು ಕೈಕೊಂಡಿರುವರೆಂಬುದು ಅತಿ ಸಂತೋಷದ ವಿಷಯ, ನಮ್ಮ ಕಾಂಗ್ರೆಸ್ ಎಸೆಂಬ್ಲಿ ಮೆಂಬರರು ಅವರ ಮೇಲೆಯೇ ಹೊಂದಿರದ ತಮ್ಮ ಪಾಲಿನ ಕರ್ತವ್ಯವನ್ನು ನೆರವೇರಿಸಬೇಕು. ತಮ್ಮ ತಮ್ಮ ಮತ ಸಮುದಾಯದ ಪ್ರತಿ ಕೇಂದ್ರದಲ್ಲಿ ಸಭೆಗಳನ್ನು ನಡಿಸಿ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿ ಜನಜಾಗ್ರತಿಯನ್ನುಂಟುಮಾಡಿ ಮುಂದಿನ ಹೋರಾಟಕ್ಕೆ ಈಗಲೇ ವಾತಾವರಣವನ್ನು ಸಿದ್ಧಗೊಳಿಸಬೇಕು. ಅಂತಹ ಪ್ರಚಾರಕ್ಕೀಗ ಅನುಕೂಲ ಸಂದರ್ಭವುಂಟಾಗಿರುವುದು. ಜನರಲ್ಲೆಲ್ಲಾ ಕಾಂಗ್ರೆಸಿನ ಕುರಿತು ಹೆಚ್ಚಿನ ವಿಶ್ವಾಸವೂ ಅದರ ಕಾರ್ಯದಲ್ಲಿ ಉತ್ಸಾಹವೂ ಉಂಟಾಗಿದೆ ಹಳ್ಳಿಹಳ್ಳಿಗಳಲ್ಲಿ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿ ಕಾಂಗ್ರೆಸಿನ ಬಲವನ್ನು ನೆಲೆಗೊಳಿಸಿದರೆ ಮುಂದಿನ ಯಾವ ಹೋರಾಟದಲ್ಲಾದರೂ ಕಾಂಗ್ರೆಸ್ ಪಕ್ಷೀಯರು ಅನಾಯಾಸವಾಗಿ ಜಯಶಾಲಿಗಳಾಗದಿರರು ಆದುದರಿಂದ ಈಗಲೇ ಕಾರ್ಯಕ್ಕೆ ತೊಡಗಬೇಕು. ನಮ್ಮ ದಕ್ಷಿಣ ಕನ್ನಡದ ಕಾಂಗ್ರೆಸ್ ಎಸೆಂಬ್ಲಿ ಮೆಂಬರರು ಈ ಕುರಿತು ಶೀಘ್ರವಾಗಿ ಗಮನವಿತ್ತು ಕರ್ತವ್ಯ ನಿರತರಾಗುವರೆಂದು ನಿರೀಕ್ಷಿಸುತ್ತೇವೆ

ವಿದೇಶ

ಸ್ಪೈನಿನ ಯುದ್ಧ, ಸರಕಾರದ ವಿಜಯ

ಇದೇ ತಾ 2ರಲ್ಲಿ ಕೋರ್ಡೋಬಾ ಪ್ರಾಂತದ ಪೋಜೊಬ್ಲಾಂಕೋ ಭಾಗದ ರಣರಂಗದಲ್ಲಿ ಸ್ಪೇನಿಶ್ ಸರಕಾರದ ಸೈನಿಕರು 5 ಮೈಲು ಮುಂದೊತ್ತಿ ಹೋಗಿರುವರು ಬಂಡಾಯಗಾರರು ಸೇನೆ ಮತ್ತು ಯುದ್ಧ ಸಾಮಾಗ್ರಿ ತರಲು ಬಹಳವಾಗಿ ಉಪಯೋಗಿಸುತ್ತಿದ್ದ ಕೋರ್ಡೋಬಾ ರೈಲ್ವೇಯ ಬಳಿಯವರೆಗ ಸರಕಾರದ ಸೈನಿಕರು ಮುಂದುವರಿದಿರುವರು

ಬಾಸ್ಕ್ ಪ್ರಾಂತದ ಸರಕಾರದ ಕಡೆಯ ಸೈನಿಕರು ಅನಿರೀಕ್ಷಿತವಾಗಿ ಬಂಡಾಯಗಾರರ ಮೇಲೆ ಬಿದ್ದು ಬಂಡಾಯಗಾರರು ವಶಪಡಿಸಿಕೊಂಡಿರುವ ದೊಡ್ಡ ಪರ್ವತ ಭಾಗವನ್ನು ವಶಪಡಿಸಿಕೊಂಡಿರುವರು. ಬಾಸ್ಕ್ ಪ್ರಾಂತದ ಜನರು ಕೆಥೋಲಿಕರು. ಬಲ್ಬ್ರೋ ಭಾಗದಲ್ಲಿ ಇಗರ್ಜಿಗಳ ಮೇಲೆ ಬಾಂಬೆಸೆದುದು ಸರಕಾರದ ಕಡೆಯವರೆಂಬ ಬಂಡಾಯಗಾರರ ಸುಳ್ಳು ಸಮಾಚಾರದ ಕುರಿತು ಇವರು ಅಪಹಾಸ್ಯ ಮಾಡುತ್ತಿರುವರು. ಬಂಡಾಯಗಾರರ ವಿಮಾನಗಳು ಬಾಂಬೆಸೆದದನ್ನು ಸ್ಪೈನಿಗೆ ಹೋಗಿದ್ದ ಕ್ಯಾಂಟರ್‌ಬರಿಯ ಡೀನರು ಸ್ವತಃ ನೋಡಿರುವರು.

50 ಮಿನಿಟುಗಳಲ್ಲಿ 7 ಮೈಲು ನಡೆದುದು

ಸ್ವೀಡನಿನ ವೈಕೇಲ್ಲನನೆಂಬವನು ಇದೇ ತಾ. 4ರಲ್ಲಿ 50 ಮಿನಿಟು 19 ಸೆಕೆಂಡುಗಳಲ್ಲಿ 7 ಮೈಲು ನಡೆದು ಇದೇ ಲೋಕದಲ್ಲೇ ಹೊಸ ದಾಖಲೆಯೊಂದನ್ನು ಮಾಡಿರುವನು. ಈ ಮೊದಲು ಪ್ರೋಸ್ ಎಂಬ ಆಂಗ್ಲೇಯನು 50 ಮಿನಿಟು 28 ಸೆಕೆಂಡುಗಳಲ್ಲಿ 7 ಮೈಲು ನಡೆದಿದ್ದ.

ಇದ್ದಿಲು ಗಣಿಯಾಳುಗಳ ಮುಷ್ಕರದ ಸಂಭವ

ಇಂಗ್ಲೆಂಡಿನ ನೋಟಿಂಗ್ಹೇಮ್ ಎಂಬಲ್ಲಿಯ ಇದ್ದಿಲು ಗಣಿಯಾಳುಗಳು ಇಡೀ ರಾಷ್ಟ್ರದ ಇದ್ದಿಲು ಗಣಿಯಾಳುಗಳ ಸಂಘಕ್ಕೆ ಸೇರುವ ವಿಷಯದಲ್ಲಿ ಗಣಿಗಳ ಮಾಲಕರಿಗೂ ಅವರಿಗೂ ಉಂಟಾಗಿರುವ ವೈಮನಸ್ಯದ ನಿಮಿತ್ತ 4 ಲಕ್ಷ ಗಣಿಯಾಳುಗಳು ಮುಷ್ಕರ ಹಿಡಿಯುವ ಸಂಭವವುಂಟಾಗಿದೆ. ಈ ಕುರಿತು ಇದೇ ತಾ. 16ರಲ್ಲಿ ಓಟುಕರೆಯಲಾಗುವದು.

ಸ್ವದೇಶ

ಕುಮಾರಿ ಇಂದಿರಾ ನೆಹರು

ಇದೇ ತಾ. 3ರಲ್ಲಿ ಯುರೋಪಿನಿಂದ ವಿಮಾನ ಮೂಲಕ ಕರಾಚಿಗೆ ಬಂದಿಳಿದು ಶ್ರೀ ಜೈರಾಮದಾಸ್ ದೌಲತ್ ರಾಮರೇ ಮೊದಲಾದ ಕಾಂಗ್ರೆಸ್ ಪಕ್ಷೀಯರಿಂದ ಸ್ವಾಗತೀಕರಿಸಲ್ಪಟ್ಟರು. ಅವರು ಪ್ರಥಮವಾಗಿ ಕೇಳಿದ ಪ್ರಶ್ನೆಯೆಂದರೆ, "ಎಪ್ರಿಲ್ ತಾ. 1ರಲ್ಲೇನಾಯಿತು? ಎಷ್ಟು ಮಂದಿ ಕೈದುಮಾಡಲ್ಪಟ್ಟಿರುವರು" ಎಂದು. ಕುಮಾರಿಯವರು ಬರುವ ಅಕ್ಟೋಬರ ತಿಂಗಳಿಗೆ ಇಂಗ್ಲೆಂಡಿಗೆ ಹೋಗಿ ಆಕ್ಸ್‌ಫೋರ್ಡಿನಲ್ಲಿ ವಿದ್ಯಾಭ್ಯಾಸ ನಡೆಸಲಿರುವರು. ಅವರು ಅಲ್ಲಿಯ ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು. ತಾ 1ರಲ್ಲಿ ಅಲಹಾಬಾದಿನ ಬಾರೋಲಿ ವಿಮಾನ ನಿಲ್ದಾಣದಲ್ಲಿಳಿದಾಗ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಮತ್ತು ಶ್ರೀ ಆರ್. ಎಸ್. ಪಂಡಿತರು ಅವರನ್ನು ಸ್ವಾಗತ ಮಾಡಿದರು. ಅಸ್ವಸ್ಥದ ನಿಮಿತ್ತ ಪಂಡಿತ ಜವಾಹರಲಾಲರು ಹೋಗಲಿಲ್ಲ.

ಪಂಡಿತ ಜವಾಹರಲಾಲ ನೆಹರು

ಇವರಿಗೆ ಕೆಲವು ದಿನಗಳಿಂದ ಜ್ವರಬರುತ್ತಿರುವುದು. ಅದು ಎಂತಹ ಜ್ವರವೆಂದು ಈ ವರೆಗೆ ನಿಶ್ಚೈಸಲಾಗಲಿಲ್ಲ. ಪಂಡಿತರು ಹಾಸಿಗೆಯೊಳಗೇನೇ ಇರುವರು. ಅವರು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರರು ಹೇಳಿರುವರು. ಇದೇ ತಾ. 3ರಲ್ಲಿ ಜ್ವರವು ಹಿಂದಿನ ದಿನದಷ್ಟು ಹೆಚ್ಚಿರಲಿಲ್ಲ. ಪಂಡಿತರ ಆರೋಗ್ಯದ ವಿಷಯದಲ್ಲಿ ಚಿಂತೆಯೇನೂ ಪಡಬೇಡಿರೆಂದೂ ಜ್ವರಮಾತ್ರ ಬಿಡದೆ ಬರುತ್ತದೆಯೆಂದೂ, ತಾ. 3ರಲ್ಲಿ ಕಡಿಮೆಯಾಗಿದೆಯೆಂದೂ ಶ್ರೀ ವಿಜಯಲಕ್ಷ್ಮಿ ಪಂಡಿತರು ಪ್ರಕಟಿಸಿರುವರು.

ಪಂಡಿತ ಜವಾಹಿರಲಾಲರ ಆರೋಗ್ಯ

ಪಂಡಿತ ಜವಾಹಿರಲಾಲರ ಆರೋಗ್ಯವು ಸಾವಧಾನವಾಗಿ ನೆಟ್ಟಗಾಗುತ್ತ ಬರುತ್ತಿರುವುದು. ಜ್ವರವು ಇಳಿಮುಖವಾಗಿದೆ. ಅವರು ತನ್ನ ಯಥಾಪ್ರಕಾರದ ಕೆಲಸಮಾಡಲು ಇನ್ನೂ ಸ್ವಲ್ಪ ಸಮಯ ಬೇಕಾಗುವುದು. ಅವರಿನ್ನು ಎಲ್ಲಿಯಾದರೂ ಸಂಚರಿಸಬೇಕಾದರೆ ಸ್ವಲ್ಪ ಹೆಚ್ಚು ಸಮಯತಾಗೀತು. ಮೇ ತಿಂಗಳ ಆರಂಭದಲ್ಲಿ ಪಂಡಿತರು ಬರ್ಮಾಕ್ಕೆಂತೂ ಹೋಗುವರು.

ಡಾಕ್ಟರ್ ಆಲಮರು ಕಾಂಗ್ರೆಸ್ಸಿಗೆ ಸೇರಿದರು

ಪಂಜಾಬಿನ ಮುಸಲ್ಮಾನ ಮುಖಂಡರಾದ ಡಾಕ್ಟರ್ ಆಲಮರು ಇದೇ ತಾ. ೪ರಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಪ್ರತಿಜ್ಞೆಗೆ ಸಹಿ ಹಾಕಿ ಕಾಂಗ್ರೆಸ್ ಎಸೆಂಬ್ಲಿ ಪಕ್ಷಕ್ಕೆ ಸೇರಿರುವರು. ಮಿ. ಕೆ. ಎಲ್. ಗೌಬರವರೂ ಕಾಂಗ್ರೆಸ್ ಪಕ್ಷಕ್ಕೆ ಸೇರುವ ಆಲೋಚನೆ ಮಾಡಿದ್ದಾರೆ. ಡಾಕ್ಟರ್ ಆಲಮರು, ಇನ್ನು ಕೆಲವಂದಿ ಮುಸಲ್ಮಾನರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿಸುವ ವಿಶ್ವಾಸವುಳ್ಳವರಿದ್ದಾರೆ. ಕಾಂಗ್ರೆಸ್ಸೊಂದೇ ಅಧಿಕಾರದ ಪ್ರೀತಿ ಅಥವಾ ಪಬ್ಲಿಕ್ ಭೀತಿಯಿಲ್ಲದೆ ಜನತೆಯ ಹಿತಸಾಧನೆಮಾಡುವ ಸಂಸ್ಥೆಯಾದ ಪರಿಂದ ಎಲ್ಲರೂ ವಿಶೇಷವಾಗಿ ಮುಸಲ್ಮಾನರು ಕಾಂಗ್ರೆಸ್ಸಿಗೆ ಸೇರಲೇ ಬೇಕೆಂದು ಡಾಕ್ಟರ್ ಆಲಮರು ವಿನಂತಿಮಾಡಿಕೊಂಡಿರುತ್ತಾರೆ.

ಮಂಗಳೂರು

ಮಂಗಳೂರು ನಗರಸಭೆ ಪರತಾಳ ಆಚರಿಸಬೇಕೆಂದು ಸಭೆಯ ಠರಾವು

ಮಂಗಳೂರು ನಗರ ಸಭೆಯ ಮೀಟಿಂಗು ಕಳೆದ ತಾ. ೩೧ನೇ ಸಾಯಂಕಾಲ ನಗರ ಸಭಾಮಂದಿರದಲ್ಲಿ ಜರಗಿತು. ಡಾ। ವಿಠಲ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಸಾಮಾನ್ಯ ವಿಷಯಗಳು ತೀರ್ಮಾನಿಸಲ್ಪಟ್ಟ ಬಳಿಕ ಶ್ರೀ ತಲಚೇರಿದಾರ ರಂಗರಾಯರ ಠರಾವು ಬಂತು. ಒಂದನೇ ಎಪ್ರಿಲ ದಿವಸದಲ್ಲಿ ಹರತಾಳವನ್ನಾಚರಿಸಬೇಕೆಂದು ಈ ಸಭೆಯವರು ಅಪ್ಪಣೆಕೊಟ್ಟಮೇರೆಗೆ ನಗರ ಸಭೆಯ ಕಚೇರಿಯನ್ನು ಮುಚ್ಚಬೇಕೆಂದೂ, ನೌಕರರಿಗೆ ರಜೆಕೊಡಬೇಕೆಂದೂ ಠರಾವು ತಂದರು. ಕಮಿಶನರು ಸರಕಾರಿ ಹುಕುಮು ಪ್ರಕಾರ ತಾವು ಆಫೀಸು ಶಾಲೆಗಳನ್ನು ಮುಚ್ಚಲು ಹುಕುಮು ಕೊಡುವುದಕ್ಕೆ ಅನುಕೂಲವಿಲ್ಲವೆಂದೂ ತಾವು ಹಾಗೆ ಶಾಲೆಗಳನ್ನು ಮುಚ್ಚಲಿಲ್ಲವೆಂದು ಕೌನ್ಸಿಲಿನ ಅಧಿಕಾರವನ್ನು ತಿರಸ್ಕರಿಸಿದಂತಾಯಿತೆಂದು ಯಾರೂ ಬೇಸರ ಪಡಬಾರದೆಂದರು. ಮತ ತೆಗೆದುಕೊಳ್ಳಲಾಗಿ ಇಬ್ಬರುವಿನಹ (ಶ್ರೀಗಳಾದ ಆನಂದ ತಲ್ಲೂರ, ಸಿ ಎಲ್. ಶೇಣೈ)ಮಿಕ್ಕವರು ಶ್ರೀ ರಂಗರಾಯರ ಠರಾವಿನ ಪರವಾಗಿ ಮತಕೊಟ್ಟರು. (ಠರಾವನ್ನು ಮದರಾಸ್ ಸರಕಾರದವರಿಗೆ ತಂತಿಮೂಲಕ ಕೊಡಲೇ ತಿಳಿಸುವ ಏರ್ಪಾಡುಮಾಡಿದ್ದರು.)

ಟೌನ್ ಬಸ್‌ಸರ್ವೀಸ್

ಮಂಗಳೂರು ಒಟೋಮೊಬೈಲ್ಸ್ ಕಂಪೆನಿಯವರಿಗೆ ನಗರದಲ್ಲಿ ಮೋಟರ್ ಓಡಿಸಲು ನಿರ್ದಿಷ್ಟ ರಸ್ತೆಗಳಲ್ಲಿ ಲೈಸನ್ಸ್ ಕೊಡಬೇಕೆಂದಾಯಿತು (ಸ್ತ್ರೀಯರಿಗಾಗಿ ಎರಡು ಸೀಟುಗಳು, ಮೈಲಿಗೆ ಆರ್ಧಾಣೆ ಚಾರ್ಜು ಇತ್ಯಾದಿಗಳು ಸೂಚನೆಗಳಾಗಿದ್ದವು). ಈ ಸಂದರ್ಭದಲ್ಲಿ ಶಂಕರ ವಿಠ್ಠಲ್, ಹನುಮಾನ್ ಕಂಪೆನಿಗಳು ಕೇಳಿಕೊಂಡ ಅರ್ಜಿಗಳು ನಿರಾಕರಿಸಲ್ಪಟ್ಟವು. ಅಂತೆಯೇ ಪಟ್ಟಾಭಿರಾಮಲರ ಮೆಮೋರಿಯಲ್ ನಿರಾಕರಿಸಲ್ಪಟ್ಟಿತು.

ಮೆರವಣಿಗೆಗೆ ತಡೆ

ತಾರೀಕು ೪ನೇ ರಾತ್ರಿ ೧೦ಗಂಟೆಗೆ ಇಡಿಯ ಆಕ್ಟ್ ೩ನೇ ಸೆಕ್ಷನ್ ೩ನೇ ಕ್ಲಾಸಿನ ಪ್ರಕಾರವಾಗಿ (ಪೋಲಿಸ್ ಆಕ್ಟ್)ಮಂಗಳೂರು ನಗರ ಹದ್ದಿನೊಳಗೆ ಯಾರೂ ಲೈಸನ್ಸ್ ಇಲ್ಲದೆ ಮೆರವಣಿಗೆಗಳನ್ನು ತೆಗೆದುಕೊಂಡು ಹೋಗಕೂಡದೆಂದು ಪ್ರಕಟಣೆಯಾಗಿದೆ. ಎಪ್ರಿಲ್ ೧ನೇ ತಾರೀಕಿಗೆ ಆಗಬೇಕಾಗಿದ್ದ ಮೆರವಣಿಗೆ ಸಂಬಂಧ ಈ ಪ್ರಕಟಣೆ.

ಪುಂಡಾಟಿಕೆಯಿಂದ ಜಖಂ

ಸ್ಥಳೀಯ ಕದ್ರಿದೇವಸ್ಥಾನದ ಮುಂದಿನ ಛಾವಡಿಯಲ್ಲಿ ಇಬ್ಬರು ಮಾತುಮಾತಿಗೆ ಜಗಳಮಾಡಿಕೊಂಡು ಒಬ್ಬನು ಇನ್ನೊಬ್ಬನನ್ನು ತಳ್ಳಿದನು. ಅವನು ಕೆಳಗೆಬಿದ್ದು ಅಲ್ಲಿಂದ ಕೆಳ ಅಂಗಣದವರೆಗೂ ಹೊರಳಿಬಿದ್ದು ಪೈಯಲ್ಲಿ ಗಾಯಹೊಂದಿ ಸ್ಮೃತಿ ತಪ್ಪಿ ಬಿದ್ದಿದ್ದನು. ಅವನನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಅವನ ದೇಹದಿಂದ ಬಂದರಕ್ತವು ಛಾವಡಿಯಲ್ಲೂ ಕೆಳಗೂ ಇನ್ನೂ ಇದೆ. ಅಂತೂ ಪುಂಡರ ಪುಟ್ಟಿಗೆ ದೇವಸ್ಥಾನಗಳು ಕೂಡ ಕೋಳಿ ಅಂಕದ ಕಣಗಳೇ ಆಗಿಹೋದುದು ಬಹು ವಿಷಾದಕರ.

ಸತ್ಕಾರ ಕೂಟ

ಇದೇ ಕಳೆದ ತಾ. ೩೭ರಲ್ಲಿ ೮೦ ಯ ಚ್‌ಮೂವಪ್ಪ ನವನೂತನ ಗೃಹಪ್ರವೇಶ ಸಮಾರಂಭದ ಸಮಯ ಶ್ರೀಮಾನ್ ಬಿ ವೆಂಕಟ್ರಮಬಾಳಿಗ ಎಂ. ಎಲ್ ಎ, ಇವರನ್ನು ಅಭಿನಂದಿಸುವ ಬಗ್ಗೆ ನಗರಸಭಾಧ್ಯಕ್ಷ ರಾವ ಸಾ। ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರ ಕೂಟವನ್ನು ಬಹು ವಿಜೃಂಭಣೆಯಿಂದ ಜರಗಿಸಿದರು.

ಧುರೀಣರ ಆಗಮನ

ಮದ್ರಾಸಿನ ರಾಜಸಭಾಪಕ್ಷದ ಮುಖಂಡರಾದ ಶ್ರೀ। ರಾಜಗೋಪಾಲಾಚಾರ್ಯರು, ಶ್ರೀ। ಟಿ ಪ್ರಕಾಶಂ—ಮತ್ತು ಇನ್ನಿತರ ಐಳೆಂಟು ಮಂದಿ ಪ್ರವಾಸಿಗರೊಡಗೂಡಿಕೊಂಡು ತಾ ೧೧-೪-೩೭ನೇ ಬುಧವಾರ ಸಂಜೆ ಮೈಲ್‌ಬಂಡಿಯಲ್ಲಿ ಮಂಗಳೂರಿಗೆ ಚಿತ್ತೈಸಿ ಸಾರ್ವಜನಿಕ ಭಾಷಣವನ್ನಿತ್ತು ಮರುದಿನ ಕಲ್ಲಿಕೋಟೆಗೆ ಹಿಂತೆರಳಲಿರುವರು

> **ತಾ. 15ರ ಸಂಚಿಕೆ ಹೊರಡುವುದಿಲ್ಲ**
>
> ನವಯುಗವು ವರ್ಷಕ್ಕೊಂದು ಹತ್ತು ರಜೆ ಪಡೆಯುವ ಪದ್ಧತಿಯಂತೆ ಯುಗಾದಿ ಹಬ್ಬದ ನಿಮಿತ್ತ ತಾ. 15-4-'37ರ ಸಂಚಿಕೆಯು ನಿಲ್ಲಿಸಲ್ಪಟ್ಟಿರುವುದು.
>
> ಮೆನೇಜರ್, 'ನವಯುಗ'
> ಉಡುಪಿ.

ಗ್ರಾಮೋದ್ಯೋಗ ಕಲಿಸುವ ಶಾಲೆ

ಮಿ। ಕೆ। ಆರ್। ಕಾರಂತರು ಹೀಗೆ ತಿಳಿಸುತ್ತಾರೆ. ಕಳೆದ ಸಂಚಿಕೆಯಲ್ಲಿ ದೊಡ್ಡಬಳ್ಳಾಪುರದ ಗ್ರಾಮೋದ್ಯೋಗ ಕಲಿಸುವ (ಸಕ ಸಮಯದ) ಶಾಲೆಗೆ ಸೇರಲಿಚ್ಛಿಸುವವರು ಅರ್ಜಿಕಳುಹಿಸುವಕೊನೆಯ ತಾ ೧-೪-೩೭ ಎಂದು ಪ್ರಕಟವಾಗಿದೆ. ಆದರೆ ಶಾಲೆಗೆ ಸೇರಲಿಚ್ಛಿಸುವವರು ಅರ್ಜಿ ಕಳಿಸುವ ಕೊನೆಯ ತಾರೀಕನ್ನು ೨೦-೪-೩೭ಕ್ಕೆ ಮುಂದರಿಸಲಾಗಿದೆ ಎಂದು ನನಗೆ ಪತ್ರಬರೆದಿದ್ದಾರೆ. ಅಲ್ಲದೆ ಈ ಜಿಲ್ಲೆಯಿಂದಲೂ ಹೋಗುವ ವಿದ್ಯಾರ್ಥಿಗಳಿಗೆ ಕಲಿಯಲಿಕ್ಕೆ ಬೇಕಾದ ವಿಶೇಷಏರ್ಪಾಡುಗಳೂ ಮಾಡಲಾಗುವವು ಎಂದು ತಿಳಿಸಿದ್ದಾರೆ. ಆದುದರಿಂದ ಅರ್ಜಿ ಕಳಿಸುವವರು ಹಿಂದಿನಪ್ರಕಟಣೆಯಂತೆ ಮಿ। ಶ್ರೀಪತಿರಿಗೆ ಕಳಿಸಬೇಕು. ತಾರೀಕು ೨೦-೪ ರ ಮುಂಚೆ ಅರ್ಜಿಗಳು ಅವರಿಗೆ ತಲಪಬೇಕು. ಅಲ್ಲದೆ ಅನುಕೂಲವಿದ್ದರೆ ಅರ್ಜಿದಾರರು ತಮ್ಮ ಹೆಸರುಗಳನ್ನು ನನಗೆ ತಿಳಿಸಬಹುದು.

ಈ ಮೊದಲು ಇಲ್ಲಿ ವಕೀಲರಾಗಿದ್ದ ಶ್ರೀ। ಎಸ್। ಸಂಜೀವ ತಲ್ಲೂರ್ ಬಿ. ಎ ಬಿ. ಎಲ್. ರವರು ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡು ಪಂಚಾಯತ ಆಫೀಸರಾಗಿ ನೇಮಿಸಲ್ಪಟ್ಟಿರುವರು.

ಸತ್ಕಾರಕೂಟ

ಇದೇ ತಾ. ೩ನೇ ಶನಿವಾರ ಸಾಯಂಕಾಲ ಮಂಗಳೂರು ಸ್ಯಾಂಟ್ ಎಲೋಸಿಯಸ್ ಕಾಲೇಜು ಹೋಟೆಲಿನ ವಿದ್ಯಾರ್ಥಿ ಸಂಘದ ಉಪಾಧ್ಯಾಯರುಗಳು [illegible] ಶ್ರೀ. [illegible] ಉಪಾಧ್ಯಾಯ [illegible] ಶ್ರೀ. [illegible] ಉಪಾಧ್ಯಾಯರೊಂದಿಗೆ ಸವಿಯು ಮುಕ್ತಾಯವಾಯಿತು.

ಸದ್ಧರ್ಮ ಪತ್ರಿಕೆಯ ಚಂದಾದಾರರಲ್ಲಿ ಮತ್ತು ಎಲ್ಲಾ ಸಹಾಯಕರಲ್ಲಿ ವಿನಂತಿ

ಮಹನೀಯರೇ! ಈ ಪತ್ರಿಕೆಯ ಆರ್ಥಿಕ ಸಂಕಷ್ಟ ನಿವಾರಣೆಯ ಬಗ್ಗೆ ನಾವು ಕನ್ನಡನಾಡುಗಳಲ್ಲಿ ಸಂಚರಿಸುತ್ತಿದ್ದೇವೆ. ನಮ್ಮ ಸಂಚಾರವು ಮುಗಿದ ಕೂಡಲೇ ದ್ವಿತೀಯ ವರ್ಷದ ಪ್ರಥಮ ಸಂಚಿಕೆಯು ಇದೇ ಬರುವ 'ಶ್ರೀರಾಮನವಮಿ' ದಿನಕ್ಕೆ ಸರಿಯಾಗಿ ವಿಶೇಷ ಸಂಚಿಕೆಯ ರೂಪದಿಂದ ವಿವಿಧ ಲೇಖನಗಳೊಂದಿಗೆ ಸಚಿತ್ರವಾಗಿ ಪ್ರಕಟವಾಗುವುದು. ಚಂದಾದಾರರೂ ಇತರ ಮಹನೀಯರೂ ನಮಗೆ ಯಥಾಶಕ್ತಿ ಆರ್ಥಿಕ ಬೆಂಬಲಕೊಟ್ಟು ನಮ್ಮ ಸಂಚಾರವನ್ನು ಸಫಲಗೊಳಿಸಿ ಕೊಡಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇವೆ.

ಬಿ ಲಕ್ಷ್ಮಣದೇವ ವಿದ್ಯಾರ್ಥಿ,
ಸಂಪಾದಕ.

ಶ್ರೀ. ಕೆ. ಟಿ. ಆಳ್ವರು

ಇದೇ ೩ನೇ ಶುಕ್ರವಾರ ಮೃತರಾಗಿರುವರೆಂಬುದು ಅತ್ಯಂತ ವಿಷಾದಕರವಾದೆ. ಶ್ರೀ ಆಳರು ಚಿಕ್ಕಪ್ರಾಯದಲ್ಲಿ ಬೊಂಬಾಯಿಗೆ ಹೋಗಿ ಸ್ವಂತ ಪರಿಶ್ರಮದಿಂದ ಮುಂದೆ ಬಂದು ಬೊಂಬಾಯಿ ಸರ್ಜಿಕಲ್ ಕಂಪೆನಿಯ ಮಾಲಕರಾಗಿ ಸಾಕಷ್ಟು ಹಣ ಸಂಪಾದಿಸಿ ಸಪ್ಪಿ ಕೆಲಸ ಬಿಟ್ಟು ಮಂಗಳೂರಿಗೆ ಬಂದು ವಾಸಿಸುತ್ತಿದ್ದರು. ಇವರು ಒಳ್ಳೇ ಚಿತ್ರಗಾರರು. ಪುಷ್ಪ ವ್ಯವಸಾಯದಲ್ಲಿ ಮಂಗಳೂರಲ್ಲೇ ಅಗ್ರಗಣ್ಯರಾಗಿ ಮಂಗಳೂರಿನ ಪುಷ್ಪ ಪ್ರದರ್ಶನದಲ್ಲಿ ಹಲವು ಪ್ರಾಮುಖ್ಯ ಇನಾಮುಗಳನ್ನು ಪಡೆದಿದ್ದರು. ತಾನೇ ಸ್ವತಃ ಕೆಲಸಮಾಡಿ ತನ್ನ ಮನೆಯ ಹೂದೋಟವನ್ನು ಅತ್ಯಂತ ಮನೋಜ್ಞವಾಗಿ ರಚಿಸಿದ್ದರು. ಶ್ರೀ ಆಳ್ವರು ನಿರ್ಭಯ ಸ್ವಭಾವದವರೂ, ಸ್ವತಂತ್ರ ಬುದ್ಧಿಯವರೂ ಸ್ವಾವಲಂಬಿಗಳೂ, ಸಂಸ್ಕೃತರೂ, ಸುಧಾರಕರೂ ಆಗಿದ್ದರು. ಮೃತರ ಬಂಧುಬಳಗದ ದುಃಖದ ವಿಷಯದಲ್ಲಿ ನಾವು ಹೃತ್ಪೂರ್ವಕ ಸಹಾನುಭೂತಿಯುಳ್ಳವರಿರುವೆವು.

ಹಿಂದೀ ವ್ಯಾಪಾರಿಗಳು ಅಬಿಸೀನಿಯವನ್ನು ಬಿಟ್ಟುಹೋಗಬೇಕೆಂದಾಜ್ಞೆ

ಅಬಿಸೀನಿಯದ ಮುಖ್ಯ ಪಟ್ಟಣವಾದ ಅಡಿಸ್ ಅಬಾಬದಲ್ಲಿಯೂ ಇನ್ನಿತರ ಕಡೆಗಳಲ್ಲಿಯೂ ಹಲವು ಅಂಗಡಿಗಳುಳ್ಳ ಹಿಂದೀ ವ್ಯಾಪಾರಿಗಳಾದ ಮಹಮ್ಮದಾಲಿ ಕಂಪೆನಿಯವರು 18 ದಿವಸಗಳೊಳಗೆ ತಮ್ಮ ಅಂಗಡಿಗಳನ್ನೆಲ್ಲಾ ಮುಚ್ಚಬೇಕೆಂದು ಇಟಲಿಯು ಆಜ್ಞೆಕೊಟ್ಟಿರುವುದು. ಕಂಪೆನಿಯವರು ಅಬಿಸೀನಿಯದಲ್ಲಿ ಅನೇಕ ಅಂಗಡಿಗಳನ್ನು ತೆರೆದು ಲಕ್ಷಗಟ್ಲೆ ಹಣ ವಿನಿಯೋಗಿಸಿರುವರು. ಲಕ್ಷಗಟ್ಲೆ ಹಣದ ಬೆಲೆಯ ಮಾಲು ಇವರಲ್ಲಿ ದಾಸ್ತಾನಿರುವುದು. ಹೊರ ಬಾಕಿಯೂ ಹೆಚ್ಚಿರುವುದು. ಇವರು 18 ದಿವಸಗಳೊಳಗೆ ತಮ್ಮ ಅಂಗಡಿಗಳನ್ನು ಮುಚ್ಚಿ ಹೋಗಬೇಕೆಂಬ ಇಟಲಿ ಸರಕಾರದ ಕಟ್ಟಾಜ್ಞೆಯಿಂದ ಈ ಕಂಪೆನಿಯವರಿಗೆ ದೊಡ್ಡ ಅನ್ಯಾಯವಾಗಿದೆ. ಅವರ ಸೊತ್ತು ಮತ್ತು ಪ್ರಾಣ ನಷ್ಟವಾಗುವ ಸಂಭವವೂ ಉಂಟಾಗಿದೆ. ಈ ಸಂಬಂಧವಾಗಿ ನಪ್ರಿ ಕಂಪೆನಿಯವರು ಬ್ರಿಟಿಷ್ ಸರಕಾರಕ್ಕೂ ಹಿಂದೀ ಸರಕಾರಕ್ಕೂ ಅಗ್ರಹದ ವಿನಂತಿಮಾಡಿಕೊಂಡಿರುವರು. ಎಸೆಂಬ್ಲಿಯಲ್ಲಿ ಈ ಕುರಿತು ಪ್ರಶ್ನೋತ್ತರ ನಡೆದಿರುವುದಲ್ಲದೆ ಎಜರ್ನ್‌ಮೆಂಟ್ ಸೂಚನೆ ಕೂಡಾ ತರಲ್ಪಟ್ಟಿರುವುದು.

ಉಡುಪಿ

ಶ್ರೀಪಾದಂಗಳವರ ಕಾಶೀಯಾತ್ರೆ

ಶ್ರೀ ಕಾಣಿಯೂರು ಮಠದ ಶ್ರೀಪಾದಂಗಳವರು ಕಾಶೀ ಯಾತ್ರೆಗಾಗಿ ೨೨-೩-೩೭ನೇ ಸೋಮವಾರ ಹೊರಟುಹೋಗಿರುವರು. ಅಲ್ಲಿಂದ ಬದರಿಕಾಶ್ರಮಕ್ಕೆ ಹೋಗುವರಾಗಿ ತಿಳಿದುಬರುತ್ತದೆ.

ವರ್ಗ

ಇಲ್ಲಿಯ ಶಾಲಾ ಇನ್ಸ್‌ಪೆಕ್ಟರರಾಗಿದ್ದ ಮಿ ವರ್ಗೀಸರವರಿಗೆ ಬಳ್ಳಾರಿಗೆ ವರ್ಗವಾಗಿರುವುದು. ಅದಕ್ಕಾಗಿ ಉಪಾಧ್ಯಾಯವೃಂದದವರೊಂದು ಸತ್ಕಾರಕೂಟವನ್ನೇರ್ಪಡಿಸಿದ್ದರು.

ನಾಟಕ ಪ್ರದರ್ಶನ

ಇದೇ ಬರುವ ತಾ ೧೦ನೇ ಶನಿವಾರ ರಾತ್ರಿ ಘಂಟೆ ೯-೩೦ಕ್ಕೆ ಉಡುಪಿಯ ಶ್ರೀ ಶಾರದ ಸಂಗೀತ ಕಲಾಶಾಲೆಯ ವಿದ್ಯಾರ್ಥಿನಿಯರಾದ ಚಿಕ್ಕ ಬಾಲಿಕೆಯರು, ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಉಡುಪಿ ಸರಕಾರಿ ಆಸ್ಪತ್ರೆಯ ಕುಷ್ಠರೋಗಿಗಳ ಕಟ್ಟೋಣದ ಸಹಾಯಾರ್ಥವಾಗಿ ಕೋಲಾಟವೇ ಮೊದಲಾದ ವಿವಿಧ ಕಲಾಪ್ರದರ್ಶನಗಳನ್ನೊಳಗೊಂಡ 'ಸತಿಸಾವಿತ್ರಿ' ಎಂಬ ನಾಟಕವನ್ನು ಉತ್ತಮರೀತಿಯಲ್ಲಿ ಅಭಿನಯಿಸಿ ತೋರಿಸಲಿರುವರು. ಕುಷ್ಠರೋಗಿಗಳ ಸಹಾಯಾರ್ಥವಾದ ಈ ಪುಣ್ಯಕೆಲಸಕ್ಕಾಗಿ ಚಿಕ್ಕ ಬಾಲಿಕೆಯರು ಮಾಡುವ ಸಹಾಯವು ಸಾರ್ಥಕವಾಗುವಂತೆ ಉಡುಪಿಯ ಮಹಾಜನರು ಪ್ರೋತ್ಸಾಹವೀಯುವುದು ಅತ್ಯಾವಶ್ಯಕವಾಗಿದೆ.

ದಕ್ಷಿಣ ಕನ್ನಡ

ಕುಂದಾಪುರ

ಇಲ್ಲಿಯ ತಾಲೂಕು ಕಾಂಗ್ರೆಸ್ ಕಮಿಟಿಯವರು ತಾ ೨೯-೩-೩೭ರಲ್ಲಿ ಸಭೆ ಸೇರಿ ಈ ಸರ್ಕಲಿನಿಂದ ಚುನಾವಣೆಯಾಗದಿರುವ ಡಿ ಬೋ. ಸೀಟಿಗೆ ಕಾಂಗ್ರೆಸು ಉಮೇದುವಾರರನ್ನು ನಿಲ್ಲಿಸುವ ಆವಶ್ಯವಿಲ್ಲವೆಂದು ಬಹುಮತದಿಂದ ತೀರ್ಮಾನಿಸಲಾಯಿತು. ಇದೇ ತಾ ೧-೪-೩೭ರಲ್ಲಿ ಕುಂದಾಪುರ, ಶಿರೂರು ಬೈಂದೂರು, ಕಿರಿಮಂಜೇಶ್ವರ ಬಸರೂರು, ಕೋಟೇಶ್ವರ ಕೋಟ, ಹುಣ್ಸೆಮಕ್ಕಿ ಬಿದ್ಕಲ್ಕಟ್ಟೆ ಮೊದಲಾದ ಕಡೆಗಳಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಕೆಲವೆಡೆ ಮೆರವಣಿಗೆ ಸಭೆ ಭಾಷಣಗಳಿದ್ದುವು.

ಕುಂದಾಪುರ ಸರ್ಕಲಿನ ಡಿ. ಬೋ. ಮೆಂಬರಸ್ಥಾನಕ್ಕೆ ತಾ ೩-೪-೩೭ರಲ್ಲು ಶ್ರೀ ಬಿ ಮಹಾಬಲ ಹೊಳ್ಳ ಬಿ ಎ, ಬಿ ಎಲ್ ಎಡ್ವೊಕೇಟ್ ಇವರೊಬ್ಬರು ಮಾತ್ರ ನೊಮಿನೇಶನು ದಾಖಲುಮಾಡಿರುವರಾಗಿ ತಿಳಿದುಬಂದಿದೆ.

ಇಲ್ಲಿಯ ಕರ್ಣಾಟಕ ಸಾಹಿತ್ಯ ಸಂಘದಲ್ಲಿ ಸಾರ್ವಜನಿಕ ಧರ್ಮಾರ್ಥ ವಾಚನಾಲಯವನ್ನು ಏರ್ಪಡಿಸಬೇಕಾಗಿ ನಿರ್ಣಯವಾದ ಪ್ರಕಾರ ಇದೇ ತಾ, ೧೦ನೇ ಶನಿವಾರ ಆ ಘಂಟೆ ೬-೩೦ಕ್ಕೆ ವಾಚನಾಲಯದ ಉದ್ಘಾಟನ ಸಮಾರಂಭವು ಜರಗಲಿರುವುದು. ಅಂದಿನ ಸಮಾರಂಭದ ಅಗ್ರಾಸನವನ್ನು ಶ್ರೀಮಾನ್ ಕಡೆಕಾರು ರಾಜಗೋಪಾಲಕೃಷ್ಣ ರಾಯರು ಅಲಂಕರಿಸಲು ಸಮ್ಮತಿಸಿರುವರಾಗಿ ತಿಳಿದುಬಂದಿದೆ. ಭಾಷಾಭಿಮಾನಿಗಳೆಲ್ಲರೂ ಸಭಾಕಾರ್ಯದಲ್ಲಿ ಭಾಗಿಗಳಾಗಬೇಕಾಗಿ ಸಂಘದ ವಿನಂತಿಯಿದೆ.

ಕಟಪಾಡಿ

ಶ್ರೀ ಗೂಳಿಗರಡಿ ದಶಾವತಾರ ಮೇಳದವರು ಅಲ್ಲಲ್ಲಿ ಬಯಲಾಟಗಳನ್ನಾಡಿ ಪಾತ್ರಧಾರಿಗಳು ಬೆಳ್ಳಿಯ ಪದಕ ಇತ್ಯಾದಿ ಉಡುಗೊರೆಗಳಿಂದ ಬಹುಮಾನಿಸಲ್ಪಟ್ಟಿರುವರು. ವೃಷ್ಣಿ ಪಾತ್ರಧಾರಿಯೆಂಬ ಕೀರ್ತಿಯನ್ನು ಪಡೆದ ಇವನಿಗೆ ಪ್ರಥಮ ಬಹುಮಾನ ದೊರೆಯದೆ ಅನ್ಯರ ಪಾಲಿಗೆ ಸಾರಿದುದರಿಂದ ವಿಮರ್ಶಕರು ಜ್ಞಾನಶೂನ್ಯರೆನ್ನುವ ಬದಲಿಗೆ ಶ್ರೀಮಾನ್ ಬಾಬ ಪೂಜಾರಿಯವರು ತನ್ನನ್ನು ತಾನು ಅದ್ದಿಕೊಳ್ಳುತ್ತಿದ್ದರೆ ಉತ್ತಮವಿತ್ತು.

ಪ್ರೇಕ್ಷಕ.

ಮೂಡಬಿದರೆ

ಇಲ್ಲಿಯ ಬೋರ್ಡು ಮಿಡ್ಲ ಸ್ಕೂಲಿನಲ್ಲಿ ಅನಿವಾರ್ಯ ಕಾರಣಗಳಿಂದ ಶಾಲಾ ವಾರ್ಷಿಕೋತ್ಸವವನ್ನು ನಡೆಸಲು ಆಗದಿದ್ದರೂ ಉತ್ಸಾಹೀ ಉಪಾಧ್ಯಾಯವೃಂದವು ಮಕ್ಕಳ ಪ್ರೋತ್ಸಾಹಕ್ಕಾಗಿ ಕಳೆದ ಮಂಗಳವಾರ ಡಾ ಕರಂಜೆ ರಾಮರಾಯರ ಅಧ್ಯಕ್ಷತೆಯಲ್ಲಿ ಮಾಕ್ ಸ್ಪರ್ಧೆಯನ್ನೂ ಸಂಗೀತ ಸ್ಪರ್ಧೆಯನ್ನೂ ಜರಗಿಸಿ ಇನಾಮುಗಳನ್ನು ಹಂಚಿಸಿದರು. ಮಾತ್ರವಲ್ಲ ಶನಿವಾರ ದಿವಸ ಮಧ್ಯಾಹ್ನ ವಿವಿಧ ತರದ ವಿನೋದಗೊಳಿಸುವ ಆಟಗಳ ಸ್ಪರ್ಧೆಯನ್ನೇರ್ಪಡಿಸಿ ಪ್ರಥಮಸ್ಥಾನಗೈದವರಿಗೆ ಶ್ರೀಯುತ ರಾಮರಾಯ ಕಿಣಿ, ರೇಂಜರರಿಂದ ಬಹುಮಾನಗಳನ್ನು ಹಂಚಿಸಿದರು. ಈ ಶಾಲೆಯು ಊರಿನ ಜೀವನೇ ಆಗಿರುವುದೆಂದು ಹೇಳಬಹುದು. ಇಂತಹ ಶಾಲೆಯನ್ನು ತೆಗೆಯುವ ಆಲೋಚನೆಮಾಡದೆ ಇಲ್ಲಿಯೇ ಸ್ಥಿರವಾಗಿರುವಂತೆ ಮಾಡಬೇಕಾಗಿ ವಿದ್ಯಾಧಿಕಾರಿಗಳಿಗೂ, ಡಿ ಬೋ ಪ್ರೆಸಿಡೆಂಟರಿಗೂ ಊರಿನವರ ದೈನ್ಯಪೂರ್ವಕ ಪ್ರಾರ್ಥನೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಧಾರವಾಡ

ರಾಷ್ಟ್ರೀಯ ಸಪ್ತಾಹ

(೬-೪-೩೭ರಿಂದ ೧೩-೪-'೩೭)

ಎಪ್ರಿಲ್ ೬ನೇ ತಾರೀಕಿನಿಂದ ೧೩ನೇ ತಾರೀಕಿನ ವರೆಗೆ ರಾಷ್ಟ್ರೀಯ ಸಪ್ತಾಹವನ್ನು ಪಾಲಿಸಬೇಕೆಂದು ಮತ್ತೆ ಹೇಳುವ ಕಾರಣವಿಲ್ಲ. ಈ ವಾರದಲ್ಲಿ ಕಾಂಗ್ರೆಸ್ ವಿಧಾಯಕ ಕಾರ್ಯಕ್ರಮವನ್ನು ಮುಂದುವರಿಸುವುದಲ್ಲದೆ ಸದ್ಯಕ್ಕೆ ರಾಷ್ಟ್ರದಲ್ಲಿ ಉಂಟಾದ ಗಂಭೀರ ಪರಿಸ್ಥಿತಿಯನ್ನು ಜನತೆಯ ಎದುರಿಗೆ ಇಡುವುದು ನಮ್ಮ ಕರ್ತವ್ಯವಾಗಿದೆ. ಕಾಂಗ್ರೆಸ್ಸಿನವರು ಮಂತ್ರಿಪದವನ್ನು ಏಕೆ ನಿರಾಕರಿಸಿದರು. ಆದರಿಂದ ಮುಂದೆ ಏನು ಪರಿಣಾಮವಾಗಬಹುದು ಮೊದಲಾದ ಕಾರಣಗಳನ್ನು ಹಳ್ಳಿಗಳಲ್ಲಿ ತಿರುಗಾಡಿ ರೈತರಿಗೆ ತಿಳಿಸಿ ಹೇಳುವುದು ಅವಶ್ಯವಿದೆ. ಯಾಕೆಂದರೆ ಅನೇಕರು ಕಾಂಗ್ರೆಸ್ಸಿನ ವಿರುದ್ಧ ಪ್ರಚಾರವನ್ನು ಕೈಕೊಂಡಿರುವರು. ಇದನ್ನು ಕಾಂಗ್ರೆಸ್ ಕಾರ್ಯಕರ್ತರು ಲಕ್ಷ್ಯದಲ್ಲಿಟ್ಟು ಕಾಂಗ್ರೆಸ್ಸಿನ ಭೂಮಿಕೆಯನ್ನು ಚೆನ್ನಾಗಿ ಪ್ರಚಾರಮಾಡಬೇಕು. ಹಳ್ಳಿಗಳಲ್ಲಿ ಕಾಂಗ್ರೆಸ್ ಸಂಘಟನೆಯ ಕಾರ್ಯವನ್ನು ಕೈಕೊಳ್ಳಬೇಕು, ಸಭಾಸದರನ್ನು ಮಾಡಬೇಕು. ಕೊನೆಯ ದಿವಸ ಇಡೀ ವಾರದಲ್ಲಿ ನಡೆದ ಕಾರ್ಯಕ್ರಮದ ವರದಿಯನ್ನು ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಚೇರಿಗೆ ಕಳುಹಿಸಬೇಕು.

ರಾ. ಶ್ರೀ ಹುಕ್ಕೇರಿಕರ
ಗೌ, ಕಾರ್ಯದರ್ಶಿ, ಧಾರವಾಡ

ಬಂಟರ ಯಾನೆ ನಾಡವರ ಸಂಘ ಮುಂಬಾಯಿ

ಈ ಸಂಘದ ಮಹಾಸಭೆಯು ಕಳೆದ ಮಾರ್ಚಿ ತಾ ೨೮ನೇ ಆದಿತ್ಯವಾರ ಮುಂಬಾಯಿ ನೇಶನಲ್ ಮೆಡಿಕಲ್ ಕೋಲೇಜಿನಲ್ಲಿ ಜರಗಿತು. ಮ ರಾ ಡಾಕ್ಟರ್ ವೆಂಕಟ್ರಾಯ ಸೆಟ್ರು ಅವರ್ಗಳವರು ತಕ್ಕ ಸಮಯಕ್ಕೆ ಬರಲು ಅನಾನುಕೂಲವಾದ್ದರಿಂದ ಶ್ರೀಯುತ ಕೆ ಪಿ ಕೆ ಸೆಟ್ರು ಸೂಚಿಸಿ ಶ್ರೀಯುತ ಮಹಾಬಲ ಸೆಟ್ರು ಪುಷ್ಟೀಕರಿಸಿದ್ದರಿಂದ ಮ. ರಾ ಬಡಿಲ ದೂಮಪ್ಪ ನಾಯ್ಕರು ಅಧ್ಯಕ್ಷ ಸ್ಥಾನವನ್ನು ಅಂಗೀಕರಿಸಿ ಈ ಕೆಳಗಿನ ಕಾರ್ಯಕ್ರಮಗಳು ನೆರವೇರಲಾಯಿತು.

(೧) ಈ ದಿನ ಕೂಡಿದ ಸದಸ್ಯರನ್ನೂ ಸ್ವಜಾತಿ ಬಾಂಧವರನ್ನೂ ಸ್ವಾಗತದಿಂದ ಸತ್ಕರಿಸಲಾಯಿತು.

(೨) ಮದ್ರಾಸ್ ಲೆಜಿಸ್ಲೇಟಿವ್ ಯಸೆಂಬ್ಲಿ ಕೌನ್ಸಿಲ್ ಮೆಂಬರರಾದ ಅತ್ತಾವರ ಬಾಲಕೃಷ್ಣ ಸೆಟ್ರು ಈ ದಿನದ ಮಹಾಸಭೆಗೆ ತಂತೀಮೂಲಕ ಕಳುಹಿಸಿದ ಸಂದೇಶವನ್ನು ಸಭೆಯ ಮುಂದಿಟ್ಟು ರಿಕಾರ್ಡುಮಾಡಲಾಯಿತು.

(೩) ಸಂಘದ ಸೆಕ್ರೆಟರಿಯವರು ತಯಾರಿಸಿದ ವರದಿಯನ್ನು ಸಭೆಯಮುಂದೆ ಓದಿ ರಿಕಾರ್ಡು ಮಾಡಲಾಯಿತು.

(೪) ಸಂಘದ ಏಳಿಗೆಯ ಕುರಿತೂ, ಮುಂದಿನ ಅಭಿವೃದ್ಧಿಯ ಕುರಿತೂ ಮತ್ತು ಸಂಘದ ಮೆಂಬರರನ್ನು ಆಗಾಗ್ಯೆ ಕಂಡು ತಾನುತಿಳಿದುಕೊಂಡ ಸಂಗತಿಯ ಕುರಿತು ಶ್ರೀಯುತ ಕೆ ಪಿ ಕೆ ಸೆಟ್ರು ಭಾಷಣವಿತ್ತದ್ದಲ್ಲದೆ ಕೆಲವು ಸೂಚನೆಗಳನ್ನು ಕೂಡಾ ಸಭೆಯ ಮುಂದಿಟ್ಟರು. ಆ ಸೂಚನೆಗಳ ವಿಷಯ ಶ್ರೀಯುತ ಮಂಗಳೂರು ಬಾಬು ಸೆಟ್ರು ತನ್ನ ಅಭಿಪ್ರಾಯವನ್ನು ಸಭೆಯಲ್ಲಿ ತಿಳಿಸಿ ವಾಚನಾಲಯವನ್ನೂ ರಾತ್ರೆ ಶಾಲೆಯನ್ನೂ ತೆರೆಯುವ ವಿಷಯ ವಿರೋಧಿಸಿದರು. ಆ ಮೇಲೆ ಶ್ರೀಯುತ ಕೌಡೂರು ವೆಂಕಪ್ಪ ಹೆಗಡೆಯವರು ಶ್ರೀಯುತ ಕೆ ಪಿ ಕೆ ಸೆಟ್ರ ಸೂಚನೆಗಳನ್ನು ಪುಷ್ಟೀಕರಿಸಿ ಭಾಷಣವನ್ನಿತ್ತರು. ತದನಂತರ ಶ್ರೀಯುತ ರುಕಯ್ಯ ಸೆಟ್ರು ಸಂಘದ ಏಳ್ಮೆಯ ವಿಷಯ ಭಾಷಣವಿತ್ತರು. ಆಮೇಲೆ ಶ್ರೀಯುತ ಕುತ್ತೆತ್ತೂರು ರಾಮಣ್ಣ ಸೆಟ್ರು, ಶ್ರೀಯುತ ಕೆ ಪಿ ಕೆ ಸೆಟ್ರ ಸೂಚನೆಗಳನ್ನು ಪುಷ್ಟೀಕರಿಸಿ ಸಂಘದ ಆದಷ್ಟು ಮೀಟಿಂಗಿನಲ್ಲಿ ಇತ್ಯರ್ಥಮಾಡಬೇಕಾಗಿ ಭಾಷಣವಿತ್ತದ್ದಲ್ಲದೆ ಸಂಘದ ಉದ್ದೇಶಗಳು ನೆರವೇರುವಂತೆ ಸರ್ವಸದಸ್ಯರೂ ಸ್ವಜಾತಿ ಬಾಂಧವರೂ ನೆರವಾಗಬೇಕಾಗಿ ಕೇಳಿಕೊಂಡರು.

(೫) ಸಂಘದ ಅಧ್ಯಕ್ಷರಾದ ಮ ರಾ| ರಾ| ಡಾಕ್ಟರ್ ವೆಂಕಟ್ರಾಯ ಸೆಟ್ರು ಸಾಯಂಕಾಲ ೫ ಘಂಟೆ ಸಮಯಕ್ಕೆ ಸಕುಟುಂಬಯುಕ್ತರಾಗಿ ಕೊಡಗಿನಲ್ಲಿ ಕಾಫಿಯೆಸ್ಟೇಟಿನ ಮೇನೇಜರರಾದ ಮ ರಾ ಬಾಕ್ರಬೈಲು ಲಕ್ಶ್ಮಣ ಭಂಡಾರಿಯವರು (ಬಿ ಯಸ್ ಸಿ) ಯೆಡಿನ್ ಬರ್ಗ ಮತ್ತು ಇವರ ಪತ್ನಿ ವಗೈರೆಯೊಡನೆ ಈ ದಿನದ ಸಭೆಗೆ ಚಿತ್ತೈಸಿ ನಂತರದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದರು.

(೬) ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ ಮ ರಾ ರಾ ಬಡಿಲ ದೂಮಪ್ಪನಾಯ್ಕರು ಸಂಘದ ಕಾರ್ಯಕಲಾಪಗಳು ಸರಿಯಾಗಿ ನೆರವೇರುವಂತೆ ಸಹಕರಿಸಬೇಕಾಗಿ ಭಾಷಣವಿತ್ತರು.

(೭) ಶ್ರೀಯುತ ಮೂಲ್ಕಿ ಬಾಬು ಸೆಟ್ರು ತನ್ನ ಶಿಷ್ಯವೃಂದದೊಡನೆ ತನ್ನ ಅತ್ಯದ್ಭುತವಾದ ಅಂಗಸಾಧನೆಗಳನ್ನು ಸಭಿಕರ ಮುಂದೆ ಆಡಿತೋರಿಸಿದರು. ಸಂಘದ ಅಧ್ಯಕ್ಷರಾದ ಮ| ರಾ| ರಾ| ಡಾಕ್ಟರ್ ವೆಂಕಟ್ರಾಯ ಸೆಟ್ರು ತನ್ನ ಸ್ವಂತ ಖರ್ಚಿನಿಂದ ಬೆಳ್ಳಿಯ ಕಪ್ ಇನಾಮು ಕೊಡುವುದಾಗಿ ವಾಗ್ದಾನವಿತ್ತುದಲ್ಲದೆ ಶ್ರೀಯುತ ಬಾಬುಸೆಟ್ರಿಗೆ ಅವರ ಅಂಗಸಾಧನೆ ಪ್ರದರ್ಶನದ ಅಭಿವೃದ್ಧಿಗೆ ದ್ರವ್ಯಸಹಾಯ ವಗೈರೆ ಅಗತ್ಯವಿರುವದಾದರೆ ತನ್ನಿಂದ ಕೂಡಿದಷ್ಟು ಮಟ್ಟಿನ ಸಹಾಯವನ್ನೀಯುವೆನೆಂದು ವಾಗ್ದಾನ ಮಾಡಿರುವರು.

ಈ ದಿನ ನೆರೆದ ವಿಶೇಷ ಮಹಾಸಭೆಗೆ ಚಿತ್ತೈಸಿದ ಸಭಿಕರ ಮತ್ತು ಅತಿಥಿಗಳ ಕೂಡುವಿಕೆಯಿಂದ ಫಾಟೋ ತೆಗೆಯಲ್ಪಟ್ಟಿತು.

ಸಂಘದ ಜೊತೆಕಾರ್ಯದರ್ಶಿ ಶ್ರೀಯುತ ಕೆ. ಪಿ ಕೆ ಸೆಟ್ರು ಸಂಘದ ಪರವಾಗಿ ಅತಿಥಿಗಳಿಗೂ ಅಧ್ಯಕ್ಷರುಗಳಿಗೂ ಸಭಿಕರಿಗೂ ಚಾ ಫಲಾಹಾರ ತಾಂಬೂಲಾದಿಗಳಿಂದ ಸತ್ಕರಿಸಿ ಸಭೆಯು ಕೊನೆಗೊಂಡಿತು.

ಕೆ. ಪಿ. ಕೆ ಸೆಟ್ಟಿ, ಮೂಲ್ಕಿ ದೊಂಬಸೆಟ್ಟಿ
ಜೊತೆ ಗೌರವ ಕಾರ್ಯದರ್ಶಿಗಳು

ನವಯುಗದಲ್ಲೇ
ನಿಮ್ಮ ಜಾಹೀರಾತನ್ನು
ಕೊಡಿರಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ
"ಗೊನೊಕಿಲರ್" (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷದಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ ೩—೦—೦ (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪.

Sole Manufacturer **Dr. D N. JASANI,** Vittalbhai Patel Road, BOMBAY4

— ದಕ್ಷಿಣ ಕನ್ನಡದಲ್ಲೆಲ್ಲಾ ಹರತಾಳ! —

ಎಲ್ಲೆಲ್ಲಿಯೂ ಮೆರವಣಿಗೆ, ಸಭೆ! — — * * * — — ಹೊಸ ಸುಧಾರಣೆಯ ಖಂಡನೆ !!

ಮಂಗಳೂರು

ಏಪ್ರಿಲ್ ತಾ. ೧ನೇಯ ತಾರೀಖಿನಲ್ಲಿ ನಡೆದ ಹರತಾಳವು ಬಹಳ ಯಶಸ್ವಿಯಾಗಿತ್ತು, ಸಣ್ಣ ಪುಟ್ಟ ಅಂಗಡಿಗಳೂ, ಕಾಫಿ ಹೋಟೆಲುಗಳೂ ಸಂಪೂರ್ಣ ಮುಚ್ಚಲ್ಪಟ್ಟಿದ್ದುವು. ಹಿಂದುಗಳೂ, ಮುಸಲ್ಮಾನರೂ, ಕ್ರೈಸ್ತರೂ ಇದರಲ್ಲಿ ಸಮಭಾಗ ವಹಿಸಿದುದು ಬಹಳ ವಿಶೇಷದ ಸಂಗತಿಯಾಗಿದೆ. ಇದರಿಂದಲೇ ಸುಧಾರಣೆಯ ವಿಷಯವಾಗಿ ಜನರಿಗಿರುವ ಅನಾದರಣೆಯು ಸ್ವಯಂವ್ಯಕ್ತವಾಗುವುದು.

ಅಂದು ಸಾಯಂಕಾಲ ಮೈದಾನಿನಲ್ಲಿ ಡಾ। ವಿಟ್ಟಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಪ್ರಚಂಡ ಮಹಾಸಭೆಯು ಸೇರಿತು. ಶ್ರೀಮಾನ್ ಎ. ಬಿ. ಶೆಟ್ಟಿ ಎಂ. ಎಲ್. ಎ. ರವರು ಮೊದಲು ಮಾತನಾಡುತ್ತಾ ೧೯೩೫ನೇ ಇಸವಿಯ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟು ಏತಕ್ಕಾಗಿ ಖಂಡನೀಯ, ತಿರಸ್ಕರಣೀಯವೆಂಬುದನ್ನು ಆಮೂಲಾಗ್ರವಾಗಿ ವಿವರಿಸಿದರು. ಈ ಸುಧಾರಣೆಯಲ್ಲಿ ಜನರಿಗೆ ನಿಜವಾದ ಅಧಿಕಾರವು ಕೊಡಲ್ಪಟ್ಟಿಲ್ಲವೆಂಬುದನ್ನು ಇತ್ತೀಚೆಗೆ ನಡೆದ ವಿದ್ಯಮಾನಗಳಿಂದ ತೋರಿಸಿಕೊಟ್ಟರು. ಕೇಂದ್ರ ಸರಕಾರದಲ್ಲಿಯೂ, ಗವರ್ನರರ ಕೈಯಲ್ಲಿಯೂ ಎಲ್ಲಾ ಅಧಿಕಾರಗಳು ಕೇಂದ್ರೀಕರಿಸಲ್ಪಟ್ಟಿರುವವೆಂದರು. ಇನ್ನು ಫೆಡರಲ್ ಅಸೆಂಬ್ಲಿಯಾಗುವಾಗ ದೇಶೀಯ ಸಂಸ್ಥಾನಗಳ ರಾಜರಿಂದ ನೇಮಕಹೊಂದಿದ ಪ್ರತಿನಿಧಿಗಳು ಬರುವರೆಂದೂ, ಬ್ರಿಟಿಷ ಇಂಡಿಯಾದಲ್ಲಿ ಪರೋಕ್ಷ ಚುನಾವಣೆಯ ಮೂಲಕ ಪ್ರತಿನಿಧಿಗಳನ್ನು ಆರಿಸಬೇಕಾದುದೆಂದೂ ಇದರಿಂದ ನಿಜವಾದ ಅಧಿಕಾರವು ಜನರ ಕೈಗೆ ಬರುವುದಿಲ್ಲವೆಂಬುದನ್ನೂ ವ್ಯಕ್ತಗೊಳಿಸಿ ಅನೇಕ ವಿಧದಿಂದ ಈ ಸುಧಾರಣೆಯು ಹಿಂದಿನ ರಾಜ್ಯಪದ್ಧತಿಯಿಂದಲೂ ನಿಕೃಷ್ಟವಾದುದೆಂದರು.

ಸಭೆಯ ಮುಂದೆ ತಂದಿದ್ದ ಠರಾವಿನ ಪರವಾಗಿ ಮಾತನಾಡುತ್ತಾ ಶ್ರೀಮಾನ್ ಕಾರಂತರು ಎಂ. ಎಲ್. ಎ. ಇವರು ಬ್ರಿಟಿಷ್ ಪಾರ್ಲಿಮೆಂಟಿನವರು ಇಂತಹ ಒಂದು ರಾಜ್ಯರಚನೆಯನ್ನು ಬೇರೆ ಯಾವ ರಾಜ್ಯಕ್ಕೂ ಕೊಟ್ಟಿರಲಿಲ್ಲವೆಂದೂ, ಇದರಿಂದ ಇನ್ನು ನೂರೈದು ಸಾವಿರ ವರ್ಷದ ವರೆಗೂ ಅಧಿಕಾರವು ಜನರ ಕೈಗೆ ಬರುವಂತಿಲ್ಲವೆಂದೂ ಹೇಳಿದರು. ಮದ್ರಾಸಿನಲ್ಲಿ ಅಲ್ಪವಾದ ಭರವಸೆಯನ್ನು ಕೊಡಲು ಗವರ್ನರರು ಒಪ್ಪಲಿಲ್ಲವೆಂದೂ ಇದರಿಂದಲೇ ಪ್ರಜಾಮುಖಂಡರಿಗೆ ಎಷ್ಟು ಅಧಿಕಾರ ಕೊಟ್ಟಿದೆಯೆಂದು ಗೊತ್ತಾಗುವುದೆಂದೂ ಹೇಳಿದರು.

ಶ್ರೀ. ಆರ್. ಎ. ಅಯ್ಯರವರು ಇಂಗ್ಲಿಷಿನಲ್ಲಿ ಮಾತಾಡುತ್ತಾ ಜನತೆಯ ಶಕ್ತಿಯನ್ನು ಹೆಚ್ಚಿಸಬೇಕೆಂದೂ, ಆ ಮೂಲಕ ಈ ಅಪ್ರಯೋಜಕವಾದ ರಾಜ್ಯರಚನೆಯನ್ನು ಧ್ವಂಸಮಾಡಬೇಕೆಂದೂ ಹೇಳಿದರು.

ಶ್ರೀ. ಎನ್. ಎಸ್. ಕಿಲ್ಲೆಯವರು ರಾಷ್ಟ್ರಚಳವಳಿಯು ಇನ್ನೂ ಭರದಿಂದ ಸಾಗಬೇಕಾಗಿದೆಯೆಂದೂ ಕಾಂಗ್ರೆಸ್ಸಿನವರು ಇದು ವರೆಗೆ ಮಾಡಿದ ಕೆಲಸಕ್ಕಾಗಿ ಕಾಂಗ್ರೆಸ್ಸಿನ ಶತ್ರುಗಳು ಕೂಡ ಮೆಚ್ಚಬೇಕೆಂದೂ ಯಾವ ಜನಾಂಗದ ಅಧಿಕಾರವೂ ಸಂಯುಕ್ತ ಪ್ರಜಾಶಕ್ತಿಯನ್ನೆದಿರಿಸಲಾರದೆಂದೂ, ಕಾಂಗ್ರೆಸಿನವರು ಅತ್ಯಲ್ಪ ಕಾಲದಲ್ಲಿಯೇ ಸುಧಾರಣೆಯ ಸ್ವರೂಪವನ್ನು ಬಯಲಿಗೆಳೆಪರೆಂದೂ ಹೇಳಿದ್ದಲ್ಲದೆ ಕಾಂಗ್ರೆಸಿನವರು ಅಧಿಕಾರ ಲೋಭದಿಂದ ಕೆಲಸಮಾಡಿದ್ದಲ್ಲವೆಂದರು.

ಶ್ರೀ. ತಲಚೇರಿಕರ ರಂಗರಾಯರು ತಮ್ಮ ಭಾಷಣದಲ್ಲಿ ಈಗಿನ ಕೆಲ ಜಸ್ಟಿಸ್ ಪಕ್ಷದವರು ಸಿಕ್ಕಿದಷ್ಟು ಲಾಭವೆಂದು ಮಂತ್ರಿಪದವಿಗಳನ್ನು ಸ್ವೀಕರಿಸಿರುವರೆಂದೂ, ಮುಂದಿನ ಆರು ತಿಂಗಳ ವರೆಗೆ ಕಾಂಗ್ರೆಸಿನವರು ಕೆಲಸಮಾಡಿ ಇತರ ಎಲ್ಲಾ ಪಕ್ಷಗಳನ್ನು ಸಂಪೂರ್ಣವಾಗಿ ಮುರಿದು ಬಿಡಬೇಕೆಂದೂ ಹೇಳಿದರು.

ಅನಂತರ ಹೊಸ ರಾಜ್ಯ ವಿಷಯದಲ್ಲಿ ಜನತೆಯ ಅಸಮಾಧಾನವನ್ನು ಸೂಚಿಸಿ, ಮತ್ತು ಕಾನ್‌ಸ್ಟಿಟ್ಯುಯಂಟ್ ಅಸೆಂಬ್ಲಿಯನ್ನು ಕರೆದು ಅದರಲ್ಲಿ ಮುಂದಿನ ರಾಜ್ಯರಚನೆ ತಯಾರಾಗಬೇಕೆಂಬ ಠರಾವು ಬಹುಮತದಿಂದ ಮಂಜೂರಾಯಿತು.

ಅಧ್ಯಕ್ಷರು ಸಭೆಯಲ್ಲಿ ಮಾತಾಡಿದವರ ಅಭಿಪ್ರಾಯಕ್ಕೆ ಸಮ್ಮತಿಕೊಟ್ಟದ್ದಲ್ಲದೆ ಸುಧಾರಣೆಯು ನಮಗೆ ಅಧಿಕಾರವನ್ನು ಸ್ವಲ್ಪ ಮಟ್ಟಿಗೂ ಕೊಡುವುದಿಲ್ಲವೆಂದರು.

ಶ್ರೀ। ಕೆ ಹೈದರರು ವಂದನಾರ್ಪಣೆ ಮಾಡಿದ ಅನಂತರ ಸಭಾಂತ್ಯವಾಯಿತು.

ಉಡುಪಿ.

ತಾ. ೧-೪-೩೭ನೇ ಗುರುವಾರ ಕಾಂಗ್ರೆಸಿನ ಅನುಮತಿಯಂತೆ ಜಯಶೀಲ ಹರತಾಳವು ಆಚರಿಸಲ್ಪಟ್ಟಿತು. ವ್ಯಾಪಾರ ವಹಿವಾಟುಗಳು ಬೆಳಗಿನಿಂದ ಸಂಜೆಯವರೆಗೂ ಪೂರ್ಣವಾಗಿ ನಿಲ್ಲಿಸಲ್ಪಟ್ಟದ್ದವು. ಪಟ್ಟಣದ ಮುಖ್ಯ ಭಾಗವೆಲ್ಲಾ ಸಂಪೂರ್ಣ ಮುಚ್ಚಲ್ಪಟ್ಟಿತ್ತಲ್ಲದೆ ಒಂದು ಕೈ ಬೆರಳೆಣಿಕೆಯ ಕೆಲವೇ ಚಿಲ್ಲರೆ ಅಂಗಡಿಗಳನ್ನು ಬಿಟ್ಟರೆ ಎಲ್ಲಾ ಕಡೆಗಳಲ್ಲಿಯೂ ಅಪೂರ್ವ ಹರತಾಳವಾಚರಿಸಲ್ಪಟ್ಟದ್ದಿತು. ಮೊದಲೇ ಪ್ರಕಟವಾದಂತೆ ಸಂಜೆ ೫ ಘಂಟೆಗೆ ಸರಿಯಾಗಿ ಕರಿಪತಾಕೆಯ ಮೆರವಣಿಗೆಯು ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಪಿ. ಮಂಜುನಾಥ ನಾಯ್ಕರ ಧುರೀಣತ್ವದಲ್ಲಿ ರಥಬೀದಿಯಿಂದ ಹೊರಟಿತು. ಶ್ರೀಮತಿ ಪಿ. ಮನೋರಮಾಬಾಯಿಯವರೇ ಮೊದಲಾದ ಸ್ತ್ರೀಯರೂ, ಅಬಾಲವೃದ್ಧರೂ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಬಳಿಕ ಈ ಮೌನ ಮೆರವಣಿಗೆಯು ತೆಂಕುಪೇಟೆ, ಕೋರ್ಟುರಸ್ತೆ, ಗಾಂಧಿಮೈದಾನು, ಸಂತೆಕಟ್ಟೆ, ಕಲ್ಸಂಕ ಮಾರ್ಗವಾಗಿ ಮುಂದುವರಿದು ಘಂಟೆ ೭ಕ್ಕೆ ಸರಿಯಾಗಿ ರಥಬೀದಿಗೆ ತಲಪಿತು. ಅಲ್ಲಿ ಶ್ರೀಯುತ ಕೆ. ಕೆ. ಸೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಶ್ರೀ. ಕೆ. ಸೀನ ಸೆಟ್ಟರು ಅಂದಿನ ಹರತಾಳದ ಮಹತ್ವವನ್ನು ವಿವರಿಸಿದರು. ಶ್ರೀಯುತ ವಾಸುದೇವ ಶೆಣೈಯವರು ಹೊಸ ಸುಧಾರಣೆಯ ರೂಪರೇಷೆ, ಪ್ರಾಂತಿಕ ನ್ಯಾಯವಿಧಾಯಕ ಸಭೆಗಳ ಹಾಗೂ ಫೆಡರಲ್ ಅಸೆಂಬ್ಲಿಯ ರಚನೆಯಲ್ಲಿರುವ ಅಪ್ರಾಮಾಣಿಕತೆಯನ್ನು ತಿಳಿಸಿದರು. ಶ್ರೀ ಪಿ. ಮಂಜನಾಥನಾಯ್ಕರು ಸ್ಥಳೀಕ ವಿದ್ಯಮಾನಗಳನ್ನು ವಿವರಿಸಿ ದೇಶದ ಒಕ್ಕಟ್ಟು ಮತ್ತು ಸ್ವಾಭಿಮಾನವನ್ನು ತೋರಿಸುವ ಇಂತಹ ದಿನವನ್ನು ಆಚರಿಸುವದರಲ್ಲಿ ಪ್ರತಿಯೊಬ್ಬರೂ ಸಹಕರಿಸುವದು ಧರ್ಮವೆಂಬುದನ್ನು ಒತ್ತಿ ಹೇಳಿದರು. ಶ್ರೀ ಎಮ್. ವಿಟ್ಠಲ ಹೆಗ್ಡೆಯವರು ದೇಶದ ದಾರಿದ್ರ್ಯ ನಿವಾರಣೆ ಹಾಗೂ ಪೂರ್ಣ ಸ್ವಾತಂತ್ರ್ಯಕ್ಕಾಗಿ ಈ ತನಕ ನಡೆದಿರುವ ಹೋರಾಟದ ಮಹತ್ವವನ್ನು ಮನಗಾಣಿಸಿ ಇಂತಹ ಸ್ವಾತಂತ್ರ್ಯಾಭಿಲಾಷಿ ರಾಷ್ಟ್ರವು ಈ ಸುಧಾರಣೆಯಿಂದ ಎಂದಿಗೂ ತೃಪ್ತಿಪಡಲಾರದೆಂದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸೈಮನ್ ಕಮಿಶನ್, ಲಂಡನ್ ಪರಿಷತ್ತುಗಳ ವಿದ್ಯಮಾನಗಳನ್ನು ವಿವರಿಸಿ ಇವುಗಳ ಫಲಿತಾಂಶವಾಗಿ ಈಗ ಜಾರಿಗೆ ಬಂದಿರುವ ಸುಧಾರಣೆಯು ಎಷ್ಟೊಂದು ಟೊಳ್ಳಾಗಿರುವದೆಂಬದನ್ನು ವರ್ಣಿಸಿದರು. ಕಾಂಗ್ರೆಸಿನ ಕಾರ್ಯಕ್ರಮ, ಗವರ್ನರರು ಆಶ್ವಾಸನ ಕೊಡಲೊಪ್ಪದುದಕ್ಕಾಗಿ ಕಾಂಗ್ರೆಸಿನವರು ಮಂತ್ರಿಮಂಡಲಿಯನ್ನು ರಚಿಸಲು ನಿರಾಕರಿಸಿದ ರೀತಿ ಮೊದಲಾದುವುಗಳನ್ನು ವಿವರಿಸಿ ಹೇಳಿ—ಹೊಸ ರಾಜ್ಯಾಂಗ ರಚನೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಮತ್ತು ಕಾಂಗ್ರೆಸಿನ ಎಲ್ಲಾ ಕಾರ್ಯಗಳಲ್ಲಿ ಬೆಂಬಲವನ್ನು ಕೊಡುವ ಠರಾವನ್ನು ಸಭೆಯ ಮುಂದಿಟ್ಟರು. ಅದು ಸರ್ವಾನುಮತದಿಂದ ಮಂಜೂರಾದ ನಂತರ ಕಾರ್ಯದರ್ಶಿಯ ಧನ್ಯವಾದಗಳಾಗಿ ಸಭಾಂತ್ಯವಾಯಿತು.

ಕುಂಬಳೆ

ಈ ದಿವಸ ಇಲ್ಲಿ ಹರತಾಳವನ್ನು ಆಚರಿಸಬೇಕಾಗಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯಿಂದ ಬಂದ ನೋಟೀಸು ಪ್ರಕಾರ ಹಿಂದು, ಮುಸಲ್ಮಾನ, ಕ್ರೈಸ್ತರು ಒಗ್ಗಟ್ಟಾಗಿ ಯಾವತರದ ವೈಷಮ್ಯವೂ ಇಲ್ಲದೆ ಆಚರಿಸಿದ್ದು ಇದೇ ಪ್ರಥಮ ಸರ್ತಿ. ಸಾಧಾರಣ ೧೧ ಗಂಟೆಯವರೆಗೆ ಪೇಟೆ ಕಳುವಳಿ ಹಿಡಿದು ನ್ಯಾಯಾಪರೆಗೆ ವಂದೇ ವಂದು ಅಂಗಡಿಯಾಗಲೀ ಹೋಟಲು ಆಗಲೀ ಹಿಂದೂ ಮುಸಲ್ಮಾನ ಕ್ರೈಸ್ತರ ವ್ಯಕ್ತಿಯಾರೊಬ್ಬರೂ ತೆರೆದಿರಲಿಲ್ಲ. ನಂತರ ಸಾಧಾರಣ ೫-೬ ಅಂಗಡಿಗಳು ಹೊರತು ಬಾಕಿ ಪೂರ್ಣ ಬಂದಾಗಿತ್ತು. ಸಾಯಂಕಾಲ ೫ರಿಂದ ೬ರ ವರೇಗೆ ಕರಿನಿಶಾನೆ ಮೆರವಣಿಗೆ ಮತ್ತು ಮೈದಾನಿನಲ್ಲಿ ಸಾರ್ವಜನಿಕ ಸಭೆ ನಡೆಯಿತು. ಜನಾಬ್ ಮಹಮ್ಮದ್ ಶೆರೂಲರು ಅಧ್ಯಕ್ಷರಾಗಿದ್ದರು. ಹೊಸರಾಜ್ಯಾಂಗರಚನೆಯ ನಿಷೇಧದ ಠರಾವನ್ನು ಸಭೆಯ ಮುಂದಿಟ್ಟು ಸರ್ವಸಮ್ಮತದಿಂದ ಪಾಸ್‌ಮಾಡಲಾಯಿತು.

ಮೂಡಬಿದ್ರೆ

ಕಳೆದ ೧-೪-೩೭ನೇ ದಿನ ಹೊಸರಾಜ್ಯ ಘಟನೆಯನ್ನು ನಿಷೇಧಿಸುವ ಸಲುವಾಗಿ ಸಂಪೂರ್ಣ ಹರತಾಳವನ್ನು ಆಚರಿಸಲಾಯಿತು. ಆದರೆ ಸಾಯಂಕಾಲ ೬ ಘಂಟೆಯನಂತರ ೪-೫ ಜನ ಸ್ವಾರ್ಥಿಗಳು ಹಗಲು ಕಾಂಗ್ರೆಸ ಅಭಿಮಾನಿಗಳೆಂದು ತೋರ್ಪಡಿಸಿ ಕೊಂಡಿದ್ದು ರಾತ್ರಿ ತಮ್ಮ ಅಂಗಡಿಗಳನ್ನು ತೆರೆದಿಟ್ಟು ಚಾತಕ ಪಕ್ಷಿಯಂತೆ ಆಫೀಸರುಗಳ ಬೆಂಬಲಕ್ಕೆ ಬಾಯಿಬಿಟ್ಟು ಕುಳಿತಿದ್ದುದು ತುಂಬಾ ಶೋಚನೀಯ ಮತ್ತು ತಮಾಷೆಯಾಗಿ ತೋರುತ್ತಿತ್ತು.

ಉಪ್ಪಿನಂಗಡಿ

ಇಲ್ಲಿ ನಿನ್ನೆ ತಾ ೧-೪-೩೭ರಲ್ಲಿ ಕಾಂಗ್ರೆಸ್ಸಿನ ಆಜ್ಞೆಯಂತೆ ಸಂಪೂರ್ಣಹರತಾಳವನ್ನು ಆಚರಿಸಿದ್ದಲ್ಲದೆ ಸಾಯಂಕಾಲ ಘಂಟೆ ೫॥ಗೆ ಕಪ್ಪು ನಿಶಾನೆಯಿಂದ ಪುರಜನರ ಮೆರವಣಿಗೆ ಹೊರಟು ಹೊಳೆ ಕಿನಾರಿಗೆ ಬಂದು ಶ್ರೀಮತಿ ಲಕ್ಷ್ಮೀ ಪಿ ಪಿ ಪೈಗಳವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀಯುತ ಬಳ್ಕುಂಜೆ ಗೋಪಾಲ ಶ್ರೀನಿವಾಸರು ಹರತಾಳ ದಿನಾಚರಣೆಯ ಕುರಿತು ಮಾತನಾಡಿ ನವಸುಧಾರಣೆಯ ಕಾನೂನಿನ ಘಾತುಕತನವನ್ನು ವಿವರಿಸಿ ಭಾಷಣವಿತ್ತರು. ಅಧ್ಯಕ್ಷರ ಹಿತೋಕ್ತಿಗಳಾದ ನಂತರ ಹೊಸ ರಾಜ್ಯಾಂಗರಚನೆಯ ನಿಷೇಧ ಸೂಚಕ ಠರಾವನ್ನು ಶ್ರೀಯುತರು ಸಭೆಯ ಮುಂದಿಟ್ಟದನ್ನು ಸರ್ವಾನುಮತದಿಂದ ಅಂಗೀಕರಿಸಿದನಂತರ ಸಭೆಯು ಮುಕ್ತಾಯವಾಯಿತು.

ಹೊಸದುರ್ಗ

೧೯೩೫ನೇ ಇಸವಿಯ ಗವರ್ನಮೆಂಟ್ ಒಫ್ ಇಂಡಿಯಾ ಆಕ್ಟನ್ನು ಸರಕಾರದವರು ಇದೇ ಎಪ್ರಿಲ್ ತಿಂಗಳ ೧ ತಾ. ವಂದರಲ್ಲಿ ಜ್ಯಾರಿಗೆ ತರುವುದರಿಂದ ಆ ದಿವಸವನ್ನು ಹರತಾಳವಾಗಿ ಆಚರಿಸಬೇಕಾಗಿ ಕಾಂಗ್ರೆಸಿನ ನಿರ್ಣಯ ಪ್ರಕಾರ ಈ ದಿವಸ ಇಲ್ಲಿ ಸಹಾ ಪ್ರಚಂಡವಾದ ಹರತಾಳವನ್ನು ಆಚರಿಸಲಾಯಿತು, ಮುಹಮ್ಮದೀಯ ಮತ್ತು ಕ್ರೈಸ್ತ ಬಂಧುಗಳು ಸಹಾ ಸಂಪೂರ್ಣವಾಗಿ ಸಹಕರಿಸಿ ತಮ್ಮ ಅಂಗಡಿಗಳನ್ನು ಮುಚ್ಚಿದ್ದರು. ಈ ಪ್ರಕಾರ ಎಲ್ಲಾ ಮತದವರು ಏಕೀಕರಿಸಿ ಈ ದಿವಸ ಹರತಾಳವನ್ನು ಆಚರಿಸಿದು ಸರ್ವಮತ ಕಾಂಗ್ರೆಸ್ಸಿನ ... ಎಲ್ಲಾ ... ಯ ಜನತೆಯಲ್ಲೂ ... ಪ್ರತ್ಯಕ್ಷವಾಗಿದೆ. ... ಎಲ್ಲಾ ... ಅಂಗಡಿಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟವು. ಸಾಯಂಕಾಲ ಘಂಟೆ ೫ಕ್ಕೆ ಕಪ್ಪು ನಿಶಾನೆಗಳನ್ನು ಪ್ರದರ್ಶಿಸಿ ಮೆರವಣಿಗೆಯು ... ಹೊಸದುರ್ಗದ ... ಬಳಿಯ ಮೈದಾನಕ್ಕೆ ಬಂದುಸೇರಿ ಪುರಜನರ ಮಹಾಸಭೆಯು ಶ್ರೀಮಾನ್ ಎ. ಸಿ. ಕಣ್ಣನ್ ನಾಯರ್ ಇವರ ಅಧ್ಯಕ್ಷತೆಯಲ್ಲಿ ಸೇರಿತು. ಅಧ್ಯಕ್ಷರ ಭಾಷಣದ ತರುವಾಯ ಶ್ರೀಯುತ ಡಿ ಎಸ್ ಕಾಮತರು ಸಭೆಯ ಮುಂದಿಟ್ಟ, ವಂದನೀಯರಾದ ಸರಕಾರದವರು ಈ ದಿವಸದಿಂದ ಜಾರಿಗೆ ತರಲಿರುವ ಹೊಸ ಶಾಸನವನ್ನು ಈ ಸಭೆಯು ಖಂಡಿಸುತ್ತದಾಗಿಯೂ ಬಹುಸಂಖ್ಯಾತರಾಗಿ ಎಸೆಂಬ್ಲಿಯಲ್ಲಿ ಕಾಂಗ್ರೆಸ್‌ಪಾರ್ಟಿಯವರು ಮಂತ್ರಿಮಂಡಲವನ್ನು ರಚಿಸುವರೆ ಒಪ್ಪದ ಈ ಸಂದರ್ಭದಲ್ಲಿ ಗವರ್ನರರು ನೇಮಕಮಾಡಿದ ಮಂತ್ರಿಮಂಡಲದ ಮೇಲೆ ಪೂರ್ಣ ಅವಿಶ್ವಾಸ ಪಡುತ್ತದೆಂತಲೂ ಎರಡು ನಿರ್ಣಯಗಳು ಸರ್ವಾನುಮತದಿಂದ ಮಂಜೂರಾದವು. ನಂತರ ಬೇರೆ ಕೆಲವರ ಭಾಷಣಗಳಾಗಿ ಸಭೆಯು ಅಧ್ಯಕ್ಷರಿಂದ ಮುಕ್ತಾಯಗೊಳಿಸಲ್ಪಟ್ಟಿತು.

ಪೇತ್ರಿ

ಇದೇ ಎಪ್ರಿಲ್ ತಿಂಗಳ ತಾ. ೧ನೇ ಗುರುವಾರ, ನವರಾಜ್ಯಾಂಗ ಶಾಸನದ ಬಹಿಷ್ಕಾರದ ಸಲುವಾಗಿ, ಪೇತ್ರಿಯಲ್ಲಿ ಹರತಾಳವನ್ನು ಆಚರಿಸಿ ಸಾಯಂಕಾಲ ಘಂಟೆ ೪ ರಿಂದ ೫ಕ್ಕೆ ಕರಿನಿಶಾನೆಯನ್ನು ಹಿಡಿದು ಮೌನ ಮೆರವಣಿಗೆಯಾದ ಬಳಿಕ ಶ್ರೀ. ವೆಂಕಟಸ್ವಾಮಿ, ಇವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ, ಕಾಂಗ್ರೆಸ್ಸಿನ ಧ್ಯೇಯ ...

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
***Head Office*: UDIPI.**
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to date Banking business is also undertaken

ಸ್ಥಳೀಯ ಕುರಿತು, ಭಾಷಣಗಳಾದ ತರ ನಾಯ ಗ್ರಾಮ ಕಾಂಗ್ರೆಸ್ ಕಮಿಟಿ ಒಂದನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿ, ರಾಷ್ಟ್ರಗೀತೆಯೊಡನೆ ಸಭೆಯು ಕೊನೆಗೊಂಡಿತು

ಕುಂಜಾಲು

ಇಲ್ಲಿ ತಾ. ೧ ೪ ೩೭ರಲ್ಲಿ ಸರ್ವತ್ರ ಭಾರತದಲ್ಲಿ ಆಚರಿಸಿದಂತೆ ಹರತಾಳ ಆಚರಿಸಲ್ಪಟ್ಟಿತು. ವಿಧಿಸ್ರಕಾರ ವರವರಿಗೆ ಆಮಂತ್ರಣ ಸಭೆಗೆ ಬಂದಿದ್ದ ಶ್ರೀಯುತ ಉ ಯನ್. ಪಂಡಿತ್ ಪುಟ್ಟಣ್ಣಯ್ಯನವರ ಅಧ್ಯಕ್ಷತೆಯಲ್ಲಿ, ಹೊಸರಾಜ್ಯಾಂಗರಚನೆ ಮಸೂದೆಯ ನಿಷೇಧದ ಠರಾವು ಸರ್ವಸಮ್ಮತದಿಂದ ಮಂಜೂರುಮಾಡಲ್ಪಟ್ಟಿತು. ಇಲ್ಲಿಗೊಂದು ಕಾಂಗ್ರೆಸು ಆಫೀಸು ಸ್ಥಾಪಿಸಲು ತಾಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರನ್ನು ಕೇಳಿಕೊಳ್ಳಬೇಕಾಗಿ ಕೂಡಾ ತೀರ್ಮಾನಿಸಲ್ಪಟ್ಟಿತು.

ಶಿರ್ವ

ತಾ. 1—4—37ರಲ್ಲಿ ಶಿರ್ವ ಮಂಚಕಲ್ ಸಂತೆಯಾಗಿದ್ದರೂ ಜಯಶೀಲ ಹರತಾಳವಾಚರಿಸಲ್ಪಟ್ಟಿತ್ತು. ಗೊತ್ತಿಲ್ಲದೆ ಕೆಲವು ಸಾಮಾನು ಗಾಡಿಗಳು ಬಂದಿದ್ದರೂ ಸಂತೆಯ ವ್ಯಾಪಾರವೂ ನಿಲ್ಲಿಸಲ್ಪಟ್ಟಿತ್ತು. ಬಂಟಕಲ್, ಸಾಂತೂರು, ಮುದರಂಗಡಿ, ಸೂಡಾ ಮೊದಲಾದ ಕಡೆಗಳಲ್ಲಿಯೂ ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ಅಲ್ಲಲ್ಲಿ ಕಂಪತಾಕೆಗಳು ಹಾರಾಡುತ್ತಿದ್ದವು. ಸಂಜೆ ೫ ಘಂಟೆಗೆ ಶ್ರೀ ಕುತ್ಯಾರು ಮದನ ಸೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿತು. ಶ್ರೀಗಳಾದ ಮಾಧವ, ವಿ. ಶ್ಯಾನುಭಾಗ ಕೆ. ಆರ್ ದಾಬ ಸೆಟ್ಟಿ, ಎಂ. ಸಂಕಪ್ಪ ಹೆಗ್ಡೆ ಮೊದಲಾದವರು ಭಾಷಣಗಳನ್ನಿತ್ತರು. ಅಧ್ಯಕ್ಷರು ಆ ದಿನಾಚರಣೆಯ ಉದ್ದೇಶವನ್ನು ತಿಳಿಸಿ, ಹಳ್ಳಿಗಳ ಜಾಗ್ರತಿಯ ಕುರಿತು ಭಾಷಣವಿತ್ತರು. ಹೊಸ ಸುಧಾರಣೆಯನ್ನು ನಿಷೇಧಿಸಿ ಠರಾವಾಗಿ ಸಭಾಂತ್ಯವಾಯಿತು.

ಕಟಪಾಡಿ

ತಾ ೧—೪—೧೯೩೭ರಲ್ಲಿ ಸಂಪೂರ್ಣ ಹರತಾಳ ವಾಚರಿಸಲ್ಪಟ್ಟಿತು ಎಲ್ಲಾ ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು ಸಂಜೆ ಕರಿ ಪತಾಕೆಯ ಮೆರವಣಿಗೆಯು ಪೇಟೆಯಲ್ಲಿ ಸುತ್ತಾಡಿ ಶ್ರೀ. ಕೆ. ಎಲ್ಲಪ್ಪ ಬಲ್ಲಾಳರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀಯುತರಾದ ಕುರುಕಾಲು ಗಣಪಯ ಸೆಟ್ಟಿ, ವೇಜುಸೆಟ್ಟಿ, ಕೆ. ಜಿ. ಕಿಣಿ, ಪಿ ಲಕ್ಷ್ಮೀ ನಾರಾಯಣ ನಾಯಕ್ ಮೊದಲಾದವರು ಹರತಾಳದ ಉದ್ದೇಶವನ್ನು ತಿಳಿಸಿ ಹೊಸ ಸುಧಾರಣೆಯನ್ನು ಖಂಡಿಸಿ ಭಾಷಣವಿತ್ತರು. ನಿಷೇಧ ಸೂಚಕ ನಿರ್ಣಯವು ಮಂಜೂರಾಯಿತು.

ಕಾಪು

ಇಲ್ಲಿಯೂ ಸಂಪೂರ್ಣ ಹರತಾಳವಾಚರಿಸಲ್ಪಟ್ಟಿತು. ಸಂಜೆ ಶ್ರೀ. ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿತು. ಅಧ್ಯಕ್ಷರು ಸಭೆಯ ಮುಂದಿಟ್ಟ ನವೀನ ರಾಜ್ಯಾಂಗರಚನೆಯ ನಿಷೇಧ ಸೂಚಕ ಠರಾವು ಮಂಜೂರಾಯಿತು. ಪಾಂಗಾಳದಲ್ಲಿಯೂ ಹರತಾಳ ನಿತ್ತು.

ಹೆರ್ಡೂರು

ಹೊಸ ಸುಧಾರಣೆಯನ್ನು ನಿಷೇಧಿಸಿ ತಾ. ೧ರಲ್ಲಿ ಜಯಶೀಲ ಹರತಾಳವಾಚರಿಸಲ್ಪಟ್ಟಿತು. ಅಪರಾಹ್ನ ಕರಿಧ್ವಜದ ಮೆರವಣಿಗೆಯಾಗಿ ಸಭೆಸೇರಿಯಿತು. ಶ್ರೀ. ಬೇಳಿಂಜೆ ಕೃಷ್ಣಯ್ಯ ಹೆಗ್ಡೆಯವರು ಅಧ್ಯಕ್ಷರಾಗಿದ್ದರು. ನಿಷೇಧ ಸೂಚಕ ಠರಾವಾಯಿತು. ಮೊಂಟೇರಂಗಡಿಯಲ್ಲಿಯೂ ಪೂರ್ಣಹರತಾಳ ವಾಚರಿಸಲ್ಪಟ್ಟು ಸಾರ್ವಜನಿಕಸಭೆಯಲ್ಲಿ ಹೊಸ ರಾಜ್ಯಾಂಗರಚನೆಯನ್ನು ಖಂಡಿಸುವ ಠರಾವಾಯಿತು. ಕೆಮ್ಮಣ್ಣು ಹಿರಿಯಡ್ಕ, ಕಲ್ಯಾಣಪುರ, ಪರ್ಕಳ, ಮಣ್ಣಿ, ಮೊದಲಾದ ಎಲ್ಲಾ ಊರುಗಳಲ್ಲಿಯೂ ಹರತಾಳ ವಾಚರಿಸಲ್ಪಟ್ಟಿತು.

ಬಾಲವಾಙ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾ ಲ ವಾ ಙ್ಮ ಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ

ಉ ಡು ಪಿ.

(೧೬ನೇ ಪುಟದಿಂದ)

ಯಿಂದಾಗಲೀ ಹಣವನ್ನು ಒದಗಿಸಿ ಮುನಿಸಿಪಲ್ ತೆರಿಗೆಗಳನ್ನು ಕೆತ್ತು ಕಾಲಹರಣ ಮಾಡಬೇಕೆ? ಇದು ಎಷರ್ಮತನಕ ಸಾಗೀತು ಎಂದು ಸ್ವಾಭಾವಿಕವಾಗಿ ಪ್ರಶ್ನೆ ಹುಟ್ಟುವುದು. ಮುನಿಸಿಪಲ್ ಏಕ್ಟನ್ನು ಕೂಲಂಕುಷವಾಗಿ ಮುಂದಟ್ಟುಮಾಡಿ, ತೆರಿಗೆಯ ಭಾರವನ್ನು ಹೇಗೆ ತಗ್ಗಿಸಲಾಗುವುದು, ಯಾವ್ಯಾವ ಸಂದರ್ಭಗಳಲ್ಲಿ ಯಾವ್ಯಾವ ತೆರಿಗೆಗಳನ್ನು ವಿನಾಯಿತಿಪಡಿಸಬಹುದು, ಖರ್ಚುವೆಚ್ಚಗಳನ್ನು ಯಾವ ಮಟ್ಟಿಗೆಲ್ಲ ಕಡಿಮೆಮಾಡಬಹುದು, ಅಲ್ಪಖರ್ಚಿನಿಂದ ಯಾವ್ಯಾವ ಸೌಕರ್ಯಗಳನ್ನು ಹೆಚ್ಚಿಸಬಹುದು, ಸರಕಾರದಿಂದ ಯಾವ್ಯಾವ ಮಟ್ಟಿನ ಸಹಾಯ ನಿಯಾಯತಿ ಸಿಗಬಹುದೆಂಬುದಾಗಿ ವಿವೇಚನೆಮಾಡಿ ಸಾಂಘಿಕ ರೀತಿಯಲ್ಲಿ ಎಡೆಬಿಡದೆ ಪರಿಶ್ರಮ ಮಾಡಿ ಹೆಣಗಾಡಲು ಮುಂದಿನ ವ್ಯವಸ್ಥೆಗಳಾಗಬೇಕು.

ನಮಗಿಂತಲೂ ಚಿಕ್ಕ ಊರುಗಳಲ್ಲಿ (ಮೈಸೂರುಸೀಮೆ ಮತ್ತು ಬೊಂಬಾಯಿ ಆಧಿಪತ್ಯದಲ್ಲಿ) ಮುನಿಸಿಪಾಲಿಟಿಗಳು ರೂಪಿತವಾಗಿ ಇಂದಿಗೆ ಹಲವು ವರ್ಷಗಳಾದ್ದುಂಟು. ಅಲ್ಲಿನ ರೀತಿ ನೀತಿ ನಿಯಮಗಳನ್ನು ಗೊತ್ತುಮಾಡಿ ಅಲ್ಲೆಲ್ಲ ಸಾಧ್ಯವಾದಂತೆ ನಮ್ಮಲ್ಲೂ ನಮ್ಮ ಸ್ಥಿತಿಗತಿಗಳಿಗನುಗುಣವಾಗಿ ಮಾರ್ಪಾಟುಗಳನ್ನೂ ಮಾಡುವ ಬಗೆಯನ್ನು ವಿವೇಚಿಸಬೇಕು. ಅಗತ್ಯವಿದ್ದಲ್ಲಿ ಮದ್ರಾಸು ಡಿಸ್ಟ್ರಿಕ್ಟ್ ಮುನಿಸಿಪಾಲಿಟಿಸ್ ಆಕ್ಟನ್ನು ದುರಸ್ತಿಗೊಳಿಸುವರೆ ಮದ್ರಾಸು ಎಸಂಬ್ಲಿಯಲ್ಲಿ ಪ್ರಚಾರಗೈದು ಕಾರ್ಯಸಾಧನೆ ಮಾಡುವ ಪ್ರಯತ್ನಗಳನ್ನೂ ಕೈಗೊಳ್ಳಬೇಕು

ಅಂತೂ ನಮಗೆ ಬೇಡವಾದಾಗ್ಯೂ ನಮ್ಮ ಇಚ್ಛೆಯನ್ನು ಕೇಳದೆ ನಮಗೆ ದೊಡ್ಡ ಹೊರೆಯಾಗಿರುವ ಮುನಿಸಿಪಲ್ ಆಡಳಿತವನ್ನು ಸರಕಾರವು ಬಡ ಉಡುಪಿಯವರ ಮೇಲೆ ಹೊರಿಸಿರುವುದಾದರೂ, ಅದನ್ನು ರದ್ದು ಮಾಡಿಸಬಹುದೆಂಬ ಆಶೆಯು ವ್ಯರ್ಥ; ಹೇಗೂ ಬಂದ ಆಪತ್ತನ್ನು ಉಪಾಯದಿಂದ ತಾಳ್ಮೆಯಿಂದ ಕಾರ್ಯಸಾಧನದಿಂದ ಸಹಿಸಿಕೊಂಡು, ನಮ್ಮ ಮೇಲ್ಮೆಯನ್ನು ಅವಿಶ್ರಾಂತ ಶ್ರಮ ಸಾಹಸಗಳಿಂದ ಸಾಧಿಸಬೇಕಾಗಿದೆ. ಇತ್ತ ನಮ್ಮ ವಿವೇಕಶಾಲಿ ಪ್ರತಿಭಾಶಾಲಿ ನಾಗರಿಕರು ಗಮನಿಸುವರೆ?

ಉಡುಪಿ ನಾಗರಿಕ.

ಕರಾಚಿಯಲ್ಲಿ ಬೋಂಬಿನ ಸ್ಫೋಟ

ಮಾರ್ಚಿ ತಾ 31ರಲ್ಲು ಕರಾಚಿ ಪಟ್ಟಣದಲ್ಲೊಂದೆಡೆ ಕಸದ ರಾಶಿಯಲ್ಲಿ ಬೋಂಬೊಂದು ಬಿದ್ದಿರುವುದನ್ನು ಕಂಡು ಹತ್ತಿರದ ಹುಡುಗರು ಅದನ್ನು ಹೆಕ್ಕಿ ಮನೆಗೆ ತಂದು ತೆರೆಯಲೆತ್ನಿಸಿದರು. ಆಗ ಅದು ಸ್ಫೋಟವಾಗಿ ಇಬ್ಬರು ಕೊಲ್ಲಲ್ಪಟ್ಟು 3 ಮಂದಿಗೆ ಬಹಳ ಪೆಟ್ಟಾಗಿರುವುದು. ಸೇನಾಖಾತೆಯವರು ತರಬೇತಿಗಾಗಿ ಬೋಂಬುಗಳನ್ನು ಲೋರಿಗಳಲ್ಲಿ ಹಾಕಿ ಒಯ್ಯುತ್ತಿದ್ದಾಗ ಒಂದು ಬೋಂಬು ಜಾರಿ ಬಿದ್ದಿರಬೇಕೆಂದು ನಂಬಲಾಗಿದೆ



ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. ೩೦ ಮಾತ್ರೆಗಳು ರೂ. ೫ — ೦—೦

೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,

ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.



ಧರ್ಮಾರ್ಥ ಬಹುಮಾನಗಳು 1-4-0ಗೆ !

—·— ಯಾರಿಗೆ ? —·—

ರೂಪಾಯಿ 1—4—0 ಕೊಟ್ಟು 14ಪೀಸ ಒಟ್ಟೊ ರೋಸ್ಡ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡೆಕೊಳ್ಳುವವರಿಗೆ !!

ಇನಾಮುಗಳ ವಿವರ:—3ಡಜ್ಜು ರಿಸ್ಟ್‌ವಾಚುಗಳು; 1 ರೈಲ್ವೆಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್ ; 1 ಜತೆ ಗುಬ್ಬಿಗಳು; 1 ಫೌಂಟನ್ ಪೇನ 14 ಕ್ಯಾರೆಟ್ ನಿಬ್ಬು ಸಮೇತ; 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶನೀಯವ 1 ಟೋರ್ಚ್‌ಲ್ಯಾಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. **ಇಂದೇ ಆರ್ಡರು ಕೊಡಿರಿ.**

Bengal Watch Co.,

Post Box No. 12214, CALCUTTA

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು. ಪರೀಕ್ಷಿಸಲಪೇಕ್ಷಿಸುವವರು

"ಯೋಗೀಶ್ವರರ ಶಕ್ತಿಸಾಹಸ"

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುಮ್

ಚಿಕಾಕೋಲ್

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ: ಡಬ್ಬಿ ೧ಕ್ಕೆ ೧—೦—೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. **ಕ್ರಯ: ಡಬ್ಬಿ ೧ಕ್ಕೆ ೨-೦-೦.**

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ನಾಣಿಯ ಮದುವೆ

[ಕತೆಗಾರ: ಬನ್ನಂಜೆ P. N. ರಾಮಾಚಾರ್ಯ, ಉಡುಪಿ]

ಅವನ ನಿಜವಾದ ಹೆಸರು ನಾರಾಯಣನೆಂದು! ಆದರೆ ನಾವೆಲ್ಲರೂ ಅವನನ್ನು ಕರೆಯುತ್ತಿದ್ದುದು ನಾಣಿಯೆಂದು! ಅವನು ಒಂದು ನಮೂನೆ ವ್ಯಕ್ತಿ. ಬಾವಲಿಯ ಹಾಗೆ, ಮಳೆ ಬಂದ ಕಡೆ ಕೊಡೆಹಿಡಿದು ಬಿಟ್ಟರಾಯಿತೆಂದು ಅವನ ಸಿದ್ಧಾಂತ. ಆಕಾರದಲ್ಲಿ ಹೇಗೆನ್ನುವಿರಾ? ಬಕಪಕ್ಷಿಯಂತೆ ಎಂದರೆ ಸಾಕು! ಆಗ ನಿಮಗೇ ತಿಳಿಯುತ್ತದೆ ಅವನ ರೂಪ! ತಾನೊಬ್ಬ ದೊಡ್ಡ ಸಾಹಿತಿಯೆಂದು ಅವನ ನಿರ್ಧಾರ. ಅದಕ್ಕಾಗಿ ಅವನು ಹೆಮ್ಮೆ ಪಡುತ್ತಿದ್ದ. ಆದರೆ ದೊಡ್ಡ ಸಾಹಿತಿಯೆನ್ನುವುದಕ್ಕಿಂತ ಗೊಡ್ಡು ಸಾಹಿತಿಯೆಂದರೆ ಚೆನ್ನಾಗಿರುವುದೆಂದು ನಮಗನ್ನಿಸುತ್ತಿದೆ! ಏಕೆನ್ನುವಿರಾ? ಅವನಲ್ಲಿ ಸ್ವತಂತ್ರವಾದ ರಚನಾಚಾತುರ್ಯವಿಲ್ಲ. ಹತ್ತಾರು ಕಾದಂಬರಿಗಳನ್ನೋ ನೂರಾರು ಕಿರುಗತೆಗಳನ್ನೋ ನೋಡಿ ಅವುಗಳಲ್ಲಿನ ಒಂದೊಂದು ವಾಕ್ಯಗಳನ್ನು ಪೋಣಿಸಿ ಒಂದು ಭಯಂಕರ ಕತೆಯನ್ನಾಗಿ ಸೃಷ್ಟಿಸುವನು! ಭದ್ರಾಪುರದ 'ಧರ್ಮ ಸಾಮ್ರಾಜ್ಯ'ವೆಂಬ ಪತ್ರಿಕೆಗೆ ಅವನ ಕತೆಗಳೇ ಸಾಟಿ! ಇರಲಿ, ನಮಗೇಕೆ ಆ ಸಮಾಚಾರ? ನಾವೀಗ ಹೇಳಬಯಸುವುದು ಅವನ ಮದುವೆಯ ವಿಷಯವನ್ನಲ್ಲದೆ ಇತಿಹಾಸವನ್ನಲ್ಲ.

ನಾಣಿಯ ಮೊದಲ ಪತ್ನಿಯಾದ ಲೀಲೆಯು ಸ್ವರ್ಗಸ್ಥಳಾಗಿ ಇಂದಿಗೆ ಒಂದು ವರುಷವು ಸಂದಿತು. ಲೀಲೆಯು ತುಂಬಾ ಚಲುವೆ! ಮತ್ತೆ ಬೇರೆ ತುಂಬಾ ಗುಣವಂತೆ. ಹಾಗೂ ರಸಿಕೆ. ರಸಿಕನೊಬ್ಬನನ್ನು ವರಿಸಬೇಕೆಂದು ಆಕೆಯ ಮನದಾಸೆ. ಪ್ರಕೃತಿ ದೇವಿಯ ಅಭಿಶಾಪವೋ ಏನೋ ಲೀಲೆಗೂ ನಾಣಿಗೂ ಮದುವೆಯಾಗಿ ಬಿಟ್ಟಿತು. ನಾಣಿಯು ಲೀಲೆಯನ್ನು ಕಣ್ಣೆತ್ತಿ ನೋಡಲಿಲ್ಲ. ಆಕೆ ಹತ್ತಿರ ಬಂದರೆ ತಲೆಬಾಗಿಸಿಬಿಡುತ್ತಿದ್ದ. ಇನಿಯನು ರಸಿಕನಿದ್ದರೆ ಸರಸ ಸಾಮ್ರಾಜ್ಯದಲ್ಲಿ ವಿಹರಿಸಬಹುದೆಂದು ಲೀಲೆಯು ಕಲ್ಪಿಸಿಕೊಂಡಿದ್ದಳು. ಆದರೆ ಇನಿಯನೊಡನೆ ಹೇಗೆ ಮಾತನಾಡಬೇಕೋ ಅದೇ ನಾಣಿಗೆ ಗೊತ್ತಿಲ್ಲ, ಇದರಿಂದ ಆ ಬಾಲೆಯ ಸರಳ ಹೃದಯದಲ್ಲಿ ಹೆಚ್ಚಾದ ದುಃಖವುಂಟಾಯಿತು! ಇದೇ ಬೇನೆಯಿಂದ ಆಕೆ ಬೆಂದು ಬೆಂಡಾದಳು. ಆಕೆ ನಾಣಿಯ ವಿಷಯದಲ್ಲಿ ತುಂಬಾ ಕರುಣೆಪಟ್ಟಳು. ಜತೆ ಬಾಳದ ಪತಿಯೊಡನೆ ಕಾಲಕಳೆವುದೆಂದರೆ ಅದು ನರಕಯಾತನೆಯೆಂದು ತಿಳಿಯಿತಾಕೆಗೆ! ಈ ದುಃಖವು ಆಕೆಯಿಂದ ತಡೆಯಲಾಗಲಿಲ್ಲ. ಆಕೆ ಒಂದು ದಿನ ನಟ್ಟಿಗೆ ತನ್ನ ತವರು ಮನೆಗೆ ನಡೆದುಬಿಟ್ಟಳು. ಕೆಲವು ದಿನಗಳಲ್ಲಿ 'ಇದೇ ದುಃಖದಿಂದ ಒಂದುದಿನ ರಾತ್ರೆ ಕುತ್ತಿಗೆಗೆ ನೇಣುಹಾಕಿಕೊಂಡು ಅನಂತ ಧಾಮಕ್ಕೆ ಹೊರಟುಹೋದಳೆಂ'ದು ಸುದ್ದಿಯು ಬಂದಿತು. ತನ್ನ ಅರ್ಧಾಂಗಿಯ ಮರಣಕ್ಕಾಗಿ ನಾಣಿಯು ಸಂತಾಪಪಡಲಿಲ್ಲ. ಏಕೆಂದರೆ, ಅವನಿನ್ನೂ ಪ್ರೇಮದ ಬೆಲೆಯನ್ನು ಅರಿತಿಲ್ಲ. ದಿನ ಹೋದಾಗಲೆಲ್ಲಾ ಆತನ ಮನಸ್ಸಿನಲ್ಲಿ ಒಂದು ರೀತಿಯ ಬೇಸರವು ನೆಲೆಗೊಂಡಿತು. ಪ್ರಪಂಚದಲ್ಲಿ ತಾನು ಏಕಾಕಿಯಾಗಿರುವೆನೆಂದು ಅರಿತನು. ಪುನರ್ವಿವಾಹಮಾಡಿಕೊಳ್ಳುವ ನಿರ್ಧಾರಮಾಡಿದನು. ಆದರೆ ಅವನಿಗೆ ಹೆಣ್ಣು ಕೊಡುವವರಾರು? ಆ ಊರಲ್ಲಿ ಅವನು ಅಷ್ಟು ಪ್ರಸಿದ್ಧನಾಗಿದ್ದನು. ಹೀಗೆಯೇ ಇನ್ನೂ ಎರಡು ವರ್ಷಗಳು ಸಂದುವು. ನಾಣಿಗೆ ಮದುವೆಯಾಗುವ ಆಸೆ ಇಮ್ಮಡಿಯಾಯಿತು.

ಒಂದು ದಿನ ನಾಣಿಯು ಮದುವೆಯ ಚಿಂತೆಯಲ್ಲೇ ಮುಣುಗಿ ತನ್ನ ಕೊಠಡಿಯಲ್ಲಿ ಕುಳಿತ್ತಿದ್ದ. ಅಷ್ಟರಲ್ಲಿ ಪರಾಶರ ಶಾಸ್ತ್ರಿಗಳು ಬಂದರು. "ಶಾಸ್ತ್ರಿಗಳೇ? ಏತಕ್ಕೆ ಬಂದಿರಿ?" ಕುಗ್ಗಿದ ದನಿಯಿಂದ ನಾಣಿಯು ಪ್ರಶ್ನಿಸಿದ. "ನಿನ್ನ ಸಾಹಿತ್ಯ ಸೇವೆಯು ಸಸೂತ್ರವಾಗಿ ನಡೆಯುತ್ತಿದೆಯಷ್ಟೆ?" ಶಾಸ್ತ್ರಿಗಳು ಕೇಳಿದರು. ನಾಣಿಯು ನಕ್ಕನು. ಈ ಪ್ರಶ್ನೆಯಿಂದ ಅವನು ಹೆಮ್ಮೆಪಟ್ಟಿರಬೇಕು! "ನಾಣಿ! ನಾನೀಗ ಒಂದು ಘನವಾದ ಕಾರ್ಯಕ್ಕಾಗಿ ಬಂದಿರುವೆನು." ಎಂದರು ಶಾಸ್ತ್ರಿಗಳು. "ಏನದು?" ಕೌತುಕದಿಂದ ನಾಣಿಯು ಪ್ರಶ್ನಿಸಿದನು. 'ಏನಿಲ್ಲ!' "ನೀನೀಗ ಮದುವೆ-ಗಿದುವೆಮಾಡಿಕೊಳ್ಳಬೇಕೆಂದು ಇದ್ದಿಯಾ"?ಎಂದು ಶಾಸ್ತ್ರಿಗಳು ಪ್ರಶ್ನಿಸಿದರು." ಮದುವೆಯೆಂಬ ಶಬ್ದವು ಕಿವಿಗೆ ಬಿದ್ದೊಡನೆಯೇ ನಾಣಿ ಪುಳಕಿತನಾದ! "ನಮಗೆಲ್ಲ ಹೆಣ್ಣುಕೊಡುವವರಾರು?" ಎಂದ ನಾಣಿ ನಸುನಗುತ್ತ. "ಹಾಗೆಂದರೇನು ನಾಣಿ?" "ಹೆಣ್ಣುಕೊಡುವವರಾರೆಂದರೇನು?" ಹೆಣ್ಣಿಗೇನು ದರಿದ್ರ?—ಅದೂ ನಿನ್ನಂತಹ ಸಾಹಿತಿಗೆ!" ಎಂದರು ಶಾಸ್ತ್ರಿಗಳು. ಈ ಮಾತುಗಳನ್ನು ಕೇಳಿ ನಾಣಿಯು ಆನಂದಿಂದುಬ್ಬಿದ. "ನಾಣೀ! ನಮ್ಮ ನೆರಮನೆಗೆ ಯಾರೋ ಬಿಡಾರ ಬಂದಿರುವರು. ವೈಷ್ಣವ ಬ್ರಾಹ್ಮಣರೇ. ಎಲ್ಲಿಯೋ ಭದ್ರಪುರದವರಂತೆ. ಅವರಲ್ಲಿ ಒಂದು ಹುಡುಗಿ ಇದೆ, ನಾಣಿ,—ನಿನಗೆ ತಕ್ಕ ಹುಡುಗಿ. ಯಾರಾದರೊಬ್ಬ ಯೋಗ್ಯನಿಗೆ ಕೊಟ್ಟುಬಿಡಬೇಕೆಂದು ಅವರಾಸೆ! ನಾನು ನಿನ್ನ ವಿಷಯವಾಗಿ ಪ್ರಸ್ತಾಪಿಸಿದೆ. ಅವರು ತುಂಬಾ ಸಂತೋಷಪಟ್ಟರು. ನಿನಗಾಗಬಹುದೆಂದಿದ್ದರೆ........!" ಶಾಸ್ತ್ರಿಗಳೆಂದರು. ಈ ಮಾತುಗಳನ್ನು ಕೇಳಿದ ನಾಣಿಯ ಸಂತೋಷಕ್ಕೆ ಪಾರವೆಲ್ಲಿಯದು? 'ಶಾಸ್ತ್ರಿಗಳೇ! 'ನೋಡಿ, ಈಗ ನನ್ನನ್ನು ಕೇಳುವವರಾರು ತಂದೆಯೇ? ತಾಯಿಯೇ? ಹೆಂಡತಿಯೇ? ಎಲ್ಲರೂ ಒಗ್ಗಟ್ಟಿನಿಂದ ನನ್ನನ್ನು ಬಿಟ್ಟು ನಡೆದುಬಿಟ್ಟರು ನನ್ನಿಂದ ಒಂದೂ ಸಾಗದು. ಅದು ನಿಮಗೆ ಗೊತ್ತಿದೆ. ಅಂದ ಮೇಲೆ ನೀವು ಪ್ರಯತ್ನಪಡಲಾರಿರಾ?" ಎಂದ ನಾಣಿ ಅತಿ ದೈನ್ಯದಿಂದ "ಹಾಗೆಂದರೇನು ನಾಣಿ! ಶಾಸ್ತ್ರಿಗಳೆಂದರು. „ಆದರೆ ನೀನು ಮೊದಲನೆಯ ಹೆಂಡತಿಯನ್ನು ಉಪೇಕ್ಷಿಸಿದ್ದಿಯೆಂದೂ, ಗೃಹಕೃತ್ಯದ ವಿಷಯದಲ್ಲಿ ಅಸಡ್ಡೆಯಲ್ಲಿರುವೆಯೆಂದೂ ಒಂದೂ 'ವದಂತಿ' ಇದೆ. ಆ ಮಟ್ಟಿಗೆ ನೀನು ಸುಧಾರಿಸಬೇಕು ಕಂಡೆಯಾ! ಇನ್ನು ಕಾಲಗತಿ ಕಷ್ಟ, ಹಣವಿಲ್ಲ. ಆದುದರಿಂದ ಮದುವೆಯು ಸಂಕ್ಷೇಪದಲ್ಲಾಗಬೇಕೆಂದು ಅವರ ಕೋರಿಕೆ. ನೀನೇನ್ನುವೆ?" "ನಾನೇನು ಹಣವನ್ನು ಗಾಡಿಯಲ್ಲಿ ತುಂಬಿಸಿಟ್ಟಿರುವೆನೆಂದು ತಿಳಿದಿರುವಿರಾ? ಆ ವಿಷಯದಲ್ಲಿ ನನ್ನದೇನೂ ಆತಂಕವಿಲ್ಲ." ನಾಣಿಯೆಂದ. "ಸರಿ ಹಾಗಾದರೆ, ನಾಳೆ ಮಾತಾಡೋಣ!" ಎಂದು ಶಾಸ್ತ್ರಿಗಳು ಹೊರಟುಹೋದರು.

* * * * *

ಒಂದು ದಿನ ಏಕಾಂತದಲ್ಲಿ ಹತ್ತಾರು ಜನರ ಸೇರುವಿಕೆಯಿಂದ ನಾಣಿಗೆ ಮದುವೆಯಾಗಿ ಬಿಟ್ಟಿತು—ನಾಟಕದ ಮದುವೆಯಂತೆ! ಅತಿಚಲುವೆಯಾದ ದುರ್ಗಿಯೇ ಆತನ ವಧು. ಆಕೆಗೀಗ ಹದಿನೆಂಟು ವರ್ಷ ವಯಸ್ಸು ಇರಬಹುದು. ಆಕೆಯ ನಿರುಪಮ ಸೌಂದರ್ಯವನ್ನು ನೋಡಿ ನಾಣಿಯು ಮುಗ್ಧನಾಗಿಹೋದನು. ನಾಣಿಯು ನವನಾರಿಯನ್ನುಕೂಡಿಕೊಂಡು ತನ್ನ ಮನೆಗೆ ಬಂದನು. ಏನು ಕಾರಣವೋ ಆಕೆಯಲ್ಲಿ ತುಂಬಾ ಮಮತೆ ನಾಣಿಗೆ!

ಒಂದು ದಿನ ನಾಣಿಯು ತನ್ನ ಮನೆಯ ಹೊರಜಗಲಿಯಲ್ಲಿ ಕುಳಿತ್ತಿದ್ದ. ಅಂಚೆಯವನು ನಾಣಿಗೆ ಒಂದು ರಿಜಿಸ್ಟ್ರಿ ಲಕ್ಕೋಟೆಯನ್ನುಕೊಟ್ಟು ತೆರಳಿದ. ನಾಣಿಯು ಅದನ್ನು ಅವಸರದಿಂದ ಬಿಚ್ಚಿ ಓದಿದ.

ಶ್ರೀಃ

ಭದ್ರಾಪುರ ತಾ. 27-6-1936.

ಭದ್ರಾಪುರ ಮಠಾಧೀಶರಾದ ದೈವಜ್ಞತೀರ್ಥ ಶ್ರೀಪಾದಂಗಳವರು ಮಾಡುವ ಶ್ರೀಮನ್ನಾರಾಯಣ ಸ್ಮರಣೆಗಳು.

ಕಾಳೂರಿನ ನಾಥರಾಯರ ಮಗ ನಾರಾಯಣರಾಯರೀಗೆ—ಈ ಮೂಲಕ ತಿಳಿಯಪಡಿಸುವುದೇನೆಂದರೆ:—ನೀವು ನಮ್ಮ ಧರ್ಮದ ವ್ಯತಿರಿಕ್ತವಾಗಿ ವಿಧವೆಯೊಬ್ಬಳನ್ನು ಕಳೆದವಾರ ವಿವಾಹವಾಗಿರುವಿರೆಂದು ನಮ್ಮ ಶಿಷ್ಯವರ್ಗದವರು ನಮ್ಮ ಗೋಚರಕ್ಕೆ ತಂದಿರುವರು. ಈ ವಿಷಯದಲ್ಲಿ ನಮ್ಮ ಶ್ರೀಗಳವರು ಅಸಮಾಧಾನ ಪಡುವುದಲ್ಲದೆ, ನಿಮ್ಮನ್ನು ತಮ್ಮ ಶಿಷ್ಯವರ್ಗದಿಂದ ಬಹಿಷ್ಕರಿಸಿದ್ದಾರೆ. ಇಂದಿನಿಂದ ನಿಮಗೂ ನಮ್ಮ ಶ್ರೀಮಠಕ್ಕೂ, ಶ್ರೀಮಠದ ಶಿಷ್ಯವೃಂದಕ್ಕೂ ಯಾವ ತರಹದ ಸಂಬಂಧವೂ ಇರುವುದಿಲ್ಲ. ನೀವು ಬಹಿಷ್ಕೃತರು—ಜಾತಿ ಬಾಹಿರರು—ತಿಳಿದಿರುವುದು.

ಅಜ್ಞೆಪ್ರಕಾರ,
ವೀರಭದ್ರ ಶಾಸ್ತ್ರಿ, ಏಜಂಟ್.

ನಾಣಿಗೆ ಸಿಡಿಲು ಬಡಿದಂತಾಯಿತು. 'ಏನು? ನನ್ನ ದುರ್ಗಿಯು ವಿ-ಧ-ವೆ-ಯೇ? ಸ್ವಾಮಿಗಳಿಂದ ನನಗೆ ಬಹಿಷ್ಕಾರ! ನಾನು ಮುಂ... ಡೇ... ಗಂ... ಡ.... ನೇ?" ನಾಣಿಯ ಮೈಯೆಲ್ಲ ಬೆವರಿ ಹೋಯಿತು. ಅವನಿಗೇನೂ ತೋಚದೆ ದುರ್ಗಿಯನ್ನು ಹುಡುಕ ಹೊರಟನು. ದುರ್ಗಿಯು ಕೋಣೆಯಲ್ಲಿ ಮಲಗಿದ್ದಳು. ನಾಣಿಯು ಲಕ್ಕೋಟೆಯನ್ನು ಆಕೆಯ ಮುಖಕ್ಕೆ ಎಸೆದನು. ದುರ್ಗಿಯು ಥಕ್ಕನೆ ಎದ್ದು ಕುಳಿತಳು. "ಮುಂ.......!" ನಾಣಿಯು ಏನೇನೋ ಹೇಳುವುದರಲ್ಲಿದ್ದ 'ಏನು—ಏನಾಯಿತು?' ದುರ್ಗಿಯು ಗಾಬರಿಯಿಂದ ಕೇಳಿದಳು. "ಪ್ರಾಚೀನ ಕರ್ಮ!" ಎಂದು ನಾಣಿ ಅಲ್ಲೇ ಕುಳಿತುಬಿಟ್ಟ. ಆಕೆ ಅಲ್ಲೇ ಬಿದ್ದಿದ್ದ ಲಕ್ಕೋಟೆಯನ್ನು ತೆಗೆದು ಅದರಲ್ಲಿಯ ಕಾಗದವನ್ನು ಓದಿದಳು—ಘಟ್ಟಿಯಾಗಿ ನಕ್ಕುಬಿಟ್ಟಳು. "ದುರ್ಗಿ ನಗುವೆ ಏತಕ್ಕೆ?" ಆಕೆ ಸುಮ್ಮಗಿದ್ದಳು. 'ವಿಧವೆ!' ನಾಣಿಯು ಘರ್ಜಿಸಿದ. "ನಿನ್ನಪ್ಪನು ಇಂತಹ ಮೋಸ ಮಾಡಬಹುದೇ?" "ಅಮಂಗಲವನ್ನಾಡದಿರಿ! ನಾನಲ್ಲ—ವಿ—!" ನಾಚಿಕೆಯಿಂದ ಆಕೆಯೆಂದಳು. "ಏನನ್ನುವೆ ಸ್ವಾಮಿಯವರ ಪತ್ರವನ್ನು ಸುಳ್ಳೆನ್ನುವೆಯಾ?" ನಾಣಿಯೆಂದ. "ನನಗೆ ಹಿಂದೊಮ್ಮೆ—ಮದುವೆಯಾಗಿತ್ತು....!" ಎಂದಳಾಕೆ ಸಂಕೋಚದಿಂದ 'ಆದರೆ ಮತ್ತೆ ಆತ ಸತ್ತುಹೋದ!' ಸ್ಫೂರ್ತಿಯಿಂದ ನಾಣಿಯೆಂದ "ಇಲ್ಲ ಅವರಿನ್ನೂ ಜೀವಿಸಿದ್ದಾರೆ!" ಆಕೆಯೆಂದಳು. ಅಯ್ಯೋ ಗ್ರಹಚಾರವೇ!—ದುರ್ಗಿ ಆತನ ಹೆಸರೇನು?" "ಊಹು—ಊಹು!" ಆಕೆ ನಾಚಿದಳು. ಹೂಂ ಹೇಳು! ನಾಣಿಯೆಂದ ದುರ್ಗಿಯು ಲಕ್ಕೋಟೆಯನ್ನು ತೆಗೆದು ಅದರಲ್ಲಿ ಏನೋ ಬರೆದು ತೋರಿಸಿದಳು. ನಾಣಿ ಓದಿದ, "ನನ್ನ ಮೊದಲಿನ, ಪತಿ ನಾಣಿ!" ಎಂದಿತ್ತು "ಅದು ಈಗಿನ ಗಂಡ!" ನಾಣಿಯೆಂದ. ಈಗಿನ ಗಂಡನೂ—ಆಗಿನ ಗಂಡನೂ—ಎಲ್ಲಾ....! ಅಂದಿನ ಲೀಲೆಯೂ—ಇಂದಿನ ದುರ್ಗಿಯೂ ನಾನೆ!" ದುರ್ಗಿಯೆಂದಳು. "ನನ್ನ ಲೀಲೆ ಸತ್ತುಹೋಗಿದ್ದಾಳೆ.!" ನಾಣಿಯೆಂದ. ಅದು "ಬರಿಯ ನಟನೆ!" ದುರ್ಗಿಯೆಂದಳು. "ಏತಕ್ಕಾಗಿ?" ಎಂದು ಕೇಳಿದ ನಾಣಿ. "ನಿಮ್ಮನ್ನು ದಾರಿಗೆ ಹಚ್ಚುವುದಕ್ಕಾಗಿ!" ಎಂದಳು ದುರ್ಗಿ. ಇಷ್ಟು ಹೊತ್ತಿಗೆ "ನಾಣಿ ವಿಶೇಷವೇನು"? ಎನ್ನುತ್ತಾ ಪರಾಶರ ಶಾಸ್ತ್ರಿಗಳು ಪ್ರವೇಶಿಸಿದರು. 'ಎಲ್ಲವೂ ವಿಶೇಷ!' ನಾಣಿಯೆಂದ. 'ನಾಣಿ!' ಶಾಸ್ತ್ರಿಗಳೆಂದರು. "ನಿನ್ನನ್ನು ದಾರಿಗೆ ಹಚ್ಚುವುದಕ್ಕಾಗಿ ನಿನ್ನ ಮಾವನವರು ಹೂಡಿರುವ ಕಪಟನಾಟಕವಿದು! ಈಕೆ ನಿನ್ನ ಲೀಲೆ!—ಆಕೆಯನ್ನು ನೀನು ಗುರುತಿಸಲಾರದೆ ಹೋದೆ! ನೀನೂ ಒಬ್ಬ ಮನುಷ್ಯ" "ಶಾಸ್ತ್ರಿಗಳೇ ಈ ಬಹಿಷ್ಕಾರ ಪತ್ರ....?" ನಾಣಿಯು ಕೇಳಿದನು. "ಅದೂ ಕಪಟ ನಾಟಕದ ಇನ್ನೊಂದು ದೃಶ್ಯ. ಇರಲಿ. ನೀನು ಮುಂದಕ್ಕೆ ನಿನ್ನ ಅರ್ಧಾಂಗಿಯನ್ನು ಉಪೇಕ್ಷಿಸಬೇಡ, ಆಕೆಯ ಕೆಲಸಗಳಲ್ಲಿ ನೀನೂ ಸಹ ಭಾಗಿಯಾಗಿರು. ದೀನಜನರಿಗೆ ಸಹಾಯಮಾಡುತ್ತಾ ಮನುಷತ್ವ—ಪ್ರೇಮ—ಸ್ವಾತಂತ್ರ್ಯ ಇವುಗಳ ಬೆಲೆಯನ್ನರಿತಿರು. ಆಗ ನೀನೊಬ್ಬ ಮನುಷ್ಯನಾಗುವೆ" ಶಾಸ್ತ್ರಿಗಳೆಂದರು. ಕೆಲವು ಮಾತುಕತೆಗಳಾದ ಬಳಿಕ ಶಾಸ್ತ್ರಿಗಳು ತೆರಳಿದರು. ನಾಣಿಯ ಕೈಯು ಹಠಾತ್ತಾಗಿ ಲೀಲೆಯ ಹೆಗಲನ್ನೇರಿತು. ಲೀಲೆಯ ಕೈಯೂ ನಾಣಿಯ ಹೆಗಲನ್ನೇರಿತು. ಮತ್ತೇನಾಯಿತೆಂದು ನೀವುಗಳೇ ಕಲ್ಪಿಸಿಕೊಳ್ಳಲಿ.

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೆಜರ್, 'ನವಯುಗ'

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ನ

ಉಡುಪಿ ಮುನಿಸಿಪಾಲಿಟಿ

ಬಡ ಉಡುಪಿಗೆ ಜನತೆಯ ಇಚ್ಛೆಯ ವಿರುದ್ಧವಾಗಿ ಮುನಿಸಿಪಾಲಿಟಿಯನ್ನು ಮಾನ್ಯ ಸರಕಾರದವರು ದಯಪಾಲಿಸುವವರೆಗಾದರೂ ತೀರ ಕೆಲಮಂದಿ ಈ ಊರಿಗೆ ಮುನಿಸಿಪಲ್ ಆಡಳಿತಬೇಕೆನ್ನುವವರು ಬೇರೆ ಬೇರೆ ಕಾರಣಗಳಿಂದಾಗಿ ಇದ್ದರು. ಆದರೆ ಮುನಿಸಿಪಲ್ ಆಡಳಿತದ ಅನುಭವದಿಂದಾಗಿ ಈಗ ನಮ್ಮೂರಿಗೆ ಮುನಿಸಿಪಾಲಿಟಿ ಬೇಕೆನ್ನುವವರ್ಯಾರೂ ಇಲ್ಲವೆಂದು ಖಂಡಿತ ಹೇಳಬಹುದಾಗಿದೆ. ಮುನಿಸಿಪಲ್ ಆಡಳಿತದಿಂದ ನಾಗರಿಕರಿಗೆ ಪ್ರಯೋಜನವಿಲ್ಲವೆಂದಲ್ಲ; ದಾರಿದ್ರ್ಯ ಕಾಲದಲ್ಲಿ ಮಗ ಉಣಲಿಕ್ಕೆ ಕಲಿತ ಎಂಬಂತೆ ಯಾವುದೊಂದು ಬಗೆಯ ವಿಶಿಷ್ಟಕೈಗಾರಿಕೆ, ರೈಲ್ವೆ ಅಥವಾ ಬಂದರಿನ ಆಸರ, ಹೆಚ್ಚಿನ ವ್ಯಾಪಾರ ಅಥವಾ ಸಂಪನ್ನತೆ ಇಲ್ಲದಿರುವ ಮತ್ತು ಬರೇ ಶ್ರೀ ಕೃಷ್ಣ ದೇವಳದ ಇಲ್ಲವೆ ತಾಲೂಕು ಮುಖ್ಯ ಆಫೀಸು ಕಚೇರಿಗಳುಳ್ಳ ಕಾರಣದಿಂದಲೇ ಮಾತ್ರ ಹಳ್ಳಿ ಊರಾದ ಉಡುಪಿಗೆ ಈಗ್ಗೆ ಜಗದ್ವ್ಯಾಪಿಯಾಗಿರುವ ಆರ್ಥಿಕ ಮುಷ್ಟಿಯ ನೇಳೆ ಕೂಲಿಗೇಡಿತನವು ತಾಂಡವವಾಡುವ ಈ ದುಷ್ಕಾಲದಲ್ಲಿ ಜನತೆಯು ಶ್ರೀಮಂತರಾಗಲಿ ಬಡವರಾಗಲಿ ನಾನಾಬಗೆಗಳ ಮುನಿಸಿಪಲ್ ತೆರಿಗೆಗಳನ್ನು ಅದೆಂತು ತೆತ್ತು ಕಾಲಕಳೆಯುತ್ತಿರಬೇಕು? ಮಠ ದೇವಸ್ಥಾನಗಳನ್ನು ಆಶ್ರಯಿಸಿ ಹಳೆಯ ಸಂಪ್ರದಾಯದಂತೆ ಮನೆ ಗುಡಿಗಳನ್ನು ಸ್ವಂತ ಇಲ್ಲವೆ ಧನಿಯರ ಸಹಾಯದಿಂದ ಕಟ್ಟಿ, ಹುಸಿ ಒಕ್ಕಲಾಗಿ, ಧನಿಯರಲ್ಲಿ ಅಥವಾ ಇತರರಲ್ಲಿ ಕೂಲಿಗೈದು ಜೀವನ ನಿರ್ವಾಹಮಾಡುವಂತಹರೆಷ್ಟಿಲ್ಲ! ಬಡವರಿಗೆ ಅಥವಾ ಹಿಂದುಳಿದ ವರ್ಗದವರಿಗೆ ಸರಕಾರದ ರಿಯಾಯಿತಿಯಿಂದ ದರಕಾಸ್ತು ಸ್ಥಳಗಳು ದೊರಕಿರುತ್ತಾ ಹೇಗೋ ಕಷ್ಟಪಟ್ಟು ದುಡಿದು ಇಲ್ಲವೆ ಅನೇಕ ಸಂಗತಿಗಳಲ್ಲಿ ಸಾಲಗಳನ್ನು ಮಾಡಿಯೂ ಕೂಡ ಗುಡಿಸಲುಗಳನ್ನು ನಿರ್ಮಿಸಿ ಹೇಗೊ ಹೊಟ್ಟೆಹೊರೆದು(ಅರ್ಧವೂ ಕಡಿಮೆಯೋ) ಇರುವ ಮಂದಿಯೆಷ್ಟಿಲ್ಲ! ಅಲ್ಲದೆ ನೆವಮಾತ್ರ ತಿಂಗಳಿಗೆ ನಾಲ್ಕಾಣೆ ಎಂಟಾಣೆ ಬಾಡಿಗೆಯಂತೆ ನಿರ್ಣಯಿಸಿ ಬಾಡಿಗೆ ತೆತ್ತು ಹಲವು ಸಂದರ್ಭಗಳಲ್ಲಿ ವರ್ಷಗಟ್ಲೆ ಬಾಡಿಗೆ ತೆರದೆ ಜೀವಿಸುವ ಮಂದಿಯೆಷ್ಟಿಲ್ಲ! ಮೇಲಾಗಿ ಉಡುಪಿಯೊಳಗೂ ಆಜುಬಾಜಿನಲ್ಲೂ ಸಣ್ಣ ಸಣ್ಣ ಹಿಡಿತಗಳನ್ನು ಗೇಣಿಗೆ ಪಡೆದುಕೊಂಡು ಗುಡಿಸಲುಗಳನ್ನು ಕಟ್ಟಿಕೊಂಡು ಕೃಷಿಯೇ ಮುಖ್ಯ ಜೀವನೋಪಾಯಮಾಡಿಕೊಂಡು ಇರುವವರು ಅದೆಷ್ಟೋ ಮಂದಿ. ಅಂದರೆ ಮುನಿಸಿಪಲ್ ತೆರಿಗೆಗಳಲ್ಲಿ ಪ್ರಧಾನವಾದ ಸೊತ್ತಿನ ತೆರಿಗೆ ಮತ್ತು ಅದಕ್ಕೆ ಒತ್ತಾಗಿ ಲಗಾವಾಗುವ ಶೌಚ ತೆರಿಗೆಗಳು ಮೇಲಣ ಮನೆವಾರ್ತೆಯವರ ಮೇಲೆ ಎಷ್ಟು ಕಷ್ಟದಾಯಕವಾದೀತೆಂಬುದನ್ನು ಸ್ವತಃ ತಿಳಿದವರೇ ಬಲ್ಲರು.

ಉಡುಪಿ ಮುನಿಸಿಪಲ್ ಸರಹದ್ದಿನೊಳಗೆ ಇರುವ ಸುಮಾರು ೩೦೦೦ ಮನೆಗಳಲ್ಲಿ ಅಧಿಕಾಂಶ ಮೇಲಣ ತರಗತಿಯ ಅಂದರೆ ವರ್ಷಾವಧಿ ೧೦-೧೫ ರೂಪಾಯಿಗಳ ಉತ್ಪನ್ನಕ್ಕೆ ಮಿಕ್ಕದ ಮನೆಗಳಿರುತ್ತವೆ. ಇವುಗಳಲ್ಲಿ ವಾಸ್ತವಿಸುವವರಿಂದ ಸೊತ್ತಿನ ತೆರಿಗೆಯನ್ನು ಅವರವರ ಬಡತನದ ಸ್ಥಿತಿಗತಿಗಳಿಂದ ತೆಗೆದುಕೊಳ್ಳಬರುವುದಿಲ್ಲ, ಇವರನ್ನು ಬಿಟ್ಟರೆ ಉಳಿದವರ ತೆರಿಗೆಯು ಮುನಿಸಿಪಲ್ ಆಡಳಿತಕ್ಕೆ ತೀರ ಕಡಿಮೆಯಾಗುವುದು. ಎಲ್ಲ ಮನೆಗಳಿಗೂ ಇನ್ನಿತರ ಬಗೆಗಳಲ್ಲೂ ತೆರಿಗೆಗಳನ್ನು ಹೊರಿಸಿಯೇ ಈಗಣ ಪದ್ಧತಿಯಂತೆ ಮುನಿಸಿಪಲ್ ಆಡಳಿತವನ್ನು ನಿರ್ವಹಿಸುವುದೇ ಒಂದು ಸಮಸ್ಯೆಯಾಗಿದೆಯೆನ್ನುವಾಗ, ಮೇಲಣ ಗುಡಿಗುಡಿಸಲುಗಳನ್ನು ಬಿಟ್ಟು ಉಳಿದವರಿಂದ ತೆರಿಗೆ ವಸೂಲುಮಾಡಿ ಆಡಳಿತ ನಿರ್ವಹಿಸುವುದಂತೂ ಅಸಾಧ್ಯ. ಹಾಗಾದರೆ ಈ ಮುನಿಸಿಪಾಲಿಟಿಯು ಯಾರಿಗಾಗಿ ಮತ್ತು ಹೇಗೆ ನಿರ್ವಹಿಸಲ್ಪಡತಕ್ಕದ್ದು?

ಪಟ್ಟಣಿಗರ ಸೌಕರ್ಯ ಸುಖಗಳಿಗಾಗಿ ಹಳ್ಳಿಗರ ಹಣವನ್ನು ವೃಥಾ ಅಥವಾ ಅನ್ಯಾಯವಾಗಿ ಪೇಟೆ ಪಟ್ಟಣಗಳಿಗೆ ವ್ಯಯಿಸುವುದು ಧರ್ಮವಲ್ಲವಾಗಿ, ಪಟ್ಟಣಿಗರೇ ತಂತಮ್ಮ ಪ್ರಯೋಜನಾರ್ಥವಾಗಿ ತಾವು ತಾವೇ ಹಣತೆತ್ತು ನಿರ್ವಹಿಸಬೇಕೆನ್ನುವ ಒಂದುಪಕ್ಷ; ಬಡವರ ಹಣದಿಂದ ಶ್ರೀಮಂತರ ಅಥವಾ ಕೌನ್ಸಿಲರರ ಪ್ರಯೋಜನವಾಗುವುದೇ ಮುನಿಸಿಪಾಲಿಟಿಯ ಉದ್ದೇಶವೆನ್ನುವ ಇನ್ನೊಂದು ಪಕ್ಷ. ವಿದ್ಯಾವಂತ ನಿರುದ್ಯೋಗಸ್ಥರನ್ನು ಹೋಗಲಾಡಿಸುವ ಮತ್ತು ಆಫೀಸು ಸಿಬ್ಬಂದಿಯ ಮೂಲಕವಾಗಿ ಸರಕಾರವು ಜನತೆಯ ಮೇಲೊಂದು ಹಿಡಿತವನ್ನು ಸಾಧಿಸುವದೆನ್ನುವ ಮಗದೊಂದು ಪಕ್ಷ. ಇದೆಲ್ಲ ಹೇಗಿದ್ದರೂ ಉಡುಪಿಯ ಮಟ್ಟಿಗೆ ಹಲಕೆಲವು ದೀಪಸ್ತಂಭಗಳ ನಿರ್ಮಾಣ, ಕೆಲವೊಂದು ಓಣಿಗಳ ದುರುಸ್ತಿ; ಕೆಲಮಂದಿ ತೋಟಿ ಮತ್ತು ಕಸಗುಡಿಸುವವರ ಹೆಚ್ಚುಗೆಯಲ್ಲದೆ, ಈಗಲೂ ಇನ್ನು ಐದಾರು ವರ್ಷಗಳ ಮಟ್ಟಿಗೂ ಸಾರ್ವಜನಿಕರಿಗೆ ಹಿಂದಣಕ್ಕಿಂತ ಅಷ್ಟೊಂದು ಹೆಚ್ಚಿನ ಪ್ರಯೋಜನ ಲಾಭಗಳ್ಯಾವುವೂ ಕಂಡುಬರುವುದಿಲ್ಲ. ಸ್ವಚ್ಛಗೊಳಿಸುವ ತೆರಿಗೆಯನ್ನು ಎಲ್ಲರಿಂದಲೂ ವಸೂಲು ಮಾಡಲ್ಪಡುವ ದೆಸೆಯಿಂದ ಎಲ್ಲ ಮನೆಗಳವರು ಹರತ್ತಾಗಿ ಪ್ಯಾಖಾನೆಗಳಲ್ಲೇ ಮಲವಿಸರ್ಜಿಸಬೇಕಾದ್ದಲ್ಲಿ, ತೋಟಿಗಳ ಸಂಖ್ಯೆ ವೃದ್ಧಿಸಲಿಕ್ಕೇ ಬಹಳ ವೆಚ್ಚ ತಗಲಬಹುದು. ಅಂತೆಯೇ ಬೀದಿಕೇರಿಗಳನ್ನು ಗುಡಿಸಿ ನೀರು ಹಾಯಿಸಿ ಆರೋಗ್ಯ ರೀತ್ಯಾ ಪಟ್ಟಣವನ್ನು ನಿರ್ಮಲವಾಗಿಡಬೇಕಾಗಿದ್ದರೆ, ಆರೋಗ್ಯಖಾತೆಗೆ ಇನ್ನಷ್ಟು ಹೆಚ್ಚು ಹಣ ವ್ಯಯಿಸಬೇಕಾಗುವುದು. ಹೆಚ್ಚಿಗೆ ಬೇಕಾಗಿರುವ ದೀಪಸ್ತಂಭಗಳ ಮಾತಂತಿರಲಿ! ಮುಂದವಾಗಿ ಮನೆಗಳುಳ್ಳ ವಠಾರದಲ್ಲಿ ಹೊಸ ರಸ್ತೆಗಳನ್ನು ಮಾಡಿಸುವುದು ಓಣಿಗಳನ್ನು ಅಗಲಮಾಡುವುದು ಮೊದಲಾದ ರಸ್ತೆಗಳ ಪ್ರಸ್ತಾಪವನ್ನು ಬೇರೆ ಇಡೋಣ! ಸಂಗತ್ಯಾನುಸಾರಗಳು ಹೀಗಿರುತ್ತಾ ಸದ್ಯದ ಸಂದಿಗ್ಧ ಸಮಯದಲ್ಲ ಆರ್ಥಿಕ ಅಭಾವದ ಬಿಕ್ಕಟ್ಟಿನಲ್ಲಿ ಜನತೆಯ ದುರಾದೃಷ್ಟದಿಂದಲೋ ಸಕಾಲದಲ್ಲಿ ಸಂದರ್ಭೋಚಿತವಾದ ಪ್ರಯತ್ನ ಸಾಹಸಗಳ ಅಭಾವದಿಂದಲೋ, ಸ್ಥಳೀಯ ಸಂಸ್ಥೆಗಳಲ್ಲಿ ನಮ್ಮ ಪ್ರತಿನಿಧಿಗಳ ಉದಾಸೀನದಿಂದಲೋ ಪ್ರಾಂತಿಕ ಸರಕಾರದ ಮಂತ್ರಿಮಂಡಲದ ಅದಾವುದೋ ಧೋರಣೆಯಿಂದಲೋ ಅಥವಾ ಅಂದು ಜಿಲ್ಲಾ ಪಂಚಾಯತ ಆಫೀಸರರು ಭೆಟ್ಟಿಮಾಡಿ ಅನುಭವ ಸಂಗ್ರಹಿಸಿದಾಗ ತಂತಮ್ಮ ಅಭಿಮತಗಳನ್ನಿತ್ತ ಸ್ವಯಂಪ್ರತಿಷ್ಠಾಪ್ರಭೃತಿಗಳ ದೆಸೆಯಿಂದಲೋ ಇಂದಿಗೆ ಒಂದೂವರೆ ವರ್ಷದಿಂದ ನೆಲೆಮಾಡಿರುವ ಮುನಿಸಿಪಾಲಿಟಿಯು ರದ್ದಾಗಬಹುದೇ?

ಸದ್ಯದ ಸ್ಥಿತಿಗತಿಗಳಿಂದಾಗಿ, ವಾತಾವರಣದಿಂದಾಗಿ, ಸದ್ಯ ಜಾರಿಯಲ್ಲಿರುವ ಡಿಸ್ಟ್ರಿಕ್ಟ್ ಮುನಿಸಿಪಾಲಿಟಿಯ ಆಕ್ಟು ಮತ್ತು ಅದರ ನಿಯಮಾವಳಿಯಿಂದಾಗಿ ಉಡುಪಿ ಮುನಿಸಿಪಾಲಿಟಿಯನ್ನು ವಜಾಮಾಡುವುದು ತೀರ ಅಸಾಧ್ಯ. ಅಲ್ಲದೆ ಅಲ್ಲಸಲ್ಲದ ನೆವನಗಳಿಂದಾಗಿ ಸದಸ್ಯರು ಆಗಿಂದಾಗ ಸೂಚನೆಗಳನ್ನು ಮುನಿಸಿಪಲ್ ಸಭೆಯಲ್ಲಿ ತಂದು ಕರ್ಣಾನಂದವಾಗುವಂತೆ ಹುರುಪಿನಿಂದ ಚರ್ಚಿಸಿ ನಿರ್ಣಯಗಳನ್ನು ಮಂಜೂರು ಮಾಡುವುದರಲ್ಲೂ ಪೌರುಷವ ಪ್ರಯೋಜನವೂ ಇಲ್ಲ. ಹಾಗಾದರೆ ನಾಗರಿಕರು ಸಹಿಸಲಾರದ ಮತ್ತು ಅವರ ಶಕ್ತಿ ಸಾಮರ್ಥ್ಯಗಳಿಗೂ ಮಿಗಿಲಾದ ತೆರಿಗೆಗಳ ಹೊರೆಯನ್ನು ನಿರ್ವಹಿಸಿ ದಿಕ್ಕು ತೋಚದವರಾಗಿ ಬಳಲುವುದೇ? ಮುನಿಸಿಪಾಲಿಟಿಯ ಆರಂಭದಿಂದಲೇ ವಿರಾಟ್ ಸ್ವರೂಪ ತಾಳಿ, ಎಷ್ಟೋ ಹಿಂದೆ ಜನ್ಮವೆತ್ತಿದ ಅಥವಾ ಶ್ರೀಮಂತ ಊರಿನ ಮುನಿಸಿಪಾಲಿಟಿಗಳಿಗೂ ಮಿಗಿಲಾದ ತೆರಿಗೆಗಳನ್ನು ಹೇಗೆ ತೆರಬೇಕು? ಊರ ಜನರು ತೀವ್ರ ದಿವಾಳಿಯಾಗುವುದೆ ಅಥವಾ ನಿರ್ವಾಹವಿಲ್ಲದೆ ಊರು ಮನೆಗಳನ್ನು ತ್ಯಜಿಸಬೇಕೆ? ಎಂಬಿವು ಗಹನವಾದ ಪ್ರಶ್ನೆಗಳಾಗಿವೆ

ಈಗಾಗಲೇ ಸೊತ್ತಿನ ತೆರಿಗೆಯ ಬಾಬ್ತು ವಾರಾಂಟು ಜಪ್ತಿಗಳು ಆಗುತ್ತಲಿವೆ. ತೆರಿಗೆದಾರರು ಹಣದ ಅಭಾವದಿಂದಲೋ ಕೆಲ ದುರ್ಬೋಧಕರ ದುರಾಲೋಚನೆಯಿಂದಲೊ ತೆರಿಗೆಗಳನ್ನು ತೆರುವರೆ ಅಸಮ್ಮತಿಯನ್ನೂ ಅಡ್ಡಿಯನ್ನೂ ಪ್ರದರ್ಶಿಸಿರುವರು. ಹಲವರು ಮನೆಗಳಲ್ಲಿನ ಚರಸೊತ್ತುಗಳನ್ನು ಪಲಾಭಾರೆ ಒಯ್ದು, ಜಪ್ತಿಗೆ ಬಂದಲ್ಲಿ ಅಧಿಕಾರಿಗಳಿಗೆ ಬೆಲೆಬಾಳುವ ಸೊತ್ತುಗಳೇ ಸಿಗದಂತೆ ಮಾಡಿರುವ ಸಂಗತಿಗಳು ಕೇಳಬರುತ್ತವೆ. ಅನಿರ್ವಾಹ ದೆಸೆಯಿಂದಾಗಿ ಎರಡು ಅರ್ಧವರ್ಷಗಳ ತೆರಿಗೆಯ ನೋಟೀಸುಗಳು ಈಗ್ಗೆ ಏಕಕಾಲದಲ್ಲಿ ಹೊರಟದ್ದೂ ಇತ್ತ ಸರಕಾರದ ತೀರ್ಪಿಯ ಅವಸರವುಂಟಾದುದೂ ಪರಿಸ್ಥಿತಿಯನ್ನು ಮತ್ತಷ್ಟು ವಿಷಮಗೊಳಿಸಿವೆ.

ಮುನಿಸಿಪಲ್ ತೆರಿಗೆಯ ಸಂಬಂಧವಾಗಿ ಇದುವರೆಗೆ ಹತ್ತು ಸಂದರ್ಭಗಳಲ್ಲಿ ಜಪ್ತಿ ಮಾಡಲಾಗಿದೆ. ೧೯೩೭ನೇ ಮಾರ್ಚಿಗೆ ಅಂತ್ಯವಾಗುವ ಅರ್ಧವರ್ಷದ (ಮುನಿಸಿಪಾಲಿಟಿಯ ಪ್ರಥಮಕಂತಿನ) ತೆರಿಗೆಯ ಮಟ್ಟಿನ ಜಪ್ತಿಗಳು ೯ ಮತ್ತು ಅನಂತರದ ತೆರಿಗೆಗೆ ೧ ಜಪ್ತಿ ಮಾತ್ರ ಆಗಿವೆ. ಇವುಗಳಲ್ಲಿ ಮೂರು ಬಾಬಿನಲ್ಲ ಸೊತ್ತುಗಳನ್ನು ಏಲಂ ಮಾಡಲಾಗಿದೆ; ಕೆಲ ಬಾಬಿನಲ್ಲಿ ಹಣ ತೆತ್ತು ಸೊತ್ತುಗಳನ್ನು ವಾಪಸು ಪಡೆಕೊಳ್ಳಲಾಗಿದೆ; ಇನ್ನುಳಿದ ಬಾಬಿನಲ್ಲಿ ಆವ್ಯೈರು ತೀರ್ಮಾನವಾಗಿಲ್ಲ. ೧೯೩೭ನೆಯ ಮಾರ್ಚಿಗೆ ಅಖೈರಾಗುವ ಅರ್ಧ ವರ್ಷದ ತೆರಿಗೆಗಳಲ್ಲಿ ನೇಕಡಾ ೮೦ ವಸೂಲಾಗಿವೆ; ಕೆಲವರ ಮಟ್ಟಿಗೆ ಪತ್ರವ್ಯವಹಾರದಲ್ಲಿದೆ. ಬರೇ ಸ್ವಲ್ಪಾಂಶ ಮಾತ್ರ ಬಾಕಿ ಇರುವುದು. ಇವರ ಮಟ್ಟಿಗೆ ಪದೇಪದೇ ಎಚ್ಚರಿಕೆ ವ ಇತರ ಸೌಮ್ಯರೀತಿಯು ನಿರರ್ಥಕವಾದ ಮೇಲೆಯೆ, ನಿರ್ವಾಹವಿಲ್ಲದೆ ಜಪ್ತಿಯನ್ನು ಮಾಡಬೇಕಾಗಿ ಬಂದುದಾಗಿದೆ. ಇದರಿಂದಾಗಿ ಮುನಿಸಿಪಲ್ ಕಮಿಶನರರು ಜನರ ಭಾಷೆಗಳ ಪರಿಜ್ಞಾನವಿಲ್ಲದವರು, ಕಠಿಣಶಾಸನಗಾರರು, ಇಲ್ಲವೆ ಅನಾವಶ್ಯಕವಾಗಿ ಜಪ್ತಿ ವಾರಂಟುಗಳನ್ನು ಹೊರಡಿಸುವವರು ಎಂಬುದಾಗಿ ಆರೋಪಹುಟ್ಟಿಸಿ ತೆರಿಗೆದಾರರಲ್ಲಿ ದುರ್ಬೋಧನೆ ಮಾಡಿದವರಿಂದ ಕಾರ್ಯಸಾಧನೆಯಾಗದು. ತಮ್ಮ ಕರ್ತವ್ಯಸಾಧನೆಯಲ್ಲಿ ಕ್ರಮಬದ್ಧವಾದ ರೀತಿಯಲ್ಲಿ ಸಂದರ್ಭವಿದ್ದಲ್ಲೆಲ್ಲ ದಯಾದಾಕ್ಷಿಣ್ಯದಿಂದಲೇ ಕಮಿಶನರರು ವರ್ತಿಸುವವರೆಂದು ಅವರೊಡನೆ ವ್ಯವಹಾರ ನಡೆಸಿದವರೆಲ್ಲರಿಗೆ ವೇದ್ಯವಾದ ಸಂಗತಿಯಾಗಿದೆ. ಅವರು ತಮ್ಮ ಹುದ್ದೆಗೆ ಯೋಗ್ಯರಲ್ಲವೆಂದು ಅಪವಾದ ಹುಟ್ಟಿಸುವುದರಲ್ಲಿ ಅರ್ಥವಿಲ್ಲ. ಅವರೇನೂ ತೀರ ಹೊಸಬರಾಗಲೀ ಮುನಿಸಿಪಲ್ ಆಡಳಿತದ ಅನುಭವವಿಲ್ಲದವರಾಗಲೀ ಇರುವುದಿಲ್ಲ. ಈಗ ಒಮ್ಮೆಯೇ ಸ್ವಪ್ರತಿಷ್ಠಾಕಾಮಿಗಳು ಕೆಲವರು ಗೊಂದಲವೆಬ್ಬಿಸಿದರೆ, ಸರಕಾರದವರು ಅವರನ್ನು ಇಲ್ಲಿಂದ ಥಕ್ಕನೆ ವರ್ಗಾಯಿಸಿಬಿಡುವ ಹಾಗಿಲ್ಲ. ಒಂದೊಮ್ಮೆ ವರ್ಗಾಯಿಸಿದರೂ ಇನ್ನೊಬ್ಬ ಕಮಿಶನರು ಬಂದೇಬರುವರು. ಬಾಕಿಯಿರುವ ತೆರಿಗೆಗಳನ್ನು ಹೇಗೂ ಯಾರಾದರೊಬ್ಬ ಆಫೀಸರರು ವಸೂಲುಮಾಡುವರೆ ನಿಯಮಬದ್ಧವಾದ ಎಲ್ಲಾ ರೀತಿ ನೀತಿಗಳನ್ನೂ ಉಪಯೋಗಿಸಲೇ ಬೇಕಾದುದು ಅನಿರ್ವಾಹ. ಹಾಗೂ ತೆರಿಗೆಗಳು ಸ್ವಲ್ಪಮಟ್ಟಿಗೆ ಬಾಕಿ ಉಳಿದೇಹೋದಲ್ಲಿ ಅವನ್ನು ನಿರ್ವಹಿಸುವ ಸಾಮರ್ಥ್ಯವು ಸರಕಾರಕ್ಕೆ ಇದ್ದೇ ಇರುತ್ತದೆ. ಅಂತೂ ನಾಗರಿಕರು ನಿರರ್ಥಕವಾದ ನೆವಗಳಿಂದ ಸುಳ್ಳು ಅಭಿಪ್ರಾಯದಿಂದ ಮುನಿಸಿಪಲ್ ನಿಬಂಧನೆಗಳ ಅರಿವಿಲ್ಲದ ದುರ್ಬೋಧಕರ ಮೋಸಕ್ಕೆ ಒಳಗಾಗದೆ ತೆರಿಗೆಗಳನ್ನು ಕೊಡುವುದು ನಾಗರಿಕರ ಲಕ್ಷಣವಾಗಿದೆ. ಆಯಾಯ ಸಂದರ್ಭಗಳಲ್ಲಿ ತನ್ಮೊಡನೆ ತೆರಿಗೆದಾರರು ಆಹವಾಲಿಗಳನ್ನು ಯಥಾರ್ಥವಾಗಿ ಅರುಹಿದಲ್ಲಿ ನ್ಯಾಯವಾದ ವ್ಯಾದೆಗಳಿಂದ ತೆರಿಗೆಗಳನ್ನು ವಸೂಲುಮಾಡುವ ಏರ್ಪಾಟನ್ನು ಸದ್ಯದ ಕಮಿಶನರು ಮಾಡಿದ್ದುಂಟು; ಹಾಗೆಯೇ ವರ್ತಿಸುವ ಭರವಸೆಯೂ ಇದೆ. ಅಲ್ಲದೆ ತಮ್ಮವರೇ ಆದ ಮುನಿಸಿಪಲ್ ಅಧ್ಯಕ್ಷರ ಇಲ್ಲವೆ ಸದಸ್ಯರ ಸಹಾಯದಿಂದ ಕೂಡಿದ ಮಟ್ಟಿನ ರಿಯಾಯಿತಿ ಪಡೆದುಕೊಳ್ಳಬಹುದಾಗಿದೆ. ತೆರಿಗೆದಾರರ ಸಂಘವಾಗಲಿ, ಇತರ ಯಾವ ಸಂಘವೇ ಆಗಲಿ ಕರನಿರಾಕರಣದ ಕಾರ್ಯಕ್ರಮವನ್ನು ಇಟ್ಟುಕೊಂಡಿಲ್ಲವಾದ್ದರಿಂದ, ತಪ್ಪು ಅಭಿಪ್ರಾಯದಿಂದ ತೆರಿಗೆ ಕೊಡುವುದಿಲ್ಲವೆಂದು ಪ್ರತಿಪಾದಿಸಿದ್ದಲ್ಲಿ ಕಾರ್ಯಸಾಧನೆಯಾಗುವುದಿಲ್ಲ. ಹಾಗಾದರೆ ಅಸಾಧ್ಯವಾದರೂ ಬಡ ನಾಗರಿಕರು ಮನೆಮಾರು ಇಲ್ಲವೆ ಸೊತ್ತುಗಳನ್ನು ಮಾರಿಯಾದರೂ ಇನ್ನಾವ ರೀತಿ

(೧೮ನೇ ಪೇಜಿಗೆ ಮುಂದರಿಸಿಯದೆ.)

ಭರತಖಂಡದಲ್ಲಿ ಸಾಮ್ಯವಾದವು ಸಂಭವವೇ?

(ಪ್ಯಾರೇಲಾಲ್, ಬಿ. ಎ.)

ಇತ್ತೀಚೆ ಸಾರ್ವಜನಿಕ ಕ್ಷೇತ್ರದ ಕಾರ್ಯಕರ್ತರ ಮನಸ್ಸಿನಲ್ಲಿಯೂ ಸಾಮ್ಯವಾದ (Socialism) ದ ಸಿದ್ಧಾಂತವು ಹಿಂದೂ ದೇಶಕ್ಕೆ ಉಪಯುಕ್ತವೋ ಅಲ್ಲವೋ ಎಂಬ ಪ್ರಶ್ನೆಯು ಬಲವತ್ತರವಾಗುತ್ತ ಬಂದಿದೆ. ಬಹಳ ಗಂಭೀರ ರೀತಿಯಿಂದ ವಿಚಾರಮಾಡಿ ಕಟ್ಟಕಡೆಗೆ ಹಿಂದೂ ದೇಶದ ಬಾಹ್ಯ ಹಾಗೂ ಅಂತರಿಕ ಪರಾಧೀನತೆಯ ಏಕಮಾತ್ರ ಚಿಕಿತ್ಸೆಯು ಸಾಮ್ಯವಾದವೆಂದು ತೀರ್ಪು ಕೊಟ್ಟ ಮಹಾನುಭಾವರ ಸಂಘಕ್ಕೆ ಸೇರಿದವನು ನಾನಲ್ಲ. ನಮ್ಮ ದೇಶದ ಅನೇಕ ಪ್ರಮುಖರಿಗೆ ಆ ನಿರ್ಣಯದ ಮೇಲೆ ಇನ್ನೂ ಅನುಮಾನವಿದೆ. ಸಾಮ್ಯವಾದದ ವಿರೋಧಿಗಳು ಸಹ ಭರತ ಖಂಡದಲ್ಲಿ ಮಾತ್ರ ಸಾಮ್ಯವಾದವು ಕಾರ್ಯರೂಪದಲ್ಲಿ ಪರಿಣತವಾಗಲಾರದೆಂದು ಹೇಳಿ ಜನರನ್ನು ತಪ್ಪು ದಾರಿಯಲ್ಲಿ ಒಯ್ಯಲೆತ್ನಿಸುತ್ತಿರುವರು. ರಶಿಯಾ ಮತ್ತು ಹಿಂದುಸ್ಥಾನಗಳೊಳಗೆ ಆಕಾಶ ಪಾತಾಳದ ತಾರತಮ್ಯವಿದೆ ಎಂದು ಅನೇಕರ ಬೊಬ್ಬೆ. ಭಾರತೀಯ ಸಭ್ಯತೆ ಹಾಗೂ ವರ್ತಮಾನ ಪರಿಸ್ಥಿತಿ ಸಾಮ್ಯವಾದಕ್ಕೆ ಅನುಕೂಲವಿಲ್ಲವೆಂಬುದೊಂದೇ ಅವರ ಪ್ರತಿವಾದ. ಈ ರೀತಿ ಹೇಳುತ್ತಿರುವವರು ಮೊದಲಾಗಿ ಸಾಮ್ಯವಾದದ ವಿರೋಧಿಗಳು ಇಲ್ಲವೆ ಸಾಮ್ಯವಾದವನ್ನು ಚೆನ್ನಾಗಿ ತಿಳಿಯದಿರುವವರು. ಈ ಎರಡೂ ಪರಿಸ್ಥಿತಿಗಳಲ್ಲಿ ಸಾಮ್ಯವಾದವನ್ನು ಭಾರತದಲ್ಲಿ ಕಾರ್ಯಾನ್ವಿತ ಮಾಡುವುದು ಸಾಧ್ಯವೇ ಅಲ್ಲವೇ ಎಂಬುದನ್ನು ಸ್ಪಷ್ಟೀಕರಿಸುವುದು ಅವಶ್ಯಕ. ಅಸಾಧ್ಯವೆಂಬ ಶಬ್ದವು ಹೇಡಿಗಳ ನಿಘಂಟಿನಲ್ಲಿ ಮಾತ್ರ ಇರುವುದೆಂದು ನೆಪೋಲಿಯನನು ಹೇಳಿದ್ದನಂತೆ. 'ಸಾಧ್ಯ'ವೆಂಬ ಶಬ್ದವನ್ನು ನಾನು ಆ ಅರ್ಥದಲ್ಲಿ ಉಪಯೋಗಿಸುವುದಿಲ್ಲ. ಸಾಧ್ಯ ಅಸಾಧ್ಯವೆಂಬುದರಲ್ಲಿ ನನ್ನ ಅರ್ಥವು ಇಷ್ಟೇ. ಭರತ ಖಂಡದಲ್ಲಿ ಸಾಮ್ಯವಾದವನ್ನು ಕಾರ್ಯಾನ್ವಿತ ಮಾಡುವುದು ಯುಕ್ತಿಸಂಗತವೋ ಅಲ್ಲವೋ? ಮತ್ತು ಹಿಂದುಸ್ಥಾನದ ವರ್ತಮಾನಪರಿಸ್ಥಿತಿಗೆ ಸಾಮ್ಯವಾದವು ಅನುಕೂಲವೋ ಪ್ರತಿಕೂಲವೋ?

ಸಾಮ್ಯವಾದದ ವಿಜಯವು ಮೊತ್ತ ಮೊದಲು ಪೂಂಜೀವಾದ (Capitalism) ಸಂಕಲೆಯ ಅತಿ ನಿರ್ಬಲ ಸಂಧಿಯಲ್ಲಿ (in the weakest link in the chain of Capitalism) ಸಂಭವಿಸುವುದೆಂದು ಸಾಮ್ಯವಾದದ ಜನ್ಮದಾತನಾದ ಕಾರ್ಲ್ ಮಾರ್ಕ್ಸನು ಹೇಳಿರುವನು. ಪೂಂಜೀವಾದದ ಸಂಕಲೆಯ ಅತಿ ನಿರ್ಬಲ ಸಂಧಿ ಎಂದರೆ ಪೂಂಜೀವಾದವು ಇನ್ನೂ ಚೆನ್ನಾಗಿ ಬೇರೂರದಿರುವ ದೇಶವೆಂದರ್ಥ. ಆದುದರಿಂದ ಹಿಂದೂದೇಶದಲ್ಲಿ ನೆಲೆಗೊಂಡಿರುವ ಪೂಂಜೀವಾದದ ಬಲ ಪರೀಕ್ಷೆ ಮಾಡುವುದು ನಮ್ಮ ಪ್ರಥಮ ಕರ್ತವ್ಯವಾಯಿತು. ಇದಕ್ಕೋಸ್ಕರ ನಾವು ಹಿಂದೂದೇಶದ ಸಾಮಾಜಿಕ ಆರ್ಥಿಕ ಹಾಗೂ ರಾಜನೈತಿಕ ಪರಿಸ್ಥಿತಿಗಳನ್ನು ಪರಿಶೀಲಿಸಬೇಕಾಗಿದೆ.

ನಮ್ಮ ಸಾಮಾಜಿಕ ಸ್ಥಿತಿಯು ಅತಿ ದಾರುಣವಾಗಿರುವುದು ಮಾತ್ರವಲ್ಲದೆ ಅತಿ ವಿಚಿತ್ರಕರವಾಗಿಯೂ ಇದೆ. ದೇಶದ ಸಮಗ್ರ ಜನಸಂಖ್ಯೆಯನ್ನು ಧರ್ಮ ಮತ (Religion) ಹಾಗೂ ಭಾಷೆಯ ದೃಷ್ಟಿಯಿಂದ ಅನೇಕ ರೀತಿಯಲ್ಲಿ ವಿಭಾಗಿಸಬಹುದು. ಆದರೆ ಭಾಷೆಯ ವಿಭಿನ್ನತೆ ಮತ್ತು ಸಾಮ್ಯವಾದಗಳೊಳಗೆ ಯಾವ ಸಂಬಂಧವೂ ಇರುವುದಿಲ್ಲ. ಸಾಮ್ಯವಾದದ ದೃಷ್ಟಿಯಲ್ಲಿ ಧರ್ಮ (ಮತ)ದ ಬೆಲೆಯೂ ಅಷ್ಟೇ. ಅದು ಕೇವಲ ಢೋಂಗಿ ಅಥವಾ "ಜನತೆಯ ಅಫೀಮ್" (Religion is the opium of the people) ಆಗಿ ಪರಿಣಮಿಸಿದೆ. ಹಿಂದೂ ದೇಶದ ಅಧಿಕಾಂಶ ಜನರು ಈ ಧರ್ಮವೆಂಬ ಅಫೀಮಿನ ಪರವಶತೆಯಿಂದ ಅನೇಕ ಅಸಹನೀಯ ಹಾಗೂ ಪೈಶಾಚಿಕ ಕೃತ್ಯಗಳನ್ನು ಮಾಡುತ್ತ ಬಂದಿರುವರು. ಈ ಕಾರಣದಿಂದಲೇ ಅವರು ತಮ್ಮ ಸಹೋದರರ ಮತ್ತು ನೆರೆಕರೆಯವರ ನೆತ್ತರನ್ನು ಹೀರಲು ಹಿಂಜರಿಯಲಿಲ್ಲ. ಧರ್ಮದ ಹೆಸರಿನಿಂದ ಇಷ್ಟರ ವರೆಗೆ ವ್ಯರ್ಥವಾಗಿ ಎಷ್ಟೋ ದುಃಖೋಪಭೋಗಮಾಡಿರುವರು. ಈಗಲೂ ನಮ್ಮ ಮೇಲೆ ಬಲಾತ್ಕಾರದಿಂದ ನಡೆಯುತ್ತಿರುವ ಅಮಾನುಷ ಪೀಡೆಯನ್ನು ಧರ್ಮದ ಹೆಸರಿನಿಂದಲೇ ಸಹಿಸುತ್ತಿರುವರು. ಏಕೆಂದರೆ ಹಿಂದೂ ಧರ್ಮದ ಪ್ರಕಾರ ಪೂರ್ವ ಜನ್ಮದ ಕರ್ಮವನ್ನು ಈ ಜನ್ಮದಲ್ಲಿ ತೀರಿಸಬೇಕಾಗಿದೆ

ಹಿಂದೂ ದೇಶದ ಅಧಿಕಾಂಶ ನಿವಾಸಿಗಳೆಂದರೆ ಹಿಂದುಗಳು ಆ ಮೇಲೆ ಮುಸಲ್ಮಾನರು. ಮುಸಲ್ಮಾನರು ಈ ದೇಶಕ್ಕೆ ಬಂದು ಅನೇಕ ಶತಮಾನಗಳಾದರೂ ಹಿಂದು ಮುಸಲ್ಮಾನರಲ್ಲಿ ಪರಸ್ಪರ ಮೈತ್ರಿಯು ಅಷ್ಟೊಂದು ಹೆಚ್ಚಾಗಿ ಬೆಳೆಯಲಿಲ್ಲ. ಇದರ ಮೂಲ ಕಾರಣವು ಧಾರ್ಮಿಕ ಗುರುಗಳ ಅಯೋಗ್ಯ ಉಪದೇಶ ಎಂಬುದರಲ್ಲಿ ಅನುಮಾನವಿಲ್ಲ. ಇಲ್ಲವೆ, ಧಾರ್ಮಿಕ ಗ್ರಂಥಗಳ ಅಸತ್ಯ ಕಥನ. ಆಯಾ ಧರ್ಮದ ಪ್ರಚಾರಕರು ಸ್ವಾಭಾವಿಕವಾಗಿ ಇತರ ಧರ್ಮಗಳನ್ನು ಜರೆದು ಜನರಲ್ಲಿ ಪರಸ್ಪರ ವೈಮನಸ್ಸವನ್ನು ಹಚ್ಚಿಸುತ್ತಿರುವರಲ್ಲದೆ ಯಾವ ರೀತಿಯಲ್ಲೂ ಪ್ರೇಮಬಂಧನವನ್ನು ಬಿಗಿಯಲಾರರು.

ಮಹಾತ್ಮಾಗಾಂಧಿ ಗಫಾರ್‌ಖಾನರಂಥ ಮಹಾವ್ಯಕ್ತಿಗಳಿಂದಲೂ ಈ ಧಾರ್ಮಿಕ ಸಮಸ್ಯೆಯ ಪರಿಹಾರವು ತಕ್ಕ ರೀತಿಯಲ್ಲಿ ಆಗದಿರುವುದರಿಂದ ಇದರ ಉಪಶಮನವು ಎಲ್ಲಿದೆ ಎಂದು ನಾವೇ ತಿಳಿದುಕೊಳ್ಳಬಹುದು. ಈ ಎಲ್ಲಾ ಕಾರಣಗಳಿಂದ ಭೂಲೋಕದಲ್ಲಿರುವ ಎಲ್ಲಾ ಮತಗಳ ನಿರ್ಮೂಲವು ಮಾನವ ಜಾತಿಯ ಏಕೀಕರಣಕ್ಕೆ ಅತಿ ಸುಲಭ ಸಾಧನವೆಂದು ಯಾರೂ ತಿಳಿಯಬಲ್ಲರು. ಸಾಮ್ಯವಾದವು ಮತ ವಿಚಾರಗಳಿಗೆ ಸಂಪೂರ್ಣ ವಿರೋಧವಿಲ್ಲದಿದ್ದರೂ ತೀರ ಅಸಡ್ಡೆಯನ್ನು ತೋರಿಸುವುದರಿಂದ ಅದು ಭರತಖಂಡದ ಧಾರ್ಮಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಅತಿ ಸುಲಭವಾಗಿ ಪರಿಹರಿಸಬಲ್ಲದು.

ಹೀಗೆ ಸಾಮ್ಯವಾದಕ್ಕಾಗಿ, ಧರ್ಮ ವಿರೋಧ ಏಕೆ ಮಾಡಬೇಕೆಂದು ಪ್ರಶ್ನೆ. ಕೇವಲ ಧರ್ಮವಿರೋಧ ಮಾಡುವುದು ನಮ್ಮ ಕರ್ತವ್ಯವಲ್ಲ. ಆದರೆ ಪ್ರಚಲಿತ ಧರ್ಮಗಳು ನಾವು ಹೂಡಲಿರುವ ಸಾಮಾಜಿಕ ಹಾಗೂ ರಾಜನೈತಿಕ ಕ್ರಾಂತಿಗಳಿಗೆ ವಿರೋಧವಾಗಿರುವುದರಿಂದ ಅವುಗಳ ಖಂಡನೆ ಮಾಡಬೇಕಾಗಿದೆ. ಪ್ರಚಲಿತ ಸಮಾಜ ಪದ್ಧತಿ ರೀತಿಗಳನ್ನು ಸದಾ ಜೀವಂತವಿಡುವ ಆ ಎಲ್ಲಾ ಕಾರಣಗಳನ್ನು ವಿರೋಧಿಸುವುದು ಸಾಮ್ಯವಾದಿಗಳ ಕರ್ತವ್ಯ. ವರ್ತಮಾನ ಸಮಾಜವೆಂಬ ಏಣಿಯ ತುದಿಯಲ್ಲಿ ಸುವರ್ಣಾಸನಗಳನ್ನು ಅಲಂಕರಿಸಿ ಕೂಡಿರುವ ಕೇವಲ ಕೆಲವು ಮಂದಿ ಧಾರ್ಮಿಕ ಗುರುಗಳು ಮತ್ತು ಸಮಾಜಸ್ತಂಭಗಳು ಈ ದೋಷಯುಕ್ತ ಸಮಾಜ ಸಂಘಟನೆಯ ನೆರವಿನಿಂದಲೇ ತಮ್ಮ ತಲೆಯನ್ನು ಎತ್ತಿ ಹಿಡಿದಿರುವರು. ಆದರೆ ನಮ್ಮ ಕೆಲಸವು ವರ್ತಮಾನ ಸಾಮಾಜಿಕ ಸಂಘಟನೆಯನ್ನು ಕ್ರಾಂತಿಯೆಂಬ ಮಹಾಯುಧದಿಂದ ಚೂರ್ಣಮಾಡಿ ಸರ್ವಸುಖದಾಯಕವಾದ ಹೊಸ ಸಾಮ್ಯವಾದೀ ಸಮಾಜ ಸಂಘಟನೆಯನ್ನುಂಟುಮಾಡುವುದು.

ಸಾಮ್ಯವಾದಕ್ಕೆ ಅಧಿಕಾಂಶ ವಿರೋಧವಿರುವುದು ಹಿಂದೂ ಧರ್ಮವು. ಮಹಮ್ಮದೀಯರು ಸಂಕೀರ್ಣ ವಿಚಾರವಾದಿಗಳೇನೋ ನಿಜ. ಆದರೆ ಅವರು ಈಶ್ವರ ಸಂಬಂಧವಿರುವ ತನಕ ಮಾತ್ರ ಸಾಮ್ಯವಾದವನ್ನು ವಿರೋಧಿಸುವರು. ಹಿಂದುವು ತನ್ನ ದುರವಸ್ಥೆಯನ್ನು ತನ್ನ ಪೂರ್ವ ಕರ್ಮದ ಮೇಲೆ ಹೊರತು ಇನ್ನಾರ ಮೇಲೂ ಹೊರಿಸಲಾರನು. ಕೈಯಲ್ಲಿದ್ದ ರೊಟ್ಟಿಯನ್ನು ಇನ್ನೊಬ್ಬನು ಕಸುಕೊಂಡರೂ ಅದು ಪೂರ್ವಜನ್ಮದ ಕರ್ಮವೇ ಸರಿ ಅವನಿಗೆ ಈ ನಂಬಿಕೆಯಿಂದಲೇ ಹಿಂದುಗಳು ಧನಿಕ ದರಿದ್ರ ಬ್ರಾಹ್ಮಣ ಅಸ್ಪೃಶ್ಯರೆಂಬ ಭೇದಗಳನ್ನು ಇನ್ನೂ ತಮ್ಮ ಸಮಾಜದಲ್ಲಿ ಇಟ್ಟುಕೊಳ್ಳಲು ಸಿದ್ಧರಿರುವರು.

ಸಾಮ್ಯವಾದದಿಂದ ರಾಜನೈತಿಕ ಸಮಸ್ಯೆಯನ್ನು ಹೇಗೆ ಭೇದಿಸಬಲ್ಲೆವು? ಪರಾಧೀನವಾದ ಹಿಂದೂದೇಶವನ್ನು ಏಕೀಕರಿಸಲು ಸಾಮ್ಯವಾದದ ಹೊರತು ಬೇರೆ ಔಷಧವಿಲ್ಲೆಂಬುದು ನಿಶ್ಚಯ. ಸಾಮ್ಯವಾದದ ಹೆಸರೆತ್ತುತ್ತಲೇ ದೇಶದ ವ್ಯಾಪಾರಿ ಜನರು, ಜಮೀನುದಾರರು, ಇನ್ನಿತರ ರಾಜರುಗಳೆಲ್ಲಾ ವೈರಿ ಪಕ್ಷವನ್ನು ಸೇರುವರೆಂದು ಅನೇಕರ ಹೆದರಿಕೆ. ಆದರೆ ಅದೇನೂ ಅಸ್ವಾಭಾವಿಕವಾದುದಲ್ಲ. ಆ ತರಗತಿಯ ಜನರು ಎಂದೂ ಬಡವರ ಹಿತಚಿಂತಕರಾಗಿದ್ದುದಿಲ್ಲ. ಬಡವರ ಅಂದರೆ ಕೆಲಸಗಾರರ ರಕ್ತಶೋಷಣೆಯಿಂದಲೇ ಅವರ ಭಂಡವಾಳವು ಬೀಗಿದುದೆಂದು ಎಲ್ಲರಿಗೂ ತಿಳಿದ ವಿಷಯವೇ. ಅವರು ನಮಗೆ ಸಹಾಯಮಾಡಿದರೂ ಸ್ವಾರ್ಥದೃಷ್ಟಿಯಿಂದ ಅವರು ವಿದೇಶ ವಸ್ತುಗಳನ್ನು ತ್ಯಜಿಸಿ ದೇಶಭಕ್ತಿ ಪ್ರದರ್ಶಿಸಿದುದು ವಿದೇಶೀ ಪ್ರತಿದ್ವಂದಿಗಳನ್ನು ನೀರು ಕುಡಿಸುವುದಕ್ಕೋಸ್ಕರವೇ ಹೊರತು ಬೇರೆಯಲ್ಲ. ಈ ರೀತಿ ಸ್ವಾರ್ಥಪರತೆಯಿಂದ ಬರುವ ಸಹಾಯವು ಉಪಕಾರಕ್ಕಿಂತ ಅಪಕಾರಮಾಡುವ ಭಯವೇ ಹೆಚ್ಚು. ನಮ್ಮ ರಾಜನೈತಿಕ ಹಾಗೂ ಸಾಮಾಜಿಕ ಕ್ರಾಂತಿಗೆ ಬೇಕಾದುದು ಕೆಲಸಗಾರರು ಮತ್ತು ಕೃಷಿಕವೃಂದ. ಆದರೆ ಈಗಿನ ಪೂಂಜೀವಾದ ನಿರ್ಮಿತ ಸಮಾಜ ಸಂಘಟನೆಯು ಸಂಪೂರ್ಣ ಜನತೆಯನ್ನು ನೈತಿಕ ಪತನದತ್ತ ಒಯ್ಯುತ್ತಲಿರುವುದು. ಆದುದರಿಂದಲೇ ಸಮಾಜದ ಆಮೂಲ ಪರಿವರ್ತನೆಯ ಆವಶ್ಯಕತೆ.

ದೇಶದ ಆರ್ಥಿಕ ಪರಿಸ್ಥಿತಿಯನ್ನು ನೋಡಿದರೂ ನಮಗೆ ಸಾಮ್ಯವಾದದ ಹೊರತು ಬೇರೆ ಉಪಾಯವು ತೋರುವುದಿಲ್ಲ. ಈಗ ಹಿಂದೂ ದೇಶದಲ್ಲಿ ಸಾಮಂತ ಕ್ರಮವು (Feudalism) ಹೋಗುತ್ತ ಪೂಂಜೀವಾದವು ಬೇರೂರುತ್ತಿರುವುದು. ಪಾಶ್ಚಾತ್ಯ ದೇಶಗಳಲ್ಲಿ ಪೂಂಜೀವಾದವು ಎಷ್ಟು ಬಲವಾಗಿ ಬೆಳೆದಿರುವುದೋ ಅಷ್ಟು ಶಕ್ತಿಯು ಇನ್ನೂ ಅದಕ್ಕೆ ದೊರೆಯಲಿಲ್ಲ. ನಿಜವಾಗಿ ನೋಡಿದರೆ ಪೂಂಜೀವಾದದ ಬಲವು ಅತಿ ಕಡಿಮೆಯಾಗಿಯೇ ಇದೆ. ಆದುದರಿಂದಲೇ ಸಾಮ್ಯವಾದಕ್ಕೆ ಹಿಂದೂ ದೇಶವು ತಕ್ಕ ಬಯಲಾಗಿದೆ.

ನಮ್ಮಲ್ಲಿ ಈಗ ತಾನೆ ಮಧ್ಯವರ್ಗದ ಪತನವಾಗುತ್ತಿದೆ. ಈ ಸಾರ್ವಜನಿಕ ದುರವಸ್ಥೆಯಿಂದಲೇ ಉಚ್ಚ (ಧನಿಕ) ವರ್ಗದವರು ಸುಖಿಗಳಾಗಿರುವುದು. ಪೂಂಜೀವಾದದ ಸ್ಥಿತಿಯು ಹೆಚ್ಚೆಚ್ಚು ದೃಢವಾದಂತೆ ಮಧ್ಯವರ್ಗವು ಇನ್ನೊಂದು ರೂಪವನ್ನು ತಾಳುವುದು ಅದು ಕಾರಣ ಸ್ವಲ್ಪ ಸಮಯದ ವರೆಗೆ ಕ್ರಾಂತಿಕಾರಿ ಭಾವನೆಯ ಪ್ರವಾಹವು ನಿಂತುಹೋಗುವುದು. ಆದರೂ ಈ ಸ್ತಂಭಿತ ರೂಪದಲ್ಲಿ ಅದು ಹೆಚ್ಚು ಸಮಯ ನಿಲ್ಲಲು ಸಾಧ್ಯವಿಲ್ಲ. ಏಕೆಂದರೆ ಪೂಂಜೀವಾದಿ ಸಮಾಜದಲ್ಲಿ ಸದೈವ ಪ್ರತಿಸ್ಪರ್ಧೆಯು ಇದ್ದೇ ಇರುವುದು. ಇಲ್ಲಿಯ ಕೃಷಿಕರ ಅಸಂತುಷ್ಟಿಯು ಭೀಕರ ರೂಪವನ್ನು ತಾಳಿದೆ ಎಂದು ನಮಗೆ ಕಳೆದ ಆಂದೋಲನದಿಂದ ವ್ಯಕ್ತವಾಗಿದೆ. ಸುಶಿಕ್ಷಿತ ಯುವಕ ದಳವು ಉದ್ಯೋಗದ ಅಭಾವದಿಂದ ನಿರುದ್ಯೋಗಿಗಳಾಗಿ ಉಪವಾಸಬೀಳಬೇಕಾದುದರಿಂದ ಅವರಲ್ಲಿ ಸಮಾಜದ ಮೇಲಿನ ಪ್ರತೀಕಾರ ಭಾವನೆಯು ವಿಶೇಷ ರೂಪದಲ್ಲಿ ಬಲಗೊಂಡಿದೆ. ಈ ಎಲ್ಲಾ ಪರಿಸ್ಥಿತಿಗಳನ್ನು ಪರಿಶೀಲಿಸಿ ನೋಡಿದರೆ ಹಿಂದೂ ದೇಶದ ಸದ್ಯ ಪರಿಸ್ಥಿತಿಯು ಸಾಮ್ಯವಾದ ಪ್ರಸಾರಕ್ಕೆ ಅತ್ಯಂತ ಅನುಕೂಲವಾಗಿದೆಯೆಂದು ವಿಶದವಾಗುತ್ತದೆ. ಆದುದರಿಂದಲೇ ಸಾಮ್ಯವಾದಿಗಳು ಹಾಗೂ ಸಾಮ್ಯವಾದ ಪಕ್ಷೀಯರು ಈ ಉತ್ತಮ ಸಂದರ್ಭವನ್ನು ಕಳೆದುಕೊಳ್ಳದೆ ಪೂಂಜೀವಾದೀ ಸಮಾಜ ಸಂಘಟನೆಯನ್ನು ನಿರ್ಮೂಲಮಾಡಿ ಸಾಮ್ಯವಾದೀ ಸಮಾಜ [illegible] ಹಿಂದೂದೇಶದ ಕ್ರಮಶಃ ಶೋಷಣ ಪೀಡೆ, ದಾರಿದ್ರ್ಯ, ತಾರತಮ್ಯಗಳನ್ನು ತೊಡೆದೋಡಿಸಲು ಹೋರಾಡಬೇಕು."

ಗರ್ಭಿಣಿಯರ ವಿಷಯದಲ್ಲಿ ತೆಗೆದುಕೊಳ್ಳಬೇಕಾದ ಜಾಗ್ರತೆ

(ಡಾಕ್ಟರ್ ಹರಿದಾಸ್ ಡೇ, ಲೇಟ್ ಸೀನಿಯರ್ ಹೌಸ್ ಫಿಸಿಷನ್, ಕ್ಯಾಂಬೆಲ್ ಹಾಸ್ಪಿಟಲ್, ಕಲ್ಕತ್ತೆ, ಇವರಿಂದ)

ನಾವು ಗರ್ಭಿಣಿಯರ ವಿಷಯವಾಗಿ ಸ್ವಲ್ಪ ಜಾಗ್ರತೆಯಿಂದಿದ್ದ ಪಕ್ಷದಲ್ಲಿ, ಮಗುವು ಹುಟ್ಟುವುದಕ್ಕೆ ಮುಂಚೆಯೂ, ಹುಟ್ಟುವಾಗಲೂ, ಹುಟ್ಟಿದಮೇಲೆಯೂ ಸಾಧಾರಣವಾಗಿ ನಡೆಯುವ ಅನರ್ಥಗಳನ್ನೆಲ್ಲ ನಿವಾರಿಸಬಹುದು. ನಮ್ಮ ದೇಶದಲ್ಲಿ ಸಾಮಾನ್ಯಜನರು ಈ ವಿಷಯದಲ್ಲಿ ಹೆಚ್ಚು ಗಮನ ಕೊಡುವುದಿಲ್ಲ. ಆದುದರಿಂದ ವೈದ್ಯವೃತ್ತಿಯಲ್ಲಿರುವವರೆಲ್ಲರೂ ಜನರಿಗೆ ಅದರವಿಷಯವಾಗಿ ಬೋಧಿಸಿ, ಆ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಅವರಿಗೆ ತಿಳಿಸಬೇಕು. ಹಾಗೆ ಮಾಡಿದರೆ ಅವರು ಗರ್ಭಿಣಿಯರ ವಿಷಯದಲ್ಲಿ ಅಜಾಗ್ರತೆಯಾಗಿರುವುದರ ದುಷ್ಫಲಗಳನ್ನೆಲ್ಲ ಗ್ರಹಿಸುವರು. ಪ್ರಸವದಿಂದಾಗುವ ಮರಣಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ, ಇದಕ್ಕೆ ಆ ವಿಷಯದಲ್ಲಿ ನಮ್ಮ ಜನರ ಅಜ್ಞತೆಯೇ ಮುಖ್ಯ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ಗರ್ಭಿಣಿಯರು ಪ್ರಸವಕ್ಕೆ ಮುಂದಾಗಿ ಮರಣಹೊಂದುವುದಕ್ಕೆ ಈ ಕೆಳಗೆ ಕಂಡವುಗಳು ಮುಖ್ಯಕಾರಣಗಳು. ಎಂದರೆ, 'ಎಕ್ಲಾಂಪ್ಸಿಯಾ', 'ಎಕ್ಲಾಂಪ್ಸಿಯಾ'ಗೆ ಮುಂಚಿತವಾಗಿಕಾಣುವ "ಟಾಕ್ಸೀಮಿಯಾ" "ಟಾಕ್ಸೀಮಿಯಾ"ಗೆ ಸಂಬಂಧಪಟ್ಟ ವಾಂತಿ, "ಆಲ್ಬು ಮಿನೂರಿಯಾ" ಎಂಬೀ ವ್ಯಾಧಿಗಳು. ಪ್ರಸವಕಾಲದಲ್ಲಿಯೂ ಮತ್ತು ಪ್ರಸವವಾದಮೇಲೆಯೂ ಗರ್ಭಿಣಿಯರು ಮರಣಹೊಂದುವುದಕ್ಕೆ ಬಹಳವಾಗಿ ರಕ್ತೋದ್ರೇಕವುಂಟಾಗುವುದೇ ಕಾರಣವು. ಪ್ರಸವವಾದಮೇಲೆ ವಿಷಸಂಬಂಧವಾದ "ಸೆಪ್ಟಿಕ್" ಜ್ವರವು ಬಂದರೆ, ಗರ್ಭಿಣಿಯರು ಮರಣಹೊಂದುವರು ಆರಂಭದಲ್ಲಿ ಜಾಗ್ರತೆಯಾಗಿದ್ದ ಪಕ್ಷದಲ್ಲಿ ಇದನ್ನೂ ತಪ್ಪಿಸಬಹುದು. ಮತ್ತು ಗರ್ಭಸ್ರಾವ, ಗರ್ಭವು ಒಡೆಯುವುದು, ಗರ್ಭದಲ್ಲಿ ಶಿಶುವು ಸ್ಥಳದಲ್ಲಿಲ್ಲದೆ ಕದಲಿರುವುದು, ಇವನ್ನೆಲ್ಲ ನಿವಾರಿಸಬಹುದು ಗರ್ಭದಲ್ಲಿ ಪಿಂಡವು ಬೆಳೆಯುವುದರಿಂದ ಗರ್ಭಿಣಿಯರ ದೇಹಕ್ಕೆ ಕೆಲಸವು ಹೆಚ್ಚುವುದು. ಆದುದರಿಂದ ಅಂತಹ ಅಪಾಯಗಳನ್ನು ನಿವಾರಿಸುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡಬೇಕು. ಗರ್ಭಿಣಿಯರಿಗೆ ತಕ್ಕ ಔಷಧಗಳನ್ನು ಕೊಡಿಸುವುದರೊಡನೆ, ಅವರು ಈ ಕೆಳಗೆಕಂಡ ಆರೋಗ್ಯ ವಿಧಿಗಳನ್ನನುಸರಿಸಬೇಕು.

ಆಹಾರ—ಗರ್ಭಿಣಿಯರ ದೇಹವು ಸುಲಭವಾಗಿ ಆಯಾಸ ಹೊಂದುವುದರಿಂದ ಅವರಿಗೆ ಹೆಚ್ಚು ಆಹಾರವು ಬೇಕಾಗುವುದು. ಅವರು ಒಳ್ಳೆಯ ಪೋಷಣಾಗುಣವುಳ್ಳ ಮತ್ತು ಸುಲಭದಲ್ಲಿ ಜೀರ್ಣವಾಗತಕ್ಕ ಆಹಾರಗಳನ್ನು ತೆಗೆದುಕೊಳ್ಳಬೇಕು. ಅವರು ಕಾಲ್ಸಿಯಂ ಮತ್ತು ಜೀವಸತ್ವ ಪದಾರ್ಥಗಳಿಂದ ಕೂಡಿದ ಲಘುವಾದ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳಬೇಕು. ಹಾಲು, ಬೆಣ್ಣೆ, ಹಸಿಯ ತರಕಾರಿಗಳು, ಮೀನು, ಕೋಳೀ ಮೊಟ್ಟೆ, ತಕ್ಕಾಳಿಹಣ್ಣು, ಇವು ಉತ್ತಮವಾದ ಆಹಾರಗಳು. ಅವರು ಒಗ್ಗರಣೆಗಳನ್ನಾಗಲೀ, ಸುಲಭದಲ್ಲಿ ಜೀರ್ಣವಾಗದ ಪದಾರ್ಥಗಳನ್ನಾಗಲೀ ತೆಗೆದುಕೊಳ್ಳಬಾರದು. ಅವರು, ಶುದ್ಧವಾದ ನೀರು, ಗ್ಲೂಕೋಸ್ ನೀರು, ಜೇಳೆಯ ನೀರು, ಅಥವಾ ಸಾರು ಇವುಗಳನ್ನು ಕ್ರಮವಾಗಿ ತೆಗೆದುಕೊಳ್ಳಬೇಕು. ಹಾಗೆ ಮಾಡಿದರೆ ಅವರಿಗೆ ಜಲವಿಸರ್ಜನೆಯು ಕ್ರಮವಾಗಿಯೂ, ಕಷ್ಟವಿಲ್ಲದೆಯೂ ಆಗುವುದು. ದೇಹದೊಳಗಿನ ಕಶ್ಮಲಗಳನ್ನು ಈ ರೀತಿ ಮೂತ್ರಕೋಶದ ಸಹಾಯದಿಂದ ಹೊರಪಡಿಸಬಹುದು.

ಉಡುಪು—ಈಗ ನಾಜೂಕಿನವರು ಉಡುವ ಹಾಗೆ ಗರ್ಭಿಣಿಯರು ಬಟ್ಟೆಯನ್ನು ಬಹಳ ಬಿಗಿಯಾಗಿ ತೊಟ್ಟುಕೊಳ್ಳಬಾರದು. ಹಾಗೆ ಮಾಡಿದರೆ ಮೊದಲೇ ಆಯಾಸಹೊಂದಿರುವ ಹೃದಯ, ಯಕೃತ್ತು ಮುಂತಾದ ಅವಯವಗಳನ್ನು ಒತ್ತಿದಂತಾಗುವುದು. ಅವರು ತಮಗೆ ತಕ್ಕ ಹಗುರವಾದ ಬಟ್ಟೆಗಳನ್ನು ಧರಿಸಬೇಕು.

ಸ್ನಾನ—ಗರ್ಭಿಣಿಯರು ಪ್ರತಿದಿನವೂ ಸ್ನಾನ ಮಾಡಬೇಕು. ಸ್ನಾನಮಾಡುವಾಗ ರೋಮ ಕೂಪಗಳನ್ನು ಶುದ್ಧವಾಗಿಡುವುದಕ್ಕಾಗಿ ಸಾಬೂನನ್ನುಪಯೋಗಿಸಬಹುದು. ಮುಖ್ಯವಾಗಿ ಜನನಾಂಗವು ಬಹಳ ಶುದ್ಧವಾಗಿರುವಂತೆ ಜಾಗ್ರತೆಯಿಂದಿರಬೇಕು.

ಕರುಳುಗಳು—ಗರ್ಭಿಣಿಯರಲ್ಲಿ ಸರ್ವಸಾಧಾರಣವಾಗಿರುವ ಮಲಬದ್ಧತೆಯನ್ನು ನಿವಾರಿಸುವುದಕ್ಕೆ ಪ್ರಯತ್ನಿಸಬೇಕು. ಅದಕ್ಕಾಗಿ ಅವರು ಸಮೃದ್ಧಿಯಾಗಿ ಹಣ್ಣುಗಳು. ಹಾಲು, ಹಸಿಯ ತರಕಾರಿಗಳು ಹಣ್ಣಿನರಸ, ಮುಂತಾದುವನ್ನು ತೆಗೆದುಕೊಳ್ಳಬೇಕು. ಇವುಗಳಿಂದೇನೂ ಪ್ರಯೋಜನವಿಲ್ಲವೆಂದು ತೋರಿದಪಕ್ಷದಲ್ಲಿ, 'ಗ್ಲಿಸರ್‌ಯೆಕೊ' ಪುಡಿ, 'ಕ್ಯಾಸ್ಕಾರಾಸಗರ್ಡ್' ಮುಂತಾದ ಕಡಿಮೆ ಶಕ್ತಿಯುಳ್ಳ ವಿರೇಚಕ ಔಷಧಗಳನ್ನು ತೆಗೆದುಕೊಳ್ಳಬೇಕು. ಹೆಚ್ಚು ತೀವ್ರಶಕ್ತಿಯುಳ್ಳ ಭೇಧಿಯ ಔಷಧಗಳನ್ನು ತೆಗೆದುಕೊಳ್ಳಬಾರದು. ಏಕೆಂದರೆ, ಅದರಿಂದ ಕೆಲವು ಸಂದರ್ಭಗಳಲ್ಲಿ ಗರ್ಭಸ್ರಾವವುಂಟಾಗಬಹುದು

ವ್ಯಾಯಾಮ—ಗರ್ಭಿಣಿಯರು ಬೈಲುಪ್ರದೇಶಗಳಲ್ಲಿ ಮಿತವಾದ ವ್ಯಾಯಾಮವನ್ನು ತೆಗೆದುಕೊಳ್ಳಬೇಕು. ಅನೇಕರು, ಗರ್ಭಿಣಿಯರು ಯಾವಾಗಲೂ ಸುಮ್ಮನೆ ಕುಳಿತುಕೊಂಡಿರಬೇಕೆನ್ನುವರು. ಈ ತಿಳುವಳಿಕೆಯನ್ನು ನಿವಾರಿಸಬೇಕು ಆದರೆ ಅವರು ಪ್ರಯಾಸದಿಂದ ನಡೆಸತಕ್ಕ ಕೆಲಸವನ್ನಾಗಲೀ, ಕಠಿಣವಾದ ಅಂಗಸಾಧನೆಗಳನ್ನಾಗಲೀ ಮಾಡಬಾರದು.

ಗರ್ಭಿಣಿಯರಲ್ಲಿ ಈ ಕೆಳಗೆಕಂಡ ಚಿಹ್ನೆಗಳಲ್ಲಿ ಯಾವುದಾದರೊಂದು ಕಂಡುಬಂದರೂ ಒಡನೆಯೇ ಡಾಕ್ಟರರಿಗೆ ತೋರಿಸಬೇಕು—

(೧) ಜಲವಿಸರ್ಜನೆಯು ಕಡಿಮೆಯಾಗುವುದು, (೨) ಮುಖ ಅಥವಾ ಕಾಲುಗಳು ಬಾತುಕೊಳ್ಳುವುದು, (೩) ಆಗಾಗ ತಲೆನೋವು ಬರುವುದು, (೪) ದೃಷ್ಟಿಯು ಮಂದವಾಗುವುದು. ಮತ್ತು ಕಣ್ಣಮುಂದೆ ಬೆಳಕು ಜ್ವಲಿಸುವಂತೆ ಕಾಣಿಸುವುದು, (೫) ರಕ್ತಸ್ರಾವ.

ಗರ್ಭಿಣಿಯರ ಮೂತ್ರವನ್ನು ಆರಂಭದಲ್ಲಿಯಲ್ಲಿ ತಿಂಗಳಿಗೊಂದುಸಲವಂತೆಯೂ, ಗರ್ಭಕಾಲವು ಮುಗಿಯುತ್ತ ೧೫ದಿನಗಳಿಗೊಂದುಸಲದಂತೆಯೂ ಪರೀಕ್ಷಿಸಿ ನೋಡುತ್ತಿರಬೇಕು. ೨೪ಗಂಟೆಗಳ ಕಾಲದೊಳಗಾಗಿ ಎಷ್ಟು ಮೂತ್ರವು ವಿಸರ್ಜಿಸಲ್ಪಡುವುದೆಂಬ ಪ್ರಮಾಣವನ್ನು ನೋಡಬೇಕು. ಮೂತ್ರದಲ್ಲಿ ಆಲ್ಬುಮಿನ್ ಕಂಡರೆ ಒಡನೆ ಅದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಬೇಕು.

ಆರೋಗ್ಯ ಚಂದ್ರಿಕೆ.

ಒಂದಿಷ್ಟು ನಗು

ತಾಯಿ—(ಪ್ರಾರ್ಥನೆ ಮುಗಿದೊಡನೆ)

ರಾಮೂ! ಪ್ರಾರ್ಥನೆ ಕಾಲಕ್ಕೆ ಕಣ್ಣು ಮುಚ್ಚಿಕೊಳ್ಳಬೇಕೆಂದು ಹೇಳಿದ್ದೆನಲ್ಲ! ನೀನೇಕೆ ಹಾಗೆ ಮಾಡಲಿಲ್ಲವೋ ಹುಡುಗ?

ಮಗ—ನಿನಗೆ ಹೇಗೆ ಗೊತ್ತಾಯಿತಮ್ಮ?

x x x x x

ಗೌರಿ—ನಮ್ಮ ರಸ್ತೆಯ ಮೇಲಿನ ಲಾಟೀನು ಕಂಭಗಳಿಗೆಲ್ಲಾ ಬಣ್ಣ ಬಳಿದಿದ್ದಾರೆ.'

ಮಿಮಲೆ—'ಅಹುದು; ನಿನ್ನೆ ನನ್ನ ಗಂಡ ಮನೆಗೆ ಬಂದಾಗ ನೋಡಿದೆ.'

x x x x x

'ಜಗತ್ತಿನ ಒಂದು ಮುಖ್ಯಗುಣವೆಂದರೆ, ನೀನು ಯಾವುದಾದರೂ ಒಂದು ಒಳ್ಳೆಯವಸ್ತುವನ್ನು ಜಗತ್ತಿಗೆ ಕೊಡು; ಅದು ನಿನಗೆ ಮರಳಿ ಬರುವುದು."

"ನಿಜ, ನಾನು ಕಳುಹಿಸಿದ ಕವಿತೆಗಳೆಲ್ಲ ನನಗೇ ಬಂದಿವೆ."

x v x x x

"ನಿನ್ನ ಮಗನ ಕೊಲೇಜ್ ವಿದ್ಯಾಭ್ಯಾಸದಿಂದ ಏನಾದರೂ ಪ್ರಯೋಜನವಾಯಿತೇ?

ಹೌದು. ನನ್ನ ಹೆಂಡತಿ ಈಗ ಆತನನ್ನು ಹೊಗಳುವುದನ್ನು ಬಿಟ್ಟುಬಿಟ್ಟಿದ್ದಾಳೆ.

x x x x x

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ದರ	ಉಡುಪಿ ವರೆಗೆ
ರಾಶಿ ಅಕ್ಕಿ …	3 – 6	3—10	3— 0	3— 2
ಮುಕ್ಕತಿ …	3— 8	4 – 4	3— 4	3—14
ಗುಡ್ಡ ಮುಗ್ಗಿ …	3—10	3 – 14	3— 0	3— 2
ಸೂರ ಅವ್ವಲ್ ಬೆಳ್ತಿಗೆ …	4— 0	4— 4	4— 4	4— 8
ರಂಗೂನು ಬೆ ಗೋ. ೧ಕ್ಕೆ	7— 0	7— 4	6—14	7— 8
ಗೋದಿ ಗೋಣಿ ೧ಕ್ಕೆ …	11— 0	13— 0	12 0	14— 0
ತೊಗರಿ ಗೋಣಿ ೧ಕ್ಕೆ …	9— 8	12— 8	12— 8	13— 0
ಹುರುಳಿ ಗೋಣಿ ೧ಕ್ಕೆ …	5 — 0	5 — 6	4— 0	5— 8
ಕಡಲೆ ಗೋಣಿ ೧ಕ್ಕೆ …	8— 0	12 — 8	8— 8	8 – 12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17— 0
ಉದ್ದು ಗೋಣಿ ೧ಕ್ಕೆ …	9— 0	9 — 8	9— 0	8— 8
ಹೆಸರು ಗೋಣಿ ೧ಕ್ಕೆ …	7 —12	8— 0	10— 0	9— 8
ಹೊರುಬೆಲ್ಲ ಖಂಡಿ ೧ಕ್ಕೆ…	30— 0	32— 8	20— 0	30— 0
ಉಪ್ಪು ಗೋಣಿ ೧ಕ್ಕೆ ..	4 – 2	5— 4	5— 2	5— 4
ಕೊಬ್ರಿ ಖಂಡಿ ೧ಕ್ಕೆ …	75— 0	84— 0	90— 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	26— 8	28 – 8	18—12	20— 0
ಎಳ್ಳಿಂಡಿ ಖಂಡಿ ೧ಕ್ಕೆ …	26 — 4	27 — 8	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	6— 0	7— 0	6 — 8	6—12
ಎಳ್ಳೆಣ್ಣೆ ಮಣ ೧ಕ್ಕೆ …	7— 0	…	6— 0	6— 4
ಚಿಮಣಿ ಎಣ್ಣೆ ಪೆಟ್ಟಿಗೆ೧ಕ್ಕೆ	6— 5	7 – 5	6— 8	6—12
ಮೋರಿಸ ಸಕ್ಕರೆ ಮ. ೧ಕ್ಕೆ	5— 2	3— 4	2—14	2—15
ಮೆಣಸು …	2— 8	5— 0	3— 4	3— 6
ಸಾಸಿವೆ ಮುಡಿ ೧ಕ್ಕೆ …	5— 4	5- 8	5— 8	5—12
ಕೊತ್ತಂಬರಿ ಮುಡಿ ೧ಕ್ಕೆ …	2— 8	3 — 0	2— 8	3— 4
ಕಾಳುಮೆಣಸು ಖ. ೧ಕ್ಕೆ…	100— 0	120 — 0	110— 0	120 – 0
ಗೇರುಬೀಜ ಮು ೧ಕ್ಕೆ …	3 – 4	3— 8	4 – 6	4— 8
ಕಬ್ಬಿಣ ಖಂಡಿ ೧ಕ್ಕೆ …	35— 0	37— 8	55— 0	60— 0
ತಾಂಬ್ರ ತಗಡು ಮ. ೧ಕ್ಕೆ	12— 4	12— 8	17— 8	…
,, ಪಾತ್ರೆಗಳು ಮ. ೧ಕ್ಕೆ	12— 8	14— 0	18— 8	19— 0
ಚೀನಿ ಬೆಳ್ಳಿ ಸೇರು ೧ಕ್ಕೆ…	13— 8	15— 0	13 —14	…
ಹಿತ್ತಾಳೆ ತಗಡು ಮ ೧ಕ್ಕೆ	10— 0	10— 8	13— 0	…
ಪವನು ೧ಕ್ಕೆ …	22— 7	22— 8	22—12	…
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45— 0	45— 0	50— 0
ನೇಟಿವ್ ಕಾಫಿ ಖಂಡಿ ೧ಕ್ಕೆ	170— 0	180 – 0	180— 0	220— 0
ಪಿಬೇರಿ ಕಾಫಿ ಖಂಡಿ ೧ಕ್ಕೆ	175— 0	195— 0	210 — 0	220— 0
ಮಡಿಕೇರಿ ಏಲಕ್ಕಿ …	50— 0	55— 0	70— 0	75— 0
ತುಪ್ಪ ಮಣ ೧ಕ್ಕೆ …	17— 0	18 — 0	14— 0	15— 0
ಏಲಕ್ಕಿ ಬೀಜ ಮಣ ೧ಕ್ಕೆ	80— 0	85 — 0	70— 0	80 – 0

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —·— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಡಿಸೆಂಬರದಲ್ಲಿ ೬ನೆಯ ವರುಷದ ೧ನೆಯ ಸಂಚಿಕೆಯು ಪ್ರಕಟವಾಗುವದು. ಅದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು.

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ.

ಇಳಿಸಿದ ಚಂದಾ ೧-೮-೦ (ಅಂಚವೆಚ್ಚ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೪-೦

ಮೈಸೂರು, ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು ಎಲ್ಲಾ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ.

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು·

ಕಿರಿಯರ ಪ್ರಪಂಚ

೧	ನಾಡಕಥೆ	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ ..	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಧುವನ ...	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಸ್ಯೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. 3—0—0 ಮಾತ್ರ. ವಿ. ಪಿ. ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

ದಿ ನ್ಯೂ ಗ್ಲಾಸ್ ಎಂಪೋರಿಯಮ್

ಪೋಸ್ಟಾಫೀಸ್ ರೋಡ್, ಉಡುಪಿ

ನಮ್ಮಲ್ಲಿ ಎಲ್ಲಾ ತರದ ಗ್ಲಾಸ್‌ವೇರ್, ಎನಾಮಲ್‌ವೇರ್ ಸ್ಟೈನ್‌ಲೆಸ್‌ವೇರ್, ಲೇಂಪ್ ಲಾಟೀನು, ಪೆಟ್ರೊಮೆಕ್ಸ್ ಇತ್ಯಾದಿ ಎಲ್ಲಾ ತರದ ಸಾಮಗ್ರಿಗಳು ಮತ್ತು ಹೊಟೇಲು-ಹೊಸ್ಟೆಲುಗಳಿಗೆ ಉಪಯುಕ್ತವಾದ 'ಟೀಸೆಟ್' ಕಪ್ಸ್-ಸಾಸರ್, ಪ್ಲೇಟ್ಸ್, ಥರ್ಮೋಸ್‌ಫ್ಲಾಸ್ಕ್, ಜಗ್, ಟ್ರೇಸ್ಲವರ್ ವೇಜ್, ಮತ್ತು ಪ್ರಜಂಟೇಶನ್ ಬಗ್ಗೆ ನಾನಾತರದ ಚಲೋ ಫೇನ್ಸಿ, ಗ್ಲಾಸ್‌ವೇರ್ ಸಾಮಾನುಗಳೂ ಸದಾ ಕಡಿಮೆ ಬೆಲೆಗೆ ಸಿಕ್ಕುವುವು.

ನಾವು ಹೊಸತಾಗಿ ಎಲ್ಲಾ ಸಾಮಾನುಗಳನ್ನು ಡೈರೆಕ್ಟ್ ತರಿಸಿರುವುದರಿಂದ ಯಾವತ್ತೂ ಸಾಮಾನುಗಳು ಕಡಿಮೆ ಬೆಲೆಗೆ ಕೊಡಲು ಅನುಕೂಲವಿದೆ ಕಾರಣ ಗ್ರಾಹಕರು ಸ್ವತಹಾ ನಮ್ಮ 'ಶೋರೂಮ್'ನ್ನು ಸಂದರ್ಶಿಸಿ ಮಾಲನ್ನು, ದರಗಳನ್ನು ಪರಿಶೀಲಿಸಿ ಕೊಂಡುಕೊಳ್ಳಬೇಕಾಗಿ ವಿನಂತಿ.

THE GENERAL STORES, UDIPI

The only Reliable House for quality goods of every description

---

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ—·— ಗುಡಪಿಪ್ಪಲಿ (ಲೀವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ. **ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು!** ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇವರ ಹೊಸವರ್ಷದ ಜುಲೈಯಲ್ಲಿ ಮೊದಲಾಗುತ್ತವೆ ಮಯೋದಯ ಉದ್ಯೋಗ ಬೇಕಾಗಿದ್ದವರ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಸ್ಕೂಲ್ಸ್, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಸರ್ಕಾರ ಅವರಲ್ಲಿಂದ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರಾಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ **ಡಾ॥ ಸುಮತಿಬಾಯಿ,**

ಬಿ. ಎ. ಎಲ್. ಟಿ., ಎಫ್. ಪಿ. ಎಮ್. ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್-

The Coondapoor Bank, Ltd.,

Head Office:- **Coondapoor.** Branch Office:-**Brahmavar.**

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: **ಕುಂದಾಪುರ** | ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ.ಶೆ.2, **ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು**ಸಾ ಶೆ 4,
ಕಾಯಂ ಠೇವಣಾತಿಗಳು 3 **ತಿಂಗಳ ಬಾಬತು** ಸಾ. ಶೆ. 4

6 **ಮತ್ತು** 9 **ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ** 5%,
1 **ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ** 5½%
2 **ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್. ಶೇಕಡಾ** 6% **ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.**

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ
ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತವೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. **N. Sheshagiri Rao,** ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,

ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮಾಸ] **ವಿಶ್ವವಾಣಿ** [ಪತ್ರಿಕೆ

ಸಂಪಾದಕರು—**ಅ. ನ. ಕೃಷ್ಣರಾಯರು.**

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... ...	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚಾರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,
ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ನೂರು ಇನಾಮುಗಳು.



THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಗ್ಸ್ 1, ಕಾಶೀಲಕ್ಷ್ಮಿ 1, ವಿಶ್ವೇಶ್ವರ ಪಟ 1, ಈ ತಸಾಮಾನುಗಳು 1 ಆಣೆಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುತ್ತವೆ. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆಸೀರೆಗಳೂ, ಖಣ, ಮಡಿ ಕದಪಾಮ್ಸ್, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾದರ, ಧಾವಳಿ, ನಾಮ್‌ದಾ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ; ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವರೆಗೂ ಸಾದಾ 16ಮೊಳದ ಶೀರೆ 1ಕ್ಕೆ ರೂ. 16ರಿಂದ ರೂ. 36ರ ವರೆಗೆ. ಅರೆ ಕಡಮೆ 16ಮೊಳ ಕ್ಸವರ್ ಅಂಚು ರೂ. 10½ ಯಿಂದ ರೂ 16. ಖಣ 1ಕ್ಕೆ ರೂ. 1½ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂ. ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ

WANTED

Educated, accomplished and beautiful Shivalli Brahmin Brides between 14 and 16 to marry educated youths between 23 and 25 of the same cast, well settled in life. Also a Shivalli Brahmin bridegroom to marry a girl of nearly 14. No personal interview granted. Apply with photo and horoscope to

PS
C/o **Navayuga,** ***UDIPI***

USE

Suvasini Agarbathies

(REGD.)

SRI BHARATHA VASTU MANDIRA, UDIPI.

GOGLETS! *WATER COOLERS!!*

GET

Healthy by drinking Cooled Water.

ಬೇಸಿಗೆ ಕಾಲದಲ್ಲಿ
ತಣಿಸಿದ ನೀರನ್ನು ಕುಡಿದು
ಆನಂದಪಡೆಯಿರಿ.

ಮಣಿಪಳದ ಉತ್ತಮ ತರದ ಮಣ್ಣಿನಿಂದ ತಯಾರಿಸಲ್ಪಟ್ಟ ತರತರದ

ನೀರಿನ ಕೂಜೆಗಳು

ನಮ್ಮಲ್ಲಿ ಮಾರಾಟಕ್ಕೆ ಇವೆ.

ಶ್ರೀ ಭಾರತ ವಸ್ತು ಮಂದಿರ, ರಥಬೀದಿ ಉಡುಪಿ

Show Rooms & Sales Depot at Bobbarya Junction.

SUPPLY AGENCY LTD. UDIPI

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೧೦ ಪುಟಗಳು

NAVAYUGA
A Nationalist Kanarese Weekly, UDIPI, S. K.

It will pay you
to advertise in
'NAVAYUGA'
The Leading
Nationalist
Kanarese Weekly
of Karnatak
FOR RATES OF ADVT. Etc.
APPLY TO THE MANAGER

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣು ಮುಂದಿರಿಸಿ
ಸಮಾಜಸೇವೆಗೆಯು
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಶಿರಿಯುರ ಪ್ರಪಂಚ, ಉಡುಪಿ.

VOL XVI-NO 33

22-4-1937

ಮೂಡ ಬಾನಿನ ಕಣ್ಣು ಕೆಂಗಿಡಿಯ್ನುಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮಿಡುವುದು ತಂಬೆಳಕ ತಿಂಗಳಿನ ಮೊಗವನ್ನು,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬]   ಉಡುಪಿ, ಗುರುವಾರ ೨೨ ಎಪ್ರಿಲ್, ೧೯೩೭   [ಸಂಚಿಕೆ ೩೩

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I)

BRANCHES:

1 BANGALORE CITY
2 BELGAUM
3 BYADGI
4 BELLARY
5 ADONI
6 HOSPET
7 TALIPARAMBA
8 UPPINANGADI
9 KASARGODE
10 PAYYANUR
11 KANHANGAD
12 KARKALA
13 NANDYAL
14 PRODATTUR
15 TADPATRI
16 HUBLI
17 GADAG
18 KARWAR
19 KUMTA
20 ANKOLA
21 HONAVAR
22 BHATKAL
23 BRAHMAVAR
24 HUNGARCUTTA
25 SIRSI
26 SAGAR
27 COONDAPOOR
28 UDIPI
29 MANGALORE
30 CANNANORE

Beg to announce

The Opening of their Branch at

BOMBAY

on Friday, the 23rd April 1937
IN
"Premchand House"
AT
Sir Pherozshah Mehta Road.

Paid up Capital	Rs. 3,45,580
Reserves	„ 19,2,390
Deposits exceed	„ 22 lakhs
Total Working Funds exceed	„ 40 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್. ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ   ಕೆ. ಎ. ರಾವ್, ಮೆನೇಜರ್.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ ——— ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ⅛ ದಲ್ಲಿ) ಹೊರಡುವುದು!

ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ.ಎ.ಯವರಿಂದ ಅನುವಾದಿಸಲ್ಪಟ್ಟು ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚಾರವಡೆಯುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ-ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. 3—0—0 ಮಾತ್ರ. ವಿ. ಪಿ. ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,

ಚಾಮರಾಜಪೇಟೆ, **ಬೆಂಗಳೂರು ನಗರ**

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಖು ಠೇವಣಾತಿ ಸೇಕಡ 5½ರ ವರೇಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, — ಯಂ. ಆರ್. ಪೂಂಜ,

President & Manager, — ಪ್ರೆಸಿಡೆಂಟ್ ಮತ್ತು ಮೆನೇಜರ್.

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ; ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... ...	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚಾರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶೀ ಔಷಧಗಳು.

ಗುಣ ಬಾರದಿದ್ದರೆ — ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಫಿಕೇಟ ಮ. ರಾ. ಎ. ಎಮ್. ಇನ್ಸ್ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ದಬ್ಬಿಯ ಕಿಮ್ಮತು ರೂ. ೩ ಟ.ಖ. ಆಣೆ, ೮ ದಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ. ಪಿ. ಖರ್ಚು ಆಣೆ ೮.

ಬಹಳಸಾರೆ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು। ಕೇಳವಾ ಮಾಹಿಮಾ ಜಿ. ರಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ಸಮಾಚಾರ ಸಂಗ್ರಹ

ಸ್ಪೈನಿನಲ್ಲಿ ಸ್ತ್ರೀಯರಿಗೆ ಪೂರ್ಣ ಸ್ವಾತಂತ್ರ್ಯ ಹರತಾಳ ದಿನ ಆಫೀಸ್ ಬಂದ್ ಮಾಡಿದುದಕ್ಕೆ ಆಕ್ಷೇಪ, ವಾಯುವ್ಯ ಗಡಿನಾಡಿನ ಗಲಭೆ

ರಷ್ಯಾದಲ್ಲಿ ನಾಸ್ತಿಕವಾದ ಪ್ರಚಾರ.

ಲೋಕದಲ್ಲ ನಾಸ್ತಿಕವಾದದ ತವರೂರೆಂದರೆ ರಷ್ಯ, ಅಲ್ಲಿ ದೇವರಿಗಾಗಲಿ ದೇವ ಮಂದಿರಕ್ಕಾಗಲಿ ಸರಕಾರವು ಯಾವ ಆಶ್ರಯವನ್ನೂ ಕೊಡುವುದಿಲ್ಲ ಮಾತ್ರವಲ್ಲದೆ ಅವುಗಳನ್ನು ನಿರ್ಮೂಲಿಸಲೆತ್ನಿಸುತ್ತದೆ ರಷ್ಯದಲ್ಲಿ ಕ್ರಾಂತಿಯುಂಟಾಗಿ ಈಗ 19 ವರ್ಷವಾಗಿರುವುದು ಅಂದಿನಿಂದ ಅಲ್ಲಿ ದೇವ ಧರ್ಮಗಳ ವಿರುದ್ಧವಾಗಿ ಪ್ರಚಂಡ ಚಳವಳ ನಡೆಯುತ್ತಾ ಬಂದಿದ. ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವೀಯದಂತೆ ನಿಷೇಧಹಾಕಲಾಗಿದೆ. ಇತ್ತಲಾಗಿ ರಷ್ಯದಲ್ಲಿ ನಡೆದ ಜನ ಸಂಖ್ಯಾಗಣನೆಯ ಮೇರಗೆ, ಅಲ್ಲಿಯ ಎರಡೂವರೆ ಕೋಟಿ ಹುಡುಗರಿಗೆ ಮತ ವಿಚಾರವೇ ತಿಳಿಯದೆಂದು ತಿಳಿದು ಬಂದಿದೆ, ಅವರಿಗೆ ಗುಡ್ ಫ್ರೈಡೇ ಎಂಬ ದಿನದ ಹೆಸರು ಕೂಡಾ ಗೊತ್ತಿಲ್ಲ ಮೋಸ್ಕೋ ನಗರ ಒಂದರಲ್ಲೇ 800 ಇಗರ್ಜಿಗಳು ಮುಚ್ಚಲ್ಪಟ್ಟಿರುವವು ಇಗರ್ಜಿ ಮತ್ತು ಕ್ರೈಸ್ತ ಮಠಗಳ ಆಸ್ತಿಪಾಸ್ತಿಗಳನ್ನೆಲ್ಲಾ ಸರಕಾರವು ಅಪಹರಿಸಿರುವುದು ಧಾರ್ಮಿಕ ಪುಸ್ತಕಗಳಾವವನ್ನೂ ರಷ್ಯದಲ್ಲಿ ಪ್ರಚಾರಮಾಡಲಿಕ್ಕಿಲ್ಲ ಸಬ್ಬತ್ ದಿನವಾದ ಆದಿತ್ಯವಾರದ ಆಚರಣೆಯೇ ಇಲ್ಲ.

ಸರ್ದಾರ್ ಶಾರ್ದೂಲಸಿಂಘರ ಜಹಗೀರು ರದ್ದಾಯಿತು.

ಪಂಜಾಬಿನ ಪ್ರಸಿದ್ಧ ಕಾಂಗ್ರೆಸ್ ಮುಖಂಡರಲ್ಲೊಬ್ಬರಾದ ಸರ್ದಾರ್ ಶಾರ್ದೂಲ ಸಿಂಘರು 4 ತಲಾಂತರಗಳಿಂದ ಅನುಭವಿಸಿಕೊಂಡು ಬಂದಿರುವ ಜಹಗೀರನ್ನು ಸರಕಾರದವರು ಈಗ ರದ್ದುಪಡಿಸಿರುವರು ಸರ್ದಾರರ ರಾಜಕೀಯ ಚಳವಳವು ಸರಕಾರಕ್ಕೆ ವ್ಯತಿರಿಕ್ತವಾಗಿರುವುದರಿಂದ ಅವರ ಜಹಗೀರನ್ನು ರದ್ದು ಪಡಿಸಲಾಗಿದೆಯೆಂದೇ ಸರಕಾರವು ಅದಕ್ಕೆ ಕೊಟ್ಟಿರುವ ಕಾರಣವು.

ಸ್ಪೈನಿನಲ್ಲಿ ಸ್ತ್ರೀಯರಿಗೆ ಪುರುಷ ಸಮಾನ ಹಕ್ಕು.

ಸ್ಪೈನಿನ ಸ್ತ್ರೀಯರು ಪ್ರಕೃತದ ಅಲ್ಲಿಯ ಅಂತಃ ಕಲಹದಲ್ಲಿ ಸರಕಾರದ ಸಹಾಯಕರಾಗಿ ತೋರಿಸಿರುವ ಸಾಹಸಕ್ಕೆ ಸರಕಾರದವರು ಕೃತಜ್ಞತೆಯಿಂದ ಅವರಿಗೆ ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲೆಲ್ಲಾ ಪುರುಷ ಸಮಾನ ಹಕ್ಕು ಬಾಧ್ಯತೆಯನ್ನಿತ್ತಿರುವರು. ವಿವಾಹದಿಂದ ಅವಳು ಗಂಡನ ಅತ್ಯಂತ ಹಿತದ ಮಿತ್ರಳಾಗುವಳೇ ಹೊರತು ದಾಸಿಯಾಗಲಾರಳು, ಪುರುಷರಾರಾದರೂ ಅವಳನ್ನು ದಾಸಿಯಂತೆ ಕಂಡಲ್ಲಿ ಶಿಕ್ಷಾರ್ಹರಾಗುವರು.

3 ಮಂದಿಯ ವಿಷಾದಕರ ಮರಣ.

ಗ್ವಾಲಿಯರ್ ಸಂಸ್ಥಾನದ ದಾನೋಲಿ ಎಂಬಲ್ಲಿ ಒಬ್ಬ ಹಿಂದು ಸ್ತ್ರೀಯು ತನ್ನ ಪತಿಯು ಮೃತನಾದ ದುಃಖ ತಾಳಲಾರದೆ ಆತನ ಶವವು ಮನೆಯಲ್ಲಿರುತ್ತಿದ್ದಂತೆಯೇ ತನ್ನ ಹೆಣ್ಣು ಮಗುವನ್ನು ಕೈಯಲ್ಲಿ ಹಿಡಕೊಂಡೇ ಉಪ್ಪರಿಗೆಯಿಂದ ಕೆಳಗೆಹಾರಿಬಿಟ್ಟಳು ಹಾರುವಾಗ ಅವಳು ದಾರಿಯಲ್ಲಿ ಹೋಗುತ್ತಿದ್ದವನೊಬ್ಬನ ಮೇಲಬಿದ್ದು ತಾಯಿ ಮಗು ಮತ್ತು ದಾರಿಗ ಹೀಗೆ 3 ಮಂದಿಯೂ ಕೊಲ್ಲಲ್ಪಟ್ಟರು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು

ಇದೇ ಬರುವ 26ರಲ್ಲು ವಾರ್ಧದಲ್ಲಿ ನಡೆಯಲಿರುವುದು. ಇದಕ್ಕೆ ಕಾಂಗ್ರೆಸ್ ಪಕ್ಷೀಯರು ಬಹುಪಕ್ಷ ಪಡೆದಿರುವ6ಪ್ರಾಂತಗಳ ಮುಖಂಡರು ಕೂಡಾ ಆಮಂತ್ರಿಸಲ್ಪಟ್ಟು, ಸರಕಾರದ ದೋರಣೆಯಿಂದುಂಟಾದ ಪರಿಸ್ಥಿತಿಯು ಪರಿಶೀಲಿಸಲ್ಪಡುವುದೆಂದು ತಿಳಿದು ಬರುತ್ತದ

ಸಂತಾನೋತ್ಪತ್ತಿಗೆ ಪ್ರೋತ್ಸಾಹ

ಇಟಲಿಯ ಸರಕಾರವು ವಿವಾಹ ಮತ್ತು ಸಂತಾನೋತ್ಪತ್ತಿಗೆ ಬಹಳ ಪ್ರೋತ್ಸಾಹವೀಯುತ್ತಿರುವುದು, 26 ವರ್ಷಗಳೊಳಗೆ ಮದುವೆಯಾಗುವ ದಂಪತಿಗಳಿಗೆ 1,000 ದಿಂದ 3,000 ಲೀರಿನ ವರೆಗೆ ಸರಕಾರವು ದೀರ್ಘಕಂತಿನಿಂದ ಸಾಲಕೊಡುವುದು, ಪ್ರತಿ ಮಗು ಹುಟ್ಟಿದಾಗ ಈ ಸಾಲವು ಸೇಕಡ 10ರಷ್ಟು ಕಡಿಮೆಮಾಡಲ್ಪಡುವದು 4 ಮಕ್ಕಳು ಹುಟ್ಟಿದರ ಸಾಲವು ಸೇಕಡ 40ರಷ್ಟು ಕಡಿಮೆಯಾಗುವುದು ಸರಕಾರಿ ನೌಕರರಿಗೆ ಮಕ್ಕಳು ಹೆಚ್ಚೆಚ್ಚಾಗಿ ಹುಟ್ಟಿದಂತ ಹೆಚ್ಚಿನ ಬಡ್ತಿ ಕೊಡಲಾಗುವುದು,

ಮುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ಧ್ವಜ

ಲಕ್ನೋ ಮುನಿಸಿಪಾಲಿಟಿಯ ಆಫೀಸಿನ ಮೇಲ ಮೊದಲೊಮ್ಮೆ ಮಹಾತ್ಮಗಾಂಧಿಜಿಯವರು ಧ್ವಜವೇರಿಸಿದುದನ್ನು ಲಕ್ನೋ ಕಮಿಶನರರು ತೆಗೆಸಿದ್ದರು.ಆಮೇಲೆ ಕಳದ ವಾರ ಪಂಡಿತ ಗೋವಿಂದವಲ್ಲಭ ಪಂತರು ಪುನಃರಾಷ್ಟ್ರೀಯ ಧ್ವಜವನ್ನೇರಿಸಿ,ಅದುತೆಗೆಯಲ್ಪಡದಂತೆ ನೋಡುವುದು ಮುನಿಸಿಪಾಲಿಟಿಯ ಪವಿತ್ರ ಕರ್ತವ್ಯವೆಂದರು ಈಗ ಲಕ್ನೋವಿನ ಕಮಿಶನರರು, ರಾಷ್ಟ್ರೀಯ ಧ್ವಜನೇರಿಸಲು ಮುನಿಸಿಪಾಲಿಟಿಯವರು ಮಾಡಿದ ರೂ. 100 ವೆಚ್ಚವು ಅಕ್ರಮವಾದುದೆಂದು ಆಕ್ಷೇಪವೆತ್ತಿರುವರು

ಹರತಾಳ ದಿನ ಆಫೀಸ್ ಬಂದ್ ಮಾಡಿದುದಕ್ಕೆ ಆಕ್ಷೇಪ

ಪಂಜಾಬಿನ ಲ್ಯಾಲಪುರಮುನಿಸಿಪಾಲಿಟಿಯವರು ಎಪ್ರಿಲ್ 1ನೇ ಹರತಾಳದ ದಿನ ತಮ್ಮ ಆಫೀಸು ಮತ್ತು ಶಾಲೆಗಳನ್ನು ಮುಚ್ಚುವ ನಿರ್ಣಯಮಾಡಿದ್ದರು ಸದ್ರಿ ನಿರ್ಣಯವನ್ನು ಅಲ್ಲಿಯ ಡಿಪ್ಯುಟಿ ಕಮಿಶನರರು ರದ್ದು ಪಡಿಸಿದ್ದರು ಆದರೂ ಮುನಿಸಿಪಾಲಿಟಿಯವರು ಆಫೀಸು ಮತ್ತು ಶಾಲೆಗಳನ್ನು ಮುಚ್ಚಿ, ಮುನಿಸಿಪಾಲಿಟಿಯು ಜನ ಪ್ರತಿನಿಧಿಗಳ ಸಂಸ್ಥೆಯಿರುವದರಿಂದ ಹೊಸ ಸುಧಾರಣೆಯ ಕುರಿತು ಜನತೆಯ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ತಮ್ಮಕರ್ತವ್ಯವಿರುವುದು ಮತ್ತು ಆಹಕ್ಕು ಆದಕ್ಕಿರುವುದೆಂದು ಡಿಪ್ಯುಟಿ ಕಮಿಶನರರಿಗೆ ತಿಳಿಸಿರುವರು ಅಮೃತಸರ ಮುನಿಸಿಪಾಲಿಟಿಯವರು, ಹೊಸ ಸುಧಾರಣೆಯನ್ನು ಸ್ವಾಗತೀಕರಿಸಲು ತಮ್ಮ ಆಫೀಸನ್ನು ಮುಚ್ಚಿದ್ದರು ಆದರೆ ಕಮಿಶನರರು ಅದಕ್ಕೂ ಆಕ್ಷೇಪವೆತ್ತಲಿಲ್ಲ

ವಾಯುವ್ಯ ಗಡಿನಾಡಿನ ಗಲಭೆ

ಯು ಇನ್ನೂ ಶಾಂತವಾಗಿರುವುದಿಲ್ಲ ಇಪ್ಪಿಯ ಫಕೀರರ ಕಡೆಯ ದಂಗಡಿಗರು ಸರಕಾರದ ಕಡೆಯ ಸೈನಿಕರಿಗೆ ಇನ್ನೂ ಪೀಡಿಕೊಡುತ್ತಿರುವರು. ಬನ್ನೂ ಪಟ್ಟಣದ ಹಿಂದು ಮತ್ತು ಸಿಖ್ಖರಲ್ಲಿ ದಿಗಿಲುಂಟಾಗಿರುವುದು ಅವರ ಮನೆಮಾರುಗಳಮೇಲೆ ಧಾಳಿ ನಡಿಸಿ ಕೈಗೆ ಸಿಕ್ಕವರನ್ನು ಹಿಡಿದೊಯ್ಯುವ ಅತ್ಯಾಚಾರವು ನಡೆದಿರುವುದು ಸರಕಾರವು ಬಂಡಾಯಗಾರರ ಮೇಲೆ ಬೊಂಬೆಸೆಯುವ ಬೆದರಿಕೆ ಹಾಕಿ ಆ ಪ್ರಕಾರ ಬಂಡಾಯಗಾರರ ಹಳ್ಳಿಗಳ ಮೇಲ ವಿಮಾನ ಮೂಲಕ ಬೊಂಬುಗಳ ಮಳೆಗರವರೂ, ಕೆಲವು ದಂಗಡಿಗರ ಸಹಾಯಕರನ್ನು ಸೆಲ್ಲಿಸಿದರೂ ವಜೀರಿಸ್ತಾನದ ದಂಗಡಿಗರುಗ ಲಾಟೆಯೆಬ್ಬಿಸುತ್ತಲೇ ಇರುವರು. ಇಪ್ಪಿಯ ಫಕೀರರು ವಾಸಮಾಡುತ್ತಿರುವ, ಪೈನೋರ ಮತ್ತು ಶಣ್ಯ ಗುಡ್ಡಬೆಟ್ಟಗಳನಡುವಿನ ಗುಹೆಯಮೇಲೆ ಬೋಂಬೆಸೆಯಲು ಸಾಧ್ಯವಿಲ್ಲ ಈ ಫಕೀರರು ಅದ್ಭುತ ಶಕ್ತಿಯುಳ್ಳ ಅಸಾಧಾರಣ ಪುರುಷರೆಂದು ಅವರ ಕುರಿತು ನಾನಾ ಕತೆಗಳು ವಜೀರಿಸ್ತಾನದವರೂ ದಂಗಡಿಗರಲ್ಲಿ ಹಬ್ಬಿರುವುದು ಫಕೀರರ ವಯಸ್ಸೀಗ42. ಅವರು ಇಪ್ಪಿ ಎಂಬ ಹಳ್ಳಿಯಲ್ಲಿ ಹುಟ್ಟಿದವರು ಅವರು ಹೆಚ್ಚಿನ ಸಮಯವನ್ನು ತನ್ನ ಗುಹೆಯಲ್ಲಿ ಧ್ಯಾನದಲ್ಲಿ ಕಳೆಯುವರು ಅವರ ಸುತ್ತಲೂ ಅತ್ಯಂತ ವಿಶ್ವಾಸಿ ಜನರ ಕಾವಲಿರುವುದು ವಜೀರಿಸ್ತಾನದ ದಂಗಡಿಗರಿಗೆ ಈ ಫಕೀರರ ಮೇಲೆ ಬಹಳ ಭಕ್ತಿಯಿರುವುದು.

ಪಂಚಮಹಾಲ್ ಜಿಲ್ಲೆಯಲ್ಲಿ ಕ್ಷಾಮ.

ಗುಜರಾಥಿನ ಪಂಚಮಹಾಲ್ ಜಿಲ್ಲೆಯಲ್ಲಿ ಕ್ಷಾಮವುಂಟಾಗಿ ತಿನ್ನಲಿಕ್ಕಿಲ್ಲದೆ ಸೇಕಡ 30ರಷ್ಟು ಜಾನುವಾರುಗಳು ಮೃತವಾಗಿರುವವು ದವಸಧಾನ್ಯಗಳ ತೀವ್ರ ಅಭಾವವುಂಟಾಗಿರುವುದು ಬಿಲ್ಲ ಜಾತಿಯ ಬೇಸಾಯಗಾರರೆಲ್ಲಾ ಉಪವಾಸ ಬೀಳಬೇಕಾಗಿ ಬಂದಿರುವುದು, ಸರಕಾರದವರೂ, ಗುಜರಾದ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರೂ ಅಲ್ಲಲ್ಲಿ ಕೇಂದ್ರಗಳನ್ನು ತೆರೆದು ಜನರಿಗ ಸಹಾಯವೀಯುತ್ತಿರುವರು

ಶ್ರೀ ಜೈಪ್ರಕಾಶನಾರಾಯಣರಿಗೆ 3 ತಿಂಗಳು ಶಿಕ್ಷೆ

ಪಾಟ್ನದಲ್ಲಿ ಹರತಾಳದ ಸಂಬಂಧವಾಗಿ ದಸ್ತಗಿರಿ ಮಾಡಲ್ಪಟ್ಟಿರುವ ಅಖಿಲಭಾರತ ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷದ ಜನರಲ್ ಸಕ್ರೆಟರಿಗಳಾದ ಶ್ರೀ ಜೈ ಪ್ರಕಾಶ ನಾರಾಯಣರಿಗೆ ಮತ್ತು ಪಾಟ್ನಾ ಟೌನ್ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರೇ ಮೊದಲಾದ 14 ಮಂದಿಗೆ ಪಾಟ್ನ ಸಿಟಿ ಮೆಜಿಸ್ಟ್ರೇಟರು3ತಿಂಗಳಶಿಕ್ಷೆ ವಿಧಿಸಿರುವರು.

ಕಾಂಗ್ರೆಸಿನ ಮುಂದಿನ ಅಧಿವೇಶನವು.

ಬಾರ್ದೋಲಿಯಲ್ಲಿ ನಡೆಸಲ್ಪಡಬೇಕೆಂದು ಗಾಂಧಿಜಿಯವರು ಕೊನೆಯ ತೀರ್ಮಾನಮಾಡಿರುವರು. ಕಾಂಗ್ರೆಸ್ ಅಧಿವೇಶನವನ್ನು ತಮ್ಮ ಗ್ರಾಮದಲ್ಲಿ ಜರಗಿಸಬೇಕೆಂದು ರಾಸ್ ಗ್ರಾಮದ ಪ್ರತಿನಿಧಿಗಳು ವಾರ್ಧಕ್ಕೆ ಹೋಗಿ ಗಾಂಧಿಜಿಯವರೊಡನೆ ಮಾತಾಡಿದ್ದರು, ಆದರೆ ಗಾಂಧಿಯವರು ಅವರನ್ನು ಸಮಾಧಾನಪಡಿಸಿ ಬಾರ್ದೋಲಿಯಲ್ಲೇ ಕಾಂಗ್ರೆಸನ್ನು ಜರಗಿಸುವ ನಿರ್ಣಯ ಮಾಡಿರುವರು

ಪಂಡಿತ ಜವಾಹರಲಾಲರು

ಪುನ ಜ್ವರ ಪೀಡಿತರಾಗಿರುವರು. ಈಗ ಸ್ವಲ್ಪ ಗುಣವಾಗಿರುವುದು. ಕಾಯಿಲೆಯ ನಿಮಿತ್ತ ಅವರಿಗೆ ಶಾಂತಿನಿಕೇತನಕ್ಕೆ ಹೋಗಿ ಅಲ್ಲ ಚೀನೀ ಹಾಲನ್ನು ತೆರೆಯುವ ಸಮಾರಂಭವನ್ನು ನಡಿಸಲಾಗಲಿಲ್ಲ,

ಸ್ಪೈನಿನ ಪರಿಸ್ಥಿತಿ

ಸ್ಪೈನಿನ ಅಂತಃಕಲಹವು ಆರಂಭವಾಗಿ ಈಗ ಸುಮಾರು 9 ತಿಂಗಳಾಯಿತಾದರೂ ಇನ್ನೂ ಶೀಘ್ರವಾಗಿ ಶಾಂತಿಯುಂಟಾಗುವ ಚಿಸ್ಥೆಯೇನೂ ತೋರುವುದಿಲ್ಲ ಆದರ ಸಮಯ ಹೋದಂತೆ ಸ್ಪೈನ ಸರಕಾರದ ಬಲವು ಹೆಚ್ಚುತ್ತಿರುವುದು ಅವರು ಹೆಚ್ಚೆಚ್ಚಾಗಿ ಜನತೆಗೆ ಸೇನಾ ತರಬೇತಿಯಿತ್ತು ಸಿದ್ಧತೆಮಾಡುತ್ತಿರುವರು ದಿನ ಹೋದಂತೆ ಜನರಲ್ ಫ್ರೆಂಕೋರವರ ಶಕ್ತಿಕುಂದುತ್ತಿರುವುದು. ಸೇನಾ ಸಹಾಯವೂ ಅವರಿಗೆ ಕಡಿಮೆಯಾಗ ಹತ್ತಿರುವುದು. ಇದು ಹೊರತು ಅವರ ಸೇನಾ ನಾಯಕತ್ವದ ಕುರಿತು ಇಟಲಿ ಮತ್ತು ಜರ್ಮನಿಗೂ ಅವರಿಗೂ ಅಭಿಪ್ರಾಯ ಭೇದವುಂಟಾಗಿ ವೈಷಮ್ಯವೆದ್ದಿದೆಯೆಂದು ಸುದ್ದಿಯುಂಟಾಗಿದ ಸೈನಿಕರಲ್ಲಿಯೂ ಅತೃಪ್ತಿಯುದ್ಭವಿಸಿದೆ. ಆದುದರಿಂದ ಜನರಲ್ ಫ್ರೆಂಕೋರವರ ಅಪಜಯ ನಿಶ್ಚಯವೆಂದು ನಂಬಲಾಗಿದೆ

ಗಾಂಧಿ ಸೇವಾಸಂಘ

ಇದರಂತೆನೇ ವಾರ್ಷಿಕ ಸಭೆಯು ಇದೇ ತಾ 16ರಲ್ಲು ಬೆಳಗಾಂವ ಜಿಲ್ಲೆಯ ಹುದ್ಲಿ ಎಂಬಲ್ಲಿ ನಡೆಯಿತು ಶ್ರೀ ಕಿಶೋರ್‌ಲಾಲ ಮಾಶರುವಾಲರವರು ಅಧ್ಯಕ್ಷರಾಗಿದ್ದರು. ಈ ಸಭೆಗೆ ಸುಮಾರು 200 ಮಂದಿ ಬಂದಿದ್ದರು ಶ್ರೀ ಗಂಗಾಧರ ದೇಶಪಾಂಡೆಯವರು ಸ್ವಾಗತ ಭಾಷಣಮಾಡಿ, ಗಾಂಧಿ ಸೇವಾ ಸಂಘದ ಕರ್ನಾಟಕ ಶಾಖೆಯ ಕಾರ್ಯಕಲಾಪಗಳನ್ನು ವಿವರಿಸಿದರು ಆಮೇಲೆ ಗಾಂಧಿಜಿಯವರು ಸಂಘದ ಗತವರ್ಷದ ಚಟುವಟಿಕೆಗಳನ್ನು ವಿಮರ್ಶಿಸಿ ಭಾಷಣಮಾಡಿದರು ಅಧ್ಯಕ್ಷರ ಭಾಷಣದ ನಂತರ ಸಂಘದ ಮೆಂಬರರು ಚುನಾವಣೆಗಳಲ್ಲಿ ಭಾಗವಹಿಸುವ ಕುರಿತು ಚರ್ಚೆ ನಡೆಯಿತು ಇದರಲ್ಲಿ ಸರ್ದಾರ್ ವಲ್ಲಭಾಯಿ ಪಟೇಲ್, ಬಾಬು ರಾಜೇಂದ್ರ ಪ್ರಸಾದ್, ಕಾಕಾ ಕಳೇಲ್ಕರ್ ಮೊದಲಾದವರು ಭಾಗ ವಹಿಸಿದ್ದರು

ರಶ್ಯದ ನೂತನ ನಿರ್ಮಾಣ

ಬೋಲ್ಶೆವಿಕರ ಧರ್ಮವಿರೋಧಕ್ಕೆ ಕಾರಣವೇನು?

[ರಶ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಶ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡುವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ, ವಿಮರ್ಶಕ ದೃಷ್ಟಿಯಿಂದ 'ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.]

—ಸಂ. ನ

ರಶ್ಯದ ತರುಣರ ನಿರ್ಭೀತವಾದ ನಾಸ್ತಿಕತ್ವವು ಅಲ್ಲಿಯ ಧರ್ಮವಿನಾಶಕ್ಕೆ ಮೂಲ ಕಾರಣವೆನ್ನಬಹುದು. ಎಲ್ಲಲ್ಲಿಯೂ ಮುಂದುವರಿದವರೆನಿಸುವ ತರುಣ ವೃಂದವು ನಾಸ್ತಿಕವಾದ ಪ್ರಚಾರದಲ್ಲೇ ಆನಂದೋತ್ಸಾಹವುಳ್ಳದ್ದಾಗಿರುವದು. ಇದರೊಂದಿಗೆ ದೇಶದ ಇತರ ತರುಣರೂ, ಸೇರುತ್ತಿರುವರು. ನಾಸ್ತಿಕವಾದವು ರಶ್ಯದಲ್ಲಿ ಶಾಶ್ವತವಾಗಿ ನಿಲ್ಲುವಹಾಗಿಲ್ಲ ಅದೇನೋ ತಾತ್ಕಾಲಿಕವಾಗಿ ಎದ್ದುದೊಂದು ಬಿರುಗಾಳಿ. ಕ್ರೈಸ್ತ ಧರ್ಮವು ಇಂತಹ ಆಘಾತಗಳನ್ನು ಹಿಂದೆ ಎಷ್ಟೋ ತಾಳಿಕೊಂಡು ಬಾಳಿಬಂದಿರುವುದು. ಬೋಲ್ಶೆವಿಸ್ಮ್ ಕೂಡಾ ಅದನ್ನು ನಿರಂತರವಾಗಿ ನಿರ್ನಾಮಗೊಳಿಸುವುದರಲ್ಲಿ ಜಯಶೀಲವಾಗಲಾರದೆಂದು ಕೆಲ ಮಂದಿ ಧಾರ್ಮಿಕ ಪ್ರಮುಖರ ದೃಢ ವಿಶ್ವಾಸ ಆದರೆ ಧರ್ಮಗಳು. ವಿಶೇಷವಾಗಿ ಕ್ರೈಸ್ತ ಧರ್ಮವು, ಬೋಲ್ಶೆವಿಸ್ಮನಷ್ಟು ದೃಢ ನಿರ್ಧಾರದ, ಬುದ್ಧಿವಂತ ಮತ್ತು, ಉತ್ಸಾಹಶೀಲ ವೈರಿಯನ್ನು ಇತಿಹಾಸದಲ್ಲಿ ಹಿಂದೆಂದೂ ಇದಿರಿಸಿರುವುದಿಲ್ಲೆಂಬುದನ್ನು ನಾನು ಒತ್ತಿಹೇಳಬೇಕಾಗಿದೆ ಬೋಲ್ಶೆವಿಕರು ಇತರ ಸರ್ವಸಾಧಾರಣ ವೈರಿಗಳಂತಲ್ಲ ಅವರ ಸಮರಶಕ್ತಿಯ ಕುರಿತು ತಿರಸ್ಕಾರ ಸೂಚಿಸುವುದರಿಂದ ಫಲವಿಲ್ಲ, ಅವರು ಧರ್ಮವನ್ನು ಪ್ರತಿಭಟಿಸಲು ಹಿಂದಿನ ಧರ್ಮವಿರೋಧಕರಂತೆ ಹಿಂಸೆ ಮತ್ತು ಪಾಶವಿಕ ದಬ್ಬಾಳಿಕೆಯನ್ನು ಉಪಯೋಗಿಸುವುದಿಲ್ಲ ಹಿಂಸೆಯು ಕಟ್ಟಕಡೆಗೆ ಅಪಜಯದಲ್ಲಿ ಪರಿಣಮಿಸುವುದೆಂದು ಅವರಿಗೆ ಗೊತ್ತು.

ಬೋಲ್ಶೆವಿಕರು ಧರ್ಮಕ್ಕೆ ಅಷ್ಟೊಂದು ಪ್ರಬಲ ವಿರೋಧಿಗಳಾಗಲು ಕಾರಣವೇನು? ಧರ್ಮಾಧಿಕಾರಿಗಳು ರಶ್ಯದ ಹಳೆಯ ಆಳ್ವಿಕೆಯ ಸಹಾಯಕರಾಗಿ, ಸಾಮಾಜಿಕ ಪ್ರಗತಿಯನ್ನು ವಿರೋಧಿಸಿ ಕ್ರಾಂತಿಕಾರರನ್ನು ನಾನಾ ರೀತಿಯಲ್ಲಿ ಪೀಡಿಸಿರುವರೆಂದೇ? ಝಾರರಿಗೆ ನೆರವಾಗಿನಿಂತು ಕ್ರಾಂತಿಕಾರರನ್ನು ದಬಾಯಿಸಿದವರು ರಶ್ಯದ ಹಳೆಯ ಇಗರ್ಜಿಗಳವರೆಂಬೇ?

ಹಾಗಾದರೆ ಬೋಲ್ಶೆವಿಕರು ಅವರ ಕುರಿತು ಮಾತ್ರ ದ್ವೇಷಭಾವವುಳ್ಳವರಾಗಬೇಕಿತ್ತು. ಆದರ ಅವರು ಎಲ್ಲಾ ಧರ್ಮಗಳನ್ನೂ ವಿರೋಧಿಸಲು ಕಾರಣವೇನು? ಇದಕ್ಕೆ ರಶ್ಯದ ಕ್ರಾಂತಿಕಾರ ಚಳವಳಿಯ ಹಿಂದಿನ ಇತಿಹಾಸವನ್ನು ಸ್ವಲ್ಪ ಪರಿಶೀಲಿಸಬೇಕು. ರಶ್ಯದ ಹಳೆಯ ಕ್ರಾಂತಿಕಾರ ಸ್ತ್ರೀ ಪುರುಷರು, ಒಂದಾಗಿ ಸೇರಿ, ಜನತೆಯನ್ನು ಪುರಾತನ ಕಾಲದಿಂದ ದಬಾಯಿಸಿಕೊಂಡು ಬಂದಿರುವ ಅಂಧಶ್ರದ್ಧೆಯ ಬಂಧನದಿಂದ ಅವರನ್ನು ಬಿಡಿಸಲು ಎಡೆಬಿಡದೆ ಪ್ರಯತ್ನ ನಡಿಸಿದರು ಅವರ ಜೀವನದ ಸಮಸ್ಯೆಗಳನ್ನೆಲ್ಲಾ ತಿಳಕೊಂಡು, ಅವನ್ನು ನಿವಾರಿಸುವುದಕ್ಕಾಗಿ ತಾವು ಹೆಣಗಾಡಿ ನಾನಾ ಕಷ್ಟ ಸಹಿಸಿದರು; ಅನುದಿನವೂ ಜನರ ಕಷ್ಟನಿವಾರಣೆಗಾಗಿ, ಅವರ ಉನ್ನತಿಗಾಗಿ ತಮ್ಮ ಜೀವನ ಸವೆಸಿದರು. ತಮ್ಮ ಕ್ಷೇಮ ಚಿಂತನೆಯಾಗಲೀ, ಧನ ದೌಲತ್ತು ಉದ್ಯೋಗವೇ ಮೊದಲಾದ ಸ್ವಾರ್ಥದೃಷ್ಟಿಯಾಗಲಿ ಅವರಿಗೆ ಒಂದಿಷ್ಟು ಇರಲಿಲ್ಲ. ನಿಜವಾದ ಜನಹಿತ ಸಾಧಕ ತ್ಯಾಗ ಮೂರ್ತಿಗಳವರು. ಪ್ರಾಣದ ಹಂಗು ತೊರೆದು ಜನತೆಯ ಉನ್ನತಿ ಸಾಧಿಸುವ ದೀಕ್ಷಾಬದ್ಧರಾದವರು. ಇಂದು ಅವರು ತಮ್ಮ ಮನೆಯಲ್ಲಿದ್ದರೆ ನಾಳೆ ಗಣಿಗುಹೆಗಳಲ್ಲೆಲ್ಲಿಯಾದರೂ ತಲೆಮರಸಿಕೊಂಡಿರಬೇಕು. ಇಂದು ಸ್ವತಂತ್ರರಾಗಿತಿರುಗಾಡಿಕೊಂಡಿದ್ದರೆ ನಾಳೆ ಬಂಧನಕ್ಕೊಳಗಾಗಿ ಸೈಬೀರಿಯದ ಪೈಶಾಚಿಕ ಶಿಕ್ಷೆಗೊಳಗಾಗಬೇಕು ಇಂದು ತಮ್ಮ ಸುದದಿ ಮಕ್ಕಳೊಂದಿಗೆ ಸುಖವಾಗಿದ್ದರೆ ನಾಳೆ ಸಜೀವ ಘೋರಿಯಾಗಿರುವ ಸುಭದ್ರ ಕೋಟೆಯೊಳಗೆ ಬಂದಿಗಳಾಗಿ ನರಳಬೇಕು. ಈ ಸ್ತ್ರೀ ಪುರುಷರಲ್ಲಿ, ಜನತಾಸೇವೆಯ ಪ್ರೇಮವಿದ್ದಿತು, ವಿಶ್ವಾಸ ವಿದ್ದಿತು, ದೃಢನಿಷ್ಠೆ ಇತ್ತು, ಎಲ್ಲಕ್ಕಿಂತಲೂ ಹೆಚ್ಚಾಗಿ ಜನಹಿತ ಸಾಧನೆಯೇ ತಮ್ಮ ಸರ್ವಸ್ವವೆಂಬ ಅಚಲ ತ್ಯಾಗ ಬುದ್ಧಿಯಿದ್ದಿತು. ಈ ವೀರ ನರನಾರಿ ರತ್ನಗಳ ಚರಿತ್ರೆಯನ್ನೋದಿದರೆ ಅವರುಕೇವಲ ವೀರರುಮಾತ್ರವಲ್ಲದೆ ಮಾನವ ಶ್ರೇಷ್ಠರೂ ಆಗಿ ನಿಜವಾದ ಕ್ರೈಸ್ತಧರ್ಮತತ್ವದ ಪ್ರತಿಮೂರ್ತಿಗಳಂತಿದ್ದರೆನ್ನಬಹುದು. ಅಷ್ಟೊಂದು ಮಾನವ ಸೌಹಾರ್ದ ಮತ್ತು ಉದಾತ್ತಭಾವನೆಯಿಂದ ತುಂಬಿದ ವ್ಯಕ್ತಿಗಳಾಗಿ ಜನಮಾನ್ಯರಾಗಿದ್ದರವರು.

ಆದರೆ ಈ ಕ್ರಾಂತಿಕಾರರಲ್ಲಿ ಇಂತಹ ಉದಾತ್ತಭಾವನೆ, ಕಾರ್ಯಸಿದ್ಧಿಯನ್ನುಂಟು ಮಾಡಿದುದು ಕ್ರೈಸ್ತಧರ್ಮವಲ್ಲ. ಅವರು ಆ ಭಾವನೆಗಳನ್ನು ಪಡೆದುದೇ ಬೇರೆಕಡೆಯಿಂದ. ಇಗರ್ಜಿಯು ಅವರಿಗೆ ಯಾವ ಸಹಾಯವನ್ನಾಗಲೀ ಪ್ರೋತ್ಸಾಹವನ್ನಾಗಲಿ ಕೊಡಲಿಲ್ಲ ಈ ಕ್ರಾಂತಿಯ ಭಾವನೆಯನ್ನು ಆ ಅಚಲ ನಿಷ್ಠೆಯನ್ನು ತಾವು ಯಾವುದಾದರೊಂದು ಧರ್ಮದಿಂದ ಪಡೆದುದೆಂದು ರಶ್ಯದ ಕ್ರಾಂತಿಕಾರರಾರೂ ಹೇಳುವುದೇ ಇಲ್ಲ ಕ್ರಾಂತಿಯನ್ನು ಧಾರ್ಮಿಕ ತತ್ವ ಮತ್ತು ಆದರ್ಶಗಳ ವಾಹನವನ್ನಾಗಿ ಅವರು ಮಾಡಿದುದೇ ಇಲ್ಲ.

ಕ್ರಾಂತಿಕಾರರು ದೇವರ ಸೇವಾಬದ್ಧರಾಗಿರಲಿಲ್ಲ. ಕ್ರೈಸ್ತನ ಇಚ್ಛೆ ಅಥವಾ ಮಾತನ್ನು ಸಲಿಸುವವರು ತಾವೆಂದು ಅವರು ಭಾವಿಸಿಕೊಂಡು ಇಲ್ಲ. ಅವರು ಕ್ರಾಂತಿಯ ಸೇವಕರಾಗಿ ಮೂಢ ರಶ್ಯಾನರ ಬಂಧವಿಮೋಚನೆಗೊಳಿಸುವ ದೀಕ್ಷಾಬದ್ಧರಾಗಿದ್ದರು ತಮ್ಮ ತತ್ವದ ಮೇಲಿನ ಅವರ ದೃಢ ವಿಶ್ವಾಸ, ಅವರ ತ್ಯಾಗಬುದ್ಧಿ, ತಮ್ಮ ಕಾರ್ಯಸಾಧನೆಗಾಗಿ ಸರ್ವಸ್ವವನ್ನೂ ಪ್ರಾಣವನ್ನಾದರೂ ಬಲಿಕೊಡುವ ಅವರ ಸಿದ್ಧತೆಗೆ ಧರ್ಮವು ಕಾರಣವಾಗಿರಲಿಲ್ಲ ಧರ್ಮ ವಿರೋಧವಾಗಿದ್ದ ಫ್ರಾನ್ಸಿನ ಕ್ರಾಂತಿ ಮತ್ತು ಜರ್ಮನಿಯ ಭೌತಿಕವಾದದಿಂದಲೇ ಅವರು ಸ್ಫೂರ್ತಿಪಡೆದಿದ್ದರು ಸಾಮ್ಯವಾದ ಸ್ಥಾಪನಾಚಾರ್ಯನಾದ ಕಾರ್ಲ್‌ಮಾರ್ಕ್ಸ್‌ನೇ ಅವರ ಗುರು "ಧರ್ಮವೆಂಬುದು ಜನತೆಗೆ ಅಫೀಮು ಕೊಟ್ಟಂತೆ" ಎಂದು ಮೊದಲಾಗಿ ಸಾರಿದವನೇ ಕಾರ್ಲ್‌ಮಾರ್ಕ್ಸ್. ಆದುದರಿಂದ ರಶ್ಯದ ಕ್ರಾಂತಿಕಾರರ ಬುದ್ಧಿ ಭಾವನೆಗಳು ಧರ್ಮವಿರೋಧವಾಗಿ ಬೆಳೆದುವು.

ಈಗ ಈ ಕ್ರಾಂತಿಕಾರರೇ ಬೋಲ್ಶೆವಿಕರೆಂಬ ಅಭಿಧಾನದಿಂದ ಅಧಿಕಾರಕ್ಕೆ ಬಂದಿರುವುದರಿಂದ ಅವರು ತಮ್ಮ ಧರ್ಮವಿರೋಧವನ್ನೇನೂಮುಚ್ಚುಮರೆ ಮಾಡುವುದಿಲ್ಲ ಕ್ರೈಸ್ತಧರ್ಮಕ್ಕೂ ಸಾಮ್ಯವಾದಕ್ಕೂ ಸಂಬಂಧವೇ ಇಲ್ಲೆಂದೇ ಬೋಲ್ಶೆವಿಕರ ಅಭಿಮತ ಕೇವಲ ಭೌತಿಕವಾದಿಗಳಾಗಿ, ಜನತೆಯ ಇಹಸುಖಸಾಧನೆಯೇ ಸರ್ವಸ್ವವಾಗಿರುವ ಬೋಲ್ಶೆವಿಕರು ಕ್ರೈಸ್ತಧರ್ಮದ ಪರಲೋಕವಾದ ಮಂತ್ರತಂತ್ರಾದಿಗಳಿಗೆಲ್ಲಾ ಬದ್ಧವಿರೋಧಿಯಾರುವರು. ದೇವರಮೇಲಿನ ನಂಬಿಗೆಗೆ ಭೌತಿಕ ಆಧಾರವೇನೂ ಇಲ್ಲ ಆದುದರಿಂದ ಅದು ಕೇವಲ ಕಾಲ್ಪನಿಕವಾದುದು ಅಥವಾ ಭ್ರಮಾತ್ಮಕವಾದುದೆಂದೇ ಅವರ ತರ್ಕ. ಧನಶಾಹಿಯನ್ನು ಕೊನೆಗೊಳಿಸಿ, ವರ್ಗಭೇದ ಮತ್ತು ವರ್ಗದ ಹೋರಾಟದಿಂದ ಪರಿಪೂರ್ಣ ವಿಮುಕ್ತವಾಗಿರುವ ಸಮಾಜರಚನೆ ಯಾದಾಗ ಧರ್ಮ ದೇವರು ಅಂಧವಿಶ್ವಾಸಗಳೆಲ್ಲ ಸ್ವಾಭಾವಿಕವಾಗಿ ಮಣ್ಣುಗೂಡುವವೆಂದೇ ಬೋಲ್ಶೆವಿಕರ ನಂಬಿಕೆ ಕ್ರೈಸ್ತಧರ್ಮದ ಕೆಲವು ಘೋಷಣೆಗಳು ಸಮಾಜಹಿತಘಾತುಕವಾಗಿರುವವೆಂದು ಅವರ ಮತ ಅದರಿಂದಾಗಿ ಮಾನವನು ಕೇವಲ ದೈವಾವಲಂಬಿಯಾಗಿ ತನ್ನ ಜೀವನವನ್ನು ಸುಖಮಯಗೊಳಿಸುವ ಹೋರಾಟ ಶಕ್ತಿ ಮತ್ತೂ ಉತ್ಸಾಹವನ್ನೇ ಕಳಕೊಳ್ಳುವನು. ಅದು ಮಾನವನಿಗೆ, ಸ್ವರ್ಗಸುಖದ ವಾಗ್ದಾನವಿತ್ತು ಇಹದ ಅನ್ಯಾಯಗಳನ್ನೆಲ್ಲಾ ಸಹಿಸಿಕೊಳ್ಳುವ ಭ್ರಾಂತಿಯನ್ನುಂಟುಮಾಡುವುದು. ಮಾನವನ ಮನಸೆಳೆದು ಆತನನ್ನು ಸರಿಮಾರ್ಗ ಹಿಡಿಸಬೇಕೆಂದು ಕ್ರೈಸ್ತ ಧರ್ಮದ ಪ್ರಯತ್ನ ಆದರೆ ಬಲಶಾಲಿಯಾದವನು ತನ್ನ ದುರ್ಬಲ ಸಹೋದರನನ್ನು ಸುಲಿಯುವಾಗ ಅದನ್ನು ನಿಲ್ಲಿಸಲು ಅದರಿಂದ ಸಾಧ್ಯವಾಗಿರುವುದಿಲ್ಲ. ಉದಾತ್ತಭಾವನೆಗಳೇನೋ ಅದರಲ್ಲಿ ತುಂಬಾ ಇದ್ದರೂ ಸಮಾಜಕ್ಕೆ ಅದರಿಂದ ಉಪಯೋಗವಿಲ್ಲ. ಕ್ರೈಸ್ತಧರ್ಮವು ಮಾನವ ಬಾಂಧವ್ಯವನ್ನು ಸಾರುವುದು; ಆದರೆ ವಸ್ತುತಃ ಅದು ಸಾಮಾಜಿಕ ಒಡಕು ಮತ್ತು ಜನಾಂಗಿಕ ಕಲಹಗಳ ಆಯುಧವಾಗಿ ಹೋಗಿರುವುದು. ಪರರನ್ನು ತನ್ನಂತೆಕಾಣುವ ಕ್ರೈಸ್ತಧರ್ಮದ ಸುವರ್ಣಸೂತ್ರವೆಲ್ಲಿ? ಸಮಾಜದಲ್ಲಿ ಪ್ರಬಲವಾಗಿರುವ ವರ್ಗಭೇದದ ಹೋರಾಟವೆಲ್ಲಿ? ಎಂದೇ ಬೋಲ್ಶೆವಿಕರಟೀಕೆ. ಆಧುನಿಕ ಸ್ಥಿತಿಗತಿಗಳಿಗನುಗುಣವಾಗಿ ಎಂತಹ ರೂಪಾಂತರ ಹೊಂದಿರುವ ಧರ್ಮವಾದರೂ ಅವರಿಗೆ ಬೇಕಾಗಿಲ್ಲ. ಕರ್ತವ್ಯವನ್ನೇ ದೇವರಕಟ್ಟಳೆಯಾಗಿ ಪರಿಗಣಿಸುವುದು, ಆದರ್ಶ ನಡತೆಯನ್ನು ಪ್ರೀತಿಸಿಮಾಡಿಸುವುದು, ಆಂತರಿಕ ಶಕ್ತಿಯ ಬೆಳವಣಿಗೆ, ಆತ್ಮಾನುಭವ ವಿಶ್ವಚಾಲಕತ್ವವೇ ಮೊದಲಾದ ಆಧುನಿಕ ವೇದಾಂತಿಗಳ ಧರ್ಮದೇವರುಗಳ ಯಾವ ವ್ಯಾಖ್ಯೆಯನ್ನೂ ಬೋಲ್ಶೆವಿಕರು ತಿರಸ್ಕರಿಸಿಬಿಡುವರು. ತಮ್ಮ ಬರವಣಿಗೆಗಳಲ್ಲಿ ದೇವರು ಎಂಬ ಶಬ್ದವನ್ನಿವರು ದೊಡ್ಡಕ್ಷರಗಳಲ್ಲಿಕೂಡಾ ಬರಿಯುವುದಿಲ್ಲ ಅವರ ದೃಷ್ಟಿಯಲ್ಲಿಧರ್ಮವೆಂಬುದುಜನತೆಯಅಫೀಮು. ಧರ್ಮವು ಆಂತರಿಕ ಸ್ಫೂರ್ತಿ ಮತ್ತು ಅನುಭವದಿಂದುಂಟಾದುದಲ್ಲ ಅದೊಂದು ತರಬೇತಿಯಿಂದ ಹೊರಗಣ ಒತ್ತಾಯದಿಂದ ಬೆಳೆದುಬಂದುದು. ಮಕ್ಕಳನ್ನು ಹುಟ್ಟಿದಾರಭ್ಯದಿಂದಲೇ ಯಾವತರದ ಧಾರ್ಮಿಕ ಬೋಧನೆಯಿಲ್ಲದೇನೇ ಬೆಳೆಸಿದರೆ ಅವರು ಧರ್ಮಬಾಹಿರರಾಗಿಯೇ ಬೆಳೆದು ಧರ್ಮದ ಬುಗ್ಗೆಯೇ ಒಣಗಿಹೋಗಿ ಅದುತನ್ನಂತೆಯೇ ಸತ್ತುಹೋಗುವುದೆಂಬ ಭಾವನೆಯನ್ನು ಕಟ್ಟಿಕೊಂಡು ಬೋಲ್ಶೆವಿಕರು ಧರ್ಮದ ಮೇಲೆ ಧಾಳಿನಡಿಸುತ್ತಾರೆ. ಆದುದರಿಂದಲೇ ರಶ್ಯದಲ್ಲಿ ಯುವಕರ ವಿಧೇಯತೆ ಪಡೆಯಲು ಒಂದೆಡೆ ಇಗರ್ಜಿ ಮತ್ತು ಅದರ ಸಹಾಯಕರು, ಇನ್ನೊಂದೆಡೆ ಬೋಲ್ಶೆವಿಸ್ಮ್ ಮತ್ತು ಅದರ ಏಜನ್ಸಿಗಳೊಳಗೆ ಪ್ರಚಂಡ ತಿಕ್ಕಾಟ ನಡೆದಿದ. ರಶ್ಯದ ಕಮ್ಯೂನಿಸ್ಟ್ ಪಕ್ಷೀಯರು ತಮ್ಮ ವಿವಿಧ ಸಾಧನಗಳಿಂದ ಧರ್ಮವನ್ನು ನಿರ್ಮೂಲಗೊಳಿಸುವುದರಲ್ಲಿ ನಿರತರಾಗಿರುವರು. ಸೇನೆ, ಶಾಲೆ, ಮಕ್ಕಳವಸತಿ, ಆಟದರಂಗ, ಭಾಷಣ ನಿಲ್ದಾಣ, ಸಿನೆಮ, ನಾಟಕ, ಪತ್ರಿಕೆ, ಪುಸ್ತಕಗಳಲ್ಲಾ ಕಮ್ಯೂನಿಸ್ಟರ ಧರ್ಮ ವಿರೋಧಪ್ರಚಾರದ ಉಪಕರಣಗಳಾಗಿವೆ. ಇದು ಹೊರತು ಒಟ್ಟು ೬ ಮಿಲ್ಯ ತರುಣರು ಸದಸ್ಯರಾಗಿರುವ ಬೇರೆ ಬೇರೆ ಯುವಕ ಸಂಘಗಳವರೂ ಧರ್ಮವನ್ನು ರಶ್ಯದಿಂದ ನಿರ್ನಾಮಗೊಳಿಸಲೆತ್ನಿಸುತ್ತಿದ್ದಾರೆ. ಅದು ಈ ತರುಣರ ಸಾಹಸದ ಕೆಲಸವಾಗಿದೆ. ಅದರಲ್ಲವರು ಅಭಿಮಾನ ಪಡುವಂತಾಗಿದೆ.

(ಮುಂದುವರಿಯುವುದು)

ನವಯುಗದಲ್ಲೇ ನಿಮ್ಮ ಜಾಹಿರಾತು ಕೊಡಿರಿ

ಇಂಗ್ಲೆಂಡಿನ ಮಹತ್ವಕ್ಕೆ ಕಾರಣವೇನು?

ಲೇಖಕರು: ಶ್ರೀ|| ಆರ್. ಎಸ್. ನೆಹರಾ, ಬಿ. ಎ.

[ಶ್ರೀಯುತ ನೆಹರಾರವರು ೧೯೨೨ರಲ್ಲಿ ನ್ಯಾಯವಾದಿ ವೃತ್ತಿಯನ್ನವಲಂಬಿಸಿದರು. ಅನೇಕ ವರ್ಷಗಳು ಕೆನ್ಯಾ ಕಾಲೋನಿಯ ಸುಪ್ರೀಂ ಕೋರ್ಟಿನಲ್ಲಿ ನ್ಯಾಯವಾದಿಗಳಾಗಿದ್ದು ಕೀರ್ತಿಗಳಿಸಿದ ಬಳಿಕ ಅವರು ಇಂಗ್ಲೆಂಡಿನಲ್ಲಿ ನೆಲೆಸಿದರು. ಇಂಗ್ಲೆಂಡಿನ ಸುಪ್ರೀಮ್ ಕೋರ್ಟು ಮತ್ತು ಪ್ರೀವಿಕೌನ್ಸಿಲ್ಲಿನ ನ್ಯಾಯವಾದಿ ಎನಿಸಿದ ಭಾರತೀಯರಲ್ಲಿ ಇವರೇ ಮೊದಲನೇಯವರು. ಲಂಡನ್ನಿನಲ್ಲಿ ಪ್ರಕಟವಾಗುತ್ತಿರುವ ದಿ ಇಂಡಿಯನ್'' ಎಂಬ ಮಾಸಪತ್ರಿಕೆಯ ಸ್ಥಾಪಕರು ಇವರು.]

ಇಂಗ್ಲೆಂಡಿನ ಮಹತ್ವಕ್ಕೆ ಕೈಗಾರಿಕೆಯ ಅಭಿವೃದ್ಧಿಯಾಗಲಿ, ಆಂಗ್ಲೇಯನ ಸ್ವಾಭಿಮಾನ, ದೇಶಾಭಿಮಾನ, ಧರ್ಮಾಭಿಮಾನವಾಗಲಿ, ಇಂಗ್ಲೆಂಡಿನ ಹವಾಗುಣ ಫಲವತ್ತತೆಯಾಗಲಿ ಮುಖ್ಯ ಕಾರಣವಲ್ಲ. ಆಂಗ್ಲೇಯನ ಸ್ವಾವಲಂಬನ, ಸಮಯ ನಿಯಮತ್ವ, ಸಹಿಷ್ಣುತೆ ಮತ್ತು ಶಿಸ್ತೇ ಇಂಗ್ಲೆಂಡಿನ ಮಹತ್ವಕ್ಕೆ ಮೂಲಕಾರಣ. ಕೆಲವು ಮಹಾತ್ಮರನ್ನೂ, ನೆಹರುಗಳನ್ನೂ ಮೆಚ್ಚಿಕುಳಿತುಕೊಳ್ಳುವುದರಿಂದ ಸ್ವಾತಂತ್ರ್ಯವನ್ನು ಸಾಧಿಸಲು ಆಗುವುದಿಲ್ಲ. ಪ್ರತಿಯೊಬ್ಬ ಭಾರತೀಯನೂ ಪ್ರಾಮಾಣಿಕತೆಯಿಂದ, ಸ್ವಾವಲಂಬನದಿಂದ ನಿರ್ಭೀತಿಯಿಂದ ಸಮಯ ನಿಯಮದಿಂದ, ಕಬ್ಬಿಣದಂತೆ ಕಠಿಣವಾದ ಶಿಸ್ತಿನಿಂದ ತನ್ನ ಕರ್ತವ್ಯವನ್ನು ನೆರವೇರಿಸಿದರೆ ಮಾತ್ರ ಇಂಗ್ಲೆಂಡಿನಂತೆ ಭಾರತವು ಹಿರಿಯ ಜನಾಂಗವಾಗಿ ಗಣನೀಯವಾಗಬಹುದು.

●

ಕೈಗಾರಿಕೆಯ ಅಭಿವೃದ್ಧಿಯೇ ಇಂಗ್ಲೆಂಡಿನ ಮಹತ್ವಕ್ಕೆ—ಶ್ರೇಷ್ಠತೆಗೆ ಪ್ರಮುಖ ಕಾರಣವೆಂದು ಇಂದಿಗೂ ಸ್ಕೂಲು ಕಾಲೇಜುಗಳಲ್ಲಿ ತಿಳಿಸುವರು. ಅಪಾರವಾದ ಕಬ್ಬಿಣದ ಅದುರೂ, ತೆಗೆದು ಮುಗಿಯದ ಕಲ್ಲಿದ್ದಲ ಗಣಿಗಳೂ ಸಮೀಪಸ್ಥಳಗಳಲ್ಲಿ ದೊರೆತುದೇ ಇಂಗ್ಲೆಂಡಿನ ಅಭ್ಯುದಯಕ್ಕಿದ್ದ ಸಾಧನವೆಂದು ಭಾವಿಸಲಾಗಿದೆ. ಮಂಜುಕವಿದ ನಿಷ್ಕರುಣ ಹವಾಗುಣದ ಅನಿಶ್ಚಿತತೆಯೇ ಈ ದ್ವೀಪದ ನಿವಾಸಿಗಳ ಅಸಾಧಾರಣ ಶಾರೀರಕ ಬಲದ ಕಾರಣವೆನ್ನುವರು. ಇಂಡಿಯದಲ್ಲಾಗಲೀ ಅಥವಾ ಇತರ ವಸಾಹತುಗಳಲ್ಲಾಗಲೀ ಅತಿ ಸುಲಭದಲ್ಲಿ ಸಾಧ್ಯವಾಗಬಲ್ಲ ನಿರಂಕುಶ ಪ್ರಭುತ್ವದ ಅನುಭವದಿಂದ ಮದೋನ್ಮತ್ತರಾಗದೆ, ಸ್ವದೇಶದಲ್ಲಿಯೇ ಮನೆಮಾಡಿದ ಜನತೆಯ ನೈಜ ಕ್ರೈಸ್ತ ಧರ್ಮವೇ ಇಂಗ್ಲೆಂಡಿನ ಶ್ರೇಷ್ಠತೆಗೆ ಕಾರಣವೆಂಬುದಾಗಿ ಹಲವು ಧರ್ಮಾಭಿಮಾನಿಗಳು ಅಭಿಪ್ರಾಯಪಡುವರು. ಬ್ರಿಟಿಷರ ಪ್ರಗಾಢ ದೇಶಭಕ್ತಿಯ ಫಲವೇ ಸೂರ್ಯನು ಅಸ್ತಮಿಸದ ಜಗತ್ತೋವಿಶಾಲವಾದ ಪ್ರಚಂಡ ಸಾಮ್ರಾಜ್ಯ ಸ್ಥಾಪನೆಯ ಮೂಲಕಾರಣವೆಂದು ಅನೇಕರ ನಂಬುಗೆಯು. ತನ್ನ ಸೇವೆಯಿಂದ ಮೊಗಲ್ ಚಕ್ರವರ್ತಿಯನ್ನು ಪ್ರಸನ್ನೀಕರಿಸಿಕೊಂಡ ಆಂಗ್ಲೇಯ ವೈದ್ಯನೊಬ್ಬನು, ತನ್ನ ಸೇವೆಗೆ ಪ್ರತಿಫಲವಾಗಿ ತನ್ನ ದೇಶಬಾಂಧವರಿಗೆ ನಿರಾತಂಕ ವ್ಯಾಪಾರ ಹಕ್ಕನ್ನು ಕೋರಿ ಪಡೆದ ವಿಷಯವನ್ನು ಈ ದೇಶಾಭಿಮಾನಿಗಳು ಪೂರ್ವದಲ್ಲಿ ಎಷ್ಟು ನಿಸ್ವಾರ್ಥರಾಗಿದ್ದರೆಂಬುದಕ್ಕೆ ದೃಷ್ಟಾಂತವಾಗಿ ಸೂಚಿಸುವರು.

ತಮ್ಮ ವೈಯಕ್ತಿಕ ಸ್ಪರ್ಶಾನುಗುಣವಾಗಿ ಆನೆಯ ಸ್ವರೂಪವನ್ನು ವರ್ಣಿಸಿದ ಆರುಜನ ಕುರುಡರಂತೆ ವಿವಿಧ ವಿದೇಶಿಯರು ಇಂಗ್ಲೆಂಡಿನ ಶ್ರೇಷ್ಠತೆಗೆ ವಿವಿಧ ಕಾರಣಗಳನ್ನು ಸೂಚಿಸುವರು. ಈ ದ್ವೀಪಗಳನ್ನು ಕಣ್ಣಾರೆ ಕಾಣದವರು, ಇಲ್ಲಿನ ನಿವಾಸಿಗಳು ಒಳ್ಳೆಯವರೆಂದೂ, ದೈವಭಕ್ತರೆಂದೂ, ನಿಷ್ಕಲ್ಮಷ ಹೃದಯರೆಂದೂ, ಇತರರ ಆಸ್ತಿಯನ್ನು ಅಪಹರಿಸಲು ಯತ್ನಿಸದಿರುವವರೆಂದೂ ಕಲ್ಪನೆಮಾಡುವರು. ಇಂಗ್ಲೀಷರು ಸಾಮಾಜಿಕ ಜೀವನದಲ್ಲಿ ಭಾರತೀಯರಿಗೂ ಮತ್ತು ಇತರ ದೇಶದವರಿಗೂ ತೋರಿಸುವ ಅಸ್ಪೃಶ್ಯತಾ ವರ್ತನೆಯಿಂದ ಲೋಕಾನುಭವವಿಲ್ಲದ ಅಧೀನ ಜನಾಂಗಗಳ ಮನದಲ್ಲಿ ಇಂಗ್ಲೀಷರು ಮಾನವ ಶ್ರೇಷ್ಠರೆಂಬ ಭಾವನೆಯು ಬಗೆಗಟ್ಟಲು ಅನುವಾಗುವುದು. ಅವಿದ್ಯಾವಂತರೆದುರಿನಲ್ಲಿ ತಮ್ಮ ದೊಡ್ಡಸ್ತಿಕೆಯನ್ನು ಉಳಿಸಿಕೊಳ್ಳಲು ಅವರ ಸ್ವಾಭಾವಿಕ ಬಿರುಸುತನ, ಸಲಿಗೆಯಿಲ್ಲದ ಸ್ವಭಾವ ಇವುಗಳು ಬಹು ಸಹಕಾರಿಯಾಗಿವೆ.

ಇಂಗ್ಲೆಂಡಿನ ಶ್ರೇಷ್ಠತೆಗೆ ಅವರ ಸ್ವತಂತ್ರ ರಾಜ್ಯಾಡಳಿತವೇ ಕಾರಣವೆಂಬುದು ಸಾಮಾನ್ಯ ರಾಜಕೀಯ ಜ್ಞಾನವುಳ್ಳ ಭಾರತೀಯನ ದೃಢನಂಬಿಕೆ. ಕೇವಲ ಐವತ್ತು ಮಿಲಿಯ ಸಾಮಾನ್ಯ ಜನತೆಯು ಆಧುನಿಕ ಜಗತ್ತಿನ ಶ್ರೇಷ್ಠ ಜನಾಂಗವಾಗಿ ಮೆರೆಯಲು ನೈಜ ಕಾರಣವೇನಿರಬಹುದೆಂಬುದನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಕಾಲಾನುಗತ ಕ್ರಿಯಾತ್ಮಕ ಮತ್ತು ವೈಯಕ್ತಿಕ ಅನುಭವದ ಮೇಲೆ ಪರಿಶೀಲಿಸುವ ತಾಳ್ಮೆಯುಳ್ಳವರಂತೂ ಅತಿ ವಿರಳ. ನಿಷ್ಪಕ್ಷಪಾತ ಮತ್ತು ವಿಮರ್ಶಕ ದೃಷ್ಟಿಯಿಂದ ಅವಲೋಕಿಸುವುದಾದರೆ ಬ್ರಿಟನ್ನಿನ ಮತ್ತು ಬ್ರಿಟಿಷರ ಇಂದಿನ ಪ್ರವರ್ಧಮಾನ ಸ್ಥಿತಿಗಿರುವ ಹಲವು ಮುಖ್ಯ ಕಾರಣಗಳು ಮನವರಿಕೆಯಾಗಲು ದೀರ್ಘಕಾಲ ಬೇಕಿಲ್ಲ.

ಹವಾಗುಣ, ಫಲವತ್ತಾದ ಭೂಮಿ ಇವೇ ನೈಜಕಾರಣಗಳಾಗಿದ್ದರೆ ಕಾಶ್ಮೀರ ದೇಶದ ಜನರು ಪ್ರಪಂಚದಲ್ಲಿ ಅತ್ಯಂತ ಹೇಡಿಗಳೂ ಹಿಂದುಳಿದವರೂ ಆಗಿ ಬಾಳಬೇಕಾದುದಿರಲಿಲ್ಲ. ಇಂಗ್ಲೆಂಡಿನಂತೆಯೇ—ಅದೇ ಮಂಜುಕವಿದ, ಮೇಘಾವೃತವಾದ, ಮಳೆ ಹನಿಯುವ, ಹಿಮಕಟ್ಟಿದ ಚಳಿಗಾಲವು ಕಾಶ್ಮೀರದಲ್ಲೂ ಇದೆ. ಲಂಡನಿನಂತೆಯೇ—ಅತಿ ಮನೋಹರವಾದ ಹಸುರು ನೋಟದ ವಸಂತಕಾಲದ ಆನಂದಾನುಭವವನ್ನು ಶ್ರೀನಗರದಲ್ಲಿಯೂ ಹೊಂದಬಹುದು. ಫಲಪುಷ್ಪ ತರುಲತಾದಿಯಾಗಿ ಪ್ರಕೃತಿಯ ಸರ್ವ ಸೊಬಗೂ ಇವೆರಡರಲ್ಲೂ ಏಕರೀತಿಯಾಗಿವೆ. ಆದರೆ ಜನರಂತೂ ತೀರ ವಿರುದ್ಧ ಸ್ವಭಾವದವರು. ಇಂಗ್ಲೀಷರವನೊಬ್ಬನು ಪಂಜಾಬಿಗಳಾದಿಯಾಗಿ ಸಾವಿರಾರು ಭಾರತೀಯರನ್ನು ಅಂಕೆಗೆ ತಂದುಕೊಂಡು ಹೇಗೆ ಆಳಬಹುದಾಗಿದೆಯೋ ಹಾಗೆಯೇ ಪಂಜಾಬಿಯೊಬ್ಬನು ನೂರಾರು ಕಾಶ್ಮೀರಿಗಳನ್ನು ಕಾಲ್ನಡೆಗಳಂತೆ ಬೆದರಿಸಿ ಅಂಕೆಗೆ ತಂದುಕೊಂಡು ಅಟ್ಟಿಬಿಡಬಹುದು. ಖನಿಜ ಸಂಪತ್ತಿಯಲ್ಲಿ ಭಾರತವು ಜಗತ್ತಿನ ಯಾವ ರಾಷ್ಟ್ರಕ್ಕೇ ಆಗಲಿ ಕಡಿಮೆ ಎನಿಸಿಲ್ಲ. ಆದರೇನು? ಆ ಸಂಪತ್ತು ನೆಲದೊಳಗೆ ಹುದುಗಿದೆಯೇ ಹೊರತು ಈಚೆಗೆ ಬೇರೆ ಇನ್ನೂ ಬರಲಿಲ್ಲ. ಈಗಾಗಲೇ ಅನೇಕ ಕಬ್ಬಿಣ ಮತ್ತು ಕಲ್ಲಿದ್ದಲು ಗಣಿಗಳು ಆರಂಭವಾಗಿರುವುದಾದರೂ ಅವು ಹಲವು ಬ್ರಿಟಿಷರ ಕರ್ತೃತ್ವ ಶಕ್ತಿಯಿಂದಾದವು. ಕಬ್ಬಿಣದ ಅದುರೂ, ಕಲ್ಲಿದ್ದಲು ಅಥವಾ ಜಲಶಕ್ತಿಯು ಸಮೀಪದಲ್ಲಿರುವುದೇ ಒಂದು ಜನತೆಯ ಶ್ರೇಷ್ಠತೆಗೆ ಕಾರಣವಾಗಿದ್ದರೆ ಬಂಗಾಳಿಗಳು ಜಗತ್ತಿನ ಕೈಗಾರಿಕೋದ್ಯಮ ನಿಪುಣರಾಗಿ ಮೆರೆಯಬಹುದಾಗಿತ್ತು; ಇಡೀ ಭಾರತದ ವಿಜಯಿಗಳಾಗಬಹುದಾಗಿತ್ತು. ಆದರೆ ಉಲ್ಲೇಖಿತವಾಗಿರುವ ಭಾರತದ ಇತಿಹಾಸದಲ್ಲಿ ಬಂಗಾಳಿ ದೊರೆಯು ದೆಹಲಿ ಸಿಂಹಾಸನದ ಮೇಲೆ ಮಂಡಿಸಿದುದು ಎಲ್ಲೂ ಕಂಡು ಬಂದಿಲ್ಲ.

ಗ್ರೇಟ್ ಬ್ರಿಟನ್ನಿನ ಶ್ರೇಷ್ಠತೆಗೆ ಬಹುಮಟ್ಟಿಗೆ ಕಾರಣಭೂತವಾದ, ಏಕೆ-ಯಾವುದೇ ದೇಶ, ಜನಾಂಗ ಹಾಗು ರಾಷ್ಟ್ರದ ಐಹಿಕ ಸಂಪತ್ತಿನ ಉತ್ಕರ್ಷಕ್ಕೆ ಅದೇ ಪ್ರಮಾಣದಲ್ಲಿ ನೆರವಾಗಬಲ್ಲ ಪ್ರಮುಖವಾದ ನೈಜ ಕಾರಣಗಳನ್ನು ಕೆಲವು ಶಿರೋನಾಮೆಗಳ ಕೆಳಗೆ ಕೇಂದ್ರೀಕರಿಸಬಹುದು. **ಸ್ವಾವಲಂಬನ** ಸ್ವಭಾವವನ್ನು ಇವುಗಳಲ್ಲಿ ಮೊದಲನೆಯದಾಗಿ ಸೂಚಿಸಬಹುದು. ಇತರರ ಅಥವಾ ಅಂದಿನ ಸರಕಾರದ ನಿಂದೆಯಲ್ಲಿ ಕಾಲವನ್ನೂ ತ್ರಾಣವನ್ನೂ ಪೋಲುಮಾಡದೆ, ಉದ್ದೇಶ ಸಾಧನೆಗಾಗಿ ರೀತಿ ಮಾರ್ಗಗಳನ್ನು ಕಂಡುಹಿಡಿಯುವುದರಲ್ಲಿಯೂ ವಸ್ತು ಸೃಷ್ಟನೆ ಮತ್ತು ಸಂಶೋಧನೆಯಲ್ಲಿಯೂ ಮನಮೋಡಿಸುವ ಕರ್ತೃತ್ವ ಶಕ್ತಿಯು ಈ ಸದ್ಗುಣದಿಂದ ಬರುವದು. ಇಂಗ್ಲೆಂಡಿನ ೧೦ ವರ್ಷ ವಯಸ್ಸಿನ ಚಿಕ್ಕ ಮಗುವು ೩೦ ವರ್ಷ ವಯಸ್ಸಿನ ಬೆಳೆದ ಭಾರತೀಯನಿಗಿಂತಲೂ ಹೆಚ್ಚಿನ ಸ್ವಾತಂತ್ರ್ಯವನ್ನು ವ್ಯಕ್ತಗೊಳಿಸಬಲ್ಲದು. ನಿರ್ಭಯತೆ ಮತ್ತು ಸ್ವಾತಂತ್ರ್ಯ ಭಾವನೆ ಇವು ತಮಗಿಂತ ಅಧಿಕ ಸಂಖ್ಯಾತರಾದ ಜನಾಂಗಗಳನ್ನು ಗೆಲ್ಲುವ ಶಕ್ತಿಯನ್ನು ಅವರಿಗೆ ಬರುವಂತೆ ಮಾಡಿವೆ. ಸ್ವಾವಲಂಬಿಗಳು ಮಾತ್ರ ವಿವಿಧ ತೊಡರುಗಳೂ, ಭೀಕರ ಅಪಾಯಗಳೂ ಇರುವ ಕಾರ್ಯದಲ್ಲಿ ತೊಡಗಬಲ್ಲರು. ಒಮ್ಮೆ ಅಪಜಯ ಮತ್ತು ವಿನಾಶವುಂಟಾದರೆ ಅವರಾರನ್ನೂ ನಿಂದಿಸರು. ಅವಾಂತರ ಅಸಂತೋಷಕ್ಕೆ ಎಡೆಕೊಡರು.

ಸಮಯ ನಿಯಮತ್ವ (Punctuality) ಅಂದರೆ ಯುಕ್ತಕಾಲದಲ್ಲಿ ಆಯಾ ಕೆಲಸವನ್ನು ಆಗ ಮಾಡಿಸುವ ಗುಣ. 'ಸಾಹೇಬನು' ತನ್ನ ಆಫೀಸು ಕೆಲಸದಲ್ಲಾಗಲೀ ಅಥವಾ ದಿನಚರಿಯ ಯಾವುದೇ ಕಾರ್ಯದಲ್ಲಾಗಲೀ ನಿರ್ದಿಷ್ಟ ಕಾಲದಲ್ಲಿ ತೊಡಗಿರುತ್ತಾನೆಂಬುದು ಎಲ್ಲರೂ ಆಡುವ ಮಾತು. ಆತನು ಕಾಲಮೀರಿ ಹೋಗಿ ರೈಲು ತಪ್ಪುವಂತಿಲ್ಲ. ಸಂಸಾರದ ಯಜಮಾನನಿಗೆ ಊಟಮಾಡುವ ಇಷ್ಟ ಬರುವ ತನಕ ಗೊತ್ತು ಗುರಿಯಿಲ್ಲದೆ ಕಾದುಕಾದು ಸೇವಕರು ಒಣಗಬೇಕಾಗಿಲ್ಲ. ಪ್ರತಿಯೊಬ್ಬರೂ ಕ್ಲಪ್ತಕಾಲದಲ್ಲಿ ಕಾರ್ಯ ನಿರ್ವಹಿಸುವುದರಿಂದ ಇಡೀ ವ್ಯವಹಾರವು ಸರಾಗವಾಗಿ ಸಾಗುವುದು. ಉಪಾಹಾರದ ಕಾಲವಾಗಿದ್ದರೆ ಮಿಲಿಯಗಟ್ಟಲೆ ಜನರು ಇಡೀ ಇಂಗ್ಲೆಂಡಿನಲ್ಲೆಲ್ಲಾ ಉಪಾಹಾರದಮೇಜುಗಳ ಮುಂದೆ ಕುಳಿತಿರುತ್ತಾರೆ. ಬೇರೆಯವರನ್ನಾದರೂ ನೋಡಲು ಕಛೇರಿಯಲ್ಲಿರುವ ಕಾಲವಾವುದು, ಕೆಲಸದಲ್ಲಿ ತೊಡಗಿರುವ ಕಾಲವಾವುದೆಂಬುದು ಪ್ರತಿಯೊಬ್ಬನಿಗೂ ಗೊತ್ತು. ಭಾರತೀಯರಲ್ಲಾದರೋ ನಿಷ್ಕರ್ಷಿತ ವೇಳೆಗೆ ಸರಿಯಾಗಿ ಬರುವುದನ್ನು ಆ ವ್ಯಕ್ತಿಯ ಗುಣವೆನ್ನುವುದಕ್ಕಿಂತಲೂ ಅವನಲ್ಲಿರುವ ಕುಂದನ್ನೂ ಅವನಿಗೆ ಗಣ್ಯಸ್ಥಾನವಿಲ್ಲದಿರುವುದನ್ನೂ ಸೂಚಿಸುವುದೆಂಬ ಭಾವನೆಯಿದೆ. ನಿಷ್ಕರ್ಷಿತ ವೇಳೆಗೆ ಕ್ಷಣವೂ ತಡಮಾಡದೆ ಕಾರ್ಯ ನೆರವೇರಿಸುವವರೆಂಬ ಕೀರ್ತಿಯನ್ನು ಇಂಗ್ಲೀಷರು ಗಳಿಸಿದ್ದಾರೆ.

ಇಂಗ್ಲೀಷ್ ಜನಾಂಗದಲ್ಲಿ ಕಂಡುಬರುವ ಮತ್ತೊಂದು ಸದ್ಗುಣವೆಂದರೆ **ಸಹಿಷ್ಣುತೆ**. ಇದೇ-ಬ್ರಿಟಿಷರ ನಿಷ್ಪಕ್ಷಪಾತತ್ವದ, ಬ್ರಿಟಿಷರ ನ್ಯಾಯಶೀಲತೆಯ, ಇಂಗ್ಲೆಂಡಿನಲ್ಲಿ ಕ್ರಾಂತಿಯು ಎಂದೂ ಉಲ್ಬಣವಾಗದಿರುವುದರ ಪಾಯಗಲ್ಲು. ಸಹಿಷ್ಣುತೆಯು, ವಸ್ತುಗಳು ಮತ್ತು ವಿಚಾರಗಳು ಬೆಳೆದು, ವಿಕಾಸಹೊಂದಿ, ನಿಧಾನವಾಗಿ ಏಕಪ್ರಕಾರವಾಗಿ ಯುಕ್ತಮಾರ್ಗದಲ್ಲಿ ಮಾರ್ಪಡಲು ಅವಕಾಶವೀಯುವುದು. ಸಹಿಷ್ಣುತೆ ಮತ್ತು ನಿಷ್ಪಕ್ಷಪಾತವಿಲ್ಲದ ಪ್ರಜಾಸತ್ತೆಯು (Democracy) ಬರಿಯ ಹುಚ್ಚಾಟವಾಗುತ್ತಿತ್ತು. ತನ್ನ ದೇಶದ ಜ್ಯೂರಿಗಳು ನ್ಯಾಯಬದ್ಧವಾಗಿ ಪಕ್ಷಪಾತವಿಲ್ಲದೆ ವರ್ತಿಸುವರೆಂಬುದನ್ನು ಇಂಗ್ಲೀಷರವನು ಬಲ್ಲನು. ಪಾರ್ಲಿಮೆಂಟ್ ಮಂತ್ರಿಗೂ ವಿರುದ್ಧವಾಗಿ ನಿರ್ಭೀತಿಯಿಂದ ತೀರ್ಪು ಹೇಳಬಲ್ಲ ಕೆಚ್ಚೆದೆಯಿರುವುದಾದರೂ ಇಂಗ್ಲೀಷ್ ನ್ಯಾಯಾಧೀಶನೊಬ್ಬನಿಗೇ.

ವಿಶಾಲ ಜಗತ್ತಿನ ವಿಜಯಕ್ಕೆ ಕಾರಣವಾದ ಶಿರೋಭೂಷಣಪ್ರಾಯವಾದ ಸದ್ಗುಣಗಳೆಂದರೆ-ಚಿಕ್ಕವರು ದೊಡ್ಡವರಾದಿಯಾಗಿ ಸರ್ವರೂ ಅಭ್ಯಸಿಸಿರುವ ಅವರ ಶಿಸ್ತಿನ ಬಲ. ಎಲ್ಲಿ ನೋಡಿದರೂ ತನಗೆ ತಾನೇ ಈ ಗುಣವು ರೂಪುದೋರುವುದನ್ನು ಕಾಣಬಹುದು. ಸಿನೆಮಾಮಂದಿರದ ಟಿಕೆಟ್ ಕಿಟಕಿಯ ಬಳಿಯಾಗಲೀ, ಅಥವಾ ಆಟದ ಮೈದಾನದ ಪ್ರವೇಶ ದ್ವಾರದಲ್ಲಾಗಲೀ, ಅಥವಾ ರೈಲ್ವೇ ನಿಲ್ದಾಣದಲ್ಲಾಗಲೀ, ಇಬ್ಬಿಬ್ಬರು ಜೊತೆಯ ಹಿಂದೆ ಜೊತೆಯಾಗಿ ನೂರಾರು ಅಡಿಗಳುದ್ದ ಸಾಲುಗಟ್ಟಿ ನಿಂತು ಕಾಯುವ ದೃಶ್ಯವು ಅಪರೂಪವಲ್ಲ. ಇಂಗ್ಲೆಂಡಿಗೆ ಈಗಿನ ಶ್ರೇಷ್ಠ

(೧೪ನೇ ಪೇಜಿಗೆ)

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವನು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲ ಬೇಕಾಗುವದು. ಕ್ರಯ ಬಾಟ್ಲ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1923

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಗ್ಗೆ 5-55	ರಾತ್ರಿ 8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25**,
ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ **20**,
ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.
ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಆಕ್ಟಿಂಗ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.
ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.
ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ಬೊಂಬಾಯಿಂದ ಬರುವದು	ಬೊಂಬಾಯಿಗೆ ತೆರಳುವದು
ಮಂಗಳೂರು	ಗುರುವಾರ ಬೆಳಗ್ಗೆ 8 ಗಂಟೆ	ಶನಿವಾರ ಬೆಳಗ್ಗೆ 9 ಗಂಟೆ
	ಸೋಮವಾರ ಬೆಳಗ್ಗೆ 7 ಗಂಟೆ	ಮಂಗಳವಾರ ಬೆಳಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಗ್ಗೆ ಗಂಟೆ 2-30	ಶನಿವಾರ ಮಧ್ಯಾಹ್ನ 12
	ಆದಿತ್ಯವಾರ ಹಗಲು 3 ಗಂಟೆ	ಮಂಗಳವಾರ ಮಧ್ಯಾಹ್ನ 12
ಕುಂದಾಪುರ	ರವಿವಾರ ಹಗಲು 1 ಗಂಟೆ	ಶನಿವಾರ ಸಂಜೆ ಗಂಟೆ 3-30
		ಮಂಗಳವಾರ ಮಧ್ಯಾಹ್ನ 3-30

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ

THE
Vijaya Bank, Ltd.

Head Office: MANGALORE. Branch Offices: UDIPI, KAUP.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½
ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½
6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.
2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರಟರಿ.

ವಿಜಯಾಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದಶಾಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

Leaders or 'Mis'-Leaders?

It really surprises one to see how some of our self-appointed leaders and people with the so-called'local standing' change their creeds just as easily as the proverbial chameleon does its colour. If one were to judge them from their actions one is almost driven against his will to condemn them. In the first place, Udipi is unfortunate enough not to have any public worker of note and even those few who expect the credulous public of Udipi to consider them as such, are men who trim their sails with the windin short time servers.

I shall not be wide off the mark if I were to say that there is no such thing as public-spirit in Udipi. People who can devote some of their time to public activities don't, and people who want to can't. Take for example the members of the local Bar. Legal profession is considered to be one of those professions, why, the only profession, where there is much scope and ample opportunity for service for one who is public-minded. All things considered lawyers are better equipped for such work. Well, one hardly sees any one of these legal celebrities taking any interest in any public activity in Udipi. In this connection it would be worthwhile mentioning about the attitude of the Bar in the recent assembly elections. Barring a few, some of the lawyers were indifferent while others worked for the Justice party. Those few who worked for the Congress were carried away by the tide of popular opinion and had even a slight thouch of the election fever. They had not worked because of their sympathy for the National Cause but because they were forced as it were out of personal considerations. I am not casting any aspersions on them. That they have worked for the Congress no one denies. But there is a psychological explantion for this. When some National Leader of all India fame, or for the matter of that of any fame, comes to Udipi these will come out of their shells and strut like proud cocks before the once-too-often deluded and credulous public, just as the marionette on the stage. Invariably on these occasions you will find them to be front-benchers. The moment the leaders turn their backs on the place these dive back into their shells never to come out again till another breeze of celebreties blows on these parts. In proof of this I will just mention a fact or two. On the 13th of this month the local Congress Committee celebrated the last day of the National Week, on which occasion the newly elected Congress M. L. A. Mr. A. B. Shetty presided and Prof. C. J. Varkey, another Congress M. L. A. made an eloquent speech. None of our so called leaders of "local standing" were present. And what is more, a stranger from Mangalore remarked upon the conspicous absence of the members of the legal profession at the meeting. Where upon a friend of mine standing by cynically answered him saying 'hat the members of that noble profession could be found busily engaged in a game of cards at the local club. This is how they show their interest in Congress work. Another of the local leaders was heard to have gloated over the statement made in public that he is not even a four-anna Congress member, nor does he wish to become one. I can well inform my friend that the Congress will not be the worse for his not joining it. Some of our other leaders who were most vociferous in their allegiance to the Congress were also most anxious to give a party to the Interim Minister Hon'ble Mr. Palat, who came to this place unknown, unhonoured and unsung. While on the other hand, the lesser fry of the Congress greeted him on the outskirts of the town with a procession of black flaggs and cries of "GO BACK DUMMY MINISTER."

It is high time the public of Udipi realise the delusion under which they have been so far. We have all along been looking up to some of our money-bags to lead us in Congress activities. The Congress is of the people for the good of the people and it shall remain as such, not as an instrument in the hands of some of our "psuedo" leaders to gain some cheap notoriety, but as the will of the people to achieve the goal of the Nation.

K. Sarvotham Shetty.

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:		
P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India.	Charni Road, Bombay No. 4.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs. 80,00,000
Life Funds Over	Rs. 68,00,000
Premi um Income Over ...	Rs 22,54,000
Interest Income	Rs. 3,16,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs. 4,4251,200

TOTAL BUSINESS IN FORCE Rs. 4,42,51,200

MUSINGS ON THE WAY

Dewan Bahadur Hegde has come out with a letter in Kanteerava giving publicity to the order passed by Government on the letter of Dr. Vittal Shetty in regard to the disallowance of his resolution asking for the disposal of road tenders by the end of January. Is there anything surprising in Dewan Bahadur's Government of which the Raja of Bobbili was the chief coming to his rescue in such a way? Have they not put him on the gadi and should they not bear such a loyal friend's infirmities?

x x x x x

The funniest part of this letter, however relates to the ruling given by the President on the resolution in question as directed by the Government. Notice of the resolution was given at the end of last November. The President brooded over it for nearly a month and a half and said that it was inadmissible by reason of the fact that it was an attempt at interfering with his executive functions. Even a friendly Government seem to have found this reason not satisfactory. They call it, therefore, "an apparently conditional opinion" and ask the President to give a final and definite ruling on the merits of the resolution. So three months after the receipt of the resolution the President says he has disallowed it on two grounds namely that tenders have already been called and that the end of January is too early a period for the disposal of tenders. Tenders were called after the resolution was disallowed and so the first ground cannot now be put forth to support the action of the President. The second reason given by the President is only an expression of his opinion. It cannot be made a ground for denying to a member his statutory right to move such a resolution. The Board has already given its verdict on the matter by adjourning all the business at its meeting on the 20th of January as a protest against such arbitrary action. The Dewan Bahadur could well have spared himself this irksome task of self defence at such a belated hour but for the bidding of the Government to give a final and definite ruling

x x x x x

Following the example of his chief, the new Minister for Education came on a pilgrimage here last week. He brought with him to Kollur one of our Endowment Commissioners also at the expense of the public. Some visits were paid to institutions that had closed for the vacation Our ex- M. L. C. and ex-Congressman Mr. U. C. S. Bhat was eager to have the honour of being the first host of the new Minister. So he invited the hon-gentlemen for a Tea Party just after his arrival. Would non-official gentlemen of Congress sympathies attend the party, if they knew it was meant for meeting a member of the new cabinet which was in such bad odour? Mr. Bhat was, however too shrewd a gentleman to be outwitted, and he issued invitations worded in different ways to different people. Those who where called to meet the Endowment Commissioner found that the chief guest whom they had to honour was the Minister. What an achievement for Mr. Bhat to make his Congress friends walk into his parlour and eat the humble pie!

—Under the search light

The Combined Booking Agency

AND

The Joint Booking Office

MANGALORE, SOUTH KANARA.

ಪ್ರಯಾಣದ ಅಪೂರ್ವ ವ್ಯವಸ್ಥೆಯೇ ನಮ್ಮ ಜಿಲ್ಲೆಯು ಸಂಪಾದಿಸಿರುವ ಗೌರವಗಳ ಲ್ಲೊಂದಾಗಿದೆ. ಈ ತರದ ವ್ಯವಸ್ಥೆಯನ್ನು ಇನ್ನೆಲ್ಲಿಯೂ ಕಾಣಲಾರಿರಿ.

ಉತ್ತರದಿಂದ: ಭಟ್ಕಳ, ಗೋಕರ್ಣ, ಶಿರ್ಸಿ, ಅಂಕೋಲಾ, ಕಾರವಾರ ಅಲ್ಲದೆ ಗೋವಾ ವರೆಗೂ ಹೋಗಲಿಕ್ಕಾಗುತ್ತದೆ.

ಪೂರ್ವದಿಂದ: ಹುಲಿಕಲ್-ಶಿಮೊಗ್ಗಾ, ಆಗುಂಬೆ-ಶಿಮೊಗ್ಗಾ, ಚಾರ್ಮಾಡಿ, ಕಡೂರು, ಶಿರಾಡಿ, ಸಕಲೇಶಪುರ, ಹಾಸನ, ಮಡಿಕೇರಿ, ಮೈಸೂರು ಮೊದಲಾದ ಕಡೆಗಳಿಗೆ ಹೋಗಿ ಮುಂಬ್ಯಾಗೂ, ಮುಂಬ್ಯಾ ಪ್ರಾಂತ್ಯದ ಎಲ್ಲಾ ಭಾಗಗಳಿಗೂ, ಬೆಂಗಳೂರಿಗೂ, ಮದ್ರಾಸಿಗೂ ರೈಲು ಮೂಲಕ ಪ್ರಯಾಣಿಸ ಬಹುದಾಗುತ್ತದೆ.

ದಕ್ಷಿಣದಲ್ಲಿ: ಕಾಸರಗೋಡು ವರೆಗೆ ಸರ್ವಿಸುಗಳು ಇವೆ.

ಬಸ್ಸು ಸರ್ವಿಸುಗಳ ನೌಕರರೆಲ್ಲರೂ ಅತೀ ಸಭ್ಯರೀತಿಯಿಂದ ವರ್ತಿಸಬೇಕಾಗಿ ಎಚ್ಚರಿಸಲ್ಪಟ್ಟಿದ್ದಾರೆ.

ಪ್ರಯಾಣಿಕರು ತಮ್ಮ ಅನುಭವದ ಕುರಿತು ಬರೆಯುವ ಕಾಗದಗಳ ಮೇಲೆ ತುಂಬಾ ಲಕ್ಷ್ಯವಿಡಲಾಗುವುದು.

Joint Managers.

ಮಂಗಳೂರು

(ನಮ್ಮ ಸ್ವಂತ ಬಾತ್ಮಿದಾರರಿಂದ)

ಮಂಗಳೂರಲ್ಲಿ ರಾಷ್ಟ್ರೀಯವಾರ

ಮಂಗಳೂರಲ್ಲಿ ರಾಷ್ಟ್ರೀಯವಾರವು ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ತಾ. ೧೩ನೇ ಬುಧವಾರ ದಿವಸ ಪ್ರಭಾತಫೇರಿ, ಧ್ವಜವಂದನಾದಿಗಳು ಬೆಳಗ್ಗೆ ನಡೆದವು. ಸಾಯಂಕಾಲ ಶ್ರೀ. ಬಿ. ವೆಂಕಟರಾವ್ ಬಾಳಿಗ ಬಿ. ಎ., ಬಿ. ಎಲ್, ಯಂ, ಎಲ್. ಎ. ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಪುರಜನರ ಪ್ರಾಸಭೆಯು ಸೇರಿತು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ. ರಾಮರಾಯ ಮಲ್ಯರು ಹಿಂದುಸ್ಥಾನದ ಪ್ರಕೃತ ರಾಜಕೀಯ ಪರಿಸ್ಥಿತಿಯನ್ನು ಕುರಿತು ಭಾಷಣಮಾಡಿದರು. ಶ್ರೀ. ತಲಚೇರಿಕರ ರಂಗರಾಯರು ಜಲಿಯನ್ವಾಲಾ ಭಾಗಿನಲ್ಲಿ ಎಪ್ರಿಲ್ ತಾ. ೧೩ರಲ್ಲಿ ಹೇಗೆ ಹಿಂದೀ ವೀರ ದೇಶಭಕ್ತರು ಅನೇಕ ಸಂಖ್ಯೆಯಲ್ಲಿ ಕೊಲ್ಲಲ್ಪಟ್ಟರೆಂಬುದನ್ನು ತಿಳಿಸಿ, ಇಂತಹ ಅತ್ಯಾಚಾರ ಕೊಲೆಗಳನ್ನು ಭಾರತೀಯರ ಮೇಲೆ ಬೀಳದಂತೆ ಮಾಡಬೇಕಾದರೆ ಸ್ವರಾಜ್ಯ ಸಂಪಾದನೆಯಾಗದೆ ಗತ್ಯಂತರವಿಲ್ಲವೆಂದರು. ಅಧ್ಯಕ್ಷರ ಸಮಯೋಚಿತ ಭಾಷಣವಾದ ಅನಂತರ, ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಆಚಾರ್ಯ ಕಾಲೇಲ್ಕರರ ಆಗಮನ

ಆಚಾರ್ಯ ಕಾಲೇಲ್ಕರರು ಕಳೆದ ತಾ. ೧೨ರಲ್ಲಿ ಮಂಗಳೂರಿಗೆ ಶ್ರೀಮತಿ ಅನಸೂಯಾ ಬಜಾಜ್, ಶ್ರೀ। ಧರ್ಮಾಧಿಕಾರಿ, ಪಂಡಿತ ಸಿದ್ಧನಾಥಪಂಥರೇ ಮೊದಲಾದವರೊಡನೆ ಬಂದರು. ಡಾ। ಯು. ಪಿ. ಮಲ್ಯರೇ ಮೊದಲಾದವರು ಆಚಾರ್ಯರಿಗೆ ಸ್ವಾಗತವಿತ್ತರು. ಆಚಾರ್ಯರನ್ನು ಸತ್ಕರಿಸುವುದಕ್ಕಾಗಿ ಗಣಪತಿ ಹೈಸ್ಕೂಲಿನಲ್ಲಿ ಒಂದು ಟೀಪಾರ್ಟಿ ನಡೆಯಿತು. ಅದಾದ ಮೇಲೆ ಮೈದಾನಿನಲ್ಲಿ ಸಾರ್ವಜನಿಕ ಸಭೆನಡೆಯಿತು. ಡಾ। ವಿಟ್ಠಲ ಶೆಟ್ಟಿಯವರು ಅಧ್ಯಕ್ಷರಾಗಿದ್ದರು. ಆಚಾರ್ಯರು ಹಿಂದೀ ಭಾಷೆಯು ಹೇಗೆ ರಾಷ್ಟ್ರಭಾಷೆಯಾಗುವುದಕ್ಕೆ ಯೋಗ್ಯವಾಗಿದೆ ಎಂಬುದನ್ನು ಅದನ್ನು ಹೇಗೆ ಹರಡಬೇಕೆಂಬುದನ್ನೂ, ರಾಷ್ಟ್ರಭಾಷೆಯು ದೇಶಕ್ಕೆ ಹೇಗೆ ಅಗತ್ಯವೆಂಬುದನ್ನೂ ಸವಿಸ್ತಾರವಾಗಿ ತಿಳಿಸಿದರು. ಅಧ್ಯಕ್ಷರು ಭಾಷಣಕರ್ತರ ಅಭಿಪ್ರಾಯಗಳನ್ನು ಅನುಮೋದಿಸಿದರು. ಧನ್ಯವಾದ ಸಮರ್ಪಣೆಯಾದ ಮೇಲೆ ಸಭೆಯು ಮುಗಿಯಿತು.

ತಾ. ೧೩ರಲ್ಲಿ ಆಚಾರ್ಯ ಕಾಲೇಲ್ಕರರು ಹಿಂದೀ ಕೆಲಸಗಾರರ ಸಭೆಗೆ ಚಿತ್ತೈಸಿ ಅನೇಕ ಸೂಚನೆಗಳನ್ನಿತ್ತರು. ಮಹಿಳಾಸಭೆಗೆ ಚಿತ್ತೈಸಿ ಅಲ್ಲಿ ಕೆಲ ಮಾತುಗಳನ್ನಾಡಿದರು. ಅನಂತರ ಶ್ರೀ। ಜರೋಮ್ ಸಾಲ್ಡಾನರ ಮನೆಯಲ್ಲಿ ಜರಗಿದ ಕ್ರಿಸ್ತರ ಸಭೆಗೆ ಹೋಗಿ ಅಲ್ಲಿ ಕೆಲ ಮಹನೀಯರು ಹಿಂದೀ ಪ್ರಚಾರದ ವಿಷಯದಲ್ಲಿ ಹಾಕಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಸಮಾಧಾನಪಡಿಸಿದರು. ಅನಂತರ ಕ್ರಿಸ್ತರು ಹಿಂದೀ ಭಾಷೆಯನ್ನು ಕಲಿಯಬೇಕಾದ ಅವಶ್ಯಕತೆಯನ್ನು ಕುರಿತು ಕೆಲ ಮಾತುಗಳನ್ನಾಡಿದರು. ಇದೇ ವಿಚಾರದಲ್ಲಿ ಉಪಯುಕ್ತ ಸಲಹೆಗಳನ್ನು ಸೂಚಿಸುವುದಕ್ಕೆ ಒಂದು ಉಪಸಮಿತಿಯು ಏರ್ಪಾಡಾಯಿತು.

ರೈತರಿಗೆ ಸಹಾಯ

ಮಂಗಳೂರು ತಾಲೂಕಿಗೆ ಸೇರಿದ ಸುರತಕಲ್, ಮೂಲ್ಕಿ ಮತ್ತು ಉಡುಪಿ ತಾಲೂಕಿಗೆ ಸೇರಿದ ಉಡುಪಿ, ಕಾಪು ಫಿರ್ಕಗಳಲ್ಲಿ ರೈತರಿಗೆ ಸಾಲಕೊಡುವ ಏರ್ಪಾಡನ್ನು ಸರಕಾರದವರು ಮಾಡಿರುವರು. ೫೦೦೦ ರೂ ಗಳ ಮೌಲ್ಯದ ಆಸ್ತಿಯಿಂದ ಹೆಚ್ಚಾಗಿಲ್ಲದವರು ಮತ್ತು ೨೦೦೦ ರೂ. ಗಳಿಂದ ಅಧಿಕ ಸಾಲಯಿಲ್ಲದವರು ಈ ಸಾಲ ಪಡೆಯುವುದಕ್ಕೆ ಅರ್ಹರು. ಬಡ್ಡಿಯ ದರ ಸೇಕಡ ೫॥./ ಹೀಗೆಂದು ಸ್ಪೆಶಲ್ ಲೋನ್ಸ್ ಆಫೀಸರರು ತಿಳಿಸುತ್ತಾರೆ. ಹೆಚ್ಚಿನ ವಿಷಯಗಳನ್ನು ಆಯಾ ಸ್ಥಳಗಳ ಪಟೇಲರಿಂದ ತಿಳಿಯಬಹುದಾಗಿದೆ.

ಈಶ್ವರಾನಂದ ಮಹಿಳಾ ಸೇವಾಶ್ರಮದ ವರ್ಧಂತಿ

ಕಳೆದ ತಾ. ೧೧ರಲ್ಲಿ ಈಶ್ವರಾನಂದ ಮಹಿಳಾ ಸೇವಾಶ್ರಮದ ವರ್ಧಂತ್ಯುತ್ಸವವು ಶ್ರೀಮತಿ ಬಿ. ಕಲ್ಯಾಣಮ್ಮನವರ (ಸುಪರಿಂಟೆಂಡೆಂಟ್, ಸ್ತ್ರೀಯರ ಟ್ರೈನಿಂಗ್ ಶಾಲೆ, ಕಣ್ಣಾನೂರು) ಅಧ್ಯಕ್ಷತೆಯಲ್ಲಿ, ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ನಡೆಯಿತು. ಜಿಲ್ಲಾ ಕಲೆಕ್ಟರ್ ಧೊರೆಗಳೇ ಮೊದಲಾದ ಅಧಿಕಾರಿಗಳು ಚಿತ್ತೈಸಿದ್ದರು. ಪ್ರಾರ್ಥನೆ ಮತ್ತು ಇನ್ನಿತರ ಕಾರ್ಯಕ್ರಮಗಳಾದ ಮೇಲೆ ವರದಿ ವಾಚನವಾಯಿತು. ಆಶ್ರಮವು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿದೆಯೆಂಬುದು ವ್ಯಕ್ತವಾಯಿತು. ವರದಿಯಿಂದ ಮಹಾಜನರ ಸಹಾಯವು ಅಗತ್ಯವೆಂಬುದನ್ನು ಸಹ ಸೂಚಿಸಲಾಯಿತು. ಅಧ್ಯಕ್ಷೆಯರು ಇನಾಮು ಹಂಚಿದರು. ಮತ್ತು ಆಶ್ರಮವು ಮಾಡುತ್ತಿರುವ ಕೆಲಸವನ್ನು ಪ್ರಶಂಸಿಸಿ ಭಾಷಣವಿತ್ತರು. ಧನ್ಯವಾದಾರ್ಪಣೆಯಾದ ಮೇಲೆ ಸಭೆಯು ಮುಗಿಯಿತು.

ಬಿಸೆಂಟ್ ಶಾಲೆ

ಬಿಸೆಂಟ್ ಶಾಲೆಯಲ್ಲಿ ವಸಂತೋತ್ಸವವು ಕಳೆದ ತಾ. ೧೭ರಲ್ಲಿ ಡಾ। ಸಿ. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ತಾ. ೧೭ರಲ್ಲಿ ಸಂಗೀತ ಸ್ಪರ್ಧೆಯು ನಡೆದು ಪ್ರಥಮ ಬಹುಮಾನವು ಮಿಶನ್ ಹೈಸ್ಕೂಲಿಗೆ ದೊರೆಯಿತು. ಈದಿನ ರಾತ್ರಿ ನಾಟಕವೂ ನಾಟ್ಯವೂ ಇದ್ದುವು.

ಸ್ತುತ್ಯ ಸಹಾಯ

ವಸಂತೋತ್ಸವದ ದಿವಸ ಡಾ। ರಾಮ ಕಾಮತರು ಬಿಸೆಂಟ್ ಶಾಲೆಗೆ, ಕಾರವಾರದ ಶ್ರೀ। ವಿಟ್ಠಲ ಸಂತಾರಾಮ ಕುಲಕರ್ಣಿಯವರು(ತಮ್ಮ ಧರ್ಮಪತ್ನಿ ರಾಧಾಬಾಯಿಯವರ ಹೆಸರಲ್ಲಿ) ತಮ್ಮ ಸ್ವಂತ ಖರ್ಚಿನಿಂದ ವಿದ್ಯುದ್ದೀಪವನ್ನು ಹಾಕಿಸಿದುದನ್ನು ಪ್ರಶಂಸಿಸಿ ಮಾತಾಡಿದರಲ್ಲದೆ, ದೀಪಗಳನ್ನು ಬೆಳಗುವ ಸಮಾರಂಭವನ್ನೂ ನೆರವೇರಿಸಿದರು.

ಮಂತ್ರಿಗಳ ಆಗಮನ

ಕಳೆದ ತಾ. ೧೨ರಲ್ಲಿ ಮದ್ರಾಸ್ ಗವರ್ನರರಿಂದ ನೇಮಿತರಾದ ವಿದ್ಯಾಂಗದ ಮಂತ್ರಿ ಶ್ರೀ। ಆರ್. ಎಮ್. ಪಾಲಾತರು ಮಂಗಳೂರಿಗೆ ಬಂದರು. ಅವರನ್ನು ಕಲೆಕ್ಟರ್ ಧೊರೆಗಳೂ ಇನ್ನಿತರ ಅಧಿಕಾರಿಗಳೂ ಶ್ರೀ। ಸುಬ್ರಹ್ಮಣ್ಯ ಭಟ್ಟರೂ ಇನ್ನಿತರರೂ ರೈಲ್ವೆ ಸ್ಟೇಶನಿನಲ್ಲಿ ಇದಿರುಗೊಂಡು ಸತ್ಕರಿಸಿದರು. ಅದೇ ದಿನ ಸಾಯಂಕಾಲ ಶ್ರೀ। ಭಟ್ಟರಲ್ಲಿ ಟೀ ತೆಗೆದುಕೊಂಡು ಉಡುಪಿಗೆ ಹೊರಟರು.

ತಾ ೧೫ರಲ್ಲಿ ಮಂಗಳೂರಿಗೆ ಬಂದು ಹಲವರಿಗೆ ಭೇಟಿಕೊಟ್ಟದ್ದಲ್ಲದೆ, ಕೆನರಾ ಹೈಸ್ಕೂಲ್, ಅಲ್ವಾಸಿಯಸ್ ಕಾಲೇಜ್ ಮೊದಲಾದುವನ್ನೂ, ಆಸ್ಪತ್ರೆಗಳನ್ನೂ, ಕೈಗಾರಿಕೆ ಶಾಲೆಗಳನ್ನೂ ಸಂದರ್ಶಿಸಿದರು. ಲೇಡೀಸ್ ಕ್ಲಬ್ಬಿನಲ್ಲಿ ಮಿಸೆಸ್ ಪಾಲಾತರಿಗೆ ಟೀ ಪಾರ್ಟಿಯಿತ್ತು.

ಶ್ರೀ। ಸುಬ್ರಹ್ಮಣ್ಯ ಭಟ್ಟರು ಮಂತ್ರಿಗಳಿಗೆ ಒಂದು ಸತ್ಕಾರವನ್ನಿತ್ತರು. ಅದರಲ್ಲಿ ಕಾಂಗ್ರೆಸ್ ಪಕ್ಷದವರಿಗೂ ಆಮಂತ್ರಣವಿತ್ತು. ಆದರೆ ಕೆಲವರ ಆಮಂತ್ರಣದಲ್ಲಿ ಹಿಂದೂರಿಲಿಜಿಯಸ್ ಎಂಡೋಮೆಂಟ್ ಬೋರ್ಡಿನ ಅಧ್ಯಕ್ಷರಿಗೆ ಸತ್ಕಾರವೆಂದು ಬರೆದಿತ್ತು. ಹೆಸರು ಒಬ್ಬರದು, ಸತ್ಕಾರವು ಮತ್ತೊಬ್ಬರ ಗೌರವಾರ್ಥವಾಗಿ. ಇದರಿಂದ ಹಲವರಿಗೆ ಬೇಸರವಾಗಿದೆಯೆಂದು ತಿಳಿದುಬರುತ್ತದೆ.

ತಾ. ೧೭ರಲ್ಲಿ ಮಂತ್ರಿಗಳು ಹೊರಟುಹೋದರು.

ಮೆಡಿಕಲ್ ಅಸೋಸಿಯೇಶನ್

ದ. ಕನ್ನಡ ಮೆಡಿಕಲ್ ಅಸೋಸಿಯೇಶನಿನ ಸಭೆಯು ತಾ. ೧೭ರಲ್ಲಿ ಡಾ। ಕೆ. ಕೆ. ನಂಬಿಯಾರ್ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಟ್ಯೂಬರ್ ಕ್ಯುಲೋಸಿಸ್ ರೋಗದ ವಿಷಯ ವಿಶೇಷ ಮಾಹಿತಿಯನ್ನು ಪಡೆದು ಬಂದಿರುವ ಮೂಲ್ಕಿಯ ಡಾ। ಯಂ ಉಮೇಶರಾಯರು "ಟ್ಯೂಬರ್ ಕ್ಯುಲೋಸಿಸಿಗೆ ಆಧುನಿಕ ಚಿಕಿತ್ಸೆ" ಎಂಬ ವಿಷಯದಲ್ಲಿ ಮಾತಾಡಿದರು ಈ ರೋಗವು ಪರಂಪರೆಯಿಂದ ಬರತಕ್ಕದ್ದಲ್ಲವೆಂದೂ, ಅದನ್ನು ಸ್ವಲ್ಪ ಜಾಗ್ರತೆಯಿಂದ ಜನರೂ, ವೈದ್ಯರೂ ಸಹಕರಿಸಿದರೆ ಹೋಗಲಾಡಿಸಬಹುದೆಂದೂ, ಈಗಿನ ವಿಜ್ಞಾನಶಾಸ್ತ್ರವು ಹೊಸ ರೀತಿಯಲ್ಲಿ ಚಿಕಿತ್ಸೆಮಾಡಬಹುದೆಂಬುದನ್ನು ತಿಳಿಸಿದೆಯೆಂದೂ, ಮಂಗಳೂರಲ್ಲಿ ಬಂಗಾಳದ ಟ್ಯೂಬರ್ ಕ್ಯುಲೋಸಿಸ್ ಅಸೋಸಿಯೇಶನಿನಂತಹ ಸಂಸ್ಥೆಯೊಂದು ಅಗತ್ಯವೆಂದೂ ಮುಂತಾಗಿ ಹೇಳಿದರು.

ಅಸೋಸಿಯೇಶನಿನ ಸೆಕ್ರೆಟರಿಗಳಾದ ಡಾ। ಕೆ. ಆರ್. ಕಿಣಿಯವರೂ, ಅಧ್ಯಕ್ಷರಾದ ನಂಬಿಯಾರರೂ ತಮ್ಮ ಅನುಭವಗಳನ್ನು ತಿಳಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ಥಿಯೊಸಾಫಿಕಲ್ ಕಾನ್‌ಫರೆನ್ಸ್

ಈ ಪರಿಷತ್ತು ಥಿಯೊಸಾಫಿಕಲ್ ಲಾಜಿನಲ್ಲಿ ಶ್ರೀ। ಟಿ. ಎಸ್. ಸುಬ್ರಹ್ಮಣ್ಯ ಅಯ್ಯರ ರಿಟೈರ್ಡ ಡೆಪ್ಯುಟಿ ಕಲೆಕ್ಟರ್ ಇವರ ಅಧ್ಯಕ್ಷತೆಯಲ್ಲಿ ನಿನ್ನೆಯ ದಿನ ಜರಗಿತು. ಡಾ। ಸಿ. ರಾಮಕಾಮತರು ಪರಿಷತ್ತಿನ ಉದ್ಘಾಟನೆಯನ್ನು ಮಾಡುತ್ತಾ, 'ಇಂತಹ ಪರಿಷತ್ತು ಧಾರ್ಮಿಕದೃಷ್ಟಿಯಿಂದ ಮಾತ್ರವಲ್ಲದೆ ಭ್ರಾತೃಭಾವವನ್ನು ಹೆಚ್ಚಿಸಲು ಅನುಕೂಲವಾಗಿದೆ ಎಂದರು.

ಅಧ್ಯಕ್ಷರು ಗೀತೆಯ ವಿಷಯವಾಗಿ ಮಾತನಾಡುತ್ತಾ ವ್ಯಕ್ತಿಗೂ, ವಿಶ್ವಕ್ಕೂ ಭೇದವಿಲ್ಲ' ಒಂದು ಇನ್ನೊಂದರಲ್ಲಿ ಐಕ್ಯವಾಗಿದೆ. ಇದೇ ಗೀತೆಯಲ್ಲಿ ಹೇಳಲ್ಪಟ್ಟಿದೆ. ಲೋಕದ ಹಿತಕ್ಕಾಗಿಯೇ ಸರ್ವಸ್ವವನ್ನೂ ವಿನಿಯೋಗಿಸಬೇಕು. ವಸ್ತುಗಳಲ್ಲಿ ಆಶೆಯನ್ನಿಡಕೂಡದು. ಹಾಗೆ ಇದ್ದರೆ ಐಶ್ವರ್ಯವನ್ನು ಅಲ್ಲಗಳೆಯಬೇಕಿಲ್ಲ. ಪ್ರತಿಯೊಂದೂ ಲೋಕದ ಹಿತಕ್ಕಾಗಿಯೇ ಎಂದು ತಿಳಿಯಬೇಕೆಂದರು.

ಥಿಯೊಸಫಿಯ ವಿಷಯ ಮಾತಾಡುತ್ತಾ, ಇದು ಲೋಕದಲ್ಲಿ ಜನರನ್ನು ಭ್ರಾತೃಗಳಂತೆ ಮಾಡಲು ಯತ್ನಿಸುವುದಿಲ್ಲ. ಆದರೆ ಅಂತಹ ಜನರಲ್ಲಿ ಭ್ರಾತೃಭಾವವು ಉಂಟಾಗುವಂತೆ ಮಾಡಲು ಬೇಕಾದ ಕೇಂದ್ರಗಳನ್ನು ಕಲ್ಪಿಸುತ್ತಿದೆಎಂದರು. ಡಾ। ಬೆಸೆಂಟರ ಜೀವನದಲ್ಲಿ ಇದೇ ತತ್ವವನ್ನು ನೋಡಬಹುದೆಂದರು. ಶ್ರೀ। ಯಂ. ಎಸ್. ಮಾಧವರಾಯರು ಧನ್ಯವಾದಗಳನ್ನರ್ಪಿಸಿದರು. ಅನಂತರ ಸಭೆಯು ಮುಗಿಯಿತು.

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

ಮಹಿಳಾ ಸಭೆಗೆ ಶ್ರೀ। ಕಾಳೇಲ್‌ಕರರವರ ಆಗಮನ

ಇದೇ ಕಳೆದ ತಾ ೧೩ನೇ ಮಂಗಳವಾರ ಸಾಯಂ ಘಂ। ೫ಕ್ಕೆ ಹಿಂದೀ ಪ್ರಚಾರ ಕಾರ್ಯದ ನಿಮಿತ್ತ ಮಂಗಳೂರಿಗೆ ದಯಮಾಡಿಸಿದ್ದ ಶ್ರೀಮತಿ। ಅನಸೂಯ ಬಜಾಜ್‌ರಿಂದೊಡಗೂಡಿದ ಶ್ರೀಯುತ। ಆಚಾರ್ಯ ಕಾಕಾ ಕಾಳೇಲ್‌ಕರ್ ಮತ್ತು ಸಹಪಾಠಿಗಳು ಮಹಿಳಾಸಭೆಗೆ ಚಿತ್ತೈಸಿದರು. ಈ ಸಂದರ್ಭದಲ್ಲಿ ಶ್ರೀಯುತ। ಕಾಳೇಲ್‌ಕರ್‌ರವರು "ಹಿಂದೀ ಕಲಿಯುವ ಆವಶ್ಯಕತೆ"ಯ ಕುರಿತು ಎಲ್ಲರಿಗೂ ಮನಗಾಣುವಂತೆ ಬೋಧಪರವಾಗಿ ಮಾತಾಡಿದರು. ಅನಂತರ ಮಿಸೆಸ್। ಪದ್ಮಬಾಯಿಯವರು ಹಿಂದೀಯಲ್ಲಿ ಬಂದಿಷ್ಟ ಅತಿಥಿಗಳಿಗೆ ಧನ್ಯವಾದವನ್ನರ್ಪಿಸಿದರಲ್ಲದೆ, ಮಿಸೆಸ್॥ ಎಸ್ ಆನಂದಿ ಬಾಯಿ (ಸಭೆಂ ಸಮಾಜ ಅಧ್ಯಕ್ಷೆ)ಯವರು ಮಹಿಳಾಸಭೆಯ ಹಾಗೂ ಮಂಗಳೂರು ಮಹಿಳೆಯವರ ಕುರಿತು ಅಭಿಪ್ರಾಯಗಳನ್ನಿತ್ತ ನಂತರ, ಮಿಸೆಸ್ ಎನ್. ಯಮುನಾಬಾಯಿಯವರಿಂದ ಶ್ರೀಯುತ। ಕಳೇರ್‌ಕರರಿಗೆ ಹೂವಿನ ಬುಕ್ಕೆಯುಸಮರ್ಪಿಸಲ್ಪಟ್ಟ ನಂತರ ಸಭಾಂತ್ಯವಾಯಿತು.

ದುಃಖಸೂಚಕ ಸಭೆ

ಇದೇ ಕಳೆದ ತಾ. ೧೭ನೇ ಶನಿವಾರ ಸಾಯಂ। ಘಂ। ೪-೩೦ರಲ್ಲು ದಿವಂಗತರುಗಳಾದ ಮಿಸೆಸ್। ಸುಂದರಿ ಬಾಯಿ ಬಾಜೀರಾವ್ (ಮಂಗಳೂರು ಫರ್ನ್ನಿಚರ್ ಮಾರ್ಟಿನ ಪ್ರೊಪ್ರೈಟರ್ ದಿವಂಗತ ಮಂಗಳೂರು ಜಾರಪ್ಪನವರ ಪುತ್ರಿ)ಮತ್ತು ಮಿ. ಕೆ.ಟಿ.ಆಳ್ವರವರ ಅಕಾಲ ನಿಧನದ ಕುರಿತು ಮಹಿಳಾಸಭೆಯ ಕಾರ್ಯನಿರ್ವಾಹಕ ಕಮಿಟಿಯವರು ದುಃಖಸೂಚಕ ಠರಾವುಗಳನ್ನು ಪಾಸುಮಾಡಿ, ದಿವಂಗತರುಗಳ ಸಂಬಂಧಿಕರಿಗೆ ಕಳುಹಿಸಿಕೊಟ್ಟರು.

ಭಜನೆಮಂಡಳಿಯ ವಾರ್ಷಿಕೋತ್ಸವ ಸಭೆ

ಕೈಲ್ಸೆ ಗುಡ್ಡೆ ರೋಡ್ ಬಳಿಯಲ್ಲಿರುವ ಶ್ರೀ ಸೀರೇಶಪ್ಪಾ ಆರ್ಯ ಭಜನೆ ಮಂಡಳಿಯ ೧೨ನೇ ವಾರ್ಷಿಕೋತ್ಸವವು ತಾ ೧೮-೪-೩೭ರಲ್ಲು ಸೆಂಟ್ ಎಲೋಸಿಯಸ್ ಕಾಲೇಜಿನ ಪಂಡಿತರಾದ ಬ್ರಹ್ಮಶ್ರೀ ನಿಡ್ಲೋಡಿ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿತು. ಆ ಸಂದರ್ಭದಲ್ಲಿ ಅಧ್ಯಕ್ಷರು ತಮ್ಮ ಯೋಗ್ಯ ಸಲಹೆಗಳನ್ನು ಕೊಟ್ಟು ಮಂಡಳಿಯ ಅಭಿವೃದ್ಧಿಯನ್ನು ಬಯಸಿದಲ್ಲದೆ, ಮಹನೀಯರಾದ ರೆವರೆಂಡ್ ಇ. ಸುಬ್ಬಕೃಷ್ಣಯ್ಯ M. A. B.Dc. B.D.ಯವರುಜೀವನ ಮತ್ತು ಅದರಸಾರ್ಥಕತೆಯ ವಿಶಯ ಭೋದ ಪ್ರದವಾದ ಭಾಷಣವನ್ನು ಶ್ರೀಯುತ ಬಸ್ತಿದಾಸಪ್ಪ ಶೆಣೈಯವರು "ಸುಖಪ್ರಾಪ್ತಿಯ ಸಾಧನೆಯು ವಿಶಯವಾಗಿಯೂ, ಶ್ರೀ ವಿ. ಕೆ. ವೈದ್ಯರು 'ಭಕ್ತಿಯ' ವಿಶಯವಾಗಿಯೂ, ಮನದಟ್ಟಾಗುವಂತೆ ಮಾತಾಡಿದ ನಂತರ ವಂದನೆಯನ್ನು ಅರ್ಪಿಸಿ ಕಿಂಚಿತ್ ಉಪಹಾರದೊಂದಿಗೆ ಸಭಾಂತ್ಯವಾಯಿತು. ಅಂದು ರಾತ್ರಿ ಭಜನಾ ಮಂಡಳಿಯ ಸದಸ್ಯರು ದಿವಂಗತ ಮಾಧವ ತಿಂಗಳಾಯರಿಂದ ವಿರಚಿತವಾದ 'ಜನಮಲ್ಕ್' ಎಂಬ ಸಾಮಾಜಿಕ ತುಳುನಾಟಕವನ್ನು ಬಹಳ ಸಾರಸ್ಯವಾಗಿ ಅಭಿನಯಿಸಿ ಜನರನ್ನು ಆಹ್ಲಾದಗೊಳಿಸಿದರು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಲಿಮಿಟೆಡ್, ಉಡುಪಿ

(೧೯೦೬ರಲ್ಲು ಸ್ಥಾಪಿತವಾದದ್ದು)

ಪ್ರಕಟಣೆ

ಇದರ ಶಾಖೆಗಳು ತಾ. 19-3-1937ರಲ್ಲು

(1) **ವೆಲ್ಲೂರು** (ಉತ್ತರ ಆರ್ಕಾಡು ಜಿಲ್ಲೆ) ಮತ್ತು (2) **ಬೈಂದೂರು** (ದಕ್ಷಿಣ ಕನ್ನಡ ಜಿಲ್ಲೆ) ಈ ಸ್ಥಳಗಳಲ್ಲಿ ತೆರೆಯಲ್ಪಟ್ಟಿರುವುವು.

ಈ ಬ್ಯಾಂಕಿನ ರಿಜಿಸ್ಟರ್ಡ್ ಆಫೀಸನ್ನು ತಾ. 19-3-1937ನೇ ಶುಕ್ರವಾರ ಇಡೀ ಪಟ್ಟಣದ ಮಧ್ಯ ಸ್ಥಳವಾದ **ಮಸೀದಿ ರಸ್ತೆಯಲ್ಲಿರುವ** (ದಿವಂಗತ ಖಾನ್ ಬಹದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮು ಸಾಹೇಬರು ವಾಸ್ತವಿಸಿದ್ದ) **ಭವ್ಯವಾದ ಕಟ್ಟಡಕ್ಕೆ ಒಯ್ಯಲ್ಪಟ್ಟಿರುವುದು.**

ಎಸ್. ಶ್ರೀನಿವಾಸ ಪ್ರಭು,
MANAGER

ಉಡುಪಿ, ತಾ. ೨೨-೪-'೩೭ ಗುರುವಾರ

ತಪ್ಪು ಯಾರದು?

ಕಾಂಗ್ರೆಸು ಮತ್ತು ಬ್ರಿಟಿಷ್ ಸರಕಾರಗಳೊಳಗೆ ನಡೆದಿರುವ ಪ್ರಕೃತದ ಜಗ್ಗಾಟದಲ್ಲಿ ತಪ್ಪುಯಾರದು? ದೇಶದ ಬಿಕ್ಕಟ್ಟಿನ ಪರಿಸ್ಥಿತಿಗೆ ಕಾರಣರಾರು? ಎಂಬುದೀಗ ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ. ಬ್ರಿಟಿಷರು ಅದೆಷ್ಟರ ಮಟ್ಟಿನ ಆಡಳಿತ ಸ್ವಾತಂತ್ರವನ್ನು ಹಿಂದೀಯರಿಗಿತ್ತಿರುತ್ತಾರೆ; ಅದರಿಂದ ಎಷ್ಟರ ಮಟ್ಟಿಗೆ ಅವರು ತೃಪ್ತರಾಗಿರುತ್ತಾರೆಂಬುದು ಜಗತ್ತಿಗೆಲ್ಲಾ ಈಗ ತಿಳಿಯುವಂತಾಗಿರುವುದು. ಚುನಾವಣೆಯಲ್ಲಿ ಕಾಂಗ್ರೆಸ್ಸು ಪ್ರಚಂಡ ವಿಜಯ ಪಡೆದು ಆರು ಪ್ರಾಂತ್ಯಗಳಲ್ಲಿ ಹೊಸ ಸುಧಾರಣಾ ಆಕ್ಟಿಗನುಗುಣವಾಗಿ ಮಂತ್ರಿ ಪದವಿ ರಚಿಸಲಾಗದೆ, ಗವರ್ನರರು ತನ್ನ ಹಸ್ತಕರಾದ ಕೆಲವರನ್ನು ಮಂತ್ರಿಗಳಾಗಿ ನೇಮಿಸಿಕೊಳ್ಳುವ ವಿಪರ್ಯಾಸವನ್ನು ನಡೆಸಿರುವುದರಿಂದ ಪರಿಸ್ಥಿತಿಯು ಮತ್ತಷ್ಟು ಕ್ಷೋಭೆಗೊಂಡಿದೆ!

ಕಾಂಗ್ರೆಸಿನವರು ಆಡಳಿತ ಜವಾಬ್ದಾರಿಯನ್ನು ವಹಿಸುವ ಮೊದಲು, ಗವರ್ನರರು ತನ್ನ ವಿಶೇಷಾಧಿಕಾರಗಳನ್ನುಪಯೋಗಿಸದೆ ತಮಗೆ ಸಂಪೂರ್ಣ ಆಡಳಿತ ಸ್ವಾತಂತ್ರ್ಯವೀಯುವ ಆಶ್ವಾಸನೆಯನ್ನು ಮುಂದಾಗಿ ಕೇಳಿದುದು ನ್ಯಾಯ ಸಮ್ಮತವೇ? ಗವರ್ನರರಿಗೆ ಇಂಡಿಯಾ ಆಕ್ಟಿನ ಮೇರೆಗೆ ಅಂತಹ ಆಶ್ವಾಸನೆಯೀಯಲು ಸಾಧ್ಯವೇ? ಎಂಬೀ ಕುರಿತು ಹಿಂದುದೇಶದಲ್ಲಿಯೂ ಇಂಗ್ಲೆಂಡಿನಲ್ಲಿಯೂ ಭಿನ್ನಾಭಿಮತವುಂಟಾಗಿರುವುದು. ಹಿಂದೀಯರಲ್ಲಿ ಸರ್. ತೇಜ ಬಹದೂರು ಸಪ್ರುಗಳೇ ಮೊದಲಾದ ಕೆಲವೇ ಮಂದಿಯ ಹೊರತು ಹೆಚ್ಚಿನವರು, ಕಾಂಗ್ರೆಸು ಗವರ್ನರರಿಂದ ಸಂಪೂರ್ಣ ಪ್ರಾಂತಿಕ ಆಡಳಿತ ಸ್ವಾತಂತ್ರ್ಯದ ಆಶ್ವಾಸನೆ ಕೇಳಿದುದು ನ್ಯಾಯ; ಗವರ್ನರರಿಗೆ ಇಂಡಿಯಾ ಆಕ್ಟಿನ ಮೇರೆಗೇನೇ ಅಂತಹ ಆಶ್ವಾಸನೆ ಕೊಡಲು ಸಾಧ್ಯವಿದೆಯೆಂಬ ಅಭಿಮತವುಳ್ಳವರಿರುವರು. ಮಾಜಿ ಹೈಕೋರ್ಟು ನ್ಯಾಯಾಧೀಶರುಗಳೂ, ದೊಡ್ಡ ದೊಡ್ಡ ವಕೀಲರೂ, ವಕೀಲ ಸಂಘದವರೂ ಕಾಂಗ್ರೆಸಿನ ಧೋರಣೆಯನ್ನು ಸಮರ್ಥಿಸಿರುವರು. ಇಡೀ ಲೋಕದ ರಾಜನೀತಿಜ್ಞರಲ್ಲಿ ಅಗ್ರಗಣ್ಯಸಾಲಿಗೆ ಸೇರಿರುವ ಇಂಗ್ಲೆಂಡಿನ ಪ್ರೊಫೆಸರ್ ಕೀತರೇ, ಕಾಂಗ್ರೆಸಿನ ಧೋರಣೆಯು ನ್ಯಾಯವಾದುದೆಂದು ವ್ಯಕ್ತಪಡಿಸಿರುವುದು ಮಾತ್ರವಲ್ಲದೆ, ಗವರ್ನರರು ಇಂಟೆರಿಮ್ ಮಂತ್ರಿಗಳನ್ನು ಸ್ಥಾಪಿಸಿರುವುದು ಪ್ರಜಾಸತ್ತೆಯ ಮೂಲ ತತ್ವಕ್ಕೇನೇ ವಿಘಾತವಾದುದೆಂದು ಹೇಳಿರುವರು. ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರು ಮಾತ್ರ ಸದರ್ಪ ಅಧಿಕಾರವಾಣಿಯಿಂದ, ಗವರ್ನರರು ಕಾಂಗ್ರೆಸಿನವರಿಗೆ ಇಂಡಿಯಾ ಆಕ್ಟಿನ ಮೇರೆಗೆ ಆಶ್ವಾಸನೆ ಈಯಲು ಸಾಧ್ಯವಿಲ್ಲ. ಅಂತಹ ಆಶ್ವಾಸನೆ ಕೊಡುವುದರಿಂದ, ಹಿಂದು ದೇಶದ ಅಲ್ಪ ಸಂಖ್ಯಾಕರಹಿತ ರಕ್ಷಣೆಯೇ ಮೊದಲಾದ ಗವರ್ನರರ ಜವಾಬ್ದಾರಿಯನ್ನು ಬಿಟ್ಟುಕೊಟ್ಟಂತಾಗುವುದು, ಕಾಂಗ್ರೆಸ್ ಪಕ್ಷೀಯರ ಧೋರಣೆಯು ನ್ಯಾಯಸಮ್ಮತವಾದುದಲ್ಲ, ಅವರು ತಮ್ಮ ಪ್ರಕೃತದ ಧೋರಣೆಯನ್ನು ಮಾರ್ಪಡಿಸಿ, ವೈಸರಾಯರೊಡನೆ ಸಂಧಿಪ್ರಸ್ತಾಪ ನಡಿಸುವ ತನ್ನ ಅಪೇಕ್ಷೆಯನ್ನು ಸೂಚಿಸದ ವಿನಹ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸುವಂತಿಲ್ಲ, ಗವರ್ನರರು ಪ್ರಾಂತದ ಆಡಳಿತ ನಡಿಸುವುದಕ್ಕಾಗಿ ಇಂಟೆರಿಮ್ ಮಂತ್ರಿಗಳನ್ನು ನೇಮಿಸಿದುದರಲ್ಲಿ ಅಯುಕ್ತವಾದುದೇನೂ ಇಲ್ಲೆಂದು, ಲೋರ್ಡ್ಸ್ ಸಭೆಯಲ್ಲಿ ಕಂಠೋಕ್ತವಾಗಿ ಹೇಳಿರುವರು. ಇದರಿಂದ ಅವರು ದೇಶದ ಪ್ರಕೃತದ ಬಿಕ್ಕಟ್ಟನ್ನು ಯಾವುದಾದರೊಂದು ರೀತಿಯಲ್ಲಿ ನಿವಾರಿಸುವ ದಾರಿಯನ್ನು ಮುಚ್ಚಿಬಿಟ್ಟಂತಾಗಿರುವುದು.

ಈ ವಿದ್ಯಮಾನಗಳಲ್ಲಿ ಗಾಂಧಿಜಿಯವರು ಮಾಡಿರುವ ಸೂಚನೆಯು ಅತ್ಯಂತ ವಿವೇಕಪರವಾದುದಿದ್ದು ತಪ್ಪು ಆಳರಸರದ್ದಲ್ಲದೆ ಕಾಂಗ್ರೆಸಿನವರದ್ದಲ್ಲವೆಂಬುದನ್ನು ಲೋಕವಿಶ್ರುತಗೊಳಿಸುವಂತಹದಾಗಿದೆ. ಆಳರಸರಿಂದ ಆಡಳಿತ ಸ್ವಾತಂತ್ರ್ಯದ ಕುರಿತಾದ ಯಾವ ತರದ ಆಶ್ವಾಸನೆಯನ್ನೂ ಪಡೆಯದೆ ರಾಜ್ಯಭಾರದ ಜವಾಬ್ದಾರಿ ವಹಿಸಿ ಕಡೆಗೆ ಅಪಹಾಸ್ಯ, ಅಪಮಾನಕ್ಕೊಳಗಾಗುವುದು ಕಾಂಗ್ರೆಸಿನ ಸ್ವಾಭಿಮಾನಕ್ಕೆ ಕುಂದು. ಸಹಾನುಭೂತಿಯಿಂದ ಸಹಾಯ ಮಾಡುವೆವೆಂಬ ಆಳರಸರ ಬಾಯಿಮಾತಿನ ಟೊಳ್ಳುತನವನ್ನು ಕಾಂಗ್ರೆಸಿನವರು ಹಲವು ಬಾರಿ ಪರೀಕ್ಷಿಸಿ ಕಂಡುಕೊಂಡಿರುವರು. ಗವರ್ನರರುಗಳ ಬಾಯಿ ಮಾತಂತಿರಲಿ, ವೈಸರಾಯರು ಬ್ರಿಟಿಷ್ ಪ್ರಧಾನ ಮಂತ್ರಿಗಳೇ ಸಂದರ್ಭಾನುಸಾರ ಕೊಟ್ಟಿರುವ ವಾಗ್ದಾನಗಳೇ ತೃಣಸಮಾನವಾಗಿ ಮೂಲೆಗೊತ್ತಲ್ಪಟ್ಟಿರುವವು. ಇದು ಹೊರತು ಕಳೆದ 15 ವರ್ಷಗಳಿಂದ ಕಾಂಗ್ರೆಸು ಸರಕಾರದ ಬದ್ಧ ವೈರಿಯಾಗಿ ಹೋರಾಡಿರುವುದು. ಇಂಡಿಯಾ ಆಕ್ಟಿನಿಂದ ಇದ್ದ ಸ್ವಾತಂತ್ರ್ಯವೇ ಹೋಗುವಂತಾಗಿದೆಯೆಂಬ ದೃಢ ನಿರ್ಧಾರದಿಂದ ಅದನ್ನು ಆದಿಯಿಂದ ಇಂದಿನ ವರೆಗೆ ಪ್ರಬಲವಾಗಿ ವಿರೋಧಿಸುತ್ತಾ ಬಂದಿರುವುದು. ಈಗ ಅದೇ ಆಕ್ಟನ್ನು ಸ್ವೀಕರಿಸಿ ಪ್ರಾಂತಿಕ ರಾಜ್ಯಭಾರ ನಡಿಸಿದರೆ ಕಾಂಗ್ರೆಸ್ಸಿನವರು ತಮ್ಮ ಧ್ಯೇಯಕ್ಕೇನೇ ಭಂಗಮಾಡಿದಂತಾಗುವುದು. ಆದುದರಿಂದ ಅವರು ಪ್ರಾಂತಿಕ ಆಡಳಿತ ಜವಾಬ್ದಾರಿ ವಹಿಸುವ ಮೊದಲೇ ತಮಗೆ ಎಷ್ಟರ ಮಟ್ಟಿನ ಪ್ರಾಂತಿಕ ಸ್ವಾತಂತ್ರ್ಯವೀಯಲ್ಪಡುವುದೆಂಬುದನ್ನು ಪರೀಕ್ಷಿಸುವ ಧೋರಣೆ ವಹಿಸಿದುದು ಸ್ವಾಭಾವಿಕವೂ ಯುಕ್ತವೂ ಆಗಿದೆ. ಯಾಕೆಂದರೆ ಇಂಡಿಯಾ ಆಕ್ಟಿನಲ್ಲಿ ಹಿಂದೀಯರಿಗೆ ಸಂಪೂರ್ಣ ಅಧಿಕಾರ ಕೊಡಲ್ಪಟ್ಟಿದೆಯೆಂದು ಆಳರಸರು ಘಂಟಾಘೋಷವಾಗಿ ಹಲವುವೇಳೆ ಸಾರಿಹೇಳಿರುವರು. ಮಾತ್ರವಲ್ಲದೆ ಕಾಂಗ್ರೆಸಿನವರು ಜವಾಬ್ದಾರಿ ವಹಿಸುವ ಮನಸ್ಸಿಲ್ಲದೆ ಬೇರೆಯವರಿಗೆ ತೊಡಕನ್ನುಂಟುಮಾಡುವ ಕುತಂತ್ರಿಗಳು, ಅವರಿಗೆ ಮನಸ್ಸಿದ್ದರೆ, ಈಗ ಕೊಡಲ್ಪಟ್ಟಿರುವ ನಿಜವಾದ ಪ್ರಾಂತಿಕ ಸ್ವಾಯತ್ತತೆಯ ಮೂಲಕ ಜನಹಿತ ಸಾಧನೆಮಾಡಬಹುದು ಆದರೆ ಅದು ಕಾಂಗ್ರೆಸಿಗೆ ಬೇಕಾಗಿಲ್ಲ,ತಾವು ಮತದಾರರ ಮುಂದಿಟ್ಟಿರುವ ಕಾರ್ಯಕ್ರಮವನ್ನು ಕಾರ್ಯತಃ ಜ್ಯಾರಿಗೆ ತರಲು ಅಸಾಧ್ಯವಿರುವುದರಿಂದ, ಕಾಂಗ್ರೆಸಿನವರು ಆಡಳಿತ ಜವಾಬ್ದಾರಿ ವಹಿಸಲು ತಪ್ಪಿಸಿಕೊಳ್ಳುತ್ತಿರುವರೆಂದೆಲ್ಲಾ ಕಾಂಗ್ರೆಸ್ಸಿನವರನ್ನು ಹಲವು ರೀತಿಯಲ್ಲಿ ಟೀಕಿಸಿರುವರು. ಆದರೆ ಕಾಂಗ್ರೆಸಿನವರು ಜವಾಬ್ದಾರಿ ವಹಿಸಲು ಸಿದ್ಧರಾಗಿ ಬಂದು ನಿಜವಾದ ಆಡಳಿತ ಸ್ವಾತಂತ್ರ್ಯವನ್ನು ಕೇಳುವಾಗ ಮಾತ್ರ, ಅದನ್ನು ಕೊಡಲು ಬ್ರಿಟಿಷರು ಸಿದ್ಧರಿಲ್ಲ. ಇದರಿಂದ ಅವರ ಮಾತಿಗೆ, ವಾಗ್ದಾನಗಳಿಗೆ ಬೆಲೆ ಎಷ್ಟೆಂಬುದು ಸಿದ್ಧವಾಗದಿರದು. ಗಾಂಧಿಜಿಯವರೀಗ ಅವರನ್ನು ದೊಡ್ಡ ಉಭಯ ಸಂಕಟದಲ್ಲಿ ಹಾಕಿರುವರು. ಗವರ್ನರರು ಇಂಡಿಯಾ ಆಕ್ಟಿನ ಮೇರೆಗೆ ಕಾಂಗ್ರೆಸಿನವರು ಕೇಳುವ ಆಶ್ವಾಸನೆ ಕೊಡಬಹುದೋ ಕೊಡದೋ ಎಂಬ ಕುರಿತು ಭಿನ್ನಾಭಿಪ್ರಾಯವಿರುವುದೆಂಬುದನ್ನು ಅವರು ಅಂಗೀಕರಿಸಿ ಆ ವಿಷಯದ ತೀರ್ಮಾನವನ್ನು ೩ ಮಂದಿ ನ್ಯಾಯಾಧೀಶರಿಗೆ ಒಪ್ಪಿಸಬೇಕು. ಈ ಮೂರು ಮಂದಿಯಲ್ಲಿ ಒಬ್ಬರನ್ನು ಕಾಂಗ್ರೆಸ್ಸಿನವರೂ, ಇನ್ನೊಬ್ಬರನ್ನು ಸರಕಾರದವರೂ ಆರಿಸಬೇಕು. ಮೂರನೆಯವರನ್ನು ಈ ಇಬ್ಬರು ನ್ಯಾಯಾಧೀಶರು ಆರಿಸಬೇಕು. ಈ ಮೂರು ಮಂದಿಯ ತೀರ್ಮಾನಕ್ಕೆ ಇತ್ತಂಡದವರೂ ಒಪ್ಪಬೇಕೆಂದೇ ಮಹಾತ್ಮರ ಸೂಚನೆ. ಇಂತಹ ನ್ಯಾಯಪರವಾದ ಸೂಚನೆಯನ್ನು ಆಳರಸರಿಗೆ ಥಕ್ಕನೆ ಮೂಲೆಗೊತ್ತಲು ಸಾಧ್ಯವಿಲ್ಲ. ಆದುದರಿಂದ ಆ ಕುರಿತು ಆಲೋಚಿಸಲಾಗುವುದೆಂದಿಷ್ಟೇ ಹೇಳಿ ಸುಮ್ಮನಾಗಿರುವರು. ಇದು ಹೊರತು ರಾಜಿಮಾಡುವ ವಿಷಯದಲ್ಲಿ ತನಗೆ ಯಾವುದೊಂದು ತರದ ಪ್ರತಿಷ್ಠೆಯೂ ಇಲ್ಲವೇ ತಾನು ಮಾಡಿರುವ ಸೂಚನೆಗಳೆಲ್ಲಾ ತನ್ನದೇ ಹೊರತು ಕಾಂಗ್ರೆಸಿನದಲ್ಲ. ತಾನು ಕಾಂಗ್ರೆಸು ಮತ್ತು ಸರಕಾರಗಳೊಳಗೆ ಮಧ್ಯಸ್ಥಿಕೆ ವಹಿಸಲು ಸದಾ ಸಿದ್ಧನಿರುವನೆಂದು ಕೂಡಾ ಗಾಂಧಿಯವರು ವ್ಯಕ್ತಪಡಿಸಿರುವರು. ಇದರಿಂದ ಕಾಂಗ್ರೆಸಿನವರದೇನೂ ತಪ್ಪಿಲ್ಲ. ತಪ್ಪು ಸರಕಾರದ್ದೆಂಬುದು ಎಂಥವನಿಗಾದರೂ ವಿದಿತವಾಗದಿರದು.

ಇಂಟೆರಿಮ್ ಮಂತ್ರಿಗಳನ್ನು ಸ್ಥಾಪಿಸಿ **ಗವರ್ನರರುಗಳು ಸುಧಾರಣಾ ಆಕ್ಟನ್ನೇ ಮೂಲೆಗೊತ್ತಿದಂತಾಗಿದೆ; ಪ್ರಚಂಡ ಜನಮತವನ್ನು ಧಿಕ್ಕರಿಸಿ ಇಚ್ಛಾನುಸಾರ ನಡೆ**ದಂತಾಗಿದೆ ಎಂಬ ಕುರಿತು ದೇಶದಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯವೇನೂ ಇರವುದಿಲ್ಲ. ಈ ಮಂತ್ರಿಗಳಿಗೆ ಎಂತಹ ಬೆಂಬಲವಿದೆ ಎಂಬುದು, ಗವರ್ನರರು ಎಸೆಂಬ್ಲಿ ಸಭೆ ಕರೆದಲ್ಲಿ ತಿಳಿಯುವುದು. ಒಂದೇ ಒಂದು ದಿನವಾದರೂ ಈ ಮಂತ್ರಿಗಳು ಅಧಿಕಾರದಲ್ಲಿರಲಾರರು. ಸರಕಾರವು ಹಿಂದೀಯರೆಲ್ಲರ ಒಮ್ಮತವಾದ ಅಭಿಪ್ರಾಯವನ್ನು ಒಂದಿಷ್ಟಾದರೂ ಗಣಿಸುವುದಾದರೆ ಕೂಡಲೇ ಎಸೆಂಬ್ಲಿ ಸಭೆ ಕರೆಯಲೇಬೇಕು. ಇಲ್ಲವಾದರೆ ಕಾಂಗ್ರೆಸಿನೊಡನೆ ಯಾವದಾದರೊಂದು ರೀತಿಯಲ್ಲಿ ರಾಜಿಮಾಡಿ ಪ್ರಕೃತ ದೇಶದಲ್ಲಿ ಉಪಸ್ಥಿತವಾಗಿರುವ ಬಿಕ್ಕಟ್ಟನ್ನು ಕೂಡಲೇ ನಿವಾರಿಸುವಂತೆ ನೋಡಬೇಕು. ಇದೇರೀತಿ ನಡೆದರೆ ಪರಿಸ್ಥಿತಿಯು ಅವರಕ್ಕೆ ಮಿಾರಿಹೋಗಿ ದೇಶದ ಶಾಂತಿಭಂಗಕ್ಕೆ ಅವರೇ ಕಾರಣರಾದಂತಾಗುವುದೆಂದು ಈವರೆಗೆ ಸರಕಾರದೊಡನೆ ಸಹಕರಿಸಿಕೊಂಡು ಬಂದಿರುವ ಮಂದ ಪಕ್ಷೀಯ ಮುಖಂಡರೇ ಕೇಳಿಕೊಳ್ಳ ಹತ್ತಿರುವರು, ಸರ್ ಮಹಮ್ಮದ್ ಉಸ್ಮಾನರಂಥವರು ಕೂಡಾ ಕಾಂಗ್ರೆಸಿನವರೊಡನೆ ಸಂಧಿಮಾಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಂಡಿರುವರು. 'ಸ್ಟೇಟ್ಸ್‌ಮೆನ್'' ನಂತಹ ಆಂಗ್ಲೋ ಇಂಡಿಯನ್ ಪತ್ರಿಕೆಗಳೂ ಸರಕಾರದ ಧೋರಣೆಯನ್ನು ಕಠಿಣವಾಗಿ ಟೀಕಿಸಿ ಆಳರಸರು ತುಸುವಿವೇಕತಾಳಿ ಕಾಂಗ್ರೆಸಿನ ನ್ಯಾಯವಾದ ಕೇಳಿಕೆಯನ್ನು ಮನ್ನಿಸಬೇಕೆಂದು ಆಗ್ರಹದಿಂದ ಕೇಳಹತ್ತಿರುವವು. ಇಂಡಿಯಾ ಆಕ್ಟಿನಿಂದ ಹಿಂದೀಯರು ತೃಪ್ತಿಗೊಂಡಂತಿಲ್ಲೆಂದು ಬ್ರಿಟಿಷರಿಗಾಗಿ ಮನವರಿಕೆಯಾಗ ಹತ್ತಿರುವುದು.ಸರಕಾರವಾದರೋ ಸ್ವಲ್ಪ ಸಮಯದ ವರೆಗೆ ಕಾದು ನೋಡುವ ಧೋರಣೆವಹಿಸಿರುವಂತಿದೆ ಅದೇನು ಮಾಡಿದರೂ, ಕಾಂಗ್ರೆಸಿನೊಡನೆ ರಾಜಿ ಮಾಡದೆ ದೇಶದ ಈಗಿನ ಬಿಕ್ಕಟ್ಟು ನಿವಾರಣೆಯಾಗುವ ಹಾಗಿಲ್ಲ. ಆದುದರಿಂದ ಆಳರಸರಲ್ಲಿ ಸ್ವಲ್ಪವೇನಾದರೂ ವಿವೇಕವು ಉಳಿದಿದ್ದರೆ, ಅವರ ಮುತ್ಸದ್ದಿತನವು ಸಂಪೂರ್ಣ ದಿವಾಳಿಯಾಗಿ ಹೋಗಿರದಿದ್ದರೆ ಈ ಸಂದರ್ಭದ ಮತ್ತು ಗಾಂಧಿಜಿಯವರ ಉದಾರ ಮನೋವೃತ್ತಿಯ ಸದುಪಯೋಗ ಪಡೆದು ಕಾಂಗ್ರೆಸಿನವರ ನ್ಯಾಯವೂ ಅತ್ಯಂತ ವಿವೇಕಪರವೂ ಆದ ಕೇಳಿಕೆಯನ್ನು ಮನ್ನಿಸತಕ್ಕದ್ದು.

ಬೇಕಾಗಿದೆ

ಚತುರ ಕೆಲಸಗಾರರು ಬೇಕು. ಹೆಚ್ಚಿನ ಮಾಹಿತಿಗಳಿಗೆ ಒಂದಾಣೆಸ್ಟಾಂಪಿನೊಂದಿಗೆ ಬರೆಯುವುದು.

"K"
C/o NAVAYUGA, UDIPI

ಉಡುಪಿ

ತಾ. ೧೨–೪–೩೭ನೇ ಸೋಮವಾರ ಸಂಜೆ ಸಾಧಾರಣ ಆರೂವರೆ ತಾಸಿಗೆ ಸ್ಥಳೀಯ ಹೆಮ್ಮಕ್ಕಳ ಟ್ರೈನಿಂಗ್ ಶಾಲೆಯ ವರ್ಧಂತಿ ಸಮಾರಂಭವು ಸೌಭಾಗ್ಯವತಿ ಶಾಂಭವಿ ಬಾಯಿ, ಆರ್. ಪೂಂಜ, ಬಿ ಎ.ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೊರಾಂಗಣವು ನಿಶಾನೆಗಳಿಂದ ಅಲಂಕೃತವಾಗಿತ್ತು. ದೇವತಾ ಪ್ರಾರ್ಥನೆಯಾಗಿ

ಗಳಲ್ಲಿ ನಡೆದ ವಿದ್ಯಮಾನಗಳನ್ನು ವಿಸ್ತಾರವಾಗಿ ವಿವರಿಸಿಹೇಳಿದರು. ತಾತ್ಕಾಲಿಕ ಮಂತ್ರಿಮಂಡಲದ ಸದಸ್ಯರಲ್ಲೊಬ್ಬರಾದ ಶ್ರೀ ಪಾಲಟರು ನಿಜವಾಗಿಯೂ ಪ್ರಜಾಪಕ್ಷದ ಬಹುಮಂದಿಯ ಪ್ರತಿನಿಧಿಗಳಾಗಿ ಉಡುಪಿಗೆ ಬರುತ್ತಿದ್ದರೆ ಅವರು ಎಂತಹ ಮಾನಮರ್ಯಾದೆಗಳಿಗೆ ಪಾತ್ರರಾಗುತ್ತಿದ್ದರು ಎಂಬುದನ್ನು ವಿಶದೀಕರಿಸಿದರು ಹಿಂದೀ ಜನಾಂಗದ ಐಕ್ಯತೆಯು ದಿನೇ ದಿನೇ ಪ್ರಬಲವಾಗಿ ಬೆಳೆಯುತ್ತಿರುವುದು ಸರಕಾರಕ್ಕೆ ತಿಳಿ

ಯವಾಗಿರುತ್ತದೆ ಈ ವಿಷಯದಲ್ಲಿ ಸ್ಪೆಶಲ್ ಪೋನ್ ಆಫಿಸರರು ಹೀಗೆ ತಿಳಿಸುತ್ತಾರೆ—

ಕೃಷಿಕರ ಸಾಲ ಸಂಬಂಧವಾದ ಸರಕಾರದ ಆಕ್ಟಿನ ಪ್ರಕಾರ ಸಾಲಪಡಕೊಳ್ಳುವ ಬಗ್ಗೆ ಜನರಿಂದ ಅರ್ಜಿಗಳು ಸ್ವೀಕರಿಸಲಾಗುವವು ಆದರೆ ಈ ಸಾಲವು ಮಂಗಳೂರು ತಾಲೂಕಿನ ಸುರತ್‌ಕಲ ಮೂಲ್ಕಿ ಮತ್ತು ಉಡುಪಿ ತಾಲೂಕಿನ ಉಡುಪಿ ಮತ್ತು ಕಾಪು ಈ ಭಾಗಗಳ ರೆವಿನ್ಯೂ ಇನ್ಸ್ಪೆಕ್ಟರರ ಫಿರ್ಕಾದಲ್ಲಿರುವವರಿಗೆ ಮಾತ್ರ ದೊರೆಯುವುದು ಅಲ ದೆ ಸಾ

ಇದೇ ತಾ ೧೨–೪–೩೭ನೇ ಸೋಮವಾರ ಪೂರ್ವಾಹ್ನ ೧೧ಕ್ಕೆ ಶ್ರೀ. ಕೆ. ಆರ್. ಭಟ್ಟ ಯವರ ವಠಾರಗೆಯಲ್ಲಿ ವಿಜಯಾ ಬೇಂಕಿನ ಶಾಖೆಯನ್ನು ತೆರೆಯುವ ಸಮಾರಂಭೋತ್ಸವವು. ರಾವ್ ಸಾಹೇಬ್ ಹೊಸಕೋಟೆ ಗಣಪತಿರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಊರ ಪ್ರಮುಖ ಮಹನೀಯರೆಲ್ಲಾ ದಯಮಾಡಿಸಿದ್ದರು. ಈ ತಾಲೂಕಿನವರ ಪ್ರೋತ್ಸಾಹದಿಂದ ಈ ಶಾಖೆಯು ಅಭಿವೃದ್ಧಿ ಹೊಂದಲೆಂದು ಬೇಂಕಿನ ಶ್ರೇಯಸ್ಸನ್ನು ಬಯಸಿ ಪ್ರಾರ್ಥಿಸುತ್ತೇವೆ.

ಕೋಟ

ಇಲ್ಲಿಯ ಗಿಳಿಯಾರು ಶ್ರೀಶಾಂಭವೀ ವಿದ್ಯಾದಾಹಯರ್ ಎಲಿಮೆಂಟರಿ ಶಾಲೆಯವರ್ಧಂತ್ಸುವ ಈ ತಿಂಗಳ ತಾರೀಕು ೧೯ನೇ ಸೋಮವಾರ ದಿನ ಸು ನ್ಯಾಯವಿಧಾಯಕ ಸಭೆಯ ಸದಸ್ಯರಾದ ಬಿ ಶೆಟ್ಟರವರ ಅಧ್ಯಕ್ಷತೆಯಲ್ಲಿ ಬಹಳಸಂಭ್ರದ ಜರಗಿತು ಮಂಗಳೂರು, ಉಡುಪಿ, ಕಾ ಕುಂದಾಪುರ ಮುಂತಾದ ಹಳವು ಪ್ರಾಮುಖಗಳಿಂದ ಅನೇಕ ಮಂದಿ ಮಹನೀಯರು ಬ ನ್ದರು, ಶಾಲಾ ಮಕ್ಕಳ ವಿವಿಧ ಚಟುವಟಿಕೆ ಜನಮನೋರಂಜನವಾಗಿದ್ದುವು. ಇದರ ಲ್ಲಿ ಶ್ರೀಮಾನ್ ಎಸ್ ಎಸ್. ಹೊಳ್ಳರ ಸಹ ಸ್ತುತ್ಯಾರ್ಹವಾಗಿತ್ತು. ಯಕ್ಷಗಾನ, ನಾಟಕ ಪ್ರೇಕ್ಷಕರನ್ನು ಮುಗ್ಧಗೊಳಿಸಿದವು. ಅ ರ ಸುಮಧುರ ಭಾಷಣವನ್ನು ಕೇಳಿ, ಸಭಿಕರ ನಂದಗೊಂಡರು. ಶಾಲಾ ಮೆನೇಜರರಾದ ಷ ಕಾರಂತರವರ ಹೃದಯದ್ರಾವಕವಾದ ಂ ನ ಸಮರ್ಪಣಾನಂತರದಲ್ಲಿ, ಅಂದಿನ ವರ್ಧಮಾನ್ಸವವು ಕೊನೆಗೊಂಡಿತು.”

ಕಾಂಗ್ರೆಸ್ ಪ್ರಚಾರ ಕಾರ್ಯ ಪುತ್ತೂರು ಡಿವಿಜನ್.

೯-೪ '೩೭ರಲ್ಲು ಬೆಳಿಗ್ಗೆ ಉಪ್ಪಿನಂಗಡಿಯ ವೆಂಕಪ್ಪಶೆಟ್ಟಿಗಳವರ ಅಧ್ಯಕ್ಷತೆಯಲ್ಲಿ ಸೇರಿದ ಜನರ ಸಭೆಯಲ್ಲಿ ಶ್ರೀ ಕೆ. ಆರ್, ಕಾರಂತ, ಎಲ್ ಎ, ಯವರು ಕಾಂಗ್ರೆಸ್ಸಿನವರು ಮಂ ಸ್ಥಾನಗಳನ್ನು ಏಕೆ ನಿರಾಕರಿಸಿದರೆಂಬುದನ್ನು ದವರು ತಾತ್ಕಾಲಿಕ ಮಂತ್ರಿಮಂಡಲಗಳ ಚಿಸಿದುದು ಸರಿಯಲ್ಲ ಎಂದು ಮೊದಲಾಗಿ ಭಾಷಿಸಿದರು.

ದಿನ ಸಾಯಂಕಾಲ ಕಡಬದಲ್ಲಿ ಸೇರಿದ ನ ಸಭೆಯಲ್ಲಿ ಸಭಾಧ್ಯಕ್ಷರು ಶ್ರೀ ಬಿ. ಟಿ. ವರು, ಶ್ರೀ ಗಳಾದ ಕೆ. ಆರ್. ಕಾರಂತ, ಬಿ. ರೈಯವರೂ ಈಗಿನ ರಾಜಕೀಯ ಪರಿಸ್ಥಿ ಕುರಿತು ವಿವರಿಸಿದರು.

೧೧-೪-೩೭ನೇ ದಿನ, ಬೆಳಿಗ್ಗೆ ಸುಳ್ಯದಲ್ಲಿ ಶ್ರೀ ಬಿ ಲಿಂಗಪ್ಪ ಗೌಡರ ಅಧ್ಯಕ್ಷತೆಯಲ್ಲಿ ಸೇ ಸಾಜನ ಸಭೆಯಲ್ಲಿ ಶ್ರೀ ನೊಳಹಳ್ಳಿ ಶಿವರಾ ಶ್ರೀ ಕೆ. ಆರ್. ಕಾರಂತರು, ಮೇಲಿನ ವಿಷ ನ್ನೇ ವಿವರಿಸಿ ಎಲ್ಲರೂ ಕಾಂಗ್ರೆಸ್ಸಿಗೆ ಬೆಂಬಲ ಕಾಗಿ ಪ್ರಾರ್ಥಿಸಿದರು.

೧೨-೪ '೩೭ರಲ್ಲು ಸಾಯಂಕಾಲ ಪುತ್ತೂರ ಬೆಳ್ಳಿಪಾಡಿ ದಾಸಶೆಟ್ಟಿಗಳವರ ಅಧ್ಯಕ್ಷತೆಯಲ್ಲಿ ಜನ ಸಭೆಜರಗಿ ಶ್ರೀ. ಕೆ. ಆರ್. ಕಾರಂತರ ನಾಯ್ತು.

೧೩-೪-'೩೭ರಲ್ಲು ಸಾಯಂಕಾಲ ಕುಂಬಳೆ ಜರಗಿದ ಮಹಾ ಸಭೆಗೆ ಮದ್ರಾಸಿನ 'ಸಂದೇಶ' ಪತ್ರಿಕೆಯ ಸಂಪಾದಕರಾದ ಶ್ರೀ ಯಂ. ಕಾಮತರವರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಹಿ ರಾಮರಾಯಮಲ್ಯ, ಕೆ. ಆರ್. ಕಾ ಮೊದಲಾದವರ ಭಾಷಣಗಳಿದ್ದುವು. ಮೇಲಿನ ಸ್ಥಳಗಳಲ್ಲಿ ಗ್ರಾಮ ಕಾಂಗ್ರೆಸ್ ಕಮಿಟಿಗಳ ನ್ನ ಸ್ಥಾಪಿಸುವ ಉದ್ದೇಶದಿಂದ ಕಾಂಗ್ರೆಸ್ ಬರರು ಕಾಂಗ್ರೆಸ್ ಸದಸ್ಯರನ್ನು ಸೇರಿಸುತ್ತಿರು

ರಾಮರಾಯ ಮಲ್ಯ. ಕಾರ್ಯದರ್ಶಿ
ದ. ಕ. ಜಿಲ್ಲಾ ಕಾಂಗ್ರೆಸ್, ಕಮಿಟಿ.

ನವಯುಗ ತುಳು ಸಂಚಿಕೆ

ಸಂಪುಟ ೧ || ಮೇಷ (ಪಗ್ಗು) ೯ ಗುರುವಾರ || ಸಂಚಿಕೆ ೮

ಒರಿಯಾಂಡ್

(ಬರೆತಿನಾರ್. ಕುರುಂಜಿತ ಚಿನ್ನಪ್ಪ ಗೌಡೆರ್, ಸುಳ್ಯತ ಶಾಲೆ, ಬಾಲವ್ಯಂದ)

ಊರುಡೊಂಜಿ ಕುದ್ಕೆ ಜಾತಿ ।
ಉಂಡ್ ಆತ್ತೋಯಾ ?
ಕುದ್ಕೆ ಜಾತಿಡಾದ್ ಎನ್ನ ।
ಕೋರಿ ಜಾತಿ ಮುತ್ತ್ಂಡ್ ॥ ೧ ॥
ಕುದ್ಕೆಂಡ್ ಪಣ್ಪಿ ಪ್ರಾಣಿಳೇನ್ ।
ಮುಕ್ಳೋಡತ್ತೋಯಾ ?
ಇಜ್ಜಾಂಡೆನ್ನ ಕೋರಿ ಒಂಜಿ ।
ಒರಿಯಂದತ್ತೋಯಾ? ॥ ೨ ॥
ಐಕ್ ಆದ್ ನಾಯಿಳೇನ್ ।
ಸಾಂಕೋಡತ್ತೋಯಾ ॥
ನಾಯಿಡ್ದಾಪ್ ಕುದ್ಕೆಜಾತಿ ।
ಒರಿಯಂದತ್ತೋಯಾ ॥ ೩ ॥

ಕುಕ್ಕಣ್ಣಾ ಲಕ್ಕ್

(ಬರೆತಿನಾರ್ ಸುಳ್ಯೊತ ನಾರಾಯಣ ರೈ)

ಕುಕ್ಕಣ್ಣಾ ಲಕ್ಕಣ್ಣಾ ಕುಕ್ಕುನು ನೊಲ್ಲ ಪೆಜಿಲಣ್ಣಾ
ಜಾರ್‌ಡ್ ಬೂರಡ ಕುಕ್ಕುನು ಪೆಜನಗ
ಜಾಗ್ರತೆ ತೂಲಾ ಕುಕ್ಕಣ್ಣಾ
ಲಕ್ಕೊಡು ನೊಲ್ಲ ಶಬ್ದವು ಕೇಂಡ್ಬ
ಇಲ್ಲಡೆ ಮುಟ್ಟ್ಟೆ ಈ ತೂಲಾ
ಮಾಂತೆರ್ಲ ಬರುವೆರ್ ಕುಕ್ಕುನು ಪೆಜಿವೆರ್
ನಿಕ್ಕಲ ತಿಕ್ಕಂಡ್ ಕೊರಂಟ್ಲಾ

ಸಾಲೆಗ್ ಪೋವೋಡು

(ಬರೆತಿನಾರ್. ಸುಳ್ಯೊತ ನಾರಾಯಣ ರೈ)

ಅಮ್ಮ ಎಂಕ್ ಶಾಲೇಗ್ ಪೋವೋಡು
ಪಾಟೋ ಕಲ್ತ್‌ತ್ ಮಾಸ್ಟ್ರರಾತ್
ಕೋಟುಗೀಟು ಎಂಕ್ ಪಾಡೋಡು
ಅಮ್ಮ ಎಂಕ್ ಶಾಲೇಗ್ ಪೋವೋಡು
ಮಾಂತೆರೆಡ್ತ್ ಮಲ್ಲಯಾನ್ ಮಾಸ್ಟರಾವೋಡು
ಏನ್ ಹೆಡ್‌ಮಾಸ್ಟರಾವೋಡು
ಏನ್ ಎಡ್ಡೆ ಮಾಸ್ಟರಾವೋಡು
ಅಮ್ಮ ಎಂಕ್ ಶಾಲೇಗ್ ಪೋವೋಡು
ಕೋಟು ಚಡ್ಡಿ ಅಂಗಿಮಾಂತ ದೆತ್ತ್‌ಕೊರೋಡು
ಹೇಟ್ ಒಂಜಿ ತರೆಕ್‌ದೀಯರ ಎಂಕ್ ಕೊರೋಡು
ಪಾರಕಲಿಪ್ಯರ ಬೂಕು ಮಾಂತ ಎಂಕ್ ಕೋರೋಡು
ಅಮ್ಮ ಎಂಕ್ ಶಾಲೇಗ್ ಪೋವೋಡು

ಕಂಡು ಕೈಕಂಜಿಲ್

(ಗರತಿಯ ಪಾಡ್‌ತ ಮೆಟ್ಟ್)

(ಬರೆತಿನಾರ್. ಕುರುಂಜಿತ ಚಿನ್ನಪ್ಪ ಗೌಡೆರ್, ಸುಳ್ಯತ ಶಾಲೆ, ಬಾಲವ್ಯಂದ)

ಕಂಡು ಕೈಕಂಜಿಲ ಕಂಡೋನ್ ಸೂವೊಂಡ್
ಕಂಡೋದ ಬರೀಡೆ ಪೋಪಾರೇ ||ಕಂಡೋದ||
ನಿಕುಲು ಚೆಂಡೆದ ಬಲ್ಲೆನೆ ನೂರೊಂಡ್ ॥ ೧ ॥
ಬೇಲಿದ ಬರಿ ಬರಿ ಕಾರ್‌ನ್ ಪಾಡೊಂಡ್
ಉಲಾಯಿಗ್ ನೂರ್ಯಾರ ಬರ್ಪಾರೇ || ಉಲಾಯಿಗ್ ||
ನಿಕುಲು ಏರ್‌ಲಾ ಇಜ್ಜಂದ್ ಮಲ್ತಾರೋ ॥ ೨ ॥
ಸಾಲೆಗ್ ಪೋಪಿನಕ್ಲ್ ನಿಕ್ಲೆಗ್ ಬೋಡಾದ್
ಕುಲ್ಲೊಂದು ಉಳ್ಳೇರೆ ಜೋಕುಳು || ಕುಲ್ಲೊಂದು ||
ನಿಕುಲು ದಾಯೆಗ್ ಬರ್ಪುನ ಪೋಲೇಯೋ || ೩ ||

ಸಿಪಲ್ ಕೌನ್ಸಿಲರ್ ಶ್ರೀ. ಯು. ಸುಂದರ ಕಮ್ತಿಯವರು ಮಹಾಜನ ಸಭೆಯ ಮುಂದಿರಿಸಿದರು ಹಾಜರಿದ್ದ ಪ್ರೊಫೆಸರ್ ಸಿ ಜೆ ಪಾರ್ಕರ್. ಯಮ್ ಎಲ್ ಎ ಯವರು ಸದ್ರಿ ಠರಾವನ್ನು ಪುಷ್ಟೀಕರಿಸಿ ಇಂಗ್ಲಿಷಿನಲ್ಲಿ ಸರಳರೀತಿಯಿಂದ ಎಲ್ಲರಿಗೂ ತಿಳಿಯುವಂತೆ ಚಲೋದಾಗಿ ಮಾತನಾಡಿದರು. ಸಕಸುಧಾರಣ ಆಕ್ಟನ್ನಿತ್ತ ಸನ್ಮಾನನೀಯ ಅಧ್ಯಕ್ಷರಾದ ಶ್ರೀ ಎ ಬಿ ಶೆಟ್ಟರು ಭಾಷಣವೀಯುತ್ತ ಅ ಭಾ ಕಾ ಕಮಿಟಿ, ಡಿಲ್ಲಿ ಕನ್ವೆನ್ಷನ್

ನವಭಾರತ ಬುಕ್ ಡೆಪೋ

ಇದಕ್ಕಾಗಿ ಕಾದಿರಿಸಿದ ಸ್ಥಳ.

! ! !

ಬೇಕು

ವಿದ್ಯಾವತಿಯರೂ ರೂಪವತಿಯರೂ ಚೆನ್ನಾಗಿ ಹಾಡ ಬಲ್ಲವರೂ ಆದ ನಟಿಯರು ಬೇಕಾಗಿದೆ. ವಿವರಗಳಿಗೆ ಬರೆಯಿರಿ.

X

C/o "NAVAYUGA" Udipi.

ಮದ್ಲ್ತ ಬಾಳ್ವೆ

ಎಮ್. ವಿಟ್ಠಲ ಹೆಗ್ಡೆ.

೧

ಲೋಕ ಒಂಜಿ ನಡತೋದುಂಡ
ಯಾನ್ ಪಿನಯಿ ಯೆನನ್ ಬುಡುದೆ
ಕಾಲ ತಿರುಗುನವೆನ್ ತೂಂಡ
ಆಯೆ ನೀತಿ ಸೂತ್ರ ಕಡ್‌ದೆ
ಪಂತೆಡ್ ಪರಪಂಚನಾ?
ಕ್ರಮತ ನಡತ್ ಇಂಚನಾ?
ಬಾಳೊಲಿ ನನ ಯೆಂಚನಾ!
ಮಾತೆರವ್ಮಗಾಯುಗೀ ರೀತಿದ ಪೊಳಸಂಚನಾ?

೨

ಯೆನನ್ 'ಇಡೆಗ್ ನೂಕಿನಾಯೆ
ಕಿನ್ನಿರಂಗ ತಲೊಟು ಬುಡಿಯೆ
ಎನ ಪೊರುಲುನು ಮದೆಟ್ ತೂಯೆ
ಐತ ಸುತ್ತು ಮುತ್ತು ಸುಡಿಯೆ
ಒಂಟೆ ಕಾರ್ ದೀವೊಲಿ!
ನೆಲ ಸುಡುತಿ ಕಾವೊಲಿ!
ಕೈ ಕೊರಿಯೆಡ ಆವೊಲಿ!
ಯಾನ್ ದೆರ್ತ್ ತುಂಬುದಿಪುದ್ ಅದಗ ಜಾವೊಲಿ!

೩

ಮಾತೆರೆಗ್‌ಲ ಕೊರಿನ ಬೇಗ
ಯೆಂಕ್ ಕೊರ್‌ಜೆ, ದಾನೆ ಪಣೊಲಿ!
ಈ ತರತ ಮಾರಿರೋಗ
ಪೋವರೊವ್ವು ಮರ್ದ್ ತಿನೊಲಿ!
ಯೆಂಕ್ ಜಾಗ್ ಈತೆನ?
ಹಕ್ಕ್ ಕೊರಂದ್ ಪೋತೆನ!
ಅವ್ವೆನೊಂಜಿ ದೀತೆನ!
ಜಾಗ್‌ನೊಂತ್ ಬುಡುಪವರೆಗ್ ದೇಗ್ ಸೋತೆನ!

೪

ಮನಸ್‌ಡೊಂಜಿ ತೃಪ್ತಿ ಪುಟುಂಡು
ಐತ ಬೊಲ್ಪುಡಂಚಿತೂಯೆ!
ಅಲ್ತ್ ಒಂಜಿ ಕಣ್ಣ್‌ಗೆಟೆಂಡ್
ಈಯಪ್ರೊಲಿಯಿಂದ್‌ದಾಯೆ
ಉಲಯಿದುಲಯಿ ನಲ್ಪೊಲಿ
ಸುಖತಗೊಂಡ್ ತಲ್ಪೊಲಿ!
ಬೇತೆ ದಾನೆ ಮಲ್ಪೊಲಿ!
ಈಯುವಿನ್ಪಿ ಬಿದೆಕಮ್ಮೃತದ ಕೈಯಿ ಕೊಲ್ಪೊಲಿ!

೫

ಪಿದಯಿಪೋದು ಉರುಡುರುಡುದು
ಯೆಕ್ಕವು ಸುಖಯೆರೆಗ್ ಬೋಡು?
ಆಸೆದೊಂಜಿ ಸಸಿನ್ ನೆಡ್‌ದ್
ಕೈ ಬುಡುಂಡಲದಗ ಬಾಡು
ಲೋಕ ಮಲ್ಲೆನುಪ್ಪಡ್
ಐತ ಹಕ್ಕ್ ತಪ್ಪಡ್
ಈತೆನಾಂಡಲೊಪ್ಪಡ್!
ಈ ಬಲನೇ ಪಾರ್‌ಪಾದ್ ಬಾನದರ್ಪಡ್

ಕಡಿಗೆ ಅಪಯಶಸ್ಸು, ಅಪಮಾನಕಷ್ಟಗಳಿಗೆ ಕಾರಣ ಮಹಾತ್ಮರ ಸೂಚನೆ. ಇಂತಹ ನ್ನು ಮನ್ನಿಸತಕ್ಕದ್ದು.
ಗುವುದು ಕಾಂಗ್ರೆಸಿನ ಸ್ವಾಭಿಮಾನಕ್ಕೆ ನ್ಯಾಯಪರವಾದ ಸೂಚನೆಯನ್ನು ಆಳರ

ರಾಮೆ!

ಬರೆತಿನಾರ್ ಸುಳ್ಯೋತ ಮಮ್ಮದೆ.
B. H. E. S. S.
'ಬಾಲವ್ವಂದ' ಸುಳ್ಯ.

"ರಾಮಣ್ಣಾ, ಬೆಲ್ಲೋ ಕಂಡ್‌ತ್ ತಿನ್ಪನಾ?" ರಾಮುನ ಸಿದ್ಯಪ್ಪೆ ಕೇಂಡಳ್.

"ಇಜ್ಜಿ, ಸಿದ್ಯಪ್ಪೇ, ಒಂಜಿ ಎಳಿಯ ತುಂಡು"...ರಾಮು ಮೆಲ್ಲ ಪಂಡೆ.

"ಒಂಜಿ ತುಂಡ್....?ಈ ಸಾಲೆಡ್ತ್ ಬತ್ತ್‌ದ್ ಪೊರ್ತ್ ಸುವಾರಾಂಡ್. ದಾಲಾ ಬೇಲೆ ಮಲ್ಪುನೆಟಿಜ್ಜ."

"ಇಜ್ಜಿ, ಸಿದ್ಯಪ್ಪೇ, ಇತ್ತೆ ಬತ್ತೆ ಆತೆ."

"ಇತ್ತೆ....ದಾದ ಪನ್ಪಂಚೆ....ಮುಂಡೇಮಗ"ಂದ್‌ತ್ ರಾಮುಗ್ ಪೆಟ್ಟ್‌ಕೊರ್ಯಳ್. ಪಾಪೋ ಆಣ್‌ಗ್ ಪೆಟ್‌ದ ಬೇನೆ ತಡೆವಾಂದೆ ಬುಲಿಪ್ಪರ ಸುರುಮಲ್ತೆ."

ರಾಮುನ ಅಮ್ಮೆ ಮಲ್ಲ ವಕೀಲೆರ್. ಆರೆಗಿತ್ತೆ ಇಪ್ಪಿ ಬೊಡೆದಿ ರಡ್ಡನೆ ಸಂಬಂಧೊತವು. ರಾಮು ದುಂಬುತ ಬೊಡೆದಿನ ಮಗೆ. ಆಯೆ ಈ ಸಿದ್ಯಪ್ಪೆನ ಪೆಟ್ಟ್ ಸಿಂದ್‌ತ್, ಸಿಂದ್‌ತ್, ಬಚ್ಚಿದ್ ಪೋದಿತ್ತೆ. ರಾಮುನ ಅಮ್ಮೆ ಸಾಮುರಾಯೆರ್ ಬಯ್ಯನಗ ಇಲ್ಲಡೆಗ್ ಬತ್ತೆರ್. ಸಿದ್ಯಪ್ಪೆ ಅಮ್ಮಡ ಪಂಡ್‌ದ್ ನೋಪಾವಲ್‌ಂದ್‌ದ್, ಆಣ್‌ದೆತ್ತ್ ಬಲಿತ್ತ್‌ರ್ಯೆ, ಮಾತೆರ್ಲಾ ರಾಮುನು ನಾಡ್ಯೆರ್. ಆಂಡ ಆಯೆ ತೂವೆರ ತಿಕ್ಕ್‌ಜೆ. ಸಾಮುರಾಯೆರೆಗ್ ಭಾರಿ ದುಃಖೊ ಆಂಡ್. ರಾಮು ಸೀದಾ ಮೈಸೂರ್‌ಗ್ ಪಾರ್‌ದ್‌ಪೋಯೆ.

ಪಾಪೋ ಮೈಸೂರ್‌ಡ್ ಆಣ್ ಮಾಗೊಂತ ತರೇಡ್ ಬುಲ್ತೋಂದ್ ಕುಲ್ಯೆ. ರುಘುನಾಥರಾಯೆರ್‌ಂದ್ ಪಣ್ಪಂಚಿನ ಒಂಜಿ ಜನೊ ರಾಮುನ್ ತೂದ್ ತನ ಇಲ್ಲಡೆಗ್ ಲೆತೋಂದ್ ಪೋಯೆರ್. ಅಲ್ಲ್ ತನ ಪುದರ್ ಸುಂದರೆಂದ್‌ತ್ ರಾಮು ಪಂಡೆ. ರಘುನಾಥರಾಯೆರೆಗ್ ಒರ್ತಿ ಮಗಲಿತ್ತಲ್. ಆಲೆ ಪುದಾರ್ ಲೀಲಾಂದ್‌ತ್. ಸುಂದರೆ ಆಲೆಗ್ ತಕ್ಕ ಕಂಡಾನಿಂದ್‌ತ್ ರಾಯೆರ್ ನಿನೆದರ್, ರಾಮು "ಎಂಕ್ ಅಪ್ಪೆ ಇಜ್ಜಿ, ಅಮ್ಮೆ ಇಜ್ಜಿ"ಂದ್‌ತ್ ರಾಯೆರೆಟ ಸುಳ್ಳ್ ಪಂಡೆ. "ಈ ಎನ್ನೆರ್ಯ ಉಂತ್‌ಂ"ದ್‌ತ್ ರಾಯೆರ್ ಪಂಡೆರ್. ಲೀಲಾನ್ಲ ರಾಮುನ್ಲಾ ಸಾಲೆಗ್ ಕಡಪುಡ್ಯೆರ್.

ಇಂಚಿ ರಾಮುನ ಅಮ್ಮೆ ಸಾಮುರಾಯೆರ್ ರಾಮುನ್ ನಾಡ್ಯೆರ ಭಾರೀ ಪ್ರೇತ್ನೊ ಮಲ್ತೆರ್. ಐಕ್ ಸರಿಯಾದ್ ಏರ್ಕದ ಒಂಜಿ ಊರ್‌ಡ್ ಏರೋ ಒಂಜಿ ಆಣ್ ಗುವ್ವೆಲ್‌ಗ್ ಬೂರ್‌ದ್ ಸೈತಿತ್ತೆಗೆ. ಪುಣನ್ ದಿಕ್ಕೆರ್ ಗುಂಡಿಟ್ ಪಾಡ್ಯೆರ್ಂದ್‌ತ್ ಒಂಜಿ ಸುದ್ದಿ ಸಾಮುರಾಯೆರೆಗ್ ಬತ್ತ್‌ಂಡ್. ಆ ಸೈತಿ ಆಣೇ ರಾಮೆಂದ್‌ತ್ ರಾಯೆರ್ ಗ್ರೇತ್‌ದ್ ಮೆಲ್ಲಾಯೆರ್.

ರಾಮೆಲಾ ಲೀಲಲಾ ಸೂರ್ಯ ಚಂದ್ರೆರೆಲೆಕ್ಕೊ ಇತ್ತಿ ನಾಕ್ಲು ಮಲ್ಲೆ ಆಯೆರ್. ರಘುನಾಥರಾಯೆರ್ ಮೊಕುಲೆ ಉಲಾಯಿ ಮದಿಮೆ ಮಲ್ತ್‌ದ್ ಬುಡುಪುಣಾಂದ್‌ತ್ ಆಲೋಚನೆ ಮಲ್ತೆರ್. ಆಂಡ ರಾಯೆರ್ ಕೀಳ್ ಜಾತಿದಾರ್. ರಾಮುಗ್ಲಾ ಒರ ಅಮ್ಮನ ಮೋನೆ ತೂವೊಡ್‌ಂದ್‌ದ್ ಆಶೆ ಪತ್‌ಂಡ್, ಆನಿ ಬಯ್ಯಗ್ ರಾಮು, ರಾಯೆರ ಕಾರ್‌ಗ್ ಬೂರ್ಯೆ, ಬೂರ್‌ದಾದ್ ತನ ಕಥೆನ್ ಮಾತ ಪಂಡೆ. ರಾಯೆರೆಗ್ ಪಿನ್ಪ್ರಿಲಾ ದುಃಖೊಲಾ ಒಟ್ಟುಗ್ ಬತ್ತ್‌ಂಡ್. ಆರ್ ಸಾಮುರಾಯೆರೆಗ್ ಬರ್ಯೆರ ಕಾಗಜಿ ಕಡಪುಡ್ಯೆರ್. ಆರ್ ರಾಮುನು ಊರ್‌ಗ್ ಲೆತೊಂದ್‌ಪೋಯೆರೆಂದ್‌ತ್ ಬತ್ತೆರ್. ಬಯ್ಯಗ್ ರಾಮು ಒಂಜಿ ಪೇಪರ್ ಓದೊಂತಿತ್ತೆ. ಆತಾನಗ ಲೀಲ, ಉಳಯಿ ಬತ್ತಳ್.

"ಈರ್ ಊರ್‌ಗ್ ಪೋಪರಾ?" ಆಲ್ ಕೇಂಡಲ್.

"ಇಜ್ಜಿ, ಇಜ್ಜಿ, ಎಲ್ಲೆನೇ ಬರ್ಪೆ"ಂದ್‌ತ್ ರಾಮು ಉತ್ತರೊ ಕೊರ್ಯೆ.

"ಈರೆ ಅಮ್ಮೆ ಎಂಕ್‌ಲೆ ಮದಿಮ್ಮೆಗ್ ಒಪ್ಪಿಗೆ ಕೊರ್ಜೆರ್ಡ?" ಪೆರಪ್ಪ ಲೀಲ ಕೇಂಡಲ್.

"ಆರೆನ್ ಒಪ್ಪಾವೆ"ಂದ್‌ತ್ ರಾಮು ಪಂಡೆ. ಲೀಲ ಸಂತೋಸೊಡ್ "ಆವಡ್, ಎನನ್ ಮದಪಡೇ"ಂದ್‌ದ್ ತನ ಬೇಲೆಗೆ ಪೋಯಳ್.

ಮನದಾನಿ ಕಾಂಡೆ, ಅಮ್ಮೆ ಮಗೆ, ಆಕ್‌ಲೆ ಊರ್‌ಗ್ ಬತ್ತೆರ್. ರಾಮು ಆಯನ ಸಿದ್ಯಪ್ಪೆನ ಕ್ಷಮೆ ಕೇಂಡೆ. ಸಿದ್ಯಪ್ಪೆಗ್‌ಲಾ ಬೇಜಾರಾಂಡ್. "ರಾಮೂ ಈ ಬುಲೆತ್ತಿನ ಆಣ್, ಹಾಲಾದ್ ಪೋವ, ನಿಕ್ಕ್ ಮದಿಮ್ಮೆಮಲ್ಪೊಡ್‌ಂದುಲ್ಲೆ."

"ಆವಡಮ್ಮ. ರಘುನಾಥರಾಯೆರ ಮಗಳೆನಾಂಡ ಮಾತ್ರ.."

"ದಾದ ಪನ್ಪನಿ ಈ, ಜಾತಿಡ್ತ್ ಪ್ಯೇನಕ್ಲೆಲ್ ಮದ್‌ಮ್ಮೆ ಆಪುನೆನಾ?"

"ಜಾತಿಗ್ ಸೂಬೂರ್‌ಂಡ್, ಈತಾನೆಟ ಎನನ್ ಸಾಂಕ್ತ್‌ಜೆರಾ?"

"ಈ ಎನ ಪಾಲ್‌ಗ್ ಇತ್ತ್‌ಂಡ್ಲಾ ಒಂಜಿ ಇಜ್ಜಂಡ್ಲ ಒಂಜೆ. ನಡಪ್ಪು........ನಡಪ್ಪೊ." ರಾಮು ಮನದಾನಿಯೇ ಮೈಸೂರ್‌ಗ್ ಪೋಯೆ.

ಸಿವಲ್ ಕೌನ್ಸಿಲರ್ ಶ್ರೀ. ಯು. ಸುಂದರ ಕ
ನವಭಾರತ ಬುಕ್ ಡಿಪ್

ರಾಮುನ್ ತೂದ್ ಆಲ್ನ್ ಮಾತೆರೆಗ್ಲಾ ಸಂತೋಸೊ ಆಂಡ್. ಮದ್ಮೆದ ಸಿದ್ಧತೆಗ್ ತೊಡಗ್ಯೆರ್, ಮಾತೆರೆಗ್ಲಾ ಆಮಂತ್ರಣೊ ಪೋಂಡ್. ಐನೆಡೆಟ್ ಎಂಕ್ಲಾ ಒಂಜಿ ಬತ್ತ್ಂಡ್. ಸಾಮರಾಯೆರೆಗ್ಲಾ ಪಂಟ್‌ದ್‌ಕಡಪುಡ್ಯೆರ್. ಆರ್ ಪಗೆಲ್ ಇರ್ಲಾ ಆಲೋಗನೆ ಮಲ್ತ್‌ದ್ ಮದ್‌ಮ್ಮೆಗ್ ತನ ಬೊಡೆದಿನ್ಲಾ ಲೆತೋಂದ್ ಬತ್ತೇರ್. ಲೀಲನ್ ರಾಮುಗ್ ಕೊರ್ತ್ ಮದ್‌ಮ್ಮೆ ಆಂಡ್. ಅಮ್ಮನಲ್ಲಾ, ಸಮ್ಮಲೆನಲ್ಲಾ ಆಸ್ತಿ ರಾಮುಗ್ ತಿಕ್ಕ್ಂಡ್. ಮಾತೆರೆಗ್ಲಾ ಸಂತೋಸೊ ಆಂಡ್.

ಮಾತೆರ್ಲಾ ಸಂತೋಸೊದ ಸುಗ್ಗಿಟ್ ತಲಿತ್ತೆರ್. ಎಂಕ್ ಐನ್ ಲೊಲಾ ನಲಿಪುಕ. ಅತ್ತೆ?

— ಸಮಾಪ್ತಿ —

ತುಳ್‌ನಾಡ್‌ದ ಸೇವೆಗಾದ್ ತುಳು ಭಾಷೆದ ಉದ್ಧಾರೊಗಾದ್ ಬರ್ಪಿನ

ತುಳು ಸಂಚಿಕೆಡ್

ಮಾತಲಾ ಇಂಚನೇ

ಪನ್ಪಿಂಚಿನ ಒಂಜೇ ಅಂಕೊದ (ಏಕಾಂಕ) ನಾಟಕೊ.

ಬರೆತಿನರ್:—

ಸಿವಣ್ಣೆ. ಸುಳ್ಯೊದಾರ್, ಬಾಲವ್ಯಂದೊ.

ಏ ರಾ ವು

ಬರೆತಿನಾಯೆ: **ರಾಜ ಭಿಕ್ಷು,** ಸಂಪಾಜೆ.

※

ದಾಟಿ:—'ಮಿನುಗಲೆ ನಕ್ಷತ್ರದ'

('ಏರಾವು'ದ ಸಾರಾಂಶೊನು ಮರ್ದನೋ ಮಲ್ತ್‌ದ್ ವಿಚಾರೋಗ್ರಹಿಪಂದೆ ಲಕ್ಷ್ಮಿ, ಶಾರದೆ, ಸುಂದರಿ ಇನ್ಪಿ ಪುದರ್‌ದ ಪೊಣ್ಣ ನಾಕುಲು ಅಕಲೆ ಮನಸ್ ವಿಕಾಸೊಡ ತೂಟ್ ಎನನ್ ಬಸ್ಮಮಲ್ಪಿಯೆರೆ ಆಂವಂದ್ ಅಂದ್‌ದ್ ಕೇಂಡೊಣುವೆ.)

ಹೇಸಿಗೆ! ಹೇಸಿಗೆ! ಓಲಕ್ಷ್ಮಿ! ।
ಹೇಸಯ ಒಯಿಕ್‌ಲ ಈ ಲಕ್ಷ್ಮಿ।
ಸ್ತ್ರಾನೊದ ಮಾನೊದ ನೆಂಪುಜ್ಜೆ? ।
ಗೇನೊಲು ಒವುಲಾ ನಿಕ್ಕಿಜ್ಜೆ? ।
ಮೋನೆನ್ ತೋಜಂದ್ ನಡಪುವನೆ! ।
ಮಾನೊನು ಮಾಜವುನಾ ಲಕ್ಷ್ಮಿ।
ಕಂಡನಿಯ್ಯಾಸಿಗೆ ಈ ಬುಡುದು ।
ಮಿಂಡೆರೆ ನಾಡ್‌ಬ ಈ ಪೋದು ।
ಕಂಡನಿಗೆಜ್ಜೆರಿಗಾನಗನೆ ।
ಮಿಂಡನ್ ಬುಡುದು ಈ ಪೋಪ ।
ಗೀಳೆಂದ್ ಗ್ರಹಿತ್‌ಂಡ ಈ ಲಕ್ಷ್ಮಿ ।
ಗೀಳೆನರೀತಿಡ್ ಈ ಇಜ್ಜ ।
ಸೂಳೆಡ್ ಸೂಳೆ ಈ ಸೂಳೆ ।
ಮೋಳೊದ ಮರ್ಲ್‌ನಿನ ಸೇಲೆ ।
ಪೊರ್ಲುನು ತೂದು ಏರಂಡಲಾ ।
ಮರ್ಲ್‌ಂಡ ಮರ್ಲಬ ಏರೆನ್‌ಲಾ ।
ಕ್ಷಣೊಮಾತ್ರ ಇತ್‌ದ್ ಈಯಲ್ತ್ ।
ಕೇಣಂದೆ ಪಣಂದೆಲ ಪೋಪಲ್ತ್ ।
ಏರೆಗ್ ಆಂಡಲ ಈ ಒಲಿಪ ।

ತರೆ ತರೆ ತಾಂಟದ್ ಈ ಬಲಿಪ ।
ಆಯ್ಯೊ ಲಕುಮಿ ದಾಯಿಂಚ? ।
ಕೊಯ್ಯನೆ ಕೆಕ್ಕಲ್ ಈ ಇಂಚ? ।
ನಿನನ್ ತೂನಗ ಎನ ಮೈಲ ।
ಪನಿ ಪನಿ ಮರ್ಲ್ಂಡು ಈ ತೂಲ ।
ಗಳಿಗೆದ ಸುಖೊಕು ಮರ್ಲಾದ್ ।
ಮೋಲ್‌ಗ್ ಒಯಿತ್‌ಂಡ ನಿನನ್ಯಾಸ್ ।
ಗೀಳೆನಲೆಕ್ಕೊ ಒರೊಇತ್‌ದ್ ।
ಸೂಳೆನ ತರೊಟು ಪಾಪೊವ ।
ಸೂಳೆಲೆ ಸೂಳೆ! ಮಹಾ ಸೂಳೆ! ।
ಗೀಳೆಲೆ ಗುಣೊಕ್ಲೆನೀತೂಲ ।
ಶಾರದೆ ಒರ್ಯಗ್ ಒರೊ ಒಲಿಂಪ ।
ಮಿರಾರಂದೆ ಉಪ್ಪಲ್ ಸ್ವಾಯೊದ್ ।
ಪೊರ್ಲುದ ಲಕ್ಷ್ಮಿ ನಿನಗೋಜಿ ।
ಮರ್ಲೆರೆಗಾವುಗೆ ಎಂಕ್ಯಾಜಿ ।
ಸುಂದರಿ ಶಾರದೆ ಎಂಕೊಲಿಯ ।
ಅಂದೊದವಾಣಿಯೆ ಈ ಬಲದು ।
ಸುಂದರಿ ಶಾರದೆ ನಿನರೂಪು ।
ಅಂದೊಡು ಒಲಿಪದ್ ಈ ಕಾಪು ।

ಗುವುದು ಕಾಂಗ್ರೆಸಿನ ಸ್ವಾಭಿಮಾನಕ್ಕೆ ನ್ಯಾಯಪರವಾದ ಸೂಚನೆಯನ್ನು ಆಳರ

* ತ ಪ್ಪು ಏ ರೆ ನ *

ಬರೆತಿನಾರ್:—ಸಿವಣ್ಣೆ. ಸುಳ್ಯೊದಾರ್. ಬಾಲವೃಂದ

ಲಿಂಗಣ್ಣೆ ಇಲ್ಲಡೆಗ್ ಬತ್ತೆಡ ಸೈ. ಆಯ ಬೊಡೆದಿ ಗಂಗಮ್ಮಗ್ ದರಿಪ್ಪೇಲ್ ಪತ್ತುನಿ, ಲಿಂಗಣ್ಣೆ ಇಲ್ಲಡೆದ ವೊಟ್ಟು ಬಡತ್ತುನಲಾ ಗಂಗಮ್ಮಗ್ ವೋರೆಕೆಂಪಾದ್ ನ್ಯೈತರೋವೊ ಕುತ್ತ ಉಂತ್‌ದ್, ಕಣ್ಣ್‌ಡ್ದ್ ತೂದಕಿಡಿ ಬರ್ಪುನೆದ ಬದಲ್‌ಗ್ ಬಾಯಿಡ್ದ್ ಗಂಗಾವ್ಯತೋ "ಬತ್ತ್‌ದ್ ಆಂ, ಹಾಂ, ಬತ್ತರಾ"... ಪನ್ಪಿನ ಪಾತೆರೊದೊಟ್ಟುಗ್ ಆಯಗ್ ಪ್ರಸಾದೊತಿಕ್ಕ್‌ದ್, ಮ್ಯಾಪುದ ಸೂಡಿ ಕೈಟ್ ಪತ್ತ್‌ದ್ (ಎಂಕ್ಲೇ ಗೋಡೆಗ್ ವೈಟ್ ವಾಸ್ ಕೊರ್ಪಿಲೆಕ್ಕ)ಅಂಬಿನೀರ್‌ದ'ಗ್ರೀನ್ ವಿದ್ ಬ್ಲೇಕ್‌ವಾಸ್, ಕೊರ್ಪುನಳಾ, ಒರೋರೊ, ಸವೋನೆ. ಲಿಂಗಣ್ಣೆ ಗಂಗಮ್ಮಗ್ ದೃಷ್ಟಿಭೂತೊಂದ್‌ತ್ ಪುದಾರ್‌ದೀಯೆ.

ಎಂಕ್ಲೊ ದೇವೆರ್‌ಂದ್‌ಂಡ ಗಣ್ಯೊಮಲ್ಪುಜೊ. ಪಾಪಾಸ್ ಪಾಡೊಂದು ತಟ ಪಟ ಮಲ್ತೊಂದು ದೇವೆರೆದುರುಡ್ ಪೋಪೋ, ಭೂತೋಲ್ ಏನಿ ಅಂದಾಂಡ ಪಾಪಾಸ್ ಮಾದ ಎಂಕ್ಲೆ ಕೈಡ್. ಲಿಂಗಣ್ಣೆ ಇಂಚಿನ ಭೂತೊಳೆಡ್ದ್‌ಲಾ, ಆರೆ ತಪ್ಪುಡ್ದೇ ಉಂಡಾಯಿನ ದೃಷ್ಟಿ ಭೂತೊಗ್ ಹೆಚ್ಚಾದ್ ಪೋಡಿಪ್ಪೇದೆ. ಆಯೆ ಈ ಭೂತೋ ಪತ್ತಿ ಪೆಟ್ಟುಗ್ "ಶಾಂತಿಃ ಶಾಂತಿಃ"ಂದೊಂದ್ ಅಟ್ಯೊನೋ, ಕೋಣೆದ ಮೂಲೆನೋ ಪಿತ್ತ್‌ಲ್‌ಡಿತ್ತಿನಿ ಪಾಯ್ಯಾನೆನೋ ಸೇರ್‌ದ್ ಅಡೆಂಗುಣ ಅಸ್ಸಾಮಿ.

ಲಿಂಗಣ್ಣೆ ಕಾಂಡೆದ ಕಾಪೀಪರ್ಪುನೆನ್, ಬುಡುದಿತ್ತೆ. ಮಧ್ಯಾನೊದ ಒನಸ್ ತಿಕ್ಕಿನಲ್ ಕತ್ತಲೆದ ಒನಸ್ಸ್ ಇಲ್ಲಾಡ್. ಬೊಡೆದಿಗ್‌ಲಾ ಬಾಲೆಗ್ಲಾ ಖರ್ಚ್‌ಗ್ ಲಿಂಗೆ ಕನರೊಡ್. ಗಂಗಮ್ಮಲಾಆಳೆ ಪೆರ್ಗುಡೆದಪಿಟ್ಟಿಲಾ (ಅತ್ತತ್ತ್. ಬಂಗಾರದ ಗಿಟ್ಟಿ.) ಲಿಂಗಣ್ಣಗ್ ಕೊರ್ಪಿ ಕಷ್ಟೋ ಆತೀತತ್ತ್. ವೊಗುಲೆನ್ ಈ ಮೂಜಿಜನದ ಸಂಸಾರೊಡ್ ಎನ್ನ ಕಣ್ಣ್‌ಗ್ ತೋಜಿನ ಕೆಲ ಚಿತ್ರೊಳೆನ್ ಯಾನ್ ಬರೆವೆ. ದುಂಬು, ವೊಕುಲ್ ಮಾದ, ಏರ್? ಒಲ್ಪ ತಕ್ಕ್‌ಂದ್‌ದ್ ಗೊತ್ತ್ ಮಲ್ತೋನ್ಯೊ.

ಸೋಮಣ್ಣೆರ್ ಮೂಸೂರ್‌ದಾರ್. ಪನೀದ್‌ಪಸೆ (ಕಾಸ್) ಇತ್ತಿನಾರ್. ಆರೆಗಿಪ್ಪಿನ ಒರಿಯೇ ಮಗೆ ಲಿಂಗಣ್ಣೆ. ಆರೆಬೊಡೆದಿ ಪೆದ್‌ದ್ ರಡ್ಡ್‌ವರ್ಸೋ ಆವೊಡಾಂಡನೆ ಆಲೋಕೊಗ್ ಪೋದಿತ್ತಲ್. ಸೋಮಣ್ಣಗ್ ಈ ಭೂಮಿಡ್ ಲಿಂಗಣ್ಣೆ ಅತ್ತಾದೆ ಬೇತೆ ಏರ್ಲಾ ಇಜ್ಜಿ. ಎಂಕಮ್ಮ ಪಾಪೊದ ಒಂಜಿ ಪೊಣ್ಣ್‌ಜ್ಜಿ. ಆಲೆನ ಇಲ್ಲಡೆ ಸೋಮಣ್ಣೆರೆ ಇಲ್ಲಡೆತ ಎರನೇ. ಎಂಕಮ್ಮನ ಕಂಡಾಣಿ, ಹಿರಿಯರೆ ಊರ್‌ಗ್ ದುಂಬೇ, ಗಾಡಿ ಕಟ್ಟ್‌ದಿತ್ತೆರ್. ಆರ್ ಪೋನಗ ಒಂಜಿ ಪೊಣ್ಣು ಬಾಲೆನ್ಲಾ, ಒಂಜಿರ್ನೂದು ರೂಪಾಯಿನ್ಲಾ ದೀದ್ ಪೋದಿತ್ತೆರ್. ಎಂಕಮ್ಮನ, ಮಗಳೆ ಪುದಾರ್, ಗಂಗಮ್ಮಂದ್‌ತ್. ಎಂಕಮ್ಮ ಗಂಗಮ್ಮನ್, ಸಾಲೆಗ್ ಕಡಪುಡ್ಯಳ್. ಆಲೆ ಒಟ್ಟುಗ್, ಲಿಂಗೆಲಾ ಪೋಯೆ.

ಲಿಂಗಣ್ಣೆ, ನಾಲ್ನೆಕ್ಲಾಸ್ ಕಲ್ತ್‌ದ್, ಸಾಲೆ ಬುಡ್ಯೆ—ಗಂಗಮ್ಮ ಬುಕ್ಕೊಲಾ ಕಲ್ತಳ್. ಮಿತ್ತ ಕ್ಲಾಸ್‌ಗ್ ಪೋಯಿಲೆಕ್ಕೊನೆ, ಸುರು ಆಂಡವೆ, ಸೆಂಟ್, ಗಿಂಟ್ ವೆಸ್ಲಿನ್, ಬಿರ್ಲಂಟೈನ್, ಪೌಡರ್, ಸ್ಲಿಪ್ಪರ್, ಟೂತ್‌ಪೇಸ್ಟ್, ಟೂತ್‌ಬ್ರಶ್, ತರ ತರದ ಸೋಪುಲ್ ಮಾತ ಕನತ್ತ್‌ದ್ ಸೋಕುಮಲ್ಪೆರ. ಎಂಕಮ್ಮನ ಮಂಞಣೆದ ಪೊಣ್ಣುತ್ತಾ. ಆಲ್‌ಲಾ ಮಲ್ಲಾಯಳ್.

ಇಂಚಿ ಸೋಮಣ್ಣಗ್ ಲಿಂಗಣ್ಣನ ಮದ್ಮೆದ ಯೋಚನೆ ಪತ್ತ್‌ಂಡ್. ಆರ್‌ಸೂದಿತ್ತಿ ಪೊಣ್ಣು ಗಂಗಮ್ಮನೆ. ಸೋಮಣ್ಣೆ ಎಂಕಮ್ಮಡ ಪಾತೆರ್ದ್ ಮಲ್ಪಿನ ಪ್ರಯತ್ನೊಮಾದ; ಮಲ್ದೆರ್, ಎಂಕಮ್ಮ ಒಪ್ಪೆರೆ ಒಪ್ಪೇದೆರ್. ಆರೆ ಮನಸ್ಸ್‌ಡ್ ಮಂಗ್ಲೂರ್, ಒಡಿಪು, ಕಾರ್ಲದಂಚಿದ ಸೋಕುದಾಯಗ್ ಕೊರೊಡುಂದಿತ್ತ್‌ಂಡ್. ಗಂಗಮ್ಮನ ಮನಸ್ಸ್‌ಡ್ಲಾ, ಸೆಂಟ್‌ದೀದ್ ಮೂಕುಗ್ ಕನ್ನಡಿ ಏರ್ಸಾದ್, (ಕುದುರೆಗ್ ಜೀನ್ ಪಾಡಿಲೆಕ್ಕೊ) ಕೈಕ್ ರಿಸ್ಟ್‌ವಾಚ್ ಕಟ್ಟ್‌ದ್, ಪೂಕೆಚಲ್ಲಣ ಪಾಡ್ದ್, ಬೂಟೀಸ್ ಮೆಟ್ಟುಣ ಶೋಕಿವಾಲೆನೇ ಆವೊಡುಂದಿತ್ತ್‌ಂಡ್.

ಮನದಾನಿ ಲಿಂಗಣ್ಣೆ, ವಾಸೋಕುಡಿತ್ತೆಂದ್ ಕೇನ್ವರಾ? ಆಯನ ಸೋಕೇ ಸೋಕು, ಗಂಗಮ್ಮ ಎಂಚಿ ಕಂಡಾನಿ ಆವೊಡ್‌ಂದ್‌ದ್ ನೆನೆದಿತ್ತಲಾ, ಐಕ್, ಒಂಜಿ ಪಾಲ್‌ಮಿಗಿಲಿತ್ತಿ ಲಿಂಗೆ, ಏರ್ಲ, ಪುದಾರ್ ದಾನೆಂದ್‌ತ್ ಕೇಂಡಿನಾಂಡ "ಲಿಂಗನ್, ರೋಂದ್‌ತ್ ಪನೇದೆ. ಇಂದ್ ಮಾದ ಸೋಮನ ಬುದ್ಧಿ ವಾದೊ.

ಬಯ್ಯನ ಗಂಗಮ್ಮ ಸಾಲೆಡ್ತ್ ಬರ್ಪುನೆನ್ ಲಿಂಗಣ್ಣೆ ಕಾದೊಂದಿತ್ತೆ—ಬನ್ನಗ ಆಲೆಗೆದುರು ಪೋದ್ "ಗುಡ್‌ಮೋಣಿ, ಡೀಯರ್"ಂದ್‌ತ್ ರಡ್ಡ್ ಪೊಟ್ಟಂಗ್ಲಿಸ್ ಪಂಡ್ರಿಯೆ; ಆಲೆಗ್ ಓಲಿಜ್ಜಾಂತಿನ ಕೋಪೋ ಬತ್ತ್‌ಂಡ್. ದೆತ್ತಿಬಾಯಿಗ್, "ಯು ರೆಚ್ಚೆಡ್ ಫೂಲ್"ಂದ್‌ತ್ ನೆರ್ಯಳ್. "ಪೆಲಕಾಯಿಡ ರೆಚ್ಚಿಡ್ ಈ ಬೂರ್"ಂದ್ ಸಂಡೊಂದ್ ಆಲೆ ಕೈ ಪತ್ಯೆ. ಆಲ್ ಪಿಸ್ರಡ್ ಲಿಂಗಣ್ಣನ ಕೆನ್ನೆಗ್ ರಡ್ಡ್ ಏರ್ಪಾಯಳ್.

ಸಿಪಲ್ ಕೌನ್ಸಿಲರ್ ಶ್ರೀ. ಯು. ಸುಂದರ ಕ
ವಿ ಯವರು ಮಹಾಜನ ಸಭೆಯು ಮುಂದಿರಿಸಿದ
ನವಭಾರತ ಬುಕ್ ಡಿಪ್ಪೋ

ಸೋಮಣ್ಣೆ, ಆವಂತಿನ ಪೋವಂತಿನ ಆಶೆ ತೋಜ್ಪಾದ್, ಎಂಕಮ್ಮನ ಮನಸ್ಸ್‌ನ್ ತಿರ್‌ಗಾಯೆ.

ಎಂಚಲಾ ಲಿಂಗಣ್ಣಗ್ ಗಂಗಮ್ಮನ್ (ಗಂಗಮ್ಮಗ್ ಲಿಂಗಣ್ಣನ್) ಕೊರ್ದ್ ಮದಿಮೆ ಮಲ್ದೆರ್. ಮದಿಮೆದ ಮನ ದಾನಿ, ಸೋಮಣ್ಣೆ, ಕಟ್ಟೆದಾಡೆಗ್ ಪಿದ್ಯಾ ಕುಳ್ಳೆರ ಪೋದಿತ್ತೆರ್. ಅಲ್ಲ್ ದಾನ್ಯೋ ತುಚ್ಚಿಂಡ್‌ಂದ್‌ದ್ ಪಾರ್ ಬತ್ತೆರ್. ಜಾಲ್ ಡೇ ಜೆತ್ತೆರ್. ಜೈದ್‌ನಾರ್ ಬೊಕ್ಕ ಲಕ್ಕ್‌ಜ್ಜೆರ್. ಮದ್ಮೆ ದೊಟ್ಟುಗು ಸಾವುಲಾ ಆಂಡ್.

ಪೊಸ ಕಂಡನಿ ಬೊಡೆದಿ ಸಂಸಾರ ನಡೆಪ್ಪುಡೆರ ಸುರು ಮಲ್ತೆರ್. ಒಂಜಿ ದಿನೊ, ಲಿಂಗಣ್ಣೆ ಪಿದ್ಯಾ ಪೋದಿತ್ತೆ. "ಎನನ್ ದಾಯೆ ಆಯಗ್ ಕೊರ್ಯ ಅಬಾ, ಸೈತ್ತಿನೆ ಅಬಾ, ಅಯ್ಯೋ ದೇವೆರೇ...ಗಂಗಮ್ಮ ಸುರ್‌ಮಲ್ತಲ್. ಬುಲ್ಪಡ ಗಂಗೂ ಮ್ಗಾದ ಸರಿಪೋಪುಂಡು. ಈ ಐನೀದ್ ಜೋರುಪ್ಪುಲ ಎಂಕಮ್ಮ ಸಮಾಧಾನೊ ಮಲ್ಪೆರ ಸುರ್‌ಮಲ್ತಲ್. 'ಇಜ್ಜಬ್ಬಾ ಯಾನ್ ಬದ್ಕುಜೀ." ಗಂಗಮ್ಮಸುರುಮಲ್ತಲ್ ಪಿರ.'ದಾನಾಂಡ್‌ದೇ?'ಎಂಕಮ್ಮ ಕೇಂಡಲ್. "ಕೋಡೆ...ಇರ್ಲ್...ಸುಮಾರು ಪದ್ರಾಡ್ ಗಂಟೆಗ್ ಬತ್ತೆರ್, ಬತ್ತ್‌ನಾರೇ ಅಂಗಿ ಕದ್ದೆದ್ ದೀಯೆರ್. 'ಬಲದೀ'ಂದ್‌ದ್ ಬತ್ತ್‌ದ್ ಎನ ಕಂಟೆಲ್‌ಗ್ ಕೈಪಾಡ್ಯೆರ್. ಒಯಿತೋಂದ್ ಎನ ಕೋಣೆಗೆ ಬತ್ತೆರ್. ದಾನೆದಿ ರಂಡೇಂದ್‌ದ್ ರಡ್ಡ್ ನರ್ಯೆರ್. ಬೊಕ್ಕ. 'ಈ ಎನ್ನರಗಿಣೆ'ಂದ್‌ತ್ ಒಯ್ತೆರ್. "ಈ ದಂಡೊ"ಂಡ್‌ತ್ ಅಂಜಿನೂಕ್‌ಡ್ಯೆರ್." ಬುಲ್ತೊಂದೆ ಗಂಗಮ್ಮ ಪಂಡಳ್. "ಶಿವಶಿವಾ, ಏನೊರೊ ತೈತ್‌ಜೆನೇ" ಎಂಕಮ್ಮ ಪಂಡಳ್ "ಸೈತಂಡಾತ್ಪೆ"ಂದ್ ಪಂಡೋಂದೆ ಲಿಂಗಣ್ಣೆ ಉಲ್ಯಾ ಬತ್ತೆ.

ಈ ಸಂಗತಿ ಆಯಿಬೊಕ್ಕ, ಎಂಕಮ್ಮ ಹಾಸಿಗೆ ಪತ್ತ್ಯಳ್. ಜ್ಯೋಸೆರೆಡ ಪಂಚಾಂಗೊ ದೀಪಾಂಡ್. ಆಲೆಗ್ ಪತ್ತ್‌ದಿತ್ತಿನ ಸೋಮಣ್ಣನ ಪೀಡೆಗ್ ಶಮನೊ ಮಲ್ಪುನಗನೇ ಪರ ಲೋಕೊದ ಯಾತ್ರೆಗ್, ಎಂಕಮ್ಮ ತೊಡಗ್ಯಲ್.

ನಣ ಲಿಂಗಣ್ಣಗ್ ಕೇನುನಕ್‌ಲ್ ಇಜ್ಜಾಂತೆ ಜುಗಾರಿ ಗೊಬ್ಬೆರ ಸುರುಮಲ್ತೆ. ಗಂಗಮ್ಮಗಿಂದ್ ತೆರಿಂಡ್. ಬೊಬ್ಬೆ ಹಾಕ್ಯಲ್, ನೆರ್ಯಳ್, ಕೇಂಡೋಂಡಳ್, ಲಿಂಗಣ್ಣೆ ಕತ್ತಲಾನಗ ಜುಗಾರಿಗೊಬ್ಬೆರೆ ಪೋವೇದೆ. ಇತ್ತಿದುಡ್ಡ್‌ನ್ ಕಳೆವೊಂಡೆ, ಬೊಡೆದಿಡ ದುಡ್ಡು ಕೇಂಡೆ. ಗಂಗಮ್ಮ ಆಯಡ್ತ್‌ಮೂರೊ ಇಪ್ಪೆರ ಸುರುಮಲ್ತಲ್. ಸುಮಾರ್‌ದಿನೊ ಕಲೇಂಡ್. ಎನ್ನವ್ ತತ್ತ್‌ಂಡ್ ಎಂಕ್ ಕ್ಷಮೆ ಕೊರ್‌ಂದ್‌ತ್ ಲಿಂಗಣ್ಣೆ ಗಂಗಮ್ಮನ ಕಾರ್‌ಗ್‌ಬೂರ್ಯೆ. ಪಾಪೊ! ಪೊಣ್ಣತ್ತಾ? ಗಂಗಮ್ಮ ಸತ್ಯೋ ಗ್ರೈತಳ್, ಸುಖೊನ್ ಯಾನ್ಲಾ ತೂವೊಡ್‌ಂದ್‌ದ್ ನಿಶ್ಚಯ ಮಲ್ತಲ್. ಇತ್ತಿ ರೂಪಾಯಿನ್ ಲಿಂಗಣ್ಣಗ್ ಕೊರ್ಯಳ್. ಕೈಕ್ ಈ ರೂಪಾಯಿ ಬೂರಿಪಟ್ಟ್‌ಗ್ ಲಿಂಗಣ್ಣೆ ನಲಿಪೆರ ಸುರುಮಲ್ತೆ. 'ಜುಗಾರಿತಂಗಡಿಗ್ ಪೋಪೆ'ಪಂಡೆ ಗಂಗಮ್ಮ ಪಾರ್ ಬತ್ತಲ್ ಕಂಡಣಗ್ ಅಡ್ಡೋ ಉಂತ್ಯಲ್. ಆಯೆ ಬಲಿಪೆರೆ ಸುರ್‌ಮಲ್ತೆ ಗಂಗಮ್ಮ ಒಂಜಿ ಕತ್ತಿಪತೊಂದ್ ಆಯಗ್ ಕಡ್ಪೆರ ಬತ್ತಲ್. ಲಿಂಗನ್ ಜುಗಾರಿ ಲೆಪ್ಪೇತ್‌ಂಡ್, ಲಿಂಗಣ್ಣೆ ಕತ್ತಿನ್ ಒಯಿತ್ ದೆತ್ತ್‌ದ್, ಆಳೆ ಮುಸುಡ್‌ಗ್ ಗುದ್ದ್‌ದ್ ಬಲಿತ್ತೆ.

ಲಿಂಗಣ್ಣೆ ಪೋನಗ ಸಾದಿಟ್ ಆಯಗೊರಿ ಜತೆ ತಿಕ್ಕೆ. ಆಯೆ ಲಿಂಗನ್ ಲೆತೊಂದ್ ಪೋಯೆ, ಓಡೆಗ್? ಸೂಳೆಳೆ ಕೇರಿಗ್ ಆತ್ತತ್ತ್ ಯಮಲೋಕೊಗ್, ಲಿಂಗಣ್ಣಗ್ ತಾರುಣ್ಯೊದ ರಭಸೋ. ವಿಷಾಸೆ ಉಡೆಪುಂಡಾತೆ. ತುಳುವೆರೆ ರಕ್ತೋಬಿಂದು ಆಯನ ನರಕುಳೆಡ್ ಪರಿಪುಂಡ್. ಆಯೆ ದುಂಬು ದುಂಬು ಪೋಯೆ, ಓಡೆಗ್....ಅಯ್ಯೋ........ಆ ಪಾಪೊದ ಕೂಪೋಗ್.

ತುಳುವೆರೆ! ತುಳು ಜಾತಿದ ಆಣ್ ಪೊಣ್ಣ್‌ಲೆ! ಯೌವ್ವನೊಗ್ ಕಾರ್‌ದೀಡ್‌ನ ವೀರೆರೆ! ನಿಕ್‌ಳೇ ತುಳುನಾಡ್‌ದ ನಿಧಿ, ಕುಳು ನಿಕ್‌ಳೆಡ್ತೇ ದೇಶೋನ್ನತಿ ಆಪೊಡು. ನಿಕ್‌ಳೆನ, ಸಂತಾನೊದ ಭಾರತ ಮಾತೆನ ಉನ್ನತಿಗ್ ನಿಕ್‌ಳೇ ಮೂಲೊ 'ಒಂಜೇ ಗುಟುಕ್‌ಂದ್‌ತ್ ಪರ್ಪಿನ ಕಳಿ, ಗಂಗಸರೊ, ಶರಾಬು ಮಾತ ನಿಕ್‌ಳೆನ್ ಗುಳುಂಕನೆ ನುಂಗುಜಾ? ಜುಗಾರಿ, ಅಮಲ್ ದೆಪ್ಪು ನಾಕ್‌ಲೆನ ಒಂಜಿ ವ್ಯವಸಾಯೋ. ನಣ ಒರಿತ್‌ನ ವ್ಯಭಿಚಾರೋ ಅಮಲ್ ದೆಪ್ಪುನಾಕ್‌ಲ್ ನೆಕ್ಕ್‌ಕಾರ್‌ದೀವಾಂದೆ ಇಜ್ಜಿ. ಇಂದ್ ಮೂಜಲಾ ಒಂಜಪ್ಪೆ ಬಾಲೆಳ್ ಜಾಗ್ರತೆ! ನೆನ್ನ ವಿಷಯೋ ಜಾಗ್ರತೆ!

ಪಾನ್ಯೊಮಾತ ಆದ್ ಪೋಂಡತ್ತಾ! ಹಾಳಾವಡ್, ಎನ್ನ ತರೆ! ಪಾಪೋ! ನನ ಗಂಗಮ್ಮನ್ ತೂಕೊ, ಗಂಗಮ್ಮನ ಜೀವನೊ ನಿಸ್ಸಾರಾಂಡ್. ಲಿಂಗಣ್ಣೆ ಇಲ್ಲಡೆಗ್ ಬರ್ಪುನೆನ್ ಬುಡ್ಯೆ. ಲಿಂಗಣ್ಣೆ ಓಳ್ಳ ಇಲ್ಲಡೆಗ್ ಬತ್ತೆಂಡ, ಗಂಗಮ್ಮ ಅಯನ್ ಕೆರ್ಯರಲಾ ಹೇಸಯಳ್‌ಂದ್‌ತ್ ಆಳೆವೋರೆನ್ ತೂನಗ ತೋಜೇತ್‌ಂಡ್.

ರಾಮರಾಯೆರ್ ಅಲ್ತ ರಿಜಿಸ್ತ್ರೇಷನ್‌ದ ಗುಮಾಸ್ತೆರ್. ಆರ್ ಆಡೆಗ್ ಪೊಸಬ್ಬೆ. ರಾಯೆರ್ ಗಂಗಮ್ಮನ ಇಲ್ಲಾಳ್‌ತೆದ್‌ರ್‌ದ ಒಂಜಿ ಮಾಳಗೆನ್ ಬಾಡಿಗೆಗ್ ದೆತೊಂದ್ ವಾಸೊಮಲ್ಪೇತೆರ್, ಕಾಲಾನ್ ಕಾಲೊಡ್ ರಾಯೆರೆ ಮನಸ್ ಗಂಗಮ್ಮಗ್ ಸೋಲ್ತ್‌ಂಡ್. ಗಂಗಮ್ಮಲಾ ಸುಖೋನು ಪಡೆವೆರ ಸೊಂಟೊ ಕಟ್ಯಳು.

ಟವುದು ಕಾಂಗ್ರೆಸಿನ ಸ್ವಾಭಿಮಾನಕ್ಕೆ ನ್ಯಾಯಪರವಾದ ಸೂಚನೆಯನ್ನು ಆಳರ

ಲಿಂಗಣ್ಣೆ, ರಡ್ಡ್ ಮೂಜಿ ತಿಂಗೊಳು ಸೂಳೆಳೆ ಇಲ್ಲಾಳೆತ್ತೆ. ಕೈಟ್ ಕಾಸ್ ಮುಗಿಂಡ್. ಆಯನ ಸಾನಿ, ಆಯನ್ ನೋತ್ ಪಿದ್ಯಾ ಪಾಡ್ಯೆಳ್, ಲಿಂಗಣ್ಣೆ ಮರುಗ್ಯೆ, ಬೂಲ್ತೆ ತರೆತರೆ ನೋತೋಂಡೆ. ಬೊಕ್ಕ ಒಂಜಿದಿನೊ ಗಂಗಮ್ಮನಾಡೆಗ್ ಬತ್ತೆ. ಆಳೆನ ಕಾರ್ ಪತ್ಯೆ. ಗಂಗಮ್ಮ ಮೊಟ್ಟ್‌ದ್ ನೂಕ್ಯೆಳ್.

ಲಿಂಗಣ್ಣಗ್ ದಾನೆ ಮಾತ ಆಂಡ್. ರಾಮರಾಯೆರ ಕಾರ್‌ಗ್ ಬೂರ್ಯೆ. ರಾಯೆರ್ ಪಿನೀದ್ ಯೋಚನೆ ಮಲ್ತೆರ್ 'ಎನ ಗಂಗಮ್ಮನ ಪ್ರೀತಿದ ಫಲೊ ತಿಕ್‌ಂಡ್. ಪುದಾರ್‌ಗ್ ಲಿಂಗೆ ಇಪ್ಪಡ್‌ಂ'ದ್‌ದ್ ಗ್ರ್ಯೆತೆರ್ ರಾಯೆರ್'ಇತ್ತೆ ಪ್ರೋಲಾ, ಆಳೆಗ್ ಯಾನ್ ಬುದ್ಧಿ ಪಣ್ಪೆ" ಪಂಡೆರ್ ಆರ್. ಅಂಚಿ ಇಂಚಿಂದ್‌ತ್ ಲಿಂಗಣ್ಣೆ ಇಲ್ಲಡೆಗ್ ಸೇರ್ಯೆ.

ಐನಾಜ್ ತಿಂಗೊಳಾನಗ ಗಂಗಮ್ಮ ಒಂಜಿ ಪೊಣ್ಣು ಬಾಲೆನ್ ಪೆದ್ಯೆಳ್. ಲಿಂಗಣ್ಣೆ, ಉಸುರ್ ಪಿದ್ಯಾಪಾಡ್ಜೆ ನೆಕ್ ಸರಿಯಾದ್ ರಾಮರಾಯೆರೆಗ್ ವಗೊರ್ ಆಂಡ್. ಗಂಗಮ್ಮ ಕೈಟ್ ಒಂಜಿನೂದ್ ರೂಪ್ಯಾ ಪಾಡ್ದ್ ಆರ್ ಪೋಯೆರ್. ಗಂಗಮ್ಮ ಲಿಂಗಣ್ಣಗ್ ನುಪ್ಪು ಕುಂಟು, ಕೊರ್‌ಂದ್‌ತ್ ಜೋರ್ ಮಲ್ಪರೆ ಸುರ್‌ಮಲ್ತಲ್. ಈ ಕಥೆದ ಸುರ್‌ಟ್ ಪಂಡಿಲೆಕ್ಕ ಆಂಡ್ ಲಿಂಗಣ್ಣನ ಅವಸ್ಥೆ. ಗಂಗಮ್ಮಗಿತ್ತೆ ಸುಖೊ ಇಜ್ಜಿ. ಲಿಂಗಣ್ಣೆ ಬಾಲೆನ್ ಮುಟ್ಯೆಂಡ ಆಲೆಗ್ ಬಂಜಿ ಉರಿ. ಲಿಂಗಣ್ಣಗಿಂದು ತೆರಿಯಾಂತೆ ಇಜ್ಜಿ.

ಆಲಿತ್ತೆ ಏಪ್ರೋಲಾ ಕೋಪೊತ ಮುದ್ದೆ. ಬಾಲೆನ್ ತೂನಗ ಆಲೆಗ್ ಒರೋರೊ ಸಂತೋಸೊ ಆವೇದ್‌ಂಡ್. ಆ ಸಮಯೊಡು ಆಲ್ ಜೋಗುಲ ಪಂಡಲ್‌ಂಡ ಲಿಂಗೆ ಪಿದಾಯಿ ಪೊವೋಡಾತೆ. (ನಿಕ್‌ಲೆಗಾದ್ ಬರೆವೆ)

೧

ಜೋ ಜೋ ಬಂಗಾರ್ ಜೋ ಜೋ
ದಾಯೆಗಪ್ಪಾ ಇಂಚಿ ಕಂಡಾನಿ
ಏಪ್ರೋಲ ಕೊಪ್ರೊನೇ
ದಾಯೆಗಪ್ಪಾ ಇಂಚಿ ಕಂಡಾನಿ
ಗಜ್ಜೆ ಕಿಂರ್ಟೆಲಿ ಮೋರೆ ಬಾಂಪೆಲೆ
ಲಜ್ಜೆ ನಾಚಿಕೆ ದಾಂತಿನಾಯೇ
ದಾಯೆಗಪ್ಪಾ ಇಂಚಿ ಕಂಡಾನೀ

೨

ಜೋ ಜೋ ಬಂಗಾರ್ ಜೋ ಜೋ
ದಾಯೆಗಪ್ಪಾ ಇಂಚಿ ಕಂಡಾನಿ
ಏಪ್ರೋಲ ಕೋಪ್ರೊನೇ
ದಾಯೆಗಪ್ಪಾ ಇಂಚಿ ಕಂಡಾನಿ
ಕಪ್ಪುರೂಪುಡ್ ಕಾಳಭೈರವೆ
ಗುಜ್ಜೆ ಕೊದ್ಯೆಲ್ ಕಂಡ್‌ಸಿನ್ವೆಲೆ
ಬಜ್ಜೆ ನಟ್ಟೀಲೇ

೩

ಜೋ ಜೋ ಬಂಗಾರ್ ಜೋ ಜೋ
ದಾಯೆಗಪ್ಪಾ ಇಂಚಿ ಕಂಡಾನೀ
ಏಪ್ರೋಲ ಕೋಪೊನೆ
ದಾಯೆಗಪ್ಪಾ ಇಂಚಿ ಕಂಡಾನಿ
ಸಪ್ಪು ಮಿತ್ತ್‌ಡೆ ಜೆಪ್ಪುನಾಯೆ
ಹೆಜ್ಜೆಪಂಡ್‌ಂಡಜ್ಜಡ್‌ತ್‌ಕಡೆ
ಸಜ್ಜಿ ಸಜ್ಜಿಗೆ ತಿನ್ಪೆಲೇ
ದಾಯೆಗಪ್ಪಾ ಇಂಚಿ ಕಂಡಾನಿ

೪

ಜೋ ಜೋ ಬಂಗಾರ್ ಜೋ ಜೋ
ದಾಯೆಗಪ್ಪಾ ಇಂಚಿ ಕಂಡಾನೀ
ಏಪ್ರೋಲ ಕೋಪ್ರೊನೆ
ದಾಯೆಗಪ್ಪಾ ಇಂಚಿ ಕಂಡಾನಿ
ನಿನ್ನಮ್ಮೆದೂರೊಡ್
ನಿನ್ನಮ್ಮ ಲರ್ಕಡ್
ಜೆಪ್ರ್ಲಬಾಲೇ ಸಂತೋಸೊಡ್
ಜೋ ಜೋ ಬಂಗಾರ್ ಜೋ ಜೋ

ಇತ್ತೆ ಈ ಸಂಸಾರೊ ಈ ರೀತಿ ಆವೆರ ತಪ್ಪು ಏರೆನವ್?
ಲಿಂಗಣ್ಣಗ್ ಗಂಗಮ್ಮನ್ ಕೊರ್‌ನ ಪಂಕಮ್ಮನವ್ರೊ?
ಅಪಗನೇ ಅಕ್‌ಳೆನ್ ಬುಡುದ್ ಪೋಯಿನ ಸೋಮಣ್ಣನವ್ರೋ?
ಅತ್ತ್ ಜುಗಾರಿ, ಹಾದ್ರ್ಯೊಗ್ ಬಲಿಬೂರ್ನ ಲಿಂಗಣ್ಣನವ್ರೊ?
ತನ್ನಿಚ್ಛೆ ಪೂರ್ಯೆಸಾಯಿನ ರಾಮರಾಯೆರ್ನವ್ರೊ? ಏರ್ನಾ?
ತಪ್ಪು ಏರೆನ?

ಸಿಪಲ್ ಕೌನ್ಸಿಲರ್ ಶ್ರೀ. ಯು. ಸುಂದರ ಕ
ನವಭಾರತ ಬುಕ್ ಡಿಪ್ರೊ

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಲಿಮಿಟೆಡ್, ಉಡುಪಿ
(೧೯೦೬ರಲ್ಲಿ ಸ್ಥಾಪಿತವಾದದ್ದು)

ಪ್ರಕಟಣೆ

ಇವರ ಶಾಖೆಗಳು ತಾ. 19-3-1937ರಲ್ಲಿ
(1) **ವೆಲ್ಲೂರು** (ಉತ್ತರಆರ್ಕಾಡು ಜಿಲ್ಲೆ) ಮತ್ತು (2) **ಬೈಂದೂರು** (ದಕ್ಷಿಣ
ಕನ್ನಡ ಜಿಲ್ಲೆ) ಈ ಸ್ಥಳಗಳಲ್ಲಿ ತೆ
ಈ ಬ್ಯಾಂಕಿನ ರಿಜಿಸ್ಟರ್ಡ್ ಆ
ಇಡೀ ಪಟ್ಟಣದ ಮಧ್ಯ ಸ್ಥ
ಖಾನ್ ಬಹದೂರ್ ಹಾಜಿ ಅಬ್ದು
ಭವ್ಯವಾದ ಕಟ್ಟಡಕ್ಕೆ ಒಯ್ಯ

ಗ್ಗಾನಗಳೇ ತೃಣಸಮಾನವಾಗಿ ಮೂಲೆ
ಗೊತ್ತಲ್ಪಟ್ಟಿರುವವು. ಇದು ಹೊರತು ಕಳ
ದ 15 ವರ್ಷಗಳಿಂದ ಕಾಂಗ್ರೆಸು ಸರಕಾರ
ದ ಬದ್ಧ ವೈರಿಯಾಗಿ ಹೋರಾಡಿರುವುದು.
ಇಂಡಿಯಾ ಆಕ್ಟಿನಿಂದ ಇದ್ದ ಸ್ವಾತಂತ್ರ್ಯ
ವೇ ಹೋಗುವಂತಾಗಿದೆಯೆಂಬ ದೃಢ
ನಿರ್ಧಾರದಿಂದ ಅದನ್ನು ಆದಿಯಿಂದ ಇಂದಿ
ನ ವರೆಗೆ ಸಬಲವಾಗಿ ವಿರೋಧಿಸುತಾ

ಗ್ರೆಸಿನವಲ್ಲ. ತಾನು ಕಾಂಗ್ರೆಸು **ಮತ್ತು**
ಸರಕಾರಗಳೊಳಗೆ **ಮಧ್ಯಸ್ಥಿಕೆ ವಹಿಸಲು**
ಸದಾ ಸಿದ್ಧನಿರುವನೆಂದು **ಕೂಡಾ ಗಾಂಧಿ**
ಯವರು ವ್ಯಕ್ತಪಡಿಸಿರುವರು. ಇದರಿಂದ
ಕಾಂಗ್ರೆಸಿನವರದೇನೂ ತಪ್ಪಿಲ್ಲ. ತಪ್ಪು
ಸರಕಾರದ್ದೆಂಬುದು ಎಂಥವನಿಗಾದರೂ
ವಿದಿತವಾಗದಿರದು.

ಇಂಟರಿಮ್ ಮಂತ್ರಿಗಳನು ...

ಉಡುಪಿ, ತಾ. ೨೨-೪-'೩೭ ಗು

ತಪ್ಪು ಯಾರದು

ಕಾಂಗ್ರೆಸು ಮತ್ತು ಬ್ರಿಟಿಷ್
ಗಳೊಳಗೆ ನಡೆದಿರುವ ಪ್ರಕೃತದ
ದಲ್ಲಿ ತಪ್ಪುಯಾರದು? ದೇಶದ ಬಿ
ಪರಿಸ್ಥಿತಿಗೆ ಕಾರಣರಾರು? ಎಂ
ಸೂರ್ಯಪ್ರಕಾಶದಷ್ಟು ಸ್ಪಷ್ಟ ವ
ಬ್ರಿಟಿಷರು ಅದೆಷ್ಟರ ಮಟ್ಟಿನ
ಸ್ವಾತಂತ್ರ್ಯವನ್ನು ಹಿಂದೀಯ
ತ್ತಾರೆ; ಆದರಿಂದ ಎಷ್ಟರ ಮಟ್ಟಿಗೆ
ತೃಪ್ತರಾಗಿರುತ್ತಾರೆಂಬುದು ಜಗ
ಈಗ ತಿಳಿಯುವಂತಾಗಿರುವುದು.
ವಣೆಯಲ್ಲಿ ಕಾಂಗ್ರೆಸ್ಸು ಪ್ರಚಂಡ
ಪಡೆದು ಆರು ಪ್ರಾಂತ್ಯಗಳಲ್ಲಿ ಹೊ
ರಣಾ ಆಕ್ಟಿಗನುಗುಣವಾಗಿ ಮಂತ್ರಿ
ರಚಿಸಲಾಗದೆ, ಗವರ್ನರರು ತನ್ನ
ರಾದ ಕೆಲವರನ್ನು ಮಂತ್ರಿಗಳಾಗಿ
ಕೊಳ್ಳುವ ವಿಪರ್ಯಾಸವನ್ನು ನ
ದರಿಂದ ಪರಿಸ್ಥಿತಿಯು ಮತ್ತಷ್ಟು
ಗೊಂಡಿದೆ!

ಕಾಂಗ್ರೆಸಿನವರು ಆಡಳಿತ ಜವ
ಯನ್ನು ವಹಿಸುವ ಮೊದಲು, ಗ
ತನ್ನ ವಿಶೇಷಾಧಿಕಾರಗಳನ್ನುಪ
ದೆ ತಮಗೆ ಸಂಪೂರ್ಣ ಆಡಳಿತ ಸ
ವೀಯುವ ಆಶ್ವಾಸನೆಯನ್ನು ವ
ಕೇಳಿದುದು ನ್ಯಾಯ ಸಮ್ಮತವೇ?
ರರಿಗೆ ಇಂಡಿಯಾ ಆಕ್ಟಿನ ಮೇರೆಗೆ
ಆಶ್ವಾಸನೆಯೀಯಲು ಸಾಧ್ಯವೇ
ಕುರಿತು ಹಿಂದುದೇಶದಲ್ಲಿಯೂ
ನಲ್ಲಿಯೂ ಭಿನ್ನಾಭಿಮತವುಂಟ
ದು. ಹಿಂದೀಯರಲ್ಲಿ ಸರ್. ತೇ
ದೂರು ಸಪ್ರುಗಳೇ ಮೊದಲಾದ
ಮಂದಿಯು ಹೊರತು ಹೆಚ್ಚಿನವರ
ಗ್ರೆಸು ಗವರ್ನರರಿಂದ ಸಂಪೂರ್ಣ
ಕ ಆಡಳಿತ ಸ್ವಾತಂತ್ರ್ಯದ ಆಶ್ವಾಸನೆ ಕೇಳಿ
ದುದು ನ್ಯಾಯ; ಗವರ್ನರರಿಗೆ ಇಂಡಿಯಾ
ಆಕ್ಟಿನ ಮೇರೆಗೇನೇ ಅಂತಹ ಆಶ್ವಾಸನೆ
ಕೊಡಲು ಸಾಧ್ಯವಿದೆಯೆಂಬ ಅಭಿಮತವು
ಳ್ಳವರಿರುವರು. ಮಾಜಿ ಹೈಕೋರ್ಟು
ನ್ಯಾಯಾಧೀಶರುಗಳೂ, ದೊಡ್ಡ ದೊಡ್ಡ
ವಕೀಲರೂ, ವಕೀಲ ಸಂಘದವರೂ ಕಾಂ
ಗ್ರೆಸಿನ ಧೋರಣೆಯನ್ನು ಸಮರ್ಥಿಸಿರು
ಗುವುದು ಕಾಂಗ್ರೆಸಿನ ಸ್ವಾಭಿಮಾನಕ್ಕೆ
ಕುಂದು. ಸಹಾನುಭೂತಿಯಿಂದ ಸಹಾಯ
ಮಾಡುವೆವೆಂಬ ಆಳರಸರ ಬಾಯಿಮಾತಿನ
ಟೊಳ್ಳುತನವನ್ನು ಕಾಂಗ್ರೆಸಿನವರು ಹಲ
ವು ಬಾರಿ ಪರೀಕ್ಷಿಸಿ ಕಂಡುಕೊಂಡಿರುವರು.
ಗವರ್ನರರುಗಳ ಬಾಯಿ ಮಾತಂತಿರಲಿ,
ವೈಸರಾಯರು ಬ್ರಿಟಿಷ್ ಪ್ರಧಾನ ಮಂತ್ರಿ
ಗಳೇ ಸಂದರ್ಭಾನುಸಾರ ಕೊಟ್ಟಿರುವ ವಾ
ನ್ಯಾಯಪರವಾದ ಸೂಚನೆಯನ್ನು ಆಳರ
ಸರಿಗೆ ಥಕ್ಕನೆ ಮೂಲೆಗೊತ್ತಲು ಸಾಧ್ಯ
ವಿಲ್ಲ. ಆದುದರಿಂದ ಆ ಕುರಿತು ಆಲೋಚಿ
ಸಲಾಗುವುದೆಂದಿಷ್ಟೇ ಹೇಳಿ ಸುಮ್ಮನಾಗಿ
ರುವರು. ಇದು ಹೊರತು ರಾಜಿಮಾಡುವ
ವಿಷಯದಲ್ಲಿ ತನಗೆ ಯಾವುದೊಂದು ತರ
ದ ಪ್ರತಿಷ್ಠೆಯೂ ಇಲ್ಲವೇ ತಾನುಮಾಡಿರುವ
ಸೂಚನೆಗಳೆಲ್ಲಾ ತನ್ನದೇ ಹೊರತು ಕಾಂ

* ವಂದೇ ಮಾತರಂ *

ತುಳುನಾಡ್ ಪತ್ರಿಕೆಡ್ದ್ (ಬರೆತಿನಾಯೆ ತುಳುವಾಲೆ)

(೭ನೇ ಸಂಚಿಕೆಡ್ದ್ ದುಂಬರ್ತಿನವು.)

ಮಾಸ್ಟ್ರ—ನಂಕ್ ನಮ್ಮ ಭೂಮಿದಾವಡ್ ಊರುದಾವಡ್ ಇಲ್ಲ್‌ದಾವಡ್ ಕಡೇಕ್ ಕೆಂಡನ್ನಗ್ ಬುಡೇದಿನ ಹಕ್ಕ್ ಕೂಡ ಇಜ್ಜಾಂದಿಲೆಕ್ಕ ಮಲ್ತ್‌ದಿನವೇ ಇಂಗ್ಲಿಸ್‌ಸರ್ಕಾರ. ಕಾಡಡ್ ಉಪ್ಪುನ ಮುರ್ಗೊಲೆಗ್ ಮರಟುಪ್ಪುನ ಪಕ್ಕಿಲೆಗ್ ಸಾನ್ ದೇವೆರ್ ಕೊರ್ತಿನ ಬುದ್ಧಿಡ್ ಕೂಡು ನಡಪರೆ ಹಕ್ಕುಂಡು. ಬುದ್ಧಿ ಇತ್ತಿನ ನರಮಾನಿಯಾದ್ ನಮ ಪುಟ್ಟುದು ನಂಕ್ ಗೊತ್ತಿಂತಿನೆನ್ ಸಭೆಲ್ ಪಾರೆರಿಯೆರೆಲಾ ಪತ್ರಿಕೆಲೆಗ್ ಬರೆವರೆಲಾ ಪ್ರಕಟನ ಮಲ್ಪೆರೆಲಾ ಬಲ್ಲಿಂದ್ ಕಾನೂನು ಮಲ್ತ್‌ಬೊಕ್ಕ ನಂಕ್ ಎಂಚಿನ ಸೊಸಂತ್ರ. ನಮ ಆಕ್ಲೆನ ಗುಲಾಮೆರ್ಂದ್ ಪಂಡ್‌ದ್ ನಲಿಪುನ ಮಲ್ಲ ಸ್ವತಂತ್ರ.

ರಾಜು—ಅಂದೆ ಆಯ್ಯ ನಮುಲಾ ಇಂಗ್ಲೀಸ್ ದಾಕ್ಲ ಇಂದ್‌ದ್ ಪನ್‌ಂಡ ನಮ್ಮ ರಾಜ್ಯ ಆಪುಜಾ.

ಮಾಸ್ಟ್ರೆ—ಅಂಚ ಪಾತೆರುನೆಕ್ಕಾದ್ ನಿಕ್ಲೆನ್ ಜೋಕುಲು ಇಂದ್‌ದ್ ಪನ್ಪಿನಿ. ಆಕ್ಲು ಜೊಲ್ಲು ಮೋನೆದಾಕ್ಲು ನಮನ್ ಆಕ್ಲ ಮಾನ್ಯೆರೆಡ್ದ್‌ಲಾ ಕಡೆ ಮಲ್ಪುವೆರತ್ತ್.

ಶಂಕರೆ—ಅವ್ವೆಂಚ ಮಾಸ್ಟ್ರೆ?

ಮಾಸ್ಟ್ರ—ಆಕ್ಲೆನ ಇಂಗ್ಲಾಂಡ್‌ದ್ ಮಲ್ಲ ಒಂಜಿ ಹೋಟೆಲ್‌ಡ್ ಉಲಾಯಿ ಪೊಪ್ಪುನಗ ಬಾಕಿಲ್‌ಡ್ ಒಂಜಿ ಬೋರ್ಡ್‌ಡು-"ಡೋಗ್ಸ್-ಕ್ಯಾಟ್ಸ್-ಎಂಡ್, ಇಂಡಿಯನ್ಸ್" ಉಲಯಿ ಪ್ರೋವರೆ ಬಲ್ಲಿಂದ್ ಬರೆತೆರ್ಂಗೆ. ಡೋಗ್ಸ್ ಇಂದ್‌ಂಡ ನಾಯಿಲು. ಕ್ಯಾಟ್ಸ್ ಇಂದ್‌ಂಡ ಪುಚ್ಚೆಲು. ಇಂಡಿಯನ್ಸ್ ಇಂದ್‌ಂಡ ನಮ್ಮ ಹಿಂದುಸ್ತಾನದ ಭಾರತೀಯೆರ್, ಆದುಪ್ಪು ಕಪ್ಪು ಜನೊಕ್ಲು. ಇಂದ್‌ದ್ ಬರೆಯಿಬೊಕ್ಕ ನಮ ಎಂಚ ಇಂಗ್ಲೀಸ್‌ದಾಕ್ಲು ಆಪಿನಿ.

ರಾಜು—ಅಂಚಾಂಡ ನಮ್ಮ ರಾಜ್ಯ ನಂಕ್ ಎಂಚ ತಿಕ್ಕುನಿ?

ಮಾಸ್ಟ್ರ—ನಂಕ್ ನಮ ಸ್ವರಾಜ್ಯ ದೆತೊನೊಡು. ಆಪಗ ನಂಕ್ ಮಾತ ಹಕ್ಕ್‌ಲಾ ತಿಕ್ಕುನ್ಡ್.

ಶಂಕರೆ—ನಮ ಯೆಂಚ ಸ್ವರಾಜ್ಯ ದೆತೊನುನಿ?

ಮಾಸ್ಟ್ರ—ಸ್ವರಾಜ್ಯ ಆವೊಡಾಂಡ ನಮ ಮಾತೆರ್ಲ ಕೊಂಗ್ರೆಸ್‌ಗ್ ಸೇರೊಡು.

ರಾಜು—ಅಂದೆ. ಕೊಂಗ್ರೆಸ್‌ದಾಕ್ಲೆನ್‌ಮಾತ ಪತ್ತ್‌ದ್ ಜೈಲಿಗ್ ಪಾಡುಜೆರಾ?

ಮಾಸ್ಟ್ರ—ಮಾತೆರ್ಲ ಕೊಂಗ್ರೆಸ್ಸಾಂಡ ಆಕ್ಲೆನ್ ಪಾಡಿಯೆರೆ ಜೈಲೇತ್‌ಬೋಡು-ಜೈಲ್‌ನ್ ತೂಪಿನಿಯೇರ್.

ಶಂಕರೆ—ಅಂದೆ ಅಯ್ಯಾ, ಸರ್ಕಾರೊಗು ಎದುರುಂತ್ಯೆರೆ ಆವಂದ್ ಯಿಂದ್‌ಡ್ ದುಂಬುದ ಮಾಸ್ಟ್ರ ಪನ್ತೆರ್.

ಮಾಸ್ಟ್ರ—ಅವ್ವಂದ್. ನ್ಯಾಯ ನೀತಿಗ್ ಸಮಾದ್ ನಡಪುವುನ ಸರ್ಕಾರೊಗು ಎದುರುಂತ್ಯೆರ್ ಆವಂದ್. ಅವ್ವು ರಾಜದ್ರೋಹ ಆಪುಂಡು. ಕೊಂಗ್ರೆಸ್‌ದಾಕ್ಲು ಮಲ್ಪುನಾವಡ್ ಕೇನುನಾವಡ್ ಅನ್ಯಾಯದವತ್ತ್ ಬೊಕ್ಕ ಆಯಗ್ ಬೋಡುತ್ತಿನವುಲಾ ಅತ್ತ್ ಊರುಗಾದ್ ದೇಶೋಗಾದ್ ಕೇನುನೆಕ್ಕ್ ಇತ್ತೆಲಾ ಯೇತೋ ಜನೊನು ಜಯಿಲ್‌ಗ್ ಪಾಡುವೆರ್. ಪಾಕ ಜನೊಕ್ಕು ಫಾಸೀ ಹುಕ್ಕುಂ ಕೊರಿಯೆರ್. ಏತೋ ಜನೊನು ಟಾಪುಗು ಕಡಪುಡುವೆರ್. ಇತ್ತೆಲಾ ಏತೋ ಜನ ಜಯಿಲ್‌ಡ್ ಕುರಿವೆರ್. ಆಂಡಲಾ ಅಯಿಕ್ ಮಾತ ಪೋಡಿಯಂದೆ ದಯಿರೊಡು ಸರಕಾರೊಗು ಎದ್‌ರುಂತುದು ಆಕ್ಲೆನ ಅನ್ಯಾಯೊನು ಆಕ್ಲೆಗ್ ತೆರಿಪಾವುನ ಕೂಟನೇ ಕೊಂಗ್ರೆಸ್. ಅವ್ವೇ ಇಡೀ ರಾಜ್ಯದ ಒಂಜಿ ಮಲ್ಲ ಸಭೆ— (ನನತೂ ನನ ಒರ)

● ತುಳುವೆರ್ ಅವಶ್ಯವೋದರೆತ್ತಿ ಪುಸ್ತಕಳು. ●

ಕೃಷ್ಣ ಸಂಧಾನ	೦	೮	೦
ಮಿತ್ಯನಾರಾಯಣ ಕತೆ	೦	೮	೦
ಜನಮರ್ಲ್	೦	೬	೦
ಸತೀ ಕಮಲೆ	೦	೬	೦
ಕಾಸಿಗೆ	೦	೪	೦
ಅಳಿಯಸಂತಾನ ಕಟ್ಟ್‌ದ ಗುಟ್ಟು	೧	೪	೦
ಮಹ್‌ಮಾಳತ್ತ್ ಮದ್‌ಮಾಯೆ	೦	೨	೦
ಮುಂಡತ್ತಾಯೆ	೦	೨	೦
ತುಳು ಪದ್ಯಮಾಲಿಕೆ	೦	೧	೦
ಪುಗಿರೆದ ಅಮಲ್	೦	೧	೦

● **ಎಸ್. ಯು. ಪಣಿಯಾಡಿ, ತುಳುವ ಸಾಹಿತ್ಯಮಾಲೆ, ಉಡುಪಿ.** ●

ಬೇಕಾಗಿದೆ

ಚತುರ ಕೆಲಸಗಾರರು ಬೇಕು. ಹೆಚ್ಚಿನ ಮಾಹಿತಿಗಳಿಗೆ ಒಂದಾಣೆಸ್ಟ್ಯಾಂಪಿನೊಂದಿಗೆ ಬರೆಯುವುದು.

"K"

C/o NAVAYUGA, UDIPI.

ಉಡುಪಿ

ತಾ. ೧೨-೪-೩೭ನೇ ಸೋಮವಾರ ಸಂಜೆ ಸಾಧಾರಣ ಆರೂವರೆ ತಾಸಿಗೆ ಸ್ಥಳೀಯ ಹೆಮ್ಮಕ್ಕಳ ಟ್ರೈನಿಂಗ್ ಶಾಲೆಯ ವರ್ಷಾಂತಿ ಸಮಾರಂಭವು ಸೌಭಾಗ್ಯವತಿ ಶಾಂಭವಿ ಬಾಯಿ, ಆರ್. ಶೆಣೈ, ಬಿ ಎ.ಯವರ ಅಧ್ಯಕ್ಷತೆಯಲ್ಲಿ ಜರಗಿತು. 'ಶಾಲಾ ಹೊರಾಂಗಣವು ಸಿಂಗಾರಗಳಿಂದ ಅಲಂಕೃತವಾಗಿತ್ತು. ದೇವತಾ ಪ್ರಾರ್ಥನೆಯಾಗಿದ ಬಳಿಕ ಶಾಲಾ ಮುಖ್ಯಾಧ್ಯಾಪಕಿ ಮಿಸೆಸ್ ಮನೋರಮಾ ಬಾಯಿ, ಬಿ. ಎ. ಎಲ್. ಟಿ.ಯವರು ಶಾಲಾ ವರದಿಯನ್ನೋದಿದರು. ಅಧ್ಯಕ್ಷೆಯರು ಶಾಲೆಯ ಹಾಗೂ ವಿದ್ಯಾರ್ಥಿನಿಯರ ಶ್ರೇಯೋಭಿವೃದ್ಧಿಯ ಕುರಿತು ಬೋಧಪರವಾಗಿ ಮಾತಾಡಿದರು. ಇದಾಗಿ 'Tiial by Laxmi, ಎಂಬ ಇಂಗ್ಲಿಷ್ ನಾಟಕದ ಪ್ರದರ್ಶನವಾಗಿ 'ದಾಮಾಜಿಪಂತ' ಎಂಬ ಕನ್ನಡ ಸಂಗೀತ ನಾಟಕವನ್ನು ಶಾಲಾವಿದ್ಯಾರ್ಥಿನಿಯರು ಹೃದಯಂಗಮವಾಗಿ ಅಭಿನಯಿಸಿದರು. ಸನ್ಮಾನ್ಯ ಅಧ್ಯಕ್ಷೆಯರಿಗೂ ನೆರೆದ ಸ್ತ್ರೀಪುರುಷರಿಗೂ ಧನ್ಯವಾದಗಳು ಸಮರ್ಪಿಸಲ್ಪಟ್ಟು ನಂತರ ರಾಷ್ಟ್ರ ಗೀತೆಯೊಂದಿಗೆ ಸಭಾಕಾರ್ಯವು ಜಯಶೀಲವಾಗಿ ಅಂತ್ಯವಾಯಿತು.

ಇದೇ ತಾ. ೧೬ನೇ ರಾತ್ರಿ ಮದ್ರಾಸು ಸರಕಾರದ ವಿದ್ಯಾಂಗದೊಡೆಯರಾದ ಶ್ರೀ. ಆರ್. ಯಮ್. ಪಾಲಟರವರು ಪತ್ನೀ ಸಮೇತರಾಗಿ ಎಂಡೋಮೆಂಟ್ ಬೋರ್ಡಿನ ಕಮೀಶನರರೊಡನೆ ಉಡುಪಿಗೆ ಚಿತ್ತೈಸಿದರು. ಇವರ ಆಗಮನ ನಿರೀಕ್ಷೆಯಲ್ಲಿದ್ದ ಹಲಕೆಲವರು ಕಲ್ಸಂಕದ ಬಳಿಯಲ್ಲೇ ಕಪ್ಪುನಿಶಾನೆಗಳ ಸ್ವಾಗತವನ್ನಿತ್ತು "ಡಬ್ಲ್ಯು ಮಿನಿಸ್ಟರ್ ಗೋ ಬೇಕ್" ಎಂದು ಜಯಕಾರಗಳನ್ನೆಬ್ಬಿಸಿದರು. ಹೇಗೂ ಪುರ ಪ್ರವೇಶ ಮಾಡಿದ ಬಳಿಕ ಶ್ರೀ ಕೃಷ್ಣ ದರ್ಶನಾರ್ಥವಾಗಿ ತೇರುಬೀದಿಗೆ ಬಂದರು. ಅಲ್ಲಿಯೂ ಕರಿ ಬಾವುಟಗಳ ಪ್ರದರ್ಶನ, ಶ್ರೀ ಕೃಷ್ಣನ ದರ್ಶನ ಪಡೆದು ಶ್ರೀಪಾದಂಗಳವರಿಂದ ಮಂತ್ರಾಕ್ಷತೆಯನ್ನು ಸ್ವೀಕರಿಸಿ ಮಹಾದ್ವಾರದಿಂದ ಹಿಂತಿರಳದೆ ಬಡಗುಮಾಳಿಗೆಯ ಚಿಕ್ಕ ಓಣಿಯಿಂದ ಪಾಲಾಯನ ಹೋಗುವ ಪ್ರಸಂಗವನ್ನು ಒದಗಿಸಿಕೊಟ್ಟಿತು ಈ ಪ್ರದರ್ಶನ, ಜಯಕಾರಗಳು. ವಿದ್ಯಾ ಮಂತ್ರಿಗಳೊಂದಿಗೆ ಉಡುಪಿಯ ಕೆಲಮಂದಿ ಅಧ್ಯ ಗೃಹಸ್ಥರಿದ್ದರೆಂದೂ, ಖಾಸಗಿಯಾಗಿ ಶ್ರೀ ಪಾಲಟರಿಗೆ ಟೀಪಾರ್ಟಿ ಸತ್ಕಾರವಿತ್ತರೆಂದೂ ತಿಳಿದುಬರುತ್ತದೆ.

ತಾ ೧೩ನೇ ಮಂಗಳವಾರವನ್ನು ರಾಷ್ಟ್ರೀಯ ವಾರದ ಕೊನೆಯ ದಿನವಾಗಿ ಅಖಿಲಭಾರತದಲ್ಲಿ ಆಚರಿಸುವಂತೆ ಉಡುಪಿಯಲ್ಲೂ ಸಾಂಗವಾಗಿ ಆಚರಿಸಲಾಯಿತು. ಪ್ರಭಾತ ಫೇರಿ, ಧ್ವಜವಂದನಾದಿಗಳು ಬೆಳಗ್ಗೆ ಎಂಟು ಗಂಟೆಯೊಳಗಾಗಿ ಮುಗಿದವು. ಸಂಜೆ ಸಾರ್ವಜನಿಕ ಸಭೆಯೊಂದು ಶ್ರೀ ಎ. ಬಿ. ಶೆಟ್ಟಿ, ಎಮ್. ಎಲ್. ಎ.ಯವರ ಅಧ್ಯಕ್ಷತೆಯಲ್ಲಿ ರಥಬೀದಿಯಲ್ಲಿ ಜರಗಿತು. ಶ್ರೀ. ಕೆ. ಕೆ. ಶೆಟ್ಟರು ರಾಷ್ಟ್ರೀಯ ವಾರದ ಮಹತ್ವದ ಕುರಿತು ವಿಚಾರಪೂರ್ಣ ಭಾಷಣವೀಯುವಾಗ ಜಾಲಿಯನ್ ವಾಲಾಬಾಗಿನ ಭಯಾನಕ ಘಟನಾವಳಿಗಳನ್ನು ಚಿತ್ತವೇಧಕ ರೀತಿಯಲ್ಲಿ ವಿವರಿಸಿ ಹೇಳಿದರು.

ಕಾಂಗ್ರೆಸಿನವರು ಮಂತ್ರಿಪದವಿಯನ್ನು ಸ್ವೀಕರಿಸುವ ಬಾಬಿನಲ್ಲಿ ಅಖಿಲಭಾರತ ಕಾಂಗ್ರೆಸ್ ಕಮಿಟಿಯವರೂ ನೇಶನಲ್ ಕನ್ವೆನ್ಶನಿನವರೂ ಅಪೇಕ್ಷಿಸಿದಂತೆ ಸರಕಾರದವರ ವರ್ತನೆಯನ್ನು ನಿಷೇಧಿಸಿ ಮತ್ತು ತಾತ್ಕಾಲಿಕ ಮಂತ್ರಿಮಂಡಳ ಸ್ಥಾಪನೆಯ ಸಾಹಸದಲ್ಲಿ ಸದರಿ ಸ್ಥಾನಗಳನ್ನು ಸ್ವೀಕರಿಸಿದ ನಮ್ಮ ದೇಶಭಾಂಧವರಲ್ಲಿ ಅವಿಶ್ವಾಸವನ್ನು ಸೂಚಿಸುವ ನಿರ್ಣಯವನ್ನು ಮುನಿಸಿಪಲ್ ಕೌನ್ಸಿಲರ್ ಶ್ರೀ. ಯು. ಸುಂದರ ಕಿಣಿಯವರು ಮಹಾಜನ ಸಭೆಯ ಮುಂದಿರಿಸಿದರು ಹಾಜರಿದ್ದ ಪ್ರೊಫೆಸರ್ ಸಿ ಜಿ ಪಾರ್ಕರ್ ಯಮ್ ಎಲ್ ಎ ಯವರು ಸದ್ರಿ ಠರಾವನ್ನು ಪುಷ್ಟೀಕರಿಸಿ ಇಂಗ್ಲಿಷಿನಲ್ಲಿ ಸರಳರೀತಿಯಿಂದ ಎಲ್ಲರಿಗೂ ತಿಳಿಯುವಂತೆ ಚಟೋಕಾಗಿ ಮಾತನಾಡಿದರು. ನವಸುಧಾರಣ ಆಕ್ಷೇಪ್ತಿ ಸನ್ಮಾನನೀಯ ಅಧ್ಯಕ್ಷರಾದ ಶ್ರೀ ಎ ಬಿ ಶೆಟ್ಟರು ಭಾಷಣವೀಯುತ್ತ ಅ ಭಾ ಕಾ ಕಮಿಟಿ, ಡಿಲ್ಲಿ ಕನ್ವೆನ್ಶನ್ ಗಳಲ್ಲಿ ನಡೆದ ನಿರ್ಧಾರಗಳನ್ನು ವಿಸ್ತಾರವಾಗಿ ವಿವರಿಸಿಹೇಳಿದರು. ತಾತ್ಕಾಲಿಕ ಮಂತ್ರಿಮಂಡಲದ ಸದಸ್ಯರಲ್ಲೊಬ್ಬರಾದ ಶ್ರೀ ಪಾಲಟರು ನಿಜವಾಗಿಯೂ ಪ್ರಜಾಪಕ್ಷದ ಬಹುಮಾಂದಿಯ ಪ್ರತಿನಿಧಿಗಳಾಗಿ ಉಡುಪಿಗೆ ಬರುತ್ತಿದ್ದರೆ ಅವರು ಎಂತಹ ಮಾನಮರ್ಯಾದೆಗಳಿಗೆ ಪಾತ್ರರಾಗುತ್ತಿದ್ದರು ಎಂಬುದನ್ನು ವಿಶದೀಕರಿಸಿದರು ಹಿಂದೀ ಜನಾಂಗದ ಐಕ್ಯತೆಯು ದಿನೇ ದಿನೇ ಪ್ರಬಲವಾಗಿ ಬೆಳೆಯುತ್ತಿರುವುದು ಸರಕಾರಕ್ಕೆ ತಿಳಿದಿರುವುದಾದರೂ ಸಂದರ್ಭಾನುಸಾರ ಹಿಂದೀ ಜನತೆಯು ತಮ್ಮ ಏಕಮಾತ್ರ ಪ್ರತಿನಿಧಿ ಸಂಸ್ಥೆಯಾದ ಕಾಂಗ್ರೆಸಿನಲ್ಲಿ ದ್ವಿಗುಣಿತವಾದ ಪ್ರೀತಿ-ವಿಶ್ವಾಸಗಳನ್ನು ತೋರುವುದು ಅತ್ಯಾವಶ್ಯಕವೆಂದು ಒತ್ತಿ ಹೇಳಿದರು ಮೇಲಣ ಠರಾವ ಸರ್ವಾನುಮತದಿಂದ ಅಂಗೀಕರಿಸಲಾಗಿ ವಂದೇಮಾತರಂ ಗೀತೆಯೊಂದಿಗೆ ಸಭಾಂತ್ಯವಾಯಿತು

ಕಟಪಾಡಿ, ಕಾಪು ಕೇಂದ್ರಗಳಲ್ಲಿ ಶ್ರೀ ಎ ಬಿ ಶೆಟ್ಟರೂ ಕಲ್ಯಾಣಪುರ, ಬ್ರಹ್ಮಾವರ, ಬಾರ್ಕೂರು ಕೇಂದ್ರಗಳಲ್ಲಿ ಪ್ರೊ। ಪಾರ್ಕರ್ ಯವರೂ ಮಹಾಜನರನ್ನು ಕಂಡು ಸದ್ಯದ ರಾಜಕೀಯ ವಾತಾವರಣದ ಕುರಿತು ಅನುಭವವನ್ನಿತ್ತರೆಂದು ತಿಳಿದುಬರುತ್ತದೆ:

25 ರೂಪಾಯಿಗಳನ್ನು
ಬಹುಮಾನ ಪಡೆಯುವುದು ಹೇಗೆ?
ಬರುವ ವಾರದ
ನ ವ ಯು ಗ
ಸಂಚಿಕೆಯನ್ನು ನೋಡಿರಿ.

ಉಡುಪಿ ಮುನಿಸಿಪಾಲಿಟಿಯ ಸಾಮಾನ್ಯ ಸಭೆಯೊಂದು ತಾ ೨೦-೪-೩೭ನೇ ಮಂಗಳವಾರ ಸಂಜೆ ಚೆಯರ್‌ಮೇನ್, ಶ್ರೀ ಆರೂರುಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿಗೆ ಶ್ರೀ ಪಿ ಉಪೇಂದ್ರ ನಾಯಕರನ್ನೂ ಈ ಸಭೆಯ ಪ್ರತಿನಿಧಿಯನ್ನಾಗಿ ಆರಿಸಲಾಯಿತು ಮುನಿಸಿಪಾಲಿಟಿಯನ್ನು ರದ್ದುಗೊಳಿಸಿ ಮೆನೇಜರ್ ಪಂಚಾಯತ ಬೋರ್ಡನ್ನು ಸ್ಥಾಪಿಸಬೇಕೆನ್ನುವ ಶ್ರೀ ವಾಮನ ಭಟ್ಟರ ಠರಾವು ಮುಂದರಿಸಿಡಲಾಯಿತು ಮಾನ್ಯ ಸರಕಾರವು ಮುನಿಸಿಪಾಲಿಟಿಯನ್ನು ರದ್ದುಗೊಳಿಸಲು ಪ್ರಕೃತ ನಿರಾಕರಿಸಿದ್ದಲ್ಲಿ ಕೌನ್ಸಿಲ ಮೆಂಬರರೆಲ್ಲರೂ ಒಮ್ಮತದಿಂದ ರಾಜಿನಾಮೆಯನ್ನೀಯಬೇಕೆಂಬ ಶ್ರೀ ಪಿ ಎನ್ ಮಾಧವರಾಯರ ಸೂಚನೆಯು ಮಾನ್ಯವಾಗಲಿಲ್ಲ

ರೈತರಿಗೆ ಸರಕಾರದಿಂದ ಸಾಲಕೊಡುವ ವಿಚಾರ

ಬಡರೈತರ ಸಾಲ ನಿವಾರಣೆ ಬಗ್ಗೆ ಅವರ ಆಸ್ತಿಯ ಜವಾಬುದಾರಿಕೆಯಿಂದ ಸರಕಾರದವರು ಅವರಿಗೆ ಕಡಿಮೆ ಬಡ್ಡಿಯಲ್ಲಿ ಸಾಲಕೊಡುವರೆಂದು ನಿಶ್ಚಯವಾಗಿರುತ್ತದೆ ಈ ವಿಷಯದಲ್ಲಿ ಸ್ಪೆಶಲ್ ಲೋನ್ ಆಫೀಸರರು ಹೀಗೆ ತಿಳಿಸುತ್ತಾರೆ—

ಕೃಷಿಕರ ಸಾಲ ಸಂಬಂಧವಾದ ಸರಕಾರದ ಆಕ್ಟಿನ ಪ್ರಕಾರ ಸಾಲಪಡಕೊಳ್ಳುವ ಬಗ್ಗೆ ಜನರಿಂದ ಅರ್ಜಿಗಳು ಸ್ವೀಕರಿಸಲಾಗುವವು ಆದರೆ ಈ ಸಾಲವು ಮಂಗಳೂರು ತಾಲೂಕಿನ ಸುರತ್ಕಲ್ ಮೂಲ್ಕಿ ಮತ್ತು ಉಡುಪಿ ತಾಲೂಕಿನ ಉಡುಪಿ ಮತ್ತು ಕಾಪು ಈ ಭಾಗಗಳ ರೆವಿನ್ಯೂ ಇನ್ಸ್ಪೆಕ್ಟರರ ಫಿರ್ಕದಲ್ಲಿರುವವರಿಗೆ ಮಾತ್ರ ದೊರೆಯುವುದು ಅಲ್ಲದೆ ಸಾಲಪಡೆಯಲಿಚ್ಛಿಸುವವರ ಆಸ್ತಿಯ ಬೆಲೆಯು ರೂಪಾಯಿ ೫೦೦೦ಕ್ಕೆ ಮಿಕ್ಕಿರಬಾರದು ಮತ್ತು ಸಾಲವು ರೂ ೨೦೦೦ಕ್ಕಿಂತ ಜಾಸ್ತಿಯಿರಬಾರದು ಇನ್ನೂ ಹೆಚ್ಚಿನ ಅಗತ್ಯವುಳ್ಳ ವಿವರಗಳನ್ನೂ ಮತ್ತು ಅರ್ಜಿ ಮಾಡುವ ಅಚ್ಚಾದ ಫೋರ್ಮುಗಳನ್ನೂ ಗ್ರಾಮ ಪಟೇಲರಿಂದ, ಮೇಲೆ ಹೇಳಿದ ನಾಲ್ಕು ಫಿರ್ಕಗಳ ಆಫೀಸರರಿಂದ ಅಥವಾ ಮಂಗಳೂರು ತಾಲೂಕಾಫೀಸಿನ ಮಾಳಿಗೆಯಲ್ಲಿರುವ ಸ್ಪೆಶಲ್ ಲೋನ್ಸ್ ಆಫೀಸರರ ಆಫೀಸಿನಿಂದ ಪಡೆದುಕೊಳ್ಳಬಹುದು, ಈಗ ಬಡ್ಡಿಯ ದರ ಸೇಕಡಾ ೫॥,

ತಾ. ೧೯-೪-೩೭ನೇ ತಾರೀಕಿನ ದಿವಸ ಶಿರಿಬೀಡಿನಲ್ಲಿರುವ ಸುಲೇಮಾನ ಸಾಹೇಬರೆಂಬವರು ತನ್ನ ಆಡಿಗೆ ಸೊಪ್ಪು ಕೊಯ್ಯಲಿಕ್ಕೆ ಹಲಸಿನ ಮರಕ್ಕೆ ಹತ್ತಿದರು ಅಲ್ಲಿಂದ ಅಕಸ್ಮಾತ್ತಾಗಿ ಕೆಳಗೆ ಬಿದ್ದುಬಿಟ್ಟರು ಕೂಡಲೆ ಅವರನ್ನು ಸರಕಾರಿ ಆಸ್ಪತ್ರೆಗೆ ಸಾಗಿಸಲಾಗಿ ಮರುದಿವಸ ಸದ್ರಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು

ಕುಂದಾಪುರ

ಇದೇ ತಾ. ೧೧ನೇ ಆದಿತ್ಯವಾರ ಸಾಯಂ ಘಂಟೆ ೬ಕ್ಕೆ ಕುಂದಾಪುರ ಗಾಂಧಿ ಮೈದಾನಿನಲ್ಲಿ ಕಾಂಗ್ರೆಸು ಪ್ರಚಾರದ ಸಲುವಾಗಿ ಮಹಾಜನರ ಸಲುವಾಗಿ ಮಹಾಜನರ ಸಭೆಯು ಶ್ರೀ ಕೆ. ಎಲ್. ಭಂಡಾರರು, ಎಡ್ವಕೇಟ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮಾನ್ ಎ. ಬಿ. ಶೆಟ್ರು ಹೊಸ ರಾಜ್ಯಾಂಗ ರಚನೆಯ ವಿಷಯ ಸವಿಸ್ತಾರವಾಗಿ ಸುರಸಭಾಷಣವನ್ನಿತ್ತರು. ತರುವಾಯ ಶ್ರೀ. ಕೆ. ಶಂಕರನಾರಾಯಣ ಕಾರಂತ, ಬಿ ಎ., ಬಿ. ಎಲ್., ಎಡ್ವಕೇಟ್ ಇವರು. ಕಾಂಗ್ರೆಸು ಬಹುಮತದಿಂದ ಆರಿಸಿ ಬಂದ ಎಸೆಂಬ್ಲಿಗಳಲ್ಲಿ ಕಾಂಗ್ರೆಸು ಅಧಿಕಾರ ಸ್ವೀಕಾರವಾದಲ್ಲಿ ಮಾನ್ಯ ಗವರ್ನರರು ತನ್ನ ವಿಶೇಷಾಧಿಕಾರವನ್ನು ಉಪಯೋಗಿಸುವುದಿಲ್ಲವೆಂತ ಆಶ್ವಾಸನೆ ಕೊಡಬೇಕೆಂಬ ಕಾಂಗ್ರೆಸ್ಸಿನ ಕೇಳಿಕೆಯನ್ನು ಈ ಸಭೆಯು ಸಮರ್ಥಿಸುತ್ತದೆ. ಜನಮತವಿಲ್ಲದ—ಹಂಗಾಮಿ ಮಂತ್ರಿಗಳನ್ನು ನೇಮಿಸಿದ ಗವರ್ನರರ ವರ್ತನೆಯನ್ನು ಈ ಸಭೆಯು ಖಂಡಿಸುತ್ತದೆ ಎಂಬ ಠರಾವುಗಳು ಸರ್ವಸಮ್ಮತಿಯಿಂದ ಮಂಜೂರಾದುವು. ಸಭಾಧ್ಯಕ್ಷರ ಸಮಯೋಚಿತ ಭಾಷಣಾ ನಂತರ ಸಭೆಯು ಚದರಿತು.

SPACE
Reserved
FOR
NAVA-BHARTA BOOK DEPO.
ಸದ್ಯದಲ್ಲೇ ತೆರೆಯಲ್ಪಡುವ
ನವಭಾರತ ಬುಕ್ ಡಿಪೊ
ಇದಕ್ಕಾಗಿ
ಕಾದಿರಿಸಿದ
ಸ್ಥಳ.

ಇದೇ ತಾ ೧೨-೪-೩೭ನೇ ಸೋಮವಾರ ಪೂ. ಘಂ। ೧೧ಕ್ಕೆ ಶ್ರೀ. ಕೆ. ಆರ್. ಭಟ್ಟಯವರ ಮಾಳಿಗೆಯಲ್ಲಿ ವಿಜಯಾ ಬೇಂಕಿನ ಶಾಖೆಯನ್ನು ತೆರೆಯುವ ಸಮಾರಂಭೋತ್ಸವವು, ರಾವ್ ಸಾಹೇಬ್ ಹೊಸಕೋಟೆ ಗಣಪತಿರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಊರ ಪ್ರಮುಖ ಮಹನೀಯರೆಲ್ಲಾ ದಯಮಾಡಿಸಿದ್ದರು. ಈ ತಾಲೋಕಿನವರ ಪ್ರೋತ್ಸಾಹದಿಂದ ಈ ಶಾಖೆಯು ಅಭಿವೃದ್ಧಿಯೊಂದಲೆಂದು ಬೇಂಕಿನ ಶ್ರೇಯಸ್ಸನ್ನು ಬಯಸಿ ನಾವೂ ಪ್ರಾರ್ಥಿಸುತ್ತೇವೆ.

ಕೋಟೆ

"ಇಲ್ಲಿಯ ಗಿಳಿಯಾರು ಶ್ರೀಶಾಂಭವೀ ವಿದ್ಯಾದಾಯಿನಿ ಹಯರ್ ಎಲಿಮೆಂಟರಿ ಶಾಲೆಯ ವರ್ಷಾಂತ್ಸವವು ಇದೇ ತಿಂಗಳ ತಾರೀಕು ೧೯ನೇ ಸೋಮವಾರ ದಿನ ಮದ್ರಾಸು ನ್ಯಾಯವಿಧಾಯಕ ಸಭೆಯ ಸದಸ್ಯರಾದ ಶ್ರೀಎ.ಬಿ.ಶೆಟ್ಟರವರ ಅಧ್ಯಕ್ಷತೆಯಲ್ಲಿ ಬಹಳಸಂಭ್ರಮದಿಂದ ಜರಗಿತು. ಮಂಗಳೂರು, ಉಡುಪಿ, ಕಾರ್ಕಳ, ಕುಂದಾಪುರ ಮುಂತಾದ ಹಲವು ಪ್ರಾಮುಖ್ಯ ಸ್ಥಳಗಳಿಂದ ಅನೇಕ ಮಂದಿ ಮಹನೀಯರು ಚಿತ್ತೈಸಿದ್ದರು. ಶಾಲಾ ಮಕ್ಕಳ ವಿವಿಧ ಚಟುವಟಿಕೆಗಳು, ಜನಮನೋರಂಜನವಾಗಿದ್ದುವು. ಇದರ ಜತೆಯಲ್ಲಿ ಶ್ರೀಮಾನ್ ಎಸ್ ಎಸ್. ಹೊಳ್ಳರ ಸಹಕಾರವು ಸ್ತುತ್ಯಾರ್ಹವಾಗಿತ್ತು. ಯಕ್ಷಗಾನ, ನಾಟಕಗಳು ಪ್ರೇಕ್ಷಕರನ್ನು ಮುಗ್ಧಗೊಳಿಸಿದವು. ಅಧ್ಯಕ್ಷರ ಸುಮಧುರ ಭಾಷಣವನ್ನು ಕೇಳಿ, ಸಭಿಕರೆಲ್ಲಾ ಆನಂದಗೊಂಡರು. ಶಾಲಾ ಮೆನೇಜರರಾದ ಶ್ರೀ ಶೇಷ ಕಾರಂತರವರ ಹೃದಯದ್ರಾವಕವಾದ ಶ್ರಮ್ಯವಾದ ಸಮರ್ಪಣಾನಂತರದಲ್ಲಿ, ಅಂದಿನ ವರ್ಧಂತಿ ಉತ್ಸವವು ಕೊನೆಗೊಂಡಿತು."

ಕಾಂಗ್ರೆಸ್ ಪ್ರಚಾರ ಕಾರ್ಯ ಪುತ್ತೂರು ಡಿವಿಜನ್.

ತಾ ೯-೪-'೩೭ರಲ್ಲು ಬೆಳಗ್ಗೆ ಉಪ್ಪಿನಂಗಡಿಯಲ್ಲಿ ಶ್ರೀ ವೆಂಕಪ್ಪರೈಗಳವರ ಅಧ್ಯಕ್ಷತೆಯಲ್ಲಿ ಸೇರಿದ ಮಹಾಜನರ ಸಭೆಯಲ್ಲಿ ಶ್ರೀ ಕೆ. ಆರ್. ಕಾರಂತ, ಯಂ ಎಲ್. ಎ, ಯವರು ಕಾಂಗ್ರೆಸ್ಸಿನವರು ಮಂತ್ರಿ ಪದವಿಗಳನ್ನು ಏಕೆ ನಿರಾಕರಿಸಿದರೆಂಬುದನ್ನು ಸರಕಾರದವರು ತಾತ್ಕಾಲಿಕ ಮಂತ್ರಿಮಂಡಲಗಳನ್ನು ರಚಿಸಿದುದು ಸರಿಯಲ್ಲ ಎಂದು ಮೊದಲಾಗಿ ಭಾಷಣಮಾಡಿದರು.

ಅದೇ ದಿನ ಸಾಯಂಕಾಲ ಕಡಬದಲ್ಲಿ ಸೇರಿದ ಮಹಾಜನ ಸಭೆಯಲ್ಲಿ ಸಭಾಧ್ಯಕ್ಷರು ಶ್ರೀ ಬಿ. ಟಿ. ಅಂಗರವರು, ಶ್ರೀಗಳಾದ ಕೆ. ಆರ್. ಕಾರಂತ, ಬಿ. ವೆಂಕಪ್ಪ ರೈಯವರೂ ಈಗಿನ ರಾಜಕೀಯ ಪರಿಸ್ಥಿತಿಯ ಕುರಿತು ವಿವರಿಸಿದರು.

ತಾ. ೧೧-೪-೩೭ನೇ ದಿನ ಬೆಳಿಗ್ಗೆ ಸುಳ್ಯದಲ್ಲಿ ಶ್ರೀ ಬಂಟಮಾಡಿ ಲಿಂಗಪ್ಪ ಗೌಡರ ಅಧ್ಯಕ್ಷತೆಯಲ್ಲಿ ಸೇರಿದ ಮಹಾಜನ ಸಭೆಯಲ್ಲಿ ಶ್ರೀ ಮೊಳಹಳ್ಳಿ ಶಿವರಾಯರು, ಶ್ರೀ ಕೆ. ಆರ್. ಕಾರಂತರು, ಮೇಲಿನ ವಿಷಯಗಳನ್ನೇ ವಿವರಿಸಿ ಎಲ್ಲರೂ ಕಾಂಗ್ರೆಸ್ಸಿಗೆ ಬೆಂಬಲ ಕೊಡಬೇಕಾಗಿ ಪ್ರಾರ್ಥಿಸಿದರು.

ತಾ. ೧೨-೪ '೩೭ರಲ್ಲು ಸಾಯಂಕಾಲ ಪುತ್ತೂರಲ್ಲಿ ಶ್ರೀ ಬೆಳ್ಳಿಪಾಡಿ ದಾಸರೈಗಳವರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆಜರಗಿ ಶ್ರೀ. ಕೆ. ಆರ್. ಕಾರಂತರ ಭಾಷಣವಾಯ್ತು.

ತಾ. ೧೫-೪-'೩೭ರಲ್ಲು ಸಾಯಂಕಾಲ ಕುಂಬಳೆಯಲ್ಲಿ ಜರಗಿದ ಮಹಾ ಸಭೆಗೆ ಮದ್ರಾಸಿನ 'ಸಂಡೇ ಟೈಮ್ಸ್' ಪತ್ರಿಕೆಯ ಸಂಪಾದಕರಾದ ಶ್ರೀ ಯಂ. ಯನ್. ಕಾಮತರವರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಹಿ ರಾಮರಾಯಮಲ್ಯ, ಕೆ. ಆರ್. ಕಾರಂತ ಮೊದಲಾದವರ ಭಾಷಣಗಳಿದ್ದುವು. ಮೇಲಿನ ಎಲ್ಲಾ ಸ್ಥಳಗಳಲ್ಲಿ ಗ್ರಾಮ ಕಾಂಗ್ರೆಸ್ ಕಮಿಟಿಗಳನ್ನು ವ್ಯವಸ್ಥೆಗೊಳಿಸುವ ಉದ್ದೇಶದಿಂದ ಕಾಂಗ್ರೆಸ್ ಕೆಲಸಗಾರರು ಕಾಂಗ್ರೆಸ್ ಸದಸ್ಯರನ್ನು ಸೇರಿಸುತ್ತಿರುವರು.

ಹಿ. ರಾಮರಾಯ ಮಲ್ಯ. ಕಾರ್ಯದರ್ಶಿ
ದ. ಕ. ಜಿಲ್ಲಾ ಕಾಂಗ್ರೆಸ್, ಕಮಿಟಿ.

ಬೇಕು

ವಿದ್ಯಾವತಿಯರೂ ರೂಪವತಿಯರೂ ಚೆನ್ನಾಗಿ ಹಾಡ ಬಲ್ಲವರೂ ಆದ ನಟಿಯರು ಬೇಕಾಗಿವೆ. ವಿವರಗಳಿಗೆ ಬರೆಯಿರಿ.

X
C/o "NAVAYUGA" Udipi.

ದಕ್ಷಿಣ ಕನ್ನಡ

ಮೂಡಬಿದ್ರೆ

ಕಳೆದ ತಾ. ೧೧ನೇ ಆದಿತ್ಯವಾರ ದಿನ ಕಾರ್ಕಳ ಫೂಟ್‌ಬೋಲು ಟೀಮಿನವರಿಗೂ, ಮೂಡಬಿದ್ರೆ ಮಿಡಲ್ ಶಾಲಾ ಹಳೇ ವಿದ್ಯಾರ್ಥಿ ಸಂಘದ ಫೂಟ್‌ಬೋಲ್ ಟೀಮಿಗೂ, ಒಂದು ಪಂದ್ಯಾಟ ನಡೆದು ಮೂಡಬಿದ್ರೆಯ ಟೀಮಿನವರು ಎರಡು ಗೋಲುಗಳನ್ನು ಹಾಕಿ ಜಯಶೀಲರಾದರು (೨-೦). ಇಲ್ಲಿ ಫೂಟ್‌ಬೋಲ್ ಟೀಮು ಎರಡು ವರುಷಗಳಿಂದಿದ್ದರೂ, ಇಷ್ಟು ಸುವ್ಯವಸ್ಥಿತ ರೀತಿಯಲ್ಲಿ ಆಡಲು ಕಲಿತುದು ಇದೇ ಬಾರಿ. ಈ ಬಗ್ಗೆ ಊರ ಮಹನೀಯರು ನಮ್ಮ ಮಿಡಲ್ ಶಾಲೆಗೆ ಹೊಸತಾಗಿ ಡ್ರಿಲ್ ಟೀಚರಾಗಿ ಬಂದಿರುವ ಶ್ರೀಯುತ ಜೋಸೆಫ್ ಸೀಕೇರ P. T. I ರಿಗೆ ಎಷ್ಟು ಕೃತಜ್ಞರಾದರೂ ಸಾಲದು. ಕಳೆದ ಎರಡು ತಿಂಗಳುಗಳಿಂದ ಪೇಟೆಯ ವ್ಯಾಪಾರಸ್ಥರನ್ನೇ ಹುರಿದುಂಬಿಸಿ ಫೂಟ್‌ಬೋಲು ಆಡುವಂತೆ ಮಾಡಿ ಕಾರ್ಕಳ ಟೀಮಿನಂತಹ ಸುಸಜ್ಜಿತ ಟೀಮಿನೊಡನೆ ಜಯಪ್ರದವಾಗುವಂತೆ ಮಾಡಿದ ಶ್ರೀಯುತರಿಗೆ ಇಲ್ಲಿಯೇ ಖಾಯಂ ಉಪಾಧ್ಯಾಯರನ್ನಾಗಿ ಮಾಡುವಂತೆ ಮಾನ್ಯ ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರೊಡನೆ ಅರಿಕೆ.

ಮುಲ್ಕಿ

ಶ್ರೀ ಮಹಾ ವಿಷ್ಣು ಮೂರ್ತಿ ದೇವರ ಸನ್ನಿಧಿಯಲ್ಲಿ ಕಾಲಂಪ್ರತಿ ಜರಗತಕ್ಕ ಉತ್ಸವವು ತಾರೀಕು 24-4-37ನೇ ಶನಿವಾರ ಧ್ವಜಾರೋಹಣ, ರಂಗಪೂಜೆ, ತಾರೀಕು. 25-4-37ನೇ ರಂಗಪೂಜೆ, ಬಲಿ ಪ್ರದರ್ಶನ, ತಾ. 26-4-37 ಕೆರೆದೀಪ, ತಾ. 27-4-37ನೇ ಮಂಗಳವಾರ ರಥಾರೋಹಣ, ಮಹಾ ಸಂತರ್ಪಣೆ, ರಾತ್ರಿ ರಥೋತ್ಸವ ತಾ. 28-4-37ಕ್ಕೆ ಕವಟೊದ್ಘಾಟನ ರಾತ್ರಿ ಧ್ವಜ ಅವರೋಹಣ ಓಕುಳಿ ಸಹಾ ಜರಗುವುದು. ಆದ್ದರಿಂದ ಭಜಕವೃಂದದವರು ಸರ್ವ ಮಾನ್ಯರು, ಈ ಉತ್ಸವಗಳಿಗೆ ಸೇರಬೇಕಾಗಿ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಶ್ರೀ ಮುಡಿಗಂಧ ಪ್ರಸಾದವನ್ನು ಸ್ವೀಕರಿಸಬೇಕಾಗಿ ನನ್ನ ವಿನಂತಿ.

ಪ್ರಕೃತ ಆಡಳ್ತ ಮೊಕ್ತೇಸರ.
ಮರಡಿತ್ತಾಯ ಗುರುರಾಜ ಭಟ್ಟ.

ಮುಲ್ಕಿ

ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ. 10-4-37ನೇ ಶನಿವಾರ ಅಪರಾಹ್ನ ಘಂಟೆ 2-30ಕ್ಕೆ ಶ್ರೀಮಾನ್ ಯಂ. ಆರ್ ಪೂಂಜರವರ ಅಧ್ಯಕ್ಷತೆಯಲ್ಲಿ ಸ್ಥಳೀಕ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಶ್ರೀ ದೇವತಾ ಪ್ರಾರ್ಥನೆ, ವರದಿ ವಾಚನ, ಕುಪ್ಪಿಆಟ, ಕೋಲಾಟ, ಪಿರಮಿಡ್ಸ್, ಆಸನಗಳು ಸೂರ್ಯ ನಮಸ್ಕಾರ ಇತ್ಯಾದಿ ವಿವಿಧ ಚಟುವಟಿಕೆಗಳನ್ನು ಮಕ್ಕಳು ಪ್ರದರ್ಶಿಸಿದರು. ಮಾನಂಪಾಡಿ ಬೋರ್ಡ್ ಎಲಿಮೆಂಟರೀ ಶಾಲೆಯ ಸಹಾಯಕ ಶ್ರೀ ಬಿ. ವಿ. ಕೃಷ್ಣಯ್ಯನವರು ಶ್ರೀ ಶಂಕರಾಚಾರ್ಯರ ಜೀವಿತ ವೃತ್ತವನ್ನು ಹರಿಕಥಾರೂಪದಲ್ಲಿ ನಿರೂಪಿಸಿದರು. ತದನಂತರ ಸನ್ಮಾನ್ಯ ಅಧ್ಯಕ್ಷ ಮಹಾಶಯರ ಆಮೋಘವಾದ ಭಾಷಣ, ಉಪಕಾರ ಸ್ಮರಣೆಯೊಂದಿಗೂಡಿ ಸಭಾಕಾರ್ಯವು ಅಂತ್ಯಗೊಂಡಿತು. ಮುಂದಿನ ಸಭೆಯು ತಾ. 20-7-1937 ರಲ್ಲಿ ಸೆಂಟರ್ ಶಾಲೆಯಲ್ಲಿ ಜರಗಲಿರುವುದು.

ಮುಲ್ಕಿಗ್ರೇಂಡ್ ರೇಫಲ್

ಈ ಸೋಡ್ತಿಯಲ್ಲಿ ಇನಾಮು ಪಡದವರು ಇದೇ ಬರುವ ತಾ. 30-4-1937ರ ಒಳಗೆ ಇನಾಮಿನ ಹಣವನ್ನು ಪಡೆಯಬೇಕೆಂದೂ ಆ ಮೇಲೆ ಬಂತಕ್ಕ ಪಕ್ಕ ಬಾಧ್ಯತಗಳಿಗೆ ಸಿಗಾಕೊಡೋಣಾಗಲಿಕ್ಕಿಲ್ಲವೆಂದೂ ಈ ಮೂಲಕ ಸರ್ವರ ಅವಗಾಹನೆಗೆ ತರೋಣಾಗಿದೆ ಎಂದು ಸದ್ರಿ ಸೋಡ್ತಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಸ್ಥಳೀಕ ಶ್ರೀ. ವೆಂಕಟ್ರಮಣ ದೇವಳದ ವರ್ಷಾವಧಿ ರಥೋತ್ಸವವು ಇದೇ ಶ್ರೀ ರಾಮನವಮಿ ದಿನ ಅಂದರೆ ತಾ. 19-4-37ರಲ್ಲಿ ಜರಗಿರುವುದು.

ಇಲ್ಲಿ ನೂತನವಾಗಿ ಏರ್ಪಡಿಸಿರುವ "ದಿ, ಯುನೈಟೆಡ್" ಫೂಟ್‌ಬೋಲ್ ಟೀಮಿನವರಿಗೂ, ಸ್ಥಳೀಕ ಹೈಸ್ಕೂಲಿನ ಫೂಟ್‌ಬೋಲ್ ಟೀಮಿನವರಿಗೂ ಕಳೆದ ತಾ 21-3-37ರಲ್ಲಿ ಒಂದು ಫ್ರೆಂಡ್ಲೀ ಮೇಟ್ ನಡೆದು ಮೊದಲಿನವರಾದ ಯುನೈಟೆಡ್ ಫೂಟ್‌ಬೋಲ್ ಟೀಮಿನವರು ಐದು ಗೋಲುಗಳನ್ನು ಕೊಟ್ಟು ಗೆದ್ದಿರುವರಾಗಿ ತಿಳಿದುಬರುತ್ತದೆ.

ಇಲ್ಲಿಯ ಯುವಕರು ಸೇರಿ, ಸದ್ಯದಲ್ಲೇ "ಅಸ್ಪೃಶ್ಯತಾ" ಅಥವಾ 'ಹರಿಜನೋದ್ಧಾರ' ಎಂಬ ಹರಿದಾಸ ಕೃತ ಸಾಮಾಜಿಕ ನಾಟಕವನ್ನು ಅಭಿನಯಿಸಲಿರುವರಾಗಿ ತಿಳಿದುಬರುತ್ತದೆ.

ನಿಡ್ಡೋಡಿ.

ನಮ್ಮ ನಿಡ್ಡೋಡಿ ಬೋರ್ಡ್ ಹ್ಯಾಯರ್ ಎಲಿಮೆಂಟರಿ ಶಾಲಾ ವರ್ಧಂತಿಯು ತಾ. ೨೬-೪-'೩೭ನೇ ಸೋಮವಾರ ಶ್ರೀಯುತ ಯಚ್. ಸಂಜೀವ ರಾವ್, ಬಿ. ಎ. ಎಲ್. ಟಿ. (ಮಂಗಳೂರು ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರ್) ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ರಾತ್ರಿ ಘಂಟೆ ೭ಕ್ಕೆ 'ಸಂಶಯ ಪಿಶಾಚಿ' ಎಂಬ ಕನ್ನಡ ನಾಟಕವನ್ನೂ 'ಹಳ್ಳಿಯ ವೈಚಿತ್ರ್ಯ' ಎಂಬ ತುಳು ನಾಟಕವನ್ನೂ ಶಾಲಾ ವಿದ್ಯಾರ್ಥಿಗಳು ಅಭಿನಯಿಸಲಿರುವರು ತತ್ಸಂಬಂಧ ತಮ್ಮಗಳ ಸುಮಾಗಮನವನ್ನು ಸಾದರದಿಂದ ಹಾರೈಸುವ.

ನಿಡ್ಡೋಡಿ ಬಾವ ನಾರಾಯಣಶೆಟ್ಟಿ,
ಸ್ಕೂಲು-ಕಮಿಟಿ-ಅಧ್ಯಕ್ಷ.

ಶಿರ್ವ

ತಾ ೧೫-೪-'೩೭ನೇ ಗುರುವಾರ ಕೊಂಗ್ರೆಸ್ ಪ್ರಚಾರಕ್ಕಾಗಿ ಬಂದಿದ್ದ ಪ್ರೊಫೆಸರ್ ವಾರ್ಕಿ ಎಂ. ಎಲ್. ಎ. ರವರು ಕೊಂಗ್ರೆಸಿನ ಕಾರ್ಯಕಲಾಪಗಳ ಕುರಿತು ಭಾಷಣವಿತ್ತರು. ಶ್ರೀ ಪಿ. ಲಕ್ಷ್ಮೀನಾರಾಯಣ ನಾಯಕರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಕೆ. ಮಹಾಬಲ ಶೆಟ್ಟಿ, ಜೆರೊಮ್ ಸಾಲ್ಡಾನ, ಕೆ. ಗಣಪಯ್ಯ ಶೆಟ್ಟಿ, ಎಮ್ ವಿಟ್ಠಲ ಹೆಗ್ಡೆಯವರು ಸದ್ಯಸ್ಥಿತಿಯನ್ನು ವಿವರಿಸಿ ಭಾಷಣವಿತ್ತರು. ಪ್ರೊ. ವಾರ್ಕಿ ಎಂ. ಎಲ್. ಎ. ರವರು ತನಗೆ ಬೆಂಬಲವಿತ್ತವರೆಲ್ಲರನ್ನೂ ಅಭಿನಂದಿಸಿ ಪ್ರತಿಯೊಬ್ಬರೂ ಕೊಂಗ್ರೆಸ್ ಮೆಂಬರರಾಗಬೇಕೆಂದು ಕೇಳಿಕೊಂಡರು. ಶ್ರೀ ಎ. ದಾಬಶೆಟ್ಟರು ಧನ್ಯವಾದಗಳನ್ನಿತ್ತರು

ಕಾಪು

ಹಳ್ಳಿಗಳಲ್ಲಿ ಪ್ರಚಾರಕಾರ್ಯವನ್ನು ಮಾಡುವರೆ ಬಂದಿದ್ದ ತಾಲೂಕು ಕೊಂಗ್ರೆಸ್ ಕಮಿಟಿಯ ಅಧ್ಯಕ್ಷ, ಕಾರ್ಯದರ್ಶಿಯರಾದ ಶ್ರೀ ಪಿ. ಮಂಜುನಾಥ ನಾಯಕ್ ಮತ್ತು ಶ್ರೀ ವಿಟ್ಠಲ ಹೆಗ್ಡೆಯರು ತಾ. ೧೬-೪-'೩೭ರಲ್ಲಿ ಕಾಪಿನ ಸಾರ್ವಜನಿಕ ಸಭೆಯಲ್ಲಿ ಸದ್ಯದ ರಾಜಕೀಯ ವಾತಾವರಣದ ವಿಷಯವಾಗಿ ಭಾಷಣವಿತ್ತರು. ಹಳ್ಳೀ ಕಮಿಟಿಯನ್ನು ಸ್ಥಾಪಿಸಲನುಕೂಲವಾಗುವಂತೆ ಎಲ್ಲರೂ ಕೊಂಗ್ರೆಸ್ ಮೆಂಬರರಾಗಬೇಕೆಂದು ವಿನಂತಿಸಿದರು. ಶ್ರೀ ಕೆ. ಚರ್ದಪ್ಪ ಶೆಣೈಯವರು ಧನ್ಯವಾದಗಳನ್ನಿತ್ತರು.

ಶ್ರೀ ಜ್ಞಾನೋದಯ ಸಮಾಜದ ವಾರ್ಷಿಕೋತ್ಸವವು

ಕಳೆದ ಸೌರಯುಗಾದಿ ದಿವಸ ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಅಂದು ಸೂರ್ಯೋದಯ ಕಾಲದಲ್ಲಿ ಸಮಾಜದ ಸದಸ್ಯರೆಲ್ಲರೂ, ಸಮುದ್ರ ಕರೆಯಲ್ಲಿ ಒಟ್ಟುಗೊಂಡು, ಸ್ನಾನ, ಹವನ, ಸಂಧ್ಯಾವಂದನಾದಿಗಳನ್ನು ನಡೆಸಿದ ಬಳಿಕ ಶ್ರೀ ಮೋಹನಪ್ಪ ತಿಂಗಳಾಯರು ವೇದೋಪದೇಶವನ್ನು ಮಾಡಿದರು, ತರುವಾಯ ಪ್ರತಿ ಒಬ್ಬರೂ ತಮ್ಮ ಮದ್ಯಪಾನ ವರ್ಜಿತ ವ್ರತವನ್ನು ಸ್ವೀಕರಿಸಿದರು. ಒಂಭತ್ತು ಜನರು ಹೊಸತಾಗಿ ಸೇರಿ ಸಂಪೂರ್ಣ ಮದ್ಯಪಾನ ಪರಿತ್ಯಾಗ ವ್ರತವನ್ನು ಕೈಕೊಂಡರು. ಸಾಯಂಕಾಲ 4½ ಘಂಟೆಗೆ ತಳಿರುತೋರಣಗಳಿಂದ ಅಲಂಕೃತವಾದ ಸಮಾಜ ಮಂದಿರದಲ್ಲಿ, ಶ್ರೀ ಉಳ್ಳಾಲ ಉಗ್ಗಪ್ಪ ಬಂಗೇರರ ಅಧ್ಯಕ್ಷತೆಯಲ್ಲಿ, ಸದಸ್ಯರ ಮಹಾಸಭೆಯು ನೆರೆದು ಬಂತು. ಆರ್ಯ ಮಹಿಳೆಯರಿಂದ ಈಶ್ವರ ಭಜನ ಪ್ರಾರ್ಥನ ಸಂಗೀತಗಳಾಗಿ, ಶ್ರೀ ಮೋಹನಪ್ಪ ತಿಂಗಳಾಯರು ಸೌರಯುಗಾದಿಪರ್ವ ಮಹತ್ವವನ್ನು ಹೇಳಿ ಸಭಾ ಕಾರ್ಯವನ್ನು ಪ್ರಾರಂಭಗೊಳಿಸಿದರು. ಶ್ರೀ ಪದ್ಮಪ್ಪ ತಿಂಗಳಾಯರಿಂದ ಸಮಾಜವು ಸಾಧಿಸಿದ ಕಾರ್ಯ ವೃತ್ತಾಂತಗಳ ವರದಿಯೂ ಬೆಂಗರೆ ಮೋಹನಯ್ಯ ಕರುಣಾಕರರಿಂದ ಸಮಾಜದ ಗತವರುಷದ ಜಮಾ ಖರ್ಚು ಲೆಖ್ಖ ಪರಿಶೋಧನೆಯ ವರದಿಯೂ ಓದಲ್ಪಟ್ಟು ಸರ್ವಾನುಮತದಿಂದ ಮಂಜೂರುಮಾಡಲ್ಪಟ್ಟವು. ತರುವಾಯ ಸಮಾಜದ ಸಾರ್ವಜನಿಕ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಕುರಿತು ವಿವಿಧ ಸೂಚನೆಗಳು ಮುಂದೆ ಬಂದು ಸಾದ ಪ್ರತಿವಾದಗಳೊಡನೆ ಈ ಕೆಳಗಿನ ನಿರ್ಣಯಗಳು ಬಹುಮತದಿಂದ ನಿರ್ಧಾರಮಾಡಲಾಯಿತು.

೧. ಸಮಾಜದ ರಜತ ಜಯಂತಿ ಉತ್ಸವವನ್ನು ಕೆಲವು ಅಪರಿಹಾರ್ಯ ಕಾರಣಗಳಿಂದ ಮುಂದರಿಸಬೇಕಾಯಿತು. ಇದಕ್ಕಾಗಿ ಸಮಾಜವು ವ್ಯಸನಪಡುತ್ತದೆ. 1938ನೇ ಇಸವಿಯ ಮಾರ್ಚಿ ತಿಂಗಳಲ್ಲಿ ಸದರೀ ಉತ್ಸವವನ್ನು ಜರಗಿಸತಕ್ಕದ್ದು.

೨. ರಜತ ಜಯಂತಿ ಸಂದರ್ಭದಲ್ಲಿ ಸರ್ವಜಾತಿ ಮತಗಳಿಗೆ ಸಂಬಂಧಪಟ್ಟ ಮತ್ಸ್ಯವ್ಯವಸಾಯಿ ಜನರ ಒಂದು ಮಹಾ ಪರಿಷತ್ತನ್ನೂ ಮತ್ಸ್ಯ ವ್ಯವಸಾಯ ವಸ್ತು ಪ್ರದರ್ಶನವನ್ನೂ ಏರ್ಪಡಿಸುವ ವ್ಯವಸ್ಥೆ ಮಾಡಬೇಕು.

3. ಮೊಗವೀರರ ಸಾಂಪತ್ತಿಕ ಸ್ಥಿತಿ ಸುಧಾರಣೆಗಾಗಿ ಮದರಾಸು ಪ್ರಾಂತದ ಪೂರ್ವಕರಾವಳಿಯಲ್ಲಿ ಮತ್ಸ್ಯವ್ಯವಸಾಯ ಮತ್ತು ವ್ಯಾಪಾರವನ್ನು ಇಲ್ಲಿಗಿಂತಲೂ ಲಾಭಕರವಾಗಿನಡಾಸಲು ಅನುಕೂಲವಾದ ಒಂದು ಯೋಗ್ಯಸ್ಥಾನವನ್ನು ಹುಡುಕಿ ತೆಗೆದು ಅಲ್ಲಿ ಮೊಗವೀರರ ಒಂದು ಕಾಲನಿಯನ್ನು ಸ್ಥಾಪಿಸುವ ಹಂಚಿಕೆಮಾಡಬೇಕು. ಇದರ ಪ್ರಾರಂಭಿಕ ಪರಿಶೋಧನೆಯಕಾರ್ಯಕ್ಕಾಗಿ ಪ್ರಕೃತ ರೂಪಾಯಿ ಒಂದು ನೂರಕ್ಕೆ ಮಿಕ್ಕದಷ್ಟು ವೆಚ್ಚಮಾಡತಕ್ಕದ್ದು.

4. ಸಮಾಜದ ಮದ್ಯಪಾನ ಪರಿತ್ಯಾಗ ಪ್ರಚಾರ ನಿಧಿಗೆ, ಪಿತ್ತಾಪುರ ಮಹಾರಾಜರವರು ರೂಪಾಯಿ ಇನ್ನೂರು ದಾನಕೊಟ್ಟುದಕ್ಕಾಗಿಯೂ, ಮಹಾರಾಜರವರ ಮದ್ಯಪಾನ ಪರಿತ್ಯಾಗ ಪ್ರಚಾರ ಪ್ರೇಮಕ್ಕಾಗಿಯೂ, ಈ ಸಮಾಜವು ಅವರಿಗೆ ತಮ್ಮ ಹೃತ್ಪೂರ್ವಕ ಧನ್ಯವಾದವನ್ನು ಸಮರ್ಪಿಸುತ್ತದೆ.

5. ಸಮಾಜದ ಶ್ರದ್ಧಾವಂತ ಸದಸ್ಯರೂ, ಒಬ್ಬ ಆದರ್ಶ ಪುರುಷರೂ ಆಗಿದ್ದ ಬೊಕ್ಕಪಟ್ಣ ಬಾಬು ಪುತ್ರಣ್ಣಾಯರ ಅಕಾಲ ಮರಣಕ್ಕಾಗಿ ಈ ಸಭೆಯು ವಿಷಾದ ಪಡುತ್ತದೆ.

ತರುವಾಯ ಸಾಯಂಕಾಲ 5½ ಘಂಟೆಗೆ ಎಲ್ಲಾ ಜಾತಿಯ ಸ್ತ್ರೀ ಪುರುಷರ ಸಾರ್ವಜನಿಕ ಮಹಾಸಭೆಯು ಜರಗಿತು. ಬೋಳೂರು ಶ್ರೀ ಲಕ್ಷ್ಮಣ ಪುತ್ರಣ್ಣಾಯರ ನೇತೃತ್ವದಲ್ಲಿ ಶಿಕ್ಷಣಹೊಂದಿದ ಬೆಂಗರೆ ವ್ಯಾಯಾಮ ಶಾಲಾ ವಿದ್ಯಾರ್ಥಿಗಳ ಪ್ರೇಕ್ಷಣೀಯವಾದ ಶರೀರಬಲ ಸಾಧನ ಪ್ರದರ್ಶನಗಳೂ, ಸಮಾಜದ ಸತ್ಕಾರೋತ್ತೇಜಕ ನಾಟಕ ಮಂಡಳಿಯವರ "ಸತೀ ಸಂಯುಕ್ತೆ" ಎಂಬ ಐತಿಹಾಸಿಕ ನಾಟಕಾಭಿನಯಗಳೂ ಜರಗಿದವು.

ಕುಂದಾಪುರ

ಇಲ್ಲಿಯ ಕರ್ನಾಟಕ ಸಾಹಿತ್ಯ ಸಂಘದಲ್ಲಿ ಇದೇ ತಾ. ೧೦-೪-೩೭ನೇ ಶನಿವಾರ ಸಾಯಂ ಘಂಟೆ ೪-೩೦ಕ್ಕೆ ಶ್ರೀಮಾನ್ ಕಡೆಕಾರು ರಾಜಗೋಪಾಲ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಒಂದು ಸಾರ್ವಜನಿಕ ಧರ್ಮಾರ್ಥ ವಾಚನಾಲಯವನ್ನು ತೆರೆಯುವ ಆರಂಭೋತ್ಸವವು ವಿಜೃಂಭಣೆಯಿಂದ ಜರಗಿತು. ವಾಚನಾಲಯದ ಉದ್ಘಾಟನವು ಇಲ್ಲಿಯ ಪ್ರಮುಖ ಮಹನೀಯರಾದ ರಾವ್ ಸಾಹೇಬ್ ಹೊಸಕೋಟೆ ಗಣಪತಿ ರಾವ್ ಇವರಿಂದ ನಡಿಸೋಣಾಯಿತು ವಾಚನಾಲಯದ ಆವಶ್ಯಕತೆಯ ಕುರಿತು ಕಾರ್ಕಳದ ವಕೀಲರಾದ ಶ್ರೀ ಬೈಕಾಡಿ ವಾಸುದೇವ ರಾವ್, ಶ್ರೀ ಕೆ. ಎಲ್. ಭಂಡಾರರು, ಶ್ರೀ ಕೆ. ಅಣ್ಣಪ್ಪ ಕಾರಂತರು ಸಮಯೋಚಿತ ಭಾಷಣವನ್ನಿತ್ತರು. ಸಂಘದ ಅಧ್ಯಕ್ಷರಾದ ಶ್ರೀ ಕೆ. ನರಸಿಂಹ ಕಾಮತರು ವಾಚನಾಲಯದ ಪ್ರಯೋಜನವನ್ನು ವಿವರಿಸಿ ಈ ಬಡ ಸಂಸ್ಥೆಯು ಕೈಕೊಂಡ ಈ ಸತ್ಕಾರ್ಯಕ್ಕೆ ಕರ್ನಾಟಕದ ಎಲ್ಲಾ ಪತ್ರಿಕಾ ಸಂಪಾದಕರು ತಮ್ಮ ತಮ್ಮ ಪತ್ರಿಕೆಗಳನ್ನು ಈ ವಾಚನಾಲಯಕ್ಕೆ ಧರ್ಮಾರ್ಥವಾಗಿ ಇಲ್ಲವೇ ಅತೀ ಕಡಿಮೆ ಚಾರ್ಜಿನಿಂದ ಕೊಡಿಸುವಂತೆ ಕೇಳಿಕೊಳ್ಳಬೇಕಾಗಿ ತಂದ ಠರಾವು ಸರ್ವ ಸಮ್ಮತಿಯಿಂದ ಮಂಜೂರಾಯಿತು. ಅಧ್ಯಕ್ಷರ ಸುರಸ ಭಾಷಣಾನಂತರ ರಾಷ್ಟ್ರಗೀತದಿಂದ ಸಭೆಯು ಕೊನೆಗೊಂಡಿತು.

ಬಲ್ಲಿರಾ? ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ--- ಗುಡಪಿಪ್ಪಲಿ (ಲೀವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ಪ್ರಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚಿಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಕೊಳ್ಳಿರಿ.

ವಿದ್ಯಾರ್ಥಿಗಳಿಗಾಗಿ, ವಿದ್ಯಾರ್ಥಿಗಳಿಂದಲೇ ನಡೆಸಲ್ಪಡುತ್ತಿರುವ ವಿದ್ಯಾಶಾಲೆ

[ಜಪಾನೆಂದರೆ ಇಂದೀಗ ಪ್ರಗತಿಪರ ರಾಷ್ಟ್ರಗಳಲ್ಲಿ ಪ್ರಥಮ ಶ್ರೇಣಿಗೆ ಸೇರಿದುದು 50 ವರ್ಷಗಳ ಮೊದಲು ಬೆಸ್ತರ ಕೊಂಪೆಗಳಾಗಿದ್ದ ರಾಷ್ಟ್ರವು ಇಂದು ಜಗತ್ತಿನ ನಾಗರಿಕತೆಯ ಕೇಂದ್ರವಾಗಿರುವುದು.

ಇಲ್ಲಿನ ವಿದ್ಯಾರ್ಥಿಗಳು ವಿದ್ಯಾರ್ಥಿಗಳಾಗಿಯೇ ನಡೆಸುತ್ತಿರುವ ವಿದ್ಯಾಶಾಲೆ ಇದೆ. ಇದರಲ್ಲಿನ ಸಮಸ್ತ ಕಾರುಬಾರುಗಳೂ ವಿದ್ಯಾರ್ಥಿಗಳದೇ. ಬೇರೆಯವರ ಸಂಪರ್ಕವೇ ಇಲ್ಲ. ಇಲ್ಲಿ ಅವರು ಎಂತಹ ವಿಚಕ್ಷಣೆಯಿಂದ ವಿದ್ಯಾಶಾಲೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆಂಬುದನ್ನು ನೋಡಿದಲ್ಲಿ ವಿದ್ಯಾಖಾತೆಯ ಆಡಳಿತಗಾರರು ಸಹ ತಿಳಿಯಬೇಕಾದ ಎಷ್ಟೋ ವಿಷಯಗಳಿವೆ. ಈ ವಿದ್ಯಾಶಾಲೆಯ ವಿವರಣೆಯನ್ನು ಸೂಕ್ಷ್ಮವಾಗಿ ಈ ಲೇಖನದಲ್ಲಿ ಕೊಡಲಾಗುವುದು.]

ಬಹುತೇರನಾಗಿ ಜಪಾನಿನ ಪಾಠಶಾಲೆಗಳಲ್ಲಿ ಮಕ್ಕಳಿಗೆ ಕೊಡುವ ಶಿಕ್ಷಣವೆಲ್ಲವೂ ಕೇವಲ ರಾಷ್ಟ್ರೀಯತೆಯನ್ನೇ ಅನುಸರಿಸುವದು. ಪರಕೀಯರ, ಪಾಶ್ಚಾತ್ಯರ ವಿದ್ಯಾವಿಧಾನಗಳನ್ನು ಅನುಸರಿಸಿ, ಜಪಾನರು ತಮ್ಮ ರಾಷ್ಟ್ರೀಯತೆಗೆ ಹಾನಿ ತಂದುಕೊಳ್ಳುತ್ತಿಲ್ಲ. ತಮ್ಮ ವಿದ್ಯಾವಿಧಾನಗಳು ಆ ಪಾಶ್ಚಾತ್ಯರ ವಿದ್ಯಾವಿಧಾನಗಳಿಗೆ ಯಾತರಲ್ಲೂ ಕಡಿಮೆಯಲ್ಲವೆಂದೇ ಇವರ ಉಚ್ಚ ಮನೋಭಾವ. ತಮ್ಮ ವಿಧಾನವು ಕೀಳು ಪಾಶ್ಚಾತ್ಯರದು ಮೇಲು ಎಂಬ ನೈಚ್ಯಮನೋಭಾವಕ್ಕೆ ಇವರ ಮನಸ್ಸಿನಲ್ಲೆಡೆಯೇ ಇಲ್ಲ. ಹಾಗೂ, ಪಾಶ್ಚಾತ್ಯರಿಂದ ಕಲಿಯುತಕ್ಕ, ಅನುಸರಿಸತಕ್ಕ ವಿಧಾನಗಳೇನಾದರೂ ಇದ್ದಲ್ಲಿ, ಅವುಗಳ ತತ್ವವನ್ನು ತೆಗೆದುಕೊಂಡು, ಸಂಸ್ಕರಿಸಿ ತಮ್ಮ ರಾಷ್ಟ್ರೀಯತೆಗೆ ಅನ್ವಯಿಸುವಂತೆ, ತಮ್ಮದೇ ಆದ ಹೊಸ ವೈವಿಧ್ಯದಲ್ಲಿ ಅದನ್ನು ಬೆಸೆದು ಬೋಧಿಸಲೆತ್ನಿಸುವರು. ಇದನ್ನು ಬಿಟ್ಟು, ಕೇವಲ ಮಂಗಗಳಂತೆ ಅನುಕರಿಸಿ, ತಮ್ಮ ರಾಷ್ಟ್ರೀಯ ಭಾವನೆಯನ್ನು ಬದಿಗೊತ್ತುವ ಕಾರ್ಯವನ್ನೆಂದಿಗೂ ಮಾಡರು.

ಇಲ್ಲಿನ ವಿದ್ಯಾವಿಚಕ್ಷಣರು ತಮ್ಮ ವಿದ್ಯಾವಿಧಾನಗಳು ಸರ್ವ ಸಂಪೂರ್ಣವಾಗಿ ಇದೆಯೆಂದಾಗಲೀ, ಈಗಿರುವುದರಿಂದಲೇ ಕೃತಕೃತ್ಯರಾಗಿರುವೆವೆಂದಾಗಲೀ ಸರ್ವಥಾ ಭಾವಿಸರು. ಇವರು ತದೇಕಮಾನಸರಾಗಿ ತಮ್ಮ ವಿದ್ಯಾವಿಧಾನಗಳಲ್ಲಿ ಪ್ರಗತಿತೋರುವುದು ಹೇಗೆಂಬುದನ್ನು ಕುರಿತು ಸದಾ ಚಿಂತಿಸುತ್ತಲೇ ಇರುತ್ತಾರೆ. ಪ್ರಯೋಗ ಪರೀಕ್ಷೆಗಳನ್ನು ಮಾಡುತ್ತಲೇ ಇರುತ್ತಾರೆ. ಆದುದರಿಂದ ಜಪಾನಿನವರ ವಿದ್ಯಾಭ್ಯಾಸ ಕ್ರಮವು ಸ್ಥಾಯೀಭೂತವಾಗಿಯೇ ಇರದೆ ಆಧುನಿಕ ಕಾಲಕ್ಕೆ ಅನುಗುಣವಾಗಿ ಅಭಿವೃದ್ಧಿ ಹೊಂದುತ್ತಲೇ ಇದೆ.

ಇದು ಇಪ್ಪತ್ತನೆಯ ಶತಮಾನದ ಕಾಲ ಜಗತ್ತಿನ ವಿಸ್ತೀರ್ಣವು ಕಡಿಮೆಯಾಗದಿದ್ದರೂ ದೂರದ ಭಾವವು ದಿನದಿನಕ್ಕೆ ಸಂಕುಚಿತವಾಗುತ್ತಿರುವ ಸಮಯ. ಕೇವಲ ವಾಣಿಜ್ಯವ್ಯಾಪಾರಗಳನ್ನೇ ತಳಹದಿಯನ್ನಾಗುಳ್ಳ ಜೀವನ ಮಾಡಬೇಕಾದ ಕಾಲ. ರಾಷ್ಟ್ರರಾಷ್ಟ್ರಗಳು ಒಂದರೊಡನೊಂದು ಸ್ಪರ್ಧಿಸುತ್ತಿರುವ ಮೇಲಾಟದ ಕಾಲ. ಈ ಕಾಲದಲ್ಲಿ ಕೂಪಕೂರ್ಮನ್ಯಾಯವು ಸುತರಾಂ ಕೆಲಸಕ್ಕೆ ಬರುವಂತಿಲ್ಲ. ಇಂತಹ ಕಾಲಧರ್ಮಕ್ಕನುಗುಣವಾಗಿ ಜನಜೀವನವೂ ರೂಪುಗೊಳ್ಳಬೇಕು. ಅನೂಚಾನ ಅಸ್ತಿತ್ವವನ್ನು ಉಳಿಸಿಕೊಂಡು ಆ ಪುರಾತನ ಸಂಸ್ಕೃತಿಯನ್ನು ಬಳಸಿಕೊಂಡು ಬಲವಾದ ಆಧುನಿಕ ಕಲಾ ಪರಿಣತ ಭವ್ಯಮಂದಿರವನ್ನು ಕಟ್ಟಬೇಕು.

ಹೀಗೆ ಮಾಡದ ರಾಷ್ಟ್ರವು ಅಳಿಯದೆ ಉಳಿಯುವಂತಿಲ್ಲ. ಪುರಾತನ ಗ್ರೀಕ-ರೋಮಾಯರ ಸಾಮ್ರಾಜ್ಯಗಳೇ ಇದಕ್ಕೆ ಸಾಕ್ಷಿ. ನಾಗರಿಕತೆಯ ಅತ್ಯುಚ್ಚ ಶಿಖರಾಗ್ರದಲ್ಲಿದ್ದಾಗ್ಯೂ ಅಲ್ಲಿಂದದು ಪತನವಾಗತಕ್ಕುದೇ ಹೌದು. ಅಂದಮೇಲೆ, ಯಾವ ರಾಷ್ಟ್ರವು ತನ್ನ ಸಂಸ್ಕೃತಿಯನ್ನು, ರಾಷ್ಟ್ರೀಯತೆಯನ್ನು, ಪರದಾಸ್ಯಲಾಂಛನವಾದ ಅನುಕರಣದ ಅಡಿಗಳಲ್ಲಿ ಬಲಿಗೊಡುವುದೋ ಆ ರಾಷ್ಟ್ರವು ಗುಲಾಮಗಿರಿಯ ಹಾದಿಹಿಡಿದು, ಅದರಿಂದುತ್ಪನ್ನವಾದ ನೈಚ್ಯಮನೋಭಾವದ ಭಾರದಿಂದ ಕುಗ್ಗಿ ತಗ್ಗಿ, ಅನತಿಕಾಲದಲ್ಲೇ ಅಳಿಯುವುದು. ಅಳಿಯದಿದ್ದರೂ ದಾಸ ರಾಷ್ಟ್ರವಾಗಿ ಉಳಿಯುವುದು.

ಉತ್ತಮ ಜನಜೀವನಕ್ಕೆ ಅಲ್ಲಿನ ವಿದ್ಯಾಭ್ಯಾಸಕ್ರಮವೇ ಮೂಲಕಾರಣ. ವಿದ್ಯೆಯೆಂದರೆ, ಜನಾಂಗವನ್ನು ಕೇವಲ ಲೇಖನಿಶೂರರ ಪಟಾಲಮುಗಳನ್ನು ತಯಾರು ಮಾಡುವ ನಿಸ್ಸಾರವೂ ನಿರ್ವೀರ್ಯವೂ ಆದ ವಿದ್ಯೆಯಲ್ಲ. ಜನಾಂಗದ ಪ್ರಜೆಗಳಾಗಲು ಯಾವ ಯಾವ ವಿಷಯ ಪರಿಜ್ಞಾನವಿರಬೇಕೋ ಯಾವ ಪರಿಜ್ಞಾನವನ್ನು ಪಡೆದಲ್ಲಿ ರಾಷ್ಟ್ರವು ಸ್ವತಂತ್ರ ಜೀವನಮಾಡಲು ಸಾಧ್ಯವೋ ಅಂತಹ ಪರಿಜ್ಞಾನವನ್ನು ಪ್ರಜೆಗಳಲ್ಲಿ ಉಂಟುಮಾಡಬಲ್ಲ ವಿದ್ಯೆಯಾಗಬೇಕು. ಉತ್ತಮ ಪ್ರಜೆಗಳಾಗಲು, ಸ್ವದೇಶ ವತ್ಸಲರಾಗಲು, ಸ್ವತಂತ್ರ ಜೀವನ ನಡೆಸುವವರಾಗಲು, ಕೊಡಬೇಕಾದ ವಿದ್ಯಾಕ್ರಮವೇ ಬೇರೆ.

ಆದುದರಿಂದ, ಆಧುನಿಕ ರಾಷ್ಟ್ರಗಳಲ್ಲವೂ, ಮಕ್ಕಳ ವಿದ್ಯಾಭ್ಯಾಸವೆಂದರೆ ಕೇವಲ ಅಕ್ಷರ ಅಂಕೆಗಳ ಜೋಡಣೆಗಳು ಮಾತ್ರವೇ ಅಲ್ಲವೆಂದೂ, ಕೇವಲ ಪಠನ ಮನನಗಳಿಂದ ಮುಂದೆ ಜೀವನಮಾಡಲು ದುಸ್ಸಾಧ್ಯವೆಂದೂ ತಿಳಿದು, ತಮ್ಮ ಮಕ್ಕಳ ವಿದ್ಯಾಭ್ಯಾಸದ ಕ್ರಮವನ್ನೇ ಬದಲಾಯಿಸಿದ್ದಾರೆ. ಪಾಠಪ್ರವಚನಗಳ ಜತೆಗೆ ಕೃಷಿಕ, ಪಾರಿಶ್ರಾಮಿಕ, ವಿಜ್ಞಾನ ಪ್ರಯೋಗಾದಿಗಳನ್ನೂ ಕಲಿಸಲಾರಂಭಿಸಿದ್ದಾರೆ

ಮಕ್ಕಳು ಪ್ರಾಥಮಿಕ ವಿದ್ಯಾಭ್ಯಾಸವನ್ನಂತೂ ಮಾಡಿಯೇ ತೀರಬೇಕು. ಮಾಧ್ಯಮಿಕ ವಿದ್ಯಾಭ್ಯಾಸವೂ ಅಗತ್ಯವೇ. ಅಲ್ಲಿಂದಾಚೆಗೆ ವಿದ್ಯೆಯ ಜತೆಯಲ್ಲಿ ವಿದ್ಯಾರ್ಥಿಗಳ ಮನಃಪ್ರವೃತ್ತಿಗಳಿಗನುಸಾರವಾಗಿ ಅವರಿಗೆ ಉಪವೃತ್ತಿಗಳನ್ನು ಕಲಿಸಲಾರಂಭಿಸುತ್ತಾರೆ. ಮುಂದೆ ಈ ಉಪವೃತ್ತಿಗಳಲ್ಲೇ ಹೆಚ್ಚು ಅನುಭವವುಂಟಾಗುವಂತೆ ಅನುಕೂಲ್ಯಗಳನ್ನು ಕಲ್ಪಿಸಿ, ಪ್ರಾಪ್ತವಯಸ್ಕರಾಗುವ ವೇಳೆಗೆ ವೃತ್ತಿ ನೈಪುಣ್ಯ ಹೊಂದಲು ಅವಕಾಶವನ್ನುಂಟುಮಾಡುತ್ತಾರೆ.

ಹೀಗೆ ಮಾಡುವುದರಿಂದ ಮಕ್ಕಳು ಪ್ರೌಢ ವಯಸ್ಕರಾಗುವ ವೇಳೆಗೆ ಅವರಿಗೆ ಸ್ವಾವಲಂಬನ ಶಕ್ತಿಯುಂಟಾಗಿರುತ್ತದೆ ಲೇಖನಿಯನ್ನು ಮಾತ್ರ ಓಡಿಸಲು ಬಲ್ಲ ಗುಲಾಮಗಿರಿ ಪ್ರಾಪ್ತಿಗಾಗಿ ಕಛೇರಿಗಳ ಬಾಗಿಲುಗಳನ್ನು ಕಾಯುವ ದಾಸ್ಯಭಾವವರ್ಜಿತರಾಗಿರುತ್ತಾರೆ. ಇದೀಗ ಪ್ರಗತಿಪರ ಆಧುನಿಕ ರಾಷ್ಟ್ರಗಳಲ್ಲಿನ ವಿದ್ಯಾಭ್ಯಾಸ ವಿಧಾನ.

ಈ ತತ್ವಾನುಯಾಯಿಗಳ ಪೈಕಿ ಜಪಾನಿನವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಆದರ ವಿಚಾರವನ್ನೆಲ್ಲಾ ಇಲ್ಲಿ ಹೇಳಲು ಅವಕಾಶವಿಲ್ಲವಾಗಿ ಅಲ್ಲಿನ ಒಂದೇ ಪಾಠಶಾಲೆಯ ವಿಚಾರವನ್ನು ಮಾತ್ರ ಇಲ್ಲಿ ಹೇಳಲಾಗುವುದು. ಈ ಪಾಠಶಾಲೆಯು ಅಲ್ಲಿನ ಇತರ ಪಾಠಶಾಲೆಗಳಂತಲ್ಲ. ಇದರ ವಿಧಾನವೇ ಬೇರೆ. ಆದರ ಹೆಸರು 'ಜಿಯಾಗಾಕ್ಯುಯೆನ್' ಎಂಬುದಾಗಿ. ಇದೊಂದು 'ಪ್ರೈವೇಟ್ ಸ್ಕೂಲ್' ಟೋಕಿಯೋ ನಗರದಲ್ಲಿದೆ. ಇದರಲ್ಲಿ ಮೂರು ವಿಭಾಗಗಳು- ಬಾಲಕರದೊಂದು, ಬಾಲಕಿಯರದೊಂದು, ಸಣ್ಣ ಮಕ್ಕಳದೊಂದು. ಸಣ್ಣ ಮಕ್ಕಳ ವಿಭಾಗದಲ್ಲಿ ಕೇವಲ ಪ್ರಾಥಮಿಕ ವಿದ್ಯಾಭ್ಯಾಸ ಮಾತ್ರ. ಜಪಾನ್ ಸಾಮ್ರಾಜ್ಯದ ಪಾಠಶಾಲೆಗಳ ಪೈಕಿ ಸ್ವರಾಜ್ಯ ವಿಧಾನದಲ್ಲಿ ವಿದ್ಯಾರ್ಥಿಗಳಿಂದಲೇ ನಡೆಸಲ್ಪಡುತ್ತಿರುವ ಪಾಠಶಾಲೆಯು ಇದೊಂದೇ. ಪರಕೀಯರು ಯಾರೂ ಈ ಶಾಲೆಯಲ್ಲಿಲ್ಲ. ವಿದ್ಯಾರ್ಥಿನಿಯರ ವಿಭಾಗದಲ್ಲಿ ಏಳು ಸಂವತ್ಸರ ಕಾಲದ ವಿದ್ಯಾಭ್ಯಾಸ, ಆ ಮೇಲೆ ಮೂರುವರ್ಷಕಾಲ ಪ್ರೌಢ ವಿದ್ಯಾಭ್ಯಾಸ. ಪ್ರತಿ ತರಗತಿಯಲ್ಲೂ ಸಾಧಾರಣವಾಗಿ ನಲವತ್ತುಮಂದಿ ವಿದ್ಯಾರ್ಥಿಗಳಿರುತ್ತಾರೆ.

ಈ ನಲವತ್ತುಮಂದಿ ಸಾಮಾನ್ಯವಾಗಿ ಆರಾರು ಮಂದಿಯ ಗುಂಪುಗಳಾಗಿ ವಿಂಗಡಿಸಲ್ಪಟ್ಟಿರುತ್ತಾರೆ. ಈ ಒಂದೊಂದು ಗುಂಪಿಗೂ ಒಂದೊಂದು 'ಸಂಸಾರ'ದಲ್ಲಿನ ವಿದ್ಯಾರ್ಥಿಗಳನ್ನು ಆರು ತಿಂಗಳಿಗೊಮ್ಮೆ ಚದುರಿಸಿ ಬೇರೆ ಬೇರೆ ಸಂಸಾರಗಳಿಗೆ ಕಳುಹಿಸಿ ಸಂಸಾರಗಳನ್ನು ಪುನರ್ನಿರ್ಮಿಸುತ್ತಾರೆ. ಪ್ರತಿಯೊಂದು 'ಸಂಸಾರವೂ' ತಮ್ಮಲ್ಲೆ ಒಬ್ಬ ಯಜಮಾನನನ್ನು ಚುನಾಯಿಸಿಕೊಂಡು, ಅವನ ಅಧೀನದಲ್ಲಿರುತ್ತದೆ. ಸಾಂಘೀಭಾವವು ಚೆನ್ನಾಗಿ ಮೂಡಲೆಂಬುದೇ ಈ ವಿಧಾನದ ಒಳತತ್ವ.

ಈ ವಿದ್ಯಾರ್ಥಿಗಳ ಸ್ವರಾಜ್ಯದಲ್ಲಿ ವೇತನದ ಕೆಲಸಗಾರರು ಇಲ್ಲನೇ ಇಲ್ಲ. ಇಲ್ಲಿ ಯಾರಿಗೂ ಸಂಬಳವಿಲ್ಲ. ಪಾಠಶಾಲೆಗೆ ಬೇಕಾಗುವ ಸಾಮಾನುಗಳೆಲ್ಲವೂ ಅಲ್ಲಿನ ವಿದ್ಯಾರ್ಥಿಗಳ ಸಹಕಾರ ಸಂಘದಲ್ಲಿ ದೊರಕುವುವು. ಈ ಸಂಘಕ್ಕೆ ಸೇರಿದಂತೆಯೇ ಒಂದು ಉಪಾಹಾರ ಮಂದಿರವೂ ಇದೆ. ಶಾಲೆಯ ಕಟ್ಟಡಗಳು, ಅವುಗಳ ಉಸ್ತುವಾರಿ, ರಿಪೇರಿ, ತೋಟಗಳು ಮತ್ತು ಆಟದ ಬೈಲುಗಳು ಎಲ್ಲವನ್ನೂ ವಿದ್ಯಾರ್ಥಿಗಳೇ ನಡಿಸಿಕೊಂಡು ಹೋಗುತ್ತಿದ್ದಾರೆ. ಈ ಶಾಲೆಯಲ್ಲಿನ ವಿದ್ಯಾರ್ಥಿಗಳೆಲ್ಲರ ಮೇಲ್ವಿಚಾರಣೆಗಾಗಿ ಒಂದು ಸಮಿತಿಯಿದೆ. ಈ ಸಮಿತಿಯ ಸದಸ್ಯರೂ ವಿದ್ಯಾರ್ಥಿಗಳೇ. ಈ ಸಮಿತಿಯಲ್ಲಿನ ಸದಸ್ಯರ ಸಂಖ್ಯೆಯು ಮೂವತ್ತು. ಈ ಪಾಠಶಾಲೆಯ ಉಪಾಧ್ಯಾಯರು ಸಹಾ ವಿದ್ಯಾರ್ಥಿಗಳೇ. ಇಲ್ಲಿ ಜನರಿಗೆ ಬೇಕಾದ ಪಾರಿಶ್ರಾಮಿಕ ಕಸುಬುಗಳೇ ಅಲ್ಲದೆ, ಕುಶಲಕಲೆಗಳನ್ನೂ ಕಲಿಸಲು ಏರ್ಪಾಡಾಗಿದೆ. ಒಟ್ಟಿನಲ್ಲಿದು ಅಪೂರ್ವ ಕಲಾಶಾಲೆ ಜಪಾನಿನ ಕೀರ್ತಿ ವೈಭವದ ಕುರುಹುಗಳಲ್ಲೊಂದು.

— ಪ್ರಜಾಮತ

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಖರ್ಚು ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೇಜರ್, 'ನವಯುಗ'

ಬೊಂಬಾಯಿಯಲ್ಲಿ
ನವಯುಗದ ಬಿಡಿಪ್ರತಿಗಳು
ಶ್ರೀ. ವಿ. ಎಸ್. ಶಿಬ್ರೂರಕರ್,
ದಿ ನೇಶನಲ್ ಕೆನರಾ ನ್ಯೂಸ್ ಏಜನ್ಸಿ
ಇವರಲ್ಲಿ ಮಾರಾಟಕ್ಕೆ ಸಿಗುತ್ತವೆ.

ಬಾಲಸಾಹಿತ್ಯದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ
ಬಾಲವಾಙ್ಮಯ
ಬೆಲೆ ಮೂರಾಣೆ
ಉಪಾಧ್ಯಾಯರ ಪ್ರಕಟನ ಸಮಿತಿ
ಉಡುಪಿ.

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. [ಸಂ. ನ.]

ದಕ್ಷಿಣಕನ್ನಡ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನ ಅಧ್ಯಕ್ಷ ಹಾಗೂ ಇತರ ಸದಸ್ಯರ ಅವಗಾಹನೆ ಬಗ್ಗೆ —

ಸರಕಾರದವರು ನಿಶ್ಚಯಿಸಿರುವ ಸ್ಟಂಡಾರ್ಡ್ ದರಕ್ಕಿಂತ ಮಿಕ್ಕಿದ ದರದಲ್ಲಿ ವಿದ್ಯಾರ್ಥಿಗಳಿಂದ ಶಾಲಾ ಸಂಬಳವನ್ನು ಏಡೆಡ್ ಶಾಲೆಯವರು ಇನ್ನು ಮುಂದಕ್ಕೆ ವಸೂಲು ಮಾಡಬಾರದೆಂದು ಸೂಚಿಸುವ ಒಂದು ನಿರ್ಣಯವು ತಾ. 24-4-37ರಲ್ಲಿ ಜರಗುವ ಕೌನ್ಸಿಲಿನ ಸಭೆಯಲ್ಲಿ ಇತ್ಯರ್ಥವಾಗುವುದೆಂದು ತಿಳಿದುಬರುತ್ತದೆ.

ಏಡೆಡ್ ಶಾಲೆಯ ಮೆನೆಜಮೆಂಟಿನವರಿಗೆ ಒಂದು ಪ್ರಾಥಮಿಕ ಶಾಲೆಯನ್ನು ನಡೆಯಿಸುವರೆ ತಗಲುವಷ್ಟು ಸಂಪೂರ್ಣ ಹಣದಷ್ಟಾಗಲೀ, ಆಯಾಯ ಶಾಲೆಯಲ್ಲಿ ವಸೂಲಾದ ಶಾಲಾವಿದ್ಯಾರ್ಥಿಗಳ ಸಂಬಳದಷ್ಟು ಮೊಬಲಗನ್ನು ಒಟ್ಟು ಖರ್ಚಿನಲ್ಲಿ ಕಡಿಮೆಮಾಡಿ ಮಿಕ್ಕುಳಿದ ಮೊಬಲಗಿನಷ್ಟಾಗಲೀ ಹಣವು ಸರಕಾರದಿಂದ ಕೊಡಲ್ಪಡುವುದಿಲ್ಲ. ಸರಕಾರದವರು ಕೊಡುವ ಹಣವು ಬರೇ ಸಹಾಯ ಧನವಾಗಿರುವುದನ್ನೂ, ವರ್ಷಂಪ್ರತಿ ಈ ಮೊಬಲಗಿನಲ್ಲಿಯೂ ಅಪಾರವಾದ ಕಡಿತವು ಉಂಟಾಗಿ ನಿಜವಾಗಿ ತಗಲುವ ವೆಚ್ಚಕ್ಕಿಂತ ಈ ಮೊಬಲಗು ಎಷ್ಟೋ ಕಡಿಮೆಯಾಗಿರುವುದನ್ನೂ, ಹೀಗೆ ಕಡಿಮೆಬೀಳುವ ಮೊಬಲಗಿನಲ್ಲಿ ಸ್ವಲ್ಪ ಅಂಶವನ್ನು ಶಾಲಾ ಮೆನೆಜಮೆಂಟಿನವರು ಅವರವರ ಗ್ರಾಮಸ್ಥರ ಸ್ಥಿತಿಗತಿಗಳನ್ನವಲಂಬಿಸಿ ಒಂದು ಸಂಬಳದ ದರವನ್ನು ನಿಶ್ಚಯಿಸಿ ಆದಷ್ಟು ನಷ್ಟವನ್ನು ಭರ್ತಿಮಾಡುತ್ತಿರುವುದನ್ನೂ, ಏಡೆಡ್ ಶಾಲೆಯವರು ಇಂತಿಷ್ಟೇ ದರದ ಸಂಬಳವನ್ನು ವಸೂಲುಮಾಡಬೇಕಾಗಿ ಸರಕಾರದವರ ಯಾವ ಕಟ್ಟಪ್ಪಣೆಯಾಗಲೀ ಪ್ರಾಥಮಿಕ ವಿದ್ಯಾಭ್ಯಾಸದ ಏಕ್ಟಿನಲ್ಲಿ ಯಾವ ನಿರ್ಬಂಧವಾಗಲೀ ಇಲ್ಲದಿರುವುದನ್ನೂ ಗಮನಿಸದೆ, ಮಾನ್ಯ ವಿದ್ಯಾ ಕೌನ್ಸಿಲಿನವರು ಈ ನಿರ್ಣಯವನ್ನು ಜ್ಯಾರಿಮಾಡಿದರೆ ಜಿಲ್ಲೆಯ ಅನೇಕ ಯೋಗ್ಯ ಏಡೆಡ್ ಪ್ರಾಥಮಿಕ ಶಾಲೆಗಳಿಗೆ ನಷ್ಟವುಂಟಾಗಿ ಅವುಗಳ ಯಶಸ್ಸಿಗೆ ಹಾಗೂ ಅಭಿವೃದ್ಧಿಗೆ ವಿದ್ಯಾಕೌನ್ಸಿಲಿನವರು ಪ್ರೋತ್ಸಾಹಕೊಡುವುದರ ಬದಲು ಅವುಗಳ ಅಸ್ತಿತ್ವಕ್ಕೇನೇ ಬಲವಾದ ಕೊಡಲಿಯ ಏಟು ಕೊಟ್ಟಂತಾಗುವುದು.

ಮೇಲಿನ ವಿದ್ಯಮಾನಗಳನ್ನು ಪರ್ಯಾಲೋಚಿಸಿ ಇಂತಹ ನಿರ್ಣಯವನ್ನು ಮಂಜೂರುಮಾಡಬಾರದಾಗಿ ವಿಜ್ಞಾಪನೆ.

ಆರ್. ಎಚ್. ಎಸ್.

(೫ನೇ ಪುಟದಿಂದ)

ಸ್ಥಾನ ಬಂದಿರುವುದಾದರೂ ಜನಾಂಗದಲ್ಲಿರುವ ಈ ಹಲವು ಸದ್ಗುಣಗಳ ಪ್ರಭಾವದಿಂದ. ಜನಾಂಗ ಜೀವನದಲ್ಲಿ ರೂಢಮೂಲವಾಗಿರುವ ಈ ಸದ್ಗುಣಗಳಿಂದ ಇತರ ಸಣ್ಣ ಪುಟ್ಟ ಸದಾಚರಣೆಗಳೂ ಬೆಳೆದು ಬಂದಿವೆ. ಐಹಿಕ ಸಂಪತ್ತಿನ ಉತ್ಕರ್ಷತೆ ಪಡೆದ ಜನಾಂಗಗಳು ಜಗತ್ತಿನಲ್ಲಿ ಅನೇಕವಿವೆ. ಆದರೆ ಇಂಗ್ಲೀಷ್ ಜನತೆಯ ಶ್ರೇಣಿಯನ್ನೂ, ಔನ್ನತ್ಯವನ್ನೂ ಸೇರುವಂತಹದು ಯಾವುದೂ ಇಲ್ಲ. ಸಂಪೂರ್ಣ ಭಾಷಣಸ್ವಾತಂತ್ರ್ಯವೂ, ಕ್ರಿಯಾಸ್ವಾತಂತ್ರ್ಯವೂ ಇರುವ ದೇಶವೆಂದರೆ ಇಂಗ್ಲೆಂಡು ಮಾತ್ರ. ಅಲ್ಲಿ ಸರ್ವಾಧಿಕಾರಿಗಳಿಲ್ಲ. ವರ್ಣ ದ್ವೇಷದಿಂದ ಬಿಳಿಯ ಜನರು ಕಪ್ಪು ಜನರನ್ನು ಹಿಂಸಿಸುವ ಪಾಡಿಕೆಯಿಲ್ಲ. ದರೋಡೆಕೋರರಿಲ್ಲ; ಒತ್ತಾಯಮಾಡಿ ಕೆಲಸ ತೆಗೆದುಕೊಳ್ಳುವ ಯಾವುದೇ ತರಹದ ನಿರ್ಬಂಧಗಳಿಲ್ಲ. ಯಾರು ಬೇಕಾದರೂ ತಮಗೆ ಇಷ್ಟ ಬಂದುದನ್ನು ಮಾತಾಡಿ ಬರೆಯಬಹುದು. ಏನೇ ಆಗಲಿ, ತೆರೆಯ ಹಿಂದಿನ ಕೈವಾಡಕ್ಕೆ ಅವಕಾಶವಿಲ್ಲದಿರುವ ಅವರ ನ್ಯಾಯಸ್ಥಾನದಲ್ಲಿ ಕಾಯಿದೆಗೊಳಪಟ್ಟ ನಿಷ್ಪಕ್ಷಪಾತ ವಿಚಾರಣೆಯು ತಮಗೆ ದೊರೆಯುವುದೆಂದು ಧೈರ್ಯದಿಂದಿರಬಹುದು.

ಸರ್ವ ಸಾಮಾನ್ಯವಾದ, ಸರಳವಾದ ಆದರೂ ಅಭ್ಯಸಿಸಲು ಬಹು ಕಠಿಣವಾದ ಮೇಲೆ ಹೇಳಿದ ಗುಣಲಕ್ಷಣಗಳು ಯಾವ ಪ್ರಮಾಣದಲ್ಲಿವೆಯೋ ಅದಕ್ಕೆ ಸಮವೆನಿಸಿದ ಪ್ರಮಾಣದಲ್ಲಿ ಯಾವುದೇ ವ್ಯಕ್ತಿಯೇ ಆಗಲಿ, ಜನಾಂಗವೇ ಆಗಲಿ, ಅಥವಾ ರಾಷ್ಟ್ರವೇ ಆಗಲಿ ಕೀರ್ತಿಹೊಂದಿ ಸಂಪದ್ಯುಕ್ತವಾಗಬಹುದು. ಈ ಗುಣಲಕ್ಷಣಗಳು ಭಾರತೀಯರಲ್ಲಿ ನಿತ್ಯಾಚರಣೆಯಾಗಿ ರೂಢಿಗೊಂಡಂದು ಭಾರತವೂ ಹಿರಿಯ ಜನಾಂಗವಾಗಿ ಸಂಪದ್ಯುಕ್ತವಾಗಿ ಬಾಳಬಲ್ಲದು. ಕೆಲವು ಮಹಾತ್ಮರನ್ನೂ ನೇತಾರರುಗಳನ್ನೂ ನೆಚ್ಚಿ ಕುಳಿತುಕೊಳ್ಳುವುದರಿಂದ ಸ್ವಾತಂತ್ರ್ಯವನ್ನೂ ಗೆಲುವನ್ನೂ ಸಾಧಿಸಲಾಗುವುದಿಲ್ಲ. ಇಂಡಿಯವು ಹಿರಿಯ ಜನಾಂಗವಾಗಿ ಬಾಳಬೇಕಾದರೆ ಪ್ರತಿಯೊಬ್ಬ ಭಾರತೀಯನೂ ಪ್ರಾಮಾಣಿಕತೆಯಿಂದ, ಸ್ವಾವಲಂಬನದಿಂದ, ನಿರ್ಭೀತಿಯಿಂದ ಸಮಯಸೂಚಕತೆಯಿಂದ, ಕಬ್ಬಿಣದಂತೆ ಕಠಿಣವೆನಿಸಿದ ಆತ್ಮಸಂಯಮದ ಸಹಿಷ್ಣುತೆಯಿಂದ ತನ್ನ ಕರ್ತವ್ಯವನ್ನು ನೆರವೇರಿಸಬೇಕಾಗಿದೆ. ಈ ಸದ್ಗುಣಗಳನ್ನು ಅನುಸರಿಸಿರುವವರು ಈಗಾಗಲೇ ಗೆಲುವು ಪಡೆದು ಅಭಿವೃದ್ಧಿ ಹೊಂದಿದ್ದಾರೆ. ಆದರೆ ಭಾರತದ ಅಧಿಕ ಜನಸಂಖ್ಯೆಯೊಂದಿಗೆ ತುಲನೆ ಮಾಡುವುದಾದರೆ ಇವರ ಪ್ರಮಾಣವು ಅತ್ಯಲ್ಪ. ಇಂಗ್ಲೆಂಡನ್ನು ಶ್ರೇಷ್ಠತಮ ಮತ್ತು ಅತ್ಯುನ್ನತ ಪ್ರಗತಿಪರ ರಾಷ್ಟ್ರವನ್ನಾಗಿ ಮಾಡಿದ ಈ ಸದ್ಗುಣಗಳನ್ನು ಪ್ರತಿಯೊಬ್ಬ ಭಾರತೀಯನೂ ಮನನ ಮಾಡಿ ಅಭ್ಯಸಿಸುವುದು ಮೇಲು.

ವಿಮಾವಾಣಿಜ್ಯ

ದೋಸೆಯ ಸೊಬಗು

ರಾಗ—ಕಾಂಬೋಧಿ, ಝಂಪೆತಾಳ.

(ದಾಟಿ—ಅರಿಗಾದರು ಪೂರ್ವ ಕರ್ಮ ಬಿಡದು—ಎಂಬಂತೆ)

ಈ ಸರಿಯ ಸೊಬಗ್ಯಾವ ತಿಂಡಿಯೊಳು ಕಾಣೆ
ಕಾಫಿ ಇಡ್ಲಿಯ ರಮಣ ಈ ದೋಸೆಗಲ್ಲದೇ ॥

ಮಾರ ದೋಸೆಯು ತಾನು ಹೂರ್ಣ ಕಡುಬಿನ ರಮಣ
ಪೂರಿ ಚಕ್ಕುಲಿ ಹಲ್ವದಸುರಾಂತಕಾ
ಬಾರಿ ಸಾಂಬಾರಿಡ್ಲಿ ಉಪ್ಪೇರಿಗಳ ಜನಕ
ವೀರ ಲಾಡಿನ ಗುರುವು ತುಪ್ಪ ದೋಸೇ ॥ ಈ ॥

ಪಾವನತ್ವದಿ ನೋಡೆ ರವೆಯ ದೋಸೆಯು ತಾನು
ದೇವತ್ವದಲಿ ತಾ ಮಸಾಲೆದೋಸೇ
ಲಾವಣ್ಯದಲಿ ನೋಡೆ ಉದ್ದು ಮಿಶ್ರಿತ ದೋಸೆ
ಭುವನದೊಳಗಾನಂದ ಭವನ ದೋಸೇ ॥ ಈ ॥

ತಿರುಪತಿಯ ಸ್ವಾಮಿ ತಾ ಕರದಿ ದೋಸೆಯ ತೋರ್ಪ
ತಿರುಮಕೂಡ್ಲು ನೃಸಿಂಹ ತಿಂಬ ಪರಿ ತೋರ್ಪ
ಶ್ರೀರಂಗ ಸ್ವಾಮಿ ತಾ ಭಾರಿ ದೋಸೆಯ ತಿಂದು
ಒರಗಿಪ್ಪ ತಲೆತಿರಿಗಿ ಏನೆಂಬೆ ದರ್ಪ ॥ ಈ ॥

ನಾರಿ ಮಹಕಾಳಿ ನಾಲಿಗೆಯಲ್ಲಿ ಸವಿದೋಸೆ
ವರ ಗಣಪನುದರದೊಳು ಪೂರ ದೋಸೇ
ಹರಿ ಕೃಷ್ಣಗುತ್ಥಾನದ್ವಾದಶೀದಿನ ದೋಸೆ
ನರಕಚತುರ್ದಶಿ ದಿನವು ಪ್ರತಿಗೃಹದೊಳ್ ದೋಸೆ ॥ ಈ ॥

ಜಗದೊಳಗೆ ಜಂಟಲ್‌ಮ್ಯಾನ್ ಸೋಗು ಬೀರುವ ದೋಸೆ
ಮಗು ಮುದುಕರ್ ನಗುನಗುತ ತಿಂಬ ದೋಸೇ
ಬಗೆಬಗೆಯೊಳ್ ವೆಂಕಟಾ ವಿಟ್ಠಲಗೆ ಮಿಗಿಲೆನಿಪ
ಜಗದಿ ಪಾವನವಾದ ದೋಸೆಗಿಹ ಭಾಗ್ಯವೇ ॥ ಈ ॥

ಕೊಳಲ್ ವೆಂಕಟ್ರಾವ್, ಉದ್ಯಾವರ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

“ಗೊನೋಕಿಲರ್” (ರಿಜಿಸ್ಟರ್ಡ್)

ಡಾ. ಜಸಾನಿಯವರ ಜಗತ್ಪ್ರಸಿದ್ಧ

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕೆಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, Vittalbhai Patel Road, BOMBAY 4

ಇಂದಿನ ಪ್ರಾಪಂಚಿಕ ಪರಿಸ್ಥಿತಿ

(ಪ್ಯಾರಿಲಾಲ್, ಬಿ. ಏ.)

ಅಂತರಾಷ್ಟ್ರೀಯ ಗಗನದಲ್ಲಿ ಅತಿ ಭಯಾನಕ ಮೇಘರಾಶಿಯು ಘರ್ಜಿಸುತ್ತಿರುವ ಈ ಸಮಯದಲ್ಲಿ ಪ್ರಾಪಂಚಿಕ ರಾಜನೈತಿಕ ಪರಿಸ್ಥಿತಿಯನ್ನು ಸ್ಪಷ್ಟ ರೀತಿಯಲ್ಲಿ ತಿಳಿದುಕೊಳ್ಳುವುದರ ಮಹತ್ವವನ್ನು ನಾವೇನೂ ಹೇಳಬೇಕಾಗಿಲ್ಲ. ಪ್ರಾಣಕ್ಕೆ ಬರುವ ಮಹಾಪ್ರಶ್ನೆಗಳು ನಮ್ಮ ಮುಂದೆ ಬಂದು ನಿಂತಿವೆ. ಆರ್ಥಿಕ, ರಾಜನೈತಿಕ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಪ್ರತಿದ್ವಂದ್ವ ವೈಷಮ್ಯಾದಿಗಳು ಭೀಕರ ಪರಮಾವಧಿಯನ್ನು ಮುಟ್ಟಿರುವುದು ನೋಡಿಯೂ ಸುಮ್ಮನಿರಲು ಸಾಧ್ಯವೇ?

ಮೊತ್ತಮೊದಲು ೧೯೧೪ರ ಮತ್ತು ಇಂದಿನ ಪ್ರಪಂಚಗಳೊಳಗೆ ಬಹು ವಿಶಾಲ ತಾರತಮ್ಯವಿದೆ ಎಂದು ತಿಳಿದುಕೊಳ್ಳುವುದು ಆವಶ್ಯಕ. ೧೯೧೪ರಲ್ಲಿ ಪ್ರಧಾನವಾಗಿದ್ದ ಶಕ್ತಿಗಳ ಸಂಬಂಧಕ್ಕೂ ಇಂದೀಗ ಹೋರಾಡುತ್ತಿರುವ ಶಕ್ತಿಗಳ ಸಂಬಂಧಕ್ಕೂ ಎಷ್ಟೋ ವ್ಯತ್ಯಾಸವಿದೆ. ಅಲ್ಲದೆ ಈ ಶಕ್ತಿಗಳ ಪರಸ್ಪರ ಸಂಬಂಧವು ದಿನೇ ದಿನೇ ಬದಲಾಗುತ್ತ ಬರುತ್ತಿದೆ. ಅದು ಕಾರಣ ನಾವೀಗ ನಿರ್ದೋಷದೃಷ್ಟಿಯಿಂದ ಈ ಶಕ್ತಿ ದ್ವಂದ್ವಗಳ ಸಂಬಂಧವನ್ನು ಸರಿಯಾಗಿ ತಿಳಿದುಕೊಂಡು ಸದ್ಯದ ಪರಿಸ್ಥಿತಿಯನ್ನು ಪರಿಶೀಲಿಸಬೇಕಾಗಿದೆ.

ಮಹಾಯುದ್ಧದ ನಂತರ ಕಳೆದು ಹೋದ ಹತ್ತೊಂಭತ್ತು ವರ್ಷಗಳು ಈ ಶಕ್ತಿಗಳ ಪ್ರಗತಿಯಲ್ಲಿ ಸ್ತಂಭಿತ ಸಮಯವಲ್ಲ. ಇಷ್ಟರೊಳಗೆ ಪ್ರಪಂಚದ ಪ್ರಧಾನ ಶಕ್ತಿಗಳ ಪರಸ್ಪರ ಸಂಬಂಧವು ದಿನೇ ದಿನೇ ಬದಲಾಗುತ್ತ ಬಂದಿರುವುದಲ್ಲದೆ ಅವೇ ಇಂದೀಗ ನಮ್ಮ ಮುಂದೆ ತಾಂಡವ ನೃತ್ಯಮಾಡತೊಡಗಿವೆ. ಹೆಚ್ಚೇಕೆ? ಕಳೆದ ಹತ್ತೊಂಭತ್ತು ವರ್ಷಗಳಲ್ಲಿ ಮುಂದೊತ್ತಿ ಬರುತ್ತಿರುವ ಕ್ಲೇಶ ಕಲಹಗಳು ಈಗ ತಾನೇ ಆರಂಭವಾಗುವ ಇನ್ನೊಂದು ಹೊಸ ಯುಗದಲ್ಲಿ ಪರಮಾವಧಿಯನ್ನು ಹೊಂದಲಿವೆ.

ಮಹಾಯುದ್ಧದ ನಂತರ ಸ್ಥಾಪಿತವಾದ ಸಂಧಿಸಂಬಂಧಗಳು ಎಂದೋ ನಿರ್ನಾಮವಾಗಿ ಹೋದುವು. ವಾಶಿಂಗಟನ್ ಸಂಧಿಯ ಹೆಸರಿಲ್ಲ. ಲೋಕೇರ್ನೊ ಮಾಯವಾಯಿತು. ವರ್ಸೈಲ್ಸ್ ಸಂಧಿಯು ಛಿನ್ನವಿಛಿನ್ನವಾಗಿ ಅದರಲ್ಲಿ ಕೇವಲ ಪರಾಧೀನ ರಾಜ್ಯ ವಿಷಯಕವಾದ ಭಾಗವು ಜೀವಂತವಿದೆ. ಆದರೆ ಇದನ್ನೂ ಯುದ್ಧ ಕ್ಕೋಸ್ಕರ ವ್ಯಗ್ರಚಿತ್ತರಾಗಿರುವ ಮುಸೂಲೊನಿ ಹಿಟ್ಲರ್ (ಛೆ! ಮೋಸವಾಯಿತು) ಹಿಟ್ಲರ್ ಮುಸಲೊನಿಯವರು ಅಷ್ಟರಲ್ಲೇ ಬಿಡುವಂತೆ ಕಾಣುವುದಿಲ್ಲ. ಪ್ರಾಪಂಚಿಕ ಆರ್ಥಿಕ ದುರ್ದೆಶೆ (World economic crisis) ಯ ನಂತರ ಅದರ ಸುವ್ಯವಸ್ಥೆಯು ಯಾವ ರೀತಿಯಲ್ಲಿಯೂ ಮುಂದೆ ಸಾಗಲಿಲ್ಲ. ಜಪಾನಿನವರು ಉತ್ತರ ಚೈನದ ಮೇಲೆ ಮಾಡಿದ ಆಕ್ರಮಣದಿಂದಲೂ ಇಟಲಿಯಾನರು ಅಬಿಸೀನಿಯಾನರ ರಕ್ತ ಹೀರಿದ ನ್ಯಾಯದಿಂದಲೂ ರಾಷ್ಟ್ರ ಸಂಘದ ಕರುಣಾಜನಕ ದೌರ್ಬಲ್ಯವು ತೀರಾ ವಿಶದವಾಯಿತು. ಭೂಲೋಕದ ಭಾವೀಸಂಸ್ಥಾಪನಾಕ್ರಮ, ಯುದ್ಧ, ಶಾಂತಿ, ಅಂತರಾಷ್ಟ್ರೀಯ, ರಾಜನೈತಿಕ ಸಂಬಂಧ ಇವೇ ಮುಂತಾದ ಪ್ರಶ್ನೆಗಳು ನಮ್ಮನ್ನು ಇನ್ನೂ ಬಾಧಿಸುತ್ತಿವೆ.

ಮಹಾಯುದ್ಧದಿಂದ ವಿಜಯಿಗಳಾಗಿ ಹೊರಬಂದ ರಾಷ್ಟ್ರಗಳ ಉದ್ದೇಶವೇನಿತ್ತು? ಅದನ್ನು ನಾವು ಬಲ್ಲೆವು. ಪರಾಜಿತ ರಾಷ್ಟ್ರಗಳ ಅಧೀನ ರಾಜ್ಯಗಳನ್ನು ತಮ್ಮೊಳಗೆ ಹಂಚಿಕೊಂಡು ಅವರನ್ನು ಸದಾ ಅಧಃಸ್ಥಿತಿಯಲ್ಲಿ ಇರಿಸಬೇಕೆಂದು, ಅಷ್ಟೆ. ಆದರೆ ಆ ಉದ್ದೇಶವು ಇಷ್ಟರ ವರೆಗೆ ಎಷ್ಟು ಸಾಫಲ್ಯವನ್ನು ಹೊಂದಿತು? ಸಾಮ್ರಾಜ್ಯವಾದೀ ಕೂಟದೊಳಗಿನ ನಾಜಿ ಜರ್ಮನಿ ಮತ್ತು ಫಾಸಿಸ್ಟ್ ಇಟಲಿ ರಾಷ್ಟ್ರಗಳು ವ್ಯಕ್ತರೀತಿಯಲ್ಲಿ ಯುದ್ಧಾಭಿಮುಖವಾಗಿ ಸಾಗುತ್ತಿರುವುವು. ಇಂದೀಗ ಪ್ರಶ್ನೆಯು ಶಾಂತಿಸ್ಥಾಪನೆಯದಲ್ಲ. ಅದರ ಬದಲಾಗಿ ಪರಾಧೀನ ರಾಜ್ಯಗಳ ಪುನರ್ವಿಭಾಗ ಮತ್ತು ಅದರ ಹೋರಾಟಕ್ಕಾಗಿ ಶಸ್ತ್ರಸನ್ನಾಹ. ಇವೆಲ್ಲ ಸಂಗತಿಗಳಿಂದ ಸಾಮ್ರಾಜ್ಯವಾದವು ಪ್ರಪಂಚದ ಪುನರ್ವಿಭಾಗಕ್ಕಾಗಿ ಇನ್ನೊಂದು ಮಹಾಯುದ್ಧವನ್ನು ಹೂಡಲು ಸಿದ್ಧವಾಗುತ್ತಿದೆ ಎಂದು ನಾವು ನೋಡಿದಂತಾಯಿತು.

ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸುವಾಗ ಇನ್ನೊಂದು ಮಹಾಯುದ್ಧದ ಭೀಕರ ಛಾಯೆಯು ಇನ್ನೂ ಇನ್ನೂ ಸಮೀಪಕ್ಕೆ ಬರುತ್ತಿರುವುದು ತೋರುತ್ತಿದೆ. ಎಲ್ಲಾ ದಿಕ್ಕುಗಳಲ್ಲೂ ಪ್ರಪಂಚವು ಕ್ಷೈಮಾರಿ ದುರ್ಗತಿಯ ಕಡೆ ಮುಮುಕುತ್ತಿದೆ. ಆದರೂ ರಾಜನೈತಿಕ ಮುಂದಾಳುಗಳು ಮತ್ತು ರಾಜಕಾರ್ಯ ಧುರೀಣರಲ್ಲಿ ಯಾರೂ ಇದಕ್ಕೆ ತಕ್ಕ ಉಪಶಮನವನ್ನು ತೋರಿಸಿಕೊಡಲು ಶಕ್ತರಿದ್ದಂತೆ ಕಾಣುವುದಿಲ್ಲ. ಪ್ರಾಯಃ ಒಂದು ವೇಳೆ ಶಕ್ತರಿದ್ದರೂ ಸಿದ್ಧರಿಲ್ಲವೆಂದು ಕಾಣುತ್ತದೆ. ನಿಶ್ಚಿತ ರೂಪದಲ್ಲಿ ಎದುರಾಗಿ ಬರುತ್ತಿರುವ ಯುದ್ಧವನ್ನು ತಡೆಯಲು ಸಾಧ್ಯವಿಲ್ಲವೇ? ತಡೆಯುವುದಾದರೆ ಹೇಗೆ? ಇವೇ ಪ್ರಶ್ನೆಗಳು ಪ್ರತಿಯೊಂದು ದೇಶದ ಸಮಸ್ತ ದೀನ ಜನತೆಯ ಹೃದಯದೊಳಗೂ ಕುಕ್ಕುತ್ತಿವೆ.

ಇಂದಿನ ಮತ್ತು ೧೯೧೪ರಲ್ಲಿದ್ದ ಪ್ರಪಂಚಗಳಲ್ಲಿ ತಾರತಮ್ಯವೇನೆಂದು ನೀವು ಕೇಳಬಹುದು. ಈ ತಾರತಮ್ಯವು ಇವುಗಳ ಮಧ್ಯೆ ಕಳೆದುಹೋದ ಸುಮಾರು ೨೦ ವರ್ಷಗಳ ಅವಧಿ. ಈ ಇಪ್ಪತ್ತು ವರ್ಷಗಳೆಂದರೆ ರಾಜನೈತಿಕ ಹಾಗೂ ಸಾಮಾಜಿಕ ಶಕ್ತಿಗಳ ಪ್ರಗತಿಯಲ್ಲಿ ಮುಂಚಿನ ಎಷ್ಟೋ ಶತಮಾನಗಳಿಗೆ ಸಮಾನ. ಅಲ್ಲದೆ ಈ ತಾರತಮ್ಯವು ಕೇವಲ ಸಾಮ್ರಾಜ್ಯವಾದೀ ಶಕ್ತಿಗಳ ಸಂಬಂಧದಲ್ಲಿ ಮಾತ್ರವಲ್ಲ. ಅದರ ಮೂಲವು ವರ್ತಮಾನ ಸಮಾಜದ ತಳಹದಿಯನ್ನೇ ಬದಲಾಯಿಸುವ ಸಾಮಾಜಿಕ ಪರಿವರ್ತನೆಗಳಲ್ಲಿ ಅಡಕವಾಗಿದೆ.

ರಶಿಯದಲ್ಲಿ ಸಾಮ್ಯವಾದೀ ರಾಜ್ಯಸ್ಥಾಪನೆಯಾದ ನಂತರ ಪೂಂಜೀವಾದ (Capitalism) ಸಾಮ್ಯವಾದಗಳ ಸಂಬಂಧದಲ್ಲಿ ವಿಶೇಷ ಪರಿವರ್ತನೆಯಾಗಿದೆ. ಸಾಮ್ಯವಾದೀರಶಿಯವು ದಿನೇ ದಿನೇ ಬೆಳೆಯುತ್ತ ಇಂದು ರಾಜನೈತಿಕ ಹಾಗೂ ಆರ್ಥಿಕ ಸ್ಥಿತಿಯಲ್ಲಿ ಪ್ರಪಂಚದ ದ್ವಿತೀಯ ರಾಷ್ಟ್ರವಾಗಿ ಬಂದುನಿಂತಿದೆ. ೧೯೧೪ರಲ್ಲಿ ಅಥವಾ ಪೂರ್ವದ ಇನ್ನಾವ ಸಮಯದಲ್ಲೂ ಇಂಥಾ ಸ್ಥಿತಿಯು ಇದ್ದಿರಲಿಲ್ಲ. ದಿನೇ ದಿನೇ ಬೆಳೆಯುತ್ತಿರುವ ಅದರ ಬಲದ ವರ್ಚಸ್ಸಿನಿಂದ ರಶಿಯವು ಪ್ರಾಪಂಚಿಕ ರಾಜನೈತಿಕ ಪ್ರಶ್ನೆಗಳ ಮೇಲೆ ಹೆಚ್ಚಿಚ್ಚು ಪ್ರಭಾವ ಬೀರಲು ಶಕ್ತವಾಗುತ್ತಿದೆ. ನಾಜಿ ಜರ್ಮನಿ ಮತ್ತು ಫಾಸಿಸ್ಟ್ ಇಟಲಿಗಳ ಯುದ್ಧಾಸಕ್ತತೆಯಿಂದಲೂ ಆಕ್ರಮಣ ನೀತಿಯಿಂದಲೂ ಇವುಗಳು ಮತ್ತು ಶಾಂತಿಪ್ರಿಯ ರಶಿಯಗಳೊಳಗೆ ವೈಷಮ್ಯವು ಹೆಚ್ಚುತ್ತ ಬರುತ್ತಿದೆ. ಕ್ರಮೇಣ ರಶಿಯವು ಭೂಲೋಕದ ಇತರ ಶಾಂತಿಪ್ರಿಯ ಶಕ್ತಿಗಳನ್ನು ಏಕೀಕರಿಸಿ ಯುದ್ಧಭಯವನ್ನು ನಿವಾರಿಸಲೂ ಬಹುದು. ಆದರೆ ಇಂಥಾ ಸಂದರ್ಭದಲ್ಲಿ ಇನ್ನೂ ಮಹಾಪ್ರಶ್ನೆಗಳು ಬರಲಿವೆಯೆಂಬುದು ನಿಶ್ಚಯ.

ಇಷ್ಟೇ ಅಲ್ಲದೆ ಪೂಂಜೀವಾದೀ ರಾಜ್ಯಗಳಲ್ಲೇ ಪೂಂಜೀವಾದ ಸಾಮ್ಯವಾದಗಳಲ್ಲಿರುವ ಶಕ್ತಿಸಂಬಂಧವು ವಿಶೇಷವಾಗಿ ಬದಲಾಗುತ್ತ ಬರುತ್ತಿದೆ. ೧೯೧೪ರಿಂದ ಅಂದರೆ ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದ ಸಂಭವಿಸುತ್ತಿರುವ ಅಸಹನೀಯ ಘಟನೆಗಳಿಂದ ಶ್ರಮ ಜೀವಿ ವರ್ಗದವರಲ್ಲೂ ಜನತೆಯ ಮಧ್ಯ ಹಾಗೂ ಕೆಳಗಿನ ವರ್ಗದವರಲ್ಲೂ ತೀಕ್ಷ್ಣ ಜಾಗ್ರತಾವಸ್ಥೆಯು ತಲೆದೋರುತ್ತಿದೆ. ಈ ಜಾಗ್ರತಾವಸ್ಥೆಯೇ ಪೂರ್ವಸಮಾಜ ಪದ್ಧತಿಯ ಮೃತ್ಯುಸೂಚಕ ಚಿಹ್ನೆಯು. ಇದರ ಪರಿಣಾಮವಾಗಿಯೇ ಅನೇಕ ದೇಶಗಳಲ್ಲಿ ಕೆಲಸಗಾರರ ಸಂಯುಕ್ತದಳ (United front) ಮತ್ತು ಜನರದಳ (People's front) ಮುಂತಾದವು ತೋರಿಬಂದವು. ಇತ್ತೀಚೆ ನಡೆದುಹೋದ ಆಸ್ಟ್ರಿಯಾ, ಫ್ರಾನ್ಸ್, ಪೋಲೇಂಡ್, ಚೈನಾ ಮತ್ತು ಹಿಂದುಸ್ಥಾನ ಹಾಗೂ ಈಗ ನಡೆಯುತ್ತಿರುವ ಸ್ಪೈನ್ ದೇಶದ ಕಲಹಗಳಿಂದ ಲೋಕದಲ್ಲಿ ಅಂತರಾಷ್ಟ್ರೀಯ ಯುದ್ಧದ ಭಯ ಮಾತ್ರವಲ್ಲದೆ ಆಯಾಯಾ ದೇಶಗಳಲ್ಲಿ ಕ್ರಾಂತಿಕಾರಕ ಸಂಘರ್ಷಗಳು ಒಂದರಹಿಂದೊಂದು ನಡೆಯಲಿರುವುದೆಂದೂ ಮತ್ತು ಇಂಥಾ ಕ್ರಾಂತಿಗಳ ಪರಿಣಾಮ ಸ್ವರೂಪವಾಗಿ ಆ ಮಹಾಯುದ್ಧದ ಭಯವು ದೂರವಾದರೂ ಆಗಬಹುದೆಂದೂ ಸುಲಭವಾಗಿ ತಿಳಿಯಬಹುದು.

ಈ ತರದ ಹೊಸ ಸಾಮಾಜಿಕ ಶಕ್ತಿ ಪ್ರವಾಹವು ಕೇವಲ ಪಾಶ್ಚಾತ್ಯ ಹಾಗೂ ಅಮೇರಿಕ ದೇಶಗಳಲ್ಲಿ ಮಾತ್ರವಲ್ಲ. ಸಾಮ್ರಾಜ್ಯವಾದೀ ಶಾಸನಕ್ಕೆ ಅಧೀನವಾಗಿರುವ ಪರತಂತ್ರ ರಾಜ್ಯಗಳಲ್ಲೂ ತೋರಿಬರುತ್ತಿದೆ. ಪರಾಧೀನ ರಾಜ್ಯಗಳೆಲ್ಲಾ ಸಾಮ್ರಾಜ್ಯವಾದೀ ಅಧಿಕಾರವನ್ನು ನಿರಾಕರಿಸಲು ತಲೆಯೆತ್ತಿವೆ. ೧೯೧೪ರಲ್ಲಿ ಯಾವ ಹೋಲಿಕೆಯೂ ಇಲ್ಲದಂಥಾ ಸಾಮ್ಯವಾದೀ ಚೈನವು (Soviet China) ಹೊಸ ಮಾರ್ಗದಲ್ಲಿ ಕಾಲಿಟ್ಟದೆ. ರಾಷ್ಟ್ರೀಯ ಕ್ರಾಂತಿಕಾರಕ ಆಂದೋಲನವು ಸರ್ವಸಾಧಾರಣವಾಗಿ ಚೈನಾ, ಹಿಂದೂದೇಶ, ಆಫ್ರಿಕಾ ಮತ್ತು ದಕ್ಷಿಣ ಅಮೇರಿಕದ ರಾಜ್ಯಗಳಲ್ಲಿ ಬಲಹೊಂದುತ್ತ ಬರುತ್ತಿದೆ. ಒಟ್ಟಾರೆ ಹೇಳುವುದೆಂದರೆ ಮನುಷ್ಯಜಾತಿಯ ಅಧಿಕಾರದಳವು ಎಚ್ಚೆತ್ತು ಅಧಿಕಾರಸ್ಥಾಪನೆಗಾಗಿ ಮುಂದೆ ಕಾಲಿಟ್ಟಿದೆ.

ಇಪ್ಪತ್ತನೆಯ ಶತಮಾನದ ಆದಿಯ ಸಾಮ್ರಾಜ್ಯವಾದೀ ಯುಗದಲ್ಲಿ ಪರಮಾವಧಿಯನ್ನು ಹೊಂದಿದ ಪೂರ್ವಸಮಾಜ ಪದ್ಧತಿಗೆ ೧೯೧೪ರ ಮಹಾದುರ್ಘಟನೆಯಿಂದ ಪ್ರಥಮಾಘಾತವಾಯಿತು. ಅಂದಿನಿಂದ ಅದಕ್ಕೆ ಶಾಂತಿಯಿಲ್ಲ; ಸುಖವಿಲ್ಲ. ೧೯೧೪ನೇ ಮಹಾಯುದ್ಧದ ಭೇರಿಯು ಹೇಗೆ ಪೂರ್ವದ ಶೂನ್ಯಪ್ರಾಯವಾದ ಸಾ

(೧೭ನೇ ಪೇಜಿಗೆ)

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
***Head Office*: UDIPI.**
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

• ತುಸು ವಿನೋದ •

ಅಂಗಡಿಯವ:–ಏನಯ್ಯಾ, ಯಾರನ್ನು ಕೇಳಿ ಒಳಗೆ ಪ್ರವೇಶಿಸಿದೆ! ಹೊರಗೆ 'ನೋಟೀಸ್ ಬೋರ್ಡ್'ನ್ನು ನೋಡಲಿಲ್ಲವೋ?

ವಿಜಿಟರ್:–ನೋಡಿದೆ ಸ್ವಾಮಿ! ಅದರಲ್ಲಿ 'ಅಪ್ಪಣೆಯಿಲ್ಲದೆ ಯಾರೂ ಒಳಗೆ ಪ್ರವೇಶಿಸಕೂಡದು' ಎಂದು ಬರೆದಿದ್ದಿತು, ಆದ್ದರಿಂದ ಅಪ್ಪಣೆ ಪಡೆಯಲು ತಮ್ಮ ಬಳಿಗೆ ಬಂದಿರುವೆನು.

x x x x

(ಯುಗಾದೀ ಹಬ್ಬದ ದಿನ ತಾಯಿಯು ಮಗನನ್ನು ಕುರಿತು) ಮಗೂ ಈ ದಿನ ತುಂಟಾಟಮಾಡಬಾರದು. ಒಬ್ಬರ ಕೈಯಲ್ಲಿ ಬೈಸಿಕೊಳ್ಳಬಾರದು. ಹಾಗೆ ಮಾಡಿಕೊಂಡರೆ ವರ್ಷ ಪೂರ್ತಿಯೂ ಬೈಗಳವನ್ನು ಕೇಳಬೇಕಾಗುವುದು ಎಚ್ಚರಿಕೆ.

ಮಗ:–ಅಮ್ಮಾ, ಹಾಗಾದರೆ ಅಪ್ಪನ ಜೇಬಿನಿಂದ ರೂಪಾಯಿಯನ್ನು ತೆಗೆದುಕೊಳ್ಳುತ್ತೇನೆ ದಯವಿಟ್ಟು ನನ್ನನ್ನು ಹೊಡೆಯಬಾರದು ಮತ್ತು ಬೈಯಬಾರದು.

x x x x

ನಿನ್ನ ಇಂಗ್ಲೀಷ್ ವಿದ್ಯಾಭ್ಯಾಸ ಹೇಗೆ ನಡೆಯುತ್ತಿದೆ?

"ಬಹಳ ಚನ್ನಾಗಿ—ಪ್ರಾರಂಭದಲ್ಲಿ ಯಾರು ಮಾತನಾಡಿದರೂ ತಿಳಿಯುತ್ತಿರಲಿಲ್ಲ, ಈಗ ನಾನು ಮಾತನಾಡಿದರೆ ಯಾರಿಗೂ ಅರ್ಥವಾಗುವದಿಲ್ಲ.

x x x x

ಡಾಕ್ಟರು:-(ಜವಾನನನ್ನು ಕೂಗಿ) ನೀನು ನಿನ್ನೆ ತೆಗೆದುಕೊಂಡು ಹೋದ ಔಷಧಿಯನ್ನು ನಾರಾಯಣಶೆಟ್ಟರು ತೆಗೆದುಕೊಂಡರೋ ಇಲ್ಲವೋ ಗೊತ್ತಾಗಲೇ ಇಲ್ಲವಲ್ಲ.

ಜವಾನ:–ಅವರು ಖಂಡಿತವಾಗಿ ತೆಗೆದುಕೊಂಡೇ ಇರಬೇಕು. ಏಕೆಂದರೆ ನಾನು ಇವತ್ತು ಮನೆಯಿಂದ ಬರುವಾಗ ಅವರ ಮನೆಯಲ್ಲಿ ಅಳುವ ಶಬ್ದ ಕೇಳಬರುತ್ತಿತ್ತು.

x x x x

ತಾತ:–ಲೋ! ಮಗು ಯಾಕೆ ಅಳುತ್ತಿದ್ದಿ?

ಮಗು:-ಅಪ್ಪನು ನಮ್ಮ ತಾಯಿಯನ್ನು ಲೆ! ಕತ್ತೆ ಎಂದು ಬೈದನು. ಅದಕ್ಕೆ ಪ್ರತಿಯಾಗಿ ಅಮ್ಮನು ಅಪ್ಪನನ್ನು ನಾಯಿಯೆಂದು ಬೈದಳು.

ತಾತ:–ಅವರು ಜಗಳವಾಡಿದರೆ ನೀನೇಕೆ ಅಳುತ್ತಿ?

ಮಗು:-ನನ್ನ ತಂದೆಯು ನಾಯಿ, ನನ್ನ ತಾಯಿಯು ಕತ್ತೆ, ಆದರೆ ಈ ಮಧ್ಯದಲ್ಲಿ ನಾನೇನೆಂಬುದನ್ನು ತಿಳಿಯಲಿಲ್ಲ

ಪ್ರಜಾಮತ.

ವ್ಯಾಪಾರಿ– ಹಗ್ಗಾ ತಕ್ಕೋತೀರಾ ಸಾಮಿ! ಹಗ್ಗಾ ನಾ?

ದಾರಿಗ—(ರೇಗಿ) ಏನಯ್ಯಾ ತಲೆತುಂಬಾ ಮಾತಾಡ್ತೀಯಾ?

ವ್ಯಾಪಾರಿ–(ಹತ್ತಿರ ಬಂದು) ಸ್ವಾಮಿ! ಬಲು ಚೆನ್ನಾಗೈತೆ ಹಗ್ಗಾ! ಗಟ್ಟಿ ಇದೆ. ದರಾನು ಕಡಿಮೆ. ಕೊಡ್ಲೇನೂ ಒಂದು?

ದಾರಿಗ—(ಸಿಟ್ಟಿನಿಂದ) ಅಲ್ವೇನಯಾ ಜ್ಞಾನಾಗೀನಾ ನೆಟ್ಟಗೈತಾ ಇಲ್ಲಾ ನಿಂಗೆ? ಹೆಂಡ್ತಿ ಮಕ್ಳು ಮರಿಗಳು, ಬಂಧು ಬಳಗ ಎಲ್ಲ್ರ ಇರೋತ್ತೀಲಿ ಹಗ್ಗಾ ತಕ್ಕೊಂಡು ಸಾಯಿ ಅಂತಿಯಲ್ಲ ಮಾರಾಯಾ.......?

ವ್ಯಾಪಾರಿ— (ನಗುತ್ತಾ) ಹಂಗಲ್ಲಾ ಬುದ್ಧಿ! ನೀರು ಸೇದೋಕೆ, ದನಾ ಕಟ್ಟೋಕೆ ಹಗ್ಗ ಗಟ್ಟ್ಯಾಗೈತೇಂತೆ.

ದಾರಿಗ—(ನಾಚಿ) ಓಹೋ! ಹಾಗೋ ಚೇಡಾ.

* * * *

ಅಪರಾಧಿ—ಸ್ವಾಮಿ! ನಾನು ಖಂಡಿತವಾಗಿಯೂ ನಿರಾಪರಾಧಿ.

ನ್ಯಾಯಾಧೀಶ—ನಾನು ನಂಬಲಾರೆ. ಎಷ್ಟು ಪ್ರಮಾಣಮಾಡಿದರೂ ನೀನು ಹೇಳುವುದೆಲ್ಲಾ ಸುಳ್ಳು.

ಅಪರಾಧಿ—ಹಾಗಾದರೆ ನಾನಪರಾಧಿ.

* * * *

ಗುರು—"ಸತ್ಯವಿದ್ದರೆ ಎತ್ತಲೂ ಭಯವಿಲ್ಲ"

ಶಿಷ್ಯ—ಸತ್ಯ ಹೇಳಿದವರಿಗೆ ಕ್ಷಮೆಯಲ್ಲವೇ ಸಾರ್.

ಗುರು—ಹೌದು, ಯಾಕೆ?

ಶಿಷ್ಯ—ಹಾಗಾದರೆ ನಾನು ಮನೆಲೆಕ್ಕ ಮಾಡಿಲ್ಲ ಸಾರ್.

* * * *

ತಂದೆ—ಏನೋ ಬಾಬು ನೀನು ಹತ್ತು ಮಾರ್ಕು ಪೂರಾ ತೆಗದ ದಿನವೇ ಇಲ್ಲವಂತೆ, ಮೇಸ್ತ್ರು ಹೇಳುತ್ತಾರೆ.

ಬಾಬು—ಹೌದಪ್ಪಾ ಆ ಮೇಸ್ಟ್ರಿಗೆ ಒಂದು ಬರಿಯಲಿಕ್ಕೇ ಗೊತ್ತಿಲ್ಲ.

ಕೊಳಲ್ ವೆಂಕಟ್ರಾವ್ ಉದ್ಯಾವರ.

(೧೫ನೇ ಪೇಜಿನಿಂದ)

ಸಾಮ್ರಾಜ್ಯವಾದೀ ಪದ್ಧತಿಯ ಮರಣಸೂಚಕವಾಗಿತ್ತೋ ಹಾಗೆಯೇ ಅದು ಆಗ ತಾನೆ ಉದಯವಾಗುತ್ತಿರುವ ಸಾಮ್ಯವಾದೀ ಯುಗದ ಶುಭಾಗಮನಸೂಚಕ ಮೃದು ನಿನಾದವಾಗಿಯೂ ಕೇಳಿಸಿತು. ಅಂದು ಸಮಾಜ ಪರಿವರ್ತನೆಯ ಕೇವಲ ಆರಂಭ. ಯುದ್ಧಾನಂತರ ಪೃಥ್ವಿಯ ಅಧಿಕ ಭಾಗದಲ್ಲಿ ಪೂರ್ವಪದ್ಧತಿಯನ್ನು ಪುನರಪಿ ತರಲು ಪ್ರಯತ್ನ ನಡೆದುದರಿಂದ ಅಂದಿನ ಆ ಪ್ರಶ್ನೆಗಳೇ ಇಂದೀಗ ಇನ್ನೂ ಭಯಂಕರ ರೂಪತಾಳಿ ನಮ್ಮ ಮುಂದೆ ಬಂದು ನಿಂತಿವೆ. ಈಗ ನಮ್ಮನ್ನು ಬೇರೊಂದು ರಣಭೇರಿಯ ಯುದ್ಧಕ್ಕಾಗಿ ಕರೆಯುತ್ತಿದೆ. ಅಂದು ಆರಂಭಮಾಡಿದ ಪರಿವರ್ತನೆಗಳನ್ನು ಇಂದು ನಾವು ಕೊನೆಗಾಣಿಸಬೇಕಾಗಿದೆ.

ಈಗ ತಾನೆ ಎದುರಿಸಲು ಬರುತ್ತಿರುವ ಪ್ರಶ್ನೆಗಳ ಉತ್ತರದಲ್ಲೇ ನಮ್ಮ ಅಂದರೆ ಲೋಕದ ಅಧಿಕಾಂಶ ಜನತೆ ಏಕೆ ಸಂಪೂರ್ಣ ಜನತೆಯ ಭವಿಷ್ಯವು ಅಡಕವಾಗಿದೆ. ಆದುದರಿಂದ ಅವುಗಳನ್ನು ಎದುರಿಸುವಾಗ ದೃಷ್ಟಿವಿಶಾಲತೆಯ ಅಗತ್ಯವಿದೆ. ಸಾಧಾರಣ ಬರುವ ಇಪ್ಪತ್ತು ವರ್ಷಗಳೊಳಗೆ ನಮ್ಮ ಭವಿಷ್ಯವು ನಿರ್ಣಯವಾಗಲಿದೆ. ಆದುದರಿಂದ ನಾವು ಸಹ ತಕ್ಕ ರೀತಿಯಲ್ಲಿ ಸತರ್ಕರಾಗಿರುವುದು ಉತ್ತಮವಲ್ಲವೇ?

ANOTHER MILESTONE
HAS BEEN PASSED BY

MESSRS PADUBIDRI BROTHERS.

In their march of unprecedented Progress and Success

THEY HAVE THE

PROUD DISTINCTION OF WINNING THE FIRST PRIZE
FOR THE HIGHEST BUSINESS PRODUCTION AND HAVE FIRMLY
ESTABLISHED THEIR REPUTATION FOR
EFFICIENCY, ECONOMY AND SECURITY,

as Chief Agents of the East & West Insurance Co., Ltd.,

FOR

MAHARASHTRA & KARNATAKA

Applications for Agencies are solicited from Influential and Capable Gentlemen in any walk of life.

Apply sharp to:

Messrs. Padubidri Bros.,
40, Naryanlal Bansilal Mansions,
Bellasis Road, BOMBAY 8.

ಸಂಜೆಯ ಸಿದ್ದಯ್ಯ

ಕತೆಗಾರ— P. N. ಬನ್ನಂಜೆ ರಾಮಾಚಾರ್ಯ, ಉಡುಪಿ

ಸಿದ್ದಯ್ಯನು ದನಿಯು ಹೇಳಿದ ಹಾಗೆ ಕೇಳುವ ಆಳು. ಅಂತಹ ಒಕ್ಕಲು ಸಿಗಬೇಕಾದರೆ ದನಿ ತಪಸ್ಸು ಮಾಡಬೇಕಾಗಿದೆ. 'ದನಿಯೇ ದೈವ'ವೆಂಬ ಭಾವನೆಯು ಅವನಲ್ಲೇ ಮನೆಮಾಡಿಕೊಂಡಿತ್ತು. ಹಳ್ಳಿಯ, ಜೀವನ ಸಂಗ್ರಾಮದಲ್ಲಿ ಹೆಸರುವಾಸಿಯಾದ ಯೋಧನಾಥ! ರುಕ್ಕಿಯೆಂದರೆ ಆತನಿಗೆ ಅನುರೂಪಳಾದ ಪತ್ನಿ. ಸಿದ್ದಯ್ಯ ರುಕ್ಕಿಯರೆಂದರೆ ದೈವಸೃಷ್ಟಿಯಲ್ಲಿ ಒಂದು ಅಭೂತಪೂರ್ವವಾದ ಜೋಡಿ! ಈಗ್ಗೆ ಕೆಲವು ವರ್ಷಗಳಿಂದ ಸಿದ್ದಯ್ಯನು ನಮ್ಮ ಒಕ್ಕಲಾಗಿರುವನು. ನಮ್ಮ ಮನೆಯ ಸಮೀಪದಲ್ಲಿಯೇ ಒಂದು ಬೆಟ್ಟ. ಅದರ ತಪ್ಪಲಲ್ಲಿಯೇ ಸಿದ್ದಯ್ಯನು ಮನೆಮಾಡಿಕೊಂಡಿದ್ದ. ಪ್ರಕೃತಿಯ ಶೋಭೆಯೊಡನೆ ಜಗಳವಾಡುತ್ತಿರುವ ಸೊಂಪಾದ ತೆಂಕಣ ತಂಗಾಳಿಗೆ ಮೈಯೊಡ್ಡಲು ನಾವೆಲ್ಲರೂ ಆ ಬೆಟ್ಟಕ್ಕೆ ಹೋಗುವ ವಾಡಿಕೆ. ಇಂದೂ ನಾನು ಗಾಳಿಯನ್ನು ಸೇವಿಸಲಿಕ್ಕೆಂದು ಬೆಟ್ಟಕ್ಕೆ ಹೋದೆನು. ಅಲ್ಲಿ ಹಲವರು ನೆರೆದಿದ್ದರು. ನಾನೂ ಅವರ ಗುಂಪನ್ನು ಸೇರಿದೆನು ಕ್ರಮೇಣ ಕತ್ತಲಾಗುತ್ತಾ ಬಂದಿತು. ಜನರೆಲ್ಲರೂ ಒಬ್ಬೊಬ್ಬರೇ ಚದರತೊಡಗಿದರು. ನಾನೂ ಅಲ್ಲಿಂದ ಹೊರಟು ಸಿದ್ದಯ್ಯನ ಮನೆಯ ಬದಿಯಿಂದಾಗಿ ಹಾದು ಎರುತ್ತಿದ್ದೆ. ಆಗ ಸಿದ್ದಯ್ಯನ ಮನೆಯುಲ್ಲಿ ಯಾರೋ ಮಾತಾಡುತ್ತಿರುವಂತೆ ಕೇಳಿಸಿತು. ನಾನು ಅಲ್ಲೇ ನಿಂತು ಅಲ್ಲಿಯ ಮಾತುಕತೆಯನ್ನಾಲಿಸತೊಡಗಿದೆ.

"ರುಕ್ಕಿ! ಬಾಗಿಲು-ಬಾಗಿಲು" ಸಿದ್ದಯ್ಯನ ಸ್ವರವು ನನಗೆ ಕೇಳಿಸಿತು.

"ಬಾಗಿಲು...! ಪೌಡರ್ ತನ್ನಿರೆಂದು ಸಾವಿರ ಸಲ ಹೇಳಿದೆ. ತಂದಿರುವಿರಾ? ಅದನ್ನೂ ತರಕೊಡದ ಹೇಡಿ ನೀವು! ಪೌಡರ್ ತರದೆ ಬಾಗಿಲು ತೆರೆಯಲಾರೆ—ಊಂಹೂಂ!" ರುಕ್ಕಿಯ ಹಿನ್ನುಡಿಯು ನನಗೆ ಕೇಳಿಸಿತು.

"ಅಯ್ಯೋ ರುಕ್ಕಿ! ಬಾಗಿಲು ತೆಗೆ. ನನ್ನ ಹಣವೆಲ್ಲವೂ ನಿನ್ನ ಪೌಡರಿಗಾಗಿಯೇ ವೆಚ್ಚವಾಗುತ್ತಿದೆಯಲ್ಲಾ! ಇನ್ನೂ ನನ್ನ ಜೀವ ಹಿಂಡುತ್ತೀಯಲ್ಲಾ?" ಸಿದ್ದಯ್ಯನಂದನು.

"ಚೆನ್ನಾಯಿತು! ಚೆನ್ನಾಯಿತು ಸುಳ್ಳು ಹೇಳಲಿಕ್ಕೂ ಕಲಿತು ಬಿಟ್ಟಿರಾ? ಇದುವರೆಗೆ ಒಂದು ಡಬ್ಬಿ ಪೌಡರ್ ತಂದು ಕೊಟ್ಟದ್ದಿದೆಯೇ? ನನಗೆ ಒಲೆಯ ಬೂದಿಯೆ ಗತಿ!" ರುಕ್ಕಿಯುಂದಳು. "ಬೂದಿಯನ್ನು ಹಚ್ಚಿಕೊಂಡರೂ ನಿನ್ನ ಮುಖ ಎಷ್ಟು ಸೊಗಸಾಗಿ ಕಾಣಿಸುತ್ತಿದೆ ರುಕ್ಕಿ! ಇರಲಿ! ಬಾಗಿಲು ತೆರೆ."

"ಬಾಗಿಲು ತೆರೆಯಲು ನಿಮ್ಮ ಮನೆಯಳ! ಹೋಗಿ ಪೌಡರ್ ತನ್ನಿರಿ!"

'ನನ್ನ ಮನೆಯಲ್ಲವೆನ್ನುತ್ತೀಯೆ ರುಕ್ಕಿ! ಸಾವಿರ ರೂಪಾಯಿ ಕೊಟ್ಟು ಕ್ರಯಚೀಟು ಮಾಡಿಸಿಕೊಂಡವನು ನಾನೇ? ಅಥವಾ ನೀನೆ?'

"ಕ್ರಯ ಚೀಟುಮಾಡಿಸಿ ಕೊಂಡವರು ನೀವಾದರೂ ರೂಪಾಯಿ ನನ್ನದೇ? ನಿಮ್ಮದೇ?" ಹೊರಗಿನಿಂದ ಈ ಸಂಭಾಷಣೆಯನ್ನು ಕೇಳುತ್ತಿದ್ದ ನನಗೆ ದಿಗಿಲಿಗಿಟ್ಟಿತು. ಇದು ವರೆಗಿನ ಮಾತುಕತೆಗಳು ಹಾಸ್ಯಪೂರ್ಣವಾಗಿದ್ದುವು. ಪೌಡರೆಂದರೇನೆಂದರಿಯದ ರುಕ್ಕಿಗೆ ಈ 'ಛಲ'ವೆಲ್ಲಿಂದ ಬಂದಿತು! ಎಂದು ನಾನು ನಗುತ್ತಿದ್ದೆ. ಆದರೆ 'ಕ್ರಯಚೀಟು ಮಾಡಿಸಿಕೊಂಡವನು ನಾನೇ ನೀನೆ?'ಎಂಬ ಮಾತನ್ನು ಕೇಳಿ ನಾನು ತೀರಾ ಗಾಬರಿ ಪಟ್ಟೆ! ತಿಪ್ಪೇ ಕೆರೆಯ ರಂಗಭಟ್ಟರಿಂದ ಕ್ರಯಕ್ಕೆ ಪಡಕೊಂಡವನು ನಾನು! ನನ್ನ ಚಾಲುಗೇಣಿ ಒಕ್ಕಲು ಸಿದ್ದಯ್ಯ!! ಹೀಗಿದ್ದು ಅವನಾಡುವ ಮಾತನ್ನು ಕೇಳಿದರೆ ಎದೆ ಝಲ್ಲೆನ್ನುವುದು!!! ನನಗೆ ಭಾರೀ ವಿಚಾರಕ್ಕಿಟ್ಟಿತು. ಅಲ್ಲಿನ ಮಾತು ಮುಂದರಿಸಿತು.

"ರುಕ್ಕಿ ಹೀಗೇಕೆ ಹಟಮಾಡುತ್ತೀಯೇ ಹಟಮಾರಿಯಾದ ನಿನ್ನಿಂದ ಸತ್ತೆನಲ್ಲಾ ನಾನು!"

"ಅಯ್ಯೋ! ಬೇಡಪ್ಪಾ!! ದೇವರೇ!!! ನಾನೆಲ್ಲಿಗಾದರೂ ಹೋಗಿ ಸಾಯುತ್ತೇನೆ. ಹಟಮಾರಿಯಂತೆ! ಹಟಮಾರಿ! ಎಂತಹ ಬಿರುದು!" ರುಕ್ಕಿಯು ಬಿಕ್ಕಿ ಬಿಕ್ಕಿ ಅಳತೊಡಗಿದಳು.

"ಅಯ್ಯೋ ನನ್ನ ರುಕ್ಕಿ ಅಳುತ್ತಾಳೆ. ನಾನೆಲ್ಲಿಗಾದರೂ ಹೋಗಿ ಬಿಡುತ್ತೇನೆ. ಮನೆಯೂ ಬೇಡ! ಮಾರೂ ಬೇಡ!" ಸಿದ್ದಯ್ಯನೂ ಬಿಕ್ಕಿ ಬಿಕ್ಕಿ ಅಳತೊಡಗಿದನು. ನನಗೆ ನಗೆತಡೆಯದಾಯಿತು. 'ಇದೊಂದು ಒಳ್ಳೇವಿನೋದಾತ್ಮಕ ನಾಟಕವೇ ಆಗಿದೆ' ಎಂದು ನೆನಸಿದೆ ನಾನು. ಒಳಗೆ ಮಾತು ಪುನಃ ಮುಂದರಿಸಿತು.

'ರುಕ್ಕೀ ಅಳಬೇಡ. ಪೌಡರ್ ನಾಳೆ ತರುತ್ತೇನೆ.'

'ಹಾಗಾದರೆ ಇಂದು ಬಿಸಿನೀರು ಕಾಯಿಸಿರಿ. ನನಗೆ ಸ್ನಾನವಾಗಬೇಕಾಗಿದೆ.'

'ಬಿಸಿನೀರೂ ನಾಳೆ ಕಾಯಿಸಿಕೊಡುತ್ತೇನೆ.'

'ಹಾಗಾದರೆ ಅಡಿಗೆ ಮಾಡಿರಿ.'

'ಹೋಟೇಲಿನಿಂದ ಅನ್ನ ತರೋಣ!'

'ಬೇಗ ತನ್ನಿರಿ.'

'ಛೂ ರುಕ್ಕಿ!'

'ಏನು?'

'ಬೇಗ ತನ್ನಿರಿ ಎಂದು ನನಗೆ ಅಪ್ಪಣೆ ಕೊಡುತ್ತೀಯಾ? ನಾನೇನು ಕೂಲಿಯಾಳೆ?

'ಹೇಳಿದ ಹಾಗೆ ಕೇಳಬೇಕು!'

'ರುಕ್ಕಿ! ಬಡಿತೇನೆ ಬೆನ್ನಿಗೆ.'

'ಹೂಂ ಹೊದೀತೆನೆ ಕೆನ್ನೆಗೆ.'

ರುಕ್ಕಿ! ಜಾಗ್ರತೆ!'

'ಉಹು! ಜಾಗ್ರತೆ!!'

"ಥೂ! ಹಾಳು ಹೆಂಡತಿ! ಒಂದು ಸೂಳೆಯ ಮನೆಗಾದರೂ ಹೊಕ್ಕಿದ್ದರೆ ಇಷ್ಟೆಲ್ಲ ಫಜೀತಿಯೇ ಇದ್ದಿಲ್ಲವಿತ್ತು. ನನ್ನ ಹಣೇಬರಹ! ನನ್ನ ಹೆಣ್ಣೆಂಬ ಸುಟ್ಟ ಮಮತೆಯಿಂದ ನಾನು ಒದ್ದಾಡುವುದು. ಅಯ್ಯೋ ನಾನು ಬರಿಯ ಮರುಳ!"

"ಸರಿ. ಅದಕ್ಕೂ ಆರಂಭವಾದರೆ ಪೂರ್ಣವಾಗುತ್ತದೆ. ದುಂದುಗಾರಿಕೆ ಹೇಗೂ ಇದ್ದೇ ಇದೆ. ಅದರ ಜತೆಗೆ ಸೂಳೆಗಾರಿಕೆ!"

'ರುಕ್ಕಿ! ಏಕೆ ಸಿಟ್ಟುಮಾಡುತ್ತಿಯೇ?'

'ಹೇಳಿದ ಹಾಗೆ ಕೇಳದೆ ಇದ್ದರೆ ಸಿಟ್ಟು ಬರುವುದಿಲ್ಲವೇ ಮತ್ತೆ....? ಹುಂ! ಎಷ್ಟು ಥಿಮಾಕು!'

'ಹೇಳಿದ ಹಾಗೆ ಕೇಳುತ್ತೇನೆ. ರುಕ್ಕಿ ಸಿಟ್ಟುಮಾಡಬೇಡ!'

'ಹಾಗಾದರೆ ಒಂದು ಹಾಡು ಹಾಡಿರಿ ನೋಡೋಣ!'

'ಕರ್ಮ! ನನಗೆ ಹಾಡು ಬರುತ್ತಿದೆಯೇ ರುಕ್ಕಿ?'

'ಒಂದು ಹಾಡಿರಿ ಒಂದೇ ಒಂದು.'

"ನನ್ನ ಮುದ್ದು ರುಕ್ಕಿ
ಮಾತಾಡ್ತಾಳೆ ಸೊಕ್ಕಿ
ಹೊಡೆದಾಗ ಸಿಕ್ಕಿ
ಅಳುತ್ತಾಳೆ ಬಿಕ್ಕಿ"

'ಅಪ್ಪಾ! ಒಳ್ಳೆಯ ಹಾಡು!'

'ಎಲ್ಲಿ ರುಕ್ಕಿ! ನೀನೊಂದು ಹಾಡು.'

'ಹುಂ—ಉಹುಂ—ಹುಂ—ಉಹುಂ.'

'ಅಯ್ಯೊಯ್ಯೊ ನಾಚಿಕೆಯೇ? ಹಾಡೇ ....ರುಕ್ಕೀ!'

"ನನಗೊಂದು ಗಂಡ
ಕೆಲಸದಲ್ಲಿ ದಂಡ
ಪೋಲಿಗಳ ಮಿಂಡ
ನನ್ನ ಪ್ರಾಣ ಗಂಡ"

'ಹ! ಹ!! ಹ!!! ರುಕ್ಕಿ! ನನಗೆ ಸಿಟ್ಟು ಬಂತು. ಬೇಗ ಬಾಗಿಲು ತೆಗೆ.'

'ಇದೆಂತಹ ಗಂಡನಪ್ಪಾ! ಸಿಟ್ಟು ಬರುವ ಗಂಡ! ಹ ಹ ಹ !'

'ಇದೋ! ಜೋರಾಗಿ ಸಿಟ್ಟು ಬಂದಿತು!'

ಹೀಗೆಂದು ಸಿದ್ದಯ್ಯನು ಬಾಗಿಲನ್ನು ಬಲವಾಗಿ ಒದೆಯತೊಡಗಿದನು. ಇದನ್ನು ಕೇಳಿ ನನಗೆ ಮೇರೆಯಿಲ್ಲದ ಸಿಟ್ಟು ಬಂದಿತು. 'ಇದೆಂತಹ ತಮಾಷೆ? ಹೀಗೆಲ್ಲ ಒದೆದರೆ ಬಾಗಿಲು ಒಡೆದು ಹೋಗಲಿಕ್ಕಿಲ್ಲವೇ?' ಎಂದು ನಾನು ಮನಸ್ಸಿನಲ್ಲಿಯೇ ನೆನಸಿ, ಫಕ್ಕನೆ ಸಿದ್ದಯ್ಯನ ಮನೆಯ ಮುಂದುಗಡೆ ಹೋಗಿ "ಸಿದ್ದಯ್ಯ! ಏನಿದು ಗಲಾಟೆ" ಎಂದು ಕೇಳಿದೆ.

'ಯಾರದು? ನನ್ನನ್ನು ಸಿದ್ದಯ್ಯನೆಂದು ಕರೆಯುವುದು! ಹಾಗೆಲ್ಲ ಕರೆಯಲಾಗದು 'ದನಿಯರೇ ಎಂದು ಕರೆಯಬೇಕು' ಎಂದ ಸಿದ್ದಯ್ಯ.

"ಪಿತ್ಥ ತಲೆಗೇರಿದೆಯಲ್ಲವೇ?" ಎಂದೆ ನಾನು ಗರಮ್ಮಾಗಿ!

'ಪಿತ್ತವೇರಿದೆಯಾ? ಇಳಿಸುತ್ತೇನೆ.' ಎನ್ನುತ್ತಾ ಒಂದು ದೊಡ್ಡ ದೊಣ್ಣದೊಣ್ಣೆಯನ್ನು ಹಿಡಿದುಕೊಂಡು ಚಾವಡಿಯಿಂದ ಕೆಳಗಿಳಿದನು. ನಾನು ಕಂಗಾಲಾದೆ. ಸಿದ್ದಯ್ಯನು ದೊಣ್ಣೆಯನ್ನು ಬೀಸುತ್ತಾ ಬಾಯಲ್ಲಿ ಏನೇನೋ ಒದರುತ್ತಾ ನನ್ನಕಡೆಗೆ ಧುಮುಕಿದನು. ಜೀವವಿದ್ದರೆ ಬದುಕಿಕೊಂಡೇನೆಂದು ನಾನು ಉಸುರುಗಟ್ಟಿ ಓಡತೊಡಗಿದೆ. ಸಿದ್ದಯ್ಯನೂ ನನ್ನನ್ನು ಹಿಂಬಾಲಿಸಿದನು. ಇಷ್ಟರಲ್ಲಿ ರಸ್ತೆಯು ಬಂದಿತು. ನನಗೆ ಧೈರ್ಯವೂ ಬಂದಿತು. ಏನು ಕಾರಣವೋ? ಸಿದ್ದಯ್ಯನು ರಸ್ತೆಗೆ ಬರದೆ ಅಲ್ಲಿಂದಲೇ ಮರಳಿದನು.

ನಾನು ಮನೆಗೆ ತಲಪಿದಾಗ ನನ್ನಾಕೆ ಕಾದಿದ್ದಳು. "ಇಂದು ವಿಳಂಬವಾದುದೇಕೆ?" ನನ್ನಾಕೆಯ ಪ್ರಶ್ನೆ! ನಾನೆಲ್ಲವನ್ನೂ ಆಕೆಗೆ ತಿಳಿಸಿದೆನು. ಆಕೆ ನಕ್ಕುಬಿಟ್ಟಳು. ನನಗಾ ರಾತ್ರಿ ಸರಿಯಾಗಿ ನಿದ್ದೆ ಹತ್ತಲೊಲ್ಲದು. "ಅಂತಹ ಸಿದ್ದಯ್ಯ ರುಕ್ಕಿಯರು ಇಂದು ಹೀಗೇಕೆ? ಕಳ್ಳುಕುಡಿದರೆ ಹೀಗಾಗುವುದೆಂದು ಕೇಳಿದ್ದೆ! ಆದರೆ ಇಷ್ಟು ಪ್ರಮಾದ.......?"

*   *   *   *   *

ಸಿದ್ದಯ್ಯನನ್ನು ವಿಚಾರಿಸಬೇಕೆಂದು ನನಗೆ ಭಾರೀ ಕುತೂಹಲ. ಅದಕ್ಕಾಗಿ ಬೆಳಗ್ಗೆ ಆಳನ್ನು ಕಳುಹಿಸಿ, ಸಿದ್ದಯ್ಯ ರುಕ್ಕಿಯರನ್ನು ಕರೆಸಿದೆ, ಅವರಿಬ್ಬರೂ ನಡುಗುತ್ತಾ ನನ್ನೆದುರು ಬಂದುನಿಂತರು. 'ಏಕೆ ಸಿದ್ದಯ್ಯ... ಅಲ್ಲಲ್ಲ....ದನಿಯರೇ ಈ ವಿನಯವೇತಕ್ಕೆ?" ನಗುತ್ತಾ ನಾನುಕೇಳಿದೆ. ರುಕ್ಕಿಯು ಮುಖಕ್ಕೆ ವಸ್ತ್ರವನ್ನು ಹಿಡಿದುಕೊಂಡು ನಗಹತ್ತಿದಳು. ಓಹೋ! ರುಕ್ಕಿ ತಮಾಷೆಗಾಗಿ ನಾನೆಂದೆ, 'ಇಂದು ಪೌಡರು ಹಚ್ಚಿಕೊಳ್ಳಲು ಮರೆತುಬಿಟ್ಟೆಯಾ ? "

"ಖಾವಂದರೇ....ಅದು ಸಂಜೆಯಹೊತ್ತು ....ಬಡವರು....ಹೊಟ್ಟೆತುಂಬಾ ಗಂಜಿಯಿಲ್ಲ....ಅದಕ್ಕಾಗಿ ಸಾಯಂಕಾಲಹೊತ್ತಿಗೆ ಕಳ್ಳುಕುಡಿಯುವುದುಂಟು....ಆಗ ನಮಗೆ ಪ್ರಜ್ಞೆ ಇರುವುದಿಲ್ಲ ...ಏನಿದ್ದರೂ ಕ್ಷಮಿಸಬೇಕು....ಒಡೆಯರೇ". ಎಂದು ಸಿದ್ದಯ್ಯನು ನನ್ನ ಕಾಲಿಗೆ ಬಿದ್ದನು. ಇದನ್ನು ನೋಡುತ್ತಿದ್ದ ರುಕ್ಕಿಯೂ ನನಗೆ ನಮಸ್ಕರಿಸಿದಳು "ಸಿದ್ದಯ್ಯ!"ನನ್ನೂ ರುಕ್ಕಿಯನ್ನೂ ಎಬ್ಬಿಸಿ ನಾನು ಮಾತಿಗೆ ಮೊದಲು ಮಾಡಿದೆನು. "ಕಳ್ಳು ಎಂಬುದು ಮನುಷ್ಯತ್ವವನ್ನು ಅಪಹರಿಸುವ ಭೂತ! ಅದರಿಂದಾಗುವ ಅನರ್ಥಗಳು ನಿನಗೇ ತಿಳಿದಿವೆ. ನನ್ನ ಸ್ಥಳದಲ್ಲಿ ಇರಬೇಕೆಂಬ ಆಶೆಯಿದ್ದರೆ, ನೀನು ಮುಂದಕ್ಕೆ ಕಳ್ಳುಕುಡಿಯಲಾಗದು. ತಿಳಿಯಿತೇ?"

"ಆಯಿತು ಬುದ್ಧಿ! ಎಂದು ಸಿದ್ದಯ್ಯ ಬಹು ವಿನಯದಿಂದ ಹಲವು ಮಾತುಕತೆಗಳಾದ ಬಳಿಕ ಸಿದ್ದಯ್ಯ ರುಕ್ಕಿಯರು ಹೊರಟು ಹೋದರು.

"ಈಗ ನೋಡಿ ನನ್ನ ಸಿದ್ದಯ್ಯನನ್ನು" ಎಂದಳು ನಮ್ಮಾಕೆ."

"ಈಗ ನಮ್ಮ ಸಿದ್ದಯ್ಯ! ನಿನ್ನೆ ಸಂಜೆಯ ಸಿದ್ದಯ್ಯ!....ಹೇಗೆ, ಸಂಜೆಯ ಸಿದ್ದಯ್ಯ ನಕತೆ ಚೆನ್ನಾಗಿಲ್ಲವೆ?"ಎಂದೆ ನಾನು.

"ಅಹುದು!" ಎಂದು ಆಕೆ ಮೃದುವಾಗಿ ನಕ್ಕಳು.

ಬೇಕಾಗಿದೆ.

ದ್ವಾರಕಾನಾಥ್ ಮತ್ತು ಸಿಂಹ ಕಂಪೆನಿಯವರು ತಯಾರಿಸಲಿರುವ ಕನ್ನಡ ಸಾಮಾಜಿಕ ವಾಕ್ಚಲನಚಿತ್ರದಲ್ಲಿ ಅಭಿನಯಿಸಲು ವಿದ್ಯಾವತಿಯರೂ ಮತ್ತು ರೂಪವತಿಯರೂ ಆದ ಕುಲೀನ ಯುವತಿಯರು ಬೇಕಾಗಿವೆ.

ಹೆಚ್ಚಿನ ವಿಷಯಗಳಿಗೆ ಭಾವಚಿತ್ರಗಳೊಡನೆ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಇದೇ ಮಾಹೆ 25ನೇ ತಾರೀಕಿನೊಳಗಾಗಿ ಬರೆಯಿರಿ.

Dwarakanath Simha & Co.,

FILM PRODUCERS

'LALITA' Yontikoppal

MYSORE

ದಕ್ಷಿಣ ಕನ್ನಡ ಜಿಲ್ಲಾ ಭೂಮಾಲಿಕರ ಸಂಘ, ಮಂಗಳೂರು.

ಮಹಾಲಿರೋಗ ಹಾವಳಿಗೆ ಸರಕಾರದ ಸಹಾಯ

ಮಹಾಲಿರೋಗ ತಗಲಿದ ಅಡಿಕೆ ತೋಟಗಳ ತೀರ್ವೆರಿಯಾಯಿತಿ ವಿಷಯ ಸರಕಾರದವರು ಮಂಜೂರುಮಾಡಿದ ರೆವಿನ್ಯೂ ಡಿಪಾರ್ಟ್‌ಮೆಂಟಿನ ನಂಬ್ರ ಮಿಸ್. 479 (ತಾ. 3–3–37ನೇ) ಹುಕುಮಿನ ತರ್ಜಿಮೆಯನ್ನು ಈ ಕೆಳಗೆ ಕೊಟ್ಟಿದ್ದೇನೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಅಡಿಕೆ ತೋಟಗಳು ಮಹಾಲಿ ರೋಗದ ಹಾವಳಿಗೊಳಗಾಗಿವೆಯೆಂದು ಹೇಳುವ ಒಂದು ಡೆಪ್ಯುಟೇಶನ್ 1936ನೇ ಇಸವಿ ಆಗೋಸ್ತು ತಿಂಗಳಲ್ಲಿ ಮಾನ್ಯ ರೆವಿನ್ಯೂ ಮೆಂಬರರನ್ನು ಬಂದು ನೋಡಿತು. ಅವರು 1936ನೇ ಇಸವಿಯ ಸಪ್ಟಂಬರ ತಿಂಗಳಲ್ಲಿ ಮಹಾಲಿ ಹಾವಳಿಗೆ ತುತ್ತಾದ ಅನೇಕ ಅಡಿಕೆ ತೋಟಗಳನ್ನು ಸಂದರ್ಶಿಸಿ ಕಲೆಕ್ಟರರು ಎಲ್ಲಾ ತೋಟಗಳಲ್ಲಿ ಚೆನ್ನಾಗಿ ತನಿಕ್ಕೆನಡಿಸಿ ರೈತರಿಗೆ ಯಾವ ರಿಯಾಯತಿ ಅವಶ್ಯವಿದೆ ಎಂಬುದನ್ನು ರೆವಿನ್ಯೂ ಬೋರ್ಡಿಗೆ ತಿಳಿಸಬೇಕೆಂದು ಕಲೆಕ್ಟರೊಡನೆ ಆಜ್ಞಾಪಿಸಿದರು. ದಕ್ಷಿಣಕನ್ನಡ ಜಿಲ್ಲೆಯ ಕಲೆಕ್ಟರರು ತನ್ನ ವಿಚಾರಣೆಯ ವರದಿಯಲ್ಲಿ ಕಾಸರಗೋಡು, ಕುಂದಾಪುರ, ಕಾರ್ಕಳ, ಮತ್ತು ಪುತ್ತೂರು ತಾಲೂಕುಗಳಲ್ಲಿರುವ ಅಡಿಕೆ ತೋಟಗಳಿಗೆ ಮಾತ್ರ ವಿಶೇಷ ಲಕ್ಷ್ಯವನ್ನೀಯಬೇಕೆಂದೂ ಮತ್ತು ಬಿ. ಯಸ್. ಒ. 14 ವಿಭಾಗ5(ii)ರ ಪ್ರಕಾರ ಮೇಲಿನ ನಾಲ್ಕು ತಾಲೂಕುಗಳಲ್ಲಿ ರಿಯಾಯಿತಿಮಾಡಬಹುದೆಂದೂ ಆದರೆ ಅದು ಅಲ್ಲಿ ರೈತರ ನಂಜ, ಪುಂಜ, ಬಾಗಾಯ್ತು ಈ ಎಲ್ಲಾ ಸ್ಥಳಗಳ ಒಟ್ಟು ಪೈರಿನಲ್ಲಿ ರೂಪಾಯಿಗೆ ಆರುಆಣೆ ಅಥವಾ ಅದಕ್ಕಿಂತ ಕಡಿಮೆಯಾಗಿದ್ದರೆ ಮಾತ್ರ ರಿಯಾಯಿತಿ ಮಾಡಬಹುದೆಂದೂ ಹೇಳಿರುವರು. ರೆವಿನ್ಯೂ ಬೋರ್ಡಿನವರು ಕಲೆಕ್ಟರರವರದಿಯನ್ನು ಅನುಮೋದಿಸುತ್ತಾರೆ. ಈ ರೋಗವು ಅಡಿಕೆ ಮರಗಳನ್ನು ಮಾತ್ರ ಕೆಡಿಸುವುದಿದ್ದರೂ ಜಿಲ್ಲೆಯಲ್ಲಿರುವ 6ತಾಲೂಕುಗಳ ಪೈಕಿ 4 ತಾಲೂಕುಗಳು ಇದರ ಹಾವಳಿಗೆ ಭಯಂಕರವಾಗಿ ತುತ್ತಾಗಿರುತ್ತವಲ್ಲದೆ ಇನ್ನೊಂದು ತಾಲೂಕಿನ ಅಂಶವು ಕೂಡಾ ಇದರ ಉಪದ್ರಕ್ಕೊಳಗಾಗಿದೆ. ಅಡಿಕೆ ತೋಟಗಳು ಸಾಮಾನ್ಯವಾಗಿ ಪ್ರತ್ಯೇಕವಾಗಿರುವುವಲ್ಲದೆ, ಅವುಗಳಲ್ಲಿ ಅಡಿಕೆ ಮತ್ತು ಸಾಗುವಳಿ ಮಾಡಿ ರೈತರು ಅದರ ಸಂಪಾದನೆಯ ಮೇಲೆ ಹೊಂದಿಕೊಂಡಿರುತ್ತಾರೆ. ಈ ಸಂಗತ್ಯಾನುಸಾರಗಳು ವಿಶೇಷವಾದಕಾರಣ ಅದರ ನಿವೃತ್ತಿಯು ಕೂಡಾ ವಿಶೇಷವಾಗಬೇಕಾದುದರಿಂದ ತೀರ್ವೆ ಮಾಫಿಯನ್ನು ನಿಶ್ಚೈಸುವುದರಲ್ಲಿ ತೋಟದ ಉತ್ಪತ್ತಿ ಮೇಲೆ ಮಾತ್ರ ಮಾಡಬೇಕಲ್ಲದೆ ರೈತನ ಇತರ ಭೂಮಿಯಲ್ಲಿ ಆಗುವ ಉತ್ಪತ್ತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು. ಆದುದರಿಂದ ಬಿ. ಯಸ್. ಒ. ನಂಬ್ರ 14 (5) (ii)ಕ್ಕೆ ಅನುಸಾರವಾಗಿ ಈ ಕೆಳಗಿನ ತೀರ್ವೆರಿಯಾಯಿತಿಯನ್ನು ಮಾಡಬೇಕಾಗಿ ಗವರ್ನ್‌ಮೆಂಟಿನವರು ಹುಕುಂ ಕೊಡುವದಾಗಿರುತ್ತದೆ. (1)ಅಡಿಕೆ ತೋಟದಲ್ಲಿ ರೂಪಾಯಿಗೆ6ಆಣೆ ಅಥವಾ ಅದಕ್ಕಿಂತ ಹೆಚ್ಚಿನ ಉತ್ಪತ್ತಿಯಿರುವಲ್ಲಿ ರಿಯಾಯಿತಿ ಇಲ್ಲ. (2)ಆರು ಮತ್ತು ನಾಲ್ಕು ಆಣೆಗಳೊಳಗಿನ ಸಂಪಾದನೆ ಇರುವಲ್ಲಿ, ಶೇಕಡಾ 30ರಂತೆ. (3) ನಾಲ್ಕು ಮತ್ತು ಎರಡು ಆಣೆಗಳೊಳಗಿನ ಸಂಪಾದನೆ ಇರುವಲ್ಲಿ ಶೇಕಡಾ50ರಂತೆ. (4) ಎರಡು ಆಣೆ ಅಥವಾ ಅದಕ್ಕಿಂತ ಕಡಿಮೆ ಇರುವಲ್ಲಿ ಶೇಕಡಾ 75ರಂತೆ ರಿಯಾಯಿತಿ ಮಾಡಿದ ಜುಮ್ಲಾ ಹಣವನ್ನು ಈ ಆರ್ಡರಿಗನುಸಾರವಾಗಿ ಗವರ್ನ್‌ಮೆಂಟಿಗೆ ತಿಳಿಸಬೇಕು.

ಮಂಗಳೂರು, ತಾ. ೬-೪-೧೯೩೭ } ಕೋಟ ರಾಮಕೃಷ್ಣ ಕಾರಂತ, ಗೌರವಕಾರ್ಯದರ್ಶಿ.

ಚಿತ್ರಮಯ ಪ್ರಪಂಚ

ಗಾಜೇ ಆಹಾರ

ರಶ್ಯದಲ್ಲಿ ಮ್ಯುಸೊಮಿನಮಿಯೋ ಎಂಬ 25 ವರ್ಷದ ತರುಣನೊಬ್ಬನ ಮುಖ್ಯ ಆಹಾರವೆಂದರೆ ಗಾಜು. ಈ ತರುಣನು ದಿನಕ್ಕೆ ೧೨ ಖಾಲಿ ಸೀಸೆಗಳನ್ನು ತಿನ್ನುತ್ತಾನೆ. ಮಣ್ಣಿನ ಪಾತ್ರೆಗಳಾದರೂ ಚಿಂತೆಯಿಲ್ಲ. ಅವನಿಗದು ಪಲ್ಯವಿದ್ದಂತೆ. ಇಲೆಕ್ಟ್ರಿಕ್ ದೀಪದ ಬಲ್ಬುಗಳು ಉಪ್ಪಿನಕಾಯಿಯಂತೆ ಅವನಿಗೆ. ಈ ವಿಚಿತ್ರ ಪ್ರಾಣಿಯನ್ನು ನೋಡಿ ಡಾಕ್ಟರರು ಬೆರಗಾಗಿ ಹೋಗಿದ್ದಾರೆ.

೭೫ ವರ್ಷದ ನವತರುಣಿ

ಪೋಲೆಂಡ್ ದೇಶದಲ್ಲಿ ಮೋರಿಯಾ ಸೋಗಾರ್‌ಸ್ಕೆ ಎಂಬೊಬ್ಬಳುಹೆಂಗಸಿನ ವಯಸ್ಸು 75. ಆದರೂ ಅವಳು 30 ವರ್ಷದ ನವತರುಣಿಯಂತಿದ್ದಾಳೆ. ಅವಳಿಗೆ ಸ್ವಲ್ಪವಾದರೂ ವಯಸ್ಸಾದ ಸೂಚನೆ ಕಂಡುಬರುವದಿಲ್ಲ. ಸೋಗಾರ್‌ಸ್ಕಳನ್ನು ಪರೀಕ್ಷಿಸಿದ ಡಾಕ್ಟರರು ಅವಳ ದೇಹ ಸೌಷ್ಠವವನ್ನೂ ಲಾವಣ್ಯವನ್ನೂ ಕಂಡು ವಿಸ್ಮಯ ಗೊಂಡಿದ್ದಾರೆ. ಜನ್ಮದಾರಭ್ಯ ಇವಳಿಗೆ ಒಂದುದಿನವೂ ಕಾಯಿಲೆಯಾದುದಿಲ್ಲ.

ಸ್ನಾನಮಾಡಲಿಲ್ಲವೆಂದು ದಾಂಪತ್ಯ ವಿಚ್ಛೇದ

ಅಮೇರಿಕದ ಇಂಡಿಯಾನ ಎಂಬಲ್ಲಿಯ ಒಬ್ಬ ಹುಡುಗಿಯು ಮದುವೆಯಾಗಿ ಆರುವಾರಗಳಲ್ಲೇ ದಾಂಪತ್ಯವಿಚ್ಛೇದಕ್ಕೆ ಅರ್ಜಿಹಾಕಿದಳು. ತನ್ನ ಗಂಡ ಒಂದೂವರೆ ತಿಂಗಳಿಂದಲೂ ಸ್ನಾನಮಾಡಿಲ್ಲೆಂಬುದೇ ಈ ವಿಚ್ಛೇದಕ್ಕೆ ಅವಳ ಕಾರಣ.

ಸ್ತ್ರೀಯರಿಬ್ಬರು ಗಂಡಹೆಂಡಿರಾಗಿ ಬಾಳಿದುದು

ಫ್ರಾನ್ಸಿನ ಕಾನ್ಸೆಸ್ ಎಂಬಲ್ಲಿ ಪ್ರಣಯಭಗ್ನರಾದ ಸ್ತ್ರೀಯರಿಬ್ಬರು ಪುರುಷಜಾತಿಯನ್ನೇ ದ್ವೇಷಿಸಿ ತಾವೇ ಗಂಡಹೆಂಡಿರಾಗಿ 40 ವರ್ಷಗಳವರೆಗೆ ಆದರ್ಶ ದಂಪತಿಗಳಾಗಿ ಸುಖವಾಗಿದ್ದ ವಿಚಿತ್ರ ಸಂಗತಿಯು ತಿಳಿದು ಬಂದಿದೆ. ಇವರಿಬ್ಬರಲ್ಲಿ ಜೀವನಕ್ಕೆ ಬೇಕಷ್ಟು ಹಣವಿದ್ದಿತು, ಅವರು ಅವಿವಾಹಿತರಿಗೆ ಹುಟ್ಟಿದ 3ಮಂದಿ ಹೆಮ್ಮಕ್ಕಳನ್ನು ತಮ್ಮ ಮಕ್ಕಳಾಗಿ ಸಾಕಿದ್ದರು. ಇತ್ತಲಾಗಿ ಗಂಡನಾಗಿದ್ದ ಸ್ತ್ರೀಯು ಮೃತಳಾಗಿ ಅವಳ ಹಣವು ಹೆಮ್ಮಕ್ಕಳೊಳಗೆ ಯಾವ ರೀತಿಯಲ್ಲಿ ವಿಭಾಗಿಸಲ್ಪಡಬೇಕೆಂಬ ಪ್ರಶ್ನೆಬಂದಾಗ ಸಂಗತಿಯೆಲ್ಲಾ ಹೊರಬಿತ್ತು.

ವಿಚಿತ್ರ ಕೂಸು

ಕಲ್ಕತ್ತದ ಸೋನೇಪುರದ ಆಸ್ಪತ್ರೆಯಲ್ಲಿ 6 ತಿಂಗಳ ಕೂಸೊಂದಕ್ಕೆ ಮಲದ್ವಾರವಿಲ್ಲ ಮಲವು ಮೂತ್ರದ್ವಾರದಿಂದಲೇ ಹೋಗುವುದು. ಮಗುವು ಸರ್ವಸಾಮಾನ್ಯ ಕೂಸುಗಳಂತೆಯೇ ಆರೋಗ್ಯವಾಗಿರುವುದು. ಓಪರೇಶನ್ ಮಾಡುವುದು ಅಪಾಯಕರವೆಂದು ಡಾಕ್ಟರರ ಅಭಿಪ್ರಾಯ. ಈ ಮಗುವನ್ನು ನೋಡಲು ಅನೇಕರು ಬಂದು ಹೋಗುತ್ತಿರುವರು.

ಹೆಂಡತಿಯ ಮೂಗುಕೊಯ್ದುದು

ಕಾಪುರ್ತಲದಲ್ಲಿ ಪತಿಯೊಬ್ಬನು ತನ್ನ ಹೆಂಡತಿಯ ನಡತೆಯಕುರಿತು ಸಂಶಯಗೊಂಡು ಅವಳ ವರ್ತನೆಗೆ ಕಾರಣ ಕೇಳಿದನು. ಅವಳು ತಕ್ಕಕಾರಣಕೊಡದಿರಲು ರೇಗಿಬಿದ್ದು ಕ್ಷೌರಕತ್ತಿಯಿಂದ ಅವಳ ಮೂಗು ಕತ್ತರಿಸಿಬಿಟ್ಟನು. ಈ ಕುರಿತು ಖಟ್ಲೆನಡದು ಮೆಜಿಸ್ಟ್ರೇಟರು ತಪ್ಪಿತಗಾರನಿಗೆ ಒಂದೂವರೆ ವರ್ಷ ಶಿಕ್ಷೆವಿಧಿಸಿದರು.

ತಿಂಗಳಿಗೆ ಒಂದು ಘಂಟೆ ನಿದ್ದೆ

ಇಂಗ್ಲೆಂಡಿನ ಮೋಟರ್ ಮಿಲ್ಯಾಧೀಶರೂ, ಲೋಕಪ್ರಸಿದ್ಧ ದಾನಶೂರರೂ ಆದ ಲೋರ್ಡ್‌ನ್ಯೂಫೀಲ್ಡರು ಬಾಲ್ಯದಾರಭ್ಯ ನಿದ್ದೆಯಿಲ್ಲದವರಾಗಿ ತಿಂಗಳಿಗೆ ಸುಮಾರು ಒಂದು ಘಂಟೆಮಾತ್ರ ನಿದ್ರೆಮಾಡುತ್ತಿರುವರಂತೆ. ಡಾಕ್ಟರರಿಗೆ ಇದರಕಾರಣವೇನೆಂದು ಕಂಡುಹಿಡಿಯಲು ಸಾಧ್ಯವಾಗಿರುವುದಿಲ್ಲ. ಲೋರ್ಡ್‌ನ್ಯೂಫೀಲ್ಡರ ಅಸಾಧಾರಣ ಕಾರ್ಯಕಲಾಪಗಳಿಗೆ ಇದೇ ಕಾರಣವಾಗಿರಬಹುದೆಂದು ನಂಬಲಾಗಿದೆ.

ಮಂಗನಾಗಿ ಮಾರ್ಪಡುತ್ತಿರುವ ಹುಡುಗ

ದಕ್ಷಿಣ ಆಫ್ರಿಕದ ಗ್ರೆಹೆಮ್ಸ್‌ಟೌನ್ ಎಂಬಲ್ಲಿಯ ಹೆಲ್ತ್ ಆಫೀಸರರು ಕೇಪ್ ಟೌನ್ ಪ್ರಾಂತದ ತೋಟ ಒಂದರಲ್ಲಿ ಮಾನವ ವಾನರ ಒಂದನ್ನು ಕಂಡುಹಿಡಿದಿದ್ದಾರೆ. ಈ ವಿಚಿತ್ರ ಪ್ರಾಣಿಯು ಹುಟ್ಟಿ ೪ ವರ್ಷಗಳ ವರೇಗೆ ಸರ್ವಸಾಮಾನ್ಯ ಹುಡುಗನಂತಿದ್ದ. ಆದರೆ ಆ ಮೇಲೆ ವಾನರನಂತೆನಾಲ್ಕು ಕಾಲುಗಳಿಂದ ನಡೆಯ ತೊಡಗಿದ. ಈಗ ಇವನಿಗೆ ೧೫ವರ್ಷವಾಗಿರುವುದು. ಅವನ ಮುಖವು ಮಂಗನಂತೆಯೇ ಇದ್ದು ವರ್ತನೆಯೂ ಅದೇ ರೀತಿಯಾಗಿರುವುದು. ಅವನಿಗೀಗ ಸರಿಯಾಗಿ ಮಾತಾಡಲಾಗುವುದಿಲ್ಲ. ಮಂಗಗಳಂತೆಯೇ ಕಿರುಚುತ್ತಿದ್ದಾನೆ. ಈ ಮಾರ್ಪಾಟವು ಹೇಗೆ ಉಂಟಾಯಿತೆಂಬುದುತಿಳಿದು ಬಂದಿಲ್ಲ. ಆದರೆ ಈ ಹುಡುಗನ ತಾಯಿಯು ಗರ್ಭಿಣಿಯಾಗಿದ್ದಾಗ, ತೋಟದಲ್ಲಿ ಕಟ್ಟಿದ್ದ ದೊಡ್ಡ ವಾನರನೊಂದನ್ನು ನೋಡುತ್ತಾ ಕೆಲವು ಘಂಟೆ ಕಳೆಯುತ್ತಿದ್ದಳಂತೆ.

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ದರ	ಉಡುಪಿ ವರೆಗೆ
ರಾಶಿ ಅಕ್ಕಿ …	3 – 6	3—10	3— 0	3— 2
ಮಸ್ಕತಿ …	3— 8	4 – 4	3 – 4	3—14
ಗುಡ್ಡು ಸುಗ್ಗಿ …	3—10	3 – 14	3— 0	3— 2
ಊರ ಅವ್ವಲ್ ಬೆಳ್ತಿಗೆ …	4— 0	4— 4	4— 4	4— 8
ರಂಗೂನು ಬಿ. ಗೋ. ೧ಕ್ಕೆ	7— 0	7— 4	6—14	7— 8
ಗೋದಿ ಗೋಣಿ ೧ಕ್ಕೆ …	11— 0	13— 0	12 –0	14— 0
ತೊಗರಿ ಗೋಣಿ ೧ಕ್ಕೆ …	9— 8	12— 8	12— 8	13— 0
ಹುರುಳಿ ಗೋಣಿ ೧ಕ್ಕೆ …	5— 0	5— 6	4— 0	5— 8
ಕಡಲೆ ಗೋಣಿ ೧ಕ್ಕೆ …	8— 0	12— 8	8— 8	8 –12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17— 0
ಉದ್ದು ಗೋಣಿ ೧ಕ್ಕೆ …	9— 0	9— 8	9— 0	8— 8
ಹೆಸರು ಗೋಣಿ ೧ಕ್ಕೆ …	7 –12	8— 0	10— 0	9— 8
ಊರುಬೆಲ್ಲ ಖಂಡಿ ೧ಕ್ಕೆ…	30— 0	32— 8	20— 0	30— 0
ಉಪ್ಪು ಗೋಣಿ ೧ಕ್ಕೆ ..	4 - 2	5— 4	5— 2	5— 4
ಕೊಬ್ರಿ ಖಂಡಿ ೧ಕ್ಕೆ …	75— 0	84— 0	90— 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	26— 8	28 – 8	18 –12	20— 0
ಎಳ್ಳಿಂಡಿ ಖಂಡಿ ೧ಕ್ಕೆ …	26— 4	27— 8	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	6— 0	7— 0	6— 8	6—12
ಎಳ್ಳೆಣ್ಣೆ ಮಣ ೧ಕ್ಕೆ …	7— 0	…	6— 0	6— 4
ಚಿಮಿಣಿ ಎಣ್ಣೆ ಪೆಟ್ಟಿಗೆ೧ಕ್ಕೆ	6— 5	7 – 5	6— 8	6—12
ಮೋರಿಸ ಸಕ್ಕರೆ ಮು. ೧ಕ್ಕೆ	3— 2	3— 4	2 --14	2—15
ಮೆಣಸು …	2— 8	5— 0	3— 4	3— 6
ಸಾಸಿವೆ ಮುಡಿ ೧ಕ್ಕೆ …	5— 4	5- 8	5— 8	5—12
ಕೊತ್ತಂಬರಿ ಮುಡಿ ೧ಕ್ಕೆ …	2— 8	3 – 0	2— 8	3— 4
ಕಾಳುಮೆಣಸು ಖ. ೧ಕ್ಕೆ…	100— 0	120 – 0	110— 0	120 – 0
ಗೇರುಬೀಜ ಮು. ೧ಕ್ಕೆ …	3 – 4	3— 8	4 – 6	4— 8
ಕಬ್ಬಿಣ ಖಂಡಿ ೧ಕ್ಕೆ …	35— 0	37— 8	55— 0	60— 0
ತಾಂಮ್ರ ತಗಡು ಮ. ೧ಕ್ಕೆ	12— 4	12— 8	17— 8	…
,, ಪಾತ್ರೆಗಳು ಮ. ೧ಕ್ಕೆ	12 – 8	14— 0	18— 8	19— 0
ಚೀನ ಬೆಳ್ಳಿ ಸೇರು ೧ಕ್ಕೆ…	13— 8	15— 0	13 –14	…
ಹಿತ್ತಾಳೆ ತಗಡು ಮ. ೧ಕ್ಕೆ	10— 0	10— 8	13 – 0	…
ಪವನು ೧ಕ್ಕೆ …	22— 7	22— 8	22 –12	…
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45— 0	45 — 0	50— 0
ನೇಟಿವ್ ಕಾಫಿ ಖಂಡಿ ೧ಕ್ಕೆ	170 – 0	180 – 0	180 – 0	220— 0
ಫಿಬೇರಿ ಕಾಫಿ ಖಂಡಿ ೧ಕ್ಕೆ	175— 0	195— 0	210 – 0	220— 0
ಮಡಿಕೇರಿ ಏಲಕ್ಕಿ …	50— 0	55— 0	70— 0	75— 0
ತುಪ್ಪ ಮಣ ೧ಕ್ಕೆ …	17 – 0	18— 0	14— 0	15— 0
ಏಲಕ್ಕಿ ಬೀಜ ಮಣ ೧ಕ್ಕೆ	80— 0	85— 0	70— 0	80— 0

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —·— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಪ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**
೩೦ ಮಾತ್ರೆಗಳು ರೂ. ೩—೦—೦ **ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.**

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು'

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಶೇಷ ಗುಣ ಉಂಟಾಗುವಂತೆ ಮಾಡುತ್ತವೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:— ಹೊರಗೆ ಹಚ್ಚಲು ಮಾತ್ರವೇ. ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ನಾಲ್ಕು ದಿವಸವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿಉಷ್ಣ, ಕೈಕಾಲುಗಳ ಉರಿ, ಇಸ್ಬು ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.
'ಕಾಮಶಾಸ್ತ್ರ' ಧರ್ಮಾರ್ಥ ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡು ಹಾಕಿರಿ
ಆತಂಕ ನಿಗ್ರಹ ಫಾರ್ಮಸಿ, ೬೪. ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು ಇನಾಮುಗಳು.

OUR CUSTOMER
THIS MAN

THIS MAN
WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶಿಮೆ ಮಾಲುಗಳ ಕೆಟಲಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಅಣೆಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾಮ್ಡಿ, ಸೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲನ್ ಚೌಕ, ಶಾವಳಿ, ನಾಮರ್ಡ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಸಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವರೆಗೆ ಸಾದಾ 16 ಮೊಳದ ಶೀರೆ 1ಕ್ಕೆ ರೂ. 16ರಿಂದ ರೂ. 35ರ ವರೆಗೆ. ಅರೆ ಕಡಮೆ 16 ಮೊಳ ಕ್ವಾಲ್ ಅಂಚು ರೂ. 10½ಯಿಂದ ರೂ 16. ಖಣ 1ಕ್ಕೆ ರೂ. 1½ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂ. ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ



ಧರ್ಮಾರ್ಥ
ಬಹುಮಾನಗಳು
1-4-0ಗೆ!

--- ಯಾರಿಗೆ? ---

ರೂಪಾಯಿ 1—4—0 ಕೊಟ್ಟು 14 ಸೀಸೆ ಒಟ್ಟೋಬೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

ಇನಾಮುಗಳ ವಿವರ:— 3 ಡಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೆಟೈಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್; 1 ಜತೆ ಗುಬ್ಬಿಗಳು; 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ; 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶನೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟೈಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. ಇಂದೇ ಆರ್ಡರು ಕೊಡಿರಿ.

Bengal Watch Co.,
Post Box No. 12214, CALCUTTA

ಕಿರಿಯರ ಪ್ರಪಂಚ

೧	ನಾಡಕಥೆ	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಧುವನ	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸ ದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುನ್
ಚಿಕಾಕೋಲ್

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮುಯೂರದಿಯು ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಸ್ಕೂಲ್, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ನಾಲ್ಕು ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮುಖ್ಯೋಪಾಧ್ಯಾಯಾ **ಡಾ॥ ಸುಮತಿಬಾಯಿ,**

ಬಿ. ಎ. ಎಲ್. ಟಿ., ಎಫ್. ಪಿ. ಎಮ್. ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್-

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	**ಭೈರವ ಮಾತ್ರೆಗಳು**
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

The Coondapoor Bank, Ltd.,

Head Office:- **Coondapoor**. Branch Office:-**Brahmavar**.

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: **ಕುಂದಾಪುರ** | ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ.ಶೆ.2, **ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು**ಸಾ.ಶೆ 4,
ಕಾಯಂ ಠೇವಣಾತಿಗಳು 3 **ತಿಂಗಳ ಬಾಬತು** ಸಾ. ಶೆ. 4

6 **ಮತ್ತು** 9 **ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ** 5%,
1 **ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ** 5½%
2 **ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ** 6% **ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.**

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತವೆ. ಪಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. | **N. Sheshagiri Rao,** ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ

ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ

ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷ ಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ— **ಭವಾನಿ ಅಂಡ್ ಕಂಪೆನಿ,**
ಪೋಸ್ಟ್ ಬಾಕ್ಸ್ ನಂ. 237, ಜೆ. ಟಿ. ಮದರಾಸು.

Dazzling! Defiant! Thought Provoking!

We Want A Dictator

BY

B. N. RAO.

Commencing from this issue, a series of articles under the above caption will appear in **Financia Expertus,** which no Student of Indian politics and economics can afford to miss. Grippingly interesting and crammed with original and unconventional suggestions for the Reconstruction of Indian Society

You simply must read these articles.

Copies can be had at—

Calcutta Advertising & Literature D'stributing Agency,
65, Colotoole, St. **Calcutta.**

Shankara Karnataka Pustaka Bhandar, Dharwar.

All Swadeshamitran Book stalls.

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು--ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc
APPLY TO THE MANAGER

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ

VOL XVI-NO 34

29-4-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ,

ವಾರಪತ್ರಿಕೆ

ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೨೯ ಎಪ್ರಿಲ್, ೧೯೩೭ [ಸಂಚಿಕೆ ೩೪

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I)

BRANCHES:

1 BANGALORE CITY
2 BELGAUM
3 BYADGI
4 BELLARY
5 ADONI
6 HOSPET
7 TALIPARAMBA
8 UPPINANGADI
9 KASARGODE
10 PAYYANUR
11 KANHANGAD
12 KARKALA
13 NANDYAL
14 PRODATTUR
15 TADPATRI
16 HUBLI
17 GADAG
18 KARWAR
19 KUMTA
20 ANKOLA
21 HONAVAR
22 BHATKAL
23 BRAHMAVAR
24 HUNGARCUTTA
25 SIRSI
26 SAGAR
27 COONDAPOOR
28 UDIPI
29 MANGALORE
30 CANNANORE

Beg to announce

Having Opened their Branch at

BOMBAY

on *Friday, the 23rd April 1937*
IN
"Premchand House"
AT
Sir Pherozshah Mehta Road.

Paid up Capital	Rs.	3,45,580
Reserves	„	19,2,390
Deposits exceed	„	22 lakhs
Total Working Funds exceed	„	40 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ ಎಸ್. ಎಸ್ ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲಿಗಳ ಐಶ್ವರ್ಯ!!

ಹೊಳಪಿನ ಹಾಳೆ ════ ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ **ಮೊದ**ಲ್ಗೊಂಡು **ದೊಡ್ಡ ಆಕಾರದಲ್ಲಿ** (ಡೆಮಿ ⅛ ದಲ್ಲಿ) ಹೊರಡುವುದು!

ಅಲ್ಲದೆ **ಚಂದಾದರವನ್ನು** ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ ಎಲ್. ಗುಂಡಪ್ಪ, ಎಂ ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ-ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ. ವಿ. ಪಿ. ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,

ಚಾಮರಾಜಪೇಟೆ, **ಬೆಂಗಳೂರು ನಗರ**

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಬಂಗಾರ ವ ಸರಕಿನ ಆಧಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ಸಿರಖು ಡೇಪಣಾತಿ ಸೇಕಡ 5½ರ ವರೇಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja, — ಯಂ. ಆರ್. ಪುಂಜ,
President & Manager, — ಪ್ರಸಿಡೆಂಟ್ ಮತ್ತು ಮೆನೇಜರ್.

ಮಾಸ] **[ಪತ್ರಿಕೆ.**

ವಿಶ್ವವಾಣಿ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ವಿಶೇಷ.

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	ರೂ. ೩—೮—೦
,, ,, (೬ ತಿಂಗಳಿಗೆ)	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)	ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — # ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ ಎ. ಎಮ್ ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

[ವಿ. ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ **ಕಾರಣದಿಂದಲೂ** ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ **ಸೇವನೆಯಿಂದ** ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ **ಬಂದಾಗುವುದು.** ತದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು। ಕೇಳವಾ ಮಾಹಿಮಾ ಜಿ. ರಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ರಷ್ಯದ ನೂತನ ನಿರ್ಮಾಣ

ಧರ್ಮದ ಮೇಲೆ ಬೋಲ್ಶೆವಿಕರ ಧಾಳಿಯ ರೀತಿ

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶೆ ದೃಷ್ಟಿಯಿಂದಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.] —ಸಂ. ನ.

ರಷ್ಯದ ಬೋಲ್ಶೆವಿಕರು ಧರ್ಮದ ಮೇಲಿನ ಕೇವಲ ವಿನಾಶಕ ಧಾಳಿಯಿಂದಲೇ ತೃಪ್ತರಿರುವುದಿಲ್ಲ. ಹಲವು ಶತಮಾನಗಳಿಂದ ನಾಗರಿಕತೆಯ ಪ್ರಾಮುಖ್ಯವಾದೊಂದು ಅಂಗವಾಗಿ ಜನ ಜೀವನದಲ್ಲಿ ರೂಢಮೂಲವಾಗಿ ಬಂದಿರುವ ಸಂಸ್ಥೆಯೊಂದನ್ನು ಕಿತ್ತುಹಾಕಿ ಬಿಡುವುದರಿಂದ ಉಂಟಾಗುವ ಶೂನ್ಯತೆಯನ್ನು ಹಾಗೆಯೇ ಉಳಿಸಿದರೆ ಅದು ಒಂದಲ್ಲೊಂದು ದಿನ ಹಿಂದಿನ ಅಥವಾ ಇನ್ನೊಂದು ಬಗೆಯ ಧರ್ಮದ ಆಕ್ರಮಣಕ್ಕೆ ಪುನಹ ಒಳಗಾಗಬಹುದೆಂಬುದನ್ನು ಅವರು ಚೆನ್ನಾಗಿ ಬಲ್ಲರು. ಮಾನವನ ಸೌಂದರ್ಯ ಭಾವನೆಯನ್ನು ಆಕರ್ಷಿಸುವ,ಆತನ ಪ್ರಾಮುಖ್ಯತೆಯನ್ನು ಮಾನಿಸುವ, ಅವನ ಶ್ರೇಷ್ಠತಾ ಭಾವ ಮತ್ತು ಸಂಗಡ ಬುದ್ಧಿಯನ್ನು ಹೆಚ್ಚಿಸುವ, ಜೀವನದ ಮತ್ತು ವಿಶ್ವದ ವಿಚಿತ್ರ ಸಮಸ್ಯೆಗೆ ಕೈಕೀಲಿಯಂತಿರುವ ಕೆಲವು ಸಂಗತಿಗಳು ಧರ್ಮದಲ್ಲಿರುವುವೆಂಬುದನ್ನು ಬೋಲ್ಶೆವಿಕರು ಮನಗಂಡು, ಅವುಗಳ ಸ್ಥಾನದಲ್ಲಿ ತಮ್ಮದೇ ಆದ ವಿಚಾರ, ಆಚಾರ ಮತ್ತು ಸಂಸ್ಥೆಗಳನ್ನು ಸಂಸ್ಥಾಪಿಸ ಲೆತ್ನಿಸಿರುವರು. ಧರ್ಮದ ಅಸ್ತಿತ್ವಕ್ಕೆ ಸ್ವಲ್ಪವೇನಾದರೂ ಕಾರಣವಿರಬಾರದು. ಅದರಲ್ಲಿ ಮಾನವನಿಗೆ ಭೌತಿಕವಾಗಿಯಾಗಲಿ, ಆತ್ಮಿಕ ಅಥವಾ ಮಾನಸಿಕವಾಗಿಯಾಗಲಿ ಪ್ರಯೋಜನಕರವಾದುದೇನೂ ಇರುವಂತಾಗಬಾರದೆಂದೇ ಬೋಲ್ಶೆವಿಕರ ಸಾಧನೆ. ವಿಜ್ಞಾನದ ಪ್ರಚಾರ ಮತ್ತು ಪ್ರಯೋಗದಿಂದ. ಕಲೆ, ನೀತಿ, ಸಾಮಾಜಿಕ ವ್ಯವಹಾರ, ಮತ್ತು ಸಮಾಜ ಸೇವಾಸಕ್ತಿಯಿಂದ, ನವೀನ ಮತ ಸ್ಥಾಪನೆಯಿಂದ ರಷ್ಯದಿಂದ ಧರ್ಮವನ್ನು ಶಾಶ್ವತವಾಗಿ ನಿರ್ಮೂಲಿಸಿಬಿಡಬಹುದೆಂದು ಅವರ ದೃಢ ವಿಶ್ವಾಸ. ಅವರ ಧರ್ಮದ ಮೇಲಿನ ಧಾಳಿಯ ಸಾಮಾನ್ಯ ರೀತಿಗಳಿವು. ವಿಜ್ಞಾನ ಶಕ್ತಿಯಿಂದವರು ಧರ್ಮದ ಮಾನಸಿಕ ಪಾಶವನ್ನೇ ತುಂಡುಹಾಕಿ, ಸೃಷ್ಟಿ, ದೇವರು, ಕ್ರೈಸ್ತ, ದೈವಾರಾಧನೆಯ ಕುರಿತು ಬೈಬುಲಿನ ಮಾತ್ರವಲ್ಲ ಯಾವುದಾದರೆಂದು ಧರ್ಮದ ಭಾವನೆಗಳ ಬುಡವನ್ನೇ ಕತ್ತರಿಸಿಹಾಕಲೆಳಸುವರು. ಜೀವನದ ವೈಚಿತ್ರ್ಯ, ಅದರ ಮೂಲ, ವ್ಯಾಪನೆ ಮತ್ತು ಉದ್ದೇಶದ ಶೋಧನೆಗೆ ವಿಜ್ಞಾನವೇ ಬೇಗದಕ್ಕೆ. ಸಾಮ್ಯವಾದದ ಪರಿಚಾರಿಕೆಯಂತಿರುವ ವಿಜ್ಞಾನದ ಮೇಲೆ ಮಾನವನು ಸಂಪೂರ್ಣ ವಿಶ್ವಾಸವಿಡಬೇಕೆಂದು ಬೋಲ್ಶೆವಿಕರು ವಿಜ್ಞಾನವನ್ನು ಧರ್ಮಪ್ರಚಾರಕರಷ್ಟೇ ವಿಶ್ವಾಸ ಮತ್ತು ಉತ್ಸಾಹದಿಂದ ಪ್ರಚಾರಮಾಡುತ್ತಿದ್ದಾರೆ. ವಿಜ್ಞಾನ ಶಬ್ದವೇ ರಷ್ಯನರಿಗೆ ಪವಿತ್ರವಾಗಿ ಹೋಗಿದೆ. ಅದು ರಷ್ಯದ ತರುಣರಲ್ಲಿ ಹೊಸ ವಿಶ್ವಾಸ, ಉತ್ಸಾಹ ಮತ್ತು ಸಾಹಸವನ್ನುಂಟುಮಾಡುವ ಮಹಾ ಶಕ್ತಿಯಾಗಿದೆ.

ನವೀನ ನೈತಿಕ ಭಾವನೆ

ಬೋಲ್ಶೆವಿಕರ ನೈತಿಕ ಭಾವನೆಯು ಲೋಕದ ಸರ್ವಸಾಧಾರಣ ಭಾವನೆಗಿಂತ ತೀರಾ ಭಿನ್ನವಾದುದು. ಒಬ್ಬನು ಮತ್ತೊಬ್ಬನನ್ನುಸುಲಿಗೆಮಾಡಬಾರದೆಂಬ ತತ್ವವೇ ಅವರ ಸರ್ವ ನೀತಿಯಮೂಲ. ಅವರ ನೀತಿಯಂತೆ ಒಬ್ಬನು ವ್ಯಾಪಾರದಲ್ಲಿ ವಿಪರೀತ ಲಾಭಮಾಡುವುದು ದೊಡ್ಡ ಅನೀತಿ. ಯಾಕೆಂದರೆ ಅವರ ತತ್ವಪ್ರಕಾರ ಲಾಭವು ಯಾವಾಗಲೂ ಸುಲಿಗೆಯಿಂದುಂಟಾಗುವುದು ಅಂತೆಯೇ ಬೋಲ್ಶೆವಿಕರ ದೃಷ್ಟಿಯಲ್ಲಿ, ಲಾಭ ಪಡೆಯುವುದಕ್ಕಾಗಿ ಉಪಯೋಗಿಸಬಹುದಾದ ಖಾಸಗಿ ಸೊತ್ತನ್ನಿಟ್ಟುಕೊಳ್ಳುವುದೂ, ಬೇರೆ ಬೇರೆ ರೀತಿಯಲ್ಲಿ ಹಣವನ್ನು ವಿನಿಯೋಗಿಸಿ ಧನ ಸಂಚಯಮಾಡುವುದೂ ಅನೀತಿಯಾಗಿದೆ. ಸ್ತ್ರೀ ಪುರುಷ ಸಂಬಂಧ ವಿಷಯದಲ್ಲಿ ಅವರು ಲೋಕದ ಇತರ ಭಾಗಗಳಲ್ಲಿ ಜ್ಯಾರಿಯಲ್ಲಿರುವ ನೀತಿ ನಿಯಮಗಳನ್ನು ನಿಷೇಧಿಸುತ್ತಾರ. ಆದರೆ ಲೈಂಗಿಕ ಜೀವನದಲ್ಲಿ ಸ್ವೈರವರ್ತನೆಯನ್ನವರು ಕಠಿಣವಾಗಿ ವಿರೋಧಿಸುತ್ತಾರೆ. ಮೊದಲು ರಷ್ಯದ ಪ್ರತಿಯೊಂದು ಪಟ್ಟಣ ಮತ್ತು ನಗರಗಳಲ್ಲಿ ತುಂಬಿಕೊಂಡಿದ್ದ ವೇಶ್ಯಾನಿಲಯಗಳನ್ನು ಬೋಲ್ಶೆವಿಕರು ನಿಲ್ಲಿಸಿಬಿಟ್ಟಿರುವರು. ಹೊಗೆಬತ್ತಿ ಸೇದುವುದು, ಕುಡಿಯುವುದು, ಜುಗಾರಾಡುವುದೆಲ್ಲಾ ಅನೀತಿಯೆಂದು ಪರಿಗಣಿಸಲ್ಪಡದಿದ್ದರೂ ಬೋಲ್ಶೆವಿಕರು ಅಂತಹ ದುರ್ವ್ಯಸನಗಳ ವಿರೋಧವಾಗಿ ಪ್ರಬಲ ಪ್ರಚಾರ ಮಾಡುತ್ತಾರೆ. ನರ್ತನಕ್ಕೆ ವಿರುದ್ಧವಾದ ತಂಡವೊಂದು ಬೋಲ್ಶೆವಿಕರ ಪಕ್ಷದೊಳಗಿದೆ. ಅಮೆರಿಕದಲ್ಲಿ ಪ್ರಚಾರವಿರುವ 'ಫ್ರಾಕ್ಸ್ ಟ್ರೋಟ್' ಎಂಬ ನರ್ತನವು ರಷ್ಯದಲ್ಲಿ ಅಸಭ್ಯವಾದುದೆಂದು ನಿಷೇಧಿಸಲ್ಪಟ್ಟಿರುವುದು. ಧರ್ಮ ಮತ್ತು ದೇವಾಲಯಗಳು ಜನತೆಯ ಮೇಲೆ ಬೀರುವ ಕಲಾರೂಪದ ಆಕರ್ಷಣವನ್ನೂ ಬೋಲ್ಶೆವಿಕರು ನಿರ್ನಾಮಗೊಳಿಸುವ ನಿರ್ಧಾರದಿಂದಿರುತ್ತಾರೆ. ರಷ್ಯದ ಒಕ್ಕಲಿಗರು ಮೊದಲಿನಂತೆ ದೇವರ ಕಿಂಡಿ, ಬೈಬುಲಿನ ಕಥೆಗಳ ಚಿತ್ರ, ಕ್ರೈಸ್ತನ ಮತ್ತು ಸಂತಸಾಧುಗಳ ಪ್ರತಿಮೆ ಮೊದಲಾದುವುಗಳಿಂದ ತಮ್ಮ ಗೋಡೆಗಳನ್ನು ಅಲಂಕರಿಸುವ ಬದಲಿಗೆ ರಷ್ಯದ ಕ್ರಾಂತಿಯ ಮುಖಂಡರ ಚಿತ್ರಗಳಿಂದಲೂ ಓದ್ಕ ಎಂಬ ಸುರೆಯನ್ನು ಕುಡಿಯುವುದರಿಂದುಂಟಾಗುವ ಹಾನಿಯ ಮತ್ತು ಅಜ್ಞಾನ, ಮೌಢ್ಯ, ಅಂಧಾಚಾರ, ಕ್ರೂರತನಗಳ ಪರಿಣಾಮದ ದೃಶ್ಯಗಳಿಂದಲೂ ಮಕ್ಕಳು ಮೃಗಪಕ್ಷಿಗಳಮೇಲೆ ಪ್ರೇಮವನ್ನುಂಟುಮಾಡುವ ಮತ್ತು ಪ್ರಕೃತಿ ಸೌಂದರ್ಯದ ಚಿತ್ರಗಳಿಂದಲೂ ಶೃಂಗರಿಸಿಕೊಳ್ಳಬೇಕು. ಹಳ್ಳಿಮೂಲೆಗಳ ರೈತರ ಗುಡಿಸಲುಗಳ ಗೋಡೆಗಳಲ್ಲಿ ಕೂಡಾ ಇಂತಹ ಜೀವನಕ್ಕೆ ನಿಕಟ ಸಂಬಂಧವುಳ್ಳ ಮತ್ತು ಅನುನಿತ್ಯದ ವ್ಯವಹಾರದ ಚಿತ್ರಗಳನ್ನು ಕಾಣಬಹುದು. ಇಗರ್ಜಿಗಳ ಧಾರ್ಮಿಕಕೂಟ ಗೀತೆಯು ಜನತೆಯಲ್ಲಿ ಒಂದು ಬಗೆಯ ಆವೇಶವನ್ನುಂಟುಮಾಡುವುದು. ಅದರ ಬದಲಿಗೆ ಬೋಲ್ಶೆವಿಕರು ಕ್ರಾಂತಿಯ ಪ್ರಾಣ ಬಲಿದಾನದ, ತ್ಯಾಗ ವೀರತನದ, ಧನ ಸತ್ತೆಯಮೇಲೆ ಜನಸತ್ತೆಯು ಪಡೆದಿರುವ ವಿಜಯದ ಕೂಟಗಾನವನ್ನು ಜ್ಯಾರಿಗೆ ತಂದಿರುವರು. ಇಗರ್ಜಿಯು ನಾನಾ ವಿಧಗಳಿಂದ ಜನನ ವಿವಾಹ ಮತ್ತು ಮರಣವನ್ನು ಗಂಭೀರವಾಗಿಯೂ ಮನೋಮುಗ್ಧಕರವಾಗಿಯೂ ಮಾಡುವಂತೆ ಬೋಲ್ಶೆವಿಕರು ತಮ್ಮದೇ ಆದ ವಿಧಿಗಳಿಂದ ಅವನ್ನು ಅತ್ಯಂತ ಮನೋಜ್ಞವಾಗಿ ಮಾಡಿರುವರು. ಮತ್ತು ಮಾನವನ ಸಾಮಾಜಿಕ ಪ್ರವೃತ್ತಿಯನ್ನು ತೃಪ್ತಿಪಡಿಸಲು ಇಗರ್ಜಿಗಿಂತ ಕ್ಲಬ್ಬು ಎಷ್ಟೋ ಮೇಲಾಗಿದೆ. ರಷ್ಯದ ಪ್ರತಿಯೊಂದು ಪಟ್ಟಣ, ಪ್ರಾಮುಖ್ಯ ಹಳ್ಳಿ, ಕಾರ್ಖಾನೆ, ಕಾಮಗಾರಿಗಳ ಸ್ಥಳಗಳಲ್ಲೆಲ್ಲಾ ಪುಷ್ಪಪತಾಕೆಗಳಿಂದಲೂ, ಚಿತ್ರ ತೋರಣಗಳಿಂದಲೂ ಅಲಂಕರಿಸಲ್ಪಟ್ಟು, ಗಾಯನ, ನಾಟಕಾದಿಗಳ ಪ್ರದರ್ಶನಕ್ಕೆ ಯೋಗ್ಯವಾದ ರಂಗಭೂಮಿಯ ಸಿದ್ಧತೆಗಳನ್ನೊಳಗೊಂಡ ಕ್ಲಬ್ಬುಗಳಿರುವವು. ಇಲ್ಲಿ ಒಕ್ಕಲಿಗರೂ ಮಜೂರರೂ ತಮಗೆ ಆರಾಮು ದೊರೆತಾಗ ಒಟ್ಟುಸೇರಿ ಮಾತುಕತೆ ಮತ್ತು ಚರ್ಚೆ ನಡಿಸುವರು; ಭಾಷಣಗಳನ್ನು ಕೇಳುವರು, ಆಟಗಳನ್ನಾಡುವರು, ನಾಟಕ ಸಿನೆಮ ಪ್ರದರ್ಶನಗಳನ್ನು ನೋಡುವರು, ಓದು ಬರಹ ಕಲಿಯುವರು. ಕ್ಲಬ್ಬುಗಳಿಲ್ಲದ ಹಳ್ಳಿಗಳಾಗಲಿ, ಕಾರ್ಖಾನೆಗಳಾಗಲಿ ರಷ್ಯದಲ್ಲಿರುವುದು ಅಪರೂಪ. ಏನೆಚೂರು ನಾಟಕ ಸಂಘಗಳು ರಷ್ಯದ ಹಳ್ಳಿಮೂಲೆಗಳಲ್ಲಿಯೂ ಉತ್ತಮ ನಾಟಕಗಳನ್ನು ಪ್ರದರ್ಶಿಸಿ ಜನಮನರಂಜನೆ ಮಾತ್ರವಲ್ಲದೆ ಕ್ರಾಂತಿಯ ನವೀನ ಭಾವನೆಗಳನ್ನು ಜನರಲ್ಲಿ ನೆಲೆಗೊಳಿಸುತ್ತವೆ. ರಷ್ಯದ ಯುವಕರು ಒಂದಿಷ್ಟೂ ಆಲಸ್ಯದಿಂದಿರದೆ ಸದಾ ಯಾವುದಾದರೊಂದು ಚಟುವಟಿಕೆಯಲ್ಲಿ ನಿರತರಾಗಿರುವಂತೆ ಮಾಡಲು ಸೋವಿಯೆಟ್ ಸರಕಾರದಷ್ಟು ಲೋಕದ ಇನ್ನಾವ ಸರಕಾರವೂ ಪ್ರಯತ್ನಿಸಲಾರದು.

ಬೋಲ್ಶೆವಿಕರ ಸಮಾಜ ಸೇವಾಸಕ್ತಿ

ರಷ್ಯದ ಕ್ರಾಂತಿಯ ಧ್ವಜದಡಿಯಲ್ಲಿ ಸಮಾಜ ಸೇವಾನಿರತನಾದವನು ತನ್ನ ಜೀವನದಲ್ಲಿ ಹೊಸ ಆಸಕ್ತಿ ಮತ್ತು ಆನಂದ್ಯೋತ್ಕರ್ಷತೆಯನ್ನು ಹೊಂದುವನೆಂದು ಬೋಲ್ಶೆವಿಕರ ಅಭಿಮತ. ರಷ್ಯದಲ್ಲಿ ಪ್ರತಿಯೊಬ್ಬನೂ ಒಂದಲ್ಲೊಂದು ರೀತಿಯ ಸಮಾಜ ಸೇವಾಕಾರ್ಯನಿರತನಾಗಿರಬೇಕು. ವೈದ್ಯ, ಅಧ್ಯಾಪಕ, ಇಂಜಿನಿಯರ್ ವ್ಯವಸಾಯ ತಜ್ಞ, ಕಮ್ಮಾರ, ಅಡಿಗೆಯವರೇ ಮೊದಲಾದ ಬೇರೆ ಬೇರೆ ವೃತ್ತಿಗಳವರೆಲ್ಲರೂ ಸಮಾಜ ಸೇವೆಯ ಬೆಲೆಯನ್ನರಿತುಕೊಳ್ಳಬೇಕು.

ಮಾನವನ ಅನುನಿತ್ಯದ ಕೆಲಸದಲ್ಲಿ ಸಮಾಜದ ಸೇವೆಯೇ ಮುಖ್ಯಸಂಗತಿ, ಮುಖ್ಯಸ್ಫೂರ್ತಿ, ಮುಖ್ಯಸಾಧನೆ ಮುಖ್ಯಗುರಿ. ಒಂದೇಮಾತಿನಲ್ಲಿ ಹೇಳುವುದಾದರೆ ರಷ್ಯದಲ್ಲಿ ಸಮಾಜಸೇವೆಯೇ ಈಗಧರ್ಮವಾಗಿನಿಂತಿದೆ. ಉಪವಾಸವ್ರತ ಹಿಡಿದು, ಪ್ರಾರ್ಥನೆ ನಡಿಸಿ ದೈವ ಮೂರ್ತಿಗಳೆದುರಲ್ಲಿ ಮೇಣದ ಬತ್ತಿಹೊತ್ತಿಸಿ, ಸನ್ಯಾಸಾಶ್ರಮಗಳಿಗೆ ಸೇರಿ ಇಹಲೋಕದಿಂದ ವಾಸ್ತವಿಕ ಜೀವನದಿಂದ ವಿಮುಖವಾಗುವುದರಿಂದ ಯಾವ ಪ್ರಯೋಜನವೂ ದೊರೆಯಲಾರದು. ಪರಲೋಕ ವಿಚಾರವೆಂಬುದೇ ಕೇವಲ ಭ್ರಾಮಕವಾದುದು ಮಾತ್ರವಲ್ಲದೆ ನಾವು ಹುಟ್ಟಿಬೆಳೆದಿರುವ, ನಾವು ದಿನನಿತ್ಯ ವ್ಯವಹಾರವನ್ನಿಟ್ಟುಕೊಂಡಿರುವ ಭೂಲೋಕ ವ್ಯಾಪಾರದ ಕಡೆಗೆ ಕಣ್ಣುಮುಚ್ಚಿ ಯಾವ ಆಧಾರವೂ ಇಲ್ಲದ ಕೇವಲ ಕಾಲ್ಪನಿಕವಾದ ಪರಲೋಕ ಯೋಚನಾ ಮಗ್ನವಾಗಿರುವುದು ಆತ್ಮವಂಚನೆಯೆಂದೇ ಬೋಲ್ಶೆವಿಕರ ವಾದ. ಆದರಿಂದ ಮಾನವನು ಕೇವಲ ಕಾಲ್ಪನಿಕ ಒಳ್ಳಿತ ಮತ್ತು ಸುಖ ಪಡೆವ ಸ್ವಾರ್ಥ ದೃಷ್ಟಿಯುಳ್ಳವನಾಗುವನು. ರಷ್ಯದಲ್ಲಿ ಅವನು ಹೊಸ ಸಮಾಜದ ಹೊಸ ಕಾಮಗಾರಿಗಳ ಹೊಸ ಪಟ್ಟಣಗಳ ಹೊಸ ಮನೆ, ಶಾಲೆ ಮೊದಲಾದ ಜನೋಪಕಾರಿ ಸಂಸ್ಥೆಗಳ ರಚನೆಯಲ್ಲಿ ನಿರತನಾಗಿ ಹೊಸ ಆನಂದ ಮತ್ತು ಆಕಾಂಕ್ಷೆಯುಳ್ಳವನಾಗುವನು. ಈ ಕೆಲಸಗಳು ಆತನನ್ನು ತನ್ನ ಸ್ವಾರ್ಥಪರತೆಯಿಂದ ಹೊರಗೆಳೆದು ಆತನಿಗೂ ಆತನ ಸಹೋದರ ಮಾನವನಿಗೂ ಹೊಸ ಸಮಾಜಕ್ಕೂ ನಿಕಟ ಸಂಬಂಧವುಳ್ಳವನನ್ನಾಗಿ ಮಾಡುವವು. ಇಂತಹ ಚಟುವಟಿಕೆಗಳಿಗೇನೇ ಮಾನವನು ತನ್ನ ಸಮಯ ಶಕ್ತಿ ಮತ್ತು ಪ್ರತಿಭೆಯನ್ನುಪಯೋಗಿಸಬೇಕು. ಕಾಲ್ಪನಿಕ ದೈವದೇವರುಗಳ ಪೂಜೆ ಪುರಸ್ಕಾರಕ್ಕಿಂತ ಇಂತಹ ಉದ್ಯಮಗಳೇ ಮಾನವನಲ್ಲಿ ನಿಜವಾದ ಸ್ವಗೌರವ ಬುದ್ಧಿಯನ್ನು ಬೆಳೆಸಿ ಅವನ ವೈಯುಕ್ತಿಕ ಬೆಲೆಯನ್ನು ಹೆಚ್ಚಿಸುವವು. ಯಾಕೆಂದರೆ ಅದರಿಂದಾಗಿ ಅವನು ದೀನ ಪರಾವಲಂಬಿಯಾಗುವ ಬದಲಿಗೆ ಸ್ವಾವ

(೮ನೇ ಪೇಜಿಗೆ)

ಈ ಸಂಚಿಕೆಯಲ್ಲಿ ಪ್ರಕಟವಾಗಿರುವ

ಹೆಂಡ್ತಿ ಗಂಡನಾದರೆ?

ಎಂಬ ಹಾಸ್ಯರಸಪ್ರಧಾನವಾದ ಏಕಾಂಕ ನಾಟಕವನ್ನು

ಓದಲು ಮರೆಯಬೇಡಿರಿ.

ಸಮಾಚಾರ ಸಂಗ್ರಹ: ಅಡ್ಡಿಸ್ ಅಬಾಬದ ಇಟೇಲಿಯಾನ ಸೈನಿಕರ ಅವಸ್ಥೆ, ಲೋಕದಲ್ಲಿ ಶಾಂತಿಸ್ಥಾಪನೆಯ ಯತ್ನ, ಪಂಜಾಬಿನಲ್ಲಿ ಹಿಮಗಾಳಿಯ ಹಾವಳಿ, ತಿರುವಾಂಕೂರಿಗೆ ಹರಿಜನರ ಯಾತ್ರೆ, ಕಾಂಗ್ರೆಸಿಗೆ ಅಹ್ರಾರರ ಬೆಂಬಲ

ಲಾಹೋರಿನಲ್ಲಿ ಪೋಲೀಸರ ಜಡ್ತಿ

ಇದೇ ತಾ. ೧೨ರಲ್ಲಿ ಲಾಹೋರಿನ ಲಜಪತ ರೈ ಭವನದಲ್ಲಿ ಪಂಜಾಬಿನ ಸೋಸಿಯಲಿಸ್ಟರ ಸಭೆಯು ಗುಪ್ತವಾಗಿ ನಡೆಯುತ್ತಿದ್ದಾಗ ಪೋಲೀಸರು ಬಂದು ಸಭಾಸ್ಥಳವನ್ನು ಜಡ್ತಿಮಾಡಿ ಕೆಲವು ಕಾಗದಗಳನ್ನೊಯ್ದರು. ಪೋಲಿಸರು ಬಂದೊಡನೆಯೇ ಸಭೆಯವರು ಚೆದರಿದರು. ಯಾರೂ ದಸ್ತಗಿರಿ ಮಾಡಲ್ಪಟ್ಟಿರುವುದಿಲ್ಲ. ಪೋಲೀಸರು ಸರ್ವೆಂಟ್ ಆಫ್ ಪೀಪಲ್ಸ್ ಪಾರ್ಟಿಯ ಮತ್ತು ಅಖಿಲಭಾರತ ಚರಕಸಂಘದ ಆಫೀಸನ್ನು ಜಡ್ತಿ ಮಾಡಿದರು. ಇದು ಹೊರತು ಪಂಜಾಬು ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ನಾಯಕರಾದ ಡಾಕ್ಟರ್ ಗೋಪಿಚಂದ್ ಭಾರ್ಗವರ ಮನೆಯನ್ನೂ ಇತರ ಕಾಂಗ್ರೆಸ್ ಸಂಸ್ಥೆಗಳನ್ನೂ ಜಡ್ತಿ ಮಾಡಿದರು. ಕಮ್ಯೂನಿಸ್ಟರೊಬ್ಬರು ಲಾಹೋರಿಗೆ ಬಂದಿರುವರೆಂದು ಪೋಲೀಸರಿಗೆ ತಿಳಿದು ಆ ಸಂಬಂಧವಾಗಿ ಈ ಜಡ್ತಿಗಳು ನಡೆಸಲ್ಪಟ್ಟವೆಂದು ತಿಳಿದು ಬರುತ್ತದೆ.

ಮಲಬಾರು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಕಾಂಗ್ರೆಸಿಗೆ ಬಹುಪಕ್ಷ

ಮಲಬಾರು ಡಿಸ್ಟ್ರಿಕ್ಟ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇಷ್ಟರವರೆಗೇನೇ ೩೧ ಸೀಟುಗಳು ದೊರೆತಿರುವವು. ಬೋರ್ಡಿನ ಒಟ್ಟುಸೀಟುಗಳು ೪೨. ೧೦ ಸರ್ಕಲುಗಳಲ್ಲಿ ಕಾಂಗ್ರೆಸ್ ಪರವಾದ ಮತ್ತು ಅವರ ಎದುರಾಗಿ ನಿಂತಿರುವ ಉಮೇದ್ವಾರರೊಳಗೆ ತೀವ್ರ ಪ್ರತಿಸ್ಪರ್ಧೆ ಇರುವುದು

ಪಂಡಿತ ನೆಹರು

ಗಳಿಗೆ ಈಗ ಜ್ವರವು ಸಂಪೂರ್ಣ ಬಿಟ್ಟಿರುವುದು ಅವರು ಮೇ ತಾ. ೭ರ ಸುಮಾರಕ್ಕೆ ರಂಗೂನಿಗೆ ಮುಟ್ಟಿ ಬರ್ಮದಲ್ಲಿ ೧೦ ದಿವಸಗಳವರೆಗಿರುವರು. ಆದಿನ ರಂಗೂನಿನಲ್ಲಿ ನಿಲ್ಲುವರು. ಉಳಿದ ದಿನಗಳಲ್ಲಿ ಬರ್ಮದ ಬೇರೆ ಬೇರೆ ಪ್ರಾಮುಖ್ಯಸ್ಥಳಗಳನ್ನು ಸಂದರ್ಶಿಸುವರು. ಬರ್ಮ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಪಂಡಿತರ ಸಂಚಾರ ಕಾರ್ಯಕ್ರಮವನ್ನು ತಯಾರಿಸುತ್ತಿರುವರು.

ಅಡ್ಡಿಸ್ ಅಬಾಬದ ಇಟೇಲಿಯಾನ ಸೈನಿಕರ ಅವಸ್ಥೆ

ಅಬಿಸೀನಿಯದ ಅಡ್ಡಿಸ್ ಅಬಾಬದಲ್ಲಿರುವ ೩೦,೦೦೦ ಇಟೇಲಿಯಾನ ಸೈನಿಕರೀಗ ಆಹಾರಸಾಮಗ್ರಿಗಳ ಅಭಾವದಿಂದ ಬಹಳ ನಷ್ಟಕ್ಕೀಡಾಗಿದ್ದಾರೆ. ಮಳೆಗಾಲ ಪ್ರಾರಂಭವಾಗುವ ಮೊದಲು ಅವರಲ್ಲನೇಕರು ಇಟೇಲಿಗೂ ಅಬಿಸೀನಿಯದ ಇತರ ಭಾಗಗಳಿಗೂ ಕಳುಹಿಸಲ್ಪಡಲಿರುವರು. ಅಡ್ಡಿಸ್ ಅಬಾಬಕ್ಕೆ ಮೊದಲು ಯಾವಾಗಲೂ ಅದರ ಸುತ್ತುಮುತ್ತಲಿನ ವ್ಯವಸಾಯಿಕ ಜಿಲ್ಲೆಗಳಿಂದ ಆಹಾರ ಸಾಮಗ್ರಿಗಳು ಒದಗಿಸಲ್ಪಡುತ್ತಿದ್ದುವು. ಈಗ ಈ ಜಿಲ್ಲೆಗಳ ಒಕ್ಕಲಿಗರಾರೂ ತಮ್ಮ ಸಾಮಾನುಗಳನ್ನು ಅಡ್ಡಿಸ್ ಅಬಾಬಕ್ಕೊಯ್ಯಲು ಸಿದ್ಧರಿರುವುದಿಲ್ಲ. ಅವರು ಸಾಮಾನು ಕೊಂಡೊಯ್ದರೆ ಇಟೇಲಿಯಾನರು ಅವನ್ನು ಒಂದೇ ಕದ್ದೊಯ್ಯುವರು; ತಮ್ಮ ಚಲಾವಣೆಯು ನೋಟುಗಳ ಮೂಲಕ ಹಣ ಕೊಡುವರು ಇವುಗಳು ಅಬಿಸೀನಿಯನರಿಗೆ ಯಾವ ಕೆಲಸಕ್ಕೂ ಬರುವಂತಿಲ್ಲ ಇಷ್ಟರವರೆಗೆ ಮಾರ್ಶಲ್ ಗ್ರೇಜಿಯಾನಿಯರು, ಜಿಬೌತಿ, ಎರಿಟ್ರಿಯ, ಮತ್ತು ಇಟೇಲಿಯಾನ ಸೋಮಾಲಿಲೇಂಡಿನಿಂದ ರಸ್ತೆ ಮತ್ತು ರೈಲುಗಳ ಮೂಲಕ ಆಹಾರ ಸಾಮಗ್ರಿತರಿಸುತ್ತಿದ್ದರು. ಇನ್ನು ಮಳೆಯಾರಂಭವಾದರೆ ಇದು ಸಾಧ್ಯವಿಲ್ಲ. ಆದುದರಿಂದ, ಮಳೆಗಾಲದಲ್ಲಿ ಅಡ್ಡಿಸ್ ಅಬಾಬದ ಮೇಲೆ, ವಿರೋಧಿ ಪಂಗಡಿಗರು ಧಾಳಿನಡಿಸುವ ಸಂಭವವಿದ್ದರೂ ಇಟೇಲಿಯಾನರಿಗೆ ತಮ್ಮ ಸೈನಿಕರನ್ನು ಕಡಿಮೆಮಾಡದೆ ನಿರ್ವಾಹವಿಲ್ಲವಾಗಿದೆ.

ಲೋಕದಲ್ಲಿ ಶಾಂತಿಸ್ಥಾಪನೆಯ ಯತ್ನ

ಮೊದಲು ಲೇಬರ್ ಪಕ್ಷದ ನಾಯಕರಾಗಿದ್ದು ಯುದ್ಧದ ಕುರಿತಾದ ಅದರ ಧೋರಣೆಗೆ ಅಸಮ್ಮತಿಸಿ ರಾಜಿನಾಮೆ ಕೊಟ್ಟಿರುವ ಮಿ. ಜೋರ್ಜ್ ಲೇನ್ಸ್‌ಬರಿಯವರು ತನ್ನ ಕಡು ವೃದ್ಧಾಪ್ಯವನ್ನೂ ಲಕ್ಷಿಸದೆ ಲೋಕದಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನಿಸುತ್ತಿರುವರು. ಅವರು ಅಮೆರಿಕಕ್ಕೆ ಹೋಗಿ ಪ್ರಸಿಡೆಂಟ್ ರುಸವೆಲ್ಟರೊಡನೆ ಮಾತಾಡಿರುವರು. ಹಾಗೆಯೇ ಯುರೋಪಿನ ಕೆಲವು ರಾಷ್ಟ್ರಗಳ ಪ್ರಧಾನ ಮಂತ್ರಿಗಳೊಡನೆಯೂ ಮಾತಾಡಿ ಅಭಿಪ್ರಾಯ ಕೇಳಿರುವರು. ಈ ಸಂದರ್ಭದಲ್ಲಿ ಕೆಲವರು ಲೇನ್ಸ್‌ಬರಿಯವರು ಮೊದಲು ಹೋಗಿ ಹಿಟ್ಲರರೊಡನೆ ಮಾತಾಡಬೇಕೇ ಹೊರತು ತಮ್ಮೊಡನೆ ಮಾತಾಡಿ ಫಲವಿಲ್ಲೆಂದು ತಿಳಿಸಿದರು. ಮಿ. ಲೇನ್ಸ್ ಬರಿಯವರು ಅವರ ಮಾತಿನಮೇರೆಗೆ ಹಿಟ್ಲರರೊಡನೆಯೇ ಮಾತಾಡುವ ನಿರ್ಧಾರಮಾಡಿ ತನ್ನಿಚ್ಛೆಯನ್ನು ಹಿಟ್ಲರರಿಗೆ ತಿಳಿಸಿ ಅವರ ಆಮಂತ್ರಣವಂತೆ ಇದೇ ತಾ. ೧೯ರಲ್ಲು ಬರ್ಲಿನಿಗೆ ಹೋಗಿ ಅವರೊಡನೆ ಮಾತುಕತೆ ನಡೆಸಿದರು. ಇದರ ಪರಿಣಾಮವಾಗಿ, ಲೋಕದ ರಾಷ್ಟ್ರಗಳೊಳಗೆ ಪರಸ್ಪರ ಸೌಹಾರ್ದ ಮತ್ತು ಸಾಂಪತ್ತಿಕ ಸಹಕಾರವನ್ನು ಸ್ಥಾಪಿಸುವುದಕ್ಕಾಗಿ ಪ್ರೆಸಿಡೆಂಟ್ ರುಸುವೆಲ್ಟರಾಗಲಿ, ಇತರ ಯಾವುದಾದರೊಂದು ದೊಡ್ಡ ರಾಷ್ಟ್ರದ ಮುಖ್ಯಾಧಿಕಾರಿಗಳಾಗಲಿ ಜಗತ್ತಿನ ರಾಷ್ಟ್ರಗಳ ಪರಿಷತ್ತೊಂದನ್ನು ಕರೆದರೆ ಅದರಲ್ಲಿ ಜರ್ಮನಿಯು ಭಾಗಿಯಾಗಲು ಸಿದ್ಧವಿರುವುದೆಂದು ತಿಳಿದು ಬಂದಿದೆ. ಮಿ. ಲೇನ್ಸ್‌ಬರಿಯವರಿನ್ನು ಮುಸಲೋನಿಯವರನ್ನು ಕಂಡು ಅವರ ಅಭಿಪ್ರಾಯ ಕೇಳಲಿರುವರು. ಲೋಕದ ರಾಷ್ಟ್ರಗಳು ಸಹಕರಿಸಲೊಪ್ಪಿದರೆ ಪ್ರೆಸಿಡೆಂಟ್ ರುಸವೆಲ್ಟರು ಜಾಗತ್ತಿಕ ಪರಿಷತ್ತನ್ನು ಕರೆಯಲೊಪ್ಪಿರುವರು.

ರಾಜಕೀಯ ಕೈದಿಗಳ ಬಿಡುಗಡೆ

ಯ ಕುರಿತು ಇದೇ ತಾ. ೧೨ರಲ್ಲು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಕೇಳಲ್ಪಟ್ಟಾಗ ಅಂಡರ್ ಸೆಕ್ರಿಟರಿಗಳಾದ ಮಿ. ಬಟ್ಲರರು ಇನ್ನು ಮುಂದೆ ರಾಜಕೀಯ ಕೈದಿಗಳ ಬಿಡುಗಡೆಯ ವಿಚಾರವನ್ನು ಆಯಾ ಪ್ರಾಂತೀಯ ಸರಕಾರಗಳು ನಿರ್ಧರಿಸತಕ್ಕದೆಂದು ಹೇಳಿರುವರು. ಅಂದರೆ ಇನ್ನು ಮುಂದೆ ರಾಜಕೀಯ ಕೈದಿಗಳನ್ನು ಬಿಡುವ ಅಥವಾ ನಿರ್ಬಂಧದಲ್ಲಿರಿಸುವ ಸ್ವತಂತ್ರವು ಪ್ರಾಂತಿಕ ಸರಕಾರದ್ದಾಗಿದೆ.

ಕಾಂಗ್ರೆಸಿಗೆ ಅಹ್ರಾರರ ಬೆಂಬಲ

ಅಹ್ರಾರರೆಂದರೆ ಪಂಜಾಬು ಮತ್ತು ಸಂಯುಕ್ತಪ್ರಾಂತದ ರಾಷ್ಟ್ರೀಯ ಮತ್ತು ಪ್ರಗತಿಪರ ಭಾವನೆಯ ಮುಸಲ್ಮಾನ ಪಕ್ಷೀಯರು. ಸಂಯುಕ್ತ ಪ್ರಾಂತದ ಅಹ್ರಾರ್ ಪಕ್ಷದ ಪ್ರಾಂತೀಯ ಪರಿಷತ್ತು ಇದೇ ತಾ. ೧೨ರಲ್ಲು ಲಕ್ನೋದಲ್ಲಿ ಮಿ. ಮಝಹಾರ್ ಅಲಿಯವರ ಅಧ್ಯಕ್ಷತೆಯಲ್ಲಿ ಜರಗಿದಾಗ, ಕೆಲ ಮಂದಿ ಜಾತೀಯ ವಾದಿಗಳು ಪರಿಷತ್ತಿಗೆ ಅಡ್ಡಿಯನ್ನೊಡ್ಡಲೆತ್ನಿಸಿದರೂ ಪ್ರಯೋಜನವಾಗಲಿಲ್ಲ ಪರಿಷತ್ತು ಜಯಶೀಲವಾಗಿ ನಡೆದು, ವಾಯವ್ಯ ಗಡಿನಾಡಿನ ಪಂಗಡಿಗರ ಮೇಲಿನ ಧಾಳಿ ಮತ್ತು ಬೋಂಬೆಸತವನ್ನು ನಿಷೇಧಿಸುವ, ಕಾಂಗ್ರೆಸಿನೊಡನೆ ಸಹಕರಿಸುವ ಮೊದಲಾದ ನಿರ್ಣಯಗಳಾಗಿರುವವು. ಇಂಡಿಯಾ ಸೆಕ್ರಿಟರಿಗಳಾದ ಲೋರ್ಡ್ ಜೆಟ್ಲೆಂಡರ ಹೇಳಿಕೆಯನ್ನೂ ನಿಷೇಧಿಸಲಾಯಿತು. ಈ ಪರಿಷತ್ತಿನ ಸ್ತ್ರೀಯರ ಚಪ್ಪರಕ್ಕೆ ಒಬ್ಬನು ಬೆಂಕಿಕೊಡಲೆತ್ನಿಸಿದಾಗ ಕೆಂಪು ಬುರ್ಕಿಯ ಮುಸಲ್ಮಾನ ಸ್ವಯಂಸೇವಕಿಯೊಬ್ಬಳು ಖಡ್ಗಹಿಡಕೊಂಡು ಏಕಾಕಿಯಾಗಿ ಅವನ ಬಳಿಗೋಡಿ ಧೈರ್ಯದಿಂದ ಸಹಾಯಬರುವವರೆಗೆ ಆತನನ್ನು ತಡೆಗಟ್ಟಿದಳು.

ಪಂಜಾಬಿನಲ್ಲಿ ಹಿಮ ಗಾಳಿಯ ಹಾವಳಿ

ಇದೇ ತಾ. ೧೨ರಲ್ಲಿ ಪಂಜಾಬಿನ ಲೂಧಿಯಾನ ಮತ್ತು ಇನ್ನೂ ಕೆಲವು ಕಡೆಗಳಲ್ಲಿ ಪ್ರಬಲವಾಗಿ ಹಿಮಗಾಳಿ ಬೀಸಿ ಬೇಸಾಯಗಾರರಿಗೆ ಬಹಳ ಹಾವಳಿಯಾಗಿರುವುದು. ಗೋಳಿಗಿಂತಲೂ ದೊಡ್ಡದಾದ ಕಲ್ಮಳೆಬಿದ್ದು ಬೆಳೆಗಳು ನಾಶವಾಗಿರುವವು. ಮರವೊಂದಕ್ಕೆ ಮಿಂಚು ಬಡಿದು ಅದರಡಿಯಲ್ಲಿದ್ದ ಇಬ್ಬರು ಸ್ತ್ರೀಯರು ಮತ್ತು ಇಬ್ಬರು ಗಂಡಸರು ಕೊಲ್ಲಲ್ಪಟ್ಟಿರುವರು. ಒಂದು ಕೊಟ್ಟಿಗೆಗೆ ಮಿಂಚು ಬಡಿದು ಅದರೊಳಗಿದ್ದ ಜಾನುವಾರುಗಳೆಲ್ಲಾ ಸತ್ತಿರುವವು. ಕೆಲವು ಕಡೆಗಳಲ್ಲಿ ಹಿಮಕಲ್ಲುಗಳು ತತ್ತಿಯಷ್ಟು ದೊಡ್ಡವಿದ್ದವು. ಗೋಧಿ, ಬಟಾಟೆ ಬೆಳಗೂ, ಮಾವಿನ ಹಣ್ಣಿಗೂ ಹೆಚ್ಚಿನ ಹಾವಳಿಯಾಗಿರುತ್ತದೆ. ಸರಕಾರವು ಈ ಕುರಿತು ಕೂಡಲೆ ವಿಚಾರಣೆ ನಡಿಸತೊಡಗಿದೆ.

ತಿರುವಾಂಕೂರಿಗೆ ಹರಿಜನರ ಯಾತ್ರೆ

ಪೂನದ ಹರಿಜನ ಮುಖಂಡರಾದ ಶ್ರೀ ರಾಜಭೋಜರು ಕೆಲ ಮಂದಿ ಹರಿಜನರೊಂದಿಗೆ ತಿರುವಾಂಕೂರಿಗೆ ಯಾತ್ರೆ ಹೋಗಿ ಪ್ರಥಮವಾಗಿ ಅಲ್ಲಿ ದೇವಸ್ಥಾನ ಪ್ರವೇಶಮಾಡಲಿರುವರು. ಶ್ರೀ ರಾಜ ಭೋಜರು ತಿರುವಾಂಕೂರು ಮಹಾ ರಾಜರ ಸೆಕ್ರಿಟರಿಗಳಿಗೆ ಬರೆದ ಕಾಗದದಲ್ಲಿ ಮಹಾಜನರು ಸಂಧಿಸಮಯದಲ್ಲಿ ಹಿಂದು ಧರ್ಮವನ್ನು ರಕ್ಷಿಸಿರುವರೆಂದು ತಿಳಿಸಿ ಅವರಿಗೆ ತಮ್ಮ ವಂದನೆಯನ್ನರ್ಪಿಸಲು ಅವರನ್ನು ನೋಡಬಿಡಬೇಕೆಂದು ಕೇಳಿಕೊಂಡಿರುವರು.

ಸ್ಪೈನಿನ ಯುದ್ಧದಲ್ಲಿ ಹಿಂದೀಯರ ಭಾಗ

ಸ್ಪೈನಿಶ್ ಸರಕಾರದ ಕಡೆಯಿಂದ ಹೋರಾಡಿ ಗಾಯಗೊಂಡು ಜಿಬ್ರಾಲ್ಟರಿಗೆ ತರಲ್ಪಟ್ಟಿರುವ ಮಿ. ಫರಡೇ ಎಂಬ ಆಂಗ್ಲೇಯನೊಬ್ಬನು ಸ್ಪೆನಿಶ್ ಸರಕಾರದ ಕಡೆಯಲ್ಲಿ 100 ಮಂದಿ ಹಿಂದೀಯರು ಹೋರಾಡುತ್ತಿರುವರೆಂದು ಹೇಳಿರುವನು. ಸ್ಪೆನಿಶ್ ಸರಕಾರದ ಕಡೆಯಿಂದ ಹೋರಾಡುವ ಇತರ ದೇಶೀಯರೆಂದರೆ 2000 ಮಂದಿ ಫೆಸಿಸ್ಟ ಪದ್ಧತಿ ವಿರೋಧಿಗಳಾದ ಇಟಲಿಯಾನರು, 1500 ಮಂದಿ ನಾಜಿ ವಿರೋಧಿಗಳಾದ ಜರ್ಮನರು, 5000 ಮಂದಿ ಫ್ರೆಂಚರು, 600 ಮಂದಿ ಬ್ರಿಟಿಷರು, 700 ಮಂದಿ ಅಮೆರಿಕಾನರು, 2000 ಮಂದಿ ರಸ್ಯಾನರು, 300 ಮಂದಿ ಜಾಪಾನರು, 150 ಮಂದಿ ಚೀನೀಯರು, 200 ಮಂದಿ ಅರಬರು, 150 ಮಂದಿಗಿಂತಲೂ ಮಿಕ್ಕಿದ ಫ್ರೆಂಚ್ ಮತ್ತು ರಸ್ಯಾನ ಸ್ತ್ರೀಯರು ಮೆಶೀನ್‌ಗನ್ ಹಿಡಿದು ಹೋರಾಡುತ್ತಿರುವರು ಅಲಿಕಾಂಟೆಯಲ್ಲಿ ಸರಕಾರದ ಕಡೆಯಲ್ಲಿ ಘಂಟೆಗೆ 350 ಮೈಲು ಹಾರುವ 300 ವಿಮಾನಗಳಿರುವವು. ಸರಕಾರವು ದೊಡ್ಡ ಸೇನೆಯೊಂದನ್ನೀಗ ತರಬೇತಿಮಾಡುತ್ತಿರುವುದು. ಇದು ಬೇಗನೆ ಹೋರಾಡಲು ಸಿದ್ಧವಾಗುವುದು. ಸರಕಾರದ ಕಡೆಯ ಸೇನೆಯು ದಿನೇ ದಿನೇ ಹೆಚ್ಚಿನ ಒಕ್ಕಟ್ಟಿನಿಂದ ಬಲಗೊಳ್ಳುತ್ತಿರುವುದು. ಬಂಡಾಯಗಾರರಿಗೆ ಮೇಡ್ರಿಡ್, ವೆಲೆನ್ಸಿಯಾ ಅಥವಾ ಬಾರ್ಸಲೋನವನ್ನು ಜೈಸಲು ಸಾಧ್ಯವೇ ಇಲ್ಲೆಂದು ಮಿ. ಫರಡೆಯವರ ಅಭಿಪ್ರಾಯ. ಯುದ್ಧದಿಂದ ಅನಾಥರಾಗಿರುವ ಸುಮಾರು 500 ಮಂದಿ ಸ್ಪೈನಿಶ್ ಮಕ್ಕಳು ಮೆಕ್ಸಿಕೋವಿಗೆ ಕಳುಹಿಸಲ್ಪಡಲಿರುವರು. ಅಲ್ಲಿಯ ನೂರಾರು ಕುಟುಂಬಗಳವರು ಸ್ಪೈನಿನ ಅನಾಥ ಮಕ್ಕಳನ್ನು ಪಡೆಯಲು ಅರ್ಜಿಮಾಡಿಕೊಂಡಿರುವರು.

ಕಲ್ಕತ್ತದ ಕಿತ್ತಾನಾರು ಗಿರಣಿ ಮುಷ್ಕರ

ಕಲ್ಕತ್ತದ ಕಿತ್ತಾನಾರು ಗಿರಣಿ ಮುಷ್ಕರವು ದಿನೇ ದಿನೇ ಉಲ್ಬಣಾವಸ್ಥೆ ಹೊಂದುತ್ತಿರುವುದು. ಇಷ್ಟರ ವರೆಗೆ ಸುಮಾರು ೨ ಲಕ್ಷ ಮಂದಿ ಗಿರಣಿಯಾಳುಗಳು ಮುಷ್ಕರಕ್ಕೆ ಸೇರಿರುವರು. ಗಿರಣಿಯಾಳುಗಳ ಕುಟುಂಬದವರೆಲ್ಲಾ ಸೇರಿ ಒಟ್ಟಿಗೆ ಸುಮಾರು 10 ಲಕ್ಷ ಮಂದಿಯ ಮೇಲೆ ಈ ಮುಷ್ಕರದ ಪರಿಣಾಮವಾಗಿರುವುದು. ಸರಕಾರವು 144 ಸೆಕ್ಷನನ್ನು ಗಿರಣಿಗಳಿರುವ ಏಳೆಂಟು ಮೈಲು ವಿಸ್ತೀರ್ಣದಲ್ಲಿ ಜ್ಯಾರಿಗೆ ತಂದಿರುವುದು. ಮುಷ್ಕರ ನಡೆದಿರುವ ಗಿರಣಿಗಳ

ಲೆಲ್ಲಾ ಪೋಲೀಸರ ಬಂದೋಬಸ್ತು ನಡೆದಿರುವುದು. ಕಲ್ಕತ್ತದ ಕೆತ್ತನಾರು ಗಿರಣಿಯಾಳುಗಳ ಕೇಳಿಕೆಗಳು ನ್ಯಾಯವಾದುದರಿಂದ ಬಂಗಾಳ ಕಾಂಗ್ರೆಸ್ ಕಮಿಟಿಯವರು ಮುಷ್ಕರಗಾರರಿಗೆ ತಮ್ಮಿಂದ ಸಾಧ್ಯವಾದ ಸಹಾಯಮಾಡುತ್ತಿರುವರು. ಈ ಮುಷ್ಕರಗಾರರ ಕೆಲಸಗಾರರಷ್ಟು ಮರವೆಸ್ಥಿಗೀಡಾದ ಕೆಲಸಗಾರರು, ಇಡೀ ದೇಶದಲ್ಲಿ ಮತ್ತೆಲ್ಲಿಯೂ ಇರಲಾರರು. ಆದುದರಿಂದ ಅವರ ಬೇಡಿಕೆಗಳಿಗೆ ಯಾರಾದರೂ ಆಕ್ಷೇಪಿಸಬಾರದೆಂದು ಪಂಡಿತ ಜವಾಹರಲಾಲರು ಮುಷ್ಕರಗಾರರ ಸಹಾಯಕ್ಕಾಗಿ ವಿನಂತಿಮಾಡಿಕೊಂಡಿರುವರು.

ಮದ್ರಾಸ್ ಪ್ರಾಂತದಲ್ಲಿ ಭೂಕಂದಾಯ

ನೇಕಡ 25ರಷ್ಟರ ರಿಯಾಯಿತಿಯ ಆಲೋಚನೆ

ಮದ್ರಾಸಿನ ಇಂಟರಿಮ್ ಮಂತ್ರಿಗಳು ಇದೇ ತಾ. 21ರಲ್ಲು ಊಟಕಮಂಡಿನಲ್ಲಿ ಸಭೆಸೇರಿ ತಮ್ಮ ಮುಂದಿನ ಕಾರ್ಯಕ್ರಮದ ಕುರಿತು ವಿಚಾರಿಸಿದರು, ಜನತೆಯ ಸಂಕಷ್ಟ ನಿವಾರಣೆಯ ವಿಷಯದಲ್ಲಿ ಈಗಣ ಮಂತ್ರಿಗಳು ಕಾಂಗ್ರೆಸ್ ಪಕ್ಷೀಯರಿಗಿಂತ ಹಿಂದಿಲ್ಲೆಂಬುದನ್ನು ತೋರಿಸುವ ಕಾರ್ಯಕ್ರಮವನ್ನು ಅವರೀಗ ಕೈಕೊಂಡಿರುವರೆಂದು ತಿಳಿದುಬರುತ್ತದೆ. ಮಂತ್ರಿಗಳು ಶೀಘ್ರವಾಗಿ ಸುಮಾರು ನೇಕಡ 25 ರಷ್ಟು ಭೂಕಂದಾಯ ರಿಯಾಯಿತಿಮಾಡಿ ರಿಸೆಟ್ಲ್‌ಮೆಂಟನ್ನೆಲ್ಲಾ ನಿಲ್ಲಿಸಿಬಿಡುವರು. ಸೆಕೆಂಡರಿ ಶಿಕ್ಷಣ ಕ್ರಮವನ್ನು ಬದಲಾವಣೆಮಾಡುವರು. ರೈತರ ಸಾಲವನ್ನು ಪಂಚಾಯಿತಿಕೆಯಿಂದ ನಿವಾರಿಸುವ ಏರ್ಪಾಡುಮಾಡುವರು. ಈ ಸಂಬಂಧವಾಗಿ 1 ಕೋಟಿ ಸಾಲ ತೆಗೆದ.ಕೊಳ್ಳುವ ಆಲೋಚನೆ ನಡೆದಿದೆ.

ಕೊಚ್ಚಿ ಮಹಾರಾಜರ ಅರ್ಥರಹಿತ ಘೋರಣೆ

ದೇವಸ್ಥಾನವನ್ನು ಶುದ್ಧಮಾಡುವ ಹುಕುಮು

ತಿರುವಾಂಕೂರಿನ ತರುಣ ಮಹಾರಾಜರು ತನ್ನ ಸಂಸ್ಥಾನದ ದೇವಸ್ಥಾನಗಳನ್ನು ಹರಿಜನರಿಗೆ ತೆರೆದುಹಾಕಿ ಹಿಂದು ಧರ್ಮದಲ್ಲೊಂದು ಮಹತ್ತಾದ ಸುಧಾರಣೆಮಾಡಿರುವಾಗ ಅವರ ನೆರೆಯ ಕೊಚ್ಚಿಯ ಮುದುಕ ಮಹಾರಾಜರು ಶ್ರದ್ಧಾಳುಗಳ ಸಹಾಯಕರಾಗಿ ತಿರುವಾಂಕೂರಿನ ಸುಧಾರಣೆಯನ್ನು ತಡೆಗಟ್ಟುವ ಅತ್ಯಂತ ಅವಿವೇಕ ಪರಘೋರಣೆ ವಹಿಸಿರುವರು. ತಿರುವಾಂಕೂರಿನ ಅನಂತ ಪದ್ಮನಾಭ ದೇವಸ್ಥಾನದ ಮುಖ್ಯ ಅರ್ಚಕರಾದ ಬ್ರಹ್ಮಶ್ರೀ ನೆಡುಂಪಳ್ಳಿ ನಂಬೂದರಿಪಾದರು ಮತ್ತು ತಿರುವಾಂಕೂರಿನ ಅವರ್ಣರ ದೇವಸ್ಥಾನಪ್ರವೇಶ ಸಮಾರಂಭದಲ್ಲಿ ಭಾಗವಹಿಸಿದ 24 ನಂಬೂದರಿ ಕುಟುಂಬಗಳವರು ಕೊಚ್ಚಿ ಸಂಸ್ಥಾನದ ದೇವಸ್ಥಾನಗಳಿಗೆ ಪ್ರವೇಶಿಸಕೂಡದೆಂದೂ, ದೇವಸ್ಥಾನದ ಕೆರೆಗಳಲ್ಲಿ ಸ್ನಾನಮಾಡಿ ಪೂಜಾದಿಗಳನ್ನು ಮಾಡಬಾರದೆಂದೂ, ಅವರು ತಕ್ಕ ಪ್ರಾಯಶ್ಚಿತ್ತ ಮಾಡಿಕೊಂಡು ತಮ್ಮ ವರ್ತನೆಗಾಗಿ ಪಶ್ಚಾತ್ತಾಪ ಸೂಚಿಸಿದರೆ ಮಾತ್ರ ದೇವಸ್ಥಾನಗಳಲ್ಲಿ ಪೂಜೆ ನಡಿಸಬಹುದೆಂದೂ ಕೊಚ್ಚಿಯ ಮಹಾರಾಜರ ಹುಕುಮು. ಕೊಚ್ಚಿ ಸಂಸ್ಥಾನದ ಇರಿಂಜಲಕುಡ ಎಂಬಲ್ಲಿಯ ಕುಡಲ್ ಮಾಣಿಕ್ಕಮ್ ಎಂಬ ಪ್ರಸಿದ್ಧ ದೇವಸ್ಥಾನದ ಉತ್ಸವಕ್ಕೆ ತಿರುವಾಂಕೂರು ಸಂಸ್ಥಾನದ ಪರವಾಗಿ ಪೂಜೆ ನಡಿಸಲು ಶ್ರೀ ಪದ್ಮನಾಭ ದೇವಸ್ಥಾನದ ಮುಖ್ಯ ತಂತ್ರಿಗಳಾದ ಬ್ರಹ್ಮಶ್ರೀ ನೆಡುಂಪಳ್ಳಿ ನಂಬೂದರಿಪಾದರು ಕಳುಹಿಸಲ್ಪಟ್ಟಿದ್ದರು. ಈ ಕುರಿತು ಕೊಚ್ಚಿಯ ಶ್ರದ್ಧಾಳು ಬ್ರಾಹ್ಮಣರು ಆಕ್ಷೇಪಿಸಿ ಮಹಾರಾಜರಿಗೆ ದೂರುಕೊಟ್ಟರು. ಈ ದೂರನ್ನು ಕೇಳಿ ಮಹಾರಾಜರು, ಬ್ರಹ್ಮಶ್ರೀ ನೆಡುಂಪಳ್ಳಿ ನಂಬೂದರಿಪಾದರು ಮಾಣಿಕ್ಕಮ್ ದೇವಸ್ಥಾನಕ್ಕೆ ಪ್ರವೇಶಿಸಬಾರದು ಮತ್ತು ಮಾಣಿಕ್ಕಮ್ ದೇವಸ್ಥಾನವು ಶುದ್ಧೀಕರಿಸಲ್ಪಡಬೇಕೆಂಬ ಮೇಲಿನ ಆಜ್ಞೆ ಕೊಟ್ಟಿರುವರು. ಇದಕ್ಕೆ ಪ್ರತಿಯಾಗಿ ತಿರುವಾಂಕೂರು ಮಹಾರಾಜರು ಅವರ್ಣ ದೇವಸ್ಥಾನ ಪ್ರವೇಶದ ತನ್ನ ಅನುಜ್ಞೆಯಂತೆ ಬರಹ ಸಿಕಿನಡೆಯಲೊಪ್ಪದ ಅರ್ಚಕರುಗಳಿಗೆ ಯಾವ ತರದ ದಾನ ಧರ್ಮ ದಕ್ಷಿಣೆಗಳು ಕೊಡಲ್ಪಡಲಾಗದೆಂದು ಹುಕುಮು ಹೊರಡಿಸಿರುವರು. ಇದರಿಂದ ಕೊಚ್ಚಿ, ತಿರುವಾಂಕೂರು ಸಂಸ್ಥಾನಗಳೊಳಗೆ ವೈಷಮ್ಯವೇಳುವಂತಾಗಿದೆ. ಮಾಣಿಕ್ಕಮ್ ದೇವಸ್ಥಾನದಲ್ಲಿ ಪೂಜೆನಡಿಸುವ ಅಧಿಕಾರವು ಬ್ರಹ್ಮಶ್ರೀ ನೆಡುಂಪಳ್ಳಿಯವರಿಗೆ ಇರುವುದೆಂದೂ ಅದನ್ನು ಕೊಚ್ಚಿಯ ಮಹಾರಾಜರಿಗೆ ನಿರಾಕರಿಸುವ ಹಕ್ಕಿಲ್ಲೆಂದೂ, ತಿರುವಾಂಕೂರಿನ ಮತ್ತು ಕೊಚ್ಚಿಯ ಹಲವು ಮಂದಿ ಮುಖಂಡರ ಅಭಿಮತವಿದೆ ಈ ನಡುವೆ ರೆಸಿಡೆಂಟರು ಕೊಚ್ಚಿಯ ,ಮಹಾರಾಜರ ಘೋರಣೆಯನ್ನೇ ಸಮರ್ಥಿಸಿ ಮಾಣಿಕ್ಕಮ್ ದೇವಸ್ಥಾನವು ಶುದ್ಧೀಕರಿಸಲ್ಪಟ್ಟು ಅಲ್ಲಿಯ ಜಾತ್ರೆ ನಡೆದು ಬಿಟ್ಟಿದೆ. ಇತ್ತಂಡದವರೂ ಇಂಡಿಯಾ ಸರಕಾರಕ್ಕೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುವರು ಇನ್ನು ಇಂಡಿಯಾ ಸರಕಾರವು ಯಾವ ತೀರ್ಮಾನ ಕೊಡುವುದೋ ನೋಡಲಿದೆ. ಮಹಾತ್ಮಗಾಂಧಿ, ಶ್ರೀ ಘನಶ್ಯಾಮ್ ಬಿರ್ಲ, ಶ್ರೀ ರಾಜಗೋಪಾಲಾಚಾರ್ಯರೇ ಮೊದಲಾದ ಮುಖಂಡರು ಕೊಚ್ಚಿನ ಮಹಾರಾಜರ ಘೋರಣೆಯನ್ನು ಕಠಿಣವಾಗಿ ಟೀಕಿಸಿರುವರು. ಹಿಂದು ಮಹಾಸಭೆಯವರೂ ಕೊಚ್ಚಿಯ ಮಹಾರಾಜರು ತಮ್ಮ ಹುಕುಮನ್ನು ಹಿಂತೆಗೆಯಬೇಕೆಂದು ಕೇಳಿಕೊಂಡಿರುವರು. ಆದರೆ ಕೊಚ್ಚಿಯ ಮಹಾರಾಜರು ರೆಸಿಡೆಂಟರ ಬೆಂಬಲದಿಂದ ತನ್ನ ಹುಕುಮನ್ನು ಧೈರ್ಯದಿಂದ ಜ್ಯಾರಿಗೆ ತಂದುಬಿಟ್ಟಿರುವರು, ಇದರಿಂದ ಕೊಚ್ಚಿಯ ಸುಧಾರಕರುಉದ್ವೇಗಗೊಂಡಿರುವರು ತಿರುವಾಂಕೂರಿನವರು ರೇಗಿಬಿದ್ದಿರುವರವರು,

ವಾಯವ್ಯ ಗಡಿನಾಡಿನ ಗಲಾಟೆಯು

ಇನ್ನೂ ಶಾಂತವಾಗಿರುವದಿಲ್ಲ ಎಪ್ರಿಲ್ ತಾ. 19ರಲ್ಲಿ ಬನ್ನು ಜಿಲ್ಲೆಯ ಜಕೋರಿ ಪ್ರೊಸ್ಟಿನಮೇಲೆ ಸುಮಾರು 100 ಮಂದಿ ಪಂಗಡಿಗರು ಧಾಳಿ ನಡಿಸಿ ಸರಕಾರದ ಕಡೆಯಸೈನಿಕರಿಗೂ ಅವರಿಗೂ ಹೋರಾಟವಾಗಿ ಪಂಗಡಿಗರಲ್ಲಿ ಇಬ್ಬರು ಕೊಲ್ಲಲ್ಪಟ್ಟು ಕೆಲವರು ಗಾಯಗೊಂಡಿರುವರು. ಟೈಯಾರ್ಚ ಪ್ರೊಸ್ಟಿನಮೇಲೆ ಧಾಳಿನಡಿಸಿದಮ್ಸಾಸುದ್ ಪಂಗಡಿಗರಲ್ಲಿ 15ಮಂದಿ ಕೊಲ್ಲಲ್ಪಟ್ಟರುವರು. ಬನ್ನು ಜಿಲ್ಲೆಯಲ್ಲಿ ಒಬ್ಬ ಹಿಂದುವಿನ ಮನೆಯುಲುಟಾಯಿಸಲ್ಪಟ್ಟಿರುವುದು. ಇನ್ನೊಂದು ಮುಸಲ್ಮಾನನ ಮನೆಯಿಂದ 14 ಜಾನುವಾರುಗಳು ಒಯ್ಯಲ್ಪಟ್ಟಿರುವವು. ಎಪ್ರಿಲ್ ತಾ. 9ರಲ್ಲಿ ಸರಕಾರದ ಕಡೆಯ ಸೈನಿಕ ದಳವೊಂದರ ಮೇಲೆ ವಜೀರಿ ಪಂಗಡಿಗರು ನಡಿಸಿದ ಧಾಳಿಯಲ್ಲ ಒಟ್ಟು 70ಮಂದಿ ಕೊಲ್ಲಲ್ಪಟ್ಟಿರುವರೆಂದು ತಿಳಿದು ಬರುತ್ತದೆ.

ಇದೇ ತಾ. 19ರಲ್ಲಿ ರಜಕ್ ಎಂಬಲ್ಲಿ ಪಂಜಾಬಿನ ಒಂದುದಳ ಸೇನೆಯು ನೀರು ತರುವ ಕೆಲವರಿಗೆ ರಕ್ಷಣೆ ಈಯುತ್ತಿದ್ದಾಗ ವೈರಿಪಂಗಡಿಗರು ಅವರ ಮೇಲೆ ಗುಂಡು ಹಾರಿಸಿ 8ಮಂದಿ ಹಿಂದೀ ಸೈನಿಕರು ಕೊಲ್ಲಲ್ಪಟ್ಟಿರುವರು. ಈ ಪಂಗಡಿಗರ ಮೇಲೆ ಗುಂಡುಹಾರಿಸಿ ಓಡಿಸಲಾಯಿತು ರಮ್ಜಕ್ ಎಂಬ ಊರಿನ ಬಳಿಯಲ್ಲಿ ವೈರಿಪಂಗಡಿಗರ ತಂಡಗಳು ಸೇರಿದಿರುವವು ಈ ತಂಡದವರು ಅಲ್ಲಲ್ಲ ಅಡಗಿಕೊಂಡು ಸಂದರ್ಭ ನೋಡಿ ಸರಕಾರದ ಸೈನಿಕರ ಮೇಲೆ ಗುಂಡು ಹಾರಿಸಿದರು. ಸಮರಂಗಕ್ಕೆ ಬಂದು ಯುದ್ಧಮಾಡುವುದೇ ಇಲ್ಲ. ರಸ್ತೆಗಳನ್ನು ಸಂಕ, ಸೇತುವೆ, ತಂತಿ ಕಂಬಾದಿಗಳನ್ನು ಸಾಧ್ಯವಾದಷ್ಟು ಮುರಿದು ಹಾಕುವರು. ಸಾವರ್ ಪೋಲೀಸ್ ಸ್ಟೇಶನಿನ ಮೇಲೆ 50ಮಂದಿ ಸಶಸ್ತ್ರ ವಜೀರರು ಧಾಳಿನಡಿಸಿ 900ಆಡುಗಳನ್ನು ತೆಗೆದುಕೊಂಡು ಹೋಗಿರುವರು. ಬಜೋರಿ ಪೋಲೀಸ್ ಸ್ಟೇಶನಿನಬಳಿ ಒಬ್ಬ ಹಿಂದುವಿನ ಮನೆಯು ಲುಟಾಯಿಸಲ್ಪಟ್ಟಿರುವುದು.

ಮಾಡುಬಿದ್ದು ೧೨ ಮಂದಿಯ ಮರಣ

ಇದೇ ತಾ. 22ರಲ್ಲು ಈರೋಡಿನ ವಾರದ ಸಂತೆಗೆ ಬಂದ ಕೆಲವು ಜನರು, ಮಳೆಹನಿಯಿತೆಂದು 200 ಅಡಿ ಉದ್ದದ ಹೊಸತೊಂದು ಕಟ್ಟಡದ ಅಡಿಯಲ್ಲಿ ಹೋಗಿನಿಂತರು, ಆಗ ಹಠಾತ್ತಾಗಿ ಆ ಕಟ್ಟಡದ ಮಾಡುಬಿದ್ದು 100 ಕ್ಕಿಂತಲೂ ಮಿಕ್ಕಿದ ಜನರು ಅದರಡಿಯಲ್ಲಿ ಸಿಕ್ಕಿಗಾಯಗೊಂಡಿರುವರು. 12ಮಂದಿ ಕೊಲ್ಲಲ್ಪಟ್ಟಿರುವರು ಪೋಲೀಸರು ಈ ಕುರಿತು ವಿಚಾರಣೆ ನಡಿಸುತ್ತಿರುವರು.

ಪೋಲೀಸರಿಗೆ ಮತ್ತು ಹಳ್ಳಿಗರಿಗೆ ಜಗಳ

ಬಂಗಾಳದ ಬರ್ದ್ವಾನ್ ಪಟ್ಟಣದ ಸಮೀಪದ ಸೋನೇಪುರವೆಂಬ ಹಳ್ಳಿಗೆ ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರರೂ ಮತ್ತು ಕೆಲಮಂದಿ ಪೋಲೀಸರರೂ, ಕಳವಿನ ಸೊತ್ತು ಜಡ್ತಿಗಾಗಿ ಹೋಗಿ ಒಂದು ಮನೆಯನ್ನು ಜಡ್ತಿಮಾಡಿ ಕಳವಿನ ಮಾಲುಗಳನ್ನು ಹಿಡಿದರು. ಆಗ ಆ ಹಳ್ಳಿಗರೆಲ್ಲರೂ ಸೇರಿ ಪೋಲೀಸರಮೇಲೆ ಬಿದ್ದು ಹೊಡೆದು ಅವರೊಡನಿದ್ದ ಸಾಮಾನುಗಳನ್ನು ಕಸಕೊಂಡು ಬಂಧನದಲ್ಲಿಟ್ಟರು. ಪೋಲಿಸರಲ್ಲೊಬ್ಬನು ಉಪಾಯದಿಂದ ತಪ್ಪಿಸಿಕೊಂಡು ಪೋಲೀಸ್ ಸ್ಟೇಶನಿಗೆ ಬಂದು ಸಂಗತಿಯನ್ನೆಲ್ಲಾ ತಿಳಿಸಿದನು. ಆಗ ಪೋಲಿಸ್ ಸುಪರಿಂಟೆಂಡೆಂಟರು ಪೋಲಿಸ್ ಫೌಜಿನೊಂದಿಗೆ ಸೋನೇಪುರಕ್ಕೆ ಹೋಗಿ ಸಬ್ ಇನ್ಸಪೆಕ್ಟರ್ ಮತ್ತು ಪೋಲೀಸರನ್ನು ಬಿಡಿಸಿ 20 ಮಂದಿ ಹಳ್ಳಿಗರನ್ನು ದಸ್ತಗಿರಿಮಾಡಿರುವರು.

ಮೋಟರ್ ಸೈಕಲ್ ಅಪಘಾತ

ಬೆಂಗಳೂರಿನ ಮೋಟರ್ ಮಿಕೆನಿಕರಾದ ಮಿ. ಕೋಲ್ಬ್ ಎಂಬವರು ತನ್ನ ಹೆಂಡತಿ ಮತ್ತು3ಮಂದಿ ಮಕ್ಕಳನ್ನೂ ಸೈಡ್ ಕಾರಿನಲ್ಲಿ ಕುಳ್ಳಿರಿಸಿಕೊಂಡು ಮೋಟರ್ ಸೈಕಲಿನಲ್ಲಿ ಊಟಕಮಂಡಿನಿಂದ ಮೈಸೂರಿಗೆ ಬರುತ್ತಿದ್ದಾಗ ಬೇಗೂರು ಎಂಬ ಹಳ್ಳಿಯ ಬಳಿ ಮೋಟರ್ ಸೈಕಲ್ ಹಾಳಾಗಿ ಅದು ಹತೋಟಿತಪ್ಪಿ ಮರ ಒಂದಕ್ಕೆ ಢಕ್ಕೆಹೊಡೆದು ಸ್ಯೈಡ್‌ಕಾರು ಪ್ರತ್ಯೇಕಿಸಲ್ಪಟ್ಟು ಮಿಸೆಸ್ ಕೋಲ್ಬ್ ಮತ್ತು 5 ವರ್ಷದ ಮಗ ಹರ್ಬರ್ಟ್ ಕೋಲ್ಬ್ರನು ರಸ್ತೆಯಲ್ಲಿಯೇ ಕೊಲ್ಲಲ್ಪಟ್ಟಿರುವರು. ಉಳಿದವರಿಗೆ ಜಖಮಾಗಿರುವುದು.

ಗದ್ದೆಯ ಜಗಳದಿಂದಾಗಿ ಇಬ್ಬರ ಮರಣ

ಇದೇ ತಾರೀಕು 22ರಲ್ಲು ಏರ್ನಾಡ್ ತಾಲೋಕಿನ ವೆಲಿಮುಕ್ಕು ಎಂಬಲ್ಲಿ ಗದ್ದೆ ಸಾಗುವಳ್ಳಿಯ ಕುರಿತು ಎರಡು ತೀಯ ಕುಟುಂಬಗಳೊಳಗೆ ಜಗಳವಾಗಿ ಕತ್ತಿ ದೊಣ್ಣೆಗಳಿಂದ ಹೊಡೆದಾಟ ನಡೆದು 2 ಮಂದಿಕೊಲ್ಲಲ್ಪಟ್ಟಿರುವರು ಇನ್ನೊಬ್ಬನು ಬದುಕುವುದು ಕಷ್ಟ. ಹಲವರು ಗಾಯಗೊಂಡಿರುವರು,

ಅಳ್ವಾರಿನಲ್ಲಿ ಪೋಲೀಸರ ಗೋಳಿಬಾರು

ಇದೇ ತಾ. 21ರಲ್ಲು ಅಲ್ವಾರ್ ಸಂಸ್ಥಾನದ ಬೈರೂರು ಎಂಬ ಹಳ್ಳಿಯಲ್ಲಿ ಹಿಂದುಗಳಿಗೂ ಮುಸಲ್ಮಾನರಿಗೂ ಜಗಳವಾಗುವ ಸಂಭವವುಂಟಾಗಿ ಹಿಂದುಗಳು ಪೋಲೀಸರನಾತಿನ ಮೇರೆಗೆ ಚದರಲೊಪ್ಪದ ಪೋಲೀಸರ ಮೇಲೆ ಬಿದ್ದುದರಿಂದ ಪೋಲೀಸರು ಗುಂಡುಹಾರಿಸಿ 14ಮಂದಿ ಕೊಲ್ಲಲ್ಪಟ್ಟು 42 ಮಂದಿ ಗಾಯಗೊಂಡಿರುವರೆಂದು ತಿಳಿದು ಬರುತ್ತದೆ.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತವೆ ಈ ಗುಳಿಗೆಗಳು ಆರೋಗ್ಯ ವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ. ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಇಂಥಾ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦

'ಕಾಮಶಾಸ್ತ್ರ' ಪರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡು ಹಾಕಿರಿ

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ಕಸ್ತೂರಿ ಮಿಶ್ರಣ ಪಠಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ. ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನೂ ನನ್ನ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ,

ಕಿರಿಯರ ಪ್ರಪಂಚ, ಉಡುಪಿ.

ಜನರಲ್ ಎಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**

ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಷ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭರ್ಗೋವಾ ಎಸ್ಕ್ವೈಯರ್, ಎಫ್. ಎಸ್. ಎಸ್. (ಲಂಡನ್)

ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, **ಬಳ್ಳಾರಿ.** ಆರ್ಗನೈಸ್ಸರ್, **ವೆಲ್ಲೂರು.**

ಚೀಫ್ ಏಜೆಂಟ್ಸ್, **ಮಧುರ, ತ್ರಿಚಿನಾಪಳ್ಳಿ.**

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸಮುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಲಯ,

ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ. ಮಾಸಪತ್ರಿಕೆ.

ಬೋಧಪ್ರದವಾದ ಲೇಖಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ

ಕಾಸರಗೋಡು, ದಕ್ಷಿಣಕನ್ನಡ.

THE

Vijaya Bank, Ltd.

Head Office: MANGALORE. Branch Offices: **Udipi, Kaup & Coondapoor.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3¾

6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5¼ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ,

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 10ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A B Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ ಬ್ರದರ್ಸ್,

ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ಟಾಂಡ ಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ,

ಕೆ. ಎಸ್. ಶೆಟ್ಟಿ, ಕೆನರಾ ನರ್ಸರಿ,

ಪೋಸ್ಟ್ ಕಾಪು, ದ. ಕನ್ನಡ

Mr. U. C. S. Bhat's Explanation

It is really surprising that a purely private social function given by me to my friends, should have given rise to so much misunderstanding and comment, just because the Hon. Mr. R. M. Palat the Minister for Education attended the same like any other friend of mine as would appear from the article entitled "Musings on the way" in the "Navayuga" of 22-4-1937 and another article in the "Rashtra Bhandu" on the 24th April 1937 and I therefore hasten to contradict the comments.

In the first place it was a purely private social and not a party in honour of either Mr. E. Padmagirisha Iyer, the Endowment Commissioner or the Hon. the Minister. I did not send any printed invitations but orally asked such of those friends whom I met to come for tea and such of those that I did not meet I wrote private letters. To none did I write that it was a party "to meet" or "in honour of" Mr. E. Padmagirisha Iyer or the Hon. the Minister. I simply wrote that I had invited also Mr. Padmagirisha Iyer and some other friends. I mentioned his name because be was the only outsider whom I had invited till then and that too not that the party was to him. It was a pure private entertainment to my friends where each guest was as important as the other.

Though Mr. Palat was to be my guest during his stay in Mangalore-by the way neither this visit of his nor his being my guest were things fixed after he became Minister, but were fixed over six months ago when he told me that he would be going over to Kollur for the next Vishu and be my guest while at Mangalore-he had written to me in his letter of the 3rd April that he would be going direct on the 12th evening from the railway station to Udipi on his way to Kollur, and that I should meet him for a moment at the Station, while in another letter he wrote to me that on his way back from Kollur he and his family would stay with me on the 15th. I therefore had not invited him for the party on the 12 evening, when I sent down the invitations or told my friends orally about it nor did I think that he would change his programme and come to my place for tea that evening. When however I asked him at the station as to whether he had taken tea that evening and requested him to go to my place for tea before he left for Udipi and that my house was on the way he consented and drove home. To say therefore that I deliberately gave a party in honour of the Minister holding out to some that it was in honour of the Endowments Commissioner and to others that it was in honour of the Minister is not correct. It was a private "at home" to which I had invited about 15 or 20 friends of whom Mr. Palat happened to be one and not in his honour or to meet him. If I had invited him earlier before I sent the invitations I should certainly have mentioned his name also as one of the invitees as I mentioned Mr. Padmagirisha Iyer's name. At the time I never thought that Mr. Palat would break his programme of going direct from the station to Udipi and come for tea to my place. The writer in the "Navayuga" himself admits this fact that I invited the Hon. gentlemen for a tea party just after his arrival" In the face of this admission to say that I deliberately gave a party to the Minister and made the Congress invitees to walk into my parlour to meet him in the guise of a party to the Endowment Commissioner or that I deliberately to further this object sent differently worded invitations to different persons is preposterous. The invitations were sent long before my invitation to the Hon. Mr. Palat. I don't think that there is anything wrong in my having invited my friend Mr. Palat and his wife-I had often occassion to partake of their hospitality in the past-to the party as my friends. Certainly there is no ban against Congressmen attending social functions where Ministers also are invited as guests like themselves. May I ask the writer of the article, if it was such an offence in their eyes for a Congressmen to invite a Minister even when his visit was private, why did Mr. A. B. Shetty the Congress M. L. A., invite Mr. Rajan for dinner when he came to Mangalore in his official capacity and was setting up candidates against the Congress party? Does he think that he was justified? Even after the elections when Mr. Palat came to Mangalore as a Minister on this very occasion did not Mr. Shetty the Congress M. L. A. invite him to his house though not in the day time as I did but at night? As for me, as the writer of the article himself admits though sarcastically, I am an Ex-M. L. C. and Ex-Congress member and I am not bond by any rules of Congress. What has the 'writer' to say regarding the congress representative? The writer in the 'Navayuga' who poses as the censor of the Congress morals in special, would do well to restrict his critisms to Congressmen themselves in which case he would have done a great public service. I assure him that in addition to the above he will find many more lapses in Congressmen and M. L. A's themselves, such as attending Court on days of Hartal to argue cases as on the 1st of April etc., in breach of Congress discipline.

ESTD. 1906

CANARA BANK

LIMITED.

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

I would however appeal to the 'Navayuga' not to preach this cult of hatred and social ostracism which is opposed to the true sprit of Congress Satyagraha which is based on truth and which believes in winning ones enemies by love and not hatred. When even Mr C. Rajagopalachari the leader of the Congress in the presidency invites the Ministers to tour with him and meet his Congress followers and hear their views, why should the "Navayuga" preach this cult of hatred against them.

Let not the "Navayuga" however consider that I am not prepared to give a party to my friends whether they are Ministers or whether they hold views opposed to that of mine in political matters, or that I am not prepared to own the same publicly. All that I say is that this party on the 12th is not in honour of Mr. Palat. On the 15th night however, I gave another party - a dinner party- in honour of Mr. Palat to which I had invited a few friends but not Congressmen and if the "Navayuga" does not know about it I hereby infrom him about it and leave it to him to publish it if he wants.

U. C. S. Bhat.

(We are at a loss to know why Mr. U. C. S. Bhat has thought it fit to atack us for the correspondence publised in the Navayuga of the 22nd inst under the-non-de-plume of 'under the search light.' Since we are not in anyway responsible for the views of our correspondents I we don't care to give any reply to Mr. Bhat's uncalled for critisisus We wish to tell Mr. Bhat however that we are not prepared to take any advice from his type of men as regards the true spirit of the Congress. Let him be ture to himself and try to practice himself what he seems to be no anxions to preach others.)

Editor.

ಬೇಕಾಗಿದೆ

ಚತುರ ಕೆಲಸಗಾರರು ಬೇಕು. ಹೆಚ್ಚಿನ ಮಾಹಿತಿಗಳಿಗೆ ಒಂದಾಣೆ ಸ್ಟಾಂಪಿನೊಂದಿಗೆ ಬರೆಯುವುದು.

"K"

C/o NAVAYUGA, UDIPI

(೩ನೇ ಪೇಜಿಯಿಂದ)

ಲಂಬನೆಯು ಸ್ವಾಭಿಮಾನಿಯಾಗುವನು. ಭೀತವಿನೀತನಾಗುವ ಬದಲಿಗೆ ನಿರ್ಭಯ ವಿಜಯಿಯಾಗುವನೆಂದೇ ಬೋಲ್ಶೆವಿಕರ ಪ್ರತಿಪಾದನೆ. ಸಮಾಜ ಸೇವೆಯೇ ಧರ್ಮದ ನಾನಾ ಪರಿಯ ಆಕರ್ಷಣಗಳನ್ನು ಮೂಲೆಗೊತ್ತಿ ಅದರ ಪ್ರಭಾವವನ್ನು ನಿರ್ನಾಮಗೊಳಿಸಬಲ್ಲುದೆಂದೇ ಅವರವಿಶ್ವಾಸ.

ಆಗ ಲೋಕದಲ್ಲಿ ಹೊಸಮತವೊಂದು ಸ್ಥಾಪನೆಯಾಗುವುದು. ಹೊಸ ಮನ್ವಂತರವೊಂದು-ಆರಂಭವಾಗುವುದು. ಹೊಸ ವಿಜಯದಿಂದಾಗಿ ಹೊಸ ನಾಗರಿಕತೆ, ಹೊಸ ಸಮಾಜವುಂಟಾಗುವುದು. ಒಂದೇ ಶಬ್ದದಿಂದ ಹೇಳುವುದಾದರೆ ಲೋಕದಲ್ಲಿ ಅಭೂತ ಪೂರ್ವವಾದ ಹೊಸ ಸೃಷ್ಟಿಯೇ ಉಂಟಾಗುವುದು. ಅದು ಬ್ರಹ್ಮ ಸೃಷ್ಟಿಯೂ ಅಲ್ಲ, ವಿಶ್ವಾಮಿತ್ರ ಸೃಷ್ಟಿಯೂ ಅಲ್ಲ, ಮಾನವನಿಗಾಗಿ ಮಾನವ ನಿರ್ಮಿತವಾದ ನವೀನ ಸೃಷ್ಟಿ, ಅದರಲ್ಲಿ ಮಾನವನೇ, ಮಾನವ ಸಮಾಜವೇ, ಇಹಲೋಕವೇ ಮುಖ್ಯವಲ್ಲದೆ, ಎಂದೆಂದಿಗೂ ಅನಿಶ್ಚಿತವಾಗಿಯೂ ಕಾಲ್ಪನಿಕವಾಗಿಯೂ ಇರುವ ಧರ್ಮದೇವರುಗಳಿಗೆ ಅದರಲ್ಲಿ ಸ್ಥಳವಿಲ್ಲ. ಒಂದು ದೃಷ್ಟಿಯಿಂದ ಹೇಳುವುದಾದರೆ ಮಾನವನು ಧರ್ಮದೇವರುಗಳ ಪಾಶವನ್ನು ಹರಿದೊಗೆದು ಬಂಧವಿಮುಕ್ತನಾಗಿ ಸರ್ವಸ್ವತಂತ್ರ ಪಡೆದು ಸ್ವಾಭಿಮಾನಿ, ಸ್ವಾವಲಂಬಿ ಹಾಗೂ ಆತ್ಮ ವಿಶ್ವಾಸಿಯಾಗುವ ಹೊಸ ನಿರ್ಮಾಣವಿದು.

ರಷ್ಯನರಿಗೆ ತಮ್ಮ ನವೀನ ನಿರ್ಮಾಣದಲ್ಲಿ ದೃಢ ವಿಶ್ವಾಸವಿದೆ, ಅಚಲ ಶ್ರದ್ಧೆಯಿದೆ, ಅತ್ಯಂತ ಉತ್ಸಾಹವಿದೆ. ಅವರಿಗೆ ಲೋಕದಲ್ಲಿ ಅದಕ್ಕಿಂತ ಹೆಚ್ಚಿನದೇನೂ ಇಲ್ಲ. ಅದಕ್ಕವರು ತಮ್ಮ ತನುಮನಧನವೆಲ್ಲಾ ಸಮರ್ಪಿಸಲು ಸಿದ್ಧರು.

ಇದೀಗ ರಷ್ಯದ ಧರ್ಮವನ್ನು ಎದುರಿಸಿ ನಿಂತಿರುವ ನವೀನವಾದ ಧಾಳಿ. ಧರ್ಮಕ್ಕೆ ಯಾವ ಅರ್ಥವೂ ಇಲ್ಲ, ಅದು ಮಾನವನಿಗೆ ಅಪ್ರಯೋಜಕವಾದುದೆಂದು ಧರ್ಮದ ಸಾಮಾಜಿಕ,ಕಲಾತ್ಮಕ,ತಾಂತ್ರಿಕ ಮತ್ತು ಪ್ರಯೋಜಕ ಆಕರ್ಷಣಗಳನ್ನೆಲಾ ತಡೆಗಟ್ಟಿ ಅದನ್ನು ನಿರ್ನಾಮಗೊಳಿಸಲು ಆಳವಾದ ವಿಚಾರದಿಂದ ನಡಿಸಲ್ಪಟ್ಟಿರುವ ಪ್ರಯತ್ನವಿದು. ಇಂತಹ ಧಾಳಿಯನ್ನು ಧರ್ಮವು ಹಿಂದೆಂದೂ ಯಾವ ದೇಶದಲ್ಲಿಯೂ ಇದಿರಿಸಿರಲಿಲ್ಲ. ರಷ್ಯದ ಶ್ರದ್ಧಾಳು ಧರ್ಮವು ಈ ಧಾಳಿಯನ್ನಿದಿರಿಸಲು ಸಿದ್ಧವಿಲ್ಲದೆ ಕಂಗೆಟ್ಟಿರುವುದು. ಅಲ್ಲಿಯ ಪ್ರೊಟೆಸ್ಟೆಂಟರು ತಳಮಳಗೊಂಡಿರುವರು. ರೋಮನ್ ಕೆಥೋಲಿಕರು ಹತಾಶರಾಗಿರುವರು ಸೋವಿಯಟ್ ಸರಕಾರವು ಅವರ ಸೊತ್ತುಗಳನ್ನೆಲ್ಲಾ ಅಪಹರಿಸಿ 18 ವರ್ಷದೊಳಗಿನ ಹುಡುಗರಿಗೆ ಮನೆಯ ಹೊರಗೆ ಯಾವ ತರದ ಧಾರ್ಮಿಕ ಶಿಕ್ಷಣವನ್ನೂ ಕೊಡಬಾರದೆಂದು ನಿಷೇಧಿಸಿರುವುದರಿಂದ ಅವರ ನಿರುಪಾಯರಾಗಿರುವರು.

ರಷ್ಯದ ಹೊಸ ನಿರ್ಮಾಣದಲ್ಲಿ ಸ್ಥಿರ ಚರಗಳ ಸೊತ್ತಿನ ವ್ಯವಸ್ಥೆ ಹೇಗಿದೆ?
ಎಂಬುದನ್ನು ತಿಳಿಯಬೇಕೆ?
ಮುಂದಿನ ಸಂಚಿಕೆ ನೋಡಿರಿ.

The Combined Booking Agency

AND

The Joint Booking Office

MANGALORE, SOUTH KANARA.

ಪ್ರಯಾಣದ ಅಪೂರ್ವ ವ್ಯವಸ್ಥೆಯೇ ನಮ್ಮ ಜಿಲ್ಲೆಯು ಸಂಪಾದಿಸಿರುವ ಗೌರವಗಳಲ್ಲೊಂದಾಗಿದೆ. ಈ ತರದ ವ್ಯವಸ್ಥೆಯನ್ನು ಇನ್ನೆಲ್ಲಿಯೂ ಕಾಣಲಾರಿರಿ.

ಉತ್ತರದಿಂದ: ಭಟ್ಕಳ, ಗೋಕರ್ಣ, ಶಿರ್ಸಿ, ಅಂಕೋಲಾ, ಕಾರವಾರ ಅಲ್ಲದೆ ಗೋವಾ ವರೆಗೂ ಹೋಗಲಿಕ್ಕಾಗುತ್ತದೆ..

ಪೂರ್ವದಿಂದ: ಹುಲಿಕಲ್-ಶಿಮೊಗ್ಗಾ, ಆಗುಂಬೆ-ಶಿಮೊಗ್ಗಾ, ಚಾರ್ಮಾಡಿ, ಕಡೂರು, ಶಿರಾಡಿ, ಸಕಲೇಶಪುರ, ಹಾಸನ, ಮಡಿಕೇರಿ, ಮೈಸೂರು ಮೊದಲಾದ ಕಡೆಗಳಿಗೆ ಹೋಗಿ ಮುಂಬ್ಯಾಗೂ, ಮುಂಬ್ಯಾಪ್ರಾಂತ್ಯದ ಎಲ್ಲಾ ಭಾಗಗಳಿಗೂ, ಬೆಂಗಳೂರಿಗೂ, ಮದ್ರಾಸಿಗೂ ರೈಲು ಮೂಲಕ ಪ್ರಯಾಣಿಸಬಹುದಾಗುತ್ತದೆ.

ದಕ್ಷಿಣದಲ್ಲಿ: ಕಾಸರಗೋಡು ವರೆಗೆ ಸರ್ವಿಸುಗಳು ಇವೆ.

ಬಸ್ಸು ಸರ್ವಿಸುಗಳ ನೌಕರರೆಲ್ಲರೂ ಅತೀ ಸಭ್ಯರೀತಿಯಿಂದ ವರ್ತಿಸಬೇಕಾಗಿ ಎಚ್ಚರಿಸಲ್ಪಟ್ಟಿದ್ದಾರೆ.

ಪ್ರಯಾಣಿಕರು ತಮ್ಮ ಅನುಭವದ ಕುರಿತು ಬರೆಯುವ ಕಾಗದಗಳ ಮೇಲೆ ತುಂಬಾ ಲಕ್ಷ್ಯವಿಡಲಾಗುವುದು.

Joint Managers.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರಿಗೆ ರಾಷ್ಟ್ರಧುರೀಣರ ಆಗಮನ

ಶ್ರೀ ರಾಜಗೋಪಾಲಾಚಾರ್ಯರಿಗೆ ಅಪೂರ್ವ ಸತ್ಕಾರ

ಮದ್ರಾಸ್ ನ್ಯಾಯವಿಧಾಯಕ ಸಭೆ(ಅಸೆಂಬ್ಲಿ)ಯ) ಕಾಂಗ್ರೆಸ್ ಪಕ್ಷದ ಮುಂದಾಳುಗಳೂ ಪ್ರಸಿದ್ಧ ರಾಷ್ಟ್ರಭಕ್ತರೂ ಆಗಿರುವ ಶ್ರೀಮಾನ್ ಸಿ. ರಾಜಗೋಪಾಲಾಚಾರ್ಯರು, ಶ್ರೀ ಟಿ. ಪ್ರಕಾಶಂ, ಶ್ರೀ ಕಾಳೇಶ್ವರ ರಾವ್, ಶ್ರೀ ಮುನಿಸಾಮಿ ಪಿಳ್ಳೆ, ಡಾ! ಪಿ ಸುಬ್ಬರಾಯನ್ ಇವರೇ ಮೊದಲಾದವರೊಡಗೂಡಿ ತಾ. ೨೯ನೇ ಬುಧವಾರ ಸಾಯಂಕಾಲ ೮-೨೦ಕ್ಕೆ ಮಂಗಳೂರಿಗೆ ಚಿತ್ತೈಸಿದರು. ಮಂಗಳೂರು ನಗರಸಭಾಧ್ಯಕ್ಷರಾದ ಡಾ! ಕೆ. ವಿಟ್ಠಲ ಶೆಟ್ಟಿಯವರೂ, ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ದಿವಾನ್ ಬಹದ್ದೂರು ಬಿ. ಮಹಾಬಲ ಹೆಗ್ಗಡೆಯವರೂ, ಜಿ. ಬೋ. ಸೆಕ್ರೆಟರಿಗಳಾದ ಶ್ರೀ ಸುಂದರರಾಯರೂ, ದಕ್ಷಿಣಕನ್ನಡದಿಂದ ಮದ್ರಾಸ್ ಅಸೆಂಬ್ಲಿಗೆ ಚುನಾಯಿಸಲ್ಪಟ್ಟ ಸದಸ್ಯರೈವರೂ, ಮತ್ತು ಕಾಂಗ್ರೆಸ್ ಅಧಿಕಾರಿಗಳೂ ರೈಲ್ವೆ ಸಿಲ್ದಾಣಕ್ಕೆ ಬಂದಿದ್ದು ಅಭ್ಯಾಗತರಾದ ಧುರೀಣರನ್ನು ಇದಿರುಗೊಂಡು ಸ್ವಾಗತೀಕರಿಸಿ, ಹೂವಿನ ಹಾರಗಳನ್ನು ಸಮರ್ಪಿಸಿ ಸತ್ಕರಿಸಿದರು. ಶ್ರೀ ಆಚಾರ್ಯರೂ ಅವರ ಸಂಗಾತಿಗಳೂ ಪೆಂಟ್ಲೆಂಡ್ ಪೇಟೆಗೆ ಕೊಡಲೆಹೊರಟು ಅಲ್ಲಿ ಸ್ವಲ್ಪಕಾಲ ವಿಶ್ರಮಿಸಿ ದಕ್ಷಿಣ ಕನ್ನಡ ಜಿಲ್ಲಾ ಟೀಚರ್ಸ್ ಗಿಲ್ಡ್ ಇದರ ಪರಿಷತ್ತಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸುವುದಕ್ಕೆಂದು ಗಣಪತಿ ಹೈಸ್ಕೂಲಿಗೆ ಬಂದರು.

ಗಣಪತಿ ಹಾಸ್ಕೂಲಿನಲ್ಲಿ ಶ್ರೀ ಏಕಾಂಬರ ರಾಯರು ಶ್ರೀ ರಾಜಗೋಪಾಲಾಚಾರ್ಯರನ್ನು ಇದಿರುಗೊಂಡು ವಂದಿಸಿ ಅವರಿಗೂ ಅವರ ಕೂಡೆ ಬಂದಿದ್ದ ಇತರ ಧುರೀಣರಿಗೂ ಉಚಿತಾಸನಗಳನ್ನಿತ್ತು ಸತ್ಕರಿಸಿದರು. ಅನಂತರ ದೇವತಾ ಪ್ರಾರ್ಥನೆಯಾಯಿತು. ಶ್ರೀ ಏಕಾಂಬರ ರಾಯರು ಪರಿಷತ್ತಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸಬೇಕೆಂದು ಶ್ರೀ ಆಚಾರ್ಯರನ್ನು ಕೇಳಿಕೊಳ್ಳುವ ಸಂದರ್ಭದಲ್ಲಿ ಹೀಗೆಂದರು:– 'ಬಂಧುಭಗಿನಿಯರೇ,ನಮ್ಮ ಉಪಾಧ್ಯಾಯರ ಸಂಘದ ಶಿಬಿರವನ್ನು ಜಿಲ್ಲೆಯ ಬೇರೆ ಭಾಗದಲ್ಲಿ ಮಾಡಿಸುವುದು ನಮ್ಮ ಪದ್ಧತಿಯಾಗಿತ್ತು. ಆದರೆ ಕಾರಣಾಂತರಗಳಿಂದ ಈ ವರ್ಷ ಹಾಗೆ ಮಾಡಲು ಸಾಧ್ಯವಾಗದೆ ಅದನ್ನು ಮಂಗಳೂರಲ್ಲಿಯೇ ಜರಗಿಸಬೇಕಾಗಿಬಂತು. ಈ ಸಂದರ್ಭದಲ್ಲಿ ನಮ್ಮ ಪರಿಷತ್ತನ್ನು ತೆರೆಯಲು ಶ್ರೀ ಸಿ. ರಾಜಗೋಪಾಲಾಚಾರ್ಯರಂತಹ ವಿದ್ಯಾಭಿಮಾನಿಗಳು ದೊರೆತುದುದು ನಮ್ಮ ಪುಣ್ಯವೆಂದೇ ಹೇಳಬೇಕಾಗಿದೆ. ಅವರು ಅಧಿಪತ್ಯದ ವಿದ್ಯಾವಂತರ ವತಿಯಿಂದ ಮದ್ರಾಸ್ ಅಸೆಂಬ್ಲಿಗೆ ಆರಿಸಲ್ಪಟ್ಟಿರುವ ಮಹನೀಯರಾಗಿರುವರು. ಅವರು ಈ ಕಾಲಕ್ಕೆ ಸರಿಯಾದ ಪ್ರಚಂಡ ವ್ಯಕ್ತಿಗಳು. ಅವರು ಪರಿಪಕ್ವವಾದ ಅನುಭವವು ನಮಗೆ ದೊರಕಿದುದು ಮಹತ್ವದ ಸಂಗತಿ.

ನಮ್ಮ ಪರಿಷತ್ತು ಇನ್ನೂ ಎಳೆಯದು. ಅದು ಯಾವ ದೊಡ್ಡ ಕೆಲಸವನ್ನೂ ಕೈಕೊಂಡಿಲ್ಲ. ಆದ್ದರಿಂದ ಅದು ನೆರವೇರಿಸಿದ ಕೆಲಸದ ವಿಷಯ ಏನೂ ಹೇಳಲು ಇರುವುದಿಲ್ಲ ಆದರೆ ಇದರ ಉದ್ದೇಶವು ಉಪಾಧ್ಯಾಯರ ಹಿತವನ್ನು ಸಾಧಿಸುವುದು. ತಂಜಾವೂರಲ್ಲಿ ಶ್ರೀ ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಲಿರುವ ದಕ್ಷಿಣ ಹಿಂದುಸ್ಥಾನದ ಉಪಾಧ್ಯಾಯರ ಪರಿಷತ್ತಿನಲ್ಲಿ ಉಪಾಧ್ಯಾಯರ ಕಷ್ಟಸುಖಗಳ ವಿಷಯ ವಿಚಾರವಾಗುವುದು. ಆ ಸಂದರ್ಭದಲ್ಲಿ ನಾವು ಅದರಲ್ಲಿ ಭಾಗವಹಿಸಬೇಕಾಗಿದೆ. ಅಲ್ಲಿ ನಡೆಯಬಹುದಾದ ತೀರ್ಮಾನದಂತೆ ನಡೆಯಲು ನಾವು ಯತ್ನಿಸಬೇಕು. ಈಗ ತಮಗೆ ಸಮಯವು ಇಲ್ಲದಿದ್ದರೂ, ನಮ್ಮ ಆಮಂತ್ರಣವನ್ನು ದಯವಿಟ್ಟು ಸ್ವೀಕರಿಸಿ ಇಲ್ಲಿವರೆಗೆ ಬಂದ ಆಚಾರ್ಯರಿಗೆ ಸಂಘದ ಪರವಾಗಿ ವಂದನೆಗಳನ್ನರ್ಪಿಸಿ, ಅವರನ್ನು ಪರಿಷತ್ತಿನ ಉದ್ಘಾಟನೆಯನ್ನು ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಆಚಾರ್ಯರ ಭಾಷಣ

'ಉಪಾಧ್ಯಾಯರ ವೃತ್ತಿಯ ಪಾವಿತ್ರ್ಯ'

ಶ್ರೀ ರಾಜಗೋಪಾಲಾಚಾರ್ಯರು ಪರಿಷತ್ತನ್ನು ಉದ್ಘಾಟನೆ ಮಾಡುವ ಸಂದರ್ಭದಲ್ಲಿ ಹೇಳಿದ್ದೇನೆಂದರೆ–'ನನ್ನನ್ನು ಈ ಪರಿಷತ್ತಿನ ಉದ್ಘಾಟನಾ ಸಮಾರಂಭಮಾಡಬೇಕೆಂದು ತಾವು ಕೇಳಿಕೊಂಡುದಕ್ಕೂ ನನಗಿಲ್ಲಿಗೆ ಬರಲವಕಾಶವನ್ನು ಕಲ್ಪಿಸಿ ಕೊಟ್ಟುದಕ್ಕೂ ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳು. ನಿಮ್ಮ ಅಧ್ಯಕ್ಷರು ಈ ಮೊದಲು ಸೂಚಿಸಿದಂತೆ ನನಗೆ ಹೆಚ್ಚು ಸಮಯವನ್ನು ಕಳೆಯಲು ಅನುಕೂಲವಿಲ್ಲ. ಅದರಲ್ಲಿಯೂ ನಾನಿಲ್ಲಿಗೆ ಬರುವಾಗ ಸ್ವಲ್ಪ ಕಾಲ ವಿಳಂಬವೂ ಆಯಿತು. ಆದ್ದರಿಂದ ನಾನೇನಾದರೂ ಹಿತೋಪದೇಶವನ್ನು ಮಾಡದಿದ್ದರೆ ನೀವು ನನ್ನನ್ನು ಕ್ಷಮಿಸಬೇಕು. ತಂಜಾವೂರಲ್ಲಿ ಸೇರಲಿರುವ ಉಪಾಧ್ಯಾಯರ ಪರಿಷತ್ತಿನ ಸಮಯ ನನಗೆ ತೋಚಿದ ಕೆಲ ಸೂಚನೆಗಳನ್ನು ಹೇಳಬೇಕೆಂದಿರುವೆನು.

ನಿಮ್ಮ ಅಧ್ಯಕ್ಷರು ನನ್ನ ವಿಷಯವಾಗಿ ಪ್ರಶಂಸೆ ಮಾಡಿದರು. ಆ ವಿಷಯವಾಗಿ ನಾನು ಮಾತಾಡಲು ಇಷ್ಟವುಳ್ಳವನಾಗಿರುವುದಿಲ್ಲ.

ನನಗೆ ಉಪಾಧ್ಯಾಯ ವೃತ್ತಿಯಲ್ಲಿ ತುಂಬಾ ವಿಶ್ವಾಸ, ಪ್ರೀತಿಯಿದೆ. ಹೆಚ್ಚು ಹೆಚ್ಚಾಗಿ ಜನರು ಈ ವೃತ್ತಿಯನ್ನು ಅನುಸರಿಸುವುದಿಲ್ಲವೇಕೆ ಎಂದು ನಾನು ಆಗಾಗ್ಗೆ ಯೋಚಿಸುವುದುಂಟು. ನಾನು ಉಪಾಧ್ಯಾಯನಾಗಿದ್ದರೆ ನಿಮ್ಮೊಡನೆ ಸೇರಿಕೊಂಡು ನಿಮ್ಮ ಕಷ್ಟ ಸುಖದಲ್ಲಿ ಭಾಗವಹಿಸುತ್ತಿದ್ದೆನು.

ನಮ್ಮ ದೇಶದಲ್ಲಿ ಉಪಾಧ್ಯಾಯರ ಸ್ಥಿತಿಯು ಉತ್ತಮ ರೀತಿಯಲ್ಲಿಲ್ಲ. ಸಂಘಗಳು ಸ್ವಲ್ಪ ಮಟ್ಟಿಗೆ ಅವರ ಏಳಿಗೆಗೆ ಯತ್ನಿಸುತ್ತದೆ. ಹೀಗೆ ಯತ್ನಿಸುವವುಗಳು ಎರಡು ವಿಧ. ಒಂದು ವಿಧದ್ದು ಉಪಾಧ್ಯಾಯ ವೃತ್ತಿಯಲ್ಲಿ ಸುಧಾರಣೆ ತರಲು ಯತ್ನಿಸುತ್ತಿದೆ. ಮತ್ತೊಂದು ತರದ್ದು ಉಪಾಧ್ಯಾಯರಿಗೆ ಹೆಚ್ಚು ವೇತನ ದೊರಕುವಂತೆ ಮಾಡಲೆತ್ನಿಸುತ್ತದೆ. ಇಂಗ್ಲೆಂಡಿನಲ್ಲಿ ಇಂತಹ ಸಂಘಗಳು ಬಹಳ ಅಧಿಕಾರವನ್ನು ಹೊಂದಿವೆ. ಆದರೆ ನಮ್ಮ ದೇಶದಲ್ಲಿ ಈ ಅಧಿಕಾರವು ಸಂಘಗಳಿಗಿಲ್ಲ. ಇಲ್ಲಿ ಎಲ್ಲವೂ ಅಧಿಕಾರಿಗಳ ಅಧಿಕಾರಕ್ಕೊಳಪಟ್ಟಿರಬೇಕು.

ಮಿತ್ರರೇ ಸರಕಾರದವರು ನನ್ನಲ್ಲಿ ಅವಿಶ್ವಾಸವನ್ನಿಟ್ಟಿದ್ದಾರೆ. ಆದರೆ ತಾವುಗಳು ನನ್ನಲ್ಲಿ ವಿಶ್ವಾಸವಿಟ್ಟು ನನ್ನನ್ನು ಇಲ್ಲಿಗೆ ಬರಮಾಡಿದ್ದಕ್ಕಾಗಿ ನಿಮಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು

ಈಗ ನಿಮ್ಮ ಸಂಘವು ಇನ್ನೂ ಬಾಲ್ಯಾವಸ್ಥೆಯಲ್ಲಿದೆಯೆಂದು ಹೇಳಿದ್ದೀರಿ. ನಮ್ಮ ದೇಶದಲ್ಲಿ ಬಾಲ್ಯವಯಸ್ಸಿನಲ್ಲಿ ಮರಣ ಅಧಿಕ. ಆದರೆ ನಿಮ್ಮ ಸಂಘವು ದಿನೇ ದಿನೇ ಅಭಿವೃದ್ಧಿ ಹೊಂದಿ ಚಿರಕಾಲ ಬಾಳಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ. ಈಗ ಈ ಪರಿಷತ್ತನ್ನು ತೆರೆಯುತ್ತೇನೆ ಎಂದು ಹೇಳಿ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು.

ಶ್ರೀ ಮುಕುಂದರಾಯರು ಶ್ರೀ ಆಚಾರ್ಯರಿಗೆ ಧನ್ಯವಾದಗಳನ್ನರ್ಪಿಸಿದ ಅನಂತರ ಶ್ರೀ ಆಚಾರ್ಯರೂ ಇನ್ನಿತರ ಧುರೀಣರೂ ಜಿಲ್ಲಾಬೋರ್ಡಿಗೆ ಚಿತ್ತೈಸಿದರು.

ಮಹಾತ್ಮಾ ಗಾಂಧಿಯವರ ಭಾವಚಿತ್ರ ಅನಾವರಣ

ಜಿಲ್ಲಾಬೋರ್ಡಿನಲ್ಲಿ ರಾಜಾಜಿಯವರ ಭಾಷಣ

ಗಣಪತಿ ಹೈಸ್ಕೂಲಿನಿಂದ ಜಿಲ್ಲಾ ಬೋರ್ಡಿಗೆ ಶ್ರೀ ಆಚಾರ್ಯರೂ ಅವರ ಕೂಡೆ ಬಂದಿದ್ದ ಧುರೀಣರೂ ಚಿತ್ತೈಸಿದರು. ಅಲ್ಲಿ ಜಿಲ್ಲಾಬೋರ್ಡು ಅಧ್ಯಕ್ಷರೂ, ಸೆಕ್ರೆಟರಿಯವರೂ, ಜಿಲ್ಲಾ ಬೋರ್ಡು ಸದಸ್ಯರೂ ರಾಜಾಜಿಯವರನ್ನೂ ಇನ್ನಿತರ ಧುರೀಣರನ್ನೂ ಆದರದಿಂದ ಇದಿರುಗೊಂಡು ಉಚಿತಾಸನದಲ್ಲಿ ಕುಳ್ಳಿರಿಸಿದರು. ಮಹಾತ್ಮರ ಭಾವಚಿತ್ರವನ್ನು ಅನಾವರಣ ಮಾಡಬೇಕಂದು ಕೇಳಿಕೊಳ್ಳುವ ಸಂದರ್ಭದಲ್ಲಿ ದಿವಾನ್ ಬಹದೂರು ಬಿ. ಮಹಾಬಲಹೆಗ್ಗಡೆಯವರು, 'ಮಹಾತ್ಮ ಗಾಂಧಿಯವರು ಲೋಕಪ್ರಸಿದ್ಧರಾದವರು.ಅವರ ಚರಿತ್ರೆಯನ್ನು ಹೇಳುವುದು ಅನಗತ್ಯ. ಅವರ ವಿಷಯ ತಿಳಿಯದವರು ಈ ದೇಶದಲ್ಲಿ ಯಾರೂ ಇಲ್ಲವೆಂದು ನನ್ನ ಭಾವನೆ. ಈ ಪೂಜ್ಯವ್ಯಕ್ತಿಗಳ ಚಿತ್ರದ ಅನಾವರಣಮಾಡಲು ಶ್ರೀ ರಾಜಗೋಪಾಲಾಚಾರ್ಯರು ಬಂದುದು ಮತ್ತಷ್ಟು ಮಹತ್ವದ ಸಂಗತಿಯಾಗಿದೆ. ಆದ್ದರಿಂದ ಭಾವಚಿತ್ರವನ್ನು ಅನಾವರಣ ಮಾಡಬೇಕಾಗಿ ಶ್ರೀ ಆಚಾರ್ಯರನ್ನು ನಾನು ಕೇಳಿಕೊಳ್ಳುತ್ತೇನೆ' ಎಂದರು.

ಭಾವಚಿತ್ರದ ಅನಾವರಣ ಮಾಡುವಸಂದರ್ಭದಲ್ಲಿ ಶ್ರೀ ಆಚಾರ್ಯರು, 'ಮಹಾತ್ಮರ ಭಾವಚಿತ್ರವು ಇಲ್ಲಿ ಇದುವರೆಗೆ ಇಡಲ್ಪಡದೆ ಇದ್ದದ್ದು ಆಶ್ಚರ್ಯದ ಸಂಗತಿ. ನನ್ನ ಕೈಯಿಂದಲೇ ಈ ಕೆಲಸವು ಆಗಬೇಕಾಗಿತ್ತೆಂದು ಈ ಕೆಲಸವು ಬಾಕಿ ಉಳಿಯಿತೆಂದು ಭಾವಿಸುತ್ತೇನೆ. ಮಹಾತ್ಮರು ಲೋಕವಂದ್ಯರು. ಇವರ ನೆನಪು ಸರ್ವರಲ್ಲಿಯೂ ಇರಬೇಕು. ಪ್ರತಿಯೊಂದು ಮನೆ ಶಾಲೆ ಕಚೇರಿಯಲ್ಲಿಯೂ ಇವರ ಚಿತ್ರವು ಇರಬೇಕು. ರಾಮಾಯಣ,ಭಾರತ ಬರೆದ ಮಹನೀಯರು ಮನುಷ್ಯರು. ಅವರು ಎಲ್ಲಿಹುಟ್ಟಿದರು, ಎಲ್ಲಿ ಬೆಳೆದರು ಎಂಬುದು ನಮಗೆ ಗೊತ್ತಿಲ್ಲ. ಅದು ಬರೆದಿಡಲ್ಪಟ್ಟಿಲ್ಲ. ಕೆಲಕಾಲದ ಮೇಲೆ ಮಹಾತ್ಮ ವಿಷಯವೂ ಮರೆತುಹೋಗಬಹುದು. ಹಾಗಾಗಬಾರದು. ಅವರ ಚರಿತ್ರೆಯು ಪ್ರತಿಯೊಬ್ಬ ಭಾರತೀಯನಿಗೂ ತಿಳಿಯುವಂತಾಗಬೇಕು. ಮಹಾತ್ಮರ ಜೀವನಚರಿತ್ರೆಯಿಂದ ಅವರ ತ್ಯಾಗಾದಿಗುಣಗಳನ್ನು ತಿಳಿಯಬಹುದು. ಈ ಬೋರ್ಡಿನ ನೌಕರರು ಪ್ರಾತಃಕಾಲ ಕಚೇರಿಗೆಬಂದು ಮಹಾತ್ಮರ ಚಿತ್ರವನ್ನು ದರ್ಶನಮಾಡಿ ಅವರ ವಿಚಾರದಲ್ಲಿ ಸ್ವಲ್ಪಯೋಚಿಸಿದರೆಂದರೆ ಅವರಿಗೆ ಅದರಿಂದ ತುಂಬಾಜ್ಞಾನವುಂಟಾಗಬಹುದು. ಮಿತ್ರರೇ ಈಗ ಈ ಭಾವಚಿತ್ರವನ್ನು ಅನಾವರಣ ಮಾಡುತ್ತೇನೆ' ಎಂದು ಚಿತ್ರವನ್ನು ಅನಾವರಣ ಮಾಡಿದರು.

ದಿವಾನ್ ಬಹದೂರು ಬಿ. ಮಹಾಬಲ ಹೆಗ್ಗಡೆಯವರು ರಾಜಾಜಿಯವರಿಗೂ ಅವರ ಸಂಗಾತಿಗಳಿಗೂ ಧನ್ಯವಾದಗಳನ್ನು ಅರ್ಪಿಸಲಾಗಿ ಸಮಾರಂಭವು ಮುಕ್ತಾಯವಾಯಿತು. ರಾಜಾಜಿಯವರು ಅಲ್ಲಿಂದ ಮೈದಾನಕ್ಕೆ ಹೊರಟರು.

ಮಂಗಳೂರು ನಗರಸಭೆ

ಕಳೆದ ತಾ. ೧೬ರಲ್ಲಿ ಮಂಗಳೂರು ನಗರ ಸಭೆಯ ಮೀಟಿಂಗು ಮಾನ್ಯ ಡಾ! ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಾರಂಭವಾಗುವ ಮೊದಲು ಶ್ರೀ ಗಳಾದ ರಾಜ ಗೋಪಾಲಾಚಾರ್ಯರಿಗೂ ಟಿ. ಪ್ರಕಾಶಂರವರಿಗೂ ಮಾನ ಪತ್ರಗಳನ್ನು ಕೊಡಬೇಕೆಂದು ಶ್ರೀ ಯಂ. ಮಾಧವರಾಯರು ಠರಾವು ತಂದರು; ಅದನ್ನು ಶ್ರೀ ಎಲ್. ಸಿ. ಪಯಸ್‌ರವರು ಅನುಮೋದಿಸಿ ಅದು ಸರ್ವಾನುಮತಿಯಿಂದ ಪಾಸಾಯಿತು. ಮಾನಪತ್ರವನ್ನು ತಯಾರಿಸುವರೆಂಬುದು ಸಮಿತಿಯು ಕೂಡಲೆ ಏರ್ಪಟ್ಟಿತು.

ಮಂಗಳೂರು ಮುನಿಸಿಪಾಲಿಟಿಗೆ ಮಲಬಾರಿನ ಓವರ್ ಸ್ಯಾನಿಟರಿ ಇನ್ಸ್‌ಪೆಕ್ಟರರನ್ನು ೨॥ ತಿಂಗಳ ಹಂಗಾಮಿ ಉದ್ಯೋಗಕ್ಕೆ ನೇಮಿಸಿದ ಮೇಲೆ ತೀವ್ರ ಚರ್ಚೆಯಾಯಿತು. ಜಿಲ್ಲೆಯವರನ್ನು ಬಿಟ್ಟು ಹೊರಗಿನಿಂದ ಜನವನ್ನು ತಂದುದು ಸರಿಯಲ್ಲವೆಂದು ಕೌನ್ಸಿಲಿನವರು ಹೆಚ್ಚಿನವರು ಅಭಿಪ್ರಾಯಪಟ್ಟರು. ಅಧ್ಯಕ್ಷರು ಕೌನ್ಸಿಲಿನ ಅಭಿಪ್ರಾಯದಂತೆ ಮುಂದಕ್ಕೆ ನಡೆಯಲು ಯತ್ನಿಸುವುದಾಗಿ ಆಶ್ವಾಸನೆಯಿತ್ತರು ರಸ್ತೆಗಳಿಗೆ ಸಿಮೆಂಟು ಹಾಕುವ ವಿಷಯ ಮುಂದಿನ ಮೀಟಿಂಗಿನಲ್ಲಿ ಇತ್ಯರ್ಥವಾಗಬೇಕೆಂದಾಯಿತು ನಗರ ಸಭೆಯ ಕೈಕೆಳಗಿನ ಪೇಟೆಗಳಿಗೆ ಖದ್ದರ್ ಉಡುಪುಗಳನ್ನು ಕೊಡಬೇಕೆಂದು ನಿರ್ಧಾರವಾಯಿತು.

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India.	Charni Road, Bombay No. 4.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over	Rs. 80,00,000
Life Funds Over	Rs. 68,00,000
Premium Income Over ...	Rs. 22,54,000
Interest Income	Rs. 3,16,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE **Rs. 4,42,51,200**

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

(ಸ್ಥಾಪನೆ — 1906)

ಹೆಡ್ ಆಫೀಸು: **ಉಡುಪಿ (ದ. ಕ.)**

ಚಂದಾ ಹಾಕಲ್ಪಟ್ಟ ಮೂಲಧನ	ರೂ.	3,50,000
ಚಂದಾಹಾಕಲ್ಪಟ್ಟು ಎತ್ತಿದ ಮೂಲಧನ....	,,	2,88,950
ರಿಸರ್ವ್ ವಗೈರೆ ಇತರ ಹಣಗಳು	,,	3,63,578
ಠೇವಣಾತಿಗಳು	,,	38,58,207

ವ್ಯವಹಾರಧನವು ಒಟ್ಟಿಗೆ ಅರ್ಧಕೋಟಿ ರೂಪ್ಯಾಗಳಿಗೆ ಮಿಕ್ಕಿದೆ

ಬೇಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತದೆ. ಅತೀ ಕಡಿಮೆ ದರದ ಬಡ್ಡಿಯಲ್ಲಿ ಭಂಗಾರದ ಈಡಿನ ಮೇಲೂ ಇತರ ಯೋಗ್ಯ ಜವಾಬ್ದಾರಿ ಮೇಲೂ ಸಾಲಗಳು ಕೊಡಲಾಗುತ್ತದೆ.

ಹೆಚ್ಚಿನ ಮಾಹಿತಿಯನ್ನು ಬ್ಯಾಂಕಿನ ಹೆಡ್ ಆಫೀಸಿನಿಂದಾಗಲೀ ಬ್ರಾಂಚು ಆಫೀಸುಗಳಿಂದಾಗಲೀ ತಿಳಿದುಕೊಳ್ಳಬಹುದು.

V. R. Kamath, B. A., LL.B.
ಮೆನೇಜರ್.

ಉಡುಪಿ, ತಾ. ೨೯-೪-'೩೭ ಗುರುವಾರ

ಗಾಂಧಿಜೀಯವರ ಸ್ಪಷ್ಟೀಕರಣ

ಗಾಂಧಿಜಿಯವರು ಇದೇ ತಾ. 22ರಲ್ಲಿ ಪೂನದಲ್ಲಿ ಹಿಂದು ಪತ್ರಿಕೆಯ ಪ್ರತಿನಿಧಿಯ ಪ್ರಶ್ನೆಗಳಿಗೆ ಉತ್ತರವೀಯುವಾಗ ಕಾಂಗ್ರೆಸಿನ ಧೋರಣೆಯನ್ನು ಸ್ಪಷ್ಟಪಡಿಸಿರುವರು. ಗವರ್ನರರು ಸ್ವಲ್ಪವಾದರೂ ಇಂಡಿಯಾ ಆಕ್ಟಿಗೆ ಪ್ರತಿಕೂಲವಾಗಿ ನಡೆಯಬೇಕೆಂದು ತಾನು ಕೇಳಿರುವುದಿಲ್ಲ. ಪ್ರಾಂತಿಕ ಸ್ವಾತಂತ್ರ್ಯದ ಮೇರೆಗೆ ಪ್ರಾಂತದ ಆಡಳಿತಕ್ಕೆ ಸಂಪೂರ್ಣ ಜವಾಬ್ದಾರರಾಗಿರುವವರು ಮಂತ್ರಿಗಳು. ಆದುದರಿಂದ ಕಾಂಗ್ರೆಸಿನವರು ಮಂತ್ರಿಪದವಿ ಸ್ವೀಕರಿಸುವ ಮೊದಲು, ಅವರ ಅನುನಿತ್ಯದ ಆಡಳಿತದಲ್ಲಿ ಗವರ್ನರರು ಕೈಹಾಕುವುದಿಲ್ಲೆಂಬ ಭರವಸೆಯಷ್ಟೇ ಅವರಿಗೆ ಬೇಕಾದುದು. ಇಂಡಿಯಾ ಆಕ್ಟಿನ ಮೇರೆಗೆ ಗವರ್ನರರಿಗೆ ಇಂತಹ ಆಶ್ವಾಸನೆಯನ್ನು ಕೊಡಲಾಗುವುದಿಲ್ಲೆಂಬುದು ತನಗೆ ವಿಚಿತ್ರ ತೋರುತ್ತದೆ. ಮತ್ತು ಬ್ರಿಟಿಷರ ಉದ್ದೇಶದ ವಿಷಯದಲ್ಲಿ ಸಂದೇಹಕ್ಕೆ ಕಾರಣವಾಗುತ್ತದೆಂದು ಗಾಂಧಿಜಿಯವರ ಅಭಿಪ್ರಾಯ. ಗವರ್ನರರು ಯಾವಾಗಲಾದರೂ ತನ್ನ ವಿಶೇಷಾಧಿಕಾರಗಳನ್ನು ಉಪಯೋಗಿಸಲೇ ಬಾರದು; ಅಂತಹ ಸಂದರ್ಭವು ಎಂದೂ ಉಂಟಾಗಲಾರದೆಂದು ಮಹಾತ್ಮರೇನೂ ಹೇಳುವುದಿಲ್ಲ. ಮಂತ್ರಿಗಳು ಜನಹಿತ ಘಾತುಕವಾದ ಕಾರ್ಯವನ್ನೇನಾದರೂ ಮಾಡಿ ಗವರ್ನರರ ಸಲಹೆಯನ್ನು ನಿರಾಕರಿಸಿದರೆ ಅವರು ರಾಜಿಕೊಡುವಂತೆ ಮಾಡಿ, ಎಸೆಂಬ್ಲಿಯನ್ನು ಕೊನೆಗೊಳಿಸಿ ಹೊಸ ಚುನಾವಣೆ ನಡೆಸುವುದು ಗವರ್ನರರ ಕರ್ತವ್ಯವಿರುತ್ತದೆ. ಇದನ್ನು ಗವರ್ನರರಂತೆಯೇ ಮಂತ್ರಿಗಳೂ ಮಾಡಬಹುದು. ಅಂದರೆ ಅವರು ಜನಹಿತಕ್ಕೆಂದು ಮಾಡುವ ಯಾವುದಾದರೊಂದು ಕೆಲಸವು ಗವರ್ನರರಿಗೊಪ್ಪಿಗೆಯಾಗದೆ ಅದಕ್ಕವರು ಆಕ್ಷೇಪಿಸಿದರೆ ಆಗ ಮಂತ್ರಿಗಳು ರಾಜಿನಾಮೆಕೊಟ್ಟು ಹೊಸ ಚುನಾವಣೆ ನಡೆಸುವಂತೆ ಮಾಡಬಹುದು. ಇದೂ ಪ್ರಜಾ ಸತ್ತೆಯ ನ್ಯಾಯವಾದ ಕ್ರಮ. ಆದರೆ ಇಂತಹ ಪರಿಸ್ಥಿತಿಯು ದಿನ ದಿನದ ಆಡಳಿತದಲ್ಲುಂಟಾಗಲಾರದು. ಆದುದರಿಂದ ಅನುನಿತ್ಯದ ಆಡಳಿತದಲ್ಲಿ ತಾವು ಕೈಹಾಕುವುದಿಲ್ಲೆಂದು ಗವರ್ನರರಿಗೆ ಆಶ್ವಾಸನೆಕೊಡಲು ಅಡ್ಡಿಯೇನೋ ತಿಳಿಯದು. ಇಷ್ಟಕ್ಕೂ ಅಡ್ಡಿಯಿರುವುದಾದರೆ, ಆಳರಸರಿಗೆ ನಿಜವಾದ ಪ್ರಾಂತಿಕ ಆಡಳಿತ ಜವಾಬ್ದಾರಿಯನ್ನು ಕೂಡಾ ಪ್ರಜಾ ಪ್ರತಿನಿಧಿಗಳಿಗೆ ಕೊಡಲು ಇಷ್ಟವಿಲ್ಲೆಂದೂ, ಎಂತಹ ಪರಿಸ್ಥಿತಿಯಲ್ಲಿಯೂ ಅವರ ಅಧಿಕಾರದ ಹಿಡಿತ ಯಥಾ ಪ್ರಕಾರವಿರಬೇಕೆಂದೇ ಅವರ ಉದ್ದೇಶವೆಂದೂ ಸ್ಪಷ್ಟವಾಗುವುದು.

ಬಿಕ್ಕಟ್ಟನ್ನು ಕೂಡಲೆ ನಿವಾರಿಸಬೇಕು

6 ಮುಖ್ಯ ಮಂತ್ರಿಗಳಲ್ಲಿ ಕಾಂಗ್ರೆಸಿನವರು ಬಹುಪಕ್ಷದಿಂದ ಆರಿಸಿ ಬಂದರೂ ಅಧಿಕಾರ ಸ್ವೀಕರಿಸುವಂತಾಗದೆ ಕೇವಲ 'ಡಮ್ಮಿ ಮಂತ್ರಿಗಳು' ಅವರನ್ನು ಮಂತ್ರಿಗಳೆಂದು ಕರೆಯುವುದರಲ್ಲಿಯೂ ಅರ್ಥವಿಲ್ಲ; ಕೇವಲ ಗವರ್ನರರ ಹಸ್ತಕರಾದ ಅವರು ಪ್ರಜಾ ಜವಾಬ್ದಾರಿ ರಾಜ್ಯಭಾರದ ಹೆಸರಲ್ಲಿ ಆಡಳಿತ ನಡೆಸುವ ಅಕ್ರಮ ಮತ್ತು ಅನ್ಯಾಯದಿಂದುಂಟಾಗಿರುವ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸರಕಾರವು ಕೂಡಲೆ ನಿವಾರಿಸಲೆತ್ನಿಸಬೇಕೆಂದೀಗ ಮಂದ ಪಕ್ಷಿಯ ಮುಖಂಡರುಗಳೇ ಆಗ್ರಹಪಡಹತ್ತಿರುವರು. ಮಹಾತ್ಮಾ ಗಾಂಧಿಯವರು ಪೂನದಲ್ಲಿಕೊಟ್ಟ ಅಭಿಪ್ರಾಯದಿಂದ ಸರ್. ತೇಜ ಬಹದೂರು ಸಪ್ರುಗಳು ಕೂಡಾ ಕಾಂಗ್ರೆಸಿನ ಧೋರಣೆಯ ವಿವೇಕವನ್ನು ಮನಗಂಡು ಈಗ ಸರಕಾರವು ಕಾಂಗ್ರೆಸಿನೊಡನೆ ರಾಜಿ ಮಾಡಲು ಪರಿಷತ್ತೊಂದನ್ನು ಕರೆಯಬೇಕೆಂದು ಸೂಚಿಸಿರುವರು. ಸರ್. ಶಿವಸ್ವಾಮಿ ಅಯ್ಯರರೇ ಮೊದಲಾದವರು, ಪ್ರಕೃತದ ಪರಿಸ್ಥಿತಿಯನ್ನು ಈಗಣಂತೆಯೇ ಇರಗೊಡಿಸುವುದು ಸರಕಾರದ ಹಿತಕ್ಕೇನೇ ಘಾತುಕ. ಯಾಕೆಂದರೆ ಕಾಂಗ್ರೆಸಿನವರು ಕಾಯಿದೆಭಂಗ ಚಳವಳವನ್ನೇನಾದರೂ ಆರಂಭಿಸಿಬಿಟ್ಟರೆ ಮತ್ತೂ ಬಿಕ್ಕಟ್ಟಿನ ಪರಿಸ್ಥಿತಿಯುಂಟಾಗುವುದೆಂದು ಎಚ್ಚರಿಸಿರುವರು. ಸ್ಟೇಟ್ಸ್‌ಮನ್ ಮೊದಲಾದ ಆಂಗ್ಲೋ ಇಂಡಿಯನ್ ಪತ್ರಿಕೆಗಳು ಮಾತ್ರವಲ್ಲದೆ, ಲಂಡನಿನ ಟೈಮ್ಸ್ ಪತ್ರಿಕೆಯು ಕೂಡಾ ಗಾಂಧಿಜಿಯವರ ಸ್ಪಷ್ಟೀಕರಣದಿಂದ ತೃಪ್ತಿಗೊಂಡು, ಈಗ ರಾಜಿಗೆ ಅನುಕೂಲ ಪರಿಸ್ಥಿತಿಯುಂಟಾಗಿರುವುದರಿಂದ ಇತ್ತಂಡದವರೂ ಪ್ರತಿಷ್ಠೆಗೆ ಮನಸ್ಸುಕೊಡದೆ ಯಾವುದಾದರೊಂದು ವಿಧದ ಸಂಧಾನಮಾಡಿಕೊಳ್ಳಬೇಕೆಂದು ಸೂಚಿಸಿರುವುದು. ಲಂಡನಿನಲ್ಲಿ ಕೂಡಾ ಕಾಂಗ್ರೆಸಿನ ಧೋರಣೆಯ ವಿವೇಕವು ಜನರಿಗೆ ವಿದಿತವಾಗ ಹತ್ತಿದೆ. ಆದುದರಿಂದ ಕಿರೀಟಧಾರಣೋತ್ಸವ ಮುಗಿದಮೇಲೆ ಯಾವುದಾದರೊಂದು ಬಗೆಯ ರಾಜಿಯಾಗಬಹುದೆಂದು ಊಹಿಸಬಹುದಾಗಿದೆ.

'ಮೈನೋರಿಟಿ' ಪ್ರಶ್ನೆ

ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರು ಇಂಗ್ಲೆಂಡಿನ ಲೋರ್ಡ್ಸ್ ಸಭೆಯ ತನ್ನ ಭಾಷಣದಲ್ಲಿ, ಹಿಂದುದೇಶದ ಅಲ್ಪ ಸಂಖ್ಯಾಕರ ರಕ್ಷಣೆಯ ಗವರ್ನರರ ಜವಾಬ್ದಾರಿಯ ಪ್ರಶ್ನೆಯನ್ನೆತ್ತಿ ಭೇದದ ಬೀಜ ಬಿತ್ತಿದುದರಿಂದ, ಹಿಂದೀ ಕ್ರೈಸ್ತರೇ ಮೊದಲಾದ ಅಲ್ಪ ಸಂಖ್ಯಾತ ಸಮಾಜಗಳ ಮುಖಂಡರು ಅದನ್ನು ನಿಷೇಧಿಸಿ, ಕಾಂಗ್ರೆಸಿನ ನ್ಯಾಯದೃಷ್ಟಿ ನಿಷ್ಪಕ್ಷಪಾತದ ಕುರಿತು ತಮ್ಮ ದೃಢ ವಿಶ್ವಾಸ ಸೂಚಿಸಿರುವರು. ಪ್ರೊಫೆಸರ್ ಮಾರ್ಕ್ ಎಮ್. ಎಲ್. ಎ. ಯವರು. ಈ ಕುರಿತು ಮದ್ರಾಸಿನ ಹಿಂದು ಪತ್ರಿಕೆಯಲ್ಲಿ ಬೋಧಪರವಾದೊಂದು ಲೇಖ ಬರೆದುದು, ಬಹುಪಕ್ಷ ಸಮಾಜವಾದ ಹಿಂದುಗಳು ಹಿಂದಿನಿಂದಲೂ ಕ್ರೈಸ್ತರಿಗೆ ಯಾವ ತರದ ಅನ್ಯಾಯವನ್ನೂ ಮಾಡಿಲ್ಲೆಂದು ಐತಿಹಾಸಿಕ ಉದಾಹರಣೆಗಳಿಂದ ಸಿದ್ಧಗೊಳಿಸಿ, ಇತ್ತಲಾಗಿಯೇ ಯೋಗ್ಯರಾದ ಕ್ರೈಸ್ತರಿಗವರು ತಕ್ಕ ಸ್ಥಾನಮಾನಗಳನ್ನಿತ್ತಿರುವರೆಂದು ಪ್ರತಿಪಾದಿಸಿರುವರು. ಈ ಸಲದ ಎಸೆಂಬ್ಲಿ ಚುನಾವಣೆಯಲ್ಲಿ ಕ್ರೈಸ್ತರಿಗೆ ಪ್ರತ್ಯೇಕವಾಗಿ ಕಾದಿಟ್ಟಿರುವ 6 ಸೀಟುಗಳಲ್ಲಿ 4 ಸೀಟುಗಳನ್ನು ಕಾಂಗ್ರೆಸ್ ಉಮೇದ್ವಾರಿಗಳು ಪಡೆದಿರುವರು. ಹೆಚ್ಚಿನ ಹರಿಜನ ಸೀಟುಗಳೂ ಕಾಂಗ್ರೆಸಿಗೆ ದೊರೆತಿರುವುದು. ಮುಸಲ್ಮಾನರೀಗ ಹೆಚ್ಚೆಚ್ಚಾಗಿ ಕಾಂಗ್ರೆಸಿಗೆ ಸೇರ ಹತ್ತಿ ಕಾಂಗ್ರೆಸೆಂಬುದು ಭಾರತೀಯರೆಲ್ಲರ ವಿಶ್ವಾಸ ಪಡೆದಿರುವ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯಾಗಿರುವುದು. ಆದುದರಿಂದ 'ಮೈನೋರಿಟಿ' ಸಮಾಜಗಳ ಹಿತರಕ್ಷಣೆಯು ಇಂಡಿಯಾ ಸಕ್ರೆಟರಿಗಳ ವಾದವು ಕೇವಲ ಕುಟಿಲ ನೀತಿಯಲ್ಲದೆ ಅದಕ್ಕಾವ ಆಧಾರವೂ ಇರುವುದಿಲ್ಲ.

ಕಾಂಗ್ರೆಸಿನ ಕುರಿತು ಮಿ. ಜಿನ್ನಾರವರ ಸಿಟ್ಟು

ಪಂಡಿತ ಜವ್ಹಾರಲಾಲರರು ಕಳೆದ ಚುನಾವಣೆಯ ಕಾಂಗ್ರೆಸಿನ ಪರವಾಗಿ ಹೆಚ್ಚಿನ ಮುಸಲ್ಮಾನರಾರೂ ಆರಿಸಿ ಬಾರದುದರಿಂದ ಸಂತಾಪಗೊಂಡು ಮುಸಲ್ಮಾನ ಜನತೆಯನ್ನು ಕಾಂಗ್ರೆಸಿನ ಕಡೆಗೆ ಒಲಿಸಿಕೊಳ್ಳಲು ವಿಶೇಷ ಪ್ರಯತ್ನ ನಡೆಸಿ ಕೆಲ ಮಟ್ಟಿಗೆ ಜಯಶೀಲರಾಗಿರುವರು. ಬಿಹಾರ್ ಸಂಯುಕ್ತಪ್ರಾಂತ ಮತ್ತು ಪಂಜಾಬಿನಲ್ಲಿ ಅನೇಕ ಮಂದಿ ಮುಸಲ್ಮಾನ ಮುಖಂಡರು ಕಾಂಗ್ರೆಸಿಗೆ ಸೇರಿ ಕೆಲಸಮಾಡಹತ್ತಿರುವರು. ಇದರಿಂದ ಮಿ. ಜಿನ್ನಾ ಮತ್ತು ಮೌಲಾನಶೌಕತಾಲಿಗಳು ಕಾಂಗ್ರೆಸಿನ ಕುರಿತು ರೇಗಿಬಿದ್ದು ಪಂಡಿತ ಜವ್ಹಾರಲಾಲರು 'ಡಿಕ್ಟೇಟ'ರರಂತೆ ವರ್ತಿಸುವರೆಂದೂ, ಮುಸಲ್ಮಾನರೊಳಗೆ ಒಡಕುಂಟು ಮಾಡುವ ಕುಟಿಲತಂತ್ರ ನಡೆಸುತ್ತಾರೆಂದೂ, ಇದರಿಂದ ಕಾಂಗ್ರೆಸಿಗೆ ಅಪಾಯ ತಪ್ಪದೆಂದೂ ಟೀಕಿಸಿರುವರು. ಹೆಚ್ಚಿನ ಮುಸಲ್ಮಾನರು, ಕಾಂಗ್ರೆಸಿಗೆ ಸೇರಿ ಬಿಟ್ಟರೆ ಮುಸ್ಲಿಮ್ ಲೀಗಿಗೆ ಮತ್ತು ತಮ್ಮ ಮುಖಂಡತ್ವಕ್ಕೇನು ಗತಿಯೆಂಬ ಸಂಕುಚಿತ ಬುದ್ಧಿಯೇ ಈ ಟೀಕೆಗೆ ಕಾರಣ. ಮಿ. ಜಿನ್ನಾ ಮತ್ತು ಮೌಲಾನರು ಕಾಂಗ್ರೆಸಿಗೇನೇ ಸೇರಿ ಯಾಕೆ ಕೆಲಸಮಾಡಬಾರದೋ ತಿಳಿಯದು.

ಕೊಚ್ಚಿಯ ಮಹಾರಾಜರ ಶುದ್ಧ ಅವಿವೇಕತನ

ಮುದಿಪ್ರಾಯದಲ್ಲಿ ಬುದ್ಧಿ ಮಂದವಾಗುವುದು ಸ್ವಾಭಾವಿಕ. ಅಂತೆಯೇ ಕೊಚ್ಚಿಯ ಮುದಿ ಮಹಾರಾಜರೀಗ ವಿವೇಕಭ್ರಷ್ಟರಾಗಿ ಕೊಚ್ಚಿಯ ಶ್ರದ್ಧಾಳುಗಳ ಕೈಗೊಂಬೆಯಾಗಿ ಶುದ್ಧ ಅವಿವೇಕಪರ ಧೋರಣೆ ವಹಿಸಿರುವರು. ಇದಕ್ಕೆ ಅವರ ದಿವಾನರಾದ ಸರ್ ಷಣ್ಮುಖಮ್ ಚೆಟ್ಟಿಯಾರರೂ, ಇಂಡಿಯಾ ಸರಕಾರದ ರೆಸಿಡೆಂಟರೂ ಸಮ್ಮತಿಸಿದುದು ಆಶ್ಚರ್ಯದ ಸಂಗತಿಯು. ಇದರಿಂದ ಕೊಚ್ಚಿಯು ಮುಂದಡಿಯಿಡುವ ಬದಲಿಗೆ ಹಿಂದಡಿ ಇಟ್ಟಂತಾಯಿತು. ಮಾತ್ರವಲ್ಲದೆ ಪ್ರಗತಿಗಾಮಿಯಾದ ತಿರುವಾಂಕೂರನ್ನೂ ಹಿಂದಕ್ಕೆಳೆಯಲೆತ್ನಿಸಿದಂತಾಗಿರುವುದು. ತಿರುವಾಂಕೂರಿನ ಶ್ರೀ ಪದ್ಮನಾಭ ದೇವಸ್ಥಾನಕ್ಕೆ ರಾಜಾಜ್ಞೆಯ ಮೇರೆಗೆ,ಅವರ್ಣ ಹಿಂದುಗಳನ್ನು ಪ್ರವೇಶಿಸಿಬಿಡುವ ಸಮಾರಂಭದಲ್ಲಿ ಭಾಗಿಯಾದ ಮಾತ್ರದಿಂದಲೇ ಅಲ್ಲಿಯ ಅರ್ಚಕ ಕುಟುಂಬಗಳೇ ಅಶುದ್ಧವಾಗಿ, ಅವರು ತಮ್ಮ ಪಾರಂಪರ್ಯ ಹಕ್ಕು ಪ್ರಕಾರ ಕೊಚ್ಚಿಯ ಕೂಟಲ್ ಮಾಣಿಕ್ಕಮ್ ದೇವಸ್ಥಾನದಲ್ಲಿ ಪೂಜೆನಡೆಸಲು ಅನರ್ಹರಾಗುವರು. ಅವರು ಪೂಜೆ ನಡೆಸಬೇಕಾದರೆ ಪ್ರಾಯಶ್ಚಿತ್ತಮಾಡಿಕೊಳ್ಳಬೇಕು. ಅವರು ಪ್ರವೇಶಿಸಿದ ಕೂಟಲ್ ಮಾಣಿಕ್ಕಮ್ ದೇವಸ್ಥಾನವು ಶುದ್ಧೀಕರಿಸಲ್ಪಡಬೇಕೆಂಬ ಕೊಚ್ಚಿಯ ಮಹಾರಾಜರ ಅನುಜ್ಞೆಯು ಅದೆಷ್ಟು ಅವಿಚಾರಪರವಾದುದೆಂಬುದನ್ನು ನಾವು ಪ್ರತ್ಯೇಕ ವಿವರಿಸಬೇಕಾಗಿಲ್ಲ. ಇಂತಹ ಹಿಂದು ಧರ್ಮ ರಕ್ಷಕರೆನಿಸುವ ಭ್ರಾಂತರ ಅರ್ಥರಹಿತ ಧೋರಣೆಯಿಂದಲೇ ಹಿಂದು ಧರ್ಮವು ಅಧೋಗತಿಗಿಳಿದಿರುವುದು.

ಮಂಗಳೂರು ಚಂದಾದಾರರಲ್ಲಿ ವಿನಂತಿ.

ಮಂಗಳೂರಿನ ಸ್ಥಳೀಕ ಚಂದಾದಾರರು ತಮ್ಮ ಚಂದಾಹಣವನ್ನು ಕೆನರಾ ಪ್ರೆಸ್ಸಿನ ಮೆನೇಜರರೊಡನೆ ಪಾವತಿ ಮಾಡಿ ರಶೀದಿ ಪಡೆಯಬೇಕಾಗಿ ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್,
ನವಯುಗ, **ಉಡುಪಿ**

ಕುಷ್ಠರೋಗಿಗಳ ಚಿಕಿತ್ಸೆಯ ಏರ್ಪಾಡು

ಜಿಲ್ಲೆಯ ಹಲವು ಚಿಕ್ಕ ಪಟ್ಟಣಗಳ ಸರಕಾರಿ ಆಸ್ಪತ್ರೆಗಳಲ್ಲಿ ಕೂಡಾ ಕುಷ್ಠರೋಗಿಗಳನ್ನು ಪ್ರತ್ಯೇಕವಿರಿಸಿ ಚಿಕಿತ್ಸೆ ನಡೆಸಲು ಪ್ರತ್ಯೇಕ ಕಟ್ಟಡದ ಏರ್ಪಾಡಿರುವಾಗ ಉಡುಪಿಯ ಸರಕಾರಿ ಆಸ್ಪತ್ರೆಯಲ್ಲಿ ಅದು ಇಷ್ಟರವರೆಗೆ ಇಲ್ಲದಿರುವುದು ದೊಡ್ಡ ದಾ

ದೊಂದು ಕೊರತೆ ಕೊರತೆಯನ್ನು ನಿವಾರಿಸಲು ಉಡುಪಿಯ ಆಸ್ಪತ್ರೆಯ ಶಿಬ್ಬಂದಿಯವರು ಆಸ್ಪತ್ರೆಯ ಜನಪ್ರಿಯ ಡಾಕ್ಟರರಾದ ಡಾಕ್ಟರ್ ಪಚಾಕೊ ಮತ್ತು ಹೆಸರುವಾಸಿಗಳಾದ ಡಾಕ್ಟರ್ ಸುಂದರರಾಮ ಪೈಗಳ ನೇತೃತ್ವದಲ್ಲಿ ಅಲ್ಪ ರೀತಿಯಲ್ಲಾದರೂ ಆರಂಭಮಾಡಿರುವುದು ಅಭಿನಂದನೀಯ ವಿಷಯವಿದೆ. ಆಸ್ಪತ್ರೆಯ ಶಿಬ್ಬಂದಿಯವರು, ಸ್ಥಳೀಯ ಶಾರದಾ ಸಂಗೀತ ಶಾಲೆಯ ಬಾಲಿಕೆಯರಿಂದ ನಡಿಸಿದ 'ಬೆನಿಫಿಟ್' ನಾಟಕ ಪ್ರದರ್ಶನದಿಂದ ಕುಷ್ಠರೋಗಿ ಕಟ್ಟಡಕ್ಕಾಗಿ ಸಂಗ್ರಹಿಸಿರುವ ರೂ. 140 ಯಾವುದಕ್ಕೂ ಸಾಲದು. ಆದುದರಿಂದ ಡಿಸ್ಟ್ರಿಕ್ಟ್ ಲೆಪ್ರೊಸಿ ಕೌನ್ಸಿಲಿನವರೂ, ಸ್ಥಳೀಯ ಮುನಿಸಿಪಾಲಿಟಿಯವರೂ, ಇನ್ನು ಇತರ ಸಂಸ್ಥೆಗಳವರೂ, ಮಹನೀಯರೂ, ಉದಾರ ಸಹಾಯಮಾಡಿ, ಈ ಶುಭಾರಂಭವನ್ನು ಜಯಶೀಲಗೊಳಿಸುವುದು ಅವರ ಕರ್ತವ್ಯವಿರುವುದು.

ವಿದೇಶ

ಲಂಡನಿನಲ್ಲಿ ಮುಷ್ಕರದ ಬೆದರಿಕೆ

ಇಂಗ್ಲೆಂಡಿನ ಆಗ್ನೇಯ ಭಾಗದ ಹಲವು ಪಟ್ಟಣಗಳಲ್ಲಿ ಬಸ್‌ಡ್ರೈವರರು ತಮ್ಮ ಕೆಲಸದ ಸಮಯ ಕಡಿಮೆ ಮಾಡುವ ಕುರಿತು ಮುಷ್ಕರ ಹಿಡಿದು ಬಸ್ಸು ಸರ್ವಿಸುಗಳೇ ನಿಲ್ಲಿಸಲ್ಪಟ್ಟಿರುವವು. ಲಂಡನಿನಲ್ಲಿ ಮೇ ತಾ. ೧ರಲ್ಲಿ ೪೦,೦೦೦ಮಂದಿ ಬಸ್ ಡ್ರೈವರರು ಮುಷ್ಕರ ಹಿಡಿಯುವ ನಿರ್ಧಾರಮಾಡಿರುವರು ಈ ಮುಷ್ಕರ ನಡೆಯದಂತೆ ರಾಜಿ ಪ್ರಸ್ತಾಪ ನಡೆಯುತ್ತಿದೆ.

ಸ್ಪೈನಿನ ಅಂತಃಕಲಹ

ಬಿಲ್ಬಾವ್ರೋವನ್ನು ವಶಪಡಿಸಿಕೊಳ್ಳಲು ಬಂಡಾಯಗಾರರು ಪ್ರಬಲಪ್ರಯತ್ನ ನಡಿಸುತ್ತಿರುವರು ಅವರು ಈ ಭಾಗದಲ್ಲಿ ಕೆಲವುಟ್ಟಿನ ವಿಜಯಪಡೆದು ಗಳಿಸ್ಸೈಲು ಮುಂದೊತ್ತಿರುವರು ಹೆಚ್ಚಿನ ಮದ್ದುಗುಂಡು ಮತ್ತು ೫೦೦ ಜನರು ಬಂಡಾಯಗಾರರಿಗೆ ಸೆರೆಸಿಕ್ಕಿರುವರೆಂದು ತಿಳಿದುಬರುತ್ತದೆ.

ಬಿಲ್ಬಾವ್ರೋ ಬಂದರಿಗೆ ಬಂಡಾಯಗಾರರ ಮುತ್ತಿಗೆಹಾಕಿರುವರೆಂದೂ, ಆದುದರಿಂದ ಅಲ್ಲಿಗೆ ಹಡಗುಗಳೇನಾದರೂ ಸಾಮಾನು ತಂದರೆ ಅವುಗಳನ್ನು ಹಿಡಿಯಲಾಗುವುದೆಂದೂ ಬೆದರಿಕೆ ಹಾಕಿದುದರಲ್ಲಿ ಹುರುಳಿಲ್ಲೆಂಬದು ಈಗ ಸಿದ್ಧವಾಗಿದೆ ಯಾಕೆಂದರೆ ಬಿಲ್ಬಾವ್ರೋ ಬಂದರಿಗೆ ಈಗ ಹಲವು ಬ್ರಿಟಿಷರ ಪ್ರಜಾರಕ್ಕಾಗಿ ಉಪಯೋಗಿಸುವ ಆಲೋಚನೆಯು ಬೇಗನೇ ಕಾರ್ಯರೂಪಕ್ಕೆ ಬರುವುದೆಂದು ನಂಬುತ್ತೇನೆಂದು ಸಂದೇಶವಿತ್ತಿರುವರು

ಸ್ವದೇಶ

ರಥದಡಿಗೆ ಬಿದ್ದು ಇಬ್ಬರ ಮರಣ

ಇದೇ ತಾ. 2೧ರಲ್ಲು ಹಂಪಿಯ ರಥೋತ್ಸವದಲ್ಲಿ ಒಂದೇ ಸವನೆ ಒಂದು ದೊಡ್ಡದು ಮತ್ತು ಇನ್ನೊಂದು ಸಣ್ಣ ರಥವು ಎಳೆಯಲ್ಪಡುವಾಗ, ಪೋಲೀಸ್ ಬಂದೋಬಸ್ತಿದ್ದರೂ ಜನರಲ್ಲಿ ಗೊಂದಲವೆದ್ದು ೬ ಜನರು ರಥದಡಿಗೆ ಬಿದ್ದು 2 ಮಂದಿ ಆಸ್ಪತ್ರೆಯಲ್ಲಿ ಮೃತಪಟ್ಟಿರುವರು, ಒಬ್ಬನ ಕಾಲು ಕತ್ತರಿಸಲ್ಪಟ್ಟಿರುವುದು

ಇನ್ನಿಬ್ಬರು ಹಿಂದುಗಳನ್ನು ಕದ್ದೊಯ್ದರು

ಇದೇ ತಾ. 23ರಲ್ಲು ವಾಯುವ್ಯ ಗಡಿನಾಡಿನ ಡೇರ ಇಸ್ಮಾಯೀಲ್‌ಖಾನ್ ಜಿಲ್ಲೆಯ ಗುಲ್ ಇಮಾಮ್ ಎಂಬ ಹಳ್ಳಿಯಮೇಲೆ ಬಂಡಾಯಗಾರರು ನುಗ್ಗಿ 30 ಅಂಗಡಿಗಳನ್ನು ಲುಟಾಯಿಸಿ, ಎರಡನ್ನು ಸುಟ್ಟುಹಾಕಿ ಇಬ್ಬರು ಹಿಂದುಗಳನ್ನು ಕದ್ದೊಯ್ದಿರುವರು. ಇಪ್ಪಿಯ ಪಕೀರರು ವ್ಯಸೋರವೇಲಿಯಲ್ಲಿ ಅಲ್ಲಲ್ಲಿ ಸಂಚರಿಸಿ ಪಂಗಡಿಗರೊಡನೆ ಸಹಾಯ ಕೇಳುತ್ತಿರುವರು. ಇಡೀ ವಾಯುವ್ಯ ಗಡಿನಾಡಿನ ಪ್ರದೇಶವನ್ನು ಸೈನಿಕರ ಅಧಿಕಾರಕ್ಕೆ ಬಿಟ್ಟುಕೊಡಲಾಗಿದೆ ಹಿಂದೀ ಸೈನಿಕರು ವಿಮಾನಗಳ ಸಹಾಯಪಡೆದು ಬಂಡಾಯಗಾರರ ಪ್ರದೇಶದೊಳಗೆ ನುಗ್ಗುತ್ತಿರುವರು

ಉಡುಪಿ

ನಾಟಕಪ್ರದರ್ಶನ

ಉಡುಪಿಯ ಶ್ರೀ ಶಾರದಾಸಂಗೀತಕಲಾ ಶಾಲೆಯ ಚಿಕ್ಕ ಬಾಲಿಕೆಯರು ಸದ್ರಿ ಶಾಲೆಯ ಸ್ಥಾಪಕರಾದ ಶ್ರೀ ಕೆ. ಪದ್ಮನಾಭಾಚಾರ್ಯರಿಂದ ತರಬೇತಿ ಹೊಂದಿ ಅವರೇ ಬರೆದಿರುವ 'ಸತೀ ಸಾವಿತ್ರಿ' ಎಂಬ ನಾಟಕವನ್ನು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಕಳೆದ ಶನಿವಾರ ರಾತ್ರಿ, ಉಡುಪಿಯ ಸರಕಾರೀ ಆಸ್ಪತ್ರೆಯ ಕುಷ್ಠರೋಗಿಗಳ ಕಟ್ಟಡದಸಹಾಯಾರ್ಥವಾಗಿ ಜಯಶೀಲವಾಗಿ ಅಭಿನಯಿಸಿದರು ಈ ಸಂದರ್ಭದಲ್ಲಿ ಮೆಜಿಸ್ಟ್ರೇಟರಾದ ಶ್ರೀ ಕೆ ವ್ಹಿ ಸುಂದರೇಶ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು ಸ್ತ್ರೀ ಪುರುಷ ಪ್ರೇಕ್ಷಕರೂ ಹೆಚ್ಚಾಗಿ ನೆರೆದುಬಂದಿದ್ದರು. ನಾಟಕ ಮಾತ್ರವಲ್ಲದೆ ಚಿಕ್ಕ ಹುಡುಗಿಯರ ವಿದವಿದದ ನರ್ತನಗಳೂ ಮನೋಹರವಾಗಿದ್ದವು ಕುಮಾರಿ ಎಸ್. ಶಶಿಕಲಾ ಬಾಯಿಯ ನಾರದಪಾತ್ರವು ಅತ್ಯುತ್ತಮವಾಗಿದ್ದು, ಸರ್ವರ ಪ್ರಶಂಸೆಗೆ ಪಾತ್ರವಾಯಿತು ಈ ಬಾಲಿಕೆಯು ನುರಿತ ನಟನಂತೆ ತನ್ನ ಭೂಮಿಕೆಯನ್ನು ನಿರ್ವಹಿಸಿರುವಳು. ಯು ಸರಸ್ವತಿಬಾಯಿಯ ಸಾವಿತ್ರಿ ಪಾತ್ರವೂ ಮತ್ತು ಯಸ್ ಯಶೋದಾಬಾಯಿಯ ಮಾಳವಿ ಪಾತ್ರಗಳೂ ಚೆನ್ನಾಗಿದ್ದುವು. ಶ್ರೀ ವೆಂಕಟ್ರಾವ್, ಬಿ ಎ, ಎಲ್ ಟಿ, ಇವರ ಪುತ್ರಿ ಕುಮಾರಿ ಪದ್ಮಾಬಾಯಿಯು ಇಂಪಾದ ಗಾಯನವಿದ್ದಿತು ನಾಟಕಾಂತ್ಯದಲ್ಲಿ ಅಧ್ಯಕ್ಷರು, ಚಿಕ್ಕ ಬಾಲಿಕೆಯರ ಮನೋಹರ ಪ್ರದರ್ಶನಗಳನ್ನು ಪ್ರಶಂಸಿಸಿ ಅವರನ್ನು ತರಬೇತಿಮಾಡಿದ ಶ್ರೀ ಪದ್ಮನಾಭಾಚಾರ್ಯರನ್ನು ಅಭಿನಂದಿಸಿ ಪ್ರದರ್ಶನದಲ್ಲಿ ಭಾಗವಹಿಸಿದ ಬಾಲಿಕೆಯರಿಗೆಲ್ಲಾ ಪಾರಿತೋಷಕ ಹಂಚಿದರು ಆ ಮೇಲೆ ಕುಮಾರಿ ಜಲಜಾಕ್ಷಿಗೆ ಡಾಕ್ಟರ್ ಸುಂದರರಾಮ ಪೈಗಳು ಒಂದು ಪದಕವನ್ನಿತ್ತರು ಅಂತೆಯೇ ಕುಮಾರಿ ಸರಸ್ವತಿಗೊಂದು ಪದಕನೀಯಲ್ಪಟ್ಟಿತು ಡಾಕ್ಟರ್ ಪಿ ಜಿ ಆಚಾರ್ಯರೂ, ಅಧ್ಯಕ್ಷರೂ ಕುಮಾರಿ ಶಶಿಕಲೆಗೆ ಒಂದೊಂದು ಪದಕವನಿತ್ತರು ಶ್ರೀ ಪದ್ಮನಾಭಾಚಾರ್ಯರಿಗೆ ಡಾಕ್ಟರ್ ಪಿ ಜಿ ಆಚಾರ್ಯರು ಮತ್ತು ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಸರ್ಟಿಫಿಕೇಟುಗಳನ್ನಿತ್ತರು. ತಬ್ಲವಾದನ ಪ್ರವೀಣರಾದ ಶ್ರೀ ಪ್ರಭಾಕರರಿಗೂ ಸರ್ಟಿಫಿಕೇಟು ಕೊಡಲ್ಪಟ್ಟಿತು ಕೊನೆಯಲ್ಲಿ ನಗರಾಧ್ಯಕ್ಷರಾದ ಶ್ರೀ ಅರೂರರವರು ಎಲ್ಲರಿಗೂ ವಂದನಾರ್ಪಣೆಸಿ, ಬಾಲಿಕೆಯರ ಪ್ರದರ್ಶನಗಳನ್ನು ಬಹಳವಾಗಿ ಪ್ರಶಂಸಿಸಿ ಕುಮಾರಿ ಶಶಿಕಲೆಯ ಮಧುರಗಾನವು ಅದೆಷ್ಟು ಮನೋಜ್ಞವಾಗಿರುವುದೆಂಬುದನ್ನು ಶೇಕ್ಸ್‌ಪಿಯರ್ ಕವಿಯ ಪದ್ಯವೊಂದನ್ನೆತ್ತಿ ಸಮರ್ಥಿಸಿದರು. ಈ ನಾಟಕದಲ್ಲಿ ಒಟ್ಟು ರೂ. ೨೪೦ ಸಂಗ್ರಹವಾಗಿರುವುದು ಖರ್ಚು ರೂ. ೮೦ ಕಳೆದು ಸುಮಾರು ರೂ ೧೬೦ ಕುಷ್ಠರೋಗಿ ಕಟ್ಟಡಕ್ಕೆ ಸಿಕ್ಕಿರುವುದು ಈ ನಾಟಕ ಪ್ರದರ್ಶನಕ್ಕೆ ಮೂಲಕಾರಣರು ಸರಕಾರಿ ಆಸ್ಪತ್ರೆಯ ಹೆಡ್ ಕಂಪೌಂಡರರಾದ ಶ್ರೀ ಮಂಜುನಾಥರಾಯರು ಆಸ್ಪತ್ರೆಯ ಕ್ಲಾರ್ಕರಾದ ಶ್ರೀ ಬಿ ಉಮಾನಾಥರಾಯರು ಮತ್ತು ಇತರ ಶಿಬಂದಿಯವರೂ, ಶ್ರೀ ಮೂಡಬಿದ್ರಿ ಕೃಷ್ಣಯ್ಯನವರೂ ಈ ಪ್ರದರ್ಶನವನ್ನು ಜಯಶೀಲವಾಗಿ ಮಾಡುವುದರಲ್ಲಿ ನೆರವಾಗಿರುವರು. ಉದ್ಯಾವರದ ಮಿಸೆಸ್ ಕರ್ನೇಲಿಯೋ, ಆಸ್ಪತ್ರೆಯಲ್ಲಿ ಪ್ರೊಬೇಶನರಾದ ಮಿಸ್ ಸಂಜೀವಿ ಬಾ., ಕಂಪೌಂಡರಾದ ಶ್ರೀ ಎ ರಾಮಚಂದ್ರ ರಾವ್, ಎ. ಬಿ ಶಂಕರರಾಯರೂ, ಕೋಪರ್‌ರೇಶನ್ ಬೇಂಕಿನ ಏಜೆಂಟರಾದ. ಶ್ರೀ ನಾರಾಯಣ ಭಟ್ಟರೂ ಟಿಕೇಟು ಮಾರಿ ಹಣ ಸಂಗ್ರಹಿಸುವುದರಲ್ಲಿ ಸಹಾಯಮಾಡಿರುವರು ಈ ನಾಟಕದ ವ್ಯವಸ್ಥಾಪಕರು ಇವರೆಲ್ಲರಿಗೂ, ಹೆಚ್ಚಾಗಿ ಟಿಕೇಟು ತೆಗೆದುಕೊಂಡು ಜನೋಪಕಾರಕ ಕೆಲಸಕ್ಕೆ ಸಹಾಯಮಾಡಿದ ಜನಸಾಮಾನ್ಯರಿಗೆಲ್ಲರಿಗೂ ವಂದನೆಯನ್ನರ್ಪಿಸಲಿಚ್ಛಿಸುತ್ತಾರೆ

ಹವಾಮಾನ

ಕಳೆದ ಏಳೆಂಟು ದಿವಸಗಳಿಂದ ವಿಪರೀತ ಸೆಖೆಯಿದ್ದು ಬಹಳವಾಗಿ ಮಳೆಸುರಿಯಲಾರಂಭವಾಗಿದೆ ಈ ಅಕಾಲವೃಷ್ಟಿಯಿಂದಾಗಿ ಜನರಿಗೆ ಕೆಲಮಟ್ಟಿಗೆ ತೊಂದರೆಯಾಗಿರುವುದು ಆಕಾಶವು ಇನ್ನೂ ಮೋಡ ಕವಿದಿರುವುದು ಕೆಲವೆಡೆ ಮಿಂಚು ಕೂಡಾ ಬಡಿದಿರುವುದು. ಆದರೆ ಪ್ರಾಣಹಾನಿಯೇನೂ ಆಗಿರುವುದಿಲ್ಲ

ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ಕಳೆದ ಆದಿತ್ಯವಾರ ದಿನ ಭಜನೆ ಮಂಗಳವು ಬ್ರಾಹ್ಮಣ ಸಂತರ್ಪಣೆಯಿಂದ ಕೊನೆಗೊಂಡಿತು

ತೋನ್ಸೆ

ಏಣಗಡ್ಡೆ ಹೊಸಮನೆ ಶಿದ್ದಯ್ಯ ಹೆಗ್ಡೆರು ತಾರೀಕು ೧೯-೪ ೩೭ನೇ ಸಂಜೆ ತನ್ನ ೮೦ನೇ ವಯಸ್ಸಿನಲ್ಲಿ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಶಾಂತ ಪ್ರಕೃತಿಯವರೂ ಕಾರ್ಯಜಾಣರೂ ಆಗಿದ್ದರು ಮೃತರ ಬಂಧುಬಳಗದವರ ದುಃಖದೊಂದಿಗೆ ನಾವೂ ಸಹಭಾಗಿಗಳಾಗಿದ್ದೇವೆ

ಮಂಗಳೂರು

ಬೇರೆ ನಗರ ಸಭೆಗಳು ಎಪ್ರಿಲ್ 1ನೇ ತಾರೀಕಿನಲ್ಲಿ ತಮ್ಮ ಶಾಲೆಗಳನ್ನು ಕಚೇರಿಗಳನ್ನೂ ಮುಚ್ಚಿದುವು ಮಂಗಳೂರು ಕೌನ್ಸಿಲಿನಲ್ಲಿ ಮುಚ್ಚಬೇಕೆಂದು ಠರಾವಾಗಿದ್ದರೂ ಆದರಂತೆ ನಡೆಯಲಿಲ್ಲ ಇದಕ್ಕೆ ಕಾರಣವೇನೆಂದು ತನ್ನ ನಡಿಸಬೇಕೆಂದು ಶ್ರೀ ಕಾರಂತರು ಸೂಚಿಸಿದರು ಇನ್ನು ಬೇರೆ ಕೆಲವು ಪ್ರಶ್ನೆಗಳ ತೀರ್ಮಾನವಾದಮೇಲೆ ಸಭಾಂತ್ಯವಾಯಿತು

ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆ

ತಾ ೨೧ರಲ್ಲಿ ಶ್ರೀ ಯಂ. ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿದ ಜಿ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ರಾಣೆಬೆನ್ನೂರಲ್ಲಿ ಜರಗಲಿರುವ ಕ. ಪ್ರಾಂತಿಕ ರಾಜಕೀಯ ಪರಿಷತ್ತಿಗೆ ಶ್ರೀ ಗಂಗಾಧರ ರಾವ್ ದೇಶಪಾಂಡೆಯವರು ಅಧ್ಯಕ್ಷರಾಗಬೇಕೆಂದು ಸೂಚಿಸಲಾಯಿತು ಶ್ರೀ ಕಿಲ್ಲೆಯವರು ಜಿಲ್ಲೆಯಲ್ಲಿ ಹಳ್ಳಿಗಳಲ್ಲಿ ಕಾಂಗ್ರೆಸ್ ಸಮಿತಿಗಳನ್ನು ಏರ್ಪಡಿಸುವರೆ ನೇಮಿಸಲ್ಪಟ್ಟರು.

ವ್ಯಾಯಾಮ ಮಂಡಲದ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭ

ಮಂಗಳೂರಿನ ಶ್ರೀ ಬಾಲಮಾರುತಿ ವ್ಯಾಯಾಮ ಮಂಡಲದ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ನಿನ್ನೆಯ ದಿನ ಸಾಯಂಕಾಲ ರಾವ್ ಬಹದೂರು ಎನ್. ವೆಂಕಟರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು ದೇವತಾ ಪ್ರಾರ್ಥನೆಯಾದ ತರುವಾಯ ಶ್ರೀ ಪಿ. ಎನ್ ಶೆಣೈಯವರು ಮಂಡಲದ ಗತವರ್ಷದ ವರದಿಯನ್ನು ಓದಿ,ಮಂಡಲದ ಸಂಕ್ಷಿಪ್ತ ಚರಿತ್ರೆಯನ್ನು ವಿವರಿಸಿ ಹೇಳಿದರು ಅನಂತರ ವ್ಯಾಯಾಮ ಸ್ಪರ್ಧೆಯಲ್ಲಿ ಗೆದ್ದವರಿಗೆ ಪಾರಿತೋಷಕಗಳನ್ನು ಹಂಚಿದ ಅನಂತರದಲ್ಲಿ ಅಧ್ಯಕ್ಷರು, ಆರೋಗ್ಯವೇ ಭಾಗ್ಯವೆಂದೂ, ಆರೋಗ್ಯವು ಚೆನ್ನಾಗಿಲ್ಲದಿದ್ದರೆ ಏನೊಂದು ಕೆಲಸವನ್ನು ಮಾಡುವುದಕ್ಕೂ ಸಾಧ್ಯವಿಲ್ಲವೆಂದೂ ಆದಕಾರಣ ದೇಹದ ಆರೋಗ್ಯವನ್ನು ಕಾಪಾಡುವುದಕ್ಕಾಗಿ ಎಲ್ಲರೂ ವ್ಯಾಯಾಮ ಮಾಡಬೇಕೆಂದೂ ಭಾಷಣಮಾಡಿದರು ಮಂಡಲದ ವಿದ್ಯಾರ್ಥಿಗಳು ಅಂಗಸಾಧನೆಯ ಪ್ರದರ್ಶನವನ್ನು ಮಾಡಿ ತೋರಿಸಿದರು ಈ ಹೊಸ ಕಟ್ಟಡವು ಶ್ರೀ ವೆಂಕಟರಮಣ ದೇವಸ್ಥಾನದವರ ಉದಾರತೆಯಿಂದ ಮಂಡಲಿಗೆ ದೊರೆತುದಾಗಿದೆ

ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲು

ದಕ್ಷಿಣಕನ್ನಡಜಿಲ್ಲಾ ಎಜ್ಯುಕೇಶನಲ ಕೌನ್ಸಿಲಿನ ಸಭೆಯು ಕಳೆದ ತಾ ೨೪ರಲ್ಲಿ ಜರಗಿತು, ಶ್ರೀ. ಎಸ್. ರಾಮರಾಯರು ಅಧ್ಯಕ್ಷರಾಗಿದ್ದರು, ಫೆಬ್ರವರಿ, ಮಾರ್ಚಿ ಮತ್ತು ಎಪ್ರಿಲ್ ತಿಂಗಳುಗಳಲ್ಲಾದ ಸಭೆಗಳ ಕಾರ್ಯಕ್ರಮವನ್ನು ಒಪ್ಪಲಾಯಿತು. ಮೂಡುಬಿದರೆ ಶಾಲೆಗೆ ಹಾಯರ್ ಎಲಿಮೆಂಟರಿ ಕ್ಲಾಸುಗಳಿಗೆ ಮಂಜೂರಾತಿ ಕೊಡಲ್ಪಟ್ಟಿತು ಉದ್ಯಾವರ ಶಾಲೆಗೆ ಕ್ರಿಸ್ತೇತರರನ್ನು ಸೇರಿಸಿಕೊಳುವ ವಿಷಯದಲ್ಲಿದ್ದ ಪ್ರತಿಬಂಧವು ಹಾಗೆಯೇ ಇಡಲ್ಪಟ್ಟಿತು. ಬೇರೆ ಕೆಲವು ವಿಷಯಗಳ ಮೇಲೆ ಚರ್ಚೆ ತೀರ್ಮಾನಗಳಾದ ಮೇಲೆ ಮೀಟಿಂಗು ಮುಗಿಯಿತು

ಪೋಸ್ಟು ಮತ್ತು ಟೆಲಿಗ್ರಾಫ್ ಯೂನಿಯನ್ ಪರಿಷತ್ತು

ಇಂಡಿಯನ್ ಪೋಸ್ಟ್ ಮತ್ತು ಟೆಲಿಗ್ರಾಫ್ ಯೂನಿಯನಿನ ಮಂಗಳೂರು ಶಾಖೆ ಇದರ ಪರಿಷತ್ತು ನಿನ್ನೆಯದಿನ ಸಾಯಂಕಾಲ ಗಣಪತಿ ಹೈಸ್ಕೂಲಿನಲ್ಲಿ ನಡೆಯಿತು. ಕಾರ್ಕಳದ ವಕೀಲರಾದ ಹಾಜಿ ಮುಸೇನ್ ಸಾಹೇಬ್ ಬಹದೂರು ಬಿ ಎ, ಬಿ ಎಲ್, ಯಂ ಎಲ್. ಎ ಇವರು ಅಧ್ಯಕ್ಷತೆ ವಹಿಸಿದ್ದರು ಪೋಸ್ಟಲ್ ಯೂನಿಯನಿನ ಸದಸ್ಯರ ಏಳಿಗೆಗೆಬೇಕಾದ ಹಲವು ಹಿತ ಸೂಚನೆಗಳನ್ನು ಅಧ್ಯಕ್ಷರು ತಮ್ಮ ಭಾಷಣದಲ್ಲಿ ವ್ಯಕ್ತಿಗೊಳಿಸಿದರು ಮತ್ತು ಯೂನಿಯನಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸಿದರು

ಸತ್ಕಾರ ಕೂಟ

ರಾ॥ ಪಮ್ಮಸ್ಥಳ ಮಂಜಯ್ಯ ಹೆಗ್ಗಡೆರು ಮಂಗಳೂರಿನ ತನ್ನ ನೂತನ ಗೃಹಪ್ರವೇಶ ಸಮಾರಂಭದ ಸಲುವಾಗಿ ಪ್ರಮುಖ್ಯ ಗೃಹಸ್ಥರಿಗೆ ಕಳೆದ ಆದಿತ್ಯವಾರ ಒಂದುಸತ್ಕಾರಕೂಟವನ್ನೇರ್ಪಡಿಸಿದರು

ಕಳೆದ ತಾ ೧೪ರಿಂದ ನಿನ್ನೆ ತಾ ೨೧ರ ವರೇಗೆ ಮಂಗಳೂರಿನ ಬಂಗರೆಯಲ್ಲಿ ಮೊಗವೀರ ಹತ್ತೂ ಸಮಸ್ತರ ಕೊಡುವಿಕೆಯಿಂದ (ದಿನಂಪ್ರತಿ ಸಾಯಂ ಘಂಟೆ ೪ರಿಂದ ೭ ೩೦ರ ವರೇಗೆ) ಹರಿಕೀರ್ತನಾ ಸಪ್ತಾಹವು ನಡೆಯಿತು ಇತ್ತೀಚೆಗೆ ನಮ್ಮ ಮಂಗಳೂರಿಗೆ ಬಂದು ಊರಿನ ಪ್ರಸಿದ್ಧ ವಿದ್ವಾಂಸರಿಂದ ತತ್ತ್ವಾರ್ಥಸಹಿತವಾಗಿ ಕಥೆಮಾಡುವರೆಂದು ಪ್ರಸಿದ್ಧಿಯನ್ನೂ ಇಲ್ಲಿಯವರಿಂದಲೇ ಸುವರ್ಣಪದಕ ಬಹುಮಾನಾದಿಗಳನ್ನೂ ಪಡೆದ ವೇದಮೂರ್ತಿ ಮ॥ ರಾಮಗ ಹರಿದಾಸರೇ, ಈ ನಮ್ಮ ಕಥಾಕಾಲಕ್ಷೇಪ ನಡೆಸಿದರು ನಿನ್ನೆ ಸಾಯಂ॥ ಘಂಟೆ ೯ಕ್ಕೆ ಭಕ್ತಿದಾಯಕವಾದ ರಾಮಾಂಜನೇಯಕಥೆಯು ಮಂಗಳವಾಗಿ, ದಾಸರು ಉಡುಗೊರೆ ಉಚಿತಗಳಿಂದಲೂ, ಕೆಂಜಿಹಾದಕ್ಷಿಣೆಯಿಂದಲೂ ಬಹುಮಾನಿಸಲ್ಪಟ್ಟರು.

SPACE Reserved FOR
UDIPI
NAVA-BHARAT BOOK DEPOT
ಸದ್ಯದಲ್ಲೇ ತೆರೆಯಲ್ಪಡುವ
ನವಭಾರತ ಬುಕ್ ಡಿಪೋ
ಇದಕ್ಕಾಗಿ
ಕಾದಿರಿಸಿದ
ಸ್ಥಳ.
ಉಡುಪಿ

ದಕ್ಷಿಣ ಕನ್ನಡ

ಮೂಡಬಿದರೆ

ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯ ಹೆಡ್ ಮಿಸ್ಟ್ರೆಸ್‌ರವರಾದ ಮಿಸೆಸ್ ಆರ್. ಆರ್. ಸೋನ್ಸರವರು ಕೆಲಸದಿಂದ ನಿವೃತ್ತರಾದುದರಿಂದ ಶಾಲಾ ಉಪಾಧ್ಯಾಯಿನಿಯರೂ, ಮಕ್ಕಳೂ, ಊರವರೂ ಕೂಡಿ ತಾರೀಕು ೨೨ನೇ ಗುರುವಾರ ಮಧ್ಯಾಹ್ನ ೪ ಗಂಟೆಗೆ ಒಂದು ವಿದಾಯ ಕೂಟವನ್ನು ಜರಗಿಸಿದರು. ಪಂಚಾಯತ ಪ್ರೆಸಿಡೆಂಟರೂ, ಡಾಕ್ಟರರೂ ಆದ ಶ್ರೀಯುತ ಎಂ. ವೆಂಕಟಪ್ಪಯ್ಯ ಮಲ್ಯರು ಅಗ್ರಾಸನವನ್ನು ಅಲಂಕರಿಸಿದರು. ಮಾನಪತ್ರ ಸಮರ್ಪಣೆ, ಮುಂಚಿನ ಅಲ್ಲದೆ ಈಗಿನ ವಿದ್ಯಾರ್ಥಿನಿಯರ ಪ್ರೀತಿ ಸೂಚಕ ಬಹುಮಾನಗಳು ಮತ್ತು ಸಂಗೀತ, ಫಲಹಾರದೊಡನೆ ಸಭೆಯು ಮುಕ್ತಾಯವಾಯಿತು. ಶಾಲೆಯು ಸ್ಥಾಪನೆಯಾದಂದಿನಿಂದ ಈ ವರೆಗೂ ೧೮ ವರ್ಷಗಳು ಯೋಗ್ಯರೀತಿಯಿಂದ ಶಾಲೆಯನ್ನು ನಡಿಸಿಕೊಂಡುಬಂದಿರುವ ಮಿಸೆಸ್ ಆರ್. ಆರ್. ಸೋನ್ಸರವರ ಅಗಲುವಿಕೆಯಿಂದ ಶಾಲೆಗೆ ದೊಡ್ಡ ಆಘಾತವಾದಂತಾಗಿದೆ ಈಗ ನೇಮಿಸಲ್ಪಟ್ಟ ಶ್ರೀಮತಿ ಜಲಜಬಾಯಿಯವರು ಯೌವನಸ್ಥರಾದುದರಿಂದ ಒಳ್ಳೇ ಹುರುಪಿನಿಂದ ಕೆಲಸಮಾಡಿ ಶಾಲೆಯ ಯಶಸ್ಸನ್ನು ಇನ್ನೂ ಹೆಚ್ಚಿಸುವರಾಗಿ ನಂಬಿಕೆ.

ದಿ ಸ್ಟೂಡೆಂಟ್ಸ್ ಯೂನಿಯನ್ ಫೂಟ್ ಬೋಲ್ ಕ್ಲಬ್, ಬೊಂಬಾಯಿ

ತಾರೀಕು ೨೮-೩-೩೭ರಲ್ಲಿ ಈ ಕ್ಲಬ್ಬಿನ ದ್ವಿತೀಯ ವಾರ್ಷಿಕ ವರದಿಯು ಶ್ರೀ ಯನ್. ಜಿ. ಪುತ್ರನ್ ರವರ ಅಧ್ಯಕ್ಷತೆಯಲ್ಲಿ ಮೊಗವೀರ ರಾತ್ರಿ ಶಾಲಾ ಕಟ್ಟಡದಲ್ಲಿ ನಡೆದು ಕ್ಲಬ್ಬಿನ ಆಡಳಿತ ಕಮಿಟಿಯನ್ನು ನೇಮಿಸಲಾಯಿತು.

೧೯೩೭-೩೮ರ ಆಡಳಿತ ಕಮಿಟಿ ಮೆಂಬರರು— ಮ. ರಾ. ಟಿ. ಎ. ಕೋಟ್ಯಾನ್ ಮತ್ತು ಎಲ್. ಟಿ. ಸುವರ್ಣ, ಅಧ್ಯಕ್ಷರು, ಯಸ್. ಟಿ. ಸುವರ್ಣ, ಯಸ್. ಎಚ್. ಅಮಿನ್, ಜೊತೆ ಕಾರ್ಯದರ್ಶಿಯರು. ಸೀತಾರಾಮ ಕೆ. ಅಮಿನ್, ಕೋಶಾಧಿಕಾರಿ. ಎ. ಪಿ. ಕೋಟ್ಯಾನ್, ಜಿ. ಟಿ. ಪುತ್ರನ್, 'ಎ' ಪಂಗಡದ ದಳಪತಿಯರು (ಕೆಪ್ಟನರು). ಎ. ಎ. ಶ್ರೀಯನ್, ಮತ್ತು ಕೆ. ಬಿ. ಕೋಟ್ಯಾನ್, 'ಬಿ' ಪಂಗಡದ ದಳಪತಿಯರು. ಡಿ ಕೆ. ಸಾಲಿಯಾನ್, ಸುಬ್ರಾಯ ಕೆ. ಅಮಿನ್, 'ಸಿ' ಪಂಗಡದ ದಳಪತಿಯರು. ನರ್ಸಪ್ಪ ಕೆ. ಸುವರ್ಣ, ಕೃಷ್ಣಪ್ಪ ಟಿ. ಶ್ರೀಯನ್, ಲೆಖ್ಖ ಪರಿಶೋಧಕರು ಸಿ. ಎ. ಕಂಗೆನ್, ಎನ್. ಬಿ. ಸಾಲಿಯನ್, ಜಿ. ಯಸ್. ಕರ್ಕಡ, ವೈ. ಎಂ. ಶೆಟ್ಟಿ, ಎ. ಬಿ. ಸುವರ್ಣ, ಕಮಿಟಿ ಮೆಂಬರರು.

ಜಿಲ್ಲಾ ಬೋರ್ಡು ಚುನಾವಣೆ

ದ. ಕ. ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯು ಬರುವ ಅಕ್ಟೋಬರ ತಿಂಗಳಲ್ಲಿ ಜರಗಲಿರುವುದಾಗಿ ತಿಳಿದುಬರುತ್ತದೆ ಮತದಾರರ ಪಟ್ಟಿಯನ್ನು ತಯಾರಿಸುವುದೇ ಮೊದಲಾದ ಇಲೆಕ್ಷನ್ ಕೆಲಸ ನಡೆಸುವರೆ ಆಫೀಸರರ ನೇಮಕವಾಗಲಿರುವುದು. ಶ್ರೀಗಳಾದ ಪಿ. ಎಸ್. ತಿಮ್ಮಪ್ಪ ಶೆಟ್ಟಿ, ಬಿ.ಎ. ಪರಶುರಾಮ ಬಿ. ಎ. ಬಿ. ಎಲ್. ಇವರಿಬ್ಬರು ಚುನಾವಣಾ ಅಧಿಕಾರಿಗಳಾಗಿ ಸಧ್ಯದಲ್ಲಿಯೇ ನೇಮಕ ಹೊಂದಲಿರುವರೆಂದು ಸುದ್ದಿಯುಂಟಾಗಿದೆ

ಕೊಡಗು

ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆ— ಕಾಂಗ್ರೆಸ್ ಉಮೇದ್ವಾರರಿಗೆ ಪ್ರಚಂಡ ವಿಜಯ: ೧೧ ಸ್ಥಾನಗಳಲ್ಲಿ ೯ ಸ್ಥಾನಗಳಿಗೆ ಕಾಂಗ್ರೆಸ್ ಹುರಿಯಾಳುಗಳೇ ಜಯಶೀಲರಾಗಿ ಆರಿಸಿ ಬಂದಿರುವರು

ಶ್ರೀಗಳಾದ ಕಾಕೆಮಾಡ ಗಣಪತ್ತಿಯವರು, ಅಜ್ಜಕುಟ್ಟಿರ ಪೊನ್ನಪ್ಪನವರು, ಪಂಧ್ಯಂಡ ಬೆಳ್ಯಪ್ಪನವರು ಮಂಪೇಪಂಡ ಸೋಮಯ್ಯನವರು, ಬಿಟ್ಟೋಳಂಡ ಮಾಚಯ್ಯನವರು, ಪೋರೆಯನ ಮುದ್ದಣ್ಣನವರು ಅಪ್ಪಚ್ಚೆಟ್ಟೋಳಂಡ ಮಾಚಯ್ಯನವರು, ಪಂಡ್ಲಿ ಪುಪ್ಪಣ್ಣನವರು, ಸಿಂಗೂರು ಮಾದಪ್ಪನವರು ಕಾಂಗ್ರೆಸ್ ಪಕ್ಷದಿಂದ ನಿಂತು ಜಯಶೀಲರಾದ ಉಮೇದ್ವಾರಿಗಳು ಕಾಂಗ್ರೆಸ್ ಉಮೇದ್ವಾರಿಗಳಲ್ಲದೆ ಜಯಶೀಲರಾದವರು ರಾವ್ ಸಾಹೇಬ್ ಪಾಂಪಂಡ ಚೆಂಗಪ್ಪನವರು ಮತ್ತು ಶ್ರೀ. ಎಸ್. ಎನ್. ರಾಮ ಶೆಟ್ಟಿಯವರು. ಕೊಡಗು ಕೌನ್ಸಿಲು ಚುನಾವಣೆಯು ಇದೇ ತಾ. ೨೦ರಲ್ಲಿ ನಡೆದಿರುವುದು. ಇದರಲ್ಲೂ ಕಾಂಗ್ರೆಸಿನವರು ಬಹುಪಕ್ಷದಿಂದ ಆರಿಸಿ ಬರಬಹುದೆಂದು ನಂಬಲಾಗಿದೆ.

ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಬೊಂಬಾಯಿ ಶಾಖೆ

ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಈ ಸಂಸ್ಥೆಯ ೩೧ನೇ ಶಾಖೆಯೊಂದು ಇದೇ ತಾ. ೨೩ನೇ ಶುಕ್ರವಾರ ಸಂಜೆ ೫|| ತಾಸಿಗೆ ಸರಿಯಾಗಿ ಬೊಂಬಾಯಿ ಕೇಂದ್ರದಲ್ಲಿ ಬೊಂಬಾಯಿಯ ಮೇಯರರಾದ ಡಾ. ಇ ಮೋಸಸ್ ಎಂ. ಡಿ ಇವರ ಅಧ್ಯಕ್ಷತೆಯಲ್ಲಿ ಅತ್ಯಂತ ಸಂಭ್ರಮದಿಂದ ತೆರೆಯಲ್ಪಟ್ಟಿತು ಸಮಾರಂಭಕ್ಕೆ ಮಹನೀಯರನೇಕರು ದಯಮಾಡಿಸಿದ್ದರು. ಮ್ಯಾನೇಜಿಂಗ್ ಡೈರೆಕ್ಟರರಾದ ಡಾ ಮಾಧವ ಪೈಗಳವರು ನೆರೆದವರಿಗೆ ಸುಸ್ವಾಗತವನ್ನು ಬಯಸಿ ಬ್ಯಾಂಕಿನ ಭಾವೀ ಶ್ರೇಯಸ್ಸಿನ ಕುರಿತು ಸಹಕಾರ ಪ್ರೋತ್ಸಾಹವನ್ನು ಕೋರಿದ ಬಳಿಕ ಸಭಾಧ್ಯಕ್ಷರ ಸಂದರ್ಭೋಚಿತ ಭಾಷಣವಾಯಿತು ಈ ಹೊಸ ಶಾಖೆಯು ಸರ್ವತೋಮುಖವಾಗಿ ಯಶಸ್ಸನ್ನೂ ಅಭಿವೃದ್ಧಿಯನ್ನೂ ಹೊಂದಲೆಂದು ಹಾರೈಸುತ್ತೇವೆ.

ಅಡ್ಯನಡ್ಕ

ಇಲ್ಲಿಯ ಏಡೆಡ್ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವು ತಾ. ೧೯-೪-೩೭ನೇ ಸೋಮವಾರ ಅಪರಾಹ್ಣ ಘಂಟೆ ೫ಕ್ಕೆ ಸರಿಯಾಗಿ ಪುತ್ತೂರು ರೇಂಜ್ ಶಾಲಾ ಸೀನಿಯರ್ ಡಿಪ್ಯೂಟಿ ಇನ್ಸ್‌ಪೆಕ್ಟರ್ ಮ. ರಾ. ಬಿ. ವಿ. ವೆಂಕಟ್ರಮಣ, ಬಿ. ಎ. ಎಲ್. ಟಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು ಆಸುಪಾಸಿನ ಶಾಲೆಗಳ ಉಪಾಧ್ಯಾಯರುಗಳೂ, ಊರ ಮತ್ತು ಪರಊರಿನ ಅನೇಕ ಮಂದಿ ಸದ್ಗೃಹಸ್ಥರೂ ನೆರೆದಿದ್ದರು. ಕ್ರಮದಂತೆ 'ಸ್ವಾಗತ ಭಾಷಣ' ಅಧ್ಯಕ್ಷರ ಚುನಾವಣೆ, ದೇವತಾ ಪ್ರಾರ್ಥನೆ ಸ್ಕೂಲು ಟೋಸ್ಟುವರದಿ ಓದೋಣ, ಮಕ್ಕಳಿಗೆ ಇನಾಮುಹಂಚೋಣ, ಹಿತಚಿಂತಕರ ಭಾಷಣಗಳಾದ ಮೇಲೆ ಅಧ್ಯಕ್ಷ ಮಹಾಶಯರು ಶಾಲೆಯ ಏಳಿಗೆಯ ವಿಷಯವಾಗಿ ಅನೇಕಾನೇಕ ಹಿತಸೂಚನಗಳಿಂದ ಸುರಸವಾದ ಭಾಷಣವನ್ನು ಮಾಡಿದರು. ಅನಂತರ ಮಕ್ಕಳ ವಿನೋದಗಳೂ, ರಾತ್ರಿಯಲ್ಲಿ ಯಕ್ಷಗಾನ ಸಮಾರಂಭವೂ ನಡೆಯಿತು.

ಫರಂಗಿಪೇಟೆ

ತಾ. ೧೯ನೇ ರಾಮನವಮಿ ದಿನ ಇಲ್ಲಿಯ ಶ್ರೀ. ರಾಮಾ ಹಾಯರ್ ಎಲಿಮೆಂಟರಿ ಶಾಲೆಯ ೨೦ನೇ ವರ್ಧಂತಿ ಉತ್ಸವವು. ಮಂಗ್ಳೂರು ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಹೆಡ್ ಮಾಸ್ತರ್ ಕೆ. ಗೋಪಾಲರಾವ್ ಅವರ್ಗಳ್ ಬಿ. ಎ. ಎಲ್. ಟಿ.ಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಶಾಲಾವಠಾರವು ಜನಸ್ತೋಮದಿಂದ ಕಿಕ್ಕಿರಿದು ಹೋಗಿತ್ತು. ಮಂಗೂರು ಡಿವಿಷನ್ ಡಿಪ್ಯುಟಿಕಲೆಕ್ಟರ್, ಸಾಹುಕಾರ್ ಯಂ. ವೆಂಕಟೇಶ ಪೈ. ಮತ್ತು ಕುಟುಂಬ, ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿಯ ಮೆನೆಜರವರ ಕುಟುಂಬ, ಮಂಗಳೂರು ರೇಂಜಿನ ಸೀನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್, ಗವರ್ನಮೆಂಟ್ ಕೊಲೇಜು ಅಧ್ಯಾಪಕರು, ಚೇಳೂರು ಇಗರ್ಜಿ ಗುರುಗಳು, ಕಿನ್ನಿಕಂಬಳ, ಕಲ್ಲಡ್ಕ, ಮೇರಮಜ್ಲ್, ಚೇಳೂರು ಇತ್ಯಾದಿ ಶಾಲೆಗಳ ಉಪಾಧ್ಯಾಯರ ಮಂಡಳಿಗಳು ಮುಂತಾದ ಹಲವು ಮಂದಿ ಗೃಹಸ್ಥರೂ ಗೃಹಿಣಿಯರೂ ದಯಮಾಡಿದ್ದರು. ಕಾರ್ಯಕ್ರಮದಂತೆ ದೇವತಾ ಪ್ರಾರ್ಥನ, ಶಾಲಾ ಹಿತವನ್ನು ಬಯಸುವದು, ಶಾಲಾರಿಪೋರ್ಟು ಓದುವದು, ಇನಾಮುಗಳ ಹಂಚೋಣ, ಶಾಲಾಹಿತೈಷಿಗಳ ಭಾಷಣಗಳು ನಡೆದ ನಂತರ, ಅಧ್ಯಕ್ಷರು ತಮ್ಮ ಹಾಸ್ಯಾಸ್ಪದ ಮತ್ತು ಬೋಧ ಪ್ರದವಾದ ದೀರ್ಘ ಭಾಷಣ ಮಾಡಿದರು. ಅನಂತರ ಶಾಲಾವಿದ್ಯಾರ್ಥಿನಿಯರು ಲೆಜೀಮ್ ಮತ್ತು ನರ್ತನಗಳಿಂದ ಸಭಿಕರನ್ನು ಹರ್ಷಗೊಳಿಸಿದರು. ಕೊನೆಯದಾಗಿ 'ಸಂಸಾರ ಚಕ್ರ' ಎಂಬ ಸಾಮಾಜಿಕ ನಾಟಕ ಒಂದನ್ನು ಆಡಿದ ತರುವಾಯ ಅತಿಥಿಗಳಿಗೆಲ್ಲಾ ಧನ್ಯವಾದಗಳನ್ನು ಅರ್ಪಿಸಿ,ರಾಷ್ಟ್ರಗೀತದೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು. ಆ ದಿನ ಬೆಳಿಗ್ಗೆ ವಿದ್ಯಾರ್ಥಿಗಳಿಗೂ, ಸ್ಕೂಲ್ ಡೇ ಬಗ್ಗೆ ಸಹಾಯಮಾಡಿದವರಿಗೂ ಎಂದಿನಂತೆ ಉಪಹಾರವಿತ್ತು.

ಅಂಕೋಲಾ

ಶ್ರೀ. ಸಂಸ್ಥಾನ ನಾಗವೇ ಅಂಕೋಲಾ ಹನುಮಟ್ಟಾ ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ದೇವಾಲಯದ ಜೀರ್ಣೋದ್ಧಾರ ಶಿಖರ ಕಲಶಪ್ರತಿಷ್ಠಾ ಮಹೋತ್ಸವ ಸಮಾರಂಭವು ಶ್ರೀಶಕ ೧೮೫೯ನೇ ಈಶ್ವರ ನಾಮ ಸಂವತ್ಸರದ ವೈಶಾಖ ಶುಕ್ಲ ೩ಯಾ (ಅಕ್ಷಯ ತೃತೀಯಾ) ಗುರುವಾರ ಉದಯ ಘಟಿ ೨-೧೬ಕ್ಕೆ (ತಾರೀಕು ೧೩-೫-೩೭ ಪ್ರಾತಃ ಘ.೭ಕ್ಕೆ) ಪ್ರಾಪ್ತವಾಗುವ ವೃಷಭಲಗ್ನ ಸುಮುಹೂರ್ತದಲ್ಲಿಜರಗಿಸಬೇಕಾಗಿ ನಿಶ್ಚಯಿಸಿರುವದರಿಂದ,ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ದೇವರುಗಳ ಅನುಗ್ರಹದಿಂದ ಶ್ರೀ ಸನ್ನಿಧಿಯಲ್ಲಿ ನೆರವೇರುವ ಈ ದಿವ್ಯಸಮಾರಂಭಕ್ಕೆ ತಾವು ಸರ್ವರೂ ದಯೆಗೈದು ಸಹಭಾಗಿಗಳಾಗಿ, ಈ ಪುಣ್ಯಪ್ರದವಾದ ಮಹತ್ಕಾರ್ಯವನ್ನೂ ಸಮಾರಾಧನಾದಿ ವಿಶಿಷ್ಟಕಾರ್ಯಗಳನ್ನೂ ಚಂದಗಾಣಿಸಿ ಸಂಪೂರ್ಣತೆಗೊಳಿಸಿಕೊಟ್ಟು, ಶ್ರೀಲಕ್ಷ್ಮೀನಾರಾಯಣ ಮಹಾಮಾಯಾ ದೇವರುಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗಿ, ಮಹಾಪ್ರಸಾದವನ್ನು ಸ್ವೀಕರಿಸಿ, ಕೃತಾರ್ಥರಾಗಬೇಕಾಗಿಯೂ, ಈ ಸಂದರ್ಭದಲ್ಲಿ ಶ್ರೀ ದೇವರುಗಳಿಗೆ ತೆಗದಿಟ್ಟ ಕಾಣಿಕೆ ವಗೈರೆ ದ್ರವ್ಯಗಳನ್ನು ತಂದು ಭಂಡಾರಕ್ಕೆ ಅರ್ಪಿಸಬೇಕಾಗಿಯೂ

ನಾರಾಯಣ ಮುಷ್ಟಗಿರಿ ಮಹಾಲೆ.

ಭಂಡಾರದ ಆಡಳಿತೆ ಮೊಕ್ತೇಸರ ಮಹಾಜನ ಇವರು ತಿಳಿಸುತ್ತಾರೆ. ಅಂಕೋಲು ಹನುಮಟ್ಟಾ.

ಜಾಹೀರು ಪ್ರಕಟಣೆ

ನಂಬ್ರ 2515ನೇ ಬಡಗಬೆಟ್ಟು ಸಹಕಾರ ಸಂಘ, ಲಿಮಿಟೆಡ್, ಉಡುಪಿ ಇದರ ಮಹಾಸಭೆಯೊಂದನ್ನು ತಾ. 6-5-1937ನೇ ಗುರುವಾರ ಅಪರಾಹ್ನ ಘಂಟೆ 4ಕ್ಕೆ ಸಂಘದ ಆಫೀಸಿನಲ್ಲಿ ಜರಗಿಸಿ, ಸಂಘದ ಬಾಬ್ತು ಪ್ರಕೃತ ವಿಜಯ ಬೇಂಕ್, ಲಿಮಿಟೆಡ್, ಇದರ ಉಡುಪಿ ಶಾಖೆಯು ಮತ್ತು ದೇವದಾಸ ಭಟ್ಟರ ಸ್ವಾಧೀನ ಇರುವ ಕಟ್ಟೋಣವನ್ನು ಮಾರಾಟಮಾಡುವ ವಿಷಯ ಆಲೋಚಿಸಲಾಗುವುದು. ತತ್ಸಮ್ಮಂಧ ಸಂಘದ ಮೆಂಬರರೆಲ್ಲರೂ, ಕಟ್ಟೋಣವನ್ನು ಕ್ರಯಕ್ಕೆ ಪಡಕೊಳ್ಳಲಪೇಕ್ಷಿಸುವ ಗ್ರಾಹಕರೂ ಸಹ ಅಂದು ಸಕಾಲದಲ್ಲಿ ಹಾಜರಾಗಬೇಕಾಗಿ ಈ ಮೂಲಕ ತಿಳಿಸೋಣಾಗುತ್ತದೆ.

ನಂಬ್ರ 2515ನೇ ಬಡಗಬೆಟ್ಟು, ಸಹಕಾರ ಸಂಘ,
ಲಿಮಿಟೆಡ್, ಉಡುಪಿ.
ತಾರೀಕು 27-4-1937.

ಕೆ. ಜಿ ಬಲ್ಲಾಳ್,
ಬಿ. ಎ., ಎಲ್ ಎಲ್. ಬಿ.
ಪ್ರೆಸಿಡೆಂಟ್.

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ—

ಗುಡಪಿಪ್ಪಲಿ **(ಲೀವರ್ ರೋಗಕ್ಕೆ)**	ಗರ್ಭಪಾಲ **(ಗರ್ಭಶೂಲೆ, ಗರ್ಭಸ್ರಾವಕ್ಕೆ)**	ಚಂದ್ರಮಸ್ **(ವಾಂತಿಭೇದಿ, ಅತಿಸಾರಕ್ಕೆ)**

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ. **ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ** ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಕೊಳ್ಳಿರಿ.

ರಾಜಾಜಿಯವರ ಉಜ್ವಲ ಭಾಷಣ

'ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧ ಹಕ್ಕು — ತಾತ್ಕಾಲಿಕ ಮಂತ್ರಿಮಂಡಲದ ತೀವ್ರ ಖಂಡನೆ

(ನಮ್ಮ ಸ್ವಂತ ಬಾತ್ಮಿದಾರರಿಂದ)

ಜಿಲ್ಲಾ ಬೋರ್ಡು ಆಫೀಸಿನಲ್ಲಿ ಗಾಂಧಿಜಿಯವರ ಭಾವಚಿತ್ರ ಅನಾವರಣ ಮಾಡಿ ಶ್ರೀ| ರಾಜಗೋಪಾಲಾಚಾರ್ಯರೂ ಅವರೊಡನೆ ಬಂದಿದ್ದ ಇತರ ಧುರೀಣರೂ ಮೈದಾನಕ್ಕೆ ಹೊರಟುಬಂದರು. ಮೈದಾನಿನಲ್ಲಿ ಸುಮಾರು 8-10 ಸಾವಿರ ಮಂದಿ ಸ್ತ್ರೀಪುರುಷರು ಬಂದು ಕುಳಿತಿದ್ದರು. ಶ್ರೀ| ಆಚಾರ್ಯರು ಭಾಷಣವೇದಿಕೆಯ ಮೇಲೇರಲು ಜಯಜಯಕಾರವು ಎಲ್ಲೆಲ್ಲಿಯೂ ಕೇಳಿಬಂತು.

ಶ್ರೀ| ಕೆ. ಆರ್. ಕಾರಂತ್ ಯಂ. ಎಲ್. ಎ.'ಯವರು ಡಾ| ಕೆ. ವಿಟ್ಠಲಶೆಟ್ಟಿಯವರನ್ನು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಪ್ರಾರ್ಥಿಸಲಾಗಿ ಡಾ| ಶೆಟ್ಟಿಯವರು ಅಗ್ರಾಸನವನ್ನು ವಹಿಸಿದರು. ಡಾ| ಶೆಟ್ಟಿಯವರು ಅಭ್ಯಾಗತರಿಗೆ ಸ್ವಾಗತವನ್ನಿತ್ತರು. ಮತ್ತು ನಗರಸಭೆಯವರ ಮಾನಪತ್ರವನ್ನು ಸಮರ್ಪಿಸಿದರು. ಆ ಮಾನಪತ್ರದಲ್ಲಿ ಶ್ರೀ| ಆಚಾರ್ಯರಿಗೂ, ಶ್ರೀ| ಟಿ. ಪ್ರಕಾಶಂರವರಿಗೂ ಆದರ ಪೂರ್ವಕವಾದ ಸ್ವಾಗತವನ್ನು ಬಯಸಿದ್ದಲ್ಲದೆ ಈ ನಗರವು ಕಾಂಗ್ರೆಸಿನ ಧ್ಯೇಯವನ್ನು ಪಾಲಿಸಲು ಸದಾ ಸಿದ್ಧವಿದೆಯೆಂದು ಬರೆದಿತ್ತು. ಪ್ರಕೃತದ ರಾಜಕೀಯ ಧೋರಣೆಯ ವಿಷಯವಾಗಿ ಸೂಚಿಸುತ್ತಾ, ಸರಕಾರದವರು ಮತದಾರರ ತೀರ್ಮಾನಕ್ಕೆ ವಿರುದ್ಧವಾಗಿ ನಡೆದುದು ಸರಿಯಲ್ಲವೆಂದೂ, ತಾತ್ಕಾಲಿಕ ಮಂತ್ರಿಗಳನ್ನು ಪದವಿಯಿಂದ ಕಿತ್ತುಹಾಕಿ ರಾಷ್ಟ್ರಪಕ್ಷದವರನ್ನು ಮಂತ್ರಿಮಂಡಲಸ್ಥಾಪಿಸುವಂತೆ ಕೇಳಿಕೊಳ್ಳಬೇಕೆಂದೂ ಅದರಲ್ಲಿ ಸೂಚಿಸಲ್ಪಟ್ಟಿತ್ತು. ಮಾನಪತ್ರವನ್ನು ಓದಿ ಶ್ರೀ| ಆಚಾರ್ಯರಿಗೂ, ಶ್ರೀ| ಪ್ರಕಾಶಂರವರಿಗೂ ಕೊಟ್ಟ ಮೇಲೆ ಅವರಿಬ್ಬರನ್ನೂ ಹೂವಿನ ಹಾರ ಹಾಕಿ ಸತ್ಕರಿಸಿದರು.

ಶ್ರೀ| ರಾಜಗೋಪಾಲಾಚಾರ್ಯರ ಭಾಷಣದ ಸಾರ

ಕನ್ನಡದಲ್ಲಿ ಉತ್ತರಕೊಡಲು ಸಾಧ್ಯವಿಲ್ಲದುದಕ್ಕಾಗಿ ರಾಜಾಜಿಯವರು ತಮ್ಮ ಅಶಕ್ತತೆಯನ್ನು ಸೂಚಿಸಿ ವಿಷಾದಪಟ್ಟು ಇಂಗ್ಲಿಷಿನಲ್ಲಿ ತಮ್ಮ ಭಾಷಣವನ್ನಾರಂಭಿಸಿದರು. ಅಧ್ಯಕ್ಷರೇ ಮತ್ತು ಬಂಧುಭಗಿನಿಯರೇ, ಎರಡನೆಯ ಸಾರಿ ನಿಮ್ಮ ಈ ಸುಂದರ ನಗರಕ್ಕೆ ಬಂದೆನಾಗಿ ಸಂತೋಷಪಡುತ್ತೇನೆ. ನಿಮ್ಮ ನಗರಸಭೆಯವರು ನನಗೆ ಕೊಟ್ಟ ಮಾನಪತ್ರದಲ್ಲಿ ನಾನು ಯಾವ ವಿಷಯದಲ್ಲಿ ಮಾತನಾಡಬೇಕೆಂದಿದ್ದೆನೋ ಅದೇ ವಿಷಯವನ್ನು ಸೂಚಿಸಿದ್ದಾರೆ. ಸರಕಾರದವರು ಪ್ರಕೃತ ಅನುಸರಿಸುತ್ತಿರುವ ಧೋರಣೆಯನ್ನು ಅದರಲ್ಲಿ ತೀವ್ರವಾಗಿ ಖಂಡಿಸಿದ್ದಾರೆ.

ಸರಕಾರದವರು ತಪ್ಪು ಮಾಡಿದ್ದಾರೆ

ಎಲ್ಲೆಲ್ಲಿಯೂ ನಗರಸಭೆಗಳು, ಜಿಲ್ಲಾ ಬೋರ್ಡುಗಳು ಮತ್ತು ಇನ್ನಿತರ ಸಂಸ್ಥೆಗಳು ಸರಕಾರದವರು ಈಗ ಅನುಸರಿಸುತ್ತಿರುವ ಮಾರ್ಗವನ್ನು ಖಂಡಿಸುತ್ತಿವೆ. ಇವರಿಂದಲೇ ಸರಕಾರವು ತಪ್ಪುದಾರಿಯನ್ನು ಹಿಡಿದಿದೆಯೆಂದು ಗೊತ್ತಾಗುತ್ತದೆ. ಒಂದು ಜನಾಂಗದ ಅಭಿಪ್ರಾಯವನ್ನು ತಿರಸ್ಕರಿಸುವುದು ಯುಕ್ತವಲ್ಲ. ಆದರೆ ಸರಕಾರದವರು ಇನ್ನೂ ಸರಿಯಾದ ಪಾಠವನ್ನು ಕಲಿಯಲಿಲ್ಲ. ಸಾಗರದಲ್ಲಿನ ಮಹತ್ತಾದ ಅಲೆಗಳಿಂದ ಪಾಠ ಕಲಿಯದಿರುವವರು ಗುಡಿಸಲಿನಲ್ಲಿರುವ ನೀರಿನ ಹನಿಯಿಂದ ಕಲಿಯುವುದಾದರೂ ಹೇಗೆ?

ಜನಾಂಗದ ಅಭಿಪ್ರಾಯವನ್ನು ತಿರಸ್ಕರಿಸುವುದು ಹಾನಿಕರ

ಪ್ರಕೃತ ಬ್ರಿಟಿಷ್ ಸರಕಾರದವರು ಭಾರತ ಜನಾಂಗದ ಅಭಿಪ್ರಾಯವನ್ನು ತಿರಸ್ಕಾರ ಬುದ್ಧಿಯಿಂದ ನೋಡುತ್ತಿದ್ದಾರೆ. ಇದು ಅವರಿಗೆ ಶ್ರೇಯಸ್ಕರವಲ್ಲ. ಜನಾಂಗದ ಅಭಿಪ್ರಾಯವನ್ನು ತಿರಸ್ಕರಿಸಿದರೆ ಅದರಿಂದ ಕೇಡು ಸಂಭವಿಸಬಹುದಲ್ಲದೆ, ಅದರಿಂದ ಕಲ್ಯಾಣವಾಗಲಾರದು.

ಸುಧಾರಣೆಯು ದಾನವಲ್ಲ

ಬ್ರಿಟಿಷ್ ಸರಕಾರವು ಹಿಂದುಸ್ಥಾನಕ್ಕೆ ಸುಧಾರಣೆಯನ್ನು ಕೊಡುವುದು ಒಂದು ದಾನವಲ್ಲ. ಸುಧಾರಣೆಯು ನಮ್ಮದು. ಅದರಲ್ಲಿ ನಮಗೆ ಹಕ್ಕು ಇದೆ. ಅದು ನಮ್ಮ ಜನ್ಮಸಿದ್ಧವಾದ ಹಕ್ಕು. ನಮ್ಮದೇ ಆದ ಸುಧಾರಣೆಯನ್ನು ನಾವು ಪಡೆಯುವಾಗ ಅದರಲ್ಲೇನಾದರೂ ಕುಂದುಕೊರತೆಯಿದೆಯೇ ಎಂದು ನೋಡುವುದು ನಮ್ಮ ಕರ್ತವ್ಯ. ಒಬ್ಬನು ಒಂದು ವಸ್ತುವನ್ನು ನಮಗೆ ದಾನ ಕೊಟ್ಟರೆ ಆ ವಸ್ತುವನ್ನು ನಾವು ಪರೀಕ್ಷಿಸಬೇಕಿಲ್ಲ. ಆದರೆ ನಮ್ಮ ವಸ್ತುವನ್ನು ನಾವು ಹಿಂದೆ ಪಡೆಯುವಾಗ ಅದನ್ನು ನಾವು ಚೆನ್ನಾಗಿ ಪರೀಕ್ಷಿಸಿ ನೋಡಿಯೇ ಸ್ವೀಕರಿಸಬೇಕು. ಅದೇ ರೀತಿಯಲ್ಲಿ ಈ ಸುಧಾರಣೆಯನ್ನು ನಾವು ಚೆನ್ನಾಗಿ ಪರೀಕ್ಷಿಸಬೇಕಾಗಿದೆ.

ಭರತಖಂಡದೊಡನೆ ಸಂಧಿ

ಇಂಗ್ಲಿಷ್ ಜನರು ತಮ್ಮ ಅನುಕೂಲತೆಗಾಗಿ ಈ ಸುಧಾರಣೆಯನ್ನು ಕೋರಿಸಿರುವರು. ತಮ್ಮ ದೇಶದ ಉದ್ಧಾರಕ್ಕಾಗಿ, ಕ್ಷೇಮಕ್ಕಾಗಿ ತಮ್ಮ ದೇಶದ ಸುತ್ತುಮುತ್ತಲಿನ ರಾಜ್ಯಗಳೊಡನೆ ಸಂಧಿಮಾಡಿಕೊಳ್ಳುತ್ತಿರುವರು; ಇದೇ ಸಾಲದು. ಬ್ರಿಟಿಷರು ತಮಗೆ ಕ್ಷೇಮ ಬೇಕಾದರೆ ಹಿಂದುಸ್ಥಾನದೊಡನೆ ಸಂಧಿಮಾಡಿಕೊಳ್ಳಬೇಕು.

ಹದಿನೆಂಟನೆಯ ಶತಮಾನಕ್ಕೆ ಹಿಂತಿರುಗುವರೆ?

ನಾವು ನಿಮಗೊಂದು ಹೊಸ ರಾಜ್ಯಪದ್ಧತಿಯನ್ನು ಕೊಟ್ಟಿದ್ದೇವೆ. ಅದನ್ನು ನೀವು ತಿರಸ್ಕರಿಸದಿದ್ದರೆ ನಾವದನ್ನು ವಾಪಾಸು ತೆಗೆದುಕೊಳ್ಳುತ್ತೇವೆ. ಎಂದು ಬ್ರಿಟಿಷರು ಹೇಳುವಹಾಗಿಲ್ಲ. ಬ್ರಿಟಿಷ್ ಸರಕಾರವು ಹೀಗೆ ಹೇಳಿ 18ನೇ ಶತಮಾನಕ್ಕೆ ಹಿಂತಿರುಗುವ ಸಂಭವವಿಲ್ಲ. ಒಂದುವೇಳೆ ಅವರು ಹಿಂತಿರುಗಿದರೆ ನಾವೂ ಸಹ 18ನೇ ಶತಮಾನಕ್ಕೆ ಹಿಂತಿರುಗಬೇಕಾಗುವುದು. ಆಗ ಆಕಾಲದ ವಿಪತ್ತುಗಳೆಲ್ಲವು ಪುನಃ ತಲೆಯೆತ್ತುವುವು.

ಸುಧಾರಣೆಯ ಮಾರ್ಗದಲ್ಲಿ ಮುಂದೊತ್ತುವುದೊಂದೇ ದಾರಿ

ಒಂದು ಅಗಲಕಿರಿದಾದ ಓಣಿಯಲ್ಲಿ ಒಂದು ಮೋಟರ್ ಬಂಡಿಯನ್ನು ತಿರುಗಿಸಲು ಸಾಧ್ಯವೇ? ಎಂದೂ ಇಲ್ಲ. ಅದನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದೊಂದೇ ಮಾರ್ಗ. ಹಾಗೆಯೇ ಸರಕಾರದವರು ಸುಧಾರಣೆಯ ಮಾರ್ಗವನ್ನು ಬಿಟ್ಟು ಹಿಂತಿರುಗಲು ಸಾಧ್ಯವಿಲ್ಲ. ಆ ದಾರಿಯಲ್ಲಿ ಮುಂದುವರಿಯಲೇ ಬೇಕು.

ಸೆಕ್ಷನ್ 93

ನಮ್ಮಲ್ಲಿ ಕೆಲವರು, ಸರಕಾರದವರು ಇಂಡಿಯಾ ಮಸೂದೆಯ ಸೆಕ್ಷನ್ 93ರ ಪ್ರಕಾರ ಅಧಿಕಾರ ನಡೆಸುವರೆಂದು ಹೇಳುತ್ತಾರೆ. ಸರಕಾರದವರನ್ನು ಸೆಕ್ಷನ್ 93ರ ಪ್ರಕಾರ ಆಡಳಿತೆ ನೋಡುವ ಸ್ಥಿತಿಗೆ ನಾವು ತಂದುದಾದರೆ ನಾವು ಮೊದಲನೆಯ ಜಯವನ್ನು ಹೊಂದಿದಂತೆಯೇ ಸರಿ. ಸರಕಾರದವರು ಆದುದರಿಂದಲೇ ತಾವು ಸೆಕ್ಷನ್ 93ರಪ್ರಕಾರ ರಾಜ್ಯಭಾರಮಾಡುವೆವೆಂದು ಬಾಯಿಬಿಟ್ಟು ಹೇಳದಿರುವುದಕ್ಕೆ ಕಾರಣ. ಮಿತ್ರರೇ ನಿಜವಾಗಿಯೂ ಸರಕಾರದವರು ಈಗ ಆಳುತ್ತಿರುವುದು ಸೆಕ್ಷನ್ 93 ಕ್ಕನುಸಾರವಾಗಿ ಎಂಬುದನ್ನು ಮರೆಯಬೇಡಿರಿ.

ಬೆಕ್ಕು ಕಣ್ಣುಮುಚ್ಚಿ ಹಾಲು ಕುಡಿದಂತೆ

ಬೆಕ್ಕು ಕಣ್ಣುಮುಚ್ಚಿ ಹಾಲುಕುಡಿಯುವಾಗ ತನ್ನನ್ನು ಯಾರೂ ನೋಡುವುದಿಲ್ಲವೆಂದು ಯೋಚಿಸುವ ಹಾಗೆ ಸರಕಾರದವರು ತಮ್ಮ ಈಗಿನ ಧೋರಣೆಯನ್ನು ಗುಪ್ತವಾಗಿ ಬಚ್ಚಿಟ್ಟಿರುವರು.

ಮಹಾತ್ಮರ ಉದ್ದೇಶ

ಸರಕಾರದ ಮನೋವರ್ತನೆಯು ಯಾವ ರೀತಿ ಬರುವುದೋ ಎಂದು ಸಂಶಯದಿಂದಲೇ ಮಹಾತ್ಮ ಗಾಂಧಿಯವರು ಭರವಸೆಯ ಪ್ರಶ್ನೆಯನ್ನು ಮುಂದೆಹಾಕಿದರು. ಸರಕಾರದವರು ಈ ಭರವಸೆಗಳಿಗೆ ಪ್ರತಿಭಟಿಸುವರೆಂದು ಮಹಾತ್ಮರು ಊಹಿಸಿರಲಿಲ್ಲವಾದರೂ, ಏನು ಮಾಡುವರೋ ಎಂಬ ಸಂಶಯವು ಅವರಿಗಿಲ್ಲದಿರಲಿಲ್ಲ. ಆದಕಾರಣ ಮೊದಲೇ ಚರ್ಚೆಗೆ ಎಡೆಬಾರದಂತೆ ಮಾಡಿಕೊಳ್ಳುವುದಕ್ಕೆ ಭರವಸೆಯನ್ನು ಕೇಳಲು ಕಾರಣ. ಅರಣ್ಯವನ್ನು ಪ್ರವೇಶಿಸುವವನು ಮೊದಲು ಕಾಲಿಗೆ ಪಾದರಕ್ಷೆಗಳನ್ನು ಹಾಕಿಕೊಳ್ಳುವಂತೆ ಕಾಂಗ್ರೆಸಿನವರು ಮಂತ್ರಿಪದವಿಗೆ ಏರುವ ಮೊದಲೇ ಭರವಸೆಗಳನ್ನು ಕೇಳಲು ಕಾರಣ.

ಭರವಸೆಗಳು ಬೇಕೇಬೇಕು

ಕಾಂಗ್ರೆಸಿನವರು ಪ್ರತಿನಿತ್ಯದಲ್ಲಿಯೂ ಅಧಿಕಾರಿಗಳೊಡನೆ ಹೋರಾಡಿಕೊಂಡಿರಲು ಇಷ್ಟಪಡದ ಕಾರಣದಿಂದಲೇ ಭರವಸೆಗಳನ್ನು ಮುಂಚಿತವಾಗಿ ಕೇಳಿದರು. ಆದರೆ ಅದಕ್ಕೆ ಸರಕಾರದವರು ಒಪ್ಪಲಿಲ್ಲ. ಕೆಲವೇ ತಾಸುಗಳಲ್ಲಿ ನಾವು ಅಧಿಕಾರಸ್ಥಾನದ ಸಮೀಪ ಸಹ ಹೋಗದೆ ಹಿಂದಕ್ಕೆ ಬಂದಿದ್ದೇವೆ.

ಜನತೆಯಲ್ಲಿ ಹೊಸ ಹುರುಪು

ಹೀಗೆ ನಾವು ಅತ್ಯಲ್ಪ ಕಾಲದಲ್ಲಿಯೇ ಹೊರಬಂದ ಕಾರಣ ಜನರಲ್ಲಿ ಹೊಸ ಉತ್ಸಾಹ, ಹುರುಪು ಉಂಟಾಗಿದೆ. ಎಲ್ಲೆಲ್ಲಿಯೂ ಅದು ಗೋಚರಕ್ಕೆ ಬರುತ್ತಿದೆ. ದೊಡ್ಡ ಹೋರಾಟವು ಸದ್ಯದಲ್ಲಿಯೇ ನಡೆಯಲಿರುವುದೆಂದೂ ಅದರಲ್ಲಿ ತಾವು ಉತ್ಸಾಹದಿಂದ ತಮ್ಮ ಕಾರ್ಯಭಾರವನ್ನು ವಹಿಸಬಹುದೆಂದೂ ಕಾಂಗ್ರೆಸ್ ಕಾರ್ಯಕರ್ತರ ಆಶೆಯಾಗಿದೆ.

ಜಸ್ಟಿಸ್‌ಪಕ್ಷದ ಮೇಲೆ ಅಸಮಾಧಾನ

ಕಾಂಗ್ರೆಸಿನವರಲ್ಲಿ ಕೆಲವರು ಜಸ್ಟಿಸ್ ಪಕ್ಷದವರ ಮೇಲೆ ಆಗ್ರಹಪಡುತ್ತಾರೆ. ಇನ್ನು ಕೆಲವರು ಜಸ್ಟಿಸ್ ಮತ್ತು ಸರಕಾರದವರ ಮೇಲೆ ಕೋಪಪ್ರಕಟಿಸಿದ್ದಾರೆ. ಜಸ್ಟಿಸ್ ಪಕ್ಷವು ಸಂಪೂರ್ಣ ನಾಶಹೊಂದಿದೆ. ಅದರ ಮೇಲೆ ಕೋಪಿಸಿ ಫಲವಿಲ್ಲ. ಅಲ್ಲದೆ ಸರ್ ಮಹಮ್ಮದ್ ಉಸ್ಮಾನ್, ಬೊಬ್ಬಿಲಿಯ ರಾಜರು ಮೊದಲಾದವರು ಈಗ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಈ ಅಭಿಪ್ರಾಯಗಳು ಸರಕಾರಕ್ಕೆ ವಿರುದ್ಧವಾಗಿವೆ. ಇನ್ನು ಕೆಲಕಾಲದಲ್ಲಿ ಜಸ್ಟಿಸ್ ಪಕ್ಷದವರು ಕಾಂಗ್ರೆಸನ್ನು ಸೇರಿ ಕಾಂಗ್ರೆಸಿನವರ ಉತ್ಸಾಹದಿಂದಲೂ ಅಧಿಕವಾದ ಉತ್ಸಾಹದಿಂದ ಸರಕಾರದೊಡನೆ ಹೋರಾಡಬಹುದು.

ಹೊಸ ಆಯುಧ

ಈಗ ಎಲ್ಲರೂ ಸರಕಾರದವರೊಡನೆ ಹೋರಾಡಬೇಕಾಗಿದೆ. ಈ ಹೋರಾಟದಲ್ಲಿ ಅಹಿಂಸಾತ್ಮಕವಾದ ಆಯುಧಗಳೇ ನಮ್ಮ ಬತ್ತಳಿಕೆಯಲ್ಲಿರಬೇಕಾದುವು. ಮಹಾತ್ಮಾ ಗಾಂಧಿಯವರು ಹೊಸ ಹೊಸ ರೀತಿಯ ಶೋಧಗಳನ್ನು ನಡೆಸಿ ಅಹಿಂಸಾತ್ಮಕ ಆಯುಧಗಳನ್ನು ಕಂಡುಹಿಡಿಯುತ್ತಿದ್ದಾರೆ ಸದ್ಯದಲ್ಲಿಯೇ ಅವರು ಏನನ್ನು ಸೃಷ್ಟಿಮಾಡುವರೋ ತಿಳಿಯದು. ಅಸಹಕಾರ, ಕಾಯಿದೆಭಂಗ ಇವುಗಳನ್ನು ಉಪಯೋಗಿಸಿ ಆಯಿತು. ಈಗ ಅಧಿಕಾರ ಸ್ವೀಕಾರವು ಬಂತು. ಮುಂದೇನು ಬರಲಿರುವುದೋ ನೋಡಬೇಕಷ್ಟೆ.

ನಾವು ಜವಾಬ್ದಾರಿಕೆಯನ್ನು ಮರೆತಿಲ್ಲ.

ಕಾಂಗ್ರೆಸಿನವರು ತಮ್ಮ ಜವಾಬ್ದಾರಿಕೆಯನ್ನು ಮರೆತಿದ್ದಾರೆಂದು ನಮ್ಮನ್ನು ಆಕ್ಷೇಪಿಸುವವರಿದ್ದಾರೆ. ಜವಾಬ್ದಾರಿಕೆಯನ್ನು ಮರೆತವರು ಸರ್. ಕೆ. ವಿ. ರೆಡ್ಡಿಯವರು. ನಾವು ನಮ್ಮ ಜವಾಬ್ದಾರಿಯನ್ನು ತಿಳಿದೇ ಕೆಲಸಮಾಡುತ್ತಿದ್ದೇವೆ.

ಬ್ರಿಟಿಷರ ದರ್ಪಕ್ಕೆ ಮಾನ ಕೊಡುವುದಿಲ್ಲ.

ಆಸ್ಟ್ರೇಲಿಯ, ಕೆನಡಾಗಳಲ್ಲಿ ವಿಶೇಷಾಧಿಕಾರಗಳನ್ನು ಬ್ರಿಟಿಷರು ಉಪಯೋಗಿಸಿಲ್ಲ. ಇಲ್ಲಿಯೂ ಉಪಯೋಗಿಸಲಾರರು ಎಂದು ಕೆಲವರ ವಾದ. ಆದರೆ ಅಲ್ಲಿಯ ರಾಜ್ಯರಚನೆಗಳಿಗೂ ಇಲ್ಲಿಯದಕ್ಕೂ ಬಹಳ ವ್ಯತ್ಯಾಸವಿದೆ. ಇಲ್ಲಿ ವಿಶೇಷಾಧಿಕಾರವನ್ನು

ಉಪಯೋಗಿಸುವವರು ಗವರ್ನರರಲ್ಲ. ಬ್ರಿಟಿಷ್ ಜನಸಾಮಾನ್ಯರು. ಗವರ್ನರರು ಅವರ ಹೇಳಿಕೆಯ ಪ್ರಕಾರ ನಡೆಯುವವರು. ಆದಕಾರಣ ಬ್ರಿಟಿಷ್ ಜನರ ದರ್ಪಕ್ಕೆ ಭಾರತೀಯರು ತಲೆಬಾಗಿಸಿ ಕುಳಿತುಕೊಳ್ಳುವಂತಿಲ್ಲ.

ಗಾಂಧಿಯವರು ಅಡ್ಡಿಪಡಿಸಿದರೆ

ಕೆಲವರು, ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸದಂತೆ ಮಾಡಿದವರು ಗಾಂಧಿಯವರೆನ್ನುವರು. ಆದರೆ ಇದು ನಿಜವಲ್ಲ. ಅ. ಭಾ. ಕಾ. ಕಮಿಟಿಯ ತೀರ್ಮಾನವಾದ ಮೇಲೆ ಗಾಂಧಿಜಿಯವರು ಯಾವದೊಂದು ಸೂಚನೆಯನ್ನೂ ಕಾಂಗ್ರೆಸಿಗೆ ಕೊಟ್ಟಿಲ್ಲವೆಂದು ನಾನು ಖಂಡಿತವಾಗಿಹೇಳುತ್ತೇನೆ.

ಮುಂದಿನ ಕರ್ತವ್ಯ

ನಾವು ಯಾವ ಕ್ಷಣದಲ್ಲಿಯೂ ಚುನಾವಣೆಗೆ ಸಿದ್ಧರಾಗಿಯೇ ಇದ್ದೇವೆ. ಕಾಂಗ್ರೆಸಿನವರಿಗೇನೆ ಮಹಾಜನರ ಬೆಂಬಲ ದೊರೆಯುವುದೆಂಬ ಭರವಸೆಯು ನನಗಿದೆ. ಈಗ ನಾವು ದೇಶದ ಪ್ರತಿಯೊಂದು ಹಳ್ಳಿಯಲ್ಲಿಯೂ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿ ಕಾಂಗ್ರೆಸಿನ ಶಕ್ತಿಯನ್ನು ಹೆಚ್ಚಿಸಬೇಕೆಂದು ನನ್ನ ಪ್ರಾರ್ಥನೆ. ಇನ್ನೊಂದಾವೃತ್ತಿ ತಮ್ಮನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ|ಗಳಾದ ಪ್ರಕಾಶಂರವರೂ, ಮುನಿಸ್ವಾಮಿಪಿಳ್ಳೆಯವರೂ, ಡಾ| ಸುಬ್ಬರಾಯನರವರೂ ಕೆಲಮಾತುಗಳನ್ನಾಡಿದರು. ಅನಂತರ ಸರಕಾರದ ಘೋರಣೆಯನ್ನು ಟೀಕಿಸಿ ಠರಾವುಗಳಾದುವು. ಡಾ| ಶೆಟ್ಟಿಯವರು ಅಭ್ಯಾಗತರನ್ನು ವಂದಿಸಿದ ಮೇಲೆ ಸಭಾಂತ್ಯವಾಯಿತು.

ಔತಣ

ಶ್ರೀ| ಆಚಾರ್ಯರಿಗೂ ಅವರ ಸಂಗಾತಿಗಳಿಗೂ ಬಿಸೆಂಟ್ ಶಾಲೆಯಲ್ಲಿ ತಾ| 21 ನೇ ರಾತ್ರಿ ಔತಣ ನಡೆಯಿತು. ಅಹ್ವಾನಿತರ ಸಂಖ್ಯೆ 200ಕ್ಕಿಂತ ಹೆಚ್ಚು ಇದ್ದಿತು. ಡಾಕ್ಟರ್ ಮಲ್ಯರೇ ಮೊದಲಾದವರು ಬಂದವರ ಪರಿಚಯವನ್ನು ರಾಜಾಜಿಯವರಿಗೆ ಮಾಡಿಕೊಟ್ಟರು.

ಮರುದಿವಸ (ತಾ. 22ನೇ) ಬೆಳಿಗ್ಗೆ ಬಿಸೆಂಟ್ ಶಾಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಸೇರಿತು. ಅದರಲ್ಲಿ ಸುಮಾರು 100 ಮಂದಿ ಹಾಜರಿದ್ದರು. ಶ್ರೀ| ಕಾಳೇಶ್ವರ ರಾಯರು ಕಾರ್ಯಕರ್ತರು ಮುಂದೆ ಮಾಡಬೇಕಾದ ವಿಷಯಗಳನ್ನು ಸೂಚಿಸಿ ಭಾಷಣಮಾಡಿದರು. ಶ್ರೀ| ರಾಜಗೋಪಾಲಾಚಾರ್ಯರೂ ಕೆಲಮಾತುಗಳನ್ನಾಡಿದರು.

ಅದೇ ಬೆಳಿಗ್ಗೆ 9 ಘಂಟೆಗೆ ಸರಿಯಾಗಿ ಕೆನರಾ ಹೈಸ್ಕೂಲ್ ಭುವನೇಂದ್ರ ಸದನದಲ್ಲಿ ಪಂಡಿತ ಜವಾಹರಲಾಲ ನೆಹರು, ಡಾ| ರವೀಂದ್ರನಾಥ ಠಾಕೂರ, ಸರದಾರ ಪಟೇಲ, ಇವರುಗಳ ಭಾವಚಿತ್ರಗಳ ಅನಾವರಣವನ್ನು ರಾಜಾಜಿಯವರು ನೆರವೇರಿಸಿದರು. ಕೆನರಾ ಹೈಸ್ಕೂಲಿನಲ್ಲಿ ಅತಿಥಿಗಳನ್ನು ಶ್ರೀ ಎ| ಶ್ರೀನಿವಾಸ ಪೈಗಳು ಆದರದಿಂದ ಸ್ವಾಗತೀಕರಿಸಿದರು.

9-50ಕ್ಕೆ ರಾಜಾಜಿಯವರೂ ಅವರ ಸಂಗಾತಿಗಳೂ ಕಲ್ಲಿಕೋಟೆಗೆ ಹೊರಟುಹೋದರು.

Government of Madras PRESS COMMUNIQUE.

In connection with the celebration of his Majesty the King Emperor's Coronation, which will be held in May next, it has been decided to issue a commemorative medal for sale to the public. The medal will show on one side the effigy of His Majesty the King and on the other of Her Majesty the Queen, with appropriate legends. The medal will be issued in two sizes. The large size medal will have a diameter of 2¼ inches and will be struck in fine silver. It will be available to the public in a leather case at the price of Rs. 15 (ruppees fifteen only) per medal. The small size medal will have a diameter of 1¼ inches and will be struck in fine silver and also in bronze, and will be available to the public in a cardboard case at the price of Rs. 2 (rupees two only) for the silver and Re. 1 (rupee one only) for the bronze medal. The prices include packing, but exclude postage charges. Orders, both from individual purchasers and from the trade should be addressed to the Master of the Mint, Calcutta, who will supply the Medals direct to the purchasers by V. P. Post. Trade discount will be allowed on wholesale orders, details of which may be ascertained from the Master of the Mint, Calcutta. In order to enable Calcutta Mint to comply with demand, it is essential that orders for the medals should be placed as early as possible.

2. Specimen of the Coronation medal in gold will also be available to the public in a leather case at the price of 50 guineas each for the large and 12 guineas each for the small medal. Applicants for these medals should communicate direct with the Royal Mint, London.

C. F. Brackenbury,
Chief Secretary.

Census of the educated unemployed

With a view to ascertaining the extent of unemployment among the educated classes in the Province, the Government directed the Commissioner of Labour and Rural Uplift to take a census of the educated unemployed, making a start with graduates in Law, Arts and Sciences and Diploma holders. The Commissioner issued a press notice in July last asking the unemployed among graduates in Law, Arts and Sciences and in Engineering and Medicine and Diploma holders in Economics and European languages to send in their names to him along with certain particulars. But only 759 persons responded to the notice. The Government consider the response most disappointing but propose to make another attempt but this time over a wider field so as to embrace all educated unemployed persons.

2. The expression 'educated unemployed' requires as precise a definition as possible for the purpose of the census. The Government observe that the Sapru Committee of United Provinces defined the expression 'educated young men' as people who had received education at the universities, intermediate colleges, high schools, varnacular middle schools, or at the industrial or technical institutions or professional colleges or schools, and passed one of the examinations specified below. In regard to the question as to what was meant by unemployment the Committee held the view that young men who after taking a University Degree or Diploma remain without employment between the ages of 23 and 26 and in the caes of men with only school education all those who have finished their school education but do not want to proceed to any university and remain unemployed should be treated as unemployed. These definitions do not, of course, claim to be perfect but seem to afford a basis to proceed upon and the Government direct that these criteria be applied for the purposes of the census of the educated unemployed of this province also.

M. A.
M. Sc.
LL. B.
B. A.
B. Com.
B. Sc.
B. Ag.
Intermediate in Arts, Science, Commerce and Agriculture.
High School Examination.
Vernacular Middle Examination.
Oriental Titles Examination.
Final Examinations of the technical institutions, Engineering, Medicine.

3. All the educated unemployed within the meaning of paragraph 2 above accordingly invited to send their names within six weeks to the commissioner of Labour and Rural Uplit, Chepauk, Madras, with the following particulars.

1. Name.
2. Address
3. Qualifications.
4. Employment, if any, previously held.
5. Nature of employment sought

Replies should be sent with the superscription on cover 'Unemployment Enquiry.'

C. J. PAUL,
Secretary to Government.

The Canara Industrial Works

WANTED

Three respectable and reliable partners with business abilities to finance and conduct a Cashew Nut Factory to be started near Manipal, which is the best Cashew Nut centre and a growing industrial centre.

For further particulars apply to:-

S. R. Patla,
Post **Udipi, (S. K.)**

ಪಂಚಾಂಗಗಳು

"ವಿವಾಹದ ದಿನವನ್ನು ನಿಶ್ಚಯಿಸುವುದನ್ನು ಕೂಡಾ ವಧೂವರರ ಕಡೆಯವರ ಅನುಕೂಲತೆಗೆ ಬಿಟ್ಟುಬಿಡದೆ ಅದನ್ನು ಜ್ಯೋತಿಷ್ಕನು ತಾನೇ ವಹಿಸಿಕೊಂಡು ವಿವಾಹ ಮುಹೂರ್ತಗಳ ಒಂದು ಲಿಸ್ಟ್ ಕೊಟ್ಟಿರುತ್ತಾನೆ! ಸಕಾಲದಲ್ಲಿ ಯಾವ ಕೆಲಸವನ್ನೂ ಮಾಡದಂತೆ ಪ್ರತಿದಿನದಲ್ಲಿಯೂ 'ಇಷ್ಟುಗಳಿಗೆ ಅಮೃತ ಇಷ್ಟುಗಳಿಗೆ ವಿಷವೆಂದು ನಮಗೆ ಎಚ್ಚರಿಸಿಬಿಟ್ಟಿದ್ದಾನೆ!"

ಹಿಂದೂ ಸಮಾಜದಲ್ಲಿ ಅಂಧಶ್ರದ್ಧೆಯನ್ನು ಹಬ್ಬಿಸುವ ಅನೇಕ ಸಾಧನಗಳಲ್ಲಿ ಪಂಚಾಂಗವೂ 'ಒಂದಾಗಿರುತ್ತದೆ. ತಾರೀಕು ವಾರ ತಿಥಿ ಇತ್ಯಾದಿ ನಿತ್ಯ ವ್ಯವಹಾರಕ್ಕೆ ಅವಶ್ಯವಿರುವ ವಿಷಯಗಳು ಪಂಚಾಂಗದಲ್ಲಿರುವುವಾದರೂ ಅವುಗಳೊಂದಿಗೆ ನಮ್ಮಲ್ಲಿರುವ ಅಂಧ ಶ್ರದ್ಧೆಯನ್ನು ಬಲಪಡಿಸುವ ಅನಾವಶ್ಯಕವಾದ ಅನೇಕ ವಿಷಯಗಳೂ ಅದರಲ್ಲಿ ಇವೆ. ಪ್ರಾರಂಭ ಮಾಡುವಾಗಲೇ ಪ್ರತಿನಿತ್ಯವೂ ಪಂಚಾಂಗ ಶ್ರವಣಮಾಡುವುದರಿಂದ ಶ್ರೇಯಸ್ಸು ಮತ್ತು ಆಯುಸ್ಸು ವೃದ್ಧಿಯಾಗಿ ರೋಗ ಮತ್ತು ಪಾಪಗಳು ಪರಿಹಾರವಾಗಿ ನಾವು ಇಚ್ಛಿಸುವ ಕಾರ್ಯಗಳೆಲ್ಲವೂ ಸಿದ್ಧಿಯಾಗುವವು. ಮತ್ತು ಮಹತ್ತಾದ ಪುಣ್ಯವು ಲಭಿಸುವುದು ಎಂದು ಬರೆದು ಪಂಚಾಂಗ ಶ್ರವಣದ ಉದ್ದೇಶವನ್ನು ಪಂಚಾಂಗಕರ್ತರು ವಿಪರೀತವಾಗಿ ತೋರಿಸಿ ಬಿಚ್ಚಿಟ್ಟಿರುತ್ತಾರೆ. ನಂತರ ಅರ್ಥಾರ್ಥ ಸಂಬಂಧವಿಲ್ಲದ ಆ ಸಂವತ್ಸರ ಫಲವು ಎರಡು ಪುಟಗಳಲ್ಲಿ ಬರೆಯಲ್ಪಟ್ಟಿದೆ. ಚಂದ್ರನು ಮಂತ್ರಿಯಾದುದರಿಂದ ಪ್ರಜೆಗಳೂ ಅರಸರೂ ಅಭಿವೃದ್ಧಿಯನ್ನೈದುವರು, ಸೂರ್ಯನು ಅರ್ಘಾಧಿಪತಿಯಾದ್ದರಿಂದ ಮಳೆ ಕಮ್ಮಿಯಾಗಿ ಜನರು ಹಸಿವೆಯಿಂದ ವ್ಯಾಕುಲರಾಗಿ ಅರಸರು ಪರಸ್ಪರ ಕಲಹಮಾಡುವರು. ಈ ರೀತಿಯ ಪರಸ್ಪರ ವಿರುದ್ಧವಾದ ಸುಳ್ಳು ವರ್ತಮಾನಗಳಿಂದ ಜನರಿಗೆ ಯಾವ ಪ್ರಯೋಜನವೋ ತಿಳಿಯುವುದಿಲ್ಲ. ಈ ಸಂವತ್ಸರದಲ್ಲಿ ಎರಡು ಕೊಳಗ ನೀರು ಮಳೆಯಾಗಿ ಬೀಳುವುದಂತೆ. ಎಷ್ಟು ಸ್ಪಷ್ಟ ವರ್ತಮಾನವಿದು. ಮಂದಾಕಿನೀ ಎಂಬ ದೇವ ಜಾತಿಯ ಬಾಲ ವಯಸ್ಸಿನ ಸಂಕ್ರಾಂತಿಯು ಬಿಳಿ ವಸ್ತ್ರವನ್ನುಟ್ಟು ವಿಚಿತ್ರ ತರದ ರವಕೆಯನ್ನು ತೊಟ್ಟು ಕಸ್ತೂರಿಯನ್ನು ಲೇಪಿಸಿಕೊಂಡು ಹವಳದ ಆಭರಣ ಭೂಷಿತಳಾಗಿ ಸಂಪಿಗೆ ಹೂವನ್ನು ಮುಡಿದು ಸಿಂಹದಮೇಲೆ ಕುಳಿತುಸುವರ್ಣ ಪಾತ್ರದಲ್ಲಿ ಅನ್ನವನ್ನುಂಡು ದಕ್ಷಿಣಮುಖಿಯಾಗಿ ವಾಯುವ್ಯ ದಿಕ್ಕನ್ನು ನೋಡುತ್ತ ಪಶ್ಚಿಮ ದಿಕ್ಕಿಗೆ ಹೋಗುವಳಂತೆ.

ಇವಳು ಹೋಗುವ ದಾರಿ ಮತ್ತು ಸಮಯವನ್ನು ಇವರು ಸ್ಪಷ್ಟವಾಗಿ ತಿಳಿಸುತ್ತಿದ್ದರೆ ಈ ಸುಂದರಿಯನ್ನು ನೋಡಲಿಕ್ಕೆ ಕೋಟ್ಯಂತರ ಜನರು ಅವಳ ದಾರಿಯಲ್ಲಿ ಕಾದು ಕುಳಿತುಕೊಳ್ಳುತ್ತಿದ್ದರು. ಅರುವತ್ತು ಯೋಜನ ವಿಸ್ತೀರ್ಣದ ಉದ್ದ ಮೂಗಿನ ಜೋಲುವ ತುಟಿಯ ಒಂದೇ ಮುಖದ ಪುರುಷಾಕಾರದ ಹಿಂದೆ ನೋಡುತ್ತಿರುವ ಸಂಕ್ರಾಂತಿಯು ಒಂಭತ್ತು ಭುಜಗಳಿಂದ ಯುಕ್ತವಾಗಿ ಯಾವಾಗಲೂ ತವರವನ್ನು ಹಿಡಕೊಂಡು ತಿರುಗುತ್ತಿರುವುದಂತೆ.

(ಮೇಲೆ ಹೇಳಿದ ಸ್ತ್ರೀ ಸಂಕ್ರಾಂತಿಯು ಈ ಭಯಂಕರ ಪುರುಷ ಸಂಕ್ರಾಂತಿಗೆ ಎದುರು ಸಿಕ್ಕದಿದ್ದರೆ ಸಾಕು.) ಇದೇ ರೀತಿಯ ಹಾಸ್ಯಾಸ್ಪದವಾದ ಕತೆಯನ್ನು ವರ್ಷಾರಂಭ ದಿನ ಯಾವಾತನು ಕೇಳುವನೋ ಅವನು ಸಮಸ್ತ ಸಂಪತ್ತನ್ನೂ ಭೋಗವನ್ನೂ ಆಯುಸ್ಸನ್ನೂ ಧನವನ್ನೂ ಕೀರ್ತಿಯನ್ನೂ ಸುಖವನ್ನೂ ಹೊಂದುವನಂತೆ. (ನಮ್ಮ ದೇಶದ ದುಃಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಎಷ್ಟು ಸುಲಭ ದಾರಿಯಿದೆ!) ಎಲ್ಲರೂ ತಿಳಿಯಲಿಚ್ಛಿಸುವ ಗ್ರಹಣಗಳ ವಿಚಾರವಿದೆ. ಆದರೆ ಅದರ ಅಂತ್ಯದಲ್ಲಿ ಇಂಥಾ ರಾಶಿಯವರಿಗೆ ಮತ್ತು ನಕ್ಷತ್ರದವರಿಗೆ ಅರಿಷ್ಟವಿದೆ. ಹಗಲು 1 ಗಂಟೆಯ ವರೆಗೆ ಎಲ್ಲರೂ ಭೋಜನ ತೀರಿಸಿಬಿಡಿರೆಂದು ಸೂಚಿಸಿ ಆ ಜೋತಿಷ್ಯ ಶಾಸ್ತ್ರದ ಗೌರವವನ್ನು ಪಂಚಾಂಗ ಕರ್ತನು ಹಾಳುಮಾಡಿಬಿಟ್ಟಿದ್ದಾನೆ. ಇನ್ನು ಈ ವರ್ಷದಲ್ಲಿ ಯಾವ ಯಾವ ನಕ್ಷತ್ರದಲ್ಲಿ ಹುಟ್ಟಿದವರಿಗೆ ಎಷ್ಟೆಷ್ಟು ಆದಾಯ ನಷ್ಟವೆಂದೂ ಯಾವ್ಯಾವ ದಿನ ಪ್ರಯಾಣ ಪ್ರಾರಂಭಿಸಿದರೆ ಏನೇನು ಫಲವೆಂದೂ ಜನ್ಮನಕ್ಷತ್ರದಿಂದ ನಿತ್ಯ ನಕ್ಷತ್ರದ ವರೆಗೆ ಕೂಡಿಸಿ ೯ರಿಂದ ಭಾಗಿಸಿ ಮಿಗುಳಿ ಶೇಷ ಬಂದರೆ ಕೆಟ್ಟದು; ಸರಿ ಬಂದರೆ ಒಳ್ಳೆಯದೆನ್ನುವ ತಾರಾಬಲ ನೋಡುವ ಕ್ರಮವನ್ನು ಕೊಟ್ಟು ಯಾವ ಮನುಷ್ಯನಾದರೂ ಸಂದರ್ಭಗಳನ್ನು ನೋಡಿಕೊಂಡು ಕಾಲೋಚಿತವಾಗಿ ಯಾವ ಕಾರ್ಯವನ್ನೂ ಪ್ರವರ್ತಿಸದಂತೆ ಜನರನ್ನು ಬೇಕಾದಷ್ಟು ಭಯ ಹುಟ್ಟಿಸುವ ವಿಷಯಗಳನ್ನು ಕೊಟ್ಟಿರುತ್ತಾನೆ. ವಿವಾಹದ ದಿನವನ್ನು ನಿಶ್ಚಯಿಸುವದನ್ನೂ ಕೂಡಾ ವಧೂವರರ ಕಡೆಯವರ ಅನುಕೂಲತೆಗೆ ಬಿಟ್ಟುಬಿಟ್ಟಿದೆ. ಅದನ್ನೂ ಜ್ಯೋತಿಷ್ಯನು ತಾನೇ ವಹಿಸಿಕೊಂಡು ವಿವಾಹದ ಮುಹೂರ್ತಗಳ ಒಂದು ಲಿಸ್ಟ್ ಕೊಟ್ಟಿರುತ್ತಾನೆ. ಸಕಾಲದಲ್ಲಿ ಯಾವ ಕೆಲಸವನ್ನೂ ಮಾಡದಂತೆ ಪ್ರತಿ ದಿನದಲ್ಲಿಯೂ ಇಷ್ಟುಗಳಿಗೆ ಅಮೃತ ಇಷ್ಟುಗಳಿಗೆ ವಿಷವೆಂದು ನಮಗೆ ಎಚ್ಚರಿಸಿಬಿಟ್ಟಿದ್ದಾನೆ.

ಇಷ್ಟರಿಂದಲೂ ತೃಪ್ತನಾಗದೆ ಕೊನೆಗೆ ಜಂತಿಯಲ್ಲಿ ಸದಾ ಓಡಾಡುತ್ತಿರುವ ಹಲ್ಲಿಯು ಫಕ್ಕನೆ ಕಾಲು ಜಾರಿ ನಮ್ಮ ಮೈಯ ಮೇಲೆ ಬಿದ್ದಿತೆಂದರೆ ಅದು ಯಾವ್ಯಾವ ಭಾಗಕ್ಕೆ ಬಿದ್ದರೆ ಏನೇನು ಫಲ ಅದರ ಪರಿಹಾರವೇನು ಎಂಬ ಅಮೂಲ್ಯವಾದ ಸೂಚನೆಗಳು. ರಾತ್ರಿಯ ಊಟ ಸ್ವಲ್ಪ ಜಾಸ್ತಿಯಾಗಿ ನಿದ್ರೆ ಸರಿಯಾಗಿ ಬಾರದೆ ಕನಸುಗಳು ಬಂದವೆಂದರೆ ಅವುಗಳ ಫಲ ಮತ್ತು ಅವುಗಳಿಗೆ ಆಗತಕ್ಕ ಪ್ರಾಯಶ್ಚಿತ್ತಗಳು, ಹುಡುಗಿಯು ಪುಷ್ಪವತಿಯಾದ ದಿನ ವಾರ ತಿಥಿ ನಕ್ಷತ್ರಗಳಿಗೆ ಸ್ಥಳ ಆ ಕಾಲ ಉಟ್ಟುಕೊಂಡ ವಸ್ತ್ರದ ಬಣ್ಣ ಇತ್ಯಾದಿಗಳ ದೆಸೆಯಿಂದ ಅವಳಿಗೆ, ಅವಳ ಗಂಡನಿಗೆ ಅವಳಲ್ಲಿ ಹುಟ್ಟಬಹುದಾದ ಮಕ್ಕಳಿಗೆ ಆಗುವ ಶುಭಾಶುಭಗಳು ಇವುಗಳಿಗೆ ಪ್ರಾಯಶ್ಚಿತ್ತ, ಮನೆ ಕಟ್ಟುವವನು ಬೇಕಾದಷ್ಟು ಬೆಳಕೂ ಬಿಸಿಲೂ ಗಾಳಿಯೂ ದೊರೆಯದಂತೆ ಹೇಗೆ ಕಟ್ಟಿಸಬಹುದೆಂಬುದೂ ಈ ರೀತಿಯ ವಿಷಯಗಳನ್ನು ಒಂದರ ಹಿಂದೆ ಒಂದು ಕೊಟ್ಟು, ಇವುಗಳಿಂದಲೂ ಮತ್ತು ತನ್ನ ಗಣಿತ ರೀತಿ ಸರಿ ತನ್ನದು ಸರಿ ಎಂಬ ತರ್ಕದಿಂದಲೂ ನಾಲ್ಕು ಪುಟಗಳಲ್ಲಿ ಮುಗಿಸಬಹುದಾದ ಪಂಚಾಂಗವನ್ನು ನಾಲ್ವತ್ತು ಪುಟಗಳ ಗ್ರಂಥವಾಗಿ ಮಾಡಿಬಿಡುತ್ತಾನೆ.

ಖಗೋಲದ ವಿಚಾರವಾಗಿ ಪರಿಶೋಧಿಸಿ ವಿಶೇಷ ಪರಿಶ್ರಮದಿಂದ ಗ್ರಹಣ ಕಾಲ ಮೊದಲಾದ ಅನೇಕ ಮಹತ್ತಾದ ವಿಷಯಗಳನ್ನು ಕಂಡು ಹಿಡಿದು ಜಗತ್ತನ್ನು ಬೆರಗುಗೊಳಿಸಿರುವ ಆರ್ಯಭಟ್ಟ ಮೊದಲಾದ ನಮ್ಮ ಪ್ರಾಚೀನ ಜ್ಯೋತಿಷ್ಯಗಾರರಿಗೆ ನಾವೆಲ್ಲರೂ ತಲೆಬಗ್ಗಿಸಲೇ ಬೇಕು. ಈಗಿನ ಜ್ಯೋತಿಷ್ಯಗಾರರೂ ಅವರ ದಾರಿಯನ್ನು ಹಿಡಿದು ಈಗಲೂ ನಮಗೆ ಅವಶ್ಯವಿರುವ ಉಪಯುಕ್ತ ವಿಷಯಗಳನ್ನು ಪ್ರಚಾರಗೊಳಿಸುತ್ತಿದ್ದರೆ ಪ್ರಯೋಜನವಿತ್ತು.

ಅದರ ಬದಲಾಗಿ ನಮ್ಮ ಪಂಚಾಂಗ ಕರ್ತರು ಮೊದಲೇ ಅಜ್ಞಾನದಿಂದಲೂ, ಅಂಧಶ್ರದ್ಧೆಯಿಂದಲೂ ತುಂಬಿರುವ ನಮ್ಮ ಹಿಂದೂ ಸಮಾಜವನ್ನು ಅರ್ಥಾರ್ಥ ಸಂಬಂಧವಿಲ್ಲದ ಈ ರೀತಿಯ ಅಬದ್ಧ ಸೂಚನೆಗಳಿಂದ ಬೆದರಿಸಿ ಇನ್ನಷ್ಟು ಮರುಳುಗೊಳಿಸುತ್ತಿರುವುದು ನ್ಯಾಯವಲ್ಲ. ಈ ರೀತಿಯ ಪಂಚಾಂಗಗಳಿಂದ ನಮ್ಮ ಸಮಾಜಕ್ಕೆ ಹಾನಿಯೇ ಹೊರತು ಯಾವ ಪ್ರಯೋಜನವೂ ಇಲ್ಲವೆಂದು ಧೈರ್ಯವಾಗಿ ಹೇಳಬಹುದು. ಹೀಗೆಲ್ಲಾ ಬರೆದವನ್ಯಾರೆಂದು ನಮ್ಮ ಪಂಚಾಂಗಕರ್ತರು ಈ ಲೇಖನ ಬರೆದವನ ಜಾತಿ, ವಿಲಾಸ, ಉದ್ಯೋಗ ಪ್ರಾಯ ಇವನ್ನೆಲ್ಲಾ ಕಂಡು ಹುಡುಕುವುದರ ಬದಲಾಗಿ ಸಾಧ್ಯವಿದ್ದರೆ ಈಗಿನ ಪಂಚಾಂಗಗಳಲ್ಲಿರುವ ಖಗೋಲಶಾಸ್ತ್ರಕ್ಕೆ ಸಂಬಂಧಪಡದ ಮೇಲೆ ಕಾಣಿಸಿದ ವಿಷಯಗಳು ನಿಜವೆಂದೂ ಜನರಿಗೆ ಉಪಯುಕ್ತವಾದುವುಗಳೆಂದೂ ಸ್ವತಂತ್ರವಿಚಾರದಿಂದ ಯುಕ್ತಾಯುಕ್ತವಾಗಿ ಪತ್ರಿಕೆಗಳಲ್ಲಿ ಲೇಖನಗಳ ಮೂಲಕ ಪ್ರಚಾರಗೊಳಿಸಲು ಪ್ರಯತ್ನಮಾಡುತ್ತಿದ್ದರೆ ಎಲ್ಲರಿಗೂ ಬಹಳ ಉಪಕಾರವಾಗುತ್ತಿತ್ತು.

ವಿಚಾರಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಆಸ್ಪತ್ರೆಯ ಔಷಧ, ಇಂಗ್ಲೀಷು ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವತೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೬೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. ೩—೦—೦ (ಮೂರು) ವಿ. ಪಿ. ಛಾರ್ಜು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವನಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲಭಾಯಿ ಪಟೇಲ್ ರೋಡ್, ಮುಂಬಯಿ ೪.

Sole Manufacturer: Dr. D. N. JASANI, Vittalbhai Patel Road, BOMBAY 4

ಹೆಂಡ್ತಿ ಗಂಡನಾದರೆ?

ನೇ ನೋಟ

(ಅರವಿಂದ ಮನೋಹರರಿಬ್ಬರು ಆಪ್ತಮಿತ್ರರು. ಅರವಿಂದ ಕಾರ್ಯಜಾಣ, ವಿಚಾರಶೀಲ, ಶಾಂತಸ್ವಭಾವಿ, ಮಂದಗಾಮಿ. ಮನೋಹರ ಅರವಿಂದನ ಪ್ರತಿವಿರುದ್ಧ ಸ್ವಭಾವಿ. ಎಲ್ಲದರಲ್ಲಿಯೂ ತೀವ್ರಗಾಮಿ, ಮಾತಿನಮಲ್ಲ. ಹಿಂದುಮುಂದು ನೋಡದೆ ಒಮ್ಮೆಯೇ ಕಾರ್ಯಪ್ರವಾಹಕ್ಕೆ ಧುಮುಕಿ ಮನಬಂದಂತೆ ನಡೆಯುವವ. ಒಮ್ಮೆ ಮಾಡಿದುದಕ್ಕೇನೇ, ಮನಸ್ಸಿಗೆ ತೋರಿದರೆ ಪ್ರತಿವಿರುದ್ಧ ಮಾಡುವುದಕ್ಕೂ ಹಿಂಜರಿಯದವ. ಆದರೆ ಅರವಿಂದನಿಗಿಂತ ಎಷ್ಟೋ ಜಾಣ, ಎಷ್ಟೋ ಪ್ರಗತಿಗಾಮಿಯೆಂಬ ಹೆಗ್ಗಳಿಕೆಯುಳ್ಳವ. ಒಂದು ದಿನ ಅರವಿಂದನು ತನ್ನ ಮನೆಯ ಪೋರ್ಟಿಕೋದಲ್ಲಿ ಕೊಲಂಬಿಯಾ ಪೋರ್ಟೆಬ್ಲ್ ಗ್ರಮಫೋನ್ ಇಟ್ಟು "ನಾನೊಂದುಮದುವೆಯ ಮಾಡಿಕೊಂಡೇ" ಎಂಬ ಮರಿರಾವಿನ ಪ್ಲೇಟನ್ನಿಟ್ಟು ಮುಗುಳುನಗೆ ಬೀರಿ ಅದಕ್ಕೆ ತಂಕ್ಕತೆ ತಾಳಹಾಕುತ್ತಾ ಒಬ್ಬನೇ ಕುಳಿತಿರುವಾಗ ಮನೋಹರನು ಲಗುಬಗೆಯಿಂದ ಪ್ರವೇಶಿಸಿ ಒಮ್ಮೆಯೇ ಗ್ರಮಫೋನಿನ ಮುಳ್ಳನ್ನೆತ್ತಿ ಪ್ಲೇಟನ್ನು ತೆಗೆದು ಮೇಜಿಯ ಮೇಲೊಂದೆಡೆ ಬಿಸಾಡಿ ಬಿಡುವನು. ಅರವಿಂದನು ಜಗ್ಗನೆ ಈಸಿಚೇರಿನಿಂದೆದ್ದು ಮನೋಹರನ ಭುಜ ಹಿಡಿದು ಕುಲುಕಿ)

ಅರವಿಂದ—ಏನಾಗಿದೆ ನಿನಗೆ? ದುಡ್ಡುಕೊಟ್ಟುದು ನಾನದಕ್ಕೆ!

ಮನೋಹರ—ಯಾರು ದುಡ್ಡು ಕೊಟ್ಟುದಾದರೂ ಇತರರಿಗೊಂದು 'ನ್ಯೂಸೆನ್ಸ್' (ಉಪದ್ರವ) ಆಗಬಾರದಷ್ಟೆ?

ಅರವಿಂದ—ಏನು 'ನ್ಯೂಸೆನ್ಸ್'?

ಮನೋಹರ—ನವ ವರನು ಮದುವೆಯಾದ ಮೇಲೆ ಪ್ರಥಮ ಸಲ ತನ್ನ ಗೆಳೆಯನನ್ನು ಕಾಣಬರುವಾಗ ಅವನನ್ನು ಸ್ವಾಗತೀಕರಿಸುವುದು ಈ ಸುಟ್ಟ ಪ್ಲೇಟನ್ನಿಟ್ಟೇ?

ಅರವಿಂದ—ನವವರನು ತನ್ನ ವೆಲ್ ಎಕಂಪ್ಲಿಷ್ಡ್ ಮತ್ತು ಅಪ್ ಟುಡೇಟ್ (ಸರ್ವಗುಣಸಂಪನ್ನ ಮತ್ತು ಅತ್ಯಾಧುನಿಕ) ವಧುವಿನೊಂದಿಗೆ 'ನೋಟೀಸು' ಕೊಟ್ಟು ಚಿತ್ತೈಸುತ್ತಿದ್ದರೆ ಅವನ ಸ್ವಾಗತ ಗೀತೆಯೇ ಬೇರೆಯಿತ್ತು!

ಮನೋಹರ—ಏನಾ ಸ್ವಾಗತ ಗೀತೆ?

ಅರವಿಂದ—ನವದಂಪತಿಗಳು ನೂತನ ಶೃಂಗಾರ, ವಯ್ಯಾರ, ಬೆಡಗು ಬಿನ್ನಾಣದಿಂದ ನಮ್ಮ ಮನೆಯಂಗಣಕ್ಕೆ ಮಂದಗಮನದಿಂದ ಸುಂದರ ಹೆಜ್ಜೆಯಿಡುತ್ತಾ ಪ್ರವೇಶಿಸುವಾಗಲೆ "ಪ್ರಿಯೆ ಬಾಬಾರೋ! ಪ್ರಿಯೆ ಬಾಬಾರೋ! ಪ್ರಿಯ ಬಾಬಾರೋ! ಪ್ರಿಯೆ ಬಾಬಾರೋ!" ಎಂಬ ಪ್ಲೇಟನ್ನು ಸ್ಪೆಶ್ಯಲಾಗಿ ತಯಾರಿಸಿಯೋ ತರಿಸಿಯೋ ಇಡುತಿದ್ದೆ. ಆಗ ಆ ದಂಪತಿಗಳು ಆನಂದ ತುಂದಿಲಾಂತರಂಗರಾಗಿ ಕೇವಲ ಅನುರಾಗಮತ್ತರಾಗಿ ಬಾಹ್ಯಜಗತ್ತನ್ನೇ ಮರೆತು,ನಮ್ಮ ಮನೆಯಂಗಣವನ್ನೇ ನರ್ತನರಂಗವಾಗಿ ಮಾಡಿ ಕುಣಿಕುಣಿದು ಚುಂಬಿಸಿ, ಚುಂಬಿಸಿ ಚುಂಬಿಸಿ ಕುಣಿದು ತಾವು ಸಾಕ್ಷಾತ್ ಆಂಗ್ಲೇಯ ದಂಪತಿಗಳೆಂಬುದನ್ನು ಲೋಕಕ್ಕೆಲ್ಲಾ ವ್ಯಕ್ತಪಡಿಸುವಂತಾಗುತ್ತಿತ್ತು.

ಮನೋಹರ—ಸಾಕೋ ತಮಾಷೆ!

ಅರವಿಂದ—ಏನು ತಮಾಷೆ?'ನಾನು ಮದುವೆಯಾದರೆ ಪ್ರತ್ಯಕ್ಷ ಆಂಗ್ಲೇಯ ದಂಪತಿಗಳಂತೆಯೇ ನಡೆಯುತ್ತೇನೋ ಇಲ್ಲವೋ ನೋಡೆ'ಂದು ಮಾತು ಮಾತಿಗೆ ಎತ್ತಿ ಒತ್ತಿ, ಚುಚ್ಚಿ ಕಚ್ಚಿ ನನಗೆ ಹೇಳುತ್ತಿದ್ದವನಲ್ಲವೆ ನೀನು? ಈಗೇಕೆ ನವ ವರನು ನವ ವಧುವಿನೊಂದಿಗೆ ಬರಲಿಲ್ಲ? ಗೊತ್ತಾಯಿತಲ್ಲ ಬೆಳೆಯ ಗುಣ ಮೊಳೆಯಲ್ಲಿ!

ಮನೋಹರ—ಛೇ! ಛೇ! ಏನು ಮಾತಿದು ಅರವಿಂದ? ಅವಳೇ ನಿನ್ನಲ್ಲಿಗೆ ಬರಲು ತುಸು ನಾಚಿದಳು. ನವ ವಧುವಲ್ಲವೆ? 'ಬೇಡ ಹಾಗಾದರೆ. ನಿನ್ನನ್ನೇ ಕರತರುವೆ'ನೆಂದು ಇಲ್ಲಿಗೆ ಬಂದೆ.

ಅರವಿಂದ—ಏನು? ತುಸು ನಾಚಿದಳೆ? ಎಸ್. ಎಸ್. ಎಲ್. ಸಿ. ಕಲಿತು ಮಿಸ್ಟ್ರೆಸ್ ಆಗಿ ಅನಂತರ ಮಂಗಳೂರಿಗೆ ಹೋಗಿ ಟ್ರೈನಾಗಿ ಆ ಮೇಲೆ ಇಲ್ಲಿಯೇ ಮಿಸ್ಟ್ರೆಸ್ ಆಗಿ ಬಹಳ ಫೋರ್ವರ್ಡೆಂದು (ಮುಂದುವರಿದವಳೆಂದು) ಪ್ರಸಿದ್ಧಿ ಪಡೆದ ಫೋರ್ವರ್ಡ್‌ನೆಸ್ಸಿನ ಇನ್ಕಾರ್ನೇಶನೇ (ಅವತಾರವೇ) ಆಗಿರುವ ನಿನ್ನನ್ನು ಮದುವೆಯಾದ ಮೇಲೆಯೂ ಅವಳು ತುಸು ನಾಚಿದಳೇ ಇಲ್ಲಿಗೆ ಬರಲು ನಿನ್ನೊಂದಿಗೆ? ಅಥವಾ ನಿನಗೇ ಅವಳನ್ನು ಕರಕೊಂಡುಬರಲು ತುಸು ನಾಚಿಕೆಯಾಯಿತೆ? ಯಾವುದು ಹೇಳು? ದಾರಿಯಲ್ಲಿ, ಎಲ್ಲಿಯಾದರೂ ಒಬ್ಬೊಬ್ಬ ದಂಪತಿಗಳು ಒಟ್ಟೊಟ್ಟಿಗೆ ಸರಸಸಲ್ಲಾಪಮಾಡಿಕೊಂಡು ಹೋಗುವಾಗ, 'ನೋಡು ನೋಡು! ನವದಂಪತಿಗಳೆಂದರೆ ಹೀಗಿರಬೇಕು' ಎಂದು ಅರ್ಧ ಫರ್ಲಾಂಗಿನ ವರೆಗೂ ಅವರನ್ನೆ ಕಣ್ಣಿಟ್ಟು ನೋಡುತ್ತಾ,ಮನಸ್ಸಿನೊಳಗೆ ಏನೇನೋ ಆಗುತ್ತಿದೆ ಎನ್ನುತಿದ್ದೆಯಲ್ಲಾ? ಈಗ ಆ ಏನೇನೆಲ್ಲಾ ಆಗುವುದು ಎಲ್ಲಿ ಹೋಯಿತು? ಮಾತಿಗೂ ಆಚರಣೆಗೂ ಎಷ್ಟೊಂದು ಅಭ್ಯಂತರವಿದೆ ನೋಡು ಮನೋಹರ?

ಮನೋಹರ—ಸಾಕು ಸಾಕು ತಮಾಷೆ ಎಲ್ಲಾ! ನೋಡುವ ಇನ್ನೇನಾದರೊಂದು ಪ್ಲೇಟ್ ಇಡು.

ಅರವಿಂದ—("ನಾನೊಂದು ಮದುವೆಯ ಮಾಡಿಕೊಂಡೇ" ಎಂಬುದನ್ನೇ ಪುನಃ ಇಟ್ಟು) ಇದನ್ನಾಗ ಅರ್ಧದಲ್ಲೇ ಕುತ್ತಿಗೆ ಮುರಿದೆ. ನನಗೇಕೋ ಇದನ್ನು ಕೇಳಿದಷ್ಟು ಸಂತೋಷ!

ಮನೋಹರ—ಹೌದು, ಕೇಳಿದಷ್ಟು ಸಂತೋಷ! ಅಂತಹ ಪ್ಲೇಟುಗಳನ್ನು ಕೇಳುವಾಗ, 'ಫಿಲ್ಮ್ ಸೆನ್ಸರ್ ಶಿಪ್ಪಿ'ನಂತೆ (ಚಲಚಿತ್ರ ಪರೀಕ್ಷಕರಂತೆ) ಗ್ರಮಫೋನ್ ಪ್ಲೇಟ್‌ಗಳ ಕುರಿತೂ ಸೆನ್ಸರ್‌ಶಿಫ್ ಅವಶ್ಯವೆಂದು ತೋರುತ್ತದೆ ನನಗೆ. ನನಗೆ ಪೂರ್ಣಯ್ಯನಂತೆ ಒಂದೇಒಂದು ಕ್ಷಣದ ಅಧಿಕಾರ ದೊರೆಯುತ್ತಿದ್ದರೆ ಮೊದಲು ಈ ಮರಿರಾವ್‌ನ ಪ್ಲೇಟ್‌ಗಳನ್ನೆಲ್ಲಾ ಪುಡಿ ಪುಡಿಮಾಡಿಸಿ ಅರಬಿಸಮುದ್ರ ಮಧ್ಯೆ ಬಿಸಾಡಿಸಿ ಮರಿರಾವನ್ನು ಕೂಡಲೇ ಅಂಡಮಾನಿಗೆ ಗಡಿಪಾರುಮಾಡಿ ಬಿಡುತ್ತಿದ್ದೆ!

ಅರವಿಂದ—ಬೇಡ ಬೇಡಪ್ಪ! ಆ ಮರಿರಾವ್ ಪಾಪ ಬದುಕಿಕೊಳ್ಳಲಿ. ನಾನೆಲ್ಲಿಯಾದರೂ ಅವನ ಪ್ಲೇಟ್ ಇಡುವುದು; ನವದಾಂಪತ್ಯದ ಅಮಲೇರಿದ ನೀನೆಲ್ಲಿಯಾದರೂ ಒಮ್ಮೆಯೇ ಅದನ್ನು ಒಡೆದುಹಾಕಿ ಬಿಡುವುದು! ಬಂತಲ್ಲ 'ಗಸಿ' ನನಗೆ 3 ರೂಪಾಯಿಗೆ! ಆ ವ್ಯಾಪಾರವೇ ಬೇಡ. ಬೇರೊಂದು ಪ್ಲೇಟ್ ಇಡುವ (ರಾಜಯ್ಯಂಗಾರರ 'ಮನುಜ ಶರೀರವಿದೇನಃಸುಖ' ಎಂಬ ಪ್ಲೇಟನ್ನಿಡುವನು)

ಮನೋಹರ—(ಮತ್ತಷ್ಟು ರೇಗಿ) ನಿಲ್ಲಿಸು, ನಿಲ್ಲಿಸು ಕೂಡ್ಲೆ ನಿಲ್ಲಿಸು!

ಅರವಿಂದ—ಏನು? ಯಾಕೆ? ಎಲ್ಲಿ? (ದಿಗಿಲು ನಟಿಸುವನು)

ಮನೋಹರ—ತೆಗೆ, ತೆಗೆ ಮೊದಲು ಆ ಪ್ಲೇಟನ್ನು, ಅನಂತರ ಹೇಳುತ್ತೇನೆ, ಸಂಗತಿಯೇನು, ಯಾಕೆ, ಎಲ್ಲಿಯೆಂದು!

ಅರವಿಂದ—ಆಯ್ತು ಮಹಾರಾಯ. ಈ ನವ ವರನ ಮರ್ಜಿಯಲ್ಲ ನಮ್ಮಂತಹ ಹಳೆ ಮರ್ಜಿಯವರಿಗೆ ಉಳಿಗಾಲವಿಲ್ಲ! ಎಲ್ಲಿಯಾದರೂ ಮೆಶಿನು ಮುರಿಯಬೇಡ ಮಹಾರಾಯ! (ಪ್ಲೇಟನ್ನು ತೆಗೆಯುವನು)

ಮನೋಹರ—ಮನುಜ ಶರೀರವಲ್ಲಿ ಸುಖವಿರದಿದ್ದರೆ, ಅದು ನಿರರ್ಥಕವಾದರೆ ಅದನ್ಯಾಕೆ ಉಂಟುಮಾಡಿದನಪ್ಪ ಆ ತಲೆಯಿಲ್ಲದ ದೇವರು? ಅವನಿಗೇನು ಬೇರೆ ಕಸಬು ಇದ್ದಿಲ್ವೋ? ಮನುಜ ಶರೀರದಲ್ಲಿ ಸುಖವೇ ಇಲ್ಲದಿದ್ದರೆ ನಮಗೆಲ್ಲಾ ಒಮ್ಮೆಯೇ ಅರಬಿಸಮುದ್ರದಾಳಕ್ಕೆ ಬಿದ್ದು ಸತ್ತು ಈ ಜೀವದಾಚೆಯಾದರೂ ಸುಖವಿರುವುದೋ ಎಂದು ಶೋಧಿಸಹೋವರೇನು?

ಅರವಿಂದ—ನಾನೂ ಒಂದು ಮದುವೆಮಾಡಿಕೊಂಡಿದ್ದೇನೆ. ಆದರೆ ನನಗೇನೂ ಹೀಗಾಗಲಿಲ್ಲವಪ್ಪ! ಒಂದೊಮ್ಮೆ ಧಾರೆಮಣೆಯಲ್ಲಿ ಹೆಣ್ಣಿನ ಕೈಹಿಡಿಯುವಾಗ, ಅಪರೂಪವಾಗಿ ಓರೆಕಣ್ಣ ನೋಟಗಳೊಮ್ಮೊಮ್ಮೆ ಒಟ್ಟುಗೂಡುವಾಗ ಏನೋ ಒಂದು ಬಗೆ ಆಗುತ್ತಿತ್ತು. ಆದರೆ ಅದೆಲ್ಲ ಒಂದೆರಡು ದಿವಸ. ಆ ಮೇಲೆ ನಾನೇ ನಾನು, ಅವಳೇ ಅವಳು.

ಮನೋಹರ—ಹೌದು ನಿಂದೊಂದು ಮದುವೆ! ಗೊಂಬೆ ಮದುವೆ!

ಅರವಿಂದ—ಹೌದಪ್ಪ ನಮ್ಮದೆಲ್ಲಾ ಗೊಂಬೆ ಮದುವೆ! ಲೋಕದಲ್ಲಿ ನಿಜವಾದ ಮದುವೆಯೆಂದರೆ ನಿನ್ನದೊಬ್ಬನದೇ!

ಮನೋಹರ—ಅಫ್‌ಕೋರ್ಸ್! (ನಿಶ್ಚಯವಾಗಿಯೂ) ಮದುವೆಯೆಂದರೆ ಕಂಪೇನಿಯನ್‌ಶಿಫ್ ಆಫ್ ಸೋಲ್, ಮೈಂಡ್, ಎಂಡ್ ಬೋಡಿ. (ಆತ್ಮ, ಮನ ಮತ್ತು ಶರೀರ ಸಹಚರ್ಯೆ) ನಾವು ಇರುವುದೊಟ್ಟಿಗೆ, ಹೋಗುವುದೊಟ್ಟಿಗೆ, ಬರುವುದೊಟ್ಟಿಗೆ. ಸ್ಪೆನಿಶ್ ಸಿವಿಲ್‌ವಾರ್ (ಸ್ಪೈನಿನ ಅಂತಃಕಲಹ) ಯುರೋಪಿಯನ್ ಸಿಚುವೇಶನ್ (ಯುರೋಪಿನ ಪರಿಸ್ಥಿತಿ) ಇಂಟೆರಿಮ್ ಮಿನಿಸ್ಟ್ರಿ (ತಾತ್ಕಾಲಿಕ ಮಂತ್ರಿಮಂಡಲ) ಎಟಿಟ್ಯೂಡ್ ಆಫ್ ದಿ ಗವರ್ನ್‌ಮೆಂಟ್ ಟವರ್ಡ್ಸ್ ಕಾಂಗ್ರೆಸ್ (ಕಾಂಗ್ರೆಸಿನ ಕುರಿತು ಸರಕಾರದ ಧೋರಣೆ) ಗಾಂಧಿಜೀಸ್ ಸ್ಟೇಟ್ಸ್‌ಮೆನ್ಶಿಪ್ (ಗಾಂಧಿಜಿಯವರ ರಾಜನೀತಿಜ್ಞತೆ) ಮೊದಲಾದ ವಿಷಯಗಳನ್ನು ನಾವು ಚರ್ಚಿಸದ ದಿನವಿಲ್ಲ. ನಿಮ್ಮ ಹೆಂಡಿರೆಂದರೆ ಪಂಜರದ ಪಕ್ಷಿಗಳು. ಬೆಂಕಿಬೀಳಲಿ ನಿಮ್ಮ ಎಜುಕೇಶನಿಗೆ! (ವಿದ್ಯೆಗೆ)

ಅರವಿಂದ—ನೀನು ಅದೃಷ್ಟಶಾಲಿಯಪ್ಪ! ಅದೃಷ್ಟಶಾಲಿ!

ಮನೋಹರ—ಸರ್ಟನ್ಲಿ! (ನಿಜವಾಗಿಯೂ) (ವಾಚ್ ನೋಡಿ) ಓಹೋ ಬಹಳಹೊತ್ತಾಗಿ ಹೋಯಿತು. ಈಗ ನಾವು ಹೋಗುವ! ಅವಳಲ್ಲಿ ಎಷ್ಟು ಕಾದು ಕೊಂಡಿರುವಳೋ ಏನೋ?

ಅರವಿಂದ—ಯಾರು?

ಮನೋಹರ—ಅವಳು.

ಅರವಿಂದ—ಅವಳಂದರಾರಪ್ಪ? ಹೆಸರಿಲ್ಲವೇ ಅವಳಿಗೆ?

ಮನೋಹರ—ಅವಳಂದರೆ ಅವಳೇ, ನನ್ನವಳು.

ಅರವಿಂದ—ಓಹೋ! ನೀನೂ 'ಫೋರ್ವರ್ಡ್' ಅಂದರೆ ಇಷ್ಟೇ. ಹೆಂಡ್ತಿ ಹೆಸರು ಹೇಳಲಾರದ ನಿನ್ನ ಫೋರ್ವರ್ಡ್‌ನೆಸ್ ಎಂತಹದಪ್ಪಾ ಅದು?

ಮನೋಹರ—ಸಾಕೋ ತಮಾಷೆ! ಹೋಗುವ ಡ್ರೆಸ್‌ಮಾಡು.

ಅರವಿಂದ—ಹೇಳಪ್ಪ, ಶ್ರೀಮತಿ ಮನೋರಮಾ ಬಾಯಿ ಎಮ್ ರಾವ್ ಎಂದು. ಆಹಹ! ಮನೋಹರನಿಗೆ ಮನೋರಮೆ! ಮನೋರಮೆಗೆ ಮನೋಹರ! ಹೆಸರಿಗೇನೇ ಕೊಡಬೇಕೇನು?

ಮನೋಹರ—ಎಷ್ಟೋ ತಮಾಷೆಮಾಡುವುದು! ನಡೆ ಹೋಗುವ.

ಅರವಿಂದ—ಓಹೋ! ಅ-ವ-ಳು ಕಾಯುತ್ತಿರಬಹುದಲ್ಲವೇ? ನಡೆ ನಡೆ ಹೋಗುವ (ಇಬ್ಬರೂ ಹೋಗುವರು.)

(ಮುಂದರಿಯುವುದು)

೨ನೇ ನೋಟವನ್ನು ಬರುವ ಸಂಚಿಕೆಯಲ್ಲಿ ಓದಲು ಮರೆಯಬೇಡಿರಿ!

— ಇಟಲಿಯಾನರ ಪೈಶಾಚಿಕ ಕೃತ್ಯಗಳು —

ಮೃತ್ಯುದೂತರಂತಿರುವ ಇಟಾಲಿಯನ್ನರು ಅಬಿಸೀನಿಯಾ ಜನರಪಾಲಿಗೆ ಯುದ್ಧಾನಂತರ ರಣಭೂಮಿಯಲ್ಲಿ ಕಾಣಿಸಿಕೊಳ್ಳುವ ಶಾಕಿನೀ ಢಾಕಿನೀಗಳಂತೆ ಬಂದರು.

ಎರಡು ಸಾವಿರ ವರ್ಷಗಳಿಂದಲೂ ತಮ್ಮದಾಗಿದ್ದ ಲೋಕೈಕಪ್ರಿಯವಾದ ಸ್ವಾತಂತ್ರ್ಯವನ್ನು ಕಸಿದುಕೊಂಡ ಇಟಾಲಿಯನ್ನರ ಮೇಲೆ ಯಾರೋ ಒಬ್ಬಿಬ್ಬರು ತಮ್ಮ ಮನಸ್ಸಿನ ದುಗುಡವನ್ನು ತಡೆಯಲಾರದೆ ಕೈಮಾಡಿದರೆ ಅದಕ್ಕಾಗಿ ಇಟಲೀ ಸರಕಾರದವರು ಕೈಗೊಂಡ ಸೇಡಿನ ವಿಧಾನವು ಹೃದಯವಿದಾರಕವಾದುದು.

ಮುಸೋಲಿನಿಯ ಕಪ್ಪಂಗಿಯ ಸೈನಿಕರಿಗೆ ಹಬಸೀ ಜನರಮೇಲೆ ಬೀಳಬಹುದೆಂದು ಅನುಜ್ಞೆ ಬಂದುದೇ ತಡ, ಅಲ್ಲಿನ ನೇಟಿವ್ ಜನರು ವಾಸವಾಗಿದ್ದ ನಗರಭಾಗಕ್ಕೆ ನುಗ್ಗಿ ಮಾರಣ ಕಾರ್ಯಕ್ಕೆ ಆರಂಭ ಮಾಡಿದರು.

ಮಹಾಯುದ್ಧಕಾಲದಲ್ಲಿ ಯಾವ ಯಾವ ಆಯುಧಗಳನ್ನು ತೊಟ್ಟು ವಧಿಸುವರೊ ಹಾಗೆಯೇ ಕೆಂಡದ ಮಳೆ ಸುರಿಸಿದರು, ಮೆಷೀನ್ ಗನ್ನುಗಳನ್ನು ಪಯೋಗಿಸಿದರು, ರಿವಾಲ್ವರು ರೈಫ್ಲುಗಳಿಂದ ಗುಂಡು ಹಾರಿಸಿದರು.

ಹೆಣ್ಣು ಗಂಡುಗಳೆಂದಾಗಲೀ, ಮುದುಕ ಮೋಟರೆಂದಾಗಲೀ, ಮಕ್ಕಳು ಮರಿಗಳೆಂದಾಗಲೀ ಚಿಂತಿಸುವ ಪಾಪಕ್ಕೇ ಹೋಗಲಿಲ್ಲ ಈ ಮೃತ್ಯು ದಳದವರು.

ಹೀಗೆ ಒಂದಲ್ಲ, ಎರಡಲ್ಲ ಹದಿನಾಲ್ಕು ಸಾವಿರ ಪ್ರಾಣಿಗಳನ್ನು, ನಿಶ್ಯಸ್ತ್ರರಾಗಿದ್ದ ಜನರನ್ನು, ಯಾವ ತಪ್ಪನ್ನೂ ಮಾಡದಿದ್ದವರನ್ನು ಬಲಿಗೊಟ್ಟರು. ಮನೆಗಳಿಗೆ ಅಗ್ನಿ ಪ್ರವೇಶಮಾಡಿಸಿದರು. ಈ ಭೈರವ ಕ್ರೀಡೆಯನ್ನಾಡಿ ತಾಂಡವವಾಡತೊಡಗಿದರು.

ಈ ರೀತಿಯಾಗಿ ಜನರನ್ನು ಬಲಿಗೊಟ್ಟರೆ, ಕಣ್ಣಿಗೆ ಕಂಡವರನ್ನೆಲ್ಲ ಕೊಂದರೆ, ಆಗ ಬೇಕಾದುದೇ ಆಯಿತು-ಎತ್ತ ನೋಡಿದರತ್ತ ಹೆಣಗಳ ರಾಶಿ! ಬೀದಿಯಲ್ಲಿ, ಮನೆಗಳಲ್ಲಿ, ಎಲ್ಲೆಲ್ಲೂ!

ಈ ಹೆಣಗಳನ್ನು ಹೇಗಾದರೂ ಸಾಗಿಸದಿದ್ದಲ್ಲಿ ತಮಗೇ ಕಷ್ಟ. ಹೆಣಗಳು ಕೊಳೆತು ವಾತಾವರಣವೆಲ್ಲವೂ ದುರ್ಗಂಧಮಯವಾಗುವುದು.

ಆದರೆ ಇವರೆಲ್ಲರನ್ನೂ ಮಣ್ಣಿನಲ್ಲಿ ಹಾಕುವುದೆಂದರೆ ಅದು ಮುಗಿಯದ ಕೆಲಸ. ೧೪೦೦೦ ಜನರಿಗೆ ಗುಂಡಿಗಳನ್ನು ತೋಡುವವರಾರು? ಹೂಳುವವರಾರು? ಆದುದರಿಂದ ಲಾರಿಗಳಲ್ಲಿ ಹೆಣಗಳನ್ನೂ, ತುಂಡು ತುಂಡಾಗಿದ್ದ ದೇಹಗಳನ್ನೂ ಸಾಗಿಸಿಕೊಂಡು ಹೋದರು. ಅವುಗಳನ್ನೆಲ್ಲಾ ಪೆಟ್ರೋಲಿನಲ್ಲಿ ನೆನಸಿ ಒಂದುಕಡೆ ಹೇರಿಸಿದರು. ಆ ಮೇಲೆ ಬೆಂಕಿಯಿಟ್ಟರು.

ಪ್ರಾಯಶಃ ಇಷ್ಟೊಂದು ಮಂದಿಯನ್ನು ಏಕಕಾಲದಲ್ಲಿ ಬೆಂಕಿಗೆ ಹಾಕಿದ ಉದಾಹರಣೆಗಳು ಜಗತ್ತಿನ ಇತಿಹಾಸದಲ್ಲಿ ಇದೆಯೆಂದೇ ಹೇಳುವಂತಿಲ್ಲ.

ಇದೀಗ ಮುಸೋಲಿನಿಯ ದೂತರ ಮಾರಣ ಹೋಮದ ಕತೆ.

ನರಹತ್ಯಕ್ಕೆ ಹಿಂದೆಗೆಯಲಿಲ್ಲ, ಶಿಶುಹತ್ಯಕ್ಕೆ ನಾಚಲಿಲ್ಲ, ಸತೀತ್ವ ಹರಣವು ಅವರ ದಿನಚರಿ.

ಇನ್ನು ಇವರ ಕೇಡಿಗರ ಪ್ರಣಯ ತರಂಗವನ್ನಷ್ಟು ನೋಡೋಣ.

ಒಬ್ಬಾನೊಬ್ಬ ಇಟಾಲಿಯನ್ ಮಂತ್ರಿ (ಅಥವಾ, ಪಾದ್ರಿ ?) ಯು (L' Azione Coloniale) ಎಂಬ ಪತ್ರಿಕೆಯಲ್ಲಿ ಈ ರೀತಿ ಬರೆದಿದ್ದಾನೆ. ಹಿಂದೆ ಎಂದೋ ಬರೆದಿದ್ದುದಲ್ಲ. ಈಗ ಇತ್ತೀಚೆಗೆ, ಬಿಸಿಬಿಸಿಯಾಗಿ ಬರೆದಿದ್ದಾನೆ.

"ಅಬಿಸೀನಿಯಾದಲ್ಲಿ ಬೇಕಾದಷ್ಟು ಮಂದಿ ಶ್ವೇತವರ್ಣೀಯ ಸ್ತ್ರೀಯರು ಇಲ್ಲದಿರುವ ಪ್ರಯುಕ್ತ, ಅದೂ ಅಲ್ಲದೆ ಸತ್ಯಶೀಲರಾದ ಹೆಂಗಸರು ಮಾತ್ರವೇ ಇರುವ ಪ್ರಯುಕ್ತ, ಇಲ್ಲಿ ಇರುವ ಇಟಾಲಿಯನ್ ಸೈನಿಕರಿಗೆ ಬಹಳ ಉದ್ರೇಕಕ್ಕೆ ಕಾರಣವಾಗಿದೆ, ಈ ಸಮಸ್ಯೆಯು ಬಹಳ ಕಠಿಣ ಸ್ಥಿತಿಗೆ ಬಂದಿದೆ."

ಈ ವಿಷಯದಮೇಲೆ ಇನ್ನೂ ಹೆಚ್ಚಾಗಿ ಬರೆಯುವುದು ಅನವಶ್ಯಕ.

ಈಗೀಗ ತಿಳಿದುಬರುತ್ತಿರುವ ಸಮಾಚಾರಗಳ ರೀತ್ಯಾ, ಇಟಲಿಯವರು ಹಬಸೀ ಜನರನ್ನು ಹತೋಟಿಗೆ ತರುವುದಕ್ಕಾಗಿ ಹಬಸೀ ಸ್ತ್ರೀಯರ ಮೇಲೆ ಬಿದ್ದು ಕೆಡಿಸಲಾರಂಭಿಸಿದ್ದಾರಂತೆ. ಇವರು ಈ ರೀತಿ ಮಿತಿಮೀರಿ ವರ್ತಿಸುತ್ತಿರುವುದನ್ನು ಕಂಡರೂ ಅಧಿಕಾರಿಗಳು ಯಾವ ಶಿಕ್ಷಿಸುವ ಕೆಲಸಕ್ಕೂ ಹೋಗುವಂತಿಲ್ಲವಾಗಿ ಸೋಲ್ಜರುಗಳ ಅತ್ಯಾಚಾರಗಳು ಮೇರೆ ಮೀರಿವೆ.

ತೂಕಡಿಸುವವನಿಗೆ ಹಾಸಿಗೆ ಹಾಸಿಕೊಟ್ಟ ಹಾಗೆ, ಇಟಲಿಯ ಸರಕಾರದವರೇ ಸರ್ವಾನ್ವಯವಾದ ಒಂದು ಹುಕುಮನ್ನು ಹೊರಡಿಸಿದ್ದಾರೆ. ಇಟಲಿ ಡಾಕ್ಟರುಗಳು ಎಂತಹ ಗೌರವಸ್ಥರ ಮನೆಗಳಿಗಾದರೂ ಹೇಳದೆ ಕೇಳದೆ ಹೋಗಬಹುದಾಗಿದೆ. ಹೋಗಿ ಮನೆಯವನ ಹೆಂಡತಿ ಮತ್ತು ಹೆಣ್ಣು ಮಕ್ಕಳನ್ನೂ ಕರೆದು ನಗ್ನರನ್ನಾಗಿ ಮಾಡಿ ವೈದ್ಯ ಪರೀಕ್ಷೆ ನಡಿಸಿ ಅವರು ಇಟಾಲಿಯನ್ ಸೈನಿಕರ ಸಂಭೋಗಕ್ಕೆ ಅರ್ಹರಾಗಿದ್ದಾರೆಯೋ ಅಥವಾ ಕಾಯಿಲೆಗಳೇನಾದರೂ ಇವೆಯೋ? ಎಂಬುದನ್ನು ಪರೀಕ್ಷೆಮಾಡುತ್ತಾರೆ. ಅನಂತರ ಇಟಾಲಿಯನ್ ಸೈನಿಕರು ಆ ಸದ್ಗೃಹಸ್ತರ ಮನೆಗೆ. ತಮಗೆ ಇಚ್ಛೆ ಬಂದಾಗೆಲ್ಲ ನುಗ್ಗಿ ಅಲ್ಲಿರುವ ಸ್ತ್ರೀಯರ ಮೇಲೆ ಅತ್ಯಾಚಾರಗಳನ್ನು ಮಾಡಲು ಅಭ್ಯಂತರವಿಲ್ಲ.

ಹೀಗೆ ಮುಸೊಲಿನಿಯ ಕಡೆಯವರು ಕೇವಲ ತಮ್ಮ ಸೈನಿಕರ ಆರೋಗ್ಯದ ಕಡೆ ಹೆಚ್ಚು ಗಮನ ಕೊಡುತ್ತಿದ್ದಾರೆಯೇ ವಿನಹ ಹಬಸೀ ಜನರ ಹೆಂಗುಸರ ಮಾನಗಳು ತೃಣಕ್ಕಿಂತಲೂ ಕಡಿಮೆಯಾಗಿವೆ.

ಮೇಲೆ ಹೇಳಿದ ಈ ವಿಷಯಗಳು ಲಂಡನ್ನಿನ ಪಾರ್ಲಿಮೆಂಟ್ ಸಭೆ (ಕಾಮನ್ಸ್) ಯಲ್ಲಿ ಮಾರ್ಚಿ ಅಧಿವೇಶನದಲ್ಲಿ ಚರ್ಚೆಗೆ ಬಂದಾಗ, ಬ್ರಿಟಿಷ್ ಪ್ರಭುತ್ವ ಸ್ಥಾನದಲ್ಲಿರುವವರು, ಎಷ್ಟೋ ಗಾಂಭೀರ್ಯದಿಂದ, ಈ ವಿಷಯಗಳು ನಡೆದುದುಂಟೆಂದು ಒಪ್ಪಿಕೊಂಡರು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಈ ವಿಷಯವು ಚರ್ಚೆಗೆ ಬಂದ ವಿಚಾರವು ಇಟಲಿಗೆ ತಿಳಿದುಬಂದದ್ದೇ ತಡ; ಅಲ್ಲಿನ ಪತ್ರಿಕೆಗಳು ಪ್ರತೀಕಾರವಾಗಿ, ಬ್ರಿಟಿಷರು ಹಿಂದೆ ಬ್ರಿಟಿಷ್ ಸೋಮಾಲಿಲ್ಯಾಂಡಿನಲ್ಲಿ ನಡೆಸಿದ ಅತ್ಯಾಚಾರಗಳನ್ನು ಕುರಿತು ಪ್ರಕಟಿಸಿದರು.

ಹೀಗೆ ಇಟಲಿಯವರಿಂದ ಪ್ರಕಟಿಸಲ್ಪಟ್ಟಿರುವ ಪ್ರತಿಭಟನ ರೂಪವಾದ ಆರೋಪಗಳಲ್ಲಿ ಒಂದು ಇದು:—

ಹಿಂದೆ ಒಬ್ಬ ಆಂಗ್ಲೇಯ ಅಧಿಕಾರಿಯು ಒಬ್ಬ ನೇಟಿವ್ ಪ್ರಜೆಯ ಹತ್ತಿರಕ್ಕೆ ಹೋಗಿ ತೆರಿಗೆಯನ್ನು ವಸೂಲ್ಮಾಡಲೆತ್ನಿಸಿದಾಗ ಮಾತುಗಳು ಹೋಗಿ ಜಗಳಕ್ಕಾರಂಭವಾಗಿ ಕೊನೆಗೆ ಆಂಗ್ಲೇಯ ಅಧಿಕಾರಿಗೆ ಗುಂಡಿನೇಟು ಬಿತ್ತು.

ಆಗ ಬ್ರಿಟಿಷರು ಏನು ಮಾಡಿದರು? ೧೫೦ ಮಂದಿ ನೇಟಿವ್ ಮುಂದಾಳುಗಳನ್ನು ಹಿಡಿದುಕೊಂಡು ಬಂದು, ನಿಷ್ಕಾರಣವಾಗಿ ಯಾವ ವಿಚಾರಣೆಯನ್ನೂ ನಡೆಸದೆ, ಅವರಷ್ಟು ಮಂದಿಯನ್ನೂ ಕೊಂದುಹಾಕಿದರು. ಅಲ್ಲಿಗೂ ನಿಲ್ಲದೆ ವಿಮಾನಗಳ ಮೂಲಕ ಸುಮಾರು ಮೂವತ್ತು ಚದರ ಮೈಲಿಯಷ್ಟು ಪ್ರಾಂತದಮೇಲೆ ಹತ್ತು ಟನ್ ಬಾಂಬುಗಳನ್ನು ಸುರಿದರು. ಹೀಗೆ ಅಲ್ಲಿದ್ದ ನೇಟಿವ್ ಪ್ರಜೆಗಳೆಲ್ಲರನ್ನೂ ಬಲಿಗೊಟ್ಟರು.

ಇದು ಬ್ರಿಟಿಷ್ ಸೋಮಾಲಿ ಲ್ಯಾಂಡಿನಲ್ಲಿ ಮಾಡಿದ್ದಾಯಿತು.

ಹಿಂದೆ ಇವರು ಸುಡಾನ್‌ಪ್ರಾಂತವನ್ನು ತಮ್ಮ ವಶಕ್ಕೆ ತೆಗೆದುಕೊಂಡಾಗ ಅಲ್ಲಿನ ಶಾಲಾ ವಿದ್ಯಾರ್ಥಿಗಳು ಬ್ರಿಟಿಷರಿಗೆ ವಿರುದ್ಧವಾಗಿ ಚಳವಳಿಮಾಡಲು ಸಾವಿರಾರು ಮಂದಿ ಪ್ರಜೆಗಳನ್ನು ಮೃತ್ಯುಸದನಕ್ಕಟ್ಟಿದರು.

ಈ ಪ್ರಕಾರವಾಗಿ ಇಟಲಿಯವರು ಬ್ರಿಟಿಷರ ಇತಿಹಾಸದಲ್ಲೂ ತಮ್ಮ ಅಬಿಸೀನಿಯಾ ಅತ್ಯಾಚಾರಗಳು ಪ್ರತಿಬಿಂಬಿಸುವವಷ್ಟಿವೆ ಎಂಬುದಾಗಿ ತಮ್ಮ ಪತ್ರಿಕೆಗಳಲ್ಲಿ ಬರೆದು ತೃಪ್ತರಾಗಿದ್ದಾರೆ.

ಇದನ್ನೆಲ್ಲಾ ನೋಡಿದರೆ, ನಾಗರಿಕ ರಾಜ್ಯಗಳೆಂದು ಬಡಾಯಿ ಕೊಚ್ಚಿಕೊಳ್ಳುತ್ತಿರುವ ಈ ರಾಷ್ಟ್ರಗಳ ಅನಾಗರಿಕ ಕೃತ್ಯಗಳು ಎಲ್ಲಿಗೆ ನಿಲ್ಲುವುವೋ ಹೇಳುವಂತಿಲ್ಲ.

—ಪ್ರಜಾಮತ.

THE

PANGAL NAYAK BANK

LIMITED.

ESTABLISHED 1920.

Paid up Capital: Rs. 1,82,100/-

***Head Office*: UDIPI.**

Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ಬೇಕಾಗಿದೆ.

ದ್ವಾರಕಾನಾಥ್ ಮತ್ತು ಸಿಂಹ ಕಂಪೆನಿಯವರು ತಯಾರಿಸಲಿರುವ ಕನ್ನಡ ಸಾಮಾಜಿಕ ವಾಕ್ಚಲನಚಿತ್ರದಲ್ಲಿ ಅಭಿನಯಿಸಲು ವಿದ್ಯಾವತಿಯರೂ ಮತ್ತು ರೂಪವತಿಯರೂ ಆದ ಕುಲೀನ ಯುವತಿಯರು ಬೇಕಾಗಿವೆ.

ಪೆಟ್ಟಿನ ವಿಷಯಗಳಿಗೆ ಭಾವಚಿತ್ರಗಳೊಡನೆ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಇದೇ ಮಾಹೆ 25ನೇ ತಾರೀಕಿನೊಳಗಾಗಿ ಬರೆಯಿರಿ.

Dwarakanath Simha & Co.,

FILM PRODUCERS

'LALITA' Vontikoppal

MYSORE

ರೂಪಾಯಿ 25 ಬಹುಮಾನ
ಚಕ್ರ ಬಂಧ ಸ್ಪರ್ಧೆ

ಪ್ರಥಮ ಬಹುಮಾನ ರೂಪಾಯಿ 15

ನಂಬ್ರ ೫

ಇತರ ಬಹುಮಾನ ರೂಪಾಯಿ 10

ಉತ್ತರ ಸ್ವೀಕಾರದ ಕೊನೆಯ ತಾ. ೧೫-೫-೩೭] [ಉತ್ತರ ಪ್ರಕಟಿಸುವ ಸಂಚಿಕೆಯ ತಾ. ೨೦-೫-೩೭.

ಒಗಟುಗಾರ:— ಎಸ್. ರಾಘವ ಹೆಗಡೆ, ಹಕ್ಲಾಳ.



ಬಿಡ್ಡುಗರ ಹೆಸರು__________

ವಿಳಾಸ__________

— ಸೂಚನೆಗಳು —

ಎಡದಿಂದ ಬಲಕ್ಕೆ.

1. ಲಕ್ಷ್ಮಿ.
3. ಭಾಗ.
4. ಮೈಸೂರಿನ ಮಾಸಪತ್ರಿಕೆಗಳಲ್ಲೊಂದು.
9. ಪೃಥ್ವಿ.
11. ರಾಮ ಪುತ್ರರಲ್ಲೊಬ್ಬ
15. ಪ್ರಮುಖ ದೇಶಭಕ್ತರಲ್ಲೊಬ್ಬ.
19. ಮರದಿಂದುಂಟಾಗುವ ಒಂದು ಸಾಧನ.
22. ದೇವರ ಹೆಸರು
24. ವರ್ತಮಾನ.
26. ಭೂಮಿ.
27. ಶ್ರೇಷ್ಠ.
28. ಆಕಾಶ.
30. ಯುದ್ಧ.

ಮೇಲಿಂದ ಕೆಳಕ್ಕೆ.

2. ಮಾನವರು ಹೆಚ್ಚಾಗಿ ಇದನ್ನು ಬಯಸು[ತ್ತಾರೆ.
3. ಚೆಲುವು.
5. ಮುಖ.
6. ಮನುಷ್ಯರು ಸಾಕುವ ಪ್ರಾಣಿಗಳಲ್ಲೊಂದು.
7. ಕಾಪಾಡಿ
8. ಹುಡುಕುವಿಕೆ.
10. ಕರಿ.
12. 4 ರೂಪಾಯಿ.
13. ರಸನೇಂದ್ರಿಯಗಳಲ್ಲೊಂದು.
16. ಮಂಗಲಕಾರ್ಯಗಳಿಗೆ ಇದು ಬೇಕು.
17. ಕಿವಿಗೊಟ್ಟು ಕೇಳು.
18. ಆಶೀರ್ವದಿಸು.
20. ಉಸಿರಾಟ.
21. ಭಕ್ತ.
23. ಮರಣ.
25. ಸೇವಕ.
26. ಪ್ರತಿಯೊಬ್ಬನೂ ಬಯಸುವಂಥಾದ್ದು.
29. ಮೇರೆ.
31. ಬೆಲೆ.

ನಿಯಮಗಳು

೧. ಪ್ರತಿ ಉತ್ತರದೊಡನೆ ಎರಡಾಣೆಯ ದಪ್ಪಾಲುಚೀಟನ್ನು ಇಡಬೇಕು. ಅದನ್ನು ಯಾವ ಕಾರಣದಿಂದಲೂ ತಿರುಗಿ ಕೊಡಲಾಗುವುದಿಲ್ಲ. ಅಥವಾ ಬೇರೊಂದು ಸ್ಪರ್ಧೆಗೆ ಜಮೆಹಿಡಿಯುವಂತೆಯೂ ಇಲ್ಲ. ೨. ಒಬ್ಬರು ಅನೇಕ ಉತ್ತರಗಳನ್ನು ಕಳುಹಿಸಬಹುದು. ಮೊದಲನೆಯದನ್ನು ಮೇಲಿನ ಚಕ್ರಬಂಧದ ಕೂಪನಿನಲ್ಲಿಯೂ ಮಿಕ್ಕವುಗಳನ್ನು ಬೇರೆ ಕಾಗದದಲ್ಲಿಯೂ ಬರೆದು ಕಳುಹಿಸಬಹುದು. ೩. ಸ್ಪರ್ಧೆಯ ಎಲ್ಲಾ ವಿಷಯಗಳಲ್ಲಿಯೂ ಚಕ್ರಬಂಧ ಸ್ಪರ್ಧೆಯ ಸಂಪಾದಕರ ತೀರ್ಮಾನವೇ ಕೊನೆಯದಾಗಿರುತ್ತದೆ. ೪. ಈ ಸ್ಪರ್ಧೆಗೆ ಸಂಬಂಧಪಟ್ಟ ಪತ್ರವ್ಯವಹಾರಗಳನ್ನು ಎಷ್ಟು ಮಾತ್ರವೂ ಮಾಡಲಿಕ್ಕಿಲ್ಲ; ಆದಕ್ಕಾಗಿ ಮಾತುಕಥೆಯೂ ಅನಗತ್ಯವಿದೆ. ೫. ನಿಯಮಗಳನ್ನು ಪಾಲಿಸದಿರುವ ಉತ್ತರಗಳು ಅಸ್ವೀಕೃತವಾಗುವವು ೬. ನವಯುಗದ ಸಂಪಾದಕರ ಬಳಿ ಮೊಹರುಮಾಡಿಟ್ಟ ಉತ್ತರಕ್ಕೆ ಹೊಂದಿಕೆಯಾಗುವ ಉತ್ತರವೇ ಸಂಪೂರ್ಣ ಸಮರ್ಪಕ ಉತ್ತರ. ಒಂದಕ್ಕಿಂತ ಹೆಚ್ಚು ಸಂಪೂರ್ಣ ಉತ್ತರಗಳು ಬಂದರೆ ಇನಾಮನ್ನು ಸೋಡ್ತಿ ಹಾಕಿ ಕೊಡಲಾಗುವುದು. ಆದರೆ ಎಲ್ಲರ ಹೆಸರುಗಳನ್ನು ಪ್ರಕಟಿಸಲಾಗುವುದು. ಇನಾಮನ್ನು ಬಿಡ್ಡುಗರ ಸಂಖ್ಯಾಮಾನಕ್ಕನುಗುಣವಾಗಿ ಏರಿಳಿಸಲಾದೀತು ಉತ್ತರವನ್ನು ತಾ. 15-5-37ರ ತನಕ ಸ್ವೀಕರಿಸಿ ತಾ. 20-5-37ಕ್ಕೆ ಪ್ರಕಟಿಸಲಾಗುವುದು. ಉತ್ತರವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ಮೆನೇಜರ್: **ನವಯುಗ, ಉಡುಪಿ.**

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಗ್ಗೆ 6-55	ರಾತ್ರಿ 8-56
ಕಾಂಜಂಗಾಂಡ್ ಪ್ಯಾಸಂಜರ್	ಬೆಳಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಗ್ಗೆ 9 50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಗ್ಗೆ 9-20

ಸ್ಟೀಮರು ಸಮಯ

	ಬೊಂಬೈಂದ ಬರುವದು	ಬೊಂಬೈಗೆ ತೆರಳುವದು
ಮಂಗಳೂರು	ಗುರುವಾರ ಬೆಳಗ್ಗೆ 8 ಗಂಟೆ	ಶನಿವಾರ ಬೆಳಗ್ಗೆ 9 ಗಂಟೆ
	ಸೋಮವಾರ ಬೆಳಗ್ಗೆ 7 ಗಂಟೆ	ಮಂಗಳವಾರ ಬೆಳಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಗ್ಗೆ ಗಂಟೆ 2-30	ಶನಿವಾರ ಮಧ್ಯಾಹ್ನ 12
	ಆದಿತ್ಯವಾರ ಹಗಲು 3 ಗಂಟೆ	ಮಂಗಳವಾರ ಮಧ್ಯಾಹ್ನ 12
ಕುಂದಾಪುರ	ರವಿವಾರಹಗಲು 1 ಗಂಟೆ	ಶನಿವಾರ ಸಂಜೆ ಗಂಟೆ 3-30
		ಮಂಗಳವಾರ ಮಧ್ಯಾಹ್ನ 3-30

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ ...	3 – 6	3—10	3— 0	3— 2
ಮುಡ್ಡಿ ...	3— 8	4 4	3 – 4	3—14
ಗುಡ್ಡ ಸುಗ್ಗಿ ...	3—10	3 – 14	3 — 0	3— 2
ಊರ ಅವ್ವಲ್ ಬೆಳ್ತಿಗೆ ...	4— 0	4— 4	4— 4	4— 8
ರಂಗೂನು ಬೆ. ಗೋ. ೧ಕ್ಕೆ	7— 0	7— 4	6—14	7— 8
ಗೋಧಿ ಗೋಣಿ ೧ಕ್ಕೆ ...	11— 0	13— 0	12 –0	14— 0
ತೊಗರಿ ಗೋಣಿ ೧ಕ್ಕೆ ...	9— 8	12— 8	12— 8	13— 0
ಹುರುಳಿ ಗೋಣಿ ೧ಕ್ಕೆ ...	5 — 0	5— 6	4 — 0	5— 8
ಕಡಲೆ ಗೋಣಿ ೧ಕ್ಕೆ ...	8— 0	12— 8	8 – 8	8 – 12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17— 0
ಉದ್ದು ಗೋಣಿ ೧ಕ್ಕೆ ...	9— 0	9 — 8	9— 0	8— 8
ಹೆಸರು ಗೋಣಿ ೧ಕ್ಕೆ ...	7 –12	8— 0	10— 0	9— 8
ಊರುಬೆಲ್ಲ ಖಂಡಿ ೧ಕ್ಕೆ ...	30— 0	32— 8	20— 0	30— 0
ಉಪ್ಪು ಗೋಣಿ ೧ಕ್ಕೆ ..	4 – 2	5— 4	5— 2	5— 4
ಕೊಬ್ಬರಿ ಖಂಡಿ ೧ಕ್ಕೆ ...	75— 0	84— 0	90— 0	95— 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	26— 8	28 – 8	18—12	20— 0
ಎಳ್ಳಿಂಡಿ ಖಂಡಿ ೧ಕ್ಕೆ ...	26— 4	27 — 8	20— 0	21— 4
ಕೊಬ್ಬರಿ ಎಣ್ಣೆ ಮಣ ೧ಕ್ಕೆ	6— 0	7— 0	6 – 8	6—12
ಎಳ್ಳೆಣ್ಣೆ ಮಣ ೧ಕ್ಕೆ ...	7— 0	...	6 – 0	6— 4
ಚಿಮಿಣಿ ಎಣ್ಣೆ ಪೆಟ್ಟಿಗೆ೧ಕ್ಕೆ	6— 5	7 – 5	6 – 8	6—12
ಮೋರಿಸ ಸಕ್ಕರೆ ಮು. ೧ಕ್ಕೆ	3 — 2	3— 4	2—14	2—15
ಮೆಣಸು ...	2— 8	5— 0	3 – 4	3— 6
ಸಾಸಿವೆ ಮುಡಿ ೧ಕ್ಕೆ ...	5— 4	5- 8	5— 8	5—12
ಕೊತ್ತಂಬರಿ ಮುಡಿ ೧ಕ್ಕೆ ...	2— 8	3 – 0	2 — 8	3— 4
ಕಾಳುಮೆಣಸು ಖ. ೧ಕ್ಕೆ ...	100— 0	120 – 0	110— 0	120 – 0
ಗೇರುಬೀಜ ಮು ೧ಕ್ಕೆ ...	3 – 4	3 – 8	4 – 6	4— 8
ಕಬ್ಬಿಣ ಖಂಡಿ ೧ಕ್ಕೆ ...	35— 0	37— 8	55— 0	60— 0
ತಾಂಬ್ರ ತಗಡು ಮ. ೧ಕ್ಕೆ	12— 4	12 — 8	17— 8	...
,, ಪಾತ್ರಗಳು ಮ. ೧ಕ್ಕೆ	12 – 8	14— 0	18— 8	19— 0
ಚೀನಿ ಬೆಳ್ಳಿ ಸೇರು ೧ಕ್ಕೆ ...	13 – 8	15 — 0	13—14	...
ಹಿತ್ತಾಳೆ ತಗಡು ಮ. ೧ಕ್ಕೆ	10 — 0	10 – 8	13— 0	...
ಸವನು ೧ಕ್ಕೆ ...	22— 7	22— 8	22 –12	...
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45— 0	45 — 0	50— 0
ನೇಟಿವ್ ಕಾಫಿ ಖಂಡಿ ೧ಕ್ಕೆ	170 – 0	180 0	180 – 0	220— 0
ಫಟೇರಿ ಕಾಫಿ ಖಂಡಿ ೧ಕ್ಕೆ	175— 0	195 — 0	210 – 0	220— 0
ಮಡಿಕೇರಿ ಏಲಕ್ಕಿ ...	50— 0	55 — 0	70— 0	75— 0
ತುಪ್ಪ ಮಣ ೧ಕ್ಕೆ	17 — 0	18 — 0	14— 0	15— 0
ಏಲಕ್ಕಿ ಬೀಜ ಮಣ ೧ಕ್ಕೆ	80— 0	85— 0	70— 0	80— 0

BUY ADVERTISED GOODS.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. ೬೦ ಮಾತ್ರೆಗಳು ರೂ. ೫ -- ೦---೦
೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುವ್
ಚಿಕಾಕೋಲ್

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶೆ ಮಾಲುಗಳ ಕೆಟಲಗು 1, ಕಾಶೀಸಕ್ಷಿ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕಧಪಾಮ್ಸಿ, ಪೇಟಾ, ಕೋಟಿಂಗ್, ಶಟಿರ್ಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಕ, ಧಾವಳಿ, ನಾಮರ್ಾಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ 20 ರಿಂದ 55 ಪಡಲು ಸಾದಾ 16 ಮೊಳದ ಶೀರೆ 1 ಕ್ಕೆ ರೂ. 16 ರಿಂದ ರೂ. 35 ರ ವರೆಗೆ. ಅರಿ ಕಡಮೆ 16 ಮೊಳ ಕ್ಲವರ್ ಅಂಚು ರೂ. $10\frac{1}{2}$ ಯಿಂದ ರೂ 16. ಖಣ 1 ಕ್ಕೆ ರೂ. $1\frac{1}{4}$ ರಿಂದ ರೂ 10 ರ ವರೆಗೆ, ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚಾಕಂಬಾ, ಬಿನಾರಿಸ್, ಕಾಶಿ



ಧರ್ಮಾರ್ಥ
ಬಹುಮಾನಗಳು
1-4-0 ಗೆ !
--- ಯಾರಿಗೆ? ---

ರೂಪಾಯಿ 1—4—0 ಕೊಟ್ಟು 14 ಸೀಸೆ ಒ. ಟ್ರೋರೋನ್ಸ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡೆಕೊಳ್ಳುವವರಿಗೆ!!

ಇನಾಮುಗಳ ವಿವರ:—3 ಡಮ್ಮಿ ರಿಸ್ಟ್‌ವಾಚುಗಳು; 1 ಶೈಲ್ವಿಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಶ್; 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು; 1 ಫೌಂಟನ್ ಪೆನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲ್ಯಾಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. ಇಂದೇ ಆರ್ಡರುಕೊಡಿರಿ.

Bengal Watch Co.,
Post Box No. 12214, CALCUTTA

ಕಿರಿಯರ ಪ್ರಪಂಚದ ಪುಸ್ತಕಗಳು.

೧	ನಾಡಕಥೆ	೧	೨	೦
೨	ಮುಂದಿನ ದೇವರು ...	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ	೦	೬	೦
೬	ಕಾವ್ಯಸಾಮ್ರಾಜ್ಯ ...	೦	೧೨	೦
೭	ಮಧುವನ	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು.
ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

WANTED

Influential agents to canvass Subscribers and to get advertisements for 'Navayuga' throughout Karnataka on pay or commission basis.
For particulars apply to—

The Manager,
Navayuga, Udipi.

ಅಖಿಲ ಕನ್ನಡ ನಾಡಿಗೆ
ಪ್ರೀತಿಯಾಗಿರುವ

ಮಾಸ] ಕಥಾಕುಂಜ [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ವಿಷಯಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೋಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ **ಡಾ| ಸುಮತಿಬಾಯಿ,**

ಬಿ. ಎ. ಎಲ್. ಟಿ., ಎಫ್. ಪಿ. ಎಚ್. ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್-

The Coondapoor Bank, Ltd.,

Head Office:- **Coondapoor.** Branch Office:-**Brahmavar.**

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ.ಶೆ.2, **ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು**ಸಾ.ಶೆ 4,
ಕಾಯಂ ಠೇವಣಾತಿಗಳು 3 **ತಿಂಗಳ ಬಾಬತು** ಸಾ. ಶೆ. 4

6 **ಮತ್ತು** 9 **ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ** 5%,
1 **ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ** 5½%
2 **ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ** 6% **ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.**

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತವೆ. ಪಾಲುಗಳು ದೊರೆಯುತ್ತವೆ, ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. — **N. Sheshagiri Rao,** ಸಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,

ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್
ಕೋಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ

ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ

ರತಿವಿಲಾಸ ಮಾತ್ರೆಗಳು

ಈ ಆದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ— **ಭವಾನಿ ಅಂಡ್ ಕಂಪೆನಿ,**

ಪೋಸ್ಟು ಬಾಕ್ಸ್ ನಂ. 237, ಜೆ. ಟಿ. ಮದರಾಸ್

Dazzling! Defiant!
Thought Provoking!

We Want A Dictator

BY
B. N. RAO.

Commencing from this issue, a series of articles under the above caption will appear in **Financia Expertus,** which no Student of Indian politics and economics can afford to miss. Grippingly interesting and crammed with original and unconventional suggestions for the Reconstruction of Indian Society

You simply must read these articles.

Copies can be had at—

Calcutta Advertising & Literature Distributing Agency,
65, Colotoole, St. **Calcutta.**

Shankara Karnataka Pustaka Bhandar,
Dharwar.

All Swadeshamitran Book stalls.

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೨೦ ಪುಟ

NAVAYUGA
A Nationalist Kanarese Weekly, UDIPI, S. K.

ನವಯುಗ

VOL. XVI-NO. 35

6-5-1937

ವಾರಪತ್ರಿಕೆ

ಸಂಪಾದಕ: ಕೆ. ಕೆ. ಶೆಟ್ಟಿ.

It will pay you to advertise in 'NAVAYUGA' The Leading Nationalist Kanarese Weekly of Karnatak

FOR RATES OF ADVT. Etc.
APPLY TO THE MANAGER

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೬ ಮೇ, ೧೯೩೭ [ಸಂಚಿಕೆ ೩೫

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I.)

BRANCHES:

1 BANGALORE CITY
2 BELGAUM
3 BYADGI
4 BELLARY
5 ADONI
6 HOSPET
7 TALIPARAMBA
8 UPPINANGADI
9 KASARGODE
10 PAYYANUR
11 KANHANGAD
12 KARKALA
13 NANDYAL
14 PRODATTUR
15 TADPATRI
16 HUBLI
17 GADAG
18 KARWAR
19 KUMTA
20 ANKOLA
21 HONAVAR
22 BHATKAL
23 BRAHMAVAR
24 HUNGARCUTTA
25 SIRSI
26 SAGAR
27 COONDAPOOR
28 UDIPI
29 MANGALORE
30 CANNANORE

Beg to announce
Having Opened their Branch at
BOMBAY
on Friday, the 23rd April 1937
IN
"Premchand House"
AT
Sir Pherozshah Mehta Road.

Paid up Capital	Rs. 3,45,580
Reserves	„ 19,2,390
Deposits exceed	„ 22 lakhs
Total Working Funds exceed	„ 40 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ- ಕೆ. ವಿ. ರಾವ್, ಮೆನೇಜರ್.

ನ ವ ಯು ಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ ═══ ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ 1/4 ಪಳ್ಳಿ) ಹೊರಡುವುದು!

ಅಲ್ಲದೆ ಚಂದಾದರವನ್ನು ಇಳಿಸಿದೆ— ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ. ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ-ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ. ವಿ. ಪಿ. ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,

ಚಾಮರಾಜಪೇಟೆ, ಬೆಂಗಳೂರು ನಗರ

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ಪರದಲ್ಲಿ ಸಾಲಕೊಡಲಾಗುವುದು.

ಸಿರಯ ಠೇವಣಾತಿ ನೇಕಡ 5½ರ ವರೇಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ಪರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, *President & Manager*, ಯಂ. ಆರ್. ಪೂಂಜ, ಪ್ರಸಿಡೆಂಟ್ ಮತ್ತು ಮೆನೇಜರ್.

ಮಾಸ]

ವಿಶ್ವವಾಣಿ

[ಪತ್ರಿಕೆ.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ: ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈವಿಧ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗ ವಿಲಾಸಲು.

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ) ... ... ರೂ. ೩—೮—೦
,, ,, (೬ ತಿಂಗಳಿಗೆ) ... ... ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ) ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ **ಸ್ತ್ರೀಧರ್ಮ ಸಂಜೀವಿನೀ ಚೂರ್ಣ** (ರಿಜಿಸ್ಟರ್ಡ) **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವ್ಯಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ. ಪಿ. ಖರ್ಚು ಆಣೆ ೮,

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭದಾರಣ ಬಂದಾಗುವುದು. ಇದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು॥ ಕೇಳವಾ ಮಾಹಿಮಾ ಜಿ. ರಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, S. M. C.

ಕನ್ನಡ ಭಾಷಾಪಾಠಗಳು.

ಮೆಕ್ಮಿಲನರ ಕನ್ನಡ ಪುಸ್ತಕಾವಳಿ

ಸುಪ್ರಸಿದ್ಧವಾಗಿರುವ ಈ ಗ್ರಂಥಮಾಲೆಯನ್ನು ಈಗ ಮಕ್ಕಳ ವಯೋಧರ್ಮ, ಮನೋಧರ್ಮಗಳಿಗೆ ಅನುಸರಿಸಿ ಸಿಲೆಬಸಿನ ಎಲ್ಲ ಅಂಗಗಳನ್ನು ಒಳಗೊಂಡು, ಪದ್ಯಗಳನ್ನೂ ಸೇರಿಸಿ, ಯಾವತ್ತು ಬಗೆಯ ಅಭ್ಯಾಸಗಳನ್ನೂ ಸೂಚಿಸಿ, ವ್ಯಾಕರಣ ಮತ್ತು ಪ್ರಬಂಧರಚನೆಗೂ ಅನುಕೂಲವೂ ಉಪಯುಕ್ತವೂ ಆಗುವಂತೆ ತಿದ್ದಿ ರಚಿಸಲಾಗಿದೆ.

ಶಿಕ್ಷಣವು ಅತ್ಯಾಧುನಿಕ ರೀತಿಗೆ ಒಪ್ಪುವಂತೆ ಬರೆದ ಪುಸ್ತಕಗಳು:
ಶ್ರೀಯುತರು ಕೆ. ಶ್ರೀನಿವಾಸ ಕಿಣಿ, ಬಿ. ಎ., ಎಲ್. ಟಿ.,
ಎಮ್. ಎಸ್. ಕಾಮತ್, ಉಗ್ರಾಣ ಮಂಗೇಶರಾವ್
ಮೊದಲಾದವರಿಂದರಚಿತವಾದವು.

ಈಗಲೆ ಅಚ್ಚಾಗಿ ಪ್ರಕಟವಾದುದು!

ಬಾಲಶಿಕ್ಷೆ

ಮೊದಲನೆ ದರ್ಜೆಯ ಮಕ್ಕಳಿಗೆ ಇಷ್ಟು ಮೋಹಕರವಾದ ಮತ್ತು ಸಂಪೂರ್ಣ ಸುಲಭರೀತಿಯಿಂದ ಕನ್ನಡವನ್ನು ಓದಲೂ, ಬರೆಯಲೂ, ಸಂಭಾಷಣೆ ನಡಿಸಲೂ ಅತ್ಯುಪಯುಕ್ತವಾದ ಮತ್ತೊಂದು **ಪುಸ್ತಕವೇ ಇಲ್ಲ.**

ಶ್ರೀ. ಕೆ. ಶ್ರೀನಿವಾಸ ಕಿಣಿ, ಬಿ. ಎ., ಎಲ್. ಟಿ.
ಶ್ರೀ. ಎಮ್. ಎಸ್. ಕಾಮತ್—ಇವರಿಂದ

ಒಂದು ವರ್ಷದಲ್ಲಿ ಕನ್ನಡ ಭಾಷೆಯ ಮತ್ತು ಲಿಪಿಯ ಮೂಲ ಪರಿಜ್ಞಾನವು ಅತ್ಯಾಧುನಿಕ ರೀತಿಯಲ್ಲಿ ಮಕ್ಕಳಿಗೆ ದೊರೆವುದು.

ಬಾಲಶಿಕ್ಷೆ	ಕ್ರಯ 2 ಆಣೆ
ಮೊದಲನೆ ಪುಸ್ತಕ	,, 2 ,,
ಎರಡನೆ ,, ...	,, 3 ,,
ಮೂರನೆ ,, ...	,, 4 ,,
ನಾಲ್ಕನೆ ,, ...	,, 5 ,,
ಐದನೆ ,, ...	,, 6 ,,
ಆರನೆ ,, ...	,, 7 ,,
ಏಳನೆ ,, ...	,, 8 ,,

ನೂತನ ಸಾಮಾನ್ಯ ವಿಜ್ಞಾನ ಪಾಠಗಳು.

1ನೆಯಿಂದ 5ನೆ ತರಗತಿಯ ವರೆಗೆ, ಎಳೆಯ ಮಕ್ಕಳಿಗೆ ತಿಳಿಯುವ ಹಾಗೆ, ಸಿಲೆಬಸಿನಲ್ಲಿರುವ ಯಾವತ್ತು ವಿಷಯಗಳನ್ನು ತುಂಬಾ ಚಿತ್ರಮಯವಾಗಿ ಕಥಾರೂಪದಲ್ಲಿ ವಿವರಿಸಿ ಸುಲಭ ಮಾತಿನಲ್ಲಿ ಬರೆಯಲಾಗಿದೆ.

ಮೊದಲನೆ ಪುಸ್ತಕ	2ನೆ ದರ್ಜೆಗೆ	ಕ್ರಯ	3 ಆಣೆ
ಎರಡನೆ ,,	3ನೆ ,, ...	,,	3 ,,
ಮೂರನೆ ,,	4ನೆ ,, ...	,,	5 ,,
ನಾಲ್ಕನೆ ,,	5ನೆ ,, ...	,,	6 ,,

ದೇಹದ ಅಂಗಾಂಗಗಳ ಮೊಡೆಲ್‌ಗಳೂ, ಚಿತ್ರಪಟಗಳೂ, ಮೃಗ ವೃಕ್ಷಾದಿಗಳ ಚಿತ್ರಗಳೂ ಸಿಗುವುವು.

ಗಣಿತ ಪುಸ್ತಕಗಳು

ಗಣಿತಶಾಸ್ತ್ರವನ್ನು ಆಟದಂತೆ ಪ್ರತ್ಯಕ್ಷ ಬೋಧಿಸಲು ಅತ್ಯುಪಯುಕ್ತವಾಗಿರುವ ಸಚಿತ್ರ ಪುಸ್ತಕಗಳು.

ಬಾಲಗಣಿತ 1ನೆ ದರ್ಜೆಯದು	ಕ್ರಯ	3 ಆಣೆ 6ಪೈ
,, 2ನೆ ,, ...	,,	5 ,,
,, 3ನೆ ,, ...	,,	7 ,, 6 ,,
,, 4ನೆ ,, ...	,,	8 ,, 6 ,,
,, 5ನೆ ,, ...	,,	11 ,, 6 ,,

ಭೂಗೋಲ ಶಾಸ್ತ್ರ

ಭೂವಿವರಣೆ ಮೊದಲನೆಯ ಪುಸ್ತಕ .... ಕ್ರಯ 2 ಆಣೆ 6 ಪೈ
,, ಎರಡನೆಯ ,, ... ,, 3 ,, 6 ,,

ಚಿತ್ರಮಯ ದಕ್ಷಿಣ ಕನ್ನಡ ಶ್ರೀ. ಕಾರಾಂತರಿಂದ ನೂರಾರು ಚಿತ್ರಗಳಿಂದ ಭೂಗೋಲ ಬೋಧನೆ ಕ್ರಯ 6 ಆಣೆ 6 ಪೈ.

ದಕ್ಷಿಣ ಕನ್ನಡ ಜಿಲ್ಲೆಯ ಭೂಗೋಲ
ಶ್ರೀ. ಯು. ಭವಾನಿಶಂಕರರಾಯರಿಂದ

ಅತ್ಯಾಧುನಿಕ ರೀತಿಯಲ್ಲಿ ಜನಜೀವನಕ್ಕೂ ಭೂಗೋಲ ಶಾಸ್ತ್ರಕ್ಕೂ ಇರುವ ಸಂಬಂಧದ ಮೂಲಕ ಫೊಟೋ ಚಿತ್ರಗಳೊಡನೆ ಜಿಲ್ಲಾ ಭೂಗೋಳವನ್ನು ಮನೋರಂಜಕ ರೀತಿಯಲ್ಲಿ ಬರೆದ ಪುಸ್ತಕ. .... ಕ್ರಯ 5 ಆಣೆ 6ಪೈ

ಕನ್ನಡ-ಇಂಗ್ಲೀಷ-ಗೋಳಗಳು, ನಕ್ಷೆಗಳು, ಜನಜೀವನ ಚಿತ್ರಗಳು, ಮೇಪ್ ಬುಕ್, ಎಟ್ಲಾಸ್ ಎಲ್ಲವೂ ದೊರೆಯುತ್ತವೆ.

ಕನ್ನಡ ಪದ್ಯ ಪುಸ್ತಕಗಳು.

ಸರ್ವ ಉಪಾಧ್ಯಾಯರಿಗೂ ಸುಪರಿಚಿತವಾದವು

ಮೊದಲನೆಯ ಪದ್ಯ ಪುಸ್ತಕ	ಕ್ರಯ 2 ಆಣೆ 6 ಪೈ
ಎರಡನೆಯ ,, ,, ...	,, 3 ,, 6 ಪೈ
ಮೂರನೆಯ ,, ,, ...	,, 6 ,,

ಮೆಕ್ಮಿಲನರ ಪುಸ್ತಕಾವಳಿಯ ಹಸ್ತಕಗಳು

ಭಾಷಾಜ್ಞಾನವು ನೂತನ ಪ್ರತ್ಯಕ್ಷಪ್ರಯೋಗದಿಂದ ಉಂಟಾಗುವಂತೆ ನೂತನ ವಿಧಾನದಿಂದ ಬರೆದುವು. ಸುಮ್ಮನೆ ಶಬ್ದಾರ್ಥ ಮಾತ್ರವಲ್ಲ.

ಎರಡನೆ ಪುಸ್ತಕದ ಹಸ್ತಕ ಕ್ರಯ 2 ಆ. ನಾಲ್ಕನೆ ಪುಸ್ತಕ ಹಸ್ತಕ ಕ್ರಯ 2ಆ. 6ಪೈ
ಮೂರನೆ ,, ,, ,, 2 ಆ. 6ಪೈ ಐದನೆ ,, ,, ,, 3ಆ.
ಆರನೆ ಮತ್ತು ಏಳನೆ ಪುಸ್ತಕದ ಹಸ್ತಕ ಕ್ರಯ 3ಆ. 6ಪೈ

ಉಪಾಧ್ಯಾಯರು ಮಕ್ಕಳಿಗೆ ಕಲಿಸುವದೇನು? ಮಕ್ಕಳು ಪಾಠಕಲಿವಾಗ ಬರೆದುಕೊಳ್ಳುವುದೇನು? ಎಲ್ಲವೂ ಈ ಹಸ್ತಕಗಳಲ್ಲಿವೆ.

ಕನ್ನಡ ವ್ಯಾಕರಣ ಪಾಠಗಳು.

ಎಷ್ಟೋ ಪ್ರಸಿದ್ಧಿಗೆ ಬಂದಿರುವ ಈ ಪುಸ್ತಕಗಳ ಪುನರ್ಮುದ್ರಣ,
ಕನ್ನಡ ಮೂಲವ್ಯಾಕರಣ ಕ್ರಯ 3 ಆಣೆ ಕನ್ನಡ ಬಾಲವ್ಯಾಕರಣ ಕ್ರಯ 3ಆ.3ಪೈ
ಕನ್ನಡ ಶಾಲಾವ್ಯಾಕರಣ ಕ್ರಯ 6ಆಣೆ

ತಿದ್ದಿದ ಸಿಲೆಬಸಿಗೆ ಸರಿಯಾಗಿ ಇವಲ್ಲದೆ ಬೇರೆ ವ್ಯಾಕರಣ ಪುಸ್ತಕಗಳಿಲ್ಲ.

ಕನ್ನಡ ಕಥೆಯ ಪುಸ್ತಕಗಳು

ಭಾಷಾಜ್ಞಾನವು ಕಥಾರೂಪವಾಗಿ ಉಲ್ಲಾಸದಿಂದ ಮಕ್ಕಳಲ್ಲಿ ಹುಟ್ಟುವಂತೆ ತಿದ್ದಿದ ಸಿಲೆಬಸಿಗೆ ತಕ್ಕಂತೆ ಬರೆಯಿಸಿ, ಸಚಿತ್ರವಾಗಿ ಮುದ್ರಿತವಾದುವು.

ಗುಬ್ಬೀಪಾಯಸ ಕ್ರಯ ರೂ. 0 0 6. ಪಾಪೋಸಿನ ಪಚೀತಿ ಕ್ರಯ ರೂ. 0 0 6. ಗಡ್ಡದ ಅಜ್ಜಯ್ಯ ಕ್ರಯ ರೂ 0 1 6. ಸಿಂಡ್ರೆಲ್ಲ 3ನೇ ದರ್ಜೆಗೆ ಕ್ರಯ ರೂ 0 1 6. ಕೆಂಚನ್ನ ಕ್ರಯ ರೂ 0 1 6, ಕಾಗೆಯೂ ಗುಬ್ಬಿಯೂ 1ನೇ ದರ್ಜೆ ,, ,, 0 2 3. ಅಲಿಬಾಬನ ಕಥೆ. ಕ್ರಯ ರೂ 0 2 3. ಮೌರ್ಯ ಸಿಂಹಾಸನ ಕ್ರಯ ರೂ 0 4 0. ಸಂಯೋಗಿತೆ ಕ್ರಯ ರೂ 0 6 0. ಐತಿಹಾಸಿಕ ಕಥಾವಳಿ (ಸುವಾಸಿನಿಯ. ಸಂಗ್ರಹ) ಕ್ರಯ ರೂ. 0 6 0

ಸಚಿತ್ರ ಚರಿತ್ರೆ ಪುಸ್ತಕಗಳು

ಸಚಿತ್ರ ಚರಿತ್ರೆ.	Iನೆ ದರ್ಜೆ.	ಕ್ರಯ 2 ಆಣೆ
	IIನೆ ,,	,, 2 ,,
	IIIನೆ ,,	,, 3 ,,
	IVನೆ ,,	,, 4 ,, 6 ಪೈ
	Vನೆ ,,	,, 5 ,,
	VIನೆ ,,	,, 6 ,,
	VIIನೆ ,,	,, 4 ,,

ಸಿಲೆಬಸಿಗೆ ಸರಿಯಾಗಿವೆ, ಸುಲಭ ಶೈಲಿ, ಮನಮೋಹಕ ರೀತಿ ಸಚಿತ್ರವಾಗಿವೆ. ಸಂಪೂರ್ಣವಾಗಿವೆ.

ಇಂಗ್ಲಿಷು ಮತ್ತು ಕನ್ನಡ

ಮಿತ್ರಾ ಕೋಪಿ ಪುಸ್ತಕಗಳು

ಎಲ್ಲ ತರಗತಿಗಳಿಗೂ ಅಗತ್ಯ ಬೇಕಾದುವು.

English Readers

NEW ERA READERS

I Primer	As- 5
II Primer	,, 6
Book I	,, 8
,, II	,, 10
,, III	,, 12

ನಮ್ಮ ಜಿಲ್ಲೆಯ ಹವಾಗುಣಕ್ಕೆ ಸರಿಯಾಗುವಂತೆ, ತಯಾರಿಸಿ ತರಿಸಲಾದ ಎಲ್ಲಾ ಬಗೆಯ ಲೇಖನ ಸಾಮಗ್ರಿಗಳು

ಗಣಿತಶಾಸ್ತ್ರ ಬೋಧನೆಗೆ ಬೇಕಾದ ಉತ್ತಮೋಪಕರಣಗಳು ಚಿತ್ರಲೇಖನಕ್ಕೆ ಬೇಕಾಗಿರುವ ಬಣ್ಣಗಳೂ, ಪೆನ್ಸಿಲುಗಳೂ ಇತ್ಯಾದಿ,

ಮಿತ್ರಾ ಎಕ್ಸರ್‌ಸೈಜ್ ಮತ್ತು ನೋಟ್ ಬುಕ್ಕುಗಳು ಉತ್ತಮ ಕಾಗದ-ಕಡಿಮೆ ಬೆಲೆ

ಗೀಟುಳ್ಳ ಮತ್ತು ಇಲ್ಲದ, ಬೇಕುಬೇಕಾದ ಸೈಜಿನವು.

ಮೇಲಿನ ಪುಸ್ತಕಗಳು

ನವಭಾರತ ಬುಕ್ ಡಿಪೋ, ಚರ್ಚ್‌ರೋಡ್, ಉಡುಪಿ ಇಲ್ಲಿಯೂ ದೊರೆಯುತ್ತವೆ.

ರಷ್ಯದ ನೂತನ ನಿರ್ಮಾಣ

ಖಾಸಗಿ ಸೊತ್ತೇ ಲೋಕದ ಸರ್ವ ಕೆಡುಕಿನ ಮೂಲ.

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಡಸ್ ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ ಸಂಗತಿಗಳನ್ನು ತೆಗೆದುಕೊಡಲಾಗಿದೆ.] —ಸಂ. ನ.

ಮಾಲಿಕ ಭಾವನೆಯು ನಿಷೇಧಾರ್ಹವಾದುದು.

ಕೇವಲ ವೈಯಕ್ತಿಕ ಸ್ವಾರ್ಥಪರ ಖಾಸಗಿ ಸಂಪಾದನೆ ಮತ್ತು ಸೊತ್ತಿನ ಕುರಿತು ಬೊಲ್ಶೆವಿಕರು ಅದೆಷ್ಟು ವಿರೋಧಿಗಳಿರುವರೆಂಬುದನ್ನು 'ಎಬೆಸ್‌ಪ್ರಿಸೋರ್ನಿ' ಎಂಬವನ ವೃತ್ತಾಂತವು ಮನಗಾಣಿಸುವುದು. ಎಬೆಸ್‌ಪ್ರಿಸೋರ್ನಿಯು ರಷ್ಯದ ಒಬ್ಬ ದಾರಿಹೋಕ ಹುಡುಗನಾಗಿದ್ದ. ಬೀಗ ಮಾಡುವ ಕಮ್ಮಾರನೊಬ್ಬನು ಅವನನ್ನು ಪ್ರೀತಿಸಿ ತನ್ನಲ್ಲಿ ಕೆಲಸಕ್ಕಿಟ್ಟುಕೊಂಡ. ಎಬೆಸ್‌ಪ್ರಿಸೋರ್ನಿಯು ಬೀಗ ಮಾಡಲು ಬಹಳ ಚೆನ್ನಾಗಿ ಕಲಿತು ಒಳ್ಳೇ ಮಜೂರಿ ಸಂಪಾದಿಸುತ್ತಿದ್ದ. ಸಂಪಾದಿಸಿದುದನ್ನು ಪೋಲು ವೆಚ್ಚ ಮಾಡದೆ ಉಳಿಸಿ, ತನಗೊಂದು ಹೊಸ ಉಡುಗೆ ಮತ್ತು ರಿಸ್ಟ್ ವಾಚು ತಗೆದುಕೊಂಡು ಒಳ್ಳೆಯ ಕೋಣೆಯೊಂದರಲ್ಲಿ ವಾಸಮಾಡತೊಡಗಿದ. ಇದು ಹೊರತು ಒಂದು ರೇಡಿಯೋ ಸಟ್ಟನ್ನೂ 'ಎಕ್ಕೋಡಿಕಯನ್' ಎಂಬ ಸಂಗೀತೋಪಕರಣವನ್ನೂ ತಗೆದುಕೊಂಡು ತನ್ನ ಆರಾಮ ಸಮಯವನ್ನು, ಒಂದನ್ನು ಕೇಳುತ್ತ ಅಥವಾ ಇನ್ನೊಂದನ್ನು ಬಾರಿಸುತ್ತ ಸಂತೋಷದಿಂದ ಕಳೆಯಲಾರಂಭಿಸಿದ. ಹೆಚ್ಚೆಚ್ಚಾಗಿ ಹಣ ಗಳಿಸಿ ಉಳಿಸಹತ್ತಿದ. ಎಬೆಸ್‌ಪ್ರಿಸೋರ್ನಿಯು ಇತರ ದೇಶಗಳಲ್ಲಾದರೆ, ಬಹಳ ಹೊಗಳಲ್ಪಡುವ ಗುಣಗಳಾದ ಪ್ರಯತ್ನ, ಪರಿಶ್ರಮ ಮತ್ತು ಆಕಾಂಕ್ಷೆಯುಳ್ಳ ತರುಣನಾಗುತ್ತಿದ್ದನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ರಷ್ಯದ ಕ್ರಾಂತಿಯ ತರುಣರ ಪತ್ರಿಕೆಯೊಂದು, ಸಮಾಜಕ್ಕೆ ಎಬೆಸ್‌ಪ್ರಿಸೋರ್ನಿಯಂತಹ ತರುಣನು ಬೇಕಾಗಿರುವನೋ ಎಂಬ ಚರ್ಚೆಗೆ ತನ್ನ ಪುಟಗಳನ್ನು ತೆರೆದುಹಾಕಿತು. ಆಗ ಆ ಪತ್ರಿಕೆಯ ಸಂಪಾದಕರಿಗೆ ನೂರಾರು ಪತ್ರಗಳು ಬಂದವು. ಅವುಗಳಲ್ಲಿ ಎಬೆಸ್‌ಪ್ರಿಸೋರ್ನಿಯು ಪ್ರಬಲವಾಗಿ ಟೀಕಿಸಲ್ಪಟ್ಟಿದ್ದನು. ಅವನು ಪರಿಶ್ರಮಿಯೂ ಆಕಾಂಕ್ಷಿಯೂ ಆಗಿದ್ದನೆಂಬುದಕ್ಕಾಗಿ ಈ ಟೀಕೆಗಳ ಸುರಿಮಳೆಯಲ್ಲ, ತನ್ನ ಉನ್ನತಿ ತನ್ನ ಸುಖಾನಂದದ ದೃಷ್ಟಿಯೊಂದೇ ಉಳ್ಳವನಾಗಿ ಜೀವನವನ್ನು ತನ್ನ ಆವರಣದೊಳಗೇನೇ ಇರಿಸಿಕೊಂಡಿದ್ದನೆಂದು. ಇದರಿಂದಾಗಿ ಅವನು ಖಾಸಗಿ ಸೊತ್ತು ಮತ್ತು ಸ್ವಂತ ಮಾಲಿಕತನದ ಅಭಿಲಾಷೆಯುಳ್ಳವನಾಗುತ್ತಿದ್ದನೆಂದೇ ರಷ್ಯದ ಕ್ರಾಂತಿಯ ತರುಣರು ಎಬೆಸ್‌ಪ್ರಿಸೋರ್ನಿಯ ಜೀವನವನ್ನು ತೀವ್ರವಾಗಿ ನಿಷೇಧಿಸಿದುದು.

ಇಂತಹ ಸಂಗತಿಗಳಿಂದ ರಷ್ಯದ ಸೋವಿಯೆಟರ ತತ್ವ ಮತ್ತು ಉದ್ದೇಶವು ದೊಡ್ಡ ದೊಡ್ಡ ವ್ಯಾಖ್ಯಾನ ನಿಬಂಧಗಳಿಗಿಂತಲೂ ಸ್ಪಷ್ಟವಾಗಿ ಮನವರಿಕೆಯಾಗುವದು. ರಷ್ಯದ ಹೊರಗಣ ರಾಜ್ಯಗಳಲ್ಲಿ ಯಾವನು ಜನರ ಮೆಚ್ಚಿಕೆಗೋಸ್ಕರ ಹೊಗಳಲ್ಪಟ್ಟು ಮಾದರಿ ತರುಣನೆಂದು ಉದ್ಘೋಷಿಸಲ್ಪಡುತ್ತಿದ್ದನೋ, ಅವನೇ ರಷ್ಯದ ಕ್ರಾಂತಿಯ ತರುಣರ ದೃಷ್ಟಿಯಲ್ಲಿ ಸಮಾಜಕ್ಕೆ ತೊಡಕು ಮತ್ತು ಕೆಡುಕು, ಎಬೆಸ್‌ಪ್ರಿಸೋರ್ನಿಯು ಖಾಸಗಿ ಸೊತ್ತಿನ ಉಪಾಸಕನಾಗಿರುವನು ಅಥವಾ ಆಗಬಹುದೆಂಬೊಂದು ಕಾರಣದ ನಿಮಿತ್ತವೇ ರಷ್ಯದ ತರುಣರು ತಮ್ಮಲ್ಲಿದ್ದ ಶಕ್ತಿಯನ್ನೆಲ್ಲಾ ಉಪಯೋಗಿಸಿ ಆತನನ್ನು ಅಣಗಿಸಲೆತ್ನಿಸುವರು. ಯಾಕೆಂದರೆ ಖಾಸಗಿ ಸೊತ್ತೆಂಬ ಸಂಸ್ಥೆಯೇ ಬೊಲ್ಶೆವಿಕ ಬದ್ಧ ವೈರಿಯು. ಅದನ್ನು ಮುರಿದೊಗೆಯಲು ಅವರು ಭೀಷಣವಾಗಿ ಹೋರಾಡಿರುವರು. 'ಖಾಸಗಿ ಸೊತ್ತನ್ನು ತೆಗೆದುಹಾಕುವುದು' ಎಂಬೊಂದೇ ವಾಕ್ಯದಿಂದ ಕಮ್ಯೂನಿಸ್ಟರ ಭಾವನೆಯನ್ನು ಅನುವಾದಿಸಿ ಬಿಡಬಹುದೆಂದು ಅವರ ಪ್ರಕಟನೆಯಲ್ಲೇ ಹೇಳಲ್ಪಟ್ಟಿರುತ್ತದೆ. ಬೋಲ್ಶೆವಿಕರ ಮೂಲ ಸಿದ್ಧಾಂತವೂ, ವೇದಾಂತವೂ ಇದೇ. ಖಾಸಗಿ ಸೊತ್ತಿನ ಸಂಸ್ಥೆಯನ್ನೇ ಅವರು ನಿರ್ಮೂಲಿಸಲೆಳಸುವರು. ಅದರ ಪರಿಜ್ಞಾನವೇ ಮಾನವನಿಗೆ ಇಲ್ಲವಂತೆ ಮಾಡಬಗೆಯುವರು.

ಖಾಸಗಿ ಸೊತ್ತೆಂದರೇನು?

ಖಾಸಗಿ ಸೊತ್ತೆಂಬುದಕ್ಕೆ ಅವರ ಮುಖ್ಯ ವ್ಯಾಖ್ಯೆಯು ಉತ್ಪಾದನೆಯ ಸಾಧನವೆನು ಸಮಾಜದ ಉತ್ಪತ್ತಿಯನ್ನು ಉಪಯೋಗಿಸುವ ಹಕ್ಕನ್ನು ಕಮ್ಯೂನಿಸ್ಟರೇನೂ ಅಪಹರಿಸುವ ಹಾಗಿಲ್ಲ: ಕೆಲವೊಂದು ಬಗೆಯ ಖಾಸಗಿ ಸೊತ್ತನ್ನು ಮಾನವನು ನ್ಯಾಯವಾಗಿ ಪಡಕೊಳ್ಳಬಹುದು. ಉದಾಹರಣೆಗಾಗಿ ತನಗೆ ಬೇಕಾದಂತಹ ಉಡಿಗೆ, ತೊಡಿಗೆ, ಮನೆ, ತೋಟ, ಚಿಕ್ಕ ಹೊಲಗೇರಿ; ಆದರೆ ಅವನ ಸ್ವಂತ ಉಪಯೋಗಕ್ಕಾಗಿ ಮಾತ್ರ. ಮಳೆಗಾಲಕ್ಕಾಗಿ ಒಬ್ಬನು ತನ್ನ ಕುತ್ತಟ್ಟದಲ್ಲಿ ದವಸ ಧಾನ್ಯ ಸಂಗ್ರಹಿಸಿಡಬಹುದು, ಆದರೆ ಕೇವಲ ತನ್ನ ಉಪಯೋಗಕ್ಕಾಗಿ ಮಾತ್ರವಲ್ಲದೆ, ವ್ಯಾಪಾರ ಅಥವಾ ಲಾಭಕ್ಕಾಗಿಯಲ್ಲ. ಲಾಭಕ್ಕಾಗಿ ಮತ್ತು ಅಧಿಕಾಧಿಕ ಸಂಪಾದನೆಗಾಗಿ ಉಪಯೋಗಿಸಲ್ಪಡುವ ವ್ಯಾಪಾರಿಕ ಸೊತ್ತನ್ನು ಬೋಲ್ಶೆವಿಕರು ನಿಷೇಧಿಸಲಿಚ್ಛಿಸುವರು. ಮಧ್ಯತರಗತಿಯ ಸೊತ್ತು ಸ್ವಾಮಿತ್ವವು ಸಂಪೂರ್ಣ ನಿರ್ನಾಮ ಹೊಂದಬೇಕೆಂದೇ ಬೋಲ್ಶೆವಿಕರ ದೃಢ ನಿರ್ಧಾರ. ಇದರಲ್ಲಿ ಉತ್ಪತ್ತಿಯ ಸಾಧನಮಾತ್ರವಲ್ಲದೆ ಅದರ ಹಂಚುವಿಕೆ, ರಖಮ್ ಮತ್ತು ಚಿಲ್ಲರ ವಿಕ್ರಯ ಮತ್ತು ಆ ಸಂಬಂಧವಾದ ಎಲ್ಲಾ ವಿಷಯಗಳೂ ಸೇರುತ್ತವೆ. ವೈಯಕ್ತಿಕ ಸೊತ್ತು ಮಾಲಿಕ ಸೊತ್ತಾಗಿ, ಭಂಡವಾಳವಾಗಿ ಮಾರ್ಪಾಟ ಹೊಂದಲು ಅನಾಧ್ಯವಾಗುವಾಗ ಮಾತ್ರ ಕಮ್ಯೂನಿಸ್ಟರು ಪ್ರಯತ್ನಿಸುತ್ತಿರುವ ಆದರ್ಶ ಪರಿಸ್ಥಿತಿಯುಂಟಾಗುವುದು. ಖಾಸಗಿ ಸೊತ್ತೆಂದರೆ ಇದೇ ಅರ್ಥವನ್ನು ಅಂದರೆ ಸ್ವಂತ ಉಪಯೋಗಕ್ಕೆ ಅಗತ್ಯವಲ್ಲದ ಆಸ್ತಿಬದುಕೆಂಬ ಅರ್ಥವನ್ನು ಬೊಲ್ಶೆವಿಕರು ಕಟ್ಟಿಕೊಂಡಿರುತ್ತಾರೆ.

ಮಾಲಿಕತ್ವವು ಮಾನವ ಕೋಟಿಗೆ ಮಾರಿ ಸ್ವರೂಪ

ಕೇವಲ ಮಾಲಿಕತ್ವ ಮತ್ತು ಲಾಭದ ದೃಷ್ಟಿಯಿಂದ ಸಂಪಾದಿಸಲ್ಪಡುವ ಸೊತ್ತೇ ಮಾನವ ಕೋಟಿಗೆ ಮಾರಿ ಸ್ವರೂಪವಾಗಿರುವುದೆಂದು ಬೋಲ್ಶೆವಿಕರ ಸಾಧನೆ. ಲೋಕದ ಬಡತನ, ಯುದ್ಧ, ವೇಶ್ಯಾವೃತ್ತಿ, ತಕ್ಷೀರುಗಾರಿಕೆಯೇ ಮೊದಲಾದುವನ್ನು ಚರ್ಚಿಸುವಾಗ, ಆಶೆ, ಅಸೂಯೆ, ದ್ವೇಷವೇ ಮೊದಲಾದ ದುರ್ಗುಣಗಳ ದುಷ್ಪರಿಣಾಮಗಳ ಕುರಿತು ಸಮಾಲೋಚಿಸುವಾಗ, ಜನಾಂಗಿಕ ಜಗಳ, ಅಂತರ ರಾಷ್ಟ್ರೀಯ ಕಲಹಗಳ ಕಾರಣ ಹುಡುಕುವಾಗ ಇವೆಲ್ಲಾ ಸಂಪೂರ್ಣವಾಗಿ ಇಲ್ಲವೆ ಬಹುತೇಕವಾಗಿ ಖಾಸಗಿ ಸೊತ್ತೆಂಬ ವಿಷ ಬುಗ್ಗೆಯಿಂದಲೇ ಹೊರಟುಬರುತ್ತವೆಂದು ಬೋಲ್ಶೆವಿಕರ ಮನೋ ನಿರ್ಧಾರ. ಖಾಸಗಿ ಸೊತ್ತಿನ ಸಂಸ್ಥೆಯನ್ನು ಸಮ್ಮತಿಸುವುದು ಮಾತ್ರವಲ್ಲದೆ ಉಚ್ಚತೆಗೇರಿಸುವ ಎಷ್ಟೊಂದು ಮಂದಿ ಸಾಂಪತ್ತಿಕ ಶಾಸ್ತ್ರಜ್ಞರಲಿ, ವೇದಾಂತಿಗಳಿರಲಿ, ಧಾರ್ಮಿಕ ಸಂಸ್ಥೆಗಳು ಅದಕ್ಕೆಂತಹ ಪಾವಿತ್ರ್ಯವನ್ನು ಬೇಕಾದರೂ ಕೊಡಲಿ, ಬೋಲ್ಶೆವಿಕರದಕ್ಕೆ ಸೊಪ್ಪು ಹಾಕುವುದಿಲ್ಲ. ಖಾಸಗಿ ಸೊತ್ತನ್ನು ಪಡಕೊಳ್ಳುವ ಒತ್ತಾಯ ಮತ್ತು ಅದಕ್ಕಾಗಿ ನಡಸಲ್ಪಡುವ ಸಾಧನೆಯಿಂದಲೇ ಪ್ರಗತಿಗೆ ಪ್ರೋತ್ಸಾಹ ದೊರೆಯುವುದು, ವೈಯಕ್ತಿಕ ವಿಶಿಷ್ಟತೆಯು ಸ್ಥಾಪಿಸಲ್ಪಡುವುದು ಮತ್ತು ಸಚ್ಚಾರಿತ್ರ್ಯವು ಬೆಳೆಯುವಂತಾಗುವುದೆಂದು ಲೋಕದ ಅತಿ ಹೆಚ್ಚಿನ ಜನರು ನಂಬಿಕೊಂಡಿದ್ದರೂ ಬೋಲ್ಶೆವಿಕರದಕ್ಕೆ ಗಣ್ಯಮಾಡುವುದಿಲ್ಲ. ವಿಜ್ಞಾನದ ವಿಚಿತ್ರ ಪ್ರಕೃತಿಯು ಇಂದಿನ ದಿನಗಳಲ್ಲಿ ಖಾಸಗಿ ಸೊತ್ತಿನಿಂದ ಪ್ರಯೋಜನವಿದೆಯೆಂಬುದನ್ನೂ ಅವರು ಒಪ್ಪಲಾರರು. ಅವರಿಗೆ ಅದು ಲೋಕದ ಮಹಾ ಮಾರಿಯಾಗಿದ್ದು ಎಲ್ಲೆಲ್ಲಿಯೂ ಕೇವಲ ಹಾವಳಿ, ಹಾನಿ ಅನೀತಿ, ಅತ್ಯಾಚಾರ ಅನಾಹುತಗಳ ವಿಷಬೀಜ ಬಿತ್ತಿ ಮಾನವ ಕೋಟಿಯನ್ನು ವಿನಾಶದ ದಾರಿ ಹಿಡಿಸುವದಾಗಿರುವುದು. ಇತರ ಸುಧಾರಕರು, ರಾಜನೀತಿಜ್ಞರು, ಧಾರ್ಮಿಕ ಪ್ರವಾದಿಗಳಂತೆ ಅವರು ಈ ಮಹಾ ಮಾರಿಯನ್ನು ಸನ್ಮಾರ್ಗಕ್ಕೆ ತರಲೆತ್ನಿಸಲಾರರು. ಅದರೊಡನೆ ಯಾವ ತರದ ಸಂಧಾನವನ್ನಾಗಲಿ, ಸಂಬಂಧವನ್ನಾಗಲಿ ಅವರು ಬೆಳೆಸಲಾರರು. ಅದನ್ನು ಕೀಳಿಹಾಕಿ, ಘೋರ ಶಾಪಕ್ಕೆ ಗುರಿಪಡಿಸಿ ಅದರ ಸ್ಮರಣೆ ಕೂಡಾ ನಿಂದ್ಯವಾಗುವಂತೆ ಮಾಡಲೆಳಸುವರು. ಅದಕ್ಕಾಗಿ ಎಂತಹ ತ್ಯಾಗಕ್ಕೂ, ತಮ್ಮ ತನುಮನಧನ ಸರ್ವಸ್ವವನ್ನೂ ಬಲಿಕೊಡುವುದಕ್ಕೂ ಸಿದ್ಧರಿರುವರು.

ಖಾಸಗಿ ಸೊತ್ತಿನ ವಿರೋಧವು ಹೊಸತಾದುದಲ್ಲ

ಖಾಸಗಿ ಸೊತ್ತಿನ ಮೇಲಿನ ಧಾಳಿಯು ಹೊಸತಾದುದೇನೂ ಅಲ್ಲ. ಅದರಿಂದುಂಟಾಗಬಹುದಾದ ಹಾನಿಯು ಭಯಾನಕವಾದುದೆಂದು ಆ ಕುರಿತು ಭೀತಿಗೊಂಡು ವಿಚಾರಿಗಳೂ, ಅರಸರೂ ಪ್ರವಾದಿಗಳೂ ಪುರಾತನ ಕಾಲದಿಂದ ಇದ್ದರು. ಲೋಕದ ಮುಖ್ಯ ಧರ್ಮಗಳು, ಸೊತ್ತನ್ನು ಶೇಖರಿಸುವ ಮತ್ತು ಸಂಪತ್ತನ್ನು ಸಂಚಯಿಸುವ ಪ್ರಲೋಭನವನ್ನು ತೀವ್ರವಾಗಿ ನಿಷೇಧಿಸಿರುವವು. ಬೌದ್ಧ ಮತ ಸ್ಥಾಪಕ ಭಗವಾನ್ ಗೌತಮ ಬುದ್ಧ ಮತ್ತು ಆತನ ಅನುಯಾಯಿ ಸನ್ಯಾಸಿಗಳು, ಸೊತ್ತು ಸಂಪತ್ತಿನ ಆಶೆಯನ್ನು ತ್ಯಜಿಸಿಬಿಟ್ಟು ಕೇವಲ ಕಾಷಾಯ ವಸ್ತ್ರ ಧರಿಸಿ ಭಿಕ್ಷಾಪಾತ್ರೆ ಕ್ಷೌರ ಕತ್ತಿ, ಸೂಜಿ ಮತ್ತು ನೀರಿನ ಚೀಲವನ್ನೇ ತಮ್ಮ ಸೊತ್ತು ಸರ್ವಸ್ವವನ್ನಾಗಿ ಮಾಡಿ ನಿಂತಲ್ಲಿ ನಿಲ್ಲದೆ ಅಲೆದಾಡುತ್ತಿದ್ದರು. ಹಳೆಯ ಕ್ರೈಸ್ತ ಧರ್ಮದ ಆಚಾರ್ಯನಾದ ಮೋಸೆಯು, ಸೊತ್ತಿನ ಕುರಿತು ಕಠಿಣ ನಿಯಮಗಳನ್ನು ವಿಧಿಸಿದ್ದನು. "ಭೂಮಿಯು ನಿರಂತರವಾಗಿ ವಿಕ್ರಯಿಸಲ್ಪಡಕೂಡದು. ಯಾಕೆಂದರೆ ಭೂಮಿಯು ನನ್ನದು. ನೀವು ನನ್ನೊಂದಿಗೆ ಪ್ರಯಾಣಮಾಡುವ ಆಗಂತುಕರು—7 ವರ್ಷಗಳಾದ ಮೇಲೆ ನೀವು ನಿಮ್ಮ ಭೂಮಿಯನ್ನು ಈ ಪ್ರಕಾರ ಬಿಟ್ಟುಕೊಡತಕ್ಕದ್ದು. ತನ್ನ ನೆರೆಯವನಿಗೆ ಏನಾದರೂ ಸಾಲಕೊಡುವ ಪ್ರತಿಯೊಬ್ಬ ಸಾಲಿಗನು ಅದನ್ನು ಬಿಟ್ಟುಕೊಡಬೇಕು. ಅವನು ಅದನ್ನು ತನ್ನ ನೆರೆಯವನಿಂದಾಗಲಿ, ಅಥವಾ ಅವನ ಸಹೋದರನಿಂದಾಗಲಿ ಒತ್ತಾಯದಿಂದ ಪಡಕೊಳ್ಳಬಾರದು. ಯಾಕೆಂದರೆ ಅವನು ಬಿಟ್ಟುಕೊಡುವುದು ದೇವರ ಹೆಸರಲ್ಲಿ" ಹೀಬ್ರು ಪ್ರವಾದಿಗಳೂ ಖಾಸಗಿ ಸೊತ್ತಿನ ಅಭಿಲಾಷೆಯನ್ನು ಕಠಿಣವಾಗಿ ಖಂಡಿಸಿರುವರು. ಕ್ರೈಸ್ತನು ಧನ ಸಂಚಯವನ್ನು ಶಪಿಸಿರುವನು. ಕ್ರೈಸ್ತ ಧರ್ಮಾರಂಭ ಕಾಲದ ಧರ್ಮಾಧಿಕಾರಿಗಳ ಬೋಧನೆಗಳಲ್ಲಿ ಲೆನಿನ್ ಅಥವಾ ಕಾರ್ಲ್ ಮಾರ್ಕ್ಸನ ತತ್ವಗಳೇ ಅಡಕವಾಗಿವೆ. "ಸೊತ್ತಿಗೆ ಹಕ್ಕೆಂಬುದಿಲ್ಲ. ಭೂಮಿಯು ಭಗವಂತನದು, ಮತ್ತು ನಾವು ಆತನ ಮಕ್ಕಳು. ಭೂಮಿಯನ್ನು ಸೊತ್ತಾಗಿ ಪರಿಗಣಿಸುವುದು ದೈವ

ಕಳೆದ ನಂಚಿಕೆಯಿಂದ ಪ್ರಕಟವಾಗುತ್ತಿರುವ
ಹೆಂಡ್ತಿ ಗಂಡನಾದರೆ?
ಎಂಬ ಹಾಸ್ಯರಸ ಪ್ರಧಾನವಾದ ಏಕಾಂಕ ನಾಟಕವನ್ನು
ಓದಲು ಮರೆಯಬೇಡಿರಿ

ಸಮಾಚಾರ ಸಂಗ್ರಹ

ಮಿ. ಬಟ್ಲರ್ ಸಾಹೇಬರ ಹೇಳಿಕೆ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯ, ವೈಸರಾಯರು ಗಾಂಧಿಜಿಯವರನ್ನು ಕಾಣಬೇಕು. ಕೊಚ್ಚಿಯ ಕೂಟಲಮಾಣಿಕ್ಕಮ್ ದೇವಸ್ಥಾನದ ಜಗಳ

ಮಿ. ಬಟ್ಲರ್ ಸಾಹೇಬರ ಹೇಳಿಕೆ

ಎಪ್ರಿಲ ತಾ ೨೬ರಲ್ಲಿ ಇಂಗ್ಲಂಡಿನ ಕೋಮನ್ಸ್ ಸಭೆಯಲ್ಲಿ ಹಿಂದುದೇಶದ ಪರಿಸ್ಥಿತಿಯ ಕುರಿತು ಪ್ರಶ್ನೋತ್ತರ ನಡೆಯಿತು ಈ ಪ್ರಶ್ನಗಳಿಗೆ ಹಿಂದುದೇಶದ ಅಂಡರ್ ಸೆಕ್ರೆಟರಿಗಳಾದ ಮಿ ಬಟ್ಲರ್ ಸಾಹೇಬರು ಕೊಟ್ಟ ಉತ್ತರಗಳಿಂದ ಈ ಕೆಳಗಣ ಸಂಗತಿಗಳು ತಿಳಿದುಬಂದಿವೆ ಗವರ್ನರರು ಕಾಂಗ್ರೆಸ್ ಪಕ್ಷೀಯರಿಗೆ ಭರವಸೆ ಕೊಡಬಹುದೋ ಕೂಡದೋ ಎಂಬ ಪ್ರಶ್ನೆಯನ್ನು ನ್ಯಾಯಾಧೀಶರ ತೀರ್ಪಿಗೊಪ್ಪಿಸುವುದು ಸಮಂಜಸವಲ್ಲ. ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಆಡಳಿತದಲ್ಲಿ ಆಗಾಗ ಕೈಹಾಕಲು ಉಪಯೋಗಿಸುವರೆಂಬುದೇ ಕಾಂಗ್ರೆಸ್ ಪಕ್ಷೀಯರ ಮುಖ್ಯ ಬೆದರಿಕೆ ಪಾರ್ಲಿಮೆಂಟು ಯಾವ ಉದ್ದೇಶದಿಂದ ವಿಶೇಷಾಧಿಕಾರಗಳನ್ನು ನಿರ್ಮಿಸಿರುವುದೋ ಅದರ ಹೊರತು ಇತರ ಉದ್ದೇಶಗಳಿಗೆ ಅವನ್ನು ಉಪಯೋಗಿಸುವುದನ್ನು ಸರಕಾರವು ಪ್ರೋತ್ಸಾಹಿಸಲಾರದು. ಗವರ್ನರರು ತಮ್ಮ ಜವಾಬ್ದಾರಿಯ ಸಂಕುಚಿತ ಅರ್ಥಮಾಡಿಕೊಂಡು ಮಂತ್ರಿಗಳು ತಮ್ಮ ಕಾರ್ಯಕ್ರಮವನ್ನು ಜ್ಯಾರಿಗೆ ತರಲು ಉಪಯೋಗಿಸುವ ಅಧಿಕಾರದ ಮೇಲೆ ಕೈಹಾಕಬೇಕೆಂಬುದು ಎಂದೂ ಸರಕಾರದ ಉದ್ದೇಶವಲ್ಲ ಗಾಂಧಿ ಮತ್ತು ವೈಸರಾಯರೊಳಗೆ ಮಾತುಕತೆ ನಡಿಸುವ ವಿಷಯದಲ್ಲಿ ಗಾಂಧಿಜಿಯವರಾಗಲಿ ಇತರ ಯಾವ ಪುಢಾರಿಗಳೇ ಆಗಲಿ ವೈಸರಾಯರೊಡನೆ ಆ ಕುರಿತು ವಿನಂತಿ ಮಾಡಿಕೊಂಡಿಲ್ಲ ಪರ್ಯಾಲೋಚಿಸಲಾಗುವುದೆಂದು ಬಟ್ಲರ್ ಸಾಹೇಬರ ಉತ್ತರ

ಸರಕಾರಕ್ಕೂ ಕಾಂಗ್ರೆಸಿಗೂ ರಾಜಿ ಮಾಡುವ ವಿಷಯದಲ್ಲಿ ಗಾಂಧಿಜಿಯವರ ಅಭಿಪ್ರಾಯ ಕೇಳಲ್ಪಟ್ಟಾಗ, ಅವರು ತಾನು ತನ್ನ ಮನಸನ್ನು ಸಂಪೂರ್ಣವಾಗಿ ಸ್ಪಷ್ಟಪಡಿಸಿರುತ್ತೇನೆ ಇನ್ನು ಮುಂದಿನ ಜವಾಬ್ದಾರಿ ಸರಕಾರದ್ದು ಅವರು ಕೊಟ್ಟಿರುವುದು ನಿಜವಾದ ಪ್ರಾಂತಿಕ ಜವಾಬ್ದಾರಿಯೋ ಅಥವಾ ಅದಕ್ಕೆ ಪ್ರತಿವಿರೋಧವಾದುದೋ ಎಂಬುದನ್ನು ನಿರ್ಧರಿಸುವ ಕೆಲಸ ಸರಕಾರದವರದೆಂದು ಹೇಳಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯ

೩ ದಿವಸಗಳಲ್ಲಿ ಒಟ್ಟು ೨೮ ಘಂಟೆಗಳ ಚರ್ಚೆಯ ನಂತರ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಈ ಕೆಳಗಣ ನಿರ್ಣಯಗಳನ್ನು ಮಂಜೂರು ಮಾಡಿರುವರು 'ಮಂತ್ರಿಪದವಿ ಸ್ವೀಕಾರದ ಕುರಿತು ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ನಾಯಕರ ವರ್ತನೆಯನ್ನು ಕಾಂಗ್ರೆಸ್ ಕಮಿಟಿಯು ಸಮ್ಮತಿಸಿ ಸಮರ್ಥಿಸುತ್ತದೆ. ಇಂಡಿಯಾ ಆಕ್ಟನ್ನು ಬದಲಾಯಿಸದ ವಿನಹ ಕಾಂಗ್ರೆಸಿನವರು ಕೇಳಿರುವ ಆಶ್ವಾಸನೆಯನ್ನು ಕೊಡಲು ಸಾಧ್ಯವಿಲ್ಲೆಂದು ಬ್ರಿಟಿಷ್ ಮಂತ್ರಿಗಳು ವಾದಿಸುತ್ತಿರುವರಾದರೂ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಅಂಥ ಬದಲಾವಣೆಯನ್ನೇನೂ ಅಪೇಕ್ಷಿಸಿಲ್ಲೆಂಬುದನ್ನು ವರ್ಕಿಂಗ್ ಕಮಿಟಿಯು ಸ್ಪಷ್ಟಪಡಿಸುತ್ತದೆ ಇಂಡಿಯಾ ಆಕ್ಟಿಗನುಸಾರವಾಗಿ ಕಾಂಗ್ರೆಸಿನವರು ಕೇಳಿರುವ ಆಶ್ವಾಸನೆಯನ್ನು ಕೊಡಬಹುದೆಂದು ವರ್ಕಿಂಗ್ ಕಮಿಟಿಗೆ ಪ್ರಮುಖನ್ಯಾಯಾಧೀಶರು ಸಲಹೆ ಇತ್ತಿರುತ್ತಾರೆ ಬ್ರಿಟಿಷ್ ಸರಕಾರದ ಧೋರಣೆಯ ಕುರಿತು ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡ್ ಮತ್ತು ಅಂಡರ ಸೆಕ್ರೆಟರಿಗಳಾದ ಮಿ. ಬಟ್ಲರರು ಕೊಟ್ಟಿರುವ ಹೇಳಿಕೆಗಳು ಕಾಂಗ್ರೆಸಿನ ಕೇಳಿಕೆಗಳನ್ನು ತೃಪ್ತಿಪಡಿಸಲು ಏನೇನೂ ಸಾಕಾಗಲಾರವು ಮತ್ತು ಅವು ಕಾಂಗ್ರೆಸಿನ ಧೋರಣೆಯ ಕುರಿತು ತಪ್ಪು ಕಲ್ಪನೆಯಿಂದ ತಪ್ಪು ಅರ್ಥವನ್ನುಂಟುಮಾಡುವಂಥವಾಗಿವೆ. ಈ ಹೇಳಿಕೆಗಳು ಮಾಡಲ್ಪಟ್ಟಿರುವ ರೀತಿಯು ಕಾಂಗ್ರೆಸಿಗೆ ಅಪಮಾನಕರವಾಗಿದೆ ಬ್ರಿಟಿಷ್ ಸರಕಾರದ ಹಿಂದಿನ ಮತ್ತು ಈಗಣ ವರ್ತನೆಯ ದೃಷ್ಟಿಯಿಂದ, ಕಾಂಗ್ರೆಸಿನವರು ಕೇಳುವ ಪ್ರತ್ಯೇಕವಾದ ಆಶ್ವಾಸನೆ ಇಲ್ಲದೆ ಪ್ರಜಾನುರಾಗಿಗಳಾದ ಮಂತ್ರಿಗಳು ಗವರ್ನರರ ಅಧಿಕಾರ ಚಾಲನೆಯ ಆತಂಕವಿಲ್ಲದೆ ಸರಿಯಾಗಿ ಆಡಳಿತ ನಡಿಸಲು ಶಕ್ತರಾಗಲಿಕ್ಕಿಲ್ಲ ಈ ಆಶ್ವಾಸನೆಯು ಗವರ್ನರರಿಗೂ ಮಂತ್ರಿಗಳಿಗೂ ತೀವ್ರವಾದ ಭಿನ್ನಾಭಿಪ್ರಾಯವುಂಟಾದಲ್ಲಿ ಮಂತ್ರಿಗಳನ್ನು ತಗೆದು ಹಾಕುವ ಇಲ್ಲವೆ ಎಸೆಂಬ್ಲಿಯನ್ನು ಮುಕ್ತಾಯಗೊಳಿಸುವ ದು ಗವರ್ನರರ ಅಧಿಕಾರವನ್ನೇನೂ ರದ್ದು ಮಾಡುವುದಿಲ್ಲ ಆದರೆ ಹೀಗೆ ಗವರ್ನರರು ತನ್ನ ಜವಾಬ್ದಾರಿಯಿಂದ ಮಂತ್ರಿಗಳನ್ನು ರಾಜೀನಾಮೆ ಕೊಡಿಸುವ ಬದಲಿಗೆ ಅವರು ಆಡಳಿತದಲ್ಲಿ ಕೈ ಹಾಕಿ ಮಂತ್ರಿಗಳೇ ರಾಜಿನಾಮೆ ಕೊಡುವಂತಾಗುವ ಪಕ್ಷ ವರ್ಕಿಂಗ ಕಮಿಟಿಯ ಪ್ರಬಲ ಆಕ್ಷೇಪವಿರುತ್ತದೆ' ಕಾಂಗ್ರೆಸ್ ವರ್ಕಿಂಗ್ ಕಮಿಟಿಯೊಳಗಣ ತೀವ್ರಗಾಮಿಗಳು ಅವರು ಹೊಸಲೆ ಉಗ್ರತರ ಕ್ರಮವನ್ನು ... ಕೈಕೊಳ್ಳಬಹುದು ... ಕುರಿತು ದೀರ್ಘ ಚರ್ಚೆ ನಡೆದು ಮಹಾತ್ಮ ಗಾಂಧಿಯವರ ಮಧ್ಯಸ್ಥಿಕೆಯಿಂದ ಕಡೆಗೆ ಮೇಲಿನ ನಿರ್ಣಯ ಮಂಜೂರಾಯಿತೆಂದು ತಿಳಿದು ಬರುತ್ತದೆ

ಗಾಂಧಿಜಿಯವರ ಸಲಹೆಯ ಮೇರೆಗೆ ವರ್ಕಿಂಗ್ ಕಮಿಟಿಯವರು ಸರಕಾರದವರೊಡನೆ ಯಾವ ತರದ ಬಿಕ್ಕಟ್ಟಿಕ್ಕೂ ಅವಕಾಶ ದೊರೆಯದಂತೆ ಜಾಗ್ರತೆ ತಗೆದುಕೊಂಡಿರುವರು ಇಂಟರಿಮ ಮಂತ್ರಿಗಳು ನಿಯೋಜಿಸಲ್ಪಟ್ಟಿರುವಾಗ ಅವರನ್ನು ಅಪಮಾನಗೊಳಿಸುವ ಕರಿಪತಾಕೆಯ ಪ್ರದರ್ಶನವನ್ನು ನಡಿಸಬಾರದು ಜನಸಮುದಾಯದ ಸಂಪರ್ಕವನ್ನು ಬೆಳೆಸುವಾಗ ಅಲ್ಪಸಂಖ್ಯಾಕ ಸಮಾಜಗಳ ಮುಖಂಡರನ್ನು ಸಿಟ್ಟಿಗೆಬ್ಬಿಸುವ ಕೆಲಸವೇನನ್ನಾದರೂ ಮಾಡಬಾರದೆಂದು ವರ್ಕಿಂಗ್ ಕಮಿಟಿಯವರು ಸ್ಪಷ್ಟಪಡಿಸಿರುವರು. ಮುಂದಿನ ಕೆಲವು ವಾರಗಳಲ್ಲಿ ಕಾಂಗ್ರೆಸಿನವರು ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಬೇಕು ಪ್ರಕೃತದ ಪರಿಸ್ಥಿತಿಯ ಕುರಿತು ಕಾಂಗ್ರೆಸ್ ವರ್ಕಿಂಗ ಕಮಿಟಿಯು ತೀವ್ರ ಅತೃಪ್ತಿಯುಳ್ಳದ್ದಾಗಿದೆ ಸಂಧಾನದ ... ಯಿರುವ ವರೆಗೆ ಹೊಸ ಹೆಜ್ಜೆಯನ್ನೇನಾದರೂ ತೆಗೆದುಕೊಳ್ಳಬಾರದೆಂದೇ ವರ್ಕಿಂಗ್ ಕಮಿಟಿಯ ... ವಿರೋಧಿಗಳ ಅವಿನಯತೆಯಿಂದೇನೂ ಪಲ್ಲಟಗೊಳ್ಳದ ಗಾಂಧಿಜಿಯವರು ಕೂಡಾ ಲೋರ್ಡ ಜೆಟ್ಲೆಂಡ್ ಮತ್ತು ಮಿ. ಬಟ್ಲರರ ಹೇಳಿಕೆಗಳಿಂದ ಸಂತಪ್ತರಾಗಿರುವರಂತೆ. ಸದ್ರಿ ಹೇಳಿಕೆಗಳು ಅನವಸರ ಅಧಿಕಾರ ಪ್ರದರ್ಶನವಿದ್ದು ವ್ಯಕ್ತಿಗೆ ಅಶುಭ ಸೂಚಕವಿರುವವೆಂದು ಮಹಾತ್ಮರ ಅಭಿಮತ. ಒಂದು ದೇಶದ ಬಿಕ್ಕಟ್ಟಿನ ನಿವಾರಣೆಯ ಯೋಗ್ಯ ಉಪಾಯವೆಂದರೆ ಅವರೊಡನೆ ಒಡಂಬಡಿಕೆ ಮಾಡಿಕೊಳ್ಳುವುದಲ್ಲದೆ ಅವರ ಮೇಲೆ ರಾಜಕೀಯ ಘಟನೆಯೊಂದನ್ನು ಹೇರುವುದರಿಂದಲ್ಲ ಎಂಬ ಬ್ರಿಟಿಷ್ ಮಾಜಿ ಪ್ರಧಾನ ಮಂತ್ರಿ ಮಿ ಲ್ಯಾಡ ಜಾರ್ಜರ ಅಭಿಪ್ರಾಯಕ್ಕೆ ಗಾಂಧಿಜಿಯವರೂ ಪಂಡಿತ ಜವಾಹರಲಾಲರೂ ಪ್ರಾಮುಖ್ಯವಾಗಿ ಪರಿಗಣಿಸಿ,, ಇಂತಹ ಅಭಿಪ್ರಾಯವನ್ನು ಅಂಗೀಕರಿಸದುದೇ ಸಂದಿಗ್ಧ ದೊಡ್ಡ ತೊಡಕೆಂದು ಸೂಚಿಸಿರುವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ೩ ದಿವಸಗಳಲ್ಲಿ ೬೦ ಘಂಟೆಗಳ ವರೆಗೆ ಸಭೆ ಸೇರಿ ಎಪ್ರಿಲ್ ತಾ ೨೮ರಲ್ಲಿ ಅಗಲಿರುವರು ಜಂಜಿಬಾರಿನ ಹಿಂದೀಯರಿಗೆ ಅಲ್ಲಿಯ ಸರಕಾರವು ಮಾಡಿರುವ ಅನ್ಯಾಯ ಮತ್ತು ಅಡ್ಡಿಸ್ ಅಬಾಬದ ಇಟಲಿಯಾನರ ಅತ್ಯಾಚಾರವನ್ನು ನಿಷೇಧಿಸುವ ನಿರ್ಣಯಗಳನ್ನು ಕೂಡಾ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಂಜೂರ ಮಾಡಿರುವರು

ವೈಸರಾಯರು ಗಾಂಧಿಜಿಯವರನ್ನು ಕಾಣಬೇಕು

ಎಪ್ರಿಲ್ ತಾ ೨೯ರಲ್ಲಿ ದಕ್ಷಿಣ ಅಫ್ರಿಕದ ಹಿಂದೀ ಏಜಂಟ್ ಜನರಲರಾದ ಸರ್ ರಾಜಾ ಅಲಿಯವರು ಕೇಪ್‌ಟೌನ ಯುನಿವರ್ಸಿಟಿ ಕ್ಲಬ್ಬಿನ ಮಂಡಳಿಗೆ ಭಾಷಣ ಮಾಡುವಾಗ ಹಿಂದ ದೇಶದಲ್ಲಿ ಕಾಂಗ್ರೆಸು ಮತ್ತು ಸರಕಾರಗಳೊಳಗುಂಟಾಗಿರುವ ಬಿಕ್ಕಟ್ಟನ್ನು ನಿವಾರಿಸುವ ಒಂದೇ ದಾರಿಯೆಂದರೆ ವೈಸರಾಯರು ಮತ್ತು ಗಾಂಧಿಜಿಯವರೊಳಗೆ ಮಾತುಕತೆ ನಡೆಯುವಂತೆ ಮಾಡುವುದು. ಹಿಂದೆ ಗಾಂಧಿಜಿಯವರು ವೈಸರಾಯರನ್ನು ಕಂಡಾಗಲೆಲ್ಲಾ ದೇಶದ ಕಲ್ಯಾಣವು ಯಾವಾಗಲೂ ಕಡಿಮೆಯಾಗಿದ್ದಿತು ಪ್ರಕೃತ ಇಬ್ಬರಿಗೂ ಸಾವಧಾನಪೂರ್ವಕ ಸಂಧಿಯು ನಡೆದ ... ಬೇಗನೆ ಹೇಗಾದರೂ ಪ್ರಕೃತದ ಬಿಕ್ಕಟ್ಟು ನಿವಾರಿಸಲ್ಪಡದಿದ್ದರೆ ಹಿಂದು ದೇಶದಲ್ಲಿ ವಿಪ್ಲವವುಂಟಾಗುವ ಸಂಭವ ಹೆಚ್ಚು ಅತಿ ದೂರವಿರಲಾರದೆಂದು ಎಚ್ಚರಿಸಿರುವರು. ಇನ್ನು ಸಂಧಾನದ ಬಾಗಿಲು ತೆರೆದೇ ಇದೆ ಆದಷ್ಟು ಬೇಗನೆ ಪಕ್ಷ ... ಬಿಕ್ಕಟ್ಟನ್ನು ನಿವಾರಿಸಲು ಏನಾದರೂ ಮಾಡಲಾಗುವುದೆಂದು ತನಗೆ ವಿಶ್ವಾಸವಿರುವುದೆಂದು ಸರ ಮಹಮ್ಮದ ಉಸ್ಮಾನರೆಂದಿರುವರು ಪ್ರಾಂತಿಕ ಗವರ್ನರರಿಗೆ ಕೂಡಲೆ ಎಸೆಂಬ್ಲಿಯ ಸಭೆ ಕರೆದು, ಇಂಟರಿಮ ಮಂತ್ರಿಗಳ ಮೇಲೆ ಅವಿಶ್ವಾಸದ ಠರಾವು ಮಂಜೂರಾದೊಡನೆ ಅವರನ್ನು ಹೊರಹಾಕಿ ಕಾಂಗ್ರೆಸಿನವರೊಡನೆ ರಾಜಿಮಾಡಿಕೊಳ್ಳಬೇಕೆಂದು ಹಲವು ಮಂದಿ ಮವಾಸಕ್ಷೀಯ ಮುಖಂಡರು ಸರಕಾರಕ್ಕೆ ವಿನಂತಿಮಾಡಿಕೊಂಡಿರುವರು.

ಕೊಚ್ಚಿಯ ಕೂಟಲಮಾಣಿಕ್ಕಂ ದೇವಸ್ಥಾನದ ಜಗಳ

ಇಂಡಿಯಾ ಸರಕಾರದೊಡನೆ ಅಪೀಲ್

ಕೊಚ್ಚಿಯ ಕೂಟಲಮಾಣಿಕ್ಕಂ ದೇವಸ್ಥಾನದಲ್ಲಿ ತಿರುವಾಂಕೂರಿನ ಶ್ರೀ ಪದ್ಮನಾಭ ದೇವಸ್ಥಾನದ ತಂತ್ರಿಗಳು ಪೂಜೆ ನಡಿಸಬೇಕಾದರೆ ... ಪವಿತ್ರ ಮಾಡಿಕೊಳ್ಳಬೇಕೆಂಬ ಕೊಚ್ಚಿ ಮಹಾರಾಜರ ಆಜ್ಞೆ ಮತ್ತು ... ಬ್ರಿಟಿಷ್ ರೆಸಿಡೆಂಟರ ... ಅಧಿಕಾರಾತೀತ ಮತ್ತು ಅನ್ಯಾಯವಾದುದೆಂದು ದುರ್ಬಲ

ದ್ರೋಹ ಎಂದು ಅಂಬ್ರೋಸ್ ಎಂಬವನು ಹೇಳಿರುವನು. ಸೈಂಟ್ ಜೆರೋಮನು ಈ ವಿಷಯದಲ್ಲಿ ಮತ್ತೂ ಉಗ್ರವಾಗಿದ್ದನು "ಶ್ರೀಮಂತಿಕೆಯು ಯಾವಾಗಲೂ ಕಳ್ಳತನದ ಪರಿಣಾಮ ಅದನ್ನು ಪಡೆದವನಲ್ಲದಿದ್ದರೂ ಆತನ ಹಿಂದಿನವನು ಕಳ್ಳತನ ಮಾಡಿರಲೇಬೇಕು. "ತಮಗೆ ಅತ್ಯಾವಶ್ಯಕವಾದುದಕ್ಕಿಂತ ಹೆಚ್ಚಿಗೆ ಪಡೆಕೊಂಡಿರುವವರು ಇತರರದನ್ನು ಅಪಹರಿಸಿಕೊಂಡಿಟ್ಟುಕೊಂಡಂತೆಂದು ಸೈಂಟ್ ಆಗಸ್ಟಿನನು ಹೇಳುವನು ಹಿಂದು ಧರ್ಮದ ಉತ್ಕೃಷ್ಟ ಆದರ್ಶವು, ಸರ್ವತ್ಯಕ್ತ ಸನ್ಯಾಸ ಜೀವನವಾಗಿದೆ ಲೋಕದ ವಸ್ತುಗಳ ಮೇಲಿನ ಆಸಕ್ತಿ ಮಮಕಾರಗಳನ್ನು ಬಿಟ್ಟವನೇ ಆದರ್ಶ ಪುರುಷನಾಗುವನು

ಆದರೆ ಈ ರೀತಿಯ ಖಾಸಗಿ ಸೊತ್ತು ಸಂಪತ್ತಿನ ನಿಷೇಧಕ್ಕೂ ಬೋಲ್ಶೆವಿಕರ ಥಾಳಿಗೂ ಆಕಾಶ ಪಾತಾಳದಂತರವಿದೆ ಮೋಸೆ, ಬುದ್ಧ, ಕ್ರೈಸ್ತ ಮೊದಲಾದ ಧರ್ಮಸ್ಥಾಪಕರಾಗಲಿ, ಅನಂತರದ ಪ್ರವಾದಿ, ವೇದಾಂತಿಗಳಾಗಲಿ ಖಾಸಗಿ ಸೊತ್ತೆಂಬುದು ಸಂಪೂರ್ಣವಾಗಿ ನಾಶವಾಗಬೇಕೆಂದೇನೂ ಸಾರಿರುವುದಿಲ್ಲ ಧರ್ಮಗಳು ಸೊತ್ತುಗಳ ಮೇಲಿನ ಆಸಕ್ತಿ ಮಮಕಾರಗಳನ್ನು ತ್ಯಜಿಸಹೇಳುವುದು ಪರಲೋಕದ ಈಶ್ವರನ ಪ್ರೀತ್ಯರ್ಥವಾಗಿ, ಶರೀರದ ಬಂಧನವನ್ನು ಹರಿದು ಮುಕ್ತಿಪಡೆಯಲಿಕ್ಕಾಗಿಯಲ್ಲದೆ ಜನಸಾಮಾನ್ಯರ ಇಹಲೋಕ ಸುಖಾಭಿವೃದ್ಧಿಯ, ಇಹ ಜೀವನ ಕ್ಷೇಮ ಚಿಂತನೆಯ ಉದ್ದೇಶದಿಂದಲ್ಲ ಧರ್ಮಗಳ ಸೊತ್ತು ನಿಷೇಧವು ಕೇವಲ ಅದೊಂದು ವೈಯಕ್ತಿಕ ಆದರ್ಶವಲ್ಲದೆ ಸಾಮಾಜಿಕ ಗುರಿಯಲ್ಲ, ಅದೊಂದು ಕಾಲ್ಪನಿಕ ಸಾಯುಜ್ಯ ಸುಖಪ್ರಾಪ್ತಿಗಾಗಿಯಲ್ಲದೆ ವಾಸ್ತವ ಸುಖಾನುಭವಕ್ಕಲ್ಲ.

ಬೋಲ್ಶೆವಿಕರು ಖಾಸಗಿ ಸೊತ್ತಿನ ಬದ್ಧ ದ್ವೇಷಿಗಳಾಗಿರುವುದೇಕೆ? ಎಂಬುದನ್ನು ಮುಂದಿನ ಸಂಚಿಕೆಯಿಂದ ತಿಳಿಯಿರಿ

ಮಾಣಿಕಮ್ ದೇವಸ್ಥಾನದ ಆಡಳಿತಾಧಿಕಾರಿ ಮತ್ತು ಧರ್ಮಾಧಿಕಾರಿಯೂ ಆದ ಶ್ರೀ ತಾಚುದಾಯ ಕೈಮಲರು ಆಕ್ಷೇಪಿಸಿ ಆ ಕುರಿತು ಇಂಡಿಯಾಸರಕಾರಕ್ಕೆ ಅಪೀಲು ಮಾಡಿ ಕೊಂಡಿರುವರು. ಇನ್ನು ಇಂಡಿಯಾ ಸರಕಾರವು ಯಾವನಿರ್ಣಯಕ್ಕೆ ಬರುವುದೋ ನೋಡಲಿದೆ. ಕೂಟಲ ಮಾಣಿಕಮ್ ದೇವಸ್ಥಾನದ ಅತ್ಯುಚ್ಚ ಧರ್ಮಾಧಿಕಾರಿಯಾದ ಕೈಮಲರು ಸದರಿ ದೇವಸ್ಥಾನದ ಉತ್ಸವಕಾಲದಲ್ಲಿ ತಿರುವಾಂಕೂರಿನ ಧ್ವಜವೊಂದನ್ನು ಯಾವತರದ ಪ್ರಾಯಶ್ಚಿತ್ತವೂ ಇಲ್ಲದೆ ಧ್ವಜಸ್ತಂಭದ ಮೇಲೇರಿಸಿರುವರು ಧ್ವಜಕ್ಕೂ ಪ್ರಾಯಶ್ಚಿತ್ತವಾಗಬೇಕೆಂದು ಕೊಚ್ಚಿಯ ವೈದಿಕರು ಹಠತೊಟ್ಟಿದ್ದು ಅದಕ್ಕೆ ಮಹಾರಾಜರು ಕೂಡಾ ಸಮ್ಮತಿಸಿದ್ದರೆಂದು ತಿಳಿದು ಬರುತ್ತದೆ. ಆದರೆ ಕೈಮಲರು ಮಾತ್ರಗಣ್ಯಮಾಡಲಿಲ್ಲ ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನದ ಹೆಚ್ಚಿನಜನರು ಕೊಚ್ಚಿಮಹಾರಾಜರ ವರ್ತನೆಯನ್ನು ನಿಷೇಧಿಸಿರುವರು ಬ್ರಿಟಿಷ್ ರೆಸಿಡೆಂಟರಿಗೆ ಕೂಟಲಮಾಣಿಕಂ ದೇವಸ್ಥಾನದ ಲೌಕಿಕಾಡಳಿತದಲ್ಲಿ ಮಾತ್ರ ಕೈಹಾಕುವ ಹಕ್ಕಲ್ಲದೆ ಧರ್ಮಾಧಿಕಾರದಲ್ಲಿ ಪ್ರವೇಶಿಸುವ ಹಕ್ಕಿಲ್ಲೆಂಬ ಕೈಮಲರ ಆಕ್ಷೇಪವನ್ನು ರೆಸಿಡೆಂಟರು ಮನ್ನಿಸಿ ಧರ್ಮಾಧಿಕಾರದಲ್ಲಿ ತಾನು ಕೈಹಾಕಲಿಲ್ಲೆಂದು ತಿಳಿಸಿರುವರು. ಕೂಟಲ್ಮಮಾಣಿಕಂ ದೇವಸ್ಥಾನದಲ್ಲಿ ಗಲಾಟೆಯಾಗಿ ಶಾಂತಿ ಭಂಗವಾಗದಂತೆ ರೆಸಿಡೆಂಟರು ಕೊಚ್ಚಿಯ ಮಹಾರಾಜರ ಅಪ್ಪಣೆಗೆ ಸಮ್ಮತಿ ಇತ್ತಂತೆ ತೋರುತ್ತದೆ. ಕೈಮಲರ ಅಭಿಪ್ರಾಯದಂತೆ, ಕೊಚ್ಚಿಯ ಮಹಾರಾಜರು ಅಲ್ಲಿಯ ವೈದಿಕರ ಸಹಾಯಕ್ಕೆ ಹೋಗದಿದ್ದರೆ ಅವರು ಮೌನವಾಗಿರುತ್ತಿದ್ದರು ಕೊಚ್ಚಿಮಹಾರಾಜರ ಆಶ್ರಯದೊರೆತ ಮೇಲೆ ಮಾತ್ರ ಈ ವೈದಿಕರು ಚಳವಳಿಸಲಾರಂಭಿಸಿದುದು. ಕೊಚ್ಚಿಯ ಮಹಾರಾಜರ ಈ ಅವಿವೇಕದ ಆಜ್ಞೆಯನ್ನು ಇಡೀ ದೇಶದ ಸುಧಾರಕ ತಂಡದವರು ಮಾತ್ರವಲ್ಲದೆ ಹಿಂದೂಸಭೆಯವರೂ, ಪಂಜಾಬೇ ಮೊದಲಾದ ಉತ್ತರ ಹಿಂದೂಸ್ಥಾನದ ಸನಾತನಿಗಳೂ ನಿಷೇಧಿಸಿರುವರು ತಿರುವಾಂಕೂರು ಮಹಾರಾಜರ ಅವರ್ಣರ ದೇವಸ್ಥಾನ ಪ್ರವೇಶ ಹುಕುಮನ್ನು ತಿರುವಾಂಕೂರಿನ ಖಾಸಗಿ ದೇವಸ್ಥಾನಗಳವರೇ ಅನುಸರಿಸಲಿಲ್ಲ. ಹಿರಿಯ ಮಹಾರಾಣಿಯವರ ಖಾಸಗೀ ದೇವಸ್ಥಾನವೇ ಅವರ್ಣರಿಗೆತೆರೆಯಲ್ಪಟ್ಟಿಲ್ಲ. ಅವರ್ಣರು ಪ್ರವೇಶಿಸಿರುವ ದೇವಸ್ಥಾನಗಳಲ್ಲಿ ಪೂಜೆ ನಡಿಸುವ ತಂತ್ರಿಗಳು ತಮ್ಮ ಕುಟುಂಬದೊಂದಿಗೆ ವಾಸಿಸದೆ ಪ್ರತ್ಯೇಕವಿದ್ದಾರೆ. ತಾವು ಪೂರ್ವಾಚಾರಗಳನ್ನೂ ಎಂದಿಗೂ ಬಿಟ್ಟು ಬಿಡಲಿಕ್ಕಿಲ್ಲ ಅದಕ್ಕಾಗಿ ಎಂತಹತ್ಯಾಗಮಾಡಲೂ ಸಿದ್ಧರಿರುವೆವು ಕೈಮಲರು ಧರ್ಮದ ವಿಷಯದಲ್ಲಿ ತಮ್ಮ ಅಭಿಪ್ರಾಯದಂತೆ ನಡೆಯಬೇಕು. ಪುರಾತನ ರೂಢಿಯನ್ನು ಬದಲಾಯಿಸುವ ಹಕ್ಕು ಅವರಿಗಿರುವುದಿಲ್ಲೆಂಬ ಕೊಚ್ಚಿಯ ವೈದಿಕರ ಅಭಿಮತ.

ವಜೀರಿಸ್ಥಾನದ ಪರಿಸ್ಥಿತಿಯು

ಏನೂ ಬದಲಾವಣೆಯಾಗದೆ ಯಥಾಪ್ರಕಾರವಿದೆ. ಎಪ್ರಿಲ್ ತಾ. ೨೬ರಲ್ಲು ಕೆಲವು ಪಂಗಡಿಗರು ಬನ್ನು ಜಿಲ್ಲೆಯ ಗುರಿವಾನ್ ಹಳ್ಳಿಯ ಮೇಲೆ ಧಾಳಿ ನಡಿಸಿ ೩ಮಂದಿ ಹಳ್ಳಿಗರನ್ನು ಕೊಂದುಹಾಕಿರುವರು. ಈ ಮೊದಲೊಮ್ಮೆ ಈ ಹಳ್ಳಿಯ ಮೇಲೆ ಕೆಲಮಂದಿ ಪಂಗಡಿಗರು ಧಾಳಿಯಿಟ್ಟಾಗ ಹಳ್ಳಿಗರು ಅವರಲ್ಲಿಇಬ್ಬರನ್ನು ಕೊಂದು ಇಬ್ಬರನ್ನು ಗಾಯಗೊಳಿಸಿದ ಪ್ರತೀಕಾರಾರ್ಥವಾಗಿ ಈ ಧಾಳಿನಡಿಸಲ್ಪಟ್ಟದೆಂದು ಬರುತ್ತದೆ. ಸರಕಾರದ ಗಡಿನಾಡಿನ ಘೋರಣೆಯನ್ನು ನಿಷೇಧಿಸಿದುದಕ್ಕಾಗಿ ಬನ್ನುವಿನ ೪ಮಂದಿ ಮೌಲವಿಗಳು ಒಂದು ಹಳ್ಳಿಯಲ್ಲಿ ನಿರ್ಬಂಧದಲ್ಲಿರಿಸಲ್ಪಟ್ಟಿರುವರು. ಮಿರಾಲಿಯಿಂದ ೩ಮೈಲು ದೂರದಲ್ಲಿ ಸರಕಾರದ ಸೈನಿಕರಿಗೂ ವಜೀರಿ ಪಂಗಡಿಗರೂ ನಡೆದ ಜಗಳದಲ್ಲಿ ಕೊಲ್ಲಲ್ಪಟ್ಟ ೩೦ಮಂದಿ ವಜೀರಿಗಳ ಶವವು ಬನ್ನುವಿಗೆ ತರಲ್ಪಟ್ಟಿದೆ. ೪೩ಮಂದಿ ಪಟ್ವಾರಿಗಳೆಂಬ ಕೀಳು ತರಗತಿಯ ಗ್ರಾಮ ನೌಕರರು, ತಮಗೆ ಕುಟುಂಬ ಸಮೇತವಾಗಿ ಬನ್ನು ಜಿಲ್ಲೆಯ ಹಳ್ಳಿಗಳಲ್ಲಿ ವಾಸಿಸಲು ಸಾಧ್ಯವಿಲ್ಲೆಂದು ತಮ್ಮ ಉದ್ಯೋಗಗಳಿಗೆ ರಾಜಿನಾಮೆಯಿತ್ತಿರುವರು. ಇವರ ಮುಖಂಡರು ೪ಮಂದಿ ಕೈದುಮಾಡಲ್ಪಟ್ಟಿರುವರು.

ಇಪಿಯ ಫಕೀರರು ವಿಮಾನಗಳಿಂದ ಬೋಂಬೆನೆಯಲಸಾಧ್ಯವಾದ ಗವಿಯೊಂದರಲ್ಲಿ ವಾಸಿಸಿಕೊಂಡು ತನ್ನ ಕಡೆಗೆ ಜನರನ್ನು ಸೇರಿಸುತ್ತಿರುವರು. ಕೆಲವು ಪಂಗಡಿಗರುಸರಕಾರಕ್ಕೆ ಶರಣಾಗರಾಗತೊಡಗಿರುತ್ತಾರೆ. ಆದರೆ ಹೆಚ್ಚಿನವರು ಇನ್ನೂ ಹೋರಾಡುತ್ತಲೇ ಇದ್ದಾರೆ. ಸೇತುವೆಗಳನ್ನು ಮುರಿಯುವ, ತಂತಿಗಳನ್ನು ಕಡಿದುಹಾಕುವ, ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿರುವ ಪಹರೆಗಾರರ ಮೇಲೆ ಗುಂಡೆಸೆಯುವ, ಹಳ್ಳಿಗಳ ಮೇಲೆ ಧಾಳಿನಡಿಸಿ ಹಾವಳಿಮಾಡುವ ಕೃತ್ಯಗಳನ್ನು ಎಡೆಬಿಡದೆ ನಡಿಸುತ್ತಲೇ ಇದ್ದಾರೆ. ಎಪ್ರಿಲ್ ತಾ. ೨೩ರಲ್ಲು ಗುರಿವಾನ್ ಎಂಬ ಹಳ್ಳಿಯ ಮೇಲೆ 300 ಮಂದಿ ಭಟ್ಟಾನಿ ಪಂಗಡಿಗರು ಧಾಳಿನಡಿಸಿ ೩೦ಮನೆಗಳನ್ನು ಸುಟ್ಟುಹಾಕಿರುವರು. ಹಿಂದು ಮತ್ತು ಸಿಖ್ಖಸ್ತ್ರೀಯರು ಮಕ್ಕಳಿಗೆ ಈ ಹಳ್ಳಿಯ ಮುಸಲ್ಮಾನರು ಆಶ್ರಯವಿತ್ತರು. ಭಟ್ಟಾನಿಗಳು ಬಂದು ಕೇಳಿದಾಗ ತಾವು ಯಾರಿಗೂ ಆಶ್ರಯವೀಯಲಿಲ್ಲೆಂದು ಆಣೆ ಇಟ್ಟು ಹೇಳಿದರು.

ರಾತ್ರಿಯಲ್ಲಿ ಸೈನಿಕರ ಮೇಲೆ ಧಾಳಿ

ಇದೇ ತಾ. ೩ನೇ ರಾತ್ರಿ ಬಿಚಿಕಾಕ್ಕೀ ಎಂಬಲ್ಲಿಯ ಹಿಂದೀ ಸೈನಿಕರ ಮೇಲೆ ಪಂಗಡಿಗರು ಬಿದ್ದು ಹಿಂದಕ್ಕೋಡಿಸಲ್ಪಟ್ಟಿರುವರು. ದುವ್ವಿಲ್ ಎಂಬಲ್ಲಿ ಎರಡು ಲೋರಿಗಳ ಮೇಲೆ ಪಂಗಡಿಗರು ಬಿದ್ದಾಗ ಒಬ್ಬ ಹಿಂದು ಮತ್ತು ಇನ್ನೊಬ್ಬ ಸಿಖ್ಖನು ಕೊಲ್ಲಲ್ಪಟ್ಟಿರುವರು. ರಾಜಿನಾಮೆ ಕೊಟ್ಟ ಪಟ್ವಾರಿಗಳು ಅದನ್ನು ಹಿಂತೆಗೆದುಕೊಂಡಿರುವರು. ದಕ್ಷಿಣ ವಜೀರಿಸ್ಥಾನದಲ್ಲಿ ತೊಂದರೆಕೊಡುತ್ತಿದ್ದ ಬಟ್ಟಾನಿಗಳು ತಮ್ಮ ಸದ್ವರ್ತನೆಯ ಜವಾಬ್ದಾರಿಯಾಗಿ ೨೮ಮಂದಿಯನ್ನು ಸರಕಾರಕ್ಕೊಪ್ಪಿಸಿ ಶರಣಾಗತರಾಗಿರುವರು. ವೈರಿ ಪಂಗಡಿಗರ ಮೇಲೆ ವಿಮಾನ ಮೂಲಕ ಬೋಂಬೆಸೆತವು ನಡೆಯುತ್ತಲೇಇರುವುದು. ಒಂದು ವಿಮಾನವು ನೆಲಕ್ಕೆ ಬಿದ್ದು ಸುಟ್ಟುಹೋಗಿರುವುದು. ಅದರೊಳಗಿದ್ದವರು ರಕ್ಷಿಸಲ್ಪಟ್ಟಿರುವರು. ಬನ್ನುವಿನಲ್ಲಿ ಸರಕಾರವು ಜನರಿಗೆ ಹೆಚ್ಚಾಗಿ ಕೋವಿ ಲೈಸನ್ಸ್ ಕೊಡಹತ್ತಿರುವುದು.

ಇಪಿಯ ಫಕೀರರು ಅದ್ಭುತ ಶಕ್ತಿಯುಳ್ಳವರೆಂದು ವಜೀರಿಸ್ಥಾನದ ಪಂಗಡಿಗರಲ್ಲಿ ಪ್ರತೀತಿ. ಅವರ ಪ್ರಭಾವದ ನಿಮಿತ್ತ ಅವರಿಗೆ ಗುಂಡು ಬೋಂಬುಗಳು ತಾಗುವುದಿಲ್ಲೆಂದು ಪಂಗಡಿಗರ ನಂಬಿಕೆಮಾತ್ರವಲ್ಲದೆ ಫಕೀರರೇ ಸಭೆಗಳಲ್ಲಿ ಆ ಪ್ರಕಾರ ಹೇಳಿ ಜನರನ್ನು ನಂಬಿಸುತ್ತಿರುವರು. ಪಂಗಡಿಗರ ಅದೊಂದು ಸಭೆಯಲ್ಲಿ ಫಕೀರರು, ತಾನು ವಿಮಾನದಿಂದ ಬೀಳುವ ಬೋಂಬುಗಳನ್ನು ಕಾಗದವಾಗಿ ಮಾಡುವೆನೆಂದು ಹೇಳಿದಾಗಲೇ, ಸರಕಾರದ ವಿಮಾನವೊಂದು ಮೇಲಿಂದ, ಪಂಗಡಿಗರು ಫಕೀರರಿಗೆ ಸಹಾಯಮಾಡಬಾರದೆಂದು ಕೇಳಿಕೊಳ್ಳುವ ಪ್ರಕಟಣೆಗಳನ್ನೆಸೆಯಿತು. ಮೂಢ ಪಂಗಡಿಗರು, ಫಕೀರರು ಬೋಂಬುಗಳನ್ನು ಕಾಗದಗಳನ್ನಾಗಿ ಮಾಡಿದರೆಂದು ನಂಬಿದರು. ಫಕೀರರ ಬಲ ಹೆಚ್ಚಿತು. ಇಂತಹ ಮೂಢ ಮನೋವೃತ್ತಿಯ ನಿಮಿತ್ತವೇ ಪಂಗಡಿಗರು ಫಕೀರರ ಕಡೆಯಲ್ಲಿ ನಿಂತು ಕಾದಾಡುತ್ತಿರುವರು.

ಸ್ಪೈನಿನ ಅಂತಃಕಲಹ ಬಾಸ್ಕ್ ಪ್ರಾಂತದಲ್ಲಿ ಭೀಷಣ ಹೋರಾಟ

ಬಾಸ್ಕ್ ಪ್ರಾಂತದ ಬಿಲ್ಬಾವೋ ಬಂದರನ್ನು ವಶಪಡಿಸಿಕೊಳ್ಳಲು ಬಂಡಾಯಗಾರರು ಪ್ರಚಂಡಪ್ರಯತ್ನನಡಿಸುತ್ತಿರುವರು. ಬಿಲ್ಬಾವೋದಲ್ಲಿ ಆಹಾರದ ತೀವ್ರ ಅಭಾವ ಉಂಟಾಗಿರುವುದರಿಂದ,ಬಂಡಾಯಗಾರರು ಮುತ್ತಿಗೆ ಹಾಕಿರುವ ಬೆದರಿಕೆ ಬೀರಿದ್ದರೂ ಲಕ್ಷಿಸದೆ ಇಷ್ಟರವರೆಗೆ ೬ಬ್ರಿಟಿಷ್ ಸ್ಟೀಮರುಗಳು ಬಿಲ್ಬಾವೋ ಬಂದರಿಗೆ ಆಹಾರ ಸಾಮಗ್ರಿಗಳನ್ನೊಯ್ದಿರುವವು. ಇದರಿಂದ ಬಂಡಾಯಗಾರರು ಇಂಗ್ಲೆಂಡಿನ ಮೇಲೆ ರೇಗಿ ಬಿದ್ದಿರುವರು. ಇಟೆಲಿ ಮತ್ತು ಜರ್ಮನಿಗಳಲ್ಲಿಯೂ ಈ ಕುರಿತು ತಲ್ಲಣ ಉಂಟಾಗಿರುವುದು. ಬಾಸ್ಕ್ ರಣರಂಗದಲ್ಲಿ ಒಟ್ಟು 7,000 ಮಂದಿ ಬಾಸ್ಕ್ ಸೈನಿಕರನ್ನು ಸೆರೆಹಿಡಿಯಲಾಗಿದೆ ಎಂದೂ ಹೆಚ್ಚಿನ ಯುದ್ಧೋಪಕರಣಗಳು ತಮಗೆ ಸಿಕ್ಕಿವೆಯೆಂದೂ, ದುರೆಂಗೋ ಎಂಬ ಪ್ರಾಮುಖ್ಯಸ್ಥಳವು ಸಂಪೂರ್ಣವಾಗಿ ತಮ್ಮ ಅಧೀನವಾಗಿದೆ ಎಂದೂ ಬಂಡಾಯಗಾರರ ಕಡೆಯಸುದ್ದಿ.

ಗೊರ್ನಿಕ ಪಟ್ಟಣದ ಸಂಪೂರ್ಣ ನಾಶ

ಗೊರ್ನಿಕ ಪಟ್ಟಣವು ಬಾಸ್ಕಪ್ರಾಂತ್ಯದ ಪುರಾತನ ಪ್ರಧಾನ ಪಟ್ಟಣ. ಬಾಸ್ಕ್ ಜನರಿಗೆಲ್ಲಾ ಅತಿ ಪವಿತ್ರವಾದುದು. ಎಪ್ರಿಲ್ ತಾ, ೨೭ರಲ್ಲು ಬಂಡಾಯಗಾರರ ವಿಮಾನಗಳು ಈ ಪಟ್ಟಣದ ಮೇಲೆ ೩॥ ಘಂಟೆಗಳ ವರೆಗೆ ಬೋಂಬಿನ ಮಳೆಗರೆದು ಇಡೀಪಟ್ಟಣವನ್ನೇ ಸಂಪೂರ್ಣ ನಾಶ ಮಾಡಿರುವವು. ಈ ವಿನಾಶಕಾರ್ಯದಲ್ಲಿ ಭಾಗವಹಿಸಿದ ವಿಮಾನಗಳು ಜರ್ಮನಿಯವುಗಳಾಗಿದ್ದುವೆಂದು ತಿಳಿದು ಬರುತ್ತದೆ. ಈ ವಿಮಾನ ಧಾಳಿಯ ಸಂದರ್ಭದಲ್ಲಿ ೧೦೦೦ಕ್ಕಿಂತಲೂ ಮಿಕ್ಕಿದ ಸ್ಫೋಟಕ ಮತ್ತು ಹಲವು ಕಿಚ್ಚಿಬ್ಬಿಸುವ ಬೊಂಬುಗಳೆಸೆಯಲ್ಪಟ್ಟಿದ್ದುವೆಂದು ಅಂದಾಜು ಮಾಡಲಾಗಿದೆ. ಎಷ್ಟು ಪ್ರಾಣಹಾನಿಯಾಗಿರುವುದೆಂದು ಈ ವರೆಗೆ ತಿಳಿದಿಲ್ಲ. ಆದರೆ ಅನೇಕಮಂದಿ ಸ್ತ್ರೀಯರು ಮತ್ತು ಮಕ್ಕಳು ಕೊಲ್ಲಲ್ಪಟ್ಟಿರುವರು; ಬೋಂಬಿನ ಸ್ಫೋಟನವನ್ನು ತಪ್ಪಿಸಿ ಗದ್ದೆಗಳಿಗೋಡಿದ ನೂರಾರು ಮಂದಿಯನ್ನೂ ವಿಮಾನಗಳು ಬೆಂಬತ್ತಿ ಅವರ ಮೇಲೆ ಮಿಶನ್ ತೋಪುಗಳಿಂದ ಗುಂಡುಗಳ ಮಳೆಗರೆದುವು. ಇಡೀ ಪಟ್ಟಣದಲ್ಲೇ ಬೆಂಕಿಯೆದ್ದಿರುವುದು. 50 ಮಂದಿ ಸ್ತ್ರೀಯರು ಮತ್ತು ಮಕ್ಕಳು 1 ಕಟ್ಟಡದೊಳಗೆ ಸಿಕ್ಕಿ ಸಜೀವವಾಗಿ ಸುಡಲ್ಪಟ್ಟಿರುವರು. ಬಂಡಾಯಗಾರರ ಕಡೆಯಲ್ಲಿ 100ವಿಮಾನಗಳಿರುವವು. ಆದರೆ ಬಾಸ್ಕ್ ಸರಕಾರದ ಕಡೆಯಲ್ಲಿ ವಿಮಾನಗಳೇನೂ ಇಲ್ಲ. ವಿಮಾನಧಾಳಿಯಿಂದ ಬಾಸ್ಕಪ್ರಾಂತದ ಪಟ್ಟಣಗಳನ್ನು ನಾಶಗೊಳಿಸಿ ಬಾಸ್ಕ್ ಸರಕಾರವು ಶರಣು ಬರುವಂತೆ ಮಾಡಿ ಬಿಲ್ಬಾವೋಪಟ್ಟಣದ ಕೈಗಾರಿಕೆಗಳನ್ನು ವಶಪಡಿಸಿಕೊಳ್ಳಬೇಕೆಂದೇ ಬಂಡಾಯಗಾರರ ಪ್ಲೇನು.

ಆದರೆ ಬಾಸ್ಕ್ ಪ್ರಾಂತೀಯರು ಅಸಾಧಾರಣವೀರರು ತಮ್ಮ ಪವಿತ್ರ ಪಟ್ಟಣವಾದ ಗೊರ್ನಿಕಾವನ್ನು ಬಂಡಾಯಗಾರರು ನಾಶಪಡಿಸಿದುದರಿಂದ ಅವರೆಲ್ಲಾ ರೇಗಿ ಬಿದ್ದು ಪ್ರಾಣದ ಹಂಗು ತೊರೆದು ಕಾದಾಡಿ ತಮ್ಮ ಪ್ರಾಂತವನ್ನು ರಕ್ಷಿಸುವ ನಿರ್ಧಾರಮಾಡಿರುವರು.

ಬಾಸ್ಕ್ ಸರಕಾರದವರೇ ಅಪಜಯ ಹೊಂದಿ ಹಿಂದೋಡುವಾಗ ಪಟ್ಟಣಗಳನ್ನು ಸಿಡಿಮದ್ದಿನಿಂದ ಸ್ಫೋಟಗೊಳಿಸಿ ನಾಶಮಾಡಿರುವರೆಂದು ಬಂಡಾಯಗಾರರ ಆರೋಪ. ಬಾಸ್ಕ್ ಪ್ರಾಂತದ ಪ್ರೆಸಿಡೆಂಡರು ಈ ಕ್ಷುದ್ರ ಆರೋಪವನ್ನು ಅಲ್ಲಗಳೆದು, ಜರ್ಮನ್ ವಿಮಾನಗಳು ೩½ಘಂಟೆಗಳ ವರೆಗೆ ಗೊರ್ನಿಕದ ಮೇಲೆ ಎಡೆಬಿಡದೆ ಬೋಂಬೆಸೆದ ಸಂಗತಿಯನ್ನು ಪ್ರತಿಜ್ಞಾಪೂರ್ವಕವಾಗಿ ಸಿದ್ಧಪಡಿಸಿರುವರು. ಬಂಡಾಯಗಾರರ ಈ ಪೈಶಾಚಿಕ ಅತ್ಯಾಚಾರಗಳಿಂದ ಇಂಗ್ಲೆಂಡ್ ಫ್ರಾನ್ಸ್ ಮೊದಲಾದ ರಾಷ್ಟ್ರಗಳು ಸಂತಾಪಗೊಂಡು ಈ ರೀತಿಯ ಅತ್ಯಾಚಾರಗಳು ನಡೆಯದಂತೆ ತಕ್ಕ ಏರ್ಪಾಡು ನಡಿಸುವ ಕುರಿತು ಆಲೋಚಿಸುತ್ತಿರುವವು.

FOR SALE

From

EZEKIEL SOANS

Retired Teacher

Near Manipal

POST UDIPI, S. K.

A decent building on a plot of nearly 1½ acres built according to the modern requirements and situated nearly 2 furlongs from Manipal, S. K. is for sale for Rs. 2000. Intending purchasers are requested to communicate to theabove address.

(*Sd.*) **Ezekiel Soans.**

MUSINGS ON THE WAY

Musings on the Way

What a laboured explanation it is that Mr. U. C. S. Bhat has given in your last issue! The Sannyasigudde Saint may belive in his own pre-eminent virtue but he cannot fool the people every time. His letter makes it plain that he knew Mr. Palat was coming to Mangalore on the 12th of April, that he went to receive him at the railway station and that he invited him for the party that he had arranged. Who will belive that it is a mere chance coincedence that the tea-party happened to be got up on the very evening of Mr. Palat's arrival and that it was not meant for Mr. Palat?

x x x x

Mr. Bhat had told some of his friends that his friend the new minister had written to him expressing a desire to meet the local members of the Assembly when he came to Mangalore. As a matter of fact the Tea-party was arranged not merely to honour Mr. Palat but also to bring about a friendly meeting between him and the newly elected members. Mr. Palat's name could not be mentioned in the invitation letter for obvious reasons. Some of the friends who came to the party found fault with Mr. Bhat for making them do obeisance, much against their will, to the Dummy Minister who figured as the chief guest of the occasion.

x x x x

No M. L. A. attended Mr. Bhat's party and so Mr. Palat had to seek other opportunities of meeting them. Mr. Bhat has attempted to have a fling at Mr. A. B. Shetty by making it appear that he invited Mr. Palat to his place under cover of darkness. I have it on good authority that the meeting was sought for by Mr. Palat who wrote to Mr. Shetty from Mr Bhat's place one night and that Mr. Palat went to Mr. Shetty after finishing his dinner at Mr Bhat's that night. This interview seems to have got Mr. Palat into trouble. It is strange that Mr. Bhat who knows the real story should make such insinuations. But that is his way.

x x x x

Mr. Bhat is evidently at war with the Congress and he is hitting right and left. What a pity that his claims for nomination to the Upper House were not favourably considered!

Under the Searchlight.

ವಿಚಿತ್ರ ಪ್ರಪಂಚ

5 ಪವನಿಗೆ ಪತಿವಿಕ್ರಯ

ಪೆರಿಸಿನಲ್ಲಿ ಗಂಡಹೆಂಡರಿಬ್ಬರು ಸುಖವಾಗಿದ್ದರು. ಒಂದು ವರ್ಷದ ಹಿಂದೆ ಗಂಡ ಇನ್ನೊಬ್ಬ ಸ್ತ್ರೀಯಲ್ಲಿ ಅನುರಕ್ತನಾದ. ಹೆಂಡತಿಗೆ ಇದು ತಿಳಿಯಿತು. ಅವಳು ಕೋಪ ನಟಿಸಿದಳು. ಕೊನೆಗೆ ಪತಿಯ ಮೇಲಿನ ತನ್ನ ಹಕ್ಕನ್ನು 5 ಪವನಿಗೆ ಬಿಟ್ಟುಕೊಡಲೊಪ್ಪಿದಳು. ಅಂತೆಯೇ ವಹಿವಾಟು ನಡೆಯಿತು. ಹೆಂಡತಿಯು 5 ಪವನು ಪಡೆದು ಗಂಡನನ್ನು ಬಿಟ್ಟುಕೊಟ್ಟಳು. ಗಂಡ ತನ್ನ ಪ್ರಣಯಿಯೊಡನೆ ಸುಖವಾಗಿದ್ದ. ಇದಾಗಿ ಕೆಲವು ತಿಂಗಳಾದಮೇಲೆ ಹೆಂಡತಿಯು ತನ್ನ ಮನಸ್ಸನ್ನು ಬದಲಾಯಿಸಿ, ಗಂಡನು ತನ್ನನ್ನು ಬಿಟ್ಟು ಹೋಗಿರುವನೆಂದೂ, ಆತನಿಂದ ತನಗೆ ಪರಿಹಾರ ದ್ರವ್ಯ ಸಿಗಬೇಕೆಂದೂ ಖಟ್ಲೆ ನಡೆಸಿದಳು. ಖಟ್ಲೆಯು ವಿಚಾರಣೆಯಾಗುವಷ್ಟರಲ್ಲಿ ತಾನು 5 ಪವನು ತೆಗೆದುಕೊಂಡು ಗಂಡನನ್ನು ಮಾರಿದುದು ನಿಜವೆಂದೊಪ್ಪಿದಳು. ಖಟ್ಲೆಯು ಈಗ ತೆಗೆದುಹಾಕಲ್ಪಟ್ಟಿರುವುದು.

ದೇವರ ದಂಡನೆ

ಅಮೆರಿಕದ ಲೋಸ್ ಎಂಜೆಲ್ಸಿನಲ್ಲಿ ಸಾಮುವೇಲ್ ವ್ಹಿಟೇಕರ್ ಎಂಬವನು ತನ್ನ ಪತ್ನಿಯನ್ನು ಕೊಂದುದಕ್ಕಾಗಿ ಆಜೀವ ಶಿಕ್ಷೆಗೊಳಗಾದನು. ಆಗ ವ್ಹಿಟೇಕರನು ತನ್ನ ತೋಳುಗಳನ್ನೆತ್ತಿ "ಈ ಭೀಕರ ಕೃತ್ಯವನ್ನು ನಾನು ಮಾಡಿರುವೆನಾದರೆ ಕಾರಾಗೃಹಕ್ಕೆ ಹೋಗುವ ಮೊದಲು ನನ್ನನ್ನು ದೇವರು ಹೊಡೆದು ಕೊಲ್ಲಲಿ" ಎಂದು ಕೂಗಿದ. ಅಂತೆಯೇ ಅವನು ಸೆರೆಮನೆಗೆ ಮುಟ್ಟುವ ಮೊದಲೇ ಹೃದಯಸ್ತಂಭನವಾಗಿ ಕೆಳಗೆ ಬಿದ್ದು ಪ್ರಾಣಬಿಟ್ಟ.

ನಿದ್ದೆಯಲ್ಲಿ ಕೊಲೆಯ ಗುಟ್ಟು ಹೇಳಿದುದು

ಹಂಗೇರಿದೇಶದ ಸ್ಟೀಫನ್ ಎಂಬೊಬ್ಬ 21 ವರ್ಷಪ್ರಾಯದ ಕಳ್ಳನು ಕಳವು ಮಾಡಿದುದಕ್ಕಾಗಿ ಶಿಕ್ಷೆ ಅನುಭವಿಸುತ್ತಿದ್ದಾಗ ರಾತ್ರಿ ನಿದ್ದೆಯಲ್ಲಿ ಮಾತಾಡುತ್ತಾ ತಾನು ಮಾಡಿದ ಕೊಲೆಯ ಸಂಗತಿಗಳನ್ನೆಲ್ಲಾ ವಿವರಿಸುವುದನ್ನು ಪಾರ್ದಾರರೂ ಇತರ ಕೈದಿಗಳೂ ಕೇಳಿ ವಿಸ್ಮಯಗೊಂಡರು. ಸ್ಟೀಫನನು ಪುನಃ ವಿಚಾರಣೆಗಾಗಿ ಮೆಜಿಸ್ಟ್ರೇಟರ ಮುಂತರಲ್ಪಟ್ಟ. ಅವನು ನಿದ್ದೆಯಲ್ಲಿ ಮಾತಾಡಿದ ಸಂಗತಿಗಳನ್ನೆಲ್ಲಾ ಕೇಳಿದವರು ಸಾಕ್ಷಿ ಹೇಳಿದಾಗ ತಾನು 11 ಮಂದಿಯನ್ನು ಕೊಂದುದು ನಿಜವೆಂದು ಮೊದಲು ಒಪ್ಪಿದ. ಅನಂತರ 15 ಮಂದಿಯನ್ನು ಕೊಂದಿರುವೆನೆಂದು ಹೇಳಿದ.

ಉಗುರಿನ ಮೂಲಕ ಕೇಳಬಹುದು

ಚಿಕಾಗೋ ಪಟ್ಟಣದ ಪ್ರೊಫೆಸರ್ ರೋಬರ್ಟ್ ಗೋಲ್ಡ್ ಬರ್ಗರು ಫೊನೋಪೀಕ್ಟರ್ ಎಂಬ ಹೊಸ ಯಂತ್ರವೊಂದನ್ನು ನಿರ್ಮಿಸಿರುವರು. ಇದರ ಮೂಲಕ ಕಿವುಡರಾದವರು ಉಗುರಿನಿಂದ ಶಬ್ದ ಕೇಳಿ ಮಾತಾಡಬಹುದು. ಈ ಯಂತ್ರವು ಮಾತಾಡುವ ಶಬ್ದಗಳನ್ನು ಒಂದು ಮುಳ್ಳಿನಲ್ಲಿ ಸಂಗ್ರಹಿಸುವುದು. ಕಿವುಡನು ಅದನ್ನು ಬೆರಳ ತುದಿಗಳಿಂದ ಮುಟ್ಟಿದ ಕೂಡಲೆ ಶಬ್ದಗಳವನಿಗೆ ಕೇಳ ಬರುವುವು.

ಹುಡುಗಿಗೆ ಗಡ್ಡ ಮೀಸೆ ಬಂದು ಹುಡುಗನಾದುದು

17 ವರ್ಷಪ್ರಾಯದ ಹೋಟೆಲು ಹುಡುಗಿ ನೆಲ್ ಎಂಬವಳು ಆಸ್ಪತ್ರೆಗೆ ಹೋಗಿ, ತನಗೆ ಗಡ್ಡ ಮೀಸೆ ಬೆಳೆಯುತ್ತಾ ಇದೆ. ಲಿಂಗಭೇದವೇನಾದರೂ ಆಗುತ್ತದೋ ಏನೋ ನೋಡಿರೆಂದು ಕೇಳಿಕೊಂಡಳು. ಹಲವು ವಾರ ಆಸ್ಪತ್ರೆಯಲ್ಲಿ ಕಳೆದಳು. ಅನಂತರ ಜೋರಾ ಎಂಬ ಹುಡುಗನಾಗಿ ಆಸ್ಪತ್ರೆಯಿಂದ ಹೊರಬಂದಳು. ಮೊದಲು ಹುಡುಗಿಯಾಗಿ ಕೆಲಸ ಮಾಡುತ್ತಿದ್ದ ಹೋಟೆಲಿನಲ್ಲಿಯೇ ಈಗ ಹುಡುಗನಾಗಿ ಕೆಲಸಕ್ಕೆ ನಿಂತಿರುವಳು.

The Canara Industrial Works

WANTED

Three respectable and reliable partners with business ablities to finance and conduct a Cashew Nut Factory to be started near Manipal, which is the best Cashew Nut centre and growing industrial centre.

For further particulars apply to:—

S. R. Patla,
Post **Udipi**, (S. K.)

ESTD. 1906

CANARA BANK

LIMITED.

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,53,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

ಬೇಕು

ವಿದ್ಯಾವತಿಯರೂ ರೂಪವತಿಯರೂ ಚೆನ್ನಾಗಿ ಹಾಡ ಬಲ್ಲವರೂ ಆದ ನಟಿಯರು ಬೇಕಾಗಿದೆ. ವಿವರಗಳಿಗೆ ಬರೆಯಿರಿ.

X
C/o "NAVAYUGA" Udipi.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ. ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಡೆಗಳ ಬೇಜು, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ **ಸ್ವತಹ ಬಂದು ಯಾ ಪತ್ರ** ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ,
ಕಿರಿಯರ ಪ್ರಪಂಚ, ಉಡುಪಿ.

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**
ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.
ಮೂಲಧನವು ರೂ, **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭರ್ಗವಾ ಎಸ್ಕ್ವಾಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ನೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿವಾರದ 15ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ. ಮಾಸಪತ್ರಿಕೆ.

ಬೋಧಪ್ರದವಾದ ಲೇಖಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳ ನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE

Vijaya Bank, Ltd.

Head Office: MANGALORE. Branch Offices: Udipi, Kaup & Coondapoor.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆಗಳು: **ಉಡುಪಿ, ಕಾಪು, ಕುಂದಾಪುರ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ, ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಸಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A B Shetty, ಚೆಯರ್‌ಮೇನ್.
K. Gopalakrishna Shetty. ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದಶೀ ಶಾಪ್, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೋ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಅಗ್ನಿಯಿಂದ ಅನಾಹುತ

ಕಳೆದ ತಾ. ೨೮ರಲ್ಲಿ ಬಿಜೈಬೋಳೂರ್ ಮುದುಗರ ಶಾಲೆಯ ಸಮೀಪ ಮುಳಿ ಹುಲ್ಲು ಹೊದಿಸಿದ ಎರಡು ಮನೆಗಳಿಗೆ ಅಕಸ್ಮಾತ್ತಾಗಿ ಬೆಂಕಿ ತಗಲಿ ಎರಡು ಮನೆಗಳೂ ಸುಟ್ಟುಹೋದುವು ಪ್ರಾಣಾಪಾಯವೇನೂ ಆಗಲಿಲ್ಲ.

ಕೂಲಿಗಾರರ ಶೋಚನೀಯ ಮರಣ

ಮಂಗಳೂರು ಅತ್ತಾವರದ ಸಮೀಪ ಬಾಬುಗುಡ್ಡೆ ಎಂಬಲ್ಲಿ ಬಾವಿಯನ್ನು ಅಗೆಯುತ್ತಿದ್ದ ಐದು ಮಂದಿ ಕೂಲಿಗಾರರ ಮೇಲೆ ಮಣ್ಣು ಕುಸಿದು ಬಿದ್ದು ಆ ಪೈಕಿ ಇಬ್ಬರು ಕಾಲವಶರಾದರು. ಮೂರು ಜನರು ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರು. ಈ ಶೋಚನೀಯ ಅಪಘಾತವು ಸಹ ತಾ ೨೮ರಲ್ಲಿ ಸಂಭವಿಸಿತು.

ಪಾರಿತೋಷಕ ವಿತರಣಾ ಸಮಾರಂಭ

ಮಂಗಳೂರು ಕಾಸ್ಮೋಪಾಲಿಟನ್ ಕ್ಲಬ್ಬಿನ ಟೆನ್ನಿಸ್ ಪಂದ್ಯಾಟವು ಕಳೆದ ತಾ ೨೮ರಲ್ಲಿ ಅಂತ್ಯವಾಯಿತು. ಆ ದಿನ ಪಂದ್ಯಾಟದಲ್ಲಿ ಗೆದ್ದವರಿಗೆ ಪಾರಿತೋಷಕವನ್ನು ಹಂಚುವ ಸಮಾರಂಭವು ನಮ್ಮ ಜಿಲ್ಲಾ ಕಲೆಕ್ಟರ್ ಮಿ. ಟಿ. ಎ. ವರ್ಗೀಸ್ ಐ. ಸಿ. ಯಸ್. ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಿಸೆಸ್ ವರ್ಗೀಸರವರು ಪಾರಿತೋಷಕಗಳನ್ನು ಹಂಚಿದರು. ಅಧ್ಯಕ್ಷರು ಆಟಗಳ ಸ್ಪರ್ಧೆಗಳು ಎಷ್ಟು ಅಗತ್ಯವೆಂಬುದನ್ನು ಸೂಚಿಸಿದ್ದಲ್ಲದೆ ಅಂದಿನ ಸಮಾರಂಭದ ಅಧ್ಯಕ್ಷಸ್ಥಾನವನ್ನು ಕೊಟ್ಟುದಕ್ಕಾಗಿ ಕ್ಲಬ್ಬಿನ ಅಧಿಕಾರಿಗಳನ್ನು ವಂದಿಸಿದರು.

ಜಿಲ್ಲಾ ಬೋರ್ಡು ಸಭೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸಭೆಯು ಬರುವ ತಾ. ೧೫ನೇ ಶನಿವಾರ ಮಂಗಳೂರು ಬೋರ್ಡಾಫೀಸಿನಲ್ಲಿ ಪೂರ್ವಾಹ್ನ ೧೧ ಘಂಟೆಗೆ ನಡೆಯುವುದು.

ಬಡಬಗ್ಗರಿಗೆ ಅನ್ನದಾನ

ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಮಂಗಳೂರು ನಗರದಲ್ಲಿ ತಾವು ನೂತನವಾಗಿ ಕಟ್ಟಿಸಿದ ಬಂಗ್ಲೆಯ ಪ್ರವೇಶೋತ್ಸವದ ಸಂದರ್ಭದಲ್ಲಿ ಸುಮಾರು ೮೦೦ ಮಂದಿಗೆ ಅನ್ನದಾನ ಮಾಡಿಸಿದರು ಸ್ತುತ್ಯ.

ಮಂಗಳೂರಲ್ಲಿ ಸಾರ್ವಭೌಮರ ಕಿರೀಟಧಾರಣ ದಿನದ ಸಮಾರಂಭ

ಸಾರ್ವಭೌಮ ಆರನೇ ಜಾರ್ಜರ ಕಿರೀಟಧಾರಣ ಸಮಾರಂಭದ ದಿನದಲ್ಲಿ ಮಂಗಳೂರಲ್ಲಿಯೂ ಈ ಉತ್ಸವವನ್ನು ಯಶಸ್ವಿಯಾಗಿ ಆಚರಿಸುವಂತೆ ಮಾಡುವ ಉದ್ದೇಶದಿಂದ ಜಿಲ್ಲಾ ಕಲೆಕ್ಟರ್ ಧೊರೆಗಳ ಅಧ್ಯಕ್ಷತೆಯಲ್ಲಿ ಒಂದು ಪುರಜನ ಸಭೆಯು ಕಳೆದ ತಾ. ೧ನೇ ಶನಿವಾರ ಗವರ್ನಮೆಂಟ್ ಕಾಲೇಜಿನ ಭವನದಲ್ಲಿ ನಡೆಯಿತು. ನಗರದ ಅಧಿಕಾರಿಗಳೂ, ಬಿರುದಾಂಕಿತರೂ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಬಡವರಿಗೆ ಅನ್ನ (ಅಕ್ಕಿ) ದಾನ, ಶಾಲಾಮಕ್ಕಳಿಗೆ ತಿಂಡಿ ಹಂಚೋಣ, ದೀಪ ಬೆಳಗುವುದು, ಸಿಡಿಮದ್ದುಗಳ ಪ್ರದರ್ಶನ ಇವುಗಳನ್ನು ನಡೆಸಬೇಕೆಂಬ ಸೂಚನೆಯು ಸಭೆಯ ಮುಂದಿರಿಸಲ್ಪಟ್ಟಿತು. ಈ ಕೆಲಸಗಳನ್ನು ಯಶಸ್ವಿಯಾಗಿ ಜರಗಿಸುವ ಬಗ್ಗೆ ಒಂದು ಜನರಲ್ ಕಮಿಟಿಯನ್ನು ಚುನಾಯಿಸಲಾಯಿತು. ದಿವಾನ್ ಬಹದೂರು ಬಿ. ಮಹಾಬಲ ಹೆಗ್ಗಡೆಯವರು ಆ ಸಭೆಯು ಮಂಗಳೂರು ಜನತೆಯ ಸಭೆಯಲ್ಲ, ಅದು ಕಾನ್‌ಸ್ಟಿಟ್ಯೂಶನಲಿಸ್ಟರ ಅಥವಾ ಲಾಯಲಿಸ್ಟರ ಸಭೆಯೆಂದರು. ಮಿ. ಸಿ. ಎಲ್. ಬೋಳಾರರವರು ಇದಕ್ಕೆ ಆಕ್ಷೇಪಿಸಿ ಜಿಲ್ಲಾ ಬೋರ್ಡು ಅಧ್ಯಕ್ಷರು ಹೇಳಿದ್ದು ಸರಿಯೇ? ಇದು ಪುರಜನರ ಸಭೆಯಲ್ಲವೇ? ಎಂದು ಕೇಳಿ ಜಿ. ಬೋ. ಅಧ್ಯಕ್ಷರ ಹೇಳಿಕೆಯನ್ನು ತಿದ್ದಬೇಕೆಂದು ಕಲೆಕ್ಟರ್ ಅಧ್ಯಕ್ಷರನ್ನು ಪ್ರಾರ್ಥಿಸಿದರು. ಕಲೆಕ್ಟರ್ ಧೊರೆಗಳು, ಅದು ಪುರಜನರ ಸಭೆ ಹೌದೆಂದು ಒಪ್ಪಿಕೊಂಡು ಮುಂದಿನ ಕಾರ್ಯಕ್ರಮವನ್ನು ಅನುಸರಿಸಿದರು ಅಲ್ಲೇ ಒಂದು ವಂತಿಗೆಯ ಪಟ್ಟಿಯೂ ತಯಾರಿಸಲ್ಪಟ್ಟಿತು. ಇದಾದ ಮೇಲೆ ಬೇರೆ ಬೇರೆ ಕೆಲಸಗಳನ್ನು ಸುಸೂತ್ರವಾಗಿ ನಡೆಸುವುದಕ್ಕೆ ಉಪಸಮಿತಿಗಳನ್ನು ಏರ್ಪಡಿಸಿ ಆ ಸಮಿತಿಗಳ ಸಭೆಯೂ ನಡೆಯಿತು.

ಕಾಂಗ್ರೆಸ್ ಪ್ರಚಾರಕಾರ್ಯ

ಕಾಂಗ್ರೆಸ್ ಧುರೀಣರಾದ ಶ್ರೀ. ಎ. ಬಿ. ಶೆಟ್ಟಿಯವರು, ಶ್ರೀ. ಕಾರಂತರು, ಶ್ರೀ. ಬಿ. ವಿ. ಬಾಳಿಗರು ಇವರೇ ಮೊದಲಾದವರು ಜಿಲ್ಲೆಯ ಬೇರೆಬೇರೆ ಭಾಗದಲ್ಲಿ ಸಂಚರಿಸಿ, ಕಾಂಗ್ರೆಸ್ಸಿನವರು ಮಂತ್ರಿಮಂಡಲಗಳನ್ನು ಸ್ಥಾಪಿಸದಿರಲು ಕಾರಣವೇನೆಂಬುದನ್ನು ಜನರಿಗೆ ತಿಳಿಸಿ ಮಂಗಳೂರಿಗೆ ಹಿಂತಿರುಗಿದರು.

ಹರಿಜನ ಲೇಬರ್ ಲೀಗ್

ಈ ಲೀಗಿನ ಒಂದು ಸಭೆಯು ಶ್ರೀ. ಕೆ. ಈಶ್ವರ ಯಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕೆಲ ಲೆಕ್ಕಪತ್ರಗಳನ್ನು ಪರಿಶೋಧಿಸಿ, ಓವರ್ ಸೀಯರ ಮದುವೆಯ ಸಾಲಕ್ಕೆ ಸ್ವಲ್ಪ ರೂಪಾಯಿಗಳನ್ನು ಮಂಜೂರುಮಾಡಿದ ತರುವಾಯ ಹರಿಜನರಿಗೆ ಪ್ರಾರ್ಥನೆ, ಭಜನೆ ಸಭೆಗಳನ್ನು ನಡೆಸಲು ಅನುಕೂಲವಾದ ಒಂದು ಕಟ್ಟಡವು ಅಗತ್ಯವೆಂದೂ, ಅದನ್ನು ಕಟ್ಟಿಸಲು ಒಂದು ಸ್ಥಳವನ್ನು ದಯಪಾಲಿಸುವಂತೆ ಸರಕಾರದವರನ್ನು ಪ್ರಾರ್ಥಿಸಬೇಕೆಂದೂ ಠರಾವು ಮಾಡಲ್ಪಟ್ಟಿತು.

ಮಲಬಾರು—ಕರ್ನಾಟಕ ಗಡಿನಾಡು. ಕ. ಪ್ರಾ. ಕಾ. ಕಮಿಟಿಯವರ ವಿಚಾರಣೆ.

"ನವಯುಗ"ದ ಪ್ರತಿನಿಧಿಗಳು ಶ್ರೀ ಆರ್. ಎಸ್. ಮುಕ್ಕೇರಿಕರ (ಕ. ಪ್ರಾ. ಕಾ. ಕಮಿಟಿಯ ಗೌ. ಕಾರ್ಯದರ್ಶಿಗಳು) ರನ್ನು, ಅವರು ಮಂಗಳೂರಿಗೆ ಮೊನ್ನೆ ಬಂದಿದ್ದಾಗ ಸಂದರ್ಶಿಸಿ, ಮಲೆಯಾಳ ಕನ್ನಡ ವಾದದ ವಿಷಯವಾಗಿ ಪ್ರಶ್ನಿಸಲು ಅವರು ಈ ಅಭಿಪ್ರಾಯವನ್ನಿತ್ತರು:—"ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು, ಕಾಸರಗೋಡು ತಾಲೂಕು ತನ್ನ ಅಧಿಕಾರಕ್ಕೆ ಒಳಪಡಬೇಕೆಂದೂ ೧೯೨೧ರಿಂದ ಅದು ಕೇರಳ ಪ್ರಾಂತಿಕ ಕಾ. ಕಮಿಟಿಯ ಅಧಿಕಾರಕ್ಕೆ ಸೇರಿತ್ತೆಂದೂ, ಈಗಲೂ ಅಲ್ಲಿ ಅಧಿಕಾರ ನಡೆಸಲು ತನಗೆ ಅಧಿಕಾರವಿರಬೇಕೆಂದೂ ಕೇಳುತ್ತದೆ. ಇದರ ನಿಜಾಂಶವು ಹೀಗಿದೆ. ೧೯೨೦ರಲ್ಲಿ ಭಾಷಾನುಗುಣ ಪ್ರಾಂತ ರಚನೆಯಾದಾಗ ಗಡಿಗಳನ್ನು ನಿರ್ಧರಿಸಲು ಕಮಿಶನು ಏರ್ಪಾಡಾಗಲಿಲ್ಲ. ಜನಸಂಖ್ಯೆಗನುಸಾರವಾಗಿ ಇಡೀ ಜಿಲ್ಲೆಗಳು ಒಂದಲ್ಲ ಒಂದು ಪ್ರಾಂತಕ್ಕೆ ಸೇರಿಸಲ್ಪಟ್ಟುವು. (ಒಂದು ದಿಕ್ಕಿನಲ್ಲಿ ಮಾತ್ರ ಗಡಿ ನಿರ್ಧಾರಕ್ಕೆ ಒಂದು ಕಮಿಶನು ಏರ್ಪಡಿಸಲ್ಪಟ್ಟಿದ್ದಿತು.) ಅಂದಿನಿಂದಲೂ ದಕ್ಷಿಣ ಕನ್ನಡವು ಕರ್ನಾಟಕ ಪ್ರಾಂತಕ್ಕೆ ಸೇರಿಕೊಂಡಿದೆ. ಆಗಿನಿಂದಲೂ ಅದು ಕಾಸರಗೋಡು ತಾಲೂಕಿನಲ್ಲಿ ಕಾಂಗ್ರೆಸ್ ಸದಸ್ಯರನ್ನು ಸೇರಿಸಿಕೊಳ್ಳುತ್ತಿತ್ತು. ಮತ್ತು ಕಾಸರಗೋಡು ತಾಲೂಕು ಕಾಂಗ್ರೆಸ್ ಸಮಿತಿಯು ಮಂಗಳೂರಿನ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕೈಕೆಳಗೆ ಕೆಲಸ ಮಾಡಿಕೊಂಡು ಬರುತ್ತಿದೆ. ತನ್ನಧೀನದಲ್ಲಿದ್ದ ಸ್ಥಳದಲ್ಲಿ ಕಾಸರಗೋಡು ಇದೆಯೆಂದೂ ಆದ್ದರಿಂದ ಅದು ಕೇರಳಕ್ಕೆ ಸೇರಬೇಕೆಂದೂ ಕೇರಳ ಪ್ರಾಂತಿಕ ಕಾಂಗ್ರೆಸ್ ಸಮಿತಿಯವರು ಈಗ ಕೇಳುತ್ತಿದ್ದಾರೆ. ಈ ವಿಷಯವು ತನಿಖೆ ಬಗ್ಗೆ ಎ. ಐ. ಸಿ. ಸಿ. ಯವರ ಮುಂದೆ ಬಂದಿದೆ. ಅದು ಅವರಿಂದ ಕೆ. ಪಿ. ಸಿ. ಸಿ. ಯವರಲ್ಲಿಗೆ ವಿಚಾರಣೆಗೆ ಬಂದಿದೆ. ಆ ವಿಚಾರಣೆಯ ಸಂದರ್ಭದಲ್ಲಿ ನಾವಿಲ್ಲಿಗೆ ಬಂದಿದ್ದೇವೆ.

ಕಳೆದ ಬುಧವಾರ ಇಲ್ಲಿಗೆ ಸಮೀಪ ಕಂಕನಾಡಿ ಬೈಲ್ ಎಂಬಲ್ಲಿ ಮುಂಬೈ ಆರ್ಯ ಸಮಾಜದ ಆರ್ಯ ವೀರದಳದ ಕೆಪ್ಟನರಾದ ಸ್ವೋಗ ಬಜಾರ ಶ್ರೀಯುತ ನಾರಾಯಣ ಕಾಂಚನರು, ಮುಂಬೈ ಪ್ರಾಂತ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಗಳಾದ ಬೊಕಪಟ್ಣ ಯೋಗಪ್ಪ ಕರ್ಕೇರರ ಭಗಿನಿ ಶ್ರೀಮತಿ ಕಲ್ಯಾಣಿ ದೇವಿಯೊಂದಿಗೆ ವೈದಿಕ ವಿಧಿ ಪ್ರಕಾರ ವಿವಾಹವಾದರು. ಮಂಗಳೂರು ಆರ್ಯ ಸಮಾಜದ ಕಾರ್ಯದರ್ಶಿ ಶ್ರೀ ಮೋಹನಪ್ಪ ತಿಂಗಳಾಯರ ಪೌರೋಹಿತ್ಯದಿಂದ ಸಂಸ್ಕಾರವು ಸಾಂಗವಾಗಿ ನಡೆಯಿತು. ವಧೂವರರು ಪಾಣಿಗ್ರಹಣ ಪ್ರತಿಜ್ಞಾ ಮಂತ್ರಗಳ ಅರ್ಥದಂತೆ ತುಳುಭಾಷೆಯ ಮೂಲಕ ಪರಸ್ಪರ ಸಂಭಾಷಣೆ ಮಾಡಿದ ದೃಶ್ಯವು ಬೋಧಪರವಾಗಿತ್ತು. ವಿವಾಹ ಸಂಸ್ಕಾರಾಂತ್ಯದಲ್ಲಿ ಪುರೋಹಿತರು ವಧೂವರರಿಗೆ ದಾಂಪತ್ಯ ಧರ್ಮದ ಕುರಿತು ಸದುಪದೇಶವನ್ನು ಕೊಟ್ಟರು. ಶ್ರೀ ನಾರಾಯಣ ಕಾಂಚನರು ತನ್ನ ವಿವಾಹ ಸ್ಮರಣಾರ್ಥವಾಗಿ ಮುಂಬೈ ಸ್ವೋರ್ಟ್ ಆರ್ಯ ಸಮಾಜಕ್ಕೆ ರೂಪಾಯಿ ೫, ಮಂಗಳೂರು ಮೊಗವೀರ ಶ್ರೀ ಜ್ಞಾನೋದಯ ಸಮಾಜಕ್ಕೆ ರೂಪಾಯಿ ೫, ಮುಂಬೈ ಆರ್ಯವೀರ ದಳಕ್ಕೆ ರೂಪಾಯಿ ೫, ದಾನ ಕೊಟ್ಟರು.

ಕದ್ರಿ

ಅಡೂರು ಗ್ರಾಮದ ಶ್ರೀ.ಟಿ.ರಾಮಣ್ಣ ರೈ ಎಂಬ ಯುವಕರು ಅಡೂರುಪಟೇಲ್ ಕುಂಞಣ್ಣ ರೈಗಳ ಸೊಸೆ ಶ್ರೀಮತಿ ದೇವಕಿ ಎಂಬ ಯುವತಿಯನ್ನು ಎಪ್ರಿಲ್ ತಾ. ೨೬-೪-೩೭ನೇ ಸೋಮವಾರ ಕದ್ರಿ ಶ್ರೀ ಮಂಜುನಾಥ ದೇವಸ್ಥಾನದಲ್ಲಿ ವಿವಾಹವಾದರು. ವರನು ಎಂದಿನಂತೆ ನಾಲ್ಕು ಮೊಳದ ಶುದ್ಧ ಖಾದಿ ಮುಂಡನ್ನೂ ಜುಬ್ಬವನ್ನೂ ಖದ್ದರ್ ಟೊಪ್ಪಿಯನ್ನು ಧರಿಸಿದ್ದನು. ವಧುವು ಬಿಳೀ ಖದ್ದರ್ ರವಕೆಯನ್ನು ಬಹಳ ಕಡಿಮೆ ಬೆಲೆಯ ಬಿಳೀ ಸೀರೆಯನ್ನು ಧರಿಸಿದ್ದರು ವಧೂವರರಿಬ್ಬರೂ ದೊಡ್ಡ ಮನೆತನಕ್ಕೆ ಸೇರಿದವರಾದರೂ ಯಾವತರದ ಆಡಂಬರಕ್ಕೂ ಒಳಪಡದೆ ಈ ರೀತಿ ವರ್ತಿಸಿದ್ದು ಕುಂಬಾರಿಲ್ಲ ಘನೀಯವೇಸರಿ.

ಹರಿಜನರ ಶುದ್ಧಿ ಸಂಸ್ಕಾರ

ಧರ್ಮಸ್ಥಳದಲ್ಲಿ ೧೫ ವರ್ಷಗಳ ಹಿಂದೆ ಕ್ರೈಸ್ತಮತಾವಲಂಬಿಗಳಾಗಿದ್ದ ೪೦ ಮಂದಿ ಹರಿಜನರನ್ನು ಹಿಂದೂ ಧರ್ಮಕ್ಕೆ ಶುದ್ಧಿಸಂಸ್ಕಾರದ ಮೂಲಕ ಸೇರಿಸಿಕೊಳ್ಳಲಾಯಿತು. ಹಿಂದೂ ಮಹಾಸಭೆಯ ಮೈಸೂರು ಶಾಖೆಯ ಸೆಕ್ರೆಟರಿಗಳಾದ ಶ್ರೀ. ಶೇಷಪ್ಪಯ್ಯನವರು ಈ ಸಂಸ್ಕಾರದ ಪೌರೋಹಿತ್ಯವನ್ನು ನಡೆಸಿ ಅವರಿಗೆ ಹಿಂದೂ ಹೆಸರನ್ನಿಟ್ಟರು.

ಉಪಾಧ್ಯಾಯರ ವರ್ಗಾವರ್ಗಿ

ದ. ಕ. ಜಿಲ್ಲಾ ಬೋರ್ಡಿನ ಹೈ ಸ್ಕೂಲ್ ಹೆಡ್ಮಾಸ್ಟರುಗಳ ವರ್ಗಾವರ್ಗಿ.—ಕುಂದಾಪುರದಿಂದ ಶ್ರೀ. ಕೆ. ಪಿ. ನರಸಿಂಹ ವೆಂಕಟೇಶ ಶೆಣೈಯವರು ಕಾರ್ಕಳಕ್ಕೆ; ಕಾರ್ಕಳದಿಂದ ಶ್ರೀ. ಬಿ. ಬಿ. ಪುರಾಣಿಕರು ಕುಂದಾಪುರಕ್ಕೆ. ಪುತ್ತೂರಿನಿಂದ ಶ್ರೀ. ಎಂ. ರಾಮನ್ ನಂಬಿಯಾರರು ಕಾಸರಗೋಡಿಗೆ; ಕಾಸರಗೋಡಿನಿಂದ ಶ್ರೀ. ಕೆ. ಶ್ರೀನಿವಾಸ ಕಿಣಿಯವರು ಮೂಲ್ಕಿಗೆ; ಮೂಲ್ಕಿಯಿಂದ ಶ್ರೀ. ಕೆ. ಕೃಷ್ಣರಾಯರು ಪುತ್ತೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಬೈಂದೂರ್ ಮಿಡ್ಲ್ ಸ್ಕೂಲ್ ಹೆ. ಮಾಸ್ಟರ್ ಶ್ರೀ. ಕೆ. ಎಲ್. ಆಚಾರ್ಯರು ಅಸಿಸ್ಟೆಂಟರಾಗಿ ಕುಂದಾಪುರಕ್ಕೆ, ಕುಂದಾಪುರದಲ್ಲಿ ಅಸಿಸ್ಟೆಂಟರಾದ ಶ್ರೀ. ವೆಂಕಪ್ಪಶೆಟ್ಟರು ಕಾರ್ಕಳಕ್ಕೆ, ಕಾರ್ಕಳದಿಂದ ಅಸಿಸ್ಟೆಂಟರಾದ ಶ್ರೀ. ಎನ್. ವೆಂಕಟರಾಯರು ಹೆಡ್. ಮಾಸ್ಟರರಾಗಿ ಮೂಡಬಿದಿರೆಗೆ; ಮೂಡಬಿದಿರೆಯಿಂದ ಆ ಮಿಡ್ಲ್ ಸ್ಕೂಲ್ ಹೆ. ಮಾಸ್ಟರ್ ಶ್ರೀ ಪಿ. ರಾಮಕೃಷ್ಣರಾಯರು ಹೆ। ಮಾಸ್ಟರರಾಗಿ ಬೈಂದೂರಿಗೆ, ಉಡುಪಿಯಿಂದ ಅಸಿ। ಶ್ರೀ। ಎಚ್। ದೇವರಾವ್ ಕಾರ್ಕಳಕ್ಕೆ. ಕಾರ್ಕಳದಿಂದ ಅಸಿ। ಶ್ರೀ. ಕೆ. ದತ್ತಾತ್ರೇಯರಾಯರು ಪುತ್ತೂರಿಗೆ; ಪುತ್ತೂರಿನಿಂದ ಅಸಿ। ಶ್ರೀ। ಸಂಜೀವ ಶೆಟ್ಟರು ಉಡುಪಿಗೆ, ಸೆಕೆಂಡರಿ ಗ್ರೇಡ್ ಅಸಿ।ಗಳಲ್ಲಿ ಶ್ರೀ। ಟಿ। ಶ್ರೀನಿವಾಸ ರಾಯರು ಪುತ್ತೂರಿನಿಂದ ಬೈಂದೂರಿಗೆ; ಶ್ರೀ.ವಿ.ಎಂ ಹೊಳ್ಳರು ಬೈಂದೂರಿನಿಂದ ಪುತ್ತೂರಿಗೆ ವರ್ಗ ಹೊಂದಿರುವರು ಇದೇ ರೀತಿ ಎಲಿಮೆಂಟರಿ ಅಧ್ಯಾಪಕರಿಗೂ ವರ್ಗಾವರ್ಗಿಯಾಗಲಿವೆಯೆಂದು ತಿಳಿದುಬರುತ್ತದೆ.

ದ. ಕ. ಜಿಲ್ಲಾ ಕಲೆಕ್ಟರರಾಗಿ ಶ್ರೀ ವಿ. ಎಂ। ನೆಬ್ಲೋಡಿಯವರು ನೇಮಕ ಹೊಂದಿದ್ದಾರೆ.

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India.	Charni Road, Bombay No. 4.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	... ...	Rs. 80,00,000
Life Funds Over	... ...	Rs. 68,00,000
Premium Income Over	...	Rs. 22,54,000
Interest Income	... ...	Rs. 3,16,000
Claims Paid ...	... ...	Rs. 5,75,000

Total Claims paid Over Rs. 38,50,000
Total Business in Force Over Rs. 4,4251,200

TOTAL BUSINESS IN FORCE Rs. 4,42,51,200

ದಿ ಕೆನರಾ ಬ್ಯಾಂಕಿಂಗ್ ಕೊಪ್ರೊರೇಶನ್, ಉಡುಪಿ, ಲಿಮಿಟೆಡ್

(ಸ್ಥಾಪನೆ:— 1906)

ಹೆಡ್ ಆಫೀಸು: **ಉಡುಪಿ (ದ. ಕ.)**

ಚಂದಾ ಹಾಕಲ್ಪಟ್ಟ ಮೂಲಧನ	ರೂ.	**3,50,000**
ಚಂದಾಹಾಕಲ್ಪಟ್ಟು ಎತ್ತಿದ ಮೂಲಧನ....	,,	**2,88,950**
ರಿಸರ್ವ್ ವಗೈರೆ ಇತರ ಹಣಗಳು	,,	**3,63,578**
ಠೇವಣಾತಿಗಳು	,,	**38,58,207**

ವ್ಯವಹಾರಧನವು ಒಟ್ಟಿಗೆ ಅರ್ಧಕೋಟಿ ರೂಪಾಯಿಗಳಿಗೆ ಮಿಕ್ಕಿದೆ

ಬೇಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ. ಅತೀ ಕಡಿಮೆ ದರದ ಬಡ್ಡಿಯಲ್ಲಿ ಭಂಗಾರದ ಈಡಿನ ಮೇಲೂ ಇತರ ಯೋಗ್ಯ ಜವಾಬ್ದಾರಿ ಮೇಲೂ ಸಾಲಗಳು ಕೊಡಲಾಗುತ್ತವೆ.

ಹೆಚ್ಚಿನ ಮಾಹಿತಿಯನ್ನು ಬ್ಯಾಂಕಿನ ಹೆಡ್ ಆಫೀಸಿನಿಂದಾಗಲೀ ಬ್ರಾಂಚು ಆಫೀಸುಗಳಿಂದಾಗಲೀ ತಿಳಿದುಕೊಳ್ಳಬಹುದು.

V. R. Kamath, B. A., LL.B.
ಮೆನೇಜರ್.

ಉಡುಪಿ, ತಾ. ೬-೫-'೩೭ ಗುರುವಾರ

ಯುರೋಪು ವಿನಾಶದ ದಾರಿ ಹಿಡಿದಿದೆ.

ಯುರೋಪಿನ ಇಂದಿನ ವಿದ್ಯಮಾನಗಳನ್ನು ತುಸು ವಿಚಾರದೃಷ್ಟಿಯಿಂದ ನೋಡಿದರೆ ಶೀಘ್ರವಾಗಿ ಅದೊಂದು ಘೋರ ಪತನಕ್ಕೆ ಧಾವಿಸುತ್ತಿದೆಯೆಂಬುದು ಮನವರಿಕೆಯಾಗದಿರದು. ಇಟೆಲಿ, ಜರ್ಮನಿ, ರಶ್ಯ, ಫ್ರಾನ್ಸು ಮೊದಲಾದ ದೊಡ್ಡ ರಾಷ್ಟ್ರಗಳಲ್ಲದೆ ಇತರ ಚಿಕ್ಕಪುಟ್ಟ ರಾಜ್ಯಗಳೂ ಭರದಿಂದ ಯುದ್ಧಸಿದ್ಧತೆ ಮಾಡುತ್ತಿರುವವು. ಯುದ್ಧೋಪಕರಣಗಳಿಗಾಗಿ ಕೋಟಿಗಟ್ಲೆ ಹಣವು ವ್ಯಯವಾಗುತ್ತಿರುವುದು. ಪ್ರತಿಯೊಂದು ರಾಷ್ಟ್ರದ ಅರವಾಸಿಗಿಂತಲೂ ಹೆಚ್ಚಿನ ಆದಾಯವು ಯುದ್ಧೋಪಕರಣಗಳಿಗಾಗಿ ವಿನಿಯೋಗಿಸಲ್ಪಡುತ್ತಿರುವದು. ಕೆಲವು ರಾಷ್ಟ್ರಗಳು ಕೋಟಿ ಗಟ್ಲೆಯಲ್ಲಿ ಸಾಲ ಪಡೆದು ಕೂಡಾ ಯುದ್ಧೋಪಕರಣಗಳನ್ನು ಹೆಚ್ಚಿಸಲಾರಂಭಿಸಿರುವವು. ಫ್ರಾನ್ಸು ಕಳೆದ ಮಾರ್ಚಿ ತಿಂಗಳಲ್ಲಿ 10,000 ಮಿಲ್ಯ ಫ್ರೇಂಕುಗಳನ್ನು ಸಮರಸಿದ್ಧತೆಗಾಗಿ ವಿನಿಯೋಗಿಸಿರುವುದು. ಜನೋಪಕಾರಿ ಕೆಲಸಕ್ಕಾಗಿ 10,000 ಮಿಲ್ಯ ಪವನುಗಳನ್ನು ಸಾಲ ಪಡೆದಾದರೂ ಉಪಯೋಗಿಸಬೇಕೆಂದು ಅಲ್ಲಿ ಮಜೂರ ಪ್ರಮುಖರು ಸರಕಾರವನ್ನು ಒತ್ತಾಯಪಡಿಸುತ್ತಿರುವರು. "ಮರಣಕ್ಕಾಗಿ 10,000 ಮಿಲ್ಯ ಫ್ರೇಂಕು ವಿನಿಯೋಗಿಸಲಿದೆ; ಜೀವನಕ್ಕಾಗಿ 10,000 ಮಿಲ್ಯ ದೊರೆಯಲಾರದೇ?" ಎಂಬುದೇ ಇವರ ಪ್ರಶ್ನೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅಲ್ಲಿಯ ಪ್ರಧಾನ ಮಂತ್ರಿಗಳಾದ ಬ್ಲುಮರಿಗೆ ಅಧಿಕಾರವೇ ಅಸಹನೀಯವಾಗಿದೆ. ಲೋಕದ ಅತ್ಯಂತ ವಿವೇಕಪರರಾಷ್ಟ್ರವೆಂದು ಪ್ರಸಿದ್ಧಿ ಹೊಂದಿರುವ ಇಂಗ್ಲೆಂಡೂ ಈಗ ಈ ಮಹಾ ಮಾರಣಕ್ಕೆ ಭರದಿಂದ ತಯಾರು ಮಾಡಲಾರಂಭಿಸಿದೆ. ಲೇಬರ್ ಪಕ್ಷದ ನಾಯಕರಾದ ಮಿ. ಅಟ್ಲಿಯವರು ತಮ್ಮೊಂದು ಭಾಷಣದಲ್ಲಿ ಯುದ್ಧಕ್ಕೆ ತಾಗುವ ವೆಚ್ಚದ ಪರಿಣಾಮವನ್ನು ಈ ರೀತಿ ವಿವರಿಸಿರುವರು. "ಈ ವರ್ಷದ ಬ್ರಿಟಿಷ್ ಬಜೆಟಿನ ಪ್ರಕಾರ ಒಟ್ಟು ವ್ಯಯವು 9,42,000,000 ಪವನು ಇದರಲ್ಲಿ 550,000,000 ಪವನುಗಳು ಹಿಂದಿನ ಮತ್ತು ಮುಂದಿನ ಯುದ್ಧ ವೆಚ್ಚಕ್ಕಾಗಿ ವಿನಿಯೋಗಿಸಲ್ಪಡುತ್ತದೆ. ಈ ಪ್ರಕಾರ ಸರಕಾರವು ವ್ಯಯಿಸುವ ಪ್ರತಿಯೊಂದು ಪವನಿನಲ್ಲಿ 11 ಶಿಲ್ಲಿಂಗ್ 9 ಪೆನ್ಸ್ ಹಿಂದಿನ ಯುದ್ಧ ವೆಚ್ಚವನ್ನು ತುಂಬಿಸುವುದಕ್ಕೂ, ಇಂದಿನ ಯುದ್ಧೋಪಕರಣಗಳಿಗಾಗಿಯೂ ವೆಚ್ಚವಾಗುತ್ತದೆ. ಇದನ್ನೂ ಪ್ರಜಾಹಿತ ಕೆಲಸಗಳಿಗೆ ವಿನಿಯೋಗಿಸಲ್ಪಡುವ ಹಣವನ್ನು ಸರಿಹೋಲಿಸಿ ನೋಡಿರಿ, ಶಿಕ್ಷಣಕ್ಕಾಗಿ ಕೇವಲ 1 ಶಿಲ್ಲಿಂಗ್ 2 ಪೆನ್ಸ್, ಪ್ರಾಯ ಸಂದವರಿಗೆ ಮತ್ತು ವಿಧವೆಯರಿಗೆ ಪೆನ್ಶನು 1 ಶಿಲ್ಲಿಂಗ್ 1 ಪೆನ್ನಿ, ಮನೆ ಕಟ್ಟಿಸಿಕೊಡಲು 5 ಪೆನ್ಸ್, ಸಂಕಷ್ಟ ಪೀಡಿತರಿಗೆ ಮತ್ತು ನಿರುದ್ಯೋಗಿಗಳ ಸಹಾಯಕ್ಕಾಗಿ 2 ಪೆನ್ಸ್, ನಿರುದ್ಯೋಗ ವಿಮೆಗೆ 8 ಪೆನ್ಸ್ ವಿನಿಯೋಗಿಸಲ್ಪಡುವುದು. ಕೇವಲ 2 ವರ್ಷಗಳ ಮೊದಲು ಸರಕಾರವು ಸೈನ್ಯಕ್ಕಾಗಿ ಒಟ್ಟು 114 ಮಿಲ್ಯ ಪವನು ವ್ಯಯಿಸಿದ್ದಿತು. ಈ ವರ್ಷ ಇದು 280 ಮಿಲ್ಯ ಪವನಿಗೇರಿದೆ. ಹೀಗೆ ಯುದ್ಧಕ್ಕಾಗಿ ಹಣ ಪೋಲು ವೆಚ್ಚವಾದರೆ ಜನಹಿತ ಕಾರ್ಯಗಳಿಗಾಗಿ ಹಣ ಉಳಿಯುವದಾದರೂ ಎಲ್ಲಿಂದ?" ಯಾವಾಗಲೂ ಮಿತಗಾಮಿಯಾಗಿರುವ ಇಂಗ್ಲೆಂಡಿನ ಅವಸ್ಥೆಯೇ ಹೀಗಾದ ಮೇಲೆ ಇನ್ನು ಇತರ ತೀವ್ರಗಾಮಿ ರಾಷ್ಟ್ರಗಳ ಪರಿಸ್ಥಿತಿಯನ್ನು ಪ್ರತ್ಯೇಕ ವಿವರಿಸಿ ಹೇಳಬೇಕಾಗಿಲ್ಲ. ಜರ್ಮನಿ ಮತ್ತು ಇಟೆಲಿಗಳಲ್ಲಿ ಯುದ್ಧ ಸಿದ್ಧತೆಗಾಗಿ ಎಷ್ಟೊಂದು ವ್ಯಯಿಸಿದರೂ ಸಾಕೆನಿಸುವುದಿಲ್ಲ. ಅಲ್ಲಿಯ ಜನತೆಯಲ್ಲಿ ಸಮರ ಮನೋವೃತ್ತಿಯೇ ದಿನೇ ದಿನೇ ಹೆಚ್ಚಾಗಿ ಬೆಳೆಸಲ್ಪಡುತ್ತಿದೆ. ಈ ಭ್ರಾಂತಿಗೊಳಗಾದ ಜನರು ಜೀವನಕ್ಕಿಲ್ಲದಿದ್ದರೂ ಮರಣಕ್ಕಾಗಿ ಎಂತಹ ವೆಚ್ಚವನ್ನಾದರೂ ಪ್ರತಿ ಮಾತೆತ್ತದೆ ಸಹಿಸಿಕೊಂಡಿರುವರು. ತಮ್ಮ ರಾಷ್ಟ್ರದ ಗೌರವಕ್ಕಾಗಿ, ರಕ್ಷಣೆಗಾಗಿ, ಸಾಮ್ರಾಜ್ಯ ವಿಸ್ತಾರಕ್ಕಾಗಿ ಯುದ್ಧವು ಅತ್ಯಗತ್ಯ, ಅದಕ್ಕೆ ಎಷ್ಟೊಂದು ವೆಚ್ಚ ಮಾಡಿಯಾದರೂ ತಕ್ಕ ಸಿದ್ಧತೆ ಮಾಡುವುದು ನ್ಯಾಯವೆಂಬ ಮನೋವೃತ್ತಿಯೇ ಯುರೋಪಿನ ಜನರಲ್ಲೀಗ ಪ್ರಬಲವಾಗಿರುವುದು. ಯುದ್ಧವೇ ಈಗ ಅಲ್ಲಿಯ ಪ್ರತಿಯೊಂದು ದೇಶದ ಆರಾಧ್ಯ ದೇವತೆಯಾಗಿ ಸರ್ವ ಪ್ರಧಾನ ಸ್ಥಾನ ಪಡೆದಿರುವುದು.

ಕೇವಲ ಸೈನಿಕರು ಮಾತ್ರವಲ್ಲದೆ ಜನಸಾಮಾನ್ಯರು, ಸ್ತ್ರೀಯರು ಮಾತ್ರ 8 ವರ್ಷದ ಮಕ್ಕಳು ಯುದ್ಧಕ್ಕೆ ಸಿದ್ಧರಾಗುತ್ತಿರುವರು. ಇಟೆಲಿ ಜರ್ಮನಿ ಮತ್ತು ರಶ್ಯದಲ್ಲಿ ಲಕ್ಷಗಟ್ಲೆ ಎಳೆವಯಸ್ಸಿನ ತರುಣರು ಮತ್ತು ಚಿಕ್ಕ ಬಾಲಕರು ಕೂಡಾ ಸಮರ ತರಬೇತಿ ಹೊಂದುತ್ತಿರುವರು! ಕೇವಲ ಶಾಲೆಗಳಿಗೆ ಹೋಗಿ ವಿದ್ಯೆ ಕಲಿತು ಪಾಠ, ಆಟ, ವಿನೋದಗಳಲ್ಲಿ ಸಮಯ ಕಳೆಯಬೇಕಾದ ಬಾಲಕರು ಸೈನಿಕ ಪೋಷಾಕು ಹಾಕಿಕೊಂಡು ಚಿಕ್ಕ ಚಿಕ್ಕ ಕೋವಿ ಕತ್ತಿ ಹಿಡಕೊಂಡು ಶಿಸ್ತಿನಿಂದ ತರಬೇತಿ ಹೊಂದುತ್ತಿರುವರು. ಯುದ್ಧದ ಕಾಡ್ಗಿಚ್ಚಿದ್ದರೆ ಇಡೀ ಯುರೋಪೇ ಮಣ್ಣುಗೂಡುವ ಭಯಾನಕ ಪರಿಸ್ಥಿತಿಯುಂಟಾಗಿರುವುದು. ಆ ಮಹಾ ಮರಣಕ್ಕೆ ಒಂದಿಷ್ಟು ವಿಚಾರವಿಲ್ಲದೆ ಸರ್ವಸಿದ್ಧತೆಯು ಭರದಿಂದ ಸಾಗುತ್ತಿರುವುದು. ಯುರೋಪಿನ ರಾಷ್ಟ್ರಗಳು ಪರಸ್ಪರ ಅವಿಶ್ವಾಸ ಮತ್ತು ಸಂಶಯದಿಂದ, ಒಂದನ್ನೊಂದು ಹೊಂಡಕ್ಕೆ ಹಾಕುವ ದುರುದ್ದೇಶದಿಂದ ಕುಟಿಲ ರಾಜನೀತಿಯನ್ನುಪಯೋಗಿಸಿ ಒಳಗಿಂದೊಳಗೆ ತಮಗೆ ಬೇಕಾದ ರಾಷ್ಟ್ರಗಳೊಡನೆ ಕವರು ಕರಾರುಗಳನ್ನು ಮಾಡಿಕೊಳ್ಳಹತ್ತಿರುವವು. ಜರ್ಮನಿಯು ರಶ್ಯದ ಮತ್ತು ಫ್ರಾನ್ಸಿನ ಮೇಲಿನ ದ್ವೇಷದಿಂದ ಇಟೆಲಿ, ಜಪಾನುಗಳೊಳಗೆ ಸೇರಿ ಒಳ ಸಂಚು ನಡೆಸುತ್ತಿರುವುದು. ಇಟೆಲಿಯು ಭೂಮಧ್ಯ ಸಾಗರದಲ್ಲಿ ಇಂಗ್ಲೆಂಡಿನ ಆಟ ನಡೆಯದಂತೆ ಮಾಡಲು ಮತ್ತು ತನ್ನ ರೋಮು ಸಾಮ್ರಾಜ್ಯವನ್ನು ಆದಷ್ಟು ವಿಸ್ತರಿಸಲು ಬೇಕಾದ ತಂತ್ರಗಳನ್ನೆಲ್ಲಾ ನಡಿಸುತ್ತಿರುವುದು. ಇವೆರಡೂ ತಮ್ಮ ಸಮೀಪದ ಚಿಕ್ಕ ರಾಷ್ಟ್ರಗಳನ್ನು ತಮ್ಮ ಬಲೆಗೆಳೆಯಲೆತ್ನಿಸುತ್ತಿರುವವು. ಈ ಚಿಕ್ಕ ರಾಷ್ಟ್ರಗಳಾದರೋ ತಮ್ಮ ತಮ್ಮ ಪ್ರಯೋಜನ ನೋಡಿಕೊಂಡು ತಮಗೆ ಬೇಕಾದ ರಾಷ್ಟ್ರಗಳೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಿರುವವು. ಆದರೆ ಅವು ಯಾವ ರಾಷ್ಟ್ರದೊಡನೆಯೂ ವಿಶ್ವಾಸವನ್ನಿಟ್ಟುಕೊಂಡಿರುವಂತೆ ತೋರುವುದಿಲ್ಲ. ಫ್ರಾನ್ಸು ಜರ್ಮನಿಯ ಬೆದರಿಕೆಯಿಂದ ರಶ್ಯದೊಡನೆ ಒಪ್ಪಂದ ಮಾಡಿಕೊಂಡು ಇಂಗ್ಲೆಂಡಿನೊಂದಿಗೆ ಯಾವಾಗಲೂ ಸಹಕರಿಸಿಕೊಂಡೇ ನಡೆಯುತ್ತಿರುವುದು ಇಂಗ್ಲೆಂಡಿಗೀಗ ವಿಶೇಷವಾಗಿ ಇಟೆಲಿಯ ಪ್ರಾದುರ್ಭಾವವು ಅಸಹನೀಯವಾಗಿದೆ. ಆದುದರಿಂದ ಅದು ಇಟೆಲಿಯ ಕುಟಿಲ ತಂತ್ರವನ್ನು ಪ್ರತಿಭಟಿಸುವ ತಂತ್ರ ನಡಿಸುತ್ತಿದೆ. ರಶ್ಯವು ತನ್ನ ನವೀನ ಹಾಗೂ ಕ್ರಾಂತಿಕಾರಕ ರಾಜ್ಯಭಾರ ಕ್ರಮಕ್ಕೆ ಹೆಚ್ಚಾಗಿ ಯುರೋಪಿನ ರಾಷ್ಟ್ರಗಳೆಲ್ಲಾ ವಿರೋಧವಿರುವವೆಂಬುದನ್ನು ಅರಿತುಕೊಂಡು ಯಾವ ರಾಷ್ಟ್ರದೊಡನೆಯೂ ಹೊಂದಿರದ ಅಸಹಾಯ ಶೂರ ರಾಷ್ಟ್ರವಾಗಬೇಕೆಂಬ ದೃಷ್ಟಿಯಿಂದ ಪ್ರಚಂಡ ಯುದ್ಧಸನ್ನಾಹ ಮಾಡಿಕೊಂಡಿದೆ. ಅಮೇರಿಕವು ಯುರೋಪಿನ ಸಂಗತಿಯೇ ತನಗೆ ಬೇಡವೆಂದು ತನ್ನಷ್ಟಕ್ಕಿದ್ದೆ, ಅದರೂ ಯುದ್ಧಸಿದ್ಧತೆಯಲ್ಲಿ ಅದೇನು ಹಿಂದೆ ಬಿದ್ದಿಲ್ಲ. ಯಾಕೆಂದರೆ ಅದಕ್ಕೆ ಜಪಾನಿನ ಕುತಂತ್ರದ ಭೀತಿಯಿದೆ.

ಹೀಗಾಗಿ ಇಡೀ ಲೋಕವೇ ಅದೊಂದು ಮಹಾ ವಿಪ್ಲವದ ಜ್ವಾಲಾಮುಖಿಯ ಮೇಲೆ ನಿಂತಿರುವಂತಿದೆ. ಈ ಜ್ವಾಲಾಮುಖಿಯು ಯಾವಾಗ ಸ್ಫೋಟವಾಗುವುದೋ ಹೇಳಬರುವುದಿಲ್ಲ. ಅಂತೂ ಅದು ಒಂದಲ್ಲ ಒಂದುದಿನ ಸ್ಫೋಟವಾಗುವುದು ನಿಶ್ಚಯವೆಂದು ಎಲ್ಲರೂ ಭಾವಿಸಿಕೊಂಡಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಕೆಲವುಂದಿ ಲೋಕ ಶಾಂತಿ ಸಾಧಕರ, ಯುದ್ಧವಿರೋಧಕರ ಸಿದ್ಧತೆಯ ನಿಷೇಧಕರ ಮೊರೆಯು ಕೇವಲ ಅರಣ್ಯರೋದನವಾಗಿದೆ. ಮಿ. ಲೇನ್ಸ್‌ಬರಿಯವರಂತಹ ಆದರ್ಶವಾದಿಯೊಡನೆ ಹಿಟ್ಲರ್ ಮುಸಲೋನಿಗಳೂ ಶಾಂತಿಯ ಪ್ರತಿಪಾದಕರಾಗಿ ತೋರಿಸಿಕೊಳ್ಳಬಹುದು ಲೋಕಶಾಂತಿ ಸ್ಥಾಪನೆಗಾಗಿ ತಾವೂ ಸಿದ್ಧರಿರುವೆವೆಂಬ ಆತುರ ಸೂಚಿಸಬಹುದು. ಆದರೆ ಇದು ಕೇವಲ ಬಾಯಿ ಮಾತು, ಕಣ್ಣುಕಟ್ಟು. ಇನ್ನೊಂದು ಮಹಾ ಪ್ರಳಯವಾಗದೆ ಯುರೋಪಿನಲ್ಲಿ ಹಾಗು ಲೋಕದಲ್ಲಿ ಶಾಂತಿ ದೇವಿಯು ಪ್ರತಿಷ್ಠಿತವಾಗುವ ಸಂಭವ ತೋರುವುದಿಲ್ಲ.

ಮಂಗ್ಲೂರು ಚಂದಾದಾರರಲ್ಲಿ ವಿನಂತಿ.

ಮಂಗಳೂರಿನ ಸ್ಥಳೀಕ ಚಂದಾದಾರರು ತಮ್ಮ ಚಂದಾಹಣವನ್ನು ಕೆನರಾ ಪ್ರೆಸ್ಸಿನ ಮೆನೇಜರರೊಡನೆ ಪಾವತಿ ಮಾಡಿ ರಶೀದಿ ಪಡೆಯಬೇಕಾಗಿ ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್,
ನವಯುಗ, **ಉಡುಪಿ**

ವಿದೇಶ

ಕೆಥೋಲಿಕ ಪಾದ್ರಿಗಳಿಗೆ ಶಿಕ್ಷೆ

ಜರ್ಮನಿಯ ನಾಜಿ ಪಕ್ಷದ ವಿರೋಧವಾಗಿ ಪಿತೂರಿ ನಡೆಸುವರೆಂಬ ಆರೋಪದಿಂದ ಫಾದರ್ ಸೊಸ್ಕೆಂಟರೆಂಬ ಕೆಥೋಲಿಕ ಪಾದ್ರಿಗಳಿಗೆ ೧೧ವರ್ಷ ಕಠಿಣಶಿಕ್ಷೆ ವಿಧಿಸಲಾಗಿದೆ. ೧೦ ವರ್ಷಗಳ ವರೆಗೆ ಅವರ ನಾಗರಿಕ ಹಕ್ಕುಬಾಧ್ಯತೆಗಳನ್ನು ರದ್ದುಪಡಿಸಲಾಗಿದೆ. ಫಾದರ್ ಕ್ರೇಮರ್ ಎಂಬವರಿಗೆ ೫ವರ್ಷ ಮತ್ತು ಜುವೆಲಟನೆಂಬ ಕೆಥೋಲಿಕ ಗ್ರಹಸ್ಥನೊಬ್ಬನಿಗೆ ೨ ವರ್ಷ ಕಠಿಣ ಶಿಕ್ಷೆ ಕೊಡಲಾಗಿದೆ. ಕೆಥೋಲಿಕರು ಕೇವಲ ತಮ್ಮ ಧಾರ್ಮಿಕ ಕೆಲಸಗಳಲ್ಲಿ ನಿರತರಾಗಿದ್ದು ಜರ್ಮನಿಯ ರಾಜ್ಯಭಾರದಲ್ಲಿ ಕೈಹಾಕಿದರೆ ಪರಿಣಾಮ ನೆಟ್ಟಗಾಗದೆಂದು ಹರ್ ಹಿಟ್ಲರರು ಎಚ್ಚರವಿತ್ತಿರುವರು.

ಡ್ಯೂಕ್ ಆಫ್ ವಿಂಡ್ಸರರಿಗೆ ಗ್ರ್ಯಾಂಟು ಇಲ್ಲ.

ಬ್ರಿಟಿಷ್ ರಾಜಮನೆತನಕ್ಕೆ ಸರಕಾರದಿಂದ ಕೊಡಲ್ಪಡುವ ಗ್ರಾಂಟಿನಲ್ಲಿ ೬ನೇ ಜೋರ್ಜರ ಚಿಕ್ಕ ಮಕ್ಕಳಿಗೆ ಕೂಡಾ ಗ್ರಾಂಟಿರುವುದಾದರೂ ಡ್ಯೂಕ್ ಆಫ್‌ವಿಂಡ್ಸರರಿಗೆ ಯಾವ ಗ್ರೇಂಟೂ ಕೊಡಲ್ಪಡುವುದಿಲ್ಲ.

ಪೂನದ ಸತ್ಯಾಗ್ರಹ

ಪೂನದ ಸೊನ್ಯ ಮಾರುತಿದೇವಸ್ಥಾನದ ಬಳಿ ತಾಳಹೊಡೆದು ಭಜನೆಮಾಡಬಾರದೆಂಬ ಮೆಜಿಸ್ಟ್ರೇಟರ ಹುಕುಮನ್ನು ಉಲ್ಲಂಘಿಸುವ ಸತ್ಯಾಗ್ರಹವು ಯಥಾಪ್ರಕಾರ ನಡೆಯುತ್ತಿರುವುದು. ಪೂನದ ಡೆಮಾಕ್ರೆಟಿಕ್ ಸ್ವರಾಜ್ಯ ಪಕ್ಷದ ನಾಯಕರಾದ ಶ್ರೀ. ಜೋಶಿಪಟ್ಟರವರು ಈ ಕುರಿತು ಬೊಂಬಾಯಿಯ ಮುಖ್ಯ ಮಂತ್ರಿಗಳ ಭೇಟಿಮಾಡಿದರೂ ಪ್ರಯೋಜನವಾಗಲಿಲ್ಲ. ಪಟ್ಟಗಿರಿಗಳು

ಯಥಾಪ್ರಕಾರ ನಡೆಯುತ್ತಿರುವವು. ಶೋಲಾಪುರ, ನಾಗಪುರ ಮೊದಲಾದ ಕಡೆಗಳಿಂದ ಈ ಸತ್ಯಾಗ್ರಹಕ್ಕಾಗಿ ಜನರು ಬರಲಾರಂಭಿಸಿದರು. ತಮ್ಮನ್ನು ಮಾರುತಿ ಗುಡಿಗೆ ಪ್ರವೇಶಿಸಬಿಟ್ಟರೆ ತಾವು ಈ ಸತ್ಯಾಗ್ರಹಕ್ಕೆ ಸೇರುವೆವೆಂದು ಹರಿಜನರು ಕೇಳಿಕೊಂಡಿರುವರು.

ಕಲ್ಕತ್ತ ಕೋರ್ಪರೇಶನಿನ ಮೇಯರ್ ಮತ್ತು ಡೆಪ್ಯೂಟಿ ಮೇಯರರ ಸ್ಥಾನಗಳಿಗೆ ಕಾಂಗ್ರೆಸ್ ಉಮೇದ್ವಾರಿಗಳಾದ ಶ್ರೀ ಸನತ್ಕುಮಾರ ರೈ ಚೌಧುರಿ ಮತ್ತು ಪಿ. ಎ. ಕೆ. ಎಂ ಜಿಲಾನಿಯವರು ಆರಿಸಲ್ಪಟ್ಟಿರುವರು.

ಸ್ಪೈನಿನ ಯುದ್ಧ

ಇದೇ ತಾ ೧೮ರಲ್ಲಿ ಬಾಸ್ಕ್ ಪ್ರಾಂತ್ಯದ ಸೈನಿಕರು ಬಂಡಾಯಗಾರರ ಸೈನಿಕರನ್ನು ಸೋಲಿಸಿ ೩೫೦೦ರವರೆಗಿನ ಬಂಡಾಯಗಾರ ಸೈನಿಕರು ಕೊಲ್ಲಲ್ಪಟ್ಟಿರುವರೆಂದೂ ಅನೇಕರು ಸೆರೆಸಿಕ್ಕಿರುವರೆಂದೂ ತಿಳಿದು ಬರುತ್ತದೆ. ೪೦೦೦ ಮಂದಿ ಇಟೆಲಿಯಾನ ಮತ್ತು ಸ್ಪೇನಿಶ್ ಸೈನಿಕರು ಗೋರ್ಬಿಕಿಯ ಮೇಲೆ ಬಂಧಾಗ ಹಿಂದಕ್ಕಟ್ಟಲ್ಪಟ್ಟಿರುವರಂತೆ. ಆದರೆ ಬಂಡಾಯಗಾರರ ಕಡೆಯ ಸುದ್ದಿಯ ಪ್ರಕಾರ ಬೋಮಿರಿಯೋ ಮತ್ತು ಮಿಂಟಿಕಾ ಎಂಬ ಪಟ್ಟಣಗಳನ್ನವರು ವಶಪಡಿಸಿಕೊಂಡಿರುವರು. ಇಲ್ಲಿಂದ ೩೦೦೦ ಮಂದಿ ಬಾಸ್ಕ್ ಸೈನಿಕರು ಹಿಂದೆ ಸರಿದಿರುವರು.

ಸ್ವದೇಶ

ಕೊಡಗು ಕೌನ್ಸಿಲು ಚುನಾವಣೆ

ಎಪ್ರಿಲ್ ತಾ. 26ರಲ್ಲಿ ಕೊಡಗು ಕೌನ್ಸಿಲಿಗೆ ನಡೆದ ಚುನಾವಣೆಯಲ್ಲಿ 13ಮಂದಿ ಮೆಂಬರರ ಪೈಕಿ 9ಮಂದಿ ಕಾಂಗ್ರೆಸ್ ಉಮೇದ್ವಾರಿಗಳು ಆರಿಸಿಬಂದಿರುವರು. ಕಾಂಗ್ರೆಸ್ ಕಡೆಯಿಂದ ಆರಿಸಿಬಂದವರ ಹೆಸರನ್ನು ಈ ಕೆಳಗೆ ಕೊಡಲಾಗಿದೆ. 1 ಶ್ರೀಗಳಾದ ಕೊಳ್ಳಿಮಾಡ ಕರುಂಬಯ್ಯನವರು 2 ಪುತ್ತಮನೆ ಮುದ್ದಮ್ಮಯ್ಯನವರು 3 ಅಜ್ಜಮಾಡ ಮಾಡಪ್ಪನವರು 4 ಎಚ್. ಬಿ. ಸಿದ್ದಯ್ಯನವರು 5 ಪುಡ್ಯಂಡ ಬೆಳ್ಯಪ್ಪನವರು 6 ಐನಡ ಕಾರ್ಯಪ್ಪನವರು 7 ಬಿದ್ದಂಡ ಕಾರ್ಯಪ್ಪನವರು 8 ಕೋರನ ದೇವಯ್ಯನವರು 9 ಚೌಡ್ಲು ಕಾಳಪ್ಪನವರು. ಎಪ್ರಿಲ್ ತಾರೀಕು 17ರಲ್ಲಿ ನಡೆದ ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ 11 ಸ್ಥಾನಗಳ ಪೈಕಿ 9 ಸ್ಥಾನಗಳು ಕಾಂಗ್ರೆಸಿನವರಿಗೆ ದೊರೆತಿರುವುದು. ಹೀಗೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿಯೂ ಕೌನ್ಸಿಲಿನಲ್ಲಿಯೂ ಕಾಂಗ್ರೆಸ್ ಪಕ್ಷೀಯರೇ ಪ್ರಬಲ ಬಹುಪಕ್ಷದಿಂದ ಆರಿಸಬಂದಿರುವರು.

ಮಹಾತ್ಮಾ ಗಾಂಧಿಯವರು

ಇದೇ ತಾ. 16ರಲ್ಲಿ ಬುಲ್ಸಾರಿನ ಬಳಿಯ ತೀತರ್ ಎಂಬ ಸಮುದ್ರ ಬದಿಯ ಆರೋಗ್ಯ ವಸತಿಗೆ ಹೋಗಿ ಒಂದು ತಿಂಗಳು ವಾಸಿಸಲಿರುವರೆಂದು ತಿಳಿದುಬರುತ್ತದೆ. ಈಗ ಅಹಮ್ಮದಾಬಾದಿಗೆ ಹೋಗಿರುವ ಸರ್ದಾರ್ ವಲ್ಲಭಾಯಿ ಪಟೇಲರೂ ತೀತಲಿಗೆ ಹೋಗಿ ಮುಂದಿನ ಕಾಂಗ್ರೆಸ್ ಅಧಿವೇಶನದ ವ್ಯವಸ್ಥೆಯ ಕುರಿತು ಗಾಂಧೀಜಿಯವರೊಡನೆ ಮಾತಾಡಲಿರುವರು.

ಪೂನದ ಸತ್ಯಾಗ್ರಹ 50 ಮಂದಿಯ ದಸ್ತಗಿರಿ

ಪೂನದ ಸೋನ್ಸ್ ಮಾರುತಿ ದೇವಸ್ಥಾನದ ಸಂಬಂಧವಾಗಿ ನಡೆದ ಸತ್ಯಾಗ್ರಹದಲ್ಲಿ ಇಷ್ಟರವರೆಗೆ 50 ಮಂದಿ ಕೈದುಮಾಡಲ್ಪಟ್ಟಿರುವರು. ಇದೇ ತಾ. 2 ರಲ್ಲಿ 10ಮಂದಿ ದಸ್ತಗಿರಿಯಾಗಿರುವರು. ಮಹಾರಾಷ್ಟ್ರದ ವರ್ಣಾಶ್ರಮ ಸಂಘದವರೂ, ಹಿಂದೂ ಸಭೆಯವರೂ ಈ ಸತ್ಯಾಗ್ರಹಕ್ಕೆ ಸಂಪೂರ್ಣವಾಗಿ ತಮ್ಮ ಒಪ್ಪಿಗೆಯಿತ್ತು ಹಿಂದುಗಳು ಅದರಲ್ಲಿ ಹೆಚ್ಚಾಗಿ ಭಾಗವಹಿಸಬೇಕೆಂದು ಕೇಳಿಕೊಂಡಿರುವರು. ಬೊಂಬಾಯಿಯಲ್ಲಿ ಹಿಂದುಗಳ ಸಭೆಯೊಂದು ನಡೆದು ಪೂನ ಮೆಜಿಸ್ಟ್ರೇಟರ ಹುಕುಮನ್ನು ನಿಷೇಧಿಸಲಾಯಿತು.

ಕಾಂಗ್ರೆಸ್ ಮುಖಂಡರ ದಸ್ತಗಿರಿ

ಬೊಂಬಾಯಿ ಪ್ರಾಂತದ ರೆವಿನ್ಯೂ ಮೆಂಬರರಾದ ಶ್ರೀ ಜಮ್ನಾದಾಸ ಮೆಹತಾರವರು ಎಪ್ರಿಲ್ ತಾ. ೨೯ರಲ್ಲಿ ಶೋಲಾಪುರದ ಮಾರ್ಗವಾಗಿ ಬಿಜಾಪುರಕ್ಕೆ ಹೋಗುವ ರೈಲು ಸ್ಟೇಷನಿನಲ್ಲಿ ದೊಡ್ಡ ಜನಸ್ತೋಮವು ಕರಿಧ್ವಜ ಹಿಡಿದು ವಿರೋಧ ಪ್ರದರ್ಶನ ನಡೆಸಿ ಸ್ಟೇಶನಿನ ಒಳಗೆ ಪ್ರವೇಶಿಸಲೆತ್ನಿಸಿದಾಗ ಪೋಲೀಸರು 'ಲಾಟಿ'ಯಿಂದ ಹೊಡೆದು ೧೦ ಮಂದಿ ಗಾಯಗೆಂಡಿರುವರು. ಬೊಂಬಾಯಿ ಪ್ರಾಂತ್ಯದ ಕಾಂಗ್ರೆಸ್ ಪಕ್ಷದ 'ವ್ಹಿಪ್'ದ ಡಾಕ್ಟರ್ ಅಂಟ್ರೋಲಿಕರ್ ಮತ್ತು ಪ್ರಮುಖ ಸಾಮ್ಯವಾದಿಗಳಲ್ಲೊಬ್ಬರಾದ ಶ್ರೀ ಸಾಣೆಯವರು ಕೈದುಮಾಡಲ್ಪಟ್ಟಿರುವರು. ಶ್ರೀ. ಮೆಹತಾರವರು ಬಿಜಾಪುರಕ್ಕೆ ಮುಟ್ಟಿದಾಗ ಅಲ್ಲಿಯೂ ಕರಿಧ್ವಜ ಪ್ರದರ್ಶನ ನಡೆದಿತ್ತು.

ಪಂಡಿತ ಜವಾಹಿರಲಾಲ ನೆಹರು

ಇದೇ ತಾ. ೬ರಲ್ಲಿ ಕಲ್ಕತ್ತಕ್ಕೆ ಮುಟ್ಟಿದಾಗ ಹೌರ ಸ್ಟೇಶನಿನಲ್ಲಿ ಅವರಿಗೆ ಪ್ರಚಂಡ ಸ್ವಾಗತ ನೀಡಲಾಯಿತು. ಅವರೊಂದಿಗೆ ಅವರ ಪುತ್ರಿ ಕುಮಾರಿ ಇಂದಿರ ನೆಹರುಗಳೂ ಇದ್ದರು. ಪಂಡಿತರು ತಾ. ೪ಕ್ಕೆ ತೆರಳಿರುವರು. ಹೌರ ಸ್ಟೇಶನಿನ ಪಂಡಿತರನ್ನು ನೋಡಲು ಸಾವಿರಾರು ಜನರು ಕಿಕ್ಕಿರಿದು ನೆರೆದಿದ್ದರು. ಕಲ್ಕತ್ತದ ಹೊಸಮೇಯರರಾದ ಶ್ರೀ. ಎಸ್. ಕೆ. ಚೌದುರಿಯವರು ನೂರಾರುಮಂದಿ ಕಾಂಗ್ರೆಸ್ ಪಕ್ಷೀಯರೊಂದಿಗೆ ಪಂಡಿತರನ್ನು ಎದುರುಗೊಂಡರು. ಪಂಡಿತರ ಟ್ರೈನು ಸ್ಟೇಶನಿನೊಳಗೆ ಬರುವಾಗ ಜನರಲ್ಲಿ ನುಗ್ಗಾಟವುಂಟಾಗಿ ಇಬ್ಬರು ತರುಣರು ರೈಲ್ವೇ ನಿಲ್ದಾಣದಿಂದ ಕಾಲುತಪ್ಪಿ ಕೆಳಗೆಬಿದ್ದರು. ಒಬ್ಬನ ಕಾಲುಗಳು ತುಂಡಾಗಿಹೋಗಿರುವವು. ಇನ್ನೊಬ್ಬನಿಗೆ ಅಪಾಯವೇನೂ ಆಗಲಿಲ್ಲ. ಈ ಸಂಗತಿಯನ್ನು ಕೇಳಿ ನೆಹರುಗಳು ಸಂತಾಪಗೊಂಡು ಕೂಡಲೆ ಈ ತರುಣರು ಬಿದ್ದಲ್ಲಿಗೆ ಬಂದು ಅವರಿಗೆ ಪ್ರಥಮ ಚಿಕಿತ್ಸೆ ಮಾಡಿಸಿದರು. ಇನ್ನೊಬ್ಬ ಮುಸಲ್ಮಾನನಿಗೂ ಜನರ ನುಗ್ಗಾಟದಲ್ಲಿ ಪೆಟ್ಟಾಗಿರುವುದು. ಪಂಡಿತರು ಶ್ರೀ. ಶರತ್ಚಂದ್ರ ನಿವಾಸಕ್ಕೆ ಹೋದರು. ಇಂದು ಸಂಜೆ ಪಂಡಿತರು, ಕಲ್ಕತ್ತದ ಕಿತ್ತಾನಾರು ಗಿರಣಿಯ ಮುಷ್ಕರ ಮತ್ತು ಜನತೆಯ ಕರ್ತವ್ಯ ಎಂಬ ಕುರಿತು ಭಾಷಣಮಾಡಲಿರುವರು.

ಉಡುಪಿ

ಶ್ರೀ. ಕೆ. ಸರ್ವೋತ್ತಮ ಶೆಟ್ಟರು

ಉಡುಪಿ ಇವರು ತಮ್ಮ ಪಾರ್ಟಿಯನ್ನು ಸೇರಿಸಿಕೊಂಡು ಬೊಂಬಾಯಿಂದ ಸ್ಟೀಮರ್ ಹತ್ತಿ ಕಳೆದ ತಾ 22ಕ್ಕೆ ಫ್ರಾನ್ಸ್‌ನಲ್ಲಿ ಜರಗಲಿರುವ ಎಕ್ಸಿಬಿಷನ್‌ಗೂ ಲಂಡನಿನಲ್ಲಿ ನಡೆಯಲಿರುವ ೬ನೇ ಜೋರ್ಜ್ ಚಕ್ರವರ್ತಿಗಳ ಕಿರೀಟಧಾರಣೋತ್ಸವಕ್ಕೂ ತೆರಳಿರುತ್ತಾರೆ. ಅಲ್ಲಿಂದ ಜರ್ಮನಿ, ಇಟಲಿ, ಬೆಲ್ಜಿಯಂ, ಅಮೆರಿಕ, ಚೈನಾ, ಜಾಪಾನು, ಮೊದಲಾದ ದೇಶಗಳಿಗೂ ಹೋಗುವರೆಂದು ತಿಳಿದುಬರುತ್ತದೆ. ಈ ಸಾಹಸಿ ತರುಣರ ಪ್ರಯಾಣವು ಸುಖದಾಯಕವಾಗಲೆಂದೂ 'ಟ್ವಿನ್‌ಗರ್ಲ್ಸ್' ಪ್ರದರ್ಶನವು ಹೋದಲ್ಲೆಲ್ಲ ಜಯಶೀಲವಾಗಲೆಂದೂ ಹಾರೈಸುತ್ತೇವೆ.

ಭಾವಚಿತ್ರ ಅನಾವರಣ

ಇದೇ ತಾ. 13ನೇ ಗುರುವಾರ ಅಪರಾಹ್ನ ಘಂಟೆ 4ಕ್ಕೆ ಇಲ್ಲಿಯ ಪೇಜಾವರ ಮಠದ ವ್ಯಾಸಭವನದಲ್ಲಿ ಶ್ರೀ ಮಧ್ವಾಗಮತದ ಸುಪ್ರಸಿದ್ಧ ವ್ಯಾಖ್ಯಾತರಾದ ಪೇಜಾವರ ಮಠದ ಶ್ರೀ ಮಧ್ವಿಜಯಧ್ವಜಾಚಾರ್ಯರ ಭಾವಚಿತ್ರ ಅನಾವರಣ ಸಮಾರಂಭವು ಮಂಗಳೂರಿನ ರಿಟಾಯರ್ಡ್ ಸಬ್‌ಜಡ್ಜರಾದ ಶ್ರೀ. ಬಿ. ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು. ಈ ಸಂದರ್ಭದಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಕೋಲೆಜಿನ ಪಂಡಿತ ಶ್ರೀ ನಾರಾಜ ಶ್ರೀನಿವಾಸಾಚಾರ್ಯರು ಶ್ರೀ ಮಧ್ವಿಜಯಧ್ವಜಾಚಾರ್ಯರ ಕುರಿತು ಭಾಷಣಮಾಡಲಿರುವರು. ಎಲ್ಲರಿಗೂ ಸ್ವಾಗತವಿದೆಯೆಂದು ಪೇಜಾವರ ಮಠದ ಜನರಲ್ ಏಜೆಂಟ್ ಶ್ರೀ ಮಿಯಾಳ ನರಸಿಂಹಾಚಾರ್ಯರು ತಿಳಿಸುತ್ತಾರೆ.

ವಿಷಾದಕರ ಮರಣ

ಕಟಪಾಡಿ

ಇಲ್ಲಿಯ ಪಾಂಗಾಳನಾಯ್ಕರ ಮನೆಯ ಶ್ರೀ. ಗೋವಿಂದ ನಾಯ್ಕರ ವಿಧವೆಯು ಎಪ್ರಿಲ್ ತಾ. 28ನೇ ಬುಧವಾರ ಬೆಳಗ್ಗೆ ಕಾಫಿ ತಯಾರಿಸಲು ಬೆಂಕಿ ಮಾಡುವಾಗ ಅಕಸ್ಮಾತ್ತಾಗಿ ಸೀರೆಗೆ ಬೆಂಕಿತಾಗಿ ಬೆಂಕಿ ನೊಂದಿಸಲಾಗದೆ ಮೈಯೆಲ್ಲಾ ಸುಟ್ಟುಹೋಗಿ ಅಂದೇ ಮಧ್ಯಾಹ್ನ ಮೃತರಾಗಿರುವರೆಂಬುದು ವಿಷಾದಕರವಿದೆ.

ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯವರ ಪ್ರಚಾರಕಾರ್ಯ

ಹಳ್ಳಿಗಳಲ್ಲಿ ಕಾಂಗ್ರೆಸ್ ಪ್ರಚಾರ ಕಾರ್ಯವನ್ನು ಮಾಡಿ, ಗ್ರಾಮಕಮಿಟಿಗಳನ್ನು ಸ್ಥಾಪಿಸುವಕಲುವಾಗಿ ಕಾಂಗ್ರೆಸ್ ಕೆಲಸಗಾರರ ದಳವೊಂದು ಇದೇ ತಾರೀಕು ೧೭-೫-೩೭ರಿಂದ ತಾ. ೧-೬-೩೭ರ ವರೆಗೆ ತಾಲೂಕಿನ ಹಳ್ಳಿಗಳಲ್ಲೆಲ್ಲಾ ಸಂಚರಿಸಲಿರುವದು. ಎಲ್ಲಾ ಮಹನೀಯರೂ ಸಹಕರಿಸಬೇಕಾಗಿ ವಿನಂತಿ.

ಕಾರ್ಯಕ್ರಮ:—ತಾ| ೧೭-೫-೩೭ಬ್ರಹ್ಮಾವರ ತಾ| ೧೮ ಬಾರ್ಕೂರು, ತಾ| ೧೯ ಸ್ವಾಬರಕಟ್ಟೆ, ತಾ| ೨೦ ಕೋಟ, ತಾ| ೨೧ ಬೆಳಿಗ್ಗೆ ಪಾಸ್ತಾನ, ಸಂಜೆ ಹಂಗಾರಕಟ್ಟೆ, ತಾ| ೨೨ ಕಲ್ಯಾಣಪುರ ತಾ| ೨೩ ಮಲ್ಪೆ, ತಾ| ೨೪ ಹಿರಿಯಡ್ಕ, ತಾ| ೨೫ ಪೆರ್ಡೂರು, ತಾ| ೨೬ ಪೇತ್ರಿ, ತಾ| ೨೭ ಕೊಕ್ಕರ್ಣೆ ತಾ| ೨೮ ಉದ್ಯಾವರ ತಾ| ೨೯ ಬೆಳಿಗ್ಗೆ ಕಟಪಾಡಿ ಸಂಜೆ ಕಾಪು ತಾ| ೩೦ ಬೆಳಿಗ್ಗೆ ಎರ್ಮಾಳ ಸಂಜೆ ಪಡುಬಿದ್ರೆ, ತಾ| ೩೧ ಬೆಳಿಗ್ಗೆ ಕುತ್ಯಾರು ಸಂಜೆ ಶಿರ್ವ ತಾ| ೧-೬-೩೭ ಉಡುಪಿ ಟೌನ್.

ಪ್ರತಿಯೊಂದು ಕಡೆಯಲ್ಲಿಯೂ ಪ್ರಾತಃಕಾಲ ಧ್ವಜವಂದನೆ ಸಂಜೆ ಸಾರ್ವಜನಿಕ ಸಭೆಯಿರುವುದು. ಮಹಾಜನರೆಲ್ಲರೂ ಸಂಪೂರ್ಣವಾಗಿ ಕಾಂಗ್ರೆಸ್ ಕಾರ್ಯದಲ್ಲಿ ಅಭಿಮಾನದಿಂದ ಸಹಕರಿಸಬೇಕಾಗಿ ಪ್ರಾರ್ಥನೆ.

ಪಾಂಗಾಳ ಮಂಜನಾಥ ನಾಯ್ಕ, ಅಧ್ಯಕ್ಷ,
ತಾಲೂಕು ಕಾಂಗ್ರೆಸ್ ಕಮಿಟಿ, ಉಡುಪಿ.

ನಮ್ಮ ಚಂದಾದಾರರಲ್ಲಿ ವಿನಂತಿ.

ಕಳೆದ ಸಪ್ಟಂಬರ ಲಾಗಾಯಿತು ನಾವು 'ನವಯುಗ'ವನ್ನು ನಮ್ಮ ಚಂದಾದಾರರಿಗೆ ಕಳುಹಿಸುತ್ತಾ ಬಂದಿದ್ದೇವೆ. ಆದರೆ ಕೆಲವರು ತಮ್ಮ ಚಂದಾ ಹಣವನ್ನು ಈ ವರೆಗೂ ನಮಗೆ ಪಾವತಿಮಾಡಲಿಲ್ಲ. ಆ ಬಗ್ಗೆ ನಾವು ಪತ್ರಿಕೆಯಲ್ಲಿ ವಿನಂತಿಸಿಕೊಂಡಿರುವೆವಲ್ಲದೆ ಪ್ರತ್ಯೇಕ ನೋಟೀಸನ್ನು ಕಳುಹಿಸಿರುತ್ತೇವೆ. ಆದರೂ ಕೆಲವರು ಚಂದಾಹಣವನ್ನು ಈ ವರೆಗೂ ಕಳುಹಿಸಿರುವುದಿಲ್ಲ. ವಿ.ಪಿ. ಮಾಡಿದರೆ ವೃಥಾ ೯ ಆಣೆ ಹೆಚ್ಚಿಗೆ ತೆರಬೇಕಾಗುವುದು. ಆದುದರಿಂದ ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು ದಯವಿಟ್ಟು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ನವಯುಗ

ವ್ಯಾಯಾಮ ಪ್ರದರ್ಶನ

ಕುಂಜಿಬೆಟ್ಟು ವಿಶಾಜವ್ಯಾಯಾಮ ಮಂಡಳಿಯವರು ಕಳೆದ ತಿಂಗಳ ತಾ. 29ನೇ ಸಂಜೆ ಸ್ಥಳೀಯ ಬೋರ್ಡು ಹೈಸ್ಕೂಲಿನ ವಠಾರದಲ್ಲಿ ವಿವಿಧ ಶಕ್ತಿ ಪ್ರದರ್ಶನಗಳನ್ನು ಪ್ರದರ್ಶಿಸಿದರು. ಶ್ರೀಗಳಾದ ಕೆ. ಗೋವಿಂದ ಭಗತ್, ಮಾಧವ ಕಾಮತ್, ಯು. ಪಿ. ಶೆಣೈ, ನಾರಾಯಣ ನಾಯ್ಕ ಇವರಿಗೆ ಫಿಜಿಕಲ್ ಕಲ್ಚರ್ ಕಮಿಟಿಯವರು ಶ್ರೀ. ಕೆ. ಎ. ಸುಂದರೇಶಶಾಸ್ತ್ರಿಗಳ ಕೈಯಿಂದ ರಜತ ಪದಕಗಳನ್ನು ಉಚಿತವಾಗಿ ಕೊಡಿಸಿದರು. ಈ ಪ್ರದರ್ಶನದ ವ್ಯವಸ್ಥೆಯನ್ನು ಮಾಡಿದ ಶ್ರೀ ವಕೀಲ್ ವಿಠಲ ಕಾಮತರ ಉದ್ಯಮವು ಸ್ತುತ್ಯವಿದೆ.

ಮಂಗಳೂರಿನ ಪ್ರತಾಪರೋವ್ ಸ್ಪೋರ್ಟ್ಸ್ ಬಳಗದವರು ತಾ. 5-5-37ನೇ ಸಂಜೆ ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್ಬಿನ ಮೈದಾನಿನಲ್ಲಿ ಅಂಗಸಾಧನಾ ಚಾತುರ್ಯವನ್ನು ಪ್ರದರ್ಶಿಸಿದರು, ಮತ್ತು ಅದೇ ರಾತ್ರಿ ಜೀವನ್ಮೃತಾ ಎಂಬ ನಾಟಕವನ್ನು ವಿವಿಧ ವಿನೋದಗಳನ್ನು ಅಭಿನಯಿಸಿದರು.

ದ್ರಾವಿಡ ಬ್ರಾಹ್ಮಣ ಸಮಾಜದ ಮುಖಂಡರೊಬ್ಬರ ನಿಧನ

ಬ್ರಹ್ಮಾವರ

ಇಲ್ಲಿಯ ಸುಪ್ರಸಿದ್ಧ ಗೃಹಸ್ಥರೂ ದ್ರಾವಿಡ ಬ್ರಾಹ್ಮಣ ಸಮಾಜದ ಮುಂದಾಳುಗಳೊಬ್ಬರೂ ಆದ ಶ್ರೀಮಾನ್ ವಾರಂಬಳ್ಳಿ ಸುಬ್ಬಣ್ಣಯ್ಯನವರು ಇದೇ ತಾ. ೩೦-೪-೩೭ ಶುಕ್ರವಾರ ವೈಕುಂಠವಾಸಿಗಳಾದರೆಂಬುದನ್ನು ತಿಳಿಸಲು ತುಂಬಾ ವ್ಯಸನ ಪಡುತ್ತೇವೆ. ದಿವಂಗತರು ನಿಧನ ಹೊಂದುವಾಗ್ಗೆ ೬೧ ವರ್ಷ ಪ್ರಾಯದವರಿದ್ದು ಪರೋಪಕಾರಿಗಳೂ ಜನಪ್ರಿಯರೂ ಆಗಿ ತಮ್ಮ ಉದಾರತ್ವದಿಂದ ಜನರ ಮೆಚ್ಚುಗೆಯನ್ನು ಪಡೆದಿದ್ದರು. ತಮ್ಮ ವೈದ್ಯಕೀಯ ವೃತ್ತಿಯಲ್ಲಿ ಒಳ್ಳೇ ನಿಷ್ಣಾತರಿದ್ದು ಸುಮಾರು ನಲ್ವತ್ತು ವರ್ಷ ಔಷಧಿಯನ್ನು ಬಡಬಗ್ಗರಿಗೆ ಧರ್ಮಕ್ಕೆ ಕೊಡುತ್ತ ನೂರಾರು ಬಡ ಜನರರಿಗೆ ಜೀವದಾನ ಮಾಡಿ ಚೆನ್ನಾಗಿ ಲೋಕಸೇವೆ ಮಾಡಿರುವರು. ಅಲ್ಲದೆ ನಮ್ಮ ಜಿಲ್ಲೆಯಲ್ಲಿರುವ ಬಹಳ ಉತ್ತಮ (ಕೋಪರೇಟಿವ್ ಸೊಸೈಟಿ) ಸಹಕಾರ ಸಂಘಗಳ ಪೈಕಿ ಒಂದೆಂದು ಹೆಸರು ಪಡೆದ ಬ್ರಹ್ಮಾವರ ಸಹಕಾರ ಸಂಘದ ಪ್ರೆಸಿಡೆಂಟರಾಗಿ ಹದಿನೆಂಟು ವರ್ಷಗಳ ಕಾಲ ಅತಿ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದು ಅದರ ಅಭ್ಯುದಯಕ್ಕೆ ಮುಖ್ಯಕಾರಣರಾಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಇಲ್ಲಿ ಹೊಸತಾಗಿ ಕಟ್ಟಲ್ಪಟ್ಟ ಹುಡುಗರ ಎಲಿಮೆಂಟರಿ ಶಾಲೆಯ ಸ್ಥಾಪನೆಯು ವಿಶೇಷ ಇವರ ಧನಗಳಿಂದ ಸಹಾಯಮಾಡಿ ಕೃತಕಾರ್ಯರಾದರು. ಇವರು ಇನ್ನು ಅನೇಕ ವಿಧಗಳಿಂದಲೂ ಜನಸೇವೆಯನ್ನುಮಾಡಿ ಈಗ ಸ್ವರ್ಗಸ್ಥರಾಗಿರುವುದರಿಂದ ಇಂದು ಇಡೀ ಬ್ರಹ್ಮಾವರವೇ ಕಣ್ಣೀರು ಸುರಿಸುವಂತಾಗಿದೆ. ಎತ್ತ ಕಡೆ ತೆರಳಿದರೂ ಅವರ ಗುಣ ಸ್ತವನವೇ ಕೇಳುತ್ತಿರುವುದು. ದಿವಂಗತರು ಕಳೆದ ವರ್ಷ ಜನವರಿ ತಿಂಗಳಲ್ಲಿ ನ್ಯುಮೋನಿಯಾ ಜ್ವರಕ್ಕೆ ಬಿದ್ದು ಮತ್ತೆ ಗುಣಹೊಂದಿದರೂ ಅದರ ಚಟವು ಮತ್ತು ಉಳಿದು ಅದರಿಂದಾಗಿ ಸುಮಾರು ಒಂದುವರೆ ವರ್ಷದಿಂದ ಸ್ವಲ್ಪ ಕಷ್ಟಪಡುತ್ತಿದ್ದರೂ ಈಗ ಹದಿನೈದು ದಿವಸದಿಂದ ರೋಗವು ಪ್ರಬಲಿಸಿ ನಿಧನ ಹೊಂದಿದರು. ಶ್ರೀಯುತ ಮೃತರ ಕುಟುಂಬದೊಡನೆ ಸಮಾನುಭೂತಿಯನ್ನು ಶ್ರೀಯುತರ ಆತ್ಮಕ್ಕೆ ಚಿರಸಾಖ್ಯವನ್ನೂ ಶಾಂತಿಯನ್ನು ಕೋರುತ್ತೇವೆ.

ಮಂಗಳೂರಿನ
ಬೆಂಗಳೂರಿನ
ಧಾರವಾಡದ
ಕಥೆ, ಕಾದಂಬರಿ ಮುಂತಾದ ಯಾವತ್ತೂ
ಪುಸ್ತಕಗಳು
ಸಿಗುವ
ಏರ್ಪಾಡಾಗಿದೆ.
ನವಭಾರತ ಬುಕ್ ಡಿಪೊ
ಉಡುಪಿ

ದಕ್ಷಿಣ ಕನ್ನಡ

ಮೂಲ್ಕಿ

ಇಲ್ಲಿಯ ಆಸ್ಪತ್ರೆಯ ನಿರ್ವಹಣಾ ಕಮಿಟಿಯ ಮೆಂಬರರ ವಾರ್ಷಿಕ ಮಹಾಸಭೆಯು ಈ ಮೇ ತಿಂಗಳ ತಾರೀಕು ೧೬ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಮ ರಾ ರಾ ಬಿ ವೆಂಕಟಪ್ಪಯ್ಯ ಬಾಳಿಗಾ ಬಿ ಎ ಬಿ ಎಲ ಯಮ್ ಎಲ್ ಎ ಇವರ ಅಧ್ಯಕ್ಷತೆಯಲ್ಲಿ ಸೇರುವುದು ಎಲ್ಲಾ ಮೆಂಬರರೂ ಈ ಸಭೆಗೆ ದಯಮಾಡಿ ಹಾಜರಾಗಬೇಕೆಂದು ಸದ್ರಿ ಸಂಘದ ಗೌರವ ಜತೆ ಕಾರ್ಯದರ್ಶಿಯವರು ಪ್ರಾರ್ಥಿಸುತ್ತಾರೆ

ಕೆಮ್ಮಿಂಜೆ

ಇಲ್ಲಿಯ ಹಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ತಾ. ೨೪ ೪ '೩೭ನೇ ಶನಿವಾರ ಅಪರಾಹ್ನ, ಪುತ್ತೂರು ರೇಂಜಿನ ಸೀನಿಯರ್ ಡಿಪ್ಯುಟಿ ಇನ್‌ಸ್ಪೆಕ್ಟರಾದ ಶ್ರೀಮಾನ್ ಬಿ ವಿ. ವೆಂಕಟರಮಣ ಅವರ್ಗಳ್ ಬಿ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು

ಸುಳ್ಯ ಮುಂದೆ ಕೋಲು

ಕಳೆದ ತಾ ೨೨-೪-೧೯೩೭ರಲ್ಲು, ಇಲ್ಲಿಯ ಶಾಲೆಯ ನೂತನ ಕಟ್ಟೋಣ ಪ್ರವೇಶ ಸಮಾರಂಭವು ಶ್ರೀ ಸಂಪಾಜೆ ಮುಂಡಪ್ಪ ರೈ ಪೇಶಕೋಡಿಯವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರುಗಿಸಲ್ಪಟ್ಟಿತು ಸುಮಾರು ಮುನ್ನೂರಕ್ಕೂ ಮಿಕ್ಕಿದ ಜನರು ಹಾಜರಿದ್ದರು ಸಭೆಯಲ್ಲಿ ಹಾಜರಿದ್ದ ಸುಳ್ಯ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಏಣಪ್ಪ ರೈ, ಸುಳ್ಯ ಶಾಲಾ ಹೆಡ್ಮಾಸ್ಟರ್ ಶ್ರೀ ರಾಮಪ್ಪಯ್ಯ ಅಜ್ಜಾವರ ಶಾಲಾ ಮಾಸ್ತರ್ ರಾಮರಾಯ ಮೊದಲಾದ ಮಹನೀಯರು ತಮ್ಮ ಬೋಧಪ್ರದ ಭಾಷಣಗಳಿಂದ ಸಭಿಕರನ್ನು ಆನಂದಗೊಳಿಸಿದರು ಅಧ್ಯಕ್ಷರ ಭಾಷಣದ ನಂತರ ತಿಂಡಿ ತೀರ್ಥಗಳೊಂದಿಗೆ ಸಭೆಯು ಚೆದರಿತು

ಗ್ರಾಮಕಾಂಗ್ರೆಸ್ ಕಮಿಟಿಗಳ ಸ್ಥಾಪನೆಗಾಗಿ ಜಿಲ್ಲಾ ವ್ಯವಸ್ಥಾಪಕರ ಸಂಚಾರ.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ವತಿಯಿಂದ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಯನ್ ಯಸ್ ಕಿಲ್ಲೆ ಮತ್ತು ಪಾರ್ಟಿಯವರು ಪುತ್ತೂರು ತಾಲೂಕಿನಲ್ಲಿ ಈ ಕೆಳಗಿನ ಕಾರ್ಯಕ್ರಮದಂತೆ ಸಂಚಾರಮಾಡಲಿರುವರು

ಮುಂದಿನ ೬-೫-'೩೭ ಬೆಳಿಗ್ಗೆ ಉಪ್ಪಿನಂಗಡಿ, ೬-೫-೩೭, ಸಾಯಂಕಾಲ, ಕೊಕ್ಕಡ ೭-೫-'೩೭ ಸಾಯಂಕಾಲ, ಕಡಬ ೮-೫ '೩೭ ಸಾಯಂಕಾಲ, ಬೆಳ್ಳಾರೆ ೯-೫-'೩೭ ಸಾಯಂಕಾಲ, ಕೆಯ್ಯೂರು ೧೦-೫-'೩೭ ಬೆಳಿಗೆ, ಸುಳ್ಯ ೧೦-೫-೩೭ ಸಾಯಂಕಾಲ, ಪುತ್ತೂರು ೧೧ ೫ '೩೭ ಸಾಯಂಕಾಲ, ವಿಟ್ಲಂಪಾಡಿ ೧೨-೫ '೩೭ ಸಾಯಂಕಾಲ, ವಿಟ್ಲ ೧೩-೫-'೩೭ ಸಾಯಂಕಾಲ, ಸಾಲೆ ಕಟ್ಟೆ ೧೪-೫ ೩೭ ಬೆಳಿಗ್ಗೆ, ಪುತ್ತೂರು ೧೫-೫-'೩೭ ಸಾಯಂಕಾಲ

ತಾಲೂಕು ಕಾಂಗ್ರೆಸ್ ಕಮಿಟಿ ಮೀಟಿಂಗ್.

ಹಿರಿಯಡ್ಕ

ಸ್ಥಳೀಯ ಶ್ರೀ ವೀರಭದ್ರ ದೇವಸ್ಥಾನದಲ್ಲಿ ವರ್ಷಾವಧಿ ನಡೆಯತಕ್ಕ ಜಾತ್ರೆಯು ಈ ವರ್ಷವೂ ತಾ ೨೬ ೪ '೩೭ರಿಂದ ತಾ ೩೦-೪-'೩೭ರ ತನಕ ಸಾಂಗವಾಗಿ ಜರಗಿಸಲ್ಪಟ್ಟಿತು ಜಾತ್ರೆಯ ಸಮಯದಲ್ಲಿ ಪ್ರತಿವರ್ಷವೂ ಮಿಶ್ಶನೆರಿಗಳು ಇಲ್ಲಿಗೆ ಬಂದು ತಮ್ಮ ಪ್ರಚಾರ ಕಾರ್ಯವನ್ನು ಯಾವ ತಡೆಯೂ ಇಲ್ಲದೆ ನೆರವೇರಿಸಿಕೊಂಡು ಹೋಗುತ್ತಿದ್ದರು

ಆದರೆ ಸ್ಥಳೀಯ ಆರ್ಯ ಸಮಾಜದವರು ಕಳೆದ ವರ್ಷದಂತೆ ಈ ವರ್ಷವೂ, ಆರ್ಯ ಧರ್ಮಪ್ರಚಾರಕರಾಗಿರುವ ಶ್ರೀಯುತ ಕಾರ್ಕಳ ಮಂಜುನಾಥ ಶೆಣ್ಯರವರ ಸಹಾಯದಿಂದ ಮಿಶ್ಶನರಿಗಳ ಭಾಷಣ ಕೇಳಲು ಒಬ್ಬನೇ ಒಬ್ಬನಾದರೂ ಸಿಗದಂತೆ ಮಾಡಿದುದು ಮಾತ್ರವಲ್ಲದೆ ಆರ್ಯ ಧರ್ಮದ ಮಹತ್ವದ ಕುರಿತು ಜನತೆಗೆ ಮಂದಟ್ಟಾಗುವಂತೆ ಮಾಡಿ, ಜನರಲ್ಲಿಯ ಅಂಧ ಶ್ರದ್ಧೆಯನ್ನು ಹೋಗಲಾಡಿಸುವಂತೆ ಮಾಡಿದ ಪ್ರಚಾರ ಕಾರ್ಯದ ಪರಿಣಾಮವಾಗಿ ಜನರಲ್ಲಿ ತಕ್ಕ ಮಟ್ಟಿಗೆ ನವಜಾಗ್ರತಿಯುಂಟಾಗಿದೆ ಎನ್ನಬಹುದು

ವಿಶೇಷ ವಿಷಯವಾವುದೆಂದರೆ —ಕ್ರಿಸ್ತ ಉಪದೇಶಿಗಳು ತರ್ಕದಲ್ಲಿ ಸೋತೊಡನೆ ಒಮ್ಮೆಗೇ ಎಟ್ಟಿಗೆದ್ದು ತಮ್ಮ ಎದುರುವಾದಿಗಳಿಗೆ 'ಅಪವಿತ್ರದ್ದು' ಇದು ಏಸು ಕ್ರಿಸ್ತನ ತತ್ವ ಸಮ್ಮತವೋ? ಈ ಕ್ರಿಸ್ತ ಉಪದೇಶಿಗಳ ಅಜ್ಞಾನದ ಪರಿಣಾಮವೋ? ಸತ್ಯ ಮಾರ್ಗವನ್ನು ಬೋಧಿಸುತ್ತೇವೆನ್ನುವ ಈ ಕ್ರಿಸ್ತ ಉಪದೇಶಿಗಳು 'ಓದುವುದು ಶಾಸ್ತ್ರ ಇಕ್ಕುವುದು ಗಾಳ' ವೆಂಬಂತೆ ಆಚರಿಸಿದುದರ ರಹಸ್ಯವೇನು? ಇವರೇ ಯೇಸುಕ್ರಿಸ್ತನ ತತ್ವವನ್ನು ಆಚರಣೆಗೆ ತರುವುದು ಉತ್ತಮವಲ್ಲವೇ? ಈ ವರ್ಷದ ಜಾತ್ರೆಯಲ್ಲಿ ಹರಿಜನರ ಕಾಶಿ ಹೋಟೆಲೊಂದು ತೆರೆದಿದ್ದುದು ವಿಶೇಷಕರ ಸಂಗತಿಯಾಗಿದೆ

ಸುರತ್ಕಲ್

ಈ ಮೊದಲೇ ಪ್ರಕಟಿಸಿದಂತೆ ಇಲ್ಲಿಯ 'ಇದ್ಯ ವಿದ್ಯಾದಾಯಿನೀ ಶಾಲೆ'ಯ ೨೮ನೇ ವರ್ಷದ ವರ್ಧಂತ್ಯುತ್ಸವವು ಇದೇ ತಾ ೨೫ ೪ ೩೭ರಲ್ಲಿ ಮಂಗಳೂರಿನ ರಿ ಸಬ್‌ಜಡ್ಜರಾದ ಮಾ ರಾ ರಾ ಬಿ. ಗೋಪಾಲಕೃಷ್ಣಯ್ಯನವರ ಸಭಾಧ್ಯಕ್ಷತೆಯಲ್ಲಿ ಅಂತ್ಯಂತ ಯಶಸ್ವಿಯಾಗಿ ಜರಗಿತು ಶಾಲಾಮುಂದಿರವು ಚಿತ್ರ ಪತಾಕೆಗಳಿಂದ ಅಲಂಕರಿಸಲ್ಪಟ್ಟಿತ್ತು ಊರಪರವೂರ ಅನೇಕ ಮಹನೀಯರೂ ಮಹಿಳೆಯರೂ ಸಮಾರಂಭಕ್ಕೆ ಒತ್ತೈಯಿಸಿದ್ದರು ಸಭಾಕಾರ್ಯವು ಅಪರಾಹ್ನ ಘಂಟೆ ೩-೧೫ಕ್ಕೆ ಶಾಲಾ ವಿದ್ಯಾರ್ಥಿನಿಯರ ದೇವತಾ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು ಈ ಶಾಲಾ ಹಳೇ ವಿದ್ಯಾರ್ಥಿಯಾಗಿದ್ದು ಈಗ ಬಿ ಎ ಪರೀಕ್ಷೆಗೆ ನಿಂತಿರುವ ಶ್ರೀ ಯಂ ಬಾಬು ಶೆಟ್ಟಿಯವರು ಶಾಲಾಭಿನಂದನವನ್ನು ತಮ್ಮ ಸುರಸವಾದ ಭಾಷಣದಲ್ಲಿ ಮಾಡಿ ಮುಗಿಸಿದರು ಶಾಲಾಮುಖ್ಯೋಪಾಧ್ಯಾಯರು ಗತವರ್ಷದ ವರದಿಯನ್ನೋದಿದ ತರುವಾಯ ಶಾಲಾ ಬಾಲಬಾಲಕಿಯರಿಂದ, ನಾಟಕ, ಗಮಕ, ಮದ್ದು ಅಭಿನಯ ಗೀತಾದಿಗಳನ್ನೂಳಗೊಂಡ ವಿವಿಧ ವಿನೋದಾವಳಿಗಳ ಪ್ರದರ್ಶನವಾಯಿತು ಗತವರ್ಷದಲ್ಲಿ ಉತ್ತಮ ರೀತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನಿತ್ತು, ಹಂಚಲಾದವು ಕೊನೆಗೆ ಸಭಾಧ್ಯಕ್ಷರ ಅರ್ಥಗರ್ಭಿತ ಭಾಷಣವಾಗಲು ಮಂಗಲ ಗೀತದೊಂದಿಗೆ ಈ ಸಂತೋಷ ಸಮಾರಂಭವು ಕೊನೆಗೊಂಡಿತು

ಈ ಸಮಾರಂಭದ ವೇಳೆ ಮಕ್ಕಳಿಗೆ ಇನಾಮು ಹಂಚುವರೆ ಧನ ಮತ್ತು ಇತರ ಸಹಾಯವನ್ನು ಮಾಡಿದ ವಿದ್ಯಾಭಿಮಾನಿ ಮಹನೀಯರೆಲ್ಲರಿಗೂ ಧನ್ಯವಾದಗಳನ್ನರ್ಪಿಸಲಾಯಿತು ಅಂದೇ ಪೂರ್ವಾಹ್ನ ಘಂಟೆ ೧೦ ೧೦ಕ್ಕೆ ಈ ಶಾಲಾ ಹಳೇ ವಿದ್ಯಾರ್ಥಿಗಳ ಮಹಾ ಸಭೆಯು ಜರಗಿ ಮುಂದಿನ ವರ್ಷದ ಕಾರ್ಯಕಾರಿ ಮಂಡಲಿಯ ನೇಮಕ ಮತ್ತು ಕಾರ್ಯಕ್ರಮ ನಿರ್ಧಾರಗಳಾದವು ಅದೇ ದಿನ ರಾತ್ರಿ ಘಂಟೆ ೧೦ಕ್ಕೆ ಇದೇ ಸಂಘದವರು 'ರಾಜನಿಷ್ಠೆ' ಎಂಬ ಐತಿಹಾಸಿಕ ನಾಟಕವನ್ನು ಅಂದವಾಗಿ ಅಭಿನಯಿಸಿ ನೆರೆದ ಪ್ರೇಕ್ಷಕರನ್ನು ಆನಂದಗೊಳಿಸಿದರು

ನಿಡ್ಡೋಡಿ

ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಾರ್ಷಿಕ ವರ್ಧಂತ್ಯುತ್ಸವವು ತಾರೀಕು ೨೬-೪-೩೭ನೇ ಸೋಮವಾರ ನಡೆಯಿತು ಪೂರ್ವಾಹ್ನ ಘಂಟೆ ೯ಕ್ಕೆ ಹಳೆ ವಿದ್ಯಾರ್ಥಿಗಳ ಮತ್ತು ಈಗಿನ ವಿದ್ಯಾರ್ಥಿಗಳ ಫಲಾಹಾರ ಸತ್ಕಾರಗಳು ಸಾಂಗವಾಗಿ ನಡೆದು ಅಪರಾಹ್ನ ಘಂಟೆ ೬. ೩ಕ್ಕೆ ಮಂಗಳೂರು ರೇಂಜಿನ ಶಾಲಾ ಡಿ| ಇನ್‌ಸ್ಪೆಕ್ಟರ್ ರಾ| ಸಂಜೀವರಾವ್, ಬಿ ಎ ಎಲ ಟಿ ಇವರ ಅಧ್ಯಕ್ಷತೆಯಲ್ಲಿ ಉತ್ಸವವು ಬಹು ವಿಜೃಂಭಣೆಯಿಂದ ಜರಗಿತು ಊರ, ಪರವೂರ ಸ್ತ್ರೀಪುರುಷರು ನೆರೆದಿದ್ದರಲ್ಲದೆ, ಅನೇಕ ಶಾಲಾ ಅಧ್ಯಾಪಕರು ಕೂಡಾ ಬಂದಿದ್ದರು ಸಭೆಯ ಮನಸ್ಸನ್ನು ಆಕರ್ಷಿಸುವಂತೆ ಸದ್ರಿ ಶಾಲಾ ಬಾಲಕ, ಬಾಲಕಿಯರು, 'ಸಂಶಯ ಪಿಶಾಚಿ' ಮತ್ತು 'ಪಳ್ಳಿಯ ವೈಚಿತ್ರ್ಯ' ವೆಂಬ ಕನ್ನಡ ತುಳು ನಾಟಕಗಳ ಪ್ರದರ್ಶನಗಳಿಂದಲೂ ಅಲ್ಲಲ್ಲಿ ಆನಂದಗೊಳ್ಳುವ ವಿನೋದಗಳಿಂದಲೂ ಜನತೆಯ ಪ್ರೀತಿಗ ಪಾತ್ರರಾದರು ಈ ಸಮಾರಂಭಕ್ಕೆ ಸಹಾಯವಿತ್ತ ಸರ್ವರಿಗೂ ಶಾಲಾ ವರ್ಧಂತ್ಯುತ್ಸವದ ಕಮಿಟಿಯು ಉಪಕಾರಸ್ಮರಣೆಯನ್ನೀಯುವುದು

ಕೆನ್‌ಸರ್ ಎಂಬ ಘನರೋಗ ಗುಣಪಡಿಸಿದ ಡಾ ಯನ್ ಆರ್. ಸುವರ್ಣ

M. B B S. M S (BOM)

ಇವರು ನಮ್ಮ ಜಿಲ್ಲೆಯಲ್ಲಿ ಪ್ರಸಿದ್ಧಿ ಪಡೆದಿರುವ ರಾವ್ ಬಹದೂರ ನಾರ್ಣಪ್ಪ ಸುವರ್ಣರವರ ಸಹೋದರರು ಸಂ ೧೯೩೫ರಲ್ಲಿ ಮುಂಬಾಯಿಯ ಗೋರ್ಧನ್‌ದಾಸ್ ಸುಂದರದಾಸ್ ಮೆಡಿಕಲ್ ಕಾಲೇಜ್ ಮತ್ತು ಕಿಂಗ್ ಎಡ್ವರ್ಡ್ ಮೆಮೋರಿಯಲ್ ಹೋಸ್ಪಿಟಲಿನಲ್ಲಿ ದಾಖಿಲಾಗಿ ಡಾ. ಜಿ ವಿ ದೇಶ್ಮುಖ್ ಎಮ್ ಡಿ ಎಫ್ ಆರ್ ಸಿ ಎಸ್‌ರವರ ಕೈಕೆಳಗೆ ಅಭ್ಯಾಸಿಸುತ್ತ ೧೯೩೪ರಲ್ಲು ಎಮ್ ಬಿ ಬಿ ಎಸ್ ಮತ್ತು ೧೯೩೬ರಲ್ಲಿ ಎಮ್ ಎಸ್ ಡಿಗ್ರಿಯನ್ನೂ ಪಡೆದವರು ಕೋಂಗ್ರೆಸ್ ಹೋಸ್ಪಿಟಲಿನ ಒನರರಿ ಸರ್ಜನರೂ, ಆಗಿರುತ್ತಾರೆ ಮತ್ತು ಗಿರ್‌ಗಾಂ ಒಪೆರ ಹೌಸಿನ ಹತ್ತಿರ ಸಂತಕ್ಕೆ ಒಂದು ನರ್ಸಿಂಗ್‌ಹೋಮ್ ತೆರೆದು ಜನ ಸೇವೆ ಗೈಯುತ್ತ ಯಶಸ್ವಿಗಳಾಗಿರುತ್ತಾರೆ ದೊಡ್ಡ ದೊಡ್ಡ ಓಪರೇಷನ್ ಕೇಸುಗಳಲ್ಲಿ ಈಗಲೂ ಡಾ ದೇಶ್ಮುಖರ ಸಲಹೆಯನ್ನು ಪಡೆಯುತ್ತಲಿದ್ದಾರೆ ಇವರ ಉದ್ದಿಮೆಯು ಕರ್ನಾಟಕಕ್ಕೆ, ಮುಖ್ಯಥಾ ನಮ್ಮ ಜಿಲ್ಲೆಗೆ ಭೂಷಣವಾಗಿರುತ್ತದೆಂದರೆ ಹೆಚ್ಚಾಗದು ನಾನು ಬಹಳ ಸಮಯದಿಂದ ಕಾಯಿಲೆಯಲ್ಲಿ ನರಳುತ್ತಿದ್ದು ಪಂಡಿತ, ವೈದ್ಯ ಡಾಕ್ಟರರೇ ಮೊದಲಾದವರ ಔಷದಗಳಿಂದ ಗುಣವಾಗದೆ ಒಪರೇಶನಿಗೂ, ಅಸಾಧ್ಯವಾಗಿ ಕೊರಳ ಎಡ ಪಾರ್ಶ್ವ ಬಾತುಹೋಗಿ ನೀರನ್ನೂ ಕುಡಿಯಲಿಕ್ಕಾಗದೆ ರಾತ್ರಿ ಹಗಲು ಏಕಪ್ರಕಾರ ಅತಿಶಯ ವೇದನೆಯಿಂದ ನರಳುತ್ತಾ ಸಂಕಷ್ಟಪಡುತ್ತಿದ್ದುದನ್ನು ಕಂಡವರೆಲ್ಲರೂ ನಿರಾಶೆ ಪಟ್ಟು ಇವನಿಗೆ ಚಿಕಿತ್ಸೆ ಮಾಡುವುದು ವ್ಯರ್ಥ, ಬದುಕಲಾರನು ಎಂದಂದುಕೊಳ್ಳುತ್ತಿದ್ದರು ಕಡೆಗೆ ನನ್ನ ಅಣ್ಣ ಮನ್ನಪ್ಪ ಪಿ ಸಾಲಿಯಾನರಿಂದ ಇದೇ ಫೆಬ್ರವರಿ ತಾ. ೨೫ರಲ್ಲು ಮುಂಬಯಿಗೆ ಕರೆಯಿಸಲ್ಪಟ್ಟು ಅದೇ ದಿನ ಶ್ರೀಗಳಾದ ರಂಘು ಪಿ ಮೂಲೂರುಕಾರ್ ಮತ್ತು ಎರ್ಮಾಳ ಕಾಂತಪ್ಪ ಎ ಪುತ್ರನ್‌ರವರು ಮೇಲ್ಕಂಡ ನರ್ಸಿಂಗ್ ಹೋಮಿಗೊಯ್ದು, ಡಾಕ್ಟರರು ಪರೀಕ್ಷಿಸಿ ಕೆನ್‌ಸರ್ ಎಂಬ ಘನರೋಗವೆಂದು ಸ್ಪಷ್ಟ ಗೊತ್ತುಮಾಡಿ ತನ್ನ ನರ್ಸಿಂಗ್ ಹೋಮಿನಲ್ಲೇ ಇರಿಸಿ ಬುದ್ಧಿಚಾತುರ್ಯದಿಂದಲೂ ಪ್ರಯತ್ನದಿಂದಲೂ ರೆಡಿಯಂನ ಮೂಲಕ ಬರೇ ಏಳು ದಿವಸಗಳಲ್ಲಿ ಪೂರ್ಣ ಗುಣಪಡಿಸಿ ನನ್ನನ್ನು ಬದುಕಿಸಿದರು, ನಾನು ಈಗ ಸೌಖ್ಯದಲ್ಲಿದ್ದೇನೆ ನನ್ನ ಹಾಗೆಯೇ ಹಳ್ಳಿಯಲ್ಲಿರುವ ಇಂಥಾ ಘನರೋಗ ಪೀಡಿತರಾದ ಅನುಭವಸ್ಥರಿಂದ ಪರೀಕ್ಷಿಸಲ್ಪಡದ ಎಷ್ಟೋ ಜನರು ಪರಲೋಕ ಯಾತ್ರೆಯನ್ನೇ ನಿರೀಕ್ಷಿಸುತ್ತಿರಬೇಕಾಗುವುದೆಂಬುದಕ್ಕೆ ಬಹಳ ಪಶ್ಚಾತ್ತಾಪವೂ ವಿಷಾದವೂ ಪಡಬೇಕಾಗಿದೆ ಮತ್ತು ಇಂಥಾ ಘನರೋಗ ಪೀಡಿತರಾದವರು ಇವರಂಥಾ ಪ್ರಾಜ್ಞ ಡಾಕ್ಟರರಿಂದ ಪರೀಕ್ಷಿಸಿ ಸೌಖ್ಯಹೊಂದಬೇಕೆಂಬುದೇ ನನ್ನ ವಿಶೇಷ ವಿನಂತಿ ಡಾಕ್ಟರರು ಇನ್ನೂ ತರುಣ ಪ್ರಾಯ, ಉದಾರಿ, ಸರಳಸ್ವಭಾವ ಪ್ರತಿ ಒಂದು ಮಹತ್ಕಾರ್ಯ ಸಿದ್ಧಿಮಾಡಿಕೊಳ್ಳತಕ್ಕ ಸಮರ್ಥರೂ ಹಾಗೆಯೇ ಬಡ, ದೀನ ಜನರ ಉದ್ಧಾರಕರೂ ಆಗಿರುತ್ತಾರೆ ಇವರನ್ನು ಆಯುರಾರೋಗ್ಯ ಸಂಪತ್ಸಮೃದ್ಧಿಯೊದನೆ ಜಿಲ್ಲೆಗೂ ಜೇಶಕ್ಕೂ ಕೀರ್ತಿಯುತರಾಗಿ ಮೆರೆಯುತ್ತಿರುವಂತೆ ಸರ್ವಶಕ್ತ ಪರಮೇಶ್ವರನು ಅನುಗ್ರಹಿಸಲೆಂದು ನನ್ನ ದೀನ ಮತ್ತು ಹೃತ್ಪೂರ್ವಕ ಪ್ರಾರ್ಥನೆ

ಚೆಂದು ಪಿ. ಸಾಲಿಯಾನ್:

ಬಾಲವಾಙ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾಲವಾಙ್ಮಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ

ಉಡುಪಿ

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮಧ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ--- ಗುಡಪಿಪ್ಪಲಿ (ಲಿವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮುಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಕೊಳ್ಳಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಇದರ 31ನೇ ಮತ್ತು ಅತಿ ದೊಡ್ಡ ಶಾಖೆಯು ಎಪ್ರಿಲ್ ತಾ. 23ರಲ್ಲಿ ಬೊಂಬಾಯಿಯ ಫ್ರೋರ್ಟಿನ ಸರ್ ಫಿರೋಜ್‌ಶಾ ಮೇಥಾ ರೋಡಿನಲ್ಲಿ 'ಪ್ರೇಮಚಂದ್ ಹೌಸ್' ಎಂಬ ನವೀನ ಕಟ್ಟಡದಲ್ಲಿ ಬೊಂಬಾಯಿ ಕೋರ್ಪರೇಶನಿನ ಮೇಯರರಾದ ಡಾಕ್ಟರ್ ಇ. ಮೋಸೆಸ್ ಎಮ್. ಡಿ.ಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ತೆರೆಯಲ್ಪಟ್ಟಿತು. ಶಾಖೆಯನ್ನು ತೆರೆಯುವ ಧಾರ್ಮಿಕ ವಿಧಿಯು ಪೂರ್ವಾಹ್ನ ನಡೆಯಿತು. ಸಂಜೆಯ ಸಮಾರಂಭದಲ್ಲಿ 700 ಕ್ಕಿಂತಲೂ ಮಿಕ್ಕಿದ ಅತಿಥಿಗಳು ಭಾಗಿಯಾಗಿದ್ದರು. ಬೊಂಬಾಯಿ ಕೋರ್ಪರೇಶನಿನ ಮಾಜಿ ಮೇಯರರೂ ಸುಪ್ರಸಿದ್ಧ ದೇಶಭಕ್ತರೂ ಆದ ಮಿ. ಕೆ. ಎಫ್. ನರಿಮೆನರೂ ಹಾಜರಿದ್ದರು. ಸಂಜೆ ಘಂಟೆ 5-30 ಕ್ಕೆ ಸರಿಯಾಗಿ ಡಾಕ್ಟರ್ ಮೋಸೆಸರು ಬೇಂಕಿನ ಆಫೀಸಿನ ಮುಖ್ಯ ದ್ವಾರಕ್ಕೆ ಕಟ್ಟಲ್ಪಟ್ಟಿದ್ದ ಬೆಳ್ಳಿಯ ಸರಿಗೆಯನ್ನು ಕಡಿದು ಆಫೀಸನ್ನು ತೆರೆದರು ಆ ಮೇಲೆ ಬೇಂಕಿನ ಚೇಯರ್‌ಮೆನರಾದ ಡಾಕ್ಟರ್ ಪೈಗಳು ಅಧ್ಯಕ್ಷರನ್ನು ಒಳಗೆ ಕರದೊಯ್ದು ಆಫೀಸನ್ನೆಲ್ಲಾ ತೋರಿಸಿದರು. ಪ್ರಥಮದಲ್ಲಿ ಡಾಕ್ಟರ್ ಪೈಗಳು ಬೇಂಕಿನ ಬೇರೆ ಬೇರೆ ಚಟುವಟಿಕೆಗಳನ್ನು ವಿವರಿಸಿ ಭಾಷಣವಿತ್ತರು ಅನಂತರ ಡಾಕ್ಟರ್ ಮೋಸೆಸರು, ಸಿಂಡಿಕೇಟನ್ನು ಬೊಂಬಾಯಿಗೆ ಸ್ವಾಗತೀಕರಿಸಿ ಅದಕ್ಕೆ ಯಶಸ್ಸನ್ನು ಕೋರಿದರು. ಅಲ್ಪ ಸ್ವಲ್ಪ ಹಣವನ್ನು ಎಲ್ಲಾ ತರಗತಿಯ ಜನರು ಉಳಿಸುವಂತೆ ನೆರವಾಗುವ ಸಿಂಡಿಕೇಟಿನ ಪಿಗ್ಮಿ ಸ್ಕೀಮನ್ನು ಪ್ರಶಂಸಿಸಿ ಬೊಂಬಾಯಿಯವರು ಸಿಂಡಿಕೇಟಿಗೆ ಸಹಾಯವಿತ್ತು ಪ್ರೋತ್ಸಾಹಿಸಬೇಕೆಂದು ಕೇಳಿಕೊಂಡರು. ಕೊನೆಗೆ ಬೇಂಕಿನ ಡೈರೆಕ್ಟರರಲ್ಲೊಬ್ಬರಾದ ಶ್ರೀ. ಆರ್ ಎಸ್. ಹಳದೀಪುರಕಾರರು ಮರಾಠಿಯಲ್ಲಿ ಎಲ್ಲರಿಗೂ ವಂದನೆಯನ್ನರ್ಪಿಸಿ ಫಲಹಾರದೊಂದಿಗೆ ಸಭಾ ಕಾರ್ಯವು ಕೊನೆಗೊಂಡಿತು. ಸಮಾರಂಭವು ಅತ್ಯಂತ ಜಯಶೀಲವಾಗಿ ಜರಗಿತು.

ಚೇಯರ್‌ಮೆನರ ಭಾಷಣ

ಸಿಂಡಿಕೇಟಿನ ಚೇಯರ್ ಮೆನರಾದ ಡಾಕ್ಟರ್ ಪೈಗಳ ಭಾಷಣದ ಸಾರಾಂಶ "ಉಡುಪಿಯ ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡಿನ ಪರವಾಗಿ ನಾನು ತಮ್ಮೆಲ್ಲರನ್ನು ಅತ್ಯಾನಂದದಿಂದ ಸ್ವಾಗತೀಕರಿಸುತ್ತೇನೆ ಅದೊಂದು ಭೂಖಂಡವೇ ಆಗಿರುವ ಭಾರತದ ಪ್ರಧಾನ ವ್ಯಾಪಾರ ಪಟ್ಟಣವಾದ ಬೊಂಬಾಯಿಯಲ್ಲಿ ನಮ್ಮ ಶಾಖೆಯನ್ನು ತೆರೆಯುವ ಈ ಸಮಾರಂಭವು ಬೇಂಕಿನ ಇತಿಹಾಸದಲ್ಲಿ ಹೊಸಮನ್ವಂತರವೊಂದನ್ನಾರಂಭಿಸುವಂದಿರುವುದು. ಸಿಂಡಿಕೇಟು 1925ನೇ ಇಸವಿಯ ರೂ. 1,00,000 ಭಂಡವಾಳದಿಂದ ಆರಂಭಿಸಲ್ಪಟ್ಟಿತು. ಪ್ರಾಮಾಣಿಕವಾದ ಆಡಳಿತ ಕ್ರಮದಿಂದಲೂ, ವಹಿವಾಟ ಚಾತುರ್ಯದಿಂದಲೂ ಸಿಂಡಿಕೇಟು ತನ್ನ ಜೀವನದ ಹನ್ನೆರಡೇ ವರ್ಷಗಳಲ್ಲಿ ಪ್ರಗತಿಯ ದಾರಿಯಲ್ಲಿ ಅತೀ ಶೀಘ್ರ ಹೆಜ್ಜೆಗಳನ್ನಿಟ್ಟು ಮುನ್ನಡೆದಿರುವುದು. ಅದು ಇಷ್ಟರೊಳಗೇನೇ ಬೊಂಬಾಯಿ, ಮದ್ರಾಸು ಮತ್ತು ಮೈಸೂರಲ್ಲಿ 30 ಶಾಖೆಗಳನ್ನು ಸ್ಥಾಪಿಸಿ ಆ ಮೂಲಕ ರೂ 4 ರಿಂದ 5 ಕೋಟಿಗಳ ವರೆಗಣ ವಹಿವಾಟು ನಡೆಸಿರುವುದು ಈ ಅಲ್ಪಾವಧಿಯಲ್ಲಿ ಸಿಂಡಿಕೇಟು ಸ್ಥಿರತೆಯನ್ನು ಪಡೆದಿರುವುದು ಮಾತ್ರವಲ್ಲದ ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿ ಹೊಂದುತ್ತಿರುವುದೆಂಬುದು ಅಭಿಮಾನದ ವಿಷಯವಿದ

ರಿಸರ್ವ್ ಬೇಂಕಿನ ಸದಸ್ಯತನಕ್ಕೆ ಅರ್ಹತೆ ಪಡೆವುದಕ್ಕಾಗಿ ಕಳದ ಜನವರಿಯಲ್ಲಿ ಶೇರು ಒಂದರ ರೂಪಾಯಿ ನೂರರ ಐದು ಸಾವಿರ ಶೇರುಗಳ ಮೂಲಕ ಬೇಂಕಿನ ಭಂಡವಾಳವನ್ನು ರೂ ಹತ್ತು ಲಕ್ಷಕ್ಕೇರಿಸಿದಾಗ ಒಂದೇ ಒಂದು ತಿಂಗಳೊಳಗೆ ಪ್ರಕಟಿಸಲ್ಪಟ್ಟ ಶೇರುಗಳೆಲ್ಲಾ ತುಂಬಿ ಹೋಗಿರುವುವು ಇದು ಬೇಂಕಿನ ಮೇಲಿನ ಜನತೆಯ ಮತ್ತು ಠೇವಣಾತೀದಾರರ ಗೌರವ ಮತ್ತು ವಿಶ್ವಾಸವನ್ನು ವ್ಯಕ್ತಗೊಳಿಸುವುದು. ಠೇವಣಾತಿಯ ಬಡ್ಡಿಯ ದರವು ಕಡಿಮೆ ಮಾಡಲ್ಪಟ್ಟರೂ ಠೇವಣಾತಿಯು ಬಹಳವಾಗಿ ಹೆಚ್ಚುತ್ತಿರುವುದು

ಮಿತವ್ಯಯದ ಆಡಳಿತದಲ್ಲಿಯೂ ಬ್ರೇಂಚುಗಳ ಸ್ಥಾಪನೆಯಲ್ಲಿಯೂ ದಕ್ಷಿಣ ಹಿಂದುಸ್ಥಾನದ ಬೇಂಕುಗಳು ಪ್ರಶಂಸೆ ಪಡೆದಿರುತ್ತವೆ. ಮಿ ಡಾರ್ಲಿಂಗರ ವರದಿಯ ಪ್ರಕಾರ ಪಟ್ಟಣಗಳಲ್ಲಿ ಮಾತ್ರವೇ ಅಗ್ಗವಾಗಿ ಹಣ ದೊರೆಯುವ ವ್ಯವಸ್ಥೆ ಇದೆ. ನಾವು ನಮ್ಮ ಶಾಖಗಳನ್ನು ತೆರೆಯುವ ವಿಷಯದಲ್ಲಿ ಬಹಳ ಜಾಗರೂಕತೆಯಿಂದಿದ್ದು ನಮ್ಮ ಸಹೋದರ ಸಂಸ್ಥೆಗಳೊಡನೆ ಪೋಲಾಟ ನಡಿಸದೆ, ಹೊಸಕ್ಷೇತ್ರಗಳನ್ನು ಕಂಡುಕೊಳ್ಳುವುದರಲ್ಲಿ ನಿರತರಾಗಿರುವೆವು. ಶಾಖೆಗಳನ್ನು ಸ್ಥಾಪಿಸಿದಲ್ಲೆಲ್ಲಾ ನಾವು ಒಂದೇ ಪ್ರಕಾರವಾದ ವಿಜಯ ಪಡೆದು ವಿಪರೀತ ಬಡ್ಡಿಯ ವಹಿವಾಟವು ನಿಲ್ಲಿಸಲ್ಪಡುವಂತೆ ಮಾಡಿರುವೆವು. ನಮ್ಮ 30 ಶಾಖೆಗಳು ಬೊಂಬಾಯಿಯಲ್ಲಿ ನಮ್ಮ ಒಂದು ಶಾಖೆಗೆ ಬೇಕಾಗುವಷ್ಟರ ವಹಿವಾಟನ್ನು ನಡಿಸುತ್ತಿರುವುದರಿಂದಲೇ ನಾವು ಇಲ್ಲಿ ನಮ್ಮ ಒಂದು ಶಾಖೆಯನ್ನು ತೆರೆಯಲು ಕಾರಣ ಇದು ಹೊರತು ನಮ್ಮ ಬೇಂಕಿಗೆ ಪ್ರತ್ಯೇಕವಾದ ಸ್ಥಾನವೊಂದು ಇದೆಯೆಂದು ನಾವು ನಂಬುತ್ತೇವೆ. ಕೆಲವೊಂದು ವಹಿವಾಟುಗಳಿಗೆ ಗಿರಾಕಿಗಳು ನಮ್ಮನ್ನೇ ಆಶ್ರಯಿಸುವುದು ಅನುಕೂಲವಾಗಿದ.

ಸಿಂಡಿಕೇಟಿನ ವಿಶಿಷ್ಟ ಲಕ್ಷಣಗಳಂದರೆ, ಅತ್ಯಂತ ಬಡ ಮನುಷ್ಯನೂ ಅದರ ವಹಿವಾಟುದಾರನಾಗಬಹುದು ಪ್ರತಿದಿನ ಎರಡಾಣೆಯಂತೆ ಏಳು ವರ್ಷಗಳ ವರೆಗೆ ತಮ್ಮ ಬಾಗಿಲಿಗೆ ಬರುವವರ ವಶಕೊಟ್ಟು ಮತ್ತು ಅದರ ಜವಾಬ್ದಾರಿಯಿಂದ ಸಾಲಕೊಡ ಪಡೆಯುವ ವ್ಯವಸ್ಥೆಯಿರುವ ನಮ್ಮ ಪಿಗ್ಮಿ ಸ್ಕೀಮಿನ ಉಪಯೋಗವನ್ನು ಎಂತಹ ನಿರಾಶೆ ಪಡೆಯುವ ವ್ಯಕ್ತಿಯಾದರೂ ಪಡೆದು ತನ್ನ ಜೀವನವನ್ನು ಕ್ರಮಗೊಳಿಸಿ ಮುಂದಿನ ವರ್ಷಗಳಿಗಾಗಿ ಸ್ವಲ್ಪವೇನನ್ನಾದರೂ ಉಳಿಸಿಕೊಳ್ಳಬಹುದು ನಮ್ಮ ಇತರ ಠೇವಣಾತೀ ಸ್ಕೀಮುಗಳು ನವೀನವಾದುವುಗಳಾಗಿವೆ. ಕೊಡುವಾಗ ಏನೂ ತಿಳಿಯದೆ ಕಟ್ಟಕಡೆಗೆ ಆಶ್ಚರ್ಯಕರವಾಗಿ ಅದೊಂದು ಸಂಪತ್ತನ್ನೇ ಶೇಖರಿಸಿಕೊಡುವ ಕ್ರಮ ನಮ್ಮದು. ನಮ್ಮ ಬೇಂಕಿಂಗ್ ಮತ್ತು ಇನ್ಶೂರೆನ್ಸ್ ಸ್ಕೀಮುಗಳು ಹೊಸ ಕ್ಷೇತ್ರವನ್ನೇ ತೆರೆದಿರುವುವು. ಬೊಂಬಾಯಿಯವರೂ ಈ ಹೊಸ ಯೋಜನೆಗಳ ಪ್ರಯೋಜನ ಪಡಕೊಳ್ಳಬಹುದು ನೀವೆಲ್ಲರೂ ನಮಗೆ ಬೇಂಕಿನಲ್ಲಿ ಲೆಕ್ಕ ತೆರೆದು ನಮ್ಮ ನಿಮ್ಮ ಸೇವೆ ಮಾಡುವ ಸಂದರ್ಭ ಒದಗಿಸಿಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ ನಿಮಗೆಲ್ಲರಿಗೆ, ವಿಶೇಷವಾಗಿ ಇಂದಿನ ಅಧ್ಯಕ್ಷರಿಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು.

ಅಧ್ಯಕ್ಷರ ಭಾಷಣ

ಸಿಂಡಿಕೇಟಿನ ಶಾಖೆಯನ್ನು ಬೊಂಬಾಯಿಯಲ್ಲಿ ತೆರೆಯುವಾಗ ಬೊಂಬಾಯಿ ಕೋರ್ಪರೇಶನಿನ ಮೇಯರರಾದ ಡಾಕ್ಟರ್ ಮೋಸೆಸರು ಈ ಕೆಳಗಿನ ಸಾರಾಂಶದ ಭಾಷಣವಿತ್ತಿರುವರು. ಕರ್ನಾಟಕ ಬೇರೆ ಬೇರೆ ಭಾಗಗಳಲ್ಲಿ, ಮೈಸೂರು ಸಂಸ್ಥಾನದಲ್ಲಿ ಮತ್ತು ಉತ್ತರ ಮಲಬಾರಿನಲ್ಲಿ 30 ಶಾಖೆಗಳನ್ನು ಸ್ಥಾಪಿಸಿ ಬೊಂಬಾಯಿಯಲ್ಲಿ ಈಗ ತನ್ನ ಶಾಖೆಯನ್ನು ತೆರೆದಿರುವ ಈ ಹೊಸ ಬೇಂಕಿಂಗ್ ಸಂಸ್ಥೆಯು ಸ್ವಲ್ಪ ಕಾಲದಲ್ಲಿಯೇ ಸ-ಲಭವಾಗಿ ಈ ಪಟ್ಟಣದಲ್ಲಿ ತನ್ನ ವಹಿವಾಟನ್ನು ನೆಲೆಗೊಳಿಸುವುದೆಂದು ನಿಶ್ಚಯವಾಗಿ ಹೇಳಬಹುದು. ಕರ್ನಾಟಕ ಮತ್ತು ಮೈಸೂರಿನ ಸಾವಿರಾರು ಜನರು ಬೇರೆ ಬೇರೆ ವ್ಯಾಪಾರ ವಹಿವಾಟಿನಲ್ಲಿಯೋ, ನೌಕರರಾಗಿಯೋ, ಅಥವಾ ಇನ್ನಿತರ ವೃತ್ತಿಗಳಲ್ಲಿಯೋ ಬೊಂಬಾಯಿಯಲ್ಲಿರುವರು. ಅವರ ಆವಶ್ಯಕತೆಗಳೆಲ್ಲಾ ಈ ಸಂಸ್ಥೆಯಿಂದ ತೃಪ್ತಿ ಹೊಂದದಿರಲಾರವು ಈ ಬೇಂಕು ಇತ್ತಲಾಗಿ ತನ್ನ ಶೇರು ಭಂಡವಾಳವನ್ನು ರೂ 5 ಲಕ್ಷದಿಂದ ರೂ. 10 ಲಕ್ಷಕ್ಕೇರಿಸಿದಾಗ ಸ್ವಲ್ಪ ಸಮಯದಲ್ಲಿಯೇ ಬೇಕಾದುದಕ್ಕಿಂತಲೂ ಹೆಚ್ಚಿನ ಶೇರು ಹಣಪಡೆದುದು ಬೇಂಕಿನ ಮೇಲಿನ ಜನತೆಯ ವಿಶ್ವಾಸವನ್ನು ತೋರಿಸುತ್ತದೆ ಈ ಸಂಸ್ಥೆಯ ಎಲ್ಲಾ ಚಟುವಟಿಕೆಗಳಿಗಿಂತಲೂ ಹೆಚ್ಚಾಗಿ ನನ್ನ ಮನಸ್ಸನ್ನು ಆಕರ್ಷಿಸಿದುದೆಂದರ ಅವರ ಪಿಗ್ಮಿ ಸ್ಕೀಮ್. ಠೇವಣಾತೀದಾರನ ಮನೆಬಾಗಿಲಿಂದ ಪಡೆಯುವ ಪ್ರತಿನಿತ್ಯದ ಠೇವಣಾತಿ ಇದು ಒಬ್ಬನು ಪ್ರತಿನಿತ್ಯ ಎರಡು ಆಣೆಗಳಂತೆ ಸರಿಯಾಗಿ ಠೇವಣಾತಿ ಇಡುತ್ತಾ ಬಂದರೆ ಏಳು ವರ್ಷಗಳಲ್ಲಿ ಅದು ರೂಪಾಯಿ ಮುನ್ನೂರು ಆಗುವುದು. ಇದು ತಮಗೆ ಉಳಿಸಲು ಮನಸ್ಸಿದ್ದರೂ ಅದಕ್ಕೆ ತಕ್ಕ ಅನುಕೂಲತೆ ಇಲ್ಲದ ಸುಮ್ಮನೆ ಇರುವವರಿಗೆ ಬಹಳ ಪ್ರಯೋಜನಕರವಿದೆ. ತೆರದಿದ್ದರ ದಂಡನೆಯಾಗಲಿ, ಮೊದಲಿನ ಠೇವಣಾತಿಯ ರದ್ದತಿಯಾಗಲಿ ಇವರಲ್ಲಿಲ್ಲ ಠೇವಣಾತಿಯಾಗಿ ಇಡಲ್ಪಡುವುದಕ್ಕೆಲ್ಲಾ ಬಡ್ಡಿ ಸಿಕ್ಕುವುದು. ಮತ್ತು ಒಬ್ಬನು ತೆತ್ತ ಹಣದ ಶೇಕಡಾ 90ರಷ್ಟು ಸಾಲಸಿಗುವುದು ಇದು ಒಳ್ಳೆಯದೆಂದು ಎಲ್ಲಾ ಜನರಿಗೂ ವೇದ್ಯವಾಗದಿರದು ಇಲ್ಲಿಯವರು ಇನ್ನು ಮುಂದಾದರೂ ಇದರ ಉಪಯೋಗ ಪಡೆಯುವರೆಂದು ನಂಬುತ್ತೇನೆ ಈ ಸಂಸ್ಥೆಯ ಸಂಗತಿಗಳನ್ನೆಲ್ಲಾ ಕೇಳಿದ ನನಗೆ ಇದು ಬೊಂಬಾಯಿಯಲ್ಲಿಯೂ ಜಯಶೀಲವಾಗುವುದೆಂಬುದರಲ್ಲಿ ಸಂದೇಹವಿಲ್ಲ ದೇಶವು ಮುಂದುವರಿಯುತ್ತಿರುವ ಈ ಕಾಲದಲ್ಲಿ ಇಂತಹ ಸಂಸ್ಥೆಗಳ ಮೂಲಕ ಹೆಚ್ಚಿನ ಕೆಲಸಮಾಡಲು ಸಾಧ್ಯವಿರುವುದರಿಂದ ಅವುಗಳಿಗೆ ನಾನು ಸ್ವಾಗತವೀಯುತ್ತೇನೆ ಬೇಂಕಿನಂತಹ ಸಾಲಕೊಡುವ ಸಂಸ್ಥೆಗಳು ರಾಷ್ಟ್ರದ ಸಾಂಪತ್ತಿಕ ಶರೀರದ ಬೆನ್ನೆಲುಬಾಗಿವೆ ಮತ್ತು ತನ್ನ ಗಿರಾಕಿಗಳಲ್ಲಿ ಮಿತವ್ಯಯದ ಅಭ್ಯಾಸವನ್ನುಂಟುಮಾಡಿ ಜನಸಮುದಾಯದಲ್ಲಿ ಜಾಗ್ರತೆಯನ್ನುಂಟುಮಾಡುವಂಥಾ ಪಿಗ್ಮಿ ಠೇವಣಾತಿ ಸ್ಕೀಮಿನಂತಹ ವ್ಯವಸ್ಥೆಯುಳ್ಳ ಈ ಬೇಂಕು ದೇಶದ ಹಿತಸಾಧನೆಗೆ ಹೆಚ್ಚಿನ ಸಹಾಯವಾಗಲೆಂದು ದೇವರೊಡನೆಪ್ರಾರ್ಥಿಸುತ್ತೇನೆ.

THE

PANGAL NAYAK BANK

LIMITED.

ESTABLISHED 1920.

Paid up Capital: Rs. 1,82,100/-

***Head Office*: UDIPI.**

Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc, are discounted at a nominal charge.

Current, Savings Bank and Cumulative deposits are accepted at moderate rates of interest

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ರಶ್ಯದ ಪ್ರಚಂಡ ಯುದ್ಧದ ಸಿದ್ಧತೆ

ಗುಪ್ತವಾಗಿ ದೊಡ್ಡ ಯುದ್ಧ ನೌಕೆಯ ರಚನೆ
ಗಂಡಸರು ಯುದ್ಧಕ್ಕೆ ಹೋದರೆ ಹೆಂಗಸರು ನೌಕರಿ ನೋಡುವರು

ಇದೇ ಬರುವ ನವೆಂಬರ ತಾ 7ಕ್ಕೆ ರಶ್ಯದ ಸೋವಿಯೆಟ್ ರಾಜ್ಯಭಾರ ಕ್ರಮವು ಸ್ಥಾಪಿತವಾಗಿ 20 ವರ್ಷಗಳಾದುವು. ಇಂದೀಗ ರಶ್ಯವು ಲೋಕದ ಪ್ರಬಲ ರಾಷ್ಟ್ರಗಳಲ್ಲೊಂದಾಗಿ ಗಣಿಸಲ್ಪಡುವಂತಾಗಿರುವುದು. ಅದರ ಪ್ರಾದುರ್ಭಾವವು ನೆರೆಯ ಜರ್ಮನಿ ಮತ್ತು ಜಾಪಾನುಗಳಲ್ಲಿ ಬಹಳ ತಳಮಳವುಂಟುಮಾಡಿರುವುದು. ಸೋವಿಯೆಟ್ ರಶ್ಯವನ್ನು ಹೇಗಾದರೂ ಮಾಡಿ ಬಗ್ಗುಬಡಿಯಬೇಕೆಂದು ಜರ್ಮನಿ ಜಾಪಾನುಗಳೀಗ ಒಳಗಿಂದೊಳಗೆ ನಾನಾ ಸಂಚುಗಳನ್ನು ನಡಿಸಿರುತ್ತಿರುವವು. ಆದುದರಿಂದ ಶೀಘ್ರವಾಗಿ ರಶ್ಯವು ಯುದ್ಧಕ್ಕೆ ಹೋಗಬೇಕಾಗುವ ಸಂಭವವಿದೆಯೆಂಬುದನ್ನು ಸೋವಿಯೆಟ್ ಸರಕಾರದವರು ಚೆನ್ನಾಗಿ ಮನಗಂಡು ಆತ್ಮರಕ್ಷಣೆಗಾಗಿ ಅದಕ್ಕೆ ಬೇಕಾದ ಸಿದ್ಧತೆಗಳನ್ನು ನಡಿಸಿಯೇ ಇರುವರು.

ರಶ್ಯದ ಶಾಲೆಗಳಲ್ಲಿ ಸೇನಾ ತರಬೇತಿಯು ಖಡ್ಡಾಯವಾಗಿ ಮಾಡಲ್ಪಟ್ಟಿದೆ. ಸೇನೆಗೆ ಸೇರಿಸುವ ಪೂರ್ವ ಸಿದ್ಧತೆಯಿದು. ಈ ತರಬೇತಿಯ ಮೇರೆಗೆ 1937ನೇ ವರ್ಷದ ಅಂತ್ಯದೊಳಗೆ 200,000 ತರುಣರು ನಾನಾ ವಿಧದ ಕೋವಿ, ತುಪಾಕಿಯ ಉಪಯೋಗದಲ್ಲಿ ಪ್ರವೀಣತೆಯುಳ್ಳವರಾಗುವರು. 70,000 ಮಂದಿ ವಿಮಾನಧಾಳಿ ಮತ್ತು ರಸಾಯನಿಕ ಯುದ್ಧ (ಅಂದರೆ ನಾನಾ ಪರಿಯ ವಿಷ ವಾಯು ಪ್ರಯೋಗ) ವನ್ನು ತಡೆಗಟ್ಟುವ ಕ್ರಮದಲ್ಲಿ ತಜ್ಞತೆಯನ್ನು ಪಡೆಯುವರು. 150,000 ಮಂದಿ ತರುಣರು ವಿಮಾನ ರಚನೆಯಲ್ಲಿ ತರಬೇತಿ ಹೊಂದುವರು. ಇದು ಹೊರತು 8ರಿಂದ 16 ವರ್ಷಗಳ ವರೆಗಣ 5,000,000 ಹುಡುಗ ಹುಡುಗಿಯರನ್ನು ಜಲ, ನೆಲ, ಆಕಾಶ ಯುದ್ಧ ಕ್ರಮದಲ್ಲಿ ತರಬೇತಿ ಮಾಡಲಾಗುವುದು. ಈ ಯೋಜನೆಗಳೆಲ್ಲವೂ ಬರುವ ನವೆಂಬರ ತಾ. 7ರೊಳಗೆ ಅಂದರೆ ರಶ್ಯದಲ್ಲಿ ಕ್ರಾಂತಿಯುಂಟಾದ 20ನೇ ವಾರ್ಷಿಕೋತ್ಸವವು ಜರಗುವುದರೊಳಗೆ ಜ್ಯಾರಿಗೆ ಬಂದು ಸಂಪೂರ್ಣವಾಗಬೇಕು.

ಇಷ್ಟು ಮಾತ್ರವಲ್ಲದೆ ಗಂಡಸರು ರಣರಂಗಕ್ಕೆ ಹೋಗಿ ಕಾದಾಡುತ್ತಿರುವಾಗ ಅವರ ಅನುನಿತ್ಯದ ಕೆಲಸವನ್ನು ಯಥಾಪ್ರಕಾರ ನಡಿಸಲು ರಶ್ಯದ ಸ್ತ್ರೀಯರು ಸಹ ಸ್ವಗೃಹದಲ್ಲಿಯೇ ತಯಾರಾಗುತ್ತಿರುವರು. ರಶ್ಯದ ಕ್ರಾಂತಿಯ ಸ್ಥಾಪನಾಚಾರ್ಯನಾದ ಲೆನಿನನ ವಿಧವೆ ಕ್ರುಪ್‌ಸ್ಕಾವಳ ನೇತ್ರತ್ವದಲ್ಲಿ ಸ್ತ್ರೀಯರ ತರಬೇತಿಯು ಭರದಿಂದ ನಡೆಯುತ್ತಿರುವುದು. ರಶ್ಯದ ಸ್ತ್ರೀಯರು, ಪುರುಷರು ಮಾಡುವ ಯಾವ ಕೆಲಸ ಮಾಡಲೂ ತಯಾರಿರುವರು. ಅಗತ್ಯವಿದ್ದರೆ ರಣರಂಗಕ್ಕೂ ತೆರಳಿ ವೈರಿಗಳೊಡನೆ ಕಾದಾಡಿ ಯುದ್ಧ ಮಾಡುವುದಕ್ಕೂ ಹಿಂಜರಿಯುವವರಲ್ಲ. ಅಷ್ಟೊಂದು ಕಾರ್ಯ ಪಟುಗಳೂ ಧೀರೆಯರೂ ಆಗಿರುವರವರು.

ರಶ್ಯದ ತರುಣರಿಗೆ ಸಮರ ತರಬೇತಿಯನ್ನೀಯುವ ಕೆಲಸವು ಸುವ್ಯಸ್ಥಿತವಾಗಿ ನಡೆದಿರುವುದು. ಸಾವಿರಾರು ಚಿಕ್ಕ ನಳಿಗೆಯ ರೈಫಲ್‌ಗಳು ತಯಾರಿಸಲ್ಪಟ್ಟು 6 ಮಿಲ್ಯ ತೋಟೆ ಮದ್ದು ಗುಂಡುಗಳನ್ನು ತರುಣರಿಗೆ ಹಂಚಲಾಗಿದೆ. ವಿಷ ವಾಯು ಮುಖ ರಕ್ಷೆಗಳು, ಸಾಸಿವೆ ವಾಯು ನಿರೋಧಕ ಕವಚಗಳು, ಮತ್ತು ಉರಿ ಹಚ್ಚಿಸುವ ಚಿಕ್ಕ ಇಂಜಿನುಗಳೆಲ್ಲಾ ಅಪಾರವಾಗಿ ತಯಾರಾಗುತ್ತಿವೆ. ಯುದ್ಧ ನಾವೆಯ ಮೊದಲೊಂದನ್ನು ತಯಾರಿಸಿ ಅದನ್ನು ಮೋಸ್ಕೋ ನದಿಯಲ್ಲಿ ತೇಲಿಬಿಟ್ಟು ಜಲಯುದ್ಧ ಶಿಕ್ಷಣವೀಯಲ್ಪಡುವುದು. ಇದು ಹೊರತು ಸಾರ್ವಜನಿಕರಿಗೆಲ್ಲಾ ಆಧುನಿಕ ಕ್ರಮಗಳನ್ನು ತಿಳಿಸಲು ಸೋವಿಯೆಟ್ ಸರಕಾರವು, ವಿಮಾನ ಯುದ್ಧ, ಸಿಡಿಮದ್ದಿನ ಟ್ಯಾಂಕಿಗಳ ಕದನ, ತೋಪಿನಹೋರಾಟ ಗಾಳಿ ಕೊಡೆಗಳ ಮೂಲಕವೈರಿಗಳ ಮೇಲೆ ಧಾಳಿಯ ಹಂಚಿಕೆಯೇ ಮೊದಲಾದ ಯುದ್ಧ ರೀತಿಯನ್ನು ತೋರಿಸುವ 60,000 ಅಡಿ ಉದ್ದದ ಚಲಚಿತ್ರವನ್ನು ತಯಾರಿಸಿ ರಶ್ಯದಲ್ಲೆಲ್ಲಾ ಪ್ರದರ್ಶಿಸುವ ಏರ್ಪಾಡು ಮಾಡಲಾಗಿದೆ. ಬಾಲಕರ ಉಪಯೋಗಾರ್ಥವಾಗಿ ಪ್ರದರ್ಶಿಸಲ್ಪಡುವ ಆಟದಸಾಮಾನುಗಳು ಕೂಡ ಯುದ್ಧಕ್ಕೆ ಸಂಬಂಧಿಸಿದವೇ.

ರಶ್ಯದ ಆಕಾಶ ಪಡೆಯು ಇಡೀ ಲೋಕದಲ್ಲೇ ಅತ್ಯಂತ ಪ್ರಬಲವಾದುದೆಂಬುದು ಈಗ ಲೋಕಕ್ಕೆಲ್ಲಾ ತಿಳಿದ ವಿಷಯ. ಈಗ ಅದು ಗುಪ್ತವಾಗಿ ದೊಡ್ಡ ಜಲ ಪಡೆಯೊಂದನ್ನು ಕಟ್ಟುತ್ತಿರುವುದೆಂದು ತಿಳಿದುಬಂದಿದೆ. 5 ಯುದ್ಧನಾವೆಗಳನ್ನು ಕಟ್ಟಿಕೊಡಲು ಸೋವಿಯೆಟ್ ಸರಕಾರವು ಫ್ರಾನ್ಸಿನೊಡನೆ ಕೇಳಿಕೊಂಡಿದೆ. ರಶ್ಯವು ಕೂಡಲೆ 2 ಹೊಸ ಯುದ್ಧನಾವೆಗಳನ್ನು ಕಟ್ಟುವುದರಲ್ಲಿರುವುದು.

ಬೊಂಬಾಯಿಯಲ್ಲಿ
ನವಯುಗದ ಬಿಡಿಪ್ರತಿಗಳು
ಶ್ರೀ. ವಿ. ಎಸ್. ಶಿಬ್ರುಕರ್ಾರ್,
ದಿ ನೇಶನಲ್ ಕೆನರಾ ನ್ಯೂಸ್ ಏಜನ್ಸಿ
ಇವರಲ್ಲಿ ಮಾರಾಟಕ್ಕೆ ಸಿಗುತ್ತವೆ.

The Combined Booking Agency
AND
The Joint Booking Office
MANGALORE, SOUTH KANARA.

— ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ —

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ—ಚಾರ್ಮಾಡಿ — ಕಾರ್ಕಳ
ಉಜಿರೆ (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ) — ಉಡುಪಿ
ಮಂಗಳೂರು — ಕುಂದಾಪುರ
ಪುತ್ತೂರು — ಮೂಡಬಿದ್ರೆ
ಮೂಲ್ಕಿ — ಗಂಗೊಳ್ಳಿ

ಜಿಲ್ಲೆಯ ಹೊರಗೆ—
ಮಡಿಕೇರಿ, ಮೈಸೂರು, ಸಕಲೇಶಪುರ, ಚಿಕ್ಕಮಗಳೂರು, ಮೂಡಗೆರೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿ ಗೃಹಗಳು ನಿರ್ಮಿಸಲ್ಪಡುವುವು. ನೀವು ಕಂಡಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜ್ವೊಯಿಂಟ್ ಮೆನೇಜರರಿಗೆ ತಿಳಿಸಿರಿ.

ಸ್ವೀಕಾರ ವಿಮರ್ಶೆ

ಉಗಾದಿ ಉಡುಗೊರೆ:—ಸಂಪಾದಕರು:—ಶ್ರೀಮತಿ ಆರ್. ಕಲ್ಯಾಣಮ್ಮ, ಶ್ರೀ.ಟಿ.ಎಂ. ಆರ್. ಸ್ವಾಮಿ, 'ಹಿರಿಯಣ್ಣ' ಕನ್ನಡಿಗರ ಕಣಜ. ಪ್ರಕಾಶಕರು:—ಕನ್ನಡಿಗರ ಕಣಜ, ಬೆಂಗಳೂರು. ಕ್ರೌನ್ 1/16 ಸೈಜಿನ ೩೨ ಪುಟಗಳು ಬೆಲೆ ೦ ೨ ೦.

ಇದು 'ಕನ್ನಡಿಗರ ಕಣಜ'ದ ಒಂದನೇ ಕಾಳು. ಮಕ್ಕಳಿಗಾಗಿ ಬರೆದುದು. ಶಿಶುಗೀತೆಗಳೂ ಗದ್ಯಭಾಗವೂ ಇದೆ. ಶ್ರೀ ಟಿ. ಎಂ. ಆರ್. ಸ್ವಾಮಿ, ಹೊಯ್ಸಳ ಕೆ. ವಿ. ಪುಟ್ಟಪ್ಪ ಮೊದಲಾದವರ, ಮಕ್ಕಳ ವಯೋಗುಣಕ್ಕನುಗುಣವಾಗಿ ಬರೆದ ಗೀತೆಗಳಿವೆ, ಕತೆಗಳಿವೆ. ನಾಟಕವೂ ಇದೆ. ಒಟ್ಟಾರೆ ಪುಸ್ತಕವು ಗೀತೆ, ಕತೆ, ನಾಟಕಾದಿಗಳಿಂದ ಕೂಡಿದ್ದು ಪಂಚಗಜ್ಜಾಯದಂತೆ ರುಚಿಕರವಾಗಿದೆ. 'ಕನ್ನಡಿಗರ ಕಣಜ'ದಿಂದ ಇದಕ್ಕಿಂತಲೂ ರುಚಿಕರವಾದ ಕಾಳುಗಳು ಹೊರಬಿದ್ದು ಕನ್ನಡ ಕಂದರ ಆಹಾರವಾಗಲೆಂದು ಹಾರೈಸುತ್ತೇವೆ.

ಗ್ರಾಮೋದ್ಯೋಗ ಆಂದೋಲನ: ಸಂಗ್ರಾಹಕರು ಮತ್ತು ಪ್ರಕಾಶಕರು—ಶ್ರೀ ಪಾಟೀಲ ಕಲ್ಲನಗೌಡರು, ಬಿ. ಎ. ಲೋಕಸೇವಾ ಸಂಘ, ತಡಸ. ಕ್ರೌನ್ 1/16 ಆಕಾರದ ೮—೩೭ ಪುಟಗಳು ಬೆಲೆ ೦ ೨ ೦.

ಇದು ಸೇವಾ ಪುಷ್ಪ ಗ್ರಂಥಮಾಲೆಯ ೪ನೇ ಅರಳು. ಶ್ರೀ. ಗೌಡರು ಮ. ಗಾಂಧಿಯವರ ಮತ್ತು ಜೆ. ಸಿ. ಕುಮಾರಪ್ಪನವರ ವಿಚಾರಗಳನ್ನು ಸಂಗ್ರಹಿಸಿ ಕರ್ನಾಟಕದಲ್ಲಿಯ ಗಾಂಧಿ ಸೇವಾ ಸಂಘದ ಸಮ್ಮೇಲನ ಸ್ಮಾರಕವಾಗಿ ಪ್ರಕಟಿಸಿದ್ದಾರೆ.

ಇದರಲ್ಲಿ ಗ್ರಾಮೋದ್ಯೋಗ ತತ್ವಗಳ ಹೆಚ್ಚುಗಾರಿಕೆಯನ್ನೂ ಗ್ರಾಮೋದ್ಯೋಗ ಸಂಘದಂಥ ಸಂಘಗಳ ಆವಶ್ಯಕತೆಯು ಹಳ್ಳಿಗಳಲ್ಲಿ ಎಷ್ಟಿದೆ ಎಂಬುದನ್ನೂ ಚಿತ್ರಿಸಲಾಗಿದೆ. ಹಳ್ಳಿಗಳಲ್ಲಿ ಸಂಘಗಳಾಗ ಬೇಕಾಗಿರುವ ಈ ಕಾಲದಲ್ಲಿ ಈ ಗ್ರಂಥವನ್ನು ಪ್ರಕಟಿಸಿ ಲೇಖಕರು ತುಂಬಾ ಉಪಕಾರವನ್ನು ಮಾಡಿದ್ದಾರೆ

ಕನ್ನಡ ಸಹಕಾರಿ:—ಸಹಕಾರ ತತ್ವಗಳನ್ನು ಪ್ರಚಾರ ಪಡಿಸಲು 10–12 ವರ್ಷಗಳಹಿಂದೆಜನ್ಮವೆತ್ತಿದ್ದ ಈಮಾಸಪತ್ರಿಕೆಯು ಕಳೆದ 2–3 ವರ್ಷಗಳಲ್ಲಿ ಕಾರಣಾಂತರಗಳಿಂದ ನಿಲ್ಲಿಸಲ್ಪಟ್ಟಿದ್ದು ಈಗ ಪುನಃ ಪ್ರಕಟವಾಗಹತ್ತಿದೆ. 13ನೇ ಸಂಪುಟದ 1ನೇ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಅದರಲ್ಲಿ ಸಹಕಾರ ಮತ್ತು ಸಹಕಾರ ಸಂಘಗಳ ಕುರಿತಾದ ಉಪಯುಕ್ತ ಲೇಖನಗಳಿವೆ. ಸಂಪಾದಕರು, ಶ್ರೀ. ಉಳ್ಳಾಲ ಮಂಗೇಶರಾವ್, ಬಿ. ಎ. ಎಲ್. ಟಿ. ಯವರು, ವಾರ್ಷಿಕ ಚಂದಾ ರೂ. ೧. ಮಾತ್ರ.

ಮೂಲ್ಕಿ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ ನವಮ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ಹಗಲಿಲ್ಲಾ ಹೊಟ್ಟೆ ಬಟ್ಟೆಗಾಗಿ ದುಡಿದು ರಾತ್ರಿಕಾಲದಲ್ಲಿ ಸಾಕಷ್ಟು ವಿದ್ಯಾಭ್ಯಾಸವನ್ನು ಪಡೆಯಲಾಶಿಸುವ ಬಡವರಿಗಾಗಿ ಈ ಶಾಲೆಯು ಮೂಲ್ಕಿಯ ಮಹನೀಯರ ಪ್ರೋತ್ಸಾಹದಿಂದ ಸ್ಥಾಪಿಸಲ್ಪಟ್ಟು 9 ವರ್ಷಗಳಿಂದ ವಿದ್ಯಾದಾನವನ್ನು ಮಾಡುತ್ತ ಬಂದಿದೆ. ವರ್ಷ ವರ್ಷವೂ ಇದರ ಅಭಿವೃದ್ಧಿಯಾಗುತ್ತಿರುವುದನ್ನು ಕೇಳಿ ಸಂತೋಷವಾಗುತ್ತಿದೆ. ಆರ್ಥಿಕ ದುಃಸ್ಥಿತಿಯಿಂದ ಎಷ್ಟೋ ರಾತ್ರಿ ಶಾಲೆಗಳು ಮುಚ್ಚಲ್ಪಡುತ್ತಿರುವ ಈಕಷ್ಟಕಾಲದಲ್ಲಾದರೂ ಶ್ರೀ.ಬಿ. ಭೋಜರಾಯರು ಈ ಶಾಲೆಯನ್ನು ಯೋಗ್ಯವಾಗಿ ನಡೆಸಿಕೊಂಡು ಬರುತ್ತಿರುವುದು ಸ್ತುತ್ಯವಿದೆ. ಇಂತಹ ಸಂಸ್ಥೆಗೆ ಸಹಾಯ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಶಿವಸಮಾಜ ಸಂಘದ ಕ್ರಮ ನಿಬಂಧನೆಗಳ ಪ್ರತಿಯೊಂದು ನಮ್ಮ ಬಳಿಗೆ ಬಂದಿದೆ. ಹರಿಜನರ ಏಳಿಗೆಗಾಗಿ ಉಡ್ಪಿಯಲ್ಲಿ 1932ರಲ್ಲಿ ಶಿವಸಮಾಜವೆಂಬ ಸಂಘವು ಸ್ಥಾಪಿತವಾಗಿತ್ತು. ಅದೇ ಸಂಘವು ಈಗ ರಿಜಿಸ್ತ್ರಿಮಾಡಲ್ಪಟ್ಟು ಪತಿತ ವರ್ಗದವರ ಮೇಲ್ಮೆಗಾಗಿ ದುಡಿಯ ಹತ್ತಿರುವುದು ಶ್ಲಾಘನೀಯವಿದೆ. ಈ ಸಮಾಜ ಸಂಘಕ್ಕೆ ಹರಿಜನರೆಲ್ಲರೂ ಸೇರಿ ಸಮಾಜೋದ್ಧಾರ ಕಾರ್ಯಕ್ಕೆ ನೆರವಾಗುವುದು ವಿಹಿತವಿದೆ.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದೌರ್ಬಲ್ಯ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ [illegible] ನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

ANOTHER MILESTONE

HAS BEEN PASSED BY

MESSRS PADUBIDRI BROTHERS.

In their march of unprecedented Progress and Success

THEY HAVE THE

PROUD DISTINCTION OF WINNING THE FIRST PRIZE FOR THE HIGHEST BUSINESS PRODUCTION AND HAVE FIRMLY ESTABLISHED THEIR REPUTATION FOR EFFICIENCY, ECONOMY AND SECURITY,

as Chief Agents of the East & West Insurance Co., Ltd.,

FOR

MAHARASHTRA & KARNATAKA

Applications for Agencies are solicited from Influential and Capable Gentlemen in any walk of life.

Apply sharp to:

Messrs. Padubidri Bros.,

40, Naryanlal Bansilal Mansions,

Bellasis Road, BOMBAY 8.

ಈಗ ನಮ್ಮ ಸಮಾಜದಲ್ಲಿ ಏನಾಗಿದೆ ಎಂದರೆ ಅದರ ಪ್ರತಿಯೊಂದು ಧರ್ಮವೂ ಬರೀ ಕುರುಡುಹೆಜ್ಜೆ ಆಗಿಬಿಟ್ಟಿದೆ. ಯಾವದನ್ನೇ ಮಾಡುವಾಗ ಮನುಷ್ಯನು ಮಾಡುವ ಪ್ರಶ್ನೆಯ ಸಾರಾಂಶ ಇಷ್ಟೇ. "ನಮ್ಮ ಹಿಂದಿನವರು ಹೀಗೆ ಮಾಡುತ್ತಿದ್ದರೋ?"— ಇದೇ ಅವನ ಬುದ್ಧಿಗೆ ಬೀಳುವ ಕೆಲಸವೆಂದರೆ! ಹಿಂದಿನ ರಿಕಾರ್ಡುಗಳು ಹೂಂ ಎಂದವೋ ಸಾಕಿನ್ನು ಸಿಗಲಷ್ಟೇ ತನ್ನ ಆಚಾರಕ್ಕೆ ಕೈಹಾಕಲಿಕ್ಕೆ.

ಈಗಿನ ಶಾಲೆಗಳಲ್ಲಿ ಶಿಕ್ಷಣ ಹೊಂದಿದವರದೊಂದು ರೀತಿಯಿದೆ. ಅವರು ಹಿಂದಿನ ರಿಕಾರ್ಡ್‌ಗಳನ್ನು ತಿರುವಿಹಾಕುವದಿಲ್ಲ. ಅವೆಲ್ಲವೂ "ಬರೀ ಅವಿವೇಕ"ವೇ ಈ ಬೃಹಸ್ಪತಿಗಳಿಗೆ. ಇವರು ಕೇಳುವ ಪ್ರಶ್ನೆ ಹೀಗಿದೆ "ಯುರೋಪ್‌ನಲ್ಲಿ, ಅಮೇರಿಕದಲ್ಲಿ, ಇಲ್ಲವಾದರೆ ಕೊನೆಗೆ ಜಪಾನಿನಲ್ಲಿಯಾದರೂ ಇಂಥಾ ವಿಷಯ ಸಂಭವಿಸಿದೆಯೆ?" ಸಾಮಾಜಿಕ ವಿಷಯಗಳಲ್ಲಿಯೇ ಆಗಲಿ, ಧಾರ್ಮಿಕ ವಿಷಯಗಳಲ್ಲಿಯೇ ಆಗಲಿ, ಆರ್ಥಿಕ ವಿಷಯಗಳಲ್ಲಿಯೇ ಆಗಲಿ, ರಾಷ್ಟ್ರೀಯ ವಿಷಯಗಳಲ್ಲಿಯೇ ಆಗಲಿ, ಈ ವಿದ್ಯಾವಂತ(?) ರಿಗೆ ಆ ಪ್ರಾಂತ್ಯಗಳ ಉದಾಹರಣೆ ಇಲ್ಲವಾದರೆ ಇವರ ಕೈಕಾಲುಗಳೇ ಕದಲುವದಿಲ್ಲ. ಸುಪ್ರಸಿದ್ಧ ತಂತ್ರಶಾಸ್ತ್ರ ವಿಶಾರದನಾದ ಸರ್ ಜೋನ್ ವುಡ್ ರೋಪರು 'ಇಂಥವರನ್ನು ಪಾಶ್ಚಿಮದ ಮಾನಸಪುತ್ರರು' ಎಂದಿಟ್ಟ ಹೆಸರಿಗೆ ಸಕಾರಣವಾದ ಆಕ್ಷೇಪಣೆ ಇದೆಯೆ!

ಹಿಂದೆ ನೋಡಿದರೇನು ಪಶ್ಚಿಮವನ್ನು ದಿಟ್ಟಿಸಿದರೇನು—ಇಬ್ಬರ ಹಣೆಬರೆಹವೂ ಒಂದೇ, **ಬರೀ ಅನುಕರಣ**. ಇಂಥವರ ಬುದ್ಧಿಗೆ ಹೊಸಹೊಸ ಪ್ರಶ್ನೆಗಳಿಲ್ಲ. ಪ್ರಮೇಯಗಳಿಲ್ಲ. ಇವಿಲ್ಲವಾದರೆ ಬುದ್ಧಿಗೆ ಕೆಲಸವೇ ಇಲ್ಲ. ಕೆಲಸವಿಲ್ಲದ ಅಂಗವು ಬರಬರುತ್ತ ಬತ್ತಿಹೋಗಿ ಹಾಳಾಗುವದು ಪ್ರಕೃತಿಯ ಒಂದು ನಿಯಮವೇ ಅಷ್ಟೆ? ಕೈಕಾಲುಗಳಿಗೆ ಕೆಲಕಾಲ ಕೆಲಸವನ್ನೇ ಕೊಡದೆ ನೋಡಿ. ಕ್ರಮೇಣ ಅವು ಒಣಗಿ ಕಟ್ಟಿಗೆಯಾಗುತ್ತ ಹೋಗುವವು. ಹೊಟ್ಟೆಗೆ ಸಾಕಷ್ಟು ಕೂಳುನೀರು ಹಾಕದೆ ನೋಡಿ. ಬರಬರುತ್ತ ಹಸಿವೆಯೇ ಮಂದವಾಗಿ ಹೊಟ್ಟೆಗೆ ಏನೇನೋ ರೋಗಗಳು ಬಂದು ಬಿಡುವವು. ಆಯಾ ಅಂಗಗಳಿಗೆ ತಕ್ಕ ಕೆಲಸಗಳನ್ನು ಅವುಗಳಿಂದ ಯೋಗ್ಯರೀತಿಯಿಂದ ಮಾಡಿಸಿದರೇನೇ ಅವುಗಳ ಬದುಕು ಸರಿಯಾಗಿ ಸರಲವಾಗಿ ಸಾಗುವದು. ಅದನ್ನು ಬಿಟ್ಟು ಅವುಗಳಿಗೆ ತಕ್ಕ ಕೆಲಸ ಕೊಡದೆ ಹೋದರೆ ಅವು ನಾಶವಾಗಿಯೇ ತೀರಬೇಕು. ಇದು ಕಟ್ಟಿಟ್ಟ ಪ್ರಕೃತಿನಿಯಮ. ಅದರ ಪ್ರಭಾವವನ್ನು ಯಾರೂ ತಪ್ಪಿಸಿಕೊಳ್ಳಲಾರರು.

ಹೀಗಿರುವಾಗ ಈಗ ಸಾವಿರಾರು ವರ್ಷಗಳಿಂದ ಬೀಳುಬಿದ್ದ ಭಾರತೀಯರ ಬುದ್ಧಿಯ ಗತಿಯೇನಾಗಿರಬೇಕು? ಪ್ರಶ್ನೆ ಪ್ರಮೇಯಗಳಿಂದಲೇ ಅಲ್ಲವೆ ಬುದ್ಧಿಗೆ ಕೆಲಸ ಸಿಕ್ಕುವದು? ಹಿಂದಿನವರಂತೆ ಮಾಡಿದರಾಯಿತು; ಅಥವಾ ಪಾಶ್ಚಿಮಾತ್ಯರು ಮಾಡಿದಂತೆಯೇ ಮಾಡಿದರಾಯಿತು. ಎಂದು ಭಾವಿಸಿ ನಡೆಯುವವರ ಬುದ್ಧಿಗೆ ಪ್ರಮೇಯಗಳೇ ಎಲ್ಲಿವೆ? **ಕೆಲಸವಿಲ್ಲದ** ಬುದ್ಧಿಯೇ ಕೆಲಸಕ್ಕೆ ಬಾರದ ಬುದ್ಧಿ ಎಂಬುದನ್ನು ಮಾತ್ರ ಮರೆಯಲಿಕ್ಕಾಗದು.

ಬದುಕು-ಸಾವುಗಳ ಗುಟ್ಟು

ಲೇಖಕ:—**ಪಂಡಿತ** ತಾರಾನಾಥರಾಯರು.

ಭಾರತೀಯರ ಬುದ್ಧಿಗೆ ಕೆಲಸವಿಲ್ಲ ಎಂಬ ಮಾತಿಗೆ ಅನೇಕರು ಆಕ್ಷೇಪಣೆ ತೆಗೆಯಬಹುದು. ನಮ್ಮ ಯುವಕರು ಬಿ. ಎ, ಎಮ್. ಎ, ಪಾಸ್ ಆಗುವದಿಲ್ಲವೆ? ಆಯ್. ಸಿ. ಎಸ್, ಆಯ್. ಎಮ್. ಎಸ್ ಸಿಗಿಯುವದಿಲ್ಲವೆ? ಯೂರೋಪ್ ಅಮೇರಿಕೆಗಳ ವರೆಗೆ ಹೋಗಿ ಅಲ್ಲಿಯ ಹತ್ತಾರು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವದಿಲ್ಲವೆ? 'ಜಜ್'ರಾಗಿ ನ್ಯಾಯ ಮಾಡುವದಿಲ್ಲವೆ? ಕಲೆಕ್ಟರರಾಗಿ ಆಳುವದಿಲ್ಲವೆ?—ಇತ್ಯಾದಿ ಇತ್ಯಾದಿ ಪ್ರಶ್ನೆಗಳ ಸುರಿಮಳೆಯನ್ನೇ ಅಂಥವರು ಹರಿಸಬಹುದು. ಅವರ ಪ್ರಶ್ನೆಗಳಿಗೆಲ್ಲ ಅಹುದು ಎಂದು ಉತ್ತರವನ್ನು ಕೊಡಬೇಕಾಗುವದಾದರೂ, ಅಂಥಾ ಪ್ರಶಸ್ತಿಗಳನ್ನು ಪಡೆಯುವವರ ಬುದ್ಧಿಗೆ ನೈಸರ್ಗಿಕವಾದ ಕೆಲಸ ಇಲ್ಲವೇ ಇಲ್ಲ ಎಂದು ಮತ್ತೂ ಹೇಳಲೇ ಬೇಕಾಗುತ್ತದೆ.

ಅದೇಕೆ? ಜೀವಿಯು ಪರಿಸ್ಥಿತಿಯೊಡನೆ ನೈಸರ್ಗಿಕವಾಗಿ ಕಾದಾಡುತ್ತ ಹೋರಾಡುತ್ತ ಬೆಳೆಯಿತು. ತನ್ನ ಸಂರಕ್ಷಣೆಯ ಉಪಾಯಗಳನ್ನು ಬೆಳೆಯಿಸಿತು. ಕಟ್ಟಡಗಳನ್ನು ಮಾಡಿತು. ತನ್ನ ಸಂರಕ್ಷಣೆಗೆ ತನ್ನ ನೆರೆಹೊರೆಯನ್ನು ತನ್ನಂತೆಯೇ ಮಾಡಿಕೊಳ್ಳಬೇಕು, ಹಾಗೆ ಮಾಡಿದರೆ ತನ್ನ ಸಂರಕ್ಷಣೆಯು ಇನ್ನೂ ಬಲವಾಗುವದು ಎಂದು ಜೀವಿಗೆ ಕಂಡುಬಂತು. ಇಲ್ಲಿ ಬುದ್ಧಿಯು ಬೆಳಕು ಮೊದಲು ಹರಿಯಿತು. ಆ ಬುದ್ಧಿಯಿಂದಲೇ ಸಮಾಜವು ಹುಟ್ಟಿತು, ವ್ಯಕ್ತಿ ಸಮಾಜಗಳ ಪರಸ್ಪರ ಸಂಬಂಧವು ಬೆಳೆಯುತ್ತ ಹೋಯಿತು. ಈ ಸಂಬಂಧದಿಂದ ಪರಸ್ಪರ ಸುಖಸೌಲಭ್ಯ ಸಂರಕ್ಷಣೆಗಳೂ ಬೆಳೆಯುತ್ತ ಬಂದವು. ಇಂಥಾ ಸಂಬಂಧದ ಅನುಭವವು ಬೆಳೆದಂತೆ **ಈ ಲಭ್ಯವನ್ನು ಇನ್ನೂ ಇನ್ನೂ ಕಾಪಾಡಿ ಬಲಪಡಿಸುವದೇ** ಎಲ್ಲಾ ವ್ಯಕ್ತಿಸಮಾಜಗಳ ಧ್ಯೇಯವೂ ಧರ್ಮವೂ ಸಹಜವಾಗಿಯೇ ಆಗುತ್ತ ಬಂತು.

ಪರಿಸ್ಥಿತಿಯು ಸದಾ ಒಂದೇ ರೀತಿಯಾಗಿರುವದಿಲ್ಲವಷ್ಟೆ. ಅದಕ್ಕೆ ಏರಿಳಿತಗಳಿವೆ. ಅದಕ್ಕೆ ಊರ್ಧ್ವಗತಿ ಅಧೋಗತಿಗಳಿವೆ. ಅದರ ಗತಿಯನ್ನೇ ಅನುಸರಿಸಿ ವ್ಯಕ್ತಿಸಮಾಜಗಳನ್ನು ಏಕರೀತಿಯಾಗಿ ಕಾಪಾಡುವ ರೀತಿ-ನೀತಿಗಳೇ ಸಂಸ್ಕೃತಿಯ ಜೀವಜೀವಾಳವಾದವು. ಸಕಲ ಸುಖಸೌಭಾಗ್ಯಗಳ ಬುಗ್ಗೆಯಾದ ಆ ಸಂಸ್ಕೃತಿಗೆ ಪರಿಸ್ಥಿತಿಯ ಪೆಟ್ಟು ಹತ್ತಬಾರದು ಎಂಬದೇ ಧರ್ಮದ ಧ್ಯೇಯವಾಯಿತು, ಸಾಧನವಾಯಿತು. ಅದನ್ನು ಇದಿರಿಸುವ ಶಕ್ತಿ-ವ್ಯಕ್ತಿಗಳೊಡನೆ ಹೋರಾಡುವದಕ್ಕೆ ಬೇಕಾದ ಉಪಾಯಗಳನ್ನು ಸಯುಕ್ತಿಕವಾಗಿ ಸಾಧಿಸಲು ಕಲಿಸುವದೇ ಶಿಕ್ಷಣದ ತತ್ತ್ವವಾಯಿತು, ಸಾಧನವಾಯಿತು. ವ್ಯಕ್ತಿಸಮಾಜಗಳ ಸುಖಹಿತವಿಕಾಸಮೂಲವಾದ ಆ ಸಂಸ್ಕೃತಿಯ ರಕ್ಷಣಾಭಿವೃದ್ಧಿಗಳೇ ವಿದ್ಯಾಸೂತ್ರಗಳ ಪ್ರಾಣಗಳಾದವು. ಇವುಗಳಿಗಾಗಿ ಎಂಥಾ ಸಂಗ್ರಾಮಕ್ಕಾದರೂ ತೊಡೆ ತಟ್ಟಿ ಭುಜಬಡಿದು ಹಾರಿಬೀಳುವ ಸಾಹಸಸಾಧನಗಳೂ ಆ ವಿದ್ಯಾಸೂತ್ರಗಳ ಅಂಗಗಳೇ ಆಗಿಬಿಟ್ಟವು. ವ್ಯಕ್ತಿಸಮಾಜಗಳ ವಿಕಾಸದ ಇತಿಹಾಸವನ್ನು ಪರೀಕ್ಷಿಸುವಾಗ ಪ್ರಗತಿಯು ಹೀಗೆ ಕಂಡು ಬರುತ್ತದೆ. ಮತ್ತು ಆ ಗತಿಯಲ್ಲಿ ವಿಶೇಷವೇನು ಎಂದರೆ, ಅದರಲ್ಲಿ **ನೈಜವಿದೆ, ಸ್ಥಿತಿ ಪರಿಸ್ಥಿತಿಗಳ ಹೊಂದಿಕೆಯಿದೆ,** ಆ ಹೊಂದಿಕೆಯಲ್ಲಿ ದಾಸ್ಯವಿಲ್ಲ, ಕದನವಿದೆ, ವಿಕಾಸವಿದೆ. **ಸಂಗ್ರಾಮಕ್ಕೆ ತಕ್ಕ ವಿಕಾಸ, ವಿಕಾಸಕ್ಕೆ ತಕ್ಕ ಸಂಗ್ರಾಮ, ಮತ್ತೆ ರಡರಲ್ಲಿಯೂ ಸಹಜತೆ**—ಇವೆಲ್ಲ ನಮಗೆ ಒಡೆದು ಕಾಣುತ್ತವೆ. ಸಾರಾಂಶ-ಬುದ್ಧಿಯ ಕೆಲಸವು ವ್ಯಕ್ತಿಸಮಾಜ, ಸ್ಥಿತಿ ಪರಿಸ್ಥಿತಿ, ಸಂಗ್ರಾಮ ವಿಕಾಸ ಇವುಗಳ ನೈಸರ್ಗಿಕ ಸೂತ್ರವನ್ನು ಬಿಟ್ಟುಹೋಗಲಿಲ್ಲ. ಇವುಗಳಲ್ಲೆಲ್ಲ ಸಹಜವಾದ ಸಂಬಂಧವಿದೆ, ಸಮತಾನತೆ ಇದೆ, ಎಂದೇ ಪ್ರಗತಿಯೂ ಇದೆ. (ಸಶೇಷ)

ಬೇಕಾಗಿದೆ.

ದ್ವಾರಕಾನಾಥ ಮತ್ತು ಸಿಂಹ ಕಂಪೆನಿಯವರು ತಯಾರಿಸಲಿರುವ ಕನ್ನಡ ಸಾಮಾಜಿಕ ವಾಕ್ಚಲನಚಿತ್ರದಲ್ಲಿ ಅಭಿನಯಿಸಲು ವಿದ್ಯಾವತಿಯರೂ ಮತ್ತು ರೂಪವತಿಯರೂ ಆದ ಕುಲೀನ ಯುವತಿಯರು ಬೇಕಾಗಿದೆ.

ಹೆಚ್ಚಿನ ವಿಷಯಗಳಿಗೆ ಭಾವಚಿತ್ರಗಳೊಡನೆ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಇದೇ ಮಾಹೆ 25ನೇ ತಾರೀಕಿನೊಳಗಾಗಿ ಬರೆಯಿರಿ.

Dwarakanath Simha & Co.,
FILM PRODUCERS
'LALITA' Vontikoppal
MYSORE

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಸೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩—೦—೦ (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪.

Sole Manufacturer: **Dr. D. N. JASANI,** Vittalbhai Patel Road, BOMBAY 4

ಹೆಂಡ್ತಿ ಗಂಡನಾದರೆ?

೨ನೇ ನೋಟ

[ಕಡುಬೇಸಗೆಯ ಆದೊಂದು ಆದಿತ್ಯವಾರ ಸಂಜೆ ಮನೋಹರನು ತನ್ನ ಮನೆಯ ಮುಂಭಾಗದ ಹೂದೋಟದ ನಡುವಿನ ಚಿಕ್ಕ ಅಂಗಳದಲ್ಲಿ ಕುರ್ಚಿಯಲ್ಲಿ ಕುಳಿತು ಚಿಂತಾಮಗ್ನನಾಗಿರುವನು. ಆಗ ಮನೋರಮೆಯು ಲವಂಚದ ಅಂದವಾದ ಬೀಸಣಿಗೆಯೊಂದರಲ್ಲಿ ಗಾಳಿ ಹಾಕಿಕೊಳ್ಳುತ್ತಾ ಪ್ರವೇಶಿಸಿ]

ಮನೋರಮೆ—ರಂಗ! ರಂಗ! ರಂಗ! (ಗಟ್ಟಿಯಾಗಿ ಕೂಗಿ ಕೋಪಗೊಂಡು ಬೀಸಣಿಗೆಯಿಂದ ಭರದಿಂದ ಗಾಳಿ ಹಾಕಿಕೊಳ್ಳುತ್ತಾ ಅಂಗಳದಲ್ಲಿ ಅತ್ತಿತ್ತ ತಿರುಗಾಡುವಳು)

ರಂಗ—(ಸ್ವಲ್ಪ ಹೊತ್ತಿನ ಮೇಲೆ ಹೊರಗೆ ಓಡಿಬಂದು) ಅಮ್ಮಾ! ಕರೆದಿರೋ ನನ್ನನ್ನು?

ಮನೋರಮೆ—ಎಲ್ಲಿ ಹೋಗಿದ್ದಿಯೋ ಮಂಗ! ಇಲ್ಲಿ ಬಾ! ಬಾ ಇಲ್ಲಿ!

ರಂಗ—ಬೇಡಮ್ಮ ಬೇಡ! ನನ್ನ ಕಿವಿಪಾತ್ರ ಹಿಂಡಬೇಡಿ. ಮತ್ತೇನು ಬೇಕಾದರೂ ಮಾಡಿ. ನಾನು ಹೊರಗೆ ಉಚ್ಚೆಹೊಯಿಲಿಕ್ಕೆ ಹೋಗಿದ್ದೆನಮ್ಮ! ನಿಮ್ಮ ಸ್ವರಕೇಳಿತು- ಕೂಡ್ಲೆ ಓಡಿ ಬಂದೆ.

ಮನೋರಮೆ—ಹೌದೌದು ಓಡಿ ಬಂದೆ! ನಿನಗೆ ರಾಯರ ಸಲುಗೆ ಹೆಚ್ಚಾಗಿದೆ! ಅಧಿಕಪ್ರಸಂಗಿ! ಹೋಗೀಗ; ಒಂದು ಕುರ್ಚಿ ತಾ ಹೊರಗೆ!(ಮನೋಹರನನ್ನು ದಿಟ್ಟಿಸಿ)ಏನಿದು ಬಹಳ ವಿಚಾರಮಗ್ನವಾಗಿರುವುದಿಂದು?

ಮನೋಹರ—ಏನಿಲ್ಲ, ಈ ರಾಣಿತನ ಎಷ್ಟರವರೆಗೆ ನಡೆದೀತು ಅಂತ; ಅಷ್ಟೆ.

ಮನೋರಮೆ—(ರಂಗನು ತಂದಿಟ್ಟ ಕುರ್ಚಿಯಲ್ಲಿ ದಡಕ್ಕನೆ ಕೂತು) ನಿಮ್ಮ ರಾಜತನವಿರುವ ವರೆಗೆ! ಅಲ್ಲ, ನನ್ನದೆಂತಹ ರಾಣಿತನವಪ್ಪ!

ಮನೋಹರ—ಅದೇನು ನೀತಿ ನಿನಗೊಬ್ಬಳಿಗೇನೇ ಆಗುವುದೋ? ನಮಗೆಲ್ಲಾ ಆಗುವುದಿಲ್ಲವೋ? ನಾವೆಲ್ಲ ನಿನ್ನಂತೆಯೇ ಯಾವಾಗಲೂ ಬೀಸಣಿಗೆ ಹಿಡಿದು ಮೆರೆದಾಡುತ್ತೇವೋ?

ಮನೋರಮೆ—ಅಬ್ಬಬ್ಬ! ನನ್ನ ಬೀಸಣಿಗೆಯ ಮೇಲೆ ನಿಮಗೆ ಕಣ್ಣಾಯಿತೇ? ಹುಂ, ಆಗಲಿ, ಇನ್ನೇನು ಹೇಳಿ? ನನಗೆ ಸ್ವಲ್ಪ ಸೆಕೆಜಾಸ್ತಿ; ನಾನೇನು ಮಾಡುವುದದಕ್ಕೆ? ನಿಮ್ಮನ್ನೆಲ್ಲಾ ಬೀಸಣಿಗೆ ಹಿಡಕೊಳ್ಳಬಾರದೆಂದು ಹೇಳಿದವರಾರು?

ಮನೋಹರ—ನಾವಿಬ್ಬರೂ ಹೀಗೆ ಕುರ್ಚಿಯಲ್ಲಿ ರಾಜ ರಾಣಿಯರಂತೆ ಕುಳಿತಿರುವುದನ್ನು ಯಾರಾದರೂ ನೋಡಿದರೆ ಏನು ಹೇಳಿಯಾರು?

ಮನೋರಮೆ—ಹೇಳುವುದೇನು? ಸಂಜೆ ಗಂಡ ಹೆಂಡಿರಿಬ್ಬರೂ ಒಟ್ಟಿಗೆ ಕೂತು ಗಾಳಿತೆಗೆದುಕೊಳ್ಳುತ್ತಿದ್ದಾರೆಂದು ಹೇಳಿಯಾರು; ಅಷ್ಟೆ!

ಮನೋಹರ—ಅಷ್ಟೆ! ನಿನಗೆ ಅಷ್ಟೇ ಗೊತ್ತು! ಅದಂತಿರಲಿ. ನೀನು ಮೊನ್ನೆ ನಡುರಸ್ತೆಯಲ್ಲಿ ಅರ್ಧ ಘಂಟೆ ನಿಂತು ಅರವಿಂದನೊಡನೆ ಮಾತಾಡುತ್ತಿದ್ದುದೇನನ್ನು?

ಮನೋರಮೆ—ನನಗೆ ಬೇಕಾದ ಸಂಗತಿಯನ್ನು. ಅದರಿಂದೇನಾಯಿತು?

ಮನೋಹರ—ಅದರಿಂದೇನಾಯಿತೇ? ಹೆಣ್ಣು ಹೆಂಗಸು ನೀನು ರಸ್ತೆಯಲ್ಲಿ ನಿಂತು ಹಾಗೆಲ್ಲಾ ಗಂಡಸರೊಡನೆ ಮಾತಾಡುವುದು ಸರಿಯೇ?

ಮನೋರಮೆ—ಓಹೋ ಹಾಗೆ! ಗಂಡು ಗಂಡಸು ನೀವು ಏನು ಬೇಕಾದರೂ ಮಾಡಬಹುದು! ಆದರೆ ಹೆಣ್ಣು ಹೆಂಗಸು ನಾನು, ಅದು ಮಾಡಬಾರದು, ಇದು ಮಾಡಬಾರದು; ಅಲ್ಲಿ ಹೋಗಬಾರದು, ಇಲ್ಲಿ ಹೋಗಬಾರದು; ಹಾಗೆ ಮಾತಾಡಬಾರದು, ಹೀಗೆ ಮಾತಾಡಬಾರದು! ಆಗಲಿ, ಇನ್ನೇನಾದರೂ ಉಂಟೋ ಮುಗಿಯಿತೋ ಇಲ್ಲಿಗೆ?

ಮನೋಹರ—ಬಹುಕಾಲದಿಂದ ನನ್ನೊಂದಿಗಿದ್ದು ಒಳ್ಳೇ ಅಡಿಗೆ ಮಾಡುತ್ತಿದ್ದ ಹುಡುಗನನ್ನು ಹೊರಹಾಕಿದೆ. ಈಗ ಬಂದವನಿಗೆ ಸರಿಯಾಗಿ ಅನ್ನ ಮಾಡುವುದಕ್ಕೂ ತಿಳಿಯುವುದಿಲ್ಲವಲ್ಲ?

ಮನೋರಮೆ—(ಸಿಟ್ಟಿನಿಂದ) ನಾನೇನು ಮಾಡಬೇಕು ಅದಕ್ಕೆ? ಇವನನ್ನು ಕಳುಹಿಸಿ ಇನ್ನೊಬ್ಬ ಚೆನ್ನಾಗಿ ಅಡಿಗೆ ತಿಳಿದವನನ್ನು ಕರೆತರುವುದು!

ಮನೋಹರ—ತರುವುದೆಂದರೆ ಹುಡುಗರೇನು 'ಮಾರ್ಕೆಟಿನಲ್ಲಿ' ಮಾರ ಸಿಗುವರೇ?

ಮನೋರಮೆ—ಮಾರಸಿಗದಿದ್ದರೆ ಮಾಡಿತರುವುದೊಂದು ಹುಡುಗನನ್ನು!

ಮನೋಹರ—ಪ್ರಿಯೆ, ಎಷ್ಟಾದರೂ ಹುಡುಗರು ಮಾಡಿದ ಅಡಿಗೆ ಅಷ್ಟಕ್ಕಷ್ಟೇ. ನೀನೀಗ ನಿನ್ನ ಮಿಸ್ಟ್ರೆಸ್ ಕೆಲಸ ಬಿಟ್ಟು ಈ ಹುಡುಗನಿಗೇನೇ ಅಡಿಗೆ ಮಾಡಲು ಚೆನ್ನಾಗಿ ಕಲಿಸಿ ಮನೆಯ ಜಾಗ್ರತೆ ನೋಡಿಕೊಂಡಿರಬಾರದೇಕೆ? ಅದು............ಹೊರತು............

ಮನೋರಮೆ—ಏನು ಅದುಹೊರತು? ಯಾಕೆ ಸಂದೇಹ? ಹೇಳಿಬಿಡಿ.

ಮನೋಹರ—ನೀನು ಅಷ್ಟೊಂದು 'ಫ಼ೋರ್ವರ್ಡ್' (ಮುಂದುವರಿದವಳು) ಆಗಿರಕೂಡದು ಪ್ರಿಯೆ!

ಮನೋರಮೆ—ಏತಕ್ಕಾಗಿ ಹಾಗೆನ್ನುವಿರಿ?

ಮನೋಹರ—ನಮ್ಮ ಹೃದಯ ಹೇಗಿದ್ದರೂ ಲೋಕಾಪವಾದವನ್ನು ತಪ್ಪಿಸಿಕೊಳ್ಳಬೇಕಲ್ಲ ಪ್ರಿಯೆ!

ಮನೋರಮೆ—ಏನು ಲೋಕಾಪವಾದ?

ಮನೋಹರ—ನಿನ್ನ ಕುರಿತು ಜನರು ಏನೆಲ್ಲಾ ಹೇಳುತ್ತಿರುವರೆಂದು ನೀನು ಬಲ್ಲೆಯಾ?

ಮನೋರಮೆ—ನೀವಾದರೂ ತಿಳಿದ ಬಗೆ ಹೇಗೆ?

ಮನೋಹರ—ನನ್ನ ಅಕ್ಕ ಮತ್ತು ಭಾವ ಹೇಳಿದರು.

ಮನೋರಮೆ—ಓಹೋ, ಅಕ್ಕ, ಮತ್ತು ಭಾವ ಹೇಳಿದರೆ? ಅಕ್ಕ ಮತ್ತು ಭಾವನ ಮಾತು ಕೇಳಲು ನೀವು ನನ್ನನ್ನು ಮದುವೆಯಾದುದೇ?ಸರಿ, ಸರಿ, ಏನು ಹೇಳಿದರವರು?

ಮನೋಹರ—ನೀನು ನನ್ನನ್ನು ಜನರಿದಿರಲ್ಲೆಲ್ಲಾ ಹೆಸರಿತ್ತು ಕರೆಯುವೆಯಂತೆ. ಇಚ್ಛಾನುಸಾರ ತಿರುಗಾಡುತ್ತಿವಿಯಂತೆ. ಸಿಕ್ಕಿದವರ ಮನೆಗೆ ಹೋಗಿ ಯಾರ್‍ಯಾರೊಡನೆಲ್ಲಾ ಮಾತಾಡುತ್ತಿರುವೆಯಂತೆ.

ಮನೋರಮೆ—ಹೂಂ. ಮತ್ತೇನು? ಮತ್ತೇನೆಲ್ಲಾ ಮಾಡುವೆನಂತೆ?

ಮನೋಹರ—ಮತ್ತೂ ಒಂದು ಮಾತು ಹೇಳಿದರು ಪ್ರಿಯೆ.

ಮನೋರಮೆ—ಏನು ಆ ಮಾತು ಹೇಳಿಬಿಡಿ. ಯಾಕೆ ಬಾಕಿಮಾಡುವುದು!

ಮನೋಹರ—ನಾವು ಗಂಡಹೆಂಡಿರಂತಲ್ಲವಂತೆ. ಹೆಂಡ್ತಿ ಗಂಡರಂತಂತೆ!

ಮನೋರಮೆ—ಅಂದರೆ?

ಮನೋಹರ—ಅಂದರೆ ನೀನು ಗಂಡ, ನಾನು ಹೆಂಡ್ತಿಯಂತಾಗಿರುವುದಂತೆ.

ಮನೋರಮೆ—ಈ ಅಂತೆಗಳ ಕಂತೆಗಳನ್ನೆಲ್ಲಾ ಕೇಳಿ ನೀವು ಸುಮ್ಮಗಿದ್ದಿರೇ?

ಮನೋಹರ—ಮತ್ತೇನು ಮಾಡುವುದು?

ಮನೋರಮೆ—ನಿಮಗೆಲ್ಲಾ ಅದು ಸರಿತೋರುವುದೇ?

ಮನೋಹರ—ಇಲ್ಲ.

ಮನೋರಮೆ—ಹಾಗಾದರೆ ಯಾರು ಏನು ಹೇಳಿದರೇನು?

ಮನೋಹರ—ಆದರೆ ಲೋಕಾಪವಾದಕ್ಕೆ ಬೆದರಬೇಕಲ್ಲ ಪ್ರಿಯೆ?

ಮನೋರಮೆ—ನಾವು ಯಾವುದನ್ನೂ ಯಾರನ್ನೂ ಗಣಿಸದೆ ಧೋರಿಮಡ್ಡ ಮಂಗಗಳಂತಿರಬೇಕೆಂಬ ನಿಮ್ಮ ಮಾತೆಲ್ಲ ಅಳಿಯಿತು ಈಗ? ಅವರು ಗಂಡ ಹೆಂಡಿರಂತಿರುವುದೇ? ಹೆಂಡ್ತಿ ಗಂಡರಂತಿರುವುದೇ?

ಮನೋಹರ—ಏನು ಮಾಡುವುದು? ಸಮಾಜದಲ್ಲಿರುವಾಗ ಕಣ್ಣು ಕಟ್ಟಿಗಾದರೂ ಅವರ ಕಟ್ಟುಕಟ್ಟಳೆಗಳಂತೆ ನಡೆಯಬೇಕಲ್ಲವೇ?

ಮನೋರಮೆ—ಇದನ್ನು ನೀವು ಮೊದಲೇ ಹೇಳುತ್ತಿದ್ದರೆ ನಿಮ್ಮನ್ನು ನಾನು ಮದುವೆಯಾಗುತಿದ್ದೆ? ಇಲ್ಲವಲ್ಲ? ಆಗ 'ಟ್ರೂ ಕಂಪೆನಿಯನ್‌ಶಿಪ್,' (ನಿಜವಾದ ಸಹಚರ್ಯ, ಸ್ತ್ರೀಯರಿಗೂ ಗಂಡಸರಂತೆಯೇ ಇರಬೇಕಾದ 'ಲಿಬರ್ಟಿ ಎಂಡ್ ಇಕ್ವಾಲಿಟಿ' (ಸ್ವಾತಂತ್ರ್ಯ ಮತ್ತು ಸಮಾನತೆ); ಈಗ 'ಇಂಡಿಯನ್ ಸೊಸೈಟಿಯಲ್ಲಿ' (ಹಿಂದು ಸಮಾಜದಲ್ಲಿ) ಸ್ತ್ರೀಯರನ್ನು 'ಸ್ಲೇವ್'ಗಳಾಗಿ (ದಾಸಿಯರಾಗಿ) ಕಾಣುವ ರೀತಿಯ ಕುರಿತೆಲ್ಲಾ ಉದ್ದುದ್ದ ಮಾತಾಡುತ್ತಿದ್ದಿರಲ್ಲ?

ಮನೋಹರ—ಏನು ಮಾಡುವುದು? ಮನುಷ್ಯನ ಸ್ಥಿತಿ ಹೀಗೆಯೇ ನಿಲ್ಲುವುದೆನ್ನಲಾಗುವುದೇ?

ಮನೋರಮೆ—ಅದೇನಿಲ್ಲ! ಇವತ್ತು ಮನುಷ್ಯನಾಗಿದ್ದವನು ನಾಳೆ ಮಂಗನಾಗಿ ಹೋಗಬಹುದು. ಯಾಕೆಂದರೆ ಅವನ ಮುತ್ತಾತ ಮಂಗನೇ ಅಲ್ಲವೇ? ಎಂತೆಂತಹ ವಿಚಿತ್ರ ಸಂಗತಿಗಳೆಲ್ಲಾ ನಡೆಯುತ್ತಿವೆ ಈ ಲೋಕದಲ್ಲಿ! ನಿಮ್ಮನು ಅದರಲ್ಲೊಂದೆನ್ನುವ, ಚಿಂತೆಯಿಲ್ಲ; ನಾನೇನು ಮಾಡಬೇಕೆನ್ನುವುದೀಗ ನೀವು?

ಮನೋಹರ—ಮತ್ತೇನಿಲ್ಲ; ಮಿಸ್ಟ್ರೆಸ್ ಕೆಲಸ ಬಿಡಬೇಕು. ಮನೆಯಲ್ಲಿಯೇ ಇದ್ದು ಹುಡುಗನಿಗೆ ಅಡಿಗೆಮಾಡ ಕಲಿಸಿ ಮನೆಗೆಲಸ ನೋಡಿಕೊಂಡಿರಬೇಕು. 'ಗೃಹಿಣೀ ಗೃಹ ಮುಚ್ಯತೇ'—

ಮನೋರಮೆ—ಸಾಕು ನಿಮ್ಮ ಶ್ಲೋಕಾರ್ಥ! ನಾನು ಹಾಗಿರುವುದಕ್ಕೇನೂ ಅಡ್ಡಿಯಿಲ್ಲ. ನನ್ನ ಖರ್ಚಿಗೆ ಮಾತ್ರ ಬೇಕಷ್ಟು ಹಣವನ್ನಾಗಲಿ ನನಗೆ ಬೇಕಾದ ಸಾಮಾನುಗಳನ್ನಾಗಲಿ ನೀವು ತಂದು ಕೊಡಬೇಕಾದೀತು! 'ಮತ್ತೆ ಹಾಗೆ, ಹೀಗೆ, ದುಡ್ಡಿಲ್ಲ; ಪುರುಸೊತ್ತಿಲ್ಲ'ಎಂದರೆ ನಾನು ಕೇಳಲಾರೆ! ಈಗಲೇ ಹೇಳಿದ್ದು.

ಮನೋಹರ—ನಿನಗೆ ಏನು ಬೇಕಾದರೂ ತಂದುಕೊಡುತ್ತೇನೆ ಪ್ರಿಯೆ! ಆ ಕುರಿತು ನಿನಗೆ ಯಾವ ಸಂದೇಹವೂ ಬೇಡ. ಹ್ಯಾಗೂ ನಾವಿಬ್ಬರೂ ನಮ್ಮ ದಾಂಪತ್ಯವನ್ನು ಸುಖವಾಗಿ ನಡೆಸಿದರಾಯಿತು.

ಮನೋರಮೆ—ದಾಂಪತ್ಯ ಸುಖವೆಂದರೆ ನಿಮ್ಮೊಬ್ಬರ ಸುಖವಲ್ಲವೇ? ಅದಕ್ಕೇನೂ ಅಡ್ಡಿಯಿಲ್ಲ. (ರಿಸ್ಟುವಾಚು ನೋಡಿ) ಘಂಟೆ ಆರಾಯಿತು. ನೀವು ಮಾರ್ಕೆಟಿಗೆ ಹೋಗುವುದಿಲ್ಲವೇ?

ಮನೋಹರ—ಓಹೋ ತಡವಾಯಿತು, ಹೋಗುತ್ತೇನೆ ಪ್ರಿಯೆ! ಕೋಪಿಸಿಕೊಳ್ಳಬೇಡ. ಜನಾಪವಾದ ತಪ್ಪಿಸಲೆಂದು ಮಾತ್ರ ನಾನಿಷ್ಟು ಹೇಳಿದುದು. ನಮ್ಮ ಜನರು ಅತ್ಯಂತ ಕ್ಷುದ್ರ ಬುದ್ಧಿಯವರು.

ಮನೋರಮೆ—ಸಾಕು! ಸಾಕು! ನನಗೇನೂ ನಿಮ್ಮ 'ಎಕ್ಸ್‌ಪ್ಲನೇಶನ್' (ಸಮಾಧಾನ) ಬೇಕಿಲ್ಲ. ಮಾರ್ಕೆಟಿಗೆ ಹೋಗಿ ಈಗ.

ಮನೋಹರ—ಆಯ್ತು. 'ಗುಡ್ ಈವ್ನಿಂಗ್.' ಈಗ ಬರುತ್ತೇನೆ ಪ್ರಿಯೆ!

ಮನೋರಮೆ—(ಗುಡ್ ಈವ್ನಿಂಗ್ ಕೊಡದೆ) ಯಾವಾಗ ಬೇಕಾದರೂ ಬನ್ನಿ, ನನಗೇನು? ಬರುವಾಗ ಒಂದು ಬೋಕ್ಸ್ ಕುಟ್ಟಿಕೂರ ಪೌಡರ್, ಗೊಡ್ರೆಜ್ ಸೋಪ್ ನಂಬರ್ ವನ್ ಒಂದು ಬೋಕ್ಸ್, ಮತ್ತು ಒಂದು ಚೆಂಡು ಜಾಜಿ ಹೂ ತಂದುಬಿಡಿ.

ಮನೋಹರ—ಆಯ್ತು ಪ್ರಿಯೆ, ತಪ್ಪದೆ ತರುತ್ತೇನೆ. 'ಗುಡ್ ಈವ್ನಿಂಗ್.'

ಮನೋರಮೆ—ಇನ್ನೊಂದು ಸಂಗತಿ ಮರತೆ. ಸೆಂಟು ಕರ್ಚಾಗಿ ಹೋಗಿದೆ. ಒಂದು ಬಾಟ್ಲಿ ಫಸ್ಟ್‌ಕ್ಲಾಸ್ ಸೆಂಟ್ ತರಬೇಕು.

(೧೯ನೇ ಪುಟಕ್ಕೆ ಮುಂದರಿದಿದೆ)

ರೂಪಾಯಿ 25 ಬಹುಮಾನ
ಚಕ್ರ ಬಂಧ ಸ್ಪರ್ಧೆ

ಪ್ರಥಮ ಬಹುಮಾನ ರೂಪಾಯಿ **15**	ನಂಬ್ರ ೫	ಇತರ ಬಹುಮಾನ ರೂಪಾಯಿ **10**

ಉತ್ತರ ಸ್ವೀಕಾರದ ಕೊನೆಯ ತಾ. ೧೫-೫-೩೭] [ಉತ್ತರ ಪ್ರಕಟಿಸುವ ಸಂಚಿಕೆಯ ತಾ. ೨೦-೫-೩೭.

ಒಗಟುಗಾರ:— **ಎಸ್. ರಾಘವ ಹೆಗಡೆ, ಪರ್ಕಳ.**



ಬಿಡ್ಸುಗರ ಪೆಸರು____________________

ವಿಳಾಸ ____________________

ಎಡದಿಂದ ಬಲಕ್ಕೆ — **ಸೂಚನೆಗಳು** —

1. ಲಕ್ಷ್ಮಿ
3. ಭಾಗ
4. ಮೈಸೂರಿನ ಮಾಸಪತ್ರಿಕೆಯಲ್ಲೊಂದು
9. ಸೃಥ್ವಿ
11. ರಾಮ ಪುತ್ರರಲ್ಲೊಬ್ಬ
15. ಪ್ರಮುಖ ದೇಶಭಕ್ತರಲ್ಲೊಬ್ಬ
19. ಮರದಿಂದುಂಟಾಗುವ ಒಂದು ಸಾಧನ
22. ದೇವರ ಹೆಸರು
24. ವರ್ತಮಾನ
26. ಭೂಮಿ
27. ಶ್ರೇಷ್ಠ
28. ಆಕಾಶ
30. ಯುದ್ಧ

ಮೇಲಿನಿಂದ ಕೆಳಕ್ಕೆ

2. ಮಾನವರು ಹೆಚ್ಚಾಗಿ ಇದನ್ನು ಬಯಸು
3. ಚೆಲುವು
5. ಮುಖ
6. ಮನುಷ್ಯರು ಸಾಕುವ ಪ್ರಾಣಿಗಳಲ್ಲೊಂದು
7. ಕಾಪಾಡಿ
8. ಹುಡುಕುವಿಕೆ
10. ಕರಿ
12. 4ರೂಪಾಯಿ
13. ರಸನೇಂದ್ರಿಯಗಳಲ್ಲೊಂದು
16. ಮಂಗಲಕಾರ್ಯಗಳಿಗೆ ಇದು ಬೇಕು
17. ಕಿವಿಗೊಟ್ಟು ಕೇಳು
18. ಆಶೀರ್ವದಿಸು
02. ಉಸಿರಾಟ
21. ಭಕ್ತ
23. ಮರಣ
25. ಸೇವಕ
26. ಪ್ರತಿಯೊಬ್ಬನೂ ಬಯಸುವಂಥಾದ್ದು [ತ್ತಾರೆ
29. ಮೇರೆ
31. ಬೆಲೆ

ನಿಯಮಗಳು

೧. ಪ್ರತಿ ಉತ್ತರದೊಡನೆ ಎರಡಾಣೆಯ ಟಪ್ಪಾಲುಚೀಟನ್ನು ಇಡಬೇಕು. ಅದನ್ನು ಯಾವ ಕಾರಣದಿಂದಲೂ ತಿರುಗಿ ಕೊಡಲಾಗುವುದಿಲ್ಲ. ಅಥವಾ ಬೇರೊಂದು ಸ್ಪರ್ಧೆಗೆ ಜಮೆಹಿಡಿಯುವಂತೆಯೂ ಇಲ್ಲ. ೨. ಒಬ್ಬರು ಅನೇಕ ಉತ್ತರಗಳನ್ನು ಕಳುಹಿಸಬಹುದು. ಮೊದಲನೆಯದನ್ನು ಮೇಲಿನ ಚಕ್ರಬಂಧದ ಕೂಪನಿನಲ್ಲಿಯೂ ಮಿಕ್ಕವುಗಳನ್ನು ಬೇರೆ ಕಾಗದದಲ್ಲಿಯೂ ಬರೆದು ಕಳುಹಿಸಬಹುದು. ೩. ಸ್ಪರ್ಧೆಯ ಎಲ್ಲಾ ವಿಷಯಗಳಲ್ಲಿಯೂ ಚಕ್ರಬಂಧ ಸ್ಪರ್ಧೆಯ ಸಂಪಾದಕರ ತೀರ್ಮಾನವೇ ಕೊನೆಯದಾಗಿರುತ್ತದೆ. ೪. ಈ ಸ್ಪರ್ಧೆಗೆ ಸಂಬಂಧಪಟ್ಟ ಪತ್ರವ್ಯವಹಾರಗಳನ್ನು ಎಷ್ಟು ಮಾತ್ರವೂ ಮಾಡಲಿಕ್ಕಿಲ್ಲ; ಅದಕ್ಕಾಗಿ ಮಾತುಕಥೆಯೂ ಅನಗತ್ಯವಿದೆ. ೫. ನಿಯಮಗಳನ್ನು ಪಾಲಿಸದಿರುವ ಉತ್ತರಗಳು ಅಸ್ವೀಕೃತವಾಗುವವು ೬. ನವಯುಗದ ಸಂಪಾದಕರ ಬಳಿ ಮೊಹರುಮಾಡಿಟ್ಟ ಉತ್ತರಕ್ಕೆ ಹೊಂದಿಕೆಯಾಗುವ ಉತ್ತರವೇ ಸಂಪೂರ್ಣ ಸಮರ್ಪಕ ಉತ್ತರ. ಒಂದಕ್ಕಿಂತ ಹೆಚ್ಚು ಸಂಪೂರ್ಣ ಉತ್ತರಗಳು ಬಂದರೆ ಇನಾಮನ್ನು ಸೋಟ್ಟಿ ಹಾಕಿ ಕೊಡಲಾಗುವುದು. ಆದರೆ ಎಲ್ಲರ ಹೆಸರುಗಳನ್ನು ಪ್ರಕಟಿಸಲಾಗುವುದು. ಇನಾಮನ್ನು ಬಿಡ್ಸುಗರ ಸಂಖ್ಯಾಮಾನಕ್ಕನುಗುಣವಾಗಿ ಏರಿಳಿಸಲಾದೀತು ಉತ್ತರವನ್ನು ತಾ. 15-5-37ರ ತನಕ ಸ್ವೀಕರಿಸಿ ತಾ. 20-5-37ಕ್ಕೆ ಪ್ರಕಟಿಸಲಾಗುವುದು. ಉತ್ತರವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ಮೆನೇಜರ್: ನವಯುಗ, ಉಡುಪಿ.

(೧೭ನೇ ಪೇಜಿನಿಂದ ಮುಂದುವರಿದುದು)

ಮನೋಹರ—ಅಯ್ತಪ್ಪಾ ಆಯ್ತು. ನಿನಗೆ ಬೇಕಾದ್ದನ್ನೆಲ್ಲಾ ತರುತ್ತೇನೆ. ಗುಡ್ ಈವ್ನಿಂಗ್.

ಮನೋರಮೆ—ನಾನು ಹೇಳಿದ್ದು ನಿಮಗೆಲ್ಲಾ ನೆನಪಾದೀತೆ? ಬೇಕಾದರೆ ಒಂದು ಪಟ್ಟಿ ಮಾಡಿಕೊಡುತ್ತೇನೆ.

ಮನೋಹರ—ಬೇಡ, ಬೇಡ ಪ್ರಿಯೆ. ನನಗೆಲ್ಲಾ ನೆನಪುಂಟು. ಗುಡ್ ಈವ್ನಿಂಗ್.

ಮನೋರಮೆ—ಎಲ್ಲವನ್ನೂ ನೆನಪಿನಿಂದ ತರದಿದ್ದರೆ ನೋಡಿ ಮತ್ತೆ! ಗುಡ್ ಈವ್ನಿಂಗ್. ಹುಂ ಹೋಗಿ. (ಮುಗುಳ್ನಗೆ ಬೀರುವಳು. ಮನೋಹರನು ಹರ್ಷಚಿತ್ತನಾಗಿ ಹೊರಟುಹೋಗುವನು)

ಸ್ಟೀಮರು ಸಮಯ

	ಬೊಂಬೈಯಿಂದ ಬರುವದು	ಬೊಂಬೈಗೆ ತೆರಳುವದು
ಮಂಗಳೂರು	ಗುರುವಾರ ಬೆಳಿಗ್ಗೆ 8 ಗಂಟೆ	ಶನಿವಾರ ಬೆಳಿಗ್ಗೆ 9 ಗಂಟೆ
	ಸೋಮವಾರ ಬೆಳಿಗ್ಗೆ 7 ಗಂಟೆ	ಮಂಗಳವಾರ ಬೆಳಿಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 2-30	ಶನಿವಾರ ಮಧ್ಯಾಹ್ನ 12
	ಆದಿತ್ಯವಾರ ಹಗಲು 3 ಗಂಟೆ	ಮಂಗಳವಾರ ಮಧ್ಯಾಹ್ನ 12
ಕುಂದಾಪುರ	ರವಿವಾರಹಗಲು 1 ಗಂಟೆ	ಶನಿವಾರ ಸಂಜೆ ಗಂಟೆ 3-30
		ಮಂಗಳವಾರ ಮಧ್ಯಾಹ್ನ 3-30

ಪೇಟೆ ಧಾರಣೆ

	ಮಂಗಳೂರು		ಉಡುಪಿ	
ಸಾಮಗ್ರಿಗಳು	ಇಂದ	ವರೆಗೆ	ಇಂದ	ವರೆಗೆ
ರಾಶಿ ಅಕ್ಕಿ ...	3 – 6	3—10	3— 0	3— 2
ನಾಪ್ಟಿ ...	3— 8	4 4	3 – 4	3—14
ಗುಡ್ಡ ಸಾಗ್ಗಿ ...	3—10	3 – 14	3— 0	3— 2
ಸೂರ ಅವ್ವಲ್ ಬೆಳ್ತಿಗೆ ...	4— 0	4— 4	4— 4	4— 8
ರಂಗೂನು ಬೆ. ಗೋ. ೧ಕ್ಕೆ	7— 0	7— 4	6—14	7— 8
ಗೋದಿ ಗೋಣಿ ೧ಕ್ಕೆ ...	11— 0	13— 0	12 – 0	14— 0
ತೊಗರಿ ಗೋಣಿ ೧ಕ್ಕೆ ...	9— 8	12— 8	12— 8	13— 0
ಹುರುಳಿ ಗೋಣಿ ೧ಕ್ಕೆ ...	5— 0	5— 6	4— 0	5— 8
ಕಡಲೆ ಗೋಣಿ ೧ಕ್ಕೆ ...	8— 0	12— 8	8— 8	8—12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17— 0
ಉದ್ದು ಗೋಣಿ ೧ಕ್ಕೆ ...	9— 0	9— 8	9— 0	8— 8
ಹೆಸರು ಗೋಣಿ ೧ಕ್ಕೆ ...	7 —12	8— 0	10— 0	9— 8
ಉರುಬೆಲ್ಲ ಖಂಡಿ ೧ಕ್ಕೆ...	30— 0	32— 8	20— 0	30— 0
ಉಪ್ಪು ಗೋಣಿ ೧ಕ್ಕೆ ..	4 - 2	5— 4	5— 2	5— 4
ಕೊಬ್ರಿ ಖಂಡಿ ೧ಕ್ಕೆ ...	75 — 0	84 — 0	90 — 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	26— 8	28 – 8	18 —12	20— 0
ಎಳ್ಳಿಂಡಿ ಖಂಡಿ ೧ಕ್ಕೆ ...	26 — 4	27— 8	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	6— 0	7— 0	6 - 8	6—12
ಎಳ್ಳೆಣ್ಣೆ ಮಣ ೧ಕ್ಕೆ ...	7— 0	7— 0	6 – 0	6— 4
ಚಮಿಣಿ ಎಣ್ಣೆ ಪೆಟ್ಟಿಗೆ೧ಕ್ಕೆ	6— 5	7 – 5	6— 8	6—12
ಮೋರಿಸ ಸಕ್ಕರೆ ಮ. ೧ಕ್ಕೆ	3— 2	3— 4	2—14	2—15
ಮೆಣಸು ...	2— 8	5— 0	3— 4	3— 6
ಸಾಸಿವೆ ಮುಡಿ ೧ಕ್ಕೆ ...	5— 4	5- 8	5— 8	5—12
ಕೊತ್ತಂಬರಿ ಮುಡಿ ೧ಕ್ಕೆ ...	2— 8	3— 0	2— 8	3— 4
ಕಾಳುಮೆಣಸು ಖ. ೧ಕ್ಕೆ...	100— 0	120 – 0	110 – 0	120 – 0
ಗೇರುಬೀಜ ಮು ೧ಕ್ಕೆ ...	3 – 4	3— 8	4— 6	4— 8
ಕಬ್ಬಿಣ ಖಂಡಿ ೧ಕ್ಕೆ ...	35— 0	37— 8	55— 0	60— 0
ತಾಂಮ್ರ ತಗಡು ಮ. ೧ಕ್ಕೆ	12— 4	12 — 8	17— 8	17— 8
,, ಪಾತ್ರಗಳು ಮ. ೧ಕ್ಕೆ	12 — 8	14— 0	18— 8	19— 0
ಬೀಸಿ ಬೆಳ್ಳಿ ಸೇರು ೧ಕ್ಕೆ...	13 — 8	15— 0	13 —14	14— 0
ಹಿತ್ತಾಳೆ ತಗಡು ಮ. ೧ಕ್ಕೆ	10 — 0	10 — 8	13 — 0	13— 0
ಪವನು ೧ಕ್ಕೆ ...	22— 7	22— 8	22 – 12	22—14
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45— 0	45 — 0	50— 0
ನೇಟಿವ್ ಕಾಫಿ ಖಂಡಿ ೧ಕ್ಕೆ	170 – 0	180 - 0	180 - 0	220— 0
ಫಿಬೇರಿ ಕಾಫಿ ಖಂಡಿ ೧ಕ್ಕೆ	175 — 0	195— 0	210 — 0	220— 0
ಮಡಿಕೇರಿ ಏಲಕ್ಕಿ ...	50 — 0	55— 0	70— 0	75— 0
ತುಪ್ಪ ಮಣ ೧ಕ್ಕೆ ...	17 — 0	18 — 0	14— 0	15— 0
ಏಲಕ್ಕಿ ಬೀಜ ಮಣ ೧ಕ್ಕೆ	80— 0	85— 0	70— 0	80— 0

BUY ADVERTISED GOODS.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ಮಾರ್ಕ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವಂ
ರಾಜ ಮತ್ತು ರಾಣಿಯು ಟ್ರೇಡ್‌ಮಾರ್ಕುಳ್ಳ ರಿಂಗ್‌ಮಾರ್ಕ
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇವರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦**
೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.
ಪತ್ತೆ:—ಪಂಡಿತ್ ಎ. ವಿ. ಆರಮುವ್
ಚಿಕಾಕೋಲ್

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು ಇನಾಮುಗಳು.

THIS MAN OUR CUSTOMER

THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶಿಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಪೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾನ್ನಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳ, ಧಾವಳಿ, ನಾಮರ್ದಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ಪಡಲು ಸಾದಾ 16ಮೊಳದ ಶೀರೆ 1ಕ್ಕೆ ರೂ. 16ರಿಂದ ರೂ. 35ರ ವರೆಗೆ, ಅರಿ ಕಡಮೆ 16ಮೊಳ ಕ್ಲಾವರ್ ಅಂಚು ರೂ. 10½ ಯಿಂದ ರೂ. 16, ಖಣ 1ಕ್ಕೆ ರೂ. 1½ರಿಂದ ರೂ 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ



ಧರ್ಮಾರ್ಥ ಬಹು ಮಾನಗಳು 1-4-0ಗೆ !

--- ಯಾರಿಗೆ ? ---

ರೂಪಾಯಿ 1—4—0 ಕೊಟ್ಟು 14ಸೀಜನ ಟೈಂಕೀಪರ್ಸ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3ಡಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೆಟಾಯಿಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್ ; 1 ಜತೆ ಗುಬ್ಬಿಗಳು; 1 ಫೌಂಟನ್ ಪೆನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಿಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. ಇಂದೇ ಆರ್ಡರುಕೊಡಿರಿ.

Bengal Watch Co.,
Post Box No. 12214, CALCUTTA

ಕಿರಿಯರ ಪ್ರಪಂಚದ ಪುಸ್ತಕಗಳು.

೧	ನಾಡಕಥೆ	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಧುವನ ...	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು
ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸ ದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

WANTED

Influential agents to canvass Subscribers and to get advertisements for 'Navayuga' throughout Karnataka on pay or commission basis.

For particulars apply to—

The Manager,
Navayuga, Udipi.

ಅಖಿಲ ಕನ್ನಡ ನಾಡಿಗೆ
ಪ್ರೀತಿಯಾಗಿರುವ

ಮಾಸ] ಕಥಾಕುಂಜ [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ। ಸುಮತಿಬಾಯಿ,

ಬಿ ಎ ಎಲ್ ಟಿ, ಎಫ್, ಪಿ. ಎಮ್ ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್-

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್

ಕೊಲೆರಾ ರೋಗಕ್ಕೆ ರಾಮಬಾಣ ಔಷಧ.

೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

The Coondapoor Bank, Ltd.,

Head Office:- Coondapoor. Branch Office -Brahmavar.

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ

ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ.ಶೆ 4, ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ. 4

6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ 5%

1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ 5½%

2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ಸಾಲಕೊಡಲಾಗುತ್ತವೆ. ಪಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರೆಕೊಳ್ಳಿರಿ.

Halsnad Soorappayya, ಚೆಯರ್‌ಮೇನ್.

N. Sheshagiri Rao, ಸೆಕ್ರಿಟರಿ

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಟ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೊಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೊಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬ 1ಕ್ಕೆ 1-8-0.**

ವಿಳಾಸ— **ಭವಾನಿ ಅಂಡ್ ಕಂಪೆನಿ,**
ಪೋಸ್ಟು ಬಾಕ್ಸ್ ನಂ. **237,** ಜಿ. ಟಿ. ಮದರಾಸ್.

ನಿರಖು ಠೇವಣಾತಿಗಳು

ಈ ಕೆಳಗಿನ ದರಗಳಲ್ಲಿ ಸ್ವೀಕರಿಸಲ್ಪಡುತ್ತವೆ.

3	ತಿಂಗಳಿಂದ	6	ತಿಂಗಳವರೆಗೆ	ಶೇಕಡಾ	4½
7	,,	9	,,	,,	5
10	,,	12	,,	,,	5½
13	ತಿಂಗಳು ಮತ್ತು	ಅದರ ಮೇಲೆ		,,	6[illegible]

ಮಾಹಿತಿಗೆ ವಿಚಾರಿಸಿರಿ.

SUPPLY AGENCY LTD. UDIPI

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H SHETTY at "NAVAYUGA" OFFICE, UDIPI.

Registered No. M. 3618 | ೨೦ ... ಂದಾಣೆ | NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT Etc.
APPLY TO THE MANAGER

ನವಯುಗ

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL. XVI-NO. 36 | 13-5-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧೩ ಮೇ, ೧೯೩೭ [ಸಂಚಿಕೆ ೩೬

THE
Canara Industrial & Banking
SYNDICATE, LIMITED.
ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I)

BRANCHES:

1 BANGALORE CITY
2 BELGAUM
3 BYADGI
4 BELLARY
5 ADONI
6 HOSPET
7 TALIPARAMBA
8 UPPINANGADI
9 KASARGODE
10 PAYYANUR
11 KANHANGAD
12 KARKALA
13 NANDYAL
14 PRODATTUR
15 TADPATRI
16 HUBLI
17 GADAG
18 KARWAR
19 KUMTA
20 ANKOLA
21 HONAVAR
22 BHATKAL
23 BRAHMAVAR
4 HUNGARCUTTA
25 SIRSI
26 SAGAR
27 COONDAPOOR
28 UDIPI
29 MANGALORE
30 CANNANORE

Beg to announce
Having Opened their Branch at
BOMBAY
on *Friday, the 23rd April 1937*
IN
"Premchand House"
AT
Sir Pherozshah Mehta Road.

Paid up Capital	Rs. 3,45,580
Reserves	„ 19,2,390
Deposits exceed	„ 22 lakhs
Total Working Funds exceed	„ 40lakhs

ನ್ಯೂ ಕೋಮಲ ವಿಲಾಸ ಹೋಟೆಲ್
91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ
ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ
ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.
ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಪಬ್ಲಿಕ್, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್ ಗಳಿವೆ. ಪ್ರೊಸ್‌ಫೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ। ಸುಮತಿಬಾಯಿ,

ಬಿ. ಎ ಎಲ್. ಟಿ., ಎಫ್. ಪಿ. ಎಮ್. ಎಸ್. ಭಿಷಗ್ರತ್ನ, ರಿಜಿಸ್ಟ್ರಾರ್-

The Coondapoor Bank, Ltd.,

Head Office:- **Coondapoor.** Branch Office:-**Brahmavar.**

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ.ಶೆ 4,
ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ. 4
6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5%
1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5½%
2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತವೆ. ಪಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. **N. Sheshagiri Rao,** ಸೆಕ್ರೆಟರಿ

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ

ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೊಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೊಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ

ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1 ಕ್ಕೆ 1-8-0.**

ವಿಳಾಸ— ಭವಾನಿ ಅಂಡ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. **237,** ಜೆ. ಟಿ. ಮದರಾಸ್.

ನಿರಖು ಠೇವಣಾತಿಗಳು

ಈ ಕೆಳಗಿನ ದರಗಳಲ್ಲಿ ಸ್ವೀಕರಿಸಲ್ಪಡುತ್ತವೆ.

3	ತಿಂಗಳಿಂದ	6	ತಿಂಗಳವರೆಗೆ	ಸೇಕಡಾ	4½
7	,,	9	,,	,,	5
10	,,	12	,,	,,	5½
13	ತಿಂಗಳು ಮತ್ತು ಅದರ ಮೇಲೆ			,,	6½

ಮಾಹಿತಿಗೆ ವಿಚಾರಿಸಿರಿ.

SUPPLY AGENCY LTD. UDIPI

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M 3618 ೨೦ ... ಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT Etc. APPLY TO THE MANAGER

ನವಯುಗ

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣು ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ

VOL. XVI-NO 36 13-5-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿದ ತುಮುಲನಾದ,

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧೩ ಮೇ, ೧೯೩೭ [ಸಂಚಿಕೆ ೩೬

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I)

BRANCHES:

1 BANGALORE CITY
2 BELGAUM
3 BYADGI
4 BELLARY
5 ADONI
6 HOSPET
7 TALIPARAMBA
8 UPPINANGADI
9 KASARGODE
10 PAYYANUR
11 KANHANGAD
12 KARKALA
13 NANDYAL
14 PRODATTUR
15 TADPATRI
16 HUBLI
17 GADAG
18 KARWAR
19 KUMTA
20 ANKOLA
21 HONAVAR
22 BHATKAL
23 BRAHMAVAR
24 HUNGARCUTTA
25 SIRSI
26 SAGAR
27 COONDAPOOR
28 UDIPI
29 MANGALORE
30 CANNANORE

Beg to announce
Having Opened their Branch at
BOMBAY
on *Friday, the 23rd April 1937*
IN
"Premchand House"
AT
Sir Pherozshah Mehta Road.

Paid up Capital	Rs. 3,45,580
Reserves	„ 19,2,390
Deposits exceed	„ 22 lakhs
Total Working Funds exceed	„ 40 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ. ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ರ ವರೇಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, — ಯಂ. ಆರ್. ಪೂಂಜ,
President & Manager, — ಪ್ರೆಸಿಡೆಂಟ್ ಮತ್ತು ಮೆನೇಜರ್.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು. ಪ್ರೊ. ಎಸ್. ಎಸ್ ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ — ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ⅛ ದಲ್ಲಿ) ಹೊರಡುವುದು!

ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬಯಿ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ. — ವಿ. ಪಿ. ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,

ಚಾಮರಾಜಪೇಟೆ, **ಬೆಂಗಳೂರು ನಗರ**

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... .	ರೂ. ೩—೮—೦
,, ,, (೬ ತಿಂಗಳಿಗೆ)	.. ..	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ ಎ. ಎಮ್ ಇನ್ಸ್‌ಪೆಕ್ಟರ ಬೆಳಗಾಂವ.—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩ ಟ.ಖ. ಆಣೆ, ೮ ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ. ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ಇದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು। ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ಕನ್ನಡ ಭಾಷಾಪಾಠಗಳು.

ಮೆಕ್ಮಿಲನರ ಕನ್ನಡ ಪುಸ್ತಕಾವಳಿ

ಸುಪ್ರಸಿದ್ಧವಾಗಿರುವ ಈ ಗ್ರಂಥಮಾಲೆಯನ್ನು ಈಗ ಮಕ್ಕಳ ವಯೋಧರ್ಮ, ಮನೋಧರ್ಮಗಳಿಗೆ ಅನುಸರಿಸಿ ಸಿಲೆಬಸಿನ ಎಲ್ಲ ಅಂಗಗಳನ್ನು ಒಳಗೊಂಡು, ಪದ್ಯಗಳನ್ನೂ ಸೇರಿಸಿ, ಯಾವತ್ತು ಬಗೆಯ ಅಭ್ಯಾಸಗಳನ್ನೂ ಸೂಚಿಸಿ, ವ್ಯಾಕರಣ ಮತ್ತು ಪ್ರಬಂಧರಚನೆಗೂ ಅನುಕೂಲವೂ ಉಪಯುಕ್ತವೂ ಆಗುವಂತೆ ತಿದ್ದಿ ರಚಿಸಲಾಗಿದೆ

ಶಿಕ್ಷಣವು ಅತ್ಯಾಧುನಿಕ ರೀತಿಗೆ ಒಪ್ಪುವಂತೆ ಬರೆದ ಪುಸ್ತಕಗಳು.

ಶ್ರೀಯುತರು ಕೆ ಶ್ರೀನಿವಾಸ ಕಿಣಿ, ಬಿ ಎ., ಎಲ್ ಟಿ,

ಎಮ್ ಎನ್ ಕಾಮತ್, ಉಗ್ರಾಣ ಮಂಗೇಶರಾವ್

ಮೊದಲಾದವರಿಂದ ರಚಿತವಾದವು

ಈಗಲೆ ಅಚ್ಚಾಗಿ ಪ್ರಕಟವಾದುದು!

ಬಾಲಶಿಕ್ಷೆ

ಮೊದಲನೆ ದರ್ಜೆಯ ಮಕ್ಕಳಿಗೆ ಇಷ್ಟು ಮೋಹಕರವಾದ ಮತ್ತು ಸಂಪೂರ್ಣ ಸುಲಭರೀತಿಯಿಂದ ಕನ್ನಡವನ್ನು ಓದಲೂ, ಬರೆಯಲೂ, ಸಂಭಾಷಣೆ ನಡಿಸಲೂ ಅತ್ಯುಪಯುಕ್ತವಾದ ಮತ್ತೊಂದು ಪುಸ್ತಕವೇ ಇಲ್ಲ

ಶ್ರೀ ಕೆ ಶ್ರೀನಿವಾಸ ಕಿಣಿ ಬಿ ಎ, ಎಲ್ ಟಿ.

ಶ್ರೀ ಎಮ್ ಎನ್. ಕಾಮತ್—ಇವರಿಂದ

ಒಂದು ವರ್ಷದಲ್ಲಿ ಕನ್ನಡ ಭಾಷೆಯ ಮತ್ತು ಲಿಪಿಯ ಮೂಲ ಪರಿಜ್ಞಾನವು ಅತ್ಯಾಧುನಿಕ ರೀತಿಯಲ್ಲಿ ಮಕ್ಕಳಿಗೆ ದೊರೆವುದು

ಬಾಲಶಿಕ್ಷೆ	ಕ್ರಯ 3 ಆಣೆ
ಮೊದಲನೆ ಪುಸ್ತಕ	,, 2 ,,
ಎರಡನೆ ,	, 3 ,,
ಮೂರನೆ ,,	,, 4 ,,
ನಾಲ್ಕನೆ ,,	,, 5 ,,
ಐದನೆ ,	,, 6 ,,
ಆರನೆ ,,	,, 7 ,,
ಏಳನೆ ,,	,, 8 ,,

ನೂತನ ಸಾಮಾನ್ಯ ವಿಜ್ಞಾನ ಪಾಠಗಳು.

1ನೆಯಿಂದ 5ನೆ ತರಗತಿಯ ವರೆಗೆ, ಎಳೆಯ ಮಕ್ಕಳಿಗೆ ತಿಳಿಯುವ ಹಾಗೆ ಸಿಲೆಬಸಿನಲ್ಲಿರುವ ಯಾವತ್ತು ವಿಷಯಗಳನ್ನು ತುಂಬಾ ಚಿತ್ರಮಯವಾಗಿ ಕಥಾರೂಪದಲ್ಲಿ ವಿವರಿಸಿ ಸುಲಭ ರೀತಿಯಲ್ಲಿ ಬರೆಯಲಾಗಿದೆ

ಮೊದಲನೆ	ಪುಸ್ತಕ	2ನೆ ದರ್ಜೆಗೆ	ಕ್ರಯ 3 ಆಣೆ
ಎರಡನೆ	,,	3ನೆ ,	, 3 ,
ಮೂರನೆ	,,	4ನೆ ,,	, 5 ,
ನಾಲ್ಕನೆ	,,	5ನೆ ,,	,, 6 ,,

ದೇಹದ ಅಂಗಾಂಗಗಳ ಮೋಡೆಲ್‍ಗಳೂ, ಚಿತ್ರಪಟಗಳೂ, ಮೃಗ ಪಕ್ಷಿಗಳ ಚಿತ್ರಗಳೂ ಸಿಗುವುವು

ಗಣಿತ ಪುಸ್ತಕಗಳು

ಗಣಿತಶಾಸ್ತ್ರವನ್ನು ಆಟದಂತೆ ಪ್ರತ್ಯಕ್ಷ ಬೋಧಿಸಲು ಅತ್ಯುಪಯುಕ್ತವಾಗಿರುವ ಸಚಿತ್ರ ಪುಸ್ತಕಗಳು

ಬಾಲಗಣಿತ	1ನೆ ದರ್ಜೆಯದು	.	ಕ್ರಯ 4 ಆಣೆ 6 ಪೈ
,,	2ನೆ	,,	,, 5 ,,
,,	3ನೆ	,,	,, 7 ,, 6 ,,
,,	4ನೆ	,,	, 8 , 6 ,
,,	5ನೆ	,,	,, 11 ,, 6 ,,

ಭೂಗೋಲ ಶಾಸ್ತ್ರ

ಭೂವಿವರಣ ಮೊದಲನೆಯ ಪುಸ್ತಕ	ಕ್ರಯ 2 ಆಣೆ 6 ಪೈ
,, ಎರಡನೆಯ ,,	,, 3 ,, 6 ,,

ಚಿತ್ರಮಯ ದಕ್ಷಿಣ ಕನ್ನಡ ಶ್ರೀ ಕಾರಂತರಿಂದ ನೂರಾರು ಚಿತ್ರಗಳಿಂದ ಭೂಗೋಲ ಬೋಧನೆ ಕ್ರಯ 6 ಆಣೆ 6 ಪೈ.

ದಕ್ಷಿಣ ಕನ್ನಡ ಜಿಲ್ಲೆಯ ಭೂಗೋಲ

ಶ್ರೀ. ಯು ಭವಾನಿಶಂಕರರಾಯರಿಂದ

ಅತ್ಯಾಧುನಿಕ ರೀತಿಯಲ್ಲಿ ಜನಜೀವನಕ್ಕೂ ಭೂಗೋಲ ಶಾಸ್ತ್ರಕ್ಕೂ ಇರುವ ಸಂಬಂಧದ ಮೂಲಕ ಫೋಟೋ ಚಿತ್ರಗಳೊಡನೆ ಜಿಲ್ಲಾ ಭೂಗೋಲವನ್ನು ಮನೋರಂಜಕ ರೀತಿಯಲ್ಲಿ ಬರೆದ ಪುಸ್ತಕ ಕ್ರಯ 5 ಆಣೆ 6 ಪೈ

ಕನ್ನಡ ಇಂಗ್ಲೀಷ ಗೋಳಗಳು, ನಕ್ಷೆಗಳು, ಜನಜೀವನ ಚಿತ್ರಗಳು, ವರ್ಕ್ ಬುಕ್, ಎಟ್ಲಾಸ್ ಎಲ್ಲವೂ ದೊರೆಯುತ್ತವೆ

ಕನ್ನಡ ಪದ್ಯ ಪುಸ್ತಕಗಳು.

ಸರ್ವ ಉಪಾಧ್ಯಾಯರಿಗೂ ಸುಪರಿಚಿತವಾದವು

ಮೊದಲನೆಯ ಪದ್ಯ ಪುಸ್ತಕ	ಕ್ರಯ 2 ಆಣೆ 6 ಪೈ
ಎರಡನೆಯ ,, ,,	,, 3 ,, 6 ಪೈ
ಮೂರನೆಯ ,, ,,	,, 6 ,,

ಮೆಕ್ಮಿಲನರ ಪುಸ್ತಕಾವಳಿಯ ಹಸ್ತಕಗಳು

ಭಾಷಾಜ್ಞಾನವು ನೂತನ ಪ್ರತ್ಯಕ್ಷಪ್ರಯೋಗದಿಂದ ಉಂಟಾಗುವಂತೆ ನೂತನ ವಿಧಾನದಿಂದ ಬರೆದುದು ಸುಮ್ಮನೆ ಶಬ್ದಾರ್ಥ ಮಾತ್ರವಲ್ಲ.

ಎರಡನೆ ಪುಸ್ತಕದ ಹಸ್ತಕ ಕ್ರಯ 2 ಆ. ನಾಲ್ಕನೆ ಪುಸ್ತಕ ಹಸ್ತಕ ಕ್ರಯ 2ಆ 6ಪೈ

ಮೂರನೆ , ,, ,, 2 ಆ 6ಪೈ ಐದನೆ ,, , ,, 3ಆ

ಆರನೆ ಮತ್ತು ಏಳನೆ ಪುಸ್ತಕದ ಹಸ್ತಕ ಕ್ರಯ 3ಆ 6ಪೈ

ಉಪಾಧ್ಯಾಯರು ಮಕ್ಕಳಿಗೆ ಕಲಿಸುವದೇನು? ಮಕ್ಕಳು ಪಾಠಕಲಿವಾಗ ಬರೆದುಕೊಳ್ಳುವುದೇನು? ಎಲ್ಲವೂ ಈ ಹಸ್ತಕಗಳಲ್ಲಿದೆ

ಕನ್ನಡ ವ್ಯಾಕರಣ ಪಾಠಗಳು

ಎಷ್ಟೋ ಪ್ರಸಿದ್ಧಿಗೆ ಬಂದಿರುವ ಈ ಪುಸ್ತಕಗಳ ಪುನರ್ಮುದ್ರಣ,

ಕನ್ನಡ ಮೂಲವ್ಯಾಕರಣ ಕ್ರಯ 3 ಆಣೆ ಕನ್ನಡ ಬಾಲವ್ಯಾಕರಣ ಕ್ರಯ 4ಆ 3ಪೈ

ಕನ್ನಡ ಶಾಲಾ ವ್ಯಾಕರಣ ಕ್ರಯ 5ಆ

ತಿದ್ದಿದ ಸಿಲೆಬಸಿಗೆ ಸರಿಯಾಗಿ ಇವಲ್ಲದ ಬೇರೆ ವ್ಯಾಕರಣ ಪುಸ್ತಕಗಳಿಲ್ಲ.

ಕನ್ನಡ ಕಥೆಯ ಪುಸ್ತಕಗಳು

ಭಾಷಾಜ್ಞಾನವು ಕಥಾರೂಪವಾಗಿ ಉಲ್ಲಾಸದಿಂದ ಮಕ್ಕಳಲ್ಲಿ ಹುಟ್ಟುವಂತೆ ತಿದ್ದಿದ ಸಿಲೆಬಸಿಗೆ ತಕ್ಕಂತೆ ಬರೆಯಿಸಿ ಸಚಿತ್ರವಾಗಿ ಮುದ್ರಿತವಾದುವು.

ಗಲ್ಲಿವರಯಾತ್ರೆ ಕ್ರಯ ರೂ 1 0 6 ನಾಗ್ಪೂರಿನ ಪಚೀತಿ ಕ್ರಯ ರೂ. 0 0 6

ಗಡ್ಡದ ತಿಜ್ಜಯ್ಯ ಕ್ರಯ ರೂ 0 1 1 ಸಿಂಡ್ರೆಲ್ಲಾ 3ನೇ ದರ್ಜೆಗೆ ಕ್ರಯ ರೂ 0 1 6

ಕಂಚಿಕಮ್ಮ ಕ್ರಯ ರೂ 0 1 6 ಕಾಗೆಯೂ ಗುಬ್ಬಿಯೂ 1ನೇ ದರ್ಜೆ ,, ,, 0 2 3

ಆಲಿಬಾಬನ ಕಥೆ. ಕ್ರಯ ರೂ 0 2 3 ಮೌರ್ಯ ಸಿಂಹಾಸನ ಕ್ರಯ ರೂ 0 1 0

ಸಂಯೋಗಿತೆ ಕ್ರಯ ರೂ 0 6 0, ಐತಿಹಾಸಿಕ ಕಥಾವಳಿ (ಸುವಾಸಿನಿಯ ಸಂಗ್ರಹ) ಕ್ರಯ ರೂ. 0 6 0

ಸಚಿತ್ರ ಚರಿತ್ರೆ ಪುಸ್ತಕಗಳು

ಸಚಿತ್ರ ಚರಿತ್ರೆ	Iನೆ ದರ್ಜೆ	ಕ್ರಯ 2 ಆಣೆ
	IIನೆ ,,	,, 3 ,,
	IIIನೆ ,,	3 ,,
	IVನೆ	,, 4 ,, 6 ಪೈ
	Vನೆ	, ,,
	VIನೆ ,,	6
	VIIನೆ ,,	, 1 ,,

ಸಿಲಬಸಿಗೆ ಸರಿಯಾಗಿವೆ, ಸುಲಭ ಶೈಲಿ, ಮನಮೋಹಕ ರೀತಿ

ಸಚಿತ್ರವಾಗಿವೆ ಸಂಪೂರ್ಣವಾಗಿವೆ

ಇಂಗ್ಲೀಷು ಮತ್ತು ಕನ್ನಡ

ಮಿತ್ರಾ ಕೋಪಿ ಪುಸ್ತಕಗಳು

ಎಲ್ಲ ತರಗತಿಗಳಿಗೂ ಅಗತ್ಯ ಬೇಕಾದುವು.

English Readers

NEW ERA READERS

I Primer	As. 5
II Primer	,, 6
Book I	, 8
,, II	, 10
,, III	,, 12

ನಮ್ಮ ಜಿಲ್ಲೆಯ ಹವಾಗುಣಕ್ಕೆ ಸರಿಯಾಗುವಂತೆ, ತಯಾರಿಸಿ ತರಿಸಲಾದ ಎಲ್ಲ ಬಗೆಯ ಲೇಖನ ಸಾಮಗ್ರಿಗಳು

ಗಣಿತಶಾಸ್ತ್ರ ಬೋಧನೆಗೆ ಬೇಕಾದ ಉತ್ತಮೋಪಕರಣಗಳು ಚಿತ್ರಲೇಖನಕ್ಕೆ ಬೇಕಾಗಿರುವ ಬಣ್ಣಗಳೂ, ಪನಿಲುಗಳೂ ಇತ್ಯಾದಿ

ಮಿತ್ರಾ ಎಕ್ಸರ್ ಸೈಜ್ ಮತ್ತು ನೋಟ್ ಬುಕ್ಕುಗಳು ಉತ್ತಮ ಕಾಗದ—ಕಡಿಮೆ ಬೆಲೆ

ಗೀಟುಳ್ಳ ಮತ್ತು ಇಲ್ಲದ ಬೇಕಾದಬೇಕಾದ ಸೈಜಿನವು.

ಮೇಲಿನ ಪುಸ್ತಕಗಳು

ನವಭಾರತ ಬುಕ್ ಡಿಪೋ, ಚರ್ಚ್‍ರೋಡ್, ಉಡುಪಿ ಇಲ್ಲಿಯೂ ದೊರೆಯುತ್ತವೆ.

ರಷ್ಯದ ನೂತನ ನಿರ್ಮಾಣ

ಖಾಸಗಿ ಸೊತ್ತು ಮತ್ತು ವ್ಯಾಪಾರ ಲಾಭದ ಮೇಲಿನ ಕಠಿಣ ನಿರ್ಬಂಧ.

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ ಸಂಗತಿಗಳನ್ನು ತೆಗೆದುಕೊಡಲಾಗಿದೆ.] —ಸಂ. ನ.

ರಷ್ಯದ ಕ್ರಾಂತಿಕಾರರು ಖಾಸಗಿ ಸೊತ್ತೆಂಬುದೇ ಸಂಪೂರ್ಣನಾಶವಾಗಬೇಕೆಂಬ ದೀಕ್ಷಾಬದ್ಧರಾದವರು. ಅದು ಕೂಡಾ ಹಳೆಯ ಧಾರ್ಮಿಕ ತತ್ವಗಳಂತೆ, ವೈಯಕ್ತಿಕ ಸಾಯುಜ್ಯ ಅಥವಾ ಪರಲೋಕ ಸುಖಸಾಧನೆಗಲ್ಲ. ಇಡೀ ಲೋಕದ ಮಾನವರ ಇಹಸುಖ ವ್ಯವಸ್ಥೆಗಾಗಿ. ಅವರು ಕೇವಲ ರಷ್ಯವೊಂದರಲ್ಲಿ ತಮ್ಮ ತತ್ವಗಳನ್ನು ಜ್ಯಾರಿಗೆ ತಂದು ನವಸಮಾಜರಚನೆಯನ್ನುಂಟುಮಾಡುವುದರಲ್ಲಿ ತೃಪ್ತರಿಲ್ಲ. ಇಡೀ ಲೋಕದಲ್ಲೇ ಕ್ರಾಂತಿಯನ್ನುಂಟುಮಾಡಬೇಕೆಂದೇ ಅವರ ಉದ್ದೇಶ. ಇಡೀ ಮಾನವಸಮಾಜವು ಒಂದೊಂದು ಆಫೀಸು ಮತ್ತು ಕಾರ್ಖಾನೆಯಂತಾಗಬೇಕೆಂದು ಲೆನಿನರು ಒಮ್ಮೆ ಹೇಳಿದ್ದರು. ಬೋಲ್ಸೆವಿಕರು ಯಾವುದನ್ನೂ ವೈಯಕ್ತಿಕ ವಿವೇಚನೆಗೆ ಬಿಟ್ಟುಬಿಡುವುದಿಲ್ಲ. ಯಾರಿಗಾದರೂ ತನ್ನಿಚ್ಛೆ ಪ್ರಕಾರ ನಡೆಯುವ ಸ್ವತಂತ್ರವೇ ಇಲ್ಲ. ಪ್ರತಿಯೊಬ್ಬನೂ ಸಮಾಜ ನಿಯಮಕ್ಕೆ ತಲೆ ಬಗ್ಗಬೇಕು; ಇಲ್ಲವಾದರೆ ಹೊರಹಾಕಲ್ಪಡುವನು. ಅವನು ವಿರೋಧಿಯಾಗಿ ನಿಂತರೆ ಅವನನ್ನೊಂದು ಕಾಟಕೊಡುವ ಕೀಟದೋಪಾದಿ ನಾಶಮಾಡಲಾಗುವುದು. ಬೋಲ್ಸೆವಿಕರ ಉದ್ದೇಶದಲ್ಲಿ ಪರಬ್ರಹ್ಮೇಚ್ಛೆಯ ಪ್ರೇರೇಪಣೆಯು ಸಮಾವೇಶವಾಗುವುದೇ ಇಲ್ಲ. ಅವರ ಲೋಕದಲ್ಲಿ ಈಶ್ವರನಿಗೆ ಸ್ಥಾನವೇ ಇಲ್ಲ. ಆತ್ಮೋನ್ನತಿಗಾಗಿ ಐಹಿಕಸುಖವನ್ನು ತ್ಯಜಿಸಿಬಿಡುವುದೆಂಬುದು ಸೋವಿಯೆಟರ ದೃಷ್ಟಿಯಲ್ಲಿ ಮೂರ್ಖತನದ ಪರಮಾವಧಿಯು. ಶರೀರವು ಅವರಿಗೆ ಮಿಥ್ಯೆಯಲ್ಲ ಸತ್ಯ, ಮಾಯೆಯಲ್ಲ ನಿಜ, ಭ್ರಾಂತಿಯಲ್ಲ ವಾಸ್ತವ. ಜೀವಿತವು ಪಾಪಕೂಪವಲ್ಲ; ಸುಖವೈಭವಯುಕ್ತವಾದುದು, ಸಮುಜ್ವಲವಾದುದು. ಭೌತಿಕ ಸುಖೋನ್ನತಿಯನ್ನವರು ಕಡಿಮೆ ಮಾಡುವ ಬದಲಿಗೆ ಹೆಚ್ಚಿಸಲೆತ್ನಿಸುವರು. ಇಹಸುಖತ್ಯಾಗವಲ್ಲ; ಸರ್ವರಿಗೂ ಸಮಾನ ಸುಖವ್ಯವಸ್ಥೆಯೇ ಅವರ ಮುಖ್ಯ ತತ್ವ. ಖಾಸಗಿ ಸೊತ್ತಿನ ಮೇಲಿನ ಬೋಲ್ಸೆವಿಕ ಧಾಳಿ, ಅವರ ಉದ್ದೇಶ, ಅವರ ಕಾರ್ಯದ ವ್ಯಾಪನೆ ಮತ್ತು ಸಾಧನೆಯು ಮಾನವ ಇತಿಹಾಸದಲ್ಲೇ ಅಭೂತಪೂರ್ವವಾದುದು. ಆದುದರಿಂದಲೇ ಅವರ ಪ್ರಯೋಗವು ಇಷ್ಟೊಂದು ಸಾಹಸ ಪೂರ್ಣ ಮತ್ತು ಪ್ರಚಂಡವಾಗಿರುವುದು.

ನಿಜವಾದ ಮುಕ್ತಿ ಯಾವುದು?

ರಷ್ಯದ ಸಾಮ್ಯವಾದಿ ಸಮಾಜದ ತತ್ವಗಳಂತೆ ಉತ್ಪಾದನೆಯ ಅನಾಯಕತ್ವವು ನಿವಾರಿತವಾಗುವುದು. ಒಬ್ಬ ಮಾನವನು ಇನ್ನೊಬ್ಬನ ಮೇಲೆ ನಡಿಸುವ ಸೂರೆ ವಂಚನೆಗಳು ಕೊನೆ ಹೊಂದುವವು. ಸಮಾಜದ ಆವಶ್ಯಕತೆಗಳಿಗನುಗುಣವಾಗಿ ಸಾಂಪತ್ತಿಕ ಜೀವನವು ವ್ಯವಸ್ಥಿತವಾಗುವುದು. ಮಿತಿಮೀರಿದ ಉತ್ಪಾದನೆಯಿಂದುಂಟಾಗುವ ಗಂಡಾಂತರ ಮತ್ತು ಜನತೆಗೆ ಅವುಗಳಿಂದುಂಟಾಗುವ ಸಂಕಷ್ಟವು ದೂರಮಾಡಲ್ಪಡುವುದು. ವಿದೇಶೀ ಮಾರ್ಕೆಟುಗಳ ಹುಡುಕಾಟ, ತಮ್ಮ ಅಧಿಕಾರಕ್ಕಾಗಿ ಹೋರಾಟ, ಹಣದ ವಿನಿಯೋಗಕ್ಕಾಗಿ ಮೇಲಾಟ ಇವೆಲ್ಲಾ ಅನಾವಶ್ಯಕವಾಗುವವು. ಇದರಿಂದಾಗಿ ಯುದ್ಧದ ಮುಖ್ಯ ಕಾರಣವೇ ಇಲ್ಲದಾಗುವುದು. ಶ್ರಮವು ಯಾವುದಾದರೊಂದು ಗುರಿಯ ಸಾಧನೆಯಾಗುವ ಬದಲಿಗೆ ಸಮಾಜದ ಪ್ರಾಮುಖ್ಯ ಆವಶ್ಯಕತೆಯಾಗುವುದು. ಬಡತನ, ಸಾಂಪತ್ತಿಕ ಭಿನ್ನಭೇದ, ಗಲ್ಲಿಗಳ ಗಲೀಜು ಜೀವನವೇ ಮೊದಲಾದ ಸಾಮಾಜಿಕ ದೋಷಗಳೆಲ್ಲ ಇಲ್ಲವಾಗುವವು. ಶಾರೀರಿಕ ಮತ್ತು ಮಾನಸಿಕ ಶ್ರಮಗಳೊಳಗಣ ಭೇದವು ಅಳಿದುಹೋಗುವುದು. ಸ್ತ್ರೀ ಪುರುಷರೊಳಗಣ ತಾರತಮ್ಯಗಳು ಹೋಗಿಬಿಡುವವು. ತರಗತಿಭೇದ, ನಿರ್ಬಂಧಗಳೆಲ್ಲಾ ಇಲ್ಲವೆ ಮಾನವನು ಸಮಾನತೆ ಮತ್ತು ಸಂಪೂರ್ಣ ಸ್ವಾತಂತ್ರ್ಯ ಪಡೆದು ಮುಕ್ತನಾಗುವನು. ಇದೇ ವಾಸ್ತವಿಕ ಮುಕ್ತಿ. ಶಿಕ್ಷಣವು ಶ್ರೀಮಂತರ ಹಕ್ಕಿನದಾಗಿರದೆ ಎಲ್ಲರಿಗೂ ದೊರೆಯುವಂತಾಗುವುದು. ಸಂಸ್ಕೃತಿಯು ಎಲ್ಲಾ ಜನರ ಹಕ್ಕಿನದಾಗಿ ಅನುಭವಿಸಲ್ಪಟ್ಟು ಪ್ರತಿಯೊಬ್ಬ ಮಾನವನ ಆಂತರಿಕ ಪ್ರತಿಭಾವಿಶಿಷ್ಟತೆಯು ಅರಳಿ ಸುಗಂಧ ಬೀರುವುದು. ರಾಷ್ಟ್ರೀಯ ಗಡಿ ಗೋತ್ರ, ಸರಕಾರದ ಎಲ್ಲೆಗಳೆಲ್ಲಾ ಮಾಯವಾಗುವವು. ಧರ್ಮ, ಮಂತ್ರತಂತ್ರ, ಮೂಢಾಚಾರ, ದುರ್ವಿಚಾರಗಳೆಲ್ಲಾ ಅಳಿದುಹೋಗಿ ಹೊಸ ಮನ್ವಂತರವೊಂದು, ಹೊಸ ಶಕವೊಂದು ಆರಂಭವಾಗಿ ಅದರಲ್ಲಿ ಹೊಸ ಮಾನವ ಸಿಂಹಾಸನಸ್ಥನಾಗುವನು. ರಷ್ಯದ ಕ್ರಾಂತಿಕಾರರು ಸಾಧಿಸಬೇಕೆಂದಿರುವ ಕಟ್ಟಕಡೆಯ ಗುರಿಯಿದು. ಖಾಸಗಿಸೊತ್ತು ನಿರ್ನಾಮವಾದಾಗ ಮಾತ್ರ ಈ ಗುರಿ ಮುಟ್ಟಬಹುದೆಂದು ಅವರ ನಿರ್ಧಾರ. ಆದುದರಿಂದ ಪ್ರಕೃತದ ಪರಿಸ್ಥಿತಿಯಲ್ಲಿ ಅವರು ಲೋಕದಲ್ಲಿ ಅದರ ಅಸ್ತಿತ್ವವನ್ನು ನಿರ್ವಾಹವಿಲ್ಲದೆ ಸಹಿಸಿಕೊಳ್ಳುವರಾದರೂ ಅದರ ಎಲುಬುಗಳಿಗೆ ಸ್ವಲ್ಪವಾದರೂ ಮಾಂಸವು ಹೆಚ್ಚಾಗಿ ಸೇರದಂತೆ, ಅದರ ರಕ್ತವು ಹೆಚ್ಚಿಸಲ್ಪಡದಂತೆ ನೋಡುವರು. ಅದನ್ನೀಗ ಅವರು ಹಿಡಿದು ಸಾಮಾಜಿಕ, ಸಾಂಪತ್ತಿಕ ಮತ್ತು ರಾಜಕೀಯ ನಿರ್ಬಂಧಗಳ ಸಂಕೋಲೆಗಳಿಂದ ಬಿಗಿದಿಟ್ಟಿದ್ದಾರೆ. ಎಚ್ಚರದಿಂದ ನೋಡಿಕೊಂಡು, ಪಳಗಿಸಿ, ಅರೆಹೊಟ್ಟೆಯಲ್ಲಿರಿಸಿ ಅಗತ್ಯಬಂದಾಗ ಹೆಚ್ಚಿನ ಯಾವ ಶ್ರಮ ಮತ್ತು ಪ್ರಯತ್ನವಿಲ್ಲದೆ ಉಸಿರುಗಟ್ಟಿಸಿ ಕೊಲ್ಲಲಿದ್ದಾರೆ.

ಲಾಭವು ಎಂದಿಗೂ ಸೇಕಡಾ ೫೦ಕ್ಕಿಂತ ಹೆಚ್ಚಬಾರದು

ಸೋವಿಯೆಟ್ ಸರಕಾರದವರು ಖಾಸಗಿ ಸೊತ್ತಿನಮೇಲೆ ಹೊರಿಸಲ್ಪಟ್ಟಿರುವ ಸಾಂಪತ್ತಿಕ ರಚನೆಯೇ ಅದನ್ನು ಹತೋಟಿಯಲ್ಲಿರಿಸುವಂತಹದಿರುವುದು. ಕರಗಳ ಕುರಿತು ವಿಚಾರಿಸಿದರೆ, ಕೆಲವೊಂದು ಕರಗಳನ್ನು ಸಾಮ್ಯವಾದಿ ತತ್ವಗಳನ್ನು ಸ್ವೀಕರಿಸಿ ಸೋವಿಯೆಟ್ ಸಮಾಜಕ್ಕೆ ಸೇರಿದವರೂ ಖಾಸಗಿ ಸೊತ್ತನ್ನು ಯಥಾಪ್ರಕಾರವಾಗಿಟ್ಟುಕೊಂಡಿರುವವನಂತೆಯೇ ತೆರಬೇಕಾದರೂ ಅವರು ಸರಕಾರದಿಂದ ಪಡೆಯುವ ಯಾವ ಅನುಕೂಲತೆಗಳನ್ನೂ ಅವನು ಪಡೆಯಲಾರನು. ಸೋವಿಯೆಟ ಸಮಾಜಕ್ಕೆ ಸೇರಿದವರು ಕೂಡಾ ಆದಾಯ ತೆರಿಗೆಗಳನ್ನು ತೆರುವರು. ಆದರೆ ಸ್ಥಳಬಾಡಿಗೆಯ ವಿಷಯದಲ್ಲಿ ಅವರಿಗೆ ಡಿಸ್ಕೌಂಟ್ ಕೊಡಲಾಗುವುದು. ಅವರಿಗೆ ಸರಕಾರದ ಬೇಂಕುಗಳಿಂದ ಸುಲಭವಾಗಿ ಸಾಲದೊರೆಯುವುದು. ಸಾಮಾನುಗಳನ್ನು ಹಂಚುವ ಸರಕಾರದ ಏಜನ್ಸಿಗಳು ಮೊದಲಾಗಿ ಸೋವಿಯೆಟ್ ಸಮಾಜಕ್ಕೆ ಸೇರಿದವರಿಗೆ ಸಾಮಾನುಗಳನ್ನೀಯುವವು. ಖಾಸಗಿ ಸೊತ್ತುವಾದಿಗೆ ಇಂತಹ ಅನುಕೂಲತೆ ಕೊಡಲ್ಪಡುತ್ತಿದ್ದರೆ ಅವನು ಬಹಳ ಅದೃಷ್ಟಶಾಲಿಯೆಂದು ಪರಿಗಣಿಸಿಕೊಳ್ಳುತ್ತಿದ್ದನು. ಆದಾಯ ತೆರಿಗೆಯೇ ಅವನ ಹೆಚ್ಚಿನ ಆದಾಯವನ್ನು ನುಂಗಿ ಅವನನ್ನು ಕಂಗೆಡಿಸಿಬಿಡುವುದು. ರಾಷ್ಟ್ರೀಯವಾಗಿ ಹೊರಿಸಲ್ಪಡುವ ಆದಾಯತೆರಿಗೆಯು ಮೊದಲಿನ 1000 ರುಬುಲುಗಳ ಮೇಲೆ ಮಿತವಾಗಿಯೇ ಇದೆ. ಆದರೆ ಆದಾಯವು ಹೆಚ್ಚುತ್ತ ಹೋದಂತೆ ಇದು ವಿಪರೀತವಾಗಿ ಅಧಿಕವಾಗುತ್ತದೆ. ಮೊದಲಿನ 1000 ರುಬುಲುಗಳ ಮೇಲಿನ ಆದಾಯತೆರಿಗೆ ಸೇಕಡಾ 3 ಮಾತ್ರ, ಆ ಮೇಲಿನ ಸಾವಿರಗಳಿಗೆ ಈ ತೆರಿಗೆಯು ಹೆಚ್ಚುತ್ತ ಹೋಗಿ, 10 ಸಾವಿರ ರುಬುಲುಗಳ ಮೇಲಿನ ಆದಾಯ ತೆರಿಗೆ ಸೇಕಡಾ 25 ಆಗುವುದು. ಆದಾಯವು 24,000 ರುಬುಲುಗಳಾಗಿರುವಾಗ ತೆರಿಗೆಯು ಅದರ ಮೂರನೇ ಒಂದು ಪಾಲಾಗುವುದು. 21 ಸಾವಿರಕ್ಕಿಂತಲೂ ಹೆಚ್ಚಾದಾಗ ತೆರಿಗೆಯು ಸೇಕಡ 50 ಆಗುವುದು. ಇದು ಹೊರತು ಸ್ಥಳೀಯ ತೆರಿಗೆ ಇನ್ನು ಬೇರೆಯಿದೆ. ಇದು ರಾಷ್ಟ್ರೀಯ ತೆರಿಗೆಯ ಕಾಲು ಪಾಲಷ್ಟಾಗಿರುವುದು. ಖಾಸಗಿ ಸೊತ್ತುವಾದಿಯ ಮೇಲಿನ ಕರವು ಇಷ್ಟೇ ಅಲ್ಲ. ಅವನ ಲಾಭದ ಮೇಲೆ ಹೆಚ್ಚಿನ ತೆರಿಗೆಯು ಪ್ರತ್ಯೇಕವಾಗಿ ಹೊರಿಸಲ್ಪಡುತ್ತದೆ. ರಷ್ಯದಲ್ಲಿ ಖಾಸಗಿ ವ್ಯಾಪಾರಿಗಳು ತಮ್ಮ ವಸ್ತುಗಳಿಂದ ಇಂತಿಷ್ಟೇ ಪ್ರಮಾಣದಲ್ಲಿ ಲಾಭಪಡೆಯಬೇಕೆಂದು ಕಾನೂನಿರುವುದು. ಈ ಪ್ರಮಾಣಕ್ಕಿಂತ ಹೆಚ್ಚಿನ ಲಾಭ ಪಡೆದರೆ ಅದು ವಿಪರೀತ ಲಾಭವಾಗಿ ಪರಿಗಣಿಸಲ್ಪಡುವುದು. ಈ ಆದಾಯವು 1000 ರುಬುಲು ಮಾತ್ರವಾಗಿ ಕೇವಲ ಸೇಕಡ 10ರಷ್ಟರ ಲಾಭ ಮಾತ್ರವೆಂದಾದರೆ ಅದರ ಮೇಲೆ ಸೇಕಡ 6ರಷ್ಟು ಮಾತ್ರ ಕರಹೊರಿಸಲಾಗುವುದು. ಪರಂತು ಈ 1000 ರುಬುಲುಗಳು ಸೇಕಡ 20ರಷ್ಟರ ಲಾಭವೇದಾದರೆ ಅದರ ಮೇಲಿನ ತೆರಿಗೆ ಸೇಕಡ 10ರಷ್ಟಾಗುವುದು. ಈ ವಿಪರೀತ ಲಾಭದ ಪ್ರಮಾಣವು ಹೆಚ್ಚಾದಂತೆ ಅದರ ಮೇಲಿನ ತೆರಿಗೆಯು ತೀವ್ರವಾಗಿ ಹೆಚ್ಚುತ್ತಾ ಹೋಗುವುದು. ಆದರೆ ಯಾವ ಸಂದರ್ಭದಲ್ಲೂ ಈ ವಿಪರೀತ ಲಾಭವು ಸೇಕಡಾ 50ಕ್ಕಿಂತ ಹೆಚ್ಚಾಗಬಾರದು. ಹೆಚ್ಚಾದರೆ ಅವನಿಗೆ ಭಯಂಕರ ದಂಡನೆ ವಿಧಿಸಲಾಗುವುದು. ಸೇಕಡ 50ಕ್ಕಿಂತಲೂ ಮಿಕ್ಕಿದ ಲಾಭ ಪಡೆದು ರಷ್ಯದ ಕಾನೂನನ್ನು ಉಲ್ಲಂಘಿಸಿದುದಕ್ಕಾಗಿ ಹಲವರ ಸೊತ್ತುಗಳನ್ನು ಸರಕಾರವು ವಶಪಡಿಸಿಕೊಂಡು ಅವರನ್ನು ಯಾವುದಾದರೊಂದು ಮೂಲೆಗೆ ಗಡಿಪಾರುಮಾಡಿರುವದು.

ಇಂತಹ ಕಠಿಣ ನಿರ್ಬಂಧ ಮತ್ತು ಮಿತಮೀರಿದ ತೆರಿಗೆಯಿಂದಾಗಿ ಖಾಸಗಿ ವ್ಯಾಪಾರಿಗೆ, ರಷ್ಯದ ಸೋವಿಯೆಟ್ ಸಮಾಜಕ್ಕೆ ಸೇರಿದ ಸಾಮೂಹಿಕ ವ್ಯಾಪಾರಿಗಳೊಡನೆ ಸ್ಪರ್ಧಿಸಲು ಪ್ರಯಾಸವಾಗುವುದು. ಇದು ಹೊರತು ಅವನಿಗೆ ಇನ್ನೂ ಕೆಲವು ಆತಂಕಗಳಿರುವವು. ಅವನು ತನ್ನ ನಿವಾಸಕ್ಕಾಗಿ ಬಾಡಿಗೆಕೊಡಬೇಕಾಗಿರುವುದು. ಮೋಸ್ಕೋದಂತಹ ದೊಡ್ಡ ಪಟ್ಟಣದಲ್ಲಿ ಪ್ರತಿಯೊಬ್ಬನಿಗೆ ವಾಸಿಸಲು ಸರ್ವಸಾಧಾರಣವಾಗಿ ಕೊಡಲ್ಪಡುವ ಸ್ಥಳವೆಂದರೆ 16 ಚಚ್ಚೌಕ ಗಜ. ಒಬ್ಬ ವ್ಯಾಪಾರಿಯು ಅದಕ್ಕೆ 20ರಿಂದ 40 ರುಬುಲುಗಳ ವರೆಗೆ ಬಾಡಿಗೆ ತೆರಬೇಕಾಗುವುದು. ಅವನುವಾಸಿಸುವ ಸ್ಥಳವು 18 ಗಜಕ್ಕಿಂತಮಿಕ್ಕಿದರೆ ಹೆಚ್ಚಿಗೆಯಾದಪ್ರತಿಯೊಂದು ಗಜಕ್ಕೆ ಮೊದಲಿಗಿಂತ 3ಪಾಲುಹೆಚ್ಚಿಗೆ ಕೊಡಬೇಕಾಗುವುದು. ಅಂದರೆ ಯಾರ್ಡಿಗೆ 60ರಿಂದ 120 ರುಬುಲುಗಳ ವರೆಗೆ ತೆರಬೇಕಾಗುವುದು. ಸೋವಿಯೆಟ್ ಸಮಾಜಕ್ಕೆ ಸೇರಿದವರು ಇಷ್ಟೊಂದು ತೆರಬೇಕಾಗಿಲ್ಲ. ಖಾಸಗಿ ವ್ಯಾಪಾರಿಯು ತನ್ನ ಮಕ್ಕಳನ್ನು ಶಾಲೆಗೆ ಸೇರಿಸಬೇಕಾದರೆ ಹೆಚ್ಚಿನ ಸಂಬಳ ತೆರಬೇಕು. ಈ ಸಂಬಳವು ಅವನ ಆದಾಯದ ಪ್ರಕಾರ ನಿಶ್ಚೈಯಿಸಲ್ಪಡುವುದು. ಖಾಸಗಿ ವ್ಯಾಪಾರಿಗೆ ಸೈನ್ಯಕ್ಕೆ ಸೇರುವ ಪ್ರಾಯ ಬಂದ ಗಂಡು ಹುಡುಗನಿದ್ದರೆ ಅವನು ಸೈನಿಕ ಕರತೆರಬೇಕು. ಅವನ ಮಕ್ಕಳನ್ನು ಸೇನೆಗೆ ಸೇರಿಸಿಕೊಳ್ಳಲಾಗುವುದಿಲ್ಲ. ಆದರೆ ಆತನು ಸೇನೆಗೆ ಸೇರಿಸಲ್ಪಡುತ್ತಿದ್ದರೆ ಮಾಡುತ್ತಿದ್ದ ಸೇವೆಯ ಬದಲಿಗೆ ಪ್ರತ್ಯೇಕ ಕರ ಕೊಡಬೇಕು. ರಷ್ಯದ ಬೇಂಕುಗಳೆಲ್ಲಾ ಸರಕಾರಿ ಬೇಂಕುಗಳು. ಇವುಗಳಲ್ಲಿ ಖಾಸಗಿ ವ್ಯಾಪಾರಿಗೆ ಸಾಲವೇನೂ ಸಿಗಲಾರದು. ರಷ್ಯದಲ್ಲಿ ಸುಮಾರು ಸೇಕಡ 80ರಷ್ಟರ ರಖಮ್ ವ್ಯಾಪಾರವು ಸರಕಾರದ ವಶವಿರುವುದು. ಖಾಸಗಿ ವ್ಯಾಪಾರಿಯು ಬಹಳ ಬುದ್ಧಿವಂತನಿದ್ದು ಸೂತ್ರ ಚಾಲನೆಯಿಂದ ಅಪಾಯಕ್ಕೊಳಗಾಗಿ ಸಾಮಾನುಗಳನ್ನು ಪಡೆಯಬೇಕೇ

(ಪುಟ ೬ಕ್ಕೆ)

ಸಮಾಚಾರ ಸಂಗ್ರಹ

ಹಿಂದೂ ಸಭೆಯು ಕಾಂಗ್ರೆಸ್ ವಿರೋಧಿಯಲ್ಲ—ಮಾರುತಿ ಗುಡಿಯ ಸತ್ಯಾಗ್ರಹ—ಅಮೃತಸರದಲ್ಲಿ ಲಾಠಿ ಪ್ರಹರ—ಡಾಕ್ಟರ್ ಖಾನ್ ಸಾಹೇಬರ ವಿನಂತಿ—ಸ್ಪೈನಿನಲ್ಲಿ ಸೆರೆಸಿಕ್ಕಿದವರ ಯಮಯಾತನೆ.

ಹಿಂದು ಸಭೆಯು ಕಾಂಗ್ರೆಸ್ ವಿರೋಧಿಯಲ್ಲ

ಇದೇ ತಾ. 4ರಲ್ಲಿ ಲಾಹೋರಿನಲ್ಲಿ ಹಿಂದೂ ಮಹಾಸಭೆಯ ಪ್ರೆಸಿಡೆಂಟರಾದ ಸರ್. ಗೋಕುಲ್‌ಚಂದ್ ನರಂಗರ ಗೌರವಾರ್ಥವಾಗಿ ಟೀ ಪಾರ್ಟಿ ಸತ್ಕಾರವೊಂದು ಜರಗಿದಾಗ ಅವರು, ಹಿಂದೂ ಮಹಾಸಭೆಯು ರಾಷ್ಟ್ರೀಯ ಮಹಾಸಭೆಗೆ ಪ್ರತಿಕೂಲವಾದುದೆಂಬ ಭಾವನೆಯು ವ್ಯಾಪಕವಾಗಿ ಹಬ್ಬಿರುವುದು ಶೋಚನೀಯವಿದೆ ಕಾಂಗ್ರೆಸಿನ ಮತ್ತು ಮಹಾಸಭೆಯ ಕಾರ್ಯಕ್ರಮಗಳೊಳಗೆ ಪ್ರಾಮುಖ್ಯ ಭೇದವೇನೂ ಇರುವದಿಲ್ಲ, ಮಹಾ ಸಭೆಯು ಸ್ವರಾಜ್ಯ ಚಳವಳಕ್ಕೇನೂ ಪ್ರತಿಕೂಲವಿಲ್ಲವೆಂದು ಹೇಳಿರುವರು.

ಬಿರುಗಾಳಿಯ ಹಾವಳಿ

ಇದೇ ತಾ. 5ರಲ್ಲಿ ಬಂಗಾಳದ ಹಲವು ಜಿಲ್ಲೆಗಳಲ್ಲಿಯೂ ಆಸ್ಸಾಮಿನಲ್ಲಿಯೂ ಪ್ರಚಂಡ ಬಿರುಗಾಳಿಯೆದ್ದು ಜಡಿಮಳೆ ಸುರಿದು ಸೊತ್ತು ಮತ್ತು ಬೆಳೆಗಳಿಗೆ ಹೆಚ್ಚಿನ ಹಾವಳಿಯಾಗಿರುವುದು. ಬೀರ್‌ಭೂಮಿಯಲ್ಲಿ ಒಂದು ಮಣ್ಣಿನ ಗೋಡೆಬಿದ್ದು ನ್ಯುಮೋನಿಯಾ ಪೀಡಿತ ಸ್ತ್ರೀಯೊಬ್ಬಳು ಮತ್ತು ಅವಳ ಆರೈಕೆ ನೋಡುತ್ತಿದ್ದ ಇನ್ನಿಬ್ಬರು ಕೊಲ್ಲಲ್ಪಟ್ಟಿರುವರು.

ಮುಸಲ್ಮಾನರು ಮತ್ತು ಕಾಂಗ್ರೆಸು

ಕಾಂಗ್ರೆಸಿಗೆ ಸೇರುವುದು ಮಾತ್ರವಲ್ಲ ಅದನ್ನು ನಡೆಸುವೆವು.

ಇದೇ ತಾ 4ರಲ್ಲಿ ವಾಯವ್ಯಗಡಿನಾಡಿನ ಕಾಂಗ್ರೆಸ್ ಮುಖಂಡರಾದ ಡಾಕ್ಟರ್ ಖಾನ್ ಸಾಹೇಬರು ಪತ್ರಿಕಾಪ್ರತಿನಿಧಿಯೋರ್ವನೊಡನೆ, “ಮುಸಲ್ಮಾನರು ಕಾಂಗ್ರೆಸಿಗೆ ಸೇರಬಾರದೆಂದು ಬೋಧಿಸುವ ಮುಖಂಡರೆನಿಸುವವರು ಅವರನ್ನು ತಪ್ಪುದಾರಿ ಹಿಡಿಸುತ್ತಿರುವರು. ಎಲ್ಲಾ ಸಮಾಜಗಳ ಹಿತವನ್ನು ಏಕ ಪ್ರಕಾರವಾಗಿ ಸಾಧಿಸುವ ಭಾರತೀಯರೆಲ್ಲರ ಪ್ರತಿನಿಧಿ ಸಂಸ್ಥೆಯೆಂದರೆ ಕಾಂಗ್ರೆಸು. ಮುಸಲ್ಮಾನ ಜನತೆಯನ್ನು ಕಾಂಗ್ರೆಸಿಗೆ ಹೆಚ್ಚೆಚ್ಚಾಗಿ ಸೇರಿಸುವ ಕಾಂಗ್ರೆಸಿನ ಪ್ರಯತ್ನವು ಈ ಮುಖಂಡರೆನಿಸುವವರಲ್ಲಿ ದಿಗಿಲುಂಟುಮಾಡಿದೆ. ಯಾರೇನು ಅಡ್ಡಿ ಮಾಡಿದರೂ ಕಾಂಗ್ರೆಸು ಜಯ ಹೊಂದುವುದೆಂತೂ ನಿಶ್ಚಯ” ಎಂದಿರುವರು. ಡಾಕ್ಟರ್ ಖಾನರು ಶ್ರೀ ಸುಭಾಸಚಂದ್ರರೊಡನೆ ಮಾತಾಡಿರುವರು. ಲಾಹೋರ್ ಪಟ್ಟಣದ ಬಾಘಾನ ಪುಂವೆಂಬಲ್ಲಿ ಸಾರ್ವಜನಿಕ ಸಭೆಯೊಂದನ್ನು ನಡಿಸಿ ಹೆಚ್ಚಾಗಿ ಮುಸಲ್ಮಾನರನ್ನು ಕಾಂಗ್ರೆಸ್ ಮೆಂಬರರಾಗಿ ಸೇರಿಸಿ ಕಾಂಗ್ರೆಸ್ ಕಮಿಟಿಯೊಂದನ್ನು ಸ್ಥಾಪಿಸಿರುವರು.

ಪೂನ ಮಾರುತಿಗುಡಿ ಸತ್ಯಾಗ್ರಹ

೧೨೨ ಮಂದಿಯ ದಸ್ತಗಿರಿ

ಇದೇ ತಾ. ೪ರಲ್ಲಿ ಪೂನದ ಸೋನ್ಯಾ ಮಾರುತಿಗುಡಿಯ ಸತ್ಯಾಗ್ರಹದ ನಿಮಿತ್ತ ೩೭ ಮಂದಿ ದಸ್ತಗಿರಿ ಮಾಡಲ್ಪಟ್ಟಿರುವರು ಇಷ್ಟರವರೆಗೆ ಒಟ್ಟು ೧೨೨ ಮಂದಿ ಕೈದು ಮಾಡಲ್ಪಟ್ಟಿರುವರು. ತಾ. ೪ರಲ್ಲಿ ಶ್ರೀ ಜಗರ್ವಾಲ ಬೆರಿಸ್ಟರ್ ಇವರು ರೂ. 25ರ ಜುಲ್ಮಾನೆಗೂ, ಶ್ರೀ ಗೋವಿಂದ ದಾತೆ ಮತ್ತು ಲಪಾಟೆ ಎಂಬ ಹಿಂದೂ ಮುಖಂಡರು ರೂ. ೫೦ರ ಜುಲ್ಮಾನೆಗೂ ಗುರಿಯಾಗಿರುವರು. ಈ ಸಂಬಂಧವಾಗಿ ಪೂನದ ಡೆಮೊಕ್ರೆಟಿಕ್ ಸ್ವರಾಜ್ಯ ಪಕ್ಷೀಯರು ಇದೇ ತಾ. ೯ರಲ್ಲಿ ಬೊಂಬಾಯಿಯ ಅರ್ಥಸಚಿವರಾದ ಶ್ರೀ ಜಮ್ನಾದಾಸ ಮೇಥಾರವರ ಭೇಟಿಮಾಡಿ ತಮ್ಮ ಕನಿಷ್ಠ ಕೇಳಿಕೆಗಳನ್ನು ಅವರ ಮುಂದಿಡಲಿರುವರು.

ಅಮೃತಸರದಲ್ಲಿ ಲಾಠಿಪ್ರಹರ

ಪಂಜಾಬಿನ ಅಮೃತಸರದ ಬಳಿಯ ನಾರಾಯಣ ಸ್ವದೇಶಿ ಗಿರಣಿಗಳು ಮೇ ತಾ. 1ರಲ್ಲಿ ಮಜೂರ ದಿನಾಚರಣೆಯ ಸಂದರ್ಭದಲ್ಲಿ ಮುಚ್ಚಲ್ಪಡಲಿಲ್ಲೆಂದು ಸದರಿ ಗಿರಣಿ ಕೆಲಸಗಾರರು ಮುಷ್ಕರ ಹಿಡಿದಿರುವರು. ಇದೇ ತಾ. ೪ರಲ್ಲಿ ಗಿರಣಿಬಾಗಿಲಲ್ಲಿ ಪಹರೆಗಾರರನ್ನು ಚದರಿಸಲು ಗಿರಣಿಮಾಲಕರು ಪೋಲೀಸರನ್ನು ಕರೆದರು. ಪೋಲೀಸರು ೩೯ ಮಂದಿಯನ್ನು ದಸ್ತಗಿರಿಮಾಡಿರುವರು. ಇವರಲ್ಲೊಬ್ಬರು ಅಮೃತಸರದ ಮಜೂರಸಂಘದ ಕಾರ್ಯದರ್ಶಿಗಳಾದ ಮಿ. ಬಾಶೀರ್ ಬಸ್ಸಿರ್ ಎಂಬವರು. ಜನತೆಯನ್ನು ಚದರಿಸಲು ಪೋಲೀಸರು ಲಘುವಾಗಿ ಲಾಠಿ ಪ್ರಹರ ಮಾಡಿ ೭ ಮಂದಿಗೆ ಅಲ್ಪಸ್ವಲ್ಪ ಪೆಟ್ಟಾಗಿರುವುದು, ಮಜೂರಮುಖಂಡರು ಎಲ್ಲಾ ಗಿರಣಿಗಳಲ್ಲೂ ಮುಷ್ಕರ ಆರಂಭಿಸುವ ಆಲೋಚನೆ ಮಾಡುತ್ತಿರುವರು.

ಡಾಕ್ಟರ್ ಖಾನ್ ಸಾಹೇಬರ ವಿನಂತಿ

ಸ್ವಾತಂತ್ರ್ಯಕ್ಕಿಂತ ಹೆಚ್ಚಿನದು ಲೋಕದಲ್ಲಿ ಇನ್ನಾವುದೂ ಇಲ್ಲ.

ಇದೇ ತಾ 3ರಲ್ಲಿ ಲಾಹೋರು ಸಿಟಿ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಪ್ರಚಂಡ ಸಾರ್ವಜನಿಕ ಸಭೆಯೊಂದು ನಡೆದು ಡಾಕ್ಟರ್ ಖಾನ್ ಸಾಹೇಬರಿಗೆ ಮಾನಪತ್ರವನ್ನರ್ಪಿಸಲಾಯಿತು. ಅದರಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಡಾಕ್ಟರ್ ಖಾನ್ ಸಾಹೇಬರು ಮತ್ತು ಖಾನ್ ಅಬ್ದುಲ್ ಗಾಫರ್ ಖಾನರು ಮಾಡಿರುವ ತ್ಯಾಗಗಳು ಉಲ್ಲೇಖಿಸಲ್ಪಟ್ಟು, ಡಾಕ್ಟರ್ ಖಾನ್ ಖಾನ್‌ಅಬ್ದುಲ್‌ಗಾಫರ ಖಾನ್, ಮಹಾತ್ಮ ಗಾಂಧಿ ಮತ್ತು ಪಂಡಿತ ಜವಾಹಿರಲಾಲರಂತೆ ಉಜ್ವಲ ದೇಶಾಭಿಮಾನಿಗಳ ತ್ಯಾಗಗಳಿಂದ ದೇಶವು ಸ್ವಾತಂತ್ರ್ಯವನ್ನು ಖಂಡಿತವಾಗಿಯೂ ಪಡೆಯುವುದೆಂಬ ವಿಶ್ವಾಸ ಸೂಚಿಸಲ್ಪಟ್ಟಿದ್ದಿತು. ಈ ಮಾನ ಪತ್ರಕ್ಕೆ ಉತ್ತರವೀಯುವಾಗ ಡಾಕ್ಟರ್ ಖಾನರು, ಲೋಕದಲ್ಲಿ ಸ್ವಾತಂತ್ರ್ಯಕ್ಕಿಂತ ಅಮೂಲ್ಯವಾದುದೇನೂ ಇಲ್ಲ. ವೈಯಕ್ತಿಕವಾಗಿ ತಾನು ಗುಲಾಮನಾಗಿ ಮಿಲ್ಯಾಧೀಶನಾಗಿರುವುದಕ್ಕಿಂತಲೂ, ಬಂಧವಿಮುಕ್ತಿ ಹೊಂದಿದ ಹಿಂದುದೇಶದಲ್ಲಿ ಸಮಗಾರ, ತೋಟಿ ಅಥವಾ ಒಡಚಾಕರಿಯವನಾಗಿರಲೆಳಸುತ್ತೇನೆ. ನಾನೊಬ್ಬ ಖುದಾಯಿ ಖಿದ್ಮತ್ಗಾರನು ಮಾನವಕೋಟಿಯ ಸೇವೆಯೇ ನನ್ನ ಧ್ಯೇಯ. ಹಿಂದೀಯರೆಲ್ಲರೂ ಬಂಧುಗಳಂತೆ ಜೀವಿಸಿ ತಮ್ಮೊಳಗೆ ಹೋರಾಡುವುದನ್ನು ನಿಲ್ಲಿಸಬೇಕು. ಸ್ವಾರ್ಥಸಾಧಕರ ಮೋಸಕ್ಕೊಳಗಾಗದಂತೆ ನೋಡಿಕೊಳ್ಳಬೇಕು. ಹಿಂದೂದೇಶದ ಸ್ವಾತಂತ್ರ್ಯಸಾಧನೆಗಾಗಿ ತಾನು ತನ್ನ ಜೀವನ, ಆಸ್ತಿ, ಪಾಸ್ತಿ, ಸರ್ವಸ್ವವನ್ನೂ ಸಮರ್ಪಿಸಲು ಸಿದ್ಧನಿರುವೆನು ಎಂದರು.

ಸ್ಪೈನಿನಲ್ಲಿ ಸೆರೆಸಿಕ್ಕಿದವರ ಯಮಯಾತನೆ

ಸ್ಪೈನಿನ ಬಂಡಾಯಗಾರರ ಕೈಗೆ ಸಿಕ್ಕಿ ಸೆರೆಯಾದವರು ಎಂತಹ ಯಮಯಾತನೆಗೊಳಗಾಗಬೇಕೆಂಬುದನ್ನು, ಜೀನ್ ಪೆಲ್ಲಿಟ್ಟಿಯರನೆಂಬ ಫ್ರೆಂಚ್ ವೈಮಾನಿಕನು ಈ ರೀತಿ ವಿವರಿಸಿರುವನು. ಜೀನನು ಬಾಸ್ಕ್ ಸರಕಾರದ ಪಕ್ಷಕ್ಕೆ ವೈಮಾನಿಕನಾಗಿ ಹೋಗಿ ಸೇರಹೋದಾಗ ಬಂಡಾಯಗಾರರ ಕೈಗೆ ಸಿಕ್ಕಿ ಸೆರೆಯಾದವನು ‘ನಾನು ಸೆರೆಸಿಕ್ಕಿದೊಡನೆಯೇ ಒಂದರೆಟ್ಟಿ ಎ..ಬಿ ಸರಪುನ ಗೊಯ್ಯಲ್ಪಟ್ಟೆನು ಜಿಲ್ಲಾ ಮೆಜಿಸ್ಟ್ರೇಟರ ಮುಂದೆ ತರಲ್ಪಡಲು ಒಂದು ಘಂಟೆ ವಿಳಂಬವಾಯಿತು. ಆಗ ಪೋಲಿಸರೊಳಗಿಂದ ಹೃದಯದ್ರಾವಕ ಕೂಗಾಟವು ಕೇಳುತ್ತು. ಇದು, ಸೆರೆಯಾಳುಗಳಿಗೆ ಸೈನಿಕರು ರಬ್ಬರ್ ಚಿಪ್ಪಗಳಿಂದ ಹೊಡೆಯುವಾಗ ಅವರ ಕೂಗಾಟವೆಂದು ಅನಂತರ ನಾನು ನೊಂದು ತಿಳಿದೆನು. ನಮ್ಮ ಕೈಗಳು ಹಿಂದೆ ಕಟ್ಟಲ್ಪಟ್ಟವು ಕೋವಿಗಳ ಕಡೆಯಿಂದ ಕಲವರಿಗೆ ಸರಿ ಹೊಡೆತ ಸಿಗುತ್ತಿತ್ತು. ಹೀಗೆ ಹೊಡೆದ ಮೇಲೆ ಜೋಥತಪ್ಪಿ ಬಿದ್ದವರನ್ನು ಬರ್ಬರವಾಗಿ ನೆಲದ ಮೇಲೆ ಧರಧರನೆ ಎಳೆಯಲಾಗುತ್ತಿತ್ತು. ನನ್ನನ್ನೀ ಒಬ್ಬ ಆಫೀಸರರನು ಮೊಟ್ಟೆಯ ಮೇಲೆ ತುಳಿದು ಕೋಣೆಗೆ ದೂಡಿದನು ೧೫ ದಿವಸ ನಾನು ಏಕಾಂತ ಕೋಣೆಯಲ್ಲಿರಿಸಲ್ಪಟ್ಟೆನು. ೬ ಅಡಿ ಅಗಲ ೯ ಅಡಿ ಉದ್ದದ ಕೋಣೆಗಳಲ್ಲಿ ಅಪರ್ಣಸ್ಥೀಯ ಕೊಳಕಿನಲ್ಲಿ ೪ ಮಂದಿ ಒಟ್ಟಿಗೆ ಬಂಧನದಲ್ಲಿರಿಸಲ್ಪಡುವರು. ಪ್ರತಿದಿನ ಒಬ್ಬೊಬ್ಬರೇ ಆಗಿ ಕೈದಿಗಳು ಗುಂಡಿನ ಬಾಯಿಗೆ ಕೊಡಲ್ಪಡುತ್ತಿದ್ದರು ‘ಒಂದು, ಎರಡು, ಮೂರು’ ಎಂದು ಹೇಳಿದೊಡನೆ ಗುಂಡೆಸೆಯಲ್ಪಟ್ಟು ನಡೆಯುವ ಕೊಲೆಯು ನಮ್ಮನ್ನು ಪ್ರತಿದಿನವೂ ಜೀವನ್ಮೃತರನ್ನಾಗಿ ಮಾಡುತ್ತಿತ್ತು. ಈ ಕೈದಿಗಳೆಲ್ಲರೂ ವೀರಾವೇಶದಿಂದ ‘ಕ್ರಾಂತಿಯು ಚಿರದಿನ ಬಾಳಲಿ” ಎಂದುಕೂಗಿ ಗುಂಡಿಗೆ ಎದೆಗೊಡುತ್ತಿದ್ದರು.

ಇಂಟೆರಿಮ್ ಮಂತ್ರಿಗಳ ಮೇಲೆ ಅವಿಶ್ವಾಸ ಸೂಚನೆ

ಇದೇ ತಾ. 1ರಲ್ಲಿ ಮದ್ರಾಸಿನ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಸಿ. ರಾಜಗೋಪಾಲಾಚಾರ್ಯರು, ಮಾನ್ಯಗವರ್ನರಿಗೊಂದು ಪತ್ರ ಬರೆದು, ಇಂಟೆರಿಮ್ ಮಂತ್ರಿಗಳ ಮೇಲೆ ಎಸಂಬ್ಲಿ ಮೆಂಬರರಿಗಿರುವ ಅವಿಶ್ವಾಸವನ್ನು ಪ್ರಕಟಪಡಿಸಿರುವರು. ಇದಕ್ಕೆ ಮದ್ರಾಸ್ ಎಸಂಬ್ಲಿಯ 215 ಮಂದಿ ಪೈಕಿ 167 ಮಂದಿ ಮತ್ತು ಕೌನ್ಸಿಲಿನ 54 ಮಂದಿ ಸದಸ್ಯರಲ್ಲಿ 30 ಮಂದಿ ಸಹಿ ಹಾಕಿರುವರು. ಇದಕ್ಕೆ ಕಾಂಗ್ರೆಸ್ ಪಕ್ಷೀಯರು ಮಾತ್ರವಲ್ಲದೆ ಇತರ ಕೆಲವರೂ ಸಹಿ ಹಾಕಿರುವರು. ಗವರ್ನರರು ಎಸೆಂಬ್ಲಿ ಸಭೆ ಕರೆಯದುದರಿಂದ ಮಂತ್ರಿಗಳ ಮೇಲೆ ಈ ರೀತಿಯಲ್ಲಿ ಅವಿಶ್ವಾಸ ಸೂಚಿಸಬೇಕಾಯಿತು. ಈ ಪತ್ರದಲ್ಲಿ ಇಂಡಿಯಾ ಆಕ್ಟಿಗೆ ವಿರೋಧವಾಗಿ ಮುಕ್ತ ಜನಮತವನ್ನು ಧಿಕ್ಕರಿಸಿ ಮಂತ್ರಿಗಳನ್ನು ನೇಮಿಸಿದುದನ್ನು ನಿಷೇಧಿಸಲಾಗಿದೆ.

ಆಕಾಶನಾವೆಗೆ ಬೆಂಕಿಹಿಡಿದು ಪ್ರಾಣಹಾನಿ.

ಹಿಂಡನ್ ಬರ್ಗ್ ಎಂಬುದು ಜರ್ಮನರು ಇತ್ತಲಾಗಿ ಕಟ್ಟಿದ ಲೋಕದ ಅತಿ ದೊಡ್ಡ ಆಕಾಶ ನಾವೆಗಳಲ್ಲೊಂದು. ಇದು ಅತಿ ದೊಡ್ಡದಾಗಿದ್ದು ಅದರೊಳಗೆ ಪ್ರಯಾಣಿಕರಿಗೆ ಎಲ್ಲಾ ತರದ ಅತ್ಯಾಧುನಿಕ ಪ್ರಯಾಣಾನುಕೂಲತೆಗಳಿದ್ದವು ಈ ಆಕಾಶನಾವೆಯು ಯುರೋಪಿನಿಂದ ಅಮೇರಿಕಕ್ಕೆ ಪ್ರಯಾಣಿಕರನ್ನೊಯ್ಯಲು ಉಪಯೋಗಿಸಲ್ಪಡುತ್ತಿತ್ತು. ಇದೇ ತಾ 7ರಲ್ಲಿ ಹಿಂಡನ್ ಬರ್ಗು ಅಮೇರಿಕದ ನ್ಯೂಜೆರ್ಸಿಯ ಲೇಕ್ ಹರ್ಸ್ಟ್ ಎಂಬಲ್ಲಿ ನಿಲ್ಲುವುದರಲ್ಲಿರುವಾಗ ಫಕ್ಕನೆ ಅದರೊಳಗಿದ್ದ ಭಯಂಕರ ಬೆಂಕಿಯಿಂದ ಇಡೀ ಆಕಾಶನಾವೆಯು ಸುಟ್ಟುಹೋಗಿರುವುದು. ಇದರೊಳಗೆ 39 ಮಂದಿ ಪ್ರಯಾಣಿಕರು ಮತ್ತು 60 ಮಂದಿ ಕೆಲಸಗಾರರಿದ್ದರು ಒಟ್ಟು 38 ಮಂದಿ ಕೊಲ್ಲಲ್ಪಟ್ಟು ಉಳಿದವರು ಬದುಕಿರುವರೆಂದು ತಿಳಿದುಬರುತ್ತದೆ ಕೆಲವರು ಕೆಳಗೆ ಹಾರಿ ಬದುಕಿಕೊಂಡರು. ಆಕಸ್ಮಾತ್ತಾಗಿ ಈ ಭಯಂಕರ ಬೆಂಕಿಯೇಳಲು ಕಾರಣವೇನೆಂದು ತಿಳಿದು ಬಂದಿಲ್ಲ, ಪರಿಶೀಲನೆಯು ನಡೆಯುತ್ತಿದೆ. ಆರ್. 101 ಎಂಬ ಅತಿ ದೊಡ್ಡ ಆಂಗ್ಲೇಯ ಆಕಾಶನಾವೆಯು ಪ್ರಥಮ ಪ್ರಯಾಣದಲ್ಲೇ ಕೆಳಗೆಬಿದ್ದು ಸುಟ್ಟುಹೋದ ಭೀಕರ ಜಿಸಾಹುತದಿಂದ ಜರ್ಮನರು ಪಾಠಕಲಿತು, ಅದರ ಸುಟ್ಟುಳಿದ ಸಾಮಾನುಗಳಿಂದ ಬಹು ಜಾಗ್ರತೆಯಿಂದ ಹಿಂಡನ್ ಬರ್ಗನ್ನು ಕಟ್ಟಿದ್ದರು. ಅದರಲ್ಲಿ ಮರದ ಒಂದು ಚೂರೂ ಇರಲಿಲ್ಲ. ಹಿಂಡನ್ ಬರ್ಗಿನಲ್ಲಿ ಪ್ರಯಾಣಿಕರನ್ನು ಪ್ರಥಮವಾಗಿ ತಂಬಾಕು ಸೇದ ಬಿಡಲಾಗಿತ್ತು. ಹಿಂಡನ್ ಬರ್ಗ್ ಸುಟ್ಟುಹೋದುದರಿಂದ ಜರ್ಮನಿಯಲ್ಲೆಲ್ಲಾ ಸಖೇದ ವಿಸ್ಮಯವುಂಟಾಗಿರುವುದು.

ಬೆಂಕಿಯ ಹಾವಳಿ

ಇದೇ ತಾ 6ರಲ್ಲಿ ಬೊಂಬಾಯಿಯ ಅಪೊಲೊ ಸ್ಟ್ರೀಟಿನ ಧಾಕರ್ಸೀ ಮೂಲ್ಜಿ ಬಿಲ್ಡಿಂಗಿಗೆ ಬೆಂಕಿ ಹಿಡಿದು ಸುಟ್ಟು ಹೋಗಿ ಸುಮಾರು ರೂ. ೨ ಲಕ್ಷ ನಷ್ಟವಾಗಿರುವುದು ೨ ಮಾಳಿಗೆಗಳ ಈ ಕಟ್ಟಡಕ್ಕೆ ಹಿಡಿದ ಬೆಂಕಿಯು ಪಕ್ಕದ ಇತರ ಕಟ್ಟಡಗಳಿಗೆ ಹಬ್ಬದ ಹಾಗೆ ಫ್ಯಾರ್ ಇಂಜನುಗಳು ಜಯಶೀಲವಾಗಿ ಪ್ರಯತ್ನಿಸಿದುವು.

ಇದೇ ತಾ 5ರಲ್ಲಿ ನಾಸಿಕದ ತ್ರಿಯಂಬಕ್ ಎಂಬಲ್ಲಿ ಅನಾಹುತಕಾರಿ ಬೆಂಕಿಯೆದ್ದು ರೂ. 1 ಲಕ್ಷದಷ್ಟರ ಸೊತ್ತು ನಾಶವಾಗಿ

ರುವುದು 4 ಜನರಿಗೆ ಜಖಮ್ಆಗಿ ಒಬ್ಬನು ಮೃತನಾಗಿರುವನು. ಸಕಾಲದಲ್ಲಿ ನಾಸಿಕದ ಮುನಿಸಿಪಲ್ ಫ್ಯಾರ್ ಬ್ರಿಗೇಡ್ ಬಾರದಿದ್ದರೆ ಇಡೀ ತ್ರಿಯಂಬಕವೇ ಸುಟ್ಟುಹೋಗುತ್ತಿತ್ತು

ಲಾಹೋರಿನಲ್ಲಿ ಇದೇ ತಾ. 6ರಲ್ಲಿ ಹೊಸತಾಗಿ ಕೆರೆಯಲ್ಪಟ್ಟ ಹೋಟೆಲೊಂದು ಮತ್ತು ಸುಪ್ರಸಿದ್ಧ ಜನ್ರಲ್ ಅಂಗಡಿಯೊಂದು ಸುಟ್ಟುಹೋಗಿ ರೂ. 50,000 ದಷ್ಟರ ನಷ್ಟವಾಗಿರುವುದು ಹತ್ತಿರದ ಕೆಮಿಸ್ಟ್ ಶಾಪು ಕೂಡಾ ಅರವಾಸಿ ಸುಟ್ಟುಹೋಗಿರುವುದು. ಪ್ರಾಣಹಾನಿಯೇನೂ ಆಗಿರುವುದಿಲ್ಲ

ಇದೇ ತಾ 5ರಲ್ಲಿ ಡಿಲ್ಲಿಯಲ್ಲಿ ನಾಲ್ಕು ಕಡೆಗಳಲ್ಲಿ ಬೆಂಕಿಯೆದ್ದು ಕೂಡಲೆ ಫ್ಯಾರ್ ಬ್ರಿಗೇಡಿನ ಸಹಾಯದಿಂದ ನೊಂದಿಸಲ್ಪಟ್ಟಿರುವರುವುದು ಒಟ್ಟು ರೂ. 2,000 ನಷ್ಟವಾಗಬಹುದು.

ಭೂಕಂದಾಯ ಕಮಿಟಿ

ಇಂಟೆರಿಮ್ ಮಂತ್ರಿಗಳು ಸೇಕಡ 25 ರಷ್ಟರ ಭೂಕಂದಾಯ ರಿಯಾಯಿತಿಯನ್ನು ಕೂಡಲೆ ಜ್ಯಾರಿಗೆ ತರುವರೆಂದು ಪ್ರಕಟವಾಗಿದ್ದರೂ ಈ ಫಸಿಯ ತೀರ್ವೆಯು ಇಷ್ಟರಲ್ಲೇ ವಸೂಲಾಗಿರುವದರಿಂದ ಮುಂದಿನ ಫಸ್ಲಿಯಲ್ಲಿ ರಿಯಾಯಿತಿ ತೋರಿಸಲಾಗುವುದಂತೆ ಮುದ್ರಾಸ್ ಪ್ರಾಂತದ ಭೂಕಂದಾಯ ಕ್ರಮವನ್ನೇ ಪೂರ್ವಡಿಸುವ ಕುರಿತು ವಿಚಾರಣೆ ನಡಿಸಿ ವರದಿ ತಯಾರಿಸಲು ಒಂದು ಕಮಿಟಿಯು ಸ್ಥಾಪಿಸಲ್ಪಟ್ಟಿರುವುದು. ಇದಕ್ಕೆ ಮೊದಲು ಮುದ್ರಾಸ್ ಸರಕಾರದ ರೆವಿನ್ಯೂ ಮೆಂಬರರೂ ಆಕ್ಟಿಂಗ್ ಗವರ್ನರರೂ ಆಗಿದ್ದ ಸರ್ ನೋರ್ಮನ್ ಮಾರ್ಶ್ ಬೇಂಕರು ಅಧ್ಯಕ್ಷರು ಇತರ ಮೆಂಬರರು ಶ್ರೀಗಳಾದ ಬಿ. ಸುಬ್ರಾಯ ಮುದಲಿಯಾರ್, ಬಿ ರಾಮಚಂದ್ರ ರೆಡ್ಡಿ, ಬಿ. ಮಹಾಬಲ ಹೆಗ್ಡೆ, ಜೆ ಎಫ್ ಹೋಲರು ಸಿ ಇ ಜೋನ್ಸ್, ಮತ್ತು ಎಚ್. ಆರ್ ಉಜ್ಜೆಲ್ಲಿಯವರು ಕಾರ್ಯದರ್ಶಿಗಳು ಮಲಬಾರಿನ ಸರ್. ಕೃಷ್ಣನ್ ನಾಯರರು ಈ ಕಮಿಟಿಯ ಮೆಂಬರರಾಗಲು ಸಿರಾಕರಿಸಿರುವರು.

ಶ್ರೀ ಸುಭಾಷಚಂದ್ರ ಬೋಸರು

ಆರೋಗ್ಯ ಸಂಪಾದನೆಗಾಗಿ ಪಂಜಾಬಿನ ಡಾಲ್‌ಹೌಸಿ ಎಂಬಲ್ಲಿಗೆ ಇನ್ನು ಒಂದೆರಡು ದಿನಗಳಲ್ಲಿ ಹೋಗಲಿರುವರು. ಅವರು ತಾ 7ರ ವರೆಗೆ ಲಾಹೋರಿನಲ್ಲಿದ್ದರು. ಅವರಿಗೆ ಈಗಲೂ ಸ್ವಲ್ಪ ಜ್ವರಬರುತ್ತಿದೆ. ತನಗೆ ಸೌಖ್ಯವಿಲ್ಲದಿದ್ದರೂ ಸ್ಥಳೀಯ ಯುವಕ ಚಳವಳದಲ್ಲಿ ಅಗ್ರಭಾಗವಹಿಸುತ್ತಿರುವ ಎರಡು ವಿದ್ಯಾರ್ಥಿ ಸಂಘಗಳೊಳಗೆ ಒಕ್ಕಟ್ಟುಂಟುಮಾಡಲೆತ್ನಿಸಿದರು. ಡಾಲ್‌ಹೌಸಿಯ ಹವಾಗುಣದಿಂದ ಶ್ರೀ ಭೋಸರ ಆರೋಗ್ಯವು ನೆಟ್ಟಗಾದರೆ ಅವರು ರಾಜಕೀಯದಲ್ಲಿ ಆಸಕ್ತಿಯಿಂದ ಭಾಗವಹಿಸಿ ತನ್ನ ನವೀನ ಕಾರ್ಯಕ್ರಮವೊಂದನ್ನು ಜನತೆಯ ಮುಂದಿಡಲಿರುವರು. ಶ್ರೀ ಸುಭಾಸರು ಯುರೋಪಿನಲ್ಲಿರುವಾಗಲೂ ಹಿಂದುದೇಶದಲ್ಲಿಯೂ ಮುಂದಿನ ಕಾರ್ಯಕ್ರಮದ ಕುರಿತು ಹೆಚ್ಚಿನ ವಿಚಾರಮಾಡಿರುವರು. ಅಗತ್ಯ ಬಿದ್ದರೆ ಇಡೀ ದೇಶದಲ್ಲೆಲ್ಲಾ ಒಮ್ಮೆ ಸಂಚರಿಸಿ ಜನ ಜಾಗ್ರತಿಯುಂಟುಮಾಡುವರು.

ಪೂನದೇವಸ್ಥಾನ ಸತ್ಯಾಗ್ರಹ

ಇದೇ ತಾ. ೮ರಲ್ಲಿ ಪೂನದ ಮಾರುತಿ ಗುಡಿಯಲ್ಲಿ ಘಂಟೆ ಬಡಿದು ಭಜನೆ ಪೂಜಾದಿಗಳನ್ನು ನಡಿಸಬಾರದೆಂಬ ಸರಕಾರದ ಹುಕುಮನ್ನು ಜನರು ಉಪಾಯದಿಂದ ಮೂಲೆಗೊತ್ತಿದರು. ಮಾರುತಿಗ ಡಿಯಲ್ಲಿ ಪೂಜೆನಡಿಯುವಾಗ ಹತ್ತಿರದ ಖಾಸಗಿ ಕಟ್ಟಡಗಳಿಂದ ವಾಲಗ ಮತ್ತು ಬೇಂಡುಬಾರಿಸಲಾಯಿತು ದೇವಸ್ಥಾನದೊಳಗಣಒಂದು ಸ್ವಿಚ್ಚಿನಮೂಲಕ ಹೊರಗಣಗೆಲ್ಲರಿಗೆಜೋಡಿಸಲ್ಪಟ್ಟ ಇಲೆಕ್ಟ್ರಿಕ್‌ಘಂಟೆಯನ್ನು ಬಾರಿಸಲಾಯಿತು. ಇದು ಪೋಲೀಸರಿಗೆ ತಿಳಿದೊಡನಯೇ ಅವರು ಓಡಿಹೋಗಿ ವಾದ್ಯ ಬೇಂಡುಗಳನ್ನು ಅವುಗಳ ವಾದಕರಿಂದ ಕಸಕೊಂಡರು. ಈ ಸಂದರ್ಭದಲ್ಲಿ ಸಾವಿರಾರು ಮಂದಿ ದೇವಸ್ಥಾನದ ಹೊರಗೆ ನೆರೆದಿದ್ದರು. ಇಂದು ಸಂಜೆ 45 ಮಂದಿ ಕೈದುಮಾಡಲ್ಪಟ್ಟಿರುವರು, ರಾಮಪ್ಯಾರಿ ಎಂಬ ರಜಪೂತ ಸ್ತ್ರೀಯು ಪ್ರಥಮವಾಗಿ ಸತ್ಯಾಗ್ರಹ ಆಚರಿಸಿದಳು

ಲೋರ್ಡ್ ಜೆಟ್ಲೆಂಡರ ಹೇಳಿಕೆ ಗಾಂಧಿಯವರ ಅಭಿಪ್ರಾಯ

ಇದೇ ತಾ.೮ರಲ್ಲಿ ಇಂಡಿಯಾಸಕ್ರಿಟರಿಗಳಾದ ಲೋರ್ಡ್ ಜಟ್ಲೆಂಡರ ಹೇಳಿಕೆಯ ಕುರಿತು ಗಾಂಧಿಯವರ ಅಭಿಪ್ರಾಯವನ್ನು ಎಸೋಸಿಯೇಟೆಡ್ ಪ್ರೆಸ್ಸಿನ ಪ್ರತಿನಿಧಿಯು ಕೇಳಿದಾಗ ಅವರು ಈ ಕೆಳಗಣಂತೆ ಹೇಳಿರುವರು 'ಇಂಡಿಯಾ ಸಕ್ರಿಟರಿಗಳು ಕಳೆದಸಲಮಾಡಿದ ಭಾಷಣಕ್ಕಿಂತ ಈ ಸಲದ್ದು ನಿಶ್ಚಯವಾಗಿಯೂ ಸೌಹಾರ್ದಪರವಾಗಿದೆ ಆದರ ಅದರಿಂದ ದೇಶದ ಬಿಕ್ಕಟ್ಟನ್ನು ನಿವಾರಿಸಲೇನೂ ಸಹಾಯವಾಗಲಾರದೆಂದು ನನ್ನ ಭಾವನೆ. ಕಳೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವು, ಆಶ್ವಾಸನೆಯ ಕುರಿತಾದ ಕಾಂಗ್ರೆಸಿನ ಧೋರಣೆಯನ್ನು ಸುಸ್ಪಷ್ಟಗೊಳಿಸಿದೆ. ಇಡೀಲೋಕಕ್ಕೆ ಅದು ಸುವಿದಿತವಾಗಿದೆ. ಗವರ್ನರರಿಗೆ ಅಸಹನೀಯವಾದ ಪರಿಸ್ಥಿತಿಯುಂಟಾಗಿ ಅವರು ಮಂತ್ರಿಗಳ ರಾಜಿನಾಮೆಯನ್ನು ನಿರೀಕ್ಷಿಸಿ ಕೊಂಡಿರುವ ಬದಲಿಗೆ ತಾನಾಗಿ ಅವರ ರಾಜಿನಾಮೆ ಕೇಳಿ ಅವರನ್ನು ಅಧಿಕಾರದಿಂದ ತಳ್ಳಿಹಾಕುವ ಜವಾಬ್ದಾರಿಯನ್ನು ಕಾನೂನುಪ್ರಕಾರ ಅವರು ವಹಿಸಬಹುದಾಗಿರುವಾಗ ಕಾಂಗ್ರೆಸಿನವರು ಕೇಳುವ ಆಶ್ವಾಸನೆಯನ್ನ ವರು ಅನಾಯಾಸವಾಗಿ ಕೊಡಲು ಯಾವ ಅಡ್ಡಿಯೂ ಇರಲಾರದು ದೇಶದಲ್ಲಿ ಸಾರ್ವತ್ರಿಕವಾದ ವಿರೋಧವಿರುವಾಗಲೂ ಗವರ್ನರರ. ಕೆಲವೊಂದು ವ್ಯಕ್ತಿಗಳನ್ನು ಮಂತ್ರಿಗಳಾಗಿ ನೇಮಿಸಿರುವುದು ಸರಕಾರದ ಸಂಶಯವನ್ನು ಮತ್ತಷ್ಟು ಬಲಗೊಳಿಸುತ್ತದೆ ಅಧಿಕಾರ ಸ್ವೀಕರಿಸಲು ಕಾಂಗ್ರೆಸಿಗೆಯಥಾರ್ಥವಾದ ಆರಯಿಂದೆ. ಅದು ಅಧಿಕಾರ ಸ್ವೀಕರಿಸಿದ ಪಕ್ಷದಲ್ಲಿ ಕಾಯಿದೆಶೀರವಾಗಿ ಕಾಂಗ್ರೆಸಿನ ಗುರಿಯಾದ ಸಂಪೂರ್ಣ ಸ್ವರಾಜ್ಯಸಾಧನೆಯ ಮಾರ್ಗದಲ್ಲಿ ಎಷ್ಟೊಂದು ಮುಂದುವರಿಯಲು ಸಾಧ್ಯವಿದೆ ಎಂಬ ಕುರಿತು ಅನ್ಸಯಿಂದ ಪ್ರಯತ್ನಿಸಿನೋಡುವುದು'.

ಲೋರ್ಡ್ ಜೆಟ್ಲೆಂಡರ ಹೇಳಿಕೆಯು ಕಾಂಗ್ರೆಸಿನವರ ಕೇಳಿಕೆಯನ್ನು ಬಹುಮಟ್ಟಿಗೆ ತೃಪ್ತಿಪಡಿಸುವಂತಹದಿರುವುದರಿಂದ ಕಾಂಗ್ರೆಸಿನವರೀಗ ತಮ್ಮ ಧೋರಣೆಯನ್ನು ಬದಲಾಯಿಸುವ ಕುರಿತು ಆಲೋಚಿಸಬೇಕು. ರಾಜಿಯವಿಷಯದಲ್ಲಿ ಇನ್ನು ಮುಂದಿನಜವಾಬ್ದಾರಿಅವರದೆಂದುಸಿಮ್ಲದ ಅಭಿಪ್ರಾಯವಿರುವುದು ಇಂಡಿಯಾಸೆಕ್ರಿಟರಿಗಳಹೇಳಿಕೆಯಕುರಿತು ಗಾಂಧಿಜಿಯವರ ಅಭಿಪ್ರಾಯವು ಉಟಕಮಂಡಿನಲ್ಲಿ ಆಶೋದಯವನ್ನುಂಟುಮಾಡಿರುವುದು ಈಗ ಇಂಡಿಯಾ ಸೆಕ್ರಿಟರಿಗಳು, ಮುಖ್ಯತಃ ಕಾಂಗ್ರೆಸಿನ ಕೇಳಿಕೆಗಳನ್ನೊಪ್ಪಿರುವಾಗ ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಬೇಕೆಂದು ಸರ್ ಟಿ. ಆರ್ ವೆಂಕಟ್ರಮಣ ಶಾಸ್ತ್ರಿಗಳಂದಿರುವರು. ಕಾಂಗ್ರೆಸಿನವರು ಇನ್ನೂ ಇನ್ನೂ ಭೀತಿ ಸಂಶಯಗಳ ವಾತಾವರಣದಲ್ಲೇ ಸುತ್ತಾಡದೆ ಮಂತ್ರಿಪದವಿ ಸ್ವೀಕರಿಸಬೇಕು ಯಾರಾದರೊಬ್ಬರ ಮಧ್ಯಸ್ಥಿಕೆಯಿಂದ ವೈಸರಾಯ ಗಾಂಧಿಜಿಯವರೊಳಗೆ ಮಾತುಕಥೆಗಳು ನಡೆಯುವಂತಾದರೆ ಒಳ್ಳೇದೆಂದು ಸರ್. ಸಿ. ಎಸ್. ಶಿವಸ್ವಾಮಿ ಅಯ್ಯರರ ಅಭಿಮತ.

ಕಾಂಗ್ರೆಸು ಮುಖಂಡರು ಅಧಿಕಾರ ಸ್ವೀಕರಿಸುವುದಕ್ಕೆ ಸರಕಾರವು ವಿರೋಧ ವಿದೆಯೆಂಬ ದಕ್ಕೆ ಆಧಾರವಿಲ್ಲ ಕಾಂಗ್ರೆಸ್ ಮಂತ್ರಿಮಂಡಲವನ್ನೂ ಸ್ವಾಗತೀಕರಿಸಲು ಗವರ್ನರರು ಸಿದ್ಧರಾಗಿಯೇ ಇರುವರು. ಕ್ರಮವಾದ ಶಾಸನರಚನೆಮತ್ತುಆಡಳಿತದ ಅನುಸಿತ್ಯದ ಕೆಲಸದಲ್ಲಿ ಅವರು ಕೈಹಾಕಲಾರೆಂಬ ಭರವಸೆಯು ಇದ್ದೇ ಇದೆ ಈ ಕುರಿತು ನಿಶ್ಚಿತವಾದ ವಚನಕೊಡಬೇಕೆಂದು ಕಾಂಗ್ರೆಸಿನವರು ಕೇಳಿ ಬಿಕ್ಕಟ್ಟು ಉಂಟಾಗಿದೆ. ಅದನ್ನು ನಿವಾರಿಸಲು ಪ್ರಯತ್ನ ನಡೆಯಬೇಕು. ಈಗ ನೇಮಿಸಲ್ಪಟ್ಟಿರುವ ಮಂತ್ರಿಗಳಿಗೆ ಯಾವ ರಾಜಕೀಯ ಪಕ್ಷದ ಬೆಂಬಲವೂ ಇಲ್ಲದಿರುವುದರಿಂದ ಇವರು ಬೇಗನೆ ಅಪರಿಹಾರ್ಯವಾದ ತೊಡಕಿಗೊಳಗಾಗುವರು. ಬೇರೆ ಬೇರೆ ಪ್ರಾಂತಗಳ ಗವರ್ನರರು ಮತ್ತುಕಾಂಗ್ರೆಸ್ ಮುಖಂಡರುಗಳು ಒಟ್ಟು ಸೇರುವಂತೆ ಪರಿಷತ್ತು ಒಂದನ್ನು ನಡೆಸಲ್ಪಡಬೇಕು. ಅದಕ್ಕೆ ಗಾಂಧಿಯವರೂ ಕಾಂಗ್ರೆಸ್ ಪ್ರೆಸಿಡೆಂಟರೂ ಆಮಂತ್ರಿಸಲ್ಪಡುವುದರಿಂದ ಯಾವಹಾನಿಯೂ ಇಲ್ಲ, ಎಂದು ಸರ್. ತೇಜಬಹದೂರ್ ಸಪ್ರುಗಳು ಲಂಡನಿನಲ್ಲಿ ಮೇಂಚೆಸ್ಟರ್ ಪತ್ರಿಕೆಯ ಪ್ರತಿನಿಧಿಯೊಡನೆ ಹೇಳಿರುವರು.

(೪ನೇ ಪಾಜಯಿಂದ)

ಹೊರತು ಇಲ್ಲವಾದರೆ ಸರಕಾರದ ಕೋಪರೇಟಿವ್ ಸ್ಟೋರ್ಸ್‌ಗಳೇ ಮೊದಲಾಗಿ ಸಾಮಾನುಗಳನ್ನು ಪಡೆಯುವವು ವ್ಯಾಪಾರ ವಹಿವಾಟಿನ ಕುರಿತು ಸೋವಿಯೆಟ್ ಸರಕಾರದ ನಿಯಮಗಳನ್ನು ಉಲ್ಲಂಘಿಸಿದರೆ ಕೂಡಲೇ ತಕ್ಕ ಶಿಕ್ಷೆಯು ದೊರೆಯುವುದು ಕಾನೂನಿಗಿಂತ 5 ಮಿನಿಟು ಹೆಚ್ಚಾಗಿ ಅಂಗಡಿಯನ್ನು ತೆರೆದಿಟ್ಟುದಕ್ಕಾಗಿ ವ್ಯಾಪಾರಿಗಳಿಗೆ ಬಹಳ ಜುಲ್ಮಾನೆಯಾದುದಿದೆ. ಕಾಜನ್ ಎಂಬ ಪ್ರಾಂತದಲ್ಲಿ ವ್ಯಾಪಾರಿಗಳಾರಾದರೂ ಸರಕಾರದ ಸಮಯ ನಿಯಮಕ್ಕೆ ವಿರೋಧವಾಗಿ ಒಂದು ರೊಟ್ಟಿಯನ್ನು ಕೂಡಾ ಮಾರದಿದ್ದುದರಿಂದ ನಾನು ಹಲವು ಘಂಟೆ ಉಪವಾಸ ತಿರುಗಾಡಬೇಕಾಗಿದ್ದಿತು ಸಂಜೆ 5 ಘಂಟೆಗೆ ಅಂಗಡಿಗಳೆಲ್ಲಾ ಮುಚ್ಚಲ್ಪಡಬೇಕು ನಾನು ಹೋದ ಸಮಯ 5 ಘಂಟೆ ದಾಟಿತ್ತು ಈ ಮೊದಲೊಮ್ಮೆ ಇಲ್ಲಿ ನನ್ನಂತೆಯೇ ಹೊರಗಣಿಂದ ಬಂದಿದ್ದ ಪ್ರೇಕ್ಷಕನೊಬ್ಬನಿಗೆ ನಿಯುಕ್ತ ಸಮಯ ದಾಟಿ ತತ್ತಿಗಳನ್ನು ಮಾರಿದುದಕ್ಕಾಗಿ ಖಾಸಗಿ ವ್ಯಾಪಾರಿಯೊಬ್ಬನಿಗೆ 25 ರುಬುಲು ಜುಲ್ಮಾನೆ ವಿಧಿಸಲಾಗಿತ್ತು ತನ್ನ ಅಂಗಡಿಯ ಅಂಗಳದಲ್ಲಿ ಒಕ್ಕಲಿಗರು ಬಿಸಾಡಿರುವ ಸೂರ್ಯ ಕಾಂತಿ ಬೀಜದ ತೊಗಲನ್ನು ಗುಡಿಸದೆ ಹಾಗೆಯೇ ಬಿಟ್ಟುದಕ್ಕಾಗಿ ಪೋಲೀಸನೊಬ್ಬನು ಸದ್ರಿ ಅಂಗಡಿಯನ್ನಿಟ್ಟಿದ್ದ ಸ್ತ್ರೀಯೊಬ್ಬಳ ಕುರಿತು ಸರಕಾರಕ್ಕೆ ದೂರುಕೊಟ್ಟಿದ್ದನು. ಸರಕಾರದ ನೈರ್ಮಲ್ಯದ ನಿಯಮವನ್ನು ಮೀರಿದಳೆಂದೇ ಇವಳ ಮೇಲಿನ ಆಪಾದನೆ. ಇಂತಹ ವಿಪರೀತವಾದ ತೆರಿಗೆ, ಕಾನೂನಿನ ನಿರ್ಬಂಧ ಮತ್ತು ಅನಾನುಕೂಲತೆಯ ತೊಡಕುಗಳುಳ್ಳ ವ್ಯಾಪಾರಿಯು ಹೆಚ್ಚಿನ ಲಾಭ ಪಡೆದು ಹಣ ಸಂಗ್ರಹಿಸುವುದು ಬಲು ಪ್ರಯಾಸ. ಅಂತಹ ಚತರರು ಹಾಗೂ ಬುದ್ಧಿಶಾಲಿವ್ಯಾಪಾರಿಯು ಹೇಗಾದರೂ ಉಪಾಯಮಾಡಿ ಹಣ ಸಂಪಾದಿಸಿಬಿಟ್ಟರೆ ಅದನ್ನವನಿಗೆ ತನ್ನ ಜೀವಮಾನದ ವರೆಗೆ ಮಾತ್ರ ಅನುಭವಿಸಲು ಸಾಧ್ಯವಿದೆ ಅವನು ಸತ್ತನೆಂದರೆ ಸರಕಾರವು ಮೃತ್ಯುತೆರಿಗೆಯ ರೂಪದಲ್ಲಿ ಅದನ್ನು ಕಿತ್ತುಕೊಂಡುಬಿಡುವುದು. ವಿಲಾಸಕ್ಕಾಗಿಯಲ್ಲದೆ ಅವಶ್ಯಕತೆಯಾಗಿರುವ ಸಾಮಾನುಗಳಮೇಲೆ, ಅಂದರೆ ವಾಚು, ಪಿಯಾನೊ ಪಾತ್ರಗಳೇ ಮೊದಲಾದ 100 ರುಬುಲಗಳಿಗಿಂತ ಮಿಕ್ಕಿದ ಬೆಲೆಯ ಸಾಮಾನುಗಳಮೇಲೆ ಸರಕಾರವು ಮೃತ್ಯುತೆರಿಗೆ ಹೊರಿಸುವುದಿಲ್ಲ ಇತರ ಸೊತ್ತುಗಳ ಮೇಲೆಲ್ಲಾ ವಿಪರೀತವಾದ ಮೃತ್ಯು ತೆರಿಗೆ ಹಾಕಲಾಗುವುದು. ಸೊತ್ತುಗಳ ಬೆಲೆ ಹೆಚ್ಚಾದಂತೆ ತೆರಿಗೆಯೂ ಅಧಿಕವಾಗುವುದು. ಹೀಗೆ ಖಾಸಗಿ ಸೊತ್ತುವಾದಿಯು ಎತ್ತ ತಿರುಗಿದರೂ ಅವನ ದಾರಿಯು ಮುಳ್ಳುಗಳಿಂದಲೇ ತುಂಬಿರುವುದು. ಅವನು ಜೀವಂತವಿರುವಾಗ ಮಾತ್ರವಲ್ಲದೆ ಸಾಯುವಾಗಲೂ ಅವನ ಮೇಲೆ ಸರಕಾರವು ಹೊಂಚು ಹಾಕಿಕೊಂಡು ಅವನ ಸೊತ್ತನ್ನೆಲ್ಲಾ ಸಾಧ್ಯವಾದಷ್ಟು ವಶಪಡಿಸಿಕೊಳ್ಳಲೆತ್ನಿಸುವುದು. ಒಟ್ಟಾರೆ ಖಾಸಗಿಸೊತ್ತುವಾದಿಯನ್ನು ಸಾಧ್ಯವಾದ ರೀತಿಯಲ್ಲೆಲ್ಲಾ ಒಗ್ಗಿ ಬಡಿಯುವುದೇ ಸರಕಾರದ ಉದ್ದೇಶ. ಖಾಸಗಿ ವ್ಯಾಪಾರಿಯೆಂಬ ಗಣವನ್ನು ಯಾವ ಕರುಣೆಯೂ ಇಲ್ಲದೆ ಸಂಪೂರ್ಣವಾಗಿ ಕರೆದು ಬರಿದುಗೊಳಿಸಬೇಕೆಂದು ಸೋವಿಯೆಟ್ ಸರಕಾರವು ಇಷ್ಟೊಂದು ಕಠಿಣ ನಿರ್ಬಂಧಗಳನ್ನು ಕಠಿಣವಾಗಿ ಜ್ಯಾರಿಗೆ ತಂದಿರುವುದು. ಯಾಕಂದರೆ ಅವರ ಸಮಾಜ ನೀತಿಯಂತೆ ಖಾಸಗಿ ಸೊತ್ತೆಂಬುದು ಭಯಂಕರ ಪಾಪವೂ ಶಾಪವೂ ಆಗಿರುವುದು.

ಬಾಲವಾಙ್ಮಯದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ
ಬಾಲವಾಙ್ಮಯ
ಬೆಲೆ ಮೂರಾಣೆ
ಉಪಾಧ್ಯಾಯರ ಪ್ರಕಟನ ಸಮಿತಿ
ಉ ಡು ಪಿ.

ಇಂಟರಿಮ್ ಮಂತ್ರಿಗಳ ಕುತಂತ್ರ ಬಯಲಾಯಿತು

ಶ್ರೀ. ಎ. ಬಿ. ಶೆಟ್ಟಿ ಮತ್ತು ಶಿಕ್ಷಣ ಮಂತ್ರಿ ಪಾಲತರ ಪತ್ರವ್ಯವಹಾರ

ಕಾಂಗ್ರೆಸ್ ಪಕ್ಷದ ಕೆಲವರನ್ನು ನಾನಾ ವಿಧದ ಆಶೆತೋರಿಸಿ ಪ್ರತ್ಯೇಕವಾದೊಂದು ಪಕ್ಷ ಸ್ಥಾಪಿಸುವಂತೆ ಮಾಡಿ, ಕಾಂಗ್ರೆಸಿನೊಳಗೆ ಒಡಕುಂಟುಮಾಡಿ ತಮ್ಮ ಬೇಳೆ ಬೇಯಿಸಬೇಕೆಂದು ಇಂಟರಿಮ್ ಮಂತ್ರಿಗಳು ಒಳಗಿಂದೊಳಗೆ ಪ್ರಯತ್ನ ನಡಿಸುತ್ತಿದ್ದರೆಂಬುದು ಶ್ರೀ. ಎ. ಬಿ. ಶೆಟ್ಟಿಗೂ ಶಿಕ್ಷಣ ಮಂತ್ರಿಗಳಾದ ಶ್ರೀ ಆರ್ ಪಾಲತರಿಗೂ ನಡೆದ ಪತ್ರವ್ಯವಹಾರವು ವಿದಿತಪಡಿಸುವುದು. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಸರ್ದಾರ್ ವಲ್ಲಭಾಯಿ ಪಟೇಲರು ಈ ಕುರಿತೊಂದು ಹೇಳಿಕೆಯನ್ನಿತ್ತು ಸದ್ರಿ ಪತ್ರವ್ಯವಹಾರವನ್ನು ಪ್ರಕಟಪಡಿಸಿರುವರು.

'ಇಂಟರಿಮ್ ಮಂತ್ರಿಗಳೆನಿಸಿಕೊಳ್ಳುವವರು ಕಾಂಗ್ರೆಸ್ ಪಕ್ಷೀಯರ ವಿಧೇಯತೆಗೆ ಭಂಗತರಲು ನಡಿಸಿನ ಪ್ರಯತ್ನವು ಸಂಪೂರ್ಣವಾಗಿ ನಿಷ್ಫಲವಾಗಿರುವುದು. ಬಿಹಾರಿನ ಹರಿಜನ ಮೆಂಬರರು ಅಲ್ಲಿಯ ಮಂತ್ರಿಗಳು ಬೀರಿದ ಮೋಹಜಾಲಕ್ಕೆ ಬಲಿಬೀಳದ ಉದಾತ್ತ ಉದಾಹರಣೆಯನ್ನು ಮಹಾತ್ಮ ಗಾಂಧಿಯವರು ಪ್ರಶಂಸಿಸಿರುತ್ತಾರೆ. ಕಳೆದ ಮಾರ್ಚಿ ತಾ. 21ರಲ್ಲಿ ಶ್ರೀ ಸಿ, ರಾಜಗೋಪಾಲಾಚಾರ್ಯರು ಮಂಗಳೂರಿಗೆ ಹೋಗಿದ್ದಾಗ, ಮದ್ರಾಸಿನ ಮಂತ್ರಿಗಳಲ್ಲೊಬ್ಬರಾದ ಶ್ರೀ ಪಾಲತರು, ಕಾಂಗ್ರೆಸ್ ಪಕ್ಷದ ಮೆಂಬರರು ಕೆಲವರನ್ನು ಕಂಡು ಸ್ವತಂತ್ರವಾದೊಂದು ಪಕ್ಷ ಸ್ಥಾಪಿಸಲು ನಡಿಸಿದ ತಂತ್ರದ ಕುರಿತು ಸಂಪೂರ್ಣ ವಿವರವನ್ನು ಶ್ರೀ. ಎ. ಬಿ. ಶೆಟ್ಟಿ ಅವರಿಗೆ ತಿಳಿಸಿದರು. ಅನಂತರ ಈ ಸಂಬಂಧವಾಗಿ ಶ್ರೀ. ಎ. ಬಿ. ಶೆಟ್ಟಿಗೂ ಶ್ರೀ ಪಾಲತರಿಗೂ ನಡೆದ ಪತ್ರವ್ಯವಹಾರವನ್ನು ಈ ಕೆಳಗೆ ಕೊಡಲಾಗಿದೆ. ಆ ಕುರಿತು ನಾನೇ ಬರಿಯಬೇಕಾಗಿಲ್ಲ. ಶ್ರೀ. ಎ. ಬಿ. ಶೆಟ್ಟಿ ಪತ್ರದ ಸಂಗತಿಗಳನ್ನು ಶ್ರೀ ಪಾಲಟರೇನೂ ನಿರಾಕರಿಸುವುದಿಲ್ಲ, ಆದರೆ ಅಂತಹ ಮಾತುಕತೆಗಳನ್ನು ಪ್ರಕಟಿಸಬಾರದೆಂದೇ ಅವರ ಆಕ್ಷೇಪ. ಖಾಸಗಿ ಮಾತುಕತೆಗಳನ್ನು ಜಾಹೀರು ಪಡಿಸಬಾರದೆಂಬ ಸಾಮಾನ್ಯ ನಿಯಮವು, ಒಂದು ಪಕ್ಷದ ಮೆಂಬರರ ವಿಧೇಯತೆಯನ್ನು ಕೆಡಿಸಲೆತ್ನಿಸಿ ಸಾರ್ವಜನಿಕ ಹಿತ ವಿಘಾತಮಾಡುವ ವರ್ತನೆಗೆ ಅನ್ವಯಿಸುವುದಿಲ್ಲ ಕೆಟ್ಟ ಕೆಲಸ ಮಾಡುವವನು, ತನ್ನ ಪ್ರಯತ್ನವು ನಿಷ್ಫಲವಾದಾಗ ಅದನ್ನು ಬಯಲುಗೊಳಿಸಬಾರದೆಂಬ ಹಕ್ಕಿಗೆ ಬಾಧ್ಯನಾಗಲಾರನು. ಆದುದರಿಂದ ನಾನು ಇಂಟರಿಮ್ ಮಂತ್ರಿಗಳು ಜನತೆಯ ಸೇವೆಗಾಗಿಯಲ್ಲ ತಮ್ಮ ಸ್ವಾರ್ಥಕ್ಕಾಗಿ ಸ್ವೀಕರಿಸಿರುವ ಮಂತ್ರಿ ಪದವಿಯನ್ನು ಸ್ಥಿರವಾಗಿರಿಸಿಕೊಳ್ಳಲು ಎಂತಹ ನಿಂದ್ಯ ಕೆಲಸವನ್ನೇ ಮಾಡಹೋಗುವರೆಂಬುದನ್ನು ಜಾಹೀರು ಪಡಿಸಲು ಶ್ರೀ. ಎ. ಬಿ. ಶೆಟ್ಟಿ ಪತ್ರವ್ಯವಹಾರವನ್ನು ಪ್ರಕಟಿಸುವ

ಶ್ರೀ ಎ. ಬಿ. ಶೆಟ್ಟಿ ಶ್ರೀ ಪಾಲತರಿಗೆ ಬರೆದ ಪತ್ರ

ಮಂಗಳೂರು
22-4-37

ಪ್ರಿಯ ಪಾಲತರೇ,

ಅಂದು ನೀವು ನನ್ನ ಮನೆಗೆ ಬಂದಿದ್ದಾಗ, ಯಾವ ಆಶ್ವಾಸನೆಯೂ ಶರ್ತವೂ ಇಲ್ಲದೆ ಅಧಿಕಾರ ಸ್ವೀಕರಿಸಲು ಮದ್ರಾಸ್ ಲೆಜಿಸ್ಲೆಟಿವ್ ಎಸೆಂಬ್ಲಿಯ ಕೆಲಮಂದಿ ಮೆಂಬರರು ಪ್ರತ್ಯೇಕವಾದೊಂದು ತಂಡವಾಗಬೇಕೆಂದು ಸೂಚಿಸಿದಿರಿ ಮತ್ತು ಮಲಬಾರಿನ 3 ಅಥವಾ 4 ಮಂದಿ ಮೆಂಬರರು ಈ ತಂಡಕ್ಕೆ ಸೇರಲೊಪ್ಪಿರುವರು; ಇಂತಹ ಸುಮಾರು 50 ಮಂದಿ ಮೆಂಬರರು ಸಿಕ್ಕಿದರೆ ಈಗಣ ಮಂತ್ರಿಮಂಡಲವನ್ನು ಪುನಃ ರಚನೆ ಮಾಡಬಹುದೆಂದು ಹೇಳಿದಿರಿ. ಈ ವಿಷಯದಲ್ಲಿ ನನ್ನ ಅಭಿಪ್ರಾಯವೇನು; ನಾನಾಗಲಿ ದಕ್ಷಿಣ ಕನ್ನಡ ಜಿಲ್ಲೆಯ ಇನ್ನಾವ ಎಸೆಂಬ್ಲಿ ಮೆಂಬರರಾಗಲಿ ಇಂತಹ ಪ್ರತ್ಯೇಕವಾದೊಂದು ತಂಡಕ್ಕೆ ಸೇರುವವರಿರುವರೇ ಎಂದು ಕೇಳಿದಿರಿ. ಕಾಂಗ್ರೆಸಿನ ಪರವಾಗಿ ಚುನಾವಣೆಗೆ ನಿಂತವರು ಕಾಂಗ್ರೆಸಿಗೆ ದ್ರೋಹವಾದ ಬಗೆಯಲು ಸಾಧ್ಯವಿಲ್ಲ ಮತ್ತು ಈಗ ಅವರು ಕಾಂಗ್ರೆಸಿನ ನಿರ್ಧಾರಕ್ಕೆ ವಿರೋಧವಾಗಿ ಬಂಡಾಯವೆಬ್ಬಿಸುವುದರಲ್ಲಿ ನ್ಯಾಯವಿಲ್ಲೆಂದು ನಾನು ನಿಮಗೆ ಸ್ಪಷ್ಟವಾಗಿ ಹೇಳಿದೆ. ಆಗ ನೀವು, ಜನರು ಹೊಸ ರಾಜ್ಯಾಂಗ ರಚನೆಯನ್ನು ಕಾರ್ಯಕ್ಕೆ ಹಚ್ಚಲೊಪ್ಪದಿದ್ದರೆ ಸರಕಾರವು ಹಿಂದಿನ ಮಿಂಟೋ ಮೋರ್ಲೆ ಸುಧಾರಣೆಗೆ ಹಿಂದೆ ಸರಿಯಬಹುದು ಅಥವಾ ಇನ್ನೊಂದು ಚುನಾವಣೆ ನಡೆಯುವ ಪಕ್ಷದಲ್ಲಿ ಕಾಂಗ್ರೆಸನ್ನೇ ಬೇಕಾಯಿದೆಶೀರವಾಗಿ ಮಾಡಿ ಅದು ಚುನಾವಣೆಯಲ್ಲಿ ಭಾಗವಹಿಸದಂತೆ ಮಾಡಬಹುದೆಂದೆಲ್ಲಾ ಹೇಳಿದಿರಿ. ನಮ್ಮ ಪಕ್ಷದ ನಾಯಕರಾದ ಶ್ರೀ ಸಿ ರಾಜಗೋಪಾಲಾಚಾರ್ಯರು ನಿನ್ನೆ ಇಲ್ಲಿಗೆ ಬಂದಿದ್ದಾಗ, ಮಲಬಾರಿನಲ್ಲಾಗಲಿ ಇತರ ಕಡೆಗಳಲ್ಲಾಗಲಿ ಕಾಂಗ್ರೆಸನ್ನು ಬಿಟ್ಟು ಪ್ರತ್ಯೇಕವಾದೊಂದು ತಂಡಮಾಡುವ ಪ್ರಯತ್ನ ನಡಿದಿದೆಯೇ ಎಂದು ನಾನವರೊಡನೆ ಕೇಳಿದೆನು. ಈ ಸಂದರ್ಭದಲ್ಲಿ ನೀವು ನನ್ನೊಡನೆ ನಡಿಸಿದ ಮಾತುಕತೆಯ ಸಾರಾಂಶವನ್ನು ಅವರಿಗೆ ತಿಳಿಸುವುದು ನನ್ನ ಕರ್ತವ್ಯವೆಂದು ಭಾವಿಸಿದೆ. ಅವರು ಈ ವಿಷಯವು ಪ್ರಾಮುಖ್ಯವಾದುದೆಂದು ಬಗೆದು, ಕಾಂಗ್ರೆಸ್ ಪಕ್ಷದ ಮೆಂಬರರ ವಿಧೇಯತೆಯನ್ನು ಕೆಡಿಸಲು ನಡೆಸಲ್ಪಡುವ ಯತ್ನವನ್ನು ನಿಲ್ಲಿಸಿಬಿಡಬೇಕೆಂದು ನೀವು ನನ್ನೊಡನೆ ಹೇಳಿದುದನ್ನು ನಾನು ಪ್ರಕಟಿಗೊಳಿಸಬೇಕೆಂದು ಹೇಳಿರುತ್ತಾರೆ. ನೀವು ಪನ್ನ ಅಭಿಪ್ರಾಯ ಮಾಡಿಕೊಳ್ಳನಂತೆ ಈ ವಿಷಯವನ್ನು ನಿಮಗೆ ಮುಂದಾಗಿ ತಿಳಿಸುವದು ನನ್ನ ಕರ್ತವ್ಯವಾಗಿರುವುದು.

(ಇದರ ಪ್ರತಿಯೊಂದನ್ನು ಶ್ರೀ ಸಿ. ರಾಜಗೋಪಾಲಾಚಾರ್ಯರಿಗೆ ಮದ್ರಾಸಿಗೆ ಕಳುಹಿಸಲಾಗಿದೆ.)

ಎಪ್ರಿಲ್ ತಾ. 27ರಲ್ಲಿ ಶ್ರೀ ಎ. ಬಿ. ಶೆಟ್ಟಿ ಅಲಹಾಬಾದಿನ ಸ್ವರಾಜ್ಯ ಭವನಕ್ಕೆ ಶ್ರೀ ಸಿ. ರಾಜಗೋಪಾಲಾಚಾರ್ಯರಿಗೆ, 'ಪಾಲತರ ಉತ್ತರವು ನನ್ನ ಮತ್ತು ಅವರ ಮಾತುಕತೆಯ ವಿಷಯಗಳನ್ನು ನಿರಾಕರಿಸುವುದಿಲ್ಲ. ಪತ್ರದ ಪ್ರತಿ ಮದ್ರಾಸಿಗೆ ಕಳುಹಿಸಲ್ಪಟ್ಟಿದೆ' ಎಂದು ತಂತಿಬಿಟ್ಟರು.

ಶ್ರೀ ಶೆಟ್ರಿಗೆ ಶ್ರೀ ಪಾಲತರ ಪತ್ರ

ಉಟಕಮಂಡ್, 25-4-37

ಪ್ರಿಯ ಶೆಟ್ಟರೇ,

ನೀವು ಕೈಕೊಳ್ಳುವ ಕೆಲಸದ ಕುರಿತು ನನಗೆ ಬರೆದುದಕ್ಕಾಗಿ ನಿಮಗೆ ನನ್ನ ಅನೇಕ ವಂದನೆಗಳು. ಖಾಸಗಿ ಮಾತುಕತೆಯನ್ನು ಪ್ರಕಟಗೊಳಿಸುವುದು ಎಷ್ಟೊಂದು ನೀತಿಯುಕ್ತವಾದುದೆಂಬುದನ್ನು ನಾನಿಲ್ಲಿ ವಿಚಾರಿಸಬೆಳಸುವುದಿಲ್ಲ. ಆದರೆ ನೀವು ನಿಮ್ಮ ಸ್ಟೇಟ್‌ಮೆಂಟನ್ನು ಪ್ರಕಟಗೊಳಿಸುವ ಮೊದಲು ಅದರ ಪ್ರತಿಯೊಂದನ್ನು ನನಗೆ ಕಳುಹಿಸುವ ದಯಮಾಡಿದರೆ ನನಗೆ ಸಂತೋಷವಾಗುತ್ತಿತ್ತು. ಯಾಕಂದರೆ ಆ ಮೇಲೆ ಅದರ ಯಾವುದಾದರೊಂದು ವಿಷಯವನ್ನು ನಿರಾಕರಿಸುವ ಆವಶ್ಯಕತೆಯು ನನಗುಂಟಾಗಲಾರದು. ನೀವು ಒಂದು ಪ್ರತಿಯನ್ನು ನನಗೆ ಕಳಹಿಸುವ ನಿರ್ಧಾರವಮಾಡಿದರೆ ಅಗತ್ಯವಿದ್ದಲ್ಲಿ ಅದನ್ನು ನಾನು ತಿದ್ದಿ ನಿಮಗೆ ಹಿಂದೆ ಕಳುಹಿಸುವೆನು.

ಇತಿ

(ಸಹಿ) ಆರ್. ಎಸ್ ಪಾಲತ್

ನಾನು ನಿಮ್ಮೊಡನೆ ನಡಿಸಿದ ಮಾತ್ರಕತೆಯು ಖಾಸಗಿ ರೀತಿಯದಾಗಿರುವಂತೆಯೇ ಈ ಪತ್ರವನ್ನೂ ನಾನು ನಿಮಗೆ ಖಾಸಗಿಯಾಗಿಯೇ ಬರೆದುದಾಗಿದೆ.

ಶ್ರೀ ಪಾಲತರಿಗೆ ಶ್ರೀ ಶೆಟ್ರಿ ಎರಡನೇ ಪತ್ರ

ಮಂಗಳೂರು
27-4-37

ಪ್ರಿಯ ಪಾಲತರೇ,

ನಿಮ್ಮ ತಾ. 25ರ ಪತ್ರತಲ್ಪಿತು. ನನ್ನ ಪಕ್ಷದ ನಾಯಕರಿಗೆ ಅಗತ್ಯವೆಂದು ತೋರಿದಲ್ಲಿ ಈ ಮೊದಲಿನ ನನ್ನ ಪತ್ರದಲ್ಲಿ ನಾನು ಬರೆದುದು ಮಾತ್ರವೆ ಪ್ರಕಟಿಸಲ್ಪಡುವುದು. ಖಾಸಗಿ ಸಂಭಾಷಣೆಯನ್ನು ಪ್ರಕಟಗೊಳಿಸುವ ನೀತಿಯ ಕುರಿತು ನೀವು ಬರೆದಿರುವಿರಿ. ನಮ್ಮ ಸಂಭಾಷಣೆಯ ವಿಷಯವು ವೈಯಕ್ತಿಕ ಸಂಬಂಧದ ಖಾಸಗಿ ಸ್ವರೂಪದ್ದಲ್ಲ. ನೀವು ಸೂಚಿಸಿದ ನಿಶ್ಚಿತವಾದ ಕಾರ್ಯರೀತಿಯು ನನ್ನ ಸಾರ್ವಜನಿಕ ಜೀವನ ಮತ್ತು ಹೆಸರಿಗೆ ಮಾತ್ರವಲ್ಲದೆ ನಾನು ಪ್ರತಿಜ್ಞಾಬದ್ಧನಾಗಿರುವ ಪಕ್ಷದ ಐಕಮತ್ಯಕ್ಕೆ ಸಂಬಂಧಿಸುವದಾಗಿದೆ. ನನ್ನ ಸಂಗತಿ ತಿಳಿದಿರುತ್ತಾ ನೀವು ನನ್ನ ಬಳಿಗೆ ಬರುವ ಔಚಿತ್ಯವನ್ನು ಕಂಡುಕೊಂಡು ಉದ್ದೇಶಪೂರ್ವಕವಾಗಿ ನನಗೆ ಅಂತಹ ಸೂಚನೆ ಮಾಡಿದುದು ವಿಷಾದಕರವಿದೆ.

ಇತಿ

(ಸಹಿ) ಎ. ಬಿ. ಶೆಟ್ಟಿ

ESTD. 1906

CANARA BANK

LIMITED.

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,53,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

ಮಂಗ್ಳೂರು ಚಂದಾದಾರರಲ್ಲಿ ವಿನಂತಿ.

ಮಂಗಳೂರಿನ ಸ್ಥಳೀಕ ಚಂದಾದಾರರು ತಮ್ಮ ಚಂದಾಹಣವನ್ನು ಕೆನರಾ ಪ್ರೆಸ್ಸಿನ ಮೆನೇಜರರೊಡನೆ ಪಾವತಿ ಮಾಡಿ ರಶೀದಿ ಪಡೆಯಬೇಕಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮೆನೇಜರ್,

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬ ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ. ಕ.



ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಡೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ,
ಕಿರಿಯರ ಪ್ರಪಂಚ, ಉಡುಪಿ.

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: 1907]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**
ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.
ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಕೊಳ್ಳಿರಿ—

ಪಿ. ಡಿ. ಭರ್ಗೋವಾ ಎಸ್ಕ್ವೈಯರ್, ಎಮ್. ಎಸ್. ಎಸ್ (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸ್ಸರ್, ನೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-
ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಲೇಖ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವುದು

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ. ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು ವೈಜ್ಞಾನಿಕ ವಿಷಯಗಳ.-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳ ನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE

Vijaya Bank, Ltd.

Head Office MANGALORE. Branch Offices Udipi, Kaup & Coondapoor.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ,
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 100ರ ವರೆಗೆ ಸಾ ಶೆ. 8. 101ರಿಂದ ಮೇಲ್ಪಟ್ಟ ಸಾಲುಗಳಿಗೆ ಸಾ. ಶೆ. 7

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಫಾರಂಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್ — **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪ್ಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಆದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವದೇಶೀ ಸ್ಟೋರ್ಸ್, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

ಮಂಗಳೂರು.

(ನಮ್ಮ ಸ್ವಂತ ಬಾತ್ಮೀದಾರರಿಂದ)

ಯಕ್ಷಗಾನಸಮಾರಂಭ

ಇದೇ ತಾ. ೧೬ಕ್ಕೆ ಕದ್ರಿ ಶ್ರೀ ಮಂಜುನಾಥ ದೇವರ ಸನ್ನಿಧಿಯಲ್ಲಿ ಶ್ರೀ ಮಂಜುನಾಥ ಕೃಪಾ ಪೋಷಿತ ಯಕ್ಷಗಾನ ಕಲಾವರ್ಧಕ ಸಂಘದ ತೃತೀಯ ವಾರ್ಷಿಕೋತ್ಸವವು ಜರಗುವುದು. ಅಂದು ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಒಂದು ಯಕ್ಷಗಾನ ತಾಳಮದ್ದಳೆಯ ಸಮಾರಂಭವು ನಡೆಯಲಿರುವುದು.

ಆಕಸ್ಮಿಕ ಮರಣ

ಕಳೆದ ತಾ. ೮ರಲ್ಲಿ ಮಂಗಳೂರು ನಗರದ ಕಾಡಹಿತ್ಲು ಎಂಬಲ್ಲಿಯ ಗೇರು ಬೀಜದ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ ಮಧ್ಯವಯಸ್ಸಿನ ಓರ್ವಸ್ತ್ರೀಯು ಆಕಸ್ಮಿಕ ಮರಣಕ್ಕೀಡಾದಳು. ಹೃದ್ರೋಗದಿಂದ ಈಕೆಯು ಮಡಿದಳೆಂದು ಊಹಿಸಲಾಗಿದೆ.

ಲ್ಯಾಂಡ್ ರೆವಿನ್ಯೂ ಕಮಿಟಿ

ಮದ್ರಾಸ್ ಸರಕಾರದವರು ಏರ್ಪಡಿಸಿರುವ ಲ್ಯಾಂಡ್ ರೆವಿನ್ಯೂ ಕಮಿಟಿಗೆ ಮಂಗಳೂರಿನ ದಿವಾನ್ ಬಹದ್ದೂರು ಬಿ. ಮಹಾಬಲ ಹೆಗ್ಗಡೆ, (ಜಿಲ್ಲಾಬೋರ್ಡು ಅಧ್ಯಕ್ಷರು) ಯವರು ಓರ್ವ ಸದಸ್ಯರಾಗಿ ನೇಮಕ ಹೊಂದಿರುವರು.

ಪೋಲೀಸ್ ಲಾಕಪ್ಪಿನಲ್ಲಿ ಮರಣ ನ್ಯಾಯವಿಧಾಯಕರ ಅರ್ಜಿ

ಕಳೆದ ತಾ. ೧ರಲ್ಲಿ ಮ್ಯಾಜಿಸ್ಟ್ರೇಟರ ವಾರಂಟಿನ ಮೇಲೆ ಮೋಟರ್ ಡ್ರೈವರ್ ಸಂಕು ಶೆಟ್ಟಿ ಎಂಬವರನ್ನು ಮಂಗಳೂರಿನ ಪೋಲೀಸರು ದಸ್ತಗಿರಿಮಾಡಿ ಲಾಕಪ್ಪಿನಲ್ಲಿಟ್ಟರು. ಮರುದಿವಸ ಅವರು ಲಾಕಪ್ಪಿನಲ್ಲಿಯೇ ಸತ್ತು ಹೋದರೆಂಬ ವಾರ್ತೆ ಹಬ್ಬಿತು. ತಾ. ೩ನೇ ಭಾನುವಾರ ಅವರ ದೇಹವನ್ನು ಪರೀಕ್ಷಿಸುವುದಕ್ಕಾಗಿ ಆಸ್ಪತ್ರೆಗೆ (ಸುಮಾರು ಸಾಯಂಕಾಲ ೮ ಘಂಟೆಗೆ) ಒಯ್ಯಲಾಯಿತು. ಸೋಮವಾರ (೩೦ ೪) ದಿವಸ ಬೆಳಿಗ್ಗೆ ೧೦ ರಿಂದ ೨-೩೦ರ ವರೆಗೆ ದೇಹವನ್ನು ಜಿಲ್ಲಾ ಸರ್ಜನರೂ, ಅಸಿಸ್ಟಾಂಟ್ ಸರ್ಜನರೂ ಪರೀಕ್ಷಿಸಿ, ತಮ್ಮ ಸರ್ಟಿಫಿಕೇಟನ್ನು ಒಂದು ಮುಚ್ಚಿದ ಕವರಿನಲ್ಲಿ ಹಾಕಿ ಅಧಿಕಾರಿಗಳಿಗೆ ಕಳುಹಿಸಿದರಂತೆ.

ಪೋಲೀಸರ ಹೇಳಿಕೆಯ ಪ್ರಕಾರ ಸಂಕು ಶೆಟ್ಟಿಯವರು ತಾ. ೩ನೇ ಸೋಮವಾರ ದಿವಸ ಬೆಳಿಗ್ಗೆ ಬಹಿರ್ದೇಶಕ್ಕೆ ಹೋದರು. ಅಲ್ಲಿಂದ ಬಂದಮೇಲೆ ಅವರಿಗೆ ಆಹಾರಕೊಟ್ಟಲ್ಲಿ ಅವರು ಅದನ್ನು ಮುಟ್ಟಲಿಲ್ಲ. ಮಧ್ಯಾಹ್ನ ಅನಂತರ ಸುಮಾರು ೩-೧೫ರಲ್ಲಿ ನೋಡುವಾಗ ಅವರು ಸತ್ತುಹೋಗಿದ್ದರು: ಅದೇ ಸಾಯಂಕಾಲ ಸುಮಾರು 7-8 ಘಂಟೆಗೆ ಮೃತರ ಶರೀರವನ್ನು ಆಸ್ಪತ್ರೆಗೊಯ್ಯಲಾಯಿತು. ತನ್ಮಧ್ಯೆ ಲಾಕಪ್ಪಿನಲ್ಲಿ ಸಂಕು ಶೆಟ್ಟಿಯವರನ್ನು ಲಾಕಪ್ಪಿನಲ್ಲಿ ಹೊಡೆದುಕೊಂದರೆಂಬಸುದ್ದಿಯು ನಗರದಲ್ಲಿಹಬ್ಬಿತು ಸುಮಾರು ಜನರು ಮೃತರ-ಸಂಬಂಧಿಕರೂ ಅನೇಕ ಮೋಟರ್ ಡ್ರೈವರರೂ, ವೆನ್ಲಾಕ್ ಆಸ್ಪತ್ರೆಯ ಗೇಟಿನ ಬಳಿ ನಿಂತಿದ್ದರು. ಮೃತ ಶರೀರವು ಮೃತರ ವಾರೀಸುದಾರರಿಗೆ ಕೊಟ್ಟ ಬಳಿಕ ಅದನ್ನು ಮೆರವಣಿಗೆಯಿಂದ ಸ್ಮಶಾನಕೊಯ್ದರು. ಮೃತ ದೇಹದ ಮೇಲೆ ಗಾಯಗಳು ಇದ್ದುವೆಂದೂ, ಹೊಟ್ಟೆಯಲ್ಲಿ ಆಹಾರವಿದ್ದಿಲ್ಲವೆಂದೂ, ದೇಹವು ಕೊಳೆಯ ವುದಕ್ಕೆ ಆರಂಭವಾಗಿತ್ತೆಂದೂ ಪರೀಕ್ಷೆ ನಡಿಸಿದವರು ಬರೆದಿರುವುದಾಗಿ ತಿಳಿದು ಬರುತ್ತದೆ. ಸಂಕು ಶೆಟ್ಟಿಯವರ ಮರಣವು ಈ ರೀತಿ ಸಂಭವಿಸಿದ್ದರಿಂದ ಆ ವಿಷಯದಲ್ಲಿ ಸಂಶಯಪಟ್ಟು ನಮ್ಮ ಜಿಲ್ಲೆಯ ನ್ಯಾಯ ವಿಧಾಯಕರು ಅಧಿಕಾರಿಗಳಿಗೆ ಅರ್ಜಿ ಬರೆದು ಈ ಮರಣ ಸಂಭವಿಸಲು ಲಾಕಪ್ಪಿನಲ್ಲಿ ಅನ್ಯಾಯ ನಡೆದಿರುವ ಹಾಗೆ ತಮಗೆ ಸಂಶಯವಿದೆಯೆಂದೂ ಆದ್ದರಿಂದ ಸರಿಯಾದ ತನಿಖೆ ನಡೆಸಬೇಕೆಂದೂ ಬರೆದಿರುವರಂತೆ. ಇದೇ ರೀತಿ ಮೃತರ ಅತ್ತೆಯವರೂ, ಇನ್ನೂ ಅನೇಕ ಮೋಟರ್ ಡ್ರೈವರರೂ ಡಿ. ಎಸ್. ಪಿ, ಡಿ. ಮ್ಯಾಜಿಸ್ಟ್ರೇಟ್ ಮೊದಲಾದ ಅಧಿಕಾರಿಗಳಿಗೆ ಅರ್ಜಿಮಾಡಿಕೊಂಡಿರುವರೆಂದು ತಿಳಿದುಬರುತ್ತದೆ.

ನ್ಯಾಯ ವಿಧಾಯಕರು ಬರೆದ ಅರ್ಜಿಗೆ ಡಿ. ಎಸ್. ಪಿ. ಗಳು ಅನ್ಯಾಯವೇನೂ ನಡೆದಿಲ್ಲವೆಂದೂ, ತನಿಕೆ ನಡೆಸಲ್ಪಟ್ಟಿದೆಯೆಂದೂ, ಉತ್ತರಕೊಟ್ಟಿರುವರಾಗಿ ತಿಳಿದುಬರುತ್ತದೆ. ಈಗ ನಗರದಲ್ಲಿ ಎಲ್ಲೆಲ್ಲಿಯೂ ಸಂಕು ಶೆಟ್ಟರ ಮರಣದ ವಾರ್ತೆಯನ್ನೇ ಜನರು ಮಾತಾಡುತ್ತಿದ್ದಾರೆ.

ಅಚೂತ್ ಕನ್ಯಾ

ಕಳೆದ ತಾ. ೭ನೇ ಶುಕ್ರವಾರ ದಿವಸ ಸಾಯಂಕಾಲ ಸ್ಥಳೀಯ ಚಿತ್ರಾಟಾಕೀಸ್ ಮಂದಿರದಲ್ಲಿ "ಅಚೂತ್ ಕನ್ಯಾ" ಎಂಬ ಮಾತಾಡುವ ಚಲಚಿತ್ರದ ಪ್ರದರ್ಶನವು ಮೊದಲನೇ ಸಾರಿ ಪ್ರದರ್ಶಿಸಲ್ಪಟ್ಟಿತು. ಈ ಹೊಸ ಕಥೆಯ ಪ್ರಾರಂಭೋತ್ಸವವನ್ನು ಮಂಗಳೂರು ನಗರಸಭಾಧ್ಯಕ್ಷರಾದ ಮಾನ್ಯ ಡಾ| ಕೆ. ವಿಟ್ಠಲ ಶೆಟ್ಟಿಯವರು ಅನೇಕ ನಾಗರಿಕರ ಸಮ್ಮುಖದಲ್ಲಿ ನೆರವೇರಿಸಿದರು.

ವರನು ಬೇಕು

ಗೃಹಕೃತ್ಯದಲ್ಲಿ ಬಲು ನಿಪುಣೆಯೂ ರೂಪವತಿಯೂ ಆದ ಹದಿನಾಲ್ಕು ವರ್ಷ ಪ್ರಾಯದ ಶಿವಳ್ಳಿ ಬ್ರಾಹ್ಮಣ ವಿಧವೆಗೆ— ಸ್ವಜಾತಿಯ 25—30 ವರ್ಷದೊಳಗಿನ ಯೋಗ್ಯ ವರನು ಬೇಕು. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯುವುದು; ವ ಸ್ವತಹ ಮಾತನಾಡುವುದು.

ವಿಳಾಸ—

ಸಮಾಜ ಸೇವಾ ಗ್ರಂಥಮಾಲಾ,

ಮುದ್ರಾಡಿ (ಕಾರ್ಕಳ ತಾಲೂಕು)

ಪೋಸ್ಟ್: ಹೆಬ್ರಿ—ದ. ಕನ್ನಡ.

ದಕ್ಷಿಣ ಕನ್ನಡ

ಮೂಲ್ಕಿ

ಸ್ಥಳೀಯ ಹೈಸ್ಕೂಲಿನ ಸಹಾಯಾರ್ಥವಾಗಿ ಏರ್ಪಡಿಸೋಣಾದ ಸೋಡ್ತಿಯಲ್ಲಿ ದೊರೆತ ಹಣವನ್ನು ಉಪಯೋಗಿಸುವ ಕುರಿತು ತಕ್ಕ ನಿರ್ಧಾರ್ರಮಾಡಲಿಕ್ಕೆ ಇದೇ ಬರುವ ತಾ. ೧೭ನೇ ರವಿವಾರ ಅಪರಾಹ್ನ ಘಂಟೆ ೫ಕ್ಕೆ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಲಿರುವುದು ಎಂದು ತಿಳಿದು ಬರುತ್ತದೆ.

ಸ್ಥಳೀಕ ಹೋಸ್ಪಿಟಲ್ ಪುವರ್ ಫಂಡಿನ ವರ್ಷಾವಧಿ ಮಹಾಸಭೆಯು ಇದೇ ಬರುವ ತಾ. ೧೭ನೇ ರವಿವಾರದಿನ ಮ| ಶ್ರೀ| ಬಿ| ವೆಂಕಟ್ರಾಯ ಬಾಳಿಗ, ಬಿ. ಎ., ಬಿ. ಯಲ್., ಯಂ. ಯಲ್. ಎ. ರವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಸ್ಥಳೀಕ ಶ್ರೀ| ದುರ್ಗಾದೇವಿ ಧರ್ಮಾರ್ಥಶಾಲೆಯ ದಶಮ ವರ್ಷವರ್ಧಂತಿಯು ಇದೇ ಬರುವ ತಾ. ೧೭ನೇ ರವಿವಾರ ರಾತ್ರಿ ಘಂಟೆ ೭-೩೦ಕ್ಕೆ ಶ್ರೀ| ಎ ಬಿ. ಶೆಟ್ಟಿ ಯಂ. ಯಲ್. ಎ. ರವರ ಸನ್ನಾಧ್ಯಕ್ಷತೆಯಲ್ಲಿ ಜರಗಲಿರುವುದು ವಿದ್ಯಾಭಿಮಾನಿಗಳಾದ ಸರ್ವರಿಗೂ ಸ್ವಾಗತವಿದೆ, ಎಂದು ಸದರಿ ಶಾಲೆಯವರು ತಿಳಿಸುತ್ತಾರೆ

ಸ್ಥಳೀಕ ಬೋರ್ಡ್ ಆಸ್ಪತ್ರೆಯ ವೈದ್ಯ ಉದ್ಯೋಗಸ್ಥರಾದ ಶ್ರೀ| ಡಾಕ್ಟರ್ ಯಂ. ಉಮೇರಾವ್ ಯಲ್. ಯಂ. ಯಸ್. ರವರಿಗೆ ಬಂಟ್ವಾಳಕ್ಕೆ ವರ್ಗವಾಗಿ ಅವರ ಬದಲಿಗೆ ಶ್ರೀ| ಡಾಕ್ಟರ್ ಕೆ. ಸೇವಿರಾಜ ಆಳ್ವ, ಯಲ್. ಯಂ. ಯಸ್ ರವರು ಇಲ್ಲಿ ಬರಲಿರುವರು.

ಸ್ಥಳೀಕ ಬೋರ್ಡು ಹೈಸ್ಕೂಲಿನ ಮುಖ್ಯ ಉಪಾಧ್ಯಾಯ ಶ್ರೀ. ಕೆ. ಕೃಷ್ಣರಾವ್ ಬಿ. ಎ. ಯಲ್.ಟಿ ಯವರಿಗೆ ಪುತ್ತೂರಿಗೆ ವರ್ಗವಾಗಿ ಅವರ ಸ್ಥಾನಕ್ಕೆ ಶ್ರೀ. ಕೆ. ಶ್ರೀನಿವಾಸಕಿಣಿ ಬಿ. ಎ. ಯಲ್.ಟಿ.ರವರು ಇಲ್ಲಿಗೆ ಬರಲಿರುವರು.

ಇಲ್ಲಿಯ ಬಿಲ್ಲವ ಸಮಾಜದ ಸೇವಾಸಂಘಕ್ಕೆ ರಾ. ಯಂ, ಕೆ. ಪೂವಪ್ಪನವರು ಒಪ್ಪಿಸಿ ಕೊಡುವ ನೂತನ ಕಟ್ಟಡ ಪ್ರವೇಶ ಸಮಾರಂಭವು ಇದೇ ಬರುವ ತಾ. ೨೧-೫-೩೬ನೇ ಬೃಹಸ್ಪತಿವಾರ ಅಪರಾಹ್ನ ಘಂಟೆ ೪ಕ್ಕೆ ಶ್ರೀ| ಡಾಕ್ಟರ್ ಯಂ. ಆರ್. ಕಾಮತ್‌ರವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸದರಿ ಸಂಘದ ದ್ವಿತೀಯ ವರ್ಷಾವಧಿ ಮಹಾಸಭೆಯು ಇದೇ ಬರುವ ೨೪ನೇ ರವಿವಾರ ಅಪರಾಹ್ನ ಘಂಟೆ ೨-೩೦ಕ್ಕೆ ಮಂಗಳೂರಿನ ಗವರ್ನಮೆಂಟ್ ಕಂಟ್ರಾಕ್ಟರರೂ, ಬೆಂಚ್ ಮೆಜಿಸ್ಟ್ರೇಟರರೂ ಆಗಿರುವ ಮ. ರಾ. ಯಂ. ದೂಮಪ್ಪ ಅವರ್ಗಳ್ ರವರ ಅಧ್ಯಕ್ಷತೆಯಲ್ಲಿ ಜರಗುವುದಾಗಿ ತಿಳಿದು ಬರುತ್ತದೆ.

ನಿಂಜೂರು ಶ್ರೀ ವಿವೇಕಾನಂದ ಸೇವಾಸಂಘ

ಇಲ್ಲಿ ತಾ. ೯-೫-೩೬ನೇ ಆದಿತ್ಯವಾರ ಮೂರು ಘಂಟೆಗೆ ಈ ಸಂಘದ ವಿಶೇಷ ಸಭೆಯೊಂದು ಶ್ರೀಮಾನ್ ನಕರೆ ಶಾಮರಾಯ ನಾಯಕರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಮೊದಲು ಪ್ರಕಟಿಸಿದಂತೆ ಆ ದಿವಸ ಶ್ರೀಮಾನ್ ಸುಬ್ಬಣ್ಣ ಭಟ್ಟ ಬಿ. ಎ. ಇವರು 'ರಾಜಯೋಗ'ವನ್ನು ಕುರಿತು ಪ್ರಬೋಧಕರ ಭಾಷಣವನ್ನು ಮಾಡಿದರು. ಆಮೇಲೆ ಅದೇ ಸಂಘದ ಕಾರ್ಯಕಾರಿಮಂಡಳಿಯ ಸಭೆಯು ಶ್ರೀ ಮುದ್ರಾಡಿ ಕೃಷ್ಣಶೆಟ್ರ ನೇತೃತ್ವದಲ್ಲಿ ಜರಗಿ ಬೈಲೂರು ಸೆಂಟರಿನಲ್ಲಿ ಆ ಪೋಲಿಂಗ್ ಸ್ಟೇಶನಿಗೆ ಸೇರಿದ ೬ ಗ್ರಾಮಗಳ ಪರವಾಗಿ ಒಂದು ಕಾಂಗ್ರೆಸ್ ವಿಲ್ಲೇಜ್‌ಕಮಿಟಿಯನ್ನು ಸ್ಥಾಪಿಸಬೇಕೆಂದು ಸರ್ವಾನುಮತದಿಂದ ಹಾಸಾಗಿ ಸದಸ್ಯರನ್ನು ಒಟ್ಟುಗೂಡಿಸುವರೆ ಒಂದು ಕಾರ್ಯಕಾರಿಕಮಿಟಿಯನ್ನು ಏರ್ಪಡಿಸಲಾಯಿತು.

ಪಿ. ಯಸ್. ನಿಂಜೂರು ಬಿ. ಎ., ಬೈಲೂರು ಅಂತಯ್ಯ ಶೆಟ್ಟರು, ಸಂಜೀವ ಶೆಟ್ಟರು, ಜಗನ್ನಾಥ ಶೆಟ್ಟರು, ಶ್ರೀಮಾನ್ ಕೃಷ್ಣಯ್ಯ ಶೆಟ್ಟರ ಮತ್ತು ಪ್ರೇಮರಾಯ ನಾಯ್ಕರ ಉಜ್ವಲ ರಾಷ್ಟ್ರೀಯ ಭಾಷಣವಾದಮೇಲೆ ಸಭೆಯು ಮುಕ್ತಾಯಗೊಂಡಿತು.

ಬಾರ್ಕೂರು

ಬಾರ್ಕೂರು ಜಯಕರ್ನಾಟಕ ಕ್ಲಬ್ಬಿನ ಪ್ರಥಮ ಸಭೆಯು ಇದೇ ತಾ. ೬-೫-೩೬ನೇ ಸಾಯಂಕಾಲ ಘಂಟೆ ೫ಕ್ಕೆ ಸದರಿ ಕ್ಲಬ್ಬಿನ ಮೆಂಬರರಾದ ಡಾಕ್ಟರ್ ಕೆ. ಆರ್. ಪೈ (ಎಲ್.ಯಂ.ಪಿ.) ಇವರ ಅಧ್ಯಕ್ಷತೆಯಲ್ಲಿ ಜರಗಿ ಡಾಕ್ಟರ್ ಬಿ. ಕೃಷ್ಣಚ್ಚಾರಿ (ಎಲ್ ಐ.ಯಂ.) ಇವರನ್ನು ಗೌರವ ಅಧ್ಯಕ್ಷರಾಗಿಯೂ ಶ್ರೀ. ಬಿ.ಗೋಪಾಲರಾವ್ ಇವರನ್ನು ಗೌರವ ಕಾರ್ಯದರ್ಶಿಯರನ್ನಾಗಿಯೂ ಚುನಾಯಿಸಲ್ಪಟ್ಟಿತು. ಕ್ಲಬ್ಬಿಗೆ ಒಂದು ಯೋಗ್ಯವಾದ ಕಟ್ಟಡವನ್ನು ತಿಂಗಳಿಗೆ ರೂ.೧ರಂತೆ ಬಾಡಿಗೆಗೆ ತೆಗೆದುಕೊಳ್ಳಬೇಕೆಂದೂ ಕ್ಲಬ್ಬಿನ ವರ್ಧಂತಿಯನ್ನು ಬರುವ ಸಪ್ಟೆಂಬರದಲ್ಲಿ ಜರಗಿಸಬೇಕೆಂದೂ; ಪತ್ರಿಕೆಯನ್ನು ಡೆಲಿವರಿಮಾಡಲು ಬಹಳಕಡಿಮೆ ಕರ್ಚಿನಿಂದ ಒಬ್ಬ ಹುಡುಗನನ್ನು ಇಟ್ಟುಕೊಳ್ಳುವಂತೆಯೂ ನಿಶ್ಚಯಿಸಲಾಯಿತು. ಬಿ. ಆರ್. ರೈ., ಬಿ, ಗೋಪಾಲರಾವ್,ಡಾಕ್ಟರ್ ಬಿ ಕೃಷ್ಣ ಚ್ಚಾರಿ, ನಾಗಪ್ಪಯ್ಯ, ಪಟೇಲ್ ಮುಂತಾದವರು ಭಾಷಣಮಾಡಿದರು. ಅಧ್ಯಕ್ಷರು ಸರಸವಾಗಿ ಭಾಷಣವಿತ್ತರು. ಧನ್ಯವಾದ ಸಮರ್ಪಣೆಯಾದನಂತರ ಸಭೆಯು ಕೊನೆಗೊಂಡಿತು.

ಖಂಬದಕೋಣೆ

ಇತ್ತಲಾಗೆ ತಾವು ಖಂಬದಕೋಣೆಯ ಮಹಾಜನರ ಮನಃಪೂರ್ವಕವಾದ ಸಹಾನುಭೂತಿಯಿಂದ ಖಂಭದಕೋಣೆಯಲ್ಲಿ 'ಸದಾನಂದ ಕ್ಲಬ್'ಎಂಬ ಹೆಸರಿನಿಂದ ಒಂದುವಾಚನಾಲಯವನ್ನು ತೆರೆದಿರುತ್ತೇವೆಂದೂ ಇಲ್ಲಿಯ ಸ್ಥಳೀಕರು ಬಡವರಾದುದರಿಂದ ಎಲ್ಲಾ ಮಹನೀಯರು ತಮ್ಮ ಶಕ್ತ್ಯಾನುಸಾರವಾಗಿ ಪುಸ್ತಕ ರೂಪದಿಂದಾಗಲೀ ದ್ರವ್ಯ ರೂಪದಿಂದಾಗಲೀ ಸಹಾಯವಿತ್ತು ತಮ್ಮ ವಾಚನಾಭಿವೃದ್ಧಿಯ ಪ್ರಸಾರಕ್ಕೆ ಉದಾರ ಬುದ್ಧಿಯಿಂದ ಪ್ರೋತ್ಸಾಹಿಸಬೇಕೆಂದೂ ಕ್ಲಬ್ಬಿನ ಅಧ್ಯಕ್ಷರಾದ ಖಂಭದಕೋಣೆ ರಾಮರಾವ್ ಇವರುವಿನಂತಿಮಾಡಿಕೊಳ್ಳುತ್ತಾರೆ.

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India.	Charni Road, Bombay No. 4.

INSPECTORATE OFFICE AT:

1. Ottapalam, Malabar District. 2. Central Station Road, Trivandrum.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs. 80,00,000
Life Funds Over	Rs. 68,00,000
Premium Income Over ...	Rs. 22,54,000
Interest Income	Rs. 3,16,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE Rs. 4,42,51,200

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ವ್ಯವಹಾರ ಸನ್ನದು ಹೊಂದಿದುದು)

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು 'ಸೇಲಂ'ನಲ್ಲಿ ಶೀಘ್ರದಲ್ಲಿಯೇ ತೆರೆಯೋಣಾಗುವುದು.

ಬ್ಯಾಂಕಿನ ಆಫೀಸು
ತಾ. 7—5—1937

V R. Kamath, B. A., LL.B.
ಮೆನೇಜರ್.

ಉಡುಪಿ, ಗುರುವಾರ, ತಾ. ೧೩-೫-'೩೭

ಲೋರ್ಡ್ ಜೆಟ್ಲೆಂಡರ ಮನೋವೃತ್ತಿಯ ಪರಿವರ್ತನೆ.

ಕಾಂಗ್ರೆಸ್ ಪಕ್ಷೀಯರು ಕೇಳಿರುವ ಆಶ್ವಾಸನೆಯ ಕುರಿತು ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರು ಮಾಡಿದ ಮೊದಲನೇ ಭಾಷಣಕ್ಕೂ ಎರಡನೇದಕ್ಕೂ ಬಹಳ ಅಭ್ಯಂತರವಿದೆ. ಇದಕ್ಕೆ ಕಾಂಗ್ರೆಸಿನ ನಿರ್ಭಯ ಹಾಗೂ ಅತ್ಯಂತ ವಿವೇಕಪರ ಧೋರಣೆಯೇ ಕಾರಣ. ಇಂಡಿಯಾ ಸೆಕ್ರೆಟರಿಗಳ ಪ್ರಥಮ ಭಾಷಣದ ಮನೋವೃತ್ತಿಯು, ಆಳರಸುತನದ ಹೆಮ್ಮೆ ಮತ್ತು ದರ್ಪದಿಂದ ತುಂಬಿತ್ತು. ಇಂಡಿಯಾ ಆಕ್ಟಿನ ಪ್ರಕಾರ ಕಾಂಗ್ರೆಸಿನವರಿಗೆ ಯಾವ ತರದ ಆಶ್ವಾಸನೆಯನ್ನೀಯಲು ಎಷ್ಟಕ್ಕೂ ಸಾಧ್ಯವಿಲ್ಲ ಮೈನೋರಿಟಿ ಸಮಾಜಗಳ ಹಿತರಕ್ಷಣೆಗಾಗಿ ವಿಶೇಷಾಧಿಕಾರಗಳು ಗವರ್ನರರಿಗೆ ಅತ್ಯಾವಶ್ಯಕ ಕಾಂಗ್ರೆಸ್ ಪಕ್ಷೀಯರು ಇಂಡಿಯಾ ಆಕ್ಟನ್ನು ಒಡೆಯುವಂತೆ ತೋರುವುದಿಲ್ಲೆಂದೆಲ್ಲಾ ಆಗ ಲೋರ್ಡ್ ಜೆಟ್ಲೆಂಡರು ಉದ್ಧಟತನ ತೋರಿಸಿದ್ದರು. "ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸದೆ ಎಲ್ಲಿ ಹೋದಾರು? ಅವರ ಬೆದರಿಕೆಗಳಿಗೆಲ್ಲಾ ಸೊಪ್ಪು ಹಾಕುವ ಅಗತ್ಯ ನಮಗಿಲ್ಲ. ಅವರೇ ಬೇಕಾದರೆ ನಮ್ಮ ಬಳಿಗೆ ರಾಜಿಗಾಗಿ ಕರ ಜೋಡಿಸಿಕೊಂಡು ಬರಬೇಕು. ನಾವು ಅಧಿಕಾರದಲ್ಲಿದ್ದು ಆಳುವವರು; ಅವರು ಪರಾಧೀನ ದುರ್ಬಲರು" ಎಂಬ ಧೋರಣೆಯಿಂದ ಜೆಟ್ಲೆಂಡ್ ಸಾಹೇಬರು ಹಿಂದುಮುಂದೆ ಚೆನ್ನಾಗಿ ವಿಚಾರಿಸಿಕೊಳ್ಳದೆ ಪ್ರಥಮದ ಅತ್ಯಂತ ಅವಿವೇಕಪರ ಭಾಷಣಮಾಡಿದ್ದರು.

ಕಾಂಗ್ರೆಸಿನ ವಿವೇಕ ಪರಧೋರಣೆ

ಈ ಭಾಷಣವು ಇಡೀ ದೇಶವನ್ನೇ ರೇಗಿಸಿತು. ತೀರಾ ಮಂದಗಾಮಿಗಳನ್ನೂ ಜೆಟ್ಲೆಂಡರ ಬಿರುಸು ಮಾತುಗಳ, ಭೇದನೀತಿಯು ಕೆಣಕಿಸಿತು. ಕಾಂಗ್ರೆಸಿಗೆ ದೇಶದಲ್ಲಿ ಬೆಂಬಲವು ಮತ್ತಷ್ಟು ಹೆಚ್ಚಿತು. ಅದಕ್ಕಾಗಿ ಕಾಂಗ್ರೆಸಿನವರು ಇಂಡಿಯಾ ಸೆಕ್ರೆಟರಿಗಳಿಗೆ ಆಭಾರಿಯಾಗಿರಲೇಬೇಕು. ಸರಕಾರದ ಹಿಂದಿನ ವರ್ತನೆ ಮತ್ತು ಇಂದಿನ ಧೋರಣೆಯಿಂದಾಗಿ ತಮಗೆ ಅವರಿಂದ ಆಶ್ವಾಸನೆ ಪಡೆಯದೆ ಅಧಿಕಾರ ಸ್ವೀಕರಿಸಲು ಸಾಧ್ಯವಿಲ್ಲ. ಇಂದು ಅಧಿಕಾರ ಸ್ವೀಕರಿಸಿ ನಾಳೆ ರಾಜಿನಾಮೆ ಕೊಟ್ಟು ಹೊರಬರುವ ವಿಪರ್ಯಾಸಕ್ಕೊಳಗಾಗುವುದರಲ್ಲಿ ಅರ್ಥವಿಲ್ಲ. ತಾವು ಇಂಡಿಯಾ ಆಕ್ಟಿಗನುಸಾರವಾದ ರಾಜ್ಯಾಂಗ ರಚನೆಯ ಸೂತ್ರ ಬದ್ಧವಾಗಿ ನಡೆಯುವ ಭರವಸೆ ಕೊಡುವಾಗ ಗವರ್ನರರು ನಮಗೆ ಪ್ರಾಂತಿಕ ಅಧಿಕಾರಿ ಸ್ವಾತಂತ್ರ್ಯದ ಆಶ್ವಾಸನೆಯನ್ನು ಯಾಕೆ ಕೊಡಲಾರರೋ. ತಿಳಿಯದು ಇದು ಪ್ರಾಂತಿಕ ಸ್ವಾತಂತ್ರ್ಯವೆಂಬುದು ನಿಜವಾದುದಲ್ಲ ಬರಿಯ ಛಾಯಾಮಾತ್ರವಾದುದೆಂಬ ತಮ್ಮ ಸಂಶಯವು ಮತ್ತಷ್ಟು ಬಲಗೊಳ್ಳುವುದು ಗವರ್ನರರಿಗೂ ಮಂತ್ರಿಗಳಿಗೂ ಆಡಳಿತ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾದಲ್ಲಿ ಅವರು ಮಂತ್ರಿಗಳನ್ನು ರಾಜಿನಾಮೆ ಕೊಡುವಂತೆ ಮಾಡಬಹುದು. ಸರಕಾರವು ಕೊಟ್ಟಿರುವ ಪ್ರಾಂತಿಕ ಸ್ವಾತಂತ್ರ್ಯದಲ್ಲೇನಾದರೂ ತಿರುಳಿರುವುದಾದರೆ, ಪ್ರಾಂತದ ಆಡಳಿತಕ್ಕೆಲ್ಲಾ ಮಂತ್ರಿಗಳೇ ಜವಾಬ್ದಾರರೆಂದಾದರೆ, ಗವರ್ನರರು ಅನುದಿತ್ಯದ ರಾಜ್ಯಭಾರದಲ್ಲಿ ಕೈಹಾಕುವುದಿಲ್ಲೆಂಬ ಆಶ್ವಾಸನೆಯನ್ನು ಕೊಡುವುದಕ್ಕೆ ಯಾವ ಆತಂಕವೂ ಇರಲಾರದು. ಇಂಡಿಯಾ ಆಕ್ಟಿಗೆ ಯಾವ ರೀತಿಯ ಭಂಗವನ್ನೂ ಉಂಟುಮಾಡದೆ ಹಾಗೆ ಮಾಡಲು ಸಾಧ್ಯವಿದೆಯೆಂಬ ಕಾಂಗ್ರೆಸಿನ ಧೋರಣೆಯು ಯುಕ್ತವೂ ವಿವೇಕವೂ ಆದುದೆಂಬುದಕ್ಕೆ ಇದೀ ಲೋಕದಲ್ಲೇ ಸಾಕಷ್ಟು ಜನಮತದ ಬೆಂಬಲ ದೊರೆತಿರುವುದು. ಇಂಗ್ಲೆಂಡಿನಲ್ಲೇ ಹಲವು ಮಂದಿ ವಿವೇಕಶಾಲಿಗಳು ಕಾಂಗ್ರೆಸಿನ ಕೇಳಿಕೆಯು ನ್ಯಾಯವಾದುದೆಂದು ವಾದಿಸಹತ್ತಿದರು. ಸರಕಾರದವರು ಗಾಂಧಿಜಿಯವರೇ ಮೊದಲಾದ ಕಾಂಗ್ರೆಸ್ ಮುಖಂಡರೊಡನೆ ಚರ್ಚಿಸಿ ಯಾವುದಾದರೊಂದು ಇತ್ಯರ್ಥ ಮಾಡಬೇಕು. ವೃಥಾ ಪ್ರತಿಷ್ಠೆಯನ್ನು ಕಟ್ಟಿಕೊಂಡು ಸುಮ್ಮನಿದ್ದರೆ ಕೆಲಸ ಕೆಡುವುದು. ಕಾಂಗ್ರೆಸು ಸಂಪೂರ್ಣವಾಗಿ ತೀವ್ರಗಾಮಿಗಳ ಕೈವಶವಾಗುವಂತಾಗುವುದು. ಆಗ ದೇಶದಲ್ಲಿ ಪುನಹ ದೊಡ್ಡ ವಿಪ್ಲವವುಂಟಾಗುವುದು ಎಂದೆಲ್ಲಾ ಹಲವು ರಾಜನೀತಿಜ್ಞರು ಸರಕಾರಕ್ಕೆ ಎಚ್ಚರವಿತ್ತಿರುವರು.

ಸರಕಾರದ ಉಭಯ ಸಂಕಟ

ಇಂತಹ ಪರಿಸ್ಥಿತಿಯಲ್ಲಿ ಮತ್ತೂ ಮತ್ತೂ ತಾವು ತಮ್ಮ ಶುದ್ಧ ಅವಿವೇಕಪರ ಧೋರಣೆಯನ್ನು ಕಟ್ಟಿಕೊಂಡಲ್ಲಿ ಪರಿಸ್ಥಿತಿಯು ಕೆಟ್ಟುಹೋಗಿ ಅನಾಹುತವಾಗುವ ಸಂಭವವುಂಟಾಗುವುದೆಂದು ಆಳರಸರಿಗೆ ಮನವರಿಕೆಯಾಗುವಂತಿದೆ. ಅವರ ಮನೋವೃತ್ತಿಯು ಬದಲಾಗಿರುವುದು. ಸ್ವಭಾವವು ಮೃದುವಾಗಿರುವುದು. ಕಾಂಗ್ರೆಸಿನವರು ಹೇಗಾದರೂ ಅಧಿಕಾರ ಸ್ವೀಕರಿಸುವಂತೆ ಮಾಡದಿದ್ದರೆ ನಿರ್ವಾಹವಿಲ್ಲೆಂದು ಅವರು ತುಸು ಉದಾರ ಹಾಗೂ ವಿವೇಕಪರ ಧೋರಣೆ ವಹಿಸಿರುವರು. ಅವರೀಗ ಉಭಯಸಂಕಟದಲ್ಲಿ ಬಿದ್ದಿರುವರು. ತಾವು ನೇಮಿಸಿರುವ ಇಂಟೆರಿಮ್ ಮಂತ್ರಿಗಳು, ಎಸೆಂಬ್ಲಿ ಸಭೆ ಕರೆದ ಪಕ್ಷದಲ್ಲಿ ಒಂದೇ ಒಂದು ದಿನದ ಅಧಿಕಾರದಲ್ಲಿರಲು ಸಾಧ್ಯವಿಲ್ಲ, ಅವರಿನ್ನು ಎಸೆಂಬ್ಲಿ ಸಭೆ ಕರೆಯದೆ ಹೆಚ್ಚೆಂದರೆ 6 ತಿಂಗಳು ಮಾತ್ರ ಅಧಿಕಾರದಲ್ಲಿರಿಸಬಹುದು. ಮುಂದೇನು? ಪುನಃ ಚುನಾವಣೆ ನಡಿಸಿದರೆ ಕಾಂಗ್ರೆಸಿಗೆ ಮತ್ತಷ್ಟು ಹೆಚ್ಚಿನ ಬೆಂಬಲ ಸಿಕ್ಕುವುದು ನಿಶ್ಚಯ. ಹಾಗೂ ಹೀಗೂ ಅಧಿಕಾರವನ್ನು ತಾವೇ ನಿರಂಕುಶವಾಗಿ ನದಿಸುವಹೊರತು ಬೇರೆ ಯಾವ ದಾರಿಯೂ ಇಲ್ಲವೆ ಆಳರಸರೀಗ ಹಿಂದಿನ ನಿಷ್ಠುರ ಧೋರಣೆಯನ್ನು ಬಿಟ್ಟು ಕಾಂಗ್ರೆಸ್ ಪಕ್ಷೀಯರನ್ನು ಒಲಿಸಿಕೊಳ್ಳಲೆತ್ನಿಸುತ್ತಿರುವರು. ಇಂಡಿಯಾ ಆಕ್ಟಿನ ಮೇರೆಗೆ ಮಂತ್ರಿಗಳು ಸಂಪೂರ್ಣ ಜವಾಬ್ದಾರಿ ವಹಿಸಿ ತಮ್ಮ ಕಾರ್ಯಕ್ರಮವನ್ನು ಜ್ಯಾರಿಗೆ ತರಬಹುದು. ಗವರ್ನರರು ಆಕ್ಟಿನ ಸಂಕುಚಿತ ಹಾಗೂ ಕಾನೂನು ಪ್ರಕಾರವಾದ ಅರ್ಥ ಮಾಡಿಕೊಂಡು ಮಂತ್ರಿಗಳ ಅಧಿಕಾರವನ್ನು ಆಕ್ರಮಿಸಿದರೆ ಅದನ್ನು ಸರಕಾರವು ಪ್ರೋತ್ಸಾಹಿಸಲಾರದೆಂದು ಅಂಡರ್ ಸೆಕ್ರೆಟರಿಗಳಾದ ಮಿ. ಬಟ್ಲರರು ಕೋಮನ್ ಸಭೆಯಲ್ಲಿ ವ್ಯಕ್ತಪಡಿಸಿದರು. ಆದರೆ ಕಾಂಗ್ರೆಸಿನವರು ಅದರಿಂದ ತೃಪ್ತಿಪಡಲಿಲ್ಲ ಮಾತ್ರವಲ್ಲದೆ ವೈಸರಾಯರೊಡನೆ ಮಾತಾಡಬೇಕಾದರೆ ಕಾಂಗ್ರೆಸಿನವರು ಹಾಗೆ ಕೇಳಿಕೊಳ್ಳಲಿ; ಆಗ ಆ ಕುರಿತು ವಿಚಾರಿಸಲಾಗುವುದೆಂಬ ಮಿ. ಬಟ್ಲರರ ದರ್ಪದ ಮಾತು ಕಾಂಗ್ರೆಸಿಗೆ ಅಪಮಾನಕರವಾಗಿರುವುದು. ಅಲಹಾಬಾದಿನಲ್ಲಿ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಕಾಂಗ್ರೆಸಿನ ಧೋರಣೆಯನ್ನು ಮತ್ತಷ್ಟು ಸ್ಪಷ್ಟಪಡಿಸಿರುವರು ಮತ್ತು ಮಿ. ಬಟ್ಲರರು ಕಾಂಗ್ರೆಸನ್ನು ಕೇವಲ ಅರ್ಜಿದಾರರ ಸ್ಥಾನಕ್ಕಿಳಿಸಿ ಮಾಡಿದ ಅಪಮಾನಕ್ಕಾಗಿ ಖೇದ ಸೂಚಿಸಿರುವರು. ಈಗ ಇಂಡಿಯಾ ಸೆಕ್ರೆಟರಿಗಳು ಮಾಡಿರುವ ಭಾಷಣವು ಬಹುತೇಕ ಕಾಂಗ್ರೆಸಿನ ಕೇಳಿಕೆಗಳನ್ನೊಪ್ಪುವಂತಹದಾಗಿದೆ ಸಂಪೂರ್ಣ ಆಡಳಿತ ಜವಾಬ್ದಾರಿಯು ಮಂತ್ರಿಗಳದು. ಗವರ್ನರರು ಅವರ ಸಹಾಯಕರೇ. ಅವರಿಬ್ಬರೂ ಒಂದೇ ಉದ್ಯಮದಲ್ಲಿ ಸಮ ಪಾಲುಗಾರರು. ಒಬ್ಬರೊಬ್ಬರ ವಿರೋಧಿಗಳಲ್ಲ, ಸಹವ್ಯವಸಾಯಿಗಳು. ಗವರ್ನರರು ಮಂತ್ರಿಗಳ ಆಡಳಿತದಲ್ಲಿ ನಿರಂತರವೂ ಕೈಹಾಕಿ ಅವರಿಗೆ ತೊಂದರೆ ಕೊಡಬಾರದು. ತಮ್ಮ ಅನುಭವ ಮತ್ತು ತಿಳುವಳಿಕೆಯಿಂದ ರಾಜ್ಯಭಾರದಲ್ಲಿ ಮಂತ್ರಿಗಳಿಗೆ ಬೇಕಾದ ಸಹಾಯ ಮಾಡುವುದು ಗವರ್ನರರ ಕರ್ತವ್ಯವೆಂದೆಲ್ಲಾ ಲೋರ್ಡ್ ಜೆಟ್ಲೆಂಡರು ಉದಾರ ಮನೋವೃತ್ತಿ ತೋರಿಸಿರುವರು.

ಬಿಕ್ಕಟ್ಟನ್ನು ನಿವಾರಿಸುವುದೆಂತು

ಇಂತಹ ವಿದ್ಯಮಾನಗಳಲ್ಲಿ ಇನ್ನು ವೈಸರಾಯರಿಗೂ ಗಾಂಧಿಜಿಯವರೇ ಮೊದಲಾದ ಕಾಂಗ್ರೆಸ್ ಮುಖಂಡರಿಗೂ ಯಾವ ಮಾತುಕತೆ ನಡೆವ ಆವಶ್ಯಕವೂ ಇರುವುದಿಲ್ಲ. ಗವರ್ನರರು ಕೂಡಲೆ ಎಸೆಂಬ್ಲಿ ಸಭೆ ಕರೆದು ತಮ್ಮ 'ಇಂಟೆರಿಮ್' ಮಂತ್ರಿಗಳ ಮುಖಕ್ಕೆ ಮಂಗಳಾರತಿ ಮಾಡಬೇಕು. ಪುನಹ ಕಾಂಗ್ರೆಸ್ ಪಕ್ಷದ ನಾಯಕರನ್ನು ಆಮಂತ್ರಿಸಿ, ಅವರಿಗೆ ಸಂಪೂರ್ಣವಾಗಿ ಆಡಳಿತ ಸ್ವಾತಂತ್ರ್ಯವೀಯಲಾಗುವುದು. ಅವರು ತಮ್ಮ ಕಾರ್ಯಕ್ರಮವನ್ನು ಜ್ಯಾರಿಗೆ ತಂದು ನಡಿಸುವ ಅನುದಿತ್ಯದ ರಾಜ್ಯಭಾರ ಕ್ರಮದಲ್ಲಿ ತಾವೇನೂ ಕೈಹಾಕಲಾರೆವು ಎಂಬ ಆಶ್ವಾಸನೆ ಕೊಟ್ಟಲ್ಲಿ ಕಾಂಗ್ರೆಸಿನವರಿಗೆ ಮಂತ್ರಿಪದವಿ ಸ್ವೀಕರಿಸಲು ಯಾವ ಆತಂಕವೂ ಇರಲಾರದು. ಆಗ ದೇಶದಲ್ಲಿ ಉಂಟಾಗಿರುವ ಬಿಕ್ಕಟ್ಟು ನಿವಾರಿಸಲ್ಪಡುವದು. ಸರಕಾರವೂ ಇದಕ್ಕೆ ಸಿದ್ಧವಿರುವುದೋ ನೋಡಬೇಕು.

ವಿದೇಶ

ಸ್ಪೈನಿನ ಯುದ್ಧ

ಇದೇ ತಾ. ೫ರಲ್ಲಿ ಬಾಸ್ಕ್ ಸರಕಾರದ ಸೈನಿಕರು ಟೇಂಕುಗಳ ಸಹಾಯದಿಂದ, ತಾ ೪ರಲ್ಲಿ ಬಂಡಾಯಗಾರರು ವಶಪಡಿಸಿಕೊಂಡಿದ್ದ ಪ್ರದೇಶವನ್ನು ವಶಪಡಿಸಿಕೊಂಡಿರುವರು ಆದರೆ ಬಂಡಾಯಗಾರರ ಕಡೆಯ ಸುದ್ದಿಯವರಿಗೆ ಅವರ ಸೈನಿಕರು ಮುಂದೊತ್ತಿರುವರೆಂದೂ, ಸರಕಾರದಕಡೆಯ೩೦೦ಮಂದಿ ಸೈನಿಕರು ಕೊಲ್ಲಲ್ಪಟ್ಟಿರುವರೆಂದೂ ತಿಳಿದುಬರುತ್ತದೆ. ಬಿರುಗಾಳಿಗೆ ಸಿಕ್ಕಿ ಫ್ರಾನ್ಸಿನ ಗಡಿಪ್ರದೇಶದಲ್ಲಿಳಿದಿದ್ದ ಸ್ಪೈನಿನ್ ಸರಕಾರದಕಡೆಯ ೧೩ವಿಮಾನಗಳನ್ನು ಫ್ರೆಂಚ್ ಸರಕಾರವು ಪುನಹ ಹೋಗಬಿಟ್ಟದೆ ಸ್ಪೈನಿನಲ್ಲಿ ಬಹಳ ಕಷ್ಟಕೊಳಗಾಗಿರುವ ಸುಮಾರು ೧ಲಕ್ಷಮಕ್ಕಳನ್ನು ಪರದೇಶಗಳಿಗೆ ಕಳುಹಿಸಿ ಪೋಷಿಸುವ ವ್ಯವಸ್ಥೆಯಾಗಿದೆ.

ರೋಮಸಾಮ್ರಾಜ್ಯವು ಸ್ಥಾಪಿಸಲ್ಪಟ್ಟ ಪ್ರಥಮ ವರ್ಷಂತಿಯು ಇದೇ ತಾ. ೯ರಲ್ಲು ಇಟೆಲಿಯಲ್ಲಿ ಬಹಳ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ೪೫೦೦೦ ಸೈನಿಕರು ಮುಸಲೋನಿಯವರ ಮತ್ತು ಇಟೆಲಿಯ ಚಕ್ರವರ್ತಿಗಳ ಸಮ್ಮುಖದಲ್ಲಿ 'ಮಾರ್ಚ್'ಮಾಡಿದರು.

ಲಂಡನಿನ ಬಸ್ ಡ್ರೈವರರ ಮುಷ್ಕರವನ್ನು ನಿಲ್ಲಿಸಲು ಸರಕಾರವು ಪ್ರಯತ್ನಿಸುತ್ತಿರುವದಾದರೂ ಅದು ಇನ್ನೂ ಕೊನೆಗೊಂಡಿಲ್ಲ. ಜನರೆಲ್ಲಾ ನಡೆದೇ ಹೋಗಬೇಕಾಗಿದೆ ಕಿರೀಟಧಾರಣೋತ್ಸವದ ಪ್ರೇಕ್ಷಕರಿಗೆ ಬಹಳ ತೊಂದರೆಯಾಗಿದೆ.

ಮೋಸ್ಕೋಪಟ್ಟಣವು ಬಂದರಾಗಿ ಮಾರ್ಪಟ್ಟಿತು.

ರಶ್ಯದ ಪ್ರಧಾನ ಪಟ್ಟಣವಾದ ಮೋಸ್ಕೊವನ್ನು ಲೋಕದ ಪ್ರಮುಖ ಬಂದರುಗಳಲ್ಲೊಂದನ್ನಾಗಿ ಮಾಡುವ ಸೋವಿಯಟ್ ಸರಕಾರದ ಆಕಾಂಕ್ಷೆಯು ಈಗ ನೆರವೇರಿರುವುದು. ಓಲ್ಗಾ ಕಾಲುವೆಯೆಂಬುದನ್ನು ಕಡಿದುದರಿಂದ ಮೋಸ್ಕೋ ಪಟ್ಟಣಕ್ಕೂ ವೈಟ್, ಬಾಲ್ಟಿಕ್, ಕ್ಯಾಸ್ಪಿಯನ್ ಮತ್ತು ಬ್ಲೇಕ್ ಸಮುದ್ರಗಳಿಗೂ ಸಂಬಂಧವನ್ನು ಸ್ಥಾಪಿಸಲಾಗಿದೆ. ಈ ಕಾಲುವೆಯ ಕೆಲಸವು ೬ವರ್ಷಗಳಿಂದ ನಡೆಯುತ್ತಿದ್ದು ಈಗಸಂಪೂರ್ಣವಾಗಿದೆ. ಇದಕ್ಕೆ೧,೦೦೦,೦೦೦,೦೦೦ ಪವನು ವೆಚ್ಚವಾಗಿದೆ ಇದರ ಉದ್ದ ೮೦ ಮೈಲುಗಳಿರುತ್ತದೆ ಈ ಕಾಲುವೆ ಕಟ್ಟಲಿಕ್ಕಾಗಿ ಕಾರ್ಚೇವ ಎಂಬಪಟ್ಟಣವನ್ನೇ ನಿರ್ಮೂಲಗೊಳಿಸಿ ಬೇರೆಕಡೆ ನಿರ್ಮಿಸಬೇಕಾಯಿತು. ಇದಕ್ಕಾಗಿ ೪೦,೦೦೦ಕಟ್ಟಡಗಳು ಕಟ್ಟಲ್ಪಟ್ಟವು.

ಸ್ವದೇಶ

ಕೋತಿಯು ಮಗುವನ್ನು ಕೊಂದಿತು

ಇದೇ ತಾ ೬ರಲ್ಲಿ ತುತ್ತುಕುಡಿಯ ಮೋಲ ರಂಗನಾಥ ಪುರಮ್ ಎಂಬ ರಸ್ತೆಯಲ್ಲಿ ಸಳಗಿಸಿ ಸಾಕಲ್ಪಡುತ್ತಿದ್ದ ಕೋತಿಯೊಂದು ತಲೆಗೆಟ್ಟು, ತನೆಯ ೨ ವರ್ಷದ ಮಗುವೊಂದರ ಹೊಟ್ಟೆ ಬಗಿದು ಕರುಳನ್ನು ಕಚ್ಚಿ ತುಂಡುಮಾಡಿತು ಮಗುವಿನ ತಾಯಿಯು ಮಂಗನ ಕೈಯಿಂದ ಮಗುವನ್ನು ಬಿಡಿಸಹೋದಾಗ ಅವಳ ಮೇಲೆಯೂ ಬಿದ್ದು ಗಾಯಪಡಿಸಿತು. ಮಗುವು ಆಸ್ಪತ್ರೆಯಲ್ಲಿ ಮೃತವಾಗಿರುವದು

ಪೂನದ ದೇವಸ್ಥಾನ ಸತ್ಯಾಗ್ರಹ!

ಶ್ರೀ ಎನ್. ಸಿ. ಕೇಳ್ಕರ ದಸ್ತಗಿರಿ

ಮಹಾರಾಷ್ಟ್ರದ ಪ್ರಮುಖ ಮುಖಂಡರಲ್ಲೊಬ್ಬರಾದ ಶ್ರೀ ಎನ್. ಸಿ ಕೇಳ್ಕರರು ಇದೇ ತಾ ೧೦ರಲ್ಲಿ ಪೂನದ ಸೋನ್ಸ್ ಮಾರುತಿ ಗುಡಿಗೆ ಹೋಗಿ ಘಂಟೆ ಬಾರಿಸಿ ಸತ್ಯಾಗ್ರಹಮಾಡಿ ದಸ್ತಗಿರಿಮಾಡಿರುವರು. "ನಾನು ಇಷ್ಟರ ವರೆಗೆ ಶಾಂತಿ ಪ್ರಿಯ ಮತ್ತು ಕಾಯಿದೆಶೀಲವರ್ತನೆಯವನಾಗಿದ್ದೆ. ನಾನು ಸಾರ್ವಜನಿಕ ಜೀವನದಿಂದ ನಿವೃತ್ತಿ ಹೊಂದುವ ನಿರ್ಧಾರ ಮಾಡಿದ್ದೆ, ಆದರೆ ನನ್ನಲ್ಲಿಯ ರಾಜಕೀಯ ಜಾಗೃತಿಯು ಬೀರೂರಿಕೊಂಡಿದೆ ಅಧಿಕಾರಿಗಳ ಅವಿವೇಕ ಪರಿವರ್ತನೆಗಿಂತ ಕೆಟ್ಟಉದ್ಧಟತನವು ಇನ್ನಾವುದೂ ಇರಲಾರದು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಹುಕುಮು ಹೇಯವಾದುದು ಆದುದರಿಂದ ಎಷ್ಟೊಂದು ಮಿತವಾದಿಯಾದರೂ ಸ್ವಾಭಿಮಾನಿಯಾಗಿರುವ ಹಿಂದುವಿನ ಒಂದೇ ದಾರಿಯೆಂದರೆ ಈ ಹುಕುಮನ್ನುಲ್ಲಂಘಿಸುವದು" ಎಂಬೀ ಹೇಳಿಕೆಯನ್ನು ಶ್ರೀ ಕೇಳ್ಕರರಿತ್ತು ಮಾರುತಿಗುಡಿಯ ಘಂಟೆ ಬಾರಿಸಿ ಕೈದುಮಾಡಲ್ಪಟ್ಟು ವೈಯಕ್ತಿಕ ಜಾಮೀನಿನಿಂದ ಬಿಡಲ್ಪಟ್ಟರು. ಇಂದು ೨೯ಮಂದಿ ಕೈದುಮಾಡಲ್ಪಟ್ಟಿರುವರು. ಈ ಚಳವಳ ಆರಂಭವಾದಂದಿನಿಂದ ಒಟ್ಟು ೪೪೯ಮಂದಿ ಕೈದುಮಾಡಲ್ಪಟ್ಟಿರುವರು

ಕಲ್ಕತ್ತೆಯ ಗಿರಣಿ ಮುಷ್ಕರದ ಮುಕ್ತಾಯ.

ಗಿರಣಿಗಳು ತೆರೆಯಲ್ಪಟ್ಟವು

ಬಂಗಾಳ ಮುಖ್ಯಮಂತ್ರಿಗಳು, ಗಿರಣಿಮಾಲಕರುಗಳ ಕೇಳಿಕೆಗಳು ನ್ಯಾಯವಾದುದೆಂದು ಒಪ್ಪಿ, ಮುಷ್ಕರದ ನಿಮಿತ್ತ ಯಾವ ಮಜೂರನೂ ದಂಡಿಸಲ್ಪಡಲಾರನೆಂಬ ಆಶ್ವಾಸನೆ ಯಿತ್ತ ಮೇರೆಗೆ ಕಲ್ಕತ್ತೆಯ ಕೆತ್ತನಾರು ಗಿರಣಿ ಮುಷ್ಕರವು ಕೊನೆಗೊಂಡು ಇದೇ ತಾ ೧೦ರಲ್ಲಿ ಹಟ್ಟಿನ ಗಿರಣಿಗಳಲ್ಲಿ ಯಥಾಪ್ರಕಾರ ಕೆಲಸ ಆರಂಭ ವಾಗಿರುವುದು. ಮಜೂರ ಮುಖಂಡರ ಮೇಲಿನ ನಿಷೇಧ ಹುಕುಮುಗಳಿಲ್ಲಾ ಹಿಂತೆಗೆಯಲ್ಪಟ್ಟಿರುವವು ಈಗ ಮಜೂರ ಮುಖಂಡರು ಗಿರಣಿ ಭಾಗಗಳಲ್ಲೆಲ್ಲಾ ತಿರುಗಾಡಿ ಮುಷ್ಕರದ ಮನ್ನಿಸಲ್ಪಟ್ಟ ವಿಷಯಗಳನ್ನೆಲ್ಲಾ ತಿಳಿಸುತ್ತಿರುವರು ಈ ಮುಷ್ಕರದ ರಾಜಿಯ ವಿವರಗಳು ಇಷ್ಟರವರೆಗೆ ನಿರ್ಧರಿಸಲ್ಪಟ್ಟಿರುವದಿಲ್ಲ

ಅಹಮ್ಮದಾಬಾದಿನಲ್ಲಿ ಹಿಂದು ಮುಸಲ್ಮಾನ ಕಲಹ

ಇದೇ ತಾ. ೧೧ರಲ್ಲಿ ಅಹಮ್ಮದಾಬಾದಿನ ಕಂಟೋನ್‌ಮೆಂಟ್, ಪ್ರದೇಶದಲ್ಲಿ ಹಿಂದುಗಳ ಮದುವೆಯ ಮೆರವಣಿಗೆಯೊಂದು ಮಸೀದಿಯೊಂದರ ಬಳಿ ಹೋಗುತ್ತಿದ್ದಾಗ ಮುಸಲ್ಮಾನರು ತಡೆದು ಜಗಳವಾಗಿ ಅನೇಕರು ಗಾಯಗೊಂಡಿರುವರು ಕೂಡಲೇ ಪೋಲೀಸರು ಈ ಸ್ಥಳಕ್ಕೆ ಧಾವಿಸಿಬಂದು ಗಲಾಟೆನಿಲ್ಲಿಸಿದರು ಈ ಸಂಬಂಧವಾಗಿ ೨ ಮಂದಿ ಕೈದುಮಾಡಲ್ಪಟ್ಟರುವರು

ಉಡುಪಿ

ಉಡುಪಿಯ ಫಿಜಿಕಲ್ ಕಲ್ಚರ್ ಎಸೋಸಿಯೇಶನಿನವರ ಆಮಂತ್ರಣದ ಮೇರೆಗೆ ಉಡುಪಿಗೆ ಬಂದಿದ್ದ ಮಂಗಳೂರಿನ ಪ್ರತಾಪರೋವರ್ ಸ್ಕೌಟುದಳದವರು ತಾ ೩ನೇ ಸಾಯಂಕಾಲ ೬ ಘಂಟೆಗೆ ಸ್ಥಳೀಕ ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್ಬಿನ ಕಂಪೌಂಡಿನಲ್ಲಿ ಮ ರಾ ವಕೀಲ್ ಯ.ಂ ವಿಠಲ ಕಮ್ತಿರ ಅಧ್ಯಕ್ಷತೆಯಲ್ಲಿ ಅಂಗಸಾಧನಾ ಸಾರ್ವಜನಿಕ ಪ್ರದರ್ಶನವನ್ನು ನಡೆಸಿದರು ಪ್ರದರ್ಶನಾಂತ್ಯದಲ್ಲಿ ಒರ್ಗನೈಸರರಾದ ಶ್ರೀ ವಿ ಎನ್ ಬಿಜೂರರವರು ಅಂಗಸಾಧನೆಯ ಅತ್ಯಾವಶ್ಯಕತೆಯನ್ನೂ, ದಳ ನಾಯಕರಾದ ಶ್ರೀ ಕೊರಗ ಶೆಟ್ಟಿ, ವ್ಯಾಯಾಮವಿಶಾರದ ಇವರ ಪರಿಚಯವನ್ನೂ ದಳದವರು ಸಂಚರಿಸುವ ಉದ್ದೇಶವನ್ನೂ ವಿವರಿಸಿ, ಉಡುಪಿಯ ಫಿಜಿಕಲ್ ಕಲ್ಚರ್ ಎಸೋಸಿಯೇಶನಿನವರು ಮುಖ್ಯವಾಗಿ ಶ್ರೀ ವಿಠಲಕಾಮತರು ಈ ಸಂದರ್ಭವನ್ನು ಒದಗಿಸಿದುದಕ್ಕಾಗಿ ಕೃತಜ್ಞತೆಯನ್ನರ್ಪಿಸಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂದಿನ ಪ್ರದರ್ಶನದ ವ್ಯವಸ್ಥಾಪಕರನ್ನು ಶ್ಲಾಘಿಸಿ ಆರೋಗ್ಯಭಾಗ್ಯದ ಹೆಚ್ಚುಗಾರಿಕೆಯನ್ನು ವಿವರಿಸಿ, ಉಡುಪಿಯವರು ಮಂಗಳೂರವರ ಈ ಮಾದರಿಯನ್ನನುಸರಿಸಿ ಅವರಿಗಿಂತಲೂ ಬಲಗೊಳ್ಳಬೇಕೆಂದು ಚಿತ್ತಾಪಹಕವಾಗಿ ವಿವರಿಸಿದರು ಕೊನೆಯಲ್ಲಿ ಮಾರ್ಗದರ್ಶಿಗಳಾದ ಶ್ರೀ ಎಸ್ ಎನ್. ಹೊಳ್ಳರು ತಮ್ಮ ದಳದ ಕಾರ್ಯಕಲಾಪಗಳನ್ನು ನಿವೇದಿಸಿ ಅಂದು ರಾತ್ರಿ ಅವರು ಅಭಿನಯಿಸಲಿದ್ದ 'ಜೀವನ್ಮೃತ' ನಾಟಕಕ್ಕೆ ಎಲ್ಲರೂ ಬಂದು ಪ್ರೋತ್ಸಾಹಿಸಬೇಕೆಂದು ವಿನಂತಿಸಿದ ಬಳಿಕ ಸಭೆ ಮುಗಿಯಿತು. ಪ್ರದರ್ಶನವು ಸರ್ವಸಾಮಾನ್ಯವಾಗಿದ್ದರೂ ಶ್ಲಾಘನೀಯವಾಗಿತ್ತು ರಾತ್ರಿಯ ಪ್ರದರ್ಶನದಲ್ಲಿ ಶ್ರೀ ಹೊಳ್ಳರ ಪ್ರದರ್ಶನಗಳು ಮನೋರಂಜಕವಾಗಿದ್ದವು

ರಜತೋತ್ಸವ

ನಂಬ್ರ ೧೧೭ನೇ ಪರಸ್ಪರ ಸಹಾಯಕ ಸಂಘದ ರಜತೋತ್ಸವವು ಈ ತಿಂಗಳ ಆಂತ್ಯದಲ್ಲಿ ಜರಗಲಿರುವುದು ಇದನ್ನು ಯಶಸ್ವಿಯಾಗಿ ನೆರವೇರಿಸುವುದಕ್ಕಾಗಿ ಸಹಾಯಧನಗಳ ಸಂಗ್ರಹ ಕಾಗೂ ಇತರ ವ್ಯವಸ್ಥೆ ಮಾಡಲು ೨೨ ಮಂದಿ ಸದಸ್ಯರ ಒಂದು ಜನರಲ್ ಕಮಿಟಿಯನ್ನು ಏರ್ಪಡಿಸಲಾಗಿದೆ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳೇ ಈ ಕಮಿಟಿಯ ಅಧ್ಯಕ್ಷರು ರಾ ಯಸ್ ಆನಂದ ರಾವ್ ಮತ್ತು ಶ್ರೀ ಪದ್ಮನಾಭ ರಾಯರು ಜತೆಕಾರ್ಯದರ್ಶಿಗಳು ಶ್ರೀ. ಟಿ ಎಸ್ ಕೇಶವ ನಂಬಿಯಾರರು ಕೋಶಾಧಿಕಾರಿಗಳು ರಜತೋತ್ಸವ ಸಮಾರಂಭದ ಸಭಾಧ್ಯಕ್ಷರುಗಳು ಶ್ರೀ ರಾಮದಾಸ ಪಂತಲು ಇವರನ್ನು ಕೇಳಿಕೊಳ್ಳಲಾಗಿದೆ

ಇಲ್ಲಿಯ ಸರಕಾರಿ ಆಸ್ಪತ್ರೆಯ ಡಾಕ್ಟರಾಗಿ ಜನಪ್ರೀತರಾಗಿದ್ದ ಡಾಕ್ಟರ್ ಪಟಾಕೋರವರು ಮದ್ರಾಸಿನ ಜನರಲ್ ಆಸ್ಪತ್ರೆಯ ಸೀನಿಯರ್ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಲ್ಪಟ್ಟಿರುವರು ಉಡುಪಿಗೆ ಡಾಕ್ಟರ್ ಜಿ ಪಿ ಜೋಸೆಫ್, ಎಲ್ ಎಮ್ ಎಸ್ ಇವರು ಬಂದಿರುವರು

ಶಾರದಾ ಸಂಗೀತಕಲಾ ಶಾಲೆಯ ವರ್ಧಂತಿ

ಶ್ರೀ ಪದ್ಮನಾಭಾಚಾರ್ಯರಿಂದ ನಡೆಸಲ್ಪಡುವ ಈ ಶಾಲೆಯ ವರ್ಧಂತಿಯು ನಡ್ಡಿ ೨ ಲಕ್ಷ್ಮೀದೆವಲ್ಲಿ ಉಡುಪಿಯ ಸಬ್ ಮೆಜಿಸ್ಟ್ರೇಟರಾದ ಶ್ರೀ ಸುಂದರೇಶ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಕಳೆದ ತಾ. ೫ನೇ ಸಂಜೆ ಸಂಭ್ರಮದಿಂದ ಆಚರಿಸಲ್ಪಟ್ಟಿತು ೨೩ ಬಾಲಕರ ಗಾಯನ, ವಾದ್ಯ ಪೂಜಾದಿಗಳು ನಡೆದು ಪ್ರಸಾದ ಹಂಚಲ್ಪಟ್ಟಿತು ಅಧ್ಯಕ್ಷರು ಶಾಲೆಗೆ ಆಶೀರ್ವಾದಯಿತ್ತು, ಈ ಶಾಲಾ ಬಾಲಿಕೆಯರು ಅಭಿನಯಿಸಿದ್ದ ಸಾವಿತ್ರಿ ಸತ್ಯವಾನ್ ನಾಟಕದಲ್ಲಿ ನಾರದ ಪಾತ್ರ ವಹಿಸಿದ್ದ ಕುಮಾರಿ ಶಕೀಕೆಗೆ ತಾನು ಕೊಡುವೆನಾಗಿ ಹೇಳಿದ್ದ ಬೆಳ್ಳಿಯ ಪದಕವನ್ನು ಇಂದು ಕೊಟ್ಟರು ಡಾಕ್ಟರ್ ಪಿ ಜಿ ಆಚಾರ್ಯರೂ ಅದೇ ರೀತಿ ಈ ಹುಡುಗಿಗೆ ಚಿನ್ನದ ಪದಕವಿತ್ತು ಶಾಲೆಗೆ ಶ್ರೇಯಸ್ಸನ್ನು ಬಯಸಿದರು ಕೊನೆಗೆ ಶ್ರೀ ಪದ್ಮನಾಭಾಚಾರ್ಯರು ಎಲ್ಲರಿಗೂ ವಂದನೆಯನ್ನರ್ಪಿಸಿ ಸಭೆಯು ಕೊನೆಗೊಂಡಿತು

ಆರನೆಯ ಜಾರ್ಜ್ ಮಹಾ ಪ್ರಭುಗಳವರು ಪಟ್ಟಾಭಿಷಿಕ್ತರಾಗುವ ಸುದಿನವನ್ನು (ತಾ. 12) ಉಡುಪಿಯಲ್ಲಿ ತಾಲೂಕು ಕಚೇರಿ ಕಂಪೌಂಡಿನಲ್ಲಿ ಅಧಿಕಾರಿ ವರ್ಗದವರೂ ಕೆಲವೇ ಮಂದಿ ಬಿನ್ ಅಧಿಕಾರಿಗಳೂ ಒಟ್ಟಿಗೆ ಸೇರಿ ಆಚರಿಸಿದರು ಕುಂದಾಪುರದ ಸಬ್ ಕಲೆಕ್ಟರರು ಹಾಜರಿದ್ದರು ಯೂನಿಯನ್ ಜಾಕ್ ನಿಶಾನೆಯು ಗಾಳಿಯಲ್ಲಿ ಹಾರಾಡುತ್ತಿತ್ತು ಪೋಲೀಸರು 'ಸಲ್ಯೂಟ್' ಮಾಡಿದರು ಹರಿಜನರಿಗೆ ಅಕ್ಕಿ ಹಂಚಲಾಯಿತು ಸಾಯಂಕಾಲ ತಾಲೂಕು ಕಚೇರಿ ಮುಂಭಾಗವು ದೀಪಾವಳಿಗಳಿಂದ ಬೆಳಗಿಸಲಾಯಿತು

ಉಪ್ಪೂರು

ಮಾಮೂಲಿನಂತೆ ಇದೇ ತಾ ೬ರಲ್ಲಿ ಪೆನ್ಶನರ್ ಯು ಕೆ ಗೋವಿಂದ ಶೆಟ್ಟರು ತನ್ನ ಎಲ್ಲಾ ಶಾಲಾ ಮಕ್ಕಳನ್ನು ಕೂಡಿಸಿ ಶಾಲಾ ವರ್ಧಂತ್ಸವವನ್ನು ನೆರವೇರಿಸಿದರು

ರಾಮನಾಡು ಡಿಸ್ಟ್ರಿಕ್ಟ್ ಹೈಸ್ಕೂಲಿನ ಸಂಸ್ಕೃತ ಪಂಡಿತರಾದ ಯು ಲಕ್ಷ್ಮೀನಾರಾಯಣ ಬಟ್ಟರವರು ಅಗ್ರಾಸನವನ್ನಲಂಕರಿಸಿದ್ದರು ಹಲವು ವಿಷಯಗಳಲ್ಲಿ ಮಕ್ಕಳೊಳಗೆ ಸ್ಪರ್ಧೆಗಳಿದ್ದು ಇನಾಮು ಹಂಚಲ್ಪಟ್ಟಿತು. ಅಲ್ಲದೆ ತಿಂಡಿ ಪಾನೀಯ ಗಳಿಂದ ಮಕ್ಕಳು ಆನಂದಗೊಂಡರು

ಲೇಜಿಮ್ ಕೋಲಾಟಗಳಲ್ಲದೆ ನಡ್ಡಿ ಶಾಲಾಧ್ಯಾಪಕರಾದ ರಾ ಕೃಷ್ಣಯ್ಯ ಶೆಟ್ಟರವರಿಂದ ರಚಿಸಲ್ಪಟ್ಟ 'ಅನುಮಾಲಯ' ಎಂಬ ನಾಟಕ ದೃಶ್ಯವು ಪ್ರೇಕ್ಷಕರನ್ನು ಆನಂದ ಸಾಗರದಲ್ಲಿ ತೇಲಾಡಿಸ ಮಾಡಿತ್ತು

ವಾರ್ಡ್ಸ ಮೆನೇಜರರು—ಸರಕಾರದ ಪ್ರಾಥಮಿಕ ಶಾಲೆಗಳಿಗೆ ಹಲವು ವರ್ಷಗಳಿಂದ ಅತ್ಯಲ್ಪ ಗ್ರಾಂಟು ಕೊಡುತ್ತಿರುವುದರಿಂದ ಶಾಲೆಯನ್ನು ನಡೆಸುವುದು ಎಷ್ಟು ಕಷ್ಟತರವೆಂಬುದನ್ನು ಸಭಿಕರಿಗೆ ಮನಗಾಣಿಸಿದ್ದಲ್ಲದೆ ಉಪಾಧ್ಯಾಯರ ಮತ್ತು ರಕ್ಷಕರ ಕರ್ತವ್ಯಗಳನ್ನು ಸಭಿಕರಿಗೆ ವಿವರಿಸಿದರು

ಪೂಜ್ಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮನೇಜರರ ಸಾಹಸವನ್ನು ಶ್ಲಾಘಿಸಿ, ಯಶಸ್ವಿಯಾಗಿ ಬಹುಕಾಲ ಶಾಲೆ ಬೆಳಗಬೇಕೆಂದು ಶ್ರೀ ಪರಮಾತ್ಮನನ್ನು ಪ್ರಾರ್ಥಿಸಿ ಉಪಾಧ್ಯಾಯ ವೃತ್ತಿಯ ಮಹತ್ತಿಕೆಯನ್ನು ಮನಗಾಣಿಸಿ ವಂದನಾರ್ಪಣದಿಂದ ಭರಖಾಸ್ತು ಮಾಡಿದರು

ತಾ ೧೨ರಲ್ಲೂ ಇದೇ ರೀತಿ ರಾಜರ ಪಟ್ಟಾಭಿಷೇಕ ಮಹೋತ್ಸವವನ್ನು ಯಶಸ್ವಿಯಾಗಿ ಜರಗಿಸಿದರು

ನಮ್ಮ ಚಂದಾದಾರರಲ್ಲಿ ವಿನಂತಿ.

ಕಳೆದ ಸೆಪ್ಟಂಬರ ಲಾಗಾಯಿತು ನಾವು 'ನವಯುಗ'ವನ್ನು ನಮ್ಮ ಚಂದಾದಾರರಿಗೆ ಕಳುಹಿಸುತ್ತಾ ಬಂದಿದ್ದೇವೆ. ಆದರೆ ಕೆಲವರು ತಮ್ಮ ಚಂದಾ ಹಣವನ್ನು ಈ ವರೆಗೂ ನಮಗೆ ಪಾವತಿಮಾಡಲಿಲ್ಲ ಆ ಬಗ್ಗೆ ನಾವು ಪತ್ರಿಕೆಯಲ್ಲಿ ವಿನಂತಿಸಿಕೊಂಡಿರುವೆವಲ್ಲದೆ ಪ್ರತ್ಯೇಕ ನೋಟಿಸನ್ನು ಕಳುಹಿಸಿರುತ್ತೇವೆ. ಆದರೂ ಕೆಲವರು ಚಂದಾಹಣವನ್ನು ಈ ವರೆಗೂ ಕಳುಹಿಸಿರುವುದಿಲ್ಲ. ವಿ ಪಿ ಮಾಡಿದರೆ ವೃಥಾ ೯ ಆಣೆ ಹೆಚ್ಚಿಗೆ ತೆರಬೇಕಾಗುವುದು ಆದುದರಿಂದ ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು ದಯವಿಟ್ಟು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

ಮೆನೇಜರ್,
ನವಯುಗ

ಮಂಗಳೂರು

ಆಬ್ಕಾರಿ ಪೋಲೀಸರಿಗೆ ಮತ್ತು ಹಳ್ಳಿಗರಿಗೆ ಜಗಳ ಆಮಂದಿಗೆ ಜಖಂ

ಕಳೆದ ಶನಿವಾರ ಮಂಗಳೂರಿಂದ ೬ ಮೈಲು ದೂರವಿರುವ ಆಲಿಸೆ ಎಂಬಲ್ಲಿಯ ಕೆಲಮಂದಿ ಹಳ್ಳಿಗರಿಗೂ ಆಬಕಾರಿ ಪೋಲೀಸರಿಗೂ ಜಗಳವಾಗಿ ಎರಡು ಕಡೆಯಲ್ಲಿಯೂ ೮ ಮಂದಿ ಗಾಯಗೊಂಡು ಆಸ್ಪತ್ರೆಯಲ್ಲಿರುವರೆಂದು ತಿಳಿದು ಬರುತ್ತದೆ ಅಬ್ಕಾರಿ ಇನ್ಸ್ಪೆಕ್ಟರು ಕೆಲವು ಮನೆಗಳನ್ನು ಜಪ್ತಿಮಾಡಿ ಗೇರುಹಣ್ಣಿನ ನಾರಾಯಿ ಮತ್ತು ಅಕ್ರಮವಾಗಿ ತಯಾರಿಸಲ್ಪಟ್ಟ ಉಪ್ಪನ್ನು ಕಂಡುಹಿಡಿದು, ಹಳ್ಳಿಗರ ಕೆಲವರ ಸ್ಟೇಟ್‌ಮೆಂಟನ್ನು ಬರೆದು ಅವರ ಸಹಿ ಕೇಳಿದಾಗ ಅವರು ಸಹಿಕೊಡದೊಪ್ಪದೆ ಜಗಳವಾಗಿ ಹೊಡೆದಾಟ ನಡೆದು ಇನ್ಸ್ಪೆಕ್ಟರರಿಗೂ ಅವರ ಕೆಲಸದವರಿಗೂ ಪೆಟ್ಟಾಯಿತೆಂದೂ ಆಗ ಇನ್‌ಸ್ಪೆಕ್ಟರು ರಿವಾಲ್ವರಿನಿಂದ ಗುಂಡುಹಾರಿಸಿದರೆಂದೂ ತಿಳಿದುಬರುತ್ತದೆ ೫ಮಂದಿ ಹಳ್ಳಿಗರೂ ೩ಮಂದಿ ಅಬ್ಕಾರಿ ಕೆಲಸದವರೂ ಈಗ ಆಸ್ಪತ್ರೆಯಲ್ಲಿರುವರು

ಶ್ರೀ ಶಂಕರ ಜಯಂತಿ

ಉಳ್ಳಾಲ ಅಧ್ವೈತಾಶ್ರಮದಲ್ಲಿ ಇದೇ ಈಶ್ವರ ಸಂವತ್ಸರದ ವೈಶಾಖ ಶುದ್ಧ ಪಂಚಮಿಗೆ ಸರಿಯಾದ (ತಾ, ೧೫ ೫ ೩೭)ಶನಿವಾರ ಸ್ಸಾಯ ಘಂಟೆ ೪ಕ್ಕೆ ಶ್ರೀ ಬ್ರಹ್ಮಶ್ರೀ ಜ್ಯೋತಿ ಅನಂತಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಶ್ರೀ ಶಂಕರಾಚಾರ್ಯರ ಜಯಂತ್ಯುತ್ಸವವು ಶ್ರೀಮಂತ ಜರಗಲಿರುವದು ಈ ಸಂದರ್ಭದಲ್ಲಿ ಉತ್ತಮವಾದ ಹರಿಕಥೆ, ಉಪನ್ಯಾಸಾದಿಗಳು ಜರಗುವವು ಶ್ರದ್ಧಾಳುಗಳಿಗೆ ಅಪೂರ್ವಸಂದರ್ಭ

ಜಿಲ್ಲಾ ಬೋರ್ಡು ಡಾಕ್ಟರುಗಳ ವರ್ಗಾವರ್ಗಿ

ಸುಳ್ಯದಿಂದ ಡಾ| ಕೆ| ಕೆ| ರೈಯವರು ಬೈಂದೂರಿಗೆ, ಬೈಂದೂರಿನಿಂದ ರಾ| ಹೆಬ್ಬಾರರು ಬೆಳ್ತಂಗಡಿಗೆ, ಬೆಳ್ತಂಗಡಿಯಿಂದ ಡಾ| ಯು| ಎಸ್| ನ್ಯಾಕರ್ರು ಸುಳ್ಯಕ್ಕೆ, ಮೂಲ್ಕಿಯಿಂದ ಡಾ ಉಮೇಶ ರಾಯರು ಬಂಟ್ವಾಳಕ್ಕೆ, ಬಂಟ್ವಾಳದಿಂದ ಡಾ| ನವೀಡಾಜ ಆಳ್ವರು ಮೂಲ್ಕಿಗೆ, ಮೂಡಬಿದ್ರೆಯಿಂದ ಡಾ| ಎಂ. ಆರ್| ಶೆಟ್ಟಿಯವರು ಶಿರ್ವಕ್ಕೆ, ಶಿರ್ವದಿಂದ ಡಾ| ಎ| ಶ್ಯಾಮರಾಯರು ಮೂಡಬಿದ್ರೆಗೆ ವರ್ಗಾಯಿಸಲ್ಪಟ್ಟವರು ಲೋಕಲ್ ಸಂಪ್ ಒರ್ವನ್ಮೆಯ ನೇ ಮೊದಲಾದ ಇತರ ಸಿಬಂದಿಯ ವರ್ಗಾವರ್ಗಿ ಕೂಡಲೆ ನಡೆಬೆದೆಯೆಂತೆ

ಬೊಂಬಾಯಿಯಲ್ಲಿ

ನವಯುಗದ ಬಿಡಿಪ್ರತಿಗಳು

ಶ್ರೀ. ವಿ. ಎಸ್. ಏಬ್ರುಕ್ಕರ್,
ದಿ ನೇಶನಲ್ ಕೆನರಾ ನ್ಯೂಸ್ ಏಜನ್ಸಿ
ಇವರಲ್ಲಿ ಮಾರಾಟಕ್ಕೆ ಸಿಗುತ್ತವೆ

ಮಂಗಳೂರಿನ
ಬೆಂಗಳೂರಿನ
ಧಾರವಾಡದ

ಕಥೆ, ಕಾದಂಬರಿ ಮುಂತಾದ ಯಾವತ್ತೂ

ಪುಸ್ತಕಗಳು
ಸಿಗುವ
ಏರ್ಪಾಡಾಗಿದೆ.

ನವಭಾರತ ಬುಕ್ ಡಿಪೊ

ಉಡುಪಿ

ದಕ್ಷಿಣ ಕನ್ನಡ

ಬ್ರಹ್ಮಾವರ

ತಾ. 23-4-'37ನೇ ಶುಕ್ರವಾರ ಬ್ರಹ್ಮಾವರ ಕುಮ್ಮಗೋಡು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಮ. ರಾ. ರಾ. ಹಂದಾಡಿ ಪಟೇಲ್ ಹೆರಿಯಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಒಂದು ಸಭೆ ಕೂಡಿ, ಈ ನಮ್ಮ ಶಾಲೆಯಲ್ಲಿ ಒಂದು ಭಜನೆ ಮಂಡಲವನ್ನು ಸ್ಥಾಪಿಸ ಬೇಕೆಂದು ಹಲವರ ಅಭಿಮತದಂತೆ ಶಾಲಾ ಮು ಖ್ಯೋಪಾಧ್ಯಾಯರು ಡಿಸ್ಟ್ರಿಕ್ಟ್ ಬೋರ್ಡಿಗೆ ಬರ ಕೊಂಡಲ್ಲಿ ಕೊಡೋಣಾದX. N. Dis/11-12-36 ನೇ ಹುಕ್ಕುಂ ಪ್ರಕಾರ ಈ ದಿನ ಮ. ರಾ. ರಾ. ಬಿ. ಮಹಾಬಲೇಶ್ವರ ಶೆಟ್ರು ಇವರನ್ನು ಅಧ್ಯಕ್ಷರನ್ನಾಗಿ ಯೂ, ಮ. ರಾ. ರಾ. ಲಕ್ಷ್ಮಣ ಕಿಣಿಯರು ಮತ್ತು ಬಿ. ನಾರಾಯಣರಾಯರನ್ನು ಜೊತೆ ಕಾರ್ಯದರ್ಶಿ ಯರನ್ನಾಗಿಯೂ, ಬಿ. ಜಗಜ್ಜೀವನದಾಸ್ ಶೆಟ್ರು, ಪಡುಮನೆ ಮಂಜಯ್ಯ ಶೆಟ್ರು, ಗ್ರಾಮಚಾವಡಿ ನೋನಪ್ಪ ಶೆಟ್ರು, ಹಾಡಿ ಮನೆ ಚಂದ್ರಶೆಟ್ರು, ಗಾಳಿ ಮನೆ ನಾರಾಯಣ ಶೆಟ್ರು, ಬೈಲುಮನೆ ಮಹಾಬಲ ಶೆಟ್ರು ಇವರನ್ನು ಸದ್ರಿ ಕಮಿಟಿಯ ಮೆಂಬರುಗಳನ್ನಾ ಗಿಯೂ ಮಾಡುವರೆ ಮಂಜೂರಾಯಿತು. ಪ್ರತಿ ಶುಕ್ರ ವಾರ ತಪ್ಪದೆ ಭಜನೆ ನಡೆಸಬೇಕೆಂದು ನಿರ್ಣಯಿಸ ಲಾಯಿತು.

ಭಜನಾ ಮಂಡಲಿಗೆ ಸಹಾಯಾರ್ಥವಾಗಿ—ಅಧ್ಯಕ್ಷರು ಒಂದು ಶ್ರುತಿ ಪೆಟ್ಟಿಗೆಯನ್ನೂ ಜಗಜ್ಜೀವನ ದಾಸ್ ಶೆಟ್ರು ಒಂದು ಕವಾಟನ್ನೂ, ಲಕ್ಷ್ಮಣ ಕಿಣಿ ಯರು ಶ್ರೀರಾಮ ಪಟ ಒಂದನ್ನೂ, ಮಾಸ್ಟರ್ ಬಿ. ನಾರಾಯಣ ರಾಯರು ಒಂದು ಜೊತೆ ತಬ್ಲೆಯನ್ನೂ ಗೋವಿಂದ ಶೆಟ್ರು, ಗೋವಿಂದ್ರಾಯ ಕಿಣಿಯರು, ಮಂಜಯ್ಯ ಶೆಟ್ರು, ಮಹಾಬಲ ಹೆಗ್ಡೇರು, ಪುತ್ರ ಶೆಟ್ರು ಇವರುಗಳು ಒಂದೊಂದು ಜೊತೆ ತಾಳಗಳ ನ್ನೂ ಉಚಿತಾರ್ಥವಾಗಿ ಕೊಡುತ್ತೇವೆಂದು ವಾಗ್ದಾನ ಮಾಡಿದರು.

ಜನಸ್ತೋಮವು ತೆಕ್ಕಿರಿದಿತ್ತು. ಈ ಭಜನ ಮಂಡ ಲಿಗೆ ಅನೇಕರು ಧನಸಹಾಯನಿತ್ತಿರುವರು. ಹಾಗೆಯೇ ವಿದ್ಯಾಭಿಮಾನಿಗಳೆಲ್ಲರೂ ನಮ್ಮ ಕಾರ್ಯಕ್ಕೆ ಧನ ಸಹಾಯಮಾಡಿ, ತಮ್ಮ ಹೆಸರನ್ನು ಕಳುಹಿಸಿಕೊಡ ಬೇಕೆಂದೂ ಅಪೇಕ್ಷಿಸುತ್ತೇವೆ.

ಶ್ರೀಯುತ ಲಕ್ಷ್ಮಣ ಕಿಣಿಯರು ಭಜನ ಮಂಡಲಿಯ ವಿಚಾರ ಜನರಿಗೆ ಹೃದಯಂಗಮವಾಗಿ ವಿವರಿ ಸಿಯೂ, ಶ್ರೀಯುತ ಗಾಳಿಮನೆ ನಾರಾಯಣ ಶೆಟ್ರು ಶ್ರೀರಾಮ ಭಜನೆಯ ಮಹಾತ್ಮೆಯನ್ನು ವಿವರಿಸಿ ಜನ ರಲ್ಲಿ ಭಕ್ತಿರಸಹುಟ್ಟುವಂತೆಯೂ ಬೋಧಪರವಾದ ಕೆಲವು ವಾಕ್ಯಗಳಿಂದ ಜನರನ್ನು ಆನಂದಗೊಳಿಸಿ ದರು.

ಮಂಜೇಶ್ವರ

ಕಳೆದ ಆದಿತ್ಯವಾರ ಇಲ್ಲಿಯ ವೈಕುಂಠ ಭಕ್ತ ಶ್ಮೈಬ್ರರ ಭವನದಲ್ಲಿ ಶ್ರೀ ಚಂದ್ರಶೇಖರನೆಂಬ ಯುವ ಕನಿಗೂ, ಕಲ್ಯಾಣಿ ಬಾಯಿ ಎಂಬ ಯುವತಿಗೂ ವೈದಿಕ ವಿಧಿಪ್ರಕಾರ ವಿವಾಹ ಸಂಸ್ಕಾರವಾಯಿತು. ವರನು ಎರಡು ವರ್ಷಗಳ ಮೊದಲು ಮಹಮ್ಮದಿ ಮತಾವಲಂಬಿಯಾಗಿದ್ದು ಇತ್ತೀಚೆಗೆ ಮಂಗಳೂರು ಆರ್ಯ ಸಮಾಜದಲ್ಲಿ ಶುದ್ಧಿ ಸಂಸ್ಕಾರಗೊಳಿಸಲ್ಪಟ್ಟವನು. ವಧುವು ನೆಟ್ಟಣಿಗೆ ಗ್ರಾಮದ ಒಬ್ಬ ಅನಾಥಳು. ಅಲ್ಲಿಯ ಒಬ್ಬ ಮಹಮ್ಮದೀಯ ಯುವಕನು ಅವ ಳನ್ನು ಉಪಾಯಾಂತರದಿಂದ ಪುತ್ತೂರಿಗೆ ತಂದು ಅವಳ ಇಚ್ಛೆಗೆ ವಿರುದ್ಧವಾಗಿ ಇಸ್ಲಾಂ ಮತಕ್ಕೆ ಸೇರಿ ಸಲಿಕ್ಕಿದ್ದಾಗ, ಪುತ್ತೂರಿನ ಆರ್ಯ ಹಿಂದೂ ಧರ್ಮಾ ಭಿಮಾನಿಯಾದ ಶ್ರೀ ರಾಮಯ್ಯ ಶೆಟ್ಟಿಯವರಿಂದ ಅವಳು ರಕ್ಷಿಸಲ್ಪಟ್ಟು ಕೆಮ್ಮಿಂಜೆ ಸುಬ್ಬಣ್ಣಯ್ಯನ ವರ ರಾಮದೇವಾಶ್ರಮದಲ್ಲಿ ಪೋಷಿಸಲ್ಪಟ್ಟವಳು. ಶ್ರೀ ಮೋಹನಪ್ಪ ತಿಂಗಳಾಯರು ಈ ವಿವಾಹ ಸಂ ಸ್ಕಾರವನ್ನು ನೆರವೇರಿಸಿ, ಕೂಡಿದ ಜನಸ್ತೋಮಕ್ಕೆ ಆರ್ಯ ಸಮಾಜದ ಕಾರ್ಯ ಮತ್ತು ಪತಿತೋದ್ಧಾರಣೆ ಯ ಮಹತ್ವದ ಕುರಿತು ಬೋಧಪರ ಭಾಷಣಕೊಟ್ಟ ರು. ಶ್ರೀಮಾನ್ ವೈಕುಂಠ ಭಕ್ತರವರು ಈ ಕಾರ್ಯ ದಲ್ಲಿ ತನ್ನ ಸಂಪೂರ್ಣ ಸಹಾನುಭೂತಿಯನ್ನು ತೋರಿ ಸಿದ್ದಲ್ಲದೆ ವಧೂವರರು ಸದ್ಧರ್ಮ ಪ್ರವರ್ತಕರಾ ಗುವಂತೆ ಚಿಕ್ಕ ಉಪದೇಶವನ್ನೂ ಕೊಟ್ಟರು. ವಧೂ ವರರು ತಮ್ಮ ವಿವಾಹ ಸ್ಮರಣಾರ್ಥ ರೂಪಾಯಿ ಮೂರು ಆರ್ಯ ಸಮಾಜನಿಧಿಗೆ ದಾನಕೊಟ್ಟರು.

ಬೆಳ್ಳಾರೆ

ತಾ. ೯-೫-೩೭ನೇ ಆದಿತ್ಯವಾರ ಅಪರಾಹ್ಣ ಘಂಟೆ ೫-೩೦ಕ್ಕೆ ಸರಿಯಾಗಿ ಇಲ್ಲಿ ಶ್ರೀ। ಡಾ. ಪಿ. ಮಹಾಲಿಂಗ ಭಟ್ಟರ ಅಧ್ಯಕ್ಷತೆಯಲ್ಲಿ ಗ್ರಾಮ ಕಾಂ ಗ್ರೆಸ್ ಸಭೆಜರಗಿತು. ಗ್ರಾಮಕಾಂಗ್ರೆಸ್ ಕಮಿಟಿಗಳ ನ್ನು ಸ್ಥಾಪಿಸುವ ಬಗ್ಗೆ ಇಲ್ಲಿಗೆ ಬಂದಿದ್ದ ಶ್ರೀಮಾನ್ ಎನ್. ಎಸ್. ಕಿಲ್ಲೆಯವರು ಕಾಂಗ್ರೆಸ್ ಕಮಿಟಿಯ ನ್ನು ಸ್ಥಾಪಿಸುವ ಆವಶ್ಯಕತೆಗಳನ್ನು ವಿವರಿಸಿ ಹೇಳಿ ಕಮಿಟಿಯನ್ನು ಸ್ಥಾಪಿಸಲು ಯೋಗ್ಯ ಸಲಹೆಗಳನ್ನು ಕೊಟ್ಟರು. ಆ ಮೇಲೆ ಐದುಗ್ರಾಮಗಳನ್ನು ಸೇರಿದ ಒಂದು ಸಂಯುಕ್ತ ಕಾಂಗ್ರೆಸ್ ಕಮಿಟಿಯನ್ನು ಬೆಳ್ಳಾರೆಯಲ್ಲಿ ಸ್ಥಾಪಿಸಲಾಯಿತು. ಶ್ರೀಗಳಾದ ಸೀತಾ ರಾಮ ಕೋಟೆ, ಮತ್ತು ಗಣೇಶ ಸುಬ್ರಪ್ಪಯ್ಯ, ಇವರುಗಳನ್ನು ಕ್ರಮವಾಗಿ ಅಧ್ಯಕ್ಷ ಮತ್ತು ಕಾರ್ಯ ದರ್ಶಿಗಳನ್ನಾಗಿ ಆರಿಸಲಾಯಿತು. ಶ್ರೀ। ಗಣೇಶ ಸುಬ್ರಪ್ಪಯ್ಯನವರು ಶ್ರೀ। ಕಿಲ್ಲೆಯವರಿಗೂ, ಶ್ರೀ। ಪಿ. ಮಾಲಿಂಗಭಟ್ಟರಿಗೂ, ಧನ್ಯವಾದಗಳನ್ನು ಅರ್ಪಿ ಸಿದ ಬಳಿಕ ಸಭೆಯು ಮುಕ್ತಾಯವಾಯಿತು.

ಹಳ್ಳಿಯ ಸುದ್ದಿ

ದೇಶವೆಂಬುದು ಹಳ್ಳಿಯಲ್ಲಿದೆ, ಹಳ್ಳಿಯ ಏಳಿಗೆ ಯೇ ದೇಶೋನ್ನತಿ.ಹಳ್ಳಿಯಲ್ಲಿವಿದ್ಯಾವಂತರೇ ಕಡಿಮೆ. ಹಾಗೂ ಒಬ್ಬಿಬ್ಬರು (ಈಗಿನ) ವಿದ್ಯೆಯನ್ನು ಹೊಂದಿದವರಿದ್ದರೆ ಅವರು ಹೊತ್ತು ಹೆತ್ತು ಮತ್ತು ಸಲಹಿದ ಆ ಅಮ್ಮನನ್ನು ದೂರಕ್ಕೆ ಬಿಟ್ಟು ಪೇಟೆ ಪಟ್ಟಣಗಳಲ್ಲಿ ಸೇರಿದ್ದು ಬಿಡುವರು! ಅಲ್ಲಿಯೇ ದೂರ ದಲ್ಲಿಯೇ ನಿಂತು, ಮಾತನಲ್ಲೇ ಮಾತೆಯನ್ನು ಸಂತೆ ಯಿಸಲು ಹೇಳಿಕೆಗಳನ್ನು ಹೇಳಿಕಳುಹಿಸುವರಲ್ಲದೆ, ಕಣ್ಣೀರಿಡುವ ತಾಯಿಯನ್ನು ಕಾಂಬ ಹಂಬಲವೇ ಹಲವರಿಗೆ ಹುಟ್ಟುವುದಿಲ್ಲ! ಹಳ್ಳಿಯ ಒಳ್ಳೆಯವು ಗಳೆಲ್ಲಾ ಪೇಟೆಗೆ ವಿನಾಸಲಾಯಿತು. ಉಳಿದುಳಿದ ಪರಕು ಮುರುಕು! ಇದೆಲ್ಲ ಹಳ್ಳಿಗೆ!

ವಿದ್ಯೆಯಿಲ್ಲ, ಬುದ್ಧಿಯಿಲ್ಲ, ಸಂಘವಿಲ್ಲ, ಸ್ವಾತಂ ತ್ರ್ಯವೂ ಇಲ್ಲ! ಇಂತಿರುವ ಹಳ್ಳಿಯಲ್ಲಿ ಹಲವರು ಅಂಧಶ್ರದ್ಧೆಯಿಂದ ಒಬ್ಬರೊಡನೊಬ್ಬರು ಹೋರಾ ಡಿಕೊಳ್ಳುತ್ತಾ ಹಳ್ಳಿಯನ್ನೇ ಹಳ್ಳಕ್ಕೆಳೆದು ತಾವೂ ಬೀಳುತ್ತಿರುವರು! ಹೊರಲಾರದ ಕರದ ಹೊರೆ ಯಿಂದ ಮುರಿದಶಿರವುಳ್ಳ, ಬಡತನದ ಬೇಗೆಯಿಂದ ಬೆಂದು ಬೇಗುದಿಗೊಂಡ ಬೇಸಾಯಗಾರರಿಂದು ಇತಿ ಕರ್ತವ್ಯ ಮೂಢರಾಗಿ ಕಂಗೆಟ್ಟಿರುವರು. ಪ್ರತಿಹಳ್ಳಿ ಯಲ್ಲಿಹೀಗಿರುವ ಹಳ್ಳಿಗಳಲ್ಲೊಂದು ನಿಂಜೂರು. ಇಲ್ಲಿ ಎನ್. ಪಿ. ಸುಬ್ಬಣ್ಣಭಟ್ಟ ಬಿ. ಎ. ಇವರು ಮತ್ತು ಮಾಸ್ಟರ್ ನಿಂಜೂರು ಸಂಜೀವ ಸೆಟ್ಟರು ಸಹಸೇರಿ 'ಶ್ರೀ ವಿವೇಕಾನಂದ ಸೇವಾಸಂಘ ನಿಂಜೂರು' ಎಂಬ ಹೆಸರಿನಿಂದ ಒಂದು ಸಂಘವನ್ನೇರ್ಪಡಿಸಿ ಆಮೂಲ ಕ ಜನರ ಆಚರಣೆ ಮೂಢನಂಬಿಕೆ ಒಳಜಗ ಳ ಆಲಸ್ಯ ನಿರುದ್ಯೋಗ ಇತ್ಯಾದಿಗಳನ್ನು ಹೋಗ ಲಾಡಿಸಲು ಪ್ರಯತ್ನಿಸಿ ಜನರಲ್ಲಿ ಅದೊಂದು ಬಗೆ ಯ ಕಳೆಯನ್ನು ಬೆಳಗಿಸಿ, ಹಳ್ಳಿಯ ಉನ್ನತಿಗಾಗಿ ತುಂಬಾಪ್ರಯತ್ನಿಸುವುದನ್ನು ಕಂಡೆ. ಬಹುಸಂತಸ ಗೊಂಡೆ. ಇದಕ್ಕಾಗಿ ಅವರಿಬ್ಬರಿಗೂ ನನ್ನ ಹೃತ್ಪೂ ರ್ವಕವಂದನೆ. ವಿದ್ಯಾವಂತರೆಲ್ಲ ಶ್ರೀಮಾನ್ ಪಿ. ಯಸ್. ನಿಂಜೂರ್ ಬಿ. ಎ. ಇವರಂತೆ ಹಳ್ಳಿಯನ್ನು ಬೆಳಗಲು ಹೊರಟರೆ ನಮ್ಮ ಮಾತೆಯ ಬಂಧನವು ಬಹುಬೇಗನೆ ಮುರಿದು ಹೋಗುವಲ್ಲಿ ಅಡ್ಡಿಯಿಲ್ಲ.

ಮುದ್ರಾಡಿ ಕೃಷ್ಣಯ್ಯ ಸೆಟ್ಟಿ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಬೊಂಬಾಯಿ

ಈ ಮೇಲ್ತೋರುವ ಮಂಡಳಿಯ ೨೧ನೇ ವಾರ್ಷಿ ಕ ಮಹಾಸಭೆಯನ್ನು ಇದೇ ಮೇ ತಿಂಗಳ ತಾ. 23 ನೇ ಆದಿತ್ಯವಾರ ಅಪರಾಹ್ನ ೨ಘಂಟೆ (S. T.) ನಂ. 146ನೇ ಮೋದಿರಸ್ತೆಯಲ್ಲಿರುವ ಮೊಗವೀರ ರಾತ್ರಿ ಶಾಲಾ ಸಭಾಸದನದಲ್ಲಿ ಮಂಡಳಿಯ ಅಧ್ಯಕ್ಷರಾದ ರಾ. ಎಚ್. ಕೆ. ಎ. ಕುಂದರನ್, D. Com. I. Mc. (Bom) F. C. I. (Lon) ಇವರ ಅಧ್ಯ ಕ್ಷತೆಯಲ್ಲಿ ಜರಗಿಸಲು ನಿಶ್ಚೈಸಿರುವುದರಿಂದ ಮೆಂಬ ರರೆಲ್ಲರೂ ಕ್ಲಪ್ತ ಸಮಯದಲ್ಲಿ ಹಾಜರಾಗಿ ಸಭಾ ಕಾರ್ಯವನ್ನು ಸಾಂಗಗೊಳಿಸಬೇಕಾಗಿ ಕೋರುವ,

ಯಸ್. ಕೆ. ಪ್ಯೆಂದನ್,
ವಿ. ಬಿ. ಕರ್ಕೇರ,
ಮಾನಾರ್ಥ ಜತೆಕಾರ್ಯದರ್ಶಿಯರು.

The Combined Booking Agency

AND

The Joint Booking Office

MANGALORE, SOUTH KANARA.

— ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ —

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ—ಚಾರ್ಮಾಡಿ — ಕಾರ್ಕಳ

ಉಜ್ರೆ (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ) — ಉಡುಪಿ

ಮಂಗಳೂರು — ಕುಂದಾಪುರ

ಪುತ್ತೂರು — ಮೂಡಬಿದ್ರೆ

ಮೂಲ್ಕಿ — ಗಂಗೊಳ್ಳಿ

ಜಿಲ್ಲೆಯ ಹೊರಗೆ—

ಮಡಿಕೇರಿ, ಮೈಸೂರು, ಸಕಲೇಶಪುರ, ಚಿಕ್ಕಮಗಳೂರು, ಮೂಡಗೆರೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿ ಗೃಹಗಳು ನಿರ್ಮಿಸಲ್ಪಡುವುವು. ನೀವು ಕಂಡಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜ್ಯೊಂಟ್ ಮೆನೇಜರರಿಗೆ ತಿಳಿಸಿರಿ.

ಲೋರ್ಡ್ ಜೆಟ್ಲೆಂಡರ ಹೇಳಿಕೆ

ಪ್ರಾಂತಿಕ ಆಡಳಿತಕ್ಕೆಲ್ಲಾ ಮಂತ್ರಿಗಳೇ ಜವಾಬ್ದಾರಿ, ಆಡಳಿತದಲ್ಲಿ ಆಗಾಗ ಗವರ್ನರರೇನೂ ಕೈಹಾಕುವುದಿಲ್ಲ

ಇದೇ ತಾ. ೧೧ರಲ್ಲಿ ಲಂಡನಿನಲ್ಲಿ ಹೌಸ್ ಆಫ್ ಲೋರ್ಡ್ಸ್ ಸಭೆ ಸೇರಿಯಿತು. ಆಗ ಲೇಬರ್ ಪಕ್ಷದ ಲೋರ್ಡ್ ಸ್ನೆಲ್ಲರು ಪ್ರಕೃತದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿವಾರಿಸುವುದಕ್ಕಾಗಿ ಗಾಂಧಿಜಿ ಮತ್ತು ವೈಸರಾಯರೊಳಗೆ ಮಾತುಕತೆ ನಡೆಯುವ ವ್ಯವಸ್ಥೆ ಮಾಡಲು ಸಾಧ್ಯವಿಲ್ಲವೇ? ಎಂದು ಪ್ರಶ್ನಿಸಿದಾಗ ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರು ದೀರ್ಘವಾದೊಂದು ಭಾಷಣಮಾಡಿದರು. ಅದರ ಮುಖ್ಯಾಂಶಗಳನ್ನು ಈ ಕೆಳಗೆ ಕೊಡಲಾಗಿದೆ.

"ಗಾಂಧಿಜಿ ಮತ್ತು ವೈಸರಾಯರೊಳಗೆ ನಡೆಯುವ ಚರ್ಚೆಯ ಪರಿಣಾಮವಾಗಿ, ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವ ಕುರಿತು ಏನಾದರೊಂದು ಸರಳಸೂತ್ರವು ಕಂಡುಹಿಡಿಯಲ್ಪಡಬಹುದೆಂಬ ಭಾವನೆಯಿಂದ ಲೋರ್ಡ್ ಸ್ನೆಲ್ಲರು ಈ ಸೂಚನೆಮಾಡಿರುವುದಾಗಿದೆ. ಇಂಡಿಯಾ ಆಕ್ಟು ಪ್ರಕಾರ ಗವರ್ನರರಿಗೆ ತಮ್ಮ ವಿಶೇಷಾಧಿಕಾರಗಳನ್ನು ಬಿಟ್ಟುಕೊಡಲು ಸಾಧ್ಯವಿಲ್ಲೆಂದು ನಾನು ಈ ಮೊದಲು ಲೋರ್ಡ್ ಲೋಥಿಯನರಿಗಿತ್ತ ಉತ್ತರವನ್ನು ನಾನಿಲ್ಲಿ ಪುನಃ ಹೇಳಬೇಕಾಗಿಲ್ಲ. ಒಂದುವೇಳೆ ಗವರ್ನರರು ಆಶ್ವಾಸನೆಯಿತ್ತರೂ ಅದರ ಅರ್ಥದ ಕುರಿತು ಭಿನ್ನಾಭಿಪ್ರಾಯವೆದ್ದು ವಿಶ್ವಾಸಘಾತದ ಅಪವಾದ ಬರುವ ಸಂಭವವಿರುತ್ತದೆ. ಮಂತ್ರಿಮಂಡಲ ಮತ್ತು ಗವರ್ನರರೊಳಗಣ ಸಂಬಂಧವನ್ನು ನಿಯುಕ್ತಗೊಳಿಸುವ ಸೂತ್ರವೇನನ್ನಾದರೂ ಕಾಯಿದೆಶೀರವಾಗಿ ರಚಿಸಿಡಲು ಸಾಧ್ಯವಾಗಿದ್ದರೆ ಅದು ಇಂಡಿಯಾ ಆಕ್ಟಿನಲ್ಲಿ ಅಡಕವಾಗುತ್ತಿತ್ತು. ಅಂತಹ ಸೂತ್ರವೇನನ್ನಾದರೂ ಮಾಡಲು ಅಸಾಧ್ಯವಾದುದರಿಂದಲೇ, ಆಕ್ಟಿನ ಜಯಶೀಲತೆಗೆ ಪ್ರಾಮುಖ್ಯವಾದುದೆಂದರೆ ಅದನ್ನು ಜ್ಯಾರಿಗೆ ತರುವ ಮನೋಭಾವವೆಂದೇ ಆಕ್ಟಿನಲ್ಲಿಯೂ, ಆಕ್ಟಿನ ಕುರಿತು ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದಿದ್ದಾಗಲೂ ಆಗಾಗ ಒತ್ತಿ ಹೇಳಲಾಗಿತ್ತು. ದುರ್ದೈವ ವಶಾತ್ ಕೆಲವರು, ಗವರ್ನರರ ಮೇಲಿರುವ ಕೆಲವೊಂದು ಜವಾಬ್ದಾರಿಗಳಿಗೆ ಆಕ್ಟಿನಲ್ಲಿ ಸೂಚಿತವಾದುದಕ್ಕಿಂತಲೂ ಹೆಚ್ಚಿನ ಅರ್ಥಮಾಡಿಕೊಂಡಿರುವರು.

ಬ್ರಿಟಿಷ್ ಸರಕಾರದ ಹಿಂದಿನ ವರ್ತನೆ ಮತ್ತು ಇಂದಿನ ಘೋಷಣೆಯಿಂದಾಗಿ, ಕಾಂಗ್ರೆಸಿನವರು ಕೇಳಿರುವ ಆಶ್ವಾಸನೆಯ ವಿನಹ ಪ್ರಜಾಪಕ್ಷೀಯರಾದ ಮಂತ್ರಿಮಂಡಲವು ನಿರಂತರ ಮತ್ತು ಉಪೇಕ್ಷಕರ ಆತಂಕಗಳಿಗೊಳಗಾಗುವರೆಂದು ಕಾಂಗ್ರೆಸಿನವರು ಇತ್ತಲಾಗಿ ನಿರೂಪಿಸಿರುವರು. ಇದಕ್ಕೂ ಇಂಡಿಯಾ ಆಕ್ಟಿನ ಮೇರೆಗೆ ಪ್ರಜಾಪಕ್ಷೀಯ ಮಂತ್ರಿಗಳು ಆಡಳಿತ ನಡಿಸುವ ಕುರಿತು ನನ್ನಲ್ಲಿರುವ ಭಾವನೆ ಮತ್ತು ಚಿತ್ರಕ್ಕೂ ಬಹಳ ಅಭ್ಯಂತರವಿದೆ. ಆದುದರಿಂದ ಪ್ರಾಂತಗಳಲ್ಲಿ ಹೊಸ ರಾಜ್ಯಾಂಗ ರಚನೆಯು ಹೇಗೆ ಜ್ಯಾರಿಗೆ ತರಲ್ಪಡಬೇಕೆಂಬ ಕುರಿತು ನನ್ನ ಕಲ್ಪನೆಯನ್ನು ನಾನು ವಿವರಿಸುವುದು ಆವಶ್ಯವಾಗಿದೆ. ನಾನು ಸಿಲೆಕ್ಟ್ ಕಮಿಟಿಯ ಮತ್ತು ರೌಂಡ್‌ಟೇಬಲ್ ಪರಿಷತ್ತಿನ ಸದಸ್ಯನಾಗಿದ್ದುದರಿಂದ ಇಂಡಿಯಾ ಆಕ್ಟನ್ನು ರೂಪಿಸಿದವರ ಉದ್ದೇಶ ಮತ್ತು ಮನೋಭಾವವನ್ನು ಅರಿತವನಿರುವೆನು. ಮೊದಲಾಗಿ, ಗವರ್ನರರು ಮತ್ತು ಮಂತ್ರಿಗಳು ಬೇರೆ ಬೇರೆ ಭಾಗಗಳಿದ್ದು ಆಗಾಗ ಪರಸ್ಪರ ತಿಕ್ಕಾಟವುಂಟಾಗುವಂತೆ ಪ್ರತ್ಯೇಕ ಪ್ರತ್ಯೇಕವಾಗಿ ಕೆಲಸಮಾಡುವರೆಂದು ಭಾವಿಸಿಕೊಳ್ಳುವುದೇ ತಪ್ಪು. ಪ್ರಾಂತದ ಸಂಪೂರ್ಣ ಆಡಳಿತ ಜವಾಬ್ದಾರಿ ಮತ್ತು ಕರ್ತೃತ್ವ ಶಕ್ತಿಯು ಹೆಸರಿನ ಮಟ್ಟಿಗೆ ಗವರ್ನರರದಾದರೂ, ಮಂತ್ರಿಗಳು ಅಧಿಕಾರ ಸ್ವೀಕರಿಸಿದೊಡನೆಯೇ ಸರ್ವ ಜವಾಬ್ದಾರಿಯೂ ಅವರದಾಗುವುದು. ಇದೇ ಹೊಸ ರಾಜ್ಯಾಂಗರಚನೆಯ ಮುಖ್ಯತತ್ವ. ತನ್ನ ರಾಜ್ಯಭಾರದ ಅನುಭವ ಮತ್ತು ರಾಜಕೀಯ ಜ್ಞಾನದಿಂದ ಪ್ರತಿಯೊಂದು ವಿಧದಲ್ಲಿಯೂ ಮಂತ್ರಿಗಳಿಗೆ ಸಹಾಯಮಾಡುವುದು ಗವರ್ನರರ ಕರ್ತವ್ಯವಿರುತ್ತದೆ.

ಕಾಂಗ್ರೆಸಿನವರು ಮಹತ್ತಾಗಿ ಮಾಡಿರುವ ಗವರ್ನರರ ವಿಶೇಷಾಧಿಕಾರಗಳು ಸರ್ವಸಾಮಾನ್ಯವಾಗಿ ಉಪಯೋಗಕ್ಕೆ ಬರುವುದೇ ಇಲ್ಲ. ಇಂಡಿಯಾ ಆಕ್ಟಿನಲ್ಲಿ ನಿರ್ದೇಶಿಸಲ್ಪಟ್ಟು, ಇನ್‌ಸ್ಟ್ರುಮೆಂಟ್ ಆಫ್ ಇನ್‌ಸ್ಟ್ರಕ್ಷನಿನಲ್ಲಿ ಸ್ಪಷ್ಟೀಕರಿಸಲ್ಪಟ್ಟಿರುವ ಗವರ್ನರರ ವಿಶೇಷ ಜವಾಬ್ದಾರಿಯ ಪ್ರಶ್ನೆ ಬಂದಾಗ ಮಾತ್ರ ಈ ವಿಶೇಷಾಧಿಕಾರಗಳನ್ನುಪಯೋಗಿಸುವ ಸಂಭವ ಬರಬಹುದು. ಒಂದೊಮ್ಮೆ ಅವುಗಳ ಉಪಯೋಗದ ಪ್ರಶ್ನೆ ಬಂದರೂ ಗವರ್ನರರು ಕೂಡಲೇ ಮಂತ್ರಿಗಳಿಗೆ ವಿರೋಧವಾಗಿ ನಿಲ್ಲುವರೆಂದು ನೆನಸಿಕೊಳ್ಳುವುದು ತಪ್ಪಾಗಿರುತ್ತದೆ, ಅಂತಹದನ್ನು ನಾನು ನಿರೀಕ್ಷಿಸುವುದೂ ಇಲ್ಲ. ಆಶಿಸುವುದೂ ಇಲ್ಲ. ಪ್ರಾಂತದ ಆಡಳಿತದಲ್ಲಿ ಯಾವ ಗವರ್ನರರ ಸಲಹೆ ಮತ್ತು ಬೆಂಬಲವು ಮಂತ್ರಿಗಳಿಗೆ ಅಮೂಲ್ಯವಾಗಿರುವುದೋ ಅವರು, ತನಗೆ ಪಾರ್ಲಿಮೆಂಟು ವಹಿಸಿತ್ತಿರುವ ವಿಶೇಷ ಜವಾಬ್ದಾರಿಯ ಕುರಿತು ತನಗೂ ಮಂತ್ರಿಗಳಿಗೂ ಭಿನ್ನಾಭಿಪ್ರಾಯವುಂಟಾಗುವ ಅಪಾಯಕರ ಪರಿಸ್ಥಿತಿ ಉಂಟಾದೊಡನೆಯೇ ತನ್ನ ತೊಂದರೆಗಳನ್ನೆಲ್ಲಾ ನಿಶ್ಚಯವಾಗಿಯೂ ಮಂತ್ರಿಗಳ ಮುಂದಿರಿಸದಿರಲಾರರು. ಮಂತ್ರಿಗಳು ತಮ್ಮ ತೊಂದರೆಯ ಸಂದರ್ಭದಲ್ಲಿ ಹ್ಯಾಗೆ ಗವರ್ನರರ ಸಹಾಯವನ್ನು ಪಡೆಕೊಳ್ಳಬಹುದೋ ಹಾಗೆಯೇ ಹೊಸ ರಾಜ್ಯಾಂಗ ರಚನೆಯು ಅಂತರಿಕಭಾವದಂತೆ ನಡೆಯುವದಾದರೆ, ಗವರ್ನರರು ತನ್ನ ತೊಡಕಿನ ಸಂದರ್ಭದಲ್ಲಿ ಮಂತ್ರಿಗಳಿಂದ ಸಹಾನುಭೂತಿಯ ಸಹಕಾರವನ್ನು ನಿರೀಕ್ಷಿಸಬಹುದು. ಇದರಿಂದಾಗಿ ಮಂತ್ರಿಗಳು ಗವರ್ನರರಿಗೆ ತೊಂದರೆಯಾಗದಂತೆ ತಮ್ಮ ಕಾರ್ಯಕ್ರಮವನ್ನು ಸ್ವಲ್ಪಮಟ್ಟಿಗೆ ಬದಲಾಯಿಸಬಹುದು. ಅಂತು ಪರಸ್ಪರ ಒಂದೇ ಉದ್ದೇಶದಿಂದ ಕೆಲಸಮಾಡುವವರು ತಮ್ಮ ಭಿನ್ನಾಭಿಪ್ರಾಯದ ಕುರಿತು ಚರ್ಚಿಸಿಕೊಂಡಲ್ಲಿ ಆ ಭಿನ್ನತೆಯು ಸಂಪೂರ್ಣವಾಗಿ ಹೋಗದಿದ್ದರೂ ಕೆಲಮಟ್ಟಿಗೆ ಕಡಿಮೆಯಾಗದಿರಲಾರದು. ಹೀಗೆ ಪರಸ್ಪರ ಮಾತುಕತೆಗಳಿಂದ ತಮ್ಮ ಭಿನ್ನತೆಯು ಸ್ಪಷ್ಟೀಕರಿಸಲ್ಪಟ್ಟ ಮೇಲೆ, ಫಲಕಾರಿಯಾಗಿ ಆ ವರೆಗೆ ನಡೆದು ಬಂದ ತಮ್ಮ ಸಂಬಂಧವನ್ನು ಪ್ರಾಂತದ ಹಿತದೃಷ್ಟಿಯಿಂದ ಮುರಿಯುವುದು ನ್ಯಾಯವಾದುದೋ? ಎಂಬುದನ್ನು ನಿರ್ಧರಿಸುವ ಜವಾಬ್ದಾರಿಯು ಇತ್ತಂಡದವರದಾಗಿದೆ. ಹೀಗೆ ಇತ್ತಂಡದವರೂ ಅಂತಃಕರಣಪೂರ್ವಕವಾಗಿ ಪರಸ್ಪರ ಸಂಬಂಧವನ್ನು ಮುರಿದೊಗೆವ ಸಂದರ್ಭಗಳು ಎಂದಿಗೂ ಬರಲಾರವೆಂದು ಆಶಿಸುವುದು ಅನುಚಿತವಾಗಲಾರದಲ್ಲವೇ? ಇಂಡಿಯಾ ಆಕ್ಟನ್ನು ಜ್ಯಾರಿಗೆತರುವ ಕುರಿತಾದ ನನ್ನೀ ಚಿತ್ರವು ನಿಜವಾದರೆ, ಗವರ್ನರರು ಮತ್ತು ಮಂತ್ರಿಗಳೊಳಗಣ ಸಂಬಂಧವು ಪಾರಸ್ಪರ್ಯವಾದ ಉದ್ಯಮದಲ್ಲಿ ಸಮಪಾಲುಗಾರಿಕೆಯೆಂದಾದರೆ ಮಂತ್ರಿಗಳ ಜವಾಬ್ದಾರಿ ಮತ್ತು ಕಾರ್ಯನಿರ್ವಾಹದಲ್ಲಿ ಗವರ್ನರರು ನಿರಂತರವಾಗಿ ಮತ್ತು ತೊಂದರೆಗಾರರಾಗಿ ಕೈಹಾಕುವ ಪ್ರಶ್ನೆಯೇ ಉಂಟಾಗಲಾರದು.

ಲೋರ್ಡ್ ಜೆಟ್ಲೆಂಡರು ಅನಂತರ ಕೆಲ ದಿನಗಳ ಮೊದಲು ಅಂಡರ್ ಸೆಕ್ರೆಟರಿಗಳಾದ ಮಿ. ಬಟ್ಲರರು ಪಾರ್ಲಿಮೆಂಟಿನಲ್ಲಿತ್ತ ಆಶ್ವಾಸನೆಯನ್ನು ಪುನರಪಿ ನಿರೂಪಿಸಿದರು 'ಗವರ್ನರರ ವಿಶೇಷ ಅಧಿಕಾರಗಳನ್ನು ಯಾವ ಉದ್ದೇಶದಿಂದ ಪಾರ್ಲಿಮೆಂಟು ನಿಯೋಜಿಸಿರುವುದೋ ಅದರ ಹೊರತು ಇತರ ರೀತಿಯಲ್ಲಿ ಅವನ್ನು ಉಪಯೋಗಿಸುವುದಾದರೆ ಸರಕಾರವು ಅವಕ್ಕೆ ಪ್ರೋತ್ಸಾಹ ಕೊಡಲಾರದು. ಗವರ್ನರರು ತಮ್ಮ ಜವಾಬ್ದಾರಿಗಳ ಸಂಕುಚಿತ ಹಾಗೂ ಕಾನೂನು ಪ್ರಕಾರವಾದ ಅರ್ಥವನ್ನು ಮಾಡಿಕೊಂಡು ಪಾರ್ಲಿಮೆಂಟು ಮಂತ್ರಿಗಳ ಕೈವಶ ಕೊಡಬೇಕೆಂದಿರುವ ಮತ್ತು ಅವನ್ನು ಅವರು ತಮ್ಮ ಕಾರ್ಯಕ್ರಮವನ್ನು ಮುಂದೊತ್ತುವುದರಲ್ಲಿ ಉಪಯೋಗಿಸಬೇಕೆಂದು ನಾವು ಅಪೇಕ್ಷಿಸುವ ಹೆಚ್ಚಿನ ಅಧಿಕಾರವನ್ನು ಆಕ್ರಮಿಸಿಕೊಳ್ಳಬೇಕೆಂದು ಸರಕಾರದ ಉದ್ದೇಶವೇ ಅಲ್ಲ. ಈಗ ಹಿಂದೂದೇಶದಲ್ಲಿ ಬಹುಪಕ್ಷೀಯ ಮಂತ್ರಿಮಂಡಲವು ಸ್ಥಾಪಿಸಲ್ಪಟ್ಟಿರುವಲ್ಲಿಯೂ, ಅಲ್ಪಪಕ್ಷೀಯ ಮಂತ್ರಿಗಳಿರುವಲ್ಲಿಯೂ ಗವರ್ನರರ ಯಾವ ರೀತಿಯ ಆತಂಕವೂ ಇಲ್ಲದೆ ಸಾಹಸವರ ಕಾರ್ಯಕ್ರಮಗಳು ಸ್ವೀಕರಿಸಲ್ಪಟ್ಟಿರುವವು. ತಮ್ಮ ಕರ್ತವ್ಯ ನಿರ್ವಾಹದಲ್ಲಿ ಅನಾವಶ್ಯಕವಾಗಿ ಗವರ್ನರರು ಕೈಹಾಕಿ ಆತಂಕಿಸುವರೆಂಬ ತಪ್ಪು ಭಾವನೆಯ ನಿಮಿತ್ತ ಉಂಟಾದ ಭೀತಿಯಿಂದ ಇಷ್ಟರವರೆಗೆ ಜವಾಬ್ದಾರಿ ವಹಿಸಲು ಸಂದೇಹಗೊಂಡವರು, ತಮ್ಮ ನಡುವೆಯೇ ಹೊಸ ರಾಜ್ಯಾಂಗ ರಚನೆಯು ಕಾರ್ಯಕ್ಕೆ ಹಚ್ಚಲ್ಪಟ್ಟಿರುವ ರೀತಿಯಿಂದ ಪ್ರೋತ್ಸಾಹ ಮತ್ತು ಅಭಯ ಪಡೆಯುವರೆಂದು ಆಶೆಕಟ್ಟಿಕೊಳ್ಳಬಹುದೆ? ಅಂತಾಗಲೆಂದೇ ನನ್ನ ಪ್ರಾಮಾಣಿಕ ಹಾಗೂ ಅಂತರಿಕ ಆಶೆಯಿರುವುದೆಂಬುದನ್ನು ನಾನು ಹೇಳಬೇಕಾಗಿಲ್ಲ'.

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮಧ್ವುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ--- ಗುಡಪಿಪ್ಪಲಿ (ಲೀವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಕೊಳ್ಳಿರಿ.

ಸ್ಪೈನಿನ ಅಂತಃಕಲಹ

ಮೇದ್ರಿದ್ ಪಟ್ಟಣವೀಗ ಅಜೇಯವಾಗಿದೆ.

ಬಾಸ್ಕ್ ಪ್ರಾಂತದ ಸಾವಿರಾರು ಮಕ್ಕಳು ಮತ್ತು ಸ್ತ್ರೀಯರಿಗೆ ರಕ್ಷಣೆ.

ಸ್ಪೈನಿಷ್ ಸರಕಾರದ ಕಡೆಯ ಬಾರ್ಸಿಲೋನದಲ್ಲಿ ಅನಾಯಕವಾದಿಗಳು ಸರಕಾರದ ವಿರೋಧವಾಗಿ ಬಂಡಾಯವೆಬ್ಬಿಸಿ, ಸುಮಾರು 100 ಮಂದಿ ಕೊಲ್ಲಲ್ಪಟ್ಟಿರುವರು. ಈಗ ಈ ಬಂಡಾಯವು ಅಡಗಿಸಲ್ಪಟ್ಟಿರುವುದು.

ಮರೆಂಗೊದಿಂದ ಸಮುದ್ರದ ವರೆಗಿನ ಸ್ಥಳವನ್ನು ಆವರಿಸಲೆತ್ನಿಸುವ ಬಂಡಾಯಗಾರರನ್ನು ಸರಕಾರದ ಸೈನಿಕರು ಹಿಮ್ಮೆಟ್ಟಿಸಿರುವರು. ಈ ಹೋರಾಟದ ನಂತರ 400 ಮಂದಿ ಇಟಲಿಯಾನರನ್ನು ಸರಕಾರದ ಕಡೆಯ ಸೈನಿಕರು ಹೂಳಿರುವರು. ಇದೇ ತಾ. ३ರಲ್ಲಿ ಬಲ್ಲಾಷ್ಟೋಡ ಸುತ್ತು ನಡೆದ ಹೋರಾಟಗಳಲ್ಲಿ ಒಟ್ಟು 2500 ಮಂದಿಯ ವರೆಗೆ ಹತರಾದರು. ಬೋವಿಲ್ಲಿಯೋ ಎಂಬ ಚಿಕ್ಕ ಬಂದರವನ್ನು ಸುಮಾರು 3000 ಬಂಡಾಯಗಾರರು ವಶಮಾಡಿಕೊಳ್ಳಲೆತ್ನಿಸಿದಾಗ ಸರಕಾರದ ಸೈನಿಕರು ಅವರನ್ನು ಸಂಪೂರ್ಣವಾಗಿ ಮುತ್ತಿ ಅನೇಕರನ್ನು ಕೊಂದುಹಾಕಿದರು. ಕೆಲಮಂದಿ ಇಟಲಿಯಾನಸೈನಿಕರು ಸಮುದ್ರಕ್ಕೆ ಹಾರಿ 2 ಮೈಲು ಈಜಾಡಿ ಆಚೆ ದಡ ಸೇರಲೆತ್ನಿಸಿದಾಗ ಸರಕಾರದ ಕಡೆಯ ಸೈನಿಕರು ಮಿಶಿನ್ ತೋಪುಗಳಿಂದ ಗುಂಡೆಸೆದು ಹಲವರನ್ನು ಕೊಂದುಹಾಕಿದರು. ಸಿಕ್ಕಿಬಿದ್ದ ಬಂಡಾಯಗಾರ ಸೈನಿಕರನ್ನೊಯ್ಯಲು ಕಳುಹಿಸಲ್ಪಟ್ಟ ದೋಣಿಗಳನ್ನು ಸರಕಾರದ ಕಡೆಯ ತೋಪುಗಳ ಮೂಲಕ ಹಿಂದಕ್ಕೆ ಓಡಿಸಲಾಯಿತು.

ಮೇದ್ರಿದ್ ಈಗ ಅಜೇಯವಾಗಿದೆ

ಹಿಂದೊಮ್ಮೆ ಮೇದ್ರಿದ್ ಪಟ್ಟಣವು ಬಂಡಾಯಗಾರರ ವಶವಾಗುವ ಸಂಭವವುಂಟಾದಾಗ ಸರಕಾರದ ಕಡೆಯ ವೀರಸೈನಿಕರು, ಪ್ರಾಣದ ಹಂಗು ತೊರೆದು 'ವೈರಿಗಳು ಮೇದ್ರಿದಿಗೆ ಪ್ರವೇಶಿಸಕೂಡದು' ಎಂದು ಬಂಡಾಯಗಾರರನ್ನು ತಡೆಗಟ್ಟಿದರು. ಈಗ ವೈರಿಗಳಿಗೆ ಮೇದ್ರಿದಿಗೆ ಪ್ರವೇಶಿಸಲು ಸಾಧ್ಯವೇ ಇಲ್ಲವೆಂಬಂತಾಗಿದೆ. ಮೇದ್ರಿದಿನ ಕೋಟೆ ಕಂದರಗಳೀಗ ಬಹಳ ಭದ್ರವಾಗಿವೆ. ಸೈನಿಕರ ಉತ್ಸಾಹವು ವಿಚಿತ್ರವಾಗಿದೆ. ಒಬ್ಬರಲ್ಲಾದರೂ ಸ್ವಲ್ಪವೂ ಅತೃಪ್ತಿಯಿರುವುದಿಲ್ಲ.

ಮಕ್ಕಳು ಫ್ರಾನ್ಸಿಗೆ ಕಳುಹಿಸಲ್ಪಟ್ಟರು

ಬಾಸ್ಕ್ ಪ್ರಾಂತದ ಬಿಲ್ಬಾವೋದಿಂದ ಸ್ತ್ರೀಯರು ಮಕ್ಕಳನ್ನು ಹೊರಗೆ ಕರೆದೊಯ್ದು ಆಶ್ರಯನೀಯುವ ಕೆಲಸವನ್ನು ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ಕೈಕೊಂಡಿರುವವು. ಇದು ಕೇವಲ ಪರೋಪಕಾರ ಕಾರ್ಯವಾದರೂ ಜನರಲ್ ಫ್ರೇಂಕೋರವರದಕ್ಕೆ ಒಪ್ಪಿಗೆ ಕೊಟ್ಟಿರುವುದಿಲ್ಲ. ಈ ಸ್ತ್ರೀಯರು ಮಕ್ಕಳನ್ನೊಯ್ಯುವ ಹಡಗುಗಳನ್ನು ನಿರಾತಂಕವಾಗಿ ಬಿಡಲಾಗುವುದಿಲ್ಲೆಂದು ಜನರಲ್ ಫ್ರೇಂಕೋರವರು ತಿಳಿಸಿರುವರು. ಆದರೂ ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ಅದನ್ನು ಗಣ್ಯಮಾಡದೆ 4000 ಬಾಸ್ಕ್ ಸ್ತ್ರೀಯರು ಮತ್ತು ಮಕ್ಕಳು ಇದೇ ತಾ. ೯ರಲ್ಲಿ ಫ್ರಾನ್ಸಿಗೆ ಒಯ್ಯಲ್ಪಟ್ಟಿರುವರು. ಈ ಮಕ್ಕಳು ತಮ್ಮ ಹೆತ್ತವರನ್ನಗಲಿ ಹೋಗುವ ದೃಶ್ಯವು ಹೃದಯದ್ರಾವಕವಿದ್ದಿತು.

ಯುರೋಪಿಗೆ ಎಚ್ಚರಿಕೆ

ಸ್ಪೈನಿನ ಭೀಷಣ ಅಂತಃಕಲಹವು ಯುರೋಪಿನ ರಾಷ್ಟ್ರಗಳ ಕಣ್ಣು ತೆರೆದಿರುವುದು. ಯುದ್ಧ ಪ್ರಾರಂಭವಾದರೆ ವಿಮಾನಪಡೆಯು ಅನಿರೀಕ್ಷಿತವಾಗಿ ಸೇನಾ ಸಂಗ್ರಹವೇನೂ ಇಲ್ಲದ ಪಟ್ಟಣಗಳ ಮೇಲೆ ಹಠಾತ್ತಾಗಿ ಏರಿಹೋಗಿ ಬೋಂಬುಗಳ ಮಳೆಗರೆದು, ಅವುಗಳನ್ನು ಹೇಗೆ ನಾಶಪಡಿಸಬಹುದೆಂಬದನ್ನು ಬಾಸ್ಕ್ ಪ್ರಾಂತದ ಗೋರ್ನಿಕ ಪಟ್ಟಣದ ವಿನಾಶವು ಚಿತ್ರವೇಧಕವಾಗಿ ವಿದಿತಗೊಳಿಸಿರುವುದು. ಇಂತಹ ಭೀಷಣ ಕೃತ್ಯಗಳು ಇನ್ನು ಮುಂದೆ ನಡೆಯದಂತೆ ಮಾಡಬೇಕೆಂದು ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ಪ್ರಯತ್ನ ಮಾಡತೊಡಗಿರುವವು. ಗೋರ್ನಿಕವನ್ನು ಬಂಡಾಯಗಾರರು ಬೋಂಬೆಸೆದು ವಿನಾಶ ಮಾಡಿದ ಮಾದರಿಯು ಇನ್ನು ಮುಂದೆಯೂ ಅನುಸರಿಸಲ್ಪಟ್ಟರೆ ಯುರೋಪಿನ ಭವಿಷ್ಯವು ಭಯಂಕರವಾದುದೆಂದು ಇಂಗ್ಲೆಂಡಿನ ಪರರಾಷ್ಟ್ರಮಂತ್ರಿಗಳಾದ ಮಿ. ಈಡನರೇ ಪಾರ್ಲಿಮೆಂಟಿನಲ್ಲಿ ಒಪ್ಪಿರುವರು. ಸ್ಪೈನಿನಲ್ಲಿ ಇತ್ತಂಡದವರೂ ವಿಮಾನದ ಮೂಲಕ ಬೋಂಬೆಸೆತವನ್ನು ನಿಲ್ಲಿಸಬೇಕೆಂದು ಬ್ರಿಟಿಷ್ ಸರಕಾರವು ವಿನಂತಿ ಮಾಡಿಕೊಂಡಿರುವುದು.

ಗೋರ್ನಿಕವು ಭಸ್ಮರಾಶಿಯಾಗಿದೆ

ಬಾಸ್ಕ್ ಜನರ ಪುರಾತನ ಹಾಗೂ ಪವಿತ್ರ ಪಟ್ಟಣವಾದ ಗೋರ್ನಿಕವು ಇಂದೀಗ ಬಂಡಾಯಗಾರರ ಕಡೆಯ ಜರ್ಮನ್ ವೈಮಾನಿಕರ ಮೂರೂವರೆ ಘಂಟೆಗಳ ಎಡೆಬಿಡದ ಧಾಳಿಗೊಳಗಾಗಿ ಸಂಪೂರ್ಣ ಸುಟ್ಟುಹೋಕಿ ಭಸ್ಮರಾಶಿಯಾಗಿ ಬಿದ್ದಿರುವುದು. ಆಧುನಿಕ ಹೋರಾಟದ ಇತಿಹಾಸದಲ್ಲಿ ಇಷ್ಟೊಂದು ಭೀಕರ ವಿಮಾನಧಾಳಿಯು ಹಿಂದೆಂದೂ ನಡೆದಿಲ್ಲ. ನೂರಾರು ಮಂದಿ ನಾಗರಿಕರು ಸಜೀವವಾಗಿ ಸುಡಲ್ಪಟ್ಟಿರುವರು. ಕೆಲಮಂದಿ ಜೀವಂತವಾಗಿ ಉರುಳುವ ಕಟ್ಟಡಗಳಡಿಯಲ್ಲಿ ಹೂಳಲ್ಪಟ್ಟಿರುವರು. 1000 ಸ್ಫೋಟಕ ಬೋಂಬುಗಳೆಸೆಯಲ್ಪಟ್ಟ ಮೇಲೆ ಅವುಗಳ ಹಿಂದಿನಿಂದ ಕಿಚ್ಚೆಬ್ಬಿಸುವ ಬೋಂಬುಗಳನ್ನೆಸೆಯಲಾಯಿತು. ನೂರಾರು ಜನರು ಕಂಗೆಟ್ಟು ಪ್ರಾಣ ಬದುಕಿಸಿಕೊಳ್ಳಲು ಹತ್ತಿರದ ಬಯಲು ಪ್ರದೇಶಕ್ಕೋಡಿದಾಗ ಅವರನ್ನು ಬೆನ್ನಟ್ಟಿಹೋಗಿ, ಮಿಶಿನ್ ತೋಪುಗಳಿಂದ ಅವರ ಮೇಲೆ ಗುಂಡಿನ ಮಳೆ ಗರೆಯಲಾಯಿತು. ಒಟ್ಟು ಎಷ್ಟು ಮಂದಿ ಕೊಲ್ಲಲ್ಪಟ್ಟಿರುವರೆಂದು ಇನ್ನೂ ತಿಳಿದಿಲ್ಲ. ಆದರೆ ನೂರಾರು ಮಂದಿ ಗಂಡಸರು ಹೆಂಗಸರು ಮತ್ತು ಮಕ್ಕಳು ಸಜೀವವಾಗಿ ಸುಡಲ್ಪಟ್ಟಿರುವರು; ಸ್ಫೋಟಕ ಬೋಂಬುಗಳಿಂದ ಕೊಲ್ಲಲ್ಪಟ್ಟಿರುವರು. ವಿಮಾನಗಳು ತಮ್ಮ ಪೈಶಾಚಿಕ ವಿನಾಶಕ್ರಿಯೆಯನ್ನು ಕೊನೆಗೊಳಿಸಿದಾಗ ಇಡೀ ಗೋರ್ನಿಕ ಪಟ್ಟಣವು ಧಗಧಗ ಉರಿಯುತ್ತಿತ್ತು. ಹಳೆಯ ಶಿಲ್ಪಕಲೆಯಿಂದ ಅತಿ ಸುಂದರವಾದ ಇಗರ್ಜಿಗಳೆಲ್ಲಾ ಮಣ್ಣುಪಾಲಾಗಿರುವವು. ಬೋಂಬಿನ ಹಾವಳಿ ತಪ್ಪಿಸಲೆಂದು ಒಂದು ನೆಲಮಾಳಿಗೆಯಲ್ಲಿ ಅಡಗಿದ್ದ 60 ಮಂದಿ ಸ್ತ್ರೀಯರೂ ಸಜೀವವಾಗಿ ಸುಡಲ್ಪಟ್ಟಿರುವರು. ಇಡೀ ಗೋರ್ನಿಕ ಪಟ್ಟಣವೇ ಇಂದೀಗ ಇಲ್ಲದಾಗಿರುವುದು. ಇಂತಹ ಘೋರವಿನಾಶದಿಂದ ಇಡೀ ಲೋಕವೇ ಸ್ತಂಭಿತವಾಗಿರುವುದು. ಬಾಸ್ಕ್ ಜನರು ನಿಷ್ಠಾವಂತ ಕೆಥೊಲಿಕರು ಅವರಲ್ಲಿ ಕ್ರಾಂತಿಕಾರಕ ಕಮ್ಯೂನಿಷ್ಟರೇನೂ ಇಲ್ಲ. ಈ ಕೆಥೋಲಿಕರ ಅತ್ಯುಚ್ಚ ಧರ್ಮಾಧಿಕಾರಿಯೊಬ್ಬರು ಬಂಡಾಯಗಾರರ ಅಮಾನುಷ ಕೃತ್ಯಗಳನ್ನು ಕಣ್ಣಾರೆ ಕಂಡು ಆ ಕುರಿತು ಪೋಪ ಸಾಹೇಬರಿಗೆ ದೂರುಕೊಡ ಹೋಗಿರುವರು.

JUST RECEIVED

Look sharp! Hurry up!!

Provincial Autonomy

(BY K. T. SHAH)

Price Re. 1—8—0

(Postage extra)

Book your order for a copy today only.

NAVAYUGA OFFICE
UDIPI

The Canara Industrial Works

WANTED

Three respectable and reliable partners with business ablities to finance and conduct a Cashew Nut Factory to be started near Manipal, which is the best Cashew Nut centre and growing industrial centre.

For further particulars apply to:—

S. R. Patla,
Post **Udipi, (S. K.)**

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಅದ್ಭುತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧—೦—೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ತೋರ್ಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

ನೋಟೀಸು

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್
ಲಿಮಿಟೆಡ್, ಕುಂದಾಪುರ

ಈ ಬೇಂಕಿನಲ್ಲಿ ನಗಗಳ ಅಡವಿನಮೇಲೆ ಸಾಲ ಪಡೆದ ಈ ಕೆಳಗಿನ ಕುಳುವಾರುಗಳ ಬಾಬ್ತು ಬಡ್ಡಿ ಸಹಾ ಕೊಡದೆ ರಿಜಿಸ್ಟ್ರಿ ನೋಟೀಸು ಕೊಟ್ಟರೂ ಯಾವದೊಂದು ನಿವೃತ್ತಿಗೆ ಬಾರದಿರುವುದರಿಂದ ಸದ್ರಿ ನಗಗಳನ್ನು ಇದೇ ತಾ. 20-5-'37ನೇ ಗುರುವಾರ ಘಂಟೆ ೨ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ ಎಂಬ ಸಂಗತಿ ಸರ್ವರೂ ತಿಳಿದಿರತಕ್ಕದ್ದು.

ಲೋ. ನಂ.	ಅಡವಿಟ್ಟ ಅಸಾಮಿಯ ಹೆಸರು.	ಅಡವಿಟ್ಟ ಮೊಬಲಗು.
३१३	ರಾಮಚಂದ್ರ ಶೆಟ್ಟಿ, ಹಂಗ್ಲೂರು	25—0—0
३५६	ಕೆ. ಶಿವರಾವ್, ಪ್ರೊಪ್ರೈಟರ್, ರಾವ್ ಎಂಡ್ ರಾವ್, ಕುಂದಾಪುರ	25—0—0

ಹೆಚ್ಚಿನ ಸಂಗತಿ ಬೇಂಕಿನಲ್ಲಿ ವಿಚಾರಿಸಿ ತಿಳಿಯಬಹುದು.

ಕುಂದಾಪುರ, 5—5—1937

ಟಿ. ಜಿ. ಎಮ್. ಪೈ,
ಏಜೆಂಟ್.

ವಿವಾಹವು ಬೊಂಬೆಯಾಟವಲ್ಲ

Marriage the happiest bond of love might be:
If hands were only Joined when hearts agree.

ಲೇಖಕರು: ಮಾಲಿಕಾ ಚೆನ್ನ.

'ತರುಣರೇ! ನಿಮ್ಮ ಜೀವನವು ಸುಖಮಯವಾಗಬೇಕೆಂದು ನೀವು ಆಶಿಸುತ್ತಿದ್ದರೆ, ದಿನೇ ದಿನೇ ಅಧಃಪತನ ಹೊಂದುತ್ತಿರುವ ನಿಮ್ಮ ರಾಷ್ಟ್ರವು ಜಗತ್ತಿನ ಅನ್ಯ ರಾಷ್ಟ್ರಗಳಂತೆ ಪ್ರಗತಿ ಹೊಂದಬೇಕೆಂದು ನೀವು ಬಯಸುತ್ತಿದ್ದರೆ, ನೀವು ಸಮಾಜದ ಇಂಥ ಅಸಂಬದ್ಧ ಪ್ರಲಾಪವನ್ನು ಪ್ರತಿಭಟಿಸಲಿಕ್ಕೇ ಬೇಕು. ಜೀವನವನ್ನೇ ಮಣ್ಣುಗೂಡಿಸುವಂಥ ಪೂರ್ವಾಚಾರಗಳಲ್ಲಿ ನಮಗೆ ಕುರುಡು ನಂಬಿಕೆ ಏಕೆ? ನಮಗಿಂದು ಅಂಧಪ್ರಶ್ನೆಯು ಬೇಡ. ವಿಚಾರವರಿತು ಕಾರ್ಯ ಮಾಡಬೇಕು."

ವಿವಾಹವೆಂದರೆ ಎಲ್ಲಿಯೋ ಅನಾಮಧೇಯವಾಗಿ ಬೆಳೆದ ಸ್ತ್ರೀಮೂರ್ತಿಯನ್ನು ತಂದು ಅವಳಿಗೆ ಯಾವುದೋ ಅಂತಸ್ತಿನ ಇನ್ನೊಂದು ಪುರುಷವ್ಯಕ್ತಿಯಿಂದ ನೂರಾರು ಜನಗಳ ಮಧ್ಯೇ ಅರ್ಥವಾಗದ ಶ್ಲೋಕಗಳನ್ನು ಒಟಗುಟ್ಟುತ್ತಿರುವ ಧರ್ಮದರ್ಶಿಗಳ ಎದುರಿಗೆ ಬಲುವೆಯಿಂದಲೋ ಜುಲುಮೆಯಿಂದಲೋ ಕರಗ್ರಹಣ ಮಾಡಿಸಿ "ಇವಳು ನಿನ್ನ ಸತಿ; ಇವನು ನಿನ್ನ ಪತಿ" ಎಂದು ಏನನ್ನೂ ಅರಿಯದ ಆ ನವದಂಪತಿಗಳಿಗೆ ಹೇಳಿ ಅವರನ್ನು ಭಯಂಕರವಾದ ಸಂಸಾರದ ಗಾಢಾಂಧಕಾರದಲ್ಲಿ ತಳ್ಳಿಬಿಡುವದು. ಇದೇ ವಿವಾಹದ ಇಂದಿನ ಅರ್ಥವಾಗಿದೆ. ಆದರೆ ವಿವಾಹದಂಥ ಅರ್ಥಗರ್ಭಿತವಾದ ತತ್ವಗಳನ್ನೊಳಗೊಂಡ ಕಟ್ಟಳೆಯ ರಚನೆಯು ಇಷ್ಟು ಸುಲಭವಾಗಿದೆ ಎಂದು ನನಗನಿಸುವದಿಲ್ಲ. ಧರ್ಮದರ್ಶಿಗಳೆಂದು ಹೇಳಿಕೊಳ್ಳುತ್ತಿರುವ ಇಂದಿನ ಸ್ವಾರ್ಥಸಾಧಕರ ಮಂತ್ರಘೋಷಣೆಯ ಗಡಿಬಿಡಿಯ ಮಧ್ಯದಲ್ಲಿ ಅಪರಿಚಿತವಾದ ಎರಡು ವ್ಯಕ್ತಿಗಳ ಪಾಣಿಗ್ರಹಣ ಮಾಡಿಸುವುದೇ ವಿವಾಹದ ಸರ್ವಸ್ವವಲ್ಲ. ಅದರಲ್ಲಿ ಪವಿತ್ರವಾದ ಉದಾತ್ತವಾದ ಅನಂತ ಉದ್ದೇಶಗಳು ಅಡಕವಾಗಿವೆ. ಆ ತತ್ವಗಳನ್ನು ನಾವಿಂದು ವಿಚಾರದಿಂದ ತಿಳಿಯಬೇಕಾಗಿದೆ.

ವಿವಾಹವು ಜನಜೀವನದಲ್ಲಿ ಐಕ್ಯವನ್ನು ಸ್ಥಾಪಿಸಿ ಜಗಜ್ಜೀವನದ ಕುಡಿಯನ್ನು ಕೊನರಿಸುವುದಕ್ಕಾಗಿ ಹೇಳಲ್ಪಟ್ಟಿದೆಯೇ ವಿನಾ, ಮನಸ್ಸಿನ ಕ್ಷುಲ್ಲಕವಾದ ಕಾಮಲಾಲಸೆಯನ್ನು ತೃಪ್ತಿಪಡಿಸಿಕೊಳ್ಳುವ ಸಂಕುಚಿತ ಸಾಧನೆಯಾಗಿ ಹೇಳಲ್ಪಟ್ಟಿಲ್ಲ. ಒಂದು ಧರ್ಮಸಂಸ್ಥೆಯಿಂದ ನಿಯಮಬದ್ಧವಾದ ಹಲವು ನೀತಿ ಸೂತ್ರಗಳಿಗನುಸಾರವಾಗಿ ಸ್ತ್ರೀಪುರುಷರಲ್ಲಿ ಸ್ನೇಹವನ್ನು ಉಂಟುಮಾಡುವ ಕಟ್ಟಳೆಗೆ ವಿವಾಹವೆಂಬ ಹೆಸರು ಕೊಡಲ್ಪಟ್ಟಿದೆ. ಈ ಕಟ್ಟಳೆಯಿಂದ ಭಿನ್ನವಾದ ಎರಡು ವ್ಯಕ್ತಿಗಳು ಪರಸ್ಪರರ ಹಿತಕ್ಕಾಗಿ ಪ್ರೇರಿಸಲ್ಪಟ್ಟು ಜಗತ್ತಿನಲ್ಲಿ ಸಾರ್ವಜನಿಕ ನಿಮಿತ್ತಗಳನ್ನುಂಟುಮಾಡಿ ತಮ್ಮ ಅನುಭವದ ಸ್ನೇಹಮಯ ಮನೋವಿಕಾರಗಳ ಬೀಜಗಳನ್ನು ಜಗದ್ಹೃದಯದಲ್ಲಿ ಬಿತ್ತುವುದಕ್ಕೆ ಕಾರಣರಾಗುತ್ತಾರೆ ಇದೇ ದಾಂಪತ್ಯಧರ್ಮದ ನಿಜ ಸ್ವರೂಪ. ದಾಂಪತ್ಯ ಜೀವನದಲ್ಲಿ ಕಾಲಿಟ್ಟ ಮೇಲೆ ಯಾಂತ್ರಿಕ ರೀತಿಯಿಂದ ಪರಸ್ಪರ ಭೋಗಸೌಖ್ಯವನ್ನು ಅನುಭವಿಸುವುದೇ ಅವರ ಕರ್ತವ್ಯವಲ್ಲ. ಅವರು ಪರಸ್ಪರರ ಸುಖದುಃಖಗಳಲ್ಲಿ ಭಾಗ ವಹಿಸಬೇಕು. ಆನಂದ ವಿಪತ್ತುಗಳಲ್ಲಿ ಒಂದಾಗಬೇಕು. ಜೀವನದ ಪ್ರತಿನಿಮಿಷವೂ ಒಬ್ಬರನ್ನೊಬ್ಬರು ಸಹಕರಿಸಬೇಕು. ಈ ರೀತಿ ಸಹಕಾರದಿಂದ ನಾಗುವ ನಲ್ಮೆಯ ಸಂಸಾರಗಳೇ ದಾಂಪತ್ಯದ ಆದರ್ಶ. ಇದರಲ್ಲಿಯೇ ನಿಜವಾದ ದಾಂಪತ್ಯಪ್ರೇಮ (Conjugal love)ವಿದೆ. ಮಾನವ ಜೀವನದ ಸರ್ವ ಕಷ್ಟನಷ್ಟಗಳ ಪರಿಹಾರ ಕೇಂದ್ರವೆಂದರೆ ಪತಿಗೆ ಸತಿ, ಸತಿಗೆ ಪತಿ. ಈ ತತ್ವದ ಮೇಲೆಯೇ ಜನ್ಮಜೀವನದ ಅಸ್ತಿವಾರವು ಹಾಕಲ್ಪಟ್ಟಿದೆ. ಈ ಮಹಾ ತತ್ವಗಳ ತಿರುಳನ್ನು ಕಂಡು ಅದರಿಂದಾಗುವ ಆನಂದವನ್ನುಂಡು ಉಂಡ ಆನಂದವನ್ನು ಜಗತ್ತಿಗೆ ನೀಡುವುದೇ ದಾಂಪತ್ಯ ಜೀವನದ ಕರ್ತವ್ಯ ಧರ್ಮವಾಗಿದೆ.

ಇಷ್ಟಾದರೂ ಅವರ ಕಾರ್ಯವು ಮುಗಿದಂತಾಗಲಿಲ್ಲ. ದಂಪತಿಧರ್ಮದ ಭೋಗಸೌಖ್ಯದ ಫಲವಾಗಿ ಅವರು ಜಗತ್ತಿಗೆ ಹೊಸ ಜೀವಿಗಳನ್ನು ತರಬೇಕು. ತಂದ ಜೀವಿಗಳಲ್ಲಿ ನೀತಿಪುರಸ್ಸರವಾದ ರಸಾನಸಗಳನ್ನೂ ಮಾನವಸಂಬಂಧವಾದ ಜ್ಞಾನವನ್ನೂ ಉಂಟುಮಾಡಬೇಕು ನಿಸರ್ಗದ ತತ್ವಗಳನ್ನು ಅವರ ಹೃದಯದಲ್ಲಿ ಬಿತ್ತಬೇಕು. ಬಿತ್ತಿ ಅವರನ್ನು ಜಗತ್ತಿನ ಸರ್ವ ಜ್ಞಾನ ಮತ್ತು ಶಕ್ತಿಗಳ ಮೂರ್ತ ಸ್ವರೂಪರನ್ನಾಗಿ ಮಾಡಬೇಕು. ವಿಶ್ವದ ಮಹಾ ಮೇಧಾವಿಗಳನ್ನೂ, ಅಸಾಮಾನ್ಯ ಯೋಧರನ್ನೂ, ಅಪ್ರತಿಮ ವೀರರನ್ನೂ ಸಿದ್ಧಮಾಡುವವರು ತಂದೆ ತಾಯಿಗಳೇ ಆಗಿದ್ದಾರೆ. ಅವರಿಂದಲೇ ಪ್ರಪಂಚದ ಮಹಾ ವಿಭೂತಿಗಳು, ಸ್ವಾತಂತ್ರ್ಯವೀರರು, ರಾಜಕಾರಣಪಟುಗಳು ಜನ್ಮವೆತ್ತುವರು. ಇಡೀ ಮಾನವಜಾತಿಯ ವೈಯಕ್ತಿಕಪ್ರಗತಿಯು ಅವರನ್ನವಲಂಬಿಸಿದೆ. ಜಗತ್ತಿನ ಸರ್ವತೋಮುಖವಾದ ಅಭಿವೃದ್ಧಿಗೆ ಅವರೇ ಕಾರಣರಾಗಿದ್ದಾರೆ ವಿವಾಹವೆಂದರೆ ಇಷ್ಟೆಲ್ಲ ಘನತರವಾದ ಜವಾಬ್ದಾರಿಯನ್ನು ಹೊರುವ ಒಂದು ಮಹತ್ವದ ಸಂಘಟನೆಯಾಗಿದೆ.

ಹೀಗಿದ್ದು ವಿವಾಹವೆಂದರೆ ಮಕ್ಕಳಾಡುವ ಬೊಂಬೆಯ ಆಟದಷ್ಟು ಸುಲಭವೆಂದು ಭಾವಿಸಿ, ಎಳೆಮಕ್ಕಳನ್ನೂ ಜ್ಞಾನಾಜ್ಞಾನಗಳ ವಿವೇಚನೆ ಇಲ್ಲದವರನ್ನೂ ಇಂತಹ ಮಹತ್ಕಾರ್ಯಕ್ಕಾಗಿ ಪ್ರೇರಿಸಬಹುದೇ? ವಿವೇಕವು ಸರ್ವಥಾ ಕೂಡದು ಎಂದು ಹೇಳುತ್ತಿದ್ದರೂ ನಾವು ಯಾವುದೋ ಒಂದು ರೂಢಿಯ ದಾಸರಾಗಿ ಚಿಕ್ಕಮಕ್ಕಳನ್ನು ಕೂಡಾ ಇಂಥಾ ಅಸಾಧಾರಣ ವಿವಾಹ ಕಟ್ಟಳೆಯ ನಿರ್ಬಂಧಕ್ಕೆ ಒಳಪಡಿಸುತ್ತೇವೆ. ಆದರೆ ಯಾವನೊಬ್ಬ ವಿವೇಕಿಯಾದ ಮನುಷ್ಯನ ನಿಷ್ಪಕ್ಷಪಾತ ದೃಷ್ಟಿಗೆ ಈ ಕಾರ್ಯವು ತೀರ ನಿಸ್ಸಾರವಾದುದೆಂದು ಕಂಡು ಬರದಿರಲಾರದು. ವಿವಾಹವು ಹಸುಮಕ್ಕಳಾಡುವ ಬಾಲಲೀಲೆಯ ಒಂದು ದ್ಯೋತಕವಲ್ಲ. ಈಗ ಮಾಡಿ ಇನ್ನೊಂದು ಕ್ಷಣಕ್ಕೆ ಮರೆಯಾಗುವ ಮಿಂಚಿನ ಪರಿಯ ಕ್ಷಣಭಂಗುರವಾದ ಕಾರ್ಯವೂ ಅಲ್ಲ. ಇದು ಚಿರಸ್ಥಾಯಿಯಲ್ಲವಾದರೂ ಒಂದು ವ್ಯಕ್ತಿಯ ಜೀವನವು ಕೊನೆಗಾಣುವ ಪರ್ಯಂತವಾದರೂ ಸ್ಥಾಯಿಯಾದುದು. ಇದೊಂದು ಮನುಷ್ಯ ಅತಿ ಮಹತ್ವದ ಅನೇಕ ರಹಸ್ಯಗಳಿಂದ ತುಂಬಿರುವ ಜಟಿಲ ಸಮಸ್ಯೆ. ಈ ಸಮಸ್ಯೆಯನ್ನು ಬಹು ಎಚ್ಚರಿಕೆಯಿಂದ ತುಂಬಾ ಜವಾಬ್ದಾರಿಯಿಂದ ಪೂರ್ಣ ಮಾಡಬೇಕು. ಇಂಥಾ ಅಸಾಧಾರಣವಾದ ಜವಾಬ್ದಾರಿಯ ವೈವಾಹಿಕ ಜೀವನದ ಕಾರ್ಯಭಾರವನ್ನು ಸಮರ್ಥರ ಮೇಲೆಯೇ ಹೊರಿಸುವದು ಸಮಾಜದ ಕೆಲಸ. ಅದಕ್ಕಾಗಿ ಸಮಾಜವು ಜಾಗೃತವಾಗಬೇಕು. ಇಂದಿನ ವರೆಗೂ ತಾನು ಮಾಡಿದ ಘೋರ ಕೃತ್ಯಗಳ ಫಲವಾಗಿ ಲಕ್ಷಾಂತರ ಎಳೆಜೀವಿಗಳು ಅನುಭವಿಸುತ್ತಿರುವ ಗೋಳಿನ ಬಾಳನ್ನು ಕಣ್ದೆರೆದು ನೋಡಬೇಕು.

ಆಧುನಿಕ ಕವಿವರ್ಯರೊಬ್ಬರು 'ಜೊತೆಯಾನೆ ಜೀವರಿಗೆ ಸೃಷ್ಟಿಸಮ್ಮತ ವಿಧಿಯು' ಎಂದು ಹೇಳಿದ್ದಾರೆ. ನಿಜ! ಅದರಂತೆ ನಾವು ಜೊತೆಯನ್ನು ಪಡೆಯಲೇ ಬೇಕು. ಆದರೆ ಅದಕ್ಕೆ ಒಂದು ಮೇರೆ ಇದೆ. ಆದರೆ ಅದು ಹೇಗೆ? ಎಂಬ ಪ್ರಶ್ನೆ ಇದೆ. ಈ ಪ್ರಶ್ನೆಯನ್ನು ಬಿಡಿಸಿಯೇ ಮುಂದೆ ಸಾಗಬೇಕು. ವಿವಾಹದ ನಂತರ ಅವನೊಬ್ಬ ವಿಶ್ವಸಭೆಯ ಸದಸ್ಯನಾಗಿ ಅದರ ಸಾಮರ್ಥ್ಯವನ್ನು ಹೆಚ್ಚಿಸಬೇಕು.

ತನ್ನಲ್ಲಿಯ ಜ್ಞಾನ ಭಾಂಡಾರವನ್ನು ಬೆಳಸಿಕೊಳ್ಳಬೇಕು. ಈ ಎಲ್ಲ ಮಹತ್ಕಾರ್ಯಗಳನ್ನು ಮಾಡಲಿರುವದರಿಂದ ವಿವಾಹವನ್ನು ಮಾನವ ಜೀವಿತದಲ್ಲಿಯ ಅತಿ ಮುಖ್ಯ ಘಟನೆಯೆಂದು ಎಣಿಸಲಿಕ್ಕೆ ಬೇಕು. ಈ ಬಗ್ಗೆ ಆಧುನಿಕ ವಿಚಾರಗಳನ್ನು ನಿರೀಕ್ಷಿಸಿದರೆ ಅವು ತೀರ ಘಾತುಕವಾಗಿದೆ ಎಂದು ಕಂಡುಬರುತ್ತದೆ. ವಿವಾಹವೆಂದರೆ ಕೇವಲ ನಮ್ಮ ಭೋಗ್ಯ ವಸ್ತುವಾಗಿ ಒಬ್ಬ ಯುವತಿಯು ದೊರಕುತ್ತಾಳೆಂದೂ ಅವಳ ಸಂಗಡ ಸುಖವಾಗಿ ಕಾಲ ಕಳೆಯುತ್ತ ತನ್ನ ವಿಷಯಲಾಲಸೆಯನ್ನು ತೃಪ್ತಿಪಡಿಸಿಕೊಳ್ಳುವದೇ ತನ್ನ ಇತಿಕರ್ತವ್ಯವೆಂದೂ ಇಂದಿನ ಎಷ್ಟೋ ಜನರ ತಿಳುವಳಿಕೆಯಾಗಿದೆ ವಿವಾಹದಂಥ ಮಹಾ ಘಟನೆಯು ಇನ್ನೊಂದು ಕೀಳು ಬೆಲೆಗಿಳಿದಿರುವದು ತುಂಬಾ ಘಾತುಕವೆಂದು ಹೊಸದಾಗಿ ಹೇಳಬೇಕಾಗಿಲ್ಲ. ಈ ಭಾಗಕ್ಕೆ ಧರ್ಮಜ್ಞರೆಂದು ಹೇಳಿಸಿಕೊಳ್ಳುತ್ತಿರುವವರನೇಕರು "ಅಷ್ಟವರ್ಷಾತ್ ಭವೇತ್ಕನ್ಯಾ" ಎಂಬ ಯಾವುದೋ ಒಂದು ಸೂತ್ರವನ್ನು ಆಧಾರವಾಗಿ ಇಟ್ಟುಕೊಂಡು ಬಾಲ ವಿವಾಹವನ್ನು ಪ್ರಚಾರ ಮಾಡುತ್ತಲಿದ್ದಾರೆ. ಇಂಥ ಧರ್ಮಾಂಧರು ಈಗಲಾದರೂ ಕಣ್ತೆರೆಯಬೇಕು.

ನಮ್ಮ ಧರ್ಮಶಾಸ್ತ್ರಗಳಲ್ಲಿ ವಿವಾಹವೆಂದರೇನು? ಅದನ್ನು ಮಾಡುವ ಕಾಲ ಪಾತ್ರವು? ಎಂಬುದನ್ನು ಕುರಿತು ಹೇಳಲ್ಪಟ್ಟಿದೆ. ಅವುಗಳಿಗನುಸಾರ ವಿವಾಹವೆಂದರೆ 'ಪ್ರಾಯಸ್ಥ ಯುವಕ ಯುವತಿಯರ ಸಂಸ್ಕಾರ, ಮಕ್ಕಳಿಗೂ ಶಿಶುಗಳಿಗೂ ವಿವಾಹವಾಗಲಾರದು. ಅದರಂತೆ ರೋಗಿಗಳೂ, ವೃದ್ಧರೂ, ಮೂರ್ಖರೂ, ಉನ್ಮಾದಗ್ರಹಸ್ಥರೂ ವಿವಾಹಕ್ಕೆ ಅಯೋಗ್ಯರಾಗಿರುವರು. ವಿವಾಹವಾಗಲಿರುವವರು ಯೋಗ್ಯ ವಯಸ್ಕರಾಗಿರಬೇಕು. ವಿವಾಹದ ಮೇಲೆ ತಮ್ಮ ಮೇಲಿರುವ ಜವಾಬ್ದಾರಿಯನ್ನರಿತು ಅದರಂತೆ ನಡೆಯುವಷ್ಟು ಶಿಕ್ಷಿತರೂ ಬುದ್ಧಿವಂತರೂ ಆಗಿರಲಿಕ್ಕೆ ಬೇಕು. ವಿವಾಹ ಕಾಲದಲ್ಲಿ ವಧೂವರರು ಪರಸ್ಪರ ವಚನ ಪ್ರತಿಜ್ಞೆಗಳನ್ನು ಮಾಡಿ ವಿಶ್ವದ ಮಹತ್ತರವಾದ ಒಂದು ಕಾರ್ಯಭಾರವನ್ನು ಹೊರಲಿರುವದರಿಂದ ಚಿಕ್ಕ ಬಾಲ ಬಾಲೆಯರು ಅವುಗಳ ಮಹತ್ವವನ್ನು ಅರಿಯಲಾರರು. ಆದ್ದರಿಂದ ದಾಂಪತ್ಯ ಧರ್ಮದ ಕರ್ತವ್ಯ ಮಹತ್ವವನ್ನರಿಯದ ಹಸುಗೂಸುಗಳನ್ನೂ, ಮೂರ್ಖರನ್ನೂ ವಿವಾಹ

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1.82,100/-
***Head Office*: UDIPI.**
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ಸ್ಪೈನಿನ ಅಂತಃಕಲಹ

ಮೇಡ್ರಿಡ್ ಪಟ್ಟಣವೀಗ ಅಜೇಯವಾಗಿದೆ. ಬಾಸ್ಕ್ ಪ್ರಾಂತದ ಸಾವಿರಾರು ಮಕ್ಕಳು ಮತ್ತು ಸ್ತ್ರೀಯರಿಗೆ ರಕ್ಷಣೆ.

ಸ್ಪೈನಿಷ್ ಸರಕಾರದ ಕಡೆಯು ಬಾರ್ಸಿಲೋನದಲ್ಲಿ ಅನಾಯಕವಾದಿಗಳು ಸರಕಾರದ ವಿರೋಧವಾಗಿ ಬಂಡಾಯವೆಬ್ಬಿಸಿ, ಸುಮಾರು 100 ಮಂದಿ ಕೊಲ್ಲಲ್ಪಟ್ಟಿರುವರು. ಈಗ ಈ ಬಂಡಾಯವು ಅಡಗಿಸಲ್ಪಟ್ಟಿರುವುದು.

ದುರೆಂಗೊದಿಂದ ಸಮುದ್ರದ ವರೆಗಿನ ಸ್ಥಳವನ್ನು ಆವರಿಸಲೆತ್ನಿಸುವ ಬಂಡಾಯಗಾರರನ್ನು ಸರಕಾರದ ಸೈನಿಕರು ಜಯಿಸಿರುವರು. ಈ ಹೋರಾಟದ ನಂತರ 400 ಮಂದಿ ಇಟೆಲಿಯಾನರನ್ನು ಸರಕಾರದ ಕಡೆಯ ಸೈನಿಕರು ಹೊಳಿರುವರು. ಇದೇ ತಾ. ೭ರಲ್ಲಿ ಬಿಲ್ಬಾವೋದ ಸುತ್ತು ನಡೆದ ಹೋರಾಟಗಳಲ್ಲಿ ಒಟ್ಟು 2500 ಮಂದಿಯು ವರೆಗೆ ಹತರಾದರು. ಬೋವಿರ್ಲಿಯೋ ಎಂಬ ಚಿಕ್ಕ ಬಂದರವನ್ನು ಸುಮಾರು 2000 ಬಂಡಾಯಗಾರರು ವಶಮಾಡಿಕೊಳ್ಳಲೆತ್ನಿಸಿದಾಗ ಸರಕಾರದ ಸೈನಿಕರು ಅವರನ್ನು ಸಂಪೂರ್ಣವಾಗಿ ಮುತ್ತಿ ಅನೇಕರನ್ನು ಕೊಂದುಹಾಕಿದರು. ಕೆಲಮಂದಿ ಇಟೆಲಿಯಾನ್ಸೈನಿಕರು ಸಮುದ್ರಕ್ಕೆ ಹಾರಿ 2 ಮೈಲು ಈಜಾಡಿ ಆಚೆ ದಡ ಸೇರಲೆತ್ನಿಸಿದಾಗ ಸರಕಾರದ ಕಡೆಯ ಸೈನಿಕರು ಮಿಶನ್ ತೋಪುಗಳಿಂದ ಗುಂಡಿಸಿದು ಹಲವರನ್ನು ಕೊಂದುಹಾಕಿದರು. ಸಿಕ್ಕಿಬಿದ್ದ ಬಂಡಾಯಗಾರ ಸೈನಿಕರನ್ನೊಯ್ಯಲು ಕಳುಹಿಸಲ್ಪಟ್ಟ ದೋಣಿಗಳನ್ನು ಸರಕಾರದ ಕಡೆಯ ತೋಪುಗಳ ಮೂಲಕ ಹಿಂದಕ್ಕೆ ಓಡಿಸಲಾಯಿತು.

ಮೇಡ್ರಿಡ್ ಈಗ ಅಜೇಯವಾಗಿದೆ

ಹಿಂದೊಮ್ಮೆ ಮೇಡ್ರಿಡ್ ಪಟ್ಟಣವು ಬಂಡಾಯಗಾರರ ಕೈವಶವಾಗುವ ಸಂಭವವುಂಟಾದಾಗ ಸರಕಾರದ ಕಡೆಯ ವೀರಸೈನಿಕರು, ಪ್ರಾಣದ ಹಂಗು ತೊರೆದು 'ವೈರಿಗಳು ಮೇಡ್ರಿಡಿಗೆ ಪ್ರವೇಶಿಸಕೂಡದು' ಎಂದು ಬಂಡಾಯಗಾರರನ್ನು ತಡೆಗಟ್ಟಿದರು. ಈಗ ವೈರಿಗಳಿಗೆ ಮೇಡ್ರಿಡಿಗೆ ಪ್ರವೇಶಿಸಲು ಸಾಧ್ಯವೇ ಇಲ್ಲವೆಂಬಂತಾಗಿದೆ. ಮೇಡ್ರಿಡಿನ ಕೋಟೆ ಕಂದರಗಳಾಗ ಬಹಳ ಭದ್ರವಾಗಿವೆ. ಸೈನಿಕರ ಉತ್ಸಾಹವು ವಿಚಿತ್ರವಾಗಿವೆ. ಒಬ್ಬರಲ್ಲಾದರೂ ಸ್ವಲ್ಪವೂ ಅತೃಪ್ತಿಯಿರುವುದಿಲ್ಲ.

ಮಕ್ಕಳು ಫ್ರಾನ್ಸಿಗೆ ಕಳುಹಿಸಲ್ಪಟ್ಟರು

ಬಾಸ್ಕ್ ಪ್ರಾಂತದ ಬಿಲ್ಬಾವೋದಿಂದ ಸ್ತ್ರೀಯರು ಮಕ್ಕಳನ್ನು ಹೊರಗೆ ಕರೆದೊಯ್ದು ಆಶ್ರಯವೀಯುವ ಕೆಲಸವನ್ನು ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ಕೈಕೊಂಡಿರುವವು. ಇದು ಕೇವಲ ಪರೋಪಕಾರ ಕಾರ್ಯವಾದರೂ ಜನರಲ್ ಫ್ರೇಂಕೋರವರದಕ್ಕೆ ಒಪ್ಪಿಗೆ ಕೊಟ್ಟಿರುವುದಿಲ್ಲ. ಈ ಸ್ತ್ರೀಯರು ಮಕ್ಕಳನ್ನೊಯ್ಯುವ ಹಡಗುಗಳನ್ನು ನಿರಾತಂಕವಾಗಿ ಬಿಡಲಾಗುವುದಿಲ್ಲೆಂದು ಜನರಲ್ ಫ್ರೇಂಕೋರವರು ತಿಳಿಸಿರುವರು. ಆದರೂ ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ಅದನ್ನು ಗಣ್ಯಮಾಡದೆ 4000 ಬಾಸ್ಕ್ ಸ್ತ್ರೀಯರು ಮತ್ತು ಮಕ್ಕಳು ಇದೇ ತಾ. ೬ರಲ್ಲಿ ಫ್ರಾನ್ಸಿಗೆ ಒಯ್ಯಲ್ಪಟ್ಟಿರುವರು. ಈ ಮಕ್ಕಳು ತಮ್ಮ ಹೆತ್ತವರನ್ನಗಲಿ ಹೋಗುವ ದೃಶ್ಯವು ಹೃದಯಾದ್ರಾವಕವಿದ್ದಿತು.

ಯುರೋಪಿಗೆ ಎಚ್ಚರಿಕೆ

ಸ್ಪೈನಿನ ಭೀಷಣ ಅಂತಃಕಲಹವು ಯುರೋಪಿನ ರಾಷ್ಟ್ರಗಳ ಕಣ್ಣು ತೆರೆದಿರುವುದು. ಯುದ್ಧವಾರಂಭವಾದರೆ ವಿಮಾನಪಡೆಯು ಅನಿರೀಕ್ಷಿತವಾಗಿ ಸೇನಾ ಸಂಗ್ರಹವೇನೂ ಇಲ್ಲದ ಪಟ್ಟಣಗಳ ಮೇಲೆ ಹಠಾತ್ತಾಗಿ ಏರಿಹೋಗಿ ಬೋಂಬುಗಳ ಮಳೆಗರೆದು, ಅವುಗಳನ್ನು ಹೇಗೆ ನಾಶಪಡಿಸಬಹುದೆಂಬದನ್ನು ಬಾಸ್ಕ್ ಪ್ರಾಂತದ ಗೋರ್ನಿಕ ಪಟ್ಟಣದ ವಿನಾಶವು ಚಿತ್ತವೇಧಕವಾಗಿ ವಿದಿತಗೊಳಿಸಿರುವುದು. ಇಂತಹ ಭೀಷಣ ಕೃತ್ಯಗಳು ಇನ್ನು ಮುಂದೆ ನಡೆಯದಂತೆ ಮಾಡಬೇಕೆಂದು ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ಪ್ರಯತ್ನಮಾಡತೊಡಗಿರುವವು. ಗೋರ್ನಿಕವನ್ನು ಬಂಡಾಯಗಾರರು ಬೊಂಬೆಸೆದು ವಿನಾಶ ಮಾಡಿದ ಮಾದರಿಯು ಇನ್ನು ಮುಂದೆಯೂ ಅನುಸರಿಸಲ್ಪಟ್ಟರೆ ಯುರೋಪಿನ ಭವಿಷ್ಯವು ಭಯಂಕರವಾದುದೆಂದು ಇಂಗ್ಲೆಂಡಿನ ಪರರಾಷ್ಟ್ರಮಂತ್ರಿಗಳಾದ ಮಿ. ಏಡನರೇ ಪಾರ್ಲಿಮೆಂಟಿನಲ್ಲಿ ಒಪ್ಪಿರುವರು. ಸ್ಪೈನಿನಲ್ಲಿ ಇತ್ತಂಡದವರೂ ವಿಮಾನಮೂಲಕ ಬೋಂಬೆಸೆತವನ್ನೇ ನಿಲ್ಲಿಸಬೇಕೆಂದು ಬ್ರಿಟಿಷ್ ಸರಕಾರವು ವಿನಂತಿ ಮಾಡಿಕೊಂಡಿರುವುದು.

ಗೋರ್ನಿಕವು ಭಸ್ಮರಾಶಿಯಾಗಿದೆ

ಬಾಸ್ಕ್ ಜನರ ಪುರಾತನ ಹಾಗೂ ಪವಿತ್ರ ಪಟ್ಟಣವಾದ ಗೋರ್ನಿಕವು ಇಂದೀಗ ಬಂಡಾಯಗಾರರ ಕಡೆಯ ಜರ್ಮನ್ ವೈಮಾನಿಕರ ಮೂರೂವರೆ ಘಂಟೆಗಳ ಎಡೆಬಿಡದ ಧಾಳಿಗೊಳಗಾಗಿ ಸಂಪೂರ್ಣ ಸುಟ್ಟುಹಾಕಿ ಭಸ್ಮರಾಶಿಯಾಗಿ ಬಿದ್ದಿರುವುದು. ಆಧುನಿಕ ಹೋರಾಟದ ಇತಿಹಾಸದಲ್ಲಿ ಇಷ್ಟೊಂದು ಭೀಕರ ವಿಮಾನಧಾಳಿಯು ಹಿಂದೆಂದೂ ನಡೆದಿಲ್ಲ. ನೂರಾರು ಮಂದಿ ನಾಗರಿಕರು ಸಜೀವವಾಗಿ ಸುಡಲ್ಪಟ್ಟಿರುವರು. ಕೆಲಮಂದಿ ಜೀವಂತವಾಗಿ ಉರುಳುವ ಕಟ್ಟಡಗಳಡಿಯಲ್ಲಿ ಹೂಳಲ್ಪಟ್ಟಿರುವರು. 1000 ಸ್ಫೋಟಕ ಬೋಂಬುಗಳೆಸೆಯಲ್ಪಟ್ಟ ಮೇಲೆ ಅವುಗಳ ಹಿಂದಿನಿಂದ ಕಿಚ್ಚೆಬ್ಬಿಸುವ ಬೋಂಬುಗಳನ್ನೆಸೆಯಲಾಯಿತು. ನೂರಾರು ಜನರು ಕಂಗೆಟ್ಟು ಪ್ರಾಣ ಬದುಕಿಸಿಕೊಳ್ಳಲು ಹತ್ತಿರದ ಬಯಲು ಪ್ರದೇಶಕ್ಕೋಡಿದಾಗ ಅವರನ್ನು ಬೆನ್ನಟ್ಟಿಹೋಗಿ, ಮಿಶನ್ ತೋಪುಗಳಿಂದ ಅವರ ಮೇಲೆ ಗುಂಡಿನ ಮಳೆ ಗರೆಯಲಾಯಿತು. ಒಟ್ಟು ಎಷ್ಟು ಮಂದಿ ಕೊಲ್ಲಲ್ಪಟ್ಟಿರುವರೆಂದು ಇನ್ನೂ ತಿಳಿದಿಲ್ಲ. ಆದರೆ ನೂರಾರು ಮಂದಿ ಗಂಡಸರು ಹೆಂಗಸರು ಮತ್ತು ಮಕ್ಕಳು ಸಜೀವವಾಗಿ ಸುಡಲ್ಪಟ್ಟಿರುವರು; ಸ್ಫೋಟಕ ಬೋಂಬುಗಳಿಂದ ಕೊಲ್ಲಲ್ಪಟ್ಟಿರುವರು. ವಿಮಾನಗಳು ತಮ್ಮ ಪೈಶಾಚಿಕ ವಿನಾಶಕ್ರಿಯೆಯನ್ನು ಕೊನೆಗೊಳಿಸಿದಾಗ ಇಡೀ ಗೋರ್ನಿಕ ಪಟ್ಟಣವು ಧಗಧಗ ಉರಿಯುತ್ತಿತ್ತು. ಹಳೆಯ ಶಿಲ್ಪಕಲೆಯಿಂದ ಅತಿ ಸುಂದರವಾದ ಇಗರ್ಜಿಗಳೆಲ್ಲಾ ಮಣ್ಣುಪಾಲಾಗಿರುವವು. ಬೊಂಬಿನ ಹಾವಳಿ ತಪ್ಪಿಸಲೆಂದು ಒಂದು ನೆಲಮಾಳಿಗೆಯಲ್ಲಿ ಅಡಗಿದ್ದ 50 ಮಂದಿ ಸ್ತ್ರೀಯರೂ ಸಜೀವವಾಗಿ ಸುಡಲ್ಪಟ್ಟಿರುವರು. ಇಡೀ ಗೋರ್ನಿಕ ಪಟ್ಟಣವೇ ಇಂದೀಗ ಇಲ್ಲದಾಗಿರುವುದು. ಇಂತಹ ಘೋರವಿನಾಶದಿಂದ ಇಡೀ ಲೋಕವೇ ಸ್ತಂಭಿತವಾಗಿರುವುದು. ಬಾಸ್ಕ್ ಜನರು ನಿಷ್ಠಾವಂತ ಕೆಥೊಲಿಕರು ಅವರಲ್ಲಿ ಕ್ರಾಂತಿಕಾರಕ ಕಮ್ಯೂನಿಷ್ಟರೇನೂ ಇಲ್ಲ. ಈ ಕೆಥೋಲಿಕರ ಅತ್ಯುಚ್ಚ ಧರ್ಮಾಧಿಕಾರಿಯೊಬ್ಬರು ಬಂಡಾಯಗಾರರ ಅಮಾನುಷ ಕೃತ್ಯಗಳನ್ನು ಕಣ್ಣಾರೆ ಕಂಡು ಆ ಕುರಿತು ಪೋಪ ಸಾಹೇಬರಿಗೆ ದೂರುಕೊಡ ಹೋಗಿರುವರು.

JUST RECEIVED

Look sharp! Hurry up!!

Provincial Autonomy

(BY K. T. SHAH)

Price Re. 1—8—0

(Postage extra)

Book your order for a copy today only.

NAVAYUGA OFFICE

UDIPI

The Camara Industrial Works

WANTED

Three respectable and reliable partners with business ablities to finance and conduct a Cashew Nut Factory to be started near Manipal, which is the best Cashew Nut centre and growing industrial centre.

For further particulars apply to:—

S. R. Patla,

Post **Udipi, (S. K.)**

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ದಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಕೃತ ಗುಣ ಉಂಟಾಗುವಂತೆ ಮಾಡುತ್ತವೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:— (ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು, ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦. 'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೭೪. ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ನೋಟೀಸು

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಕುಂದಾಪುರ

ಈ ಬೇಂಕಿನಲ್ಲಿ ನಗಗಳ ಅಡವಿನಮೇಲೆ ಸಾಲ ಪಡೆದ ಈ ಕೆಳಗಿನ ಕುಳುವಾರುಗಳ ಬಾಬ್ತು ಬಡ್ಡಿ ಸಹಾ ಕೊಡದೆ ರಜಿಸ್ಟ್ರಿ ನೋಟೀಸು ಕೊಟ್ಟರೂ ಯಾವದೊಂದು ನಿವೃತ್ತಿಗೆ ಬಾರದಿರುವುದರಿಂದ ಸದ್ರಿ ನಗಗಳನ್ನು ಇದೇ ತಾ. 20-5-'37ನೇ ಗುರುವಾರ ಘಂಟೆ 2ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುತ್ತದೆ ಎಂಬ ಸಂಗತಿ ಸರ್ವರೂ ತಿಳಿದಿರತಕ್ಕದ್ದು.

ಲೋ. ನಂ.	ಅಡವಿಟ್ಟ ಅಸಾಮಿಯ ಹೆಸರು.	ಅಡವಿಟ್ಟ ಮೊಬಲಗು.
313	ರಾಮಚಂದ್ರ ಶೆಟ್ಟಿ, ಹಂಗ್ಲೂರು	25—0—0
336	ಕೆ. ಶಿವರಾವ್, ಪ್ರೊಪ್ರೈಟರ್, ರಾವ್ ಎಂಡ್ ರಾವ್, ಕುಂದಾಪುರ	25—0—0

ಹೆಚ್ಚಿನ ಸಂಗತಿ ಬೇಂಕಿನಲ್ಲಿ ವಿಚಾರಿಸಿ ತಿಳಿಯಬಹುದು.

ಕುಂದಾಪುರ, 5—5—1937

ಟಿ. ಜಿ. ಎಮ್. ಶೈ,
ಏಜೆಂಟ್.

ವಿವಾಹವು ಬೊಂಬೆಯಾಟವಲ್ಲ

Marriage the happiest bond of love might be,
If hands were only Joined when hearts agree.

ಲೇಖಕರು: ಮಾಲಿಕಾ ಚೆನ್ನ.

‘ತರುಣರೇ! ನಿಮ್ಮ ಜೀವನವು ಸುಖಮಯವಾಗಬೇಕೆಂದು ನೀವು ಆಶಿಸುತ್ತಿದ್ದರೆ, ದಿನೇ ದಿನೇ ಅಧಃಪತನ ಹೊಂದುತ್ತಿರುವ ನಿಮ್ಮ ರಾಷ್ಟ್ರವು ಜಗತ್ತಿನ ಅನ್ಯ ರಾಷ್ಟ್ರಗಳಂತೆ ಪ್ರಗತಿ ಹೊಂದಬೇಕೆಂದು ನೀವು ಬಯಸುತ್ತಿದ್ದರೆ, ನೀವು ಸಮಾಜದ ಇಂಥ ಅಸಂಬದ್ಧ ಪ್ರಲಾಪವನ್ನು ಪ್ರತಿಭಟಿಸಲಿಕ್ಕೇ ಬೇಕು. ಜೀವನವನ್ನೇ ಮಣ್ಣುಗೂಡಿಸುವಂಥ ಪೂರ್ವಾಚಾರಗಳಲ್ಲಿ ನಮಗೆ ಕುರುಡು ನಂಬಿಕೆ ಏಕೆ? ನಮಗಿಂದು ಅಂಥಪ್ರಶ್ನೆಯು ಬೇಡ ವಿಚಾರವರಿತು ಕಾರ್ಯ ಮಾಡಬೇಕು.”

ವಿವಾಹವೆಂದರೆ ಎಲ್ಲಿಯೋ ಅನಾಮಧೇಯವಾಗಿ ಬೆಳೆದ ಸ್ತ್ರೀಮೂರ್ತಿಯನ್ನು ತಂದು ಅವಳಿಗೆ ಯಾವುದೋ ಅಂತಸ್ಸಿನ ಇನ್ನೊಂದು ಪುರುಷವ್ಯಕ್ತಿಯಿಂದ ನೂರಾರು ಜನಗಳ ಮಧ್ಯೇ ಅರ್ಥವಾಗದ ಶ್ಲೋಕಗಳನ್ನು ಒಟಗುಟ್ಟುತ್ತಿರುವ ಧರ್ಮದರ್ಶಿಗಳ ಎದುರಿಗೆ ಬಲುಮೆಯಿಂದಲೋ ಜುಲುಮೆಯಿಂದಲೋ ಕರಗ್ರಹಣ ಮಾಡಿಸಿ “ಇವಳು ನಿನ್ನ ಸತಿ; ಇವನು ನಿನ್ನ ಪತಿ” ಎಂದು ಏನನ್ನೂ ಅರಿಯದ ಆ ನವದಂಪತಿಗಳಿಗೆ ಹೇಳಿ ಅವರನ್ನು ಭಯಂಕರವಾದ ಸಂಸಾರದ ಗಾಢಾಂಧಕಾರದಲ್ಲಿ ತಳ್ಳಿಬಿಡುವದು. ಇದೇ ವಿವಾಹದ ಇಂದಿನ ಅರ್ಥವಾಗಿದೆ. ಆದರೆ ವಿವಾಹದಂಥ ಅರ್ಥಗರ್ಭಿತವಾದ ತತ್ವಗಳನ್ನೊಳಗೊಂಡ ಕಟ್ಟಳೆಯ ರಚನೆಯು ಇಷ್ಟು ಸುಲಭವಾಗಿದೆ ಎಂದು ನನಗನಿಸುವುದಿಲ್ಲ. ಧರ್ಮದರ್ಶಿಗಳೆಂದು ಹೇಳಿಕೊಳ್ಳುತ್ತಿರುವ ಇಂದಿನ ಸ್ವಾರ್ಥಸಾಧಕರ ಮಂತ್ರಘೋಷಣೆಯ ಗಡಿಬಿಡಿಯ ಮಧ್ಯದಲ್ಲ ಅಪರಿಚಿತವಾದ ಎರಡು ವ್ಯಕ್ತಿಗಳ ಪಾಣಿಗ್ರಹಣ ಮಾಡಿಸುವುದೇ ವಿವಾಹದ ಸರ್ವಸ್ವವಲ್ಲ. ಅದರಲ್ಲಿ ಪವಿತ್ರವಾದ ಉದಾತ್ತವಾದ ಅನಂತ ಉದ್ದೇಶಗಳು ಅಡಕವಾಗಿವೆ, ಆ ತತ್ವಗಳನ್ನು ನಾವಿಂದು ವಿಚಾರದಿಂದ ತಿಳಿಯಬೇಕಾಗಿದೆ.

ವಿವಾಹವು ಜನಜೀವನದಲ್ಲಿ ಐಕ್ಯವನ್ನು ಸ್ಥಾಪಿಸಿ ಜಗಜ್ಜೀವನದ ಕುಡಿಯನ್ನು ಕೊನರಿಸುವುದಕ್ಕಾಗಿ ಹೇಳಲ್ಪಟ್ಟದೆಯೇ ವಿನಾ, ಮನಸ್ಸಿನ ಕ್ಷುಲ್ಲಕವಾದ ಕಾಮಲಾಲಸೆಯನ್ನು ತೃಪ್ತಿಪಡಿಸಿಕೊಳ್ಳುವ ಸಂಕುಚಿತ ಸಾಧನೆಯಾಗಿ ಹೇಳಲ್ಪಟ್ಟಿಲ್ಲ. ಒಂದು ಧರ್ಮಸಂಸ್ಥೆಯಿಂದ ನಿಯಮಬದ್ಧವಾದ ಹಲವು ನೀತಿ ಸೂತ್ರಗಳಿಗನುಸಾರವಾಗಿ ಸ್ತ್ರೀಪುರುಷರಲ್ಲಿ ಸ್ನೇಹವನ್ನು ಉಂಟುಮಾಡುವ ಕಟ್ಟಳೆಗೆ ವಿವಾಹವೆಂಬ ಹೆಸರು ಕೊಡಲ್ಪಟ್ಟಿದೆ. ಈ ಕಟ್ಟಳೆಯಿಂದ ಭಿನ್ನವಾದ ಎರಡು ವ್ಯಕ್ತಿಗಳು ಪರಸ್ಪರರ ಹಿತಕ್ಕಾಗಿ ಪ್ರೇರಿಸಲ್ಪಟ್ಟು ಜಗತ್ತಿನಲ್ಲಿ ಸಾರ್ವಜನಿಕ ನಿಮಿತ್ತಗಳನ್ನುಂಟುಮಾಡಿ ತಮ್ಮ ಅನುಭವದ ಸ್ನೇಹಮಯ ಮನೋವಿಕಾರಗಳ ಬೀಜಗಳನ್ನು ಜಗದ್ಹೃದಯದಲ್ಲಿ ಬಿತ್ತುವುದಕ್ಕೆ ಕಾರಣರಾಗುತ್ತಾರೆ. ಇದೇ ದಾಂಪತ್ಯಧರ್ಮದ ನಿಜ ಸ್ವರೂಪ. ದಾಂಪತ್ಯ ಜೀವನದಲ್ಲಿ ಕಾಲಿಟ್ಟ ಮೇಲೆ ಯಾಂತ್ರಿಕ ರೀತಿಯಿಂದ ಪರಸ್ಪರ ಭೋಗಸೌಖ್ಯವನ್ನು ಅನುಭವಿಸುವುದೇ ಅವರ ಕರ್ತವ್ಯವಲ್ಲ. ಅವರು ಪರಸ್ಪರರ ಸುಖದುಃಖಗಳಲ್ಲಿ ಭಾಗ ವಹಿಸಬೇಕು. ಆನಂದ ವಿಪತ್ತುಗಳಲ್ಲಿ ಒಂದಾಗಬೇಕು. ಜೀವನದ ಪ್ರತಿನಿಮಿಷವೂ ಒಬ್ಬರನ್ನೊಬ್ಬರು ಸಹಕರಿಸಬೇಕು. ಈ ರೀತಿ ಸಹಕಾರದಿಂದ ಸಾಗುವ ನಲ್ಮೆಯ ಸಂಸಾರಗಳೇ ದಾಂಪತ್ಯದ ಆದರ್ಶ. ಇದರಲ್ಲಿಯೇ ನಿಜವಾದ ದಾಂಪತ್ಯಪ್ರೇಮ (Conjugal love)ವಿದೆ. ಮಾನವ ಜೀವನದ ಸರ್ವ ಕಷ್ಟನಷ್ಟಗಳ ಪರಿಹಾರ ಕೇಂದ್ರವೆಂದರೆ ಪತಿಗೆ ಸತಿ, ಸತಿಗೆ ಪತಿ. ಈ ತತ್ವದ ಮೇಲೆಯೇ ಜನ್ಮಜೀವನದ ಅಸ್ತಿವಾರವು ಹಾಕಲ್ಪಟ್ಟಿದೆ. ಈ ಮಹಾ ತತ್ವಗಳ ತಿರುಳನ್ನು ಕಂಡು ಅದರಿಂದಾಗುವ ಆನಂದವನ್ನುಂಡು ಉಂಡ ಆನಂದವನ್ನು ಜಗತ್ತಿಗೆ ನೀಡುವುದೇ ದಾಂಪತ್ಯ ಜೀವನದ ಕರ್ತವ್ಯ ಧರ್ಮವಾಗಿದೆ.

ಇಷ್ಟಾದರೂ ಅವರ ಕಾರ್ಯವು ಮುಗಿದಂತಾಗಲಿಲ್ಲ. ದಂಪತಿಧರ್ಮದ ಭೋಗಸೌಖ್ಯದ ಫಲವಾಗಿ ಅವರು ಜಗತ್ತಿಗೆ ಹೊಸ ಜೀವಿಗಳನ್ನು ತರಬೇಕು. ತಂದ ಜೀವಿಗಳಲ್ಲಿ ನೀತಿಪುರಸ್ಸರವಾದ ರಸಾಯನಗಳನ್ನೂ ಮಾನವಸಂಬಂಧವಾದ ಜ್ಞಾನವನ್ನೂ ಉಂಟುಮಾಡಬೇಕು. ನಿಸರ್ಗದ ತತ್ವಗಳನ್ನು ಅವರ ಹೃದಯದಲ್ಲಿ ಬಿತ್ತಬೇಕು. ಬಿತ್ತಿ ಅವರನ್ನು ಜಗತ್ತಿನ ಸರ್ವಜ್ಞಾನ ಮತ್ತು ಶಕ್ತಿಗಳ ಮೂರ್ತ ಸ್ವರೂಪರನ್ನಾಗಿ ಮಾಡಬೇಕು. ವಿಶ್ವದ ಮಹಾಮೇಧಾವಿಗಳನ್ನೂ, ಅಸಾಮಾನ್ಯ ಯೋಧರನ್ನೂ, ಅಪ್ರತಿಮ ವೀರರನ್ನೂ ಸಿದ್ಧ ಮಾಡುವವರು ತಂದೆ ತಾಯಿಗಳೇ ಆಗಿದ್ದಾರೆ. ಅವರಿಂದಲೇ ಪ್ರಪಂಚದ ಮಹಾ ವಿಭೂತಿಗಳು, ಸ್ವಾತಂತ್ರ್ಯವೀರರು, ರಾಜಕಾರಣಪಟುಗಳು ಜನ್ಮವೆತ್ತುವರು. ಇದೀ ಮಾನವಜಾತಿಯ ವೈಯಕ್ತಿಕಪ್ರಗತಿಯು ಅವರನ್ನವಲಂಬಿಸಿದೆ. ಜಗತ್ತಿನ ಸರ್ವತೋಮುಖವಾದ ಅಭಿವೃದ್ಧಿಗೆ ಅವರೇ ಕಾರಣರಾಗಿದ್ದಾರೆ. ವಿವಾಹವೆಂದರೆ ಇಷ್ಟೆಲ್ಲ ಘನತರವಾದ ಜವಾಬ್ದಾರಿಯನ್ನು ಹೊರುವ ಒಂದು ಮಹತ್ವದ ಸಂಘಟನೆಯಾಗಿದೆ.

ಹೀಗಿದ್ದು ವಿವಾಹವೆಂದರೆ ಮಕ್ಕಳಾಡುವ ಬೊಂಬೆಯ ಆಟವಷ್ಟು ಸುಲಭವೆಂದು ಭಾವಿಸಿ, ಎಳೆಮಕ್ಕಳನ್ನೂ ಜ್ಞಾನಾಜ್ಞಾನಗಳ ವಿವೇಚನೆ ಇಲ್ಲದವರನ್ನೂ ಇಂತಹ ಮಹತ್ಕಾರ್ಯಕ್ಕಾಗಿ ಪ್ರೇರಿಸಬಹುದೇ? ವಿವೇಕವು ಸರ್ವಥಾ ಕೊಡದು ಎಂದು ಹೇಳುತ್ತಿದ್ದರೂ ನಾವು ಯಾವುದೋ ಒಂದು ರೂಢಿಯ ದಾಸರಾಗಿ ಚಿಕ್ಕ ಮಕ್ಕಳನ್ನು ಕೂಡಾ ಇಂಥಾ ಅಸಾಧಾರಣವಾದ ಕಟ್ಟಳೆಯ ನಿಬಂಧಕ್ಕೆ ಒಳಪಡಿಸುತ್ತೇವೆ. ಆದರೆ ಯಾವನೊಬ್ಬ ವಿವೇಕಿಯಾದ ಮನುಷ್ಯನ ನಿಷ್ಪಕ್ಷಪಾತ ದೃಷ್ಟಿಗೆ ಈ ಕಾರ್ಯವು ತೀರ ನಿಕೃಷ್ಟವಾದುದೆಂದು ಕಂಡು ಬರದಿರಲಾರದು. ವಿವಾಹವು ಹಸುಮಕ್ಕಳಾಡುವ ಬಾಲಲೀಲೆಯ ಒಂದು ದ್ಯೋತಕವಲ್ಲ. ಈಗ ಮಾಡಿ ಇನ್ನೊಂದು ಕ್ಷಣಕ್ಕೆ ಮರೆಯಾಗುವ ಮಿಂಚಿನ ಪರಿಯ ಕ್ಷಣಭಂಗುರವಾದ ಕಾರ್ಯವೂ ಅಲ್ಲ. ಇದು ಚಿರಸ್ಥಾಯಿಯಲ್ಲವಾದರೂ ಒಂದು ವ್ಯಕ್ತಿಯ ಜೀವನವು ಕೊನೆಗಾಣುವ ಪರ್ಯಂತವಾದರೂ ಸ್ಥಾಯಿಯಾದುದು. ಇದೊಂದು ಸಮಸ್ಯೆ ಅತಿ ಮಹತ್ವದ ಅನೇಕ ರಹಸ್ಯಗಳಿಂದ ತುಂಬಿರುವ ಜಟಿಲ ಸಮಸ್ಯೆ. ಈ ಸಮಸ್ಯೆಯನ್ನು ಬಹು ಎಚ್ಚರಿಕೆಯಿಂದ ತುಂಬಾ ಜವಾಬ್ದಾರಿಯಿಂದ ಪೂರ್ಣ ಮಾಡಬೇಕು. ಇಂಥಾ ಅಸಾಧಾರಣವಾದ ಜವಾಬ್ದಾರಿಯ ವೈವಾಹಿಕ ಜೀವನದ ಕಾರ್ಯಭಾರವನ್ನು ಸಮರ್ಥರ ಮೇಲೆಯೇ ಹೊರಿಸುವದು ಸಮಾಜದ ಕೆಲಸ. ಅದಕ್ಕಾಗಿ ಸಮಾಜವು ಜಾಗೃತವಾಗಬೇಕು. ಇಂದಿನ ವರೆಗೂ ತಾನು ಮಾಡಿದ ಘೋರ ಕೃತ್ಯಗಳ ಫಲವಾಗಿ ಲಕ್ಷಾಂತರ ಎಳೆಜೀವಿಗಳು ಅನುಭವಿಸುತ್ತಿರುವ ಗೋಳಿನ ಬಾಳನ್ನು ಕಣ್ದೆರೆದು ನೋಡಬೇಕು.

ಆಧುನಿಕ ಕವಿವರ್ಯರೊಬ್ಬರು ‘ಜೊತೆಯಾಸೆ ಜೀವರಿಗೆ ಸೃಷ್ಟಿಸಮ್ಮತ ವಿಧಿಯು’ ಎಂದು ಹೇಳಿದ್ದಾರೆ. ನಿಜ! ಅದರಂತೆ ನಾವು ಜೊತೆಯನ್ನು ಪಡೆಯಲೇ ಬೇಕು. ಆದರೆ ಅದಕ್ಕೆ ಒಂದು ಮೇರೆ ಇದೆ. ಆದರೆ ಅದು ಹೇಗೆ? ಎಂಬ ಪ್ರಶ್ನೆ ಇದೆ. ಈ ಪ್ರಶ್ನೆಯನ್ನು ಬಿಡಿಸಿಯೇ ಮುಂದೆ ಸಾಗಬೇಕು. ವಿವಾಹದ ನಂತರ ಅವನೊಬ್ಬ ವಿಶ್ವಸಭೆಯ ಸದಸ್ಯನಾಗಿ ಅದರ ಸಾಮರ್ಥ್ಯವನ್ನು ಹೆಚ್ಚಿಸಬೇಕು.

ತನ್ನಲ್ಲಿಯ ಜ್ಞಾನ ಭಾಂಡಾರವನ್ನು ಬೆಳಸಿಕೊಳ್ಳಬೇಕು. ಈ ಎಲ್ಲ ಮಹತ್ಕಾರ್ಯಗಳನ್ನು ಮಾಡಲಿರುವದರಿಂದ ವಿವಾಹವನ್ನು ಮಾನವ ಜೀವಿತದಲ್ಲಿಯ ಅತಿ ಮುಖ್ಯ ಘಟನೆಯೆಂದು ಎಣಿಸಲಿಕ್ಕೆ ಬೇಕು. ಈ ಬಗ್ಗೆ ಆಧುನಿಕ ವಿಚಾರಗಳನ್ನು ನಿರೀಕ್ಷಿಸಿದರೆ ಅವು ತೀರ ಘಾತುಕವಾಗಿದೆ ಎಂದು ಕಂಡುಬರುತ್ತದೆ. ವಿವಾಹವೆಂದರೆ ಕೇವಲ ನನ್ನ ಭೋಗ್ಯ ವಸ್ತುವಾಗಿ ಒಬ್ಬ ಯುವತಿಯು ದೊರಕುತ್ತಾಳೆಂದೂ ಅವಳ ಸಂಗಡ ಸುಖವಾಗಿ ಕಾಲ ಕಳೆಯುತ್ತ ತಮ್ಮ ವಿಷಯಲಾಲಸೆಯನ್ನು ತೃಪ್ತಿಪಡಿಸಿಕೊಳ್ಳುವದೇ ತಮ್ಮ ಇತಿಕರ್ತವ್ಯವೆಂದೂ ಇಂದಿನ ಎಷ್ಟೋ ಜನರ ತಿಳುವಳಿಕೆಯಾಗಿದೆ. ವಿವಾಹದಂಥ ಮಹತ್ಘಟನೆಯು ಇಷ್ಟೊಂದು ಕೀಳು ಬೆಲೆಗಿಳಿದಿರುವದು ತುಂಬಾ ಘಾತುಕವೆಂದು ಹೊಸದಾಗಿ ಹೇಳಬೇಕಾಗಿಲ್ಲ. ಈ ಭಾಗಕ್ಕೆ ಧರ್ಮಜ್ಞರೆಂದು ಹೇಳಿಸಿಕೊಳ್ಳುತ್ತಿರುವವರನೇಕರು “ಅಷ್ಟೇ ವರ್ಷಾತ್ ಭವೇತ್ಕನ್ಯಾ” ಎಂಬ ಯಾವುದೋ ಒಂದು ಸೂತ್ರವನ್ನು ಆಧಾರವಾಗಿ ಇಟ್ಟುಕೊಂಡು ಬಾಲ ವಿವಾಹವನ್ನು ಪ್ರಚಾರ ಮಾಡುತ್ತಲಿದ್ದಾರೆ. ಇಂಥ ಧರ್ಮಾಂಧರು ಈಗಲಾದರೂ ಕಣ್ತೆರೆಯಬೇಕು.

ನಮ್ಮ ಧರ್ಮಶಾಸ್ತ್ರಗಳಲ್ಲಿ ವಿವಾಹವೆಂದರೇನು? ಅದನ್ನು ಮಾಡುವ ಕಾಲ ಯಾವುದು? ಎಂಬುದನ್ನು ಕುರಿತು ಹೇಳಲ್ಪಟ್ಟಿದೆ. ಅವುಗಳಿಗನುಸಾರ ವಿವಾಹವೆಂದರೆ ‘ಪ್ರಾಯಸ್ಥ ಯುವಕ ಯುವತಿಯರ ಸಂಸ್ಕಾರ. ಮಕ್ಕಳಿಗೂ ಶಿಶುಗಳಿಗೂ ವಿವಾಹವಾಗಲಾರದು. ಅದರಂತೆ ರೋಗಿಗಳೂ, ವೃದ್ಧರೂ, ಮೂರ್ಖರೂ, ಉನ್ಮಾದಗ್ರಹಸ್ಥರೂ ವಿವಾಹಕ್ಕೆ ಅಯೋಗ್ಯರಾಗಿರುವರು. ವಿವಾಹವಾಗಲಿರುವವರು ಯೋಗ್ಯ ವಯಸ್ಕರಾಗಿರಬೇಕು. ವಿವಾಹದ ಮೇಲೆ ತಮ್ಮ ಮೇಲಿರುವ ಜವಾಬ್ದಾರಿಯನ್ನರಿತು ಅದರಂತೆ ನಡೆಯುವಷ್ಟು ಶಿಕ್ಷಿತರೂ ಬುದ್ಧಿವಂತರೂ ಆಗಿರಲಿಕ್ಕೆ ಬೇಕು. ವಿವಾಹ ಕಾಲದಲ್ಲಿ ವಧೂವರರು ಪರಸ್ಪರ ವಚನ ಪ್ರತಿಜ್ಞೆಗಳನ್ನು ಮಾಡಿ ವಿಶ್ವದ ಮಹತ್ತರವಾದ ಒಂದುಕಾರ್ಯಭಾರವನ್ನು ಹೊರಲಿರುವದರಿಂದ ಚಿಕ್ಕ ಬಾಲ ಬಾಲೆಯರು ಅವುಗಳ ಮಹತ್ವವನ್ನು ಅರಿಯಲಾರರು. ಆದ್ದರಿಂದ ದಾಂಪತ್ಯ ಧರ್ಮದ ಕರ್ತವ್ಯ ಮಹತ್ವವನ್ನರಿಯದ ಹಸುಗೂಸುಗಳನ್ನೂ, ಮೂರ್ಖರನ್ನೂ ವಿವಾಹ

THE

PANGAL NAYAK BANK

LIMITED.

ESTABLISHED 1920.

Paid up Capital: Rs. 1.82,100/-

Head Office: UDIPI.

Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ಬಂಧನದಿಂದ ಕಟ್ಟಿಹಾಕುವುದು ರಾಷ್ಟ್ರ ಘಾತುಕವೂ ಮಹಾ ಪಾಪವೂ ಆಗಿದೆ"

ವಿವಾಹವು ಚಿಕ್ಕ ವಯಸ್ಸಿನಲ್ಲಾದರೂ ಸಂವರ್ಕವು ಪ್ರಾಪ್ತವಯಸ್ಕರಾದ ಮೇಲೆಯೇ ಆಗುವದೆಂದು ಅಭಿಪ್ರಾಯ ಪಡುವ ಮಹಾಪುರುಷರೂ ನಮ್ಮಲ್ಲಿದ್ದಾರೆ. ಆದರೆ ವಿವಾಹ ಬಂಧನಕ್ಕೆ ಮೂಲಕಾರಣವಾದ ಅನುರಾಗದ ಅನುಭವವೇ ಇಲ್ಲದ ಆ ಚಿಕ್ಕ ಮಕ್ಕಳು ಪ್ರಾಪ್ತವಯಸ್ಕರಾಗುವಷ್ಟರಲ್ಲಿ ಪರಸ್ಪರ ಪ್ರೇಮರಹಿತರಾಗಿ ನೀರಸ ಬಾಳುವೆ ಸಾಗಿಸುವ ಪ್ರಸಂಗವು ಬರಬಹುದು; ಇಲ್ಲವೇ ವಿವಾಹ ವಿಚ್ಛೇದನವಾಗುವ ಸಂಭವವಾದರೂ ಇರಬಹುದು. ಇವೆರಡೂ ಬರಲಿಕ್ಕಿಲ್ಲೆಂದು ಕಲ್ಪಿಸಿದರೂ ಇನ್ನೊಂದು ಮಹಾ ಕಾರಣವಿದೆ. ಆವರ ವಯಸ್ಸಿನಲ್ಲಿ ಉರ್ವರಲ್ಲೊಬ್ಬರು ಕಾಲನಿಗೆ ತುತ್ತಾದರೆ . ಹೆಣ್ಣು ಸತ್ತರಂತೂ ಸರಿಯೇ! ಸಮಾಜವು ಪುರುಷನ ಪುನರ್ವಿವಾಹಕ್ಕೆ ಒಪ್ಪಣೆ ಕೊಡುತ್ತಿದೆ. ಆದರೆ ದುರ್ದೈವದಿಂದ ಗಂಡನೇ ಮೃತನಾದರೆ? ಆಯಿತು. ನಿರಪರಾಧಿಯಾದ ಆ ಎಳೆ ಗೂಸಿನ ಜೀವನವೇ ಕೊನೆಗೊಂಡಿತೆಂದು ಹೇಳಬೇಕು (ವೃದ್ಧ ವಿವಾಹವು ಕೂಡಾ ಇದೇ ರೀತಿಯ ಭಯಂಕರ ಪರಿಣಾಮದಲ್ಲಿ ಪರ್ಯವಸಾನ ಹೊಂದುವದೆಂಬುದನ್ನು ಮರೆಯಬಾರದು.) ಹೀಗೆ ವಿಚಾರ ವಿವೇಚನೆಗಳಿಲ್ಲದೇ ಕಾರ್ಯ ಮಾಡುತ್ತಿರುವ ರೂಢಿ ಮೂಢರೇ ನಮ್ಮ ಸಮಾಜದ ಪ್ರಗತಿಗೆ ಕಂಟಕರಾಗಿದ್ದಾರೆಂಬುದು ನಿಃಸಂದೇಹವಾದ ಮಾತು. ಇವರು ಎಲ್ಲಿಯವೋ ಒಂದೆರಡು ಸಂಸ್ಕೃತ ಶ್ಲೋಕಗಳನ್ನು ಆಧಾರವಾಗಿಟ್ಟುಕೊಂಡು ಅವುಗಳಿಗನುಸಾರವಾಗಿ ಶಾಸ್ತ್ರಗಳನ್ನು ಕೂಡಾ ಉಲ್ಲಂಘನ ಮಾಡಿ, ಎಷ್ಟು ಮಾತ್ರಕ್ಕೂ ಪ್ರೌಢವಯಸ್ಕರ ಪ್ರೇಮ ವಿವಾಹಕ್ಕೆ ಆಸ್ಪದಕೊಡದೆ ಎಷ್ಟೋ ಪ್ರೇಮ ಯುಗ್ಮಗಳ ಜೀವನವನ್ನೇ ಹಾಳುಮಾಡುತ್ತಿದ್ದಾರೆ

ತರುಣರೇ! ನಿಮ್ಮ ಜೀವನವು ಸುಖಮಯವಾಗಬೇಕೆಂದು ನೀವು ಆಶಿಸುತ್ತಿದ್ದರೆ ದಿನೇ ದಿನೇ ಅಧಃಪತನ ಹೊಂದುತ್ತಿರುವ ನಿಮ್ಮ ರಾಷ್ಟ್ರವು ಜಗತ್ತಿನ ಅನ್ಯ ರಾಷ್ಟ್ರಗಳಂತೆ ಪ್ರಗತಿಹೊಂದಬೇಕೆಂದು ನೀವು ಬಯಸುತ್ತಿದ್ದರೆ ನೀವು ಸಮಾಜದ ಇಂಥ ಅಸಂಬದ್ಧ ಪ್ರಲಾಪವನ್ನು ಪ್ರತಿಭಟಿಸಲಿಕ್ಕೆ ಬೇಕು ಜೀವನವನ್ನೇ ಮಣ್ಣುಗೂಡಿಸುವಂಥ ಪೂರ್ವಾಚಾರಗಳಲ್ಲಿನಮಗೆ ಕುರುಡು ನಂಬಿಕೆ ಏಕೇ ನಮಗಿಂದು ಅಂಧಶ್ರದ್ಧೆಯು ಬೇಡ ವಿಚಾರವಂತರು ಕಾರ್ಯಮಾಡಬೇಕು. "ನಾವೆಲ್ಲರೂ ಪರಮಾತ್ಮನ ಮಕ್ಕಳು. ವಿಶ್ವವೇ ನಮ್ಮ ಕುಟುಂಬ" ಎಂಬ ಉದಾತ್ತ ಭಾವನೆಯು ನಮ್ಮೆಲ್ಲರ ಹೃದಯಾಂತರಾಳದಲ್ಲಿ ದೃಢವಾಗಿ ನೆಲೆಗೊಳ್ಳಬೇಕು. ನಮ್ಮ ನಾಡಿನ ಅಭ್ಯುದಯಕ್ಕೆ ಕುಠಾರಪ್ರಾಯವಾದ ಬಾಲ್ಯವಿವಾಹದಂಥ ಪದ್ಧತಿಗಳನ್ನು ಪೂರ್ಣವಾಗಿ ತಡೆದು ಹಾಕಲಿಕ್ಕೆ ಬೇಕು ವಿವಾಹವಾಗಲಿರುವವರು ಪರಸ್ಪರ ಹಿತಾಹಿತಗಳನ್ನು ತಿಳಿಯುವಷ್ಟು ಬುದ್ಧಿವಂತರಾಗಿ ಬೆಳೆಯಲಿ. ಅಲ್ಲಿಯ ವರೆಗೂ ಅವರ ದಿನಗಳು ಪವಿತ್ರವಾದ ವಿದ್ಯೆಯ ಪಠನದಲ್ಲಿ ಕಳೆಯಲಿ. ಆ ಮೇಲೆ ವಧೂವರರ ಪೂರ್ಣ ಪಕ್ವಕಾಲದಲ್ಲಿ ಪರಸ್ಪರ ಅನುಮತಿಯಂತೆ ಪ್ರೇಮ ವಿವಾಹವನ್ನೇ ಜರುಗಿಸಲಿ.

ಎಷ್ಟೋ ಸಂದರ್ಭಗಳಲ್ಲಿ ಈ ರೀತಿಯ ವಿವಾಹಗಳಿಗೆ ಇಂದಿನ ವಿಶಿಷ್ಟ ಕಲ್ಪಿತ ಜಾತಿಯು (Creed) ವಿರೋಧಿಸಬಹುದು. ಒಂದು ಕಡೆ ಆ ಜಾತಿಯ ಪ್ರಚಾರಕರಾಯುದ ಮುಂದಾಳುಗಳು ಸ್ವಾರ್ಥಸಾಧನೆಯ ಶಂಖನಾದವನ್ನು ಮಾಡುತ್ತಿರಲಿ. ಅಂದ ಸಮಾಜ ಹುಂಜಗಳ ಕಾದಾಟಕ್ಕೆ ಒಲಿಬೀಳದೆ ನಾವು ಅನ್ವೇಷಣೆಯಿಂದ ಸತ್ಯಕಂಡಮಾರ್ಗವನ್ನೇ ಅನುಸರಿಸೋಣ. ಇದರ ಬಗ್ಗೆ ಪೂರ್ವಕಾಲದ ಯಾವ ಆಧಾರಗ್ರಂಥಗಳೂ ವಿರೋಧಾಭಿಪ್ರಾಯವನ್ನು ಸೂಚಿಸುವದಿಲ್ಲ ಅಂದಿನ ವಿವಾಹ ಪದ್ಧತಿಯನ್ನು ಅವಲೋಕಿಸಿದರೆ ಪ್ರಾಯಸ್ಥ ಯುವಕ ಯುವತಿಯರ ಪರಸ್ಪರ ಅನುಮತಿಯಂತೆ ಸ್ವಯಂವರ ರೂಪದಲ್ಲಿ ಬಳಕೆಯಲ್ಲಿದ್ದ ಪ್ರೇಮ ವಿವಾಹವು ಎಷ್ಟೋ ಕಾಲದ ವರೆಗೆ ಅಂತರ್ಜಾತಿಗಳಲ್ಲಿಯೂ ನಡೆಯುತ್ತಿತ್ತೆಂಬುದು ಅಂದಿನ ಸತ್ಯವಾದ ಚರಿತ್ರೆ ಇತಿಹಾಸಗಳಿಂದ ತಿಳಿದುಬರುತ್ತದೆ ಅದರಂತೆ ಜಗತ್ತಿನ ಇಂದಿನ ಇತಿಹಾಸದ ಸಿಂಹಾವಲೋಕನವನ್ನು ಮಾಡಿದರು ಕೂಡು ನಮ್ಮ ರಾಷ್ಟ್ರವನ್ನುಳಿದು ಯಾವತ್ತೂ ರಾಷ್ಟ್ರಗಳು ಈ ವಿಷಯದಲ್ಲಿ ಪೂರ್ಣ ಸುಧಾರಣೆಯನ್ನು ಹೊಂದಿವೆ ಎಂಬುದು ಕಂಡುಬರದಿರಲಾರದು

ಸರಸ್ವತಿ.

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ [ಸಂ ಸ]

ಬಸ್ಸು ಕಂಪೆನಿಗಳು ಸ್ಪೆಶ್ಯಲ್ ಸರ್ವೀಸುಗಳನ್ನು ನಿಲ್ಲಿಸಿರುವುದೇಕೆ?

ನಮ್ಮ ಜಿಲ್ಲೆಯ ಬಸ್ಸುಕಂಪನಿಗಳು ಹಿಂದೆಲ್ಲಾ ಜಾತ್ರೆ ಮುದ್ದೆಗಳಿಗೆ ಸಹಾ ಜನರಿಗೆ ಹೋಗಲನುಕೂಲವಾಗುವಂತೆ ಸ್ಪೆಶ್ಯಲ್ ಸರ್ವಿಸುಗಳನ್ನು ಚಾಲು ಮಾಡುತ್ತಿದ್ದವರು, ಈಗ ಸಾವಿರಗಟ್ಟಲೆ ಜನನಿಂದಣಿ ಕೂಡುವ ರಥೋತ್ಸವಾದಿ ಮಹೋತ್ಸವ ಸಮಯದಲ್ಲಿ ಸಹಾ ಸ್ಪೆಶ್ಯಲ್ ಸರ್ವೀಸುಗಳನ್ನು ಚಾಲು ಮಾಡದಿರುವದರಿಂದ ಜನರು ಹೆಚ್ಚಿನ ಕಷ್ಟನಷ್ಟವನ್ನು ಅನುಭವಿಸುತ್ತಿರುವರು

ಕೆಲವು ದಿನಗಳ ಹಿಂದೆ ಮುಲ್ಕಿ ಕವತಾರು ಜಾತ್ರೆಯ ಸಮಯದಲ್ಲಿ ಬಸ್ಸು ಕಂಪೆನಿಯವರು ಸ್ಪೆಶ್ಯಲ ಸರ್ವೀಸನ್ನು ಚಾಲು ಮಾಡದ ಕಾರಣ ಎಷ್ಟೋ ಮಂದಿ ಬಡ ಪ್ರಯಾಣಿಕರು ತಮ್ಮ ಪ್ರಯಾಣವನ್ನು ನಿಲ್ಲಿಸಬೇಕಾಯಿತು ಸಾಧಾರಣ ಇನ್ನೂರಕ್ಕೆ ಮೇಲ್ಪಟ್ಟು ಪ್ರಯಾಣಿಕರು ಚಾಲ್ತಿ ಬಸ್ಸುಗಳಲ್ಲಿ ಸ್ಥಳ ದೊರೆಕದೆ ಕಾಲ್ನಡೆಯಿಂದ ಪ್ರಯಾಣಮಾಡಿ ಬಹಳ ಕಷ್ಟಪಟ್ಟಿರುವರು ಹೇಳತೀರದು ಅದರಲ್ಲೂ ಹೆಂಗಸರು ಮಕ್ಕಳು ಬಿಸಿಲಿನ ಬೇಗೆಯಿಂದ ಬಳಲಿ ಬೆಂದಾದ ದೃಶ್ಯವು ಕರುಣಾಜನಕವಾಗಿತ್ತು, ಮುಂಚಿನ ವರ್ಷದಲ್ಲಿ ಒಂದಂತೆ ಬಸ್ಸುಗಳ ಅನುಕೂಲವಿದ್ದು ಈ ವರ್ಷ ಮಾತ್ರ ಆ ರೀತಿ ಬಸ್ಸು ಕಂಪನಿಯವರು ಸ್ಪೆಶಲ್ ಸರ್ವೀಸು ಬಿಡದ ಕಾರಣ ಬಸ್ಸು ಕಂಪೆನಿಗಳನ್ನು ಬಹಳವಾಗಿ ದೂರಿಕೊಂಡು ಹೋದರು

ಈ ವಿಷಯದಲ್ಲಿ ಬಸ್ಸು ಕಂಪೆನಿಗಳ ಅಧಿಕಾರಿಗಳಲ್ಲಿ ವಿಚಾರಿಸಿದ್ದಲ್ಲಿ ತಮಗೆ ಸ್ಪೆಶ್ಯಲ್‌ಸರ್ವೀಸುಗಳನ್ನು ಚಾಲು ಮಾಡುವರೆ ಮಾನ್ಯ ಜಿಲ್ಲಾ ಸುಪರಿಂಟೆಂಡೆಂಟ್ ಧೊರೆಗಳವರ ಅನುಮತಿ ದೊರೆಯುವುದಿಲ್ಲವೆಂದೂ, ಹಾಗೆ ಅನುಮತಿ ಇಲ್ಲದೆ ಸ್ಪೆಶ್ಯಲ್ ಸರ್ವೀಸು ಚಾಲು ಮಾಡಿದರೆ ತಾವು ಹೆಚ್ಚಿನ ನಷ್ಟಗಳಿಗೆ ಗುರಿಯಾಗಬೇಕಾಗುತ್ತದೆಂದೂ ಹೇಳಿದರು ಸ್ಪೆಶ್ಯಲು ಸರ್ವಿಸುಗಳನ್ನು ಚಾಲು ಮಾಡಿದರೆ ವಾಪಾಸು ಬರುವಾಗ ಖಾಲಿ ಬರಬೇಕಾದ ಕಾರಣ ಕಂಪೆನಿಗಳಿಗೆ ಸ್ಪೆಶ್ಯಲುಗಳಿಂದ ನಷ್ಟವುಂಟಾಗುತ್ತದೆಂದು ಇವರು ಸ್ಪೆಶ್ಯಲುಗಳನ್ನು ಚಾಲು ಮಾಡುವುದಿಲ್ಲವೋ? ಅಥವಾ ಜಿಲ್ಲಾ ಸುಪರಿಂಟೆಂಡೆಂಟ್ ಧೊರೆಗಳವರ ಅನುಮತಿ ದೊರೆಯದೆ ಇವರಿಗೆ ಸ್ಪೆಶ್ಯಲ್ ಸರ್ವೀಸುಗಳನ್ನು ಚಾಲು ಮಾಡಲು ಅಸಾಧ್ಯವೋ? ತಿಳಿಯದು

ಜಿಲ್ಲಾ ಸುಪರಿಂಟೆಂಡೆಂಟ್ ಧೊರೆಗಳವರು ಬಸ್ಸು ಕಂಪೆನಿಗಳಿಗೆ ಸ್ಪೆಶ್ಯಲ್ ಸರ್ವೀಸು ಚಾಲು ಮಾಡುವರೇ ಅನುಮತಿ ಕೊಡದಿರುವುದರಿಂದ (ಬಸ್ಸು ಕಂಪೆನಿಯವರು) ನಿರುಪಾಯರಾಗಿ ಸ್ಪೆಶ್ಯಲ್ ಸರ್ವೀಸುಗಳ ಹಂಬಲವನ್ನು ತೊರೆದು ಕುಳಿತಿರುವುದು ನಿಜವಾದರೆ ನಾವು ಬಸ್ಸು ಕಂಪೆನಿಗಳನ್ನು ದೂರಿ ಪ್ರಯೋಜನವಿರಲಾರದು ಮಾನ್ಯ ಜಿಲ್ಲಾ ಸುಪರಿಂಟೆಂಡೆಂಟ್ ಧೊರೆಗಳವರು ಪ್ರಯಾಣಿಕರ ಸೌಕರ್ಯದ ಕಡೆಗೆ ಹೆಚ್ಚಿನ ದೃಷ್ಟಿಯನ್ನಿಟ್ಟು ಇನ್ನು ಮೇಲೂ ಪ್ರಯಾಣಿಕರಿಗೆ ಇಂತಹ ಮಹೋತ್ಸವ ಕಾಲದಲ್ಲಿ ತೊಂದ್ರೆ, ಕಷ್ಟಗಳುಂಟಾಗದಂತೆ ಯೋಗ್ಯ ಏರ್ಪಾಡು ಮಾಡುವರಾಗಿ ನಂಬುತ್ತೇನೆ

ಓರ್ವ ಪ್ರಯಾಣಿಕ

FOR SALE

From
EZEKIEL SOANS
Retired Teacher
Near Manipal
POST UDIPI, S. K.

A decent building on a plot of nearly 1½ acres built according to the modern requirements and situated nearly 2 furlongs from Manipal, S. K. is for sale for Rs 2000. Intending purchasers are requested to communicate to theabove address.

(*Sd.*) Ezekiel Soans

ಬೇಕು

ವಿದ್ಯಾವತಿಯರೂ ರೂಪವತಿಯರೂ ಚೆನ್ನಾಗಿ ಹಾಡ ಬಲ್ಲವರೂ ಆದ ನಟಿಯರ ಬೇಕಾಗಿವೆ. ವಿವರಗಳಿಗೆ ಬರೆಯಿರಿ.

X
C/o "NAVAYUGA" Udipi

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ ೩—೦—೦ (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer **Dr D. N. JASANI,** Vittalbhai Patel Road, BOMBAY 4

ಹೆಂಡ್ತಿ ಗಂಡನಾದರೆ?

...ನೇ ನೋಟ

[ಮನೋಹರನು ತನ್ನ ಮನೆಯ ಎದುರಿನ ಅಗಲವಾದ ಪಡಸಾಲೆಯಲ್ಲಿ ಈಸಿಚೇರಿನಲ್ಲಿ ಒರಗಿ ಚಿಂತಾಮಗ್ನನಾಗಿರುವಾಗ ಅರವಿಂದನು ಪ್ರವೇಶಿಸಿ]

ಅರವಿಂದ—ಗುಡ್ ಈವ್ನಿಂಗ್ ಮನೋಹರ. ಹೌ ಗೋಸ್ ದಿ ವರ್ಲ್ಡ್ ವಿಥ್ ಯು? (ನಮಸ್ಕಾರ, ಮನೋಹರ, ಹ್ಯಾಗಿದ್ದಿ?) (ಮನೋಹರನು ಸುಮ್ಮನಿರುವನು. ಅರವಿಂದನು ಅವನ ಸಮೀಪ ಹೋಗಿ ಭುಜಹಿಡಿದು ಕುಲುಕಿ) ಏನು! ಏನಾಯಿತು ಮನೋಹರ? (ಮನೋಹರನು ಮತ್ತೂ ಸುಮ್ಮನಿರುವನು, ಆಗ ಒಳಗೇನೋ ಕೆಲಸಮಾಡುತ್ತಿದ್ದ ಮನೋರಮೆಯು ಹೊರಗೆಬಂದು ಬಾಗಿಲ ಬಳಿ ಸುಮ್ಮಗೆ ನಿಲ್ಲುವಳು.)

ಅರವಿಂದ—ಗುಡ್‌ಈವ್ನಿಂಗ್ ಮನೋರಮಾ! ಏನಿದು ನಿನ್ನ ಗಂಡನ ಅವಸ್ಥೆ? (ಮನೋರಮೆಯು ಮಾತಾಡಲೆತ್ತಿದ ತುಟಿಗಳನ್ನು ಬಿಗಿಹಿಡಿದು ಸುಮ್ಮನಿರುವಳು) ಇದರಲ್ಲಿಯೂ ಕಂಪೇನಿಯನ್ ಶಿಫ್ (ಸಹಚರ್ಯೆ) ಇದೆಯೇ? ಗಂಡ ಮಾತಾಡದಿದ್ರೆ ಹೆಂಡ್ತಿಯೂ ಮಾತಾಡಬಾರದೆ?

ಮನೋರಮೆ—ಪರ್ಮಿಶನ್ (ಅಪ್ಪಣೆ) ಬೇಕಲ್ಲ ತುಟಿಎತ್ತಲಿಕ್ಕೆ! ನಾನಿಲ್ಲಿ ಬಂದುದೇ ತಪ್ಪು ನೋಡಿ ಪರ್ಮಿಶನ್ ಇಲ್ಲದೆ. ನಿಮ್ಮ ಸ್ವರ ಕೇಳಿ ಧೈರ್ಯದಿಂದ ಬಂದುಬಿಟ್ಟೆ.

ಮನೋಹರ—ಹಾಗಾದರೆ ಯಾಕೆ ಬಂದದ್ದು? ಯಾಕೆ ಮಾತಾಡುವುದು ಪರ್ಮಿಶನ್ ಇಲ್ಲದೆ?

ಅರವಿಂದ—ಇದೇನು ಮನೋಹರ? ಪ್ರಾಯಶಃ ಇದು ಅವನ ಒಂದು ಕ್ಷಣದ ಡಿಕ್ಟೇಟರ್‌ಶಿಪ್ ಎಂದು ತೋರುತ್ತದೆ ಮನೋರಮಾ. ನೀನದಕ್ಕೆ ನೊಂದುಕೊಳ್ಳಬೇಡ. ಮನೋಹರ ಇದೇನು ಸಂಗತಿ?

ಮನೋಹರ—ಏನೆಂದು ಅವಳೊಡನೆಯೇ ಕೇಳು.

ಮನೋರಮೆ—ಓಹೋ! ನನ್ನೊಡನೆಯೇ ಕೇಳಬೇಕೇ? ಹಾಗಾದರೆ ಪರ್ಮಿಶನ್ ಸಿಕ್ಕಿತೆಂದಾಯಿತು, ಮಾತಾಡಲಿಕ್ಕೆ!

ಅರವಿಂದ—ಏನು, ಏನು ಸಂಗತಿಯಿದು ಮನೋರಮಾ? ಅವನಿಗೆ ಡಿಕ್ಟೇಟರ್‌ಶಿಪ್ ತಲೆಗೇರಿ ಬಿಟ್ಟಂತಿದೆ. ನೀನಾದರೂ ಹೇಳಬಾರದೆ ಮನೋರಮಾ?

ಮನೋರಮೆ—ಸಂಗತಿ ವಿಶೇಷವೇನಿಲ್ಲ ಮಿಸ್ಟರ್ ಅರವಿಂದ್. 99 ಪರ್ಸೆಂಟ್ (ನೂರಕ್ಕೆ 99 ಮಂದಿ) ಗಂಡಸರಿಗೆಲ್ಲಾ ಸರ್ವಸಾಮಾನ್ಯವಾದ ಸಂಗತಿಯೇ ಇದು.

ಅರವಿಂದ—ಏನದು ಮನೋರಮಾ?

ಮನೋರಮೆ—ನೀವೇನಾದರೂ ಎಕ್ಸೆಪ್ಶನ್ (ಅಪವಾದ) ಇರುವಿರೋ ಏನೋ ಅದಕ್ಕೆ. ಎಕ್ಸ್‌ಕ್ಯೂಸ್ ಮಿ ಮಿಸ್ಟರ್ ಅರವಿಂದ್ (ದಯಮಾಡಿ ಕ್ಷಮಿಸಿರಿ)

ಅರವಿಂದ—ಸಂಗತಿ ಏನೆಂದು ಮನಬಿಚ್ಚಿ ಹೇಳಬಾರದೆ ಮನೋರಮಾ?

ಮನೋರಮೆ—ಸಂಗತಿ ಇಷ್ಟೆ. ಹೆಂಡತಿಗೆ ಗಂಡನಂತೆಯೇ ಸ್ವಾತಂತ್ರ್ಯವಿದೆ, ಸಮಾನತೆಯಿದೆ, ಅವಳು ಗಂಡನ ಲೈಫ್ ಕಂಪೇನಿಯನ್, ಫ್ರೆಂಡ್ (ಜೀವನ ಸಂಗಾತಿ, ಗೆಳತಿ) ಅಂತ ದೊಡ್ಡ ದೊಡ್ಡ ಲೆಕ್ಚರು ಕೊಡುತ್ತಾರಲ್ಲ, ಅದೆಲ್ಲಾ ಠಕ್ಕು, ಕಣ್ಣುಕಟ್ಟು! ಎಡ್ಯುಕೇಟೆಡ್ (ವಿದ್ಯಾವಂತ) ಗಂಡಂದಿರ ಹೆಂಡಿರು ಎಡ್ಯುಕೇಟೆಡ್ ಸ್ಲೇವ್ಸ್, (ವಿದ್ಯಾವಂತ ದಾಸಿಯರು) ಅಷ್ಟೆ.

ಅರವಿಂದ—ಆದರೆ ನಿನ್ನ ಗಂಡ, 'ಕಂಪೇನಿಯನ್ ಶಿಪ್ ಆಫ್ ಸೋಲ್ ಮೈಂಡ್ ಎಂಡ್ ಬೋಡಿಯನ್ನು' (ಆತ್ಮ, ಮನ ಮತ್ತು ಶರೀರ ಸಹಚರ್ಯೆಯನ್ನು) ಆಶಿಸುವವ. ಪ್ರತ್ಯಕ್ಷ ಆಂಗ್ಲೇಯ ದಂಪತಿಗಳಂತಿದ್ದು ಸಮಾಜಕ್ಕೊಂದು ನೂತನಮಾದರಿ ಹಾಕಿಕೊಡಬೇಕೆಂದಿದ್ದವ ಇತರರ ಹಾಗೇನೂಮಾಡಲಿಕ್ಕಿಲ್ಲವ.

ಮನೋರಮೆ—ಹೌದೌದು! ನನಗೇನೇ ಆ ಕಂಪೇನಿಯನ್ ಶಿಪ್ (ಸಹಚರ್ಯೆ) ಸಾಕುಸಾಕಾಗಿ ಅದಕ್ಕಿಂತ ಅಡಿಗೆ ಮನೆ ಅಜ್ಞಿಯಾಗಿರುವುದೇ ಲೇಸೆಂದಿರುವೆನು.

ಅರವಿಂದ—ಹಾಗಂದ್ರೆ?

ಮನೋರಮೆ—ಹಾಗಂದ್ರೆ ಬಿಚ್ಚಿ ಹೇಳಬೇಕೇ ಮಿಸ್ಟರ್ ಅರವಿಂದ್? ಅವರು ಮೊದಲು ಹೆಂಡ್ತಿ ಗಂಡನಾಗಿದ್ದುದಂತೆ. ಈಗ ಗಂಡ ಹೆಂಡ್ತಿಯಾಗಲು ಪ್ರಯತ್ನಿಸುತ್ತಿದ್ದಾರೆ!

ಅರವಿಂದ—ಅಂದರೆ?

ಮನೋರಮೆ—ಅಂದರೆ ಮೊದಲವರು ಹೆಂಡ್ತಿತನದ ಗಂಡನಾಗಿದ್ದರಂತೆ. ಈಗ ಗಂಡಸುತನದ ಗಂಡನಾಗುತ್ತಿದ್ದಾರೆ.

ಅರವಿಂದ—ಅಂದರೆ ಅವನು ಈಗೇನು ಮಾಡುತ್ತಿದ್ದಾನೆ ಮನೋರಮಾ?

ಮನೋರಮೆ—ಏನೆಂದು ನಿಮಗೆ ಆರಂಭದಲ್ಲೇ ತಿಳಿಯಲಿಲ್ಲವೇ? ನಾನವರ ಪರ್ಮಿಶನ್ (ಅಪ್ಪಣೆ) ವಿನಹ ಏನೂ ಮಾಡಬಾರದೆಂದೇ ಅವರ ಕಟ್ಟಪ್ಪಣೆ

ಅರವಿಂದ—ಛೆ! ಛೆ! ಹಾಗೇನು ಮಾಡಲಿಕ್ಕಿಲ್ಲವ. ಅವನ ಕೆಲಸಮಯದ ಡಿಕ್ಟೇಟರ್ ಶಿಪ್ಪಾಗಿರಬೇಕದು. ಅವನಂತಹ ಸ್ತ್ರೀ ಸ್ವಾತಂತ್ರ್ಯದ ಸ್ಟ್ರೋಂಗ್ ಎಡ್ವಕೇಟ್ (ಪ್ರಬಲ ಪ್ರತಿಪಾದಕನು) ಈಗಿರಲಾರ, ಹಿಂದೆ ಹುಟ್ಟಿರಲಾರ, ಮುಂದೆ ಹುಟ್ಟಲಾರ.

ಮನೋರಮೆ—ಲೋಕದ ಇತರ ಸ್ತ್ರೀಯರ ಸ್ವಾತಂತ್ರ್ಯದ ಎಡ್ವಕೇಟ್! ತನ್ನ ಹೆಂಡ್ತೀದ್ದಲ್ಲ

ಅರವಿಂದ—ಏನು ಹೇಳುವೆ ಮನೋರಮಾ ನೀನು? ಸ್ತ್ರೀಯು ಪುರುಷನ ನಿಜವಾದ ಅರ್ಧಾಂಗಿಯಾಗಬೇಕೆಂದೇ ನಿನ್ನನ್ನವನು ಹುಡುಕಿ ಹುಡುಕಿ ಸ್ವಯಂವರವಾದುದು!

ಮನೋರಮೆ—ಹಾಗಾದರೆ ಕೇಳಿ ಸರಿಯಾಗಿ ಈ ಅರ್ಧಾಂಗಿತನವನ್ನು! ನಾನೆಲ್ಲಿಯಾದರೂ ಹೊರಗೆ ಹೋಗ್ಲಿಕ್ಕಿಲ್ಲ, ಯಾರೊಡನಾದ್ರೂ ಮಾತಾಡಲಿಕ್ಕಿಲ್ಲ. ಸಂಜೆ ಮಹಿಳಾಸಭೆಗೂ ಹೋಗಬಾರದಂತೆ. ತಿಂಗಳಾರಾಯಿತು ಅದರ ಸಬ್‌ಸ್ಕ್ರಿಪ್ಶನ್ (ಚಂದಾ) ಕೊಡದೆ. ನಿಮ್ಮೊಡನೆ ನಾನು ಅಂದು ರಸ್ತೆಯಲ್ಲಿ ನಿಂತು ಮಾತಾಡಿದುದೂ ತಪ್ಪಂತೆ. ಹೆಚ್ಚೇಕೆ ಆಫೀಸಿಗೆ ಹೋಗುವಾಗ ನನ್ನನ್ನು ಕೋಣೆಯೊಳಗೆ ಹಾಕಿ ಬೀಗ ಹಾಕಿಹೋಗುವ ಮಾತೂ ಬಂದದೆ. ಪುಣ್ಯದಿಂದ ಕಾರ್ಯರೂಪಕ್ಕೆ ಬರಲಿಲ್ಲದು ಇಷ್ಟರವರೆಗೆ!

ಅರವಿಂದ—ದಿಸ್ ಈಸ್ ಹೊರಿಬ್ಲ್ (ಇದು ಭಯಂಕರ ಸಂಗತಿ)

ಮನೋರಮೆ—ಇಷ್ಟೇ ಅಲ್ಲ, ಇನ್ನೂ ಉಂಟು ಕೇಳಿ ಪುರಾಣ. ಅವರು ಕ್ಲಬ್ಬಿನಿಂದ್ಲೋ ಸಿನೆಮದಿಂದ್ಲೋ ರಾತ್ರಿ 10-11 ಘಂಟೆಗೆ ಬರುವ ತನಕ ನಾನು ಊಟಮಾಡದೆ ಯಾವಾಗ ಚಿತ್ತೈಸುತ್ತದೆ ಸವಾರಿಯೆಂದು ಕಣ್ಣಿಗೆ ಎಣ್ಣೆ ಹಾಕಿಕೊಂಡು ಎಚ್ಚರದಿಂದ ನಿರೀಕ್ಷಿಸಿಕೊಂಡಿರಬೇಕಂತೆ. ಬೆಳಿಗ್ಗೆ 8-9 ಘಂಟೆಯ ವರೆಗೂ ಸವಾರಿ ಏಳದಿದ್ದರೆ ನಾನು ಏಳುವಾಗಲೆ, 'ರಂಗನಾಯಕ ರಾಜೀವಲೋಚನ ರಮಣ ನೀ ಬೆಳಗಾಯಿತೇಳೆನ್ನುತ' ಎಂದು ಗಟ್ಟಿಯಾಗಿ ಉದಯರಾಗ ಹಾಡಿ ಅವರನ್ನೆಬ್ಬಿಸಬೇಕಂತೆ!

ಅರವಿಂದ—ಇದು ಹಳೆಯ ಮರ್ಜಿಗಿಂತ್ಲೂ ಕಡೆಯಾಯಿತು.

ಮನೋರಮೆ—ಕೇಳಿ ಕೇಳಿ ತಾಳ್ಮೆಯಿಂದ; ಇಷ್ಟೇ ಅಲ್ಲ ಮತ್ತೂ ಉಂಟು. ಕಾಫಿ ತಿಂಡಿಯ ವಿಷಯ ಕ್ರಿಟಿಸಿಸಮ್ (ಟೀಕೆ) ಮಾಡದ ದಿನವಿಲ್ಲ. ಊಟದ ಕುರಿತು ಕಂಪ್ಲೈಂಟ್ (ದೂರು) ಪ್ರತಿ ದಿನ ಇದ್ದದ್ದೇ. ವಸ್ತ್ರ ಒಗೆದು ಇಸ್ತ್ರಿ ಹಾಕಿ ಮಡಿಮಾಡಿದ್ದು ಸ್ವಲ್ಪ ಹೆಚ್ಚುಕಡಿಮೆಯಾದರೆ ಬಂತುಕೋಪ! ನಾನೇನಾದರೂ ತಂದುಕೊಡ ಹೇಳಿದರೆ, 'ಹಣ ಎಲ್ಲಿಂದ, ನಿನ್ನಪ್ಪನ ಮನೆಯಿಂದ ಬರುತ್ತದೋ' ಎಂದಾಯಿತು. ಬಾಯ್ಬಿಟ್ಟು ಮಾತಾಡಿದರೆ ಎದುರಾಡುವುದೆಂದಾಯಿತು. ಮನೆಯಿಂದ ಹೊರಡಬೇಕೆಂದಾಯಿತು. 'ಯಾಕೆ ಬೇಕಪ್ಪ ನನಗೆ ಎಡ್ಯುಕೇಟೆಡ್ ವೈಫೂ ವೈಟ್ ಎಲಿಫೆಂಟೂ! (ವಿದ್ಯಾವಂತ ಹೆಂಡತಿ ಮನೆಮಾರಿ) ಎಲ್ಲಿಯಾದರೂ ಸಿಂಪ್ಲ್ ವಿಲ್ಲೇಜ್ ಗರ್ಲನ್ನು ಮೆರಿಯೇಜ್ ಆಗಿದ್ರೆ (ಸರಳ ಹಳ್ಳಿ ಹುಡುಗಿಯನ್ನು ಮದುವೆಮಾಡಿಕೊಂಡಿದ್ರೆ) ಸುಖವಾಗಿರಬಹುದಿತ್ತಲ್ಲಾ!' ಎಂಬುದೇ ಅನುನಿತ್ಯದ ಪಲ್ಲವಿ. ಗಂಡಸರು ಸಂಪಾದಿಸಿ ತಂದುಹಾಕುವವರು. ಹೆಂಡಿರ ಮೇಲೆ ಅಧಿಕಾರ ನಡಿಸುವುದು ಅವರ ಜನ್ಮಸಿದ್ಧ ಹಕ್ಕು. ಎಲ್ಲವನ್ನೂ ಸಹಿಸಿ ಪೆಟ್ಟುಕೊಟ್ಟರೂ ತಿಂದು ಅನುನಿತ್ಯ ಅನನ್ಯ ಭಕ್ತಿಯಿಂದ ಪತಿದೇವನ ಪೂಜೆನಡಿಸುವುದೇ ಪತ್ನಿಯ ಪವಿತ್ರಧರ್ಮ!

ಅರವಿಂದ—ಛೆ! ಪೆಟ್ಟು ಕೂಡಾ ಕೊಟ್ಟಿರುವನೆ ಮನೋರಮ ನಿನಗಾತ?

ಮನೋರಮೆ—ಒಂದೆರಡು ಸಲವಲ್ಲ.

ಅರವಿಂದ—(ಕ್ರುದ್ಧನಾಗಿ) ಏನು ಮೂರ್ಖತನ ನಿನ್ನದಿದು ಮನೋಹರ? (ಮನೋಹರ ಮೌನವಾಗಿರುವನು.)

ಮನೋರಮೆ—ಘಂಟೆ ಮೂರಾಯಿತು, ಹೀಗೆ ಕೂತು ತಪಸ್ಸುಮಾಡ್ಲಿಕ್ಕೆ ತೊಡಗಿ. ಏನೋ ನೂತನ ಸಿದ್ಧಿಯಿರಬೇಕು ಇಂದು.

ಅರವಿಂದ—(ಮನೋಹರನನ್ನು ರಟ್ಟೆ ಹಿಡಿದೆಬ್ಬಿಸಿ) ಏನು? ಏನಿದು ಮನೋಹರ ಏನಾಗಿದೆ ನಿನಗೆ?

ಮನೋಹರ—ಆಗಿರುವುದೇನು? ನನ್ನ ಅದೃಷ್ಟ ಅರವಿಂದ! ನನ್ನ ಲಿಪಿ!

ಅರವಿಂದ—ನಿನ್ನ ನಿನ್ನ ಅದೃಷ್ಟ! ನಿನ್ನ ಲಿಪಿ! ಐ ಎಮ್ ದಿ ಕೆಪ್ಟನ್ ಅಫ್ ಮೈ ಸೋಲ್, ಐ ಎಮ್ ದಿ ಮಾಸ್ಟರ್ ಅಫ್ ಮೈ ಫೇಟ್ (ನಾನು ನನ್ನ ಆತ್ಮನಾವೆಯ ಕರ್ಣಧಾರ. ನನ್ನ ಅದೃಷ್ಟದ ನಾಯಕ) ಎನ್ನುತ್ತಿದ್ದೆಯಲ್ಲ?

ಮನೋಹರ—ನೀನು ಎಷ್ಟು ಬೇಕಾದರೂ ತಮಾಷೆಮಾಡು ಅರವಿಂದ! ನನ್ನ ಅದೃಷ್ಟ, ಏನು ಮಾಡುವುದು!

ಅರವಿಂದ—ಏನೋ ನಿನ್ನ ಅದೃಷ್ಟ? ಏನಾಯಿತು ಹೇಳಬಾರದೇ?

ಮನೋಹರ—ನನ್ನ ಕೆಲಸಹೋಯಿತು ಅರವಿಂದ (ನಿಟ್ಟುಸಿರಿಡುವನು)

ಮನೋರಮೆ—ಓಹೋ! ಕೆಲಸಹೋಯಿತೇ? ಅದು ನನಗೆ ಗೊತ್ತು! ದಿನ ಇಡೀ ಕ್ಲಬ್ಬಿನಲ್ಲಿ ಬ್ರಿಜ್ಜೋ, ಪೋಕರೋ (ಇಸ್ಪೀಟು) ಆಡುತ್ತಿದ್ದರೆ ಕೆಲಸ ಉಳಿಯುವುದೆಂದರೆ ಹ್ಯಾಗೆ?

(ಆವಾಗ ಹುಡುಗ ಪ್ರವೇಶಿಸಿ)

ಹುಡುಗ—ಅಮ್ಮಾ ಅನ್ನದ ಪಾತ್ರೆಯಿಂದ ನೀರು ಉಕ್ಕಿ ಒಲೆಗೆ ಬಿದ್ದು ಬೆಂಕಿ ನೊಂದಿಹೋಯಿತು. ಅನ್ನ ಬೆಂದಿತೋ ನೋಡಿ ಅಮ್ಮ ಸ್ವಲ್ಪ ಒಳಗೆ ಬನ್ನಿ.

ಮನೋರಮೆ—ನೋಡಿ, ನೋಡಿ ನಮ್ಮ ಹಣೆಬರಹಕ್ಕೆ ಸಿಕ್ಕಿದ ಹುಡುಗನೊಬ್ಬ! ಎಷ್ಟು ಹೇಳಿದರೂ ಅನ್ನ ಬೆಂದಿತೋ ನೋಡಿ ಬಾಗಿಸಲಿಕ್ಕೆ ಬರುವುದಿಲ್ಲ ನೋಡಿ ಇವನಿಗೆ! (ಹುಡುಗನ ಕಡೆಗೆ ತಿರುಗಿ ಅವನ ಕಿವಿ ಹಿಂಡಿ) ನೀನೇನು ಇನ್ನೂ ಹಲ್ಲುಬಾರದ ಮಗುವೋ ಮೂರ್ಖ? ಬೇತಾಳನ ಹಾಗೆ ಬೆಳೆದಿದ್ದೀಯಲ್ಲ ಯಾಕೆ? (ಭರದಿಂದ ಒಳಗೆ ಸರಿಯುವಳು)

ಮನೋಹರ—ನೋಡಿದೆಯಾ ಎಡ್ಯುಕೇಟೆಡ್ ವೈಫಿನ (ವಿದ್ಯಾವತಿ ಹೆಂಡತಿಯ) ರೀತಿ! ಹೀಗೆ ಮಾಡಿದ್ರೆ ಯಾರು ಕೆಲಸಕ್ಕೆ ನಿಂತಾರು ಈ ಮನೆಯಲ್ಲಿ? ಅವನೊಬ್ಬ ಬರೇ ಡಫ್ಫರ್ (ಬುದ್ಧಿ ಶೂನ್ಯ) ಆದುದಕ್ಕಾಯಿತು! ಸ್ವಲ್ಪ ಬ್ರೈನ್ (ಬುದ್ಧಿ) ಇದ್ದರೆ ಯಾವಾಗ ಓಡಿಬಿಡುತ್ತಿದ್ದ!

ಅರವಿಂದ—ಅದಂತಿರಲಿ, ನಿನ್ನ ಕೆಲಸಹೋದುದು ಹ್ಯಾಗೆ ಮನೋಹರ?

ಮನೋಹರ—ಈಗಿನ ನಮ್ಮ ಮೆನೇಜರನಿಗೂ ನನಗೂ ಸರಿಹೋಗುವುದಿಲ್ಲ. ಅವನಿಗೆ ನನ್ನ ಮೇಲೆ ಮೊದಲಿಂದಲೂ ಕಣ್ಣಿತ್ತು. ಆದರೆ ನಾನು ಕೆಲಸ ಸರಿಮಾಡುತ್ತಿದ್ದೆ. ಮದುವೆಯಾದ ಮೇಲೆ ಕೆಲಸ ಚೆನ್ನಾಗಿ ಮಾಡ್ಲಿಕ್ಕಾಗಲಿಲ್ಲ ನನಗೆ ಇವಳ ಕಾಟದಿಂದ. ಅವನಿಗೆ ಬೇಕಾದ ಕಾರಣದೊರೆಯಿತು.

ಅರವಿಂದ—ಇನ್ನೇನು ಮಾಡುವೆ?

ಮನೋಹರ—ಇನ್ನೇನು ಮಾಡುವುದು? ಬಿಕ್ಕೆ ಬೇಡುವುದು ಈ ಎಡ್ಯುಕೇಟೆಡ್ ವೈಫನ್ನು (ವಿದ್ಯಾವಂತೆ ಹೆಂಡತಿಯನ್ನು) ಕುತ್ತಿಗೆಗೆ ಕಟ್ಟಿಕೊಂಡು!

ಅರವಿಂದ—ಯಾಕೆ ಹಾಗೆನ್ನುವೆ ಮನೋಹರ!

ಮನೋಹರ—ಮತ್ತೇನೆನ್ನಲಿ ಅರವಿಂದ? ಈ ಮಾರಿಯನ್ನು ಕಟ್ಟಿಕೊಂಡು ನಾನಿನ್ನೇನು ಮಾಡುವುದು? ಏನು ನನ್ನ ಗತಿಯಿನ್ನು? (ಕಣ್ಣೀರಿಡುವನು)

ಅರವಿಂದ—ನಾನು ಮೊದಲೇ ಹೇಳಿದ್ದೆ ನಿನಗೆ, 'ಕೆಲಸದಿಂದ ಬಿಡಿಸಬೇಡ ನಿನ್ನ ಹೆಂಡ್ತಿಯನ್ನು, ಸಂದರ್ಭ ಹ್ಯಾಗೆ ನಿಲ್ಲುವದೆಂದು ಹೇಳಬರುವುದಿಲ್ಲ' ಎಂದು. ನೀನು ಕೇಳಲಿಲ್ಲ. ಅವಳು ಕೆಲಸದಲ್ಲಿರುವುದು ನಿನ್ನ ಡಿಗ್ನಿಟಿಗೆ (ಗೌರವಕ್ಕೆ) ಕೊರತೆಯೆಂದೆ. ಈಗೇನು ಮಾಡುವೆ?

ಮನೋಹರ—ಏನು ಮಾಡಲಿ ಅರವಿಂದ?

ಅರವಿಂದ—ಮಾಡುವುದೇನು? ಕೆನರಾ ಗರ್ಲ್ಸ್ ಸ್ಕೂಲಿಗೊಬ್ಬಳು ಮಿಸ್ಟ್ರೆಸ್ ಬೇಕಂತೆ, ಮನೋರಮೆಯನ್ನು ನೇಮಿಸುವಂತೆ ನಾನು ಮೆನೇಜರರೊಡನೆ ಮಾತಾಡಿ ಪ್ರಯತ್ನಿಸುವೆನು. ನನಗವರ ಪರಿಚಯವಿದೆ.

ಮನೋಹರ—ಆಯ್ತು ಅರವಿಂದ, ಹುಡುಗಿಯರ ಶಾಲೆಯಲ್ಲಿ ಮಿಸ್ಟ್ರೆಸ್ ಆಗಿರುವುದಕ್ಕೇನೂ ನನ್ನ ಅಡ್ಡಿಯಿಲ್ಲ. ಇಲ್ಲನಾದರೆ ಬರುವ ತಿಂಗಳ ಎಕ್ಸ್‌ಪೆನ್ಸಿಗೆ (ವೆಚ್ಚಕ್ಕೆ) ಗತಿಯಿಲ್ಲ.

ಅರವಿಂದ—ಆಯ್ತು ಇಂದೇ ಮಾತಾಡುತ್ತೇನೆ. ನನಗೆ ಸ್ವಲ್ಪ ಬೇರೆ ಕೆಲಸವಿದೆ. ನಾಳೆ ಬರುತ್ತೇನೆ. ಗುಡ್ ಈವ್ನಿಂಗ್. (ನಮಸ್ಕಾರ) ಮನೋರಮೆಯೊಡನೆ ನಾಳೆ ಬರುವೆನೆಂದು ಹೇಳು. (ಹೋಗುವನು)

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ ...	3 - 6	3—10	3— 0	3— 2
ಮಸ್ಕತಿ ...	3— 8	4 - 4	3 - 4	3—14
ಗುಡ್ಡು ಸುಗ್ಗಿ ...	3—10	3 - 14	3— 0	3— 2
ಊರ ಅವ್ವಲ್ ಬೆಳ್ತಿಗೆ ...	4 — 0	4— 4	4— 4	4— 8
ರಂಗೂನು ಬ. ಗೋ. ೧ಕ್ಕೆ	7— 0	7— 4	6 —14	7— 8
ಗೋದಿ ಗೋಣಿ ೧ಕ್ಕೆ ...	11 — 0	13— 0	12 - 0	14— 0
ತೊಗರಿ ಗೋಣಿ ೧ಕ್ಕೆ ...	9— 8	12— 8	12— 8	13— 0
ಹುರುಳಿ ಗೋಣಿ ೧ಕ್ಕೆ ...	5 - 0	5— 6	4 — 0	5— 8
ಕಡಲೆ ಗೋಣಿ ೧ಕ್ಕೆ ...	8— 0	12— 8	8 - 8	8 12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17— 0
ಉದ್ದು ಗೋಣಿ ೧ಕ್ಕೆ ...	9— 0	9 — 8	9— 0	8— 8
ಹೆಸರು ಗೋಣಿ ೧ಕ್ಕೆ ...	7 - 12	8— 0	10— 0	9— 8
ಊರುಬೆಲ್ಲ ಖಂಡಿ ೧ಕ್ಕೆ ...	30— 0	32— 8	20 -- 0	30 — 0
ಉಪ್ಪು ಗೋಣಿ ೧ಕ್ಕೆ ..	4 2	5— 4	5 — 2	5— 4
ಕೊಬ್ರಿ ಖಂಡಿ ೧ಕ್ಕೆ ...	75 — 0	84— 0	90 - 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	26— 8	28 - 8	18—12	20— 0
ಎಳ್ಳಿಂಡಿ ಖಂಡಿ ೧ಕ್ಕೆ ...	26 - 4	27— 8	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	6— 0	7— 0	6 8	6—12
ಎಳ್ಳೆಣ್ಣೆ ಮಣ ೧ಕ್ಕೆ ...	7— 0	7— 0	6 - 0	6 — 4
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	6 — 5	7 - 5	6 — 8	6—12
ಮೋರಿಸ ಸಕ್ಕರೆ ಮ. ೧ಕ್ಕೆ	3 — 2	3— 4	2 - 14	2 —15
ಮೆಣಸು ...	2 - 8	5 -- 0	3 - 4	3— 6
ಸಾಸಿವೆ ಮುಡಿ ೧ಕ್ಕೆ ...	5— 4	5 - 8	5— 8	5 —12
ಕೊತ್ತಂಬರಿ ಮುಡಿ ೧ಕ್ಕೆ ...	2— 8	3 - 0	2— 8	3— 4
ಕಾಳುಮೆಣಸು ಖ. ೧ಕ್ಕೆ ...	100— 0	120 -- 0	110 0	120 — 0
ಗೇರುಬೀಜ ಮು ೧ಕ್ಕೆ ...	3 - 4	3 — 8	4 - 6	4— 8
ಕಬ್ಬಿಣ ಖಂಡಿ ೧ಕ್ಕೆ ...	35— 0	37— 8	55 — 0	60— 0
ತಾಂಬ್ರ ತಗಡು ಮ. ೧ಕ್ಕೆ	12— 4	12— 8	17— 8	17— 8
,, ಪಾತ್ರಗಳು ಮ. ೧ಕ್ಕೆ	12 — 8	14— 0	18— 8	19— 0
ಚೀನಿ ಬೆಳ್ಳಿ ಸೇರು ೧ಕ್ಕೆ ...	13— 8	15— 0	13 14	14 — 0
ಹಿತ್ತಾಳೆ ತಗಡು ಮ. ೧ಕ್ಕೆ	10 — 0	10 - 8	13 — 0	13— 0
ಪವನು ೧ಕ್ಕೆ ...	22 — 7	22— 8	22 - 12	22 -- 14
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45 -- 0	45 -- 0	50 -- 0
ನೀಲಗಿರಿ ಕಾಫಿ ಖಂಡಿ ೧ಕ್ಕೆ	170 - 0	180— 0	180 - 0	220 — 0
ಫಿಬೇರಿ ಕಾಫಿ ಖಂಡಿ ೧ಕ್ಕೆ	175— 0	195— 0	210 - 0	220— 0
ಮಡಿಕೇರಿ ಏಲಕ್ಕಿ ...	50— 0	55 -- 0	70— 0	75— 0
ತುಪ್ಪ ಮಣ ೧ಕ್ಕೆ ...	17 - 0	18— 0	14— 0	15— 0
ಏಲಕ್ಕಿ ಬೀಜ ಮಣ ೧ಕ್ಕೆ	80— 0	85— 0	70 — 0	80 -- 0

BUY ADVERTISED GOODS.

ಚಿತ್ರಮಯ ಪ್ರಪಂಚ

ಪತ್ನಿಯ ಕ್ರೂರತನಕ್ಕಾಗಿ ಮುಷ್ಕರ

ಅಮೆರಿಕದ ಬ್ರುಕ್ಲಿನ್ ಎಂಬಲ್ಲಿ ಥೋಮಸ್ ಕೆಲ್ಲಿ ಎಂಬವನು ಕಳೆದ ೨೩ ವರ್ಷಗಳಿಂದ ತನ್ನ ಪತ್ನಿಯ ಗದರಿಕೆಗೆ ಬೆದರಿ ಮನೆ ಕೆಲಸವನ್ನೆಲ್ಲಾ ಮಾಡುತ್ತಿದ್ದ. ಕಟ್ಟ ಕಡೆಗೆ ಅವನಿಗದು ಅಸಹನೀಯವಾಯಿತು. ಅಮೆರಿಕದ ಕೈಗಾರಿಕೆಗಳಲ್ಲಿ ಕೆಲಸಮಾಡುವ ಮಜೂರರು ಕಾರ್ಖಾನೆಗಳೊಳಗೇನೇ ಕೂತು ಮುಷ್ಕರ ಹಿಡಿದು ಜಯಶೀಲವಾದುದನ್ನು ನೋಡಿದ ಥೋಮಸ್ ಕೆಲ್ಲಿಯು ಅದರಿಂದ ಪಾಠ ಕಲಿತು ತಾನೂ ಮುಷ್ಕರವಾರಂಭಿಸಿದ. ಅಡಿಗೆ ಪಾತ್ರೆಗಳನ್ನೆಲ್ಲಾ ಒಂದೆಡೆ ಇಟ್ಟು ತಾನು ಕೆಳಗೆ ಕೂತು ಬಿಟ್ಟ. ಹೆಂಡತಿ ಬಂದು ಗದರಿಸಿದಳು, ಬೆದರಿಸಿದಳು, ಬೈದು ಭಂಗಿಸಿದಳು; ಏನು ಹೇಳಿದರೂ ಕೆಲ್ಲಿಯು ಏಳಲೇ ಇಲ್ಲ. ಕಟ್ಟ ಕಡೆಗೆ ಬೇಸತ್ತು ತಾನೇ ಪಾತ್ರಗಳನ್ನು ತೊಳೆದು ಅಡಿಗೆಮಾಡತೊಡಗಿದಳು. ಕೆಲ್ಲಿಯ ಮುಷ್ಕರ ಜಯಶೀಲವಾಯಿತು.

ಹೆಂಡತಿಯ ಚೆಂಡಾಡುವ ಹಕ್ಕು

ವಿಯನ್ನದ ಹರ್ ಕಾರ್ಲ್‌ಲುಜ್ ಎಂಬವನ ೩೮ ವರ್ಷ ಪ್ರಾಯದ ಹೆಂಡತಿಯು ಆಸ್ಟ್ರಿಯದ ಸುಪ್ರಸಿದ್ಧ ಚೆಂಡಾಟಗಾರಳು. ಇವಳು ಗ್ರಹಕೃತ್ಯದ ಬದಲಿಗೆ ಚೆಂಡಾಡುವುದರಲ್ಲೇ ಸಮಯ ಕಳೆಯುವಳು. ಅವಳು ಆಡಹೋಗುಬಾಗ ತಾನು ಅಡಿಗೆಮಾಡಿ ಮನೆಯ ಜಾಗ್ರತೆ ನೋಡಿ, 10 ವರ್ಷದ ಮಗನೊಬ್ಬನನ್ನು ಆರೈಕೆಮಾಡಬೇಕು. ಆದುದರಿಂದ ತನ್ನ ವಿವಾಹ ವಿಚ್ಛೇದವಾಗಬೇಕೆಂದು ಹರ್ ಲುಜ್ಜನು ಕೋರ್ಟಿನಲ್ಲಿ ಖಟ್ಲೆ ಮಾಡಿದ. ತನಗೆ ಗಂಡಸಿನಂತೆಯೇ ಆಟಗಳಲ್ಲಿ ಭಾಗ ವಹಿಸುವ ಹಕ್ಕುಂಟೆಂದು ಅತನ ಹೆಂಡತಿ ವಾದಿಸಿದಳು. ನಂಬ್ರ ಹೆಂಡತಿಗೆ ಗುಣವಾಯಿತು. ಹೆಂಡತಿ ಚೆಂಡಾಟ ಆಡುವುದರಲ್ಲಿ ನಿರತಳಿರುವಳೆಂದು ಅವಳ ವಿವಾಹವಿಚ್ಛೇದಮಾಡಲು ಸಾಧ್ಯವಿಲ್ಲೆಂದಾಯಿತು.

ಲೋಕದ ಅತಿದೊಡ್ಡ ಸ್ತ್ರೀ ದ್ವೇಷಿ

ಪೋಲಂಡಿನ ಬುಬ್ಲಿನ್ ಎಂಬಲ್ಲಿಯ ಸಂಗೀತ ಶಾಲೆಯ ಪ್ರೊಫೆಸರನಾದ ಜಂತೋನಿ ಸ್ಕುಬಿಯಕ್ ಎಂಬವನು ಲೋಕದ ಅತಿದೊಡ್ಡ ಸ್ತ್ರೀ ದ್ವೇಷಕನು. ಅವನು ಸ್ತ್ರೀಯ ವಂಚಕತನವನ್ನು ವಿವರಿಸುತ್ತಾ ಒಂದೇ ಸವನೆ 26 ಘಂಟೆಗಳ ವರೆಗೆ ವ್ಯಾಖ್ಯಾನಿಸಿರುವನು. ಸಂಜೆ 7 ಘಂಟೆಗೆ ಮಾತಾಡತೊಡಗಿದವನು ಮರುದಿನ ರಾತ್ರಿ 9 ಘಂಟೆಗೆ ಭಾಷಣ ನಿಲ್ಲಿಸಿದನು. ಮಧ್ಯೆ ಹಾಲು ಮತ್ತು ಕತ್ತಿ ತೆಗೆದುಕೊಳ್ಳಲು ಕೆಲವೇ ಸೆಕುಂದ ಮಾತ್ರ ಮಾತಾಡುವುದನ್ನು ನಿಲ್ಲಿಸಿದ್ದನು.

ತರುಣ ಮುದುಕಿಯರ ಮದುವೆ

ಲಂಡನಿನಲ್ಲಿ ಸ್ಟೆನ್ಲೆಸಿಯರ್ಲೆ ಎಂಬ 22 ವರ್ಷದ ತರುಣನೊಬ್ಬನು 65 ವರ್ಷದ ಮುದುಕಿಯನ್ನು ಮದುವೆಯಾಗಿರುವನು. ಇವರಿಗೆ ಮದುವೆಯ ಮೊದಲು 2 ವರ್ಷಗಳ ಪರಿಚಯವಿದ್ದಿತು. ಈ ವಿವಾಹವು ರಹಸ್ಯವಾಗಿರಿಸಲ್ಪಟ್ಟಿದ್ದಿತು. ಆದರೆ ಮದುವೆಯಾದ ರಾತ್ರಿ ಸಂಗತಿ ತಿಳಿದಾಗ ಹೆಚ್ಚಾಗಿ ಪ್ರಾಯ ಸಂದ ಸ್ತ್ರೀಯರೆಲ್ಲಾ ಈ ದಂಪತಿಗಳನ್ನು ಅಭಿನಂದಿಸಿ ಪ್ರೋತ್ಸಾಹಿಸಿದರು.

38 ಮಕ್ಕಳ ತಂದೆ

ಫ್ಲೋರೀಡಾದ ಬ್ರುಕ್ಸ್‌ವಿಲ್ಲೆ ಎಂಬಲ್ಲಿಯ ಅಂಬ್ರೋಸ್ ಡಗ್ಲಸ್ ಎಂಬ 91 ವರ್ಷದ ನೀಗ್ರೋ ಜಾತಿಯ ಮುದುಕನು ಅಮೆರಿಕದ ಅತಿ ಹೆಚ್ಚು ಮಕ್ಕಳ ತಂದೆಯಾಗಿರುವನು. ಇವನಿಗೆ ಒಟ್ಟು 38 ಮಕ್ಕಳಿರುವರು. ಮೊದಲಿನ ಪತ್ನಿಯಲ್ಲಿ 26, ಎರಡನೇದರಲ್ಲಿ 12. ಕಡೆಯ ಮಗು ಹುಟ್ಟಿದುದು ಇತ್ತಲಾಗಿ. ತಾನು ಇಷ್ಟೊಂದು ಮಕ್ಕಳ ತಂದೆ ಹೇಗಾದುದೆಂದು ಡಗ್ಲಸನಿಗೇನೇ ತಿಳಿಯದು. ಅವನು ಮದುಕನಾದರೂ ಮಕ್ಕಳು ಒಂದರ ಹಿಂದೊಂದು ಹುಟ್ಟುತ್ತಲೇ ಹೋಗುತ್ತಿದ್ದವು.

ಇಷ್ಟೊಂದು ದೊಡ್ಡ ಕುಟುಂಬವಿದ್ದರೂ ಡಗ್ಲಸನಿಗೆ ಅದರ ಪೋಷಣೆಯ ಕುರಿತು ಯಾವ ಚಿಂತೆಯೂ ಇಲ್ಲ. ಡಗ್ಲಸನಿಗೆ ಮಕ್ಕಳಿಗೆ ಏನು ಹೆಸರಿಡುವುದೆಂದು ಕೂಡ ತಿಳಿಯದಾಗಿ ಕಡೆಗೆ ಅವನು ಒಂದೊಂದಕ್ಕೆ ಅಮೆರಿಕದ ಒಂದೊಂದು ಪ್ರಾಂತದ ಹೆಸರುಕೊಡಲಾರಂಭಿಸಿದ.

ಮುದುಕಿಯು ಮಗುವಾಗಿ ಮಾರ್ಪಟ್ಟುದು

ಡಾಕ್ಟರ್ ಬಿವರ್ಲೆ ರಾಂಡಲ್ಫ್ ಟಿಕ್ಕರ್ ಎಂಬವರು, 61 ವರ್ಷದ ಸ್ತ್ರೀಯೊಬ್ಬಳು ಕಾಲ ಹೋದಂತೆ ಮುದುಕಿಯಾಗುವ ಬದಲಿಗೆ ಬಾಲ್ಯಾವಸ್ಥೆ ಪಡೆದ ವಿಚಿತ್ರ ಸಂಗತಿಯೊಂದನ್ನು ವರ್ಜೀನಿಯ ಮೆಡಿಕಲ್ ಮಂತ್ಲಿ ಎಂಬ ವೈದ್ಯಕೀಯ ಮಾಸಿಕದಲ್ಲಿ ಪ್ರಕಟಿಸಿರುವರು. ಈ ಸ್ತ್ರೀಯು ಡಾಕ್ಟರ್ ಟಿಕ್ಕರರ ಸೆನಟೋರಿಯಮಿಗೆ ತರಲ್ಪಟ್ಟಾಗ ಅವಳ ಮಾತುಕತೆ, ವರ್ತನೆಯೆಲ್ಲಾ ಕೇವಲ ಆರೇಳು ವರ್ಷದ ಹುಡುಗಿಯಂತಿತ್ತು. ಅವಳು ಚಿಕ್ಕ ಹುಡುಗಿಯಂತೆಯೇ ಬಾಲಕರ ಪುಸ್ತಕಗಳನ್ನು ಓದುತ್ತಿದ್ದಳು, ಅತ್ತಿತ್ತ ಓಡುತ್ತಾ, ಆಡುತ್ತಾ ಡಾಕ್ಟರು, ನರ್ಸುಗಳೊಡನೆಲ್ಲಾ ತಮಾಷೆಮಾಡುತ್ತಾ ಇದ್ದಳು. ಅವಳ ಮಕ್ಕಳೇ ಅವಳ ಬಳಿಗೆ ಬಂದಾಗ ತಾನು ಅವರ ಪುತ್ರಿಯೆಂಬಂತೆ ನಡೆಯುತ್ತಿದ್ದಳು. ಕೆಲವೇ ತಿಂಗಳುಗಳಲ್ಲಿ ಈ ಸ್ತ್ರೀಯು 3, 4 ವರ್ಷದ ಮಗುವಿನಂತಾದಳು. ತೊದಲ್ನುಡಿಯಲಾರಂಭಿಸಿದಳು. ಅವಳಿಗೆ ಸರಿಯಾಗಿ ಆಹಾರ ಕೂಡಾ ತೆಗೆದುಕೊಳ್ಳಲಾಗಲಿಲ್ಲ. ಓದುವುದನ್ನೆಲ್ಲಾ ಬಿಟ್ಟು ಬಿಟ್ಟಳು. ನರ್ಸುಗಳು ಬಿಡುತ್ತಿದ್ದರೆ ನೆಲದಲ್ಲಿ ಹೊರಳಾಡುತ್ತಿದ್ದಳು. ಮತ್ತೂ ಕೆಲವು ತಿಂಗಳುಗಳಲ್ಲಿ ಇವಳು ಅತಿ ಚಿಕ್ಕ ಶಿಶುವಿನಂತೆ ಹಾಸಿಗೆ ಹಿಡಿದಳು. ಕೈಕಾಲುಗಳನ್ನು ಶಿಶುವಿನಂತೆ ಅತ್ತಿತ್ತ ಅಲುಗಾಡಿಸಲಾರಂಭಿಸಿದಳು. 30 ವರ್ಷಗಳ ಮೊದಲು ಮೃತವಾಗಿದ್ದ ತಾಯಿಯನ್ನು "ಅಮ್ಮಾ ಅಮ್ಮಾ" ಎಂದು ಕರೆಯಲು ಮಾತ್ರ ಅವಳಿಗೆ ಸಾಧ್ಯವಾಯಿತು. ಈಗ ಅವಳಿಗೆ ದ್ರವಾಹಾರಬೇಕಾಯಿತು. ಯಾಕಂದರೆ ಅವಳು ಗಟ್ಟಿ ಆಹಾರ ಜಗಿಯಲಾರದಾದಳು. ಕಟ್ಟಕಡೆಗೆ ಇವಳು ಕೇವಲ ಉಸಿರಾಡುತ್ತಿದ್ದು ಯಾವ ತರದ ಆಹಾರವನ್ನೂ ತೆಗೆದುಕೊಳ್ಳದ ಗರ್ಭಸ್ಥ ಅವಸ್ಥೆ ಹೊಂದಿ ಮೃತಳಾದಳು. ಈ ವಿಚಿತ್ರ ವಿದ್ಯಮಾನವನ್ನು ಡಾಕ್ಟರರು ಈ ರೀತಿ ವಿವರಿಸಿರುವರು. ಈ ಸ್ತ್ರೀಯು ಸಂಪೂರ್ಣವಾಗಿ ತನ್ನ ಗಂಡನನ್ನು ಅವಲಂಬಿಸಿಕೊಂಡಿದ್ದಳು. ಅವಳ ಎಲ್ಲಾ ಅವಶ್ಯಕತೆಗಳನ್ನೂ ಅವನೇ ಒದಗಿಸಿ ಕೊಡುತ್ತಿದ್ದ. 3 ಮಕ್ಕಳಾದ ಮೇಲೆ ಗಂಡ ತೀರಿ ಹೋದ. ಆ ಮೇಲೆ ಇವಳು ಮಕ್ಕಳಂತೆ ವರ್ತಿಸಿ ಕೊನೆಗೆ ಸನಟೋರಿಯಮಿಗೆ ತರಲ್ಪಟ್ಟಳು.

'ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪ್ಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪ್ಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫–೦–೦**
೩೦ ಮಾತ್ರೆಗಳು ರೂ. ೩–೦–೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ರೆ:— ಪಂಡಿತ್ ಎ. ವಿ. ಆರಮುವ್
ಚಿಕಾಕೋಲ್

ನಮ್ಮ ಜರಿ ಪೀತಾಂಬರ, ರೇಶ್ಮೆ ಮದಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು! ಇನಾಮುಗಳು.

OUR CUSTOMER
THIS MAN

THIS MAN
WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶಿಮೆ ಮಾಲುಗಳ ಕೆಟಲಗ್ 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾವ್ಡಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲನ್ ಚಾಳ, ಧಾವಳಿ, ನಾಮರ್ದಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಮಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವರೆಗೆ. ಸಾದಾ 16ಮೊಳದ ಶೀರೆ 1ಕ್ಕೆ ರೂ. 16 ರಿಂದ ರೂ. 35ರ ವರೆಗೆ. ಅರೆ ಕಡಿಮೆ 16ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ. 16. ಖಣ 1ಕ್ಕೆ ರೂ. 1½ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ



ಧರ್ಮಾರ್ಥ ಬಹುಮಾನಗಳು

1-4-0ಗೆ !

--- **ಯಾರಿಗೆ ?** ---

ರೂಪಾಯಿ 1—4—0 ಕೊಟ್ಟು 14ಸೀಸೆ ಒಟ್ಟೋರೋಸ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3 ಡಮ್ಮಿ ರಿಸ್ಟ್ ವಾಚುಗಳು; 1 ರೈಲ್ವೆಟಾಯಿಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್ ; 1 ಜತೆ ಗುಬ್ಬಿಗಳು; 1 ಫೌಂಟನ್ ಪೆನು 14 ಕ್ಯಾರೆಟ್ ನಿಬ್ಬು ಸಮೇತ; 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡ್ ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಿಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. **ಇಂದೇ ಆರ್ಡರುಕೊಡಿರಿ**

Bengal Watch Co.,
Post Box No. 12214, CALCUTTA

ಕಿರಿಯರ ಪ್ರಪಂಚದ

ಪುಸ್ತಕಗಳು.

೧	ನಾಟಕಕಥೆ	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಧುವನ	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸ ಮೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

WANTED

Influential agents to canvass Subscribers and to get advertisements for 'Navayuga' throughout Karnataka on pay or commission basis.

For particulars apply to—

The Manager,
Navayuga, Udipi.

ಅಖಿಲ ಕನ್ನಡ ನಾಡಿಗೆ
ಪ್ರೀತಿಯಾಗಿರುವ

ಮಾಸ [ಕಥಾಕುಂಜ] ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಪರ್ಮಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೋಸ್ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| **ಸುಮತಿಬಾಯಿ,**

ಬಿ. ಎ. ಎಲ್. ಟಿ., ಎಫ್. ಓ. ಎಮ್. ಎಸ್., ಭಿಷಗ್ರತ್ನ, ರಿಜಿಸ್ಟ್ರಾರ್.

The Coondapoor Bank, Ltd.,

Head Office:- **Coondapoor.** Branch Office:-**Brahmavar.**

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳಿಗೆ ಸಾ.ಶೆ 4, ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ 4

6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5%,

1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ $5\frac{1}{2}$%

2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯ 10 ಸಹಾ ಸಾಲಕೊಡಲಾಗುತ್ತವೆ. ಪಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. **N. Sheshagiri Rao,** ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ವರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ಚಿತ್ರ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ

ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ— **ಭವಾನಿ ಅಂಡ್ ಕಂಪೆನಿ,**
ಪೋಸ್ಟು ಬಾಕ್ಸ್ ನಂ. **237**, ಜೆ. ಟಿ. ಮದರಾಸ್.

ಅಮರವಾದ
ನಸ್ವರವಾದ

ಸುಖವನ್ನು ಬಯಸುವವರಿಗೆ

ಗೀತೆಯ ಕೈಗನ್ನಡಿ

(ಶ್ರೀ ಹೊಸಕೆರೆ ಚಿದಂಬರಯ್ಯನವರಿಂದ)

ಪ್ರಪಂಚದಲ್ಲೆಲ್ಲಾ ಅಸದೃಶವಾದ

ಭಗವದ್ಗೀತೆಯ

ಸರಳ ಸಮೂಲ ಭಾಷಾಂತರ.

ಮೂರನೇ ಸಂಸ್ಕರಣದ ೩,೦೦೦ ಪ್ರತಿಗಳಲ್ಲಿ

— ಕೆಲವೇ ಉಳಿದಿವೆ —

ಸುಂದರವಾದ ಅಚ್ಚುಕಟ್ಟಾದ ೪೦೦ ಪುಟಗಳ ಪುಸ್ತಕದ

ಬೆಲೆ: ೦—೪—೦.

ಇಂಗ್ಲಿಷು ಭಾಷೆಯ

ವ್ಯಾಪಕತೆ, ಆವಶ್ಯಕತೆ ಗೌರವಗಳನ್ನು ಯಾರೂ ಅರಿಯದಿರಲಾರರು.

ಇಂಗ್ಲಿಷನ್ನು ಶಾಲೆಗೆ ಹೋಗಿ ಕಲಿಯುವ ಸೌಭಾಗ್ಯದಿಂದ

ವಂಚಿತರಾದವರಿಗೆ

"ಒಂದೇ ತಿಂಗಳಲ್ಲಿ ಇಂಗ್ಲಿಷ್"

ಪಾದೂರು ವಾಸುದೇವ ಉಪಾಧ್ಯಾಯ, ಬಿ. ಎ. ಎಲ್ ಎಲ್ ಬಿ. ಇವರಿಂದ

ಎಂಬ ಪುಸ್ತಕವೇ

ಹೆದ್ದಾರಿ

ಅತ್ಯಲ್ಪ ಕಾಲದಲ್ಲಿ ಪ್ರಥಮ ಮುದ್ರಣದ ಪ್ರತಿಗಳು ಮುಗಿದು ಹೋಗಿ, ದ್ವಿತೀಯಾವೃತ್ತಿಯು ಹೊರಟಿದೆ.

ಬೆಲೆ: ೦—೮—೦.

ತುಳುನಾಡ್ ಛಾಪಖಾನೆ, ಉಡುಪಿ

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು—ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc.
APPLY TO THE MANAGER

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯ-ರ ಪ್ರಪಂಚ, ಉಡುಪಿ.

VOL. XVI-NO. 37

20-5-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ

ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೨೦ ಮೇ, ೧೯೩೭ [ಸಂಚಿಕೆ ೩೭

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I.)

BRANCHES:

1 BANGALORE CITY	16 HUBLI
2 BELGAUM	17 GADAG
3 BYADGI	18 KARWAR
4 BELLARY	19 KUMTA
5 ADONI	20 ANKOLA
6 HOSPET	21 HONAVAR
7 TALIPARAMBA	22 BHATKAL
8 UPPINANGADI	23 BRAHMAVAR
9 KASARGODE	24 HUNGARCUTTA
10 PAYYANUR	25 SIRSI
11 KANHANGAD	26 SAGAR
12 KARKALA	27 COONDAPOOR
13 NANDYAL	28 UDIPI
14 PRODATTUR	29 MANGALORE
15 TADPATRI	30 CANNANORE

Beg to announce
Having Opened their Branch at
BOMBAY
on *Friday, the 23rd April 1937*
IN
"Premchand House"
AT
Sir Pherozshah Mehta Road.

Paid up Capital	Rs. 3,45,580
Reserves	„ 19,2,390
Deposits exceed	„ 22 lakhs
Total Working Funds exceed	„ 40 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರದಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು. ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ —— ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ 1/8 ದಲ್ಲಿ) ಹೊರಡುವುದು!

ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ.ಎ.ಯವರಿಂದ ಅನುವಾದಿಸಲ್ಪಟ್ಟು, ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನೇಳನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ. — ವಿ. ಪಿ. ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,

ಚಾಮರಾಜಪೇಟೆ, **ಬೆಂಗಳೂರು ನಗರ**

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಖು ಡೇಪಾಜಿಟ ಸೇಕಡ 5½ರ ವರೇಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, *President & Manager,* — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	ರೂ. ೩—೮—೦
,, ,, (೬ ತಿಂಗಳಿಗೆ)	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)	ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — **ಸ್ತ್ರೀಧರ್ಮ ಸಂಜೀವಿನೀ ಚೂರ್ಣ** (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಹೊಟ್ಟೆಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ. ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ, ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು। ಕೇಳವಾ ಮಾಹಿಮಾ ಜಿ. ರಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ಕನ್ನಡ ಭಾಷಾಪಾಠಗಳು.

ಮೆಕ್ಮಿಲನರ ಕನ್ನಡ ಪುಸ್ತಕಾವಳಿ

ಸುಪ್ರಸಿದ್ಧವಾಗಿರುವ ಈ ಗ್ರಂಥಮಾಲೆಯನ್ನು ಈಗ ಮಕ್ಕಳ ವಯೋಧರ್ಮ, ಮನೋಧರ್ಮಗಳಿಗೆ ಅನುಸರಿಸಿ ಸಿಲೆಬಸಿನ ಎಲ್ಲ ಅಂಗಗಳನ್ನು ಒಳಗೊಂಡು, ಪದ್ಯಗಳನ್ನೂ ಸೇರಿಸಿ, ಯಾವತ್ತು ಬಗೆಯ ಅಭ್ಯಾಸಗಳನ್ನೂ ಸೂಚಿಸಿ, ವ್ಯಾಕರಣ ಮತ್ತು ಪ್ರಬಂಧರಚನೆಗೂ ಅನುಕೂಲವೂ ಉಪಯುಕ್ತವೂ ಆಗುವಂತೆ ತಿದ್ದಿ ರಚಿಸಲಾಗಿದೆ.

ಶಿಕ್ಷಣವು ಆತ್ಯಾಧುನಿಕ ರೀತಿಗೆ ಒಪ್ಪುವಂತೆ ಬರೆದ ಪುಸ್ತಕಗಳು:
ಶ್ರೀಯುತರು ಕೆ. ಶ್ರೀನಿವಾಸ ಶಿಣೈ, ಬಿ. ಎ., ಎಲ್. ಟಿ.,
ಎಮ್. ಎನ್. ಕಾಮತ್, ಉಗ್ರಾಣ ಮಂಗೇಶರಾವ್
ಮೊದಲಾದವರಿಂದರಚಿತವಾದವು

ಈಗಲೆ ಅಚ್ಚಾಗಿ ಪ್ರಕಟವಾದುದು!

ಬಾಲಶಿಕ್ಷೆ

ಮೊದಲನೆ ದರ್ಜೆಯ ಮಕ್ಕಳಿಗೆ ಇಷ್ಟು ಮೋಹಕರವಾದ ಮತ್ತು ಸಂಪೂರ್ಣ ಸುಲಭರೀತಿಯಿಂದ ಕನ್ನಡವನ್ನು ಓದಲೂ, ಬರೆಯಲೂ, ಸಂಭಾಷಣೆ ನಡಿಸಲೂ ಅತ್ಯುಪಯುಕ್ತವಾದ ಮತ್ತೊಂದು ಪುಸ್ತಕವೇ ಇಲ್ಲ.
ಶ್ರೀ. ಕೆ. ಶ್ರೀನಿವಾಸ ಶಿಣೈ, ಬಿ. ಎ., ಎಲ್. ಟಿ.
ಶ್ರೀ. ಎಮ್. ಎನ್. ಕಾಮತ್—ಇವರಿಂದ
ಒಂದು ವರ್ಷದಲ್ಲಿ ಕನ್ನಡ ಭಾಷೆಯ ಮತ್ತು ಲಿಪಿಯ ಮೂಲ ಪರಿಜ್ಞಾನವು ಅತ್ಯಾಧುನಿಕ ರೀತಿಯಲ್ಲಿ ಮಕ್ಕಳಿಗೆ ದೊರೆವುದು.

ಬಾಲಶಿಕ್ಷೆ	....	ಕ್ರಯ 2 ಆಣೆ
ಮೊದಲನೆ ಪುಸ್ತಕ	....	,, 2 ,,
ಎರಡನೆ ,,	....	,, 3 ,,
ಮೂರನೆ ,,	....	,, 4 ,,
ನಾಲ್ಕನೆ ,,	....	,, 5 ,,
ಐದನೆ ,,	....	,, 6 ,,
ಆರನೆ ,,	....	,, 7 ,,
ಏಳನೆ ,,	....	,, 8 ,,

ನೂತನ ಸಾಮಾನ್ಯ ವಿಜ್ಞಾನ ಪಾಠಗಳು.

1ನೆಯಿಂದ 6ನೆ ತರಗತಿಯ ವರೆಗೆ, ಎಳೆಯ ಮಕ್ಕಳಿಗೆ ತಿಳಿಯುವ ಹಾಗೆ ಸಿಲೆಬಸಿನಲ್ಲಿರುವ ಯಾವತ್ತು ವಿಷಯಗಳನ್ನು ತುಂಬಾ ಚಿತ್ರಮಯವಾಗಿ ಕಥಾ ರೂಪದಲ್ಲಿ ವಿವರಿಸಿ ಸುಲಭ ಮಾತಿನಲ್ಲಿ ಬರೆಯಲಾಗಿದೆ.

ಮೊದಲನೆ ಪುಸ್ತಕ	2ನೆ ದರ್ಜೆಗೆ	....	ಕ್ರಯ 3 ಆಣೆ
ಎರಡನೆ ,,	3ನೆ ,,	....	,, 3 ,,
ಮೂರನೆ ,,	4ನೆ ,,	....	,, 5 ,,
ನಾಲ್ಕನೆ ,,	5ನೆ ,,	....	,, 6 ,,

ದೇಹದ ಅಂಗಾಂಗಗಳ ಮೊದೆಲ್‌ಗಳೂ, ಚಿತ್ರಪಟಗಳೂ, ಮೃಗ ವೃಕ್ಷಾದಿಗಳ ಚಿತ್ರಗಳೂ ಸಿಗುವುವು.

ಗಣಿತ ಪುಸ್ತಕಗಳು

ಗಣಿತಶಾಸ್ತ್ರವನ್ನು ಆಟದಂತೆ ಪ್ರತ್ಯಕ್ಷ ಬೋಧಿಸಲು ಅತ್ಯುಪಯುಕ್ತವಾಗಿರುವ ಸಚಿತ್ರ ಪುಸ್ತಕಗಳು.

ಬಾಲಗಣಿತ	1ನೆ ದರ್ಜೆಯದು	....	ಕ್ರಯ 3 ಆಣೆ 6ಪೈ
,,	2ನೆ ,,	....	,, 5 ,,
,,	3ನೆ ,,	....	,, 7 ,, 6 ,,
,,	4ನೆ ,,	....	,, 8 ,, 6 ,,
,,	5ನೆ ,,	....	,, 11 ,, 6 ,,

ಭೂಗೋಲ ಶಾಸ್ತ್ರ

ಭೂವಿವರಣೆ ಮೊದಲನೆಯ ಪುಸ್ತಕ	....	ಕ್ರಯ 2 ಆಣೆ 6 ಪೈ
,, ಎರಡನೆಯ ,,	....	,, 3 ,, 6 ,,

ಚಿತ್ರಮಯ ದಕ್ಷಿಣ ಕನ್ನಡ ಶ್ರೀ. ಕಾರಾಂತರಿಂದ ನೂರಾರು ಚಿತ್ರಗಳಿಂದ ಭೂಗೋಲ ಬೋಧನೆ ಕ್ರಯ 5 ಆಣೆ 6 ಪೈ.

ದಕ್ಷಿಣ ಕನ್ನಡ ಜಿಲ್ಲೆಯ ಭೂಗೋಲ
ಶ್ರೀ. ಯು. ಭವಾನಿಶಂಕರರಾಯರಿಂದ

ಆತ್ಯಾಧುನಿಕ ರೀತಿಯಲ್ಲಿ ಜನಜೀವನಕ್ಕೂ ಭೂಗೋಲ ಶಾಸ್ತ್ರಕ್ಕೂ ಇರುವ ಸಂಬಂಧದ ಮೂಲಕ ಫೋಟೋ ಚಿತ್ರಗಳೊಡನೆ ಜಿಲ್ಲಾ ಭೂಗೋಳವನ್ನು ಮನೋರಂಜಕ ರೀತಿಯಲ್ಲಿ ಬರೆದ ಪುಸ್ತಕ. .... ಕ್ರಯ 5 ಆಣೆ 6ಪೈ

ಕನ್ನಡ-ಇಂಗ್ಲಿಷ-ಗೋಳಗಳು, ನಕ್ಷೆಗಳು, ಜನಜೀವನ ಚಿತ್ರಗಳು, ಮೇಪ್ ಬುಕ್, ಎಟ್ಲಾಸ್ ಎಲ್ಲವೂ ದೊರೆಯುತ್ತವೆ.

ಕನ್ನಡ ಪದ್ಯ ಪುಸ್ತಕಗಳು.

ಸರ್ವ ಉಪಾಧ್ಯಾಯರಿಗೂ ಸುಪರಿಚಿತವಾದವು

ಮೊದಲನೆಯ ಪದ್ಯ ಪುಸ್ತಕ	....	ಕ್ರಯ 2 ಆಣೆ 6 ಪೈ
ಎರಡನೆಯ ,, ,,	....	,, 3 ,, 6 ಪೈ
ಮೂರನೆಯ ,, ,,	....	,, 6 ,,

ಮೆಕ್ಮಿಲನರ ಪುಸ್ತಕಾವಳಿಯ ಹಸ್ತಕಗಳು

ಭಾಷಾಜ್ಞಾನವು ನೂತನ ಪ್ರತ್ಯಕ್ಷಪ್ರಯೋಗದಿಂದ ಉಂಟಾಗುವಂತೆ ನೂತನ ವಿಧಾನದಿಂದ ಬರೆದುವು. ಸುಮ್ಮನೆ ಶಬ್ದಾರ್ಥ ಮಾತ್ರವಲ್ಲ.
ಎರಡನೆ ಪುಸ್ತಕದ ಹಸ್ತಕ ಕ್ರಯ 2 ಆ. ನಾಲ್ಕನೆ ಪುಸ್ತಕ ಹಸ್ತಕ ಕ್ರಯ 2ಆ. 6ಪೈ
ಮೂರನೆ ,, ,, ,, 2 ಆ. 6ಪೈ ಐದನೆ ,, ,, ,, 3ಆ.
ಆರನೆ ಮತ್ತು ಏಳನೆ ಪುಸ್ತಕದ ಹಸ್ತಕ ಕ್ರಯ 3ಆ. 6ಪೈ
ಉಪಾಧ್ಯಾಯರು ಮಕ್ಕಳಿಗೆ ಕಲಿಸುವದೇನು? ಮಕ್ಕಳು ಪಾಠಕಲಿವಾಗ ಬರೆದು ಕೊಳ್ಳುವುದೇನು? ಎಲ್ಲವೂ ಈ ಹಸ್ತಕಗಳಲ್ಲಿದೆ.

ಕನ್ನಡ ವ್ಯಾಕರಣ ಪಾಠಗಳು.

ಎಷ್ಟೋ ಪ್ರಸಿದ್ಧಿಗೆ ಬಂದಿರುವ ಈ ಪುಸ್ತಕಗಳ ಪುನರ್ಮುದ್ರಣ,
ಕನ್ನಡ ಮೂಲವ್ಯಾಕರಣ ಕ್ರಯ 3 ಆಣೆ ಕನ್ನಡ ಬಾಲವ್ಯಾಕರಣ ಕ್ರಯ 3ಆ.3ಪೈ
ಕನ್ನಡ ಶಾಲಾವ್ಯಾಕರಣ ಕ್ರಯ 5ಆಣೆ
ತಿದ್ದಿದ ಸಿಲೆಬಸಿಗೆ ಸರಿಯಾಗಿ ಇವಲ್ಲದೆ ಬೇರೆ ವ್ಯಾಕರಣ ಪುಸ್ತಕಗಳಿಲ್ಲ.

ಕನ್ನಡ ಕಥೆಯ ಪುಸ್ತಕಗಳು

ಭಾಷಾಜ್ಞಾನವು ಕಥಾರೂಪವಾಗಿ ಉಲ್ಲಾಸದಿಂದ ಮಕ್ಕಳಲ್ಲಿ ಹುಟ್ಟುವಂತೆ ತಿದ್ದಿದ ಸಿಲೆಬಸಿಗೆ ತಕ್ಕಂತೆ ಬರೆಯಿಸಿ, ಸಚಿತ್ರವಾಗಿ ಮುದ್ರಿತವಾದುವು.
ಗುಬ್ಬೀಪಾಯಸ ಕ್ರಯ ರೂ. 0 0 6. ಪಾಪೋಸಿನ ಪಚೀತಿ ಕ್ರಯ ರೂ. 0 0 6.
ಗಡ್ಡದ ಅಜ್ಜಯ್ಯ ಕ್ರಯ ರೂ 0 1 6. ಸಿಂಡ್ರೆಲ್ಲ 3ನೇ ದರ್ಜೆಗೆ ಕ್ರಯ ರೂ 0 1 6
ಕೆಂಚನ್ನು ಕ್ರಯ ರೂ 0 1 6. ಕಾಗೆಯೂ ಗುಬ್ಬಿಯೂ 1ನೇ ದರ್ಜೆ ,, ,, 0 2 3.
ಆಲಿಬಾಬನ ಕಥೆ. ಕ್ರಯ ರೂ 0 2 3. ಮೌರ್ಯ ಸಿಂಹಾಸನ ಕ್ರಯ ರೂ 0 4 0.
ಸಂಯೋಗಿತೆ ಕ್ರಯ ರೂ 0 6 0. ಐತಿಹಾಸಿಕ ಕಥಾವಳಿ (ಸುವಾಸಿನಿಯ ಸಂಗ್ರಹ) ಕ್ರಯ ರೂ. 0 6 0

ಸಚಿತ್ರ ಚರಿತ್ರೆ ಪುಸ್ತಕಗಳು

ಸಚಿತ್ರ ಚರಿತ್ರೆ.	Iನೆ ದರ್ಜೆ.	ಕ್ರಯ 2 ಆಣೆ
	IIನೆ ,,	,, 2 ,,
	IIIನೆ ,,	,, 3 ,,
	IVನೆ ,,	,, 4 ,, 6 ಪೈ
	Vನೆ ,,	,, 5 ,,
	VIನೆ ,,	,, 6 ,,
	VIIನೆ ,,	,, 4 ,,

ಸಿಲೆಬಸಿಗೆ ಸರಿಯಾಗಿವೆ, ಸುಲಭ ಶೈಲಿ, ಮನಮೋಹಕ ರೀತಿ
ಸಚಿತ್ರವಾಗಿವೆ. ಸಂಪೂರ್ಣವಾಗಿವೆ.

ಇಂಗ್ಲಿಷು ಮತ್ತು ಕನ್ನಡ

ಮಿತ್ರಾ ಕೋಪಿ ಪುಸ್ತಕಗಳು

ಎಲ್ಲ ತರಗತಿಗಳಿಗೂ ಅಗತ್ಯ ಬೇಕಾದುವು.

English Readers

NEW ERA READERS

I Primer	As- 5
II Primer	,, 6
Book I	,, 8
,, II	,, 10
,, III	,, 12

ನಮ್ಮ ಜಿಲ್ಲೆಯ ಹವಾಗುಣಕ್ಕೆ ಸರಿಯಾಗುವಂತೆ, ತಯಾರಿಸಿ ತರಿಸಲಾದ ಎಲ್ಲ ಬಗೆಯ ಲೇಖನ ಸಾಮಗ್ರಿಗಳು

ಗಣಿತಶಾಸ್ತ್ರ ಬೋಧನೆಗೆ ಬೇಕಾದ ಉತ್ತಮೋಪಕರಣಗಳು ಚಿತ್ರಲೇಖನಕ್ಕೆ ಬೇಕಾಗಿರುವ ಬಣ್ಣಗಳೂ, ಪೆನ್ಸಿಲುಗಳೂ ಇತ್ಯಾದಿ,

ಮಿತ್ರಾ ಎಕ್ಸರ್‌ಸೈಜ್ ಮತ್ತು ನೋಟ್ ಬುಕ್ಕುಗಳು ಉತ್ತಮ ಕಾಗದ-ಕಡಿಮೆ ಬೆಲೆ

ಗೀಟುಳ್ಳ ಮತ್ತು ಇಲ್ಲದ, ಬೇಕುಬೇಕಾದ ಸೈಜಿನವು.

ಮೇಲಿನ ಪುಸ್ತಕಗಳು

ನವಭಾರತ ಬುಕ್ ಡಿಪೋ, ಚರ್ಚ್‌ರೋಡ್, ಉಡುಪಿ ಇಲ್ಲಿಯೂ ದೊರೆಯುತ್ತವೆ.

ರಸ್ಯದ ನೂತನ ನಿರ್ಮಾಣ

ಖಾಸಗಿ ಸೊತ್ತುದಾರರ ಮೇಲೆ ರಾಜಕೀಯ ಬಹಿಷ್ಕಾರ

[ರಸ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಸ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ'ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ ಸಂಗತಿಗಳನ್ನು ತೆಗೆದುಕೊಡಲಾಗಿದೆ.] —ಸಂ. ನ.

ರಸ್ಯದ ಸೋವಿಯೆಟ್ ಸರಕಾರವು ಖಾಸಗಿ ಸೊತ್ತುದಾರರ ಮೇಲೆ ನಡಿಸುವ ರಾಜಕೀಯ ಧಾಳಿಯು ಅತ್ಯಂತ ನಿರ್ಘೃಣವಾದುದಾಗಿದೆ. ಖಾಸಗಿ ವ್ಯಾಪಾರಿಯು ತನ್ನ ನಾಗರಿಕ ಹಕ್ಕುಗಳನ್ನೇ ಕಳಕೊಳ್ಳುವನು. ರಸ್ಯದಲ್ಲಿದು ದೊಡ್ಡ ಅನಾಹುತವು. ಅದರಿಂದಾಗಿ ಅವನು ರಸ್ಯದ ರಾಜಕೀಯ ವಿಷಯಗಳಲ್ಲಿ ಅಸ್ಪೃಶ್ಯನಾಗಿ ಕೂಡಾ ಭಾಗವಹಿಸದಂತಾಗುವುದು ಮಾತ್ರವಲ್ಲದೆ ಅವನು ಬಹಿಷ್ಕೃತ ವ್ಯಕ್ತಿಯ ದೀನಾವಸ್ಥೆಗಿಳಿಸಲ್ಪಡುವನು. ಖಾಲಿ ಜಾಗವಿದ್ದ ಪಕ್ಷದಲ್ಲಿ ಮಾತ್ರವೆ ಆತನ ಮಕ್ಕಳು ಶಾಲೆಗೆ ಸೇರಿಸಲ್ಪಡುವರು. ಅವನು ಅತಿ ಹೆಚ್ಚಿನ ಶಾಲಾಸಂಬಳ ಕೊಡಬೇಕಾಗುವುದು. ರಸ್ಯದ ಚಿಕ್ಕ ಟೌನೊಂದರ ಹೋಟೆಲು ಮ್ಯಾಲಿಕನೊಬ್ಬನೊಡನೆ ನಾನೊಮ್ಮೆ, "ನಿನ್ನ ಮಗಳನ್ನು ನೀನೇಕೆ ಶಾಲೆಗೆ ಕಳುಹಿಸುವುದಿಲ್ಲ"ಎಂದು ಕೇಳಿದೆ. ಯಾಕೆಂದರೆ, ಶಾಲಾಧಿಕಾರಿಗಳು 200 ರುಬ್ಲು ಸಂಬಳ ಕೇಳುವರು ನಾನಷ್ಟು ಸಂಬಳವನ್ನು ಕೊಡುವುದಾದರೂ ಎಲ್ಲಿಂದ? ಎಂದವನು ಉತ್ತರವಿತ್ತ. ಆಗ ಆತನ 14ವರ್ಷದ ಮಗಳು, "ನೀವು ನನ್ನನ್ನು ಬರುವ ವರ್ಷ ಶಾಲೆಗೆ ಕಳುಹಿಸದಿದ್ದಲ್ಲಿ ನಾನು ಮನೆಯಿಂದ ಓಡಿ ಹೋಗಿ ನಿಮ್ಮನ್ನು ಎಂದೆಂದಿಗೂ ತ್ಯಜಿಸಿ ಬಿಡುವೆನು" ಎಂದು ಬಿರುಸುದನಿದಳು. ತಂದೆಯು ಇದಕ್ಕುತ್ತರವಾಗಿ ಏನೂ ಹೇಳದೆ ಮಗಳನ್ನೊಮ್ಮೆ ದಿಟ್ಟಿಸಿ ನೋಡಿದನು. ಅವನ ಕಣ್ಣಲ್ಲಿ ನೀರು ತುಂಬಬಂತು. ಅವಳು ಅಲ್ಲಿಂದ ಹೋದ ಮೇಲೆ ಅವನು ನನ್ನ ಸಮೀಪಕ್ಕೆ ಬಾಗಿ, "ಅವಳು ಹಾಗೆಯೇ ಮಾಡದಿರಲಾರಳು" ಎಂದು ಹೇಳಿದ.

ಒಮ್ಮೆ ನಾನು, ಒಬ್ಬ ಮುದುಕ ಮತ್ತು ಆತನ 18ವರ್ಷದ ಮಗನು ನಡಿಸುತ್ತಿದ್ದ ಚಾ ಹೋಟೆಲಿನಲ್ಲಿ ನಿಂತೆ. ಮಗನಿಗೆ ಪುಸ್ತಕಗಳನ್ನೋದುವುದೆಂದರೆ ಬಹಳ ಆಶೆ. ಅವನೇಕೆ ವಿಶ್ವವಿದ್ಯಾಲಯಕ್ಕೆ ಸೇರಲಿಲ್ಲವೆಂದು ನಾನು ಕೇಳಿದೆ. ಅವನು ನಾನು ವಿಶ್ವವಿದ್ಯಾಲಯಕ್ಕೆ ಸೇರಲು ಮಾಡಿದ ಪ್ರಯತ್ನ ಆಫಲವಾಯಿತು. ಆದರೆ ತನ್ನ ತಂದೆಯ ನಿಮಿತ್ತ ಅದು ಸಾಧ್ಯವಾಗುವಂತೆ ತೋರುವುದಿಲ್ಲ. ತಂದೆಯು ಒಮ್ಮೆ ಹಣವಂತರಾಗಿದ್ದರು. ಈಗ ಬಡವರಾದರೂ ಚಾ ಹೋಟೆಲಿನ ಮ್ಯಾಲಕರಾಗಿರುವುದರಿಂದ ನಾಗರಿಕ ಹಕ್ಕು ಬಾಧ್ಯತೆಗಳಿಲ್ಲವಾಗಿರುವರು. ಆದುದರಿಂದ ತನಗೆ ವಿಶ್ವವಿದ್ಯಾಲಯದಲ್ಲಿ ಸ್ಥಳ ಖಾಲಿಬೀಳುವವಂತೆಯೇ ತೋರುವುದಿಲ್ಲೆಂದು ಹೇಳಿದ. ಅವನಿಗೆ ಮನಸ್ಸಿದ್ದರೆ ತನ್ನ ತಂದೆಯನ್ನೇ ನಿರಾಕರಿಸಿಬಿಟ್ಟು ಹೆಸರನ್ನು ಬದಲಾಯಿಸಿ ತಾನು ಸ್ವತಂತ್ರನೆಂದು ಪ್ರಕಟಪಡಿಸಬಹುದು. ಆಗ ಅವನಿಗೆ ವಿದ್ಯಾಲಯಗಳ ದ್ವಾರಗಳು ತೆರೆಯಲ್ಪಡುವವು. ಅವನ ಸ್ನೇಹಿತರು ಕೆಲವರು ಹಾಗೆಯೇ ಮಾಡಿರುವರು. ಆದರೆ ಇವನಿಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ. ಯಾಕೆಂದರೆ ಅವನ ತಂದೆಯು ಮುದುಕನಾಗಿದ್ದು ವಿಧುರನಾಗಿರುವನು. ಅವನು ಸಾಯುವ ತನಕ ಬಹಿಷ್ಕೃತನಾಗಿರುವಂತಾದರೂ ಮಗನನ್ನು ಬಿಟ್ಟಿರುವಹಾಗಿಲ್ಲ.

ಗ್ರಂಥಕರ್ತಳೊಬ್ಬಳು ನನ್ನೊಡನೊಮ್ಮೆ ಹೀಗೆ ಹೇಳಿದ್ದಳು. "ನನ್ನ ಮಗನು ಈಗ ತಾನೆ ಹೈಸ್ಕೂಲಿಗೆ ಸೇರಿರುವನು. ಅವನು ಬಹಳ ಬುದ್ಧಿಶಾಲಿ ಮತ್ತು ಆಕಾಂಕ್ಷಿಯಿರುವನು. ಅವನೀಗಲೇ ವಿಶ್ವವಿದ್ಯಾಲಯ ಮತ್ತು ಮುಂದಿನ ತನ್ನ 'ಪ್ಲೇನು'ಗಳ ಕುರಿತು ಮಾತಾಡಹತ್ತಿರುವನು. ಆದರೆ ನಾನು ರಸ್ಯದ ಕ್ರಾಂತಿಯನ್ನು ಅಷ್ಟೇನೂ ಪ್ರೀತಿಸದಿರುವುದರಿಂದ ನಾಗರಿಕ ಹಕ್ಕುಗಳಿಂದ ಬಾಹಿರಳಾಗಿರುವೆನು. ಮತ್ತು ಆ ಕಾರಣದಿಂದಾಗಿ ವಿಶ್ವವಿದ್ಯಾಲಯದ ದ್ವಾರವು ಅವನಿಗೆ ಮುಚ್ಚಲ್ಪಡಬಹುದೆಂಬುದು ಆತನಿಗೆ ತಿಳಿದಿಲ್ಲ. ನಾನಾಗಿ ತಿಳಿಸಲು ನನ್ನ ಹೃದಯ ಒಪ್ಪದು. ಅವನಿಗೀ ಅವಸ್ಥೆಯು ತಿಳಿದೊಡನೆಯೇ ಅವನು ಮಹತ್ವದ ನಿರ್ಧಾರ ಮಾಡಬೇಕಾಗುವುದು. ಒಂದೋ ಅವನು ನನ್ನನ್ನು ತ್ಯಜಿಸಿ ಬಿಟ್ಟು, ನನ್ನಿಂದ ಪ್ರತ್ಯೇಕವಾಗುವುದು ಮಾತ್ರವಲ್ಲದೆ ಕಾನೂನು ಪ್ರಕಾರ ನನ್ನನ್ನು ನಿರಾಕರಿಸಿ ಬಿಟ್ಟು ನನ್ನಿಂದ ಪ್ರಾಯಃಶಃ ಎಂದೆಂದಿಗೂ ದೂರವಾಗಬೇಕು.; ಇಲ್ಲವೆ ವಿಶ್ವವಿದ್ಯಾಲಯದ ವಿದ್ಯೆ ಮತ್ತು ಮುಂದಿನ ತನ್ನ ವೃತ್ತಿಗೆ ತಿಲಾಂಜಲಿಯಿತ್ತು ಸುಮ್ಮನಿರಬೇಕು.

ತಿರಸ್ಕೃತರಾಗಿರುವ ರಸ್ಯದ ಸೊತ್ತುವಾದಿಗಳ ಮಕ್ಕಳ ವಿಷಯದಲ್ಲಿ ಕ್ರಾಂತಿಕಾರರು ಅಷ್ಟೊಂದು ಕ್ರೂರ ಪಕ್ಷಪಾತ ತೋರಿಸಲು ಅವರು ಕೊಡುವ ಕಾರಣವೇನೆಂದರೆ ರಸ್ಯದ ಪ್ರಕೃತದ ಪರಿಸ್ಥಿತಿಯಲ್ಲಿ ಅಧ್ಯಾಪಕನಾಗಲಿ, ಇಂಜನೀಯರನಾಗಲಿ, ಪ್ರತಿಯೊಬ್ಬ ಚತುರ ಕೆಲಸಗಾರನೂ ತಮಗೆ ಅಮೂಲ್ಯನಾಗಿರುವಾಗ, ತಾವು ತಮ್ಮ ವಿಶ್ವವಿದ್ಯಾಲಯಗಳ ಸ್ಥಳಗಳನ್ನು ನಮ್ಮ ನವೀನ ಸಮಾಜಕ್ಕೆ ನಿಸ್ಸಂದೇಹವಾಗಿ ವಿಧೇಯರಾಗಿರುವ ಸ್ತ್ರೀ—ಪುರುಷರಿಂದ ತುಂಬಿಸಬೇಕೇ ಹೊರತು ಸಂಶಯಕರ ವಿಧೇಯತೆಯುಳ್ಳವರನ್ನು ಸೇರಿಸಲು ಸಾಧ್ಯವಿಲ್ಲ. ಕಾರಣವೇನೋ ಯುಕ್ತವಾದುದೇ. ಆದರೆ ಇದು, ಸೊತ್ತುವಾದಿಗಳಾದ ಮಾತಾಪಿತೃಗಳ ಪೀಡೆಯ ಭಾರವನ್ನಾಗಲಿ ಅವರ ಮಕ್ಕಳ ಜೀವನದ ತೊಂದರೆಯನ್ನಾಗಲಿ ಕಡಿಮೆಮಾಡುವುದಿಲ್ಲ.

ಖಾಸಗಿ ವ್ಯಾಪಾರಿ, ಉದ್ಯಮಿಗಳಮೇಲೆ ಬೋಲ್ಶೆವಿಕರು ಹಾಕಿರುವ ಸಾಮಾಜಿಕ ಬಹಿಷ್ಕಾರ ಮತ್ತು ತಿರಸ್ಕಾರವು ಹೃದಯದ್ರಾವಕವಿರುವುದು. ಅವರಿಗೆ 'ನೆಪ್ ಮೆನ್' ಎಂಬ ಅತ್ಯಂತ ನಿಂದ್ಯ ಹಾಗೂ ಹೀನವಾದ ಹೆಸರಿಡಲಾಗಿದೆ. ರಸ್ಯದ ಕ್ರಾಂತಿಕಾರರ ದೃಷ್ಟಿಯಲ್ಲಿ ಅದಕ್ಕಿಂತ ಹೇಯವಾದುದು ಇನ್ನಾವುದೂ ಇಲ್ಲ. 'ನೆಪ್ ಮೆನ್' ಎಂದರೆ ಹಂದಿ ನಾಯಿ ಸಮಾನನು. ಅವನು ಸದಾ ದ್ರೋಹಿ, ವಂಚಕ, ವಿಶ್ವಾಸಘಾತುಕನು. ನನ್ನ "ಮಕ್ಕಳು 'ನೆಪ್ ಮೆನ್' ಆಗುವುದಕ್ಕಿಂತಲೂ ದರೋಡೆಗಾರರಾಗುವುದು ಮೇಲೆ"ಂದು ಮೊದಲು ಮಿಲ್ಲ್ಯಾಧೀಶನಾಗಿದ್ದವನೊಬ್ಬನ ಪುತ್ರಿಯು ಉದ್ಗರಿಸಿದ್ದಳು. 'ನೆಪ್ ಮೆನ್' ಆಗಿ ನಿರಂತರವಾದ ತಿರಸ್ಕಾರದ ಪೀಡೆಗೊಳಗಾಗುವುದಕ್ಕಿಂತಲೂ ಗೋಡೆಗೊರಗಿ ನಿಲ್ಲಿಸಿ ಗುಂಡಿನ ಬಾಯಿಗೆ ಕೊಡುವುದು ಹೆಚ್ಚಿನ ಕನಿಕರದ ಕೆಲಸವೆಂದೇ ಈ ಸ್ತ್ರೀಯ ಅಭಿಪ್ರಾಯ. ಇಂತಹ ಪರಿಸ್ಥಿತಿಯಲ್ಲಿ, ಹಿಂದಿನ ಕಾಲದಲ್ಲಿ ರಸ್ಯದ ವ್ಯಾಪಾರೋದ್ಯಮಗಳಲ್ಲಿ ಅಗ್ರಗಣ್ಯರಾದವರೀಗ ಖಾಸಗಿ ಉದ್ಯಮಗಳನ್ನೇ ಬಿಟ್ಟುಬಿಟ್ಟಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಮೃತ್ಯುಪಾಶದಂತೆ ಅದೆಂದರೆ ಅವರು ದೂರವಾಗುವರು. ಅವರೆಲ್ಲಾ ಈಗ ಸರಕಾರದ ಸೇವೆಮಾಡಲು ಸೇರಿ ಕಡಿಮೆ ಸಂಬಳದಲ್ಲಿ ಸರಳ ಮತ್ತು ಮಿತಜೀವನ ನಡಿಸುತ್ತಿರುವರು. ಆದರೆ ಅವರಿಗೆ ತಮ್ಮ ಮಕ್ಕಳನ್ನು ತಮಗೆ ಬೇಕಾದ ವಿದ್ಯಾಲಯಗಳಿಗೆ ಸೇರಿಸುವ, ವಿಶೇಷವಾಗಿ ರಸ್ಯದಲ್ಲಿ ತಾವು ಸ್ವಾಭಿಮಾನಿಗಳಾಗಿ ಜೀವಿಸುವ ಹಕ್ಕಿರುತ್ತದೆ. ಕೆಲವೊಂದು ವ್ಯಾಪಾರ ವಹಿವಾಟುಗಳು ಕಾನೂನಿಗೆ ವಿರುದ್ಧವಾದುವೆಂದು ದಂಡನೆಗೊಳಗಾಗುವ ಭೀತಿಯು ಅವರಿಗಿಲ್ಲ. ಅವರ ಮನಸ್ಸಿನಲ್ಲೀಗ ಯಾವ ವ್ಯಥೆಯೂ ಇಲ್ಲ. ಖಾಸಗಿ ಉದ್ಯಮ ಸಂಬಂಧವಾದ ಯಾವ ತರದ ಹೃದಯವೇದನೆಯನ್ನೂ ಅವರು ಅನುಭವಿಸಬೇಕಾಗಿಲ್ಲ. ಹೇರಳ ಹಣ ಸಂಪಾದಿಸಿ ಕಾಲು ತಿಕ್ಕುವ ಹುರಿಗಿಂತ ಕಳತಿಯಾಗಿರುವುದಕ್ಕಿಂತಲೂ ಗೌರವಪೂರ್ವಕವಾಗಿ ಸರಳ ಹಾಗೂ ಮಿತಜೀವನನಡಿಸುವುದೇ ಅವರಿಗೆ ಲೇಸೆನಿಸಿರುವುದು.

ಹಳ್ಳಿಗಳ ಹೊರಗೆ ಖಾಸಗಿ ಸೊತ್ತಿಂಬುದೇ ನಿರ್ನಾಮವಾಗಹತ್ತಿದೆ. ಪ್ರಕೃತದ ವಿದ್ಯಮಾನಗಳಲ್ಲಿ ಅದು ಸರಕಾರದ ದಬ್ಬಾಳಿಕೆ ಮತ್ತು ಸಾಮೂಹಿಕ ಉದ್ಯಮದೆದುರಲ್ಲಿ ಅಸ್ತಿತ್ವದಲ್ಲಿರುವುದು ಸಾಧ್ಯವಿಲ್ಲ. ರಸ್ಯದಲ್ಲೀಗ ಸೇಕಡ 85ರಷ್ಟರ ಕೈಗಾರಿಕೆಗಳು ಮತ್ತು ವ್ಯಾಪಾರ ವಹಿವಾಟುಗಳು ಸರಕಾರದ ಸಾಮೂಹಿಕ ಸಂಘಗಳ ಅಧೀನವಾಗಿವೆ. ಹೊರಗಣ ದೇವಣಾತಿದಾರರಿಗೂ ವ್ಯಾಪಾರಿಗಳಿಗೂ ಕೆಲ ಮಟ್ಟಿನ ರಿಯಾಯಿತಿ ತೋರಿಸಲ್ಪಡುತ್ತದೆ. ಅದು ಕೂಡಾ ಸ್ವಲ್ಪ ಸಮಯದವರಿಗೆ ಮಾತ್ರ. ರಸ್ಯದ ಈ ಸಾಮೂಹಿಕ ಉದ್ಯಮವು ಇಷ್ಟರ ವರೆಗೆ ಅಷ್ಟೊಂದು ಜಯಶೀಲವಾಗಿರುವುದೆಂದು ಹೇಳಬರುವುದಿಲ್ಲ. ಅದು ಜಯಶೀಲವಾಗಬೇಕಾದರೆ ಅಮೆರಿಕವೇ ಮೊದಲಾದ ದೇಶಗಳಿಗಿಂತ ಸಾಮಾನುಗಳನ್ನು ಅಗ್ಗವಾಗಿಯೂ ಉತ್ಕೃಷ್ಟವಾಗಿಯೂ ತಯಾರಿಸಿ ವಿಕ್ರಯಿಸಬೇಕು. ಇಲ್ಲವಾದರೆ ಅದು ಇತರ ದೇಶಗಳೊಂದಿಗೆ ಮೇಲಾಟ ನಡಿಸಿ ಯಶಸ್ವಿಯಾಗಲು ಸಾಧ್ಯವಿಲ್ಲ. ಖಾಸಗಿ ಉದ್ಯಮ ಮತ್ತು ವ್ಯಾಪಾರಕ್ಕೂ, ರಸ್ಯದ ಸಾಮೂಹಿಕ ಉತ್ಪತ್ತಿಗೂ ಈಗ ಪ್ರಚಂಡ ಸ್ಪರ್ಧೆ ಮಾತ್ರವಲ್ಲದೆ ಯುದ್ಧವೇ ನಡೆದಿರುವುದು. ಇದರಲ್ಲಿ ಯಾವುದು ಜಯಶೀಲವಾಗುವುದೋ ನೋಡಬೇಕು. ಅಂತೂ ಇದರ ಪರಿಣಾಮವು ಇಡೀ ಲೋಕವನ್ನೇ ಅವಲ, ಬದಲು ಮಾಡಿ ಬಿಡದಿರಲಾರದು. ಪ್ರತಿಯೊಂದು ಆಫೀಸು ಕಾರ್ಖಾನೆ, ಶೋಧನಾಲಯಗಳಲ್ಲಿ, ಬುದ್ಧಿಶಕ್ತಿ, ಶರೀರಶಕ್ತಿ, ಯಾಂತ್ರಿಕ ಚಾತುರ್ಯ, ಸಂಘಟನಾ ಪ್ರವೀಣತೆಯಿಂದ, ಇದ್ದಲು, ಕಬ್ಬಿಣ ಮತ್ತು ಎಣ್ಣೆಯ ಮೂಲಕವಾಗಿ ಎಡೆಬಿಡದೆ ಹೋರಾಟ ನಡೆದಿರುವುದು. ಇದು ವಿನಾಶಕ ಯುದ್ಧವಲ್ಲ; ವಿಧಾಯಕ ಸ್ಪರ್ಧೆ.

ತೋರುವಿಕೆಗೆ ಈ ಯುದ್ಧವು ಅಪಹಾಸ್ಯಕರವಾಗಿರುವುದು. ಲೋಕದಲ್ಲೇ ಅಗ್ರಗಣ್ಯವಾದ ಮಹಾ ಮಹಾ ಯಾಂತ್ರಿಕ ಕಾಮಗಾರಿಗಳಾದ ಜರ್ಮನಿಯ ಕ್ರುಫ್ ಕೈಗಾರಿಕೆಗಳು, ಅಮೆರಿಕದ ಫೋರ್ಡ್ ಮೋಟರ್ ಕಂಪೆನಿ, ಜನರಲ್ ಮೋಟರ್ಸ್, ಯುನೈಟೆಡ್ ಸ್ಟೇಟ್ಸ್ ಸ್ಟೀಲ್ ಕೋರ್ಪರೇಶನ್, ಇಂಟರ್‌ನೇಶನಲ್ ಹಾರ್ವೆಸ್ಟರ್, ಜನರಲ್ ಇಲೆಕ್ಟ್ರಿಕ್ ಕಂಪೆನಿ ಮೊದಲಾದ ನೂರಾರು ಖಾಸಗಿ ಉದ್ಯಮಗಳಿಗೆ ಹೋಲುವಂಥಾದ್ದು ರಸ್ಯದಲ್ಲೇನಿದೆ? ಸಾಮಾನುಗಳನ್ನು ತಯಾರಿಸುವ ವಿಚಿತ್ರ ಯಂತ್ರಪದ್ಧತಿ ಮಾತ್ರವಲ್ಲದೆ ಅವನ್ನು ಕೂಡಲೆ ಹಂಚುವ ಅಮೆರಿಕದಂತಹ ವಿಸ್ಮಯಕರ ವ್ಯವಸ್ಥೆಯು ರಸ್ಯದಲ್ಲೆಲ್ಲಿದೆ? ರಸ್ಯದಲ್ಲಿ ಅಂತಹ ಅದ್ಭುತವೇನೂ ಇಲ್ಲ. ಅದು ಕೈಗಾರಿಕೋದ್ಯಮಗಳಲ್ಲಿ ಬಹಳ ಹಿಂದಿದೆ. ಆದರೆ ಆದರ ನೂತನ ಪ್ರಯೋಗದಿಂದಾಗಿ ಸಾಮಾನುಗಳ ತಯಾರಿ, ಹಂಚುವಿಕೆ ಮತ್ತು ಉಪಯೋಗದಲ್ಲಿ ನಡೆಯುವ ದುರ್ವ್ಯಯವು ಉಳಿಸಲ್ಪಡುವುದು. ಯಾಕೆಂದರೆ ವೈಯಕ್ತಿಕವಾಗಿ ಸ್ಥಾಪಿತವಾಗಿರುವ ಉದ್ಯಮಗಳು ಎಷ್ಟೊಂದು ಚತುರತೆಯಿಂದ ಅತ್ಯಂತ ಮಿತವ್ಯಯದಿಂದ ನಡಿಸಲ್ಪಟ್ಟರೂ, ಹೊರಗಣ ಸಮಾಜದ ಅವ್ಯವಸ್ಥೆಯ ನಿಮಿತ್ತ ದುರ್ವ್ಯಯವಾಗುವುದು ತಪ್ಪುವುದೇ ಇಲ್ಲ. ಆದರೆ ರಸ್ಯದ ನೂತನ ಸಮಾಜ ರಚನೆಯಲ್ಲಿ ಅಂತಹ ದುರ್ವ್ಯಯಕ್ಕೆ ಆಸ್ಪದವಿಲ್ಲ. ಆದುದರಿಂದ ರಸ್ಯದ ನವೀನ ವ್ಯವಸ್ಥೆಯು ಜಯಶೀಲವಾಗುವ ಕುರಿತು ಬೋಲ್ಶೆವಿಕರಿಗೇನೂ ಸಂಶಯವಿಲ್ಲ. ರಸ್ಯವು ಈ ನೂತನ ಪ್ರಯೋಗದಲ್ಲಿ ಜಯಹೊಂದಿದರೆ ಸಾಮೂಹಿಕವಾದವು ಲೋಕದಲ್ಲೆಲ್ಲಾ ಪ್ರಚಾರಕ್ಕೆ ಬಂದು ಖಾಸಗಿ ಸೊತ್ತುವಾದವು ಮೂಲೆ ಗುಂಪಾಕುವುದು. ಆದರೆ ರಸ್ಯವು ಅಪಜಯ ಹೊಂದಿದರೆ ಯಥಾ ಪ್ರಕಾರ ಖಾಸಗಿ ಸೊತ್ತುವಾದವೇ ಲೋಕದಲ್ಲಿ ಮಾತ್ರವಲ್ಲ ರಸ್ಯದಲ್ಲಿಯೂ ನೆಲೆಗೊಳ್ಳುವುದು.

ಸಮಾಚಾರ ಸಂಗ್ರಹ

ಹರಿಜನರಿಗೆ ದೇವಸ್ಥಾನ ಪ್ರವೇಶ, ಮುಂದಿನ ಕಾಂಗ್ರೆಸ್ ಅಧಿವೇಶನ ೨೭ ವರ್ಷಗಳ ಬಂಧನದ ಮೇಲೆ ಬಿಡುಗಡೆ, ಬೆಂಕಿಯಿಂದ ಇಡೀ ಹಳ್ಳಿ ಸುಟ್ಟುಹೋಯಿತು, ಪೂನದ ಸತ್ಯಾಗ್ರಹ, ಡಬ್ಲಿನಿನಲ್ಲಿ ಸ್ಫೋಟ

ಹರಿಜನರಿಗೆ ದೇವಸ್ಥಾನ ಪ್ರವೇಶ

ತಿರುವಾಂಕೂರಿನ ಮಾದರಿಯನ್ನನುಸರಿಸಿ ಕಥಿಯಾವಾಡದ ಲಥಿ ಸಂಸ್ಥಾನದ ಥಾಕೂರುಸಾಹೇಬರು ಇದೇ ತಾ. 16ರಲ್ಲಿ ಅಂಕ್ಷೇತ್ರ ಎಂಬ ಸುಪ್ರಸಿದ್ಧ ಸಾರ್ವಜನಿಕ ಮಂದಿರವನ್ನು ಎಲ್ಲಾ ಜಾತಿಯ ಹಿಂದುಗಳಿಗೂ ತೆರೆದು ಹಾಕಿರುವರು ಈ ದೇವಸ್ಥಾನದಲ್ಲಿ ರಾಮಚಂದ್ರ, ಅನ್ನಪೂರ್ಣ ದೇವಿ, ಮಹದೇವ, ಹನುಮಂತ ಮತ್ತು ಸತ್ಯನಾರಾಯಣ ವಿಗ್ರಹಗಳಿರುವವು. ಕಥಿಯಾವಾಡದ ಸಂಸ್ಥಾನಗಳಲ್ಲಿ ಮೊದಲಾಗಿ ಹರಿಜನರಿಗೆ ದೇವಸ್ಥಾನವನ್ನು ತೆರೆದ್ದು ಹಾಕಿದುದು ಲಥಿಯೇ ಸರಿ.

ಮುಂದಿನ ಕಾಂಗ್ರೆಸ್ ಅಧಿವೇಶನ

ಇದೇ ತಾ.11ರಲ್ಲು ಮಹಾತ್ಮಾಗಾಂಧಿಯವರು ಸರ್ದಾರ್ ವಲ್ಲಭಾಯಿ ಪಟೇಲ್ ಮತ್ತು ಶ್ರೀ ಮಹದೇವ ದೇಸಾಯಿಯವರೊಂದಿಗೆ ಬಾರ್ದೋಲಿ ತಾಲೂಕಿನ ಸ್ವೈದಾಲಿ, ಹರಿಪುರ ಮತ್ತು ಆಫ್ವಾ ಗ್ರಾಮಗಳನ್ನು ಸಂದರ್ಶಿಸಿ ಕಾಂಗ್ರೆಸ್ ಅಧಿವೇಶನ ನಡಿಸಲು ಯಾವ ಸ್ಥಳವು ಒಳ್ಳೇದೆಂಬುದನ್ನು ಪರೀಕ್ಷಿಸಿ ಹರಿಪುರವು ಯೋಗ್ಯವಾದುದೆಂದು ನಿಶ್ಚೈಸಿರುವರೆಂದು ತಿಳಿದು ಬರುತ್ತದೆ.

೨೭ ವರ್ಷಗಳ ಬಂಧನದ ಮೇಲೆ ಬಿಡುಗಡೆ

ಮಹಾರಾಷ್ಟ್ರದ ಸುಪ್ರಸಿದ್ಧ ಮುಖಂಡರೂ ಉಜ್ವಲ ಸಮಾಜ ಸುಧಾರಕರೂ ಆದ ಶ್ರೀ ವಿ. ಡಿ. ಸಾವರ್ಕರರು ರಾಜದ್ರೋಹದ ಆರೋಪದ ನಿಮಿತ್ತ 1910ರಲ್ಲಿ ಇಂಗ್ಲೆಂಡಿನಲ್ಲಿ ಕೈದುಮಾಡಲ್ಪಟ್ಟು ಅಂದಿನಿಂದ ನಿರ್ಬಂಧನಲ್ಲಿರಿಸಲ್ಪಟ್ಟಿದ್ದರು ಇತ್ತಲಾಗಿ ರತ್ನಗಿರಿಯಲ್ಲಿ ನಿರ್ಬಂಧದಲ್ಲಿರಿಸಲ್ಪಟ್ಟ, ಅವರು ಅಲ್ಲಿಂದ ಬೇರೆ ಎಲ್ಲಿಗೂ ಹೋಗದಂತಾಗಿದ್ದಿತು. ಈಗ ಅವರ ಮೇಲಿನ ಎಲ್ಲಾ ನಿರ್ಬಂಧಗಳನ್ನು ತೆಗೆದು ಹಾಕಿ ಇದೇ ತಾ. 10ರಲ್ಲು ೨೭ವರ್ಷಗಳ ನಿರ್ಬಂಧದನಂತರ ಬಿಡುಗಡೆ ಮಾಡಲಾಗಿದೆ.

ಬೆಂಕಿಯಿಂದ ಇಡೀ ಹಳ್ಳಿ ಸುಟ್ಟು ಹೋಯಿತು.

ಸಂಯುಕ್ತ ಪ್ರಾಂತದ ಇಜೋಗ ಎಂಬ ಹಳ್ಳಿಯಲ್ಲಿ ಭಯಂಕರ ಬೆಂಕಿಯೆದ್ದು ಬಹುತೇಕ ಇಡೀ ಹಳ್ಳಿಯು ಸುಡಲ್ಪಟ್ಟಿರುವುದು. ಬೆಂಕಿಯು 72ಘಂಟೆಗಳ ವರೆಗೆ ಉರಿಯಿತು. ನೂರಾರು ಮಣ ದವಸ ಧಾನ್ಯಗಳು ಸುಟ್ಟುಹೋಗಿರುವವು. ಹಲವು ಜಾನುವಾರುಗಳು ಹತವಾಗಿರುವವು. ಮದುವೆಯ ಔತಣಕ್ಕಾಗಿ ಮಿಠಾಯಿ ತಯಾರಿಸುತ್ತಿದ್ದಾಗ ಗಾಳಿಬೀಸಿ ಒಲೆಯಿಂದ ಕಿಡಿಹಾರಿ ಹುಲ್ಲು ಮೂಟೆಯೊಂದಕ್ಕೆ ಬೆಂಕಿ ಹಿಡಿದು ಇಡೀ ಹಳ್ಳಿಗೆ ಹಬ್ಬಿತು. ಈ ಹಳ್ಳಿಗರಿಗೆ ಸಹಾಯ ಕೆಲಸವು ನಡೆಯುತ್ತಿದೆ.

500 ಮನೆಗಳು ಸುಟ್ಟುಹೋದುವು

ಇದೇ ತಾ. 12ನೇ ರಾತ್ರಿ ಒರಿಸ್ಸದ ಜಟ್ನಿ ಎಂಬ ಹಳ್ಳಿಯಲ್ಲಿ ದೊಡ್ಡ ಬೆಂಕಿಎದ್ದು 500 ಮನೆಗಳು ಸುಟ್ಟುಹೋಗಿರುವವು. ಹಲವು ಜಾನುವಾರುಗಳು ಕೊಲ್ಲಲ್ಪಟ್ಟಿರುವವು. 3 ಜನರು ಹತರಾಗಿರುವರು, ನೀರಿನ ಕೊರತೆಯ ಪರಿಸ್ಥಿತಿಯ ಮತ್ತಷ್ಟು ಉಗ್ರಗೊಳಿಸಿತು. ಯೂನಿಯನ್ ಬೋರ್ಡು ಆಫೀಸು ರಿಕಾರ್ಡುಗಳ ಸಮೇತ ಸಂಪೂರ್ಣ ಸುಟ್ಟುಹೋಗಿರುವುದು.

ಮಧ್ಯಪ್ರಾಂತದ ಎಸೆಂಬ್ಲಿ ಮೆಂಬರರ ಸಭೆ

ಇದೇ ತಾ. 13ರಲ್ಲು ಮಧ್ಯಪ್ರಾಂತದ ಎಸೆಂಬ್ಲಿ ಮೆಂಬರರ ಸಭೆಯು ನಾಗಪುರದಲ್ಲಿ ಜರಗಿತು, ಸುಮಾರು 5000ಮಂದಿ ಪ್ರೇಕ್ಷಕರು ನೆರೆದುಬಂದಿದ್ದರು. ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ನಾಯಕರಾದ ಡಾಕ್ಟರ್. ಎನ್. ಬಿ. ಖಾರೆಯವರು ಅಧ್ಯಕ್ಷರಾಗಿದ್ದರು. ದೇಶಕ್ಕೆ ಮತ್ತು ಕಾಂಗ್ರೆಸ್ಸಿಗೆ ವಿಧೇಯವಾಗಿರುವ ಪ್ರತಿಜ್ಞೆಯನ್ನು ಡಾಕ್ಟರ್ ಖಾರೆಯವರು ಓದಿಹೇಳಿ ಸುಮಾರು 300ಮಂದಿ ಪ್ರತಿನಿಧಿಗಳದನ್ನು ಉಚ್ಚರಿಸಿದರು. ಡಿಲ್ಲಿ ಕನ್ವೆನ್ಶನಿನಲ್ಲಿ ಮಂಜೂರಾದ ರಾಷ್ಟ್ರೀಯ ಕೇಳಿಕೆಯನ್ನು ಸಮರ್ಥಿಸುವ, ಚುನಾವಣೆಯಲ್ಲಿ ಪ್ರಕಟಿಸಲ್ಪಟ್ಟ ಕಾಂಗ್ರೆಸಿನ ಕಾರ್ಯಕ್ರಮವನ್ನು ಪುಷ್ಟೀಕರಿಸುವ ನಿರ್ಣಯಗಳು ಮಂಜೂರಾದುವು. ಭೂಕಂದಾಯ ಮತ್ತು ಗೇಣಿಯನ್ನು ಸೇಕಡ 20ರಷ್ಟು ಇಳಿಸಬೇಕು; ರೂ 500ರ ಕೆಳಗಣ ವ್ಯವಸಾಯೋತ್ಪತ್ತಿಯ ಮೇಲೆ ಕರಹೊರಿಸಬಾರದು; ಸರಕಾರಿ ನೌಕರರ ಸಂಬಳವು ಕಡಿಮೆಯೆಂದರೆ ತಿಂಗಳಿಗೆ ರೂ. 30 ಆಗಿರಬೇಕೆಂಬ ಸಮತಾವಾದಿಗಳ ಸೂಚನೆಗಳು ಪ್ರಬಲ ಬಹುಮತದಿಂದ ಬಿದ್ದುಹೋದುವು. ಆ ಮೇಲೆ ಇಂಟರಿಮ್ ಮಂತ್ರಿಗಳನ್ನು ನಿಷೇಧಿಸುವ, ಕೂಡಲೆ ಎಸೆಂಬ್ಲಿ ಸಭೆ ಕರೆಯುವಂತೆ ಗವರ್ನರರನ್ನು ಒತ್ತಾಯ ಪಡಿಸುವ, ಸ್ಪೈನಿನ ಅಂತಃಕಲಹದಲ್ಲಿ ಸ್ಪೆನಿಶ್ ಸರಕಾರದೊಡನೆ ಸಹಾನುಭೂತಿ ತೋರಿಸುವ ಠರಾವುಗಳು ಪಾಸಾದುವು.

ಪೂನದ ಸತ್ಯಾಗ್ರಹ

ಒಟ್ಟು 1008 ಮಂದಿಯ ದಸ್ತಗಿರಿ

ಪೂನದ ಮಾರುತಿ ಗುಡಿಯಲ್ಲಿ ಘಂಟೆ ಬಾರಿಸಿ ಪೂಜೆ ನಡಿಸಬಾರದೆಂದು ಪೂನದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಕೊಟ್ಟ ಹುಕುಮಿನ ಅವಧಿಯು ಇದೇ ತಾ. 13ರಲ್ಲು ಕೊನೆಗೊಳ್ಳುವುದು. ಅನ್ಯಾಯವಾದ ಈ ಹುಕುಮನ್ನು ಉಲ್ಲಂಘಿಸಿ ನಡೆದ ಸತ್ಯಾಗ್ರಹದಲ್ಲಿ ಒಟ್ಟು 1008ಮಂದಿ ಕೈದುಮಾಡಲ್ಪಟ್ಟಿರುವರು. ಕೊನೆಯ ದಿನ ಸತ್ಯಾಗ್ರಹ ನಡಿಸಲು ಅನೇಕರು ಆತುರಗೊಂಡು ಬಂದಿದ್ದರು. ಈ ದಿನ ಒಟ್ಟು 125ಮಂದಿ ಘಂಟೆಬಾರಿಸಿ 80ಮಂದಿ ದಸ್ತಗಿರಿಮಾಡಲ್ಪಟ್ಟಿರುವರು. ಇವತ್ತಿನ ಸತ್ಯಾಗ್ರಹದಲ್ಲಿ ಹಲವು ಮಂದಿ ಕಾಂಗ್ರೆಸ್ ಪಕ್ಷೀಯರು ಭಾಗಿಯಾಗಿದ್ದರು. ಕಾಂಗ್ರೆಸ್ ಎಸೆಂಬ್ಲಿ ಮೆಂಬರರಾದ ಶ್ರೀ. ಬಿ. ಎಮ್. ಗುಪ್ತೆಯವರೂ ಶ್ರೀ! ಟಿಲಗಾಂವ್‌ಕರರೂ ಸತ್ಯಾಗ್ರಹಮಾಡಿ ಕೈದುಮಾಡಲ್ಪಟ್ಟಿರುವರು.

ಡಬ್ಲಿನಿನಲ್ಲಿ ಸ್ಫೋಟ

ಇದೇ ತಾ. 23ರಲ್ಲು ಐರ್ಲೆಂಡಿನ ಪ್ರಧಾನ ಪಟ್ಟಣವಾದ ಡಬ್ಲಿನಿನಲ್ಲಿ ಸ್ಫೋಟವುಂಟಾಗಿ ಇಂಗ್ಲೆಂಡಿನ ಅರಸರಾದ 3ನೇ ಜೋರ್ಜರ ಕುದುರೆಯ ಮೇಲೆ ಕೂತಿದ್ದ ಶಿಲಾ ಪ್ರತಿಮೆಯು ಮುರಿದುಹಾಕಲ್ಪಟ್ಟಿರುವುದು ಕುದುರೆಯು ಅದರ 15 ಅಡಿ ಎತ್ತರದ ಪೀಠದಿಂದ 20ಅಡಿ ದೂರ ಮುರಿದು ಬಿದ್ದಿರುವುದು. ಕುದುರೆಯ ಮೇಲಿನ ಅರಸರಪ್ರತಿಮೆಯು ದೂರಕ್ಕೆಸೆಯಲ್ಪಟ್ಟ ಅವರ ಒಂದು ತೋಳು ಹಾರಿಹೋಗಿರುವುದು. ಇನ್ನೊಂದು ಮುರಿದು ಅಲ್ಲಿಯೇ ಸಿಕ್ಕಿಕೊಂಡಿರುವುದು. ಇದು ಐರ್ಲೆಂಡಿನ ರಿಪಬ್ಲಿಕನ್ ಪಕ್ಷೀಯರ ಪ್ರತೀಕಾರವೆಂದು ನಂಬಲಾಗಿದೆ. ಯಾಕೆಂದರೆ, ಈಗ ತಾನೆ ನಡೆದ ಇಂಗ್ಲೆಂಡಿನ ಚಕ್ರವರ್ತಿಗಳ ಕಿರೀಟಧಾರಣೋತ್ಸವದಲ್ಲಿ ಅವರು ಐರ್ಲೆಂಡಿಗೂ ರಾಜರೆಂದು ನಿರೂಪಿಸಿದುದನ್ನು ನಿಷೇಧಿಸುವುದಕ್ಕಾಗಿ ಈ ರಿಪಬ್ಲಿಕನ್ ಪಕ್ಷೀಯರು ಕಿರೀಟಧಾರಣೆಯ ದಿನ ದೊಡ್ಡ ಪ್ರದರ್ಶನ ನಡಿಸಲಿದ್ದಾಗ ಅದನ್ನು ಐರಿಷ್ ಸರಕಾರವು ನಿಷೇಧಿಸಿದ್ದಿತು.

ರಸ್ತೆಯ ಬದಿಯಲ್ಲಿ ಮಲಗಿದ್ದವರು ಕೊಲ್ಲಲ್ಪಟ್ಟರು.

ಇದೇ ತಾ. 13ನೇ ಮುಂಜಾನೆ ಬೊಂಬಾಯಿಯ ಪರೇಲಿನ ಪ್ಯೊಬವಾಡಿ ಜಂಕ್ಷನಿನ ಬಳಿ ಒಂದು ಲೋರಿಯು ರಸ್ತೆ ಬಿಟ್ಟು ಜನರು ನಡೆದು ಹೋಗುವ ಬದಿಗೆ ಹತ್ತಿ ಹೋಗಿ ಅಲ್ಲಿ ಮಲಗಿದ್ದ 6 ಜನರಮೇಲೆ ಸರಿದು 3ಮಂದಿ ಕೂಡಲೇ ಕೊಲ್ಲಲ್ಪಟ್ಟಿರುವರು. ಇನ್ನು ಮೂರುಮಂದಿಗೆ ಬಹಳ ಪೆಟ್ಟಾಗಿರುವುದು. ಪೋಲೀಸರೀಗ ಈ ಲೋರಿಯನ್ನು ಹುಡುಕುತ್ತಿರುವರು.

ಹಿಂದುಸ್ಥಾನಿ ಸೇವಾದಳ ಕಟ್ಟಡವನ್ನು ಬಿಟ್ಟುಕೊಟ್ಟರು.

1932ರ. ಕಾಯಿದೆಭಂಗ ಚಳವಳದ ಸಂದರ್ಭದಲ್ಲಿ ಹಿಂದುಸ್ಥಾನಿ ಸೇವಾದಳವು ಬೇಕಾಯಿದೆಶೀರ ಸಂಸ್ಥೆಯೆಂದು ಸರಕಾರವು ನಿರೂಪಿಸಿ ಬಾಗಲಕೋಟೆಯ ಅದರ ಕಟ್ಟಡವನ್ನು ವಶಮಾಡಿ ಕೊಂಡಿತ್ತು. ಇದೇ ತಾ. 15ರಲ್ಲು ಪೋಲೀಸರು ಈ ಕಟ್ಟಡವನ್ನು ಬಿಟ್ಟುಕೊಟ್ಟಿರುವರು. ಈಗ ಮೈಸೂರಲ್ಲಿರುವ ಡಾಕ್ಟರ್ ಹರ್ಡಿಕರರು ಬೇಗನೇ ಬಾಗಲುಕೋಟೆಗೆ ಹೋಗಿ ಸೇವಾದಳ ಕಟ್ಟಡವನ್ನು ವಶಮಾಡಿಕೊಳ್ಳಲಿರುವರು.

ಬೊಂಬಾಯಿಯಲ್ಲಿ ಪೋಲೀಸರ ಜಪ್ತಿ

ಇದೇ ತಾ. 13ರಲ್ಲು ಬೊಂಬಾಯಿಯ ಗುಪ್ತಪೋಲೀಸರು ಪ್ರಸಿದ್ಧ ಮಜೂರ ಮುಖಂಡರಾದ ಶ್ರೀ. ಎಸ್. ಆರ್. ಶೆಟ್ರ ವಾಸಸ್ಥಳವಾದ ಮಾತುಂಗದ ಕಿಂಗ್ಸ್ ಸರ್ಕಲ್‌ನ ಹಾಜಿ ಚೇಂಬರ್ಸನ್ನು ಸುಮಾರು ೧ಘಂಟೆಯವರೆಗೆ ಜಪ್ತಿಮಾಡಿದರು. ಆಕ್ಷೇಪಕರವಾದುದೇನೂ ದೊರಕಲಿಲ್ಲ.

ಹಳ್ಳಿಗಳಲ್ಲಿ ಕಾಂಗ್ರೆಸ್ ಪ್ರಚಾರ

ಹಳ್ಳಿಯವರ ಪರಿಸ್ಥಿತಿಯನ್ನು ಸ್ವತಹ ಪರಿಶೀಲಿಸಿ, ಅವರಲ್ಲಿ ಕಾಂಗ್ರೆಸ್ ಪ್ರಚಾರ ಮಾಡಿ ಅವರೊಡನೆ ನಿಕಟ ಸಂಬಂಧ ಬೆಳೆಸಲು, ತಂಜಾವೂರಿನ ವಕೀಲರಾದ ಟಿ. ವಿ. ಸದಾಗೋಪಾಚಾರ್ಯರ್ ಮತ್ತು ಗಾಂಧಿ ಮಿಶನ್ ಸೊಸೈಟಿಯ ಸ್ವಾಮಿ ನಿರ್ಮಲಾನಂದ ಭಿಕ್ಷು ಇವರ ನೇತೃತ್ವದಲ್ಲಿ 12ಮಂದಿಯ ಜಾಥಾ ಒಂದು ತಂಜಾವೂರು ಮತ್ತು ಆರ್ಕಾಡುಜಿಲ್ಲೆಗಳ ಹಳ್ಳಿಗಳಲ್ಲಿ ಇದೇ ತಾ. 9ರಿಂದ ಸಂಚರಿಸುತ್ತಿರುವುದು. ಈ ಜಾಥಾದಲ್ಲಿ ಕುಂಭಕೋಣದ

THE

PANGAL NAYAK BANK

LIMITED.

ESTABLISHED 1920.

Paid up Capital: Rs. 1,82,100/-

***Head Office:* UDIPI.**

Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ಹ್ಯಾಸ್ಕೂಲಿನ ಅಸಿಸ್ಟಾಂಟರೊಬ್ಬರೂ ಸೇರಿರುವರು. ಇವರು ಹಳ್ಳಿಗಳವರನ್ನು ಕಂಡು ಮಾತಾಡಿ, ಸಭೆಸೇರಿಸಿ ಭಾಷಣ ಮಾಡುವುದು ಮಾತ್ರವಲ್ಲದ ಹರಿಜನ ಕೇರಿಗಳನ್ನು ಸಂದರ್ಶಿಸಿ ಅವುಗಳನ್ನು ಸ್ವತಹ ಗುಡಿಸಿ ನಿರ್ಮಲಗೊಳಿಸಿ ಸ್ವಚ್ಛವಾಗಿರಿಸುವಂತೆ ಮಾಡುವರು.

ಬೊಂಬಾಯಿಯ ಮಂತ್ರಿ ಮಂಡಲದ ಮೇಲೆ ಅವಿಶ್ವಾಸ

ಬೊಂಬಾಯಿಯ ಎಸೆಂಬ್ಲಿಯ ಒಟ್ಟು 201 ಮೆಂಬರರ ಪೈಕಿ 106 ಮೆಂಬರರ ಸಹಿ ಪಡೆದು, ಬೊಂಬಾಯಿ ಎಸೆಂಬ್ಲಿ ಪಕ್ಷದ ನಾಯಕರಾದ ಶ್ರೀ. ಬಿ. ಜಿ. ಖೇರರು ಗವರ್ನರರಿಗೆ ನಿರೂಪಣೆಯೊಂದನ್ನೊಪ್ಪಿಸಿರುವರು ಅದರಲ್ಲವರು ಇಂಟೆರಿಮ್ ಮಂತ್ರಿಗಳ ಮೇಲೆ ಅವಿಶ್ವಾಸ ಸೂಚಿಸಿ, ಎಸೆಂಬ್ಲಿಯ ಅಥವಾ ಜನತೆಯ ಪರವಾಗಿ ಯಾವ ಕೆಲಸಮಾಡುವುದಕ್ಕೂ ಅವರಿಗೆ ಹಕ್ಕಿರುವುದಿಲ್ಲೆಂದು ನಿಷೇಧಿಸಿರುವರು.

ಸರ್. ಟಿ. ಬಿ. ಸಪ್ರೂಗಳು

ಇದೇ ತಾ. 13ರಲ್ಲು ಲಂಡನಿನಲ್ಲಿ ಹಿಂದೂವಿನ ಪ್ರತಿನಿಧಿಗೆ ಭೇಟಿಕೊಟ್ಟಾಗ ಈ ರೀತಿ ಹೇಳಿರುವರು. "ಹಿಂದುದೇಶದ ರಾಜಕೀಯ ಬಿಕ್ಕಟ್ಟನ್ನು ನಿವಾರಿಸಿ ಶಾಂತಿಯನ್ನುಂಟುಮಾಡುವ ಪ್ರಯತ್ನಕ್ಕಾಗಿಯೇ ನಾನೇನೂ ಇಲ್ಲಿಗೆ ಬಂದಿಲ್ಲ ನಾನು ಆ ವಿಷಯದಲ್ಲಿ ಸಹಾಯಮಾಡಲು ಸಿದ್ಧನಿರುವೆನು ಆದರೆ ಯಾರಪರವಾಗಿಯೂ ಆ ಪ್ರಯತ್ನನಡಿಸಲು ನಾನು ಅಧಿಕೃತನಾಗಿರುವುದಿಲ್ಲ ನಾನು ಇಷ್ಟರಲ್ಲೇ ಲೋರ್ಡ್ ಲೋಧಿಯನರೇ ಮೊದಲಾದವರೊಡನೆ ಮಾತಾಡಿರುವೆನು ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರನ್ನು ಕಾಣುವ ನಿರೀಕ್ಷೆಯಿಂದಿರುವೆನು." ಎಂದು ಹೇಳಿ ಸರ್ ಸಪ್ರೂಗಳು, ಕಾಂಗ್ರೆಸಿನವರು ಚುನಾವಣೆಯಲ್ಲ ಜಯಶೀಲರಾದುದರಿಂದ ಮಂತ್ರಿ ಪದವಿಸ್ವೀಕರಿಸಲೇ ಬೇಕಿತ್ತು. ಹಾಗೆಯೇ ಅವರಿಗೆ ಓಟುಕೊಟ್ಟ ಜನಸಮುದಾಯವು ನಿರೀಕ್ಷಿಸುತ್ತಿದ್ದಿತು. ಗವರ್ನರರು ಅನುನಿತ್ಯದ ರಾಜ್ಯಭಾರದಲ್ಲಿ ಕೈಹಾಕಬಾರದೆಂದು ಆಕ್ಟಿನಲ್ಲೇ ಇದೆ ಅದಕ್ಕೆ ವಿರುದ್ಧವಾಗಿ ಅವರು ಆಡಳಿತದಲ್ಲಿ ಕೈಹಾಕಿ ಆತಂಕಮಾಡಿದರೆ ಅವರನ್ನು ತಪ್ಪಿನಲ್ಲ ಹಾಕಿ ಕಾಂಗ್ರೆಸಿನವರು ತಮ್ಮ ಹುದ್ದೆಗೆ ರಾಜಿನಾಮೆ ಕೊಟ್ಟು ಹೊರಬರಬಹುದಿತ್ತು. ಅದರಿಂದ ಕಾಂಗ್ರೆಸಿಗೆ ಮತ್ತಷ್ಟು ಬಲಬರುತ್ತಿತ್ತೆಂದು ಅಭಿಪ್ರಾಯಪಿತ್ತಿರುವರು

ರಾಜಿನಾಮೆಯೋ? ತೆಗೆದು ಹಾಕುವುದೋ?

ಶ್ರೀ ರಾಜಾಜಿಯವರ ಸ್ಪಷ್ಟೀಕರಣ

ಈಗ ಕಾಂಗ್ರೆಸು ಮತ್ತು ಸರಕಾರಗಳೊಳಗಣ ಭಿನ್ನತೆಯು, ಮಂತ್ರಿಗಳು ರಾಜಿನಾಮೆಕೊಡುವುದೋ? ಅವರನ್ನು ಗವರ್ನರರು ಅಧಿಕಾರದಿಂದ ತೆಗೆದು ಹಾಕುವುದೋ? ಎಂಬ ಪ್ರಶ್ನೆಯಮೇಲೆ ಮಾತ್ರ ಅವಲಂಬಿಸಿದೆ ಶ್ರೀ. ಟಿ ಆರ್. ವೆಂಕಟ್ರಮಣ ಶಾಸ್ತ್ರಿಗಳೇ ಮೊದಲಾದವರು, ರಾಜಿನಾಮೆಗೂ ತೆಗೆದುಹಾಕುವುದಕ್ಕೂ ಹೆಚ್ಚಿನ ಭೇದವೇನೂ ತೋರುವುದಿಲ್ಲೆಂದು ಅಭಿಪ್ರಾಯಪಿತ್ತಿರುವರು ಆದರೆ ಗಾಂಧಿಜೀಯವರೂ, ಶ್ರೀ. ಸಿ ರಾಜಗೋಪಾಲಾಚಾರ್ಯರೂ ಅವುಗಳೊಳಗೆ ಹೆಚ್ಚಿನ ಭೇದವಿರುವುದೆಂದೂ, ಮಂತ್ರಿ ಪದವಿಯಿಂದ ತೆಗೆದು ಹಾಕುವಾಗ ಅದರ ಸಂಪೂರ್ಣ ಜವಾಬ್ದಾರಿ ಗವರ್ನರರದಿರುವುದೆಂದೂ ವ್ಯಕ್ತಪಡಿಸಿರುವರು ರಾಜಿನಾಮೆ ಮತ್ತು ತೆಗೆದು ಹಾಕುವುದರಲ್ಲಿ ಅಂತಹ ಭೇದವೇನೂ ಇಲ್ಲದಿದ್ದಲ್ಲಿ ಆಳರಸರು ಕಾಂಗ್ರೆಸಿನವರನ್ನು ಕೂಡಲೆ ಮಂತ್ರಿಪದವಿ ಸ್ವೀಕರಿಸಲು ಪುನಃ ಆಮಂತ್ರಿಸಬಹುದು. ಯಾಕಂದರೆ ಕಾಂಗ್ರೆಸಿನ ಇತರ ಕೇಳಿಕೆಗಳೆಲ್ಲವನ್ನು ಅವರು ಬಹುತೇಕ ತೃಪ್ತಿಪಡಿಸಿರುವರು "ರಾಜಿನಾಮೆ ಮತ್ತು ತೆಗೆದು ಹಾಕುವುದರೊಳಗೆ ಯಾವ ಭೇದವೂ ಇಲ್ಲವಾದರೆ ಕಾಂಗ್ರೆಸು ಅಧಿಕಾರ ಸ್ವೀಕರಿಸದಿರುವುದರಿಂದ ಜವಾಬ್ದಾರಿ ಹೊರಲು ತಪ್ಪಿಸಿಕೊಂಡಂತಾಗುವುದು, ಇಲ್ಲವೆ ಕೇವಲ ಮುಂರತನ ತೋರಿಸಿದಂತಾಗುವುದು. ಮಂತ್ರಿಗಳು ಅಧಿಕಾರಕ್ಕೆ ಬಂದೊಡನೆಯೇ ಆಡಳಿತದ ಜವಾಬ್ದಾರಿಯೆಲ್ಲಾ ಅವರದಾಗುವುದು. ಆಂದಮೇಲೆ ಮಂತ್ರಿಗಳಿಗೂ ಗವರ್ನರರಿಗೂ ಆಡಳಿತ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾಗಿ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಬಿಟ್ಟುಕೊಡಲೊಪ್ಪದಿದ್ದಲ್ಲಿ ಅವರನ್ನು ತಳ್ಳಿಹಾಕುವಾಗ ಅದರ ಜವಾಬ್ದಾರಿಯೆಲ್ಲವೂ ಗವರ್ನರರದು ಇದಕ್ಕೂ ಮಂತ್ರಿಗಳು ತಾವಾಗಿ ರಾಜಿನಾಮೆ ಕೊಡುವುದಕ್ಕೂ ಬಹಳ ವ್ಯತ್ಯಾಸವಿದೆ ಗಂಡಂದಿರು ತಮ್ಮ ಹೆಂಡಿರಿಗೆ ಪಟ್ಟುಕೊಡಬಾರದೆಂದು ನಾವು ಆಗ್ರಹತೊಟ್ಟು ಅದಕ್ಕಾಗಿ ಒಂದು ಸೂತ್ರ ಕಂಡುಕೊಳ್ಳಬೇಕೆಂದು ಹುಡುಕಾಡುವೆವು ಆದರೆ ಹೆಂಡಿರಿಗೆ ಹೊಡೆಯುವ ತಮ್ಮ ಕಾನೂನು ಪ್ರಕಾರವಾದ ಹಕ್ಕಿನಿಂದ ವಿಮುಕ್ತರಾಗಲು ಗಂಡಂದಿರಿಗೆ ಸಾಧ್ಯವಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ಗಂಡನು ಹೆಂಡತಿಗೆ ಹೊಡದನೆಂದಾದರೆ ವಿವಾಹ ವಿಚ್ಛೇದವಾಗಬೇಕು, ಅಥವಾ ಹೊಡೆದನೆಂಬ ಕಾರಣದಿಂದ ಹೆಂಡತಿಯು ವಿವಾಹ ವಿಚ್ಛೇದವನ್ನು ಕೇಳಬೇಕು ಎಂಬೀ ನಿಯಮಗಳಲ್ಲ ನಾವು ಯಾವುದಾದರೊಂದನ್ನು ಅನುಸರಿಸಬೇಕು. ಗಂಡನು ಹೆಂಡತಿಗೆ ಹೊಡೆಯಕೂಡದೆಂಬ ತತ್ವವನ್ನು ಒಪ್ಪುವುದಾದರೆ ನಾವು ಮೊದಲಿನ ನಿಯಮವನ್ನನುಸರಿಸತಕ್ಕದ್ದು. ಕಾಂಗ್ರೆಸು ಮತ್ತು ಗವರ್ನರರೊಳಗಣ ಈಗಿರುವ ಭಿನ್ನತೆಯೂ ಇದೇ ರೀತಿಯಾಗಿದೆ. ಗವರ್ನರರು ಆಡಳಿತದಲ್ಲಿ ಕೈಹಾಕಿದ ನಿಮಿತ್ತವೇ ಮಂತ್ರಿಗಳು ಅಧಿಕಾರದಿಂದ ತೆಗೆದು ಹಾಕಲ್ಪಡುವಂತಾಗಬೇಕೇ ಹೊರತು ಅದನ್ನು ಕಾರಣಮಾಡಿಕೊಂಡು ಅವರು ತಾವಾಗಿ ರಾಜಿನಾಮೆಯನ್ನಾಶಿಸುವಂತಾಗ ಬಾರದು? ಎಂದು ಶ್ರೀ ರಾಜಗೋಪಾಲಾಚಾರ್ಯರು ಕಾಂಗ್ರೆಸಿನ ಅಭಿಪ್ರಾಯವನ್ನು ಸ್ಪಷ್ಟೀಕರಿಸಿರುವರು.

ರಾತ್ರಿ ಕಾಲದಲ್ಲಿ ವಜೀರಿ ಸಂಗಡಿಗರಮೇಲೆ ಧಾಳಿ

ಇದೇ ತಾ 1೬ನೇ ರಾತ್ರಿ ಸರಕಾರದ 8 ಪಟ್ಲಾಮು ಸೈನಿಕರು ಶಿಬಿರ ಬಿಟ್ಟು ಕತ್ತಲಲ್ಲೇ ಬಹಳ ಕಷ್ಟದಿಂದ ವೈರಿ ಪ್ರದೇಶದ ಮೇಲೆ 4 ಮೈಲುಗಳ ವರೆಗೆ ಮುನ್ನಡೆದು ಪ್ರಾಮುಖ್ಯ ಸ್ಥಳಗಳನ್ನು ವಶಪಡಿಸಿಕೊಂಡರು ರಾತ್ರಿಯ ಈ ಸೈನಿಕ ಚಲನದಿಂದ ಆಶ್ಚರ್ಯಗೊಂಡ ವೈರಿಗಳು ಹೆಚ್ಚಿನ ವಿರೋಧವೇನೂ ಹೂಡದೆ ಹಿಂದೆ ಸರಿದುಹೋದರು. ಸರಕಾರದ ಕಡೆಯ ಟಾಂಕಿಗಳೂ ವಿಮಾನಗಳೂ ವೈರಿಗಳಿಗೆ ಹಾವಳಿ ಮಾಡಿದುವು. ಹಲವು ವೈರಿ ತಂಡಗಳ ಮೇಲೆ ವಿಮಾನಗಳ ಮೂಲಕ ಬೋಂಬೆ ಸೆಯಲ್ಪಟ್ಟು ಅನೇಕರು ಕೊಲ್ಲಲ್ಪಟ್ಟಿರುವರು.

ಪಂಜಾಬಿನ ಚುನಾವಣೆಯ ಖಟ್ಲೆ

ಪಂಜಾಬಿನ ಭಾಲ್ವಾಲ್ ಎಂಬಲ್ಲಿ 3 ಮಂದಿ ಸಹೋದರರು ತನಗೆ ಓಟುಕೊಡಲಿಲ್ಲೆಂದು ಎಸೆಂಬ್ಲಿ ಮೆಂಬರರಾದ ಮಿ. ಚೌಧುರಿ ಉಮರ್ ಹಯತರು ಈ ಸಹೋದರರ ತಂಗಿಯನ್ನು ಮದುವೆಯಾಗಿದ್ದ ತನ್ನ ಸಮೀಪ ಸಂಬಂಧಿಯು ತನ್ನ ಪತ್ನಿಯನ್ನು ಬಿಟ್ಟು ಬಿಡುವಂತೆ ಮಾಡಿರುವರು ಆದುದರಿಂದ ಅವರ ಚುನಾವಣೆಯು ರದ್ದಾಗತಕ್ಕದ್ದೆಂದು ಮಾಜಿ ಮಾಲಿಕ್ ಸರ್ದಾರ್ ಖಾನ್ ನೂನ್ ಎಂಬವರು ಅರ್ಜಿಮಾಡಿಕೊಂಡಿರುವರು. ಇದರ ಸತ್ಯಾಸತ್ಯತೆಯನ್ನು ಪಂಜಾಬಿನ ಚುನಾವಣೆಯ ಸಂಬಂಧದ ಖಟ್ಲೆಗಳನ್ನು ವಿಚಾರಿಸಲು ನಿಯುಕ್ತರಾಗಿರುವ ನ್ಯಾಯಾಧೀಶರು ವಿಚಾರಿಸುತ್ತಿರುವರು.

ಮಿ. ಜೋರ್ಜ್ ಜೋಸೆಫರು

ಮಧುರಾ ಜಿಲ್ಲೆಯ, ಶ್ರೀ ಕುಮಾರಸ್ವಾಮಿ ರಾಜರ ರಾಜಿನಾಮೆಯಿಂದ ಖಾಲಿ ಬಿದ್ದ ಕೇಂದ್ರ ಎಸೆಂಬ್ಲಿ ಸಭೆಗೆ ಕಾಂಗ್ರೆಸ್ ಪರವಾಗಿ ಪ್ರತಿಸ್ಪರ್ಧಿಯಿಲ್ಲದೆ ಆರಿಸಿ ಬಂದಿರುವರು ಶ್ರೀ ಕುಮಾರಸ್ವಾಮಿ ರಾಜರು ಮದ್ರಾಸ್ ಎಸೆಂಬ್ಲಿ ಮೆಂಬರರಾಗಿ ಆರಿಸಿ ಬಂದಿರುವುದರಿಂದ ಕೇಂದ್ರ ಎಸೆಂಬ್ಲಿ ಮೆಂಬರಿಕೆಗೆ ರಾಜಿನಾಮೆ ಕೊಟ್ಟಿರುವರು.

ಶ್ರೀ ಸುಭಾಸಚಂದ್ರ ಭೋಸರು

ಡಾಕ್ಟರ್ ಧರ್ಮವೀರರು ಮತ್ತು ಅವರ ಪತ್ನಿಯೊಂದಿಗೆ ಇದೇ ತಾ. 12ರಲ್ಲು ಡೌಲ್ ಹೌಸಿಗೆ ಹೋಗಿರುವರು. ಡಾಕ್ಟರ್ ಧರ್ಮವೀರರು ಡಾಕ್ಟರ್ ಸತ್ಯಪಾಲರೊಡನೆ ಕೇಳಿಕೊಂಡ ಪ್ರಕಾರ ಮಧ್ಯದ ಸ್ಟೇಶನುಗಳಲ್ಲಿ ಕಾಂಗ್ರೆಸಿನವರು ಶ್ರೀ ಭೋಸರಿಗೆ ಸ್ವಾಗತವೀಯುವ ವ್ಯವಸ್ಥೆಯನ್ನೇನೂ ನಡಿಸಲಿಲ್ಲ. ಶ್ರೀ ಭೋಸರಿಗೆ ಈಗ ಜ್ವರ ಸ್ವಲ್ಪ ಹೆಚ್ಚು ಬರುತ್ತಿವೆ. ಆದರೆ ಡೌಲ್ ಹೌಸಿಯಲ್ಲಿ ಅವರು ಶೀಘ್ರವಾಗಿ ಆರೋಗ್ಯ ಹೊಂದುವರೆಂದು ನಿರೀಕ್ಷಿಸಲಾಗಿದೆ.

ಗುಡ್ಡೆ ಜರಿದು ಬಿದ್ದು ಪ್ರಾಣಹಾನಿ

ಇಟೆಲಿಯ ಕೋಸ್ಟ ಎಂಬಲ್ಲಿ ದೊಡ್ಡ ಗುಡ್ಡೆಯೊಂದು ಬಂಡೆಕಲ್ಲು ಸಮೇತ ಜರಿದು ಮನೆ ಮಾರುಗಳ ಮೇಲೆ ಬಿದ್ದು ಹಲವು ಮಂದಿ ಮನೆಗಳೊಳಗೆ ಹೂಳಲ್ಪಟ್ಟು ಮೃತರಾಗಿರುವರು. ಈ ಗುಡ್ಡೆಯು ಜರಿದು ಬೀಳುವಾಗ ಗುಡುಗಿನಂತೆ ಶಬ್ದವಾಗಿ ಹೊರದ ಹಳ್ಳಿಗರೂ ಇದೇನು ಅನಾಹುತವೆಂದು ನಿದ್ದೆಯಿಂದೆಚ್ಚತ್ತು ಹೊರಗೋಡಿ ಬಂದಿದ್ದರು.

ಯುದ್ಧನಾವೆಯಲ್ಲಿ ಸ್ಫೋಟ

ಸ್ಪೈನಿಗೆ ಯುದ್ಧ ಸಾಮಗ್ರಿಗಳನ್ನಾರಾದರೂ ಕಳುಹಿಸದಂತೆ ಕಾಯಲು ನಿಯುಕ್ತವಾಗಿದ್ದ ಎಚ್. ಎಮ್. ಎಸ್. ಹಂಟರ್ ಎಂಬ ಬ್ರಿಟಿಷ್ ಯುದ್ಧನಾವೆಯಲ್ಲಿ ಇದೇ ತಾ 12ರಲ್ಲಿ ಅಕಸ್ಮಾತ್ತಾಗಿ ಒಂದು ಸ್ಫೋಟವುಂಟಾಗಿ 4 ಮಂದಿ ಕೊಲ್ಲಲ್ಪಟ್ಟು 14 ಮಂದಿಗೆ ಜಖಮ್ ಆಗಿರುವುದು. ಈ ಸ್ಫೋಟವು ಹೇಗುಂಟಾಯಿತೆಂಬ ಕುರಿತು ಶೋಧನೆ ನಡಿಯುತ್ತಿರುವುದು. ಬಂಡಾಯಗಾರರು ತೇಲಿಸಿಬಿಟ್ಟ ಸಿಡಿಮದ್ದಿನ ಬುಟ್ಟಿಯೊಂದಕ್ಕೆ ಸ್ಟೀಮರು ತಾಗಿ ಸ್ಫೋಟವುಂಟಾಯಿತೆಂದು ನಂಬಲಾಗಿದೆ.

ಭೋಜನದಲ್ಲಿ ಕಿಲುಬಿನ ವಿಷ

ಇದೇ ತಾ 15ರಲ್ಲಿ ಲಕ್ನೋದಲ್ಲಿ ಮಜ್ಲಿಸ್ ಎಂಬ ಧಾರ್ಮಿಕೋತ್ಸವದ ಸಂಬಂಧವಾಗಿ ಭೋಜನ ನಡೆದಾಗ ಅದನ್ನುಂಡ 20 ಕ್ಕಿಂತಲೂ ಮಿಕ್ಕಿದ ಜನರು ಕೂಡಲೆ ತೀವ್ರ ಅಸ್ವಸ್ಥದಲ್ಲಿ ಬಿದ್ದು ಕೊಲೇರಾ ಪೀಡೆಗೊಳಗಾದರು. ಇವರಲ್ಲಿ ಕೆಲವರು ಸ್ತ್ರೀಯರು ಮತ್ತು ಮಕ್ಕಳು. ಸುಮಾರು 12 ಮಂದಿ ಸಂಕಟಾವಸ್ಥೆಯಲ್ಲ ಆಸ್ಪತ್ರೆಗೊಯ್ಯಲ್ಪಟ್ಟಿರುವರು. ಒಂದು ಮಗುವು ಮೃತವಾಗಿರುವುದು. ಕಿಲುಬಿನ ವಿಷವೇ ಇದಕ್ಕೆ ಕಾರಣವೆಂದು ನಂಬಲಾಗಿದೆ.

ಬರ್ಮದಲ್ಲಿ ನೆಹರುಗಳ ಸಂಚಾರ

ಪಂಡಿತ ಜವಹಿರಲಾಲರು ಬರ್ಮದಲ್ಲಿ ಸಂಚರಿಸುತ್ತಿರುವರಷ್ಟೆ. ಅವರು ಹೋದಲ್ಲೆಲ್ಲಾ ಜನರು ಅವರನ್ನು ಅತ್ಯುತ್ಸಾಹದಿಂದ ಸ್ವಾಗತೀಕರಿಸುತ್ತಿರುವರು. ರಂಗೂನಿನ ಕೋರ್ಪರೇಶನಿನವರೂ ನಾಗರಿಕರೂ ಅವರಿಗೆ ಮಾನಪತ್ರವಿತ್ತು ಸತ್ಕರಿಸಿರುವರು. ಅವರು, ಬರ್ಮವು ರಾಜಕೀಯವಾಗಿ ಪ್ರತ್ಯೇಕಿಸಲ್ಪಟ್ಟರೂ 1000 ವರ್ಷಗಳ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂಬಂಧವು ಮುರಿದುಹೋಗಲಾರದು. ಬರ್ಮದ ಕುರಿತು ಹಿಂದೀಯರು ಸಂಪೂರ್ಣ ಸಹಾನುಭೂತಿಯುಳ್ಳವರಾಗಿ ಸಹಾಯ ಮಾಡದಿರಲಾರರು ಹಿಂದೀಯರು ಬರ್ಮಿಯರನ್ನೇನೂ ಸೂರೆಮಾಡುವವರಲ್ಲ. ಬರ್ಮವು ಪ್ರತ್ಯೇಕ ಪ್ರಾಂತವಾದರೂ ಅದರ ಗುಲಾಮಗಿರಿಯು ಯಥಾ ಪ್ರಕಾರವಿದೆ. ಅದನ್ನು ನಿವಾರಿಸಲು ಬರ್ಮಿಯರು ಹಿಂದೀಯರೊಡನೆ ಸಹಕರಿಸುವುದು ಅವರ ಕರ್ತವ್ಯವೆಂದು ಹೇಳಿರುವರು. ಪಂಡಿತರು ರಂಗೂನಿನಿಂದ 200 ಮೈಲುಗಳ ವರೆಗೆ ಮೋಟರ್ ಕಾರಿನಲ್ಲಿ ಸಂಚರಿಸಿ ಹಳ್ಳಿಗಳನ್ನು ಸಂದರ್ಶಿಸಿದರು ಪಂಡಿತ ನೆಹರುಗಳ ಸ್ವಾಗತದ ವ್ಯವಸ್ಥೆಯಲ್ಲ ಹಿಂದೀ ಮತ್ತು ಬರ್ಮಿಯ ಸ್ವಯಂಸೇವಕರು ಏಕಪ್ರಕಾರವಾದ ಉತ್ಸಾಹದಿಂದ ಭಾಗವಹಿಸಿದ್ದರು. ಹಿಂದೀ ರಾಷ್ಟ್ರೀಯ ಧ್ವಜವು ಬರ್ಮಿಯ ರಾಷ್ಟ್ರಧ್ವಜದೊಂದಿಗೆ ಎಲ್ಲೆಲ್ಲಯೂ ಹಾರಾಡುತ್ತಿದ್ದಿತು. ಹಳ್ಳಿಗಳಲ್ಲಿ ಕೂಡಾ ಸಾವಿರಾರು ಮಂದಿ ಪಂಡಿತರನ್ನು ನೋಡಲು ನೆರೆದುಬಂದಿದ್ದರು.

JUST RECEIVED

Look sharp! Hurry up!

Provincial Autonomy

(BY K. T. SHAH)

Price Re. 1—8—0

(Postage extra)

Book your order for a copy today only.

NAVAYUGA OFFICE UDIPI

ಜನರಲ್ ಫ್ರೇಂಕೋರವರು ಸ್ಪೈನ್ ಬಿಟ್ಟೋಡುವರು

* * ಎರಡು ತಿಂಗಳಲ್ಲಿ ಸ್ಪೈನಿನ ಬಂಡಾಯ ಅಣಗಿಸಲ್ಪಡುವುದು * *

ಸ್ಪೈನಿನ ಬಂಡಾಯಗಾರರ ದಿನವು ಎಣಿಸಲ್ಪಟ್ಟಿರುವಂತೆ ತೋರುತ್ತದೆ. ಅವರು ಮೇದ್ರಿದನ್ನು ವಶಪಡಿಸಿಕೊಳ್ಳುವ ಆಶೆಯನ್ನೇ ಬಿಟ್ಟುಬಿಟ್ಟಂತೆ ತೋರುತ್ತದೆ. ಇತ್ತಲಾಗಿ ಆ ರಣರಂಗದಲ್ಲಿ ಹೋರಾಟವೇನೂ ನಡೆಯುವಂತೆ ತೋರುವುದಿಲ್ಲ. ಮೇದ್ರಿದಿನ ಮೇಲೆ ವಿಮಾನ ಧಾಳಿ ನಡಿಸುವ ರಾಕ್ಷಸೀ ಕೃತ್ಯವು ಮಾತ್ರ ಎಡೆಬಿಡದೆ ನಡಿಸಲ್ಪಡುತ್ತಿರುವುದು. ಈ ಯುದ್ಧ ಆರಂಭವಾಗಿ ಈಗ ೮ ತಿಂಗಳು ಮಿಕ್ಕಿದರೂ ಇನ್ನೂ ಮೇದ್ರಿದ್ ಪಟ್ಟಣವು ತಮ್ಮ ವಶವಾಗದಿರುವುದರಿಂದ ಬಂಡಾಯಗಾರ ಸೈನಿಕರಲ್ಲಿ ತೀವ್ರ ಅತೃಪ್ತಿಯುಂಟಾಗಿದೆ. ಇದಕ್ಕೆ ಜನರಲ್ ಫ್ರೇಂಕೋರವರೇ ಕಾರಣರೆಂದು ಅವರ ಕುರಿತು ವಿರೋಧವು ಹೆಚ್ಚುತ್ತಿದೆ. ಬಂಡಾಯದ ಆರಂಭದಲ್ಲಿ ಜನರಲ್ ಫ್ರೇಂಕೋರವರ ಕಡೆಯಲ್ಲಿ ಮುಂಭಾಗದಲ್ಲಿ ನಿಂತು ನಿರ್ಭಯವಾಗಿ ಹೋರಾಡಿದವರು ಸ್ಪೆನಿಶ್ ಮೊರೊಕ್ಕೋವಿನ ಮೂರರೆಂಬ ಕರಿಯ ಸೈನಿಕರು. ಇತ್ತಲಾಗಿ ಇವರ ಹೋರಾಟದ ವಾರ್ತೆಯೇ ಇಲ್ಲ. ಇದರಿಂದ ಸ್ಪೆನಿಶ್ ಮೊರೊಕ್ಕೋದಲ್ಲಿ ಅತೃಪ್ತಿಯುಂಟಾಗಿದೆಯೆಂದೂ, ಜನರಲ್ ಫ್ರೇಂಕೋರವರು ಅಲ್ಲಿಂದ ಹೆಚ್ಚೆಚ್ಚು ಸೇನೆಯನ್ನು ತರಿಸುವ ಬದಲಿಗೆ ಅಲ್ಲಿಗೇನೇ ಸೇನೆಯನ್ನು ಕಳುಹಿಸಬೇಕಾಗಿದೆಯೆಂದೂ ಊಹಿಸಬಹುದಾಗಿದೆ.

ಜನರಲ್ ಫ್ರೇಂಕೋರವರೀಗ ಉಭಯ ಸಂಕಟದಲ್ಲಿ ಬಿದ್ದಂತೆ ತೋರುತ್ತದೆ. ಮೊದಲು ಅವರು ಮೂರ್ ಸೈನಿಕರ ಮೇಲೆ ಅವಲಂಬಿಸಿ ಅವರನ್ನೇ ಯುದ್ಧದಲ್ಲಿ ಮುಂದೊಡ್ಡಿದರು. ಇದರಿಂದ ಒಂದೆಡೆ ಮೂರ್ ಸೈನಿಕರಲ್ಲಿಯೂ ಮತ್ತೊಂದೆಡೆ ಸ್ಪೆನಿಶರಲ್ಲಿಯೂ ಅತೃಪ್ತಿಯುಂಟಾಗಲು ಕಾರಣವಾಯಿತು. ಯಾಕೆಂದರೆ ಮೂರರು ಸ್ಪೆನಿಶರ ಪರಂಪರಾಗತ ವೈರಿಗಳು. ಅವರನ್ನು ಜನರಲ್ ಫ್ರೇಂಕೋರವರು ತನ್ನ ಸೇನೆಯ ಮುಂಭಾಗದಲ್ಲಿ ಉಪಯೋಗಿಸಿದುದರಿಂದ ಸ್ಪೆನಿಶರಲ್ಲಿ ಅವರ ಕುರಿತು ವಿರೋಧವುಂಟಾಗಲು ಕಾರಣವಾಯಿತು. ಆ ಮೇಲೆ ಮೂರ್ ಸೈನಿಕರು ಹಿಂದೆ ಹಾಕಲ್ಪಟ್ಟು ಇಟೆಲಿಯಾನ ಮತ್ತು ಜರ್ಮನ್ ಸೈನಿಕರು ಜನರಲ್ ಫ್ರೇಂಕೋರವರ ಸೇನೆಯಲ್ಲಿ ಅಗ್ರಭಾಗ ವಹಿಸಿದರು. ಇದರಿಂದಲೂ ಸ್ಪೆನಿಶರಲ್ಲಿ ಕೆಲಮಟ್ಟಿನ ಅತೃಪ್ತಿಗೆ ಕಾರಣವಾಯಿತು. ಯಾಕೆಂದರೆ ಇಟೆಲಿಯಾನ ಸೈನಿಕರು ಸ್ಪೆನಿಶರನ್ನು ಧಿಕ್ಕರಿಸಿ ಅಹಂಭಾವದಿಂದ ನಡೆಯುತ್ತಿದ್ದರು. ಆದರೆ ಮೇದ್ರಿದಿನ ರಣರಂಗದಲ್ಲಿ ಇಟೆಲಿಯಾನರು ಸಂಪೂರ್ಣವಾಗಿ ಪರಾಜಯಹೊಂದಿದಾಗ ಅವರ ಸೊಕ್ಕು ಮುರಿಯಿತು. ಜನರಲ್ ಫ್ರೇಂಕೋರವರು ಜಯಶೀಲವಾಗುವ ಸಂಭವವು ಕಂಡುಬಾರದುದರಿಂದ ಜರ್ಮನಿಯು ಅವರಿಗೆ ಸಹಾಯಮಾಡಲು ಹಿಂದೆಗೆಯಿತು. ಇಟೆಲಿಯು ನಿರುತ್ಸಾಹಗೊಂಡಿತು. ಈಗ ಜನರಲ್ ಫ್ರೇಂಕೋರವರಿಗೆ ಯಾವ ಸೈನಿಕರ ಉತ್ಸಾಹದ ಬೆಂಬಲವೂ ಇಲ್ಲದಂತಾಗಿದೆ. ಅವರು ಉಭಯ ಸಂಕಟದಲ್ಲಿ ಬಿದ್ದುಬಿಟ್ಟಿದ್ದಾರೆ.

ಮೇದ್ರಿದಿನ ಮೇಲಿನ ಧಾಳಿಯು ಜಯಶೀಲವಾಗುವ ಸಂಭವ ತೋರದುದನ್ನು ಕಂಡು ಜನರಲ್ ಫ್ರೇಂಕೋರವರ ಕಡೆಯ ಪ್ರಮುಖ ಸೇನಾನಿಯಾದ ಜನರಲ್ ಮೋಲಾರವರು ಪ್ರಚಂಡ ಸೇನಾ ಸಿದ್ಧತೆಯಿಂದ ಬಾಸ್ಕ್ ಪ್ರಾಂತದ ಮೇಲೇರಿ ಹೋಗಿ, ಪ್ರಾಮುಖ್ಯ ಬಂದರವೂ, ಕೈಗಾರಿಕೋದ್ಯಮಗಳ ಕೇಂದ್ರವೂ ಆದ ಬಿಲ್ಬಾವೋವನ್ನು ಶೀಘ್ರವಾಗಿ ವಶಪಡಿಸಿಕೊಳ್ಳುವ ಪ್ರಯತ್ನ ನಡಿಸಿದರು. ಈ ವಿಜಯಪ್ರದರ್ಶನದಿಂದ ಮೇದ್ರಿದಿನ ಅಪಜಯದ ಕಳಂಕವನ್ನು ಅಳಿಸಿಬಿಡಬೇಕೆಂದೇ ಜನರಲ್ ಮೋಲಾರವರ ಉದ್ದೇಶವಿತ್ತು. ಆದರೆ ಬಾಸ್ಕ್ ಸೈನಿಕರು ಅಸಾಧಾರಣ ಧೈರ್ಯ ಸ್ಥೈರ್ಯದಿಂದ ಕಾದಾಡಿ ಜನರಲ್ ಮೋಲಾರವರ ಸೇನೆಯ ಧಾಳಿಯನ್ನು ತಡೆಗಟ್ಟಿರುವರು. ನಿಷ್ಠಾವಂತ ಕೆಥೋಲಿಕರಾಗಿರುವ ಬಾಸ್ಕ್ ಜನರು ತಮ್ಮ ಸೇನೆಗೆ ಇಷ್ಟೊಂದು ಪ್ರಬಲ ವಿರೋಧವನ್ನೇನೂ ಒಡ್ಡದೆ ಶರಣಾಗತರಾಗುವರೆಂಬ ಜನರಲ್ ಮೋಲಾರವರ ಕಲ್ಪನೆಯು ಬಯಲು ಭ್ರಾಂತಿಯಾಯಿತು. ಅವರು ತೀವ್ರ ಅಸಹಿಷ್ಣುತೆಯಿಂದ ಬಾಸ್ಕ್ ಜನರ ಪವಿತ್ರ ಹಾಗೂ ಪುರಾತನ ಪ್ರಧಾನ ಪಟ್ಟಣವಾದ ಗೊರ್ನಿಕದ ಮೇಲೆ ಪ್ರಚಂಡ ವಿಮಾನ ಧಾಳಿ ನಡಿಸಿ ಅದನ್ನು ನಾಮಾವಶೇಷ ಮಾಡಿಬಿಟ್ಟರು. ಈ ಭೀಷಣ ವಿಮಾನ ಧಾಳಿಗಳಿಂದ ಬಾಸ್ಕ್ ಜನರು ದಿಗಿಲುಗೊಂಡು ಮರೆಹೋಗುವರೆಂದು ಜನರಲ್ ಮೋಲಾರವರು ಭಾವಿಸಿದ್ದರು. ಆದರೆ ಇದರಿಂದ ಪ್ರತಿವಿರುದ್ಧ ಪರಿಣಾಮವಾಯಿತು. ಬಾಸ್ಕ್ ಜನರ ಪವಿತ್ರ ಪಟ್ಟಣವು ಸಂಪೂರ್ಣ ನಾಶವಾದುದರಿಂದ ಅವರಿಗೆ ಬಂಡಾಯಗಾರರ ಕುರಿತು ಬದ್ಧ ದ್ವೇಷವುಂಟಾಯಿತು. ಅವರಲ್ಲಿ ದ್ವಿಗುಣಿತವಾದ ಯುದ್ಧೋತ್ಸಾಹವುಂಟಾಯಿತು. ಲೋಕದಲ್ಲೆಲ್ಲಾ ಬಂಡಾಯಗಾರರ ಪೈಶಾಚಿಕ ಅತ್ಯಾಚಾರವು ನಿಷೇಧಿಸಲ್ಪಡುವಂತಾಯಿತು. ಇದರಿಂದ ಬಂಡಾಯಗಾರರಿಗೆ ದೊಡ್ಡ ಘಾತವಾಯಿತು.

ಬಿಲ್ಬಾವೋ ಬಂದರಿಗೆ ಮುತ್ತಿಗೆ ಹಾಕಲಾಗಿದೆ. ಹೊರಗಣಿಂದ ಸ್ಟೀಮರು ಬಂದರೆ ಅಪಾಯಕ್ಕೊಳಗಾಗಬೇಕಾದೀತೆಂದು ಜನರಲ್ ಫ್ರೇಂಕೋರವರು ಪೊಳ್ಳು ಬೆದರಿಕೆ ಹಾಕಿ ಬಾಸ್ಕ್ ಜನರಿಗೆ ಆಹಾರ ಸಾಮಗ್ರಿಗಳು ಹೊರಗಣಿಂದ ದೊರೆಯದಂತೆ ಮಾಡಿದ ಉಪಾಯಕ್ಕೆ ಬ್ರಿಟಿಷ್ ಸರಕಾರವು ತಲೆಬಾಗಿ ಸುಮ್ಮನಿದ್ದರೂ, ಕೆಲ ಮಂದಿ ಸಾಹಸವರ ನಾವಿಕರಿಂದಾಗಿ ಬಿಲ್ಬಾವೋ ಬಂದರಿಗೆ ಹಲವು ಸ್ಟೀಮರುಗಳು ನಿರಾತಂಕವಾಗಿ ಪ್ರವೇಶಿಸಿ ಬಾಸ್ಕ್ ಜನರಿಗೆ ಆಹಾರ ಸಾಮಾಗ್ರಿಗಳನ್ನೊದಗಿಸಿರುವವು. ಇದರಿಂದ ಜನರಲ್ ಫ್ರೇಂಕೋರವರು ಭಗ್ನ ಮನೋರಥರಾಗಿರುವರು.

ಹೀಗೆ ಎಲ್ಲಾ ಕಡೆಗಳಿಂದಲೂ ಜನರಲ್ ಫ್ರೇಂಕೋರವರನ್ನು ವಿರುದ್ಧ ಪರಿಸ್ಥಿತಿಯೇ ಎದುರಿಸುತ್ತಿರುವುದರಿಂದಲೂ, ಅವರ ಸೇನೆಯಲ್ಲಿ ದಿನೇ ದಿನೇ ಅತೃಪ್ತಿಯು ಹೆಚ್ಚುತ್ತಿರುವುದರಿಂದಲೂ, ಅವರು ಬೆಲೇರಿಕ್ ದ್ವೀಪಗಳ ಮೂಲಕ ಇಟೆಲಿಗೆ ವಿಮಾನ ಮಾರ್ಗವಾಗಿ ಹೋಗುವ ಪ್ಲೇನ್ ಮಾಡಿರುವರೆಂದು ತಿಳಿದುಬರುತ್ತದೆ. ಜನರಲ್ ಫ್ರೇಂಕೋರವರ ಸೇನೆಯಲ್ಲಿ ಕೆಲಸ ಮಾಡಿದ್ದ ಕೆಪ್ಟನ್ ರೆನೆ ಜನೊನ್ ಎಂಬ ಬೆಲ್‌ಜಿಯನ್ ಸೈನ್ಯಾಧಿಕಾರಿಯು ಈಗ ಬಂಡಾಯಗಾರರ ಕೇಂದ್ರ ಸ್ಥಳವಾದ ಬರ್ಗೋಸನ್ನು ಬಿಟ್ಟು ಪೆರಿಸಿಗೆ ಬಂದಿರುವರು. ಇವರು, ಫ್ರೇಂಕೋರವರು ಇಟೆಲಿಗೋಡಲು ಸಿದ್ಧತೆಮಾಡುತ್ತಿರುವರೆಂಬುದು ಅವರ ಪಕ್ಷದವರಿಗೆನೇ ತಿಳಿದಿರುವುದೆಂದೂ, ಇನ್ನು ೨ ತಿಂಗಳಲ್ಲಿ ಸ್ಪೈನಿನ ಬಂಡಾಯವು ಅಣಗಿಸಲ್ಪಡುವುದು ನಿಶ್ಚಯವೆಂದೂ ಪೆರಿಸಿನ ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿರುವರು.

The Canara Industrial Works

WANTED

Three respectable and reliable partners with business ablities to finance and conduct a Cashew Nut Factory to be started near Manipal, which is the best Cashew Nut centre and growing industrial centre.

For further particulars apply to:—

S. R. Patla,
Post Udipi, (S. K.)

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ—

ಗುಡಪಿಪ್ಪಲಿ (ಲೀವರ್ ರೋಗಕ್ಕೆ)	ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ)	ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ತೀವ್ರದಿಂದ ನಿಲ್ಲಿಸುವದು

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟಬುಕ್ ಕಮಿಟಿಯವರಿಂದ ಮಂಜೂರಾಗಿದೆ

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ,
ಕಿರಿಯರ ಪ್ರಪಂಚ, ಉಡುಪಿ.

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**
ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**
ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.
ಮೂಲಧನವು ರೂ. **75** ಲಕ್ಷ ಮೀರಿದೆ

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ ಡಿ ಭರ್ಗೊವಾ ಎಸ್ಕ್ವಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವದು.

ಸದ್ಧರ್ಮ ಪ್ರಚಾರಕ ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ ३—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE

Vijaya Bank, Ltd.

Head Office MANGALORE Branch Offices **Udipi, Kaup & Coondapoor.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಖಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5¼ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು
ರೂ 1ರಿಂದ 100ರ ವರೆಗೆ ಸಾ ಶೆ 8 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಫಾರ್ಮುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ३ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು ಹಣ್ಣು ಅತಿ ಮಧುರ, ಒಳ್ಳೇ ರುಚಿ, ರೋಗಿಷ್ಠರಿಗೆ ಉತ್ತಮ ಆಹಾರ ಅದರಲ್ಲಿ ಲಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ಟಾಡರ್ಡ್ ಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋ ಸ್ಟೇಟಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ ಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಇಲೆಕ್ಷನ್ ಆಫೀಸರರ ನೇಮಕ್

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುವ ನವಂಬರ ಂಗಳಲ್ಲಿ ಜಿಲ್ಲಾ ಬೋರ್ಡಿಗೆ ಚುನಾವಣೆಗಳು ನಡೆಯಲಿವೆಯಷ್ಟೆ. ಈ ಬಗ್ಗೆ ಓರ್ವ ಇಲೆಕ್ಷನ್ ಆಫೀಸರರ ನೇಮಕವಾಗಿದೆ. ಇಲ್ಲಿನ ಸಬ್ ಮ್ಯಾಜಿಸ್ಟ್ರೇಟರವರಾದ ಶ್ರೀ| ಯು. ಜನಾರ್ದನ ಬಿ. ಎ ಇವರು ಇಲೆಕ್ಷನ್ ಆಫೀಸರರಾಗಿ ನೇಮಕಹೊಂದಿರುವರು.

ಯಕ್ಷಗಾನ ಸಭೆ

ಮೊದಲು ಸೂಚಿಸಿದಂತೆ ಕದ್ರಿ ಮಂಜುನಾಥ ಸ್ವಾಮಿಯ ಕ್ಷೇತ್ರದಲ್ಲಿ ನಿನ್ನೆಯ (ತಾ ೧೭) ದಿನ ರಾತ್ರಿ ಯಕ್ಷಗಾನ ಕಲುಕೋವಿದರಿಂದ ಯಕ್ಷಗಾನ ಸಭೆಯು ಜರಗಿಸಲ್ಪಟ್ಟಿತು. ಜನಸಂದಣಿಯು ಬಹಳ ಚೆನ್ನಾಗಿತ್ತು. ಪ್ರಸಂಗ ಕಂಸವಧ ಅಥವಾ ಬಿಲ್ಲ ಹಬ್ಬ. ಅರ್ಥದಾರಿಗಳೂ ಭಾಗವತರೂ ಮೃದಂಗಗಾರರೂ ಜನರನ್ನು ತಮ್ಮ ಕಲಾಪ್ರದರ್ಶನದಿಂದ ಸಂತೋಷಗೊಳಿಸಿದರು.

ಮಂಗಳೂರಲ್ಲಿ ಕಿರೀಟಧಾರಣ ಉತ್ಸವ

ಕಳೆದ ೧೨ ರಂದು ಮಂಗಳೂರಲ್ಲಿ ಸಾರ್ವಭೌಮರ ಕಿರೀಟಧಾರಣ ಉತ್ಸವವು ಆಚರಿಸಲ್ಪಟ್ಟಿತು. ಅಂದು ಹಿಂದೂ ದೇವಸ್ಥಾನಗಳಲ್ಲಿಯೂ ಮಸೀದಿಗಳಲ್ಲಿಯೂ, ಇಗರ್ಜಿಗಳಲ್ಲಿಯೂ ವಿಶೇಷ ಪೂಜೆಗಳು ನಡೆದವು. ಬಡಬಗ್ಗರಿಗೆ ಸುಮಾರು ೭೫ ಮುಡಿ ಅಕ್ಕಿಯನ್ನು ಹಂಚಿದರು. ಶಾಲಾ ಮಕ್ಕಳಿಗೆ ತಿಂಡಿ ಹಂಚಲಾಯಿತು. ರಾತ್ರಿಯಲ್ಲಿ ಸರಕಾರಿ ಕಟ್ಟಡಗಳು ಮಾತ್ರವಲ್ಲದೆ ಅನೇಕ ಖಾಸಗಿ ಕಟ್ಟಡಗಳು ಸಹ ವಿದ್ಯುದ್ದೀಪಗಳಿಂದ ಬೆಳಗಿಸಲ್ಪಟ್ಟವು.

ಪ್ರಸಿದ್ಧ ವೈದ್ಯರಿಗೆ ಸತ್ಕಾರ

ಕಂಕನಾಡಿಯ ಫಾದರ್ ಮುಲ್ಲರರ ಆಸ್ಪತ್ರೆಯ ಮುಖ್ಯ ವೈದ್ಯರಾದ ಡಾ. ಎಲ್. ಪಿ. ಫೆರ್ನಾಂಡಿಸರಿಗೆ ಕೈಸರ್-ಇ-ಹಿಂದ್ ಪದಕಿಗೆ ಒಂದು 'ಬಾರ್' ಬಹುಮಾನವಾಗಿ ಸರಕಾರದವರಿಂದ ಕೊಡಲ್ಪಟ್ಟದ್ದಕ್ಕಾಗಿ ಮಂಗಳೂರಿನ ಕೆಥೋಲಿಕರು ಕೆಥೋಲಿಕ್ ಯೂನಿಯನ್ ಕ್ಲಬ್ಬಿನಲ್ಲಿ, ಯೂನಿಯನಿನ ಅಧ್ಯಕ್ಷರಾದ ರೈ. ರೆ. ಫಾ. ಮಸ್ಕರೇಂಞಾರ ಅಧ್ಯಕ್ಷತೆಯಲ್ಲಿ ಸಭೆ ಜರಗಿಸಿ ಡಾ. ಫೆರ್ನಾಂಡಿಸರಿಗೆ ಧನ್ಯವಾದಗಳನ್ನರ್ಪಿಸಿದರು. ಅಧ್ಯಕ್ಷರು ಡಾಕ್ಟರರ ಗುಣಕಥನಮಾಡಿ ಅವರು ಜಾತಿ ಮತಭೇದವಿಲ್ಲದೆ ದೀನರ ಸೇವೆಯನ್ನು ಕೈಕೊಂಡಿದ್ದಾರೆಂದರು. ಶ್ರೀ ಯಂ ಎಸ್. ಶ್ರೀಪ್ಪರು ಡಾ| ಫೆರ್ನಾಂಡಿಸರಿಗೆ ಇದಕ್ಕಿಂತಲೂ ದೊಡ್ಡದಾದ ಗೌರವಗಳು ಇನ್ನೂ ಬರಲೆಂದು ಹಾರೈಸಿದರು. ಅನಂತರ ಒಂದು ಸತ್ಕಾರ ಕೂಟವು ಡಾ| ಫೆರ್ನಾಂಡಿಸರ ಗೌರವಾರ್ಥವಾಗಿ ನಡೆಯಿತು. ಲಘು ಫಲಾಹಾರವಾದ ಮೇಲೆ ಸಭಾಂತ್ಯವಾಯಿತು.

ಅದೇ ದಿನ ಸಾಯಂಕಾಲ (ತಾ ೧೩) ಕೆಥೋಲಿಕ್ ಬ್ಯಾಂಕಿನ ವತಿಯಿಂದ ಡಾ| ಫೆರ್ನಾಂಡಿಸರಿಗೆ ಒಂದು ಸತ್ಕಾರವು ನಡೆಯಿತು.

ಸಾರ್ವಭೌಮರಿಗೆ ಕೆಥೋಲಿಕರ ಧನ್ಯವಾದ

ಮಂಗಳೂರಿನ ಕೆಥೋಲಿಕರು ರೈ. ರೆ ಫಾ ಮಸ್ಕರೇಂಞಾರ ಅಧ್ಯಕ್ಷತೆಯಲ್ಲಿ ಕೆಥೋಲಿಕ್ ಯೂನಿಯನ್ ಕ್ಲಬ್ಬಿನಲ್ಲಿ ಕಳೆದ ತಾ. ೧೨ರಲ್ಲಿ ಸಭೆ ಸೇರಿ ಸಾರ್ವಭೌಮ ಆರನೇ ಜಾರ್ಜರು ಚಿರಕಾಲ ರಾಜ್ಯಭಾರಮಾಡಲೆಂದು ಹಾರೈಸಿ ಒಂದು ಠರಾವು ಮಾಡಿದರು. ಅಧ್ಯಕ್ಷರು ಆ ದಿನದ ಮಹತ್ವವನ್ನು ತಿಳಿಸಿ ಠರಾವನ್ನು ಸಭೆಯ ಮುಂದಿರಿಸಿದರು. ಶ್ರೀ. ಶ್ರೀಪ್ಪರು, ರಾಜಕೀಯ ವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದರೂ, ಕೆಥೋಲಿಕರು ಸಾರ್ವಭೌಮರ ವಿಷಯದಲ್ಲಿ ತಮ್ಮ ರಾಜಭಕ್ತಿಯನ್ನು ಈ ಪ್ರಕಾರ ತೋರಿಸಿದುದು ಬಹಳ ಒಳ್ಳೆಯದು ಎಂದರು. ರೆ. ಫಾ. ಅಂಬ್ರೊಜಿಯವರು ಅರಸರನ್ನು ಗೌರವಿಸಬೇಕೆಂದು ಕ್ರಿಸ್ತಧರ್ಮವು ಬೋಧಿಸುತ್ತದೆಂದು, ಹಲವು ಅನೇಕ ನಿದರ್ಶನಗಳಿಂದ ವ್ಯಕ್ತಗೊಳಿಸಿದರು. ಸರ್ವಾನುಮತಿಯಿಂದ ಠರಾವು ಮಂಜೂರಾಯಿತು.

ಈ ಠರಾವನ್ನು ಗವರ್ನರರ ಮೂಲಕ ಸಾರ್ವಭೌಮರಿಗೆ ಕಳುಹಿಸಬೇಕೆಂದು ಇನ್ನೊಂದು ಠರಾವಾದ ಮೇಲೆ ಜಯಘೋಷ (ತ್ರಿಚಿಯರ್ಸ್)ನೊಡನೆ ಸಭಾಂತ್ಯವಾಯಿತು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಸಭೆ

"ಮಂತ್ರಿಮಂಡಲವು ನ್ಯಾಯವಿರುದ್ಧ" ಜಿಲ್ಲೆಯ ಆರ್ಥಿಕ ಪರಿಸ್ಥಿತಿಯ ವಿಚಾರಣೆ

ಕಳೆದ ತಾ ೧೫ನೇ ಶನಿವಾರ ಪೂರ್ವಾಹ್ನ ೧೧ ಘಂಟೆಗೆ ಸರಿಯಾಗಿ ದ. ಕ. ಜಿಲ್ಲಾ ಬೋರ್ಡಿನ ಸಭೆಯು ಬೋರ್ಡು ಆಫೀಸಿನಲ್ಲಿ ಜರಗಿತು. ಸದಸ್ಯರ ಸಂಖ್ಯೆಯು ಸ್ವಲ್ಪ ಕಡಿಮೆಯಾಗಿತ್ತು. ಜಿಲ್ಲಾ ಬೋ ಅಧ್ಯಕ್ಷರು ಹಾಜರಿಲ್ಲದಿದ್ದ ಕಾರಣ ಉಪಾಧ್ಯಕ್ಷರಾದ ಶ್ರೀ ಎ ಸಿ ಗೊನ್ಸಾಲ್ವಿಸರು ಅಗ್ರಾಸನವನ್ನು ವಹಿಸಿದ್ದರು.

ಬೋರ್ಡಿನ ಕಾರ್ಯಗಲಾಪಗಳು ಆರಂಭವಾಗಬೇಕಾದರೆ ಮೊದಲು ನೂತನವಾಗಿ ಬೋರ್ಡು ಸದಸ್ಯರಾಗಿ ಚುನಾಯಿಸಲ್ಪಟ್ಟ ಶ್ರೀ' ವಾಹಾಬಲಹೊಳ್ಳರು ರಾಜಭಕ್ತಿಯ ಪ್ರಮಾಣವನ್ನು ಮಾಡಿದರು. ಶ್ರೀ| ಶ್ರೀಪ್ಪರು ಮೂರು ಸಭೆಗಳಿಗೆ ಬಾರದೆ ಇದ್ದ ಕಾರಣ ಅವರ ಸದಸ್ಯತನವು ರದ್ದಾಗಿದೆ. ಅವರನ್ನು ಪುನಃ ತೆಗೆದುಕೊಳ್ಳುವ ವಿಷಯವು ಆಜೆಂಡದಲ್ಲಿತ್ತು. ಶ್ರೀ| ಶ್ರೀಪ್ಪರು ಬೋರ್ಡು ಆಫೀಸಿನವರ ಪತ್ರಕ್ಕೆ ಉತ್ತರ ಕೊಡದೆ ಇದ್ದ ಕಾರಣ ಅವರನ್ನು ಪುನಃ ತೆಗೆದುಕೊಳ್ಳುವ ಪ್ರಶ್ನೆಯು ಮುಂದರಿಸಲ್ಪಟ್ಟಿತು.

ಸಂತಾಪ ಸೂಚಕ ಠರಾವು

ಜಿಲ್ಲಾ ಬೋರ್ಡಿನ ಸದಸ್ಯರಾಗಿದ್ದು ಚೆನ್ನಾಗಿ ಕೆಲಸಮಾಡಿದ್ದ ಜನಾಬ್ ಮಹಮ್ಮದ್ ಫರೂಲ್ ಸಾಹೇಬ್ ಬಹದ್ದೂರರವರ ಅಕಾಲ ನಿಧನಕ್ಕಾಗಿ ಬೋರ್ಡು ಸಂತಾಪಪಡುತ್ತದೆ ಎಂಬ ಠರಾವನ್ನು ಅಧ್ಯಕ್ಷರಾದ ಶ್ರೀ ಗೊನ್ಸಾಲ್ವಿಸರು ಸಭೆಯ ಮುಂದಿರಿಸಿದರಲ್ಲದೆ ದಿವಂಗತರ ಕಾರ್ಯದಕ್ಷತೆ, ಪ್ರಭೃತಿ ಮೊದಲಾದ ಗುಣಗಳನ್ನು ಪ್ರಶಂಸಿಸಿ ಮಾತಾಡಿದರು. ಸಭೆಯವರು ಎದ್ದು ನಿಂತು ಠರಾವನ್ನು ಅಂಗೀಕರಿಸಿದರು. ಈ ಠರಾವನ್ನು ದಿವಂಗತರ ಕುಟುಂಬದವರಿಗೆ ತಿಳಿಸಬೇಕೆಂದೂ ನಿರ್ಧಾರವಾಯಿತು.

ಪ್ರಶ್ನೋತ್ತರಗಳು

ಬಹಳ ಸ್ವಾರಸ್ಯವಾದ ಪ್ರಶ್ನೋತ್ತರಗಳು ನಡೆದವು. ಹಿಂದೆಗಳಲ್ಲಿ ಸ್ವೀಪರ್ ಸೂಸೈಟಿಗಳ ಲೆಕ್ಕಪತ್ರ ವಿಚಾರ, ರೂರಲ್ ಡಿಸ್ಪೆನ್ಸರಿಯ ವೈದ್ಯರನ್ನು ಸರಿಯಾದ (ರೆಗ್ಯುಲರ್) ಡಿಸ್ಪೆನ್ಸರಿಗಳಿಗೆ ತೆಗೆದುಕೊಳ್ಳುವುದು; ಡಿ ಮೆಡಿಕಲ್ ಆಫೀಸರರ ಅನುಮತಿ ದೊರೆತಿದೆಯೋ ಎಂಬ ಪ್ರಶ್ನೆ; ಜಿಲ್ಲಾ ಬೋರ್ಡು ನೌಕರರು ಚುನಾವಣೆ ಕಾಲದಲ್ಲಿ ಉಮೇದ್ವಾರರ ಪರವಾಗಿ ಕೆಲಸಮಾಡಿದ ವಿಷಯದಲ್ಲಿ ಆಕ್ಷೇಪ ಬಂದಿದೆಯೋ ಎಂಬ ವಿಚಾರ; ಇದು ವಿಚಾರಿಸಲ್ಪಟ್ಟು ದಂಡನೆ ವಿಧಿಸಲ್ಪಟ್ಟಿದೆಯೋ ಎಂಬಿತ್ಯಾದಿ ಅನೇಕ ಪ್ರಶ್ನೆಗಳು ಕೇಳಲ್ಪಟ್ಟವು. ಮೂರಬು ಕದವಿನ ಕಂಟ್ರಾಕ್ಟು ವಿಷಯದಲ್ಲಿ ಬಾರ್ಕೂರಿನ ಜನರು ಬರಕೊಂಡ ಅರ್ಜಿಯು ಇಂಜಿನಿಯರಿಗೆ ಕಳುಹಿಸಲ್ಪಟ್ಟಿದೆಯೋ ಎಂದು ಶ್ರೀಮತಿ ಮನೋರಮಾ ಬ್ಯಾಯವರು ಪ್ರಶ್ನೆ ಕೇಳಿದರು. ಉತ್ತರ- ಕಾಲನಿಶ್ಚಿತ ಶಿಫಾರಸುಗಳನ್ನು ಇಂಜಿನಿಯರು ಕೊಟ್ಟು, ಐದು ವರ್ಷದ ಗೇಣಿಗೆ ಕೊಡಬಹುದೆಂದು ಹೇಳಿದ್ದಾರೆ ಮತ್ತು ಒಂದು ಜಂಗರನ್ನು ಇಟ್ಟಲ್ಲಿ ೫ ವರ್ಷಕ್ಕೆ ಕೊಡಬಹುದೆಂದು ಶರತ್ತು ಹಾಕಿದ್ದಾರೆ. ಅರ್ಜಿಯಲ್ಲಿ ಏನು ಹೇಳಲ್ಪಟ್ಟದೆಯೆಂದು ಶ್ರೀ| ಎ ಬಿ. ಶೆಟ್ಟಿಯವರು ಕೇಳಿದರು. ಮತ್ತು ಎಲ್ಲಾ ಸಂಗತಿಗಳು ಇಂಜಿನಿಯರ್ ಡಿಪಾರ್ಟುಮೆಂಟಿಗೆ ಬಾರದಿರಲು ಕಾರಣವೇನೆಂದರು. ಮುಂದಿನ ಸಭೆಯ ಮುಂದೆ ಈ ಎಲ್ಲಾ ಸಂಗತಿಗಳನ್ನೂ ಇಡಬೇಕೆಂದು ಸೂಚಿಸಿದರು. ಹೀಗಾಗಿ ಪ್ರಶ್ನೆಯು ಮುಂದರಿಸಲಾಯಿತು. ಶ್ರೀಮತಿಯವರು, ಶ್ರೀ|ಬಿ ವಿಟ್ಠಲ ಶೆಟ್ಟರು ಈಗಿನ ಕಂಟ್ರಾಕ್ಟರರು ಕೊಡುವುದಕ್ಕಿಂತ ಹೆಚ್ಚು ತಾವು ಕೊಡ ಪವಾಗಿ ಅರ್ಜಿಮಾಡಿಕೊಂಡಿದ್ದರೆ? ಎಂದರು. ಅದಕ್ಕೆ ಅರ್ಜಿಯು ಠರಾವಾದ ಮೇಲೆ ಈ ಆಫೀಸಿಗೆ ಬಂತು ಎಂದು ಉತ್ತರ ಬಂತು. ಕದವಿನ ಕಂಟ್ರಾಕ್ಟನ್ನು ಹರಾಜುಮಾಡದೆ ಇರಲು ಕಾರಣವೇನು? ಈ ವರುಷದ ಉತ್ಪತ್ತಿ ಎಷ್ಟು? ಹಿಂದಿನ ೫ ವರುಷಗಳ ಸರಾಸರಿ ಉತ್ಪತ್ತಿ ಎಷ್ಟು? ಎಂಬ ಪ್ರಶ್ನೆಗಳನ್ನೂ ಶ್ರೀ ಎ ಬಿ ಶೆಟ್ಟಿಯವರು ಕೇಳಿದರು. ಮುಂದಿನ ಮೀಟಿಂಗಿನಲ್ಲಿ ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳು ಕೊಡಲ್ಪಡುವವು.

ಠರಾವುಗಳು

ನೆರಿಯ ಬಸ್ತರ್ಡ ರಸ್ತೆ ಕಡಿಸಬೇಕೆಂದು ಶ್ರೀ| ಕುಂಞ' ಕಳಂದರ ಬ್ಯಾರಿಗಳು ತಂದ ಠರಾವು ವರ್ಕ್ಸ್ ಮತ್ತು ಕಮ್ಯುನಿಕೇಶನ್ ಕಮಿಟಿಯ ಮುಂದೆ ಬರಬೇಕೆಂದಾಯಿತು. ಬೆಳ್ತಂಗಡಿ ತಾಲೂಕಿನ ಶಿರ್ಲದಲ್ಲಿ ಒಂದಾದರೂ ಆಸ್ಪತ್ರೆಯಾಗಲಿ, ಡಿಸ್ಪೆನ್ಸರಿಯಾಗಲಿ ಇಲ್ಲದಿರುವುದರಿಂದ ಒಂದು ಡಿಸ್ಪೆನ್ಸರಿಯನ್ನಾದರೂ ಸರಿಯಾದ ಸ್ಥಳದಲ್ಲಿ ತೆರೆಯಬೇಕೆಂದು ಶ್ರೀಯುತ ತಿರುಮಲಪುರವರು ಠರಾವು ತಂದು ತ್ರಿಕಪುರದಲ್ಲಿ ಒಂದನ್ನು ತೆರೆಯಲು ಸರಕಾರದವರು ಶಿಫಾರಸು ಮಾಡಿದ್ದರಿಂದ ಅದನ್ನು ಮುಂದೊತ್ತಲಿಲ್ಲ. ಇದೇ ಸದಸ್ಯರು ಒಂದು ಸಾರ್ವಜನಿಕ ಬಾವಿಯನ್ನು ಮಯಿಸಾಚೆದಲ್ಲಿ ತೋಡಿಸಬೇಕೆಂದು ಠರಾವು ತಂದರು. ಕೂಡಲೆ ಬಾವಿಗೆ ತಗಲಬಹುದಾದ ಅಂದಾಜನ್ನು ತಯಾರಿಸಬೇಕೆಂದು ಡಾ| ಆಚಾರ್ಯರು ತಂದ ಉಪಸೂಚನೆ ಮಂಜೂರಾಯಿತು. ಹಾಗೆಯೇ ಕುಂಜಾಲಿನ ರೂರಲ್ ಆಸ್ಪತ್ರೆಯನ್ನು ಪೆರ್ಡೂರಿಗೆಕೊಡಲು ಸರಕಾರದವರು ಆಕ್ಷೇಪ ಮಾಡುವರಾದ್ದರಿಂದ ಅದನ್ನು ಹಿರಿಯಡ್ಕದಲ್ಲಿ ಸ್ಥಾಪಿಸಬೇಕೆಂದು ಡಾ| ಆಚಾರ್ಯರು ಸೂಚಿಸಿದರು. ಪೆರ್ಡೂರಿಗೂ ಒಂದು ಡಿಸ್ಪೆನ್ಸರಿಯು ಅಗತ್ಯವಿದೆಯೆಂದರು. ಸರಕಾರದವರು ಶಿಫಾರಸುಮಾಡಿದ ಡಿಸ್ಪೆನ್ಸರಿಗಳಿಗೆ ಈನಾಲ್ಕು ಹೆಚ್ಚು ಕೇಂದ್ರಗಳನ್ನು ಸೇರಿಸಲಾಯಿತು-ಹೊಸಂಗಡಿ, ಮುಂಡ್ಕೂರು, ಅಜೆಕಾರ್ ಮತ್ತು ಪೆರ್ಡೂರು. ಶ್ರೀ|ಬಿ|ಸುಂಗೇಶರಾಯರು ಒಂದು ಠರಾವನ್ನು ತಂದು ಗುಜ್ಜೆ ಮತ್ತು ಎತ್ತರ ಸ್ಥಳಗಳಲ್ಲಿ ತೆಂಗಿನ ತೋಟವನ್ನು ಬೋರ್ಡಿನವರು ಮಾಡಿದ್ದರಿಂದ ಆದಾಯಕ್ಕಿಂತಲೂ ಖರ್ಚುವಿಪರೀತ ಹೆಚ್ಚು ಇರುವುದರಿಂದ ಆ ತೋಟಗಳಿಗಾಗಿ ಇನ್ನು ಖರ್ಚು ಮಾಡುವುದನ್ನು ನಿಲ್ಲಿಸಬೇಕೆಂದು ಸೂಚಿಸಿದರು. ಆದರೆ ಇಷ್ಟು ಖರ್ಚುಮಾಡಿ, ಮರಗಳು ಫಲಕೊಡುವುದಕ್ಕೆ ತಯಾರಾದಾಗ ಅವುಗಳನ್ನು ಬಿಟ್ಟು ಬಿಡುವುದು ಉಚಿತವೇ ಎಂದು ಶ್ರೀ| ಎ ಬಿ ಶೆಟ್ಟರು ಕೇಳಿದರು. ಈ ತೋಟಗಳ ವಿಷಯ ಎಲ್ಲಾ ಸಂಗತಿಗಳನ್ನೂ ಬರುವ ಮೀಟಿಂಗಿನ ಮುಂದೆ ಇರಿಸಬೇಕೆಂದಾಯಿತು.

ಜಿಲ್ಲೆಯ ಆರ್ಥಿಕ ಸ್ಥಿತಿಯವಿಚಾರಣೆ

ಜಿಲ್ಲೆಯಲ್ಲಿರುವ ನಿರುದ್ಯೋಗತೆಯನ್ನು ಹೋಗಲಾಡಿಸಲು ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಅನುಕೂಲತೆಗಳಿವೆಯೋ ಎಂಬ ಸಂಗತಿಯನ್ನು ತಿಳಿಯುವುದಕ್ಕೂ ಇದೇ ಜಿಲ್ಲೆಯ ಸಂಪೂರ್ಣ ಆರ್ಥಿಕ ಪರಿಸ್ಥಿತಿಯನ್ನು (ಕೆನಾಮಿಕ್ ಸರ್ವೆ) ತಿಳಿಯುವ ಬಗ್ಗೆಯೂ ಒಂದು ಸಮಿತಿಯಾಗಬೇಕು. ಅದು ಜಿಲ್ಲಾ ಎಜ್ಯಾಕೇಶನಲ್ ಅಸೋಸಿಯೇಶನ್ ಡಿ ಇಕನಾಮಿಕ್ ಕೌನ್ಸಿಲ್ ಗ್ರಾಮ ಕೈಗಾರಿಕೆ ಸಂಘವೇ ಮೊದಲಾದ ಸಂಸ್ಥೆಗಳ ಕೂಡೆ ಸಹಕರಿಸಿ ಒಂದು ವರದಿಯನ್ನು ತಯಾರಿಸಬೇಕು. ಮತ್ತು ಈ ಸಮಿತಿಯ ಸದಸ್ಯರು ಭತ್ತೆಯಿಲ್ಲದೆ ಕೆಲಸಮಾಡಬೇಕೆಂಬ ಸಲಹೆಗಳನ್ನೊಳಗೊಂಡ ಠರಾವನ್ನು ಶ್ರೀ| ಬಿ. ವೈಕುಂಠ ಬಾಳಿಗರು ತಂದರು. ಅದು ಸರ್ವಸಮ್ಮತಿಯಿಂದ ಮಂಜೂರಾಯಿತು. ಶ್ರೀ| ಗಳಾದ ಎ. ಬಿ. ಶೆಟ್ಟಿ, ಶಿವರಾವ್ ಬಿ. ವಿ. ಬಾಳಿಗ, ಕೆ ಜಿ. ಬಲ್ಲಾಳ, ಅಧ್ಯಕ್ಷರು ಇನ್ನು ಕೆಲವರು ಇರುವ ಒಂದು ಸಮಿತಿಯು ಏರ್ಪಟ್ಟಿತು.

ತಾತ್ಕಾಲಿಕ ಮಂತ್ರಿಮಂಡಲದ ಖಂಡನೆ

ಈ ಸಭೆಯು ತಾತ್ಕಾಲಿಕ ಮಂತ್ರಿಮಂಡಲದನಿರ್ಮಾಣವನ್ನು ಖಂಡಿಸುತ್ತದೆ. ಏಕೆಂದರೆ ಇದರ ನಿರ್ಮಾಣವು ನ್ಯಾಯವಿರುದ್ಧ ಮತ್ತು ಮಂತ್ರಿಗಳು ಕೂಡಲೇ ರಾಜಿನಾಮೆ ಕೊಡಬೇಕೆಂದೂ, ನ್ಯಾಯವಿಧಾಯಕ ಸಭೆಗಳು ಕೂಡಲೆ ಕೂಡಿಸಲ್ಪಡಬೇಕೆಂದೂ ಕೇಳಿಕೊಳ್ಳುತ್ತದೆ ಎಂಬ ಠರಾವನ್ನು ಡಾ| ಪಿ. ಪ. ಆಚಾರ್ಯರು ತಂದರು. ಇದನ್ನು ಶ್ರೀ| ಬಿ ಕೃಷ್ಣಯ್ಯ ಹೆಗ್ಡೆಯವರು ಅನುಮೋದಿಸಿದರು. ಮಿ. ಜಫ್ರಿಸರು ಅದನ್ನು ವಿರೋಧಿಸಿದರು. ಅಧಿಕಬಹುಮತದಿಂದ ಇದು ಮಂಜೂರಾಯಿತು.

ಶ್ರೀಮತಿ ಮನೋರಮಾಬಾಯಿಯವರು ಕಾಂಗ್ರೆಸಿನವರು ಧರಿಸಬೇಕೆನ್ನುವ ಸರಿಯೆಂದು ಈ ಬೋರ್ಡು ಅಭಿಪ್ರಾಯಪಡುತ್ತದೆಂಬ ಠರಾವನ್ನೂ, ಮಹಾತ್ಮರ ಪಟವನ್ನು ಅಧ್ಯಕ್ಷರ ಪಟಗಳ ಮಧ್ಯೆ ಸ್ವಲ್ಪ ಎತ್ತರದಲ್ಲಿರಿಸಬೇಕೆಂಬ ಠರಾವನ್ನೂ ತಂದರು. ಅವು ಮಂಜೂರಾದವು.

ಮುಂದಿನ ಬೋರ್ಡು ಚುನಾವಣೆಗಳಲ್ಲಿ ಬಣ್ಣದ ಪೆಟ್ಟಿಗೆಗಳನ್ನೇ ಉಪಯೋಗಿಸಬೇಕೆಂದು ಬೋರ್ಡಿನ ಅಭಿಪ್ರಾಯವಾಗಿದೆಯೆಂದು ಠರಾವು ತಂದರು, ಅದು ಸ್ವೀಕೃತವಾಯಿತು. ಇನ್ನೂ ಕೆಲವು ಠರಾವುಗಳು ಅಂಗೀಕೃತವಾದ ಮೇಲೆ ಇತರ ವಿಷಯಗಳ ಚರ್ಚೆಗೆ ಆರಂಭವಾಯಿತು. (ಘಟ ೧೫ಕ್ಕೆ)

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,53,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR etc., etc.

ಬೇಕು

ವಿದ್ಯಾವತಿಯರೂ ರೂಪವತಿಯರೂ ಚೆನ್ನಾಗಿ ಹಾಡ ಬಲ್ಲವರೂ ಆದ ನಟಿಯರು ಬೇಕಾಗಿದೆ. ವಿವರಗಳಿಗೆ ಬರೆಯಿರಿ.

'X'

C/o 'Navayuga' Udipi.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ವ್ಯವಹಾರ ಸನ್ನದು ಹೊಂದಿದುದು)

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು 'ಸೇಲಂ'ನಲ್ಲಿ ಶೀಘ್ರದಲ್ಲಿಯೇ ತೆರೆಯೋಣಾಗುವುದು.

ಬ್ಯಾಂಕಿನ ಆಫೀಸು
ತಾ. 7—5—1937

V. R. Kamath, B. A., LL.B.
ಮೆನೇಜರ್.

ನವಯುಗ

ಉಡುಪಿ, ಗುರುವಾರ, ತಾ. ೨೦-೫-'೩೭

ಕಿರೀಟ ಧಾರಣೆಯ ಪ್ರದರ್ಶನ

ಇದೇ ತಾ. 12ರಲ್ಲು ಲಂಡನಿನಲ್ಲಿ 6ನೇ ಜೋರ್ಜ್ ಚಕ್ರವರ್ತಿಗಳ ಕಿರೀಟ ಧಾರಣೋತ್ಸವವು ಅದೊಂದು ಜಾಗತಿಕ ಉತ್ಸವವಾಗಿ, ಪ್ರಚಂಡ ಪ್ರದರ್ಶನವಾಗಿ ಅತ್ಯಂತ ವಿಜೃಂಭಣೆಯಿಂದ ನಿರ್ವಿಘ್ನವಾಗಿ ಜರಗಿರುವುದು. ಆದರೆ ಅದೊಂದು ಬರಿಯ ಡಂಬಾಚಾರ ಮತ್ತು ಪ್ರದರ್ಶನ ಮಾತ್ರವಲ್ಲದೆ ಅದರಲ್ಲೇನೂ ಹುರುಳಿರುವಂತೆ ನಮಗೆ ತೋರುವುದಿಲ್ಲ. ಸರ್ವಸಾಮಾನ್ಯವಾಗಿ ಮಾನವನು ಆಡಂಬರ ಪ್ರಿಯ. ತನ್ನ ಶ್ರೇಷ್ಠತೆ ಮಹತ್ತಿಕೆಗಳನ್ನು ಪ್ರದರ್ಶಿಸುವುದರಲ್ಲಿ ಆತನಿಗೆ ಅತ್ಯಂತ ಆಸಕ್ತಿ. ಬ್ರಿಟಿಷರೀಗ ಅಂತಹ ಆಡಂಬರವನ್ನು, ತಮ್ಮ ಮಹತ್ವಿಕೆಯ ಪ್ರದರ್ಶನವನ್ನು, ಒಂದೇ ಮಾತಿನಲ್ಲಿ ಹೇಳುವುದಾದರೆ ದೊಡ್ಡ ಕಣ್ಣು ಕಟ್ಟೊಂದನ್ನು ಜಯಶೀಲವಾಗಿ ನಡಿಸಿಬಿಟ್ಟಿರುವರು. ನಾವು ಇದನ್ನು ಕಣ್ಣು ಕಟ್ಟೆಂದು ಹೇಳಲು ನಾಕಷ್ಟು ಕಾರಣಗಳಿವೆ. ಬಾಲ್ಯಾರಭ್ಯದಿಂದಲೂ ಅರಸುತನಕ್ಕೆ ತರಬೇತಿ ಹೊಂದಿ ತನ್ನ ವೈಯಕ್ತಿಕ ಗುಣವಿಶೇಷಗಳಿಂದಲೂ, ದೀನ ದರಿದ್ರ ಜನ ಸೇವಾ ತತ್ಪರತೆಯಿಂದಲೂ ಇಂಗ್ಲಂಡಿನ ಹಾಗೂ ಬ್ರಿಟಿಷ ಸಾಮ್ರಾಜ್ಯದ ಪ್ರಜೆಗಳ ನಿಜವಾದ ಭಕ್ತಿ ವಿಶ್ವಾಸಗಳಿಗೆ ಪಾತ್ರರಾದವರು ಎಂಟನೇ ಎಡ್ವರ್ಡರು. ಈಗ ಚಕ್ರವರ್ತಿಗಳಾದ ಆರನೇ ಜೋರ್ಜರ ಯಾವ ಗುಣವಿಶೇಷಗಳೂ ಆಗ ತಿಳಿದು ಬಂದಿಲ್ಲ. ಅವರೊಬ್ಬ ಸರ್ವಸಾಮಾನ್ಯ ರಾಜಕುಮಾರರಂತಿದ್ದರು. ಅಂತಹ ಜನಪ್ರಿಯ ಎಡ್ವರ್ಡರನ್ನು ಬ್ರಿಟಿಷ್ ಮಂತ್ರಿಮಂಡಲವು, ಕೇವಲ ಹಿಂದಿನ ಸಂಪ್ರದಾಯವೊಂದನ್ನು ಬದಲಾಯಿಸಲಾಗದೆ ಸಿಂಹಾಸನದಿಂದ ತಳ್ಳಿಹಾಕಿ ಬಿಟ್ಟು ತಮಗೆ ಬೇಕಾದಂತೆ ನಡೆಯುವ ಜೋರ್ಜರನ್ನು ಪಟ್ಟಕ್ಕೇರಿಸಿ ಈಗ ಕೆಲವೇ ತಿಂಗಳಾಗಿರುವುದು ಮಾತ್ರ. ಇಷ್ಟರಲ್ಲೇ ಅವರ ಮೇಲಿನ ಬ್ರಿಟಿಷರ ಅಪಾರ ಭಕ್ತಿವಿಶ್ವಾಸದ, ರಾಜನಿಷ್ಠೆ ಮತ್ತು ವಿಧೇಯತೆಯ ನಟನೆಯೊಂದು ನಡೆದಿರುವುದು ಎಂಟನೇ ಎಡ್ವರ್ಡರು ಯುವರಾಜರಾಗಿರುವಾಗಲೂ ಆ ಮೇಲೆ ಚಕ್ರವರ್ತಿಗಳಾಗಿ ಪಟ್ಟಕ್ಕೇರಿದಾಗಲೂ ಬ್ರಿಟಿಷರಿಗೆ ದೇವತಾ ಸ್ವರೂಪರೇ ಆಗಿದ್ದರು. ಮಿಸೆಸ್ ಸಿಮ್ಸನರ ಕುರಿತಾದ ಅವರ ಪ್ರಣಯ ವ್ಯಾಪಾರವನ್ನು ಕೊನೆಯ ವರೆಗೂ ಬ್ರಿಟಿಷ್ ಪತ್ರಿಕೆಗಳು ಪ್ರಕಟಿಸಲಿಲ್ಲ. ಬ್ರಿಟಿಷರಾರೂ ಆ ಕುರಿತು ಉಸಿರೆತ್ತಲಿಲ್ಲ. ಆದರೆ ಯಥಾರ್ಥವಾದಿಗಳಾದ ಎಡ್ವರ್ಡರೇ ಮಿಸೆಸ್ ಸಿಮ್ಸನರ ಪ್ರಣಯಕ್ಕಾಗಿ, ಬ್ರಿಟಿಷರು ಅಷ್ಟೊಂದು ಮಹತ್ವದ್ದಾಗಿ ಪರಿಗಣಿಸಿರುವ ಸಿಂಹಾಸನವನ್ನು ತೃಣೀಕರಿಸಿ ತ್ಯಜಿಸಿಬಿಟ್ಟು, ತಾನು ದೇವತಾ ಮನುಷ್ಯನಲ್ಲ; ಸಾಮಾನ್ಯ ಮಾನವನೆಂಬುದನ್ನು ಲೋಕ ವಿಶ್ರುತಗೊಳಿಸಿ ಬ್ರಿಟಿಷರ ಭ್ರಾಂತಿಯ ಮುಸುಕನ್ನು ಹರಿದೊಗೆದರು. ಇದರಿಂದ ಬ್ರಿಟಿಷ್ ಅರಸುತನಕ್ಕೆ, ಸಾಮ್ರಾಜ್ಯವಾದಕ್ಕೆ ದೊಡ್ಡ ಆಘಾತವುಂಟಾಯಿತು. ಆದರೂ ಬ್ರಿಟಿಷರು ಎದೆಗುಂದದೆ ಗೊಂಬೆಯಾಟದಂತೆ ಆರನೇ ಜೋರ್ಜರನ್ನು ಪಟ್ಟಕ್ಕೇರಿಸಿ ಅವರನ್ನೀಗ ದೇವರಂತೆ ಪೂಜಿಸಲಾರಂಭಿಸಿ ತಾವು ಕಳಕೊಂಡ ಪ್ರತಿಷ್ಠೆಯನ್ನು ಪುನಹ ಪಡೆಯಲೆತ್ನಿಸಿರುವರು. ಜೋರ್ಜರ ಕಿರೀಟ ಧಾರಣೋತ್ಸವದ ಸಾಂಕ್ರಮಿಕವು ಇಡೀ ಲೋಕಕ್ಕೇನೇ ಹಬ್ಬುವಂತೆ ಮಾಡಿರುವರು. ಅದನ್ನು ತಮ್ಮ ಅರಸುತನದ ಮಹತ್ವಿಕೆ, ಸಾಮ್ರಾಜ್ಯದ ವೈಭವ ಮತ್ತು ಲೋಕದಲ್ಲಿ ತಮ್ಮ ಹೆಚ್ಚುಗಾರಿಕೆಯ ಪ್ರದರ್ಶನದ ಸಂದರ್ಭವಾಗಿ ಜಯಶೀಲವಾಗಿ ಜರಗಿಸಿ ಕೃತಕೃತ್ಯರಾಗಿರುವರು. ಆದರೆ ಅದೊಂದು ಅಂಧಾಚರಣೆ ಮತ್ತು ಕಪಟನಾಟಕ ಮಾತ್ರವಲ್ಲದೆ ಅದರ ಅಂತರಾಳದಲ್ಲೇ ಹೆಚ್ಚಿನ ತಿರುಳಿರುವುದೆಂದು ಹೇಳಬರುವುದಿಲ್ಲ 20ನೇ ಶತಮಾನದಲ್ಲಿ ಬ್ರಿಟಿಷರು ತಮ್ಮಾ ಕಪಟನಾಟಕವನ್ನು ಇಷ್ಟೊಂದು ಜಯಪ್ರದವಾಗಿ ಜರಗಿಸಿ ದೇವತ್ವದ ವೇದಿಕೆಯಿಂದ ಕಳಚಿಬಿದ್ದ ತಮ್ಮ ಅರಸುತನವನ್ನು ಪುನಹ ಅಲ್ಲಿಯೇ ಸ್ಥಾಪಿಸಿಬಿಟ್ಟುದಕ್ಕಾಗಿ ಅಭಿನಂದನೀಯರೇ ಸರಿ.

ಕಿರೀಟ ಧಾರಣೆ ಮತ್ತು ಹಿಂದುದೇಶ

ಅಷ್ಟೊಂದು ಪ್ರಚಂಡ ಪೂರ್ವಸಿದ್ಧತೆ ಮತ್ತು ಎಡೆಬಿಡದ ಪ್ರಚಾರದಿಂದ ಇಡೀ ಲೋಕದ ಅಪೂರ್ವ ಉತ್ಸವನೆಂಬಂತೆ ಅತ್ಯಂತ ವಿತರಣೆಯಿಂದ ಜರಗಿದ ಈ ಕಿರೀಟ ಧಾರಣೋತ್ಸವವು ಹಿಂದೀಯರ ಹೃದಯದಲ್ಲಿ ನಿಜವಾದ ಭಕ್ತಿವಿಶ್ವಾಸವನ್ನಾಗಲಿ ಉತ್ಸಾಹವನ್ನಾಗಲಿ ಉಂಟುಮಾಡಿಲ್ಲೆಂದು ಧೈರ್ಯದಿಂದ ಹೇಳಬಹುದು. ಹಿಂದೀ ಸರಕಾರದ ಪರವಾಗಿ ಕೆಲ ಮಂದಿ ನೌಕರರು, ಸೈನಿಕರೇ ಮೊದಲಾದವರು ಲಂಡನಿನ ಉತ್ಸವದಲ್ಲಿ ಭಾಗಿಯಾಗಿರಬಹುದು. ಕೆಲವು ರಾಜ ಮಹಾರಾಜರುಗಳು ಬ್ರಿಟಿಷ್ ಸರಕಾರದ ಕೃಪಾಕಟಾಕ್ಷಕ್ಕಾಗಿ ಲಂಡನಿಗೆ ಸಂಭ್ರಮದಿಂದ ಪಯಣ ಬೆಳಸಿರಬಹುದು. ಆದರೆ ಮಿ. ಲ್ಯೊಡ್ ಜೋರ್ಜರಂದಂತೆ ನಿಜವಾದ ಹಿಂದು ದೇಶವು ಅದರಲ್ಲಿ ಭಾಗಿಯಾಗಿಲ್ಲ ಮಾತ್ರವಲ್ಲದೆ ಅದನ್ನು ಬಹಿಷ್ಕರಿಸಿರುವುದು. ಪ್ರದರ್ಶನದ ದೃಷ್ಟಿಯಿಂದ ಕೂಡಾ ಹಿಂದೂ ದೇಶವು ಸಾಮ್ರಾಜ್ಯದ ಇತರ ಭಾಗಗಳಿಗಿಂತ ಹಿಂದೆ ಬಿದ್ದಿರುವುದು. ಅಲ್ಲಲ್ಲಿ ಕೇವಲ ಕೆಲ ಮಂದಿ ಸರಕಾರಿ ನೌಕರರು ಸೇರಿ ಕಿರೀಟ ಧಾರಣೋತ್ಸವವನ್ನು ಕಟ್ಟು ಕಟ್ಟಳೆಯಂತೆ ಆಚರಿಸಿರುವರು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಗವರ್ನರರು ಪೋಲೀಸ್ ಮತ್ತು ಸೈನಿಕ ಪ್ರದರ್ಶನಗಳನ್ನು ನಡಿಸಿರಬಹುದು; ಪ್ರಭುನಿಷ್ಠೆಯ ಸಂದೇಶಗಳನ್ನು ಚಕ್ರವರ್ತಿಗಳಿಗೆ ಕಳುಹಿಸಿರಬಹುದು. ಆದರೆ ನಿಜವಾದ ಹಿಂದುದೇಶವು ತೀರಾ ವೈರಾಗ್ಯ ತಳೆದು ಸುಮ್ಮನಿದ್ದಿತು. ಕೆಲವೆಡೆ ನಿಷೇಧ ಸಭೆಗಳು ಕೂಡಾ ನಡೆದಿರುವವು. ಕಲ್ಕತ್ತ ಮತ್ತು ಮದ್ರಾಸ್ ಕೋರ್ಪರೇಶನುಗಳು ಕಿರೀಟಧಾರಣೋತ್ಸವದಲ್ಲಿ ಯಾವ ಭಾಗವನ್ನೂ ವಹಿಸಿರುವುದಿಲ್ಲ. ಕಾಂಗ್ರೆಸಿನವರಾರೂ ಅದರಲ್ಲಿ ಭಾಗ ವಹಿಸಕೂಡದೆಂದು ಕಾಂಗ್ರೆಸ್ ಪ್ರೆಸಿಡೆಂಟರು ಮೊದಲೇ ಆಜ್ಞಾಪಿಸಿದ್ದರು. ಹಲವು ಜಿಲ್ಲಾ ಬೋರ್ಡು ಮುನಿಸಿಪಾಲಿಟಿಗಳೂ ತಟಸ್ಥವಾಗಿದ್ದುವು.

ಹಿಂದು ದೇಶದ ವೈರಾಗ್ಯಕ್ಕೆ ಬೇಕಷ್ಟು ಕಾರಣಗಳಿವೆ. ಕಿರೀಟಧಾರಣೋತ್ಸವವೆಂಬುದು ಹಿಂದು ದೇಶದ ಪರಾಧೀನತೆಯನ್ನು ಮತ್ತಷ್ಟು ಬಲಗೊಳಿಸುವ ಹಂಚಿಕೆಯಾಗಿ ಪರಿಣಮಿಸಿರುವುದು. ಜೋರ್ಜ್ ಚಕ್ರವರ್ತಿಗಳು ತನ್ನ ಭಾಷಣದಲ್ಲಿ, ಬ್ರಿಟಿಷ್ ಸಾಮ್ರಾಜ್ಯವೆಂದರೆ ಸ್ವತಂತ್ರರಾಷ್ಟ್ರಗಳ ಸರಿಸಮಾನ ಪಾಲುಗಾರಿಕೆ, ಸ್ವತಂತ್ರ ಜನಾಂಗಗಳ ಕೂಟವೆಂಬರ್ಥದ ಮನೋಭಾವವನ್ನು ವ್ಯಕ್ತಪಡಿಸಿರುತ್ತಾರೆ. ವೈಸರಾಯರು ತನ್ನ ಸಂದೇಶದಲ್ಲಿ, ಹಿಂದು ದೇಶದಲ್ಲಿನ ಹೊಸ ಯುಗದ ಪ್ರಸ್ತಾಪವೆತ್ತಿರುತ್ತಾರೆ. ಇದು ಎಷ್ಟರ ಮಟ್ಟಿಗೆ ನಿಜವಾದುದು? ಬ್ರಿಟಿಷ್ ಸಾಮ್ರಾಜ್ಯದ ಇತರ ಸಾಮಂತ ರಾಜ್ಯಗಳೆಲ್ಲಾ ಸ್ವತಂತ್ರವಾಗಿರುವಾಗ ಹಿಂದು ದೇಶವು ಇನ್ನೂ ಪರಾಧೀನವಾಗಿದ್ದು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಸ್ವಾರ್ಥಸಾಧನೆಯ ಕೇವಲ ಒಂದು ಉಪಕರಣವಾಗಿದೆ. ಅಲ್ಲಿ ಹೊಸ ಯುಗವೊಂದು ಆರಂಭವಾಗುವ ಬದಲಿಗೆ, ಸರಕಾರವು ಇದೇ ರೀತಿ ಹಿಂದೀಯರ ಆಕಾಂಕ್ಷೆಗಳ ಕುರಿತು ಅಲಕ್ಷ್ಯ ತೋರಿಸುತ್ತಾ ಹೋದರೆ ಬೇಗನೆ ವಿಪ್ಲವವುಂಟಾಗುವ ಸಂಭವ ತೋರುತ್ತದೆ. ಅನೇಕ ಮಂದಿ ರಾಜಕೀಯ ಕೈದಿಗಳು ಇನ್ನೂ ಸೆರೆಮನೆಗಳಲ್ಲಿ ಕೊಳೆಯುತ್ತಿದ್ದಾರೆ. 2000ರದ ವರೆಗಣ ಬಂಗಾಳದ ತರುಣರು ಡಿಟೆನ್ಯೂ ಕೈದಿಗಳಾಗಿ ನರಳುತ್ತಿದ್ದಾರೆ. ದಬ್ಬಾಳಿಕೆಯ ಶಾಸನಗಳು ಸರಕಾರದ ಬತ್ತಳಿಕೆಯಲ್ಲಿ ತುಂಬಿಕೊಂಡಿದ್ದು ಅವುಗಳ ಉಪಯೋಗವೂ ಆಗಾಗ ನಡೆಯದಿಲ್ಲ. ಎಲ್ಲಕ್ಕಿಂತಲೂ ಮೇಲಾಗಿ, ಪ್ರಾಂತಿಕ ಸ್ವಾತಂತ್ರ್ಯವನ್ನು ಕೂಡಾ ಸಂಪೂರ್ಣವಾಗಿ ಕೊಡಲಾರದೆ ಇಡೀ ದೇಶದಲ್ಲೇ ಉಂಟಾಗಿರುವ ಕ್ಷೋಭೆಯನ್ನು, ವಿಕಟ ಪರಿಸ್ಥಿತಿಯನ್ನು ಕಿರೀಟ ಧಾರಣೆಯ ಸಂದರ್ಭದಲ್ಲಾದರೂ ನಿವಾರಿಸಲು ಆಳರಸರು ನಿಜವಾದ ಯಾವ ಪ್ರಯತ್ನವನ್ನೂ ನಡಿಸಿರುವುದಿಲ್ಲ. ಮಾತ್ರವಲ್ಲದೆ ತಮ್ಮ ಕೈಗೊಂಬೆಗಳನ್ನು ಮಂತ್ರಿಗಳಾಗಿ ನೇಮಿಸಿ ದೊಡ್ಡ ರಾಜಕೀಯ ಅತ್ಯಾಚಾರಮಾಡುವ ಹವ್ಯಾಸಕ್ಕೆ ಮನಸ್ಸು ಕೊಟ್ಟಿರುವರು. ಇಂತಹ ಪರಿಸ್ಥಿತಿಯಲ್ಲಿ ಕಿರೀಟಧಾರಣೆಯಲ್ಲಿ ಹಿಂದೀಯರು ಉತ್ಸಾಹ ತೋರಿಸುವುದಾದರೂ ಹೇಗೆ? ಬ್ರಿಟಿಷ್ ಮಂತ್ರಿಮಂಡಲದ ಧೋರಣೆಯನ್ನು ಪುಷ್ಟೀಕರಿಸಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ಮತ್ತಷ್ಟು ಬಲಗೊಳಿಸುವ ಉಪಕರಣವಾಗಿ ಉಪಯೋಗಿಸಲ್ಪಟ್ಟಿರುವ ಜೋರ್ಜ್ ಚಕ್ರವರ್ತಿಗಳ ಮೇಲೆ ಹಿಂದೀಯರಲ್ಲಿ ನಿಜವಾದ ಭಕ್ತಿ ವಿಶ್ವಾಸವುಂಟಾಗುವುದಾದರೂ ಹೇಗೆ?

ನೋಟಿಸು

ಸುಳ್ಯ ಪಂಚಾಯಿತ ಕೋರ್ಟಿನಲ್ಲಿ

ಶಿವಿಲ್ ವ್ಯಾಜ್ಯ ನಂಬ್ರ 165/37

ಬಿ. ಅಚ್ಚಣ್ಣ ನ್ಯಾಕ, ಬೆಳ್ಳಿಪ್ಪಾಡಿ ಸುಬ್ಬಣ್ಣ ನ್ಯಾಕರ ಮಗ ಸುಳ್ಯ ಕಸಬಾ } ವಾದಿ

ಬಿ. ಜೆ. ಡಿ. ಸೋಜ, ಕಾಸರಗೋಡು ತಾಲೂಕು ಬದಿಯಡ್ಕ ಗ್ರಾಮದಲ್ಲಿರುವ ಪೇದ್ರು ಡಿ. ಸೋಜರ ಮಗ ಸುಳ್ಯ ಕಸಬಾ ಗ್ರಾಮಸ್ಥ. } ಪ್ರತಿವಾದಿ

ಸದ್ರಿ ಪ್ರತಿವಾದಿ ಬಿ. ಜೆ. ಡಿ. ಸೋಜರೀಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ.

ಮೇಲ್ಕಂಡ ವಾದಿಯು ರೂ. 37-5-9 ಕ್ಕೋಸ್ಕರ ನಿಮ್ಮ ಮೇಲೆ ಈ ಕೋರ್ಟಿನಲ್ಲಿ ವ್ಯಾಜ್ಯ ದಾಖಲ್ಮಾಡಿದ್ದಾನೆ. ಆದಕಾರಣ ಸದ್ರಿ ವಾದಿಗೆ ಉದಾಹರಣೆ ಕೊಡುವ ಬಗ್ಗೆ ಈ ಕೋರ್ಟಿನಲ್ಲಿ 1937ನೇ ಇಸವಿ ಜೂನು ತಾ. 22ನೇ ಶನಿವಾರ ದಿವಸ ಹಗಲು 12 ಗಂಟೆಗೆ ನೀವು ಈ ಕೋರ್ಟಿನಲ್ಲಿ ಸ್ವತಃ ಹಾಜ್ರಾಗುವಂತೆ ಇದರಿಂದ ತಿಳಿಸೋಣಾಗಿದೆ, ಮತ್ತು ಸದ್ರಿ ತಾರೀಕಿನಲ್ಲಿ ನೀವು ಹಾಜ್ರಾಗದೆ ಇದ್ದರೆ ವ್ಯಾಜ್ಯವನ್ನು ನಿಮ್ಮ ಗೈರು ಹಾಜರಿಯಲ್ಲಿ ಕೇಳಿ ಫೈಸಲ್ ಮಾಡೋಣಾದೀತೆಂದು ಸಹಾ ನೀವು ಇದರಿಂದ ತಿಳಿಯತಕ್ಕದ್ದು.

ಪಂಚ್ಯಾತಕೋರ್ಟು ಸುಳ್ಯ,
(Sd) S. N. Ramakrishnaya *President*,
ತಾರೀಕು 17-5-1937

ವಿದೇಶ

ಸ್ಪೈನಿನ ಯುದ್ಧ

ಸರಕಾರದ ಕಡೆಯ ಸೈನಿಕರು ಟೊಲೇಡೋ ಎಂಬ ಪ್ರಾಮುಖ್ಯ ಪಟ್ಟಣವನ್ನು ಆವರಿಸಿರುವರೆಂದೂ, ಅದು ಬೇಗನೆ ಸರಕಾರದ ವಶವಾಗಲಿರುವದೆಂದೂ ಸ್ಪೆನಿಶ್ ಸರಕಾರದ ಕಡೆಯ ಸುದ್ದಿ. ಟೊಲೇಡೋ ಭಾಗದಲ್ಲಿ ನಡೆದ ಭೀಷಣ ಯುದ್ಧದಲ್ಲಿ ಸ್ಪೆನಿಶ್ ಸರಕಾರದ ಕಡೆಯ ೧೦,೦೦೦ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ಬಂಡಾಯಗಾರರ ಕಡೆಯ ವಾರ್ತೆ.

ಬಾಸ್ಕ್ ಸೈನಿಕರ ವಿಜಯ

ಬಿಲ್ಬಾವೋ ಪಟ್ಟಣದ ಮೇಲಿನ ಬಂಡಾಯಗಾರರ ಧಾಳಿಯ ಸಂದುಕಟ್ಟಿನ ಸ್ಥಳವಾಗಿರುವ ವಿಜ್ಕಾಗಿರ್ ಎಂಬ ಪರ್ವತ ಪ್ರದೇಶದ ಪ್ರಾಮುಖ್ಯ ಗುಡ್ಡವನ್ನೂ

ಬಾಸ್ಕ್ ಸೈನಿಕರು ಬಂಡಾಯಗಾರರಿಂದ ವಶಪಡಿಸಿಕೊಂಡಿರುವರು. ಇದರಿಂದಾಗಿ ಈ ಗುಡ್ಡದ ಇತರ ಕಡೆಯಲ್ಲಿರುವ ಬಂಡಾಯಗಾರರ ಸ್ಥಾನಕ್ಕೆ ಅಪಾಯವುಂಟಾಗಿದೆ. ಬಿಲ್ಬಾವೊ ಪಟ್ಟಣದ ಉತ್ತರದಲ್ಲಿಯೂ ಬಾಸ್ಕ್ ಸೈನಿಕರು ಬಂಡಾಯಗಾರರ ಸೇನೆಯನ್ನು ಹಿಂದಕ್ಕಟ್ಟಿ ಹಲವು ಮಂದಿ ಇಟೆಲಿಯನ ಮತ್ತು ಜರ್ಮನ್ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ವಾರ್ತೆ ಬಂದಿದೆ.

ವಿಮಾನ ಧಾಳಿ

ಇದೇ ತಾ ೧೬ರಲ್ಲು ವೆಲೆನ್ಸಿಯದ ಮೇಲೆ ಬಂಡಾಯಗಾರರ ವಿಮಾನಗಳು ನಡಿಸಿದ ಧಾಳಿಯಲ್ಲಿ ೩೦ಮಂದಿ ಕೊಲ್ಲಲ್ಪಟ್ಟು ೧೫೦ ಮಂದಿಗೆ ಪೆಟ್ಟಾಗಿರುವದು ಬ್ರಿಟಿಷ್ ರಾಯಭಾರಿ ನಿವಾಸದ ಎರಡು ಕೋಣೆಗಳಿಗೆ ಜಖಮ್ ಆಗಿ ಕೆಲವರು ಗಾಯಗೊಂಡಿರುವರು.

ಕ್ಯಾಬೆಲ್ಲೇರೋ ಸರಕಾರದ ರಾಜಿನಾಮೆ

ಬಾರ್ಸಿಲೋನದಲ್ಲಿ ಇತ್ತಲಾಗಿ ನಡೆದ ವಿದ್ಯಮಾನಗಳಿಂದಲೂ, ದೀರ್ಘಕಾಲದ ಯುದ್ಧವನ್ನೆದಿರಿಸಲು ಸರಕಾರವನ್ನು ಬಲಪಡಿಸುವುದಕ್ಕಾಗಿಯೂ ಸ್ಪೈನಿನ ಕ್ಯಾಬೆಲ್ಲೇರೋ ಸರಕಾರವು ರಾಜಿನಾಮೆಕೊಟ್ಟಿರುವುದು ಕ್ಯಾಬಲ್ಲೇರೋ ಮಂತ್ರಿಮಂಡಲದಿಂದ ಸೋಸಿಯಲಿಸ್ಟರೂ ಕಮ್ಯೂನಿಸ್ಟರೂ ಹಿಂತೆಗೆದುದೇ ಈ ರಾಜಿನಾಮೆಗೆ ಕಾರಣ ಕ್ಯಾಬಲ್ಲೇರೋರವರೇ ಹೊಸದೊಂದು ಮಂತ್ರಿಮಂಡಲವನ್ನೇರ್ಪಡಿಸುತ್ತಿರುವರಾದರೂ ಇನ್ನೂ ವರೆಗೆ ಜಯಶೀಲರಾಗಿರುವುದಿಲ್ಲ.

ಉಡುಪಿ

ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದುತ್ತಾ ಬರುತ್ತಿರುವ ಸ್ಥಳೀಕ 'ದಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್', ಬ್ಯಾಂಕು ರಿಜರ್ವ ಬ್ಯಾಂಕಿನ ಓರ್ವ ಮೆಂಬರರಾಗಿ ಸೇರಿಸಲ್ಪಟ್ಟಿರುವುದು ಆನಂದದಾಯಕವಾಗಿದೆ.

ಮಾರುತೀವಿಥಿಕೆಯಿಂದ ಚರ್ಚ್‌ರೋಡಿಗೆ ಬರಲು ನಿವೃತ್ತ ರಿಜಿಸ್ಟ್ರಾರರಾದ ಶ್ರೀ ರಂಗಪ್ಪ ಪಡಿಯಾರರು ಚತ್ರಿರದ ಹಾದಿಗೋಸ್ಕರ ಸ್ವಲ್ಪ ಸ್ಥಳವನ್ನು ಬಿಟ್ಟಿದ್ದರೆಂದೂ ಜನರು ಆ ಮಾರ್ಗವಾಗಿ ಬಂದು ಕ್ಲಬ್ಬಿನ ಪರಾಶವಾಗಿ ಯೂ ಉಡ್ಡಿ ಪ್ರೆಸ್ಸಿನ ಪಟ್ಟಾಸ್ಥಳದಮಾರ್ಗವಾಗಿ ಚರ್ಚ ರೋಡನ್ನು ಸೇರುತ್ತಿದ್ದರೆಂದೂ ಇತ್ತೀಚೆಗೆ ಆ ಖಾಸಗಿ ಸ್ಥಳಗಳ ಪಟ್ಟದಾರರು ಗೋಡೆಗಳನ್ನಿಟ್ಟಿರುವುದರಿಂದ ಹಾದಿಯು ಬಂದು ಮಾಡಲ್ಪಟ್ಟಿರುವುದಾಗಿಯೂ ಇದರಿಂದ ಜನರಿಗೆ ಸರಕಾರಿ ಆಸ್ಪತ್ರೆ, ಮುನ್ಸಿಪಲ್ ಆಫೀಸು ಮೊದಲಾದ ಕಡೆಗಳಿಗೆ ಹೋಗಲಿಕ್ಕೂ ಶಾಲಾ ವಿದ್ಯಾರ್ಥಿಗಳಿಗೆ ಮೈನ್ ಶಾಲೆ, ಟ್ರೈನಿಂಗ್ ಶಾಲೆಗಳಿಗೆ ಹೋಗಿ ಬರಲಿಕ್ಕೂ ತುಂಬಾ ತೊಂದರೆಯಾಗಿರುವುದಾಗಿಯೂ ಉಲ್ಲೇಖಿಸುವ ದೀರ್ಘಬಾತ್ಮಿಯೊಂದು ನಮ್ಮೆಡೆಗೆ ಬಂದಿದೆ. ಮುನಿಸಿಪಾಲಿಟಿಯವರು ಈ ಕುರಿತು ವಿಚಾರ ನಡಿಸಿ ನ್ಯಾಯಮಾರ್ಗವನ್ನು ಅನುಸರಿಸದಿರಲಾರರೆಂದು ನಿರೀಕ್ಷಿಸಲಾಗಿದೆ.

ಶ್ರೀ ಪೇಜಾವರ ಮಠದ ವ್ಯಾಸಭವನ ಎಂಬ ವಾಚನ ಮಂದಿರದಲ್ಲಿ ತಾ.೧೩-೫-೩೭ರಲ್ಲಿ, ಶ್ರೀ ಮಧ್ವಾಚಾರ್ಯರ ಶಿಷ್ಯ ವರ್ಗದಲ್ಲಿ ಎಂಟನೆಯವರೂ ಶ್ರೀ ಮದ್ಭಾಗವತಕ್ಕೆ ವ್ಯಾಖ್ಯಾನ ಬರೆದು ಪ್ರಸಿದ್ಧರಾದವರೂ ಆದ ಪೇಜಾವರ ಮಠದ ಮೂಲ ವಿಜಯಧ್ವಜ ವರರು ಹಂಸರ ತೈಲಚಿತ್ರ ಅನಾವರಣ ಸಮಾರಂಭವನ್ನು ಶ್ರೀ ಯು. ಸಿ. ಸುಬ್ರಹ್ಮಣ್ಯ ಭಟ್, ಬಿ. ಎ. ಬಿ ಎಲ್ ರವರು ಜರಗಿಸಿದರು. ಶ್ರೀಗಳಾದ ಉಳಿಯಾರು ಶ್ರೀನಿವಾಸಾಚಾರ್ಯರೂ ಕಾಪು ಕೃಷ್ಣಾಚಾರ್ಯರೂ ಬಿ. ಶ್ರೀನಿವಾಸ ಭಟ್ಟರೇ ಮೊದಲಾದವರೂ ಸಂದರ್ಭೋಚಿತವಾಗಿ ಮಾತನಾಡುತ್ತ ಈ ವ್ಯವಸ್ಥೆಯನ್ನು ಏರ್ಪಡಿಸಿದ ಶ್ರೀ ವಿಶ್ವಮಾನ್ಯ ತೀರ್ಥರನ್ನೂ ಮಠದ ಜನರಲ್ ಏಜಂಟರಾದ ಶ್ರೀ ಮಿಯಾರ ನರಸಿಂಹಾಚಾರ್ಯರನ್ನೂ ಶ್ಲಾಘಿಸಿದರು. ಚಿತ್ರವನ್ನು ಬರೆದ ಕಲಾ ನಿಪುಣ ಶ್ರೀ ಯಸ್. ಪುರುಷೋತ್ತಮ ರಾಯರೂ ಮನ್ನಣೆಗೆ ಪಾತ್ರರಾದರು. ಈ ಸಮಾರಂಭಕ್ಕೆ ಊರ ಪರವೂರ ಅನೇಕ ಮಹನೀಯರನೇಕರು ಚಿತ್ತಯಿಸಿದ್ದರಾದರೂ ಇತರ ಮಠಿಯರುಭಾಗ ವಹಿಸದಿದ್ದುದು ವಿಷಾದಕರವಲ್ಲವೇ?

ಉಡುಪಿ ಮುನಿಸಿಪಾಲಿಟಿಯ ಸಾಮಾನ್ಯ ಸಭೆಯೊಂದು ತಾ ೧೮-೫-೩೭ನೇ ಮಂಗಳವಾರ ಸಂಜೆ ಐದೂ ಕಾಲು ತಾಸಿಗೆ ಮುನಿಸಿಪಲ್ ಆಫೀಸಿನಲ್ಲಿ ರಾ| ಅರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಶಾಲು ವಿದ್ಯಾರ್ಥಿಗಳ ಆರೋಗ್ಯವನ್ನು ಪರೀಕ್ಷಿಸುವರೆ ಶ್ರೀಗಳಾದ ಡಾಕ್ಟರ್ ರಾಘವೇಂದ್ರ ನಾಯಕ್, ಕೆ.ಎಲ್ ಐತಾಳರನ್ನು ಒನರರಿ ಮೆಡಿಕಲ್ ಆಫೀಸರಾಗಿನೇಮಿಸಲಾಯಿತು. ಕೊರೊನೇಶನ್ ಇತರ ವಿಶೇಷದಿನಗಳಲ್ಲಿರಾಷ್ಟ್ರಧ್ವಜಗಳನ್ನು ಮುನಿಸಿಪಲ್ ಕಟ್ಟಡದಲ್ಲಾಗಲೀ ಅಥವಾ ಮುನಿಸಿಪಾಲಿಟಿಗೆ ಸಂಬಂಧಪಟ್ಟ ಕಟ್ಟೋಣಗಳಲ್ಲಿ ತೂಗಹಾಕಬಾರದಾಗಿ ಒಂದ ಸರಕಾರಿ ಹುಕುಮನ್ನು ರಿಕಾರ್ಡುಮಾಡಲಾಯಿತು.

ಬ್ರಹ್ಮಾವರ ಸೆಂಟರಿನಲ್ಲಿ ಸಹಕಾರಿ ಸಂಘಗಳ ಪಂಚಾಯತದಾರರ ಮತ್ತು ಮೆಂಬರರ ತರಬೇತಿ ಶಿಕ್ಷಣಕ್ಲಾಸುಗಳು ಇದೇ ತಾ ೧೭ ಮತ್ತು ೧೮ರಲ್ಲು ನಡೆದವು. ಊಟದ ವ್ಯವಸ್ಥೆ ಸೆಂಟ್ರಲ್ ಬ್ಯಾಂಕಿನವರಿಂದ ಮಾಡಲಾಗಿತ್ತು. ಪ್ರಚಾರ ಕಾರ್ಯಕ್ಕಾಗಿ ಶ್ರೀಗಳಾದ ಯು. ಶಾಂತಾರಾಮರಾವ್, ಪಿ. ರಾಮರಾಯ ಮತ್ತು ಯು. ಗೋವಿಂದ ರಾಯರು ಬಂದಿದ್ದರು. ಡೆಪ್ಯುಟಿ ರಿಜಿಸ್ಟ್ರಾರ್ ರಾ| ಸಿ ಕಣ್ಣನ್ ನಾಯರರೂ ಮೊಕ್ಕಾಂ ಮಾಡಿದ್ದರು.

ಸ್ಪೆಶಲ್ ಮೀಟಿಂಗ್

ವರ್ಕ್ಸ್ ಮತ್ತು ಕಮ್ಯುನಿಕೇಶನ್ ಸಮಿತಿಯಿಂದ ರಾಜಿನಾಮೆ ಕೊಟ್ಟ ಶ್ರೀ ಶಿವರಾಯರ ಸ್ಥಾನದಲ್ಲಿ ಶ್ರೀ| ವೆಂಕಪ್ಪ ಶೆಟ್ಟಿಯವರು ಆರಿಸಲ್ಪಟ್ಟರು.

ಕಾಂಗ್ರೆಸ್ ಸಭೆ

ನಗರ ಕಾಂಗ್ರೆಸ್ ಕಮಿಟಿಯ ಜನರಲ್ ಮೀಟಿಂಗು ಕಳೆದ ತಾ. ೧೫ರಲ್ಲಿ ಜರಗಬೇಕಾಗಿತ್ತು. ಆದರೆ ಕಾರಣಾಂತರದಿಂದ ಅದು ಮುಂದರಿಸಲ್ಪಟ್ಟಿತು.

ವ್ಯಾಯಾಮ ಸಂಘದ ಪ್ರಥಮ ವಾರ್ಷಿಕೋತ್ಸವ

ಬೆಂಗರೆ ಮೊಗವೀರ ಶಕ್ತಿಸಾಧನ ವ್ಯಾಯಾಮ ಸಂಘದ ಪ್ರಥಮ ವಾರ್ಷಿಕೋತ್ಸವವು ಕಳೆದ ಶುಕ್ರವಾರ ಸಾಯಂಕಾಲ ಶ್ರೀ ಮೋಹನಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ಜರಗಿತು. ಇದಕ್ಕಾಗಿ ಬೆಂಗರೆಯ ಮೈದಾನಿನಲ್ಲಿ ಭವ್ಯವಾದ ಸಭಾಮಂಟಪವು ತಯಾರಿಸಲ್ಪಟ್ಟಿತ್ತು. ಭಗವತ್ ಪ್ರಾರ್ಥನೆ ಮತ್ತು ಕಾರ್ಯಗಳ ವರದಿ ವಾಚನದ ತರುವಾಯ ಸಂಘದ ಸದಸ್ಯರ ವಿವಿಧಶಕ್ತಿ ಪ್ರದರ್ಶನಗಳು ಜರಗಿದವು. ದಾಲು ಕತ್ತಿ ಮತ್ತು ಈಟಿ ಬರ್ಚಿಯ ಯುದ್ಧಗಳೂ, ಇಬ್ಬರ ಮಲ್ಲ ಯುದ್ಧಗಳೂ ಪ್ರೇಕ್ಷಣೀಯವಾಗಿತ್ತು. ಸಂಘದ ವ್ಯಾಯಾಮ ಶಾಲೆಯ ಆಧ್ಯಾಪಕರಾದ ಬೇಳೂರು ಲಕ್ಷ್ಮಣ ಪುತ್ರನ್ ರವರ ಸ್ನಾಯು ನಿಯಂತ್ರಣ (ಮಸಲ್ಸ್ ಕಂಟ್ರೋಲ್) ಪ್ರದರ್ಶನವು ಅತ್ಯಾಶ್ಚರ್ಯಕರವಾಗಿತ್ತು. ಇವರಿಗೆ ಸಂಘದವರು ಅಧ್ಯಕ್ಷರ ಮುಖಾಂತರ ಒಂದು ಚಿನ್ನದ ಮೆಡಲನ್ನು ತೊಡಿಸಿದರು ನಂತರ ಅಂಗಸಾಧನೆಯ ಮಹತ್ವದ ಕುರಿತು ಬೆಂಗರೆ ಮೋಹನಯ್ಯ ಕರುಣಾಕರರೂ ಜ್ಯೋಗಿ ನಾರಾಯಣ ಬಂಗೇರರೂ, ಪಣಂಬೂರು ಕುಂಞ ಪುತ್ರನ್ನಾಯರೂ, ಭಾಷಣಗಳನ್ನು ಮಾಡಿದರು. ಮಧ್ಯಪಾನಾದಿ ದುರ್ವ್ಯಸನಗಳ ಹಾನಿಯನ್ನೂ ವ್ಯಾಯಾಮದಿಂದುಂಟಾಗುವ ಆರೋಗ್ಯ ಭಾಗ್ಯವನ್ನೂ ವಿವರಿಸಿ ಅಧ್ಯಕ್ಷರು ಕಾಲೋಚಿತ ಭಾಷಣಕೊಟ್ಟರು.

ಕಳೆದ ವಾರ ಇಲ್ಲಿಯ ಮುನಿಸಿಪಲ್ ಸೆನಿಟರಿ ಇಲಾಖೆಯ ಲೋರಿಯೊಂದು ಮಾರ್ಕೆಟು ಬಳಿ ಒಂದು ಅಂಗಡಿಯ ಅತ್ಯಂತ ಬದಿಯಿಂದ ಹಾದು ಹೋಗಿ ಮಾಡು ಮುರಿದು ಹೋಯಿತಲ್ಲದೆ ಆ ಅಂಗಡಿಯಲ್ಲಿ ಜಿನಸು ಕೊಳ್ಳುತ್ತಿದ್ದ ಬೊಕಪಟ್ನ ಮೊಗವೀರ ಜಾತಿ ಬಸ್ತು ಗುರಿಕಾರರ ಹೆಂಡತಿ ಕಾವೇರಿ ಎಂಬವಳು ಜಖಂ ಹೊಂದಿ ಆಸ್ಪತ್ರೆಯಲ್ಲಿ ಮರಣಪಟ್ಟಳು ಲೋರಿಯ ಡ್ರೈವರು ಮದ್ಯಪಾನದಿಂದ ಮತ್ತನಾಗಿದ್ದನಂತೆ.

ಮುಂಬಯಿ ಆವೆರೀ ಕಂಪೆನಿಯ ಉದ್ಯೋಗಸ್ಥರೊಬ್ಬರಾದ ಶ್ರೀಮಾನ್ ಜಿ. ಕೆ. ಕರುಣಾಕರರು ತನ್ನ ವಿವಾಹ ಸಂಸ್ಕಾರದ ಸ್ಮರಣಾರ್ಥವಾಗಿ ಮಂಗಳೂರು ಶ್ರೀ ಜ್ಞಾನೋದಯ ಸಮಾಜದ ರಜತಜಯಂತಿ ನಿಧಿಗೆ ರೂಪಾಯಿ ೫ ದಾನವಾಗಿ ಕಳುಹಿಸಿರುತ್ತಾರೆ. ಇದಕ್ಕಾಗಿ ಅವರ ಉಪಕಾರ ಸ್ಮರಿಸುತ್ತೇನೆ.

ಕಾರ್ಯದರ್ಶಿ.

ಮುಲ್ಕಿ

ತಾ. ೧೨-೫ ೩೭ರಲ್ಲಿ ರಾಜರ ಕಿರೀಟಧಾರಣೋತ್ಸವದ ದಿನ ಸಾಯಂ ಗಂಟೆ ೪ಕ್ಕೆ ಮುಲ್ಕಿ ಪಂಚಾಯತ ಬೋರ್ಡು ಆಫೀಸಿನ ಪ್ರವೇಶೋತ್ಸವವು ಮ. ರಾ. ಕಲ್ಕುಡಿ ರಾಮರಾವ್, ಬೆಂಚ್ ಮೇಜಿಸ್ಟ್ರೇಟ್ ಇವರ ಅಧ್ಯಕ್ಷತೆಯಲ್ಲಿ ಮುಲ್ಕಿ ಛತ್ರದ ನೂತನ ಕಟ್ಟಡದಲ್ಲಿ ಜರಗಿತು. ಬೋರ್ಡಿನ ಕಾರ್ಯಕಲಾಪಾದಿಗಳ ಕುರಿತು ಸಭಿಕರಲ್ಲಿ ಕೆಲವು ಮಾನ್ಯ ಗೃಹಸ್ಥರ ಭಾಷಣಗಳಾದುವು ಅನಂತರ ಅಧ್ಯಕ್ಷರು ಈ ಬೋರ್ಡಿನಿಂದ ಗ್ರಾಮಕ್ಕೆ ಈ ವರೆಗೆ ಆದ ಉಪಕಾರದ ಕುರಿತೂ ಮುಂದೆ ಸಹ ಒಳ್ಳೇ ನಿಶ್ಚಿತ ಕೆಲಸಗಳನ್ನೇ ಬೋರ್ಡು ಮಾಡದಿರಲಾರದೆಂದೂ ಭಾಷಣವಿತ್ತರು. ಕಡೆಗೆ ಬೋರ್ಡು ಸದಸ್ಯರು ಏರ್ಪಡಿಸಿದ ಉಪಹಾರ ಸತ್ಕಾರವಾದ, ಬಳಿಕ ಬೋರ್ಡಿನ ಅಧ್ಯಕ್ಷರಾದ ರಾ| ಕೆ ಎಂ ಸೋಮನವರು ಧನ್ಯವಾದಗಳನ್ನರ್ಪಿಸಲಾಗಿ ಸಭಾಂತ್ಯವಾಯಿತು.

ಈ ವರೆಗೆ ನಾದುರುಸ್ತಿಯಲ್ಲಿದ್ದ ಛತ್ರವನ್ನು ಪಂಚಾಯತ ಬೋರ್ಡಿನವರು ದುರುಸ್ತಿ ಪಡಿಸಿ ಅದರ ಅರ್ಧ ಭಾಗವನ್ನು ಬೋರ್ಡಿನ ಆಫೀಸಿಗೂ ಉಳಿದ ಅರ್ಧ ಭಾಗವನ್ನು ಸಾರ್ವಜನಿಕ ಛತ್ರವಾಗಿಯೂ ಏರ್ಪಡಿಸಿದುದು ಸ್ತುತ್ಯವಾಗಿದೆ.

ಕಾರ್ಕಳ

ಇಲ್ಲಿಯ ಕೆಲವು ಉತ್ಸಾಹೀ ತರುಣರು ಸೇರಿ ತಾ ೭-೫-೩೭ರಲ್ಲಿ ಶ್ರೀ ರಾಮ ದೇವಸ್ಥಾನದ ಹತ್ತಿರ 'ವ್ಯಭಿಚಾರಿಣಿ ಯಾರು' ಎಂಬ ನಾಟಕವನ್ನು ಬಹು ಯಶಸ್ವಿಯಾಗಿ ಅಭಿನಯಿಸಿದರು. ಇದೇ ನಾಟಕವನ್ನು ಯಥಾವಕಾಶವಾಗಿ ಬೇರೆ ಕಡೆಗಳಲ್ಲೂ ಅಭಿನಯಿಸುವ ವ್ಯವಸ್ಥೆಯಾಗಿದೆ.

ಸ್ವೀಕಾರ

ಮಂಗಳೂರಿನಿಂದ ಮಿ| ಜೆ. ಬಿ. ಮಚ್ಚಾದೋರರ ಸಂಪಾದಕತ್ವದಿಂದ ಹೊರಡುತ್ತಿರುವ 'ಸಮಾಜಚೊ ದಿವೊ' ಎಂಬ ಕೊಂಕ್ಣಿ ಇಂಗ್ಲಿಷ್ ಪಕ್ಷ ಪತ್ರಿಕೆಯ ೧ನೇ ವರ್ಷದ ೩ನೇ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಇದು ಪ್ರತಿ ತಿಂಗಳ ೧೦ ಮತ್ತು ೨೫ನೇ ತಾರೀಕಿಗೆ ಹೊರಡುತ್ತಿದೆ. ವಾರ್ಷಿಕ ಚಂದಾ ರೂ ೧-೮-೦ ಮಾತ್ರ ಬಿಡಿಪತ್ರಿಕೆಗೆ ೦-೧-೦. ಈ ನೂತನ ಬಂಧುವಿಗೆ ನಮ್ಮ ಸುಸ್ವಾಗತ!

—•— ಅಭಿನಂದನೆ —•—

ಕುಂದಾಪುರ,
ತಾ. 15—5—'37.

ಪ್ರಿಯರೇ,

ನಾನು ಈ ವಾರ ನಿಮ್ಮ ಉಡುಪಿಗೆ ಬರುವೆನೆಂದು ಬರೆದಿದ್ದನಷ್ಟೆ! ಆದರೆ ನಮ್ಮ ಸಂಘದ ಸಭೆಯ ದೆಸೆಯಿಂದ ಬರಲಿಕ್ಕಾಗುವದಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ. ನಾನು ಇನ್ನೊಂದು ಬಾರಿ ಬರುತ್ತೇನೆ ನಾನು ಮೊದಲು ಬರೆದಿರುವಂತೆ ನನ್ನ ಸಂಘಕ್ಕೆ ಕೆಲವು ಪುಸ್ತಕಗಳು ಅತ್ಯಾವಶ್ಯಕವಾಗಿವೆ. ಆದುದರಿಂದ ನೀವು ಉಡುಪಿಯಲ್ಲಿ ಇತ್ತೀಚೆಗೆ ಪ್ರಾರಂಭವಾದ "ನವ ಭಾರತ ಬುಕ್ ಡಿಪ್ಪೊ" ದಲ್ಲಿ ಯಾವ ಪುಸ್ತಕಗಳಿವೆ ಎಂಬುದನ್ನು ತಿಳಿಸಿರಿ. ಯಾ ಅವರ ಕೆಟಲಾಗು ಇದ್ದರೆ ಕಳುಹಿಸುವ ವ್ಯವಸ್ಥೆ ಮಾಡಿರಿ. ಅಲ್ಲಿ ಧಾರವಾಡದ, ಮಂಗಳೂರಿನ, ಬೆಂಗಳೂರಿನ ಆಧುನಿಕ ಗ್ರಂಥಗಳು ದೊರೆಯುತ್ತವೆಂದು ಕೇಳಿದ್ದೇನೆ. "ಕಿರಿಯರ ಪ್ರಪಂಚ"ದ ಮತ್ತು "ನವಯುಗ"ದ ಶ್ರೀ ಹೊನ್ನಯ್ಯ ಶೆಟ್ಟರು ಇದರಲ್ಲಿ ಕೈಹಾಕಿರುವರೆಂದು ನನಗೆ ವರ್ತಮಾನವಿದೆ. ಹಾಗಿದ್ದರೆ ಅಲ್ಲಿ ನಮ್ಮ ಸಂಘಕ್ಕೆ ಬೇಕಾದ ಉತ್ತಮ ಗ್ರಂಥಗಳು ಸಿಗಬಹುದೆಂದು ನಂಬುತ್ತೇನೆ. ಮತ್ತು ಶ್ರೀ ಶೆಟ್ಟರ ಈ ಹೊಸ ಸಾಹಸಕ್ಕಾಗಿ ನಾನವರನ್ನು ಅಭಿನಂದಿಸುತ್ತೇನೆ. ನವಭಾರತ ಬುಕ್ ಡಿಪ್ಪೋವು ಆಧುನಿಕ ಗ್ರಂಥಗಳ ಭಂಡಾರ ಮಾತ್ರವೆಯೋ? ಶಾಲಾಪುಸ್ತಕಗಳು ಶಾಲೋಪಕರಣಗಳು, ಸ್ಟೇಶನರಿ ಮೊದಲಾದವೂ ದೊರೆಯುತ್ತವೆಯೋ ತಿಳಿಸಿರಿ. ಈಗಿನ ಕಾಲದಲ್ಲಿ ಬರೇ ಬುಕ್ ಡಿಪ್ಪೋವನ್ನು ನಡೆಸುವುದು ಅಸಾಧ್ಯವಾದ್ದರಿಂದ ಅವನ್ನೂ ಸೇರಿಸುವುದು ಉಚಿತವೆಂದು ನನಗನಿಸುತ್ತದೆ,

ಬಾಕಿ ವಿಚಾರ ಹಿಂದಿನಿಂದ. ಕೂಡಲೇ ಉತ್ತರ ಬರೆಯಿರಿ.

ಇತಿ ನಿಮ್ಮವನಾದ,
H. K. Shetty.

(೯ನೇ ಪುಟದಿಂದ)

ಕೆಲವರು ಕ್ಲಾರ್ಕರು ತಮಗೆ ಅಡ್ವಾನ್ಸ್ ಇನ್ಕ್ರಿಮೆಂಟು ಕೊಡಬೇಕೆಂದು ಅರ್ಜಿಮಾಡಿದ್ದರು. ಅವರ ಪ್ರಾರ್ಥನೆಯಂತೆ ಕೊಡಬಾರದೆಂದು ಬೋರ್ಡು ತೀರ್ಮಾನಿಸಿತು. ನಾಲ್ಕು ಬಾವಿಗಳಿಗೆ ಬೇಕಾದ ಅಂದಾಜು ಖರ್ಚು ಮಂಜೂರುಮಾಡಲ್ಪಟ್ಟಿತು. ಮೂಲಗ್ರಾಮದ ಶಾಲೆಯನ್ನು (ಕಾರ್ಕಳತಾಲೂಕು) ತೆರೆಯಬೇಕೆಂದಾಯಿತು. ಮುಲ್ಕಿ ಕಡವನ್ನು ಪಂಚಾಯತಕ್ಕೆ ಬಿಟ್ಟುಕೊಡಬೇಕೆಂದು ಶ್ರೀಮತಿ ಮನೋರಮಾ ಬಾಯಿಯವರು ಠರಾವು ತಂದರು. ಅದು ಕ್ಲಾಸಿಕೆಫಿಕೇಶನ್ ಕಮಿಟಿಯ ಮುಂದೆ ಬರಬೇಕೆಂದಾಯಿತು. ಮೂಲ್ಕಿ ಹೈಸ್ಕೂಲಿನಲ್ಲಿ ಫಿಜಿಯಾಲಜಿಯನ್ನು ಕಲಿಸುವುದಕ್ಕಾಗಿ ೭೦೦ ರೂ ವೆಚ್ಚವಾಗಿದೆಯಾದ್ದರಿಂದ ಆ ವಿಷಯವನ್ನು ಕಲಿಸುವ ಏರ್ಪಾಡು ಮಾಡಬೇಕೆಂದು ಶ್ರೀ| ಎ ಬಿ. ಶೆಟ್ಟಿಯವರು ಠರಾವು ತಂದರು.

ಇನ್ನು ಕೆಲವಿಷಯಗಳು ಪರ್ಯಾಲೋಚಿಸಲ್ಪಟ್ಟ ಮೇಲೆ, ಸರಕಾರಿ ಹುಕುಮುಗಳು ಓದಲ್ಪಟ್ಟು ೨ ತಾರೀಖಿನ ಮೇಲೆ ಸಭೆಯು ಮುಗಿಯಿತು.

FOR SALE

From

EZEKIEL SOANS

Retired Teacher

Near Manipal

POST UDIPI, S. K.

A decent building on a plot of nearly $1\frac{1}{2}$ acres built according to the modern requirements and situated nearly 2 furlongs from Manipal, S. K. is for sale for Rs. 2000. Intending purchasers are requested to communicate to theabove addssre.

(*Sd.*) **Ezekiel Soans.**

ದಕ್ಷಿಣ ಕನ್ನಡ

ಮೂಲ್ಕಿ

ಇಲ್ಲಿಂದ ವರ್ಗವಾಗಿ ಹೋದ ಶ್ರೀ ಡಾಕ್ಟರ್ ಎಂ ಉಮೇಶರಾವ್, ಯಲ್ ಎಂ. ಎಂಡ್ ಯಸ್ ಮತ್ತು ಶ್ರೀ ಕೆ ಕೃಷ್ಣರಾವ್ ಬಿ ಎ. ಯಲ್. ಟಿ. ರವರನ್ನು ಗೌರವಿಸುವ ಬಗ್ಗೆ ತಾ. ೮-೫-೩೭ರಲ್ಲು ಅಪರಾಹ್ನ ಘಂಟೆ ೫ಕ್ಕೆ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ ಒಂದು ಸಂತೋಷ ಕೂಟದ ಏರ್ಪಾಡನ್ನು ಮಾಡೋಣಾಗಿತ್ತು. ಶ್ರೀ ಕೆ. ಯು ಪೈ ಬಿ ಎ ರವರು ಅಗ್ರಾಸನರಾಗಿದ್ದರು ಸಭಾಧ್ಯಕ್ಷರು ಪೂರ್ವ ಪೀಠಿಕೆಯಾಗಿ ಅತಿಥಿಗಳ ಗುಣಕಥನವನ್ನು ಮಾಡಿದುದಲ್ಲದೆ ಸಭಿಕರ ಪೈಕಿ ಶ್ರೀಗಳಾದ ಟಿ ನಾರಾಯಣ ಶೆಣೈ, ಯಂ ಆರ್. ಪುಂಜ, ಡಾಕ್ಟರ ಎಂ ಆರ್ ಕಾಮತ್, ಯಂ ಪಿ ದೇವರಾವ್, ಬಿ ಎ ಎಲ್. ಟಿ ಇವರೇ ಮೊದಲಾದವರು ಡಾಕ್ಟರರೂ, ರಾಯರೂ ಇಲ್ಲಿದ್ದ ಕಾಲದಲ್ಲಿ ಮಾಡಿದ್ದ ಅಮೂಲ್ಯ ಕೆಲಸಗಳ ಪರಿಚಯ, ಅವರಿಬ್ಬರಲ್ಲಿಯೂ, ಅಡಕವಾಗಿದ್ದ ಪ್ರೇಮ, ಸೌಹಾರ್ದತೆ, ಸರಳ ಸ್ವಭಾವ ಇತ್ಯಾದಿಗಳನ್ನು ಕುರಿತು ಪ್ರಶಂಸಿಸಿ ಮಾತಾಡಿದರು ಸಭಾಧ್ಯಕ್ಷರು ಅತಿಥಿಗಳಿಬ್ಬರ ಕೊರಳಿಗೂ ಹೂ ಹಾರ ಹಾಕಿ ಗೌರವಿಸಿದರು. ಅತಿಥಿಗಳಿಬ್ಬರು ಕೆಲವೇ ಮಾತುಗಳಿಂದ ತಮ್ಮ ಹೃತ್ಪೂರ್ವಕ ಆಭಾರವನ್ನು ಸೂಚಿಸಿದರು. ಕಡೆಗೆ ಕೂಡಿ ಬಂದ ಸಭಸ್ತರನ್ನು ಫಲಹಾರ ತಾಂಬೂಲಾದಿಗಳಿಂದ ಉಪಚರಿಸಲ್ಪಟ್ಟಿತು

ಫರಂಗಿ ಪೇಟೆ

ಇಲ್ಲಿಯ ಪುದು ಬೋರ್ಡ ಮಾಪಿಳ್ಳ ಶಾಲೆಯ ವರ್ಷೋತ್ಸವವು ಇದೇ ಕಳೆದ ತಾ ೧೮ರಲ್ಲು ಜನಾಬ್ ಮೊಗ್ರಾಲ್ ಕೆ ಕುಞಾಮ್ಮದ್ ಮೌಲಾನಾ ವೈಲ್ಮಿ ಸಾಹೇಬರ ಅಧ್ಯಕ್ಷತೆಯಲ್ಲಿ ಬಹಳ ಯಶಸ್ವಿಯಾಗಿ ನಡೆಯಿತು. ಕೆನರಾ ರೇಂಜ್ ನ ಮಹ್ಮಡನ್ ಶಾಲೆಗಳ ಡಿಪ್ಯುಟಿ ಇನ್ಸ್ಪೆಕ್ಟರವರೂ ಊರ ಪರವೂರ ಗೃಹಸ್ಥರೂ ನೆರೆದು ಬಂದಿದ್ದರು. ಸಾಯಂ ಘಂಟೆ ೭ಕ್ಕೆ ಅಧ್ಯಕ್ಷರ ಚುನಾವಣೆಯ ನಂತರ ಸದ್ರಿ ಶಾಲೆಯ ಹಳೇ ವಿದ್ಯಾರ್ಥಿ ಜನಾಬ್, ಎ. ಹಾಜೋದು ಸಾಹೇಬರು ತಿಲಾ ಅಭಿವಂದನವನ್ನು ಮಾಡಿದರು ಹೆಣ್ಣು ಮಕ್ಕಳ ಡ್ರಿಲ್ಲ್ ಆಟವೂ ಮತಯಾಳ ನಾಟಕವೂ ಆದ ತರುವಾಯ ಹೆಡ್ ಮಾಸ್ಟರರು ಶಾಲಾ ರಿಪೋರ್ಟನ್ನು ಓದಿ ಆಟಪಾಠಗಳಲ್ಲಿ ಉತ್ತೀರ್ಣರಾದವರಿಗೆ ಇನಾಮುಗಳು ಹಂಚೋಣಾದವು ಶಾಲಾ ಹಿತೈಷಿಗಳಲ್ಲಿ ಜನಾಬ್, ಎಫ್ ಎಚ್. ವಡೆಯರ್, ಶ್ರೀಯುತರುಗಳ ದ ಡಿ ಮಾಧವ ರಾವ್, ಎ ರಾಮಚಂದ್ರ ಹೆಗ್ಡೆ ಮತ್ತು ಕೆ. ರಾಮಚಂದ್ರ ಪೈಗಳ ಭಾಷಣವಾದ ಬಳಿಕ, ಡಿ ಇನ್ಸ್ಪೆಕ್ಟರವರು ಈ ಶಾಲೆಯ ಕೆಲಸವನ್ನು ಕೊಂಡಾಡಿ ಇನ್ನಷ್ಟು ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಿಕೊಟ್ಟು ಸ್ತ್ರೀ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿಗೆ ನಿಗಾ ತೆಗೆದುಕೊಳ್ಳಬೇಕಾಗಿ ಗ್ರಾಮಸ್ಥರನ್ನು ಎಚ್ಚರಿಸಿ ಮಾತನಾಡಿದರು ಮಕ್ಕಳ ಕೋಲಾಟ, ಕನ್ನಡ ನಾಟಕ ಇತ್ಯಾದಿಗಳು ನಡೆದ ಬಳಿಕ ಅಧ್ಯಕ್ಷರು- ವಿದ್ಯಾಭ್ಯಾಸವೇ ಜನಾಂಗದ ಏಳಿಗೆಯ ಸಾಧನವೆಂದೂ, ಇಂದು ತಾನು ಇಲ್ಲಿ ಕಣ್ಣಾರೆ ಕಂಡ ಹಿಂದೂ ಮುಸ್ಲಿಮ್ ಐಕ್ಯವೇ ಮುಂದೆ ಈ ಊರ ಉದ್ಧಾರಕ್ಕೆ ಒಂದು ದೃಷ್ಟಾಂತವೆಂದೂ ಹೀಗೆ ಮತಭೇದವನ್ನು ಲೆಕ್ಕಿಸದೆ ಸರ್ವರೂ ಒಕ್ಕಟ್ಟಾಗಿ ಒಂದೇ ಜನಾಂಗವೆಂಬ ಭಾವನೆಯಿಂದ ನಡಕೊಂಡಲ್ಲಿ ದೇಶೋದ್ಧಾರವಾಗುವದೆಂದೂ ತಮಗೆ ಆಗತ್ಯವಿರುವ ಯಾವ ಭಾಷೆಯನ್ನೂ ಅಭ್ಯಾಸಿಸುವದರಲ್ಲಿ ಯಾವ ದೋಷವಿಲ್ಲವೆಂದೂ ಮುಂತಾದ ಬೋಧಪ್ರದ ಮತ್ತು ಅನುಭವಯುಕ್ತವಾದ ಭಾಷಣಮಾಡಿದ ಬಳಿಕ ಗನ್ನಾದ ರಾಷ್ಟ್ರಗೀತೆಗಳೊಂದಿಗೆ ಸಮಾರಂಭವು ಮುಕ್ತಾಯ ಗೊಂಡಿತು.

ಪ್ರತ್ಯಕ್ಷ

ಕಲ್ಯಾಣಪುರ

ಬಿಲ್ಲವ ಯುವಕ ಸಂಘದವರು ತಮ್ಮ ಸಮಾಜದ ಉದ್ದಿಶ್ಯ ಒಂದು ಭಜನೆ ಮಂಡಳಿಯನ್ನು ತೆರೆಯುವರೆಂದು ವಾರ್ತೆಯಿದೆ. ಈ ಮಂಡಳಿಯಿಂದ ಬಿಲ್ಲವ ಸಮಾಜಕ್ಕೂ ತರುಣರ ಏಳಿಗೆಗೂ ಮುಂದಕ್ಕೆ ಹೆಚ್ಚಿನ ಶ್ರೇಯಸ್ಸಲ್ಲದೆ, ಅನೇಕ ಬಾಲಕರಿಗೂ ಉತ್ತಮ ರೀತಿಯ ಹಾದಿಯನ್ನು ಕಲ್ಪಿಸಿಕೊಟ್ಟಂತಾಗುವುದೇ ಸಂತೋಷಕರ.

ಬ್ರಹ್ಮಾವರ

ಇಲ್ಲಿನ ಮಾರ್ ಆಲ್ಬ ರೀಸ್ ಓರ್ಡರ್ಸ್ ಸೀರ್ಯನ್ ಸಂಡೇ ಸ್ಕೂಲಿನ ವರ್ಷಾಂತ್ಯೋತ್ಸವವು ಕಳೆದ ಶನಿವಾರ ಸಾಯಂಕಾಲ ಘಂಟೆ ೩ಕ್ಕೆ ಸಿ ಎಚ್ ಇ ಸ್ಕೂಲಿನ ಕಟ್ಟೋಣದಲ್ಲಿ ರೆವೆರೆಂಡ್ ಫಾದರ್, ಕೆಯ ಕೋಶರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು ಶಾಲೆಗೆ ಸಂಬಂಧಪಟ್ಟ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮಾಬಾಕಳದಿಂದ ಶಾಲೆಯವರೆಗೆ ಮೆರವಣಿಗೆಯಿಂದ ಬಂದರು ಅನಂತರ ವಿದ್ಯಾರ್ಥಿಗಳು ಪ್ರಾರ್ಥನೆ ಮಾಡಿದರು ಸೆಕ್ರೆಟರಿ ರೆವೆರೆಂಡ್ ಡೀಕನ್ ವರ್ಗೀಸರೂ, ಶ್ರೀಯುತರುಗಳಾದ ಪಿ ಎಸ್ ವಿ ಜನೇಸರೂ, ಎಲ್ ಜಿ. ಡಿ ಸೋಜರೂ ಅಪ್ಲೋಲಿನ್ ಮಾಸರೂ ಸಂಡೇ ಸ್ಕೂಲಿನ ಸ್ಥಾಪನೆ, ಅಭಿವೃದ್ಧಿಯನ್ನು ಕುರಿತು ಸಭೆಯಲ್ಲಿ ಭಾಷಣಕೊಟ್ಟರು ಅಧ್ಯಕ್ಷರು ತಮ್ಮ ಸುರಸವಾದ ಭಾಷಣಕೊಟ್ಟ ಮೇಲೆ ವಿದ್ಯಾರ್ಥಿ ವಿದ್ಯಾರ್ಥಿನಿಯರ ಭಾವಚಿತ್ರ ತೆಗೆಯಲಾಯಿತ. ನೆರೆದ ಸರ್ವರೂ ಫಲಾಹಾರ ದಿ ಸತ್ಕಾರಗಳಲ್ಲಿ ಭಾಗವಹಿಸಿ ಅನಂತರ ದೇವರ ಪ್ರಾರ್ಥನೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು

ಅಖಿಲ ಕರ್ನಾಟಕ ಪ್ರಾಂತೀಯ ಆಯುರ್ವೇದ ಮಹಾ ಮಂಡಲ ಮತ್ತು ವಿದ್ಯಾಪೀಠ ಕಾರ್ಯಾಲಯ ಹುಬ್ಬಳ್ಳಿ

ಶಿವಮೊಗ್ಗೆಯಲ್ಲಿ ಆದ ಆನೇ ವೈದ್ಯ ಸಮ್ಮೇಲನದ ಕಾಲಕ್ಕೆ ಔಷಧಿವಸ್ತು ಪ್ರದರ್ಶನದಲ್ಲಿ ಸುವರ್ಣ ಮತ್ತು ರಜತ ಪದಕಗಳನ್ನು ಬಹುಮಾನ ಪಡೆದವರಿಗೆ ಈ ತಿಂಗಳಲ್ಲಿಯೇ ಪದಕಗಳನ್ನು ಕಾರ್ಯಾಲಯದಿಂದ ಕೊಡುವದು ನಿಶ್ಚಯವಾಗಿದ್ದಾರೆ ಅದ್ದರಿಂದ ಬಹುಮಾನಗಳನ್ನು ಪಡೆದವರು ಮೇಲಿನ ವಿಳಾಸಕ್ಕೆ ತಮ್ಮ ಸಂಪೂರ್ಣ ವಿಳಾಸವನ್ನು ತಿಳಿಸಬೇಕು ಅಥವಾ ಸಮಕ್ಷಮ ಬಂದು ತೆಗೆದುಕೊಂಡು ಹೋಗಬೇಕು. ಬರಲಿಕ್ಕಾಗದವರಿಗೆ ಅವರವರ ವಿಳಾಸಕ್ಕೆ (ಫಕ್ತ ಪೋಸ್ಟೇಜ ಖರ್ಚಿಗೆ) ವಿ. ಪಿ. ಯಿಂದ ಮಾಡಲ್ಪಡುವದು.

ಡಾ. ಅ. ಹಲಸೀಕರ
ಸೆಕ್ರೆಟರಿ
ಅ. ಕ. ಪ್ರಾಂತೀಯ ಆಯುರ್ವೇದ ಮಹಾ ಮಂಡಲ, ಹುಬ್ಬಳ್ಳಿ

ಬಂಟರ ಯಾನೆ ನಾಡವರ ಸಂಘ ಮುಂಬಯಿ

ಕಳೆದ ತಾ ೮-೫-೩೭ನೇ ಅದಿತ್ಯವಾರ ದಿವಸ ಮುಂಬಾಯಿ ಬಂಟರ ಯಾನೆ ನಾಡವರ ಸಂಘದ ಪರವಾಗಿ ಕೆಲವು ಕಮಿಟಿ ಮೆಂಬರರು, ಇನ್ನು ಬೇರೆ ನಮ್ಮ ಸಮಾಜದವರಾದ ಕೆಮ್ಮಣ್ಣು ಸಂಕಪ್ಪ ಶೆಟ್ಟಿ ಕಡಂದಲೆ ಮಹಾಬಲ ಶೆಟ್ಟಿ, ಕಟ್ಟಿಂಗೇರಿ ಸಂಜೀವ ಶೆಟ್ಟಿ, ಕುತ್ತೆತ್ತೂರು ರಾಮಣ್ಣ ಶೆಟ್ಟಿ ಇವರ ಸಹಾಯ ಪಡಕೊಂಡು ನಮ್ಮ ಸಂಘದ ಬಿಲ್ ಕಲೆಕ್ಟರರ ಒಡನಾಟದಿಂದ ಮುಂಬಾಯಿಯಲ್ಲಿರುವ ದಾದರ್, ಮಹೀಮ್, ಒಡಲ, ಭವಾನಿ ಶಂಕರರೋಡು ಮೊದಲ್ಗೊಂಡ ಅನೇಕ ಸ್ಥಳಗಳಲ್ಲಿರುವ ಹಿಂದೂ ವಿಶ್ರಾಂತಿ ಗೃಹಗಳ ಮ್ಹಾಲಿಕರನ್ನು ಕಂಡು ಅನೇಕ ಜನರಿಗೆ ಸದ್ರಿ ಸಂಘದ ಕಾರ್ಯಕಲಾಪಗಳನ್ನು ತಿಳಿಸಿದ್ದಲ್ಲದೆ ಸುಮಾರು ೪೦ ರ ವರೆಗಿನ ಹೊಸ ಮೆಂಬರರನ್ನೂ ಸುಮಾರು ರೂಪಾಯಿ ೨೦ ವಂತಿಗೆ ವಸೂಲನ್ನೂ ಮಾಡಿರುತ್ತವೆ ಎಂಬ ಈ ವರ್ತಮಾನವನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ, ಮಾತ್ರವಲ್ಲದೆ, ತಮ್ಮ ಇಡೀ ದಿವಸದ ಕೆಲಸಗಳನ್ನು ಬಿಟ್ಟು ನಮ್ಮ ಸಂಘದ ಮೇಲ್ಮೆಯನ್ನು ಬಯಸಿ ನಮಗೆ ಸಹಾಯಕೊಟ್ಟ ಮಹನೀಯರಿಗೆ ಬಂಟರ ಯಾನೆ ನಾಡವರ ಸಂಘದ ಪರವಾಗಿ ನಮ್ಮ ಮನಃಪೂರ್ವಕವಾದ ವಂದನೆಗಳು ಇದರಂತೆ ಇನ್ನುಳಿದ ಮಹಾಜನರು ನಮಗೆ ಸಹಾಯಕೊಟ್ಟು, ನಮ್ಮ ಸಂಘದ ಮೇಲ್ಮೆಯನ್ನು ಬಯಸುವರಾಗಿ ಅಪೇಕ್ಷಿಸುತ್ತೇವೆ.

ಮಂಜೇಶ್ವರ ದೊಂಬ ಶೆಟ್ಟಿ ಎಂಬವರು ಸುಮಾರು ನಾಲ್ಕೈದು ತಿಂಗಳುಗಳಿಂದ ಕಾಯಿಲೆಯಿಂದ ಆಸ್ಪತ್ರೆಯಲ್ಲಿದ್ದು ಶಾಯಿಲೆ ಸ್ವಲ್ಪ ಸಮಾಧಾನವಾಗುತ್ತ ಆಸ್ಪತ್ರೆಯಿಂದ ಬಂದು ಊರಿಗೆ ಹೋಗಲಿಕ್ಕೆ ರೂಪಾಯಿ ಅಡಚಣೆಯಾದ್ದರಿಂದ ಕಳೆದ ತಾ. ೨೮-೪-೩೭ ರಲ್ಲು ನಮ್ಮ ಸಂಘಕ್ಕೆ ಅರ್ಜಿ ಮಾಡಿಕೊಳ್ಳಲಾಗಿ ನಮ್ಮ ಸಭೆಯಲ್ಲಿದ್ದ ಎಲ್ಲಾ ಮೆಂಬರರೂ ಇವರು ಸಂಘದಿಂದ ಸಹಾಯ ಕೇಳಲು ಯೋಗ್ಯರೆಂದು ನಿಶ್ಚಯಿಸಿದಂತೆ ಅವರನ್ನು ತಾ ೩೦-೪-೩೭ನೇ ಮಂಗಳವಾರ ದಿವಸ ನಮ್ಮ ಬಿಲ್ ಕಲೆಕ್ಟರರೊಂದಿಗೆ ಬೋಟು ಬಂದರಕ್ಕೆ ಕಳುಹಿಸಿ ಟಿಕೇಟು ತೆಗ್ಸಿಕೊಟ್ಟದ್ದಲ್ಲದೆ ಅವರನ್ನು ಸ್ಟೀಮರಿನಲ್ಲಿ ಕುಳ್ಳಿರಿಸಿ ಪ್ರಯಾಣದ ಖರ್ಚಿನ ಬಗ್ಗೆ ನಗದು ರೂಪಾಯಿಗಳನ್ನು ಕೈಯಲ್ಲಿಕೊಟ್ಟು ಊರಿಗೆ ಕಳುಹಿಸಿರುತ್ತದೆಂದೂ ಈ ಮೂಲಕ ತಿಳಿಸುತ್ತಾರೆ

ಮೂಲ್ಕಿ ದೊಂಬ ಶೆಟ್ಟಿ
ಗೌರವ ಜೊತೆ ಕಾರ್ಯದರ್ಶಿಯವರು.

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ

ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯ ನವರಿಂದ ರಚಿತವಾದ

'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್ ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

The Manager,
The National Kanara News Agency,
No. 58 Mody Street, Fort Bombay.

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S India.	Charni Road, Bombay No. 4.

INSPECTORATE OFFICE AT:

1. Ottapalam, Malabar Distr ct   2. Central Station Road, Trivandrum

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over	Rs. 80,00,000
Life Funds Over	Rs 68,00,000
Premium Income Over ...	Rs. 22,54,000
Interest Income	Rs. 3,16,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs. 4,4251.200,

TOTAL BUSINESS IN FORCE **Rs. 4,42,51,200**

ANOTHER MILESTONE

HAS BEEN PASSED BY

MESSRS PADUBIDRI BROTHERS.

In their march of unprecedented Progress and Success

THEY HAVE THE

PROUD DISTINCTION OF WINNING THE FIRST PRIZE

FOR THE HIGHEST BUSINESS PRODUCTION AND HAVE FIRMLY

ESTABLISHED THEIR REPUTATION FOR

EFFICIENCY, ECONOMY AND SECURITY,

as Chief Agents of the East & West Insurance Co., Ltd.,

FOR

MAHARASHTRA & KARNATAKA

Applications for Agencies are solicited from Influential and Capable Gentlemen in any walk of life.

Apply sharp to:

Messrs. Padubidri Bros.,

40, Naryanlal Bansilal Mansions,

Bellasis Road, BOMBAY 8.

The Combined Booking Agency

AND

The Joint Booking Office

MANGALORE, SOUTH KANARA.

— ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ —

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ—ಚಾರ್ಮಾಡಿ — ಕಾರ್ಕಳ

ಉಜಿರೆ (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ) — ಉಡುಪಿ

ಮಂಗಳೂರು — ಕುಂದಾಪುರ

ಪುತ್ತೂರು — ಮೂಡಬಿದ್ರೆ

ಮೂಲ್ಕಿ — ಗಂಗೊಳ್ಳಿ

ಜಿಲ್ಲೆಯ ಹೊರಗೆ—

ಮಡಿಕೇರಿ, ಮೈಸೂರು, ಸಕಲೇಶಪುರ, ಚಿಕ್ಕಮಗಳೂರು, ಮೂಡಗೆರೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿ ಗೃಹಗಳು ನಿರ್ಮಿಸಲ್ಪಡುವುವು. ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜೊಯಿಂಟ್ ಮೆನೇಜರರಿಗೆ ತಿಳಿಸಿರಿ.

ವಿ ಚಿ ತ್ರ ಪ್ರ ಪಂ ಚ

ಸ್ತ್ರೀಯ ವಿಚಿತ್ರ ಲಿಂಗಮಾರ್ಪಾಟಿ

ವಿಯನ್ನದ ಲೇನ್ಸೆಟ್ ಎಂಬ ಪತ್ರಿಕೆಯಲ್ಲಿ ಸ್ತ್ರೀಯೋರ್ವಳ ವಿಚಿತ್ರ ಲಿಂಗಮಾರ್ಪಾಟದ ಸಂಗತಿಯು ಪ್ರಕಟವಾಗಿದೆ. ಈ ಸ್ತ್ರೀಗೆ 32 ವರ್ಷ ಪ್ರಾಯವಿದ್ದು ಅವಿವಾಹಿತೆಯಾಗಿದ್ದಳು. ಇವಳಲ್ಲಿ ಪುರುಷತ್ವದ ಚಿನ್ಹೆಗಳು ಹೆಚ್ಚಾಗಿ ತೋರಿ ಬಂದುದರಿಂದ ಒಪರೇಶನ್ ಮಾಡಿಸಿಕೊಂಡಳು. ಈ ಒಪರೇಶನ್ ಆದ ಸ್ವಲ್ಪ ಸಮಯದಲ್ಲಿಯೇ ಇವಳ ಪುರುಷ ಲಕ್ಷಣಗಳೆಲ್ಲಾ ಮಾಯವಾದವು. ಸ್ತ್ರೀಯು ಪುರುಷನಾಗಿ ಪುರುಷನು ಸ್ತ್ರೀಯಾಗಿ ಮಾರ್ಪಡುವ ಸಂಗತಿಗಳು ಹಲವು ನಡೆದಿವೆ. ಆದರೆ ಹೀಗೆ ಸ್ತ್ರೀಯು ಪುರುಷನಾಗಿ ಆ ಮೇಲೆ ಪುನಹ ಸ್ತ್ರೀಯಾಗಿ ಮಾರ್ಪಡುವ ಸಂಗತಿಯು ಅಪರೂಪ. ಕಳೆದ ವರ್ಷ ಬೆಲ್ ಗ್ರೇಡಿನಲ್ಲಿ ತರುಣ ಸ್ತ್ರೀಯೋರ್ವಳು ಗಂಡಸಾಗಿ ಮಾರ್ಪಟ್ಟಿರುವಳು. ಹುಟ್ಟುವಾಗ ಗಂಡು ಮಗುವೆಂದು ರಿಜಿಸ್ಟ್ರಿಯಾಗಿ 7ನೇ ವರ್ಷದಲ್ಲಿ ಹೆಣ್ಣಾಯಿತು. 5 ವರ್ಷಗಳ ನಂತರ ಹೆಣ್ಣು ಪುನಃ ಗಂಡಾಯಿತು. ಇತ್ತಲಾಗಿ ಪೋಲೆಂಡಿನ ಮಿಸ್ ಸೋಫಿ ಸೂಮೆಂಟ್ ಕೋವ ಎಂಬವಳು ಲಿಂಗ ಮಾರ್ಪಾಟಕ್ಕಾಗಿ ಒಪರೇಶನ್‌ಮಾಡಿಕೊಂಡಿದ್ದಳು. ವಾರ್ಸೊ ಪಟ್ಟಣದಲ್ಲಿ ಸೈನಿಕನಾಗಿದ್ದವನೊಬ್ಬನು ಲಿಂಗ ಮಾರ್ಪಾಟ ಹೊಂದಿ ಒಂದು ವರ್ಷದ ನಂತರ 9 ರಾತ್ತಲ ಭಾರದ ಮಗುವೊಂದನ್ನು ಹೆತ್ತುದು ಅತ್ಯಂತ ವಿಸ್ಮಯಕರವಾದುದು.

ನಾಲ್ಕು ಕಿವಿಗಳ ಜೋತಿಮುಖದ ಕರು

ಬಂಗಾಳದಲ್ಲಿ ಒಂದೆಡೆ ಒಂದು ದನವು ಅತ್ಯಂತ ವಿಕಟ ಸ್ವರೂಪದ ಕರುವೊಂದನ್ನು ಹಾಕಿರುವುದು. ಈ ಕರುವಿಗೆ ನಾಲ್ಕು ಕಿವಿಗಳು. ಪ್ರತಿಯೊಂದು ಮೊಣಕಾಲಿನ ಬಳಿ ಮನುಷ್ಯನ ಕೈಯ ಆಕಾರದ ಇನ್ನೊಂದು ಕಾಲು ಜೋತಾಡುತ್ತಿದೆ. ಇಷ್ಟುಮಾತ್ರವಲ್ಲದೆ ಇದರ ಮುಖ ಕೋತಿಯಂತಿದೆ.

ಪ್ರೇತ ಬಿಡಿಸಹೋದ ಮಂತ್ರವಾದಿಯೇ ಕೊಲ್ಲಲ್ಪಟ್ಟ

ಲಾಹೋರಿನಲ್ಲಿ ಮುಸಲ್ಮಾನನೊಬ್ಬನಿಗೆ ಬಹು ಸಮಯದಿಂದ ಪ್ರೇತ ಭಾದೆಯಿತ್ತು. ಅದನ್ನು ಬಿಡಿಸಲು ಮಂತ್ರವಾದಿಯೊಬ್ಬನನ್ನು ಕರತಂದರು. ಈ ಮಂತ್ರವಾದಿಯು ಪ್ರೇತ ಹಿಡಿದವನನ್ನು ಕೋಣೆಯೊಳಗೆ ಹಾಕಿ ಕೀಲು ಹಾಕಿಕೊಂಡು ತನ್ನ ಮಂತ್ರಶಕ್ತಿ ತೋರಿಸಲಾರಂಭಿಸಿದ. ಅಷ್ಟರಲ್ಲಿ ಪ್ರೇತ ಹಿಡಿದವನು 'ಎಲೋ ನಿನ್ನ ಮಂತ್ರ ತಂತ್ರಗಳನ್ನು ಕಟ್ಟಿಡು' ಎಂದು ಅವನ ಮೇಲೆ ಬಿದ್ದು ಹೊಡೆಯಲಾರಂಭಿಸಿದ. ಕೂಡಲೆ ಕೊರಡಿಯೊಳಗಿಂದ ಮಂತ್ರವಾದಿಯ ಆಕ್ರಂದನ ಧ್ವನಿ ಕೇಳತೊಡಗಿತು. ಅದನ್ನು ಕೇಳಿ ಹೊರಗಿದ್ದವರು ಕೋಣೆಯ ಬಾಗಿಲೊಡೆದು ಒಳ ಹೋಗುವಾಗ ಮಂತ್ರವಾದಿಯು ಒಂದು ಮೂಲೆಯಲ್ಲಿ ಗತಪ್ರಾಣನಾಗಿ ಬಿದ್ದಿದ್ದ. ಆ ಮೇಲೆ ಪೋಲೀಸರು ಬಂದು ಪ್ರೇತ ಹಿಡಿದವನನ್ನು ಹಿಡಿದುಕೊಂಡು ಹೋದರು.

ನಗ್ನನೃತ್ಯದ ನಿಷೇಧ

ಅಮೆರಿಕದ ಪ್ರಧಾನ ಪಟ್ಟಣವಾದ ನ್ಯೂಯಾರ್ಕಿನಲ್ಲಿ, ನರ್ತಕಿಯರು ತಮ್ಮ ಉಡುಪನ್ನೆಲ್ಲಾ ಸ್ವಲ್ಪ ಸ್ವಲ್ಪವಾಗಿ ತೆಗೆದು ಹಾಕಿ ಕಡೆಗೆ ಬತ್ತಲೆಯಾಗಿ ಕುಣಿಯುವ ಪ್ರದರ್ಶನವು 14 ನಾಟಕ ಶಾಲೆಗಳಲ್ಲಿ ಜನಪ್ರಿಯವಾಗಿ ನಡೆಸಲ್ಪಡುತ್ತಿತ್ತು. ಇದರಿಂದ ವರ್ಷಕ್ಕೆ ಈ ನಾಟಕ ಶಾಲೆಗಳವರಿಗೆ 2,000,000 ಲಾಭ ಸಿಗುತ್ತಿತ್ತು. ಇದನ್ನೀಗ ಅಲ್ಲಿಯ ಕಮಿಶನರರು, ನಾಚಿಕೆಕರ ಅಸಭ್ಯ ಹಾಗೂ ಹೇಯ ಪ್ರದರ್ಶನವೆಂದು ನಿಷೇಧಿಸಿರುವರು.

ದೊಣ್ಣೆ ಹಿಡಕೊಂಡೇ ಮಲಗುವ ಪತ್ನಿ

ಇಂಗ್ಲೆಂಡಿನ ಬ್ರಿಸ್ಟಲಿನಲ್ಲಿ ಮಿಸೆಸ್ ಡೋರಿಸ್ ಮೋರ್ರೋವೆ ಎಂಬವಳು ದೊಣ್ಣೆ ಹಿಡಕೊಂಡೇ ಮಲಗುತ್ತಿದ್ದಳು. ಅವಳ ಗಂಡ ಗೊರೆಕೆ ಹೊಡೆಯ ಹತ್ತಿದರೆ ಅವಳಿಗೂ ಅವಳ ಮಗಳಿಗೂ ನಿದ್ದೆಯೇ ಹತ್ತದು. ಆತನನ್ನು ಸಾಧಾರಣ ರೀತಿಯಿಂದ ಎಬ್ಬಿಸುವುದಕ್ಕೆ ಸಾಧ್ಯವಿಲ್ಲ. ಅಂತಹ ಕುಂಭಕರ್ಣನವ. ಮಿಸೆಸ್ ಡೋರಿಸಳು ನಿದ್ದೆ ಬಿಟ್ಟು ಬಿಟ್ಟು ಸಾಕಾಗಿ ಕಡೆಗೆ ಒಂದು ದೊಣ್ಣೆ ಹಿಡಕೊಂಡೇ ಮಲಗುತ್ತಿದ್ದಳು. ಗಂಡ ಗೊರಕೆ ಹೊಡೆಯಲಾರಂಭಿಸಿದಾಕ್ಷಣ ದೊಣ್ಣೆಯಿಂದ ಅವನಿಗೆ ಒಂದೇಟುಹೊಡೆದು ಎಚ್ಚರಿಸಿಬಿಡುವಳು

೧೧ ತಿಂಗಳ ಮಗುವಿಗೆ ೧೬ ಹಲ್ಲು

ಇಂಗ್ಲೆಂಡಿನ ಗ್ರೀನ್ ಫೋರ್ಡ್ ಎಂಬಲ್ಲಿಯ ಜೇನೆಟ್ ಹೊಲ್ಲಿಮೆನ್ ಎಂಬ ೧೧ ತಿಂಗಳ ಮಗುವಿಗೆ ೧೬ ಹಲ್ಲುಗಳಿರುವುವು. ಈ ಎಳೆವಯಸ್ಸಿನಲ್ಲಿ ಇಷ್ಟು ಹಲ್ಲು ಹುಟ್ಟುವ ಕೂಸು ಈ ವರೆಗೆ ಯಾವುದೂ ಇಲ್ಲ.

ನಗ್ನವಾದಿಗಳ ಸಂಘ

ಲಂಡನಿನ ಖಾಸಗಿ ಮನೆಯೊಂದರಲ್ಲಿ ಕೆಲವರು ಲೋಟಸ್ ಲೀಗ್ ಎಂಬ ನಗ್ನವಾದಿಗಳ ಸಂಘವೊಂದನ್ನು ಸ್ಥಾಪಿಸಿರುವರು. ಕಳೆದ ತಿಂಗಳಲ್ಲಿ ಈ ಲೀಗಿನ 100 ಮಂದಿ ಮೆಂಬರರು ಇಲ್ಲಿ ಸಭೆಸೇರಿ ನಗ್ನರಾಗಿ ನರ್ತನ ನಡಿಸಿದರು. ಅವರು 'ಪ್ರತಿಯೊಂದು ಸಂಘದಲ್ಲಿ ಜನರು ಸಂಪೂರ್ಣ ಬತ್ತಲೆಯಾಗಿ ವಿಹರಿಸುವಂತೆ ಮರೆಯಾಗಿರುವ ಸ್ಥಳವನ್ನೇ ಪ್ರಕಟಿಸಬೇಕು. ಇಲ್ಲಿ ಸಂಪೂರ್ಣ ಬತ್ತಲೆಯಾಗಿ ಈಜಾಡುವವರಿಗೆ ತಕ್ಕ ಜಲಾಶಯಗಳನ್ನೇರ್ಪಡಿಸಬೇಕು. ಜನಾಂಗವನ್ನು ಆರೋಗ್ಯಶಾಲಿಯನ್ನಾಗಿಯೂ ಪುಷ್ಟವನ್ನಾಗಿಯೂಮಾಡಲು ನಗ್ನವಾದಕ್ಕಿಂತ ಒಳ್ಳೇದು ಇನ್ನಾವುದೂ ಇಲ್ಲೆಂಬ ನಿರ್ಣಯ ಕೂಡಾಮಾಡಿರುವರು.

ವರನು ಬೇಕು

ಗೃಹಕೃತ್ಯದಲ್ಲಿ ಬಲು ನಿಪುಣೆಯೂ ರೂಪವತಿಯೂ ಆದ ಹದಿನಾಲ್ಕು ವರ್ಷಪ್ರಾಯದ ಶಿವಳ್ಳಿ ಬ್ರಾಹ್ಮಣ ವಿಧವೆಗೆ– ಸ್ವಜಾತಿಯ 25–30ವರ್ಷದೊಳಗಿನ ಯೋಗ್ಯವರನು ಬೇಕು. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯುವುದು; ವ ಸ್ವತಹ ಮಾತನಾಡುವುದು.

ವಿಳಾಸ—

ಸಮಾಜ ಸೇವಾ ಗ್ರಂಥಮಾಲಾ,
ಮುದ್ರಾಡಿ (ಕಾರ್ಕಳ ತಾಲೂಕು)
ಪೋಸ್ಟ್ ಹೆಬ್ರಿ ದ. ಕ.

SUKHA NIVAS

Court Road, UDIPI
(Opp:- TALUK OFFICE)

Modern Model! Homely Hotel!

HIGH CLASS SWEETS AND SAVERIES

Coffee, Tea, Cocoa, delicious & fragrant.

VERY NEAR TO GANDHI MAIDAN, TALUK OFFICE, COURT & HIGH SCHOOLS

Our Building enjoys a magnificient site and rooms are well Ventilated and breezy.

THE ONLY PLACE FOR FASHIONABLE ENTERTAINMENTS AND MEALS.

ORDERS FOR TEA-PARTIES ACCEPTED AT SHORT NOTICE

MODERATE CHARGES

Prop:-H. Vasudeva Nayak & Bros

ಸುಖನಿವಾಸ ಉಡುಪಿ.

ಸುವ್ಯವಸ್ಥೆಯ ಮೇಲ್ವಿಚಾರಣೆ
ಉಚಿತವಾದ ಸುಖದ ತವರುಮನೆ
ನಿರ್ಮಲವಾದ ಊಟದ ಸಲಕರಣೆ
ವಾಯುಸೇವನೆಗೆ ಯೋಗ್ಯಯೋಜನೆ
ಸಕಲಜನ ಮನರಂಜನೆಯ ಸಂಯೋಜನೆ

ಈ ಅನುಕೂಲತೆಗಳಿರುವುದರಿಂದ ವಿದ್ಯಾರ್ಥಿಗಳಿಗೂ ಉದ್ಯೋಗಸ್ಥರಿಗೂ ಪ್ರಯಾಣಿಕರಿಗೂ ಯೋಗ್ಯವಾದ ಹೋಟೆಲೆಂದರೆ

ಸುಖನಿವಾಸವೊಂದೇ.

ಕಾಫಿಗೆ, ತಿಂಡಿಗೆ, ಭೋಜನಕ್ಕೆ, ಉಳಕೊಳ್ಳಲಿಕ್ಕೆ ನಕ್ಕು ನಲಿಯಲಿಕ್ಕೆ, ಸುಖನಿವಾಸಕ್ಕೆ,

ಸುಖನಿವಾಸವೊಂದೇ

ಜ್ಞಾಪಕದಲ್ಲಿಡಲು ಯೋಗ್ಯವಾಗಿದೆ.

ಸುಖನಿವಾಸವು ಕೋರ್ಟು ಕಚೇರಿಗಳಿಗೂ ಹೈಸ್ಕೂಲುಗಳಿಗೂ ಮಧ್ಯರಂಗದಲ್ಲಿದ್ದು ಅತ್ಯಾಧುನಿಕ ಅನುಕೂಲತೆಗಳಿಂದ ಒಡಗೂಡಿದೆ.

ಸರಿಯಾಗಿ ಗಾಳಿಬೆಳಕುಳ್ಳ ಕೋಣೆಗಳು!

ಟೀಪಾರ್ಟಿಯ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಸುಖನಿವಾಸದ ಭೋಜನ ಕಾಫಿ, ತಿಂಡಿ
ಮನೋವಿಕಾಸದ ಮೂಲ.

ವ್ಯವಸ್ಥಾಪಕರು:—
ಎಚ್. ವಾಸುದೇವ ನಾಯಕ್, ಎಂಡ್ ಬ್ರದರ್ಸ್.

ಹೊಗೆಸೊಪ್ಪಿನ ಉಪಯೋಗದ ದುಷ್ಪರಿಣಾಮ

ಲೇಖಕ:—ಡಾಕ್ಟರ್ ಎ ತಿಮ್ಮಪ್ಪಶೆಟ್ಟಿ, ಎಲ್. ಬಿ. ಎಸ್. ಸಿ. (ಕಲ್ಕತ್ತಾ)

ಸುಮಾರು ಎರಡು ಶತಮಾನಗಳ ಮೊದಲು ಹಿಂದುಸ್ಥಾನದಲ್ಲಿ ಹೊಗೆಸೊಪ್ಪನ್ನು ಕಂಡವರು ಕೂಡಾ ಇದ್ದಿಲ್ಲ ನಂತರ ಅದು ಬೇರೆ ರಾಜ್ಯದಿಂದ ತರಲ್ಪಟ್ಟು ಈಗ ದೇಶದ ಮೂಲೆ ಮೂಲೆಗಳಲ್ಲಿ ಕೂಡಾ ಅತಿ ಕಡಿಮೆ ಕ್ರಯಕ್ಕೆ ಬೇಕಾದಷ್ಟು ದೊರಕುವ ವಸ್ತುವಾಗಿದೆ. ಈ ದೇಶದಲ್ಲಿ ವೀಳ್ಯ ಹಾಕಿಕೊಳ್ಳುವ ಪದ್ಧತಿಯು ಪೂರ್ವದಲ್ಲೇ ಇದ್ದುದರಿಂದ ಹೊಗೆಸೊಪ್ಪು ಆಕಾಲದಿಂದಲೇ ಉಪಯೋಗಿಸಲ್ಪಡುತ್ತಿದ್ದಿತೆಂಬ ತಪ್ಪು ಅಭಿಪ್ರಾಯವು ಈಗಲೂ ಕೆಲವರಲ್ಲಿದೆ. ಆಕಾಲದಲ್ಲಿ ವೀಳ್ಯದೆಲೆಯನ್ನೂ ಅಡಿಕೆಯನ್ನೂ ಮಾತ್ರ ಉಪಯೋಗಿಸುತ್ತಿದ್ದರು. ಅಮಲು ಪದಾರ್ಥವನ್ನು ಉಪಯೋಗಿಸುವುದು ಕೆಟ್ಟದೆಂದು ಎಲ್ಲರ ಅಭಿಪ್ರಾಯವಿದ್ದರೂ ಹೆಚ್ಚಿನ ಮಟ್ಟಿಗೆ ಎಲ್ಲಾ ಶಾಸ್ತ್ರಗಳೂ ಅದನ್ನು ನಿಷೇಧಿಸಿದರೂ ಜನರಲ್ಲಿ ದಿನೇ ದಿನೇ ಅದರ ಉಪಯೋಗವು ಹೇಗೆ ಹೆಚ್ಚಾಗುತ್ತಾ ಬರುತ್ತದೋ ಅದೇ ರೀತಿ ಹೊಗೆಸೊಪ್ಪಿನ ಉಪಯೋಗವು ಕೆಟ್ಟದೆಂದು ಅನೇಕರಿಗ ಗೊತ್ತಿದ್ದರೂ ಅದನ್ನು ಕ್ರಮೇಣ ಹೆಚ್ಚೆಚ್ಚಾಗಿ ಉಪಯೋಗಿಸಲ್ಪಡುತ್ತಾ ಬರುವುದು ನಿಜವಾಗಿಯೂ ವಿಷಾದಕರವಾದ ಸಂಗತಿ.

ಮನುಷ್ಯನು ಹೊಗೆಸೊಪ್ಪಿನ ಭ್ರಮೆಗೆ ಒಳಗಾಗಬೇಕಾದರೆ ಕಾರಣಗಳು ಹಲವಿವೆ. ನಮ್ಮದೇಶದಲ್ಲಿ ಇತ್ತೀಚೆಗೆ ಅದು ಹೆಚ್ಚಾಗಿ ಅನುಕರಣೀಯವಾಗಿಯೂ ಮತ್ತು ನಮೂನೆಯಾಗಿಯೂ ಉಪಯೋಗಿಸಲ್ಪಡುತ್ತಿದ್ದರೂ ಆರಂಭದಲ್ಲಿ ಅದನ್ನು ಹಲ್ಲುಗಳ ರಕ್ಷಣೆಗೆಂದು ಉಪಯೋಗಮಾಡಲಾರಂಭಿಸಿದರೆಂದು ಕಂಡುಬರುತ್ತಿದೆ. ಪ್ರಾಚೀನ ಕಾಲದಲ್ಲಿ ಹಲ್ಲುಗಳ ರೋಗಗಳು ಅತಿವಿರಳವಾಗಿತ್ತೆಂದೂ, ಇತ್ತೀಚೆಗೆ ಅವುಗಳು ಸರ್ವಸಾಧಾರಣ ಎಲ್ಲರಲ್ಲಿಯೂ ಕಾಣುತ್ತಿರುವುದೆಂದೂ ಸರ್ವರಿಗೂ ತಿಳಿದ ವಿಷಯವೇ ನಾವು ಆರೋಗ್ಯದ ಮೂಲತತ್ವವನ್ನೇ ಕ್ರಮೇಣ ಬದಲಾಯಿಸಿ ಕೆಡಿಸಿದುದೇ ಅದಕ್ಕೆ ಮುಖ್ಯಕಾರಣವೆಂಬುದನ್ನರಿತು ಆವಿಷಯವನ್ನು ತಿದ್ದಿಕೊಂಡು ಹಲ್ಲುಗಳಲ್ಲಿ ನೋವೇ ಬಾರದಂತೆ ತಡೆಗಟ್ಟುವುದನ್ನು ಬಿಟ್ಟು, ಆ ನೋವನ್ನು ನಿವಾರಣೆ ಮಾಡಲು ಹೊಗೆಸೊಪ್ಪನ್ನು ಉಪಯೋಗಮಾಡುವೆವು. ಅದರಪ್ರಯೋಜನ ತತ್ಕಾಲಶಮನ ಮಾತ್ರ, ಅದರಲ್ಲಿ ಹೆಚ್ಚಿನ ಕೆಡುಕುಂಟೆಂದೂ ಅರಿಯದೆ ಚಳಿಗೋಸ್ಕರ ಅಗ್ಗಿಷ್ಟಿಕೆಯ ಶಾಖವನ್ನು ಬಯಸಿ ಅತಿಯಾಗಿ ಶಾಕತಾಗಿಸಿಕೊಂಡು ತಲೆ ತಿರಿಗಿ ಅಗ್ಗಿಷ್ಟಿಕೆಯ ಮೇಲೆಯೇ ಬಿದ್ದು ಮೈಯೆಲ್ಲಾ ಸುಟ್ಟುಕೊಂಡಂತೆ, ಹೊಗೆಸೊಪ್ಪನ್ನೂ ಅತಿಯಾಗಿ ಉಪಯೋಗಿಸ ತೊಡಗಿ ಹಲ್ಲುಗಳನ್ನೂ ವಸಡುಗಳನ್ನೂ ಹೆಚ್ಚೇಕೆ ಇಡೀ ದೇಹದ ಆರೋಗ್ಯವನ್ನೇ ಹಲವರು ಕೆಡಿಸಿಕೊಳ್ಳುತ್ತಿರುವರು. ಹಲವರು ಹಲ್ಲುಗಳಲ್ಲಿ ಶಕ್ತಿಬರುವುದಕ್ಕೂ ಮತ್ತು ಹಲ್ಲುಗಳು ಅಲ್ಲಾಡುವುದಕ್ಕೂ ಹೊಗೆಸೊಪ್ಪಿನ ಪುಡಿಯನ್ನು ಮೂಗಿಗೆ ಸೇದಿದರೆ ಉತ್ತಮವೆಂದೂ, ವೀಳ್ಯದೊಂದಿಗೆ ಹೊಗೆಸೊಪ್ಪು ಉಪಯೋಗಿಸಿದರೆ ಹಲ್ಲುಗಳು ಗಟ್ಟಿಯಾಗುತ್ತವೆಂದೂ, ಹಲ್ಲುಗಳಲ್ಲಿ ಉಂಟಾಗುವ ಹುಳಗಳು ಸಾಯುತ್ತವೆಂದೂ, ಬೀಡಿ, ಚುಟ್ಟಾ, ಸಿಗರೇಟುಗಳನ್ನು ಸೇದಿದರೆ ಹುಳುಗಳಿಂದ ತಿನ್ನಲ್ಪಟ್ಟ ಹಲ್ಲುಗಳಿಂದ ಹುಳಗಳು ಸತ್ತುಹೋಗಿ ಮುಂದಕ್ಕೆ ಹಲ್ಲುಗಳು ಹುಳಗಳಿಗೆ ತುತ್ತಾಗುವುದಿಲ್ಲವೆಂದೂ ಹಲವು ತಪ್ಪು ಊಹನೆಗಳನ್ನು ಮಾಡಿಕೊಂಡು ಹೊಗೆಸೊಪ್ಪನ್ನು ಬೇರೆ ಬೇರೆ ರೀತಿಯಿಂದ ಸದಾ ಉಪಯೋಗಿಸುತ್ತಿರುವರು. ಅಲ್ಲದೆ ಶೀತವಲಯದವರು ಚುಟ್ಟಾ ವಗೈರೆಗಳನ್ನು ಸೇದಿ ತಮ್ಮ ದೇಹದಲ್ಲಿ ಸ್ವಲ್ಪಮಟ್ಟಿಗೆ ಶಾಕವನ್ನು ಹೆಚ್ಚಿಸಿ ಸ್ವಲ್ಪ ಪ್ರಯೋಜನ ಹೊಂದಿ ಅದರ ಅಭ್ಯಾಸಕ್ಕೆ ತುತ್ತಾಗಿ ಉಷ್ಣವಲಯಕ್ಕೆ ಬಂದಾಗ ಕೂಡ ಆ ಅಭ್ಯಾಸವನ್ನು ತೊರೆಯಲಾರದೆ ಅವುಗಳನ್ನು ಉಪಯೋಗಿಸುವವನ್ನು ಉಷ್ಣವಲಯದವರು ಕೂಡ ನೋಡಿ ಅದರಲ್ಲಿರುವ ದೋಷಗಳನ್ನು ವಿಚಾರಿಸದೆ ಅನುಸರಿಸುವುದು ತೀರಾಹುಚ್ಚುತನ. 'ಹಿರಿಯಕ್ಕನಚಾಳಿ ಮನೆಮಕ್ಕಳಿಗೆಲ್ಲ" ಎಂಬ ನಾಣ್ಣುಡಿಗೆ ಸರಿಯಾಗಿ ಈಗಿನಕಾಲದಲ್ಲಿ ಹಿರಿಯರನ್ನನುಸರಿಸಿ ನಾಲ್ಕೈದು ವರ್ಷದ ಮಕ್ಕಳೂ ಕೂಡಾ ಬೀಡಿ ಸೇದುವುದನ್ನು ನೋಡುವಾಗ ನಮ್ಮ ಜನಾಂಗದ ಆರೋಗ್ಯಾಭಿವೃದ್ಧಿಯು ಇನ್ನಷ್ಟು ಕುಂದಿಹೋಗಿ ಪರದೇಶಿಯರಿಂದ ಆಳಲ್ಪಡಲು ನಮ್ಮ ಯೋಗ್ಯತೆಯನ್ನು ಇನ್ನಷ್ಟು ಹೆಚ್ಚಿಸಿದಂತಾಗುವುದೆಂದು ಕಾಣಿಸುತ್ತಿದೆ.

ಪಿಯರಿ. ಸಿ. ಫೌಜೀಸ್ ಎಂಬವರು ಹೊಗೆಸೊಪ್ಪಿನ ಮತ್ತು ಸಿಗರೇಟ್ ಚುಟ್ಟಾ ಸೇದುವಿಕೆಯ ವಿಷಯ ಶೋಧನೆಮಾಡಿ ಈ ಕೆಳಗಿನ ಅಭಿಪ್ರಾಯವನ್ನಿತ್ತಿರುವರು. ಹೊಗೆಸೊಪ್ಪಿನಲ್ಲಿ ಒಂದು ತರದ ಅಂಟೂ, ಜಿಬಿಯೂ, ಸಸ್ಯಾಮ್ಲಗಳೂ, ರಾಳಗಳೂ, ಚರ್ಬಿಗಳೂ, ಪೊಟೇಸಿಯಮ್ ಉಪ್ಪುಗಳೂ, ಚಪಲೆಣ್ಣೆಯೂ, ಎಮಿಡನ್ ಎಂಬ ಒಂದುವಸ್ತುವೂ ಮತ್ತು ಒಂದು ಒಳ್ಳೆಯ ಶಕ್ತಿಯುಳ್ಳ ಕ್ಷಾರ ಸಹಿತವಾದ ನಿಕೊಟಿನೆಂಬ ವಿಷಪದಾರ್ಥವೂ ಇದೆ. ಹೊಗೆಸೊಪ್ಪಿನಲ್ಲಿ ನಿಕೋಟಿನು ಸುಮಾರು ಶೇ. ಕಡಾ 2ರಿಂದ ೬ರ ವರೆಗೆ ಇದೆ. ಹೊಗೆಸೊಪ್ಪಿನ ಕಲ್ಕವು ಕಠಿಣವಾದ ವಿಷವು. ಅದನ್ನು ಕುಡಿದರೆ ತಡೆಯಲಾರದ ಹೊಟ್ಟೆನೋವು ಉಂಟಾಗಿ ನರಗಳೆಲ್ಲಾ ಸಂಕೈದಂತಾಗಿ ಪ್ರಾಣಾಪಾಯ ಉಂಟಾಗುವುದು. ಅದನ್ನು ಯಾವರೀತಿಯಲ್ಲೇ ಉಪಯೋಗಿಸಲಿ ಅತಿರೇಕವಾದರೆ ಜ್ಞಾಪಕ ಶಕ್ತಿಯು ಕಡಿಮೆಯಾಗುತ್ತದೆ. ದೇಹದಲ್ಲಿ ಒಂದು ತರದ ನಡುಕ ಉಂಟಾಗುತ್ತದೆ. ತಲೆತಿರುಗುವಿಕೆಯೂ ಬರುವುದು. ಬಾಯಿಯಲ್ಲಿ ರಕ್ತವೇ ಕಡಿಮೆಯಾಗಿ, ಪಯೋರಿಯಾ ರೋಗಕ್ಕೆ ಆಸ್ಪದವಿತ್ತು ಹಲ್ಲುಗಳು ಅಲ್ಲಾಡಿ ಬಿದ್ದುಹೋಗುವುವು. ವಸಡಿಗಳು ನಾರವಾಗುವುವು. ನಾಲಿಗೆಯ ರುಚಿಕೆಡುವುದು. ಶ್ವಾಸಕೋಶ ಕೆಡುವುದು. ಎದೆ ಬಡಿತವೆಂಬ ರೋಗವುಂಟಾಗುವುದು. ಧಾತು ನಷ್ಟವಾಗುದು ಅಲ್ಲದೆ ಇಡೀ ದೇಹದಲ್ಲೇ ಒಂದು ತರದ ಉಷ್ಣತೆಯುಂಟಾಗಿ ಇನ್ನೂ ಹಲವು ತರದ ರೋಗಗಳಿಗೆ ಎಡೆದೊರೆಯುವುದು. ಅದರ ದುಷ್ಪರಿಣಾಮವು ನಿತ್ರಾಣಿಗಳಲ್ಲಿಯೂ, ಎಳೆ ಪ್ರಾಯದವರಲ್ಲಿಯೂ ಮತ್ತು ಅಸ್ವಸ್ಥದವರಲ್ಲಿಯೂ ವಿಪರೀತವಾಗಿರುವುದು. ಹೊಗೆ ಸೊಪ್ಪು ಆರೋಗ್ಯಕ್ಕೆ ಹಾನಿಕರಮಾತ್ರವಲ್ಲ ಇಡಿ ದೇಹಕ್ಕೇ ಅಪಾಯಕರವಾದ ವಸ್ತುವು.

ಆದರೆ ಅದರಲ್ಲಿರುವ ನಿಕೋಟಿನೆಂಬ ವಿಷಪದಾರ್ಥವನ್ನು ತೆಗೆದ ನಂತರ ಅದನ್ನು ಅತ್ಯಲ್ಪವಾಗಿ ಉಪಯೋಗಿಸಿದರೆ ಹೆಚ್ಚಿನ ಮಟ್ಟಿಗೆ ಕೆಡುಕನ್ನುಂಟುಮಾಡುವುದಿಲ್ಲ. ಹೊಗೆಸೊಪ್ಪನ್ನು ಉಪಯೋಗಿಸುವದರಿಂದ ಜೀರ್ಣಕ್ಕೆ ಸಹಾಯವಾದಂತೆಯೂ ಮತ್ತು ಆಲೋಚನಾಶಕ್ತಿಯು ಹೆಚ್ಚಾಗುವಂತೆಯೂ ಕಾಣುತ್ತಿದೆ. ಅದು ಅಣುನಾಶಕಾರಿಯಾದುದರಿಂದ ಅದನ್ನು ಉಪಯೋಗಿಸುವವರು ಉಚ್ಛ್ವಾಸ ಮಾಡಿದ ವಾಯುವಿನ ಅಣುಗಳನ್ನು ಕೊಂದು ಕಾರಣಾಂತರದಿಂದ ಇತರರು ಆ ವಾಯುವನ್ನು ಸೇದುವಾಗ ಉಚ್ಛ್ವಾಸ ಮಾಡಿದವರಲ್ಲಿ ಏನಾದರೊಂದು ತರದ ಹರಡುವ ರೋಗವಿದ್ದರೆ ಅದನ್ನು ಹರಡದಂತೆ ಮಾಡುತ್ತದೆ. ಮಾದಕ ಪದಾರ್ಥಗಳಂತೆ ಅವನ್ನು ಉಪಯೋಗಿಸತೊಡಗಿದರೆ ಕ್ರಮೇಣ ಅದು ಅಭ್ಯಾಸಕ್ಕೆ ಬಂದು ತೊಂದರೆಯುಂಟಾಗಿ ಅತಿಕಷ್ಟಸಾಧ್ಯವಾಗುವದಲ್ಲದೆ ಅದನ್ನು ದಿವಸ ಹೋದಂತೆ ಹೆಚ್ಚೆಚ್ಚಾಗಿ ಉಪಯೋಗಿಸಬೇಕಾಗುತ್ತದೆ. ಆದುದರಿಂದ ಅದಕ್ಕೆ ಸಂಪೂರ್ಣ ಬಹಿಷ್ಕಾರ ಕೊಡುವುದೇ ಉತ್ತಮ. ಬಾಯಿಯಲ್ಲಿ ಪಯೋರಿಯ ಎಂಬ ಹಲ್ಲುಗಳ ರೋಗವೂ, ವಸಡಿಗಳರೋಗವೂ ಯಾ ಇತರ ಯಾವ ಬಾಯಿಯ ರೋಗವೂ ಇರುವಾಗ ಅದನ್ನು ಎಂದೆಂದಿಗೂ ಉಪಯೋಗಿಸಲೇ ಬಾರದು. ಉಪಯೋಗಿಸಿದಲ್ಲಿ ಆ ರೋಗಗಳು ಇಡೀ ಬಾಯಿಯನ್ನೇ ಆವರಿಸಿ ಎಂದೆಂದಿಗೂ ಗುಣವಾಗಲಾರವು.

ಚುಟ್ಟಾ ಬೀಡಿ ಸಿಗರೇಟ್ ಸೇದುವ ಅಭ್ಯಾಸವನ್ನು ಬಿಡಲು ಅಸಾಧ್ಯವೆಂದು ಕಾಣುವವರು ಅದರ ಕೆಟ್ಟ ಗುಣಗಳನ್ನಾದರೂ ಆದಷ್ಟು ಕಡಿಮೆಮಾಡಿ ಉಪಯೋ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

"ಗೊನೊಕಿಲರ್" (ರಿಜಿಸ್ಟರ್ಡ್)

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ, ಇನ್‌ಜಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩—೧—) (ಮೂರು) ವಿ. ಪಿ ಛಾರ್ಜ ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, Vittalbhai Patel Road, BOMBAY 4.

ಗಿಸುವರೆ ಈ ಕೆಳಗಿನ ಕ್ರಮಗಳನ್ನನುಸರಿಸಬೇಕು. 1. ಸಾಧ್ಯವಾದ ಮಟ್ಟಿಗೆ ಒಳ್ಳೆಯ ಗಾಳಿ ಸಂಚಾರವಿದ್ದ ಸ್ಥಳಗಳಲ್ಲೇ ಅವುಗಳನ್ನು ಸೇದಬೇಕು. 2. ಚುಟ್ಟಾ ಬೀಡಿ ಸಿಗರೇಟುಗಳನ್ನು ಉದ್ದವಾದ ನಳಿಗೆಗಳಿಗೆ ಸಿಕ್ಕಿಸಿ, ನಿಕೊಟಿನನ್ನು ತಣ್ಣಗೆಮಾಡಿ ತಡೆಯುವ ಉಪಾಯಗಳನ್ನು ಆ ನಳಿಗೆಗಳಲ್ಲಿರಿಸಿಕೊಂಡು ನಂತರ ಸೇದಬೇಕು. ಬಾಯಿಯಿಂದ ಹೊಗೆಸೊಪ್ಪಿರುವ ದೂರವು ಹೆಚ್ಚಾದಷ್ಟು ಅದರ ದುಷ್ಪರಿಣಾಮವು ಕಡಿಮೆಯಾಗುತ್ತಾ ಬರುತ್ತದೆ. 3. ಹೊಗೆಯನ್ನು ಬಾಯಿಯಿಂದ ಆದಷ್ಟು ಬೇಗನೆ ಹೊರತಳ್ಳಬೇಕು. ಇಲ್ಲವಾದರೆ ಅದರಲ್ಲಿರುವ ನಿಕೊಟಿನು ಬಾಯಿಯನ್ನಾವರಿಸಿರುವ ಪರೆಯನ್ನು ಸೇರಿ ಕ್ರಮೇಣ ಇಡೀ ಬಾಯಿಯನ್ನೇ ಕಪ್ಪುಮಾಡಿ ಅದರಲ್ಲಿರುವ ರಕ್ತವನ್ನು ಕುಂದಿಸಿಬಿಡುವುದು. 4. ಹೊಗೆಯನ್ನು ಎಂದಿಗೂ ಶ್ವಾಸಕೋಶಗಳೊಳಗೆ ಎಳೆದುಕೊಳ್ಳಬಾರದು. ಹಾಗೆ ಮಾಡಿದರೆ ಅದಲ್ಲಿರುವ ನಿಕೊಟಿನು ಶ್ವಾಸಕೋಶದ ಪರೆಯನ್ನು ನಾಶಮಾಡುತ್ತದೆ. 5. ಯಾವಾಗಲೂ ನಿಕೊಟಿನು ತೆಗೆಯಲ್ಪಟ್ಟ ಹೊಗೆಸೊಪ್ಪನ್ನೇ ಉಪಯೋಗಿಸಬೇಕು.

ಹೊಗೆಸೊಪ್ಪಿನ ಉಪಯೋಗದಿಂದ ಮನುಷ್ಯನಲ್ಲಿರುವ ಶುಚಿತ್ವವೇ ಕೆಟ್ಟು ಹೋಗುತ್ತದೆ. ಹುಡಿ ಎಳೆಯುವವರು ಹೋದಲ್ಲೆಲ್ಲಾ ಸೀನುತ್ತಾ ತಮ್ಮ ಕೈವಸ್ತ್ರವು ಹುಡಿ ಮಿಶ್ರವಾದ ಸಿಂಬಳದಿಂದ ನೋಡಲಿಕ್ಕೆ ಅಸಹ್ಯವಾದ ರೀತಿ ಮಾಡಿಕೊಳ್ಳುವರು. ಕೆಲವರು ಆ ಸಿಂಬಳವನ್ನು ಸೀನಿ ನೆಲದಲ್ಲಿಯೂ, ಗೋಡೆ, ಕಂಬ ಇತ್ಯಾದಿಗಳಿಗೆ ಉಜ್ಜಿ ಕೊಳಕುಮಾಡುವರು ಇನ್ನೂ ಕೆಲವರು ಆ ಸಿಂಬಳವನ್ನು ಬಾಯಿಗೆ ತಂದುಕೊಂಡು ಎಲ್ಲೆಲ್ಲಿಯೂ ಉಗಿಯುವರು. ಹಲವರು ಮೂಗಿನ ಒಳಗೂ ಹೊರಗೂ ತುಂಬಾ ಪುಡಿಯನ್ನು ಅಂಟಿಸಿಕೊಂಡು ಇತರರಿಗೆ ಒಲ್ಲದ ದೃಶ್ಯವನ್ನು ಮಾಡಿಕೊಳ್ಳುವರು. ಬೀಡಿ ಚುಟ್ಟಾ ಸಿಗರೇಟ್ ಎಳೆಯುವವರ ದೆಸೆಯಿಂದ ಮಹಡಿಯಿಂದ ಪಾಯಿಖಾನೆಯವರೆಗೂ, ರೈಲು ಮೋಟಾರುಬಂಡಿಗಳಲ್ಲಿಯೂ ಹೆಚ್ಚೇಕೆ ದಾರಿಯಲ್ಲೆಲ್ಲೆಲ್ಲಿಯೂ ಹೊಗೆಸೊಪ್ಪಿನ ಹೊಗೆಯವಾಸನೆಯೂ ಉರಿಯುತ್ತಿರುವ ಮತ್ತು ನೊಂದಿ ಹೋಗಿರುವ ಬೀಡಿ ಮೊದಲಾದುವುಗಳ ತುಂಡುಗಳೂ ಬೆಂಕಿಕಡ್ಡಿಗಳ ತುಂಡುಗಳೂ ಕಾಣಬರುವುವು. ಅಲ್ಲದೆ ಅವುಗಳ ಬೆಂಕಿಯಿಂದ ಹಲವು ಕಡೆಗಳಲ್ಲಿ ಅನಾಹುತಗಳು ಆಗಾಗ್ಗೆ ಕಂಡುಬರುತ್ತವೆ. ಈ ಅಭ್ಯಾಸವು ಹಳ್ಳಿಗಳ ಮೂಲೆ ಮೂಲೆಗಳ ವರೆಗೂ ಕೂಡ ಹರಡಿರುವುದರಿಂದ ಮುಳಿಹುಲ್ಲು ಬೆಳೆದಿರುವ ಕಾಲದಲ್ಲಿ ವರ್ಷಂಪ್ರತಿ ಹಲವು ಗುಡ್ಡೆ ಗುಡ್ಡೆಗಳೇ ಉರಿದು ಭಸ್ಮವಾಗಿ ಲೆಖ್ಖವಿಲ್ಲದಷ್ಟು ಮರಗಿಡಗಳು ನಾಶವಾಗುವುವು. ಅಲ್ಲದೆ ದನಕರುಗಳಿಗೆ ಕೂಡ ಒಂದು ತುತ್ತು ಮೇವೂ ಇಲ್ಲದಂತಾಗುವುದು. ಈ ಹೊಗೆ ಬಿಡುವ ಅಭ್ಯಾಸದಿಂದ ಅನೇಕರಲ್ಲಿ ಆಗಾಗ್ಗೆ ಎಂಜಲು ಉಗಿಯುತ್ತಿರುವ ಅಭ್ಯಾಸವುಂಟಾಗಿ ಅವರು ಹೋದಲ್ಲೆಲ್ಲ ಉಗಿದುಹಾಕುತ್ತಿರುವರು. "ಉಗುಳಿ ಉಗುಳಿ ರೋಗ" ಎಂಬ ನಾಣ್ಣುಡಿಯು ಈ ಸಂದರ್ಭದಲ್ಲಿ ಸರಿಯಾಗಿ ಒಪ್ಪುವುದು. ಆ ಕೆಟ್ಟ ಚಾಳಿಯು ಈಗೀಗ ಅನೇಕರಲ್ಲಿ ಹರಡಿರುವದರಿಂದ ಅದರ ಹೊಗೆಯು, ಗಾಳಿ ಸಂಚಾರವು ಸರಿಯಾಗಿರದೆ ಮೊದಲೇ ಬಿಸಿಯಾಗಿರುವ ಸಿನೆಮಾ, ನಾಟಕ, ಮತ್ತು ಇತರ ಸಭಾಸ್ಥಳಗಳನ್ನು ಇನ್ನಷ್ಟು ಬಿಸಿಮಾಡಿ ಹೊಗೆಯ ಹೊಲಸು ವಾಸನೆಯಿಂದ ತುಂಬಿ ಅದರ ಅಭ್ಯಾಸವಿಲ್ಲದಿದ್ದವರಿಗೆ ಹೆಚ್ಚಿನ ಅಸಹ್ಯವನ್ನುಂಟುಮಾಡುತ್ತದೆ. ಮಾತ್ರವಲ್ಲ ಅಲ್ಲಿ ಕೂಡಿದವರೆಲ್ಲರ ಆರೋಗ್ಯವನ್ನೇ ಹಾಳುಮಾಡುತ್ತವೆ. ಬೀಡಿ ಚುಟ್ಟಾ ಸಿಗರೇಟ್ ಸೇದುವವರ ಬಾಯಿಯು ಒಂದು ತರದ ಕೆಟ್ಟ ವಾಸನೆಯಿಂದ ಕೂಡಿರುವದರಿಂದ ಅವರ ಹತ್ತಿರ ಸರಿದು ಮಾತನಾಡುವರೆ ಇತರರಿಗೆ ಒಗ್ಗುವುದಿಲ್ಲ. ಹಾಗಿರುತ್ತಾ ಅವರ ಒಡನಾಡಿಗಳಿಗೆ ಎಷ್ಟು ಕಷ್ಟವಾಗದು!

ಎಳ್ಳಷ್ಟು ಪ್ರಯೋಜನವಿಲ್ಲದ, ಹಲವು ದುಷ್ಪರಿಣಾಮಗಳನ್ನೊಳಗೊಂಡ ಹೊಗೆಸೊಪ್ಪಿನ ಉಪಯೋಗದಿಂದ ನಮ್ಮ ಆರೋಗ್ಯವನ್ನು ನಾವು ಕಳೆದುಕೊಳ್ಳುವದಲ್ಲದೆ ನಮ್ಮಲ್ಲಿರುವ ಎಷ್ಟೋ ಐಶ್ವರ್ಯವು ಪರರಾಜ್ಯಗಳಿಗೆ ಸುರಿದು ಹೋಗುವುದು. ಬರೇ ಸಿಗರೇಟೊಂದಕ್ಕೆ ವರ್ಷಂಪ್ರತಿ ಕೋಟ್ಯಂತರ ರೂಪಾಯಿ ಪರದೇಶಕ್ಕೆ ಸುರಿಯಲ್ಪಡುವುದು. ಹಾಗಿರುತ್ತಾ ಅಂಥಾ ಕೆಡುಕನ್ನು ನಮ್ಮ ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಕೂಡಲೆ ನಿಲ್ಲಿಸುವ ಪ್ರಯತ್ನ ಮಾಡುವುದು ಆತನ ಕರ್ತವ್ಯವಾಗಿದೆ. ಹಾಗೆ ಮಾಡದಿದ್ದಲ್ಲಿ ನಮ್ಮ ಜನಾಂಗವೇ ಕ್ರಮೇಣ ಈ ದುರಾಭ್ಯಾಸಗಳಿಗೆ ತುತ್ತಾಗಿ ತಮ್ಮ ತನುಮನಧನಗಳನ್ನು ಕೆಡಿಸಿಕೊಂಡು ದುರ್ಬಲರಾಗಿ ಹೀನ ಸ್ಥಿತಿಗಿಳಿಯಬೇಕಾದೀತು. ಇದನ್ನಡಗಿಸಲು ತಕ್ಕದಾದ ಶಾಸನವನ್ನು ಸಂಬಂಧಪಟ್ಟ ಅಧಿಕಾರಿಗಳು ಜಾರಿಗೆ ತರುವಂತೆ ಮಾಡುವದು ಅವರ ಕರ್ತವ್ಯಗಳಲ್ಲೊಂದಾಗಿದೆ.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಶಿಷ್ಟ ಗುಣ ಉಂಟಾಗುವಂತೆ ಮಾಡುತ್ತವೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!!

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳೆಲ್ಲದರಲ್ಲೂ ಸಾವಿರಗಟ್ಟಲೆ ಇದ್ದಾಗ್ಯೂ

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಕ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಿಬೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರು ಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡೆವಳಿಗಳಾವುವು? ಅಲ್ಲಿನ ವೇಶ್ಯಾವಾಟಿಗಳು, ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳ ಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ.

ಅನೇಕ ವೇಶ್ಯೆಯರ ಜೀವನ ಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ. ಮೆದುಳಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ!

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅತ್ಯಾವಶ್ಯಕವಾದುದು.

ಈ ಪುಸ್ತಕವನ್ನು ಓದಬೇಕು! ಮನೋವೈಶಾಲ್ಯವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು

ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು

ಅವರಿಗೆ ಇವರಿಗೆ ಎನ್ನುವುದೇನು? ಎಲ್ಲರಿಗೂ ಬೇಕು.

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ.

ಉತ್ತಮವಾದ ಹೊಳಪು ಕಾಗದ, ೩೦೦ ಪುಟಗಳು.

ಬೆಲೆ ರೂ. ೧—೮—೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು.

ಮೈಸೂರಿನಲ್ಲಿ ಲ್ಯಾನ್ಸ್ ಡೌನ್, ಬಜಾರ್, ಸ್ಟೇಟ್ ಮಾರ್ಟ್‌ನಲ್ಲಿ, ಮಂಗಳೂರಲ್ಲಿ ಸ್ಕೂಲ್‌ಬುಕ್ ಕಂಪೆನಿಯಲ್ಲಿ ದೊರಕುತ್ತದೆ

ಟಾಗೂರ್ ಅಂಡ್ ಕೋ, (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ.

ಹೆಂಡ್ತಿ ಗಂಡನಾದರೆ?

೪ನೇ ನೋಟ

[ಮನೋಹರನು ಜೀವನದಲ್ಲೇ ಜಿಗುಪ್ಸೆಗೊಂಡವನಾಗಿ ಸ್ವಲ್ಪ ವಿಳಂಬವಾಗಿ ಎದ್ದು ಅವಸರದಿಂದ ಕಾಫಿ ತಯಾರಿಸುತ್ತಿರುವನು. ಮನೋರಮೆಯು ಬಹಳ ತಡವಾಗಿ ಎದ್ದು ಘಂಟೆ 7½ ಆದುದನ್ನು ನೋಡಿ ಕಣ್ಣೊರಸುತ್ತಾ ಅವಸರದಿಂದ ಚಾವಡಿಗೆ ಬಂದು]

ಮನೋರಮೆ—(ಮೇಜಿಯ ಮೇಲಿದ್ದ ರಿಸ್ಟ್‌ವಾಚ್ ನೋಡಿ) ಛೆ! ಹಾಫ್ ಪಾಸ್ಟ್ ಸೆವೆನ್ (7½ ಘಂಟೆ) ಆಗಿಹೋಯಿತು! ಎಂಟಕ್ಕೊಂದು ಎಂಗೇಜ್‌ಮೆಂಟು (ಕೆಲಸ) ಉಂಟು! ರಂಗ! ರಂಗ! (ಗಟ್ಟಿಯಾಗಿ ರಂಗನನ್ನು ಕರೆಯುವಳು ರಂಗನು ಒಳಗಿಂದಲೇ 'ಓ' ಎಂದು ಕೂಗಿ ಸುಮ್ಮನಾಗುವನು.) ರಂಗ! ರಂಗ! ಎಲ್ಲಿ ಸತ್ತು ಹೋದಿಯೋ ಪಟಿಂಗ!

ರಂಗ—(ಒಳಗಿಂದಲೆ) ಬಂದೆ ಅಮ್ಮಾ ಬಂದೆ! ರಾಯರು ಕಾಫಿ ತಯಾರಿಸುತ್ತಿದ್ದಾರೆ, ನಾನು ಕಪ್ ತೊಳೆಯುತ್ತಿದ್ದೇನೆ. ಯಾರು ಬೇಕಮ್ಮ ನಿಮಗೆ ನಾನೋ ರಾಯರೋ?

ಮನೋರಮೆ—ನೀನಾಗಲಿ ರಾಯರಾಗಲಿ ಒಂದು ತಂಬಿಗೆ ನೀರು ತನ್ನಿಲ್ಲಿ ಮುಖ ತೊಳೆಯಲಿಕ್ಕೆ. (ತುಸುಹೊತ್ತು ಕಾದು ಯಾರೂ ನೀರು ತರದಿರಲು ಸಿಟ್ಟಿನಿಂದ ಒಳಹೋಗಿ ರಂಗನನ್ನು ಕಿವಿಹಿಡಿದು ಹೊರಗೆಳತಂದು) ಯಾಕೋ ನೀರು ತರಲಿಲ್ಲ ಮೂರುಕಾಸಿನವನೇ?

ರಂಗ—ಅಯ್ಯಯ್ಯೋ! ದಮ್ಮಯ್ಯ ಕಿವಿಬಿಡಿಯಮ್ಮ. ಎಷ್ಟು ಸಲ ಹೇಳುವುದಮ್ಮ ನಾನು ಕಿವಿ ಮಾತ್ರ ಹಿಡಿಯಬೇಡಿ, ಮತ್ತೇನು ಬೇಕಾದರೂ ಮಾಡಿಯೆಂದು?

ಮನೋರಮೆ—ನನಗೆ ನಿನ್ನ ಕಿವಿಯೇ ಹಿಡಿಯಬೇಕು. ಏನಾಗುತ್ತದೆ ನೋಡುವ! ಯಾಕೆ ನೀರು ತರಲಿಲ್ಲ ಹೇಳು ಮೊದಲು. (ಗಟ್ಟಿಯಾಗಿ ಹಿಂಡುವಳು)

ರಂಗ—ಆಯಿ! ಆಯಿ! ಹೇಳುತ್ತೇನಮ್ಮ ಹೇಳುತ್ತೇನೆ. ರಾಯರು ನೀರು ತೆಗೆದುಕೊಂಡು ಹೋಗಲು ಕೇಳಲಿಲ್ಲ ನನ್ನ ಕೈತುಂಬಾ ಸಾಬೂನಿತ್ತು.

ಮನೋರಮೆ—ಏನಂದ್ರು?

ರಂಗ—ಬೇಕಾದ್ರೆ ಕೊಂಡುಹೋಗು. ನನ್ನ ಹೆಂಡತಿಗೆ ಮುಖ ತೊಳೆಯಲು ನಾನು ನೀರು ತೆಗೆದುಕೊಂಡು ಹೋಗಿ ಕೊಡುವುದು ನನ್ನ ಗೌರವಕ್ಕೆ ಕುಂದು ಎಂದ್ರು!

ಮನೋರಮೆ—ಹೆಂಡ್ತಿಗೆ ಗಂಡ ಕಾಫಿಮಾಡಿ ಕೊಡಬಹುದಂತೇನೋ?

ರಂಗ—ಕಾಫಿ ಮಾಡಿಕೊಡುವುದು ಮನೆ ಒಳಗಂತೆ. ಯಾರೂ ನೋಡುವುದಿಲ್ಲವಂತೆ ಅದನ್ನು.

ಮನೋರಮೆ—ಹಾಗಾದ್ರೆ ಗುಟ್ಟಾಗಿ ಹೆಂಡ್ತಿ ಚಾಕ್ರಿ ಮಾಡಬಹುದಂತೆಯೋ?

ರಂಗ—ನನಗೇನು ಗೊತ್ತದೆಲ್ಲಾ ನಿಮ್ಮ ಗಂಡ ಹೆಂಡಿರ ಸಂಗತಿ?

ಮನೋರಮೆ—ಕರೆ ನಿನ್ನ ರಾಯರನ್ನಿಲ್ಲಿ.

ರಂಗ—(ಒಳಗೆ ಹೋಗುತ್ತಾ) ರಾಯರೇ! ರಾಯರೇ! ಇಲ್ಲಿ ಬರಬೇಕಂತೆ. (ಒಳಹೋಗಿ ಮನೋಹರನನ್ನು ಕಳುಹಿಸುವನು. ಮನೋಹರನು ಒಂದು ಗಂಜಿಪರಾಕು ಮುಂದು ಮತ್ತು ಪೈರಾನು ಹಾಕಿಕೊಂಡು ಎದುರು ಭಾಗಕ್ಕೊಂದು ಕೆಪ್ಪುವಸ್ತ್ರ ಕಟ್ಟಿಕೊಂಡು ತಲೆಬಾಗಿ ನಿಲ್ಲುವನು.)

ಮನೋರಮೆ—(ವ್ಯಂಗ್ಯವಾಗಿ ನಕ್ಕು) ಪಕ್ಕಾ ಬಟ್ಲರಾಗಿ (ಅಡಿಗೆಯವರಾಗಿ) ಹೋಗಿದ್ದೀರಿ ನೀವೀಗ!

ಮನೋಹರ—(ಕಣ್ಣೆತ್ತಿ ದುರದುರನೆ ನೋಡಿ) ಏನಂದಿ?

ಮನೋರಮೆ—ಏನು? ಎದುರು ಮಾತಾಡುವಿರೋ?

ಮನೋಹರ—(ಕೋಪವನ್ನು ಕಟ್ಟಿಕೊಂಡು) ಇಲ್ಲ. (ಸುಮ್ಮನಾಗುವನು)

ಮನೋರಮೆ—ನೀವ್ಯಾಕೆ ನನ್ನನ್ನು 7 ಘಂಟೆಗೆ ಎಬ್ಬಿಸಲಿಲ್ಲ? 8 ಘಂಟೆಗೊಂದು ಎಂಗೇಜ್‌ಮೆಂಟಿದೆ (ಕೆಲಸವಿದೆ)ಯೆಂದು ನಾನು ಹೇಳಿಲ್ವೇನು?

ಮನೋಹರ—(ತಲೆತುರಿಸುತ್ತಾ) ಹೌದು ಹೇಳಿದ್ದೆ. ನಾನೇನು ಮಾಡಬೇಕಿತ್ತದಕ್ಕೆ?

ಮನೋರಮೆ—ನೀವೇನು ಮಾಡಬೇಕಿತ್ತು! 6½ ಘಂಟೆಗೆದ್ದು 'ರಂಗನಾಯಕ ರಾಜೀವ ಲೋಚನೆ ರಮಣೀ ನೀ ಬೆಳಗಾಯಿತೇಳೆನುತಾ' ಎಂದು ಗಟ್ಟಿಯಾಗಿ ಉದಯರಾಗ ಹಾಡಬೇಕಿತ್ತು.

ಮನೋಹರ—ನಾನೇ?

ಮನೋರಮೆ—ಹೌದು ನೀವೇ?

ಮನೋಹರ—ಎಷ್ಟಾದರೂ ನಿನ್ನ ಗಂಡನಲ್ಲವೇ ನಾನು ಮನೋರಮಾ?

ಮನೋರಮೆ—ಗಂಡನಾದ್ರೇನು ಕೋಡುಂಟೇ ನಿಮಗೆ! ಸಂಪಾದಿಸಿ ಹಾಕುವವಳು ಹೆಂಡ್ತಿಯಿರುವಾಗ ಗಂಡನಾದವನೇಕೆ ಹೆಂಡ್ತಿ ಕೆಲಸಮಾಡಬಾರದು! ಗಂಡನು ಸಂಪಾದಿಸಿ ಹಾಕುವಾಗ ಹೆಂಡ್ತಿ ಕತ್ತೆಚಾಕರಿ ಮಾಡುವುದಿಲ್ಲವೇನು?

ಮನೋಹರ—ಎಷ್ಟಾದರೂ ಗಂಡನು ಹೆಂಗಸಿನಂತಿರಲಾಗುತ್ತದೆಯೋ ಮನೋರಮಾ? ಗಂಡಸು ಗಂಡಸೇ, ಹೆಂಗಸು ಹೆಂಗಸೇ.

ಮನೋರಮೆ—(ವ್ಯಂಗ್ಯವಾಗಿ) ಗಂಡಸು ಗಂಡಸೇ! ಹೆಂಗಸು ಹೆಂಗಸೇ! ನೋಡುತ್ತೇನೆ ನಾನು ನಿಮ್ಮ ಗಂಡಸುತನ ಎಲ್ಲಿವರೆಗೆ ಬರುತ್ತದಂತ? ಎಲ್ಲಿ ಉಂಟೀಗ ಕಾಫಿ?

ಮನೋಹರ—ರಂಗ! ರಂಗ! (ಗಟ್ಟಿಯಾಗಿ ಕರೆಯುವನು) ಎಲ್ಲಿ ಹೋದಿಯೋ? ಟೇಬ್ಲಿನಲ್ಲಿದ್ದ (ಮೇಜಿಯ ಮೇಲಿದ್ದ) ಕಾಫಿಯನ್ನು ಕಪ್ಪಿಗೆ ಹೊಯ್ದು ತಾರೋ ಇಲ್ಲಿ!

ರಂಗ—(ಒಳಗಿನಿಂದಲೇ) ಅಯ್ಯಯೋ! ಕೈಯೆಲ್ಲಾ ಸುಟ್ಟುಹೋಯಿತ್ತು (ಗಟ್ಟಿ ಬೊಬ್ಬೆ ಹಾಕುವನು.)

ಮನೋರಮೆ—ನನಗೆ ಗೊತ್ತದು! ನಿಮಗೊಬ್ಬ ಚಾಕರಿಯವ! ನಿಮಗೆ ಹೋಗಿ ತರ್ಲಿಕ್ಕೇನು!

ಮನೋಹರ—ಮನೋರಮಾ ಸ್ವಲ್ಪ ಮೆಲ್ಲಗೆ ಮಾತಾಡು; ಯಾರಾದರೂ ಕೇಳಿಸ್ರೆ!

ಮನೋರಮೆ—ಕೇಳಿಸ್ರೇನಾಯಿತು? ಈ ಮನೆಯ ಯಜಮಾನಿ ನಾನಲ್ಲವೇ? ನನ್ನಿಚ್ಛಾನುಸಾರ ಮಾತಾಡುವೆನು. ಯಾರು ಕೇಳಿದರೇನು? ಗಂಡಸನ್ನು ಮಾತ್ರ ತಾಯಿ ಹೆತ್ತುದು, ಸ್ತ್ರೀಯನ್ನಲ್ಲವೇ? ಅವಳಿಲ್ಲಿಯಾದರೂ ಕತ್ತೆಯ ಹೊಟ್ಟೆಯಿಂದ ಬಂದವಳೇ? ಅವಳು ಸಂಪಾದಿಸಿ ಹಾಕುವಾಗ ಯಾಕೆ ಅಧಿಕಾರ ನಡಿಸಬಾರದು? ಗಂಡಸಿಗೆ ಮಾತ್ರ ಸ್ತ್ರೀಯ ಮೇಲೆ ಅಧಿಕಾರ ನಡಿಸುವ ಹಕ್ಕೇ? ಹೋಗ್ಹೋಗಿ ಕಾಫಿ ತಂದಿಡಿ ಈಗ, (ರಿಸ್ಟ್‌ವಾಚು ನೋಡಿ) ಸಮಯವಾಯ್ತು ನನಗೆ. ನಾನು ಬಚ್ಚಲಿಗೆ ಹೋಗಿ ಮುಖ ತೊಳೆದು ಬರುತ್ತೇನೆ. ನೀರು ಹಾಕಿದ್ದೀರಲ್ಲ ಹಂಡೆಗೆ? (ಹೋಗಿಬಿಡುವಳು)

ಮನೋಹರ—ಹೌದು (ಒಳಗೆ ಹೋಗಿ ಮೆಲ್ಲಗೆ ಒಂದು ಕಪ್ ಕಾಫಿ ತಂದಿಟ್ಟು ನಿಟ್ಟುಸಿರಿಟ್ಟು ಗೊಂಬೆಯಂತೆ ನಿಂತುಕೊಳ್ಳುವನು. ರಂಗ ಅವರ ಹಿಂದಿನಿಂದಲೇ ಜೋಲುಮೋರೆ ಹಾಕಿಕೊಂಡು ಬಂದು)

ರಂಗ—ಯಾಕೆ ರಾಯರೇ ಬಹಳ ದುಃಖಪಡುತ್ತಿದ್ದೀರಿ? ನನಗೆ ಅಮ್ಮ ಮೊದಲು ದಿನಕ್ಕೊಂದು ಸಾವಿರ ಬೈದು ಸರಿಪೆಟ್ಟು ಕೂಡ ಕೊಡುತ್ತಿದ್ದಿಲ್ವೇ? ನಾನೇನು ಹೀಗೆ ದುಃಖಿಸುತ್ತಿದ್ದೆನೇ? ನಿಮಗೆ ಬೈಯ್ಯುವುದು ಮಾತ್ರ ಪೆಟ್ಟು ಕೊಡುವುದಿಲ್ಲ.

ಮನೋಹರ—ಆ ಕಾಲವೂ ಬಹು ದೂರವಿರಲಿಕ್ಕಿಲ್ಲ ರಂಗ?

ಮನೋರಮೆ—(ಅವಸರದಿಂದ ಪ್ರವೇಶಿಸಿ ಕಾಫಿಯನ್ನು ಬೆರಳುಹಾಕಿ ನೋಡಿ) ಇದ್ಯಾಕೆ ನಿಮ್ಮ ತಲೆಗೆ ಹೊಯ್ಕೊಳ್ಳಲಿಕ್ಕೋ? ಇದಕ್ಕಿಂತ ತಣ್ಣೀರು ಕುಡಿದರೇನು? ಇಷ್ಟು ಸಮಯ ಆಯಿತು. ಒಂದು ಕಾಫಿ ಸಹ ಸರಿಯಾಗಿ ಮಾಡುವುದಕ್ಕೆ ತಿಳಿಯುವುದಿಲ್ಲೆಂದ್ರೆ ಇನ್ನೇನು ಮಾಡುವಿರಿ ನೀವು? ಊಟವಂತೂ ಒಂದು ದಿನ ಕೂಡ ಸರಿಯಾಗಿ ಮಾಡ್ಲಿಕ್ಕಿಲ್ಲವಲ್ಲ? ನಾನೇನು ಬದುಕಬೇಕೋ ಬೇಡವೋ? ಹೀಗೆಲ್ಲಾ ಮಾಡಿದರೆ ನಾನೇ ಮನೆಬಿಟ್ಟು ಹೋಗಬಹುದು.

ಮನೋಹರ—ನಾನೇನು ಮಾಡುವುದು?

ಮನೋರಮೆ—ನೀವೇನು ಮಾಡುವುದು! ನಿಮ್ಮನ್ನು ತರಬೇಕು ಮಾಡ್ಲಿಕ್ಕೆ ಫಸ್ಟ್‌ಕ್ಲಾಸ್ ಬಟ್ಲರನೊಬ್ಬನನ್ನು (ಒಳ್ಳೇ ಅಡಿಗೆಯವನೊಬ್ಬನನ್ನು) ಕರೆತರಲೇ?

ರಂಗ—ಬೇಡಮ್ಮ ಬೇಡ. ಅವರು ಕ್ರಮೇಣ ಸ್ವಲ್ಪಸ್ವಲ್ಪ ಕಲಿತು ಹುಷಾರಾಗುತ್ತಾರೆ! ಈಗ ಸ್ವಲ್ಪ ಸಮಯ ಮಾತ್ರ ಆದುದಲ್ಲಮ್ಮ ರಾಯರು ಅಡಿಗೆ ಮಾಡಲಾರಂಭಿಸಿ.

ಮನೋರಮೆ—ಹೌದೌದು! ಇವರು ಹುಷಾರಾಗುವುದಿನ್ನು ಒಂದೇ ದಿನ! ಅದಂತಿರಲಿ ರಂಗ, ನಾನು ಇಲ್ಲಿಂದ ಹೋದ ಮೇಲೆ ಇವರು ಮನೆಯಲ್ಲಿಯೇ ಇರುತ್ತಾರೋ? ಎಲ್ಲಿಯಾದರೂ ಹೊರಗೆ ಹೋಗುತ್ತಾರೋ?

ರಂಗ—ಎಲ್ಲಿಯೂ ಹೋಗುವುದಿಲ್ಲಮ್ಮಾ, ಪಾಪ ಅವರು!

ಮನೋರಮೆ—ಏನು ನೀನೂ ಅವರೊಂದಿಗೆ ಸೇರಿರುವೆಯಾ ನೀಚಾ? (ಕಿವಿ ಹಿಡಿಯಹೋಗುವಳು.)

ರಂಗ—ಇಲ್ಲ, ಇಲ್ಲ ಹೇಳುತ್ತೇನಮ್ಮ. ದಮ್ಮಯ್ಯ ಕಿವಿಮಾತ್ರ ಹಿಡಿಯಬೇಡಿ. ತಲೆಗೆ ಎಷ್ಟು ಕುಟ್ಟಿ ಬೇಕಾದ್ರೂ ಹೊಡೆಯಿರಿ. ನನ್ನ ಪ್ರಾಣವಿರುವ ಸ್ಥಳವೇ ಕಿವಿಯಮ್ಮ.

ಮನೋರಮೆ—ಹಾಗಾದರೆ ಹೋಗಲಿ ನೋಡುವ ನಿನ್ನ ಪ್ರಾಣ? (ಸರಿಯಾಗಿ ಕಿವಿ ತಿರುವಿ ಬಿಡುವಳು.)

ರಂಗ—ಅಯ್ಯಯ್ಯೋ ಸತ್ತೆ ಸತ್ತೆ! ಹೇಳುತ್ತೇನಮ್ಮಾ ಹೇಳುತ್ತೇನೆ ನೀವು ಇಲ್ಲಿಂದ ಹೋದಕೂಡ್ಲೆ ಹೊರಟು ನೆರೆಮನೆಯಲ್ಲೆಲ್ಲಾ ತಿರುಗಾಡಿ ಮಧ್ಯಾಹ್ನ ನೀವು ಬರುವದಕ್ಕಿಂತ ಸ್ವಲ್ಪ ಮುಂಚೆ ಬರುತ್ತಾರಮ್ಮ. ಮಧ್ಯಾಹ್ನ ನೀವು ಹೋದ ಮೇಲೆ ಹೊರಟು ಹೋದವರು ಸಂಜೆ ನೀವು ಬರುವದಕ್ಕಿಂತ ಸ್ವಲ್ಪ ಮುಂಚೆ ಬರುತ್ತಾರೆ. ಅಮ್ಮನತ್ರ ಹೇಳಬೇಡ, ದುಡ್ಡು ಕೊಡುತ್ತೇನೆ ನಿನಗೆ ಎಂದಿದ್ದಾರಮ್ಮ. ಇಷ್ಟರವರೆಗೆ ಒಂದು ಪೈ ಕೂಡಾ ಕೊಡ್ಲಿಲ್ಲ.

ಮನೋಹರ—ಏನಂದಿ ನೀಚಾ? (ರಂಗನನ್ನು ಹೊಡೆಯಲು ಮುಂದುವರಿಯುವನು)

ಮನೋರಮೆ—ಸಾಕು ಸಾಕು ದರ್ಬಾರೆಲ್ಲ. ಕಟ್ಟಿಡಿ. ನಾನಲ್ಲ ಬಲ್ಲೆ. ನೀವು ಮನೆ ಮನೆ ಅಡ್ಡಾಡಿ ಸಿಕ್ಕ ಸಿಕ್ಕ ಹೆಂಗಸರೊಡನೆಲ್ಲಾ ಮಾತಾಡುತ್ತಿರುವಿರೆಂದು ಮಿಸ್ ರಮಣಿ ಹೇಳಿದಳು.

ಮನೋಹರ—ಇಲ್ಲ, ಮನೋರಮಾ ಇಲ್ಲ. ಎಲ್ಲಿಯಾದರೂ ಒಮ್ಮೊಮ್ಮೆ ಒಳಗೆ ಕೂತು ಕೂತು ಬೇಸರವಾದಾಗ ನಾನು ನೆರಮನೆ ಗಂಗಮ್ಮನವರ ಮನೆಗೆ ಮಾತ್ರ ಹೋದುದು. ಅವರು 60 ವರ್ಷದ ಮುದುಕಿಯೆಂದು ನೀನೇ ಬಲ್ಲೆಯಲ್ಲ? ಯಾವ ಮುಖದಲ್ಲಿ ನಾನು ಮನೆಮನೆ ತಿರುಗಾಡುವುದು?

ಮನೋರಮೆ—ನಿಮಗೇನಾಗಿದೆ ಈಗ? ಯಾವಾಗಲೂ ಮನೆಯೊಳಗೇ ಇರಬೇಕು. ಮನೆಬಿಟ್ಟು ಹೋಗುವ ಕೆಲಸ ನಿಮಗೇನುಂಟು? ನೀವು ಮನೆ ಮನೆ ತಿರುಗುತ್ತಿರುವುದು ನನ್ನ ಗೌರವಕ್ಕೆ ಕುಂದು. ಜನರೆಲ್ಲಾ ಏನು ಹೇಳುತ್ತಾರೆ ಬಲ್ಲಿರಾ?

ಮನೋಹರ—ಏನು ಹೇಳುತ್ತಾರೆ?

ಮನೋರಮೆ—ಮನೋರಮೆಗೊಬ್ಬ ಗಂಡ. ಅವನಿಗೊಂದಿಷ್ಟು ಮಾನ ಮರ್ಯಾದೆ ಇಲ್ಲ. ಮನೆ ಮನೆ ಅಡ್ಡಾಡುತ್ತಿರುವುದು, ಸಿಕ್ಕ ಸಿಕ್ಕವರೊಡನೆಲ್ಲಾ ಮಾತಾಡುವುದು, ಅವನಿಗೇನು ಕೇಳುವವರಿಲ್ಲವೋ ಎನ್ನುತ್ತಿದ್ದಾರೆ.

ಮನೋಹರ—ಆಯ್ತು; ಇನ್ನಾ ಮುದುಕಿ ಗಂಗಮ್ಮನ ಮನೆಗೂ ಹೋಗುವುದಿಲ್ಲ

ಮನೋರಮೆ—(ರಿಸ್ಟ್‌ವಾಚ್ ನೋಡಿ) ನನಗೆ ಹೋಗಬೇಕೀಗ; ನಿಮ್ಮೊಡನೆ ಮಾತಾಡುತ್ತಾ ಕಾಲಕಳೆಯಲು ಸಮಯವಿಲ್ಲ. ಸಾಮಾನಿಗೆಲ್ಲಾ ಎಷ್ಟು ಹಣಬೇಕು? ಬೇಗ ಹೇಳಿ.

ಮನೋಹರ—ಹತ್ತು ಹನ್ನೆರಡು ಆಣೆ ಬೇಕು.

ಮನೋರಮೆ—ಹೂಂ. ಹತ್ತು ಹನ್ನೆರಡಾಣೆ! ಇನ್ನು ಲೆಕ್ಕ ಬರುವುದಿಲ್ವೊ ನಿಮಗೆ? ಹೀಗೆ ಖರ್ಚುಮಾಡಿದ್ರೆ ಮನೆ ಉಳಿವ ಹಾಗಿಲ್ಲ, ಬೇಗ ದಿವಾಳಿ ಹೋಗಬೇಕಾದೀತು!

ಮನೋಹರ—(ತಲೆತುರಿಸಿ) ಮನೋರಮ, ನನಗೊಂದು ಮುಂಡು........

ಮನೋರಮೆ—ಮುಂಡುಗಿಂಡೆಲ್ಲಾ ಈಗ ಬೇಡ, ಇನ್ನೊಮ್ಮೆ ನೋಡುವ ಈಗ ದುಡ್ಡಿಲ್ಲ. ಇಗೊಳ್ಳಿ, ನಾಲ್ಕಾಣೆ. (ಕೈಚೀಲದಿಂದ ನಾಲ್ಕಾಣೆ ಕೊಟ್ಟು ಹೊರಟು ಹೋಗಿಬಿಡುವಳು.)

ಮನೋಹರ—(ಬಹಳ ಚಿಂತಾಮಗ್ನನಾಗಿ) ರಂಗ! ನಾನೆಲ್ಲಿಯಾದರೂ ಹೊರಟು ಹೋಗಿ ಸನ್ಯಾಸಿಯಾಗುತ್ತೇನೆ. ಇಲ್ಲವಾದರೆ ಏನಾದರೂ ಮಾಡಿ ಆತ್ಮಹತ್ಯೆಯಾದರೂ ಮಾಡಿಕೊಳ್ಳುತ್ತೇನೆ. ಸಾಕಾಯಿತು ನನಗೆ ಈ ಬಾಳು.

ರಂಗ—ನೀವು ಹೋದ್ರೆ ನಾನೂ ಬರುತ್ತೇನೆ ಸ್ವಾಮಿ ನಿಮ್ಮೊಂದಿಗೆ. ಒಟ್ಟಿಗೆ ಹೋಗೋಣ.

ಮನೋಹರ—ಎಲ್ಲಿ ಹೋಗುವುದು? ಏನು ಮಾಡುವುದು?

ರಂಗ—ಬೊಂಬಾಯಿಗೆ ಹೋಗಿಬಿಡುವ ಸ್ವಾಮಿ. ಕಾಪಿ ಹೋಟೇಲಿನವ ನೊಬ್ಬನು ನನ್ನನ್ನು ಕರಕೊಂಡು ಹೋಗುತ್ತೇನಂತ ಹೇಳಿದ್ದಾನೆ. ನಿಮ್ಮನ್ನೂ ಕರಕೊಂಡು ಹೋದಾನು.

ಮನೋಹರ—ರಂಗ ನೀನಿಲ್ಲಿರು. ನಾನು ಅರವಿಂದನ ಮನೆಗೆ ಹೋಗಿ ಅವನೊಡನೆ ಒಂದು ಮಾತು ಹೇಳಿಬರುತ್ತೇನೆ. ಅವನು ಮಾಡಿದ ಮದುವೆ ನನಗೆ. ಅವನಿಗೂ ಮನೋರಮೆಗೂ ಸಂಬಂಧವುಂಟಂತೆ.

ರಂಗ—ಮನೆಬಿಟ್ಟು ಹೋಗಬಾರದೆಂದು ಹೇಳಿದ್ದಲ್ವೋ ಸ್ವಾಮಿ ಅಮ್ಮನವರು!

ಮನೋಹರ—ಸತ್ತಳವಳು. ಮರ್ಯಾದೆಗೆ ಹೆದರಿ ನಾನಿಷ್ಟರವರೆಗೆ ಸಹಿಸಿಕೊಂಡಿದ್ದೆ. ಇಡಿ ಮುಳುಗಿದ ಮೇಲೆ ಚಳಿಯೇನಿನ್ನು? ನಾನಿಂದೇ ಅವಳನ್ನು ಬಿಟ್ಟು ಹೋಗುವೆನು.

ರಂಗ—ಅವರು ಹಿಡಿದು ತಂದ್ರೆ?

ಮನೋಹರ—(ನಕ್ಕು) ಏನು ಹೇಳುವೆಯೋ ಮೂರ್ಖ! ನನ್ನನ್ನವಳು ಹಿಡಿದು ತರುವುದೇ? ನಾನು ಗಂಡಸಲ್ಲವೇ? ಅರವಿಂದನೊಡನೆ ಒಂದು ಮಾತು ಹೇಳಿ ಆ ಮೇಲೆ ನಾನು ಮಾಡುವುದು ಮಾಡುತ್ತೇನೆ.

ರಂಗ—ಹೌದು, ಇದೆಲ್ಲಾ ಈಗ ಹೇಳುವುದು. ಅಮ್ಮನವರು ಇಸ್ಕೂಲಿಂದ ಬಂದ ಮೇಲೆ ಮತ್ತೆ ಸುದ್ದಿಯಿಲ್ಲ ನಿಮ್ಮದು.

ಮನೋಹರ—ನೋಡು ಇವತ್ತೇನು ಮಾಡುತ್ತೇನಂತ! (ಹೋಗಿಬಿಡುವನು)

ರಂಗ—ನಾನೆಲ್ಲಿಯೂ ನೋಡಲಿಲ್ಲಪ್ಪ ಇಂತಹ ಸಂಗತಿ! ಹೆಂಡ್ತಿ ಚಾಕರಿ ಗಂಡ ಮಾಡುವುದೆಂದರೆ? ಅಡಿಗೆ ಕೂಡಾ ಅವರೇ ಮಾಡಬೇಕಂದ್ರೆ? ಅವರೇನು ಮಾಡಿಯಾರು ಮತ್ತೆ ಪಾಪ! ನಾನಾಗಬೇಕಿತ್ತು, ನನಗೊಂದು ಇಂತಹ ಹೆಂಡ್ತಿ ಸಿಗಬೇಕಿತ್ತು, ಗುದ್ದಿ ಗುದ್ದಿಯೇ ಹದ್ದಿಗೆ ತರುತ್ತಿದ್ದೆ! ರಾಯರು ಪಾಪದವರು. (ಒಳಗೆ ಹೋಗುವನು.)

ಸುಸಮಯ! ಹಣ ಸಂಪಾದಿಸಿರಿ!!

ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.

ಮದರಿಂಡಿಯಾ ಬೆನಿಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್
ಮದರಿಂಡಿಯಾ ಬೆನೆಫಿಟ್ ಕಂಪೆನಿ,
ಹಂಪನ ಕಟ್ಟೆ, ಮಂಗಳೂರು.

WANTED

Candidates for Telegraph and station Master class. Allowance Rs. 28. Uniform, passage and quarter free. Service essential. Rules and Entrance from on annas eight. Director, Royal Telegraph and Ry. Duties College, Bombay 14.

WANTED

A Typist-Clerk: Decent salary. Apply sharp stating your qualifications.

New Era Technical School, UDIPI.

ಚಕ್ರಬಂಧ ಸ್ಪರ್ಧೆ
ನಂಬ್ರ ೫ರ ಉತ್ತರ



ಸರಿಯಾಗಿ ಬಿಡಿಸಿದವರು

1 ಯಂ. ಯೆ. ಸುಬ್ರಮಣ್ಯ ಭಟ್, ಉಡುಪಿ. 2 ತಾಲ್ಪಾಡಿ ಹೊಸಮನೆ ಪೊಡಿಯಬ್ಬ, ಕೋಟೆಕಾರ್. 3 ಪಿ. ಆರ್. ಚಂದ್ರ, ಪುತ್ತೂರು. 4 ಎಂ. ವಾಸುದೇವ ನಾಯಕ್, ಮಂಗಳೂರು. 5 ಕೆ. ಜೆ. ಅಮೀನ್, ಫ್ರೋರ್ಟ್ ಬೊಂಬಾಯಿ. 6 ಕೆ. ಟಿ. ಕರ್ಕೇರ, ಬೊಂಬಾಯಿ. 7. ಎಂ. ಆರ್.ಶೆಣೈ, ಮಂಗಳೂರು.

ಒಂದು ತಪ್ಪಾದವರು

1 ವಿ. ರಾಮಣ್ಣ ಶೆಟ್ಟಿ, ವಂಡ್ಸೆ. 2 ವಡೇರ ಹೋಬಳಿ ಅಣ್ಣಪ್ಪ ಶೆಟ್ಟಿ, ಕುಂದಾಪುರ. 3 ಎಚ್. ಜನಾರ್ಧನ ನಾಯಕ್, ಉಡುಪಿ. 4 ಜಿ. ರಾಮದಾಸ ನಾಯಕ್, ಮಂಗಳೂರು 5 ಕುಮಾರಿ ಗಿರಿಜಾ ರೈ ದೇಶಕೋಡಿಕಾರ್, ಸಂಪಾಜೆ, ಕೊಡಗು. 6 ಕೆ. ರಾಮಕೃಷ್ಣ ಕಾಮತ್, ಪಯ್ಯನೂರು. 7 ಸಂಪಾಜೆ ಮುಂಡಪ್ಪ ರೈ, ದೇಶಕೋಡಿಕಾರ್. 8 ಕೆ. ವಿಟ್ಠಲ ಉಪಾಧ್ಯ, ಉಡ್ಪಿ. 9 ಜಿ. ಎಸ್. ಭಟ್, ಕೆಕ್ಕಾರ್. 10 ಟಿ. ಸರ್ವೋತ್ತಮ ಪೈ, ಉಡ್ಪಿ. 11 ಕೆ. ಬಾಬು, ಹಂಪನಕಟ್ಟೆ. 12 ಕೆ. ಕರ್ನಾಡ್, ಮಂಗಳೂರು. 13 ಡಾಕ್ಟರ್, ಎನ್. ವಿ. ಉಪಾಧ್ಯಾಯ, ಮಂಗಳೂರು. 14 ಕೆ. ರಮಾನಾಥ ಪೈ, ಉಡ್ಪಿ, 15 ಯು. ನಾರಾಯಣ ಮಧ್ಯಸ್ಥ, ಉಪ್ಪೂರು. 16 ಬಿ. ನಾರಾಯಣ ರಾವ್, ಮೂಲ್ಕಿ. 17 ಉಡ್ಪಿ ಲಕ್ಷ್ಮೀ ನಾರಾಯಣ ಭಟ್, ಬೈಲಹೊಂಗಲ. 18 ಬಿ. ನಾರಾಯಣ ಹೆಗ್ಡೆ, ಯೇಣಗುಡ್ಡೆ. 19 ಎಚ್. ಕಮಲಾಕ್ಷ ಕಾಮತ್, ಹೊಸಂಗಡಿ. 20 ಮಲ್ಪೆ ಕೇಶವ ಭಟ್, ಉಡ್ಪಿ. 21 ಬಿ. ಎಂ. ನಾಯಕ್, ಹಾಲಾಡಿ. 22 ಬಿ. ಕೃಷ್ಣಪ್ಪ ಶೆಟ್ಟಿ, ತೆಕ್ಕಟ್ಟೆ. 23 ಶಿವಸಂಕಪ್ಪ ಶೆಟ್ಟಿ, ವಿಟ್ಲ. 24 ಬಿ. ರತ್ನಾಬಾಯಿ, ಉಡ್ಪಿ. 25 ಬಿ. ವೆಂಕಟ್ರಮಣಾಚಾರ್, ಬ್ರಹ್ಮಾವರ. 26 ಕೆ. ಪದ್ಮನಾಭ ಪ್ರಭು, ಮಂಗಳೂರು. 27 ಕೆ. ಶ್ರೀನಿವಾಸ ಹತ್ವಾರ, ತೆಕ್ಕಟ್ಟೆ. 28 ಕೆ. ನಾರಾಯಣ ಭಂಡಾರಿ, ಕಂಡ್ಲೂರು. 29 ಮೆನೇಜರ್, ದಿ ನೇಶನಲ್ ಕೆನರಾ ನ್ಯೂಸ್ ಏಜನ್ಸಿ, ಬೊಂಬಾಯಿ. 30 ಸುರತ್ಕಲ್ ರುಕ್ಕು ಬ್ಯಾ. 31 ಪಿ. ಭಾರತಿ ಬ್ಯಾ. 32 ಎ. ಕೃಷ್ಣ ಮೂರ್ತಿ, ಉಡ್ಪಿ.

ಎರಡು ತಪ್ಪಾದವರು

1. ದೇಜು ಎ. ಕಂಗ್ಯೆನ್, ಬೊಂಬಾಯಿ. 2 ಚಿನ್ನಮ್ಮ ಡಿ. ಕಂಗೆನ್, ಬೊಂಬಾಯಿ. 3 ದಾಮೋದರ ನಾಯಕ್. ಕಟಪಾಡಿ. 4 ಸತ್ಯರಾಜ ಎನ್. ಚಡಗರ್, ಬೈಂದೂರು. 5 ಎ. ರಾಮದಾಸ ಪೈ, ಉಡ್ಪಿ. 6 ಅನಂತ ಮಂಜುನಾಥ ಕಮ್ತಿ, ಬೊಂಬಾಯಿ. 7 ರಮಾನಾಥ ಶೆಣೈ ಬೊಂಬಾಯಿ. 8 ಎಂ. ಎಸ್. ಚಿನ್ನಪ್ಪ ಗೌಡ, ಗುತ್ತಿಗಾರ್.

ಮೂರು ತಪ್ಪಾದವರು

1 ರುಕ್ಮಿಣಿ ದೇವಿ, ತಿಬ್ರುಕರ್ಾರ್, ಬೊಂಬ್ಯಾ. 2 ಶಿರ್ವ ದುಗ್ಗಪ್ಪ ಹೆಗ್ಡೆ. 3 ಜನಾರ್ದನ ಪೈ, ಪುಂಜಾಲ್ ಕಟ್ಟೆ. 4 ಕೆ. ದಾಸ ಸೋಮ, ಬೊಂಬ್ಯಾ. 5 'ಮಂಗಳೂರು ಮಲ್ಲಿಗೆ' 6 ಎನ್. ಸಂಜೀವ ಶೆಟ್ಟಿ, ನಿಡ್ಡೋಡಿ.

ಸರಿಯಾಗಿ ಉತ್ತರವಿತ್ತವರೊಳಗೆ ಚೀಟಿ ಹಾಕಲಾಗಿ ಒಂದನೆ ಬಹುಮಾನವು ಎಂ. ಆರ್. ಶೆಣೈ, ಮಂಗಳೂರು, ಎರಡನೇ ಬಹುಮಾನವು ಕೆ. ಜೆ. ಅಮೀನ್, ಬೊಂಬ್ಯಾ, ಮೂರನೇ ಬಹುಮಾನವು ಎಂ. ವಾಸುದೇವ ನಾಯಕ್, ಮಂಗಳೂರು ಇವರಿಗೆ ಸಿಕ್ಕಿದೆ.

ವಿ. ಸೂ. ಬಿಡಿಸುಗರ ಸಂಖ್ಯೆಯು ಕಡಿಮೆಯಾದ್ದರಿಂದ ಇನಾಮನ್ನು ಈ ರೀತಿಕೊಡಲಾಗಿದೆ.

I ರೂ. **5**/- II ರೂ. **3**/- III ರೂ. **2**/-

ಬರುವ ವಾರ ಪ್ರಕಟವಾಗುವ
ನೂತನ ಒಗಟನ್ನು ಕಾದಿರಿ!

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಗಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —.— ಬೊಂಬಾಯಿ, ಮದ್ರಾಸು, ಕಲ್ಕತ್ತ

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**
೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರದಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.
ಪತ್ತೆ:—ಪಂಡಿತ್ ಎ. ವಿ. ಆರಮುವ್
ಚಿಕಾಕೋಲ್

ನಮ್ಮ ಜರಿ ಪೀತಾಂಬರ, ರೇಷ್ಮೆ ಮದಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು! ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಷ್ಮೆ ಮಾಲುಗಳ ಕೆಟಲಗು 1, ಕಾಶೀಸಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಷ್ಮೆ ಸೀರೆಗಳೂ, ಖಣ, ಮಡಿ ಕದಪಾಮ್ಡಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳ, ಧಾವಳಿ, ನಾಮರ್ದಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪದಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55 ಪದಲು ಸಾದಾ 16 ಮೊಳದ ಶೀರೆ 1ಕ್ಕೆ ರೂ. 16 ರಿಂದ ರೂ 35ರ ವರೆಗೆ, ಅರೆ ಕಡಮೆ 16 ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ 16 ಖಣ 1ಕ್ಕೆ ರೂ. 1½ ರಿಂದ ರೂ 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ



ಧರ್ಮಾರ್ಥ
ಬಹುಮಾನಗಳು
1-4-0ಗೆ !
—.— **ಯಾರಿಗೆ ?** —.—

ರೂಪಾಯಿ 1—4—0 ಕೊಟ್ಟು 14 ಪೀಸ ಒಟ್ಟೊರೋಸ್ಟ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3 ಡಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೆಟಾಯಂ ಡಮ್ಮಿ ಪಾಕೆಟ್‌ವಾಚು; 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಸ್, 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್; 1 ಜತೆ ಗುಬ್ಬಿಗಳು, 1 ಫೌಂಟನ್ ಪೆನ 11 ಕ್ಯಾರಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0 ಇಂದೇ ಆರ್ಡರುಕೊಡಿರಿ

Bengal Watch Co.,
Post Box No. 12214, CALCUTTA

ಕಿರಿಯರ ಪ್ರಪಂಚದ
ಪುಸ್ತಕಗಳು.

೧	ನಾಡಕಥೆ ...	೦	೨	೦
೨	ಮುಂದಿನ ದೇವರು ...	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ ...	೦	೬	೦
೬	ಕಾವ್ಯಸಾಮ್ರಾಜ್ಯ ..	೦	೧೨	೦
೭	ಮಧುವನ	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು
ದೊರೆಯದೆ ಪೇಚಾಡುವಿರೇಕೆ?

ಇನ್ಸೂರೆನ್ಸ್ ಕಂಪನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

WANTED

Influential agents to canvass Subscribers and to get advertisements for 'Navayuga' throughout Karnataka on pay or commission basis.

For particulars apply to—

The Manager,
Navayuga, Udipi.

ಅಖಿಲ ಕನ್ನಡ ನಾಡಿಗೆ
ಪ್ರೀತಿಯಾಗಿರುವ

ಮಾಸ] **ಕಥಾಕುಂಜ** [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲಾಯಿಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೋಸ್‌ಫೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| ಸುಮತಿಬಾಯಿ,

ಬಿ. ಎ. ಎಲ್. ಟಿ., ಎಫ್. ಪಿ. ಎಚ್. ಎಸ್., ಭಿಷಗ್ರತ್ನ, ರಿಜಿಸ್ಟ್ರಾರ್.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್

ಕೊಲೆರಾ ರೋಗಕ್ಕೆ ರಾಮಬಾಣ ಔಷಧ.

೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

The Coondapoor Bank, Ltd.,

Head Office:- **Coondapoor.** Branch Office:-**Brahmavar.**

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ.ಶೆ 4, ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ 4

6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5%,

1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5½%

2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತವೆ. ಪಾಲುಗಳು ದೊರೆಯುತ್ತವೆ, ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್.

N. Sheshagiri Rao, ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,

ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ

ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೩೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ

ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವವಕ್ಕೆ ಒಂದು ಗಂಟೆ ಮಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ— ಭವಾನಿ ಅಂಡ್ ಕಂಪೆನಿ,

ಪೋಸ್ಟು ಬಾಕ್ಸ ನಂ. 237, ಜೆ. ಟಿ. ಮದರಾಸ್.

ಶಾಲಾ ವಿದ್ಯಾರ್ಥಿಗಳಿಗೆ

ಎಕ್ಸರ್‌ಸೈಸ್

ಡ್ರಾಯಿಂಗ್

ಮೇಪ್ ಡ್ರಾಯಿಂಗ್

ಕೋಪಿ

ರಫ್

ಪುಸ್ತಕಗಳು ನಮ್ಮಲ್ಲಿ

ಯೋಗ್ಯ ಕ್ರಯಕ್ಕೆ

ದೊರೆಯುತ್ತವೆ.

ಅತ್ಯಪೂರ್ವ ಸುಸಂಧಿ

ಈಗಲೇ

ಬಂದಿರುವ

ಹೊಸ

ಮಾದರಿಯ

ಉತ್ತಮ ತರದ

ಫೌಂಟನ್ ಪೆನ್‌ಗಳು

ಮಾರಾಟಕ್ಕಿವೆ.

ತುಳುನಾಡ್ ಛಾಪಖಾನೆ, ಉಡುಪಿ

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು---ಒಂದಾಣೆ

NAVAYUGA
A Nationalist Kanarese, Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc.
APPLY TO THE MANAGER

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL. XVI-NO. 38 | 27-5-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,'
ಬನದ ನಾಡೊಳು ಮೊಳಗುತಿಡೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೨೭ ಮೇ, ೧೯೩೭ [ಸಂಚಿಕೆ ೩೮

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I.)

BRANCHES:

1 BANGALORE CITY
2 BELGAUM
3 BYADGI
4 BELLARY
5 ADONI
6 HOSPET
7 TALIPARAMBA
8 UPPINANGADI
9 KASARGODE
10 PAYYANUR
11 KANHANGAD
12 KARKALA
13 NANDYAL
14 PRODATTUR
15 TADPATRI
16 HUBLI
17 GADAG
18 KARWAR
19 KUMTA
20 ANKOLA
21 HONAVAR
22 BHATKAL
23 BRAHMAVAR
24 HUNGARCUTTA
25 SIRSI
26 SAGAR
27 COONDAPOOR
28 UDIPI
29 MANGALORE
30 CANNANORE

BEG TO ANNOUNCE

that the Syndicate has been included in the list of Scheduled Banks under the Reserve Bank of India Act.

Non-Scheduled Banks, other companies and company promoters may take advantage of this for depositing their amounts with the Syndicate under the Indian Companies Act 1936.

Paid up Capital	Rs. 3,45,580
Reserves	„ 19,2,390
Deposits exceed	„ 22 lakhs
Total Working Funds exceed	„ **40lakhs**

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಮು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪುಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು:—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ:
ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... ...	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚಾರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,
ಬೆಂಗಳೂರು ನಗರ.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು

ಗುಣ ಬಾರದಿದ್ದರೆ **ಸ್ತ್ರೀಧರ್ಮ ಸಂಜೀವಿನೀ ಚೂರ್ಣ** (ರಿಜಿಸ್ಟರ್ಡ) **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಷೇಶ ದೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ.ಖ. ಆಣೆ, ೮ ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ. ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು। ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

The Combined Booking Agency

AND

The Joint Booking Office

MANGALORE, SOUTH KANARA.

— ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ —

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ—ಚಾರ್ಮಾಡಿ — ಕಾರ್ಕಳ

ಉಜಿರೆ, (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ) — ಉಡುಪಿ

ಮಂಗಳೂರು — ಕುಂದಾಪುರ

ಪುತ್ತೂರು — ಮೂಡಬಿದ್ರೆ

ಮೂಲ್ಕಿ — ಗಂಗೊಳ್ಳಿ

ಜಿಲ್ಲೆಯ ಹೊರಗೆ—

ಮಡಿಕೇರಿ, ಮೈಸೂರು, ಸಕಲೇಶಪುರ, ಚಿಕ್ಕಮಗಳೂರು, ಮೂಡಗೆರೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿ ಗೃಹಗಳು ನಿರ್ಮಿಸಲ್ಪಡುವುವು. ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜ್ಯೊಂಟ್ ಮೆನೇಜರರಿಗೆ ತಿಳಿಸಿರಿ.

ಕನ್ನಡ ಭಾಷಾಪಾಠಗಳು.

ಮೆಕ್ಮಿಲನರ ಕನ್ನಡ ಪುಸ್ತಕಾವಳಿ

ಸುಪ್ರಸಿದ್ಧವಾಗಿರುವ ಈ ಗ್ರಂಥಮಾಲೆಯನ್ನು ಈಗ ಮಕ್ಕಳ ವಯೋಧರ್ಮ, ಮನೋಧರ್ಮಗಳಿಗೆ ಅನುಸರಿಸಿ ಸಿಲೆಬಸಿನ ಎಲ್ಲ ಅಂಗಗಳನ್ನು ಒಳಗೊಂಡು, ಪದ್ಯಗಳನ್ನೂ ಸೇರಿಸಿ, ಯಾವತ್ತು ಬಗೆಯ ಅಭ್ಯಾಸಗಳನ್ನೂ ಸೂಚಿಸಿ, ವ್ಯಾಕರಣ ಮತ್ತು ಪ್ರಬಂಧರಚನೆಗೂ ಅನುಕೂಲವೂ ಉಪಯುಕ್ತವೂ ಆಗುವಂತೆ ತಿದ್ದಿ ರಚಿಸಲಾಗಿದೆ

ಶಿಕ್ಷಣವು ಅತ್ಯಾಧುನಿಕ ರೀತಿಗೆ ಒಪ್ಪುವಂತೆ ಬರೆದ ಪುಸ್ತಕಗಳು:
ಶ್ರೀಯುತರು ಕೆ ಶ್ರೀನಿವಾಸ ಕಿಣಿ, ಬಿ ಎ., ಎಲ್. ಟಿ,
ಎಮ್. ಎನ್ ಕಾಮತ್, ಉಗ್ರಾಣ ಮಂಗೇಶರಾವ್
ಮೊದಲಾದವರಿಂದರಚಿತವಾದವು

ಈಗಲೆ ಅಚ್ಚಾಗಿ ಪ್ರಕಟವಾದುದು!

ಬಾಲಶಿಕ್ಷೆ

ಮೊದಲನೆ ದರ್ಜೆಯ ಮಕ್ಕಳಿಗೆ ಇಷ್ಟು ಮೋಹಕರವಾದ ಮತ್ತು ಸಂಪೂರ್ಣ ಸುಲಭರೀತಿಯಿಂದ ಕನ್ನಡವನ್ನು ಓದಲೂ, ಬರೆಯಲೂ, ಸಂಭಾಷಣೆ ನಡಿಸಲೂ ಅತ್ಯುಪಯುಕ್ತವಾದ ಮತ್ತೊಂದು ಪುಸ್ತಕವೇ ಇಲ್ಲ

ಶ್ರೀ. ಕೆ. ಶ್ರೀನಿವಾಸ ಕಿಣಿ. ಬಿ ಎ, ಎಲ್ ಟಿ.
ಶ್ರೀ ಎಮ್ ಎನ್. ಕಾಮತ್—ಇವರಿಂದ

ಒಂದು ವರ್ಷದಲ್ಲಿ ಕನ್ನಡ ಭಾಷೆಯ ಮತ್ತು ಲಿಪಿಯ ಮೂಲ ಪರಿಜ್ಞಾನವು ಅತ್ಯಾಧುನಿಕ ರೀತಿಯಲ್ಲಿ ಮಕ್ಕಳಿಗೆ ದೊರೆವುದು

ಬಾಲಶಿಕ್ಷೆ	ಕ್ರಯ 2 ಆಣೆ
ಮೊದಲನೆ ಪುಸ್ತಕ	,, 2 ,,
ಎರಡನೆ ,,	,, 3 ,,
ಮೂರನೆ ,,	,, 4 ,,
ನಾಲ್ಕನೆ ,,	,, 5 ,,
ಐದನೆ ,	,, 6 ,,
ಆರನೆ ,,	,, 7 ,,
ಏಳನೆ ,,	,, 8 ,,

ನೂತನ ಸಾಮಾನ್ಯ ವಿಜ್ಞಾನ ಪಾಠಗಳು.

1ನೆಯಿಂದ 6ನೆ ತರಗತಿಯ ವರೆಗೆ, ಎಳೆಯ ಮಕ್ಕಳಿಗೆ ತಿಳಿಯುವ ಹಾಗೆ ಸಿಲೆಬಸಿನಲ್ಲಿರುವ ಯಾವತ್ತು ವಿಷಯಗಳನ್ನು ತುಂಬಾ ಚಿತ್ರಮಯವಾಗಿ ಕಥಾ ರೂಪದಲ್ಲಿ ವಿವರಿಸಿ ಸುಲಭ ಮಾತಿನಲ್ಲಿ ಬರೆಯಲಾಗಿದೆ

ಮೊದಲನೆ ಪುಸ್ತಕ	2ನೆ ದರ್ಜೆಗೆ	ಕ್ರಯ 3 ಆಣೆ
ಎರಡನೆ ,,	3ನೆ ,,	, 3 ,,
ಮೂರನೆ ,,	4ನೆ ,,	,, 5 ,,
ನಾಲ್ಕನೆ ,,	6ನೆ ,,	,, 6 ,,

ದೇಹದ ಅಂಗಾಂಗಗಳ ಮೊದೆಲ್‌ಗಳೂ, ಚಿತ್ರಪಟಗಳೂ, ಮೃಗ ವೃಕ್ಷಾದಿಗಳ ಚಿತ್ರಗಳೂ ಸಿಗುವುವು

ಗಣಿತ ಪುಸ್ತಕಗಳು

ಗಣಿತಶಾಸ್ತ್ರವನ್ನು ಆಟದಂತೆ ಪ್ರತ್ಯಕ್ಷ ಬೋಧಿಸಲು ಅತ್ಯುಪಯುಕ್ತವಾಗಿರುವ ಸಚಿತ್ರ ಪುಸ್ತಕಗಳು

ಬಾಲಗಣಿತ	1ನೆ ದರ್ಜೆಯದು	ಕ್ರಯ 3 ಆಣೆ 6ಪೈ
,,	2ನೆ ,,	,, 5 ,,
,,	3ನೆ ,,	,, 7 ,, 6 ,,
,,	4ನೆ ,,	,, 8 ,, 6 ,,
,,	5ನೆ ,,	, 11 ,, 6 ,,

ಭೂಗೋಲ ಶಾಸ್ತ್ರ

ಭೂವಿವರಣೆ ಮೊದಲನೆಯ ಪುಸ್ತಕ	ಕ್ರಯ 2 ಆಣೆ 6 ಪೈ
,, ಎರಡನೆಯ ,,	,, 3 ,, 6 ,,

ಚಿತ್ರಮಯ ದಕ್ಷಿಣ ಕನ್ನಡ ಶ್ರೀ ಕಾರಾಂತರಿಂದ ನೂರಾರು ಚಿತ್ರಗಳಿಂದ ಭೂಗೋಲ ಬೋಧನೆ ಕ್ರಯ 5 ಆಣೆ 6 ಪೈ.

ದಕ್ಷಿಣ ಕನ್ನಡ ಜಿಲ್ಲೆಯ ಭೂಗೋಲ

ಶ್ರೀ. ಯು. ಭವಾನಿಶಂಕರರಾಯರಿಂದ

ಅತ್ಯಾಧುನಿಕ ರೀತಿಯಲ್ಲಿ ಜನಜೀವನಕ್ಕೂ ಭೂಗೋಲ ಶಾಸ್ತ್ರಕ್ಕೂ ಇರುವ ಸಂಬಂಧದ ಮೂಲಕ ಫೊಟೋ ಚಿತ್ರಗಳೊಡನೆ ಜಿಲ್ಲಾ ಭೂಗೋಳವನ್ನು ಮನೋರಂಜಕ ರೀತಿಯಲ್ಲಿ ಬರೆದ ಪುಸ್ತಕ. ಕ್ರಯ 5 ಆಣೆ 6ಪೈ

ಕನ್ನಡ ಇಂಗ್ಲೀಷ ಗೋಳಗಳು, ನಕ್ಷೆಗಳು, ಜನಜೀವನ ಚಿತ್ರಗಳು, ವೇಪ್ ಬುಕ್, ಎಟ್ಲಾಸ್ ಎಲ್ಲವೂ ದೊರೆಯುತ್ತವೆ

ಕನ್ನಡ ಪದ್ಯ ಪುಸ್ತಕಗಳು.

ಸರ್ವ ಉಪಾಧ್ಯಾಯರಿಗೂ ಸುಪರಿಚಿತವಾದವು

ಮೊದಲನೆಯ ಪದ್ಯ ಪುಸ್ತಕ	ಕ್ರಯ 2 ಆಣೆ 6 ಪೈ
ಎರಡನೆಯ ,, ,,	,, 3 ,, 6 ಪೈ
ಮೂರನೆಯ ,, ,,	,, 6 ,,

ಮೆಕ್ಮಿಲನರ ಪುಸ್ತಕಾವಳಿಯ ಹಸ್ತಕಗಳು

ಭಾಷಾಜ್ಞಾನವು ನೂತನ ಪ್ರತ್ಯಕ್ಷಪ್ರಯೋಗದಿಂದ ಉಂಟಾಗುವಂತ ನೂತನ ವಿಧಾನದಿಂದ ಬರೆದುವು ಸುಮ್ಮನೆ ಶಬ್ದಾರ್ಥ ಮಾತ್ರವಲ್ಲ.

ಎರಡನೆ ಪುಸ್ತಕದ ಹಸ್ತಕ ಕ್ರಯ 2 ಆ. ನಾಲ್ಕನೆ ಪುಸ್ತಕ ಹಸ್ತಕ ಕ್ರಯ 2ಆ 6ಪೈ
ಮೂರನೆ ,, ,, ,, 2 ಆ 6ಪೈ ಐದನೆ ,, ,, ,, 3ಆ
ಆರನೆ ಮತ್ತು ಏಳನೆ ಪುಸ್ತಕದ ಹಸ್ತಕ ಕ್ರಯ 3ಆ. 6ಪೈ.

ಉಪಾಧ್ಯಾಯರು ಮಕ್ಕಳಿಗೆ ಕಲಿಸುವದೇನು? ಮಕ್ಕಳು ಪಾಠಕಲಿವಾಗ ಬರೆದುಕೊಳ್ಳುವುದೇನು? ಎಲ್ಲವೂ ಈ ಹಸ್ತಕಗಳಲ್ಲಿದೆ

ಕನ್ನಡ ವ್ಯಾಕರಣ ಪಾಠಗಳು

ಎಷ್ಟೋ ಪ್ರಸಿದ್ಧಿಗೆ ಬಂದಿರುವ ಈ ಪುಸ್ತಕಗಳ ಪುನರ್ಮುದ್ರಣ,
ಕನ್ನಡ ಮೂಲವ್ಯಾಕರಣ ಕ್ರಯ 3 ಆಣೆ ಕನ್ನಡ ಬಾಲವ್ಯಾಕರಣ ಕ್ರಯ 3ಆ 3ಪೈ
ಕನ್ನಡ ಶಾಲಾವ್ಯಾಕರಣ ಕ್ರಯ 6ಆಣೆ

ತಿದ್ದಿದ ಸಿಲೆಬಸಿಗೆ ಸರಿಯಾಗಿ ಇವಲ್ಲದ ಬೇರೆ ವ್ಯಾಕರಣ ಪುಸ್ತಕಗಳಿಲ್ಲ.

ಕನ್ನಡ ಕದೆಯ ಪುಸ್ತಕಗಳು

ಭಾಷಾಜ್ಞಾನವು ಕಥಾರೂಪವಾಗಿ ಉಲ್ಲಾಸದಿಂದ ಮಕ್ಕಳಲ್ಲಿ ಹುಟ್ಟುವಂತೆ ತಿದ್ದಿದ ಸಿಲೆಬಸಿಗೆ ತಕ್ಕಂತ ಬರೆಯಿಸಿ, ಸಚಿತ್ರವಾಗಿ ಮುದ್ರಿತವಾದುವು.

ಗುಬ್ಬೀರಾಯನ ಕ್ರಯ ರೂ 0 0 6. ಪಾಪೂಸಿನ ಪಚೀತಿ ಕ್ರಯ ರೂ. 0 0 6
ಗಡ್ಡದ ಅಜ್ಜಯ್ಯ ಕ್ರಯ ರೂ 0 1 6 ಸಿಂಡ್ರೆಲ್ಲ 3ನೇ ದರ್ಜೆಗೆ ಕ್ರಯ ರೂ 0 1 6.
ಕೆಂಚಮ್ಮ ಕ್ರಯ ರೂ 0 1 6 ಕಾಗೆಯೂ ಗುಬ್ಬಿಯೂ 1ನೇ ದರ್ಜೆ ,, ,, 0 2 3.
ಆಲಿಬಾಬನ ಕಥ. ಕ್ರಯ ರೂ 0 2 3. ಮೌರ್ಯ ಸಿಂಹಾಸನ ಕ್ರಯ ರೂ 0 4 0.
ಸಂಯೋಗಿತೆ ಕ್ರಯ ರೂ 0 6 0. ಐತಿಹಾಸಿಕ ಕಥಾವಳಿ (ಸುವಾಸಿನಿಯ ಸಂಗ್ರಹ) ಕ್ರಯ ರೂ. 1 6 0

ಸಚಿತ್ರ ಚರಿತ್ರೆ ಪುಸ್ತಕಗಳು

ಸಚಿತ್ರ ಚರಿತ್ರೆ	Iನ ದರ್ಜೆ.	ಕ್ರಯ 2 ಆಣೆ
	IIನೆ ,,	,, 2 ,,
	IIIನೆ ,,	,, 3 ,,
	IVನೆ ,	,, 4 ,, 6 ಪೈ
	Vನ ,,	, 5 ,,
	VIನೆ ,,	,, 6 ,
	VIIನೆ ,,	, 4 ,,

ಸಿಲೆಬಸಿಗೆ ಸರಿಯಾಗಿವೆ, ಸುಲಭ ಶೈಲಿ, ಮನಮೋಹಕ ರೀತಿ
ಸಚಿತ್ರವಾಗಿವೆ ಸಂಪೂರ್ಣವಾಗಿವೆ

ಇಂಗ್ಲಿಷು ಮತ್ತು ಕನ್ನಡ

ಮಿತ್ರಾ ಕೋಪಿ ಪುಸ್ತಕಗಳು

ಎಲ್ಲ ತರಗತಿಗಳಿಗೂ ಅಗತ್ಯ ಬೇಕಾದುವು.

English Readers

NFW ERA READERS

I Primer	As- 5
II Primer	,, 6
Book I	,, 8
,, II	,, 10
,, III	,, 12

ನಮ್ಮ ಜಿಲ್ಲೆಯ ಹವಾಗುಣಕ್ಕೆ ಸರಿಯಾಗುವಂತೆ, ತಯಾರಿಸಿ ತರಿಸಲಾದ ಎಲ್ಲ ಬಗೆಯ ಲೇಖನ ಸಾಮಗ್ರಿಗಳು

ಗಣಿತಶಾಸ್ತ್ರ ಬೋಧನೆಗೆ ಬೇಕಾದ ಉತ್ತಮೋಪಕರಣಗಳು ಚಿತ್ರಲೇಖನಕ್ಕೆ ಬೇಕಾಗಿರುವ ಬಣ್ಣಗಳೂ, ಪೆನ್ಸಿಲುಗಳೂ ಇತ್ಯಾದಿ,

ಮಿತ್ರ ಎಕ್ಸರ್‌ಸೈಜ್ ಮತ್ತು ನೋಟ್ ಬುಕ್ಕುಗಳು ಉತ್ತಮ. ಕಾಗದ— ಕಡಿಮೆ ಬೆಲೆ

ಗೀಟುಳ್ಳ ಮತ್ತು ಇಲ್ಲದ. ಬೇಕುಬೇಕಾದ ಸೈಜಿನವು.

ಮೇಲಿನ ಪುಸ್ತಕಗಳು

ನವಭಾರತ ಬುಕ್ ಡಿಪೋ, ಚರ್ಚ್‌ರೋಡ್, ಉಡುಪಿ ಇಲ್ಲಿಯೂ ದೊರೆಯುತ್ತವೆ.

ರಷ್ಯದ ನೂತನ ನಿರ್ಮಾಣ

ಅತ್ಯಂತ ಸ್ವಾಭಾವಿಕ ಸ್ತ್ರೀ-ಪುರುಷ ಸಂಬಂಧ

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿ ಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.] —ಸಂ. ನ.

ರಷ್ಯದ ಸ್ತ್ರೀಪುರುಷ ಸಂಬಂಧವನ್ನು ನಿಯಮಿತಗೊಳಿಸುವ ಪದ್ಧತಿಗಳಲ್ಲಿ ಯಾವ ತರದ ನಿಷೇಧ, ನಿರ್ಬಂಧ, ಸಂಶಯ ಭೀತಿಯಾಗಲಿ ಇರುವುದಿಲ್ಲ. ಸ್ತ್ರೀಪುರುಷ ಸಂಬಂಧ ವಿಷಯವಾದ ಭಾಷಣಗಳಲ್ಲಿ ಎಂತಹ ರಹಸ್ಯ ಸಂಗತಿಯಾದರೂ ಮುಚ್ಚುಮರೆಯಿಲ್ಲದೆ ಚರ್ಚಿಸಲ್ಪಡುವುದು. ಇದರಲ್ಲಿ ಸ್ತ್ರೀಪುರುಷರಿಬ್ಬರೂ ಭಾಗ ವಹಿಸುವರು. ಆಗಾಗ, ಜನನೇಂದ್ರಿಯ ರೋಗಗಳ ಹಾನಿಯನ್ನು ಮನಗಾಣಿಸುವುದಕ್ಕಾಗಿ ಯಾವುದಾದರೊಂದು ಸಂಘವು, ತನ್ನ ಹೆಂಡತಿಗೆ ರೋಗವಿತ್ತವನೆನಿಸುವ ಗಂಡನ ವಿಚಾರಣೆಯ ನಕಲಿ ಪ್ರದರ್ಶನ ನಡಿಸುವುದು. ಈ ಸಂದರ್ಭದಲ್ಲಿ ಸಾಕ್ಷಿಗಾರರು, ಡಾಕ್ಟರರು, ನರ್ಸುಗಳೇ ಮೊದಲಾದವರು ಜನನೇಂದ್ರಿಯಗಳ ರಚನೆ, ಅವುಗಳಿಗೆ ರೋಗ ತಗಲುವ ರೀತಿಯ ಕುರಿತೆಲ್ಲಾ ಸರ್ವಸಂಗತಿಗಳನ್ನೂ ಪಂಜರಿಯಲ್ಲಿ ನಿಂತು ಸ್ಪಷ್ಟವಾಗಿ ಇನ್ನಿಕ್ಕಿದ್ದಂತೆ ವಿವರಿಸಿ ಹೇಳುವರು. ಇದನ್ನು ನೋಡುವುದಕ್ಕೂ ಗಂಡಸರಂತೆಯೇ ಹೆಂಗಸರೂ ನೆರೆದು ಬರುವರು. ರೈಲ್ವೆ ಕಂಪಾರ್ಟ್‌ಮೆಂಟಿನ ಮಲಗುವ ಕೋಣೆಯ ಟಿಕೇಟು ತೆಗೆದುಕೊಂಡರೆ ನಿಮ್ಮ ಪಕ್ಕದ ಸಂಗಾತಿಯು ಸ್ತ್ರೀಯೋ ಪುರುಷನೋ ಎಂದು ಹೇಳಬರುವುದಿಲ್ಲ. ನಾನು ಪ್ರಥಮ ಸಲ ರಷ್ಯಕ್ಕೆ ಹೋಗಿದ್ದಾಗ ನನ್ನ ಮಲಗುವ ಕೋಣೆಯಲ್ಲಿ ನನ್ನ ಸಂಗಾತಿಯಾಗಿ ಸ್ತ್ರೀಯೊಬ್ಬಳು ಇರುವುದನ್ನು ಕಂಡು ಆಶ್ಚರ್ಯಗೊಂಡು ಏನೋ ತಪ್ಪಾಗಿರಬೇಕೆಂದು ನೆನೆಸಿ ಅದನ್ನು ಸರಿಪಡಿಸಲು ಕಂಡಕ್ಟರನ ಸಹಾಯ ಕೇಳಿದೆ. ಆದರೆ ಕಂಡಕ್ಟರನು ನನ್ನನ್ನೊಮ್ಮೆ ಕಣ್ಣು ಬಿಟ್ಟು ಕರುಣೆಯಿಂದೆಂಬಂತೆ ನೋಡಿ, "ಅದರಲ್ಲೇನು? ನಿಮ್ಮಂತೆಯೇ ಸ್ತ್ರೀಯೊಬ್ಬಳೂ ಟಿಕೇಟು ಪಡಕೊಂಡಿರುವುದರಿಂದ ಅವಳಲ್ಲಿಯೇ ಮಲಗಬೇಕು" ಎಂದು ಹೇಳಿ ನಡೆದು ಬಿಟ್ಟ. ಸಂಜೆ ಪುನಃ ನಾನವನನ್ನು ಸಂಧಿಸಿದೆ. ಅವನು ನಾನು ಯಾವ ದೇಶದವನೆಂದು ಕೇಳಿದ. ನಾನು ಅಮೇರಿಕದವನೆಂದೆ. ಅಮೇರಿಕದಲ್ಲಿ ಗಂಡಸರು ಅಪರಿಚಿತ ಸ್ತ್ರೀಯರೆಂದರೆ ಹೆದರಿ ಬಿಡುವರೋ? ಎಂದು ಪ್ರಶ್ನಿಸಿ ತಮಾಷೆಮಾಡಿದ.

ರಷ್ಯದಲ್ಲಿ ಸ್ತ್ರೀಪುರುಷರು, ಅವರು ತರುಣರಿರಲಿ, ಪ್ರಾಯದವರಿರಲಿ, ವಿವಾಹಿತರಿರಲಿ, ಅವಿವಾಹಿತರಿರಲಿ, ಒಬ್ಬರನ್ನೊಬ್ಬರು ಸ್ವಾಭಾವಿಕವಾಗಿ ಹೋಗಿ ಕಂಡು ಮಾತಾಡುವುದು ಯುಕ್ತವೇ ಆಗಿರುವುದು. ಅದಕ್ಕೊಂದು ಸಮಯ ಸ್ಥಳವೆಂಬ ನಿಯಮವೇನೂ ಇಲ್ಲ. ಹಗಲಲ್ಲಾಗಲಿ ರಾತ್ರಿಯಲ್ಲಾಗಲಿ, ಯಾವ ಸಮಯದಲ್ಲೇ ಆಗಲಿ, ಖಾಸಗಿ ಕೋಣೆಯಲ್ಲಾಗಲಿ, ಮನೆ ಹೋಟೆಲುಗಳಲ್ಲಾಗಲಿ, ಸ್ತ್ರೀಪುರುಷರು ಒಬ್ಬರೊಬ್ಬರನ್ನು ಸಂದರ್ಶಿಸಿದರೆ ಅದರಲ್ಲಿ ಔಚಿತ್ಯವೇನೂ ಇಲ್ಲ ಮಾತ್ರವಲ್ಲದೆ ಅದು ಉಚಿತವೇ ಆಗಿದೆ. ರಷ್ಯದ ಹುಡುಗಿಯರು, ಒಂದಿಷ್ಟು ಸಂಕೋಚವಿಲ್ಲದೆ, ಕ್ಲಾಸ್ ರೂಮ್, ನಾಟಕ ಶಾಲೆ ಅಥವಾ ಇನ್ನಾವ ಸಾರ್ವಜನಿಕ ಸ್ಥಳಗಳಿಗೆ ಹೋಗುವಂತೆಯೇ ಗಂಡಸರ ಕೋಣೆಗಳಿಗೆ ಹೋಗಿ ಮಾತುಕತೆ ನಡೆಸುವರು. ಅದು ಅಯುಕ್ತವಾದುದು, ಅದರಿಂದಾಗಿ ತಮ್ಮ ಮೇಲೆ ಸಂದೇಹವುಂಟಾಗಬಹುದು, ತಾವು ನಿಂದೆಗೀಡಾಗಬಹುದೆಂಬ ಯೋಚನೆಯನ್ನೇ ಅವರು ಎಂದಿಗೂ ಕಟ್ಟಿಕೊಳ್ಳುವುದಿಲ್ಲ. ವಿಶ್ವವಿದ್ಯಾಲಯಗಳಲ್ಲಿ ಸ್ತ್ರೀಪುರುಷ ವಿದ್ಯಾರ್ಥಿಗಳು ಒಂದೇ ಕಟ್ಟಡದ ಬೇರೆ ಬೇರೆ ಕೋಣೆಗಳಲ್ಲಿ ವಾಸಿಸುವರು. ಆದರೆ ಅವರು ಗಂಡಸರಂತೆಯೇ ಒಬ್ಬರೊಬ್ಬರ ಕೋಣೆಗೆ ಹೋಗಿ ಒಟ್ಟಿಗೆ ವ್ಯಾಸಂಗ ಮಾಡುವರು. ಕಾಫಿ ಕುಡಿಯುವರು, ಜೀವನದ ಸಮಸ್ಯೆಗಳನ್ನು ಚರ್ಚಿಸುವರು, ರಾಜಕೀಯ ವಿಷಯಗಳ ಕುರಿತು ವಾದ ನಡಿಸುವರು. ನಾನು ರಷ್ಯದ ತರುಣರ ಹಲವು ಸಂಘ, ಸಭೆ, ಕ್ಲಬ್ಬು, ವಿಶ್ವವಿದ್ಯಾಲಯಗಳಿಗೆಲ್ಲಾ ಹೋಗಿ ನೋಡಿರುವೆನು. ಅಲ್ಲಿ ಸ್ತ್ರೀಪುರುಷರು ಯಾವ ಸಂದರ್ಭದಲ್ಲಾದರೂ ಸರಿಸಮಾನತೆಯಿಂದ ಯಾವ ಶಂಕೆ ಸಂಕೋಚವೂ ಇಲ್ಲದೆ ಹೊಕ್ಕು ಬಳೆದು ಅತ್ಯಂತ ಸ್ವಾಭಾವಿಕ ಸಂಬಂಧವುಳ್ಳವರಾಗಿರುವರು.

ರಷ್ಯದಲ್ಲಿ ಮೊದಲಿಂದಲೂ ಸ್ತ್ರೀಯರು ಶೀಲವತಿಯರಾಗಿರಬೇಕಾದರೆ ಅವರು ಸದಾ ಮನೆಯೊಳಗೆ ಪಂಜರ ಗಿಳಿಗಳಂತಿರಬೇಕೆಂಬ ಪದ್ಧತಿಯಿರಲಿಲ್ಲ. ಪೀಟರ್ ದಿ ಗ್ರೇಟ್ ಎಂಬ ರಷ್ಯದ ಪ್ರಖ್ಯಾತ ಅರಸನೊಬ್ಬರು ಸ್ತ್ರೀಯರನ್ನು ಮನೆಯ ಬಾಗಿಲೊಳಗಣ ಬಂಧನದಿಂದ ಹೊರಗೆಳೆದು ಸ್ವಾತಂತ್ರ್ಯವಿತ್ತಿರುವರು. ಅಂದಿನಿಂದ ರಷ್ಯದಲ್ಲಿ ಸ್ತ್ರೀಯು, ಪುರುಷನ ಅಧೀನದಲ್ಲಿದ್ದು ಅವನು ಹೇಳಿದಂತೆ ನಡೆಯಬೇಕಾಗಿದ್ದರೂ ಹೊಕ್ಕು ಬಳಕೆಯ ವಿಷಯದಲ್ಲಿ ಸ್ವತಂತ್ರ ಪಡೆದಳು. ರಷ್ಯದ ಒಕ್ಕಲಿಗರಲ್ಲಂತೂ ಸ್ತ್ರೀಪುರುಷ ಸಂಬಂಧವು ಅತಿಸರಳ ಹಾಗೂ ಸ್ವಾಭಾವಿಕವಾಗಿದ್ದಿತು. ಸ್ತ್ರೀಯರ ಮೇಲೆ ಯಾವತರದ ನಿಷೇಧನಿರ್ಬಂಧಗಳೂ ಇರಲಿಲ್ಲ. ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಅವರೆಲ್ಲಾ ಒಂದೇ ಗುಡಿಸಲೊಳಗೆ ಮಲಗುತ್ತಿದ್ದರು. ಹೊಲಗಳಲ್ಲಿ ಒಟ್ಟೊಟ್ಟಿಗೆ ಕೆಲಸ ಮಾಡುತ್ತಿದ್ದರು. ಈಗಲೂ ರಷ್ಯದ ಕೆಲವು ಕಡೆಗಳಲ್ಲಿ ಸೆಕೆಕಾಲದಲ್ಲಿ ಸ್ತ್ರೀಪುರುಷರು ಒಟ್ಟಿಗೆ ತಮ್ಮ ಕುದುರೆಗಳನ್ನು ಹುಲ್ಲುಗಾವಲುಗಳಿಗೊಯ್ದು ಅಲ್ಲಿ ಬಯಲಲ್ಲಿ ಒಟ್ಟಿಗೆ ಜೀವಿಸುವರು, ಒಟ್ಟಿಗೆ ಮಲಗುವರು. ನಾನು 1934ನೇ ಸೆಕೆಕಾಲದಲ್ಲಿ ಕ್ಯೂಬಿನ್ ಎಂಬಲ್ಲಿಯ ಕೊಸಕ್ ಸೆಟ್ಲ್‌ಮೆಂಟಿಗೆ ಹೋಗಿದ್ದಾಗ, ಅಲ್ಲಿಯ ತರುಣರು ಪೂರ್ವದ ಪದ್ಧತಿಯನ್ನೇ ಅನುಸರಿಸಿ, ಆಗಾಗ ದೀರ್ಘ ಸಮಯದ ವರೆಗೆ ಹುಡುಗಿಯರೊಟ್ಟಿಗೆ ಮಲಗಿ ಅವರನ್ನು ಒಲಿಸಿಕೊಂಡು ಮದುವೆಯಾಗುವರೆಂದು ತಿಳಿದುಕೊಂಡೆ. ಪರಂತು ಹುಡುಗಿಯು ಅಕ್ಷತ ಯೋನಿಯೇ ಆಗಿರುವಳು. ರಷ್ಯದ ಒಕ್ಕಲಿಗರಲ್ಲಿರುವ **ಈ** ಪೂರ್ವ ಸಂಪ್ರದಾಯಗಳು, ಅವರು ತಮ್ಮ ಸ್ತ್ರೀಯರನ್ನು ಸಂಶಯ ಭೀತಿ ಪಾಪಅಥವಾ ಪವಿತ್ರಭಾವನೆ, ವಿಜಾತೀಯ ದೃಷ್ಟಿಯಿಂದೆಲ್ಲಾ ಕಾಣದೆ ಅವರೊಡನೆ ಸಹಜ ಸಂಬಂಧ ಬೆಳೆಸಿಕೊಂಡು ಬಂದಿರುವರೆಂಬುದನ್ನು ಸಿದ್ಧಗೊಳಿಸುವವು. ಈ ದೃಷ್ಟಿಯಿಂದ ರಷ್ಯದ ಕ್ರಾಂತಿಯು ಸ್ತ್ರೀಪುರುಷ ಸಂಬಂಧದಲ್ಲುಂಟು ಮಾಡಿರುವ ಮಾರ್ಪಾಟವು, ಹೊಸರೀತಿನೀತಿಗಳು ಆಶ್ಚರ್ಯಕರವೇನೂ ಅಲ್ಲ. ಆದರೆ ಯುರೋಪಿನ ಇತರ ರಾಷ್ಟ್ರಗಳ ಪದ್ಧತಿಗಳ ದೃಷ್ಟಿಯಿಂದ ಅವು ಅತ್ಯಂತ ನೂತನವೂ, ಆಶ್ಚರ್ಯಕರವೂ, ಸಾಹಸಪರವೂ ಆಗಿವೆ.

ನವೀನ ಲೈಂಗಿಕ ನೀತಿ

ವೈಯಕ್ತಿಕ ತೀರ್ಮಾನ ಮತ್ತು ಕ್ರಿಯಾ ಸ್ವಾತಂತ್ರ್ಯವೇ ರಷ್ಯದ ಈ ನವೀನ ಲೈಂಗಿಕ ನೀತಿಯ ಮೂಲತತ್ತ್ವ. ಹಳೆಯ ನೀತಿನಿಯಮಗಳನ್ನವರು ಮೂಲೆಗೊತ್ತಿರುವರು. ಶಾಶ್ವತವೂ, ಅನುಲ್ಲಂಘನೀಯವೂ, ಅಪರಿವರ್ತಿತವೂ ಆದ ನೀತಿಯನ್ನವರು ಒಪ್ಪುವುದಿಲ್ಲ. ಶಾಶ್ವತವಾದ ನೀತಿಯೆಂಬುದನ್ನವರು ಅಂಗೀಕರಿಸುವುದಿಲ್ಲ. ಶಾಶ್ವತವಾದ ನೀತಿಯಲ್ಲಿ ನಮಗೆ ವಿಶ್ವಾಸವಿಲ್ಲೆಂದು ಲೆನಿನರೇ ಹೇಳಿರುವರು. ಮಾನವ ಸಮಾಜವು ಉನ್ನತಿಗೇರುವಂತೆ ಮಜೂರರ ಸೂರೆಯು ನಿವಾರಿಸಲ್ಪಡುವಂತೆ ನೀತಿಯು ಸಹಾಯವೀಯುವ ಕೆಲಸಮಾಡುತ್ತದೆ. ಆದುದರಿಂದ ರಷ್ಯನರು ಲೈಂಗಿಕ ನಡತೆಯ ಕುರಿತು ಸರ್ವ ಜವಾಬ್ದಾರಿಯನ್ನು ವ್ಯಕ್ತಿಯ ಮೇಲೆ ಅಂದರೆ ಗಂಡಸಿನಷ್ಟೇ ಹೆಂಗಸಿನ ಮೇಲೆಯೂ ಹಾಕಿರುವರು. ರಷ್ಯದಲ್ಲಿ ಲೈಂಗಿಕ ಜೀವನವನ್ನು ನಿಯಂತ್ರಗೊಳಿಸುವ ಯಾವ ಕಾನೂನೂ ಇರುವುದಿಲ್ಲ.

(ಮುಂದುವರಿಯುವುದು.)

THE

PANGAL NAYAK BANK

LIMITED.

ESTABLISHED 1920.

Paid up Capital: Rs. 1,82,100/-

***Head Office*: UDIPI.**

Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ವರನು ಬೇಕು

ಗೃಹಕೃತ್ಯದಲ್ಲಿ ಬಲು ನಿಪುಣೆಯೂ ರೂಪವತಿಯೂ ಆದ ಹದಿನಾಲ್ಕು ವರ್ಷಪ್ರಾಯದ ಶಿವಳ್ಳಿ ಬ್ರಾಹ್ಮಣ ವಿಧವೆಗೆ– ಸ್ವಜಾತಿಯ 25–30 ವರ್ಷದೊಳಗಿನ ಯೋಗ್ಯವರನು ಬೇಕು. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯುವುದು; ವ ಸ್ವತಹ ಮಾತನಾಡುವುದು.

ವಿಳಾಸ—

ಸಮಾಜ ಸೇವಾ ಗ್ರಂಥಮಾಲಾ,

ಮುದ್ರಾಡಿ (ಕಾರ್ಕಳ ತಾಲೂಕು)

ಪೋಸ್ಟ್ ಹೆಬ್ರಿ ದ. ಕ.

ಮಂಗ್ಳೂರು ಚಂದಾದಾರರಲ್ಲಿ ವಿನಂತಿ.

ಮಂಗಳೂರಿನ ಸ್ಥಳೀಕ ಚಂದಾದಾರರು ತಮ್ಮ ಚಂದಾಹಣವನ್ನು ಕೆನರಾ ಪ್ರೆಸ್ಸಿನ ಮೆನೇಜರರೊಡನೆ ಪಾವತಿ ಮಾಡಿ ರಶೀದಿ ಪಡೆಯಬೇಕಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮೆನೇಜರ್,

ನವಯುಗ, **ಉಡುಪಿ**

ಸಮಾಚಾರ ಸಂಗ್ರಹ: ಮುಸಲ್ಮಾನರು ಕಾಂಗ್ರೆಸಿಗೆ ಸೇರಲೇ ಬೇಕು, ಗಾಂಧಿಜಿಯವರ ಹೆಸರಿನ ಮಾಂತ್ರಿಕ ಪ್ರಭಾವ, ಹರಿಜನರಿಗೆ ದೇವಸ್ಥಾನ ತೆರೆದು ಹಾಕಲಾಯಿತು, ಪಂಡಿತ ಜವಾಹರಲಾಲರ ಬರ್ಮಾ ಸಂಚಾರ.

ಮುಸಲ್ಮಾನರು ಕಾಂಗ್ರೆಸಿಗೆ ಸೇರಲೇ ಬೇಕು.

ಅಲಹಾಬಾದ್ ಪರಿಷತ್ತಿನ ನಿರ್ಣಯ

ಕಾಂಗ್ರೆಸಿನ ಕುರಿತು ಸಹಾನುಭೂತಿಯಿರುವ ಮುಸಲ್ಮಾನ ಮುಖಂಡರುಗಳ ಪರಿಷತ್ತೊಂದು ಇದೇ ತಾ. 13, 14 ಮತ್ತು 15ರಲ್ಲು ಅಲಹಾಬಾದಿನಲ್ಲಿ ಜರಗಿ, ಮುಸಲ್ಮಾನ ಸಮುದಾಯದಲ್ಲಿ ಕಾಂಗ್ರೆಸ್ ಕಾರ್ಯವನ್ನು ಮುಂದೆತ್ತುವ ಕಷ್ಟ ಮತ್ತು ತೊಡಕುಗಳ ಕುರಿತು ದೀರ್ಘ ಚರ್ಚೆ ನಡೆದು ಕಟ್ಟಕಡೆಗೆ ಮುಸಲ್ಮಾನರೆಲ್ಲರೂ ಕಾಂಗ್ರೆಸಿಗೆ ಕೂಡಲೆ ಸೇರಿ ಕೆಲಸಮಾಡಬೇಕೆಂಬ ನಿರ್ಧಾರವಾಗಿರುವುದು. ಮೌಲಾನ ಅಬ್ದುಲ್ ಕರೀಮ್ ಅಜದರು ಮುಸಲ್ಮಾನರೆಲ್ಲರೂ ಕಾಂಗ್ರೆಸಿಗೆ ಸೇರಬೇಕೆಂದು ಆಗ್ರಹತೋರ್‍ಸ್ಟ್ರಿ, ಆ ಮಾರ್ಗದಲ್ಲಿನ ತೊಡಕುಗಳನ್ನು ನಿವಾರಿಸುವ ಉಪಾಯಗಳನ್ನು ಸೂಚಿಸಿದರು. ಮೌಲಾನ ಅಹಮ್ಮದ್ ಸೈಯದ್ ಹುಸೇನರೂ ಈ ಚರ್ಚೆಯಲ್ಲಿ ಭಾಗವಹಿಸಿದ್ದರು. "ಮುಸಲ್ಮಾನರು ಕೈಕೊಂಡು ಅನುಸರಿಸಬೇಕಾದ ಉಚಿತವೂ ನ್ಯಾಯವೂ ಆದ ಏಕಮಾತ್ರ ಧೋರಣೆಯೆಂದರೆ ಹಿಂದೀ ರಾಷ್ಟ್ರೀಯಸಭೆಗೆ ನಿಶ್ಚಿತವಾಗಿ ಸೇರಿ ದೇಶದ ಸ್ವಾತಂತ್ರ್ಯ ಸಮರದಲ್ಲಿ ಭಾಗಿಯಾಗುವುದಾಗಿದೆ" ಎಂಬುದೇ ಈ ಪರಿಷತ್ತಿನಲ್ಲಿ ಸರ್ವಸಮ್ಮತಿಯಿಂದ ಮಂಜೂರಾದನಿರ್ಣಯ. ಈ ಪರಿಷತ್ತಿನಲ್ಲಿ ಡಾಕ್ಟರ್ ಸೈಯದ್ ಅಹಮ್ಮದ್ ಸರ ಸೈಯದ್ ವಜೀರ್ ಹಾಸನ್, ಮೌಲಾನಾ ಮಹಮ್ಮದ್ ಸೈಯದ್, ಖಾನ್ ಬಹದೂರು ಮೌಲವಿ ಬಾಶೀರುದ್ದೀನ್, ಮೌಲನ ಅಬ್ದುಲ್ ಸಿದ್ದೀಕ್, ಮೌಲಾನ ಸೈಯದ್ ಟ-ಫಾಲ್ ಅಹಮ್ಮದ್, ಮೌಲಾನಾ ಮಸುದಲ್ ಇನಾಡ್ಡಿ, ಖ್ವಾಜಿ ಅಬ್ದುಲ್ ಮೊಜಿದ್, ಮೌಲನ ಬಾಶೀರ ಅಹಮ್ಮದ್ ಡಾಕ್ಟರ್ ಅಬ್ದುಲ್ ಕರೀಮ್, ಎಂ. ಹಮಿದುಲ್ಲಾ ಅನ್ಸಾರಿ ಮೊದಲಾದವರು ಭಾಗಿಯಾಗಿದ್ದರು. ಜಮಿಯತ್ ಉಲ್-ಉಲೇಮ ಸಂಘದವರು ಕೂಡಾ ಈ ಪರಿಷತ್ತಿಗೆ ನಿರ್ಣಯವನ್ನು ಸಂಪೂರ್ಣವಾಗಿ ಸಮರ್ಥಿಸಿರುವರು.

ಕಾಂಗ್ರೆಸಿಗೆ ಬಿಹಾರಿನ ಅಧಿಕಾರಿಯ ಪ್ರಶಂಸೆ

ಗಾಂಧಿಜಿಯವರ ಹೆಸರಿನ ಮಾಂತ್ರಿಕ ಪ್ರಭಾವ

"ಈ ಸಲದ ಚುನಾವಣೆಯಲ್ಲಿ ಜನತೆಯ ಮೇಲೆ ಪ್ರಚಂಡ ಆಕರ್ಷಣ ಬೀರಿ ಉಮೇದ್ವಾರಿಗಳ ಹೆಸರನ್ನು ಕೂಡಾ ಅರಿಯದ ಲಕ್ಷಗಟ್ಟಲೆ ನಿರಕ್ಷರ ಕುಕ್ಷಿಮತದಾರರನ್ನು ಆಕರ್ಷಿಸಿದುದೆಂದರೆ ಗಾಂಧಿಯವರ ಹೆಸರಿನ ಮಾಂತ್ರಿಕ ಶಕ್ತಿ. ಇದು ಇತರ ಎಲ್ಲಾ ಚುನಾವಣೆಯ ಪ್ರಚಾರ ವಿಧಾನಕ್ಕಿಂತಲೂ ಅತುಲ ಪ್ರಭಾವಶಾಲಿಯಾಗಿ ಅತ್ಯಂತ ಜಯಶೀಲವಾಗಿದ್ದಿತು 'ಅವರುನಿಮಗೆ ಪೂರಿರೊಟ್ಟಿಗಳನ್ನು ಕೊಟ್ಟರೆ ತಿನ್ನಿರಿ. ಮೋಟರು ವಾಹನಗಳಲ್ಲಿ ಕುಳಿತುಕೊಳ್ಳ ಹೇಳಿದರೆ ಕೂತುಕೊಳ್ಳಿರಿ ಆದರೆ ಪೆಟ್ಟಿಗೆಗೆ ಓಟುಹಾಕುವಾಗ ಮಾತ್ರ ಜಾಗ್ರತೆಯಿಂದಿರಿ' ಎಂಬುದೇ ಕಾಂಗ್ರೆಸಿನ ಪ್ರಚಾರ ಕಾರ್ಯದ ಮುಖ್ಯವಾದೊಂದು ಪಲ್ಲವಿಯಾಗಿತ್ತು. ಕಾಂಗ್ರೆಸಿನ ಸಂಘಟನೆಯು ಇತರ ಪಕ್ಷದವರಿಗಿಂತ ಎಷ್ಟೋ ಉತ್ತಮವಾಗಿದ್ದಿತು. ಕಾಂಗ್ರೆಸಿನ ಒಮ್ಮತ, ಒಕ್ಕಟ್ಟು, ಶಿಸ್ತು ಮತ್ತು ಮುಂದಾಳುತ್ವ ಮಾತ್ರವಲ್ಲದೆ ಜನತೆಯ ಮನಸ್ಸನ್ನೆಳೆಯುವ ಕಾರ್ಯಕ್ರಮವು ಬಹಳ ಪ್ರಯೋಜನವನ್ನುಂಟುಮಾಡಿತು ಇತರ ಪಕ್ಷಗಳಲ್ಲಿ ಯಾವ ತರದ ಸಂಘಟನೆ ಮತ್ತು ಪ್ರಚಾರದ ವ್ಯವಸ್ಥೆ ಇರಲಿಲ್ಲ. ಮಾತ್ರವಲ್ಲದೆ ಅವು ಸರಕಾರದ ಪಕ್ಷಪಾತವೆಂಬ ದೊಡ್ಡ ಅನಾನುಕೂಲತೆಯು ಅವಕ್ಕಿದ್ದಿತು" ಎಂದು ಬಿಹಾರ್ ಪ್ರಾಂತದ ಇಲೆಕ್ಷನ್ ಆಫೀಸರಾದ ಮಿ. ನೇಸಿಯವರು ಕಾಂಗ್ರೆಸ್ಸನ್ನು ಹೊಗಳಿ ಟಪ್ಪಾಲು ಮೂಲಕ ಓಟು ಕೊಡುವ ಪದ್ಧತಿಯು ಅಪ್ರಯೋಜಕ ಮತ್ತು ಅಯುಕ್ತವಾದುದೆಂದು ನಿಷೇಧಿಸಿರುವರು.

ಡೆಹರಾಡೂನಿನಲ್ಲಿ 39 ಮಂದಿಯ ದಸ್ತಗಿರಿ

ಎರಡನೇ ವಿವಾಹದ ನಿಷೇಧ

ಜಿಲ್ಲೆಯ ಕ್ಷತ್ರಿಯ ಸಭೆಯವರು, ಒಬ್ಬ ಮನುಷ್ಯನು ತನ್ನ ಮೊದಲನೇ ಹೆಂಡತಿ ಇರುತ್ತಾ 2ನೇ ವಿವಾಹ ಮಾಡಿಕೊಳ್ಳುವುದನ್ನು ನಿಷೇಧಿಸಿ ನಿರ್ಣಯಮಾಡಿ ಸದ್ರಿ ನಿರ್ಣಯವನ್ನು ಎರಡನೇ ವಿವಾಹ ನಡೆಯುವ ಸ್ಥಳವಾದ ಡೆಹರಾಡೂನಿನ ಆರ್ಯಸಮಾಜಕ್ಕೆ ಕಳುಹಿಸಿದರು ಆರ್ಯ ಸಮಾಜದವರು ಈ ವಿವಾಹಕ್ಕಾಗಿ ಬರುವ ವರನ ಮೆರವಣಿಗೆಯ ವಿರುದ್ಧವಾಗಿ ಕರಿಧ್ವಜ ಪ್ರದರ್ಶನ ನಡಿಸಲು ನಿರ್ಧರಿಸಿದರು ಆ ಪ್ರಕಾರ ಇದೇ ತಾ. 17ರಲ್ಲು ವರನ ದಿಬ್ಬಣವು ಡೆಹರಡೂನ್ ರೈಲ್ವೆ ಸ್ಟೇಶನಿಗೆ ಬಂದಾಗ ಸ್ತ್ರೀಯೋರ್ವಳು ವರನಿದ್ದ ರೈಲ್ವೇ ಕಂಪಾರ್ಟ್‌ಮೆಂಟಿಗೆ ಹೋಗಿ ಕರಿಧ್ವಜವೊಂದನ್ನು ಅವನಿಗಿತ್ತಳು ಸದ್ರಿ ಕಂಪಾರ್ಟ್‌ಮೆಂಟಿನಲ್ಲಿದ್ದ ಕೆಲವರು ಆ ಸ್ತ್ರೀಯನ್ನು ದೂಡಿದರು. ಆಗ ಸ್ಟೇಶನಿನ ಹೊರಗೆ ನೆರೆದಿದ್ದ ಜನಸ್ತೋಮವು ರೇಗಿಬಿದ್ದು ದಿಬ್ಬಣಿಗರ ಮೇಲೆ ಮಣ್ಣು ಮತ್ತು ಕಲ್ಲೆಸೆದರು ಕೆಲವರ ಮೇಲೆ ಕೈಮಾಡಿದರು. ಇಷ್ಟರಲ್ಲಿ ಪೋಲೀಸರು ಬಂದು ವರನನ್ನು ಸುರಕ್ಷಿತವಾದೊಂದು ಸ್ಥಳಕ್ಕೆ ಮುಟ್ಟಿಸಿ ಗಲಾಟೆ ನಿಲ್ಲಿಸಿದರು. ಜನರು ಕರಿಧ್ವಜದ ಮೆರವಣಿಗೆ ನಡಿಸಿ ವರನ ನಿವಾಸದ ಸ್ಥಳಕ್ಕೆ ಹೋದರು. ಆಗ ಪೋಲೀಸರು ಲೋರಿಗಳಲ್ಲಿ ಅಲ್ಲಿಗೆ ಧಾವಿಸಿ ಬಂದು 39 ಮಂದಿಯನ್ನು ದಸ್ತಗಿರಿ ಮಾಡಿದರು. ಇವರಲ್ಲಿ 10 ಮಂದಿ ಸ್ತ್ರೀಯರು ಮತ್ತು ಒಬ್ಬರು ಎಸೆಂಬ್ಲಿ ಮೆಂಬರರು. ಈ ಚಳವಳದಲ್ಲಿ ಸ್ತ್ರೀಯರು ಅಗ್ರಭಾಗ ವಹಿಸಿದ್ದರು. ಕೈದುಮಾಡಲ್ಪಟ್ಟವರೆಲ್ಲಾ ರೂ. 100ರ ವೈಯಕ್ತಿಕ ಜಾಮೀನಿನಿಂದ ಬಿಡಲ್ಪಟ್ಟಿರುವರು.

ಹರಿಜನರಿಗೆ ದೇವಸ್ಥಾನ ತೆರೆದುಹಾಕಲಾಯಿತು.

ಶಾಸ್ತ್ರಗಳ ಕುರಿತು ಪೂಜಾರಿಗಳ ಅಜ್ಞಾನ

ತಿರುವಾಂಕೂರಿನ ಮತ್ತು ಬರೋಡದ ಮಹಾರಾಜರುಗಳ ಮಾದರಿಯನ್ನನುಸರಿಸಿ ಇದೇ ತಾ. 17ರಲ್ಲು ಕಥಿಯಾವಾಡದ ಲಿಂಬ ಸಂಸ್ಥಾನದ ರಾಜರು ಸುಪ್ರಸಿದ್ಧ ಅನ್ನಕ್ಷೇತ್ರ ದೇವಸ್ಥಾನವನ್ನು ಹರಿಜನರಿಗೆ ತೆರೆದು ಹಾಕಿದರು. ಈ ಸಂದರ್ಭದಲ್ಲವರು, 'ಹರಿಜನರು ಹಿಂದು ದೇವಸ್ಥಾನಗಳಿಗೆ ಪ್ರವೇಶಿಸಬಾರದೆಂಬುದಕ್ಕೆ ಯಾವ ಶಾಸ್ತ್ರಾಧಾರವೂ ಇಲ್ಲ ಅಂಧ ಶ್ರದ್ಧೆ ಮತ್ತು ಮೂಢ ವಿಶ್ವಾಸಗಳ ಬಂಧನದಿಂದ ವಿಮುಕ್ತರಾಗಿ ಜನರು ನಿಜವಾದ ಧರ್ಮದ ತಿರುಳನ್ನರಿತುಕೊಂಡು ಆಚರಿಸಿದರೆ ಅದರಿಂದ ಸಮಾಜದ ಬೇರೆ ಬೇರೆ ತಂಡದವರೊಳಗಣ ಪರಸ್ಪರ ಪ್ರೇಮಾನುಬಂಧವು ಬಲಗೊಂಡು ಇಡೀ ಸಮಾಜವು ಸಶಕ್ತವಾಗುವಂತಾಗುವುದು: ಆದುದರಿಂದ ಇಂದೀಗ ನಾನು ಈ ದೇವಸ್ಥಾನವನ್ನು ಹರಿಜನರಿಗೆ ತೆರೆದು ಹಾಕುವ ಸಂಸ್ಕಾರ ನಡಿಸುವುದರಿಂದ ದೊಡ್ಡ ಅನ್ಯಾಯವೊಂದನ್ನು ಮಾತ್ರ ಸರಿಪಡಿಸಿದಂತಾಗಿರುವುದು. ಹರಿಜನರು ಎಲ್ಲಾ ವಿಷಯದಲ್ಲಿಯೂ ನನ್ನ ಇತರ ಪ್ರಜೆಗಳು ಅನುಭವಿಸುವಂತಹ ಹಕ್ಕುಗಳನ್ನೆಲ್ಲಾ ಇನ್ನು ಮುಂದೆ ಹರಿಜನರೂ ಪಡೆಯುವರು" ಎಂದು ಹೇಳಿ ಶಾಸ್ತ್ರಗಳ ಕುರಿತು ಹಿಂದು ಪೂಜಾರಿಗಳಿಗಿರುವ ಅಜ್ಞಾನಕ್ಕಾಗಿ ವಿಷಾದ ಸೂಚಿಸಿ ಅಂತಹ ಅರ್ಚಕರು ಹಿಂದು ಸಮಾಜಕ್ಕೊಂದು ಪೀಡೆಯೆಂದು ಕಂಠೋಕ್ತವಾಗಿ ನುಡಿದು ತಾನು ಯೋಗ್ಯ ಪೂಜಾರಿಗಳನ್ನು ತಯಾರಿಸಲು ಪ್ರಯತ್ನಿಸುವೆನೆಂದರು. ಮತ್ತು ಹರಿಜನರು ತಮ್ಮೊಳಗಣ ಬೇರೆ ಪಂಗಡಗಳೊಳಗಿರುವ ಅಸ್ಪೃಶ್ಯತೆಯನ್ನು ತೆಗೆದುಹಾಕಬೇಕೆಂದು ವಿನಂತಿ ಮಾಡಿಕೊಂಡರು.

60ಮಂದಿಯ ದಸ್ತಗಿರಿ

ಲಾಠಿ ಪ್ರಹರದಿಂದ 15ಮಂದಿಗೆ ಪೆಟ್ಟು

ಆಂಧ್ರ ದೇಶದ ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷದವರು ಗುಂಟೂರು ಜಿಲ್ಲೆಯ ಕೊಥಪಟಮ್ ಎಂಬ ಹಳ್ಳಿಯಲ್ಲಿ ರಾಜಕೀಯ ಮತ್ತು ಸಾಂಪತ್ತಿಕ ವಿಷಯಗಳಲ್ಲಿ ಭಾಷಣಗಳನ್ನು ನಡಿಸಿ ವಿದ್ಯಾರ್ಥಿಗಳಿಗೆ ತರಬೇತಿಕೊಡುವ ಬೇಸಿಗೆಯ ಶಿಬಿರವೊಂದನ್ನು ನಡಿಸುವ ಏರ್ಪಾಡು ಮಾಡಿದ್ದರು. ಆದರೆ ಈ ಭಾಷಣಗಳು ನಡೆಯುವಾಗ ಪೋಲೀಸರನ್ನು ಒಳಗೆ ಬಿಡಲಿಲ್ಲ. ಆದುದರಿಂದ ಸರಕಾರವು ಸದ್ರಿ ಶಿಬಿರದಲ್ಲಿ ಕಮ್ಯೂನಿಸ್ಟ್ ತತ್ವಗಳ ಪ್ರಚಾರವಾಗ್ವದೆಂದು ಅದನ್ನು ಬೇಕಾಯಿದೆಶೀರವಾಗಿಮಾಡಿ ಹುಕುಮು ಕೊಟ್ಟಿದ್ದಿತು. ಈ ಹುಕುಮು ತಮ್ಮ ನ್ಯಾಯವಾದ ಹಕ್ಕುಗಳ ಮೇಲಿನ ಆಕ್ರಮಣವೆಂದು 60 ಮಂದಿ ಕಾಂಗ್ರೆಸ್ ಸೋಸಿಯಲಿಸ್ಟರು ಅದನ್ನುಲ್ಲಂಘಿಸುವ ನಿರ್ಧಾರಮಾಡಿದರು. ಇದೇ ತಾ. 20ನೇ ಸಂಜೆ ಸರಕಾರದ ಹುಕುಮನ್ನು ಜ್ಯಾರಿಗೆ ತರಲು ಗುಂಟೂರಿನ ಪೋಲೀಸ್ ಸುಪರಿಂಟೆಂಡೆಂಟರು ಪೋಲೀಸ್ ಫೌಜಿನೊಂದಿಗೆ ಕೊಥಪಟಮಿಗೆ ಹೋಗಿದರು. ತಾ. 21ರಲ್ಲು ಆಂಧ್ರದೇಶದ ಪ್ರಮುಖಕಾಂಗ್ರೆಸ್ ಸೋಸಿಯಲಿಸ್ಟರೇ ಮೊದಲಾದ 60 ಮಂದಿ ಸರಕಾರದ ಕಾನೂನನ್ನು ಉಲ್ಲಂಘಿಸಿ ಸಭೆ ನಡಿಸಿದರು ಈ ಶಿಬಿರದ ವ್ಯವಸ್ಥಾಪಕರಾದ ಶ್ರೀ ಕಾಮೇಶ್ವರ ರಾಯರು ನೆರೆದ ಜನರಿಗೆ ಭಾಷಣವಿತ್ತು, ಪೋಲೀಸರನ್ನು ತಮ್ಮ ಶಿಬಿರದೊಳಗೆ ಬರಬಿಡದ ಕಾರಣದಿಂದ ತಾವೆಲ್ಲಾ ಏನೋ ಒಳಸಂಚು ನಡಿಸುವವೆಂದು ತಮ್ಮ ಶಿಬಿರವು ಬೇಕಾಯಿದೆಶೀರವಾಗಿ ಮಾಡಲ್ಪಟ್ಟಿತೆಂದೂ, ಇದಕ್ಕೆ ಈಗಣ ಇಂಟೆರಿಮ್ ಮಂತ್ರಿಗಳು ಕಾರಣವೆಂದೂ ಹೇಳಿದರು. ಈ ಸಂದರ್ಭದಲ್ಲಿ ಹಳ್ಳಿಗರೆಲ್ಲಾ ನೆರೆದು ಬಂದಿದ್ದರು. ಇಷ್ಟರಲ್ಲಿ ರಿಸರ್ವ್ ಪೋಲೀಸರು ಈ ಶಿಬಿರಕ್ಕೆ ಮುತ್ತಿಗೆ ಹಾಕಿ ಲಾಠಿಪ್ರಹರಮಾಡಿ 15 ಮಂದಿಗೆ ಪೆಟ್ಟಾಯಿತು ಇವರನ್ನು ಲೋರಿಯಲ್ಲಿ ಹಾಕಿ ಒಂಗೋಲು ಸಬ್ ಜೈಲಿಗೆ ಕಳುಹಿಸಲಾಯಿತು. ಆ ಮೇಲೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಈ ಸ್ಥಳಕ್ಕೆ ಬಂದು ಉಳಿದ 15 ಮಂದಿಯನ್ನು ದಸ್ತಗಿರಿ ಮಾಡಿಸಿ ಸೆರೆಮನೆಗೆ ಕಳುಹಿಸಿದರು.

ಪಂಡಿತ ಜವಾಹರಲಾಲರ ಬರ್ಮಾಸಂಚಾರ

ರೂ. 70,000 ನಿಧಿ ಸಮರ್ಪಣೆ

ಪಂಡಿತ ಜವಾಹರಲಾಲರು ಬರ್ಮಾದ ಹಲವು ಭಾಗಗಳಲ್ಲಿ ಸಂಚರಿಸಿ ಇದೇ ತಾ. 21ರಲ್ಲು ಪೆನಾಂಗಿಗೆ ಹೋಗಿರುವರು. ಅವರು ಬರ್ಮಾದ ಕೆಲವು ಹಳ್ಳಿಗಳಿಗೆ ಕೂಡಾ ಹೋಗಿರುವರು. ಪಂಡಿತರ ಸ್ವಾಗತಕ್ಕಾಗಿ ಬರ್ಮೀಯರೂ, ಅಲ್ಲಿರುವ

The Canara Industrial Works

WANTED

Three respectable and reliable partners with business abilities to finance and conduct a Cashew Nut Factory to be started near Manipal, which is the best Cashew Nut centre and growing industrial centre.

For further particulars apply to.—

S. R. Patla,
Post Udipi, (S K)

ಹಿಂದೀಯರೂ ಅತ್ಯುತ್ಸಾಹದಿಂದ ಸಹಕರಿಸಿ ಕೆಲಸಮಾಡಿದ್ದರು. ಇದೇ ತಾ. 19ರಲ್ಲಿ ರಂಗೂನಿನಲ್ಲಿ ಬರ್ಮೀಯರ ಮತ್ತು ಬರ್ಮದ ಹಲವು ಸಂಸ್ಥೆಗಳ ಪರವಾಗಿ ರೂ. 70,000ದ ನಿಧಿಯೊಂದನ್ನು ಪಂಡಿತರಿಗೊಪ್ಪಿಸಲಾಯಿತು. ಇದರಲ್ಲಿ ಹೆಚ್ಚಿನಂಶವು ದಿವಂಗತ ಕಮಲನೆಹರು ಆಸ್ಪತ್ರೆ ಫಂಡಿಗಾಗಿ ಕೊಡಲ್ಪಟ್ಟಿರುವದು. ಈಗಣ ಕಾರ್ಯಕ್ರಮದಂತೆ ಪಂಡಿತರು ತಾ. 6ರಲ್ಲಿ ಪೆನಂಗಿನಿಂದ ರಂಗೂನಿಗೆ ಹಿಂತಿರುಗಿ ರಂಗೂನಿನಿಂದ ಕೂಡಲೇ ಮೈಲ್ ಬೋಟಿನ ಮೂಲಕ ಟು ತಾ 10ಕ್ಕೆ ಕಲ್ಕತ್ತಕ್ಕೆ ಬಂದು ಮುಟ್ಟಿ ಅಲ್ಲಿಂದ ನೆಟ್ಟಗೆ ಅಲಹಾಬಾದಿಗೆ ಹೋಗುವರು.

ಜಸ್ಟಿಸ್ ಪಕ್ಷದ ಮುಖಂಡರು ಕಾಂಗ್ರೆಸಿಗೆ ಸೇರಿದರು.

ಶ್ರೀ ಪ್ರೇಮಯ್ಯನವರ ಹೇಳಿಕೆ

ಆಂಧ್ರದೇಶದ ಬಾಪಟ್ಲ ಎಂಬಲ್ಲಿಯ ಕ್ರೈಸ್ತಮುಖಂಡರೂ ಜಸ್ಟಿಸ್ ಪಕ್ಷದ ಕಳದ ಕೌನ್ಸಿಲ್ ಮೆಂಬರರೂ ಆಗಿದ್ದ ಶ್ರೀ. ಬಿ. ಆರ್. ಪ್ರೇಮಯ್ಯನವರು ಇದೇ ತಾ. 19ರಲ್ಲಿ ಕಾಂಗ್ರೆಸ್ ಪ್ರತಿಜ್ಞೆಗೆ ಸಹಿ ಹಾಕಿ ಕಾಂಗ್ರೆಸಿಗೆ ಸೇರಿರುವರು. ಈ ಸಂದರ್ಭದಲ್ಲಿ ಅವರು ಕೊಟ್ಟ ಹೇಳಿಕೆಯ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ. "ಅಲ್ಪ ಸಂಖ್ಯಾಕರ ಹಿತವು ಸಾಧಿಸಲ್ಪಡುವುದೆಂದು ನಾನು 15ವರ್ಷಗಳ ಮೊದಲು ಕೌನ್ಸಿಲಿನಲ್ಲಿ ಜಸ್ಟಿಸ್ ಪಕ್ಷಕ್ಕೆ ಸೇರಿದ್ದೆನು. ಆದರೆ ಅಲ್ಪ ಸಂಖ್ಯಾಕರ ಹಿತಕ್ಕೆ ಜಸ್ಟಿಸ್ ಪಕ್ಷೀಯರು ಗಣ್ಯಮಾಡದೆ ಇತ್ತೀಚೆಗಾಗಿ ಅದು ಕೇವಲ ವೈಯಕ್ತಿಕ ದ್ವೇಷಾಸೂಯೆಯ ಪಂಡವಾಗಿ ಪರಿಣಮಿಸಿರುವುದು. ಅಲ್ಪಸಂಖ್ಯಾಕರ ಸಾಂಪತ್ತಿಕ ಸ್ವಾತಂತ್ರ್ಯವನ್ನು ಕಾಂಗ್ರೆಸಿನ ಮೂಲಕ ಮಾತ್ರ ಸಾಧಿಸಲು ಸಾಧ್ಯವಿದೆ. ಅದರಲ್ಲಿ ಎಲ್ಲಾ ಧರ್ಮಗಳವರು ಸಮಾನತೆಯಿಂದ ಸೇರಿ ಕೆಲಸಮಾಡಬಹುದು. ಆದುದರಿಂದ ಕ್ರೈಸ್ತರೆಲ್ಲರೂ ಕಾಂಗ್ರೆಸಿಗೆ ಸೇರಬೇಕು."

ನಿಮ್ಮ ಪ್ರಮುಖರ ಮೇಲೆ ವಿಶ್ವಾಸವಿಡಿರಿ

ಶ್ರೀ ರಾಜಗೋಪಾಲಾಚಾರ್ಯರ ವಿನಂತಿ

ಇದೇ ತಾ. 19ರಲ್ಲಿ ಮದ್ರಾಸಿನ ಕಾಂಗ್ರೆಸ್ ಹೌಸಿನಲ್ಲಿ ಡಾಕ್ಟರ್ ಸುಬ್ಬರಾಯನರ ಅಧ್ಯಕ್ಷತೆಯಲ್ಲಿ, ರಾಜಕೀಯ ಮತ್ತು ಸಾಂಪತ್ತಿಕ ವಿಷಯ ಭಾಷಣ ನಡಿಸುವ ಶಾಲೆಯೊಂದು ತೆರೆಯಲ್ಪಡುವ ಸಂದರ್ಭದಲ್ಲಿ, ಶ್ರೀ ರಾಜಗೋಪಾಲಾಚಾರ್ಯರು ಈ ರೀತಿ ವಿನಂತಿಮಾಡಿಕೊಂಡಿರುವರು. "ಅಧಿಕಾರ ಸ್ವೀಕರಿಸಬೇಕೆಂದು ಕಟ್ಟಕಡೆಗೆ ಕಾಂಗ್ರೆಸಿಗೆ ಮನವರಿಕೆಯಾದರೆ ಅದು ಹಾಗೆಯೇ ಮಾಡುವುದು. ಆ ವಿಷಯದಲ್ಲಿ ಜನರೇನೂ ಸಂದೇಹಪಡಬೇಕಾಗಿಲ್ಲ. ಕಾಂಗ್ರೆಸು ನಿಃಸ್ವಾರ್ಥ ಬುದ್ಧಿಯಿಂದ ಹೋರಾಟ ನಡಿಸುತ್ತಿದೆ. ಕಾಂಗ್ರೆಸ್ ಮುಖಂಡರು ಯಾವ ತರದ ಅಚಾತುರ್ಯವನ್ನೂ ಮಾಡಿಲ್ಲ ರಾಷ್ಟ್ರಕ್ಕೆ ಯಾವುದು ಒಳ್ಳೇದೋ ಅದನ್ನವರು ತಿಳಕೊಂಡು ಅದರಂತೆ ಧೈರ್ಯದಿಂದ ನಡೆಯುವರೆಂಬ ವಿಷಯದಲ್ಲಿ ಜನರಿಗೆ ಯಾವ ಸಂದೇಹವೂ ಬೇಡ. ಈಗ ಮಂತ್ರಿಗಳ ರಾಜಿನಾಮೆ ಮತ್ತು ಅವರನ್ನು ಗವರ್ನರರು ತೆಗೆದುಹಾಕುವ ವಿಷಯದಲ್ಲಿ ಮಾತ್ರ ಸರಕಾರ ಮತ್ತು ಕಾಂಗ್ರೆಸುಗಳೊಳಗೆ ಭಿನ್ನಾಭಿಪ್ರಾಯವಿರುವಂತಿದೆ. ಕಾಂಗ್ರೆಸಿನ ಹೇಳಿಕೆಯಲ್ಲಿ ಹುರುಳೇನೂ ಇಲ್ಲದಿದ್ದರೆ, ರಾಜಿನಾಮೆಯೂ, ಅಧಿಕಾರದಿಂದ ತೆಗೆದುಹಾಕುವುದೂ ಒಂದೇ ಆದರೆ ಸರಕಾರದವರು ಕಾಂಗ್ರೆಸಿನವರನ್ನು ಮಂತ್ರಿಪದವಿ ಸ್ವೀಕರಿಸಲು ಆಮಂತ್ರಿಸಬಾರದೇಕೊ ತಿಳಿಯದು. ಕಾಂಗ್ರೆಸಿನವರು ಜನತೆಯ ಹಿತವನ್ನೇ ಸಾಧಿಸುವರು. ಆದುದರಿಂದ ಜನರು ಅವರ ಮೇಲೆ ಸಂಪೂರ್ಣ ವಿಶ್ವಾಸವಿಡಬೇಕು."

150 ಮನೆಗಳು ಸುಟ್ಟುಹೋದವು

ಇದೇ ತಾ. ೨೧ರಲ್ಲಿ ಎಲ್ಲೂರಿನ ಮಜೂರ ಜನರು ವಾಸಿಸುವ ಪ್ರದೇಶದಲ್ಲಿ ದೊಡ್ಡ ಬೆಂಕಿಯೆದ್ದು 150ಗುಡಿಸಲುಗಳು ಸುಟ್ಟುಹೋಗಿರುವವು. ೩ ಘಂಟೆಗೆ ಹಿಡಿದ ಬೆಂಕಿಯು ಗಾಳಿಯ ಸಹಾಯದಿಂದ ಅರ್ಧ ಘಂಟೆಯೊಳಗೆ ತನ್ನ ವಿನಾಶಕಾರ್ಯ ಮುಗಿಸಿಬಿಟ್ಟಿತು. ಬಡ ಮಜೂರರಿಗೆ ತಮ್ಮ ಸೊತ್ತುಗಳನ್ನು ಹೊರ ತೆಗೆಯಲು ಕೂಡಾ ಅವಕಾಶ ದೊರೆಯಲಿಲ್ಲ ಕೆಲವು ನಾಯಿ ಮತ್ತು ಹಂದಿಗಳು ಕೊಲ್ಲಲ್ಪಟ್ಟಿರುವವು. ಇದೇ ರಾತ್ರಿ ಇನ್ನೊಂದು ಬೆಂಕಿಯೆದ್ದು ೩ ಅಂಗಡಿಗಳು ಸುಟ್ಟುಹೋಗಿರುವವು. ಈ ಬೆಂಕಿಗಳ ಕಾರಣ ತಿಳಿದಿಲ್ಲ.

ಶ್ರೀ। ಕೇಳಪ್ಪನರು ಅಧ್ಯಕ್ಷರಾಗಿ ಆರಿಸಲ್ಪಟ್ಟರು

ಇದೇ ತಾ. ೨೦ರಲ್ಲಿ ಮಲಬಾರು ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯು ಮಲಬಾರು ಕಲೆಕ್ಟರರ ಅಧ್ಯಕ್ಷತೆಯಲ್ಲ ನಡೆಯಿತು. ಬೋರ್ಡಿನ ಒಟ್ಟು ೬೨ ಮೆಂಬರರಲ್ಲಿ ೩೨ ಮಂದಿ ಕಾಂಗ್ರೆಸ್ ಮೆಂಬರರೆಲ್ಲರೂ ಖಾದಿ ಹಾಕಿಕೊಂಡು ಬಂದಿದ್ದರು. ಮೆಂಬರರೆಲ್ಲರೂ ಪ್ರತಿಜ್ಞೆ ತೆಗೆದುಕೊಂಡ ಮೇಲೆ ಶ್ರೀ. ಕೇಳಪ್ಪನವರು ಸರ್ವ ಸಮ್ಮತಿಯಿಂದ ಬೋರ್ಡಿನ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು. ಪಿ. ಕೆ ಮಹಮ್ಮದ್ ಮುಸ್ಲಾಲಿಯರ್‌ರವರು ವೈಸ್‌ಪ್ರೆಸಿಡೆಂಟರಾಗಿ ಎದುರಾಳಿಯಿಲ್ಲದೆ ಚುನಾಯಿತರಾದರು. ಬೋರ್ಡಿನ ಆಡಳಿತದಲ್ಲ ತಾನು ತನ್ನಿಂದ ಸಾಧ್ಯವಾದ ಸಹಾಯ ಮಾಡುವೆನೆಂದು ಕಲೆಕ್ಟರರು ಆಶ್ವಾಸನೆಯಿತ್ತು ಹೊಸ ಪ್ರೆಸಿಡೆಂಟರನ್ನು ಅಭಿನಂದಿಸಿದರು.

ಪಾಟ್ನದಲ್ಲಿ ಬೋಂಬಿನ ಸ್ಫೋಟ

ಇದೇ ತಾ. 19ರಲ್ಲಿ ಪಾಟ್ನದಲ್ಲಿ ಗಂಗಾನದಿಯ ತೀರದ ಮಿತಂಘಾಟ್ ಎಂಬಲ್ಲಿ ಬೋಂಬೊಂದು ಸ್ಫೋಟವಾಗಿ ಶಿವ ಪ್ರಸಾದ್ ಮತ್ತು ರಾಜೇಂದ್ರ ಪ್ರಸಾದರೆಂಬ ಇಬ್ಬರು ತರುಣರು ಗಾಯಗೊಂಡಿರುವರು. ಈ ಸ್ಥಳದಿಂದ ಅರ್ಧ ಮೈಲು ದೂರದ ಒಂದು ಮನೆಯಲ್ಲಿ ಕಳದ ವರ್ಷ ಒಂದು ಸ್ಫೋಟವಾಗಿದ್ದಿತು. ಪೋಲೀಸರು ಈ ಸಂಬಂಧವಾಗಿ 5 ಮನೆಗಳ ಜಡ್ತಿ ನಡಿಸಿ ಗಾಯಗೊಂಡವರ ಹೊರತು ಇನ್ನು 3 ಮಂದಿ ತರುಣರನ್ನು ಕೈದು ಮಾಡಿರುವರು. ಇದೇ ದಿನ ನೋಂಘೀರಿನಲ್ಲೊಂದು ಮನೆಯಲ್ಲಿ ಬೋಂಬೊಂದು ಸ್ಫೋಟವಾಗಿ 4ಮಂದಿ ಗಾಯಗೊಂಡಿರುವರು.

ಆಲ್ವಾರಿನ ಮಹಾರಾಜರ ಮರಣ

ಆಲ್ವಾರಿನ ಮಹಾರಾಜರು ಇದೇ ತಾ. 19ರಲ್ಲಿ ತನ್ನ 35ನೇ ವಯಸ್ಸಿನಲ್ಲಿ ಪೆರಿಸಿನಲ್ಲಿ ಟೆನ್ನಿಸ್ ಆಡುವಾಗ ಕಾಲುಜಾರಿ ಬಿದ್ದು ಮೃತರಾಗಿರುವರು. ಇವರು ದೊಡ್ಡ ಸಂಸ್ಕೃತ ಪಂಡಿತರಾಗಿದ್ದರು. ಹಿಂದು ಧರ್ಮ ಮತ್ತು ಸಂಸ್ಕೃತಿಯ ಕುರಿತು ಹೆಚ್ಚಿನ ಅಭಿಮಾನವುಳ್ಳವರಿದ್ದರು. ರೌಂಡ್ ಟೇಬಲ್ ಪರಿಷತ್ತಿನಲ್ಲಿ ಪ್ರಮುಖಭಾಗ ವಹಿಸಿದ್ದರು. 1933ರಲ್ಲಿ ಆಲ್ವಾರ್ ಸಂಸ್ಥಾನದ ಆಡಳಿತ ವಿಷಯದಲ್ಲಿ ಸರಕಾರಕ್ಕೂ ಮಹಾರಾಜರಿಗೂ ಭಿನ್ನಾಭಿಪ್ರಾಯವುಂಟಾಗಿ ಮಹಾರಾಜರು ಪಟ್ಟಬಿಟ್ಟು ಯುರೋಪಿಗೆ ಹೋದರು. ಆ ಮೇಲೆ ಸಂಸ್ಥಾನಕ್ಕೆ ಕಾಲಿಡಲೇ ಇಲ್ಲ. ಇವರಿಗೆ ಸಂತತಿ ಇಲ್ಲದಿರುವುದರಿಂದ ಮುಂದೆ ಪಟ್ಟಕ್ಕೆ ಬರುವವರಾರೆಂದು ಗೊತ್ತಿಲ್ಲ. ಮಹಾರಾಜರು ಯಾರನ್ನೂ ದತ್ತಕ್ಕೆ ತೆಗೆದುಕೊಳ್ಳಲಿಲ್ಲ. ಅವರ ಶವವು ಹಿಂದು ದೇಶಕ್ಕೆ ತರಲ್ಪಡುವುದು

ಲಕ್ನೊದಲ್ಲಿ ಶೀಯಸುನ್ನಿ ಜಗಳ

ಇದೇ ತಾ. 20ರಲ್ಲಿ ಲಕ್ನೊದಲ್ಲಿ ಶೀಯರು ಇಸ್ಲಾಮಿಡನ್ನು ಆಚರಿಸಿ ಮಹಮ್ಮದ್ ಪೈಗಂಬರರ 3 ಮಂದಿ ಸಂಗಾತಿಗಳನ್ನು ದೂಷಿಸುವ 'ಟಬಾರ' ಎಂಬ ಶ್ಲೋಕಗಳನ್ನು ಉಚ್ಚಾರಮಾಡಿದರು. ಇದರಿಂದ ಸುನ್ನಿಗಳು ಆಕ್ರೋಶಗೊಂಡು ಇತ್ತಂಡದವರಲ್ಲಿಯೂ ಜಗಳವುಂಟಾಗಿ ದೊಣ್ಣೆ ಮತ್ತು ಲಾಠಿಗಳಲ್ಲಿ ಹೊಡಕೊಂಡರು. ಇದರಿಂದಾಗಿ ಒಟ್ಟು 30 ಮಂದಿ ಗಾಯಗೊಂಡಿರುವರು. 12 ಮಂದಿಗೆ ಬಹಳ ಪೆಟ್ಟಾಗಿರುವುದು. ಕೂಡಲೇ ಪೋಲೀಸರು ಧಾವಿಸಿ ಬಂದು ಗಲಾಟೆ ನಿಲ್ಲಿಸಿದರು. ಮುಸಲ್ಮಾನ ಪ್ರದೇಶದ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟಿರುವವು. ಇತ್ತಂಡದವರೊಳಗೆ ರಾಜಿಮಾಡುವ ಪ್ರಯತ್ನ ನಡೆದಿದೆ.

ಡ್ಯೂಕ್ ಆಫ್ ವಿಂಡ್ಸರರ ವಿವಾಹ

ಡ್ಯೂಕ್ ಆಫ್ ವಿಂಡ್ಸರ್ ಮತ್ತು ಮಿಸೆಸ್ ಸಿಮ್ಸನರು ಒಟ್ಟಿಗೆ ಆನಂದದಿಂದಿರುವರು. ಅವರ ವಿವಾಹವು ಜೂನ್ ತಾ. 3ರಲ್ಲಿ ನಡೆಯುವುದು. ಈ ವಿವಾಹಕ್ಕೆ ರಾಜ ಮನೆತನದವರಾರೂ ಆಮಂತ್ರಿಸಲ್ಪಡುವುದಿಲ್ಲ. ಡ್ಯೂಕರ ಮತ್ತು ಮಿಸೆಸ್ ಸಿಮ್ಸನರ ಆಪ್ತ ಸಂಗಾತಿಗಳಿಗೆ ಮಾತ್ರ ಆಮಂತ್ರಣವಿರುವುದು.

ಪ್ರಕಟಣೆ

"ಮುಗುಳು" ಪದ್ಯ ಪುಸ್ತಕದ ಸೋಲ್ ಏಜೆನ್ಸಿಯನ್ನು ಉಡುಪಿಯ 'ನವಭಾರತ ಬುಕ್ ಡಿಪೊ' ಇವರಿಗೆ ಕೊಡಲಾಗಿದೆ. ಪ್ರತಿಗಳು ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು.

ಕೆ. ಹೊನ್ನಯ್ಯ ಶೆಟ್ಟಿ,
೨೬–೪–'೩೭. ಉಡುಪಿ.

ಅಪೂರ್ವ ಸಂದರ್ಭ ! ಒಂದೇ ಒಂದು ನಾಟಕ ! ಅಲಭ್ಯ ಲಾಭ !!

ಇದೇ ತಾ. 29ನೇ ಶನಿವಾರ ರಾತ್ರಿ 9·30ಕ್ಕೆ

ಮೂಲ್ಕಿ, ಪಡುಬಿದ್ರೆ, ಕಾರ್ಕಳ ಮೊದಲಾದ ಕಡೆಗಳಲ್ಲಿ ಇದೇ ನಾಟಕವನ್ನು ಅಭಿನಯಿಸಿ, ಪ್ರೇಕ್ಷಕರ ಪ್ರಶಂಸೆಗೆ ಪಾತ್ರರಾದ

ಮೂಲ್ಕಿ ಕಿರಿಯರ ಕೂಟದವರು * * * * ಮೂಲ್ಕಿ ಸಂಗೀತಕಲಾ ಮಂದಿರದ

ದ್ವಿತೀಯ ವರ್ಷ ವರ್ಧಂತಿಯ ಸಹಾಯಾರ್ಥವಾಗಿ

ಅಸ್ಪೃಶ್ಯತಾ ಅಥವಾ ಹರಿಜನೋದ್ಧಾರ

ಎಂಬ ನವೀನ ಸಂಗೀತ ಸಾಮಾಜಿಕ ನಾಟಕವನ್ನು

ಉಡುಪಿ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ

ಉತ್ಕೃಷ್ಟ ನಟವರ್ಗದವರಿಂದೊಡಗೂಡಿ ಅಭಿನಯಿಸುವರು. ಉಡುಪಿಯ ಮಹಾಜನರೆಲ್ಲರೂ ಬಂದು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಸ್. ಎನ್. ಹರಿದಾಸ್, ವ್ಯವಸ್ಥಾಪಕ.

ವಿಚಿತ್ರ ಪ್ರಪಂಚ

ಲೋಕದ ಅತಿ ಎತ್ತರ ಮನುಷ್ಯ

ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ಆಲ್ಟನ್ ಎಂಬಲ್ಲಿ ಹುಟ್ಟಿರುವ ರೋಬರ್ಟ್ ವಾಡ್ಲೋ ಎಂಬವನು ಲೋಕದ ಅತಿಗಾತ್ರ ಮನುಷ್ಯ. ಇವನ ಪ್ರಾಯ 18 ವರ್ಷ ಮಾತ್ರ. ಎತ್ತರ 8 ಅಡಿ 7 ಇಂಚು ದೇಹದ ತೂಕ 450 ರಾತ್ತಲ್. ವಾಡ್ಲೋವು ಈಗ ಒಂದು ಸರ್ಕಸ್ ಕಂಪೆನಿಗೆ ಸೇರಿದ್ದಾನೆ. ಅವನು ಜನರೆದುರಿಗೆ ಬಂದು ನಿಲ್ಲುವುದೇ ಸರ್ಕಸಿನ ಒಂದು ಪ್ರದರ್ಶನ.

ಭಿಕ್ಷೆ ಬೇಡುವ ನಾಯಿ.

ಲಂಡನಿನಲ್ಲಿ ಬೇಡುವುದು ಕಾನೂನಿಗೆ ವಿರುದ್ಧವಾಗಿದೆ. ಆದುದರಿಂದ ಲಂಡನ್ ಪಟ್ಟಣದ ಬೀದಿಗಳಲ್ಲಿ ಯಾರಾದರೂ ಬೇಡಿದರೆ ಖಟ್ಲೆಗೊಳಗಾಗುವರು. ಆದರೆ ಮನುಷ್ಯನ ಬದಲಿಗೆ ನಾಯಿ ಬೇಡಿದರೆ ಅದೂ ತಪ್ಪಿತಸ್ಥರಾಗುವುದೇ ಎಂಬ ಪ್ರಶ್ನೆಯು ಕೋರ್ಟಿನ ಮುಂದೆ ಬಂತು. ಒಬ್ಬ ಮನುಷ್ಯನು ತಾನೇನೂ ಬೇಡುತ್ತಿರಲಿಲ್ಲ. ಆದರೆ ತನ್ನ ನಾಯಿಯನ್ನು ಬೇಡಲು ತರಬೇತಿ ಮಾಡಿದ್ದ. ಅದು ಒಂದು ಟೊಪ್ಪಿ ಹಿಡಕೊಂಡು ಜನರ ಮುಂದೆ ಹೋಗಿ ನಿಂತು ಬಾಲ ಅಲ್ಲಾಡಿಸುತ್ತಿತ್ತು. ಮೂಸಿ ಬೇಡುವಂತೆ ನಟಿಸುತ್ತಿತ್ತು. ಇದಕ್ಕಾಗಿ ಪೋಲೀಸರು ಈ ನಾಯಿಯ ಯಜಮಾನನ ಮೇಲೆ ಖಟ್ಲೆ ನಡಿಸಿದರು. ಅದು ಅವನ ಏಜೆಂಟಾಗಿ ಬೇಡುವುದರಿಂದ ಅವನು ಶಿಕ್ಷಾರ್ಹನೆಂದು ವಾದಿಸಿದರು. ಆದರೆ ಮೆಜಿಸ್ಟ್ರೇಟರು ನಾಯಿಯ ಕೆಲಸವು ಆಕ್ಷೇಪಕರವಾದುದೆಂದೊಪ್ಪದೆ ಖಟ್ಲೆಯನ್ನು ತೆಗೆದು ಹಾಕಿಬಿಟ್ಟರು.

ಹೆಂಡಿರ ದಾಸರ ಸಂಘ

ಹೆಂಡಿರ ಅಡಿಯಾಳುಗಳಾಗಿ ಅವರಿಂದ ನಾನಾ ಪೀಡೆ ಪಡೆಯುತ್ತಿರುವ ಗಂಡಂದಿರೆಲ್ಲಾ ಒಟ್ಟು ಸೇರಿ 'ಡೋಗ್ ಹೌಸ್' ಎಂಬ ಸಂಘಗಳನ್ನು ಸ್ಥಾಪಿಸಿಕೊಂಡಿರುವರು. ಈ ಸಂಘವು ಸ್ಥಾಪಿತವಾದುದು ಇತ್ತಲಾಗಿ, ಇಷ್ಟರಲ್ಲೇ ಅದರ ಮೆಂಬರಿಕೆಯು ಬಹಳವಾಗಿ ಹೆಚ್ಚಿದೆ. ಚಿಕಾಗೋದಲ್ಲಿ 5000 ಮೆಂಬರರು ಈ ಸಂಘಕ್ಕೆ ಸೇರಿದ್ದಾರೆ. ಹೆಂಡಿರ ಕಾಟ ಮತ್ತು ಅಡಿಯಾಳುತನವು ಸಾಕು ಸಾಕಾದ ಗಂಡಂದಿರ ಆಶಯವಾಗಿ ಕೆಲವೇ ಜನರಿಂದ ಸ್ಥಾಪಿತವಾದ ಈ ಸಂಘದ ಶಾಖೆಗಳು ಕೆನಾಡಾ, ಇಂಗ್ಲೆಂಡ್, ಹೊಸಲೂಲು ಮತ್ತು ಕಲ್ಕತ್ತಗಳಲ್ಲಿ ಸ್ಥಾಪಿತವಾಗಿರುವವು.

ಜ್ವಾಲಾಮುಖಿಗೆ ಹಾರಿ ಆತ್ಮಹತ್ಯೆ

ಜಪಾನಿನಲ್ಲಿ ಪ್ರಣಯಿಗಳು ಭಗ್ನ ಮನೋರಥರಾದರೆ ಟೋಕಿಯೋ ಪಟ್ಟಣದ ಬಳಿಯಿರುವ ಮೌಂಟ್ ವಿಹಾರ ಎಂಬಲ್ಲಿರುವ ಜ್ವಾಲಾಮುಖಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವುದು ಮೊದಲಿಂದಲೂ ನಡೆದು ಬಂದೊಂದು ರೂಢಿ. ಇದನ್ನು ಯಾರಿಂದಲೂ ತಡೆಗಟ್ಟಲು ಸಾಧ್ಯವಿಲ್ಲ. ಅದಕ್ಕೆ ಕಾನೂನಿನ ತಡೆಯಿಲ್ಲ. ಕಳೆದ ವರ್ಷ 619 ಮಂದಿ ಈ ರೀತಿ ಆತ್ಮಹತ್ಯೆ ಮಾಡಿಕೊಂಡಿರುವರು. ಹೀಗೆ ಜ್ವಾಲಾಮುಖಿಗೆ ಹಾರಿ ಆತ್ಮಹತ್ಯೆ ಮತ್ತು ಹರಿಕಾರಿಯಿಂದ ಜಪಾನಿನಲ್ಲಿ ವರ್ಷಕ್ಕೆ 17,000 ದಿಂದ 18,000ದ ವರೆಗಣ ಜನರು ಆತ್ಮಘಾತ ಮಾಡಿಕೊಳ್ಳುತ್ತಿರುವರು. ಇದನ್ನು ನಿಲ್ಲಿಸಲು ಈಗ ಚಳವಳ ನಡೆದಿರುವುದು.

ಯುರೋಪಿನ ಅತಿಪಳಬ ದಂಪತಿಗಳು

ಹಂಗೇರಿ ದೇಶದ ಜೋಸೆಫ್ ಕೃಸ್ಮನೆಂಬವನು 106 ವರ್ಷ ಪ್ರಾಯದ ಮುದುಕ. ಅವನ ಪತ್ನಿ ಮರಿಯಳ ಪ್ರಾಯ 100 ಇಬ್ಬರೂ ಸುಖ ದಾಂಪತ್ಯ ನಡಿಸಿ ೩ ತಿಂಗಳ ಮೊದಲು ತಮ್ಮ ವಿವಾಹದ 75ನೇ ವಾರ್ಷಿಕೋತ್ಸವವನ್ನು ಆಚರಿಸಿದ್ದರು. ಅನಂತರ ಜೋಸೆಫನು ನ್ಯುಮೋನಿಯ ಜ್ವರ ಪೀಡಿತನಾಗಿ ಮೃತನಾದ. ಮೇರಿಯಳಿಗಿದು ಅಸಹನೀಯವಾಯಿತು. ಇವನ ಶವ ಸಂಸ್ಕಾರವಾಗುವಾಗಲೇ ಮೇರಿಯಳು ಹೃದಯಸ್ತಂಭನದಿಂದ ಮೃತಪಟ್ಟಳು. ಈ ದಂಪತಿಗಳು ಈ ವರೆಗೆ ಕಾಯಿಲೆಯಲ್ಲಿ ಬಿದ್ದುದೇ ಇಲ್ಲ. ಇವರಿಗೆ 43 ಮಂದಿ ಮೊಮ್ಮಕ್ಕಳಿರುವರು. ಜೋಸೆಫನ ಸುಖ ಜೀವನದ ೩ ನಿಯಮಗಳೆಂದರೆ ಕ್ರಮವಾಗಿ ಜೀವಿಸುವುದು, ಸದಾ ಸಂತೋಷ ಚಿತ್ತವಾಗಿರುವುದು, ಧಾರಾಳ ಹೊಗೆಬತ್ತಿ ಸೇದುವುದು.

ಕುಳ್ಳರಾದುದರಿಂದ ಮದುವೆಯಾಗಲಾರದು.

ಯುಗೊಸ್ಲಾವಿಯದ ಸರ್ಕಾರಿನಲ್ಲಿ ಅಂತೋನು ಮತ್ತು ಮಿರಿಜಾ ಎಂಬಿಬ್ಬರು ಕುಳ್ಳರಿರುವರು. ಅಂತೋನನಿಗೆ 28ವರ್ಷ. ಮಿಲಜಳಿಗೆ 23ವರ್ಷ ವಯಸ್ಸು. ಅಂತೋನನ ಗಾತ್ರ 2 ಅಡಿ 11ಇಂಚು. ಮಿಲಿಜಳದು 2ಅಡಿ 8½ಇಂಚು ಈ ಕುಳ್ಳರಿಬ್ಬರೂ ಮದುವೆ ಮಾಡಿಕೊಳ್ಳುವ ನಿರ್ಧಾರ ಮಾಡಿದರು. ಆದರೆ ಅವರು ಬಹಳ ಕುಳ್ಳರಿರುವುದರಿಂದ ಸಿವಿಲ್ ಕಾನೂನು ಪ್ರಕಾರ ಮದುವೆಯಾಗಲು ಸಾಧ್ಯವಿಲ್ಲವಾಗಿದೆ ಯಾಕಂದರೆ ಕಾನೂನು ಪ್ರಕಾರ ಮದುವೆಯಾಗುವವರು ಕಡಿಮೆಯೆಂದರೆ 3ಅಡಿ ಎತ್ತರವಿರತಕ್ಕದ್ದು. ಅಂತೋನು ಮತ್ತು ಮಿರಿಜಳು ಯುಗೋಸ್ಲಾವಿಯದ ಕೆಥೋಲಿಕ್, ಮುಸಲ್ಮಾನ, ಯೆಹೋದ್ಯ ದೇವಾಲಯಗಳಿಗೆಲ್ಲಾ ಹೋಗಿ ತಮ್ಮ ಮದುವೆಯ ಸಂಸ್ಕಾರ ನಡಿಸಬೇಕೆಂದು ಕೇಳಿಕೊಂಡರೂ ಪ್ರಯೋಜನವಾಗಲಿಲ್ಲ. ಎಲ್ಲಾ ದೇವಾಲಯಗಳವರೂ ಮದುವೆಮಾಡಲು ಸಾಧ್ಯವಿಲ್ಲೆಂದು ನಿರಾಕರಿಸಿರುವರು.

ನಾಯಿಗಳ ವಿಚಿತ್ರ ಬುದ್ಧಿಶಕ್ತಿ

ಮಾತಾಡುವ, ಲೆಕ್ಕ ಮಾಡಬಲ್ಲ, ಓದಬಲ್ಲ, ಮನೆಗೆ ಯಾರ್‍ಯಾರು ಯಾವುದಕ್ಕೆ ಬರುವುವೆಂದು ತಿಳಿದು ಕೊಳ್ಳಬಲ್ಲ ವಿಚಿತ್ರ ನಾಯಿಗಳಿರುವವೆಂದೀಗ ತಿಳಿದುಬಂದಿದೆ. ಜರ್ಮನಿಯಲ್ಲಿ ಹುಡುಗರಿಗೆ ತಮ್ಮ ಮನೆಕೆಲಸದಲ್ಲಿ ಸಹಾಯಮಾಡುವ ಹಲವು ನಾಯಿಗಳಿರುವವು. ಅಂತಹ ಒಂದು ನಾಯಿಯ ಹೆಸರು ರೊಲ್ ಎಂದು. ರೋಲ್ಫಿನ ಯಜಮಾನಿಯು, ತನ್ನ ಮಗನಿಗೆ ೭ನ್ನು 122ಕ್ಕೆ ಕೂಡಿಸಲಾಗದುದಕ್ಕೆ ಗದರಿಸಿದಳು. ಆಗ ರೋಲ್ಫ್ ಮಗನ ಬಳಿಗೆ ಹೋಗಿ ತನ್ನ ಕಾಲಿನಿಂದ 124 ಎಂದು ನೆಲದಲ್ಲಿ ಗುರುತುಮಾಡಿ ತಿಳಿಸಿತು. ಅಂದಿನಿಂದ ಈ ಹುಡುಗನ ಮನೆಕೆಲಸವನ್ನೆಲ್ಲಾ ರೋಲ್ಫೇ ಮಾಡತೊಡಗಿತು. ರೋಲ್ಫ್ ಬಗುಳುವ ಅಕ್ಷರ ಮಾಲೆಯ ಮೂಲಕ ಮಾತಾಡಬಲ್ಲದು. ಅದರ 10 ಮರಿಗಳಲ್ಲಿ ಒಂದು ಮೋಟಾರ್ ಕಾರೊಂದರ ಅಡಿಗೆ ಬಿದ್ದು ಸತ್ತಾಗ ರೋಲ್ಫ್ "ನಾನು ನನ್ನ ಮಗನನ್ನು ಕೊಂದವನನ್ನು ಹುಡುಕುವ ಪ್ರಯತ್ನಮಾಡಿ ಅವನನ್ನು ಕಚ್ಚುವೆನು" ಕೆಲವು ನಾಯಿಗಳು ಛಾಯಾಚಿತ್ರಗಳಿಂದ ಮನುಷ್ಯರನ್ನು ಗುರುತಿಸಿ, ಮನೆಗೆಬರುವವರನ್ನು ಟೀಕಿಸ ಬಲ್ಲವು. ಜರ್ಮನಿಯ ಶ್ರೀ ಮಂಡಳೊಬ್ಬಳ ಕುವೇನಲ್ ಎಂಬ ನಾಯಿಯು ವಿಚಿತ್ರಬುದ್ಧಿಶಕ್ತಿಯುಳ್ಳದ್ದು. ಅದು ಸ್ತ್ರೀಯವೇಷ ಭೂಷಣಗಳ ಕುರಿತು ಟೀಕೆಮಾಡಬಲ್ಲದು. ಅದು ತನಗೆ ಸರಿತೋರುವಾಗ ಅಭಿನಂದಿಸುವುದು. ಶೇಕ್ಸ್‌ಪಿಯರ್ ಮೊದಲಾದ ಕವಿಗಳ ವಾಕ್ಯಗಳನ್ನೆತ್ತಿ ಅವರ್‍ಯಾರು ಬರೆದುದೆಂದು ಕೇಳಿದರೆ ಕುವೇನಲ್ ಅವರ ಹೆಸರನ್ನು ಸರಿಯಾಗಿ ಹೇಳುವುದು.

ಪ್ರಕಟಣೆ

ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ: —

ನಂಬ್ರ ೪೫೬ನೆ ಹೆಬ್ರಿ ಪರಸ್ಪರ ಸಹಕಾರ ಸಂಘದವರು ಪಡೆದ ಡಿಕ್ರಿ ಸಮಾಧಾನದ ಬಗ್ಗೆ ದ. ಕ. ಜಿಲ್ಲಾ ಸಹಕಾರ ಸಂಘಗಳ ಡಿಪ್ಯುಟಿ ರಿಜಿಸ್ತ್ರಾರರ ಕೋರ್ಟಿನಲ್ಲಿ ನಡಿಸಿದ ಇ. ಪಿ. ನಂಬ್ರ ೪೫೬/೧೯೩೬-೩೭ರಲ್ಲಿ ಆದ ಏಲಂನಲ್ಲಿ ಸದ್ರಿ ಸಂಘದ ಪರವಾಗಿ ಅಧ್ಯಕ್ಷರು ವಹಿಸಿಕೊಂಡು ಕಾರ್ಕಳ ಡಿ. ಸಬ್ ಕೋರ್ಟಿನ ಆರ್. ಇ. ಎ. ೩೦೫/೧೯೩೬ರಲ್ಲಿ ಸ್ವಾಧೀನಪಡಿಸಿಕೊಂಡ ಮೃತ ಮುಡಾಬಲ ಬಲ್ಲಾಳರ ಸ್ವಂತ ಹಕ್ಕಿನ ಬಾಬ್ತು ಹೆಬ್ರಿ ಗ್ರಾಮದ ಮಾಲಿದ ಮೂಲಿಗೇಣಿ ಹಕ್ಕಿನ ಸ್ಥಳ — ಅದರಲ್ಲಿರುವ ತಕ್ತಪ್ರೋಸೀ ಹಂಚು ಛಾವಣಿಯ ಮಾಳಿಗೆ ಮನೆ ಮತ್ತು ಅದಕ್ಕೆ ಸಂಬಂಧ ಪಟ್ಟ ಎಲ್ಲಾ ಕಟ್ಟಡಗಳನ್ನೂ ಮತ್ತು ಸದ್ರಿ ಕಟ್ಟಡದ ಚಾಲಗೇಣಿ ಒಕ್ಕಲು ಹೆಬ್ರಿ ಮುಕುಂದ ಪೈಗಳಿಂದ ಸಂಘಕ್ಕೆ ಬರತಕ್ಕ ಈ ವರೆಗಿನ ಗೇಣಿ ವಸೂಲಿ ಹಕ್ಕು ಸಮೇತ ತಾ. ೪-೬-'೩೭ನೆ ಶುಕ್ರವಾರ ಅಪರಾಹ್ನ ಗಂಟೆ ೩ ಮೂರು ಹೊಡೆಯುವ ಸಮಯಕ್ಕೆ ಸರಿಯಾಗಿ ಹೆಬ್ರಿ ಸಹಕಾರ ಸಂಘದ ಆಫೀಸಿನಲ್ಲಿ ಸಂಘದ ಅಧ್ಯಕ್ಷರಿಂದ ಪಂಚಾಯತ್ ನಡೆಯುವದು ಏಲಂ ಮಂಜೂರುಮಾಡುವ ಶರ್ತದ ಮೇಲೆ ಏಲಂ ಮಾಡೋಣಾಗುವುದು. ಏಲಂ ಖಾಯಂ ಆದೊಡನೆ ಸಂಘದ ಅಧ್ಯಕ್ಷರಿಂದ ರಿಜಿಸ್ಟ್ರೇಷನ್ ಕ್ರಯಪತ್ರ ಬರೆಕೊಡಲ್ಪಡುವುದು. ಇದರ ಮುಂದಿನ ಲಾಭನಷ್ಟಗಳಿಗೆ ಸಂಘವು ಜವಾಬ್ದಾರಿಯಾಗಲಾರದು. ಅಗತ್ಯವುಳ್ಳವರು ಹೆಚ್ಚಿನ ಅನುಭವವನ್ನು ಸಂಘದ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು. ಇದರ ಯಥಾ ನಕಲು ಗ್ರಾಮದಲ್ಲಿಯೂ ಬಹಿರಂಗಪಡಿಸಿಯದೆ.

Sd/ H. Bhujanga Ballal,
President.
ಸಹಕಾರ ಸಂಘದ ಆಫೀಸು ಹೆಬ್ರಿ.
ತಾ. ೨೪-೫-'೩೭

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

ವಿದ್ಯಾರ್ಥಿಗಳಿಗೆ ಉಪಾಧ್ಯಾಯರಿಗೆ ಇತರ ಗ್ರಾಹಕರಿಗೆ

ನವಭಾರತ ಬುಕ್ ಡಿಪೋ,

ಚರ್ಚ್ ರೋಡ್ ಉಡುಪಿ ದಕ್ಷಿಣ ಭಾರತ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1920

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಡಿಗಳ ಬೇಜು, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ,

	ಅ	
ನವಭಾರತ ಬುಕ್ ಡಿಪೊ	ಥ	ಕಾರ್ಯದರ್ಶಿ,
ಉಡುಪಿ	ವಾ	ಕಿರಿಯರ ಪ್ರಪಂಚ, ಉಡುಪಿ.

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ

ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ

'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

The Manager, **The National Kanara News Agency,**
No. 58 Mody Street, Fort Bombay.

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: 1907]

ಅತ್ಯಧಿಕ ಬೋನಸು!

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**

ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**

ಬಲವಂತ ಪೊಲಿಸಿಗಳು ರೂ. 3 ಕೋಟಿ ಮಿಕ್ಕಿವೆ.

ಮೂಲಧನವು ರೂ, **75** ಲಕ್ಷ ಮಿಾರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಷ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ ಡಿ. ಭರ್ಗವಾ ಎಸ್ಕ್ವಾಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

THE

Vijaya Bank, Ltd.

Head Office. MANGALORE. Branch Offices: **Udipi, Kaup & Coondapoor.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. $3\frac{1}{2}$

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. $3\frac{3}{4}$

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

3 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. $5\frac{1}{2}$ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ವಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದೇಶೀ ಡಿಪೋ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

ಮಂಗಳೂರು

ಶ್ರೀ ಜ್ಞಾನೋದಯ ಸಮಾಜ ಮಂಗಳೂರು

ವಿನಂತಿ

ಈ ಸಮಾಜವು ಜಾತಿ ಮತಭೇದಗಳನ್ನಿಟ್ಟುಕೊಳ್ಳದೆ ನಮ್ಮ ಜಿಲ್ಲೆಯ ಎಲ್ಲಾ ಪಂಗಡದ ಮತ್ಸ್ಯ ವ್ಯವಸಾಯಿಗಳು ಮತ್ತು ಕಾಯ ಪರಿಶ್ರಮಿಕ ಜನರಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು ಉಂಟಾಗುವಂತೆ ಸಾಕಷ್ಟು ವಿಚಾರ ಜಾಗೃತಿಯನ್ನುಂಟುಮಾಡಿರುವುದೂ ವಂಶ ಪಾರಂಪರ್ಯ ಮದ್ಯಪಾನ ನಿರತರಾಗಿರುವ ಜನರಲ್ಲಿ ಮದ್ಯಪಾನ ಪರಿತ್ಯಾಗವು ಅಸಾಧ್ಯವೆಂದೆನಿಸಲ್ಪಡುತ್ತಿದ್ದರೂ ಅಂತಹ ಜನರಲ್ಲಿ ಸಂಪೂರ್ಣ ಮದ್ಯಪಾನ ಪರಿತ್ಯಾಗ ಚಳವಳವನ್ನುಂಟುಮಾಡಿ ಅದರಲ್ಲಿ ಸಾಕಷ್ಟು ಜಯಶೀಲವಾಗಿರುವುದೂ ಐದು ಸಹಸ್ರ ರೂಪಾಯಿಗಳಿಗಿಂತ ಹೆಚ್ಚು ವ್ಯಯಮಾಡಿ ಒಂದು ಮಂದಿರ ನಿರ್ಮಾಣಗೊಳಿಸಿ ಅದರಲ್ಲಿ ಸಮಾಜದ ಎಲ್ಲಾ ವಿಧದ ಕಾರ್ಯ ಕಲಾಪಗಳು ಸಾಧಿಸಲ್ಪಡುತ್ತಿರುವುದೂ ದೇಶಾಭ್ಯುದಯಕಾಂಕ್ಷಿಗಳಾದ ಮಹಾ ಜನರಿಗೆಲ್ಲಾ ತಿಳಿದ ವಿಷಯವಾಗಿದೆ

ಪ್ರಕೃತ ಈ ಸಮಾಜವು ತನ್ನ ರಜತ ಜಯಂತಿಯ ಸ್ಮರಣಾರ್ಥವಾಗಿ ಐದು ಸಹಸ್ರ ರೂಪಾಯಿಗಳ ಒಂದು ಸ್ಥಿರಕೋಶವನ್ನು ಸಂಗ್ರಹಿಸಿ ಇನ್ನು ಮುಂದಕ್ಕೆ ಸ್ವಾವಲಂಬಿಯಾಗಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುವಂತೆಯೂ ರಜತ ಜಯಂತಿ ಉತ್ಸವ ಕಾಲದಲ್ಲಿ ಸಾರ್ವಜನಿಕವಾದ ವಿವಿಧ ಸತ್ಕಾರ್ಯಗಳನ್ನು ಮಾಡಬೇಕೆಂದೂ ಸಂಕಲ್ಪಿಸಿಯದೆ.

ನಮ್ಮ ಈ ಎಲ್ಲಾ ಕಾರ್ಯಸಾಧನೆಯ ಸಹಾಯಾರ್ಥಕವಾಗಿ ಮುಂಬಯಿಯಲ್ಲಿ ಇರುವ ಕರ್ನಾಟಕ ನೂತನ ಸಂಗೀತ ಸಭೆಯವರು ಇದೇ ಬರುವ ಜೂನ್ ತಾ. ೬ಕ್ಕೆ ಸರ್‌ಕಾವಸ್ಜಿ ಜಹಾಂಗಿರ್ ಸದನದಲ್ಲಿ ನವಯುಗ ಸಂಪಾದಕರಾದ ಶ್ರೀಮಾನ್ ಕೆ. ಕೆ ಶೆಟ್ಟಿಯವರಿಂದ ವಿರಚಿತವಾದ "ವ್ಯಭಿಚಾರಿಣಿ ಯಾರು? ಎಂಬ ಹೆಸರುಗೊಂಡ ನಾಟಕವನ್ನು ಆಡಲು ನಿಶ್ಚಯಿಸಿರುತ್ತಾರೆ. ಮುಂಬೈಯ ಕರ್ನಾಟಕ ಹಿತೈಷಿ ಕಂಪನಿಯ ಪ್ರಾಲಕರಾದ ಶ್ರೀಮಾನ್ ವಿ. ಕೆ. ಕೋಟ್ಯಾನ್‌ರವರು ಈ ನಾಟಕದ ಎಲ್ಲಾ ವ್ಯವಸ್ಥೆ ಗೈಯುವ ಸರ್ವ ಭಾರವನ್ನೂ ಟಿಕೇಟು ಮಾರಾಟ ಮಾಡಿಸುವ ಜವಾಬ್ದಾರಿಯನ್ನೂ ವಹಿಸಿಕೊಂಡಿರುತ್ತಾರೆ

ನಿಸ್ವಾರ್ಥ ಮತ್ತು ಧಾರ್ಮಿಕ ಬುದ್ಧಿಯಿಂದ ಕಾರ್ಯರಂಗಕ್ಕಿಳಿದ ಸಂಗೀತ ಸಭೆಯವರ ಮತ್ತು ಶ್ರೀ ಕೋಟ್ಯಾನ್‌ರವರ ಶ್ರಮೆಯನ್ನು ಸಾರ್ಥಕಗೊಳಿಸುವುದು ಮುಂಬೈಯಲ್ಲಿ ಇರುವ ನಮ್ಮ ತುಳು ಕರ್ನಾಟಕಸ್ಥರ ಕರ್ತವ್ಯವಾಗಿದೆ ಇದರಿಂದ ದೊರೆಯುವ ಹಣವು ಸಮಾಜದವರು ಈಗ ನಿರ್ಮಿಸುತ್ತಿರುವ ಸಾರ್ವಜನಿಕ ದೇವಯಜ್ಞ ಮಂದಿರ ಮತ್ತು ವಿದ್ಯುತ್ ದೀಪಗಳನ್ನಿಡುವ ಕಾರ್ಯಗಳಿಗಾಗಿ ಉಪಯೋಗಿಸಲಾಗುವುದು

ನಮ್ಮೂರವರ ಶ್ರೇಯ ಸಾಧನೆಗಾಗಿ, ನಮ್ಮೂರ ಕವಿಗಳಿಂದಲೇ ಕವನಿಸಲ್ಪಟ್ಟ ಸಮಾಜ ಸುಧಾರಣ ನಾಟಕವನ್ನು ನಮ್ಮೂರ ಸಂಗೀತ ಸಭೆಯವರೇ ಆಡುವ ಈ ನಾಟಕಕ್ಕೆ ಮುಂಬೈಯಲ್ಲಿ ಇರುವ ಸಾವಿರಾರು ನಮ್ಮೂರ ಬಂಧು ಭಗಿನಿಯರು ಹೋಗಿ ತಮ್ಮ ಮನೋರಂಜನೆಯೊಂದಿಗೆ ಭಾಷಾಸೇವೆ ಸಮಾಜ ಸೇವೆ, ನಾದಸೇವೆ ಗೈದು ದೇವ ಕಾರ್ಯದ ಪುಣ್ಯ ಭಾಗಿಗಳಾಗಬೇಕಾಗಿ ಬೇಡುತ್ತೇನೆ—ಇತಿ ನಮಸ್ತೇ.

ಬಿ ಮೋಹನಪ್ಪ ತಿಂಗಳಾಯ,
ಕಾರ್ಯದರ್ಶಿ.

ನಗರ ಸಭೆಯ ಮತದಾರರ ಪಟ್ಟಿ

ಮಂಗಳೂರು ನಗರಸಭೆಯ ಮತದಾರರ ಪಟ್ಟಿಯು ಪರಿಶೋಧಿಸಲ್ಪಟ್ಟು ಇದೇ ಮೇ ತಾ ೧೫ರಲ್ಲಿ ಪ್ರಕಟಿಸಲ್ಪಟ್ಟಿತು ಪಟ್ಟಿಗಳು ಮ್ಯುನಿಸಿಪಲ್ ಮತ್ತು ತಾಲೂಕು ಆಫೀಸುಗಳಲ್ಲಿ ಇಡಲ್ಪಟ್ಟಿವೆ ಅವುಗಳನ್ನು ಆಫೀಸು ಸಮಯದಲ್ಲಿ (೧೧ರಿಂದ ೫ರ ವರೆಗೆ) ಬಂದು ನೋಡಬಹುದು ಆಕ್ಷೇಪಣೆದಾವೆಗಳು ಇದ್ದಲ್ಲಿ ನಿಯಮಿತ ಫಾರ್ಮುಗಳಲ್ಲಿ ಬರಾಯಿಸಿ ಜೂನ್ ತಾ ೧೫ರ ಒಳಗಾಗಿ ಮ್ಯುನಿಸಿಪಲ್ ಕಮಿಷನರಿಗೆ ಕಳುಹಿಸಬೇಕು ಫಾರ್ಮುಗಳು ಮ್ಯುನಿಸಿಪಲ್ ಕಚೇರಿಯಲ್ಲಿ ದರ್ಮಾರ್ಥವಾಗಿ ಸಿಕ್ಕುವವು, ಎಂದು ಮಂಗಳೂರು ಮ್ಯು ಕಮಿಷನರು ತಿಳಿಸುತ್ತಾರೆ

ಪ್ರಯಾಗ ಮಹಿಳಾ ವಿದ್ಯಾಪೀಠ ಅಲಹಾಬಾದ್

ಈ ವಿದ್ಯಾಪೀಠವು ಇದೇ ಬರುವ ಜುಲೈ ತಿಂಗಳಲ್ಲಿ ೨೫ ಮಂದಿ ದಕ್ಷಿಣ ದೇಶದ ಸ್ತ್ರೀಯರನ್ನು ಸೇರಿಸಿಕೊಳ್ಳುವ ಏರ್ಪಾಡು ಮಾಡಿದೆ ಭೋಜನ, ವಸತಿ ವಿನಾ ಶುಲ್ಕವಾಗಿ ಕೊಡಲ್ಪಡುತ್ತವೆ ಅಲ್ಲದೆ ಆಂಗ್ಲೋ ಇಂಡಿಯನ್ ಮತ್ತು ಕ್ರಿಸ್ತ ಮಹಿಳೆಯರಿಗೂ ಈ ರಿಯಾಯತಿಯು ಕೊಡಲ್ಪಡುತ್ತದೆ ಈ ಅನುಕೂಲತೆಗಳನ್ನು ಉಪಯೋಗಿಸಿಕೊಳ್ಳಬೇಕೆಂದಿರುವವರು ಪ್ರಯಾಗ ಮಹಿಳಾ ವಿದ್ಯಾಪೀಠ ಅಲಹಾಬಾದ್ ಇದರ ರಿಜಿಸ್ಟ್ರಾರರಿಗೆ ಅರ್ಜಿ ಮಾಡಿಕೊಳ್ಳಬೇಕು. ದಕ್ಷಿಣ ದೇಶದ ಸ್ತ್ರೀಯರಿಗೆ ಪ್ರೋತ್ಸಾಹವಿತ್ತು ಇಲ್ಲಿಂದ ಹೋದಂದಿನ ಇವರನ್ನು ಸಂಗೀತ, ಇಂಗ್ಲೀಷ್, ವ್ಯಾಯಾಮ, ಮತ್ತು ಹಿಂದೀ ಅಧ್ಯಾಪಿಕೆಯರನ್ನಾಗಿ ಸೇವಿಸಲು ಉತ್ತರದೇಶದಲ್ಲಿ ತುಂಬ ಅವಕಾಶವಿದೆಯಂತೆ

ಜಿಲ್ಲಾ ಬೋರ್ಡು ಮತದಾರರ ಪಟ್ಟಿ

ಬರುವ ಜಿಲ್ಲಾ ಬೋರ್ಡ್ ಚುನಾವಣೆಯ ಸಂಬಂಧವಾದ ಮತದಾರರ ಪಟ್ಟಿಯನ್ನು ಸಿದ್ಧಗೊಳಿಸುವುದಕ್ಕಾಗಿ ಪ್ರತಿಯೊಂದು ತಾಲೂಕಿಗೂ ಒಬ್ಬೊಬ್ಬರಂತೆ ಅಸಿಸ್ಟೆಂಟ್ ಇಲೆಕ್ಷನ್ ಆಫೀಸರರು ನೇಮಿಸಲ್ಪಟ್ಟಿರುವರು. ಅವರುಗಳು ತಾ ೨೦ ೫ ೩೬ರಿಂದ ೧೯೩೬ನೇ ಜುಲೈ ತಿಂಗಳ ಅಂತ್ಯದ ವರೆಗೂ ಆಯಾ ತಾಲೂಕುಗಳಲ್ಲಿ ಸಂಚರಿಸಿ ಮುಖ್ಯ ಮುಖ್ಯವಾದ ಸ್ಥಳಗಳಲ್ಲಿ ಕ್ಯಾಂಪುಮಾಡಿ ಮತದಾರರಾಗಲು ಅರ್ಹತೆಯುಳ್ಳವರನ್ನು ದಾಖಲುಮಾಡಿಕೊಳ್ಳುವರು ಮತದಾರರಿಗೆ ಅನುಕೂಲವಾಗುವ ಹಾಗೆ ಈ ರೀತಿ ಸಂಚಾರದ ಏರ್ಪಾಡು ಮಾಡಲಾಗಿದೆ ಓಟು ಮಾಡಲು ಅರ್ಹತೆಯುಳ್ಳ ರೈತರೂ ಮತ್ತು ಗೇಣಿಚೀಟು ಇತ್ಯಾದಿಗಳಿರುವವರೂ ತಂತಮ್ಮ ರಿಕಾರ್ಡುಗಳನ್ನು ಈ ಅಸಿಸ್ಟೆಂಟ್ ಇಲೆಕ್ಷನ್ ಆಫೀಸರರಲ್ಲಿಗೆ ತಗೆದು ಕೊಂಡು ಹೋಗಿ ತಮ್ಮ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ದಾಖಲು ಮಾಡಿಸಬೇಕು ಅಧಿಕಾರಿಗಳ ಸಂಚಾರದ ಕಾರ್ಯಕ್ರಮವು ಪ್ರತಿಯೊಂದು ಹಳ್ಳಿಯ ಅಧಿಕಾರಿಗಳಿಗೂ ಕಳುಹಿಸಲ್ಪಟ್ಟಿರುವುದು ಆದ್ದರಿಂದ ಈ ಅನುಕೂಲತೆಗಳನ್ನು ಮತದಾರರು ಉಪಯೋಗಪಡಿಸಿ ಕೊಳ್ಳಬೇಕೆಂದು ಶ್ರೀ ಯು ಜನಾರ್ದನ, ಡಿಸ್ಟ್ರಿಕ್ಟ್ ಇಲೆಕ್ಷನ್ ಆಫೀಸರ್, ಇವರು ತಿಳಿಸುತ್ತಾರೆ.

ನಗಾರ್ನವಗಿರಿ

ಶ್ರೀ ಪಿ ನರಸಿಂಹ ಓಕ್ತಿತಲು ಎಂಬವರು ರಾಜಮಹೇಂದ್ರಿಯಿಂದ ಮಂಗಳೂರು ಮುನ್ಸಿಪ್ ಕೋರ್ಟಿಗೆ ಪ್ರಿನ್ಸಿಪಲ್ ಮುನ್ಸೀಪರಾಗಿ ವರ್ಗಹೊಂದಿದಾರೆ ಈಗಿನ ಮಂಗಳೂರು ಮುನ್ಸೀಫರಾದ ಶ್ರೀ ನರಸಿಂಹಲುರವರು ಎಡಿಷನಲ್ ಮುನ್ಸೀಫರಾಗಿ ವಿನಿಯಲ್ಪಟ್ಟಿದ್ದಾರೆ ಕಾರ್ಕಳ ಮುನ್ಸಿಫರಾದ ಶ್ರೀ ಕೊರಗಪ್ಪನವರನ್ನು ವರ್ಗಮಾಡಿದ ಹುಕುಮು ರದ್ದುಗೊಳಿಸಲ್ಪಟ್ಟಿವೆ [illegible] ಬದಲಿಗೆ ಶ್ರೀ ವೈ ಭರತರಾಜ್ಯಗಳು ನೇಮಕಹೊಂದಿರುವರು

ಒನ್ನ ಬೆಳಿಗ್ಗೆ ಘಂಟೆ ೧ಕ್ಕೆ ಸರಿಯಾಗಿ ಇಲ್ಲಿಯ ಡಿ! ಬೋರ್ಡ್ ಆಫೀಸಿನಲ್ಲಿ ಈ ಜಿಲ್ಲೆಯ ಸ್ಥಳೀಯ ಬೋರ್ಡ್ ಉದ್ಯೋಗಿಗಳದೊಂದು ಮಹಾಸಭೆ, ಆ ಉದ್ಯೋಗಿಗಳ ಸಂಘದ ಅಧ್ಯಕ್ಷರಾದ ಶ್ರೀ.ಎಂ. ಸುಂದರ ರಾವ್ (ಡಿ ಬಿ ಸೆಕ್ರೆಟರಿ ಬಿ.ಎ.ಎಲ್.ಟಿ, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು, ಈ ಸಂಘದಿಂದ ಉದ್ಯೋಗಿಗಳಿಗೆ ಇದುವರೆಗೆ ದೊರಕಿದ ಪ್ರಯೋಜನಗಳೇನೆಂದು ಚಿಕ್ಕದಾದರೂ ಸ್ವಾರಸ್ಯವಾದ ಒಂದು ಭಾಷಣದಲ್ಲಿ ಪ್ರಸ್ತಾಪಿಸಿದ ಮೇಲೆ—ಬೋರ್ಡ್ ಉದ್ಯೋಗಿಗಳಿಗೆ ಸಂಬಳದಲ್ಲಿರುವ ಕಡಿತವನ್ನು ರದ್ದು ಮಾಡಬೇಕು. ಅವರಿಗೆ ಸರಕಾರಿ ನೌಕರರ ಸಂಬಳದ ಸ್ಕೇಲನ್ನೇ ಕೊಟ್ಟು ಜ್ಯಾರಿಗೆ ತರಬೇಕು. ಮಾಜಿ ತಾ ಬೋ ಕ್ಲಾರ್ಕರಿಗೆ ಆ ಹಳೆಯ ಹಿಂದಿನ ಸ್ಕೇಲಿನಷ್ಟೇ ಸಂಬಳ ಸಲ್ಲಬೇಕು ಪಡೆಯುವರಿಗೊಂದು ನಿಧಿಯು ಏರ್ಪಾಡಾಗಬೇಕು ಎಂದು ಮುಂತಾದ ಹಲವು ನಿರ್ಧಾರಗಳಾಗುವುದರೊಡನೆ ಶ್ರೀ ಎ ಬಿ ಶೆಟ್ಟಿ, ಎಂ ಎಲ್ ಎ ಡಿ ಬೋ ಪ್ರೆಸಿಡೆಂಟರು ಇವರ ತೈಲ ಚಿತ್ರವನ್ನಿಡಬೇಕೆಂದೂ ಆ ಸಮಾರಂಭಕ್ಕಾಗಿ ಸುಮಾರು ೧೫೦ ರೂಗಳ ವಂತಿಗೆಯನ್ನೆತ್ತಬೇಕೆಂದೂ, ನಿರ್ಧಾರವಾಗಿ, ಆಲ ಹಾರದೊಂದಿಗೆ ಸಭೆಮುಕ್ತಾಯವಾಯ್ತು

ಸ್ವಾಸ್ಥ್ಯ ಸಂಘ

ಈ ಸಂಘದ ಕಾರ್ಯನಿರ್ವಾಹಕ ಮಂಡಳಿ ಸಭೆಯು ಶ್ರೀ ಬಿಜಾಪುರ ಅಧ್ಯಕ್ಷತೆಯಲ್ಲಿ ನಡೆಯಿತು ಸಂಘದ ಮುಂದಿನ ಪ್ರವಾಸದ ಶಿಕ್ಷೆವು ಮುಂಬಾಯಿ ಮುಂಬಯಿ ಕಾಶ್ಮೀರ ಸಹಸ್ಥರ ಮತ್ತು ಬೇರೆಬೇರೆ ಕೇಂದ್ರಗಳಿಗೆ ಪ್ರತಿನಿಧಿಗಳ ನೇಮಕ, ಸಂಘಕ್ಕೆ ಹಣಸಂಗ್ರಹಿಸುವ ವ್ಯವಸ್ಥೆ ಮೊದಲಾದ ವಿಷಯಗಳು ಇತ್ಯರ್ಥಗೊಂಡವು

ಗ್ರೇಂಡ್ ಸೇಲ್! ಗ್ರೇಂಡ್ ಸೇಲ್!!

ನಮ್ಮಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಯಾವತ್ತೂ ಶಾಲೋಪಕರಣಗಳು ಇತರ ಎಲ್ಲಾ ತರದ ಆಧುನಿಕ ಸಾಮಗ್ರಿಗಳು ಸ್ಟೇಶನರಿ, ಕಚೇರಿ ಮತ್ತು ನಿತ್ಯೋಪಯುಕ್ತ ಸಾಮಾಗ್ರಿಗಳು ಅತ್ಯಂತ ಕಡಿಮೆ ದರದಲ್ಲಿ ಮಾರಲ್ಪಡುತ್ತವೆ

ಅಲ್ಲದೆ ಜೂನ್ ತಾ. 1ರಿಂದ ತಾ. 30ರ ತನಕ

ನಮ್ಮಲ್ಲಿ ಒಂದೇ ಬಾರಿಗೆ ಎಂಟಾಣೆಗೆ ಮೇಲ್ಪಟ್ಟು ವ್ಯಾಪಾರಮಾಡುವವರಿಗೆ

ಅತ್ಯಮೂಲ್ಯವಾದ ಇನಾಮುಗಳು ಕೊಡಲ್ಪಡುವವು.

ಹೆಚ್ಚಿನ ವಿವರಗಳಿಗೆ ನಮ್ಮ ಪ್ರಕಟಣಾಪತ್ರವನ್ನು ನೋಡಿರಿ

ಎಸ್. ಅನಂತರಾಮಾಚಾರ್,

ಪುಸ್ತಕ ಮತ್ತು ಸ್ಟೇಶನರಿ ವ್ಯಾಪಾರಿ, ತಾಲೂಕು ಕಚೇರಿ ಬಳಿ, ಉಡುಪಿ.

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras	Visveswarapuram Circle, Bangalore City	Sowmyalayam Puthiyara, Calicut
Car Street, Mangalore	Udipi, S. India	Charni Road, Bombay No 4.

INSPECTORATE OFFICE AT:

1. Ottapalam, Malabar District. 2. Central Station Road, Trivandrum

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs 80,00,000
Life Funds Over	Rs 68,00,000
Premium Income Over	Rs. 22,54,000
Interest Income	Rs 3,16,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE Rs. 4,42,51,200

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ವ್ಯವಹಾರ ಸನ್ನದು ಹೊಂದಿದುದು)

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು 'ಸೇಲಂ'ನಲ್ಲಿ ಶೀಘ್ರದಲ್ಲಿಯೇ ತೆರೆಯೋಣಾಗುವುದು.

ಬ್ಯಾಂಕಿನ ಆಫೀಸು
ತಾ. 7—5—1937

V. R. Kamath, B. A., LL.B.
ಮೆನೇಜರ್.

ನವಯುಗ

ಉಡುಪಿ, ಗುರುವಾರ, ತಾ. ೨೭–೫–'೩೭

ಮುಸಲ್ಮಾನರು ಮತ್ತು ಕಾಂಗ್ರೆಸ್

ಇಂದೀಗ ಮುಸಲ್ಮಾನರಲ್ಲಿ, ತಾವು ಕಾಂಗ್ರೆಸಿಗೆ ಸೇರಿ ದೇಶದ ಸ್ವಾತಂತ್ರ್ಯ ಸಮರದಲ್ಲಿ ಮುಖ್ಯ ಭಾಗ ವಹಿಸಬೇಕೆಂಬ ಅಭಿಪ್ರಾಯವು ಬಲಗೊಳ್ಳುತ್ತಾ ಬರುತ್ತಿರುವುದು ಸಂತೋಷ ವಿಷಯವು. ಮುಸಲ್ಮಾನರಲ್ಲುಂಟಾಗಿರುವ ಈ ವಿಧದ ಜಾಗ್ರತಿಗೆ ಪಂಡಿತ ಜವಾಹರಲಾಲರ ದೂರದೃಷ್ಟಿಯ ಮುಂದಾಳುತ್ವವೇ ಕಾರಣ. ಅವರು ಪ್ರೆಸಿಡೆಂಟರಾದಂದಿನಿಂದ ಕಾಂಗ್ರೆಸನ್ನು ನಿಜವಾದ ಅಖಿಲ ಭಾರತ ಪ್ರಾತಿನಿಧ್ಯವುಳ್ಳ ಸಂಸ್ಥೆಯನ್ನಾಗಿ ಮಾಡಲು ಎಡೆಬಿಡದೆ ಪ್ರಯತ್ನ ಮಾಡಿರುವರು. ಕಾಂಗ್ರೆಸು ದೇಶದ ಸ್ವಾತಂತ್ರ್ಯ ಮತ್ತು ಸಾಂಪತ್ತಿಕ ಉನ್ನತಿ ಸಾಧನೆಗಾಗಿ, ಜನತೆಯ ದಾರಿದ್ರ್ಯ ಮತ್ತು ದುಃಖ ನಿವಾರಣೆಗಾಗಿ ಹೋರಾಡುವ ಸಂಸ್ಥೆ. ಯಾವ ತರದ ಜಾತೀಯ ಅಥವಾ ಧಾರ್ಮಿಕ ಸಂಕುಚಿತತೆಗೆ ಅದರಲ್ಲಿ ಆಸ್ಪದ ದೊರೆಯಲಾರದು. ಹಿಂದುಗಳಷ್ಟೇ ಮುಸಲ್ಮಾನ ಮತ್ತು ಕ್ರೈಸ್ತರೇ ಮೊದಲಾದವರ ಹಿತಸಾಧಕ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯದು. ದೇಶದ ಬಂಧ ವಿಮೋಚನೆ, ಜನತೆಯ ದುಃಖ ನಿವಾರಣೆಯ ವಿಷಯಗಳು ಸರ್ವ ಹಿಂದೀಯರಿಗೂ ಸಮನಾಗಿ ಅನ್ವಯಿಸುವವು. ಅವುಗಳಲ್ಲಿ ಯಾವ ಜಾತೀಯತೆಗೂ ಆಸ್ಪದವಿಲ್ಲೆಂದು ಪಂಡಿತರು ಮುಸಲ್ಮಾನ ಜನಸಮುದಾಯಕ್ಕೆ ಸಾರಿ ಹೇಳಿ, ಕಾಂಗ್ರೆಸು ಮುಸಲ್ಮಾನರ ಬೆಂಬಲವನ್ನು ಹೆಚ್ಚೆಚ್ಚಾಗಿ ಪಡೆಯುವಂತೆ ಮಾಡಿರುವರು. ಪರದಾಸ್ಯದಲ್ಲಿರುವವರಿಗೆ ಸ್ವಾತಂತ್ರ್ಯ ಸಾಧನೆಯ ಹೊರತು ಅನ್ಯ ಧರ್ಮವಿಲ್ಲ; ಬೇರೆ ಜೀವನವಿಲ್ಲೆಂಬ ಖಾನ್ ಅಬ್ದುಲ್ ಗಾಫರ್ ಖಾನರ ಬೋಧನೆ ಮತ್ತು ಅದೇ ಪ್ರಕಾರವಾದ ಆಚರಣೆಯೂ ಅವರ ಸ್ವಾತಂತ್ರ್ಯಕ್ಕಿಂತ ಅಮೂಲ್ಯವಾದುದು ಲೋಕದಲ್ಲಿ ಇನ್ನಾವುದೂ ಇಲ್ಲ. ಪರಾಧೀನನಾಗಿ ಮಿಲ್ಯಾಧಿಪತಿಯಾಗಿರುವುದಕ್ಕಿಂತಲೂ ಸ್ವತಂತ್ರನಾಗಿ ಸಮುಗಾರನಾಗಿರುವುದು ಮೇಲು. ತಾನು ಮತ್ತು ತನ್ನ ಸಹೋದರನು ದೇಶದ ಬಂಧ ವಿಮೋಚನೆಗಾಗಿ ತಮ್ಮ ತನು ಮನ ಧನ ಸರ್ವಸ್ವವನ್ನೂ, ಅವಶ್ಯ ಬಂದರೆ ಪ್ರಾಣವನ್ನೂ ಅರ್ಪಿಸಲು ಸಿದ್ಧರಿರುವೆವೆಂಬ ಡಾಕ್ಟರ್ ಖಾನರ ಸ್ಫೂರ್ತಿಪರ ಉಪದೇಶ ವಾಕ್ಯಗಳೂ ಪ್ರತಿಯೊಬ್ಬ ಭಾರತೀಯನು ಇಂದೀಗ ಅನುನಿತ್ಯ ಜಪಿಸುವ ಮಂತ್ರವಾಗತಕ್ಕದ್ದು. ಇಸ್ಲಾಮ್ ಧರ್ಮಕ್ಕಂತೂ ಪರಾಧೀನತೆಯು, ಪರಾವಲಂಬನೆಯು ಹೇಡಿತನವು ಅಸಹನೀಯವಿರುವುದು. ಅಂದ ಮೇಲೆ ಮುಸಲ್ಮಾನರು ತಮ್ಮ ಯಾವುದೊಂದು ವಿಧದ ಹಿತ ಸಾಧನೆಗಾದರೂ ಬ್ರಿಟಿಷ್ ಸರಕಾರದ ಕಡೆಗೆ ಕಣ್ಣು ನೀಡದೆ, ಪರದಾಸ್ಯವನ್ನು ಇನ್ನೂ ಇನ್ನೂ ಮುಂದುವರಿಸಗೊಡದೆ ಮೊದಲು ತಮ್ಮ ಬಂಧನದಿಂದ ವಿಮುಕ್ತರಾಗಿ ಸ್ವತಂತ್ರರಾಗಿ ಸ್ವಾಭಿಮಾನಿಗಳಾಗುವುದು ಅವರ ಕರ್ತವ್ಯವಿರುವುದು.

ಅಲಹಾಬಾದ್ ಪರಿಷತ್ತಿನ ನಿರ್ಣಯ

ಅಲಹಾಬಾದಿನಲ್ಲಿ ನಡೆದ ಮುಸಲ್ಮಾನ ಮುಖಂಡರ ಪರಿಷತ್ತಿನಲ್ಲಿ, ಮುಸಲ್ಮಾನರೆಲ್ಲರೂ ಯಾವದಾದರೊಂದು ಶರ್ತವಿಲ್ಲದೆ ಕಾಂಗ್ರೆಸಿಗೆ ಸೇರಿ ದೇಶದ ಸ್ವಾತಂತ್ರ್ಯ ಸಮರದಲ್ಲಿ ಭಾಗಿಯಾಗಬೇಕೆಂಬ ನಿರ್ಧಾರವಾದುದು ಮಹತ್ವದ ಹಾಗೂ ಆನಂದಕರ ಸಂಗತಿಯು. ಈ ನಿರ್ಧಾರಕ್ಕೆ ಪರಿಷತ್ತಿನವರೆಲ್ಲರು ಸಮ್ಮತಿಸಿರುವಂತೆ ತೋರುತ್ತದೆ. ಈ ಪ್ರಕಾರ ಮುಸಲ್ಮಾನ ಮುಖಂಡರೆಲ್ಲಾ ಕಾಂಗ್ರೆಸಿಗೆ ಹೆಚ್ಚಿನ ಮುಸಲ್ಮಾನ ಮೆಂಬರರನ್ನು ಸೇರಿಸುವ ಕೆಲಸವನ್ನು ಭರದಿಂದ ಮುಂದೊತ್ತಲಿರುವರು. ಕಾಂಗ್ರೆಸಿಗೆ ಸೇರುವುದರಿಂದ ತಮ್ಮ ಹಿತಕ್ಕೆ ಹಾನಿಯುಂಟಾಗಬಹುದೆಂಬ ಸಂಶಯವೇನೂ ಈ ಮುಖಂಡರಲ್ಲಿರುವುದಿಲ್ಲ. ಯಾಕೆಂದರೆ ಡಾಕ್ಟರ್ ಖಾನರಂದಂತೆ, ಮುಸಲ್ಮಾನರು ಕಾಂಗ್ರೆಸಿಗೆ ಸೇರುವುದು ಮಾತ್ರವಲ್ಲದೆ ಅದನ್ನು ತಾವೇ ನಡಿಸಿದರೆ ಅವರಿಗೆ ಮತ್ತೆ ತಮ್ಮ ಹಿತರಕ್ಷಣೆಯ ಕುರಿತು ಯಾವ ಭೀತಿಗೂ ಆಸ್ಪದ ದೊರೆಯಲಾರದು. ಹಿಂದಿನ ಖಿಲಾಫತ್ ಚಳವಳದ ಸಂದರ್ಭದಂತೆ ಇಂದೂ ಮುಸಲ್ಮಾನರು ಕಾಂಗ್ರೆಸಿನ ಸ್ವಾತಂತ್ರ್ಯ ಸಮರದಲ್ಲಿ ಮುಖ್ಯ ಭಾಗ ವಹಿಸಿ ತಮ್ಮ ಪರಂಪರಾಗತ ಶೌರ್ಯ ಸ್ಥೈರ್ಯದಿಂದ ಹಿಂದುಗಳಿಗಿಂತಲೂ ಒಂದು ಹೆಜ್ಜೆ ಮುಂದಿಟ್ಟು ದೇಶವು ಶೀಘ್ರವಾಗಿ ಬಂಧ ವಿಮೋಚನೆ ಹೊಂದುವಂತೆ ನೆರವಾಗುವರೆಂದು ನಂಬುತ್ತೇವೆ.

ಮಿ. ಜಿನ್ನಾರ ರ ಅವಿವೇಕತನ

ಸರ್, ಮಹಮ್ಮದ್ ಯಾಕೂಬರಂಥವರು, ಕಾಂಗ್ರೆಸು ಹಿಂದುಗಳ ಸಂಸ್ಥೆ, ಮುಸಲ್ಮಾನರ ಸಂಘಟನೆಯನ್ನು ಮುರಿಯುವ ಸಂಸ್ಥೆ, ಗಾಂಧಿಜಿಯವರು ಅದರ ನಾಯಕತ್ವ ವಹಿಸಿದಂದಿನಿಂದ ಅದರಲ್ಲಿ ಹಿಂದು ಸಂಸ್ಕೃತಿ ಮತ್ತು ಭಾವನೆಗಳಿಗೇನೇ ಪ್ರಾಧಾನ್ಯ ದೊರೆತಿದೆ. ಆದುದರಿಂದ ವಿಚಾರವಂತ ಮುಸಲ್ಮಾನರಾರೂ ಅದಕ್ಕೆ ಸೇರಿರುವುದಿಲ್ಲೆಂದು ಇಂಗ್ಲೆಂಡಿನ ಮೋರ್ನಿಂಗ್ ಪೋಸ್ಟಿನಂತಹ ಪತ್ರಿಕೆಗಳಲ್ಲಿ ಎಷ್ಟು ಬೇಕಾದರೂ ಪ್ರಚಾರಮಾಡಲಿ. ಅವರಂತಹ ಸರಕಾರದ ಪಕ್ಷಪಾತಿ, ಹಾಗೂ ಸ್ವಪ್ರತಿಷ್ಠಾಪರ ಮುಖಂಡರ ಮಾತಿಗೆ ಹೆಚ್ಚಿನ ಬೆಲೆ ಕೊಡುವವನಾರೂ ಇರಲಾರರು. ಆದರೆ ಮಿ ಜಿನ್ನಾರ ಮತ್ತು ಮೌಲಾನ ಶೌಕತಾಲಿಗಳಂಥವರು, ಅಲಹಾಬಾದಿನ ನಿರ್ಣಯವನ್ನು ವಿರೋಧಿಸಲು ಸೊಂಟಕಟ್ಟಿರುವುದು ಬಹಳ ಶೋಚನೀಯವಿದೆ. ಕಾಂಗ್ರೆಸಿಗೆ ಮುಸಲ್ಮಾನರನ್ನು ಸೇರಿಸಿ, ಅವರು ಸ್ವಾತಂತ್ರ್ಯ ಸಮರದಲ್ಲಿ ಮುಂದಾಗಿ ನಿಂತು ಹೋರಾಡುವಂತೆ ಮಾಡುವುದು. ಮಿ. ಜಿನ್ನಾ ಮತ್ತು ಮೌಲಾನ ಶೌಕತಾಲಿಗಳಂತಹ ನುರಿತ ಮುಖಂಡರ ಕರ್ತವ್ಯವಿದ್ದಿತು. ಒಂದೊಮ್ಮೆ ಅವರಿಗೆ ಹಾಗೆ ಮಾಡಲಾಗದಿದ್ದರೂ, ಇತರರು ಮಾಡುವಾಗ ಅದಕ್ಕವರು ತಮ್ಮಿಂದ ಸಾಧ್ಯವಾದ ಸಹಾಯ ಕೊಡಬೇಕಿತ್ತು. ಆದರೆ, ಅವರು ಕಾಂಗ್ರೆಸಿಗೆ ಮುಸಲ್ಮಾನರು ಹೆಚ್ಚೆಚ್ಚಾಗಿ ಸೇರುವುದರಿಂದ ತನ್ನ ಕೈಗೂಸಾದ ಮುಸ್ಲಿಮ್ ಲೀಗಿಗೆಲ್ಲಿಯಾದರೂ ವಿಘಾತವುಂಟಾಗುವುದೋ, ತಮ್ಮ ನಾಯಕತ್ವವೆಲ್ಲಿ ಮೂಲೆ ಗುಂಪಾಗುವುದೋ ಎಂಬ ಸಂಶಯ ಪೀಡಿತರಾಗಿ ತಳಮಳಗೊಂಡಿರುವರು. ಪಂಡಿತ ಜವಾಹರಲಾಲರು ಅವರನ್ನು ಆಮಂತ್ರಿಸಿ ಸಂಧಿ ಪ್ರಸ್ತಾಪ ಮಾಡಲಿಲ್ಲೆಂಬುದರಿಂದ ಮಿ. ಜಿನ್ನಾರವರು ಬಹಳ ಸಿಟ್ಟುಗೊಂಡಿರುವರು. ಆದರೆ ಕೆಲವುಂದಿ ಸ್ವಪ್ರತಿಷ್ಠಾಂಧ ನಾಯಕರನ್ನು ಒಲಿಸಿಕೊಂಡು ಅವರೊಡನೆ ಏನಾದರೂ ಒಡಂಬಡಿಕೆ ಮಾಡಿಕೊಳ್ಳುವುದರಿಂದ ಫಲವಿಲ್ಲೆಂಬುದನ್ನು ಪಂಡಿತರು ಚೆನ್ನಾಗಿ ಮನಗಂಡವರು. ಆದುದರಿಂದಲೇ ಅವರು ಮುಸಲ್ಮಾನ ಮುಖಂಡರನ್ನು ಅವರಷ್ಟಕ್ಕೆ ಬಿಟ್ಟು ಜನಸಾಮಾನ್ಯರ ಹೃದಯವನ್ನೊಲಿಸಿಕೊಳ್ಳಲೆತ್ನಿಸಿರುವರು. ಮುಸಲ್ಮಾನ ಜನಸಾಮಾನ್ಯರು ಕಾಂಗ್ರೆಸಿನ ಕಡೆಗೊಲಿದರೆ ಅವರ ಮುಖಂಡರು ಮತ್ತೆ ಸ್ವತಃ ಕಾಂಗ್ರೆಸಿಗೆ ಸೇರುವರು. ಸುದೈವದಿಂದ ಸಂಯುಕ್ತ ಪ್ರಾಂತದ ಮುಸಲ್ಮಾನರು ಮಿ. ಜಿನ್ನಾರವರೊಡ್ಡಿದ ಬಲೆಗೆ ಬಿದ್ದಿರುವುದಿಲ್ಲ. ಮುಸಲ್ಮಾನರದೇ ಆದ ಪ್ರತ್ಯೇಕವಾದೊಂದು ಸಂಸ್ಥೆ ಬೇಕು; ತಾನು ಸರಕಾರದ ಬಾಗಿಲ ಬಳಿಯಾಗಲಿ, ಆನಂದ ಭವನದ ದ್ವಾರದಲ್ಲಾಗಲಿ ತಲೆಬಾಗಿ ನಿಲ್ಲಲಾರೆನೆಂಬ ಮಿ. ಜಿನ್ನಾರವರ ಕುಯುಕ್ತಿಯು ಪ್ರಯೋಜನಕ್ಕೆ ಬೀಳಲಿಲ್ಲ. ಸಂಯುಕ್ತ ಪ್ರಾಂತದ ಹೆಚ್ಚಿನ ಮುಸಲ್ಮಾನ ಮುಖಂಡರು ನಿಸ್ಸಂಕೋಚವಾಗಿ ಕಾಂಗ್ರೆಸಿಗೆ ಸೇರಿ ಮೊದಲಾಗಿ ಸ್ವರಾಜ್ಯ ಸಾಧನೆ, ಆ ಮೇಲೆ ತಮ್ಮ ಹಿತಸಾಧನೆಯೆಂಬ ಧೋರಣೆ ವಹಿಸಿರುವಂತಿದೆ. ಕಾಂಗ್ರೆಸಿನ ಮೂಲಕವೇ ತಮ್ಮ ನಿಜವಾದ ಹಿತಸಾಧನೆಯಾಗಬೇಕೆಂಬ ವಿಶ್ವಾಸವುಳ್ಳವರಂತೆ ತೋರುತ್ತದೆ. ಮಿ. ಜಿನ್ನಾರವರ ಮುಸ್ಲಿಮ್ ಲೀಗನ್ನು ತ್ಯಜಿಸಿಯಾದರೂ ಅವರು ಕಾಂಗ್ರೆಸಿನೊಂದಿಗೆ ಸಹಕರಿಸುವ ದೃಢನಿರ್ಧಾರ ಮಾಡಿರುವರು. ಅಂದಮೇಲೆ ಸಂಯುಕ್ತ ಪ್ರಾಂತ್ಯದಲ್ಲಿ ಮಿ. ಜಿನ್ನಾರವರ ಬೇಳೆ ಬೇಯುವ ಹಾಗಿಲ್ಲ. ಪಂಜಾಬಿನಲ್ಲಿ ಅವರ ಪಕ್ಷಕ್ಕೆ ಯಾವ ಬೆಂಬಲವೂ ಇಲ್ಲ. ಕಾಂಗ್ರೆಸು ಈಗಣಂತೆಯೇ ಮುಸಲ್ಮಾನ ಜನಸಾಮಾನ್ಯರ ಸಂಪರ್ಕ ಪಡೆದು ಎಡೆಬಿಡದ ಪ್ರಚಾರದಿಂದ ಅವರಲ್ಲಿ ಪ್ರಬಲ ರಾಜಕೀಯ ಜಾಗ್ರತಿಯುಂಟುಮಾಡಿ ಸ್ಥಿರಬೆಂಬಲ ಪಡೆದರೆ, ಈ ಸ್ವಾರ್ಥ ಹಾಗೂ ಸ್ವಗೌರವ ಸಾಧಕ ಮುಸಲ್ಮಾನ ಮುಖಂಡರು ಜನತೆಯ ಯಾವ ಬೆಂಬಲವೂ ಇಲ್ಲದೆ ತನ್ನಂತೆಯೇ ಮೂಲೆ ಗುಂಪಾಗುವರು.

ಪ್ರಕಟಣೆಗಾಗಿ ನಮ್ಮ ಬಳಿಗೆ ಹಲವು ಕತೆಗಳು ಬಂದಿವೆ ಅವನ್ನು ಯಥಾವಕಾಶವಾಗಿ ಪ್ರಕಟಿಸಲಾಗುವುದು.

[ಸಂ, ನ.]

ವಿದೇಶ

ಸ್ಪೈನಿನ ಯುದ್ಧ

ಇದೇ ತಾ. ೨೩ರಲ್ಲಿ ಬಂಡಾಯಗಾರರು ವಿಮಾನಗಳ ಸಹಾಯದಿಂದ ಬಾಸ್ಕ್ ಪ್ರಾಂತ್ಯದ ಗುಡ್ಡಗಳ ಸಂದುಕಟ್ಟಿನಲ್ಲಿದ್ದ ಬಾಸ್ಕ್ ಸೈನಿಕರನ್ನು ಸ್ವಲ್ಪ ಹಿಂದ ಕಟ್ಟಿದರೆಂದು ತಿಳಿದು ಬರುತ್ತದೆ. ಬಂಡಾಯಗಾರ ವಿಮಾನವೊಂದು ಬಿಲ್ಬಾವೋದಿಂದ ಹೋಗುವ ಟ್ರೈನೊಂದನ್ನು ಬೆಂಬತ್ತಿ ಹೋಗಿ ಅರೀಬ ಎಂಬಲ್ಲಿ ಟ್ರೈನ್ ನಿಲ್ಲಿಸಲ್ಪಟ್ಟಾಗ ಹೊರಗೋಡಿದ ಪ್ರಯಾಣಿಕರ ಮೇಲೆ ಗುಂಡುಹಾರಿಸಿ ಅನೇಕರು ಗಾಯಗೊಂಡಿರುವರು.

ದುರೆಂಗೋ ಪಟ್ಟಣದ ನೈರುತ್ಯ ಭಾಗದಿಂದ ಜನರಲ್ ಮೋಲಾರವರು ಬಿಲ್ಬಾವೋ ಪಟ್ಟಣದ ಮೇಲೆ ನೊಡ್ಡ ಧಾಳಿ ನಡಿಸಿರುವರು. ೬೦ ಬೋಂಬಿನ ವಿಮಾನಗಳು ಮತ್ತು ೩೬ ಯುದ್ಧವಿಮಾನಗಳು ಅವರಿಗೆ ಸಹಾಯಮಾಡಿರುವವು. ಬಂಡಾಯಗಾರ ಸೈನಿಕರು ಬಾಸ್ಕ್ ಸೈನಿಕರನ್ನು ಒಮ್ಮೆಲೂ ಹಿಂದಕ್ಕಟ್ಟಿರುವರೆಂದೂ ಇದರಿಂದಾಗಿ ಬಾಸ್ಕ್ ಸರಕಾರಕ್ಕೆ ದೊಡ್ಡ ಅಪಜಯವಾಗಿರುವುದೆಂದೂ ಬಂಡಾಯಗಾರರ ಕಡೆಯ ಸುದ್ದಿ. ೧೬೦೦ಮಂದಿ ಬಾಸ್ಕ್ ಸೈನಿಕರು ಕೊಲ್ಲಲ್ಪಟ್ಟು ೧೬೦೦ಮಂದಿಯನ್ನು ಸೆರೆಹಿಡಿಯಲಾಗಿದೆಯಂತೆ.

ಬಾಸ್ಕ್ ಪ್ರಾಂತದಿಂದ ೪೦೦೦ ನಿರಾಶ್ರಿತ ಮಕ್ಕಳನ್ನು ಇದೇ ತಾ, ೨೩ರಲ್ಲಿ ಇಂಗ್ಲೆಂಡಿಗೆ ತರಲಾಗಿದೆ ಅವರನ್ನು ಬೇರೆಬೇರೆ ಪಟ್ಟಣಗಳಲ್ಲಿರಿಸಿ ಪೋಷಿಸಲಾಗುವುದು.

ಮಿ. ಬಾಲ್ಡ್ವಿನರ ರಾಜಿನಾಮೆ

ಇದೇ ತಾ. ೨೮ರಲ್ಲಿ ಇಂಗ್ಲೆಂಡಿನ ಪ್ರಧಾನ ಮಂತ್ರಿಗಳಾದ ಮಿ. ಸ್ಟೇನ್ಲೆ ಬಾಲ್ಡ್ವಿನರು ವೃದ್ಧಾಪ್ಯದ ನಿಮಿತ್ತ ತನ್ನ ಪದವಿಗೆ ರಾಜಿನಾಮೆ ಕೊಟ್ಟು ನಿವೃತ್ತರಾಗುವರು. ಮಿ. ನೆವಿಲ್ ಚೇಂಬರ್ಲೇನರು ಪ್ರಧಾನಮಂತ್ರಿಗಳಾಗಿನೇಮಿಸಲ್ಪಟ್ಟು ಹೊಸಮಂತ್ರಿ ಮಂಡಲವನ್ನು ರಚಿಸುವರು

ದಾನಶೂರ ರೋಕ್‌ಫೆಲ್ಲರರ ಮರಣ

ಲೋಕದ ಅತಿದೊಡ್ಡ ಶ್ರೀಮಂತರಲ್ಲೊಬ್ಬರಾದ ದಾನಶೂರರೆಂದು ಪ್ರಸಿದ್ಧರಾದ ಅಮೆರಿಕದ ಮಿ. ಜೋನ್ ಡಿ. ರೋಕ್ ಫೆಲ್ಲರರು ತನ್ನ ೯೭ನೇ ವಯಸ್ಸಿನಲ್ಲಿ ಮೃತರಾಗಿರುವರು. ೩೦ ವರ್ಷಗಳ ಮೊದಲು ವ್ಯಾಪಾರದಿಂದ ನಿವೃತ್ತರಾದಾಗ ಇವರ ಸಂಪತ್ತು ಸುಮಾರು ೪೦೦ ಮಿಲ್ಯ ಪವನು ಆಗಬಹುದೆಂದು ನಂಬಲಾಗಿದೆ. ಅಂದಿನಿಂದ ರೋಕ್ ಫೆಲ್ಲರರು ೧೩೦ ಮಿಲ್ಯ ಪವನುಗಳಿಗಿಂತಲೂ ಮಿಕ್ಕಿ ದಾನಮಾಡಿರುವರು. ಶಿಕ್ಷಣಕ್ಕಾಗಿ ೫೦ಮಿಲ್ಯ ರೋಕ್ ಫೆಲ್ಲರ್ ಫೌಂಡೇಶನ್‌ಎಂಬ ಜನೋಪಕಾರಿ ಸಂಸ್ಥೆಗಾಗಿ ೪೭ಮಿಲ್ಯ ಪವನು ತನ್ನ ಮೃತ ಪತ್ನಿಯ ಸ್ಮಾರಕವಾಗಿ ಒಂದು ಸಂಸ್ಥೆಗೆ ೬೦ಮಿಲ್ಯ ಪವನು ದಾನ ಮಾಡಿದ್ದರು.

ಸ್ವದೇಶ

200 ಮನೆಗಳು ಸುಟ್ಟುಹೋದುವು

ಇದೇ ತಾ. ೨೨ರಲ್ಲಿ ಗುಂಟೂರಿನಿಂದ ೪ ಮೈಲು ದೂರವಿರುವ ತಕ್ಕೆಲಪಡು ಎಂಬ ಗ್ರಾಮದಲ್ಲಿ ದೊಡ್ಡ ಬೆಂಕಿಯೆದ್ದು ೨೦೦ ಮನೆಗಳು ಸುಟ್ಟುಹೋಗಿರುವವು. ೧೦೦೦ಕ್ಕಿಂತಲೂ ಮಿಕ್ಕಿದವರು ನಿರಾಶ್ರಿತರಾಗಿರುವರು. ಮೊದಲು ಸಣ್ಣ ಗುಡಿಸಲೊಂದರಲ್ಲಿ ಬೆಂಕಿಯೆದ್ದು ಆ ಮೇಲೆ ಗಾಳಿಯ ಸಹಾಯದಿಂ

ಉಡುಪಿ ಮುನಿಸಿಪಲ್ ಕೌನ್ಸಿಲರಾದ ವಾಮನ ಭಟ್ಟರು ಉಡುಪಿ ಸರ್ಕಲಿನಿಂದ ಬರುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಉಮೇದ್ವಾರರಾಗಿ ನಿಲ್ಲಲಿರುವರೆಂದು ತಿಳಿದುಬರುತ್ತದೆ.

ಕಲ್ಯಾಣಪುರ

ಪುತ್ತೂರು ಭಗವತೀ ದೇವಸ್ಥಾನದಲ್ಲಿ ತಾ. ೨೦ರಲ್ಲಿ ಜರಗಿದ ಲಗ್ನವೊಂದರಲ್ಲಿ ವಧೂವರರು ಸಂಪೂರ್ಣ ಮಿಲ್ಟರ್ ಡ್ರೆಸ್‌ಮಾಡಿದ್ದರೆಂದೂ ವರನು ಮಿಲ್ಟರ್ ಟೋಪಿಯನ್ನೇ ಧರಿಸಿ ಕೊಂಡು ಪಾಣಿಗ್ರಹಣಮಾಡಿ

ಮೊಗವೀರ ಮಹಾ ಜನ ಸಭಾ (ಮಂಗಳೂರು ಬಾರ್ಕೂರು ಹೋಬಳಿ) ಮುಂಬಾಯಿ

ಇದರ ಮಹಾ ಸಭೆಯನ್ನು ಎಪೊಲೋ ರಸ್ತೆಯ ಪೀರ್ ಬಜಾರ್ ಮಂದಿರದಲ್ಲಿ ತಾ. ೩೦-೫-೧೯೩೭ನೇ ರವಿವಾರ ಮಧ್ಯಾಹ್ನ ೧ ಘಂಟೆಗೆ ಜರಗಿಸಬೇಕಾಗಿ ನಿಶ್ಚೈಸಲ್ಪಟ್ಟಿರುತ್ತದೆ. ಈ ಮಹಾ ಸಭೆಯಲ್ಲಿ ಇಲ್ಲಿ ಇರುವ ಮೊಗವೀರ ಸಾರ್ವಜನಿಕ ೫ ಸಂಸ್ಥೆಗ

ದೂರದಲ್ಲಿ ದರಳೆ ಗುಡಿಸುತ್ತಿರುವಾಗ ಹುಲಿಯೊಂದ ಆಕಸ್ಮಾತ್ ಅವಳ ಮೇಲೆ ಹಾರಿ ಕುತ್ತಿಗೆಯನ್ನು ಕಚ್ಚಿಕೊಂಡು ಸುಮಾರು ೧ ಮೈಲುದೂರ ಗಾಡಿ ಮಾರ್ಗವಾಗಿಯೇ ಎಳೆದುಕೊಂಡು ಹೋಗಿ ಅರ್ಧದೇಹವನ್ನು ತಿಂದಿರುವುದು. ಅಲ್ಲದೆ ಈಗಲೂ ಹಗಲು ಹೊತ್ತು ಸದರಿ ಮಾರ್ಗದಲ್ಲಿ ತಿರುಗುವ ಕೆಲವರು ಅದನ್ನು ಕಣ್ಣಾರೆಕಂಡು ಭಯ ಪಟ್ಟಿರುತ್ತಾರೆ. ಕೆಲವು ದಿನಗಳಹಿಂದೆ ನೆರೆಗ್ರಾಮವಾದ ನೊಳಹಳ್ಳಿಯಲ್ಲಿ ಒಬ್ಬರನಂತರ ಮತ್ತೊಬ್ಬರನ್ನು ಹಿಡಿದು ತಿಂದ ಹುಲಿ ...ು ಎಂದು ಊಹಿಸಲಾಗಿದೆ. ಹುಲಿಯ ಈ ...ರ್ತವರ್ತನದಿಂದ ಸಕಲರೂ ಧೈರ್ಯ ...ತ್ತಾರೆ. ಊರ ಮಹನೀಯರೂ ಸರಕಾರದವ...ರಿಸಿ, ಈ ಸಾಧಕ್ಕೆ ಕನನ್ನು ಕೊಂದು ಮುಂದೆ ...ರ ಜೀವಹಾನಿಯನ್ನು ತಪ್ಪಿಸಿ, ಜನರ ಭೀತಿ ಹೋಗಲಾಡಿಸುವರೆಂದು ನಂಬಿಕೆ.

ಅಜೆಕಾರು

...ಪ್ರದ ಅಧ್ಯಾಪಕಸಭೆಯು ತಾ.೧೫-೫-೩೭ ...ರ್ಕಳ ರೇಂಜನ ಡಿ! ಇ! ರಾದ ಮ. ರಾ. ...ಟ್ರಾಯ ಮಲ್ಯ ಅವರ್ಗಳ್ ಬಿ.ಎ ಎಲ್. ...ತ್ವದಲ್ಲಿ ಜರಗಿತು. ಕಾರ್ಯಕ್ರಮದಂ...ನ್ನೂ ತೀರ್ಮಾನಿಸಿದ ಬಳಿಕ ಅಧ್ಯಕ್ಷರ ಸು...ದ ನಂತರ ಗ್ರೂಪ್ ಫೋಟೊ, ಫಲಾಹಾರ ...ಾಗಿ ಸಭೆಯು ಮುಕ್ತಾಯ ವಾಯಿತು. ಮಾ...ಬೋರ್ಡಿನವರು ಅಜೆಕಾರಿಗೊಂದು ರೂರ...ಸ್ಪರಿಯನ್ನು ಸಂಕ್ಷನ್ ಮಾಡಿರುವುದಾಗಿ ...ಯುತ್ತದೆ. ಧನ್ಯವಾದಗಳು! ಶೀಘ್ರದಲ್ಲೇ ...ಟ್ಟಿ ಸುಸ್ವಾಗತ ಪಡೆಯಲಿ!! ಊರವರು ...ಬೋರ್ಡು ಶಿಲಾಕಟ್ಟೋಣದ ವಿಸ್ತರಿಸುನಿ...ಲಿಸನನ್ನು ಪೂರ್ತಿಗೊಳಿಸಿ ದ. ಕ. ಜಿಲ್ಲಾ...ಗೆ ದರ್ಮಾರ್ಥವಾಗಿ ಬಿಟ್ಟು ಕೊಟ್ಟಿರುವುದು ...ಳೀಕ ಪ್ರೋತ್ಸಾಹನದಲ್ಲಿ ಸೇವಿಂಗ್ಸ್ ಬೇಂ...ದವು ಕೊಡಲ್ಪಟ್ಟಿದೆ. ಎಣ್ಣೆಹೊಳೆಯ ಮ...ಜಾತ್ರೆಯು ತಾ ೧೮-೫-೩೭ರಿಂದ ಒಂದು ...ದಿನಂತೆ ಈ ವರ್ಷವೂ ಜರಗುತ್ತಲಿದೆ. ...ಇಲ್ಲೊಂದು ಗ್ರೈನ್ ಬೇಂಕ್ ಸ್ಥಾಪಿತ...ವುದು. ಸುಸ್ವಾಗತ!

ಖಂಬದಕೋಣೆ

ತಾ. ೧೪ ೫-೩೭ನೇ ದಿನ ಇಲ್ಲಿಗೆ ಚಿತ್ತ...ಯುತ ಓ. ರಾಮರಾಯಮಲ್ಯರೂ ಕೋಪ...ಸೆಂಟ್ರಲ್ ಬೇಂಕಿನ ಕಾರ್ಯದರ್ಶಿಯವರಾ...ಶಾಂತಾರಾಮರಾಯರೂ 'ಸಹಕಾರ ಸಂಘ...ದ ಪ್ರಯೋಜನವು' ಎಂಬೀವಿಷಯವನ್ನೆತ್ತಿ...ಕರಿನಂದ ಕ್ಲಬ್ಬಿನಲ್ಲಿ ಚಲೋರೀತಿಯಿಂದ ...ಾಡಿದರು. ಜನಸಂದಣಿಯು ಸಾಮಾನ್ಯ...ವಿತ್ತು.

ನವಯುಗ ತುಳು ಸಂಚಿಕೆ

ಸಂಪುಟ ೧	ವೃಷಭ (ಬೇಶ) ೧೩ ಗುರುವಾರ	ಸಂಚಿಕೆ ೯

ತಿಂಗೊಲು

ಬರೆತಿನಾಯೆ:
ಎಸ್. ವಿಟ್ಠಲ ಹೆಗ್ಡೆ

೧

ಲೋಕೊಸು ಕತ್ತಲ್ ರಟ್ಟ್‌ವ ಕಟ್ಟ್‌ಡ್
ಸುತ್ತುದು ಜೈತ್‌ಂಡ್ ಸೆರ್‌ದೀದ್
ಜೀವೊಲು ಕಣ್ಣ್‌ಡ್ ಕಲಿ ಪಸ್‌ಮಂತಿಯ
ಕರ್ತನ್ ಈಮಿನ್ ಬುಡುಪಾವ್
ಕಣ್ಣರತ್‌ದ್ ಬಾರುಳೆನೊರ ತೂಯೆ
ಎನ್ನಗುಸ್ಲಿನ ಪೋಕೆನ್ ದೀಯೆ

೨

ತಿಂಗೊಳು ಜೊಲ್ಮೆಯಿ. ಪೇರ್‌ದ ಕಂದೆಲ್
ಮಜಲ್‌ಗ್ ಮಜಲೇ ಜೊಲುಪಾಂಡ್
ಕತ್ತಲ್ ಕೋಂಟುಡು ಪಂಗುನೆ ತಿಂಗೊಲು
ಲೋಕದ ಮೋನೆನ್ ತೆಲಿಪಾಂಡ್
ಕಪ್ಪುಮಂತುಂಡು ಪೂರದ ಗಿಡುಪು
ಜಪ್ಪೆನ್ ಈ ರುಚಿ ಮೂರೊಗು ಗಿಡುಪು!

೩

ಕಡಲ್‌ದ ಸೆರ್ ಪ್ರೆರ್‌ದ್ ನಲಿಕೊರಗ್‌ಂಡ್
ಪನಿಕೆದ ಪುಬ್ಬನ ಬುಡು ಬುಡುದು
ಪಸ್ ಪಸ್ ಗಾಳಿದ ಗುಟ್ಟುದ ಪಾತೆರ
ಸಂಬರ್‌ಂಡ್ ಪೂನ ಬಳ್ಳಿನ್ ನೆಡ್‌ದ್
ಮಜಲ್‌ಗ್ ಗೂಸುಂಡು ಪೇಪೆರ್ ಪೇರ್!
ನಿಜ ನಿಜರೂಪೊಡು ತೋಜಿಯೆರಾರ್

೪

ಉಲ್ಲಯೆ ಬಾನದ ಜಾಲ್‌ಡ್ ಬೊಕ್ಕದ
ಚೆಂಡ್‌ನ್ ದಂಕುವೆ ವಡಿಕೊರುಮು
ಎಮರುಡು ತಡೆಸರ್ ಆಯೆನೆ ಬಂಟೆ
ಪುಲಿವುಂಡು ಕಾರ್‌ದ ನರ ತರೆದ್
ಆಯನ ಆಟದ ಜೊಲುಪುದ ಧೂಲು
ಮಾಯದ ಪೊಡಿ ಪರ್ ಲಕ್ಕ್‌ಂಡ್ ಮೂಲು!

೫

ಪಗೆಲ್‌ನ ಜೊಲುಪುದ ಪೊನಪೊಲುರ್‌ಂಡು
ಮೆಂಪ್ಯುರಿಪಪ್ಪ ಪಗ್ ಐಟಿಜ್ಜಿ
ಪಕ್ಕಿಲ್ ಚಿಲಿಪಿಲಿ ಕೇಣರ ತಿಕ್‌ಜಿ
ದೆಕ್ಕರೆ ಸುರು ಕತ್ತಲ್ ಮುಜ್ಜ!
ದನಿಬಾಯರತಿನ ಕಿಲಿಕಿಲಿತೆಲಿಕ್
ಜನೊಕುಲೆಗೈಸ್ತುದ ತಕತಕ ನಲಿಕೆ!

ಬರುವ ವಾರದಿಂದ ನವಯುಗದಲ್ಲಿ

ಪುರುಷವಧು!'

ಬಹು ವಿನೋದಾತ್ಮಕ ಏಕಾಂಕವು ಕ್ರಮಶಃ ಪ್ರಕಟವಾಗುವುದು ಓದಲು ಮರೆಯದಿರಿ!

ಚಂದಾದಾರರಲ್ಲಿ

...ಂದಾಹಣ ಬಾಕಿ ಇರುವ ನಮ್ಮ ...ದಾರರು ಆದಷ್ಟು ಬೇಗನೇ ತ... ಹಣವನ್ನು ಮಣಿಯಾರ್ಡರ್ ...ಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೆಜರ್, 'ನವಯುಗ'

...ವಿನಿಯೋಗಿಸಬೇಕೆಂದು ನಿರ್ಣಯವಾಯಿತೆಂದು ಒಂದು ವಾರ್ತೆ.

ಉಡುಪಿಯ ಬೀದಿನಗುಡ್ಡೆಯ ಹಿಂದೂ ಸ್ಮಶಾನದ ಬಳಿಯಲ್ಲಿ ಪೆಟ್ರೋಮೇಕ್ಸ್‌ದೀಪವನ್ನು ಮುನಿಸಿಪಾಲಿಟಿಯವರು ಇಡುವಂತೆ ಶ್ರೀ. ಎಂ. ವಾಮನ ಭಟ್ಟರು ಸೂಚನೆ ತಂದು ಅದಕ್ಕಾಗಿ ಚೀಕಾರಯಣ ಸಂಗ್ರಹಿಸಿ ಇದೇ ತಾ. ೨೮ಕ್ಕೆ ಮುನಿಸಿಪಾಲಿಟಿಗೆ ಕೊಡುವರೆಂದು ತಿಳಿದು ಬರುತ್ತದೆ.

ಇತಿ ನಿಮ್ಮ
ಉ. ಮಾ. ನಾಯಕ್.

ಮರೆತ ಮಾತು—

ನಾನೂ 'ನವಯುಗ' ಸಂಪಾದಕರೂ ಚಂದಾದಾರರನ್ನು ನೇರಿಸಲು ಒಮ್ಮೆ ಆ ಕಡೆಗೆ ಬರಬೇಕೆಂದಿರುವೆವು. ಯಾವಾಗ ಬಂದರೆ ಒಳ್ಳಿತೆಂಬುದನ್ನು ತಿಳಿಸಿದರೆ ನಾವು ಬರುವ ನಿಶ್ಚಿತ ದಿನವನ್ನು ತಿಳಿಸುತ್ತೇವೆ.

ಉ. ಮಾ. ನಾ.

—•— ಮಾತಲಾ ಇಂಚನೇ ಅಥವಾ ಮಡಿತ್ತಭಡಿ —•—

(ನಾಟಕಕಾರೆ:— ಬಾಲಬಂಧು 'ಬಾಲವೃಂದೊ' ಸುಳ್ಯ.)

(ನೆಟ್ಟ್ ಬರ್ಪಿನಿ* ಪಾತ್ರೊಲುಲಾ, ಪಾತ್ರೊತ ಪರಿಚಯೊಲಾ.)

ತಿಮ್ಮಣ್ಣ ಭಟ್ಟೆ—ಬ್ರಾಣೆ, ನಾಟಕೊಡ್ ಅಪ್ಪಗಪ್ಪಗ ತೋಜೋನ್ವೆ

ಚಿಕ್ಕಮ್ಮ—ತಿಮ್ಮಣ್ಣ ಭಟ್ಟೆರೆ ಬೊಡೆದಿ, ಮಡಿತ್ತ ಆದಿ·

ಸಂಕಪ್ಪ ರೈಲು—ಆ ಊರ್‍ದ ನೇಲ್ಯಾರ್, ಪಿನೀದ್ ಕಾಸಿತ್ರಿನಾರ್,

ಅಂದು—ಚಪ್ಪಿ ವ್ಯಾಪಾರೊದ ಬ್ಯಾರಿ, ಪಿನೀದ್ ಬೆಬ್ಬೆಬ್ಬೆ,

ವಾಮನ ಕಮ್ತಿಲು—ಆ ಗ್ರಾಮದ ಪಟೇಲೆರ್.

ಬೋರಣ್ಣೆ—ಥೇಟ್ ಅಸ್ವಾಮಿ, ದುಡ್ಡುದ ಅಡಚಣಿ, ಏಪೋಲಾ ಮುಗಿಯೆರಿದ್ದಿ.

ಜನ್ನಣ್ಣೆ—ಆ ಊರ್‍ಡ್, ಹೋಟ್ಲ್ ದೀವೋಂದುಪ್ಪುನ ಬ್ರಾಣೆ.

ಉಗ್ರಾಣಿಲು, ಬೇಲೆದಕುಲು.

ಒಂಜನೆ ದೃಶ್ಯೊ.

(ಭಟ್ರಿ ಇಲ್ಲಡೆ, ಅಂದುನ್ ಲೆತೋಂದ್ ಭಟ್ರ್ ನೂರ್ಪೆರ್.)

ಭಟ್:—ಅಂದೊಜ್ಯೇ, ಚಿಕ್ಕಾ, ಪುಗೆರೆ ಬೋಡತ್ತ್ಯೇ, ಅಂದುಟ ಇಂಡ್‍ಗೆರ್.

ಚಿಕ್ಕ:—ಅಬ್ಬ! ಇನ್ನ್ಕಳೆ! ಪುಗೆರೆ ಬ್ಯಾರಿನೊವೇ ಆವೊಡೊಡೊ. ಮಿಾನ್‍ದ ನಾತೊ.

ಭ:—ಐನ್ ಮಂಪುನಕ್ಲ್ ಮಿಾನ್ ಪುಟ್ಟಿರನೇ ಇದ್ಯೊಡೋ. ಏತ್ ಬೋಡ್ ಪಣ್.

ಚಿ:—(ಪಾತೆರಾಂದೆ ತನ್ನ ಅಸಮ್ಮತಿನ್ ತೋಜ್ಪಾಪಲ್.)

ಅಂದು:—ದದ್ದಾನೆ ಸಾಮಿ? ಬೊಬ್ಬೊಡೋ ಬೊಡ್ಚ್ಯೋ?

ಭ:—(ಒಂಜಿ ಪುಗೆರೆ ದೆತ್ತ್‍ದ್ ಚಿಕ್ಕಗ್ ಕೊರ್‍ದ್) ಒರೊ ಎಂಚ ಇಂಡ್ ಪಣ್.

ಚಿ:—ಆ (ಮೂಸ್‍ದ್) ಅಯ್ಯೋ! ಮಿಾನ್‍ದ ನಾತೊನೆ ಇಂದ್ (ದಕ್ಕ್‍ಪಲ್)

ಅ:—ಅಅವ್ರ ಮಿಮಿೊನತ್ತ್ ಮದಿಮ್ಮಾಳೆ. ಚಚ್ಚಪ್ಪ. (ಪುಗೆರೆ)

ಭ:—(ಬೊಕ್ಕ ರಡ್ಡ್ ಮೂಸ್‍ದ್) ಮಾತಲಾ ಇಂಚನೇ! ಮಿಾನ್‍ತ ನಾತೊ........ನಿನ್ನ ಸಾವಿಂದು.

☞ ನೆಟ್ಟೆತ್ತಿನ ಪುದಾರ್‍ಲ್ ಬರೇ ಕಾಲ್ಪನಿಕೊ ಆದುಲ್ಲೊ

ಅ:—ಸೆಸ್ಸೆಲ್ಲೆ; ಸಸ್ಸಾವು ಮಾತ, ಸಪ್ಪನೊಡ್ಚಿ ಆವಾ?

ಭ:—ಬೊಕ್ಕ, ಎಂಚಿನಾಕ್ಲ್ಯ ನಿಕ್ಲ್. ದುಂಬು ನಿನಮ್ಕೆ ಅಬ್ಯಾಸು ಇತ್ತೆ. ಆಯಡ್ತ್ ಮೂಜಿ ಪಾಲ್ ಈ ಬೇರೊಗ್. ನಿನ್ನ ಹುಟ್ಟೇ ಅಂಚ! ಬ್ಯಾರ್ಲ್ಲ ಮಾತಲಾ ಇಂಚನೇ.

ಅ.—ಜಜ್ಜಾಗ್ರತೆ. ಬೆಬ್ಬೇರ್ಲೆ ಸುದ್ದಿ ಬೋಡ್ಚಿ. ಕಕ್ಕಾರ್‍ಡ್ ಚೆಚ್ಚೆರ್ಪು(ಮೊಟ್ಟು)ಂಡ್. (ಅಂದು ರಡ್ಡ್ ಪಜ್ಜೆ ದುಂಬು ಬತ್ತ್‍ದ್, ಅಂಗಿತ ಕೈನ್ ಮಿತ್ತ್ ಮಿತ್ತ್ ನೂಕ್‍ಪೆ.)

ಭ:—ದಾನೆ? ದಾನೆಂದ್ ಗ್ರ್ಯೇತ ಹಾ! ಹಾ!

ಚಿ:—(ಪೋಡಿತ್ತ್‍ದ್) ಆಯ್ಯೋ! ಇನ್ನ್ಕಳೊರೊ ಉಳ್ಳೇ ಬಲ್ಲೇಂದ್............ಈ ಪೋ. ಅಂದು

ಭ:—(ಅಂದುಗ್) ಜಾರ್ ಮುಲ್ಪಡ್ತ್, ಗಾಡಿ ಕಟ್ಟ್ ಬೇಗೋ.

ಅ:—ನಿಕ್‍ಲ್ಯೆ, ಪಿಪ್ಪಿರಾ ಮೆರೆ ಜಜ್ಜಾದಿ ಮಾತಲಾ ಇಂಚನೇ. ಎಂಕ್ಲೆ ಸುಸುದ್ದಿಗ್ ಬಬತ್ತರ್ಡ ಜಾಗ್ರತೆ (ಅಂದು ಪುಗೆರೆದ ಕಟ್ಟ ಸುಂಬೊಂದು ಪೋಯೇ.)

ಚಿ:—ಇನ್ನ್ಕಳು ಬೆತ್ತ್ ಜಾಯೆ...........

ಭ:—ಪ್ಪೆ, ಆಯನೇನ್ ಕೆರ್ತ್ತವೆ.

ಚಿ:—ಹ್ಹ, ನನ ಕೆರ್ತ್ ಕೋರ್ಟ್, ಗೀರ್ಟ್, ಬೆತ್ತ್ ಜೈಲ್.

ಭ:—ಪೋ, ಇನೀಯೇ ಪೋ, ಇನ್ನಪ್ಪೆನಿಲ್ಲಡೆಗ್, ಪೊಣ್ಜೀವೆ ಜಾತಿ ಮಾತಲಾ ಇಂಚನೇ.

ಚಿ:—ಅಪಗ ಜಾನೆ ಬೋಡೋ ಐನ್ ಮಂಪಿ. ಎಂಕ್ ಜಾನೆ (ಉಲ್ಯಾ ಪೋಪಲ್, ಭಟ್ರ್ ಉಂತ್ನಲ್ಲೇ ಉಂತ್‍ದ್ ಬೊಕ್ಕ ಕುಲ್ಲ್‍ಡ್ರಿಯೆರ್.)

ರಡ್ಡನೆ ದೃಶ್ಯೊ.

(ಬೋರಣ್ಣೆ ಬರ್ಪೆ, ವ್ಯೈಡ್, ಒಂಜಿ ತುಂಡ್ ಕೈದ ಜಿಬ್ಬೊ. ಸೊಂಟೊದ್ದಿತ್ತ್ ಒಂಜಿ ಮುಂಡ್, ತರೆಕ್ಕ್ ಕಟ್ಟ್‍ದ್‍ನಿ, ನಾಲ್ಮೊರಂಗೆದ ಒಂಜಿ ಮುಂಡಾಸ್. ಕೈಟ್ ಒಂಜಿ ನಾಗರಬೆತ್ತೊ)

ಬೊ:—ಎಂಚಿನವಪ್ಪ. ಈಯೊಡ್ ಬಚಾವಿದ್ದಿ. ಧನಿಕ್ಲೆಗ್ ಗೇಣಿ ಕೊರ್ಪುನಿ ಎಂಚಪ್ಪಾ? ಬೆಳೆಕ್ಕ್ ಬಂಬುಚ್ಚ್ ಕುಲ್ಲ್‍ದ್ ಬೆಳೆ ಹಾಳಾಂಡ್. ಅಯ್ಯೋ! ಎನ್ನ ಗತಿಯೆ! ಇಂಚಿ ತೀರ್ವೆ

ಪಕ್ಲೇರೊರಿ ಪಣ್ಪಿಂಚಿನ ಪಾತೆರೊ..........ದಾದ ಮಲ್ಪುನಿ ಇತ್ತೆ......ಐಕ್ ಸರಿಯಾದ್, ಯನ ಸುಬ್ಬೆ (ಎರು) ಲಾ ಬೊಳ್ಳೊಗ್ ಪೋಪೊಡೊ. ಐನೆಡೆಟ್, ಬೊಳ್ಯ (ಮಗ) ನ್ಲಾ ಹೈಸ್ಕೂಲ್‌ಗ್ ಕಡಪ್ಪುಡೊಡೊ! ಆಯಗ್ ರುಪ್ಪಾ ಕಡಪ್ಪುಡಂತೆ ಉಪಾಯೊ ಇಜ್ಜಿ. ಕೈಟ್ ಕಾಸಿಜ್ಜಿ, ಇಂಚಿ ಕಿಟ್ಟಣ್ಣೆರೆ ಕುರಿಕ್ಕ್ ಸೇರ್ದ್ ಯಾನ್ ಕೆಟ್ಯೆ. ಒಟ್ಟಾರೆ ಮಿತ್ತ್ ಆಳೆಗ್ಲಾ ಕಾಯಿಲೆ. ಯನ ಬೇಲಿ ಮಾತಲಾ 'ಇಂಚನೇ! ಸಂಕಪ್ಪೈಲೆಡ, ಸಾಲೊ ಕೇನುನವೇ ಗತಿ. ಎಂಚಲಾ, ಆಜೆ ಲೆಕ್ಕೊಡ್ ತಿಕ್ಕ್. (ಬೋರಣ್ಣನ ಪಿರಾವುಡೆ ತಿಮ್ಮಣ್ಣ ಭಟ್ರ್ ರಭಸೊಡ್ ಬರ್ಪೆರ್)

ಬೋ:—ನಮಸ್ಕಾರೊ ಭಟ್ರೆ, ದೂರೊ ನಮೊ?

ಭ:—(ಉಂತ್‌ದ್) ಒರೊ ಮಂಗ್ಳೂರ್‌ಗ್ ಪೋವೆರಿತ್ತ್ಂಡ್, ರೈಲ್ ಬರೆರಾಂಡ್.

ಬೋ:—ದಾನೆ ಇಂಚ ಸೋಮಿ.

ಭ:—ಯನ ಕಂಗ್‌ಲೆಗ್ ಕೊಳಿರೋಗೊ. ಐಕ್ ಪಂಪ್ ಕನರೆರ.

ಬೊ:—ಯನ ತೈಲಾ ಬಂಬುಚ್ಚ್ ಕುಲ್ಲ್‌ದ್...

ಭ:—ಈಯೊಡ್ ಮಾತಲಾ ಅಂಚನೆ. ಸಿನಟ ಪಿನಿ ಪಾತೆರೊಡಾಂಡೆ.

ಬೊ:—ಐಕ್ ದಾನೆ ಅಡ್ಡಿ!(ಮೆಕ್ಲೆ ಪಿರಾವ್ಡೆ ಅಂದು ಬರ್ಪೆ)

ಅ:—ಪಪ್ಪಾತೆರೊಣೆ ಯಾನ್ಲಾ ಕೇನ್ಪೆ. (ಮೆಕೆಲ್ ಆಯನ್ ತೂವಂಡೆ ಮಾರ್ಗೊದ ಕರೆಡ್ ಉಂತ್‌ದ್ ಪಾತೆರ್ಪೆರ್.)

ಭ:—ಈ, ರೈಲೆ ಕೈಡ್ದ್ ಸಾಲೊ ದೆಪ್ಪುಗೆ ಅಂದೊ?

ಬೊ:—ಈರೆಗೇರ್ ಪಂಡೆರ್ ಸಾಮಿ.

ಭ:—ನಿನ ಬೊಡೆದಿ, ಭಸ್ಮೊ ಪಾಡ್ಪಾವೆರ ಬತ್ತಿತ್ತ್ಲ್. ಅಪಗ ಪಂಡಲ್. ಬಡ್ಡಿ ಏತ್‌ಗೆ?

ಬೊ:—(ತನ್ನಾತೆಗ್) ಮೇರೆಡ ರುಪ್ಪಾ ಉಪ್ಪೊಡು. ಬಡ್ಡಿ ನಾಲೆಲೆಕ್ಕ ಪನ್ಪೆ (ತೆರಿಪ್ಪಿಲೆಕ್ಕ) ಯಾನ್ ಬಡವೆ ಅತ್ತ್. ಅಂಚಾದ್ ನಾಲೆಲೆಕ್ಕ ಮಲ್ಪುಗ ಪನ್ತೆರ್.

ಭ:—(ತನ್ನಾತೆಗ್) ಯಾನ್ ಕೆಟ್ಯೆ. ಇತ್ತ್‌ನ ನೂದ್ ರೂಪಾಯಿ ಇಲ್ಲಾಲ್ ದೀವೆರ ದೈರ್ಯೊ ಇಜ್ಜಿ. ದಾನೆ ಮಲ್ಪುನಿ (ತೆರಿಪ್ಪಿಲೆಕ್ಕ) ನಿಕ್ಕೇತ್ ಬೋಡ್? ದಸ್ತಾವೇಜೊಡೊ?

ಬೋ:—ದಸ್ತಾವೇಜಿ! ನೂತ್ತಯ್ಯೊ ಬೋಡ್. ಕಡೆಗ್ ನೂದ್ ಯಾವು.

ಭ:—ಇತ್ತೆ ಬಡ್ಡಿದರೊ ಮಾತದಿಕ್‌ಡ್ಲಾ ನಾಲೆಲೆಕ್ಕ (ಮೇರೆಗ್ ಗೊತ್ತಿಜ್ಜಿ) ಯನಡ ಒಂಜಿ ನೂದ್ ರೂಪಾಯಿ ಉಂಡ್. ನಿಕ್ಕ್ ಮೂಜರೆ ಲೆಕ್ಕ ಕೊರ್ಕ.

ಬೋ:—ಆವು ಭಟ್ರೆ, ರೈಲೆನ್ ನಂಬೆರ ಬಲ್ಲಿ (ಪಾತೆರೋಂದ್ ಪೋಪೆರ್.) (ಅಂದು ಎದ್‌ರ್‌ಗ್ ಬರ್ಪೆ.)

ಅ:—ಫಸ್ಟ್‌ಸ್ಟ್ ಪಿಲೇನ್. (ಎಡ್ಡೆ ಉಪಾಯೊ) ರೆರೈಲೆನ್ ನಂಬೆರ ಬಬ್ಬಲ್ಲಿಗೆ, ಭಬ್ಬಟ್ರೆಗ್ಲಾ, ಸಂಕಪ್ಪೈಲೆಗ್ಲಾ, ತಿತಿಕ್ಕಾದ್ ಪಾಡಿಯೆರ, ಎಎಡ್ಡೆ ಫೈನ್. ಭಭಟ್ರೆನ್ ಲಗ್ಗಾಡಿ ದೆದೆಪ್ಪೊಡ್................ಇನಿ ಬೆಬ್ಬೆಲ್ಯಾಯಿಶ್ಚಿ. (ಶುಕ್ರವಾರೊ) ಇಇನಿ ಪ್ಪಳ್ಳಿಕ್ ಪೋಪೊಡ್. ದ್ದುದ್ದುಂಬ್ ರೈಲಾಡೆ ಪೊಪ್ಪೋತ್ ಬರ್ಪೆ. (ದುಂಬ್‌ತಕ್ಲ್ ಪ್ಯೊನಲ್ಲೆನೆ ಪೋಪೆ.)

ಮೂಜನೆ ದೃಶ್ಯೊ

(ಜನ್ನಣ್ಣ ಭಟ್ರೆ ಹೋಟೆಲ್ ಎಲಿಯುವಾಂಡ್ಲಾ ಶುಚಿ ಆದುಂಡು. ಸಂಕಪ್ಪೈಲು ಕಾಫಿ ಬಗ್ಸಾವೊಂದ್ ಪರ್ಪೆರ್. ತಿಮ್ಮಣ್ಣ ಭಟ್ರ್ ಪೇರ್ ದೆತೋಂದ್ ಬರ್ಪೆರ್.)

ರೈ:—(ದುರದುರನೆ ನಾಲ್ ಮಿನಿಟ್ ತೂದ್) ದಾನೆ ಭಟ್ರೆ? ಈರೆ ಸುದ್ದಿ, ಕೆಬಿಕ್ಕ್ ಅಪ್ಪಗಪ್ಪಗ ಬೂರುಂಡು. ಪಿನೀದ್ ಜೋರಾತರೋಂದ್‌ತ್ ಸಂಶಯೊ ಉಂಡತ್ತಾ?

ಭ:—ಏರ್ ಜೋರಾಂಡ ಏರೆಗ್ ದಾನೆ? ಪಿನಿ ಮೆಲ್ಲ ಪಾತೆರಿ.

ರೈ:—ಜೋರಾ? ಎಂಚಿ ಜೋರು? ಮುರಾನಿ ದಾದ ಮಲ್ಪುರ್ ಬೇಗ ಪನಿ.

ಭ:—'ಸಾವಧಾನೇ ಸರ್ವಹಿತ' ಮೆಲ್ಲ ಪಾತೆರ್ಕ ಆವೆ.

ರೈ:—ಮಾತ ಕೆರಿಪುಂಡು ಎಂಕ್. ಈರ್, ಬೋರಡ ದಾದ ಪನ್ತರ್, ಪನಿಬೇಗ.

ಭ:—ಪಂಡ್‌ಜಂಡ............

ರೈ:—ಮಾನಸಸ್ಟೊಗ್, ಮೊಕದ್ದಮೆ ಮಲ್ಪೆ. ದಾನೆಂದ್ ಗಿರೆವರ್, ಲಡಾಯಿಗ್ ಕಾರಣೊ ಹುಡುಕ್ಪರಾ? ನಿಕ್‌ಲೆನ ಮೂದ ಗೊತ್ತುಂಡು. ಜಾಗ್ರತೆ ಕೇಸ್ ಕೊಂಡೋವೆ, ಕ್ರಿಮಿನಲ್ ಕೇಸ್. ಈರ್ ಪಬ್ಲಿಕ್ ರೋಡ್‌ಡ್ ದಾನೆ ಮಾತ ಯನ ವಿಷಯ ಪನೊಲ್ಯಾ? ಈರ್ನ ಮಾತಲಾ ಇಂಚನೇ. ಈರೆಗ್ ಅವ್ವೇ ರೋಡ್‌ಡ್ ಮೊಟ್ಟ್‌ಡ್ ಹಾಕಾದ್ವೆ. ಆಂಟೆ ಎಂಕ್ಲೆಂಕ್ಲೆ ಹಿರಿಯೆರೆ ಇಷ್ಟಾಚಾರೊ ಗ್ರೈತ್‌ದ್, ಬುಡುಪೆ. ಈರೆ ಮಾತ ಬೇಲೆಲಾ ಇಂಚನೇ...............ಅಂದೇ? ಈರ್, ಯಾನ್ ಏರ್‌ಂಡ್ ಗ್ರೈತರ್. ಯಾನ್, ಸಂಕಪ್ಪೈ ತೆರಿಂಡಾ?

ಜನ್ನಣ್ಣ:—ಮುಳಾನಿ, ಅಂದುಲಾ ಜಿರೆಪೆರೆ ಪಂಪೇತೆ. ಇನ್ನುಳ್ಳೊ ಮಾತಲಾ ಇಂಚನೇ.

ಭ:—ಉಸ್ಸಪ್ಪ! ಶೂದ್ರೆರೆ ಕೈಡ್ತ್ ಕೇನುನಿ ಇತ್ತ್ಂಡ್. ಅವುಲಾ ಆಂಡ್. (ಬೋರಣ್ಣೆ ಉಳ್ಳ್ಯಾ ಬರ್ಪೆ.)

ಬೋ:—ಅಂದೊ ಭಟ್ರೆ. ಇತ್ತಿ ದಸ್ತಾವೇಜ್ ಬರೆಪ್ಪಾದ್ ರುಪಾಯಿ ಕೊರಿ. ಇದ್ಯಂಡ ಈರೆ ರೂಪಾಯಿಂಬೇ ಬೊಡ್ಚಿ ಏನ್ಲಾ ಉಲ್ಲೆ ನೆಲ್ಯಾರ್ಲಾ ಉಲ್ಲೆರ್

ಭ:—ಉಂತ್ಲಾ—

ಬೋ:—ಉಂತುನೆಲಾ ಬೊಡ್ಚಿ; ಕುಲ್ಲುನೆಲಾ ಬೊಡ್ಚಿ.

ರೈ:—ಜನ್ನಣ್ಣೆರೆ, ಇತ್ತಿನೆ ಗುಟ್ಟು ಪಿದಾಯಿ ಬೂರುಂಡು.

ಭ:—ಕೊರ್ಲೊ, ಬೊರಾ ಕೊರ್ಲೊ.

ಬೋ:—ಇತ್ತಿನೇ ಆವೊಡ್, ಬೊಕ್ಕ, ಸಂಕ್ರಭಟ್ರೆ ಲೆಕ್ಕ ಮಲ್ಪೊಂಡ...

ರೈ:—ಅವ್ವೇರ್, ಬೋರ.

ಬೊ:—ಆವೆ ಆರ್ ನೆಲ್ಯಾರೆ, ಆಯೆರೆದ ಭಟ್ರ್ ನೂದ್ ರುಪ್ಪಾ ಕೊರ್ಪೆ ಪಂಡ್‌ದಿತ್ತೆರ್. ಮನದಾನಿ ಪೋನಗ ಬೇತೆ ಏರೆಗೋ ಕೊರ್ಯೆರ್ಗ್. ಇಸ್ವಾಸ ಘಾತಕೆ.

ರೈ:—ಆಹಾಃ! ಅಂಚಲಾ ಉಂಡೊ? ಆರ್, ಎಡ್ಡೆ ಜನೊಂದಿತ್ತೆ ಯಾನ್.

ಬೋ:—ಓಹೋ, ಫಸ್ಟ್ ಜನೊ, ಮುಕ್ಕಾಲ್‌ಗ್ ಮೂಜೆತ ಬಾಬು.

(ಸಂಕಪ್ಪ ರೈ ಪಿದಾಡ್‌ದ್) ರೈ:—ಬೊಕ್ಕ ತಿಕ್ಕ್‌ವತ್ತ ಬೋರಣ್ಣಾ.

ಬೊ:—ತಿಕ್ಕ್‌ಪೆ ನೇಲ್ಯಾರೆ.

ಭ:—ಅಂದೋ ಬೋರಣ್ಣಾ, ಈ ಇಂಚ ಮಾತ ಪಂಡ್ರೆ ಯನೆ ಪಣ್.

ಬೊ:—ಒರೊ ಪೋಲೆಯಿ. ರುಪ್ಪಾ ಇತ್ತಿ ಕೊರ್ಪರಾ ಇಜ್ಜಾ.

ಭ:—ಇಜ್ಜಿ, ನಡಪು, ನಾಚಿಕೆದಾಂತಿನಾಯೆ.

ಬೋ:—ಈರೆಂಚಿ ಭಟ್ರ್ ಬೊಕ್ಕ, ಮೊಟ್ಟು ಪಾಡೊಂದು ಪೋದ್ ಪೂಜೆ ಮಲ್ಪುನಾರ್? (ಬೋರಣ್ಣೆ ಪೋಪೆ. ಜನ್ನಣ್ಣೆ ಕತ್ತಲಾಂಡ್‌ಂದ್ ದೀಪೊ ಪೊತ್ತಾಪೆ. ಭಟ್ರ್ ಪೇರ್‌ದ ಚೆಂಬು ಕೈಟ್ ಪತ್ತೊಂಡ್ ಪಿದಾಡ್ಯೆರ್.)

ನಾಲನೆ ದೃಶ್ಯೊ

(ಸಂಕಪ್ಪ ರೈಲೆ ಇಲ್ಲಡೆ ಆರ್ ಕುಲ್ಲೊಂದೆರ್. ಬೋರಣ್ಣ ಗೌಡೆ ಉಂತೊಂದೆ)

ಬೋ:—ಕೊರಾಂದೆ ಉಪಾಯೊ ಇಜ್ಜಿ ನೆಲ್ಯಾರೆ, ಮರ್ಯಾದಿ ಪೋಪುಂಡು.

ರೈ:—ಯಾನ್ ಪಂಡಿತ್ತೆ, ತಿಕ್ಕಂದ್‌ಂದ್‌ದ್. ಭಟ್ರೆಳ್ಪಂಡ್ ಪೋ.

ಬೋ:—(ಕಾರ್‌ಗ್ ಬೂರ್‌ದ್) ತತ್ತ್‌ಂಡ್ ನೆಲ್ಯಾರೆ. ಏತ್ ಬಡ್ಡಿ ಬೋಟಲಾ ಕೊರ್ಪೆ.

ರೈ:—ಪದಿನೆಣ್ಮೆ ಮುಕ್ಕಾಲೆ ಲೆಕ್ಕ ಕೊರ್ವನಾ. ಇಜ್ಜಂಡ ಅಪುಜಿ.

ಬೋ:—ಎನ್ನ ಕೆಕ್ಕಿಲ್ ಕೊಯ್ಯಡೆ. ಅಯ್ಯೊ ರುಪ್ಪಾ ಅಂಟ್ಲಾ ಕೊರ್ಲೆ.

ರೈ:—ಯಾನ್ ಪಂಡಿತ್ತೆ, ಪನ್ನೆಣ್ಮೆಮುಕ್ಕಾಲೆ ಲೆಕ್ಕ ಬಡ್ಡಿ ತಿಕ್ಕೊಡು.

ಬೋ:—ಐಡ್ತ್, ಯನ ಕೆಕ್ಕಿಲ್ ಪಿಜಕ್ಕುನಿ ಎಡ್ಡೆತ್ತ ನೇಲ್ಯಾರೆ.

ರೈ:—ನಡಪ್ಪಪಗ ಹಾ! ಮೊಟ್ಟು ಜಪ್ಪು.

ಬೋ:—ಅಪಗ ಎನ ಕೆಕ್ಕಿಲ್—

ರೈ:—ಬುಲೆತ್ತ್, ತೋರಾದ್, ಸೊಣ್ಪತ್ತೈನರೆ ಇಂಚ್ ಸುತ್ತಳತೆ ಆವಡ್.

ಬೋ:—'ಮಾಮಿ ಸಯ್ಯಿನಗ ಮರ್ಲ್ ಬೊಲ್ಪುಗೇ ತರಿ ಮಾಮಿ? ಬಯ್ಯಗೇತರಿ?'ಂದ್ ಕೇನ್ತ್ಲೆಗ್ಂಅಂಚ ಮಲ್ಪುವರೆ ಈರ್.

ರೈ:—ಒರ ಮೊಟ್ಟು ಜಪ್ಪುವಸ ಇಜ್ಜಾ?........ಅತ್ತ್, ನೂಕಾವೊಡಾ?

ಬೋ:—ಭಟ್ರೆನವ್ಲಾ, ಈರೆನವ್ಲಾ ಬುದ್ಧಿ ಮಾತಲಾ ಇಂಚನೇ. ದಯೆ ದೀಲೆ, ಪಾತೆರ್ಲೊ ಆವೆ?

ಐನನೆ ದೃಶ್ಯೊ

(ಬೀದಿ ಬೋರಣ್ಣೆ ಪೋಪೆ. ಅಂದು ಎದ್‌ರ್ ತಿಕ್ಕ್‌ಪೆ.)

ಅ:—ದ್ದದ್ದಾನೆ ಗೌಂಡ್ರೆ.

ಬೋ:—........

ಅ:—ದದ್ದದ್ದಾನೆ ಯಜಮಾರ್ರೆ.

ಬೋ:—ಅಂದು ಪೋ ಏನ್ ಆಲೋಚನೆ ಮಲ್ತೊಂದ್ ಪೋನಗ ಲೆತ್ನವು ಕೇಂಡ್‌ಜಿ.

ಅ:—ಅವ್ವೆಂಚಿ, ಆಆಲೋಚ್ನೆ.

ಬೋ;—ನಿಕ್‌ಲೆ ರೀತಿದ ಜನೊಕುಲೆನ.

ಅ.—ಗುಯ್ಯಾನ್ ದ್ದಾನೆ ಮಲ್ತೆ ಯಜಮಾರ್ರೆ. ಅಆಲ್ಲಾಣೆ ದದ್ದಾಲ ಇದ್ದಿ.

ಬೋ.—ಪಾತೆರೊಡ್ಚಿ, ಈ ಸಂಕಪ್ಪೈಲೆಡ ದಾನೆ ಪಂಡ.

ಅ:—ರೈಲೆನ ಯೆಯ್ಯೇರ್ ತುತ್ತೂದೆರ್ ಸಸ್ವಾಮಿ.

ಬೋ— ಈ ಮಲ್ಲ ಖಿಲಾಡಿ.

ಅ—ಈರ್ ಖಿಖಿಲಾಡಿ. ಗಗ್ಸೌಂಡರ್ ಮಾತಲಾ ಇ ಇಂಚಿನೇ.

ಬೋ—ಗೌಂಡೆರೆ ಸುದ್ದಿದೆಪ್ಪೊಡ್ಚಿ, ಗುಂಡು ಪಾಡ್‌ದ್ ಕೆರ್ವೆ.

ಅ—(ರಡ್ಡ್ ಪಜ್ಜೆ ಪಿರಪೋದ್) ಬೆಬ್ಬೆಡಿ ಮುಮ್ಮೊ ಉಂಡೋ? ಇಲ್ಲಾಲೊ?

ಬೋ—ನಿನನ್ ದೀಡಯೆ ಅಂದು, ಎಂಕ್ ನನ ಓಲ್ಲಾ ಈ ತಿಕ್ಯಂಡ.

ಅ—ದದ್ದಾನೆ ಮಲ್ಪುವರ್? ಏನಿತ್ತೆನೆ ಮಲ್ಪಿ.

ಬೋ—ಪಾತೆರಡ, ನಿನ್ನ ಜಾತಿಗ್ ಬೆಚ್ಚೊನೀರ್.

ಅ—ಸೆಸ್ಸೆಲ್ಲೆ, ಈರ್ ಮುಮ್ಮುಂಡಂಡ (ಪಾತೆರೊಡ್ಚಿ) ಈರೆ ಬೆಬ್ಬೇಲೆ ತೂಲೆ.

(ಬೋರಣ್ಣೆ ಪಿಸುಗುಟ್ಟೋಂದ್ ತನಸಾದಿ ಪತ್ವೆ. ಅಂದು ಆಯೆ ಪೋಪುನೆನೇ ತೂಪೆ.)

ಆಜನೊ ದೃಶ್ಯೊ

(ಪಟ್ಲೇರೆ ಇಲ್ಲಡೆ, ಭಟ್ರ್ಲಾ ಪಟ್ಲೇರ್ಲಾ ಪಾತೆರೋಂದ್ ಕುಲ್ಲೋನ್ತೆರ್)

ಕಮ್ತಿಳು—ದಾನೆ ಇಂಚ ಬತ್ತರ್, ಪಂಡ್‌ಜರತ್ತ.

ಭಟ್ರ್—ಇತ್ತೆ ತೂಲೆ ಕಮ್ತಿಲೆ. ಮಾತೆರ್ಲಾ ಎಂಕ್ ಉರ್ಟೆ ಉಳ್ಳೆರ್. ಇಂದು ಇಂಚಿನೇ ಇತ್ತ್ಂಡ ದಾನಾಂಡ್ಲ ಒಂಜಿಬಿನ ಘೊರ ಆವಂತಿಪ್ಪಂದ್. ಈರ್ ಏನ ಕಡೆಕ್ ಕಣ್ಣ್ ತಿಗಾಪೊಡು.

ಕ—ಎಂಚನೆಗ್‌ನಾದ ಇಂದು.......ಈರ್ಲ ಬೊಕ್ಕ

ಭ—ಅಂಚತ್ತ್ ಕಮ್ತಿರೆ, ಅಂದು, ಆ ಬ್ಯಾರಿ, ಅಂಚ ಮಲ್ಪೊಲಿಯಾ!

ಕ—ಇತ್ತೆ ಆಯಿನ ದಾನೆ? ಒರ ಪಣ್ಲೆಪ್ಪಾ.

ಭ—ಒಂಜಿ ದಿನೊ, ಅಂದು, ಪುಗೆರೆ ಕನತ್ತೆ. ಅವು ಮಿನಾಸ್‌ದ ನಾತೊ ಬರ್ಪೇತ್‌ಂಡ್, ಏಕ್ ನಿಕ್‌ಲ್ ಮಾತ ಇಂಚ ನೇ ಪಂಡೆ, ಆಯೆ ಲಡಾಯಿಗೆ ಬತ್ತೆ ಅತ್ತ?

ಕ—ಏರ್ ಅಂದು.

ಭ—ಪನ್ಪೆ ಕೇನೆ, ಒಂಜಿ ದಿನೊ ಬೋರೆ ರೈಲಾಡೆಗ್ ಸಾಲದೆಪ್ಪೆರೆ ಪೋವೇತೆ. ಯಾನ್ ಮೂಜರೆಲೆಕ್ಕ ಕೊರ್ಕಪಂಡೆ, ಏನ್ ಅಂದು ರೈಲೆಡೆ ಪೋತ್ ಪಂಡೆ. ಆರ್, ಜನ್ನಣ್ಣನ ಹೋಟ್ಲ್‌ಡ್ ಎಂಕ್ ನಾಯಿಗ್ ನೆರಿಲೆಕ್ಕ ನೆರ್ಯೆರ್. ಇಂದ್ ಪಮೊನ ಕಮ್ತಿರೆ. ಬೋರೆ ಯನ ರುಪ್ಪಾ ದೆತೊಂಡ್ಜೆ, ರೈಲ್ಲಾ ಕೊರ್ಜೆರ್ಗ. ಆಯೆ ಇತ್ತೆ ಉರಿತ್ತ್ ಬೂರ್ದೆ, ಏನ್ ಏರೆ ಮಿತ್ತ್ ಕಾರ್‌ಪೆನೋ ಗೊತ್ತಿದ್ದಿ. ಇಂದಿತ್ತೆ ಸರಿಯು ಪನ್ಲೆ?

ಕ—(ಉಗ್ರಾಣಿನ್ ಲೆತ್ತ್‌ದ್) ಈ ಪೋದು ಬೋರಣ್ಣಾ ಅಂದುನ್ನಾ ಲೆತೋಂದ್ ಬಲ್ಲ. (ಉಗ್ರಾಣಿ ಪೋಪೆ)

ಭ—ಅಪಗ ಯಾನ್ ಪೋಪೆ ಕಮ್ತಿರೆ.

ಕ—ಉಂತ್ಲೆಪ್ಪಾ, ಬಾಜೇಲ್ ಪರ್ದ್ ಪೋಲೆ.

ಭ—ಇಜ್ಜಿ, ಪೂಜೆಗ್ ಪೊರ್ತಾಂಡ್. (ಭಟ್ರ್ ಪೋವೆರ್)

(ಉಗ್ರಾಣಿ ಬರ್ಪೆ)

ಉ—ಬತ್ತೆರ್, ಜನ್ನಣ್ಣೆರಳ್ಳ್ ದಾನೆಮಾತ ಪಂಡೋಂಡಿತ್ತೆರ್. (ಇರ್ವೆಲಾ ಬರ್ಪೆರ್)

ಬೋ—ನಮುಸ್ಕಾರೊ ಸ್ವಾಮಿ.

ಆ—ಸಸ್ಸಲಾಂ ಪಠೀಲ್ರೆ.

ಕ—ನಿಕ್‌ಲ್ ಹೋಟೆಲ್‌ಡ್ ದಾದ ಜೊಬ್ಬೆಹಾಕೇತ್ತಿ?

ಬೋ—ಈ ಅಂದು ರೈಲೆಡ ಇಜ್ಜಾಂತಿನ ಚಾಡಿ ಪಣೊಲಿಯ ಸ್ವಾಮಿ.

ಆ—ಯಯ್ಯಾನ್, ಚಾಡಿ ಪನ್ಪ್‌ಜಿ ಸ್ವಾಮಿ.

ಕ—ಬೊಕೆಂಜ ನಿಕ್‌ಲ್ ಗ್ರಾಮೊಡ್ ಗಲಾಟೆ ಲಕ್ಕ್‌ಪರ್ ಕಜಾವ್. ನಿಕ್‌ಲೆ ಮಿತ್ತ್ ಕಲೆಕ್ಟ್ರೆ ಕೈಟ್ ರಿಪೋರ್ಟ್ ಕಡಪ್ಪುಡ್ಡೆ. ಮ್ಯಾಜಿಸ್ಟ್ರೇಟ್ ಕೋರ್ಟ್‌ಡ್ ವಿಚಾರಣೆ ಉಂಡು, ದಾನಿ?........

ಆ—ಇಇಂಡೆ ಉಪ್ಪಾ,—ಕೆಕ್ಕೆರೊಡ್ಜಪ್ಪಾ, ಯನಮಲ್ಲ ತತ್ತಪ್ಪಾಂಡ್ (ಕಮ್ತಿರೆ ಕಾರ್‌ಗ್ ಬೂರ್ಪೆ) ಯಯನ, ಪುಪ್ಪುಗೆರೆದ ಕಜ್ಜೋಟೊ (ವ್ಯಾಪಾರೊ)ನ್ಲಾ ಉಂತಾವಡೇ! ದಮ್ಮಯ್ಯ.

ಬೋ—ನಿಜೊಕ್ಕುಲ ಯಾನ್ ಭಟ್ರೆಗ್ ನೆರ್ತೆ ಸ್ವಾಮಿ. ನನ ನೆರಯೆ ದನಿಕ್ಕುಲೇ.

ಕ—ಎಲ್ಲಾಂಜಿ ನಿಕ್ಲೆನ್ ಜನ್ನಣ್ಣೆರೆ ಹೋಟ್ಲ್‌ಗ್ ಲೆಪ್ಪಾವೆ; ಆಪಗ (ಬೋರಗ್) 'ಈ ರೈಲೆಗ್ ದಾನೆಪಂಡ' ಕೇನ್ವೆ, 'ಈ ರೈಲೆಗ್ ಪನ್ಪ್‌ಜಿ. ಭಟ್ರ್ ಮಂಗ್ಲೂರ್‌ಗ್ ಪೋವೆರೆ ರೈಲ್ ತಿಕ್ಕ್‌ಂದ್ ರೈಲೆನ್ ನಂಬಡೆ ಪಂಡೆ' ಪನ್ಲ. (ಅಂದುಗ್) 'ಈ ಸಂಕಪ್ಪೈಲೆಡ ದಾನೆ ಪನ್ತ' ಕೇನ್ವೆ ಆಪಗ ಈ 'ಬೋರಣ್ಣೆ ರೈಲ್‌ನ್ ನಂಬೊಡ್ಜಿಂದ್ ಪಂಡ್‌ನವು ಯನ ಕೆಬಿಕ್ಕ್ ರೈಲೆನ್ ನಂಬೊಡ್ಜಿಂದ್ ಪಂಡ್‌ದ್ ಕೇನ್‌ಂಡ್, ಯಾನ್ ಏನ್ ರೈಲೆಡ ಪಂಡೆ' ಪಣ್. ನಣಕ್ಕ್ ದುಂಬು ಜಾಗ್ರತೆ. ಕಲೆಕ್ಟ್ರೆಗ್ ಗಲಾಟೆ ಶಾಂತಿ ಆತ್‌ಂಡ್‌ಂದ್ ಬರೆವೆ, ಪೋಲೆ. (ಇರ್ವೆರ್ಲಾ 'ಪ್ರಸಾದೊ' ಪಂಡೋಂದ್ ಪೋಪೆರ್)

ಏಳನೆ ದೃಶ್ಯೊ

(ರೈಲೆ ಇಲ್ಲಡೆ. ರೈಲುಲಾ ವಾಮನ ಕಮ್ತಿಳ್ಳೆ ಕುಲ್ಲೊಂತ್ತೆರ್)

ರೈ—ಓ ತುಕ್ರಾ, ಅಂಗರಾ, ಬೊಂಡೊದೆಪ್ಪಿ....ಹಾಳಾವಡ್ ಮೊಕ್ಲ್. ಗಂಜಿಗಾನಗ ಬರ್ಪೆರ್, ಕೊರೊಡ್ ದೊಣ್ಣೆಡ್. ಓ ತುಕ್ರಾ (ಘರ್ದಿ ತುಲಾಯಿಡ್ದ್) ದಾನೆ ಉಳ್ಳಯ.

ರೈ—ಬತ್ತನಾ! ಆ ಬರೀದ ತೋಟೊಟ್ದ್ ಕಡೇತ ಗುಂಡಿತ ಗೆಂದಾಳಿ ಸಾರೆಡ್ತ್ ನಾಲ್ ಬೊಂಡ ಕೊಂಡ.

ಕ—ಬೋಡ್ಜಪ್ಪಾ, ಈರೊರೊ ಕುಳ್ಳೆಪೊಲ್ಲ.

ರೈ—ಅಪರೂಪೊಡ್ ಬತ್ತರ್. ತಾಂಬೂಲ ಪಾಡೊನೆ.

ಕ—ಆಂಡಪ್ಪಾ, ಎಂಚವುಲ್ಲರ್?

ರೈ—ಉಲ್ಲೊ ಅಂಚ, ದಾನೆ ಇಂಚ ಬತ್ತರ್.

ಕ—ಪಿನೀದ್ ಪಾತೆರೆರ ಇತ್ತ್ಂಡ್, ಸಮಯ ಉಂಡೊ?

ರೈ—ಸಮಯೊ ಏತ್ಲಾ ಉಂಡೆ.

ಕ—ಇತ್ತೆ ಒಂಜಿ ಪೊಸ ಸರ್ಕಾರ್ ಬತ್ತ್‌ದ್‌ಂಡ್. ಗ್ರಾಮೊಡ್ ಗಲಾಟೆಳಿತ್ತ್ಂಡ ಮಿತ್ತ್‌ತಕ್‌ಲೆಗ್ ಬರೆಪೊಡಿಗೆ. ಎಂಕ್ಲೆ ಗ್ರಾಮೊಡು ಮಲ್ಲ ಕಿತಾಪತಿ ಆವೋಂದುಂಡು. ಆ ಗೊಂಚಲ್‌ನ್ ಕೈತ್ಯ್‌ದಕ್ಕೊಡ್. ಐನ್ ಅಪ್ಪೆಳ್ಳಾದ್, ನೆಲಸಮ ಮಲ್ಪೊಡು. ದಾನೆ ಪಣ್ಪರ್? ಅತ್ತೆ?

ರೈ—ಸಹಜೊ, ಕಮ್ತಿರೆ ಸಹಜೊ.

ಕ—ಐಕೀರ್ಲ ಪಿನೀದ್ ಸಾಯೊ ಆವೊಡು.

ರೈ—ಐಕ್‌ಮಾತ ಯಾನುಲ್ಲೆ, ಅವು ಏರ್ ನನಿಗೆ.

ಕ—ಈರೆ ಗೊತ್ತುಪ್ಪೆರಯಾವು. ಅಂದುಬ್ಯಾರಿ ಬೋರಣ್ಣೆ

ರೈ—ಕ್ಷಮೆಕೊರ್ಲೆ. ಐಟ್ ಯಾನ್ಲ ಉಲ್ಲೆ.

ಕ—ಆಂದ್, ಆಂಡ ಈರೆನ ತಪ್ಪಿಜ್ಜಿ ರೈಲೆ.

ರೈ—'ದೀಪೊದಡಿ ಕತ್ತಲೆ' ಪಂಡಿಲೆಕ್ಕ ಆಂಡ್ ಈ ಅವಸ್ಥೆ.

ಕ—ಇಂದು ಸಾರೊ ಇಜ್ಜಿ. ನನ ಇಂಚಿನೆಗ್ ಎಡೆ ಕೊರೆರಾವಂದ್.

ರೈ—ನಡತ್ತ್ ಪೋಯಿನೆನ್.

ಕ—ಎಂಚಾಂಡ್ಲ ಸಮಾಧಾನಗ್‌ಬರ್ಪಿಲೆಕ್ಕ ಮಲ್ಪೊಡು.

ರೈ—ಯಾನ್ ದಾನೆ ಮಲ್ಪೊಡು ಕಮ್ತಿರೆ, ಅಪಗ.

ಕ—ಈರ್ ಮನಿಪಾಂದುಪ್ಪುಲೆ. ಜನ್ನಣ್ಣೆರಾಡೆಗ್ ಬಯ್ಯಗ್ ಬಲ್ಲೆ.

ರೈ—ಭಟ್ರೆಗ್ ಪನೊಡ್ಚಾ

ಕ—ಅವು ಎಂಕೆಪ್ಪಡ್. ಇತ್ತೆ ಪೋಪೆ.

ರೈ—ಬೊಂಡ ಬತ್ತ್ಂಡ್.

ಕ—ಇದ್ದಿ, ಇತ್ತೆ ಪೋವೊಡು. (ಪೋಪೆರ್)

ಎಣ್ಮನೆ ದೃಶ್ಯೊ

(ಜನ್ನಣ್ಣೆರೆ ಹೋಟೆಲ್. ಅಂದು ಬೋರೆ ಬರ್ಪೆರ್)

ರೈ—ದಾನೆ ಇಂಚ ಬತ್ತ ಅಂದು.

ಅ—ಪಪ್ಪಟ್ಲೀರ್ ಪ್ಪಪಂಡೆರ್.

ರೈ—ಬೋರಣ್ಣ ಗೌಡ......

ಬೋ—ಎಂಕ್‌ಲಾ ಅವ್ವೇ, ನೇಲ್ಯಾರೆ.

ಜ—ಕುಲ್ಲುಲೆ. ಉಂತುನಿ ದಾದೆಗ್, ಮಲ್ಪೊಡ?

ರೈ—ಬೊಕ್ಕ

(ತಿಮ್ಮಣ್ಣ ಭಟ್ರ್‌ಲಾ, ವಾಮನ ಕಮ್ತಿಯೆರ್ಲಾ ಬರ್ಪೆರ್. ಮಾತೆರ್ಲಾ ಉಂತ್‌ದ್ ನಮಸ್ಕಾರೊ ಕೊರ್ಪೆರ್)

ಕ—ನಿಕ್‌ಲ್ ಏಕಾಡೇ ಬತ್ತರೊಡೊ.

ಮಾತೆರ್ಲಾ—ಇತ್ತೆ ಬತ್ತೊ, ಆತೆ.

ರೈ—ತೀರೂಡೊರೊ, ಪಂಚಾತಿಗೆ ಸುರ್ ಆವಡ್.

ಕ—ಅಂದು, ನಿಕ್ಕ್ ಭಟ್ರ್ ದಾದ ಪನ್ತೆರ್.

ಅ—ಪುಪುಗೆರೆ ನನ್ನಾದ್ನೆಗ್ ಮಾತಲಾ ಇಇಂಚಿನೇಂದ್‌ದ್ ಎಎಂಕ್ಲೆ ಜಾತಿಗ್ ನೆನ್ನೆರ್ಯೆರ್.

ಕ—ಭಟ್ರೆ, ಇಂದು ಅಂದೊ.

ಭ—ಯಾನ್ ಪುಗೆರೆಮಾತಲಾ ಇಂಚನೇ ಪನ್ಪಿನಿ ಆಧೊರ್ಡ್ ಪಂಡೆ.

ಕ—ಆದುಪ್ಪು, ಐನ್ ಗ್ರೈಪಾಂದ್ನಿ ಅಂದುನ ತಪ್ಪು. ಅಂದೊ ರೈಲೆ, ಅಂದು ಈರೆಡ ದಾದಪನ್ತೆ.

ರೈ—ಬೋರಣ್ಣ ಗೌಡೆಲಾ ಭಟ್ರ್‌ಲಾ "ರೈಲೆನಾ ನಂಬೆರ ಬಲ್ಲಿ"ಂದ್ ಪಂಡೆರ್‌ಂದ್‌ದ್ ಪಣ್ಣೆ.

ಕ—ಇಂದು ಅಂದೋ ಅಂದು.

ಅ—ಅಅಂದು ಸಾಮಿ.

ಕ—ಬೋರಣ್ಣಾ ದಾನೆ ಪನ್ಪ.

ಬೋ—ಭಟ್ರ್ ರೈಲ್‌ಡ್ ಮಂಗ್ಲೂರ್‌ಗ್ ಪೋವೊಡ್ಂದಿತ್ತೆರ್. ಎಂಕ್ಲೊ ಪಾತೆರ್‌ದ್ ಪೊರ್ತ್‌ಕಳೆಯೊ. ಬೊಕ್ಕ ಯಾನ್ ನನ ರೈಲ್‌ನ ನಂಬರೆ ಬಲ್ಲಿ ಪಂಡೆ.

ಅ—ಎಎಂಕವು ರೈಲೆನ್ ನನ್ನಂಬೆರ ಬಲ್ಲಿಂದ್ ಪಂಡಿಲೆಕ್ಕನೇಂಡ್.

ಕ—ಇಂದು ಭಟ್ರೆಮಿತ್ತ್‌ದ ಕೋಪೊಡು ಅಂದು ಮಲ್ತಿನ ತಪ್ಪು. ನನ ನಡತ್ತಿನವು ಮಾತ ಈತ್ ಪಾತೆರೊಲೆಡ್ದಾದ್. ರೈಲ್ ಭಟ್ರೆನ್ ದಾಲ ಪಣ್ತಿಪ್ಪೆರಯಾವು. ಭಟ್ರ್ ಐನ್ ಮದಪ್ಪರೆ. ಅಂದು ಪಾತೆರುನಗ ಪಿನೀದ್ ಜಾಗ್ರತೆಮಲ್ಪುಲ. ದುಂಬೇ ಈ ಬೆಬ್ಬೆಬ್ಬೆ. ಬೋರಣ್ಣೆ ಏರೆಗ್ ವ್ಯೊನ ಪಂಡ್‌ದುಲ್ಲೆನ ಐನ್ ಮಾತೆರ್ಲ ಮದಪೊಡು. ನಿಕ್‌ಲ್ ವ್ಯೊನ್ಲ ಗ್ರೈಪಾಂದೆ ದುಡುಕ

ನಾಕ್ಲ್, ನಿಕ್‍ಲ್ ಮಾತಲಾ ಇಂಚನೇ. ನನ ನಿಕ್‍ಲ್ ಒಟ್ಟು ಗುಪ್ಪೊಡು.

ಜ—ರೈಲೇ......

ರೈ—ಉಂತಿ...ಭಟ್ರೆ ಕಾಫಿ ಇತ್ತೆ ಏರೆ ಲೆಕ್ಕದ.

ಭ—ಯನಡ ಕೇಂಡಿ ಬೊಕ್ಕ ಯನ್ನವುಂದೇ ಆಂಡ್.

ಅ—ಬೊಬ್ಬೋಡ್ಚಿ, ಯಯನ್ನ ಲೆಕ್ಕೊಡ್ ಪರ್ಕ.

ಜೋ—ಯಾನುಲ್ಲೆನೆ, ಮಲ್ಪುಲೆ ಜನ್‍ಭಟ್ರೆ.

ಕ—(ತೆಲಿತೋಂದ್) ನಿಕ್‍ಲ್ ಮಾತಲಾ ಇಂಚಿನೆ. ಯಾನ್ ಯಾನ್‍ಂದ್‍ದ್. ಒರ ಬೇಗೊ ಪೋಯಿ.

ಅಂದಪ್ಪ ಮಾತಲಾ ಇಂಚನೇ.

---

* ವಂದೇ ಮಾತರಂ *

❋

(ಲನೇ ಸಂಚಿಕೆಡ್ದ್ ದುಂಬರ್ತಿನವು)

ರಾಜು—ಆಂದೆ ಮಾಸ್ಟ್ರೆ ಕೋಂಗ್ರೆಸ್‍ಗ್ ಸೇರೊಡಾಂಡ ಒಡೆ ಮುಟ್ಟ ಕಲ್ಪೊಡು.

ಮಾಸ್ಟ್ರ—ಅಯ್ಯೊ ಮರ್ಲ ಕೋಂಗ್ರೆಸ್ ಸೇರೊಡಾಂಡ ೧೮ ವರ್ಸ ಪ್ರಾಯ ಆವೊಡು. ಬುದ್ಧಿ ಸಮಾ ಇತ್ತಿನ ಆಣ್ ಪೊಣ್ಣು ಏರಾಂಡಲಾ ವರ್ಸೊಗು ನಾಲಾಣೆ ವಂತಿಗೆ ಕೊರುದು ಸೇರೊಲಿ. ಏರೆಗಾಂಡಲಾ ಊರುನು ಎಡ್ಡೆ ಮಲ್ಪೊಡಿಂದ್ ಮನಸ್ಸ್ ಇತ್ತ್‍ನ್ಡ ಆಕುಲು ಕೋಂಗ್ರೆಸ್‍ದಾಕ್ಲೆಗ್ ಸಾಯ ಮಲ್ಪೊಡು ಕೊಂಗ್ರೆಸ್‍ಗ್ ಸಾಯ ಮಲ್ಪಂದಿನಾಯೆ ಏರಾಂಡಲಾ ಇತ್ತ್ಂಡ, ಆಯಗ್ ದೇಶ ದ್ರೋಹಿಂದ್‍ದ್ ಪಣೊಲಿ.

ರಾಜು—ಈ ಕೋಂಗ್ರೆಸ್‍ದ ಸಭೆನ್ ಗಾಂದಿಯೆರ್ ಏಪ ಮಲ್ತಿನಿ?

ಮಾಸ್ಟ್ರ—ಕೋಂಗ್ರೆಸ್‍ನಿ ಗಾಂದಿಯೆರ್ ಮಲ್ತ್‍ದಿನತ್ತ್. ಆರ್ ಕೋಂಗ್ರೆಸ್‍ದ ಒಂಜಿ ಜನ. ಕೊಂಗ್ರೆಸ್‍ದಾಕ್ಲು ಪಂಡಿಲೆಕ್ಕ ಆರ್ ಮಲ್ಪುನಿ.

ಈ ಕೋಂಗ್ರೇಸ್ ಇತ್ತೆಗ್ ೫೦ ವರ್ಸೊಗು ದುಂಬು ೧೮೮೫ನೇ ಇಸ್ವಿಡ್ ಹಿಂದೂಸ್ಥಾನದ ಮಾತ ಮಲ್ಲ ಮಲ್ಲ ಪಟ್ನೊಡುಪ್ಪುನ ಮಲ್ಲ ಜನೊಕ್ಲು ಬೊಂಬಾಯಿಡ್ ಕೂಡ್ದು ಉಂಡುಮಲ್ತೆರ್.

ಶಂಕರೆ—ಅಪಗನೇ ಈ ಕೊಂಗ್ರೆಸ್‍ದಾಕ್ಲೆನ್ ದಾಯೆ ಜಯಿಲ್‍ಗ್ ಪಾಡಿಜೆರ್?

ಮಾಸ್ಟ್ರ—ಅಪಗ ದಾಯೆ ಜಯಿಲ್‍ಗ್ ಪಾಡುನಿ? ಅಪಗ ಹಿಂದುಸ್ತಾನೊಗು ಅವು ಬೋಡು. ಉಂದು ಬೋಡು ಇಂದ್‍ದ್ ಪಂಡೊನುನಿ ಕೇಂಡೊನುನಿ ನಟ್ಟೊನುನಿ, ಉಂದೆನ್ ಆಕ್ಲು ಕೆಬಿಕ್ ಸಾನ್ ದೆತ್ತೊನೇದ್‍ಜೆರ್.

ರಾಜು—ಅಂಚಾಂಡ ಯಿತ್ತೆ ದಾಯೆ ಜಯಿಲ್‍ಗ್ ಪಾಡುನಿ?

ತುಳುನಾಡ್ ಪತ್ರಿಕೆಡ್ದ್ (ಬರೆತಿನಾಯೆ ತುಳುವಾಲಿ)

ಮಾಸ್ಟ್ರ—ಇತ್ತೆ ಇಡೀ ಹಿಂದೂಸ್ತಾನೊಡುಪ್ಪುನ ಪ್ರತಿ ಒರ್ಯಗಲ್ ಮೊಕ್ಲು ಮಲ್ಪುನ ಮೋಸ ಗೊತ್ತಾತ್‍ನ್ಡ್ ಒಂಜಿ ರೂಪ್ಯಾ ತೀರ್ವೆಗ್ 15ರೂಪ್ಯಾ ತೀರ್ವೆ ಮಲ್ತ್‍ದೆರ್. ಊರುಡು ಇತ್ತಿನ ಮಾತ ಎಡ್ಡೆಡ್ಡೆ ಕೈಗಾರಿಕೆಲೆನ್ ಉಂತಾದ್ ಜನೊಕ್ಲೆಗ್ ಬಡತನಬರ್ಪಿಲೆಕ್ಕ ಮಲ್ತೆರ್‍ಡ್ತೆ ಅಂಚಾದ್ ಇತ್ತೆ ಮಾತೆರ್ಲಾ ಉನಿಪುರೆ ನುಪ್ಪುಗ್ಲಾ ಪುತ್ತೈರೆ ಕುಂಟುಗ್ಲಾ ಆಕ್ಲೆಡ ನಟ್ಯುನ ಕಾಲ ಬತ್ತ್‍ದ್‍ನ್ಡ್. ಅಯಿಡ್ಡಾವರ ಜನೊಕ್ಲು ಮೊತೆರ್ಲ ಒಟ್ಟುಗು ಕೂಡಿಯೆರ್‍ಡ ತನ್ಕುಲೆಗ್ ರಾಜ್ಯದ ಹುಟ್ಟು ತಿನಿಯೆರೆ ತಿಕ್ಕಂದ್ ಇಂದ್‍ದ್ ನಿಜಮಲ್ತ್‍ದ್ ಜನೊಕ್ಲೆನ್ ಪೋಡಿಗಟ್ಟಾವರೆ ಬೋಡಾದ್ ಜಯಿಲ್‍ಗ್ ಪಾಡುನಿ.

ಶಂಕರೆ—ಅಂದೆ ಮಾಸ್ಟ್ರೆ ಮರಾನಿ ತಸಿಲ್ದಾರ್, ಪಂನೆಗಾರ್ಲ್ರ, ಸೇನೆರ್, ಪಟ್ಲೇರ್ ಮಿನಿ ಮಾತ ಎಂಕ್ಲೆ ಇಲ್ಲಡೆ ಬತ್ತ್‍ದ್ ಮಾಮುನ್ನಡ ಪಂಡ್‍ಗ್ ಪುಡ್ದು ಕೊರೊಂಡಿದ್‍ದ್ ಪಥಿಣಿನೆಕ್ ಮಾಮುನ್ನೆ ನಿಕ್ಲು ಮಲ್ಲ ಮಲ್ಲ ಜನೊಕ್ಲು ಎನ ಇಲ್ಲಡೆಗ್ ಬರೊಡಿಂದ್‍ನ್ಡ ಬರ್ಪಿನಾಕ್ಲು ಬತ್ತ್. ಅಂಚಾದ್ ನಿಕ್ಲೆಗ್ ನಾಲ್‍ರೂಪ್ಯಾ ಕೊರ್ಪೆಂದ್ ಒರ್ಯೊರ್ಯಗ್‍ಜೊಂಜಿ ರೂಪ್ಯಾದ ಲೆಕ್ಕ ಕೊರಿಯೆರ್ ಆವೆನ್ ತಸಿಲ್ದಾರ್ ದೆತ್ತೊಂದು ಈರೆನವುಲಾ ಜೊಕ್ಕ್ ಈರೆಗ್ ಬೋಡುತ್ತಿನಾಕ್ಲೆನವುಲಾ ಮಾತಓಟುಲೆನ್ ಸರ್ಕಾರದ ಕಡೆಟ್‍ಎಡ್ಡೆ ಕೆಲಸ ಮಲ್ಪುನ ಜಸ್ಟಿಸ್‍ಂದ್‍ಒಂಜಿಪಾರ್ಟಿ ಉಂಡು. ಆಕ್ಲು ಮಲ್ಲಾಕ್ಲೆಗ್ಲಾ ಸರ್ಕಾರೊಗ್ಲಾ ಬಾರೀ ಸಾಯ ಕೊರ್ಪಿನಾಕ್ಲ್. ಅಂಚಾಡ್ ಆಕ್ಲೆಗ್ ಈರ್ ಓಟು ಕೊರ್ಪಾವೊಡಿಂಪೆರ್—ಅಯಿಕ್ ಮಾಮುನ್ನೆ ಆವು. ಎಂಚಾಂಡಲಾ ಊರುನು ಎಡ್ಡೆ ಮಲ್ಪುನಾಕ್ಲೆಗೇ ಕೊರೋಡತ್ತೆ, ಇಂದ್‍ದ್ ಪಂಡೆರ್. ಅಂಚಾಂಡ ಜಸ್ಟೀಸ್ ಇಂದ್‍ನ್ಡ ಯೇರ್ ಮಾಸ್ಟ್ರೆ?.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ವ್ಯವಹಾರ ಸನ್ನದು ಹೊಂದಿದುದು)

ನೋಟೀಸು

ಈ ಬ್ಯಾಂಕಿನ ಒಂ

ಶೀಘ್ರದಲ್ಲಿಯೆ

ಬ್ಯಾಂಕಿನ ಆಫೀಸು }
ತಾ. 7--5--1937 }

ಮಿ. ಜಿನ್ನಾರ ರ ಅವಿವೇಕತನ

ಸರ್. ಮಹಮ್ಮದ್ ಯಾಕೂಬರಂಥ ವರು, ಕಾಂಗ್ರೆಸು ಹಿಂದುಗಳ ಸಂಸ್ಥೆ, ಮುಸಲ್ಮಾನರ ಸಂಘಟನೆಯನ್ನು ಮುರಿಯುವ ಸಂಸ್ಥೆ, ಗಾಂಧಿಜಿಯವರು ಅದರ ನಾಯಕತ್ವ ವಹಿಸಿದಂದಿನಿಂದ ಅದರಲ್ಲಿ ಹಿಂದು ಸಂಸ್ಕೃತಿ ಮತ್ತು ಭಾವನೆಗಳಿಗೇನೇ ಪ್ರಾಧಾನ್ಯ ದೊರೆತಿದೆ. ಆದುದರಿಂದ ವಿಚಾರ

ನ್ನು ತ್ಯಜಿಸಿಯಾದರೂ ಅವರು ಕಾಂಗ್ರೆಸಿನೊಂದಿಗೆ ಸಹಕರಿಸುವ ದೃಢನಿರ್ಧಾರ ಮಾಡಿರುವರು. ಅಂದಮೇಲೆ ಸಂಯುಕ್ತ ಪ್ರಾಂತ್ಯದಲ್ಲಿ ಮಿ. ಜಿನ್ನಾರವರ ಬೇಳೆ ಬೇಯುವ ಹಾಗಿಲ್ಲ. ಪಂಜಾಬಿನಲ್ಲಿ ಅವರ ಪಕ್ಷಕ್ಕೆ ಯಾವ ಬೆಂಬಲವೂ ಇಲ್ಲ. ಕಾಂಗ್ರೆಸು ಈಗಣಂತೆಯೇ ಮುಸಲ್ಮಾನ ಜನಸಾಮಾನ್ಯರ ಸಂಪರ್ಕ ಪಡೆದು ಎಳೆಯುವದ

ಹೊಸ್ಸ್ತ್ರ—ಜಸ್ಟೀಸ್ ಇಂದ್‌ಂಡ ಸರ್ಕಾರದಾಕ್ಲೆನ ಆಟದ ಒಂಜಿ ಏಸದಲೆಕ್ಕ ಉಪ್ಪುನಾಕ್ಲು. ಆಕ್ಲು ಮಲ್ಲಾಕ್ಲೆನ್ಲಾ ವ್ಯಾಪಾರೊಳೆನ್ಲಾ ಸರ್ಕಾರೊನ್ಲಾ ಹಾಳಾವಂದಿಲೆಕ್ಕ ಪೇಚಾಡ್ದ್ ವರ್ಗದಾರೆಗ್ ತೀರ್ವ ಸೆಸ್ಟಲೆನ್ ವರೊಡ್ದು ಬಾರ ಹೆಚ್ಚಮಲ್ತ್‌ದ್ ಬಡವರೆಗ್ ದಿನೊಕ್ಕೊಂಜಿತೆಲಿ ಸಾನ್ ತಿಕ್ಕಂದಿಲೆಕ್ಕ ಮಲ್ಲ ಮಲ್ಲ ಇಂಜಿನ್‌ಲೆಡ್ ಕೆಲಸ ಮಲ್ಪಾದ್ ಮಲ್ಲ ಮಲ್ಲ ಬಿಲ್ಡ್ಲಿಗ್ ಬೋಡಾದ್ ಊರುಸು ಹಾಳ್‌ಮಲ್ತ್‌ದ್ ಬಡವರೆಗ್ ಮೋಸ ಮಲ್ಪುನಾಕ್ಲು ಯೇರ್ ಉಳ್ಳೆರಾ ಆಕ್ಲೆಗ್ ಜಸ್ಟೀಸ್ ಪಾರ್ಟಿಂದ್ ಪನ್ಪೆರ್. ಆಕ್ಲುಲಾ ಜನೊಕ್ಲೆನ್ ಮಂಗಟಾದ್ ಓಟು ದೆತ್ತೊಂದು ದೇವೊಗು ಮೋಸ ಮಳ್ಪುನಾಕ್ಲು ಆಕ್ಲೆಗ್ ಓಟುಕೊರ್ರ್ಬೆ ಅಂಬ್.

ರಾಜು—ಅಂಡೆ ಮಾಸ್ಟ್ರೆ—ಈ ಓಟು ಕೇನುನಾಕ್ಲು ಕೋಂಗ್ರೆಸ್ಸ್ ಜಸ್ಟೀಸ್ ಅತ್ತಂಡೆ ಬೇತೆ ಪಾರ್ಟಿದಾಕ್ಲುಲಾ ಉಲ್ಲೆರಾ?

ಮಾಸ್ಟ್ರ—ಮೋಡರೇಟ್ ಇನ್ಪಿನ ಮುಂದಪಕ್ಷದಾಕ್ಲು ಉಳ್ಳೆರ್. ಆಕ್ಲು ಸರ್ಕಾರದಾಕ್ಲು ಕೊರಿನೆನ್ ದೆತೊನುಗ ಬೊಕ್ಕ ಬೋಡಾಯಿನೆನ್ ಕೇನುಗ ಇನ್ಪಿನ ಒಂಜಿ ಪಾರ್ಟಿ ಉಂಡು. ಆಕ್ಲೆಡ್ಲಾ ನಂಕ್ ಎಡ್ಡೆತಿಕ್ಕಂದ್. ನನೊಂಜಿ ಇಂಡಿಪೆಂಡ್‌ಂಟ್ ಇನ್ಪಿ ಸ್ವತಂತ್ರ ಪಕ್ಷಯಿಂದ್ ದ್‌ಪಾಕ ಜನ ಓಟು ಕೇನ್ದ್ ಸಭೆಕ್ ಪೋಪೆರ್.

ಶಂಕರೆ—ಸ್ವತಂತ್ರಪಕ್ಷದಾಕ್ಲೆಗ್ ನಮ್ಮ ಓಟುನು ಕೊರೊಲಿಯತ್ತೆ ಆಕ್ಲು ಸ್ವತಂತ್ರಕೇನುವೆರತ್ತೆ—ಅವು ನಂಕ್ ಎಡ್ಡೆ ಅತ್ತೆ?

ಮಾಸ್ಟ್ರ—ಆ ಸ್ವತಂತ್ರಪಕ್ಷ ಇನ್ಪಿನಾಕುಲು ಉಳ್ಳೆರತ್ತ ಆಕ್ಲು ಊರುಡು ಮಲ್ಲ ಮೋಸಗಾರ್ರ್. ಆಕ್ಲು ಬಾವೊಲಿದ ಜಾತಿ ಗೆಂದಿಕಡೆ ಸೇರುನಾಕ್ಲು. ಮಾತೆರೆ ಓಟುನು ದೆತೊನಿಯೆರೆಗಾದ್ ಸ್ವತಂತ್ರದಾಕ್ಲುಯಿಂದ್‌ದ್ ಪಂಡ್‌ದ್ ಜನೊಕ್ಲೆನ ಕೆಕ್ಕಿಲ್ ಕೊಯಿಪಿನಾಕ್ಲೆಗ್ ಯೇಪಲಾ ಓಟು ಕೊರಡೆ ಆಂಡ ಓಟುಗು ಉಂತುನಾಯಿ ಒಡೆಮುಟ್ಟ ಸ್ವತಂತ್ರ ಇತ್ತಿ ಜನ ಯಿನ್ಪಿನೆನ್ ಪಿಂದೊಂಮ ಓಟು ಕೊರೊಲಿ.

ತಿಮ್ಮಪ್ಪೆ—ಅಂಡೆ ಮಾಸ್ಟ್ರೆ ಬೊಲ್ದು ತೊಪ್ಪಿದಾಕ್ಲು ಮಾತ ಸನಿಪತಿನಾಕ್ಲುಗೆ, ಅತ್ತೆ ಆಕ್ಲು ಇತ್ತಿನೆನ್ ಮಾತ ಕಳೆವೊಂದು ಮಾತೆರ್ಲ ಆಕ್ಲೆಲೆಕ್ಕನ್ನೇ ಆವೊಡಿಂದ್ ಪನ್ಪಿನಾಕ್ಲುಗೆ. ಅಂದೆ.

ಮಾಸ್ಟ್ರ—ಯೇರ್ ಪಂಡಿನಿ. ಅಂಚ ಪನ್ಪಿನಾಯೆ ಒರಿ ಇತ್ತೆಡ ಆಯೆ ಮಲ್ಲ ಪಂಜಿದ ತರೆತ್ತಾಯೆಂದ್ ಪನೊಲಿ.

ತಿಮ್ಮಪ್ಪೆ—ಅವು ಮರಾಣೆ ಎಂಕ್ಲೆ ಪಟ್ಲೆರೆ ಪಲಾಯೆ ಪಾತೆರ್ನಗ ಪಂಡೆರ್. ಕ್ವಿಟ್ ಕಾಸ್‌ದಾಂತಿನಾಕ್ಲು ಮಾತ ಕದ್ದರ್ ತುತೊಂದು ಕಾಂಗ್ರೆಸ್, ಗಾಂದಿ ಕಡೆಯಿಂದ್‌ದ್ ಯಿಲ್ಲ್‌ಲ್ಲ್ ನೆಟ್ಟ್‌ದ್ ನಾಲಾಣೆದ ಕಾಸ್ ದೆತೊಂದು ಬಂಜಿದಿಂಜಾವೆರ್‌ಂದ್ ಮಾಮಾಜಿಡ ಪಂಡೆರ್.

ಮಾಸ್ಟ್ರ—ಆರ್ ಪಟ್ಲೇರೆ ಪಲಾಯೆ ಆಸಿನೆಕ್ಕ್ ಮೋಡೆ ಎರುತ ಪಲಾಯ ಆತೆರ್‌ಡ ಎಡ್ಡೆಯಿತ್ತ್‌ನ್ದ್. ನಮ್ಮ ಊರುದ ಬಡವೆರ್ ಉಸಿಯೆರೆ ದಾಂತಿನೆಕ್ಕ್ ಬಂಜಿ ವತ್ತ್‌ದ್ ನೆಯಿತಿನ ಖದ್ದರ್ ಕುಂಟು ತುತ್ತುನಾಯೆ ವಟ್ಟೆತುತ್ತುನಾಯಡ್ಲಾ ಪತ್ತ್ ವಾಲ್‌ಗ್ ಮಲ್ಲಾಯೆ. ಆಕ್ಲು ಇಲ್ಲ್‌ಲ್ಲ್ ನಾಲಾಣೆ ನಟ್ಟುನಿಯತ್ತ್. ನಮ್ಮ ಇಡೀ ಹಿಂದುಸ್ತಾನದ ಕೋಂಗ್ರೆಸ್ ಯಿನ್ಪಿ ರಾಷ್ಟ್ರೀಯ ಸಭೆಕ್ಕ್ ಮೆಂಬರ್ರ್ ಆದ್ ಸೇರುಲೆಕ್ಕ ಜನೊಕ್ಲೆಗ್ ಪಂಡ್‌ತ್ ಆಕ್ಲೆ ಸಭೆತ್ತ ವಂತಿಗೆ ನಾಲಾಣೆ ದೆತ್ತೊಂದು ಅವ್ವೆನ್ ಇಡೀ ಹಿಂದೂಸ್ತಾನದ ರಾಷ್ಟ್ರೀಯ ಸಭೆಕ್ಕ್ ಕಡಪುಡುನು ಕೊರ್ಪಿನಾಕ್ಲು. ಆಕ್ಲು ಕರ್ಚಿಗ್ ದಾಂತಿನೆಕ್ಕ್ ನಟ್ಟುನಿಯತ್ತ್. ಆಕುಲು ದೇಶದ ಎಡ್ಡೆಗಾದ್ ತನ್ಕುಲೆ ಜೀವ ಕೊರಿಯೆರೆ ತಯಾರಾತಿನ ಸ್ವಯಂಸೇವಕೆರ್. ನಿನ ತಸಿಲ್ದಾರ್ ಕಲೇಕ್ಟರೆಡ್ದ್ ಮಲ್ಲ ಜನೊಕ್ಲು ಆಕ್ಲು.ಅಂಚಾವ್ ಆಕ್ಲ್ ಪನ್ಪಿಲೆಕ್ಕ ಮಾತೆರ್ಲ ಕೊಂಗ್ರೆಸ್‌ಗ್ ಓಟು ಕೊರೊಡು.

(ನನತೋ ನನ ಒರ)

○ ತುಳುವೆರ್ ಅನಕ್ಯನ್ರೋದರೆತ್ತಿ ಪುಸ್ತಕಳು. ○

ಕೃಷ್ಣ ಸಂಧಾನ	೦ ೮ ೦		ಆಳಿಯಸಂತಾನ ಕಟ್ಟ್‌ದ ಗುಟ್ಟು	೦
ಮಿತ್ಯನಾರಾಯಣ ಕತೆ	೦ ೮ ೦		ಮದ್‌ಮಾಳತ್ತ್ ಮದ್‌ಮಾಯೆ	೦
ಜನಮಲ್ರ್	೦ ೬ ೦		ಮುಂಡತ್ತಾಯೆ	೦
ಸತೀ ಕಮಲೆ	೦ ೬ ೦		ತುಳು ಪದ್ಯಮಾಲಿಕೆ	೦
ಕಾಸಿಗ್	೦ ೪ ೦		ಪುಗಿರೆದ ಅಮಲ್	೦

○ ಎಸ್. ಯು. ಪಣಿಯಾಡಿ, ತುಳುವ ಸಾಹಿತ್ಯಮಾಲೆ, ಉಡುಪಿ. ○

ಉಡುಪಿ, ಗುರುವಾರ, ತಾ. ೨೭-೫

ಮುಸಲ್ಮಾನರು ಮ[illegible] ಕಾಂಗ್ರೆಸ್

ಇಂದೀಗ ಮುಸಲ್ಮಾನರಲ್ಲಿ, ಕಾಂಗ್ರೆಸಿಗೆ ಸೇರಿ ದೇಶದ ಸ್ವಾ[illegible] ಸಮರದಲ್ಲಿ ಮುಖ್ಯ ಭಾಗ ವಹಿಸಬೆ[illegible] ಅಭಿಪ್ರಾಯವು ಬಲಗೊಳ್ಳುತ್ತಾ ರುವುದು ಸಂತೋಷ ವಿಷಯವು. [illegible]ಲ್ಮಾನರಲ್ಲುಂಟಾಗಿರುವ ಈ ವಿಧದ [illegible]ತಿಗೆ ಪಂಡಿತ ಜವಾಹರಲಾಲರರದೂ[illegible]ಯ ಮುಂದಾಳುತ್ವವೇ ಕಾರಣ. ಪ್ರೆಸಿಡೆಂಟರಾದಂದಿನಿಂದ ಕಾಂಗ್[illegible] ನಿಜವಾದ ಅಖಿಲ ಭಾರತ ಪ್ರಾ[illegible]ವುಳ್ಳ ಸಂಸ್ಥೆಯನ್ನಾಗಿ ಮಾಡಲ[illegible] ಬಿಡದೆ ಪ್ರಯತ್ನ ಮಾಡಿರುವರು. [illegible]ಸು ದೇಶದ ಸ್ವಾತಂತ್ರ್ಯ ಮತ್ತು [illegible]ತ್ರಿಕ ಉನ್ನತಿ ಸಾಧನೆಗಾಗಿ, [illegible] ದಾರಿದ್ರ್ಯ ಮತ್ತು ದುಃಖ ನಿವಾ[illegible] ಹೋರಾಡುವ ಸಂಸ್ಥೆ. ಯಾವ ಜಾತೀಯ ಅಥವಾ ಧಾರ್ಮಿಕ ಸ[illegible]ತೆಗೆ ಅದರಲ್ಲಿ ಆಸ್ಪದ ದೊರೆಯೇ[illegible] ಹಿಂದುಗಳಷ್ಟೇ ಮುಸಲ್ಮಾನ ಮತ್ತ[illegible]ರೇ ಮೊದಲಾದವರ ಹಿತಸಾಧಕ [illegible]ತ್ರ ರಾಷ್ಟ್ರೀಯ ಸಂಸ್ಥೆಯದು [illegible] ಬಂಧ ವಿಮೋಚನೆ, ಜನತೆಯ [illegible] ನಿವಾರಣೆಯ ವಿಷಯಗಳು ಸರ್ವ[illegible]ದುರಿಗೂ ಸಮನಾಗಿ ಅನ್ವಯಿ[illegible] ಅವುಗಳಲ್ಲಿ ಯಾವ ಜಾತೀಯತೆಗ[illegible]ದವಿಲ್ಲೆಂದು ಪಂಡಿತರು ಮುಸಲಾ[illegible] ಸಮುದಾಯಕ್ಕೆ ಸಾರಿ ಹೇಳಿ, ಕ[illegible] ಮುಸಲ್ಮಾನರ ಬೆಂಬಲವನ್ನು ಹೇ[illegible] ಪಡೆಯುವಂತೆ ಮಾಡಿರುವರು. [illegible] ದಲ್ಲಿರುವವರಿಗೆ ಸ್ವಾತಂತ್ರ್ಯ ಸ[illegible] ಹೊರತು ಅನ್ಯ ಧರ್ಮವಿಲ್ಲ; ಬೇರೆ ಜೀವನವಿಲ್ಲೆಂಬ ಖಾನ್ ಅಬ್ದುಲ್ ಗಾಫರ್ ಖಾನರ ಬೋಧನೆ ಮತ್ತು ಅದೇ ಪ್ರಕಾರವಾದ ಆಚರಣೆಯೂ ಅವರ ಸ್ವಾತಂತ್ರ್ಯಕ್ಕಿಂತ ಅಮೂಲ್ಯವಾದುದು ಲೋಕದಲ್ಲಿ ಇನ್ನಾವುದೂ ಇಲ್ಲ. ಪರಾಧೀನನಾಗಿ ಮಿಲ್ಯಾಧಿಪತಿಯಾಗಿರುವುದಕ್ಕಿಂತಲೂ ಸ್ವತಂತ್ರನಾಗಿ ಸಮುಗಾರನಾಗಿರುವುದು ಮೇಲು. ತಾನು

ಹಿಂದಿನ ಖಿಲಾಫತ್ ಚಳವಳದ ಸಂದರ್ಭದಂತೆ ಇಂದೂ ಮುಸಲ್ಮಾನರು ಕಾಂಗ್ರೆಸಿನ ಸ್ವಾತಂತ್ರ್ಯ ಸಮರದಲ್ಲಿ ಮುಖ್ಯ ಭಾಗ ವಹಿಸಿ ತಮ್ಮ ಪರಂಪರಾಗತ ಶೌರ್ಯ ಸ್ಥೈರ್ಯದಿಂದ ಹಿಂದುಗಳಿಗಿಂತಲೂ ಒಂದು ಹೆಜ್ಜೆ ಮುಂದಿಟ್ಟು ದೇಶವು ಶೀಘ್ರವಾಗಿ ಬಂಧ ವಿಮೋಚನೆ ಹೊಂದುವಂತೆ ನೆರವಾಗುವರೆಂದು ನಂಬುತ್ತೇವೆ.

ಕ್ತ ಪ್ರಾಂತದ ಹೆಚ್ಚಿನ ಮುಸಲ್ಮಾನ ಮುಖಂಡರು ನಿಸ್ಸಂಕೋಚವಾಗಿ ಕಾಂಗ್ರೆಸಿಗೆ ಸೇರಿ ಮೊದಲಾಗಿ ಸ್ವರಾಜ್ಯ ಸಾಧನೆ, ಆ ಮೇಲೆ ತಮ್ಮ ಹಿತಸಾಧನೆಯೆಂಬ ಧೋರಣೆ ವಹಿಸಿರುವಂತಿದೆ. ಕಾಂಗ್ರೆಸಿನ ಮೂಲಕವೇ ತಮ್ಮ ನಿಜವಾದ ಹಿತಸಾಧನೆಯಾಗಬೇಕೆಂಬ ವಿಶ್ವಾಸವುಳ್ಳವರಂತೆ ತೋರುತ್ತದೆ. ಮಿ. ಜಿನ್ನಾರವರ ಮುಸ್ಲಿಮ್ ಲೀಗ

ರಾದಾಗ ಇವರ ಸಂಪತ್ತು ಸುಮಾರು ೪೦೦ ಮಿಲ್ಯ ಪವನು ಆಗಬಹುದೆಂದು ನಂಬಲಾಗಿದೆ. ಅಂದಿನಿಂದ ರೋಕ್ ಫೆಲ್ಲರರು ೧೨೦ ಮಿಲ್ಯ ಪವನುಗಳಿಗಿಂತಲೂ ಮಿಕ್ಕಿ ದಾನಮಾಡಿರುವರು. ಶಿಕ್ಷಣಕ್ಕಾಗಿ ೫೦ಮಿಲ್ಯ ರೋಕ್ ಫೆಲ್ಲರ್ ಫೌಂಡೇಶನ್‌ಎಂಬ ಜನೋಪಕಾರಿ ಸಂಸ್ಥೆಗಾಗಿ ೪೭ಮಿಲ್ಯ ಪವನು ತನ್ನ ಮೃತ ಪತ್ನಿಯ ಸ್ಮಾರಕವಾಗಿ ಒಂದು ಸಂಘಕ್ಕೆ ೨೦ಮಿಲ್ಯ ಪವನು ದಾನ ಮಾಡಿದ್ದರು.

ಸ್ವದೇಶ

200 ಮನೆಗಳು ಸುಟ್ಟುಹೋದುವು

ಇದೇ ತಾ. ೨೨ರಲ್ಲಿ ಗಂಟೆ ೭ರಿಂದ ೪ ಮೈಲು ದೂರವಿರುವ ತಕ್ಕೆಲಪಡು ಎಂಬ ಗ್ರಾಮದಲ್ಲಿ ದೊಡ್ಡ ಬೆಂಕಿಯೆದ್ದು ೨೦೦ ಮನೆಗಳು ಸುಟ್ಟುಹೋಗಿರುವವು. ೧೦೦೦ಕ್ಕಿಂತಲೂ ಮಿಕ್ಕಿದವರು ನಿರಾಶ್ರಿತರಾಗಿರುವರು. ಮೊದಲು ಸಣ್ಣ ಗುಡಿಸಲೊಂದರಲ್ಲಿ ಬೆಂಕಿಯೆದ್ದು ಆ ಮೇಲೆ ಗಾಳಿಯ ಸಹಾಯದಿಂದ ಇತರ ಮನೆಗಳಿಗೆ ಹಬ್ಬಿತು ರೂ. ೩೦,೦೦೦ ದಷ್ಟರ ನಷ್ಟವಾಗಬಹುದೆಂದು ಅಂದಾಜುಮಾಡಲಾಗಿದೆ.

ಯೆಹೂದ್ಯ ಸ್ತ್ರೀಯ ಹಿಂದು ಧರ್ಮ ಸ್ವೀಕಾರ

ತಿರುವಾಂಕೂರಿನ ಶ್ರೀ ಎನ್ ಎ ತಂಪಿಯವರ ಯೆಹೂದ್ಯ ಪತ್ನಿ ಮಿಸೆಸ್ ಸೋಫಿ ಎ. ತಂಪಿಯವರು ಇದೇ ತಾ. ೨೧ ರಲ್ಲಿ ಶುದ್ಧಿ ಹೊಂದಿ ಹಿಂದು ಧರ್ಮ ಸ್ವೀಕಾರಮಾಡಿರುವಳು. ಕೇರಳ ಹಿಂದು ಮಿಶನಿನ ಬ್ರಹ್ಮ ಶ್ರೀ. ಆದಿಯಾರ ಸೋತಿಯವರು ಶುದ್ಧಿ ಸಂಸ್ಕಾರ ನಡಿಸಿ ಮಿಸೆಸ್ ಸೋಫಿಯವರಿಗೆ ಶ್ರೀಮತಿ ಶರ್ಮಿಲ ದೇವಿಯೆಂಬ ಹೆಸರಿತ್ತು, ಶ್ರೀ ಪದ್ಮನಾಭ ದೇವಸ್ಥಾನದೊಳಗೆ ಕರದೊಯ್ದರು.

ಪಂಡಿತ ಜವಾಹರಲಾಲರು

ಇದೇ ತಾ ೧೮ರಲ್ಲಿ ಪೆನಂಗಿನಿಂದ ರಂಗೂನಿಗೆ ವಿಮಾನ ಮೂಲಕ ಹಿಂತಿರುಗಿ ಅಲ್ಲಿಯ ಕೇಟರಿ ಕ್ಲಬ್ಬಿನವರಿಂದ ಸತ್ಕೃತರಾದರು. ತಾ. ೧೯ರಲ್ಲಿ ಮಧ್ಯರಾತ್ರಿಯ ವರೆಗೂ ಬೇರೆ ಬೇರೆ ಕಡೆ ಹೋಗಿ ಭಾಷಣಗಳನ್ನಿತ್ತರು. ಬರ್ಮಾವು ಹಿಂದುದೇಶದಿಂದ ಪ್ರತ್ಯೇಕವಾದರೂ ಪರಸ್ಪರ ಪ್ರಯೋಜನಕ್ಕಾಗಿ ಹಿಂದೀಯರೂ ಬರ್ಮೀಯರೂ ಒಂದಾಗಿ ನಡೆಯಬೇಕೆಂದೇ ಪಂಡಿತರ ಭಾಷಣಗಳ ಪಲ್ಲವಿಯಾಗಿದ್ದಿತು. ಅವರು ರಂಗೂನಿನ ಮಜೂರರ ನಿವಾಸಗಳಿಗೂ ಹೋಗಿ ಪರೀಕ್ಷಿಸಿದರು. ಬರ್ಮಾದಲ್ಲಿರುವ ಹಿಂದೀಯರು ರೂ ೮೦,೦೦೦ದ ನಿಧಿಯನ್ನು ಪಂಡಿತರಿಗೆ ಒಪ್ಪಿಸಿದರು. ಇದರಲ್ಲಿ ರೂ. ೪೦,೦೦೦ ಕೊಟ್ಟವರು ಗುಜರಾಥಿಗಳು ಈ ಹಣದಲ್ಲಿ ಅರೆವಾಸಿಯನ್ನು ಕಮಲ ನೆಹರು ಆಸ್ಪತ್ರೆ ಫಂಡಿಗೂ ಉಳಿದ ಅರ್ಧವನ್ನು ಕಾಂಗ್ರೆಸ್ ಪ್ರಚಾರಕಾರ್ಯಕ್ಕೂ ವಿನಿಯೋಗಿಸಲಾಗುವುದು.

ಹಿಂದು ಹುಡುಗಿಯರನ್ನು ಕದ್ದೊಯ್ದರು

ವಾಯುವ್ಯ ಗಡಿನಾಡಿನ ಬನ್ನು ಜಿಲ್ಲೆಯ ತಿತಾಕೇಲ್ ಎಂಬ ಹಳ್ಳಿಯಿಂದ ವಜೀರಿ ಪಂಗಡಿಗರು ಇತ್ತಲಾಗಿ ೪ ಮಂದಿ ಅವಿವಾಹಿತ ಹಿಂದು ಹುಡುಗಿಯರನ್ನು ಕದ್ದೊಯ್ದಿರುವರು ಅದನ್ನು ನಿಷೇಧಿಸುವುದಕ್ಕಾಗಿ ಬನ್ನುವಿನ ಹಿಂದು ಸಭೆ ಸೇರಿಸಿ ಹರತಾಳ ಆಚರಿಸುವ ನಿರ್ಧಾರಮಾಡಿರುವರು. ಸರಕಾರವು ಕದ್ದೊಯ್ಯಲ್ಪಟ್ಟ ಹುಡುಗಿಯನ್ನು ಹಿಂದೆ ಕೊಡಿಸುವ ವರೆಗೆ ಈ ಹರತಾಳವು ನಡೆಸಲ್ಪಡುವುದು

ಉಡುಪಿ

ಸಾರ್ವಭೌಮ ಆರನೇ ಜಾರ್ಜ ಪ್ರಭುಗಳವರ ಕಿರೀಟಧಾರಣಾ ಸಮಾರಂಭದ ಸಲುವಾಗಿ ಏರ್ಪಡಿಸಿದ ಕಮಿಟಿಯ ಸಭೆಯು ತಾ ೧೯-೫-೩೭ರಲ್ಲು ತಾಲೂಕು ಆಫೀಸಿನಲ್ಲಿ ಜರಗಿತು. ೬೪ಜನ ಸದಸ್ಯರಲ್ಲಿ ಶ್ರೀಗಳಾದ ಪಿ. ಗೋಪಾಲ ನ್ಯಾಯಕ್; ಆರ್. ಎ. ಸ್ಯಮನ್; ಜಿ. ಸಿ. ರೇಗೋರವರು ಮಾತ್ರ ಹಾಜರಿದ್ದರು. ಸಮಾರಂಭದ ಖರ್ಚಿನ ಬಗ್ಗೆ ವರಾಡವಂತಿಗೆಯಿಂದ ಜಮೆಯಾದ ರೂಪಾಯಿ ೮೭-೩-೧ರಲ್ಲು ಬಡಬಗ್ಗರಿಗೆ ಅಕ್ಕಿ ಹಂಚುವ ಸಲುವಾಗಿ ರೂ. ೭೨-೩-೮ ಪೈ ಖರ್ಚಾಗಿ ಉಳಿದ ರೂ. ೧೪-೧೫-೪ನ್ನು ಅಜ್ಜರಕಾಡಿನ ಮೈದಾನದಲ್ಲಿ ಸುಖಾಸನದ ನಿರ್ಮಾಣದ ಬಗ್ಗೆ ವಿನಿಯೋಗಿಸಬೇಕೆಂದು ನಿರ್ಣಯವಾಯಿತೆಂದು ಒಂದು ವಾರ್ತೆ.

ಉಡುಪಿಯ ಬೀದಿನಗುಡ್ಡೆಯ ಹಿಂದೂ ಸ್ಮಶಾನದ ಬಳಿಯಲ್ಲಿ ಪೆಟ್ರೋಮೇಕ್ಸ್ ದೀಪವನ್ನು ಮುನಿಸಿಪಾಲಿಟಿಯವರು ಇಡುವಂತೆ ಶ್ರೀ. ಎಂ. ವಾಮನ ಭಟ್ಟರು ಸೂಚನೆ ತಂದು ಅದಕ್ಕಾಗಿ ಬೇಕಾದ ಹಣ ಸಂಗ್ರಹಿಸಿ ಇದೇ ತಾ ೨೮ಕ್ಕೆ ಮುನಿಸಿಪಾಲಿಟಿಗೆ ಕೊಡುವರೆಂದು ತಿಳಿದು ಬರುತ್ತದೆ

ಉಡುಪಿ ಮುನಿಸಿಪಲ್ ಕೌನ್ಸಿಲರಾದ ವಾಮನ ಭಟ್ಟರು ಉಡುಪಿ ಸರ್ಕಲಿನಿಂದ ಬರುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಉಮೇದ್ವಾರರಾಗಿ ನಿಲ್ಲಲಿರುವರೆಂದು ತಿಳಿದುಬರುತ್ತದೆ.

ಕಲ್ಯಾಣಪುರ

ಪುತ್ತೂರು ಭಗವತೀ ದೇವಸ್ಥಾನದಲ್ಲಿ ತಾ. ೨೦ರಲ್ಲಿ ಜರಗಿದ ಲಗ್ನವೊಂದರಲ್ಲಿ ವಧೂವರರು ಸಂಪೂರ್ಣ ಖದ್ದರ್ ಡ್ರೆಸ್ ಮಾಡಿದ್ದರೆಂದೂ ವರನು ಖದ್ದರ್ ಟೋಪಿಯನ್ನೇ ಧರಿಸಿ ಕೊಂಡು ಪಾಣಿಗ್ರಹಣಮಾಡಿಕೊಂಡನೆಂದೂ ತಿಳಿದುಬರುತ್ತದೆ.

ತಾ. ೨೩-೫-೩೭ಆದಿವಾರ ದಿವಸ ಇಲ್ಲಿಯ ಪಕ್ಕೆಬೆಟ್ಟು ಬೈದರ್ಕಳ ಗರಡಿಯಲ್ಲಿ ಬಿಲ್ಲವ ಯುವಕ ಸಭೆಯು ಜರಗಿಸಲ್ಪಟ್ಟಿತು ಅನೇಕ ಮಹನೀಯರು ನೆರೆದಿದ್ದರು ಇವರ ಪೈಕಿ ಪ್ರೋತ್ಸಾಹಕರಲ್ಲೊಬ್ಬರಾದ ಶ್ರೀ. ಬಿ ಚಾಮುಪ್ಪನವರು ಸ್ವಜಾತಿಯ ಕುಂದುಕೊರತೆಗಳ ತಿದ್ದುಪಡಿಯ ಸಂಗತಿಯನ್ನೂ ಸಮಾಜದ ಮುಂದಿನ ಏಳಿಗೆಯ ವಿಷಯಗಳನ್ನೂ ಕುರಿತು ಭಾಷಣಮಾಡಿದರು. ಆ ತರುವಾಯ ಶ್ರೀ. ನಿಡಂಬಳ್ಳಿ ಶಾಲಾ ಮೆನೇಜರರಾದ ಅಂಗರಮಾಸ್ತರರು ನಮ್ಮ ಈ ಜಾತಿಯಲ್ಲಿ ಈಗ ನಡಿಯುತಿರುವ ಮುಖ್ಯವಾದ ಅಸಡ್ಡೆ ಅನ್ಯಾಯಗಳನ್ನು ಸರಿಪಡಿಸಬೇಕೆಂಬದಾಗಿ ಒತ್ತಿ ಹೇಳಿರುವರು. ಆದಕಾರಣ ಈ ಸಭೆಯು ಮುಂದಕ್ಕೆ ಅಭಿವೃದ್ಧಿ ಯಾಗಲೆಂದು ಹಾರೈಸಿರುವರು

ಇನ್ನು ತಾ. ೩೦-೫-೩೭ನೇ ರವಿವಾರ ಶ್ರೀ ಮಟ್ಟಿ ಯಂ. ಅಣ್ಣಯ್ಯನವರ ಸಮ್ಮುಖದಲ್ಲಿ ಜಾತೀಯ ಮಹಾಸಭೆಯು ಸೇರದು ಬರುವುದು. ಆದಿವಸದಲ್ಲಿ ಜಾತೀಯ ಮಹನೀಯರೂ ಗ್ರಾಮದ ಜಾತಿ ಗೃಹಸ್ಥರೂ ಈ ಸಭೆಗೆ ತಪ್ಪದೆ ಬರುವದಾಗಿ ನಂಬಿರುತ್ತೇವೆ.

ಬಿಲ್ಲವ ಯುವಕ ಸಭಾ

ಬೊಂಬಾಯಿ

ತಾ ೬-೬-೩೭ಕ್ಕೆ ಕರ್ನಾಟಕ ನೂತನ ಸಂಗೀತ ಸಭೆಯವರು ಶ್ರೀ. ಕೆ ಕೆ ಪಟ್ಟಂಡ ಬರೆಯಲ್ಪಟ್ಟು ಉಡುಪಿಯ ಕಿರಿಯರ ಪ್ರಪಂಚದವರಿಂದ ಪ್ರಕಟಿಸಲ್ಪಟ್ಟ 'ವ್ಯಭಿಚಾರಿಣಿ ಯಾರು' ಎಂಬ ಜನಪ್ರಿಯ ನಾಟಕವನ್ನು ಅಭಿನಯಿಸಲಿರುವರು.

ಮೊಗವೀರ ಮಹಾ ಜನ ಸಭಾ (ಮಂಗಳೂರು ಬಾರ್ಕೂರು ಹೋಬಳಿ)

ಮುಂಬಾಯಿ

ಇದರ ಮಹಾ ಸಭೆಯನ್ನು ಎಪ್ರೋತೋ ರಸ್ತೆಯ ಪೀರ್ ಬಜಾರ್ ಮಂದಿರದಲ್ಲಿ ತಾ ೩೦-೫-೧೯೩೭ನೇ ರವಿವಾರ ಮಧ್ಯಾಹ್ನ ೧ ಘಂಟೆಗೆ ಜರಗಿಸಬೇಕಾಗಿ ನಿಶ್ಚಯಿಸಲ್ಪಟ್ಟಿರುತ್ತದೆ ಈ ಮಹಾ ಸಭೆಯಲ್ಲಿ ಇಲ್ಲಿ ಇರುವ ಮೊಗವೀರ ಸಾರ್ವಜನಿಕ ೫ ಸಂಸ್ಥೆಗಳನ್ನು ಸಮ್ಮಿಲನಗೈದು, ಮುಂದಕ್ಕೆ ಏಕ ಸಂಸ್ಥೆಯನ್ನಾಗಿ ಏರ್ಪಡಿಸಿಕೊಳ್ಳುವ ಸಂಬಂಧ ತಕ್ಕ ನಿರ್ಧಾರಗೈಯುವದು, ಸರ್ವ ಊರುಗಳವರಿಂದ ಪ್ರತ್ಯಪ್ರತ್ಯೇಕ ಆರಿಸಲ್ಪಟ್ಟಿರುವ ಪ್ರತಿನಿಧಿ ಸದಸ್ಯರನ್ನು ಸಂಸ್ಥೆಯ ಆಡಳಿತೆ ಕಮಿಟಿ ಮೆಂಬರರನ್ನಾಗಿ ಮಂಜೂರು ಮಾಡುವದು, ತಾ. ೩-೮-೧೯೩೬ರಲ್ಲಿ ನೇಮಿಸಲ್ಪಟ್ಟಿರುವ ತಾತ್ಕಾಲಿಕ ಕಾರ್ಯಕಾರಿ ಕಮಿಟಿಯನ್ನು ವಿಸರ್ಜನೆಗೊಳಿಸುವದು ಇವೇ ಮೊದಲಾದ ಮಹತ್ಕಾರ್ಯಗಳು ನೆರವೇರಿಸಲಿಕ್ಕಿರುವುದರಿಂದ ಇದಕ್ಕೆ ಸಂಬಂಧಪಟ್ಟ ಸರ್ವ ಊರುಗಳ ಮುಂಬಾಯಿಯಲ್ಲಿರುವ ಸರ್ವ ಮೆಂಬರರೂ ಜಾತ್ಯಾಭಿಮಾನದಿಂದಲೂ, ಬೆಣ್ಣೆ ಕುದುರು ಶ್ರೀ ಮಹ ಸ್ತ್ರೀ ಅಮ್ಮನವರ ಭಕ್ತಿ ಶ್ರದ್ಧೆಯಿಂದಲೂ, ಸದರೀ ದಿನ ಖಾಸಗಿ ಮೀಟಿಂಗು ವಗೈರೆ ಯಾವ ತರದ ಸಭೆಯನ್ನು ಜರಗಿಸದೆ ದಯಮಾಡಿ ತಪ್ಪದೆ ಈ ಸಭೆಗೆ ಹಾಜರಾಗಬೇಕಾಗಿ ವಿನಂತಿಸುತ್ತೇವೆ

(ತಾತ್ಕಾಲಿಕ ಕಾರ್ಯಕಾರಿ ಕಮಿಟಿಯವರ ಅನುಮತಿಯಿಂದ)

ಯರ್ಮಾಳ ಕೊರಗಪ್ಪ ಪುತ್ರನ್,
ಮೂಲ್ಕಿ ರಾಮಚಂದ್ರ, ಮಟ್ಟಿ ಲಕ್ಷ್ಮಣ ಕಂಗನ್
ಗೌರವ ಜತೆ ಕಾರ್ಯದರ್ಶಿಗಳು

ಕೊಗ್ಗಿಯಲ್ಲಿ ಹುಲಿಯಹಾವಳಿ

ಮ ರಾ. ಕೆ. ಏ ಲ್. ಕಾರಂತರವರ ದರಬಾಸ್ತು ಸ್ಥಳದ ಸಮೀಪದಿಂದ ಕೊಗ್ಗಿಗೆ ಹೋಗುವ ಮಾರ್ಗದ ಬದಿಯಲ್ಲಿ, ಸುಮಾರು ೪೦ವರ್ಷಪ್ರಾಯದ ಸಣ್ಣಮುಂಡು ಸವಿಯಮ್ಮ ಶೆಟ್ಟಿ ಎಂಬವಳು ತಾ ೧೬-೫-೩೭ನೇ ಆದಿತ್ಯವಾರ ಹಗಲು ಗಂಟೆ೫ರ ಸಮಯ, ಮನೆಯಿಂದ ಸುಮಾರು ೧೫೦ ಗಜ ದೂರದಲ್ಲಿ ದರಳೆ ಗುಡಿಸುತ್ತಿರುವಾಗ ಹುಲಿಯೊಂದು ಆಕಸ್ಮಾತ್ ಅವಳ ಮೇಲೆ ಹಾರಿ ಕುತ್ತಿಗೆಯನ್ನು ಕಚ್ಚಿಕೊಂಡು ಸುಮಾರು ೧ ಮೈಲುದೂರ ಗಾಡಿ ಮಾರ್ಗವಾಗಿಯೇ ಎಳೆದುಕೊಂಡು ಹೋಗಿ ಅರ್ಧದೇಹವನ್ನು ತಿಂದಿರುವುದು. ಅಲ್ಲದೆ ಈಗಲೂ ಹಗಲು ಹೊತ್ತು ಸದರಿ ಮಾರ್ಗದಲ್ಲಿ ತಿರುಗುವ ಕೆಲವರು ಅದನ್ನು ಕಣ್ಣಾರೆಕಂಡು ಭಯ ಪಟ್ಟಿರುತ್ತಾರೆ ಕೆಲವು ದಿನಗಳಹಿಂದೆ ನೆರೆಗ್ರಾಮವಾದ ಮೊಳಹಳ್ಳಿಯಲ್ಲಿ ಒಬ್ಬರಸಂತರ ಮತ್ತೊಬ್ಬರನ್ನು ಹಿಡಿದು ತಿಂದ ಹುಲಿಯೇ ಇದು ಎಂದು ಊಹಿಸಲಾಗಿದೆ ಹುಲಿಯ ಈ ತರದ ನಿರ್ಭೀತವರ್ತನದಿಂದ ಸಕಲರೂ ಧೈರ್ಯಗುಂದಿರುತ್ತಾರೆ. ಊರ ಮಹನೀಯರೂ ಸರಕಾರದವರೂ ಸಹಕರಿಸಿ, ಈ ನರಭಕ್ಷಕನನ್ನು ಕೊಂದು ಮುಂದೆ ಆಗಲಿರುವ ಜೀವಹಾನಿಯನ್ನು ತಪ್ಪಿಸಿ, ಜನರ ಭೀತಿಯನ್ನು ಹೋಗಲಾಡಿಸುವರೆಂದು ನಂಬಿಕೆ.

ಅಜೆಕಾರು

ಈ ಕೇಂದ್ರದ ಅಧ್ಯಾಪಕಸಭೆಯು ತಾ.೧೫-೫-೩೭ರಲ್ಲು ಕಾರ್ಕಳ ರೇಂಜಿನ ಡಿ! ಇ! ರಾದ ಮ. ರಾ. ಬಿ ವೆಂಕಟ್ರಾಯ ಮಲ್ಯ ಅವರ್ಗಳ್ ಬಿ ಎ ಎಲ್ ಟಿಯವರ ನೇತೃತ್ವದಲ್ಲಿ ಜರಗಿತು. ಕಾರ್ಯಕ್ರಮದಂತೆ ಎಲ್ಲವನ್ನೂ ತೀರ್ಮಾನಿಸಿದ ಬಳಿಕ ಅಧ್ಯಕ್ಷರ ಸುರಸಭಾಷಣದ ನಂತರ ಗ್ರೂಪ್ ಫೋಟೊ, ಫಲಾಹಾರ ಇತ್ಯಾದಿಗಳಾಗಿ ಸಭೆಯು ಮುಕ್ತಾಯವಾಯಿತು. ಮಾನ್ಯ ಜಿಲ್ಲಾ ಬೋರ್ಡಿನವರು ಅಜೆಕಾರಿಗೊಂದು ರೂರಲ್ ಡಿಸ್ಪೆನ್ಸರಿಯನ್ನು ಸೆಂಕ್ಷನ್ ಮಾಡಿರುವುದಾಗಿ ತಿಳಿದು ಬರುತ್ತದೆ ಪಸ್ಯವಾದಗಳು! ಶೀಘ್ರದಲ್ಲೇ ತೆರೆಯಲ್ಪಟ್ಟು ಸುಸ್ವಾಗತ ಪಡೆಯಲಿ" ಊರವರು ಸ್ಥಳೀಯ ಬೋರ್ಡ ಶಾಲಾಕಟ್ಟೋಣದ ವಿಸ್ತರಿಸುವಿಕೆಯ ಕೆಲಸವನ್ನು ಪೂರ್ತಿಗೊಳಿಸಿ ದ. ಕ. ಜಿಲ್ಲಾ ಬೋರ್ಡಿಗೆ ಧರ್ಮಾರ್ಥವಾಗಿ ಬಿಟ್ಟು ಕೊಟ್ಟಿರುವುದು ಸ್ತುತ್ಯ. ಸ್ಥಳೀಕ ಪೋಸ್ಟಾಫೀಸಿನಲ್ಲಿ ಸೇವಿಂಗ್ಸ್ ಬೇಂಕ್ ಅಧಿಕಾರವು ಕೊಡಲ್ಪಟ್ಟಿದೆ. ಎಣ್ಣೆಹೊಳೆಯ ಮಾಟ್ಟುರು ಜಾತ್ರೆಯು ತಾ ೧೫-೫-೩೭ರಿಂದ ಒಂದು ವಾರ ಎಂದಿನಂತೆ ಈ ವರ್ಷವೂ ಜರಗುತ್ತಲಿದೆ. ಸದ್ಯದಲ್ಲೇ ಇಲ್ಲೊಂದು ಗ್ರೈನ್ ಬೇಂಕ್ ಸ್ಥಾಪಿತವಾಗಲಿರುವುದು. ಸುಸ್ವಾಗತ!

ಖಂಬದಕೋಣೆ

ಇದೇ ತಾ ೧೪ ೫-೩೭ನೇ ದಿನ ಇಲ್ಲಿಗೆ ಚಿತ್ತೈಸಿದ ಶ್ರೀಯುತ ಹಿ ರಾಮರಾಯಮಲ್ಯರೂ ಕೋಪರೇಟಿವ್ ಸೆಂಟ್ರಲ್ ಬೇಂಕಿನಕಾರ್ಯದರ್ಶಿಯವರಾದ ಪ್ರೋ. ಶಾಂತಾರಾಮರಾಯರೂ 'ಸಹಕಾರ ಸಂಸ್ಥೆವೂ ಅದರ ಪ್ರಯೋಜನವೂ' ಎಂಬೀವಿಷಯವನ್ನೆತ್ತಿ ಇಲ್ಲಿಯ ಸದಾನಂದ ಕ್ಲಬ್ಬಿನಲ್ಲಿ ಚಿತೋರೀತಿಯಿಂದ ಭಾಷಣಮಾಡಿದರು. ಜನಸಂದಣಿಯು ಸಾಮಾನ್ಯ ತೆಂದರಕ್ಕೆ ಮೀರಿತ್ತು

ಶಿಫಾರಸು ಪತ್ರ

ಉಡುಪಿ
ತಾ. ೨೫-೫-'೩೭

ಗೆಳೆಯರೇ,

ನಿಮ್ಮ ತಾ. 15-5-37ರ ಪತ್ರವು ಬರುವಾಗ ನಾನು ಊರಲ್ಲರಲಿಲ್ಲ. 'ನವಯುಗ' ಸಂಪಾದಕರೊಂದಿಗೆ ಚಂದಾದಾರರನ್ನು ಸೇರಿಸಲು ಹೊರಗೆ ಹೋಗಿದ್ದೆ. ಈ ಪ್ರಯುಕ್ತ ಉತ್ತರಬರೆಯಲು ವಿಳಂಬವಾದುದಕ್ಕೆ ಮನ್ನಿಸಬೇಕಾಗಿ ಕೋರುತ್ತೇನೆ

ನಾನು ನಿಮ್ಮ ಕಾಗದದಂತೆ ಇಲ್ಲಿ ಇತ್ತೀಚೆಗೆ ಪ್ರಾರಂಭವಾದ '**ನವಭಾರತ ಬುಕ್ ಡಿಪೊ**'ಗೆ ಹೋಗಿ ನೋಡಿದೆ. ಅಲ್ಲಿ ಧಾರವಾಡದ ಜಯಕರ್ನಾಟಕ ಗ್ರಂಥಮಾಲೆಯ, 'ಮನೋಹರ ಗ್ರಂಥ ಭಂಡಾರ'ದ ಹಲಸಂಗಿಯ ಆರಿಂದ ಗ್ರಂಥಮಾಲೆಯ, ಮಂಗಳೂರಿನ ಬಾಲಸಾಹಿತ್ಯಮಂಡಲದ ಇಲ್ಲಿಯ ಕಿರಿಯರ ಪ್ರಪಂಚವೇ ಮೊದಲಾದವರ ಗ್ರಂಥಗಳು ದೊರೆಯುತ್ತವೆ. ಕರ್ನಾಟಕದಲ್ಲಿ ಪ್ರಕಟವಾದ ಯಾವತ್ತೂ ಗ್ರಂಥಗಳ ಭಂಡಾರವಾಗಿ ಮಾಡಬೇಕೆಂಬುದೇ ನವಭಾರತ ಬುಕ್ ಡಿಪೋದವರ ಉತ್ಕಟೇಚ್ಛೆಯಾಗಿದೆ. ಅವರ ಕೆಟಲಾಗು ನವ್ಯವೇ ಪ್ರಿಂಟಾಗಲಿರುವುದಂತೆ. ಪ್ರಿಂಟಾದೊಡನೆ ಅದರದೊಂದು ಪ್ರತಿಯನ್ನು ನಿಮಗೆ ಕಳುಹಿಸುವಂತೆ ಹೇಳಿದ್ದೇನೆ.

ಇನ್ನು, ನವಭಾರತ ಬುಕ್ ಡಿಪೋವು ಆಧುನಿಕ ಗ್ರಂಥಗಳ ಭಂಡಾರ ಮಾತ್ರವೋ! ....ಇತ್ಯಾದಿ ಕೇಳಿದಿರಿ ಅಲ್ಲಿ ಯಾವತ್ತೂ ಶಾಲಾಪುಸ್ತಕಗಳೂ ಉಪಕರಣಗಳೂ ಸ್ಟೇಶನರಿಗಳೂ ಸಿಗುತ್ತವೆ.

ನೀವು ಬರೆದಿರುವಂತೆ ಈಗಿನ ಕಾಲದಲ್ಲಿ ಪುಸ್ತಕ ಭಂಡಾರಗಳನ್ನು ನಡೆಸುವುದು ತೀರ ಕಷ್ಟಕರವಾದುದಿರುತ್ತ ಆಧುನಿಕ ಗ್ರಂಥಗಳ ಭಂಡಾರವಾಗಿ ಮಾಡಬೇಕೆಂಬ 'ನವಭಾರತ ಬುಕ್ ಡಿಪೊ'ದ ಸಂಚಾಲಕರ ಸದಿಚ್ಛೆಯು ಸಾಹಸಪರವೂ ಅತ್ಯಂತ ಶ್ಲಾಘನೀಯವೂ ಅನುಕರಣೀಯವೂ ಇದೆ. ಕನ್ನಡಿಗರಿಂದ ಮುಖ್ಯವಾಗಿ ದಕ್ಷಿಣಕನ್ನಡಿಗರಿಂದ ಇದಕ್ಕೆ ತಕ್ಕ ಪ್ರೋತ್ಸಾಹ ದೊರಕದಿರಲಾರದೆಂದು ನಂಬುತ್ತೇನೆ

ಇತಿ ನಿಮ್ಮ

ಉ. ಮಾ. ನಾಯಕ್.

ಮರೆತ ಮಾತು—

ನಾನೂ 'ನವಯುಗ' ಸಂಪಾದಕರೂ ಚಂದಾದಾರರನ್ನು ಸೇರಿಸಲು ಒಮ್ಮೆ ಆ ಕಡೆಗೆ ಬರಬೇಕೆಂದಿರುವೆವು. ಯಾವಾಗ ಬಂದರೆ ಒಳ್ಳೆಂತೆಂಬುದನ್ನು ತಿಳಿಸಿದರೆ ನಾವು ಬರುವ ನಿಶ್ಚಿತ ದಿನವನ್ನು ತಿಳಿಸುತ್ತೇನೆ.

ಉ. ಮಾ. ನಾ.

ಬರುವ ವಾರದಿಂದ
ನವಯುಗದಲ್ಲಿ
'ಪುರುಷವಧು!'
ಎಂಬ ಬಹು ವಿನೋದಾತ್ಮಕ ಏಕಾಂಕ ನಾಟಕವು ಕ್ರಮಶಃ ಪ್ರಕಟವಾಗುವುದು
ಓದಲು ಮರೆಯದಿರಿ!

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಅದನ್ನು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವುದಾದರೆ ವಿದಾಸ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೇಜರ್, '**ನವಯುಗ**'

ದಕ್ಷಿಣ ಕನ್ನಡ

ಉಳ್ಳಾಲ ಅದ್ವೈತಾಶ್ರಮದಲ್ಲಿ ಶ್ರೀ ಶಂಕರ ಜಯಂತ್ಯುತ್ಸವ

ಆಮಂತ್ರಣ ಪತ್ರದಲ್ಲಿ ಸೂಚಿಸಿದಂತೆ ಬ್ರಹ್ಮಶ್ರೀ ನಿಡ್ಪೋಡಿ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಶ್ರೀ ಶಂಕರಾಚಾರ್ಯರ ಜಯಂತ್ಯುತ್ಸವವು ಬಹಳ ಸಂಭ್ರಮವಾಗಿ ಜರಗಿತು. ಅಧ್ಯಕ್ಷರು ತಮ್ಮ ಉಪಕ್ರಮ ಮತ್ತು ಉಪಸಂಹಾರ ಭಾಷಣದಲ್ಲಿ ಶಂಕರಾಚಾರ್ಯರ ಸಂಕ್ಷಿಪ್ತ ಜೀವನ ಚರಿತ್ರೆ ಅದ್ವೈತ ವೇದಾಂತದ ಸ್ವರೂಪ ಮತ್ತು ಆಚಾರ್ಯರ ನಿರ್ವ್ಯಾಜ ವೈದುಷ್ಯವನ್ನು ಕುರಿತು ಉತ್ತಮವಾದ ಭಾಷಣವನ್ನು ಮಾಡಿ, ಶ್ರೀ ಮಧ್ವಾಚಾರ್ಯರ ತತ್ವವನ್ನು ಅನುಸರಿಸುವ ನನ್ನನ್ನು ಶ್ರೀ ಶಂಕರಾಚಾರ್ಯರ ಜನ್ಮದಿವಸದ ಉತ್ಸವದಲ್ಲಿ ಅಧ್ಯಕ್ಷನನ್ನಾಗಿ ಆರಿಸಿದ ವಿಷಯವನ್ನು ವಿಚಾರಿಸಿದರೆ ಅದ್ವೈತ ಸಮಿತಿಯು ಪರಮತಗಳಲ್ಲಿರುವ ನನ್ನ ನಿಜವಾದ ಅಂತರಂಗವನ್ನು ತಿಳಕೊಂಡದೆ ಎಂದು ನಿರ್ಧಯಿಸುತ್ತೇನೆ. ಇಹ ಪರ ವಿಷಯಗಳಲ್ಲಿ ಅನ್ಯೋನ್ಯ ಪ್ರತಿಕೂಲತೆಗಳನ್ನು ಉಂಟುಮಾಡಿಕೊಳ್ಳುವುದು ಪ್ರಾಜ್ಞರ ಕರ್ತವ್ಯ. ಈ ವಿಷಯದಲ್ಲಿ ಸಮಿತಿಗೆ ನನ್ನ ಧನ್ಯವಾದಗಳು ಎಂದರು.

ಅನಂತರ ಬ್ರಹ್ಮಶ್ರೀ ಚಿಂತಾಮಣಿ ನಿಸ್ಲ ಘಾಟೆಯವರು ಶಂಕರ ಚರಿತ್ರೆ ಎಂದು ಸರಸವಾದ ಹರಿಕಥೆಯನ್ನು ಮಾಡಿ ಮುಗಿಸಿದ ನಂತರ, ಉಡುಪಿ ಶ್ರೀ ಕೃಷ್ಣ ಸಂದೇಶದ ಸಂಪಾದಕರಾದ ಬ್ರಹ್ಮಶ್ರೀ ಮುದ್ರಾಡಿ ಜನಾರ್ದನಾಚಾರ್ಯ-ಶಿರೋಮಣಿ ಇವರು ಸನಾತನ ಧರ್ಮವನ್ನು ಕುರಿತು "ಸನಾತನ ಧರ್ಮದ ಆಚಾರವಿಚಾರಗಳನ್ನು ಅಕಾರಣವಾಗಿ ಅಂದರೆ ಅವುಗಳ ಕೂಲಂಕಷತ್ವವನ್ನು ತಿಳಕೊಳ್ಳದೆ ಅವುಗಳನ್ನು ನಿಂದಿಸುವವರ ವರ್ತನೆಯು ಯುಕ್ತವೆಂದು ನನಗೆ ತೋರುವುದಿಲ್ಲ. ಧರ್ಮ ವಿರೋಧವು ನಮ್ಮ ಸರ್ವ ನಾಶಕ್ಕೆ ಕಾರಣವೆಂದು ಉಪದೇಶಿಸಿದರು. ಮಂಗಳಾರತಿಯ ನಂತರ ಫಲಮಂತ್ರಾಕ್ಷತೆಗಳ ಹಂಚುವಿಕೆಯಿಂದ ಉತ್ಸವವು ಕೊನೆಗಂಡಿತು.

ಮುದ್ರಾಡಿ

ಇಲ್ಲಿ ಇದೇ ೧೯ ನೆ ೩೭ನೇ ಮಧ್ಯಾಹ್ನ ೩ ಘಂಟೆಗೆ ಬಿ ಲಕ್ಷ್ಮೀವೆಂಕಟೇಶ ಭಟ್ರ ಅಧ್ಯಕ್ಷತೆಯಲ್ಲಿ ಒಂದು ಗ್ರಾಮ ಕಾಂಗ್ರೆಸ್ ಮಹಾಸಭೆಯು ಜರಗಿ ಈ ಕೆಳಗಣ ಮಹನೀಯರಿಂದ ಕೂಡಿದ ಒಂದು ಗ್ರಾಮ ಕಾಂಗ್ರೆಸ್ ಕಮಿಟಿಯನ್ನು ಸರ್ವಾನುಮತದಿಂದ ನಿರ್ಣಯಿಸಿ ಸ್ಥಾಪಿಸಲಾಯಿತು. ಅಧ್ಯಕ್ಷರು ಮುದ್ರಾಡಿ ನಾಗರಾಜ ಅತಿಕಾರಿಗಳು. ಮುದ್ರಾಡಿ ಕೃಷ್ಣಯ್ಯ ಶೆಟ್ಟರು ಮತ್ತು ಯಮ್ ವಾದಿರಾಜ ಕೇಕ್ಕಾರ ಇವರುಗಳು ಜೊತೆಕಾರ್ಯದರ್ಶಿಗಳು. ೧ ಪಿ. ಮಹಾಬಲ ಹೆಗ್ಗಡರು, ೨ ಯಮ್ ಶೀನಪ್ಪ ಹೆಗ್ಡೇರು, ೩. ಯಮ್. ಗೋಪಾಲಕೃಷ್ಣ ಹೆಗ್ಡೇರು, ೪ ಲಕ್ಷ್ಮೀವೆಂಕಟೇಶ ಭಟ್ಟರು, ೫. ಯಮ್. ಬಾಬ ಸೆಟ್ಟಿಗಾರರು, ೬ ಯಮ್ ಗೋಪಾಲ ಹೆಗ್ಡೇರು, ೭ ಆದಿರಾಜ ಅತಿಕಾರಿಗಳು, ೮ ಬಿ ಸುಬ್ರಾಯ ಆಚಾರಿಗಳು, ೯ ತೆಂಕೋಡು ಗೋವಿಂದ ಹೆಗ್ಡೇರು, ೧೦. ಯಮ್. ಬಲ ನಾರಾಯಣ ಶೆಟ್ಟರು, ೧೧ ಜೇರಿಸಾಲೆಬೆಟ್ಟು ಮಹಾಬಲ ಶೆಟ್ಟರು, ವೇಲ್ಮನೆ ಹೆರಿಯಣ್ಣ ಶೆಟ್ಟರು. ಕಾರ್ಕಳ ತಾಲೂಕು ಕಮಿಟಿಯ ಕಾರ್ಯದರ್ಶಿ ಶ್ರೀ. ಕೇಶವ ಶೆಣೈಯವರು ಕಾಂಗ್ರೆಸಿನ ಧೋರಣೆ ಮತ್ತು ಗ್ರಾಮಕಮಿಟಿಗಳ ಉದ್ದೇಶ್ಯ ಇವುಗಳ ಕುರಿತು ಜನರಿಗೆ ಮನದಟ್ಟಾಗುವಂತೆ ದೀರ್ಘ ಭಾಷಣ ಮಾಡಿದರು. ಮುದ್ರಾಡಿ ಕೃಷ್ಣಯ್ಯ ಶೆಟ್ಟರೂ, ಯಮ್ ವಾದಿರಾಜ ಕೆಲ್ಕಾರರೂ ಕಾಂಗ್ರೆಸೆಂದರೇನು? ನಮಗೆ ಎಂಥಾ ಸ್ವರಾಜ್ಯ ಬೇಕು? ಇದಕ್ಕಾಗಿ ಕಾಂಗ್ರೆಸು ಕಳೆದ ೫೦ ವರ್ಷಗಳಿಂದ ಹೇಗೆ ಕಷ್ಟಪಡುತ್ತಿರುವುದು! ಬಿದ್ದರನ್ನೇ ಎಲ್ಲರೂ ವರಿಸಿದ್ದಲ್ಲಿ ದೇಶಸೇವೆ ಅದರಿಂದ ಹೇಗಾಗುವುದು? ಮತ್ತು ಹಳ್ಳಿಹಳ್ಳಿಗಳಲ್ಲಿ ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿದಾಗ ದೊರಕುವ ಪ್ರಯೋಜನ ಇವುಗಳ ವಿಷಯ ಕೆಲವು ಚಿಲ್ಲೋ ಮಾತುಗಳನ್ನಾಡಿದರು. ಧನ್ಯವಾದದೊಡನೆ ಸಭೆ ಮುಕ್ತಾಯವಾಯಿತು.

ಕಾಂಗ್ರೆಸ್ ಸದಸ್ಯರನ್ನು ಸೇರಿಸಲು ಕಾರ್ಕಳ ತಾಲೂಕು ಕಮಿಟಿಯ ಮೆಂಬರರಾದ ಮುದ್ರಾಡಿ ಕೃಷ್ಣಯ್ಯ ಶೆಟ್ಟರು ನಮ್ಮ ತಾಲೂಕಿನ ಹಳ್ಳಿಗಳ ಕಡೆ ಬರುವವರಿದ್ದಾರೆ. ಅವರಿಗೆ ಸರ್ವರೂ ಸಹಕಾರವನ್ನೀಯಬೇಕಾಗಿ ಕಾರ್ಕಳ ತಾಲೂಕು ಕಮಿಟಿಯವರು ಅಪೇಕ್ಷಿಸುತ್ತಾರೆ.

ಕುಂದಾಪುರ ತಾಲೂಕು

ಕಾಂಗ್ರೆಸು ಸದಸ್ಯರನ್ನು ಸೇರಿಸಿ ಗ್ರಾಮ ಕಮಿಟಿಗಳನ್ನು ವ್ಯವಸ್ಥೆಗೊಳಿಸುವ ಬಗ್ಗೆ ಶ್ರೀ ಎನ್ ಎಸ್. ಕಿಳಿಯವರ ಕಾರ್ಯಕ್ರಮ—

ತಾ ೨೭ ೫ '೩೭ರಿಂದ ೩ ೬ '೩೭ರ ತನಕ

೨೭ ಹಲಾಡಿ, ೨೮ ಕೋಟೇಶ್ವರ, ೨೯ ವಂಡ್ಸೆ, ೩೦ ಬೈಂದೂರು, ೩೧ ಉಪ್ಪುಂದ(ಬೆಳಗ್ಗೆ) ೩೧ ಸಾಯಂಕಾಲ ಕಿರಿಮಂಜೇಶ್ವರ, ೧ ಜೂನ್ ಬೆಳಗೆ, ಕಂಬದ ಕೋಣೆ, ೧ ಸಾಯಂಕಾಲ ಗಂಗೊಳ್ಳಿ, ೨ ಸಾಯಂಕಾಲ ಬಸ್ರೂರು, ೩ ಜೂನ್ ಸಾಯಂಕಾಲ ಕೆಂಚನೂರು.

ಬಸ್ರೂರು ಸೆಂಟರಿನಲ್ಲಿ ಗ್ರಾಮ ಕಾಂಗ್ರೆಸ ಕಮಿಟಿಯ ರಚನೆ

ಈ ಸೆಂಟರಿಗೆ ಒಂದು ಕಾಂಗ್ರೆಸ್ ಕಮಿಟಿಯನ್ನು ಏರ್ಪಡಿಸುವರೆ ತಾ. ೧೪ ೫-೩೭ರಲ್ಲಿ ಬಸರೂರು ಪಟ್ಟಣದ ನೆರೆಹೊರೆಯಾಗಿರುವ ಆನಗಳ್ಳಿ ಕುಂದಾಪುರ ಬಳ್ಕೂರು ಮತ್ತು ಕಾಳಾವರ ಗ್ರಾಮಗಳ ಮಹಾಜನರ ಸಭೆಯೊಂದು ಬಸ್ರೂರು ವೈ ಎಂ ಎ ಕಟ್ಟಡದಲ್ಲಿ ಮ ರಾ ಬಸ್ರೂರು ಯಶ್ವಂತ ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗೆ ಕಾಣಿಸಿದಂತೆ ಈ ಸೆಂಟರಿನ ಕಾಂಗ್ರೆಸ್ ಕಮಿಟಿಯನ್ನು ರಚಿಸಿದ್ದಲ್ಲದೆ, ಈ ಠರಾವುಗಳನ್ನು ಮಂಜೂರು ಮಾಡಲಾಯಿತು. ಮ ರಾ. ಬಿ. ಯಶ್ವಂತ ನಾರಾಯಣ ನಾಯ್ಕರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಬಿ. ಕೃಷ್ಣಪ್ಪ ಶೆಟ್ರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ. ಬಿ. ರಘುನಾಥ ಶೆಟ್ರನ್ನು ಮತ್ತು ಶ್ರೀ. ಶ್ರೀಪತಿ ಭಟ್ರನ್ನು ಜತೆ ಕಾರ್ಯದರ್ಶಿಗಳಾಗಿಯೂ, ಶ್ರೀ ಬಿ ಸಿ ಮಂಜಯ್ಯ ಶೆಟ್ರನ್ನು ಕೋಶಾಧಿಕಾರಿಯಾಗಿಯೂ, ಆರಿಸಲಾಯಿತು ಮತ್ತು ಶ್ರೀಗಳಾದ ಬಿ ಶಿವರಾಮ ಶೆಟ್ರು ವಕೀಲ್, ಬಿ ಮಂಜಯ್ಯ ಹೆಗ್ಡೇರು ಎಡ್ವೋಕೇಟ್, ಬಿ. ಸುಬ್ಬಣ್ಣ ಶೆಟ್ರು, ಕೆ ಟಿ ರಾಮನ್ ನಾಯರ್, ಭಿಷಗಾಚಾರ್ಯ, ಬಿ ರಾಮ ವೈದ್ಯರ್, ಬಿ ಎಚ್. ಮೈದೀನ್ ಸಾಹೇಬರು, ಕೆ. ಸಂಜೀವ ಶೆಟ್ರು, ಬಿ ಅನಂತ ಕಮ್ತೇರು, ಎಮ್. ವಿಠಲ ಶೆಟ್ರು, ಕೆ. ರಾಮಣ್ಣ ಶೆಟ್ರು, ಕೆ. ಶೀನಪ್ಪ ಶೇರೆಗಾರರು, ಕೆ. ರಾಮಣ್ಣ ಶೆಟ್ರು, ಎ. ಮುತ್ತಯ್ಯ ಶೆಟ್ರು, ಎ ಗು ಮಂಜಯ್ಯ ಶೆಟ್ರು, ಕೆ ವೆಂಕಪ್ಪ ಶೆಟ್ರು, ಸ್ತ್ರೀಯರ ಪರವಾಗಿ ಮಿಸ್. ಭವಾನಿ, ಮತ್ತು ಹರಿಜನರ ಪರವಾಗಿ ಎ. ರಾಮ, ಈ ಮಹನೀಯರನ್ನು ಮೇನೇಜಿಂಗ್ ಕಮಿಟಿಯ ಮೆಂಬರರನ್ನಾಗಿ ಆರಿಸಲಾಯಿತು. ಕಾಂಗ್ರೆಸ್ ಮೆಂಬರರನ್ನು ಹೆಚ್ಚಾಗಿ ಸೇರಿಸಲಿಕ್ಕಾಗಿ ಮ. ರಾ. ಬಿ. ಕೃಷ್ಣಪ್ಪ ಶೆಟ್ರು, ಬಿ ಸಿ. ಮಂಜಯ್ಯ ಶೆಟ್ರು ಬಿ ಸಂಕಪ್ಪ ಶೆಟ್ರು, ಕೆ ಟಿ ರಾಮನ್ ನಾಯರ್, ಬಿ ರಾಮ ವೈದ್ಯರ್ ಇವರನ್ನೊಳಗೊಂಡ ಸಮಿತಿಯೊಂದನ್ನು ಮಾಡಲಾಯಿತು.

ಅನಂತರ ಶ್ರೀಯುತ ಬಿ ಸುಬ್ಬಣ್ಣ ಶೆಟ್ರು ತಂದ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಮಂಜೂರಾದವು (೧) ಕಾಂಗ್ರೆಸಿಗೆ ಹೆಚ್ಚಿನ ಬಹುಮತವಿರುವ ಆರು ಪ್ರಾಂತ್ಯಗಳಲ್ಲಿ ಕಾಂಗ್ರೆಸಿನವರು ಕೇಳುವ ಭರವಸೆಗಳನ್ನು ಕೊಡದಿರುವ ಆ ಪ್ರಾಂತ್ಯದ ಗವರ್ನರರ ವರ್ತನೆಯನ್ನು ಖಂಡಿಸುವುದು

(೨) ಕಾಂಗ್ರೆಸ್ ಮತಕ್ಕೆ ವಿರೋಧವಾಗಿ ಹಂಗಾಮಿ ಮಂತ್ರಿಪದವಿಗಳನ್ನು ತೆಗೆದುಕೊಂಡ ಡಮ್ಮಿ ಮಂತ್ರಿಗಳನ್ನು ನಿಷೇಧಿಸಲಾಯಿತು (೩) ಎಲ್ಲಾ ತಾಲೂಕುಗಳ ಕಾಂಗ್ರೆಸ್ ಕಮಿಟಿಗಳ ಪ್ರಮುಖ ಮೆಂಬರರು ಆಯಾಯ ತಾಲೂಕುಗಳಲ್ಲಿ ಗ್ರಾಮ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸುವದರಲ್ಲಿ ಚಟುವಟಿಕೆಯನ್ನು ತೋರಿಸುತ್ತಿದ್ದರೂ ನಮ್ಮ ತಾಲೂಕಿನಲ್ಲಿಯೂ, ಗ್ರಾಮ ಸಂಸ್ಥೆಗಳನ್ನು ಸ್ಥಾಪಿಸುವರೆ ಆರಿಸಿದ ಮೆಂಬರರು ಉದಾಸೀನಪರ ವರ್ತನೆಯನ್ನು ನಾವು ಖಂಡಿಸುತ್ತೇವೆ (೪) ಮೊನ್ನೆ ತಾನೇ ಆದ ಕಿರೀಟಧಾರಣೋತ್ಸವದ ಕಮಿಟಿಮೆಂಬರರಾಗಿ ಪಂತಿಗೆಯನ್ನು ಕೊಟ್ಟು ಪ್ರೋತ್ಸಾಹಿಸಿದ ನಮ್ಮ ತಾಲೂಕಿನ ಪ್ರಮುಖ ಕಾಂಗ್ರೆಸ್ ಮೆಂಬರರ ವರ್ತನೆಯನ್ನು ನಾವು ಖಂಡಿಸುತ್ತೇವೆ (೫) ನಮ್ಮ ಡಿಸ್ಟ್ರಿಕ್ಟಿನ ಇಕನೋಮಿಕ್ ಕೌನ್ಸಿಲ್ ಕಡೆಯಿಂದ ನಾದುರಸ್ತಿಯಾದ ಕೆರೆ, ಬಾವಿ, ರಸ್ತೆ, ವಗೈರೆಗಳನ್ನು ದುರಸ್ತಿ ಪಡಿಸುವರೆ ಭರವಸೆಕೊಟ್ಟಂತೆ, ಈ ವರೆಗೂ ಯಾವ ವ್ಯವಸ್ಥೆಯನ್ನು ಮಾಡದೆ ಇರುವುದನ್ನು ನೋಡಿ ವಿಷಾದವನ್ನು ಸೂಚಿಸಿದ್ದಲ್ಲದೆ ಈ ಕುರಿತು ಜಿಲ್ಲಾ ಇಕನೋಮಿಕ್ ಕೌನ್ಸಿಲಿನ ಮೆಂಬರರಾಗಿಯೂ, ಡಿಸ್ಟ್ರಿಕ್ಟ್ ಬೋರ್ಡು ಕಾಂಗ್ರೆಸ್‌ಪಾರ್ಟಿಯ ನಾಯಕರಾದ ಶ್ರೀ. ಮೊಳಹಳ್ಳಿ ಶಿವರಾಯರಿಗೂ ಬರಕೊಳ್ಳುವದಾಗಿ ನಿರ್ಣಯಿಸಲಾಯಿತು. (೬) ಕೆಲವು ದಿವಸಗಳ ಹಿಂದೆ ನಮ್ಮ ತಾಲೂಕು ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಮಹಾಬಲಹೊಳ್ಳರು, ಕಾಂಗ್ರೆಸ್ ಪಕ್ಷದವರಾದರೂ ಕಾಂಗ್ರೆಸಿನ ಹೆಸರಲ್ಲಿ ನಿಲ್ಲದೆ ಸ್ವತಂತ್ರರಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದುದನ್ನು ನಿಷೇಧಿಸುತ್ತೇವೆ. ಬಸ್ರೂರು ಸುಬ್ಬಣ್ಣ ಶೆಟ್ರು ನಾಲ್ಕಾರು ದಿವಸಗಳಿಂದ ನಾಲ್ಕಾರು ಗ್ರಾಮಗಳಲ್ಲಿ ಸಂಚರಿಸಿ ಅನೇಕ ಕಾಂಗ್ರೆಸ್ ಮೆಂಬರರನ್ನಾಗಿ ಸೇರಿಸಿದ್ದಕ್ಕಾಗಿ ಮತ್ತು ಬಸ್ರೂರು ಸೆಂಟರಿಗಾಗಿ ಬಸ್ರೂರಿನಲ್ಲಿ ಕಾಂಗ್ರೆಸ್ ಕಮಿಟಿಯನ್ನು ಏರ್ಪಡಿಸಲು ಸಲಹೆಗಳನ್ನಿತ್ತು ಪ್ರೋತ್ಸಾಹ ಕೊಟ್ಟ ಇವರಿಗೂ ಈ ದಿವಸ ಸಭೆಯ ಪ್ರಾರಂಭದಲ್ಲಿ ರಾಷ್ಟ್ರಗೀತೆಯನ್ನು ಹಾಡಿದ ಶ್ರೀಯುತ ಗೋಪಾಲಕೃಷ್ಣ ವ್ಯಾಸಭಾಗರಿಗೂ, ಈ ದಿವಸದ ಸಭಾಧ್ಯಕ್ಷರಿಗೂ ಮತ್ತು ಸಭಿಕರಿಗೂ ಮ ರಾ ಬಿ ರಘುನಾಥ ಶೆಟ್ರು ಬಸ್ರೂರು ಸೆಂಟರಿನ ಕಾಂಗ್ರೆಸ್ ಕಮಿಟಿಯ ಪರವಾಗಿ ಧನ್ಯವಾದಗಳನ್ನರ್ಪಿಸಿ ಸಭೆಯು ಮುಕ್ತಾಯವಾಯಿತು.

B RAGUNATHA SHETTY
B SRIPATHI BHAT.
Joint Secretaries
Basrur Circle Congress Committee.

ಜಾಹೀರು ನೋಟೀಸು

ನಮ್ಮ 'ಕಿರಿಯರ ಪ್ರಪಂಚ'ದ ಪುಸ್ತಕಗಳನ್ನು ವಿಕ್ರಯಿಸಲು ಉಡುಪಿಯಲ್ಲಿ ಇತ್ತೀಚೆಗೆ ತೆರೆಯಲ್ಪಟ್ಟ **'ನವಭಾರತ ಬುಕ್ ಡಿಪೋ'**ದವರನ್ನು ಸೋಲ್ ಏಜೆಂಟರನ್ನಾಗಿ ನಿಯಮಿಸಲಾಗಿದೆ. ಇನ್ನು ಮುಂದೆ ಅವರಿಂದ ನಮ್ಮ ಪ್ರಕಟಣೆಗಳನ್ನು ಪಡೆದುಕೊಳ್ಳಬಹುದು.

ಕಾರ್ಯದರ್ಶಿ,
'ಕಿರಿಯರ ಪ್ರಪಂಚ'.

FOR SALE

From

EZEKIEL SOANS
Retired Teacher
Near Manipal
POST UDIPI, S. K.

A decent building on a plot of nearly $1\frac{1}{8}$ acres built according to the modern requirements and situated nearly 2 furlongs from Manipal, S. K. is for sale for Rs. 2000. Intending purchasers are requested to communicate to theabove addssre.

(Sd.) Ezekiel Soans.

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮಧ್ವುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ—

ಗುಡಪಿಪ್ಪಲಿ (ಲೀವರ್ ರೋಗಕ್ಕೆ)	ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ)	ಚಂಪ್ರಮುಸ್ (ಶಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರಕೊಳ್ಳಿರಿ.

SUKHA NIVAS

Court Road, UDIPI

(Opp:- TALUK OFFICE)

Modern Model! Homely Hotel!

HIGH CLASS SWEETS AND SAVERIES

Coffee, Tea, Cocoa, delicious & fragrant.

VERY NEAR TO GANDHI MAIDAN, TALUK OFFICE, COURT & HIGH SCHOOLS

Our Building enjoys a magnificient site and rooms are well Ventilated and breezy.

THE ONLY PLACE FOR

FASHIONABLE ENTERTAINMENTS AND MEALS.

ORDERS FOR TEA-PARTIES ACCEPTED AT SHORT NOTICE

MODERATE CHARGES

Prop:-H.Vasudeva Nayak & Bros

ಸುಖನಿವಾಸ ಉಡುಪಿ.

ಸುವ್ಯವಸ್ಥೆಯ ಮೇಲ್ವಿಚಾರಣೆ

ಖಚಿತವಾದ ಸುಖದ ತವರುಮನೆ

ನಿರ್ಮಲವಾದ ಊಟದ ಸಲಕರಣೆ

ವಾಯುಸೇವನೆಗೆ ಯೋಗ್ಯಯೋಜನೆ

ಸಕಲಜನ ಮನರಂಜನೆಯ ಸಂಯೋಜನೆ

ಈ ಅನುಕೂಲತೆಗಳಿರುವುದರಿಂದ ವಿದ್ಯಾರ್ಥಿಗಳಿಗೂ ಉದ್ಯೋಗಸ್ಥರಿಗೂ ಪ್ರಯಾಣಿಕರಿಗೂ ಯೋಗ್ಯವಾದ ಹೋಟೆಲೆಂದರೆ

ಸುಖನಿವಾಸವೊಂದೇ.

ಕಾಫಿಗೆ, ತಿಂಡಿಗೆ. ಭೋಜನಕ್ಕೆ, ಉಳಕೊಳ್ಳಲಿಕ್ಕೆ ನಕ್ಕು ನಲಿಯಲಿಕ್ಕೆ, ಸುಖನಿವಾಸಕ್ಕೆ,

ಸುಖನಿವಾಸವೊಂದೇ

ಜ್ಞಾಪಕದಲ್ಲಿಡಲು ಯೋಗ್ಯವಾಗಿದೆ.

ಸುಖನಿವಾಸವು ಕೋರ್ಟು ಕಚೇರಿಗಳಿಗೂ ಹೈಸ್ಕೂಲುಗಳಿಗೂ ಮಧ್ಯರಂಗದಲ್ಲಿದ್ದು ಅತ್ಯಾಧುನಿಕ ಅನುಕೂಲತೆಗಳಿಂದ ಒಡಗೂಡಿದೆ.

ಸರಿಯಾಗಿ ಗಾಳಿಬೆಳಕುಳ್ಳ ಕೋಣೆಗಳು!

ಟೀಪಾರ್ಟಿಯ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಸುಖನಿವಾಸದ ಭೋಜನ / ಕಾಫಿ,ತಿಂಡಿ

ಮನೋವಿಕಾಸದ ಮೂಲ.

ವ್ಯವಸ್ಥಾಪಕರು:—

ಎಚ್. ವಾಸುದೇವ ನಾಯಕ್, ಎಂಡ್ ಬ್ರದರ್ಸ್.

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!!

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳೆಲ್ಲದರಲ್ಲೂ ಸಾವಿರಗಟ್ಲೆ ಇದ್ದಾಗ್ಯೂ

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ!

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅತ್ಯಾವಶ್ಯಕವಾಮದು.

ಈ ಪುಸ್ತಕವನ್ನು ಓದಬೇಕು! ಮನೋನೈಶಾಲ್ಯವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು — ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು

ಸಂಸಾರ ನಾಕೆಯನ್ನು ನಡೆಸುವವರಿಗೆ ಬೇಕು — ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು

ಅವರಿಗೆ ಇವರಿಗೆ ಎನ್ನುವುದೇನು? ಎಲ್ಲರಿಗೂ ಬೇಕು.

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ.

ಉತ್ತಮವಾದ ಹೊಳಪು ಕಾಗದ, ೩೦೦ ಪುಟಗಳು.

ಬೆಲೆ ರೂ. ೧—೮—೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು.

ಮೈಸೂರಿನಲ್ಲಿ ಲ್ಯಾನ್ಸ್ ಡೌನ್, ಬಜಾರ್, ಸ್ಟೇಟ್ ಮಾರ್ಟ್‌ನಲ್ಲಿ, ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿಯಲ್ಲಿ ದೊರಕುತ್ತದೆ.

ಟಾಗೂರ್ ಅಂಡ್ ಕೋ, (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ.

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಕ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ', ಮಕಾವ್, ಜಿಬೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರು ಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡೆವಳಿಗಳಾವುವು? ಅಲ್ಲಿನ ವೇಶ್ಯಾವಾಟಿಗಳು, ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳ ಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ.

ಅನೇಕ ವೇಶ್ಯೆಯರ ಜೀವನ ಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ. ಮೆದುಳಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. [ಸಂ. ನ]

ಜಿಲ್ಲಾ ಇಕನೋಮಿಕ್ ಕೌನ್ಸಿಲೂ ಬಸ್ರೂರು ಸಂಟರೂ

ಸ್ವಲ್ಪ ಸಮಯದ ಹಿಂದೆ ಕುಂದಾಪುರ ಡಿವಿಜನಿನ ಸಬ್‌ಕಲೆಕ್ಟರರೂ, ಜಿಲ್ಲಾ ಬೋರ್ಡು ಪ್ರಸಿಡೆಂಟರೂ, ಕುಂದಾಪುರ ತಹಶಿಲ್ದಾರರೂ, ನಮ್ಮ ಬಸ್ರೂರು ಕ್ಷೇತ್ರವನ್ನು ಸಂದರ್ಶಿಸಿ, ಸ್ಥಳೀಯ ಸ್ಥಿತಿಗತಿಗಳನ್ನು ಮನಗಂಡು ಮಾರ್ಗ ದುರುಸ್ತಿ ಪಡಿಸಿ, ಬಾವಿ ಕೆರೆಗಳನ್ನು ತೆಗೆಯಿಸಿ ಮಾದರಿ ಗ್ರಾಮವನ್ನಾಗಿ ಮಾಡುವದಾಗಿ ಇಕನೋಮಿಕ್ ಕೌನ್ಸಿಲಿನವರು ಕೈ ಹಚ್ಚುವರೆಂದು ಬಸ್ರೂರಿನ ಮಹಾಜನರಿಗೆ ತಿಳಿಯಪಡಿಸಿದರಷ್ಟೆ. ದುರ್ದೈವ ವಶಾತ್ ಈವರೆಗೆ ಸದ್ರಿ ಕೌನ್ಸಿಲಿನವರು ಕಾರ್ಯತತ್ಪರರಾದಂತೆ ಪ್ರತ್ಯಕ್ಷ ಅನುಭವವಲ್ಲ ಕಂಡುಬರುವುದಿಲ್ಲ. ಈ ಕೇಂದ್ರವಲ್ಲಿ ಕಾರ್ಯಾರಂಭವಾದರೆ ಹಳ್ಳಿಯ ಗ್ರಾಮ ಸುಧಾರಣ ಕಾರ್ಯಗಳು ಒಂದರ ಮೇಲೊಂದು ಆಗಲು ಮುಂಬಾ ಅನುಕೂಲವಿರುವದು. ಬಸ್ರೂರಲ್ಲಿ ನೇಯಿಗೆಯವರೂ, ಕಲ್ಲು ಕಟ್ಟುವವರೂ ಮಣ್ಣಿನ ಕೈಗಾರಿಕೆ ಕಲಸ ಮಾಡತಕ್ಕವರು ಬಹುಮಂದಿ ಇರುವುದರಿಂದ ಇವರೆಲ್ಲರ ಕೆಲಸವು ಸಾರ್ಥಕವಾಗುವಂತ ಸಂಸ್ಥೆಸ್ಥಾಪನೆಯಾಗುವುದು ಅತ್ಯಾವಶ್ಯಕ. ಜಿಲ್ಲಾ ಬೋರ್ಡಿನ ಕೋಂಗ್ರೆಸ್ ಪಾರ್ಟಿಯ ಲೀಡರರಾಗಿ ಈಗ ತಾನೆ ಇಕನೋಮಿಕ್ ಕೌನ್ಸಿಲಿಗೆ ಸದಸ್ಯರಾಗಿ ನೇಮಿಸಲ್ಪಟ್ಟ ರಾ| ಮೊಹಳ್ಳಿ ಶಿವರಾಯರು ಕಾಂಗ್ರೆಸ್ ಕಾರ್ಯಕ್ರಮದಲ್ಲೊಂದಾದ ಗ್ರಾಮಸುಧಾರಣಾಕಾರ್ಯದಲ್ಲಿ ನಿರತರಾಗಿರುವ ಇಕನೋಮಿಕ್ ಕೌನ್ಸಿಲಿನ ಸ್ಥಾಪನೆಯು ಸಾರ್ಥಕವಾಗುವಂತೆ ಮಾದರಿ ಸಂಸ್ಥೆರಾದ ಬಸ್ರೂರಿನ ಕುರಿತು ಗಮನ ಕೊಡುವರೇ!

ಜತಕಾರ್ಯದರ್ಶಿಗಳು,
ಬಸ್ರೂರು ಕಾಂಗ್ರೆಸ್ ಕಮಿಟಿ

ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿ

ಕಳೆದ ಎಸೆಂಬ್ಲಿ ಕೌನ್ಸಿಲು ಚುನಾವಣೆಯ ಕಾಲದಲ್ಲ ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿಯವರು ತೋರಿಸಿರುವ ಉತ್ಸಾಹವು ಸ್ತುತ್ಯಾರ್ಹವಾದರೂ ಈಗ ಮಾತ್ರ ಕಮಿಟಿಯವರು ಕಾಂಗ್ರೆಸ್ ಕಾರ್ಯಕ್ರಮವನ್ನು ತಕ್ಕಮಟ್ಟಿಗಾದರೂ ಪ್ರಚಾರಮಾಡುತ್ತಿರುವರೇ ಎಂಬುವುದು ಸಂದೇಹಾಸ್ಪದ. ಗ್ರಾಮಕಮಿಟಿಗಳ ಸ್ಥಾಪನೆಯ ಗುಂಡಗಾಳಿಯು ಇನ್ನೂ ಬೀಸತೊಡಗಿಲ್ಲ. ಕಮಿಟಿಯ ಪ್ರಸಿಡೆಂಟರು ಕಾಂಗ್ರೆಸ್ ಪ್ರತಿನಿಧಿಯಾಗಿ ಜಿಲ್ಲಾ ಬೋರ್ಡು ಚುನಾವಣೆಗೆ ನಿಲ್ಲದೆನೇ ಸ್ವತಂತ್ರರಾಗಿ ನಿಂತದ್ದು ಕಾಂಗ್ರೆಸ್ ಧ್ಯೇಯಗಳಿಗೆ ಸರಿಯೇ? ಹಲವು ಕಾಂಗ್ರೆಸು ಮುಂದಾಳುಗಳೆನಿಸುವವರು ಕಿರೀಟಧಾರಣೋತ್ಸವದಲ್ಲಿ ಕಾಂಗ್ರೆಸ್ ಆಜ್ಞೆಯನ್ನು ಉಲ್ಲಂಘಿಸಿ ಭಾಗವಹಿಸಿದುದು ತೀರಾ ತಪ್ಪಲ್ಲವೇ? ಈ ವಿಚಾರವಲ್ಲಿ ಚೌಕಸಿ ನಡಿಸುವರೆ ಒಂದು ಕಮಿಟಿಯನ್ನೇರ್ಪಡಿಸಿ ಕಾಂಗ್ರೆಸ್ ಮರ್ಯಾದೆಯನ್ನು ಕಾಪಾಡುವುದು ನಮ್ಮ ಅತ್ಯಂತ ಕರ್ತವ್ಯವಲ್ಲವೇ?

ಬಿ ಸುಬ್ಬಣ್ಣ ಶೆಟ್ಟಿ.

ಉಡುಪಿ ಮುನಿಸಿಪಾಲಿಟಿ ಸಭೆ

ಇದೇ ಕಳೆದ ತಾ 18ರಲ್ಲು ನಡೆದ ಮುನಿಸಿಪಲ್ ಸಭೆಗೆ ತಾನು ಮತ್ತು ಇತರ 5ಮಂದಿಯಲ್ಲಿ ಹೆಚ್ಚಿನವರು ಹೋಗದಿರಲು ಮುನಿಸಿಪಲ್ ಚೇಯರ್ ಮೆನರ ಹಿಂದಿನ ಸಭೆಗಳ 'ರೂಲಿಂಗ್' ಕಾರಣವೆಂದು ಡಾಕ್ಟರ್ ಪಿ ಜಿ ಆಚಾರ್ಯರು ಕಳದ ತಾ. 21ನೆಯ ರಾಷ್ಟ್ರಬಂಧುವಿನ ಸಂಚಿಕೆಯಲ್ಲ ಅವರ ಪ್ರತಿನಿಧಿಯೊಡನೆ ಹೇಳಿರುವರೆಂದು ಪ್ರಕಟವಾಗಿರುವುದು. ಡಾಕ್ಟರ್ ಆಚಾರ್ಯರು ಯಾಕೆ ತಾ 18ರ ಸಭೆಗೆ ಹೋಗಲಿಲ್ಲೆಂಬ ನಿಜ ಸಂಗತಿಯನ್ನು ಇನ್ನೂ ಸ್ವಲ್ಪ ಸಮಯದ ನಂತರ ಪ್ರಕಟಿಸುವನು. ತಾತ್ಕಾಲಿಕ ಮಂತ್ರಿ ಮಂಡಲದ ರಚನೆಯ ನಿಷೇಧದ ಠರಾವನ್ನು ತಂದವರು ಶ್ರೀಮತಿ ಮನೋರಮಾ ಬಾಯಿಯವರು. ಅದನ್ನು ಚೇಯರ್ ಮೆನರು ನೋಟೀ 'ಡಿಸ್‌ಎಲ್ಲೋ' ಮಾಡಿದರು. ಅನಂತರ ಡಾಕ್ಟರ್ ಆಚಾರ್ಯರು ಅದೇ ಠರಾವನ್ನು ತಂದಾಗ ಚೇಯರ್ ಮೆನರು ಶ್ರೀಮತಿ ಮನೋರಮಾ ಬಾಯಿಯವರ ಠರಾವಿನ ಸಂಗತಿಯನ್ನು ತಿಳಿಸಿ ಅದನ್ನು 'ರೂಲ್ ಔಟ್' ಮಾಡಿದರು. ಇದನ್ನು ನ್ಯಾಯವಾಗಿ ನಿರೋಧಿಸುವ ಮನಸು ಡಾಕ್ಟರ್ ಆಚಾರ್ಯರಿಗಿದ್ದರೆ ಅವರು ಸದ್ರಿ ಸಭೆಯಿಂದ ತಮ್ಮ ಅನುಯಾಯಿಗಳೊಂದಿಗೆ ಹೊರಹೊರಟು ಹೋಗಬೇಕಿತ್ತು. ಹಾಗೇನೂ ಮಾಡದೆ ಆಗ ಸುಮ್ಮನೆ ಕೂತು, ಅನಂತರ ಯಾವುದೋ ಕಾರಣದಿಂದ ಮುನಿಸಿಪಲ್ ಮೀಟಿಂಗಿಗೆ ಹೋಗದೆ ಕೂತು ಆ ಮೇಲೆ ರಾಷ್ಟ್ರಬಂಧುವಿನ ಪ್ರತಿನಿಧಿಯ ಉದಾರ ಸಹಾಯದಿಂದ, ತಾನು ಮೀಟಿಂಗಿಗೆ ಹೋಗದುದು ಚೇಯರ್‌ಮೆನರ ರೂಲಿಂಗನ್ನು ನಿಷೇಧಿಸಲೆಂದು ಪ್ರಕಟಿಸುವುದರಲ್ಲಿ ಅರ್ಥವಿದೆಯೇ? ಇದರಿಂದ ಡಾಕ್ಟರರು ತಾನು ಹಿಂದಿನಿಂದ ನಡಿಸಿಕೊಂಡು ಬಂದ ಆಟವನ್ನು ಇನ್ನೂ ಬಿಡದೆ ನಡಿಸುತ್ತಿರುವರೆಂದಿಷ್ಟೇ ಅರ್ಥವಾಗುವುದು. ತಾ. 18ರ ಮುನಿಸಿಪಲ್ ಮೀಟಿಂಗಿಗೆ ಹೋಗದ 6 ಮಂದಿ ಪೈಕಿ ಶ್ರೀಮತಿ ಮನೋರಮಾ ಬಾಯಿಯವರು ತಮ್ಮ ಮಗುವಿನ ಅಸ್ವಸ್ಥದ ನಿಮಿತ್ತ ಕಟಪಾಡಿಯಲ್ಲಿದ್ದರು. ಶ್ರೀ ಕೆ. ಅನಂತ ಶೆಟ್ಟಿ ಬೇರೆ ಖಾಸಗಿ ಕೆಲಸದ ನಿಮಿತ್ತ ಬರಲಿಲ್ಲ. ಶ್ರೀ ಗುರುರಾಜರಾಯರು ಕಲ್ಯಾಡಿಗೆ ಹೋಗಿದ್ದರು. ಅಂದ ಮೇಲೆ ಗೈರು ಹಾಜರಾದವರಲ್ಲಿ ಹೆಚ್ಚಿನವರನ್ನು ಡಾಕ್ಟರ್ ಆಚಾರ್ಯರು ತನ್ನ ಪಾಲಿಗೆ ಸೇರಿಸಿಕೊಳ್ಳುವುದಾದರೂ ಹೇಗೆ? ಡಾಕ್ಟರ್ ಆಚಾರ್ಯರ ಹಸ್ತಕರಂತಿರುವ ರಾಷ್ಟ್ರಬಂಧುವಿನ ಪ್ರತಿನಿಧಿಯು ಡಾಕ್ಟರ್ ಆಚಾರ್ಯರೊಬ್ಬರ ಭೇಟಿಯನ್ನೇ ಮಾಡಿ ಸುಮ್ಮನಾದುದೇಕೋ ತಿಳಿಯದು.

ಮುನಿಸಿಪಲ್ ಕೌನ್ಸಿಲರರಲ್ಲೊಬ್ಬ.

ಬಾತ್ಮೀದಾರರಲ್ಲಿ

ನಾವು ಪ್ರಕಟಿಸತಕ್ಕ ಬಾತ್ಮಿಗಳು ನಮಗೆ ಪ್ರತಿ ಮಂಗಳವಾರದೊಳಗೆ ಸಿಕ್ಕಿದರೆ ಮಾತ್ರ ಆ ವಾರದ ಸಂಚಿಕೆಯಲ್ಲ ಮುದ್ರಿಸಲು ಅನುಕೂಲವಾಗುವುದು. ವಿಳಂಬವಾಗಿ ಬಂದಲ್ಲಿ ಪ್ರಕಟಿಸಲು ಸಾಧ್ಯವಾಗಲಾರದೆಂದು ಈ ಮೂಲಕ ತಿಳಿಸಲಾಗಿದೆ.

ಮೆನೇಜರ್, **ನವಯುಗ**

ತಿದ್ದುಪಡಿ

ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟವಾದ ಮುಖ್ಯ ಪಂಚಾಯತ ಕೋರ್ಟಿನ ಸಿವಿಲ್ ವ್ಯಾಜ್ಯ ನಂಬ್ರ 141ನೇ ನೋಟೀಸಿನಲ್ಲಿ ವ್ಯಾದೆ ತಾ ಜೂನ್ 23ನೇ ಶನಿವಾರ ಒಂದು ತಪ್ಪಾಗಿ ಪ್ರಕಟವಾಗಿದೆ. ಅದು 22ನೇ ಶನಿವಾರ ಎಂದಾಗಬೇಕು [ಸಂ.ನ]

Mohini Harmoniam Works, Udipi

Single Hand Harmoniams, Portable Hand Harmoniams,
Double sets of Hand Harmoniams,
Treble sets of Hand Harmoniams,
Folding Leg Harmoniams
Specially Constructed in our Work Shop. Well tuned and fitted.

Repairs of all kinds of Musical instruments undertaken at a very moderate rate to the Complete satisfaction of our customers

A Trial order is earnestly solicited.

For Further Particulars
Apply to M K KORAGAPPA, *Proprietor.*

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

GONO KILLER

ಸಕಲ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3—0—0 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪.

Sole Manufacturer **Dr D N. JASANI,** Vitalbhai Patel Road, BOMBAY 4

ಜಾತೀಯ ಸಂಘ-ಸಂಸ್ಥೆಗಳಿಂದ ದೇಶ ಹಿತವಾದೀತೆ?

ಬರೆದವರು: ಪಂಡಿತ ತಾರಾನಾಥರು.

ರೈತಮಜೂರ ಜನರ ಉದ್ಯೋಗಗಳ ಉದ್ಧಾರದಲ್ಲಿ ದೇಶಹಿತವಿದೆಯೇ ಹೊರತು ಕೆಲವೊಂದು ವ್ಯಕ್ತಿ ಅಥವಾ ಜಾತಿಗಳ ಸಂಕುಚಿತ ಸ್ವಾರ್ಥ ಸಾಧನೆಯಲ್ಲಿಲ್ಲ.

ಯಾವದೊಂದು ವಿಧದ ಏಕೀಕರಣದ ಶ್ವಾಸವಾಗಲಿ, ವ್ಯಾಪಕಮನೋವೃತ್ತಿಯ ಸುಳಿವಾಗಲಿ ಇಲ್ಲದಿರುವ ಜಾತೀಯ ಸಂಘಗಳಿಂದ ಉಂಟಾಗುವ ಪರಿಣಾಮವೆಂದರೆ ಹೊಟ್ಟೆಕಿಚ್ಚು, ಪ್ರತಿಸ್ಪರ್ಧೆ, ದ್ವೇಷಾಸೂಯೆ.

ಗಮ್ಯದಲ್ಲಿಯಾದರೂ ಒಂದಾಗಿಸುವ, ಒಂದಾಗುವ ಶಕ್ತಿಯಿಲ್ಲದ ಇಂತಹ ಸಂತಾನದಿಂದ, ಹಲವು ಮಕ್ಕಳ ತಾಯಿ ಹಾದಿಯಲ್ಲಿ ಬಿದ್ದಂತಾಗಿದೆ. ನಮ್ಮ ದೇಶದ ಪಾಡು.

ಜಾತಿಮತಗಳ ಅಭಿಮಾನದಿಂದ ತಮಗಾಗಿಯೇ ಬೇರೆಯಾಗಿ ಮೀಸಲಿಟ್ಟ ಸಂಘ ಸಂಸ್ಥೆಗಳು, ಯುವಕರ ಅವಿಚಾರದ ಕುರುಹುಗಳು; ಅವರ ಹುರುಪಿಗೆ ಹತ್ತಿದ ಹುಳುಕುಗಳು.

[ಇಂದೀಗ ಕರ್ನಾಟಕದ ವಿಚಾರ ಕ್ರಾಂತಿಕಾರರಲ್ಲಿ ಅಗ್ರಗಣ್ಯರಾದ ಪಂಡಿತ ತಾರಾನಾಥರ ಮೇಲಿನ ಲೇಖನದ ವಿಚಾರಗಳನ್ನು ವಿರೋಧಿಸಿಯಾಗಲಿ ಪ್ರತಿಪಾದಿಸಿಯಾಗಲಿ ಒಂದುಪುಟಕ್ಕೆ ಮಿಕ್ಕದ ಯೋಗ್ಯ ಲೇಖನಗಳನ್ನು ನಮ್ಮ ವಾಚಕರಾರಾದರೂ ಕಳುಹಿಸಿದ ಪಕ್ಷದಲ್ಲಿ ನಾವು ಅವನ್ನು ಆದರದಿಂದ ಪ್ರಕಟಿಸುವೆವು.

[ಸಂ. ನ.]

ಯುವಕರ ಸಂಘಗಳು ದಿನೇ ದಿನೇ ಹೆಚ್ಚುತ್ತಿವೆ. ಅವುಗಳ ಕಾರ್ಯಕಲಾಪಗಳ ವರದಿಗಳನ್ನು ವರ್ತಮಾನ ಪತ್ರಿಕೆಗಳಲ್ಲಿ ಧಾರಾಳವಾಗಿ ಕಾಣಬಹುದು. ಇದು ನಿಜವಾಗಿಯೂ ಆದ ಎಚ್ಚರಿಕೆಯ ಲಕ್ಷಣವೆಂದು ಅನೇಕರ ಟೀಕೆ. ಯುವಕರ ಎಚ್ಚರಿಕೆಯೇ ದೇಶದ ಆಧಾರವು ಬಲಗೊಳ್ಳುತ್ತ ಹೋಗುವುದರ ಚಿಹ್ನೆ ಎಂದು ಸಾಮಾನ್ಯವಾಗಿ ಎಲ್ಲರ ಮತ. ಇದು ನಿಜವೋ- ಎಂದು ವಿವೇಚಿಸಿ ನೋಡಬೇಕು.

ಜಾತೀಯ ಪಟ್ಟು

ಯಾವ ದೇಶಗಳಲ್ಲಿ ನಮ್ಮಲ್ಲಿರುವಷ್ಟು ಜಾತಿ-ಮತ-ಮತಾಂತರಗಳ ಗೊಂದಲವಿಲ್ಲವೋ ಅಲ್ಲಿ ಯುವಕರ ಎಚ್ಚರಿಕೆಯು ದೇಶದೇಶಾಭಿಮಾನಗಳ ನಿಜವಾದ ಎಚ್ಚರಿಕೆಯೇ ಎಂದು ಹೇಳಬಹುದು. ಎಚ್ಚರಿಕೆಯ ಗಮ್ಯವು ದೇಶದ ಹಿತವೊಂದೇ ಆಗಿರುವ ಪಕ್ಷಕ್ಕೆ ದೇಶದಲ್ಲಿ ಎಷ್ಟು ಜಾತಿಮತಗಳಿದ್ದರೂ ಅಂಥಾ ಎಚ್ಚರಿಕೆಯಿಂದ ದೇಶಕ್ಕೆ ಲಾಭವಾಗಿಯೇ ತೀರುವುದೆಂದು ಹೇಳಬಹುದು. ಪ್ರತಿಯೊಂದು ಮತದ ಯುವಕರೂ ತಮ್ಮ ತಮ್ಮ ಮತದವರನ್ನು ಮಾತ್ರಬೇರೆಯಾಗಿ ಸೇರಿಸಿಕೊಂಡು ಸಂಘಗಳನ್ನು ಏರ್ಪಡಿಸುವುದರಲ್ಲಿ ದೇಶದ ಹಿತವಿದೆಯೆಂದು ಸಕಾರಣವಾಗಿ ಹೇಳಲಿಕ್ಕಾಗದು. ನಮ್ಮಲ್ಲಿ ಅನೇಕಾನೇಕ ಸನಾತನ ಮುಸಲ್ಮಾನ,ಜೈನ, ಲಿಂಗಾಯತ ಇತ್ಯಾದಿ ಸಂಘಗಳ ಗಮ್ಯವು ಸ್ಪಷ್ಟವಾಗಿಯೂ ದೇಶಹಿತವೆಂದು ಹೇಳುವುದಕ್ಕಾಗದು. ಅಷ್ಟೇಕೆ ಅವುಗಳ ವ್ಯವಸ್ಥಾಪಕರೇ ಅಂಥಾ ಧ್ಯೇಯ ವಿಟ್ಟುಕೊಂಡಿಲ್ಲ. ತಮ್ಮ ಸಂಘಗಳ ಮೊದಲ ಉದ್ದೇಶವು ತಮ್ಮ ಮತಾನುಯಾಯಿಗಳ ಉದ್ಧಾರವೆಂದೇ ಅವರು ಕೂಗಿ ಹೇಳುತ್ತಾರೆ. ಹಾಗೆ ತಮ್ಮ ಮತದವರ ಹಿತವೇ ಮೊದಲು ಎಂದು ಇಟ್ಟುಕೊಂಡು ನಡೆಯುವವರಿಂದ ದೇಶದ ಹಿತವೂ ಏತಕ್ಕಾಗಬಾರದು? ಎಂದು ಅನೇಕರು ಕೇಳಬಹುದು. ಆರೀತಿಯಾಗಿಯೇ ದೇಶದ ಹಿತವಾಗುತ್ತದೆ. ಆರೀತಿಯೇ ದೇಶ ಹಿತ ಸಾಧನೆಯ ರೀತಿ ಎಂದೂ ಹಲವರು ಸಾರುತ್ತಿದ್ದಾರೆ. ಒಂದು ಮನೆ ಕಟ್ಟಬೇಕಾದರೆ ಆ ಮನೆಯ ಒಂದೊಂದು ಸಾಮಗ್ರಿಯೂಬಿಡಿಯಾಗಿ ಗಟ್ಟಿಮುಟ್ಟಾಗಿದ್ದರಲ್ಲವೆ ಸೇರಿ ಇಡಿಯಾಗಿ ಬಿಟ್ಟ ಮೇಲೆ ಮನೆಯು ಭದ್ರವಾಗಿ ನಿಲ್ಲುವುದು.? ಎಂಬ ಸಾಮತಿಯನ್ನೂ ಎಷ್ಟೋ ಮತಾಭಿಮಾನಿಗಳ ಬಾಯಿಯಿಂದ ಕೇಳಬಹುದು. ಇದರಲ್ಲಿ ಏನೂ ಥ್ಯಾಂಶವೇ ಇಲ್ಲವೆ? ವಿವೇಚಿಸೋಣ.

ಪರಿಸ್ಥಿತಿ ವಿವೇಚನೆ

ಅವರ ಪ್ರಶ್ನೆಗಳನ್ನು ಎಷ್ಟೋ ರೀತಿಯಿಂದ ವಿವೇಚಿಸಬಹುದು.

೧ ಧ್ಯೇಯವಾಗಿದ್ದದ್ದು ಕರ್ಮವಾಗಿ ಎಂದಿಗೂ ಫಲಿಸದು. ಯಾರಧ್ಯೇಯವೇ ತಮ್ಮ ಅಥವಾ ತಮ್ಮ ಚಿಕ್ಕ ಪಂಗಡದ ಲಾಭವಾಗಿದೆಯೋ ಅಂಥವರಿಂದ ಇತರರಿಗೆ ಲಾಭವಾಗುವುದು ಕಷ್ಟ.

೨ ನಮ್ಮ ದೇಶದಲ್ಲಿ ಇಂಥಾ ಸಂಘಗಳು ಉಂಟಾಗುವುದಕ್ಕೆ ಮೊದಲಾಗಿ ಹೆಚ್ಚು ಕಡಿಮೆ ಮೂವತ್ತು ವರ್ಷಗಳ ಕಾಲವಾಗುತ್ತಿದೆ. ಬ್ರಾಹ್ಮಣೇತರರ ಸಂಘಗಳು ಮೊದಲು ಹುಟ್ಟಿದುವು. ಬ್ರಾಹ್ಮಣರಲ್ಲದವರೆಲ್ಲರೂ ಸೇರಿಕೊಳ್ಳುವುದೇ ತಮ್ಮ ಧ್ಯೇಯವೆಂದವು ಸಾರಿದವು. ಆದರೆ ವಸ್ತುತಃ ಬ್ರಾಹ್ಮಣೇತರ ಪಟ್ಟಣವಾಸಿಗಳು ಹಲವರು ಮಾತ್ರ ಹಾಗೆ ಕೂಡಿದರೇ ಹೊರತು ಇನ್ನಾರೂ ಸೇರಲಿಲ್ಲ. ಮುಸಲ್ಮಾನರೂ ಕ್ರೈಸ್ತರೂ "ನೋನ್ ಬ್ರಾಹ್ಮಿನ್" ಪಾರ್ಟಿಯವರೇ ಎಂಬುದೊಂದು ಬರೀ ಕಂಗೇ ಅಲ್ಲದ, ಅಂಥಾ ಪಾರ್ಟಿಯು ನಿಜವಾಗಿ ಕೈಗೂಡಿದ ವಿಷಯವಲ್ಲ ಎಂಬುದಕ್ಕೆ ಪ್ರತ್ಯಕ್ಷವೇ ಸಾಕ್ಷಿ. ಅಷ್ಟೇಕೆ, ಮುಸಲ್ಮಾನ ಸಂಘದವರು ಬ್ರಾಹ್ಮಣೇತರರನ್ನು ಹಿಂದುಗಳೆಂದೇ ಭಾವಿಸಿ ದೂರವಿಡುತ್ತಾರೆಯೇ ಅಲ್ಲದೆ, ಅವರಂತೆ ತಾವು ಮುಸಲ್ಮಾನರೂ ಬ್ರಾಹ್ಮಣೇತರರೇ ಎಂದುಕೊಂಡು ಅವರನ್ನು ಅಪ್ಪಿಕೊಳ್ಳುವುದಿಲ್ಲ. ಇದೆಲ್ಲ ನಡೆದು ಬಂದ ಇತಿಹಾಸ; ಒಡೆದು ಕಾಣುವ ಪ್ರತ್ಯಕ್ಷ ವಿಷಯ ಯುಕ್ತಿಗಳಿಂದ ಸಾಧಿಸಬೇಕಾಗಿಯೇ ಇಲ್ಲ.

ಯಾರಿಗೆ ಲಾಭ

ಈ "ನೋನ್ ಬ್ರಾಹ್ಮಿನ್" ಪಾರ್ಟಿಯಿಂದಲೇ ಆಗಲಿ, ಮುಸ್ಲಿಂ ಪಾರ್ಟಿಯಿಂದಲೇ ಆಗಲಿ, ದೇಶಕ್ಕೆ ಆದ ಲಾಭವೇನು. ದೇಶ ಹಾಗಿರಲಿ, ಬ್ರಾಹ್ಮಣೇತರರಿಗೆ ಅಂದರೆ ಬ್ರಾಹ್ಮಣೇತರ ಜನ ಸಾಮಾನ್ಯಕ್ಕೆ ಆದ ಲಾಭವೇನು? ಹಾಗೂ ಮುಸಲ್ಮಾನರಿಗಾದ ಲಾಭವೇನು? ತಮ್ಮ ಪಾರ್ಟಿಯಲ್ಲಿದ್ದ ಎಲ್ಲಿಯೋ ಕೆಲವರಿಗೆ ಸರಕಾರದಲ್ಲಿ ಅಂತಸ್ತು ಅಲ್ಪಸ್ವಲ್ಪ ಬಂತೆಂಬುದೇನೋ ನಿಜ. ಆದರೆ ತಮ್ಮ ಪೊಲಿಟಿಕಲ್ ಪಾರ್ಟಿಯ ಹಲಕೆಲವು ವ್ಯಕ್ತಿಗಳಿಗೆ ಮಾತ್ರ ಲಾಭವಾಯಿತೇ ಹೊರತು ತಮ್ಮ ಮತದ ಜನರಿಗೆ ಏನಾದರೂ ಲಾಭವಾಯಿತೇ? ತಮ್ಮ ಜನರಾದ ರೈತರಿಗೂ ಉದ್ಯಮಿಗಳಿಗೂ ವ್ಯಾಪಾರಸ್ಥರಿಗೂ ಈ ಪಾರ್ಟಿಗಳಿಂದ ನಷ್ಟವಾಗಿದೆಯೇ ಹೊರತು ಲಾಭವಾದುದಾಗಲೀ, ಲಾಭವಾಗುವುದೇ ಆಗಲಿ ತೋರುವುದಿಲ್ಲ. ಒಟಾವ್, ಜಾಪಾನಿನ ಒಪ್ಪಂದಗಳು ದಿನೇ ದಿನೇ ಹೆಚ್ಚುತ್ತಿರುವ ತೆರಿಗೆಗಳು ಎಲ್ಲರಿಗೂ ಗೊತ್ತೇಯಲ್ಲವೆ? ದೇಶದ ಹಿತವು ಈ ರೈತ ಇತ್ಯಾದಿಗಳ ಉದ್ಯೋಗವನ್ನು ಉದ್ಧರಿಸುವುದರಲ್ಲಿದೆಯೇ ಹೊರತು, ಮುಂದಾಳುಗಳಿಗೆ ದೊಡ್ಡ ದೊಡ್ಡ ಉದ್ಯೋಗಗಳನ್ನು ಸರಕಾರವು ಮೀಸಲಿಟ್ಟು ಕೊಡುವುದರಲ್ಲಿಲ್ಲ. ಈ ಮತಾಭಿಮಾನಗಳಿಂದಾಗುವ ಪಾರ್ಟಿ, ಸಂಘಗಳಿಂದ ದೇಶಕ್ಕೆ ಆಗುತ್ತ ಬಂದ ಹಾನಿಗೂ, ಅವುಗಳ ಇತಿಹಾಸವೇ ಸಾಕ್ಷಿಯಾಗಿರುವಾಗ, ಯುಕ್ತಿಗಳಿಂದ ಮತ್ತೆ ಸಾಧಿಸುವ ಆವಶ್ಯಕತೆಯೇನು?

ಹಲವು ಮಕ್ಕಳ ತಾಯಿ

ಲಾಭದ ಆಭಾರವನ್ನು ನೋಡಿದ್ದಾಯಿತು. ಆದರೆ ಇಂಥಾ ಹಾದಿಗಳನ್ನು ನಡೆಯುವುದರಿಂದ ಅಷ್ಟೇ ಅಲ್ಲ ಆಗುವುದು; ಕಣ್ಣಿಗೆ ಕಾಣುವಂತೆ ಎಷ್ಟೋ ಹಾನಿಯಾಗುತ್ತಿದೆ. ವಿವಿಧ ಸಂಘದವರ ಮತದಲ್ಲಿಯೇ ಆಗಲಿ, ಗಮ್ಯದಲ್ಲಿಯೇ ಆಗಲಿ, ಯಾವ ವಿಧವಾದ ಏಕೀಕರಣದ ಶ್ವಾಸವೇ ಇಲ್ಲದಿರೋಣವರಿಂದ ಇವುಗಳಿಂದ ನಡೆಯುವ ಕೆಲಸಗಳೆಂದರೆ,-ಹೊಟ್ಟೆಕಿಚ್ಚು ಪ್ರಾಟಾಪೋಟಿ, ದ್ವೇಷ, ಅಸೂಯೆ-ಮುಂತಾದ ಸಂಘ ನಾಶಕಮತ್ತಿಗಳೇ. ಇವರ ಮತಗಳ ಉಪದೇಶಗಳನ್ನು ನೋಡಿದರೆ ಅನೇಕ ಕಡೆ ಒಬ್ಬರಿಗೆ ವಿಧಿಯಾಗಿರುವುದು ಇನ್ನೊಬ್ಬರಿಗೆ ನಿಷಿದ್ಧ; ಒಬ್ಬರಿಗೆ ಪುಣ್ಯವಾಗಿರುವುದು ಇನ್ನೊಬ್ಬರಿಗೆ ಪಾಪ; ಒಬ್ಬರು ಒಂದು ವಸ್ತುವನ್ನು ಪೂಜಿಸಿದರೆ, ಇನ್ನೊಬ್ಬರದನ್ನು ಕೊಂದೋ-ತಿಂದೋ, ತುಳಿದೋ ಹಾಕಿಬಿಡುತ್ತಾರೆ. ಈ ವಿವಿಧ ಸಂಘಗಳ ಜನ್ಮ ಸ್ಫೂರ್ತಿಗಳಲ್ಲಿಯೇ ಇಂತಹ ವಿರೋಧ! ಗಮ್ಯದಲ್ಲಿಯಾದರೂ, ಒಂದಾಗಿಸುವ-ಒಂದಾಗುವ ಶಕ್ತಿ ಇಲ್ಲವಾದರೆ, ಇಂತಹ ಸಂತಾನವನ್ನಿಟ್ಟುಕೊಂಡ ದೇಶವನ್ನು ಕುರಿತು, 'ಹಲವು ಮಕ್ಕಳ ತಾಯಿ ಹಾದಿಯಲ್ಲಿ ಬಿದ್ದು ಸತ್ತಳು,-ಎಂದು ಹೇಳಬಹುದಲ್ಲವೆ? ಪ್ರತಿ ವರ್ಷವೂ ಅಲ್ಲಲ್ಲಿ ಉಂಟಾಗುವ ಹಿಂದೂ ಮುಸಲ್ಮಾನರ ಮಾರಾಮಾರಿಯಲ್ಲಿಯೇ ಬೇಕಾದಷ್ಟು ಸಾಕ್ಷ್ಯವಿಲ್ಲವೆ? ಅಷ್ಟೇಕೆ-ವೈದಿಕ ಧರ್ಮದ ತಿರುಳಾದ ನಿಷ್ಕಾಮ ಕರ್ಮದ ಮೂರ್ತಿಯೇ ಆಗಿರುವ ಮಹಾತ್ಮಾ ಗಾಂಧಿಯವರ ಮೇಲೆಯೇ ಎರಡು ಮೂರು ವರ್ಷಗಳ ಹಿಂದೆ ಬಲ್ಮಾರದಲ್ಲಿ ಸನಾತನಿಗಳ ಪ್ರಹಾರವಾಗಲಿಲ್ಲವೆ? ವಿವೇಕವಿಲ್ಲದೆ ಭೇದ ಬುದ್ಧಿಯನ್ನು ಮುಖ್ಯವಾಗಿಟ್ಟುಕೊಂಡ ಸಕಲ ವೃತ್ತಿ, ಸಂಘಗಳಲ್ಲಿಯೂ ಹುಟ್ಟಲೇಬೇಕಾದ ಮರಭಿಮಾನದಿಂದ ತಪ್ಪದೆ ನಡೆಯಬೇಕಾದ ಅತ್ಯಾಚಾರದ ನಮೂನೆಯೇ ಈ ಪೊನ್ನೆಯ ಪ್ರಹಾರ! ಬೇವು ಬಿತ್ತಿ ಮಾವು ಕೊಯ್ಯಲಿಕ್ಕಾದೀತೆ?

ಯೌವನ ಎಲ್ಲಿದೆ

ಜಗತ್ತಿನ ಇತಿಹಾಸದಲ್ಲೆಲ್ಲಿಯೂ, ರೂಢಿ ಮತಧರ್ಮಗಳಿಂದ ಭೇದ ಭೇದಗಳಲ್ಲದೆ ಇನ್ನೊಂದು ಸರ್ವಜನೋಪಕಾರಕ ಪರಿಣಾಮ ಉಂಟಾದ್ದು ತೋರುವುದಿಲ್ಲ. ಇಂದೂ ಆ ಮತಧರ್ಮಗಳ ಅಂಧಶ್ರದ್ಧೆಯಿಂದ ಉಂಟಾದ ಸಂಘ ಸಂಸ್ಥೆಗಳಿಂದ ಒಳ್ಳೇ ಪರಿಣಾಮ ಎಂದೆಂದಿಗೂ ಉಂಟಾಗಲಾರದು. ಇಂಥವುಗಳಿಂದ ಯುವಕರ ಯೌವನದ ಪೋಲು ವೆಚ್ಚಗಳು ಹೆಚ್ಚಾಗುವುದೇ ಹೊರತು; ಅವರ ಶಕ್ತಿಯೇ ಆಗಲಿ, ದೇಶದ ಹಿತವೇ ಆಗಲಿ, ಎಂದಿಗೂ ಹೆಚ್ಚಾಗುವ ಸಂಭವವೇ ಇಲ್ಲ. ಜಾತಿ ಮತಗಳ ಅಭಿಮಾನದಿಂದ ತಮಗಾಗಿಯೇ ಬೇರೆಯಾಗಿ ಮೀಸಲಿಟ್ಟ ಸಂಘ ಸಂಸ್ಥೆಗಳು ಯುವಕರ ಅವಿಚಾರದ ಕುರುಹುಗಳು;- ಅವರ ಹುರುಪಿಗೆ ಹತ್ತಿದ ಹುಳುಕುಗಳು. ಕೊಳೆತು ಕೊಳೆಸುವ ಹಳೆಯ ಹಾದಿಗೆ ಅದು ಹಳೆಯದೆಂಬುದಕ್ಕಾಗಿ ತೋರಣ ಕಟ್ಟಿ ಅದನ್ನೇ ತುಳಿಯುವುದು ಯೌವನದ ಶಕ್ತಿಯ ಲಕ್ಷಣವಲ್ಲ; ಅದರ ಹ್ರಾಸದ ಅಖಂಡನೀಯ ಪ್ರಮಾಣ. ಕೊಳೆತು ಕೊಳೆಸುವ ಸಕಲ ರೀತಿ-ನೀತಿಗಳನ್ನೂ ಹೊತುಬಿಡುವ ಧೈರ್ಯ ಸಾಹಸಗಳಿದ್ದಲ್ಲಿ ಮಾತ್ರ ನಿಜ ಯೌವನವೂ, ಇದಯೆನ್ನಬೇಕು. ಯೌವನವೂ ಮೈಗಳಲ್ಲಿಲ್ಲ; ಎದೆ-ಕೈಗಳಲ್ಲಿದೆ.

ಭೇದಕ್ಕೆ ಗುರಿ

ಯುವಕರು ಸಾರ್ವಜನಿಕ ಕೆಲಸಗಳನ್ನು ಮಾಡಬೇಕು. ಅದಕ್ಕಾಗಿ ಜಾತಿ, ಕುಲ, ಮನೆ, ಒಕ್ಕಲು, ಮತಧರ್ಮ ಇವುಗಳ ಉದ್ಧಾರದ ಮುಸುಕಿನಲ್ಲಿ ಮೆರೆಯುವ ಭೇಧಗಳಿಗೆ ಗೋರಿ ಕಟ್ಟಿ "ಜಗದ್ಧಿತಾಯ ಆತ್ಮನೇ ಮೋಕ್ಷಾಯ" ಎಂಬ ಮೃತ್ಯುಲೇಖವನ್ನು ಅದಕ್ಕೆ ಬರೆದು ಹಚ್ಚಿ, ಇಂದು ಮುಂದಕ್ಕೆ ಕಣ್ಣಿಟ್ಟು ವಿವೇಕದ ಹೊಸ ಹಾದಿಯನ್ನು ತುಳಿಯುವುದೇ ಅವರ ಮೊದಲ ಕರ್ತವ್ಯ,-ಎಂದು ಒಳಗಿಂದೊಳಗೆ ಬುದ್ಧಿಯೇ ಸ್ಪಷ್ಟವಾಗಿ ಗೊಣಗುಟ್ಟುವುದಿಲ್ಲವೆ?

JUST RECEIVED

Look sharp! Hurry up!!

Provincial Autonomy

(BY K. T. SHAH)

Price Re. 1—8—0

(*Postage extra*)

Book your order for a copy today only.

NAVAYUGA OFFICE
UDIPI

ಮುಸ್ಲಿಮ್ ಯುವಕರು ಸ್ವಾತಂತ್ರ್ಯ ಸಮರದಲ್ಲಿ ಹಿಂದುಳಿಯುವರೇ?

ಕೆ. ಹೈದರ್ ಮಂಗಳೂರು.

ಇಂದು ರಾಷ್ಟ್ರೀಯತೆಯ ಪ್ರವಾಹವು ಭೋರ್ಗರೆಯುತ್ತ ಹರಿಯುತ್ತಿದೆ. ಜಾತೀಯತೆಯ ಕಟ್ಟೆತಡೆಗಳನ್ನು ಕೊಚ್ಚಿಕೊಂಡು ಮುಂದುವರಿಯುತ್ತಿದೆ. ರಾಷ್ಟ್ರೀಯತೆಯು ಯುವಕರ ಧಮನಿಗಳಲ್ಲಿ ಸೇರಿ ನವಸ್ಫೂರ್ತಿಯನ್ನುಂಟುಮಾಡಿದೆ. ಎಲ್ಲೆಲ್ಲಿಯೂ ಅದು ವ್ಯಾಪಿಸ ಹತ್ತಿದೆ. ಈ ಒಡ್ಡನ್ನು ತಡೆಗಟ್ಟಲು ಯಾರಿಂದಲೂ, ಎಂತಹ ಅಡೆ ಕಟ್ಟುಗಳಿಂದಲೂ ಸಾಧ್ಯವಿಲ್ಲ. ಮುಸ್ಲಿಮ್ ಯುವಕರನ್ನು ಕೂಡಾ ಈ ಸರ್ವವ್ಯಾಪಿ ಪ್ರವಾಹವು ತನ್ನೊಂದಿಗೆ ಸೆಳೆದೊಯ್ಯದಿರಲಾರದು.

ವೀರರಾಗಿರುವವರು ತಮ್ಮ ಮಾತೃಭೂಮಿಯ ಸ್ವಾತಂತ್ರ್ಯ ಸಮರದಲ್ಲಿ ಹಿಂದುಳಿಯಲಾರರು. ದೇಶದ ಇಂದಿನ ಪರಿಸ್ಥಿತಿಯ ಕುರಿತು ಪ್ರತಿಯೊಬ್ಬ ಭಾರತೀಯನು ಯೋಚಿಸಬೇಕಾದುದು ಅತ್ಯಂತ ಪ್ರಾಮುಖ್ಯವಾಗಿದೆ. ಭಾರತದ ಆರ್ಥಿಕ ಸ್ಥಿತಿಯು ಎಷ್ಟೊಂದು ಕಠಿಣಾವಸ್ಥೆಗೆ ಬಂದಿಳಿದಿದೆ, ಜನತೆಯಲ್ಲಿ ದಾರಿದ್ರ್ಯವು ಎಷ್ಟರ ತನಕ ಹಬ್ಬಿದೆಯೆಂಬುದು ಇಂದಿನ ರಾಜಕೀಯ ಅಶಾಂತಿಯಿಂದಲೇ ವಿಶದವಾಗುವುದು. ಈ ಆರ್ಥಿಕ ದುಃಸ್ಥಿತಿಯು ಆದೊಂದು ಪ್ರತ್ಯೇಕ ವರ್ಗ ಅಥವಾ ಪಂಗಡದವರಿಗೆ ಮಾತ್ರ ಸಂಬಧಿಸಿರುವುದಿಲ್ಲ; ಅದು ಸಮಗ್ರ ಜನತೆಯಲ್ಲಿ ಪಸರಿದೆ. ಹಿಂದುಸ್ಥಾನದವರಾದ ನಾವು ಬ್ರಿಟಿಷರಾಳ್ವಿಕೆಯಿಂದಾಗಿ ನಿಶ್ಯಕ್ತರಾಗಿರುವುದಲ್ಲದೆ, ದಾಸ್ಯ ಮನೋವೃತ್ತಿಯು ನಮ್ಮಲ್ಲಿ ಎಷ್ಟರತನಕ ಬಳಕೆಗೆ ಬಂದಿದೆಯೆಂಬುದನ್ನು ಈಗಿನ ನಮ್ಮ ಪರಿಸ್ಥಿತಿಯೇ ಎತ್ತಿ ತೋರಿಸುತ್ತದೆ. ವಸ್ತುಸ್ಥಿತಿಯು ಹೀಗಿರುವಾಗ ನಾವು ಸಂಘಟಿತರಾಗಿ ನಮ್ಮ ದುರವಸ್ಥೆಯನ್ನು ಹೋಗಲಾಡಿಸಲು ಪ್ರಯತ್ನಿಸಬೇಕೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ಇಂದು ಆಳರಸರೆದುರು ನಿಂತು, ಭಾರತೀಯ ಜನತೆಯ ಸರ್ವತೋಮುಖಹಿತಕ್ಕಾಗಿ ಹೋರಾಡುವ ಪ್ರಾಮುಖ್ಯ ಸಂಸ್ಥೆಯು ಭಾರತ ರಾಷ್ಟ್ರಸಭೆಯೆಂದು ಸರ್ವವಿದಿತವಾಗಿದೆ. ಕಾಂಗ್ರೆಸ್ ನಮ್ಮ ದೇಶದ ಎಲ್ಲಾ ಧರ್ಮಗಳ, ಜಾತಿ ಮತಗಳ ಪ್ರತಿನಿಧಿ ಸಂಸ್ಥೆಯೆಂಬುದು ಅದರ ಕಾರ್ಯಕಲಾಪಗಳಿಂದ ಅಂತೂ ಧ್ಯೇಯದಿಂದ ವ್ಯಕ್ತವಾಗುತ್ತದೆ. ಬಲಾಢ್ಯ ಸರಕಾರದೆದುರು ನಿಂತು ಸ್ವಾತಂತ್ರ್ಯ ಸಮರವನ್ನು ನಿಶ್ಶಸ್ತ್ರರಾದ ನಾವು ನಡೆಸಬೇಕಾದರೆ ಎಲ್ಲ ಧರ್ಮೀಯರ ಸಂಘಟಿತ ಯತ್ನವು ಅವಶ್ಯವೆಂಬುದು ಸ್ವಯಂ ವ್ಯಕ್ತ. ಹೀಗಿರುವಾಗ ಸಾಮ್ರಾಜ್ಯಶಾಹೀ ಶಕ್ತಿಯನ್ನೆದುರಿಸುವ, ರಾಷ್ಟ್ರದ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸಿಗೆ ಪ್ರತಿಯೊಬ್ಬನೂ ಸೇರಿ, ಅದರ ಬಲವನ್ನು ಹೆಚ್ಚಿಸಿ ಆ ಮೂಲಕ ನಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.

ಕಾಂಗ್ರೆಸು ಮತ್ತು ಮುಸಲ್ಮಾನರು

ಮುಸಲ್ಮಾನ ಜನತೆಯೊಡನೆ ಕಾಂಗ್ರೆಸಿಗೆ ಇಷ್ಟರ ತನಕ ಹೆಚ್ಚಿನ ಸಂಬಂಧವಿಲ್ಲದಿದ್ದುದು ಶೋಚನೀಯ ಸಂಗತಿ. ಇದಕ್ಕೆ ಮುಸಲ್ಮಾನ ಮುಂದಾಳುಗಳೇ ಕಾರಣವೆಂದರೆ ಅತಿಶಯೋಕ್ತಿಯಾಗಲಾರದು. ಮುಂದಾಳುಗಳೆನಿಸಿಕೊಳ್ಳುವವರು ತಮ್ಮ ಉನ್ನತ ಸ್ಥಿತಿಯಿಂದ ಕೆಳಗಿಳಿಯಬಿಚ್ಛಿಸದೆ ಜನತೆಯನ್ನು ಅಲಕ್ಷ್ಯಮಾಡಿದುದೇ ಇದಕ್ಕೆ ಮೂಲಕಾರಣವಾಗಿದೆ. ಮುಸಲ್ಮಾನ ಜನತೆಯೊಡನೆ ಸಂಬಂಧವನ್ನು ಬೆಳೆಸಿಕೊಳ್ಳಲು ಕಾಂಗ್ರೆಸಿಗೆ ಈ ಮೊದಲೇ ಸಾಧ್ಯವಿತ್ತು. ಆದರೆ ಮುಂದಾಳು ತನದ ಸೋಗನ್ನು ಧರಿಸಿಕೊಂಡವರೊಡನೆ ಮಾತ್ರ ಕಾಂಗ್ರೆಸ್ ಮುಖಂಡರು ಐಕ್ಯ ಸಂಪಾದನೆಗೆ ಪ್ರಯತ್ನಮಾಡದೆ ನೇರವಾಗಿ ಜನತೆಯನ್ನೇ ಸೇರಲು ಯತ್ನಿಸುತ್ತಿದ್ದರೆ ಇಷ್ಟರ ವರೆಗೆ "ಮುಸಲ್ಮಾನ ಸಂಬಂಧ"ವೆಂಬ ಈ ಪ್ರಶ್ನೆಯೇ ಇರುತ್ತಿದ್ದಿಲ್ಲ. ಆದರೆ ಈಗಲಾದರೂ ಈ ವಿಚಾರವು ಕಾಂಗ್ರೆಸ್ ಮುಂದಾಳುಗಳಿಗೆ ಹೊಳೆದುದು ಅತ್ಯಂತ ಸಂತೋಷವೇ ಸರಿ. ಮುಸಲ್ಮಾನ ಜನತೆಯೊಡನೆ ಸಂಬಂಧವನ್ನು ಬೆಳೆಸುವುದಕ್ಕಾಗಿ ಅಖಿಲಭಾರತ ರಾಷ್ಟ್ರಸಭೆಯಲ್ಲಿ ಒಂದು ಪ್ರತ್ಯೇಕ ಇಲಾಖೆಯೇ ತೆರೆಯಲ್ಪಟ್ಟಿರುವುದಲ್ಲದೆ ಪ್ರತಿಯೊಂದು ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಕೂಡಾ ಈ ಬಗ್ಗೆ ಒಂದೊಂದು ಉಪಸಮಿತಿಯು ನೇಮಿಸಲ್ಪಟ್ಟಿದೆ.

ಕಾಂಗ್ರೆಸ್ 'ಹಿಂದೂ ಸಂಸ್ಥೆ'ಯಲ್ಲ

ಕಾಂಗ್ರೆಸ್ ಹಿಂದೂ ಸಂಸ್ಥೆಯೆಂಬ ತಪ್ಪು ಅಭಿಪ್ರಾಯವು ಕೆಲವು ಮುಸ್ಲಿಮರಲ್ಲಿರುವುದು ಅತ್ಯಂತ ವಿಷಾದಕರ ವಿಚಾರವಾಗಿದೆ. ಕಾಂಗ್ರೆಸ್ ಹಿಂದುಗಳ ಸಂಸ್ಥೆಯಲ್ಲ; ಅದು ಭಾರತೀಯರ ಸಂಸ್ಥೆ. ಅದರಲ್ಲಿ ಹಿಂದುಗಳಿಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ಮುಸಲ್ಮಾನರಿಗೆ, ಕ್ರೈಸ್ತರಿಗೆ ಮತ್ತು ಭಾರತದ ಇನ್ನಿತರ ಎಲ್ಲಾ ಧರ್ಮೀಯರಿಗೂ ಇದೆ. ಇದಕ್ಕೆ ಕಾಂಗ್ರೆಸ್ಸಿನಲ್ಲಿರುವ ವಿವಿಧ ಧರ್ಮಾನುಯಾಯಿಗಳೇ ನಿದರ್ಶಕರಾಗಿದ್ದಾರೆ. ರಾಷ್ಟ್ರೀಯ ಸಂಸ್ಥೆಗೆ ಜಾತೀಯತೆಯ ಭೂತದೊಡನೆ ಸಂಬಂಧ ಹಚ್ಚಲು ಯತ್ನಿಸುವುದು ಭಾರತೀಯರ ವೈರಿಗಳೊಡನೆ ಮೈತ್ರಿಯನ್ನು ಬೆಳೆಸಿದ ಹೀನ ಮನೋವೃತ್ತಿಯವರಿಗೆ ಮಾತ್ರ ಸಲ್ಲುವುದು. ಯಾವುದಾದರೂ ಒಂದು ಧರ್ಮಕ್ಕನುಸಾರವಾಗಿ ನಡೆಯುವ ಸ್ವಾತಂತ್ರ್ಯವು ಆಯಾಯ ವ್ಯಕ್ತಿಯ ಮೇಲೆ ಹೊಂದಿಕೊಂಡಿದೆ. ಕಾಂಗ್ರೆಸಿಗೆ ಸೇರುವ ಯಾವ ವ್ಯಕ್ತಿಯೂ ತಾನು (ಸೇರುವ) ಅನುಸರಿಸುವ ಧರ್ಮಕ್ಕೆ ಧಕ್ಕೆ ಬರಬಹುದೆಂದು ಹೆದರುವುದು ನಿಷ್ಪ್ರಯೋಜನ. ಇದು ಕರಾಚಿ ಕಾಂಗ್ರೆಸಿನಲ್ಲಿ ಮಂಜೂರಾದ ಮೂಲಭೂತ ಹಕ್ಕುಗಳ ಠರಾವಿನಿಂದಲೇ ವ್ಯಕ್ತವಾಗುತ್ತದೆ. (1 Every Citizen shall enjoy freedom of conscience and the right freely to profess and practice his religion, subject to public order and morality) ಹೀಗಿರುವಾಗ ಜಾತೀಯತೆಯ ಪ್ರೇತದಿಂದ ಪೀಡಿತರಾದವರ ಬೋಧನೆಗೆ ಮುಸಲ್ಮಾನ ಜನತೆಯು ಬಲಿಬೀಳದೆ ಕಾಂಗ್ರೆಸ್ ಎಲ್ಲಾ ಭಾರತೀಯರ ಸಂಸ್ಥೆಯೆಂಬ ವಿಶ್ವಾಸದಿಂದ ಆ ಮಹಾಸಂಸ್ಥೆಗೆ ಸೇರಿ, ನಮ್ಮ ದಾಸ್ಯವೃಂಖಲೆ ಅಂತು ಆರ್ಥಿಕ ಸಮಸ್ಯೆಯನ್ನು ಬಿಡಿಸುವುದು ಪ್ರಾಮುಖ್ಯ ಕರ್ತವ್ಯವಾಗಿದೆ.

ಕಾಂಗ್ರೆಸಿಗೇಕೆ ಸೇರಬೇಕು?

ನಮ್ಮ ಈಗಿನ ದಾರಿದ್ರ್ಯ ಮತ್ತು ದಾಸ್ಯವನ್ನು ನಿವಾರಿಸಿ, ಸ್ವಾತಂತ್ರ್ಯರಾಗಿ ಜೀವಿಸುವಂತೆ ಮಾಡಲು ಹೋರಾಡುತ್ತಿರುವ ಯಾವ ಸಂಸ್ಥೆಯಿದೆಯೋ ಅದಕ್ಕೆ ಸೇರುವುದೇಕೆಂದು ಕೇಳಬೇಕಾಗಿಲ್ಲ. ಇವತ್ತು ನಮಗೆ ನಮ್ಮ ಅಭಿಪ್ರಾಯವನ್ನು ಸ್ವತಂತ್ರವಾಗಿ ಮಾತಿನ ಅಥವಾ ಬರಹದ ಮೂಲಕ ವಿವರಿಸಲು ಸ್ವಾತಂತ್ರ್ಯವಿಲ್ಲ; ಸ್ವತಂತ್ರರಾಗಿ ಸಭೆಗೂಡಲು ನಮಗೆ ಎಡೆಯಿಲ್ಲ, ನಮಗೆ ಬೇಕಾದಂತೆ (ಜನತೆಗೆ ವಿರೋಧವಾಗದ ರೀತಿಯಲ್ಲಿ) ವರ್ತಿಸಲು ಸಾಧ್ಯವಿಲ್ಲ. ನಮಗೆ ಬೇಕಾದ ಕಾನೂನುಗಳನ್ನು ಮಾಡಲು, ನೌಕರರನ್ನು ನೇಮಿಸಲು ನಮಗಿಂದು ಶಕ್ಯವಿಲ್ಲ. ಪರಕೀಯರು ಮಾಡಿದ ಕಾನೂನುಗಳಿಗೆ, ಅವರು ನೇಮಿಸಿದ ನೌಕರರಿಗೆ ನಾವಿಂದು ತಲೆಬಾಗಿಸಬೇಕಾಗಿದೆ. ನಮ್ಮ ಜನರಿಗೆ ಸಾಕಷ್ಟು ವಿದ್ಯೆಯಿಲ್ಲ. ನಿರುದ್ಯೋಗಿಗಳನ್ನು ಕೇಳುವವರಿಲ್ಲ. ಕೂಲಿಗಾರರ ಸಂಕಷ್ಟಗಳನ್ನು ಲಕ್ಷಿಸುವವರಿಲ್ಲ, ರಾಜರ ಗಳ ದಬ್ಬಾಳಿಕೆಯನ್ನು ನಿವಾರಿಸುವವರಿಲ್ಲ. ರೈತರ ಸಾಲದ ಹೊರೆಯನ್ನು ಹೋಗಲಾಡಿಸುವವರಿಲ್ಲ. ನಮ್ಮ ಕೈಗಾರಿಕೆಗಳು ಮೂಲೆಪಾಲಾಗಿವೆ. ಪರದೇಶೀಯರ ಸಾಮಾನುಗಳು ನಮ್ಮ ದೇಶದಲ್ಲಿ ತುಂಬಲ್ಪಟ್ಟಿವೆ. ಬಡವರಿಂದ ಶೇಖರಿಸಿದ ತೆರಿಗೆಯ ಹಣವು ಲಕ್ಷ್ಯವಿಲ್ಲದೆ ಸೈನ್ಯಕ್ಕಾಗಿ ಕೋಟಿ ಕೋಟಿ ವೆಚ್ಚವಾಗುತ್ತಿದೆ; ಪರದೇಶಕ್ಕೆ ಹರಿಯುತ್ತಿದೆ! ಇದನ್ನು ಕೇಳುವವರಾರು? ನಾವು ಒಬ್ಬೊಬ್ಬರೇ ಆದರೆ ನಮ್ಮ ಕೂಗು ಯಾರಿಗೂ ಕೇಳಿಸದು. ಆದರೆ ನಮ್ಮ ಸಂಘಟಿತ ಸ್ವರವು ಕೇಳಿಸಲೇ ಬೇಕು. ಅದು ಕೇಳಿಯೇ ಕೇಳುವುದು! ಆಳರಸರ ಕಿವಿಗಳನ್ನು ಮುಚ್ಚಿಸಲಿರುವುದನ್ನು, ನಮ್ಮ ಉನ್ನತಿಯಾಗಬೇಕೇ? ನಾವು ದುಡಿಯಬೇಕು. ಬೇಕಾದರೆ ಮಡಿಯಬೇಕು. ಅದಕ್ಕಾಗಿಯೇ, ಆ ಉದ್ದೇಶಗಳನ್ನು ಸಂಪಾದಿಸುವುದಕ್ಕಾಗಿ ಕಾಂಗ್ರೆಸ್ಸಿಗೆ ಸೇರುವುದು. ಕಾಂಗ್ರೆಸು ಅದಕ್ಕಾಗಿಯೇ ಹೋರಾಡುತ್ತಿರುವುದು. ಈ ಸ್ವಾತಂತ್ರ್ಯ ಸಮರದಲ್ಲಿ ಹಿಂದು-ಮುಸಲ್ಮಾನರ, ಕ್ರಿಸ್ತಪಾರಸೀಕರ ಪ್ರಶ್ನೆಯಿಲ್ಲ. ಭಾರತೀಯರೆಂಬ ಸಂಘಟಿತ ವಿಚಾರಮಾತ್ರ.

ಕಾಂಗ್ರೆಸಿನ ಮುಸ್ಲಿಮ್ ಸಾಮೂಹಿಕ ಸಂಬಂಧದ ನಿರ್ಣಯವನ್ನು ಕೇಳಿ ಮುಂದಾಳು ತನಕ್ಕೆ ಮುಷ್ಟಿ ಬೀಳುವುದೆಂದು ಭಾವಿಸಿ ಮಿ. ಮಹಮ್ಮದಾಲಿ ಜಿನ್ನಾ ಸಾಹೇಬರವರು ತಮ್ಮ ವಾಗ್ಯುದ್ಧವನ್ನು ಪ್ರಾರಂಭಿಸಿ, ತನ್ನದೇ ಆದ ಸರ್ವಾಧಿಕಾರತ್ವದ ಪ್ರತಿಬಿಂಬವನ್ನು, ಕಾಂಗ್ರೆಸಿನ ಅಧ್ಯಕ್ಷರೆಂಬ ಕನ್ನಡಿಯಲ್ಲಿ ಕಂಡು ವಿಮರ್ಶಾತ್ಮಕ ವಾಗ್ಯುದ್ಧಕ್ಕೆ ಹೊರಟಿರುವರು. ಜಿನ್ನಾ ಸಾಹೇಬರು ಶಕ್ತರು. ರಾಜಕೀಯ ಪಟುಗಳು, ಮುಸ್ಲಿಮರ ಮುಂದಾಳುಗಳು. ಆದರೆ ಮುಸ್ಲಿಮ್ ಜನತೆಯ ಬಳಿ ಮಾತ್ರ ಅವರ ಮುಂದಾಳುತನವು ಸಾಗಲಿಲ್ಲ. ಕಾಂಗ್ರೆಸ್ ಅಧಿಕಾರವನ್ನು ಕೈಕೊಂಡಿರುವಾಗ ಅವರು ಸಿಟ್ಟು ತಾಳಿದ್ದಾರೆ. ಕಳೆದ ಏಪ್ರಿಲ್ 1ನೆಯ ತಾರೀಕಿನಿಂದ ಜ್ಯಾರಿಗೆ ಬಂದ ಹೇಯವಾದ 1935ರ ಇಂಡಿಯಾ ಆಕ್ಟಿನಲ್ಲಿ ಭಾರತೀಯರಿಗೆ ಸಮ್ಮತಿಯಿಲ್ಲವೆಂದು ಸೂಚಿಸಲು ಸಮಗ್ರ ಭಾರತದಲ್ಲಿ ಹರತಾಳ ಆಚರಿಸಬೇಕೆಂಬ ಕಾಂಗ್ರೆಸಿನ ನಿರ್ಣಯವನ್ನು ಮುಸಲ್ಮಾನರು ಕಾರ್ಯರೂಪಕ್ಕೆ ತರಬಾರದೆಂದು ಜಿನ್ನಾ ಸಾಹೇಬರು ಆಜ್ಞೆಯಿತ್ತರು. ಇದರಿಂದಾಗಿ ಅವರಲ್ಲಿ ರಾಷ್ಟ್ರೀಯ ಭಾವನೆಯುಳ್ಳ ಮುಸಲ್ಮಾನರಿಗಿದ್ದ ಮನ್ನಣೆಯ ಒಂದಂಶವನ್ನು ಕಳೆದುಕೊಂಡರು. ಜಿನ್ನಾ ಸಾಹೇಬರು ಕಾಂಗ್ರೆಸಿಗೆ ಸೇರಬಾರದೆಂಬ ತಮ್ಮ ಹಾಡನ್ನು ಮುಂದರಿಸುತ್ತಿದ್ದಾರೆ. ಆದರೆ ರಾಷ್ಟ್ರೀಯತೆಯ ಪ್ರಕಾಶದೆದುರು, ರಾಜಕೀಯ ಆಶಾಂತಿಯೆದುರು ಅವರ ಯತ್ನದ ಕಿರಣವು ಅಡಗಿ ಹೋಗಿದೆ? ಮೊನ್ನೆ ಮೊನ್ನೆ ಮಿ। ಜಿನ್ನಾರವರು ತಾನು ಗವರ್ನಮೆಂಟಿನ ಬಾಗಿಲ ಬಳಿ ಸಾರದಿರುವುದು ಬಹಳ ಸಂತೋಷ. ಆದರೆ ಆನಂದಭವನದೆದುರು ಇವರಿಗೆ ತಲೆ ತಗ್ಗಿಸಲು ಹೇಳುವವರಾರು? ಕಾಂಗ್ರೆಸ್ ಕಛೇರಿಯ ಬಾಗಿಲು ತೆರೆದೇ ಇದೆ. ತಲೆಯೆತ್ತಿ, ಎದೆಯೊಡ್ಡಿ, ಧೀರತೆಯಿಂದ ಆನಂದಭವನಕ್ಕೆ ಜಿನ್ನಾ ಸಾಹೇಬರವರು ಹೋಗಬಹುದು. ಸಮಾನತೆಯ ಸ್ಥಾನವನ್ನೇರಬಹುದು. ಆದರೆ ಎರಡೂ ಕಡೆಗೆ ಜಿನ್ನಾರವರು ಹೋಗದೆ ಮಧ್ಯದಲ್ಲಿಯೇ ಇರುವುದರಿಂದ ಆ ವಿಧಾನವು ಗವರ್ನಮೆಂಟಿಗೆ ಸಹಾಯವಾದಿದಂತಾಗುವುದಿಲ್ಲವೇ, ಸಂಘಟಿತ ಯತ್ನಕ್ಕೆ ಭಂಗ ಬಂದಂತಾಗುವುದಿಲ್ಲವೇ? ಮುಸಲ್ಮಾನ ಬಾಂಧವರು ಸಂಪೂರ್ಣವಾಗಿ ಕಾಂಗ್ರೆಸಿಗೆ ಸೇರಿದರೆ ಮಿ। ಜಿನ್ನಾ ಸಾಹೇಬರನ್ನು ಕಾಂಗ್ರೆಸಿಗೆ ಬರುವಂತೆ ಮಾತ್ರವಲ್ಲದೆ ಅವರ ಸೇವೆಯು ಜನ್ಮಭೂಮಿಗೆ ತುಂಬಾ ಸಲ್ಲುವಂತೆ ಮಾಡಿದಂತಾಗುತ್ತದೆ.

ಮುಸಲ್ಮಾನರಲ್ಲಿ ಬಿನ್ನಹ

ಕಾಂಗ್ರೆಸ್ ನಮ್ಮೆಲ್ಲರ ಸಂಸ್ಥೆಯೆಂದು ನಾವು ನಂಬಿ, ನಮ್ಮ ಕಠಿಣ ಸ್ಥಿತಿಯ, ಹೇಯಾವಸ್ಥೆಯ ನಿವಾರಣೆಗಾಗಿ ಹೋರಾಡುವುದು ನಮ್ಮ ಪ್ರಾಮುಖ್ಯ ಕರ್ತವ್ಯಗಳಲ್ಲೊಂದಾಗಿದೆ. ಇಂದಿನ ರಾಜಕೀಯ ಆಗುಹೋಗುಗಳಲ್ಲಿ ಮುಸ್ಲಿಮ್ ಜನತೆಯು ಕೂಡಾ ಸರಿಯಾದ ಭಾಗವನ್ನು ವಹಿಸಬೇಕಾಗಿದೆ. ಮುಸ್ಲಿಮ್ ಮುಂದಾಳುಗಳು ಮತ್ತು ಯುವಕರು ತಮ್ಮ ಕರ್ತವ್ಯವನ್ನು ಪಾಲಿಸಲು ಮರೆಯುವರೆ? ದಾಸ್ಯವೇ ನರಕ; ಸ್ವಾತಂತ್ರ್ಯವೇ ಸ್ವರ್ಗ! "ಸ್ವರ್ಗವು ಜನನಿಯ ಕಾಲ ಬಳಿಯಲ್ಲಿದೆ" ಯೆಂದು ಮಹಮ್ಮದ್ ಪೈಗಂಬರರು ಹೇಳಿರುವರಂತೆ, ಆ ಜನನಿಯ ಕೀರ್ತಿಯು ಎಲ್ಲೆಲ್ಲಿಯೂ ಬೆಳಗುವಂತಾಗಲಿ.

ಬೇಕು

ವಿದ್ಯಾವತಿಯರೂ ರೂಪವತಿಯರೂ ಚೆನ್ನಾಗಿ ಹಾಡ ಬಲ್ಲವರೂ ಆದ ನಟಿಯರು ಬೇಕಾಗಿದೆ. ವಿವರಗಳಿಗೆ ಬರೆಯಿರಿ.

'X'

C/o 'Navayuga' Udipi.

ಹೆಂಡ್ತಿ ಗಂಡನಾದರೆ?

೫ನೇ ನೋಟ

[ಅರವಿಂದನು ತನ್ನ ಮನೆಯ ಚಾವಡಿಯಲ್ಲಿ 'ನಾನೊಂದು ಮದುವೆಯ ಮಾಡಿಕೊಂಡೆ' ಎಂಬ ಪ್ಲೇಟನ್ನೇ ಇಟ್ಟು ಕೇಳುತ್ತಾ ಕೂತುಕೊಂಡಿರುವಾಗ ಮನೋಹರನು ಬಹಳ ಖಿನ್ನನಾಗಿ ಪ್ರವೇಶಿಸುವನು.]

ಅರವಿಂದ—ಗುಡ್ ಈವ್ನಿಂಗ್ ಮನೋಹರ! (ನಮಸ್ಕಾರ!ಮನೋಹರ) ಓಹೋ, ಈ ಪ್ಲೇಟೆಂದರೆ ನಿನಗಾಗುವುದಿಲ್ಲ. ಎಲ್ಲಿಯಾದರೂ ಕೋಪಬಂದು ಒಡೆದು ಹಾಕ್ಲಿಕ್ಕೂ ನೀನು ಹಿಂದೆ ಹೋಗ್ಲಿಕ್ಕಿಲ್ಲ. ನನಗೂ ಈಗೀಗ ಇದು ರುಚಿಸುವುದಿಲ್ಲ ನೋಡು. ಅದನ್ನು ಇಟ್ಟು ಇಟ್ಟಾದರೂ ಹಾಳುಮಾಡಿ ಬಿಡೋಣವೆಂದು ನಾನು ಇಡುತ್ತಿರುವುದು. ಈಗ್ಲೆ ಒಡೆದು ಹಾಕಿಬಿಡ್ಲೇ?

ಮನೋಹರ—ಬೇಡ ಬೇಡ ಅರವಿಂದ! ಅದನ್ನೇ ಒಂದು ಹತ್ತು ಸಲ ಬೇಕಾದ್ರೂ ಇಡು, ಅದರಲ್ಲಿನ್ನುವುದೆಲ್ಲಾ ಅಕ್ಷರಶಃ ನಿಜ ಅರವಿಂದ.

ಅರವಿಂದ—(ನಸುನಕ್ಕು) ಅದೇನು ಮನೋಹರ?

ಮನೋಹರ—ಆ ಪ್ಲೇಟಿನಲ್ಲಿಂದಂತೆ ನಿಜವಾಗಿಯೂ ಮದುವೆಮಾಡಿ ಕೊಳ್ಳುವುದು ಭಂಡ ಬದುಕು. ಅದರಲ್ಲೂ ಎಡ್ಯುಕೇಟೆಡ್ ಗರ್ಲ್ಸ್‌ನ್ನು (ವಿದ್ಯಾವತಿಯರನ್ನು) ಮದುವೆಮಾಡಿಕೊಳ್ಳುವುದು ಭಂಡತನದಲ್ಲಿ ಭಂಡತನ!

ಅರವಿಂದ—ಏನಾಗಿದೆ ನಿನಗೆ ಮನೋಹರ? ನಿನ್ನ ಮೊದಲಿನ ಸ್ಪಿರಿಟೆಲ್ಲಾ (ಉತ್ಸಾಹ) ಎಲ್ಲಿ ಆರಿಹೋಯಿತೀಗ?

ಮನೋಹರ—ನನ್ನ ಅದೃಷ್ಟ! ಏನು ಮಾಡುವುದು ಅರವಿಂದ? ನನಗೀಗ ಜೀವನವೇ ನಿಸ್ಸಾರವಾಗಿ ತೋರುವುದು. ಅಹ! ನಾವು ನೆನಸಿದಾಗ ಸಾಯು ವಂತಾಗಿದ್ದರೆ ಎಷ್ಟು ಚೆನ್ನಾಗಿತ್ತು!

ಅರವಿಂದ—ಮನೋಹರ, ಇಂದೇನೋ ನೀನು ನಿರುತ್ಸಾಹಿಯಾಗಿರುವಿ. ನಾನೊಂದು ಉತ್ಸಾಹಪರ ಪ್ಲೇಟನ್ನಿಡುತ್ತೇನೆ ಕೇಳು. (ಅಪ್ಪತ್ತಮ್ಮನ ಪ್ರಿಯ ಬಾ ಬಾರೋ ಎಂಬ ಪ್ಲೇಟನ್ನಿಡುವನು)

ಮನೋಹರ—ತೆಗೆ ತೆಗೆ ಆ ಪ್ಲೇಟನ್ನು ಅರವಿಂದ! ರಾಜಯ್ಯಂಗಾರರ ಮನುಜ ಶರೀರವಿದೇನು ಸುಖ ಎಂಬ ಪ್ಲೇಟಿಲ್ಲವೆ? ಅದನ್ನಿಡು ನೋಡುವ.

ಅರವಿಂದ—ನೀನು ಅಂದು ಪ್ರೊಟೆಸ್ಟ್ (ಆಕ್ಷೇಪಿಸಿದ) ಮಾಡಿದೆಯಲ್ಲಾ? ಆ ಮೇಲೆ ಸ್ವಲ್ಪ ಸಮಯದಲ್ಲೇ ಅದನ್ನು ನಾನು ಒಡೆದು ಪುಡಿಮಾಡಿ ಹಾಕಿರುವೆನು. ಈ ಲೋಕದಲ್ಲಿ ಪ್ರತಿಯೊಂದು ಪ್ರಾಣಿಯಿರುವುದು ಸುಖ ಪಡಲಿಕ್ಕಾಗಿ. ಪ್ರಾಣಿಗಳಲ್ಲೆಲ್ಲಾ ಶ್ರೇಷ್ಠ ಪ್ರಾಣಿಯಾದ ಮಾನವನೂ ಇರು ವುದು ಸುಖಸಂತೋಷಕ್ಕಾಗಿ. ಅಂದಮೇಲೆ 'ಮನುಜ ಶರೀರವಿದೇನು ಸುಖ' ಎಂದು ವೈರಾಗ್ಯದ ಪದಹಾಡುವುದರಲ್ಲಿ ಅರ್ಥವಿದೆಯೇ ಮನೋಹರ?

ಮನೋಹರ—ಸಂಪೂರ್ಣ ಅರ್ಥವಿದೆ, ಅರವಿಂದ!

ಅರವಿಂದ—ಯಾವಾಗಿಂದ ಇದು?

ಮನೋಹರ—ಈ ಜೀವನವೇ ನನಗೆ ಭಾರವಾಗಿದೆ. ಒಂದೋ ನಾನೀ ಜೀವನವನ್ನು ಹೇಗಾದರೂ ಕೊನೆಗೊಳಿಸುವೆನು. ಇಲ್ಲವಾದರೆ ಆ ಮನೋ ರಮೆಯನ್ನು ಕೊಂದು ಸೇಡು ತೀರಿಸುವೆನು.

ಅರವಿಂದ—ಏನು ಸೇಡು ತೀರಿಸುವುದು ಮನೋಹರ? ಏನೆಲ್ಲಾ ಮಾತಾಡುತ್ತಿರುವೆ ನೀನು?

ಮನೋಹರ—ನನ್ನ ಗಂಡಸುತನವನ್ನೊಮ್ಮೆ ಅವಳಿಗೆ ತೋರಿಸಿಯೇ ಸಿದ್ಧ! ಅದರಿಂದ ನನಗೆ ಫಾಶಿಯಾದರೂ ಚಿಂತೆಯಿಲ್ಲ. ಇಲ್ಲ, ಇಲ್ಲ ಅರವಿಂದ! ನಾನೀ ಅಪಮಾನವನ್ನು ತಾಳಿಕೊಂಡು ಬಾಳಿಟ್ಟುಕೊಳ್ಳಲಿಕ್ಕಿಲ್ಲ!

ಅರವಿಂದ—ಏನಿದು ಇಷ್ಟೊಂದು ಉದ್ವೇಗ ಮನೋಹರ?

ಮನೋಹರ—ಉದ್ವೇಗವೇ? ಈ ಹೆಂಗಸರಿಗೆ ಸ್ವಾತಂತ್ರ್ಯವಿತ್ತರೆ ಆಗುವ ಪರಿಣಾಮವೇ ಇದು! ಅವರು ಕಡೆಗೆ ನಮ್ಮ ತಲೆಯ ಮೇಲೇರಿ ಕುಳಿತು ಕೊಳ್ಳುವರು,

ಅರವಿಂದ—ಸ್ತ್ರೀ ಸ್ವಾತಂತ್ರ್ಯದ ಸ್ಟ್ರಾಂಚೆಸ್ಟ್ ಎಡ್ವಕೇಟ್ (ಪ್ರಬಲ ಪ್ರತಿಪಾದಕ) ಆಗಿದ್ದೆಯಲ್ಲ ನೀನು ಮನೋಹರ?

ಮನೋಹರ—ಹೌದೌದು ಆದು ಆಗ. ಈಗ ಬುದ್ಧಿ ಬಂತು ನನಗೆ! ಹೆಂಗಸರಿಗೆ ಒಂದಿಷ್ಟು ಸ್ವಾತಂತ್ರ್ಯವೀಯದೆ ಪಂಜರದೊಳಗಿನ ಪಕ್ಷಿಗಳಂತಿಟ್ಟರೆನೇ ಗಂಡಸರು ಅವರೊಂದಿಗೆ ಸಂಸಾರ ನಡಿಸಲು ಸಾಧ್ಯವಿದೆ.

ಅರವಿಂದ—ಮನೋಹರ ಹಾಗೆಲ್ಲ ಉದ್ವೇಗಗೊಳ್ಳಬೇಡ. ಬಾ ನಿಮ್ಮ ಮನೆಗೆ ಹೋಗುವ. ಮನೋರಮೆಯೊಡನೆ ವಿಚಾರಿಸುವ ಸಂಗತಿಯೇನೆಂದು? ನಿನ್ನೊಬ್ಬನ ಹೇಳಿಕೆಯಿಂದಲೇ ತೀರ್ಪುಕೊಡಲು ಸಾಧ್ಯವಿಲ್ಲ.

ಮನೋಹರ—ಅವಳೊಡನೆ ವಿಚಾರಿಸತಕ್ಕದ್ದೇನಿದೆ?

ಅರವಿಂದ—ಅವಳೊಡನೆ ವಿಚಾರಿಸತಕ್ಕದ್ದು ಬಹಳವಿದೆ. ನೀನು ಕ್ಲಾರ್ಕ ನಾಗಿ ಸಂಪಾದನೆ ಮಾಡುತ್ತಿದ್ದಾಗ ಅವಳನ್ನು ಹ್ಯಾಗೆ ಕಾಣುತ್ತಿದ್ದಿ?

ಮನೋಹರ—ಇತರರು ತಮ್ಮ ಹೆಂಡಿರನ್ನು ಕಾಣುವ ಹಾಗೆ ಕಂಡಿದ್ದೇನೆ. ಅದೆಲ್ಲಾ ಯಾಕೀಗ?

ಅರವಿಂದ—ಅಂತೆಯೇ ಅವಳು ಸಂಪಾದನೆಮಾಡಿ ಹಾಕುವಾಗ ನಿನ್ನನ್ನು ಕಾಣಬಾರದೇಕೆ?

ಮನೋಹರ—ನಾನು ಗಂಡಸು, ಅವಳು ಹೆಂಗಸು.

ಅರವಿಂದ—ನೀನು ಸಂಪಾದಿಸಿ ಹಾಕುವಾಗ ನೀನು ಗಂಡಸು. ನಿನ್ನ ಮೇಲೆ ಹೊಂದಿಕೊಂಡಿರುವ ನಿನ್ನ ಹೆಂಡತಿಯ ಮೇಲೆ ಅಧಿಕಾರ ನಡಿಸಲು ನಿನಗೆ ಹಕ್ಕುಂಟೆನ್ನುವ. ಹಾಗೆಯೇ ಅವಳು ಸಂಪಾದಿಸಿ ಹಾಕುವಾಗ ಅವ ಳೇಕೆ ಗಂಡನಾಗಬಾರದು? ಅವಳ ಮೇಲೆ ಹೊಂದಿರುವ ನಿನ್ನ ಮೇಲೆ ಅಧಿಕಾರ ನಡಿಸಬಾರದೇಕೆ?

ಮನೋಹರ—ಏನಿದು ಅರವಿಂದ, ನೀನೂ ಅವಳ ಪಕ್ಷ ಹಿಡಿಯುವೆಯಾ? ನಾನಿಲ್ಲಿ ಬಂದುದೇ ತಪ್ಪಾಯಿತು ಹಾಗಾದರೆ?

ಅರವಿಂದ—(ನಸುನಕ್ಕು) ಯಾಕೆ ತಪ್ಪಾಯಿತು? ಬಾ, ಮನೋಹರ ನಿನ್ನ ಮನೋರಮೆ ಪಾಪ ಎಷ್ಟು ತಳಮಳಗೊಂಡಿರುವಳೋ ಏನೋ?

ಮನೋಹರ—ಯಾಕೆ ತಳಮಳಗೊಳ್ಳುವುದವಳು?

ಅರವಿಂದ—ತನ್ನ ಮನೋಹರನಿಗಾಗಿ.

ಮನೋಹರ—ಏನಿದು ಅರವಿಂದ? ಪರಿಹಾಸ್ಯಕ್ಕಿದು ಸಮಯವೇ?

ಅರವಿಂದ—ದೊಡ್ಡ ಪ್ರಹಸನವೇ ನಡೆದಿರುವಾಗ ನಾನು ಪರಿಹಾಸ್ಯ ಮಾಡುವುದು ತಪ್ಪೇ?

ಮನೋಹರ—ಪ್ರಹಸನವೇನು? ನಿನಗೀ ಅವಸ್ಥೆಯಾಗುತ್ತಿದ್ದರೆ ತಿಳಿಯು ತ್ತಿತ್ತು!

ಅರವಿಂದ—ನನಗೀ ಅವಸ್ಥೆಯಾಗಲಿಕ್ಕೆ ನಾನು ನಿನ್ನಂತೆ ಸ್ತ್ರೀಸ್ವಾತಂತ್ರ್ಯದ ಸ್ಟ್ರಾಂಚೆಸ್ಟ್ ಎಡ್ವಕೇಟನೂ ಅಲ್ಲ! (ಪ್ರಬಲ ಪ್ರತಿಪಾದಕ) ನಾವು ಧೊರೆ ಮಂಡ ಮಗಳಂತೆ....

ಮನೋಹರ—ಸಾಕು, ಸಾಕು ನಿನ್ನ ತಮಾಷೆ! ನಾನು ಹೋಗುವೆನು.

ಅರವಿಂದ—(ಎದ್ದುನಿಂದ ಹೊರಟ. ಹೋಗಲಿದ್ದ ಮನೋಹರನನ್ನು ರಟ್ಟೆಹಿಡಿದು ನಿಲ್ಲಿಸಿ) ನಿಲ್ಲು ನಿಲ್ಲು ಎಲ್ಲಿ ಹೋಗುವೆ?

ಮನೋಹರ—ಎಲ್ಲಿಗಾದರೂ ಹೋಗಿ ಈ ತುಚ್ಛ ಜೀವನವನ್ನು ಕೊನೆ ಗೊಳಿಸುವೆನು.

ಅರವಿಂದ—ಮನೋರಮೆಯಂತಹ ಎಜುಕೇಟೆಡ್(ವಿದ್ಯಾವಂತ)ಮತ್ತು ಎಡ್ವಾನ್ಸ್ಡ್ ವೈಫನ್ನು (ಬಹಳ ಮುಂದುವರಿದ ಸತ್ನಿಯನ್ನು) ಬಿಟ್ಟು!

ಮನೋಹರ—ಸಾಕು, ನಿನ್ನ ಮನೋರಮೆಯಿಂದ ನಾನು ಪಟ್ಟ ಸುಖ ಸಾಕು! ಇನ್ನು ನಾನು ಸತ್ತರೂ ಸದ್ಗತಿಯೇ ಸರಿ.

ಅರವಿಂದ—ನೀನು ಮನೋರಮೆಯನ್ನು ಬಿಟ್ಟು ಹೋದರೆ ಅವಳು ಪ್ರಾಣವಿಟ್ಟುಕೊಳ್ಳಲಿಕ್ಕಿಲ್ಲ.

ಮನೋಹರ—ಪ್ರಾಣವಿಟ್ಟುಕೊಳ್ಳದಿದ್ದರೆ ಹೊಳೆಗೆ ಬಿದ್ದು ಸಾಯಲಿ! ಅವಳ ಚಾಕರಿಯವನಾಗಿ ಬಾಳಿಕೊಂಡಿರುವುದಕ್ಕಿಂತ ಈ ಹಾಳು ಬಾಳನ್ನು ಕೊನೆಗೊಳಿಸುವುದೇ ಮೇಲು!

ಅರವಿಂದ—ಅವಳು ನಿನ್ನ ಚಾಕರಿಯವಳಾಗಿರಬಹುದೇ?

ಮನೋಹರ—ಹೆಂಡತಿ ಗಂಡನ ಚಾಕರಿಮಾಡದಿದ್ದರೆ ಮತ್ತಾರು ಮಾಡು ವುದು? ನಾವವರನ್ನು ಮದುವೆ ಮಾಡಿಕೊಳ್ಳುವುದೇತಕ್ಕೆ ಮತ್ತೆ?

ಅರವಿಂದ—ಓಹೋ ಇಷ್ಟಕ್ಕೆ ಬಂತೋ ಈಗ ನಿನ್ನ ಸ್ತ್ರೀ ಸ್ವಾತಂತ್ರ್ಯದ ಪ್ರತಿಪಾದನೆ! ಹಾಗಾದರೆ ನೀನು ಪೂರ್ವಾಚಾರವಾದಿಗಳಿಗಿಂತಲೂ ಕಳತೆ ಯಾದೆಯಲ್ಲನೋ?

ಮನೋಹರ—ಕಳತೆಯಾಗಲಿ ಮೇಲಾಗಲಿ, ನಾನು ಗಂಡನಾಗಿ ಹೆಂಡ ತಿಯ ಚಾಕರಿಯವನಾಗಿರಲು ನನ್ನಿಂದ ಸಾಧ್ಯವಿಲ್ಲ.

ಅರವಿಂದ—ಯಾಕೆ ಸಾಧ್ಯವಿಲ್ಲ? ಅವಳು ಹೊರಗೆ ಸಂಪಾದನೆಗೆ ಹೋಗು ವಾಗ ಗಂಡನೇಕೆ ಮನೆ ಕೆಲಸಮಾಡಿಕೊಂಡಿರಬಾರದು.

ಮನೋಹರ—ಮನೆಕೆಲಸಮಾಡುವುದು ಹೆಂಗಸರ ಕೆಲಸ ಗಂಡಸರದಲ್ಲ.

ಅರವಿಂದ—ಹಾಗಾದರೆ ಮನೋರಮೆ ಹೊರಗೆ ಹೋಗಿ ಸಂಪಾದನೆ ಮಾಡಿ ತಂದುಹಾಕುವುದು ಮಾತ್ರವಲ್ಲದೆ, ಮನೆಕೆಲಸ ಕೂಡ ಮಾಡಬೇಕೆಂದು ನೀನನ್ನುವದೇ?

ಮನೋಹರ—ಅವಳೇನು ಬೇಕಾದರೂ ಮಾಡ್ಲಿ. ಅವಳ ಪ್ರಸ್ತಾಪವನ್ನೇ ನನ್ನೊಡನೆ ನೀನು ಎತ್ತಬಾರದು. ನನಗೂ ಅವಳಿಗೂ ಇನ್ನು ಯಾವ ಸಂಬಂಧವೂ ಇರಲಾರದು.

ಅರವಿಂದ—ಛೆ! ಛೆ! ಹಾಗೇಕೆ ಹೇಳುವೆ ಮನೋಹರ? ನೀನೇ ಅವಳ ಮನೋಹರ, ಅವಳೇ ನಿನ್ನ ಮನೋರಮೆ.

(ಇಷ್ಟರಲ್ಲಿ ರಂಗನು ದಿಗಿಲುಗೊಂಡು ಓಡಿಬಂದು)

ರಂಗ—ರಾಯರೇ! ರಾಯರೇ!! ಸ್ವಲ್ಪ ಬನ್ನಿ, ದಯಮಾಡಿ ಒಮ್ಮೆ ಮನೆಗೆ ಬನ್ನಿ! ಅಮ್ಮ ಪ್ರಾಣವಿಟ್ಟುಕೊಳ್ಳುವ ಹಾಗಿಲ್ಲ! 'ನಾನು ಅರವಿಂದಣ್ಣನ ಮಾತು ಕೇಳಿ ಕೆಟ್ಟೆ! ಅವರೆಲ್ಲ ಪ್ರಾಣಹತ್ಯೆ ಮಾಡಿಕೊಂಡರೋ ಏನೋ? ಇನ್ನೇನು ನನ್ನ ಗತಿ!' ಎಂದು ಎದೆಎದೆ ಬಡಕೊಳ್ಳುತ್ತಾರೆ ರಾಯರೆ!

ಅರವಿಂದ—ನೀನು ಏನು ಹೇಳಿದೆಯೋ ಅವಳೊಡನೆ?

ರಂಗ—ನೋಡುವ ಪರೀಕ್ಷೆಮಾಡುವ ಎಂದು ನಾನು ಒಂದು ಸುಳ್ಳು ಹೇಳಿಬಿಟ್ಟೆ ರಾಯರೆ. ಕ್ಷಮಿಸಬೇಕು.

ಅರವಿಂದ—ಏನು ಹೇಳಿದೆ?

ರಂಗ—ಅವರು ಶಾಲೆಯಿಂದ ಬಂದ ಕೂಡಲೆ, 'ರಾಯರೆಲ್ಲಿ ಹೋದ್ರೋ ರಂಗ?' ಎಂದು ಕೇಳಿದ್ರು. 'ಅವರು ಮನೆಬಿಟ್ಟು ಹೋಗಿದ್ದಾರೆ. ಎಲ್ಲಿ ಗಾದರೂ ಹೋಗಿ ಪ್ರಾಣಕಳಕೊಳ್ಳುತ್ತಾರಂತೆ' ಎಂದೆ ನಾನು. ಕೂಡ್ಲೆ ಶುರು ಮಾಡಿದ್ರಪ್ಪ ಬೊಬ್ಬೆ ಹಾಕ್ಲಿಕ್ಕೆ! ನನಗವರನ್ನು ನೋಡಿ ಪಾಪ ತಡಕೊಳ್ಳ ಲಿಕ್ಕಾಗಲಿಲ್ಲ. 'ಅಮ್ಮ ಸ್ವಲ್ಪ ಸಮಾಧಾನಮಾಡಿ ಈಗ ಬರುತ್ತೇನೆ' ಎಂದು ಓಡಿಬಂದೆ!

ಅರವಿಂದ—ನೋಡಿದೆಯ ಮನೋಹರ ಹೆಣ್ಣು ಹೃದಯ! ನಾವು ನಮ್ಮ ಹೆಂಡಿರನ್ನು ಕಾಣುವಂತೆ ಅವರೆಲ್ಲಿಯಾದರೂ ನಮ್ಮನ್ನು ಕಾಣುವಂತಾದರೆ

ನಮ್ಮಲ್ಲಿ ಶೇಕಡ 99 ಮಂದಿ ತಮ್ಮ ಪ್ರಾಣವನ್ನೇ ಇಟ್ಟುಕೊಳ್ಳುವ ಹಾಗಿಲ್ಲ. ಹೆಂಡತಿಯೆಂದರೆ ನಾವು ಸ್ವಾಮಿತ್ವ ಪಡೆದಿರುವ ಸೊತ್ತು. ಅದನ್ನು ನಮ್ಮ ಉಪಯೋಗಕ್ಕಾಗಿ ಇಚ್ಛಾನುಸಾರ ಉಪಯೋಗಿಸುವುದು ಗಂಡಂದಿರಾದ ನಮ್ಮ ಜನ್ಮ ಸಿದ್ಧ ಹಕ್ಕು. ಅವರೆಲ್ಲಿಯಾದರೂ ಸ್ವಲ್ಪ ಸ್ವತಂತ್ರ ತೋರಿಸಿದರೆ ನಮ್ಮ ಗಂಡಸುತನಕ್ಕದು ಅಸಹನೀಯವಾಗುವುದು. ಎಂತಹ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದಕನೂ ಎಷ್ಟೊಂದು ಉದಾರ ಬುದ್ಧಿಯವನೂ ಕಾರ್ಯತಃ ತನ್ನ ಹೆಂಡತಿಯ ಸ್ವತಂತ್ರ ವೃತ್ತಿಯನ್ನು ತಾಳಿಕೊಳ್ಳಲಾರನು. ಅನಾದಿ ಕಾಲದಿಂದ ಗಂಡಸರ ರಕ್ತದಲ್ಲಿ ಸೇರಿಹೋಗಿದೆ ಹೆಂಗಸರ ಮೇಲಿನ ಸ್ವಾಮಿತ್ವದ ಭಾವನೆ.

ಮನೋಹರ—ನೀನು ಹೇಳುವುದೆಲ್ಲಾ ಅಕ್ಷರಶಃ ನಿಜ ಅರವಿಂದ. ಬಾಯಲ್ಲಿ ನಾವು ಎಷ್ಟು ಹೇಳಿದರೂ ಕಾರ್ಯದಲ್ಲಿ ನಮಗೆ ಸ್ತ್ರೀಯರ ಸ್ವತಂತ್ರ ವೃತ್ತಿಯು ಸ್ವೈರವರ್ತನೆಯಾಗಿ ತೋರಿ ತೀವ್ರ ಅಸಹನೀಯವಾಗುವುದು. ಆಗ ನಮ್ಮ ಗಂಡಸುತನವೇ ಮುಂದಾಗಿ ತಲೆಹಾಕುವುದು. ನೀನು ಹೇಳಿದಂತೆ ನಮ್ಮ ರಕ್ತದಲ್ಲಿ ಸೇರಿಹೋಗಿದೆ ಆ ಅಹಂಭಾವ.

ಅರವಿಂದ—ಹೇಗೂ ನಿನ್ನ ಪರೀಕ್ಷೆಯೊಂದು ನಡೆದಂತಾಯಿತು. ಹೆಚ್ಚು ಮಾತಾಡುವವರು ಯಾವಾಗಲೂ ಕಡಿಮೆಮಾಡುವವರೆಂದಾಯಿತು. ಇನ್ನು ನನ್ನನ್ನು ಹಂಗಿಸುವುದೊಂದು ನಿಂತುಹೋಯಿತಲ್ಲ! ಈ ನಾಟಕದಲ್ಲಿ ಮನೋರಮೆ ತನ್ನ ಭೂಮಿಕೆಯನ್ನು ಬಲು ಚತುರತೆಯಿಂದ ಅಭಿನಯಿಸಿಬಿಟ್ಟಳು. ತಮಾಷೆಗೆ ಮಾಡಿದ್ದು ಪ್ರಾಣಕ್ಕೆ ಬಂತೋ ಎಂದು ಅವಳೀಗ ದಿಗಿಲುಗೊಂಡಿರಬೇಕು ಪಾಪ. ನಡೆ ಬೇಗ ಹೋಗುವ.

ಮನೋಹರ—ತಡೆ ತಡೆ! ಏನು, ಇದೆಲ್ಲಾ ನೀನು ನಡಿಸಿದ ನಾಟಕವೇ? ಆಹ! ನನಗೊಂದಿಷ್ಟು ತಿಳಿಯದಾಯಿತಲ್ಲ ನಿಮ್ಮಿಬ್ಬರ ಒಳಸಂಚು!

ಅರವಿಂದ—ತಿಳಿದರೆ ಸ್ವಾರಸ್ಯವೇನುಂಟದರಲ್ಲಿ? ನಡೆ, ನಡೆ ಈ ಪ್ರಹಸನದ ಪರ್ಯವಸಾನ ಕೆಟ್ಟದಾದೀತು ಮತ್ತೆ ಮನೋರಮೆ ಎಲ್ಲಿಯಾದರೂ ಪ್ರಾಣ ಕಳಕೊಂಡ್ರೆ!

ರಂಗ—ಹೌದಪ್ಪಾ ಹೌದು! ಅಮ್ಮ ಬೊಬ್ಬೆ ಹಾಕುವುದು ನೋಡಿ ನಾನು ಕಂಗಾಲಾಗಿ ಬಿಟ್ಟೆ! ಎಲ್ಲಿಯಾದರೂ ಎದೆಗಿದೆ ಒಡೆದುಹೋದೀತು ಅವರದು! ಬೇಗ ಹೋಗುವ ರಾಯರೇ! ಒಮ್ಮೆ ಅಮ್ಮನನ್ನು ಸಮಾಧಾನ ಪಡಿಸಿ ಮತ್ತೆ ಎಷ್ಟು ಬೇಕಾದ್ರೂ ಮಾತಾಡುವ. ಅಮ್ಮನಿಗೂ ಶನಿವಾರ ಆದಿತ್ಯವಾರ ಎರಡು ದಿವಸ ರಜೆ.

ಮನೋಹರ—ಛೆ! ಹೆಣ್ಣು ಹೃದಯವು ಅದೆಷ್ಟು ಮೃದುವಾದುದು? ಎಷ್ಟೊಂದು ಕೋಮಲವಾದುದು! ಸ್ತ್ರೀಯರೆಷ್ಟು ತ್ಯಾಗಶೀಲರು! ಎಂತಹ ಸಹನಾ ಮೂರ್ತಿಗಳು. ನಿಷ್ಠುರ ಒರಟು ಹೃದಯ ನಮ್ಮದು. ಉದ್ಧಟ ಸ್ವಾರ್ಥಿಗಳು ನಾವು ಅಧಿಕಾರ ನಡಿಸುವುದೊಂದೇ ನಮಗೆ ಗೊತ್ತು.

ಅರವಿಂದ—ಸಾಕು ಸಾಕು. ಈ ಪಶ್ಚಾತ್ತಾಪವು ಮಾತಿನಲ್ಲೇ ವೆಚ್ಚವಾಗಿಬಿಟ್ಟರೆ ಮತ್ತೆ ಕಾರ್ಯಕ್ಕುಳಿಯಲಾರದು

ಮನೋಹರ—ನೋಡು ಕಾರ್ಯಕ್ಕಿಳಿಯುವುದೋ ಇಲ್ಲವೋ ಎಂದು? ದಾಂಪತ್ಯವು ಸಾಧಾರಣ ಜವಾಬ್ದಾರಿಯ ವಿಷಯವಲ್ಲ ಅರವಿಂದ. ಅದರಲ್ಲಿ ಎಷ್ಟು ಅನುಭವವಿದ್ದರೂ ಸಾಲದು. ಬರಿಯ ಮಾತು ಕಾರ್ಯಕ್ಕೆಬಾರದು ಕಾರ್ಯದಲ್ಲಿ ನುರಿತು ನುರಿತು ಪಡೆಯಬೇಕು ಅನುಭವ. ಅದರಲ್ಲಿ ಗಂಡ ಹೆಂಡಿರಿಬ್ಬರೂ ಸಮಭಾಗಿಗಳು, ಸಹವ್ಯವಸಾಯಿಗಳು, ಸಹಕಾರಿಗಳು.

ಅರವಿಂದ—ಅಷ್ಟೊಂದು ನಿನಗೆ ತಿಳಿದರೆ ನೀನು ನವ ಮನೋಹರನಾಗುವಿ. ನವ ಮನೋರಮೆಯನ್ನೀಗ ಕಾಣುವಿ. ಇಲ್ಲಿಗೆ ಸಾರ್ಥಕವಾಗಿ ಕೊನೆಗೊಂಡಾಯಿತು ನಮ್ಮೀ ಪ್ರಹಸನ ಹೋಗುವ ನಡೆ. (ಕೈಕೈ ಹಿಡಕೊಂಡು ಇಬ್ಬರೂ ಹೋಗುವರು)

— ಸಮಾಪ್ತಿ —

ರೂ. 25 ಇನಾಮು

10 ಮಂದಿ ದೇಶಭಕ್ತರಾರು?

ನಾವು ಈ ಕೆಳಗೆ ಕೊಟ್ಟಿರುವ ಹಿಂದುದೇಶದ 10 ಮಂದಿ ಸುಪ್ರಸಿದ್ಧ ಜೀವಂತ ದೇಶಭಕ್ತರ ಹೆಸರುಗಳನ್ನು ಅವರ ದೇಶ, ಭಕ್ತಿ, ತ್ಯಾಗ, ಬುದ್ಧಿ ಶಕ್ತಿ, ಸಚ್ಚಾರಿತ್ರ್ಯ ಪ್ರಗತಿಗಾಮಿತ್ವವೇ ಮೊದಲಾದ ಗುಣ ವಿಶೇಷಗಳ ದೃಷ್ಟಿಯಿಂದ ಅವರಿಗೆ ನಾವು ಕೊಡುವ ಸ್ಥಾನದಂತೆ ಅನುಕ್ರಮವಾಗಿ ಬರೆದು ಮೊಹರ ಹಾಕಿ ಸಂಪಾದಕರ ಬಳಿ ಇಟ್ಟಿರುತ್ತೇವೆ. ನಾವು ಸ್ಥಾನಗಳನ್ನು ಕೊಟ್ಟ ಪ್ರಕಾರವಾಗಿಯೇ 10 ಮಂದಿ ದೇಶಭಕ್ತರ ಹೆಸರುಗಳನ್ನು ಅನುಕ್ರಮವಾಗಿ ತಪ್ಪಿಲ್ಲದೆ ಈ ಕೆಳಗಣ ರಿಖಾನೆಗಳಲ್ಲಿ ಬರೆದು ಕಳುಹಿಸಬೇಕು.

ಕ್ರಮ ತಪ್ಪಿ ಬರೆದ 10 ದೇಶಭಕ್ತರ ಹೆಸರು

(1) ಸಿ. ರಾಜಗೋಪಾಲಾಚಾರ್ಯರ್, (2) ಸುಭಾಸಚಂದ್ರ ಭೋಸ್, (3) ಮಹಾತ್ಮ ಗಾಂಧಿ, (4) ಪಂಡಿತ ಜವ್ಹಾರಲಾಲ ನೆಹರು, (5) ಸರ್ದಾರ್ ವಲ್ಲಭಾಯಿ ಪಟೇಲ್, (6) ಕೆ. ಎಫ್ ನರಿಮನ್, (7) ಸರೋಜಿನಿ ದೇವಿ, (8) ಶೇಟ್ ಜಮುನಾಲಾಲ ಬಜಜ್, (9) ಖಾನ್ ಅಬ್ದುಲ್ ಗಾಫರ್ ಖಾನ್, (10) ಬಾಬುರಾಜೇಂದ್ರ ಪ್ರಸಾದ್.

೧ ———
೨ ———
೩ ———
೪ ———
೫ ———
೬ ———
೭ ———
೮ ———
೯ ———
೧೦ ———

(ಹೆಸರುಗಳನ್ನು ಚಿತ್ತಿಲ್ಲದಂತೆ ಸ್ಪಷ್ಟವಾಗಿ ಬರೆಯಿರಿ)

ಉತ್ತರ ಸ್ವೀಕರಿಸುವ ಕೊನೆಯ ತಾರೀಕು 25—6—37

ನಿಯಮಗಳು

೧. ಪ್ರತಿ ಉತ್ತರದೊಡನೆ ಎರಡಾಣೆಯ ಟಪ್ಪಾಲುಚೀಟನ್ನು ಇಡಬೇಕು. ಅದನ್ನು ಯಾವ ಕಾರಣದಿಂದಲೂ ತಿರುಗಿ ಕೊಡಲಾಗುವುದಿಲ್ಲ ಅಥವಾ ಬೇರೊಂದು ಸ್ಪರ್ಧೆಗೆ ಜಮೆಹಿಡಿಯುವಂತೆಯೂ ಇಲ್ಲ ೨. ಒಬ್ಬರು ಅನೇಕ ಉತ್ತರಗಳನ್ನು ಕಳುಹಿಸಬಹುದು ಮೊದಲನೆಯದನ್ನು ಮೇಲಿನ ಕೂಪನಿನಲ್ಲಿಯೂ ಮಿಕ್ಕವುಗಳನ್ನು ಬೇರೆ ಕಾಗದದಲ್ಲಿಯೂ ಬರೆದು ಕಳುಹಿಸಬಹುದು ೩ ಸ್ಪರ್ಧೆಯ ಎಲ್ಲಾ ವಿಷಯಗಳಲ್ಲಿಯೂ ಸ್ಪರ್ಧೆಯ ಸಂಪಾದಕರ ತೀರ್ಮಾನವೇ ಕೊನೆಯದಾಗಿರುತ್ತದೆ ೪ ಈ ಸ್ಪರ್ಧೆಗೆ ಸಂಬಂಧಪಟ್ಟ ಪತ್ರವ್ಯವಹಾರಗಳನ್ನು ಎಷ್ಟು ಮಾತ್ರವೂ ಮಾಡಲಿಕ್ಕಿಲ್ಲ; ಅದಕ್ಕಾಗಿ ಮಾತುಕಥೆಯೂ ಅನಗತ್ಯವಿದೆ. ೫ ನಿಯಮಗಳನ್ನು ಪಾಲಿಸದಿರುವ ಉತ್ತರಗಳು ಅಸ್ವೀಕೃತವಾಗುವವು. ೬ ನವಯುಗದ ಸಂಪಾದಕರ ಬಳಿ ಮೊಹರುಮಾಡಿಟ್ಟ ಉತ್ತರಕ್ಕೆ ಹೊಂದಿಕೆಯಾಗುವ ಉತ್ತರವೇ ಸಂಪೂರ್ಣ ಸಮರ್ಪಕ ಉತ್ತರ ಒಂದಕ್ಕಿಂತ ಹೆಚ್ಚು ಸಮರ್ಪಕ ಉತ್ತರಗಳು ಬಂದರೆ ಇನಾಮನ್ನು ಅವರೊಳಗೆ ಹಂಚಿಕೊಡಲಾಗುವುದು. ಉತ್ತರಗಳು ಸಂಖ್ಯಾಮಾನದಂತೆ ಇನಾಮಿನ ಏವೇಜನ್ನು ಹೆಚ್ಚು ಕಡಿಮೆ ಮಾಡಲಾದೀತು; ಉತ್ತರವನ್ನು ತಾ 25—6—37ರ ತನಕ ಸ್ವೀಕರಿಸಿ ತಾ. 1—7—37ಕ್ಕೆ ಪ್ರಕಟಿಸಲಾಗುವುದು. ಉತ್ತರವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು

ಮೆನೇಜರ್,
ನವಯುಗ, ಉಡುಪಿ.

ಸುಸಮಯ! ಹಣ ಸಂಪಾದಿಸಿರಿ!

ಪ್ರೋಮ್ಯರಿಗಳನ್ನು ಕಂಪೆನಿಯೇ ಬಟವಾಡೆಮಾಡುವುದು.

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ 11ನೇ ಸ್ಕೀಮಿನ ಪ್ರಾರಂಭಿಗೆ 1—9—0 ಚೆಕ್ಕ ಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡಿಯುತ್ತಿರುವರು.

ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್

ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.

WANTED

Candidates for Telegraph and station Master class Allowance Rs. 28. Uniform, passage and quarter free. Service essential Rules and Entrance from on annas eight. Director, Royal Telegraph and Ry. Duties College, Bombay 14.

WANTED

A Typist Clerk: Decent salary. Apply sharp stating your qualifications.

New Era Technical School, UDIPI.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತವೆ ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು ಕ್ರಯ: ಡಬ್ಬಿ ೧ಕ್ಕೆ ೨-೦-೦.

'ಕಾಮಶಾಸ್ತ್ರ' ಧರ್ಮಾರ್ಥ ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡು ಹಾಕಿರಿ

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇತ್ತೀಚ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾದಲ್ಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾ ದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯ ವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲ ದಿದ್ದಲ್ಲಿ ಹಣ ವಾಪಸು. ೬೦ ಮಾತ್ರೆಗಳು ರೂ. ೫—೦—೦ ೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,

ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆ ಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡ್ಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,

ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು. ಪರೀಕ್ಷಿಸಲಪೇಕ್ಷಿಸುವವರು

"ಯೋಗೀಶ್ವರರ ಶಕ್ತಿಸಾಹಸ"

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುಪ್

ಚಿಕಾಕೋಲ್

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು! ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀಸಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆ ಸ್ಟ್ಯಾಂಪು ಕಳುಹಿ ಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸ ಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾಪ್ಸು, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಳಿ, ನಾಮ್ದಾಡಿ, ತರತರದ ರುದ್ರಾಕ್ಷಿ ಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55 ಪಡಲು ಸಾದಾ 16 ಮೊಳದ ಶೀರೆ 1 ಕ್ಕೆ ರೂ. 16 ರಿಂದ ರೂ. 35 ರ ವರೆಗೆ. ಅತಿ ಕಡಮೆ 16 ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ 16, ಖಣ 1 ಕ್ಕೆ ರೂ. 1½ ರಿಂದ ರೂ. 10 ರ ವರೆಗೆ, ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ



ಧರ್ಮಾರ್ಥ ಬಹುಮಾನಗಳು

1-4-0 ಗೆ !

— **ಯಾರಿಗೆ ?** —

ರೂಪಾಯಿ 1—4—0 ಕೊಟ್ಟು 14 ಶೀಸೆ ಒಟ್ಟೊರೋಸ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3 ಡಮ್ಮಿ ರಿಸ್ಟ್‌ವಾಚುಗಳು; 1 ಪ್ಲೆಟಿನಿಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಶ್; 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್ ; 1 ಜತೆ ಗುಬ್ಬಿಗಳು; 1 ಫೌಂಟೆನ್ ಪೆನ್ನು 14 ಕ್ಯಾರಟ್ ನಿಬ್ಬು ಸಮೇತ; 1 ಇಮಿಟೇಶನ್ ಮೋತಿಮಾಲೆ; 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡ್ ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟೈಮ್‌ಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. ಇಂದೇ ಆರ್ಡರುಕೊಡಿರಿ.

Bengal Watch Co.,

Post Box No. 12214, CALCUTTA

ಕಿರಿಯರ ಪ್ರಪಂಚದ ಪುಸ್ತಕಗಳು.

೧ ನಾಡಕಥೆ	....	೦	೨	೦
೨ ಮುಂದಿನ ದೇವರು	....	೦	೨	೦
೩ ಸ್ವತಂತ್ರ ಜೀವನೋಪಾಯ		೦	೨	೬
೪ ಕುಶ-ಲವ	....	೦	೪	೦
೫ ಸಂಶಯ ಪಿಶಾಚಿ	....	೦	೬	೦
೬ ಕಾವ್ಯಸಾಮ್ರಾಜ್ಯ	....	೦	೧೨	೦
೭ ಮಧುವನ	....	೧	೮	೦
೮ ವ್ಯಭಿಚಾರಿಣಿ ಯಾರು		೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯಬೇಕಾದರೆ ಬೇಕಾದುದೇನು?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದ ಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿ ಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸ ದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'

C/o 'ಕಿರಿಯರ ಪ್ರಪಂಚ,'

ಉಡುಪಿ.

WANTED

Influential agents to canvass Subscribers and to get advertisements for 'Navayuga' throughout Karnataka on pay or commission basis.

For particulars apply to —

The Manager,

Navayuga, Udipi.

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಮಾಸ] ಕಥಾಕುಂಜ [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಚಿತ್ರಾದುಗಳಿಂದ ಅಲಂಕೃತವಾಗಿ ಹೊರ ಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರ ರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಸೇರಿ) ಜಾಹೀರಾತುಗಳಿಗೆ ಸುವರ್ಣ ಸಂಧಿ ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲ್ಯಾಯಲ್ಲಿ ಪ್ರಾರಂಭವಾಗುತ್ತದೆ ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮಲ್ಟಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ। ಸುಮತಿಬಾಯಿ,

ಬಿ. ಎ. ಎಲ್. ಟಿ., ಎಫ್. ಪಿ. ಎಮ್. ಎಸ್. ಧಿಪಗ್ರತ್ನ. ರಿಜಿಸ್ಟ್ರಾರ್.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್

ಕೊಲೆರಾ ರೋಗಕ್ಕೆ ರಾಮಬಾಣ ಔಷಧ.

೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

The Coondapoor Bank, Ltd.,

Head Office:- **Coondapoor.** Branch Office:-**Brahmavar.**

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ.ಶೆ 4, ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ 4
6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ 5%,
1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ 5½%
2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ಸಾಲಕೊಡಲಾಗುತ್ತವೆ. ಪಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್.
N. Sheshagiri Rao, ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪೆನಿ,

೩. ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜೆ. ಟಿ. ಮದರಾಸ್.

ಶಾಲಾ ವಿದ್ಯಾರ್ಥಿಗಳಿಗೆ

ಅತ್ಯಪೂರ್ವ ಸುಸಂಧಿ

●

ಎಕ್ಸರ್‌ಸೈಸ್, ಡ್ರಾಯಿಂಗ್

ಮೇಪ್ ಡ್ರಾಯಿಂಗ್

ಕೋಪಿ, ರಫ್ ಪುಸ್ತಕಗಳು

ನಮ್ಮಲ್ಲಿ ಯೋಗ್ಯ ಕ್ರಯಕ್ಕೆ

ದೊರೆಯುತ್ತವೆ.

●

ಈಗಲೇ ಬಂದಿರುವ ಹೊಸ

ಮಾದರಿಯ ಉತ್ತಮ ತರದ

ಫೌಂಟನ್ ಪೆನ್‌ಗಳು

ಮಾರಾಟಕ್ಕಿವೆ.

●

ಸಾಮುದ್ರಿಕ ಶಾಸ್ತ್ರ



ಬೆಲೆ ೦—೮—೦

ತುಳುನಾಡ್ ಛಾಪಖಾನೆ, ಉಡುಪಿ

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

gistered No. M. 3618

೨೦ ಪುಟಗಳು--ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you
to advertise in
'NAVAYUGA'
The Leading
Nationalist
Kanarese Weekly
of Karnatak
FOR RATES OF ADVT. Etc.
APPLY TO THE MANAGER

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL. XVI-NO. 39

3-6-1937

ಮೂಡ ಬಾನಿನ ಕಣ್ಣು ಕೆಂಗಿಡಿಯ್ನು ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೩ ಜೂನ್, ೧೯೩೭ [ಸಂಚಿಕೆ ೩೯

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I)

BRANCHES:

1 BANGALORE CITY
2 BELGAUM
3 BYADGI
4 BELLARY
5 ADONI
6 HOSPET
7 TALIPARAMBA
8 UPPINANGADI
9 KASARGODE
10 PAYYANUR
11 KANHANGAD
12 KARKALA
13 NANDYAL
14 PRODATTUR
15 TADPATRI
16 HUBLI
17 GADAG
18 KARWAR
19 KUMTA
20 ANKOLA
21 HONAVAR
22 BHATKAL
23 BRAHMAVAR
24 HUNGARCUTTA
25 SIRSI
26 SAGAR
27 COONDAPOOR
28 UDIPI
29 MANGALORE
30 CANNANORE

BEG TO ANNOUNCE

that the Syndicate has been included in the list of Scheduled Banks under the Reserve Bank of India Act.

Non-Scheduled Banks, other companies and company promoters may take advantage of this for depositing their amounts with the Syndicate under the Indian Companies Act 1936.

Paid up Capital	Rs. 3,45,580
Reserves	„ 19,2,390
Deposits exceed	„ 22 lakhs
Total Working Funds exceed	„ 40 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ--

ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಣ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**
೩೦ ಮಾತ್ರೆಗಳು ರೂ. ೩-೦-೦ **ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ**

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಹತ್ತೆ:— ಪಂಡಿತ್ ಎ. ವಿ. ಆರಮುದ್
ಚಿಕಾಕೋಲ್

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು! ಇನಾಮುಗಳು.

OUR CUSTOMER
THIS MAN
THIS MAN
WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶಿಮೆಯ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆ ಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದವಾಮ್ಮಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಳಿ, ನಮ್ದಾ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ ಈಗಿನ ಹೊಸನಮೂನೆಯ ಪಡಲು ಬುಟ್ಟಿ, ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55 ಪಡಲು ಸಾದಾ 16 ಮೊಳದ ಶೀರೆ 1 ಕ್ಕೆ ರೂ 15 ರಿಂದ ರೂ 35 ರ ವರೆಗೆ. ಅತಿ ಕಡಿಮೆ 16 ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ. 16 ಜಿಣ 1 ಕ್ಕೆ ರೂ 1½ ರಿಂದ ರೂ 10 ರ ವರೆಗೆ ಪೋಸ್ಟ್ ಖರ್ಚು ಪ್ರತ್ಯೇಕ ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ



ಧರ್ಮಾರ್ಥ ಬಹುಮಾನಗಳು

1-4-0 ಗೆ !

— ಯಾರಿಗೆ ? —

ರೂಪಾಯಿ 1—4—0 ಕೊಟ್ಟು 14 ಸೀಸೆ ಒಟ್ಟೋ ರೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3 ಡಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೆಟಾಯಂ ಡಮ್ಮಿ ಪಾಕೆಟ್ ವಾಚು, 1 ಸೇಪ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್; 1 ಜತೆ ಗುಬ್ಬಿಗಳು, 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡ್ ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶಿಸುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0 **ಇಂದೇ ಆರ್ಡರುಕೊಡಿರಿ**

Bengal Watch Co.,
Post Box No. 12214, CALCUTTA

ಕಿರಿಯರ ಪ್ರಪಂಚದ

ಪುಸ್ತಕಗಳು.

೧	ನಾಡಕಥೆ	೦	೨	೦
೨	ಮುಂದಿನ ದೇವರು ...	೦	೩	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ ..	೦	೬	೦
೬	ಕಾವ್ಯಸಾಮ್ರಾಜ್ಯ ...	೦	೧೨	೦
೭	ಮಧುವನ ..	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'
C/o **'ಕಿರಿಯರ ಪ್ರಪಂಚ,'**
ಉಡುಪಿ.

WANTED

Influential agents to canvass Subscribers and to get advertisements for 'Navayuga' throughout Karnataka on pay or commission basis.

For particulars apply to—

The Manager,
Navayuga, Udipi.

ಅಖಿಲ ಕನ್ನಡ ನಾಡಿಗೆ
ಪ್ರೀತಿಯಾಗಿರುವ

ಮಾಸ **ಕಥಾಕುಂಜ** ಪತ್ರಿಕೆ

ಯು ಮನೋಹರವಾಗಿ ಹೊಸಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

— ನಮ್ಮಲ್ಲಿ ಸಿಗುವ ಗ್ರಂಥಗಳು —

	ರೂ.	ಆ	ಪೈ
ಉಡುಗೊರೆ	0	12	0
ಕೆಲವು ನೀಳ್ಗತೆಗಳು	0	12	0
ಜೀವನದ ಸೊಗಸು	0	4	0
ಬಂಗಾರದ ಡಾಬು	0	10	0
ಶೂದ್ರಕ	1	0	0
ಜೋಮನದುಡಿ	1	0	0
ಸಾಧುವರ್ಯ ನಾಗಮಹಾ			
ಶಯರ ಜೀವನದ ಕಥೆ	0	12	0
ಹರಟೆಗಳು	0	10	0
ನನ್ನನಲ್ಲ	0	10	0
ಕಣ್ಮರೆಯಾದ ಕನ್ನಡ	0	14	0
ಕನ್ನಡದ ಕಿಡಿಗಳು	0	8	0
ಕಲೆಗೊಂಚಲು	1	0	0
ಜನಜೀವನ	0	8	0
ಕಲ್ಕಿ	0	10	0
ರಾಜವಲ್ಲಭ	0	10	0
ಪೂರ್ವರಂಗ	0	10	0
ಉದ್ಧಾರ	0	10	0
ಅದೇನೇ ಇರಲಿ	0	8	0
ದೇವರ ಬಾಗಿಲು	0	8	0
ಬಿಸಿಲುಗುದುರೆ	0	10	0
ವಿಶಾಲಭಾರತ	0	4	0
ಹೊಸಹುಟ್ಟು	1	0	0
ನವಿಲು	0	12	0
ಸಂಶಯ ಪಿಶಾಚಿ	0	6	0
ವ್ಯಭಿಚಾರಿಣಿ ಯಾರು?	0	8	0
ನಾಡಕಥೆಗಳು	0	2	0
ಸ್ವತಂತ್ರಜೀವನೋಪಾಯ	0	2	6
ಕಾವ್ಯಸಾಮ್ರಾಜ್ಯ	0	12	0
ಕುಶಲವ	0	1	0
ಮುಂದಿನ ದೇವರು	0	2	0
ಗೋಮುಖ ವ್ಯಾಘ್ರ	0	4	0
ಕಾಮದಹನ	0	8	0
ನವಿಲುಗರಿ	0	12	0
ವೀಣಾನಾದ	0	8	0
ಕಲೋಪಾಸಕ	1	0	0
ಮಂಗನ ಮೆರವಣಿಗೆ	0	10	0
ಕವಿ ಕಾವ್ಯ ಮಹೋನ್ನತಿ	0	10	0
ಸರ್ವಜ್ಞನ ಸಂದೇಶ	0	10	0
ಕಾಳರಾತ್ರಿ	0	12	0
ಬಾಳುರಿ	0	12	0
ಹಳ್ಳಿಯ ರಾಣಿ	0	8	0
ವಿಧಿಯ ವೈಚಿತ್ರ್ಯ	0	12	0
ಯಜ್ಞಕುಂಡ	1	4	0
ಹಸಿವು	0	8	0
ಹಾವು	0	8	0
ಚಾಣಕ್ಯತಂತ್ರ	0	12	0
ಅಭಿನವಪಂಪ	1	4	0
ತ್ರಿಪುರದಹನ	0	12	0
ತ್ರಿಶಂಕುಸ್ವರ್ಗ	0	4	0
ದರಿದ್ರನಾರಾಯಣ	0	10	0
ಮಾವಿನತೋಪು	0	10	0
ಹಣತೆ	0	12	0
ಬಾಲವಾಙ್ಮಯ	0	3	0
ಕಾಮನಬಿಲ್ಲು	1	12	0

	ರೂ.	ಆ.	ಪೈ
ಟಾಲ್‌ಸ್ಟಾಯಿಯವರ			
ಕಥೆಗಳು	1	8	0
ಭಾರತೀಯ ನವಜನ್ಮ	0	12	0
ನಂದನವನ	0	10	0
ಮಿಲನ	0	12	0
ಬಾಳಿನಲ್ಲಿ ಬೆಳಕು	0	10	0
ಹರಿಜನ್ಸ್ವಾರ	0	12	0
ಬಡತನದ ಬಾಳು	0	8	0
ಡಾ. ಹರಡೀಕರರು	0	8	0
ಹಳ್ಳಿಯ ಚಿತ್ರಗಳು	1	0	0
ಮೂರ್ತಿ	0	8	0
ಅಶೋಕಮೌರ್ಯ	0	10	0
ನಾಕ್ರೇಟೀಸನ			
ಕೊನೆಯ ದಿನಗಳು	0	12	0
ಮಧುವನ	1	8	0
ಹರಿಶ್ಚಂದ್ರ ಕಾವ್ಯಸಂಗ್ರಹ	0	12	0
ಮಾರ್ಕಂಡೇಯ	0	12	0
ಚಿತ್ರದುರ್ಗದ			
ಪಾಳೆಯಗಾರರು	0	14	0
ಪಾಳೆಯಗಾರರು	0	12	0
ಕೆಳದಿ ನೃಪವಿಜಯ	1	8	0
ಧರ್ಮಸಂಭವ	1	2	0
ಕಾಂಗ್ರೆಸಿನ ಕತೆ	1	0	0
ಕಾಂಗ್ರೆಸ್ ಇತಿಹಾಸ	2	8	0
ಆರೋಗ್ಯ ಸಾಧನ	0	12	0
ನೀತಿ ಧರ್ಮ	0	6	0
ಭಾರತ ಗೀತಾಂಜಲಿ	0	2	0
ಬಾಲ ರಾಮಾಯಣ	0	5	0
ಸಾಮ್ಯವಾದವೇ ಏಕೆ	0	8	0
ತೆರೆಯ ಮರೆಯಲ್ಲಿ	0	8	0
ಸಣ್ಣ ಕತೆಗಳು	0	12	0
ಸತ್ಯಧಾಲಾಪ	0	10	0
ದೃಷ್ಟಿ ಸಂಗಮ	0	3	0
ಮಯೂರ	0	12	0
ನೆಳಲು ಬೆಳಕು	1	9	0
ತರಂಗ	0	6	0
ವಿವೇಕವಾಣಿ	0	3	0
ಕಲ್ಲು ಸಕ್ಕರೆ	0	3	0
ಕೆನೆ ಹಾಲು	0	3	0
ಬೊಮ್ಮನ ಹಳ್ಳಿ ಕಿಂದರಿ			
ಜೋಗಿ	0	2	0
ಇಕ್ಕೇರಿ ಸಂಸ್ಥಾನದ ಚರಿತ್ರೆ	1	1	0
ಗುಮ್ಮ ನಾಯಕನ ಪಾಳಯದ			
ಪಾಳೆಯಗಾರರು	0	14	0
ಬಂಧನದ ಆಚೆ	2	8	0
ಆರೋಗ್ಯ ಪ್ರತಾಪ	0	10	0
ಮುದುಕನ ಹೆಂಡ್ತಿ			
ಧಕಧೈರಾಧ	0	1	0
ಅದ್ದ ಬೆಳೆದ ಗಿಡ್ಡಿಯ			
ಮದುವೆ	0	1	0
ಸುರಸ ಕವಿತಾಹಾರ	0	8	0
ಗರತಿಯ ಹಾಡು	0	10	0
ಹೊಂಬಿಸಿಲು	0	10	0
ಮಲ್ಲಿಗೆ ದಂಡೆ	0	12	0
ಪಾಪಾಜಿ ಸಂತ	0	12	0

	ರೂ.	ಆ.	ಪೈ
ಸೊಬಗಿನ ಬಳ್ಳಿ	0	8	0
ಕರ್ನಾಟಕದ ವೀರ			
ಕ್ಷತ್ರಿಯರು	1	0	0
ಪುಷ್ಪಮಾಲೆ	0	12	0
ಬ್ರಾಹ್ಮಣರ ಹುಡುಗಿ	0	12	0
ಕುರಿ ಹಿಂಡು	1	0	0
ದಿಲ್ಲೀಶ್ವರನ ದಿನಚರಿ	0	12	0
ವಿಮರ್ಶೆ ೧ನೇ ಭಾಗ	0	10	0
,, ೨ನೇ ,,	0	12	0
,, ೩ನೇ ,,	0	12	0
ತಿರುಕರ ಪಿಡುಗು	0	10	0
ಆದರ್ಶ್ಕಿಂಸು	0	6	0
ತರಂಗಿಣಿ	0	6	0
ಜೀವನ ಸಂಗೀತ	0	10	0
ಆಹ್ವಾನ	0	6	0
ನಗೆಯ ಹೊಗೆ	0	4	0
ಆಹುತಿ	1	0	0
ವಿಶ್ವಾಮಿತ್ರನ ಸೃಷ್ಟಿ	1	12	0
ಜೀವನ ಯಾತ್ರೆ	0	12	0
ರಮಾ ಮಾಧವ	0	6	0
ಶ್ರೀಕೃಷ್ಣ ಚರಿತಾಮೃತ	1	0	0
ಹಿಡಿಂಬಿ	0	8	0
ಕೃಷ್ಣಾ ಕುಮಾರಿ	1	1	0
ಚಿತ್ರಕಲೆಯಲ್ಲಿ ರಾಜಾ ರವಿ			
ವರ್ಮನ ಸ್ಥಾನ	2	0	0
ಪ್ರಳಯ ತಾಂಡವ	0	6	0
ಅಭಿಮನ್ಯು	0	6	0
ಕಾಳರಾತ್ರಿ	0	12	0
ಸೇವಾ ಪ್ರದೀಪ	0	12	0
ಧರ್ಮ ಸೆರೆ	0	11	0
ಶ್ರೀ ರಂಗಭೂಮಿ	0	12	0
ಧೂಮಕೇತು	0	14	0
ಧರ್ಮಜ್ಯೋತಿ	1	4	0
ಕಂಕಣ	0	8	0
ಪದ್ಯಾವಳಿ	0	2	6
ಮುಗುಳು	0	2	6
ಪರಿಣೀತಾ	0	10	0
ದೇವರ ಮಗು	0	1	0
ಹೆಂಗಸರ ಕತೆಗಳು	0	1	0
ಹೊಸ ಹೊಸ	0	1	0
ಉತ್ಪಾತ	0	1	0
ಎರಡು ಕಥೆಗಳು	0	1	0
ಭಯ ನಿವಾರಣೆ	0	1	0
ಮಿಸ್ 1934	0	1	0
ಪ್ರಾರ್ಥನೆ	0	1	0
ಹೆಂಡ್ತಿ ಗಂಡನಾದರ	0	1	0
ಗೀತಾ ಪ್ರಕಾಶ	2	0	0

	ರೂ.	ಆ.	ಪೈ
ಗೀತೆಯ ತಿರುಳು	0	4	0
ಗೀತೆಯ ಕೈಗನ್ನಡಿ	0	4	0
ಗಾಂಧೀಜಿಯವರ ಆತ್ಮಕತೆ			
ಭಾಗ ೧	1	0	0
,, ,, ೨	0	12	0
,, ,, ೩	0	9	0
,, ,, ೪	1	8	0
,, ,, ೫	1	8	0
ಅಭಿನೇಕನಾಟಕ	1	0	0
ಕಟ್ಟೆ ಪುರಾಣ	0	3	0
ಜಾಗ್ರತಿ	0	8	0
ನಾರದ ಗರ್ವಭಂಗ	0	3	0
ಪುನರ್ಜನ್ಮ	0	4	0
ಹಣಬರಹ	0	3	0
ಕೊಳಲು	0	12	0
ಚೆಲುವು	0	8	0
ಅಳಬೇಕೋ ನಗಬೇಕೋ	0	4	0
ಅನಾಥೋದ್ಧಾರ	0	2	0
ಕಾದಂಬರೀ ಕಥಾಸಾರ	0	8	0
ನಮ್ಮ ಊರಿನ ರಸಿಕರು	1	0	0
ಪುರೂರವ	0	8	0
ಸಂಯೋಗಿತೆ	0	6	0
ಹಳ್ಳಿಯ ಚಿತ್ರಗಳು	1	0	0
ಹಾಸನ ಟೋಪಿ	0	8	0
ಹೂಂದೊವಲ ಹಂಬಲು	0	6	0
ರಾಜಸಿಂಹ	1	12	0
ಪ್ರತಾಪ ಸಿಂಹ	0	4	0
ಕಂಠಾಭರಣ	0	12	0
ಲೀಲ	0	8	0
ಯುಗಳಾಂಗುರೀಯ	0	4	0
ಕಾಮಧೇನು	0	4	0
ಪರಿಮಳಾ	0	12	0
ನರಕದಲ್ಲಿ ನರಸಿಂಹ	0	6	0
ಸೂಹ್ರಾಬ್ ರುಸ್ತುಂ	1	0	0
ಸೌಂದರ್ಯ ಲಹರಿ	0	6	0
ಏಸಿಯಾ ಖಂಡದ ಜಾಗ್ರತಿ	1	2	0
ಖಾದಿ ಶಾಸ್ತ್ರ	1	2	0
ರಾರದೆಯ ಸಂಸಾರ	1	2	0
ಗೀತಾರ್ಥ ಚಂದ್ರಿಕೆ	2	8	0
ಕೃಷ್ಣಪಾರಿಜಾತ	1	1	0
ಉರುಟಣೆ	0	1	0
ಕಾಸಿನ ಸರ	0	6	0
ನಿಶಾಚರ	0	8	0
ಯಸ್ಮೀನಾ	0	2	0
ಮಗೂ ಮದುವೆ	0	1	0
ಗುರು ಚರಿತ್ರೆ	1	12	0
ಭಗವದ್ಗೀತಾ	2	0	0

— ಇವುಗಳಲ್ಲದೆ —

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ
ಮತ್ತಿತರ ಗ್ರಾಹಕರುಗಳಿಗೂ ಬೇಕಾದ ನಮೂನೆವಾರು
ಸಾಮಾನುಗಳು ನ್ಯಾಯವಾದ ಬೆಲೆಗೆ
ಇಲ್ಲಿ ದೊರೆಯುತ್ತವೆ.

ನವಭಾರತ ಬುಕ್ ಡಿಪೋ - - ಉಡುಪಿ - - ದ. ಕ.

ರಷ್ಯದ ನೂತನ ನಿರ್ಮಾಣ

ಲೈಂಗಿಕ ಜೀವನದ ಉದಾತ್ತತೆ

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿ ಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.]

—ಸಂ ನ

ಅನೇಕ ವಿಧದ ವಿಧಿನಿಷೇಧ, ಮತ್ತು ವಿರಕ್ತಭಾವನೆಗಳಿಂದ ತುಂಬಿರುವ ಧರ್ಮವನ್ನೂ ರಷ್ಯಾನರು ಮೂಲೆಗೆಸೆದಿರುವರು. ಆದುದರಿಂದ ಅವರ ನೀತಿಯ ಮೂಲ ಧರ್ಮವಲ್ಲ, ಮಾನವ ಸಮಾಜ "ಮಾನವ ಸಮಾಜದ ಹೊರಗಣ ಶಕ್ತಿಯೊಂದರಿಂದ ಪಡೆಯುವ ನೀತಿಯನ್ನು ನಾವು ಒಪ್ಪುವದಿಲ್ಲ; ಅದು ಕೇವಲ ವಂಚನೆ" ಎಂದು ಲೆನಿನರು ಹೇಳಿರುವರು. ಇಂತಹ ರೀತಿಯಲ್ಲಿಯೇ ನಡೆಯಬೇಕೆಂದು ಆಜ್ಞಾಪಿಸುವ ಅಥವಾ ಬೆದರಿಕೆ ಹಾಕುವ ದೇವರನ್ನು ರಷ್ಯಾನರೊಪ್ಪುವದಿಲ್ಲ. 'ಮಾನವರೆಲ್ಲಾ ನನ್ನಂತೆಯೇ ಇರಬೇಕೆಂದು ನನ್ನ ಅಪೇಕ್ಷೆ' 'ಅಂದರೆ ಸ್ತ್ರೀಸಂಗಪರಿತ್ಯಾಗಿಗಳಾಗಿ ವಿರಕ್ತರಾಗಿರಬೇಕೆಂಬ ಸೈಂಟ್ ಪಾಲನ ಕಠಿಣ ನಿರ್ಬಂಧದ ಕುರಿತು ರಷ್ಯಾನರು ತೀವ್ರ ತಿರಸ್ಕಾರವುಳ್ಳವರಿರುವರು. 'ಪ್ರೇಮಜೀವನದ ಸಂಪೂರ್ಣತೆಯಿಂದ ದೊರೆಯುವ ಆನಂದ ಮತ್ತು ಉತ್ಸಾಹವನ್ನು ಕಮ್ಯೂನಿಸ್ಟ್ ದೊರಕಿಸಿ ಕೊಡತಕ್ಕದ್ದು" ಎಂಬ ಲೆನಿನರ ಮಾತೇ ರಷ್ಯಾನರ ಲೈಂಗಿಕ ಜೀವನದ ತತ್ವವಾಗಿ ನಿಂತಿದೆ. ದುರ್ದಮನೀಯವೂ, ಸರ್ವವ್ಯಾಪಕವೂ ಆಗಿರುವ ಲೈಂಗಿಕ ಉತ್ತೇಜಕತೆಯಿಂದ ತಪ್ಪಿಸಿಕೊಳ್ಳುವುದರಲ್ಲಿ ಯಾವ ಪುರುಷಾರ್ಥವೂ ಇಲ್ಲೆಂದು ಅವರಭಾವನೆ. ಮಾನವ ಹೀಳಿಗೆಯನ್ನುಂಟುಮಾಡುವುದಕ್ಕಾಗಿಯೇ ಲೈಂಗಿಕ ಜೀವನವಿರುವುದೆಂಬ ಭಾವನೆಯನ್ನೂ ಅವರೊಪ್ಪುವದಾಗಿಲ್ಲ. ಸಂತತಿ ಉತ್ಪಾದನೆಯೇ ಲೈಂಗಿಕ ಜೀವನದ ಮುಖ್ಯ ಉದ್ದೇಶವಾಗಿ ಪ್ರಕೃತಿಯು ಅದನ್ನುಂಟುಮಾಡಿರಬಹುದು. ಆದರೆ ಮಾನವನು ಎಲ್ಲಾ ವಿಷಯಗಳಲ್ಲಿಯೂ ಪ್ರಕೃತಿಯನ್ನನುಸರಿಸುತ್ತಿರುವನೇ? ಪ್ರಕೃತಿಯ ಇಚ್ಛೆ ಪ್ರಕಾರ ಅವನು ತಿನ್ನುವನೇ? ಕುಡಿಯುವನೇ? ಉಡುಗೆ ತೊಡಿಗೆ ಹಾಕಿಕೊಳ್ಳುವನೇ? ಪ್ರಣಯ ವ್ಯಾಪಾರನಡೆಸುವನೇ? ಪ್ರಕೃತಿಯಲ್ಲಿ ಭಾವನೆಯಿಲ್ಲ, ಉದಾತ್ತತೆಯಿಲ್ಲ. ಪ್ರಕೃತಿಯ ಪ್ರಾಣಿವರ್ಗದಲ್ಲಿ ಲೈಂಗಿಕ ಪ್ರೇಮವೆಂಬುದಿಲ್ಲ, ಕಾಮ ಸಂತೃಪ್ತಿ ಮಾತ್ರ. ಪರಂತು ಮಾನವನಿಗೆ ಲೈಂಗಿಕ ಪ್ರೇಮವು ಮಹತ್ವದೊಂದು ಉದ್ವೇಗವು ಮತ್ತು ನಿಗ್ರಹಿಸಲಸಾಧ್ಯವಾದ ಅವರ ಉತ್ತೇಜಕತೆಗಳಿಗೆ ಕಣ್ಮುಚ್ಚಿಕೊಂಡಿರುವುದರಿಂದ ಪ್ರಯೋಜನವಿಲ್ಲ. ಲೆನಿನರು ಒಮ್ಮೆ ನಿರೂಪಿಸಿರುವಂತೆ, 'ಲೈಂಗಿಕಜೀವನದಲ್ಲಿ ಶಾರೀರಕ ಶಾಸ್ತ್ರವೂ ಸಂಸ್ಕೃತಿಯೂ ಇರುವುದು" ಮತ್ತು ಅವೆರಡೂ ಪ್ರಾಮುಖ್ಯವಾಗಿರುವವು.

ನಾಚಿಕೆಕರವಾದುದೇನೂ ಇಲ್ಲ

ಮಾನವರಿಗೆ ಲೈಂಗಿಕ ಜೀವನವು ಕೇವಲ ಕಾಮತೃಪ್ತಿಗಾಗಿರುವುದಿಲ್ಲ; ಸಂತತಿ ಉತ್ಪಾದನೆಯ ಆದೊಂದು ಉಪಕರಣ ಮಾತ್ರವೇ ಅಲ್ಲ. ಅವೆರಡೂ ಮುಖ್ಯವಾದರೂ ಅವೆರಡಕ್ಕಿಂತಲೂ ಹೆಚ್ಚಿನ ಉದ್ದೇಶ ಅದಕ್ಕಿದೆಯೆಂದು ರಷ್ಯಾನರ ಅಭಿಮತ. ಲಿಂಗವು ಮಾನವ ಜೀವನದ ಉಚ್ಚಭಾಗವಾಗಿರುವುದಲ್ಲದೆ ಎಂದೂ ಕ್ಷುದ್ರವಾದುದಲ್ಲ. ತಿನ್ನುವುದಕ್ಕಿಂತ, ಚಹ ಕುಡಿಯುವುದಕ್ಕಿಂತ, ಪುಸ್ತಕಗಳನ್ನು ಓದುವುದಕ್ಕಿಂತ, ಸಂಗೀತ ಶ್ರವಣಕ್ಕಿಂತ, ಕಲಾಮಂದಿರಗಳ ಪ್ರದರ್ಶನಗಳನ್ನು ನೋಡುವುದಕ್ಕಿಂತ ಹೆಚ್ಚಿಗೆಯಾಗಿ ನಾಚಿಕೆಪಡತಕ್ಕುದ್ದಾಗಲಿ, ಹೇಸರತಕ್ಕದ್ದಾಗಲಿ, ಮರೆಮಾಡುವುದಾಗಲಿ, ದ್ವೇಷಿಸತಕ್ಕದ್ದಾಗಲಿ ಲೈಂಗಿಕ ಜೀವನದಲ್ಲೇನೂ ಇರುವುದಿಲ್ಲೆಂದೇ ರಷ್ಯಾನರ ವಾದ.

ಸ್ತ್ರೀ ಪುರುಷ ಸಮಾನ ಸ್ವಾತಂತ್ರ್ಯ

ಬೇರೆ ವಿಷಯಗಳಂತೆಯೇ ಲೈಂಗಿಕವಾಗಿಯೂ ಸ್ತ್ರೀ ಪುರುಷರಿಗೆ ಸರಿಸಮಾನ ಸ್ವಾತಂತ್ರ್ಯವಿರಬೇಕೆಂದೇ ರಷ್ಯಾನರ ಪ್ರಬಲ ಯತ್ನ. ಇದರಿಂದ ಸಮಾಜವು ದುರ್ಗತಿಗಿಳಿಯಬಹುದೆಂದು ಎಷ್ಟು ತರ್ಕಿಸಿದರೂ ಅವರು ಕೇಳುವ ಹಾಗಿಲ್ಲ. ಗಂಡಸರು ಈ ವರೆಗೆ ನಡಿಸಿಕೊಂಡು ಬಂದಂತೆ ಸ್ತ್ರೀಯರೂ ತಮ್ಮ ಲೈಂಗಿಕ ಸ್ವಾತಂತ್ರ್ಯವನ್ನು ದುರುಪಯೋಗಗೊಳಿಸಿದರ ಒಳ್ಳೇದಾಯಿತು. ಹಾಗೆಮಾಡುವುದಕ್ಕೆ ಅವರಿಗೆ ಹಕ್ಕಿರತಕ್ಕದ್ದೆಂದೇ ರಷ್ಯಾನರ ವಾದ. ಸ್ತ್ರೀಯರಿಗೆ ನಿರಾಕರಿಸಲ್ಪಟ್ಟಿರುವ ಭೋಗಗಳನ್ನು ಪುರುಷರನ್ನು ಅನುಭೋಗಿಸಬಿಡುವುದು, ಒಂದು ತರಗತಿಯ ಜನರು ಅನುಭವಿಸುವ ಹಕ್ಕುಗಳನ್ನು ಇನ್ನೊಂದು ವರ್ಗದವರಿಗೆ ನಿರಾಕರಿಸುವಷ್ಟೇ ಅನ್ಯಾಯ ಪಾಪಕರ ಮತ್ತು ತಮ್ಮ ಹೊಸ ನೀತಿಗೆ ವಿರುದ್ಧವಾದುದೆಂದು ರಷ್ಯಾನರ ತರ್ಕ. 'ಸಿಮೆಂಟ್' ಎಂಬ ಇತ್ತಲಾಗಿನ ರಷ್ಯಾನರ ಕಾದಂಬರಿಯೊಂದರಲ್ಲಿ ಗಂಡನು, ತನ್ನ ಹೆಂಡತಿಯ ಇಚ್ಛೆಗೆ ವಿರುದ್ಧವಾಗಿ ತನ್ನ ಗಂಡಸುತನದ ಅಧಿಕಾರವನ್ನು ನಡಿಸಲೆಳಸುವಾಗ ಹೆಂಡತಿಯು ಅದನ್ನು ಪ್ರಬಲವಾಗಿ ವಿರೋಧಿಸಿ, "ನಮ್ಮೊಳಗೇನೇ ನಾವು ನಿರ್ದಯ ಅಂತಃ ಕಲಹವನ್ನು ನಡಿಸಬೇಕಾಗಿದೆ. ನಮ್ಮ ಅಭ್ಯಾಸಗಳಿಗಂತ ಹೆಚ್ಚು ಪ್ರಬಲವೂ ಜೀವಂತವೂ ಆದುದು ಬೇರೆ ಯಾವುದೂ ಇಲ್ಲ. ಮತ್ಸರವು ಶಿಮ್ಮೊಳಗೆ ಬಂಡಾಯವೆದ್ದಿರುವುದು. ಅದು ನಿರಂಕುಶತನಕ್ಕಿಂತಲೂ ಕೆಟ್ಟದದು ಎಂದು ಗಂಡನಿಗೆ ಬುದ್ಧಿಹೇಳಿ ಅವನ ಗಂಡಸುತನದ ಅಧಿಕಾರವನ್ನು ನಡೆಯದೆಂದು ಎಚ್ಚರಿಸುವಳು

ಸ್ತ್ರೀಯು ಪುರುಷನಂತೆಯೇ ಲಿಂಗಸ್ವಾತಂತ್ರ್ಯವುಳ್ಳವಳಾದರೆ ಸ್ತ್ರೀ ಸಂಬಂಧವಾದ ಹಳೆಯ ಪವಿತ್ರ ನೈತಿಕ ಭಾವನೆಯು ತಳಹದಿಯೇ ಕುಸಿದು ಬೀಳುವುದು. ಸ್ತ್ರೀಯ ಪಾತಿವ್ರತ್ಯ ಮತ್ತು ಶೀಲವೆಂಬುದು ತತ್ವದಲ್ಲಿಯೂ ಆಚರಣೆಯಲ್ಲಿಯೂ, ವಿಧಿಯಾಗಿಯೂ ಪದ್ಧತಿಯಾಗಿಯೂ ಮೂಲೆಗುಂಪಾಗುವುದು. ಸ್ತ್ರೀಯರ ಮೇಲೆ ಹೊರಿಸಲ್ಪಡುವ ನೈತಿಕ ನಿರ್ಬಂಧವು ಅಳಿದುಹೋಗಬೇಕೆಂದೇ ರಷ್ಯಾನರ ಸಾಧನೆ. ಸ್ತ್ರೀಯರು ಸ್ತ್ರೀಯರಾಗಿರುವ ಮಾತ್ರದಿಂದಲೇ, ಗಂಡಸರು ಅನುಸರಿಸದಂತಹ, ಅಥವಾ ಸಹಿಸಿಕೊಳ್ಳಲಾರದಂತಹ ವಿಧಿ ನಿಷೇಧಗಳಿಗೆ ಅವರೇಕೆ ಒಳಗಾಗಬೇಕು? ಲೈಂಗಿಕ ನಡತೆಯ ಕುರಿತು ಸರ್ವ ಸ್ವಾತಂತ್ರ್ಯವನ್ನು ಗಂಡಸರಂತೆಯೇ ಸ್ತ್ರೀಯರ ವಿವೇಕ ಬುದ್ಧಿ, ಮನಸ್ಸಾಕ್ಷಿಗೆ ಬಿಟ್ಟುಕೊಡಬೇಕೆಂದೇ ರಷ್ಯಾನರ ಸಾಧನೆ. ಒಮ್ಮೆ ನನ್ನೊಂದಿಗೆ ಪ್ರಯಾಣಮಾಡುತ್ತಿದ್ದ ಜರ್ಮನ್ ವೈಜ್ಞಾನಿಕನೊಬ್ಬನು, ನಮ್ಮ ಸುತ್ತು ನೆರೆದಿದ್ದ ರಷ್ಯದ ತರುಣರೊಡನೆ, ಸ್ತ್ರೀಯರ ನೀತಿ, ಶೀಲದ ಕುರಿತಾ ವರ ರಷ್ಯಾನರ ಅಲಕ್ಷ್ಯವು ಅವರ ಸಮಾಜವನ್ನು ಅನೀತಿಗಿಳಿಸಬಹುದು. ಸ್ತ್ರೀಯರು ಜನಾಂಗದ ತಾಯಂದಿರು. ಆದರಿಂದಾಗಿ ನೀತಿಯ ಕುರಿತು ಅವರ ಮೇಲೆ ಗಂಡಸರಿಗಿಂತ ಹೆಚ್ಚಿನ ಜವಾಬ್ದಾರಿಯಿದೆಯೆಂದು ಪ್ರತಿಪಾದಿಸಿದರು. ಆಗ ನಮ್ಮ ಸುತ್ತಲಿದ್ದ ತರುಣರೆಲ್ಲಾ ಈ ಅಭಿಪ್ರಾಯವನ್ನು ಬೊಬ್ಬೆ ಹಾಕಿ ನಿಷೇಧಿಸಿದರು. ಅವರಿಗೆ ಜರ್ಮನ್ ವೈಜ್ಞಾನಿಕನ ಅಭಿಪ್ರಾಯವು ಬರ್ಬರವೂ ಅತಿ ಪುರಾತನವೂ ಆಗಿ ತೋರಿತು.

ಆಧುನಿಕ ವೈಜ್ಞಾನಿಕ ಅನುಕೂಲತೆಗಳೆಲ್ಲವುಗಳನ್ನೂ ರಷ್ಯದ ಸ್ತ್ರೀಯರು ಪುರುಷರಂತೆಯೇ ಅನುಭವಿಸುವರು. ಸಂತತಿ ನಿರೋಧ ಮತ್ತು ಗರ್ಭವಿನಾಶವು ರಷ್ಯದಲ್ಲಿ ಕಾಯಿದೆಶೀರವಾಗಿ ಮಾಡಲ್ಪಟ್ಟಿದೆ. ಆದರೆ ರಷ್ಯಾನರು ಅವೆರಡಕ್ಕೂ ಯಾವ ಪ್ರೋತ್ಸಾಹವನ್ನೂ ಕೊಡುವುದಿಲ್ಲ. ಅವರಿಗೀಗ ಯುದ್ಧದ ಭೀತಿತಾಗಿದೆ ವೈರಿಗಳು ತಮ್ಮ ಮೇಲೆ ಬೀಳಲು ಹೊಂಚುಹಾಕಿಕೊಂಡಿರುವರೆಂದು ಅವರ ಕಲ್ಪನೆ. ಆದುದರಿಂದ ಜನನ ಪ್ರಮಾಣವು ಕಡಿಮೆಯಾಗಬಾರದೆಂದು ಅವರು ಸಂತತಿ ನಿರೋಧದ ಕುರಿತು ಪ್ರಚಾರ ಕಾರ್ಯವೇನೂ ನಡಿಸುವುದಿಲ್ಲ. ಆದರೆ ಆ ಕುರಿತಾದ ಅನುಭವವನ್ನು ನಿರಾತಂಕವಾಗಿ ಪಡಕೊಳ್ಳಬಹುದು. ಆದುದರಿಂದ ಅದು ಜನತೆಯಲ್ಲಿ ವಿಸ್ಮಯಕರವಾಗಿ ಹಬ್ಬುತ್ತಿರುವುದು. ಗರ್ಭನಾಶವು ಹಾನಿಕರವಾದರೂ ಸಮಾಜಕ್ಕೆ ಅವಶ್ಯಕವಾದುದೆಂದು ರಷ್ಯಾನರು ಅಂಗೀಕರಿಸಿರುವರು. ಎಷ್ಟೊಂದು ಜಯಶೀಲವಾಗಿ ಗರ್ಭನಾಶಪಡಿಸಿದರೂ ಅದರಿಂದ ಆರೋಗ್ಯಕ್ಕೆ ಬಾಧಕ ಉಂಟಾಗದಿರದೆಂದು ಅವರು ಪ್ರಚಾರಮಾಡುತ್ತಿರುವರು. ಒಂದು ವೇಳೆ ಗರ್ಭನಾಶ ಮಾಡಿಕೊಳ್ಳಬೇಕಾದರೆ ಮಿಡ್‌ವೈಫ್‌ಗಳ ಬಳಿಗೆ ಹೋಗದೆ ಒಳ್ಳೇ ಅನುಭವವುಳ್ಳ ಡಾಕ್ಟರರಿರುವ ಆಸ್ಪತ್ರೆಗಳಿಗೆ ಹೋಗಿರೆಂದು ಎಚ್ಚರಿಸುತ್ತಿರುವರು. ಒಟ್ಟಾರೆ ರಷ್ಯಾನರು ಪ್ರತಿಯೊಂದು ವಿಷಯದಲ್ಲಿಯೂ ಪುರುಷರಷ್ಟೇ ಸ್ವಾತಂತ್ರ್ಯವನ್ನೂ ಅವರು ಅನುಭವಿಸುವಷ್ಟೇ ಹಕ್ಕು ಬಾಧ್ಯತೆಗಳನ್ನೂ ಸ್ತ್ರೀಯರಿಗಿತ್ತಿರುವರು.

ಆದರೆ ಸ್ವೇಚ್ಛಾಪರತೆಯು ಅವರಿಗೆ ಸಹನೀಯವಾಗುವುದಿಲ್ಲ. ತನ್ನ ಮತ್ತು ಸಮಾಜದ ಯೋಗಕ್ಷೇಮದ ದೃಷ್ಟಿಯಿಂದ ಪ್ರತಿಯೊಬ್ಬನೂ ವಿವೇಕಪರ ಆತ್ಮಸಂಯಮಿಯಾಗಬೇಕೆಂದೇ ರಷ್ಯಾನರ ಇಚ್ಛೆ. ಅನಿಯಂತ್ರಿತ ಕಾಮೋಪಭೋಗದಿಂದ ಆರೋಗ್ಯಕ್ಕೆ ಹಾನಿಯುಂಟಾಗುವುದು. ಒಬ್ಬನ ಆರೋಗ್ಯವು ಕೆಟ್ಟುಹೋದರೆ ಅವನ ಇಹ ಜೀವನದ ಸುಖಕ್ಕೇನೇ ಅವನು ಎರವಾಗಬೇಕಾಗುವುದು— ರಷ್ಯಾನರು ಇಹಜೀವನದ ಹೊರತು ಪರದಲ್ಲಿ ವಿಶ್ವಾಸವುಳ್ಳವರುವುದಿಲ್ಲ—ಅವನು ಸಮಾಜಕ್ಕೆ ತನ್ನಿಂದ ಸಾಧ್ಯವಾದ ಉತ್ಕೃಷ್ಟ ಸೇವೆಮಾಡಲು ಅಶಕ್ತನಾಗುವನು. ಇದು ಹೊರತು ಇಚ್ಛಾನುಸಾರ ಕಾಮೋಪಭೋಗಿಯಾಗಿರುವವನು ಕೇವಲ ತನ್ನೊಬ್ಬನ ಸಂಕುಚಿತ ಸ್ವಾರ್ಥಬುದ್ಧಿಯುಳ್ಳವನಾಗಿ ಸಮಾಜದ ಕುರಿತಾದ ತನ್ನ ಕರ್ತವ್ಯ ಬಾಹಿರನಾಗುವನು, ಅವನಲ್ಲಿ ಯಾವ ಜಾಗ್ರತಿಯೂ ಉಂಟಾಗದಂತಾಗುವುದು. "ಅಮಲೇರಿಸಿ ಬುದ್ಧಿ ಮಾಂದ್ಯತೆಯನ್ನುಂಟುಮಾಡುವ ಯಾವ ಮಾದಕವೂ ರಷ್ಯದ ಸಾಮ್ಯವಾದಿಗೆ ಬೇಕಾಗಿಲ್ಲ. 'ಕಾಮೋಪಭೋಗದ ಅಥವಾ ಸುರಾಪಾನದ ಉತ್ತೇಜಕತೆಯ ಅವಶ್ಯಕತೆಯು ಅವನಿಗಿಲ್ಲ. ಅವೆರಡೂ ಸಾಮಾಜಿಕ ಮತ್ತು ಶಾರೀರಕ ಹಾನಿಯನ್ನುಂಟುಮಾಡುವವು" ಎಂದು ಲೆನಿನರು ಸಾರಿರುವರು.

ರಷ್ಯದ ಕ್ರಾಂತಿಕಾರರು ಹೆಚ್ಚೆಚ್ಚಾಗಿ ಸೌಂದರ್ಯಭಾವನಾಪ್ರಚಾರಕ್ಕೆ ಗಮನ ಕೊಡುತ್ತಿರುವರು. ಮಾನವನು ತನ್ನ ಲೈಂಗಿಕ ಜೀವನದ ವಿಷಯದಲ್ಲಿ ಹೆಚ್ಚೆಚ್ಚು ಸಂಸ್ಕೃತನಾದಂತೆ ಪಶುಗಳಿಗಿಂತ ಹೆಚ್ಚೆಚ್ಚು ಶ್ರೇಷ್ಠತೆಯ ಮೆಟ್ಟಲಿಗೇರುವನು. ಮತ್ತು ಆತನ ಜೀವನದ ಸುಖಾನಂದವೂ ಅಧಿಕವಾಗುವುದು. 'ಸಾಮಾನ್ಯ ಮಾನವನೊಬ್ಬನು ಸರ್ವಸಾಧಾರಣ ಪರಿಸ್ಥಿತಿಗಳಲ್ಲಿ ಡಜನು ಕಟ್ಲೆ ಜನರು ಕುಡಿದಿರುವ ಗ್ಲಾಸಿನಲ್ಲಿ ಕುಡಿಯುವನೇ?" ಎಂದೇ ಲೆನಿನರ ಪ್ರಶ್ನೆ. ಇದರ ಅರ್ಥವು ಸ್ಪಷ್ಟವೇ ಇದೆ. ಲೈಂಗಿಕ ಜೀವನದಲ್ಲಿ ಸೌಂದರ್ಯವೂ ಶುಚಿಯೂ ಇರಬೇಕು. ಅದಕ್ಕಾಗಿ ಜನರು ಶಿಸ್ತು ಮತ್ತು ಸಂಯಮವುಳ್ಳವರಾಗಬೇಕು ಸ್ವೇಚ್ಛಾಪರತೆಯು ಕೊಳಕ ಹೊಂಡದಿಂದ ನೀರುಕುಡಿದಂತೆ ಲೈಂಗಿಕ ಜೀವನವನ್ನು ಹೇಯವಾಗಿ ಮಾಡುವುದೆಂದೇ ಲೆನಿನರ ಅಭಿಪ್ರಾಯ.

(ಮುಂದುವರಿಯುವುದು)

ಬಾತ್ಮೀದಾರರಲ್ಲಿ

ನಾವು ಪ್ರಕಟಿಸತಕ್ಕ ಬಾತ್ಮಿಗಳು ನಮಗೆ ಪ್ರತಿ ಮಂಗಳವಾರದೊಳಗೆ ಸಿಕ್ಕಿದರೆ ಮಾತ್ರ ಆ ವಾರದ ಸಂಚಿಕೆಯಲ್ಲಿ ಮುದ್ರಿಸಲು ಅನುಕೂಲವಾಗುವುದು. ವಿಳಂಬವಾಗಿ ಬಂದಲ್ಲಿ ಪ್ರಕಟಿಸಲು ಸಾಧ್ಯವಾಗಲಾರದೆಂದು ಈ ಮೂಲಕ ತಿಳಿಸಲಾಗಿದೆ.

ಮೆನೇಜರ್, **ನವಯುಗ**

ಸಮಾಚಾರ ಸಂಗ್ರಹ : ರಷ್ಯದಲ್ಲಿ ಇನ್ನು ೧೫ ಮಂದಿಯ ತಲೆ ಕಡಿತ, ಕಾಂಗ್ರೆಸಿನ ಮೇಲೆ ತಪ್ಪು ಸ್ಥಾಪನೆಯ ಪ್ರಯತ್ನ, ಕಾಂಗ್ರೆಸಿಗೆ ಪುನಃ ಆಮಂತ್ರಣ, ಕೊಟ್ಟಪಾಟಮಿನ ಲಾಠಿಪ್ರಹರ, ನಿರಕ್ಷರತೆಯ ನಿವಾರಣೆ

ರಷ್ಯದಲ್ಲಿ ಇನ್ನು ೧೫ ಮಂದಿಯ ತಲೆ ಕಡಿತ

ರಷ್ಯದಲ್ಲಿ ಜರ್ಮನರ ಹಸ್ತಕರಾಗಿ ಒಳ ಸಂಚು ನಡಿಸಿದ ಆರೋಪದಿಂದ ಕಳೆದವಾರ 60 ಮಂದಿ ಗಲ್ಲಿಗೇರಿಸಲ್ಪಟ್ಟಿರುವರಷ್ಟೆ. ಜಪಾನರ ಗುಪ್ತ ಪೋಲೀಸ್ ಸಂಘದ ಒಳ ಸಂಚಿಗೆ ಸೇರಿ ರಷ್ಯದ ಪೂರ್ವಭಾಗದ ರೈಲ್ವೆ ಮಾರ್ಗವನ್ನು ಮುರಿಯಲೆತ್ನಿಸಿದರೆಂಬ ಆರೋಪದಿಂದ ಇದೇ ತಾ 25ರಲ್ಲಿ ಇನ್ನೂ 15ಮಂದಿಯ ತಲೆಕಡಿಯಲಾಗಿದೆ.

ಸರಕಾರದ ವಿಮಾನಗಳ ಅಪಘಾತ

ಇದೇ ತಾ. 25ರಲ್ಲಿ ಬಿಲ್ಬವೋ ಪಟ್ಟಣಕ್ಕೆ ಹೋಗುತ್ತಿದ್ದ ಸ್ಪೈನಿಶ್ ಸರಕಾರದ ಕಡೆಯ 7 ವಿಮಾನಗಳಲ್ಲಿ 4 ವಿಮಾನಗಳು ಮುರಿದು ಬಿದ್ದಿರುವುವೆಂದು. ಬಂಡಾಯಗಾರರ ಕಡೆಯುವಾರ್ತೆ. ಬಾರ್ಬಿನ್ಸೊ ಎಂಬ ಚಿಕ್ಕಪಟ್ಟಣವೊಂದರಲ್ಲಿ ಅನಾರ್ಕಿಸ್ಟರೆಂಬ ಕ್ರಾಂತಿಕಾರರು ಸ್ಪೈನಿಶ್ ಸರಕಾರದ ಎದುರಾಗಿ ಬಂಡಾಯವೆಬ್ಬಿಸಿ ಸರಕಾರದ ಕಡೆಯ 100ಮಂದಿ ಮುಖಂಡರನ್ನು ಕೊಂದು ತಮ್ಮ ನಿರಂಕುಶಾಧಿಕಾರ ಸ್ಥಾಪಿಸಿರುವರೆಂದೂ, ಅವರನ್ನಡಗಿಸಲು ಸರಕಾರವು ಸೇನೆಯನ್ನು ಕಳುಹಿಸಿರುವರೆಂದೂ, ತಿಳಿದು ಬರುತ್ತವೆ.

ಕಾಂಗ್ರೆಸಿನ ಮೇಲೆ ತಪ್ಪು ಸ್ಥಾಪನೆಯ ಪ್ರಯತ್ನ

ಜಿಲ್ಲಾಧಿಕಾರಿಗಳಿಗೆ ಸರ್ಕಲರು

ಮಂತ್ರಿಪದವಿ ಸ್ವೀಕರಿಸದ ಕಾರಣಕ್ಕಾಗಿ ಕಾಂಗ್ರೆಸಿನ ಮೇಲೆ ತಪ್ಪುಸ್ಥಾಪನೆ ಮಾಡಿ ಜನರಲ್ಲಿ ಪ್ರಚಾರಕಾರ್ಯ ನಡಿಸಬೇಕೆಂದು ಮದ್ರಾಸು ಸರಕಾರದ ಸೆಕ್ರಿಟರಿಗಳು ಜಿಲ್ಲಾ ಅಧಿಕಾರಿಗಳಿಗೆಲ್ಲಾ ಸರ್ಕ್ಯುಲರು ಕೊಟ್ಟಿರುವರೆಂದು ಪ್ರಕಟವಾಗಿದೆ. 'ಕಾಂಗ್ರೆಸು ಕೇಳುವ ಆಶ್ವಾಸನೆಯನ್ನು ಗವರ್ನರರಿಗೆ ಕೊಡಲು ಸಾಧ್ಯವಿಲ್ಲ. ಮತ್ತು ಮದ್ರಾಸಿನ ಕಾಂಗ್ರೆಸ್ ಎಸೆಂಬ್ಲಿ ಪಕ್ಷದಲ್ಲಿ ಅಧಿಕಾರ ಸ್ವೀಕಾರದ ಪ್ರಶ್ನೆಯಿಂದಾಗಿ ಒಡಕುಂಟಾಗುವುದು ಎಂದೆಲ್ಲಾ ಜಿಲ್ಲಾಧಿಕಾರಿಗಳು ಪ್ರಚಾರಮಾಡಬೇಕೆಂಬುದೇ ಈ ಸರ್ಕ್ಯುಲರಿನ ಸಾರಾಂಶವಿರುವುದೆಂದು ಶ್ರೀ.ರಾಜಗೋಪಾಲಾಚಾರ್ಯರು ಪ್ರಕಟಿಸಿ ಸರಕಾರವು ಒಡ್ಡಿರುವ ಈ ಮೋಸದ ಬಲೆಗೆಯಾರೂ ಬೀಳಬಾರದೆಂದು ಎಚ್ಚರವಿತ್ತಿರುವರು. 'ಇಂತಹ ಕತೆಗಳೆಲ್ಲಾ ನುಳ್ಳೆನ್ನುತ್ತ, ಮತದಾರರ ಇಚ್ಛೆಯ ಬೆಂಬಲ ವಿರುವ ಕಾಂಗ್ರೆಸು ಅಜೇಯವಾಗಿದೆ. ಆದುದರಿಂದ ಎಸೆಂಬ್ಲಿ ಮೆಂಬರರು ಅಧಿಕಾರಿಗಳ ಬೂಟಾಟಿಗೆಗೆ ಮರುಳಾಗದೆ ಧೈರ್ಯಶಾಲಿಗಳೂ, ಸ್ಥಿರಚಿತ್ತರೂ, ಸತ್ಯನಿಷ್ಠರೂ ಆಗಿರಬೇಕೆಂದು ಶ್ರೀ ರಾಜಾಜೀಯವರು ವಿನಂತಿ ಮಾಡಿಕೊಂಡಿರುವರು. ಮದ್ರಾಸ್ ಸರಕಾರವು ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುವ ಗುಪ್ತ ಸರ್ಕಲರು, ಸಿವಿಲ್ ಸರ್ವಿಸಿನವರ ಮೇಲೆ ಸರಕಾರವು ಎಂದಿನಂತೆಯೇ ತನ್ನ ಅಧಿಕಾರ ನಡಿಸಿ ಅವರು ಮಂತ್ರಿಗಳಿಗಿಂತಲೂ ಗವರ್ನರರೊಡನೆಯೇ ಸಮೀಪ ಸಂಬಂಧವುಳ್ಳವರಾಗುವರೆಂಬುದನ್ನು ವಿದಿತಪಡಿಸುವುದು.

ಕಾಂಗ್ರೆಸಿಗೆ ಪುನಃ ಆಮಂತ್ರಣ

ಜುಲ್ಯಾತಿಂಗಳಲ್ಲಿ ಕೌನ್ಸಿಲ್ ಸಭೆ

ಸರಕಾರವು ಇನ್ನುಮುಂದೆ ಕಾಂಗ್ರೆಸಿಗೆ ಯಾವ ಆಶ್ವಾಸನೆಯನ್ನೂ ಕೊಡಲಾರದೆಂದು ತಿಳಿದು ಬರುತ್ತದೆ. ಇದೇ ಬರುವ ಜುಲ್ಯಾ ತಿಂಗಳಲ್ಲಿ ಗವರ್ನರರು ಎಸೆಂಬ್ಲಿ ಸಭೆ ಕರೆಯುವರು. ಸದ್ರಿಸಭೆಯಲ್ಲಿ ಇಂಟೆರಿಮ್ ಮಂತ್ರಿಗಳ ಮೇಲೆ ಅವಿಶ್ವಾಸದ ಠರಾವು ಮಂಜೂರಾದ ಪಕ್ಷದಲ್ಲಿ ಅವರು ರಾಜಿನಾಮೆಕೊಡುವರು. ಆ ಮೇಲೆ ಗವರ್ನರರು ಪುನಃ ಕಾಂಗ್ರೆಸ್ ಪಕ್ಷೀಯರನ್ನು ಮಂತ್ರಿ ಪದವಿಸ್ವೀಕರಿಸಲು ಆಮಂತ್ರಿಸುವರು. ಆಗಲೂ ಕಾಂಗ್ರೆಸಿನವರು ನಿರಾಕರಿಸಿದರೆ ಗವರ್ನರರು ಇಂಡಿಯಾ ಆಕ್ಟಿನ 93ನೇ ಪ್ರಕರಣದಮೇರೆಗೆ ಹೊಸರಾಜ್ಯಾಂಗ ರಚನೆಯನ್ನೇ 13ವರ್ಷಗಳವರೆಗೆ ರದ್ದುಮಾಡಿ ಆಡಳಿತವನ್ನೆಲ್ಲಾ ತಾವೇವಹಿಸಿ, ತಮ್ಮ ಸಹಾಯಕರಾಗಿ ಕೆಲವರನ್ನು ನೇಮಿಸಿ ರಾಜ್ಯಭಾರ ನಡಿಸುವರೆಂದು ತಿಳಿದು ಬರುತ್ತದೆ. ಬ್ರಿಟಿಷ್ ಸರಕಾರವೇ ಈ ನಿರ್ಣಯಕ್ಕೆ ಬಂದಿರುವುದಂತೆ.

ಕೊಟ್ಟಪಾಟಮಿನ ಲಾಠಿಪ್ರಹರ

ಗುಂಟೂರು ಜಿಲ್ಲೆಯ ಕೊಟ್ಟಪಾಟಮ್ ಎಂಬಲ್ಲಿ ನಡೆದ ಸಮತಾವಾದ ಪ್ರಚಾರಕ ಶಾಲೆಯನ್ನು ಮದರಾಸ್ ಸರಕಾರವು ನಿಷೇಧಿಸಿ, ಸದ್ರಿ ನಿಷೇಧದ ಹುಕುಮು ಉಲ್ಲಂಘಿಸಲ್ಪಟ್ಟಾಗ ಪೋಲೀಸರ ದಸ್ತಗಿರಿಮಾಡಿದುದುಮಾತ್ರವಲ್ಲದೆ ಲಾಠಿಪ್ರಹರ ನಡಿಸಲಿಲ್ಲೆಂದು ಸರಕಾರವು ಪ್ರಕಟಿಸಿರುವುದು. ಇದು ಶುದ್ಧ ಸುಳ್ಳೆಂಬುದು, ಕೈದಿಗಳನ್ನು ಸ್ವತಃ ಕಂಡ ಶ್ರೀಯುತ ಪ್ರಕಾಶಂ ಮತ್ತು ಶ್ರೀ. ಕಳೇಶ್ವರ ರಾಯರ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ.

ಶ್ರೀ ಪ್ರಕಾಶಮರು ಒಂಗೋಲು ಸಬ್ ಜೈಲಿಗೆ ಹೋಗಿ ಕೈದಿಗಳನ್ನು ಕಂಡಾಗ, ಶ್ರೀ ಕಾಮೇಶ್ವರರಾಯರ ಬೆನ್ನಿನಲ್ಲಿ ಲಾಠಿ ಪೆಟ್ಟಿನ ಗುರುತಿದ್ದಿತು. ಶ್ರೀ ಸತ್ಯನಾರಾಯಣ ರಾಜರುಗಳ ಎದೆಯ ಎಡಭಾಗವು ಬಾತಿಹೋಗಿತ್ತು. ಶ್ರೀಗಳಾದ ನರಸಿಂಹಮ್ ಮತ್ತು ಸಾಂಡ್ಯಾಲರ ಕಣ್ಣಿಗೆ ಪೆಟ್ಟಾಗಿದ್ದಿತು. ಶ್ರೀ ರಾಮರಾವ್ ಬಿ. ಎ. ಎಲ್. ಎಲ್. ಬಿ. ಯವರ ಮೂಗಿಗೆ ಪೆಟ್ಟಾಗಿತ್ತು. ಶ್ರೀಗಳಾದ ಕಾಮೇಶ್ವರರಾವ್ ಮತ್ತು ಸತ್ಯನಾರಾಯಣರಿಗೆ ಲೋಕಪ್ಪಿನಲ್ಲಿಯೂ ಪೆಟ್ಟು ಹೊಡೆಯಲಾಗಿದೆಯೆಂದು ತಿಳಿದು ಬರುತ್ತದೆ. "ಪೋಲೀಸರ ಲಾಠಿಪ್ರಹರ ಮತ್ತು ಒದೆಯ ನಿಮಿತ್ತ ಹಲವು ಕೈದಿಗಳ ಮೈಯ್ಯಲ್ಲೆಲ್ಲಾ ಗಾಯಗಳಾಗಿ ಬಹಳ ರಕ್ತ ಹೋಗಿತ್ತೆಂಬುದನ್ನು ಯಾರಿಗೂ ನಿರಾಕರಿಸಲು ಸಾಧ್ಯವಿಲ್ಲ. ಒಬ್ಬ ಕೈದಿಯು ರಕ್ತಕಾರಿದ್ದನು. ಸತ್ಯನಾರಾಯಣ ರಾಜುವಿಗೆ ಎದೆಗೆ ಪೆಟ್ಟಾಗಿ ಆಸ್ಪತ್ರೆಯಲ್ಲಿರುವನು. ಮೇ ತಾ. 21ರಲ್ಲಿ ಗುಂಟೂರಿನ ಉಷ್ಣವು 118ಡಿಕ್ರಿಯಿರುವಾಗ ಪೋಲೀಸರು ಬೆಳಗ್ಗೆ 10ಘಂಟೆಯ ನಂತರ 40ಮಂದಿ ಕೈದಿಗಳನ್ನು 4ಮೈಲು ನಡಿಸಿದರು. ಒಬ್ಬ ಹುಡುಗನ ಸಮೇತ 7ಮಂದಿ ಸ್ತ್ರೀಯರನ್ನು ಮಾಡಿಲ್ಲದ ಲೋರಿಯಲ್ಲಿ ಹಾಕಿ ಮಧ್ಯಾಹ್ನದ ಬಿಸಿಲಲ್ಲಿ 11 ಮೈಲು ಒಯ್ದರು. ಪೋಲೀಸರು ಮಾತ್ರ ಮಾಡಿದ್ದ ಲೋರಿಯಲ್ಲಿ ಕುಳಿತುಕೊಂಡರು. ಈ ಕೈದಿಗಳುಮಾಡಿದ ತಪ್ಪೇನು? ತಾವು ನ್ಯಾಯವಾಗಿ ಸಮತಾವಾದ ತತ್ವ ಪ್ರಚಾರಕ್ಕಾಗಿ ನಡಿಸಿರುವ ಶಾಲೆಯನ್ನು ನಿಷೇಧಿಸಿರುವ ಇಂಟೆರಿಮ್ ಮಂತ್ರಿಗಳ ಹುಕುಂ ಅನ್ಯಾಯವಾದುದು ಮತ್ತು ಅವರಿಗೆ ಆ ಹುಕುಮು ಕೊಡಲು ಹಕ್ಕಿಲ್ಲೆಂದು ಮನಃಪೂರ್ವಕವಾಗಿ ನಂಬಿ ಸತ್ಯಾಗ್ರಹ ಮಾಡಿದುದರಲ್ಲಿ ಅಂತಹದೊಡ್ಡ ಅಪರಾಧವೇನು? ಎಂದೇ ಶ್ರೀ ಕಳೇಶ್ವರರಾಯರ ಹೇಳಿಕೆಯ ಸಾರಾಂಶ. ಪೋಲೀಸರ ಲಾಠಿ ಪ್ರಹರದ ಕುರಿತು ಆಂಧ್ರ ಕಾಂಗ್ರೆಸ್ ಕಮಿಟಿಯವರು ವಿಚಾರಣೆ ನಡಿಸುತ್ತಿರುವರು. ಇಂಟೆರಿಮ್ ಮಂತ್ರಿಗಳಿಗೆ ನಿಷೇಧ ಹುಕುಮು ಕೊಡುವ ಅಧಿಕಾರವಿಲ್ಲೆಂದು ಆಕ್ಷೇಪಿಸಿ ಹೈಕೋರ್ಟಿನಲ್ಲಿ ಖಟ್ಲೆ ನಡೆದಿರುವುದು.

ನಿರಕ್ಷರತೆಯ ನಿವಾರಣೆ

ಚೀನಾ ಸರಕಾರದ ಪ್ರಚಂಡಯತ್ನ

ಚೀನದ ಜನರೆಲ್ಲಾ ಅಕ್ಷರಜ್ಞರಾಗುವಂತೆ ಅಲ್ಲಿಪ್ರಾಥಮಿಕ ವಿದ್ಯೆಯನ್ನೀಯುವ ಧರ್ಮಾರ್ಥ ಶಾಲೆಯನ್ನು ಸಾವಿರಗಟ್ಟಲೆಯಲ್ಲಿ ತೆರೆಯುವ ನಿರ್ಧಾರವನ್ನು ಸರಕಾರವು ಮಾಡಿರುವುದು. ಇದಕ್ಕಾಗಿ ಇನ್ನು 12 ತಿಂಗಳಲ್ಲಿ ಚೀನಕ್ಕೆ ಹೊಸತಾಗಿ 100,000 ಅಧ್ಯಾಪಕರು ಬೇಕಾಗಿರುತ್ತಾರೆ. ನಿರಕ್ಷರಿಗಳೆಲ್ಲರೂ ಸರಕಾರವು ತೆರೆಯುವ ಧರ್ಮಾರ್ಥ ಶಾಲೆಗಳಿಗೆ ಹೋಗಿ ಕಲಿಯಬೇಕೆಂದು ಪ್ರಚಂಡ ಚಳವಳವೇ ನಡೆದಿರುವುದು. ಸರಕಾರವು ಬರುವ ಜುಲ್ಯಾ ತಾ|| 1ರಿಂದ ಆರಂಭವಾಗಿ 1ವರ್ಷದ ವರೆಗೆ 20ಲಕ್ಷ ಮಂದಿಗೆ ವಿದ್ಯೆಯನ್ನೀಯುವ ಅನುಕೂಲತೆ ಮಾಡಿರುವುದು. ಇಷ್ಟರ ವರೆಗೆ 1೬ಲಕ್ಷ ಮಂದಿ ಪ್ರಾಥಮಿಕ ವಿದ್ಯೆಪಡೆಯಲು ಸರಕಾರಕ್ಕೆ ಅರ್ಜಿ ಹಾಕಿರುವರು.

ಉಕ್ಕಿನ ಕಾರ್ಖಾನೆ ಕೆಲಸಗಾರರ ಮುಷ್ಕರ

ಅಮೇರಿಕದ 3ದೊಡ್ಡ ದೊಡ್ಡ ಉಕ್ಕಿನ ಕಾರ್ಖಾನೆಗಳ 23,000 ಕೆಲಸಗಾರರು ಇಷ್ಟರಲ್ಲೇ ಮುಷ್ಕರ ಹಿಡಿದಿರುವರು. ಒಟ್ಟು 80,000 ಮಂದಿ ಈ ಮುಷ್ಕರಕ್ಕೆ ಸೇರ ಬಹುದೆಂದು ನಂಬಲಾಗಿದೆ. ಚಿಕಾಗೋ ಪಟ್ಟಣದ ರಿಪಬ್ಲಿಕ್ ಸ್ಟೀಲ್ ಕಂಪೆನಿಯವರು ಈ ಮುಷ್ಕರವನ್ನು ಗಣಿಸದೆ ಕಾರ್ಖಾನೆ ಕೆಲಸ ನಡಿಸುತ್ತಿರುವರು. ಇಲ್ಲಿ ಮುಷ್ಕರಗಾರರು ಪಹರೆ ನಡಿಸಿದಾಗ ಪೋಲೀಸರು ಬಂದು ಅವರನ್ನು ಚದರಿಸಿ 20 ಮಂದಿಯನ್ನು ದಸ್ತಗಿರಿ ಮಾಡಿರುವರು.

೫೦೦ಮಂದಿಯ ಮರಣ.

ಮೆಕ್ಸಿಕೋದೇಶದ ಒಂದು ಹಳ್ಳಿಯಲ್ಲಿ ಲೋಹವನ್ನು ತೊಳೆಯಲು ಸಂಗ್ರಹಿಸಲ್ಪಟ್ಟಿದ್ದ ಹೊಯಿಗೆ ರಾಶಿಯಲ್ಲಿ ರಾತ್ರಿ ನೀರು ಉಕ್ಕೇರಿ ನೀರೂ ಹೊಯಿಗೆಯೂ ಕೆಳಗಣ ಮನೆಗಳ ಮೇಲೆಲ್ಲಾ ಹರಿದು ಮನೆಗಳೆಲ್ಲಾ ನಾಶವಾಗಿರುವವಲ್ಲದೆ ಅವುಗಳೊಳಗೆ ಮಲಗಿದ್ದ ಸುಮಾರು 500 ಮಂದಿ ಕೊಲ್ಲಲ್ಪಟ್ಟಿರುವರು.

೭೦ಮಂದಿ ಕೊಲ್ಲಲ್ಪಟ್ಟರು.

ಸಂಯುಕ್ತ ಪ್ರಾಂತದ ಜಗೇಶ್ವರ ಎಂಬ ಹಳ್ಳಿಯಲ್ಲಿ ಮೇ ತಾ.27ರಲ್ಲಿ ವಾರ್ಷಿಕ ಸಂತೆಯೊಂದು ನಡೆಯುತ್ತಿದ್ದಾಗ ಪ್ರಚಂಡ ಹಿಮಗಾಳಿ ಬೀಸಿತು. ಜನರು ದಿಗಿಲುಗೊಂಡು ಹತ್ತಿರದ ಧರ್ಮಶಾಲೆಗೆ ಹೋಗಿ ನಿಂತರು. ಆಗ ಅಕಸ್ಮಾತ್ತಾಗಿ ಆ ಧರ್ಮಶಾಲೆಯ ಮೇಲೆ ದೊಡ್ಡ ಬೋಗಿನ ಮರ

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
Head Office: UDIPI.
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ವೊಂದು ಬಿದ್ದು ಅದರೊಳಗಿದ್ದ 30ಮಂದಿ ಕೊಲ್ಲಲ್ಪಟ್ಟು ಸುಮಾರು 50 ಮಂದಿ ಗಾಯಗೊಂಡಿರುವರು.

ಪಂಜಾಬಿನಲ್ಲಿ ಬಿರುಗಾಳಿಯ ಹಾವಳಿ

ಮೇ ತಾ. 27ರಲ್ಲು ಪಂಜಾಬಿನಲ್ಲಿ ಪ್ರಚಂಡ ಬಿರುಗಾಳಿ ಬೀಸಿ ಹಾವಳಿಯಾಗಿರುವುದು. ಲಾಹೋರಿನಲ್ಲಿ ಮನೆಯ ಮೇಲ್ಪಟ್ಟಿನ ಮೇಲೆ ಮಲಗಿದ್ದವನೊಬ್ಬನು ಎತ್ತಿ 20ಅಡಿ ಕೆಳಕ್ಕೆಸೆಯಲ್ಪಟ್ಟಿರುವನು. ಶ್ಯಿಕ್ ಪುರದಲ್ಲಿಗಾಳಿಯಿಂದ ಹಾರಿಬಂದ ತವರದ ತಗಡೊಂದು ಗಂಡಹೆಂಡಿರಿಬ್ಬರಿಗೆ ತಾಗಿ ಹೆಂಡತಿ ಮೃತಳಾಗಿರುವಳು. ಗಂಡನಿಗೆ ಬಹಳ ಪೆಟ್ಟಾಗಿರುವುದು. ಮೇಲಂತಸ್ತಿನಲ್ಲಿ ಮಲಗಿದ್ದ ಓರ್ವ ಹೆಂಗಸು ಮತ್ತು ಮಗುವು ಕೆಳಗೆ ಅಂಗಳಕ್ಕೆ ಸೆಳೆದು ಹಾಕಲ್ಪಟ್ಟು ಮಗು ಸತ್ತು ಹೋಗಿರುವುದು. ಹೆಂಗಸು ಕಂಟಕಸ್ಥಿತಿಯಲ್ಲಿರುವಳು ಕೆಲವೆಡೆ ರೈಲುಗಾಡಿಗಳು ಉರುಳಿಹಾಕಲ್ಪಟ್ಟು ಬಹಳದೂರ ಒಯ್ಯಲ್ಪಟ್ಟಿರುವವು. ಬಂಗಾಳದ ಹಲವು ಕಡೆಗಳಲ್ಲಿಯೂ ಬಿರುಗಾಳಿ ಬೀಸಿ ಬಹಳ ಮಳೆಬಂದಿರುವುದು. ಒಂದು ಹಳ್ಳಿಯಲ್ಲಿ ಬಿರುಗಾಳಿಗೆ ಮುಸಲ್ಮಾನನೊಬ್ಬನು ಕೊಲ್ಲಲ್ಪಟ್ಟಿರುವನು.

ನೋಟೀಸು

ಬೆಂಟ್ರಪಾಡಿ ಗ್ರಾಮದ ಪೊರ್ದಾಳಲ್ಲು ಇರುವ ಸುಳಿಯಾಲು ಲಕ್ಷ್ಮಿ ಹೆಂಗ್ಸಿನ ಮಗಳು **ಚೆನ್ನಮ್ಮ ಹೆಂಗ್ಸು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದ್ರೆ**

ಮೇಲೆ ಹೇಳಿದ ಲಕ್ಷ್ಮಿ ಹೆಂಗ್ಸಿಗೆ: ದುಗ್ಗಮ್ಮ, ಐತಪ್ಪ ರೈ, ದಾಸಪ್ಪ ರೈ, ಸುಬ್ಬಯ್ಯ ರೈ, ವ, ನಾನುಕೂಡಾ 5ಜನ ಮಕ್ಕಳಾಗಿರುತ್ತೇವೆ. ಈ ಪೈಕಿ ದುಗ್ಗಮ್ಮನು ಸುಮಾರು 4ವರ್ಷಗಳ ಹಿಂದೆ ಮೃತಪಟ್ಟು ಹೋಗಿ ಈ ನಾಲ್ಕು ಜನರೇ ಉಳಿದಿರುತ್ತೇವೆ. ನಮ್ಮ ತಂದೆ-ಬಟ್ಯಪ್ಪ ರೈಗಳು ಮಕ್ಕಳಿಗೋಸ್ಕರ ಸಂಪಾದಿಸಿಟ್ಟ ಸ್ಥಿರ ಆಸ್ತಿ ವ, ಚರ ಸೊತ್ತುಗಳು, ವ ರೂ. 1000-0-0 ಕ್ರಯ ಬಾಳುವ ಚಿನ್ನಾಭರಣಗಳು, ನಗದು ಐವಜು ಕೂಡಾ ಇದ್ದು, ಇವುಗಳೆಲ್ಲಾ ನಮ್ಮ ತಾಯಿ ಹೆಸರಲ್ಲಿಯೂ, ವ ಸ್ವಾಧೀನತೆಯೂ ಇರುತ್ತದೆ. ಈ ಸ್ಥಿರ ಚರ ಸೊತ್ತುಗಳಿಗೂ, ಚಿನ್ನಾಭರಣಗಳಿಗೂ ಹೊರಗಿನಿಂದ ಬರತಕ್ಕ ನಗದು ಐವಜುಗಳಿಗೂ ನಾವು ನಾಲ್ಕು ಜನರೂ ಸರಿಸಮಾನವಾದ ಹಕ್ಕುಳ್ಳವರಾಗಿರುತ್ತೇವೆ. ನಮ್ಮ ಪೈಕಿ ಸುಬ್ಬಯ್ಯ ರೈ ಎಂಬವನು ಸುಮಾರು 6ತಿಂಗಳ ಲಾಗಾಯ್ತು ಊರಲ್ಲಿ ಇಲ್ಲದೆ ಪರ ಊರಿನಲ್ಲಿ ವಾಸ್ತವಿಸಿ ಕೊಂಡಿರುತ್ತಾನೆ. ನಮ್ಮ ತಾಯಿಯು ಈಗ ಸುಮಾರು 60ವರುಷ ಪ್ರಾಯ ಮಿಕ್ಕಿದವರಾಗಿದ್ದು ಸರಿಯಾದ ಬುದ್ಧಿ ಸ್ವಾಸ್ಥ್ಯತೆಇಲ್ಲದವರಾಗಿರುತ್ತಾರೆ. ಹೀಗಿರುತ್ತಾ ಸದ್ರಿ ತಾಯಮ್ಮನವರ ಸ್ವಾಧೀನತೆಯಲ್ಲಿದ್ದ ಸ್ಥಿರಾಸ್ತಿ ಚಿನ್ನಾಭರಣ ವ ಹೊರಗಿನಿಂದ ಬರತಕ್ಕ ನಗದು ಐವಜುಗಳಲ್ಲಿ ಕೂಡಾ ನನಗೊಬ್ಬಳಿಗೆ ಹಕ್ಕು ಇಲ್ಲದಂತೆ ಮಾಡಿ ದುರ್ಲಭ್ಯ ಪಡಿಯಬೇಕೆಂಬ ಇರಾಧೆಯಿಂದ ಬಾಕಿ ಗಂಡು ಮಕ್ಕಳು ವ ಮೃತಪಟ್ಟ ದುಗ್ಗಮ್ಮನ ಗಂಡ ಡೆಮ್ಮಂಗಾರ ಪಟೇಲ ಅಪ್ಪಯ್ಯ ರೈ ಇವರು ಏಕಸ್ಥರಾಗಿ ಸದ್ರಿ ನಮ್ಮ ತಾಯಿ ಲಕ್ಷ್ಮಿ ಹೆಂಗ್ಸಿನಿಂದ ತಮಗೆ ಬೇಕಾದಂತೆ ರಿಕಾರ್ಡುಗಳು ಮಾಡಿಸಿಕೊಳ್ಳುತ್ತಾರೆಂತಲೂ ಯಾ ಮಾಡಿಸಿಕೊಂಡಿದ್ದಾರೆಂತಲೂ ಕೂಡಾ ವರ್ತಮಾನ ಕೇಳುತ್ತೇನೆ. ಆದ್ದರಿಂದ ನಾನು ಈ ಮೂಲಕ ಜ್ಯಾಹೀರು ಮಾಡಿಕೊಳ್ಳುವದೇನೆಂದ್ರೆ ನಮ್ಮ ತಂದೆ ಬಟ್ಯಪ್ಪ ರೈಗಳು ಮಕ್ಕಳ ಪ್ರೀತ್ಯರ್ಥ ಕೊಟ್ಟಿರುವ ಸ್ಥಿರಾಸ್ತಿ ಚರ ಸೊತ್ತುಗಳು ವ ಚಿನ್ನಾಭರಣಗಳು ಮತ್ತು ಹೊರಗಿನಿಂದ ಬರತಕ್ಕ ನಗದು ಐವಜುಗಳು ಕೂಡಾ ನಮ್ಮ ಸಮಷ್ಟಿ ಹಕ್ಕಿನವುಗಳಾಗಿದ್ದು ಇವುಗಳ ಆಡಳ್ತೆಯನ್ನು ಮಾತ್ರ ನಡಿಸಿಬರಲಿಕ್ಕೆ ನಮ್ಮ ತಾಯಿಗೆ ಹಕ್ಕು ಅಲ್ಲದೆ ಅವುಗಳನ್ನು ಅವರ ಮನಸ್ಸೋ ಇಚ್ಛೆಯಂತೆ ವಿನಿಯೋಗಿಸಲು ಸದ್ರಿಯವರಿಗೆ ಯಾವ ವಿಧದಿಂದ್ಲೂ ಹಕ್ಕಿರುವದಿಲ್ಲ. ಆದ್ರಿಂದ ಮೇಲೆ ಹೇಳಿದಂತೆ ಗಂಡುಮಕ್ಕಳು ಐತಪ್ಪ ರೈ ವ ದಾಸಪ್ಪ ರೈ ವ ಸುಬ್ಬಯ್ಯ ರೈ, ಮತ್ತು ಅಳಿಯ ಅಪ್ಪಯ್ಯ ರೈ, ಇವರು ತಾಯಿಯವರಿಂದ ಈ ಮೊದ್ಲು ನನ್ನ ಒಪ್ಪಿಗೆ ಶಿವಾಯಿ ಯೇನಾದ್ರೂ ರಿಕಾರ್ಡುಗಳು ಮಾಡಿಸಿದ್ದರೆ ಯಾ ಇನ್ನು ಮುಂದೆ ಮಾಡಿಸುವದಾದ್ರೆ ಅಂಥಾ ರಿಕಾರ್ಡುಗಳು ಸದ್ರಿ ಮೇಲೆ ಹೇಳಿದ ಸೊತ್ತುಗಳಲ್ಲಿ ನನಗಿರುವ ಹಕ್ಕಿನ ಮಟ್ಟಿಗೆ ಯಾವ ವಿಧದಿಂದ್ಲೂ ಬಾಧಿಸಲಿಕ್ಕೂ ಕೂಡದು ವ ಅಂಥಾ ಯಾವತ್ತು ರಿಕಾರ್ಡುಗಳಿಂದಲೂ ಕೂಡಾ ಅವರಿಗೆ ಪ್ರಯೋಜನವು ಸಿಕ್ಕಲಿಕ್ಕೆ ಕೂಡದು ಎಂಬ ಸಂಗ್ತಿ ಈ ಮೂಲಕ ಸರ್ವ ಜನರಿಗೂ ತಿಳಿಸೋಣಾಗುತ್ತದೆ.

ಚೆನ್ನಮ್ಮನ ರುಜು.

❋ ಈ ಎಡ ಹೆಬ್ಬೆಟ್ಟಿನ ಗುರ್ತು ಕೂಡಾ ಚೆನ್ನಮ್ಮನ ರುಜು.

ಪೊರ್ದಾಳ, ತಾ. 23-5-1937

ಸ್ವೀಕಾರ ಮತ್ತು ವಿಮರ್ಶೆ

ಮಂತ್ರಿಪದದ ತೊಡಕು

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಧಾರವಾಡ ಇವರು ಪ್ರಕಟಿಸಿದ ಚಿಕ್ಕದೊಂದು ಪುಸ್ತಕವಿದು ಬೆಲೆ ೦-೧-೦.

ಕಾಂಗ್ರೆಸು ಮಂತ್ರಿಪದವನ್ನು ನಿರಾಕರಿಸಿದುದರ ಅಂತರಂಗವನ್ನು ಹಳ್ಳಿಗರು, ಏಕೆ ಎಲ್ಲರೂ ಕೂಲಂಕಷವಾಗಿ ಅರಿಯರೆಂದರೆ ತಪ್ಪಾಗದು. ಕಾಂಗ್ರೆಸಿನವರು ಕೇಳಿದ ಆಶ್ವಾಸನೆಯು ಅನುಚಿತವಾಗಿತ್ತೆಂದು ಅದನ್ನು ಕೊಡಲು ಸರಕಾರದವರಿಗೆ ಅಶಕ್ಯವಿದ್ದಿತೆಂತಲೂ ತಿಳಿದವರೂ ಇರುವರಲ್ಲದೆ ಆದರ ನಿಜವಾದ ವಿದ್ಯಮಾನವನ್ನು ಅರಿತವರು ತೀರಾವಿರಳ.

ಈ ಪುಸ್ತಕವು, ಆ ಎಲ್ಲ ಸಂಶಯಗಳಿಗೆ ತಕ್ಕ ಸಮಾಧಾನವನ್ನೀಯುವುದಲ್ಲದೆ ಅಧಿಕಾರ ನಿರಾಕರಣೆಯ ವಸ್ತುಸ್ಥಿತಿಯನ್ನು ತಿಳಿಸುತ್ತದೆ. ಗವರ್ನರರ ವಿಶೇಷಾಧಿಕಾರಸ್ವರೂಪ ಅವನ್ನು ಅನುಚಿತ ಸಂದರ್ಭಗಳಲ್ಲಿ ಉಪಯೋಗಿಸಕೂಡದೆಂದು ಕಾಂಗ್ರೆಸಿನವರು ಕೇಳಿದ ಆಶ್ವಾಸನೆಯ ಸ್ವರೂಪ, ಲೋರ್ಡ್ ಝೆಟ್ಲಂಡರ ಹೇಳಿಕೆ, ಆಕುರಿತು ಮಹಾತ್ಮಾಜೀಯವರೇ ಮೊದಲಾದವರ ಅಭಿಪ್ರಾಯಗಳು, ಕಾಂಗ್ರೆಸ್ಸಿನ ಘೋಷಣೆಯ ಕುರಿತು ರಾಜಕಾರಣತಜ್ಞರಾದ ಬ್ರಿಟಿಶ್ ಹಾಗೂ ಹಿಂದೀ ಮುತ್ಸದ್ದಿಗಳ ಅಭಿಪ್ರಾಯ ಮತ್ತು ಶ್ರೀ ರಾಜಾಜಿಯವರು ಮಂಗಳೂರಲ್ಲಿ ಮಾಡಿದ ಭಾಷಣವೇ ಮೊದಲಾದ ಪ್ರಾಮುಖ್ಯ ವಿಷಯಗಳಿರುವವು.

ಆದುದರಿಂದ ಒಂದಾಣೆಗೆ ಒಂದು ಮಹತ್ವದ ಸಂಗತಿಯನ್ನು ತಿಳಿಯುವುದರಿಂದ ಯಾರೂ ವಂಚಿತರಾಗರೆಂದು ನಂಬುವೆವು.

ಯೇಲಂ ನೋಟೀಸು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಬೋರ್ಡಿನ ತಾಬೆಗೆ ಒಳಪಟ್ಟಿರುವ ಧೂಪದ ಮರಗಳ ಹಣ್ಣುಗಳನ್ನು ಹದಿನೈದು ವರ್ಷಗಳ ಅವಧಿಯಿಂದ ಸಂಗ್ರಹಿಸುವ ಹಕ್ಕನ್ನು ಜಿಲ್ಲಾ ಬೋರ್ಡು ಇಂಜಿನಿಯರರು ಇದೇ ಬರುವ ಜೂನ್ ತಾ. 7ನೇ ಸೋಮವಾರ ದಿನ ಅಪರಾಹ್ನ ಗಂಟೆ 2ಕ್ಕೆ ಆ ದಿನ ಓದುವ ಶರ್ತಗಳಿಗೆ ಒಳಪಟ್ಟು ತಮ್ಮ ಆಫೀಸು ವಠಾರದಲ್ಲಿ ಬಹಿರಂಗವಾಗಿ ದರಖಾಸ್ತು ಮಾಡುವರಾಗಿ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿಯದೆ.

A. C. Gonsalves

ವೈಸ್ ಪ್ರೆಸಿಡೆಂಟ್

ಇನ್ ಚಾರ್ಜ್.

ದ. ಕ. ಜಿಲ್ಲಾ ಬೋರ್ಡ್ ಆಫೀಸು

21—5—'37.

WANTED

Candidates for Telegraph and station Master class. Allowance Rs. 28. Uniform, passage and quarter free. Service essential. Rules and Entrance from on annas eight. Director, Royal Telegraph and Ry. Duties College, Bombay 14.

ಬೇಕು

ವಿದ್ಯಾವತಿಯರೂ ರೂಪವತಿಯರೂ ಚೆನ್ನಾಗಿ ಹಾಡ ಬಲ್ಲವರೂ ಆದ ನಟಿಯರು ಬೇಕಾಗಿದೆ. ವಿವರಗಳಿಗೆ ಬರೆಯಿರಿ.

'X'

C/o 'Navayuga' Udipi.

Mohini Harmonium Works, Udipi

Single Hand Harmoniums, Portable Hand Harmoniums,
Double sets of Hand Harmoniums,
Trible sets of Hand Harmoniums,
Folding leg Harmoniums
Specially Constructed in our Work Shop. Well tuned and fitted.

Repairs of all kinds of Musical instruments undertaken at a very moderate rate to the Complete satisfaction of our customers.

A Trial order is earnestly solicited.

For Further Particulars

Apply to:

M. K. KORAGAPPA, *Proprietor.*

ಉಡುಪಿಯ ಆದರ್ಶ ಉಪಹಾರಗೃಹ!

ಶ್ರೀರಾಮಾ ರೆಸ್ಟೋರೆಂಟ್

ಸುಲಭ ದರದಲ್ಲಿ ತಿಂಡಿ ಪಾನೀಯಗಳು! ಮಿತ ದರದಲ್ಲಿ ಊಟ ಉಪಚಾರಗಳು!

ಊಟ ಉಪಹಾರಗಳ ರುಚಿ! ಸ್ಥಳ ಆಸನಗಳ ಶುಚಿ! ಇಷ್ಟೇ ಅಲ್ಲ, ಅನುಭವಪೂರ್ಣ ಮೇಲ್ವಿಚಾರಣೆ!

ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.

ಎಚ್. ಗೋಪಾಳ ನಾಯಕ್, ಪ್ರೊಪ್ರೈಟರ್.

ಇದೇ ತಿಂಗಳ ಆರಂಭದಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಡುವುದು.

ವಿಚಿತ್ರ ಪ್ರಪಂಚ

ತಂದೆಯು ಮೊಲೆ ಹಾಲು

ತಾಯಿ ಸತ್ತರೆ, ಮಕ್ಕಳು ಮೊಲೆಹಾಲಿನ ವಿಷಯದಲ್ಲಿ ಕಂಗಾಲಾಗಬೇಕಿಲ್ಲ. ವೈದ್ಯವಿಜ್ಞಾನಿಗಳು ಅದಕ್ಕೂ ಒಂದು ಉಪಾಯವನ್ನು ಹುಡುಕಿರುವರು. ಕುದುರೆಯ ನೈಯಲ್ಲಿ ಒಂದು ವಿಧವಾದ ರಸವಿದೆ. ಅದನ್ನು ತೆಗೆದು ಗಂಡಸಿಗೆ ಇಂಜಕ್ಷನ್ ಕೊಟ್ಟುಬಿಟ್ಟರೆ ಆಗಲೇ ಸುರುವಾಗುತ್ತೆ, ಗಂಡಸಿನ ಎದೆಯಲ್ಲೂ ಹಾಲೊಸರುವುದಕ್ಕೆ! ತಾಯಂದಿರು ಸ್ಕೂಲ್ ಮಿಸ್ಟ್ರೆಸ್‌ಗಳಿದ್ದು, ಮಕ್ಕಳಿಗಾಗಿ ತಮ್ಮ ಕಾರ್ಯವನ್ನು ನಿಲ್ಲಿಸಬೇಕಿಲ್ಲ. ಅವರ ಗಂಡಂದಿರಿಗೊಂದು ಇಂತಹ ಇಂಜಕ್ಷನ್ ಕೊಟ್ಟುಬಿಟ್ಟರಾಯಿತು!

ಸೃಷ್ಟಿಯಲ್ಲಿ ಸ್ತ್ರೀಪುರುಷರ ಅಂತರ

ಶಾರೀರಕ ಶಾಸ್ತ್ರನಿಷ್ಣಾತರು, ಸ್ತ್ರೀಪುರುಷರಿಗೆ, ಸೃಷ್ಟಿಯಲ್ಲಿರುವ ಗೂಢ ಭೇದವನ್ನು ಕಂಡುಹಿಡಿದಿರುವರು. ಪುರುಷನ ರೇತಸ್ಸಿನ ಪ್ರತಿ ಒಂದು ಬಿಂದುವಿನಲ್ಲಿ, ಒಂದು ಕೋಟಿಗೆ ಕಡಿಮೆಯಾಗದ ಜೀವಾಣುಗಳಿವೆಯೆಂದೂ, ಅವೆಲ್ಲವೂ ಸ್ವಸ್ಟಿಚೈತನ್ಯವನ್ನು ಹೊಂದಿವೆಯೆಂದೂ, ನಮಗೆ ಬಂದಾಗ ಅವೆಲ್ಲವೂ ಕೋಟಿ ಮಕ್ಕಳೇ ಆಗುವುವೆಂದೂ ಕಂಡುಹಿಡಿದಿರುವರು. ಸ್ತ್ರೀ ರೇತೋಭಾಗದ ಬಿಂದುವಾದರೋ ಒಂದು-ಹೆಚ್ಚೆಂದರೆ ಎರಡು ಮೂರು, ಜೀವಾಣುಗಳಿಂದ ಕೂಡಿದ್ದಾಗಿದೆಯಂತೆ.

ವಿಚಿತ್ರ ಆಡಿನ ಮರಿ

ಈ ಜಗತ್ತಿನಲ್ಲಿ ಸೃಷ್ಟಿಯ ವೈಚಿತ್ರ್ಯಗಳು ಅನಂತವಾಗಿ ನಡೆಯುತ್ತಲೇ ಇರುವವು. ಮೊನ್ನೆ ಮೊನ್ನೆ ಹಾವೇರಿ ತಾಲೂಕಿನ ಹಳ್ಳಿಯಲ್ಲೊಂದು ಆಡು ಮರಿ ಹಾಕಿತು. ಆಡು ಮರಿಹಾಕಿದುದರಲ್ಲಿಲ್ಲ ವಿಚಿತ್ರ! ವಿಚಿತ್ರವಿತ್ತು ಮರಿಯಲ್ಲಿ! ಅದೇನೆಂದಿರಾ? ಆ ಮರಿಗೆ ಎರಡು ಬಾಯಿಗಳೂ, ನಾಲ್ಕು ಕಿವಿಗಳೂ, ಎಂಟು ಕಾಲುಗಳೂ ಇದ್ದು ದೇಹ ಒಂದೇ ಆಗಿದ್ದಿತು. ಹುಟ್ಟಿದ ಮರುದಿನವೇ ಸತ್ತಿತೆನ್ನಿ! ಸುತ್ತುಮುತ್ತಲಿನ ಸಾವಿರಾರು ಜನರು, ಇದನ್ನು ಕಂಡು ಆಶ್ಚರ್ಯಪಟ್ಟಿರುವರು.

ಪ್ರಕೃತಿಯ ಸೂತ್ರವು ಡಾಕ್ಟರರ ಕೈಯಲ್ಲಿ!

ಐರೋಪ್ಯರು, ತಾವು ಹುಟ್ಟುವಾಗ, ಹೆಣ್ಣಾಗಿರಲಿ, ಗಂಡಾಗಿರಲಿ ಅದರಿಂದ ಹಾನಿಪಡಬೇಕಾಗಿಲ್ಲೆಂದು ತೋರುತ್ತದೆ. ಯಾಕೆಂದರೆ ಅವರು ಬೇಕಾದಾಗ ಲಿಂಗ ಮಾರ್ಪಾಟಹೊಂದುವ ದಿವಸ ದೂರವಿರುವಂತೆ ತೋರುವುದಿಲ್ಲ. ಗಂಡಸರಿಗೆ ಬೇಜಾರವಾದಾಗ ಡಾಕ್ಟರರ ಹತ್ತಿರ ಹೋಗಿಬಿಟ್ಟರಾಯಿತು; ಗಂಡನನ್ನು ಹೆಂಡತಿಯನ್ನಾಗಿಯೂ ಹೆಂಡತಿಯನ್ನು ಗಂಡನನ್ನಾಗಿಯೂ ಮಾರ್ಪಡಿಸಿಬಿಡುತ್ತಾರೆ, ಆ ವಿಜ್ಞಾನಿ ವೈದ್ಯರು! ಇದನ್ನು ಸುಳ್ಳೆನ್ನಬೇಡಿರಿ! ಐರೋಪ್ಯದಲ್ಲಿ ಇದಕ್ಕೆ ಹೇರಳವಾದ ಉದಾಹರಣೆಗಳಿವೆ.

ಹಂಗೇರಿಯ ಮಹಾತಾಯಿ

ಹಂಗೇರಿಯಲ್ಲಿ ಒಬ್ಬ ಜಿಪ್ಸಿ ಹೆಂಗಸಿದ್ದಾಳೆ. ಅವಳ ವಯಸ್ಸು ಇನ್ನೂ ೪೦. ತನ್ನ ೧೦ನೇ ವರುಷದಲ್ಲಿ ಒಬ್ಬ ಚೊಚ್ಚಲು ಮಗನನ್ನು ಪಡೆದಳು. ಆಮೇಲೆ ಆರು ಸಲ, ಅವಳಿಜವಳಿ, ಕಡೆಗೆ ಸರಾಸರಿ ವರುಷ ೧೮ರ ೧ ಮಗು, ಹೀಗಾಗಿ, ಈಗ ೨೦ ಮಕ್ಕಳಿದ್ದಾರಂತೆ.

ಮಕ್ಕಳನ್ನು ವೀರರನ್ನಾಗಿ ಮಾಡುವ ಉಪಾಯ

ಒಬ್ಬ ಮಹಾಶಯನು ಈ ಉಪಾಯವನ್ನು ಮಾಡಿಈಗಸೆರೆ ಮನೆಯಲ್ಲಿದ್ದಾನೆ? ಆವನೂರು ಆಸ್ಟ್ರಿಯಾ, ವೃತ್ತಿ ಉಪಾಧ್ಯಾಯ. ಮಕ್ಕಳನ್ನೆಲ್ಲಾ ವೀರರನ್ನಾಗಿ ಮಾಡಬೇಕೆಂದು ಅವನ ಇಚ್ಛೆ! ಅದಕ್ಕಾಗಿ ಕಬ್ಬಿಣದ ಮೊಳೆಗಳನ್ನು ತರಿಸಿ, ಹುಡುಗರಿಗೆ ತಿನ್ನಹೇಳಿದ. ಮೊಳೆಗಳನ್ನು ತಿಂದರೆ ಧೈರ್ಯವೂ ಶೌರ್ಯವೂ ಉಂಟಾಗುವುದೆಂದು ಅವನೆಣಿಕೆಯೋ ಏನೊ? ಅಂತೂ ಸಾಹಸಿ ಬಾಲಕನೊಬ್ಬನು ೩ ಮೊಳೆ ತಿಂದ. ಇದು ಸರಕಾರಕ್ಕೆ ತಿಳಿಯಿತು. ಬಿಡುತ್ತಾರೆಯೋ ಮತ್ತೆ? ದಸ್ತಗಿರಿಮಾಡಿ, ವಿಚಾರಿಸಿ ಕಳುಹಿಸಿದ್ದಾರೆ ಕಾರಾಗೃಹಕ್ಕೆ. ತಾನಾದರೂ ಮೊಳೆ ತಿಂದು ವೀರನಾಗಿರುತ್ತಿದ್ದರೆ ಈಗ ತಪ್ಪಿಸಿಕೊಂಡು ಹೋಗಬಹುದು!

ಇಲಿಲಿನ ಕಾಟ

ಇಲಿಲಿಗೇಕಿದ್ದ ಅವಳಲ್ಲಿ ಮುನಿಸು? ಪಾಪ, ಅಮೇರಿಕಾದಲ್ಲಿ ಒಬ್ಬ ಹೆಂಗಸು. ಅವಳ ಮನೆಯ ತೋಟದಲ್ಲಿರುವ ಮರ ಪೂಂದರಲ್ಲಿ ಬೂದಿ ಬಣ್ಣದ ಇಲಿಲೊಂದಿದೆಯಂತೆ. ಅದು ಇವಳನ್ನು ಕಂಡಾಗಲೆಲ್ಲಾ ಮರದಿಂದಿಳಿದು ಬಂದು ಕಚ್ಚುತ್ತದಂತೆ. ಈ ಉಪದ್ರ ತಡೆಯಲಾರದೆ "ಈ ಇಲಿಲಿನಿಂದ ನನ್ನನ್ನು ರಕ್ಷಿಸಿರಿ" ಎಂದು ಪೋಲೀಸ್‌ಗೆ ಅರ್ಜಿಹಾಕಿದ್ದಾಳಂತೆ.

ಬಾಲಕಿಯ ಮೇಲೆ ಅತ್ಯಾಚಾರ

ಬಾಗಾ ಎಂಬೊಂದು ಹಳ್ಳಿಯಲ್ಲಿ ಸೂಕೂ ಕೋಯಿರಿ ಎಂಬೊಬ್ಬ ತರುಣ. ಆ ಹಳ್ಳಿಯಲ್ಲೇ ಇನ್ನೊಂದು ಬಡಸಂಸಾರ. ಗಂಡಹೆಂಡರಿಬ್ಬರೂ ಕಲ್ಲಿದ್ದಲ ಗಣಿಯಲ್ಲಿ ಕೆಲಸಕ್ಕೆ ಹೋಗಿದ್ದರು. ಅವರ ಎಂಟು ವರ್ಷ ಪ್ರಾಯದ ಬಾಲಿಕೆ ಒಬ್ಬಳೇ ದನ ಮೇಯಿಸುತ್ತಿದ್ದಳು. ಸೂಕೂ ಕೋಯಿರಿಗೇನು ಮದವೇರಿತೋ? ಆ ಹುಡುಗಿಯನ್ನು ಹತ್ತಿರದ ಮನೆಗೊಯ್ದು, ಅವಳ ಮೇಲೆ ಅತ್ಯಾಚಾರಮಾಡತೊಡಗಿದ. ಇವನ ವಾಸಪೀಕ್ಷೆಗೆ ಆ ಎಳೆ ಹುಡುಗಿ ಈಡೇ? ಪ್ರಜ್ಞೆತಪ್ಪಿ ಬಿದ್ದಳು. ವಿಪರೀತ ರಕ್ತಸ್ರಾವವೂ ಆಯಿತು! ಮನೆಗೆ ಹೋಗಲೂ ಕೂಡಾ ಆಗದೆ ಬಲು ಪೇಚಾಡಿ ಮನೆಗೆ ತಲಪಿದಳೆನ್ನಿ. ಅವಳ ತಂದೆ, ತಾಯಿ, ಸಹೋದರರು ಸಾಯಂಕಾಲ ಬಂದು ಇದನ್ನು ನೋಡಿ ಈ ತಿಂಗಳು ೩೧ನೇ ತಾರೀಕಿಗೆ ಧನಾಬಾದಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ. ಅಪರಾಧಿಯನ್ನು ಪೋಲೀಸರು ಕೋರ್ಟಿಗೆಳದು ತಂದಿರುವರು. ಅವನ ಮದವನ್ನಿಳಿಸಲು ಆ ಹುಡುಗಿಯಿಂದಾಗದಿದ್ದರೂ ಕೋರ್ಟಿನವರಿಂದಲೂ ಆಗದಿದ್ದೀತೇ?

ಮೂಗನ್ನೇ ಕತ್ತರಿಸಿದ

ಕಲ್ಕತ್ತದ ಶಿವಚಂದ್ರದಾಸನೆಂಬ ತರುಣನೊಬ್ಬನು ಆಂಗ್ಲೋ ಇಂಡಿಯನ್ ತರುಣಿಯೊಬ್ಬಳನ್ನು ಪ್ರೀತಿಸುತ್ತಿದ್ದ. ಕಳೆದ ೫ ದಿನಗಳಿಂದ ಅವರವರೊಳಗೆ ಏನೋ ಜಗಳವಿತ್ತು. ಹೀಗಾಗಿದ್ದು ಕಳೆದ ವಾರ ಆಕೆಯ ಮೂಗನ್ನು ಕತ್ತರಿಸಿ ಹಾಕಿಬಿಟ್ಟ. ಈಗದು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ಕೇಸಾಗಿದೆ. ಜಾಮೀನಿನ ಮೇಲೆ ಆ ವಾದಿತನನ್ನು ಬಿಟ್ಟಿರುವರು. ಕೇಸು ಜೂನ್ ೧೬ಕ್ಕೆ ಮುಂದರಿಸಲಾಗಿದೆ.

ಇದೊಂದು ಹಬ್ಬ

ಜಪಾನಿನ ತಾಂಬೇ ಎಂಬ ಒಂದು ಹಳ್ಳಿಯಲ್ಲಿ ಅನೇಕ ವರುಷಗಳಿಂದ ಒಂದು ಹಬ್ಬವು ನಡೆಯುತ್ತಿದೆ. ಒಂದು ವಿಚಿತ್ರ ಹಬ್ಬ- ನಿದ್ದೆಯ ಹಬ್ಬ! ಪ್ರತಿ ವರ್ಷವೂ ಈ ಹಬ್ಬ ಎರಡು ದಿನಗಳವರೆಗೆ ನಡಿಯುತ್ತೆ. ಅಂದರೆ ಆ ದಿನಗಳಲ್ಲಿ ಅವರೆಲ್ಲರೂ ನಿದ್ರಿಸಿಯೇ ಕಾಲಕಳೆಯುತ್ತಾರೆ! ಎರಡು ದಿನ ಇಡೀ ನಿದ್ರಿಸಲಿಕ್ಕೆ ಕುಂಭಕರ್ಣನಿಂದ ಕಲಿತರೇನೊ?

ಹೊಟ್ಟೆಯೊಳಗೆ ಚಲಚಿತ್ರ

ವಿಜ್ಞಾನಶಾಸ್ತ್ರದ ಮೇಲಾಟದ ಕಾಲವಿದು. ಈಗೊಂದು ವಿಚಿತ್ರ ಸಾಧನವನ್ನು ಕಂಡುಹಿಡಿದಿದ್ದಾರೆ. ಅದೆಂದರೆ ಚಿಕ್ಕ ಕೆಮರಾ! ಅದನ್ನು ಬಾಯಿಯಲ್ಲಿ ಹಾಕಿ ನುಂಗಬಹುದು. ಅದರಲ್ಲಿ ಚಿಕ್ಕ ವಿದ್ಯುದ್ದೀಪವಿದೆ. ಅದನ್ನು ನುಂಗಿ ಅದಕ್ಕೆ ತಗಲಿರುವ ವಿದ್ಯುತ್ ತಂತಿಯನ್ನು ಕೈಯಲ್ಲಿ ಹಿಡಿದುಕೊಳ್ಳಬೇಕು ಈ ಕೆಮರಾವು ಕೇವಲ ಮೂರೇ ನಿಮಿಷಗಳಲ್ಲಿ ೩೦ ಅಡಿಗಳಷ್ಟು ಚಲನಚಿತ್ರಗಳನ್ನು ತೆಗೆಯುತ್ತದೆ! ಆ ಮೇಲೆ ಅದನ್ನು ಹೊರಕ್ಕೆ ತೆಗೆದರಾಯಿತು. ಹೊಟ್ಟೆಯೊಳಗೆ ಅವಯವಗಳ ಕೆಲಸವು ಹೇಗೆ ನಡೆಯುತ್ತದೆ ಎಂಬುದನ್ನು ಸರಿಯಾಗಿ ಈ ಚಿತ್ರಪಟದಲ್ಲಿ ಕಾಣಬಹುದು.

157 ವರ್ಷದ ತಾಯಿ 107 ವರ್ಷದ ಮಗಳು

ಇಗುಪ್ತದಲ್ಲಿ ಈಗ ನಡೆಯುತ್ತಿರುವ ಜನಸಂಖ್ಯಾ ಗಣನೆಯ ಸಂದರ್ಭದಲ್ಲಿ ಒಂದು ಹಳ್ಳಿಯಲ್ಲಿ 157 ವರುಷದ ತಾಯಿ ಮತ್ತು 107 ವರುಷದ ಮಗಳು ಒಟ್ಟಿಗೆ ಇರುವುದನ್ನು ಕಂಡುಹಿಡಿಯಲಾಗಿದೆ. ತಾಯಿಯ ಹೆಸರು ಲಿಫೀಯಾ, ಮಗಳದು ಮುಬಾರ್ಕಾ. ಇವರ ಚರ್ಮವೆಲ್ಲಾ ಸುಕ್ಕಿಹೋಗಿರುವುದು. ಜನಗಣನಾಧಿಕಾರಿಯು ಇವರ ಪ್ರಾಯವನ್ನು ಸಂಬದಿದ್ದಾಗ ತಾಯಿಯು ಇಗುಪ್ತದ ಮೇಲಿನ ನೆಪೋಲಿಯಾನನ ಧಾಳಿ, ಫ್ರೆಂಚ್ ಸೈನಿಕರಿಬ್ಬರು ತನ್ನ ಕುರಿತು ತೋರಿಸಿದ ಪ್ರೇಮದ ವಿದ್ಯಮಾನಗಳನ್ನೆಲ್ಲಾ ಸರಿಯಾಗಿ ವಿವರಿಸಿದಳು.

ಎಂದೂ ಬಗುಳದ ನಾಯಿಗಳು

ಬೇಟೆಗಾಗಿ ಉಪಯೋಗಿಸಲ್ಪಡುವ 4 ನಾಯಿಗಳೀಗ ಆಫ್ರಿಕದಿಂದ ಲಂಡನಿಗೆ ತಂದು ಪ್ರದರ್ಶಿಸಲ್ಪಟ್ಟಿರುವವು. ಇವುಗಳ ಕೂದಲು ಬಹಳ ಗಿಡ್ಡನಾಗಿದ್ದು ಕಿವಿ ನೆಟ್ಟಗೆ ಮತ್ತು ಚೂಪಾಗಿವೆ. ಬಸೆಂಜೆನ್ ಎಂದು ಇವುಗಳ ಹೆಸರು. ಇವು ಬಗುಳುವುದೆಂದೇ ಇಲ್ಲ. ಆಫ್ರಿಕದ ಕಾಡುಜನರು ಇವನ್ನು ಬೇಟೆಯಾಡಲು ಉಪಯೋಗಿಸುವರು.

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

ಜಾಹೀರು ನೋಟೀಸು

ನಮ್ಮ 'ಕಿರಿಯರ ಪ್ರಪಂಚ'ದ ಪುಸ್ತಕಗಳನ್ನು ವಿಕ್ರಯಿಸಲು ಉಡುಪಿಯಲ್ಲಿ ಇತ್ತೀಚೆಗೆ ತೆರೆಯಲ್ಪಟ್ಟ 'ನವಭಾರತ ಬುಕ್ ಡಿಪೊ'ದವರನ್ನು ಸೋಲ್ ಏಜೆಂಟರನ್ನಾಗಿ ನಿಯಮಿಸಲಾಗಿದೆ. ಇನ್ನು ಮುಂದೆ ಅವರಿಂದ ನಮ್ಮ ಪ್ರಕಟಣೆಗಳನ್ನು ಪಡೆದುಕೊಳ್ಳಬಹುದು.

ಕಾರ್ಯದರ್ಶಿ,
'ಕಿರಿಯರ ಪ್ರಪಂಚ'.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ. ಕ.

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: 1907]

ಅತ್ಯಧಿಕ ಬೋನಸು!

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,

ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,

ಬಲವಂತ ಪೊಲಿಸಿಗಳು ರೂ. 3 ಕೋಟಿ ಮಿಕ್ಕಿವೆ.

ಮೂಲಧನವು ರೂ. 75 ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಕೊಳ್ಳಿರಿ—

ಪಿ. ಡಿ. ಭರ್ಗೊವಾ ಎಸ್ಕ್ವಾಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಡಿಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಬುಕ್ ಡಿಪೊ, ಉಡುಪಿ — ಅಥವಾ — ಕಾರ್ಯದರ್ಶಿ, ಕಿರಿಯರ ಪ್ರಪಂಚ, ಉಡುಪಿ.

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ

ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ

‘ಶ್ರೀ ಭಗವನ್ನಾಮ ಸಂಕೀರ್ತನಾವಳಿ’

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್ತಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

The Manager, The National Kanara News Agency,
No. 58 Mody Street, Fort Bombay.

THE

Vijaya Bank, Ltd.

Head Office: MANGALORE. Branch Offices: Udipi, Kaup & Coondapoor.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೋ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಫಾರಂಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತವೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ಮರದಲ್ಲಿ ಯಾವಾಗಲೂ ಹಣ್ಣು ಇರುವದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದಶಿ ಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

ಮಂಗಳೂರು

ಮಂಗಳೂರು ನಗರ ಸಭೆ

ಯೂನಿಯನ್ ಜಾಕ್ ಅಥವಾ ಇನ್ನಾವ ಧ್ವಜವನ್ನೂ ನ. ಸ. ಅಪ್ಪಣೆಯಿಲ್ಲದೆ ನ. ಸಭಾ ಮಂದಿರದಮೇಲೆ ಹಾರಿಸಕೂಡದು

ಕಳೆದ ತಾ. ೨೯ನೇ ಬುಧವಾರ ದಿನ ಸಾಯಂಕಾಲ ಮಂಗಳೂರು ನಗರ ಸಭೆಯ ಒಂದು ಮೀಟಿಂಗ್ ನಗರ ಸಭಾ ಮಂದಿರದಲ್ಲಿ ನಡೆಯಿತು. ಮಾನ್ಯ ಡಾ। ಕೆ. ವಿಟ್ಠಲ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಸದಸ್ಯರ ಸಂಖ್ಯೆಯು ಬಹಳ ಕಡಿಮೆಯಿತ್ತು. ವೆಲೆನ್ಸಿಯಾ ಇಗರ್ಜಿಗೆ ಸಂಬಂಧಪಟ್ಟ ಕೆಲ ಪ್ರಶ್ನೆಗಳು ಬರುವುದೆಂದು ಅನೇಕ ಕ್ರೈಸ್ತ ಬಂಧುಗಳು ಬಂದಿದ್ದರು.

ಸಭೆಯವರು ಕೆಲವು ಬಾಬಿನ ವೆಚ್ಚಗಳಿಗೆ ಹಣವನ್ನು ಮಂಜೂರುಮಾಡಿದರು. ಮತ್ತು ಸರಕಾರದ ಕೆಲವು ಹುಕುಮುಗಳನ್ನು ಓದಿ ರಿಕಾರ್ಡು ಮಾಡಿದರು. ಆನಂತರ ಶ್ರೀ ರಂಗರಾವ್ ತಲಚೇರಿಕರರ ಪ್ರಶ್ನೆಗಳು ಬಂದುವು. ಈ ಪ್ರಶ್ನೆಗಳು ಕಿರೀಟಧಾರಣೆಯೆಂದು ನಗರ ಸಭೆಯ ಮೇಲೆ ಯೂನಿಯನ್ ಜಾಕ್ ಹಾರಿಸಿದುದರಿಂದ ಕಮಿಶನರು ನಗರ ಸಭೆಯ ಅಭಿಪ್ರಾಯವನ್ನು ತಿರಸ್ಕರಿಸಿದಂತಾಗಲಿಲ್ಲವೇ ಎಂದು ಪ್ರಶ್ನೆಹಾಕಿದರು. ಡಾ। ಶೆಟ್ಟಿಯವರು, ನಗರ ಸಭೆಯ ಉದ್ದೇಶವನ್ನೂ ನಿರ್ಧಾರವನ್ನೂ ತಿರಸ್ಕರಿಸುವ ಉದ್ದೇಶವು ತಮಗಿರಲಿಲ್ಲವೆಂದು ತಿಳಿಸುವರೆಂದರು. ಶ್ರೀ। ಕಾರಂತರು ಈ ಮಾತು ಅಧ್ಯಕ್ಷರದ್ದಾಗಿದೆಯೋ ಎಂದು ಕೇಳಿದರು. ಅಧ್ಯಕ್ಷರು ಸರಕಾರಿ ರೂಲು ಪ್ರಕಾರ ತಾವು ಉತ್ತರಕೊಡಬಹುದೆಂದೂ ಕಮಿಶನರು ತಿಳಿಸಿದ್ದನ್ನು ಮಾತ್ರ ತಾವು ತಿಳಿಸಿರುವುದಾಗಿಯೂ ಉತ್ತರ ಕೊಟ್ಟರು. ಕಮಿಶನರು ಉತ್ತರ ಕೊಡುತ್ತಾ ಹೀಗೆಂದರು:-ಕಿರೀಟಧಾರಣೆಯಲ್ಲಿ ಭಾಗವಹಿಸಬೇಕೆಂದು ಸರಕಾರದ ಪತ್ರ ಬಂದುದನ್ನು ಹಾಗೆಯೇ ರಿಕಾರ್ಡುಮಾಡಿದರು. ಆದರಿಂದ ಮಾತ್ರ ಧ್ವಜಹಾರಿಸಬಾರದೆಂಬ ಅಭಿಪ್ರಾಯವು ನನಗಾಗಲಿಲ್ಲ. ಧ್ವಜವನ್ನು ಹಾರಿಸಕೂಡದೆಂದು ನಗರ ಸಭೆಯವರು ಠರಾವನ್ನು ಮಾಡಿಲ್ಲ. ಈ ಸಂದರ್ಭದಲ್ಲಿ ಸರಕಾರದ ಕಟ್ಟಡದ ಮೇಲೆ ಸರಕಾರಿ ಧ್ವಜವನ್ನು ಇಂತಹ ಮುಖ್ಯದಿನಗಳಲ್ಲಿ ಹಾರಿಸುವುದು ತಪ್ಪಲ್ಲವೆಂದು ನಾನು ಹಾರಿಸಿದ್ದಲ್ಲದೆ ನಗರ ಸಭೆಯ ತೀರ್ಮಾನವನ್ನು ತಿರಸ್ಕರಿಸುವುದಕ್ಕಾಗಿಲ್ಲ. ಅದರ ನಿರ್ಧಾರವನ್ನು ತಿರಸ್ಕರಿಸುವ ಉದ್ದೇಶವು ನನಗಿರಲಿಲ್ಲ. ಇನ್ನು ಮುಂದಕ್ಕೆ ನಾನು ಇಂತಹ ಸಂದರ್ಭದಲ್ಲಿ ಏನು ಮಾಡಬೇಕೆಂಬುದನ್ನು ಸಭೆಯವರು ಸೂಚಿಸಿದರೆ ಆ ರೀತಿಮಾಡುವೆನು.

ಶ್ರೀ ತಲಚೇರಿಕಾರರಿಗೆ ಈ ಉತ್ತರದಿಂದ ತೃಪ್ತಿಯಾಗಲಿಲ್ಲ. ಅವರು ಕಮಿಶನರ ವರ್ತನೆಯನ್ನು ನಿಷೇಧಿಸಿ ತಂದಿದ್ದ ಠರಾವಿನ ಮೇಲೆ ಮತತೆಗೆದುಕೊಳ್ಳಬೇಕೆಂದರು. ಶ್ರೀ ಶ್ರೀಸ್ವರು ಈ ಸಂದರ್ಭದಲ್ಲಿ ಎದ್ದು:-ಧ್ವಜಹಾರಿಸಕೂಡದೆಂದು ಸಭೆಯು ನಿರ್ಧರಿಸಿತ್ತು! ಅದನ್ನು ಕಮಿಶನರು ತಿರಸ್ಕರಿಸಿದರು. ಎಂಬ ಅಭಿಪ್ರಾಯದಿಂದಿದ್ದೆನು. ಆದರೆ ಈಗ ನೋಡಿದರೆ ಅದು ಹಾಗಲ್ಲ. ಒಂದು ಪತ್ರವನ್ನು ರಿಕಾರ್ಡು ಮಾಡಿದ ಮಾತ್ರಕ್ಕೆ ನಾವು ಅದರಲ್ಲಿ ಭಾಗ ವಹಿಸಬೇಕೆಂಬ ಅರ್ಥವಾಗುವದಿಲ್ಲ. ಕಮಿಶನರು ಕೌನ್ಸಿಲಿನವರ ಅಭಿಪ್ರಾಯದಂತೆಯೇ ಅಭಿಪ್ರಾಯ ಪಡದಿದ್ದರೆ ಅದಕ್ಕಾಗಿ ನಾವು ತಪ್ಪುಹಿಡಿಯಲು ಸಾಧ್ಯವಿಲ್ಲ. ಸರಕಾರದ ಕಟ್ಟಡವಿದು. ಅದರ ಮೇಲೆ ಸರಕಾರದ ಧ್ವಜವನ್ನು ಹಾರಿಸಿದರು. ಆದ್ದರಿಂದ ಅದನ್ನು ತಪ್ಪಿಸುವುದಕ್ಕಾಗಲಿ, ಅಥವಾ ಕೌನ್ಸಿಲಿನ ಅಭಿಪ್ರಾಯವನ್ನು ತಿರಸ್ಕರಿಸಿದರೆಂದಾಗಲಿ ಹೇಳಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಕಮಿಶನರನ್ನು ತಪ್ಪಿತಸ್ಥರೆಂದೆನ್ನಲು ಸಾಧ್ಯವಿಲ್ಲ ಎಂದರು. ಕೊನೆಗೆ ಕಮಿಶನರ ಸಮಾಧಾನವನ್ನು ಸ್ವೀಕರಿಸಿ ಠರಾವನ್ನು ಮುಂದರಿಸದಿರಬಹುದೆಂದಾಯಿತು.

ಇನ್ನು ಮೇಲೆ ನಗರಸಭೆಯ ಅನುಮತಿಯಿಲ್ಲದೆ ಯೂನಿಯನ್ ಜಾಕನ್ನು ನಗರ ಸಭೆಯ ಕಟ್ಟಡದ ಮೇಲೆ ಹಾರಿಸುವುದಾಗಲಿ ಅಥವಾ ಅಲಂಕಾರಕ್ಕೆ ಉಪಯೋಗಿಸುವುದಾಗಲಿ ಕೂಡದೆಂದು ಶ್ರೀ ರಂಗರಾಯರು ಒಂದು ಠರಾವನ್ನು ತಂದರು. ಶ್ರೀ। ಕಾರಂತರು ಇದನ್ನನುಮೋದಿಸಿದರು. ಶ್ರೀ। ಶ್ರೀಸ್ವರು ಇದಕ್ಕೆ ಉಪಸೂಚನೆ ತಂದು ಯೂನಿಯನ್ ಜಾಕ್ ಎಂದು ಹೇಳಿ ಒಂದು ಧ್ವಜದ ಹೆಸರೆತ್ತಿ ಅದನ್ನು ಅಗೌರವಿಸುವುದು ಸರಿಯಲ್ಲವೆಂದರು ಮತ್ತು ಸಾರ್ವಭೌಮರಿಗೆ ರಾಜಭಕ್ತಿ ಸೂಚಿಸಿ ಈ ಕೌನ್ಸಿಲನ್ನು ಪ್ರವೇಶಿಸಿ ರಾಜರ ಧ್ವಜಕ್ಕೆ ಅಗೌರವ ತೋರಿಸುವುದು ಅಸಮಂಜಸವೆಂದರು. ಮಿ। ಮೂಸಬ್ಬನವರು ಇದೇ ಅಭಿಪ್ರಾಯವನ್ನು ಸೂಚಿಸಿದರು. ಶ್ರೀ ರೇಗೋರವರು ಮತ್ತೊಂದು ಉಪಸೂಚನೆಯನ್ನು ತಂದು 'ಯೂನಿಯನ್ ಜಾಕ್ ಮತ್ತು ಬೇರೆ ಧ್ವಜಗಳು' ಎಂಬ ಪದಗಳನ್ನು ಉಪಯೋಗಿಸಿದರು. ಶ್ರೀ। ರಂಗರಾಯರು ಈ ಸೂಚನೆಯನ್ನು ಅಂಗೀಕರಿಸಿದರು. ಶ್ರೀ ರೇಗೋರವರು ಉಪಸೂಚನೆಯ ಮೇಲೆ ಮತ ತೆಗೆದುಕೊಳ್ಳಲಾಗಿ ಹದಿನಾಲ್ಕು ಮಂದಿ ಠರಾವಿನ ಪರವಾಗಿ ಮತ ಕೊಟ್ಟರು. ಆನಂತರ ಮಿ। ಶ್ರೀಸ್ವರು ಠರಾವನ್ನು ಸಭೆಯ ಮುಂದಿರಿಸಲು ಪ್ರಯತ್ನಿಸಿದಾಗ ಅದನ್ನು ಸಭೆಯ ಓಟಿಗೆ ಹಾಕುವುದು ಬೇಡವೆಂದು ಶ್ರೀ। ಶ್ರೀಸ್ವರು ಹೇಳಿದರು

ಮುಂದಕ್ಕೆ ಯಾರನ್ನಾದರೂ ಕೆಲಸಕ್ಕೆ ನೇಮಿಸುವ ಸಂದರ್ಭದಲ್ಲಿ ನಗರ ಸಭೆಯಲ್ಲಿ ಕೆಲಸಮಾಡಿದವರಿಗೆ ಮೊದಲನೆಯದಾಗಿ ಕೊಡಬೇಕೆಂದೂ, ಕನ್ನಡ ತಿಳಿದವರಿಗೆ ಕೊಡಬೇಕೆಂದೂ ಶ್ರೀ। ರಂಗರಾಯರ ಠರಾವು, ಮಂಗಳೂರಿನವರಿಗೆ ಕೊಡಬೇಕೆಂದು ನಿರ್ಧಾರವಾಯಿತು.

ಆನಂತರದಲ್ಲಿ ಮುಖ್ಯವಾಗಿ ಚರ್ಚೆಗೆ ಬಂದುದು ವೆಲೆನ್ಸಿಯಾ ಇಗರ್ಜಿಗೆ ಸಂಬಂಧಪಟ್ಟ ಪ್ರಶ್ನೆ. ಸಿರಿಯಾನ್ ಕೆಥೋಲಿಕರ ಪರವಾಗಿ ರೆವೆರೆಂಡ್ ಜಾರ್ಜರವರು ವೆಲೆನ್ಸಿಯಾ ಇಗರ್ಜಿಗೆ ಕೆಥೋಲಿಕರ ಬಗ್ಗೆ ಸಮಾಧಿಗೆ ಕೊಟ್ಟ ಸ್ಥಳದಲ್ಲಿ ಒಂದಕ್ರೆಯನ್ನು ಸಿರಿಯಾನ್ ಕೆಥೋಲಿಕರ ಸಮಾಧಿಗೆ ಕೊಡಬೇಕೆಂದು ಅರ್ಜಿಮಾಡಿದ್ದರು. ಮಿ. ಸಿ. ಎಲ್. ಬೋಟೋರವರು, ರೆವೆರೆಂಡ್ ಜಾರ್ಜರು ಕೆಥೋಲಿಕರಲ್ಲವೆಂದೂ ಅವರು ಕೆಥೋಲಿಕರಲ್ಲಿ ಒಡಕು ಹುಟ್ಟಿಸುವುದಕ್ಕೆ ಅರ್ಜಿ ಹಾಕಿರುವುದಾಗಿಯೂ ಹೇಳಿ, ಈ ಅರ್ಜಿಯನ್ನು ತಳ್ಳಿ ಹಾಕಬೇಕೆಂದರು. ಡಾ। ಅದನವರು ಹೀಗೆಂದರು: ರೆವೆರೆಂಡ್ ಜಾರ್ಜರು ಕೆಥೋಲಿಕರಿರಲಿ ಅಥವಾ ಬೇರೆಯವರಿರಲಿ ಅದು ನಮಗೆ ಹೇಳಲು ಸಾಧ್ಯವಿಲ್ಲ. ಆದರೆ ಅವರ ಅರ್ಜಿಯಲ್ಲಿ ಸಿರಿಯಾನ್ ಕೆಥೋಲಿಕರಿಗೆಂದು ಬರೆದಿದ್ದಾರೆ. ಆದ್ದರಿಂದ ಸಿರಿಯನ್ ಕೆಥೋಲಿಕರಿಗೆ ಈ ಸ್ಥಳದಲ್ಲಿ ಅಧಿಕಾರವಿದೆಯೋ ಎಂಬುದನ್ನು ವಿಚಾರಿಸಬೇಕು, ಆದ್ದರಿಂದ ಅದನ್ನು ಮುಂದಿನ ಮೀಟಿಂಗಿನಲ್ಲಿ ಇತ್ಯರ್ಥಗೊಳಿಸುವುದುತ್ತಮವೆಂದರು. ಆದರೆ ಮಿ। ಬೋಟೋರವರು ತಮ್ಮ ಛಲವನ್ನು ಬಿಡಲಿಲ್ಲ. ಕೊನೆಗೆ ಈ ಪ್ರಶ್ನೆಯನ್ನು ಮುಂದಿನ ಸಭೆಯಲ್ಲಿ ಇತ್ಯರ್ಥಗೊಳಿಸಬೇಕೆಂದಾಯಿತು.

ಮಂಗಳೂರು ಟೌನ್ ಸರ್ವಿಸಿಗೆ ಲೈಸೆನ್ಸ್ ಕೊಡುವ ವಿಷಯದಲ್ಲಿ ಯಾರೂ ಆಕ್ಷೇಪ ಹೇಳಲಿಲ್ಲ. ಶ್ರೀ। ಕಾರಂತರು ಒಂದು ಎಚ್ಚರಿಕೆಯನ್ನು ಕೊಟ್ಟರು. ಕಂಪೆನಿಯವರು ತಮ್ಮ ಕೆಲಸವನ್ನು ಮುಂದರಿಸಬಹುದು. ಆದರೆ ಮುಂದಕ್ಕೆ ನಗರ ಸಭೆಯವರಿಗೆ ಫೀಸು ಸ್ವಲ್ಪ ಹೆಚ್ಚು ಮಾಡಬೇಕಾದ ಸಂದರ್ಭ ಬಂದರೆ ಅದಕ್ಕೆ ಅವಕಾಶವನ್ನು ಇಟ್ಟುಕೊಳ್ಳಬೇಕೆಂದರು. ಮತ್ತು ಟೌನ್ ಸರ್ವಿಸಿನವರು ೨೭ ಜನರು ಕೂತುಕೊಳ್ಳುವ ವಾಹನಗಳನ್ನು ಇಡಬಹುದೆಂದಾಯಿತು. (ಕೆಲವು ರಸ್ತೆಗಳಲ್ಲಿ).

ಇನ್ನು ಕೆಲ ಸಾಮಾನ್ಯ ವಿಷಯಗಳ ಚರ್ಚೆಯಾದ ಮೇಲೆ ಸಭಾಂತ್ಯವಾಯಿತು.

ಲೆಪ್ರಸಿ (ಕುಷ್ಠ) ಕಮಿಟಿ ಸಭೆ

ಕಳೆದ ತಾ. ೨೭ರಲ್ಲಿ ಲೆಪ್ರಸಿ ಕಮಿಟಿಯು ಕಲೆಕ್ಟರರ ಕಚೇರಿಯಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಅಲ್ಲಿ ಕುಷ್ಠರೋಗ ನಿವಾರಣಾರ್ಥವಾಗಿ ಕ್ಲಿನಿಕ್ಸ್ (ಚಿಕಿತ್ಸಾ ಗೃಹವನ್ನು ನಿರ್ಮಿಸುವ ವಿಷಯಗಳ ಪರ್ಯಾಲೋಚನೆಯಾಗಿ ಆ ಬಗ್ಗೆ ಸ್ವಲ್ಪ ಹಣವು ಮಂಜೂರಾಯಿತು.

ಅಂಜುಮಾನ್ ಹಿದಾಯತುಲ್ ಇಸ್ಲಾಂ ಸಂಘ

ಇದರ ತೃತೀಯ ವಾರ್ಷಿಕೋತ್ಸವವು ಕುದ್ರೋಳಿಯ ಹಿಂದೂಸ್ಥಾನಿ ಶಾಲೆಯಲ್ಲಿ ಕಳೆದ ತಾ. ೨೪ರಲ್ಲಿ ಜರಗಿತು. ಧಾರವಾಡದ ಕರ್ನಾಟಕ ಕಾಲೇಜಿನ ಪ್ರೊಫೆಸರರಾದ ಖಾನ್ ಸಾಹೇಬ್ ಎ ಯಂ. ಮೌಲಿ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ಹೈದರ್, ಜೆ. ಶಂಸುಉದ್ದೀನ್ ಸಾಹೇಬ್, ಯಂ. ಅಬ್ದುಲ್ ಕರೀಮ್ ಸಾಹೇಬ್ ಮೊದಲಾದ ಮಹನೀಯರು ಭಾಷಣಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಮುಸಲ್ಮಾನರಲ್ಲಿ ವಿದ್ಯಾಪ್ರಸಾರವಾಗುವ ಹಾಗೆ ಸಕಲರೂ ಯತ್ನಿಸಬೇಕೆಂದರು.

ಗೋಕುಲದಾಸ್ ಫಾರ್ಮಸ್ಸ್ ಲಿಮಿಟೆಡ್

ಈ ನೂತನ ಸಂಸ್ಥೆಯ ಡೈರೆಕ್ಟರರ ಸಭೆಯು ತಾ. ೨೭-೫-೩೬ರಲ್ಲಿ ಕೂಡಿ ಅಪೇಕ್ಷಿತ ಅರ್ಜಿದಾರರಿಗೆ ಕೆಲವು ಪಾಲುಗಳನ್ನು ವಿಂಗಡಿಸಲಾಯಿತು. ಸೈಂಟ್ ಅಗ್ನೆಸ್ ಕಾಲೇಜಿನ ಲೆಕ್ಚರರಾದ ಶ್ರೀ। ಯಮ್ ನರಸಿಂಹ ಭಟ್, ಯಮ್. ಎ. ಇವರು ಹೊಸ ಡೈರೆಕ್ಟರರಾಗಿರುವರು. ಇನ್ನು ಎರಡುವಾರಗಳೊಳಗಾಗಿ ಕಾರ್ಯಾರಂಭದ ಸರ್ಟಿಫಿಕೇಟಿಗೆ ಅರ್ಜಿ ಮಾಡಲಾಗುವುದೆಂದು ತಿಳಿದು ಬರುತ್ತದೆ.

ಬರುವ ನವಂಬರದಲ್ಲಿ ನಡೆಯಲಿಕ್ಕಿರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಮಂಜೇಶ್ವರ ಸರ್ಕಲಿಗೆ ರಾ. ಎಂ. ಸಿ. ಮಮ್ಮಿಯವರು ಒಬ್ಬ ಉಮೇದ್ವಾರನಾಗಿ ನಿಲ್ಲಲು ಸಿದ್ಧಮಾಡಿದ್ದಾರೆಂತ ತಿಳಿದುಬರುತ್ತದೆ

3 Watches & other fancy goods on Rs. 2 8 0 only



Purchaser of our 10 Phials OTTO MOHINI at a time for Rs. 2-8-0 will be given free one Dummy Wrist Watch, one Infant Pocket Watch, One Dummy B Time piece One Fountain Pen with a 14 Kt. Rolled Nib, One Torch light having 300 ft. Focus and one Imitation Pearl Necklace. Packing & Postage As. 0—14—0 extra

EASTERN TRADING COY.,

Post Box No. 12204, CALCUTTA, (N. Y.)

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Rsk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India.	Charni Road, Bombay No. 4.

INSPECTORATE OFFICE AT:

1. Ottapalam, Malabar District. 2. Central Station Road, Trivandrum.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over	...	Rs. 80,00,000
Life Funds Over	... ...	Rs. 68,00,000
Premium Income Over	...	Rs. 22,54,000
Interest Income	... ...	Rs. 3,16,000
Claims Paid ...	... ...	Rs. 5,75,000

Total Claims paid Over Rs. 38,50,000
Total Business in Force Over Rs. 4,4251,20`.

TOTAL BUSINESS IN FORCE **Rs. 4,42,51,200**

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ವ್ಯವಹಾರ ನಿಮಿತ್ತ ಹೊಂದಿರುವುದು)

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು 'ಸೇಲಂ'ನಲ್ಲಿ ತಾ. 4ನೇ ಶುಕ್ರವಾರ ತೆರೆಯಲ್ಪಡಲಾಗುವುದು.

ಬ್ಯಾಂಕಿನ ಆಫೀಸು
ತಾ 7—5—1937

V. R. Kamath, B. A., LL.B.
ಮೆನೇಜರ್.

ಉಡುಪಿ, ಗುರುವಾರ, ತಾ. ೩-೬-'೩೭

ಜಾನುವಾರುಗಳ ಅಭಿವೃದ್ಧಿ

ಕೃಷಿಯೇ ಪ್ರಧಾನವಾದ ಹಿಂದು ದೇಶದಲ್ಲಿ ಕೃಷಿಯ ಆಸ್ತಿವಾರವಾಗಿರುವ ಜಾನುವಾರುಗಳ ಅಭಿವೃದ್ಧಿಯು ಅದೆಷ್ಟು ಪ್ರಾಮುಖ್ಯವಾದುದೆಂಬುದನ್ನು ಮಾನ್ಯ ವೈಸರಾಯರ ಪ್ರಯತ್ನದಿಂದಾಗಿ ಸರಕಾರಕ್ಕೀಗ ಮನವರಿಕೆಯಾಗಹತ್ತಿರುವುದು. ಲೋರ್ಡ್ ಲಿನ್ಲಿತ್‌ಗೋರವರು ವೈಸರಾಯರಾದಂದಿನಿಂದ ಈ ಕುರಿತು ಅತ್ಯಂತ ಆಸಕ್ತಿಯಿಂದ ಕೆಲಸಮಾಡುತ್ತಾ ಬಂದಿರುವರು. ಒಳ್ಳೇ ಬೀಜದೆತ್ತುಗಳಿಲ್ಲದಿದ್ದರೆ ಜಾನುವಾರು ಪೀಳಿಗೆಯು ಉತ್ತಮವಾಗುವ ಹಾಗಿಲ್ಲೆಂದು ಅವರು ದೇಶದಲ್ಲೆಲ್ಲಾ ಯೋಗ್ಯವಾದ ಬೀಜದೆತ್ತುಗಳನ್ನಿರಿಸುವ ಏರ್ಪಾಡಿನ ಕುರಿತು ಹೆಚ್ಚಿನ ಗಮನ ವಹಿಸಿದರು. ಇದರಿಂದಾಗಿ ಈಗ 1322 ಬೀಜದೆತ್ತುಗಳು ಅಲ್ಲಲ್ಲಿ ಹೊಸತಾಗಿ ಇರಿಸಲ್ಪಟ್ಟಿರುವವಲ್ಲದೆ ಅದಕ್ಕಾಗಿ ರೂ. 165,000 ಸಂಗ್ರಹವಾಗಿರುವುದು. ಜಾನುವಾರು ವ್ಯವಸಾಯದ ಕುರಿತು ಶೋಧನೆಗಳನ್ನು ನಡಿಸಲು ಕೇಂದ್ರ ಸಂಸ್ಥೆಯೊಂದು ಸ್ಥಾಪಿಸಲ್ಪಟ್ಟಿರುವುದು. ವ್ಯವಸಾಯ ಇಲಾಖೆಯಂತೆಯೇ ಜಾನುವಾರು ವ್ಯವಸಾಯದ ಕುರಿತೂ ಆಪೊಂದು ಇಲಾಖೆಯು ಕೇಂದ್ರದಲ್ಲಿಯೂ ಪ್ರತಿ ಪ್ರಾಂತ್ಯಗಳಲ್ಲಿಯೂ ಸ್ಥಾಪಿತವಾಗಿ ಕೃಷಿಯಜೀವಾಳ ಮಾತ್ರವಲ್ಲದೆ ಜನತೆಯ ಜೀವನಾಧಾರವಾದ ಜಾನುವಾರುಗಳ, ಉತ್ಪಾದನೆ, ಬೆಳವಣಿಗೆ, ಪೋಷಣೆ, ಉಪಯೋಗದ ಕುರಿತಲ್ಲಾ ವ್ಯವಸ್ಥಿತವಾದ ಕೆಲಸ ನಡೆಸಲ್ಪಡಬೇಕೆಂದೇ ವೈಸರಾಯರ ಉತ್ಕಟೇಚ್ಛೆ ಇರುವುದು. ಮೇ ತಾ 25ರಲ್ಲು ಸಿಮ್ಲಾದಲ್ಲಿ ಜಾನುವಾರು ಸಂಬಂಧವಾದ ಪರಿಷತ್ತನ್ನು ತೆರೆಯುವಾಗ ವೈಸರಾಯರು ಮಾಡಿದ ಭಾಷಣದಲ್ಲಿ ಅವರು, ಜಾನುವಾರುಗಳ ಅಭಿವೃದ್ಧಿ ಸಾಧನೆಯು ಯಾವ್ಯಾವ ರೀತಿಯಲ್ಲಿ ನಡೆಸಲ್ಪಡಬೇಕೆಂಬುದನ್ನು ನಿರೂಪಿಸಿರುವರು.

ಕೃಷಿಕನಿಗೆ ಎತ್ತಿನಷ್ಟು ಅಮೂಲ್ಯವಾದುದು ಇನ್ನೊಂದಿಲ್ಲ. ಬೇಸಾಯಕ್ಕಾಗಲಿ ಹೊರಬಯ್ಯುವುದಕ್ಕಾಗಲಿ ಪ್ರಯಾಣಕ್ಕಾಗಲಿ ನೀರೆಳೆಯುವುದಕ್ಕಾಗಲಿ ಪಕ್ಕಲಿಗನಿಗೆ ಎತ್ತಿಲ್ಲದೆ ಸಾಧ್ಯವಿಲ್ಲ. ಗೊಬ್ಬರ ಬೆರಣಿಗಳಿಗಾಗಿ ಸೆಗಣಿಯು ಎಷ್ಟೊಂದು ಆವಶ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಹಿಂದು ದೇಶದ ಜಾನುವಾರುಗಳ ವಾರ್ಷಿಕ ಕ್ರಯ ಅವುಗಳ ಶ್ರಮ ಗೊಬ್ಬರಾದಿಗಳನ್ನೆಲ್ಲಾ ಲೆಕ್ಕ ಹಿಡಿದ ಪಕ್ಷದಲ್ಲಿ ವರ್ಷಕ್ಕೆ ಸುಮಾರು ರೂ. 1300 ಕೋಟಿಯಾಗಬಹುದೆಂದು ಅಂದಾಜುಮಾಡಲಾಗಿದೆ. ದೇಶದ ವ್ಯವಸಾಯಿಕ ಸಂಪತ್ತು ಸಂಪೂರ್ಣವಾಗಿ ಜಾನುವಾರುಗಳಮೇಲೆ ಅವಲಂಬಿಸಿದೆ. ಹೆಚ್ಚಿಗೆಯಾಗಿ ಶಾಕಾಹಾರಿಗಳಾಗಿರುವ ಹಿಂದೀಯರ ಆಹಾರವು ಪೌಷ್ಟಿಕವಾಗಬೇಕಾದರೆ ಅವರು ಹಾಲು, ಮೊಸರು, ತುಪ್ಪಗಳನ್ನು ಧಾರಾಳವಾಗಿ ತಿನ್ನತಕ್ಕದ್ದು. ಈ ದೃಷ್ಟಿಯಿಂದಲೂ ಜಾನುವಾರುಗಳ ಅಭಿವೃದ್ಧಿಯು ಪ್ರಾಮುಖ್ಯವಾಗಿದೆ. ಈ ಅಭಿವೃದ್ಧಿಯು ಶಾಸ್ತ್ರೀಯವಾಗಿ ನಡಿಸಲ್ಪಡುವಂತೆ ಇಂಪೀರಿಯಲ್ ವೆಟರಿನರಿ ರಿಸರ್ಚ್ ಇನ್‌ಸ್ಟಿಟ್ಯೂಟನ್ನು ವ್ಯಾಪಕಗೊಳಿಸಲಾಗಿದೆ. ಜಾನುವಾರುಗಳ ರೋಗರುಜೆ, ಯೋಗ್ಯ ಆಹಾರ ಮತ್ತು ಉತ್ಪಾದನೆಯ ಕುರಿತು ಶೋಧನೆ ನಡಿಸಲು ತಕ್ಕ ಏರ್ಪಾಡು ನಡೆದಿದೆ.

ಬೇರೆ ಬೇರೆ ಬೀಜದೆತ್ತುಗಳಿಂದುಂಟಾಗುವ ಪೀಳಿಗೆಯು ಯಾವ ರೀತಿ ಬೆಳೆಯುತ್ತದೆಂಬುದನ್ನೆಲ್ಲಾ ತಿಳಕೊಳ್ಳುವುದು ಪ್ರಾಮುಖ್ಯವಾದುದರಿಂದ ಅಂತಹ ದಾಖಲೆಯ ಪುಸ್ತಕವನ್ನಿಟ್ಟುಕೊಳ್ಳಬೇಕು. ಇಲ್ಲವಾದರೆ ದೇಶದಲ್ಲೆಲ್ಲಾ ಬೀಜದೆತ್ತುಗಳನ್ನಿರಿಸಿ ಫಲವಿಲ್ಲ. ದನ, ಕರು ಮತ್ತು ಎತ್ತುಗಳು ಉತ್ತಮವಾಗಿ ಬೆಳೆಯಬೇಕಾದರೆ ಅವುಗಳಿಗೆ ಸರಿಯಾದ ಆಹಾರ ದೊರೆಯಬೇಕು. ಯೋಗ್ಯ ಆಹಾರವಿಲ್ಲದೆ ಜಾನುವಾರು ಪೀಳಿಗೆಯನ್ನು ಸುಧಾರಿಸುವ ಯಾವ ಪ್ರಯತ್ನವೂ ಜಯಶೀಲವಾಗಲಾರದು. ಗೋಚರಾವಿಗೆ ಸರಿಯಾದ ಹುಲ್ಲುಗಾವಲುಗಳಿರುವಂತೆಯೂ, ಬೇಸಾಯಗಾರರು ಹೆಚ್ಚಿನ ಪೋಷಕ ಆಹಾರ ವಸ್ತುಗಳನ್ನು ಜಾನುವಾರುಗಳಿಗೆ ಬೆಳಸಿ ಕೊಡುವಂತೆಯೂ ಜಾನುವಾರ ಖಾತೆಯವರು ಹೆಚ್ಚಿನ ಲಕ್ಷ್ಯಕೊಡತಕ್ಕದ್ದು. ರಿಸರ್ವ್ ಫೋರೆಸ್ಟುಗಳಲ್ಲಿ ಗೋಚರಾವಿನ ಅನುಕೂಲತೆ ಮತ್ತು ಕ್ರಮವಾಗಿ ಜಾನುವಾರು ಆಹಾರದ ಬೆಳೆಗಳನ್ನು ಬೆಳೆಸುವ ವ್ಯವಸ್ಥೆಯಾಗಬೇಕು. ಪ್ರತಿಪ್ರಾಂತತ್ತೂ ಗೋಚರಾವು ಮತ್ತು ಜಾನುವಾರು ಆಹಾರ ಸಂಬಂಧವಾದ ಕಮಿಟಿಗಳನ್ನು ಸ್ಥಾಪಿಸಿ ಅವು ಕೇಂದ್ರ ಕಮಿಟಿಯೊಂದಿಗೆ ಸಹಕರಿಸಿ ಕೆಲಸಮಾಡುವಂತಾಗಬೇಕು. ಕೇಂದ್ರದ ತಜ್ಞರು ತಮ್ಮ ಶೋಧನೆಗಳಿಂದ ಕಂಡುಕೊಳ್ಳುವ ವಿಷಯಗಳನ್ನು ಪ್ರಾಂತಗಳವರು ಕಾರ್ಯಕ್ಕೆ ಹಚ್ಚಿ ಸಹಕರಿಸದಿದ್ದರೆ ಈ ತಜ್ಞರ ಶ್ರಮವು ನಿರರ್ಥಕವಾಗುವುದು. ಮತ್ತು ಅದರಿಂದ ಬೇಸಾಯಗಾರನಿಗೆ ಯಾವ ಪ್ರಯೋಜನವೂ ದೊರೆಯದಂತಾಗುವದು. ಆದುದರಿಂದ ಆಯಾ ಪ್ರಾಂತೀಯರು ಕೇಂದ್ರ ಸಮಿತಿಯೊಂದಿಗೆ ಸಹಕರಿಸಿ, ತಮ್ಮ ತೊಂದರೆ ಸಂಕಷ್ಟಗಳ ಕುರಿತು ಅವರ ಅನುಭವ ಪಡೆದು ಕೆಲಸಮಾಡಿದರೆ ಮಾತ್ರ ಈಗ ಅತ್ಯಂತ ನಿಕೃಷ್ಟಾವಸ್ಥೆಯಲ್ಲಿರುವ ಜಾನುವಾರುಗಳ ಸ್ಥಿತಿಯು ಸುಧಾರಿಸಿ ಅದರ ಪರಿಣಾಮವಾಗಿ ಬೇಸಾಯಗಾರನೂ ಪ್ರಯೋಜನ ಹೊಂದುವನೆಂದೇ ವೈಸರಾಯರ ಅಭಿಮತ. ಜನತೆಯ ಪ್ರಯೋಜನಕ್ಕಾಗಿ ಹೊಸಹೊಸ ಕಮಿಟಿ, ಖಾತೆಗಳೇನೋ ತೆರೆಯಲ್ಪಡುವವು ಅವುಗಳಿಗಾಗಿ ಸಾವಿರಾರು ರೂಪಾಯಿಗಳ ವ್ಯಯವೂ ಆಗುವುದು. ಆದರೆ ಅವುಗಳಿಂದ ಜನತೆಗೆ ಆಗುವ ನಿಜವಾದ ಪ್ರಯೋಜನ ಮಾತ್ರ ಏನೂ ಇಲ್ಲ. ಇದೀಗ ಜನತೆಯ ಅನುಭವ. ವೈಸರಾಯರ ವಿಶೇಷವಾದ ಉತ್ಸಾಹ ಮತ್ತು ಪ್ರಯತ್ನದಿಂದಾಗಿ ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವ ಹಿಂದೀ ಜಾನುವಾರುಗಳೇನಾದರೂ ಅಭಿವೃದ್ಧಿ ಹೊಂದಿ ಕೃಷಿಕರು ಪ್ರಯೋಜನ ಪಡುವಂತಾದರೆ ಸಂತೋಷವೇ ಸರಿ.

ವಿದೇಶ

ಮಿ. ಬಾಲ್ಡ್ವಿನರ ರಾಜಿನಾಮೆ

ಮೇ ತಾ ೨೮ರಲ್ಲು ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಮಿ ಸ್ಟಾನ್ಲೆ ಬಾಲ್ಡ್ವಿನರು ವೃದ್ಧಾಪ್ಯದ ನಿಮಿತ್ತ ತನ್ನ ೭೦ನೇ ವಯಸ್ಸಿನಲ್ಲಿ ಇಂಗ್ಲೆಂಡಿನ ಪ್ರಧಾನ ಮಂತ್ರಿಪದವಿಗೆ ರಾಜಿನಾಮೆ ಕೊಟ್ಟು ರಾಜಕೀಯದಿಂದ ನಿವೃತ್ತರಾಗಿರುವರು. ಮಿ ಬಾಲ್ಡ್ವಿನರ ಉದಾರತ್ವ, ನಿಷ್ಪಕ್ಷಪಾತ ಬುದ್ಧಿ, ಮುತ್ಸದ್ದಿತನ, ಸೌಶೀಲ್ಯಾದಿ ಸದ್ಗುಣಗಳನ್ನು ಇಂಗ್ಲೆಂಡಿನ ಪತ್ರಿಕೆಗಳೆಲ್ಲಾ ಒಮ್ಮತದಿಂದ ಪ್ರಶಂಸಿಸಿರುವವು. ಇವರಿಗೆ ಅರ್ಲ್‌ಪದವಿ ಕೊಡಲಾಗಿದೆ. ಲೇಬರ್ ಪಕ್ಷದ ನಾಯಕರಾಗಿದ್ದು ಅನಂತರ ನೇಶನಲ್ ಗವರ್ನ್ಮೆಂಟಿಗೆ ಸೇರಿದ ಮಿ. ರಾಮ್ಸೆ ಮೆಕ್‌ಡೊನಾಲ್ಡರೂ ತನ್ನ ಹುದ್ದೆಯಿಂದ ನಿವೃತ್ತರಾಗಿರುವರು. ಇವರಿಗೂ ಚಕ್ರವರ್ತಿಗಳು ಕೊಡಲು ಆತುರಗೊಂಡ ಉಚ್ಚ ಪದವಿಯನ್ನವರು ನಿರಾಕರಿಸುವರೆಂದು ತಿಳಿದುಬರುತ್ತದೆ. ಮಿ. ನೆವಿಲ್ ಚೇಂಬರ್ಲೇನರು ಪ್ರಧಾನ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವರು ಸರ್ ಜೋನ್ ಸೈಮನರು ಅರ್ಥಸಚಿವರಾಗಿರುವರು.

ಸ್ಪೈನಿನ ಯುದ್ಧ

ಸ್ಪೆನಿಶ್ ಸರಕಾರದ ಕಡೆಯಿಂದ ಹೋರಾಟ ನಡಿಸಿದ ವಿದೇಶೀಯರು ಬಹಳ ಮಂದಿ ಕೊಲ್ಲಲ್ಪಟ್ಟಿರುವರು. ಇವರಲ್ಲಿ ಹೆಚ್ಚಿನವರು ಸೇನಾ ತರಬೇತಿ ಏನೂ ಪಡೆದವರಲ್ಲ. ೧೭೦೦ ಮಂದಿ ಅಮೇರಿಕಾನರಲ್ಲಿ ೫೦೦ ಮಂದಿ ಹತರಾಗಿರುವರು. ೧೦೦೦ ಮಂದಿ ಬ್ರಿಟಿಷ್ ವಲಂಟೀಯರಲ್ಲಿ ೬೦೦ ಮಂದಿ ಕೊಲ್ಲಲ್ಪಟ್ಟಿರುವರು. ೧೫೦೦೦ ಸಾವಿರ ಮಂದಿ ಫ್ರೆಂಚರಲ್ಲಿ ೩೦೦೦ ಮಂದಿ ಪ್ರಾಣಹಾನಿ ಹೊಂದಿರುವರು.

ಜನರಲ್ ಫ್ರೆಂಕೋರವರು ಮೇ ತಾ ೨೯ರಲ್ಲು ಸೆರೆಸಿಕ್ಕಿದ್ದ ೪೩ ಮಂದಿ ವಿದೇಶಿಯರನ್ನು ಬಿಡುಗಡೆ ಮಾಡಿ ಅವರಿಗೆ ಹೊಸ ಉಡುಪು ಮತ್ತು ಹಣ ಕೊಟ್ಟು ಕಳುಹಿಸಿರುವರು. ಇವರಲ್ಲಿ ೨೩ ಮಂದಿ ಆಂಗ್ಲೇಯರು.

ಮೇ ತಾ ೨೯ರಲ್ಲು ಬಾರ್ಸೆಲೋನ ಪಟ್ಟಣದ ಮೇಲೆ ಬಂಡಾಯಗಾರರು ವಿಮಾನಧಾಳಿ ನಡಿಸಿದಾಗ ೫೦ ಮಂದಿ ಕೊಲ್ಲಲ್ಪಟ್ಟು ೧೦೦ ಮಂದಿ ಗಾಯಗೊಂಡಿರುವರು, ಅನೇಕ ಮನೆಗಳು ಬಿದ್ದು ಹೋಗಿರುವವು.

ಸ್ವದೇಶ

ವಾಯುವ್ಯ ಗಡಿನಾಡಿನ ಪರಿಸ್ಥಿತಿ
ಇಪಿಯ ಫಕೀರರು ತಪ್ಪಿಸಿಕೊಂಡರು

೩೫,೦೦೦ ಸೈನಿಕರೂ ೬೪ ವಿಮಾನಗಳೂ ಈಗ ವಾಯುವ್ಯ ಗಡಿನಾಡಿನಲ್ಲಿವೆ. ಇತ್ತಲಾಗಿ ಇರಾಕಿನಿಂದ ಬೋಂಬೆಸಿನ ೪ ವಿಮಾನಗಳು ಹೊಸದಾಗಿ ಬಂದಿವೆ. ಫಕೀರರು ವಾಸಿಸಿಕೊಂಡಿದ್ದ ಅರ್ಸಲ್ಕೋಟ್‌ನ ಗವಿಗೆ ಬ್ರಿಟಿಷ್ ಸೈನಿಕರು ಮುತ್ತಿಗೆ ಹಾಕುವ ಮೊದಲೇ ಫಕೀರರು ತನ್ನ ಅನುಯಾಯಿಗಳೊಂದಿಗೆ ಅದನ್ನು ಬಿಟ್ಟುಹೋಗಿದ್ದರು. ಅವರು ದಕ್ಷಿಣ ವಜೀರಿಸ್ಥಾನದ ಮಾಸೂದ್ ಪಂಗಡಿಗರ ಪ್ರದೇಶಕ್ಕೆ ಹೋಗಿರುವರೆಂದು ತಿಳಿದುಬರುತ್ತದೆ. ವೈರಿಗಳಲ್ಲಿ ಮೇ ತಾ ೪ರಿಂದ ೧೦ರ ವರೆಗೇನೇ ೧೭೫ ಮಂದಿ ಕೊಲ್ಲಲ್ಪಟ್ಟು ೭೬ ಮಂದಿ ಗಾಯಗೊಂಡಿದ್ದಾರೆ. ಮೇ ತಾ ೧೬ರಲ್ಲಿ ೪೭ ಮಂದಿ ಕೊಲ್ಲಲ್ಪಟ್ಟು ೪೩ ಮಂದಿಗೆ ಬಹಳ ಪೆಟ್ಟಾಗಿದೆ. ಮೇ ತಾ ೧೮ರಲ್ಲಿ ಕೊಲ್ಲಲ್ಪಟ್ಟು ಮತ್ತು ಗಾಯಗೊಂಡವರು ೪೦ ಮಂದಿ. ಮೇ ತಾ ೨೨ರಲ್ಲಿ ೧೨ ಮಂದಿ ಕೊಲ್ಲಲ್ಪಟ್ಟಿರುವರೆಂದು ನಂಬಲಾಗಿದೆ. ಬ್ರಿಟಿಷ್ ಸೈನಿಕರೂ ಕೆಲವರು ಕೊಲ್ಲಲ್ಪಟ್ಟಿರುವರು. ಫಕೀರರ ಕಡೆಯವರಲ್ಲಿ ನಿರುತ್ಸಾಹವುಂಟಾಗಿರುವುದೆಂದೂ, ಆದುದರಿಂದ ಬೇಗನ ಪರಿಸ್ಥಿತಿಯು ಶಾಂತವಾಗಬಹುದೆಂದೂ ನಂಬಲಾಗಿದೆ. ಆದರೆ ಅದಕ್ಕೆ ಎಷ್ಟು ಸಮಯ ಹಿಡಿಯುವುದೆಂದು ಹೇಳಬರುವುದಿಲ್ಲ. ಫಕೀರರು ಬ್ರಿಟಿಷ್ ಸೈನಿಕರ ಕೈಗೆ ಸಿಕ್ಕುವ ಸಂಭವವಿಲ್ಲ. ಅವರು ೩ ತಿಂಗಳಿಂದ ತನ್ನ ಸೇನಾ ಕೇಂದ್ರವಾಗಿ ಮಾಡಿಕೊಂಡಿದ್ದ ಸ್ಥಳವನ್ನು ಯಾವಾಗ ಮತ್ತು ಹೇಗೆ ಬಿಟ್ಟುಹೋದುದೆಂದು ಬ್ರಿಟಿಷ್ ಸೈನಿಕರಾರಿಗೂ ತಿಳಿದಿಲ್ಲ. ಈಗ ಫಕೀರರು ಇಷ್ಟರ ವರೆಗೆ ಬ್ರಿಟಿಷರೊಡನೆ ಮೈತ್ರಿಯಿಂದಿದ್ದ ಮಸೂದ್ ಪಂಗಡಿಗರ ಪ್ರದೇಶಕ್ಕೆ ಹೋಗಿರುವುದರಿಂದ ಆ ಪ್ರದೇಶದ ಮೇಲೆಯೂ ಧಾಳಿ ನಡಿಸಲಾಗುವುದೋ ಎಂಬುದು ಇಷ್ಟರವರೆಗೆ ತಿಳಿದಿಲ್ಲ.

ವಾಯುವ್ಯ ಗಡಿನಾಡಿನ ಹಿಂದುಗಳು ಮತ್ತು ಸಿಖ್ಖರು ಬಹಳ ಉಪಟಳಕ್ಕೊಳಗಾಗಿದ್ದಾರೆ. ಪಂಗಡಿಗರು ಅವರ ಮನೆ ಮಾರುಗಳನ್ನು ಲುಟಾಯಿಸುವುದು ಮಾತ್ರವಲ್ಲದೆ ಸ್ತ್ರೀಪುರುಷರನ್ನು ಕದ್ದೊಯ್ಯುತ್ತಿದ್ದಾರೆ. ಇದನ್ನು ವಿರೋಧಿಸಿದವರನ್ನು ಕೊಂದು ಹಾಕುತ್ತಿದ್ದಾರೆ. ಇದರಿಂದ ಗಡಿನಾಡಿನ ಹಿಂದುಗಳೂ ಸಿಖ್ಖರೂ ಕ್ಷೋಭೆಗೊಂಡಿದ್ದಾರೆ. ಸರಕಾರವು ಅವರಿಗೆ ಆತ್ಮರಕ್ಷಣೆಗಾಗಿ ಕೋವಿಗಳನ್ನು ಹಂಚಿದೆ.

ಇದೇ ೩೦ರಲ್ಲು ಹಿಂದು ದೇಶದಲ್ಲಿ ಅಲ್ಲಲ್ಲಿ ಸಭೆ ನಡೆದು ಸರಕಾರದ ಗಡಿನಾಡಿನ ಧೋರಣೆ, ಅದಕ್ಕಾಗಿ ವ್ಯಯವಾಗುವ ಅಪಾರ ವೆಚ್ಚವನ್ನೆಲ್ಲಾ ಖಂಡಿಸಿ ನಿರ್ಣಯಗಳಾಗಿರುವವು. ಒಂದು ಸಭೆಯವರು ಮಾತ್ರ ಸರಕಾರದ ಧೋರಣೆಯನ್ನು ಸಮರ್ಥಿಸಿರುವರು. ಕಾಂಗ್ರೆಸಿನವರು ನಿಷೇಧಿಸಿರುವರು.

ಶ್ರೀ ರಾಜಗೋಪಾಲಾಚಾರ್ಯರು

ಮೇ ತಾ ೨೯ರಲ್ಲಿ ಬೊಂಬಾಯಿಯಿಂದ ಗಾಂಧಿಜಿಯವರು ವಾಸಮಾಡಿಕೊಂಡಿರುವ ತಿಥಲ್ ಎಂಬ ಸ್ಥಳಕ್ಕೆ ಹೊರಟಿರುವರು. ರಾಜಾಜಿಯವರು ಗಾಂಧಿಜಿಯವರೊಡನೆ ಪ್ರಕೃತದ ಬಿಕ್ಕಟ್ಟಿನ ಕುರಿತು ಚರ್ಚಿಸಲಿರುವರು. ಪಂಡಿತ ಜವಾಹರಲಾಲರು ಬರ್ಮದಿಂದ ಬಂದ ಕೂಡಲೆ ಇದೇ ತಿಂಗಳ ಮಧ್ಯದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ನಡೆಯಲಿರುವುದು.

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಅದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇನೆ. ವಿ. ಪಿ. ಮಾಡುವದಾದರೆ ವಿದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೆಜರ್, 'ನವಯುಗ'

ಉಡುಪಿ

ನಾಟಕ ಪ್ರದರ್ಶನ

ಕಳೆದ ಶನಿವಾರ ರಾತ್ರಿ ಇಲ್ಲಿಯ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಮೂಲ್ಕಿಯ ಕಿರಿಯರ ಕೂಟದವರು ಸದರಿ ಕೂಟದ ಚಾಲಕರಾದ ಶ್ರೀ ಹರಿದಾಸರಿಂದ ಬರೆಯಲ್ಪಟ್ಟ ಹರಿಜನೋದ್ಧಾರ ಅಥವಾ ಅಸ್ಪೃಶ್ಯತಾನಿವಾರಣೆ ಎಂಬ ನಾಟಕವನ್ನು ಸಾಕಷ್ಟು ತೃಪ್ತಿಕರವಾಗಿ ಅಭಿನಯಿಸಿದರು. ಚಿಕ್ಕ ಬಾಲಕ ಗಿರಿಯಪ್ಪನ ಪ್ರಸನ್ನಕುಮಾರನ ಪಾತ್ರವು ಸ್ವಾಭಾವಿಕವೂ ಹೃದ್ರಾವಕವೂ ಆಗಿ ಸರ್ವರ ಮೆಚ್ಚಿಗೆಗೆ ಪಾತ್ರವಾಯಿತು. ಸುಮಿತ್ರ ಪಾತ್ರವಹಿಸಿದ ಬಾಲಕನ ಭೂಮಿಕೆಯೂ ಸ್ವಾಭಾವಿಕವಾಗಿತ್ತು. ಶ್ರೀ| ಭವಾನಿಶಂಕರ ಶೆಟ್ಟಿ ದೇಶಭಕ್ತ ಭಾಸ್ಕರರಾಯನ ಪಾತ್ರದ ಮಾತುಗಳಲ್ಲಿ ಮತ್ತಷ್ಟು ರಸವೂ ಜೀವವೂ ಇದ್ದಿದ್ದರೆ ಉತ್ತಮವಿತ್ತು. ಈ ಪಾತ್ರದ ಪದ್ಯಗಳು ಮನೋಹರವಾಗಿದ್ದುವು. ಸನಾತನಿ ಭುಜಂಗರಾಯನು ಆವಾವುದೋ ರಾಕ್ಷಸ ಪಾತ್ರವನ್ನು ಅನುಸರಿಸುವ ಹವ್ಯಾಸಕ್ಕೆ ಹೋಗದೆ ಸ್ವಾಭಾವಿಕವಾಗಿ ಅಭಿನಯಿಸುತ್ತಿದ್ದರೆ ಪರಿಣಾಮ ಒಳ್ಳೆಯದಾಗುತ್ತಿತ್ತು. ತೆಕ್ಸಿ(?) ಪಾತ್ರದ ಅಭಿನಯವು ಕುಲೀನತೆಯ ಮೇರೆಯನ್ನು ಮೀರಿದ ಬೆಡಗು ವೈಯಾರಗಳಿಂದ ತುಂಬಿದ್ದಿತು. ಸ್ತ್ರೀ ಭೂಮಿಕೆಯಾದುದರಿಂದ ಈ ಕೃತಕ ನಟನೆಗಳೆಲ್ಲಾ ಅವಶ್ಯವೆಂದು ಈ ನಟರು ಕಲ್ಪಿಸಿಕೊಂಡಂತಿದೆ. ಪಾರಿಸಿ(?) ನಿರುಗವ ಜರತಾರಿ ಸೀರೆಯುಟ್ಟು ತಕ್ಲಿಯಲ್ಲಿ ನೂಲು ತೆಗೆಯುವ ಅಭಿನಯವು ಅಸಹನೀಯವಾಗಿತ್ತು. ಒಟ್ಟಾರೆ ಈ ಕಿರಿಯರ ಕೂಟದವರ ಪ್ರಯತ್ನವು ಅಭಿನಂದನೀಯವಿದೆ. ನಾಟಕ ಕರ್ತರು, ಸಮಾಜಕ್ಕೆ ಒಂದೇ ಸವನೆ ಆಧುನಿಕ ಧಾರ್ಮಿಕ ರಾಜಕೀಯ ಮತ್ತು ಸಾಮಾಜಿಕ ತತ್ವಗಳನ್ನೆಲ್ಲಾ ಬೋಧಿಸಿಬಿಡಬೇಕೆಂದು ಆತುರಗೊಂಡು ಹಲವು ಸನ್ನಿವೇಶಗಳನ್ನು ಒಟ್ಟುಹಾಕಿ ಅವಿಲು ಮಾಡಿಬಿಟ್ಟಿದ್ದಾರೆ. ಉದಾಹರಣೆಗಾಗಿ ದೀಕ್ಷಿತ ಸೌದಾಮಿನಿಯ ದೃಶ್ಯಗಳು ತೀರ ಅನಾವಶ್ಯಕವಾಗಿವೆ. ಕ್ರೈಸ್ತ ಡಾಕ್ಟರನ ದೃಶ್ಯವೂ ಇದೇ ರೀತಿಯಾಗಿದೆ. ಸನಾತನಿ ಭುಜಂಗನು ಪ್ರಸನ್ನಕುಮಾರನ ಉಪವಾಸವ್ರತ ಪ್ರೇಮ ಲಲಿತೆಯ ಅಸ್ವಾಸ್ಥ್ಯ ತೇಜಸ್ವಿನಿಯ ಆಗ್ರಹ ಮತ್ತು ಭಾಸ್ಕರನ ಬೋಧನೆಯಿಂದಲೇ ಮಾನಸಾಂತರ ಹೊಂದುವಂತಾಗಿದ್ದರೆ ಪರಿಣಾಮ ಒಳ್ಳೇದಾಗುತ್ತಿತ್ತು. ಭಾಸ್ಕರನು ಕೆಲವೆಡೆ ಭುಜಂಗನ ಕುರಿತು ಆಡುವ ಮಾತುಗಳು ಪಾತ್ರದ ಸ್ವಭಾವಕ್ಕೆ ಅಯೋಗ್ಯವಾದವು. ನಾಟಕ ಕರ್ತರು ಇದೇ ರೀತಿ ವ್ಯವಸಾಯ ಮಾಡಿ ಹೆಚ್ಚೆಚ್ಚಾಗಿ ಸಮಾಜಸೇವೆ ಮಾಡಲೆಂದು ಹಾರೈಸುತ್ತೇನೆ.

ಪ್ರೇಕ್ಷಕ.

ಸಿನೆಮಾ ಪ್ರದರ್ಶನ

ಕಳೆದ ತಾ. ೩ರಿಂದ ಇಲ್ಲಿಯ ಶ್ರೀ ರಾಮಕೃಷ್ಣ ಥಿಯೇಟರಿನವರೇ ಪುನಃ ಸಿನೆಮ ಪ್ರದರ್ಶನ ನಡೆಸಲಾರಂಭಿಸಿರುವರು. ಈಗ 'ಸಂಸಾರ ಸ್ವಪ್ನ' ಎಂಬ ಮೂಕ ಚಿತ್ರವು ಪ್ರಥಮವಾಗಿ ಪ್ರದರ್ಶಿಸುವುದು. ಬೇಗನೆ 'ಸಂಸಾರ ನೌಕ' ಎಂಬ ಉತ್ತಮ ಕನ್ನಡ ಮಾತನಾಡುವ ಚಿತ್ರವು ಪ್ರದರ್ಶಿಸಲ್ಪಡುವುದೆಂದು ತಿಳಿದು ಬರುತ್ತದೆ.

ಶ್ರೀ. ಬೈಲೂರು ವಾಸುದೇವರಾಯರು

ಕಳೆದ ಮುನಿಸಿಪಲ್ ಸಭೆಗೆ ಹೋಗದುದು, 'ಇಂಟೆರಿಮ್ ಮಂತ್ರಿಗಳ' ಮತ್ತು ಕರಹೊರಿಸುವ ಕುರಿತಾದ ಸರಕಾರದ ಹುಕುಮನ್ನು ನಿಷೇಧಿಸುವ ಠರಾವುಗಳನ್ನು ಚೇರ್‌ಮನರು ಚರ್ಚಿಸ ಬಿಡದುದರ ನಿಷೇಧಾರ್ಥವಾಗಿಯೇ ಎಂದು ಅವರು ತಿಳಿಸುತ್ತಾರೆ.

ಶ್ರೀ ರಾಮಾ ರೆಸ್ಟೋರೆಂಟಿನ ಶಾಖೆ

ಶ್ರೀ| ಎಚ್. ಗೋಪಾಲ ನಾಯಕರು ನಡೆಸಿಕೊಂಡು ಬರುತ್ತಿರುವ ಶ್ರೀ ರಾಮಾ ರೆಸ್ಟೋರೆಂಟ್ ಜನಪ್ರಿಯವಾದ ಉಡುಪಿಯ ಆದರ್ಶ ಉಪಹಾರ ಮತ್ತು ಭೋಜನಗೃಹ ಇದರ ಶಾಖೆಯೊಂದನ್ನು ಸದ್ಯದಲ್ಲೇ ಮಂಗಳೂರಲ್ಲಿ, ಸಿಟಿ ಬಿಸ್ಕುಟ್ ವರ್ಕ್ಸ್‌ನ ಎದುರುಗಡೆಯ ಕಟ್ಟೋಣದಲ್ಲಿ ತೆರೆಯಲಾಗುವುದೆಂದು ಪ್ರೊಪ್ರೈಟರ್ ಶ್ರೀ ಎಚ್. ಗೋಪಾಲನಾಯಕರು ತಿಳಿಸುತ್ತಾರೆ.

ದಿ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್

ಶಾಖೆಯೊಂದು ನಾಳೆ ತಾ ೪ನೇ ಶುಕ್ರವಾರ ಸೇಲಂನಲ್ಲಿ ತೆರೆಯಲ್ಪಡುವುದು.

ಉಡುಪಿ ತಾಲೂಕಿನಲ್ಲಿ ಹಳ್ಳಿ ಕೋಂಗ್ರೆಸ್ ಸಮಿತಿಗಳ ಸ್ಥಾಪನೆ ತಾಲೂಕು ಕೋಂಗ್ರೆಸ್ ಕಮಿಟಿಯವರ ಪ್ರಚಾರಕಾರ್ಯ

ಉಡುಪಿ ತಾಲೂಕು ಕೋಂಗ್ರೆಸ್ ಕೆಲಸಗಾರರ ದಳವೊಂದು ಹಳ್ಳಿಕಮಿಟಿಗಳ ಸ್ಥಾಪನೆಯೇ ಮೊದಲಾದ ಕಾರ್ಯಗಳಿಗಾಗಿ ತಾ. ೧೭-೫-೩೭ರಲ್ಲಿ ಬ್ರಹ್ಮಾವರಕ್ಕೆ ಬಂದು ಪ್ರಾತಃಕಾಲ ಧ್ವಜಾರೋಹಣ ವಿಧಿಯನ್ನು ನೆರವೇರಿಸಿತು. ಸಂಜೆ ೫ ಘಂಟೆಗೆ ಸರಿಯಾಗಿ ಬ್ರಹ್ಮಾವರ ವೈದ್ಯಶಾಲೆಯಲ್ಲಿ ಶ್ರೀ ಹಿ. ರಾಮರಾಯ ಮಲ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆನೆರೆದು ಶ್ರೀ| ಎಂ| ವಿಠಲಹೆಗ್ಡೆ, ಶ್ರೀ| ಪಿ| ಮಂಜುನಾಥ ನಾಯಕರು ಭಾಷಣವಿತ್ತರು. ಅಧ್ಯಕ್ಷರು ಪ್ರಕೃತದ ಪರಿಸ್ಥಿತಿಯ ಕುರಿತು ಉಪನ್ಯಾಸಿಸಿದ ನಂತರ ಬ್ರಹ್ಮಾವರ ಕೇಂದ್ರ ಕೋಂಗ್ರೆಸ್ ಕಮಿಟಿಯನ್ನು ರಚಿಸಲಾಯಿತು. ಶ್ರೀಯುತರಾದ ಕುಂಬ್ರಗೋಡು ನಾರಾಯಣ ಶೆಟ್ಟಿ (ಅಧ್ಯಕ್ಷ) ಪಿ. ಪೈ, ರಾಮನ್ ಗುರುಕುಲ್, ಎಂ. ಶ್ರೀನಿವಾಸಾಚಾರ್ಯ (ಜತೆಕಾರ್ಯದರ್ಶಿಗಳು) ಬಿ ಪದ್ಮನಾಭ ಪೈ (ಖಜಾಂಚಿ) ಬಿ. ಅಂತಯ್ಯ ಶೆಟ್ಟಿ ಬಿ. ಮಂಜಯ ಸೆಟ್ಟಿ, ವಿನ್ಸೆಂಟ್ ಇ. ಲುವಿಸ್, ಎಚ್. ಅಂತಯ್ಯ ಸೆಟ್ಟಿ, ಟಿ ಗೋಪಾಲ ಪೈ, ಸಗೀರ್ಬೇಗ್ ಶ್ರೀನಿವಾಸ ಶೆಣೈಯವರು ಕಾರ್ಯಕಾರೀ ಮಂಡಳಿಯ ರಚನೆಯಾಯಿತು. ತಾ. ೧೮-೫-೩೭ರಲ್ಲಿ ದಳವು ಬಾರಕೂರಿಗೆ ಹೋಯಿತು. ಸಂಜೆ ಸಿಂಹಾಸನ ಮೈದಾನದಲ್ಲಿ ಸಭೆಯಾಯ್ತು. ಜೋನ್ ಪಿ. ಸಿಕ್ವೇರಾ (ಅಧ್ಯಕ್ಷ) ಬಿ ವಿಟ್ಠಲ ಸೆಟ್ಟಿ, ಬಿ. ಜಿ. ಕಾಮತ್ (ಜತೆಕಾರ್ಯದರ್ಶಿಗಳು) ಎಚ್. ಮಂಜುನಾಥ ಜೋಯಿಸ (ಖಜಾಂಚಿ) ಮೂಡಹಡು ರಾಮರಾವ್ ಬಿ ಅನಂತಯ್ಯ ಹೆಗ್ಡೆ, ಕೆ. ಕಾಳಿಂಗ ಶ್ಯಾನುಭಾಗ ಎಸ್. ಅಣ್ಣಪ್ಪ ಸೆಟ್ಟಿ, ಅಲ್ತಾರ್ ರಾಮಣ್ಣ ಶೆಟ್ಟಿ, ಎಚ್. ಡೆನಿಸ್ ಪಿ. ಕಾರ್ಡೋಜರವರ ಕಾರ್ಯಕಾರೀ ಮಂಡಳಿಯುಳ್ಳ ಕೋಂಗ್ರೆಸ್ ಕಮಿಟಿಯನ್ನು ಸ್ಥಾಪಿಸಲಾಯಿತು. ತಾ. ೧೯ರಲ್ಲಿ ಸ್ಯಾಬರಕಟ್ಟೆಯಲ್ಲಿ ಶ್ರೀ ಕೊಕ್ಕರ್ಣೆಬೈಲು ಪಿ. ರಾಮಣ್ಣ ಹೆಗಡೆಯವರ ಅಧ್ಯಕ್ಷತೆಯಲ್ಲಿ ಸಭೆಸೇರಿಸಿದಾಗ ಶ್ರೀ. ಎಮ್. ವಿಟ್ಠಲ ಹೆಗಡೆಯವರು ಸಮಿತಿಯ ರಚನೆಯ ಕುರಿತು ವಿವರಿಸಿ ಭಾಷಣವಿತ್ತರು ಶ್ರೀ. ಕೊಕ್ಕರ್ಣೆಬೈಲು ರಾಮಣ್ಣ ಹೆಗಡೆ (ಅಧ್ಯಕ್ಷ) ಶಿರಿಯಾರ ದೇವೇಂದ್ರ ಹೆಗ್ಗಡೆ (ಕಾರ್ಯದರ್ಶಿ) ಜಂಬೂರು ಪರಮೇಶ್ವರ ಅಡಿಗ, (ಖಜಾಂಚಿ) ಹೆಗ್ಗುಂಜೆ ಶ್ರೀನಿವಾಸ ಅಡಿಗ, ಬಲ್ಲಾಡಿ ಸುಬ್ಬಣ್ಣ ಹೆಗ್ಗಡೆ, ಶಿರೂರು ಶಂಕರಣ್ಣ ಶೆಟ್ಟಿ, ಶಿರಿಯಾರ ಶೀನಪ್ಪ ಶೆಟ್ಟರು ಮೆಂಬರರಾಗಿ ಇರುವ ವರ್ಕಿಂಗ್ ಕಮಿಟಿಯನ್ನು ಸ್ಯಾಬರಕಟ್ಟೆ ಕೇಂದ್ರ ಸಮಿತಿಗೆ ರಚಿಸಲಾಯಿತು. ತಾ. ೨೦ರಲ್ಲಿ ಕೋಟದಲ್ಲಿ ಸಭೆ ಶ್ರೀ. ಎಂ| ವಿಟ್ಠಲ ಹೆಗಡೆಯವರು ಸಮಿತಿಯ ರಚನೆಯ ಕುರಿತು ವರ್ಣಿಸಿದ ತರುವಾಯ ಕೋಟ ಕೇಂದ್ರಸಮಿತಿಗೆ ಶ್ರೀ. ಕೃಷ್ಣದೇವ ಐತಾಳ (ಅಧ್ಯಕ್ಷ) ಕೋಟ ನರಸಿಂಹ ಕಾರಂತ (ಕಾರ್ಯದರ್ಶಿ) ಪದ್ಮನಾಭ ಹೇಳೆ, ಕೆ ತಾಳಂಗೆ ಉಡುಪ, ಸದಾಸಿವಐತಾಳ, ನಾರಾಯಣ ನಾಯಕ್, ಮಹಾಲಿಂಗ ಶೆಟ್ಟಿ, ಕೃಷ್ಣಪ್ಪ ಶೆಟ್ಟಿ ನರಸಿಂಹಹೊಳ್ಳ, ವೆಂಕಟರಮಣ ಪೈ, ಮಹಾಬಲೇಶ್ವರ ಐತಾಳರುಳ್ಳ ಕಾರ್ಯಕಾರಿ ಸಮಿತಿಯ ರಚನೆಯಾಯಿತು. ತಾ| ೨೧ರಲ್ಲಿ ಹಂಗಾರಕಟ್ಟೆಯಲ್ಲಿ ಕೋಂಗ್ರೆಸ್ ಮೆಂಬರರ ಸಭೆಯಾಗಿ ಶ್ರೀ| ಎಂ| ವಿಟ್ಠಲ ಹೆಗಡೆಯವರು ಅಂದಿನ ಸಭೆಯ ಉದ್ದೇಶವನ್ನು ತಿಳಿಸಿದ ನಂತರ ಹಂಗಾರಕಟ್ಟೆ ಕೇಂದ್ರ ಸಮಿತಿಗೆ ಶ್ರೀ ಪಾಂಗಳ ವಿಟ್ಠಲ ನಾಯಕ್ (ಅಧ್ಯಕ್ಷ) ಶ್ರೀ| ಬಿ| ಸಂಜೀವ ಶೆಟ್ಟಿ, ಶ್ರೀ| ಬಿ| ವಾಸುದೇವನಾಯಕ್ (ಜತೆ ಕಾರ್ಯದರ್ಶಿಗಳು) ಶ್ರೀಗಳಾದ ಪಿ| ಸೀತಾರಾಮಚಡಗ, ಐ| ಚಂದ್ರಶೇಖರ ಪಂಡೆ, ವಾಮನ ನಾಯ್ಕ, ಗೋವಿಂದರಾಯ ಪ್ರಭು, ಮತ್ತು ಮರಕಾಲ, ಕೆ| ದಯಾನಂದ ಪೈ, ಬಿ| ಅಂತಯ್ಯ ಹೆಗಡೆಯವರನ್ನು ವರ್ಕಿಂಗ್ ಕಮಿಟಿಯ ಮೆಂಬರರಾಗಿ ಸೇರಿಸಲಾಯಿತು. ಮಿಕ್ಕ ಕಡೆಗಳ ಕಾರ್ಯಕ್ರಮವನ್ನು ಸ್ವಲ್ಪ ಅವಕಾಶಕ್ಕೆ ಮುಂದುವರಿಸಲಾಗಿದೆ. ಶ್ರೀ| ಬಿ| ಅಂತಯ್ಯ ಶೆಟ್ಟಿ, ಕೆ| ಚರ್ಡಪ್ಪ ಶೆಣಯ ಮೊದಲಾದ ಸ್ವಯಂ ಸೇವಕರೂ ಈ ಸಂಚಾರದಳದಲ್ಲಿ ಸೇರಿದ್ದರು

(೧೨ನೇ ಪೇಜಿನಿಂದ)

ಇದೇ ಕಳೆದ ತಾ. ೩೧ಕ್ಕೆ ಶ್ರೀಮಾನ್ ಕೆ. ಆರ್. ಕಾರಂತ ಯಮ್.ಎಲ್. ಎ. ಇವರು ಕಾಂಗ್ರೆಸ್ ಪ್ರಚಾರಕಾರ್ಯಕ್ಕೆ ಬೆಳ್ತಂಗಡಿಗೆ ಚಿತ್ತೈಸಿದ್ದಾಗ ಒಂದು ಸಾರ್ವಜನಿಕ ಸಭೆ ಸೇರಿ ಶ್ರೀ| ಕೊಡಿಗೆ ಶೇಷಗಿರಿ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಶ್ರೀ ಕಾರಂತರು ಪ್ರಕೃತದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಮತ್ತು ತಾವು ಮಂತ್ರಿಪದವಿಯನ್ನು ಸ್ವೀಕರಿಸದಿರಲು ಕಾರಣವನ್ನು ಎಲ್ಲರಿಗೂ ಸರಿಯಾಗಿ ಮನದಟ್ಟಾಗುವಂತೆ ವಿವರಿಸಿ ಹೇಳಿದರು. ಮತ್ತು ಸಭೆಯಲ್ಲಿ ಈ ಕೆಳಗಣ ನಿರ್ಣಯವನ್ನು ಸರ್ವಾನುಮತದಿಂದ ಮಂಜೂರು ಮಾಡಲ್ಪಾಯಿತು.

"ಸರಕಾರದವರು ನಮ್ಮ ಪ್ರಾಂತಿಕ ನ್ಯಾಯವಿಧಾಯಕ ಸಭೆಗಳನ್ನು ಈ ವರೆಗೆ ಕರೆಯದಿರುವದು ಮತ್ತು ಹಂಗಾಮಿ ಮಂತ್ರಿಗಳನ್ನು ನೇಮಿಸಿದುದು ಈ ಸಭೆಯು ಖಂಡಿಸುವುದಲ್ಲದೆ ಹಿಂದೀರಾಷ್ಟ್ರೀಯ ಕಾಂಗ್ರೆಸಿನಲ್ಲಿ ತಮ್ಮ ಸಂಪೂರ್ಣ ವಿಶ್ವಾಸವನ್ನು ಈ ಸಭೆಯು ವ್ಯಕ್ತಪಡಿಸುತ್ತದೆ' ತದನಂತರ ಸ್ಥಳೀಕ ಕಾಂಗ್ರೆಸ್ ಕಮಿಟಿಯೊಂದನ್ನು ಸ್ಥಾಪಿಸಿ ಕಾಂಗ್ರೆಸು ತತ್ವಗಳನ್ನು ಆಸುಪಾಸಿನ ಗ್ರಾಮಗಳಲ್ಲಿಯೂ ಪ್ರಚಾರಮಾಡುವಂತೆಯೂ ಕಾಂಗ್ರೆಸಿಗೆ ಮೆಂಬರರನ್ನು ಸೇರಿಸುವಂತೆಯೂ ನಿರ್ಧರಿಸಲಾಯಿತು.

ಪ್ರೇಕ್ಷಕರಲ್ಲೊಬ್ಬ

ಮಂಗಳೂರು

ದ. ಕನ್ನಡ ಭೂಮ್ಯಾಲಿಕರ ಸಂಘ

ಇದೇ ಜೂನ್ ೬ನೇ ಭಾನುವಾರ ದಿನ ಪೂರ್ವಾಹ್ನ ೧೦ ಘಂಟೆಗೆ ಸರಿಯಾಗಿ ಕೊಡಿಯಾಲ ಬೈಲಿನಲ್ಲಿರುವ ಶ್ರೀ| ಕೆ. ಆರ್. ಕಾರಂತ್ ಯಂ. ಎಲ್. ಎ., ಇವರ ಕಚೇರಿಯಲ್ಲಿ ಜಿಲ್ಲಾ ಭೂಮ್ಯಾಲಿಕರ ಸಂಘದ ವರ್ಷಾವಧಿ ಸಭೆಯು ನಡೆಯುವುದು. ಕಾರ್ಯಕ್ರಮದಲ್ಲಿ ಮುಖ್ಯವಾದ ವಿಷಯಗಳಿವು. ವರದಿಯನ್ನು ಸಭೆಯ ಮುಂದಿರಿಸುವುದು; ಲೆಕ್ಕ ಪತ್ರ ಪರಿಶೋಧಿಸುವುದು; ಹೊಸ ಕಾರ್ಯಕಾರಿ ಮಂಡಲಕ್ಕೆ ಸದಸ್ಯರನ್ನಾರಿಸುವುದು; ಕಿಸ್ತ ಕಡಿಮೆಮಾಡುವುದಕ್ಕೆ ಬೇಕಾದ ಮಾರ್ಗವನ್ನು ಪರ್ಯಾಲೋಚಿಸುವುದು. ಮತ್ತು ಇನ್ನಿತರ ವಿಷಯಗಳು.

ಕೆನರಾ ಗಾಯನ ಸಮಾಜ

ಈ ಹೆಸರಿನಿಂದ ಒಂದು ಸಮಾಜವು ಇಲ್ಲಿ ಇದೇ ಜೂನ್ ತಾ. ೫ರಲ್ಲಿ ಸ್ಥಾಪಿಸಲ್ಪಡುವುದು. ಇದರ ಆರಂಭೋತ್ಸವವು ಜೂನ್ ೬ನೇ ಸಾಯಂಕಾಲ ೫-೩೦ಕ್ಕೆ ಸರಿಯಾಗಿ ಗಣಪತಿ ಹೈಸ್ಕೂಲಿನಲ್ಲಿ ಜರಗುವುದು. ಮೈಸೂರು ಆಸ್ಥಾನ ವಿದ್ವಾನ್ ದಿಲಾಯತ್ ಹುಸ್ಸೇನ್ ಇವರ ಸಂಗೀತ ಸಮಾರಂಭವೂ ನಡೆಯಲಿರುವುದು.

ನಗರ ಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಭಾಗವಹಿಸುವುದು.

ತಾ. ೨೯ನೇ ಸಾಯಂಕಾಲ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಭಕ್ತರ ಸಭೆಯು ಸೇರಿ ಬರುವ ನಗರ ಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಭಾಗವಹಿಸಬೇಕೆ? ಬೇಡವೆ? ಎಂಬ ಪ್ರಶ್ನೆಯು ಚರ್ಚಿಸಲ್ಪಟ್ಟು, ದೇಶದ ಹಿತದೃಷ್ಟಿಯಿಂದ ಸ್ಪರ್ಧೆಗೆ ನಿಲ್ಲಬೇಕೆಂದೂ, ನಗರ ಕಾಂಗ್ರೆಸ್ ಸಮಿತಿಯವರೇ ಈ ಚುನಾವಣೆಯನ್ನು ನಡಿಸಬೇಕೆಂದೂ ತೀರ್ಮಾನವಾಯಿತು. ಈ ಅಭಿಪ್ರಾಯವನ್ನು ಸದ್ಯದಲ್ಲಿಯೇ ಸೇರಲಿರುವ ಟೌನ್ ಕಾಂಗ್ರೆಸ್ ಕಮಿಟಿಯ ಮೀಟಿಂಗಿನಲ್ಲಿ ಇಡಲಾಗುವದು.

ಬಾತ್ಮೀದಾರರಲ್ಲಿ

ನಾವು ಪ್ರಕಟಿಸತಕ್ಕ ಬಾತ್ಮಿಗಳು ನಮಗೆ ಪ್ರತಿ ಮಂಗಳವಾರದೊಳಗೆ ಸಿಕ್ಕಿದರೆ ಮಾತ್ರ ಆ ವಾರದ ಸಂಚಿಕೆಯಲ್ಲಿ ಮುದ್ರಿಸಲು ಅನುಕೂಲವಾಗುವುದು. ವಿಳಂಬವಾಗಿ ಬಂದಲ್ಲಿ ಪ್ರಕಟಿಸಲು ಸಾಧ್ಯವಾಗಲಾರದೆಂದು ಈ ಮೂಲಕ ತಿಳಿಸಲಾಗಿದೆ.

ಮೆನೇಜರ್, **ನವಯುಗ**

ನವಭಾರತ ಬುಕ್ ಡಿಪೊ

ಪುಸ್ತಕ ಮತ್ತು ಸ್ಟೇಶನರಿ ವ್ಯಾಪಾರಿಗಳು

ಚರ್ಚ್‌ರೋಡು . . . ಉಡುಪಿ, ದ. ಕ.

ನಮ್ಮಲ್ಲಿ

ಜೂನ್ ತಾ. 1ರಿಂದ ಜುಲೈ 15ರ ತನಕ

ವ್ಯಾಪಾರ ಮಾಡುವವರಿಗೆ ವ್ಯಾಪಾರದ ಪರಿಮಾಣಕ್ಕನುಸಾರವಾಗಿ

ಇನಾಮುಗಳಿರುವವು.

ಹೊಸ ಹೊಸ ಮ್ಯಾಲುಗಳು ! ತೀರ ಮಿತ ದರಗಳು !!

ನವಯುಗ ಆಫೀಸಿನ ಕೆಳಗಡೆ ಇರುವ

'ನವಭಾರತ ಬುಕ್ ಡಿಪೋ'ವನ್ನೊಮ್ಮೆ ಸಂದರ್ಶಿಸಿರಿ.

This is not a Prospectus but a trade advertisement.

ಗೋಕುಲದಾಸ ಫಾರ್ಮ್ಸ್ ಲಿಮಿಟೆಡ್, ಮಂಗಳೂರು.

ಮಂಗಳೂರು ಮತ್ತು ಉಡುಪಿ ಮಹಾಜನರ ವಿಶೇಷ ಸೌಕರ್ಯಕ್ಕಾಗಿ!

ಪಾಲು ಒಂದರ ಬೆಲೆ ರೂ. ೫ ಮಾತ್ರ !

ಶುದ್ಧವಾದ ಪುಷ್ಟಿಕರವಾದ ಹಾಲು, ಬೆಣ್ಣೆ, ಮೊಸರು ಮೊದಲಾದುವನ್ನು ಸುವ್ಯವಸ್ಥಿತ ಆಧುನಿಕ ರೀತಿಯಲ್ಲಿ ಒದಗಿಸಿಕೊಡುವುದೇ ಈ ನೂತನ ಸಂಸ್ಥೆಯ ಜೀವಾಳ.

ಅಧಿಕ ಲಾಭದಾಯಕವಾದ ಸಾರ್ವಜನಿಕ ಮಿತಜವಾಬ್ದಾರಿಯ ನೆಲೆಯಲ್ಲಿ ಸ್ಥಾಪಿತವಾದ ಈ ನೂತನ ಸಂಸ್ಥೆಯು ಅಖಿಲ ದಕ್ಷಿಣಭಾರತದಲ್ಲೇ ಮೊದಲನೆಯದು.

ಆದುದರಿಂದ ಪ್ರೊಸ್ಪೆಕ್ಟಸ್ ಫೋರ್ಮುಗಳಿಗಾಗಿ ಈಗಲೇ ಬರೆದು ಕಂಪೆನಿಯ ಪಾಲುಗಳನ್ನು ಪಡಕೊಳ್ಳಿರಿ !

ದಕ್ಷಿಣ ಕನ್ನಡ

ಬ್ರಹ್ಮಾವರ

ಇಲ್ಲಿ ನವೀನವಾಗಿ ಕಟ್ಟಿಸಿರುವ ಬೋರ್ಡ್ ಎಲಿಮೆಂಟರಿ ಶಾಲಾ ಮಂದಿರದ ಪ್ರವೇಶೋತ್ಸವವು ೩ನೇ ತಾ ೨೪-೫-೩೭ನೇ ಸೋಮವಾರ ಅಪರಾಹ್ನ ಘಂಟೆ ೩-೩೦ಕ್ಕೆ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡ್ ಎಜ್ಯುಕೇಶನಲ್ ಆಫೀಸರರಾದ ಮ. ರಾ ರಾ. ಕೆ. ಸಂಜೀವ ಭಟ್ ಎಮ್. ಎ., ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಬಾಲಕ ಬಾಲಕಿಯರ ಮೆರವಣಿಗೆಯೂ, ಪ್ರವೇಶೋತ್ಸವವೂ, ಬಹಿರಂಗ ಸಭೆಯೂ, ಇನಾಮುಗಳೂ ಮಕ್ಕಳಿಗೆ ತಿಂಡಿ ತಿನಸುಗಳೂ ಇದ್ದುವಲ್ಲದೆ ಸಂಜೆಗೆ ರಾಜಭಕ್ತಿ ಎಂಬ ನಾಟಕವು ಶಾಲಾ ಬಾಲಕಿಯರಿಂದ ಮನೋಹರವಾಗಿ ಆಡಿ ತೋರಿಸಲ್ಪಟ್ಟಿತು. ಜನಸ್ತೋಮವು ಸುಮಾರು ೩-೪ ಸಾವಿರಕ್ಕೂ ಮಿಕ್ಕಿತ್ತು.

ನಾಟಕದ ಕಥೆಯು, ಚರಿತ್ರಾರ್ಹವಿದ್ದು ರಜಪೂತರಾದ ಇಂದಿರೆ ದುರ್ಗಾದಾಸರ ಸ್ವಾಮಿಭಕ್ತಿಯನ್ನೂ ದೇಶಪ್ರೇಮವನ್ನೂ, ಧರ್ಮಪರಾಯಣತೆಯನ್ನೂ ಹೊರಸೂಸುತ್ತಿದೆ. ನಾಟಕದಲ್ಲಿ ಸುಮಾರು ನಲವತ್ತು ಹಾಡುಗಳಿದ್ದು ಅವುಗಳು ಬಹು ಮಧುರ ರೀತಿಯಿಂದ ಬಾಲಿಕೆಯರಿಂದ ಹಾಡಲ್ಪಟ್ಟಿರುತ್ತವೆ. ನಾಟಕ ವೇಷ ಭೂಷಣಗಳಲ್ಲಿ ಅಲ್ಲಲ್ಲಿ ಕೆಲವು ಕೊರತೆಗಳಿದ್ದುವಾದರೂ, ಇಂತಹ ದೊಡ್ಡ ಸಂಗೀತ ನಾಟಕವನ್ನು ಚಿಕ್ಕ ಬಾಲಕಿಯರು ಆಡಿ ಜನರಂಜನೆಯನ್ನು ಮಾಡಿದುದು ಹೊಗಳತಕ್ಕದ್ದು. ದುರ್ಗಾದಾಸನ ಪಾತ್ರವು ಎಲ್ಲಕ್ಕೂ ಉತ್ತಮವಿತ್ತು. ಅಲ್ಲದೆ ಇಂದಿರೆ, ನಯನಪಾಲ, ರೋಷನಾರ ಮೊದಲಾದ ಪಾತ್ರಗಳೂ ಉತ್ತಮವಿದ್ದುವು. ನಾಟಕಾನಂತರ ಬೆಳ್ಳಿಯ ಮೆಡಲುಗಳೂ ಬಹುಮಾನಗಳೂ ಪಾತ್ರವರ್ಗಕ್ಕೆ ಹಂಚಲ್ಪಟ್ಟುವು.

ಸಿಲೆಕ್ಷನ್ ಕಮಿಟಿಯವರು ದುರ್ಗಾದಾಸನ ಪಾತ್ರವಹಿಸಿದ ಕಮಲೆಗೆ ಒಂದನೆಯ ಬಹುಮಾನವನ್ನೂ, ಇಂದಿರೆಯ ಪಾತ್ರವಹಿಸಿದ ರಾಜೀವಿಗೆ ಎರಡನೆ ಬಹುಮಾನವನ್ನೂ, ನಯನಪಾಲನ ಪಾತ್ರ ವಹಿಸಿದ ಸುಂದರಿಗೆ ಮೂರನೆಯ ಬಹುಮಾನವನ್ನೂ ಕೊಟ್ಟರು. ಸಭಿಕರಿಂದ ರೋಷನಾರೆಯ ಪಾತ್ರವಹಿಸಿದ ರಮಣಿಗೂ, ಇಂದಿರೆಯ ಪಾತ್ರ ವಹಿಸಿ ಸೊಗಸಾಗಿ ಹಾಡಿದ ರಾಜೀವಿ ಬಾಯಿಗೂ, ಬೆಳ್ಳಿಯ ಪದಕಗಳನ್ನು ಅರ್ಪಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಒಟ್ಟಿನಲ್ಲಿ ನಾಟಕವು ಬಹು ಜಯಶೀಲವಾಗಿ, ಪ್ರವೇಶೋತ್ಸವವು ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ನೂತನ ಶಾಲೆಗೆ ಶ್ರೇಯಸ್ಸನ್ನು ಶ್ರೀ ಭಗವಂತನು ದಯ ಪಾಲಿಸಲಿ ಎಂದು ಕೋರುತ್ತೇವೆ.

'ಮಾಧು'

ಮೂಲ್ಕಿ

ಸ್ಥಳೀಕ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ ದಶಮ ವರ್ಷಂತಿಯು ಇದೇ ಕಳೆದ ತಾ ೧೬-೫-೩೭ನೇ ರವಿವಾರ ರಾತ್ರಿ ಘಂಟೆ ೧೦ಕ್ಕೆ ಶ್ರೀಮಾನ್ ಎ. ಬಿ. ಶೆಟ್ಟಿ, ಯಂ. ಯಲ್. ಎ. ರವರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಊರ ಅನೇಕ ಪ್ರಮುಖರು ದಯಮಾಡಿಸಿದುದಲ್ಲದೆ ಶ್ರೀ. ವೆಂಕಟ್ರಾಯ ಬಾಳಿಗ ಬಿ. ಎ., ಬಿ ಎಲ್. ಯಂ. ಯಲ್. ಎ. ರವರೂ, ಡಿ. ಇ. ಕೌನ್ಸಿಲ ಮೆಂಬರ್ ಶ್ರೀ. ಕೆ. ಗಣಪಯ್ಯಶೆಟ್ರು ಚಿತ್ತೈಸಿದ್ದರು. ಶಾಲೆಯ ಹತ್ತನೇ ವಾರ್ಷಿಕ ವರದಿಯು ಓದಲ್ಪಟ್ಟಿತು. ಪರಸ್ಥಳರಿಂದ ಬಂದ ಸಂದೇಶಗಳು ಓದಿ ಹೇಳಲ್ಪಟ್ಟುವು. ನಂತರ ಅಧ್ಯಕ್ಷರ ಮೂಲಕ ಕೆಲವೊಂದು ಪಾರಿತೋಷಕಗಳು ಹಂಚಲ್ಪಟ್ಟವು. ಇದಾಗಲು ಶಾಲಾ ಬಾಲಕರು "ಶ್ರೀ ಕೃಷ್ಣ ರುಕ್ಮಿಣೀ ಸಂವಾದ"ವನ್ನು ಯಕ್ಷಗಾನ ಮೂಲಕ ನಟಿಸಿ ತೋರಿಸಿದರು. ಅದಾಗಲು ಶಾಲಾ ವಿದ್ಯಾರ್ಥಿಗಳಾದ ಮೂವರು ಕೊರಗರ ಹುಡುಗರು ಚಲೋ ರೀತಿಯಿಂದ ಕೊಳಲು ವಾಲಗಗಳನ್ನು ಊದಿದರು. ಸ್ಥಳೀಕ ಸಮರ್ಥ ವ್ಯಾಯಾಮಶಾಲೆಯ ಪ್ರೊಪ್ರೈಟರ್ ಶ್ರೀ. ಯಂ ರಾಮಕೃಷ್ಣ ಕಾಮತ್ ಮತ್ತು ಇವರ ಸಹಪಾಠಿ ಶ್ರೀ. ಯಂ, ಅಪ್ಪುರಾಯ ಕಾಮತ್ ಇವರಿಬ್ಬರು ಕೆಲವೊಂದು ಅಂಗಸಾಧನೆಯ ದೇಖಾವೆಗಳನ್ನು ಪ್ರದರ್ಶಿಸಿದರು. ಇದಾದ ಮೇಲೆ ಶಾಲಾ ವಿದ್ಯಾರ್ಥಿಗಳು "ಕಲಿತ ಹುಡುಗಿ" ಎಂಬ ಒಂದಂಕದ ಸಾಮಾಜಿಕ ನಾಟಕವನ್ನು ಅಭಿನಯಿಸಿ ತೋರಿಸಿದರು. ಆ ಮೇಲೆ ಅಧ್ಯಕ್ಷ ಮಹಾಶಯರ ಅಮೂಲ್ಯ ಭಾಷಣವಾಯಿತು. ಇವರು ತಮ್ಮ ಭಾವಗರ್ಭಿತವಾದ ಭಾಷಣದಲ್ಲೀ ಪಾಶ್ಚಾತ್ಯ ದೇಶಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ಒದಗಿಸಿಕೊಟ್ಟಿರುವ ಸೌಕರ್ಯಗಳನ್ನು ಕುರಿತು ವಿಮರ್ಶಿಸಿ, ರಾತ್ರಿ ಶಾಲೆಗಳ ಆವಶ್ಯಕತೆಯನ್ನು ಸಾದ್ಯಂತವಾಗಿ ವಿವರಿಸಿ ಶಾಲೆಗೆ ಉತ್ತರೋತ್ತರ ಶ್ರೇಯೋಭಿವೃದ್ಧಿಯನ್ನು ಕೋರಿದರು. ಕಡೆಗೆ ಅಧ್ಯಕ್ಷ ಮಹಾಶಯರ ಕೊರಳಿಗೆ ಹೂಹಾರ ಹಾಕಿ ಗೌರವಿಸಿಯಾಗಲು ಶಾಲಾ ಮುಖ್ಯ ಉಪಾಧ್ಯಾಯ ಶ್ರೀ. ಬಿ. ಭೋಜರಾಯರು ನೆರೆದು ಬಂದಿದ್ದ ಸರ್ವರಿಗೂ ಮುಖ್ಯವಾಗಿ ಅಧ್ಯಕ್ಷ ಮಹಾಶಯರಿಗೆ ಶಾಲೆಯ ಕಡೆಯಿಂದ ಧನ್ಯವಾದಗಳನ್ನು ಅರ್ಪಿಸಿದರು. ನಂತರ ಮಂಗಳ ಗೀತದೊಡನೆ ಸಮಾರಂಭವು ಕೊನೆಗೊಂಡಿತು.

ಸ್ಥಳೀಕ ಸಂಗೀತಕಲಾ ಮಂದಿರದ ಪೋಷಣಾರ್ಥವಾಗಿ ಕಿರಿಯರ ಕೂಟವೊಂದು ಏರ್ಪಟ್ಟು ಸಂಗೀತ ಆದಿ ತಯೇ ನಾಟ್ಯಕಲಾಪ್ರದರ್ಶನಕ್ಕಾಗಿ ಅಲ್ಲಲ್ಲಿ 'ಅಸ್ಪೃಶ್ಯತಾ' ಅಥವಾ 'ಹರಿಜನೋದ್ಧಾರ' ಎಂಬ ಸಾಮಾಜಿಕ ನಾಟಕವನ್ನು ಸಾರ್ಥಕವಾದ ರೀತಿಯಲ್ಲಿ ಜನಮನಾಕರ್ಷಕವಾಗುವಂತೆ ಅಭಿನಯಿಸಿ ಗ್ರಾಮಾದರಣೆಗೆ ಪಾತ್ರರಾದುದು ಬಹಳ ಸಂತೋಷಾಸ್ಪದ ವಿಚಾರವಿದೆ. ಇದರಿಂದ ಸಮಾಜಸೇವಾಕಾರ್ಯವು ನಿರ್ವಹಿಸಲ್ಪಡುತ್ತದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ನಾಟಕವು ಅತ್ಯಂತವೂ ಮನೋರಂಜಕವಿತ್ತು. ದೇಶಭಕ್ತ ಭಾಸ್ಕರ ರಾಯರ ಪಾತ್ರವು ಆಧುನಿಕ ತರುಣರು ದೇಶಪ್ರೇಮವನ್ನು ತುರುಕಿತತ್ಸೇವೆಯಲ್ಲಿ ಹುರುಪನ್ನುಂಟುಮಾಡುತ್ತದೆ. ಸುಮಿತ್ರ ಪ್ರಸನ್ನರೆಂಬ ಸುಧಾರಿತ ಬಾಲವೃತ್ತಿಗಳಿಂದ ಕರ್ಕಶ ಮನಸ್ಸಾದರೂ ಕರುಣಾಪೂರಿತವಾಗುತ್ತದೆ. ಅಂತೂ ಮಿಕ್ಕುಳಿದ ಪಾತ್ರಗಳೂ ಮಿಶ್ರ ರಸಗಳನ್ನು ಬೀರುವವವಿದ್ದು ನಿರಕ್ಷರರಿಂದಲೂ ದರ್ಶನಾರ್ಹತೆಯನ್ನು ಪಡೆದಿದ್ದಿತೆಂದರೆ ಅತಿಶಯವಾಗದು. ಈಗಾಗಲೇ ಮೂಲ್ಕಿ, ಕಾರ್ಕಳ ಮತ್ತು ಮೂಡಬಿದರೆ ಮತ್ತು ಉಡುಪಿಗಳಲ್ಲಿ ನಾಟಕವಾಡಿ ಕಿರಿಯರ ಕೂಟವು ಯಶಸ್ವಿಯಾಗಿರುವದು.

ಪುತ್ತೂರು ಡಿವಿಜನಿನಲ್ಲಿ ಕಾಂಗ್ರೆಸ್ ಪ್ರಚಾರ ಕಾರ್ಯ

ಬೆಳ್ಳಾರೆ

ಸ್ಥಳೀಕ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ತಾ. ೨೧-೫-೩೭ನೇ ಶುಕ್ರವಾರ ಬೆಳ್ಳಾರೆಯ ಮಹಾಜನರ ಒಂದು ಸಭೆಯು ಕೂಡಿಬಂತು. ಶ್ರೀ. ಬಿ. ನಾರಾಯಣ ಶೇಕರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಕೋಟ ರಾಮಕೃಷ್ಣ ಕಾರಂತ, ಎಮ್. ಎಲ್. ಎ. ಇವರು ತಮ್ಮ ಭಾಷಣದಲ್ಲಿ ಈಗಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಕಾಂಗ್ರೆಸ್ ಸಂಸ್ಥೆಯನ್ನು ಜನತೆಯು ಬಲಗೊಳಿಸಬೇಕೆಂದೂ, ಜನತೆಯ ಸಂಪೂರ್ಣ ಬೆಂಬಲವಿದ್ದರೆ ಕಾಂಗ್ರೆಸಿಗೆ ತನ್ನ ಧ್ಯೇಯವನ್ನು ಸಂಪಾದಿಸಲು ಶಕ್ಯವಾಗುವುದೆಂದೂ ಹೇಳಿದರು. ಶ್ರೀಗಳಾದ ಸೊರಕೆ ಸಂಕಪ್ಪ ರೈ ಮತ್ತು ಕೋಟೆ ಸೀತಾರಾಮಯ್ಯನವರು ಸಮಯೋಚಿತ ಭಾಷಣಮಾಡಿದರು. ಅಧ್ಯಕ್ಷರು ಸಭಿಕರೊಡನೆ ಕಾಂಗ್ರೆಸಿಗೆ ಸಂಪೂರ್ಣ ಬೆಂಬಲವಿತ್ತು ದೇಶಸೇವೆಯಲ್ಲಿ ಭಾಗಿಗಳಾಗಬೇಕೆಂದು ಬಿನ್ನವಿಸಿದರು. ಶ್ರೀ. ಗಣೇಶ ಸುಬ್ರಹ್ಮಣ್ಯನವರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು.

ತ್ರಿಕರಪುರ

ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳಿಂದ ಆರಿಸಲ್ಪಟ್ಟ ಕಾಂಗ್ರೆಸ್ ಎಸೆಂಬ್ಲಿ ಸದಸ್ಯರಿಗೆ ಸಾರ್ವಜನಿಕ ಮಾನಪತ್ರವನ್ನರ್ಪಿಸುವುದಕ್ಕಾಗಿ ತಾ ೨೩-೫-'೩೭ನೇ ಆದಿತ್ಯವಾರ ತ್ರಿಕರಪುರದ ಅಂತೊ ಸುತ್ತ ಮುತ್ತಲಿನ ಗ್ರಾಮಗಳ ಮಹಾಜನರ ಒಂದು ದೊಡ್ಡ ಸಭೆ ಸೇರಿತ್ತು. ಅಂದಿನ ಸಮಾರಂಭದ ಬಗ್ಗೆ ಹಿಂದು, ಮುಸ್ಲಿಮ್ ಸದಸ್ಯರನ್ನೊಳಗೊಂಡ ಒಂದು ಸ್ವಾಗತ ಸಮಿತಿಯು ವ್ಯವಸ್ಥೆ ಮಾಡಲ್ಪಟ್ಟಿತು.

ದಕ್ಷಿಣ ಕನ್ನಡ ಮತ್ತು ಮಲಬಾರ್ ಜಿಲ್ಲೆಗಳಿಂದ ದಯಮಾಡಿಸಿದ್ದ ಎಸೆಂಬ್ಲಿ ಸದಸ್ಯರು ಮೆರವಣಿಗೆಯಲ್ಲಿ ಕೈಕೋಟೆ ಸ್ಟೇಶನಿನಿಂದ ಸಭೆಸೇರುವ ಸ್ಥಳಕ್ಕೆ ಕೊಂಡೊಯ್ಯಲ್ಪಟ್ಟರು. ಸಭೆಯಲ್ಲಿ ೨೦೦೦ಕ್ಕಿಂತಲೂ ಮಿಕ್ಕಿ ಜನರು ಭಾಗವಹಿಸಿದ್ದರು. ಶ್ರೀ ಸಾಮ್ಯುವೇಲ ಆರನ್ ಎಂ. ಎಲ್. ಎ. ಯವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಸಾರ್ವಜನಿಕ ಮಾನಪತ್ರವು ಖಾದಿಬಟ್ಟೆಯಮೇಲೆ ಮುದ್ರಿಸಲ್ಪಟ್ಟಿತ್ತು. ಕಾಸರಗೋಡು ತಾಲೂಕಿನ ಪೈಕಿ ಮಲೆಯಾಳ ಭಾಷೆಯು ಮಾತಾಡಲ್ಪಡುವ ಭಾಗವನ್ನು ಮಲಬಾರಿಗೆ ಸೇರಿಸಬೇಕು. ಭೂಕಂದಾಯ ಕಡಿಮೆಯಾಗಬೇಕು. ಎಂಬಿವೇ ಮೊದಲಾದ ವಿಷಯಗಳು ಮಾನಪತ್ರದಲ್ಲಿ ಸೂಚಿಸಲ್ಪಟ್ಟಿದ್ದುವು. ಮಾನಪತ್ರಕ್ಕೆ ಉತ್ತರವಾಗಿ ಮಲಬಾರಿನ ಪ್ರತಿನಿಧಿಗಳಾಗಿರುವ ಶ್ರೀಯುತರುಗಳಾದ ಮಹಮ್ಮದ್ ಅಬ್ದುಲ್ ರಹಿಮಾನ್, ಸಿ. ಅಬ್ಯುತನ್, ಪಿ. ಮಾಧವನ್, ಮತ್ತು ಶ್ರೀಮತಿ ಕುಟ್ಟಿಮಾಳು ಅಮ್ಮನವರೂ, ದಕ್ಷಿಣ ಕನ್ನಡದ ಪ್ರತಿನಿಧಿಗಳಾದ ಶ್ರೀ ಕೆ. ಆರ್. ಕಾರಂತ, ಮತ್ತು ಬಿ. ವಿ. ಬಾಳಿಗರವರು ಭಾಷಣವಿತ್ತರು. ಅಬ್ದುಲ್ ರಹಿಮಾನ್ ಸಾಹೇಬರು ತಮ್ಮ ದೀರ್ಘ ಭಾಷಣದಲ್ಲಿ ಈಗಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದ್ದಲ್ಲದೆ ಮುಸ್ಲಿಮರು ಕಾಂಗ್ರೆಸಿಗೆ ಸೇರುವ ಮಹದವಶ್ಯಕತೆಯನ್ನು ಸೂಚಿಸಿದರು. ಮಂಜೂರಾದ ಠರಾವುಗಳ ಪೈಕಿ ತಾತ್ಕಾಲಿಕ ಮಂತ್ರಿಮಂಡಲದ ಖಂಡನೆಯೂ ಒಂದಾಗಿತ್ತು.

ಬೆಳ್ತಂಗಡಿ

ತಾ. ೨೫-೫-೩೭ರಲ್ಲಿ ಬೆಳ್ತಂಗಡಿ ಮತ್ತು ಸುತ್ತುಮುತ್ತಲಿನ ಮಹಾಜನರ ಸಾರ್ವಜನಿಕ ಸಭೆಯೊಂದು ಶ್ರೀ ಉಜ್ರೆ ಶೇಷಗಿರಿರಾಯರ ಅಧ್ಯಕ್ಷತೆಯಲ್ಲಿ ಕೂಡಿ ಬಂತು

ಶ್ರೀ. ಕೆ. ಆರ್. ಕಾರಂತ, ಎಂ. ಎಲ್. ಎ. ಯವರು ತಮ್ಮ ದೀರ್ಘಭಾಷಣದಲ್ಲಿ ಹೊಸ ರಾಜ್ಯಘಟನೆಯು ಭಾರತಕ್ಕೀವ ಪ್ರಯೋಜನಗಳ ಅಭಾವ ಕಾಂಗ್ರೆಸ್ ಭರವಸೆಯನ್ನು ಕೇಳಿದ ಕಾರಣ ಮೊದಲಾದುವುಗಳನ್ನು ವಿವರಿಸಿ, ಇತ್ತೀಚೆಗೆ ಸರಕಾರದವರು ಹೊರಡಿಸಿರುವ ಪ್ರಚಾರಣಾ ಕರಪತ್ರಗಳ ಟೊಳ್ಳು ಸ್ವಭಾವವನ್ನು ಬಯಲಿಗೆ ತಂದರು. ಅಲ್ಲದೆ ಜನತೆಯು ಕಾಂಗ್ರೆಸಿಗೆ ಅಧಿಕ ಸಂಖ್ಯೆಯಲ್ಲಿ ಸೇರಿ, ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿ ಗ್ರಾಮೋದ್ಧಾರ ಕಾರ್ಯವನ್ನು ಕೈಕೊಳ್ಳಬೇಕಾದ ಮಹದವಶ್ಯಕತೆಯ ಕುರಿತು ಕೂಡಾ ಭಾಷಣವಿತ್ತರು. ಬೆಳ್ತಂಗಡಿ ಮತ್ತು ಸುತ್ತುಮುತ್ತಲಿನ 6 ಗ್ರಾಮಗಳ ಒಂದು ಸಂಯುಕ್ತ ಗ್ರಾಮ ಕಮಿಟಿಯು ಸಭೆಯಲ್ಲಿಯೇ ವ್ಯವಸ್ಥೆಗೊಳಿಸಲ್ಪಟ್ಟಿತು ಪ್ರತಿಯೊಂದು ಗ್ರಾಮಗಳಿಂದ ಎರಡು ಪ್ರತಿನಿಧಿಗಳಂತೆ ಕಾಂಗ್ರೆಸ್ ಕಮಿಟಿಗೆ ಆರಿಸಲ್ಪಟ್ಟರು.

ಅಲ್ಲದೆ ತಾತ್ಕಾಲಿಕ ಮಂತ್ರಿಮಂಡಲವನ್ನು ಮಾಡಿದುದಕ್ಕಾಗಿ ಮತ್ತು ಮದ್ರಾಸ್ ಎಸೆಂಬ್ಲಿಯ ಸಭೆಯನ್ನು ಕರೆಯದಿದುದಕ್ಕಾಗಿ ಖಂಡಿಸುವ ಒಂದು ಠರಾವು ಮಂಜೂರಾಯ್ತು. ಮತ್ತು ಕಾಂಗ್ರೆಸಿನಲ್ಲಿ ಜನತೆಗೆ ಪರಿಪೂರ್ಣ ನಂಬಿಗೆಯಿದೆಯೆಂಬ ಠರಾವು ಕೂಡಾ ಸರ್ವಾನುಮತದಿಂದ ಮಂಜೂರಾಯ್ತು. ಶ್ರೀ. ಪಿ ಎ. ಅದ್ಯಂತಾಯರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು.

ಇಲ್ಲಿಯ ಡಾಕ್ಟರರಾಗಿದ್ದ ಶ್ರೀಮಾನ್ ಯು. ಯಸ್. ನಾಯಕರು ಹೊಸದುರ್ಗಕ್ಕೆ ವರ್ಗವಾಗಿ ಹೋಗುವ ಸಂಬಂಧ ಅವರಿಗೆ ಸತ್ಕಾರವಿದಾಯವನ್ನೀಯಲು ಒಂದು ಸಮಾರಂಭವು ತಾ. ೨೩-೫-೩೭ನೇ ರವಿವಾರ ಬೆಳ್ತಂಗಡಿ ಶಾಲಾ ಕಟ್ಟಡದಲ್ಲಿ ಡಾ| ಜೀನ ಭಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ಫೋಟೋ ತೆಗೆಸಿದ ತರುವಾಯ ಉಪಹಾರ ಜರಗಿತು. ಅನಂತರ ಉಜ್ರೆ, ಕೊಪಟ್ಟು, ಬೆಳ್ತಂಗಡಿ ನಿವಾಸಿಕರಿಂದ ಅವರ ಗುಣಕಥನಗಳನ್ನು ನಿವೇದಿಸಿ ಒಪ್ಪಟ್ಟ ಒಂದು ಮಾನಪತ್ರವನ್ನು ಓದಿಹೇಳಿ ಒಂದು ಬೆಳ್ಳಿಯ ಹರಿವಾಣದ ಜತೆಯಲ್ಲಿ ಸಮರ್ಪಿಸಲಾಯಿತು. ತರುವಾಯ ಅಧ್ಯಕ್ಷರ ಭಾಷಣವು ಜರಗಿದೊನೆ ವಂದನೋಕ್ತಿಗಳಿಂದ ಸಮಾರಂಭವು ಕೊನೆಗೊಂಡಿತು.

(೧೧ನೇ ಪೇಜ

ರೋಲ್ಡ್ ಗೋಲ್ಡ್, ನಿಕ್ಕಲ್ ಬೆಳ್ಳಿದು, 9 ಕ್ಯಾರಟಿನ ಗಟ್ಟಿ ಚಿನ್ನದ್ದು, ರಿಸ್ಟವಾಚುಗಳು, ರೈಲ್ವೆ ಟಾಯಂ ಪಾಕೆಟ್ ವಾಚು ಮತ್ತು ಟಾಯಂಪೀಸು ಗ್ಯಾರಂಟಿ ಇದೆ.

ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ.

The Manager,
The Silver Jubilee Watch Co.,
Post Box No. 571, BOMBAY.

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮಧ್ವಭುವನೇಂದ್ರ ಮಹೌಷಧಾಲಯ. ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ--- ಗುಡಪಿಪ್ಪಲಿ (ಲೀವರ್ ರೋಗಕ್ಕೆ) ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) ಚಂದ್ರಮುಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆ

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ.

ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

SUKHA NIVAS

Court Road, UDIPI

(Opp:- TALUK OFFICE)

Modern Model! Homely Hotel!

HIGH CLASS SWEETS AND SAVERIES

Coffee, Tea, Cocoa, delicious & fragrant.

VERY NEAR TO GANDHI MAIDAN, TALUK OFFICE, COURT & HIGH SCHOOLS

Our Building enjoys a magnificient site and rooms are well Ventilated and breezy.

THE ONLY PLACE FOR

FASHIONABLE ENTERTAINMENTS AND MEALS.

ORDERS FOR TEA-PARTIES ACCEPTED AT SHORT NOTICE

MODERATE CHARGES

Prop:-H.Vasudeva Nayak & Bros

ಸುಖನಿವಾಸ ಉಡುಪಿ.

ಸುವ್ಯವಸ್ಥೆಯ ಮೇಲ್ವಿಚಾರಣೆ
ಉಚಿತವಾದ ಸುಖದ ತವರುಮನೆ
ನಿರ್ಮಲವಾದ ಊಟದ ಸಲಕರಣೆ
ವಾಯುಸೇವನೆಗೆ ಯೋಗ್ಯಯೋಜನೆ
ಸಕಲಜನ ಮನರಂಜನೆಯ ಸಂಯೋಜನೆ

ಈ ಅನುಕೂಲತೆಗಳಿರುವುದರಿಂದ ವಿದ್ಯಾರ್ಥಿಗಳಿಗೂ ಉದ್ಯೋಗಸ್ಥರಿಗೂ ಪ್ರಯಾಣಿಕರಿಗೂ ಯೋಗ್ಯವಾದ ಹೋಟಲೆಂದರೆ

ಸುಖನಿವಾಸವೊಂದೇ.

ಕಾಫಿಗೆ, ತಿಂಡಿಗೆ, ಭೋಜನಕ್ಕೆ, ಉಳಕೊಳ್ಳಲಿಕ್ಕೆ ನಕ್ಕು ನಲಿಯಲಿಕ್ಕೆ, ಸುಖನಿವಾಸಕ್ಕೆ,

ಸುಖನಿವಾಸವೊಂದೇ

ಜ್ಞಾಪಕದಲ್ಲಿಡಲು ಯೋಗ್ಯವಾಗಿದೆ.
ಸುಖನಿವಾಸವು ಕೋರ್ಟು ಕಚೇರಿಗಳಿಗೂ ಹೈಸ್ಕೂಲುಗಳಿಗೂ ಮಧ್ಯರಂಗದಲ್ಲಿದ್ದು ಅತ್ಯಾಧುನಿಕ ಅನುಕೂಲತೆಗಳಿಂದ ಒಡಗೂಡಿದೆ.
ಸರಿಯಾಗಿ ಗಾಳಿಬೆಳಕುಳ್ಳ ಕೋಣೆಗಳು!
ಟೀಪಾರ್ಟಿಯ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಸುಖನಿವಾಸದ ಭೋಜನ / ಕಾಫಿ,ತಿಂಡಿ ಮನೋವಿಕಾಸದ ಮೂಲ.

ವ್ಯವಸ್ಥಾಪಕರು:—
ಎಚ್. ವಾಸುದೇವ ನಾಯಕ್, ಎಂಡ್ ಬ್ರದರ್ಸ್.

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! **ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!!**

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳೆಲ್ಲದರಲ್ಲೂ ಸಾವಿರಗಟ್ಲೆ ಇದ್ದಾಗ್ಯೂ

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ!

ಮಾನವನ ನೈತಿಕಾಚರಣೆಯ ಉಜ್ವಲ ಬೀಜಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅತ್ಯಾವಶ್ಯಕವಾದುದು.

ಈ ಪುಸ್ತಕವನ್ನು ಓದಬೇಕು! **ಮನೋವೈಶಾಲ್ಯವನ್ನು ಪಡೆಯಬೇಕು!**

ಪಾಪಪೂರಿತ ಪಟ್ಟಣಗಳು

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಕ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಿಬೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರು ಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡೆವಳಿಗಳಾವುವು? ಅಲ್ಲಿನ ವೇಶ್ಯಾವಾಟಿಗಳು, ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳ ಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ.

ಅನೇಕ ವೇಶ್ಯೆಯರ ಜೀವನ ಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ. ಮೆದುಳಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು — ಜೀವನ ರಹಸ್ಯವನ್ನು ತಿಳಿಯಬಯಸುವವರಿಗೆ ಬೇಕು
ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು — ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು
ಅವರಿಗೆ ಇವರಿಗೆ ಎನ್ನುವುದೇನು? ಎಲ್ಲರಿಗೂ ಬೇಕು.

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ.

ಉತ್ತಮವಾದ ಹೊಳಪು ಕಾಗದ, ೩೦೦ ಪುಟಗಳು.

ಬೆಲೆ ರೂ. ೧—೮—೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು.

ಮೈಸೂರಿನಲ್ಲಿ ಲ್ಯಾನ್ಸ್ ಡೌನ್, ಬಜಾರ್, ಸ್ಟೇಟ್ ಮಾರ್ಟ್‌ನಲ್ಲಿ, ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿಯಲ್ಲಿ ದೊರಕುತ್ತವೆ

ಟಾಗೂರ್ ಅಂಡ್ ಕೋ, (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ.

ಬದುಕಲೇ ಸಾಯಲೇ?

ನಿಜವಾಗಿಯೂ ಅವಸ್ಥೆಯು ಇಷ್ಟರವರೆಗೆ ಬಂದಿದೆ. ನಿರುದ್ಯೋಗವು ನಮ್ಮ ಮೇಲೆ ನಿರಾತಂಕವಾಗಿ ಸವಾರಿ ಮಾಡುತ್ತ ಕೇವಲ ಒದೆಯಿಂದ ಪುರಸ್ಕಾರವನ್ನು ಕೊಡುತ್ತಿರುವುದು. ಅನ್ಯಾಯ, ದಾರಿದ್ರ್ಯಗಳು ಎಡೆಬಿಡದೆ ಬೆನ್ನು ಹಿಡಿದಿವೆ. ಮುಂದೆ ನೋಡಿದರೋ ಸರ್ವವೂ ಶೂನ್ಯ. ಏನು ಇದೇ ನಮ್ಮ ನಾಟಕದ ಅಂತಿಮ ದೃಶ್ಯವೇ? ಇದೇ ನಮ್ಮ ಪೂರ್ವ ಕರ್ಮದ ಫಲವೇ? ಲೋಕದಲ್ಲಿ ನಾವು ಮಾತ್ರ ಅನ್ನಾಹಾರವಿಲ್ಲದೆ ಸಾಯಬೇಕೇ? ನಮ್ಮಲ್ಲಿ ಶಕ್ತಿ ಸಾಮರ್ಥ್ಯವಿದ್ದೂ ನಾವು ಪೋಕರಂತೆ ಅಲೆದಾಡುತ್ತಿರಬೇಕೇ? ನಮ್ಮ ಸಾಮಾಜಿಕ ಹಾಗೂ ರಾಜನೈತಿಕ ಕಾರ್ಯಭಾರ ನಡೆಸುತ್ತಿರುವ ಮಹಾತ್ಮರು ಕೂಗುತ್ತಿದ್ದಾರೆ, ನಮ್ಮಲ್ಲಿ ಶಕ್ತಿ ಇಲ್ಲವಂತೆ, ನಾವು ಧೈರ್ಯಹೀನರಂತೇ ಕೆಲಸಗಳ್ಳರಂತೆ. ನಿರುದ್ಯೋಗವು ನಮ್ಮ ಆಲಸ್ಯದಪರಿಣಾಮವಂತೆ, ದಾರಿದ್ರ್ಯವು ನಮ್ಮ ಪೂರ್ವದ ಕರ್ಮ ಫಲವಂತೆ, ಉದ್ಯಮದಿಂದ ಅರಮನೆ ಕಟ್ಟಬಹುದಂತೆ, ಜಯದ ಮೂಲಮಂತ್ರವು ಮುಂದೊಡುವ ಗುಣ(push)ವಂತೆ.

ನಮಗೇನೋ ಮುಂದೂಡುತ್ತಲೇ ಕೇವಲ ಕಾರಾಗೃಹದಕತ್ತಲೆಯು ಕಾಣಿಸುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಉತ್ತಮಶಿಕ್ಷಣ ಪಡೆದು ಉದ್ದುದ್ದ ಡಿಗ್ರಿಯನ್ನು ಹೊತ್ತುಕೊಂಡು ಹೊಟ್ಟೆತುಂಬ ಉಣ್ಣುವದ್ದಗಳಿಸಲು ಕಷ್ಟವಾಗಿದೆ. ಐಶ್ವರ್ಯಾಧಿಕಾರಗಳುಳ್ಳವರ ಕಾಲಬುಡದಲ್ಲಿ ಬಿದ್ದು ನೌಕರಿ ಬೇಡಿದರೆ ಒದೆಯ ಬಹುಮಾನಪಡೆದುಕೊಂಡು ಹಿಂತಿರುಗಬೇಕಾಗುತ್ತದೆ. ಇಷ್ಟರ ಮೇಲೂ ಆ ಪ್ರೋತ್ಸಾಹವೇಕೆ? ಜೀವನಾಧಾರದ ಯಾವತ್ತೂ ಸಾಮಗ್ರಿಗಳನ್ನು ಮಂಗಮುಷ್ಟಿಯಿಂದ ಬಿಗಿಹಿಡಿದು, ನಮ್ಮಿಂದ ಯಾವದೊಂದೂ ಪ್ರಯೋಜನಾತ್ಮಕ ಕಾರ್ಯಸಾಧನೆಯ ಸಂದರ್ಭವನ್ನು ಸುಲಿದು ನಮ್ಮ ಕೈಕಾಲುಗಳನ್ನು ಕಟ್ಟಿ ಅವರ ನೀಳೆ ಕೊಡುತ್ತಿರುವ ಪ್ರೋತ್ಸಾಹದ ಅರ್ಥವೇನು? ಅದರಲ್ಲಿ ವ್ಯಂಗ್ಯಮಾತ್ರವೇಕೆ? ವಿಷಮೋಸಗಳು ತುಂಬಿಹೋಗಿವೆ. ಇವೆಲ್ಲ ನಮ್ಮ ಪೂರ್ವ ಕರ್ಮದ ಫಲವೇಕೆ? ಅವರ ಅತ್ಯಾಚಾರದ ಫಲ. ದುರ್ದಮನೀಯವಾದ ಅವರ ಲೋಭದ ಪರಮಾವಧಿ. ಐಶ್ವರ್ಯಾಧಿಕಾರದಿಂದ ಮತ್ತರಾಗಿ ನಮ್ಮ ಒಣಗಿದ ದೇಹಗಳನ್ನು ಇನ್ನೂ ಹೀರುತ್ತ ತಪ್ಪನ್ನು ಸುಲಭವಾಗಿ ನಮ್ಮಮೇಲೇ ಹೊರಿಸಿಬಿಡುವ ಉಪಾಯವನ್ನು ಹುಡುಕಿದ್ದಾರೆ. ದುಃಖದಾರಿದ್ರ್ಯದಲ್ಲಿ ನರಳುತ್ತಿರುವ ನಮ್ಮನ್ನು ಸುಖಸಂಪತ್ತಿನಲ್ಲಿ ಆಲಸ್ಯವಾಗಿ ದಿನ ಕಳೆಯುತ್ತಿರುವ ಅವರಿಂದ ದೂರವಿರುವ ಗೋಡೆಯು ಅವರ ಕಣ್ಣಿಗೆ ಕಾಣುವುದಿಲ್ಲವೆಂದು ತೋರುತ್ತದೆ. ಕಂಡರೂ ಅದರ ವಿಚಾರದಿಂದ ಅವರಿಗೇನು? ಅದು ಅವರ ಅಧಿಕಾರ ಐಶ್ವರ್ಯಗಳನ್ನೂ ನಮ್ಮ ದುಃಖದಾರಿದ್ರ್ಯಗಳನ್ನೂ ಸ್ಥಿರವಿಡಲು ಅಗತ್ಯವಲ್ಲವೇ?

ಹಾಗಾದರೆ ನಾವು ಇದ್ದಲ್ಲೇ ಇರಬೇಕೇ? ಸಹನೆಯೇ ನಮ್ಮ ಸಿದ್ಧಾಂತವೇ? ಔಷಧದ ವಿಚಾರವೇ ಬೇಡವೇ? ಸಹನೆಯನ್ನು ಬೇಕಷ್ಟು ತೋರಿಸಿದುದಾಯಿತು. ಅದನ್ನು ತ್ಯಾಗವೆಂದು ಶ್ಲಾಘಿಸುವವರು ಯಾರೂ ಕಾಣುವುದಿಲ್ಲ ಅದು ನಮ್ಮ ಅಧಿಕಾರ ಸ್ಥಾಪನೆಯ ಅಸಮರ್ಥತೆ. ಇನ್ನುಳಿದುದು ಕೇವಲ ಮುಷ್ಟಿ. ನಿರಾತಂಕವಾಗಿ ಕುರಿಗಳಂತೆ ಪ್ರಾಣಕೊಡುವ ಬದಲಾಗಿ ಮನುಷ್ಯಯೋಗ್ಯವಾದ ಕಡೆಯದೊಂದು ಪ್ರಯತ್ನ ಮಾಡಬೇಕಾಗಿದೆ. ಲೋಕದಲ್ಲಿ ಪೂರ್ವದಿಂದಲೂ ಅನ್ಯಾಯ ಪೀಡೆಗಳು ಇದ್ದೇ ಇದ್ದವು. ಆದರೆ ಅವು ಕಮ್ಮಿಯಾಗುವ ಬದಲಿಗೆ ಹೆಚ್ಚುತ್ತಾ ಬರುತ್ತಿವೆ. ನಮ್ಮ ಜೀವನದ ಮೇಲೆ ನಿರ್ಧಾರಕರಾಗಿ ಕುಳಿತಿರುವ ಮಹನೀಯರುಗಳು ನಮ್ಮ ರಕ್ತಶೋಷಣೆಗೆ ಹೊಸಉಪಾಯಗಳನ್ನು ಹುಡುಕುವುದರಲ್ಲಿ ಮಗ್ನರಾಗಿದ್ದಾರೆ. ತಕ್ಕ ಸಮಯದಲ್ಲಿ ನಾವೆಲ್ಲ ಎದ್ದುನಿಂತು ಆ ವರ್ಗವಿಭಾಜಕವಾದ ಗೋಡೆಯನ್ನು ಭೇದಿಸಿ ಸಮಾಜ ದ್ರೋಹಿಗಳ ಕೃತ್ರಿಮಕ್ಕೆ ತಕ್ಕ ಫಲವನ್ನು ಕೊಡದಿದ್ದರೆ ಹೇಡಿಗಳಂತೆ ಆತ್ಮವಿನಾಶದ ಆಲಿಂಗನ ಮಾಡಬೇಕಾಗುವುದು. ಐತಿಹಾಸಿಕ ಕ್ರಮಾನುರೂಪವಾಗಿ ಪರಿಸ್ಥಿತಿಯು ಹೆಚ್ಚೆಚ್ಚು ಭಯಾನಕ ರೂಪವನ್ನು ತಾಳುತ್ತಿರುವುದು. ಸಾಮಾಜಿಕ ಹಾಗೂ ರಾಜನೈತಿಕ ಕ್ಷೇತ್ರಗಳಲ್ಲಿ ಪ್ರಳಯಕಾಲದ ಘರ್ಜನೆಯು ಕೇಳಿಸುತ್ತಿದೆ ಈ ಸಮಯದಲ್ಲಿ ನಮ್ಮಿಂದ ಆಗಬೇಕಾದುದು ಒಂದೇ. ಅದು ನಮ್ಮ ಮುಂದೆ ಕುಣಿಯುತ್ತಿರುವ ಅಮಾನುಷ ಮರಣದಿಂದ ತಪ್ಪಿಸಿಕೊಳ್ಳುವ ಕೇವಲ ಒಂದು ಯತ್ನ. ವೈರಿಯ ಪೀಡೆಯ ಪರಿಣಾಮವಾಗಿ ಪ್ರಾಣತ್ಯಜಿಸುವ ಬದಲಿಗೆ ನಮ್ಮ ಅಧಿಕಾರ ಸಂರಕ್ಷಣೆಯ ಹೋರಾಟದಲ್ಲಿ ಸಾಯುವುದು ಹೆಚ್ಚುಮೆಚ್ಚಿಗೆಯದಲ್ಲವೇ? ಈ ಜೂಜಾಟದಿಂದ ಕಳೆದುಕೊಳ್ಳುವುದೆಂದರೆ ಬರೇ ನಮ್ಮ ಕೈಯ ಸಂಕಲೆ ಮತ್ತು ನಮ್ಮ ಕಷ್ಟದ ಹೊರೆ. ಆದರೆ ಜಯಶ್ರೀಯು ನಮ್ಮನ್ನು ಒಲಿದರೆ ಸ್ವರ್ಗದ ಬಾಗಿಲು ತೆರೆಯುವುದು. ದುಃಖದ ಅಂತ್ಯವಾಗುವುದು. ಶೋಷಣೆಯ ಅಂತ್ಯಕ್ರಿಯೆ ನಡೆಯುವುದು. ಪೂರ್ವ ಸಮಾಜ ಪದ್ಧತಿಯ ಸಮಾಧಿ ಮತ್ತು ಹೊಸಸಾಮ್ಯವಾದೀ ಸಮಾಜದ ಜನ್ಮೋತ್ಸವ ಎರಡೂ ಒಟ್ಟಿಗೆ ಜರಗುವುವು—ಶಿಕ್ಷಿತ ನಿರುದ್ಯೋಗಿ

ತಲೆಶೂಲೆಯ ಮುಖ್ಯ ಕಾರಣಗಳು

ತಲೆಶೂಲೆಗಳಲ್ಲಿ ಎಷ್ಟೋ ಬಗೆಯುಂಟು. ಕೆಲವು ಸಂದರ್ಭಗಳಲ್ಲಿ ಇವು ಯಾವ ತರಕ್ಕೆ ಸೇರಿದುವೆಂಬುದನ್ನಾಗಲಿ, ಅಥವಾ ಇವುಗಳ ಕಾರಣವೇನೆಂಬುದನ್ನಾಗಲಿ ಡಾಕ್ಟರುಗಳೇ ತಿಳಿಯಲಾರರು. ಕೆಲವರು ತಲೆನೋವೆಂಬುದು ನರಗಳ ಸಂಬಂಧವಾದ ವ್ಯಾಧಿಗಳಲ್ಲೊಂದೆಂದು ಹೇಳುವರು. ಮತ್ತೆ ಕೆಲವರು ಅದು ಕಣ್ಣು ಮತ್ತು ಮೂಗಿನ ಬಾಧೆಗಳಿಗೆ ಸಂಬಂಧಪಟ್ಟುದೆಂದು ಹೇಳುವರು ಸಾಧಾರಣವಾಗಿ ಪ್ರಥಮ ಚಿಕಿತ್ಸೆಗೆ ಸಂಬಂಧಪಟ್ಟ ರೋಗಗಳಲ್ಲಿ ತಲೆನೋವು ಒಂದು ಮುಖ್ಯಾಂಶವೆನಿಸಿರುವುದು. ಏಕೆಂದರೆ, ತಲೆನೋವು ಬಂದರೆ ಎಲ್ಲರೂ ಮನೆಯಲ್ಲಿಯೇ ಚಿಕಿತ್ಸೆಮಾಡಿಕೊಳ್ಳುವರೇ ಹೊರತು, ಅದಕ್ಕಾಗಿ ಅವರು ಡಾಕ್ಟರ ಬಳಿಗೆ ಹೋಗುವುದಿಲ್ಲ. ಈಚೆಗೆ ಅದರ ಪೂರ್ವೋತ್ತರ ಪರಿಶೀಲಕರೆಲ್ಲರೂ ಹೆಚ್ಚು ಗಮನ ಕೊಡುತ್ತಿರುವುದರಿಂದ, ಅದರ ವಿಷಯವಾಗಿ ಕೆಲವು ಅಂಶಗಳು ನಮಗೆ ವ್ಯಕ್ತವಾಗುತ್ತಿವೆ. ತಲೆನೋವಿಗೆ ಅನೇಕ ಕಾರಣಗಳಿರಬಹುದು. ಆದುದರಿಂದ, ತಲೆನೋವುಂಟಾದರೆ ಅದಕ್ಕಾಗಿ ಚಿಕಿತ್ಸೆಮಾಡುವುದಕ್ಕೆ ಮೊದಲು, ಅದರ ನಿಜವಾದ ಕಾರಣವೇನೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಕಾರಣವನ್ನು ತಿಳಿಯುವ ಮೊದಲು, ಕಂಡ ಔಷಧಿಗಳನ್ನೂ, ಮೂಲಿಕೆಗಳನ್ನೂ ತೆಗೆದುಕೊಳ್ಳುವುದು ಸರಿಯಲ್ಲ.

ಈಚೆಗೆ ಒಬ್ಬ ಪರಿಶೀಲಕರು, ನರಗಳ ಮತ್ತು ಮನಸ್ಸಿನ ಸಂಬಂಧವಾದ ವ್ಯಾಧಿಗಳನ್ನೊಳಕೊಂಡ ೧೬ಬಗೆಯ ತಲೆಶೂಲೆಗಳಿರುವುವೆಂದು ಕಂಡುಹಿಡಿದಿರುವರು. ಮಿದುಳಿನಲ್ಲಿ ವ್ರಣವುಂಟಾಗಿ, ಅದರಿಂದ ತಲೆನೋವು ಬಂದ ಪಕ್ಷದಲ್ಲಿ ಅದಕ್ಕೆ ಒಂದೇ ಒಂದು ಚಿಕಿತ್ಸೆಯಿರುವುದು. ಅದೇನೆಂದರೆ, ಆ ಹುಣ್ಣನ್ನು ಶಸ್ತ್ರ ಚಿಕಿತ್ಸೆಯಿಂದಲೇ ನಿವಾರಿಸಬೇಕು. ಆದರೆ ಇಂತಹ ಕೇಸುಗಳು ಬಹಳ ಕಡಿಮೆ. ಮಿದುಳಿನಲ್ಲಿ ವಿಷಕ್ರಿಮಿಗಳಾವುದಾದರೂ ಸೇರಿಕೊಂಡಿದ್ದರೆ, ಅವರಿಂದಲೂ ತಲೆನೋವು ಬರುವುದುಂಟು. ಇಂತಹ ಸಂದರ್ಭಗಳಲ್ಲಿ ವೈದ್ಯನಾದರೂ ಔಷಧಕೊಟ್ಟು ಅದರಿಂದ ಸ್ವಸ್ಥಪಡಿಸಿಕೊಳ್ಳಬೇಕು. ರಕ್ತದ ಒತ್ತಾಟವು ಹೆಚ್ಚಾಗುವುದರಿಂದಲೂ, ಮತ್ತು ನಾಡಿಗಳು ಗಟ್ಟಿಯಾಗುವುದರಿಂದಲೂ ತಲೆನೋವು ಬರುವುದು. ಈ ಸಂಧರ್ಭದಲ್ಲಿಯೂ ಚಿಕಿತ್ಸೆಯು ಆಯಾ ಮನುಷ್ಯನ ದೇಹಸ್ಥಿತಿಯನ್ನನುಸರಿಸಿರಬೇಕು ಸಾಧಾರಣವಾಗಿ ತಲೆಶೂಲೆಯ ಮುಖ್ಯ ಕಾರಣವೆಂದರೆ, ಮೂಗಿನ ಸುತ್ತಲೂ ಇರುವ ಸಂದುಗಳಲ್ಲಿ ವಿಷಸಂಬಂಧವುಂಟಾಗುವುದೇ. ಇದಕ್ಕೆ ಆ ಭಾಗದಲ್ಲಿಯೇ ಚಿಕಿತ್ಸೆಮಾಡಬೇಕು. ಕೆಲವು ಸಂದರ್ಭಗಳಲ್ಲಿ ಮೂಗಿನ ಎರಡು ಕಡೆಗಳಲ್ಲಿಯೂ ಕಣ್ಣಿಗೆ ಸಮೀಪದಲ್ಲಿರುವ ದ್ವಾರಗಳು ತಡೆದುಹೋಗುವುದರಿಂದ ತಲೆನೋವುಂಟಾಗುವುದು. ಆ ತಡೆಯನ್ನು ನೀಗಿಸಿದರೆ ತಲೆನೋವು ನಿಂತುಹೋಗುವುದು.

(ಆರೋಗ್ಯ ಚಂದ್ರಿಕೆ)

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗ... ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನ... **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬ... ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯ... ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರ... ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ... ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇ... ರೋಡ್, ಮುಂಬಯಿ

Sole Manufacturer: Dr. D. N. JASANI, Vitalbhai Patel Road, BOMBA...

ರಸ್ಯದ ಎರಡನೇ ಪಂಚವಾರ್ಷಿಕ ಯೋಜನೆ

30 ಮಿಲ್ಯ ವಿದ್ಯಾರ್ಥಿಗಳಿಗೆ ವಿದ್ಯಾದಾನದ ಯೋಜನೆ

ರಸ್ಯದ ೨ನೇ ಪಂಚವಾರ್ಷಿಕ ಯೋಜನೆಯು ಈ ವರ್ಷ ಕೊನೆಗೊಳ್ಳುವುದು. ಇನ್ನೀಗ 3ನೇ ಪಂಚವಾರ್ಷಿಕ ಯೋಜನೆ ಆರಂಭಿಸಲ್ಪಡುವುದು. ಆ ದೃಷ್ಟಿಯಿಂದಲೇ 1937ನೇ ವರ್ಷದ ಆಯವ್ಯಯಪಟ್ಟಿಯನ್ನು ತಯೂರಿಸಲಾಗಿದೆ. 1936ಕ್ಕೆ ಅಂತ್ಯವಾಗುವ 4ವರ್ಷಗಳಲ್ಲಿ ರಸ್ಯದ ಕೈಗಾರಿಕೋತ್ಪತ್ತಿಯು ಸೇಕಡಾ 20ರಷ್ಟು ಹೆಚ್ಚಿರುವುದು. ಈ ವರ್ಷಗಳಲ್ಲಿ ಜನತೆಯು ಉಪಯೋಗಿಸುವಂತಹ ಸಾಮಾನುಗಳನ್ನೇ ತಯೂರಿಸಬೇಕೆಂದು ಸೋವಿಯಟ್ ಸರಕಾರದ ನಿರ್ಧಾರವಿದ್ದಿತಾದರೂ, ಜರ್ಮನಿಯ ಯುದ್ಧಸಿದ್ಧತೆ ಮತ್ತು ಸೋವಿಯಟ್ ಸರಕಾರದ ಕುರಿತು ಆದರ ಬದ್ಧ ದ್ವೇಷದಿಂದಾಗಿ ರಸ್ಯವೂ ಯುದ್ಧಸಾಮಗ್ರಿಗಳನ್ನು ತಯೂರಿಸುವುದರಲ್ಲಿ ನಿರತವಾಗಬೇಕಾಯಿತು. ಅಂತೆಯೇ 4 ವರ್ಷಗಳಲ್ಲಿ ರಸ್ಯವು ತಾನು ನಿಶ್ಚೈಸಿದ ಸೇಕಡ 98ರಷ್ಟರ ಯುದ್ಧ ಸಾಮಾಗ್ರಿಗಳನ್ನು ತಯಾರು ಮಾಡಿಬಿಟ್ಟು ಜರ್ಮನ್ ಮತ್ತು ಜಾಪಾನುಗಳ ಉದ್ಧಟತನಕ್ಕೆ ತಕ್ಕ ಉತ್ತರವಿತ್ತಿರುವುದು. ಫ್ರಾನ್ಸ್ ಮತ್ತು ಇಂಗ್ಲೆಂಡ್ ಮೊದಲಾದ ರಾಷ್ಟ್ರಗಳು ಪ್ರಾಮುಖ್ಯ ಜನಹಿತಕಾರ್ಯಗಳನ್ನು ನಿಲ್ಲಿಸಿ ಯುದ್ಧ ಸಾಮಾಗ್ರಿಗಳಿಗಾಗಿ ಕೋಟಿಗಟ್ಲೆ ಹಣವನ್ನು ವ್ಯಯಿಸಿರುವವು. ಆದರೆ ರಸ್ಯವು ಹಾಗೆ ಮಾಡಿರುವುದಿಲ್ಲ. ಅದು ತನ್ನ ಜನಹಿತಸಾಧಕ ಉದ್ಯಮಗಳನ್ನು ಯಥಾ ಪ್ರಕಾರ ಮುಂದೊತ್ತಿರುವುದು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಇದೇ ರೀತಿಯ ವ್ಯವಸ್ಥೆ ಮಾಡಲಾಗಿದೆ. ರಸ್ಯದ 1937ನೇ ಬಜೆಟಿನಲ್ಲಿ ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಹಣವು ಶಿಕ್ಷಣ ಪ್ರಚಾರ, ಸಾರ್ವಜನಿಕ ಆರೋಗ್ಯ ಮತ್ತು ಕಲೆ ಸಂಸ್ಕೃತಿಗಳ ಅಭಿವೃದ್ಧಿಗಾಗಿ ಪ್ರತ್ಯೇಕಿಸಿಡಲ್ಪಟ್ಟಿರುವುದು. ಕಳೆದ ವರ್ಷ ಶಿಕ್ಷಣಕ್ಕಾಗಿ 14,000,000,000ರುಬುಲ್ ವಿನಿಯೋಗಿಸಲ್ಪಟ್ಟಿರುವಾಗ ಈ ವರ್ಷ ಅದನ್ನು 19,000,000,000ಕ್ಕೇರಿಸಲಾಗಿದೆ. 1936ರಲ್ಲಿ 27 ಮಿಲ್ಯ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾಭ್ಯಾಸವನ್ನು ಧರ್ಮಾರ್ಥ ಕೊಡುವ ಏರ್ಪಾಡು ಮಾಡಲ್ಪಟ್ಟಿದ್ದಿತು. ಈವರ್ಷ ಈ ಸಂಖ್ಯೆ 30ಮಿಲ್ಯಕ್ಕೇರಿದೆ. ಮಜೂರರ ಸಂಬಳವು ಹೆಚ್ಚಿಸಲ್ಪಡಲಿರುವುದು. ಚಿಲ್ಲರೆಯಾಗಿ ಮಾರುವ ಪದಾರ್ಥಗಳ ಬೆಲೆಯು ಸೇಕಡ 3ರಷ್ಟು ಕಡಿಮೆಮಾಡಲ್ಪಡುವುದು. ಮಜೂರರ ಸಂಬಳವು ಸೇಕಡ 8ರಷ್ಟು ಹೆಚ್ಚಿಸಲ್ಪಡುವುದು. ರಸ್ಯದ ಸಂಪತ್ತು ದಿನೇ ದಿನೇ ಹೆಚ್ಚಿದಂತೆ ಮಜೂರರ ಸಂಬಳವೂ ಹೆಚ್ಚಿಸಲ್ಪಟ್ಟಿರುವುದು. ರಸ್ಯದಲ್ಲಿ ನಿರುದ್ಯೋಗವೆಂಬುದಿಲ್ಲ. ಎಲ್ಲರಿಗೂ ಸರಕಾರವೇ ಕೆಲಸಕೊಟ್ಟಿರುವುದು. ಇಂಗ್ಲೆಂಡ್, ಅಮೇರಿಕ ಫ್ರಾನ್ಸ್ ಮೊದಲಾದ ರಾಷ್ಟ್ರಗಳಲ್ಲಿ ಯುದ್ಧೋಪಕರಣಗಳಿಗಾಗಿ ಕೋಟಿಗಟ್ಲೆ ಹಣ ವ್ಯಯಿಸಲ್ಪಡುವುದಾದರೂ ಮಿಲ್ಯಗಟ್ಲೆ ಜನರು ಕೆಲಸವಿಲ್ಲದೆ ನಿರುದ್ಯೋಗಿಗಳಾಗಿರುವರು. ದಿನ ಹೋದಂತೆ ಮಜೂರರ ಸಂಬಳವು ಕಡಿಮೆಯಾಗ ಹತ್ತಿರುವುದು.

ವ್ಯವಸಾಯ ಕ್ಷೇತ್ರದಲ್ಲಿ ಸಾಮೂಹಿಕತನವು ಹೆಚ್ಚಿಗೆಯಾಗುತ್ತಿರುವುದು. ಅಂದರೆ ಸರಕಾರದ ಸಹಾಯದಿಂದ ಜನರು ಒಟ್ಟುಸೇರಿ ಬೇಸಾಯ ನಡಿಸಿ ಅದರಿಂದುಂಟಾಗುವ ಲಾಭವನ್ನು ಹಂಚಿಕೊಳ್ಳುವ ಕ್ರಮವು ರಸ್ಯದಲ್ಲೀಗ ಹೆಚ್ಚಿಚ್ಚಾಗಿ ಜ್ಯಾರಿಗೆ ಬರುತ್ತಿರುವುದು. ಹೊಸ ಬಜೆಟಿನಲ್ಲಿ ವ್ಯವಸಾಯಕ್ಕೆ ಪ್ರಾಮುಖ್ಯ ಸ್ಥಾನವೀಯಲಾಗಿದೆ. ಹೆಚ್ಚಿಗೆಯಾಗಿ ವ್ಯವಸಾಯಿಕ ಉಪಕರಣಗಳನ್ನೊದಗಿಸಲು1,000,000,000 ರುಬ್ಲುಗಳನ್ನನ್ನಿಡಲಾಗಿದೆ. ಹೊಸ ಬಜೆಟಿನ ಅತಿ ವಿಶೇಷ ಸಂಗತಿಯೆಂದರೆ ಚಿನ್ನ ತಯಾರಿಸುವ ಪ್ಲೇನು. ಈ ಪ್ಲೇನಿನ ಪ್ರಕಾರ ರಸ್ಯವು 100,000,000 ಪವನುಗಳಷ್ಟರ ಚಿನ್ನವನ್ನು ಪಡೆಯುವುದೆಂದು ಅಂದಾಜುಮಾಡಲಾಗಿದೆ. ಕಳೆದ ವರ್ಷ ರಸ್ಯವು 74,000,000 ಪವನಿನಷ್ಟರ ಚಿನ್ನದ ಉತ್ಪತ್ತಿ ಪಡೆದು ಇಡೀ ಲೋಕದಲ್ಲಿ ಎರಡನೇ ಸ್ಥಾನಪಡೆದಿದ್ದಿತು. ಇದು ದಕ್ಷಿಣ ಆಫ್ರಿಕದ ಅತಿ ಹೆಚ್ಚಿನ ಚಿನ್ನದ ಉತ್ಪತ್ತಿಗಿಂತ 1,500,000 ಪವನು ಮಾತ್ರ ಕಡಿಮೆಯಾಗಿದ್ದಿತು. ಇನ್ನು ಮುಂದೆ ರಸ್ಯವು ಚಿನ್ನದ ಉತ್ಪತ್ತಿಯಲ್ಲಿ ಪ್ರಥಮ ಸ್ಥಾನ ಪಡೆಯಲಿರುವುದು ಇಂದು ಇಡೀ ಲೋಕವು ದಿವಾಳಿಗಿರಿಯ ಕಡೆಗೆ ಧಾವಿಸುತ್ತಿರುವಾಗ ಸಾಂಪತ್ತಿಕ ಸ್ಥಿತಿಯು ಬಹಳ ಭದ್ರವಾಗಿರುವ ದೇಶವೆಂದರೆ ರಸ್ಯವೊಂದೇ. ಅದೊಂದೇ ತನ್ನ ಸಾಲವನ್ನು ಕ್ರಮವಾಗಿ ತೆರುವುದು. ಸರಕಾರದ ಬೇಂಕಿನ ಚಿನ್ನ ಸಂಗ್ರಹವು 1,400,000,000 ಪವನಿಗೇರಿರುವುದು. ಇತ್ತಲಾಗಿ ಸಾಧ್ಯವಾದಷ್ಟು ಚಿನ್ನ ಸಂಗ್ರಹಮಾಡುತ್ತಿರುವ ಅಮೆರಿಕದ ಯುನೈಟೆಡ್ ಸ್ಟೇಟಿನಲ್ಲಿ ಮಾತ್ರ ಇದಕ್ಕಿಂತ ಹೆಚ್ಚಿನ ಚಿನ್ನವಿದೆ.

WANTED

A Typist-Clerk: Decent salary. Apply sharp stating your qualifications.

New Era Technical School, UDIPI.

ಸುಸಮಯ! ಹಣ ಸಂಪಾದಿಸಿರಿ!!

ಫೋರ್ಮುಗಳನ್ನು ಕಂಪೆನಿಯೇ ಬಟವಾದೆಮಾಡುವುದು.

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡಿಯುತ್ತಿರುವರು.

ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್

ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.

ಗಣಪತಿ ವಿಲಾಸ

ಕೋರ್ಟು ರಸ್ತೆ - - - ಉಡುಪಿ

ಭೋಜನ-ಉಪಹಾರ-ವಿಶ್ರಾಂತಿ ಇವುಗಳಿಗೆ ಆದರ್ಶಗೃಹ

ಆರೋಗ್ಯಕರವೂ ಹಿತಕರವೂ ಆದ ಭೋಜನ ಸ್ನಾನ,—ವಸತಿಗಳಿಗೆ ಯೋಗ್ಯ ಸೌಕರ್ಯ—ಟೀಪಾರ್ಟಿ ಇತ್ಯಾದಿಗಳಿಗೆ ಉತ್ಕೃಷ್ಟ ಸಿದ್ಧತೆಗಳು !!!

ಮುನ್ಸಿಫ್ ಕೋರ್ಟು, ಕಚೇರಿ ಮತ್ತು ಶಾಲೆಗಳಿಗೆ ಸಮೀಪದ ಕೇಂದ್ರದಲ್ಲಿದ್ದು ಸರ್ವರಿಗೂ ಅತ್ಯಂತ ಅನುಕೂಲವಾಗಿರುತ್ತದೆ. ವಿದ್ಯಾರ್ಥಿಗಳಿಗೆ ರಿಯಾಯತಿ ದರದಲ್ಲಿ ಉತ್ತಮ ತರದ ಏರ್ಪಾಡುಮಾಡಲಾಗುವುದು.

ಕೆ. ಮಂಜುನಾಥಯ್ಯ, ಪ್ರೊಪ್ರೈಟರ್.

ಗ್ರೇಂಡ್ ಸೇಲ್! **ಗ್ರೇಂಡ್ ಸೇಲ್!!**

ನಮ್ಮಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಯಾವತ್ತೂ ಶಾಲೋಪಕರಣಗಳೂ ಇತರ ಎಲ್ಲಾ ತರದ ಅತ್ಯಾಧುನಿಕ ಮಾದರಿಯ ಸ್ಟೇಶನೆರಿ, ಕಟ್ಲೆರಿ ವಗೈರೆ ನಿತ್ಯೋಪಯುಕ್ತ ಸಾಮಾಗ್ರಿಗಳೂ ಅತ್ಯಂತ ಕಡಿಮೆದರದಲ್ಲಿ ಮಾರಲ್ಪಡುತ್ತವೆ

ಅಲ್ಲದೆ ಜೂನ್ ತಾ. 1ರಿಂದ ತಾ. 30ರ ತನಕ

ನಮ್ಮಲ್ಲಿ ಒಂದೇ ಬಾರಿಗೆ ಎಂಟಾಣೆಗೆ ಮೇಲ್ಪಟ್ಟು ವ್ಯಾಪಾರಮಾಡುವವರಿಗೆ

ಅತ್ಯಮೂಲ್ಯವಾದ ಇನಾಮುಗಳು ಕೊಡಲ್ಪಡುವವು.

ಹೆಚ್ಚಿನ ವಿವರಗಳಿಗೆ ನಮ್ಮ ಪ್ರಕಟಣಾಪತ್ರವನ್ನು ನೋಡಿರಿ.

ಎಸ್. ಅನಂತರಾಮಾಚಾರ್,

ಪುಸ್ತಕ ಮತ್ತು ಸ್ಟೇಶನೆರಿ ವ್ಯಾಪಾರಿ, ತಾಲೂಕು ಕಚೇರಿ ಬಳಿ, ಉಡುಪಿ.

15 ವರ್ಷಗಳ ಅನುಭವ! ಗ್ಯಾರಂಟೀ ಕೆಲಸ !!

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು

ಪ್ರಸಿದ್ಧರಾಗಿರುವ

ಪೈಂಟರ್ ಗಣಪತಿ ರಾವ್

ಇವರು

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.

ಕನ್ನಡಿಗೆ ಪಾದರಸವನ್ನೂ ಹಾಕಿ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ.

ಗಣಪತಿ ರಾವ್, ಪೈಂಟರ್,

ಸೋದೆ ಮಠದ ಲೇನು - - ಉಡುಪಿ, ದ. ಕ.

The Canara Industrial Works

WANTED

Three respectable and reliable partners with business ablities to finance and conduct a Cashew Nut Factory to be started near Manipal, which is the best Cashew Nut centre and growing industrial centre.

For further particulars apply to:—

S. R. Patla,
Post Udipi, (S. K.)

ANOTHER MILESTONE

HAS BEEN PASSED BY

MESSRS PADUBIDRI BROTHERS.

In their march of unprecedented Progress and Success

THEY HAVE THE

PROUD DISTINCTION OF WINNING THE FIRST PRIZE

FOR THE HIGHEST BUSINESS PRODUCTION AND HAVE FIRMLY

ESTABLISHED THEIR REPUTATION FOR

EFFICIENCY, ECONOMY AND SECURITY,

as Chief Agents of the East & West Insurance Co., Ltd.,

FOR

MAHARASHTRA & KARNATAKA

Applications for Agencies are solicited from Influential and Capable Gentlemen in any walk of life.

Apply sharp to:

Messrs. Padubidri Bros.,

40, Narayanlal Bansilal Mansions,

Bellasis Road, BOMBAY 8.

SUSHEELA & CO., KOLLEGAL. (S. INDIA.)

1000 ರೂಪಾಯಿಗಳ ಬಹುಮಾನ

ಪ್ರತಿ ಎರಡು ಕೂಪನ್‌ಗಳಿಗೂ ಒಂದು ಕೂಪನ್ ಉಚಿತ.

ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ **16-8-1937**. ಫಲಿತಾಂಶವನ್ನು ಪ್ರಕಟಿಸುವ ದಿನ **20-8-1937**.

ಮೂರು ಕೂಪನ್‌ಗಳೂ ಸರಿಯಾಗಿ ಕಳುಹಿಸಿದವರಿಗೆ **500** ರೂಪಾಯಿಗಳು.

ಒಂದು ಕೂಪನ್ ತಪ್ಪುಳ್ಳವರಿಗೆ **200** ರೂಪಾಯಿಗಳು, ಎರಡು ಕೂಪನ್ ತಪ್ಪುಳ್ಳವರಿಗೆ **100** ರೂಪಾಯಿಗಳು.

ಇತರ ಬಹುಮಾನಗಳು.

3 ಕೂಪನ್‌ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ **125** ರೂಪಾಯಿಗಳು. ಹೆಚ್ಚಾಗಿ ಕೂಪನ್‌ಗಳು ಕಳುಹಿಸಿದವರಿಗೆ **75** ರೂಪಾಯಿಗಳು.

		17		

ಸುಶೀಲ ಅಂಡ್ ಕೋ., ಕೊಳ್ಳೇಗಾಲ.

ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ.

ಹೆಸರು ______

ವಿಳಾಸ ______

______

ಪೋಸ್ಟಲ್ ಮಣಿಯಾರ್ಡರ್ ನಂಬರು ______

ಸ್ಟಾಂಪುಗಳು ______ ತಾರೀಕು ______ 1937.

ಉತ್ತರಗಳನ್ನು ಕಂಡುಹಿಡಿಯುವ ಕ್ರಮ:—ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡವಾಗಿ, ಮೂಲೆಗಳಿಂದ 85 ಬರುವಂತೆ, ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಖಾಲಿಯಲ್ಲಿ ಬರೆದು ಕಳುಹಿಸಬೇಕು.

ನಿಬಂಧನೆಗಳು

ಪ್ರವೇಶ ಧನ ಕೂಪನ್‌ಗೆ 0—8—0 ಆಣೆ. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲಿ ಮಣಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು. ಉತ್ತರಗಳು 16—8—1937ರೊಳಗೆ ನಮ್ಮ ಕೈಸೇರಬೇಕು ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಾಸುಮಾಡಲಾಗುವುದಿಲ್ಲ ಮತ್ತು ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲಾಗುವುದು. ಮೆನೇಜರರ ತೀರ್ಮಾನವೇ ಕಡೇ ತೀರ್ಮಾನ. ಬಹುಮಾನಗಳನ್ನು ಪಡೆದವರ ಹೆಸರುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು ತಮ್ಮ ವಿಳಾಸದೊಡನೆ 0—1—0 ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು ಮೇಲ್ಕಂಡ ಶರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್: **ಸುಶೀಲ ಅಂಡ್ ಕೋ., ಕೊಳ್ಳೇಗಾಲ.**

೧ನೇ ನೋಟ

ಪುರುಷವಧು!

ಏಕಾಂಕ ಪ್ರಹಸನ

[ಮಂಗಳೂರು ತಾಲೂಕು ಆಫೀಸಿನಲ್ಲಿ ಶಿರಸ್ತೇದಾರರಾಗಿದ್ದು ಪೆನ್ಶನ್ ಪಡೆಯಲು ತಯಾರಾಗಿರುವ ರಂಗರಾಯನು ತನ್ನ ಮೊದಲಿನ ಹೆಂಡಿರಿಬ್ಬರು ಮೃತರಾಗಿರಲು ಮೂರನೇ ಬಾರಿ ಮದುವೆ ಮಾಡಿಕೊಳ್ಳುವ ಆತುರದಿಂದ ಹುಡುಗಿಗಾಗಿ ಬಹಳ ಹುಡುಕಾಡುವನು. ಆದೊಂದು ಹುಡುಗಿಯನ್ನು ತಾನೇ ನೋಡ ಹೋಗಿ ತನ್ನ ಕೆಲಸವಾಗದೆ ನಿರಾಶೆಯಿಂದ ಬಹಳ ಬಳಲಿ ಮನೆಗೆ ಹಿಂತಿರುಗಿ ಚಾವಡಿಯಲ್ಲಿ ನಿಂತು ತನ್ನ ಮನೆಕೆಲಸದವಳಾದ ತುಂಗಮ್ಮನನ್ನು "ತುಂಗಮ್ಮಾ! ತುಂಗಮ್ಮಾ! ತುಂಗಮ್ಮಾ!" ಎಂದು ಕೂಗಿ ಕರೆಯುತ್ತಾ ಸಿಟ್ಟಿನಿಂದ ತನ್ನ ಮುಂಡಾಸನ್ನು ತೆಗೆದು ಒಂದೆಡೆ ಬಿಸಾಡಿ ಊರುಗೋಲನ್ನು ಟಪ್ಪನೆ ನೆಲಕ್ಕೆ ಬಡಿಯುತ್ತಾ ತುಂಗಮ್ಮನು ಬರುವಳೋ ಎಂದು ಬಾಗಿಲ ಕಡೆಗೆ ಇಣಿಕಿ ನೋಡಿ "ತುಂಗಮ್ಮ! ತುಂಗಮ್ಮ!" ಎಂದು ಕೂಡಿದಷ್ಟು ಗಟ್ಟಿ ಕೂಗಿ ಕರೆದು ಊರುಗೋಲನ್ನು ದಡಕ್ಕನೆ ಒಂದೆಡೆಗೆಸೆದು ಉಸ್ಸೆಂದು ಎರಡು ಕೈಗಳನ್ನೂ ತಲೆಗೆ ಒತ್ತಿಟ್ಟು]

ರಂಗ—ಸ್ಸೈ! ಸತ್ತೇ ಹೋದ್ಳಂತ ಕಾಣುತ್ತದೆ! ಬಾಯಾರಿಕೆಯಿಂದ ಪ್ರಾಣ ಹಾರಿಹೋಗುತ್ತದೆಂಬ ಕಾಲಕ್ಕೆ ಒಂದಿಷ್ಟು ಗಂಗೋದಕ ಕೊಡ್ಲಿಕ್ಕಿಲ್ಲದವಳು ಇದ್ದ್ರೇನು ಅವಳು ಸತ್ತ್ರೆ ಸತ್ತೇಹೋದ್ರೇನು? ಈಗ ನನ್ನಾಕೆಯೊಬ್ಬಳಿದ್ದಿದ್ರೆ ಬೆಳ್ಳಿ ಲೋಟೆಯಲ್ಲಿ ಕೆನೆಹಾಲು ಕೂಡ್ಲೆ ತಯಾರಾಗುತ್ತಿತ್ತಲ್ಲ! ಒಂದೊಮ್ಮೆಗೆ ತಯಾರಾಗದಿದ್ರೂ ನಮ್ಮ ಹೆಂಡಿರೆಂದರೆ ನಮ್ಮ ಸ್ವಾರ್ಜಿತ ಸೊತ್ತು. ಅವರನ್ನು ಮನಸ್ಸೇಚ್ಛೆ ಬೈದು ತಲೆ ಸರಿ ಜಪ್ಪಿಬಿಟ್ರೂ ಕೇಳುವವರಾರು? ಅಯ್ಯೋಯ್ಯೋ! ನನ್ನ ಎದೆ ಸುಡುವುದೇ? ಶಿವ ಶಿವಾ! (ಕೋಪಗೊಂಡು) ಆ ಗಾಂಧಿ ಕಡೆಯವರ ಮನೆ ಹಾಳಾಗಿಹೋಗ್ಲಿ! ಸ್ವರಾಜ್ಯವಂತೆ! ಸ್ವಾತಂತ್ರ್ಯವಂತೆ! ನನಗೊಂದು ಮದುವೆಮಾಡಿಕೊಳ್ಳಲಿಕ್ಕೂ ಇಲ್ಲದ ಆ ಸ್ವಾತಂತ್ರ್ಯಕ್ಕೆ ಬೆಂಕಿಬಿದ್ದು ಹೋಗ್ಲಿ!

[ರಂಗರಾಯನ ಗೆಳೆಯ ಶಿವರಾಯನು ಪ್ರವೇಶಿಸಿ]

ಶಿವ—ಏನ್ರಿ! ಏನ್ರಿ! ರಾಯರೇ ಇದು!

ರಂಗ—ಓಹೋ, ಶಿವರಾಯರು! ಬಹಳ ಅಪರೂಪ ಸವಾರಿ! ಎಲ್ಲಿ ಹೋಗಿದ್ದಿರಪ್ಪ ಇಷ್ಟು ಸಮಯ?

ಶಿವ—ಅತ್ತೆ ಮನೆಗೆ ಹೋಗಿದ್ದೆ ಸ್ವಾಮಿ ಅತ್ತೆ ಮನೆಗೆ.

ರಂಗ—ಏನೇನು?

ಶಿವ—ಅತ್ತೆ ಮನೆಗೆ ಹೋಗಿದ್ದೆ ಅಂದೆ!

ರಂಗ—"ಅತ್ತೆ ಮನೆ, ಅತ್ತೆ ಮನೆ" ಇನ್ನೊಂದು ಹತ್ತು ಸಲ ಹೇಳಿ ಸ್ವಾಮಿ! ಪೆನ್ಶನ್ ಆಗಿ 60ನೇ ಶಾಂತಿ ಕೂಡಾ ಮಾಡಿಕೊಂಡರೂ ಹೊಸದಾಗಿ ಒಂದು ಅತ್ತೆಯ ಮನೆ ಮಾಡಿಕೊಂಡು ಬಿಟ್ರಿ ನೀವು! ಐವತ್ತೈದು ವರ್ಷ ಕೂಡಾ ಆಗದ ನನ್ನ ಹಣೆಯಲ್ಲಿ ಆ ಭಾಗ್ಯವಿಲ್ಲ ಸ್ವಾಮಿ! ಆದ್ರಿಂದ ನೀವಾದರೂ ಒಂದು ಹತ್ತು ಸಲ ಅತ್ತೆಮನೆ ಎಂದು ಹೇಳುವುದನ್ನು ಕೇಳಿ ಸಂತೋಷಪಡುತ್ತೇನೆ. ಹೇಳಿ ಸ್ವಾಮಿ! ಇನ್ನೊಂದು ಹತ್ತು ಸಲ ಹೇಳಿ.

ಶಿವ—ನಾನೀಗ ಒಂದಲ್ಲ ಹತ್ತು ಅತ್ತೆಮನೆ ಮಾಡಿಕೊಳ್ಳಬೇಕಾದ್ರೂ ಹುಡುಗಿಯರಿಗೇನೂ ಕಡಿಮೆ ಬಿದ್ದಿದೆಯೇ? ಒಂದು ಹುಡುಗನಿಗೆ ಹತ್ತರಂತಿದ್ದಾರೆ ಹುಡುಗಿಯರೀಗ!

ರಂಗ—ಹಾಗಾದರೆ ನನಗೊಂದು ಹುಡುಗಿ ಸಿಗದಂತೆ ಶತ ಪ್ರಯತ್ನ ಮಾಡುವ ಆ ಗಾಂಧಿ ಕಡೆಯವರಿಗೇನೆನ್ನಬೇಕು ಸ್ವಾಮಿ! ಆ ಗಾಂಧಿ ಇದ್ದಾನಲ್ಲ ಅವ ಸಾಕ್ಷಾತ್ ಕಲಿ ಪುರುಷ!

ಶಿವ—ಏನ್ರಿ ರಂಗರಾಯರೇ! ಲೋಕಮಾನ್ಯರಾಗಿ ಶಕಪುರುಷರೆನಿಸುವ ಗಾಂಧಿಜೀಯವರ ಮೇಲೇಕೆ ಹೀಗೆ ಮುನಿದು ಬಿದ್ದಿರುವಿರಿ?

ರಂಗ—ಗಾಂಧಿಜಿ! ಲೋಕಮಾನ್ಯ! ಶಕಪುರುಷ!! ಜನರಿಗೆಲ್ಲಾ ಹುಚ್ಚು ಸ್ವಾಮಿ, ಹುಚ್ಚು! ಈಗಣ ತರುಣರಿಗೆ ಒಬ್ಬರಿಗೇನೂ ತಲೆ ಸಮವಿಲ್ಲ ಸ್ವಾಮಿ!

ಶಿವ—ಅದು ಹೌದಪ್ಪ! ತಲೆ ಸಮ ಇರುವುದೆಂದರೆ ನಿಮಗೊಬ್ಬರಿಗೆ! "ಸರ್ವಂ, ಗಾಂಧಿಮಯಂ ಜಗತ್" ಎಂಬೋಪಾದಿ ಇದೀ ಲೋಕವೇ ಈಗ ಗಾಂಧಿಮಯವಾಗಿ ಹೋಗಿದೆ! ಅವರು ಅವತಾರ ಪುರುಷರೆಂಬುದಕ್ಕೆ ಸಂದೇಹವೇ ಇಲ್ಲ. ಈಗ ಎಲ್ಲಿ ನೋಡಿದರೂ "ಗಾಂಧಿ ಮಹಾರಾಜ್ಕೀ ಜೈ! ಮಹಾತ್ಮಾ ಗಾಂಧಿಕೀ ಜೈ" ಎಂಬ ಗಾಂಧಿ ಭಜನೆಯೇ ಹೊರತು ಬೇರೆ ಉಂಟೇ ರಾಯರೇ?

ರಂಗ—ಸಾಕುಮಾಡಿ, ಸಾಕುಮಾಡಿ! ಉಂಡ ಮನೆಗೆರಡು ಬಗೆಯಬಾರದು ಸ್ವಾಮಿ, ಸರಕಾರದ ಉಪ್ಪನ್ನ ತಿಂದು ನೀವು ಹೀಗೆ ದ್ರೋಹ ಮಾಡುವುದೇ? ಆ ಗಾಂಧಿ ನಮ್ಮ ನೀತಿ ಧರ್ಮವನ್ನೆಲ್ಲಾ ನಾಶಮಾಡ ಹುಟ್ಟಿದ ಕಲಿಪುರುಷ! ಈಗ ಜನರಿಗೆಲ್ಲಾ ಗಾಂಧಿ ಹುಚ್ಚು ಹಿಡಿದುಹೋಗಿದೆ ಸ್ವಾಮಿ. ಇಲ್ಲವಾದರೆ ತಲೆಗೆಟ್ಟು ಸರಕಾರಕ್ಕೇನಾದರೂ ವಿರೋಧಮಾಡಿ ಮೂರು ಮೂರು ಸಲ ಜೈಲಿಗೆ ಹೋಗಿಬರುವವರನ್ನೆಲ್ಲಾ ದೇಶಬಂಧು, ದೇಶಭಕ್ತರೆಂದು ಕರೆಯುವದೆಂದರೆ ಏನರ್ಥ ಸ್ವಾಮಿ ಇದಕ್ಕೆಲ್ಲಾ?

ಶಿವ—ಹಾಗಾದ್ರೆ ಹತ್ತು ಹನ್ನೆರಡು ಸಲ ಜೈಲಿಗೆ ಹೋಗಿಬಂದಿರುವ ಕೇಡಿಗಳನ್ನೇಕೆ ದೇಶಭಕ್ತರೆಂದು ಕರೆಯುವುದಿಲ್ಲ?

ರಂಗ—ಆ ಸರಕಾರದವರಿಗೂ ತಲೆ ಒಂದು ಸುತ್ತು ಸಡಿಲೆಂದು ತೋರುತ್ತದೆ. ಇಲ್ಲವಾದ್ರೆ ಈ ಮಾರಿಗಳನ್ನೆಲ್ಲಾ ಒಮ್ಮೆ ಸಾಲುಸಾಲಾಗಿ ಕರದ್ಕೊಂಡು ಜೈಲಿಗೆ ಹಾಕಿದ್ದ್ಯಾಕೆ? ಆ ಮೇಲೆ ಬಿಟ್ಟದ್ದ್ಯಾಕೆ? ಈಗ ಹಾರುತ್ತವೇನು ಪುರುಸೊತ್ತಿಲ್ಲದೆ?

ಶಿವ—ಮತ್ತೇನು ಮಾಡಬೇಕಿತ್ತು?

ರಂಗ—ಮತ್ತೇನು ಮಾಡಬೇಕಿತ್ತೇ! ಸಾಲಾಸಾಲು ನಿಲ್ಲಿಸಿ ಗುಂಡುಗುಂಡು ಹೊಡೆಯಬೇಕಿತ್ತು! ಇಲ್ಲವೆ ಅಂಡಮಾನಿನಲ್ಲಿಟ್ಟು ಕರಿನೀರ ಶಿಕ್ಷೆ ಕೊಡಬೇಕಿತ್ತು! ಅದೇನಿಲ್ಲ! ಅವರೆಲ್ಲಾ ಫಸ್ಟ್ ಕ್ಲಾಸ್, ಸೆಕೆಂಡ್ ಕ್ಲಾಸ್ ಕೈದಿಗಳಂತೆ! ಅವರಿಗೆಲ್ಲಾ ಜೈಲೆಂದರೆ ಅತ್ತೆಮನೆಯಾಗಿ ಹೋಗಿದೆ ಸ್ವಾಮಿ ಸಾಯಲಿಕ್ಕೆ ತಯಾರಾದವರಂತಿದ್ದವರೆಲ್ಲಾ ಬಲುಪುಷ್ಟಿಯಾಗಿ ಹೊರಬಂದಿದ್ದಾರೆ! ಈಗವರ ಹೆಮ್ಮೆ ಅಹಂಕಾರದಿಂದ ಅವರೊಡನೆ ಮಾತಾಡ್ಲಿಕ್ಕೆ ಕೂಡಾ ಸಾಧ್ಯವಿಲ್ಲಸ್ವಾಮಿ.

ಶಿವ—ಇದನ್ನೆಲ್ಲಾ ನೀವು ಸರಕಾರಕ್ಕೆ ತಿಳಿಸಿದ್ದರೆ ನಿಮಗೆ ಒಮ್ಮೆಯೇ ದಿವಾನ್ ಬಹುದ್ದೂರ್ ಬಿರುದು ದೊರೆಯುತ್ತಿತ್ತು! ನೀವು ಇಷ್ಟು ಸಿಟ್ಟಾಗಲು ಅವರೇನು ಮಾಡಿದ್ದರಪ್ಪಾ ನಿಮಗೆ?

ರಂಗ—ಏನು ಮಾಡಿದ್ದ್ರೇ? ನಿಮಗೆ ಗೊತ್ತೇ ಇಲ್ವೇ? ಅವರ ಸತ್ಯಾಗ್ರಹ, ಪಿಕೆಟಿಂಗ್ ಬಹಿಷ್ಕಾರದಿಂದೆಲ್ಲಾ ಗಟ್ಟಿ ಶ್ವಾಸಬಿಡಲಿಕ್ಕೂ ಇಲ್ಲ ನೋಡಿ! ಅತ್ತೆಮನೆ ಸುಖದಲ್ಲಿ ಮುಳುಗಿದ್ದ ನೀವು ಪತ್ರಿಕೆ ಸಹ ಓದ್ಲಿಲ್ಲವೆಂತ ಕಾಣುತ್ತೆ, ಇತ್ತಲಾಗಿ!

ಶಿವ—ಓಹೋ! ಪೋಲೀಸ್ ಬಂದೋಬಸ್ತಿನಲ್ಲಿ ಮುದುಕನ ಮದುವೆ! ಮದುವೆ ಚಪ್ಪರದಲ್ಲಿ ನವ ಜವಾನ ಸಂಘದ ಸ್ವಯಂಸೇವಕರ ಪಹರೆ! ಪೋಲೀಸರ ಲಾಠಿ ಪ್ರಹರ! ಧೀರ ಸ್ವಯಂಸೇವಕರ ಸತ್ಯಾಗ್ರಹ! ಮದುವೆ ಚಪ್ಪರದಲ್ಲಿ ಕೋಲಾಹಲ! ದಿಬ್ಬಣಿಗರ ತಳಮಳ! ವಧುವಿನ ಮೂರ್ಛೆ! ಮುದುಕನ ಮದುವೆಗೆ ನೂನ್ನೂರು ವಿಘ್ನ! ಎಂದೆಲ್ಲಾ ನವಭಾರತ ಪತ್ರಿಕೆಯಲ್ಲಿ ಗುಂಬಳಕಾಯಿ ಅಕ್ಷರದಲ್ಲಿ ಪ್ರಕಟವಾದುದು ಮರತೇ ಹೋಯಿತು. ಪಾಪ, ನಿಮ್ಮ ಅವಸ್ಥೆ ನಿಜವಾಗಿಯೂ ಅತ್ಯಂತ ಕರುಣಾಜನಕ ರಾಯರೇ?

ರಂಗ—ಆ ಮಾರಿಗಳ ಉಪಟಳದಿಂದ ನನಗೆ ಮುಖ ತೋರಿಸಿ ಹೊರ ಹೋಗ್ಲಿಕ್ಕಿಲ್ಲ ಸ್ವಾಮಿ! ನಾನು ರಸ್ತೆಗೆ ಕಾಲಿಟ್ಟೊಡನೆಯೇ ಬಜಾರಿ ಹುಡುಗರು "ಮುದುಕನ ಮದುವೆ! ಮುದುಕನ ಮದುವೆ!" ಎಂದು ಕೂಗಿಡುವುದೆಂದ್ರೆ ನಾನು ಇದ್ದು ಸತ್ತಂತಲ್ಲವೆ ಶಿವರಾಯರೇ? ಅತ್ತೆಮನೆ ಸುಖ ಅನುಭವಿಸುತ್ತಿರುವ ನೀವೇ ಭಾಗ್ಯವಂತರಪ್ಪಾ ಭಾಗ್ಯವಂತರು!

ಶಿವ—ರಂಗರಾಯರೇ ನನ್ನ ಸಂಗತಿ ಪ್ರತ್ಯೇಕ ನೋಡಿ! ನಾನು ಈಗ ಮದುವೆಯಾಗುವುದಾದ್ರೂ ಹೆಣ್ಣು ಕೊಡುವವರು ಎಷ್ಟು ಮಂದಿಬೇಕು? ಇರುವಂತೆ ಇದ್ದರೆ ಪ್ರಾಯ ಎಷ್ಟಾದ್ರೇನು?

ರಂಗ—ಹೌದೌದು! ಆಗ ಆ ಗಾಂಧಿ ಕಡೆಯವರು ಎಲ್ಲಿಯೋ ಸತ್ತು ಹೋಗಿದ್ರು! ಈಗ ಮಾತ್ರ ಜೀವವಾದ್ರು!

ಶಿವ—ಹಾಗಲ್ಲ ಸ್ವಾಮಿ! ಅದೆಲ್ಲಾ ಒಂದು ಗುಟ್ಟು ನೋಡಿ. ನೀವು ಹೀಗೆಲ್ಲಾ ವೃದ್ಧಾಪ್ಯದ ನಿಶಾನೆಯೇ ಆಗಿರುವ ನರೆತ ಗಡ್ಡ, ಮೀಸೆ ಕೂದಲುಗಳನ್ನು ಉದ್ದುದ್ದ ಬೆಳೆಸಿಕೊಂಡು ಬಾಗು ಬೆನ್ನು ಜೋಲು ಮೈಮಾಡಿಕೊಂಡು ಜಾಂಬವನಂತಿದ್ದರೆ ನಿಮಗಾರು ಹುಡುಗಿಕೊಟ್ಟಾರು? ಅರುವತ್ತಾದರೂ ಮೂವತ್ತರಂತಿರುವ ರಹಸ್ಯವೇ ನಿಮಗೆ ತಿಳಿಯದು.

ರಂಗ—ಅದೇನಾರಹಸ್ಯ ಸ್ವಾಮಿ? ನಾನೇನು ಮಾಡಿಕೊಳ್ಳಬೇಕೆಂದು ಸ್ವಲ್ಪ ಹೇಳಿ. ಹ್ಯಾಗಾದ್ರೂ ಅಡಿಗೆಗೊಂದು ಹುಡುಗಿ, ಸತ್ತ ಮೇಲೆ ಪಿಂಡ ಹಾಕ್ಲಿಕ್ಕೊಂದು ಗಂಡು ಮಗು ಆಗುವಂತಾಗಲಿ, ಅಷ್ಟುಮಾಡಿ!

ಶಿವ—ಅಂಗೈ ನೋಡಲಿಕ್ಕೆ ಕನ್ನಡಿ ಯಾಕೆ ರಾಯರೇ! ನನ್ನನ್ನೇ ನೋಡಿದರೆ ತಿಳಿಯದೇ? ನನಗೀಗ ಅರುವತ್ತು ವರುಷ ಮೀರಿದರೂ ನಲ್ವತ್ತು ವರ್ಷ ನಿಕ್ಕೀತೆಂದು ಯಾರಾದರೂ ಹೇಳಿಯಾರೇ?

ರಂಗ—(ಶಿವರಾಯನನ್ನೊಮ್ಮೆ ಚೆನ್ನಾಗಿ ಪರೀಕ್ಷಿಸಿ) ಅದು ಹೌದು ಸ್ವಾಮಿ! ನೀವೇನು ಮಾಡುತ್ತೀರಿ? ಪ್ರತಿನಿತ್ಯ ತಪ್ಪದೆ ಚ್ಯವನಪ್ರಾಶ ಲೇಹ ತೆಗೆದುಕೊಳ್ಳುತ್ತೀರೇನು? ಅಥವಾ ಧಾತುಪುಷ್ಟಿ ಲೇಹ ತೆಗೆದುಕೊಳ್ಳುತ್ತೀರೋ?

ಶಿವ—ಚ್ಯವನ ಪ್ರಾಶವಲ್ಲ, ನಿಮ್ಮ ತಲೆ! ಹೆಣ್ಣು ಹೆಂಗ್ಸಾದವಳು ನಿಮ್ಮ ಗಾರ್ದಭ ಮುಖ, ಕೊಡಂಗಿ ವೇಷವನ್ನೆಲ್ಲಾ ಕಣ್ಣೆತ್ತಿ ನೋಡ್ಲಿಕ್ಕಿಲ್ಲ!

ರಂಗ—ಮತ್ತೇನು ಮಾಡಬೇಕು ಸ್ವಾಮಿ? ನನಗೆ ಸ್ವಲ್ಪ ಹೇಳಬಾರದೇ? ನೀವು ಹೇಳಿದ ಹಾಗೆ ಮಾಡುತ್ತೇನೆ. ಹೇಗಾದ್ರೂ ಒಂದು ಮದುವೆಮಾಡ್ಸಿಬಿಡಿ.

ಶಿವ—ಈಗ ಲೋಕದಲ್ಲಿ ಎಲ್ಲಾ ಇರುವುದು ಒಂದು ನಟನೆಯಲ್ಲಿ ನೋಡಿ ನಿಮ್ಮ ಮಂಗ ಮುಖಕ್ಕೆ ತಿಂಗಳಿಗೊಮ್ಮೆಯಾದ್ರೂ ಕ್ಷೌರಕತ್ತಿಯ ದರ್ಶನವಾಗುವುದೇ? ಅಹಹ ಮದನ ಮನ್ಮಥ ಸ್ವರೂಪ! ನಿಮ್ಮ ವೇಷವನ್ನು ದಸ್ರ ಹಬ್ಬಕ್ಕೊಯ್ದರೆ ಸರಿ ದುಡ್ಡು ಮಾಡಬಹುದು!

ರಂಗ—ನಾನು ಸ್ವಲ್ಪ ಹಳೇ ಮರ್ಜಿಯವ ಸ್ವಾಮಿ! ನಮ್ಮ ಅಜ್ಜ ಪಿಜ್ಜ ಎಲ್ಲಾ ಹೀಗೆ ಇದ್ದರಂತೆ! ನನ್ನಪ್ಪನು ಹೀಗೆಯೇ ಇದ್ದ. ನಾನೂ ಹಾಗೆಯೇ ಇದ್ದೇನೆ. ಅದರಲ್ಲೇನು?

ಶಿವ—ಅದರಲ್ಲೇನು? ಅದರಲ್ಲೇನೆಂದು ಇನ್ನೂ ತಿಳಿದಿಲ್ಲವೇ ನಿಮಗೆ? ನಿಮಗೆ ಹುಡುಗಿಯನ್ನೆಲ್ಲಿಯಾದರೂ ಗೊಂಬೆಮಾಡಿ ತರಬೇಕು. ಈ ಕಾಲದಲ್ಲಿ ಶೋಕುಮಾಡಿ ಕೊಳ್ಳಬೇಕು ಸ್ವಾಮಿ, ಶೋಕುಮಾಡಿಕೊಳ್ಳಬೇಕು!

ರಂಗ—ಶೋಕು ಅಂದ್ರೆ ಏನು ಮಾಡಿಕೊಳ್ಳಬೇಕೆಂದು ಸ್ವಲ್ಪ ಹೇಳಿ ಸ್ವಾಮಿ! ಹುಡುಗಿಯೊಂದು ಸಿಕ್ಕುವುದಾದ್ರೆ ನಾನು ಏನು ಮಾಡುವುದಕ್ಕೂ ಸಿದ್ಧನೇಸರಿ. ಒಟ್ಟು ಇಹದಲ್ಲಿಯೂ ಸುಖವಿಲ್ಲ, ಪರದಲ್ಲಿಯೂ ಗತಿಯಿಲ್ಲದಂತಾಯಿತಲ್ಲ!

ಶಿವ—ನಾನು ಹೇಳಿದ ಹಾಗೆ ಕೇಳಿದ್ರೆ ನಿಮಗೆ ಒಂದಲ್ಲ ಹತ್ತು ಹುಡುಗಿಯರನ್ನು ಮದುವೆ ಮಾಡಿಸುವುದು ನನಗೆ ಸಂದಿತು.

ರಂಗ—ಅದು ಸಾಧ್ಯವಿಲ್ಲ ಸ್ವಾಮಿ ನಿಮ್ಮಿಂದ. ಆ ಗಾಂಧಿ ಕಡೆಯವರಿದ್ದಾರಲ್ಲ ಘಟಿಂಗರು, ಅವರು ನನ್ನ ವಿಷಯದಲ್ಲಿ ಏನೇನೆಲ್ಲಾ ಸುದ್ದಿ ಹಬ್ಬಿಸಿಬಿಟ್ಟಿದ್ದಾರೆ ಸ್ವಾಮಿ

ಶಿವ—ಏನು ಸುದ್ದಿ?

ರಂಗ—ಅದನ್ನೆಲ್ಲಾ ನನಗೆ ಹೇಳಲಿಕ್ಕೇನೇ ನಾಚಿಕೆಯಾಗುತ್ತದೆ.

ಶಿವ—ಓಹೋ ಹೋ! ನಿಮಗಿನ್ನೂ ನಾಚಿಕೆ! ಹೇಳಿಯಪ್ಪಾ ಹೇಳಿ!

ರಂಗ—ನೋಡ್ಲಿ ನನಗೇನೇನೆಲ್ಲಾ ರೋಗವುಂಟೆಂತ ಸುದ್ದಿ ಹುಟ್ಟಿಸಿದ್ರು! ಆಗ ನಾನು ನಮ್ಮ ಜಿಲ್ಲಾ ಸರ್ಜನ್ ಧೊರೆಗಳಿಂದ ಫಸ್ಟ್‌ಕ್ಲಾಸ್ ಸರ್ಟಿಫಿಕೇಟು ಪಡೆದು ಪತ್ರಿಕೆಯಲ್ಲಿಯೇ ಜಾಹೀರುಮಾಡಿಬಿಟ್ಟೆ.

ಶಿವ—ಮತ್ತೇನು ಮಾಡಿದ್ರು?

ರಂಗ—'ಇಬ್ಬರನ್ನು ಮುಕ್ಕಿ ತಿಂದವ! ಮೂರನೆಯವಳನ್ನು ಮುಕ್ಕಲಿಕ್ಕೆ ಹೊರಟಿದ್ದಾನೆ. ಹೆಣ್ಣು ಕೊಡುವವರೆಲ್ಲಾ ಜಾಗ್ರತೆ'ಯೆಂದು ಊರಲ್ಲೆಲ್ಲಾ ಸಾರಿಬಿಟ್ರು. ಅದಕ್ಕೂ ನಾನು ಉಪಾಯಮಾಡಿದೆ. ಪಬ್ಲಿಕಾಗಿ ಹೆಣ್ಣು ಅಶ್ವತ್ಥದ ಮರಕ್ಕೂ ನನಗೂ ಮೂರನೆಯ ಮದವೆಮಾಡಿಸಿಕೊಂಡೆ.

ಶಿವ—ಹ! ಹ! ಹ! ರಾಯರೇ!! ನೀವು ಹೆಣ್ಣು ಅಶ್ವತ್ಥದ ಮರವನ್ನು ಮೂರನೇ ಸಲ ಮದುವೆಯಾಗಿರುತ್ತಾ ಅದು ಸಾಯದೆ ನಿಮಗೆ ಇನ್ನೊಂದು ಹೆಣ್ಣು ಯಾರು ಕೊಡುತ್ತಾರೆ?

ರಂಗ—ಅದೊಂದು ಹೌದು ಸ್ವಾಮಿ! ಹಾಗಾದ್ರೆ ಇವತ್ತೇ ಆ ಮರವನ್ನು ಕಡ್ಡಿ ಹಾಕಿಬಿಡಲೇ? ಎಲ್ಲಿ ಹೋದ್ರೂ ನನಗೆ ಅಪಜಯವಾಗಲು ಇದೇ ಕಾರಣ ನೋಡಿ! ಈಗ ತಿಳಿಯಿತು! ಸರಿ ಸರಿ!

ಶಿವ—(ಒಳಗಿಂದೊಳಗೆ ನಕ್ಕು) ಅದಂತಿರಲಿ, ನಿಮಗೆ ಮತ್ತೇನು ಮಾಡಿದ್ರು ಆ ಗಾಂಧಿ ಕಡೆಯವರು?

ರಂಗ—ಇನ್ನೊಂದು ಸಂಗತಿಯುಂಟು ಸ್ವಾಮಿ. ಅದನ್ನು ಹೇಳುವುದಾದರೂ ಹೇಗೆ? ಈ ಗಾಂಧಿ ಕಡೆಯವರಷ್ಟು ಕ್ಷುದ್ರ ಬುದ್ಧಿಯವರು ಜಗತ್ತಿನಲ್ಲೇ ಇಲ್ಲ!

ಶಿವ—ಆಗ್ಲಿ ಹೇಳಿಬಿಡಿ! ಇಷ್ಟೆಲ್ಲಾ ಹೇಳಿದ್ರಿ! ಇನ್ನು ಅದೊಂದು ಬಾಕಿ ಯಾಕೆ?

ರಂಗ—ಒಂದಲ್ಲ ಎರಡು ಹೆಂಡಿರನ್ನು ಮಾಡಿಕೊಂಡು ಮಕ್ಕಳಾಗದ ನಪುಂಸಕನಿಗೆ ಮೂರನೇ ಹೆಣ್ಣು ಕೊಡುವುದೂ ಕಲ್ಲು ಕಟ್ಟಿ ಹೊಳೆಗೆ ಹಾಕುವುದೂ ಒಂದೇ ಎಂದು ಸಾರತೊಡಗಿದ್ದಾರ ಸ್ವಾಮಿ. ಹೀಗೂ ಉಂಟೇ? ನನಗೆ ಒಂದಲ್ಲ ಎರಡಲ್ಲ ಮೂರು ಮಕ್ಕಳಾಗಿವೆ. ಆದ್ರೆ ನನ್ನ ದುರ್ದೈವ ನಾನೇನು ಮಾಡಲಿ! ಅವುಗಳಲ್ಲಿ ಒಂದೂ ಬದುಕಲಿಲ್ಲ ನೋಡಿ!

ಶಿವ—(ನಸುನಕ್ಕು) ಆಗ್ಲಿ ಸ್ವಾಮಿ ಆಗ್ಲಿ ಅವರು ಯಾವ ಸುದ್ದಿಬೇಕಾದ್ರೂ ಹಬ್ಬಿಸಲಿ, ನಿಮಗೊಂದು ಚಂದದ ಹುಡುಗಿಯನ್ನು ಮದುವೆಮಾಡಿಸುವುದು ನನಗೆ ಸಂದಿತು!

ರಂಗ—ಅದಕ್ಕೆ ನಾನೇನು ಮಾಡಬೇಕೆಂದು ಹೇಳಿಬಿಡಿ. ಎಲ್ಲಾ ಮಾಡುತ್ತೇನೆ. ಆ ಘಟಿಂಗರ ಹೆರಕ್ಕೆ ನನ್ನ ಹರ!

ಶಿವ—ಹಾಗಾದ್ರೆ ಕೇಳಿ! ಈ ಮೀಸೆ ಗಡ್ಡವನ್ನೆಲ್ಲಾ ಸರಿ ಬೋಳಿಸಿ ನಪೋತ್‌ಮಾಡಬೇಕು. ಪ್ರತಿದಿನ ಮುಂಜಾನೆ ಎದ್ದಕೂಡ್ಲೆ ನೀವು ನಡಿಸಬೇಕಾದ ಪ್ರಾತರ್ವಿಧಿಯೆಂದರೆ ಮುಖ ಕ್ಷೌರ.

ರಂಗ—ಪ್ರತಿದಿನ ಬೆಳಿಗ್ಗೆ ಕ್ಷೌರಿಕನನ್ನು ಎಲ್ಲಿ ಹುಡುಕುವುದು ಸ್ವಾಮಿ!

ಶಿವ—ಯಾಕೆ ಕ್ಷೌರಿಕ? ಒಂದು ಸೇಫ್ಟೀರೇಜರ್ ತೆಗೆದುಕೊಂಡ್ರೆ ಹತ್ತು ನಿಮಿಷದೊಳಗೆ ಸ್ವತಃ ಹಜಾಮತಿ ಮಾಡಿಕೊಳ್ಳಬಹುದು.

ರಂಗ—ಶಿವ! ಶಿವ! ಬ್ರಾಹ್ಮಣನಾದವನು ಹಜಾಮ ಕೆಲಸಮಾಡುವುದೇ?

ಶಿವ—ಛೆ! ಛೆ! ನೀವು ಹಜಾಮನಾಗಬೇಕೆಂದು ಹೇಳಿದವರಾರು ಸ್ವಾಮಿ ನಾನೇನು ಬ್ರಾಹ್ಮಣನಲ್ಲವೇ? ವಸಿಷ್ಠ ಗೋತ್ರದ ಶ್ರೇಷ್ಠ ಬ್ರಾಹ್ಮಣ. ನಮ್ಮ ಕೆಲಸ ನಾವು ಮಾಡಿಕೊಳ್ಳಲಿಕ್ಕೇನಡ್ಡಿ ಸ್ವಾಮಿ? ನಿಮ್ಮ ಕೂದಲನ್ನೆಲ್ಲಾ ವಾರಕ್ಕೊಮ್ಮೆ ಸರಿ ಕತ್ತರಿಸಿ 'ಓಕ್ಸ್ ಫೋರ್ಡ್' ಕ್ರಾಪ್ ಮಾಡಿಸಿಕೊಳ್ಳಬೇಕು. ಅದನ್ನು ಪ್ರತಿನಿತ್ಯ 'ಪೊಮೇಡ್' ಹಾಕಿ ಬಾಚಿ ಚಂದಮಾಡಿಕೊಳ್ಳಬೇಕು. ಈ ನರೆತ ಕೂದಲೆಲ್ಲಾ ಒಂದಿಷ್ಟು ತೋರದಂತೆ, ಮುದುಕರ ಮುಂಡಾಸಲ್ಲ. ಫೆಲ್ ಕ್ಯಾಪು ಇಟ್ಟುಕೊಳ್ಳಬೇಕು. ಇನ್ನು ಟೈ, ಕೊಲ್ಲರು ಪಬ್ಲೋ, ಡ್ರೆಸ್ ಕೋಟು, ಸ್ಟೈಕ್ಸ್ ಕಚ್ಚೆ, ಹಾಫ್ ಶೂಸ್, ರಿಸ್ಟುವಾಚುಗಳಿಂದೆಲ್ಲಾ ಅಪ್-ಟು ಡೇಟ್ ಆಗಿಬಿಟ್ಟರೆ ಆ ಗಾಂಧಿ ಕಡೆ ಹುಡುಗರೆಲ್ಲಾ ನಿಮ್ಮ ಗೋಜಿಗೆ ಬರಲಾರರು! ಒಂದುವೇಳೆ ಬಂದರೂ ನಿಮಗೆ ಹುಡುಗಿಯರು ಡಜನ್ ಕಟ್ಟಿನಲ್ಲಿ ಬೇಕೋ?

ರಂಗ—ಆಯ್ತಪ್ಪ. ನೀವು ಹೇಳಿದ ಹಾಗೆ ಮಾಡುತ್ತೇನೆ. ಹೇಗಾದರೂ ಒಂದು ಹುಡುಗಿ ದೊರೆತರೆ ಸರಿ ನನಗೆ.

ಶಿವ—ಆ ವಿಷಯದಲ್ಲಿ ಸಂದೇಹವೇ ಬೇಡ. ನಿಮಗೆ ಹೊತ್ತಾಯಿತು, ಹೋಗುತ್ತೇನೆ ನಾನೀಗ ನಾಳೆ ನಾನು ಬರುವಾಗ ಯಯಾತಿ ಮಹಾರಾಜನಂತೆ ಯೌವನ ತಳೆಯಬೇಕು, ಮರೆಯಬೇಡಿ. (ಹೋಗುವನು)

೩ನೇ ನೋಟವನ್ನು ನೋಡಲು ಮರೆಯಬೇಡಿರಿ !

ರೂ. 25 ಇನಾಮು

10 ಮಂದಿ ದೇಶಭಕ್ತರಾರು?

ನಾವು ಈ ಕೆಳಗೆ ಕೊಟ್ಟಿರುವ ಹಿಂದುದೇಶದ 10 ಮಂದಿ ಸುಪ್ರಸಿದ್ಧ ಜೀವಂತ ದೇಶಭಕ್ತರ ಹೆಸರುಗಳನ್ನು ಅವರ ದೇಶಭಕ್ತಿ, ತ್ಯಾಗ, ಬುದ್ಧಿಶಕ್ತಿ, ಸಚ್ಚಾರಿತ್ರ್ಯ ಪ್ರಗತಿಗಾಮಿತ್ವವೇ ಮೊದಲಾದ ಗುಣ ವಿಶೇಷಗಳ ದೃಷ್ಟಿಯಿಂದ ಅವರಿಗೆ ನಾವು ಕೊಡುವ ಸ್ಥಾನದಂತೆ ಅನುಕ್ರಮವಾಗಿ ಬರೆದು ಮೊಹರ ಹಾಕಿ ಸಂಪಾದಕರ ಬಳಿ ಇಟ್ಟಿರುತ್ತೇವೆ. ನಾವು ಸ್ಥಾನಗಳನ್ನು ಕೊಟ್ಟ ಪ್ರಕಾರವಾಗಿಯೇ 10 ಮಂದಿ ದೇಶಭಕ್ತರ ಹೆಸರುಗಳನ್ನು ಅನುಕ್ರಮವಾಗಿ ತಪ್ಪಿಲ್ಲದೆ ಈ ಕೆಳಗಣ ರಿಕಾಮೆಗಳಲ್ಲಿ ಬರೆದು ಕಳುಹಿಸಬೇಕು.

ಕ್ರಮ ತಪ್ಪಿ ಬರೆದ 10 ದೇಶಭಕ್ತರ ಹೆಸರು

(1) ಸಿ. ರಾಜಗೋಪಾಲಾಚಾರ್ಯರ್, (2) ಸುಭಾಸಚಂದ್ರ ಭೋಸ್, (3) ಮಹಾತ್ಮ ಗಾಂಧಿ, (4) ಪಂಡಿತ ಜವಾಹರಲಾಲ ನೆಹರು, (5) ಸರ್ದಾರ್ ವಲ್ಲಭಾಯಿ ಪಟೇಲ್, (6) ಕೆ. ಎಫ್ ನರಿಮನ್, (7) ಸರೋಜಿನಿ ದೇವಿ, (8) ಶೇಟ್ ಜಮುನಾಲಾಲ ಬಜಜ್, (9) ಖಾನ್ ಅಬ್ದುಲ್ ಗಾಫರ್ ಖಾನ್, 10) ಬಾಬುರಾಜೇಂದ್ರ ಪ್ರಸಾದ್.

೧ ....
೨ ....
೩ ....
೪ ....
೫ ....
೬ ....
೭ ....
೮ ....
೯ ....
೧೦ ....

(ಹೆಸರುಗಳನ್ನು ಚಿತ್ತಿಲ್ಲದಂತೆ ಸ್ಪಷ್ಟವಾಗಿ ಬರೆಯಿರಿ)

ಬಿಡಿಸಿದವರ ಹೆಸರು ....

ವಿಳಾಸ ....

ಉತ್ತರ ಸ್ವೀಕರಿಸುವ ಕೊನೆಯ ತಾರೀಕು 25—6—37

ನಿಯಮಗಳು

೧ ಪ್ರತಿ ಉತ್ತರದೊಡನೆ ಎರಡಾಣೆಯ ಟಪ್ಪಾಲುಚೀಟನ್ನು ಇಡಬೇಕು. ಅದನ್ನು ಯಾವ ಕಾರಣದಿಂದಲೂ ತಿರುಗಿ ಕೊಡಲಾಗುವುದಿಲ್ಲ. ಅಥವಾ ಬೇರೊಂದು ಸ್ಪರ್ಧೆಗೆ ಜಮೆಹಿಡಿಯುವಂತೆಯೂ ಇಲ್ಲ. ೨. ಒಬ್ಬರು ಅನೇಕ ಉತ್ತರಗಳನ್ನು ಕಳುಹಿಸಬಹುದು. ಮೊದಲನೆಯದನ್ನು ಮೇಲಿನ ಕೂಪನಿನಲ್ಲಿಯೂ ಮಿಕ್ಕವುಗಳನ್ನು ಬೇರೆ ಕಾಗದದಲ್ಲಿಯೂ ಬರೆದು ಕಳುಹಿಸಬಹುದು ೩. ಸ್ಪರ್ಧೆಯ ಎಲ್ಲಾ ವಿಷಯಗಳಲ್ಲಿಯೂ ಸ್ಪರ್ಧೆಯ ಸಂಪಾದಕರ ತೀರ್ಮಾನವೇ ಕೊನೆಯದಾಗಿರುತ್ತದೆ. ೪ ಈ ಸ್ಪರ್ಧೆಗೆ ಸಂಬಂಧಪಟ್ಟ ಪತ್ರವ್ಯವಹಾರಗಳನ್ನು ಎಷ್ಟು ಮಾತ್ರವೂ ಮಾಡಲಿಕ್ಕಿಲ್ಲ. ಅದಕ್ಕಾಗಿ ಮಾಮುಕಥೆಯೂ ಅನಗತ್ಯವಿದೆ. ೫. ನಿಯಮಗಳನ್ನು ಪಾಲಿಸದಿರುವ ಉತ್ತರಗಳು ಅಸ್ವೀಕೃತವಾಗುವವು ೬. ನವಯುಗದ ಸಂಪಾದಕರ ಬಳಿ ಮೊಹರುಮಾಡಿಟ್ಟ ಉತ್ತರಕ್ಕೆ ಹೊಂದಿಕೆಯಾಗುವ ಉತ್ತರವೇ ಸಂಪೂರ್ಣ ಸಮರ್ಪಕ ಉತ್ತರ ಒಂದಕ್ಕಿಂತ ಹೆಚ್ಚು ಸಮರ್ಪಕ ಉತ್ತರಗಳು ಬಂದರೆ ಇನಾಮನ್ನು ಅವರೊಳಗೆ ಹಂಚಿ ಕೊಡಲಾಗುವುದು. ಉತ್ತರಗಳು ಸಂಖ್ಯಾಮಾನದಂತೆ ಇನಾಮಿನ ಪ್ರಮಾಣವನ್ನು ಹೆಚ್ಚು ಕಡಿಮೆ ಮಾಡಲಾದೀತು: ಉತ್ತರವನ್ನು ತಾ. 25—6—37ರ ತನಕ ಸ್ವೀಕರಿಸಿ ತಾ. 1—7—37ಕ್ಕೆ ಪ್ರಕಟಿಸಲಾಗುವುದು. ಉತ್ತರವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು

ಮೆನೇಜರ್,

ನವಯುಗ, ಉಡುಪಿ.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ನಿಶ್ಚಿತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. **ಕ್ರಯ: ಡಬ್ಬಿ ೧ಕ್ಕೆ ೨-೦-೦.**

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja,
President & Manager,

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೆನೇಜರ್.

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ: ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ) ... ... ರೂ. ೩—೮—೦
,, ,, (೬ ತಿಂಗಳಿಗೆ) ... ... ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ) ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ— ವ್ಯವಸ್ಥಾಪಕ—'ವಿಶ್ವವಾಣಿ,'
'ಅನ್ನಪೂರ್ಣ', ವಿಶ್ವೇಶ್ವರಪುರಂ, ಬೆಂಗಳೂರು ನಗರ.

ಉಡುಪಿ ಏಜೆಂಟರು—ನವಭಾರತ ಬುಕ್ ಡಿಪೊ, ಉಡುಪಿ.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ **ಸ್ತ್ರೀಧರ್ಮ ಸಂಜೀವಿನೀ ಚೂರ್ಣ** (ರಿಜಿಸ್ಟರ್ಡ) **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಪೊಟ್ಟೆಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ. ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [೨. ಪಿ. ಖರ್ಚು ಆಣೆ ೮.

ಬಹಳಸಾರೆ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟಕ್ಕಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವದು. ತದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು॥ ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

The Combined Booking Agency

AND

The Joint Booking Office

MANGALORE, SOUTH KANARA.

— ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ —

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ—ಚಾರ್ಮಾಡಿ
ಉಜ್ರೆ (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ)
ಮಂಗಳೂರು
ಪುತ್ತೂರು
ಮೂಲ್ಕಿ
ಕಾರ್ಕಳ
ಉಡುಪಿ
ಕುಂದಾಪುರ
ಮೂಡಬಿದ್ರೆ
ಗಂಗೊಳ್ಳಿ

ಜಿಲ್ಲೆಯ ಹೊರಗೆ—

ಮಡಿಕೇರಿ, ಮೈಸೂರು, ಸಕಲೇಶಪುರ, ಚಿಕ್ಕಮಗಳೂರು, ಮೂಡಗೆರೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿ ಗೃಹಗಳು ನಿರ್ಮಿಸಲ್ಪಡುವುವು. ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜ್ಯೊಂಟ್ ಮೆನೇಜರರಿಗೆ ತಿಳಿಸಿರಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಅಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ **ಡಾ। ಸುಮತಿಬಾಯಿ,**

ಬಿ. ಎ. ಎಲ್. ಟಿ., ಎಫ್. ಪಿ. ಎಚ್. ಎಸ್., ಭಿಷಗ್ರತ್ನ, ರಿಜಿಸ್ಟ್ರಾರ್-

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

The Coondapoor Bank, Ltd.,

Head Office:- **Coondapoor.** Branch Office:-**Brahmavar.**

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ.ಶೆ 4,
ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ. 4
6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5%,
1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5½%
2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾತರದ ವ್ಯವಹಾರಗಳು ನಡೆಸಲ್ಪಡುತ್ತವೆ ಬಂಗಾರದ ಒಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತವೆ. ಪಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್.
N. Sheshagiri Rao, ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೊಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೊಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. ಕ್ರಯ ಡಬ್ಬಿ **1 ಕ್ಕೆ 1-8-0.**

ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪೆನಿ,
೩. ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜಿ. ಟಿ. ಮದರಾಸ್.

ಶಾಲಾ ವಿದ್ಯಾರ್ಥಿಗಳಿಗೆ

ಅತ್ಯಪೂರ್ವ ಸುಸಂಧಿ

●

ಎಕ್ಸರ್‌ಸೈಸ್, ಡ್ರಾಯಿಂಗ್
ಮೇಪ್ ಡ್ರಾಯಿಂಗ್
ಕೋಪಿ, ರಫ್ ಪುಸ್ತಕಗಳು
ನಮ್ಮಲ್ಲಿ ಯೋಗ್ಯ ಕ್ರಯಕ್ಕೆ
ದೊರೆಯುತ್ತವೆ.

●

ಈಗಲೇ ಬಂದಿರುವ ಹೊಸ
ಮಾದರಿಯ ಉತ್ತಮ ತರದ
ಫೌಂಟೆನ್ ಪೆನ್‌ಗಳು
ಮಾರಾಟಕ್ಕಿವೆ.

●

ಸಾಮುದ್ರಿಕ ಶಾಸ್ತ್ರ



ಬೆಲೆ ೦—೮—೦

ತುಳುನಾಡ್ ಛಾಪಖಾನೆ, ಉಡುಪಿ

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು---ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak

FOR RATES OF ADVT. Etc.
APPLY TO THE MANAGER

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL XVI-NO. 40

10-೬-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ

ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧೦ ಜೂನ್, ೧೯೩೭ [ಸಂಚಿಕೆ ೪೦

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I.)

BRANCHES:

1	BANGALORE CITY	16	HUBLI
2	BELGAUM	17	GADAG
3	BYADGI	18	KARWAR
4	BELLARY	19	KUMTA
5	ADONI	20	ANKOLA
6	HOSPET	21	HONAVAR
7	TALIPARAMBA	22	BHATKAL
8	UPPINANGADI	23	BRAHMAVAR
9	KASARGODE	24	HUNGARCUTTA
10	PAYYANUR	25	SIRSI
11	KANHANGAD	26	SAGAR
12	KARKALA	27	COONDAPOOR
13	NANDYAL	28	UDIPI
14	PRODATTUR	29	MANGALORE
15	TADPATRI	30	CANNANORE

BEG TO ANNOUNCE

that the Syndicate has been included in the list of Scheduled Banks under the Reserve Bank of India Act.

Non-Scheduled Banks, other companies and company promoters may take advantage of this for depositing their amounts with the Syndicate under the Indian Companies Act 1936.

Paid up Capital	Rs. 3,45,580
Reserves	„ 19,2,390
Deposits exceed	„ 22 lakhs
Total Working Funds exceed	„ 40 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕಮಾಸ್ಟಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**
೩೦ ಮಾತ್ರೆಗಳು ರೂ. ೩-೦-೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ನಿಮ್ಮ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

ನಮ್ಮ ಜರಿ ಪೀತಾಂಬರ, ರೇಶ್ಮೆ ಮದಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು! ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶಿಮಾಲುಗಳ ಕಟಲಾಗು 1, ಕಾಶೀಸಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆಸೀರೆಗಳೂ, ಖಣ, ಮಡಿ ಕದವಾಪ್ಪಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲನ್ ಚಾಕ, ಧಾವಳಿ, ನಾಮರ್ದ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55 ವರೆಗೆ ಸಾದಾ 16 ಮೊಳದ ಶೀರೆ 1 ಕ್ಕೆ ರೂ. 16 ರಿಂದ ರೂ. 36 ರ ವರೆಗೆ, ಅರೆ ಕಡಮೆ 16 ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ. 16, ಖಣ 1 ಕ್ಕೆ ರೂ. 1½ ರಿಂದ ರೂ. 10 ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚಾಕಂಬಾ, ಬನಾರಿಸ್, ಕಾಶಿ



ಧರ್ಮಾರ್ಥ
ಬಹುಮಾನಗಳು
1-4-0 ಗೆ !
— ಯಾರಿಗೆ ? —

ರೂಪಾಯಿ 1—4—0 ಕೊಟ್ಟು 14 ಸೀಸೆ ಒಟ್ಟೋರೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3 ಡಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೆಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್; 1 ಜತೆ ಗುಬ್ಬಿಗಳು; 1 ಪೌಂಟನ್ ಪೆನು 14 ಕ್ಯಾರಟ್ ನಿಬ್ಬು ಸಮೇತ 1 ಇಮಿಟೇಶನ್ ಮೋತಿಮಪ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. **ಇಂದೇ ಆರ್ಡರುಕೊಡಿರಿ.**

Bengal Watch Co.,
Post Box No. 12214, CALCUTTA

ಕಿರಿಯರ ಪ್ರಪಂಚದ

ಪುಸ್ತಕಗಳು.

೧	ನಾಟಕಕಥೆ ...	೦	೨	೦
೨	ಮುಂದಿನ ದೇವರು ...	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ ...	೦	೬	೦
೬	ಕಾವ್ಯಸಾಮ್ರಾಜ್ಯ ..	೦	೧೨	೦
೭	ಮಧುವನ ...	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ, ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು
ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

WANTED

Influential agents to canvass Subscribers and to get advertisements for 'Navayuga' throughout Karnataka on pay or commission basis.

For particulars apply to—

The Manager,
Navayuga, Udipi.

ಅಖಿಲ ಕನ್ನಡ ನಾಡಿಗೆ
ಪ್ರೀತಿಯಾಗಿರುವ

ಮಾಸ] **ಕಥಾಕುಂಜ** [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

— ನಮ್ಮಲ್ಲಿ ಸಿಗುವ ಗ್ರಂಥಗಳು —

	ರೂ.	ಆ.	ಪೈ.
ಉಡುಗೊರೆ	0	12	0
ಕೆಲವು ಸೀಳ್ಗತೆಗಳು	0	12	0
ಜೀವನದ ಸೊಗಸು	0	4	0
ಬಂಗಾರದ ಡಾಬು	0	10	0
ಶೂದ್ರಕ	1	0	0
ಜೋಮನದುಡಿ	1	0	0
ಸಾಧುವರ್ಯ ನಾಗಮಹಾ			
ಶಯರ ಜೀವನದ ಕಥೆ	0	12	0
ಹರಟೆಗಳು	0	10	0
ನನ್ನನಲ್ಲ	0	10	0
ಕಣ್ಮರೆಯಾದ ಕನ್ನಡ	0	14	0
ಕನ್ನಡದ ಕಿಡಿಗಳು	0	8	0
ಕತೆಗೊಂಚಲು	1	0	0
ಜನಜೀವನ	0	8	0
ಕಲ್ಕಿ	0	10	0
ರಾಜವಲ್ಲಭ	0	10	0
ಪೂರ್ವರಂಗ	0	10	0
ಉದ್ಧಾರ	0	10	0
ಅದೇನೇ ಇರಲಿ	0	8	0
ದೇವರ ಬಾಗಿಲು	0	8	0
ಬಿಸಿಲುಗುದುರೆ	0	10	0
ವಿಶಾಲಭಾರತ	0	4	0
ಹೊಸಹುಟ್ಟು	1	0	0
ನವಿಲು	0	12	0
ಸಂಶಯ ಪಿಶಾಚಿ	0	6	0
ವ್ಯಭಿಚಾರಿಣಿ ಯಾರು?	0	8	0
ನಾಡಕಥೆಗಳು	0	2	0
ಸ್ವತಂತ್ರಜೀವನೋಪಾಯ	0	2	6
ಕಾವ್ಯಸಾಮ್ರಾಜ್ಯ	0	12	0
ಕುಶಲವ	0	4	0
ಮುಂದಿನ ದೇವರು	0	2	0
ಗೋಮುಖ ವ್ಯಾಘ್ರ	0	4	0
ಕಾಮದಹನ	0	8	0
ನವಿಲುಗರಿ	0	12	0
ವೀಣಾನಾದ	0	8	0
ಕಲೋಪಾಸಕ	1	0	0
ಮಂಗನ ಮೆರವಣಿಗೆ	0	10	0
ಕವಿ ಕಾವ್ಯ ಮಹೋನ್ನತಿ	0	10	0
ಸರ್ವಜ್ಞನ ಸಂದೇಶ	0	10	0
ಕಾಳರಾತ್ರಿ	0	12	0
ಬಾಳುರಿ	0	12	0
ಹಳ್ಳಿಯ ರಾಣಿ	0	8	0
ವಿಧಿಯ ವೈಚಿತ್ರ್ಯ	0	12	0
ಯಜ್ಞಕುಂಡ	1	4	0
ಹಸಿವು	0	8	0
ಹಾವು	0	8	0
ಚಾಣಕ್ಯತಂತ್ರ	0	12	0
ಅಭಿನವಪಂಪ	1	4	0
ತ್ರಿಪುರದಹನ	0	12	0
ತ್ರಿಶಂಕುಸ್ವರ್ಗ	0	4	0
ದರಿದ್ರನಾರಾಯಣ	0	10	0
ಮಾವಿನತೋಪು	0	10	0
ಹಣತೆ	0	12	0
ಬಾಲವಾಙ್ಮಯ	0	3	0
ಕಾಮನಬಿಲ್ಲು	1	12	0

	ರೂ.	ಆ.	ಪೈ.
ಟಾಲ್‌ಸ್ಟಾಯಿಯವರ			
ಕಥೆಗಳು	1	8	0
ಭಾರತೀಯ ನವಜನ್ಮ	0	12	0
ನಂದನವನ	0	10	0
ಮಿಲನ	0	12	0
ಬಾಳಿನಲ್ಲಿ ಬೆಳಕು	0	10	0
ಹರಿಜನಸ್ವಾರೆ	0	12	0
ಬಡತನದ ಬಾಳು	0	8	0
ಡಾ. ಹರಡೀಕರರು	0	8	0
ಹಳ್ಳಿಯ ಚಿತ್ರಗಳು	1	0	0
ಮೂರ್ತಿ	0	8	0
ಅಶೋಕಮೌರ್ಯ	0	10	0
ಸಾಕ್ರೇಟೀಸನ			
ಕೊನೆಯ ದಿನಗಳು	0	12	0
ಮಧುವನ	1	8	0
ಹರಿಶ್ಚಂದ್ರ ಕಾವ್ಯಸಂಗ್ರಹ	0	12	0
ಮಾರ್ಕಂಡೇಯ	0	12	0
ಚಿತ್ರದುರ್ಗದ			
ಪಾಳೆಯಗಾರರು	0	14	0
ಪಾಳೆಯಗಾರರು	0	12	0
ಕೆಳದಿ ನೃಪವಿಜಯ	1	8	0
ಧರ್ಮಸಂಭವ	1	2	0
ಕಾಂಗ್ರೆಸಿನ ಕತೆ	1	0	0
ಕಾಂಗ್ರೆಸ್ ಇತಿಹಾಸ	2	8	0
ಆರೋಗ್ಯ ಸಾಧನ	0	12	0
ನೀತಿ ಧರ್ಮ	0	6	0
ಭಾರತ ಗೀತಾಂಜಲಿ	0	2	0
ಬಾಲ ರಾಮಾಯಣ	0	5	0
ಸಾಮ್ಯವಾದವೇ ಏಕೆ	0	8	0
ತೆರೆಯ ಮರೆಯಲ್ಲಿ	0	8	0
ಸಣ್ಣ ಕತೆಗಳು	0	12	0
ಸತ್ಯಧಾಲಾಪ	0	10	0
ದೃಷ್ಟಿ ಸಂಗಮ	0	3	0
ಮಯೂರ	0	12	0
ನೆಳಲು ಬೆಳಕು	1	9	0
ತರಂಗ	0	6	0
ವಿವೇಕವಾಣಿ	0	3	0
ಕಲ್ಲು ಸಕ್ಕರೆ	0	3	0
ಕೆನೆ ಹಾಲು	0	3	0
ಬೊಮ್ಮನ ಹಳ್ಳಿ ಕಿಂದರಿ			
ಜೋಗಿ	0	2	0
ಇಕ್ಕೇರಿ ಸಂಸ್ಥಾನದ ಚರಿತ್ರೆ	1	4	0
ಗುಮ್ಮನಾಯಕನ ಪಾಳಯದ			
ಪಾಳಯಗಾರರು	0	14	0
ಬಂಧನದ ಆಚೆ	2	8	0
ಆರೋಗ್ಯ ಪ್ರತಾಪ	0	10	0
ಮುದುಕನ ಹೆಂಡ್ತಿ			
ಫಕಧೈರಾಘೆ	0	1	0
ಅಷ್ಟ ಬೆಳೆದ ಗಿಡ್ಡಿಯ			
ಮದುವೆ	0	1	0
ಸುರಸ ಕವಿತಾಹಾರ	0	8	0
ಗರತಿಯ ಹಾಡು	0	10	0
ಹೊಟಿಸಿಲು	0	10	0
ಮಲ್ಲಿಗೆ ದಂಡೆ	0	12	0
ಮಾಮೂಜಿ ಪಂತ	0	12	0

	ರೂ.	ಆ.	ಪೈ.
ಸೊಬಗಿನ ಬಳ್ಳಿ	0	8	0
ಕರ್ನಾಟಕದ ವೀರ			
ಕ್ಷತ್ರಿಯರು	1	0	0
ಪುಷ್ಪಮಾಲೆ	0	12	0
ಬ್ರಾಹ್ಮಣರ ಹುಡುಗಿ	0	12	0
ಕುರಿ ಹಿಂಡು	1	0	0
ದಿಲ್ಲೀಶ್ವರನ ದಿನಚರಿ	0	12	0
ವಿಮರ್ಶೆ ೧ನೇ ಭಾಗ	0	10	0
,, ೨ನೇ ,,	0	12	0
,, ೩ನೇ ,,	0	12	0
ತಿರುಕರ ಪಿಡುಗು	0	10	0
ಆದದ್ದೇನು	0	6	0
ತರಂಗಿಣಿ	0	6	0
ಜೀವನ ಸಂಗೀತ	0	10	0
ಆಹ್ವಾನ	0	6	0
ನಗೆಯ ಹೊಗೆ	0	4	0
ಆಹುತಿ	1	0	0
ವಿಶ್ವಾಮಿತ್ರನ ಸೃಷ್ಟಿ	1	12	0
ಜೀವನ ಯಾತ್ರೆ	0	12	0
ರಮಾ ಮಾಧವ	0	6	0
ಶ್ರೀಕೃಷ್ಣ ಚರಿತಾಮೃತ	1	0	0
ಹಿಡಿಂಬೆ	0	8	0
ಕೃಷ್ಣಾಕುಮಾರಿ	1	4	0
ಚಿತ್ರಕಲೆಯಲ್ಲಿ ರಾಜಾ ರವಿ			
ವರ್ಮನ ಸ್ಥಾನ	2	0	0
ಪ್ರಳಯ ತಾಂಡವ	0	6	0
ಅಭಿಮನ್ಯು	0	6	0
ಕಾಳರಾತ್ರಿ	0	12	0
ಸೇವಾ ಪ್ರದೀಪ	0	12	0
ಧರ್ಮ ಸೆರೆ	0	14	0
ಶ್ರೀ ರಂಗಭೂಮಿ	0	12	0
ಧೂಮಕೇತು	0	14	0
ಧರ್ಮಜ್ಯೋತಿ	1	4	0
ಕಂಕಣ	0	8	0
ಪದ್ಯಾವಳಿ	0	2	6
ಮುಗುಳು	0	2	6
ಪರೀಕ್ಷಿತಾ	0	10	0
ದೇವರ ಮಗು	0	1	0
ಹೆಂಗಸರ ಕತೆಗಳು	0	1	0
ಹೊಸ ಹೊಸ	0	1	0
ಉತ್ಪಾತ	0	1	0
ಎರಡು ಕಥೆಗಳು	0	1	0
ಭಯ ನಿವಾರಣೆ	0	1	0
ಮಿಸ್ 1954	0	1	0
ಪ್ರಾರ್ಥನೆ	0	1	0
ಹೆಂಡ್ತಿ ಗಂಡನಾದರೆ	0	4	0
ಗೀತಾ ಪ್ರಕಾರ	2	0	0

	ರೂ.	ಆ.	ಪೈ.
ಗೀತೆಯ ತಿರುಳು	0	4	0
ಗೀತೆಯ ಕೈಗನ್ನಡಿ	0	4	0
ಗಾಂಧಿಜೀಯವರ ಆತ್ಮಕತೆ			
ಭಾಗ ೧	1	0	0
,, ,, ೨	0	12	0
,, ,, ೩	0	9	0
,, ,, ೪	1	8	0
,, ,, ೫	1	8	0
ಅಭಿಷೇಕನಾಟಕ	1	0	0
ಕಟ್ಟೆ ಪುರಾಣ	0	3	0
ಜಾಗ್ರತಿ	0	8	0
ನಾರದ ಗರ್ವಭಂಗ	0	3	0
ಪುನರ್ಜನ್ಮ	0	4	0
ಹಣೆಬರಹ	0	3	0
ಕೊಳಲು	0	12	0
ಚಿಲುವು	0	8	0
ಅಳಬೇಕೋ ನಗಬೇಕೋ	0	4	0
ಅನಾಥೋದ್ಧಾರ	0	2	0
ಕಾದಂಬರೀ ಕಥಾಸಾರ	0	8	0
ನಮ್ಮ ಊರಿನ ರಸಿಕರು	1	0	0
ಪುರೂರವ	0	8	0
ಸಂಯೋಗಿತೆ	0	6	0
ಹಳ್ಳಿಯ ಚಿತ್ರಗಳು	1	0	0
ಹಾಸನ ಟೋಪಿ	0	8	0
ಮೊಂದೊಪಲ ಹಂಬಲು	0	6	0
ರಾಜಸಿಂಹ	1	12	0
ಪ್ರತಾಪ ಸಿಂಹ	0	4	0
ಕಂಠಾಭರಣ	0	12	0
ಲೀಲೆ	0	3	0
ಯುಗಳಾಂಗುರೀಯ	0	4	0
ಕಾಮಧೇನು	0	4	0
ಪರಿಮಳಾ	0	12	0
ನರಕದಲ್ಲಿ ನರಸಿಂಹ	0	6	0
ಸೊಹ್ರಾಬ್ ರುಸ್ತುಂ	1	0	0
ಸೌಂದರ್ಯ ಲಹರಿ	0	6	0
ಏಸಿಯಾ ಖಂಡದ ಜಾಗೃತಿ	1	2	0
ಖಾದಿ ಶಾಸ್ತ್ರ	1	2	0
ಶಾರದೆಯ ಸಂಸಾರ	1	2	0
ಗೀತಾರ್ಥ ಚಂದ್ರಿಕೆ	2	8	0
ಕೃಷ್ಣಪಾರಿಜಾತ	1	4	0
ಉರುಟಣೆ	0	1	0
ಕಾಸಿನ ಸರ	0	6	0
ನಿಶಾಚರ	0	8	0
ಯಸ್ಕ್ರೀನಾ	0	2	0
ಮಗೂ ಮದುವೆ	0	1	0
ಗುರು ಚರಿತ್ರೆ	1	12	0
ಭಗವದ್ಗೀತಾ	2	0	0

— ಇವುಗಳಲ್ಲದೆ —

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ
ಮತ್ತಿತರ ಗ್ರಾಹಕರುಗಳಿಗೂ ಬೇಕಾದ ನಮೂನೆವಾರು
ಸಾಮಾನುಗಳು ನ್ಯಾಯವಾದ ಬೆಲೆಗೆ
ಇಲ್ಲಿ ದೊರೆಯುತ್ತವೆ.

ನವಭಾರತ ಬುಕ್ ಡಿಪೋ--ಉಡುಪಿ--ದ. ಕ.

ಸ್ತ್ರೀಪುರುಷ ಸಂಬಂಧದ ವಿಷಯದಲ್ಲಿ ಸ್ವೇಚ್ಛಾಪರ ವರ್ತನೆಯು ಸೋವಿಯೆಟ್ ಸರಕಾರಕ್ಕೆ ಸಹನೀಯವಾಗುವುದಿಲ್ಲ. ಅದರಿಂದ ಸಮಾಜಕ್ಕೆ ಹಾನಿಯುಂಟಾಗಬಹುದಾದುದರಿಂದ ಪ್ರತಿಯೊಬ್ಬನೂ ತನ್ನ ವರ್ತನೆಯಿಂದ ಸಮಾಜಕ್ಕೆ ಹಾನಿಯಾಗದಂತೆ ನೋಡಿಕೊಳ್ಳಬೇಕು. ಸ್ತ್ರೀಪುರುಷರು ಯಾವ ಕಷ್ಟವೂ ಇಲ್ಲದೆ ಒಟ್ಟಾಗಿ ದಾಂಪತ್ಯ ಜೀವನ ನಡಿಸಬಹುದು. ತಮಗೆ ಸರಿಹೋಗದಿದ್ದರೆ ಒಬ್ಬರನ್ನೊಬ್ಬರು ಯಾವ ತೊಂದರೆಯೂ ಇಲ್ಲದೆ ಬಿಟ್ಟುಬಿಡಬಹುದು. ಆದರೆ ಮಕ್ಕಳ ವಿಷಯದಲ್ಲಿ ಅವರು ಹೆಚ್ಚಿನ ಜವಾಬ್ದಾರಿ ಹೊರಬೇಕಾಗಿದೆ. ತಮ್ಮ ಮಕ್ಕಳ ವಿಷಯದಲ್ಲಿ ಅಲಕ್ಷ್ಯ ತೋರಿಸಿದರೆ ಕೂಡಲೆ ಖಟ್ಲೆಗೊಳಗಾಗಿ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ರಶ್ಯವು ಎಲ್ಲಾ ಮಕ್ಕಳನ್ನು ಪೋಷಣೆ ಮತ್ತು ರಕ್ಷಣೆ ಮಾಡುವಷ್ಟು ಈಗ ಮುಂದುವರಿದಿರುವುದಿಲ್ಲ. ಅಷ್ಟು ಸಂಪತ್ತು ಮತ್ತು ಅನುಕೂಲತೆಯು ಅದಕ್ಕೀಗ ಇಲ್ಲ. ಸೋವಿಯೆಟ್ ತತ್ವ ಪ್ರಕಾರ ಮಕ್ಕಳನ್ನು ರಕ್ಷಿಸಿ ವಿದ್ಯೆಕಲಿಸಿ, ಉದ್ಯೋಗ ಕೊಡುವ ಜವಾಬ್ದಾರಿಯು ಸರಕಾರದ್ದಾದರೂ ಆ ಮಹತ್ವಾದ ಜವಾಬ್ದಾರಿಯನ್ನು ರಶ್ಯವು ಈಗ ಒಮ್ಮೆಯೇ ಹೊರಲು ಸಿದ್ಧವಿರುವುದಿಲ್ಲ. ಕ್ರಮೇಣವಾಗಿ ರಶ್ಯದಲ್ಲಿ ಹುಟ್ಟುವ ಮಕ್ಕಳನ್ನೆಲ್ಲಾ ಪೋಷಿಸಲು ಶಿಶುಸಂರಕ್ಷಣಾಲಯಗಳು ಕಟ್ಟಲ್ಪಡುವವು. ಆಗ ಮಕ್ಕಳ ಪೋಷಣೆಯ ಕುರಿತಾದ ಸರ್ವ ಜವಾಬ್ದಾರಿಯನ್ನು ಸರಕಾರವೇ ವಹಿಸಿಕೊಳ್ಳುವುದು. ತನ್ನ ಕಾರ್ಯಕಲಾಪಗಳಿಂದ ಸಮಾಜಕ್ಕೇನೂ ಹಾನಿಯಾಗದಂತೆ ನೋಡಿಕೊಂಡು ವೈಯಕ್ತಿಕ ಸ್ವಾತಂತ್ರ್ಯವನ್ನು ಪಾಲಿಸಿ, ಸೌಂದರ್ಯಭಾವಕ್ಕೆ ಬಾಧಕ ತಾರದೆ, ಮಕ್ಕಳ ಕುರಿತು ಸರಿಯಾದ ಜವಾಬ್ದಾರಿ ಹೊರಲು ಸಿದ್ಧರಿರುವ ದಂಪತಿಗಳು ಇತರ ಲೈಂಗಿಕ ವಿಷಯಗಳಲ್ಲೆಲ್ಲಾ ಸ್ವತಂತ್ರರೇ ಸರಿ.

ರಶ್ಯದಲ್ಲಿ ಹೊಸ ಲೈಂಗಿಕ ನೀತಿಯುಂಟಾಗಿ, ಹಳೆಯ ವಿಧಿ ನಿಷೇಧ, ಧರ್ಮ, ನೀತಿ, ಆಚಾರ ಪದ್ಧತಿಗಳೆಲ್ಲಾ ಮೂಲೆಗುಂಪಾಗಿ, ಸ್ತ್ರೀಪುರುಷರು ಪ್ರತಿಯೊಂದು ವಿಷಯದಲ್ಲಿ ಸರಿಸಮಾನತೆ ಸ್ವತಂತ್ರ ಪಡೆದು, ಸಂತತಿನಿರೋಧ ಮತ್ತು ಗರ್ಭನಾಶವು ಕಾಯಿದೇಶೀರವಾಗಿ ಮಾಡಲ್ಪಟ್ಟು ಒಂದೇ ಸವನೆ ಹೊಸ ರೀತಿನೀತಿಯ ಪ್ರವಾಹವು ಹಿಂದಿನ ಕಟ್ಟುಗಳನ್ನೆಲ್ಲಾ ಒಡೆದು ಹರಿಯುವಾಗ ಆರಂಭದಲ್ಲಿ ಹತೋಟಿ ತಪ್ಪಿ ಕೆಲ ಮಟ್ಟಿಗೆ ಹಾನಿಯುಂಟಾಗುವುದು ಅನಿವಾರ್ಯ. ಅದು ಕೂಡಾ ಲೋಕದ ಭೀಕರ ಯುದ್ಧ, ರಶ್ಯದ ಘೋರ ಅಂತಃಕಲಹ, ಭಯಂಕರ ಕ್ಷಾಮದ ಹಾವಳಿಗೊಳಗಾದ ತರುಣರು ಯಾವುದನ್ನೂ ಲಕ್ಷ್ಯ ಪಡೆ ಮಿತಗೆಟ್ಟು ನಡೆದುದರಲ್ಲಿ ಆಶ್ಚರ್ಯವೇನೂ ಇಲ್ಲ. ಯಾಕೆಂದರೆ ಆಗ ರಶ್ಯದ ಹೊಸಸಮಾಜದ ವ್ಯವಸ್ಥೆಯು ಸ್ಥಿರವಾಗಿ ಸ್ಥಾಪಿತವಾಗಿರಲಿಲ್ಲ. ಹಳೆಯದೆಲ್ಲಾ ಮುರಿದುಹೋಗಿದ್ದುವು. ರಶ್ಯದ ಆಗಣ ತರುಣರಿಗೆ ಬೆದರಿಕೆಬೀರಲು ದೇವರಿರಲಿಲ್ಲ. ಅಂಕೆಯಲ್ಲಿರಿಸಿಕೊಳ್ಳಲು ಹೆತ್ತವರಿದ್ದಿಲ್ಲ ಕ್ರಮದಲ್ಲಿರಿಸಲು ಬೋಧಕರಿದ್ದಿಲ್ಲ. ಜನರೇನೆಂದಾರೆಂಬ ಬೆದರಿಕೆಯೇ ಅವರಿಗಿರಲಿಲ್ಲ. ಯಾವ ವಿಚಾರಮಾಡುವುದಕ್ಕೂ ಅವರಿಗೆ ಆಗ ಅವಕಾಶವಿರಲಿಲ್ಲ.

ರಶ್ಯದ ನೂತನ ನಿರ್ಮಾಣ

ವೇಶ್ಯಾ ವೃತ್ತಿಯ ನಿಷೇಧ

●

[ರಶ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಶ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ 'ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.] —ಸಂ. ನ

●

ಇಂದು ಬದುಕಿದ್ದರೆ ನಾಳೆ ಸಾಯುವವರವರು ಇಂದು ಅವರು ಉಂಡರೆ ನಾಳೆ ಉಪವಾಸ ಬೀಳಬೇಕಾಗಿದ್ದಿತು. ಇಂದು ಮನೆಯೊಳಗಿದ್ದರೆ ನಾಳೆ ಮನೆಮಾರಿಲ್ಲದೆ ಅಂಡಲೆಯಬೇಕಾಗಿದ್ದಿತು. ಅಷ್ಟೊಂದು ಅಸ್ಥಿರವಾಗಿದ್ದಿತು ಪರಿಸ್ಥಿತಿ. ಆಗ ಇಂತಹ ವಿದ್ಯಮಾನಗಳಲ್ಲಿ ಯುವಕರು ಒಂದನ್ನೂ ಗಣಿಸದೆ, ಒಂದಿಷ್ಟು ವಿಚಾರಮಾಡದೆ ಕೆಲ ಸಮಯ ಕೇವಲ ಸುಖೋಪಭೋಗದಲ್ಲಿ ಸಂಪೂರ್ಣ ಮಗ್ನರಾಗಿದ್ದರು. ಇದು ಹೊರತು ಹಿಂದಿನದನ್ನೆಲ್ಲಾ ಮುರಿದು ಮೂಲೆಗೊತ್ತಿ ಹೊಸನಿರ್ಮಾಣ ಮಾಡುವ ಆ ಬಂಡಾಯದ ಮನೋವೃತ್ತಿಯಿಂದ ಅವರಲ್ಲಾ ಹುರಿಗೊಂಡಿದ್ದರು. ಎಲ್ಲೆಲ್ಲಿಯೂ ಸ್ವೈರವರ್ತನೆಯ ತಾಂಡವವು ನಡೆದಿದ್ದಿತು. ಸ್ತ್ರೀಪುರುಷ ಸಂಬಂಧದ ವಿಷಯದಲ್ಲಿಯೂ ಅದೇಮನೋವೃತ್ತಿಯು ಉಂಟಾಗಿದ್ದಿತು. ಕಾಮತೃಪ್ತಿಯೆಂಬುದು ನೀರು ಕುಡಿಯುವಷ್ಟು ನಿರಾತಂಕವಾಗಿರಬೇಕೆಂಬ ಭಾವನೆಯುಂಟಾಗಿದ್ದಿತು. ಅದಕ್ಕೆ ಆತಂಕಿಸುವವರೆಲ್ಲಾ ನಿಷೇಧಿಸಲ್ಪಡುತ್ತಿದ್ದರು. ಇದರಿಂದ ಲೆನಿನರೇ ಉಂದುಬಿದ್ದಿದ್ದರು. ಸ್ತ್ರೀಸಂಪರ್ಕವೆಂಬುದು ನೀರು ಕುಡಿದಷ್ಟು ನಿರಾತಂಕವಾಗಿರಬೇಕೆಂಬ ಅಭಿಪ್ರಾಯವು ನಮ್ಮ ತರುಣರನ್ನು ಮಂಕುಗೊಳಿಸಿರುವುದು. ಇದು ಸಾಮ್ಯವಾದಿ ತತ್ವ ವಿರೋಧವಾದುದು. ಸಮಾಜ ವಿಘಾತಕವನ್ನುಂಟುಮಾಡುವದೆಂದು ಲೆನಿನರು ಎಚ್ಚರಿಸಿದ್ದರು. ರಾಜಕೀಯ ಶಾಂತಿ ಮತ್ತು ಸಾಂಪತ್ತಿಕ ಸುಸ್ಥಿತಿಯೊಂದಿಗೆ ಯುವಕರ ಸ್ವೈರವೃತ್ತಿಯೂ ನಿಂತುಹೋಗಿ ಅವರು ಆತ್ಮಸಂಯಮ ಮತ್ತು ಶಿಸ್ತಿನಿಂದ ನಡೆಯ ಹತ್ತಿರುವರು. ತಮ್ಮ ಸ್ವೇಚ್ಛಾಪರತೆಯ ಹಾನಿಯನ್ನು ಮನಗಾಣುವಷ್ಟರ ವಿವೇಕವು ಅವರಲ್ಲುಂಟಾಗಿರುವುದು.

ಆದರೆ ಹಳೆಯ ಆಚಾರ ವಿಚಾರಗಳೆಲ್ಲವೂ ಅಳಿದು ಹೋಗಿರುವವು. ಲೈಂಗಿಕ ವಿಷಯದಲ್ಲಿ ವೈಯಕ್ತಿಕ ಸ್ವಾತಂತ್ರ್ಯವೇ ಪ್ರಧಾನವಾಗಿರುವುದು.

ರಶ್ಯದ ಕ್ರಾಂತಿಕಾರರಿಗೆ ಸ್ತ್ರೀಯರ ವ್ಯಾಪಾರವು, ವೇಶ್ಯಾವೃತ್ತಿಯು ಅಸಹನೀಯವಿರುವುದು. ಹಿಂದೆ ಝಾರರ ಆಳ್ವಿಕೆಯಲ್ಲಿ ಮದ್ಯದಂಗಡಿ ಮತ್ತು ಮಾರ್ಕೆಟುಗಳಂತೆಯೇ ವೇಶ್ಯಾನಿಲಯವು ರಶ್ಯದ ಪ್ರತಿಯೊಂದು ಹಳ್ಳಿಯ ಆವಶ್ಯಕತೆಯಾಗಿದ್ದಿತು. ಆದರೆ ಅವನ್ನೆಲ್ಲಾ ಸೋವಿಯೆಟ್ ಸರಕಾರವು ಮುಚ್ಚಿಸಿಬಿಟ್ಟಿರುವುದು. ವೇಶ್ಯಾವೃತ್ತಿಯ ವಿರೋಧವಾಗಿ ದೊಡ್ಡ ಧಾಳಿ ನಡಿಸಿರುವುದು. ಇದರ ಪರಿಣಾಮವಾಗಿ ವೇಶ್ಯಾವೃತ್ತಿಯು ಬಹಳ ಕಡಿಮೆಯಾಗಿರುವುದು. ವ್ಯಾಪಾರ ವ್ಯವಹಾರಿಕ ಜೀವನದಲ್ಲಿ ಕಾಮೋತ್ತೇಜಕ ಆಕರ್ಷಣಗಳು ಇರಲೇಬಾರದೆಂದು ಸೋವಿಯೆಟ್ ಸರಕಾರದ ನಿರ್ಧಾರ. ಅಂತೆಯೇ ರಶ್ಯದ ಅಂಗಡಿ ಬೀದಿಗಳಲ್ಲಾಗಲಿ, ವಿನೋದ ವಿಹಾರ ಸ್ಥಳಗಳಲ್ಲಾಗಲಿ ಸ್ತ್ರೀಯರ ಬೆಡಗು ವೈಯ್ಯಾರಸೂಚಕ ಚಿತ್ರಪ್ರದರ್ಶನವೇ ಇರುವುದಿಲ್ಲ. ರಶ್ಯದ ಚಲಚಿತ್ರಗಳಲ್ಲಿ ಕಾಮೋದ್ದೀಪಕ ಪ್ರದರ್ಶನವೇ ಇರುವುದಿಲ್ಲ. ರಶ್ಯದ ಚಲಚಿತ್ರಕಾರನೊಬ್ಬನು ಕಾಮೋತ್ತೇಜಕ ಸನ್ನಿವೇಶಗಳನ್ನೇ ತನ್ನ ಚಿತ್ರದ ಪ್ರಾಮುಖ್ಯ ಸಂಗತಿಯಾಗಿ ಮಾಡಿದರೆ ಅವನು ರಶ್ಯಾನರೆಲ್ಲರ ಅಪಹಾಸ್ಯ ಮತ್ತು ತಿರಸ್ಕಾರಕ್ಕೊಳಗಾಗುವನು. ರಶ್ಯದ ಪತ್ರಿಕೆಗಳು ಲೈಂಗಿಕ ಅನಾಚಾರ ಅತ್ಯಾಚಾರಗಳ ಸಂಗತಿ ಮತ್ತು ಕತೆಗಳನ್ನು ಪ್ರಕಟಗೊಳಿಸುವುದೇ ಇಲ್ಲ. ಅಲ್ಲಿಯ ನಾಟಕ, ಕತೆ, ಕಾದಂಬರಿಗಳು ಲೈಂಗಿಕ ದುರ್ವ್ಯವಹಾರಸಂಬಂಧವಾದ ವಿದ್ಯಮಾನಗಳಿಂದ ವಿಮುಕ್ತವಾಗಿರುವವು.

ರಶ್ಯದ ಪ್ರಧಾನಪಟ್ಟಣವಾದ ಮೋಸ್ಕೋದಲ್ಲಿ ಕೇವಲ ೨ ರಾತ್ರಿ ಕ್ಲಬ್ಬುಗಳು ಮಾತ್ರ ಇರುವವು. ಇವುಗಳಿಗೆ ರಶ್ಯಾನರಾರೂ ಹೆಚ್ಚಾಗಿ ಹೋಗುವುದಿಲ್ಲ. ಅವು ರಶ್ಯಕ್ಕೆ ಬರುವ ವಿದೇಶೀಯರಿಗಾಗಿಯೇ ನಡಿಸಲ್ಪಡುವವೆನ್ನಬಹುದು. ಆದರೆ ಇಲ್ಲಿ ಯಾವತರದ ಬತ್ತಲೆ ಅಥವಾ ಅರೆ ಬತ್ತಲೆ ನರ್ತನ ಪ್ರದರ್ಶನಗಳು ನಡಿಸಲ್ಪಡಕೂಡದು. ಯುರೋಪಿನ ಇತರ ರಾಷ್ಟ್ರಗಳ ಮುಖ್ಯ ಮುಖ್ಯ ಪಟ್ಟಣಗಳಂತೆ ಮೋಸ್ಕೋದಲ್ಲಿ ಭೋಜನ ಉಪಹಾರ ಗೃಹಗಳಲ್ಲಾಗಲಿ, ನಾಟಕ ಶಾಲೆಗಳಲ್ಲಾಗಲಿ ಅರೆಬತ್ತಲೆ ಮತ್ತು ನಾನಾಪರಿಯ ಕಾಮೋತ್ತೇಜಕ ಅಂಗಚೇಷ್ಟೆಗಳಿಂದ ಜನರನ್ನಾಕರ್ಷಿಸುವ ತರುಣಿಯರ ಚಿತ್ರಗಳ ಪ್ರದರ್ಶನಗಳಿರುವುದಿಲ್ಲ. ಸ್ತ್ರೀಯ ದೇಹವನ್ನು ವ್ಯಾಪಾರ ಲಾಭಕ್ಕಾಗಿ ಉಪಯೋಗಿಸುವುದರಿಂದ ಸ್ತ್ರೀವರ್ಗಕ್ಕೆನೇ ಅಪಮಾನ ಮಾಡಿದಂತಾಗುವುದೆಂದು ರಶ್ಯದ ಕ್ರಾಂತಿಕಾರರ ಅಭಿಮತ. ರಶ್ಯಾನರಾರೂ ಕಾಮೋದ್ದೀಪಕ ಚಿತ್ರಗಳನ್ನು ಗುಪ್ತವಾಗಿಯಾಗಲಿ ಜಾಹೀರಾಗಿಯಾಗಲಿ ಆಶಿಸುವುದಿಲ್ಲ. ಅಂತಹ ಅಪ್ರತ್ಯಕ್ಷರೀತಿಯ ಉತ್ತೇಜಕತೆಯು ಅವರಿಗೆ ಬೇಕಾಗಿಯೇ ಇಲ್ಲ.

ರಶ್ಯದ ಸ್ತ್ರೀಯು ಲೈಂಗಿಕ ವಿಷಯವನ್ನು ತಿರಸ್ಕಾರದೃಷ್ಟಿಯಿಂದ ಕಾಣುವುದೇ ಇಲ್ಲ. ಸಂಗೀತ, ನಾಟಕ ಶಾಲೆ ಮತ್ತು ಹವಾಗುಣದ ಕುರಿತು ಮಾತಾಡುವಷ್ಟೇ ನಿಸ್ಸಂಕೋಚವಾಗಿ ಅವಳು ಲೈಂಗಿಕ ವಿಷಯಗಳನ್ನೂ ಚರ್ಚಿಸುವಳು. ಆದರೂ ಅವಳು ತನ್ನ ಪ್ರಣಯಜೀವನದಲ್ಲಿ ವಿಸ್ಮಯಕರಸ್ಥಿರತೆಯುಳ್ಳವಳಿರುವರು. ಕ್ರಾಂತಿಯ ಆರಂಭದಲ್ಲಿ ಸ್ವಲ್ಪ ಅಸ್ಥಿರತೆ ಉಂಟಾದರೂ ಆ ಮೇಲೆ ಅವಳು ತನ್ನ ಮಾನಸಿಕ ಮತ್ತು ಹಾರ್ದಿಕ ಸಮತೋಲನವನ್ನು ಪಡಕೊಂಡಿರುವಳು. ರಶ್ಯದ ಸ್ತ್ರೀಯು ಹಿಂದು ಮುಂದೆ ಸರಿಯಾಗಿ ವಿಚಾರಿಸದೆ ಅಲಕ್ಷ್ಯಭಾವದಿಂದ ಪುರುಷ ಸಂಬಂಧ ಬೆಳೆಸುವುದೇ ಇಲ್ಲ. ರಶ್ಯದಲ್ಲಿ ಲೈಂಗಿಕ ಸಂಬಂಧವಾದ ಹಿಂದಿನ ನಿಷೇಧ ನಿರ್ಬಂಧಗಳೆಲ್ಲಾ ತೆಗೆದು ಹಾಕಲ್ಪಟ್ಟು ವೈಯಕ್ತಿಕ ಸ್ವಾತಂತ್ರ್ಯವಿರುವುದರಿಂದ, ಅಲ್ಲಿ ಯಾವ ಆತಂಕವೂ ಇಲ್ಲದೆ ಅನಾಯಾಸವಾಗಿ ಸ್ತ್ರೀಸಂಪರ್ಕಪಡೆದು ಭೋಗಿಸಬಹುದೆಂಬ ಅಭಿಪ್ರಾಯದಿಂದ ರಶ್ಯವನ್ನು ಸಂದರ್ಶಿಸಿದ ವಿದೇಶೀಯರು ಅದರ ಪ್ರತಿವಿರುದ್ಧ ಪರಿಸ್ಥಿತಿಯನ್ನು ಕಂಡಿರುವರು. ರಶ್ಯಾನ ಸ್ತ್ರೀಯು ಎಷ್ಟೊಂದು ಸ್ವತಂತ್ರಳಿದ್ದರೂ ನಡೆನುಡಿಗಳಲ್ಲಿ ಎಷ್ಟು ನಿಸ್ಸಂಕೋಚವಾಗಿದ್ದರೂ ಸಂಯೋಗಕ್ಕೆ ಸುಲಭವಾಗಿ ಸಿಗುವವಳಲ್ಲ. ಒಬ್ಬನ ಕುರಿತು ಗಾಢ ಪ್ರೇಮೋದ್ರೇಕಿತಳಾದರೆ ಮಾತ್ರ ಆತನಿಗಾಗಿ ಏನುಮಾಡಲೂ ಸಿದ್ಧಳು.

ರಶ್ಯದ ಸ್ತ್ರೀಯು ತನ್ನ ಪ್ರಣಯದ ಕುರಿತು ಎಷ್ಟೊಂದು ಪ್ರಾಮಾಣಿಕಳಿದ್ದರೂ, ರಶ್ಯಾನರ ಲೈಂಗಿಕಭಾವವು ಎಷ್ಟು ಅಜಾಗ್ರತಸ್ಥಿತಿಯಲ್ಲಿದ್ದರೂ, ರಶ್ಯದ ಹೊಸ ಶಿಕ್ಷಣದ ಅಂಗವಾದ ಆತ್ಮಸಂಯಮವು ಎಷ್ಟೊಂದು ಪ್ರಚಾರಕ್ಕೆ ಬಂದರೂ ರಶ್ಯಾನರು ಕಟ್ಟಕಡೆಗೆ ಪಶುಸ್ವಭಾವಕ್ಕೀಡಾಗದಿರುವರೇ? ಲೈಂಗಿಕ ವ್ಯವಹಾರದಲ್ಲಿ ವೈಯಕ್ತಿಕ ಸ್ವತಂತ್ರ ಮತ್ತು ಸ್ವವಿಚಾರವೇ ಪ್ರಾಮುಖ್ಯವಾಗಿರುವಾಗ, ರಶ್ಯದ ಸ್ತ್ರೀಯು ಪುರುಷನಷ್ಟೇ ಸ್ವಾತಂತ್ರ್ಯ

(೬ನೇ ಪೇಜಿಗೆ)

3 *Watches & other fancy goods on Rs. 2-8-0 only*

Purchaser of our 10 Phials OTTO MOHINI at a time for Rs. 2-8-0 will be given free one Dummy Wrist Watch, one Infant Pocket Watch, One Dummy B Time piece One Fountain Pen with a 14 Kt. Rolled Nib, One Torch light having 300 ft. Focus and one Imitation Pearl Necklace. Packing & Postage As. 0—14—0 extra.

EASTERN TRADING COY.,

Post Box No. 12204, CALCUTTA, (N. Y.)

ಸಮಾಚಾರ ಸಂಗ್ರಹ

ಆಲ್ಮೇರಿಯದ ಮೇಲೆ ಯುದ್ಧನಾವೆಗಳ ಧಾಳಿ; ಪುನಃ ಬೊಂಬಾಯಿಯಲ್ಲಿ ಹಿಂದು ಮುಸಲ್ಮಾನರ ಜಗಳ; ಮಲಯದಲ್ಲಿ ಪಂಡಿತ ನೆಹರುಗಳ ಸಂಚಾರ; ಡ್ಯೂಕ್ ಅಫ್ ವಿಂಡ್ಸರರ ಮದುವೆ

ಆಲ್ಮೇರಿಯದ ಮೇಲೆ ಯುದ್ಧನಾವೆಗಳ ಧಾಳಿ

ಸ್ಪೆನಿಶ್ ಸರಕಾರದ ವಿಮಾನಗಳು ಐವೇಜಿ ಎಂಬಲ್ಲಿ ಡ್ಯೂಚ್ಲೆಂಡ್ ಎಂಬ ಜರ್ಮನಿಯ ಯುದ್ಧನಾವೆಯ ಮೇಲೆ ಬೋಂಬೆಸೆದು ಮಾಡಿದ ಪ್ರಾಣಹಾನಿಯ ಪ್ರತೀಕಾರಾರ್ಥವಾಗಿ ಮೇ. ತಾ. 31ರಲ್ಲು 4 ಜರ್ಮನ್ ಯುದ್ಧನಾವೆಗಳು ಆಲ್ಮೇರಿಯ ಎಂಬ ಸ್ಪೈನಿನ ಪ್ರಾಮುಖ್ಯ ಪಟ್ಟಣದ ಮೇಲೆ 30 ಮಿನಿಟುಗಳ ತನಕ 200 ಪಿರಂಗಿ ಗುಂಡುಗಳನ್ನೆಸೆದು ಅನೇಕ ಕಟ್ಟಡಗಳು ನಾಶವಾಗಿರುವವು. 19 ಮಂದಿ ಕೊಲ್ಲಲ್ಪಟ್ಟಿರುವರು. ಇವರಲ್ಲಿ 5 ಮಂದಿ ಸ್ತ್ರೀಯರು ಮತ್ತು ಒಂದು ಮಗು. 55 ಮಂದಿ ಗಾಯಗೊಂಡಿರುವರು. 39 ಮನೆಗಳು ಸಂಪೂರ್ಣ ನಾಶವಾಗಿರುವವು. ಪಟ್ಟಣದ ತೋಪುಗಳು ಗುಂಡುಹಾರಿಸಿ ಒಂದು ಯುದ್ಧನಾವೆಗೆ ಜಖಮ್ ಮಾಡಿರುವವು. ಈ ಕುರಿತು ಸ್ಪೆನಿಶ್ ಸರಕಾರವು ಲೀಗ್ ಆಫ್ ನೇಶನ್ಸ್ ಸಂಘಕ್ಕೆ ಮನವಿ ಮಾಡಿಕೊಂಡಿರುವುದು. ಜರ್ಮನಿಯು ಇನ್ನು ಮುಂದೆ ಇಂತಹ ಅತ್ಯಾಚಾರ ಮಾಡಕೂಡದೆಂದು ಇಂಗ್ಲೆಂಡು ಎಚ್ಚರಿಸಿರುವುದು. ಜರ್ಮನಿ, ಇಟಲಿ ಮತ್ತು ಪೋರ್ಚುಗಲ್ ಸರಕಾರಗಳು ಅಂತರಾಷ್ಟ್ರೀಯ ತಾಟಸ್ಥ್ಯ ಕಮಿಟಿಯ ಕೆಲಸದಲ್ಲಿ ಭಾಗವಹಿಸಲು ನಿರಾಕರಿಸಿರುವವು.

ಪುನಃ ಬೊಂಬಾಯಿಯಲ್ಲಿ ಹಿಂದು ಮುಸಲ್ಮಾನ ಜಗಳ

8 ಮಂದಿಯ ಕೊಲೆ. 125 ಮಂದಿಗೆ ಜಖಮ್ 1070 ಮಂದಿಯ ದಸ್ತಗಿರಿ

ಮೇ ತಾ. 31ರಲ್ಲು ಬೊಂಬಾಯಿಯಲ್ಲಿ ಕಳದ ಅಕ್ಟೋಬರ ಮತ್ತು ನವಂಬರದಲ್ಲಿ ಭೀಕರ ಹಿಂದು ಮುಸಲ್ಮಾನ ಗಲಾಟೆಯ ಸ್ಥಳವಾದ ಕಾಮಟಿಪುರದಲ್ಲಿ ಕೇವಲ ಮುಸಲ್ಮಾನ ಹುಡುಗನೊಬ್ಬನಿಗೆ ಹೊಡೆದ ಅಲ್ಪ ಸಂಗತಿಯ ಕುರಿತು ಎದ್ದ ಜಗಳವು ದೊಡ್ಡ ಹಿಂದು ಮುಸಲ್ಮಾನ ಜಗಳವಾಗಿ ಪರಿಣಮಿಸಿರುವುದು. ಇದರಿಂದಾಗಿ 8 ಮಂದಿ ಕೊಲ್ಲಲ್ಪಟ್ಟು 125 ಮಂದಿ ಜಖಮ್ ಹೊಂದಿರುವರು. ಗಲಾಟೆ ನಿಲ್ಲಿಸಲು ಪೋಲೀಸರು ಒಮ್ಮೆ ಗುಂಡೆಸೆಯಬೇಕಾಯಿತು. ಇಕ್ಕಡೆಯವರೂ ಕಲ್ಲು, ಸೋಡಬಾಟ್ಲಿ, ಇಟ್ಟಿಗೆ ಮೊದಲಾದುವುಗಳನ್ನು ಬಿಸಾಡಿಕೊಂಡು ರಸ್ತೆಗಳೆಲ್ಲಾ ಅವುಗಳಿಂದ ತುಂಬಿದ್ದುವು. ಕೆಲವರು ಕತ್ತಿ ದೊಣ್ಣೆಗಳಿಂದಲೂ ಹೊಡೆದಾಡಿಕೊಂಡಿದ್ದರು. ಪೋಲೀಸರು ನುಲ್ ಬಜಾರಿನಲ್ಲಿ ಗುಂಡೆಸೆದು ಮುಸಲ್ಮಾನನೊಬ್ಬನು ಕೊಲ್ಲಲ್ಪಟ್ಟನು. ಗಲಾಟೆಯಾರಂಭವಾದೊಡನೆಯೇ ಇಡೀ ಪಟ್ಟಣದ ಜನರಲ್ಲೆಲ್ಲಾ ದಿಗಿಲುಂಟಾಗಿ ಹೊರಗೆ ಮಲಗಿದ್ದವರೆಲ್ಲಾ ಎದ್ದು ಒಳಗೆ ಹೋದರು. ತಾ. 1 ಮತ್ತು 2ರಲ್ಲು ಪರಿಸ್ಥಿತಿಯು ಶಾಂತವಾಗಿತ್ತು. ಗಲಾಟೆಗಾರರಿಗೆ ಛಡಿಕೊಡುವ ಶಿಕ್ಷೆಯನ್ನು ಕೂಡ ಕೊಡಬಹುದೆಂದು ಸರಕಾರವು ಮೆಜಿಸ್ಟ್ರೇಟರಿಗೆ ತಿಳಿಸಿರುವುದು. ತಾ. 2ನೇ ರಾತ್ರಿ ಪುನಃ ತೀವ್ರ ಹೋರಾಟ ನಡೆದು ಪೋಲೀಸರು ಗುಂಡುಹಾರಿಸಬೇಕಾಯಿತು. ಪ್ರಾಣಹಾನಿಯೇನೂ ಆಗಿರುವುದಿಲ್ಲ. ತಾ. 3 ಮತ್ತು 4ರಲ್ಲು ಪರಿಸ್ಥಿತಿಯು ಶಾಂತವಾಗಿರುವುದು. ಒಟ್ಟು 1070 ಮಂದಿ ಕೈದು ಮಾಡಲ್ಪಟ್ಟಿರುವರು.

ವಾಯುವ್ಯ ಗಡಿನಾಡಿನಲ್ಲಿ ಶಾಂತಿಯ ಸಂಭವ

ಇಪಿಯ ಫಕೀರರು ವಾಸಮಾಡಿಕೊಂಡಿದ್ದ ಆರ್ಸಲ್ಕೋಟೆಯ ಗವಿಯಲ್ಲಿ ಕೆಲವು ಪ್ರಾಮುಖ್ಯ ದಾಖಲೆಗಳಿರುವ ಚೀಲವೊಂದು ದೊರೆತಿದೆಯೆಂದು ತಿಳಿದುಬರುತ್ತದೆ. ಫಕೀರರ ಕಡೆಯಲ್ಲಿ ನಿಂತು ಪ್ರಬಲ ಹೋರಾಟ ನಡಿಸಿರುವ ಟೋರಿಖೆಲ್ ಪಂಗಡಿಗರಿಗೆ ಈಗ ಯುದ್ಧವು ಸಾಕುಸಾಕಾಗಿದೆ. ಭಯಂಕರ ನಷ್ಟಕ್ಕೊಳಗಾಗಿ, ಆಹಾರದ ತೀವ್ರ ಅಭಾವದಿಂದ ಪೀಡಿತರಾಗಿ ಈ ಪಂಗಡಿಗರು ಈಗ ಸರಕಾರದೊಡನೆ ಸಂಧಿಗೆ ಸಿದ್ಧರಿರುವರೆಂದು ತಿಳಿದುಬರುತ್ತದೆ. ಸರಕಾರದ ವಿಮಾನಗಳು ಆ ಕುರಿತು ಕರಪತ್ರಗಳನ್ನು ವಿಮಾನಗಳಿಂದ ಹಂಚಿರುವವು. ಸಾವದ ಫಕೀರರು ಮಧ್ಯಸ್ತಿಕೆ ಮಾಡಲು ಮುಂದೆ ಬಂದಿರುವರು. ಆದರೆ ನಿಶ್ಶರ್ತವಾಗಿ ಇಪಿಯಫಕೀರರು ಶರಣಾಗತರಾಗದೆ ಸರಕಾರವು ಈಗಣ ಧಾಳಿಯನ್ನು ನಿಲ್ಲಿಸುವ ಹಾಗಿಲ್ಲ. ಸೈನಿಕರು ವೈರಿಪಂಗಡಿಗರ ಪ್ರದೇಶದ ಮೇಲೆ ಧಾಳಿ ನಡಿಸಿ ಮುಂದೊತ್ತುತ್ತಲೇ ಇರುವರು. ಅಲ್ಲಲ್ಲಿ ಚಿಕ್ಕ ಚಿಕ್ಕ ಹೋರಾಟಗಳು ನಡೆಯುತ್ತಲೇ ಇರುವವು. ಸೈನಿಕರು ಮುಂದುವರಿದಂತೆ ರಸ್ತೆಗಳನ್ನು ಕೂಡಾ ಬಹು ಪ್ರಯಾಸದಿಂದ ಮಾಡುತ್ತಿರುವರು.

ಮಲಯದಲ್ಲಿ ಪಂಡಿತ ನೆಹರುಗಳ ಸಂಚಾರ

ಎಲ್ಲೆಲ್ಲಿಯೂ ಅತ್ಯುತ್ಸಾಹಪರ ಸ್ವಾಗತ

ಪಂಡಿತ ನೆಹರುಗಳು ತನ್ನ ಪುತ್ರಿ ಇಂದಿರ ನೆಹರುಗಳೊಂದಿಗೆ ಮಲಯದಲ್ಲಿ ಸಂಚರಿಸುತ್ತಿದ್ದಾಗ ಅಲ್ಲಿಯ ಹಿಂದೀಯರು ಸಾವಿರಗಟ್ಲೆಯಲ್ಲಿ ನೆರೆದು ಅವರಿಗೆ ಅತ್ಯುತ್ಸಾಹಪರ ಸ್ವಾಗತವಿತ್ತು ಗೌರವಿಸಿರುವರು. ಅವರು ಮೇ ತಾ. 23ರಲ್ಲು ಪೆನಂಗಿಗೆ ಹೋದಾಗ ಅವರಿಗೆ ಸ್ವಾಗತವೀಯಲು ಬಂದರಿನಲ್ಲಿ 10,000 ಮಂದಿ ಹಿಂದೀಯರು ನೆರೆದಿದ್ದರು. ಪಂಡಿತರು ಇಪ್ಪೋ ಎಂಬಲ್ಲಿ ನೆರೆದ ಹಿಂದೀಯರಿಗೆ ಭಾಷಣವೀಯುವಾಗ, ಹಿಂದೀಯರ ನಿಜವಾದ ಸ್ವರಾಜ್ಯವೆಂದರೆ ಸಂಪೂರ್ಣ ರಾಜಕೀಯ ಅಧಿಕಾರವು 35 ಮಿಲ್ಯ ಹಿಂದೀಯರ ಹಸ್ತಗತವಾಗುವುದಾಗಿದೆ. ನೌಕರರೆಲ್ಲರೂ, ಗವರ್ನರ್ ವೈಸರಾಯರುಗಳೂ ಹಿಂದೀಯರಾಗಿ ರಾಜ್ಯಭಾರದಲ್ಲಿ ಯಾವ ಮಾರ್ಪಾಟವೂ ಆಗದಿದ್ದಲ್ಲಿ ಫಲವಿಲ್ಲ. ಅದರಿಂದ ಬರೇ ಕೆಲವೇ ಮಂದಿ ಪ್ರಯೋಜನಹೊಂದಿಯಾರು. ಜನಸಾಮಾನ್ಯರು ಪ್ರಯೋಜನ ಪಡೆಯಬೇಕಾದರೆ, ಜನತೆಯ ದಾರಿದ್ರ್ಯ ಸಂಕಷ್ಟಗಳು ಕಡಿಮೆಯಾಗಬೇಕಾದರೆ ಈಗಣ ರಾಜ್ಯಭಾರ ಕ್ರಮವನ್ನು ತೆಗೆದುಹಾಕಿ ಜನತೆಯೇ ಅಧಿಕಾರ ಪಡೆದು ತಮಗೆ ಬೇಕಾದ ರಾಜ್ಯಭಾರ ವ್ಯವಸ್ಥೆಮಾಡಿಕೊಳ್ಳಬೇಕೆಂದರು. ಮೇ ತಾ. 24ರಲ್ಲು ಪಂಡಿತರು ಕೌಲಲಂಪುರವನ್ನು ಸಂದರ್ಶಿಸಿದಾಗ ಪ್ರಚಂಡ ಜನಸ್ತೋಮವು ನೆರೆದಿದ್ದಿತು. ಪಂಡಿತರು ಹಿಂದೀಯರು ತಮ್ಮ ದೇಶದಲ್ಲಿ ಸ್ವತಂತ್ರ ಪಡೆಯದೆ ಪರದೇಶದಲ್ಲಿರುವ ಹಿಂದೀಯರಿಗೆ ಯಾವ ಸಹಾಯವನ್ನೂ ಮಾಡಲು ಸಾಧ್ಯವಿಲ್ಲ. ಆದುದರಿಂದ ಮೊದಲು ಹಿಂದೂ ದೇಶವು ಸ್ವತಂತ್ರವಾಗುವಂತೆ ಎಲ್ಲರೂ ಪ್ರಯತ್ನಿಸಬೇಕೆಂದು ಕೇಳಿಕೊಂಡು ತಾನು ಮಲಯವನ್ನು ಸಂದರ್ಶಿಸಿದುದರಲ್ಲಿ ರಹಸ್ಯವೇನೂ ಇಲ್ಲ. ಕೇವಲ ವಿಶ್ರಾಂತಿಗಾಗಿ ತಾನು ಆ ಸಂಚಾರ ಕೈಕೊಂಡುದೆಂದರು.

ಅಹಮದಾಬಾದಿನಲ್ಲಿ ವಿಶೇಷ ಮಳೆ

ಇದೇ ತಾ. 3ರಲ್ಲಿ ಅಹಮ್ಮದಾಬಾದಿನಲ್ಲಿ ವಿಶೇಷ ಮಳೆ ಮತ್ತು ಪ್ರಬಲ ಗಾಳಿ ಬಂದು ಅನೇಕ ಮರಗಳು ಉರುಳಿ ಬಿದ್ದಿರುವವು. ಹಲವು ಮನೆ ಮಾಡುಗಳು ಹಾರಿ ಹೋಗಿರುವವು. ಮುಖ್ಯರಸ್ತೆಯಲ್ಲಿ ಹೋಗುತ್ತಿದ್ದ ಮೋಟರ್ ಕಾರೊಂದರ ಮೇಲೆ ಮರಬಿದ್ದು ಒಳಗೆಕೂತವರೊಬ್ಬರು ಕೊಲ್ಲಲ್ಪಟ್ಟು ಡ್ರೈವರನಿಗೆ ಪೆಟ್ಟಾಗಿರುವುದು. ಇತರ ಕಡೆಗಳಲ್ಲಿ 5 ಮಂದಿಗೆ ಪೆಟ್ಟಾಗಿ ಆಸ್ಪತ್ರೆಗೆ ತರಲ್ಪಟ್ಟಿರುವರು. ಸಬರ್ಮತಿ ನದಿಯಲ್ಲಿ ನೆರೆಬಂದಿರುವುದು.

ಪಂಡಿತ ನೆಹರುಗಳು

ಇದೇ ಮೇ ತಾ. 26ರಲ್ಲಿ ಸಿಂಗಪುರವನ್ನು ಸಂದರ್ಶಿಸಿದಾಗ ಸುಮಾರು 15 ಸಾವಿರ ಹಿಂದೀಯರು ರೈಲ್ವೆ ಸ್ಟೇಶನಿನಲ್ಲಿ ನೆರೆದು ಅವರಿಗೆ ಸಂಭ್ರಮದ ಸ್ವಾಗತವಿತ್ತರು. ಪಂಡಿತ ನೆಹರುಗಳ ಮೋಟರ್ ಕಾರಿನ ಮುಂದಿನಿಂದ ಹೋಗುತ್ತಿದ್ದ ಕುಮಾರಿ ಇಂದಿರ ನೆಹರುವಿನ ಕಾರು ಒಂದು ಸೇತುವೆಯ ಬದಿಗೆ ತಾಗಿ ಹಾರಿ ಬಿದ್ದು ಇಂದಿರಾನೆಹರುಗಳ ತಲೆ ಮತ್ತು ಗಡ್ಡದೆಕಳೆಗೆ ಸ್ವಲ್ಪ ಪೆಟ್ಟಾಗಿರುವುದು. ಅವರು ಕೂಡಲೆ ಚಿಕಿತ್ಸೆ ಪಡೆದು ಸಂಜೆಯ ಸಾರ್ವಜನಿಕ ಭಾಷಣದಲ್ಲಿ ಭಾಗವಹಿಸಿದರು.

ಡ್ಯೂಕ್ ಆಫ್ ವಿಂಡ್ಸರರ ಮದುವೆ

ಇದೇ ತಾ. 3ರಲ್ಲಿ ಫ್ರಾನ್ಸಿನ ಚ್ಯೂರ್ಸ್ ಎಂಬಲ್ಲಿ ಡ್ಯೂಕ್ ಆಫ್ ವಿಂಡ್ಸರರ ಮತ್ತು ಅವರ ಪ್ರಣಯಿನಿ ಮಿಸೆಸ್ ವಾಲಿಸ್ ವಾರ್‌ಫೀಲ್ಡರೆ ವಿವಾಹವು ಯಾವತರದ ವಿಜೃಂಭಣೆಯೂ ಇಲ್ಲದೆ ಸರಳರೀತಿಯಲ್ಲಿ ನಡೆಯಿತು. ಇವರಲ್ಲಿ ಇಂಗ್ಲೆಂಡಿನ ರಾಜಮನೆತನದವರಾರೂ ಭಾಗಿಯಾಗ ಕೂಡದೆಂದು ಬ್ರಿಟಿಷ್ ಸರಕಾರವು ನಿಷೇಧಿಸಿದುದರಿಂದ ಅವರಾರೂ ಈ ಮದುವೆಯಲ್ಲಿ ಭಾಗವಹಿಸಲಿಲ್ಲ. ಮೋಂಟ್ಸಿನ ಮೇಯರರು ವಿವಾಹವನ್ನು ರಿಜಿಸ್ಟ್ರಿ ಮಾಡಿದರು. ಆ ಮೇಲೆ ವಧುವರರಿಬ್ಬರೂ ಹತ್ತಿರದ ದೇವಾಲಯಕ್ಕೆ ಹೋಗಿ ರೆವೆರೆಂಡ್ ಎಂಡರ್ ಜಾರ್ಡಿನರ ಮುಂದೆ ಮೊಣಕಾಲೂರಿ ನಿಂತು ವಿವಾಹದ ಧಾರ್ಮಿಕವಿಧಿಯು ಕೂಡ ಸರಳರೀತಿಯಲ್ಲಿಯೇ ನಡಿಸಲ್ಪಟ್ಟಿತು. ರೆವೆರೆಂಡ್ ಜಾರ್ಡಿನರು ಈ ವಿವಾಹ ಸಂಸ್ಕಾರ ನಡಿಸಲು ಅಧಿಕೃತರಾಗಿರುವುದಿಲ್ಲೆಂದು ಕೂಡಾ ಇಂಗ್ಲೆಂಡಿನ ಧರ್ಮಾಧಿಕಾರಿಗಳು ಕೆಲವರು ಆಕ್ಷೇಪವೆತ್ತಿದ್ದರು. ಆದರೂ ರೆವರೆಂಡ್ ಜಾರ್ಡಿನರು ಗಣ್ಯಮಾಡದೆ ವಿಂಡ್ಸರ್ ವಾಲಿಸರ ವಿವಾಹ ಸಂಸ್ಕಾರ ನಡಿಸಿದರು. ಈ ಸಂದರ್ಭದಲ್ಲಿ ಫ್ರಾನ್ಸಿನ ಪ್ರಧಾನ ಮಂತ್ರಿಗಳು ಮಿ. ಲಿಯೋನ್ ಬ್ಲಮ್ಮರು ವಧುವರರಿಗೆ ಪುಷ್ಪಕುಂಜಗಳನ್ನು ಪಾರಿತೋಷಕವಾಗಿ ಕಳುಹಿಸಿದ್ದರು. ವಿವಾಹದ ಧಾರ್ಮಿಕ ವಿಧಿಯು ಮುಗಿದ ಮೇಲೆ ದಂಪತಿಗಳು ಕೆಲನಿಮಿಷಗಳ ವರೆಗೆ ಪತ್ರಿಕಾ ಪ್ರತಿನಿಧಿಗಳು ಫೋಟೋತೆಗೆಯಲನುಕೂಲವಾಗಿ ನಿಂತರು. ಇಬ್ಬರೂ ವಿಹಾರಾರ್ಥವಾಗಿ ಆಸ್ಟ್ರಿಯಾದ ಕಾರಿಂಥಿಯ ಎಂಬಲ್ಲಿಗೆ ಹೋಗಿ ಅಲ್ಲಿ 3 ತಿಂಗಳು ಕಳೆಯಲಿರುವರು.

ಬಂಡಾಯಗಾರ ಸೇನಾನಾಯಕರ ಮರಣ

ಬಂಡಾಯಗಾರರ ಉತ್ತರ ರಣರಂಗದ ಸೇನಾನಾಯಕರಾಗಿ ಬಾಸ್ಕ್ ಪ್ರಾಂತ್ಯದ ಮೇಲೆ ಪ್ರಬಲ ಧಾಳಿನಡಿಸಿ ಬಿಲ್ಬಾವೋ ಬಂದರನ್ನು ವಶಮಾಡಿಕೊಳ್ಳಲೆತ್ನಿಸುತ್ತಿದ್ದ ಜನರಲ್ ಮೋಲಾರವರು ಇದೇ ತಾ. 3ರಲ್ಲು ವಿಮಾನದ ಅಪಘಾತಕ್ಕೆ ಸಿಕ್ಕಿ ಕೊಲ್ಲಲ್ಪಟ್ಟಿರುವರೆಂದು ಬಂಡಾಯಗಾರರ ಕಡೆಯಿಂದಲೇ ಸುದ್ದಿ ಬಂದಿದೆ. ಜನರಲ್ ಮೋಲಾರವರು, ಇಬ್ಬರು ವೈಮಾನಿಕರು,

The Canara Industrial Works

WANETD

Three respectable and reliable partners with business ablities to finance and conduct a Cashew Nut Factory to be started near Manipal, which is the best Cashew Nut centre and growing industrial centre.

For further particulars apply to:—

S. R. Patla,
Post **Udipi**, (S. K.)

ತನ್ನ ಅಂಗರಕ್ಷಕರು ಮತ್ತು ಇನ್ನಿಬ್ಬರು ಅಧಿಕಾರಿಗಳೊಂದಿಗೆ ವಿಮಾನ ಮೂಲಕ ಬಿಸ್ಕೇಕೊಲ್ಲಿಯ ತೀರದ ರಣರಂಗವನ್ನು ಪರೀಕ್ಷಿಸುತ್ತಿದ್ದಾಗ ಮಬ್ಬಿನಲ್ಲಿ ವಿಮಾನವು ತ್ರೊಂದರೆಗೊಳಗಾಗಿ ಕೆಳಗೆ ಮುರಿದು ಜನರಲ್ ಮೋಲಾರವರರೂ ಇತರರೂ ಕೊಲ್ಲಲ್ಪಟ್ಟಿರುವರು. ಜನರಲ್ ಮೋಲಾರವರ ಸ್ಥಾನದಲ್ಲಿ ಪಿಡೆಲ್ ಡಿ" ಅವಿಲರವರು ಸೇನಾನಾಯಕರಾಗಿ ನೇಮಿಸಲ್ಪಟ್ಟಿರುವರು. ಬಾಸ್ಕ್ ಸೈನಿಕರು ಡಾಮೋನಾ ಗುಡ್ಡತಟ್ಟಿನಿಂದ ಬಂಡಾಯಗಾರರನ್ನು ಹಿಂದಕ್ಕಟ್ಟಿರುವರೆಂದು ತಿಳಿದುಬರುತ್ತದೆ.

(೪ನೇ ಪೇಜಿನಿಂದ)

ಮತ್ತು ಸಾಂಪತ್ತಿಕ ಸ್ವಾವಲಂಬನೆ ಪಡೆದ ಹೊಸಪರಿಸ್ಥಿತಿಯಲ್ಲಿ, ಗರ್ಭಧಾರಣೆಯನ್ನು ನಿವಾರಿಸುವ ವೈಜ್ಞಾನಿಕ ಸಾಧನಗಳು ಅವಳಿಗೆ ಬೇಕಷ್ಟು ದೊರೆಯುವಾಗ, ಮಕ್ಕಳ ಪೋಷಣೆಗಾಗಿ ಸರಕಾರದ ಶಿಶು ಸಂಗೋಪನಾಲಯಗಳಿರುವಾಗ ಅವಳು ಲೈಂಗಿಕ ವಿಷಯದಲ್ಲಿ ಸ್ವೇಚ್ಛಾಪರ ವರ್ತನೆಯುಳ್ಳವಳಾಗದಿರುವಳೇ? ಎಂದು ಕೆಲವರು ಪ್ರಶ್ನಿಸಬಹುದು. ತಮ್ಮ ಶಿಕ್ಷಣಕ್ರಮ, ಸಾಮಾಜಿಕ ವ್ಯವಸ್ಥೆ, ವ್ಯಕ್ತಿಗಳ ಸಮಾಜದ ಕುರಿತಾದ ಜವಾಬ್ದಾರಿಯಿಂದಾಗಿ ಸ್ತ್ರೀ ಪುರುಷರು ಎಂದೂ ಸ್ವೇಚ್ಛಾಪರ ಸಂಯೋಗಗಳಲ್ಲಿ ನಿರತರಾಗಲಾರರೆಂದು ರಶ್ಯದ ಕ್ರಾಂತಿಕಾರರ ದೃಢನಿಶ್ವಾಸ. ಅಥವಾ ಲೈಂಗಿಕ ವಿಜ್ಞಾನದಲ್ಲಿ ವಿಶೇಷ ಪಾಂಡಿತ್ಯವಡೆದಿರುವ ಮಿ. ಹೆವ್‌ಲೋಕ್ ಎಲ್ಲಿಸರಂದಂತೆ ರಶ್ಯದ ಹೊಸ ಪ್ರಯೋಗದಿಂದಾಗಿ ಸ್ತ್ರೀಯರು ಹೆಚ್ಚು ಸ್ವೇಚ್ಛಾಚಾರಿಗಳಾಗುವ ಬದಲಿಗೆ ಪುರುಷರು ಮಿತವೃತ್ತಿಯುಳ್ಳವರಾಗಬಹುದು. ಸ್ವಾಭಾವಿಕವಾದ ಲೈಂಗಿಕ ಪ್ರವೃತ್ತಿಗೆ ಸಮಾಜದ ರೂಢಿ ನಿಯಮಗಳ ನಿರ್ಬಂಧವಿರುವುದರಿಂದ ಅದು ಅಡ್ಡಹಾದಿಹಿಡಿಯುತ್ತಿರಬಹುದು. ರಶ್ಯದಲ್ಲಿ ಅಂತಹ ತಡೆಯೇನೂ ಇಲ್ಲದೆ ಲೈಂಗಿಕ ಜೀವನವೇ ನ್ಯಾಯವಾದುದಾಗಿರುವಾಗ ಮಾನವನ ಕಾಮಲಾಲಸೆಗೆ ಅಡ್ಡಹಾದಿಹಿಡಿಯುವ ಆವಶ್ಯವೇನೂ ಇರುವುದಿಲ್ಲ.

ಸ್ತ್ರೀಪುರುಷರೊಳಗಣ ಲೈಂಗಿಕ ಸಂಬಂಧದ ಹಲವು ಸಮಸ್ಯೆಗಳನ್ನು ನಿರ್ಧರಿಸುವುದಕ್ಕಾಗಿ ರಷ್ಯನರಂತಹ ಪ್ರಯೋಗವು ಲೋಕಕ್ಕೆ ಆವಶ್ಯವಿದೆಯೆಂದೇ ಮಿ. ಹೆವ್‌ಲೋಕ್ ಎಲ್ಲಿಸರ ಅಭಿಪ್ರಾಯ. ರಶ್ಯದ ಪ್ರಯೋಗದಿಂದಾಗಿ ಪುರುಷನ ಬಹುಸ್ತ್ರೀ ಸಂಪರ್ಕ ಲಾಲಸೆಯು ನಿಂತುಹೋಗಿ, ಸ್ತ್ರೀಯೂ ಅದನ್ನು ವಿರೋಧಿಸುವಂತಾದರೆ ಮಾನವನ ಪ್ರಣಯ ಜೀವನದಲ್ಲಿ ಏಕಪತ್ನಿತ್ವದ ನವೀನವೂ, ಆತ್ಯುಚ್ಚವೂ, ಅಮೋಘವೂ ಆದ ತತ್ವವನ್ನು ಕಂಡುಕೊಂಡಂತಾಗುವುದು. ಲೋಕದಲ್ಲಿ ಇದೊಂದು ಹೊಸ ಶಕ್ತಿಯೇ ಆಗಿ ಎಲ್ಲೆಲ್ಲಿಯೂ ಲೈಂಗಿಕ ನೀತಿಯಲ್ಲಿ ಕ್ರಾಂತಿಯನ್ನುಂಟುಮಾಡದಿರದು. ಇದಕ್ಕೆ ಬದಲಾಗಿ ರಶ್ಯದ ಹೊಸ ಸ್ವಾತಂತ್ರ್ಯ ಮತ್ತು ಸ್ವಾಭಾವಿಕ ರೀತಿ ನೀತಿಗಳಿಂದಾಗಿ ಸ್ತ್ರೀ ಪುರುಷರು ಮೊದಲಿಗಿಂತಲೂ ಹೆಚ್ಚು ಸ್ವೇಚ್ಛಾಪರ ಪ್ರವೃತ್ತಿಯುಳ್ಳವರಾದರೆ ಸೋವಿಯೆಟ್ ಸರಕಾರವೂ ಅದನ್ನು ಸಾಮಾಜಿಕ ನಿಷೇಧಗಳಿಂದ ತಡೆಗಟ್ಟದಿರಲಾರದು.

ರಶ್ಯದ ಕೌಂಟುಬಿಕ ವ್ಯವಸ್ಥೆ ಹೇಗಿದೆ? ಮುಂದಿನ ಸಂಚಿಕೆ ನೋಡಿರಿ.

ದಿ ಕೆನರಾ ಸ್ಟೂಡೆಂಟ್ಸ್ ಯೂನಿಯನ್

ಪ್ರತ್ಯೇಕ ವ್ಯವಹಾರದಲ್ಲಿ ಮೂಲಸ್ಥಾನವೆನಿಸಿದ ಈ ಮುಂಬಯಿ ನಗರವನ್ನು ಸಾಧಾರಣ ನಾಲ್ಕೈದುನೂರು ಮೈಲು ದೂರದಿಂದ ಬಂದು, ಹಾದಿಗಟ್ಟಿ ಕನ್ನಡಿಗರು ನಿವಾಸಿಸಿರುವರಾದರೂ ತಾವು, ತಮ್ಮ ದೇಶ, ತಮ್ಮ ಜನಾಂಗದ ಏಳಿಗೆಯಲ್ಲಿ ಇನ್ನೂ ಬಲ್ಲಿದರಾಗದೆ, ಕೇವಲ ತಮ್ಮಷ್ಟಕ್ಕೇನೇ ತಾವಿರುವರೆಂದಲ್ಲಿ ಅತಿಶಯೋಕ್ತಿಯಾಗಲಾರದಷ್ಟೆ? ತಮ್ಮ ಜಾತಿ, ತಮ್ಮ ಮತ, ತಮ್ಮ ಊರಿನ ಪರಿಸ್ಥಿತಿಯಲ್ಲಿ ಮಾತ್ರ ಹಲಕೆಲವರು, ಪ್ರವರ್ತಿಸಿರುತ್ತಾರೆ. ಆದರೆ ಪ್ರತ್ಯೇಕ ಭರತಖಂಡದ ಧಶದೆಸೆಗಳಲ್ಲಿಯೂ ಜಾತಿ ಮತ ಇವುಗಳಿಂದ ಒಟ್ಟಾಗುವ ಅದೊಂದು ಅವಸಾನದಿಂದ ಹೊರತಾಗಿರಬೇಕೆಂದು ಆಬಾಲವೃದ್ಧರು ಅಹೋರಾತ್ರಿ ಹೋರಾಡುತ್ತಿದ್ದಾರೆ. ನಾವು ಮಾತ್ರ ಈ ವಿಷಯದಲ್ಲಿ ಹಿಂದುಳಿದಲ್ಲಿ ದೇಶನಾಗಲೀ, ಜನಾಂಗವಾಗಲೀ ಏಳಿಗೆಗೆ ಬರಲಿಕ್ಕಿಲ್ಲ, ಇಂದಿನ ಬಾಲಕರೇ ನಾಳಿಯ ಜನಾಂಗ ಎಂಬೀ ವಿಷಯವನ್ನು ಪ್ರತಿಯೊರ್ವ ಕರ್ಣಾಟಕೀಯನೂ ಅರಿತುಕೊಳ್ಳತಕ್ಕದ್ದು. ನಮ್ಮ ಕರ್ಣಾಟಕದ ಅನೇಕ ತರುಣರು ಈ ಮುಂಬಾಯಿಯಲ್ಲಿ ನೆಲೆನಿಂತು ಹೊಟ್ಟೆಯ ಪಾಡಿಗಾಗಿ ವಿವಾರಾತ್ರಿಯೆನ್ನದೆ ಪರಿಶ್ರಮಿಸುತ್ತಾರೆ. ಅವರ ವಿದ್ಯಾರ್ಜನೆಯಾಗಲೀ, ವಸ್ತುಸ್ಥಿತಿಯನ್ನು ತಿಳಿಯುವ ನಿಜವಾದ ಜ್ಞಾನವಾಗಲೀ ಅವರಲ್ಲಿ ಪರಿಪಕ್ವವಾಗದೆ, ಇಂದಿಗೆ ಎಷ್ಟೋ ಮಂದಿ ವಿದ್ಯಾರ್ಥಿಗಳು ಅಲ್ಲಲ್ಲಿ ಅಲೆದಾಡುತ್ತಾ ಇದ್ದಾರೆ. ಇಂತಹ ದುಸ್ಥಿತಿಯನ್ನು ಕಳೆಯುವುದರ ಸಲುವಾಗಿಯೂ ಜನಾಂಗದ ಮತ್ತು ದೇಶಸೇವೆಯನ್ನು ಮಾಡುವುದರ ಸಲುವಾಗಿಯೂ "ದಿ ಕೆನರಾ ಸ್ಟೂಡೆಂಟ್ಸ್ ಯೂನಿಯನ್" ಎಂಬ ಸಂಸ್ಥೆಯೊಂದು ೧೯೩೪ರಲ್ಲಿ ೧೯ ಮಂದಿ ವಿದ್ಯಾರ್ಥಿಗಳಿಂದ ಸ್ಥಾಪಿಸಲ್ಪಟ್ಟಿತು. ಬಂಧು ಪ್ರೇಮದ ಐಕ್ಯತೆಯಿಂದ ಇಂದಿಗೆ ಈ ಸಂಸ್ಥೆಯಲ್ಲಿ ಸಾಧಾರಣ ೧೫೦ಕ್ಕೆ ಮಿಕ್ಕಿದ ವಿದ್ಯಾರ್ಥಿಗಳು ಸದಸ್ಯರಾಗಿರುತ್ತಾರೆ. ಈ ಸಂಸ್ಥೆಯ ನೇತೃತ್ವದಿಂದ ಸದಸ್ಯರ ಆರೋಗ್ಯವನ್ನು ಕಾಪಾಡುವುದರ ಸಲುವಾಗಿಯೂ, ಮಿತವ್ಯಯದಿಂದ ಜೀವನವನ್ನು ನಡಿಸುವುದರ ಸಲುವಾಗಿಯೂ, ಭೋಜನಾಗೃಹವೊಂದನ್ನು ತೆರೆದಿರುತ್ತೇವೆ.

ಈ ಸಂಸ್ಥೆಯ ಸ್ವಯಂಸೇವಕರು ಅಂಬರ್‌ನಾಥ್ ಕೂಲಿಗಾರರ ಮುಷ್ಕರದ ಸಂದರ್ಭದಲ್ಲಿ "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸ್ಶೆಟಿ"ಯ ನೇತೃತ್ವದಿಂದ ಸ್ಥಾಪಿಸಲ್ಪಟ್ಟ ನಿಧಿಯ ಸಲುವಾಗಿ ಅಪಾರ ಶ್ರಮಪಟ್ಟು, ಅಂದಿನ ಅವರ ಕಾರ್ಯದಲ್ಲಿ ಹೆಚ್ಚಿನ ಭಾಗವಹಿಸಿ ಸದ್ರಿ ಸೊಸೈಟಿಯವರ ಪ್ರೀತಿಗೆ ಪಾತ್ರರಾಗಿರುತ್ತಾರೆ, ಇತ್ತೀಚೆಗೆ ಕಾಂಗ್ರೆಸ್ಸಿನಿಂದ ನ್ಯಾಯವಿಧಾಯಕ ಸಭೆಗಳಿಗೆ ಉಮೇದ್ವಾರರಾಗಿ ನಿಂತ ಕ್ರಿಶ್ಚನ್, ಮಹಮ್ಮದೀಯ, ಹಿಂದೀಯ ಮತ್ತು ಫಾರಸೀಯ ಉಮೇದ್ವಾರರ ಚುನಾವಣೆಯ ಸಂದರ್ಭದಲ್ಲಿ ಹೆಚ್ಚಿನ ಭಾಗವಹಿಸಿರುತ್ತದೆ.

ಆರ್ಥಿಕಸ್ಥಿತಿಯು ಪ್ರತಿಯೊಂದು ಸಂಸ್ಥೆಗೂ ಅಗತ್ಯವಿರುವದರಿಂದ ನಾವು ಪ್ರಕಟಿಸಿದ ವಿನಂತಿ ಪತ್ರದ ಮೇರೆಗೆ ನಮ್ಮ ಸಂಸ್ಥೆಯ ಮೆಂಬರರಾದ ಶ್ರೀ. ಎಚ್. ಆರ್. ಅಂಚನ್‌ರ ಮೂಲಕವಾಗಿ ನಮ್ಮ ದೇಶದ ಅಭ್ಯುದಯಾಕಾಂಕ್ಷಿಗಳಾದ ಈ ಕೆಳಗಣ ಮಹನೀಯರಿಂದ ದೊರೆತ ಧನಸಹಾಯ:—

ಮಂಗಳೂರಲ್ಲಿ ಧನಸಹಾಯಮಾಡಿದವರ ಹೆಸರು:—

ವೈದ್ಯವಿಶಾರದ, ಎಚ್. ತಿಮ್ಮಪ್ಪ ಪಂಡಿತ, ೨-೦-೦, ಶ್ರೀಯುತ ಟಿ. ಐತಪ್ಪ ಮೂಡ, ೨-೦-೦, ಶ್ರೀ ಕೆ. ನಾರ್ಣಪ್ಪ ಅಂಚನ್ ೨-೦-೦, ಶ್ರೀ ಎಚ್. ತಿಮ್ಮಪ್ಪ, ೧-೮-೦, ಶ್ರೀ ನರಸಿಂಹ ಶ್ರೀನಿವಾಸ ಪ್ರಭು, ೧-೦-೦, ಶ್ರೀ ಟಿಂಬೇ ಸ್ಟೋರ್ಸ್, ೧-೦-೦, ಶ್ರೀ ಸುಜೀರ್ ಗೋಪಾಲ ನ್ಯಾಕ, ೧-೦-೦, ಶ್ರೀ ಓರ್ವ ಹಿತಚಿಂತಕರು, ೧-೦-೦, ಶ್ರೀ ಎಮ್. ಎಸ್. ರಾವ್. ೧-೦-೦, ಶ್ರೀ ಎಮ್. ನರಸಿಂಹ ಪೈ ೧-೦-೦, ಶ್ರೀ ಕೃಷ್ಣಪ್ಪ ಟೈಲರ್, ೧-೦-೦, ಶ್ರೀ ಎಮ್. ಸದಾನಂದ ಶಾನ್‌ಭೋಗ್ ೦-೮-೦, ಶ್ರೀ ಎಮ್. ಕೇಶವ ೦-೮-೦, ಶ್ರೀ ಪಾಂಡುರಂಗ ಪ್ರಭು, ೦-೮-೦ ಶ್ರೀಯುತ ಓರ್ವ ಹಿತಚಿಂತಕರು, ೦-೪-೦, ಶ್ರೀ ಬಿ. ಕೃಷ್ಣಮಲ್ಯ, ೦-೪-೦, ಶ್ರೀ ಸರಾಫ್ ನರಸಿಂಹಶೆಟ್. ೦-೪-೦, ಶ್ರೀಯುತರುಗಳಾದ ಎಮ್. ಶಾನುಭೋಗ್ ೦-೪-೦, ಪಿ. ಹರಿನ್ಯಾಕ ೦-೪-೦, ಎಮ್. ಭಾಸ್ಕರ್ ೦-೪-೦, ಜೆ. ಸಿ. ಶಂಕರ್ ೦-೪-೦.

ಈ ಮಹನೀಯರು ಶಿಕ್ಷಣ ವ್ಯಾಸಂಗದಲ್ಲಿ ಮರೆಯದೆ, ನಮಗೆ ತಮ್ಮ ಸಹಾನುಭೂತಿಯನ್ನಿತ್ತುದರ ಸಲುವಾಗಿ ನಮ್ಮ ಮನಃಪೂರ್ವಕವಾದ ವಂದನೆಯನ್ನರ್ಪಿಸುತ್ತೇವೆ.

ಮುಂದಕ್ಕೆ ಇದಕ್ಕಿಂತಲೂ ಅಧಿಕವಾದ ಪ್ರೋತ್ಸಾಹವನ್ನು ಕೊಡುವಂತೆ, ಶ್ರೀ ಪರಮಾತ್ಮನು ಅವರಿಗೆ ಸುಖಸಂಪತ್ತನ್ನೊದಗಿಸಲೆಂದೇ ಇಲ್ಲಿ ನಮ್ಮ ಪ್ರತ್ಯೇಕವಿನಂತಿ

ಇತ್ತೀಚೆಗೆ ಮುಂಬಾಯಿಗೆ ಬಿಜ್ಜೈಸಿದ ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ ವಿದ್ಯಾರ್ಜನೆಯನ್ನು ಮಾಡುತ್ತಿರುವ ಶ್ರೀ. ಎ. ರಾಮಸ್ವಾಮಿರಾವ್ ಎಂಬವರು ನಮ್ಮ ಈ ಸಂಸ್ಥೆಯನ್ನು ಸಂದರ್ಶಿಸಿ ನಮ್ಮ ಪಾಲ್ಗೆಯಲ್ಲಿ ಸಂತೋಷಗೊಂಡು ಈ ಸಂಸ್ಥೆಯ ಆಜೀವ ಮೆಂಬರನಾಗುತ್ತೇನೆಂದು ವಾಗ್ದಾನವಿತ್ತುದು ಸ್ತುತ್ಯ.

ಆದುದರಿಂದ ಕನ್ನಡ ಬಂಧುಗಳೆಲ್ಲರೂ ನಿಜಸ್ಥಿತಿಯನ್ನು ಮನಗೊತ್ತದೆ, ಕರ್ತವ್ಯಜ್ಞಾನದಲ್ಲಿ ಹಿಂದುಳಿಯದೆ ತಮ್ಮ ತನುಮನಧನಗಳನ್ನರ್ಪಿಸಿ ನಡಿಸ್ಯಾರೆಂದೇ ನಮ್ಮ ದೃಢನಂಬಿಕೆ.

ಯಂ. ತಿಮ್ಮಪ್ಪ,
ಮಾನಾರ್ಥ ಕಾರ್ಯದರ್ಶಿ;

ಪ್ರಕಟಣೆ

ಭೂಕಂದಾಯದ ಕ್ರಮವನ್ನು ಈಗಿನ ಸ್ಥಿತಿಗಳಿಗೆ ಅನುಕೂಲಿಸುವಂತೆ ತಿದ್ದುಪಡಿ ಮಾಡುವ ವಿಷಯವನ್ನು ವಿಚಾರಿಸಲು ನಿಯಮಿಸಿದ ಕಮಿಟಿಯವರು ಸಭೆ ಸೇರಿ ಅವರ ಮುಂದಿರುವ ಸದ್ರಿ ವಿಷಯದ ಕುರಿತು ಅವರಿಗೆ ತೋರಿಬಂದ ವಿವಿಧ ಸಂಗ್ತಿಗಳನ್ನು ಪರ್ಯಾಲೋಚಿಸಿದರು. ಆದರೆ ಈ ವಿಷಯದಲ್ಲಿ ಯಾವದಾದರೂ ನಿಶ್ಚಿತಾರ್ಥಕ್ಕೆ ಬರುವ ಮೊದಲು ಮದ್ರಾಸು ಭೂಕಂದಾಯದ ಕ್ರಮವನ್ನು ಚೆನ್ನಾಗಿ ತಿಳಿದವರಿಂದ ಅಥವಾ ರೈತರ ಹಿತಗಳಿಗೆ ಪ್ರತಿನಿಧಿಯಾದ ಸಂಘಗಳಿಂದ ಕೊಡೋಣಾಗುವ ಸೂಚನೆಗಳಿಗೆಯಾ ಅನುಭವಗಳಿಗೆ ಕಮಿಟಿಯವರು ಕೃತಜ್ಞರಾಗಿರುತ್ತಾರೆ. ಆ ವಿಷಯದಲ್ಲಿ ಎಲ್ಲಾ ಪತ್ರ ವ್ಯವಹಾರಗಳು ಸದ್ರಿ ಕಮಿಟಿಯ ಸೆಕ್ರೆಟರಿಯವರಿಗೆ (ಮದ್ರಾಸು ಗವರ್ನಮೆಂಟಿನ ರೆವಿನ್ಯು ಸೆಕ್ರೆಟರಿಯವರಿಗೆ) 'ಊಟಕಮುಂಡ್ ಸ್ಟೋನ್ ಹೌಸ್ ಹಿಲ್'ನಲ್ಲ ಇದೇ ಜೂನ್ ತಿಂಗಳ ತಾರೀಕು 15ರ ಒಳಗೆ ತಲ್ಪತಕ್ಕದ್ದು.

ನಿಮ್ಮದೀ ನಿಮ್ಮದೀ ಭರತ ಭೂಮಿಾ!

ನಿಮ್ಮದೀ ನಿಮ್ಮದೀ ಭರತ ಭೂಮಿಾ
ಹಿಂದಿಯರ ನಂಬದೆಲೆ
ಆಂಗ್ಲೇಯರೇ ನೀವೆ
ವಹಿಸಿ ನಾನಾಧಿಕಾರಂಗಳನ್ನೂ ||
ಹಿಂದುಳಿದ ನಮ್ಮವರ
ಮುಂದೆ ತಂದಿರಿ ನೀವು
ನಿಂದು ಸಲಹಿರಿ ನಮ್ಮನೆಂದೆಂದಿಗೂ
ನಿಮ್ಮದೀ ನಿಮ್ಮದೀ ಭರತ ಭೂಮಿಾ ||
ಚರಕಗಳ ತಿರುಗಿ ಕೈ
ಮಗ್ಗದಲಿ ನೇಯ್ದದರ
ದೊರಗು ಬಟ್ಟೆಯ ಧರಿಸಿ ಇರುತಲಿದ್ದ
ಕುರುಬರಿಗೆ ನಿಮ್ಮೂರ
ಅರಿವೆಯನು ತರಿಸುತಲೆ
ಧೊರೆಯಂತೆ ಮೆರೆವುದಕೆ ಅರಿತ ಬಳಿಕಾ
ನಿಮ್ಮದೀ ನಿಮ್ಮದೀ ಭರತ ಭೂಮಿಾ ||
ಕಪ್ಪು ಜನರೈ ನಾವು
ಆಳಲರ್ಹರು ಅಲ್ಲ
ಒಪ್ಪೊತ್ತು ರಾಜ್ಯವನು ತಪ್ಪಿಲ್ಲದೆ
ಕಪ್ಪಗಳ ಕೊಡುತಿಹೆವು
ಅಪ್ಪಣೆಯನನುಸರಿಸಿ
ತಪ್ಪದೇ ನಿಮ್ಮ ಮನಕೊಪ್ಪುವಂತೇ
ನಿಮ್ಮದೀ ನಿಮ್ಮದೀ ಭರತ ಭೂಮಿಾ ||

P. V. U.

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
Head Office: UDIPI.
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ಕಾಂಗ್ರೆಸು ಮಂತ್ರಿಪದವಿ ಸ್ವೀಕರ

ಪ್ರತಿಭಾ ಸಂಪನ್ನ ಜನರಿರುವ ಕಾಂಗ್ರೆಸ್ ಪಕ್ಷೀಯರು ಮಂತ್ರಿಪದವಿ ಸ್ವೀಕರಿ ಬೇಕೆಂದು ಲೋರ್ಡ್ ಜೆಟ್ಲೆಂಡರ ಆಗ್ರಹದ ವಿನಂತಿ.

ವೈಮನಸ್ಯ ತಿಕ್ಕಾಟವನ್ನು ನಿವಾರಿಸಲು ತಾನು ಹಾತೊರೆಯುತ್ತಿರುವೆನು. ಕಾಂಗ್ರೆಸು ಮಂತ್ರಿಪದವಿ ಸ್ವೀಕರಿಸಬೇಕು. ಆದರೆ ಸರಕಾರವು ಅದರ ಕೇಳಿಕೆಯನ್ನು ಮನ್ನಿಸಬೇಕೆಂದು ಗಾಂಧಿಜಿಯವರ ಹೇಳಿಕೆ.

ಇಂದಿನ ವಿದ್ಯಮಾನಗಳನ್ನು ನೋಡಿದರೆ ಕಾಂಗ್ರೆಸ್ ಪಕ್ಷೀಯರು ಬೇಗನೆ ಮಂತ್ರಿಪದವಿ ಸ್ವೀಕರಿಸುವಂತಾಗುವುದೆಂದು ಹೇಳಬಹುದು. ಯಾವ ರೀತಿಯಿಂದಾದರೂ ಕಾಂಗ್ರೆಸಿನವರು ಮಂತ್ರಿಪದವಿ ಸ್ವೀಕರಿಸುವಂತೆ ಮಾಡದೆ ಆಳರಸರಿಗೆ ಬೇರೆ ಉಪಾಯವಿಲ್ಲದಾಗಿದೆ. ತಾವೀಗ ಗಾಂಧಿಜೀಯವರೇ ಮೊದಲಾದ ಮಿತಗಾಮಿಗಳ ಕೇಳಿಕೆಗಳನ್ನು ಮನ್ನಿಸದಿದ್ದಲ್ಲಿ ತೀವ್ರಗಾಮಿಗಳಿಗೆ ಬಲಕೊಟ್ಟಂತಾಗುವುದೆಂಬ ಭೀತಿಯೂ ಅವರಲ್ಲುಂಟಾಗಿದೆ. ಆದುದರಿಂದಲೇ ಒಮ್ಮೆ, ಕಾಂಗ್ರೆಸಿನ ಯಾವ ಕೇಳಿಕೆಗಳನ್ನೂ ಪರಿಗಣಿಸಲು ಸಾಧ್ಯವಿಲ್ಲೆಂದು ದರ್ಪತೋರಿದ್ದ ಇಂಡಿಯಾ ಸೆಕ್ರೆಟರಿಗಳು ಅನಂತರ ಬಹಳ ಉದಾರಭಾವದಿಂದ ಅತಿ ವಿನಯಪರರಾಗಿ ವರ್ತಿಸಿರುವರು. ಅವರು ಮೇ ತಾ. 31ರಲ್ಲು ಲಂಡನಿನ ಪಾರ್ಲಿಮೆಂಟ್ ಸಭಾಸದನದಲ್ಲಿ ಕನ್‌ಸರ್ವೆಟಿವ್ ಪಕ್ಷದ ಹಿಂದೀ ಕಮಿಟಿಯ ಸಭೆಯಲ್ಲಿ ಭಾಷಣಕೊಡುವಾಗ, ಹಿಂದು ದೇಶದ ಬೇರೆ ಬೇರೆ ಪ್ರಾಂತಗಳಲ್ಲಿ ಮಂತ್ರಿಗಳು ನಡಿಸುವ ವಿವೇಕಪರ ಆಡಳಿತಕ್ಕಾಗಿ ಅವರನ್ನು ಅಭಿನಂದಿಸಿ, ಇಂಟೆರಿಮ್ ಮಂತ್ರಿಗಳು ಮಾಡಿರುವ ಕೆಲಸವನ್ನು ಬಹಳವಾಗಿ ಹೊಗಳಿದರು. ಆಮೇಲೆ ಕಾಂಗ್ರೆಸಿನವರು ಮಂತ್ರಿಪದವಿ ನಿರಾಕರಿಸಿದ ಕುರಿತು ಪ್ರಸ್ತಾಪಿಸಿ, ಉಚ್ಚ ಆದರ್ಶಪರರೂ, ಪ್ರತಿಭಾಶಾಲಿಗಳೂ ಆದ ಹಲವರು, ಹೊಸ ರಾಜ್ಯಾಂಗರಚನೆಯ ನಿರ್ಮಾಣಕರ ಉದ್ದೇಶವನ್ನೂ ಇಂಡಿಯಾ ಆಕ್ಟಿನ ಪ್ರಕಾರ ಗವರ್ನರರಿಗೂ ಮಂತ್ರಿಗಳಿಗೂ ಇರುವ ಸಂಬಂಧವನ್ನೂ ಸರಿಯಾಗಿ ತಿಳಕೊಳ್ಳದಂತಾಗಿ ಅವರ ಸೇವೆಯನ್ನು ಹಿಂದುದೇಶವು ಕಳಕೊಂಡಿರುವುದು ವಿಷಾದಕರ ಸಂಗತಿಯು. ಕಾಂಗ್ರೆಸು ಮಂತ್ರಿಪದವಿ ಸ್ವೀಕರಿಸಿದರೆ ಗವರ್ನರರಿಗೂ ಮಂತ್ರಿಗಳಿಗೂ ಉಂಟಾಗಬಹುದಾದ ಬಿಕ್ಕಟ್ಟಿನ ಸಂದರ್ಭಗಳನ್ನು ನಿವಾರಿಸಿಕೊಳ್ಳಲೆತ್ನಿಸಲಾರದು. ಆದರೆ ಮಂತ್ರಿಗಳು ತಾವಾಗಿ ಬಿಕ್ಕಟ್ಟನ್ನು ಬೇಕೆಂದು ತಂದುಕೊಳ್ಳಲಾರರು. ಎಂಬ ಶ್ರೀ. ರಾಜಗೋಪಾಲಾಚಾರ್ಯರ ಮತ್ತು ನನ್ನ ಅಭಿಪ್ರಾಯವು ಏಕ ರೀತಿಯಿರುತ್ತಾ, ಶ್ರೀ ಆಚಾರ್ಯರು ಮಂತ್ರಿಪದವಿ ಸ್ವೀಕರಿಸುವ ಆಮಂತ್ರಣವನ್ನು ನಿರಾಕರಿಸಿದುದು ಅತ್ಯಂತ ನಿರಾಶಾಜನಕ ವಿಷಯವಿರುವುದು. ಆದರೂ ಹಿಂದು ಜನಾಂಗದ ಗುಣವಿಶೇಷಗಳ ಮತ್ತು ವಿಧಾಯಕ ಶಕ್ತಿಯ ಕುರಿತು ತನಗೆ ಗಾಢ ವಿಶ್ವಾಸವಿದೆ. ಅವರು ದೇಶ ಸೇವೆಗಾಗಿ ತಮ್ಮ ಪ್ರತಿಭೆಯನ್ನು ಪಯೋಗಿಸುವಂತಾಗುವುದೆಂದು ತನ್ನಲ್ಲಿ ಇನ್ನೂ ನಂಬಿಕೆ ಇದೆ. ಇಂಗ್ಲೆಂಡು ಸಂಪೂರ್ಣ ಯಥಾರ್ಥ ಬುದ್ಧಿಯಿಂದ ಕಾಂಗ್ರೆಸಿನೊಡನೆ ಸಹಕರಿಸುವ ಸಂದರ್ಭವನ್ನೀಗ ಕೊಟ್ಟಿರುವಾಗ ಅಥವಾ ಇಕ್ಕಡೆಯವರಿಗೂ ಸಾಮಾನ್ಯವಾಗಿರುವ ಹಿಂದುದೇಶದ ಉನ್ನತಿ ಸಾಧನೆಗಾಗಿ ಕಾಂಗ್ರೆಸಿನವರು ಇಂಗ್ಲೆಂಡಿನೊಡನೆ ಸಹಕರಿಸಿ ನಡೆಯುವ ಪರಿಸ್ಥಿತಿಯುಂಟಾಗಿರುವಾಗ, ಅಂತಹ ಸುಯೋಗವನ್ನು ಕಾಂಗ್ರೆಸಿನವರು ದೂಡಿಬಿಡಲಾರರೆಂದು ಆಶಿಸಿದರೆ ಅನ್ಯಾಯವಾಗುವುದೇ? ಯಾಕಂದರೆ ಅದರಲ್ಲೇ ಎರಡೂ ಜನಾಂಗಗಳ ಒಕ್ಕಟ್ಟಿನ ಪ್ರಯತ್ನದ ಸಾರ್ಥಕತೆ ಮಾತ್ರವಲ್ಲದೆ ಅದೇ ಅವರ ಸುಸ್ಪಷ್ಟ ಅದೃಷ್ಟವಾಗಿದೆ ಇಂಗ್ಲೆಂಡಿನ ಮತ್ತು ಹಿಂದುದೇಶದ ಇತಿಹಾಸದ ಅತ್ಯಂತ ಸಂದಿಗ್ಧವಾದ ಪ್ರಕೃತದ ಪರಿಸ್ಥಿತಿಯಲ್ಲಿ ಕಾಂಗ್ರೆಸಿನವರಿಗೆ ಇದೇ ತನ್ನ ವಿನಂತಿಯಾಗಿರಲಿ ಎಂದು ಲೋರ್ಡ್ ಜೆಟ್ಲೆಂಡರು ಅಂತಃಕರಣಪೂರ್ವಕವಾಗಿ ಕೇಳಿಕೊಂಡಿರುವರು.

"ಕಾಂಗ್ರೆಸು ಮಂತ್ರಿಪದವಿ ಸ್ವೀಕರಿಸಬೇಕೆಂದು ನಾನು ಬಹಳವಾಗಿ ಆಶಿಸುತ್ತೇನೆ. ಆದರೆ ಸರಕಾರದವರು ಕಾಂಗ್ರೆಸಿನೊಡನೆ ರಾಜಿಮಾಡುವ ಇಚ್ಛೆತೋರಿಸಬೇಕು" ಎಂದು ಗಾಂಧಿಜೀಯವರು ಇದೇ ತಾ. 2ರಲ್ಲು ಚಿಥಲಿನಲ್ಲಿ ಬೊಂಬಾಯಿಯ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಪ್ರತಿನಿಧಿಯೊಡನೆ ಹೇಳಿರುವರು. ಮಂತ್ರಿಗಳು ತಾವಾಗಿ ರಾಜಿನಾಮೆ ಕೊಡುವುದಿಲ್ಲ. ಗವರ್ನರರು ಅವರನ್ನು ತೆಗೆದುಹಾಕುವಂತಾಗಬೇಕೆಂಬೊಂದು ಸಂಗತಿಯು ಹೊರತು ಇತರ ವಿಷಯಗಳಲ್ಲೆಲ್ಲಾ ಲೋರ್ಡ್ ಜೆಟ್ಲೆಂಡರು ಕಾಂಗ್ರೆಸ್ಸನ್ನು ತೃಪ್ತಿಪಡಿಸಿರುವರೆಂದಾದರೆ, ಸರಕಾರದವರು ಇನ್ನೂ ಸ್ವಲ್ಪ ಮುಂದುವರಿದು ಕಾಂಗ್ರೆಸಿನೊಡನೆ ರಾಜಿಮಾಡಬಾರದೇಕೆ? ಇಷ್ಟರವರೆಗೆ ರಾಜಿಯ ಕುರಿತು ಮುಂದುವರಿದವರು ಕಾಂಗ್ರೆಸಿನವರೇ. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ದಿಲ್ಲಿ ನಿರ್ಣಯಕ್ಕೆ ಸಂಕುಚಿತ ಅರ್ಥಮಾಡಿ ಅಲಹಾಬಾದಿನಲ್ಲಿ ಸಂಧಾನದ ದ್ವಾರವನ್ನು ಮುಚ್ಚಿಬಿಡಲು ಸಾಧ್ಯವಿತ್ತು. ಆದರೆ ಕಾಂಗ್ರೆಸು ಹಾಗೇನೂ ಮಾಡದೆ ದ್ವಾರವನ್ನು ತೆರೆದೇ ಇಟ್ಟಿದೆ. ಕಾಂಗ್ರೆಸಿಗೂ ಸರಕಾರಕ್ಕೂ ರಾಜಿಯಾಗಲು ಈಗ ಇರುವ ಒಂದು ತೊಡಕೆಂದರೆ, ಗವರ್ನರರಿಗೂ ಮಂತ್ರಿಗಳಿಗೂ ಪ್ರಾಮುಖ್ಯ ಭಿನ್ನಾಭಿಪ್ರಾಯವುಂಟಾದರೆ ಗವರ್ನರರು ಅವರನ್ನು ತೆಗೆದುಹಾಕಬೇಕೆಂಬುದು. ಇಂತಹ ಸಂದರ್ಭದಲ್ಲಿ ಗವರ್ನರರು ಮಂತ್ರಿಗಳಿಂದ ರಾಜಿನಾಮೆ ಕೇಳುವರೆಂದು ಗವರ್ನರರು ಮಾತುಕೊಟ್ಟರೆ ತಾನು ಅಷ್ಟರಲ್ಲೇ ತೃಪ್ತನಾಗುವೆನು. ಇದೇನೂ ಅಲ್ಪ ಸಂಗತಿಯಲ್ಲ. ಯಾಕೆಂದರೆ ಇದರಿಂದ ಗವರ್ನರರು ಮಂತ್ರಿಗಳನ್ನು ತೆಗೆದುಹಾಕುವ ಜವಾಬ್ದಾರಿ ಹೊರುವ ಮೊದಲು ಐವತ್ತು ಸಲ ಯೋಚಿಸಿಕೊಳ್ಳಬೇಕಾಗುತ್ತದೆ. ಕಾಂಗ್ರೆ

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC, ETC.

ಕಸ್ತೂರಿ ಮಿಶ್ರಿಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,

ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭರ್ಗೋವಾ ಎಸ್ಕ್ವಾಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, **ಅಜ್ಮೀರ್.**

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಮೇದಿಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟಿ ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು

ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಬುಕ್ ಡಿಪೊ ಅಥವಾ ಕಾರ್ಯದರ್ಶಿ,
ಉಡುಪಿ **ಕಿರಿಯರ ಪ್ರಪಂಚ, ಉಡುಪಿ.**

ತ್ವರೆಮಾಡಿರಿ! ತ್ವರೆಮಾಡಿರಿ!! **ಬೇಗನೇ ಹೊರಬೀಳುವದು!!!**

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ

ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯ

ನವರಿಂದ ರಚಿತವಾದ

'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

The Manager, **The National Kanara News Agency,**
No. 58 Mody Street, Fort Bombay

THE

Vijaya Bank, Ltd.

Head Office: MANGALORE. Branch Offices: **Udipi, Kaup & Coondapoor.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೊ, ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ, ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1 ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಹಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ,

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದಶೀ ಕೋ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಕಾಂಗ್ರೆಸ್ ಮತ್ತು ಮ್ಯುನಿಸಿಪಲ್ ಚುನಾವಣೆ

ಕಳೆದ ಜೂನ್ ತಾ. ೧ರಲ್ಲಿ ಮಂಗಳೂರು ನಗರ ಕಾಂಗ್ರೆಸ್ ಕಮಿಟಿಯ ಸಭೆಯು ಕಾಂಗ್ರೆಸ್ ಭವನದಲ್ಲಿ ಸೇರಿತು. ಕಮಿಟಿಯ ಅನೇಕ ಸದಸ್ಯರು ಬಂದಿದ್ದರು. ಶ್ರೀ ಭೋಜರಾವ್ ಬೇಕಾರ ಇವರು ಅಧ್ಯಕ್ಷತೆ ವಹಿಸಿದ್ದರು. ನಗರ ಸಭೆಯ ಚುನಾವಣೆಯಲ್ಲಿ ನಗರ ಕಾಂಗ್ರೆಸ್ ಕಮಿಟಿಯವರು ಭಾಗವಹಿಸಬೇಕೆಂದು ಕಾಂಗ್ರೆಸ್ ಭಕ್ತರು ತೀರ್ಮಾನಿಸಿದ ವಿಷಯವು ಕೊನೆಯ ನಿರ್ಧಾರದ ಬಗ್ಗೆ ಟೌನ್ ಕಾಂಗ್ರೆಸ್ ಸಮಿತಿಯ ಮುಂದಕ್ಕೆ ಬಂತು. ಸ್ವಲ್ಪ ಚರ್ಚೆಯಾಗಿ ಕೊನೆಗೆ ಸರ್ವಾನುಮತಿಯಿಂದ ಕಾಂಗ್ರೆಸ್ ಸಮಿತಿಯವರು ಮ್ಯುನಿಸಿಪಲ್ ಚುನಾವಣೆಯಲ್ಲಿ ಭಾಗವಹಿಸಬೇಕೆಂದು ನಿರ್ಧಾರವಾಗಿ ಚುನಾವಣೆಯನ್ನು ನಡೆಸುವ ಬಗ್ಗೆ ನಗರ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಯವರೂ, ನಗರ ಕಾ. ಕಮಿಟಿಯಿಂದ ಜಿಲ್ಲಾ ಕಾ. ಕಮಿಟಿಗೆ ಆರಿಸಲ್ಪಟ್ಟ ಸದಸ್ಯರೂ, ಪ್ರೊ. ವಾರ್ತೆಯವರೇ ಮೊದಲಾದ ಮೂರು ಮಂದಿ ಕ್ರಿಸ್ತ ಗೃಹಸ್ಥರೂ; ಇಬ್ಬರು ಮುಸ್ಲಿಮ್ ಗೃಹಸ್ಥರೂ (ನೇಮಿಸಬೇಕಷ್ಟೆ) ಡಾ| ಯು. ಪಿ. ಮಲ್ಯರೂ ಇರುವ ಒಂದು ಚುನಾವಣೆ ಸಮಿತಿಯು ಏರ್ಪಡಿಸಲಾಯಿತು. ಜಿಲ್ಲಾ ಕಾಂಗ್ರೆಸ್ ಕಮಿಟಿಯವರ ಅನುಮತಿಯಿಂದ ಮುಂದಿನ ಕೆಲಸವನ್ನು ನಡೆಸಬೇಕೆಂದೂ ತೀರ್ಮಾನವಾಯಿತು.

ಸಿಟಿ ಬಸ್‌ಸರ್ವೀಸ್

ಮಂಗಳೂರಿಗೆ ಒಂದು ಸಿಟಿ ಬಸ್‌ಸರ್ವೀಸ್ ದೊರೆತಿದೆ. ಕಳೆದ ತಾ, ೪ರಿಂದ ಪ್ರಯಾಣಿಕರನ್ನೊಯ್ಯಲು ಆರಂಭವಾಗಿದೆ. ಜನರಿಗೆ ಸಂಚಾರಕ್ಕೆ ತಕ್ಕಷ್ಟು ಸೌಕರ್ಯವು ದೊರೆಯುತ್ತದೆ. ಆದರೆ ಹೆಚ್ಚು ಬಸ್ಸುಗಳ ಅಗತ್ಯವಿದೆ.

ಕೋರ್ಟು ಕಚೇರಿಗಳು ತೆರೆಯಲ್ಪಟ್ಟುವು

ಮಂಗಳೂರಿನ ಜಿಲ್ಲಾ, ಸಬ್ ಮತ್ತು ಮುನ್ಸಿಫ್ ಕೋರ್ಟುಗಳು ಕಳೆದ ತಾ, ೫ರಲ್ಲಿ (ರಜೆಯ ಸಂಬಂಧ ಮುಚ್ಚಲ್ಪಟ್ಟವುಗಳು) ತೆರೆಯಲ್ಪಟ್ಟವು.

ದಕ್ಷಿಣ ಕನ್ನಡಕ್ಕೆ ಲ್ಯಾಂಡ್ ಮಾರ್ಗೇಜ್ ಬೇಂಕು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಲ್ಯಾಂಡ್ ಮಾರ್ಗೇಜ್ ಬೇಂಕನ್ನು ತೆರೆಯಬೇಕೆಂದು ಪ್ರಯತ್ನಗಳು ನಡೆಯುತ್ತಲಿರುವುವು. ಈ ಬೇಂಕಿನ ಸಂಬಂಧವಾದ ವಿಚಾರಣೆ ನಡೆಸುವರೆ ಕಳೆದ ತಾ. ೩ರಲ್ಲಿ ಶ್ರೀ ರಾಮಲಿಂಗಮ್ ಚೆಟ್ಟಿಯಾರ್ ಯಂ. ಎಲ್. ಸಿ. ಇವರು ಮಂಗಳೂರಿಗೆ ಬಂದರು. ಶ್ರೀಮತಿ ಕಮಲಾ ದೇವಿ, ಕೊಆಪರೇಟಿವ್ ಸೊಸೈಟಿಗಳ ಡೆಪ್ಯುಟಿ ರಿಜಸ್ಟ್ರಾರ್ ಶ್ರೀ| ಸಿ. ಕಣ್ಣನ್ ನಾಯರರೇ ಮೊದಲಾದವರು ಶ್ರೀ| ಚೆಟ್ಟಿಯಾರರನ್ನು ರೈಲ್ವೆಸಿಲ್ದಾಣದಲ್ಲಿ ಇದಿರುಗೊಂಡು ಸ್ವಾಗತೀಕರಿಸಿದರು. ತಾ. ೪ರಲ್ಲಿ ಕೋ ಆಪರೇಟಿವ್ ಬಿಲ್ಡಿಂಗಿನಲ್ಲಿ ಶ್ರೀ| ಚೆಟ್ಟಿಯಾರರು ಶ್ರೀ|ಗಳಾದ ಎ. ಶ್ರೀನಿವಾಸ ಪೈ, ನಿವೃತ್ತ ಜಿಲ್ಲಾ ಕಲೆಕ್ಟರ್, ದಿವಾನ್ ಬಹದ್ದೂರು ಯು. ರಾಮರಾವ್ (ವಿಚಾರಣ ಸಮಿತಿಯ ಸದಸ್ಯರುಗಳು) ಇವರುಗಳೊಡನೆ ಪ್ರಥಮ ಸಂಭಾಷಣೆಗಳನ್ನು ಬೇಂಕಿನ ವಿಷಯದಲ್ಲಿ ನಡೆಸಿದರು. ಅಪರಾಹ್ನ ೧೨-೪೫ಕ್ಕೆ ಮಂಗಳೂರಿಂದ ಮಲಬಾರ್ ಕಡೆಗೆ ಹೊರಟರು. ಶ್ರೀ| ಚೆಟ್ಟಿಯಾರರು ತಾ. ೧೧ರಲ್ಲಿ ಪುನಃ ಮಂಗಳೂರಿಗೆ ಬಂದು ಜಿಲ್ಲೆಯ ಕೆಲವು ಮುಖ್ಯ ಕೇಂದ್ರಗಳನ್ನು ಸಂದರ್ಶಿಸಿ ಅನಂತರ ಲ್ಯಾಂಡ್ ಮಾರ್ಗೇಜ್ ಬೇಂಕಿನ ವಿಷಯವಾಗಿ ವಿಚಾರಣೆ ನಡೆಸುವರೆಂದು ತಿಳಿದುಬಂದಿದೆ. (ಶ್ರೀ| ಚೆಟ್ಟಿಯಾರರು ಈ ವಿಚಾರಣಾಸಮಿತಿಯ ಚೇರ್‌ಮನರು.)

ಪ್ರಯಾಣ

ಶ್ರೀಮತಿ ಕಮಲಾದೇವಿಯವರು ಕಳೆದ ತಾ. ೪ರಲ್ಲಿ ದಾರವಾಡಕ್ಕೆ ಹೊರಟುಹೋದರು. ಅಲ್ಲಿ ಕಾಂಗ್ರೆಸ್ ಸಮಿತಿಯ ಸಭೆಯು ನಡೆಯುವುದು. ಅದರಲ್ಲಿ ಭಾಗವಹಿಸಲು ಶ್ರೀಮತಿಯವರು ಹೋಗಿರುವರೆಂದು ತಿಳಿದುಬರುತ್ತದೆ.

ಜಿಲ್ಲಾ ಭೂಮಾಲಿಕರ ಸಂಘದ ವಾರ್ಷಿಕಸಭೆ

ದಕ್ಷಿಣ ಕನ್ನಡ ಜಿಲ್ಲಾ ಭೂಮಾಲಿಕರ ಸಂಘದ ವಾರ್ಷಿಕ ಮಹಾಸಭೆಯು ನಿನ್ನೆಯ ದಿನ (ತಾರೀಕು ೬. ೬. ೩೬) ಪೂರ್ವಾಹ್ನ ೧೦ ಘಂಟೆಗೆ ಸರಿಯಾಗಿ ಶ್ರೀ| ಕೆ. ಆರ್. ಕಾರಂತ್ ಯಂ ಎಲ್. ಎ ರವರ ಆಫೀಸಿನಲ್ಲಿ ನಡೆಯಿತು. ಶ್ರೀ|ಗಳಾದ ಯಂ. ಶಿವರಾಯರು, ಬಿ. ವಾಸುದೇವರಾಯರು, ಎಚ್. ಸೂರ್ಯನಾರಾಯಣರು, ಕೆ. ಆರ್. ಕಾರಂತರು. ಯಂ. ಎಲ್. ಎ. ಜರೋಮ್ ಸಾಲ್ಡಾನರು ಯಂ. ಎಲ್. ಸಿ., ಎ ಬಿ. ಶೆಟ್ಟಿಯವರು ಯಂ. ಎಲ್. ಎ, ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಯಂ. ಎಲ್. ಸಿ, ಜನರಾಜ ಹೆಗ್ಗಡೆಯವರು, ಯಂ ಶಂಕರನಾರಾಯಣರಾಯರೇ ಮೊದಲಾದ ಹಲವು ಮಂದಿ ದೊಡ್ಡ ಮನುಷ್ಯರು ಬಂದಿದ್ದರು. ಶ್ರೀ. ಎ ಬಿ. ಶೆಟ್ಟಿಯವರು ಅಗ್ರಾಸನ ವಹಿಸಿದ್ದರು.

ಸಂಘದ ಗತವರ್ಷದ ವರದಿಯೂ, ಆದಾಯ ವೆಚ್ಚದ ಪಟ್ಟಿಯೂ ಸಭೆಯ ಮುಂದಿರಿಸಲ್ಪಟ್ಟು ಅವು ಸ್ವೀಕೃತವಾದುವು. ಅಡಿಕೆ ಕೊಳೆರೋಗ ನಿವಾರಣೆಯ ಸಂಬಂಧವೂ, ಕಾಡುಗಳ ಸಂಕಷ್ಟ ಪರಿಹಾರಕ್ಕಾಗಿಯೂ ಸಭೆಯವರು ಪಟ್ಟ ಸಾಹಸದ ವಿಷಯವಾಗಿಯೆ ಆ ವರದಿಯಲ್ಲಿ ಉಕ್ತವಾಗಿದ್ದಿತು. ಮಾಸ್ಟ್ರ ರೆನಿಸ್ಸ ಮೆಂಬರರೂ, ಲಾ ಮೆಂಬರರೂ ಈ ಜಿಲ್ಲೆಗೆ ಕಳೆದ ವರ್ಷ ಬಂದಿದ್ದಾಗ ಅವರಿಗೆ ಆನುಭವ ಕೊಡುವುದಕ್ಕೆ ಸಂಘದವರು ಮಾಡಿದ ಪ್ರಯತ್ನವು ಎತ್ತಿ ಹೇಳತಕ್ಕದ್ದಾಗಿದೆ

ಹೊಸ ವರ್ಷದ ಅಧಿಕಾರಿಗಳ ಚುನಾವಣೆ ನಡೆದು ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಅಧ್ಯಕ್ಷರಾಗಿಯೂ, ಶ್ರೀ| ಜನರಾಜ ಹೆಗ್ಗಡೆ, ಶ್ರೀ| ಯಂ ಶಂಕರನಾರಾಯಣ ರಾಯರು ಜತೆಕಾರ್ಯದರ್ಶಿಗಳಾಗಿಯೂ, ಶ್ರೀ| ಜನರಾಜ ಹೆಗ್ಗಡೆಯವರು ಕಾರ್ಯದರ್ಶಿ ಕೆಲಸದ ಜತೆಯಲ್ಲಿ ಕೋಶಾಧಿಕಾರಿಗಳಾಗಿಯೂ, ಆರಿಸಲ್ಪಟ್ಟರು. ಕಾರ್ಯಕಾರಿ ಮಂಡಳಿಯ ಇತರ ಸದಸ್ಯರ ಚುನಾವಣೆಯೂ ನಡೆಯಿತು.

ಸಭೆಯಲ್ಲಿ ಮಂಜೂರಾದ ಠರಾವುಗಳಲ್ಲಿ, ಸಂಘವನ್ನು ರಿಜಸ್ಟರ್ ಮಾಡಬೇಕೆಂಬುದು ಒಂದು. ಜಿಲ್ಲೆಯಲ್ಲಿ ತೀರ್ವೆಯನ್ನು (ಭೂಕಂದಾಯವನ್ನು) ಕಡಿಮೆಮಾಡಬೇಕೆಂಬ ಸೂಚನೆಯನ್ನು ತಯಾರಿಸಿ ಇದೇ ಜೂನ್ ತಾ. ೧೫ರೊಳಗೆ ಸರಕಾರಕ್ಕೆ ತಿಳಿಸಬೇಕೆಂಬುದೂ ಮುಖ್ಯವಾದುವುಗಳು.

ಧನ್ಯವಾದಾರ್ಪಣೆಗಳಾದ ಮೇಲೆ ಸಭಾಂತ್ಯವಾಯಿತು.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಉತ್ಕೃತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇಸ್ಲೊ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦

'ಕಾಮಶಾಸ್ತ್ರ' ದರ್ಪಣ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ

ಆತಂಕ ನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಶಾಖೆ, ಬೆಂಗಳೂರು ಸಿಟಿ

WANTED

A Typist-Clerk: Decent salary. Apply sharp stating your qualifications.

New Era Technical School,
UDIPI.

ಸುಸಮಯ! ಹಣ ಸಂಪಾದಿಸಿರಿ!

ಪ್ರೀಮಿಯಂಗಳನ್ನು ಕಂಪೆನಿಯೇ ಬಟವಾಡೆಮಾಡುವುದು.

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಪ್ರೀಮಿಯಂಗೆ 1—9—0 ಹೆಚ್ಚುಮಾಡಿದೆ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್

ಮದರಿಂಡಿಯಾ ಬೆನೆಫಿಟ್ ಕಂಪೆನಿ,
ಹಂಪನ ಕಟ್ಟೆ, ಮಂಗಳೂರು.

JUST RECEIVED

Look sharp! Hurry up!!

Provincial Autonomy

(BY K. T. SHAH)

Price Re. 1—8—0

(*Postage extra*)

Book your order for a copy today only.

NAVAYUGA OFFICE
UDIPI

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Rsk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle Bangalore City.	Soumyalayam Puthiyara, Calicut.
Car Street, Mangalore.	Udipi, S. India	Charni Road, Bombay No. 4.

INSPECTORATE OFFICE AT:

1. Ottapalam, Malabar District. 2. Central Station Road, Trivandrum.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over	... ...	Rs. 80,00,000
Life Funds Over	... ...	Rs. 68,00,000
Premium Income Over	...	Rs. 22,54,000
Interest Income	... ...	Rs. 3,16,000
Claims Paid ...	... ...	Rs. 5,75,000

Total Claims paid Over Rs. 38,50,000
Total Business in Force Over Rs. 4,4251,200.

TOTAL BUSINESS IN FORCE **Rs. 4,42,51,200**

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್

(ಬ್ರಿಟಿಶ್ ಹಿಂದೂಸ್ಥಾನದಲ್ಲಿ ವ್ಯವಹಾರ ನಡ್ಸದು ಹೊಂದಿದುದು)

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು 'ಸೇಲಂ'ನಲ್ಲಿ ತಾ. 4ನೇ ಶುಕ್ರವಾರ ತೆರೆಯಲ್ಪಟ್ಟಿರುವುದು.

ಬ್ಯಾಂಕಿನ ಆಫೀಸು } ತಾ. 7—5—1937 }

V. R. Kamath, B. A., LL.B.
ಮೆನೇಜರ್.

ಉಡುಪಿ, ಗುರುವಾರ, ತಾ. ೧೦–೬–'೩೭

ಪ್ರಾಥಮಿಕ ಶಾಲಾಧ್ಯಾಪಕರ ಭವಿಷ್ಯ

ನಾಗರಿಕನೊಬ್ಬನು ಯಾವುದಾದರೊಂದು ವಿಷಯದಲ್ಲಿ ಮುಖ್ಯವಾಗಿ ರಾಜಕೀಯ ವಿಷಯದಲ್ಲಿ ತಿಳುವಳಿಕೆಯುಳ್ಳವನಾಗಬೇಕಾದರೆ ಅವನಿಗೆ ಪ್ರಾಥಮಿಕ ವಿದ್ಯಾಭ್ಯಾಸವಾದರೂ ಅತ್ಯಾವಶ್ಯಕ. ಒಬ್ಬನು ಅಷ್ಟಾದರೂ ವಿದ್ಯೆ ಪಡೆಯದ ಪಕ್ಷದಲ್ಲಿ ನಾಗರಿಕತೆಯ ಜವಾಬ್ದಾರಿಗಳನ್ನು ನಿರ್ವಹಿಸಲು ಸಾಧ್ಯವಿಲ್ಲ. ನಾಗರಿಕ ಜೀವನಕ್ಕೆ ಅಷ್ಟೊಂದು ಆವಶ್ಯವಿರುವ ಪ್ರಾಥಮಿಕ ವಿದ್ಯಾಪ್ರಚಾರದ ಮಹತ್ತಾದ ಜವಾಬ್ದಾರಿಯು ಪ್ರಾಥಮಿಕ ಅಧ್ಯಾಪಕರ ಮೇಲಿರುವುದು. ಸರಕಾರವು ಪ್ರಾಥಮಿಕವಿದ್ಯಾಭ್ಯಾಸಕ್ಕಾಗಿ ಎಂತಹ ಹೊಸಹೊಸ ಯೋಜನೆಗಳನ್ನು ಬೇಕಾದರೂ ಪ್ರಯೋಗಕ್ಕೆ ತರಲಿ, ಅವುಗಳಿಗಾಗಿ ಎಷ್ಟೊಂದು ಹಣ ಬೇಕಾದರೂ ವಹಿಸಲಿ, ಅವನ್ನೆಲ್ಲಾ ಸಾರ್ಥಕ ಅಥವಾ ನಿರರ್ಥಕಗೊಳಿಸುವವರು ಪ್ರಾಥಮಿಕ ಅಧ್ಯಾಪಕರು. ಅವರಲ್ಲಿ ತೃಪ್ತಿ, ಉತ್ಸಾಹ, ಆಸಕ್ತಿಯಿದ್ದರೇನೇ ಪ್ರಾಥಮಿಕ ವಿದ್ಯಾಪ್ರಚಾರದ ಉದ್ದೇಶವು ಸಾರ್ಥಕವಾಗುವುದು. ಪ್ರಕೃತದ ಪರಿಸ್ಥಿತಿಯಲ್ಲಿ ಪ್ರಾಥಮಿಕ ಅಧ್ಯಾಪಕರು ಎಷ್ಟೆಲ್ಲಾ ಸಂಕಷ್ಟಗಳಿಗೊಳಗಾಗಬೇಕಾಗಿದ್ದಾರೆ, ಅವೆಷ್ಟು ವಾಸ್ತವವಾದುವುಗಳಿವೆ ಎಂಬುದನ್ನು ಎತ್ತಿ ಹೇಳಬೇಕಾಗಿಲ್ಲ. ಅದು ಜನಜನಿತವಾಗಿರುವ ವಿಷಯ. ಪ್ರಾಥಮಿಕಅಧ್ಯಾಪಕನು ಸರ್ವಸಾಮಾನ್ಯ ಶ್ರಮಜೀವಿಗಿಂತಲೂ ಹೀನ ಸ್ಥಿತಿಯಲ್ಲಿರುವನೆಂದರೂ ಅತಿಶಯೋಕ್ತಿಯಾಗದು. ಸರ್ವಸಾಧಾರಣವಾಗಿ ಶ್ರಮಜೀವನದಲ್ಲೊಂದು ಸ್ಥಿರತೆಯಿದೆ, ತನ್ನ ಶ್ರಮಕ್ಕೆ ತಕ್ಕ ಸಂಬಳವು ದೊರೆಯುವುದೆಂಬ ತೃಪ್ತಿಯಿದೆ. ತಾನು ಸಂಪಾದಿಸಿದ್ದನ್ನೆಲ್ಲಾ ತನಗಾಗಿಯೇ ಉಪಯೋಗಕ್ಕೇನೆ ದೊರೆಯುವುದೆಂಬಭರವಸೆಯಿದೆ ಆದರೆ ಪ್ರಾಥಮಿಕ ಅಧ್ಯಾಪಕನಜೀವನವುಸದಾಅಸ್ಥಿರವಾಗಿದೆ. ಕೆಲಸ ಹೋಗುವುದೋ,ವರ್ಗವಾಗುವುದೋ ಎಂಬ ಬೆದರಿಕೆಯು ಸದಾ ಅವನನ್ನು ಕಾಡುತ್ತಲೇಇರುವುದು. ಸಂಬಳವಂತೂ ಅವನ ಮತ್ತು ಕುಟುಂಬದ ಜೀವನನಿರ್ವಾಹಕ್ಕೆ ಏನೇನೂ ಸಾಲದು, ಅದು ಕೂಡಾ ಯಾವಾಗ ದೊರೆಯುವುದೆಂಬ ನಿಶ್ಚಯವಿಲ್ಲ. ಹೀಗೆ ಅವನು ಸದಾ ಪರಾಶ್ರಯಕ್ಕೆ ಕತ್ತು ನೀಡಿಕೊಂಡೇ ಇರಬೇಕು. ಅಧ್ಯಾಪಕನಾಗಿ ಅವನು ತನ್ನ ಜೀವನಕ್ರಮವನ್ನು ಒಂದು ಪ್ರಮಾಣದಲ್ಲಿರಿಸಿಕೊಳ್ಳಬೇಕಾಗುತ್ತದೆ. ಆದರೆ ಅದಕ್ಕೆ ಹಣವೆಲ್ಲಿಂದ ಬರಬೇಕು? ಅವನು ಯಾವ ವೇಷ ಕಟ್ಟಿಯಾದರೂ ಸಂಪಾದಿಸಬೇಕು. ಇನ್ನು ಖಾಸಗಿ ಆಡಳಿತದೊಳಗಣ ಅಧ್ಯಾಪಕರ ಸಂಬಳವು ಸಂಪೂರ್ಣವಾಗಿ ಅವರಿಗೆ ದೊರೆಯುವುದೆಂದಿಲ್ಲ. ದಾಖಲೆಗೆ ಅವರ ಸಂಬಳ ಹೆಚ್ಚಿದ್ದರೂ ಅದರರ್ಧಕೂಡ ಪಡೆಯದವರಿದ್ದಾರೆ. ಇಂತಹ ಅವಸ್ಥೆಯಲ್ಲಿ ಅಧ್ಯಾಪಕರು ಸಂತೃಪ್ತಿಯಿಂದ, ಸ್ವಾವಲಂಬನೆಯಿಂದ ಮತ್ತು ಸ್ವಾಭಿಮಾನದಿಂದ ತಮ್ಮ ವೃತ್ತಿಯನ್ನು ನಡಿಸುವುದಾದರೂ ಹೇಗೆ? ಪ್ರಾಥಮಿಕ ಶಿಕ್ಷಣವು ಸಾರ್ಥಕವಾಗುವುದೆಂತು?

ಪ್ರಾಥಮಿಕ ಅಧ್ಯಾಪಕರ ಶೋಚನೀಯ ಅವಸ್ಥೆಯ ಕುರಿತು ಸರಕಾರವು ಈಗ ಕಣ್ಣು ತೆರೆದಿರುವಂತಿದೆ. ಶಿಕ್ಷಣಖಾತೆಯವರು ಆ ಕುರಿತು ಹೆಚ್ಚಿನಗಮನ ವಹಿಸಿರುವರು. ಇದರ ಪರಿಣಾಮವಾಗಿ ಪ್ರಾಥಮಿಕಅಧ್ಯಾಪಕರ ಜೀವನವು ಒಂದಿಷ್ಟು ಸುಧಾರಿತವಾಗುವ ಸಂಭವವಿದೆ. ಅವರು ಇನ್ನುಮುಂದಾದರೂ ಒಳ್ಳೆಯ ದಿನಗಳನ್ನು ಕಾಣಬಹುದೋ ಎಂಬ ಆಶೆಗಾಸ್ಪದವಾಗಿದೆ. ಈಗಣ ಶಿಕ್ಷಣ ಖಾತೆಯ ಡೈರೆಕ್ಟರರಾದ ಮಿ. ಆರ್. ಎಂ. ಸ್ಟೇಥಮ್ ಸಾಹೇಬರು ಇದೇ ತಾ ೫ರಲ್ಲು ಮಲಬಾರಿನ ಕೊಟ್ಟಾಯಂ ತಾಲೋಕಿನ ಪ್ರಾಥಮಿಕ ಅಧ್ಯಾಪಕರ ಪರಿಷತ್ತಿನಲ್ಲಿ ಭಾಷಣವೀಯುತ್ತಾ, ಸರಕಾರವು ಪ್ರಾಥಮಿಕ ಅಧ್ಯಾಪಕರ ಪರಿಸ್ಥಿತಿಯನ್ನು ಸುಧಾರಿಸಲು ಕೈಕೊಳ್ಳಲಿರುವ ಏರ್ಪಾಡುಗಳು ಕೆಲವನ್ನು ನಿರೂಪಿಸಿರುವರು. ಇನ್ನುಮುಂದೆ ಅಂಗೀಕೃತವಾಗಿರುವ ಪ್ರತಿಯೊಂದು ಖಾಸಗಿ ಶಾಲೆಯ ಅಧ್ಯಾಪಕನಿಗೆ ಶಿಕ್ಷಣ ಖಾತೆಯವರು ಶಿಕ್ಷಕ ಸರ್ಟಿಫಿಕೇಟಿನ ಹೊರತು ಲೈಸೆನ್ಸೆಂಬುದನ್ನು ಪ್ರತ್ಯೇಕವಾಗಿ ಕೊಡುವರು. ಇದರಲ್ಲಿ ಸದರಿ ಅಧ್ಯಾಪಕನು ಯಾವ ಶರ್ತಗಳಿಂದ ನೇಮಿಸಲ್ಪಡಬೇಕು, ಅವನಿಗೆ ಎಷ್ಟು ಸಂಬಳ ಕೊಡಬೇಕೆಂಬುದೆಲ್ಲಾ ನಮೂದಿಸಲ್ಪಡುವುದು. ಅಧ್ಯಾಪಕನನ್ನು ಕೆಲಸಕ್ಕೆ ತೆಗೆದುಕೊಳ್ಳುವಮೆನೇಜರನೂ ಶಿಕ್ಷಣ ಖಾತೆಯ ಆಫೀಸರರೂ ಈ ಲೈಸೆನ್ಸಿಗೆ ಸಹಿಹಾಕತಕ್ಕದ್ದು. ಇದರಿಂದಾಗಿಅಧ್ಯಾಪಕನಿಗೆ ತನ್ನ ಉದ್ಯೋಗ ಮತ್ತು ಸಂಬಳಕ್ಕೊಂದು ಆಧಾರ ದೊರಕಿದಂತಾಗುವುದು. ಅದನ್ನು ಅದರಿಸಿಕೊಂಡು ಅವನು ಅಗತ್ಯ ಬಂದರೆ ಶಿಕ್ಷಣಖಾತೆಗೆ ಅಪೀಲು ಮಾಡಿಕೊಳ್ಳಬಹುದು. ಖಾಸಗಿ ಶಾಲೆಗಳು ಪಡೆಯುವ ಗ್ರಾಂಟಿನಲ್ಲಿ ಆಡಳಿತ ವೆಚ್ಚಕ್ಕಾಗಿ ಹೆಚ್ಚೆಂದರೆ ಶೆ. ೧೧ರಷ್ಟು ಹಣವನ್ನು ಬಿಟ್ಟು ಉಳಿದ ಶೆ. ೮೯ರಷ್ಟನ್ನು ಅಧ್ಯಾಪಕರು ಸಂಬಳವಾಗಿ ಪಡೆಯಬೇಕೆಂದು ಸರಕಾರವು ನಿಯಮಮಾಡುವುದು. ಇದರಿಂದ ಖಾಸಗಿ ಶಾಲೆಗಳ ಚಾಲಕರು ಅಧ್ಯಾಪಕರ ಸಂಬಳವಿಷಯದಲ್ಲಿ ಮಾಡುವ ವಂಚನೆಯು ತಡೆಗಟ್ಟಲ್ಪಟ್ಟು ಅವರು ನಿಶ್ಚಿತ ಐವೇಜನ್ನು ಸಂಬಳವಾಗಿ ಪಡೆಯುವಂತಾಗುವುದು. ಇದು ಹೊರತು ದುರ್ನಡತೆ ಮತ್ತು ಅತೃಪ್ತಿಕರ ಕೆಲಸಕ್ಕಾಗಿ ಜುಲ್ಮಾನೆಯ ಹೊರತು ಬೇರೆಯಾವ ವಿಧದ ಕಡಿತವನ್ನೂ ಅಧ್ಯಾಪಕರ ಸಂಬಳದಲ್ಲಿ ಮಾಡಲೇ ಕೂಡದೆಂದು ಮೆನೆಜ್‌ಮೆಂಟಿನವರು ಸಂಬಳ ಸರಿಯಾಗಿ ಕೊಡದಿದ್ದರೆ. ಅಥವಾ ಅಧ್ಯಾಪಕರ ಸಂಬಳದಲ್ಲಿ ಅನುಚಿತವಾದ ಕಡಿತಮಾಡಿದರೆ ಆ ಕಾರಣದಿಂದಲೇ "ರಿಕೊಗ್ನಿಶನ್" ತೆಗೆದು ಹಾಕಬಹುದೆಂದು ಸರಕಾರವು ಕಠಿಣ ನಿಯಮಮಾಡಲಿರುವುದು. ಈ ನಿಯಮವು ಬೋರ್ಡು ಶಾಲೆಗಳಿಗೂ ಅನ್ವಯಿಸುವುದು. ಬೋರ್ಡ್ ಶಾಲೆಗಳ ಅಧ್ಯಾಪಕರ ಸಂಬಳದ ಮೇಲೆ ಮಾತ್ರವಲ್ಲದೆ ಅವರ ವರ್ಗಾವರ್ಗಿ,ಪ್ರಯಾಣ ಭತ್ತೆ "ಪ್ರಮೋಶನ್" ಮತ್ತು ಬಡ್ತಿಯ ಮೇಲೆಯೂ ತಮ್ಮ ಅಧಿಕಾರವನ್ನು ಕಠಿಣಗೊಳಿಸುವ ಆಲೋಚನೆಯು ಸರಕಾರಕ್ಕಿದೆ. ಮೆನೆಜ್‌ಮೆಂಟಿನವರು ಈ ನಿಯಮಗಳನ್ನು ಸರಿಯಾಗಿ ಪಾಲಿಸದೆ ವಂಚನೆ ನಡಿಸಿದರೆ ಅಂತಹ ವಂಚನೆಗಳೇನೂ ನಡೆಯದಂತೆ ಸರಕಾರವು ಪುನಃಬೇರೆನಿಯಮಗಳನ್ನು ಮಾಡುವ ನಿರ್ಧಾರದಿಂದಿರುವುದು. ಆದುದರಿಂದ ಮೆನೆಜ್‌ಮೆಂಟಿನವರೂ ಅಧ್ಯಾಪಕರಿಗೆ ಸರಕಾರದೊಡನೆ ಸಹಕರಿಸಿ, ಪ್ರಾಂತದಲ್ಲಿ ಪ್ರಾಥಮಿಕ ಶಿಕ್ಷಣ ಪ್ರಚಾರಕ್ಕಾಗಿ ವಿನಿಯೋಗಿಸಲ್ಪಡುವ ಹಣ ಮತ್ತು ಶ್ರಮವು ಸಾರ್ಥಕವಾಗಿ ನಿರಕ್ಷರತೆಯು ಶೀಘ್ರವಾಗಿ ನಿವಾರಿಸಲ್ಪಡುವಂತಾಗಲೆಂದೇ ಶಿಕ್ಷಣಖಾತೆಯ ಡೈರೆಕ್ಟರರ ಹಾರೈಕೆ.

ಅಧ್ಯಾಪಕರ ಜೀವನ ನಿರ್ವಾಹಕ್ಕೆ ಯೋಗ್ಯವಾದ ಸಂಬಳವು ಕ್ರಮವಾಗಿ ದೊರೆತು, ಅವರ ಉದ್ಯೋಗದಲ್ಲಿ ಸ್ಥಿರತೆಯೂ ತೃಪ್ತಿಯೂ ಉಂಟಾಗುವಂತೆ ಸರಕಾರವು ತಕ್ಕಪ್ರಯತ್ನಮಾಡುವ ಮನಸ್ಸುಳ್ಳದ್ದಾಗಿರುವುದೆಂದು ಮಿ. ಸ್ಟೆಥಮರ ಭಾಷಣದಿಂದ ಸ್ಪಷ್ಟವಾಗುವುದು. ಅಂದಮೇಲೆ ಅಧ್ಯಾಪಕರು ತಮ್ಮ ಪಾಲಿನ ಜವಾಬ್ದಾರಿಯನ್ನು ಆಸ್ಥೆಯಿಂದ ನಿರ್ವಹಿಸುವುದು ಅವರ ಕರ್ತವ್ಯವಾಗಿದೆ. ಅವರ ವಶಕೊಡಲ್ಪಡುವ ಚಿಕ್ಕ ಚಿಕ್ಕ ಹುಡುಗ ಹುಡುಗಿಯರೆಲ್ಲಾ ಶಾಲೆಗಳಿಗೆ ಸರಿಯಾಗಿ ಹೋಗಿ ಚೆನ್ನಾಗಿಕಲಿತು ಕ್ರಮವಾಗಿ ತೇರ್ಗಡೆ ಹೊಂದಿ ಕೊನೆಯಲ್ಲಿ ಶಾಲೆಬಿಟ್ಟು ಹೋಗುವಾಗ ಅವರು ಮುಂದೆ ನಿರಂತರವೂ ಅಕ್ಷರಜ್ಞನಾಗರಿಕರಾಗಿಯೇಉಳಿವಂತಾಗಬೇಕೆಂದೇ ಶಿಕ್ಷಣ ಖಾತೆಯ ಡೈರೆಕ್ಟರರ ಆಶೆ; ಅಂದರೆ ಈಗ ಶಿಕ್ಷಣದಲ್ಲಾಗುವ ಅಪಾರ ದುರ್ವ್ಯಯವುನಿವಾರಿಸಲ್ಪಡಬೇಕು ಹುಡುಗರು ಶಾಲೆಗೆ ಅಕ್ರಮವಾಗಿ ಬಂದು ಒಂದೆರಡು ಕ್ಲಾಸು ಕಲಿತು ಹೊರಹೋಗಿ ಕಡೆಗೆ ನಿರಕ್ಷರ ಕುಕ್ಷಿಗಳಾಗಿಬಿಡುವಂತಾಗ ಬಾರದು. ಇಡೀ ಪ್ರಾಂತವು ಸಾಕ್ಷರವಾಗುವಂತೆ ಸರಕಾರದೊಡನೆ ಅಧ್ಯಾಪಕರು ಸಹಕರಿಸಬೇಕು. ಆಕುರಿತು ಅವರು ಹಿಂದಿಗಿಂತಲೂ ದ್ವಿಗುಣಿತವಾದ ಉತ್ಸಾಹದಿಂದ ಕೆಲಸಮಾಡಬೇಕೆಂದೇ ಡೈರೆಕ್ಟರ ಇಚ್ಛೆ. ಸರಿಯಾದ ಸಂಬಳಮತ್ತು ಸ್ಥಿರವಾದ ಉದ್ಯೋಗ ಪರಿಸ್ಥಿತಿಯುಳ್ಳ ಅಧ್ಯಾಪಕರು ತಮ್ಮ ಕರ್ತವ್ಯದ ಮಟ್ಟಿಗೆ ಎಂದಿಗೂ ಹಿಂದುಳಿಯಲಾರರೆಂದು ನಾವು ನೆನಸುತ್ತೇವೆ.

ಪ್ರಕಟಣೆ

"**ಮುಗುಳು**"ಪದ್ಯ ಪುಸ್ತಕದ ಸೋಲ್ ಏಜೆನ್ಸಿಯನ್ನು ಉಡುಪಿಯ 'ನವಭಾರತ ಬುಕ್ ಡಿಪ್ಪೋ ಇವರಿಗೆ ಕೊಡಲಾಗಿದೆ. ಪ್ರತಿಗಳು ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು.

ಕೆ. ದೊನ್ನಯ್ಯ ಶೆಟ್ಟಿ,
25—4—'37. ಉಡುಪಿ.

ಉಡುಪಿ

ಗ್ರಾಮಸಂಚಾರ

ಇಲ್ಲಿಯ ಅಂಜುಮಾನ್ ಕ್ಲಬ್ಬಿನ ಮೆಂಬರರ ಕನಿಟವೊಂದು ತಾ. ೨೯–೫–೩೭ನೇ ಶನಿವಾರ ಸಂಜೆಗೆ ಕೆಮ್ಮಣ್ಣಿಗೆ ತೆರಳಿ ಆ ರಾತ್ರಿ ಅಲ್ಲಿಯ ಜನರನ್ನು ಗಾಯನವಾದನಾದಿಗಳಿಂದ ಸಂತೋಷಪಡಿಸಿದರು. ಮರುದಿನ (೩೦-೫-೩೭) ಕೆಮ್ಮಣ್ಣು ಹಾಯರ್ ಎಲಿಮೆಂಟರೀ ಶಾಲೆಯ ಮೆನೇಜರ್ ಹಾಗೂ ಉಪಾಧ್ಯಾಯರ ಸಹಾನುಭೂತಿಯಿಂದ ಒಂದು ಸಾರ್ವಜನಿಕ ಸಭೆಯನ್ನು ಕೂಡಿಸಿದರು. ಡಾ। ಉಮಾನಾಥರಾಯರು ಅಂದಿನ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಸಭೆಯು ಹಳ್ಳಿಗರಿಂದ ತುಂಬಿಹೋಗಿತ್ತು. ಶ್ರೀ। ಕೆ. ಶೀನಶೆಟ್ರು ಪ್ರಾರಂಭಿಕ ಭಾಷಣವನ್ನು ಮಾಡಿದ ಬಳಿಕ ಶ್ರೀ. ಗೋಪಾಲಕೃಷ್ಣರಾಯರು 'ಗ್ರಾಮಸಂಘಟನೆ'ಯ ಕುರಿತೂ, ಶ್ರೀ. ಪಿ. ಶೀನಶೆಟ್ರು ವ್ಯಾಯಾಮದ ಕುರಿತೂ, ಶ್ರೀ। ಎಮ್. ರಾಮರಾಯರು "ಸ್ವಾತಂತ್ರ್ಯದ ಬೆಲೆ ಅಂದರೆ ಆದರ, ಆವಶ್ಯಕತೆ ಹಾಗೂ ಕಾಂಗ್ರೆಸ್ಸಿನ ಧೋರಣೆ"ಯ ಕುರಿತೂ, ಶ್ರೀ ನಶೀಬ್ ಸಾಹೇಬರು ರಾಷ್ಟ್ರಭಾಷೆಯ ಆವಶ್ಯಕತೆಯ ಕುರಿತೂ ಜನರಿಗೆ ಮಂದಟ್ಟಾಗುವಂತೆ ಉಪನ್ಯಾಸವನ್ನು ಮಾಡಿದರು. ಅಧ್ಯಕ್ಷರ ಸ್ಫೂರ್ತಿಯುತವಾದ ಇಂಗ್ಲೀಷ್ ಭಾಷಣವನ್ನು ಶ್ರೀ। ಪಿ. ಶೀನಶೆಟ್ರು ತುಳುವಿಗೆ ಭಾಷಾಂತರಿಸಿ ಹೇಳಿ ಸಭಿಕರನ್ನು ಆನಂದಪಡಿಸಿದರು. ಭಾಷಣಕರ್ತರನೇಕರು 'ನವಯುಗ'ವೇ ಮೊದಲಾದ ರಾಷ್ಟ್ರೀಯ ವಾರ್ತಾಪತ್ರಿಕೆಗಳನ್ನು ಪ್ರೋತ್ಸಾಹಿಸಬೇಕೆಂದು ಕೋರಿದರು. ಸಭಿಕರಿಗೂ, ಸಭಾಪತಿಗಳಿಗೂ, ಸಭೆಗೆ ನೆರವಿತ್ತವರಿಗೂ, ಧನ್ಯವಾದಗಳನ್ನರ್ಪಿಸಿದ ತರುವಾಯ ಸಭೆಯು ಕೊನೆಗೊಂಡಿತು. ಹಳ್ಳಿಗರ ಮನೋವಿಕಾಸಕ್ಕೆ ಹೇತುವಾದ, ಈ ತರುಣರ ಕಾರ್ಯವು ಅಭಿನಂದನೀಯವಿದೆ

ಧರ್ಮದೇವರುಗಳ ಸಮಸ್ಯೆ

ತಾ. ೬–೬–೩೭ನೇ ಆದಿತ್ಯವಾರ ಸಂಜೆ ಘಂಟೆ ೬ಕ್ಕೆ ಇಲ್ಲಿಯ ದಿವಂಗತ ಹಾಜಿ ಅಬ್ದುಲ್ಲಾ ಸಾಹೇಬರ ಸ್ಮಾರಕ ಕ್ಲಬ್ಬಿನಲ್ಲಿ ಶ್ರೀ। ಕೆ. ಕೆ. ಶೆಟ್ಟಿ, ಸಂಪಾದಕ ನವಯುಗ, ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿತು. ಅಂದಿನ ಸಭೆಯ ಚರ್ಚೆಯ ವಿಷಯವು "ಧರ್ಮದೇವರುಗಳ ಸಮಸ್ಯೆ" ಭಾಷಣಕಾರರು ಶ್ರೀ। ಮುದ್ರಾಡಿ ಜನಾರ್ದನಾಚಾರ್ಯ, ಸಂಪಾದಕ ಶ್ರೀಕೃಷ್ಣಸಂದೇಶ ಇವರು. ಜನಾರ್ದನಾಚಾರ್ಯರು "ಧರ್ಮದೇವರುಗಳ ಸಮಸ್ಯೆಯು ಬೇಗನೇ ಇತ್ಯರ್ಥವಾಗತಕ್ಕ ವಿಷಯವಿರದೆ ಅತಿ ಗಹನವಾದ ವಿಷಯವೆಂದೂ ಅದನ್ನು ಅಮೂಲಾಗ್ರವಾಗಿ ತಿಳಿಯಲು ನಿಯಮಬದ್ಧನಾದ ವಿರಾಗಿಯೇ ಅರ್ಹನೆಂದೂ, ಆದರೂ ನಾವುಗಳು, ಹಿಂದಿನವರು ಕಷ್ಟಪಟ್ಟು ಕಂಡುಹಿಡಿದ

ಧರ್ಮದೇವರುಗಳನ್ನು ಇಲ್ಲವೆನ್ನುವುದು ಸರಿಯಲ್ಲವೆಂದೂ" ಒಂದು ಚಲೋ ಭಾಷಣವನ್ನು ಮಾಡಿದರು. ಮಧ್ಯೆ ಶ್ರೀ| ಕೆ ಶೀನಶೆಟ್ಟರು ಎರಡು ಮಾತುಗಳನ್ನು ಆಡಿದರು ಅಧ್ಯಕ್ಷರು "ಧರ್ಮದೇವರುಗಳು ಮಾನವನ ಮಾನವ್ಯನನ್ನು ಉಳಿಸಲಿಕ್ಕಾಗಿ ನಿರ್ಮಿಸಲ್ಪಟ್ಟವು ಈಗ ಅದೇ ಮಾನವ್ಯವನ್ನು ಅಳಿಸುವ ಸ್ಥಿತಿಗೆ ಬಂದಿವೆ ಒಂದೊಂದು ಜನಾಂಗಕ್ಕೆ ಒಂದೊಂದು ಧರ್ಮದೇವರುಗಳು! ಇದರಿಂದ ಸಮಾಜಕ್ಕೆ ಹಾನಿಯಲ್ಲದೆ ಬೇರೆಯಲ್ಲ ಈಗಿನ ಕಾಲಕ್ಕೆ ಅನುಕೂಲವಾಗಿ ಅದನ್ನು ಸುಧಾರಿಸಬೇಕು ವಿಶ್ವಾತ್ಮನೇ ದೇವರು, ವಿಶ್ವಭ್ರಾತೃತ್ವವೇ ನಿಜವಾದ ಧರ್ಮ. ಧರ್ಮದೇವರುಗಳ ವಿಷಯವಾಗಿ ಈಗ ಹಬ್ಬಿರುವ ಭ್ರಮೆಯು ಮಾತ್ರ ತೀವ್ರ ಜುಗುಪ್ಸಿತವಾದುದು ಅಂತಹ ಭ್ರಾಂತಿಯನ್ನು ರಷ್ಯನರು ಕಿತ್ತೊಗೆದು ಧರ್ಮದೇವರುಗಳ ಸಮಸ್ಯೆಯನ್ನು ಬಿಡಿಸಿ ಜಗತ್ತಿಗೇ ಉಪಕಾರಮಾಡಿರುವರು ಸಮಾಜರೂಪೀ ಭಗವಂತನ ಸೇವೆಯೇ ಧರ್ಮ ಅದೇ ನಮ್ಮ ಗುಲಾಮಗಿರಿಯನ್ನೂ, ಹೇಡಿತನವನ್ನೂ ಅಳಿಸಿ, ಸ್ವಾತಂತ್ರ್ಯಾಭಿಮಾನವನ್ನು ಕೊಡುವಂತಹುದಾಗಿದೆ ಇದಕ್ಕೆ ವಿಚಾರಕ್ರಾಂತಿಯೂ ವಿಶಾಲದೃಷ್ಟಿಯೂ ಉಂಟಾಗಬೇಕು ಈ ಸಂದರ್ಭಗಳಲ್ಲಿ ಹಿಂದೂ ಮುಸ್ಲಿಂಗಳೊಂದುಗೂಡಿ ಕ್ಲಬ್ ಎಂದು ಸ್ಥಾಪಿಸಿದ್ದು ನೀವು ನಿಜವಾಗಿಯೂ ಅಭಿನಂದನಾರ್ಹರು ಇದು ಅಭಿವೃದ್ಧಿಯ ಕುರುಹು. ಹೀಗೆಯೇ ಎಲ್ಲರೂ ವಿಚಾರವಂತರಾಗಿ ಐಕಮತ್ಯದಿಂದ ಕೇವಲ ಧರ್ಮದೇವರುಗಳ ಗುಲಾಮರಾಗದೆ. ಅಂದರೆ ಅದಕ್ಕೊಂದು ಪರಿಮಿತಿಯಿದ್ದು ತನ್ನ ಹೇತು ರಾಷ್ಟ್ರಹಿತವಾಗುವ ರೀತಿ ನಾಡಸೇವೆಯನ್ನು ಮಾಡುತ್ತಿರುವರೆಂದು ಕೋರಿ ಭಾಷಣವನ್ನು ಮುಗಿಸಿದರು ಧನ್ಯವಾದಗಳಾದ ಬಳಿಕ ಸಭೆಯು ಮುಕ್ತಾಯವಾಯಿತು

ತಾ ೧೨-೬-೩೭ನೇ ಶನಿವಾರ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಬ್ರಹ್ಮಾವರ ಎಮೆಚೂರ್ಸ್ ನಾಟಕ ಸಭೆಯವರು "ರಾಷ್ಟ್ರವೀರ" ಎಂಬ ಚಾರಿತ್ರಿಕ ನಾಟಕವನ್ನು ಅಭಿನಯಿಸಲಿದ್ದಾರೆಂದು ತಿಳಿದು ಬರುವುದು

ಉಡುಪಿ ಸರ್ಕಲಿನ ಅಬ್ಕಾರಿ ಅಸಿಸ್ಟಂಟ್ ಇನ್ಸ್‌ಪೆಕ್ಟರರಾದ ಪಿ ಕೆ. ಮಾಧವ ಮೆನೋನ್‌ರವರು ಕಣ್ಣಾನೂರ್ ಸರ್ಕಲಿನ ಆಕ್ಟಿಂಗ್‌ಇನ್‌ಸ್ಪೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುವರು.

ಶ್ರೀ ಪಂಡಿತ ಯು ಬಿ ಆಚಾರ್ಯರ 'ವಿಧವಾ ವಿವಾಹವು ಶಾಸ್ತ್ರವಿರುದ್ಧವಲ್ಲ' ಎಂಬ ಲೇಖನವು ಬರುವ ವಾರ ಪ್ರಕಟಿಸಲ್ಪಡುವುದು

ಉಡುಪಿ ಇಲೆಕ್ಟ್ರಿಕ್ ಸಪ್ಲೈ ಕೋರ್ಪರೇಶನ್

ಉಡುಪಿಗೆ ವಿದ್ಯುತ್ತನ್ನೊದಗಿಸಲು ಮೇಲಿನ ಹೆಸರಿನ ಲಿಮಿಟಡ್ ಕಂಪೆನಿಯೊಂದು ಮದ್ರಾಸಿನಲ್ಲಿ ಪ್ರಸಿದ್ಧ ಡಾಕ್ಟರರಾದ ಯು ಎಲ್ ನಾರಾಯಣ ರಾಯರ ಅಧ್ಯಕ್ಷತೆಯದಲ್ಲಿ ಸ್ಥಾಪಿಸಲ್ಪಟ್ಟಿರುವುದು ಮೆಕಿಲಕ್ ಇಂಜಿನೀಯರಿಂಗ್ ಕಂಪೆನಿಯವರು ಇದರ ಮೆನೇಜಿಂಗ್ ಏಜಂಟರು ಉಡುಪಿಯಲ್ಲಿ ಶ್ರೀ| ವಕೀಲ್ ವಿಠಲಕಾಮತರೇ ಮೊದಲಾದವರು ಈ ಕಂಪೆನಿಯ ಡೈರೆಕ್ಟರರಾಗಿರುವರು ಪ್ರಕೃತ ಈ ಕಂಪೆನಿಗೆ ಶೇರುಗಳನ್ನು ಕೂಡಿಸುವ ಕೆಲಸವು ನಡೆಯುತ್ತಿರುವುದು

ಸತ್ಕಾರಕೂಟ

ಮೈಸೂರು ಸರಕಾರದ ಪಕ್ಷ್ಯ್ರಂಗಳಾದ ಪ್ರೊಫೆಸರ್ ಕೆ.ಬಿ. ಮಾಧವ ಎಮ್. ಎ., ಪಿ.ಎ. ಇವರನ್ನು ಸನ್ಮಾನಿಸಲು ಇಲ್ಲಿಯ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡಿನವರು ಇದೇ ತಾ ೨ನೇ ಸಂಜೆ ಘಂಟೆ ೫-೩೦ಕ್ಕೆ ಮಣಿಪಾಲದಲ್ಲೊಂದು ಸತ್ಕಾರಕೂಟವನ್ನೇರ್ಪಡಿಸಿದರು.

ಮಾನಂಜೆ

ನಮ್ಮ ಆಜ್ರಿ ಮತ್ತು ಕಮಲಶಿಲೆ ಈ ಎರಡು ಗ್ರಾಮಗಳನ್ನು 'ಶಂಕರನಾರಾಯಣ ಗ್ರಾಮ ಸೇವಾ ಸಂಘ'ಕ್ಕೆ ಸೇರಿಸುವುದಾಗಿ ನಿಶ್ಚೈಸಿರುತ್ತದೆ.

ಇಲ್ಲಿಯನೇರಲಕಟ್ಟೆ ರಸ್ತೆಯಿಂದ ಕಮಲಶಿಲೆ, ಮಾನಂಜೆಗೆ ಬರತಕ್ಕ ಗ್ರಾಮ ರಸ್ತೆಯ ಮತ್ತು ಕಮಲ ಶಿಲೆ ಹೊಳೆಯ ಸಂಕದ ಕುರಿತು ಬರೆದುಕೊಂಡ ಅರ್ಜಿಯುತಲ್ಪಿ, ಕುಂದಾಪುರ ತಾಲೂಕು ವಂಡ್ಸೆ ಫಿರ್ಕಾ ರೆವಿನ್ಯೂ ಇನ್ಸ್‌ಪೆಕ್ಟರವರಿಗೆ ತನಿಖೆಗಾಗಿ ಹುಕುಂ ಬಂದಿರುವುದಾಗಿ ಕೇಳುತ್ತೇವೆ. ಮ. ರಾ. ರೆವಿನ್ಯೂ ಇನ್ಸ್‌ಪೆಕ್ಟರವರು ಈ ಗ್ರಾಮಸ್ಥರ ಅರ್ಜಿಯನ್ನು ಎಕನಾಮಿಕ್ ಕೌನ್ಸಿಲಿನ ಮುಂದಿಡುವರೆ ಶಿಫಾರಸು ಮಾಡುವುದಾಗಿ ನಂಬುತ್ತೇವೆ.

ಆಜ್ರಿಗ್ರಾಮದ ಅಗ್ರಹಾರ ಸೆಂಟರಿನಲ್ಲಿ ತೆರೆದ ಶಾಲೆಯ ಕಟ್ಟಡವು ಮುಗಿದು ಸದ್ಯದಲ್ಲೇ ಶಾಲೆಯನ್ನು ತೆರೆಯುವ ವ್ಯವಸ್ಥೆ ಆಗುತ್ತದೆ. ಶಾಲೆಯಲ್ಲಿ 35 ಹುಡುಗರ ಹಾಜ್ರಿ ಇದ್ದು, ದಿನ ನಿತ್ಯ 30 ಹುಡುಗರ ವರೆಗೆ ಬರುತ್ತಾರೆ. ಸರಿಯಾಗಿ ಶಾಲೆಮಾಡುವ ಉಪಾಧ್ಯಾಯರಿಲ್ಲದೆ ತುಂಬಾ ತೊಂದರೆ ಆಗಿದೆ. ಮಾನ್ಯ ಡಿಸ್ಟ್ರಿಕ್ಟ್ ಬೋರ್ಡಿನವರು ಇಲ್ಲಿಗೆ ಯೋಗ್ಯ ಉಪಾಧ್ಯಾಯರನ್ನು ನೇಮಕ ಮಾಡಿದರೆ ಶಾಲೆಯು ತುಂಬಾ ಏಳಿಗೆಗೆ ಬರುವುದರಲ್ಲಿ ಸಂದೇಹವಿಲ್ಲ.

ಶಂಕರನಾರಾಯಣ

ಇಲ್ಲಿ ತಾ. ೪-೬-೩೭ರಲ್ಲಿ ಕುಂದಾಪುರ ಬ್ಯಾಂಕಿನ ಶಾಖೆಯೊಂದು ತೆರೆಯಲ್ಪಟ್ಟಿರುತ್ತದೆ.

ಕಾರ್ಕಳದಲ್ಲಿ ಕಾಂಗ್ರೆಸ್ ಕಾರ್ಯ ಪ್ರಚಾರ

ತಾ ೯-೫-೩೭ರಲ್ಲು ಜರಗಿದ ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಗ್ರಾಮಗಳಲ್ಲಿ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಬೇಕೆಂದು ತೀರ್ಮಾನವಾಗಿ ಆ ಕಾರ್ಯವನ್ನು ನಿರ್ವಹಿಸುವುಕ್ಕಾಗಿ ಶ್ರೀಗಳಾದ ಕೇಶವರಾಮಚಂದ್ರ ಶೆಣೈ. ಪಿ. ವಿ. ಉಪಾಧ್ಯಾಯ, ಕೆ. ಯಂ. ಹೆಗ್ಗಡೆ, ಮುದ್ರಾಡಿ ಕೃಷ್ಣ ಶೆಟ್ಟಿ ಇವರಿಗೆ ಅಧಿಕಾರ ಕೊಡೋಣಾಗಿಯದೆ; ಶ್ರೀ. ಮುದ್ರಾಡಿ ಕೃಷ್ಣಶೆಟ್ರು ಗ್ರಾಮಗಳಲ್ಲಿ ಸಂಚರಿಸಿ ಮೆಂಬರರನ್ನು ಸೇರಿಸಿ ಅಲ್ಲಲ್ಲಿ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸುವುದರಲ್ಲಿ ಬಹಳ ಉತ್ಸಾಹದಿಂದ ಕೆಲಸಮಾಡುತ್ತಿದ್ದಾರೆ.

ತಾ. ೧೩-೫-೩೭ರಲ್ಲು ಕಾರ್ಕಳ ತಾಲೂಕಿನ ಶಿರ್ಲಾಲು, ಅಂಡಾರು, ಕೆರ್ವಾಶೆ, ಜಾರ್ಕಳ, ಹೆರ್ಮುಂಡೆ ಗ್ರಾಮಸ್ಥರ ಸಭೆಸೇರಿತು. ಶ್ರೀ|ಬಿ|ವಿ| ರಾವ್, ಯಂ| ಯಸ್| ಅಧಿಕಾರಿ ಇವರ ಭಾಷಣಗಳಾಗಿ ನ್ಯಾಯವಾದ ಭರವಸೆಯನ್ನು ಕೊಡದೆ ತಾವು ಅಧಿಕಾರ ಸ್ವೀಕಾರ ಮಾಡುವುದಿಲ್ಲವೆನ್ನುವ ಕಾಂಗ್ರೆಸಿನ ಮುಖಂಡರ ಧೋರಣೆಯನ್ನು ಸಮರ್ಥಿಸಿ, ಕಾನೂನಿಗೂ ಜನಮತಕ್ಕೂ ವಿರೋಧವಾಗಿ ಸರಕಾರದವರು ನಿರ್ಮಿಸಿರುವ ತಾತ್ಕಾಲಿಕ ಮಂತ್ರಿಮಂಡಲವನ್ನು ಖಂಡಿಸಿ ಠರಾವುಗಳು ಸರ್ವಾನುಮತದಿಂದ ಪಾಸಾದವು. ಶ್ರೀ| ನಡುಮನೆ ಗೋವಿಂದ ಭಟ್ರ ಅಧ್ಯಕ್ಷತೆಯಲ್ಲಿ ನಡೆದ ತಾ| ೧೬-೫-೩೭ರ ದುರ್ಗ, ಮಾಳ, ಕೆರ್ವಾಶೆ ಈ ದುಗ್ರಾಮಸ್ಥರ ಸಭೆಯಲ್ಲಿ ಶ್ರೀ| ರಾಮ ಪುದುವಾಳರು, ಟಿಪ್ಪಣಕಾರ ವೆಂಕಟೇಶಭಟ್ರು ಕಾಂಗ್ರೆಸಿನ ಪದವಿ ಸ್ವೀಕಾರದ ಧೋರಣೆಯ ವಿಷಯದ ಭಾಷಣಗಳನ್ನು ಮಾಡಿದ ನಂತರ ಸರಕಾರದ ಧೋರಣೆಯನ್ನು ಖಂಡಿಸಿ ಕಾಂಗ್ರೆಸಿನ ವರ್ತನೆಯನ್ನು ಸಮರ್ಥಿಸಿ ಎಸೆಂಬ್ಲಿಯನ್ನು ಕೂಡಲೇ ಕರೆಯಬೇಕೆಂಬ ಠರಾವುಗಳು ಮಂಜೂರಾದವು ತಾ.೨೨-೫-೩೭ರಲ್ಲಿ ಶ್ರೀ| ಮಲೆಬೆಟ್ಟು ಸೀತಾರಾಮಭಟ್ಟರ ಅಧ್ಯಕ್ಷತೆಯಲ್ಲಿ ನಡೆದ ದುರ್ಗ ಗ್ರಾಮಸ್ಥರ ಸಭೆಯಲ್ಲಿ ಮತ್ತು ತಾ. ೨೭-೫-೩೭ರಲ್ಲಿ ಶ್ರೀ| ಹೊಸಹಿತ್ಲು ಅನಂತ ಭಟ್ರ ಅಧ್ಯಕ್ಷತೆಯಲ್ಲಿ ನಡೆದ ತೆಳ್ಳಾರು ಗ್ರಾಮಸ್ಥರ ಸಭೆಯಲ್ಲಿ ಮತ್ತು ತಾ| ೨೮-೫-೩೭ರಲ್ಲಿ ಶ್ರೀ| ತೆಳ್ಳಾರು ಅನಂತರಾಮ ಭಟ್ರ ಅಧ್ಯಕ್ಷತೆಯಲ್ಲಿ ತೆಳ್ಳಾರುಶಾಲೆಯಲ್ಲಿ ನಡೆದ ಸಭೆಯಲ್ಲಿ ಕೂಡಾ ಕೋಂಗ್ರೆಸು ತತ್ವಗಳನ್ನು ವಿವರಿಸುವ ಭಾಷಣಗಳೂ ಕೋಂಗ್ರೆಸ್ಸನ್ನು ಸಮರ್ಥಿಸುವ ಠರಾವುಗಳೂ ಮಂಜೂರಾದವು.

ತಾಲೂಕಿನ ಎಲ್ಲಾ ಭಾಗಗಳಲ್ಲಿ ನಡೆಯುವ ಪ್ರಚಾರ ಕಾರ್ಯಗಳ ವರದಿಯನ್ನು ಸಂಗ್ರಹಿಸಿ ಆಗಾಗೆ ಪತ್ರಿಕೆಗಳಿಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಮುಂಡಾಜೆ

ತಾ ೨೬-೫-೩೭ಲ್ಲು ಬೆಳಗ್ಗೆ ೧೦ಘಂಟೆ ಮುಂಡಾಜೆ ಶಾಲಾ ಕಟ್ಟಡದಲ್ಲಿ ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ಕೋಂಗ್ರೆಸಿನ ಪ್ರಚಾರದ ಕುರಿತು ಸಭೆಜರಗಿತು. ಮದ್ರಾಸಿನ ಅಡ್ವೋಕೇಟ್ ಶ್ರೀನಿವಾಸರಾಯರು ಅಧ್ಯಕ್ಷರಾಗಿದ್ದರು. ಮ. ರಾ. ಕೆ. ಆರ್. ಕಾರಂತರ ಬೋಧಪರವಾದ ಭಾಷಣದನಂತರ ಸಭೆಯು ಮುಕ್ತಾಯವಾಯಿತು. ಸಭೆಗೆ ಮುಂಡಾಜೆ ಕಲ್ಮಂಜೆ ಗ್ರಾಮಗಳ ಗ್ರಾಮಸ್ಥರುನೆರೆದಿದ್ದು ಕೋಂಗ್ರೆಸಿನ ಇಂದಿನ ಧೋರಣವು ಸರಿಯಾದ್ದೆಂತ ಅಭಿಪ್ರಾಯವು ಎಲ್ಲರಲ್ಲೂ ಉಂಟಾಯಿತು.

ದಿ ಬಿಲ್ಲವರ ಎಸೋಸಿಯೇಶನ್ ಮುಂಬಾಯಿ ವಿದ್ಯಾರ್ಥಿವೇತನ

ಇದು ಬಿಲ್ಲವ ಜಾತಿಯ ಬಡವಿದ್ಯಾರ್ಥಿಗಳಿಗೆ ಮಾತ್ರ ವೇತನವನ್ನು ಅಪೇಕ್ಷಿಸುವವರು ಈ ಕೆಳಗೆ ನಮೂದಿಸಿದ ಪ್ರಶ್ನೆಗಳ ಉತ್ತರ ಸಮೇತ ತಾ ೩೦-೬-೩೭ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಂಡಲ್ಲಿ ಅರ್ಹರೆಂದು ಕಂಡುಬಂದವರಿಗೆ ಈ ಮೇಲಿನ ಸಂಸ್ಥೆಯಿಂದ ವೇತನವನ್ನು ಕೊಡಲಾಗುವುದು.

೧. ವಿದ್ಯಾರ್ಥಿಯ ಹೆಸರು, ೨ ತಂದೆ ಯಾ ರಕ್ಷಕನ ಹೆಸರು, ವಿಳಾಸ, ವೃತ್ತಿ ಮತ್ತು ವರ್ಷಾವಧಿ ಉತ್ಪತ್ತಿ, ೩. ಇತರ ಸಂಬಂಧಿಕರ ಹೆಸರು ಮತ್ತು ವಿಳಾಸ, ೪. ಕಲಿಯತಕ್ಕ ದರ್ಜೆಯ ಮತ್ತು ಶಾಲೆಯ ಹೆಸರು, ೫ ಕಳೆದ ಪರೀಕ್ಷೆಯ ಮಾರ್ಕುಗಳ ಪಟ್ಟಿ, ೬. ಶಾಲಾ ಸಂಬಳ, ೭. ವಿದ್ಯಾರ್ಥಿಯ ಗುಣ ನಡತೆಯ ವಿಷಯ ಶಾಲಾ ಮುಖ್ಯೋಪಾಧ್ಯಾಯರ ಪತ್ರ, ೮ ವಿದ್ಯಾರ್ಥಿಯು ವೇತನವನ್ನು ಪಡೆಯಲು ಅರ್ಹನೆಂಬುದರ ಕುರಿತು ಊರಿನ ಮೆಜಿಸ್ಟ್ರೇಟರ ಅಥವಾ ಪ್ರಸಿದ್ಧ ವಕೀಲರ ಒಂದು ಪತ್ರ,

ಮಾನಾರ್ಥ ಜನರಲ್ ಕಾರ್ಯದರ್ಶಿ.

ನವಭಾರತ ಬುಕ್ ಡಿಪೋ

ಪುಸ್ತಕ ಮತ್ತು ಸ್ಟೇಶನರಿ ವ್ಯಾಪಾರಿಗಳು

ಚರ್ಚ್‌ರೋಡು . . . ಉಡುಪಿ, ದ. ಕ.

ನಮ್ಮಲ್ಲಿ

ಜೂನ್ ತಾ. 1ರಿಂದ ಜುಲ್ಯೆ 15ರ ತನಕ

ವ್ಯಾಪಾರ ಮಾಡುವವರಿಗೆ ವ್ಯಾಪಾರದ ಪರಿಮಾಣಕ್ಕನುಸಾರವಾಗಿ

ಇನಾಮುಗಳಿರುವವು.

ಹೊಸ ಹೊಸ ಮ್ಹಾಲುಗಳು ! ತೀರ ಮಿತ ದರಗಳು !!

ನವಯುಗ ಆಫೀಸಿನ ಕೆಳಗಡೆ ಇರುವ

'ನವಭಾರತ ಬುಕ್ ಡಿಪೋ'ವನ್ನೊಮ್ಮೆ ಸಂದರ್ಶಿಸಿರಿ.

ಬೇಕು

ವಿದ್ಯಾವತಿಯರೂ ರೂಪವತಿಯರೂ ಚೆನ್ನಾಗಿ ಹಾಡ ಬಲ್ಲವರೂ ಆದ ನಟಿಯರು ಬೇಕಾಗಿವೆ. ವಿವರಗಳಿಗೆ ಬರೆಯಿರಿ.

'X'
C/o 'Navayuga' Udipi.

ಉಡುಪಿಯ ಆದರ್ಶ ಉಪಹಾರಗೃಹ !

ಶ್ರೀರಾಮಾ ರೆಸ್ಟೋರೆಂಟ್

ಸುಲಭ ದರದಲ್ಲಿ ತಿಂಡಿ ಪಾನೀಯಗಳು ! ಮಿತ ದರದಲ್ಲಿ ಊಟ ಉಪಚಾರಗಳು !

ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, ಅನುಭವಪೂರ್ಣ ಮೇಲ್ವಿಚಾರಣೆ !

ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳಿವಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿನ್ನ ಮುಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.

ಎಚ್. ಗೋಪಾಳ ನಾಯಕ್, ಪ್ರೊಪ್ರೈಟರ್.

ಇದೇ ತಿಂಗಳ ಆರಂಭದಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೆಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಡುವುದು.

ದಕ್ಷಿಣ ಕನ್ನಡ

ಮೂಲ್ಕಿ

ಇದೇ ಮೇ ತಿಂಗಳ ತಾ. ೨೧ನೇ ಶುಕ್ರವಾರ ಮ. ರಾ. ಕೋಟೆಕೇರಿ ಪೂವಪ್ಪನವರು ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘಕ್ಕೆ ಉಚಿತವಾಗಿ ಒಪ್ಪಿಸಲು ಕಟ್ಟಿಸಿದ ಕಟ್ಟಡದ ಪ್ರವೇಶ ಸಮಾರಂಭವು ಶ್ರೀ ಡಾ. ಯಂ ರಾಯಪ್ಪ ಕಾಮತ್ ಅವರ್ಗಳ್ ಯ.ಲ್ ಯಂ ಪಿ ಯವರ ಅಧ್ಯಕ್ಷತೆಯಲ್ಲಿ ಯೋಗ್ಯರೀತಿಯಲ್ಲಿ ನೆರವೇರಿತು ರಾ. ಕೆ. ಪೂವಪ್ಪನವರು ತಾನು ಕಟ್ಟಡಕಟ್ಟಿಸಿದ ಉದ್ದೇಶಗಳನ್ನು ಕುರಿತು ಭಾಷಣ ಮಾಡಿದರು ರಾ ಟಿ ನಾರಾಯಣ ಶೆಣೈರವರು ರಾ. ಬಿ ಭೋಜರಾಯರು, ರಾ. ಬಿ. ಅಣ್ಣು ಮಾಸ್ತರರು ಕೆ ಪೂವಪ್ಪನವರು ಈ ಸಂಘಕ್ಕೆ ಮಾಡಿದ ಉದಾರದಾನ, ಅವರಿಗೆ ಸಾರ್ವಜನಿಕ ಸೇವೆಯಲ್ಲಿದ್ದ ಆತುರ ಇತ್ಯಾದಿಗಳ ಕುರಿತು ಅವರಗುಣಗಳನ್ನು ಪ್ರಶಂಸಿಸಿ ಯೋಗ್ಯರೀತಿಯಲ್ಲಿ ಮಾತಾಡಿದರು. ಯಂ. ಕೆ ಎಲ್ಲಪ್ಪಮಾಸ್ತರರು ನೆರೆದ ಮಹನೀಯರ ಹಾಗೂ ಅಧ್ಯಕ್ಷರ ಉಪಕಾರ ಸ್ಮರಿಸಿ ಧನ್ಯವಾದಗಳನ್ನು ಅರ್ಪಿಸಿದರು

ಬಿಲ್ಲವ ಸಮಾಜಸೇವಾ ಸಂಘದ ಮಹಾಸಭೆ

ಈ ಸಭೆಯು ಇದೇ ಮೇ ತಿಂಗಳ ತಾ ೨೩ರಲ್ಲು ಮ ರಾ ರಾ. ಕೋಟೆಕೇರಿ ಪೂವಪ್ಪನವರು ಈ ಸಂಘಕ್ಕೆ ಉಚಿತವಾಗಿ ಒಪ್ಪಿಸಲು ಕಟ್ಟಿಸಿದ ನೂತನ ಮಂದಿರದಲ್ಲಿ ಗವರ್ನಮೆಂಟ್ ಕಂಟ್ರಾಕ್ಟರರೂ ಸ್ಪೆಶಲ್ ಒನರರಿ ಬೆಂಚ್ ಮಜಿಸ್ಟ್ರೇಟರೂ ಆದ ಮ ರಾ, ಯಂ ದೂಮಪ್ಪ ಅವರ್ಗಳರವರ ಅಧ್ಯಕ್ಷತೆಯಲ್ಲಿ ನೆರವೇರಿತು ರಾ. ಕೆ ಪೂವಪ್ಪನವರು ತನ್ನ ಸ್ವಾಗತ ಭಾಷಣದಲ್ಲಿ ನೆರೆದ ಮಹನಿಯರಿಗೆ ಸ್ವಾಗತವಿತ್ತು ತಾನು ಬಿಲ್ಲವ ಸಮಾಜ ಸೇವಾ ಸಂಘಕ್ಕೆ ಉಚಿತವಾಗಿ ಒಪ್ಪಿಸಿ ಕೊಡಲು ಕಟ್ಟಿಸಿದ ಈ ನೂತನ ಕಟ್ಟಡವನ್ನು ನೆರೆದ ಸಭಿಕರ ಸಮಕ್ಷಮ ಈ ಸಂಘಕ್ಕೆ ಬಿಟ್ಟುಕೊಟ್ಟಿದ್ದೇನೆಂದೂ, ಯಾವ್ಯೋದ್ದೇಶಕ್ಕಾಗಿ ಈ ಕಟ್ಟಡವನ್ನು ಈ ಸಂಘಕ್ಕೆ ಬಿಟ್ಟುಕೊಟ್ಟಿರುತ್ತೇನೋ ಆ ಉದ್ದೇಶವನ್ನೂ ಸಂಘದ ಸಕಲಮೆಂಬರರೂ ಜಾತಿ ಬಾಂಧವರೂ ಸಂಪೂರ್ಣತ್ವಕ್ಕೆ ಗೊಳಿಸುವರೆ ಯತ್ನಿಸಬೇಕಾಗಿ ಕೋರಿದರು ಸಂಘದ ವರದಿ ಓದಿ ಹೇಳಲ್ಪಟ್ಟನಂತರ ರಾ ಬಿ. ಭೋಜರಾಯರು, ರಾ. ಕೆ ಪೂವಪ್ಪನವರ ಉದಾರದಾನದ ಮತ್ತು ಸಂಘದ ಏಳಿಗೆಯ ಕುರಿತು ಬೋಧಪ್ರದವಾದ ಭಾಷಣಮಾಡಿದರು ತರುವಾಯ ರಾ ಯು. ದ ದು ಸುವರ್ಣರೂ ಬಿ ಅಣ್ಣು ಮಾಸ್ತರರೂ ಮತ್ತು ಯು ಬಿ. ಅನಂತಯ್ಯನವರೂ ಈ ನಿಸ್ವಾರ್ಥ ದಾನದ ಕುರಿತು ಪ್ರಶಂಸಿಸಿ ಭಾಷಣಗಳನ್ನು ಮಾಡಿದರು. ಸಂಘದ ಅಧ್ಯಕ್ಷರಾದ ಕೆ. ಪೂವಪ್ಪನವರನ್ನು ಸಂಘದ ಆಜೀವ ಅಧ್ಯಕ್ಷರನ್ನಾಗಿ ಮಾಡಬೇಕೆಂಬ ಠರಾವು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು ನೆರೆದ ಸಭಿಕರಲ್ಲಿ ಭಗಿನಿ ವೃಂದದಿಂದ ಈ ಮಂದಿರದಲ್ಲಿ ವಾರಕ್ಕೊಮ್ಮೆ ಸಭೆ ಸೇರಿಸಿ ಭಜನೆ ಪರಿಕೀರ್ತನೆ ಮೊದಲಾದ ಧಾರ್ಮಿಕ ಕಾರ್ಯಗಳನ್ನು ಜರಗಿಸಬೇಕೆಂದು ಬಂದ ಸೂಚನೆಯು ಮಾನಿಸಲ್ಪಟ್ಟಿತು ಕಾರ್ಯಕಾರಿ ಮಂಡಳಿಯ ಚುನಾವಣೆ ನಡೆದ ತರುವಾಯ ಅಧ್ಯಕ್ಷ ಮಹಾಶಯರು ಅಮೂಲ್ಯ ಭಾಷಣಮಾಡಿದರು

ಪುತ್ತೂರು

ಪುತ್ತೂರು ತಾಲೂಕು ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಮಹಾಸಭೆಯನ್ನು ಇದೇ ಜೂನು ತಾ ೧೯ನೇ ಶನಿವಾರ ಅಪರಾಹ್ಣ ಘಂಟೆ ೨ಕ್ಕೆ ಪುತ್ತೂರು ಬೋರ್ಡ ಹಾಯರೆಲಿಮೆಂಟರೀ ಶಾಲಾ ಕಟ್ಟಡದಲ್ಲಿ ಜರಗಿಸುವುದಾಗಿ ನಿಶ್ಚೈಸಿರುವುದರಿಂದ ಈ ತಾಲೂಕಿನ ಎಲಿಮೆಂಟರೀ ಶಾಲೆಗಳ ಉಪಾಧ್ಯಾಯ ಉಪಾಧ್ಯಾಯಿನಿಯರು ದಯಮಾಡಿ ಬರಬೇಕಾಗಿವಿನಂತಿ

ಕೆ. ಯಸ್. ಗಟ್ಟಿ.
ಸೆಕ್ರಿಟರಿ.

ಮೂಡಬಿದರೆ

ಇಲ್ಲಿಂದ ಬೈಂದೂರಿಗೆ ವರ್ಗಾಯಿಸಲ್ಪಟ್ಟ ಬೋರ್ಡು ಮಿಡ್ಲಸ್ಕೂಲಿನ ಹೆಡ್ಮಾಸ್ಟರ್ ಪಿ. ರಾಮಕೃಷ್ಣರಾಯರಿಗೆ ಸ್ಥಳೀಯ ಯೂನಿಯನ್ ಕ್ಲಬ್ಬಿನವರೂ ಮಿಡ್ಲಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದವರೂ ಶ್ರೀಯುತ ಗುರುಪುರ ಗೋಪಾಳ ಪೈಗಳೂ ಮತ್ತು ಕಾಳಾವರ ಭವಾನಿಶಂಕರ ರಾಯರೂ ವಿದಾಯ ಕೂಟಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ಜರಗಿಸಿ ಸತ್ಕರಿಸಿದರು

ಖಂಭದ ಕೋಣೆ

ಇದೇ ತಾ ೭9-5-37ರಲ್ಲು ಕೋಂಗ್ರೆಸು ಗ್ರಾಮ ಸಂಸ್ಥೆಗಳ ರಚನಾರ್ಥವಾಗಿ ಈ ಪ್ರಾಂತದಲ್ಲಿ ಪ್ರವಾಸಮಾಡುತ್ತಿದ್ದ ಶ್ರೀಯುತ ಎನ್ ಎಸ್. ಕಿಲ್ಲೆಯವರು ಇಲ್ಲಿಯ ಸದಾನಂದ ಕ್ಲಬ್ಬಿನ ಸರಹದ್ದಿನಲ್ಲಿ, ಸ್ಥಳೀಕ ಪ್ರಮುಖರಲ್ಲೊಬ್ಬರಾದ ಮ ರಾ. ರಾ. ಖಂಭದಕೋಣೆ ಭವಾನಿಶಂಕರರಾಯರ ಅಧ್ಯಕ್ಷತೆಯಲ್ಲಿ ನೆರೆದಿದ್ದ ನೂರಾರು ಮಂದಿ ಸಭಿಕರ ಮುಂದೆ ತಮ್ಮ ಅಚ್ಚುಮೆಚ್ಚಿನ ನುಡಿಗಳಿಂದ ಕೋಂಗ್ರೆಸಿನವರು ಈ ತನಕ ಮಾಡಿದ ಕೆಲಕೆಲಸಗಳ ಕುರಿತು ಸಂಕ್ಷೇಪವಾಗಿ ಕುರಿತು ವಿವರಿಸಿ ಮುಂದೆ ಕೊಂಗ್ರೆಸ್ಸು ಗ್ರಾಮ ಸಂಸ್ಥೆಗಳನ್ನು ಸ್ಥಾಪಿಸುವ ಆವಶ್ಯಕತೆ, ಅವು ಮಾಡತಕ್ಕ ಕಾರ್ಯಕಲಾಪಗಳು, ಅವುಗಳಿಂದಿರುವ ಪ್ರಯೋಜನಗಳು ಇತ್ಯಾದಿ ವಿಷಯಗಳನ್ನು ನೆರೆದ ಮಂದಿ ಎಂದೂ ಮರೆಯದಂತೆ ವಿವರಿಸಿ ತಮ್ಮ ಭಾಷಣವನ್ನು ಕೊನೆಗೊಳಿಸಿದರು ಸಭಿಕರಲ್ಲಿ ಶ್ರೀಮಾನ್ ಬಿ ಸುಬ್ಬಣ್ಣ ಶೆಟ್ರು ವಗ್ಯೆರೆಯವರ ಸಂದರ್ಭೋಚಿತ ಭಾಷಣಗಳಾದ ತರುವಾಯ ಅಧ್ಯಕ್ಷ ಮಹಾಶಯರು ತಮ್ಮ ಮುದ್ದಾದ ನುಡಿಗಳಿಂದ ಸಂಕ್ಷೇಪದಲ್ಲಿ ಕೋಂಗ್ರೆಸು ಗ್ರಾಮ ಸಂಸ್ಥೆಗಳ ಕುರಿತು ಕೆಲವಿಷಯಗಳನ್ನು ಸಭಿಕರ ಮುಂದಿಟ್ಟಮೇಲೆ ನೆರೆದ ಮಹನೀಯರಲ್ಲಿ ಕೂಡಲೇ ಕೆಲವರು ಮೆಂಬರರಾಗಿ ಸೇರಿದ್ದಲ್ಲದೆ ಕೆಲಮಂದಿ ಇನ್ನು ಕೆಲವೇ ದಿನಗಳಲ್ಲಿ ಸೇರುತ್ತೇವೆಂಬುದಾಗಿ ವಾಗ್ದತ್ತವಿತ್ತ ತರುವಾಯ ಶ್ರೀಯುತ ಕಿಲ್ಲೆಯವರಿಗೂ ಅಧ್ಯಕ್ಷರಿಗೂ ಇನ್ನಿತರ ಮಹನೀಯರಿಗೂ ಧನ್ಯವಾದಗಳನ್ನರ್ಪಿಸಿ ಸಭೆಯು ಮುಕ್ತಾಯವಾಯಿತು.

ಕೋಡಿಬಾಡಿ

ಇಲ್ಲಿಯ ಶಾಂತಿನಿಕೇತನ ವಿದ್ಯಾರ್ಥಿಗಳ ನಾಟ್ಯತುರ್ಯ ಪ್ರದರ್ಶನ ಸಂಘದ ಕೂಟವು ತಾ. ೨೭ ೫ ೩೭ನೇ ದಿನ ಉಡುಪಿ ರೇಂ. ಶಾಲೆಗಳ ಸಂ ಡಿ. ಇ ಶ್ರೀ ಕೆ. ರಾಮಯ್ಯ ನಾಯಕರವರ ಅಧ್ಯಕ್ಷತೆಯಲ್ಲಿ ಸೇರಿತು ಈ ದಿವದ ಸಭೆಗೆ ಮಾನ್ಯ ಜೂ ಡಿ. ಇ ಎಮ್ ಪದ್ಮನಾಭಯ್ಯನವರೂ ಬಂದಿದ್ದರು ಸಭೆಯಲ್ಲಿ ನೌಕರಿಯೂ ಕೈಗಾರಿಕೆಯೂ ಎಂಬ ವಿಚಾರ ತರ್ಕಿಸಲ್ಪಟ್ಟಿತು ಅಧ್ಯಕ್ಷರು ಸರಸವಾದ ಭಾಷಣದಿಂದ ಸಭಿಕರ ಮನಸ್ಸಂತೋಷಗೊಳಿಸಿದರು.

ಈ ದಿನ ರಾತ್ರಿ ದಿನಮಣಿ ಸ್ಕಾಟ್ ದಳದವರು ಮಾನ್ಯ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಶಿಬಿರಾಗ್ನಿಯನ್ನು ಹೊತ್ತಿಸಿ ವಿವಿಧ ವಿನೋದಾವಳಿಗಳಿಂದಲೂ ಲೇಜಿಮ್ ಆಟಗಳಿಂದಲೂ ಕೂಡಿದ ಜನಸ್ತೋಮವನ್ನು ಸಂತುಷ್ಟಪಡಿಸಿದರು

ಕುಂದಾಪುರ

ಇಲ್ಲಿಯ ಪ್ರಮುಖ ತಾಂಬ್ರ ಹಿತ್ತಾಳೆಯ ಪಾತ್ರೆ ವ್ಯಾಪಾರಿಗಳಾದ ಶ್ರೀ. ಬಿ ವೆಂಕಟ್ರಮಣ ಕಾರಂತರ ಮೇಲೆ ಕಳವಿನ ಪಾತ್ರೆಗಳನ್ನು ಕೊಂಡುಕೊಳ್ಳುತ್ತಿರುವರೆಂಬ ಆರೋಪದ ಮೇಲೆ ನಡೆಸಿದಖಟ್ಲೆಯು ತನ್ಕಿನಡೆದು ಶ್ರೀ. ಬಿ ವಿ. ಕಾರಂತರು ನಿರಪರಾಧಿಗಳೆಂದು ತಾ. ೩೧-೫-೩೭ರಲ್ಲು ಬಿಡುಗಡೆ ಹೊಂದಿದ ಸಂಗತಿಯನ್ನು ತಿಳಿಸಲು ಸಂತೋಷವೆನ್ನಿಸುತ್ತದೆ

ಈ ತಾಲೋಕಿನ ಕೊರ್ಗಿ ಮೊಳಹಳ್ಳಿ ಮೊದಲಾದ ಗ್ರಾಮಗಳಲ್ಲಿ ನರಭಕ್ಷಕ ಹುಲಿಗಳ ಕಾಟವು ಹೆಚ್ಚಾಗಿರುತ್ತದೆಂತಲೂ ಜನರು ಭೀತರಾಗಿ ತಮ್ಮ ಕೆಲಸಕಾರ್ಯಗಳನ್ನು ನೆಮ್ಮದಿಯಿಂದ ನಿರ್ವಹಿಸುವದು ಕಷ್ಟವಾಗಿರುತ್ತದೆಂತಲೂ ತಿಳಿದು ಬರುತ್ತದೆ. ಈ ಬಾಬಿನಲ್ಲಿ ಹುಲಿಯ ಶಿಕಾರಿನವಿಸಿ ಮೇಲಿನ ತೊಂದರೆಗಳಿಂದ ಪಾರುಮಾಡುವಂತೆ ಸರಕಾರದ ದಯಾದೃಷ್ಟಿಯು ಈ ಕಡೆ ಬೀಳುವದು ಒಳಿತೆಂದು ಬಹಸ್ಸೈರ ಅಂಬೋಣ.

ಕಾಂಗ್ರೆಸುಸದಸ್ಯರನ್ನು ಕೂಡಿಸುವ ಹಾಗೂ ಪ್ರಚಾರ ಮಾಡಲು ಇತ್ತ ಸಂಚರಿಸುತ್ತಲಿದ್ದ ಶ್ರೀ. ಎನ್. ಎಸ್. ಕಿಲ್ಲೆಯವರು. ಬೈಂದೂರು ಉಪ್ಪುಂದ ಖಂಬದಕೋಣೆ ಕಿರಿಮಂಜೇಶ್ವರ ಕೆಂಚನೂರು ಈ ಕಡೆ ಸುತ್ತಾಡಿ ಕುಂದಾಪುರ ಮತ್ತು ಬಸರೂರಲ್ಲಿ ಈಗಿನ ರಾಜಕೀಯ ಪರಿಸ್ಥಿತಿಯ ಕುರಿತು ಮಹಾಜನರ ಸಭೆಯಲ್ಲಿ ಭಾಷಣವನ್ನಿತ್ತರು. ಹಲವು ಜನರು ಕಾಂಗ್ರೆಸುಸದಸ್ಯರಾಗಿ ಸೇರಿರುವರೆಂದು ತಿಳಿದು ಬಂದಿದೆ ಈ ಕಡೆ ಮಳೆ ಇನ್ನೂ ಪ್ರಾರಂಭವಾಗಲಿಲ್ಲ. ಬಿಸಿಲು ಸೆಕೆಯೂ ವಿಶೇಷವಿದೆ. ಜನರು ಮಳೆಗಾಗಿ ಕಾಯುತ್ತಿರುವರು

ಕಲ್ಯಾಣಪುರ

ಇದೇ ಬರುವ ತಾ ೧೩-೬-೩೭ನೇ ರವಿವಾರ ಮಧ್ಯಾಹ್ನ ಘಂಟೆ ೧೨ಕ್ಕೆ ಬಿಲ್ಲವ ಯುವಕ ಸಭೆಯವರು ತೋನ್ಸೆ ನಿಡಂಬಳ್ಳಿ ಎಲಿಮೆಂಟರಿ ಶಾಲೆಯಲ್ಲಿ ಮಳಯಾಳ ಬಿಲ್ಲವ ಯುವಕರನ್ನು ಕೂಡಿಸಿ ಮುಂದಿನ ಏಳಿಗೆಯ ಕುರಿತು ಒಂದು ಯುವಕ ಸಭೆಯನ್ನು ಸೇರಿಸುವರೆಂದು ತಿಳಿದು ಬರುತ್ತದೆ ಕಳೆದ ೯. ೫ ೬-೩೭ನೇ ಶನಿವಾರ ದಿವಸ ಪಕ್ಕಿಬೆಟ್ಟು ಗರಡಿಯಲ್ಲಿ ಭಜನೆ ಮಂಡಳಿಯೊಂದು ಗರಡಿ ಯುವಕರಿಂದ ಸ್ಥಾಪಿಸಲ್ಪಟ್ಟಿತು. ಆ ದಿವಸದಲ್ಲಿ ಮಲ್ಪೆ ಬಿಲ್ಲವ ಭಜನೆ ಮಂಡಳಿಯವರು ಪ್ರೋತ್ಸಾಹಿಸಿದುದಕ್ಕಾಗಿ ಬಿಲ್ಲವ ಯುವಕ ಸಭೆಯವರು ಟೀಪಾರ್ಟಿಯನ್ನು ಕೊಡುವರೆಂದೂ, ಆ ದಿವಸದ ಕೆಲಸವನ್ನು ಪೂರೈಸಿದ ದಕ್ಕೆ ಚಿರ ಋಣಿಯಾಗಿರುವರೆಂದೂ ತಿಳಿದುಬರುತ್ತದೆ.

This is not a Prospectus but a trade advertisement.

ಗೋಕುಲದಾಸ ಫಾರ್ಮ್ಸ್ ಲಿಮಿಟೆಡ್,
ಮಂಗಳೂರು.

ಮಂಗಳೂರು ಮತ್ತು ಉಡುಪಿ ಮಹಾಜನರ ವಿಶೇಷ ಸೌಕರ್ಯಕ್ಕಾಗಿ!

ಪಾಲು ಒಂದರ ಬೆಲೆ ರೂ. ೫ ಮಾತ್ರ !

ಶುದ್ಧವಾದ ಪುಷ್ಟಿಕರವಾದ ಹಾಲು, ಬೆಣ್ಣೆ, ಮೊಸರು ಮೊದಲಾದುವನ್ನು ಸುವ್ಯವಸ್ಥಿತ ಆಧುನಿಕ ರೀತಿಯಲ್ಲಿ ಒದಗಿಸಿಕೊಡುವುದೇ ಈ ನೂತನ ಸಂಸ್ಥೆಯ ಜೀವಾಳ

ಅಧಿಕ ಲಾಭದಾಯಕವಾದ ಸಾರ್ವಜನಿಕ ಮಿತಜವಾಬ್ದಾರಿಯ ನೆಲೆಯಲ್ಲಿ ಸ್ಥಾಪಿತವಾದ ಈ ನೂತನ ಸಂಸ್ಥೆಯು ಅಖಿಲ ದಕ್ಷಿಣಭಾರತದಲ್ಲೇ ಮೊದಲನೆಯದು.

ಆದುದರಿಂದ ಪ್ರೊಸ್ಪೆಕ್ಟಸ್ ಫೋರ್ಮುಗಳಿಗಾಗಿ ಈಗಲೇ ಬರೆದು ಕಂಪೆನಿಯ ಪಾಲುಗಳನ್ನು ಪಡಕೊಳ್ಳಿರಿ !

WANTED

Candidates for Telegraph and station Master class. Allowance Rs. 28. Uniform, passage and quarter free. Service essential. Rules and Entrance from on annas eight. Director, Royal Telegraph and Ry. Duties College, Bombay 14.

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮಧ್ವಭುವನೇಂದ್ರ ಮಹೌಷಧಾಲಯ.

ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ--- ಗುಡಪಿಪ್ಪಲಿ (ಲೀವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರಕೊಳ್ಳಿರಿ.

SUKHA NIVAS

Court Road, UDIPI

(Opp:- TALUK OFFICE)

Modern Model! Homely Hotel!

HIGH CLASS SWEETS AND SAVERIES

Coffee, Tea, Cocoa, delicious & fragrant.

VERY NEAR TO GANDHI MAIDAN, TALUK OFFICE, COURT & HIGH SCHOOLS

Our Building enjoys a magnificient site and rooms are well Ventilated and breezy.

THE ONLY PLACE FOR

FASHIONABLE ENTERTAINMENTS AND MEALS.

ORDERS FOR TEA-PARTIES ACCEPTED AT SHORT NOTICE

MODERATE CHARGES

Prop:-H.Vasudeva Nayak &Bros

ಸುಖನಿವಾಸ ಉಡುಪಿ.

ಸುವ್ಯವಸ್ಥೆಯ ಮೇಲ್ವಿಚಾರಣೆ

ಉಚಿತವಾದ ಸುಖದ ತವರುಮನೆ

ನಿರ್ಮಲವಾದ ಊಟದ ಸಲಕರಣೆ

ವಾಯುಸೇವನೆಗೆ ಯೋಗ್ಯಯೋಜನೆ

ಸಕಲಜನ ಮನರಂಜನೆಯ ಸಂಯೋಜನೆ

ಈ ಅನುಕೂಲತೆಗಳಿರುವುದರಿಂದ ವಿದ್ಯಾರ್ಥಿಗಳಿಗೂ ಉದ್ಯೋಗಸ್ಥರಿಗೂ ಪ್ರಯಾಣಿಕರಿಗೂ ಯೋಗ್ಯವಾದ ಹೋಟೆಲೆಂದರೆ

ಸುಖನಿವಾಸವೊಂದೇ.

ಕಾಫಿಗೆ, ತಿಂಡಿಗೆ, ಭೋಜನಕ್ಕೆ, ಉಳಕೊಳ್ಳಲಿಕ್ಕೆ ನಕ್ಕು ನಲಿಯಲಿಕ್ಕೆ, ಸುಖನಿವಾಸಕ್ಕೆ,

ಸುಖನಿವಾಸವೊಂದೇ

ಜ್ಞಾಪಕದಲ್ಲಿಡಲು ಯೋಗ್ಯವಾಗಿದೆ.

ಸುಖನಿವಾಸವು ಕೋರ್ಟು ಕಚೇರಿಗಳಿಗೂ ಹೈಸ್ಕೂಲುಗಳಿಗೂ ಮಧ್ಯರಂಗದಲ್ಲಿದ್ದು ಅತ್ಯಾಧುನಿಕ ಅನುಕೂಲತೆಗಳಿಂದ ಒಡಗೂಡಿದೆ.

ಸರಿಯಾಗಿ ಗಾಳಿಬೆಳಕುಳ್ಳ ಕೋಣೆಗಳು!

ಟೀಪಾರ್ಟಿಯ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಸುಖನಿವಾಸದ ಭೋಜನ / ಕಾಫಿ, ತಿಂಡಿ ಮನೋವಿಕಾಸದ ಮೂಲ.

ವ್ಯವಸ್ಥಾಪಕರು:—

ಎಚ್. ವಾಸುದೇವ ನಾಯಕ್, ಎಂಡ್ ಬ್ರದರ್ಸ್.

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! **ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!!**

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳೆಲ್ಲದರಲ್ಲೂ ಸಾವಿರಗಟ್ಟಲೆ ಇದ್ದಾಗ್ಯೂ

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಕ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಿಬೂಟಿ ನಗರಗಳಲ್ಲೂ, ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರು ಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡೆವಳಿಗಳಾವುವು? ಅಲ್ಲಿನ ವೇಶ್ಯಾವಾಟಗಳು, ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳ ಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ.

ಅನೇಕ ವೇಶ್ಯೆಯರ ಜೀವನ ಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ. ಮೊದುಳಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ!

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅತ್ಯಾವಶಕವಾದುದು.

ಈ ಪುಸ್ತಕವನ್ನು ಓದಬೇಕು! **ಮನೋವೈಶಾಲ್ಯವನ್ನು ಪಡೆಯಬೇಕು!**

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು

ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು

ಅವರಿಗೆ ಇವರಿಗೆ ಎನ್ನುವುದೇನು? ಎಲ್ಲರಿಗೂ ಬೇಕು.

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ.

ಉತ್ತಮವಾದ ಹೊಳಪು ಕಾಗದ, ೩೦೦ ಪುಟಗಳು.

ಬೆಲೆ ರೂ. ೧-೮-೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು.

ಮೈಸೂರಿನಲ್ಲಿ ಲ್ಯಾನ್ಸ್ ಡೌನ್, ಬಜಾರ್, ಸ್ಟೇಟ್ ಮಾರ್ಟ್‌ನಲ್ಲಿ, ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿಯಲ್ಲಿ ದೊರಕುತ್ತದೆ

ಟಾಗೂರ್ ಅಂಡ್ ಕೋ, (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ.

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. [ಸಂ. ನ.]

ಕಾಪು ಮಲ್ಲಾ ಮಾರಿ ಪುಟ್ಟಣ್ಣ ಭಟ್ಟರು ಜೂನ್ ತಿಂಗಳ ಶ್ರೀ ಕೃಷ್ಣಸಂದೇಶದಲ್ಲಿ ಪಟ್ಟ ಸಂದೇಹಕ್ಕೆ ಉತ್ತರ

ತೌಳವರಲ್ಲಿ ಮೃತಾಶೌಚವನ್ನು ಏಕೋದ್ದಿಷ್ಟ ಪರ್ಯಂತರ ಆಚರಿಸುವ ಪದ್ಧತಿಯಿಲ್ಲ. ಏಕೆಂದರೆ, ಏಕೋದ್ದಿಷ್ಟವು ಆಗದೆ ಇದ್ದರೂ ತೌಳವರೇ ಆದ ಮ. ರಾ. ರಾ. ವೆಂಕಟವರಾಹಾಚಾರ್ಯ ಮತ್ತು ವಾದಿರಾಜಾಚಾರ್ಯರೇ ಮೊದಲಾದವರು ಹತ್ತು ದಿನಗಳಾದೊಡನೆಯೇ ಶುದ್ಧಿಮಾಡಿಕೊಂಡರೂ ಗುರುಮಠದವರೂ ಯಾ ಈಗ ಸಂದೇಹಪಟ್ಟವರೇ ಮೊದಲಾದವರೂ ವಿಚಾರವಿಲ್ಲದೆ ಅವರಿಂದ ಕೂಡಿ ನಡೆದುಕೊಂಡುಬಂದರೂ ಪೂರ್ವಾಚಾರಪರಿತ್ಯಾಗದೋಷ, ಸಮಾಜಕ್ಷೋಭೆ, ಮೃತಕ್ರಿಯಾಭಾವಾದಿಶಂಕಾ ಏನೂ ತೋರದೆ, ಈಗ ಮಾತ್ರ ಹೆದರಲಿಕ್ಕೆ ಅಂತಹ ಪ್ರಸಂಗವೇನು ಬಂತು? ಸದ್ರಿ ಭಟ್ರು ಈ ವರೆಗೆ ನಿದ್ರಿಸಿ ಈಗ ಎಚ್ಚತ್ತರೋ; ಅಥವಾ ಯಾರಾದರೂ ಹಿಂದಿನಿಂದ ಕಡ್ಡಿಹಾಕಿ ಎಬ್ಬಿಸಿದರೋ? ಇದೂ ಅಲ್ಲದೆ ಇದಕ್ಕಿಂತ ಪೂರ್ವದಲ್ಲಿ ಪಂಡಿತ ತಿಲಕರಾದ ಕೀರ್ತಿಶೇಷ ಅಥಮಾರು ಶ್ರೀ ಶ್ರೀಗಳವರೂ ಇಂತಹ ಸಂದರ್ಭದಲ್ಲಿಯೇ ಕುಟುಂಬದವರು ಅಂಧಶ್ರದ್ಧೆಯಿಂದ ಆಸ್ಪೃಗಳಾಗಿರುವಾಗಲೇ ಆ ಕುಟುಂಬಕ್ಕೇ ಸೇರಿದ ಶ್ರೀ. ಕುಪ್ಪಣ್ಣ ತಂತ್ರಿಗಳನ್ನು ಶುದ್ಧಿಪಡಿಸಿ ತಮ್ಮ ಮಠದಲ್ಲಿ ಅವರ ಕೈಯಿಂದಲೇ ಹವನಾದಿ ಕ್ರಿಯೆಗಳನ್ನು ಮಾಡಿಸಿದ್ದಾರೆಂಬುವುದು ಎಲ್ಲರಿಗೂ ತಿಳಿದ ವಿಷಯವೇ. ಆಗ ಭಟ್ಟರು ಯಾವ ಮೂಲೆಯಲ್ಲಿ ಮಲಗಿದ್ದರೋ! ಇದೂ ಅಲ್ಲದೆ ದೀರ್ಘಾಶೌಚದಲ್ಲಿ ಬದ್ಧ ಶ್ರದ್ಧರಾದ ಮತ್ತು ಮಹಾಕರ್ಮಠರಾದ ಹಿಂದಿನ ಕೃಷ್ಣಾಪುರ ಶ್ರೀ ಶ್ರೀಗಳವರೂ ಸಹ, ನೂರಾರು ಜನರು ಸೇರಿದ್ದ ಸಂಸ್ಕೃತ ಕಾಲೇಜಿನ ವರ್ಧಂತಿಯ ದಿವಸ ಇತರ ಶ್ರೀಗಳವರ ಸಮಕ್ಷ ಇಂತಹ ಪ್ರಸಂಗದಲ್ಲಿಯೇ ಸೂತಕಭ್ರಮೆಯಿಂದ ಕುಟುಂಬದ ಹಲವು ವಿದ್ಯಾರ್ಥಿಗಳು ದೂರ ಕುಳಿತಿದ್ದಾಗ ಶಾಸ್ತ್ರಪ್ರಕಾರ ಶುದ್ಧಿಮಾಡಿಕೊಂಡುಬಂದ ಅದೇ ಕುಟುಂಬದವರಾದ, ಆವಮಾರು ಶ್ರೀಗಳವರ ಶಿಷ್ಯ ಪಂಡಿತ ಕುಪ್ಪಣ್ಣಾಚಾರ್ಯರಿಗೂ, ಕಾಲೇಜಿನ ನ್ಯಾಯ ಪ್ರಧಾನಾಧ್ಯಾಪಕ ಹಾಗೂ ತಮ್ಮ ಮಠದ ಪಂಡಿತರೂ ಆದ ಪ. ನಾರಾಯಣಾಚಾರ್ಯರಿಗೂ ಸ್ವತಃ ಮಂತ್ರಾಕ್ಷತೆಕೊಟ್ಟ ವಿಷಯವನ್ನು ಕೇಳಿ ತಿಳಿದುಕೊಂಡರೆ ಭಟ್ಟರ ಸಂಶಯಪಿಶಾಚಿಯು ಉಚ್ಚಾಟನೆ ಆಗಲಿಕ್ಕಿಲ್ಲವೇ? ಹೆಚ್ಚೇಕೆ? ಮ. ರಾ. ರಾ. ವೆಂಕಟವರಾಹ ಆಚಾರ್ಯರ ಮನೆಯ ಮುಂಭಾಗದಲ್ಲಿ, ದಿವಂಗತ ಕ. ಪದ್ಮನಾಭಾಚಾರ್ಯರೇ ಮುಂತಾದ ಪಂಡಿತರ ಸಭೆಯಲ್ಲಿಯೇ ಈ ವಿಷಯವು ವ್ಯವಸ್ಥಿತವಾಗಿರುವುದು. ಹಿಂದಿನಿಂದಲೂ ಕೆಲವು ಮಠೀಯರು ತಮ್ಮತಮ್ಮ ಸಂಪ್ರದಾಯವೆಂದು ಭಿನ್ನಾಭಿಪ್ರಾಯದಿಂದಿರುವುದು ಸಿದ್ಧವೇ! ಹೀಗಿದ್ದರೂ ಸಮಾಜಕ್ಷೋಭೆ, ಪರಸ್ಪರ ಕಲಹವೇ ಮೊದಲಾದ ಯಾವದೊಂದು ಅನರ್ಥವೂ ತೋರಿಬರದಿದ್ದರೂ, ಈಗ ಮಾತ್ರ ನಮ್ಮ ಭಟ್ಟರು ಏನೂ ತಿಳಿಯದವರಂತೆ ಹೆದರುವುದನ್ನು ನೋಡುವಾಗ ಭಟ್ಟರ ವಿಷಯದಲ್ಲಿ ನಮಗೆ ಬಹಳ ಕರುಣೆಯಾಗುತ್ತದೆ! ಇನ್ನು ಗುರುಮಠದವರ ಅನುಮತಿಯ ವಿಷಯದಲ್ಲಿ ಸಂದೇಹವಿದ್ದರೆ, ಶುದ್ಧಿಮಾಡಿಕೊಂಡಿದ್ದೇವೆಂತ ಹೇಳುವವರ ಸಮಕ್ಷ ಹೋಗಿ ಶುದ್ಧಿಪತ್ರವಿದೆಯೇ ಮಠಕ್ಕೆ ಹೋಗಿ ಶುದ್ಧಿಪತ್ರ ಕೊಟ್ಟಿದ್ದುಂಟೋ; ಎಂದಾಗಲೀ ಕೇಳುವುದನ್ನು ಬಿಟ್ಟು ಸಂದೇಶದಲ್ಲಿ ಬೊಬ್ಬಿಟ್ಟರೆ ಇತರರೇನೆಂದಾರು? ಈ ವಿಷಯ ಪ್ರಾಯಶಃ ನಮ್ಮ ಭಟ್ಟರಿಗೆ ತಿಳಿಯಲಿಲ್ಲ, ಹಿಂದಿನಿಂದ ಹೇಳಿಕೊಡುವವರೂ ತಿಳಿಸಲಿಲ್ಲವೆಂದು ಕಾಣುತ್ತೆ ಪಾಪ! ಇನ್ನು ಅವರ ಸಂದೇಹ ಪ್ರಶ್ನೆಗಳಿಗೆ ಸಮಾಧಾನವೇನೆಂತ ನೋಡೋಣ.

ಪ್ರಶ್ನೆ ೧ರ ಉತ್ತರ- ಈ ವಿಷಯದಲ್ಲಿ ಏಕೋದ್ದಿಷ್ಟ ಕ್ರಿಯೆಯು ಅವಶ್ಯಕವಿಲ್ಲವೋ ಎಂಬ ಸಂದೇಹಕ್ಕೆ ಅವಕಾಶವೇ ಇಲ್ಲ.

ಪ್ರಶ್ನೆ ೨-ಸಪಿಂಡರಿಗೆ ದಶಾಹಾಂತದಲ್ಲಿ ಆಶೌಚನಿವೃತ್ತಿಯು ನ್ಯಾಯ ಧರ್ಮ ಶಾಸ್ತ್ರ ಸಮ್ಮತವಾದುದು.

ಪ್ರಶ್ನೆ ೩-ಪ್ರಾಮಾಣಿಕ ಪೂರ್ವಪದ್ಧತಿಯ ಪರಿತ್ಯಾಗವೇ ದೋಷಾಧಾಯಕವಲ್ಲದೆ ಇತರವಲ್ಲ.

ಪ್ರಶ್ನೆ ೪-ಇತರದೇಶದಲ್ಲಿ ಶುದ್ಧಿಯಾಗುವುದಿದೆ.

ಪ್ರಶ್ನೆ ೫-ಉತ್ತರ ಕ್ರಿಯಾಭಾವಶಂಕೆಯಿಂದ ದೀರ್ಘಾಸ್ಪೃಗಳಾಗಿರಬೇಕಾದರೆ, ಸಪಿಂಡೀಕರಣ ಕ್ರಿಯಾಭಾವಶಂಕೆಯಿಂದ, ಸಪಿಂಡೀಕರಣ ಕ್ರಿಯಾ ಪರ್ಯಂತರವೂ ಆಸ್ಪೃಗಳಾಗಿರಬೇಕೆಂದು ಹೇಳಬೇಕಾದೀತು. ಪುರಾತನವಾದ ಈ ಕ್ರಮದಿಂದ ಹೇಗೆ ಸಪಿಂಡೀಕರಣ ಕ್ರಿಯೆಯು ನಡೆಯದಿರಲು ಅವಕಾಶಕೊಟ್ಟಂತಾಗುವದಿಲ್ಲವೋ ಹಾಗೆಯೇ ಏಕೋದ್ದಿಷ್ಟಾತ್ಪೂರ್ವದಲ್ಲಿ ಶುದ್ಧಿಮಾಡಿಕೊಂಡರೂ ಉತ್ತರ ಕ್ರಿಯೆಯು ನಡೆಯದಿರಲವಕಾಶ ಕೊಟ್ಟಂತಾಗುವುದಿಲ್ಲ.

ಪ್ರಕೃತ ಇಷ್ಟು ಸಾಕು,

—ದೇರಿ ಬಾಳಕಟ್ಟ ಕೃಷ್ಣ ಭಟ್ಟ.

ಅಡಿಕೆ ತೋಟದ ಮಹಾಲಿ ರೋಗವೂ ರೇವಿನ್ಯೂ ಆಫೀಸರ ತನಖಿಯೂ

ಅಡಿಕೆ ತೋಟದ ಕೊಳೆ ರೋಗದ ಕುರಿತು ಈ ವರ್ಷದ ತೀರ್ವೆಯಲ್ಲಿ ರಿಯಾಯಿತಿ ಉಂಟೆಂತ ಕೊಳೆ ರೋಗದ ಕಷ್ಟದಲ್ಲಿ ಬಿದ್ದವರೆಲ್ಲರೂ ಆಶೆ ಇಟ್ಟುಕೊಂಡಿದ್ದರು. ನಮ್ಮ ಕುಂದಾಪುರ ತಾಲೂಕಿನಲ್ಲಿ ಅಲ್ಪ ಸ್ವಲ್ಪ ರಿಯಾಯಿತಿ ಆಗಿದ್ದರೂ ನ್ಯಾಯವಾದ ರೀತಿಯಲ್ಲಿ ರಿಯಾಯಿತಿ ಆಗದೆ ಗವರ್ನಮೆಂಟ್ ಆಫೀಸರ ಮನಸ್ಸು ಬಂದಂತೆ ಆಗಿರುತ್ತದೆ. ಅದಕ್ಕೊಂದು ಉದಾಹರಣೆ:—ನನಗೆ ಸ್ವಂತ ೮ ಎಕ್ರೆ ತೋಟವಿದ್ದು ಕೊಳೆ ರೋಗದಿಂದ ತುಂಬಾ ನಷ್ಟವಾಗಿ ರೂಪಾಯಿಗೆ ಬರೇ ನಾಲ್ಕಾಣೆ ಪೈರು ಉಳಿದಿದೆ, ಅದೂ ಅಲ್ಲದೆ ಕೊಳೆ ರೋಗದ ಹಾವಳಿಯ ಪರಿಣಾಮವಾಗಿ ಸಾವಿರಕ್ಕೆ ಮಿಕ್ಕಿದ ಮರಗಳು ಸತ್ತು ಹೋಗಿವೆ. ಅದರ ತನಿಖೆ ಬಗ್ಗೆ ಮಾನ್ಯ ಕುಂದಾಪುರ ತಶಿಲ್ದಾರರವರು ಬಂದು ರೂಪಾಯಿಗೆ ೮ ಆಣೆ ಪೈರು ಎಂತ ಬರೆದಿರುತ್ತಾರಂತೆ. ಅದರಂತೆ ನಮಗೆ ರಿಯಾಯಿತಿಯಲ್ಲಿ ಯಾವ ಅಂಶವೂ ಸಿಗಲಿಲ್ಲ. ಅದೇ ಪ್ರಕಾರ ನಮ್ಮ ನೆರಮನೆ ಆಗ್ರಹಾರ ಎಂಬಲ್ಲಿ ಸುಮಾರು ೫ ಎಕ್ರೆ ತೋಟವಿದ್ದು, ನಮ್ಮ ತೋಟದ ಇನ್ಸಪೆಕ್ಷನ್ನು ಮುಗಿಸಿ, ಅದರ ಇನ್ಸಪೆಕ್ಷನ್ನಿಗೆ ಹೋಗುವಾಗಲೆ ಕತ್ತಲೆಯಾಗಿತ್ತು. ತೋಟವನ್ನು ಕತ್ತಲಲ್ಲಿ ನೋಡಲಿಕ್ಕಾಗದ ಕಾರಣ ಅವರ ಅಡಿಕೆ ಪೈರು ಸಂಪೂರ್ಣವಾಗಿ ಉದುರಿ ಹೋಗಿದೆಯಂತ ಬರದಂತೆ ಶ್ರೀನಿವಾಸಭಟ್ಟರೆಂಬವರಿಗೆ ರೂಪಾಯಿಗೆ ೮ ಆಣೆ ತೀರ್ವೆ ರಿಯಾಯಿತಿ ಆಗಿದೆ. ಕಳೆದ ವರ್ಷವೂ ಅವರ ತೋಟಕ್ಕೆ ಕೊಳೆ ಕಡಿಮೆ ಇದ್ದು ರೂಪಾಯಿಗೆ ಹತ್ತಾಣೆ ಬೆಳೆ ಸಿಗಬಹುದು. ಈ ರೀತಿ ರೇವಿನ್ಯೂ ಆಫೀಸಿನವರ ತನಿಖೆಯು ನಮ್ಮೆರಡು ತೋಟಗಳಲ್ಲಿ ಸೂರ್ಯನ ಬೆಳಕು ಮತ್ತು ಕತ್ತಲುಗಳನ್ನು ಆದರಿಸಿ ಕೊಳೆಯ ನಿರ್ಣಯ ಮಾಡಿದುದಕ್ಕಾಗಿ ಪಶ್ಚಾತ್ತಾಪ ಪಡುತ್ತೇನೆ. ಇದೇ ರೀತಿ ಎಲ್ಲಾ ಕಡೆಗಳಲ್ಲಿ ಆಗಿದ್ದರೆ ರೈತರಿಗೆ ತುಂಬಾ ಅನ್ಯಾಯವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

—ಮಾಸಂಜೆ ಶೇಷಗಿರಿ ರಾವ್

ಶ್ರೀ ಕೃಷ್ಣಸಂದೇಶವೂ, ಕೃಷ್ಣಮಹಿಮಾದರ್ಶವೂ

ವೈದಿಕ ಧರ್ಮವೀರ ಸಂಘದಿಂದ, ಪ್ರಕಟಿಸಲ್ಪಡುತ್ತಿರುವ ಶ್ರೀ ಕೃಷ್ಣಸಂದೇಶದಲ್ಲಿ "ಶ್ರೀ ಕೃಷ್ಣ ಮಹಿಮಾದರ್ಶ" ಎಂಬೊಂದು ದೀರ್ಘ ಲೇಖನವು ಪ್ರಕಟವಾಗುತ್ತಿದೆ. ಸಂದೇಶದ ಧ್ಯೇಯವು ಧರ್ಮದ ತಿರುಳನ್ನು ತಿಳಿಸುವುದು. ಆದರೆ ಶ್ರೀ ಕೃಷ್ಣಮಹಿಮಾದರ್ಶದಲ್ಲಿ ಅಲ್ಲಲ್ಲಿ ಅಲ್ಲಸಲ್ಲದ ವಿರುದ್ಧಾರ್ಥಪ್ರತಿಪಾದಕಗಳಾದ ಕತೆಗಳಿವೆ. ಉದಾಹರಣೆಗಾಗಿ, ಇದೇ ಜೂನ್ ತಿಂಗಳ ಸಂಚಿಕೆಯ ಸಂದೇಶದಲ್ಲಿದ್ದ ಶ್ರೀಕೃಷ್ಣಮಹಿಮಾದರ್ಶ ಕತೆಯನ್ನು ತೆಗೆದುಕೊಳ್ಳೋಣ. ಒಂದು ಸಂದರ್ಭದಲ್ಲಿ ಶ್ರೀ ಕೃಷ್ಣನು ದ್ರೌಪದಿಯೊಡನೆ "ತಂಗಿ, ನಿನ್ನ ಮನಸ್ಸಿನಲ್ಲಿರುವುದನ್ನು ತಿಳಿಸು" ಎಂದಾಗ ಆ ಪತಿವ್ರತಾ ಶಿರೋಮಣಿಯು 'ಅಣ್ಣಯ್ಯ! ನನಗೆ ಐವರು ಪತಿಗಳಿರುವುದಾದರೂ ಇನ್ನೊಬ್ಬ ಪತಿಯು ಸಿಗುವನೇ ಎಂದು ಯೋಚನೆ ಮಾಡುತ್ತೇನೆ........ಸುಂದರಾಂಗನನ್ನು ನೋಡಿ ಸ್ತ್ರೀಯು ಮರುಳಾಗುವಳು' ಎಂದು ಹೇಳುವಳು. ಪತಿವ್ರತಾಶಿರೋಮಣಿಯಾದ ದ್ರೌಪ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೋನೋಕಿಲರ್" (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಸೆಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacture: Dr. D N. JASANI, Vitalbhai Patel Road, BOMBAY 4

ದಿಯು ಬಾಯಲ್ಲಿ ಬೀದಿಯ ಭಿಕಾರಿಣಿಯರು ಹೇಳುವಂತಹ ಇಂತಹ ಅಸಂಬದ್ಧ ಮಾತುಗಳು ಒಪ್ಪುವವೇ? ಇದರಿಂದ ದ್ರೌಪದಿಯೂ ಅಂತರಂಗದಲ್ಲಿ ವ್ಯಭಿಚಾರಿಣಿಯೆಂಬ ಅಪಾರ್ಥವು ಭಾಸವಾಗುವುದಿಲ್ಲವೇ? ಇನ್ನು ಇದು ಲೇಖಕರ ಅಭಿಪ್ರಾಯವೋ ಅಥವಾ ಪುರಾಣಗಳಲ್ಲಿರುವುದೇ? ಲೇಖಕರ ಅಭಿಪ್ರಾಯವೇ ಆಗಿದ್ದಲ್ಲಿ ಸಂಪಾದಕರಾದರೂ ಅದನ್ನು ತಿದ್ದಿಲ್ಲವೇಕೆ? ನನ್ನೀ ಸಂಶಯವನ್ನು ಸಂದೇಶ ಸಂಪಾದಕರು ನಿವಾರಿಸಿಯಾರೆಂದು ನಂಬಿಗೆಯಿದೆ.

ಕೃಷ್ಣಸಂದೇಶದ ವಾಚಕರಲ್ಲೊಬ್ಬ.

ಬರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಉಮೇದ್ವಾರರಾಗಲಿಚ್ಛಿಸುವವರಲ್ಲಿ ವಿನಂತಿ

ನೀವು ಈ ಮೊದಲು ಜಿಲ್ಲಾ ಬೋರ್ಡಿನ ಸದಸ್ಯರಾಗಿದ್ದವರಾಗಿರಬಹುದು. ಹೊಸತಾಗಿ ಮೆಂಬರರಾಗಲಿಚ್ಛಿಸುವವರಾಗಬಹುದು. ಆದರೆ ನೀವು ಬರುವ ಚುನಾವಣೆಯಲ್ಲಿ ಉಮೇದ್ವಾರರಾಗ ಬೇಕೆಂದು ನಿರ್ಣಯಿಸುವ ಮೊದಲು ಸ್ವಲ್ಪ ವಿಚಾರಿಸಬೇಕು. ನಿಮ್ಮ ಸರ್ಕಲಿನ ಜನರ ಪ್ರತಿನಿಧಿಯಾಗಿ ಜಿಲ್ಲಾ ಬೋರ್ಡಿನಲ್ಲಿ ಕೆಲಸ ಮಾಡಲು ಬೇಕಾದ ಶಕ್ತಿ ಮತ್ತು ಅವಕಾಶ ನಿಮಗೆ ಇದೆಯೋ ಎಂಬುದನ್ನು ನೀವು ಮುಂದಾಗಿ ಯೋಚಿಸಿರಿ. ನಿಮ್ಮ ಸರ್ಕಲಿನಲ್ಲಿ ನಿಮಗೆದುರಾಗಿ ನಿಲ್ಲತಕ್ಕವರು ಯಾರೂ ಮುಂದೆ ಬರಲಿಲ್ಲವೆಂಬುದರಿಂದ ಅಲ್ಲಿಂದ ನೀವು ಪ್ರತಿನಿಧಿಯಾಗಲು ಅರ್ಹರೆಂದು ಎಣಿಸಬೇಡಿರಿ. ಬೇರೆ ಯಾರೂ ನಿಮಗೆದುರಾಗಿ ಬಾರದಿರಲಿಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ನಿಮ್ಮ ಸರ್ಕಲಿನ ಜನರು ನಿಮ್ಮನ್ನು ಆಶ್ರಯಿಸಿರುವವರಾಗಿರಬಹುದು. ಆ ಸರ್ಕಲಿನ ಮುಖ್ಯ ಜನರೆನ್ನಿಸಿಕೊಳ್ಳುವವರು ನಿಮ್ಮಸಂಬಂಧಿಕರು, ಸ್ನೇಹಿತರಾಗಿರಬಹುದು. ಅಥವಾ ನಿಮ್ಮ ದ್ವೇಷವನ್ನು ಕಟ್ಟಿಕೊಳ್ಳಲು ಸಿದ್ಧವಿಲ್ಲದಿರಬಹುದು. ನಿಮ್ಮ ಸರ್ಕಲಿನಲ್ಲಿ ಸೋಲಿಸುವುದಕ್ಕೆ ಅವಶ್ಯವಿರುವ ಧನದ ಅನುಕೂಲತೆಯುಳ್ಳವರು ಅಲ್ಲಿ ಇಲ್ಲದಿರಬಹುದು. ಇವೇ ಮೊದಲಾದ ಕಾರಣಗಳಿಂದ ಇತರರು ನಿಮ್ಮ ಎದುರಾಗಿ ನಿಲ್ಲದಿರಬಹುದು ವಿನಾ ನಿಮ್ಮ ಸರ್ಕಲಿನಲ್ಲಿ ಉಮೇದ್ವಾರರಾಗಿ ನಿಲ್ಲುವುದಕ್ಕೆ ನೀವೇ ಯೋಗ್ಯರೆಂದು ಎಣಿಸಬೇಡಿರಿ. ನೀವು ಸ್ವತಂತ್ರವಾಗಿ ವಿಚಾರಿಸಬೇಕಾದ ವಿಷಯವೇನೆಂದರೆ, ನಿಮಗೆ ಪ್ರಥಮತಃ ಲೋಕಲ್ ಬೋರ್ಡ್ಸ್ ಆಕ್ಟು ಪ್ರಕಾರ ನಮಗೆ ಯಾವ್ಯಾವ ಹಕ್ಕು ಬಂದಿದೆ ಎಂದು ಗೊತ್ತಿದೆಯೇ? ನಿಮ್ಮ ಸರ್ಕಲಿನ ಜನರಿಗಿರುವ ಸಂಕಷ್ಟಗಳು ಯಾವವು, ಅವುಗಳಲ್ಲಿ ಜಿಲ್ಲಾ ಬೋರ್ಡಿನ ಮೂಲಕ ನಿವಾರಿಸಬಹುದಾದವುಗಳು ಯಾವವು? ಆ ಉದ್ದೇಶಗಳನ್ನು ಹೇಗೆ ನಿರ್ವಹಿಸಬೇಕೆಂದು ನಿಮಗೆ ತಿಳಿದಿದೆಯೇ? ಒಂದು ವೇಳೆ ನಿಮಗೆ ಇದೆಲ್ಲಾ ಅರ್ಥವಾಗುತ್ತದಾದರೂ ಆ ವಿಷಯುಗಳಲ್ಲಿ ಸಂಪೂರ್ಣ ಮನಸ್ಸು ಕೊಟ್ಟು ಕೆಲಸಮಾಡಲಿಕ್ಕೆ ನಿಮಗೆ ಸಮಯ ಅನುಕೂಲತೆಗಳು ಇವೆಯೋ ಎಂಬುದನ್ನು ಯೋಚಿಸಿರಿ. ಯಾವ ಕಾರಣಗಳಿಂದಲಾದರೂ ಈ ವಿಷಯುಗಳು ಅರ್ಥವಾಗುವಷ್ಟು ವಿದ್ಯೆ ಬುದ್ಧಿ ಸಮಯ ಉತ್ಸಾಹ ನಿಮ್ಮಲ್ಲಿ ಇಲ್ಲದಿದ್ದರೆ ಖಂಡಿತವಾಗಿಯೂ ಈ ಜವಾಬ್ದಾರಿಯ ಈ ಕೆಲಸಕ್ಕೆ ನೀವು ಕೈಹಾಕಬೇಡಿರಿ. ಬೋರ್ಡು ಮೆಂಬರಿಕೆಯು ಗೌರವದ ಸ್ಥಾನವೆಂಬುದೇನೋ ನಿಜ. ಆದರೆ ಅದುಯಾರಿಗೆ? ತನ್ನ ಕರ್ತವ್ಯವನ್ನು ಬೇಕಾದಂತೆ ಮಾಡಲು ಶಕ್ತಿಯಿರುವವನಿಗೆ. ಯಾವ ಪ್ರಯೋಜನವೂ ಇಲ್ಲದೆ ಗೌರವಕ್ಕಾಗಿ ಮಾತ್ರ ಮೆಂಬರನೆಂತ ಹೇಳಿಸಿಕೊಳ್ಳುವವನಿಗಲ್ಲ. ನಿಮಗಿಂತಲೂ ಹೆಚ್ಚಿನ ವಿದ್ಯಾಭ್ಯಾಸ ಮಾಡಿದವರೂ ವಿಷಯುಗಳನ್ನು ಸುಲಭದಲ್ಲಿ ಅರಿಯಬಲ್ಲವರೂ ಯಾವ ಸಂದರ್ಭಗಳಲ್ಲಿಯೂ ತಕ್ಕ ದಾರಿಯನ್ನು ಕಂಡು ಹುಡುಕಿ ಮುಂದೆ ಹೋಗುವ ಧೈರ್ಯ ಮತ್ತು ಸಾಹಸವುಳ್ಳವರೂ ನಮ್ಮಲ್ಲಿ ಅನೇಕರಿದ್ದಾರೆ. ಅವರ ದೇಶಸೇವೆ, ಸ್ವಾರ್ಥತ್ಯಾಗ ಇತ್ಯಾದಿಗಳಿಂದ ಜನರಿಗೆ ನಿಮಗಿಂತಲೂ ಅಧಿಕವಾಗಿ ಅವರ ಮೇಲೆ ಭಕ್ತಿ ವಿಶ್ವಾಸವಿದೆ. ನಿಮ್ಮ ಭಯ ದಾಕ್ಷಿಣ್ಯ ಅಲ್ಲದಿದ್ದರೆ ಸಹಜವಾಗಿಯೂ ಅಂಥವರನ್ನೇ ನಿಮ್ಮ ಸರ್ಕಲಿನ ಜನರು ಆರಿಸುತ್ತಿದ್ದರು. ನಿಮ್ಮ ಉಪದ್ರ ಒಂದಲ್ಲದಿದ್ದರೆ ಅಂತವರು ನಿಮ್ಮ ಸರ್ಕಲಿನಲ್ಲಿ ಬಂದು ಉಮೇದ್ವಾರರಾಗಿ ನಿಲ್ಲುತ್ತಿದ್ದರು. ಅಂಥವರಿಗೆ ನೀವು ಯಾವ ಆಸ್ಪದವನ್ನೂ ಕೊಡದೆ ತನ್ನ ಸರ್ಕಲಿನಲ್ಲಿ ತನಗೆದುರಾಗಿ ಯಾರು ನಿಲ್ಲುತ್ತಾರೆ ನೋಡುವ ಎಂಬ ಹೆಮ್ಮೆಯಿಂದ ನೀವು ಮುಂದೆ ಬರುವುದು ಸರಿಯಲ್ಲ. ನಿಮ್ಮೊಬ್ಬರ ಗೌರವಕ್ಕಾಗಿ ನಿಮ್ಮ ಸರ್ಕಲಿನ ಜನರು ಯೋಗ್ಯ ಪ್ರತಿನಿಧಿಯ ಸಹಾಯವಿಲ್ಲದೆ, ಕಷ್ಟಪಡಬೇಕೋ? ಇದರಿಂದ ನೀವು ನಿಮ್ಮ ಸರ್ಕಲಿನ ಜನರಿಗೆ ಮಹಾ ಅಪರಾಧ ಮಾಡಿದಂತಾಗುವುದಿಲ್ಲವೇ? ನೀವು ಹೀಗೆ ಅನ್ಯಾಯ ಮಾಡಬಾರದು. ನಿಮ್ಮ ಸರ್ಕಲಿನವರು ಬೋರ್ಡಿನಿಂದ ಹೊಂದಬಹುದಾದ ಉಪಕಾರಕ್ಕೆ ನೀವು ಅಡ್ಡಿ ಬರಬಾರದು.

ನಿಮ್ಮ ಸರ್ಕಲಿನಲ್ಲಿ ನಿಮ್ಮ ಮಾತಿಗೆ ಗೌರವವಿರುವುದಾದರೆ ನಿಮ್ಮ ಸರ್ಕಲಿನ ಜನರ ಸಂಕಷ್ಟಗಳನ್ನು ಚೆನ್ನಾಗಿ ಅರಿತು ಅವರಿಗಾಗಿ ಕೆಲಸ ಮಾಡುವ ಶಕ್ತಿಯೂ ವಿದ್ಯೆಯೂ ಉತ್ಸಾಹವೂ ಇರುವ ಒಬ್ಬ ದೇಶಭಕ್ತನನ್ನು ನಿಮ್ಮ ಸರ್ಕಲಿನಿಂದ ಆರಿಸುವಂತೆ ಮಾಡಿರಿ. ಅವನು ಹೆಚ್ಚು ಧನಾಢ್ಯನಲ್ಲವಾದರೆ ನಿಮ್ಮ ಸರ್ಕಲಿನಲ್ಲಿ ಹೆಚ್ಚಿನ ಖರ್ಚು ಇಲ್ಲದೆ ಚುನಾವಣೆ ಆಗುವಂತೆ ಬೇಕಾದ ವ್ಯವಸ್ಥೆ ಮತ್ತು ಸಹಾಯ ನೀವು ಮಾಡಿರಿ. ಅವನು ಚುನಾಯಿಸಲ್ಪಟ್ಟನಂತರ ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುವಂತೆ ಅವನಿಗೆ ಬೇಕಾದ ಪ್ರೋತ್ಸಾಹ ಕೊಡಿರಿ. ಹೀಗೆ ಮಾಡುವುದೇ ನಿಮಗೆ ಗೌರವ ಹೊರತು ಅನೇಕ ವಿದ್ಯಾವಂತರು ಉತ್ಸಾಹಿಗಳು ಇರುವ ಒಂದು ಸಭೆಯಲ್ಲಿ ನೀವು ನಿಮ್ಮ ಸರ್ಕಲಿಗಾಗಿ ಯಾವ ಉಪಕಾರವನ್ನೂ ಮಾಡಲಾರದೆ ಒಂದು ಮೂಲೆಯಲ್ಲಿ ಕುಳಿತು ಸಾರ್ವಜನಿಕ ಹಣದಿಂದ ಬತ್ತೆ ತೆಗೆದುಕೊಂಡು ಬರುವುದು ಎಷ್ಟು ಮಾತ್ರಕ್ಕೂ ನಿಮಗೆ ಗೌರವವಲ್ಲ. ಬಹಳ ಅಗೌರವವೆಂದೂ ಹೇಳಬಹುದು. ನಾನು ಹೀಗೆಲ್ಲಾ ಬರೆದೆನೆಂದು ಬೇಸರಿಸಬೇಡಿರಿ. ನಿಮ್ಮ ಹಿತಕ್ಕಾಗಿಯೇ ಹೇಳಿದ್ದೇನೆ. ನೀವು ಇದನ್ನು ಕೂಲಂಕಷವಾಗಿ ವಿಚಾರಿಸದೆ ಮುಮುಕಬೇಡಿರಿ.

—ಒಬ್ಬ ಮತದಾರ

ಗಣಪತಿ ವಿಲಾಸ

ಕೋರ್ಟು ರಸ್ತೆ - - - ಉಡುಪಿ

ಭೋಜನ-ಉಪಹಾರ-ವಿಶ್ರಾಂತಿ ಇವುಗಳಿಗೆ ಆದರ್ಶ ಗೃಹ

ಆರೋಗ್ಯಕರವೂ ಹಿತಕರವೂ ಆದ ಭೋಜನ ಸ್ಥಾನ,—ವಸತಿಗಳಿಗೆ ಯೋಗ್ಯ ಸೌಕರ್ಯ—ಟೀಪಾರ್ಟಿ ಇತ್ಯಾದಿಗಳಿಗೆ ಉತ್ಕೃಷ್ಟ ಸಿದ್ಧತೆಗಳು !!!

ಮುನ್ಸಿಫ್ ಕೋರ್ಟು, ಕಚೇರಿ ಮತ್ತು ಶಾಲೆಗಳಿಗೆ ಸಮೀಪದ ಕೇಂದ್ರದಲ್ಲಿದ್ದು ಸರ್ವರಿಗೂ ಅತ್ಯಂತ ಅನುಕೂಲವಾಗಿರುತ್ತದೆ. ವಿದ್ಯಾರ್ಥಿಗಳಿಗೆ ರಿಯಾಯತಿ ದರದಲ್ಲಿ ಉತ್ತಮ ತರದ ಏರ್ಪಾಡುಮಾಡಲಾಗುವುದು.

ಕೆ. ಮಂಜುನಾಥಯ್ಯ, ಪ್ರೊಪ್ರೈಟರ್.

ಗ್ರೇಂಡ್ ಸೇಲ್! ಗ್ರೇಂಡ್ ಸೇಲ್!!

ನಮ್ಮಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಯಾವತ್ತೂ ಶಾಲೋಪಕರಣಗಳೂ ಇತರ ಎಲ್ಲಾ ತರದ ಅತ್ಯಾಧುನಿಕ ಮಾದರಿಯ ಸ್ಟೇಶನರಿ, ಕಟ್ಲೆರಿ ವಗೈರೆ ನಿತ್ಯೋಪಯುಕ್ತ ಸಾಮಾಗ್ರಿಗಳೂ ಅತ್ಯಂತ ಕಡಿಮೆದರನಲ್ಲಿ ಮಾರಲ್ಪಡುತ್ತವೆ

ಅಲ್ಲದೆ ಜೂನ್ ತಾ. 1ರಿಂದ ತಾ. 30ರ ತನಕ

ನಮ್ಮಲ್ಲಿ ಒಂದೇ ಬಾರಿಗೆ ಎಂಟಾಣೆಗೆ ಮೇಲ್ಪಟ್ಟು ವ್ಯಾಪಾರಮಾಡುವವರಿಗೆ

ಅತ್ಯಮೂಲ್ಯವಾದ ಇನಾಮುಗಳು ಕೊಡಲ್ಪಡುವವು.

ಹೆಚ್ಚಿನ ವಿವರಗಳಿಗೆ ನಮ್ಮ ಪ್ರಕಟಣಾಪತ್ರವನ್ನು ನೋಡಿರಿ.

ಎಸ್. ಅನಂತರಾಮಾಚಾರ್,

ಪುಸ್ತಕ ಮತ್ತು ಸ್ಟೇಶನೆರಿ ವ್ಯಾಪಾರಿ, ತಾಲೂಕು ಕಚೇರಿ ಬಳಿ, ಉಡುಪಿ.

15 ವರ್ಷಗಳ ಅನುಭವ ! ಗ್ಯಾರಂಟೀ ಕೆಲಸ !!

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು

ಪ್ರಸಿದ್ಧರಾಗಿರುವ

ಪೈಂಟರ್ ಗಣಪತಿ ರಾವ್

ಇವರು

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.

ಕನ್ನಡಿಗೆ ಪಾದರಸವನ್ನೂ ಹಾಕಿ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ.

ಗಣಪತಿ ರಾವ್, ಪೈಂಟರ್,

ಸೋದೆ ಮಠದ ಲೇನು - - ಉಡುಪಿ, ದ. ಕ.

Mohini Harmonium Works, Udipi

Single Hand Harmoniums, Portable Hand Harmoniums,
Double sets of Hand Harmoniums,
Trible sets of Hand Harmoniums,
Folding leg Harmoniums

Specially Constructed in our Work Shop. Well tuned and fitted.

Repairs of all kinds of Musical instruments undertaken at a very moderate rate to the Complete satisfaction of our customers.

A Trial order is earnestly solicited.

For Further Particulars

Apply to: M. K. KORAGAPPA, *Propritor.*

ಭಾರತೀಯ ಬುದ್ಧಿಗೆ ತಕ್ಕ ಕೆಲಸವಿಲ್ಲ ಎಂಬ ವಿಚಾರಕ್ಕೆ ಆಕ್ಷೇಪಣೆ ತೆಗೆಯುವವರಿಗೆ ನನ್ನ ವಿಚಾರ ಭೂಮಿಯ ಪರಿಚಯವು ಆಗದೆ ಇರದು. ಕೆಲಸ ಎಂಬ ಶಬ್ದಕ್ಕೆ ಒಂದು ಅರ್ಥವಿಲ್ಲವೇ? ಹಾಗೆ ನೋಡಿದರೆ ಮನುಷ್ಯನು ಜಾಗ್ರತಾವಸ್ಥೆಯಲ್ಲಿರುವಾಗಲೆಲ್ಲ ಅವನ ಬುದ್ಧಿ ಒಂದಲ್ಲ ಇನ್ನೊಂದು ಕೆಲಸವನ್ನು ಮಾಡುತ್ತಲೇ ಇರುತ್ತದೆ. ಇನ್ನು ನೋಡೋಣ, ಹುಚ್ಚನ ಬುದ್ಧಿಯೂ ಪರಿಪರಿಯಾದ ಕೆಲಸಗಳನ್ನು ಮಾಡುವುದಿಲ್ಲವೇ? ಕೆಲಸದ ಬರೇ ಪ್ರಮಾಣ ಮಾತ್ರವನ್ನೇ ಲೆಕ್ಕಿಸುವುದಾದರೆ ಒಬ್ಬ ದೊಡ್ಡ ಯುನಿವರ್ಸಿಟಿ ಪ್ರೊಫೆಸರನ ಬುದ್ಧಿಯ ಕೆಲಸಕ್ಕಿಂತಲೂ ಹುಚ್ಚನ ಬುದ್ಧಿಯ ಕೆಲಸ ಹೆಚ್ಚೇ ಅಲ್ಲವೇ? ಆತನನ್ನು ಹುಚ್ಚನೆಂದು ತಿರಸ್ಕರಿಸಬೇಕೇಕೆ ಮತ್ತೆ? ಆತನ ಅನೇಕಾನೇಕ ಕೆಲಸಗಳಿಗೂ ವ್ಯಕ್ತಿ ಸಮಾಜ ಸ್ಥಿತಿ ಪರಿಸ್ಥಿತಿಗಳಿಗೂ ಸಹಜ ಸಂಬಂಧವಿಲ್ಲವೆಂದೇ ಅಲ್ಲವೇ ಆತನನ್ನು ಹುಚ್ಚ ಎಂದು ದೂರೀಕರಿಸುವುದು? ಈ ಅಳತೆಕೋಲನ್ನೇ ನಮ್ಮ ಜಜ್, ಕಲೆಕ್ಟರ್, ಪ್ರೊಫೆಸರ್, ಡಾಕ್ಟರ್, ಬಿ. ಎ. ಎಮ್. ಎ. ಇತ್ಯಾದಿ ಇತ್ಯಾದಿಗಳಿಗೂ ಹಚ್ಚಿ, ಅವರ ಯೋಗ್ಯತೆಯನ್ನೂ ಏತಕ್ಕೆ ಅಳೆಯಬಾರದು? ಇವರಿಗೂ ಇವರ ಕೆಲಸ, ಪಿಂತಸ್ತು, ಪ್ರಶಸ್ತಿಗಳಿಗೂ ನಮ್ಮ ದೇಶದ ಇಂದಿನ ಸ್ಥಿತಿಗತಿ ಪರಿಸ್ಥಿತಿಗಳಿಗೂ ಏನಾದರೂ ಸಂಬಂಧವಿದೆಯೋ? ಇವರ ಆಚಾರ ವಿಚಾರಗಳಲ್ಲಿಯಾದರೂ ಸಾಕಷ್ಟು ಸಹಜತೆ ಇದೆಯೋ? ಹೊಂದಿಕೆ ಇದೆಯೇ? ಇವನ್ನಲ್ಲವೆ ಪರೀಕ್ಷಿಸಬೇಕು?

ಬದುಕು-ಸಾವುಗಳ ಗುಟ್ಟು

ಲೇಖಕ: ಪಂಡಿತ ತಾರಾನಾಥರಾಯರು

ಇಲ್ಲಿ ನನ್ನ ಒಂದು ಅನುಭವವು ನೆನಸಿಗೆ ಬರುತ್ತದೆ. ನಾನು ನಿಜಾಮ್ ಕೋಲೇಜಿನಲ್ಲಿ ಓದುತ್ತಿದ್ದಾಗ ಒಂದು ದಿನ ಒಂದು ಚರ್ಚೆ (debate) ಇತ್ತು. "ಪಾಶ್ಚಿಮಾತ್ಯ ಶಿಕ್ಷಣದ ಲಾಭ" ಇದೇ ಚರ್ಚಾ ವಿಷಯ. ಆಗ ನಮ್ಮ ಪ್ರಿನ್ಸಿಪಲ್‌ರಾದ ಬರ್ನೆಟ್ ಅವರು ಅಧ್ಯಕ್ಷರಾಗಿದ್ದರು. ಆಗ ಹಲವು ಕೋಲೇಜ್ ವಿದ್ಯಾರ್ಥಿಗಳ ಮಾತುಗಳಾದವು. ಎಲ್ಲರೂ ಈ ಶಿಕ್ಷಣವನ್ನು ಹೊಗಳಿದ್ದೇ ಹೊಗಳಿದ್ದು! ನಾನು ಕೊನೆಗೆ ಮಾತನಾಡಿದೆನು. ಅದರ ಸಾರಾಂಶ ಇಷ್ಟೇ: "ನಾವು ಈ ಶಿಕ್ಷಣವನ್ನು ಪಡೆಯುತ್ತಿರುವುದು ಯಾರಿಗಾಗಿ? ಬರೇ ನಮಗಾಗಿ ಮಾತ್ರವೇ ಆದರೆ ಬರೇ ನಮ್ಮಪ್ಪನ ಹಣದಿಂದಲೇ ಅದನ್ನು ಸಂಪಾದಿಸಬೇಕು ಆದರೆ ಅದು ಹಾಗಿಲ್ಲ "ಫೀಸ್" ಎಂದು ನಮ್ಮಪ್ಪನ ಜೇಬಿನಿಂದ ನಾವು ಒಂದು ರೂಪಾಯಿ ಕೊಟ್ಟರೆ, ನಮಗಾಗಿ ಈ ಕೋಲೇಜ್ ಮಾಡುವ ಖರ್ಚು ಅದಕ್ಕೆ ಕಡಿಮೆಯಿಲ್ಲ. ಈ ದುಡ್ಡು ಎಲ್ಲಿಂದ ಬರುತ್ತದೆ? ರೈತನಿಂದ ತಾನೆ? ಹಾಗಾದರೆ ಅದು ಸಾಲವಲ್ಲವೇನು? ಅದನ್ನು ತೀರಿಸುವ ಬಗೆ ಹೇಗೆ? ನಮ್ಮ ಶಿಕ್ಷಣದಲ್ಲಿ ಅದಕ್ಕೆ ತಕ್ಕ ಉಪಾಯಗಳನ್ನು ಕಲಿಸುತ್ತಿದ್ದಾರೋ? ಆ ಉಪಾಯಗಳು ನಮ್ಮ ಪ್ರೊಫೆಸರರಿಗೇ ಗೊತ್ತಿಲ್ಲ ಎಂದು ನನಗೆ ನಿಶ್ಚಯವಾಗಿ ಗೊತ್ತು. ಅದೂ ಹೋಗಲಿ. ಈ ಶಿಕ್ಷಣವನ್ನು ಪಡೆಯುತ್ತಿರುವ ಕ್ಷಣಕ್ಷಣಕ್ಕೂ ತೆರಿಗೆ ತೆತ್ತು ಹಾಕುವವರಿಗೆ ನಾವು ಸಾಲಗಾರರಾಗುತ್ತಿದ್ದೇವೆ. ನಮ್ಮ ಸಾಲವು ಹೆಚ್ಚುತ್ತಲೇ ಇದೆ ಎಂಬ ತಿಳುವಳಿಕೆಯನ್ನಾದರೂ ನಮಗೆ ಈ ಶಿಕ್ಷಣವು ಕೊಡುತ್ತಿದೆಯೋ? ಹಿಂದಿನ ಆಶ್ರಮ ಶಿಕ್ಷಣದಲ್ಲಿ ಪ್ರತಿ ವಿದ್ಯಾರ್ಥಿಗೂ ತನ್ನ ಋಣದ ಎಚ್ಚರಿಕೆಯು ಮೊದಲಿನಿಂದ ಕೊಡಲ್ಪಡುತ್ತಿತ್ತು. ಎಲ್ಲ ಋಣಗಳನ್ನೂ ತೀರಿಸುವುದೇ ಮುಖ್ಯ ಧರ್ಮವೆಂದೂ ಹೇಳಲಾಗುತ್ತಿತ್ತು ಅವುಗಳನ್ನು ತೀರಿಸುವ ಸಾಧನಗಳ ಶಿಕ್ಷಣಕ್ಕೂ ಮುಖ್ಯ ಸ್ಥಾನವಿತ್ತು. ಆದರೆ ಈ ಪಾಶ್ಚಿಮಾತ್ಯ ಶಿಕ್ಷಣದಿಂದ ಆಗುವ ಲಾಭವೆಂದರೆ ಕೊಟ್ಟವರ ಸುದ್ದಿಯಿಲ್ಲ, ವಾಪಾಸು ಕೊಡುವ ಬುದ್ಧಿಯಿಲ್ಲ, ಇಷ್ಟೇ ಎಂದು ನನಗೆ ತೋರುತ್ತದೆ."

ನನ್ನ ಮಾತು ಮುಗಿದೊಡನೆಯೇ ಅಧ್ಯಕ್ಷರು ಎಂದುದರ ಸಾರಾಂಶ ನೋಡಿ: "ತಾರಾನಾಥನು ಹೇಳಿದ ಮಾತಿನಲ್ಲಿ ಬಹಳ ಸತ್ಯವಿದೆ; ಆದರೆ ಅಷ್ಟೇನು ಅನ್ವರ್ಥತೆಯಿಲ್ಲ ಯಾಕೆಂದರೆ ಆ ತತ್ತ್ವವು ಪಾಶ್ಚಿಮಾತ್ಯರೇ ಆದ ನಮಗೆ ಚೆನ್ನಾಗಿ ಗೊತ್ತು. ನಮ್ಮ ಶಿಕ್ಷಣದ ತಿರುಳೇ ಆಗಿದೆ ಅದು, ಹಾಗಿರೋಣದರಿಂದಲೇ ನಾವು ಯಾವ ದೇಶಕ್ಕೇ ಹೋಗಲಿ. ಯಾವ ದೇಶದಲ್ಲಿಯೇ ಮಡಿಯಲಿ, ನಾವು ನಮ್ಮ ದೇಶದ ಋಣವನ್ನು ಮಾತ್ರ ಎಂದಿಗೂ ಮರೆಯುವುದಿಲ್ಲ ನಮ್ಮ ದೇಶ, ಜನತೆ, ಸಂಸ್ಥೆಗಳನ್ನು ಹೇಗೆ ಉದ್ಧರಿಸಬೇಕೆಂಬ ಪ್ರಶ್ನೆ ತಲೆಯನ್ನೆಂದಿನೂ ಬಿಟ್ಟು ಹೋಗುವುದಿಲ್ಲ. ಇಂಡಿಯದ ವಿದ್ಯಾರ್ಥಿಗಳಾದ ನೀವು ಈ ಗುಣವನ್ನು ನಮ್ಮಿಂದೇಕೆ ಕಲಿತುಕೊಳ್ಳುವುದಿಲ್ಲ?"—ಎಂದು ಬರ್ನೆಟರು ಅಂದು ಹೇಳಿದ ಮಾತು ಇಂದಿಗೂ ನನ್ನ ಕಿವಿಯೆಡೆಗಳನ್ನು ಬಿಟ್ಟು ಹೋಗಿಲ್ಲ. ಅವರ ಕೊನೆಯ ಪ್ರಶ್ನೆಯನ್ನೇ ನಾನೂ ಮತ್ತೊಮ್ಮೆ ಒತ್ತಿ ಕೇಳಬಹುದಲ್ಲವೆ?

ನಮ್ಮಲ್ಲಿ ಅಂಥಾ ವಿದ್ಯಾ (?) ಪ್ರಶಸ್ತಿ ಪದವಿಗಳನ್ನು ಪಡೆದವರು, ಪಡೆಯುವವರು ದುಡಿಯುವದು ಯಾವ ಋಣಕ್ಕಾಗಿ? ಯಾರ ಉದ್ಧಾರಕ್ಕಾಗಿ? ಒಂದು ವೇಳೆ ಧ್ಯೇಯ ಸರಿಯಾಗಿದ್ದರೂ ತಕ್ಕ ಸಾಧನೋಪಾಯಗಳು ಗೊತ್ತಿವೆಯೋ ಅವರಿಗೆ? ಇವರ ಜೀವನ ಪಥದಲ್ಲಿ ಸಾರ್ವಜನಿಕವಾದ, ನೈಸರ್ಗಿಕವಾದ ಪ್ರಮೇಯ-ಸಂಗ್ರಾಮಗಳಿವೆಯೋ? ಇವಿಲ್ಲದೆ ತಮ್ಮ ಕುದುರೆಯನ್ನೇ ಕೊಬ್ಬಿಸುವ ಸಾವಿರ ಕೆಲಸಗಳು ಇವರಿಗಿದ್ದರೂ, ಇಂಥವರ ಬುದ್ಧಿಗೆ ಕೆಲಸವಿಲ್ಲವೆಂದೇ ಹೇಳಬಹುದಲ್ಲವೆ?

"ಬೆಕ್ಕಿನ ಬಿಡಾರ ಬೇರೆ"—ಎನ್ನುವ ಬುದ್ಧಿ ಹದತಪ್ಪಿದ ಹಗರಣವೇ ಸರಿ? ಅದೊಂದು ಸಾಂಕ್ರಾಮಿಕ ಉನ್ಮಾದ! ಅಂಗೀಕೃತ ಅಂಟುರೋಗ!!

(ಸಶೇಷ)

SUSHEELA & CO., KOLLEGAL. (S. INDIA.)

1000 ರೂಪಾಯಿಗಳ ಬಹುಮಾನ

ಪ್ರತಿ ಎರಡು ಕೂಪನ್‌ಗಳಿಗೂ ಒಂದು ಕೂಪನ್ ಉಚಿತ.

ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ **16-8-1937**. ಫಲಿತಾಂಶವನ್ನು ಪ್ರಕಟಿಸುವ ದಿನ **20-8-1937**.

ಮೂರು ಕೂಪನ್‌ಗಳೂ ಸರಿಯಾಗಿ ಕಳುಹಿಸಿದವರಿಗೆ **500** ರೂಪಾಯಿಗಳು.

ಒಂದು ಕೂಪನ್ ತಪ್ಪುಳ್ಳವರಿಗೆ **200** ರೂಪಾಯಿಗಳು, ಎರಡು ಕೂಪನ್ ತಪ್ಪುಳ್ಳವರಿಗೆ **100** ರೂಪಾಯಿಗಳು.

ಇತರ ಬಹುಮಾನಗಳು.

3 ಕೂಪನ್‌ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ **125** ರೂಪಾಯಿಗಳು. ಹೆಚ್ಚಾಗಿ ಕೂಪನ್‌ಗಳು ಕಳುಹಿಸಿದವರಿಗೆ **75** ರೂಪಾಯಿಗಳು.

		17		

ಸುಶೀಲ ಅಂಡ್ ಕೋ., ಕೊಳ್ಳೇಗಾಲ.

ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ.

ಹೆಸರು ....

ವಿಳಾಸ ....

....

ಪೋಸ್ಟಲ್ ಮಣಿಯಾರ್ಡರ್ ನಂಬರು ....

ಸ್ಟಾಂಪುಗಳು .... ತಾರೀಕು 1937.

ಉತ್ತರಗಳನ್ನು ಕಂಡುಹಿಡಿಯುವ ಕ್ರಮ:—ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡವಾಗಿ, ಮೂಲೆಗಳಿಂದ 85 ಬರುವಂತೆ, ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಖಾಯಿಯಲ್ಲಿ ಬರೆದು ಕಳುಹಿಸಬೇಕು.

ನಿಬಂಧನೆಗಳು

ಪ್ರವೇಶ ಧನ ಕೂಪನ್‌ಗೆ 0—8—0 ಆಣೆ ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲಿ ಮಣಿಯಾರ್ಡರ್ ಅಥವಾ ಪೋಸ್ಟಲ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು ಉತ್ತರಗಳು 16—8—1937ರೊಳಗೆ ನಮ್ಮ ಕೈಸೇರಬೇಕು. ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಾಸು ಮಾಡಲಾಗುವುದಿಲ್ಲ. ಮತ್ತು ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆ ಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲಾಗುವುದು. ಮೆನೇಜರರ ತೀರ್ಮಾನವೇ ಕಡೇ ತೀರ್ಮಾನ. ಬಹುಮಾನಗಳನ್ನು ಪಡೆದವರ ಹೆಸರುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು ತಮ್ಮ ವಿಳಾಸದೊಡನೆ 0—1—0 ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಶರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್: ಸುಶೀಲ ಅಂಡ್ ಕೋ., ಕೊಳ್ಳೇಗಾಲ.

೩ನೇ ನೋಟ

ಪು || ರು || ಷ || ವ || ಧು || !

ಏಕಾಂಕ ಪ್ರಹಸನ

[ನವಜೀವನ ಸಭೆಯವರ ನವಭಾರತ ಕ್ಲಬ್ಬಿನಲ್ಲಿ ಸಂಜೆ ನಾಲ್ಕೈದು ಮಂದಿ ತರುಣರು ಕುಳಿತು ಸಲ್ಲಾಪಿಸುತ್ತಿರುವರು]

ರಮೇಶ—ಹ! ಹ! ಹ! ಹ! (ಗಹಗಹಿಸಿ ಎಡೆಬಿಡದೆ ನಗುವನು) ಏನು ತಮಾಷೆಯಪ್ಪಾ ಏನು ತಮಾಷೆ? ಹ! ಹ! ಹ! ಹ! ತಮಾಷೆಯೇ ತಮಾಷೆ!

ಸತೀಶ—ಏನು? ಏನು ರಮೇಶ?

ರಮೇಶ—ಮುದುಕರಿಬ್ಬರ ತಮಾಷೆಯೇ ತಮಾಷೆ! ಹ! ಹ! ಹ! (ಪುನಃ ನಗುವನು)

ಸತೀಶ—ಏನಪ್ಪ! ಭೂತ ಹಿಡಿದಿದೆಯೊ ನಿನಗೆ ಹೀಗೆ ನಗಾಡಲಿಕ್ಕೆ?

ರಮೇಶ—ಅಲ್ಲ. ಆ ಮುದಿ ಜಾಂಬವರು! ಹ! ಹ! ಹ! (ಗಟ್ಟಿ ನಗುವನು)

ಸತೀಶ—ಏನೆಂದು ಹೇಳುವೆಯೋ? ಕುತ್ತಿಗೆ ಹಿಡಿಯುವುದೋ?

(ರಮೇಶನು ಮತ್ತೂ ಗಟ್ಟಿಯಾಗಿ ನಗುವನು. ಸತೀಶನು ಅವನ ಕುತ್ತಿಗೆ ಒತ್ತಿಹಿಡಿಯುವನು)

ರಮೇಶ—(ಕಣ್ಣು ಕೆರಳಿಸಿ ವಿಕಾರವಾಗಿ ಕೂಗುತ್ತಾ) ಬಿಡಪ್ಪಾ ಬಿಡು, ಕೊಲ್ಲಬೇಡ! ಹೇಳುತ್ತೇನೆ. (ಸತೀಶನು ಕುತ್ತಿಗೆ ಬಿಡುವನು) ಆ ಮುದಿ ಜಾಂಬವ ರಂಗರಾಯರಿದ್ದಾರಲ್ಲ, ಅವರೀಗ ನವಯೌವನ ತಳೆದಿದ್ದಾರೆ! ಒಹೊಹೋ ಅವರ ಫರ್‌ಕ್ಯಾಪೇನು! ಡಬ್ಲ್ ಬ್ರೆಸ್ಟ್ ಕೋಟೇನು! ಓಕ್ಸ್‌ಫೋರ್ಡ್ ಕ್ರೋಪೇನು! ಏನು ಶೋಕುಮಾಡಿಕೊಂಡಿದ್ದಾರಪ್ಪ ಮುದಿಕೋತಿ! ಅವರೊಂದಿಗೆ ಆ ಶಿವರಾಯರೊಬ್ಬರು! ಅಹಹ! ಕುತ್ತಿಗೆ ಹಿಡಿಯಬೇಡ ಮಹರಾಯ! (ದೂರಹೋಗಿ ನಿಂತು)ಏನಪ್ಪ ಈ ಮುದಿ ಮಂಕುಗಳ ಭ್ರಾಂತು! ಹೆಂಗಸರನ್ನು ಪಡೆಯಲಿಕ್ಕೆ ಗಂಡಸ್ರು ಏನೇನೆಲ್ಲ ಮಾಡುತ್ತಾರಪ್ಪ ಈ ಲೋಕದಲ್ಲಿ! ಹ! ಹ! ಹ!

ಉಮೇಶ—ಒಹೋಹೋ, ಏನು ನಗೆಯಪ್ಪ ಈ ರಮೇಶನಿಗೆ! ನಿನಗೀಗ ಒಂದು ಚಂದದ ಹುಡುಗಿಯನ್ನು ಯಾರಾದ್ರು ಶನಿ ಹಿಡಿದವರೊಬ್ಬರು ಕೊಡುವುದಾದರೆ ನೀನು ತಲೆ ಕೆಳಗೆ ಕಾಲು ಮೇಲೆಮಾಡಿ ನಡಿಯಲಿಕ್ಕೂ ಸಿದ್ಧನಿರುವುದಿಲ್ಲವೇನು?

ರಮೇಶ—ಏನೇನು? ನನಗೆ ಶನಿ ಹಿಡಿದವ ಹುಡುಗಿಕೊಡುವುದೇ! ಹ ಹ! ಹ! ಚಂದದ ಹುಡುಗಿ ಮಾತ್ರವಲ್ಲ, ಅದರಮೇಲೆ ಹತ್ತುಸಾವಿರ ವರದಕ್ಷಿಣೆ ಕೊಡುವವರು ಎಷ್ಟು ಮಂದಿ ಬೇಕು ನಿನಗೆ? ನಾನು ಮಾತ್ರ ಸ್ವರಾಜ್ಯ ಸಿಕ್ಕುವವರೆಗೆ ಮದುವೆಮಾಡಿಕೊಳ್ಳಲಾರೆನೆಂದು ಭೀಷ್ಮ ಪ್ರತಿಜ್ಞೆ ಮಾಡಿದ್ದೇನೆ.

ಉಮೇಶ—ನೀನೂ ನಿನಗೆ ಹೆಣ್ಣುಕೊಡುವವನೂ ಎಲ್ಲಿಯಾದರೂ ಕನ್ನ ಹಾಕಬೇಕು. ಹತ್ತುಸಾವಿರ ವರದಕ್ಷಿಣೆಗೆ!

ಸತೀಶ—ಸಾಕಪ್ಪ ಸಾಕು ನಿಮ್ಮ ಹರಟೆ ಮಾತು! ರಂಗರಾಯರಿದ್ದಾರಲ್ಲ, ಅವರ ಸಹಾಯಕ್ಕೆ ಆ ಸುಂದರ ರಾವಣ ಶಿವರಾಯರು ಸೇರಿದ್ದಾರೆ. ಅದುದರಿಂದಲೇ ಅವರು ಹಾಗೆ ವೇಷ ಬದಲಾಯಿಸಲು ಕಾರಣ. ಆ ಶಿವರಾಯರು ಬಹಳ ಯುಕ್ತಿಯವರು. ಎಲ್ಲಿಂದಾದರೂ ಹುಡುಗಿಯೊಂದನ್ನು ರಂಗರಾಯರಿಗೆ ಸಂಘಟನೆಮಾಡದೆ ಬಿಡರು.

ಸುರೇಶ—ಅವರಿಗೆ ಮದುವೆಯಾಗುವುದಾದರೆ ನಾವಿದ್ದು ಫಲವೇನು? ನಮ್ಮ ಸಂಘದ ಸಾರ್ಥಕತೆಯಾದರೂ ಏನು?

ರಮೇಶ—ಹೌದೌದು! ಈ ಸುರೇಶನ ಮಾತು ಕೇಳಿದ್ರೆ ನಾವು ಇನ್ನೊನ್ಮೆ ಆ ಪೋಲೀಸರಿಂದ ಲಾತಿ ಪೆಟ್ಟುತಿನ್ನಬೇಕಾದೀತು! ಕಣ್ಣಲ್ಲಿ ಒಂದಿಷ್ಟು ರಕ್ತವಿಲ್ಲಪ್ಪ ಅವರಿಗೆ! ನಾನೀಗ್ಲೆ ಹೇಳುತ್ತೇನೆ ಸುರೇಶ, ಇನ್ನು ಮುಂದೆ ಎಲ್ಲಿಯಾದ್ರೂ ಲಾತಿ ಚಾರ್ಜು ಇರುವುದಾದರೆ ನಾನಾದಿನ ಮನೆ ಅಂಗಳಕ್ಕಿಳಿಯಲಿಕ್ಕಿಲ್ಲ. ಕಳೆದ ಸಲ ಪೋಲೀಸ್ ಜವಾನನೊಬ್ಬನು ಲಾತಿಯೆತ್ತಿ ನನ್ನ ತಲೆಗೆ ಹೊಡೆಯುವಷ್ಟರಲ್ಲಿ ನಾನುದೊಪ್ಪನೆ ಬಿದ್ದು ಬಿಟ್ಟುದಕ್ಕಾಯಿತು, ಇಲ್ಲವಾದರೆ ಸತ್ತೇ ಹೋಗುತ್ತಿದ್ದೆ! ಅಹಿಂಸೆ, ಅಹಿಂಸೆ ಎಂತ ಹೇಳಿ ಸುಮ್ಮಗೆ ಯಾರ್‍ಯಾರ ಕೈಯಲ್ಲಿ ಪೆಟ್ಟು ತಿಂದು ರಸ್ತೆಯಲ್ಲಿ ನಾಯಿಗಳಂತೆ ಬಿದ್ದು ಸಾಯುವ ವ್ಯಾಪಾರ ಬೇಡಪ್ಪ ನನಗೆ! ಕಾಡಾಕಾಡಿ, ಮುಷ್ಟಾಮುಷ್ಟಿ ಹಾನಾಹಾನಿ ಏನಾದ್ರೂ ಉಂಟೋ? ನಾನಿದ್ದೇನವಕ್ಕೆ ಮುಂದೆ!

ಉಮೇಶ—ಹೌದಪ್ಪಾ ಹೌದು! ನನಗೂ, ಕಣ್ಣಲ್ಲಿ ಒಂದಿಷ್ಟು ರಕ್ತವಿಲ್ಲದ ಆ ಡೊಳ್ಳೊಟ್ಟೆ ಸಾರ್ಜೆಂಟನ ಸೂರಲ್ ಬೆತ್ತದ ಪೆಟ್ಟು ಚಟಕ್ಕನೆ ಬಿದ್ದದ್ದೇ ತಡ, ಮಿಂಚು ಮಿಂಚು ಬಡೆದಂತಾಯಿತು! ಜೀವವೊಂದಿದ್ದರೆ ಬದುಕಿಕೊಂಡೇನೆಂದು ಒಂದೇ ಸವನೆ ಓಡಿದರೆ, ಹಾರಿ ಬಿದ್ದು ಮೊಣಕಾಲು ಗಾಯಮಾಡಿಕೊಂಡು ಕುಂಟುತ್ತಾ ಹ್ಯಾಗಾದರೂ ಮನೆಯೊಳಗೆ ಸೇರಿಬಿಟ್ಟೆ!

ಸುರೇಶ—ಅಹಹ! ನೀವು ಒಳ್ಳೇ ಸತ್ಯಾಗ್ರಹಿಗಳು! ಹೇಡಿಗಳಾದ ನಿಮ್ಮನ್ನು ಕಟ್ಟಿಕೊಂಡ್ರೆ ಒಳ್ಳೇ ಕೀರ್ತಿ ಬಂದೀತು! ಆ ಕ್ರೂರ ಪೋಲೀಸರು ನಮ್ಮನ್ನು ಕೊಂದುಹಾಕಿದರೂ ನಮ್ಮ ನಿರ್ಧಾರದಿಂದ ನಾವು ಒಂದಿಷ್ಟು ಚಲಿಸಬಾರದು.

ರಮೇಶ—ಹಾಗಾದ್ರೆ ನಾವು "ಡಿವಿಜನ್ ಓಫ್ ಲೇಬರ್" (ಶ್ರಮ ವಿಭಾಗ) ಮಾಡಿಕೊಳ್ಳುವ. ಯಾವ ಸಭೆಯಲ್ಲಾದರೂ ಭಾಷಣಕೊಡುವುದು ನಾನು. ಲಾತಿ ಚಾರ್ಜಿಗೆಮಾತ್ರ ನಾನಿಲ್ಲ. ಲಾತಿ ಎಂದರೆ ನನ್ನ ಗರ್ಭ ನಡುಗುವುದು. ಭಾಷಣದಿಂದ ಎಂತಹ ಪಾಷಾಣ ಹೃದಯವನ್ನಾದರೂ ಕರಗಿಸಿ ನೀರು ನೀರುಮಾಡುವುದು ನನ್ನ ಕೆಲಸ!

ಉಮೇಶ—ನನಗೆ ಈಗಲೂ ಆ ಸಾರ್ಜಂಟನ ಕೆಂಪು ಮುಖ ನೋಡಿದರೆ ಎದೆ ಡಬ್ಬೆನ್ನುತ್ತದೆ! ಲಾತಿ ಚಾರ್ಜಿನ ಹೊರತು ಬೇರೆ ಯಾವ ದೇಶಸೇವೆಗೂ ನನ್ನ ಸರ್ವಸ್ವವನ್ನೂ ಒಪ್ಪಿಸಲು ಸಿದ್ಧನಿದ್ದೇನೆ.

ಸುರೇಶ—ಉತ್ತರ ಕುಮಾರರಾದ ನಿಮಗೆ ಈ ಸಂಘದಲ್ಲಿ ಸ್ಥಳವಿಲ್ಲ. ಧೈರ್ಯವಿಲ್ಲದವರು ಆದಷ್ಟು ಬೇಗನೆ ತಮ್ಮ ಮೆಂಬರಿಕೆಗೆ ರಾಜಿನಾಮೆಕೊಡಬಹುದು, ಅಹಿಂಸಾತ್ಮಕ ಸಮರವು ನಿಮ್ಮಂತಹ ಹೇಡಿಗಳಿಗೆ ಹೇಳಿಸಿದ್ದಲ್ಲ.

ರಮೇಶ—ದೊಡ್ಡ ಮಿಲಿಟರಿ ಆರ್ಡರು ಇವನದು! ದೇವರು ನಿನಗೊಂದು ಗಟ್ಟಿ ಎದೆಕೊಟ್ಟಿದ್ದಾನೆಂದು ಎಲ್ಲರಿಗೂ ಕೊಟ್ಟಿರುವನೇ? ನನಗೆ ಗಟ್ಟಿ ನಾಲಗೆ ಕೊಟ್ಟಿದ್ದಾನೆ. ನೀನು ಎದೆಯೊಡ್ಡಿ ನಿಂತು ಪೋಲೀಸರಿಂದ ಲಾತಿ ಪೆಟ್ಟು ತಿಂದು ಜನರನ್ನು ದಂಗುಬಿಡಿಸಬಲ್ಲೆಯಾದರೆ ನಾನು ಸಭೆಗಳಲ್ಲಿ ಎದೆಯುಬ್ಬಿಸಿ ನಿಂತು ನನ್ನ ವಾಗ್ಜಾಲದಿಂದ ಜನರನ್ನು ವಿಸ್ಮಯಗೊಳಿಸಬಲ್ಲೆ.

ಉಮೇಶ—ಈಗ ನಾವು ಉಪಾಯದಿಂದ ಕೆಲಸಮಾಡಿದರೆ ರಂಗರಾಯರಿಗೆ ಮದುವೆ ಸಾಕುಸಾಕೆನಿಸುವಂತೆ ಮಾಡಬಹುದು.

ಸುರೇಶ—ನರಿಯಂತೆ ಈ ಉಮೇಶನದು ಯಾವಾಗಲೂ ಉಪಾಯವೇ? ಯಾರನ್ನಾದರೂ ವಂಚಿಸಿ ಏನಾದರೂ ಮಾಡುವುದೊಂದೇ ಯೋಜನೆ ಅವನದು. ಗಾಂಧಿಜೀಯವರ ಅಭಿಪ್ರಾಯದಂತೆ ನಾವು ಯಾವ ತರದ ವಂಚನೆಯನ್ನೂ ಮಾಡದೆ ತ್ರಿಕರಣಶುದ್ಧವಾಗಿ ಕೆಲಸಮಾಡಬೇಕು.

ಉಮೇಶ—ಹೌದು ತ್ರಿಕರಣ ಶುದ್ಧ! ಸಾಕು ಸಾಕು ನಿನ್ನ ಗಾಂಧಿ ತತ್ವ! ಹೇಗೂ ನಮ್ಮ ಕಾರ್ಯವಾದ್ರೆ ಸರಿ, ಯಾವ ಉಪಾಯಮಾಡಿದರೇನು? ಉದ್ದೇಶ ಒಳ್ಳೆದಿದ್ರೆ ಅದರ ಸಾಧನೆಯ ಮಾರ್ಗ ಯಾವುದಾದರೇನು?

ರಮೇಶ—ಸುರೇಶನದು ಗಾಂಧಿ ತತ್ವವಾದರೆ ಉಮೇಶನದು ತಿಲಕ ತತ್ವ. ಇರಲಿ ಅವನ ಗಾಂಧಿ ತತ್ವವೊಂದು ಮೂಲೆಯಲ್ಲಿ. ಅದೂಬ ವ್ಯೊಮ್ಮೆ ಬೇಕಾಗುತ್ತದೆ. ಈಗ ನಿನ್ನ ಉಪಾಯವೇನು ಹೇಳು.

ಉಮೇಶ—ಬೇರೇನೂ ಅಲ್ಲ. ನಮ್ಮಲ್ಲಿ ಯಾರಾದರೊಬ್ಬನು ಹುಡುಗಿಯಾಗಲೊಪ್ಪಬೇಕು.

ರಮೇಶ—ಹ! ಹ! ಹ! (ಗಹಗಹಿಸಿ ನಕ್ಕು) ಹುಡುಗಿಯಾಗ್ಲಿಕ್ಕೇನಡ್ಡಿ? ಈ ಕಾಲದಲ್ಲಿ ಹುಡುಗರಾಗಿರುವುದಕ್ಕಿಂತಲೂ ಹುಡುಗಿಯರಾಗುವುದೇ ಲೇಸು. ಈಗ ಎಲ್ಲಿಯಾದ್ರೂ ಅವರೇ ಮೊದ್ಲು. ಅವರಿಗೇನೇ ಪ್ರಥಮ ಸ್ಥಾನಮಾನ. ಅವರೆಂದರೆ ಎಲ್ಲೆಲ್ಲಿಯೂ ಬಹಳ ರಿಯಾಯತಿ. ಹುಡುಗನಾಗಿ ನನ್ನಿಂದ ಎಣಿಸಲು ಅಸಾಧ್ಯವಾದ ಕಾರ್ಯವನ್ನು ಹುಡುಗಿಯಾಗಿ ನಾನು ಒಂದು ಕ್ಷಣದಲ್ಲಿ ಸಾಧಿಸಿಕೊಳ್ಳಬಹುದು.

ಉಮೇಶ—ನೀನು ಹುಡುಗಿಯಾದ್ರೆ ನಿನಗೊಬ್ಬ ಗಂಡನನ್ನು ಆಫ್ರಿಕದ ನೀಗ್ರೋಜನರಿಂದ ಹುಡುಕಿ ತರಬೇಕಾದೀತು! ಒಂದು ಪಕ್ಷಕ್ಕೆ ಸುರೇಶ ಹುಡುಗಿಯಾದ್ರೆ ಚೆಂದವಾದೀತು.

ಸುರೇಶ—ಆ ಪ್ರಸ್ತಾಪ ನನ್ನ ಹತ್ರ ಎತ್ತಬಾರದು. ನಾನು ಹುಟ್ಟಿದ್ದೂ ಹುಡುಗನಾಗಿ, ಸಾಯುವುದೂ ಹುಡುಗನಾಗಿ. ಹುಡುಗಿಯಾಗುವುದೆಂದರೇನೇ ನನಗಾಗುವುದಿಲ್ಲ.

ರಮೇಶ—ಇಲ್ಲ! ಇಲ್ಲ! ಅವ ಹುಡುಗಿಯರನ್ನು ಕಂಡ ಕೂಡ್ಲೆ ಮುಖಕ್ಕೆ ಕರವಸ್ತ್ರ ಮುಚ್ಚಿ ಮರೆಮಾಡಿಕೊಳ್ಳುತ್ತಾನೆ ಪಾಪ! ಅವನು ಹುಟ್ಟಿದ್ದೂ ಹೆಂಗಸಿನ ಹೊಟ್ಟೆಯಲ್ಲಲ್ಲ! ಈ ಬೂಟಾಟಿಕೆಯೇ ನನಗಾಗುವುದಿಲ್ಲ! ದೊಡ್ಡ ಸನ್ಯಾಸಿ ಇವ! ಇಂಥಾ ಸನ್ಯಾಸಿಗಳೆಷ್ಟು ಮಂದಿ ಕಡೆಗೆ ಅರ್ಜುನ ಸನ್ಯಾಸಿಗಳಾಗಿಲ್ಲ.

ಉಮೇಶ—ಯಾರೂ ಬೇಡಪ್ಪಾ, ಸತೀಶನಾಗಲಿ. ಅವನ ನಡೆ, ನುಡಿ, ನೇತ್ರ, ಗಾತ್ರ, ಹಣೆ, ಹುಬ್ಬು, ಮೈಗಟ್ಟು, ನಡು, ನಿತಂಬ ಮೊದಲಾದ ಎಲ್ಲಾ ಲಕ್ಷಣಗಳೂ ಕವಿ ವಿವರಣೆಯ ಪದ್ಮಿನಿ ಜಾತಿ ಸ್ತ್ರೀಯಂತೆಯೇ ಇವೆ. ಬ್ರಹ್ಮನಲ್ಲಿಯೋ ಅಪ್ಪಿತಪ್ಪಿ ಇವನನ್ನು ಹೆಣ್ಣುಮಾಡುವ ಬದ್ಲಿಗೆ ಗಂಡುಮಾಡಿ ಬಿಟ್ಟನೋ ಏನೋ?

ರಮೇಶ—ಸೈ! ಸೈ! ನಮ್ಮಲ್ಲಿ ಸತೀಶನೇ ಹುಡುಗಿಯಾಗಬೇಕು. ಅದಕ್ಕೆ ನಮ್ಮೆಲ್ಲರ ಓಟು. ಆ ಬೆಡಗು, ವಯ್ಯಾರ, ಸಿಂಗಾರವೆಲ್ಲಾ ಅವನಿಗೆ ಚೆನ್ನಾಗಿ ಗೊತ್ತು. ಈಗ ಫೂಟ್‌ಬೋಲ್ ಆಡುವ ಹೊತ್ತಾಯಿತು. ನಡೆಯಿರಿ ಮೈದಾನಿಗೆ.

ಸುರೇಶ—ನಮ್ಮಲ್ಲಿ ಸತೀಶನೇ ಪುರುಷ ವಧುವಾಗಲು ಬಹಳಯೋಗ್ಯ. ಅವನ ಸ್ವಭಾವವೂ ಹಾಗೆಯೇ. ಓಪರೇಷನೇನಾದರೂ ಮಾಡಿ ಅವನನ್ನು ಸ್ತ್ರೀಯಾಗಿ ಮಾಡಬಹುದೋ ಏನೋ?

ಸತೀಶ—ಸಾಕು ಸಾಕು ನಿನ್ನ ತಮಾಷೆ! ಪುರುಷ ವಧುವಾಗುವುದಕ್ಕೂ ಎದೆ ಗಟ್ಟಿಯಿರಬೇಕು. ನಿನ್ನಂತಹ ಅಂಜುಗೂಳಿಗಳಿಂದದು ಸಾಧ್ಯವಿಲ್ಲ. ಸಮಾಜ ಹಿತಕ್ಕಾಗಿ ನಾನೇನು ಮಾಡುವುದಕ್ಕೂ ಸಿದ್ಧನೇ ಇರುವೆನು. ನಿನ್ನಂತೆ ಸ್ವಾರ್ಥಿಯಲ್ಲ ನಾನು.

ಸುರೇಶ—ಓಹೋ! ಹುಡುಗನಾಗಿದ್ದವನು ಹುಡುಗಿವೇಷ ಹಾಕಿಕೊಳ್ಳುವುದು ಮಹಾಪರಾರ್ಥದ ಕೆಲಸ!

ಉಮೇಶ—ಯಾಕಪ್ಪ ಚರ್ಚೆ ನಮ್ಮ ನಮ್ಮೊಳಗೆ? ಬನ್ನಿ ಹೋಗುವ ಫೂಟ್‌ಬೋಲ್ ಆಡ್ಲಿಕ್ಕೆ.

(ಸತೀಶನನ್ನು ಕೈಹಿಡಿದೆಳೆದೊಯ್ಯುವನು. ಅವರ ಹಿಂದೆ ಎಲ್ಲರೂ ಹೋಗುವರು.)

೩ನೇ ನೋಟವನ್ನು ನೋಡಲು ಮರೆಯಬೇಡಿರಿ !

ಉಡುಪಿ ಮಠಗಳ ಸುಧಾರಣೆ

[ಲೇಖಕ. ಶ್ರೀ ರಾಮು]

ಲೇಖಾಂಕ ೧

ಮಠಗಳ ಸುಧಾರಣೆಯನ್ನು ಹೇಳುವು ದಕ್ಕಿಂತ ಮೊದಲು, ಅವುಗಳ ಪ್ರಾಚೀನ ಅರ್ವಾಚೀನ ಇತಿಹಾಸವನ್ನಿಷ್ಟು ಹೇಳ ಬೇಕಾಗುವುದು. ಸುಧಾರಣೆಯೆಂದರೆ ದೋಷಯುಕ್ತವಾದುದನ್ನು ಪರಿಷ್ಕರಿಸುವುದೆಂದು ಹೇಳಬಹುದು. ಮಠಗಳ ಸುಧಾರಣೆಯೆಂದಾಗ ಅದರ ದೋಷವನ್ನು ತಿಳಿಯಲು ಜಿಜ್ಞಾಸೆಯಾಗುವುದು ಸಹಜ. ಅವರ ದುಸ್ಥಿತಿಯನ್ನು ತಿಳಿಯುವುದಕ್ಕೆ ಪೂರ್ವದಲ್ಲಿ ನಿರ್ದುಷ್ಟಾವಸ್ಥೆಯು ಅರಿವಿರಬೇಕಷ್ಟೆ? ಆದುದರಿಂದ ನಾವು ಈ ಲೇಖಾಂಶದಲ್ಲಿ ಮಠಗಳ ಸ್ಥಾಪನೆಯ ಗುರಿ, ಅವುಗಳ ನಿರ್ದುಷ್ಟಾವಸ್ಥೆ ಇವುಗಳ ಪರಿಚಯವನ್ನು ಮಾಡಬಯಸುತ್ತೇವೆ.

ಹಿಂದಿನಿಂದಲೂ ಹಿಂದೂದೇಶದಲ್ಲಿ ಐಕಮತ್ಯವು ಸ್ವಲ್ಪ ಹಿಂದೆ ಹಿಂದೆ. ಐಕಮತ್ಯವನ್ನು ನೆಲೆಗೊಳಿಸಲಿಕ್ಕಾಗಿ ಎಷ್ಟೋ ಮಹನೀಯರು ಶ್ರಮಪಟ್ಟಿರುವರು. ಅವರೆಲ್ಲರ ಹೆಸರುಗಳೂ ಇತಿಹಾಸದಲ್ಲಿ ಉಜ್ವಲವಾಗಿಯೇ ಇರುವುದರಿಂದ ಅವನ್ನಿಲ್ಲಿ ಹೇಳಬೇಕಾಗಿಲ್ಲ. ೧೩ನೇ ಶತಮಾನದಲ್ಲಿಯೂ ಜನರು, ಪರಸ್ಪರ ದ್ವೇಷಾಸೂಯೆಗಳಿಗೊಳಪಟ್ಟು ಸಂಘಟನೆಯಿಲ್ಲದವರಿದ್ದರು. ಆ ಸಮಯದಲ್ಲಿಯೇ ಶ್ರೀಮನ್ಮಧ್ವಾಚಾರ್ಯರು ಜನ್ಮವೆತ್ತಿದರು. ಅವರು ಪ್ರತಿಭಾಸಂಪನ್ನರು. ಜನರ ಆ ಪಾಶವೀ ವರ್ತನೆಯು ಅವರಿಗೆ ರುಚಿಸಲಿಲ್ಲ. ಜನರನ್ನು ದಾರಿಗೆ ಹಚ್ಚೋಣವೆನಿಸಿತು ಅವರಿಗೆ. ಅದರ ಉಪಾಯವನ್ನು ಅವರು ಹುಡುಕತೊಡಗಿದರು. ಕೊನೆಗೆ, ಜನರಲ್ಲಿ ಜೀವನದ ಗುರಿಯ ಕುರಿತು ಉಪದೇಶಿಸಿ, ಅವರನ್ನು ಜಾಗ್ರತಗೊಳಿಸಬೇಕೆಂದೆಣಿಸಿದರು. ಅಂತೆಯೇ ದ್ವೈತಶಾಸ್ತ್ರವೆಂಬ ಒಂದು ಸಾಮೂಹಿಕ ಸಮಾಜಶಾಸ್ತ್ರವನ್ನು ರಚಿಸಿ, ಅದನ್ನು ಜನರಿಗೆ ಉಪದೇಶಿಸಿದರು. ಹಿಂದೂಜನರಲ್ಲಿ ಏನಿಲ್ಲದಿದ್ದರೂ ಒಂದು ಗುಣವಿದೆ; ಅಂದರೆ ಮನುಷ್ಯನ ಯೋಗ್ಯತೆಗೆ ತಕ್ಕಂತೆ ಅವರು ಅವನನ್ನು ಗೌರವಿಸುವರು. ಹಾಗೆಯೇ ಆಚಾರ್ಯರ ವಿದ್ವತ್ಪೂರ್ಣವಾದ ಉಪದೇಶದಿಂದ ಅವರಲ್ಲಿ ಸಂಸ್ಕೃತಿಯ ಸ್ಮರಣೆಯುಂಟಾಯಿತು! ತಮ್ಮನ್ನು ತಾವು ಅರಿತುಕೊಂಡರು. ಅಜ್ಞಾನಮೂಲವಾದ ಜಡ ಮೋಹದಿಂದ ಮುಕ್ತರಾಗಿ ಜೀವನದ ಗುರಿಯನ್ನು ತಿಳಿದರು. ಹೀಗಾಗಿ, ದಕ್ಷಿಣ ಹಾಗೂ ಉತ್ತರ ಭಾರತೀಯರಲ್ಲಿ ಆಚಾರ್ಯರ ವಿಷಯದಲ್ಲೊಂದು ದೈವೀ ಭಾವನೆಯು ಉಂಟಾಯಿತು. ಆ ಭಾವನೆಯೇ ಅವರನ್ನು ಕರ್ತವ್ಯದ ಕಡೆಗೆ ತಿರುಗಿಸಿತು. ಹೆಚ್ಚಾಗಿ ದಕ್ಷಿಣ ಭಾರತೀಯರಲ್ಲಿ ಒಂದು ತೆರನಾದ ಸಂಘಟನೆಯುಂಟಾಯಿತು. ಅವರ ಆತ್ಮವಿಕಾಸಕ್ಕೆ ಹೇತುಭೂತರಾದ ಆಚಾರ್ಯರು ಅವರ ಸೂತ್ರಧಾರತ್ವವನ್ನು ವಹಿಸಿ ಅವರನ್ನೊಂದು ಮನುಷ್ಯವರ್ಗದವರನ್ನಾಗಿ ಉದ್ಧರಿಸಿದರು!

ವಿಲಾಸಭೋಗಗಳು ಮಾನವನ ಹೃದಯವನ್ನು ಆಗಾಗ ಕಲಕಿಸುತ್ತವೆ. ಮನುಷ್ಯನನ್ನು ಸ್ವಾರ್ಥಿಯನ್ನಾಗಿ ಮಾಡಿ, ಕರ್ತವ್ಯವಿಮುಖನನ್ನಾಗಿ ಮಾಡುತ್ತವೆ. ಹೆಚ್ಚೇಕೆ? ಅವನನ್ನು ಒಂದು ಪಶುವನ್ನಾಗಿ ಮಾಡುತ್ತವೆ. ಇದು ಶ್ರೀ ಆಚಾರ್ಯರಿಗೆ ತಿಳಿಸುದೆಯಿಲ್ಲ. ಮನುಷ್ಯದೇಹವು ಎಷ್ಟಾದರೂ ಅಸ್ಥಿರವಲ್ಲವೇ? ಮಹಾಮಹಿಮರಾದ ಆಚಾರ್ಯರೂ, ಪ್ರಕೃತಿ ನಿಯಮದಂತೆ ಒಂದಲ್ಲ ಒಂದು ದಿನ ಕಾಲನಾಟಕ್ಕೆ ಸಿಗಲೇ ಬೇಕೆಂಬುದನ್ನು ಅರಿತಿದ್ದರು. ಅನಂತರ ಸಮಾಜದ ಭದ್ರತೆಗಾಗಿ ಅವರು ಬಹಳವಾಗಿ ಯೋಚಿಸಿ, ಕಟ್ಟಕಡೆಗೆ ಒಂದು ನಿರ್ಧಾರವನ್ನು ಮಾಡಿದರು. ಅದೇ ಇದು: ಸಮಾಜ ಸಂಘಟನೆಯ ಬಗ್ಗೆ ಉಪದೇಶಕರನ್ನು ನೇಮಿಸುವುದು. ಅವರು ನಿರಂತರ ಬ್ರಹ್ಮಚಾರಿಗಳಿದ್ದು, ಪ್ರಪಂಚದ ವಿಷಯಸುಖಕ್ಕೆ ಹೇಸುವವರಿರಬೇಕು. ವಿಷಯಾಭಿಲಾಷೆಯು ಆತ್ಮಸ್ಪ್ರಹೆಯನ್ನು ಕುಂದಿಸುತ್ತದೆ. ಆದಕ್ಕಾಗಿ ಇವರು ಅಂತಹ ನಿರ್ಬಂಧನೆಯನ್ನಿಟ್ಟಿರಬೇಕು. ಆ ಉಪದೇಶಕರು, ಸಕಲಶಾಸ್ತ್ರಗಳನ್ನೂ ಅಭ್ಯಾಸ ಮಾಡಿ ಜನರಿಗೆ ಉಪದೇಶಿಸುತ್ತಾ ಸಮಾಜವನ್ನು ರಕ್ಷಿಸಬೇಕು. ಅವರಲ್ಲಿ ಜನರಿಗೆ ನಂಬುಗೆಯುಂಟಾಗುವಂತೆ, ಅವರಿಗೆ ತಾನು ಸ್ವಲ್ಪ ಅಧಿಕಾರವನ್ನು ಕೊಟ್ಟರು; ಏನೆಂದರೆ ಸಮಾಜವು ಸ್ವೈರಾಚಾರಿಯಾಗದ ತಮ್ಮ ವ್ಯಕ್ತಿಸ್ವಾತಂತ್ರ್ಯಕ್ಕೆ ಕುಂದಿಲ್ಲದ ರೀತಿಯಲ್ಲಿ ಇವರ ಹತೋಟಿಯಲ್ಲಿಯೂ ಇರಬೇಕೆಂದು. ಆ ಉಪದೇಶಕರೇ, ಯತಿಗಳು, ಸ್ವಾಮಿಗಳು, ಸನ್ಯಾಸಿಗಳು. ಉಡುಪಿಯಲ್ಲಿ ಅಂತಹ ಎಂಟು ಮಂದಿಯನ್ನೇರ್ಪಡಿಸಿ, ಇತರ ಕಡೆಯಲ್ಲೂ ಒಬ್ಬೊಬ್ಬರನ್ನೇರ್ಪಡಿಸಿದರು. (ಇತರ ಕಡೆಯವರಲ್ಲಿ ಬಾಲಾಶ್ರಮದ ನಿಯಮವಿಲ್ಲ.) ಆ ಉಪದೇಶಕರಿಗಾದರೋ ತನ್ನ ಸೊತ್ತೆಂಬುದೇನೂ ಇದ್ದಿಲ್ಲ. ಆದಿದ್ದರೆ ಸ್ವಾರ್ಥ ಅಹಂಕಾರಗಳುಂಟಾಗುವುವೆಂದು ಶ್ರೀ ಆಚಾರ್ಯರು ಅದಕ್ಕೆಡೆಗೊಡಲಿಲ್ಲ. ಸಮಾಜವನ್ನು ವಿಭಾಗಿಸಿ ಒಂದೊಂದು ಉಪದೇಶಕರ ವಶಪಟ್ಟರು. ಆ ಉಪದೇಶಕನ ಜೀವನ ನಿರ್ವಾಹಕ್ಕೆ ಬೇಕಾದುದನ್ನು ಒದಗಿಸಿಕೊಡುವ ಹೊರೆಯು ಶಿಷ್ಯ ಮಂಡಲಿಯದು.

ಸಮಾಜದಲ್ಲಿ ಕ್ರಾಂತಿಯೆದ್ದಾಗ, ಶಾಂತಿಯನ್ನುಂಟುಮಾಡುವುದೂ, ಅಲ್ಲಲ್ಲಿ ಸಂಚರಿಸಿ ಸಂಸ್ಕೃತಿಯ ಪ್ರಚಾರಮಾಡುವುದೂ ಅವರ ಕರ್ತವ್ಯವಾಗಿತ್ತು. ಮುಖ್ಯವಾಗಿ ಸಮಾಜದ ಮಾರ್ಗದರ್ಶಕರವರು! ಅಂತಹ ಯೋಗ್ಯತೆಯುಳ್ಳವರೇ ಆ ಪಟ್ಟವನ್ನೇರುತ್ತಿದ್ದರು.

ಆ ಉಡುಪಿಯ ಎಂಟು ಮಂದಿಯವರೆಂದರೆ ಕಾಣಿಯೂರು, ಸೋದೆ, ಪುತ್ತಿಗೆ, ಅದಮಾರು, ಪೇಜಾವರ, ಫಲಿಮಾರು, ಕೃಷ್ಣಾಪುರ, ಶೀರೂರು ಎಂದು ಈಗ ಕರೆಯುತ್ತಿರುವ ಎಂಟು ಶ್ರೀಪಾದಂಗಳವರು. ಆಗಿನವರಿಗೆ ಸುಖವಿಲಾಸಕ್ಕೆಡೆಯಿದ್ದಿಲ್ಲ. ಏಕೆಂದರೆ ಸಮಾಜ ಸಂರಕ್ಷಣೆಯ ಜವಾಬ್ದಾರಿಯು ಅವರಲ್ಲಿತ್ತು. ಆ ಹೊಣೆಗಾರಿಕೆಯಿಂದಾಗಿ ಅವರಿಗೆ ಇತರ ವಿಷಯಗಳಿಗೆ ಗಮನಕೊಡಲು ಎಡೆಯೇ ಇದ್ದಿಲ್ಲ. ಅವರೂ ಆ ಕರ್ತವ್ಯವನ್ನು ತಾಳ್ಮೆಯಿಂದಲೂ, ದಕ್ಷತೆಯಿಂದಲೂ ನಿರ್ವಹಿಸುತ್ತಿದ್ದರು. ತಮ್ಮ ಕರ್ತವ್ಯವನ್ನು ಚ್ಯುತಿಯಿಲ್ಲದಂತೆ ನಡಿಸುತ್ತಿದ್ದುದರಿಂದಲೇ ಅವರಲ್ಲಿ ಜನರಿಗೆ ನೈಜ ಗೌರವವುಂಟಾಯಿತು. ಗೌರವಕ್ಕೆ ಅವರು ಅರ್ಹರೂ ಇದ್ದರು. ಆದುದರಿಂದ ಆ ಕಾಲವು ಸುಗಮವಾಗಿ ಸಾಗಿತು. ಇಂದೋ? ಇಂದು ಆ ಕಾಲಕ್ಕೆ ತೀರಾ ವಿಪರ್ಯಾಸವಿದೆ! ಕಾರಣವಿಷ್ಟೆ, ಆ ಯತಿಗಳು ಹೋದಲ್ಲೆಲ್ಲಾ ಶಿಷ್ಯವರ್ಗೀಯರು ಬಹಳ ಸತ್ಕರಿಸಿದರು. ಕಾಣಿಕೆಯೆಂದು, ಜಮೀನನ್ನೋ, ಹಣವನ್ನೋ ಕೊಡತೊಡಗಿದರು. ಕೆಲಕಾಲ ಅವನ್ನು ಪರೋಪಕಾರಕ್ಕೆ ವಿನಿಯೋಗಿಸಲಾಯಿತು. ಆದರೆ ಬರಬರುತ್ತಾ ಪರಾರ್ಥಕ್ಕಿಂತ ಸ್ವಾರ್ಥತೆಯ ಕಿರುಕುಳತನವೇ ಮಿಗಿಲಾಗತೊಡಗಿತು. ಆ ಹಣವನ್ನೆಲ್ಲಾ ತಮ್ಮದನ್ನಾಗಿ ಶೇಖರಿಸತೊಡಗಿದರು. ಹನಿಕೂಡಿ ಹಳ್ಳವೆಂಬಂತೆ, ಆ ಕೋಶವು ಅಭಿವೃದ್ಧಿಯಾಗತೊಡಗಿತು. ಹಣದ ರಾಶಿಯು ಹೆಚ್ಚಾದಂತೆಲ್ಲಾ ಜವಾಬ್ದಾರಿಕೆಯು ಮರವೆಯಾಗುತ್ತಾ ಬಂದಿತು. ತಾನು ನಿರ್ಲಿಪ್ತ, ಯೋಗಿ, ವಿರಾಗಿ, ಎಂಬ ಕಲ್ಪನೆಯು ಬದಲಾಗಿ ತಾನು ಭೋಗಿ, ಸಮಾಜದ ಸರ್ವಾಧಿಕಾರಿ, ಜಮೀನ್ದಾರ, ಮುಂತಾದ ಭ್ರಮಾತ್ಮಕ ಕಲ್ಪನೆಗಳುಂಟಾದುವು. ಹೀಗೇ ಅವರೆಲ್ಲರೂ ಸಾಕಷ್ಟು ಜಮೀನ್ದಾರರಾದರು! ಹೊಣೆಗಾರಿಕೆಯು ಕ್ರಮೇಣ ಲೋಪವಾಗಿ ಅವರೊಂದು ಸಮಾಜದ ದೊಡ್ಡ ಋಣಿಗಳಾದರು. ಅವರಲ್ಲಿದ್ದ ಕರ್ತವ್ಯತೆಯು ಹೆಸರಿಗೆ ಮಾತ್ರ ಉಳಿಯಿತು.

ಹೀಗಾಗಿ 'ಇಂದು ಮಠಗಳು ಅಧೋಗತಿಗಿಳಿದಿವೆ. ಅದು ಹೇಗೆಂಬುದನ್ನು ಮುಂದಿನ ಲೇಖಾಂಕದಲ್ಲಿ ನೋಡಿರಿ.

ರೂ. 25 ಇನಾಮು

10 ಮಂದಿ ದೇಶಭಕ್ತರಾರು?

ನಾವು ಈ ಕೆಳಗೆ ಕೊಟ್ಟಿರುವ ಹಿಂದುದೇಶದ 10 ಮಂದಿ ಸುಪ್ರಸಿದ್ಧ ಜೀವಂತ ದೇಶಭಕ್ತರ ಹೆಸರುಗಳನ್ನು ಅವರ ದೇಶಭಕ್ತಿ, ತ್ಯಾಗ, ಬುದ್ಧಿಶಕ್ತಿ, ಸಚ್ಚಾರಿತ್ರ್ಯ ಪ್ರಗತಿಗಾಮಿತ್ವವೇ ಮೊದಲಾದ ಗುಣ ವಿಶೇಷಗಳ ದೃಷ್ಟಿಯಿಂದ ಅವರಿಗೆ ನಾವು ಕೊಡುವ ಸ್ಥಾನದಂತೆ ಅನುಕ್ರಮವಾಗಿ ಬರೆದು ಮೊಹರ ಹಾಕಿ ಸಂಪಾದಕರ ಬಳಿ ಇಟ್ಟಿರುತ್ತೇವೆ. ನಾವು ಸ್ಥಾನಗಳನ್ನು ಕೊಟ್ಟ ಪ್ರಕಾರವಾಗಿಯೇ 10 ಮಂದಿ ದೇಶಭಕ್ತರ ಹೆಸರುಗಳನ್ನು ಅನುಕ್ರಮವಾಗಿ ತಪ್ಪಿಲ್ಲದೆ ಈ ಕೆಳಗಣ ರಿಖಾನೆಗಳಲ್ಲಿ ಬರೆದು ಕಳುಹಿಸಬೇಕು.

ಕ್ರಮ ತಪ್ಪಿ ಬರೆದ 10 ದೇಶಭಕ್ತರ ಹೆಸರು

(1) ಸಿ. ರಾಜಗೋಪಾಲಾಚಾರ್ಯರ್, (2) ಸುಭಾಷಚಂದ್ರ ಭೋಸ್, (3) ಮಹಾತ್ಮ ಗಾಂಧಿ, (4) ಪಂಡಿತ್ ಜವಾಹರಲಾಲ ನೆಹರು, (5) ಸರ್ದಾರ್ ವಲ್ಲಭಾಯಿ ಪಟೇಲ್, (6) ಕೆ. ಎಫ್ ನರಿಮನ್, (7) ಸರೋಜಿನಿ ದೇವಿ, (8) ಶೇಟ್ ಜಮುನಾಲಾಲ ಬಜಜ್, (9) ಖಾನ್ ಅಬ್ದುಲ್ ಗಾಫರ್ ಖಾನ್, 10) ಬಾಬುರಾಜೇಂದ್ರ ಪ್ರಸಾದ್.

೧ ____________________

೨ ____________________

೩ ____________________

೪ ____________________

೫ ____________________

೬ ____________________

೭ ____________________

೮ ____________________

೯ ____________________

೧೦ ____________________

(ಹೆಸರುಗಳನ್ನು ಚಿತ್ತಿಲ್ಲದಂತೆ ಸ್ಪಷ್ಟವಾಗಿ ಬರೆಯಿರಿ)

ಬಿಡಿಸಿದವರ ಹೆಸರು ____________________

ವಿಳಾಸ ____________________

ಉತ್ತರ ಸ್ವೀಕರಿಸುವ ಕೊನೆಯ ತಾರೀಕು 25—6—37

ನಿಯಮಗಳು

೧. ಪ್ರತಿ ಉತ್ತರದೊಡನೆ ಎರಡಾಣೆಯ ಟಪ್ಪಾಲುಚೀಟನ್ನು ಇಡಬೇಕು. ಅದನ್ನು ಯಾವ ಕಾರಣದಿಂದಲೂ ತಿರುಗಿ ಕೊಡಲಾಗುವುದಿಲ್ಲ. ಅಥವಾ ಬೇರೊಂದು ಸ್ಪರ್ಧೆಗೆ ಜಮೆಹಿಡಿಯುವಂತೆಯೂ ಇಲ್ಲ. ೨. ಒಬ್ಬರು ಅನೇಕ ಉತ್ತರಗಳನ್ನು ಕಳುಹಿಸಬಹುದು. ಮೊದಲನೆಯದನ್ನು ಮೇಲಿನ ಕೂಪನಿನಲ್ಲಿಯೂ ಮಿಕ್ಕವುಗಳನ್ನು ಬೇರೆ ಕಾಗದದಲ್ಲಿಯೂ ಬರೆದು ಕಳುಹಿಸಬಹುದು. ೩. ಸ್ಪರ್ಧೆಯ ಎಲ್ಲಾ ವಿಷಯಗಳಲ್ಲಿಯೂ ಸ್ಪರ್ಧೆಯ ಸಂಪಾದಕರ ತೀರ್ಮಾನವೇ ಕೊನೆಯದಾಗಿರುತ್ತದೆ. ೪. ಈ ಸ್ಪರ್ಧೆಗೆ ಸಂಬಂಧಪಟ್ಟ ಪತ್ರವ್ಯವಹಾರಗಳನ್ನು ಎಷ್ಟು ಮಾತ್ರವೂ ಮಾಡಲಿಕ್ಕಿಲ್ಲ; ಅದಕ್ಕಾಗಿ ಮಾತುಕತೆಯೂ ಅನಗತ್ಯವಿದೆ. ೫. ನಿಯಮಗಳನ್ನು ಪಾಲಿಸದಿರುವ ಉತ್ತರಗಳು ಅಸ್ವೀಕೃತವಾಗುವವು. ೬. ನವಯುಗದ ಸಂಪಾದಕರ ಬಳಿ ಮೊಹರುಮಾಡಿಟ್ಟ ಉತ್ತರಕ್ಕೆ ಹೊಂದಿಕೆಯಾಗುವ ಉತ್ತರವೇ ಸಂಪೂರ್ಣ ಸಮರ್ಪಕ ಉತ್ತರ. ಒಂದಕ್ಕಿಂತ ಹೆಚ್ಚು ಸಮರ್ಪಕ ಉತ್ತರಗಳು ಬಂದರೆ ಇನಾಮನ್ನು ಅವರೊಳಗೆ ಹಂಚಿ ಕೊಡಲಾಗುವುದು. ಉತ್ತರಗಳು ಸಂಖ್ಯೆ ಮಾನದಂತೆ ಇನಾಮಿನ ಮೊತ್ತವನ್ನು ಹೆಚ್ಚು ಕಡಿಮೆ ಮಾಡಲಾದೀತು. ಉತ್ತರವನ್ನು ತಾ 25—5—37ರ ತನಕ ಸ್ವೀಕರಿಸಿ ತಾ. 1—7—37ಕ್ಕೆ ಪ್ರಕಟಿಸಲಾಗುವುದು. ಉತ್ತರವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ಮೆನೇಜರ್, ನವಯುಗ, ಉಡುಪಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ರೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಮಾಸ] **ವಿಶ್ವವಾಣಿ** [ಪತ್ರಿಕೆ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ: ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... ...	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚಾರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ— ವ್ಯವಸ್ಥಾಪಕ—'ವಿಶ್ವವಾಣಿ,'
'ಅನ್ನಪೂರ್ಣ', ವಿಶ್ವೇಶ್ವರಪುರಂ, ಬೆಂಗಳೂರು ನಗರ.

ಉಡುಪಿ ಏಜೆಂಟರು—ನವಭಾರತ ಬುಕ್ ಡಿಪೊ, ಉಡುಪಿ.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — **ಸ್ತ್ರೀಧರ್ಮ ಸಂಜೀವಿನೀ ಚೂರ್ಣ** (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೨ ಟ.ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು॥ ಕೇಳವಾ ಮಾಹಿಮಾ ಜಿ. ರಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

The Combined Booking Agency

AND

The Joint Booking Office

MANGALORE, SOUTH KANARA.

— ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ —

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ—

ಚಾರ್ಮಾಡಿ	ಕಾರ್ಕಳ
ಉಜ್ರೆ (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ)	ಉಡುಪಿ
ಮಂಗಳೂರು	ಕುಂದಾಪುರ
ಪುತ್ತೂರು	ಮೂಡಬಿದ್ರೆ
ಮೂಲ್ಕಿ	ಗಂಗೊಳ್ಳಿ

ಜಿಲ್ಲೆಯ ಹೊರಗೆ—

ಮಡಿಕೇರಿ, ಮೈಸೂರು, ಸಕಲೇಶಪುರ, ಚಿಕ್ಕಮಗಳೂರು, ಮೂಡಗೆರೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿ ಗೃಹಗಳು ನಿರ್ಮಿಸಲ್ಪಡುವುವು. ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜ್ಯೊಂಟ್ ಮೆನೇಜರರಿಗೆ ತಿಳಿಸಿರಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೊಸ್ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ। ಸುಮತಿಬಾಯಿ,

ಬಿ. ಎ. ಎಲ್. ಟಿ., ಎಫ್. ಪಿ. ಎಮ್. ಎಸ್. ಭಿಷಗ್ರತ್ನ, ರಿಜಿಸ್ಟ್ರಾರ್.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್

ಕೊಲೆರಾ ರೋಗಕ್ಕೆ ರಾಮಬಾಣ ಔಷಧ.

೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

The Coondapoor Bank, Ltd.,

Head Office:- **Coondapoor.** Branch Office:-**Brahmavar.**

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ.ಶೆ 4, ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ. 4

6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪಾಯ 5%, 1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪಾಯ $5\frac{1}{2}$% 2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯ 10 ಸಹಾ ಸಾಲಕೊಡಲಾಗುತ್ತವೆ. ಫಾರುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. **N. Sheshagiri Rao,** ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ವರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ, ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪೆನಿ,

೩. ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜೆ. ಟಿ. ಮದರಾಸ್.

ಶಾಲಾ ವಿದ್ಯಾರ್ಥಿಗಳಿಗೆ

ಅತ್ಯಪೂರ್ವ ಸುಸಂಧಿ

●

ಎಕ್ಸರ್‌ಸೈಸ್, ಡ್ರಾಯಿಂಗ್

ಮೇಪ್ ಡ್ರಾಯಿಂಗ್

ಕೋಪಿ, ರಫ್ ಪುಸ್ತಕಗಳು

ನಮ್ಮಲ್ಲಿ ಯೋಗ್ಯ ಕ್ರಯಕ್ಕೆ

ದೊರೆಯುತ್ತವೆ.

●

ಈಗಲೇ ಬಂದಿರುವ ಹೊಸ

ಮಾದರಿಯ ಉತ್ತಮ ತರದ

ಫೌಂಟೆನ್ ಪೆನ್‌ಗಳು

ಮಾರಾಟಕ್ಕಿವೆ.

ತುಳುನಾಡ್ ಛಾಪಖಾನೆ

ಉಡುಪಿ

ಮಕ್ಕಳ

ಮಗ್ಗಿ ಪುಸ್ತಕ

ಪುಟಗಳು 48

●

ಸುಂದರ ಸುಶೋಭಿತ ಮುದ್ರಣ

ಉತ್ತಮವಾದ ಕಾಗದ - - ದಪ್ಪನಾದ ಬೈಂಡು

●

ಬೆಲೆ ೦—೦—೬ ಮಾತ್ರ.

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

○

ಕೂಡಲೇ ಬರೆಯಿರಿ—

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು--ಒಂದಾಣೆ

N A V A Y U G A
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc.
APPLY TO THE MANAGER

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL. XVI-NO. 41

17-6-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧೭ ಜೂನ್, ೧೯೩೭ [ಸಂಚಿಕೆ ೪೧

THE

Canara Industrial & Banking

SYNDICATE, LIMITED.

ESTD:] [INCORPORATED IN BRITISH INDIA] **[1925**

Head Office:
"MUKUNDA NIVAS"
UDIPI, (S. I.)

BRANCHES:

1 BOMBAY
2 BANGALORE CITY
3 BELGAUM
4 BYADGI
5 BELLARY
6 ADONI
7 HOSPET
8 TALIPARAMBA
9 UPPINANGADI
10 KASARGODE
11 PAYYANUR
12 KANHANGAD
13 KARKALA
14 NANDYAL
15 PRODATTUR
16 TADPATRI
17 HUBLI
18 GADAG
19 KARWAR
20 KUMTA
21 ANKOLA
22 HONAVAR
23 BHATKAL
24 BRAHMAVAR
25 HUNGARCUTTA
26 SIRSI
27 SAGAR
28 COONDAPOOR
29 UDIPI
30 MANGALORE
31 CANNANORE

BEG TO ANNOUNCE

that the Syndicate has been included in the list of Scheduled Banks under the Reserve Bank of India Act.

Non-Scheduled Banks, other companies and company promoters may take advantage of this for depositing their amounts with the Syndicate under the Indian Companies Act 1936.

Paid up Capital	Rs. 3,48,400
Reserves	„ 19,2,390
Deposits exceed	„ 24 lakhs
Total Working Funds exceed	„ 43 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುವುವು. ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ಸ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**

೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.
ಪತ್ತೆ—ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City*

ಮೂರು ಇನಾಮುಗಳು.

THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ ಮೂರು ಸಾಮಾನುಗಳು 1 ಆಣೆಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು ಸ್ಟ್ಯಾಂಪು ಬಾರದಿದ್ದರೆ ಈಗಿನ ಸೀಜನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆಸೀರೆಗಳೂ, ಖಣ, ಮಡಿ ಕದಪಾವಿನ್ನು, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಳಿ, ನಾಮರ್ದಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ 20 ರಿಂದ 55 ಶಲು ಸಾದಾ 16 ಮೊಳದ ಶೀರೆ 1 ಕ್ಕೆ ರೂ 16 ರಿಂದ ರೂ ೩೫ ರ ವರೆಗೆ ಅರೆ ಕಡಮ 16 ಮೈ... ಕ್ಲಾವರ್ ಅಂಚು ರೂ. 10½ ಯಿಂದ ರೂ 16 ಖಣ 1 ಕ್ಕೆ ರೂ 1½ ರಿಂದ ರೂ 10 ರ ವರೆ ಪೋಸ್ಟು ಖರ್ಚು ಪ್ರತ್ಯೇಕ ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ ಚೌಕಂಬಾ, ಬನಾರಿಸ್, ಕಾಶಿ



ಧರ್ಮಾರ್ಥ
ಬಹುಮಾನಗಳು
1-4-0ಗೆ !
— ಯಾರಿಗೆ? —

ರೂಪಾಯಿ 1—4—0 ಕೊಟ್ಟು 14 ಸೀಸೆ ಒಟ್ಟೊ ರೋಸ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ —3 ಡಮ್ಮಿ ರಿಸ್ಟ್‌ವಾಚುಗಳು, 1 ರೈಲ್ವೆಟಾಯಿಂ ಡಮ್ಮಿ ಪಾಕೆಟ್ ವಾಚು, 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಸ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟನ್ ಪೆನು 14 ಕ್ಯಾರೆಟ್ ನಿಬ್ಬು ಸಮೇತ 1 ಇಮಿಟೇಶನ್ ಮೋತಿಮಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಿಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0 **ಇಂದೇ ಆರ್ಡರುಕೊಡಿರಿ**

Bengal Watch Co.,
Post Box No. 12214, CALCUTTA

ಕಿರಿಯರ ಪ್ರಪಂಚದ
ಪುಸ್ತಕಗಳು

೧	ಸುಡಕಟೆಗಳು	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ ಲವ	೦	೪	೦
೫	ಸಂಶಯ ಪಿಶಾಚಿ	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಮತೆ	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦
೯	ಹೆಂಡ್ತಿ ಗಂಡನಾದರೆ	೦	೪	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು
ದೊರಕುವರೆ ಹೇಗೆ ಹುಡುಕುವಿರೇಕೆ?

ಇನ್ಶೂರೆನ್ಸ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸ ದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,
C/o 'ಕಿರಿಯರ ಪ್ರಪಂಚ,'
ಉಡುಪಿ

WANTED

Influential agents to canvass Subscribers and to get advertisements for 'Navayuga' throughout Karnataka on pay or commission basis.

For particulars apply to—

The Manager,
Navayuga, Udipi

ಅಖಿಲ ಕನ್ನಡ ನಾಡಿಗೆ
ಪ್ರೀತಿಯಾಗಿರುವ

ಮಾಸ] **ಕಥಾಕುಂಜ** [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಚಿತ್ರಗಳಿಂದಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

— ನಮ್ಮಲ್ಲಿ ಸಿಗುವ ಗ್ರಂಥಗಳು —

	ರೂ.	ಆ.	ಪೈ
ಉಡುಗೊರೆ	0	12	0
ಕೆಲವು ನೀಳ್ಗತೆಗಳು	0	12	0
ಜೀವನದ ಸೊಗಸು	0	4	0
ಬಂಗಾರದ ಡಾಬು	0	10	0
ಶೂದ್ರಕ	1	0	0
ಜೋಮನದುಡಿ	1	0	0
ಸಾಧುವರ್ಯ ನಾಗಮಹಾ			
ಶಯರ ಜೀವನದ ಕಥೆ	0	12	0
ಹರಟೆಗಳು	0	10	0
ನನ್ನನಲ್ಲ	0	10	0
ಕಣ್ಮರೆಯಾದ ಕನ್ನಡ	0	14	0
ಕನ್ನಡದ ಕಿಡಿಗಳು	0	8	0
ಕಣೆಗೊಂಚಲು	1	0	0
ಜನಜೀವನ	0	8	0
ಕಲ್ಕಿ	0	10	0
ರಾಜವಲ್ಲಭ	0	10	0
ಪೂರ್ವರಂಗ	0	10	0
ಉದ್ಧಾರ	0	10	0
ಆದೇನೇ ಇರಲಿ	0	8	0
ದೇವರ ಬಾಗಿಲು	0	8	0
ಬಿಸಿಲುಗುದುರೆ	0	10	0
ವಿಶಾಲಭಾರತ	0	4	0
ಹೊಸಹುಟ್ಟು	1	0	0
ನವಿಲು	0	12	0
ಸಂಶಯ ಪಿಶಾಚಿ	0	6	0
ವ್ಯಭಿಚಾರಿಣಿ ಯಾರು?	0	8	0
ನಾಡಕಥೆಗಳು	0	2	0
ಸ್ವತಂತ್ರಜೀವನೋಪಾಯ	0	2	6
ಕಾವ್ಯಸಾಮ್ರಾಜ್ಯ	0	12	0
ಕುಶಲವ	0	4	0
ಮುಂದಿನ ದೇವರು	0	2	0
ಗೋಮುಖ ವ್ಯಾಘ್ರ	0	4	0
ಕಾಮದಹನ	0	8	0
ನವಿಲುಗರಿ	0	12	0
ವೀಣಾನಾದ	0	8	0
ಕಲೋಪಾಸಕ	1	0	0
ಮಂಗನ ಮೆರವಣಿಗೆ	0	10	0
ಕವಿ ಕಾವ್ಯ ಮಹೋನ್ನತಿ	0	10	0
ಸರ್ವಜ್ಞನ ಸಂದೇಶ	0	10	0
ಕಾಳರಾತ್ರಿ	0	12	0
ಬಾಳುರಿ	0	12	0
ಹಳ್ಳಿಯ ರಾಣಿ	0	8	0
ವಿಧಿಯ ವೈಚಿತ್ರ್ಯ	0	12	0
ಯಜ್ಞಕುಂಡ	1	4	0
ಹಸಿವು	0	8	0
ಹಾವು	0	8	0
ಚಾಣಕ್ಯತಂತ್ರ	0	12	0
ಅಭಿನವಪಂಪ	1	4	0
ತ್ರಿಪುರದಹನ	0	12	0
ತ್ರಿಶಂಕುಸ್ವರ್ಗ	0	4	0
ದರಿದ್ರನಾರಾಯಣ	0	10	0
ಮಾವಿನತೋಪು	0	10	0
ಹಣತೆ	0	12	0
ಬಾಲವಾಙ್ಮಯ	0	3	0
ಕಾಮನಬಿಲ್ಲು	1	12	0

	ರೂ.	ಆ.	ಪೈ
ಟಾಲ್‌ಸ್ಟಾಯಿಯವರ			
ಕಥೆಗಳು	1	8	0
ಭಾರತೀಯ ನವಜನ್ಮ	0	12	0
ನಂದನವನ	0	10	0
ಮಿಲನ	0	12	0
ಬಾಳಿನಲ್ಲಿ ಬೆಳಕು	0	10	0
ಹರಿಜನ್ವಾರ	0	12	0
ಬಡತನದ ಬಾಳು	0	8	0
ಡಾ. ಹರಡೀಕರರು	0	8	0
ಹಳ್ಳಿಯ ಚಿತ್ರಗಳು	1	0	0
ಮೂರ್ತಿ	0	8	0
ಅಶೋಕಮೌರ್ಯ	0	10	0
ಸಾಕ್ರೆಟೀಸನ			
ಕೊನೆಯ ದಿನಗಳು	0	12	0
ಮಧುವನ	1	8	0
ಹರಿಶ್ಚಂದ್ರ ಕಾವ್ಯಸಂಗ್ರಹ	0	12	0
ಮಾರ್ಕಂಡೇಯ	0	12	0
ಚಿತ್ರದುರ್ಗದ			
ಪಾಳಯಗಾರರು	0	14	0
ಪಾಳಯಗಾರರು	0	12	0
ಕೆಳದಿ ನೃಪವಿಜಯ	1	8	0
ಧರ್ಮಸಂಭವ	1	2	0
ಕಾಂಗ್ರೆಸಿನ ಕತೆ	1	0	0
ಕಾಂಗ್ರೆಸ್ ಇತಿಹಾಸ	2	8	0
ಆರೋಗ್ಯ ಸಾಧನ	0	12	0
ನೀತಿ ಧರ್ಮ	0	6	0
ಭಾರತ ಗೀತಾಂಜಲಿ	0	2	0
ಬಾಲ ರಾಮಾಯಣ	0	5	0
ಸಾಮ್ಯವಾದವೇ ಏಕೆ	0	8	0
ತೆರೆಯ ಮರೆಯಲ್ಲಿ	0	8	0
ಸಣ್ಣ ಕತೆಗಳು	0	12	0
ಸತ್ಯಧಾಲಾಪ	0	10	0
ವೃಷ್ಟಿ ಸಂಗಮ	0	3	0
ಮಯೂರ	0	12	0
ನೆಳಲು ಬೆಳಕು	1	9	0
ತರಂಗ	0	6	0
ವಿವೇಕವಾಣಿ	0	3	0
ಕಲ್ಲು ಸಕ್ಕರೆ	0	3	0
ಕೆನೆ ಹಾಲು	0	3	0
ಬೊಮ್ಮನ ಹಳ್ಳಿ ಕಿಂದರಿ			
ಜೋಗಿ	0	2	0
ಇಕ್ಕೇರಿ ಸಂಸ್ಥಾನದ ಚರಿತ್ರೆ	1	4	0
ಗುಮ್ಮನಾಯಕನ ಪಾಳಯದ			
ಪಾಳಯಗಾರರು	0	14	0
ಬಂಧನದ ಆಚೆ	2	8	0
ಆರೋಗ್ಯ ಪ್ರತಾಪ	0	10	0
ಮುದುಕನ ಹೆಂಡ್ತಿ			
ಧಕಥ್ಯೈರಾಫ	0	1	0
ಆಡ್ಡ ಬೆಳೆದ ಗಿಡ್ಡಿಯ			
ಮದುವೆ	0	1	0
ಸುರಸ ಕವಿತಾಹಾರ	0	8	0
ಗರತಿಯ ಹಾಡು	0	10	0
ಹೂಬಿಸಿಲು	0	10	0
ಮಲ್ಲಿಗೆ ದಂಡೆ	0	12	0
ದಾಮಾಜಿ ಪಂತ	0	12	0

	ರೂ.	ಆ.	ಪೈ
ಸೊಬಗಿನ ಬಳ್ಳಿ	0	8	0
ಕರ್ನಾಟಕದ ವೀರ			
ಕ್ಷತ್ರಿಯರು	1	0	0
ಪುಷ್ಪಮಾಲೆ	0	12	0
ಬ್ರಾಹ್ಮಣರ ಹುಡುಗಿ	0	12	0
ಕುರಿ ಹಿಂಡು	1	0	0
ದಿಲ್ಲೀಶ್ವರನ ದಿನಚರಿ	0	12	0
ವಿಮರ್ಶೆ ೧ನೇ ಭಾಗ	0	10	0
,, ೨ನೇ ,,	0	12	0
,, ೩ನೇ ,,	0	12	0
ತಿರುಕರ ಪಿಡುಗು	0	10	0
ಆದದ್ದೇನು	0	6	0
ತರಂಗಿಣಿ	0	6	0
ಜೀವನ ಸಂಗೀತ	0	10	0
ಆಹ್ವಾನ	0	6	0
ನಗೆಯ ಹೊಗೆ	0	4	0
ಆಹುತಿ	1	0	0
ವಿಶ್ವಾಮಿತ್ರನ ಸೃಷ್ಟಿ	1	12	0
ಜೀವನ ಯಾತ್ರೆ	0	12	0
ರಮಾ ಮಾಧವ	0	6	0
ಶ್ರೀಕೃಷ್ಣ ಚರಿತಾಮೃತ	1	0	0
ಹಿಡಿಂಬೆ	0	8	0
ಕೃಷ್ಣಾಕುಮಾರಿ	1	4	0
ಚಿತ್ರಕಲೆಯಲ್ಲಿ ರಾಜಾ ರವಿ			
ವರ್ಮನ ಸ್ಥಾನ	2	0	0
ಪ್ರಳಯ ತಾಂಡವ	0	6	0
ಅಭಿಮನ್ಯು	0	6	0
ಕಾಳರಾತ್ರಿ	0	12	0
ಸೇವಾ ಪ್ರದೀಪ	0	12	0
ಧರ್ಮ ಸೆರೆ	0	14	0
ಶ್ರೀ ರಂಗಭೂಮಿ	0	12	0
ಧೂಮಕೇತು	0	14	0
ಧರ್ಮಜ್ಯೋತಿ	1	4	0
ಕಂಕಣ	0	8	0
ಪದ್ಯಾವಳಿ	0	2	6
ಮುಗುಳು	0	2	6
ಪರಿಣೀತಾ	0	10	0
ದೇವರ ಮಗು	0	1	0
ಹೆಂಗಸರ ಕತೆಗಳು	0	1	0
ಹೊಸ ಹೊಸ	0	1	0
ಉತ್ಪಾತ	0	1	0
ಎರಡು ಕಥೆಗಳು	0	1	0
ಭಯ ನಿವಾರಣೆ	0	1	0
ಮಿಸ್ 1954	0	1	0
ಪ್ರಾರ್ಥನೆ	0	1	0
ಹೆಂಡ್ತಿ ಗಂಡನಾದರೆ	0	4	0
ಗೀತಾ ಪ್ರಕಾಶ	2	0	0

	ರೂ.	ಆ.	ಪೈ
ಗೀತೆಯ ತಿರುಳು	0	4	0
ಗೀತೆಯ ಕೈಗನ್ನಡಿ	0	4	0
ಗಾಂಧಿಜೀಯವರ ಆತ್ಮಕತೆ			
ಭಾಗ ೧	1	0	0
,, ,, ೨	0	12	0
,, ,, ೩	0	9	0
,, ,, ೪	1	8	0
,, ,, ೫	1	8	0
ಅಭಿಷೇಕನಾಟಕ	1	0	0
ಕಟ್ಟೆ ಪುರಾಣ	0	3	0
ಜಾಗ್ರುತಿ	0	8	0
ನಾರದ ಗರ್ವಭಂಗ	0	3	0
ಪುನರ್ಜನ್ಮ	0	4	0
ಹಣೆಬರಹ	0	3	0
ಕೊಳಲು	0	12	0
ಚೆಲುವು	0	8	0
ಆಳಬೇಕೋ ನಗಬೇಕೋ	0	4	0
ಅನಾಥೋದ್ಧಾರ	0	2	0
ಕಾದಂಬರೀ ಕಥಾಸಾರ	0	8	0
ನಮ್ಮ ಊರಿನ ರಸಿಕರು	1	0	0
ಪುರೂರವ	0	8	0
ಸಂಯೋಗಿತೆ	0	6	0
ಹಳ್ಳಿಯ ಚಿತ್ರಗಳು	1	0	0
ಹಾಸನ ಟೋಪಿ	0	8	0
ಹೊಂದೊವಲ ಹಂಬಲು	0	6	0
ರಾಜಸಿಂಹ	1	12	0
ಪ್ರತಾಪ ಸಿಂಹ	0	4	0
ಕಂಠಾಭರಣ	0	12	0
ಲೀಲೆ	0	8	0
ಯುಗಳಾಂಗುರೀಯ	0	4	0
ಕಾಮಧೇನು	0	4	0
ಪರಿಮಳಾ	0	12	0
ನರಕದಲ್ಲಿ ನರಸಿಂಹ	0	6	0
ಸೊಹ್ರಾಬ್ ರುಸ್ತುಂ	1	0	0
ಸೌಂದರ್ಯ ಲಹರಿ	0	6	0
ಏಸಿಯಾ ಖಂಡದ ಜಾಗ್ರತಿ	1	2	0
ಖಾದಿ ಶಾಸ್ತ್ರ	1	2	0
ಶಾರದೆಯ ಸಂಸಾರ	1	2	0
ಗೀತಾರ್ಥ ಚಂದ್ರಿಕೆ	2	8	0
ಕೃಷ್ಣಪಾರಿಜಾತ	1	4	0
ಉರುಟಣೆ	0	1	0
ಕಾಸಿನ ಸರ	0	6	0
ನಿಶಾಚರ	0	8	0
ಯಸ್ಮೀನಾ	0	2	0
ಮಗೂ ಮದುವೆ	0	1	0
ಗುರು ಚರಿತ್ರೆ	1	12	0
ಭಗವದ್ಗೀತಾ	2	0	0
(ವಿ. ಪಿ. ಚಾರ್ಜು ಅಲಾಹಿದಾ)			

— ಇವುಗಳಲ್ಲದೆ —

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ಮತ್ತಿತರ ಗ್ರಾಹಕರುಗಳಿಗೂ ಬೇಕಾದ ನಮೂನೆವಾರು ಸಾಮಾನುಗಳು ನ್ಯಾಯವಾದ ಬೆಲೆಗೆ ಇಲ್ಲಿ ದೊರೆಯುತ್ತವೆ.

ನವಭಾರತ ಬುಕ್ ಡಿಪೋ--ಉಡುಪಿ--ದ. ಕ.

ಉಡುಪಿ ಮಠಗಳ ಸುಧಾರಣೆ

[ಲೇಖಕ: ಶ್ರೀ 'ರಾಮು']

ಲೇಖಾಂಕ ೨

ಒಂದು ಕಾಲದಲ್ಲಿ ಸಮಾಜವನ್ನು ವ್ಯವಸ್ಥಿತ ರೀತಿಯಲ್ಲಿರಿಸುವುದೇ ತಮ್ಮ ಸರ್ವಸ್ವವೆಂದು ಬಗೆಯುತ್ತಿದ್ದು ಆ ಕಾರ್ಯದಲ್ಲಿಯೇ ಇದ್ದ ಮಠಾಧಿಪತಿಗಳು ಇಂದು ಸಾಕಷ್ಟು ಜವಾಬ್ದಾರರಾಗಿ ಆ ಕರ್ತವ್ಯ ವಿಮುಖರಾಗಿರುವರೆಂಬಂಶವನ್ನು ಹಿಂದಿನ ಲೇಖಾಂಕದಲ್ಲಿ ಸ್ವಲ್ಪ ಮಟ್ಟಿಗೆ ತಿಳಿಸಿರುವೆವು. ಸ್ವಾಮಿಗಳು ಜವಾಬ್ದಾರರಾದರೆ ಸಮಾಜಕ್ಕೇನು ಹಾನಿ ಎಂದು ಹಲವರು ಪ್ರಶ್ನಿಸಬಹುದು. ಅದಕ್ಕೇನಾದರೂ ಉತ್ತರವು ದೊರೆಯುವುದೇ ಎಂದು ಪರಿಶೀಲಿಸುವುದೇ ಈ ಲೇಖಾಂಕದ ಉದ್ದೇಶ.

ಮಾನವನ ಮನಸ್ಸೆಂದರೆ ಹಾರಾಡುವ ಹಕ್ಕಿ. ಅದನ್ನು ತನ್ನ ಹತೋಟಿಯಲ್ಲಿಟ್ಟುಕೊಂಡ ಆತ್ಮವೇ ಶ್ರೇಷ್ಠವಾದುದು. ಮನಸ್ಸನ್ನು ಸೆಳೆಯುವ ಬಾಹ್ಯೋಪಕರಣಗಳು ಹೆಚ್ಚಾದವೆಂದರೆ ಆತ್ಮನಾಣತಿಯನ್ನೂ ಮನಸ್ಸು ಉಲ್ಲಂಘಿಸುವುದು.— ಸ್ವತಂತ್ರವಾಗಿ ವರ್ತಿಸುವುದು! ಅದಕ್ಕಾಗಿಯೇ ಏನಾದರೊಂದು ಜವಾಬ್ದಾರಿಯನ್ನು ಹೊತ್ತವನು ಒಂದು ನಿಯಮ ಬದ್ಧನಿರಬೇಕೆಂದು ಪ್ರಾಚೀನರ ಸಂಕೇತ; ಆತ್ಮಸಾಕ್ಷಾತ್ಕಾರವನ್ನು ಪಡೆಯಲಾಶಿಸುವನು, ನಿರ್ಜನ–ನೀರವ ಅಡವಿಯಲ್ಲಿರತಕ್ಕದ್ದು, ವಿದ್ಯೆಯನ್ನು ಗಳಿಸಲಾಶಿಸುವನು ಶಾಂತವಾತಾವರಣದ ಗುರುಕುಲದಲ್ಲಿರತಕ್ಕದ್ದು, ಇತ್ಯಾದಿಯಾಗಿ ಅವರವರ ಹೊಣೆಗಾರಿಕೆಯನ್ನು ನಿರ್ವಹಿಸಲನುಕೂಲವಾಗಿ ವಿಧಿ ನಿಯಮಗಳನ್ನೇರ್ಪಡಿಸಿದರು. ಅದರಂತೆಯೇ ಸಂನ್ಯಾಸಿಗೂ "ಆಜನ್ಮ ಬ್ರಹ್ಮಚಾರಿಯೂ, ಶಮದಮಾದಿ ಸಂಪತ್ತುಳ್ಳವನೂ, ಆಗಿರತಕ್ಕದ್ದು" ಮೊದಲಾಗಿ ಹೇಳಿರುವರು. ಹಿಂದಿನ ಮನುಸ್ಮೃತಿಯೇ ಮೊದಲಾದ ಗ್ರಂಥಗಳನ್ನು ನೋಡಿದರೂ ನಮ್ಮ ಉಡುಪಿಯ ಸನ್ಯಾಸಿಗಳ ಧರ್ಮದ ರೀತಿಯು ತೋರಿ ಬರುವುದಿಲ್ಲ!

ಉಡುಪಿಯೇ ಅಲ್ಲದ ಇತರ ಕಡೆಗಳಲ್ಲೂ ಒಂದೆರಡು ಮಠಗಳಿವೆಯೆಂಬುದನ್ನು ಹಿಂದಿನ ಲೇಖಾಂಕದಲ್ಲಿ ಹೇಳಿದ್ದೇವಷ್ಟೆ. ಆ ಮಠಗಳೂ ಸಹ ಮಹತ್ತಾದ ವೈಭವಗಳಿಂದ ಕೂಡಿವೆ. ಆದರೆ ಅಲ್ಲಿಯ ಪರಿಸ್ಥಿತಿಯು ಸ್ವಲ್ಪ ತೃಪ್ತಿಕರವಿದೆ. ಕಾರಣ ಅಲ್ಲಿ ಬಾಲಾಶ್ರಮದ ನಿಯಮವಿಲ್ಲ. ಗೃಹಸ್ಥನಾಗಿ ಸಂಸಾರದ ತಾಗು ಬಾಗುಗಳನ್ನು ಇದಿರಿಸಿ, ಯೌವನ ಪ್ರಭೆಯು ಕುಂದಿದ ಬಳಿಕ, ಅಲ್ಲಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಮಠಾಧಿಪತಿಗಳಾಗುತ್ತಾರೆ. ಮುದಿತನದ ಆತ್ಮಕ್ಕೆ ಬಯಕೆಗಿಂತ ಭಯವೇ ಹೆಚ್ಚು—ಆಸಕ್ತಿಗಿಂತ ವಿರಕ್ತಿಯೇ! ಹೆಚ್ಚು ಸಮಾಜದೊಡನೆ ಸಹಕರಿಸುವ ಗುಟ್ಟನ್ನು ತಿಳಿದಿರುತ್ತವದು! ಹಾಗಾಗಿ ಅಲ್ಲಿ ಹೊಣೆಗಾರಿಕೆಯು ಅಷ್ಟೊಂದು ಮರೆತು ಹೋಗುವುದಿಲ್ಲ.

ಉಡುಪಿಯ ಅವಸ್ಥೆ ಹಾಗಲ್ಲ! ಚಿಕ್ಕಂದಿನಲ್ಲಿಯೇ ಆಶ್ರಮ ಕೊಟ್ಟು ಅವರಿಗೆ ಪ್ರಪಂಚದ ಜ್ಞಾನವೇ ತಿಳಿಯದ ಹಾಗೆ ಮಾಡುತ್ತಾರೆ. ಸಂಸ್ಕಾರದ ಬೆಳವಣಿಗೆಗೆ ಸಂಸ್ಕೃತಿಯೇ ಕಾರಣ. ಸಂಸ್ಕೃತಿಯ ಅರಿವೇ ಆಗದಿದ್ದರೆ ಸಂಸ್ಕಾರದ ಬೆಳವಣಿಗೆ ಯಾಗುವುದಾದರೂ ಹೇಗೆ? ಚಿಕ್ಕಂದಿನಲ್ಲಿಯೇ ಅವರನ್ನು "ಬುದ್ಧೀ–ಬುದ್ಧೀ" ಎಂದು ಕರೆದು ಅವರ ಬುದ್ಧಿಯನ್ನೆಲ್ಲ ಕಳೆದು ಬಿಡುತ್ತಾರೆ ಅವರ ಪರಿವಾರದವರು. ನಮ್ಮ ಎಣಿಕೆಯಂತೆ, ಅವರನ್ನು ಅಷ್ಟು ಚಿಕ್ಕಂದಿನಲ್ಲಿಯೇ ಹಾಗೆ ಗೌರವಿಸುದು ತೀರ ತಪ್ಪಾಗಿದೆ. ಏಕೆಂದರೆ ಆ ವಿನಯವು ಅವರಲ್ಲಿ ಹೆಮ್ಮೆಯನ್ನು ಹುಟ್ಟಿಸುವಂತಹುದಾಗಿದೆ. ಚಿಕ್ಕಂದಿನಲ್ಲಿಯೇ ಹೆಮ್ಮೆಯು ಬೆಳೆದರೆ ಮತ್ತೆ ಮಬ್ಬು ಬೇರೆ ಹಿಡಿಯುವುದು ಬೇಡ! ಹಾಗೆಯೇ ಅವರಿಗೆ ಯೌವನದ ಉದಯವಾಗುವುದು. "ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕತಾ| ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಂ|" ಎಂಬಂತೆ ಮತ್ತಿನ ಪರಿಸ್ಥಿತಿ!! ಆದುದರಿಂದಲೇ ಋಷಿಗಳು "ಕಲಿಯುಗದಲ್ಲಿ ಸಂನ್ಯಾಸಾಶ್ರಮವು ಯೋಗ್ಯವಲ್ಲ" ಎಂದು ಘಂಟಾಘೋಷವಾಗಿ ಸಾರಿದ್ದಾರೆ!

ಹಣವಿದ್ದಾಗ, ಸುಖಪಡಕೂಡದೇಕೆ ಎಂಬ ಪ್ರಶ್ನೆಯು ತಾನಾಗಿ ಉದಿಸುತ್ತದೆ. ಆದರೆ ಸಾತ್ವಿಕ ಸುಖವನ್ನನುಭವಿಸಲು, ಅಂದರೆ ಮದುವೆಯಾಗಿ ದಾಂಪತ್ಯ ಸುಖವನ್ನು ಅನುಭವಿಸಲು ಸನ್ಯಾಸಿ ಧರ್ಮವು ನಿಷೇಧಿಸುತ್ತದೆ. ಆಗ ತಾಮಸ ಸುಖವನ್ನು ಅನುಭವಿಸೋಣವೆನ್ನಿಸುತ್ತದೆ, ಆ ಹಣದ ಮಹಿಮೆಯಿಂದ! ಅದರ ಫಲವಾಗಿಯೇ "ವೇಶ್ಯಾಸಕ್ತ" ನೆಂದು ಅಪವಾದವನ್ನು ಹೊಂದುವುದು! ಹೇಗಿದ್ದರೂ ಕೆಲವರು ಅವರನ್ನು ಗೌರವಿಸುತ್ತಾರೆ, ಅವರ ಕರ್ತವ್ಯನಿಷ್ಠತೆಗಲ್ಲ; ಹಣಕ್ಕೆ! "ಪೊನ್ನುಳ್ಳವನೇ ಕುಲೀನಂ...." ಎಂದೇನೋ ಇದೆಯಲ್ಲಾ? ಹಾಗೆ!

ಎಲ್ಲಾ ಅಂಗಗಳಿಗೂ ತಲೆಯೇ ಮುಖ್ಯ. ಅದೇ ಕೆಟ್ಟತೆಂದರೆ....? ಅಂತೆಯೇ ಸಮಾಜಕ್ಕೆ, ಸ್ವಾಮಿಗಳೆಂದರೆ ಒಂದು ಶೀರ್ಷ ಭಾಗದಂತೆ. ಅವರೇ ಕೆಟ್ಟರೆಂದ ಬಳಿಕ ಸಮಾಜದ ಭವ್ಯ ಭವಿಷ್ಯದ ಆಶೆಯೆಲ್ಲಿ ಉಳಿಯಿತು?

ಈಗ ಹಣದ ವಹಿವಾಟವು ಜಾಸ್ತಿಯಾಗಿರುವುದರಿಂದ ಸ್ವಾಮಿಗಳ ಸಮಯವು, ಕೇವಲ ಕೈತರ ಗೇಣಿಯನ್ನು ವಸೂಲು ಮಾಡುವುದು, ಕೊಡಲಿಲ್ಲದೆ ಮೊರೆಯಿಟ್ಟರೆ ಗದರಿಸಿ ಕೋರ್ಟಿಗೆ ಕಳುಹಿಸುವುದು, ರಾಜಕಾರಣಕ್ಕಾಗಿ ವಕೀಲ ಮಹಾಶಯರೊಂದಿಗೆ ಮಾತನಾಡುವುದು, ಬೇಂಕುಗಳಲ್ಲಿ ಹಣದ ವಹಿವಾಟುಮಾಡುವುದು ಇವುಗಳಲ್ಲೇ ವ್ಯಯಿಸುವುದು; ಹೀಗಾಗಿ ಸಮಾಜದಕಡೆಗೆ ಕಣ್ಣಿಡುವುದಿಲ್ಲ— ಪುರುಸತ್ತಿಲ್ಲ! ಸಮಾಜದಲ್ಲಿ ಯಾರಾದರೊಬ್ಬ ಬಡವನು ತನ್ನ ಹೊಟ್ಟೆಗಾಗಿ ಏನಾದರೊಂದು, ಸ್ವಾಮಿಗಳಿಗೊ, ಸ್ವಾಮಿಗಳ ಪರಿವಾರಕ್ಕೊ ಅಪ್ರಿಯವಾದುದನ್ನು ಮಾಡಿದರೆ, ಸರಿ ಇವನಿಗೆ ಸ್ವಾಮಿಗಳಿಂದ ಬಹಿಷ್ಕಾರ! ಸ್ವಾಮಿಗಳಿರುವುದು ಇದಕ್ಕಾಗಿಯೇ?

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಮಾಧ್ವರೆಂದೆನಿಸಿಕೊಳ್ಳುವವರಲ್ಲಿ ಹೆಚ್ಚಿನವರು ಮಧ್ವಮತದ ತತ್ವವನ್ನು ತಿಳಿದಿಲ್ಲ. ಮೇಲಾಗಿ ಶೈವ ಚಿಹ್ನೆಯಾದ ಭಸ್ಮಧಾರಣೆಯನ್ನು ಮಾಡಿಕೊಳ್ಳುವುದೂ ಇದೆ. ಅವರೂ ಈ ಮಠಗಳ ಶಿಷ್ಯರು! ಶ್ರೀಮನ್ಮಧ್ವಾಚಾರ್ಯರು ಮಠಾಧಿಪತಿಗಳನ್ನು ನೇಮಿಸಿರುವುದು ಇಂತಹರಲ್ಲಿ ತನ್ನ ತತ್ವವನ್ನು ಪ್ರಚಾರ ಮಾಡಲಿಕ್ಕಾಗಿ! ಆ ಪೂಜ್ಯ ಗುರುಗಳಾದ ಆಚಾರ್ಯರ ಸಂಕೇತವನ್ನು ಇವರೇತಕ್ಕೆ ಕಾಪಾಡುವುದಿಲ್ಲ? ಮಧ್ವಾಚಾರ್ಯರ ಶಿಷ್ಯರೆಂದೆನಿಸಿಕೊಂಡು ಇವರು ಹೀಗೇಕೆ? ಹಿಂದಿನ ಸ್ವಾಮಿಗಳ ಇತಿಹಾಸವನ್ನಾದರೂ ಇವರು ನೋಡುವುದಿಲ್ಲವೇಕೆ? "ವಾದಿರಾಜರು ಮಧ್ವಶಾಸ್ತ್ರದ ಮೇರೆಯನ್ನು ವಿಸ್ತರಿಸಿದರು. ವೃಂದಾವನಾಚಾರ್ಯರು–ಕೊಚ್ಚಿ ಮಹಾರಾಜರನ್ನು ಮಾಧ್ವರನ್ನಾಗಿಮಾಡಿದರು. ಟೀಕಾಚಾರ್ಯ, ರಾಘವೇಂದ್ರ ಸ್ವಾಮಿಯವರು, ಮಾಡಿರುವ ಉಪಕಾರವನ್ನು ಮಾಧ್ವರಾರೂ ಮರೆಯುವಂತಿಲ್ಲ." ಇತ್ಯಾದಿಯಾದ ಹಿಂದಿನ ಇತಿಹಾಸವನ್ನು ನೋಡಿಯಾದರೂ ಹೃದಯದಲ್ಲಿ ಒಂದು ಬಗೆಯ ಪರಿಣಾಮ ವಾಗುವುದಿಲ್ಲವೇಕೆ?:— ಒಂದು ಜಡಮೋಹದಿಂದ ಹಾಗೂ ಹೆಮ್ಮೆಯಿಂದ ಅವರ ಧಮನಿಯು ಹೆಪ್ಪುಗಟ್ಟಿ ಹೋಗಿರುವುದೇ? ಹಿಂದಿನವರ ವಿಚಾರವಂತಿರಲಿ! ಇಂದಿನ ಉತ್ತರಾದಿಮಠದ ಶ್ರೀಗಳವರೊಬ್ಬರು ಮಾಡುವ ಸಾಹಸವನ್ನು ಉಡುಪಿಯ ಎಂಟು ಮಂದಿಯಿಂದಲೂ ಮಾಡಲಾಗಕ್ಕಿಲ್ಲವೇ? ಅದನ್ನೆಲ್ಲಾ ತಿಳಿಯಲು ಅವರಿಗೂ ಒಂದು ಹೃದಯವಿಲ್ಲವೇ? ಅಥವಾ ಅಜ್ಞಾನವು ತುಂಬಿ ಹೋಗಿ ಇದನ್ನೆಲ್ಲ ತಿಳಿಯಲು ಎಡೆಯಿಲ್ಲವೇ? ಅವರು ಅವರಷ್ಟಕ್ಕೆ ಇರುವುದಾದರೆ ತಾವು ತಮ್ಮಷ್ಟಕ್ಕೆ ಇರೋಣವೆನಿಸುವುದಿಲ್ಲವೇ ಶಿಷ್ಯರಿಗೆ? ಇದರರಿವು ಇದೆಯೇ ಇವರಿಗೆ?

ಇವರ ಅಸಡ್ಡೆಯಿಂದ ಶ್ರೀ. ಮಧ್ವಾಚಾರ್ಯರ ತತ್ವವೇ ಅಡಗುವುದು! ಇದರಿಂದ ಸ್ವಾಮಿಗಳ ವರ್ತನೆಯಲ್ಲಿ ಶಿಷ್ಯವರ್ಗೀಯರಿಗೆ ಜಿಹಾಸೆಯೆನಿಸುವುದು. ಮಧ್ವಾಚಾರ್ಯರ ಉಪದೇಶಾಮೃತವನ್ನು ತಿಳಿಯುವುದರಿಂದ ಸಮಾಜವು ವಂಚಿತವಾಗಬೇಕಾಗುವುದು. ಇದರಿಂದ ಸ್ವಾಮಿಗಳೂ ತಮ್ಮ ಸ್ಥಾನಮಾನಗಳನ್ನು ಕಳಕೊಳ್ಳುತ್ತಾರೆ. ಸಂಘಟನೆಯಿಲ್ಲದ ಸಮಾಜವು ಅವನತಿಯ ದಾರಿಯನ್ನು ಬೇಗನೇ ಹಿಡಿಯುವುದು. ಸ್ಥಾನ ಮಾನ ಭ್ರಷ್ಟರಾದ ಸ್ವಾಮಿಗಳ ಅವನತಿಯು ಸಮೀಪಿಸುವುದೆಂಬುದನ್ನು ಮರೆಯಲಾಗದು!

ಈಗ ಇರುವ ಮಠಾಧಿಪತಿಗಳಲ್ಲಿ ಹೆಚ್ಚಿನವರು ಸಮಾಜದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕೆಟ್ಟ ಅಪವಾದವನ್ನು ಹೊಂದಿದವರೇ ಇದ್ದಾರೆ. ಅದು ಅಹುದೋ ಅಲ್ಲವೋ ಎಂಬುದನ್ನು ನಾವು ವಿಮರ್ಶಿಸಹೋಗುವುದಿಲ್ಲ. ಆದರೆ ಇಂತಹ ಅಪವಾದಗಳನ್ನು ಹೊಂದದ ರೀತಿಯಲ್ಲಿ ಅವರೇಕೆ ವರ್ತಿಸುವದಿಲ್ಲ? ಸರ್ವಜ್ಞಾಚಾರ್ಯರ ಶಿಷ್ಯರಾದ ಇವರು ಇಷ್ಟು ಅಜ್ಞರೇಕೆ? ಎಂದೇ ನಮ್ಮ ಪ್ರಶ್ನೆ!

ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸುವ ಅಧಿಕಾರವುಳ್ಳ ಸ್ವಾಮಿಗಳು ವಾಸಿಸುವ ಮಠಗಳ ವಾತಾವರಣವಾದರೂ ಶಾಂತಿದಾಯಕವೇ ಎಂದಾರಾದರೂ ಕೇಳಿದರೆ....? ಅಲ್ಲಿ ಹೊಕ್ಕು ನೋಡಲೇನು? ಶಾಂತಿಯ ಸುದ್ದಿಯೇ ಅಲ್ಲಿಲ್ಲ! ಸಂಚುವಂಚನೆಗಳ ಸುಳಿದಾಟವೇ ಹೆಚ್ಚು. ಮನಸ್ಸಿಗೆ ಗೊಂದಲವನ್ನುಂಟುಮಾಡುವ ಸಾಧನಗಳೇ ಜಾಸ್ತಿ!! ಒಂದು ಕಡೆ ಉಗ್ರಾಣ, ಒಂದು ಕಡೆ ಹಾಲು ತುಪ್ಪಗಳ ಕೇಂದ್ರ. ಒಂದು ಕಡೆ ಫಲವಸ್ತುಗಳ ಭಂಡಾರ, ಒಂದು ಕಡೆ ಶಾನುಭೋಗರ ಕಾರ್ಯಾಲಯ, ಒಂದು ಕಡೆ ಮಠ ಪ್ರತಿನಿಧಿಯ (ದಿವಾನ್) ಬೈಠಕ್ ಖಾನೆ, ಒಂದು ಕಡೆ ಮಠದ ಅಂತಃಪುರ, (ಸ್ವಾಮಿಯರ ಅಕ್ಕ ತಂಗಿಯರೇ ಮೊದಲಾದ) ಸ್ತ್ರೀಯರ ಬಿಡಾರ, ಒಂದು ಕಡೆ, ಟ್ರೆಝರಿ, ಒಂದು ಕಡೆ ಕೆಲಸಗಾರರ ಗೊಂದಲ, ಒಂದು ಕಡೆ ಒಕ್ಕಲು ಜನರ ಕೂಗು, ಒಂದು ಕಡೆ ಮಕ್ಕಳ ಬೊಬ್ಬೆ, ಹೆಚ್ಚೇನು–ಅದೊಂದು ದೊಡ್ಡ ಅವಿಭಕ್ತ ಕುಟುಂಬದ ಮನೆಯಂತಿದೆ! ಮನಶ್ಶಾಂತಿ ಇರುವವನೂ ಇಲ್ಲಿಗೆ ಬಂದರೆ ತಳಮಳಗೊಳ್ಳಬೇಕು!!—ಇನ್ನು ಸ್ವಾಮಿಗಳಿರುವ ಕೋಣೆಯೋ?—ಅದು ವೈಭವದ ತವರುಮನೆ! ಸ್ವಾಮಿಗಳನ್ನು ಆಶ್ರಯಿಸಿದ ಪರಿವಾರದವರೆಲ್ಲರೂ ಕೇವಲ ಸ್ವಾರ್ಥಪರರಾದ ಹೊಗಳು ಭಟ್ಟರು! ಇಂತಹ ಅಶಾಂತಿಯ, ವಿಷಯ ಭೋಗೋತ್ತೇಜಕ ಅಪವಿತ್ರ ಸ್ಥಳದಲ್ಲಿ ವಾಸಿಸುವವರಿಗೆ ವಿವೇಕವೂ–ಸ್ಥೈರ್ಯವೂ–ಆತ್ಮಶಾಂತಿಯೂ–ಕರ್ತವ್ಯ ನಿಷ್ಠತೆಯೂ ಹೇಗೆ ಬಂದೀತು? ಜವಾಬ್ದಾರಿಕೆಯ ಸ್ಮರಣೆಯಾದರೂ ಹೇಗಾಗಬೇಕು? ಸುಪ್ಪತ್ತಿಗೆಯಲ್ಲಿ ಮಲಗಿದವನಿಗೆ ನೆಲದಲ್ಲಿ ಮಲಗಿದವನ ಛಳಿಯ ಅರಿವಾಗುವುದೇ? ಇದೂ ಸಾಲದೆ ಹಲವರು ಸುಖ ವಿಲಾಸಗಳಿಗೆ ಕೇಂದ್ರವಾಗಲನುಕೂಲವಾದ ಬಂಗಲೆಯನ್ನೂ ಕಟ್ಟಿಸುತ್ತಿರುವರೆಂದೂ ಕೇಳುತ್ತೇವೆ. ಆರ್ಥಿಕ ದುಃಸ್ಥಿತಿಯಿಂದ ಕಂಗೆಟ್ಟ ಸಮಾಜದ ಸೇವೆಗೆ ವಿನಿಯೋಗಿಸದೆ ತನ್ನ ಭೋಗ–ವಿಲಾಸ–ಸುಖಗಳಿಗಾಗಿ ಹಣವನ್ನು ವ್ಯಯಿಸುವ ಈ ಮಹಾತ್ಮರ ಮನೋವೃತ್ತಿಯು ಅದೆಂತಹುದಾಗಿದೆಯೆಂದು ನಮಗೆ ತಿಳಿಯುವುದಿಲ್ಲ! ಹಣವಾದರೂ ಅವರ ಸ್ವಾರ್ಜಿತವೇ? ಅಲ್ಲ-ಶಿಷ್ಯರಿಂದ ಕಾಣಿಕೆಯಾಗಿ ಬಂದ ದೇವರ ಹಣ! ಅದನ್ನು ಸ್ವಾರ್ಥಕ್ಕಾಗಿ ವ್ಯಯಿಸಲು ಅವರಿಗಧಿಕಾರವಿಲ್ಲ.

ನಮ್ಮಲ್ಲಿ ಹಣವಿದೆ, ನಾವು ಮಾಡಿದಂತೆ ಆಗುವುದು, ಎಂದು ಅವರು ಬಗೆದರೂ ವಸ್ತುಸ್ಥಿತಿಯು ಹಾಗಿಲ್ಲ. ಕ್ರಮೇಣ ಅದರ ಪರಿಣಾಮವು ವಿಪರೀತಕ್ಕಿರುವುದು. ಪ್ರಭುಸತ್ತಾವಾದಿಗಳೂ ಸಹ, ಪ್ರಭುವು ಅಧರ್ಮಿಯಾಗಿದ್ದರೆ ಅವನನ್ನು ತಳ್ಳಿಹಾಕುವರು. ಹಿಂದಿನ, ಇಂದಿನ ಪರಿಸ್ಥಿತಿಯಲ್ಲಿ ಅದಕ್ಕೆ ತಕ್ಕ ನಿದರ್ಶನಗಳಿವೆ! ಹೀಗಿದ್ದರೂ ಮಠಾಧಿಪತಿಗಳು, ಈಗಿನ ಧೋರಣೆಯನ್ನು ಸುಧಾರಿಸಿಕೊಳ್ಳದಿದ್ದರೆ, ಶಿಷ್ಯ ಮಂಡಳಿಯಲ್ಲಿ ಭಯಂಕರ ಕ್ಷೋಭೆಯೆದ್ದು, ಅನರ್ಥವಾಗಬಹುದೆಂಬುದನ್ನು ಮಾತ್ರ ಜಾಗರೂಕತೆಯಿಂದ ತಿಳಿದಿರಬೇಕು!

ಸುಧಾರಣೆಯ ಬಗೆ ಹೇಗೆಂಬುದನ್ನು ಮುಂದಿನ ಲೇಖಾಂಕದಲ್ಲಿ ನೋಡಿರಿ.

ಸಮಾಚಾರ ಸಂಗ್ರಹ: ಮಧ್ಯಪ್ರಾಂತದ ಮಂತ್ರಿಗಳ ಮೇಲೆ ಅವಿಶ್ವಾಸ; ಬಾಸ್ಕರಿಗೆ ಬಂಡಾಯಗಾರರ ಬೆದರಿಕೆ; ಬೆರಿಸ್ಟರರ ಕೊಲೆ, ಹರಿಜನರಿಗೆ ರೂ. ೨೫,೦೦೦ ದಾನ; ಬಿಲ್ಬಾವೋ ಪಟ್ಟಣದಮೇಲೆ ಪ್ರಚಂಡ ಧಾಳಿ

ಮಧ್ಯಪ್ರಾಂತದ ಮಂತ್ರಿಗಳ ಮೇಲೆ ಅವಿಶ್ವಾಸ

ಮಧ್ಯಪ್ರಾಂತದ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ನಾಯಕರಾದ ಡಾಕ್ಟರ್, ಎನ್. ಬಿ. ಖಾರೆಯವರು, ಪ್ರಕೃತದ ಮಂತ್ರಿಮಂಡಲದ ಮೇಲೆ ಅವಿಶ್ವಾಸ ಸೂಚಿಸಿ ಎಸೆಂಬ್ಲಿ ಸಭೆಯು ಬೇಗನೇ ಕರೆಯಲ್ಪಡುವುದೆಂಬ ನಿರೀಕ್ಷಿಸುವ ಠರಾವನ್ನು ಇದೇ ತಾ. 11ರಲ್ಲಿ ಗವರ್ನರರ ಅವಗಾಹನೆಗಾಗಿ ಅವರ ಸೆಕ್ರೆಟರಿಗಳೊಡನೆ ಕೊಟ್ಟಿರುವರು. ಈ ಠರಾವಿಗೆ ಎಸೆಂಬ್ಲಿಯ 112 ಮಂದಿ ಮೆಂಬರರ ಪೈಕಿ 70ಮಂದಿ ಸಹಿ ಹಾಕಿರುವರು. ಇವರಲ್ಲಿ 4ಮಂದಿ ಹೊರಗಣವರು, ಕಾಂಗ್ರೆಸ್ ಪಕ್ಷದವರೇ ಆದ 3ಮಂದಿಯ ಸಹಿಯನ್ನು ಇಷ್ಟರ ವರೆಗೆ ಪಡೆಯಲಾಗಲಿಲ್ಲ.

ವಿದ್ಯಾರ್ಥಿಗಳೆದಿರಲ್ಲೇ ಅಧ್ಯಾಪಕಿಯರ ಹೊಡೆದಾಟ

ಪಂಜಾಬಿನ ಲೂಧಿಯಾನ ಮುನಿಸಿಪಾಲಿಟಿಯ ಕೈಕೆಳಗಣ ಮಿಡ್ಲ್ ಸ್ಕೂಲೊಂದರ ಕ್ರೈಸ್ತ ಜಾತಿಯ ಮುಖ್ಯ ಅಧ್ಯಾಪಕಿಯು ಬ್ರಿಟಿಷ್ ಚಕ್ರವರ್ತಿಗಳ ಕಿರೀಟಧಾರಣೋತ್ಸವದ ದಿನ ಎಲ್ಲರಿಗೂ ಮಿಠಾಯಿ ಹಂಚಿದಳು. ಅವಳು ಕ್ರೈಸ್ತಳಾದುದರಿಂದ ಹಿಂದುವಾದ ತಾನು ಅವಳ ಕೈಯಿಂದ ಮಿಠಾಯಿ ತೆಗೆದುಕೊಂಡು ತಿನ್ನಲು ಸಾಧ್ಯವಿಲ್ಲೆಂದು ಹಿಂದು ಅಧ್ಯಾಪಕಿಯೋರ್ವಳು ನಿರಾಕರಿಸಿದಳು. ಆಗ ಮುಖ್ಯ ಅಧ್ಯಾಪಕಿಯೂ ಅವಳೂ ವಿದ್ಯಾರ್ಥಿಗಳೆದಿರಲ್ಲಿಯೇ ಬೈದುಕೊಂಡು ಕಡೆಗೆ ಮಾತು ಮಿಾರಿ ಹೊಡೆದಾಡಿಕೊಂಡರು. ಇಬ್ಬರಿಗೂ ಪೆಟ್ಟಾಗಿ ಡಾಕ್ಟರರಿಂದ ಸರ್ಟಿಫಿಕೇಟು ಪಡೆದಿರುವರು. ಈ ಕುರಿತು ಲೂಧಿಯಾನ ಮುನಿಸಿಪಾಲಿಟಿಯಲ್ಲಿ 3ಘಂಟೆಗಳ ವರೆಗೆ ತೀವ್ರ ಚರ್ಚೆ ನಡೆದು, ಕೊನೆಗೆ ಅಧ್ಯಾಪಕಿಯರ ಜಗಳದ ಕುರಿತು ಎಗ್ಸಿಕ್ಯೂಟಿವ್ ಆಫೀಸರರು ವಿಚಾರಣೆ ನಡಿಸಿ ವರದಿಯೊಪ್ಪಿಸುವ ತನಕ ಇಬ್ಬರನ್ನೂ ಕೆಲಸದಿಂದ ಸಸ್ಪೆಂಡ್ ಮಾಡಲಾಯಿತು. ತನಗೆ ಮುನಿಸಿಪಾಲಿಟಿಯಿಂದ ನ್ಯಾಯ ದೊರೆಯುವ ಹಾಗಿಲ್ಲೆಂದು ಮುಖ್ಯ ಅಧ್ಯಾಪಕಿಯು ತನ್ನ ಕೆಲಸಕ್ಕೇನೇ ರಾಜಿನಾಮೆ ಕೊಟ್ಟಿರುವಳು.

ಬಾಸ್ಕರಿಗೆ ಬಂಡಾಯಗಾರರ ಬೆದರಿಕೆ

ಬಿಲ್ಬಾವೋ ಪಟ್ಟಣದ ಮೇಲೆ ಬಂಡಾಯಗಾರರು ನಡಿಸುತ್ತಿರುವ ಧಾಳಿಯು ಇನ್ನೂ ಜಯಶೀಲವಾಗಿರುವುದಿಲ್ಲ. ಬಾಸ್ಕ್ ಜನರು ವೀರಾವೇಶದಿಂದ ಹೋರಾಡಿ ಬಂಡಾಯಗಾರರನ್ನು ತಡೆಗಟ್ಟಿರುತ್ತಾರೆ. ಇದರಿಂದ ಮುನಿದು ಬಿದ್ದ ಬಂಡಾಯಗಾರರು ಬಾಸ್ಕ್ ಜನರ ಪವಿತ್ರ ಸ್ಥಳವಾದ ಗೊರ್ನಿಕವನ್ನೇ ನಾಶಗೊಳಿಸಿದ್ದರು. ಇದರಿಂದ ಪರಿಣಾಮವು ಪ್ರತಿ ವಿರುದ್ಧವಾಯಿತು. ಬಾಸ್ಕ್ ಜನರೆಲ್ಲಾ ಉದ್ರೇಕಗೊಂಡು ಮತ್ತಷ್ಟು ದೃಢ ನಿರ್ಧಾರದಿಂದ ಬಂಡಾಯಗಾರರನ್ನು ಪ್ರತಿಭಟಿಸಹತ್ತಿದರು. ಬಾಸ್ಕ್ ಸರಕಾರವು ಇದೇ ರೀತಿ ವಿರೋಧಿಸಿದರೆ ಗೊರ್ನಿಕದಂತೆ 300 ವಿಮಾನಗಳ ಮೂಲಕ ಇತರ ಕಡೆ ಕೂಡಾ ಬೋಂಬೆಸೆಯಲಾಗುವುದೆಂದು ಬಂಡಾಯಗಾರರು ಬೆದರಿಕೆ ಹಾಕಿರುವರು.

ಹರಿಜನರಿಗೆ ನೀರಾಶಯಕ್ಕಾಗಿ ರೂ. 25,000 ದಾನ

ಹರಿಜನರ ಉಪಯೋಗಕ್ಕಾಗಿ ಬಾವಿ ನೊದಲಾದುವುಗಳನ್ನು ತೋಡಿಸುವ ಅಖಿಲಭಾರತ ಹರಿಜನ ಸಂಘದ ವಾಣಿ ಫಂಡಿಗೆ ಶೇಟ್ ಜುಗಲ್ ಕಿಶೋರ್ ಬೀರ್ಲರವರು ಮಹಾತ್ಮಾ ಗಾಂಧಿಯವರ ಮೂಲಕ ರೂ, 25,000 ಕೊಟ್ಟಿರುವರು. ಹರಿಜನ ಸಂಘದ ಒಟ್ಟು ವಾಣಿ ಫಂಡು ಇಷ್ಟರವರೆಗೆ ರೂ, 62,000 ಆಗಿರುವುದು. ಶ್ರೀ ಬೀರ್ಲರವರು ಆಸ್ಸಾಮ್ ಮತ್ತು ಕೇರಳ ಪ್ರಾಂತಗಳಲ್ಲಿ ಹರಿಜನೋದ್ಧಾರ ಕೆಲಸ ನಡಿಸಲು ತಿಂಗಳೊಂದರ ರೂ, 500 ಮತ್ತು 200 ರಂತೆ ಒಂದು ವರ್ಷದವರೆಗೆ ಕೊಡುವ ವಾಗ್ದಾನವಮಾಡಿರುವರು. ಕಳೆದ 4ವರ್ಷಗಳಿಂದ ಶೇಟ್ ಜುಗಲ್‌ಕಿಶೋರರವರು ಹರಿಜನ ಸೇವಾ ಸಂಘಕ್ಕೆ ರೂ. 80,000 ಕ್ಕಿಂತಲೂ ಮಿಕ್ಕಿದ ಸಹಾಯಮಾಡಿರುವರು.

ವರನನ್ನು ತಿವಿದು ಕೊಂದುದು

ಪಂಜಾಬಿನ ಪಾಟೋರೀಕಿ ಎಂಬ ಹಳ್ಳಿಯಲ್ಲಿ ಒಬ್ಬ ಹುಡುಗಿಯನ್ನು ಮದುವೆಯಾಗಲು ಎರಡು ಕಡೆಯವರು ಹೋಲಾಡುತ್ತಿದ್ದರು. ಇದರಿಂದಾಗಿ ಈ ಎರಡು ಕಡೆಯವರಲ್ಲಿಯೂ ದ್ವೇಷ ಉಂಟಾಗಿತ್ತು. ಕಡೆಗೆ ಹುಡುಗಿಯು ಈ ಎರಡು ಕಡೆಯವರಲ್ಲಿ ಒಂದು ಕಡೆಯ ಹುಡುಗನಿಗೆ ನಿಶ್ಚಯವಾಯಿತು. ವರನ ದಿಬ್ಬಣ ಬಂದು ರಾತ್ರಿ ಒಂದು ಗುರುದ್ವಾರದೊಳಗೆ ಮಲಗಿದ್ದಾಗ ವೈರಿ ತಂಡದವರು ಅವರ ಮೇಲೆ ಬಿದ್ದು ವರನನ್ನು ತಿವಿದು ಕೊಂದು, ಅವನ ಮಾವನಿಗೆ ಬಹಳ ಜಖಮ್ ಮಾಡಿ ಕಗ್ಗತ್ತಲಲ್ಲಿ ತಪ್ಪಿಸಿಕೊಂಡು ಹೋಗಿರುವರು.

ಮೋಟರ್‌ಕಾರುಗಳ ಕಳವು

ಪೆರಿಸ್ ಪಟ್ಟಣದಲ್ಲಿ ದಿನಕ್ಕೆ ಸರಾಸರಿ 12ರಂತೆ ಮೋಟರ್‌ಕಾರುಗಳು ಕಳವಾಗುತ್ತಿರುವವು. 1931ರಲ್ಲಿ 4519 ಕಾರುಗಳು ಕದ್ದೊಯ್ಯಲ್ಪಟ್ಟಿದ್ದುವು. ಪೋಲೀಸರ ಚಾತುರ್ಯದಿಂದಾಗಿ ಇವುಗಳಲ್ಲಿ ಹೆಚ್ಚಿನವನ್ನು ಹಿಂದೆ ಪಡೆಯಲಾಗುತ್ತದೆ. ಹೆಚ್ಚಿಗೆಯಾಗಿ ಮೋಟರ್‌ಕಾರುಗಳನ್ನು ಕದ್ದೊಯ್ಯುವವರು ವಿಹಾರಪ್ರಿಯರಾದ ತರುಣರು. ಈ ತರುಣರು ಮೋಟರ್ ಕಾರುಗಳನ್ನು ಕದ್ದೊಯ್ದು ಕೆಲವು ದಿನ ಅಲ್ಲಲ್ಲಿ ವಿಹರಿಸಿ ಆ ಮೇಲೆ ಬಿಟ್ಟುಬಿಟ್ಟು ಹೋಗುವರು. ನಿಜವಾದ ಕಳ್ಳರು ಪೆರಿಸಿನಲ್ಲಿ ವರ್ಷಕ್ಕೆ 1000ವರೆಗೆ ಮೋಟರು ಕಾರುಗಳನ್ನು ಕದ್ದೊಯ್ಯುವರು.

ಬೆರಿಸ್ಟರರ ಕೊಲೆ

ಮದ್ರಾಸಿನ ಬೆರಿಸ್ಟರರಾದ ಡಾಕ್ಟರ್ ಮಿಾರ್ ಅನ್ವರುದ್ದೀನರು ಹಸನಪುರ ಎಂಬಲ್ಲಿ ಇದೇ ತಾ. 7ರಲ್ಲಿ ಅನ್ವಾರ್ ಸಾಹೇಬನೆಂಬೊಬ್ಬನಿಂದ ಕೊಲೆಮಾಡಲ್ಪಟ್ಟಿರುವರು. ಹಸನಪುರವು ಇನಾಮ್ ಹಳ್ಳಿಯಾಗಿದ್ದು ಅದರ ಆಡಳಿತವು ಡಾಕ್ಟರ್ ಅನ್ವರುದ್ದೀನರ ಆಧೀನವಿತ್ತು. ಇದರ ನಿಮಿತ್ತ ಡಾಕ್ಟರ್ ಅನ್ವರುದ್ದೀನರಿಗೂ ಅವನ ಸಹೋದರ ಮಿಾರ್ ಮುನ್ನವರುದ್ದೀನರಿಗೂ ಕಲಹವಿದ್ದಿತು. ಅನ್ವರುದ್ದೀನರು ತಾ 7ರಲ್ಲಿ ಒಬ್ಬ ಪೋಲೀಸ್ ಕನ್‌ಸ್ಟೇಬ್ಲ್, ಒಬ್ಬ ಕೋರ್ಟು ಕ್ಲಾರ್ಕ್ ಮತ್ತು ಗುಲಾಮ್ ಅಹಮ್ಮದನೆಂಬೊಬ್ಬನೊಂದಿಗೆ ಹಸನಪುರಕ್ಕೆ ಹೋಗಿ, ತನ್ನ ಆಧೀನವಿದ್ದ ಕಟ್ಟಡವೊಂದರಿಂದ ಕದ್ದೊಯ್ಯಲ್ಪಟ್ಟಿದ್ದ ಕಿಟಿಕಿಗಳನ್ನು ಹುಡುಕಿ ಗೊಬ್ಬರದ ಮೂಟೆಯೊಳಗಿಂದ ಅವನ್ನು ಪಡೆದು ಅವುಗಳ ಪಟ್ಟಿಯೆಲ್ಲಾ ಮಾಡುತ್ತಿದ್ದಾಗ ಮಹಮ್ಮದ್ ಅನ್ವಾರ್ ಸಾಹೇಬನೆಂಬವನು ಹಿಂದಿನಿಂದ ಬಂದು ಅನ್ವರುದ್ದೀನರಿಗೆ ತಿವಿದನು. ಅನ್ವರುದ್ದೀನರು ಕತ್ತಿ ಪೆಟ್ಟು ತಪ್ಪಿಸಲು ತನ್ನ ಮೋಟರಿನ ಸುತ್ತು ಓಡಿದರು. ಆದರೂ ಮಹಮ್ಮದ್ ಅನ್ವಾರನು ಅವರನ್ನು ಬೆಂಬತ್ತಿ ಪುನಃ ತಿವಿದು, ಅವರು ನೆಲಕ್ಕೆಬಿದ್ದ ಮೇಲೂ ತಿವಿದು ಅವರ ಮೇಲೆ ಕಲ್ಲು ಹೊತ್ತುಹಾಕಿ ಕೊಂದನು.

ಬಿಲ್ಬಾವೋ ಪಟ್ಟಣದ ಮೇಲೆ ಪ್ರಚಂಡ ಧಾಳಿ

ಹಳ್ಳಿಗಳ ಮೇಲೆ ಬೋಂಬೆಸೆತ

ಇದೇ ತಾ. 11ರಲ್ಲಿ ಬಂಡಾಯಗಾರರು ಬಿಲ್ಬಾವೋಪಟ್ಟಣದ ಮೇಲೆ ತಮ್ಮ ಪ್ರಬಲ ಧಾಳಿನಡಿಸಿ ಬಾಸ್ಕ್ ಸೈನಿಕರನ್ನು ಕೆಲವು ಕಡೆ ಹಿಂದಕ್ಕಟ್ಟಿರುವರು ಬಂಡಾಯಗಾರರ ವಿಮಾನಗಳು ಎಡೆಬಿಡದೆ ಬೋಂಬುಗಳ ಮತ್ತು ಗುಂಡಿನ ಮಳೆಗರೆದು ಹಾವಳಿ ಮಾಡಿದುವು. ಎರಡು ದಿನಗಳ ಅತ್ಯುಗ್ರ ಹೋರಾಟದ ನಂತರ ಬಂಡಾಯಗಾರರು ಬಿಲ್ಬಾವೋಪಟ್ಟಣದ ಉಕ್ಕಿನ ಆವರ್ತನವನ್ನು ಕೆಲವೆಡೆ ಮುರಿದು ಮುಂದೊತ್ತಿರುವರು. ಬಿಲ್ಬಾವೋಪಟ್ಟಣದ 7ಮೈಲು ಸುತ್ತು ವಳಯದಲ್ಲಿ 3ಸಾಲು ಕಂದಕ, ಮತ್ತು ಕಬ್ಬಿಣದ ಸರಿಗೆಗಳ ಬೇಲಿಗಳಿರುವವು ಬಂಡಾಯಗಾರರು 3ಮೈಲು ರಣರಂಗದಲ್ಲಿ ತಮ್ಮ ಸಂಪೂರ್ಣ ಸೇನೆಯನ್ನು ಕೇಂದ್ರೀಕರಿಸಿ ಭೀಕರ ಹೋರಾಟನಡಿಸಿ ಪ್ರಥಮಸಾಲಿನ ಕಂದಕವನ್ನು ವಶಪಡಿಸಿಕೊಂಡಿರುವರು. ಬಾಸ್ಕರಕಡೆಯಲ್ಲಿ ವಿಮಾನಗಳಿಲ್ಲದಿದ್ದುದು ಅವರಿಗೆ ಬಹುದೊಡ್ಡ ತೊಡಕು. ಬಾಸ್ಕ್ ಸೈನಿಕರು ವೀರಾವೇಶದಿಂದ ಕಾದಾಡಿ ಬಂಡಾಯಗಾರರನ್ನು ಹಿಂದಕ್ಕಟ್ಟಲೆತ್ನಿಸಿದರೂ ಪ್ರಯೋಜನವಾಗಲಿಲ್ಲೆಂದು ತಿಳಿದುಬರುತ್ತದೆ ಬಿಲ್ಬಾವೋದ ಹೊರಗಣ ಕೋಟೆಗಳ ಮೇಲೆ ಯುದ್ಧ ಹಡಗುಗಳ ಮೂಲಕ ಕೂಡಾ ಗುಂಡೆಸೆತ ನಡೆದಿದ್ದಿತು. ಬಾಸ್ಕ್ ಸೈನಿಕರು ಬಂಡಾಯಗಾರರನ್ನು ಹಿಂದಕ್ಕಟ್ಟಿ ಅನೇಕ ಮಂದಿ ಕೊಲ್ಲಲ್ಪಟ್ಟಿರುವರೆಂದು ಬಾಸ್ಕ್ ಸೇನೆಯ ಕಡೆಯ ಸುದ್ದಿ.

ಬಂಡಾಯಗಾರರ ಕಡೆಯ ಸುಮಾರು 60ವಿಮಾನಗಳು ಇಷ್ಟರವರೆಗೆ ಎಂದೂ ನಡೆಯದ ಭೀಕರ ವಿಮಾನಧಾಳಿ ನಡಿಸಿದುವು. ಬಾಸ್ಕರ ವಿಮಾನ ಭೇದಕ ತೋಪುಗಳಿಂದ ಒಂದು ವಿಮಾನವು ಕೆಳಗುರುಳಿಸಲ್ಪಟ್ಟಿತು.

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
***Head Office*: UDIPI.**
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ವಿಧವಾ ವಿವಾಹ

ಲೇಖಕ:
ಯು. ಬಿ. ಆಚಾರ್ಯ, ವೈದ್ಯಭೂಷಣ, ಮಲ್ಪೆ.

●●●

ನಮ್ಮಲ್ಲಿ ಯಾವುದೊಂದು ಸಾಮಾಜಿಕ ವ ಧಾರ್ಮಿಕ ವಿಚಾರಗಳನ್ನು ಮುಖ್ಯ ಶಾಸ್ತ್ರಮಾನದಿಂದ ಅಳೆದು ನಿರ್ಧರಿಸತಕ್ಕದ್ದೇ ಮತ್ತಾವ ಲೌಕಿಕ ಯುಕ್ತಾಯುಕ್ತತೆಯ ಅನುಮೋದನೆ ಹಾಗೂ ಅನುಸರಣೆಗಿಂತಲೂ ಸಂದಿಗ್ಧವಾಗಿ ಉಪೇಕ್ಷಿಸಲ್ಪಟ್ಟು, ಮತ್ತು ಮರಾಗ್ರಹದಿಂದ ಅವಿಮರ್ಶಿಸಲ್ಪಟ್ಟು, ಧರ್ಮದ ಹೆಸರಿನಿಂದ ರೂಢಮೂಲವಾಗಿ ಬಳಸಲ್ಪಟ್ಟ, ಸಾಮಾಜಿಕ ಕರ್ಮ ಧರ್ಮ ಸಂಬಂಧಗಳ ನಿಶ್ಚಯಾತ್ಮಕ ನಿರೂಪಣೆಗೆ ಅಮೂಲ್ಯ ಸಾಧನವಾಗಿ ಪರಿಣಮಿಸತಕ್ಕದ್ದು ಸಹಜವೂ ಪ್ರಭಾವಶಾಲಿಯೂ ಇರುವುದರಿಂದ ಪ್ರಕೃತ ಲೇಖನೀಯವಾದ "ವಿಧವಾ ವಿವಾಹ"ದ ವಿಷಯದಲ್ಲಿ ಮುಂದೆ ಉಲ್ಲೇಖಿಸಲ್ಪಡತಕ್ಕ ಪಾರಾಶರೀಯವಾದ ಒಂದೇ ಒಂದು ಶ್ಲೋಕದಿಂದ ವಿಧವಾ ವಿವಾಹದ ಶಾಸ್ತ್ರೀಯತೆಯ ಬಗ್ಗೆ ತೊಳಲತಕ್ಕವರೂ, ಅದು ಅಶಾಸ್ತ್ರೀಯವೆಂದು ಖಂಡ ತುಂಡಾಗಿ ಉದ್ಘೋಷಿಸಿ ಬಳಲತಕ್ಕವರೂ ಸಮಾಧಾನವನ್ನು ವಹಿಸಿ ಆ ಸ್ಮೃತ್ಯುಕ್ತಿಯಂತೆ ನಿರ್ಧಾರಕ್ಕೆ ಬರಬಹುದಾಗಿದೆ.

ಮುಖ್ಯವಾಗಿ ಸನಾತನಿಗಳೆನ್ನಿಸಿಕೊಳ್ಳತಕ್ಕವರನ್ನು, ಪದ್ಧತಿಯ ಅಂಧಾನುಕರಣವನ್ನಷ್ಟೇ ಮಾಡಿಕೊಳ್ಳತಕ್ಕವರನ್ನು, ಶಾಸ್ತ್ರಿಗಳೆಂದೆನಿಸಿಕೊಂಡರೂ ಬರೇ ಶಬ್ದಶಾಸ್ತ್ರಿಗಳಾಗಿದ್ದು ಅರ್ಥಶಾಸ್ತ್ರಿಗಳಾಗದೆ ಇರತಕ್ಕವರನ್ನೂ, ನೂರಾರು ಯುಕ್ತಿವಾದ ಹಾಗೂ ಲೌಕಿಕ ನಿದರ್ಶನಗಳಿಂದ ಪ್ರಸನ್ನೀಕರಿಸಿಕೊಳ್ಳಲು ಸಾಧ್ಯವಿದೆ. ಆದಕ್ಕಾಗಿ ಮಣಿಯದ ದೋಷಜ್ಞ (ಪಂಡಿತ)ರನ್ನು ಕೇವಲ ದೋಷಜ್ಞ(ಕೆಡಕನ್ನು ಮಾತ್ರವೇ ತಿಳಿದವ)ರೆಂದೇ ತಿಳಿದು ಪ್ರಗತಿಶೀಲವಾದ ಸಮಾಜವು ಮುಂದಡಿಯಿಡದೆ ಇರುವುದೇ ಇಲ್ಲ.

ಪರಿಸ್ಥಿತಿಯ ಭೀಕರತೆಯಿಂದ ವಿಹ್ವಲವಾದ, ಅವಿಚಾರದ ಮುಸುಕಿನಿಂದ ಅಂಧವಾದ ನೀತಿ ನಿಯಮಗಳ ಬಲಾತ್ಕಾರ ಘರ್ಷಣದಿಂದ ಅನೀತಿಯ, ಅತ ಏವ ಅವನತಿಯ ಅಪಮಾನದ ನೆಳವಿಗೇ ತುತ್ತಾಗಿ ಹೀನ ದೀನ ದುರ್ದಶೆಯನ್ನು ಅಖಂಡವಾಗಿ ಅನುಭವಿಸಿಕೊಂಡು ಅಸ್ವಸ್ಥವಾಗಿರುವ ಸಮಾಜವು, ಹೀಗೆ ಮುಂದು ಹೆಜ್ಜೆಯಿಟ್ಟು ತನ್ನನ್ನು ಪರಿಷ್ಕರಿಸಿಕೊಳ್ಳದೆ ಸುಧಾರಿಸಿಕೊಳ್ಳದೆ ಇದ್ದಲ್ಲಿ 'ದೇವರು ವರ ಕೊಟ್ಟರೂ ಪೂಜಾರಿ ಬಿಡ' ಎಂಬಂತೆ ಕಾಲಜ್ಞಾನಿಗಳಾದ ನಮ್ಮ ಪೂರ್ವಜರು ಮುಂದಿನ ಸಂತಾನದ ಪ್ರಗತಿಯ ಬಗ್ಗೆ ನೆಮ್ಮದಿಯ ಬಗ್ಗೆ ಆಪದ್ಧರ್ಮದ ಮಾರ್ಗಗಳನ್ನು ನಿಚ್ಚಳವಾಗಿ ತೆರೆದಿಟ್ಟು ತೋರಿಸಿ ಕೊಟ್ಟಿದ್ದರೂ ಅದರ ರಾಜವೀಥಿಯಲ್ಲಿ ನಡೆಯದೆ 'ಅಂಧೇನೈವ ನೀಯಮಾನಾಯಥಾಂಧಾಃ' ಎಂಬಂತೆ ದಾರಿತಪ್ಪಿ ಕಾಡುಕೊಂಪೆಯ ಅಪಮಾರ್ಗವನ್ನು ಹಿಡಿದೇ ಹೋದಲ್ಲಿ ಆ ಸಮಾಜಕ್ಕೆ ಎಲ್ಲಿಯ ಉಳಿಗಾಲವಿದ್ದೀತು? ಹಾಗೆ ಅಡ್ಡದಾರಿಗೆ ಬಿದ್ದವರ ಸಂರಕ್ಷಣೆಯು ಹ್ಯಾಗಾಗಬಹುದು? ಅವರು ಪರಾಕ್ರಾಂತರಾಗಲಿಕ್ಕಿಲ್ಲೆಂದೇನು ನಿಯಮ? ಹೀಗೆಯೇ ನಾಮಧಾರೀ ನೀತಿಯ ವ ಸಂಪ್ರದಾಯದ ಮಸ್ತಕ ಬಂಧನಗಳಿಂದಾಗಿಯೇ ಅನೀತಿಯ ಪಂಕದಲ್ಲಿ ಅಡ್ಡಗಾಲಿಟ್ಟು ಮುಳುಗುತ್ತಿರುವ ಸಮಾಜದ ಘಟಕಗಳು ನಮ್ಮ ಅವಿಚಾರದಿಂದಾಗಿಯೇ ವ ವಿಚಾರ ಶಕ್ತಿಯ ದುರುಪಯೋಗದಿಂದಾಗಿಯೇ ಒಂದೇ ಸವನೆ ಪರಕ್ರಾಂತವಾಗಿಕೊಂಡೇ ಬರಹತ್ತಿದಲ್ಲಿ 'ಮೂಲೇ ಕುಠಾರಃ' ಎಂಬಂತೆ ಮೂಲತಃ ಸಮಾಜವೇ ಎಲ್ಲಿ ಉಳಿಯಬೇಕು.

ಇದಕ್ಕೆ ದೂರುವುದಾದರೂ ಯಾರನ್ನು. ಸ್ಮೃತಿಯನ್ನು ದೂರುವ ಹಾಗಿಲ್ಲ. ಸ್ಮೃತಿಕಾರರಿಗೆ ಹೆಸರಿಡುವಂತಿಲ್ಲ. ಅಥವಾ ಆ ಶ್ರುತಿ ಸ್ಮೃತಿಗಳ ಗುತ್ತಿಗೆಯು ನಮ್ಮ ಕಡೆಗೇ ಇರುವದೆನ್ನತಕ್ಕ ಯಾವ ಸಾಹಸಿಯೂ ದೊರೆಯಲಾರನು. ಒಂದೊಮ್ಮೆ ಆ ಅಧಿಕಾರವು ನಮ್ಮದೆಂದು ನಡುಗುವ ಧ್ವನಿಯಲ್ಲಿ ತೊದಲು ನುಡಿಯುವ ಧರ್ಮಪೀಠಾಧಿಕಾರಿಗಳಾದರೂ ಮುಂದು ಬಂದಾರೇ ಅಂದರೆ ಪ್ರಾಯಃ ಅವರ ಶೋಚನೀಯ ಪರಿಸ್ಥಿತಿಯ ಪರಿಷ್ಕರಣಕ್ಕೇ ಬೇರೆಯವರ ಬೆಂಬಲವು ಬೇಕಾಗಿ ಬಂದು ಅವರು ಯಾವ ಅಧಿಕಾರದ ಪ್ರಯೋಗಕ್ಕೂ ತಯಾರಿಲ್ಲದೆ ಅಜೀರ್ಣವ್ಯಾಧಿಯಿಂದ ನರಳಿಕೊಂಡು ಸಮಯ ಬಂದಾಗ ಇದು ಬಿಡಿ; ಇನ್ನೂ ಹೆಚ್ಚಿನ ಯಾವ ಉಪದ್ವ್ಯಾಪೀ ಧೋರಣವನ್ನವಲಂಬಿಸುವುದಕ್ಕೂ ಸ್ವತಃ ತಯಾರೇ ಇರುವರು. ಆದುದರಿಂದ ಕಲ್ಪಿತ ವಿಘ್ನವಿಡ್ವರಗಳ ಕೋಟೆಯನ್ನು ಕಟ್ಟಿ ಅದರಲ್ಲಡಗಿಕೊಂಡು ಮುಂದರಿಯುವುದಕ್ಕೆ ಎಡೆಯಿಲ್ಲವೆಂದೋ, ಸನಾತನಿಗಳು ಇದಕ್ಕೆ ತಡೆ ಎಂದೋ ಬಡಬಡಿಸಿಕೊಂಡು ಇತಿಕರ್ತವ್ಯತಾ ಮೂಢರಾಗಿ ಕೊಡ್ರದೆ ಸಮಾಜದ ಏಳಿಗೆಗಾಗಿ ಅದರ ಸ್ವಾಸ್ಥ್ಯಕ್ಕಾಗಿ ನಮ್ಮ ಪರಮ ಪೂಜ್ಯ ಮಹರ್ಷಿಗಳು ಆಪದ್ಧರ್ಮವೆಂದು ಆದೇಶ ಉಲ್ಲೇಖ ಮಾಡಿರುವರೋ ಅದರ ಔಚಿತ್ಯವನ್ನರಿತು ಅವಶ್ಯಬಿದ್ದಾಗ ಆ ಆದೇಶವನ್ನು ಪಾಲಿಸಿಕೊಂಡು ಬಂದರೇನೇ ತಡೆಬಡೆಯಿಲ್ಲದೆ ನಮ್ಮ ಸಮಾಜದ ಪ್ರಗತಿಯು ಸಾಧಿಸಲ್ಪಟ್ಟೀತು.

ಮನುಷ್ಯನನ್ನು ವಿನಾಶಪಥಕ್ಕೊಯ್ಯುವ ಕಾಮಕ್ರೋಧಾದಿ ಅರಿಷಡ್ವರ್ಗಗಳ ಪೈಕಿ ಕಾಮದಷ್ಟು ವೇಗಶಾಲಿಯೂ ಪ್ರಧಾನತಮವೂ ಆದದ್ದುವೂ ಆದುದು ಬೇರೊಂದಿರಲಾರದು. ಅದರ ನಿಗ್ರಾಹಕ ಶಕ್ತಿಯುಳ್ಳವರು ಲೋಕದಲ್ಲಿ ಅತಿವಿರಳ. ಹೆಣ್ಣು ಹೊನ್ನು ಮಣ್ಣು ಎಂಬ ಲೋಭನೀಯ ವಸ್ತುತ್ರಯಗಳ ಪೈಕಿ ಸ್ತ್ರೀಯ ಗಣನೆಯೇ ಮೊದಲನೆಯದಾಗಿರುವುದು. "ಆಹಾರ ನಿದ್ರಾ ಭಯ ಮೈಥುನಂ ಚ ಸಾಮಾನ್ಯಮೇತತ್ಪಶುಭಿರ್ನರಾಣಾಂ" ಎಂಬಂತೆ ಭುಕ್ತದ್ರವ್ಯಗಳ ಪರಿಪಾಕದ ಪರಿಣಾಮವಾಗಿ ಪ್ರತಿ ದಿನವೂ ಮನುಷ್ಯಶರೀರದಲ್ಲಿ ಸಪ್ತಧಾತುಗಳೂ ಸಂವರ್ಧನೆಗೊಳ್ಳುವುದು ನಿಸರ್ಗ (ಸ್ವಭಾವ)ವೇ ತಾನೇ. ಈ ಸಪ್ತಧಾತುಗಳ ಪೈಕಿ ಸರ್ವ ಶ್ರೇಷ್ಠವಾದ ಜೀವನಾಧಾರಹೇತುಭೂತವಾದ ರಜೋಗುಣವುಳ್ಳ ಅಂದರೆ ಉತ್ಪಾದಕ ಶಕ್ತಿಯುಳ್ಳ ವೀರ್ಯವನ್ನು ಹೆಂಗಸರಿಗಾದರೆ ರಜಸ್ಸನ್ನು ಅದರ ಸ್ವಭಾವ ಸಿದ್ಧವಾದ ಪ್ರವೃತ್ತಿ ಮಾರ್ಗದಿಂದ ತಪ್ಪಿಸಿ ನಿವೃತ್ತಿಮಾರ್ಗಕ್ಕೆ ಸಾಧನವನ್ನಾಗಿ ಮಾಡಿಕೊಳ್ಳತಕ್ಕದ್ದು ಲೌಕಿಕ ವ್ಯವಹಾರಗಳಲ್ಲಿ ತೊಳಲಿಕೊಂಡಿರುವ ಸರ್ವಸಾಮಾನ್ಯರಿಂದ ಶಕ್ಯವಾಗತಕ್ಕ ಸಂಗತಿಯೇ ಅಲ್ಲ. ವಿಶ್ವಾಮಿತ್ರ ಪರಾಶರ ಪ್ರಭೃತಿಗಳೂ ಕಟ್ಟಕಡೆಗೆ ಇದರಲ್ಲಿ ಸಿದ್ಧಿಯನ್ನು ಹೊಂದದೆ ಹೋದರು. 'ಬಲವಾನಿಂದ್ರಿಯಗ್ರಾಮೋವಿದ್ವಾಂಸಮಪಿ ಕರ್ಷತಿ" ಎಂಬ ಅರ್ಧ ಶ್ಲೋಕದಿಂದಲೇ ಗೀತೆಯು ವಿಷಯಗಾಮಿಗಳಾದ ಇಂದ್ರಿಯಗಳ ದುರ್ಭರತೆಯನ್ನು ಸಾರಿತು. ಆಂಜನೇಯ ಭೀಷ್ಮರಂಥಾ ನೈಷ್ಠಿಕ ಬ್ರಹ್ಮಚರ್ಯೆಯುಳ್ಳ ದೃಢಪ್ರತಿಜ್ಞರೂ ಸಂಯಮಿಗಳೂ, ಅರುಂಧತೀ ಅನಸೂಯಾ ಸಾವಿತ್ರಿಯರಂಥಾ ಸತೀ ಶಿರೋಮಣಿಯರೂ ಕೋಟಿ ಸಂಖ್ಯೆಯಲ್ಲಿ ಆದೆಷ್ಟು ಸಿಗಬಹುದೆಂದು ಎಲ್ಲರೂ ಬಲ್ಲರು. ಆದರೂ ನಾವು ಇಷ್ಟು ತಿಳಿದೂ ಮಾಡುವುದಾದರೂ ಏನನ್ನು? ಲಕ್ಷೋಪಲಕ್ಷ ಸಂಖ್ಯೆಯಿಂದ ಬೆಳೆದಿರುವ ಬಾಲವಿತಂತುಗಳ, ವಿಧವಾತರುಣಿಯರ ಆತ್ಮಯಜ್ಞವನ್ನಲ್ಲವೇ?

ನಾವೂ ಒಂದು ಸಮಾಜದವರು, ಅಂತಃಕರಣವುಳ್ಳವರು, ಎಂದು ಹೇಳಿಸಿಕೊಳ್ಳಲಿಕ್ಕೆ ನಾಚಿಕೆಪಡದ ನಾವು ಅವರನ್ನು ಇಟ್ಟಿರುವ, ಅವರನ್ನು ನೋಡುತ್ತಿರುವ ವಿಧಾನದಿಂದ ಒಂದಲ್ಲ ಒಂದು ರೀತಿಯಿಂದ ಬಿಸಿಯುಸಿರಿನ ಬೇಗೆಯಿಂದ ಬೆಂದು ಬಾಡದೆ ಇದ್ದ ಹೃದಯವು ಅವರಲ್ಲಿ ಸಿಕ್ಕೀತೇ? ಪದ್ಧತಿಯ ಚೀಲದೊಳಗೆ ಅವರಿಗಾಗಿ ತಿರಸ್ಕಾರದ ಕಹಿಗುಳಿಗೆಯೇ ತುಂಬಿಟ್ಟಿರುವುದಲ್ಲದೆ ಯಾವ ಪ್ರಾಪಂಚಿಕ ವಿಚಾರದಲ್ಲಾದರೂ ಅವರಿಗೆ ಸ್ಥಾನಮಾನಗಳಿವೆಯೇ? ಅವರಿಗೆ ಸಮಾಜದ ಬಲೀಯ ಸಂಬಂಧವೆಂದರೆ ಒಂದು ನಿರ್ಬಂಧ, ಇನ್ನೊಂದು ತಿರಸ್ಕಾರ. ಈ ಕಡೆ ತಿರಸ್ಕಾರಗಳಿಂದ ಮನಸ್ಸು ರೂಕ್ಷವಾಗುತ್ತಾ ಆಗುತ್ತಾ ಅದು ಪ್ರಸನ್ನವಾಗುವುದರ ಬದಲು ಇನ್ನಷ್ಟು ಕಲುಷಿತವಾದುದಾಗಿ ಒಡೆದು ಹೋದ ಅಣೆಕಟ್ಟಿನಂತೆ ಅತಿಯಾಗಿ ಎಳೆಯಲ್ಪಟ್ಟ ಲತೆಯಂತೆ ಕಿತ್ತುಕೊಳ್ಳುವ ಅನರ್ಥದ ಸಂಭವವೇ ಹೆಚ್ಚಲ್ಲವೇ?

(ಮುಂದುವರಿಯುವುದು.)

WANTED

Candidates for Telegraph and station Master class. Allowance Rs. 28. Uniform, passage and quarter free. Service essential. Rules and Entrance from on annas eight. Director, Royal Telegraph and Ry. Duties College, Bombay 14.

ಉಡುಪಿಯ ಆದರ್ಶ ಉಪಹಾರಗೃಹ !

ಶ್ರೀರಾಮಾ ರೆಸ್ಟೋರೆಂಟ್

ಸುಲಭ ದರದಲ್ಲಿ ತಿಂಡಿ ಪಾನೀಯಗಳು ! ಮಿತ ದರದಲ್ಲಿ ಊಟ ಉಪಚಾರಗಳು !

ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, ಅನುಭವಪೂರ್ಣ ಮೇಲ್ವಿಚಾರಣೆ !

ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳಿದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.

ಎಚ್. ಗೋಪಾಳ ನಾಯಕ್, ಪ್ರೊಪ್ರೈಟರ್.

ಇದೇ ತಿಂಗಳ ತಾ. 12ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಶ್ರೀ ರಾಮಕೃಷ್ಣ ಥಿಯೇಟರಿನ ಪರವಾದ ವಿನಂತಿ

ನಾವು ನಮ್ಮ ಥಿಯೇಟರಿನ ಕುರಿತು ಕೆಲವು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇವೆ. ಶ್ರೀ ರಾಮಕೃಷ್ಣ ಥಿಯೇಟರು ಕಟ್ಟಿ ಇಂದಿಗೆ 5 ವರ್ಷಗಳಾದುವು. ಅದು ನಾನಾ ವಿಧದ ಸಾರ್ವಜನಿಕ ಕಾರ್ಯಗಳಿಗೆ, ಸಭೆ, ಪರಿಷತ್ತು, ಸಾಮಾಜಿಕ ಕೂಟವೇ ಮೊದಲಾದುವುಗಳಿಗೆ ಉಪಯೋಗಿಸಲ್ಪಡುತ್ತಾ ಬಂದಿದೆ. ಹೀಗೆ ಇಷ್ಟರ ವರೆಗೆ ಉಡುಪಿಯ ಆಧುನಿಕ ಟೌನ್ ಹೋಲಿನ ಉದ್ದೇಶಗಳನ್ನು ಪೂರೈಸಿರುವುದು. ಇದೇ ರೀತಿ ಇನ್ನು ಮುಂದೆಯೂ ಈ ಥಿಯೇಟರು ಎಲ್ಲಾ ಸಮಯಗಳಲ್ಲಿ ಜನತೆಯ ಉಪಯೋಗಕ್ಕೆ ದೊರೆಯುವಂತಾಗಬೇಕಾಗಿ ನಮ್ಮ ಉದ್ದೇಶವಿರುತ್ತದೆ.

ಅವಶ್ಯಬಿದ್ದಾಗ ಜನತೆಯ ಉಪಯೋಗಕ್ಕೆ ಬೀಳುವಂತೆಯೇ ಅವರ ದಿನನಿತ್ಯದ ಜೀವನದಲ್ಲಿಯೂ ಅದು ಪ್ರಯೋಜನಕಾರಿಯಾಗುವಂತೆ ಜನವಿನೋದಕ್ಕಾಗಿಯೂ, ಬೋಧನೆಗಾಗಿಯೂ ಆಧುನಿಕ ಚಲಚಿತ್ರಗಳನ್ನು ಪ್ರದರ್ಶಿಸಿ, ಉಡುಪಿಗೊಂದು ಸಿನೇಮಾಮಂದಿರ ಆವಶ್ಯಕತೆಯನ್ನು ಪೂರೈಸಬೇಕೆಂದೂ ನಮ್ಮ ಪ್ರಯತ್ನವಿರುವುದು. ನಮ್ಮೀ ಸಾಹಸದ ಜಯಶೀಲತೆಯು ತಮ್ಮೆಲ್ಲರ, ಸಹಕಾರ, ಸಲಹೆ ಮತ್ತು ಸೂಚನೆಗಳ ಮೇಲೆ ಅವಲಂಬಿಸಿಯದೆ. ಮತ್ತು ತಾವು ನಮ್ಮ ಕುರಿತು ಯಥಾರ್ಥವಾದ ಸಹಕಾರವನ್ನೀಯುವಷ್ಟರ ಉದಾರತೆಯನ್ನು ತೋರಿಸಿದರೆ, ನಾವು ಉತ್ಕೃಷ್ಟ ಚಲಚಿತ್ರಗಳನ್ನು ಪ್ರದರ್ಶಿಸಿ, ಜನತೆಯು ತೆರುವ ಹಣಕ್ಕೆ ಅತಿ ಹೆಚ್ಚಿನ ಪ್ರಯೋಜನವನ್ನವರಿಗಿತ್ತು, ನಮ್ಮ ದೀನ ರೀತಿಯಲ್ಲಿ ಜನಸೇವೆ ನಡಿಸುವ ಭರವಸೆಯುಳ್ಳವರಾಗಿರುವೆವು,

ಒಳ್ಳೆಯ ಥಿಯೇಟರೊಂದು ಜನತೆಯ ದಿನನಿತ್ಯದ ಜೀವನದಲ್ಲಿ ಆದೆಷ್ಟು ಪ್ರಾಮುಖ್ಯವಾದುದೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ, ಶಿಕ್ಷಣಸಂಸ್ಥೆಗಿಂತ ಅದರ ಉಪಯೋಗವೇನೂ ಕಡಿಮೆಯಲ್ಲ. ಶಿಕ್ಷಣಸಂಸ್ಥೆಯು ಪ್ರತ್ಯೇಕವಾದುದೊಂದು ತರಗತಿಯ ಜನತೆಗೆ ಅದೊಂದು ಪ್ರಾಯದಲ್ಲಿ ಮಾತ್ರ ಬೋಧನೆಯನ್ನೀಯುವುದು. ಆದರೆ ಉತ್ತಮವಾದೊಂದು ಥಿಯೇಟರು, ಎಲ್ಲಾ ಸಮಯದಲ್ಲಿ ಎಲ್ಲಾ ತರಗತಿಯ ಜನರ ಮಾನಸಿಕ ಮತ್ತು ಸಾಂಸ್ಕೃತಿಕ ಆವಶ್ಯಕತೆಗಳನ್ನು ಪೂರೈಸುವುದು ಅಂದ ಮೇಲೆ ಥಿಯೇಟರುಗಳು ಕೇವಲ ನಗೆ ವಿನೋದಗಳನ್ನುಂಟುಮಾಡುವ ಸ್ಥಳಗಳು ಮಾತ್ರವೇ ಅಲ್ಲದೆ ಮನೋರಂಜನೆಯೊಂದಿಗೆ ಬುದ್ಧಿವಿಕಾಸಗೊಳಿಸುವವುಗಳೂ ಆಗಿವೆ. ಸಿನೇಮವು ಮೋಟರ್ ವಾಹನ, ಟೆಲಿಫೋನು ಮೊದಲಾದುವುಗಳಷ್ಟೇ ಪ್ರಾಮುಖ್ಯವಾದ ಮಾನವ ಕೋಟಿಯ ಆಧುನಿಕ ಶೋಧನೆಗಳಲ್ಲೊಂದಾಗಿದೆ. ಅದರ ಮೂಲಕ ಬಡ ದಿನಕೂಲಿಯವನೊಬ್ಬನೂ ಕೂಡ ಕೇವಲ ನಾಮಮಾತ್ರವಾದ ಬೆಲೆಯಿಂದ ಲೋಕದ ಮೇಧಾವಿಗಳನ್ನು ಕಂಡು, ಕೇಳಿ, ಆನಂದೋಲ್ಲಾಸಪಡಲು ಸಾಧ್ಯವಿದೆ.

ತಮ್ಮ ಪ್ರೋತ್ಸಾಹವನ್ನು ಆಶಿಸುವ,
ಪ್ರೊಪ್ರೈಟರ್.

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ

ಈ ಮೇಲ್ತೋರುವ ಮಂಡಳಿಯ ೩೪ನೇ ವಾರ್ಷಿಕ ಮಹಾಸಭೆಯು ಮೇ ತಿಂಗಳ ತಾ. ೩೦ನೇ ಆದಿತ್ಯವಾರ ಅಪರಾಹ್ಣ ೨ ಘಂಟೆಗೆ ಮೊಗವೀರ ರಾತ್ರಿ ಶಾಲೆಯ ಸಭಾಸದನದಲ್ಲಿ ರಾ. ಎಚ್. ಕೆ. ಎ. ಕುಂದರನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ದೇವತಾಪ್ರಾರ್ಥನೆಯಾದ ಬಳಿಕ ಮಂಡಳಿಯ ದಿವಂಗತ ಮೆಂಬರರ ಮತ್ತು ಆಶ್ರಯದಾತರ ಮರಣದ ಕುರಿತು ದುಃಖ ಸೂಚಕ ಠರಾವನ್ನು ಎಲ್ಲರೂ ಎದ್ದು ನಿಂತು ಮಂಜೂರು ಮಾಡಲಾಯಿತು. ಲೆಖ್ಖ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಆಯ ವ್ಯಯದ ಪಟ್ಟಿಯನ್ನೊಳಗೊಂಡ ಸನ್ ೧೯೩೬ನೇ ಇಸವಿಯ ವಾರ್ಷಿಕ ವರದಿಯನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ಸಮಾಜದ ಸುಧಾರಣೆಯ ಕುರಿತು ಕೆಲವು ಠರಾವುಗಳನ್ನು ಮಂಜೂರು ಮಾಡಿ, ೧೯೩೭ನೇ ಇಸವಿಯ ಲೆಖ್ಖ ಪರಿಶೋಧಕರನ್ನು ನೇಮಕ ಮಾಡಿ, ಈ ಕೆಳಗಿನ ಹೊಸ ಕಾರ್ಯನಿರ್ವಾಹಕ ಸಭೆಯನ್ನು ದೃಢೀಕರಿಸಲಾಯಿತು. ಅಧ್ಯಕ್ಷರು ರಾ. ಇ. ಟಿ. ದೇಜ್ಜಿಯವರು. ಉಪಾಧ್ಯಕ್ಷರು ರಾ. ಉಚ್ಚಿಲ ರಾಮರಾಯರು. ಗೌರವ ಕಾರ್ಯದರ್ಶಿಯವರು ರಾ. ಎಸ್. ಕೆ. ಮೈಂದನ್, ಆರ್. ಕೆ. ಕುಂದರ್ ಮತ್ತು ಆರ್. ಎ. ಅಮೀನ್‌ರು. ಗೌರವ ಕೋಶಾಧಿಕಾರಿಯವರು ರಾ. ಗಳಾದ ಸಿ. ಪಿ ಕರ್ಕೇರರು, ಮತ್ತು ಡಿ ಎ. ಕರ್ಕೇರರು, ರಾತ್ರಿ ಶಾಲೆಯ ಮಾನಾರ್ಥ ಸುಪರಿಂಟೆಂಡೆಂಟರು, ರಾ. ಎಸ್. ಕೆ ಬಂಗೇರರು. ಲೈಬ್ರೆರಿಯನರು ರಾ. ಗಳಾದ ವಿ. ಬಿ. ಕರ್ಕೇರರು ಮತ್ತು ಎಸ್. ಪಿ. ಬಂಗೇರರು, ಟ್ರಸ್ಟಿಯರು ಮತ್ತು ಪೂರ್ವಾಧಿಕೃತ ಮೆಂಬರರು:-ರಾಗಳಾದ ಸಿ. ಎ. ಮಾಸ್ತರರು, ಎಸ್. ಬಿ. ಕೋಟಿಂಕಾರು, ಎಚ್. ಎಸ್ ಮೆಂಡನರು, ಕೆ. ಬಿ. ಕರ್ಕೇರರು, ಮತ್ತು ಬಿ ಎ. ಕರ್ಕೇರರು. ಮೆಂಬರರು. ರಾಗಳಾದ ಕೆ. ಯು ಮೆಂಡನರು, ಜಿ. ಸಿ. ಪುತ್ರನರು, ಎಚ್, ಕೆ. ಎ. ಕುಂದರನ್‌ರು, ಎಸ್. ಆರ್. ಕುಂದರರು, ಪಿ. ಜಿ. ಕೋಟ್ಯಾನರು, ವೈ. ಕೆ. ಕೋಟಿಯನಕಾರರು, ವೈ. ಬಿ. ಕುಂದರರು, ಎಸ್, ವಿ ಕಾಂಚನರು, ಕೆ. ಎಸ್. ಬಂಗೇರರು, ಮತ್ತು ಆರ್. ಪಿ. ಕುಂದರರು.

ಮಂಗಳೂರು ಶಾಖೆಯ ಕಮಿಟಿ ಮೆಂಬರರು

ಅಧ್ಯಕ್ಷರು, ರಾ। ಕೆ. ಎಮ್. ಸೋಮನವರು ಮಾನಾರ್ಥ ಕಾರ್ಯದರ್ಶಿ ಮತ್ತು ಕೋಶಾಧಿಕಾರಿ ರಾ। ಎಸ್. ಬಿ. ಕೋಟಿಂಕಾರರು, ಮೆಂಬರರು, ರಾಗಳಾದ ಉದಿಯಾವರ ಸದಿಯನವರು, ಕೈಪುಂಜಾಲು ಚೆನ್ನಪ್ಪನವರು, ಹೊಯಿಗೆ ಬಜಾರು ಸೋಮನಪ್ಪ ತಿಂಗಳಾಯರು, ಬೊಕ್ಕಪಟ್ಣ ಚಾರಪ್ಪ, ಎ, ಪುತ್ರನರು, ಮತ್ತು ಗುಂಡಿ ದುಗ್ಗಪ್ಪ, ಎನ್, ಶ್ರಿಯಾನ್‌ರು.

ಸಭೆಯಲ್ಲಿ ಹಾಜರಿದ್ದವರ ಪೈಕಿ ರಾಗಳಾದ ಶಂಭು ಪಿ। ಮೂಲೂರುಕಾರ್, ಯರ್ಮಾಳ್ ಕೊರಗಪ್ಪ, ಎನ್. ಕೆ. ಪುತ್ರನ್, ಎನ್. ಎ. ಕರ್ಕೇರ, ಕುಮಾರ್ ಕುಂದರ್, ಪಿ. ಎ, ಸಾಲ್ಯಾನ್, ಹೊಸಕೊಪ್ಪ ಪಕೀರಪ್ಪ, ಯರ್ಮಾಳ ಕಾಂತಪ್ಪ ಪುತ್ರನ್ ಮೊದಲಾದವರು ಮಂಡಳಿಯ ವಿವಿಧ ಕಾರ್ಯಕಲಾಪಗಳನ್ನು ಪ್ರಶಂಸಿಸಿ ಮಾತಾಡಿದರು! ಸಭಾಧ್ಯಕ್ಷರು ತಮ್ಮ ಬೋಧಪ್ರದವಾದ ಭಾಷಣದಲ್ಲಿ ಸನ್ ೧೯೩೬ನೇ ಇಸವಿಯ ಕಾರ್ಯಕಲಾಪಗಳನ್ನು ವಿಮರ್ಶಿಸಿ ಮಂಡಳಿಯ ಪುರೋಭಿವೃದ್ಧಿಗಾಗಿ ಹಲವು ಸಲಹೆಗಳನ್ನಿತ್ತರು! ಇದು ಮೊದಲ್ಗೊಂಡು, ಅಧ್ಯಕ್ಷರಿಗೂ ಸಭಿಕರಿಗೂ; ಧನ್ಯವಾದವನ್ನರ್ಪಿಸಿ, ಮಂಗಳ ಗೀತೆ ಹಾಡಿದ ಬಳಿಕ ಸಭೆಯು ಮುಕ್ತಾಯವಾಯಿತು.

ಮೊಗವೀರ ಮಹಾಜನ ಸಭಾ, (ಮಂಗಳೂರು ಬಾರುಕೂರು ಹೋಬಳಿ) ಮುಂಬಯಿ.

ಈ ಮೊದಲು ಪ್ರಕಟಿಸಿರುವಂತೆ ತಾ. ೩೦-೫-೩೭ನೇ ಆದಿತ್ಯವಾರ ಮಧ್ಯಾಹ್ನ ೧ ಘಂಟೆಗೆ ಪೀರ್ ಬಜಾರ್ ಮಂದಿರದಲ್ಲಿ ಮೇಲ್ಕಂಡ ಸಂಸ್ಥೆಯ ಮಹಾಸಭೆಯು ಶ್ರೀ। ಕದಿಕೆ ಮಹಾಲಿಂಗ ಶ್ರೀಯಾನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ೧೦೨ ಜನ ಮೆಂಬರರು ಹಾಜರಿದ್ದರು. ಸಭೆ ಜರಗುವರೆ ಹೊರಡಿಸಿದ್ದ ಜಾಹಿರಾತು ಪತ್ರ ಓದಲ್ಪಟ್ಟಿತು. ಪರದೇಶವಾದ ಇಲ್ಲಿ ಪ್ರತ್ಯ ಪ್ರತ್ಯೇಕ ಸಂಘಗಳಿದ್ದು ಸಮಾಜದ ಒಕ್ಕಟ್ಟಿನ ಕಾರ್ಯಕಲಾಪಗಳಿಗೆ ಹೆಚ್ಚಿನ ತೊಡಕುಂಟಾಗುವದರಿಂದ ಮೊಗವೀರ ಸಾರ್ವಜನಿಕ ಸಂಸ್ಥೆಗಳನ್ನು ಸಮ್ಮೇಳನಗೈದು, ಮೊಗವೀರ ಸಮಾಜದ ಪ್ರತಿನಿಧಿ ಸಂಸ್ಥೆಯಾಗಿ ಒಕ್ಕಟ್ಟಿನ ಒಂದೇ ಸಂಸ್ಥೆಯಾಗಿ ಏರ್ಪಡಿಸಿಕೊಳ್ಳಬೇಕೆಂಬಸದುದ್ದೇಶದಿಂದ ತಾತ್ಕಾಲಿಕ ಕಾರ್ಯಕಾರಿ ಕಮಿಟಿಯವರು ಜಾಹೀರುಗೊಳಿಸಿದ ಸೂಚನಾಭಿಪ್ರಾಯಕ್ಕೆ ಸರ್ವಗ್ರಾಮ (ಊರು) ಗಳ ಸಭೆ ಸಮಸ್ತರ ಪ್ರತ್ಯಪ್ರತ್ಯೇಕ ದಸ್ಕತು ನಿಶಿ ಸಮ್ಮತಿ ಪಡೆದು, ತಾ. ೩ ೮-೩೭ರಲ್ಲಿ ಜರಗಿದ ಮಹಾಸಭೆಯ ನಿರ್ಣಯ ಪ್ರಕಾರ ಮೊಗವೀರ ಸಾರ್ವಜನಿಕ ಸಂಸ್ಥೆಗಳಾಗಿರುವ ೧ ಮಂಗಳೂರು ಬಾರುಕೂರು ಹೋಬಳಿ ಯಾನೆ ಮೊಗವೀರ ಮಹಾಜನ ಸಭಾ ಮುಂಬಯಿ, ೨ ಮೊಗವೀರ ವ್ಯವಸ್ಥಾಪಕ ಮಂಡಳಿ (ಎಡ್ವರ್ಡ್ ೭ನೇ ಕೊರೊನೇಶನ್ ಫಂಡು, ಮೊಗವೀರ ಕ್ವಾರ್ಟರ್ ಯೂನಿಯನ್ ಸಮ್ಮಿಳನವಾಗಿರುತ್ತದೆ ಮುಂಬಯಿ; ೩ ಮೊಗವೀರ ದರ್ಮೋದ್ಧಾರಕ ಮಂಡಳಿ, ಮುಂಬಯಿ, ೪ ಮೊಗವೀರ ಯುವಕ ಸಂಘ, ಮುಂಬಯಿ, ೫ ಶ್ರೀಮದ್ಭಾರತ ಮಂಡಳಿ ಮುಂಬಯಿ ಈ ಪಂಚ ಸಂಸ್ಥೆಗಳನ್ನು ಸಮ್ಮಿಳನಗೈದು ಮುಂದಕ್ಕೆ ಏಕ ಸಂಸ್ಥೆಯಾಗಿ ಏರ್ಪಡಿಸಿಕೊಳ್ಳಬೇಕೆಂತ ಬಹುಮತದಿಂದ ಮಂಜೂರು ಮಾಡಲಾಯ್ತು ಇದಕ್ಕೆ ಸಂಬಂಧಪಟ್ಟ ಆಯಾಯ ಸಂಸ್ಥೆಯವರು ತಂತಮ್ಮ ಸಂಸ್ಥೆಯ ಮೆಂಬರರ ಮಹಾ ಸಭೆಯನ್ನು ಜರಗಿಸಿ ನಿರ್ಣಯಗೈದು ಇದೇ ಬರುವ ಡಿಸೆಂಬ್ರ ತಿಂಗಳ ಅಂತ್ಯದೊಳಗಾಗಿ ಉತ್ತರ ಕೊಡುವಂತೆ ಆಯಾಯ ಸಂಸ್ಥೆಯವರಿಗೆ ಬರಹ ಮೂಲಕ ತಿಳಿಸಬೇಕೆಂತಲೂ ಆಕ್ಷೇಪ ವಿನಹ ಸರ್ವಾನುಮತದಿಂದ ನಿರ್ಣಯಿಸಲ್ಪಟ್ಟಿತು.

ಸಂಸ್ಥೆಗೆ ಸಂಬಂಧ ಪಟ್ಟ ಮುಂಬಯಿಯಲ್ಲಿರುವ ಸರ್ವ ಗ್ರಾಮ (ಊರು) ಗಳವರಿಂದ ಪ್ರತ್ಯ ಪ್ರತ್ಯೇಕ ಆರಿಸಲ್ಪಟ್ಟು, ಸಮ್ಮತಿಯ ದಸ್ಕತು ನಿಶಿ ನಮೂದಿಸಲ್ಪಟ್ಟಿರವ ಪ್ರತಿನಿಧಿ ಸದಸ್ಯರನ್ನು ಸಂಸ್ಥೆಯ ಆಡಳಿತೆ ಕಮಿಟಿ ಮೆಂಬರರನ್ನಾಗಿ ಸರ್ವಾನುಮತದಿಂದ ಮಂಜೂರು ಮಾಡಲಾಯ್ತು. ಸದರೀ ಆಡಳಿತೆ ಕಮಿಟಿ ಸದಸ್ಯರು ಈ ತನಕ ಆರಿಸಿಕೊಡದೆ ಊರಿನವರ ಪ್ರತಿನಿಧಿ ಸದಸ್ಯರನ್ನು ಸೇರಿಸಿಕೊಂಡು ಮೊಗವೀರ ಸಮಾಜದ ಪ್ರತಿನಿಧಿಗಳಾಗಿ ಮಹಾಸಭೆಯ ಮತ್ತು ಸಭೆಯ ಭಂಡಾರದ ಸಂಪೂರ್ಣ ಆಡಳಿತೆಯ ಸರ್ವಾಧಿಕಾರವನ್ನು ಸ್ವತಂತ್ರತೆಯಿಂದಲೂ ತಮ್ಮೊಳಗಣ ಬಹುಮತ ಸಮ್ಮತಿಯ ನಿರ್ಧಾರದಿಂದಲೂ ನಿರ್ವಹಿಸುತ್ತಾ ಬರಬೇಕೆಂದು ನಿರ್ಧರಿಸಲ್ಪಟ್ಟಿತು.

ಧರ್ಮಾರ್ಥ ಬಹುಮಾನಗಳು



1—2—0ಗೆ!

--- ಯಾರಿಗೆ? ---

ರೂಪಾಯಿ 1-2-0 ಕೊಟ್ಟು 18 ಸೀಸೆ ಒಟ್ಟೊರೋಸ್ ಅಥವಾ 18 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

ಇನಾಮುಗಳ ವಿವರ:— 3 ಜಿಮ್ಮಿ ರಿಸ್ಟ್‌ವಾಚುಗಳು, 1 ರೈಲ್ವೆಟೈಮು ಡಮ್ಮಿ ಪಾಕೆಟ್ ವಾಚು, 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿ ಮಪ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡ್ ಗಿಲ್ಟ್ ಉಂಗುರ, ಆದಲ್ಲದೆ ಅದಿ ದೂರಕ್ಕೆ ಪ್ರಕಾಶಬೀರುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟೈಮ್‌ಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0 10 0. ಇಂದೇ ಆರ್ಡರು ಕೊಡಿರಿ.

EASTERN TRADING COY.,
Post Box No. 12204, CALCUTTA, (N. Y.)

ESTD. 1906

CANARA BANK
LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

SUKHA NIVAS

Court Road, UDIPI

(Opp:- TALUK OFFICE)

Modern Model! Homely Hotel!

HIGH CLASS SWEETS

AND

SAVERIES

Coffee, Tea, Cocoa, delicious & fragrant.

VERY NEAR TO GANDHI MAIDAN,
TALUK OFFICE, COURT & HIGH SCHOOLS

Our Building enjoys a magnificient site and rooms are well Ventilated and breezy.

THE ONLY PLACE FOR

FASHIONABLE ENTERTAINMENTS AND MEALS.

ORDERS FOR TEA-PARTIES ACCEPTED AT SHORT NOTICE

MODERATE CHARGES.

Prop:-H.Vasudeva Nayak & Bros

ಸುಖನಿವಾಸ ಉಡುಪಿ.

ಸುವ್ಯವಸ್ಥೆಯ ಮೇಲ್ವಿಚಾರಣೆ

ಉಚಿತವಾದ ಸುಖದ ತವರುಮನೆ

ನಿರ್ಮಲವಾದ ಊಟದ ಸಲಕರಣೆ

ವಾಯುಸೇವನೆಗೆ ಯೋಗ್ಯಯೋಜನೆ

ಸಕಲಜನ ಮನರಂಜನೆಯ ಸಂಯೋಜನೆ

ಈ ಅನುಕೂಲತೆಗಳಿರುವುದರಿಂದ ವಿದ್ಯಾರ್ಥಿಗಳಿಗೂ
ಉದ್ಯೋಗಸ್ಥರಿಗೂ ಪ್ರಯಾಣಿಕರಿಗೂ ಯೋಗ್ಯವಾದ ಹೋಟೆಲೆಂದರೆ

ಸುಖನಿವಾಸವೊಂದೇ.

ಕಾಫಿಗೆ, ತಿಂಡಿಗೆ, ಭೋಜನಕ್ಕೆ, ಉಳಕೊಳ್ಳಲಿಕ್ಕೆ
ನಕ್ಕು ನಲಿಯಲಿಕ್ಕೆ, ಸುಖನಿವಾಸಕ್ಕೆ,

ಸುಖನಿವಾಸವೊಂದೇ

ಜ್ಞಾಪಕದಲ್ಲಿಡಲು ಯೋಗ್ಯವಾಗಿದೆ.

ಸುಖನಿವಾಸವು ಕೋರ್ಟು ಕಚೇರಿಗಳಿಗೂ
ಹೈಸ್ಕೂಲುಗಳಿಗೂ ಮಧ್ಯರಂಗದಲ್ಲಿದ್ದು
ಅತ್ಯಾಧುನಿಕ ಅನುಕೂಲತೆಗಳಿಂದ ಒಡಗೂಡಿದೆ.
ಸರಿಯಾಗಿ ಗಾಳಿಬೆಳಕುಳ್ಳ ಕೋಣೆಗಳು!

ಟೀಪಾರ್ಟಿಯ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಸುಖನಿವಾಸದ ಭೋಜನ / ಕಾಫಿ, ತಿಂಡಿ ಮನೋವಿಕಾಸದ ಮೂಲ.

ವ್ಯವಸ್ಥಾಪಕರು:—
ಎಚ್. ವಾಸುದೇವ ನಾಯಕ್, ಎಂಡ್ ಬ್ರದರ್ಸ್.

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ!　　ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!!

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳೆಲ್ಲದರಲ್ಲೂ ಸಾವಿರಗಟ್ಲೆ ಇದ್ದಾಗ್ಯೂ

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ!

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅತ್ಯಾವಶ್ಯಕವಾದುದು.

ಈ ಪುಸ್ತಕವನ್ನು ಓದಬೇಕು!　　**ಮನೋನೈಶಾಲ್ಯವನ್ನು ಪಡೆಯಬೇಕು!**

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು　　ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕ

ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು　　ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು

ಅವರಿಗೆ ಇವರಿಗೆ ಎನ್ನುವುದೇನು? ಎಲ್ಲರಿಗೂ ಬೇಕು.

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ.

ಉತ್ತಮವಾದ ಹೊಳಪು ಕಾಗದ,　　೩೦೦ ಪುಟಗಳು.

ಬೆಲೆ ರೂ. ೧—೮—೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು.

ಮೈಸೂರಿನಲ್ಲಿ ಲ್ಯಾನ್ಸ್ ಡೌನ್, ಬಜಾರ್, ಸ್ಟ್ರೀಟ್ ಮಾರ್ಟನಲ್ಲಿ, ಮಂಗಳೂರಲ್ಲಿ ಸ್ಕೂಲ್‌ಬುಕ್ ಕಂಪೆನಿಯಲ್ಲಿ ದೊರಕುತ್ತದೆ

ಟಾಗೂರ್ ಅಂಡ್ ಕೋ, (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ.

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಕ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಿಬೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತಿವೆ? ಅಲ್ಲಿನ ವೇಶ್ಯೆಯರು ಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡೆವಳಿಗಳಾವುವು? ಅಲ್ಲಿನ ವೇಶ್ಯಾವಾಟಗಳು, ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ನೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳ ಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ.

ಅನೇಕ ವೇಶ್ಯೆಯರ ಜೀವನ ಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ. ಮೆದುಳಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಲೇಂಡ್ ಮಾರ್ಟ್‍ಗೇಜ್ ಬೇಂಕಿನ ಸಂಬಂಧ ವಿಚಾರಣೆ

ಈ ದಿನ ನಗರದ ಕೋಆಪರೇಟಿವ್ ಸೊಸೈಟಿ ಕಟ್ಟಡದಲ್ಲಿ ಲೇಂಡ್ ಮೋರ್ಟ್‍ಗೇಜ್ ಬೇಂಕಿನ ಸಂಬಂಧವಾದ ವಿಚಾರಣೆಯು ಶ್ರೀ. ಜಿ. ಎ. ರಾಮಲಿಂಗಂ ಚೆಟ್ಟಿಯಾರ್ ಅವರ್ಗಳ್ ಯಂ. ಎಲ್. ಸಿ. ಮತ್ತು ವಿಚಾರಣಾ ಸಮಿತಿಯ ಏಕೈಕ ಸದಸ್ಯರಿಂದ ನಡೆಸಲ್ಪಡುವುದು.

ಸತ್ಕಾರ

ಶ್ರೀಮತಿ ಕಮಲಾದೇವಿಯವರು ತಮ್ಮ ಗೃಹವಾದ "ಧಾರೇಶ್ವರ ಗಾರ್ಡನ್ಸ್"ನಲ್ಲಿ ಶ್ರೀ ಟಿ. ಎ. ರಾಮಲಿಂಗಂ ಚೆಟ್ಟಿಯಾರ್ ಯಂ ಎಲ್. ಸಿ. ಯವರ ಗೌರವಾರ್ಥವಾಗಿ ಈ ದಿನ ಸಾಯಂಕಾಲ (ತಾ. ೧೪-೬-೩೭) ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ನಗರದ ಅನೇಕ ಪ್ರಮುಖರಿಗೆ ಆಮಂತ್ರಣವಿತ್ತು.

ಪ್ರೊ. ಎಸ್. ಜಿ. ರಂಗರು ಬರುವರು

ಕೇಂದ್ರನ್ಯಾಯ ವಿಧಾಯಕ ಸಭೆಯ ಸದಸ್ಯರಾದ ಮತ್ತು ಅಖಿಲಭಾರತ ರೈತಸಂಘ(ಕಿಸಾನ್)ದ ಅಧ್ಯಕ್ಷರಾದ ಪ್ರೊ. ಎಸ್ ಜಿ. ರಂಗ ಇವರು, ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರ ಆಶ್ರಯದಲ್ಲಿ ಕರ್ನಾಟಕದಲ್ಲಿ ಇದೇ ತಾ. ೧೭ರಿಂದ ೩೩ರ ವರೆಗೆ ಪ್ರವಾಸ ಮಾಡಲಿರುವರು. ತಾ ೧೭ರಂದು ಮಂಗಳೂರಿಗೆ ಬಂದು ಮೂರು ದಿವಸ ಈ ಜಿಲ್ಲೆಯಲ್ಲಿ ಪ್ರವಾಸಮಾಡಿ ತಾ. ೧೯ಕ್ಕೆ ಕುಂದಾಪುರ ಮಾರ್ಗವಾಗಿ ಉತ್ತರ ಕನ್ನಡಕ್ಕೆ ತೆರಳುವವರಾಗಿರುವರು, ಎಂದು ಕ. ಪ್ರಾಂ. ಕಾ ಕಮಿಟಿಯ ಕಾರ್ಯದರ್ಶಿಗಳ ಪರವಾಗಿ ಶ್ರೀಮತಿ ಕಮಲಾದೇವಿಯವರು ತಿಳಿಸುತ್ತಾರೆ.

ಪ್ರಿನ್ಸಿಪಲ್ ಮತ್ತು ಎಡಿಶನಲ್ ಮುನ್ಸೀಫರು

ಶ್ರೀ. ಎ. ಯಂ. ಎಸ್. ಟಾಗಟ್‍ರವರು ಕಳೆದ ತಾ. ೧೦ರಲ್ಲಿ ಇಲ್ಲಿಯ ಪ್ರಿನ್ಸಿಪಲ್ ಮುನ್ಸೀಫರಾಗಿಯೂ ಶ್ರೀ. ಎಸ್. ನರಸಿಂಹಲುರವರು ಇಲ್ಲಿಯ ಎಡಿಶನಲ್ ಮುನ್ಸೀಫರಾಗಿಯೂ ತಮ್ಮ ಚಾರ್ಜುಗಳನ್ನು ವಹಿಸಿದರು. ಬರುವ ದಶಂಬರ ತಿಂಗಳ ರಜಾ ಕಾಲದ ವರೆಗೆ ಈ ಎಡಿಶನಲ್ ಮುನ್ಸೀಫ್ ಹುದ್ದೆಯನ್ನು ಸರಕಾರದವರು ಮಂಜೂರು ಮಾಡಿದ್ದಾರೆಂದು ತಿಳಿದು ಬರುತ್ತದೆ

ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜರಾದ ಮತ್ತು ಈಗ ರಜೆಯ ಮೇಲಿರುವ ಮಿರಾ' ಅಮೀರುದ್ದೀನ್ ಸಾಹೇಬ್ ಬಹದ್ದೂರರವರ ಸ್ಥಾನದಲ್ಲಿ ಶ್ರೀಮಾನ್ ಯಂ. ವೆಂಕಟರಾಮಯ್ಯ ಬಿ. ಎ. ಬಿ. ಎಲ್ ರವರು ಹಂಗಾಮಿ ಜಿಲ್ಲಾ ಮತ್ತು ಸೆಶ್ಶನ್ ಜಡ್ಜರಾಗಿ ನೇಮಿಸಲ್ಪಟ್ಟು ಅವರು ಕಳೆದ ತಾ. ೫-೬-೩೭ರಲ್ಲಿ ತಮ್ಮ ಹುದ್ದೆಯನ್ನು ವಹಿಸಿಕೊಂಡರು

ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆ ಕಾಂಗ್ರೆಸು ಲೋಕಲ್ ಬೋರ್ಡು ಚುನಾವಣೆಯಲ್ಲಿ ಸ್ಪರ್ಧಿಸುವುದು ಮಂಗಳೂರು ಟೌನು ಕಾಂಗ್ರೆಸ್ ಕಮಿಟಿಗೆ ಮ್ಯು. ಚುನಾವಣೆಯಲ್ಲಿ ಸ್ಪರ್ಧಿಸಲು ಅನುಮತಿ ದೊರೆಯಿತು

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾ ಸಭೆಯೊಂದು ಕಳೆದ ತಾ ೧೨ನೇ ಶನಿವಾರ ಸಾಯಂಕಾಲ ೬ ಘಂಟೆಗೆ ಕಾಂಗ್ರೆಸ್ ಭವನದಲ್ಲಿ ಸೇರಿತು. ಅಧ್ಯಕ್ಷರ ಗೈರ್ ಹಾಜರಿಯಲ್ಲಿ ಮತ್ತು ಉಪಾಧ್ಯಕ್ಷರಾದ ಡಾ| ವಿಟ್ಠಲ ಶೆಟ್ಟಿಯವರು ತಮ್ಮ ಜಿ. ಕಾ. ಉಪಾಧ್ಯಕ್ಷ ಪದವಿಗೆ ರಾಜಿನಾಮೆ ಕೊಟ್ಟ ಕಾರಣ ಶ್ರೀ ಕೆ. ಆರ್. ಕಾರಂತರನ್ನು ಅಧ್ಯಕ್ಷಸ್ಥಾನ ವಹಿಸಬೇಕೆಂದು ಪ್ರಾರ್ಥಿಸಲಾಯಿತು. ಅಧ್ಯಕ್ಷರು ಮೊದಲು ಡಾ| ಶೆಟ್ಟಿಯವರ ರಾಜಿನಾಮೆ ಪತ್ರವನ್ನು ಓದಿಸಿದರು ಮತ್ತು ಅದನ್ನು ರಿಕಾರ್ಡು ಮಾಡಲ್ಪಟ್ಟಿತು. ನಗರ ಕಾಂಗ್ರೆಸ್ ಸಮಿತಿಯವರು ಬರುವ ಮ್ಯುನಿಸಿಪಲ್ ಚುನಾವಣೆಯಲ್ಲಿ ಸ್ಪರ್ಧಿಸಲು ತಮಗೆ ಜಿ. ಕಾ. ಸಮಿತಿಯವರು ಅನುಮತಿ ಕೊಡಬೇಕೆಂದು ಬರೆದ ಪತ್ರವು ಸಭೆಯ ಮುಂದಿರಿಸಲಾಯಿತು. ಮಂಗಳೂರಲ್ಲಿ ಕಾಂಗ್ರೆಸ್ ನಿಷ್ಠೆಯು ತುಂಬಾ ಇದೆ. ಈಗಿನ ನಗರ ಸಭಾ ಸದಸ್ಯರಲ್ಲಿ ಕಾಂಗ್ರೆಸ್ ಭಕ್ತರೇ ಹೆಚ್ಚಾಗಿರುವರು ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಎಷ್ಟು ಬೆಂಬಲವಿದೆಯೆಂಬುದು ಗೊತ್ತಾಗಿದೆ ಈಗ ನಗರ ಸಭೆಯ ಚುನಾವಣೆಗೆ ಸ್ಪರ್ಧಿಸಿದರೆ ಕಾಂಗ್ರೆಸ್ ಕಡೆಯ ಉಮೇದ್ವಾರರನ್ನು ಆರಿಸಲು ಕಷ್ಟವಾಗಿ ಕಾಂಗ್ರೆಸ್ ಸದಸ್ಯರಲ್ಲಿ ಪರಸ್ಪರ ವೈಷಮ್ಯವುಂಟಾಗಿ ಈಗಿರುವ ಒಕ್ಕಟ್ಟು ನಾಶವಾಗಬಹುದು. ಆದಕಾರಣ ಮ್ಯುನಿಸಿಪಲ್ ಚುನಾವಣೆಗೆ ನಿಲ್ಲುವುದು ಬೇಡವೆಂಬ ಅಭಿಪ್ರಾಯದ ಒಂದು ಠರಾವನ್ನು ಶ್ರೀ| ದಾಮೋದರ ಕಾಮತರು ತಂದರು. ಅದು ಅನುಮೋದಿಸಲ್ಪಟ್ಟಿತು. ಡಾ| ಕೆ. ವಿಟ್ಠಲ ಶೆಟ್ಟಿಯವರು ನಗರದಲ್ಲಿ ೩೨ ವಾರ್ಡುಗಳಿವೆ ಅವು ಬಹಳ ಸಣ್ಣ ಕ್ಷೇತ್ರಗಳು ಕಾಂಗ್ರೆಸ್ ಭಕ್ತರ ಸಂಖ್ಯೆಯು ಬಹಳ ಹೆಚ್ಚಾಗಿದೆ ಸುಮಾರು ನೂರಕ್ಕಿಂತಲೂ ಹೆಚ್ಚಾಗಿ ಕಾಂಗ್ರೆಸ್ ಉಮೇದ್ವಾರರು ಸ್ಪರ್ಧಿಸಲು ಮುಂದೆಬರಬಹುದು. ಅವರಲ್ಲಿ ಕೆಲವರನ್ನು ಆರಿಸತಕ್ಕದು ಬಹಳ ಕಷ್ಟವಾದ ಸಂಗತಿ, ಅದರಿಂದ ಪರಸ್ಪರ ಭೇದಭಾವವು ಹುಟ್ಟಬಹುದು. ಆದ ಕಾರಣ ಮ್ಯುನಿಸಿಪಾಲಿಟಿಯ ಮಟ್ಟಿಗೆ ಕಾಂಗ್ರೆಸು ಸ್ಪರ್ಧಿಸುವುದು ಅಷ್ಟು ತೃಪ್ತಿಕರವಾಗಿ ನನಗೆ ಕಾಣುವುದಿಲ್ಲ. ಎಂದು ಅಭಿಪ್ರಾಯ ಪಟ್ಟು ಶ್ರೀ ಕಾಮತರ ಅಭಿಪ್ರಾಯವನ್ನು ಸಮರ್ಥಿಸಿದರು.

ಶ್ರೀ| ಕೆ. ಆರ್ ಆಚಾರ್ಯರು ಠರಾವಿಗೆ ವಿರೋಧ ಅಭಿಪ್ರಾಯವನ್ನು ಕೊಡುತ್ತಾ ಎರಡು ವಿಷಯಗಳನ್ನು ಸಭೆಯ ಮುಂದಿರಿಸಿದರು (೧) ಕಾಂಗ್ರೆಸ್ ಪಕ್ಷದವರು ಯಾವ ಲೋಕಲ್ ಬೋರ್ಡು ಚುನಾವಣೆಗೂ ನಿಲ್ಲುವುದಿಲ್ಲವೆಂದು ತೀರ್ಮಾನಿಸಿದರೆ ಆಗ ನಗರ ಸಭೆಯ ಚುನಾವಣೆಗೆ ನಿಲ್ಲಬೇಕೆಂದಿಲ್ಲ. ಜಿಲ್ಲಾ ಬೋರ್ಡಿನ ಚುನಾವಣೆಗೆ ನಿಂತು ನಗರ ಸಭೆಗೆ ನಿಲ್ಲದಿದ್ದರೆ ಅದು ಚೆನ್ನಾಗಿರುವುದಿಲ್ಲ. (೨) ಎರಡನೆಯದಾಗಿ ನಗರ ಕಾಂಗ್ರೆಸ್ ಸಮಿತಿಯವರು ಸ್ಪರ್ಧಿಸಬೇಕೆಂದು ನಿರ್ಧರಿಸಿದ್ದನ್ನು ನಿಲ್ಲಿಸಿ ಅದರ ತೀರ್ಮಾನವನ್ನು ರದ್ದು ಪಡಿಸುವುದು ಯುಕ್ತವಲ್ಲವೆಂದರು ಶ್ರೀ ಕೆ. ಕೆ. ಶೆಟ್ಟಿಯವರು ಶ್ರೀ ಆಚಾರ್ಯರ ಅಭಿಪ್ರಾಯವನ್ನು ಅನುಮೋದಿಸುತ್ತಾ ಹೀಗೆಂದರು ರಾಷ್ಟ್ರೀಯಭಾವನೆ ಮಂಗಳೂರು ನಗರದ ಜನರಲ್ಲಿ ಹೆಚ್ಚಾಗಿರುವುದರಿಂದ ಚುನಾವಣೆಯಲ್ಲಿ ಸ್ಪರ್ಧೆಗೆ ನಿಲ್ಲದಿರುವುದು ಅಥವಾ ಕಾಂಗ್ರೆಸ್ ಉಮೇದ್ವಾರರನ್ನು ನಿಲ್ಲಿಸಲು ಹಿಂಜರಿಯುವುದು ಸರಿಯಲ್ಲ. ಇಲ್ಲಿ ಆ ತತ್ವವನ್ನು ಒಪ್ಪಿದರೆ ಉಡುಪಿ ತಾಲೂಕಿನವರು ತಮ್ಮಲ್ಲಿ ರಾಷ್ಟ್ರೀಯ ಭಾವನೆಯಿದೆಯೆಂದು ಅಭಿಪ್ರಾಯಪಡುತ್ತಾ, ತಮ್ಮ ತಾಲೂಕಿನ ಮಟ್ಟಿಗೆ ಕಾಂಗ್ರೆಸ್ ಪಕ್ಷದವರು ಜಿಲ್ಲಾ ಬೋರ್ಡಿಗೆ ಉಮೇದ್ವಾರರನ್ನು ನಿಲ್ಲಿಸತಕ್ಕದು ಬೇಡವೆನ್ನಬಹುದು. ಅದಕ್ಕೆ ಕಾಂಗ್ರೆಸ್ ಒಪ್ಪುವುದೆ? ಒಪ್ಪಲಾರದು. ಹಾಗಾದ ಮೇಲೆ ಇಲ್ಲಿಯೂ ರಾಷ್ಟ್ರೀಯ ಭಾವನೆಯಿಂದ ಚುನಾವಣೆಗೆ ಸ್ಪರ್ಧಿಸುವುದಿಲ್ಲವೆನ್ನುವುದರಲ್ಲಿ ಹುರುಳಿಲ್ಲ ಒಂದೇ ಚುನಾವಣೆಯಲ್ಲಿ ಸ್ಪರ್ಧಿಸಬೇಕು, ಇಲ್ಲದಿದ್ದರೆ ರಾಷ್ಟ್ರಪಕ್ಷದಿಂದ ಯಾವ ಲೋಕಲ್ ಸಂಸ್ಥೆಗೂ ಉಮೇದ್ವಾರರನ್ನು ನಿಲ್ಲಿಸಕೂಡದು ಎಂದರು. ಕಾರ್ಕಳದ ಶ್ರೀ| ಪಿ. ವಿ ಉಪಾಧ್ಯಾಯರು ಶ್ರೀ ಕಾಮತರಿಗೆ ಉತ್ತರ ಕೊಡುತ್ತಾ ರಾಷ್ಟ್ರೀಯ ಭಾವನೆಯಿರುವುದರಿಂದಲೇ ಇಲ್ಲಿ ಇತರ ಪಕ್ಷದವರಿಗೆ ಒಂದು ಸ್ಥಾನವಾದರೂ ಸಿಕ್ಕದಂತೆ ಮಾಡುವುದು ಅಗತ್ಯ. ಯಾರು ಕಾಂಗ್ರೆಸ್ ಪಕ್ಷದ ಉಮೇದ್ವಾರರನ್ನು ಇದಿರಿಸುತ್ತಾರೋ (ಅವರು ಕಾಂಗ್ರೆಸ್ ಪಕ್ಷದವರೇ ಆಗಿರಲಿ) ಅವರು ನಿಜವಾದ ಕಾಂಗ್ರೆಸ್ ಭಕ್ತರಲ್ಲ. ಆದ್ದರಿಂದ ನಗರ ಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಭಾಗವಹಿಸಬೇಕೆಂದರು ಅಧ್ಯಕ್ಷರು ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಾ ಹೀಗೆಂದರು. ಕೆಲವರು ಕಾಂಗ್ರೆಸ್ ಪಕ್ಷದವರು ನಗರ ಸಭೆಯಲ್ಲಿದ್ದು ಅಲ್ಪಸ್ವಲ್ಪ ಕೆಲಸಮಾಡಿದ್ದಿರಬಹುದು, ಈಗ ಅನೇಕರು ಕಾಂಗ್ರೆಸ್ ಭಕ್ತರೂ ಆಗಿದ್ದಾರೆ ಆದರೆ, ನಿಜವಾಗಿ ಕಾಂಗ್ರೆಸಿನವರು ಯಾವ ಶಿಸ್ತಿನಿಂದಲೂ ಕೆಲಸ ಮಾಡಿಲ್ಲ. ನಗರದ ಅನೇಕ ಅಗತ್ಯವಾದ ಕಾರ್ಯಗಳು ಬಾಕಿ ಇವೆ ಅವುಗಳು ಫಲಕಾರಿಗಳಾಗಬೇಕಾದರೆ ಶಿಸ್ತಿನಿಂದ ನಡೆಯುವ ಒಂದು (ಕಾಂಗ್ರೆಸ್) ಪಕ್ಷವು ಅಗತ್ಯ ಅಲ್ಲದೆ, ಕಾಂಗ್ರೆಸಿನ ಹೆಸರಿನಿಂದ ಬಡವರಾದವರಿಗೂ ನಗರದ ಸೇವೆ ಮಾಡಲು ಅವಕಾಶವು ದೊರೆಯುವಂತಾಗಬೇಕು. ಇದುವರೆಗೆ ಹಣವಿದ್ದವರು ಹೆಚ್ಚಾಗಿ ವಕೀಲರು, ಇಲ್ಲವೇ ವೈದ್ಯರು ನಗರ ಸಭೆಗೆ ಸದಸ್ಯರಾಗಿ ಬಂದಿರುವರು. ಇತರರೂ ಬರಬೇಕಾದರೆ ಕಾಂಗ್ರೆಸ್ ಚುನಾವಣೆಗೆ ನಿಲ್ಲಬೇಕು. ಎಂದು ಸೂಚಿಸಿದರು ಶ್ರೀ| ಶ್ರೀನಿವಾಸ ಮಲ್ಯರು ಚುನಾವಣೆಯಾದ ಮೇಲೆ ಆರಿಸಿ ಬಂದವರಲ್ಲಿ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸಬಹುದೆಂದರು ಆದರೆ, ಹೆಚ್ಚಿನವರು ಈ ಅಭಿಪ್ರಾಯವನ್ನು ಅನುಮೋದಿಸಲಿಲ್ಲ. ಕೊನೆಗೆ ಶ್ರೀ| ಕಾಮತರ ಠರಾವಿನ ಮೇಲೆ ಮತಗಣನೆಯಾಗಿ ಅದು ಬಹುಮತವಿಲ್ಲದ್ದರಿಂದ ಬಿದ್ದು ಹೋಯಿತು. ಜಿಲ್ಲಾ ಬೋರ್ಡಿನ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರನ್ನು ನೇಮಿಸಬೇಕೆಂದು ಸರ್ವಾನುಮತಿಯಿಂದ ಠರಾವಾಯಿತಲ್ಲದೆ ಚುನಾವಣೆಯನ್ನು ಜಯಸ್ವಿಯಾಗಿ ನಡೆಸುವರೆ ಜಿಲ್ಲಾ ಕಾಂಗ್ರೆಸಿನ ಕಾರ್ಯಕಾರಿ ಮಂಡಲಿಯ ಸದಸ್ಯರೂ ಟೌನ್ ಕಮಿಟಿಯ ಮತ್ತು ಮಂಗಳೂರು ತಾಲೂಕು ಕಮಿಟಿಯ ಒಬ್ಬೊಬ್ಬ ಸದಸ್ಯನೂ ಇತರ ತಾಲೂಕುಗಳಿಂದ ಮೂರು ಮೂರು ಮಂದಿ ಸದಸ್ಯರೂ ಇರತಕ್ಕ ಒಂದು ಸಮಿತಿಯಾಗಬೇಕೆಂದಾಯಿತು. ಅಗತ್ಯವಿದ್ದಲ್ಲಿ ಕೆಲ ಸದಸ್ಯರನ್ನು ನೇಮಿಸುವ ಅಧಿಕಾರವು ಈ ಸಮಿತಿಗೆ ಕೊಡಲ್ಪಟ್ಟಿದೆ. ಗತ ವರ್ಷದ ಲೆಕ್ಕ ಪರಿಶೀಲನೆಯಾಗಿ ಸ್ವೀಕರಿಸಲ್ಪಟ್ಟಿತು. ಕಾಂಗ್ರೆಸ್ ಸಮಿತಿಯವರು ನೇಮಿಸಿದ ಆರ್ಗನೈಜರಿಂದ ಪ್ರತಿ ಹದಿನೈದು ದಿವಸಗಳಿಗೊಮ್ಮೆ ವರದಿಯನ್ನು ಪಡೆಯಬೇಕೆಂದಾಯಿತು! ಪಾರ್ಲಿಮೆಂಟರಿ ಕಮಿಟಿಯ ಲೆಕ್ಕ ಪತ್ರವನ್ನು ಜುಲೈ ಹದಿನೈದರೊಳಗೆ ಹಾಜರು ಪಡಿಸಬೇಕೆಂದಾಯಿತು! ಇನ್ನಿತರ ಕೆಲ ವಿಷಯಗಳ ಪರಿಶೀಲನೆಯಾಗಿ ಅವುಗಳ ಮೇಲೆ ತೀರ್ಮಾನಗಳಾದನಂತರದಲ್ಲಿ ಸಭಾಂತ್ಯವಾಯಿತು!

ಲೇಂಡ್ ರೆವಿನ್ಯು ರಿವಿಜನ್ ಕಮಿಟಿ

ದಿವಾನ ಬಹದ್ದೂರು ಬಿ ಮಹಾಬಲ ಹೆಗ್ಗಡೆಯವರು ಮೇಲಿನ ಸಮಿತಿಯಲ್ಲಿ ಭಾಗ ವಹಿಸುವುದಕ್ಕಾಗಿ ಈ ದಿನ (ತಾ ೧೪) ಉದಕ ಮಂಡಲಕ್ಕೆ ಹೊರಟು ಹೋದರೆಂದು ಯಾತ್ರಿ ವಾರ್ತೆ'

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಖರ್ಚು ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೆಜರ್, 'ನವಯುಗ'

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut
Car Street, Mangalore	Udipi, S India.	Charni Road, Bombay No 4

INSPECTORATE OFFICE AT:

1. Ottapalam, Malabar District. 2 Central Station Road, Trivandrum

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	...	...	Rs. 80,00,000
Life Funds Over	..	...	Rs 68,00,000
Premium Income Over		...	Rs 22,54,000
Interest Income	...	...	Rs. 3,16,000
Claims Paid ...	...	...	Rs. 5,75,000

Total Claims paid Over Rs. 38,50,000
Total Business in Force Over Rs. 4,4251.200,

TOTAL BUSINESS IN FORCE Rs. 4,42,51,200

The Canara Banking Corporation Udipi Ltd.

(Incorporated in British India)

Estd. 1906

ANNOUNCEMENT.

We have great pleasure to inform the public and our constituents that our name has been included in the Second Schedule of the Reserve Bank of India Act.

Issued & Subscribed Capital	Rs. 350000/-
Paid up Capital	Rs. 288950/-
Reserves	Rs. 363573/-
Deposits	Rs. 3740722/-
TOTAL RESOURCES EXCEED	HALF A CRORE.

V. R. Kamath, B. A., LL.B.
Mg. Manager.

ಉಡುಪಿ, ಗುರುವಾರ, ತಾ. ೧೭–೬–'೩೭

ಬಿಕ್ಕಟ್ಟು ನಿವಾರಿಸಲ್ಪಡುವುದೇ?

ಈಗಣ ಪರಿಸ್ಥಿತಿಯನ್ನು ನೋಡಿದರೆ ಕಾಂಗ್ರೆಸ್ ಪಕ್ಷೀಯರು ಮಂತ್ರಿಪದವಿ ಸ್ವೀಕರಿಸುವ ಕುರಿತು ಉಂಟಾಗಿರುವ ಬಿಕ್ಕಟ್ಟು ಇನ್ನು ಸ್ವಲ್ಪ ಸಮಯದಲ್ಲಿ ನಿವಾರಿಸಲ್ಪಡಬಹುದೆಂದು ತೋರುತ್ತದೆ. ಸರಕಾರವು ಕಾಂಗ್ರೆಸ್ಸಿನೊಡನೆ ರಾಜಿಮಾಡಿಕೊಳ್ಳಕೂಡದೆಂಬ ನಿರ್ಧಾರಕ್ಕೆ ಬಂದಿದ್ದರೆ ಇಷ್ಟರೊಳಗೇನೇ ವೈಸರಾಯರು ಆ ಸಂಬಂಧವಾಗಿ ನಿಶ್ಚಿತವಾದ ಯಾವುದಾದರೊಂದು ಹೇಳಿಕೆಯನ್ನೀಯುತ್ತಿದ್ದರು. ಅವರಿಗೂ ಇಂಡಿಯಾ ಸೆಕ್ರೆಟರಿಗಳಿಗೂ ಅಭಿಪ್ರಾಯ ಭೇದವುಂಟಾಗಿದೆ; ಅವರು ರಾಜೀನಾಮೆ ಕೊಡುವ ಪ್ರಶ್ನೆ ಕೂಡಾ ಹುಟ್ಟಿದೆಯೆಂದೆಲ್ಲಾ ವೈಸರಾಯರ ವಿಚಿತ್ರ ಮೌನದ ಕುರಿತು ನಾನಾ ಸುದ್ದಿಗಳು ಸುಳಿದಾಡುತ್ತಿದ್ದರೂ ಅವರು ಯಾವ ಅಭಿಪ್ರಾಯವನ್ನೂ ಇಷ್ಟರವರೆಗೆ ವ್ಯಕ್ತಪಡಿಸಿರುವುದಿಲ್ಲ. ಇದರಿಂದ, ಅವರು ಇಂಡಿಯಾ ಸೆಕ್ರೆಟರಿಗಳಂತೆ ಅವಸರದಿಂದ ಏನಾದರೊಂದು ಹೇಳಿ ಆ ಮೇಲೆ ಮುಂಚಿನ ಧೋರಣೆಯನ್ನೇ ಬಿಟ್ಟು ಬಹಳ ಸವಿಮಾತುಗಳನ್ನಾಡುವಂಥಾ ಹವ್ಯಾಸಕ್ಕೊಳಗಾಗದ ವಿಚಾರಶೀಲರೆಂಬುದು ಸಿದ್ಧವಾಗುತ್ತದೆ. ಕಾಂಗ್ರೆಸ್ಸಿನ ನಿಜವಾದ ಉದ್ದೇಶವೇನು? ಅದು ಎಷ್ಟರ ಮಟ್ಟಿಗೆ ಅಧಿಕಾರ ಸ್ವೀಕರಿಸುವ ಆತುರದಿಂದಿದೆ ಎಂಬುದನ್ನೆಲ್ಲಾ ಚೆನ್ನಾಗಿ ವಿಮರ್ಶಿಸುವ ಸಂದರ್ಭಗಳನ್ನು ಪಡಕೊಂಡು, ಅವಶ್ಯವಿದ್ದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಇನ್ನೊಂದು ಸಭೆಯವರೆಗೂ ಕಾದು ಆ ಮೇಲೆ ವೈಸರಾಯರು ತನ್ನ ಅಭಿಮತವನ್ನು ನಿರೂಪಿಸಬಹುದೆಂದೆಣಿಸಲಾಗಿದೆ. ಇಲ್ಲವಾದರೆ ಪ್ರಕೃತದ ಬಿಕ್ಕಟ್ಟನ್ನು ನಿವಾರಿಸುವ ಜವಾಬ್ದಾರಿಯನ್ನೆಲ್ಲಾ ಪ್ರಾಂತಿಕ ಗವರ್ನರರುಗಳಿಗೇನೇ ಬಿಟ್ಟು, ಬೇಗನೆ ಎಸೆಂಬ್ಲಿ ಸಭೆಯು ಕರೆಯಲ್ಪಟ್ಟು ಕಾಂಗ್ರೆಸು ಮತ್ತು ಸರಕಾರಕ್ಕೆ ರಾಜಿಯಾಗುವಂತಹ ಪರಿಸ್ಥಿತಿಯುಂಟಾಗಬಹುದೆಂದು ಊಹಿಸಬಹುದಾಗಿದೆ.

ಕಾಂಗ್ರೆಸಿನೊಡನೆ ಸಂಧಿಮಾಡುವ ಮನಸ್ಸಿಲ್ಲದಿದ್ದಲ್ಲಿ ಆರಂಭದಲ್ಲಿ ಅಷ್ಟೊಂದು ದರ್ಪ ತೋರಿಸಿದ ಲೋರ್ಡ್ ಜೆಟ್ಲೆಂಡರು ಆ ಮೇಲೀಗ ಬಹಳ ಉದಾರ ಧೋರಣೆವಹಿಸಿ ಮಧುರವಾಗಿ ಮಾತಾಡುತ್ತಿದ್ದಿಲ್ಲ. ಪ್ರಾಂತೀಯ ಗವರ್ನರರುಗಳು ಸಂದರ್ಭಗಳನ್ನು ಹುಡುಕಿಕೊಂಡು ಆಡಳಿತ ಜವಾಬ್ದಾರಿಯೆಲ್ಲಾ ಮಂತ್ರಿಗಳದ್ದು, ತಾವು ಸರ್ವ ಸಾಧಾರಣ ವಿದ್ಯಮಾನಗಳಲ್ಲಿ ಅದರಲ್ಲಿ ಕೈಹಾಕುವ ಹಾಗಿಲ್ಲೆಂದೆಲ್ಲಾ ಆಶ್ವಾಸನೆ ಕೊಡಲು ಆತುರಗೊಳ್ಳುತ್ತಿದ್ದಿಲ್ಲ. ಮಹಾತ್ಮಾ ಗಾಂಧಿ ಮತ್ತು ಶ್ರೀ| ಸಿ. ರಾಜಗೋಪಾಲಾಚಾರ್ಯರ ಹೇಳಿಕೆಗಳು, ಮಂತ್ರಿ ಪದವಿ ಸ್ವೀಕರಿಸುವ ಕಾಂಗ್ರೆಸ್ಸಿನ ಇಚ್ಛೆಯು ಅದೆಷ್ಟು ಯಥಾರ್ಥವಿರುವುದೆಂಬುದನ್ನು ವ್ಯಕ್ತಗೊಳಿಸುತ್ತವೆ. ಈಗಣ ವೈಷಮ್ಯದ ಒಂದೇ ಒಂದು ವಿಷಯವೆಂದರೆ ಮಂತ್ರಿಗಳಿಗೂ ಗವರ್ನರರಿಗೂ ಆಡಳಿತ ವಿಷಯದಲ್ಲಿ ಅನಿವಾರ್ಯವಾದ ಭಿನ್ನಾಭಿಪ್ರಾಯವುಂಟಾದರೆ ಗವರ್ನರರು ಮಂತ್ರಿಗಳಿಂದ ರಾಜೀನಾಮೆ ಕೇಳಬೇಕೇ ಹೊರತು ಮಂತ್ರಿಗಳು ತಾವಾಗಿ ರಾಜಿನಾಮೆ ಕೊಡಬೇಕಾಗುವಂತಾಗಬಾರದೆಂದು ಇದು ಅಷ್ಟೇನೂ ಪ್ರಾಮುಖ್ಯ ಸಂಗತಿಯಲ್ಲ. ಆ ಕುರಿತಾದ ಸ್ವಾತಂತ್ರ್ಯವನ್ನು ಗವರ್ನರರು ಮತ್ತು ಮಂತ್ರಿಮಂಡಲಿಗೇನೇ ಬಿಟ್ಟುಬಿಡುವುದುಚಿತವೆಂದು ಲೋರ್ಡ್ ಜೆಟ್ಲೆಂಡರ ಅಭಿಪ್ರಾಯ. ಆದರೆ ಕಾಂಗ್ರೆಸ್ಸಿನವರಿಗೆ ಈ ವಿಷಯವು ಪ್ರಾಮುಖ್ಯವಾಗಿದೆ. ರಾಜಿನಾಮೆ ಕೇಳುವ ಜವಾಬ್ದಾರಿಯು ಗವರ್ನರದ್ದಾದರೆ ಅವರು ಹಾಗೆ ಮಾಡುವ ಮೊದಲು ಹತ್ತು ಸಲ ಆಲೋಚಿಸಿಕೊಳ್ಳುವರು. ಮತ್ತು ಪ್ರಜಾ ಜವಾಬ್ದಾರಿಗಳಾದ ಮಂತ್ರಿಗಳು ತಮಗೆ ತೋರಿದಂತೆ ಪ್ರಜಾಹಿತ ಸಾಧನೆಯ ಕೆಲಸ ಮಾಡುವಾಗ, ಅದರಿಂದ ಪ್ರಜೆಗಳಿಗೆ ಅಹಿತವಾಗುವುದೆಂದು ಗವರ್ನರರು ಭಾವಿಸಿದರೆ ಆಗ ಮಂತ್ರಿಗಳನ್ನು ತಳ್ಳಿಹಾಕುವ ಕೆಲಸವೂ ಜವಾಬ್ದಾರಿಯೂ ಗವರ್ನರರದ್ದಾಗಬೇಕಾದುದು ಸ್ವಾಭಾವಿಕವೆಂದೇ ಕಾಂಗ್ರೆಸಿನವರವಾದ ಕಾಂಗ್ರೆಸಿನವರೆಬ್ಬಿಸಿರುವವಾದವು ಅಷ್ಟೊಂದು ಅಪ್ರಾಮುಖ್ಯವೆಂದಾದರೆ ಆಳರಸರಿಗೆ ಅದಕ್ಕೊಪ್ಪಿಬಿಡುವುದಕ್ಕೇ ನಡ್ಡಿ? ಕಾಂಗ್ರೆಸ್ಸಿನೊಡನೆ ಸಂಧಿಮಾಡಿಕೊಂಡು, ಹಿಂದೀಯರ ನ್ಯಾಯವಾದ ಆಕಾಂಕ್ಷೆಗಳನ್ನು ಮನ್ನಿಸಿ ಹಿಂದು ದೇಶದ ರಾಜ್ಯಭಾರವನ್ನು ಸಸೂತ್ರವಾಗಿ ಶಾಂತಿಯಿಂದ ನಡಿಸಬೇಕೆಂಬ ಮನಸ್ಸು ಸರಕಾರಕ್ಕಿದ್ದರೆ ಅದೇಕೆ ಕಾಂಗ್ರೆಸ್ಸನ್ನು ತೃಪ್ತಿಪಡಿಸಬಾರದು? ಲೋರ್ಡ್ ಜೆಟ್ಲೆಂಡರು, ತಾನೇನೂ ಸಂಧಾನದ ದ್ವಾರವನ್ನು ಮುಚ್ಚಿಬಿಡಲಿಲ್ಲ; ಕಾಂಗ್ರೆಸ್ಸಿನವರು ಅಧಿಕಾರ ವಹಿಸಬೇಕೆಂದೇ ತನ್ನ ಯಥಾರ್ಥವಾದ ಇಚ್ಛೆ; ಹಾಗಾಗದಿರುವುದು ತನಗೆ ತೀವ್ರ ವಿಷಾದಕ್ಕೆ ಕಾರಣವೆಂದೆಲ್ಲಾ ಹೇಳಿರುವರು. ಇದು ಹೊರತು ಇಂಟೆರಿಮ್ ಮಂತ್ರಿಗಳೆನಿಸುವವರು, ತಮ್ಮ ದಿನವು ಇಂದೋ ನಾಳೆಯೋ ಎಂದು ಗೊತ್ತಿಲ್ಲ; ತಾವು ಯಾವಾಗಲೂ ಕಾಂಗ್ರೆಸ್ಸಿನವರಿಗೆ ಅಧಿಕಾರಬಿಟ್ಟು ಕೊಡಲು ಸಿದ್ಧರೆಂದೇ ರಾಗ ಎಳೆಯುತ್ತಿರುವುದರಿಂದ ಕಾಂಗ್ರೆಸ್ಸಿಗೂ ಸರಕಾರಕ್ಕೂ ಮಂತ್ರಿ ಪದವಿ ಸ್ವೀಕಾರದ ವಿಷಯದಲ್ಲಿ ಬೇಗನೆ ರಾಜಿಯಾಗಬಹುದೆಂದು ತೋರುತ್ತದೆ.

ರಾಜಿಮಾಡಿಕೊಳ್ಳದೆ ನಿರ್ವಾಹವಿಲ್ಲವೆಂಬ ಪರಿಸ್ಥಿತಿಯುಂಟಾಗಿರುವುದರಿಂದ ಸರಕಾರವು ಈಗ ಬಗ್ಗಿರುವುದು. ಕಾಂಗ್ರೆಸ್ಸಿನೊಳಗೆ ಒಡಕುಂಟಾಗಬಹುದೆಂಬ ಅವರ ಮತ್ತು ಇಂಟೆರಿಮ್ ಮಂತ್ರಿಗಳ ಆಶೆಯು ನಿರರ್ಥಕವಾಗಿರುವುದು. ಕಾಂಗ್ರೆಸ್ಸಿಗೆ ಜನತೆಯ ಸಂಪೂರ್ಣ ಬೆಂಬಲ ದೊರೆತಿರುವುದು. ಪ್ರಕೃತದ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸನ್ನವರು ಒಲಿಸಿಕೊಳ್ಳದಿದ್ದ ಪಕ್ಷದಲ್ಲಿ ಇಡೀ ಇಂಡಿಯಾ ಅಕ್ಷೇಪಣ್ಣುಗೂಡುವಂತಾಗುವುದು. ಅಂದ ಮೇಲೆ ಫೆಡರೇಶನಿಗೆ ಗತಿಯೇ ಇಲ್ಲವಾಗುವುದು. ಇದು ಹೊರತು ಕಾಂಗ್ರೆಸ್ಸಿನೊಳಗೆ ತೀವ್ರಗಾಮಿಗಳ ಕೈ ಮೇಲಾಗಿ ಪುನಃ ಏನಾದರೂ ಉಗ್ರ ಕಾರ್ಯಕ್ರಮ ಕೈಕೊಳ್ಳಲ್ಪಡುವುದು ನಿಶ್ಚಯ. ಆದುದರಿಂದ ಉಪಾಯವಿಲ್ಲದೆ ಸರಕಾರವು ಕಾಂಗ್ರೆಸ್ಸಿನೊಡನೆ ರಾಜಿಮಾಡಿಕೊಳ್ಳುವ ದಾರಿಗೆ ಬಂದಿರುವುದು. ಇನ್ನು ಕೆಲವು ದಿನಗಳಲ್ಲಿ ಸಂಪೂರ್ಣ ರಾಜಿಯಾಗಬಹುದು.

ಶಿಕ್ಷಿತ ನಿರುದ್ಯೋಗಿಗಳು

ಸರ್. ತೇಜಬಹದೂರು ಸಪ್ರುಗಳು ಲಂಡನಿನಲ್ಲಿ ಶಿಕ್ಷಿತ ನಿರುದ್ಯೋಗಿಗಳ ಸಮಸ್ಯೆಯ ಕುರಿತು ವಿಚಾರಪೂರ್ಣ ಭಾಷಣವಿತ್ತರು. ಈ ಸಂದರ್ಭದಲ್ಲಿವರು ಸಂಯುಕ್ತಪ್ರಾಂತದ ಶಿಕ್ಷಿತ ನಿರುದ್ಯೋಗ ನಿವಾರಣಾ ಕಮಿಟಿಯ ಅಧ್ಯಕ್ಷರಾಗಿ ಪಡೆದ ಅನುಭವವನ್ನು ವಿವರಿಸಿ ಹೇಳಿದರು. ವಿಶ್ವವಿದ್ಯಾಲಯದ ಪದವೀಧರರು ತಿಂಗಳಿಗೆ 11ರಿಂದ 15 ರೂಪಾಯಿಗಳ ವರೆಗೆ ಸಂಬಳ ದೊರೆಯುವ ಪೋಲೀಸ್ ಕಾನ್‌ಸ್ಟೆಬ್ಲ್ ಕೆಲಸ ಪಡೆಯಲು ಹಾತೊರೆಯುತ್ತಿರುವರು. ಕೋನಪುರದಲ್ಲಿ ತರುಣ ಪದವೀಧರರು ಬೀದಿಗಳಲ್ಲಿ ಹಾಲು ಮಾರುತ್ತಾ ಜೀವನ ನಿರ್ವಾಹಮಾಡುತ್ತಿರುವರು. ನೂರು ವಕೀಲರಲ್ಲಿ ಕೇವಲ 5 ಮಂದಿ ಮಾತ್ರ ಹಣಮಾಡುತ್ತಿರುವರು. ಉಳಿದ 95 ಮಂದಿ ಉಪವಾಸ ಬಿದ್ದು ಕೊಳೆಯಬೇಕಾಗಿರುವುದೆಂಬ ಹಲವು ಚಿತ್ತವೇಧಕ ಸಂಗತಿಗಳನ್ನು ಸರ್. ತೇಜರು ತಿಳಿಸಿ, ಪರಿಸ್ಥಿತಿಯು ಇದೇ ರೀತಿ ನಡೆದರೆ ಶಿಕ್ಷಿತ ತರುಣರೆಲ್ಲಾ ಕಮ್ಯೂನಿಷ್ಟರೋ ಕ್ರಾಂತಿಕಾರರೋ ಆಗಿ ಸರಕಾರಕ್ಕೂ ಸಮಾಜಕ್ಕೂ ದೊಡ್ಡ ಅಪಾಯವುಂಟಾಗದಿರದೆಂದು ಎಚ್ಚರಿಸಿದರು. ಹಿಂದು ದೇಶದಲ್ಲಿ ಮಾಡಲು ಕೆಲಸವಿಲ್ಲದೆ, ಉಣ್ಣಲು ಅನ್ನವಿಲ್ಲದೆ, ಉಡಲು ವಸ್ತ್ರವಿಲ್ಲದೆ ನರಳುತ್ತಿರುವ ನಿರುದ್ಯೋಗಿಗಳು ಮಿಲ್ಯಗಟ್ಲೆ ಇರುವರು. ಅವರಿಗದೊಂದು ಜನ್ಮಸಿದ್ಧ ರೋಗದಂತಾಗಿದೆ. ಆದರೆ ಶಿಕ್ಷಿತ ನಿರುದ್ಯೋಗತನವು ಬೆಲೆಕೊಟ್ಟು ಕೊಂಡುಕೊಳ್ಳುವಂಥಾದ್ದು. ವಿಶ್ವವಿದ್ಯಾಲಯದ ಪ್ರತಿಯೊಬ್ಬ ಪದವೀಧರನು ಮೂರು–ನಾಲ್ಕು ಸಹಸ್ರ ರೂಪಾಯಿ ಖರ್ಚು ಮಾಡಿ ವಿದ್ಯೆ ಸಂಪಾದಿಸಿ ಆ ಮೇಲೆ ನಿರುದ್ಯೋಗಿಯಾಗಿ ಅಲೆದಾಡಬೇಕಾಗುವುದು. ಪೋಲೀಸ್ ಕಾನ್‌ಸ್ಟೆಬ್ಲನಾಗಲು ಬೀದಿ ಬೀದಿ ಹಾಲು ಮಾರಲು ಬಿ. ಎ. ವರೆಗೆ ಕಲಿತು ಬರಬೇಕಾಗಿಲ್ಲ. ಆದರೆ ಈಗ ವಿದ್ಯಾಭ್ಯಾಸದ ಅವಸ್ಥೆ ಹಾಗಾಗಿದೆ. ಬಿ. ಎ., ವರೆಗೆ ಕಲಿತರೂ ಜೀವನ ನಿರ್ವಾಹ ಮಾಡಿಕೊಳ್ಳುವ ಉಪಾಯವೂ ಶಕ್ತಿಯೂ ಇಲ್ಲದಾಗಿದೆ. ನಮ್ಮ ತರುಣರಲ್ಲಿ ಇದಕ್ಕೆ ಈಗಣ ವಿದ್ಯಾಭ್ಯಾಸದ ದೋಷವೇ ಕಾರಣ. ಅದು ಸಂಪೂರ್ಣವಾಗಿ ಬದಲಾವಣೆ ಹೊಂದದೆ ಮತ್ತು ಈಗಿನ ಸಾಮಾಜಿಕ ಮತ್ತು ಸಾಂಪತ್ತಿಕ ಪರಿಸ್ಥಿತಿಯು ಮಾರ್ಪಡದೆ ನಮ್ಮ ಶಿಕ್ಷಿತ ತರುಣರ ಅವಸ್ಥೆಯು ಸುಧಾರಿತವಾಗಲಾರದು.

ಸರ್ದಾರ್ ವಲ್ಲಭಾಯಿಯವರ ಮೇಲೆ ಆರೋಪ

ಮಿ. ನರಿಮನರು ಬೊಂಬಾಯಿ ಪ್ರಾಂತದ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ನ್ಯಾಯವಾಗಿ ಆರಿಸಲ್ಪಡಬೇಕಿತ್ತು. ಕಾಂಗ್ರೆಸ್ ಪಕ್ಷದ ಎಸೆಂಬ್ಲಿ ಮೆಂಬರರು ಹಾಗೆಯೇ ಮಾಡುತ್ತಿದ್ದರು. ಆದರೆ ಮಿ. ನರಿಮನರು ತನ್ನ ಹಸ್ತಕರಾಗಿ ಕುಣಿಯುವವರಲ್ಲ, ಸ್ವತಂತ್ರವಾಗಿ ನಡೆಯುವವರೆಂಬುದರಿಂದ ಅವರನ್ನು ಮೂಲೆಗೊತ್ತುವಂತೆ ಸರ್ದಾರ್ ವಲ್ಲಭಾಯಿಯವರು ಸೂತ್ರಚಾಲನೆಮಾಡಿ ತನ್ನ ಕೈಗೊಂಬೆಯಂತಿರುವವರೂ ಅಜ್ಞಾತರೂ ಆದ ಶ್ರೀ. ಬಿ. ಜಿ. ಖೇರರನ್ನು ನಾಯಕಸ್ಥಾನಕ್ಕೆ ತಂದರೆಂಬ ಆರೋಪವು ಸರ್ದಾರರ ತಲೆಯ ಮೇಲೆ ಈಗ ಹೊರಿಸಲ್ಪಟ್ಟಿದೆ. ಈ ಸಂಬಂಧವಾಗಿ ಅವರು ಶ್ರೀ. ಗಂಗಾಧರರಾವ್ ದೇಶಪಾಂಡೆಯವರಿಗೂ, ಶ್ರೀ. ಶಂಕರರಾವ್ ದೇವರಿಗೂ ಬೊಂಬಾಯಿಗೆ ಬರಬೇಕೆಂದು ಕೊಟ್ಟ ತಂತಿಗಳ ಪ್ರತಿ ನಕಲು ಬೊಂಬಾಯಿಯ ಕೈಸರ್–ಇ–ಹಿಂದ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸರ್ದಾರ್ ವಲ್ಲಭಾಯಿಯವರ ಕುರಿತು ಬೊಂಬಾಯಿಯಲ್ಲಿ ತೀವ್ರ ವಿರೋಧವುಂಟಾಗಿದೆ. ಸರ್ದಾರರು ಈ ಸೂತ್ರಚಾಲನೆಮಾಡಿದ್ದು ನಿಜವೆಂದು ಸಿದ್ಧವಾದರೆ ಅವರು ಸುಳ್ಳು ಹೇಳಿಕೆಗಳನ್ನಿತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರನ್ನು ವಂಚಿಸಿದರೆಂದಾಗುವುದು. ಆದುದರಿಂದ ಈ ವಿಷಯದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ವಿಚಾರಣೆ ನಡಿಸತಕ್ಕದ್ದು.

ಕೇರಳ ಕರ್ನಾಟಕ ಗಡಿವಾದ

ಕಾಸರಗೋಡು ತಾಲೋಕಿನ ಕಾಞಂಗಾಡನ್ನು ಮಲಬಾರ್ ಪ್ರಾಂತಿಕ ಕಾಂಗ್ರೆ

ಸ್ ಕಮಿಟಿಯವರು ತಮ್ಮ ಪ್ರಾಂತಕ್ಕೆ ಸೇರಿಸಿಕೊಂಡು ಅಲ್ಲಿ ಕಾಂಗ್ರೆಸ್ ಮೆಂಬರರನ್ನು ಸೇರಿಸಿಕೊಳ್ಳುತ್ತಿರುವರೆಂದೂ, ಈ ಪ್ರಶ್ನೆಯು ಪ್ರಾಂತಿಕ ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಅವಗಾಹನೆಗೆ ತರಲ್ಪಟ್ಟು ಬಹಳ ಸಮಯವಾದರೂ ಇಷ್ಟರ ವರೆಗೆ ಯಾವ ಇತ್ಯರ್ಥವೂ ಆಗಿರುವುದಿಲ್ಲೆಂದೂ ತಿಳಿದುಬರುತ್ತದೆ. ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ನಿರೂಪಿಸಿರುವಂತೆ ಪ್ರಾಂತಗಳ ಗಡಿಯ ಕುರಿತು ಕಾಂಗ್ರೆಸು ಈ ವರೆಗೆ ಯಾವ ವಿಷಯವನ್ನೂ ನಿಶ್ಚೈಸಿರುವುದಿಲ್ಲ. ಆದುದರಿಂದ ಆ ಪ್ರಶ್ನೆಯನ್ನೆತ್ತಿ ಗೊಂದಲವುಂಟುಮಾಡುವುದರಿಂದ ಬಹಳ ತೊಂದರೆಗೆ ಕಾರಣವಾದೀತು. ಪ್ರಾಂತ ಪ್ರಾಂತಗಳೊಳಗೆ ದೊಡ್ಡ ಕಲಹವೆದ್ದೀತು. ಹೀಗಿರುವಾಗ ಈಗಣ ಪ್ರಾಂತ ವಿಭಾಗದಂತೆ ನಡೆಯುವುದು ಮೇಲು. ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ತಮ್ಮ ಅವಿವೇಕವನ್ನು ಮುಂದೊತ್ತದಂತೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ಕೂಡಲೆ ತಡೆಹಾಕತಕ್ಕದ್ದು. ಕಳೆದ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಈ ವಿಷಯವು ಚರ್ಚೆಗೆ ಬಂದಾಗ ಕಮಿಟಿಯ ಅಧ್ಯಕ್ಷರ ವರ್ತನೆಯ ಕುರಿತು ಕೆಲವು ಆರೋಪಣೆಗಳು ಮಾಡಲ್ಪಟ್ಟವು. ಇದರಿಂದ ಅವರು ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಅನುಕೂಲರಿರುವರೆಂದು ನಂಬುವಂತಾಗಿರುವುದು. ಆದುದರಿಂದ ಅವರು ಈ ಸಂಬಂಧವಾದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಸಂದೇಹ ನಿವಾರಣೆ ಮಾಡುವುದೊಳ್ಳೇದು.

ವಿದೇಶ

ಬಿಲ್ಬಾವೋ ಪಟ್ಟಣದ ಮೇಲೆ ಪ್ರಚಂಡಧಾಳಿ

ಅದರ ಪತನ ನಿಶ್ಚಯ

ಬಂಡಾಯಗಾರರು ತಮ್ಮ ಪ್ರಯತ್ನವನ್ನೆಲ್ಲಾ ಕೇಂದ್ರೀಕರಿಸಿ ಬಿಲ್ಬಾವೋ ಪಟ್ಟಣದ ಪ್ರಥಮ ಉಕ್ಕಿನ ಬೇಲಿಯನ್ನು ಮುರಿದಿರುವರು. ಎರಡು ಮೈಲುಗಳ ವಿಸ್ತೀರ್ಣದಲ್ಲಿ ಬಾಸ್ಕ್ ಸೈನಿಕರು ಹಿಂದಕ್ಕೆ ಟ್ಟಲ್ಪಟ್ಟಿರುವರು. ಬಂಡಾಯಗಾರರ ಈ ವಿಜಯವು ಪರಿಸ್ಥಿತಿಯನ್ನು ಸಂದಿಗ್ಧಗೊಳಿಸಿರುವದಾದರೂ ಇನ್ನೂ ನಿರಾಶೆಗೆ ಕಾರಣವಿಲ್ಲೆಂದು ಬಾಸ್ಕ್ ಸರಕಾರವೇ ಒಪ್ಪಿರುವುದು.

ಬಂಡಾಯಗಾರರ ಕಡೆಯ ಪಾತ್ರೆಯ ಮೇರೆಗೆ ಬಂಡಾಯಗಾರ ಸೈನಿಕರು ಎರಡು ಕಡೆ ಬಾಸ್ಕ್ ಸರಕಾರದ ಉಕ್ಕಿನ ಆವರ್ಣವನ್ನು ಮುರಿದು ಮುಂದೊತ್ತಿ ಬಿಲ್ಬಾವೋ ಪಟ್ಟಣವನ್ನು ಸಮೀಪಿಸಿರುವರು. ಬಿಲ್ಬಾವೋವನ್ನು ಬಂಡಾಯಗಾರರಿಗೆ ಬಿಟ್ಟುಕೊಡದೆ ನಿರ್ವಾಹವಿಲ್ಲೆಂದು ಬಾಸ್ಕ್ ಸರಕಾರದ ಮಂತ್ರಿ ಮಂಡಲವು ಅಭಿಪ್ರಾಯ ಪಟ್ಟಿರುವದೆಂದು ತಿಳಿದುಬರುತ್ತದೆ. ಬಾಸ್ಕರು 5 ಘಂಟೆಗಳ ವರೆಗೆ ಭೀಕರ ಹೋರಾಟ ನಡಿಸಿದರೂ ಪ್ರಯೋಜನವಾಗದುದರಿಂದ ಆ ಮೇಲೆ ಹಿಂದೆ ಸರಿದರು. ಅನಂತರ ಬಂಡಾಯಗಾರ ಸೈನಿಕರಿಗೆ ಯಾವ ವಿರೋಧವೂ ಇರಲಿಲ್ಲ. ತಾ. ೧೩ರಲ್ಲು ಒಂದೇ ದಿನದಲ್ಲಿ ಬಿಲ್ಬಾವೋ ಪಟ್ಟಣದ ಮೇಲೆ ೧೦,೦೦೦ ಬೋಂಬುಗಳು ಎಸೆಯಲ್ಪಟ್ಟದ್ದುವು.

ಬಾಸ್ಕ್ ಸರಕಾರದ ಪ್ರೆಸಿಡೆಂಟರಾದ ಆಗೀರೆಯವರು ಇಂಗ್ಲೆಂಡು, ಫ್ರಾನ್ಸು, ಅಮೇರಿಕ, ರಸ್ಯವೇ ಮೊದಲಾದ ಐಳ ರಾಷ್ಟ್ರಗಳ ಧೋರಣೆಯನ್ನು ಖಂಡಿಸಿ ಇಟೆಲಿ ಮತ್ತು ಜರ್ಮನಿಗಳು ಒಂದುಗೂಡಿ ಲೋಕದ ಅತಿ ಹಳೆಯ ಪ್ರಜಾಸತ್ತಾತ್ಮಕ ರಾಜ್ಯಭಾರವನ್ನು ನಾಶಮಾಡುವಾಗ ಈ ರಾಷ್ಟ್ರಗಳು ಪ್ರಜಾಸತ್ತೆಯ ಪ್ರತಿಪಾದಕವೆನಿಸಿ ಕೈಕಟ್ಟಿ ಕುಳಿತಿರುವುದು ಹೇಡಿತನವೆಂದು ಟೀಕಿಸಿರುವರು, ಇವರ ಹೇಳಿಕೆಯ ಮೇರೆಗೆ ಕಳೆದ 75 ದಿವಸಗಳಿಂದ ೧೦೦ಕ್ಕಿಂತಲೂ ಮಿಕ್ಕಿದ ಇಟೆಲಿಯಾನ ಮತ್ತು ಜರ್ಮನ್ ವಿಮಾನಗಳು ಬಾಸ್ಕ್ ಪ್ರಾಂತದ ಪಟ್ಟಣ ಮತ್ತು ಹಳ್ಳಿಗಳನ್ನು ನಾಶಮಾಡುವುದರಲ್ಲಿ ನಿರತವಾಗಿರುವವೆಂದು ತಿಳಿದುಬರುತ್ತದೆ!

ಸ್ವದೇಶ

ಆಲ್ವಾರ್ ಮಹಾರಾಜರ ಶವ

ವನ್ನು ಇದೇ ತಾ. ೧೨ರಲ್ಲು ಆಲ್ವಾರಿಗೆ ತಂದು ಶವಪೆಟ್ಟಿಗೆ ತೆರೆದಾಗ ಜನರು ಗೋಳೋ ಎಂದು ಅಳುತ್ತ 'ಪ್ರಭುಜೀಕೀ ಜೈ' ಎಂದು ಕೂಗಿದರು. ಸೈನಿಕರ ಗಾರ್ಡ್ ಆಫ್ ಓನರಿನ ನಂತರ ಶವವು ಸುಂದರವಾಗಿ ಆಲಂಕರಿಸಲ್ಪಟ್ಟ, ಮೋಟರು ಕಾರಿನಲ್ಲಿ ಅದನ್ನಿಟ್ಟು ಬೀದಿಗಳಲ್ಲೆಲ್ಲಾ ಮೆರವಣಿಗೆಯಿಂದೊಯ್ಯಲಾಯಿತು ಸಾವಿರಾರು ಸ್ತ್ರೀ ಪುರುಷರು ಮೋಟರಿನ ಹಿಂದಿನಿಂದ ಗೋಳಿಡುತ್ತಾ ಹೋಗುತ್ತಿದ್ದರು.

ಕೊಡಗು ಜಮೀನುದಾರರ ಪರಿಷತ್ತು

ಇದೇ ತಾ. ೫ರಲ್ಲಿ ಧಾರವಾಡದ ಶ್ರೀಮತಿ ಕೃಷ್ಣಾಬಾಯಿ ಪಂಜೀಕರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿಯವರು ಕೊಡಗು ಮತ್ತು ಕರ್ನಾಟಕದ ಏಕೀಕರಣ, ಕೊಡಗಿನವರು ಕಾಂಗ್ರೆಸಿನ ಕುರಿತು ತೋರಿಸಿರುವ ಸ್ಪಷ್ಟಮುಂದೆ ಮಾಡಬೇಕಾದ ಕರ್ತವ್ಯದ ಕುರಿತಲ್ಲು ಸ್ಫೂರ್ತಿದಾಯಕವಾದ ಭಾಷಣವಿತ್ತರು. ಕೊಡಗಿನ ವೀರರಾಜ ಪೇಟೆ, ಗೋಣಿಕೊಪ್ಪಲ ಮೊದಲಾದ ಸ್ಥಳಗಳಲ್ಲಿ ಸಂಚರಿಸಿ ಮೈಸೂರು ಬೆಂಗಳೂರುಗಳನ್ನೂ ಸಂದರ್ಶಿಸಿ ಭಾಷಣವಿತ್ತು ಜನಜಾಗ್ರತಿಯನ್ನುಂಟುಮಾಡಿರುವರು.

ಕಾಂಗ್ರೆಸ್ ಮಂತ್ರಿಮಂಡಲದ ಕುರಿತು ಭವಿಷ್ಯ

ಬರುವ ಅಗೋಸ್ತು ತಿಂಗಳ ೧ನೇ ತಾರೀಕಿಗೆ ಕಾಂಗ್ರೆಸ್ ಮಂತ್ರಿಮಂಡಲನ್ನೇರ್ಪಡಿಸುವುದೆಂದು ಉತ್ತರ ಹಿಂದೂಸ್ಥಾನದ ಸುಪ್ರಸಿದ್ಧ ಜೋತಿಷಿಗಳಾದ ಪಂಡಿತ ವಿಶ್ವನಾಥ ಶಾಸ್ತ್ರಿಗಳು ಭವಿಷ್ಯ ಹೇಳಿರುವರು

ಪ್ರಭಾತಾ ಫಿಲ್ಮ್ ಕಂಪೆನಿಯ ತುಕಾರಾಮ ಮತ್ತು ನ್ಯೂಥಿಯೇಟರಿನ ಪ್ರೆಸಿಡೆಂಟ್ ಹೀಗೆ ಎರಡು ಚಿತ್ರಗಳು ವೆನಿಸ್ ನಗರದಲ್ಲಿ ನಡೆಯಲಿರುವ ಅಂತರ ರಾಷ್ಟ್ರೀಯ ಚಲಚಿತ್ರಕಲಾಪ್ರದರ್ಶನಕ್ಕೆ ಕಳುಹಿಸಲ್ಪಡಲಿರುವವೆಂದು ತಿಳಿದು ಬರುತ್ತದೆ.

ಶ್ರೀ. ಕೆ. ಸಂಜೀವಕಾಮತರು ಸ್ಕೌಟ್ ಮೆಡಲು ತ್ಯಜಿಸಿದರು

ಸ್ಕೌಟ್ ಚಳವಳದ ಸ್ಥಾಪನಾಚಾರ್ಯರಾದ ಸರ್ ಬ್ಯಾಡನ್ ಪವೆಲರು ಹಿಂದೀಯರುಶೀಲಹೀನರೆಂಬರ್ಥದ ಅಭಿಪ್ರಾಯವಿತ್ತುದರಿಂದ ಹಿಂದೀಯ ಸ್ಕೌಟ್ ಚಳವಳವೇ ನಿರ್ನಾಮವಾಗುವಂತಾಗಿದೆ. ಚೀಫ್ ಸ್ಕೌಟರ ಈ ಅಭಿಪ್ರಾಯದಿಂದ ಹಿಂದೀಯರೆಲ್ಲಾ ರೇಗಿಬಿದ್ದಿದ್ದಾರೆ. ಮದ್ರಾಸ್ ಪ್ರಾಂತ್ಯದ ಸ್ಕೌಟ್ ಸಂಘದ ಪ್ರಾಂತಿಕ ಸೆಕ್ರೆಟರಿಗಳಾದ ಶ್ರೀ. ಕೆ. ಸಂಜೀವ ಕಾಮತರು ಸ್ಕೌಟ್ ಚಳವಳದ ಕುರಿತು ತಾನುಮಾಡಿದ ಕೆಲಸಕ್ಕಾಗಿ ತನಗೆ ದೊರೆತಿರುವ ಮೆಡಲನ್ನು ತ್ಯಜಿಸಿ ಬಿಟ್ಟಿರುವರು. ಮತ್ತು ತನ್ನ ಹುದ್ದೆಗೂ ರಾಜಿನಾಮೆ ಕೊಟ್ಟಿರುವರು.

ಉಡುಪಿ

ದಕ್ಷಿಣಕನ್ನಡಜಿಲ್ಲೆಗೊಂದು ಲೇಂಡ್ ಮಾರ್ಗೇಜ್ ಬೇಂಕನ್ನು ಸ್ಥಾಪಿಸುವ ವಿಚಾರದಲ್ಲಿ ಸ್ಥಳೀಯ ಪರಿಸ್ಥಿತಿಯನ್ನು ಪರಿಶೀಲಿಸುವ ಬಗ್ಗೆ ವಿಚಾರಣಾಕಮಿಟಿಯ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವ ಶ್ರೀ. ರಾಮಲಿಂಗಂ ಚೆಟ್ಟಿಯಾರ್ ಯಂ. ಯಲ್. ಸಿ, ಯವರು ವಿಚಾರಣಾ ಸಮಿತಿಯ ಸದಸ್ಯರಾದ ಶ್ರೀ. ಎ. ಶ್ರೀನಿವಾಸ ಪೈ ಮತ್ತು ದಿವಾನ್ ಬಹದೂರ್ ಯರು. ರಾಮರಾಯರೊಂದಿಗೆ ಕಳೆದ ಆದಿತ್ಯವಾರ ಮಧ್ಯಾಹ್ನ ಉಡುಪಿಗೆ ಬಂದರು. ಸಹಕಾರಿ ಸಂಘಗಳ ಡಿಪ್ಯುಟಿ ರಿಜಿಸ್ಟರ್ ಶ್ರೀ. ಕಣ್ಣನ್ ನಾಯರರೂ, ಶ್ರೀಮತಿ ಕಮಲಾದೇವಿಯವರೂ ಜತೆಯಲ್ಲಿದ್ದರು ಸ್ಥಳೀಯ ಕ್ರಿಶ್ಚಿಯನ್ ಹ್ಯಾಸ್ಕೂಲಿನ ಭವ್ಯಹಾಲಿನಲ್ಲಿ ಅಪರಾಹ್ಣ ಎರಡು ಘಂಟೆಗೆ ಸ್ಥಳೀಯ ಮುಖಂಡರ ಕೂಡೆ ಶ್ರೀ. ಚೆಟ್ಟಿಯಾರರು ಬ್ಯಾಂಕಿನ ಸ್ಥಾಪನೆಯ ಕುರಿತು ಹಲಕೆಲವು ಪ್ರಶ್ನೆಗಳನ್ನು ಕೇಳಿದರು. ಹಾಜರಿದ್ದ ಸ್ಪೆಶಲ್ ಲೋನ್ ಆಫೀಸರರು ತಮ್ಮ ಅನುಭವವನ್ನು ಅಂಕೆಸಂಖೆಗಳಿಂದ ತಿಳಿಸಿದರು. ನೆರೆದ ಅತಿಥಿಗಳಿಗೆ ವಕೀಲ್ ಕೆ. ಜೆ. ಬಲ್ಲಾಳರು ಟೀ ಪಾರ್ಟಿಯನ್ನಿತ್ತು ಸತ್ಕರಿಸಿದರು.

ಕುಂದಾಪುರ, ಕಾರ್ಕಳ ಮತ್ತು ಉಡುಪಿ ಜಮೀನ್ದಾರ್ ಪ್ರಮುಖರನ್ನು ಕಂಡು ಅನುಭವ ಪಡಕೊಳ್ಳಬೇಕೆಂದು ಶ್ರೀ. ಚೆಟ್ಟಿಯಾರರು ಬಂದುದಾದರೂ ಹಾಜರಿದ್ದುದು ಉಡುಪಿ ರಥ ರಿನ ಕೆಲವೇ ಮಂದಿ ಗೃಹಸ್ಥರು. ಇಂತಹ ವಿಷಾದಕರ ಅಲ್ಪ ಪ್ರಮಾಣದ ಹಾಜರಿಗೆ ಡಿಪಾರ್ಟ್‌ಮೆಂಟಿನವರು ಕಾರಣಭೂತರೆನ್ನಲೂ ಬಹುದು ಸಾಕ್ಷದುದಕ್ಕೆ ಆಮಂತ್ರಿತ ಗೃಹಸ್ಥರ ಆಸಕ್ತಿಯೆಸ್ನಲೂ ಬಹುದು. ಸಾರ್ವಜನಿಕರಿಗೆ ಸಂಬಂಧಪಟ್ಟ ಇಂತಹ ಮಹತ್ವ ಸಂಗತಿಯ ವಿಚಾರಣೆಯು ನಡೆಯುವುದೆಂದು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸದಿರಲು ಕಾರಣವಾದರೂ ಏನಿರಬಹುದು?

ನಗರ ಸಭೆ

ಉಡುಪಿ ಮುನಿಸಿಪಾಲಿಟಿಯ ಸಾಮಾನ್ಯ ಸಭೆಯೊಂದು ಕಳೆದ ತಾ. ೧೦ನೇ ಸಂಜೆ ೫ ತಾಸಿಗೆ ನಗರ ಸಭಾಭವನದಲ್ಲಿ ಕೂಡಿತು. ಚೆಯರ್‌ಮೇನ್ ಶ್ರೀ ಎಡ್ವೊಕೇಟ್ ಅರೂರು ಲಕ್ಷ್ಮೀನಾರಾಯಣ ರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ದ. ಕ. ಜಿಲ್ಲಾ ಬೋರ್ಡಿನ ಆದಳಿತಕ್ಕೊಳಪಟ್ಟ ಸ್ಥಳೀಯ ಬೋರ್ಡ್ ಹ್ಯಾಸ್ಕೂಲನ್ನು ಮುನಿಸಿಪಾಲಿಟಿಯು ವಶಕ್ಕೆ ಪಡಕೊಳ್ಳುವ ಕುರಿತು ಆಲೋಚಿಸುವರೆ ಜಿಲ್ಲಾ ಬೋರ್ಡಿನ ಹಾಗೂ ಮುನಿಸಿಪಾಲಿಟಿಯ ಕೆಲಸದಸ್ಯರ ಜಾಯಿಂಟ್ ಕಮಿಟಿಯ ನೇಮಕವಾಗಬೇಕೆಂದು ಶ್ರೀ. ವಾಮನ ಭಟ್ಟರು ರೆಸಲ್ಯೂಶನ್ ತಂದರು. ಮುನಿಸಿಪಾಲಿಟಿಯ ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಹ್ಯಾಸ್ಕೂಲನ್ನು ನಡಿಸುವುದು ಕಷ್ಟಸಾಧ್ಯವಾದುದು, ಜಿಲ್ಲಾಬೋರ್ಡಿನವರು ನಮಗೆ ಬಿಟ್ಟುಕೊಡಲು ಸಿದ್ಧರಿದ್ದಾಗ್ಗ್ಯೂ ನಾವುಸಿದ್ಧರಿರುವೆವೇ ಎಂಬುದನ್ನು ಚೆನ್ನಾಗಿ ಆಲೋಚಿಸತಕ್ಕದು, ನಗರವಾಸಿಗಳಿಂದ ನಾವು ವಸೂಲುಮಾಡುವ ತೆರಿಗೆಯು ಜಾಸ್ತಿಯೆಂದೇ ಜನರಾಡುತ್ತಿರುವಾಗ ಹ್ಯಾಸ್ಕೂಲನ್ನೂ ನಾವು ಸ್ವಾಧೀನಪಡಿಸಿಕೊಂಡರೆ ಇನ್ನಷ್ಟು ತೆರಿಗೆಯನ್ನು ಹೇರಿಸಬೇಕಾಗುವದು. ಆಗ ತೆರಿಗೆದಾರರು ಮತ್ತಷ್ಟು ರೇಗಲು ಕಾರಣವಾಗುವುದು. ಅಂದಬಳಿಕೆ ಪ್ರಕೃತ ಈ ವಿಷಯವನ್ನೆತ್ತುವುದು ಸರಿಯಲ್ಲವೆಂದಾಯಿತು. ಕೊನೆಗೆ ಈ ಠರಾವಿನ ಇತ್ಯರ್ಥದ ಬಗ್ಗೆ ಬಾಕಿಯಿಡಲಾಯಿತು. ಡಾಕ್ಟರ್ ಯು. ರಾಮರಾವ್ ಯಂ. ಯಲ್.ಸಿ.ಯವರು ಅಜ್ಜರಕಾಡಿನಲ್ಲಿ ತನ್ನ ಸ್ವಂತ ಸ್ಥಳದಲ್ಲಿ ಕಟ್ಟಿಸಿದ ಅರವಟ್ಟಿಗೆಯನ್ನು ದಾನವಾಗಿ ಕೊಟ್ಟುದುದನ್ನು ಧನ್ಯವಾದ ಪೂರ್ವಕವಾಗಿ ಸ್ವೀಕರಿಸಬೇಕೆಂದಾಯಿತು, ಕೊಚ್ಚಿಕಾರ್ ಬಂಧುಗಳು ದಾನವಾಗಿ ಕೊಡುವ ಎರಡು ಪೆಟ್ರೋಮೇಕ್ಸ್ ದೀಪಗಳನ್ನು ಯಾವ ಸೆಂಟರುಗಳಲ್ಲಿಡಬೇಕೆಂಬುವುದನ್ನು ಇತ್ಯರ್ಥಿಸುವರೆ ಸದರಿಯವರನ್ನೇ ತೀರ್ಮಾನಕ್ಕೆ ಬಿಡಲಾಯಿತು. ನಗರಾಡಳಿತವು ಗತವರುಷದಲ್ಲಿ ಸರ್ವಸಾಧಾರಣ ತೃಪ್ತಿಕರವಾಗಿತ್ತು ಎಂಬ ಸರಕಾರದ ವಿಮರ್ಶೆಯನ್ನು ರಿಕಾರ್ಡು ಮಾಡಲಾಯಿತು. ತಂತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ಅರಿತ ಕೌನ್ಸಿಲು ಸದಸ್ಯರು ರಾಜಕೀಯ ಭಾಷೆಯಾದ ಇಂಗ್ಲೀಷಿನಲ್ಲಾಗಲೀ ಯಾ ಸ್ಥಳೀಯ ಭಾಷೆಯಾದ ಕನ್ನಡದಲ್ಲಾಗಲೀ ನಾತುಕತೆಗಳನ್ನು ನಡಿಸುವುದು ಶ್ರೇಯಸ್ಕರವು. ಅಧಿಕೃತ ಪತ್ರಿಕಾಪ್ರತಿನಿಧಿಗಳಿಗೆ ನಗರ ಸಭೆಯ ನೋಟೀಸುಗಳನ್ನೂ ಕಾರ್ಯಕ್ರಮಗಳನ್ನು ಕಳುಹಿಸುವ ವ್ಯವಸ್ಥೆಯನ್ನು ಮಾಡಿರುವುದೇ. ಇಲ್ಲವಾದರೆ ಇನ್ನು ಮುಂದಕ್ಕಾದರೂ ತಕ್ಕವ್ಯವಸ್ಥೆಮಾಡಲಾಗುವುದೇ?

ಸಿನೇಮಾ

ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಕನ್ನಡ ಮಾತನಾಡುವ 'ಸಂಸಾರ ನೌಕ' ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು,

ತಾ| ೧೯ ಮತ್ತು ೨೦ರಲ್ಲಿ 'ಸಂಸಾರ ನೌಕ'ದ ಮೆಟನಿ ಪ್ರದರ್ಶನಗಳಿರುವವು-

ಇದೇ ತಾ. ೭೧ರಿಂದ ಸ್ಥಳೀಕ ಶ್ರೀ ರಾಮಕೃಷ್ಣ ಥಿಯೇಟರಿನವರು ಇಂಪೀರಿಯಲ್ ಕಂಪೆನಿಯ 'ಜಂಗಲ್ ಕ್ವೀನ್' ಅಥವಾ ವನರಾಣಿ'ಎಂಬ ಉಜ್ವಲಚಿತ್ರವನ್ನು ಪ್ರದರ್ಶಿಸುವರು ಇದರಲ್ಲಿ ಸುಲೋಚನಾ,ಬಿಲ್‌ಮೋರಿಯಾ ಮೊದಲಾದವರು ಅಭಿನಯಿಸುವರು-

ವರ್ಗಾವರ್ಗಿ

ನಮ್ಮ ಜಿಲ್ಲೆಯ ಡಿ. ಇ. ಓ. ಆಗಿದ್ದ ಶ್ರೀ| ಯು. ಕಣ್ಣಪ್ಪ, ಯಂ. ಎ ಯಲ್. ಟಿ. ಇವರು ಕೊಯಮುತ್ತೂರಿಗೆ ವರ್ಗಾಯಿಸಲ್ಪಟ್ಟು ಸದ್ರಿಯವರ ಸ್ಥಾನಕ್ಕೆ ತಂಜಾವೂರಿನ ಡಿ. ಇ. ಬಿ. ಗಳಾದ ಶ್ರೀ| ಕೆ| ವಿ| ರಾಮನ್ ಮೆನೋನ್, ಯಂ| ಎ| ಎಲ್| ಟಿ| ಇವರು ಬರಲಿರುವರಾಗಿ ತಿಳಿಯುತ್ತೇವೆ.

ಮಳೆ

ಕಳೆದ ಬುಧವಾರದಿಂದ ಮುಂಗಾರು ಮಳೆಯು ಆರಂಭವಾಗಿ ಈ ವರೆಗೂ ಎಡೆಬಿಡದೆ ಬರುತ್ತಿದೆ. ಬೇಸಾಯಗಾರರು ನಾಗುವಳ್ಳಿ ಕೆಲಸಕ್ಕಾರಂಭಿಸಿದ್ದಾರೆ. ಸಕಾಲದಲ್ಲಿ ಮಳೆಗಾರಂಭವಾಗಿದೆ ಎಂದು ಹೇಳಬಹುದು.

ಈಗ ತಾನೇ ಪುಸ್ತಕರೂಪದಲ್ಲಿ ಪ್ರಕಟವಾಗಿದೆ.

?

ಕೆ. ಕಾಂತಪ್ಪ ಶೆಟ್ಟಿಯವರಿಂದ ರಚಿತವಾದ

ಹೆಂಡ್ತಿ ಗಂಡನಾದರೆ?

ಹಿಂದು ಸಮಾಜದಲ್ಲೀಗ ಸರ್ವಸಾಮಾನ್ಯವಾಗಿ ಗಂಡನು ಹೆಂಡತಿಯಮೇಲೆ ನಿರಂಕುಶಾಧಿಕಾರ ನಡಿಸುತ್ತಾನೆ. ಹೆಂಡತಿಯು ಅದನ್ನು ಅಸಾಧಾರಣ ತಾಳ್ಮೆಯಿಂದ ಸಹಿಸಿಕೊಳ್ಳುತ್ತಾಳೆ ಗಂಡನಮೇಲೆ ಹೆಂಡತಿಯು ಅದೇರೀತಿ ಅಧಿಕಾರ ನಡಿಸುವಂತಾದರೆ ಗಂಡನಿಗದು ಅತಿ ಅಸಹನೀಯವಾಗುವುದು. ಇದಕ್ಕೇನುಕಾರಣ? ಪುರುಷರಕ್ತದಲ್ಲಿ ಮಿಶ್ರಿತವಾದ ಅದೊಂದು ಹೆಮ್ಮೆ! ಸ್ತ್ರೀಹೃದಯವಾದರೂ ಅಂತರಂಗದಲ್ಲಿ ಮೃದುವಾದುದು. ಅದರ ಅರಿವು ಉದ್ಧಟ ಪುರುಷಹೃದಯಕ್ಕಿಲ್ಲ. ಈ ಗುರಿಯಿಂದ ಬರೆಯಲ್ಪಟ್ಟ ಹಾಸ್ಯರಸ ಪ್ರಧಾನವಾದ ಏಕಾಂಕ ಪ್ರಹಸನ.

ಬೆಲೆ: ೦—೪—೦ ಮಾತ್ರ.

ಪ್ರತಿಗಳಿಗೆ ಇಂದೇ ಬರೆಯಿರಿ.

ಕಾರ್ಯದರ್ಶಿ "ಕಿರಿಯರ ಪ್ರಪಂಚ" ಉಡುಪಿ

ಅಥವಾ

ನವಭಾರತ ಬುಕ್ ಡಿಪ್ಪೊ,

ಚರ್ಚ್‌ರೋಡ್, ಉಡುಪಿ.

ದಕ್ಷಿಣ ಕನ್ನಡ

ಬೈಲೂರು ಸಂಯುಕ್ತ ಕಾಂಗ್ರೆಸ್ ಕಮಿಟಿ

ಇದರ ಸ್ಥಾಪನೆಗಾಗಿ, ಪಳ್ಳಿ, ನಿಂಜೂರು, ಕಣಜಾರು, ಕಪ್ಪದೂರು, ನೀರೆ, ಬೈಲೂರು, ಇರಲ್ಪಾಡಿ, ಈ ಏಳು ಗ್ರಾಮಗಳಿಂದ ಕಾಂಗ್ರೆಸ್ ಸದಸ್ಯರ ಪ್ರಚಂಡ ಸಭೆಯೊಂದು ಶ್ರೀಮಾನ್ ಪಿ ಯಸ್, ನಿಂಜೂರು, ಬಿ ಎ ಇವರ ಅಧ್ಯಕ್ಷತೆಯಲ್ಲಿ ತಾ ೧೩-೬ ೩೭ರಲ್ಲಿ ಜರಗಿತು ಅಧ್ಯಕ್ಷರು ಕಾರ್ಯಕಾರಿ ಮಂಡಳಿಯ ರಚನೆಯ ಕುರಿತು ಭಾಷಣಮಾಡಿದ ಮೇಲೆ ಒಂದೊಂದು ಗ್ರಾಮದಿಂದ ನಾಲ್ಕು ಮೆಂಬರರುಳ್ಳ ಕಾರ್ಯಕಾರಿ ಮಂಡಳಿಯು ನಿರ್ಮಾಣವಾಯಿತು ಅನಂತರ, ಶ್ರೀಮಾನ್ ಕೆ ಶ್ರೀನಿವಾಸ ಹೆಗ್ಡೆ, ಬೈಲೂರು ಇವರು ಸಂಯುಕ್ತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿಯೂ ಶ್ರೀ ಕೆ ಅನಂತಯ್ಯ ಶೆಟ್ಟಿ ಇವರು ಕೋಶಾಧಿಕಾರಿಗಳಾಗಿಯೂ ಶ್ರೀ ಕೇಶವ ಕಿಣಿ, ಶ್ರೀ ಸಂಜೀವ ಶೆಟ್ಟಿ ಮತ್ತು ಶ್ರೀ ಸಂಜೀವ ಹೆಗ್ಡೆ ಇವರು ಜನರಲ್ ಮತ್ತು ಸಹಾಯಕ ಕಾರ್ಯದರ್ಶಿಗಳಾಗಿಯೂ ಬಹುಮತದಿಂದ ಆರಿಸಲ್ಪಟ್ಟರು ಈ ಸಂಯುಕ್ತ ಕಾಂಗ್ರೆಸ್ ಕಮಿಟಿಗೆ ಗ್ರಾಮದ ಎಲ್ಲಾ ಜನರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳುವರೆ ಒಂದು ಸಬ್ ಕಮಿಟಿಯ ರಚನೆಯೂ ಆಯಿತು ಆ ಮೇಲೆ ಕಾರ್ಯಕಾರೀ ಮಂಡಳಿಯು ಮುಂದಿನ ಕಾರ್ಯಕಲಾಪಗಳ ಚರ್ಚೆ ನಡೆದು, ನಿರ್ಣಯವಾದ ಮೇಲೆ ಸಭೆಯು ಮುಕ್ತಾಯವಾಯಿತು

ಶ್ರೀ ವಿವೇಕಾನಂದ ಸೇವಾಸಂಘ

ಈ ಸಂಘದ ಮಹಾಸಭೆಯು ತಾ ೮-೬-೩೭ರಲ್ಲಿ ಪಿ ಯಸ್ ನಿಂಜೂರು, ಬಿ ಎ, ಇವರ ಅಧ್ಯಕ್ಷತೆಯಲ್ಲಿ ಜರಗಿ ಸಂಘದ ವಾರ್ಷಿಕ ಆದಾಯದ ಶೇಕಡ ಇಪ್ಪತ್ತು ಪಾಲ್ಯವನ್ನು ಸಂಘದ ಕಟ್ಟಡದ ಬಗ್ಗೆ ಬೇಂಕಿನಲ್ಲಿ ಡಿಪೋಜಿಟ್ ಇಡಬೇಕೆಂಬ ಠರಾವು ಸರ್ವಾನುಮತದಿಂದ ಮಂಜೂರಾಯಿತು ಬೈಲೂರು ಸಂಯುಕ್ತ ಕಾಂಗ್ರೆಸ್ ಕಮಿಟಿಗೆ ೧-೦-೦ ಉತ್ತಾರ ಕೊಡಲಾಯಿತು

ಮುದ್ರಾಡಿ

ಇಲ್ಲಿ ಇದೇ ತಾ ೨೫-೫-೩೭ನೇ ಸಂಜೆ ಘಂಟೆ ೪ಕ್ಕೆ ಗ್ರಾಮಕಾಂಗ್ರೆಸ್ ಸಭೆಯು ಯಮ್ ಮಾಧಿರಾಜ ಕಲ್ಕೂರರ ಅಧ್ಯಕ್ಷತೆಯಲ್ಲಿ ಸೇರಿತು ಮುದ್ರಾಡಿ ಕೃಷ್ಣಯ್ಯ ಶೆಟ್ಟರು ಕಳೆದ ವರ್ಷದ ವರದಿಯನ್ನು ಓದಿಹೇಳಿದ ತರುವಾಯ ಕಾಂಗ್ರೆಸ್ಸಿನ ಧ್ಯೇಯದ ಕುರಿತು ಕೆಲವು ಮಾತುಗಳನ್ನು ವಿವರಿಸಿ ಹೇಳಿದರು ಕಮಿಟಿಯ ಮೆಂಬರರುಗಳೆಲ್ಲಾ ಕೈನೂಲ (ಖದ್ದರ್) ಬಟ್ಟೆಯನ್ನೇ ಧರಿಸಬೇಕೆಂದು ಸದ್ರಿ ಕೃಷ್ಣಯ್ಯ ಶೆಟ್ಟರು ತಂದ ಸೂಚನೆಯು ಚರ್ಚಿಸಲ್ಪಟ್ಟು ಸರ್ವಸಮ್ಮತಿಯಿಂದ ಅಂಗೀಕೃತವಾಯಿತು

ತಿಂಗಳಿಗೆ ಎರಡರಂತೆ ತಪ್ಪದೇ ಸಭೆ ಜರಗಿಸಬೇಕೆಂದೂ ನಿರ್ಣಯಿಸಿ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಕೆದಿಂಜೆ

ಇಲ್ಲಿಯ 'ದಿ ಗಾಂಧಿಕ್ಲಬ್ಬಿ'ನ ೩ನೇ ವಾರ್ಷಿಕ ಸಭೆಯು ಇದೇ ತಾ ೩-೬-೩೭ರಲ್ಲಿ ಜರಗಿ, ಮ ರಾ ಕೆದಿಂಜೆ ದಾಸ ಹೆಗ್ಗಡೆಯವರನ್ನು ಅಧ್ಯಕ್ಷರನ್ನಾಗಿಯೂ, ಬೋಳರಾಜು ಶೆಟ್ಟರನ್ನು ಕಾರ್ಯದರ್ಶಿಗಳನ್ನಾಗಿಯೂ, ಮ ರಾ ಗಳಾದ ಬಿ ವಿಠಲ ಹೆಗ್ಗಡೆ, ಕೆ ಮುತ್ತಯ್ಯ ಹೆಗ್ಗಡೆ, ಬೋಳ ಶಂಭು ಶೆಟ್ಟಿ ಇವರನ್ನು ಕಮಿಟಿಯ ಸದಸ್ಯರನ್ನಾಗಿಯೂ ಆರಿಸಲಾಯಿತು

ಬ್ರಹ್ಮಾವರ

ಬ್ರಹ್ಮಾವರ ಸೆಂಟರಿನ ರೈತರ ಮಹಾಸಭೆಯೊಂದು ಇದೇ ತಾ ೮ನೇ ಮಂಗಳವಾರ ಸಂಜೆ ನಾಲ್ಕು ಗಂಟೆಗೆ ರಾ ಮೋನಪ್ಪ ಶೇರ್ವೆಗಾರರ ಅಧ್ಯಕ್ಷತೆಯಲ್ಲಿ ಜರಗಿ ರೈತರ ಕಷ್ಟ ನಷ್ಟಗಳ ಕುರಿತು ಚರ್ಚೆ ನಡೆದು ಪ್ರಾಮುಖ್ಯ ಠರಾವುಗಳು ಪಾಸಾದವು. ೧೯೦೫ರ ರಿಸೆಟ್ಲ್‌ಮೆಂಟನ್ನು ಒತ್ತಟ್ಟಿಗಿರಿಸಿ ೧೮೯೮ರ ಹಳೆ ಸೆಟ್ಲ್‌ಮೆಂಟಿನ ದರದಲ್ಲಿ ಶೇಕಡಾ ೪೦ರಂತೆ ಕಡಿಮೆ ಮಾಡುವರೆ ತಿದ್ದುಪಡಿಯಾಗಬೇಕೆಂದೂ, ಸ್ಪೈರಲ್ ಗ್ರೂಪ್ ಪದ್ಧತಿಯನ್ನು ರದ್ದುಮಾಡಿ ಜಿಲ್ಲೆಯ ಗ್ರಾಮಗಳನ್ನು ಹಳೆ ಸೆಟ್ಲ್‌ಮೆಂಟ್ ಪದ್ಧತಿಗನುಸಾರವಾಗಿ ಕಡಿಮೆ ದರದ ತರ್ವೆಯ ದೃಷ್ಟಿಯಿಂದ ವಿಂಗಡಿಸಬೇಕೆಂಬದೇ ಮೊದಲಾದ ನಿರ್ಣಯವಾದವು ಸ್ಥಳಾಭಾವದಿಂದ ವಿವರವನ್ನು ಪ್ರಕಟಿಸಲಾಗಲಿಲ್ಲ

ಕುಂದಾಪುರ ತಾಲೂಕಿನ ಹಳ್ಳಿಗಳಲ್ಲಿ ನರಭಕ್ಷಕನ ಪೀಡೆ!

ಬಡಜನರ ಪ್ರಾಣಹಿಂಸೆ

ಜನರಲ್ಲಿ ದಿಗಿಲು

ಕುಂದಾಪುರ ತಾಲೂಕು ಹಾಲಾಡಿ ಗ್ರಾಮದಲ್ಲಿ ತಾ ೨೦-೫-೩೭ನೇ ದಿನ ಹಗಲು ೩ ಗಂಟೆ ಸಮಯ ಕುಡುಬಿ ಜಾತಿಯ ತಂದೆ ಮಕ್ಕಳಿಬ್ಬರು ದರಳೆ ಗುಡಿಸುತ್ತಿರುವಾಗ, ದೊಡ್ಡ ಪಟ್ಟೆಹುಲಿಯೊಂದು ೨೦ ವರುಷ ಪ್ರಾಯದ ಮಗನನ್ನು ಕಚ್ಚಿಕೊಂಡು ಹೋಯಿತು ಇದನ್ನು ನೋಡಿ ತಂದೆಯು ಹುಲಿಯ ಬೆನ್ನಟ್ಟಲು, ಹುಲಿಯು ಗಾಬರಿಯಿಂದ ಸಿಕ್ಕಿದ ತುತ್ತನ್ನು ಅಲ್ಲೇ ಬಿಟ್ಟುಹೋಯಿತು ತಂದೆಯು ಬಂದು ನೋಡುವಾಗ ಮಗನಿಗೆ ಜೀವವಿರಲಿಲ್ಲ

ತಾ ೩೧-೫-೩೭ರಲ್ಲಿ ಅಲ್ಲೇ ಒಂದು ಮೈಲು ದೂರದ ಬಾಕಡಿ ಎಂಬಲ್ಲಿ ಸುಮಾರು ೧೨ ಗಂಟೆಯ ಸಮಯ ಆರೇಳು ಮಂದಿ ಕೂಡಿ ದರಳೆ ಗುಡಿಸುತ್ತಿರುವಾಗ ಸಿದ್ದಯ್ಯ ಶೆಟ್ಟಿ ಎಂಬವನನ್ನು ಕಚ್ಚಿಕೊಂಡುಹೋಗಿ, ದೇಹದ ಕೆಲವಂಶವನ್ನು ತಿಂದಿರುವುದು

ತಾ ೩-೬-೩೭ರಲ್ಲಿ ಕುಳ್ಳಂಜೆ ಸಮೀಪದ ಬರದಕಲ್ಲು ಎಂಬಲ್ಲಿ ಕೆಲವು ಜನರು ಕೂಡಿ, ಮಕ್ಕಿಗದ್ದೆಯಲ್ಲಿ ಕೆಲಸಮಾಡುತ್ತಿರುವಾಗ, ಹುಲಿಯು ಜನರ ಗುಂಪಿಗೆ ಹಾರಿ ಒಬ್ಬ ತರುಣನನ್ನು ಹಿಡಿದು ಗಾಯ ಪಡಿಸಿರುವುದು

ಕೆಲವು ದಿನಗಳ ಹಿಂದೆ ಕುಂದಾಪುರ ತಾಲೂಕಿನ ಕೊರ್ಗಿ ಮೊಳಹಳ್ಳಿ ಇತ್ಯಾದಿ ಕಡೆಗಳಲ್ಲೂ ಇದೇ ರೀತಿಯಲ್ಲಿ ನರಭಕ್ಷಕನು ನರಬೇಟೆಯಾಡಿರುವನು ಈಗಲೂ ಆಡುತ್ತಿರುವನು

ಇದರಿಂದ ಹೊಲಗದ್ದೆಗಳಲ್ಲಿ ದುಡಿಯುವವರೂ ಪ್ರಯಾಣಿಕರೂ ತಮ್ಮ ತಮ್ಮ ಜೀವದ ಆಸೆ ಬಿಟ್ಟೇ ಮನೆಯಿಂದ ಹೊರಡಬೇಕಾಗಿದೆ ಮಾನ್ಯ ಸರಕಾರವು ಈ ಕಡೆಗೆ ಗಮನ ಕೊಡುವುದಿಲ್ಲವೇಕೋ ತಿಳಿಯದು —ಹಳ್ಳಿಗ

ಮುಂದರ್ತಿ

ಹೆಗ್ಗುಂಜೆ ಗ್ರಾಮದ ಮೂಡುಕಡೆ ಕೊಕ್ಕರ್ಣೆಯಿಂದ ಸಂಡಾರಿಗೆ ಹೋಗುವ ರಸ್ತೆಯ ಸಮೀಪ ಗೋವೆಕೊಡ್ಲು ಎಂಬಲ್ಲಿ ಕುಡುಬಿ ಜಾತಿ ಬೆಳ್ಳಿಬಾಯಿ ಎಂಬ ಸುಮಾರು ೩೧ ವರುಷ ಪ್ರಾಯದ ಹೆಂಗುಸು ತಾ ೫-೬-೩೭ನೇ ದಿನ ಬೆಳಿಗ್ಗೆ ಮನೆ ಹತ್ತಿರ ಹಾಡಿಗೆ ದರ್ಲೆ ತರಲಿಕ್ಕೆ ಹೋಗಿದ್ದಳು ಗಂಟೆ ೧೧ ಆದರೂ ಮನೆಗೆ ಬರಲಿಲ್ಲ ಹುಡುಕಿ ನೋಡುವಾಗ ಮನೆಯ ಹತ್ತಿರ ಹಾಡಿಯಲ್ಲಿ ಶವ ಬಿದ್ದಿತ್ತು ಕುತ್ತಿಗೆಯಲ್ಲಿ ಹುಲಿಯ ಉಗುರುಗಳಿಂದಾದ ಗಾಯಗಳಿದ್ದವು ಬಲಕಾಲು ತೊಡೆಯ ವರೆಗೂ ಹರಿದು ತಿಂದಿತ್ತು ಆ ಹೆಂಗುಸು ಬಾಗಿಕೊಂಡು ಒಣ ಎಲೆಗಳನ್ನು ಎಳೆಯುವಾಗ ಹುಲಿ ಹಾರಿ ಹಿಡಿದು ಕೊಂದು ಎಳೆದುಕೊಂಡುಹೋಗಿ ತಿಂದಿರಬಹುದೆಂದು ಊಹಿಸಿ ಇಂಥಾ ನರಭಕ್ಷಕನ ಹಾವಳಿಯು ಈ ಪ್ರಾಂತ್ಯ ಹೆಚ್ಚಾಗುತ್ತಾ ಬರುತ್ತದೆ ಜನರು ಹಗಲಿನಲ್ಲಿ ಮನೆಬಿಟ್ಟು ಹೊರಗಿಳಿಯೋಕ್ಕೆ ಅಂಜುತ್ತಾರೆ

ಟೀಚರ್ಸ್ ಮೀಟಿಂಗ್, ಸುಳ್ಯ

ಸುಳ್ಯ ಸೆಂಟರಿನ ಎಲ್ಲಾ ಶಾಲೆಗಳ ಉಪಾಧ್ಯಾಯರ ಕೂಡುವಿಕೆಯಿಂದ ಇದೇ ತಿಂಗಳು ೧೨ನೇ ತಾರೀಕು ಶನಿವಾರ ದಿನ ಒಂದು ಸಭೆಯು ಸುಳ್ಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು ಎಂದಿನಂತೆ ಎಲ್ಲಾ ಕಾರ್ಯಕ್ರಮಗಳು ನೆರವೇರಿದ ಬಳಿಕ ಸಭೆ ಚದರಿತು

ನಗರ್ನವಗಿರಿ

ಇಲ್ಲಿಯ ಜನಪ್ರಿಯ ಅಬ್ಕಾರಿ ಸಬ್ ಇನ್ಸ್ಪೆಕ್ಟರ್ ಮ॥ ರಾ॥ ಪನಕ್ಕಲ್'ರವರಿಗೆ ಮಲಬಾರು ಜಿಲ್ಲೆಯ ಮಾನಂತೋಡಿ ಎಂಬಲ್ಲಿಗೆ ವರ್ಗವಾದುದರಿಂದ, ಊರ ಮಹನೀಯರೆಲ್ಲರೂ ಅವರನ್ನು ಬೀಳ್ಕೊಡುವ ಸಮಾರಂಭವನ್ನು ಇದೇ ತಾ ೧೩ರಲ್ಲಿ ಸುಳ್ಯ ಬೋರ್ಡ್ ಹಾಯರ್ ಶಾಲೆಯಲ್ಲಿ ಜರಗಿಸಿದರು ಬೀಳ್ಕೊಡುವ ಸಮಾರಂಭದೊಡನೆ, ಲಘು ಫಲಾಹಾರವೂ ಇತ್ತು

ಹಿರಿಯಡ್ಕ

ಇಲ್ಲಿಯ ಆರ್ಯಸಮಾಜದವರಿಂದ ತೆರೆಯಲ್ಪಟ್ಟ ಹಿಂದೀ ಕೇಂದ್ರದಿಂದ ಇದೇ ೧೯೩೭ನೇ ಇಸವಿಯ ಫೆಬ್ರವರಿ ತಿಂಗಳ ತಾರೀಕು ೧೪ರಲ್ಲಿ ಜರಗಿದ ಪರೀಕ್ಷೆಯಲ್ಲಿ ಪ್ರಾಥಮಿಕದಲ್ಲಿ ಕುಳಿತಿದ್ದ ಮೂರು ಮಂದಿಯೂ, ಮಾಧ್ಯಮಿಕದಲ್ಲಿ ಕುಳಿತಿದ್ದ ಮೂರು ಮಂದಿಯೂ ಉತ್ತೀರ್ಣರಾಗಿದ್ದು, ಸದರಿ ವಿದ್ಯಾರ್ಥಿಗಳಿಗೆ ಯೋಗ್ಯತಾಪತ್ರಗಳನ್ನು ಹಂಚುವರೆ ಇದೇ ತಾ ೧೨ನೇ ಶನಿವಾರ ಶ್ರೀಯುತ ಮಾಂಬೆಟ್ಟು ವಿಠ್ಠಲ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿಸಲ್ಪಟ್ಟಿತು ಭಗವತ್ಪ್ರಾರ್ಥನೆ, ಕೇಂದ್ರದ ವರದಿವಾಚನಗಳು ಮುಗಿದ ತರುವಾಯ ಶ್ರೀಯುತ ಕಟಪಾಡಿ ಶ್ರೀನಿವಾಸ ಶೆಣೈರವರು 'ಹಿಂದೀಯ ಆವಶ್ಯಕತೆ' ಎಂಬ ಕುರಿತು ಚತುರೋಕ್ತಿ ಭಾಷಣವಿತ್ತರು ಆ ಬಳಿಕ ಅಧ್ಯಕ್ಷರು ಯೋಗ್ಯತಾಪತ್ರಗಳನ್ನು ಹಂಚಿದರು ಸಭಿಕರು ತಮ್ಮ ತಮ್ಮ ಅಭಿಪ್ರಾಯವಿತ್ತರು ಅಧ್ಯಕ್ಷರು ತನ್ನ ಭಾಷಣದಿಂದ ಸಭಿಕರ ಮನಸ್ಸಂತೋಷಪಡಿಸಿದರು ಆದಾಗಿ ನೆರೆದ ಸದ್ಗೃಹಸ್ಥರೆಲ್ಲರಿಗೂ ಅಧ್ಯಕ್ಷರಿಗೂ ಧನ್ಯವಾದಗಳ ಸ್ವೀಕಾರವಾಗಿ ಸಭೆಯು ಮುಕ್ತಾಯವಾಯಿತು ಸಂಸ್ಕೃತ ಪ್ರಾಥಮಿಕ, ಮಾಧ್ಯಮಿಕ ಮತ್ತು ರಾಷ್ಟ್ರಭಾಷಾ ವರ್ಗದಲ್ಲಿ ಒಟ್ಟು ಹದಿಮೂರು ಮಂದಿ ಕಲಿಯುತ್ತಿರುವುದು ಸ್ತುತ್ಯ

ಬ್ರಹ್ಮಾವರ ಕಾಂಗ್ರೆಸ್ ಕಮಿಟಿ

ಇತ್ತೀಚೆಗೆ ಸ್ಥಾಪಿಸಿದ ಬ್ರಹ್ಮಾವರ ಕಾಂಗ್ರೆಸ್ ಕಮಿಟಿಯ ಪ್ರಥಮ ಮೀಟಿಂಗು ತಾ ೧೩-೬-೩೭ನೇ ಆದಿತ್ಯವಾರ ಸಾಯಂಕಾಲ ಘಂಟೆ ೫ಕ್ಕೆ ರಾಷ್ಟ್ರಭಾಷಾ ಸಂವರ್ಧಕ ಸಂಘದ ಮಾಳಿಗೆಯಲ್ಲಿ ಶ್ರೀಯುತ ಬಿ ಉಪೇಂದ್ರ ಭಟ್ಟರವರ ಅಧ್ಯಕ್ಷತೆಯಲ್ಲಿ ನಡೆಸೇರಿ ಶ್ರೀ ಬಿ ಅಂತೈ ಶೆಟ್ಟರು ತಂದ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಮಂಜೂರಾದವು

೧ ಕಮಿಟಿಯ ಎಲ್ಲಾ ಮೆಂಬರರು ಕೈನೂಲಿನ ಖಾದಿಯನ್ನೇ ಧರಿಸಬೇಕು ಗ್ರಾಮಗಳಲ್ಲಿ ಖಾದಿ ಪ್ರಚಾರವನ್ನು ಮಾಡಬೇಕು ೨ ಬ್ರಹ್ಮಾವರ ಕೇಂದ್ರಕ್ಕೆ ಸೇರಿದ ಎಂಟು ಗ್ರಾಮಗಳ ಪ್ರಾಯಸ್ಥರೆಲ್ಲರೂ ಜಾತಿ ಮತ ಭೇದವಿಲ್ಲದೆ ಕಾಂಗ್ರೆಸ್ ಮೆಂಬರರಾಗಿ ಸೇರಬೇಕು ೩ ಎಲ್ಲಾ ಮೆಂಬರರು ಅವಶ್ಯವಾಗಿ ಹಿಂದೀ ಭಾಷೆಯನ್ನು ಕಲಿಯಬೇಕು ೪ ಪ್ರಾಂತಿಕ ಭಾಷೆಯಾದ ಕನ್ನಡವನ್ನು ತುಂಬಾ ಗೌರವಿಸಬೇಕು ೫ ಸ್ವದೇಶೀ ಕೈಗಾರಿಕೆಗಳನ್ನು ತುಂಬಾ ಪ್ರೋತ್ಸಾಹಿಸಬೇಕು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ಸಿನ ಮುಂದಿನ ಕಾರ್ಯಕ್ರಮಗಳಲ್ಲಿ ಎಲ್ಲಾ ಮೆಂಬರರು ಅತಿ ಶ್ರದ್ಧೆಯಿಂದ ಭಾಗವಹಿಸಿ ಎಲ್ಲಾ ಗ್ರಾಮಗಳಲ್ಲೂ ಪ್ರಚಾರ ನಡಿಸಬೇಕಾಗಿ ಸೂಚಿಸಿದರು ಅನಂತರ ಕಾರ್ಯದರ್ಶಿಗಳು ಸಭಿಕರಿಗೆ ವಂದನೆಯನ್ನು ಅರ್ಪಿಸಿದ ಬಳಿಕ ಸಭಾಂತ್ಯವಾಯಿತು

ಮೊಗವೀರ ಯುವಕಸಂಘ, ಮುಂಬಯಿ

ಈ ಮೇಲಿನ ಸಂಘದ ವಾರ್ಷಿಕ ಮಹಾಸಭೆಯು ತಾ ೧೬-೫-೩೭ರಲ್ಲಿ ಮೊಗವೀರ, ರಾತ್ರಿಶಾಲು ಮಂದಿರದಲ್ಲಿ ಸಂಘದ ಅಧ್ಯಕ್ಷರಾಗಿದ್ದ ಶ್ರೀಮಾನ್ ಬೊಕ್ಕಪಟ್ಣ ಬೀಗಪ್ಪ ಕೋಟೆಂಕಾರರ ಸುನ್ಮಾನಾಧ್ಯಕ್ಷತೆಯಲ್ಲಿ ಜರಗಿತು ಸುಮಾರು ನೂರಕ್ಕೆ ಮಿಕ್ಕಿದ ಮೆಂಬರರು ಹಾಜರಿದ್ದರು

ಮೊಗವೀರ ತರುಣರೆಲ್ಲರ ಸಂಘಟನೆಗೈದು ಜಾತಿಯನ್ನು ಅಭಿವೃದ್ಧಿಗೆ ತರುವಂತೆ ಪ್ರಯತ್ನಮಾಡಬೇಕೆಂದು ಮೆಂಬರರಲ್ಲನೇಕರು ಹಲವು ಸಲಹೆಗಳನ್ನಿತ್ತದ್ದಲ್ಲದೆ ಜಾತಿಯಲ್ಲಿ ಇತ್ತೀಚೆಗೆ ನೆಲೆನಿಂತಿರುವ ವರದಕ್ಷಿಣೆ ಮತ್ತು ಬಾಲ್ಯವಿವಾಹ ಇವೇ ಮೊದಲಾದ ದುಷ್ಟ ಪದ್ಧತಿಗಳನ್ನು ಖಂಡಿಸಿ ಸುರಸಭಾಷಣಗಳನ್ನಿತ್ತರು ಮೇಲಾಗಿ ವರದಕ್ಷಿಣೆ ಮತ್ತು ಬಾಲ್ಯವಿವಾಹದ ಕುರಿತಾಗಿ ಠರಾವುಗಳು ಸರ್ವಾನುಮತದಿಂದ ಮಂಜೂರುಮಾಡಲ್ಪಟ್ಟವು ಮತ್ತು ಇವುಗಳ ಪ್ರತಿಗಳನ್ನು 'ದ ಕ'ದಲ್ಲಿಯ ಸ್ವಜಾತಿಯ ಎಲ್ಲಾ ಊರಿನ ಕೂಡುಕಟ್ಟುಗಳಿಗೆ ಕಳುಹಿಸಿಕೊಡುವಂತೆಯೂ ನಿರ್ಣಯಿಸಲಾಯಿತು

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮಧ್ಭುವನೇಂದ್ರ ಮಹೌಷಧಾಲಯ. ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ

ಇವರಲ್ಲಿ---

ಗುಡಪಿಪ್ಪಲಿ (ಲೀವರ್ ರೋಗಕ್ಕೆ)	ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ)	ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು, ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ. ಕ.

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**
ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**
ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.
ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭರ್ಗವಾ ಎಸ್ಕ್ವಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, **ಅಜ್ಮೀರ್.**

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, **ಮದ್ರಾಸ್.**

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, **ವೆಲ್ಲೂರು.**

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು
ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ,

	ಅ	
ನವಭಾರತ ಬುಕ್ ಡಿಪೋ	ಥ	ಕಾರ್ಯದರ್ಶಿ,
ಉಡುಪಿ	ವಾ	ಕಿರಿಯರ ಪ್ರಪಂಚ. ಉಡುಪಿ.

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ
ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯ
ನವರಿಂದ ರಚಿತವಾದ

'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

The Manager, **The National Kanara News Agency,**
No. 58 Mody Street, Fort Bombay

THE

Vijaya Bank, Ltd.

Head Office: MANGALORE. Branch Offices: **Udipi, Kaup & Coondapoor.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty,	**K. Gopalakrishna Shetty.**
ಚೆಯರ್‌ಮೇನ್.	ಸೆಕ್ರಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪ್ಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ರಾಜಿಲೆಯವರಿಗೆ ಉತ್ತಮ ಆಹಾರ ಆದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ಮಳೆಯಲ್ಲಿ ಯಾವಾಗಲೂ ಹಣ್ಣು ಇರುವದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ಟಾರ್ ಡಿಪೋ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ದೆಪೋನ್ ಸ್ಟೋರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

"ದೇವನ ಹೊಟ್ಟೆಯ ತುಂಬುವರೆ?"

ಮಂತ್ರವ ಹೇಳುತ
ದುಡ್ಡನು ಕೇಳುತ
ಕೆಲವೆಡೆ ಗುಡಿಯಲಿ ಕುಳಿತಿಹರು ||
ನಿಮಿಷಕೆ ಮೆಚ್ಚಿಸಿ
ದೇವನ ಸೃಷ್ಟಿಸಿ
ಆತನ ಅಪ್ಪಣೆ ಹೇಳುವರು ||
ಗಂಧವ ತೋರಿಸಿ
ಅಪ್ಪಣೆ ಮಾಡಿಸಿ
ಭ್ರಾಂತಿಯ ಜಾಲವ ಬೀರುವರು ||
ಗದರಿಸಿ ಬೆದರಿಸಿ
ಹರಕೆಯ ಕೊಡಿಸಿ
ದೇವನ ಹೊಟ್ಟೆಯ ತುಂಬುವರು ||
ಕನಕವ ಮಾಡಿಸಿ
ಧನವನು ಕೊಡಿಸಿ
ದೇವನ ಧನಿಕನ ಮಾಡುವರು ||
ಧನಿಕರ ನೋಡುತ
ಧನವನು ಬೇಡುತ
ದುಡ್ಡಿನ ಧ್ಯಾನವ ಮಾಡುವರು ||
ಹರಕೆಯು ಬಾರದೆ
ಹಣವದು ಸೇರದೆ
ಗುಡಿಯಲಿ ದೇವಿಯು ಗರ್ಜಿಪಳು ||
ಬಾಧೆಯು ಊರಿಗೆ
ಬರುವುದು ವೈಲಿಗೆ
ಎನ್ನುವರಿವರು ದೇಗುಲದಿ ||
ಬಡವರ ಬಾಧಿಸಿ
ಸುಳ್ಳನು ಬೋಧಿಸಿ
ತಮ್ಮಯ ಚೀಲವ ತುಂಬುವರು ||
ಹರಿಕೆಯ ಕಾರಣ
ಹಣವನು ಹಾಕದ
ಬಡವರ ನೋಡಲು ಹೇಸುವರು ||
ದೇವರ ದೇವನು
ಮಂತ್ರಾಧೀನನು
ಮಂತ್ರವದೆಲ್ಲವು ನಮ್ಮೊಳಗೆ ||
ಇರುವುದು ಎಂಬರು
ಹರಿಯನು ನಂಬರು
ಇರುವರು ಕೆಲವರು ಹಾರವರು ||

"ಶೋಕಿಲಿ ಮೆರೆಯಲು ದೇಗುಲವೆ?"

ಕೊಳ್ಳುವ ಮಾರುವ
ದುಡ್ಡನು ಹೀರುವ
ಸಂತೆಯದಾಯಿತೆ ದೇಗುಲವು? ||
ಪರಿಪರಿ ಲೋಭವ
ತರತರ ಲಾಭವ
ಗಳಿಸಲು ಇರುವುದೆ ದೇಗುಲವು? ||
ಶಿಷ್ಟರ ಸುಲಿಯಲು
ದುಷ್ಟರ ಸಲಹಲು
ಇದಕೆನೆ ಇರುವುದು ದೇಗುಲವು? ||
ದೇವಿಯ ದೇವನ
ಹೆಸರಲಿ ಜೀವನ
ಸುಖದಲಿ ನಡೆಸಲು ದೇಗುಲವು? ||
ದುಡ್ಡನು ಗಳಿಸಲು
ಸ್ವಾರ್ಥವ ಬೆಳೆಸಲು
ಶೋಕಿಲಿ ಮೆರೆಯಲು ದೇಗುಲವೆ? ||
ಹೆದ್ದರ ಪೀಡಿಸಿ
ದುಡ್ಡನು ಕೂಡಿಸಿ
ದೊಡ್ಡವರಾಗಲು ದೇಗುಲವೆ? ||
ಸುಲಭದಿ ಕಾಂಚನ
ಗಳಿಸಲು ದೇವನ
ಗುಡಿಯಲಿ ಬಂಧಿಸಿ ಪೂಜಿಪುದೆ? ||
ಜಿಗಳಿಯ ಜೀವನ
ನಡೆಸಲು ದೇವನ
ಗುಡಿಯನು ಮಾಡಿದ ಗೂಢವದು? ||
ಸತ್ಯದ ಬಡವರ
ನಿತ್ಯವು ದುಡಿವರ
ಹತ್ತಿರ ನಿಲ್ಲನೆ ಜಗದೀಶ? ||
ಸುಳ್ಳಿನ ನುಡಿಯಲಿ
ದುಡ್ಡಿನ ಮಡಿಯಲಿ
ಇರುವನೆ ಗುಡಿಯಲಿ ಪರಮೇಶ? ||

ದೇಗುಲ ರಚಿಸಿದ ಹುರುಳೇನು?

ಒಡಲಿನ ಗುಡಿಯಲಿ
ಚಿತ್ತದ ಮಡಿಯಲಿ
ನಿತ್ಯವು ಇರುವನ ದೇವನನು ||
ಅಲ್ಲಿಯು ಇಲ್ಲಿಯು
ಮತ್ತೆಲ್ಲೆಲ್ಲಿಯು
ಸುತ್ತಲು ತುಂಬಿಹ ದೇವನನು ||
ಕಟ್ಟಳೆ ಮಡಿಯಲಿ
ಕಟ್ಟಿದ ಗುಡಿಯಲಿ
ಇಟ್ಟಿಹ ದಿಟ್ಟರ ಗುಟ್ಟೇನು? ||
ಅಂದಿನ ಭಕುತರು
ನಮ್ಮಯ ಹಿರಿಯರು
ದೇಗುಲ ರಚಿಸಿದ ಹುರುಳೇನು? ||
ದೇವನ ಭಕ್ತಿಯ
ಆತ್ಮನ ಶಕ್ತಿಯ
ದುಡಿಯಲು ಗುಡಿಯನು ಮಾಡಿದರು ||
ದೇಶದ ಉನ್ನತಿ
ಸಮಾಜದುನ್ನತಿ
ಗಾಗಿಯೆ ದೇಗುಲ ಕಟ್ಟಿದರು ||
ಜನಗಳ ಕಷ್ಟವ
ನೀಗಿಸಿ, ತುಷ್ಟಿಯ
ನೀಡಲು ಮೂಡಿತೆ ದೇಗುಲವು ||
ಜ್ಞಾನದ ಬೆಳಕನು
ತೋರಿಸಿ, ಕೊಳಕನು
ನೀಗಿಸಿ ಸಲಹಲು ದೇಗುಲವು ||
ಭೇದವ ಮರೆವರೆ
ಐಕ್ಯವ ತರುವರೆ
ಶಾಂತಿಯ ಬರುವರೆ ದೇಗುಲವು ||
ಸತ್ಯದ ಬಿತ್ತನು
ಚಿತ್ತದಿ ಬಿತ್ತಲು
ಉತ್ತಮ ಸ್ಥಾನವು ದೇಗುಲವು ||
ದೇಗುಲ ಕಾಂತಿಯು
ಮನಸಿಗೆ ಶಾಂತಿಯು
ಅಂದಿನ ಹಿಂದಿನ ಮಂದಿರವು ||
ಸ್ವಾರ್ಥವ ನೀಗಲು
ಮಾನವನಾಗಲು
ಜ್ಞಾನವನರಿಯಲು ಗುರುಮಠವು ||
ದೇವನ ನೋಡಲು
ಸಾಧನ ಮಾಡಲು
ಮಾಡಿದ ಗರುಡಿಯ ಶಾಲೆಯದು ||
ಶಕ್ತಿಯ ನೆಲೆಯನು
ಭಕ್ತಿಯ ಕಲೆಯನು
ಕಲಿಯಲು ಮಾಡಿದ ಶಾಲೆಯದು ||
ಸತ್ಯದಿ ಪ್ರೀತಿಯು
ಮಿಥ್ಯದಿ ಭೀತಿಯು
ನಿತ್ಯದಿ ನೀತಿಯು ನೆಲಸುವರೆ ||
ದುಷ್ಟರ ಶಿಕ್ಷೆಗೆ
ಶಿಷ್ಟರ ರಕ್ಷೆಗೆ
ಇಟ್ಟಿಹ ನ್ಯಾಯಾಸ್ಥಾನವದು ||
ಹಳ್ಳಿಯ ಪೊರೆಯಲು
ಎಲ್ಲರ ಸಲಹಲು
ಗುಡಿಯನು ಮಾಡಿದ ಗೂಢವದು ||
ಧರ್ಮದ ಕ್ಷೇತ್ರವು
ಕರ್ಮದ ಕ್ಷೇತ್ರವು
ಅಂದಿನ ಹಿಂದಿನ ದೇಗುಲವು ||
ಹಳ್ಳಿಯ ಸೇವೆಯ
ಗೈವುದಕಾಗಿಯೆ
ಹಿರಿಯರು ದೇಗುಲ ಕಟ್ಟಿದರು ||
ಹಳ್ಳಿಯ ಸೇವೆಯ
ಸಮಾಜ ಸೇವೆಯ
ದೇಗುಲ ಮೂಲಕ ಮಾಡಿದರು ||
ಭಾಷಾ ಸೇವೆಯ
ದೇಶದ ಸೇವೆಯ
ಈಶನ ಪೂಜೆಯ ಮಾಡಿದರು ||

ಮುದ್ರಾಡಿ ಕೃಷ್ಣಯ್ಯ ಸೆಟ್ಟಿ.

ಸುಸಮಯ! ಹಣ ಸಂಪಾದಿಸಿರಿ!!

ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮೆಂಬರರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ.

ಮೆನೇಜರ್
ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.

JUST RECEIVED
Look sharp! Hurry up!!
Provincial Autonomy
(BY K. T. SHAH)
Price Re. 1—8—0
(Postage extra)
Book your order for a copy today only.
NAVAYUGA OFFICE
UDIPI

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ "ಗೊನೊಕಿಲರ್" (ರಿಜಿಸ್ಟರ್ಡ್)

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅವ್ವತಿಮ ಔಷಧ. ಅಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer **Dr. D. N. JASANI,** Vitalbhai Patel Road, BOMBAY 4

ಸ್ವೀಕಾರ ಮತ್ತು ವಿಮರ್ಶೆ.

ನಮ್ಮ ಪುಸ್ತಕ.

ಕೇವಲ ಮಕ್ಕಳಿಗಾಗಿ ನರಸಿಂಹ ಶಾಸ್ತ್ರಿ ದೇವುಡು ಎಂ. ಎ. ಇವರ ಸಂಪಾದಕತ್ವದಲ್ಲಿ ಕನ್ನಡ ಸಾಹಿತ್ಯ ಸಮಾಜದವರಿಂದ ಬೆಂಗಳೂರಲ್ಲಿ ಪ್ರಕಟವಾಗುತ್ತಿರುವ ಮಾಸಪತ್ರಿಕೆಯಿದು. ವಾರ್ಷಿಕ ಚಂದಾ ೧—೦—೦ ಮಾತ್ರ.

ಇದರ ೧ನೇ ಸಂಪುಟದ ೯ನೇ ಸಂಚಿಕೆಯು ನಮ್ಮ ಕೈಸೇರಿದೆ. ಮಕ್ಕಳು ಮೆಚ್ಚಬಹುದಾದ ಚಿತ್ರಲಿಪಿ ಚಿತ್ರಕತೆ, ಚಿತ್ರವ್ಯಾಕರಣ, ಕತೆ, ಕವಿತೆ, ಲೇಖನವೇ ಮೊದಲಾದುವು ಇವೆ. ಅಲ್ಲದೆ, ತಾಯಂದಿರಿಗೆ ಉಪಾಧ್ಯಾಯರಿಗೆ, ಎಂಬ ಶಿರೋನಾಮದಲ್ಲಿ ಮಕ್ಕಳ ತಾಯಂದಿರೂ, ಉಪಾಧ್ಯಾಯರೂ ಓದಬಹುದಾದ ವಿಷಯಗಳೂ ಇವೆ ನಮ್ಮ ಕೈಸೇರಿದ ಸಂಚಿಕೆಯಲ್ಲಿರುವ "ಸಲ್ಲದ ಸಂಬಂಧ" ದಂತಹ ಕತೆಗಳನ್ನು ಕೊಡುವುದರ ಬದಲಿಗೆ, ಮಕ್ಕಳಲ್ಲಿ ಸ್ವಾಭಿಮಾನ, ದೇಶಾಭಿಮಾನ, ಹೊಸ ವಿಚಾರ, ಹೊಸ ಹುರುಪುಗಳು ಹುಟ್ಟಲನುಕೂಲವಾದ ಕತೆಗಳನ್ನು ಕೊಟ್ಟರೆ ಸೊಗಸಾಗಿರುವುದೆಂದು ನಮಗನ್ನಿಸುತ್ತದೆ. ಅಂತೂ ಮಕ್ಕಳಿಂದ ಪ್ರೋತ್ಸಾಹ ಪಡೆಯಲರ್ಹವಾದ ಮಾಸಪತ್ರಿಕೆ.

ವತ್ಸಲಾ

ಇದೊಂದು ಚಿಕ್ಕ ಸಾಮಾಜಿಕ ಕಾದಂಬರಿ. ಲೇಖಕಿಯರು. ಮಟ್ಪಾಡಿ ಕಮಲಾಕ್ಷಿ. ಪ್ರಕಾಶಕರು. ಕೆ. ಎಮ್. ಉಪಾಧ್ಯಾಯ, ಕಾಳೀ ಗ್ರಂಥಾಲಯ, ಅಂಬಲ್ಪಾಡಿ ಶಾಲೆ-ಉಡುಪಿ ಮುದ್ರಕರ.:- ಉಡುಪಿ ಪ್ರೆಸ್. ಬೆಲೆ ೦ ೭ ೩

ಲೇಖಕಿಯರು, ನಾರಿಯರಿಗೆ ವಿದ್ಯಾಭ್ಯಾಸವಿಲ್ಲದಿರುವುದರ ಪರಿಣಾಮವನ್ನು ಕಂಡು ಮನಸೋತು ಅದನ್ನು ನಿವಾರಿಸಬೇಕೆಂಬ ಕುತೂಹಲದಿಂದ ಈ ಕಾದಂಬರಿಯನ್ನು ಬರೆದಿರುವರೆಂದು ಅವರ ಮುನ್ನುಡಿಯಲ್ಲಿ ತಿಳಿಯುವುದು. ಕಾದಂಬರಿಯ ಸನ್ನಿವೇಶವು ತಕ್ಕಮಟ್ಟಿಗೆ ಚೆನ್ನಾಗಿವೆಯೆಂದು ಹೇಳಬಹುದು. 'ದೇವೀಚರಣ, ವಿವೇಕ ಚಂದ್ರ' ಎಂಬೆರಡು ಹೆಸರುಗಳ ಬದಲಿಗೆ ಕನ್ನಡನಾಡಿನಲ್ಲಿ ಬಳಕೆಯಲ್ಲಿರುವ ಹೆಸರುಗಳನ್ನಿಟ್ಟಿದ್ದರೆ ಸೊಗಸಾಗಿರುತ್ತಿತ್ತು, ಕೊನೆಗೆ ದೇವೀಚರಣ ಬಾಬುವಿನ ತಕ್ಷಣ ಮನೋ ಪರಿವರ್ತನೆಯು ಸನ್ನಿವೇಶವೂ ಅಷ್ಟೊಂದು ಚಮತ್ಕಾರವಾಗಿಲ್ಲವೆಂದು ನಮಗನ್ನಿಸುತ್ತದೆ. ಅದು ಸಾವಧಾನವಾಗಿ ಆಗುವಂತಿದ್ದರೆ, ಚೆನ್ನಾಗುತ್ತಿತ್ತು. ವ್ಯಾಕರಣ ದೋಷಗಳೂ ಅಲ್ಲಲ್ಲಿ ಕಂಡು ಬರುತ್ತವೆ. ಉದಾಹರಣೆಗಾಗಿ (ಅಯ್ಯಾ ಸಾಧುಗಳೆ ಮಹಿಮೆಯು ಏನೆಂದು ವರ್ಣಿಸಲಿ, ಪುಟ ೪೧) (ಪತಿಯಾರಾಧನವೇ ದೇವತಾರಾಧನೆಯೆಂದುಬಲ್ಲವರು ಒದರುತ್ತಿರುವರು ಪುಟ ೫೭) ಕೆಲವೆಡೆ ವರ್ಣನೆಗಳು ಅನಾವಶ್ಯಕವಾಗಿವೆ, ಉದಾ ಪಂಚಮ ಪರಿಚ್ಛೇದ ಸಂಪೂರ್ಣ.

ಹೇಗಿದ್ದರೂ ಪ್ರಥಮ ಸಾಹಸವಾದುದರಿಂದ ಲೇಖಕಿಯರು ಅಭಿನಂದನಾರ್ಹರು ಅವರ ಲೇಖನಿಕೆಯಿಂದ ಇನ್ನೂ ಕೆಲವು ಉತ್ತಮ ಕೃತಿಗಳು ಹೊರಬೀಳಲೆಂದು ಆಶಿಸುತ್ತೇವೆ.

ಭಕ್ತ ಭಜನಾವಳಿ

ಮಂಗಳೂರಿನ ಬ್ರಹ್ಮಸಮಾಜದವರಿಂದ ಪ್ರಕಟಿಸಲ್ಪಟ್ಟ ಭಜನೆ ಹಾಡುಗಳ ಸಂಗ್ರಹ. ಮುದ್ರಣ ಕೆನರಾ ಪ್ರೆಸ್, ಮಂಗಳೂರು, ಪುಟಗಳು ೧೪೨ ಬೆಲೆ ೬ ಆಣೆ ಮಾತ್ರ.

ಇದರಲ್ಲಿ ಹಲವೊಂದು ಮಂದಿ ಸೇರಿ ಭಜನೆ ಮಾಡಲನುಕೂಲಗಳಾದ ಭಿನ್ನ ಭಿನ್ನ ಭಾಷೆಯ ಭಕ್ತಿರಸಪೂರ್ಣಗಳಾದ ಹಾಡುಗಳಿವೆ. ಇತರ ಸಮಾರಂಭದಲ್ಲಿ ಹಾಡುವ ಹಾಡುಗಳೂ ಸಂಗ್ರಹಿಸಿವೆ ಕೊನೆಗೆ ಕೆಲವು ಸಂಸ್ಕೃತ ಸ್ತೋತ್ರಗಳಿಗೆ ಕನ್ನಡ ಅರ್ಥವೂ ಇದೆ. ಬ್ರಾಹ್ಮದರ್ಮದ ತತ್ವಗಳೂ ಅಖೈರಿಯಲ್ಲಿ ಸೇರಿಸಲ್ಪಟ್ಟಿವೆ. ಶುದ್ಧಾಶುದ್ಧ ಪತ್ರಿಕೆಯನ್ನು ಹಾಕಿದರೂ ಅಶುದ್ಧಿಗಳು ಇನ್ನೂ ತುಂಬಾ ಇವೆ. ಉದಾ ೧೨೪ನೇ ಪೇಜಿನಲ್ಲಿ 'ನಿಚಾಯ್ಯ ಮೃತ್ಯುಮುಖಾತ್ ಪ್ರಮುಚ್ಯತೇ' ಎಂದಿದೆ, ಅದು 'ನಿಚಾಯ್ಯ ತಂ ..ಎಂದಾಗಬೇಕು ೧೨೭ನೇ ಪೇಜಿನಲ್ಲಿ 'ದ್ಯಾವಾಪೃದಿವ್ಯೋ ನಿದಮಂತರಂ' ಎಂದಿದೆ. ಅದು 'ದ್ಯಾವಾಪೃಥಿವ್ಯೋರಿದಮಂತರಂ' ಎಂದಾಗಬೇಕು ೧೨೭ನೇ ಪೇಜಿನಲ್ಲಿ ಇನ್ನೊಂದು ಸಾಲಿನಲ್ಲಿ ಪಶ್ಯಾಮಿ ವಿಶ್ವೇಶ್ವರ ಭೂತನಾಥ ಎಂದಿದೆ. ಇದು ಗೀತೆಯ ಶ್ಲೋಕ ಅಲ್ಲಿರುವುದು 'ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ' ಎಂದು ಇತ್ಯಾದಿ ಆದನ್ನು ಮುಂದಿನ ಮುದ್ರಣದಲ್ಲಿ ಸರಿಪಡಿಸದಿರಲಾರರೆನ್ನುವ. ಪುಸ್ತಕವು ಪ್ರೋತ್ಸಾಹನೀಯವಿದೆ.

—"ರಾಮು"

ನಡುಮನೆಯಲ್ಲಿ

(ಎಂಟು ಏಕಾಂಕ ನಾಟಕಗಳು)

ಚಂದ್ರನಾಥ

(ಕಾದಂಬರಿ.)

ನರಕದಲ್ಲಿ ನರಸಿಂಹ

(ನಾಟಕ)

ಪ್ರೇಮ ಪ್ರಕಟನಾಲಯ, ಧಾರವಾಡ ಇವರು ಕಳುಹಿಸಿದ ಮೇಲಿನ ಪುಸ್ತಕಗಳನ್ನು ಅತ್ಯಾನಂದದಿಂದ ಸ್ವೀಕರಿಸಿದ್ದೇವೆ. ವಿಮರ್ಶೆ ಮುಂದಕ್ಕೆ.

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು, ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. [ಸಂ. ನ.]

ಇದೇನು? ಆನಂದವೋ? ವಿಶ್ರಾಂತಿಯೋ? ನಿದ್ರೆಯೋ?

ನಮ್ಮ ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಯು ಎಲ್ಲಿದೆ? ಏನು ಮಾಡುತ್ತದೆ? ಎಂಬ ವಿಚಾರ ಕೂಡಾ ಗೊತ್ತಿಲ್ಲ. ನಾನು ಕಾಂಗ್ರೇಸ ಸದಸ್ಯನಾಗಲಿಕ್ಕೆ, ಕಮಿಟಿಯನ್ನು ಹುಡುಕಿ, ಕಡೆಗೆ ನಾವು ಕೆಲವರು ಟೌನು ಕಮಿಟಿಗೆ ಸದಸ್ಯರಾಗಿ ಸೇರಿದೆವು. ಆದರೆ ಬೇರೆ ಎಲ್ಲಾ ತಾಲೂಕಿನ ಹಳ್ಳಿ ಮೂಲೆಗಳಲ್ಲಿ ಕೂಡಾ ಕಾಂಗ್ರೆಸ್ ಕಮಿಟಿಗಳು ಸ್ಥಾಪನೆಯಾಗುತ್ತಾ ಬರುವಾಗ ಜಿಲ್ಲೆಯ ಮುಖ್ಯ ತಾಲೂಕಾದ ಮಂಗಳೂರು ತಾಲೂಕು ಕಮಿಟಿ ಎಲ್ಲಿರುವದೆಂದು ಯಾರಿಗೂ ಗೊತ್ತಿಲ್ಲದೆ ಇರುವದು ನೋಡಿದರೆ ಓಟನಲ್ಲಿ ಗೆದ್ದ ಆನಂದವೋ? ಅಥವಾ ವಿಶ್ರಾಂತಿಯೋ? ಅಥವಾ ನಿದ್ರೆಯೋ? ಎಂಬದು ಸಹಾ ತಿಳಿಯುವದಿಲ್ಲ. ಇನ್ನಾದರೂ ಹಳ್ಳಿ ಮೂಲೆಯ ಜನರಿಗೆ ಕಾಂಗ್ರೇಸ ತತ್ವವನ್ನು ಬೋಧಿಸಿ ಗ್ರಾಮಗಳಲ್ಲಿ ಬೇಡವಾದರೂ ಅಲ್ಲಲ್ಲಿ ಮುಖ್ಯ ಸ್ಥಳಗಳಲ್ಲಿ ಕಮಿಟಿಗಳನ್ನು ಸ್ಥಾಪಿಸಿ ಕಾಂಗ್ರೆಸಿಗೆ ಸದಸ್ಯರನ್ನು ಸೇರಿಸುವ ಕೆಲಸವನ್ನು ಕಮಿಟಿಯ ಚಾಲಕರು ಮನಸ್ಸು ಕೊಟ್ಟು ಮಾಡುವಂತೆ ಪ್ರಾರ್ಥಿಸಿಕೊಳ್ಳುತ್ತೇನೆ. ಸರಕಾರದ ಕಡೆಯಿಂದ ಬರುವ ವರ್ತಮಾನ ಮತ್ತು ಸಭೆಗಳು ಕೂಡಾ ನಮ್ಮ ಶಿಸ್ತಿಗೆ ವಿರೋಧವೆಂಬದನ್ನಾದರೂ ಜನರಿಗೆ ತಿಳಿಸುವಂತೆ ಏಳಿರಿ! ಜಾಗ್ರತರಾಗಿರಿ!! ಕಾರ್ಯವನ್ನು ಸಾಧಿಸಿರಿ!!!

—ಕಾಂಗ್ರೆಸ್ ಸದಸ್ಯ

ಕಾಂಗ್ರೆಸ್ ಮತದಾರರೇ! ಜಾಗ್ರತೆ

ನಮ್ಮ ಜಿಲ್ಲೆಯಲ್ಲಿ ಗವರ್ನಮೆಂಟಿನ ಕಡೆಯಿಂದ ಜಸ್ಟೀಸ್ ಪಾರ್ಟಿಗೆ ಸಹಾಯ ಮಾಡಿದವರು ಅಲ್ಲಲ್ಲಿ ಸಭೆ ಸೇರಿಸಿ ಕಂದಾಯದಲ್ಲಿ ಸೇಕಡಾ 40 ಕಡಿಮೆ ಆಗುವದಕ್ಕೆ ನಿಮ್ಮ ಸಮ್ಮತಿ ಕೊಡಬೇಕೆಂದು ವರ್ಗದಾರರ ಕೂಡೆ ಕೇಳಿ ದಸ್ಕತು ಪಡಕೊಳ್ಳುತ್ತಾರೆ. ಆದರೆ ಕಾಂಗ್ರೆಸಿಗೆ ಓಟು ಕೊಟ್ಟು ಕಳುಹಿಸಿದ್ದು ಕಾಂಗ್ರೆಸಿನ ನಿರ್ಣಯದ ಪ್ರಕಾರ ತತ್ಕಾಲಕ್ಕೆ ಸೇಕಡಾ 50 ರೂಪಾಯಾದರೂ ಕಡಿಮೆಯಾಗಬೇಕೆಂದು ಸರಕಾರದೊಡನೆ ವಾದಿಸಲಿಕ್ಕೆ ಕೌನ್ಸಿಲಿಗೆ ನಾವು ಕಳುಹಿಸಿ ಈಗ ರೈತರಾದ ನಾವು ಸೇಕಡಾ 40 ಕಡಿಮೆಯಾಗಬೇಕೆಂದು ಒಪ್ಪಿಗೆ ಕೊಡುವದಾದರೆ ಮೊದಲೇ ನಮ್ಮಲ್ಲಿ ಒಗ್ಗಟ್ಟಿಲ್ಲವೆಂದು ಹೇಳುವ ಸರಕಾರವು ನಮ್ಮ ಕಡೆ ಮೆಂಬರರ ವಾದಕ್ಕೆ ಏನು ಬೆಲೆ ಕೊಟ್ಟೀತು? ಆದ್ದರಿಂದ ಯಾವ ಕಡೆಯಲ್ಲಾದರೂ ಕಾಂಗ್ರೆಸ್ಸಿಗೆ ಓಟು ಕೊಟ್ಟಿರುವ ರೈತರು ಕಂದಾಯ ಕಡಿಮೆಯಾಗುವ ಸಭೆಗಳಿಗೆ ಹೋದರೆ ಸೇಕಡಾ 50ಕ್ಕೆ ಕಡಿಮೆಯಾಗದ ರಿಯಾಯಿತಿ ಕೇಳಬೇಕಲ್ಲದೆ ನಾವು ಚುನಾಯಿಸಿ ಕಳುಹಿಸಿದ ಮೆಂಬರರ ಮಾತಿಗೆ ಬೆಲೆಯಿಲ್ಲದಂತೆ ಮಾಡಬೇಡಿರಿ! ಬಾಯಾರಿಕೆಗಾಗಿ ಉಪ್ಪು ನೀರು ಕುಡಿದು ಪಶ್ಚಾತ್ತಾಪ ಪಡಬೇಡಿರಿ!! ಈ ವಿಚಾರದಲ್ಲಿ ಎಲ್ಲರೂ ಜಾಗ್ರತರಾಗಿರಿ!!!

— ಶೀನಪ್ಪ ಹೆಗ್ಗಡೆ.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತವೆ ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿ ಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧-೦-೦

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಆದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು ಕ್ರಯ: ಡಬ್ಬಿ ೧ಕ್ಕೆ ೨-೦-೦.
'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ರೋಲ್ಡ್ ಗೋಲ್ಡ್, ನಿಕ್ಕಲ್ ಬೆಳ್ಳಿಯು, 9 ಕ್ಯಾರಟಿನ ಗಟ್ಟಿ ಚಿನ್ನದ ರಿಸ್ಟ್ ವಾಚುಗಳು, ರೈಲ್ವೆ ಟೈಯಂ ಪಾಕೆಟ್ ವಾಚು ಮತ್ತು ಟೈಯಂಪೀಸು ಗ್ಯಾರಂಟಿ ಇದೆ.
ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ.
The Manager,
The Silver Jubilee Watch Co,
Post Box No 571, BOMBAY.

This is not a Prospectus but a trade advertisement.

ಗೋಕುಲದಾಸ ಫಾರ್ಮ್ಸ್ ಲಿಮಿಟೆಡ್, ಮಂಗಳೂರು.

ಮಂಗಳೂರು ಮತ್ತು ಉಡುಪಿ ಮಹಾಜನರ ವಿಶೇಷ ಸೌಕರ್ಯಕ್ಕಾಗಿ!

ಪಾಲು ಒಂದರ ಬೆಲೆ ರೂ. ೫ ಮಾತ್ರ !

ಶುದ್ಧವಾದ ಪುಷ್ಟಿಕರವಾದ ಹಾಲು, ಬೆಣ್ಣೆ, ಮೊಸರು ಮೊದಲಾದುವನ್ನು ಸುವ್ಯವಸ್ಥಿತ ಆಧುನಿಕ ರೀತಿಯಲ್ಲಿ ಒದಗಿಸಿಕೊಡುವುದೇ ಈ ನೂತನ ಸಂಸ್ಥೆಯ ಜೀವಾಳ.

ಅಧಿಕ ಲಾಭದಾಯಕವಾದ ಸಾರ್ವಜನಿಕ ಮಿತಜವಾಬ್ದಾರಿಯ ನೆಲೆಯಲ್ಲಿ ಸ್ಥಾಪಿತವಾದ ಈ ನೂತನ ಸಂಸ್ಥೆಯು ಅಖಿಲ ದಕ್ಷಿಣಭಾರತದಲ್ಲೇ ಮೊದಲನೆಯದು.

ಆದುದರಿಂದ ಪ್ರೊಸ್ಪೆಕ್ಟಸ್ ಫೋರ್ಮುಗಳಿಗಾಗಿ ಈಗಲೇ ಬರೆದು ಕಂಪೆನಿಯ ಪಾಲುಗಳನ್ನು ಪಡಕೊಳ್ಳಿರಿ !

ಅಚ್ಚಿನಲ್ಲಿದೆ! ? ಅಚ್ಚಿನಲ್ಲಿದೆ!

ನವಯುವಕರನ್ನು ಮುಗ್ಧಗೊಳಿಸುವ ಮತ್ತು ಮಣಿ! — **ಮಿಸ್ ಲಲಿತ** — ವಾಚಕರ ಮನಸ್ಸನ್ನು ಸೂರೆಮಾಡುವ ಲಲಿತಾ ರಮಣಿ!

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು ಎತ್ತಿ ತೋರಿಸುವ ಪುಸ್ತಕವು.

ಹೊರಡಲಿರುವ ತಾರೀಕನ್ನು ಗಮನಿಸಿರಿ!

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಬರೆದವರು. ಯಂ. ವಿ. ಪುತ್ರಾನ್

ಕೂಡಲೇ ಬರೆಯಿರಿ. ಬೆಲೆ **0—8—0**

ವಿಳಾಸ — **M. V. Puthran,**
C/o 31, Bomanji Lane, *2nd Floor,* ***Fort, BOMBAY***

ಗಣಪತಿ ವಿಲಾಸ

ಕೋರ್ಟು ರಸ್ತೆ - - - ಉಡುಪಿ

ಭೋಜನ-ಉಪಹಾರ-ವಿಶ್ರಾಂತಿ ಇವುಗಳಿಗೆ ಆದರ್ಶ ಗೃಹ

ಆರೋಗ್ಯಕರವೂ ಹಿತಕರವೂ ಆದ ಭೋಜನ ಸ್ನಾನ,—ವಸತಿಗಳಿಗೆ ಯೋಗ್ಯ ಸೌಕರ್ಯ—ಟೀಪಾರ್ಟಿ ಇತ್ಯಾದಿಗಳಿಗೆ ಉತ್ಕೃಷ್ಟ ಸಿದ್ಧತೆಗಳು !!!

ಮುನ್ಸಿಫ್ ಕೋರ್ಟು, ಕಚೇರಿ ಮತ್ತು ಶಾಲೆಗಳಿಗೆ ಸಮೀಪದ ಕೇಂದ್ರದಲ್ಲಿದ್ದು ಸರ್ವರಿಗೂ ಅತ್ಯಂತ ಅನುಕೂಲವಾಗಿರುತ್ತದೆ. ವಿದ್ಯಾರ್ಥಿಗಳಿಗೆ ರಿಯಾಯತಿ ದರದಲ್ಲಿ ಉತ್ತಮ ತರದ ಏರ್ಪಾಡುಮಾಡಲಾಗುವುದು.

ಕೆ. ಮಂಜುನಾಥಯ್ಯ, ಪ್ರೊಪ್ರೈಟರ್.

ಗ್ರೇಂಡ್ ಸೇಲ್! ಗ್ರೇಂಡ್ ಸೇಲ್!!

ನಮ್ಮಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಯಾವತ್ತೂ ಶಾಲೋಪಕರಣಗಳೂ ಇತರ ಎಲ್ಲಾ ತರದ ಅತ್ಯಾಧುನಿಕ ಮಾದರಿಯ ಸ್ಟೇಶನರಿ, ಕಟ್ಲೆರಿ ವಗೈರೆ ನಿತ್ಯೋಪಯುಕ್ತ ಸಾಮಾಗ್ರಿಗಳೂ ಅತ್ಯಂತ ಕಡಿಮೆದರದಲ್ಲಿ ಮಾರಲ್ಪಡುತ್ತವೆ

ಅಲ್ಲದೆ ಜೂನ್ ತಾ. 1ರಿಂದ ತಾ. 30ರ ತನಕ

ನಮ್ಮಲ್ಲಿ ಒಂದೇ ಬಾರಿಗೆ ಎಂಟಾಣೆಗೆ ಮೇಲ್ಪಟ್ಟು ವ್ಯಾಪಾರಮಾಡುವವರಿಗೆ

ಅತ್ಯಮೂಲ್ಯವಾದ ಇನಾಮುಗಳು ಕೊಡಲ್ಪಡುವವು.

ಹೆಚ್ಚಿನ ವಿವರಗಳಿಗೆ ನಮ್ಮ ಪ್ರಕಟಣಾಪತ್ರವನ್ನು ನೋಡಿರಿ.

ಎಸ್. ಅನಂತರಾಮಾಚಾರ್,

ಪುಸ್ತಕ ಮತ್ತು ಸ್ಟೇಶನೆರಿ ವ್ಯಾಪಾರಿ, ತಾಲೂಕು ಕಚೇರಿ ಬಳಿ, ಉಡುಪಿ.

Mohini Harmonium Works, Udipi

Single Hand Harmoniums, Portable Hand Harmoniums,
Double sets of Hand Harmoniums,
Trible sets of Hand Harmoniums,
Folding leg Harmoniums
Specially Constructed in our Work Shop. Well tuned and fitted.

Repairs of all kinds of Musical instruments undertaken at a very modelate rate to the Complete satisfaction of our customers.

A Trial order is earnestly solicitcd.

For Further Particulars

Apply to: M. K. KORAGAPPA, *Proprietor.*

15 ವರ್ಷಗಳ ಅನುಭವ! ಗ್ಯಾರಂಟೀ ಕೆಲಸ !!

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು

ಪ್ರಸಿದ್ಧರಾಗಿರುವ

ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಚಿತ್ತಾರ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು.

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ.

ಗಣಪತಿ ರಾವ್, ಪೈಂಟರ್,

ಸೋದೆ ಮಠದ ಲೇನು - - ಉಡುಪಿ, ದ. ಕ.

ON THE EVE OF THE
SILVER JUBILEE OF THE
East & West Insurance Co., Ltd.

MESSRS. PADUBIDRI BROTHERS,

The accredited Chief Agents of the Company invite applications for liberal Agency contracts from Gentlemen of status and influence to cooperate in the production of a record business of Rs. 10,00,000 as a gift in honour of the advent of the auspicious event.

For particulars apply to:

Messrs. Padubidri Bros.,
CHIEF AGENTS.
KARNATAKA & MAHARASTRA.
40, Narayanlal Bansilal Mansion,
Bellasis Road, BOMBAY 8.

೩ನೇ ನೋಟ

ಪು-ರು-ಷ-ವ-ಧು!

ಏಕಾಂಕ ಪ್ರಹಸನ

(ರಂಗರಾಯನೂ ಶಿವರಾಯನೂ ಸಂಜೆ ಮಂಗಳೂರಿನ ಮೈದಾನಿನಲ್ಲಿ ಮಾತಾಡುತ್ತಾ ತಿರುಗಾಡುತ್ತಿರುವಾಗ ಉಮೇಶನು ರಮೇಶನೊಂದಿಗೆ ರಂಗರಾಯನ ಬಳಿಗೆ ಬರುವನು.)

ಉಮೇಶ—ನಿಮ್ಮಲ್ಲಿ ರಂಗರಾಯರೆಂದ್ರೆ ಯಾರು ಸ್ವಾಮಿ? ಈ ಆಸಾಮಿ ಆವಾಗಿಂದ ಅವರನ್ನು ಹುಡುಕುತ್ತಿದ್ದಾನೆ.

ಶಿವ—ಈ ಮಹಾರಾಯರೇ ರಂಗರಾಯರು. ಏನು ಏನಾಗಬೇಕು?

ರಮೇಶ—ಮತ್ತೇನಿಲ್ಲ. ಅವರೊಂದು ಮದುವೆಯಾಗುವ ಆತುರದಿಂದಿದ್ದಾರೆಂದು ಕೇಳಿದೆ.

ಶಿವ—ಹೌದ್ದು, ಅವರು ಆತುರ ಪಡದಿದ್ದರೆ ಮತ್ತಾರು ಪಡುವುದು? ಅವರಿಗೇನು ಪ್ರಾಯ ಸಂದಿದೆಯೇ? ಬೇಕಷ್ಟು ಆಸ್ತಿ ಬದುಕಿಲ್ಲವೇ? ಇದುಹೊರತು ಸರಕಾರ ಉದ್ಯೋಗಸ್ಥರಲ್ಲವೇ ಅವರು? ಒಂದಲ್ಲ ಹತ್ತು ಮದುವೆಮಾಡಿಕೊಳ್ಳಲಿಕ್ಕೇನಡ್ಡಿ ಅವರಿಗೆ?

ರಮೇಶ—ಈ ಸಂಗತಿಯನ್ನೆಲ್ಲಾ ಕೇಳಿಕೊಂಡೇ ನಾನು ಅವರಿಗೊಂದು ನೆಂಟಸ್ತಿಕೆ ಮಾತಾಡ ಬಂದುದು ಸ್ವಾಮಿ! ನೀವು ಸಿಟ್ಟುಮಾಡಬೇಡಿ.

ರಂಗ—ನ-ನ-ಗೆ ನ-ನ-ನ-ಗೆ ನೆಂಟಸ್ತಿಕೆ ಮಾತಾಡ ಬಂದುದೇ? ನನಗಲ್ಲವೇ? ನಿಜವಾಗಿಯೂ ನನಗೆ ಮಾತಾಡ ಬಂದುದಲ್ಲವೆ? ಸುಳ್ಳಲ್ಲವಲ್ಲ! ಹು-ಹು-ಹುಡುಗಿ ಯಾರು?

ಶಿವ—ಸ್ವಲ್ಪ ಸುಮ್ಮನಿರಿ. ನಿಮಗೇನಿಷ್ಟವಸರ?

ರಂಗ—ಯಾಕೆ ಸುಮ್ಮನಿರುವುದು? ಅವರು ನನಗೆ ನೆಂಟಸ್ತಿಕೆಮಾತಾಡ ಬಂದವರಂತೆ. ನೀವು ಕೇಳಲಿಲ್ಲವೇನು? ನನಗೆ ಮಾತಾಡಿಸ ಬಂದುದು, ನನಗೆ.

ಶಿವ—ಸ್ವಾಮೀ! ನೀವೀರಾಯರಿಗೆ ಯಾವ ನೆಂಟಸ್ತಿಕೆ ಮಾತಾಡಬಂದಿರುವಿರಿ?

ರಮೇಶ ಅವರೇ ಕೇಳಲಿ ರಾಯರೆ! ಮದುವೆ ಮಾಡಿಕೊಳ್ಳುವುದು ಅವರಲ್ಲವೇ? ನೀವೇ?

ರಂಗ—ಹ-ಹ-ಹೌದ್ದು, ಹೌದು ಸ್ವಾಮಿ. ನಾ-ನೇ ಮಾಡಿಕೊಳ್ಳುವವ. ನಾನೇ ಅವರಲ್ಲ, ನ ನಾನೇ. ಎ-ಎ-ಎಲ್ಲಿ ನೋಡಿಕೊಂಡು ಬಂದಿದ್ದೀರಿ ಸ್ವಾಮಿ. ಹು-ಹುಡುಗಿಯನ್ನ?

ರಮೇಶ – ಹುಡುಗಿಯೊಂದು ನಿಮಗೆ ಬೇಕಾದರೆ ನಾನು ನೋಡಿಕೊಂಡು ಬಂದದ್ದೇ ಆದೀತು. ಫಸ್ಟ್‌ಕ್ಲಾಸ್ ಹುಡುಗಿ ರಾಯರೇ! ಮದುವೆಯಾಗಬೇಕು! ಅಂಥಾ ಹುಡುಗಿಯನ್ನು!

ರಂಗ—ಅ-ಹ-ಹ! ಫಸ್ಟ್‌ಕ್ಲಾಸ್ ಹುಡುಗಿಯೇ? ನನ್ನ ಭಾಗ್ಯ! ನನ್ನ ಹಿರಿಯರು ಮಾಡಿದ ಪುಣ್ಯ! ಹ! ಹ! ಹ! ಶಿವರಾಯರೇ ನಿಮ್ಮ ಸಹಾಯವನ್ನು ನಾನು ಜನ್ಮಜನ್ಮಾಂತರಕ್ಕೂ ಮರೆಯಲಾರೆ. ಹೇಗಾದರೂ ಸಂಘಟನೆ ಮಾಡಿಕೊಡಿ ಸ್ವಾಮಿ.

ಶಿವ—ಆ ಹುಡುಗಿ ಯಾರೆಂದು ಸ್ವಲ್ಪ ಹೇಳಬಾರದೆ? ನಮ್ಮ ಹುಡುಗನಿಗೆ ನೂರಾರು ಜನರು ಹುಡುಗಿ ಮಾತಾಡಿ ಮಾತಾಡಿ ಹಿಂದೆ ಹೋಗಿದ್ದಾರೆ. ಫಸ್ಟ್‌ಕ್ಲಾಸ್ ಹುಡುಗಿ ಸಿಗಬೇಕೆಂದೇ ಈ ವರೆಗೆ ಕಾದಿದ್ದುದವರು.

ರಂಗ—ಹ! ಹ!ಹ! (ಗಹಗಹಿಸಿ ನಕ್ಕು) ನೂರಾರು ಹುಡುಗಿಯರು ನ-ನ-ಗೆ ಹ! ಹ! ಹ! (ಶಿವರಾಯನು ಹಿಂದಿನಿಂದ ಕೋಟುಹಿಡಿದೆಳೆವನು)

ರಂಗ—ಹೌದಪ್ಪ! ಹೌದು! ನೂರಲ್ಲ ಒಂದು ಸಾವಿರ ಹುಡುಗಿಯರ ಕಡೆಯವರೆಲ್ಲಾ ಬಂದು ಬಂದು ಹಿಂದೆಹೋಗಿದ್ದಾರೆ ಸ್ವಾಮಿ.

ರಮೇಶ—ಹುಡುಗಿಯೆಂದ್ರೆ ಈ ಊರ ಅಂಬಾಗ್ಲು ಮೇಲ್ಮನೆ ರಾಮರಾಯರ ಮಗಳು ಸ್ವಾಮಿ.

ಉಮೇಶ—ಓಹೋ! ಅಂಬಾಗಿಲು ರಾಮರಾಯರ ಮಗಳೇ? ಫಸ್ಟ್‌ಕ್ಲಾಸ್ ಹುಡುಗಿ ಎಂಬುವಕ್ಕೆ ಸಂದೇಹವೇ ಇಲ್ಲ. ಹುಡುಗಿಯರಲ್ಲಿ ಅಂತಹ ಹುಡುಗಿ ಇರಲಿಕ್ಕಿಲ್ಲೆಂಬ ಮಾತು ನಿಜ.

ಶಿವ—ನಮ್ಮ ಹುಡುಗ ಫಸ್ಟ್‌ಕ್ಲಾಸ್ ಹುಡುಗನಲ್ಲವೇ? ಸಾವಿರ ವರ್ಷ ತಪಸ್ಸುಮಾಡಿದರೆ ಇಂಥಾ ಹುಡುಗ ಯಾವ ಹುಡುಗಿಗಾದ್ರೂ ಸಿಕ್ಕಿಯಾನೇ?

ರಮೇಶ—ಅದ್ರೆ ನಮ್ಮ ಹುಡುಗಿಗೆ ತಕ್ಕ ಹುಡುಗನಲ್ಲ ಸ್ವಾಮಿ.

ಶಿವ—ಹಾಗೆಂದ್ರೇನು? ನಮ್ಮ ಹುಡುಗನಲ್ಲೇನು ಕುಂದುಕೊರತೆ? ಹಾಗಾದ್ರೆ ನಿಮ್ಮ ಹುಡುಗಿಯೇ ಬೇಡ, ಹೋಗಿ ಬಿಡಿ. ಹುಡುಗಿಕಡೆಯಿಂದ ಬಂದ ನಿಮಗೆ ಅಹಂಕಾರವಾದರೂ ಎಷ್ಟು?

ರಮೇಶ—ಆಯ್ತು ಹಾಗಾದರೆ, ಬೇಡ. ನಮ್ಮ ಹುಡುಗಿಗೆ ಬೇರೆ ಯೌವನ ಹುಡಗ ಸಿಕ್ಕನೆ ಪಕ್ಕಕ್ಕಲ್ಲವೆ? ನೋಡುವ. (ಹೋಗಲಾರಂಭಿಸುವನು)

ರಂಗ—ಇ-ಇ-ಇ ಇಲ್ಲ ಸ್ವಾಮಿ. ನಿ-ನಿ-ನಿಲ್ಲಿ ಸ್ವಾಮಿ! (ಶಿವರಾಯನು ಕೈ ಹಿಡಿದೆಳೆದು ಮಾತಾಡಬಾರದೆಂದು ಸನ್ನೆ ಮಾಡಿದರೂ ರಂಗರಾಯನು ಲಕ್ಷಿಸದೆ ಗಟ್ಟಿಯಾಗಿ) ಸ್ವಾಮಿ! ಸ್ವಾಮಿ! ಹೋಗಬೇಡಿ ನಿಲ್ಲಿ ನಿಲ್ಲಿ.

ರಮೇಶ—(ಕೋಪದ ನಟನೆಯಿಂದ ಹಿಂದೆ ಬಂದು) ಹುಡುಗಿ ರೂಪವತಿಯಾಗಿದ್ದರೆ ಹುಡುಗರು ಎಷ್ಟುಬೇಕು ರಾಯರೆ ನಿಮಗೆ?

ಶಿವ—ಹೌದೌದು! ಹುಡುಗರೆಲ್ಲಿಂದ?

ರಂಗ—ರಾಯರೇ, ನೀವು ಸ್ವಲ್ಪ ಸುಮ್ಮನಿರಿ. ಅಷ್ಟುಮಾಡಿ. (ಉಮೇಶನನ್ನು ನೋಡಿ) ಸ್ವಾಮೀ! ನಿಮಗೆ ಆ ಹುಡುಗಿಯ ಸಂಗ್ತಿ ಹೇಗೆ ಗೊತ್ತು?

ಉಮೇಶ—ನಮ್ಮ ನೆರೆಮನೆಯ ಹುಡುಗಿ ರಾಯರೆ! ರಮೆಯೆಂದು ಅವಳ ಹೆಸರು.

ರಂಗ—ರಮೆಯೆಂದೇ? ಹ! ಹ! ಹ! ಬಲುಸೊಗಸಾದ ಹೆಸರು! ರಮೆ! ರಮೆ! ರಮೆಯೆಂದಲ್ಲವೇ? ರಂಗನೆಂದು ನನ್ನ ಹೆಸರು! ರಂಗ-ರಮೆ, ರಮೆ-ರಂಗ. ಅ ಹ ಹ!

ಶಿವ– ಆಗ್ಲಿ! ಆ ಹುಡುಗಿಯ ವೃತ್ತಾಂತವನ್ನೆಲ್ಲಾ ಸ್ವಲ್ಪ ತಿಳಿಸಿ ಸ್ವಾಮಿ!

ಉಮೇಶ—ಅವಳ ತಂದೆಯು ಬೊಂಬಾಯಿಯಲ್ಲಿ ಸೆಸೂನ್ ಮಿಲ್ಲಿನಲ್ಲಿ ಕ್ಲಾರ್ಕರಾಗಿದ್ರು. ದೊಡ್ಡ ಸಂಬಳವೂ ಇತ್ತು. ಆದರೆ ಅವರು ಆಕಸ್ಮಿಕವಾಗಿ ಇತ್ತಲಾಗಿ ತೀರಿಕೊಂಡ್ರು. ಈಗ ಪಾಪ, ಅವರ ವಿಧವೆಯು ಬಹಳ ಕಷ್ಟಕ್ಕೊಳಗಾಗಿದ್ದಾರೆ. ಇಲ್ಲವಾದ್ರೆ ಆ ಹುಡುಗಿಗೆ ಎಷ್ಟು ಮಂದಿ ಮೇಲಾಡಿಕೊಂಡು ಬರುತ್ತಿದ್ದರೋ ಏನೋ? ಅಷ್ಟು ಚೆಲುವೆ ರಾಯರೆ ಹುಡುಗಿ.

ರಮೇಶ—ಈಗ್ಲೂ ಮೇಲಾಡುವವರಿಗೇನೂ ಕಡಿಮೆಯಿಲ್ಲ. ಆದ್ರೆ ಹಾಗಿನವರಿಗೆಲ್ಲಾ ಅವಳನ್ನು ಕೊಡಲು ಅವಳ ತಾಯಿಗೆ ಇಷ್ಟವಿಲ್ಲ, ಹುಡುಗಿ ಸ್ವಲ್ಪ ಕಲ್ತವಳು. ಒಳ್ಳೇ ಹಾಡುಗಾರಳು. ಯಾರಾದರೂ ಸರಕಾರಿ ನೌಕರರಿಗೆ ಕೊಡಬೇಕೆಂದೇ ಹುಡುಗಿಯ ತಾಯಿಯ ಆಶೆ. ಗಾಂಧಿ ಕಡೆಯವರೆಂದರೆ ಅವರಿಗಾಗುವುದಿಲ್ಲ.

ರಂಗ—ಇದೀಗ ದೈವ ಘಟನೆ! ನಾನೊಬ್ಬ ಸರಕಾರಿ ನೌಕರ. ಆ ಕಲಿಪುರುಷ ಗಾಂಧಿ ಮತ್ತು ಅವನ ಕಪಿಪಾಳ್ಯವೆಂದರೆ ನನಗೂ ಆಗುವುದಿಲ್ಲ. ಹ! ಹ! ಹ! ಏನು ದೈವ ಮಹಿಮೆ!

ಶಿವ—(ರಂಗರಾಯನನ್ನು ಭುಜಹಿಡಿದೆಳೆದು) ಏನು ಇಷ್ಟರಲ್ಲೇ ಮದುವೆಯಾಗಿ ಹೋಯ್ತೆ? ಎಂತಹ ಹುಚ್ಚರಪ್ಪ ನೀವು! ಎಂತಹ ಹುಚ್ಚರು!

ರಂಗ—ಹ!ಹ!ಹ! ಹುಚ್ಚು ನಿಮಗೆ, ನನಗಲ್ಲ. ಮದುವೆಯಾದ ಹಾಗೆಯೇ ಮತ್ತೇನು?

ಶಿವ—ಆ ನವಜವಾನ ಸಭೆಯವರು ಮದುವೆಯಾಗ ಬಿಡನಿದ್ರೆ?

ರಂಗ—ಓಹೊ! ಹೌದೌದು! ಆ ಮಾರಿಗಳ ಉಪದ್ರ ಉಂಟಲ್ಲ ಎಲ್ಲಿ ಹೋದರೂ. ಏನುಮಾಡುವುದಪ್ಪ!

ಉಮೇಶ—ಅದೇನು ಸ್ವಾಮಿ? ರಂಗರಾಯರು ಮದುವೆಯಾದ್ರೆ ನವಜವಾನರಿಗೇನು?

ಶಿವ—ಅಲ್ಲ ಸ್ವಾಮಿ! ನಮ್ಮ ಮದುಮಗ ಸ್ವಲ್ಪ ಮುದುಕ.

ರಂಗ—ಇಲ್ಲ ಸ್ವಾಮಿ, ಇಲ್ಲ, ನಾನು ಅವರಿಗಿಂತ ಐದು ವರ್ಷಕ್ಕೆ ಕಿರಿಯವ. ಅವರೀಗ ನಾಲ್ಕನೇ ಸಲ ಮದುವೆಯಾಗಿದ್ದಾರೆ. ನಾನೀಗ ಮೂರನೇ ಸಲ ಮಾತ್ರ ಆಗುವುದು.

ಉಮೇಶ—ಆ ನವಜವಾನರಿಗೇನೂ ನೀವು ಸಹಾಯಮಾಡಲಿಲ್ಲವೆಂತ ಕಾಣುತ್ತದೆ ಅವರೇನೂ ತೊಂದರೆ ಮಾಡದಂತೆ ನಾನು ನೋಡುತ್ತೇನೆ ರಾಯರೆ! ಅವರ ಸಂಘಕ್ಕೆ ಸ್ವಲ್ಪ ಹಣ ಕೊಟ್ಟು ಬಿಟ್ಟರೆ ಸರಿ.

ರಂಗ—ಆಯ್ತು ಸ್ವಾಮಿ ಆಯ್ತು. ಒಮ್ಮೆ ಹೇಗಾದರೂ ಮದುವೆಯೊಂದು ಮಾಡ್ಸಿಕೊಡಿ. ಜಗದೀಶ್ವರಾ! ನೀನೇ ಕರುಣಾಳು. ಈಗ ಎಷ್ಟೊಂದು ಅನಾಯಾಸವಾಗಿ ನನಗೆ ಹುಡುಗಿ ದೊರಕಿಸಿಕೊಟ್ಟೆ! ಅಹಾ ನಿನ್ನ ಮಹಿಮೆಗೇನನ್ನಲಿ!

ಶಿವ—ಸಾಕುಮಾಡಿ ರಂಗರಾಯರೇ ನಿಮ್ಮ ಠಕ್ಕು ಭಕ್ತಿ. ನಾನು ನಿಮ್ಮೊಟ್ಟಿಗೆ ಬಂದುದೇ ತಪ್ಪಾಯಿತು. ಹೆಣ್ಣಿನ ಮುಖವನ್ನೇ ನೋಡದವರ ಹಾಗೆ ಮಾಡುತ್ತೀರಲ್ಲ ನೀವು.

ರಂಗ—ನಿಮಗೇನು? ಮದುವೆ ಮಾಡಿಕೊಂಡು ಸೌಖ್ಯದಲ್ಲಿದ್ದೀರಿ! ನನ್ನ ಪೇಚಾಟ ನನಗೇನೇ ಗೊತ್ತು.

ರಮೇಶ—ನಾವೀಗ ಹೋಗುತ್ತೇವೆ ಸ್ವಾಮಿ. ನೀವು ಯಾವಾಗ ಬರುತ್ತೀರಿ ಹೆಣ್ಣುನೋಡ್ಲಿಕ್ಕೆ?

ರಂಗ—ಅದೇನೂ ಬೇಡ ಸ್ವಾಮಿ. ನೀವು ಹೇಳಿದ್ದೇ ಸಾಕು.

ಶಿವ—ಅವರಿಗೆ ಹೆಣ್ಣೊಂದು ಸಿಕ್ಕಿದರೆ ಸಾಕು. ಮತ್ತೇನೂ ಬೇಡ.

ರಮೇಶ—ನೀವೇನವರನ್ನು ಹಂಗಿಸುವುದು? ಹೆಣ್ಣು ನೋಡಿಯೇ ಮದುವೆಯಾಗಿ ಸ್ವಾಮಿ ನೀವು. ನಾನು ನಾಳೆಯೇ ನಿಮ್ಮ ಮನೆಗೆ ಬಂದು ನಿಮ್ಮನ್ನು ಕರದೊಯ್ದು ಹೆಣ್ಣು ತೋರಿಸುವೆನು. ಆ ಮೇಲೆಯೇ ಬಾಕಿ ವಿಷಯವೆಲ್ಲಾ ಮಾತಾಡುವ.

ರಂಗ—ನಾಳೆ ಖಂಡಿತ ಬರಬೇಕು. ತಪ್ಪಬಾರದು.

ಉಮೇಶ—ಖಂಡಿತ ಬರುತ್ತೇವೆ ಸ್ವಾಮಿ. ನಾನೂ ಬರುತ್ತೇನೆ. ನೀವೂ ನಿಮ್ಮ ಮಿತ್ರರನ್ನು ನಿಮ್ಮೊಂದಿಗೆ ಕರತನ್ನಿ. ಅವರು ಹುಡುಗಿಯನ್ನು ಚೆನ್ನಾಗಿ ಪರೀಕ್ಷಿಸಿ ಸಂಗತಿಗಳನ್ನೆಲ್ಲಾ ವಿಚಾರಿಸಿಕೊಳ್ಳಲಿ.

ರಂಗ—ನಾಳೆ ಬೆಳಿಗ್ಗೆ ಬರಬೇಕು ಸ್ವಾಮಿ, ನಾವಿಬ್ಬರೂ ತಯಾರಾಗಿ ನಿಲ್ಲುತ್ತೇವೆ.

ಶಿವ—ನಾಳೆ ಬೆಳಿಗ್ಗೇನೇ ಹೋಗಬೇಕೆಂದೇನು? ಬೆಳಿಗ್ಗೆ ನನಗೆ ಸಮಯವಿಲ್ಲ.

ರಂಗ—ಬೆಳಿಗ್ಗೇನೇ ಹೋಗಬೇಕು. ನಿಮಗೆ ಸಮಯವಿಲ್ಲದಿದ್ದರೆ ನೀವು ಬರುವುದು ಬೇಡ. ನಾನೊಬ್ಬ ಹೋದರೆ ಸಾಕು.

ರಮೇಶ—ಅಷ್ಟೇ! ನೀವೊಬ್ಬರೂ ಸಾಕು ರಾಯರೇ! ಈಗ ನಾವು ಹೋಗುತ್ತೇವೆ.

"ಕನ್ನಡಿಗರ ನ್ಯೂನತೆಗಳೂ ಅವುಗಳನ್ನು ನಿವಾರಿಸಲು ಉಪಾಯಗಳೂ"

ಲೇಖಕ: ಬಿ. ಎಸ್. ಶಿರಾಲಿ

ಒಮ್ಮೆ ಕರ್ನಾಟಕವು ಸುಧಾರಣಾ ಸಾಮ್ರಾಜ್ಯದ ಶಿರವಾಗಿತ್ತು. ಅವಿತ ಕಲಾಕೌಶಲ್ಯಗಳಿಗೆ ವಾಸಸ್ಥಾನವಾಗಿತ್ತು. ರಾಷ್ಟ್ರಭಕ್ತಿ ನಿಸ್ವಾರ್ಥತೆ, ಅತುಲ ಬಂಧು ಪ್ರೇಮ ಮುಂತಾದ ಸದ್ಗುಣಗಳಲ್ಲಿ ಇಡೀ ಜಗತ್ತಿಗೆ ಮಾರ್ಗದರ್ಶಕವಾಗಿದ್ದಿತು ಅದೇ ಕರ್ನಾಟಕವಿಂದು ಜಾತ್ಯಂಧತೆಯ ತವರುಮನೆಯಾಗಿದೆ. ಇವರು ಬ್ರಾಹ್ಮಣರು, ಇವರು ಲಿಂಗಾಯಿತರು, ಇವರು ಶೂದ್ರರೆಂಬೀಪರಿಯ ಘಾತುಕವಿಚಾರಗಳಿಗೊಳಗಾಗಿದೆ. ಪರಭಾಷೆಗಳ ಮೇಲಣ ಮೋಹಕ್ಕೆ ಬಲಿಬಿದ್ದಿದೆ. ವೀರಕನ್ನಡಿಗರಂದು ಒಕ್ಕಟ್ಟಿನಿಂದ "ವಿಜಯನಗರ'ದಂತಹ ವೈಭವದ ಸಾಮ್ರಾಜ್ಯವನ್ನು ಸ್ಥಾಪಿಸಿದ್ದಾದರೆ, ಅವರ ವಂಶಜರಾದ ನಾವು ನಮ್ಮ ನಮ್ಮೊಳಗೆ ಭೇದಗಳನ್ನು ಕಲ್ಪಿಸತೊಡಗಿದ್ದೇವೆ. ಅವರು ತಮ್ಮ ಮಾತೃಭೂಮಿ, ಮಾತೃಭಾಷೆಗಳಿಗಾಗಿ ಜೀವದ ಪರಿವೆಯಿಲ್ಲದೆ ಕಾದಿ ಕರ್ನಾಟಕದ ಕೀರ್ತಿಯನ್ನು ದಿಗಂತ ವ್ಯಾಪಿಸಿದ್ದಾದರೆ, ನಾವಿಂದು ಸ್ವಾರ್ಥಕ್ಕಾಗಿ ಪರರ ಪ್ರಾಣಗಳನ್ನು ಹೀರಲಿಕ್ಕೂ ಹಿಂದೆ ಮುಂದೆ ನೋಡುವುದಿಲ್ಲ. ಜಾತ್ಯಂಧತೆಯಂತೂ ನಮ್ಮಲ್ಲಿ ಮೇರೆಮೀರಿದೆ. ಸ್ವದೇಶಕ್ಕೆ ಸ್ವಾತಂತ್ರ್ಯವನ್ನೊದಗಿಸಿಕೊಡುವುದಕ್ಕಿಂತ 'ಸರ್ ರಾವಬಹದ್ದೂರ್' ಇವೇ ಮೊದಲಾದ ಬಿರುದಾವಳಿಗಳನ್ನು ಸಂಪಾದಿಸುವದರಲ್ಲಿಯೇ ನಾವು ನಮ್ಮನ್ನು ಧನ್ಯರನ್ನಾಗಿ ಭಾವಿಸುತ್ತಲಿದ್ದೇವೆ. ಸ್ವರಾಷ್ಟ್ರ, ಸ್ವಭಾಷೆಗಳನ್ನು ಬದಿಗಿರಿಸಿ, ಪರರಾಷ್ಟ್ರ, ಪರಭಾಷೆಗಳನ್ನು ಮನ್ನಿಸುತ್ತಲಿದ್ದೇವೆ. ತಮ್ಮ ದೇಶಕ್ಕಾಗಿ ಆತ್ಮಾರ್ಪಣೆ ಗೈಯಲು ಸಹ ಹಿಂಜರಿಯದ ಆ ಮಹಾನುಭಾವರಾದ ನಮ್ಮ ಪೂರ್ವಜರೆತ್ತ? ಸ್ವಾರ್ಥಕೂಪದಲ್ಲಿ ತೇಲಾಡಿ ಧನ್ಯತೆಯನ್ನು ತಾಳುವ ಅಲ್ಪಮತಿಗಳಾದ ನಾವೆತ್ತ! ಕನ್ನಡಿಗರೇ ಇನ್ನಾದರೂ ಎಚ್ಚರಗೊಳ್ಳಿರಿ. ತ್ವರೆಮಾಡಿರಿ. ನಿಮ್ಮಲ್ಲಿರುವ ಅಂತಸ್ಥಭೇದಗಳನ್ನು ಕಿತ್ತೊಗೆದು ರಾಷ್ಟ್ರಸೇವೆಗಾಗಿ ಟೊಂಕಕಟ್ಟಿರಿ. ಇದರಲ್ಲಿಯೇ ನಿಮ್ಮ ಧನ್ಯತೆಯಿದೆ; ಕರ್ತವ್ಯದ ಪೂರ್ಣತೆಯಿದೆ.

ಕನ್ನಡವು ಸಾಹಿತ್ಯಕ್ಷೇತ್ರದಲ್ಲಿ ಬಹು ಹಿಂದುಳಿದಿದೆ. ಇದಕ್ಕೆ ಅಭಿಮಾನ ಶೂನ್ಯ ಕನ್ನಡಿಗನೇ ಕಾರಣ. ಆತನು ತನ್ನ ಮಾತೃಭಾಷೆಯನ್ನು ಬದಿಗೊತ್ತಿ ಇಂಗ್ರೇಜಿಯಂತಹ ಪರಭಾಷೆಯ ಆಕರ್ಷಣಕ್ಕೆ ಬಲಿಬಿದ್ದಿರುವನು. ಕನ್ನಡವಾತನಿಗೆ ತ್ಯಾಜ್ಯವಾಗಿ ತೋರತೊಡಗಿದೆ. ಕನ್ನಡವೆಂದರ ಅಜ್ಞಾನಿಗಳ ಭಾಷೆಯೆಂದು ಆತನ ಭಾವನೆ. ಅಮೃತವನ್ನು ಕುಡಿಯುವ ಮೊದಲು ಅದರ ರುಚಿಯು ಗೊತ್ತಾಗುವ ಬಗೆ ಹೇಗೆ? ಪರಕೀಯಂತಹ ಮರಾಠೀ ಭಾಷೆಯು ಕೇಂದ್ರವಲ್ಲಿ ಕನ್ನಡಿಗನ ಬಳಿ ಕನ್ನಡವನ್ನಾಗಿರಿದೆ ಅವನಿಗದೊಂದು ದೊಡ್ಡ ಅವಮಾನ. ಹೇಳಲಾರದಷ್ಟು ಅಸಂತೋಷ ಕನ್ನಡಿಗ ಚಿಕ್ಕಂದಿನಿಂದ ತಾಯಿ–ತಂದೆ, ಅಕ್ಕ–ತಂಗಿಯರೊಡನೆ ಮುದ್ದಿನಿಂದಾಡಿದ ನಿನ್ನ ಕನ್ನಡವನ್ನು ತ್ಯಜಿಸಿ ಅದಾವ ಪೌರುಷವನ್ನು ಮೆರೆಯಲಿಚ್ಛಿಸುವೆ? ಬಿಡು, ಈ ಮೋಸದ ಹಾದಿಯನ್ನು ಬಿಡು. ನಿನ್ನಲ್ಲಿಯ ಸ್ವಾಭಿಮಾನವನ್ನು ಜಾಗ್ರತೆಗೊಳಿಸು

ಕರ್ನಾಟಕವು ಅಸಂಖ್ಯ ಮತಧರ್ಮಗಳ ನೆಲೆನಾಡು. ಅಲ್ಲಿ ಹಿಂದು ಮುಸಲ್ಮಾನ್, ಕ್ರಿಶ್ಚನ್ ಮುಂತಾದ ಅನೇಕ ಜಾತಿಗಳಿವೆ. ಅವರಲ್ಲಿ ಒಕ್ಕಟ್ಟಿಲ್ಲದಿದ್ದರೆ ಕರ್ನಾಟಕದ ಅಭ್ಯುದಯವೆಂಬುದು ಕನಸಿನೊಳಗಿನ ಕಡಬೇ ಸರಿ! ಆದುದರಿಂದ ಈ ಎಲ್ಲಾ ಮತಸ್ಥರಲ್ಲಿ ಅನ್ಯೋನ್ಯ ಪ್ರೀತಿಯನ್ನು ಹುಟ್ಟಿಸಿ ಐಕ್ಯವನ್ನು ಸ್ಥಾಪಿಸುವುದು ಕರ್ನಾಟಕದ ಏಳಿಗೆಯನ್ನಿಚ್ಛಿಸುವ ಪ್ರತಿಯೊಬ್ಬ ಕನ್ನಡಿಗನ ಆದ್ಯಕರ್ತವ್ಯವು. ಆದರೆ ಈ ಏಕೀಕರಣವು ಕೈಗೂಡುವುದುದೆಂತು? ಎಂಬುದೊಂದು ಪ್ರಶ್ನೆ

ಕರ್ನಾಟಕದಲ್ಲಿ ಹೆಚ್ಚಾಗಿ ಕನ್ನಡ ಮತ್ತು ಉರ್ದು ಶಾಲೆಗಳಿರುವವು. ಮುಸಲ್ಮಾನರು ತಮ್ಮ ಹುಡುಗರನ್ನು ಉರ್ದು ಶಾಲೆಗೆ ಕಳುಹಿಸುತ್ತಾರೆ. ಹಿಂದು ಕ್ರಿಶ್ಚನ್ ಹುಡುಗರು ಕನ್ನಡ ಶಾಲೆಗಳಿಗೆ ಹೋಗುತ್ತಾರೆ. ಹೀಗಾಗಿ ಹಿಂದು ಮುಸಲ್ಮಾನರು ಬಾಲ್ಯದಲ್ಲಿ ಒಂದೆಡೆ ಕಲಿಯುವುದು ಬಹು ಅಪರೂಪ. ಇದೊಂದು ಅವರಲ್ಲಿಯ ಅನ್ಯೋನ್ಯ ಪ್ರೀತಿಯ ಅಭಾವಕ್ಕೆ ಕಾರಣ. ಕನ್ನಡ ಶಾಲೆಗಳ ವಿದ್ಯಾರ್ಥಿಗಳನ್ನು ಒಟ್ಟಿಗೆ ಕೂಡಿಸಿ ಹಿಂದು ಮುಸಲ್ಮಾನರ ಐಕ್ಯಕ್ಕೆ ಅನುಕೂಲವಾದ ಭಾಷಣಗಳನ್ನು ಎರಡೂ ಶಾಲೆಗಳೊಳಗಿನ ಶಿಕ್ಷಕರು ಮಾಡಬೇಕು ರಾಷ್ಟ್ರಪ್ರೇಮವೇ ನಮ್ಮ ನಿಜವಾದ ಧ್ಯೇಯವಾಗಿರಬೇಕೆಂದು ಅವರ ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸಬೇಕು. ಕರ್ನಾಟಕದಲ್ಲಿ ವ್ಯವಹಾರದಲ್ಲಿ ಎಲ್ಲರೂ ಉಪಯೋಗಿಸುವ ಭಾಷೆಯು ಕನ್ನಡವಾದ್ದರಿಂದ ಮುಸಲ್ಮಾನ್ ವಿದ್ಯಾರ್ಥಿಗಳು ಅದನ್ನು ಸಹಜವಾಗಿ ಅರಿಯಬಲ್ಲರು. ಈ ಭಾಷಣಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೆ ತಿಳಿಯುವಂತೆ ಅದಷ್ಟು ಸುಲಭ ಕನ್ನಡದಲ್ಲಿ ಮಾಡಬೇಕು. 'ಇದನ್ನು ಲೋಕಲ್ ಬೋರ್ಡಿನ ಅಧಿಕಾರಿಗಳು ಲಕ್ಷ್ಯದಲ್ಲಿ ತರುವರೇ?

ನಮ್ಮ ದೇಶದಲ್ಲಿ ಹಿಂದು–ಮುಸಲ್ಮಾನರಲ್ಲಿ ರಾಷ್ಟ್ರೀಯ ಬಾಂಧವ್ಯವನ್ನು ನೆಲೆಗೊಳಿಸಲು ಸಮರ್ಥವಿರುವ ಸಂಸ್ಥೆ ಯಾವುದೆಂದರೆ ಅದು ಶಾಲೆಯೆಂದು ನಿಸ್ಸಂಶಯವಾಗಿ ಹೇಳಬಹುದು. ಬಾಲ್ಯದಲ್ಲಿ ಒಮ್ಮೆ ಮೂಡಿದ ಭಾವನೆಗಳು ಸಹಸಾ ಅಳಿಯಲಾರವು. ಆದುದರಿಂದ ನಮ್ಮ ಶಾಲೆಗಳೊಳಗಿನ ಶಿಕ್ಷಕರು ಹಿಂದು ಮುಸಲ್ಮಾನರಲ್ಲಿಯೂ, ವ ಮಿಕ್ಕುಳಿದ ಜಾತಿಗಳಲ್ಲಿಯೂ ಪರಸ್ಪರ ಪ್ರೀತಿಯು ನೆಲೆಯಾಗುವಂತೆ ಮಾಡಬೇಕು. ಆಗಾಗ್ಗೆ ವಿದ್ಯಾರ್ಥಿಗಳ ಸಭೆಗಳನ್ನು ಕೂಡಿಸಿ "ಹಿಂದು ಮುಸಲ್ಮಾನರ ಏಕೀಕರಣ" ಹಿಂದು-ಮುಸಲ್ಮಾನ ಧರ್ಮಗಳ ತತ್ವ ಎಂಬಿವೇ ಮೊದಲಾದ ವಿಷಯಗಳನ್ನು ಪರಿಣಾಮಕಾರಕವಾಗಿ ಚರ್ಚಿಸಬೇಕು. ಎಲ್ಲಾ ಧರ್ಮಗಳ ತತ್ವವು ಒಂದೇ ಎಂಬ ಭಾವನೆಯನ್ನು ಅವರಲ್ಲಿ ಹುಟ್ಟಿಸಿ ಧರ್ಮ ಮೂಢತನಕ್ಕೆ ಅವರ ಮನಸ್ಸಿನಲ್ಲಿ ಎಡೆ ಇಲ್ಲದಂತೆ ಮಾಡಬೇಕು. ಈ ಕಾರ್ಯವನ್ನು ಕನ್ನಡ ಶಾಲೆಗಿಂತ 'ಇಂಗ್ಲಿಷ್' ಶಾಲೆಗಳಲ್ಲಿ ಹೆಚ್ಚು ಯಶಸ್ವಿಯಾಗಿ ಮಾಡಬಹುದು. ಯಾಕಂದರೆ ಇಂಗ್ಲಿಷು ಶಾಲೆಗಳಲ್ಲಿ ಕನ್ನಡ ಶಾಲೆಗಳಿಂದ ಬರುವ ಹಿಂದು ಕ್ರಿಶ್ಚನ್ ವಿದ್ಯಾರ್ಥಿಗಳೂ, ಉರ್ದು ಶಾಲೆಗಳಿಂದ ಬರುವ ಮುಸಲ್ಮಾನ್ ವಿದ್ಯಾರ್ಥಿಗಳೂ ಒಟ್ಟಿಗೆ ಕಲಿಯುತ್ತಾರೆ. ಈ ಮೇರೆಗೆ ನಡೆದರೆ ಕರ್ನಾಟಕವು ಇನ್ನು ತುಸು ವರ್ಷಗಳಲ್ಲಿಯೇ ಏಕೀಕರಣವನ್ನು ಸಂಪಾದಿಸುವುದೆಂಬುದರಲ್ಲಿ ಸಂದೇಹವಿಲ್ಲ.

ನನ್ನ ಕನ್ನಡಿಗ ಬಂಧುಗಳು ತಮ್ಮಲ್ಲಿಯ ಈ ನ್ಯೂನತೆಗಳನ್ನು ದೂರೀಕರಿಸಿ ಕರ್ನಾಟಕದ ಉನ್ನತಿಗಾಗಿ ಸತತ ದುಡಿದ ತಮ್ಮ ರಾಷ್ಟ್ರವನ್ನು ಆದರ್ಶಸ್ವರೂಪವನ್ನಾಗಿ ಮಾಡುವರೆಂದು ನಂಬಿ ನಾನೀ ಅಲ್ಪ ಲೇಖನವನ್ನು ಮುಗಿಸುವೆನು.

ರಂಗ—ಆಯ್ತು ಸ್ವಾಮಿ. ಬಹಳ ಉಪಕಾರವಾಯಿತು. ನಮಸ್ಕಾರ.

ರಮೇಶ—ನಮಸ್ಕಾರ, ನಮಸ್ಕಾರ! (ರಮೇಶ ಉಮೇಶರಿಬ್ಬರೂ ನಗುನಗುತ್ತಾ ಹೋಗಿಬಿಡುವರು)

ಶಿವ—ರಂಗರಾಯರೇ ಇವರಲ್ಲೇನೋ 'ಫ್ಲೇಸಿ'ರಬೇಕು. ಇಲ್ಲವಾದರೆ. .

ರಂಗ—ಹೌದೌದು ಫ್ಲೇಸು! ನಿಮಗೆ ಮತ್ಸರವಾಗುತ್ತದೆಂದು ತೋರುತ್ತದೆ ನನಗೊಂದು ಫಸ್ಟ್‌ಕ್ಲಾಸ್ ಹುಡುಗಿ ಸಿಕ್ಕುವುದು. ಅಂಥವರೇನೂ ಅಲ್ಲ ಸ್ವಾಮಿ ಅವರು ನೋಡಿದ ಕೂಡ್ಲೆ ಜನರನ್ನು ಪರೀಕ್ಷಿಸಿಬಿಡಬಹುದು. ನಡೆಯಿರಿ ಹೋಗುವ ಮನೆಗೆ.

ಶಿವ—ನಾನು ಬರುವುದಿಲ್ಲ, ನೀವು ಹೋಗಿ.ಇನ್ನೂ ಆರು ಘಂಟೆ ಆಗಲಿಲ್ಲ. ನಿಮಗೆ ಸೆಂಟಸ್ಸಿಕೆ ಬಂದಮೇಲೆ ತಲೆಯೇ ನೆಟ್ಟಗಿರುವಂತೆ ತೋರುವುದಿಲ್ಲ

ರಂಗ—ತಲೆ ನನಗಲ್ಲ ನಿಮಗೆ ನೆಟ್ಟಗಿಲ್ಲ. ಎಲ್ಲ ಗೊತ್ತುಂಟು ನಿಮ್ಮದು–ಮಹಾ ಮತ್ಸರಿ ನೀವು ಸಾಕು ನಿಮ್ಮದು ಸಹವಾಸ ನನಗೆ. (ಎಂದು ಸಿಟ್ಟಿನಿಂದ ಹೋಗಿಬಿಡುವನು)

ಶಿವ—ಎಂತಹ ಮದುವೆಯ ಹುಚ್ಚಪ್ಪ ಇದು! (ತನ್ನೊಳಗೆ ನಕ್ಕು ಮೈದಾನಿನಲ್ಲಿ ತಾನೊಬ್ಬನೇ ಅಡ್ಡಾಡುವನು)

[illegible]

ನವಯುಗದಲ್ಲೇ ನಿಮ್ಮ ಜಾಹೀರಾತನ್ನು ಕೊಡಿರಿ.

THE
MOOLKY BANK, LTD.,
MOOLKY.
ದಿ ಮೂಲ್ಕಿ ಬ್ಯಾಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಬಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಖು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager. ಪ್ರೆಸಿಡೆಂಟ್ ವಾ ಮೆನೇಜರ್.

ಮಾಸ] ವಿಶ್ವವಾಣಿ [ಪತ್ರಿಕೆ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ: ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ವಿಶೇಷಲು.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ) ... ... ರೂ. ೩—೮—೦
,, ,, (೬ ತಿಂಗಳಿಗೆ) ... ... ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ) ರೂ. ೫ -೦-೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ— ವ್ಯವಸ್ಥಾಪಕ—'ವಿಶ್ವವಾಣಿ,'
'ಅನ್ನಪೂರ್ಣ', ವಿಶ್ವೇಶ್ವರಪುರಂ, ಬೆಂಗಳೂರು ನಗರ.

ಉಡುಪಿ ಏಜೆಂಟರು—ನವಭಾರತ ಬುಕ್ ಡಿಪೊ, ಉಡುಪಿ.

The Combined Booking Agency

AND

The Joint Booking Office

MANGALORE, SOUTH KANARA.

— ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ —

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ—ಚಾರ್ಮಾಡಿ — ಕಾರ್ಕಳ

ಉಜಿರೆ (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ) — ಉಡುಪಿ

ಮಂಗಳೂರು — ಕುಂದಾಪುರ

ಪುತ್ತೂರು — ಮೂಡಬಿದ್ರೆ

ಮೂಲ್ಕಿ — ಗಂಗೊಳ್ಳಿ

ಜಿಲ್ಲೆಯ ಹೊರಗೆ—

ಮಡಿಕೇರಿ, ಮೈಸೂರು, ಸಕಲೇಶಪುರ, ಚಿಕ್ಕಮಗಳೂರು, ಮೂಡಗೆರೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿ ಗೃಹಗಳು ನಿರ್ಮಿಸಲ್ಪಡುವುವು. ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜ್ಯೋಂಟ್ ಮೆನೇಜರರಿಗೆ ತಿಳಿಸಿರಿ.

SUSHEELA & CO., KOLLEGAL. (S. INDIA.)

1000 ರೂಪಾಯಿಗಳ ಬಹುಮಾನ

ಪ್ರತಿ ಎರಡು ಕೂಪನ್‌ಗಳಿಗೂ ಒಂದು ಕೂಪನ್ ಉಚಿತ.

ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ **16-8-1937**. ಫಲಿತಾಂಶವನ್ನು ಪ್ರಕಟಿಸುವ ದಿನ **20-8-1937**.

ಮೂರು ಕೂಪನ್‌ಗಳೂ ಸರಿಯಾಗಿ ಕಳುಹಿಸಿದವರಿಗೆ **500** ರೂಪಾಯಿಗಳು,

ಒಂದು ಕೂಪನ್ ತಪ್ಪುಳ್ಳವರಿಗೆ **200** ರೂಪಾಯಿಗಳು, ಎರಡು ಕೂಪನ್ ತಪ್ಪುಳ್ಳವರಿಗೆ **100** ರೂಪಾಯಿಗಳು.

ಇತರ ಬಹುಮಾನಗಳು.

3 ಕೂಪನ್‌ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ **125** ರೂಪ್ಯಾಗಳು. ಹೆಚ್ಚಾಗಿ ಕೂಪನ್‌ಗಳು ಕಳುಹಿಸಿದವರಿಗೆ **75** ರೂಪ್ಯಾಗಳು.

		17		

ಸುಶೀಲ ಅಂಡ್ ಕೋ., ಕೊಳ್ಳೇಗಾಲ.

ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ.

ಹೆಸರು ....

ವಿಳಾಸ ....

....

ಪೋಸ್ಟಲ್ ಮಣಿಯಾರ್ಡರ್ ನಂಬರು ....

ಸ್ಟಾಂಪುಗಳು .... ತಾರೀಕು .... 1937.

ಉತ್ತರಗಳನ್ನು ಕಂಡುಹಿಡಿಯುವ ಕ್ರಮ:—ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡವಾಗಿ, ಮೂಲೆಗಳಿಂದ 85 ಬರುವಂತೆ, ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಶಾಯಿಯಲ್ಲಿ ಬರೆದು ಕಳುಹಿಸಬೇಕು.

ನಿಬಂಧನೆಗಳು

ಪ್ರವೇಶ ಧನ ಕೂಪನ್‌ಗೆ 0—8—0 ಆಣೆ. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲಿ ಮಣಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು. ಉತ್ತರಗಳು 16—8—1937ರೊಳಗೆ ನಮ್ಮ ಕೈಸೇರಬೇಕು. ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಾಸುಮಾಡಲಾಗುವುದಿಲ್ಲ. ಮತ್ತು ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲಾಗುವುದು. ಮೆನೇಜರರ ತೀರ್ಮಾನವೇ ಕಡೇ ತೀರ್ಮಾನ. ಬಹುಮಾನಗಳನ್ನು ಪಡೆದವರ ಹೆಸರುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ತಮ್ಮ ವಿಳಾಸದೊಡನೆ 0—1—0 ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಶರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್: ಸುಶೀಲ ಅಂಡ್ ಕೋ., ಕೊಳ್ಳೇಗಾಲ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ ಮಾಯಾನದಿನು ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಪಬ್ಲಿಕ್, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್ ಗಳಿವೆ ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ। ಸುಮತಿಬಾಯಿ,

ಬಿ. ಎ ಎಲ್ ಟಿ., ಎಫ್, ಓ ಎಮ್. ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್-

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

The Coondapoor Bank, Ltd.,

Head Office - **Coondapoor**. Branch Office - **Brahmavar**.

Begs to announce that a new Branch has been opened at SHANKRANARAYANA on 4-6-37.

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ, ಇಲ್ಲಿ ಇದೇ ತಾ. 4ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ. ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ ಶೆ 4, ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ ಶೆ 4

6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪಾಯ 5%,
1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪಾಯ 5½%
2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ ಬಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯ 10 ಸಹಾ ಸಾಲಕೊಡಲಾಗುತ್ತವೆ. ಪಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. **N. Sheshagiri Rao,** ಸೆಕ್ರೆಟರಿ

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೊಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೊಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. ಕ್ರಯ ಡಬ್ಬಿ **1**ಕ್ಕೆ **1-8-0**.

ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪನಿ,
೩. ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜೆ. ಟಿ. ಮದರಾಸ್.

ಬೇಗನೇ ಪ್ರಕಟವಾಗಲಿದೆ

ವರ್ತಕರ ಕೈಪಿಡಿ

(ಅನುಭವಸ್ಥ ಸಂಪಾದಕ ಮಂಡಲಿಯಿಂದ ತಯಾರಿಸಲ್ಪಡುತ್ತಿದೆ.)

ತರತರದ ತಲಬಿನ ಕೋಷ್ಟಕ, ಬಡ್ಡಿ ಕೋಷ್ಟಕ, ರೈಲ್ವೆ ಮತ್ತು ಸ್ಟೀಮರುಗಳಲ್ಲಿ ಮಾಲನ್ನು ರವಾನಿಸುವ ಅನುಭವ, ಮತ್ತು ಚಾರ್ಜುಗಳ ಸಂಪೂರ್ಣ ಮಾಹಿತಿ, ಲಗ್ಗೇಜು ಚಾರ್ಜು ಇತ್ಯಾದಿ, ಟಪ್ಪಾಲು ಇಲಾಖೆಯ ಪ್ರಾಮುಖ್ಯ ನಿಬಂಧನೆಗಳು, ದರಗಳು, ಇತ್ಯಾದಿ ಹಿಂದುಸ್ಥಾನದ ಕಾರ್ಖಾನೆಗಳ, ಆಮದು ರಫ್ತುಗಳ, ಬಂದರುಗಳ ಸ್ಟೀಮರು ಕಂಪೆನಿಗಳ, ಮೊದಲಾದ ಹಲವುಬಗೆಯ ವಿವರಗಳು ಅಡಕವಾಗುವುವು.

ವ್ಯಾಪಾರಿಗಳಿಗೆ, ವ್ಯಾಪಾರೀ ಸಂಸ್ಥೆಗಳಿಗೆ ಮತ್ತು ಇತರರಿಗೆ ಅತ್ಯಗತ್ಯವಾದ ಪುಸ್ತಕ.

ಇದರಲ್ಲಿ ಜಾಹೀರಾತುಗಳನ್ನು ಪ್ರಕಟಿಸಲು ಅಪೇಕ್ಷಿಸುವವರು ದರಗಳ ಬಗ್ಗೆ ಈ ಕೆಳಗಿನವರಿಗೆ ಬರೆಯಿರಿ.

Advertisement Manager

SUPPLY AGENCY, LTD., UDIPI.

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H SHETTY at "NAVAYUGA" OFFICE, UDIPI.

Registered No. M. 3618

೨೦ ಕ್ರ... -ಬಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc. APPLY TO THE MANAGER

ನವಯುಗ

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL XVI-NO 42

24-6-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೨೪ ಜೂನ್, ೧೯೩೭ [ಸಂಚಿಕೆ ೪೨

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I.)

BRANCHES:

1 BOMBAY

2 BANGALORE CITY	17 HUBLI
3 BELGAUM	18 GADAG
4 BYADGI	19 KARWAR
5 BELLARY	20 KUMTA
6 ADONI	21 ANKOLA
7 HOSPET	22 HONAVAR
8 TALIPARAMBA	23 BHATKAL
9 UPPINANGADI	24 BRAHMAVAR
10 KASARGODE	25 HUNGARCUTTA
11 PAYYANUR	26 SIRSI
12 KANHANGAD	27 SAGAR
13 KARKALA	28 COONDAPOOR
14 NANDYAL	29 UDIPI
15 PRODATTUR	30 MANGALORE
16 TADPATRI	31 CANNANORE

BEG TO ANNOUNCE

that the Syndicate has been included in the list of Scheduled Banks under the Reserve Bank of India Act.

Non-Scheduled Banks, other companies and company promoters may take advantage of this for depositing their amounts with the Syndicate under the Indian Companies Act 1936.

Paid up Capital	Rs. 3,48,400
Reserves	„ 19,2,390
Deposits exceed	„ 24 lakhs
Total Working Funds exceed	„ 43 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-1,01 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —— ಬೊಂಬಾಯಿ, ಮದ್ರಾಸು, ಕಲ್ಕತ್ತ

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**
೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:— ಪಂಡಿತ್ ಎ. ವಿ. ಆರಮುವ್
ಚಿಕಾಕೋಲ್

ನಮ್ಮ ಜರಿ ಪೀತಾಂಬರ, ರೇಶ್ಮೆ ಮದಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು ಇನಾಮುಗಳು.

OUR CUSTOMER
THIS MAN

THIS MAN
WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಅಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾವ್ನಿ, ಪೇಟ, ಕೋಟಿಂಗ್, ಶರ್ಟಿಂಗ್ ಸಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳ, ಧಾವಳಿ, ನಾಮ್ಗಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು ಬುಟ್ಟಿ, ಹಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55 ಪಡಲು ಸಾದಾ 16 ಮೊಳದ ಸೀರೆ 1 ಕ್ಕೆ ರೂ. 16 ರಿಂದ ರೂ 35 ರ ವರೆಗೆ. ಆರೆ ಕಡಮೆ 16 ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ. 16 ಖಣ 1 ಕ್ಕೆ ರೂ 1½ ರಿಂದ ರೂ 10 ರ ವರೆಗೆ ಪೋಸ್ಟು ಖರ್ಚು ಪ್ರತ್ಯೇಕ, ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚಾಕಂಬಾ, ಬೆನಾರಿಸ್, ಕಾಶಿ



ಧರ್ಮಾರ್ಥ
ಬಹುಮಾನಗಳು
1-4-0 ಗೆ !
—— **ಯಾರಿಗೆ?** ——

ರೂಪಾಯಿ 1—4—0 ಕೊಟ್ಟು 14 ಸೀಸೆ ಒಟ್ಟೋರೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ —3 ಡಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೆಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಸ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್ ; 1 ಜತೆ ಗುಬ್ಬಿಗಳು; 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬುಸಮೇತ 1 ಇಮಿಟೇಶನ್ ಮೋತಿಮಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. **ಇಂದೇ ಆರ್ಡರು ಕೊಡಿರಿ.**

Bengal Watch Co.,
Post Box No. 12214, CALCUTTA

ಕಿರಿಯರ ಪ್ರಪಂಚದ

ಪುಸ್ತಕಗಳು.

೧	ನಾಟಕಕಥೆಗಳು ..	೦	೨	೦
೨	ಮುಂದಿನ ದೇವರು .	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ ..	೦	೪	೦
೫	ಸಂಶಯ ಪಿಶಾಚಿ .	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಧುವನ	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦
೯	ಹೆಂಡ್ತಿ ಗಂಡನಾದರೆ!	೦	೪	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

WANTED

Influential agents to canvass Subscribers and to get advertisements for 'Navayuga' throughout Karnataka on pay or commission basis.

For particulars apply to—

The Manager,
Navayuga Udipi

ಅಖಿಲ ಕನ್ನಡ ನಾಡಿಗೆ
ಪ್ರೀತಿಯಾಗಿರುವ

ಮಾಸ] ಕಥಾಕುಂಜ [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

— ಮಾನ್ಯ ವೈಸರಾಯರ ಭಾಷಣ —

[ಇದೇ ತಾ. 21ನೇ ರಾತ್ರಿ ಘಂಟೆ 10ಕ್ಕೆ ಮಾನ್ಯ ವೈಸರಾಯರು ದಿಲ್ಲಿಯಲ್ಲಿ ರೇಡಿಯೋ ಮೂಲಕ ಕೊಟ್ಟ ಭಾಷಣದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.]

ನಾನು ನಾಳೆ ಹಿಂದೂದೇಶಕ್ಕೊಂದು ಸಂದೇಶವನ್ನು ಪ್ರಕಟಪಡಿಸುವೆನು. ಇಂದು ನಾನು ಆ ಕುರಿತು ನಿಮ್ಮಲ್ಲಿ ಪ್ರತಿಯೊಬ್ಬನಿಗೆ ವೈಯಕ್ತಿಕವಾಗಿ ಕೆಲವು ಮಾತುಗಳನ್ನು ಹೇಳಿ, ಸದ್ರಿ ಸಂದೇಶವನ್ನು ನೀವೆಲ್ಲಾ ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಹಿಂದುದೇಶದಲ್ಲಿನ ಈಗಣ ರಾಜಕೀಯ ಘಟನೆಯ ಸ್ಥಿತಿ, ಆ ಕುರಿತು ದೇಶದ ಹಲವು ಕಡೆಗಳಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳಲ್ಲಿ ಉಂಟಾಗಿರುವ ಸಂದೇಹ ಮತ್ತು ಅನಿಶ್ಚಿತತೆಗಳು ನಿಮಗೆಲ್ಲರಿಗೂ ತಿಳಿದೇ ಇವೆ. ಈ ಪ್ರಾಮುಖ್ಯ ಪ್ರಶ್ನೆಗಳ ಕುರಿತು ನಡೆಯುತ್ತಿರುವ ಸಾರ್ವಜನಿಕ ಚರ್ಚಾಸರಣಿಯನ್ನು ಆತುರ, ಮೈತ್ರಿ ಮತ್ತು ಆ ಗ್ರಹರಹಿತ ಮನಸ್ಸಿನಿಂದ ಪರಿಶೀಲಿಸುತ್ತಿದ್ದು, ಸಾರ್ವಜನಿಕ ಮುಖಂಡರ ಅಭಿಪ್ರಾಯ, ಪತ್ರಿಕೆಗಳ ಟೀಕೆಗಳಿಂದೆಲ್ಲಾ ಜನಮತದ ಪ್ರವಾಹವನ್ನರಿತುಕೊಂಡ ನನ್ನ ದೃಢವಾದ ಅಭಿಪ್ರಾಯವೆಂದರೆ, ಈಗ ಉಪಸ್ಥಿತವಾಗಿರುವ ತೊಡಕುಗಳಿಗೆ ಬಹುತೇಕ ತಪ್ಪು ಅಭಿಪ್ರಾಯಗಳೇ ಕಾರಣವಾಗಿವೆ; ಮತ್ತು ಎಲ್ಲರೂ ಸದಿಚ್ಛೆಯುಳ್ಳವರಾದರೆ ಅವುಗಳನ್ನು ತಾಳ್ಮೆಯಿಂದ ಪರೀಕ್ಷಿಸಿ ನಿವಾರಿಸಲು ಸಾಧ್ಯವಿದೆ. ನಾನು ನಾಳೆ ಕೊಡುವ ಸಂದೇಶದಲ್ಲಿ, ಈಗ ಚರ್ಚೆಗೊಳಗಾಗಿರುವ ಪ್ರಶ್ನೆಗಳನ್ನು ವಿಸ್ತಾರವಾಗಿ ಮತ್ತು ಅಧಿಕಾರಿಕವಾಗಿ ವಿವರಿಸಲೆತ್ನಿಸಿರುವೆನು. ಅದರಿಂದ ನಾನು, ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಮತ್ತು ನಿಮ್ಮ ದೇಶದ ಭವಿಷ್ಯಕ್ಕೆ ಅತಿ ಪ್ರಾಮುಖ್ಯವಾದ ವಿಷಯದ ಕುರಿತು ಸರಿಯಾದ ನಿರ್ಣಯಕ್ಕೆ ಬರಲು ಸಹಾಯ ಮಾಡುವಂತಾಗಬಹುದೆಂದೇ ನನ್ನ ಆಶೆ.

ಈ ಪ್ರಶ್ನೆಗಳ ಕುರಿತು ನಿಮ್ಮ ಅಭಿಪ್ರಾಯವನ್ನು ನೀವು ರೂಪಿಸುವಾಗ, ಚರ್ಚೆಗೊಳಗಾಗಿರುವ ಪಾರಿಭಾಷಿಕ ಅಥವಾ ಭಾವಿಕ ವಿಷಯಗಳನ್ನು ಮಾತ್ರವಲ್ಲದೆ ಹೊಸ ರಾಜಕೀಯ ಘಟನೆಯಲ್ಲಡಕವಾಗಿರುವ ಇದೇ ಸುಧಾರಣೆಯ ಸ್ವರೂಪಕ್ಕೂ, ಈಗ ಹಿಂದೂ ದೇಶದಲ್ಲಿರುವ ಪರಿಸ್ಥಿತಿ ಮತ್ತು ಕಳೆದ 18ವರ್ಷಗಳಿಂದ ಈ ದೇಶದಲ್ಲುಂಟಾಗಿರುವ ರಾಜಕೀಯ ಪ್ರಗತಿಗೂ ಇರುವ ಸರ್ವಸಾಮಾನ್ಯ ಸಂಬಂಧವನ್ನು ಅವಲೋಕಿಸಿಕೊಳ್ಳಬೇಕೆಂದೇ ನಾನು ನಿಮಗೆ ಕೊಡುವ ಸಲಹೆ. ಈ ಸಂಗತಿಗಳ ಕುರಿತೆಲ್ಲಾ ನಾನು ನಿಮ್ಮ ಲಕ್ಷ್ಯವನ್ನೆಳೆಯುವುದೇಕೆಂದರೆ, ನೀವು ಏನಾದರೊಂದು ಕಾರ್ಯವನ್ನು ಮಾಡುವಾಗ, ಮಹತ್ತಾದ ಮತ್ತು ಸಿಂಧುವಾದ ಕಾರಣಗಳ ಹೊರತು, ಪ್ರಕೃತದ ಸಂಧಿಗ್ಧ ಪರಿಸ್ಥಿತಿಯಲ್ಲಿ ರಾಜಕೀಯ ಸುಧಾರಣೆಯ ನಿರಂತರವಾದ ಪ್ರಗತಿಯ ಕ್ರಮವನ್ನು ತಾತ್ಕಾಲಿಕವಾಗಿಯಾದರೂ ತಡೆಗಟ್ಟುವ ತೀವ್ರ ಅವಿವೇಕದ ಕುರಿತು ಚೆನ್ನಾಗಿ ವಿಚಾರಿಸಿಕೊಳ್ಳಬೇಕೆಂದು.

10 ವರ್ಷಗಳ ಮೊದಲು ನಾನು ಕೃಷಿ ಕಮಿಶನಿನೊಂದಿಗೆ ಈ ದೇಶವನ್ನೆಲ್ಲಾ ಸಂಚರಿಸಿದಾಗ, ಹಳ್ಳಿಯ ಜನರಿಗೆ ಸಹಾಯಮಾಡಿ, ಹಿಂದೀ ಹಳ್ಳಿಗಳ ಜೀವನವನ್ನು ಸುಧಾರಿಸಬೇಕೆಂದು ನನ್ನಲ್ಲಿ ಉತ್ಕಟೇಚ್ಛೆಯುಂಟಾಯಿತು. ಆದರೆ ಆ 2 ವರ್ಷಗಳಲ್ಲಿ ನನ್ನಲ್ಲುಂಟಾದ ಅಭಿಪ್ರಾಯಗಳು ಕೇವಲ ನನ್ನ ವಿಚಾರಣೆಯ ವಿಷಯಕ್ಕೆ ಮಾತ್ರ ಸಂಬಂಧಿಸಿದವುಗಳಾಗಿರಲಿಲ್ಲ. ನನ್ನ ಸಂಚಾರದ ಅನುಭವದಿಂದ, ಬೇರೆ ಬೇರೆ ರೀತಿಯ ಅಭಿಪ್ರಾಯಗಳುಳ್ಳ ಅನೇಕ ಸ್ತ್ರೀಪುರುಷರುಗಳೊಡನೆ ನಡೆಸಿದ ಮಾತುಕತೆಗಳಿಂದ ಹಿಂದುದೇಶದಲ್ಲೀಗ ಉಂಟಾಗಿರುವ ಸಮಸ್ಯೆಗಳ ಕುರಿತು ನಾನು ಹೊಸ ತಿಳುವಳಿಕೆಯೊಂದನ್ನು ಪಡೆದೆನು. ಹಿಂದೀ ದೃಷ್ಟಿಕೋನವನ್ನರಿತೆನು. ಇಂಗ್ಲೆಂಡಿನಲ್ಲಿ ಜೀವಿಸುವವನೊಬ್ಬನ ದೃಷ್ಟಿಯಿಂದ ಹಿಂದೂದೇಶದ ಪರಿಸ್ಥಿತಿಯ ಸ್ವರೂಪದ ಪರಿಚಯವು ನನಗೆ ಚೆನ್ನಾಗಿರುತ್ತಾ, ಹಿಂದೂದೇಶವು ತಮ್ಮ ಪ್ರಿಯ ಮಾತೃಭೂಮಿಯಾಗಿರುವ, ತಮ್ಮ ಜನಾಂಗದ ತೊಟ್ಟಿಲಾಗಿರುವ, ತಮ್ಮ ಪ್ರಗಾಢ ಪ್ರೇಮ, ಅಭಿಮಾನ ಮತ್ತು ಅತ್ಯುಚ್ಚ ಆಶೆಯ ಗುರಿಯಾಗಿರುವ ಹಿಂದೀಯರ ಮನೋವೃತ್ತಿಯನ್ನೂ ತಿಳಕೊಂಡೆನು.

ಅನುಭವವು ನನ್ನ ಮನೋವೃತ್ತಿ ಮತ್ತು ಅಭಿಪ್ರಾಯಗಳಲ್ಲಿ ಮಹತ್ತಾದ ಮಾರ್ಪಾಟವನ್ನುಂಟುಮಾಡಿತೆಂದು ನಾನು ಯಥಾರ್ಥವಾಗಿ ನಿಮಗೆ ಹೇಳುತ್ತೇನೆ. ಆ ಮೇಲೆ ನಾನು ಜೈಂಟ್ ಸಿಲೆಕ್ಟ್ ಕಮಿಟಿಯ ಅಧ್ಯಕ್ಷನಾದಾಗ, ಮುಖ್ಯವಾಗಿ ಹಿಂದೂ ದೇಶದ ರಾಜಕೀಯ ಭಾವನೆಯು ಅಭಿವೃದ್ಧಿಗೊಂಡು, ತಮ್ಮ ಮಾತೃಭೂಮಿಯ ಮಹತ್ವ, ಅದರ ಚರಿತ್ರೆ ಮತ್ತು ಲೋಕದಲ್ಲಿ ಅದರ ಪ್ರಾಮುಖ್ಯತೆಯಿಂದಾಗಿ ಅದು ಪಡೆಯಬೇಕಾದ ಉಚ್ಚಸ್ಥಾನಮಾನಗಳ ಕುರಿತು ಹಿಂದೀಯರಲ್ಲಿ ಜಾಗ್ರತಿಯು ಬೆಳೆಯುತ್ತಾ ಬಂದ ಪರಿಣಾಮವಾಗಿ ಹಿಂದೂದೇಶದ ಮತ್ತು ನನ್ನ ದೇಶದ ಸಂಬಂಧಕ್ಕೆ ಧಕ್ಕೆಯನ್ನುಂಟುಮಾಡಿರುವ ರಾಜಕೀಯ ತೊಡಕುಗಳನ್ನು ನಿವಾರಿಸುವುದರಲ್ಲಿ ನಾನು ನನ್ನ ಅಲ್ಪಮಟ್ಟಿನ ಸಹಾಯವನ್ನು ಮಾಡುವ ಸುಯೋಗವು ನನಗೆ ದೊರೆಯಲೆಂಬ ಆಶೆಯಿಂದ ಪ್ರೇರಿತನಾಗಿದ್ದೆನು. ದೇಶಾಭಿಮಾನ, ಸ್ವಾತಂತ್ರ್ಯಪ್ರೇಮ, ಉದಾರ ರಾಜ್ಯಭಾರ ಕ್ರಮಗಳಲ್ಲಿ ವಿಶ್ವಾಸ, ಈ ಗುಣಗಳ ಕುರಿತು ನನ್ನ ಜನಾಂಗದ ಪ್ರತಿಯೋರ್ವ ಸ್ತ್ರೀಪುರುಷನೂ ಅಭಿಮಾನ ಪಡೆಯುವನು. ಆದುದರಿಂದ ಅವೇ ಗುಣ ಮತ್ತು ಆಕಾಂಕ್ಷೆಗಳೇ ಹಿಂದೂದೇಶದಲ್ಲಿ ಬೆಳೆದು ಬಂದರೆ ನನ್ನ ದೇಶೀಯರು ಆ ಕುರಿತು ಚಿಂತೆ ಅಥವಾ ತಳಮಳಗೊಳ್ಳದೆ ಹೆಮ್ಮೆಗೊಂಡು ಅದನ್ನು ಸಹಾನುಭೂತಿಯಿಂದ ಕಂಡು, ಆದರಪೂರ್ವಕವಾದ ಸಹಾಯಮಾಡಬೇಕೆಂದೇ ನನಗೆ ತೋರಿತು. ಮತ್ತು ಅಗಾಧವಾದ ವಿಧಿಯ ಲೀಲೆಯಿಂದಾಗಿ, ಹಿಂದೂ ದೇಶದಲ್ಲಿ ಒಕ್ಕಟ್ಟನ್ನು ಸ್ಥಾಪಿಸಿ ಮಾನವ ಕೋಟಿಯ ಲೌಕಿಕೋನ್ನತಿಗಾಗಿ ಇಂಗ್ಲೆಂಡು ಮಾಡಿರುವ ಅತಿ ಮಹತ್ವದ ಸಹಾಯವೆಂದು ನಮ್ಮಲ್ಲಿ ಹೆಚ್ಚಿನವರು ನಂಬುವ ಪ್ರಜಾಜವಾಬ್ದಾರಿ ಮತ್ತು ಪ್ರಜಾಸತ್ತಾತ್ಮಕ ರಾಜ್ಯಭಾರದ ಜನೋಪಕಾರಕ ತತ್ವಗಳನ್ನು ಜಾಗರೂಕತೆಯಿಂದ ಬೆಳೆಸುವ ಸುದೈವವು ಬ್ರಿಟಿಷರದ್ದಾದರೆ ಅವರಿಗೆ ಅದಕ್ಕಿಂತ ಹೆಚ್ಚಿನ ವಿಜಯವಾದರೂ ಮತ್ತೇನು ಬೇಕು? ಅದಕ್ಕಿಂತ ದೊಡ್ಡ ಪ್ರತಿಫಲವಾದರೂ ಬೇರೆ ಏನುಂಟು? ನಮ್ಮಲ್ಲಿ ದೋಷವಿರಬಹುದು. ನಾವು ತಪ್ಪು ಮಾಡಿರಬಹುದು. ದೋಷಯುಕ್ತ ಮಾನವರಾದ ನಾವು ಹಲವು ಸುಸಂದರ್ಭಗಳನ್ನು ಕಳಕೊಂಡಿರಬಹುದು. ಪರಂತು ಸುಮಾರು 200ವರ್ಷಗಳ ಈ ಸುದೀರ್ಘ ಇತಿಹಾಸದ ನಂತರ, ಎರಡೂ ಜನಾಂಗದವರಾದ ನಮ್ಮ ಹಿಂದಿನವರ ಪರಿಶ್ರಮ ಮತ್ತು ಈಗಣ ನಮ್ಮ ಪ್ರಯತ್ನದಿಂದಾಗಿ, ಪೂರ್ವ ಮತ್ತು ಪಶ್ಚಿಮಗಳೊಳಗಣ ಶಾಂತಿಯ ದಾರಿಯನ್ನು ತೋರಿಸುವ ಜ್ಯೋತಿಯಾಗಿ ಮುಂದೆ ಬೆಳಗಲಿರುವಂತಹ ರಾಜ್ಯಭಾರ ಕ್ರಮವನ್ನು ಹಿಂದೂದೇಶದಲ್ಲಿ ಸ್ಥಾಪಿಸಲು ಸಹಾಯವಾದ ಪಕ್ಷದಲ್ಲಿ, ನಿಸ್ಸಂದೇಹವಾಗಿ ನಮ್ಮಿಬ್ಬರ ಪರಿಶ್ರಮವು ನಿಷ್ಫಲವಾಗಿಲ್ಲೆಂದು ಪರಿಗಣಿಸಿಕೊಳ್ಳಬಹುದು. ನಾನು ನನ್ನ ಪ್ರಭುಗಳಿಂದ ವೈಸರಾಯತನದ ಮಹತ್ತಾದ ಜವಾಬ್ದಾರಿಯನ್ನು ಸ್ವೀಕರಿಸುವಾಗ ಇಂತಹ ಆಶೆ ಮತ್ತು ಉದ್ದೇಶಗಳೇ ನನ್ನ ಆಶಯವೂ ಪೋಷಣೆಯೂ ಆಗಿತ್ತು. ಇಂತಹ ಮನಸ್ಸಿನಿಂದಲೇ ನಾನು ನಿಮಗೆ ಇಂದಿನ ಸಂದೇಶವನ್ನಿತ್ತಿರುವೆನು. ಅದನ್ನು ನೀವು ಸಹಾನುಭೂತಿಯಿಂದ ಆಳವಾಗಿ ವಿಚಾರಿಸಬೇಕೆಂದೇ ನನ್ನ ಕೇಳಿಕೆ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer Dr. D N. JASANI, Vitalbhai Patel Road, BOMBAY 4

ರಸ್ಯದ ನೂತನ ನಿರ್ಮಾಣ

ಕೌಟುಂಬಿಕ ಜೀವನ ಮತ್ತು ಸಾಮ್ಯವಾದ

[ರಸ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು ರಸ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್ ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ'ಮಾನವ ಸಮಾಜದ ಮೂಲೋತ್ಪಾಟನ' (**Humanity uprooted**) ಎಂಬುದೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.] —ಸಂ ನ

ರಸ್ಯದ ಹೊಸ ಲೈಂಗಿಕ ಭಾವನೆ ಮತ್ತು ಆ ಕುರಿತಾದ ವೈಯಕ್ತಿಕ ಸ್ವಾತಂತ್ರ್ಯವು ಮಾನವ ಸಮಾಜದ ಅತ್ಯಂತ ಹಳೆಯ ಸಂಸ್ಥೆಗಳಾದ ವಿವಾಹ ಮತ್ತು ಕುಟುಂಬದ ಅಡಿಗಲ್ಲನ್ನೇ ಸಡಿಲಿಸಹತ್ತಿವೆ. ರಸ್ಯಾನರು ಕುಟುಂಬದ ಕುರಿತು, ಧರ್ಮ ಮತ್ತು ಖಾಸಗಿ ಸೊತ್ತಿನ ಮೇಲೆಹೂಡಿರುವಂತಹ ಉದ್ದೇಶಪೂರ್ವಕವಾದ ಧಾಳಿಯನ್ನೇನೂ ನಡಿಸುವುದಿಲ್ಲ. ಕುಟುಂಬವೆಂಬ ಸಂಸ್ಥೆಯನ್ನೇ ನಿರ್ಮೂಲಿಸಿಬಿಡಬೇಕೆಂಬವರೂ ಇದ್ದಾರೆ. ಆದರೆ ಅವರು ಅಧಿಕಾರದಲ್ಲಿಲ್ಲದುದರಿಂದ ಅವರ ಮಾತನ್ನು ಕೇಳುವವರಿಲ್ಲ. ರಸ್ಯದ ಈಗಣ ಆಡಳಿತ ನಡಿಸುವವರು ಪ್ರಕೃತದ ಪರಿಸ್ಥಿತಿಯಲ್ಲಿ ಸಮಾಜದ ಭದ್ರತೆಗೆ ಕುಟುಂಬವು ಆವಶ್ಯವೆಂಬ ಭಾವನೆಯುಳ್ಳವರಿರುತ್ತಾರೆ ಸಾಮೂಹಿಕ ಭಾವನೆಯನ್ನು ಬೆಳೆಸುವ ತಮ್ಮ ಉದ್ದೇಶಕ್ಕೆ ಕುಟುಂಬವು ತೊಡಕಾಗಿರುವುದೆಂಬುದನ್ನವರು ಬಲ್ಲರು. ಆದರೆ ಅದರಿಂದ ಕೆಲಮಟ್ಟಿನ ಪ್ರಯೋಜನವಿರುವುದರಿಂದ ಮತ್ತು ಅದರ ಸ್ಥಾನದಲ್ಲಿ ಬೇರೆ ಯಾವುದನ್ನೂ ರಸ್ಯಾನರು ಈ ವರೆಗೆ ನಿರ್ಮಿಸದಿರುವುದರಿಂದ ಕುಟುಂಬವನ್ನವರು ನಾಶಮಾಡುವ ಪ್ರಯತ್ನ ನಡಿಸುವುದಿಲ್ಲ. ಆದರೆ ಅದನ್ನೆಂದಿಗೂ ಪ್ರೋತ್ಸಾಹಿಸುವುದಿಲ್ಲ ಇತರ ದೇಶಗಳಲ್ಲಿ ಮನೆ ಮತ್ತು ಕುಟುಂಬವೆಂದರೆ ಸಮಾಜದ ಅತಿ ಪವಿತ್ರವೂ ಪ್ರಮುಖ್ಯವೂ ಆದ ಸಂಸ್ಥೆಗಳಾಗಿವೆ. ಅದಕ್ಕೆ ಧರ್ಮದ ಆಧಾರವನ್ನೀಯಲಾಗುತ್ತದೆ. ಅವು ಒಡೆದು ಹೋಗದಂತೆ ಬಹಳ ಪ್ರಯತ್ನ ನಡಿಸಲ್ಪಡುತ್ತದೆ ಆದರೆ ರಸ್ಯದಲ್ಲಿ ಹಾಗಲ್ಲ. ಅಲ್ಲಿ ಕುಟುಂಬವೆಂಬುದು ವ್ಯಕ್ತಿಗಳ ಸ್ವೇಚ್ಛೆಯ ಕೂಟವಾಗಿದೆ ಅದರ ಆಂತರಿಕ ಸತ್ವದಿಂದಲೇ ಅದು ಉಳಿಯಬೇಕೇ ಹೊರತು ರಸ್ಯಾನರು ಅದಕ್ಕಾವ ಸಹಾಯವನ್ನೂ ಕೊಡಲಾರರು. ಕುಟುಂಬವು ಯಾವಾಗಲೂ ಹೊರಗಣ ಆಧಾರದ ಬಲದಿಂದುಳಿಯಬೇಕಾದರೆ ಅದು ಅಳಿಯುವುದೇ ಒಳ್ಳೇದೆಂದು ಕೆಲ ಮಂದಿ ಕ್ರಾಂತಿಕಾರರ ಅಭಿಮತ.

ಪ್ರಕೃತ ರಸ್ಯದ ಪಟ್ಟಣಗಳಲ್ಲಿ ವಿಶೇಷವಾಗಿ ಮೋಸ್ಕೋದಲ್ಲಿ ವಿವಾಹವಿಚ್ಛೇದಗಳು ಬಹಳವಾಗಿ ಹೆಚ್ಚಿರುವವು 1928 ರಲ್ಲಿ ನಡೆದ ವಿವಾಹಗಳಿಗಿಂತಲೂ ಆದ ವಿಚ್ಛೇದಗಳೇ ಅಧಿಕವಾಗಿವೆ. ಆದರೆ ಕುಟುಂಬವು ಇನ್ನೂ ಸ್ಥಿರವಾಗಿಯೇ ಉಳಿದಿದೆ ಹಳ್ಳಿಗಳಲ್ಲಿ ಅದು ಬಲವಾಗಿ ಬೇರೂರಿದೆ ಪುರಾತನ ಕಾಲದಿಂದ ಪರಂಪರಾಗತವಾಗಿ ಬಂದಿರುವ ಕೌಟುಂಬಿಕ ಭಾವನೆಯು ಹಳ್ಳಿಗರಲ್ಲಿ ಬಲವಾಗಿದೆ. ಆದರೆ ರಸ್ಯವು ಜ್ಯಾರಿಗೆ ತಂದಿರುವ ಸಾಮುದಾಯಿಕ ವ್ಯವಸಾಯ ಕ್ರಮವು ಕೆಲವೆಡೆ ಕುಟುಂಬದ ಕಟ್ಟನ್ನು, ಕಡಿದು ಹಳೆಯ ಕೌಟುಂಬಿಕ ಪದ್ಧತಿಗಳನ್ನು ಮೂಲೆಗೊತ್ತಿದೆ ಆದರೆ ರಸ್ಯಾನನು ಸ್ವಾಭಾವಿಕ ಮತ್ತು ಸರಳ ಸ್ವಭಾವದವನು ಅಮೇರಿಕದಂತಹ ಕೃತಕತೆಯನ್ನು ಅವನರಿಯನು. ಇದು ಹೊರತು ಅವನು ಸದಾ ಸಹವಾಸಪ್ರಿಯನು. ಏಕಾಕಿತ್ವವು ಅವನಿಗೆ ಅಸಹನೀಯವಾಗುವುದು. ಅವನು ಮಾನವಪ್ರೇಮಿಯು ಸದಾ ಸ್ನೇಹ ಸಹಚರ್ಯೆಯನ್ನಾಶಿಸುವವನು. ಆದುದರಿಂದ ಅವನಿಗೆ ಕುಟುಂಬವು ಸಾಮಾಜಿಕ ಮತ್ತು ಧಾರ್ಮಿಕ ಆನಂದವನ್ನುಂಟುಮಾಡುವುದು. ವಿಶೇಷವಾಗಿ ರಸ್ಯಾನನಿಗೆ ಮಕ್ಕಳೆಂದರೆ ಪ್ರಾಣ ನಾನೊಮ್ಮೆ ರಸ್ಯಾನ ಡಾಕ್ಟರರೊಬ್ಬರೊಂದಿಗೆ ಒಂದು ಹಳ್ಳಿಗೆ ಹೋಗಿದ್ದೆ ನಾವಿಬ್ಬರೂ ಒಬ್ಬ ಒಕ್ಕಲಿಗನ ಮನೆಯಲ್ಲಿ ಬೆಳಗ್ಗಿನ ಊಟಮಾಡುತ್ತಿದ್ದೆವು ಆಗ ನೆರೆಯ ನಡು ಪ್ರಾಯದ ಒಕ್ಕಲಿಗನೊಬ್ಬನೂ ಆತನ ಹೆಂಡತಿಯೂ ಸೇಬು, ಅಂಜೂರ, ಪತ್ತಿ ಮೊದಲಾದುವುಗಳನ್ನೆಲ್ಲಾ ತಂದು ಡಾಕ್ಟರರ ಮುಂದಿಟ್ಟು ಕಣ್ಣೀರಿಡತೊಡಗಿದರು. ಸ್ತ್ರೀಯು ದುಃಖವನ್ನು ತಡೆಯಲಾರದೆ ಬೊಬ್ಬೆ ಹಾಕಿ ಅಳುತ್ತಾ ತಾನು 5 ಹೆತ್ತುದರಲ್ಲಿ ಒಂದೇ ಒಂದು ಬದುಕಿರುವ 2 ವರ್ಷದ ಹೆಣ್ಣುಕೂಸೊಂದು ಕಠಿಣ ಕಾಯಿಲೆಗೊಳಗಾಗಿದೆ ಡಾಕ್ಟರರು ಕೂಡಲೆ ಮನೆಗೆ ಬಂದು ಅದರ ಪ್ರಾಣವನ್ನುಳಿಸಬೇಕೆಂದು ಮೊರೆಯಿಟ್ಟಳು. "ನನ್ನ ಚಿಕ್ಕ ಕೂಸು, ನನ್ನ ಪ್ರಾಣ, ನನ್ನ ಹೃದಯ ದೇವತೆ, ನನ್ನ ಜೀವನಾಧಾರವಾದ ಒಂದೇ ಒಂದು ಕೂಸನ್ನು ಸಾಯಗೊಡಬೇಡಿ ಹೇಗಾದರೂ ಬದುಕಿಸಿಕೊಡಿ. ಅದು ನನ್ನನ್ನು ಬಿಟ್ಟು ಹೋದರೆ ನಾನೇನು ಮಾಡಲಿ!" ಎಂದು ಸ್ತ್ರೀಯು ಮೊರೆಯಿಟ್ಟಳು. ಅವಳ ಗಂಡನು ನಿರಕ್ಷರ ಕುಕ್ಷಿಯಾದರೂ ಮಕ್ಕಳ ಪ್ರೇಮದ ಹೃದಯವೇಧಕ ಹಾಗೂ ಅತ್ಯಂತ ಕವಿತಾಮಯ ಮಾತುಗಳನ್ನು ನುಡಿದನು. ಅದನ್ನು ನನ್ನಿಂದ ಸರಿಯಾಗಿ ಭಾಷಾಂತರ ಮಾಡಲು ಸಾಧ್ಯವೇ ಇಲ್ಲ. "ಪ್ರಿಯತಮೆ ಮಗುವೊಂದಿಲ್ಲದ, ಒಂದೇ ಒಂದು ಮಗು ಕೂಡಾ ಇಲ್ಲದ ನೀನು ಆತ್ಮವನ್ನೇ ಕಳಕೊಂಡಂತೆ ತಳಮಳಿಸುತ್ತಿರುವೆ" ಎಂಬುದೇ ಗಂಡನ ಉದ್ಗಾರವಾಗಿದ್ದಿತು ಇದು ರಸ್ಯಾನರ ಸಂತತಿ ಪ್ರೇಮದ ಅಂತರಾಳವನ್ನು ತೋರಿಸುತ್ತದೆ ಕಮ್ಯೂನಿಸ್ಟರೂ ಇಂತಹಭಾವಿ ಕಕ್ಷೆಗೆ ಹೊರಗಾಗಿಲ್ಲ. ಮಾನಸಿಕವಾಗಿ ಕುಟುಂಬದ ಕುರಿತು ತಿರಸ್ಕಾರ ಸೂಚಿಸುವ ಕಮ್ಯೂನಿಸ್ಟ್ ಪ್ರಮುಖರು ಮನೆಯಲ್ಲಿ ತಮ್ಮ ಚಿಕ್ಕ ಮಕ್ಕಳನ್ನು ಕಂಡೊಡನೆಯೇ ಹಿಡಿದೆತ್ತಿ ಎದೆಗಪ್ಪಿ ಮುದ್ದಾಡುವುದನ್ನು ನಾನು ಕಂಡಿರುತ್ತೇನೆ. ಆದರೆ ಈ ಕುಟುಂಬ ಪ್ರೇಮವು, ಮಕ್ಕಳ ಪ್ರೀತಿಯು, ಸಹವಾಸ ಪ್ರಿಯತೆಯು, ಸ್ವಾಭಾವಿಕ ಜೀವನಾಸಕ್ತಿಯು, ಹಳೆಯ ಪದ್ಧತಿ ಪ್ರೇಮಾದಿಗಳೆಲ್ಲಾ ದಿನೇ ದಿನೇ ಪ್ರಬಲವಾಗುತ್ತಿರುವ ಕ್ರಾಂತಿಯ ಧಾಳಿಯನ್ನು ತಡೆಗಟ್ಟಿ ಚಿರಕಾಲ ಬಾಳಿಕೊಂಡಿರಬಲ್ಲವೇ ಎಂಬುದೀಗ ಪ್ರಶ್ನೆಯಾಗಿದೆ

ಕುಟುಂಬದ ಕಟ್ಟಿನ ಮೂಲವು ಖಾಸಗಿ ಸೊತ್ತೆನ್ನಬಹುದು. ಒಬ್ಬನ ಹಸ್ತ ಧನ ಸಂಚಯವಾಗಿ ಅದನ್ನು ತನ್ನ ಮಕ್ಕಳೇ ಅನುಭವಿಸುವಂತಾಗಬೇಕೆಂಬ ಆತನ ಪ್ರಯತ್ನದ ಪರಿಣಾಮವಾಗಿಯೇ ಏಕ ಪತ್ನಿ ಕುಟುಂಬವುಂಟಾಯಿತೆನ್ನಬಹುದು. ಒಂದು ಶತಮಾನದ ಹಿಂದಿನ ವರೆಗೆ ಪ್ರತಿಯೊಂದು ಕಡೆಯಲ್ಲಿಯೂ ಕುಟುಂಬವೇ ಸಾಂಪತ್ತಿಕ ಉತ್ಪತ್ತಿಯ ಕೇಂದ್ರವಾಗಿದ್ದಿತು ಈಗಲೂ ಅದು ಸಂಪತ್ತು ಸಂಚಯದ ಕೇಂದ್ರವಾಗಿರುವುದು ಕುಟುಂಬದ ಸೊತ್ತಿನಲ್ಲಿ ತಂದೆ, ತಾಯಿ, ಸೋದರ ಸೋದರಿಯರೆಲ್ಲರ ಸ್ವಾರ್ಥವಿರುವುದು. ಹೇರಳ ಹಣ ಸಂಚಯಿಸಿ, ಆಸ್ತಿ ಬದುಕು ಮಾಡಿ ತನ್ನ ಹೆಂಡತಿ ಮಕ್ಕಳ ಸುಖ ವಿಲಾಸವನ್ನೂ, ಕುಟುಂಬ ಗೌರವಾದಿಗಳನ್ನೂ ಹೆಚ್ಚಿಸಲು ಪ್ರತಿಯೊಬ್ಬ ತಂದೆಯೂ ಬಹಳವಾಗಿ ಹೆಣಗಾಡುವನು. ಪುರಾತನ ಕಾಲದಿಂದಲೂ ಖಾಸಗಿ ಸೊತ್ತೆಂಬ ಅಡಿಗಲ್ಲ ಮೇಲೆಯೇ ಏಕಪತ್ನಿ, ಬಹುಪತ್ನಿ, ಮತ್ತು ಪಂಗಡ ಕುಟುಂಬಗಳು ಸ್ಥಾಪಿಸಲ್ಪಟ್ಟಿರುವವು. ಆದರೆ ರಸ್ಯದಲ್ಲಿ ವಿಶೇಷವಾಗಿ ಪಟ್ಟಣಗಳಲ್ಲಿ ಖಾಸಗಿ ಸೊತ್ತು ನಿಷೇಧಿಸಲ್ಪಟ್ಟಿದೆ ಅದನ್ನು ಆಮೂಲಾಗ್ರವಾಗಿ ಕಿತ್ತುಹಾಕಬೇಕೆಂದೇ ರಸ್ಯದ ಕ್ರಾಂತಿಕಾರರ ಪ್ರಯತ್ನವಿರುತ್ತದೆ. ಇದರಿಂದಾಗಿ ರಸ್ಯಾನ ಕುಟುಂಬದ ಅಡಿಗಲ್ಲನ್ನೇ ಕಿತ್ತಂತಾಗದಿರದು. ಕುಟುಂಬಕ್ಕೆ ತಾಗಿರುವ ಇನ್ನೊಂದು ಧಕ್ಕೆಯೆಂದರೆ ಧರ್ಮ ವಿನಾಶ ಧರ್ಮವು ಕುಟುಂಬವನ್ನು ಯಾವಾಗಲೂ ಪವಿತ್ರ ವೇದಿಕೆಯ ಮೇಲಿರಿಸಿ ಸಮಾಜಕ್ಕದನ್ನು ಆಧಾರಸ್ತಂಭವಾಗಿ ಮಾಡಿರುವುದು. ಮದುವೆಯಾಗಿ ಪತ್ನೀ ಪುತ್ರರೊಂದಿಗೆ ಜೀವಿಸಬೇಕೆಂದೇ ದೇವರ ಇಚ್ಛೆ. ಮದುವೆಯೆಂಬುದು ಜನ್ಮಜನ್ಮಾಂತರದ ಸಂಗತಿ. ಪುತ್ರ ಸಂತತಿ ಪಡೆಯದವನಿಗೆ ಸದ್ಗತಿಯಿಲ್ಲೆಂದಲ್ಲಾ ಕೌಟುಂಬಿಕ ಜೀವನವನ್ನು ಧರ್ಮಗಳು ಯಾವದೊಂದು ಸರಕಾರಕ್ಕಿಂತಲೂ ಬಲವಾಗಿ ಎತ್ತಿ ಹಿಡಿದಿರುವವು. ಆದರೆ ರಸ್ಯದಲ್ಲಿ ಧರ್ಮ ದೇವಸ್ಥಾನಗಳು ತಿರಸ್ಕಾರಕ್ಕೊಳಗಾಗಿವೆ. ಅವು ಅಳಿಯಹತ್ತಿವೆ. ರಸ್ಯದ ಹೆಚ್ಚಿನ ಜನತೆಗೆ ವಿಶೇಷವಾಗಿ ತರುಣರಿಗೆ ದೇವರ ಆಜ್ಞೆ, ಧಾರ್ಮಿಕ ನಿಯಮವೆಂಬುದು ಕಡ್ಡಿ ಸಮಾನವಾಗಿದೆ. ಅದನ್ನವರು ಒಂದಿಷ್ಟು ಗಣ್ಯಮಾಡಲಾರರು. "ಮಾತೃದೇವೋ ಭವ ಪಿತೃದೇವೋ ಭವ" ಎಂದು ರಸ್ಯದ ತರುಣರ ಮುಂದೆ ಹೇಳಿದರೆ, "ಅದೆಲ್ಲಾ ಹೌದು; ಆದರೆ ಅವರಿಗೆ ನಮ್ಮ ಹೊಸ ಸಮಾಜ ರಚನೆಯಲ್ಲಿ ವಿಶ್ವಾಸವಿದ್ದು ಅವರು ನಮಗೆ ಸಹಾಯಕರಾದರೆ ಮಾತ್ರ ನಾವು ಅವರನ್ನು ಮಾನಿಸುವೆವು. 'ಇಲ್ಲವಾದರೆ ಅವರ ಗೋಷ್ಟಿಯೇ ನಮಗಿಲ್ಲ" ಎಂದು ಅವರು ನಿರ್ದಾಕ್ಷಿಣ್ಯವಾಗಿ ಹೇಳಿಬಿಡುವರು. "ದೇವರು ಒಟ್ಟು ಮಾಡಿದವರನ್ನು ಮಾನವನು ದೂರ ಮಾಡದಿರಲಿ" ಎಂಬ ಕೆಥೋಲಿಕ ಧರ್ಮದ ಆಜ್ಞೆಯು ಅಪಹಾಸ್ಯಕರವೆಂದು ಕ್ರಾಂತಿಕಾರನು ನಿಷೇಧಿಸಿ ಬಿಡುವನು. ವಿವಾಹವೆಂಬುದು ಸ್ತ್ರೀಪುರುಷರಿಬ್ಬರ ಕೆಲಸ, ಅದರ ಜವಾಬ್ದಾರಿಯೂ ಅವರದೇ ದೇವರಾಗಲಿ ಮಾನವನಾಗಲಿ ಆ ಕುರಿತು ಮಾಡುವುದೇನೂ ಇಲ್ಲೆಂದು ರಸ್ಯಾನರವಾದ "ಮರಣದಲ್ಲಿ ಮಾತ್ರ ನಾವು ಅಗಲುವುದು" ಎಂಬ ಕೆಥೋಲಿಕರ ವಿವಾಹ ಸಂಸ್ಕಾರದ ಮಾತು ಅರ್ಥರಹಿತವಾದುದೆಂದು ಕ್ರಾಂತಿಕಾರರುಉದ್ಘೋಷಿಸುವರು. ಜೀವನಸುಖವನ್ನೇ ಮಣ್ಣುಗೂಡಿಸುವ ದಾಂಪತ್ಯದಿಂದ ಬಿಡುಗಡೆ ಹೊಂದಲು ಮರಣದ ವರೆಗೆ ಕಾಯುವಷ್ಟು ನಿರರ್ಥಕವಾದುದಲ್ಲ ಇಹ ಜೀವನ ಅದು ಅಮೂಲ್ಯವಾದುದು. ಆದುದರಿಂದ ಪರಸ್ಪರ ಸರಿಹೋಗದ ದಾಂಪತ್ಯವನ್ನು ಕಟ್ಟಿಕೊಂಡು ಆಜೀವ ಕೊಳೆಯುತ್ತಿರುವುದು ಮೂರ್ಖತನವೆಂದು ರಸ್ಯಾನರ ತರ್ಕ. ಹೀಗೆ ರಸ್ಯದ ಕ್ರಾಂತಿಕಾರರು, ಧರ್ಮ ದೇವರುಗಳನ್ನು ನಿಷೇಧಿಸಿ ಕುಟುಂಬದ ಧಾರ್ಮಿಕ ತಳಹದಿಯನ್ನೂ, ಖಾಸಗಿ ಸೊತ್ತನ್ನೂ ನಿರ್ಮೂಲಿಸಿ ಅದರಭೌತಿಕ ಅಸ್ತಿವಾರವನ್ನೂ ಕಿತ್ತು ಹಾಕುತ್ತಿರುವರು. (ಮುಂದುವರಿಯುವುದು.)

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತದೆ ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧-೦-೦

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦

'ಕಾಮಶಾಸ್ತ್ರ' ಧರ್ಮಾರ್ಥ ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡು ಹಾಕಿರಿ

ಆತಂಕ ನಿಗ್ರಹ ಫಾರ್ಮಸಿ, ೭೪. ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ಸಮಾಚಾರ ಸಂಗ್ರಹ: ಮೇಧ್ರಿದಿನಲ್ಲಿ ಒಳಸಂಚು, ಅಮೃತಸರದಲ್ಲಿ ಸಿಖ್ಖ ಮುಸಲ್ಮಾನ ಕಲಹ, ಕಮಲ ನೆಹರು ಸ್ಮಾರಕ, ಇಂಗ್ಲೆಂಡಿನೊಡನೆ ಬಾಸ್ಕರ ವಿನಂತಿ, ಕಾಂಗ್ರೆಸಿನೊಡನೆ ರಾಜಿಗೆ ಸರಕಾರವು ಸಿದ್ಧವಿದೆ.

ಮೇಧ್ರಿದಿನಲ್ಲಿ ಒಳಸಂಚು
1000 ಮಂದಿಯ ದಸ್ತಗಿರಿ

ಇದೇ ತಾ. 18ರಲ್ಲು ಮೇಧ್ರಿದಿನಲ್ಲಿ ಅತಿ ವ್ಯಾಪಕವಾಗಿ ಹಬ್ಬಿದ್ದ ಒಳಸಂಚೊಂದು ಬಯಲಿಗೆಳೆಯಲ್ಪಟ್ಟು ಆ ಸಂಬಂಧವಾಗಿ ಸುಮಾರು ಸಾವಿರ ಮಂದಿ ದಸ್ತಗಿರಿಮಾಡಲ್ಪಟ್ಟಿರುವರು. ಈ ಒಳಸಂಚುಗಾರರು ತಮ್ಮ ಅಪರಾಧವನ್ನೊಪ್ಪಿ ಸಂಚಿನ ಸಂಗತಿಗಳನ್ನೆಲ್ಲಾ ಸರಕಾರಕ್ಕೆ ತಿಳಿಸಿರುವರು. ಇವರು ದಕ್ಷಿಣ ಅಮೆರಿಕಾನ ರಾಯಭಾರಿ ನಿವಾಸವೊಂದರಲ್ಲಿ ನೆಲಸಿ, ಪ್ರಬಲವಾದೊಂದು ರೇಡಿಯೋವಿನ ಮೂಲಕ ಜನರಲ್ ಫ್ರೆಂಕೋರವರ ಸೇನಾಕೇಂದ್ರಕ್ಕೆ ಸರಕಾರದ ರಹಸ್ಯಗಳನ್ನೆಲ್ಲಾ ತಿಳಿಸುತ್ತಿದ್ದರು. ಮತ್ತು ಮೇಧ್ರಿದಿನಲ್ಲಿ ಬಂಡಾಯವೆಬ್ಬಿಸಲು ಸಂದರ್ಭ ಕಾಯುತ್ತಿದ್ದು ಅದಕ್ಕಾಗಿ ಎಲ್ಲಾ ಶಸ್ತ್ರಸಿದ್ಧತೆಯಿರುವ 1400 ಮಂದಿಯನ್ನು ತರಬೇತಿಮಾಡಿದ್ದರು. ಈ ಪಿತೂರಿಗೆ ಮೇಧ್ರಿದಿನ ಸೈನ್ಯಾಧಿಕಾರಿಗಳು ಕೆಲವರೂ ಸೇರಿದ್ದು ಅವರೆಲ್ಲಾ ಈಗ ದಸ್ತಗಿರಿಯಾಗಿರುವರು.

ಅಮೃತಸರದಲ್ಲಿ ಸಿಖ್ಖ ಮುಸಲ್ಮಾನ ಕಲಹ
ಬ್ರಿಟಿಷ್ ಸೈನಿಕರು ಹೊರಕರೆಯಲ್ಪಟ್ಟರು

ಪಂಜಾಬಿನ ಅಲ್ನಾ ಎಂಬ ಹಳ್ಳಿಯಲ್ಲಿ ಸಿಖ್ಖರಿಗೂ ಮುಸಲ್ಮಾನರಿಗೂ ಜಗಳವಾದ ಪರಿಣಾಮವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಮೃತಪಟ್ಟ ಸುಂದರಸಿಂಘನೆಂಬವನ ಶವವು ಇದೇ ತಾ 18ರಲ್ಲು ಅಮೃತಸರಕ್ಕೆ ತರಲ್ಪಟ್ಟು ಮೆರವಣಿಗೆ ನಡೆಯಿತು. ಈ ಮೆರವಣಿಗೆಯೊಂದಿಗೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಪೋಲೀಸ್ ಫೌಜಿನೊಂದಿಗೆ ಹೋಗಿದ್ದರು. ಆಗ ಒಂದೆಡೆ ಮೆರವಣಿಗೆಯ ಮೇಲೆ ಇಟ್ಟಿಗೆ ತುಂಡೆಸೆಯಲ್ಪಟ್ಟು ಕೆಲಮಂದಿ ಮುಸಲ್ಮಾನರಿಗೂ ಮೆರವಣಿಗೆಯವರಿಗೂ ಜಗಳವುಂಟಾಗಿ 6 ಮಂದಿ ಗಾಯಗೊಂಡಿರುವರು. ಆ ಮೇಲೆ ಸಿಖ್ಖರು ಶವಸಂಸ್ಕಾರ ನಡಿಸಿ ಹಿಂತಿರುಗಿದಾಗ ಅಂಗಡಿಗಳಲ್ಲಿ ಕುಳಿತಿರುವ ಮುಸಲ್ಮಾನರು ಕೆಲವರಿಗೆ ಹೊಡೆದರು. ಆಗ ಪೋಲೀಸ್ ಸವಾರನೊಬ್ಬನು ಬಂದು ಅದನ್ನು ನಿಲ್ಲಿಸಿದನೆಂದು ತಿಳಿದುಬರುತ್ತದೆ. ಈಗ ಇಡೀ ಪಟ್ಟಣದಲ್ಲಿ 144 ಸೆಕ್ಷನ್ ಜ್ಯಾರಿಮಾಡಲ್ಪಟ್ಟಿದೆ. ಯಾರಾದರೂ ಅಂಗಡಿ ಯಾ ಮನೆಗಳಿಗೆ ಬೆಂಕಿ ಹಚ್ಚುವುದು ಅಥವಾ ಹೊಡೆಯುವುದು ಕಂಡುಬಂದಲ್ಲಿ ಗುಂಡು ಹೊಡೆಯಲಾಗುವುದೆಂದೂ, ಸುಳ್ಳುಸುದ್ದಿ ಹಬ್ಬಿಸುವವರು ದಸ್ತಗಿರಿಮಾಡಲ್ಪಡುವರೆಂದೂ ಹುಕುಮು ಜ್ಯಾರಿಮಾಡಲಾಗಿದೆ. ಸೈನಿಕರು ಒಂದು ಘಂಟೆಯ ವರೆಗೆ ರಸ್ತೆಗಳಲ್ಲಿ "ಪೆರೇಡ್" ನಡಿಸಿದರು. ರಸ್ತೆಗಳ ಸಂದುಗೊಂದುಗಳಲ್ಲೆಲ್ಲಾ ಪೋಲೀಸ್ ಪಹರೆ ನಡೆದಿರುವುದು. ಈ ಗಲಾಟೆಯಲ್ಲಿ ಒಟ್ಟು 40 ಮಂದಿ ಜಖಮ್ ಹೊಂದಿರುವರು. 10 ಮಂದಿಗೆ ಬಹಳ ಪೆಟ್ಟಾಗಿರುವುದು. ಇಬ್ಬರು ಮುಸಲ್ಮಾನರು ಬದುಕುವ ಹಾಗಿಲ್ಲ ಸಿಖ್ಖನೊಬ್ಬನು ತಿವಿಯಲ್ಪಟ್ಟಿರುವನು. ಲಾಹೋರಿನಲ್ಲಿಯೂ ಗಲಾಟೆಯಾಗದಂತೆ ಪೋಲೀಸ್ ಬಂದೋಬಸ್ತನ್ನಿಡಲಾಗಿದೆ.

ಕಮಲ ನೆಹರು ಸ್ಮಾರಕ
ರೂ. 3ಲಕ್ಷ ಸಂಗ್ರಹದ ನಿರೀಕ್ಷೆ

ದಿವಂಗತ ಕಮಲ ನೆಹರುಗಳ ಸ್ಮಾರಕವಾಗಿ ಆಸ್ಪತ್ರೆಯೊಂದನ್ನು ಕಟ್ಟಲು ಅಲಹಾಬಾದ್ ಮುನಿಸಿಪಾಲಿಟಿಯವರು ಆನಂದ ಭವನದ ಹಿಂದಿನ ವಿಶಾಲವಾದ ಗದ್ದೆಗಳನ್ನೆಲ್ಲಾ ತೆಗೆದುಕೊಳ್ಳುವ ನಿರ್ಧಾರ ಮಾಡಿರುವರು. ಈ ಸ್ಮಾರಕದ ವಿಷಯದಲ್ಲಿ ಮಹಾತ್ಮಾ ಗಾಂಧಿಯವರು ಬಹಳ ಆಸಕ್ತಿಯುಳ್ಳವರಿದ್ದು ರೂ. 3ಲಕ್ಷ ಒಟ್ಟುಗೂಡಿಸುವ ನಿರೀಕ್ಷೆಯುಳ್ಳವರಿರುವರು. ಈ ಆಸ್ಪತ್ರೆಯು ಇಡೀ ಹಿಂದೂದೇಶದಲ್ಲೇ ನೂತನವಾದುದಾಗಿ ಅಲಹಾಬಾದಿನ ಹೆಮ್ಮೆಯ ಸಂಗತಿಯಾಗಿ ಮಾಡಬೇಕೆಂದು ಮುನಿಸಿಪಲ್ ಚೇಯರ್‌ಮೇನರೂ ಸ್ಮಾರಕ ಕಮಿಟಿಯ ಮೆಂಬರರೂ ಆದ ಡಾಕ್ಟರ್ ಕಾಟ್ಜುರವರ ಆಶೆ. ಇದಕ್ಕಾಗಿ ರೂ. 70,000ಕ್ಕಿಂತಲೂ ಮಿಕ್ಕಿದ ಹಣವು ಇಷ್ಟರಲ್ಲೇ ಸಂಗ್ರಹವಾಗಿರುವುದು. ಪಂಡಿತ ಜವ್ಹಾರಲಾಲರು ಒಂದು ಗುಡಿಸಲನ್ನೂ ಮತ್ತು ಸ್ವರಾಜ್ಯ ಭವನದ ಸಮೀಪದ ಸ್ಥಳವನ್ನೂ ಕೊಡಲೊಪ್ಪಿರುವರು.

ಇಂಗ್ಲೆಂಡಿಗೆ ಬಾಸ್ಕರ ವಿನಂತಿ
ಲೋಕದ ಇತಿಹಾಸದಲ್ಲಿ ಅತ್ಯಂತ ಕಪ್ಪಿಗಿನ ಪುಟ

ಯುದ್ಧದ ಕ್ರೂರತೆಯನ್ನು ಕಡಿಮೆ ಮಾಡುವಂತೆ ಬ್ರಿಟಿಷರು ತನ್ನಿಂದ ಸಾಧ್ಯವಾದ ಪ್ರಯತ್ನವನ್ನೆಲ್ಲಾ ನಡಿಸಬೇಕು. ಬಂಡಾಯಗಾರರು ಬಿಲ್ಬಾವೋ ಪಟ್ಟಣದ ಕೇಂದ್ರವನ್ನೇ, ವಿಮಾನ ಮತ್ತು ತುಪಾಕಿಗಳಿಂದ ನಾಶಮಾಡುವ ಬೆದರಿಕೆ ಹಾಕಿರುತ್ತಾರೆ. ಇದನ್ನವರು ನಡಿಸದಂತೆ ನೋಡಬೇಕೆಂದು ಬಾಸ್ಕ್ ಸರಕಾರವು ಬ್ರಿಟಿಷ್ ವಿದೇಶ ಮಂತ್ರಿಗಳೊಡನೆ ಬೇಡಿಕೊಂಡಿರುವುದು. ವಿದೇಶ ಮಂತ್ರಿಗಳಾದ ಮಿ ಏಡೆನರು ಈ ಸಂಗತಿಯನ್ನು ಜನರಲ್ ಫ್ರೇಂಕೋರವರಿಗೆ ತಿಳಿಸಿ ಅವರು ತನ್ನ ಬೆದರಿಕೆಯನ್ನು ಕಾರ್ಯಕ್ಕೆ ಹಚ್ಚದಂತೆ ಕೇಳಿಕೊಳ್ಳಬೇಕೆಂದು ಅವರ ಬಳಿಯಿರುವ ಇಂಗ್ಲೆಂಡಿನ ರಾಯಭಾರಿಗೆ ಆಜ್ಞಾಪಿಸಿರುವರು. ಇನ್ನೂ ಬಿಲ್ಬಾವೋ ಪಟ್ಟಣವು ಬಂಡಾಯಗಾರರ ವಶವಾಗಿರುವುದಿಲ್ಲ. ಮಿ. ಲ್ಯೊಡ್ ಜೋರ್ಜರು, ಯುರೋಪಿನ ನಿರಂಕುಶ ರಾಜ್ಯಗಳು, ತಮ್ಮಿಚ್ಛಾನುಸಾರ ನಡೆದು ಸ್ತ್ರೀಯರು ಮಕ್ಕಳನ್ನು ಕೊಂದು, ಅತಿ ಪುರಾತನವಾದ ಪ್ರಜಾಸತ್ತೆಯನ್ನು ನಿರ್ಮೂಲಿಸುತ್ತಿರುವಾಗ ಪ್ರಜಾಸತ್ತೆಯ ಪ್ರತಿಪಾದಕನಾದ ಲೋಕದ ಇತರ ರಾಷ್ಟ್ರಗಳು ಅದನ್ನು ನಿಷೇಧಿಸುವುದಕ್ಕೂ ಹಿಂಜರಿದು ಕಣ್ಣು ಕಣ್ಣು ನೋಡುತ್ತಾ ಕುಳಿತಿರುವುದು ಲೋಕದ ಇತಿಹಾಸದಲ್ಲಿ ಅತ್ಯಂತ ಹೇಯ ಕೆಲಸವೆಂದು ನಿಷೇಧಿಸಿ 'ಬಾಸ್ಕ್ ಜನರ ಧೈರ್ಯಸ್ಥೈರ್ಯವನ್ನು ಅಭಿನಂದಿಸಿ ಅವರಿಗೆ ಜಯವಾಗಲೆಂದು ಹಾರೈಸಿರುವರು.

ಬಿಲ್ಬಾವೋ ಪಟ್ಟಣದಿಂದ ಸಾವಿರಾರು ಮಂದಿ ತಮ್ಮ ಹೆಂಡತಿ ಮಕ್ಕಳೊಂದಿಗೆ ಹೊರಟುಹೋಗುತ್ತಿರುವರು. ಅವರಿಗೆ ಅನ್ನ, ವಸ್ತ್ರ ಮತ್ತು ವಸತಿಯ ಏರ್ಪಾಡು ಮಾಡುವುದು ಕಷ್ಟವಾಗಿದೆ. ಬಂಡಾಯಗಾರರು ಬಿಲ್ಬಾವೋ ಪಟ್ಟಣದ ಉಕ್ಕಿನ ಆವರ್ಕವನ್ನು ಮುರಿದಂದಿನಿಂದ 5000 ಬಾಸ್ಕ್‌ಸೈನಿಕರನ್ನು ಸೆರೆಹಿಡಿದಿರುವರೆಂದು ತಿಳಿದುಬಂದಿದೆ. ವಿಮಾನಗಳಿಂದ ಬಿಲ್ಬಾವೋ ಪಟ್ಟಣದ ಮೇಲೆ ಎಡೆಬಿಡದೆ ಬೋಂಬು ಮತ್ತು ಗುಂಡೆಸೆತವು ನಡೆಯುತ್ತಿದೆ. ಇದರಿಂದ ಅನೇಕ ಮಂದಿ ಪ್ರಾಣ ಕಳಕೊಂಡಿರುತ್ತಾರೆ. ಬಂಡಾಯಗಾರರು ಇದೇ ತಾ. 14ರಲ್ಲು ಸಾಂತಾಮೋರಿಯ ಎಂಬ ಪ್ರಾಮುಖ್ಯ ಗುಡ್ಡವನ್ನು ವಶಪಡಿಸಿಕೊಂಡು 500 ಮಂದಿ ಸೈನಿಕರನ್ನು ಸೆರೆಹಿಡಿದಿರುತ್ತಾರೆ. ಬಾಸ್ಕ್ ಸರಕಾರದ ಸೇನಾಖಾತೆಯ ಮುಖ್ಯಸ್ಥರೂ, ಬಿಲ್ಬಾವೋದ ಸುತ್ತಲೂ ಉಕ್ಕಿನ ಚಕ್ರವ್ಯೂಹವನ್ನು ರಚಿಸಿದವರೂ ಆದ ಮೇಜರ್ ಪೆರ್ಲ್‌ಜೋರವರು ಸೆರೆ ಹಿಡಿಯಲ್ಪಟ್ಟಿರುವರೆಂದೂ ಅನೇಕ ತುಪಾಕಿ ಮತ್ತು ನೂರಾರು ಕೋವಿಗಳು ತಮ್ಮ ವಶವಾಗಿರುವವೆಂದೂ ಬಂಡಾಯಗಾರರ ಕಡೆಯ ಸುದ್ದಿ.

ಕಾಂಗ್ರೆಸಿನೊಡನೆ ರಾಜಿಗೆ ಸರಕಾರವು ಸಿದ್ಧವಿದೆ
ಲೋರ್ಡ್ ಸ್ಟೆನ್ಲೆಯವರ ಹೇಳಿಕೆ

ಇದೇ ತಾ|14ರಲ್ಲು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಿ. ಲೇನ್ಸ್ ಬರಿಯವರು, ಹಿಂದೂ ದೇಶದ ಬಿಕ್ಕಟ್ಟಿನ ಕುರಿತು ಚರ್ಚಿಸಲು ನಿಲುವಳಿ ಸೂಚನೆಯೊಂದನ್ನು ತಂದರು. ಈ ಸಂದರ್ಭದಲ್ಲವರು, ಈಗಣ ಅವಿಶ್ವಾಸ ಮತ್ತು ತಿಕ್ಕಾಟದ ಪರಿಣಾಮವಾಗಿ ಗವರ್ನರರು ಆಡಳಿತ ಜವಾಬ್ದಾರಿಯನ್ನೆಲ್ಲಾ ವಹಿಸುವಂತಾದರೆ ಪ್ರಾಂತಿಕ ಸ್ವಾಯತ್ತತೆಯನ್ನು ಅಶುಭವಾಗಿ ಆರಂಭಿಸಿದಂತಾಗುವುದು. ಗಾಂಧಿಯವರು ಕಾಂಗ್ರೆಸಿನ ಧೋರಣೆಯನ್ನು ಸ್ಪಷ್ಟಗೊಳಿಸಿರುವರು; ಮಂತ್ರಿಗಳ ರಾಜೀನಾಮೆಯ ಕುರಿತಾದ ಅವರ ಕೇಳಿಕೆಯು ನ್ಯಾಯವಾದುದು. ಈ ಅಲ್ಪ ವ್ಯತ್ಯಾಸವನ್ನು ಪರ್ವತ ಮಾಡುವುದರಲ್ಲಿ ಅರ್ಥವಿಲ್ಲ. ವೈಸರಾಯರು ಕೂಡಲೆ ಕಾಂಗ್ರೆಸ್ ಮುಖಂಡರನ್ನು ಕರೆದು ಸಂಧಿ ಪ್ರಸ್ತಾವಮಾಡಬೇಕೆಂದು ಆಗ್ರಹದಿಂದ ಕೇಳಿಕೊಂಡರು. ಇಂಡಿಯಾ ಅಂಡರ್ ಸೆಕ್ರಿಟರಿಗಳಾದ ಲೋರ್ಡ್ ಸ್ಟೆನ್ಲೆಯವರು ಇದಕ್ಕುತ್ತರವೀಯುವಾಗ, ಕಾಂಗ್ರೆಸಿಗೂ ಬ್ರಿಟಿಷ್ ಸರಕಾರಕ್ಕೂ ಒಪ್ಪಿಗೆಯ ವಿಷಯಗಳು ಹಲವಿವೆ. ಎಸೆಂಬ್ಲಿ ಸಭೆಗಳು ಬೇಗನೆ ಕರೆಯಲ್ಪಟ್ಟು ಬಹು ಪಕ್ಷೀಯರಾದ ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಬೇಕೆಂದು ಎಲ್ಲರೂ ಆತುರಪಡುತ್ತಿದ್ದಾರೆ. ಪ್ರಾಂತಿಕ ಗವರ್ನರರುಗಳು ಆಯಾ ಪ್ರಾಂತೀಯ ಕಾಂಗ್ರೆಸ್ ಪಕ್ಷದ ಮುಖಂಡರೊಡನೆ ಮಾತಾಡಿ ಒಡಂಬಡಿಕೆ ಮಾಡಿಕೊಳ್ಳುವ ಮೊದಲು ಆ ವಿಷಯದಲ್ಲಿ ಇತರರು ಕೈ ಹಾಕುವುದು ಸರಿಯಲ್ಲ. ಆ ಮೊದಲು ಎಸೆಂಬ್ಲಿ ಸಭೆ ಕರೆದೂ ಫಲವಿಲ್ಲ. ಕಾಂಗ್ರೆಸನ್ನು ಅರ್ಧ ದಾರಿಯಲ್ಲೇ ಸಂಧಿಸಿ ರಾಜಿಮಾಡಲು ಸರಕಾರವು ಬಹಳವಾಗಿ ಹಾರೈಸುವುದು. ಮಿ. ಲೇನ್ಸ್ ಬರಿಯವರು ವೈಸರಾಯರು ನೆಟ್ಟಗೆ ಕಾಂಗ್ರೆಸ್ ಮುಖಂಡರೊಡನೆ ಸಂಧಿ ಪ್ರಸ್ತಾಪಮಾಡಬೇಕೆನ್ನುತ್ತಾರೆ. ಆದರೆ ಲೋರ್ಡ್ ಜೆಟ್ಲೆಂಡರು, ರಾಜಿಪ್ರಸ್ತಾಪವು ನ್ಯಾಯವಾಗಿ ನಡೆಯಬೇಕಾದುದು ಪ್ರಾಂತಿಕ ಗವರ್ನರರು ಮತ್ತು ಕಾಂಗ್ರೆಸ್ ಪಕ್ಷದ ಪ್ರಾಂತಿಕ ನಾಯಕರೊಳಗೆಂಬ ಅಭಿಪ್ರಾಯವುಳ್ಳವರಿದ್ದಾರೆಂದು" ಹೇಳಿದರು. ಇದರಿಂದಾಗಿ ಸಂಧಿಯು ಸಂಭವನೀಯವೆಂದು ಹೇಳಬಹುದಾಗಿದೆ.

ವೈಸರಾಯರು ಹೇಳಿಕೆಯನ್ನೀಯುವರು.
ಆಶಾಪೂರ್ಣ ವಾತಾವರಣ

ಹಿಂದುದೇಶದ ಬಿಕ್ಕಟ್ಟಿನ ಕುರಿತು ಹಲವು ತಿಂಗಳುಗಳಿಂದ ಯಾವ ಪ್ರಸ್ತಾವವನ್ನೂ ಎತ್ತದೆ ಮೌನವ್ರತ ಹಿಡಿದಿದ್ದ ಮಾನ್ಯ ವೈಸರಾಯರು ಇದೇ ತಾ. 22ರಲ್ಲು ದೇಶದ ರಾಜಕೀಯ ಪರಿಸ್ಥಿತಿಯ ಕುರಿತು ದೀರ್ಘವಾದೊಂದು ಹೇಳಿಕೆಯನ್ನೀಯುವರೆಂಬ ಸಂಗತಿಯು ಜನರಲ್ಲೆಲ್ಲಾ ಆಶೋತ್ತರವನ್ನುಂಟುಮಾಡಿದೆ. ಅಂತಹ ಮಹತ್ವದ ಸಂಗತಿಯೇನಾದರೂ ಹೇಳಲಿಕ್ಕಿಲ್ಲದೆ, ಅಥವಾ ಪ್ರಕೃತದ ಬಿಕ್ಕಟ್ಟನ್ನು ನಿವಾರಿಸುವ ಕುರಿತು ತನ್ನಿಂದ ಸಹಾಯವಾಗುವಂತಾಗದಿದ್ದರೆ ಇಷ್ಟರ ವರೆಗೆ ಮೌನ ವಹಿಸಿದ್ದ ವೈಸರಾಯರು ಈಗ ಬಾಯ್ಬಿಡುವ ನಿರ್ಧಾರಮಾಡುತ್ತಿದ್ದಿಲ್ಲೆಂದು ನಂಬಬಹುದಾಗಿದೆ. ಇದರಿಂದಾಗಿ ದೇಶದ ಬಿಕ್ಕಟ್ಟು ಬೇಗನೆ ನಿವಾರಿಸಲ್ಪಟ್ಟು ಕಾಂಗ್ರೆಸಿನವರು ಶೀಘ್ರವಾಗಿ ಮಂತ್ರಿಪದವಿ ಸ್ವೀಕರಿಸುವಂತಾಗುವುದೆಂಬ ನಿರೀಕ್ಷೆಯುಂಟಾಗಿದೆ.

10,000 ಮಂದಿ ಸೆರೆಹಿಡಿಯಲ್ಪಟ್ಟರು

ಬಿಲ್ಬಾವೋ ಪಟ್ಟಣದ ನೈಋತ್ಯದ ಇಳಿಜಾರು ಪ್ರದೇಶದಿಂದ ಬಾಸ್ಕ್ ಸೈನಿಕರನ್ನು ನಿವಾಳಿಸಿ ಇಡೀ ಪಟ್ಟಣವನ್ನು ಆವರಿಸಬೇಕೆಂದು ಬಂಡಾಯಗಾರರು ಪ್ರಯತ್ನಿಸುತ್ತಿದ್ದಾರೆ. ಗಾಲ್ಡಕಾನೋ ಎಂಬ ಪ್ರಾಮುಖ್ಯ ಸ್ಥಳವು ಬಂಡಾಯಗಾರರ ವಶವಾಗಿದೆ. ಬಾಸ್ಕ್ ಸೈನಿಕರು ಹಿಂದೆ ಸರಿಯುವ ಮೊದಲು ಎಲ್ಲವನ್ನೂ ಸುಟ್ಟು ನಾಶಮಾಡಿರುವರು. ಈ ಯುದ್ಧದಲ್ಲಿ 2000 ಮಂದಿ ಬಾಸ್ಕರು ಕೊಲ್ಲಲ್ಪಟ್ಟಿರುವರೆಂದೂ ಒಟ್ಟು 10,000 ಮಂದಿ ಸೆರೆಹಿಡಿಯಲ್ಪಟ್ಟಿರುವರೆಂದೂ ಬಂಡಾಯಗಾರರ ಕಡೆಯ ಸುದ್ದಿ.

ವಿಧವಾ ವಿವಾಹ

ಲೇಖಕ:
ಯು. ಬಿ ಆಚಾರ್ಯ, ವೈದ್ಯಭೂಷಣ, ಮಲ್ಪೆ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ವರ್ತಮಾನಕಾಲವು ಎಷ್ಟು ನಾಜೂಕಿನದ್ದಿದೆ. ವಿರುದ್ಧಾಹಾರವಿಹಾರಗಳ ಸೇವನೆಯಿಂದಾಗಿಯೂ ಭಯಂಕರ ದಾರಿದ್ರ್ಯದ ಅವಭೃತಸ್ನಾನದಿಂದಾಗಿಯೂ ಜನರ ಹೃದಯವು ಅದೆಷ್ಟು ದುರ್ಬಲವಾಗಿರುವುದು. ವಿರುದ್ಧ ಪಂಥದವರಾದರೂ ನಮ್ಮ ಸಮಾಜವನ್ನು ನುಂಗಿ ನೀರು ಕುಡಿಯುವುದಕ್ಕೆ ಅದೆಷ್ಟು ವಿಧಾನಗಳಿಂದ ಹೊಂಚುಹಾಕುತ್ತಿದ್ದಾರೆ. ಹೀಗಿರುವಾಗ ಅನಾಥವಾಗಿ ಕೇವಲ ತಿರಸ್ಕೃತವಾಗಿರುವ ವಿಧವಾ ಪ್ರಪಂಚದ ಸಂರಕ್ಷಣೆಯನ್ನು ಆದಾರು ಮಾಡಬೇಕು? ಪ್ರಕೃತ್ಯಾ ಅಬಲೆಯಾದ ಪ್ರಮದೆಯು ಸ್ವಯಪ್ರಬುದ್ಧಳಾಗುವ ಪರಿಪಕ್ವಾವಸ್ಥೆಯಲ್ಲಿ ಕಾನನ ಕುಸುಮದಂತೆ ಅನಾಥಳಾಗಿಯೂ ಪರಿಣಮಿಸಿದಲ್ಲಿ ಅವಳ ಸತೀತ್ವವು ಉಳಿಯುವ ಸಂಭವಕ್ಕಿಂತಲೂ ಅಳಿಯುವ ಸಂಭವವೇ ಹೆಚ್ಚು ಇರುವುದರಿಂದ (ಇದರಲ್ಲಿ ಸಂಕಲ್ಪಜನ್ಯವಾದ ಮಾನಸಿಕ ವ್ಯಭಿಚಾರದ ವಿಷಯವನ್ನೂ ವಾಚಕರು ಮನಸ್ಸಿಗೆ ತಂದುಕೊಳ್ಳಬೇಕು) ಅರಕ್ಷಕವಾದ ಆಮಿಷವು ವಿಷಯಲುಬ್ಧಗಳಾದ ಮೃಗಗಳಿಂದ ದಶದಿಶೆಗಳಿಂದಲೂ ಮುತ್ತಲ್ಪಟ್ಟು ಅದರ ಸ್ವರೂಪನಾಶವಾಗುವ ಸನ್ನಿವೇಶವು ಒಂದೊಮ್ಮೆ ಬಲಾತ್ಕಾರದಿಂದಲಾದರೂ ನಡೆಯಬಹುದಾದುದರಿಂದ ಇಂತಹ ಆಪತ್ಕಾಲದಲ್ಲಿ ಆಪದ್ಧರ್ಮದ ಅತ್ಯಾವಶ್ಯಕತೆಯು ಇರುವುದೆಂದು ತಿಳಿದೇ ಮಹಾತ್ಮರಾದ ಪರಾಶರ ಮಹರ್ಷಿಗಳು ಸ್ವತಃ ಕಾಮದ ಅದಮ್ಯತೆಯನ್ನು ಮನಗಂಡವರಾಗಿ 'ಅತಃಪರಂ ಗೃಹಸ್ಥಸ್ಯ ಧರ್ಮಾಚಾರಂ ಕಲೌಯುಗೇ। ಧರ್ಮಂ ಸಾಧಾರಣಂ ಶ್ಚೈವ ಚಾತುರ್ವರ್ಣಾಶ್ರಮಾಗತಂ। ಸುಸಂಪಕ್ಷ್ಯಾಮ್ಯಹಂ ಪೂರ್ವಂ ಪರಾಶರವಚೋಯಥಾ' ಎಂದು ಆರಂಭಿಸಿ ಸಂದರ್ಭಾನುಸಾರವಾಗಿ ಈ ಕೆಳಗಿನ ಮಹತ್ತ್ವಪೂರ್ಣ ವಚನವನ್ನು ತನ್ನ ಸ್ಮೃತಿಯಲ್ಲಿ ಉಲ್ಲೇಖಿಸಿರುತ್ತಾರೆ. ಅದು ಹೀಗಿರುವುದು-'ನಷ್ಟೇಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ। ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ' ॥ ಎಂದು (ಪತಿಯು ಪರದೇಶ ಗಮನಾದಿಗಳಿಂದ ಪುನಃ ಪ್ರಾಪ್ತನಾಗುವ ಸಂಭವವಿಲ್ಲದಿದ್ದಲ್ಲಿ, ಅಕಾಲಿಕವಾಗಿ ಮೃತಿಹೊಂದಿದಲ್ಲಿ, ಇತ್ತ ಮದುವೆಯಾಗುವುದು ಅತ್ತ ವಿರಕ್ತನಾಗಿ ಕಾಷಾಯಧಾರಿಯಾಗಿ ಕಾಡುಪಾಲಾಗುವುದು ಹೀಗಾದಲ್ಲಿ ತಾನು ಜನ್ಮಷಂಡ(ನಪುಂಸಕ)ನಾಗಿಯೂ ಮದುವೆಯಾದಲ್ಲಿ, ನ್ಯಾಯನೀತಿಬಾಹ್ಯನಾಗಿ ದಯಾ ದಾಕ್ಷಿಣ್ಯ ಶೂನ್ಯನಾಗಿ ಪರಮಪಾತಕಿಯಾಗಿ ಅಗಮ್ಯಗಮನ, ಅಭಕ್ಷ್ಯ ಭಕ್ಷಣ, ಅಪಾಯ ಪಾನಾದಿಗಳಿಂದ ಪತಿತನಾಗಿ ಪರಿಣಮಿಸಿದಲ್ಲಿ ಇವೇ ಐದು ಬಗೆಯ ಆಪತ್ತಿಗೆ ತುತ್ತಾದ ಸ್ತ್ರೀಯರು ಬೇರೆ ಯೋಗ್ಯ ಪತಿಯನ್ನು ವರಿಸತಕ್ಕದ್ದೆಂದೇ ಈ ವಚನದ ಸ್ಪಷ್ಟಾರ್ಥವು. ಇದು ಎಂದಿಗೂ ರಾಕ್ಷಸೀ ವಿಧಾನವಾಗಲಾರದು, 'ಯಥೇಚ್ಛಂ ವಿಹರ' ಎಂದೇನೂ ಪರಾಶರರು ಹೇಳಲಿಲ್ಲ. ಉಕ್ತ ಐದು ವಿಧಾನಗಳು ಸ್ತ್ರೀಯರಿಗೆ ಒದಗತಕ್ಕ ಆಪತ್ತುಗಳು ಹೌದೆಂದು ಒಪ್ಪಿಕೊಳ್ಳಲ್ಪಟ್ಟಲ್ಲಿ ಅಂತಹ ಆಪತ್ತಿಗೆ ಆಹುತಿಯಾಗತಕ್ಕದ್ದೇ ನ್ಯಾಯವೆಂದು ವಾದಿಸತಕ್ಕದ್ದು ಮನುಷ್ಯಧರ್ಮವಾಗಲಾರದು. ಆಪತ್ತಿಗೆ ಪ್ರತಿಕ್ರಿಯೆ ಎನ್ನುವುದು. ಲೋಕಸಿದ್ಧವು ಇನ್ನು 'ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ' ಎಂಬಂತೆ ಶಾಸ್ತ್ರವೂ ಅಸ್ತು ಕೊಟ್ಟಮೇಲೆ ಈ ವಿಷಯಸಮಸ್ಯೆಯು ತನ್ನ ದಾರುಣಸ್ವರೂಪದಿಂದ ಇನ್ನೂ ಬಿಡಿಸಲ್ಪಡದೇ ಇದ್ದುದು ಶೋಚನೀಯವೇ ಸರಿ.

ಮದುವೆಯಾಗತಕ್ಕ ಗಂಡಸು ಮದುವೆಯ ಹೊತ್ತಿಗೆ ಏನೇನೋ ಮಾಂತ್ರಿಕವಾಗಿ ಒಪ್ಪಂದಮಾಡಿಕೊಂಡು ಮುಂದೆ ತನ್ನ ಜವಾಬ್ದಾರಿಯನ್ನು ಮರೆತು ಸ್ವೇಚ್ಛಾನುಸಾರವಾಗಿ ದುರ್ವೃತ್ತನಾದಲ್ಲಿ ಅದರ ದುಷ್ಪರಿಣಾಮವನ್ನು ಅದೇ ಆಗ ತಾನೆ ಗಂಡನ ಮನೆಯ ಹೊಸ್ತಿಲವನ್ನು ಹೊಕ್ಕಿದ ಹಿಂದು—ಮುಂದರಿಯದ ಅಪ್ರಬುದ್ಧ ಬಾಲಿಕೆಯು ಮುಗ್ಧ ತರುಣಿಯು ಯಾವಜ್ಜೀವವೂ ಅನುಭವಿಸಬೇಕೇ? ಅದೇನು ಯಂತ್ರವೇ? ಮನುಷ್ಯಶರೀರವೇ? ಇನ್ನು ಇದರಲ್ಲೂ ನಷ್ಟ, ಪ್ರವ್ರಜಿತ, ಕ್ಲೀಬ, ಪತಿತ, ಎಂಬ ಜೀವನ್ಮೃತರಾಗಿರುವ ಈ ನಾಲ್ಕು ವರ್ಗದವರನ್ನು ಸದ್ಯ ಬಿಟ್ಟುಬಿಡೋಣ. ಇಷ್ಟಾದರೂ ತಮ್ಮ ಭಾಗ್ಯಕ್ಕೆ ಇದ್ದಲ್ಲಿ ಅದೇ ದೊಡ್ಡ ಸಂಪತ್ತಾಯಿತೆಂದು ಭಾವಿಸತಕ್ಕ ಲಲನಾಮಣಿಯರಾದರೂ ಇರಬಹುದು. ಈಗ ನಾವು ಅಷ್ಟು ಮುಂದೆಯೂ ಹೋಗುವುದು ಬೇಡ ಈ ಐದು ಆಪತ್ತುಗಳ ಪೈಕಿ ಪ್ರಧಾನವಾದ 'ಅಕಾಲಿಕ ಪತಿಮರಣ' ಈ ಸಂದರ್ಭವನ್ನಷ್ಟೇ ಪ್ರಕೃತ ನಮ್ಮ ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಳ್ಳೋಣ.

ಯಾವುದೇ ವಯಸ್ಸಿನ ಯಾವುದೇ ಸ್ಥಿತಿಯಲ್ಲಿ ಪತಿ ಮರಣಾನಂತರ ತ್ರಿಕರಣಪೂರ್ವಕವಾಗಿಯೂ ವಿರಕ್ತಿಯನ್ನು ವಹಿಸಿ ಅಂದರ ಸ್ಮರಣಕೀರ್ತನ ಕೇಲಿ ಪ್ರೇಕ್ಷಣ ಗುಹ್ಯಭಾಷಣ ಸಂಕಲ್ಪ ಅಧ್ಯವಸಾಯ ಕ್ರಿಯಾನಿವೃತ್ತಿ ಎಂಬ ಅಷ್ಟವಿಧ ಕಾಮಸಾಧನೆಗಳಿಂದಲೂ ವಿದೂರರಾಗಿ ಅಖಂಡ ಬ್ರಹ್ಮಚರ್ಯೆಯನ್ನು ಲೋಪವಿಲ್ಲದ ಆಜೀವ ಪರಿಪಾಲಿಸುವ ಉಚ್ಚ ಮನೋನಿರ್ಧಾರವುಳ್ಳ ಸಾಧ್ವೀಮಣಿಯರಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳು. ಅಂತಹ ಸ್ತ್ರೀರತ್ನಗಳಿಗಾಗಿ ಈ ಲೇಖನವು ಏರ್ಪಟ್ಟೇ ಇಲ್ಲ. ಪತಿದೇವನ ಪವಿತ್ರ ಪ್ರೇಮಕ್ಕಾಗಿ ಇಂತಹ ಅನ್ಯಾದೃಶ ಆತ್ಮಸಂಯಮವು ಪ್ರಶಂಸನೀಯವೇಸರಿ. ಮುಂದೆ ಆದರೆ! ಎಂಬ ಪಕ್ಕಣೆಯು ಉತ್ಪನ್ನವಾಗವಾಗದಿದ್ದರ ಮಾತ್ರ ಇದು ಸ್ತುತ್ಯವ್ರತವೆಂದೆನ್ನಲು ಅಡ್ಡಿಯಿಲ್ಲ. ಪರಂತು ಸ್ಮಶಾನವೈರಾಗ್ಯವೆಂದೆನ್ನುವಂತೆ ತಾತ್ಕಾಲಿಕವಾಗಿ ಶೋಕಭರದಲ್ಲಿ ಪತಿಯ ಚಿತೆಯ ಮೇಲೆಯೇ ಬೀಳಹೋಗುವಷ್ಟು ಪತಿವ್ರತೆಯಾದವರೆಲ್ಲರೂ ದಿನ, ಮಾಸ, ವರ್ಷಗಳು ಕಳೆದಂತೆಯೂ ಅದೇ ಮನೋನಿರ್ಧಾರದಿಂದಲೇ ಇದ್ದಷ್ಟು ದಿನವೂ ಶರೀರಧಾರಣಮಾಡಿಕೊಂಡಿರಬಹುದೆಂದು ತಿಳಿಯುವುದು ತಪ್ಪಾದೀತು. ಶರೀರಧರ್ಮವಾದ ಕಾಮವಿಕಾರವು ಪತಿಯು ಮೃತಪಟ್ಟನೆಂದು ಅದೇನೂ ಸಾಯಲೊಲ್ಲದು.

ಇನ್ನು ಎಷ್ಟು ನಿಯಮ ನಿಷ್ಠೆಯಿಂದ ಜಾಗ್ರತೆಯನ್ನು ವಹಿಸಿದ್ದರೂ ತಾರುಣ್ಯದ ಭರದಲ್ಲಿ ಅವಿಚ್ಛಿನ್ನವಾಗಿ ನಡೆಯತಕ್ಕ ಲೀಲಾ ಪ್ರಪಂಚವು ಕಣ್ಣ ಮುಂದೆಯೇ ಇದ್ದು ಮನಸ್ಸನ್ನು ಹದಗೊಳಿಸುತ್ತಲೇ ಇರುವಾಗ ಸಂಗ ಸನ್ನಿವೇಶಗಳು ಕೂಡಿಬರುವ ಹೊತ್ತಿಗೆ 'ಕಾಮಃ ಕರ್ತಾ ನಾಹಂ ಕರ್ತಾ' ಕಾಮವೇ ಕೂಡಿಸುವುದು ನಾನಲ್ಲ ಎಂಬಂತೆ ಹೇಳಕೇಳದೆ ಅದುರ್ಧರ ಮಾನಸಿಕೇಚ್ಛೆಯು ಯಾವ ಹೊತ್ತಿಗೆ ಇಂದ್ರಿಯಗಳನ್ನು ವಿಷಯಾಧೀನಗಳನ್ನಾಗಿ ಮಾಡುವುದೆಂದು ಹೇಳಬರುವಂತಿಲ್ಲ. ಈ ಧರ್ಮವು ಪುರುಷರಿಂದ ಸ್ತ್ರೀಯರಿಗೊಂದು ಬೇರೆಯಿರಲಾರದು. ಇಬ್ಬರ ಅಂತರಿಂದ್ರಿಯದ (ಮನಸ್ಸಿನ) ಮೂಲ ಘಟಕಗಳೂ ಒಂದೇ ಇರುವುವು. ಆದುದರಿಂದ ವಯಸ್ಕೃತವಾದ ಈ ಶರೀರ ಮನೋಧರ್ಮದಿಂದ ಕೂಡಿದವಳಾಗಿಯೂ ಅದನ್ನು ನಿಗ್ರಹಿಸುವ ಶಕ್ತಿಯಿಲ್ಲದವಳಾಗಿಯೂ ಉಪಭೋಗಿಸಲು ಅವಕಾಶವಿಲ್ಲದವಳಾಗಿಯೂ ಈ ತಾಪತ್ರಯಗಳಿಂದ ಉನ್ಮತ್ತಳಾಗಿಯೂ ಇರುವ ವಿಧವೆಯು ಅದೆಷ್ಟು ರೀತಿಯಿಂದ ಅನೀತಿ ಪಥಕ್ಕೆ ಬಿದ್ದಾಳೆಂದು ವಿವರಿಸುವ ಆಗತ್ಯವಿಲ್ಲ!

ಒಂದೊಮ್ಮೆ ಗುರುಜನ ಭೀತಿಯಿಂದಲೋ ಜನಾಪವಾದದ ಭಯದಿಂದಲೋ ಗರ್ಭ ಶಂಕೆಯಿಂದಲೂ ಅವಳು ತನ್ನ ಕಾಮಕುತೂಹಲವನ್ನಡಗಿಸಿಕೊಂಡಲ್ಲಿ, ಎಲ್ಲಿ ಕೆಟ್ಟು ಹೋಗುವಳೋ ಎಂಬ ಭೀತಿಯಿಂದ ಮನೆಯವರು ಅವಳನ್ನು ಶೃಂಖಲಾ ಬದ್ಧ ಕರಿಣಿ (ಹೆಣ್ಣಾನೆ)ಯಂತೆ ನಿರ್ಬಂಧದಲ್ಲಿಟ್ಟಲ್ಲಿ ಇದರಿಂದ ಲವಲೇಶವಾದರೂ ಸತೀತ್ವದ ಪಾಲನೆಯಾದಂತೆ ಆಗುವುದಿಲ್ಲ ಇಂತಹ ನಿರ್ಬಂಧದಿಂದ ಮನಸ್ಸು ಇನ್ನಷ್ಟು ಉದ್ರಿಕ್ತವಾದುದಾಗಿ ಕಟ್ಟಕಡೆಗೆ ಭಯಂಕರ ಅನಾಹುತಕ್ಕೂ ಅವಹೇಳನಕ್ಕೂ ಕಾರಣವಾಗುವುದು ಶಾರೀರಕ ವ್ಯಭಿಚಾರಕ್ಕಿಂತಲೂ ಮಾನಸಿಕ ವ್ಯಭಿಚಾರದ ವೇಗವು ಹೆಚ್ಚು ವ್ಯಾಪಕವಾದುದು.

ಇಂತಹ ಸ್ತ್ರೀಯರಿಂದ 'ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೆ ವರ್ಣಸಂಕರಃ' ಎಂಬಂತೆ ವರ್ಣ ಸಾಂಕರ್ಯವಾದರೂ ಆಗಬಹುದು. ಸಮಯ ಸಾಧಿಸಿ ಇವರನ್ನು ಯಾರಾವರೂ ಅಪಹರಿಸಲೂ ಬಹುದು. ಇದರಿಂದ ಅಪವಾದದ ಭೀತಿಗಾಗಿ ಭಯಂಕರ ಭ್ರೂಣಹತ್ಯ ಶಿಶು ಹತ್ಯಾದಿ ಘೋರ ಕೃತ್ಯಗಳೂ ನಡೆಯಬಹುದು. ನೀಚಸ್ಥಾನದಲ್ಲಿ ಇವರು ಅನುರಕ್ತರಾಗಿ ಕುಲಗೇಡಿಗಳಾಗಲೂ ಬಹುದು. ಮತಾಂತರ ಪ್ರವಿಷ್ಟರಾಗಲೂ ಬಹುದು. ಈ ಉಪಲಕ್ಷಿತಗಳಾದ ಸರ್ವಾಪತ್ತುಗಳಿಂದಲೂ ಇವರನ್ನು ರಕ್ಷಿಸಬಹುದಾದ ಸಾಧನವು ಯಾವುದಾದರೊಂದು ಇದ್ದರೆ ಅದು "ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ। ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ ॥" ಎಂಬ ಅವರಿಗೆ ಪುನರ್ವಿವಾಹ ವಿಧಾಯಕವಾದ ವಿಧಾನವೇ ಆಗಿರುವುದು. ಆಶ್ರಯವನ್ನು ಹೊಂದಿಯಿರುವಂತಾದರೇನೇ ಅವರು ಸುರಕ್ಷಿತರಾದಾರು. ಹಾಗೂ ಅವರ ಕಡೆಗೆ ಯಾರ ಪ್ರಲೋಭನದ ದೃಷ್ಟಿಯೂ ಬೀಳದೆ ಇದ್ದೀತು. ಮೋಹಕ ವಸ್ತು ಒಂದು ಅರಕ್ಷಕವಾಗಿಯೂ ಇದ್ದಲ್ಲಿ ಅದನ್ನು ಆಶಾಪೂರ್ಣ ದೃಷ್ಟಿಯಿಂದ ನೋಡತಕ್ಕವರು ಲೋಕದಲ್ಲಿ ಬಹುಮಂದಿ.

ವಿಧವೆಯರಲ್ಲಿಯೂ ಅಕ್ಷತಯೋನಿ (ನಿಷೇಕ ಪ್ರಸ್ಥವಾಗದಯಿದ್ದವರ) ಯವರ ವಿಚಾರವನ್ನು ಮೊದಲಾಗಿ ಬುದ್ಧಿಪೂರ್ವಕವಾಗಿ ತೆಗೆದುಕೊಳ್ಳತಕ್ಕದ್ದದೆ. ಎರಡನೆಯದಾಗಿ ನಿಷೇಕ ಪ್ರಸ್ಥವಾಗಿದ್ದರೂ ಮಕ್ಕಳಾಗದಿದ್ದ ತರುಣಿಯರ, ಮೂರನೆಯದಾಗಿ ಮಕ್ಕಳಾಗಿದ್ದರೂ ತಾರುಣ್ಯದಲ್ಲೇ ಇದ್ದು ಸ ಭರ್ತೃಕರಾಗಿಯೇ ಸುಮಂಗಲಿಗಳಾಗಿಯೇ ಇರಬೇಕೆಂಬ ಇಚ್ಛೆಯುಳ್ಳವರ ಪುನರ್ವಿವಾಹವು ಕಾಲೋಚಿತವಿರುವುದು. ಇದರಿಂದಾಗಿ ಸಮಾಜಸ್ವಾಸ್ಥ್ಯವೂ ನೆಲೆಗೊಳ್ಳುವುದಲ್ಲದೆ ಪರಮತೀಯರ ಆಕ್ರಮಣಕ್ಕೂ ಎಡೆಯು ದೊರೆಯದಿದ್ದು (ಈ ಆಕ್ರಮಣವು ಉತ್ತರ ದೇಶದಲ್ಲ ಭರದಿಂದ ಸಾಗಿರುವುದು. ಇವತ್ತು ಚಂದ್ರಾಬಾಯಿ ಇದ್ದವಳು ನಾಳೆ ಚಾಂದಬೀಬಿ) ಬಲವಾಗಿ ಕೊಂಡು ಬರತಕ್ಕ ಭಾರತೀಯರ ಸಂಖ್ಯಾಬಲವೂ ಅಧಿಕವಾಗಿ ಹಿಂದೂ ಸಮಾಜವು ಬಲಶಾಲಿಯಾಗುವುದು.

ಕೃತೆ ತು ಮಾನವೋ ಧರ್ಮಃ। ತ್ರೇತಾಯಾಂ ಗೌತಮಃ ಸ್ಮೃತಃ। ದ್ವಾಪರೇ ಶಂಖಲಿಖಿತೌ। ಕಲೌ ಪಾರಾಶರಃ ಸ್ಮೃತಃ॥" ಎಂಬಂತೆ ಕಲಿಯುಗದ ವಾತಾವರಣಕ್ಕೆ ತಕ್ಕಂತೆ ಪರಾಶರರು ಮೇಲಿನ ವಿಚಾರವಾಗಿ ಪುನರ್ವಿವಾಹ ಯಾ ವಿಧವಾ ವಿವಾಹಕ್ಕೆ ಅನುಮೋದನೆಯನ್ನಿತ್ತಿರುವಾಗ ಇಷ್ಟವುಳ್ಳವರಲ್ಲಿ ಅದನ್ನು ಬಳಸಿ ಅನಿಷ್ಟ ನಿವಾರಣೆಮಾಡಿಕೊಳ್ಳಲು ಅಡ್ಡಿ ಏನಿದೆ?

(ವಿ. ಸೂ.—ಈ ಲೇಖನವನ್ನು ಯಾರಾದರೂ ಸಪ್ರಮಾಣವಾಗಿಯೂ ಸಯುಕ್ತಿಕವಾಗಿಯೂ ಖಂಡಿಸಿದಲ್ಲಿಯೂ ಉಕ್ತ ವಿಧಾನವು ಅಧರ್ಮ್ಯ ಅಯಶಸ್ಯ ಲೋಕನಿಂದಿತವೆಂದು ತೋರಿಸಿಕೊಟ್ಟಲ್ಲಿಯೂ ಅಂತಹ ಮಹನೀಯರ ಅಭಿಪ್ರಾಯವನ್ನು ಸಂತೋಷದಿಂದ ಒಪ್ಪಿಕೊಳ್ಳಲು ತಯಾರಿದ್ದೇನೆ. **ಲೇಖಕ.**)

JUST RECEIVED

Look sharp! Hurry up!!

Provincial Autonomy

(BY K. T. SHAH)

Price Re. 1—8—0

(Postage extra)

Book your order for a copy today only.

Navabharat Book Depot

UDIPI

ಉಡುಪಿ ಮಠಗಳ ಸುಧಾರಣೆ

[ಲೇಖಕ: ಶ್ರೀ 'ರಾಮು']

ಲೇಖಾಂಕ ೩

ಇಂದು, ಮಠಗಳು ಪತನದ ಕಡೆಗೆ ಸಾಗುತ್ತಿವೆಯೆಂದೂ, ಅವು ಸುಧಾರಿಸದಿದ್ದಲ್ಲಿ ಸಮಾಜಕ್ಕೆ ಅವುಗಳಿಂದ ಯಾವ ಪ್ರಯೋಜನವೂ ಇಲ್ಲವೆಂದೂ, ೨ನೇ ಲೇಖಾಂಕವನ್ನು ಓದಿದವರಿಗೆ ವಿದಿತವಾಗದಿರದು. ಈಗಿನ ಸಮಾಜಘಾತಕ ಧೋರಣೆಯನ್ನು ಮಾರ್ಪಡಿಸಬೇಕಾದುದೇನೋ ನಿಶ್ಚಯ; ಆದರೆ ಅದು ಯಾವರೀತಿಯಲ್ಲಿ ಎಂಬುದನ್ನು ಈ ಲೇಖಾಂಕದಲ್ಲಿ ಕೆಲವು ಟ್ಟಿಗೆ ಚರ್ಚಿಸಲಾಗುವುದು.

ಸುಧಾರಣೆಯು ಯಶಸ್ವಿಯಾಗಬೇಕಿದ್ದರೆ ಪ್ರಕೃತವಿರುವ ಬಾಲಾಶ್ರಮದ ನಿಯಮವನ್ನು ಬದಲಾಯಿಸದೆ ಉಪಾಯವಿಲ್ಲವೆಂದೇ ನಮ್ಮ ಸಲಹೆ. ಕಾಮಕ್ಕೆ ಕಣ್ಣಿಲ್ಲ. ಸ್ವಲ್ಪವೇನಾದರೂ ಇದ್ದರೂ ಹಣದ ರಾಶಿಯು ಎದುರು ಅದು ಪೂರ್ಣ ಕುರುಡಾಗಿಬಿಡುವುದು. ಯೌವನದಲ್ಲಿ ಕಾಮದ ಕಾಟಕ್ಕೆ ಸಿಲುಕದವರು ವಿರಳ. ಸ್ವಾಮಿಯವರ ತಲೆ ಬೋಳಿಸಿದರೆ ಕಾಮದ ಉಪದ್ರಕ್ಕೆ ರಕ್ಷೆ ಕಟ್ಟಿದಂತಾಗುವುದೇ? ಎಂದೂ ಇಲ್ಲ! ಅದಕ್ಕಾಗಿಯೇ ನಾವು ಹೇಳುವುದು, ಉತ್ತರಾದಿ ಮಠದವರಂತೆ ಗೃಹಸ್ಥಾಶ್ರಮ ಪದ್ಧತಿಯನ್ನು ಜ್ಯಾರಿಗೆ ತರಬೇಕೆಂದು. ಅದೂ ಸಹ ಮಠದ ಆತ್ಮೀಯರಿಗೆ ಕೊಡಲಾಗದು. ಏಕೆಂದರೆ ಐಶ್ವರ್ಯ ಮದವೊಂದು ಅವರ ರಕ್ತದ ಕಣ ಕಣಗಳಲ್ಲಿ ಕಲೆತುಹೋಗಿರುತ್ತದೆ! ಅದಕ್ಕಾಗಿ ತೀರ ಬಡವ, ಹಾಗೂ ಶಿಷ್ಯ ಸಮಾಜದ ಅಪೇಕ್ಷಿತನಾದೊಬ್ಬನಿಗೆ ಆಶ್ರಮಕೊಡತಕ್ಕದ್ದು. ಬಡತನದಿಂದ ಜೀವನದೊಡನೆ ಹೋರಾಡಿದವನೇ ನಿಜವಾದ ಯೋಗಿ! ಕರ್ಮಯೋಗಿ!! ಸನ್ಯಾಸ್ಯ ಯೋಗಿ!!!

ಅವನು ಕೇವಲ ಬಡವನು ಮಾತ್ರವಿರದೆ, ಓದು ಬರಹ ಬಲ್ಲವನೂ, ವಿಶಾಲ ಪ್ರಪಂಚದ ಅರಿವುಳ್ಳವನೂ ಆಗಿರಬೇಕು. ಅಂತಹನಿಗೆ ಆಶ್ರಮ ಕೊಟ್ಟುದುದಾದರೆ, ಅವನಲ್ಲಿ ಒಂದು ಕರ್ತೃತ್ವ ಶಕ್ತಿಯುಂಟಾಗುವುದು. ತನ್ನ ಹಿಂದಿನ ಸ್ಥಿತಿಯೂ ವರ್ತಮಾನ ಸ್ಥಿತಿಯೂ ಅವನೆದುರು ನಿಂತು ಒಂದು ಕರ್ತೃತ್ವ ಶಕ್ತಿಯ ಪಾಠವನ್ನು ಕಲಿಸುತ್ತವೆ. "ತಾನು ದರಿದ್ರನಿದ್ದೆನು; ಯಾರಿಗೂ ಬೇಡದವನಿದ್ದೆನು; ಆದರೆ ಧೈರ್ಯಗುಂದದೆ ಜೀವನದೊಡನೆ ಕಾದಾಡಿದೆನು. ಆದರೆ ಬಹುಮಾನವಿದು- ಈ ಸುಸಂಧಿಯನ್ನು ಹಾಳುಮಾಡಿಕೊಳ್ಳಲಾಗದು." ಎಂದು ಅವನು ತಿಳಿಯದಿರನು! ಭೂತ–ವರ್ತಮಾನ ಸ್ಥಿತಿಗಳ ತುಮುಲದಲ್ಲಿ, ಅವನೆದೆಯಲ್ಲಿ ಒಂದು ಜ್ಞಾನದ ಬೆಳಕು ಮೂಡದಿರದು! ಇದೇ ಉಡುಪಿ ಮಠಗಳ ಸುಧಾರಣೆಯ ಏಕಮಾತ್ರ ಮತ್ತು ಸರ್ವತೋಮುಖವಾದ ಉಪಾಯ. ಇದು ನಾವು ಬರೆದರಷ್ಟೇ ಕೈಕೂಡದು. ಸಮಸ್ತ ಶಿಷ್ಯವರ್ಗೀಯರೂ ಅಸೂಯೆಯನ್ನು ಬಿಟ್ಟು ತಾಳ್ಮೆಯಿಂದ ಇದನ್ನೋದಿ ವಿಮರ್ಶಿಸಿ, ಈ ಚಳವಳಿಯಲ್ಲಿ ಭಾಗವಹಿಸಬೇಕು. ಮಠಗಳ ಪ್ರಕೃತದ ಪರಿಸ್ಥಿತಿಯನ್ನು ಪ್ರತಿಯೊಬ್ಬ ಶಿಷ್ಯನೂ ಅಂತರಂಗದಲ್ಲಿ ಧಿಕ್ಕರಿಸುವುದನ್ನು ನಾವು ಪ್ರತ್ಯಕ್ಷ ಕೇಳಿದ್ದೇವೆ. ಆದ್ರವೇ ಹೇಸುವಾಗ, ಬಹಿರಂಗವಾಗಿ ನಿಷೇಧಿಸಲು ಅದೇಕೆ ನಾಚಿಕೆ? ಅದೇನು ನಾಚಿಕೆಯೇ? ಅಥವಾ ಬಹಿಷ್ಕಾರವೋ–ದಕ್ಷಿಣೆಗೆ ಸೊನ್ನೆಯೋ ಬರಬಹುದೆಂಬ ಭೀತಿಯೇ? ಇಂತಹವುಗಳಿಗೆ ಹೆದರುವುದು ಹೇಡಿತನದ ಕುರುಹು! ಇಂತಹ ಹೊಲಸು ಸಮಯದಲ್ಲೂ ನಾವು ಸ್ವಾರ್ಥವನ್ನು ಕಟ್ಟಿಕೊಂಡರೆ ಹೇಗೆ? ಶಿಷ್ಯರೇನು ಅಷ್ಟು ಅಭಿಮಾನ ಶೂನ್ಯರೇ? ಅಂತರಂಗದಲ್ಲಿ ಘಂಟಾಘೋಷವಾಗಿ ಧಿಕ್ಕರಿಸುವವರು ಬಹಿರಂಗದಲ್ಲಿ ಪಿಟ್ಟೆನ್ನಲೂ ಬೆದರುವುದರ ಗುಟ್ಟೇನು? ಸ್ವಾಮಿಗಳು ಮತ್ತು ಸಮಾಜ ಇವುಗಳು ಪರಸ್ಪರ ಒಂದೊನ್ನೊಂದು ಹೊಂದಿಕೊಂಡಿವೆ. ಸಮಾಜವೇ ಎದ್ದೇಳುವಾಗ, ಸ್ವಾಮಿಗಳ ಪ್ರತಾಪವೆಷ್ಟು? ಈ ಅಂತರಂಗವನ್ನೇಕೆ ಶಿಷ್ಯರು ತಿಳಿಯರು? ಆದುದರಿಂದ ಶಿಷ್ಯರು ಈಗ ಕಣ್ದೆರೆಯಬೇಕಾಗಿದೆ. ಈಗಣ ಪರಿಸ್ಥಿತಿಯನ್ನು ಏಕ ಕಂಠದಲ್ಲಿ ಖಂಡಿಸಿ, ಗೃಹಸ್ಥಾಶ್ರಮವನ್ನು ಏರ್ಪಡಿಸುವಂತೆ ಮಾಡಬೇಕು. ವಿಳಂಬಿಸಿದರೆ ಪ್ರಯೋಜನವಿಲ್ಲ. ಆದಕ್ಕೆ ಈಗಾಗಲೇ ಶಿಷ್ಯರು ಸಂಘಟಿತರಾಗಿ ಚಳವಳಿಯನ್ನು ಹೂಡತಕ್ಕದ್ದಿದೆ

ಮತ್ತು ಮಠದ ಆದಾಯವನ್ನು ಕೆಲ ಜನಹಿತ ಕಾರ್ಯಗಳಿಗೆ ಉಪಯೋಗಿಸಬೇಕು ಹೇಗೆಂದರೆ ಈಗ ಒಂದೊಂದು ಮಠದಲ್ಲಿ ಅನಂತ ಪುಸ್ತಕಗಳಿವೆ. ಎಂಟು ಮಠಗಳ ಪುಸ್ತಕಗಳನ್ನೂ ಒಂದು ಸ್ಥಳದಲ್ಲಿ ಕೇಂದ್ರೀಕರಿಸಿ ಒಂದು ಪಬ್ಲಿಕ್ ಲೈಬ್ರರಿಯನ್ನು ಮಾಡುವುದು, ಎಂಟು ಮಂದಿಯೂ ಸೇರಿ ಒಂದು ಧರ್ಮಾಸ್ಪತ್ರೆಯನ್ನು ಸ್ಥಾಪಿಸುವುದು, ಈಗಿರುವ ಸಂಸ್ಕೃತ ಕಾಲೇಜನ್ನು ಮೇಲ್ಮೆಗೆ ತರುವುದು, ಧಾರ್ಮಿಕ ಶಿಕ್ಷಣ ಮತ್ತು ವಿದ್ಯಾಪ್ರಚಾರಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸುವುದು, ಇತ್ಯಾದಿ, ಇತ್ಯಾದಿ.

ಅಥವಾ ಒಂದು ಸಾರ್ವಜನಿಕ ಸಂಘವನ್ನು ಸ್ಥಾಪಿಸಿ, ಮಠದ ಧಾರ್ಮಿಕ ಕಾರ್ಯಗಳಿಗೆ ಬೇಕಷ್ಟು ಹಣವನ್ನು ಕೊಟ್ಟು, ಮೇಲ್ಕಾಣಿಸಿದ ಜನಹಿತಕಾರ್ಯಗಳನ್ನು ಮಾಡುತ್ತಿರಬೇಕೆಂಬ, ಶರತದ ಮೇಲೆ ಮಠದವರು ತಮ್ಮ ತಮ್ಮ ಆಸ್ತಿಗಳನ್ನು ಆ ಸಂಘದವರ ವಶ ಬಿಟ್ಟು ಕೊಡಬಹುದು.

ಅಥವಾ ಮುಂದೆ ಆಶ್ರಮವಾಗತಕ್ಕವನು ಸಂಸ್ಕೃತ ಕಾಲೇಜಿನ ನಾಲ್ಕೈದು ಶಿರೋಮಣಿ ಪಾಸಾದವನಿದ್ದು, ಪ್ರಪಂಚಜ್ಞಾನಿಯೂ, ಮೇಧಾವಿಯೂ ದಕ್ಷನೂ, ಸಮಾಜದವರಿಂದ ಅಪೇಕ್ಷಿತನೂ ಯೋಗಾಭ್ಯಾಸವನ್ನು ಬಲ್ಲವನೂ ಇರಬೇಕು.

ಮುಖ್ಯವಾಗಿ ನಾವು ಇದುವರೆಗೆ ಹೇಳುತ್ತಾ ಬಂದುದು ಸ್ವಾಮಿಗಳು ಜವಾಬ್ದಾರರಾದುದರಿಂದ ಹೀಗಾಯಿತೆಂದು. ಆದುದರಿಂದ ನಾವು ಹಿಂದೆ ಸೂಚಿಸಿದ ಏನೊಂದು ವ್ಯವಸ್ಥೆಯನ್ನೂ ಮಾಡದೆ ಈಗಿರ್ರುವಂತೆಯೇ ಇರುವೆವೆಂದು ಸ್ವಾಮಿಗಳು ಕುಳಿತು ಕೊಳ್ಳುವುದಾದರೆ, ಬೇಗನೇ ಎಂಡೋಮೆಂಟ್ ಬಿಲ್ಲು ಮಠಗಳಿಗೂ ಅನ್ವಯಿಸುವಂತಾಗಲಿ ಎಂದು ನಾವು ಕೋರುತ್ತೇವೆ.

ತಮ್ಮ ಆಸ್ತಿ ಎಂಡೋಮೆಂಟಿಗೆ ಸೇರಲಾಗದೆಂದಿದ್ದರೆ ಸ್ವಾಮಿಗಳು ತೀವ್ರವೇ ಸುಧಾರಿಸಿಕೊಂಡು ನಾವು ಹಿಂದೆ ತೋರಿಸಿರುವ ಜನಹಿತಕಾರ್ಯಗಳನ್ನು ಮಾಡತೊಡಗಬೇಕು. ವಿಶೇಷತಃ ಶಿಷ್ಯರತ್ತ ಕಡೆ ಹೆಚ್ಚಿನ ಲಕ್ಷ್ಯವಿಡಬೇಕು.

ಸ್ವಾಮಿಗಳು ಸ್ವಾಭಿಮಾನವನ್ನು ಕಟ್ಟಿಕೊಂಡು ಒಳಗಡೆ ಕುಳಿತರೆ ಪ್ರಯೋಜನವಿಲ್ಲ. ಆಗಾಗ ಸಾರ್ವಜನಿಕ ಸಭೆಕೂಡಿಸಿಯೋ, ಹಳ್ಳಿಹಳ್ಳಿಗೆ ಹೋಗಿಯೋ ಮಧ್ವಾಚಾರ್ಯರರ ತತ್ವ, ಸಮಾಜ ಶಾಂತಿಯ ತತ್ವ ಇವುಗಳನ್ನೆಲ್ಲಾ ತಿಳಿಸುತ್ತಿರಬೇಕು. ಸಮಾಜದೊಡನೆ ಸಹಕರಿಸಿ, ಅವರನ್ನು ಸುಧಾರಿಸಲಿಕ್ಕೆ ಸ್ವಾಮಿಗಳಲ್ಲದೆ ಕೋಣೆಯೊಳಗೆ ಕುಳಿತು ಕೊಳ್ಳಲಿಕ್ಕಲ್ಲ.

ಕೊನೆಯ ಮಾತು

ನಾವೂ ಮಠಗಳಲ್ಲಿ ಅಭಿಮಾನ, ಸಹಾನುಭೂತಿಯುಳ್ಳವರೇ ಇದ್ದೇವೆ. ಆದರೆ ಮಠಗಳ ಇಂದಿನ ತೀವ್ರ ಜಿಗುಪ್ಸಿತ ಪರಿಸ್ಥಿತಿಯನ್ನು ನೋಡಿ ವಿಷಾದದಿಂದ ಈ ಲೇಖಾಂಕವನ್ನು ಬರೆಯ ಬೇಕಾಯಿತು. ನಾವು ಬರೆದರೆ ಮಾತ್ರ ಏನು ಪ್ರಯೋಜನ? ಬರೇ ಅರಣ್ಯ ರೋದನ! ಅಷ್ಟೆ!— ಹಾಗಾಗಗೊಡಬಾರದು. ಈಗ ಶಿಷ್ಯವರ್ಗೀಯರು ಬಹಳ ಕ್ಷೋಭೆಗೊಂಡಿದ್ದಾರೆ. ಒಂದಲ್ಲ ಒಂದುದಿನ ಪರಿಸ್ಥಿತಿಯು ಪ್ರಕೋಪಕ್ಕಿಡದಿರುವುದಿಲ್ಲ. ಆಗನ್ನವರು ಜಾಗ್ರತೆಯಿಂದ ತಿಳಿದು ಸುಧಾರಿಸಿಕೊಳ್ಳಬೇಕಾಗಿದೆ. ರಹಸ್ಯವನ್ನರಿತೇ ನಾವು ಮೊದಲಾಗಿ ಸೂಚಿಸಿ ಬಿಟ್ಟುದಿದು! ಸ್ವಾಮಿಗಳು ಸುಧಾರಿಸಿಕೊಳ್ಳದಿದ್ದರೆ, ತಮ್ಮ ಪತನವನ್ನು ತಾವೇ ಮಾಡಿಕೊಂಡತಾಗುವುದು. ಅದೇ ಅವರಿಗೆ ಸಮಾಧಾನವೆಂದಾದರೆ ನಮಗೇನು? ॥ ಸಮಾಪ್ತಿ ॥

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC, ETC.

ರೋಲ್ಡ್ ಗೋಲ್ಡ್, ನಿಕ್ಕಲ್
ಬೆಳ್ಳಿಯ, ೧ ಕ್ಯಾರಟಿನ ಗಟ್ಟಿ
ಚಿನ್ನದ ರಿಸ್ಟ್‌ವಾಚುಗಳು, ರೈಲ್ವೆ
ಟಾಯಿಂ ಪಾಕೆಟ್ ವಾಚು ಮತ್ತು
ಟಾಯಿಂಪೀಸು ಗ್ಯಾರಂಟಿ ಇದೆ.
ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ.
The Manager,
The Silver Jubilee Watch Co,
Post Box No. 571, BOMBAY.

ಸುಸಮಯ! ಹಣ ಸಂಪಾದಿಸಿರಿ!!
ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.
ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ I—9—0 ವೆಚ್ಚಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.
ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ
ಮೆನೇಜರ್
ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಜನರಲ್ ಎಶ್ಯೂರೆನ್ಸ್ ಸೊಸ್ಶೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25**,
ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ **20**,
ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.
ಮೂಲಧನವು ರೂ. **75** ಲಕ್ಷ ಮೀರಿದೆ.
ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.
ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭರ್ಗವಾ ಎಕ್ಚ್ವಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.
ಅಥವಾ
ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.
ಸುಪರಿಂಟೆಂಡೆಂಟ್, **ಬಳ್ಳಾರಿ.** ಆರ್ಗನೈಸರ್, **ನೆಲ್ಲೂರು.**
ಚೀಫ್ ಏಜೆಂಟ್ಸ್, **ಮಧುರ, ತ್ರಿಚಿನಾಪಳ್ಳಿ.**

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸ್ಟೆನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು
ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

	ಅ	
ನವಭಾರತ ಬುಕ್ ಡಿಪೊ	ಥ	ಕಾರ್ಯದರ್ಶಿ,
ಉಡುಪಿ	ವಾ	**ಕಿರಿಯರ ಪ್ರಪಂಚ, ಉಡುಪಿ.**

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ
ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯ
ನವರಿಂದ ರಚಿತವಾದ

'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

The Manager, **The National Kanara News Agency,**
No. 58 Mody Street, Fort Bombay

THE

Vijaya Bank, Ltd.

Head Office: **MANGALORE.** Branch Offices: **Udipi, Kaup & Coondapoor.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆಗಳು: **ಉಡುಪಿ, ಕಾಪು, ಕುಂದಾಪುರ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳುಸಾ. ಶೆ. 3½
ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½
6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.
2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಫಾರ್ಮುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದಶೀಯೂ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ದ. ಕ. ಹಿಂದೀ ಪ್ರಚಾರ ಸಭೆ

ನಿನ್ನೆಯ ದಿನ ಸಾಯಂಕಾಲ ಸ್ಥಳೀಯ ಉಳ್ಳಾಲ ರಘುನಾಥಯ್ಯನವರ ಸ್ಮಾರಕ ಮಂದಿರದಲ್ಲಿ ದ. ಕ. ಹಿಂದೀ ಪ್ರಚಾರ ಸಮಿತಿಯ ಸಭೆಯು ನಡೆಯಿತು ಡಾ! ಯು ಪಿ ಮಲ್ಯರು ಅಧ್ಯಕ್ಷತೆ ವಹಿಸಿದ್ದರು ನವವರ್ಷದ ಕಾರ್ಯಕಾರಿ ಸಭೆಗೆ ಸದಸ್ಯರ ಚುನಾವಣೆಯಾಗಿ ಶ್ರೀ. ಜರೋಮ್ ಎ. ಸಾಲ್ಡಾನ್ಹರು ಯಂ ಎಲ್ ಸಿ ಇವರು ಅಧ್ಯಕ್ಷರಾಗಿಯೂ, ಶ್ರೀ ಕುಡ್ಪಿ ಭೋಜರಾಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು ಒಂದು ಕಮಿಟಿಯೂ ಏರ್ಪಟ್ಟಿತು.

ಹರಿಜನ ಲೇಬರ್ ಲೀಗ್

ನಿನ್ನೆಯ ದಿನ ಬೆಳಗ್ಗೆ ಹರಿಜನ ಲೇಬರ್ ಲೀಗಿನ ಮಹಾ ಸಭೆಯು ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಶ್ರೀ ಕೆ. ಈಶರ ಯಂ ಎಲ್ ಎ ಇವರ ಅಧ್ಯಕ್ಷತೆಯಲ್ಲಿ ಜರಗಿತು ಬರುವ ಜುಲೈ ೧೧ನೇ ತಾರೀಕಿಗೆ ಹರಿಜನ ಲೇಬರ್ ಲೀಗಿನ ಪರಿಷತ್ತು ಜರಗಿಸಬೇಕೆಂದೂ, ಶ್ರೀ ಎನ್. ಎಸ್ ಶೆಟ್ಟಿಯವರನ್ನು ಅಧ್ಯಕ್ಷರಾಗಲು ಕೇಳಿಕೊಳ್ಳಬೇಕೆಂದೂ ನಿರ್ಧಾರವಾಯಿತು ಪರಿಷತ್ತಿಗೆ ಬೇಕಾದ ಕಾರ್ಯಕ್ರಮಗಳನ್ನು ಸಹ ನಿಶ್ಚಯ ಮಾಡಲಾಯಿತು

ಮೂವರಿಗೆ ಮರಣ ದಂಡನೆ

ಐವರ್ನಾಡ್ ಕೊಲೆ ಕೇಸಿನ ವಿಚಾರಣೆ ನಡೆದು ತಾ. ೧೮ರಲ್ಲಿ ತೀರ್ಪು ಕೊಡಲ್ಪಟ್ಟಿತು ಮೊಕದ್ದಮೆಯ ವಿಷಯ ಹೀಗೆ: ಪುತ್ತೂರು ತಾಲೂಕಿನ ಐವರ್ನಾಡ್ ಗ್ರಾಮದಲ್ಲಿ ಒಂದು ಅಡಿಕೆ ತೋಟದ ವಿಷಯದಲ್ಲಿ ಇಸುಬು ಬ್ಯಾರಿ ಮತ್ತು ಇಬ್ರಾಹಿಮ್ ಬ್ಯಾರಿಗಳೊಳಗೆ ವಿವಾದವಿತ್ತು ಈ ಪೈಕಿ ಮೊದಲನೆಯವನಿಗೆ ಆ ಗ್ರಾಮದ ಪ್ರಮುಖರುಗಳು ಸಹಾಯವಾಗಿದ್ದರು. ಎರಡನೆಯವನಿಗೆ ಪಟೇಲರ ಸಹಾಯವಿತ್ತು ತಾ ೧೮-೧೦ ೩೬ರಲ್ಲಿ ಇಸುಬು ಬ್ಯಾರಿಯು ಮತ್ತು ಅವನ ಸಂಗಾತಿಗಳಿಬ್ಬರು ಆ ತೋಟಕ್ಕೆ ಸುಮಾರು ಅಪರಾಹ್ನ ೧ ಘಂಟೆಗೆ ಹೋದಾಗ ಇಬ್ರಾಹಿಮನೂ ಅವನ ಕಡೆಯವರೂ ಇವರನ್ನು ಹೊಡೆದರು ಈ ವಾರ್ತೆಯನ್ನು ಕೇಳಿ ಪ್ರಮುಖರುಗಳೂ (ರಾಮಚಂದ್ರರಾಯರು) ಅವರ ಅಣ್ಣ ರಾಮರಾಯರೂ, ಭಾವ ಗುಂಡಣ್ಣನೂ ಒಬ್ಬ ಒಕ್ಕಲು ಆ ತೋಟದ ಕಡೆಗೆ ಹೋಗಲು ಅವರುಗಳನ್ನು ಗುಂಡಿನಿಂದ ಹೊಡೆದರು ಇದರ ಪರಿಣಾಮವಾಗಿ ರಾಮಚಂದ್ರರಾಯರೂ ಅವರ ಅಣ್ಣ ರಾಮರಾಯರೂ ಅಲ್ಲಿಯೇ ಮಡಿದರು. ಮತ್ತಿಬ್ಬರಿಗೆ ಗಾಯವಾಯಿತು ಈ ಮೊಕದ್ದಮೆಯ ಕೆ ದೇವಪ್ಪ ಗೌಡನನ್ನೂ, ಇಬ್ರಾಹಿಮನೆ ಸೇರಿ ಹತ್ತು ಮಂದಿಯನ್ನೂ ವಿಚಾರಣೆಗೆ ಗುರಿಪಡಿಸಿದರು. ಶ್ರೀ ಪ್ರೋ ಕೋರ್ಟಿನ ೧೪೮,೩೦೨, ಮತ್ತು ೩೦೭ನೇ ಕಲಮುಗಳ ಮೇಲೆ ವಿಚಾರಣೆಯಾಯಿತು ಪಟೇಲರೂ ಈ ಕೊಲೆಗೆ ಸಹಾಯಕರಾಗಿದ್ದರೆಂದು ಅವರ ಮೇಲೂ ವ್ಯವಹರಣೆ ಹೂಡಲ್ಪಟ್ಟಿತು ಸೆಶ್ಶನ್ಸ್ ಜಡ್ಜಿಗಳಾದ ಮಿ. ಯಂ ವೆಂಕಟರಾಮಯ್ಯನವರು ತೀರ್ಪುಕೊಟ್ಟು ಅವರಲ್ಲಿ ದೇವಪ್ಪ ಗೌಡ, ಜಂಬುಣ್ಣ ಯಾನೆ ಅಂಬುಣ್ಣ; ಮತ್ತು ಕೂಸಪ್ಪ ಗೌಡರನ್ನು ಮರಣ ದಂಡನೆಗೂ ಮತ್ತು ಬೇರೆ ತಪ್ಪುಗಳಿಗಾಗಿ ಬಂಧನಕ್ಕೂ ಗುರಿಪಡಿಸಬೇಕೆಂದು ತೀರ್ಪುಕೊಟ್ಟರು ಪಟೇಲ ರಾಮಣ್ಣ ಗೌಡರೂ ಮಿಕ್ಕ ಎಲ್ಲವರೂ ಬಿಡುಗಡೆ ಮಾಡಲ್ಪಟ್ಟರು ಆಪಾದಿತರ ಕಡೆಯಿಂದ ಶ್ರೀಗಳಾದ ಸುವರ್ಣ, ಕೆ ಉಗ್ಗಪ್ಪ ಶೆಟ್ಟಿ, ಕೆ, ವೆಂಕಟರಮಣ ಗೌಡ ಮತ್ತು ಮೂವರು ಇವರ ಗಳು ವಾದಿಸಿದರು ಸರಕಾರದ ಕಡೆಯಿಂದ ಶ್ರೀ ಕಾರ್ಕಳ ಸದಾಶಿವರಾಯರು ವ್ಯವಹರಿಸಿದರು

ಪ್ರೊ ರಂಗರವರ ಆಗಮನ

ಕೇಂದ್ರ ಶಾಸನ ನಿರ್ಮಾಣ ಸಭೆಯ ಸದಸ್ಯರೂ ಭರತಖಂಡದ ರೈತರ ಪರಿಷತ್ತಿನ ಅಧ್ಯಕ್ಷರೂ ಆಗಿರುವ ಪ್ರೊ ಎನ್ ಜಿ ರಂಗರವರು ತಾ ೧೭ನೇ ಗುರುವಾರ ಮಂಗಳೂರಿಗೆ ಬಂದರು ಶ್ರೀಯುತರನ್ನು, ಕರ್ನಾಟಕದ ರೈತರನ್ನು ಜಾಗೃತಗೊಳಿಸುವುದಕ್ಕಾಗಿ ಕ ಪ್ರಾ ಕಾಂಗ್ರೆಸ್ ಕಮಿಟಿಯವರು ಕರೆಸಿರುವುದಾಗಿದೆ ಮಂಗಳೂರಿಗೆ ಅವರು ಬಂದ ದಿವಸ ಸಾಯಂಕಾಲ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಅವರ ಭಾಷಣವಾಯಿತು ಪ್ರೊ ರಂಗರವರ ಪರಿಚಯವನ್ನು ಸಭಿಕರಿಗೆ ಶ್ರೀ ಕವಲು ದೇವಿಯವರು ಮಾಡಿಕೊಟ್ಟರು

ಪ್ರೊ ರಂಗರವರು ತಮ್ಮ ಭಾಷಣದಲ್ಲಿ ಹೀಗೆಂದರು ‘ಕರ್ನಾಟಕ ಪ್ರಾಂತಕ್ಕೆ ಬಂದುದರಿಂದ ನನಗೆ ಅತ್ಯಂತ ಸಂತೋಷವಾಗಿದೆ ಕಾರಣವೇನೆಂದರೆ ಈ ದೇಶವು ಸುಮಾರು ಮೂರು ಶತಮಾನಗಳವರೆಗೆ ಸಂಪೂರ್ಣ ಸ್ವರಾಜ್ಯವನ್ನು ಪಡೆದಿತ್ತು ವಿಜಯನಗರದ ಅರಸರು ದಕ್ಷಿಣ ದೇಶಕ್ಕೆ ಸ್ವರಾಜ್ಯವನ್ನು ಕೊಟ್ಟಿದ್ದರು. ಇಲ್ಲಿ ಭೂಮಿಯನ್ನು ಜಮೀನಾರರ ವಶಕ್ಕೆ ಕೊಡದೆ ರೈತರಿಗೆ ಕೊಟ್ಟಿದ್ದರು ಇದು ವಿಜಯನಗರದ ಅರಸರ ದೂರದೃಷ್ಟಿಯನ್ನು ತೋರಿಸುತ್ತದೆ ಈ ಪದ್ಧತಿಯು ಅನುಸರಣೆಯ ದೆಸೆಯಿಂದ ಇಲ್ಲಿ ಜಮೀನ್ದಾರರ ಸಂಖ್ಯೆಯು ಕಡಿಮೆಯಾಗಿದೆ ಮತ್ತು ಇಲ್ಲಿಯ ರೈತವಾರಿ ಪದ್ಧತಿಯನ್ನು ಸರ್ ಥಾಮಸ್ ಮನ್ರೊ ಸಾಹೇಬರು ಹಿಂದುಸ್ಥಾನದ ಎಲ್ಲ ದೇಶಗಳಿಗೂ ಅನ್ವಯಿಸುವಂತೆ ಮಾಡಬೇಕೆಂದು ಸಹ ಯತ್ನಿಸಿದರು ಆದರೆ ತನ್ನ ಧ್ಯೇಯವನ್ನು ಮುಗಿಸಿದ ಮೇಲೆ ವಿಜಯನಗರವು ಮುರಿದು ಬಿತ್ತು ಇದಕ್ಕಾಗಿ ನಾನು ವ್ಯಸನ ಪಡುವುದಿಲ್ಲ. ಏಕೆಂದರೆ ಬಹಳ ಕಾಲದ ವರೆಗೆ ರಾಜ್ಯವಿರುತ್ತಿದ್ದರೆ ಬಲಹೀನರಾದ ಅರಸರು ಬಂದು ಜಮೀನ್ದಾರರ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದರು

ಕಾಂಗ್ರೆಸಿನಲ್ಲಿ ಜಮೀನ್ದಾರರ ಶಕ್ತಿ

ಪ್ರಕೃತ ಕಾಂಗ್ರೆಸಿನಲ್ಲಿ ಜಮೀನ್ದಾರರ ಮತ್ತು ಹಣ ಸಾಲಕೊಡುವ ಸಾಹುಕಾರರ ಶಕ್ತಿಯು ಹೆಚ್ಚಾಗಿದೆ ಅವರು ಸರಕಾರದ ಮಿತ್ರರು. ಅವರನ್ನು ಕಾಂಗ್ರೆಸಿನಿಂದ ಹೊರ ಹೊರಡಿಸದಿದ್ದರೆ ಬಡಜನರ ಹಿತಸಾಧನೆಯಾಗಲಾರದು ಈ ಜಮೀನ್ದಾರರು ಅನೇಕ ವಿಧದಲ್ಲಿ ನಮ್ಮ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಯತ್ನಿಸುತ್ತಿದ್ದಾರೆ. ಈಗ ಜಮೀನ್ದಾರರು ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಯತ್ನಿಸಿದರೆ ಅವರನ್ನು ತಡೆಯುವ ಶಕ್ತಿಯು ಬಡಜನರಿಗೆ ಬರಲಾರದು ಆದ್ದರಿಂದ ಬಡಜನರು ಕೆಲಸಗಾರರು ರೈತರು ತಮ್ಮ ಹಕ್ಕು ಬಾಧ್ಯತೆಗಳನ್ನು ತಿಳಿದುಕೊಂಡು ತಮ್ಮ ಸಂಘ ಶಕ್ತಿಯನ್ನು ಬೆಳೆಸಿಕೊಳ್ಳಬೇಕು

ನಮ್ಮ ಸೋಲಿಗೆ ಕಾರಣ

೧೮೫೭-೫೮ರಲ್ಲಿ, ೧೯೦೮ರಲ್ಲಿ, ೧೯೨೧ರಲ್ಲಿ ಮತ್ತು ೧೯೩೧ರಲ್ಲಿ ಈ ಕಾಲದ ಯಾವ ಚಳವಳದಲ್ಲಿಯೂ ನಮ್ಮ ಜನರಿಗೆ ಜಯವಾಗಲಿಲ್ಲ ಆ ಕಾರಣವೇನೆಂದರೆ ಈ ಚಳವಳಗಳಲ್ಲಿ ಜನತೆಯು ಮುಖ್ಯಭಾಗವನ್ನು ವಹಿಸಿಲ್ಲ ಜನತೆಗೆ ಅವುಗಳಲ್ಲಿ ಪ್ರೀತಿ ವಿಶ್ವಾಸಗಳೂ ಇರಲಿಲ್ಲ ಆದ್ದರಿಂದ ಸೋಲು ಪ್ರಾಪ್ತಿಯಾಯಿತು

ರೈತರ ಹಕ್ಕುಗಳ ನಿರ್ಧಾರ

ಈಗ ಕೆಲಸಗಾರರು ಮತ್ತು ರೈತರು ತಮಗೆ ಯಾವ ಅಧಿಕಾರ, ಹಕ್ಕುಗಳು ಬೇಕೆಂಬುದನ್ನು ನಾವು ನಿರ್ಧರಿಸಬೇಕು ಸ್ವರಾಜ್ಯ ಸಾಧನೆಗಾಗಿ ನಾವು ಹೋರಾಡುವಾಗ ರೈತರ ಸ್ವಾತಂತ್ರ್ಯಕ್ಕಾಗಿ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು ಇದುವರೆಗೆ ರಾಷ್ಟ್ರ ಸಭೆಯು ಆರ್ಥಿಕ ಯೋಜನೆಯನ್ನು ಕೈಕೊಂಡಿರಲಿಲ್ಲ ಆದ್ದರಿಂದ ಇನ್ನು ಮೇಲೆ ಅದನ್ನು ಬಿಡಕೂಡದು

ಕಾಂಗ್ರೆಸಿಗೆ ವಿರೋಧವಲ್ಲ

ಆರ್ಥಿಕ ಸ್ವಾತಂತ್ರ್ಯವನ್ನು ರೈತರು ಕೇಳುತ್ತಾರೆಂದ ಮಾತ್ರಕ್ಕೆ ಅವರು ರಾಜಕೀಯ ಸ್ವಾತಂತ್ರ್ಯಕ್ಕೆ ವಿರೋಧಿಗಳೆಂದು ಹೇಳುವುದು ಸರಿಯಲ್ಲ ರಾಷ್ಟ್ರಸಭೆಯ ಧ್ಯೇಯದೊಡನೆ ಮತ್ತೊಂದು ಧ್ಯೇಯವನ್ನು ನಾವು ಇಟ್ಟುಕೊಂಡಿದ್ದೇವೆ

ನಮ್ಮ ಆಯುಧಗಳು

ಬ್ರಿಟಿಷ್ ಚಕ್ರಾಧಿಪತ್ಯದ ಶಕ್ತಿಯನ್ನು ಇದಿರಿಸಬೇಕಾದರೆ ಜನರು ಜಾಗ್ರತರಾಗಿ ಸುಸಂಘಟಿತರಾಗಬೇಕು. ಆದಾಗ ಬೇಕಾದರೆ ಜನರು ತಮ್ಮ ಹಕ್ಕುಗಳನ್ನು ತಮ್ಮ ಶಕ್ತಿಯನ್ನು ತಿಳಿಯಬೇಕು ಇದು ತಿಳಿದ ಮೇಲೆ ಜನರನ್ನು ತಡೆಯುವವರಿಲ್ಲ ಆ ತಿಳುವಳಿಕೆಯೇ ಅವರ ಶಕ್ತಿ ಅಹಿಂಸಾತ್ಮಕರೂಪದಲ್ಲಿ ಈ ಶಕ್ತಿಯನ್ನು ಉಪಯೋಗಿಸಿ ಅವರು ತಮ್ಮ ಗುರಿಯನ್ನು ಮುಟ್ಟುವರು

ಪ್ರಾರ್ಥನೆ

ಈಗ ನೀವೆಲ್ಲರೂ ರೈತರಿಗೆ ಮತ್ತು ಕೆಲಸಗಾರರಿಗೆ ಸಹಾಯಮಾಡಿ ಅವರು ಶಕ್ತಿಯುಕ್ತರಾಗುವ ಹಾಗೆ ಯತ್ನಿಸಬೇಕು ಕೆಲಸಗಾರರು ಮುಷ್ಕರದ ನೆರವಿನಿಂದ ತಮ್ಮ ಹಕ್ಕನ್ನು ಸ್ಥಾಪಿಸಬಹುದು.

ಪ್ರೊ ರಂಗರು ಸಭಿಕರಲ್ಲಿ ಕೆಲವರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕೊಟ್ಟರು

ಶ್ರೀ ಬಿ ವೆಂಕಟರಾವ್ ಬಾಳಿಗರು ವಂದನಾರ್ಪಣೆಗಳನ್ನರ್ಪಿಸಿದರು ಅನಂತರ ಸಭಾಂತ್ಯವಾಯಿತು.

ಬೀಡಿ ಕೆಲಸಗಾರರಿಗೆ ಉಪದೇಶ

ಅದೇ ದಿನ ರಾತ್ರಿ ೮ ಗಂಟೆಗೆ ಕಾಂಗ್ರೆಸ್ ಕಚೇರಿಯಲ್ಲಿ ಸೇರಿದ ಬೀಡಿ ಕೆಲಸಗಾರರ ಸಭೆಯಲ್ಲಿ ಪ್ರೊ ರಂಗರವರು ಭಾಷಣವಿತ್ತರು ಅದರಲ್ಲಿ ಬೀಡಿ ಕೆಲಸಗಾರರು ಸ್ಥಾಪಿಸಿದ ಸಂಘವು ಬಹಳ ಅಗತ್ಯವಾದದೆಂದು ಹೇಳಿ ಅದಕ್ಕೆ ಶ್ರೇಯಸ್ಸನ್ನು ಬಯಸುತ್ತಾ ಸಂಘಗಳಿಲ್ಲದೆ ಕೆಲಸ ಮಾಡುವವರಿಗೆ ಇರತಕ್ಕ ಕುಂದುಕೊರತೆಗಳನ್ನು ವಿವರಿಸಿದರು ಕಾರ್ಖಾನೆಗಳಲ್ಲಿ ಕೆಲಸ ಮಾಡುವವರಿಗೆ ಅನೇಕ ಅನುಕೂಲತೆಗಳಿವೆಯೆಂದೂ, ಅವರಿಗೆ ನಿಶ್ಚಿತ ಸಮಯದಲ್ಲಿ ಕೆಲಸ ಮಾಡುವ ಹಾಗೆ ನಿಯಮಗಳಿವೆಯೆಂದೂ ಕೆಲಸದಿಂದ ಅವರನ್ನು ತೆಗೆದುಹಾಕಿದರೆ ಅವರಿಗೆ ಅಪೀಲ್ ಮಾಡುವ ಪಕ್ಷದೆಯೆಂದೂ ಆದರೆ ಈ ಬೀಡಿ ಕೆಲಸಗಾರರ ಮಟ್ಟಿಗೆ ಅಂತಹ ಅನುಕೂಲತೆಗಳಿಲ್ಲವೆಂದೂ ತಿಳಿಸಿದರು ಕಾರ್ಖಾನೆಗಳಲ್ಲಿ ಮುಷ್ಕರ ಹಿಡಿಯುವ ಅಧಿಕಾರ ಕೆಲಸಗಾರರಿಗಿದೆ ಆದರೆ ಇಲ್ಲಿ ಅದೂ ಇಲ್ಲ ಹೀಗಿರುವುದರಿಂದ ಬೀಡಿ ಕೆಲಸಗಾರರು ತಮ್ಮ ಏಳಿಗೆಗೆ, ತಮ್ಮ ಕ್ಷೇಮಕ್ಕಾಗಿ ಹೋರಾಡಲು ಶಕ್ತಿಯನ್ನು ಸಂಪಾದಿಸಬೇಕಾದರೆ ಇಂತಹ ಸಂಘದಿಂದಲೇ ಸಾಧ್ಯವೆಂದರು ಪ್ರೊ ರಂಗರ ಭಾಷಣವನ್ನು ಶ್ರೀ ರಂಗರಾಯರು ಕನ್ನಡಕ್ಕೆ ಭಾಷಾಂತರಿಸಿದರು ಶ್ರೀ ಕೆ ಹೈದರು ಧನ್ಯವಾದಗಳನ್ನರ್ಪಿಸಿದ ಮೇಲೆ ಸಭಾಂತ್ಯವಾಯಿತು

ಕರ್ನಾಟಕಕ್ಕೆ ಪ್ರೊ ರಂಗರವರ ಸಂದೇಶ

ಮಂಗಳೂರಿಂದ ಪ್ರವಾಸಕ್ಕೆ ಹೊರಡುವಾಗ ಪ್ರೊ ರಂಗರವರು ಕರ್ನಾಟಕದ ಮಹಾಜನರಿಗೆ ಒಂದು ಸುದೀರ್ಘ ಸಂದೇಶವನ್ನಿತ್ತಿರುವರು ಅದರಲ್ಲಿ ಕನ್ನಡಿಗರ ರೈತವಾರಿ ಪದ್ಧತಿಯು ಉತ್ತಮ ಮತ್ತು ಆದರ್ಶ ಪದ್ಧತಿಯೆಂದು ತಿಳಿಸುವುದಲ್ಲದೆ, ಕರ್ನಾಟಕವು ಮೂಲಗೇಣಿ ಕ್ರಮವನ್ನು ಇತರ ಪ್ರಾಂತಗಳವರಿಗೆ ಕಲಿಸಿಕೊಡಲು ಶಕ್ತಿಯುಳ್ಳದಾಗಿದೆಯೆಂದು ತಿಳಿಸಿದ್ದಾರೆ ಮತ್ತು ಭೂಮಾಲಿಕರ ಮತ್ತು ಗೇಣಿದಾರರ ಒಕ್ಕಲುಗಳ ಸ್ಥಿತಿಗತಿ ಭೇದಭಾವಗಳನ್ನು ಯಾವ ರೀತಿಯಲ್ಲಿ ಹೋಗಲಾಡಿಸಬಹುದೆಂಬುದನ್ನು ವಿವರಿಸಿ, ಸ್ವಾತಂತ್ರ್ಯಗಳನ್ನು ಹೋಗಲಾಡಿಸಬೇಕೆಂದು ಅದರಲ್ಲಿ ಸೂಚಿಸುವರು

ಮ್ಯು ಚುನಾವಣೆ

ಮಂಗಳೂರು ಟೌನ್ ಕಾಂ ಸಮಿತಿಯವರು ಉಮೇದುವಾರರಿಂದ ಅರ್ಜಿಗಳನ್ನು ಜುಲೈ ತಾ ೧೫ರವರೆಗೆ ೨ರೂ ಗಳ ಠೇವಣಾತಿ ಸಮೇತ ಬೇಕೆಂದಿರುವರು.

(೧೧ನೇ ಪುಟವನ್ನು ನೋಡಿರಿ)

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries

BRANCHES AT.

P B 337 Mount Road Madras	Visveswarapuram Circle, Bangalore City	Soumya Iyam Puthiyara, Calicut
Car Street, Mangalore	Udipi, S India	Charni Road, Bombay No 4

INSPECTORATE OFFICE AT.

1 Ottapalam, Malabar District 2 Central Station Road Trivandrum

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over	Rs 80 00,000
Life Funds Over	Rs 68 00,000
Premium Income Over	Rs 22,54,000
Interest Income	Rs 3,16,000
Claims Paid	Rs 5,75,000

Total Claims paid Over Rs. 58,50,000
Total Business in Force Over Rs 4,1251 20?

TOTAL BUSINESS IN FORCE **Rs. 4,42,51,200**

The Canara Banking Corporation Udipi Ltd.

(Incorporated in British India)

Estd. 1906

ANNOUNCEMENT.

We have great pleasure to inform the public and our constituents that our name has been included in the Second Schedule of the Reserve Bank of India Act.

Issued & Subscribed Capital	Rs. 350000/-
Paid up Capital	Rs. 288950/-
Reserves	Rs. 363573/-
Deposits	Rs. 3740722/-
TOTAL RESOURCES EXCEED	HALF A CRORE.

V. R. Kamath, B. A., LL.B.

Mg. Manager.

ಉಡುಪಿ, ಗುರುವಾರ, ತಾ. ೨೪-೬-'೩೭

ವೈಸರಾಯರ ಹೇಳಿಕೆ

ಇದೇ ತಾ. 21ರಲ್ಲಿ ಮಾನ್ಯ ವೈಸರಾಯರು ರೇಡಿಯೋ ಮೂಲಕ ಕೊಟ್ಟ ಭಾಷಣವನ್ನು ನಾವು ಇನ್ನೊಂದೆಡೆ ಕೊಟ್ಟಿರುವೆವು. ಅದೆಷ್ಟು ಯಥಾರ್ಥ ಹೃದಯ ಮತ್ತು ಉದಾತ್ತ ಭಾವನೆಗಳಿಂದ ತುಂಬಿರುವುದೆಂಬುದು ಅದನ್ನೋದಿದವರಿಗೆಲ್ಲಾ ವೇದ್ಯವಾಗದಿರದು. ಅವರು ತಾ. 22ರಲ್ಲಿ ಪ್ರಕಟಗೊಳಿಸಿರುವ ದೀರ್ಘ ಹೇಳಿಕೆಯೂ ಅದೇ ರೀತಿಯ ಸೌಹಾರ್ದ, ಉದಾರಭಾವ, ಮತ್ತು ಉದಾತ್ತ ವಿಚಾರ ಪೂರ್ಣವಾಗಿರುವುದು. ಅವೆರಡರ ಹಿಂಬದಿಯಲ್ಲೂ ಯಥಾರ್ಥವಾದ ಅಂತಃಕರಣವಿರುವುದೆಂದು ಧಾರಾಳವಾಗಿ ಹೇಳಬಹುದು. ಅದರಿಂದಾಗಿ ಈಗ ದೇಶದಲ್ಲುಂಟಾಗಿರುವ ಬಿಕ್ಕಟ್ಟು ನಿವಾರಿಸಲ್ಪಟ್ಟು ಕಾಂಗ್ರೆಸ್ ಪಕ್ಷೀಯರು ಮಂತ್ರಿ ಪದವಿ ಸ್ವೀಕರಿಸುವಂತಾಗಬಹುದೆಂದು ನಿರೀಕ್ಷಿಸಬಹುದು.

ಹಿಂದು ದೇಶದ ರಾಜಕೀಯ ಘಟನೆಯು ರೂಪಿಸಲ್ಪಡುವಾಗಲೇ ಇಂತಹ ತೊಡಕುಗಳುಂಟಾಗಬಹುದೆಂದು ನಿರೀಕ್ಷಿಸಲಾಗಿದೆ. ಆ ಕುರಿತು ಹಿಂದೀಯರಲ್ಲೆಲ್ಲಾ ಆವೇಗವುಂಟಾಗುವುದು ಸ್ವಾಭಾವಿಕವಾಗಿದೆ. ಈ 3 ತಿಂಗಳುಗಳಲ್ಲಿ ಬಿಕ್ಕಟ್ಟಿನ ಬೇರೆ ಬೇರೆ ಸ್ವರೂಪದ ಕುರಿತು ನಡೆದ ಚರ್ಚೆಗಳು, ಪರಸ್ಪರ ಅಭಿಪ್ರಾಯಗಳನ್ನು ತಿಳಕೊಳ್ಳಲು ರಾಜಕೀಯ ಘಟನೆಯ ನಿಜವಾದ ಉದ್ದೇಶಗಳನ್ನು ವಿಷದಗೊಳಿಸಲು ಸಹಾಯಕವೇ ಆಗಿವೆ. ಕಾಂಗ್ರೆಸಿನವರು ಇಂಡಿಯಾ ಆಕ್ಟಿನ ಉದ್ದೇಶದ ಕುರಿತು ಕಟ್ಟಿಕೊಂಡಿರುವ ಸಂದೇಹಗಳಿಗೆ ಆಧಾರವಿಲ್ಲದಿದ್ದರೂ ಅವರ ಯಥಾರ್ಥತೆಯನ್ನು ತಾನೊಪ್ಪುತ್ತೇನೆ. ಹೊಸ ರಾಜಕೀಯ ಘಟನೆಯು ರೂಪಿಸಲ್ಪಡುವಾಗ ಮತ್ತು ಪಾರ್ಲಿಮೆಂಟನಲ್ಲಿ ಆ ಕುರಿತು ಚರ್ಚೆ ನಡೆದಾಗ ಅದರಲ್ಲಿ ಮುಖ್ಯ ಭಾಗ ವಹಿಸಿದವರಲ್ಲಿ ತಾನೊಬ್ಬ. ಆದುದರಿಂದ ಅದರ ನಿಜವಾದ ಉದ್ದೇಶವೇನೆಂಬುದನ್ನು ತಾನು ಅಧಿಕಾರಿಕವಾಗಿ ಹೇಳಬಲ್ಲೆ. ಅಲ್ಪಸಂಖ್ಯಾಕ ಮತ್ತು ಸರಕಾರಿ ನೌಕರರ ವಿಷಯವೂ ಸೇರಿ ಪ್ರಾಂತದ ಆಡಳಿತದಲ್ಲೆಲ್ಲಾ ಗವರ್ನರರು ಸರ್ವಸಾಮಾನ್ಯವಾಗಿ ಮಂತ್ರಿಗಳ ಅಭಿಪ್ರಾಯದಂತೆಯೇ ನಡೆಯಬೇಕು. ಆ ಮಂತ್ರಿಗಳು ಪ್ರಜಾಪ್ರತಿನಿಧಿ ಸಭೆಗಲ್ಲದೆ ಪಾರ್ಲಿಮೆಂಟಿಗೆ ಜವಾಬ್ದಾರರಲ್ಲ. ಸ್ಪಷ್ಟವಾಗಿ ನಿರ್ದೇಶಿಸಲ್ಪಟ್ಟಿರುವ ವಿಶೇಷಾಧಿಕಾರಗಳ ಕುರಿತು ಮಾತ್ರ ಗವರ್ನರರು ಪಾರ್ಲಿಮೆಂಟಿಗೆ ಜವಾಬ್ದಾರರಾಗಿರುವರು. ಈ ವಿಶೇಷಾಧಿಕಾರಗಳು, ಪ್ರಾಂತದಲ್ಲಿ ಶಾಂತಿ ಭಂಗವುಂಟಾಗುವ ಪರಿಸ್ಥಿತಿಯುಂಟಾದಲ್ಲಿ ಅದನ್ನು ನಿವಾರಿಸಲು, ಅಲ್ಪ ಸಂಖ್ಯಾಕರ ಹಿತರಕ್ಷಣೆ ಮಾಡಲು, ನೌಕರರಿಗೆ ಧಕ್ಕೆ ತಗಲದಂತೆ ನೋಡಲು ಮಾತ್ರ ಉಪಯೋಗಿಸಲ್ಪಡಬೇಕು. ಗವರ್ನರರು ಈ ವಿಶೇಷಾಧಿಕಾರಗಳನ್ನು ಉಪಯೋಗಿಸುವಾಗಲೂ ಮಂತ್ರಿಗಳ ಸಲಹೆ ಪಡೆದುಕೊಳ್ಳಲೇಬೇಕು. ಮಂತ್ರಿಗಳ ಪ್ರಜಾ ಜವಾಬ್ದಾರಿಕೆ ಎಂಬುದು ಬರಿಯ ಕಣ್ಣುಕಟ್ಟು. ಗವರ್ನರರು ತಮ್ಮಿಚ್ಛೆ ಬಂದಂತೆ ತಮಗೆ ಬೇಕಾದ ಕೆಲಸ ಮಾಡಬಹುದು. ಮಂತ್ರಿಗಳನ್ನು ಗಣ್ಯಮಾಡಮಾಡಬೇಕಾಗಿಲ್ಲೆಂಬ ಅಭಿಪ್ರಾಯಕ್ಕೆ ಲವ ಮಾತ್ರವೂ ಆಧಾರವಿರುವುದಿಲ್ಲ. ಮಂತ್ರಿಗಳ ಸಲಹೆಯು ನ್ಯಾಯವಾದುದಾದರೆ, ಗವರ್ನರರು ಅದಕ್ಕೆ ಸಮ್ಮತಿಸದಿದ್ದರೂ ಆ ಪ್ರಕಾರ ಅವರು ನಡೆಯಲೇಬೇಕು. ಎಲ್ಲಾ ಸಂದರ್ಭದಲ್ಲಿಯೂ ತನ್ನ ಮಂತ್ರಿಗಳ ಸಲಹೆ ಪಡೆದು ಆ ಪ್ರಕಾರವೇ ಪ್ರಾಂತಿಕ ಆಡಳಿತ ನಡೆಸುವಂತೆ ನೋಡುವುದೇ ಗವರ್ನರರ ಕರ್ತವ್ಯ. ಇತ್ತಂಡದಲ್ಲಿಯೂ ಸೌಹಾರ್ದವಿದ್ದಲ್ಲಿ ಯಾವ ತರದ ತೊಡಕೂ ಇಲ್ಲದೆ, ಮಂತ್ರಿಗಳು ಪ್ರಾಂತಿಕ ರಾಜ್ಯಭಾರವನ್ನು ನಡಿಸಿ ಜನಹಿತ ಸಾಧಿಸಲು ಯಾವ ಅಡ್ಡಿಯೂ ಇರಲಾರದು. ಈ ಉದ್ದೇಶದಿಂದಲೇ ಬ್ರಿಟಿಷ್ ಪಾರ್ಲಿಮೆಂಟಿನವರು ಇಂಡಿಯಾ ಆಕ್ಟನ್ನು ರಚಿಸಿ ಜ್ಯಾರಿಗೆ ತಂದುದಾಗಿದೆ. ಅತ್ಯಂತ ಸಂಕುಚಿತ ಕ್ಷೇತ್ರದಲ್ಲಿ ಕೇವಲ ಕೆಲವೊಂದು ಅಧಿಕಾರಗಳ ಹೊರತು ಇತರ ಸರ್ವಸಾಮಾನ್ಯವಾದ ಅನುನಿತ್ಯದ ಆಡಳಿತದ ಸಂಪೂರ್ಣ ಜವಾಬ್ದಾರಿಯು ಮಂತ್ರಿಗಳದಾಗಿದೆ. ಗವರ್ನರರು ವೈಯಕ್ತಿಕ ಸ್ವತಂತ್ರವನ್ನು ಉಪಯೋಗಿಸಬೇಕೆಂದು ನಿರ್ದಿಷ್ಟವಾದ ಕೆಲವೆ ವಿಷಯಗಳ ಬಿಟ್ಟು ಬೇರೆ ಯಾವ ಆಡಳಿತ ಕ್ಷೇತ್ರದಲ್ಲೂ ಅವರು ಕೈಹಾಕಲಾರರು. ಇದೀಗ ಈ ಮೂರು ತಿಂಗಳು ಆಡಳಿತದಿಂದ ಸಿದ್ಧವಾಗಿರುವುದು. ಒಂದು ವೇಳೆ ಮಂತ್ರಿಗಳಿಗೂ ಗವರ್ನರರಿಗೂ ಅಭಿಪ್ರಾಯ ಭೇದವುಂಟಾಗುವ ದುರ್ದೈವವುಂಟಾಗಿ ಗವರ್ನರರಿಗೆ ಎಷ್ಟಕ್ಕೂ ಮಂತ್ರಿಗಳ ಸಲಹೆಯನ್ನು ಸ್ವೀಕರಿಸಲು ಅಸಾಧ್ಯವೆಂದಾದರೆ ಆಗ ಆ ನಿರ್ಧಾರಕ್ಕೆ ಸಂಪೂರ್ಣವಾಗಿ ಅವರೇ ಜವಾಬ್ದಾರರಲ್ಲದೆ, ಮಂತ್ರಿಗಳಿಗೂ ಅದಕ್ಕೂ ಯಾವ ಸಂಬಂಧವೂ ಇರಲಾರದು. ಅಂತಹ ಸಂದರ್ಭದಲ್ಲಿ ಅಗತ್ಯವೆಂದು ತೋರಿದರೆ ಮಂತ್ರಿಗಳು ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವ ಹಕ್ಕು ಅವರಿಗಿರುವುದು. ಆದರೆ ಗವರ್ನರರು ಸರ್ವಸಾಧಾರಣ ಪರಿಸ್ಥಿತಿಯಲ್ಲಿ 'ಇಂತಹ ನಿರ್ಧಾರಕ್ಕೆ ಬರಲಾರರು. ಎಲ್ಲಾ ಸಂದರ್ಭಗಳಲ್ಲಿಯೂ ಮಂತ್ರಿಗಳನ್ನು ತನ್ನ ಕಡೆಗೊಲಿಸಿಕೊಂಡೇ ಆಡಳಿತ ನಡಿಸಲು ಅವರು ತನ್ನಿಂದ ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡುವರು. ಎಷ್ಟಕ್ಕೂ ಮಂತ್ರಿಗಳಿಗೂ ಅವರಿಗೂ ಸರಿಹೋಗದಿದ್ದರೆ ಒಂದೋ ಮಂತ್ರಿಗಳು ರಾಜಿನಾಮೆ ಕೊಡಬಹುದು. ಇಲ್ಲವೆ ಗವರ್ನರರು ಅವರಿಂದ ರಾಜಿನಾಮೆ ಕೇಳಬಹುದು. ಗವರ್ನರರು ರಾಜಿನಾಮೆ ಕೇಳುವುದಕ್ಕಿಂತ ಮಂತ್ರಿಗಳೇ ರಾಜಿನಾಮೆ ಕೊಡುವುದೇ ನ್ಯಾಯ, ಗೌರವಯುಕ್ತವಾದುದು. ಗವರ್ನರರು ರಾಜಿನಾಮೆ ಕೇಳುವುದು ಮಂತ್ರಿಗಳ ಸ್ವಾಭಿಮಾನಕ್ಕೊಂದು ಕೊರತೆ. ಇಂಡಿಯಾ ಆಕ್ಟಿನಲ್ಲಿ ಗವರ್ನರರೇ ರಾಜಿನಾಮೆ ಕೇಳಬೇಕೆಂಬ ನಿರ್ಬಂಧವೇನೂ ಇಲ್ಲ. ಹಾಗಾಗಲೂ ಸಾಧ್ಯವಿಲ್ಲ. ಅಲ್ಪ ಸಂಖ್ಯಾಕರ ಹಿತಕ್ಕೆ ಘಾತವನ್ನುಂಟುಮಾಡುವುದೇ ಮೊದಲಾದ ಕೆಲಸವನ್ನು ವಿವೇಕಶಾಲಿಗಳಾದ ಮಂತ್ರಿಗಳಾರೂ ಮಾಡಲಾರರು. ಆದುದರಿಂದ ಗವರ್ನರರಿಗೆ ಮತ್ತು ಮಂತ್ರಿಗಳಿಗೆ ಅಂತಹ ಪ್ರಬಲ ಅಭಿಪ್ರಾಯ ಭೇದವುಂಟಾಗುವ ಸಂದರ್ಭಗಳೇ ಬರಲಾರವೆಂದು ತನ್ನ ಅಭಿಪ್ರಾಯ. ಕೆಲವೊಂದು ನಿರ್ದಿಷ್ಟ ವಿಷಯಗಳ ಹೊರತು ಉಳಿದ ಆಡಳಿತ ಜವಾಬ್ದಾರಿಯೆಲ್ಲಾ ಮಂತ್ರಿಗಳದು. ಅವರು ಸಂಪೂರ್ಣವಾಗಿ ಪ್ರಜಾಪ್ರತಿನಿಧಿ ಸಭೆಗಳಿಗೆ ಹೊಣೆಗಾರರು. ಅದರಲ್ಲಿ ಗವರ್ನರರು ಕೈಹಾಕುವ ಸಂದರ್ಭಗಳೇ ಬರಲಾರವು! ಒಂದು ವೇಳೆ ಅಂತಹ ಸಂದರ್ಭ ಬಂದು ಎಷ್ಟಕ್ಕೂ ಮಂತ್ರಿಗಳಿಗೆ ಗವರ್ನರರೊಡನೆ ಸೇರಿಕೊಂಡು ಕೆಲಸ ಮಾಡಲು ಸಾಧ್ಯವಿಲ್ಲವಾದರೆ ಆಗ ಅವರು ರಾಜಿನಾಮೆ ಕೊಡಬಹುದು. ಹಾಗೆಯೇ ಗವರ್ನರರಿಗೆ ಮಂತ್ರಿಗಳೊಂದಿಗೆ ಸೇರಿ ನಡೆಯಲು ಅಸಾಧ್ಯವೆಂದಾದರೆ ಅವರು ಮಂತ್ರಿಗಳಿಂದ ರಾಜಿನಾಮೆ ಕೇಳಬಹುದು. ಆದರೆ ಇಂತಹ ಸಂದರ್ಭಗಳು ಬಾರದಂತೆ ತಮ್ಮಿಂದ ಸಾಧ್ಯವಾದ ಮಟ್ಟಿಗೆ ನೋಡುವುದೇ ಇಕ್ಕಡೆಯವರ ಕರ್ತವ್ಯವಲ್ಲದೆ ಅವನ್ನು ಹಾರೈಸುತ್ತಿರುವುದಿಲ್ಲ. ಇದೇ ಬ್ರಿಟಿಷ್ ಪಾರ್ಲಿಮೆಂಟಿನ, ಇಂಡಿಯಾ ಸೆಕ್ರೆಟರಿಗಳ, ತನ್ನ ಮತ್ತು ಎಲ್ಲಾ ಗವರ್ನರರುಗಳ ಉದ್ದೇಶವೆಂಬುದೇ ವೈಸರಾಯರ ದೀರ್ಘ ಹೇಳಿಕೆಯ ಸಾರವಾಗಿರುತ್ತದೆ. ಇಂಡಿಯಾ ಆಕ್ಟಿನಲ್ಲಿ ಮಂತ್ರಿಗಳನ್ನು ತೆಗೆದು ಹಾಕುವ, ರಾಜ್ಯಾಂಗ ರಚನೆಯು ಮುರಿದು ಹೋಗುವ ಸನ್ನಿವೇಶಗಳಿಗೆಲ್ಲಾ ತಕ್ಕ ಭದ್ರತೆಮಾಡಲ್ಪಟ್ಟಿವೆ ಯೆಂಬುದರಿಂದಲೇ ಅವು ಸಂಭವಿಸುವವೆಂದೇನೂ ಇಲ್ಲ. ಅಂತಹ ಪರಿಸ್ಥಿತಿಯು ಎಂದೂ ಉಂಟಾಗದ ಹಾಗೆ ಮಾಡಿ ಮಂತ್ರಿಗಳೂ ಗವರ್ನರರೂ ಪರಸ್ಪರ ಸಹಕಾರದಿಂದ ಸೌಹಾರ್ದದಿಂದ ನಡೆದು ಶಾಂತಕ್ಕೆ ನಿಜವಾದ ಪ್ರಯೋಜನವಾಗುವಂತಾಗಬೇಕೆಂದೇ ಗವರ್ನರರ ಮತ್ತು ತನ್ನ ಯಥಾರ್ಥವಾದ ಇಚ್ಛೆ. ಹಿಂದೀಯರಲ್ಲಿ ಹಲವರು ಇಂಡಿಯಾ ಆಕ್ಟಿನ ಕುರಿತು ತೀವ್ರ ಅತೃಪ್ತಿಯುಳ್ಳವರಾಗಿರಬಹುದು. ಅವರ ಆಕಾಂಕ್ಷೆಗಳನ್ನೀದು ತೃಪ್ತಿಪಡಿಸದಿರಬಹುದು. ಅಂಥವರ ಯಥಾರ್ಥತೆಯನ್ನು ತಾನುಪ್ರಶ್ನಿಸುವುದಿಲ್ಲ. ಆದರೆ ಹಿಂದೂದೇಶದ ನಿಜವಾದ ಹಿತವನ್ನು ಈ ಆಕ್ಟಿನ ಮೂಲಕವಾಗಿ ಸಾಧಿಸಲು ಸಾಧ್ಯವಿಲ್ಲವೇ ಎಂಬುದನ್ನು ಪ್ರತಿಯೊಬ್ಬನೂ ವಿಚಾರಿಸಿಕೊಳ್ಳತಕ್ಕದ್ದು. ಪ್ರತಿಯೊಬ್ಬ ಹಿಂದೀಯನೂ ಆಶಿಸುವ ರಾಜಕೀಯ ಗುರಿಯನ್ನು ಮುಟ್ಟಲು ಅತಿ ಹತ್ತಿರದ ದಾರಿಯೆಂದರೆ ಇಂಡಿಯಾ ಆಕ್ಟನ್ನು ಸ್ವೀಕರಿಸಿ ಅದರಿಂದ ಸಾಧ್ಯವಾದಷ್ಟು ಒಳ್ಳೇದನ್ನು ಪಡೆಯುವುದು. ಅದು ಜನೋಪಕಾರ ಮಾಡಲು ಮಹತ್ತಾದ ಸಂದರ್ಭಗಳನ್ನೀಯುತ್ತದೆ. ವಿಶೇಷವಾಗಿ ಅದರಿಂದ ಹಿಂದೀ ಹಳ್ಳಿಗರ, ಬಡಬಗ್ಗರ ಹಿತಸಾಧನೆ ಮಾಡಬಹುದಾಗಿದೆ. ಆದುದರಿಂದ ಹಿಂದೀ ರಾಜಕೀಯ ಮುಂದಾಳುಗಳೂ ಅವರ ಅನುಯಾಯಿಗಳೂ ಈ ವಿಧಾಯಕ ಕಾರ್ಯವನ್ನು ಕೈಕೊಳ್ಳುವುದು ತಮ್ಮ ಕರ್ತವ್ಯವೆಂದು ಪರಿಗಣಿಸುವಂತಾಗಲೆಂದೇ ತನ್ನ ಅಂತಃಕರಣ ಪೂರ್ವಕವಾದ ನಿರೀಕ್ಷೆ. ಒಂದು ವೇಳೆ ಹಲವು ಪ್ರಾಂತಗಳಲ್ಲಿ ಪ್ರಜಾಜವಾಬ್ದಾರಿ ರಾಜ್ಯಭಾರವು ನಿಲ್ಲಿಸಲ್ಪಡುವ ವಿಷಾದಕರ ಪರಿಸ್ಥಿತಿಯು ಉಂಟಾದರೆ ಅದರಿಂದ ಅಮೂಲ್ಯ ಸಮಯವು ಹಾಳಾಗಿ ದೇಶದ ರಾಜಕೀಯ ಪ್ರಗತಿಗೆ ದೊಡ್ಡ ಹಾನಿಯುಂಟಾಗದಿರದು. ಆದರೆ ಅಂತಹ ಪರಿಸ್ಥಿತಿಯುಂಟಾಗಲಾರದೆಂದೇ ತನ್ನ ನಂಬಿಕೆ. ಯಾಕಂದರೆ ತನಗೆ ಹಿಂದೀಯರಲ್ಲೂ, ಹಿಂದೂ ದೇಶದ ಅದೃಷ್ಟದಲ್ಲೂ ದೃಢವಿಶ್ವಾಸವಿದೆ. ನಾವು ನಡಿಯುವ ದಾರಿಯು ಕತ್ತಲಾಗಿದ್ದು ಕೆಲವು ವೇಳೆ ಕಷ್ಟವಾಗಿರಬಹುದು; ನಮ್ಮ ದಿಗ್ದರ್ಶಕ ತಾರೆಯು ಕೆಲವು ವೇಳೆ ಕಂದಿಹೋಗಿ ತೋರದಿರಬಹುದು. ಆದರೂ ವಿಶ್ವಾಸವೂ ಧೈರ್ಯವೂ ಮಹತ್ತಾದ ಶಕ್ತಿಗಳು. ಈ ಕಷ್ಟಕಾಲದಲ್ಲಿ ಅವನ್ನು ನಮ್ಮ ಸಹಾಯಕ್ಕೆ ಪಡಕೊಂಡು, ನಮ್ಮ ಆಶೆಯು ಸಫಲ ಹೊಂದುವ ದಾರಿಯಲ್ಲಿ ಮುನ್ನಡೆಯುವ ಎಂದೇ ವೈಸರಾಯರ ಕೊನೆಯ ವಿನಂತಿ. ಇಂತಹ ಮನೋವೃತ್ತಿ ಮತ್ತು ಭಾವನೆಗಳನ್ನು ರಾಜ್ಯಾಡಳಿತದಲ್ಲಿಕಾರ್ಯರೂಪದಲ್ಲಿ ತೋರುವಂತಾ ಹಿಂದೀಯರಿಂದ ಅದಕ್ಕೆ ತಕ್ಕ ಸಹಕಾರವು ದೊರೆಯದಿರಲಾರದು. ಹಿಂದೂ ದೇಶವು ಸ್ವಾಭಿಮಾನವುಳ್ಳದಾಗಿ ಸ್ವತಂತ್ರ ಪಡೆಯುವುದು ಬ್ರಿಟಿಷರ ಹೆಮ್ಮೆಯ ವಿಷಯವಾದರೆ ಅವರದಕ್ಕೆ ಯಥಾರ್ಥವಾಗಿಯೂ ಸಹಾಯ ಮಾಡುವುದಾದರೆ ಅದು ಪ್ರತ್ಯಕ್ಷವಾಗಿ ಹಿಂದೀಯರ ಅನುಭವಕ್ಕೆ ಬರುವಂತಾಗಬೇಕು. ಆಗ ಮಾತ್ರ ಅದನ್ನು ಹಿಂದೀಯರು ನಂಬಿ ಹಿಂದೂ ದೇಶ, ಇಂಗ್ಲೆಂಡುಗಳೊಳಗೆ ಪರಸ್ಪರ ಮೈತ್ರಿಯ ಸರಿಸಮಾನ ಸಂಬಂಧವು ಚಿರಕಾಲನೆಲೆಗೊಳ್ಳಬಹುದು.

ಬರುವ ವಾರದಿಂದ

ಭಿಕಾರಿಣಿ

ಎಂಬ

ವೇಶ್ಯಾ ಜೀವನದ ಹೃದ್ರಾವಕ ಪರಿಸ್ಥಿತಿಯನ್ನೂ, ಮಾತೃ ಹೃದಯದ

ಗಾರರ ವಶವಾಗಿರುವುದು. ಬಂಡಾಯಗಾರರು ಪ್ರವೇಶಿಸಿದಾಗ ಪಟ್ಟಣದ ಜನರೆಲ್ಲಾ ಪಟ್ಟಣ ಬಿಟ್ಟು ಹೋಗಿದ್ದರು. ೧೮,೦೦೦ ಮಂದಿ ಬಾಸ್ಕ್ ಸೈನಿಕರನ್ನು ಬಂಡಾಯಗಾರರು ಸೆರೆಹಿಡಿದಿರುವರು. ಜನರಲ್ ಫ್ರಾಂಕೋರವರು ಯಾವತರದ ಪ್ರತೀಕಾರವನ್ನೂ ಮಾಡಬಾರದೆಂದು ಆಜ್ಞಾಪಿಸಿರುವರು.

ಮಹಮ್ಮದ್ ಪೀರರ ಮರಣ

ಕರ್ನಾಟಕದ ಸುಪ್ರಸಿದ್ಧ ಹಾಗೂ ಅಗ್ರಗಣ್ಯ ನಟರಲ್ಲೊಬ್ಬರೂ ಚಂದ್ರಕಲಾ ನಾಟಕ ಕಂಪೆನಿಯ ಮಾಲಕರೂ ಆದ ಶ್ರೀ. ಮಹಮ್ಮದ್ ಪೀರರು ಹೃದ್ರೋಗದಿಂದ ಇದೇ ತಾ. ೧೮ರಲ್ಲು ಬೆಂಗಳೂರಲ್ಲಿ ಮೃತರಾಗಿರುವರೆಂಬುದು ಅತ್ಯಂತ ಶೋಚನೀಯವಿದೆ ಇವರು ಸಾಯುವಾಗ್ಗೆ ಕೇವಲ ೩೨ ವರ್ಷ ಗವಾಗಿದ್ದರು

ನ್ನದರ ಕುರಿತು ಹಲವು ಭಾಷಣಗಳಿಂದಲೂ ಉಪಹಾರಾದಿ ಯಥೋಚಿತ ಸತ್ಕಾರಗಳ ಸುವ್ಯವಸ್ಥೆಯಿಂದಲೂ ಸಮಾರಂಭವು ವಿಜೃಂಭಣೆಯಿಂದ ಜರಗಿತು.

ಪ್ರೊಫೆಸರ್ ಎನ್. ಜಿ. ರಂಗರವರು

ಶ್ರೀಮತಿ ಕಮಲಾದೇವಿ ಮತ್ತು ಶ್ರೀ ರಾಮರಾಯ ಮಲ್ಯರೊಂದಿಗೆ ಕಳೆದ ತಾ. 14ನೇ ಶುಕ್ರವಾರ ಸಂಜೆ ಉಡುಪಿಗೆ ಬಂದು ಸಂಜೆ ಘಂಟೆ 4.—30ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀಮತಿ ಕಮಲಾ ಯವರ ಅಧ್ಯಕ್ಷತೆಯಲ್ಲಿ ಬೇಸಾಯಗಾರ ಮಜೂರರ ಸಂಘಟನೆಯ ಕುರಿತು ಮಾತಾಡಿ ಪ್ರಥಮವಾಗಿ ಅಧ್ಯಕ್ಷರು, ಪ್ರೊಫೆಸರ್ ರವರು ಡಿಲ್ಲಿ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಸರಾಗಿದ್ದು, ಅಖಿಲ ಭಾರತ ಬೇಸಾಯಗಾರ ವನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಎಡೆಬಿಡದೆ ಮಾಡುತ್ತಿರುವರೆಂದು ಪರಿಚಯಮಾಡಿಕೊ . ಆ ಮೇಲೆ ಶ್ರೀ ರಂಗರವರು ಲೋಕದ ಬೇರೆ ರಾಷ್ಟ್ರಗಳಲ್ಲಿ ವಿಶೇಷವಾಗಿ ಫ್ರಾನ್ಸ್ ತ್ತು ರಷ್ಯಾ ದೇಶಗಳಲ್ಲಿ ಬೇಸಾಯಗಾರರು ಸಂಘ ಾಗಿ ಬಂಡಾಯವೆಬ್ಬಿಸಿ ರಕ್ತಪಾತವಿಲ್ಲದೆ ಹೇಗೆ ತಿಯನ್ನುಂಟು ಮಾಡಿರುವರೆಂಬುದನ್ನು ವಿವರಿಸಿದ. ದೇಶದ ಬೇರೆ ಬೇರೆ ಪ್ರಾಂತಗಳ ಬೇಸಾಯಗಾರರು ತಮ್ಮ ತೀವ್ರವಾದ ಕೊರತೆಗಳನ್ನು ನಿವಾ ಮಾಡಿದ ಬೇರೆ ಬೇರೆ ರೀತಿಯ ಚಳವಳಗಳ ವೃತ್ತಾಂತವನ್ನು ತಿಳಿಸಿದರು. ಮತ್ತು ಬೇಸಾಯ ರು ತಮ್ಮ ಸಂಕಷ್ಟ ನಿವಾರಣೆಗಾಗಿ ಕೇವಲ ಗ್ರೆಸಿನ ಮೇಲೆ ಹೊಂದಿಕೊಂಡಿದ್ದರೆ ಸಾಲದು ಸಂಘಟನೆ ಮಾಡಿಕೊಂಡು ತಮ್ಮ ಅಭ್ಯುದಯವನ್ನು ಸಾಧಿಸಬೇಕು ಬೇಸಾಯಗಾರರು ಮತ್ತು ಜೂರರು ಜಾಗ್ರತರಾಗಿ ತಮ್ಮ ಅಭ್ಯುದಯ ಸಾಧನದಲ್ಲಿ ನಿರತರಾದರೆಂದರೆ ಜಮಿನಾನುದಾರರ ಮತ್ತು ಧನಿಕರ ಆಟ ನಡೆಯಲಾರದು ಆದುದ ಬೇಸಾಯಗಾರರೆಲ್ಲಾ ಸಂಘಗಳನ್ನು ಸ್ಥಾಪಿಸಿ ಸ್ವಾತಂತ್ರ್ಯಸಾಧನೆಯೊಂದಿಗೆ ತಮ್ಮ ಅಭ್ಯುದಯವನ್ನೂ ಸಾಧಿಸಿಕೊಳ್ಳಬೇಕೆಂದು ಕೇಳಿಕೊಂಡರು. ಮೇಲೆ ಸ್ಥಳೀಯ ಕೆಲಮಂದಿ ಕಾಂಗ್ರೆಸ್ ಗಾರರೊಂದಿಗೆ, ದಕ್ಷಿಣ ಕನ್ನಡದಲ್ಲಿ ರೈತರ ಘಟನೆಯು ಯಾವ ರೀತಿಯಲ್ಲಿ ನಡೆಸಲ್ಪಡಬಹುದು ಕುರಿತು ಚರ್ಚಿಸಿ ಕಾರ್ಕಳಕ್ಕೆ ತೆರಳಿದರು.

(೯ನೇ ಪುಟದಿಂದ)

ಮತದಾರರ ಪಟ್ಟಿ

ಸೆಂಬ್ಲಿ ಮತದಾರರ ಪಟ್ಟಿಯು ತಯಾರಾಗು ಅರ್ಹತೆಯುಳ್ಳವರ ಅರ್ಜಿಗಳನ್ನು ಮ್ಯು ರವರು ಸ್ವೀಕರಿಸುತ್ತಿದ್ದಾರೆ

ರಷ್ಯದಲ್ಲಿ ಜನ ಜೀವನ

ಳೆದ ತಾ ೧೪ನೇ ಸೋಮವಾರ ದಿನ ಕೆನರಾ ಸ್ಕೂಲಿನಲ್ಲಿ ಮೇಲಿನ ವಿಷಯವಾಗಿ ಬೆನಾರಿಸ್ ವಿದ್ಯಾಲಯದ ಪ್ರೊಫೆಸರರಾದ ಡಾ। ಬಿ ದಾಸ ಚಾರ್ಯರು ಒಂದುಉಪನ್ಯಾಸವಿತ್ತರು. ಅದರಲ್ಲಿ ವಲ್ಲಿ ಸ್ತ್ರೀಯರಸ್ಥಾನ, ಕೈಗಾರಿಕೆಯ ಅಬಿವೃದ್ಧಿ ಳ ರಕ್ಷಣೆ, ಜನರಲ್ಲಿ ಪರಸ್ಪರಸಮಾನತೆ ಮೊದಗ ಣಗಳನ್ನು ವಿವರಿಸಿ ಹೇಳಿದರು

ನಿಂದ್ರಿ ಗಂಡನಾದರೆ

ಈಗ ತಾನೇ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ.

ಕಾಂತಪ್ಪ ಶೆಟ್ಟಿಯವರಿಂದ ರಚಿತವಾದ

ಹಾಸ್ಯರಸ ಪ್ರಧಾನವಾದ

ಏಕಾಂಕ ಪ್ರಹಸನ.

ಬೆಲೆ: ೦—೪—೦.

ಭಾರತ ಬುಕ್ ಡಿಪ್ಪೊ . . ಉಡುಪಿ

ಈ ಪ್ರಹಸನವು ತಾರೀಕು ೨೭ನೇ ಆದಿತ್ಯವಾರ ಬೊಂಬಾಯಿಯ ಮೊಗವೀರ ವ್ಯವಸ್ಥಾಪಕ ಮಂಡಳಿಯವರಿಂದ ಅಭಿನಯಿಸಲ್ಪಡುವುದು.

ಬೊಂಬಾಯಿಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತವೆ—

ವಿ. ಎಸ್. ಸಿಬ್ರಿಕರ್

ದಿ ನ್ಯೇಶನಲ್ ಕೆನರಾ ನ್ಯೂಸ್ ಏಜೆನ್ಸಿ

ಫೋರ್ಟ್, ಬೊಂಬಾಯಿ.

ನವಯುಗ ತುಳು ಸಂಚಿಕೆ

ಸಂಪುಟ ೧ ‖ ಮಿಥುನ (ಕಾರ್ತಿ) ೧೦ ಗುರುವಾರ ‖ ಸಂಚಿಕೆ ೧೦

ಪುಲ್ಯ

ಬರೆತಿನಾಯೆ:
ಎಮ್. ವಿಟ್ಠಲ ಹೆಗ್ಡೆ

ಪಕ್ಕಿಲ್ ಚಿಲಿಪಿಲಿ
"ಜೆಪ್ಪಡೆ ಕಲಿ ಕಲಿ!"
ಪನ್ಪಿನ ಗೌಜಿನ್
ಸೇರುನೆ, ದೂಜಿನ್
ಕಂತವರೆಗ್ ತಲ
ಮೂಲಿಜ್ಜೀತ್ಲ!
ಮುಂದೊಡು ಆತ್ಲ
ಬೂರುಂಡು ಬೊಲುಪು!
ಲೋಕನೆ ತೆಲವು
ಮನಸ್ಸ್‌ಡ್ ಕುಸಿಬುಡುದು
ಐಸ್ರದ ತಸಿನೆಡ್ದ್!
ಮುಡಯಿದ ಗಿರಿತರೆ
ತೋಜಂಡ್ ಮರತಿರೆ
ಜನೊಕುಲೆ ಸುಯ್ಲ್‌ಗ್
ಗಾಳಿದ ಒಯ್ಲ್‌ಗ್
ವಾತೆರ ಕೊರ್ಪುಂಡು
ಕೋಡಿಡ್ ಅರ್ಪುಂಡು
ಕತ್ತಲೆ! ಬಾನದ
ತಿಂಗೊಲು ಬಾಣದ
ಬಿರುವಾದುಂಡು
ನರ್ಸ್‌ಕ್ ದರುಂಡು
ಪಾರವರೆಗ ದಾನ್ನ!
ಏರವರೆಗ ದಿನ್ನ?
ಮನಮನ ಗಾಲಿ
ತಿಗಲೆದ ನೋಲಿ
ಮಾಜದ್ ಕಲೆಂಡ್
ಸಂತೆಸ ಬುಲೆಂಡ್
ಮುಡಯಿದ ಬೊಲುಪು
ಮೆಲ್ಲೊಡು ನಲಿವು!
ನೈಕೈಯ್ಯೊಸುದು
ದೆರ್ಪುಂಡು ಪಸ್ಪ್
ಗಾಳಿಬೊಲುಪುದ
ಕೆಲಸೊಲೆನ ಪನ
ಈಯವು ಪನೊಲಿ
ಏತ್ಲ ಪನೊಲಿ!
ಏರ್ಂಡ್ ಪೊಸಬಣ್ಣ
ಬೊಲುಪುದ ಪೊಡಿ ಸುಣ್ಣ!
ಮಣ್ಣ್‌ದ ಅಪ್ಪೆನ
ಮೋನೆಡ್ ಚಪ್ಪೆನ?
ತೆಲಿಕೆದ ಮುಗುರು
ಪೊಸ ಪೊಸ ತಿಗ್ರ್
ಪೂಜಿದಿ ಪಗ್ರ್!
ಐಸ್ರದ ಆಗರ್!
ಮೋನೆಡ್ ಹರ್ಷ
ತೆಲಿಕೆದ ಬರ್ಷ
ಬೊಲುಪುದ ರವ್ ಕುಲ್ಯ
ನೆಲ ದಿಂಜಿಂಡ್ ಪುಲ್ಯ!

ಸಂಪೂರ್ಣವಾಗಿ ಅಲಕ್ಷ್ಯಸಿರುತ್ತವೆ, ಇಷ್ಟು ಮಾತ್ರವಲ್ಲದೆ ಈ ವಿವಾಹದ ಚಲನ ಚಿತ್ರವನ್ನು ಇಂಗ್ಲೆಂಡಿನಲ್ಲಿ ಪ್ರದರ್ಶಿಸಬಾರದೆಂದು ನಿಷೇಧ ಹಾಕಲಾಗಿದೆ.

ಬಿಲ್ಬಾವೋ ಬಂದರವು ಬಂಡಾಯಗಾರರ ವಶವಾಯಿತು

ಇದೇ ತಾ. ೨೦ರಲ್ಲು ಬಾಸ್ಕ್ ಪ್ರಾಂತದ ಪ್ರಧಾನ ಪಟ್ಟಣವಾದ ಬಿಲ್ಬಾವೋವು ಬಂಡಾಯ

ಳಿಂದ ಗೌರವಿಸುವ ಎಂಬ ಸಂದೇಶವಿತ್ತಿದ್ದರು ಸಂಜೆ ಆಲ್ಬರ್ಟ್ ಹೋಲಿನಲ್ಲಿ ದೊಡ್ಡ ಸಾರ್ವಜನಿಕ ಸಭೆ ನಡೆಯಿತು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಇದರ ಸಭೆಯು ಜುಲೈ ತಾ. ೫ರಲ್ಲು ವಾರ್ಧಾದಲ್ಲಿ ನಡೆಯಲಿರುವುದು. ಇದರಲ್ಲಿ ವೈಸರಾಯರ ಭಾಷಣವು ಪರ್ಯಾಲೋಚಿಸಲ್ಪಟ್ಟು ಮಂತ್ರಿಪದವಿ ಸ್ವೀಕಾರದ ಕುರಿತು ನಿರ್ಧಾರವಾಗಲಿರುವುದು

ಕ್ಕೆ ವರ್ಗವಾಗಿ ಹೋಗಿಪ್ಪ ಶ್ರೀ ಎಚ್ ದೇವರಾವ್ ಬಿ ಎ ಎಲ್ ಟಿ, ಇವರನ್ನು ಸನ್ಮಾನಿಸಿ ಬೀಳ್ಕೊಳ್ಳುವುದಕ್ಕಾಗಿ ಹೈಸ್ಕೂಲಿನಲ್ಲಿ ಕಳೆದ ವಾರ ಒಂದು ವಿದಾಯಕ ಕೂಟವು ಏರ್ಪಟ್ಟಿತ್ತು ಶ್ರೀಯುತರು ತನ್ನ ಸ್ನೇಹಮಯ ವರ್ತನೆ, ಆನಂದ ಮನೋವೃತ್ತಿ, ರಸಿಕತ್ವ, ಸಂಗೀತಾಭಿನಯ, ಕಲಾನೈಪುಣ್ಯ, ವಾಕ್ಚಾತುರ್ಯ, ಶಿಕ್ಷಣಕೌಶಲ್ಯ, ಉದ್ಯೋಗಾಭಿಮಾನ ಮುಂತಾದ ಸದ್ಗುಣಗಳಿಂದ ಚಿರಸ್ಮರಣೀಯರಾಗಿರು

'ತುಳುನಾಡ್'ದ ಋಣ!

(ಬರೆತಿನಾಯೆ:—**P. N. ಬನ್ನಂಜೆ ರಾಮಾಚಾರ್ಯ.**)

(ಒಂಜಿ ಕಿನ್ನಿ ದೃಶ್ಯೊ.)

[ಚೊಕ್ಕಟ ಆದಿತ್ತಿ ಒಂಜಿ ಕೋಣೆ! ಕೋಣೆಡ್ ಮೇಜಿದ ಎದುರು ಒಂಜಿ ಕುರ್ಸಿಡ್ ಸೌಧಾಮಿನಿ ಪೊಣ್ಣೇವು ದಾನ್ಯಾ ಯೋಚನೆ ಮಳ್ತೊಂದು ಉಳ್ಳಾಲ್. ಆಳೆ ಕಂಡನೆ ದಿವಾಕರೆ ಮೆಲ್ಲ ಕೋಣೆದ ಉಳಾಯಿ ಬರ್ಪೆ. ಆಳೆಗ್ ಅವು ತೆರಿಯುಜ್ಜಿ.]

ದಿವಾಕರ—Soudamini! What are you thinking about?

ಸೌದಾಮಿನಿ—ಏರ್? (ತಿರುಗುದು) ಓಹೋ! ಈರಾ? ಯಾನ್ ತೂತಿನೇ ಇಜ್ಜಿ! ಬತ್ತ್‌ದ್ ಬಹಳ ಸಮಯ ಆಂಡಾ?

ದಿವಾಕರ—ಆದಿರಲಿ! ಸೌದಾಮಿನಿ! ಆದೇನೋ ಯೋಚಿಸುತ್ತಿದ್ದೀಯಲ್ಲಾ! ಅದೇನದು? ನಾನು ಕೇಳಬಹುದೇ?

ಸೌದಾಮಿನಿ—ತುಳುಟು ಪಾತೆರ್ಲೆಯೇ! ತುಳುಟು ಪಾತೆರ್ಲೆ! ತೂ ಬೂಳಡ್ ಆ ಕನ್ನೊಡೊಗ್—ಆ ಇಂಗ್ಲೀಷ್‌ಗ್...........!

ದಿವಾಕರ—What a girl you are? Soudamini!

ಸೌದಾಮಿನಿ—ಅಂಚಾಂಡ ಎಂಕ್ ಈರೆ ಮಿತ್ತ್ ಕೋಪ! ತುಳುಟು ಪಾತೆರ್ಲೆಂದ್‌ದ್ ಪಣ್‌ಂಡಾ...........!

ದಿವಾಕರ—ಸರಿ! ಆವಡಪ್ಪಾ ತುಳುಟೇ ಪಾತೆರ್ಗ! ಆಂಡಾ ಅಂತೂ ಈ ಕೋಪ ಮಳ್ಪರೆ ಬಲ್ಲಿ! ಈ ಎಂಚಿನೊ ಯೋಚನೆ ಮಳ್ತೊಂದ್ ಇತ್ತಿನಿ! ಒಂತೆ ಕೇಣ್ಗೊ ತುಕ!

ಸೌದಾಮಿನಿ—ಅತ್ತ್, ಈರ್ಲಕ್ಕ್ಯನೇ ಪೂರಾ ತುಳುವೆರ್ ಕನ್ನಡನಾ—ಇಂಗ್ಲೀಷ್‌ನಾ ಕಟೊಂದು ತುಳುನಿ ಮದತ್ತ್ ಬುಡಿಯೆರ್ಡ ತುಳು ಭಾಷೆದ ಗತಿ?

ದಿವಾಕರ—ಅಧೋಗತಿ.

ಸೌದಾಮಿನಿ—ಅದೆ! ಛೀ! ಅಂಚಿ ಪಣರೆ ಬಲ್ಲಿ! ಪೆದಿತಿ ಅಪ್ಪೆನಿ ಜೋಕ್ಲೇ ಸಸೂತ್ರ ತೂಯಿಜ್ಜಡ ನನೊರಿ ತೂವೆನಾ? ಉಂದು ತುಳುನಾಡ್ ನಮ ತುಳುವೆರ್, ತುಳು ಭಾಷೆ ನಮ ಭಾಷೆ, ನಮ ಮಾತೃಭಾಷೆ ಆದಿತ್ತಿ ತುಳುಭಾಷೆದ ನಾಶೊಗು ನಮನೇ ಕಾರಣೇರಾಂಡ ನಂಕ್ ಅವು ಹೇಸಿಗೆದ ವಿಷಯತ್ತಾ ಒಂಜಿ ಕಾಲೊಡು ಸಾಮ್ರಾಜ್ಯ ವೈಭವೊಡ್ ಮೆರೆವೊಂಡ್‌ದ್ ಇತ್ತ್‌ಂಡ್, ಈ ತುಳುನಾಡ್, ಅವು ಕಾಲಗತಿಡ್ದಾವರ ಮಣ್ಣ್‌ಗೊಡ್ಪು ಪೋಂಡ್, ದೇವರ ದಯೆಡ್ದಾವರ ಭಾಷೆ ದಾನ್ಯಾ ನನಲಾ ಉಂಡು. ಅವೆನಿಲಾ ನಮ ಕಳೆವರೆಗ್ ತೂಂಡ, ಅವು ಪಟಂಗತನ ಅತ್ತ? ಕನ್ನಡಸೋದರಿ ಇತ್ತೆ ತುಳುನಾಡ್‌ದ ಅಧಿಕಾರ ಮಳ್ತೊಂಡ್ ಉಳ್ಳಾಲ್! ತುಳು ಅಪ್ಪೆ,ಅಡಿ ಬೂಳ್ಯಾಳ್. ಆವೆನಿ ತೂವೊಂದು ಕುತೋಣೆನೋ ನಮ ಧರ್ಮನಾ? ಈರೇ ಪಣ್ಣೆ ತೂಕಾ? ಈರೆಗೆ ಪರಕೀಯ ಭಾಷೆ, ಇಂಗ್ಲೀಷ್! ಆಂಡಲಾ ಐತ ಮಿತ್ತ್ ಭಾರೀ ಪ್ರೀತಿ ಈರೆಗ್. ಆ ಪ್ರೀತಿನೇ ನಮ್ಮ ನಾಡ್ದ ಭಾಷೆದ ಮಿತ್ತ್ ದೀಂಡ ಮಾತೃ ಭಾಷೆದ ಉದ್ಧಾರ ಆವಂದಾ? ತುಳುವೆರಾದಿತ್ತಿ ನಮನೇ ಅವೆನಿ ಆವಹೇಳನ ಮಳ್ತ್‌ಂಡಾ, ಜೊಕೊರಿ ಆವೆನಿ ಉದ್ಧಾರ ಮಳ್ಪೆನಾ? 'ತುಳುನಾಡ್' 'ಇತ್ತ್‌ಂಡ್ ಪಂಡ್‌ದ್ ನಮ ಕೇಣಿಲೆಕ್ಕನೇ "ತುಳುಭಾಷೆಲಾ" ಇತ್ತ್‌ಂಡ್ ಪಂಡ್‌ದ್ ನಮ ಸಂತಾನೊಳ್ ಕೇಣುಲೆಕ್ಕ ಆಪುಂಡು. ಇನೆ, ನಮ ಸಂಸ್ಕೃತಿ, ನಮ ಭಾಷೆ, ನಮ ದೇಶ, ನಮ ಜನಂದ್‌ಡ್ ಮಾತೆರ್ಲಾ ಕ್ರಾಂತಿ ಲಕ್ಕ್‌ಡ್ಪಿ ದಿನ! ತುಳು, ಕನ್ನಡ, ತಮಿಳ್, ತೆಲುಗು, ಮಳೆಯಾಳ,ಉಂದು ಐನ್ ದ್ರಾವಿಡ ಭಾಷೆಳು ತೆಲುಗೆರ್, ತಮಿಳೆರ್, ಕನ್ನಡಿಗೆರ್ ಮಾತಾ ತಂಕುಳೆ ತಂಕುಳೆ ಭಾಷೆದ ಉದ್ಧಾರೊಗ್ ಒದ್ದಾಡೊಂದುಪ್ಪುನಾಗ ಆ ಭಾಷೆಳೆ ಸಾಲ್ದ್ ತುಳು ಭಾಷೆನಿ ಉದಾಸೀನೊಡ್ ತುಳುವೆರಾತಿತ್ತಿ ನಮನೆ ಬುಡ್ಪ್ರುಂಡಾ, ಪಂಚದ್ರಾವಿಡ ಭಾಷೆದ ಬದಲ್‌ಗ್ ತುಳುನಿ ಬುಡ್ಪು "ಚತುರ್ದ್ರಾವಿಡ ಭಾಷೆ, ಪಂಡ್‌ದ್ ಆಪುಂಡು ಇಂಚೀ ಸ್ಥಿತಿಟ್ ನಮನೆ ನಮ ಮದತ್ತ್‌ದ್ ಕುಳ್ಳುಂಡ ನಮನಿ ಮೂರ್ಖೆರ್‌ಂದ್ ಪಣೆಯೇರಾ? ಅಥವಾ ಪಣ್ಪುನಿ ದಾನೆ ನಮ ಮೂರ್ಖೆರೇ ಅತ್ತೆಯೇ? ಕೋಪ ಮಳ್ಪಡೆ.

ದಿವಾಕರ—ಅಂದಯಾ? ಸೌದಾಮಿನಿ ಈಯೊಂಜಿ ಸಾಮಾನ್ಯ ಸ್ತ್ರೀಂದ್‌ದ್ ಮಳ್ತ್‌ದೆ. ತೂನಾತ್ ಪೊತ್ತ್ಸಗ ಈ ಕಲಿಯುಗದ ಲಂಕಿಣಿ.

ಸೌದಾಮಿನಿ—ಆಡೆ! ಅವ್ವೆ ಎಂಕ್ ಕೋಪ ಬರ್ಪುಣಿ! ಎನಾನಿ ಮುದ್ದ್ ಕೊಳ್ಪಾರ್, ಆಲಿಂಗನೆ ಮಳ್ಪಾರ್, ಪೂರಾ ಆಡಂಬರಾ! ಅತ್ತ್ ಆಸೆಡ್ ಯಾನ್ ದಾಲಾ ಪಂಡ್‌ಂಡಾ ಯಾನ್ ಲಂಕಿಣಿ ಅತ್ತಾ, ಅಪ್ಪ ಈರಾ! ....!

ದಿವಾಕರ—ಸೌದಾಮಿನಿ! ಕೋಪ ಮಳ್ಪಡ! ನಿನ ಪವಿತ್ರ ಹೃದಯದ ಪರಿಚಯ ಆಂಡ್! ತುಳು ದೇವಿನ ಪ್ರೀತಿ ಮಳ್ಪರೆ ಕಲಿಪಿ ಪಾತೆನಿ ಪಂಡುಕೊರ್ದು ಈ ಎನ ಗುರುವಾಯ. ನನಯೇನು ತುಳುನಾಡ್‌ದ ದಾಸೆ.

ಸೌದಾಮಿನಿ—ಅಂಚ ಬಾಯಿಡ್ ಪಣ್ಂಡ ಯಾನ್ ಕೇಣೆಯೇ! ಪುರಾಲ್ಡ್ ತುಳುನಾಡ್ ಸಭೆ ಉಂಡು, ಐತ ಮೆಂಬರೆ ಆದ್ ಈರ್ ಈ ಒಡ್ಪುಡ್ ಐತ ಪ್ರಚಾರ ಮಲ್ಪುಲೆ!

ದಿವಾಕರ—ಸೌದಾಮಿನಿ! ಎನ ಮುದ್ದು ಸೌದಾಮಿನಿ! ಸರಿ!

ಸೌದಾಮಿನಿ—ಇಂಚನೇ ಮಾತ ತುಳುವೆರ್ಲಾ ತುಳು ಭಾಷಾ ಪ್ರೇಮಿಳಾಂಡ..................

ದಿವಾಕರ—ತುಳುನಾಡಪ್ಪೆನ ಭಾಗ್ಯನಿ ದಾನಿ ಪಣ್ಪುಣಿ!

ಸೌದಾಮಿನಿ—ದೇವರ್ ತುಳುನಾಡ್‌ನಿ ಉದ್ಧಾರ ಮಳ್ಪಡ್. ತುಳುನಾಡಪ್ಪೆನ ಭಾಗ್ಯ ಸೂರ್ಯೆ ಬೇಗನೇ ಉದಯ ಆವಡ್, ತುಳುನಾಡ್, ಪ್ರಾಚೀನ ವೈಭವದ ಸಿರಿನಿ, ನನಲಾ ಧರಿಪಡ್, ಬಲೆ ನಮ ಇನಿ ಪೋಯಿ. ಆಂಡಲಾ ಸದಾ ನಮ ಹೃದಯೊಡ್ ತುಳುನಾಡ್ದ ಋಣ ಸಲಿಪಿ ತುಳುಭಾಷಾ ಸಾಹಿತ್ಯದ ಸೇವೆ ಮಳ್ಪಿ ಉದಾತ್ತ ಭಾವನೆ ಇಪ್ಪಾಡ್! (ಪೋಪೆರ್)

ಅಮರಜ್ಯೋತಿ.

(ರಾಜಭಿಕ್ಷು ಸಂಪಾಜಿ)

ಓ ಬೊಲ್ಪು! ಓ ಬೊಲ್ಪೆ! ಒರೊ ಬೇಗೊ ಬಲಯ ।
ಓ ಬೊಲ್ಪು! ಓ ಬೊಲ್ಪೆ! ಈ ಎಂಕ್ ಒಲಿಯ ॥
ಕಣ್ಣ್‌ತ್‌ದ್ ಕುರುಡಾತೆ ಓ ಬೊಲ್ಪೆ ಬೊಲ್ಪೆ ।
ಸಿನಿ ಪ್ರಭೆನ್ ಬೆಳಗಾಲ ಈ ಎಂಕ್ ಬೊಲುಪೆ ॥
ನಿನ ನಂಬುದೇನ್ಬತ್‌ದ್ ಇಂಚಾಂಡೆ ಜ್ಯೋತಿ ।
ಪನ್ ಪನ್‌ಗೆ ಓಲುಲ್ಲ! ಈ ದಿವ್ಯ ಜ್ಯೋತಿ ॥
ಗ್ರಹಿಪಂದೆ ಯಾನ್ಪೋಯೆ ಕಾಡ್ತಾದಿ ಬೂರ್ದೆ ।
ಸಹಿಪೇರೆ ಬಲ್ಯೆಂಕ್ ಬುಡುಕೊರುಗೆ ತಾದಿ ॥
ಪ್ರಭೆ ಬಲಗೆ ಎಂಕೆದುಡು ಸರಿತಾದಿ ತೋಜ ।
ಪ್ರಭೆ ಬಲಗೆ ಈ ಯೊಲಿದ್ ಕತ್ತಲೆನ್ ಮಾಜ ॥
ಓ ಬೊಲ್ಪೆ! ಓ ಬೊಲ್ಪು! ಒರೊ ಬೇಗೊ ಬಲಯ ।
ಓ ಬೊಲ್ಪೆ, ಓ ಪ್ರಭೆನೆ, ಓ ಜ್ಯೋತಿ ಒಲಿಯ ॥
ಸಂಸಾರೊ ಕತ್ತಲೆದ ಕಾಡ್ತಾದಿ ಬುಡುದು ।
ಸಂಸಾರೊ ಮುಕ್ತಿನ್ಸಿ ಸರಿ ಮಾರ್ಗೊ ಕೊರುದ್ ॥
ಎನನೊರೊಯ ಕೊನುಪೋಲ ಆ ಊರುದಾಡೆ ।
ನನದಾಯೆ ತಡವೇತ್ ಪ್ಯೋ ಪೋಯಿ ಆಡೆ ॥

'ತೆಲಿಪಡೆ'

...:—ಅಯ್ಯೋ ಎನ ಬಾಲೆ, ಚಿಮಿಣಿ ಎಣ್ಣೆ ಪರ್ಂಡ್ ಡಾಕ್ಟ್ರೆ.

ಡಾಕ್ಟ್ರ:—ಐಕ್ ದಾನೆ. ತಾರಗೆತೆಣ್ಣೆ ಪರ್ಪಾಲ.

X X X X X X

ಗಿರಾಕಿ:—ಒಂಜಿ ಶ್ಯಾ ಬಾಟ್ಲಿ ಕೊರಿ........ಬೇಗ ಐನ್ ಮೈಲ್ ಪೋವೊಡು.

ಅಂಗಡಿತಾಯೆ:—ಸಾರಿ, ವೆರೀ ಸಾರಿ. ಐನ್ ಮೈಲ್ ಪೋಪಿ ಬಾಟ್ಲಿ ಮೂಲಿದ್ದಿ.

X X X X X X

ಇಂಗ್ಲಿಷ್ ಕಲ್ತಿ ನನ್ಕೆ:—ಓ ಬಾವ. ಒಂಜಿ ಕ್ರ್ಯೊನ್ (ಆಣಿ) ಕೊರಿ ಭಾವ.

ಭಾವೆ:—ಅಯ್ಯೊ........ಕನತ್ತ್‌ನವು ಮುಗಿತ್ತ್ಂಡ್........ಕ್ರ್ಯೊನ್ (ಕ್ರೈನಾನ್) ಬೊಡ್ಚಿ ಮದ್ರ್ ಕೊಂಡತೋ ಭಾವ.

X X X X X X

ಸಾಲೊ ಕೊರ್ನಾಯೆ:—ಏತ್ ನಲಿಪ್ಪಾವ ಈ ಇತ್ತೆ ಕೊರ್ತ್ತೇ ಕರಿಯೊಡು.

ಸಾಲೊ ದೆತೊಂಡ್ನಾಯೆ:—ಇತ್ತೆ ಇದ್ದಿ. ಪೊಕ್ಕಡೆ ಕೇನೋಡ್ಚಿ.

ಸಾಲೊ ಕೊರ್ನಾಯೆ.—ನಿನ್ನಟ ಕೇಣ್ಣಗ ಇಪ್ಪೆರ ಇಜ್ಜಿ. ಕೇಂಡೊಂತಿಪ್ಪೆರ ನನ ಒಂಜಿ ಜನೊ ದೀಡೋಡು.

ಸಾಲೊ ದೆತೊಂಡ್ನಾಯೆ:—ನನ ಜನೊ ದಾಯೆ ಕೇಣ್ಣಗ ಎನಟ ಇಪ್ಪೆರಿದ್ದಿ. ನನ ಬರೊಡ್ಚಿ, ಇತ್ತ್ಂಟ ಏನೇ ಕೊರ್ವೆ.

(K. S. Rao.)

ಚು ಟು ಕೊ ಲು

(ಬರೆತಿನಾಯೆ. K. S. Prabhu "ಬಾಲವೃಂದ" ಸುಳ್ಯ)

ರಾಮುಗೊರಿ ಅಣ್ಣೆ
ಆಯೆ ಓರೆಗಣ್ಣೆ
ಒಂಜಿದಿನೊ
ಪಾಡ್ಯೆ ಕನ್ನೊ
ಕಳ್ಪೆ ರಾಮುನಣ್ಣೆ
* * *

ಅಳ್ಪೆ ಒಂಜಿ ದೈ
ಅವು ಪೂತ ದೈ
ದೂಮು ಬತ್ತೆ
ಕೈಟ್ ಪೊಳ್ತೆ
ಪೊರ್ಲು ಪೂತ ದೈ
* * *

ಸೋಮುಗೊಂಜಿ ಪೊಣ್ಣು
ಆಲೆ ಒಂಜಿ ಕಣ್ಣ್
ಬಾರ್ ಬೂರ್ದ್
ಹಾಳ್ ಆದ್
ಪೊಲ್ಲುಗಾಂಡ್ ಮಣ್ಣ್
* * *

ಚುಟುಕ ಚುಟುಕ ಚೂಟಣ್ಣ
ಮೊರೆಂಟಿ ಚೂಟು ಪಾಡಣ್ಣ
ಎಡ್ಡೆ ಬೈತ್
ಕಜ್ಪು ಮಾಳ್ತ್
ಆಯಿನಿ ತಿನೊಡು ತೂಲಣ್ಣ

ಕಷ್ಟೊದ ಜೀವನೊ

(ಬರೆತಿನಾಯೆ. ಕುರುಂಜಿತ ಚಿನ್ನಪ್ಪ ಗೌಡೆ, ಬಾಲವೃಂದೊ ಸುಳ್ಯ)

ಓ! ಭಾವ ಇಂಚಿ ಬಲ್ಲೆಯೆ,
ಕಷ್ಟೊದ ಜೀವನೋ ಪೂಲೆಯೆ.
ಮರ್ಯಲೊಡೇ ಅವು ತೆತ್ತಿದೀಂಡ್
ಓ! ಭಾವ ಇಂಚಿ ಬಲ್ಲೆಯೆ || ೧ ||
ಓಲವು ತೆತ್ತಿ ದೀಂಡ್ ಯಾನ್ ಪನೊಡ?
ಪಲ್ಲೋಡ್ ಬೆಲುಮೆಡ್ ತೆತ್ತಿ ದೀಂಡ್
ಓ! ಭಾವ ಇಂಚಿ ಬಲ್ಲೆಯೆ || ೨ ||
ಬೊಕ್ಕ ಅವು ದಾಂಡ್ ತೂಲೆಯೆ,
ದೊಂಬುದ ಶಾಕೊಗು ತೆತ್ತಿ ನರಿಂಡ್,
ಓ! ಭಾವ ಇಂಚಿ ಬಲ್ಲೆಯೆ || ೩ ||
ತೆತ್ತಿದ ಉಲಾಯಿಡ್ದ್ ದ್ಯಾದ ಬತ್ತ್‌ಂಡ್,
ಎಲ್ಯವು ಸಾವಿರ ಕರಿಗುಡ್ದ್ ಕಾಣ್ಬು,
ಓ! ಭಾವ ಇಂಚಿ ಬಲ್ಲೆಯೆ || ೪ ||
ಅವ್ವೆ ಬುಳೆದ್‌ದ್‌ದಾಂಡ್‌ಂದ್ ಕೇಣ್ಬರ್,
ಜೊಂದೆ ಕಷ್ಟೆಂದ್ ಪನ್ಪಿನ ಪುದರೂಡೆ,
ಓ! ಭಾವ ಇಂಚಿ ಬಲ್ಲೆಯೆ || ೫ ||
"ಪಕ್ಕೊಡೆರಡ್ ರಡ್ದ್ ಬೊಕ್ಕೆನ್ ತೂಡು,"
ಜೇಚಾರೊ ಭಾರಿ ಆಂಡತ್ತೊ ಐಕ್,
ಓ! ಭಾವ ಇಂಚಿ ಬಲ್ಲೆಯೆ || ೬ ||
ಇಂಚನೆ ಈಪುನೆ ಸಮಯೊಡ್,
ಬೊಕ್ಕೆನೆ ಪೋದು ಕಾರಾಂಡ್,
ಓ! ಭಾವ ಇಂಚಿ ಬಲ್ಲೆಯೆ || ೭ ||
ಕಾರಾಯಿ ಸಮಯೋಡ್ ತೂಲೆಯೆ
ಬೀಲೊಲ ಕರಾದ್ ಪೋಂಡತ್ತೊ
ಓ! ಭಾವ ಇಂಚಿ ಬಲ್ಲೆಯೆ || ೮ ||
ನನ ಒಂಜಿ ಲಾಗೆವೇರ
ಸಿಂದ್‌ದ್ ತೂಲೆಯೆ
ಓ! ಭಾವ ಇಂಚಿ ಬಲ್ಲೆಯೆ || ೯ |
ನೆಲೊಡೆ; ನೀರ್‌ಡ್, ರಡ್ಡೆಡ್‌ಲ
ವಾಸೊನು ಮಲ್ತ್‌ದ್ ತೂಲೆಯೆ
ಓ! ಭಾವ ಇಂಚಿ ಬಲ್ಲೆಯೆ || ೧೦ |
ಕಷ್ಟೆದ ಜೀವನೊ ತೂಲೆಯೆ

— ಕುಕ್ಕುದ ರಸಾಯನೊ —

(ಬರೆತಿನಾಯೆ:— ಸುಳ್ಯೊತ ಮುಮ್ಮದೆ, ಬಾಲವೃಂದ)

ಸೀನಣ್ಣೆ ಎಂಕ್ಲೆಊರ್‍ಡ್ ಒಂಜಿ ಪಂಚ್ಯಾತ್ ಸಾಲೆಡ್
ಮಾಸ್ಟ್ರ್. ಆಯೆ ಪುಟ್ಟ್‌ದಿನಿ ಬಲತ್ತ್‌ದಿನಿ ಮಾತ ಸೇನೆರ್
ಸೇಸಗಿರಿರಾಯೆರಳ್ಪೆ. ಅವು ದಾನೆಂದ್ ಪಂಡ್‌ಂಟ, ಸೀನನ
ಅಮ್ಮೆಲಾ ಅಪ್ಪೆಲಾ ರಾಯೆರೆ ಹಿರಿಯೆರೆ ಕಾಲೊಡ್ದಿಂಚಿ, ಆಕ್‌ಲೆ
ಇಲ್ಲಾಲ್ ಬೇಲೆ ಮಲ್ತೊಂದಿತ್ತೆರ್, ಕಡೆಗ್ ಆಕ್‌ಲ್ ಆಲೋ
ಕೊಗ್ ಸೀನನ್ ಬುಡ್ದ್ ದೇವೆರೆ ಸೇವೆಗ್ ಪೋಯೆರ್. ಸೀನೆ
ರಾಯೆರೆ ಇಲ್ಲಾಳ್ತ್ ಬೇಲೆಲಾ ಮಲ್ತೊಂದ್, ಸಾಲೆಗ್ಲಾ ಪೋ
ವೋಂದಿತ್ತೆ. ರಾಯೆರ್ಲಾ ಇಂಬ್ಯನ್ ಪ್ರೀತಿಡ್ ಸೂವೋಂದಿತ್ತೆ
ರ್ ಆರೆಗ್ ಬೇತೆ ಬಾಲೆಳಿಜ್ಜಾಂಡ್. ಸೀನೆ ಎಣ್ಮನೆ ಕ್ಲಾಸ್
ಕಲ್ತ್‌ದ್‌ಪಾಸಾಯೆ. ರಾಯೆರ್ ಆಯೆಗ್ ಅಲ್ತ ಒಂಜಿ ಪಂಚಾ
ಯತಿ ಸಾಲೆಡ್ ಮಾಸ್ಟ್ರೆರೆ ಬೇಲೆ ಕೊರ್ಪಾದ್ ಒಂಜಿ ಇಲ್ಲಡೆಲಾ
ಕಟ್ಟ್ಯಾದ್ ಕೊರ್ಯೆರ್ ಸುಮಾರ್ ಸಮಯೊಡ್ದ್ ಬೊಕ್ಕ ಆಯೆಗ್
ಮದ್ಮೆ ಆಂಡ್.

ಸೀನಗೊರೊ ಮಂಗ್ಲೂರ್‌ಗ್ ಪೋವೋಡಾದ್ ಬತ್ತ್ಂ
ಡ್. ಅಲ್ಪ ಒನಸ್ಸ್‌ಗ್ ಸೇಸಪ್ಪ ಸೆಟ್ಟೆರಾಡೆಗ್ ಪೋವೇತೆ.
ಆರೆಗ್ಲಾ ಸೀನಗ್ಲಾ ಭಾರೀ ಇಷ್ಟಾಚಾರೊ. ಸೇಸಪ್ಪ ಸೆಟ್ರ್ಂ
ದ್‌ಂಡ್ ಸಾಧಾರಣೊತ್ತಾರತ್ತ್. ಆರ್ ಪಂಡ್‌ಂಟ ಅಲ್ಪ ನೂ
ತೆರೆಗ್ಲಾ ಗೊತ್ತ್. ಓಲಾಂಡ್ಲ ಕಾಂಗ್ರೆಸ್‌ದಾಕ್ಲೆನ ಒಂಜಿ ಜಾಹೀ
ರ್ಸಭೆ, ಮೀಟಿಂಗ್, ಮಿನಿ ಇತ್ತ್ಂಡ ಮೇರ್ ಅಲ್ಪ ಇಜ್ಜಾಂತೆ
ಇಜ್ಜಿ. ಆರ್ ತೂಕೆಗ್ ಮಲ್ಲಜೀಪೋ. ತುತ್ತುನಿ ಒಂಜಿ ಖದ್ದರ್
ಮುಂಡುಆರೆಬೊಳ್ದಂಗಿ(ನೆಹರುಲೆನ ಸರ್ಟ್‌ದಲೆಕ್ಕ)ಮೊನಕಾರ್
ಮುಟ್ಟಲಾ ಎತ್ತೇತ್‌ಂಡ್ ಆರೆಗ್‌ತರೆಕ್ಕ್‌ದೀಯೆರ ಒಂಜಿಗಾಂಧಿ
ತೊಪ್ಪಿ. ಆರ್ ಬೊಲ್ಪುಗ್ ಲಕ್ಕಿಪೆಟ್ಟ್‌ಗ್, 'ತೂಕ ಕೆಂಪು ಪಕ್ಷಿ
ದ ಬದಲ್‌ಗ್ ಬೊಲ್ದು ತೊಪ್ಪಿದೀಪಾವೆಂದ್ ಪನೇತೆರ್‌ಗ್.
ಇಂದು ಅಲ್ತ, ಜೋಕುಲು ಪಂಡಿನ ಸುದ್ದಿ.

ಒಂಜಿದಿನೊ ಸೆಟ್ರೆಗ್ ಒಂಜಿ ಡಿನ್ನರ್ ಪಾರ್ಟಿಗ್ ಬರೋ
ಡ್‌ಂದ್‌ತ್ ಒಂಜಿ ಆಮಂತ್ರಣೊ ಪತ್ತೊಬತ್ತ್ಂಡ್. ಅವ್ವೇ ಸ
ಮಯೊಡ್ ಸೀನೆ ಆರೆ ಇಲ್ಲಡೆಗ್ ಪೋದಿತ್ತೆ. ಸೆಟ್ರ್ ಬಯ್ಯನಗ
ಡಿನ್ನರ್ ಪಾರ್ಟಿಗ್ ಪೋಯೆರ್. ಒಟ್ಟ್‌ಗ್ ಸೀನನ್ಲಾ ಲೆತೋಂ
ಡೆರ್.

ಆನಿತ ಒನಸ್ಸ್‌ಡ್ ಕುಕ್ಕುದ ರಸಾಯನೊ ಸೀನಗ್
ಮೆಚ್ಚ್‌ದಿತ್ತ್ಂಡ್.ಆಯೆಗ್ ನನಲ ಕೇಂಡ್‌ದ್ ಸಿನೊಡ್‌ಂದ್
ದ್ ಆಸೆ ಆಂಡ ಆತ್ ಜನೊತೆದ್‌ರ್‌ಗ್ ಕೇನುನಿ ಎಂಚ. ಆಸೆ
ಪನ್ಪುನಿ ಹಾಳ್. ಸೀತೆ ಉರೆತ್ತ ಮಿತ್ತ್‌ದ ಆಸೆಡ್ ದಾನೆಮಾ
ಅನರ್ಥೊ ಮಲ್ತೊಂಜಲ್. ಡಿನ್ನರ್‌ಪಾರ್ಟಿ ಕರೀಂಡ್ ಮ
ದಾನಿ ಸೀನೆ ಊರ್‌ಗ್ ಪಿದಾಡ್ಯೆ, ಸೇಸಪ್ಪೆಟ್ರೆಡ ಪಂಡೇ|ಮಾಕೆ
ಟ್‌ಗ್ ಪೋದ್ ಒಂಜೇ ಮುಕ್ಕಾಲ್ ರೂಪ್ಯಾದ ಒಂಜಿ ಡಜನ
ಕುಕ್ಕು ದೆತೊಂಡೆ ಬೊಕ್ಕ ಬಸ್ಸ್‌ಡ್ ಕುಲ್ಯೆ. ಈ ಕುಕ್ಕ್ ಬೊ
ದಿಡ ರಸಾಯನೊ ಮಲ್ಪಾವೆರ.

ಮಲ್ಲ, ಮಲ್ಲ ಕುಕ್ಕುಲೆನ್ ತೂದ್ ಸೀನನ ಬೊಡೆದಿ ಸೀ
ಮ್ಮಗ್ ಸಂತೋಸಾಂಡ್, ಸೀನೆ 'ಪಂರ್ದೆರೆದೀಡ್",ರಸಾಯನೊ
ಮಲ್ಪೊಡು' ಪಂಡೆ. 'ಅವೆಂಚಿ ರಸಾಯನೊ?' ಕೇಂಡಲ್ ಸೀ
ಸೀನೆ ಮಂಗ್ಲೂರ್‌ಡ್ ನಡತ್ತಿನಿಮಾದ ಪಂಡೆ. ಆನಿ ಆಕ್
ನಾಲಗೆ ಒಂಜಿ ಕುಕ್ಕ್‌ದ ರುಚಿತೂಂಡ್. ಮನದಾನಿ ಸೀತವ
ಆಪೆತಿಲ್ಲಾಡೆದಜೋಕುಲೆನ್ ಲೆತ್‌ದ್ ಒಂಜಿ ಕುಕ್ಕ್ ಮೂರ್‌ದ
ಕೊರ್ಯೆಲ್, ಸೀನಣ್ಣೆ ಸಾಲೆಡ್ದ್ ಬತ್ತ್‌ದ್ 'ಪಂರ್ದ್‌ತ್‌ಂಡ
ತೂಕ'ಪಂಡೈ'ಆವು ಆರೆಗ್‌ದಾಯೆ ರಸಾಯನೊಮಲ್ಪುನ ಯ
ನತ್ತೊ"? ಪಂಡ್ರಿಯಲ್ ಸೀತಮ್ಮ ಸೀನಣ್ಣೆ ಆಯಿಡ್ದ್ ಬೊ
ಪಾತೆರ್ಜಿ.

ಸೀತಮ್ಮ ರಸಾಯನೊಗ್ ನಾಲೈನ್ ಕುಕ್ಕುಯಾವ್‌ಂಡ
ಆಪೆತಿಲ್ಲಡೆ ಮಾಪಕ್ಕ ಗೊಂಜಿ ಕೊರ್ಯೆಲ್, ಈ ಸುದ್ದಿ ಪಾ
ಕ್ಕಗ್ ಗೊತ್ತಾಂಡ್ ಬೊಕ್ಕ ಆಲೆಗ್ಲಾ ಒಂಜಿ ಕೊರ್‌ಂಡ್ ಪ
ಬಯ್ಯನಗ ತಿಗೊರ್ಂದ್ ಎಂಕಪ್ಪೈಲೆ ಮಗಲ್ ಸುಶೀಲ ಬ
ಲ್. ಇರ್ವೆರ್ಲಾ ಪಂಚಾತಿಕೆ ಹಾಕೋಂದ್ ಕುಲ್ಯೆರ್. ಸುಶೀ
ಪಿದಾಡ್ನಗ ಸೀತಮ್ಮ ಮಲ್ಲ ಮನಸ್ ಮಲ್ತ್‌ದ್ ರಡ್ಡ್ ಕುಕ
ಕೊರ್ಯೆಲ್. ಐನ ಪರಿಮಳೊ ತಡೆವಾಂದೆ ಆಳ್‌ಲಾ ಒಂ
ಮೂರ್ಯೆಳ್. ಸೀನೆ ಬಯ್ಯನ ಬತ್ತೆ. 'ಐಡ್ತ್ ಒಂಜಿ ಕೊಂ
ಒರಿನ ಪತ್ತ್‌ಯಾವ್" ಪಂಡೆ ಸೀನೆ. ಸೀನಗ್ ದಾನೆ ಗೊತ
ಸೀತಮ್ಮನ ಬಿತ್ತ್.

ರಸಾಯನೊತ್ತ ದಿನ ಬತ್ತ್ಂಡ್. ಸೀನೆ ಮದ್ಯಾನೊ
ಸಾಮಾನ್ ಕೊಂಡುಕೊರ್‌ದ್ ಸಾಲೆಗ್‌ಪೋಯೆ. ಸೀತವ
ಇಂಚಿ ಕುಕ್ಕುಮೂರ್‌ದ್ ದಿಕ್ಕೇಲ್‌ಗ್ ದೀಯೆಲ್ (ಮ ಳ್ಪಿ
ಗೊತ್ತಿಜ್ಜಿ)ಒಂಜಾತ್ ಉಪ್ಪ್‌ಪಾಡ್ಯೆಲ್.ಬೊಕ್ಕ ಬೆಲ್ಲೊ ಗು
ಡ್ ನೀರ್‌ಡ್ ಕಲತ್ತೆಲ್. ಲತ್ತ್ ಮುನ್ನಿಕ್ಕೊದ್ ಪಾಡ್ಯೆ
ಐನ್ ಕುಕ್ಕುದ ಪಾತ್ರೊಗ್ ಸುರಿತ್ತೆಲ್. ಆವ್ ಬೆಯ್ಯರಾ
ಸೀನೆ (ಏಪೋಡ್ಡ್ಂ ಬೇಗೊ)ಸಾಲೆಡ್ದ್ ಬತ್ತೆ. ಅಡಿಗೆ ಕೋ

ತ ಬಾಕಿಲ್ ಪಾಡ್‌ದಿತ್ತ್‌ಂಡ್. ತಟ್ಯೆಮೆಲ್ಲ ಪೋದ್ ಪಿದ್ಯಾಕು ಲ್ಲೊಡು" ಸೀತಮ್ಮನ ಓರ್ಡರ್ ಬಂತ್ತ್‌ಂಡ್. ಸೀನೆ ಅಂಚನೇ ಮಲ್ತೆ.ಐನ್ ನಿಮಿಷೊ ಕರಿಂಡ್ ಸೀನಗ್ ಮನಸ್ಸ್‌ಂತ್‌ಜಿ 'ಯ ನ ಸೀತು, ದಾನೆ ಮಲ್ಪುವಲ್? ಪಂಡೆ ಸೀನೆ 'ರಸಾಯನೊ ಮಲ್ಪುವಲ್" ಉಲಾಯಿಡ್ದೇ ಉತ್ತರೊ ಬತ್ತ್‌ಂಡ್ 'ಯಾನ್ ಉಲ್ಯಾ ಬರೋಲಿಗೆನ? ಪಿದಾಯಿದ ಪ್ರಶ್ನೆ "ಬಲ್ಲಿಗೆ" ಉಲ್ಯಾದ ಉತ್ತರೊ.

"ಚ್ಯ್ಂಂಂ ಜಿರಿ ಜಿರಿ ಜ್ಜಿರಿ"ಂದ್‌ದ್ ರಸಾಯನೊಗ್ ಕೊರಿ ಒಗ್ಗರಣೆ ಕೇಂಡ್‌ಂಡ್. (ಘೂ) "ಅಯ್ಯೋ ಅಯ್ಯ್ ಒಗ್ಗರಣೆ ಕೊರೆರಿದ್ದೀ........" ಸೀನೆ ಲಕ್ಕುದುಂತ್‌ದ್ ಪಂಡೆ. "ಎಂಕ್ ಗೊತ್ತುಂಡು...."ಬೊಕ್ಕ ಪತ್ತ್ ನಿಮಿಷೊ ಕರೀಂಡ್. "ನನ ಬರೋಲಿ" ಸೀತಮ್ಮ ಬಾಕಿಲ್‌ದೆತ್ತಲ್"ಈಡೆಗೇ ಬರಡ್" ಸೀನೆ ಮೇಜತೆಕ್ಕ ಕುಲ್ಯೆ. ಆಲ್ ಬಟ್ಟಲ್‌ಗ್ ಪಿಸೀದ್ ವ್ಯೆತಲ್. "ಆಯ್ಯೋ ನೆಕ್ ಮುನ್ನಿ ಪಾಡ್ದನದೀ, ಹಾಲಾದ್ ಪೋವಡ್" ಪಿಸೀದ್ ಬಾಯಿಗೆ ದೀದ್ "ನಿನ್ನ ಕರ್ಮೊ........ನಿನ್ನ ಸಾವು ರಂಡೆ! ಏತ್ ಕುಕ್ಕ್ ಪಾಡ್ದ?"(ಒಂಜೇ ಮುಕ್ಕಾಲ್ರುಪಾಯಿ ಕೊರಿ ಕುಕ್ಕತ್ತ) "ಪತ್ತಲಾ ಪಾಡ್ತೆ. ಕೊರಂಟ್ ಮಾತಾದಕ್ಯೆ. ರಡ್ಯೊಜಿ ಕೊರಂಟುಂಡಾತೆ". ಸೀತಮ್ಮ ಪಂಡಾಲ್. "ನಿನ....ಬೊಜ್ಜೊ ಪುಣ....ಬರ!" "ರ್ಯ್ಂಯೀ" ಸೀನನ ಕೈ ಟೆತ್ತಿ ಕೊರಂಟ್ ಸೀತಮ್ಮನಾಡೆಗ್ ಬತ್ತ್‌ಂಡ್. ಆಲ್ ಮೋರೆ ತಿರ್ಗಾಯಲ್. ಅವು ಆಳೆ ಕೆನ್ನೆಟ್ ಕುಲ್ಲ್‌ಂಡ್. ಸೀತಮ್ಮ ಮುಗ್ರ್ಯೆಲ್. "ನಿಕ್ ದಾಡಿ..." ಪಂಡೋಂಡೆ ಸೀನೆ ಪಿದ್ಯಾ ಪೋಯೆ. ಪೆರಪ್ಪ ಬನ್ನಗಲಾ ಆಲ್ ಅಂಚನೇ ಇತ್ತಲ್.

ಸೀನಗ್ ಗಾಬರಿ ಆಂಡ್. ಉಪಚಾರೊ ಮಲ್ತೆ. ಮನದಾನಿ ಸೀತಮ್ಮ ಅಪ್ಪೆನಿಲ್ಲಡೆಗ್ ಪೋಯಲ್.

ಸೀತಮ್ಮ ಪೋದ್ ಸಿಂಗೊಲು ಒಂಜಾಂಡ್, ರಡ್ಡಾಂಡ್, ರಡ್ಡ್ ಪೋತ್ ಮೂಜಾಂಡ್ ಸೀನನ ಬೇಜಾರೋ ಆತೀತ್ತತ್ ಬೋಡ್ಯಾನಾತ್ ಕಣ್ಣೀರ್‌ದೀಡ್ಯೆ.ಮನಸ್ಸ್‌ಗಟ್ಟಿ ಮಲ್ತೋಂದ್ 'ಆಳಾತೆ ಬರೊಡು' ಪಂಡೊಂಡೆ. ನಾಲೈನ್ ದಿನೊತ್ತಗ ಒಂಜಿ ಕಾಗದೊ ಬತ್‌ಂಡ್, ಸೀತಮ್ಮ ಬಂಜಿನಾಲ್‌ಂದ್‌ದ್. ಸೀನೆ ಸಂತೋಸೊಡ್ ಆಸಿಂಗೊಲ್ತ್ ಸಂಬಳೊ ಪೂರ ಕಡಪುಡ್ಯೆ. 'ಪತ್ಪದ್ನೈನ್ ದಿನೊತ್ತುಲಾಯಿ, ಕುಡೊಂಜಿ ಕಾಗದೊ ಬತ್ತ್‌ಂಡ್. ಐಟ್ 'ಸೀತಮ್ಮ ಪೆದ್ಯಲ್. ಆಣ್ ಬಾಲೆ ಕೂಡ್ಲೆ ಬರೊಡು'ಂದ್‌ದಿತ್ತ್‌ಂಡ್, ಸೀನೆಕಾಗದೊ ಬರೆಯೆ 'ಇನ್ಸ್‌ಪೆಕ್ಷನ್ ವರ್ಕ್ ಬತ್ತ್‌ಂಡ್. ಇನ್ಸ್‌ಪೆಕ್ಟ್ರ ಬರಿಯೆರಾಂಡ್. ರಜೆ ತಿಕ್ಕೆರೆ ಏಳೆಣ್ಮೊ ದಿನೊ ಉಂಡ್. ಇತ್ಯಾದಿ....ಇತ್ಯಾದಿ'

ಹಾ, ಹಾ, ಪನ್ಪನೆತುಲಾಯಿ ಇನ್ಸ್‌ಪೆಕ್ಷನ್ ಮುಗಿತ್ತ್ ರಜೆಲಾ ತಿಕ್ಸ್‌ಂಡ್. ಸಿನೇ ಮಾಮನಿಲ್ಲಡೆಗ್ ಪಾರ್ಯೆ. ಸೀನೆ ಬನ್ನಗ ಸೀತಮ್ಮ ಕಾರ್‌ದ ಮಿತ್ತ್, ಬಾಲೆನ್ ದೀವೊಂದಿತ್ತಲ್. ಇರ್ವೆರೆಗ್ಲಾ ಸಂತೋಸಾದ್ ಕಣ್ಣ್‌ಡ್ ನೀರ್ ಬತ್ತ್‌ಂಡ್. ರಾಮಣ್ಣೆಂದ್‌ತ್ ಪುದಾರ್ ದೀತೊ? ಆವೆ? 'ಕೇಂಡಲ್ ಸೀತಮ್ಮ, ಐಡ್ತ್ ರಸಾಯನೊದ ಕೊರಂಟ್‌ಂದ್‌ತ್, ಪುದಾರ್ ದೀತ್ವರ್ಡ್ ಲ್ಯಾಕಿತ್ತ್‌ಂಡ್" ಬಾಲೆಗ್ ಮುತ್ತಕೊರೋಂಡ್ ಸೀನೆ ಪಂಡೆ. ಇರ್ವೆರ್ಲಾ ಇಂಚನೇ ಏತ್‌ಪೊರ್ತ್ ಸರಸಗೊಬ್ಬೊಂದಿತ್ತೆರೊ ಏರೆಗ್ ಗೊತ್ತು.

● ತುಳುವೆರ್ ಅವಶ್ಯವೋದರೆತ್ತಿ ಪುಸ್ತಕಳು. ●

ಕೃಷ್ಣ ಸಂಧಾನ	೦	೮	೦	ಅಳಿಯಸಂತಾನ ಕಟ್ಟ್‌ದ ಗುಟ್ಟು	೦	೪	೦
ಮಿತ್ಯನಾರಾಯಣ ಕತೆ	೦	೮	೦	ಮದ್‌ಮಾಳತ್ತ್ ಮದ್‌ಮಾಯೆ	೦	೩	೦
ಜನಮರ್ಲ್	೦	೬	೦	ಮುಂಡತ್ತಾಯೆ	೦	೩	೦
ಸತೀ ಕಮಲೆ	೦	೬	೦	ತುಳು ಪದ್ಯಮಾಲಿಕೆ	೦	೧	೦
ಕಾನಿಗೆ	೦	೪	೦	ಪುಗಿರೆದ ಅಮಲ್	೦	೧	೦

● ಎಸ್. ಯು. ಪಣಿಯಾಡಿ, ತುಳುವ ಸಾಹಿತ್ಯಮಾಲೆ, ಉಡುಪಿ. ●

ತುಳು ವ್ಯಾಕರಣೊ ೦–೮–೦.

* ವಂದೇ ಮಾತರಂ *

❋

(೯ನೇ ಸಂಚಿಕೆಡ್ದ್ ದುಂಬರ್ತಿನವು)

ಶಂಕರೆ—ಕಾಂಗ್ರೆಸ್‌ದಾಕ್ಲೆಗ್ ಓಟು ಕೊರಿನಾಂಡ ನಂಕ್ ಸ್ವರಾಜ್ಯ ತಿಕ್ಕುನ್ವಾ

ಮಾಸ್ಟ್ರೆ—ಸ್ವರಾಜ್ಯ ಇತ್ತೆನೇ ತಿಕ್ಕುಜಿ. ಆಂಡ ಆಕ್ಲು ಸರ್ಕಾರದ ಸಭೆಟ್ ಕಾನೂನುಲೆನ್ ತಿದ್ದ್‌ದ್ ಊರುಗು ಬೊಡಾಯಿಲೆಕ್ಕ ಎಡ್ಡೆ ಮಲ್ಪರೆ ಪೇಚಾಡುವೆರ್. ಬೊಕ್ಕ ಸರ್ಕಾರದಾಕ್ಲು ಕೇನ್ಂಡ್ ಜೆರ್‌ಡ ಅಪಗನೆ ಆ ಸಭೆನ್ ಬುಡ್‌ದ್ ಪಿದಾಡ್ದ್ ಊರುದ ಜನೊಕ್ಲೆಗ್ ಸರಕಾರ ಮಲ್ತಿನ ಅನ್ಯಾಯೊನು ತೆರಿಪಾವೆರ್ ಅಂಚಾದ್ ನಮ ಕೋಂಗ್ರೆಸ್‌ದಾಕ್ಲೆನ್ ಓಟುಕೊರ್ದು ಕಡಪುಡೊಡು.

ರಾಜು—ಅಂದೆ ಮಾಸ್ಟ್ರೆ ಕೋಂಗ್ರೆಸ್‌ಗ್ ಓಟು ಕೊರಿನಾಂಡ ಆಕ್ಲು ಸರ್ಕಾರದಾಕ್ಲೆಡ ಎಂಚಿನ ಮಾತ ಕೇನುವೆರ್.?

ಮಾಸ್ಟ್ರೆ—೧ ಇತ್ತೆ ನಮ ಊರುಡು ಬಡವಗ್ ದಿನೊಕ್ಕು 3 ಆಣೆ ಕೂಲಿ ಕೊರ್ಪೆರ್. ಅವು ಆಯೆಗ್ ಇಯ್ಯವಂದ್ ದಿನೊಕ್ಕು ಒಂಜಿ ರೂಪಾಯಿಡ್ದ್ ಕಡಮೆ ಕೊರಿಯೆರೆ ಬಲ್ಲಿ.

೨ ಏತ್ ಮಲ್ಲ ಸಂಬಳದ ನೌಕರಿ ಆಂಡಲಾ ಅರಸುನ ಮಂತ್ರಿ ಆಂಡಲಾ ತಿಂಗೊಳುಗು ೫೦೦ರೂಪ್ಯಾಡ್ದ್ ಮಿತ್ತ್ ಕೊರಿಯೆರೆ ಬಲ್ಲಿ.

೩ ಇತ್ತೆ ಸೈನ್ಯೊಗು ಕರ್ಚಿ ಮಲ್ಪುನ ವರ್ಸೊಗು ೫೦ ಕೋಟಿ ರೂಪ್ಯಾಗ್ ಅರ್ದೊಗು ಕಡಮೆ ಮಲ್ತ್‌ದ್ ಹಿಂದೂಸ್ಥಾನದ ಜನೊಕ್ಲೆನೇ ಸೈನ್ಯೊಗು ಸೇರಾವೊಡು.

೪ ಕೂಲಿ ಕೆಲಸದಾಕ್ಲು ದಿನೊಕ್ಕು ೫ಗಂಟೆಡ್ದ್ ಮಿತ್ತ್ ಕೆಲಸ ಮಲ್ಪೆರೆ ಬಲ್ಲಿ.

೫ ಕೆಲಸಾದಾಂತಿನಾಕ್ಲೆಗ್ ಕೆಲಸ ಕೊರೊಡು.

೬ ಪರಬ್ಬೆರೆಗ್ ಸಂಕಡದಾಕ್ಲೆಗ್ ಪೆದ್ದುನಗ ಪೊಡುಂಜೆವೆಗ್ ಕೆಲಸದಾಂತೆ ಉಪ್ಪುನಗ ಉನಿಯೆರೆ ಕೊರ್ಪಿನ ಸಂಘ ವಿಮೆ ಕಂಪಿನಿಲೆನ್ ಮಲ್ತ್‌ದ್ ಸಾಯ ಮಲ್ಪೊಡ್.

೭ ಗೇಣಿದ ವಕ್ಕೆಲ್‌ಗ್ ಇತ್ತೆ ಉಪ್ಪುನ ಗೇಣಿನ್ ಸಮಾ ಅರ್ಧ ಕಡಮೆ ಮಲ್ಪೊಡು

೮ ಗೇಣಿದಾಕ್ಲೆನ, ಕೆಲ್ಸದಾಕ್ಲೆನ, ಕಸುಬುದಾರ್ರೆನ ಸಾಲೊನು ದೆತ್ತ್‌ದ್ ಪಾಡೊಡ್

ತುಳುನಾಡ್ ಪತ್ರಿಕೆಡ್ (ಬರೆತಿನಾಯೆ ತುಳುವಾಲಿ)

೯ ಭಂಜರ್ ಭೂಮಿನ್ ತೀರ್ವೆ, ಗೇಣಿದಾಂತೆ ವಕ್ಕೆಲ್‌ಗ್ ಕೊರೊಡು.

೧೦ ಭೂಮಿ ಈಡ್‌ದ ಸಾಲೊಗು ಉಪ್ಪುನ ದುಬಾರಿ ಬಡ್ಡಿನ್ ದೆತ್ತ್‌ದ್ ಕಡಮೆ ಮಲ್ಪೊಡು.

೧೧ ಪಾಸೀಗ್ ಕೊರ್ಪಿ ಶೀಕ್ಷೆನ್ ದೆತ್ತ್‌ದ್ ಪಾಡೊಡು.

೧೨ ಸರ್ಕಾರದಾಕ್ಲು ವರ್ಗದಾರ್ರೆಗ್ ಏರಾದಿನ ತೀರ್ವೆ ನೆಸ್ಸ್ ಮಿಸಿ ಮಾತ ದೆತ್ತ್‌ದ್ ದುಂಬುದಕಾಲೊಡು ಇತ್ತಿ ತೀರ್ವೆನೇ ದೀವೊಡು.

೧೩ ಕಲಿ, ಗಂಗಸರ, ಬಂಗಿ, ಅಫೀಮ್ ಅಮಲ್‌ದ ಮಿತ್ತ್ ದೀತಿ ಸುಂಕೊನು ದೆತ್ತ್‌ದ್ ಪಾಡೊಡು.

೧೪ ಮಾತ ಜಾತಿದ ಪೂರಾ ಜೋಕ್ಲೆಗ್ಲಾ ಆಕ್ಲಾಕ್ಲೆ ಊರುದ ಬಾಸೆಡ್ ಬೋಡಾಯಿನ ಪ್ರಾಥಮಿಕ ಬರವುನು ಬಲತ್ಕಾರೊಡು ವರ್ಸೊಗು ಕಲ್ಪಾವೊಡು.

೧೫ ವರ್ತಮಾನ ಪತ್ರಿಕೆ, ಸಂಘ, ಕೂಟ ಸಭೆಟ್ ಭಾಷಣ ಪಾತೆರದ ಸೊತಂತ್ರ ತಿಕ್ಕುಲೆಕ್ಕ ಮಲ್ಪೋನೊಡು. ಈತೇ ಆತ್ ಸಂಪೂರ್ಣ ಸ್ವರಾಜ್ಯ ತಿಕ್ಕುಲೆಕ್ಕ ಪೇಚಾಡುನ ಸಭೆನೇ ಕೋಂಗ್ರೆಸ್.

ಶಂಕರೆ—ಅಂದೆ ಮಾಸ್ಟರೆ ಉಂದು ಮಾತ ಬೊಡ್ಚಿಂದ್ ಪನ್ಪಿನಾಕ್ಲುಲಾ ಉಪ್ಪೆರಾ?

ಮಾಸ್ಟ್ರೆ—ನಿಕ್ಕ್ ದಾನೆ ಗೊತ್ತುಂಡು. ಉಂದೆಕ್ ಪೂರಾ ಎದ್ರುಂತುದು ಸರ್ಕಾರೊಗು ಸಾಯ ಮಲ್ಪುನಾಕ್ಲು ಉಳ್ಳೆರತ್ತ್, ಆಕ್ಲೆ ಜಸ್ಟೀಸ್‌ದಾಕ್ಲು.

ಶಂಕರೆ—ಆಕ್ಲೆಗ್ ನೆಟ್ಟ್‌ದಾನೆ ಲಾಭವುಂಡು?

ಮಾಸ್ಟ್ರೆ—ಆಕ್ಲೆಗ್ ರಾವ್ ಸಾಹೇಬ್, ದಿವಾನ್ ಬಹದೂರು ಇನ್ಪಿ ಮಾರುದ್ದದ ಪುದರ್‌ದ ಗೀಟುಲು, ಬೊಕ್ಕ ಮಲ್ಲ ಮಲ್ಲ ಚಾಕ್ರಿಲು ತಿಕ್ಕುನ ಆಸೆಗಾದ್ ಊರು ಮಾತ ಹಾಳಾಂಡಲಾ ತನ್ಕುಲೆಗ್ ಪುದರ್ ತಿಕ್ಕೊಡಿಂದ್ ಕೆಲ್ಸ ಮಲ್ಪುನಾಕ್ಲುಲಾ ಉಳ್ಳೆರತ್ತ ಆಕುಲು ಸರ್ಕಾರೊಗು ಬೆರಿಸಾಯೊದ್ ನಮನ್ ಜೀವಯಿತ್ತಿಲೆಕ್ಕನೇ ಕೆರ್ಪೆರ್.

ತಿಮ್ಮಪ್ಪೆ.—ಉಂದೆನ್ ಮಾತ ಕೇನ್ಂದ್ ಅಂದೆ ಮಾಸ್ಟರೆ ಅಂಚಿನಾಕ್ಲೆನ್ ತುದೆಕ್ಕ್ ನೂಕುಂಡ ದಾನೆ?

ಮಾಸ್ಟ್ರೆ—ತುದೆಕ್ಕ್ ನಮ ನೂಕರೆ ಆವಂದ್. ಅಂಚಿನ ಮೋಸಗಾರ್ರೆಗ್ ಊರುಡು ಯೇರ್ಲ ಓಟು ಕೊರಂದೆ

The Canara Banking Corporation Udipi Ltd.

(Incorporated in British India)

Estd. 1906

ANNOUNCEMENT.

We have great pleasure to inform the public and our constituents that our name has been included in the Second Schedule of the Reserve Bank of India Act

Issued & Subsc

Paid up Capital

Reserves

Deposits

TOTAL RESOURCES E

ವಾಗಿರುವುದು. ಒಂದು ವೇಳೆ ಮಂತ್ರಿಗಳಿಗೂ ಗವರ್ನರರಿಗೂ ಅಭಿಪ್ರಾಯ ಭೇದವುಂಟಾಗುವ ದುರ್ದೈವವುಂಟಾಗಿ ಗವರ್ನರರಿಗೆ ಎಷ್ಟಕ್ಕೂ ಮಂತ್ರಿಗಳ ಸಲಹೆಯನ್ನು ಸ್ವೀಕರಿಸಲು ಅಸಾಧ್ಯವೆಂದಾದರೆ ಆಗ ಆ ನಿರ್ಧಾರಕ್ಕೆ ಸಂಪೂರ್ಣವಾಗಿ ಅವರೇ ಜವಾಬಾರರಲ್ಲದೆ, ಮಂತ್ರಿಗಳಿಗೂ ಅದಕ್ಕೂ, ಅವು ಸಂಭವಿಸುವವೆಂದೇನೂ ಇಲ್ಲ. ಅಂತಹ ಪರಿಸ್ಥಿತಿಯು ಎಂದೂ ಉಂಟಾಗದ ಹಾಗೆ ಮಾಡಿ ಮಂತ್ರಿಗಳೂ ಗವರ್ನರರೂ ಪರಸ್ಪರ ಸಹಕಾರದಿಂದ ಸೌಹಾರ್ದದಿಂದ ನಡೆದು ಸಾಂತಕ್ಕೆ ನಿಜವಾದ ಪ್ರಯೋಜನವಾಗುವಂತಾಗಬೇಕೆಂದೇ ಗವರ್ನರರ ಮತ್ತು ತನ್ನ ಯಥಾರ್ಥವಾದ ಇಚ್ಛೆ.

ನವಯುಗ

ಉಡುಪಿ, ಗುರುವಾರ, ತಾ. ೨೪–

ವೈಸರಾಯರ ಹೇ

ಇದೇ ತಾ. 21ರಲ್ಲು ಮಾನ್ಯ ... ಯರು ರೇಡಿಯೋ ಮೂಲಕ ಕೊ ... ಷಣವನ್ನು ನಾವು ಇನ್ನೊಂದೆಡೆ ಕೆ ... ವೆವು. ಅದೆಷ್ಟು ಯಥಾರ್ಥ ... ಮತ್ತು ಉದಾತ್ತ ಭಾವನೆಗಳಿಂದ ... ರುವುದೆಂಬುದು ಅದನ್ನೋದಿದವ ... ವೇದ್ಯವಾಗದಿರದು. ಅವರು ತ ... ಲ್ಲು ಪ್ರಕಟಗೊಳಿಸಿರುವ ದೀರ್ಘ ... ಯೂ ಅದೇ ರೀತಿಯ ಸೌಹಾರ್ದ ... ರಭಾವ, ಮತ್ತು ಉದಾತ್ತ ವಿಚಾರ ... ವಾಗಿರುವುದು. ಆವೆರಡರ ಹಿ ... ಲ್ಲೂ ಯಥಾರ್ಥವಾದ ಅಂತಃಕ ... ವುದೆಂದು ಧಾರಾಳವಾಗಿ ಹೇಳ ... ಅದರಿಂದಾಗಿ ಈಗ ದೇಶದಲ್ಲುಂಟ ... ಬಿಕ್ಕಟ್ಟು ನಿವಾರಿಸಲ್ಪಟ್ಟು ... ಪಕ್ಷೀಯರು ಮಂತ್ರಿ ಪದವಿ ಸ್ವೀಕ ... ತಾಗಬಹುದೆಂದು ನಿರೀಕ್ಷಿಸಬಹು ...

ಹಿಂದು ದೇಶದ ರಾಜಕೀಯ ... ಯು ರೂಪಿಸಲ್ಪಡುವಾಗಲೇ ಇಂತ ... ಡಕುಗಳುಂಟಾಗಬಹುದೆಂದು ನಿರೀ ... ಗಿದೆ, ಆ ಕುರಿತು ಹಿಂದೀಯರಲ್ಲ ... ವೇಗವುಂಟಾಗುವುದು ಸ್ವಾಭಾವಿಕ ... ಈ 3 ತಿಂಗಳುಗಳಲ್ಲಿ ಬಿಕ್ಕಟ್ಟಿ ... ಬೇರೆ ಸ್ವರೂಪದ ಕುರಿತು ನಡೆದ ... ಗಳು, ಪರಸ್ಪರ ಅಭಿಪ್ರಾಯಗಳ ... ಕೊಳ್ಳಲು ರಾಜಕೀಯ ಘಟನೆಯ ... ದ ಉದ್ದೇಶಗಳನ್ನು ವಿಶದಗೆ ... ಸಹಾಯಕವೇ ಆಗಿವೆ. ಕಾಂಗ್ರೆ ... ಇಂಡಿಯಾ ಆಕ್ಟಿನ ಉದ್ದೇಶದ ... ಕಟ್ಟಿಕೊಂಡಿರುವ ಸಂದೇಹಗಳಿಗೆ ... ವಿಲ್ಲದಿದ್ದರೂ ಅವರ ಯಥಾರ್ಥ ... ತಾ ನೊ ಪ್ಪು ತ್ತೀ ನೆ. ಹೊಸ ರಾಜಕೀಯ ಘಟನೆಯು ರೂಪಿಸಲ್ಪಡುವಾಗ ಮತ್ತು ಪಾರ್ಲಿಮೆಂಟಿನಲ್ಲಿ ಆ ಕುರಿತು ಚರ್ಚೆ ನಡೆದಾಗ ಅದರಲ್ಲಿ ಮುಖ್ಯ ಭಾಗ ವಹಿಸಿದವರಲ್ಲಿ ತಾನೊಬ್ಬ. ಆದುದರಿಂದ ಅದರ ನಿಜವಾದ ಉದ್ದೇಶವೇನೆಂಬುದನ್ನು ತಾನು ಅಧಿಕಾರಿಕವಾಗಿ ಹೇಳಬಲ್ಲೆ. ಅಲ್ಪ

ಳಿತದ ಸಂಪೂರ್ಣ ಜವಾಬ್ದಾರಿಯು ಮಂತ್ರಿಗಳದಾಗಿದೆ. ಗವರ್ನರರು ವೈಯಕ್ತಿಕ ಸ್ವತಂತ್ರವನ್ನು ಉಪಯೋಗಿಸಬೇಕೆಂದು ನಿರ್ದಿಷ್ಟವಾದ ಕೆಲವೆ ವಿಷಯಗಳ ಬಿಟ್ಟು ಬೇರೆ ಯಾವ ಆಡಳಿತ ಕ್ಷೇತ್ರದಲ್ಲೂ ಅವರು ಕೈಹಾಕಲಾರರು. ಇದೀಗ ಈ ಮೂರು ತಿಂಗಳು ಆಡಳಿತದಿಂದ ಸಿದ್ಧ

ತನ್ನ ಮತ್ತು ಎಲ್ಲಾ ಗವರ್ನರರುಗಳ ಉದ್ದೇಶವೆಂಬುದೇ ವೈಸರಾಯರ ದೀರ್ಘ ಹೇಳಿಕೆಯ ಸಾರವಾಗಿರುತ್ತದೆ. ಇಂಡಿಯಾ ಆಕ್ಟಿನಲ್ಲಿ ಮಂತ್ರಿಗಳನ್ನು ತೆಗೆದು ಹಾಕುವ, ರಾಜ್ಯಾಂಗ ರಚನೆಯು ಮುರಿದು ಹೋಗುವ ಸನ್ನಿವೇಶಗಳಿಗೆಲ್ಲಾ ತಕ್ಕ ಭದ್ರತೆಮಾಡಲ್ಪಟ್ಟಿವೆ ಯೆಂಬುದರಿಂದಲೇ

ಬ್ರಿಟಿಷರ ಹಮ್ಮಿಯ ವಿಷಯವಾದರೆ ಅವರದಕ್ಕೆ ಯಥಾರ್ಥವಾಗಿಯೂ ಸಹಾಯ ಮಾಡುವುದಾದರೆ ಅದು ಪ್ರತ್ಯಕ್ಷವಾಗಿ ಹಿಂದೀಯರ ಅನುಭವಕ್ಕೆ ಬರುವಂತಾಗಬೇಕು. ಆಗ ಮಾತ್ರ ಅದನ್ನು ಹಿಂದೀಯರು ನಂಬಿ ಹಿಂದೂ ದೇಶ, ಇಂಗ್ಲೆಂಡುಗಳೊಳಗೆ ಪರಸ್ಪರ ಮೈತ್ರಿಯ ಸರಿಸಮಾನ ಸಂಬಂಧವು ಚಿರಕಾಲನೆಲೆಗೊಳ್ಳಬಹುದು.

ಇತ್ತಿನಾಂಡ ಆಕ್ಲ್ ಜೀವಯಿತ್ತಿಲೆಕ್ಕನೇ ತಯಿಪೆರ್.

ಜೋಕ್ಲು—ಅಂಡ ಮಾಸ್ತ್ರೆ ಎಂಕುಲು ಅಯಿತಾರದಾನಿ ಮಾತ ಯಿಲ್ಲಡೆಗ್ಲಾ ಪೋದು ಕೋಂಗ್ರೆಸ್ ದಾಕ್ಲೆಗ್ ಅತ್ತಾಂಡೆ ಬಾಕಿ ದಾಕ್ಲೆಗ್ ಓಟು ಕೊರಿಯೆರೆ ಆವಂದ್ ಇಂಚಿದ್ ಪನೊಡ?

ಮಾಸ್ತ್ರ—ನಿಕುಲು ಪನ್ಂಡ ಯೇರ್ ಕೇನುವೆರ್.

ಜೋಕ್ಲು—ಕೇಂಡಿಜೆರ್ಂಡ ಕುಲ್ಲಡ್. ಯೆಂಕ್ಲೆಂಗ್ ತೆರಿನೆಸ್ ಪಸ್ಪ. ಅಂಡ ನಮ್ಮ ಹಿಂದೂಸ್ತಾನೊಡು ಇತ್ತೆ ಮಲ್ಲ ಕೆಲಸದಾಕ್ಲೆಗ್ ಯೇತ್ ಸಂಬಳ ಕೊರ್ಪೆರ್.

ಮಾಸ್ತ್ರ—ವೈಸರಾಯಿ ಇನ್ಪಿ ಇಂಗ್ಲೀಸ್ ಧೊರೆಕ್ಕ್ ತಿಂಗೊಲುಗು 21ಸಾವಿರ ರೂಪಾಯಿ ಸಂಬಳ, ಬೊಕ್ಕ 5ಸಾವಿರ ರೂಪಾಯಿ ಕರ್ಚಿಗ್ಂದ್ ಕೊರ್ಪೆರ್.

ರಾಜು—ಅಂಡ ಮಾಸ್ತ್ರೆ ಸೈನೊಗು ಯೇತ್ ಕರ್ಚಾಪುಂಡು.

ಮಾಸ್ತ್ರ—ಇತ್ತೆ ವರ್ಸೊಗು ಐವ್ವ ಕೋಟಿ ರೂಪಾಯಿ ಕರ್ಚಾಪುಂಡು.

ತಿಮ್ಮಪ್ಪೆ—ಈ ದುಡ್ಡು ಒಲ್ತು ಕರ್ಚಿಮುಲ್ಪುನಿ.

ಮಾಸ್ತ್ರ—ನಮ್ಮ ಭೂಮಿದ ತೀರ್ವೆಡ್ದ್ ಲಾ ಸೆಸ್ಸೆಡ್ದ್ ಲಾ ಕರ್ಚಿಮುಲ್ಪುವೆರ್. ವರ್ಸೊಗು ನೂತ್ತನಲ್ವ ಕೋಟಿ ರೂಪಾಯಿ ಮುಲ್ತು ವಿಲ್ಯಾತಿಗ್ ಪೋಪುನ್ಡು. ಸರಾಸರೀಟ್ ತೂಂಡ ಒಂಜಿ ಸೆಕೊಂದುಗು ೫ ರೂಪಾಯಿದ ಲೆಕ್ಕ ವಿಲ್ಯಾತಿಗ್ ಮುಲ್ತು ಪೋಪುಂಡು. ಉಂದು ನಮ್ಮ ಮುಲ್ಲಾದಿಗೆ. ಅಂಡ ಉಸಿಯೆರೆ ದಾಂತೆ ನುಪ್ಪು ನುಪ್ಪು ಇಂದ್ ಜೀವ ಬುಡ್ಪಿನ ಜನೊಕ್ಲು ೫ಸಿನಿಮಿಷಗೊಂಜಿತ್ತ ಲೆಕ್ಕ ಬಡತನೊಡು ಸೈಪುನ್ಡು. ಇಂಚ ಉಪ್ಪುನಗ ಉಂಡೆಕ್ಕ್ ಸಾಯು ಮಲ್ಪುನ ಜಸ್ಟೀಸ್ ದಾಕ್ಲೆಗ್ ಓಟು ಕೊರಿಯೆರೆ ಬುಡಡೆ, ನಿಕುಲು ಇತ್ತೆದ ಜೋಕುಲು. ದುಂಬುದ ಜನಾಂಗ ಆಪಿನೆಡ್ದ್ ನಿಕುಲೆ ರಾಜ್ಯ ಆಳಿಯು ನಾಕ್ಲು. ಆ ಸಂಗತಿಲೆನ್ ಮಾತ ಪೊರ್ಲುಡು ನನದ ಚರಿತ್ರೆದ ಪಾಟೊಗು ಪನ್ಪಿ-ಇತ್ತೆ ಪ್ರಾರ್ಥನೇ ಮಲ್ಪುಲೆ ಇಂದ್ ಮಾತ ಜೋಕುಲುಲಾ–ವಂದೇ ಮಾತರಂ। ಇನ್ಪಿ ಪದ ಪಂಡದ್ ಆಯಿಬೊಕ್ಕ ಇಡೀ ಸಾಲೆದ ಜೋಕ್ಲೆನ್ ಉಂತಾದ್ ಮಾಸ್ತ್ರ ಪಂಡೆರ್ ಮಾತ

ಜೋಕ್ಲುಲಾ ಕೆಬಿಕೊರುದು ಕೇನ್ಲೆ.—

ರಾಷ್ಟ್ರಯಿನ್ಪಿ ರಾಜ್ಯನೇ ನಂಕ್ ದೇವತೆ. ಅವ್ವೇ ನಮ್ಮ ಧರ್ಮ.

ವಂದೇ ಮಾತರಂ ॥ ಇನ್ಪಿನವೇ ಮಲ್ಲ ಮಂತ್ರ.

ಹಿಂದುಸ್ತಾನ ಇನ್ಪಿನವೇ ನಮ್ಮ ರಾಜ್ಯ.

ಹಿಂದೀ ಭಾಷೆನೇ ನಮ್ಮ ದೇಶದ ಬಾಸೆ.

ಮೂಜಿ ಬಣ್ಣದ ನಿಸಾರ್ನಿಯೇ ನಮ್ಮ ರಾಷ್ಟ್ರಧ್ವಜ.

ಖದ್ದರ್ ಕುಂಟೇ ನಮ್ಮ ಐತ ಬೊಲ್ಮಾನದ ಮಡಿ.

ಬಡವೆರೆ ಸುಖನೇ ನಮ್ಮ ಸುಖ.

ಸ್ವರಾಜ್ಯನೇ ನಮ್ಮ ಜನ್ಮಾಂತರ ಹಕ್ಕ್—ಇಂದ್ ಪಂಡಿನ ಕೇನ್ಡ್ ಜೋಕ್ಲು ಮಾತ ಸಾಲೆಡ್ದ್ ಪಿದಾಡ್ದ್ ಒಟ್ಟುಗು ಕೂಡ್ದು,

ನೆಕ್ಕಾದ್ ಬದ್ಕುಗಾ| ನೆಕ್ಕಾದ್ ಬಾಳುಗಾ |

ನೆಕ್ಕಾದ್ ಬುಳೆವುಗಾ | ನೆಕ್ಕಾದ್ ಬರೆಲುಗಾ |

ನೆಕ್ಕಾದ್ ಕಾಡ್ದ್ | ನೆಕ್ಕಾದ್ ತಡಿತ್ದ್ |

ನೆಕ್ಕ್ ಬೋಡಾದ್ ಬದುಕುಗಾ। ನೆಕ್ಕ್ ಬೋಡಾದ್ ಬುಳೆವುಗಾ।

ನೆಕ್ಕ್ ಬೋಡಾದ್ ದನಿಯುಗಾ। ನೆಕ್ಕ್ ಬೋಡಾದ್ ಉರುಡುಗಾ।

ನೆಕ್ಕ್ ಬೋಡಾದ್ ಪಾತೆರುಗಾ। ನೆಕ್ಕ್ ಬೋಡಾದ್ ನಲಿಪುಗಾ |

ನೆಕ್ಕ್ ಬೋಡಾದ್ ಬಂದನೊಗು ಪೋಯಿತುಕ |

ನೆಕ್ಕ್ ಬೋಡಾದ್ ನಮ್ಮ ಜೀವೊನೆ ಕೊರ್ಕತುಕ।

ವೀರೆರ್ಂದ್ ಪನ್ಪಾಗಾ | ಶೂರರೆಂದ್ ಕೇನುಗಾ |

ವೀರ ಸ್ವರ್ಗ ನಾಡುಗಾ। ಹಿರಿಯೆರೊಟ್ಟುಗು ಕೂಡುಗಾ।

ಉಂದೆ ನಂಕ್ ಶಕ್ತಿ. ಉಂದೆ ನಂಕ್ ಮುಕ್ತಿ. ಉಂದೆ ನಂಕ್ ಯುಕ್ತಿ |

ಉಂದೆ ನಮ್ಮ ಕೋಂಗ್ರೆಸ್ಸ್। ಉಂದೆ ನಮ್ಮ ಮಂತ್ರ।

ವಂದೇ ಮಾತರಂ || ಇನ್ಪಿನವೇ ನಮ್ಮ ತಂತ್ರ

ಪೋಯಿ ನಮ್ಮ ಇಲ್ಲಡೆಗ್ | ಬರ್ಲ ನಮ್ಮ ಸಾಲೆಗ್ ||

ಇಂದ್ ಜೋಕ್ಲು ತೆಲಿತೊಂದು ನಲಿತೊಂದು ಲಾಗ್ಯೊಂದು ಪಾರೊಂದು ಆಕ್ಲಾಕ್ಲೆ ಇಲ್ಲಡೆ ಪೋಯೆರ್।

॥ ಸಂಪೂರ್ಣಂ ॥

ಬರುವ ವಾರದಿಂದ

ಭಿ ಕಾ ರಿ ಣಿ

ಎಂಬ

ವೇಶ್ಯಾ ಜೀವನದ ಹೃದ್ರಾವಕ ಪರಿಸ್ಥಿತಿಯನ್ನೂ, ಮಾತೃ ಹೃದಯದ ಪ್ರೇಮೋನ್ಮಾದವನ್ನೂ, ದುರಭಿಮಾನಿ ಪುರುಷನ ಪೈಶಾಚಿಕ ಅತ್ಯಾಚಾರಗಳನ್ನೂ ಕಣ್ಣೀರಿಡುವಂತೆ ಚಿತ್ರಿಸುವ ಸಾಮಾಜಿಕ ಕಾದಂಬರಿಯು ಪ್ರಕಟವಾಗುವುದು.

ಮುಂದಿನ ನವಯುಗ ಸಂಚಿಕೆ ನಿರೀಕ್ಷಿಸಿರಿ !

ವಿ ದೇ ಶ

ರಶ್ಯದಲ್ಲಿ ಪ್ರಬಲ ಒಳಸಂಚು

ರಶ್ಯದ ರಾಜ್ಯಭಾರದ ವಿರೋಧವಾಗಿ ಜರ್ಮನಿ ಮತ್ತು ಜಪಾನ್ ಗುಪ್ತಚರ ಸಂಘಗಳ ಹಸ್ತಕರಾಗಿ ಒಳಸಂಚು ನಡಿಸಿದರೆಂಬ ಆರೋಪದಿಂದ ಈ ಮೊದಲು ಆಮಂದಿ ಪ್ರಮುಖ ರಶ್ಯಾನ ಸೇನಾನಾಯಕರು ಗಲ್ಲಿಗೇರಿಸಲ್ಪಟ್ಟಿರುವರಷ್ಟೆ. ಈಗ ಪೋಲಂಡಿನ ಬಳಿಯ ವೈಟ್‌ರಶ್ಯಾ ಸೋವಿಯೆಟ್ ರಿಪಬ್ಲಿಕ್‌ನ ಮುಖ್ಯ ಮಂತ್ರಿಗಳೂ, ಕಮ್ಯೂನಿಸ್ಟ್ ಪಕ್ಷದ ಸೆಂಟ್ರಲ್ ಕಮಿಟಿಯವರೂ ರಶ್ಯದ ಸೋವಿಯೆಟ್ ಸರಕಾರದ ವಿರೋಧವಾಗಿ ಒಳಸಂಚುನಡಿಸಿ, ಬೆಳೆ ಮತ್ತು ಜಾನುವಾರುಗಳನ್ನು ನಾಶಮಾಡಿರುವರೆಂಬುದು ಬಯಲಿಗೆಳೆಯಲ್ಪಟ್ಟಿದೆ. ಜಾನುವಾರುಗಳಿಗೆ ಕೊಲೆರಾ ವಿಷಯದ ಇಂಜೆಕ್ಷನ್ ಕೊಟ್ಟು ಕೊಲ್ಲಲು ತಸಗೆ ಆಜ್ಞೆ ಕೊಡಲ್ಪಟ್ಟಿದ್ದುವೆಂದು ಜಾನುವಾರು ಖಾತೆಯ ಅಧಿಕಾರಿಗಳೊಬ್ಬರೊಪ್ಪಿರುವರು. ಇಲ್ಲಿಯ ಸಾಮೂಹಿಕ ವ್ಯವಸಾಯ ಕ್ಷೇತ್ರಗಳಲ್ಲೆಲ್ಲಾ ತುಂಬಾ ಪೋಲೆಂಡ್ ದೇಶದ ಗುಪ್ತಚರರು ತುಂಬಿ ಹೋಗಿರುವರಂತೆ. ವೈಟ್ ರಶ್ಯಾದ ಮಾಜಿ ಪ್ರಧಾನ ಮಂತ್ರಿಗಳಾದ ಎಮ್, ಗೋಲೊಡೆಡರು ಕೈದು ಮಾಡಲ್ಪಟ್ಟಿರುವರು. ಪ್ರೆಸಿಡೆಂಟರು ಆತ್ಮಹತ್ಯೆ ಮಾಡಿಕೊಂಡಿರುವರು. ಸೋವಿಯೆಟ್ ಸರಕಾರದ ಮೋಟರ್‌ಕಾರು ಕಾರ್ಖಾನೆಗಳಲ್ಲಿ ಬಹುತೇಕ ಕೆಲಸವೇ ನಿಂತುಹೋಗಿದೆಯಂತೆ. ಇದರ ನಿಜವಾದ ರಹಸ್ಯವೇನೆಂದು ಸರಿಯಾಗಿ ಇಷ್ಟರ ವರೆಗೆ ತಿಳಿದುಬಂದಿಲ್ಲ.

ಡ್ಯೂಕ್ ಆಫ್ ವಿಂಡ್ಸರರ ಮದುವೆಯ ಚಿತ್ರದ ನಿಷೇಧ

ಡ್ಯೂಕ್ ಆಫ್ ವಿಂಡ್ಸರ್ ಮತ್ತು ಮಿಸೆಸ್ ಸಿಂಪ್ಸನರ ವಿವಾಹಕ್ಕೆ ಬ್ರಿಟಿಷ್ ರಾಜಮನೆತನದವರಾರೂ ಹೋಗಬಾರದೆಂದು ಬ್ರಿಟಿಷ್ ಸರಕಾರವು ನಿಷೇಧಿಸಿರುವುದಷ್ಟೆ. ಅವರೆ ಅವರು ಡ್ಯೂಕರಿಗೆ ಪಾರಿತೋಷಕಗಳನ್ನು ಕಳುಹಿಸಿರುವರು. ಅವರ ವಿವಾಹ ವಿಧಿಯನ್ನು ನಡಿಸಿದ ಮಿ. ಜಾರ್ಡಿನರನ್ನೂ ಇಂಗ್ಲೆಂಡಿನಲ್ಲೆಲ್ಲಾ ಖಂಡಿಸಲಾಗಿದೆ. ಇಂಗ್ಲೆಂಡಿನಲ್ಲಿ ಡ್ಯೂಕರ ಮದುವೆ ಕುರಿತು ಬಹಿರಂಗವಾಗಿ ಸಂತೋಷ ಸೂಚಿಸುವುದೂ ತಪ್ಪಾಗಿರುತ್ತದೆ. ಹಾಗೆ ಸಂತೋಷ ಸೂಚಿಸಿದ ವ್ಯಾಪಾರಿಯೊಬ್ಬನು ತನ್ನ ಅಂಗಡಿ ಬಿಟ್ಟು ಹೋಗಬೇಕಾಗಿ ಬಂದಿದೆ. ಡ್ಯೂಕ್ ಆಫ್ ವಿಂಡ್ಸರರ ಮದುವೆಯ ಸಮಾಚಾರವನ್ನು ಫ್ರಾನ್ಸ್, ಅಮೇರಿಕೆ ಮೊದಲಾದ ದೇಶಗಳ ಪತ್ರಿಕೆಗಳು ಬಹಳ ಪ್ರಾಮುಖ್ಯವಾಗಿ ಪ್ರಕಟಿಸಿರುವಾಗ ಇಂಗ್ಲೆಂಡಿನ ಪತ್ರಿಕೆಗಳು ಅದನ್ನು ಸಂಪೂರ್ಣವಾಗಿ ಅಲಕ್ಷ್ಯಿಸಿರುತ್ತವೆ. ಇಷ್ಟು ಮಾತ್ರವಲ್ಲದೆ ಈ ವಿವಾಹದ ಚಲನ ಚಿತ್ರವನ್ನು ಇಂಗ್ಲೆಂಡಿನಲ್ಲಿ ಪ್ರದರ್ಶಿಸಬಾರದೆಂದು ನಿಷೇಧ ಹಾಕಲಾಗಿದೆ.

ಬಿಲ್ಬಾವೋ ಬಂದರವು ಬಂಡಾಯಗಾರರ ವಶವಾಯಿತು

ಇದೇ ತಾ. ೨೦ರಲ್ಲು ಬಾಸ್ಕ್ ಪ್ರಾಂತದ ಪ್ರಧಾನ ಪಟ್ಟಣವಾದ ಬಿಲ್ಬಾವೋವು ಬಂಡಾಯಗಾರರ ವಶವಾಗಿರುವುದು. ಬಂಡಾಯಗಾರರು ಪ್ರವೇಶಿಸಿದಾಗ ಹೆಚ್ಚಿನ ಜನರೆಲ್ಲಾ ಪಟ್ಟಣ ಬಿಟ್ಟು ಹೋಗಿದ್ದರು. ೧೫,೦೦೦ ಮಂದಿ ಬಾಸ್ಕ್ ಸೈನಿಕರನ್ನು ಬಂಡಾಯಗಾರರು ಸೆರೆಹಿಡಿದಿರುವರು. ಜನರಲ್ ಫ್ರೇಂಕೋರವರು ಯಾವತರದ ಪ್ರತೀಕಾರವನ್ನೂ ಮಾಡಬಾರದೆಂದು ಆಜ್ಞಾಪಿಸಿರುವರು.

ಸ್ವದೇಶ

ದೇಶಬಂಧು ದಾಸರ ಮರಣ ದಿನಾಚರಣೆ

ಇದೇ ತಾ. 16ರಲ್ಲು ದೇಶಬಂಧು ದಾಸರ 12ನೇ ಮರಣ ದಿನಾಚರಣೆಯು ದೇಶದ ಹಲವು ಕಡೆಗಳಲ್ಲಿ ಆಚರಿಸಲ್ಪಟ್ಟಿತು. ಕಲ್ಕತ್ತೆಯಲ್ಲಿ ಈದಿನಾಚರಣೆಯು ಅತ್ಯಂತ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಪಂಡಿತ ಜವಾಹರಲಾಲರು 'ಪ್ರತಿಮೆ ಮಾಡಿಸಿ ದೇಶಬಂಧುಗಳ ಸ್ಮಾರಕವನ್ನೇರ್ಪಡಿಸಿ ಫಲವಿಲ್ಲ, ಅವರ ಉಜ್ವಲ ದೇಶಾಭಿಮಾನದ, ದೇಶಕ್ಕಾಗಿ ಸರ್ವಸ್ವತ್ಯಾಗ, ಆತ್ಮ ಸಮರ್ಪಣೆಯ ದಿವ್ಯ ಜ್ಯೋತಿಯು ನಮ್ಮ ಹೃದಯವನ್ನು ಸದಾ ಬೆಳಗುತ್ತಿರಬೇಕು. 'ನನ್ನ ಶರೀರದ ಮೇಲಿನ ಕಬ್ಬಿಣದ ಸರಪಣಿಗಳ, ಕೈಗಳಲ್ಲಿನ ಕೋಳಗಳ ಬಾರವು ಹೃದಯವೇಧಕವಾಗಿದೆ. ಇಡೀ ಭಾರತವು ವಿಶಾಲ ಸೆರೆಮನೆಯಾಗಿದೆ. ನಾನು ಸತ್ತರೇನು? ಬದುಕಿದ್ದರೇನು? ಹಿಂದೂದೇಶವೂ ಕಾಂಗ್ರೆಸ್ಸೂ ಬದುಕಿದ್ದರಾಯಿತು' ಎಂದು ಹಲವು ವರ್ಷಗಳ ಮೊದಲು ದೇಶಬಂಧುಗಳು ಉದ್ಗರಿಸಿದ್ದರು. ಮಾತೃಭೂಮಿಯ ಪರಾಧೀನತೆಯು ಅವರ ಹೃದಯವನ್ನು ತಿನ್ನುತ್ತಿದ್ದಿತು. ಆ ಕಬ್ಬಿಣದ ಸರಪಳಿಗಳು ಇನ್ನೂ ನಮ್ಮನ್ನು ಕೆಳಗೊತ್ತಿಟ್ಟಿವೆ. ಆ ಕೈ ಕೋಳಗಳು ಇನ್ನೂ ನಮ್ಮ ಕೈಗಳಲ್ಲಿವೆ. ಹಿಂದೂದೇಶದ ಸ್ವಾತಂತ್ರ್ಯವು ಇನ್ನೂ ಸಾಧಿಸಲ್ಪಟ್ಟಿಲ್ಲ. ಆದುದರಿಂದ ದೇಶಬಂಧುಗಳ ಸ್ಮರಣೆಯು ನಮ್ಮನ್ನು ನಮ್ಮ ಸ್ವಾತಂತ್ರ್ಯ ಸಮರದಲ್ಲಿ ಮುಂದೊತ್ತುವಂತೆ ಮಾಡಬೇಕು. ನಾವು ಅವರನ್ನು ಕೇವಲ ಶಬ್ದಗಳಿಂದಲ್ಲ; ಕಾರ್ಯಗಳಿಂದ ಗೌರವಿಸುವ' ಎಂಬ ಸಂದೇಶವಿತ್ತಿದ್ದರು. ಸಂಜೆ ಆಲ್ಬರ್ಟ್ ಹಾಲಿನಲ್ಲಿ ದೊಡ್ಡ ಸಾರ್ವಜನಿಕ ಸಭೆ ನಡೆಯಿತು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಇದರ ಸಭೆಯು ಜುಲೈ ತಾ ೫ರಲ್ಲು ವಾರ್ಧಾದಲ್ಲಿ ನಡೆಯಲಿರುವುದು. ಇದರಲ್ಲಿ ವೈಸರಾಯರ ಭಾಷಣವು ಪರ್ಯಾಲೋಚಿಸಲ್ಪಟ್ಟು ಮಂತ್ರಿಪದವಿ ಸ್ವೀಕಾರದ ಕುರಿತು ನಿರ್ಧಾರವಾಗಲಿರುವುದು.

ಮಹಮ್ಮದ್ ಪೀರರ ಮರಣ

ಕರ್ನಾಟಕದ ಸುಪ್ರಸಿದ್ಧ ಹಾಗೂ ಅಗ್ರಗಣ್ಯ ನಟರಲ್ಲೊಬ್ಬರೂ ಚಂದ್ರಕಲಾ ನಾಟಕ ಕಂಪೆನಿಯ ಮಾಲಕರೂ ಆದ ಶ್ರೀ ಮಹಮ್ಮದ್ ಪೀರರು ಹೃದ್ರೋಗದಿಂದ ಇದೇ ತಾ. ೧೮ರಲ್ಲು ಬೆಂಗಳೂರಲ್ಲಿ ಮೃತರಾಗಿರುವರೆಂಬುದು ಅತ್ಯಂತ ಶೋಚನೀಯವಿದೆ. ಇವರು ಸಾಯುವಾಗ್ಗೆ ಕೇವಲ ೩೨ ವರ್ಷದವರಿದ್ದರು.

ಭೂಕಂದಾಯ ಕಮಿಟಿ

ಮದ್ರಾಸ್ ಪ್ರಾಂತದ ಭೂಕಂದಾಯ ಪದ್ಧತಿಯನ್ನು ಮಾರ್ಪಡಿಸುವ ಕುರಿತು ವಿಚಾರಿಸಲು ನೇಮಿಸಲ್ಪಟ್ಟಿರುವ ಕಮಿಟಿಯು ತನ್ನ ಅಸ್ಥಿರತೆಯನ್ನು ಅರಿತುಕೊಂಡು ತೀವ್ರವಾದ ಸುಧಾರಣೆಯನ್ನೇನೂ ಸೂಚಿಸಲಿಲ್ಲ. ಅದನ್ನು ಮುಂದೆ ಬರಲಿರುವ ಮಂತ್ರಿಗಳಪಾಲಿಗೆ ಬಿಟ್ಟುಬಿಟ್ಟಿದೆ. ಪ್ರಕೃತ ಇಂಟೆರಿಮ್ ಮಂತ್ರಿಗಳು ಭೂಕಂದಾಯದಲ್ಲಿ ರಿಯಾಯತಿ ತೋರಿಸಬೇಕೆಂದಿರುವ ರೂ.75ಲಕ್ಷವನ್ನು ಹೇಗೆ ಹಂಚುವದು ಎಂಬುದೇ ಅದರ ವಿಚಾರಣೆಯವಿಷಯವಾಗಿದೆ. ೧೯೦೬–೦೭ನೇ ವರ್ಷದ ಉತ್ಪತ್ತಿಗಳ ಬೆಲೆಯನ್ನು ಪರಿಗಣಿಸಿ ಕಂದಾಯವನ್ನು ನಿಶ್ಚೈಸಬಹುದೆಂದು ಕಮಿಟಿಯ ಅಭಿಮತ. ಇದರಿಂದ ೧೯೦೭ರ ನಂತರ ನಡೆದ ರಿಸೆಟ್ಲ್‌ಮೆಂಟ್ ಮೇರೆಗೆ ಏರಿಸಲ್ಪಟ್ಟ ಕಂದಾಯವನ್ನೆಲ್ಲಾ ಕಡಿಮೆ ಮಾಡಬೇಕಾಗುವದು. ಹೀಗೆ ನಂಜದ ಮೇಲಿನ ೧೪||| ರಷ್ಟರ ಮತ್ತು ಪುಂಜದ ಮೇಲಿನ ಸೇ ೧೫|| ಯಷ್ಟರ ಕಂದಾಯ ಕಡಿಮೆ ಮಾಡಲಾಗುವುದು. ಇದಕ್ಕೆ ರೂ. ೫೨ ಲಕ್ಷ ಬೇಕಾಗುವುದು. ಉಳಿದ ೨೩ ಲಕ್ಷವನ್ನು ಹೇಗೆ ವಿಂಗಡಿಸಬೇಕೆಂಬ ಕುರಿತು ಚರ್ಚೆಯುಂಟಾಗಿ ತಂಜಾವೂರು ಮತ್ತು ದಕ್ಷಿಣ ಕನ್ನಡಕ್ಕೆ ಸ್ವಲ್ಪಹೆಚ್ಚಿನ ಸಹಾಯ ದೊರೆಯ ಬಹುದಾಗಿದೆ.

ಉಡುಪಿ

ಇಲ್ಲಿಯ ಬೋರ್ಡ್ ಹೈಸ್ಕೂಲಿನಿಂದ ಕಾರ್ಕಳಕ್ಕೆ ವರ್ಗವಾಗಿ ಹೋಗಿಪ್ಪ ಶ್ರೀ ಎಚ್ ದೇವರಾವ್ ಬಿ ಎ ಎಲ್. ಟಿ, ಇವರನ್ನು ಸನ್ಮಾನಿಸಿ ಬೀಳ್ಕೊಳ್ಳುವುದಕ್ಕಾಗಿ ಹೈಸ್ಕೂಲಿನಲ್ಲಿ ಕಳೆದ ವಾರ ಒಂದು ವಿದಾಯಕ ಕೂಟವು ಏರ್ಪಟ್ಟಿತ್ತು. ಶ್ರೀಯುತರು ತನ್ನ ಸ್ನೇಹಮಯ ವರ್ತನೆ, ಆನಂದ ಮನೋವೃತ್ತಿ, ರಸಿಕತೆ, ಸಂಗೀತಾಭಿನಯ, ಕಲಾನೈಪುಣ್ಯ, ವಾಕ್ಚಾತುರ್ಯ, ಶಿಕ್ಷಣಕೌಶಲ್ಯ, ಉದ್ಯೋಗಾಭಿಮಾನ ಮುಂತಾದ ಸದ್ಗುಣಗಳಿಂದ ಚಿರಸ್ಮರಣೀಯರಾಗಿರು

ತ್ತದರ ಕುರಿತು ಹಲವು ಭಾಷಣಗಳಿಂದಲೂ ಉಪಹಾರಾದಿ ಯಥೋಚಿತ ಸತ್ಕಾರಗಳ ಸುವ್ಯವಸ್ಥೆಯಿಂದಲೂ ಸಮಾರಂಭವು ವಿಜೃಂಭಣೆಯಿಂದ ಜರಗಿತು.

ಪ್ರೊಫೆಸರ್ ಎನ್. ಜಿ. ರಂಗರವರು

ಶ್ರೀಮತಿ ಕಮಲಾದೇವಿ ಮತ್ತು ಶ್ರೀ ರಾಮರಾಯ ಮಲ್ಯರೊಂದಿಗೆ ಕಳೆದ ತಾ, 14ನೇ ಶುಕ್ರವಾರ ಸಂಜೆ ಉಡುಪಿಗೆ ಬಂದು ಸಂಜೆ ಘಂಟೆ 4.–30ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಬೇಸಾಯಗಾರ ಮತ್ತು ಮಜೂರರ ಸಂಘಟನೆಯ ಕುರಿತು ಮಾತಾಡಿದರು. ಪ್ರಥಮವಾಗಿ ಅಧ್ಯಕ್ಷರು; ಪ್ರೊಫೆಸರ್ ರಂಗರವರು ಡಿಲ್ಲಿ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಮೆಂಬರರಾಗಿದ್ದು, ಅಖಿಲ ಭಾರತ ಬೇಸಾಯಗಾರ ಸಂಘವನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಎಡೆಬಿಡದೆ ಕೆಲಸ ಮಾಡುತ್ತಿರುವರೆಂದು ಪರಿಚಯಮಾಡಿಕೊಟ್ಟರು. ಆ ಮೇಲೆ ಶ್ರೀ ರಂಗರವರು ಲೋಕದ ಬೇರೆ ಬೇರೆ ರಾಷ್ಟ್ರಗಳಲ್ಲಿ ವಿಶೇಷವಾಗಿ ಫ್ರಾನ್ಸ್ ಮತ್ತು ರಶ್ಯಾ ದೇಶಗಳಲ್ಲಿ ಬೇಸಾಯಗಾರರು ಸಂಘಟಿತರಾಗಿ ಬಂಡಾಯವೆಬ್ಬಿಸಿ ರಕ್ತಪಾತವಿಲ್ಲದೆ ಹೇಗೆ ಕ್ರಾಂತಿಯನ್ನುಂಟು ಮಾಡಿರುವರೆಂಬುದನ್ನು ವಿವರಿಸಿ, ಹಿಂದೂದೇಶದ ಬೇರೆ ಬೇರೆ ಪ್ರಾಂತಗಳ ಬೇಸಾಯಗಾರರು ತಮ್ಮ ತೀವ್ರವಾದ ಕೊರತೆಗಳನ್ನು ನಿವಾರಿಸಲು ಮಾಡಿದ ಬೇರೆ ಬೇರೆ ರೀತಿಯ ಚಳವಳಿಗಳ ವೃತ್ತಾಂತವನ್ನು ತಿಳಿಸಿದರು. ಮತ್ತು ಬೇಸಾಯಗಾರರು ತಮ್ಮ ಸಂಕಷ್ಟ ನಿವಾರಣೆಗಾಗಿ ಕೇವಲ ಕಾಂಗ್ರೆಸಿನ ಮೇಲೆ ಹೊಂದಿಕೊಂಡಿದ್ದರೆ ಸಾಲದು ತಾವೇ ಸಂಘಟನೆ ಮಾಡಿಕೊಂಡು ತಮ್ಮ ಅಭ್ಯುದಯವನ್ನು ಸಾಧಿಸಬೇಕು. ಬೇಸಾಯಗಾರರು ಮತ್ತು ಮಜೂರರು ಜಾಗ್ರತರಾಗಿ ತಮ್ಮ ಅಭ್ಯುದಯ ಸಾಧಿಸುವುದರಲ್ಲಿ ನಿರತರಾದರೆಂದರೆ ಜಮೀನುದಾರರ ಮತ್ತು ಧನಿಕರ ಆಟ ನಡೆಯಲಾರದು. ಆದುದರಿಂದ ಬೇಸಾಯಗಾರರೆಲ್ಲಾ ಸಂಘಗಳನ್ನು ಸ್ಥಾಪಿಸಿ ದೇಶದ ಸ್ವಾತಂತ್ರ್ಯ ಸಾಧನೆಯೊಂದಿಗೆ ತಮ್ಮ ಅಭ್ಯುದಯವನ್ನೂ ಸಾಧಿಸಿಕೊಳ್ಳಬೇಕೆಂದು ಕೇಳಿಕೊಂಡರು. ಆ ಮೇಲೆ ಸ್ಥಳೀಯ ಕೆಲಮಂದಿ ಕಾಂಗ್ರೆಸ್ ಕೆಲಸಗಾರರೊಂದಿಗೆ, ದಕ್ಷಿಣ ಕನ್ನಡದಲ್ಲಿ ರೈತರ ಸಂಘಟನೆಯು ಯಾವ ರೀತಿಯಲ್ಲಿ ನಡೆಸಲ್ಪಡಬಹುದೆಂಬ ಕುರಿತು ಚರ್ಚಿಸಿ ಕಾರ್ಕಳಕ್ಕೆ ತೆರಳಿದರು

(೯ನೇ ಪುಟದಿಂದ)

ಮತದಾರರ ಪಟ್ಟಿ

ಅಸೆಂಬ್ಲಿ ಮತದಾರರ ಪಟ್ಟಿಯು ತಯಾರಾಗುತ್ತಿದೆ. ಅರ್ಹತೆಯುಳ್ಳವರ ಅರ್ಜಿಗಳನ್ನು ಮ್ಯುನಿಸಿಪಲ್ ಕಮಿಶನರು ಸ್ವೀಕರಿಸುತ್ತಿದ್ದಾರೆ

ರಶ್ಯದಲ್ಲಿ ಜನ ಜೀವನ

ಕಳೆದ ತಾ. ೧೪ನೇ ಸೋಮವಾರ ದಿನ ಕಸರು ಹೈಸ್ಕೂಲಿನಲ್ಲಿ ಮೇಲಿನ ವಿಷಯವಾಗಿ ಬೆನಾರಿಸ್ ವಿಶ್ವವಿದ್ಯಾಲಯದ ಪ್ರೊಫೆಸರರಾದ ಡಾ। ಬಿ. ದಾಸಗುಪ್ತಾಚಾರ್ಯರು ಒಂದುಉಪನ್ಯಾಸವಿತ್ತರು. ಅದರಲ್ಲಿ ರಶ್ಯದಲ್ಲಿ ಸ್ತ್ರೀಯರಸ್ಥಾನ, ಕೈಗಾರಿಕೆಯ ಅಭಿವೃದ್ಧಿ ಮಕ್ಕಳ ರಕ್ಷಣೆ, ಜನರಲ್ಲಿ ಪರಸ್ಪರಸಮಾನತೆ ಮೊದಲಾದ ಗುಣಗಳನ್ನು ವಿವರಿಸಿ ಹೇಳಿದರು.

ನಮ್ಮ ಚಂದಾದಾರರಲ್ಲಿ ವಿನಂತಿ

ತಾವು ಪ್ರೋತ್ಸಾಹಿಸುವಿರೆಂದು ಕಳೆದ ಸಪ್ಟಂಬರ ತಿಂಗಳಿಂದ ಈ ವರೆಗೆ ಸುಮಾರು 10ತಿಂಗಳಿಂದ ತಮಗೆ ನಮ್ಮ ಪತ್ರಿಕೆಯನ್ನು ಕಳುಹಿಸುತ್ತಾ ಬಂದಿದ್ದೇವೆ. ಇನ್ನು ಸ್ವಲ್ಪ ಸಮಯದಲ್ಲೇ ನಮ್ಮ ವರ್ಷಾಂತ್ಯವಾಗಲಿರುವುದು. ಆದುದರಿಂದ ತಾವು ದಯವಿಟ್ಟು ತಮ್ಮ ಚಾಲ್ತಿವರ್ಷದ ಚಂದಾಹಣವನ್ನು ಮನಿಯಾರ್ಡರು ಮೂಲಕ ಆದಷ್ಟು ಬೇಗನೆ ನಮಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇವೆ. ಪ್ರಕೃತದ ಪರಿಸ್ಥಿತಿಯಲ್ಲಿ ಪತ್ರಿಕೆಯನ್ನು ನಡಿಸುವುದು ಅದೆಷ್ಟು ಕಷ್ಟದ ಸಂಗತಿಯೆಂಬುದು ತಮಗೆಲ್ಲರಿಗೂ ವಿದಿತವಿರುವ ವಿಷಯವೆಂದು ನಂಬುತ್ತೇವೆ. ಕಾಗದದ ಬೆಲೆಯು ಈಗ ಸೇಕಡ 50ಕ್ಕೂ ಹೆಚ್ಚಿರುವಾಗಲಂತೂ ಅದರಿಂದ ತುಂಬಾ ಕಷ್ಟ ನಷ್ಟವಾಗುವಂತಾಗಿದೆ. ಆದರೂ ನಾವು ಎದೆಗುಂದದೆ ತಮ್ಮೆಲ್ಲರ ಉದಾರ ಪ್ರೋತ್ಸಾಹದ ನಿರೀಕ್ಷೆಯಿಂದ ಪತ್ರಿಕೆಯನ್ನು ನಮ್ಮಿಂದ ಸಾಧ್ಯವಾದಷ್ಟು ಪ್ರಯೋಜನಕರವಾಗಿ ಪ್ರಕಟಿಸುವಂತೆ ಪ್ರಯತ್ನ ನಡಿಸುತ್ತಿರುವೆವು. ತಾವೆಲ್ಲರೂ ನಮ್ಮ ದೊಡ್ಡ ಹೋಣೆಗಾರಿಕೆಯ ಸ್ವಲ್ಪ ಸ್ವಲ್ಪ ಪಾಲನ್ನು ವಹಿಕೊಂಡು ವರ್ಷಾವಧಿ ಕೊಡುವ ಚಂದಾಹಣವನ್ನು ಆದಷ್ಟು ಬೇಗನೆ ತೆತ್ತು ನವಯುಗಕ್ಕೆ ಉದಾರಾಶಯವೀಯಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ. ಕಾರ್ಡು ಬರೆಯುವುದು ಅಥವಾ ವಿ. ಪಿ. ಮಾಡುವುದು ವೃಥಾ ನಮಗೂ ನಿಮಗೂ ವೆಚ್ಚಕ್ಕೆ ಕಾರಣವಾಗಿರುತ್ತದೆ. ನಮ್ಮ ವಿನಂತಿಗೆ ಇಷ್ಟರವರೆಗೆ ತಮ್ಮ ಚಂದಾಹಣ ತೆರದಿರುವ ಚಂದಾದಾರರೆಲ್ಲಾ ಶೀಘ್ರವಾಗಿ ನಿಗಾಕೊಡುವರೆಂದು ನಂಬುತ್ತೇವೆ.

ಮಂಗಳೂರಿನ ಚಂದಾದಾರರು ತಮ್ಮ ಚಂದಾಹಣವನ್ನು ಕೆನರಾ ಪ್ರೆಸ್ಸಿನ ಮೆನೇಜರರೊಡನೆ ಕೊಟ್ಟು ರಶೀದಿಪಡೆಯಬಹುದು. ಉಳಿದವರು ಉಡುಪಿ ಆಫೀಸಿಗೆ ಮನಿಯಾರ್ಡರ್‌ಮಾಡಿ ಕಳುಹಿಸುವುದು.

ಮೆನೇಜರ್, ನವಯುಗ, ಉಡುಪಿ,

ಹೆಂಡ್ತಿ ಗಂಡನಾದರೆ

ಈಗ ತಾನೇ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ.

ಕೆ. ಕಾಂತಪ್ಪ ಶೆಟ್ಟಿಯವರಿಂದ ರಚಿತವಾದ

ಹಾಸ್ಯರಸ ಪ್ರಧಾನವಾದ

ಏಕಾಂಕ ಪ್ರಹಸನ.

ಬೆಲೆ: ೦—೪—೦.

ನವಭಾರತ ಬುಕ್ ಡಿಪೋ - - ಉಡುಪಿ

ಈ ಪ್ರಹಸನವು ತಾರೀಕು ೨೭ನೇ ಆದಿತ್ಯವಾರ ಬೊಂಬಾಯಿಯ ಹೊಗವೀರ ವ್ಯವಸ್ಥಾಪಕ ಮಂಡಳಿಯವರಿಂದ ಅಭಿನಯಿಸಲ್ಪಡುವುದು.

ಬೊಂಬಾಯಿಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತವೆ—

ವಿ. ಎಸ್. ಸಿಬ್ರಕರ್ಣರ್

ದಿ ನೇಶನಲ್ ಕೆನರಾ ನ್ಯೂಸ್ ಏಜೆನ್ಸಿ

ಫೋರ್ಟ್, ಬೊಂಬಾಯಿ.

ದಕ್ಷಿಣ ಕನ್ನಡ

ಸಾಣೂರು

ಗ್ರಾಮಗಳಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳನ್ನು ಹರಡಿಸಿ, ಸತ್ಯ ಸನಾತನ ವೈದಿಕ ಧರ್ಮವನ್ನು ಪ್ರಚಾರಮಾಡುವ ಉದ್ದಿಶ್ಯದಿಂದ ಕಳೆದ ರವಿವಾರ ತಾರೀಕು ೬-೬-೩೭ರಲ್ಲಿ ಧರ್ಮ ಮತ್ತು ಸಮಾಜಪ್ರೇಮಿಯುವಕರಿಂದ ಒಂದು ಸಂಘ 'ಆರ್ಯಕುಮಾರ ಸಭಾ' ಹೆಸರಿನಿಂದ ಕಾರ್ಕಳ ಆರ್ಯ ಸಮಾಜದ ಕಾರ್ಯದರ್ಶಿಯವರಾದ ಶ್ರೀಯುತ ಕೇಶವ ರಾಮಚಂದ್ರಶೆಣೈಯವರಿಂದ ಸ್ಥಾಪಿಸಲ್ಪಟ್ಟಿತು. ಅದು ಬೆಳಗ್ಗೆ ೯ ಗಂಟೆಯಿಂದ ೧೧ರ ವರೆಗೆ ಅಗ್ನಿಹೋತ್ರ ಪ್ರಾರ್ಥನೆ ಭಜನೆಗಳು ಆದ ನಂತರ ಶ್ರೀಯುತ ಕೇಶವ ರಾಮಚಂದ್ರ ಶೆಣೈಯವರು ಹಿಂದೂ ಸಮಾಜದ ದುರವಸ್ಥೆ, ವಿಗ್ರಹಾರಾಧನೆ, ಮೃತಕ ಶ್ರಾದ್ಧ ಅಸ್ಪೃಶ್ಯತೆ ಮುಂತಾದ ದುಷ್ಟ ಪದ್ಧತಿಗಳಿಂದ ಸಮಾಜಕ್ಕೆ ಆಗುವ ಹಾನಿ, ವೇದಗಳ ಮಹತ್ವ, ಮನುಷ್ಯನ ಸ್ವಾಭಾವಿಕ ಧರ್ಮ, ಬ್ರಹ್ಮಚರ್ಯ, ಧರ್ಮಶಾಸ್ತ್ರಗಳು ಮತ್ತು ರಾಷ್ಟ್ರೀಯ ಸುಧಾರಣೆಯಲ್ಲಿ ನಮ್ಮ ಕರ್ತವ್ಯ, ಇವುಗಳ ಕುರಿತು ಹೃದಯಂಗಮವಾಗುವಂತೆ ಭಾಷಣಮಾಡಿದ ನಂತರ ಸಭೆಯು ಶಾಂತಿಪಾಠದೊಂದಿಗೆ ಮುಗಿಯಿತು.

ಮೂಡಬಿದ್ರಿ

ಇದೇ ತಾರೀಕು ೧೮-೬-೧೯೩೭ನೇ ಶುಕ್ರವಾರ ಪ್ರಾತಃಕಾಲ ೯ ಗಂಟೆಗೆ ಪ್ರಮುಖ ಕೆಲಸಗಾರರೂ ಕೃಷಿಕ ಚಳವಳದ ಮುಂದಾಳುಗಳೂ ಆದ ಆಂಧ್ರದೇಶದ ಪ್ರೊಫೆಸರ್ ಎನ್ ಜಿ ರಂಗರವರು ಶ್ರೀಮತಿ ಕಮಲಾದೇವಿ ಮತ್ತು ಹಿರಿಯಡ್ಕ ರಾಮರಾಯರ ಮುಖ್ಯರೊಡನೆ ಮಂಗಳೂರಿನಿಂದ ಆಗಮಿಸಿ ಸಾರ್ವಜನಿಕ ಧರ್ಮಾರ್ಥ ವಾಚನಾಲಯದಲ್ಲಿ ಸಭೆಜರಗಿ ಈಗ ಜ್ಯಾರಿಯಲ್ಲಿರುವ ರಿಸೆಟ್ಲಮೆಂಟಾ, ಕಂದಾಯ ಮತ್ತು ತೆರಿಗೆ ವಿಧಿಸುವ ರೀತಿಯಿಂದಾಗಿ ಕೃಷಿಕರಿಗೆ ಮತ್ತು ಭೂಮಾಲಿಕರಿಗೆ ಒದಗಿರುವ ಸಂಕಷ್ಟಗಳು ಇವುಗಳ ನಿವಾರಣೋಪಾಯಗಳ ಬಗ್ಗೆ ಅಖಿಲಭಾರತ ಕೃಷಿಕರ ಸಂಘವು ಕೈಕೊಂಡಿರುವ ಕಾರ್ಯಕ್ರಮವನ್ನೂ ವಿಶದೀಕರಿಸಿದರು. ಕಾರ್ಯಕ್ರಮವು ಯಶಸ್ವಿಯಾಗಲು ಪ್ರತೀ ಊರಿನ ಕೃಷಿಕರು ಮತ್ತು ಭೂಮಾಲಿಕರು ಸಹಕರಿಸಿ ಹೇಗೆ ವರ್ತಿಸಬೇಕೆಂದು ಸೂಚಿಸಿದರು. ಪ್ರಜಾಪ್ರೇಮವುಳ್ಳ ರಾಷ್ಟ್ರೀಯ ಸರಕಾರವು ಸೆಟ್ಲಮೆಂಟ್ ಪದ್ಧತಿ ತೆರಿಗೆ ವಿಧಿಸುವ ರೀತಿ ಸಂರಕ್ಷಿಸಲ್ಪಟ್ಟ ಕಾಡುಗಳ ವ್ಯವಸ್ಥೆ ಮತ್ತು ಇತರ ಆರ್ಥಿಕ ಸುಧಾರಣೆಯನ್ನು ಮಾಡಲು ಕೈಕೊಳ್ಳುವ ಧೋರಣೆಯನ್ನು ವಿವರಿಸಿದರು. ಆದರೆ ನಮಗೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯ ದೊರಕದ ವಿನಹ ಸಾಧ್ಯವಿಲ್ಲ. ದೇಶದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ನಾವು ಅನುಸರಿಸಿ ಅದಕ್ಕೆ ಬೆಂಬಲ ಕೊಡಬೇಕು ಅಂದರು

ಖಂಬದ ಕೋಣೆ

ತಾರೀಕು ೯-೬-೩೭ರಲ್ಲಿ ಇಲ್ಲಿಯ ಸದಾನಂದ ಕ್ಲಬ್ಬಿನ, ಬೇಡ್‌ಮಿಂಟನ್ ಟೀಮಿನವರಲ್ಲಿ ಸಿಕ್ಸ್‌ರಿಸ್ಸಿನವರ ೫ ಮಂದಿ ಮತ್ತು ಇತರ ಸ್ಥಳೀಕರು ೫ ಮಂದಿ ಇವರೊಳಗೆ ಫ್ರೆಂಡ್ಲೀಮೇಚ್ ನಡೆದು ಮೊದಲಿನವರು ಜಯಶೀಲರಾದರು. ಈ ಹಳ್ಳಿಯ ಗ್ರಾಮವಾದರೂ ನಾಗರಿಕತನದ ವಿಷಯಗಳಲ್ಲಿ ಈ ರೀತಿ ಮುಂದೊತ್ತಿರುವುದು ತುಂಬಾ ಸಂತೋಷಕರವೇ ಸರಿ

K. Venkat Naik

Khambadkone, S. Club, 14-6-37

ಬ್ರಹ್ಮಾವರ

ಇಲ್ಲಿಯ ಎಮೆಚೂರ್ಸ್ ಕರ್ನಾಟಕ ಸಂಗೀತನಾಟಕ ಸಭಾ ಇವರು ಉಡ್ಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಕಳೆದ ತಾ ೧೨-೬-೩೭ನೇ ಶನಿವಾರ ಅಭಿನಯಿಸಿದ ರಾಷ್ಟ್ರವೀರ ನಾಟಕದಲ್ಲಿ ಟಿಕೇಟು ವಿಕ್ರಯದಿಂದ ಉತ್ಪತ್ತಿಯಾದ ರೂಪಾಯಿ 145ರಲ್ಲಿ ಖರ್ಚು ರೂಪಾಯಿ 95 ಕಳೆದು ಬಾಕಿ ಉಳಿತಾಯವಾದ ಜುಮ್ಲಾ ರೂಪಾಯಿ 50ನ್ನು ಸಂಘದ ಹೊಸ ಡ್ರೆಸ್ಸಿಗಾಗಿ ವಿನಿಯೋಗಿಸಿದೆ. ಆ ದಿನ ರಾತ್ರಿ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಶ್ರೀಯುತ ಆರೂರು ಲಕ್ಷ್ಮೀನಾರಾಯಣರಾವ್ ಮುನಿಸಿಪಲ್ ಚೆಯರ್‌ಮ್ಯಾನ್, ಇವರಿಗೂ ಸಂಘಕ್ಕೆ ಪ್ರೋತ್ಸಾಹವನ್ನು ಕೊಟ್ಟ ಉಡುಪಿ ಮತ್ತು ಸ್ಥಳೀಯ ಮಹಾಜನರಿಗೂ, 7ರೂಪಾಯಿ ಬೆಲೆಯುಳ್ಳ ಜರಿ ಡ್ರೆಸ್ಸನ್ನು ಸಂಘಕ್ಕೆ ಧರ್ಮಾರ್ಥವಾಗಿ ಕೊಟ್ಟ ಮಾಬುಕಳದ ಹಂಚಿನ ಕಾರ್ಖಾನೆಯ ಮಾಲಕರಾದ ಶ್ರೀಯುತ ತೆಂಕಮನೆ ಮಹಾಬಲೇಶ್ವರ ಸೆಟ್ರಿಗೂ ಸಂಘವು ತುಂಬಾ ಧನ್ಯವಾದಗಳನ್ನು ಸಮರ್ಪಿಸುತ್ತದೆಂದು ಸಂಘದ ಕಾರ್ಯದರ್ಶಿಯವರಾದ ಶ್ರೀಯುತ ಕೊಚ್ಚಿಕಾರ್ ಸರ್ವೋತ್ತಮ ಶ್ಯಣೈಗಳು ತಿಳಿಸುತ್ತಾರೆ

ಶ್ರೀ ಭಾರತೀ ವಾಚನಾಲಯ ಪಾಲಾಡಿ

ಈ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯು ತಾ ೧೦-೬-೩೭ನೇ ದಿವಸ ಮಧ್ಯಾಹ್ನ ಗಂಟೆ 1-೩೦ಕ್ಕೆ ಮ. ರಾ ರಾ ಪಾಲಾಡಿ ಪಟೇಲ್ ಕೃಷ್ಣಯ್ಯ ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಕ್ಲಬ್ಬಿನ ಎಲ್ಲಾ ಸದಸ್ಯರೂ ಹಾಜರಿದ್ದರು ಸದ್ರಿ ಸಂಘಕ್ಕೆ ಕೃಷ್ಣಯ ಸೆಟ್ರನ್ನು ಅಧ್ಯಕ್ಷರನ್ನಾಗಿಯೂ ರಾ ಗಣಪಯ್ಯ ಕೆಂಬ್ರಿರನ್ನು ಕೋಶಾಧ್ಯಕ್ಷರನ್ನಾಗಿಯೂ ರಾ| ಮಹಾಬಲ ಶೆಟ್ಟರನ್ನು ಕಾರ್ಯದರ್ಶಿಯವರನ್ನಾಗಿಯೂ ಆರಿಸಲಾಯಿತು. ಸಂಘದ ಉನ್ನತಿಯ ವಿಷಯ ಅನೇಕ ಚರ್ಚಾಸ್ಪದವಾದ ತರ್ಕ ವಿತರ್ಕಗಳ ಭಾಷಣಗಳು ನಡೆದುವು. ಸದ್ರಿ ಕ್ಲಬ್ಬಿಗೆ ರಾ| ಕೃಷ್ಣಯ್ಯ ಶೆಟ್ಟರವರು ನವಯುಗ ಪತ್ರಿಕೆಯನ್ನು ರಾ| ವೀರಣ್ಣ ಶೆಟ್ಟರು ರಾಷ್ಟ್ರಬಂಧು ಪತ್ರಿಕೆಯನ್ನು ರಾ| ವೆಂಕಪ್ಪ ಹಂಜಾರರು ತರುಣ ಕರ್ನಾಟಕ ಪತ್ರಿಕೆಯನ್ನೂ ರಾ| ವಂಕಟಗಿರಿ ನಾಯ್ಕರು ಒಂದು ವಾರ ಪತ್ರಿಕೆಯನ್ನು ತರಿಸಿಯೂ, ಅಲ್ಲದೆ ಈಗ ತರಿಸುತ್ತಿರುವ ಜಯ ಕರ್ನಾಟಕ ಮಾಸಪತ್ರಿಕೆಯನ್ನು ಧರ್ಮಾರ್ಥವಾಗಿ ಕೊಡುವದಾಗಿ ವಾಗ್ದಾನಮಾಡಿದರು ಅಧ್ಯಕ್ಷರು ಸಂಘಕ್ಕೆ ಶ್ರೇಯೋಭಿವೃದ್ಧಿಯಾಗಲೆಂದು ಹರಸಿದರು ಆ ಮೇಲೆ ಧನ್ಯವಾದಾರ್ಪಣೆಯಿಂದ ಸಭಾಂತ್ಯವಾಯ್ತು

ಕಡಪಿನ ದೋಣಿ ಮುಳುಗಿ 5 ಮಂದಿಯ ಮರಣ

ಕುಂದಾಪುರ ತಾಲೋಕಿನ ಸಬ್ಲಾಡಿ ಕಡವಿನಲ್ಲಿ ಇದೇ ತಾ ೧೮-೬-೩೭ನೇ ಶುಕ್ರವಾರ ಸಾಯಂಕಾಲ ೬-೩೦ರ ಸಮಯ 7 ಜನರು ತುಂಬಿರುವ ಚಿಕ್ಕ ದೋಣಿಯು ಮಳೆಗಾಳಿಗೆ ಸಿಲುಕಿ ದೋಣಿಯು ಅಧಿಮೇಲಾಗಿ 4 ಮಂದಿ ಬಂಟ ಹೆಂಗಸರೂ ಒಬ್ಬ ದೇವಡಿಗ ತರುಣನೂ ಮರಣಕ್ಕೆ ಬಲಿಬಿದ್ದ ಸಂಗತಿಯನ್ನು ತಿಳಿಸಲು ವಿಷಾದವೆನಿಸುತ್ತದೆ. ಇವರು ಕೋಟೇಶ್ವರದ ಮದುವೆ ಮುಗಿಸಿ ತಮ್ಮ ಊರಾದ ಕನ್ಯಾನ ಗ್ರಾಮಕ್ಕೆ ಹೋಗುವವರಾಗಿದ್ದರು. ದೋಣಿಯವ ಮತ್ತು ಇನ್ನೊಬ್ಬ ಮಾತ್ರ ಬದುಕಿದರು. ಈ ಕಡವಿನ ಈಗಿನ ಗುತ್ತೇದಾರನಾದ ಖಾರ್ವಿ ಚೆರ್ದಪ್ಪ ಎಂಬವನು ಕಡವಿನಲ್ಲಿ ಚಿಕ್ಕ ದೋಣಿಯಿಟ್ಟು ಸರಿಯಾದ ಜನ ನೇಮಿಸಿಕೊಳ್ಳದೆ ನಡಿಸಿದ ಅಶ್ರದ್ಧೆ ಮತ್ತು ಅಜಾಗ್ರತೆಯೇ ಈ ಅಪಾಯಕ್ಕೆ ಕಾರಣವೆಂದು ನಂಬಲಾಗಿದೆ

ಕಲ್ಯಾಣಪುರ

ಶ್ರೀ ಭಗವತೀ ಯುವಕ ಸಂಘದವರು ತಾ. ೨೦-೬-೧೯೩೭ನೇ ರವಿವಾರ ಸಭೆಸೇರಿಸಿ ಶ್ರೀಯುತ ಮೇನಕ ಮಾಸ್ತರರ ಸಭಾಧ್ಯಕ್ಷತೆಯಲ್ಲಿ ಕಾರ್ಯಕ್ರಮದ ವಿಚಾರವೂ ಮುಂದಿನ ಏಳಿಗೆಯ ವಿಷಯದಲ್ಲಿ ಪ್ರತೀ ಆದಿತ್ಯವಾರ ಸಭೆ ಸೇರುವಂತೆಯೂ ಪಾಲು ವಂತಿಗೆ ಹಣವನ್ನೂ ತೆರುವಂತೆಯೂ ಇನ್ನು ಅನೇಕ ಜಾತಿ ಯುವಕರನ್ನು ಸೇರಿಸಿಕೊಳ್ಳುವಂತೆಯೂ ಇವೇ ಮುಂತಾದ ಸಂಗತಿಯಲ್ಲಿ ಭಾಷಣಮಾಡಿದ್ದಲ್ಲಿ ಸಭೆಯವರು ಅನುಮತಿಯಿತ್ತರು ಅಲ್ಲದೆ ಶ್ರೀಯುತ ಶಾಂತಪ್ಪನವರು ಜಾತಿಯಲ್ಲಿ ಈಗ ನಡೆಯುತ್ತಿರುವ ಕುಂದು ಕೊರತೆಗಳನ್ನು ತಿದ್ದಿಕೊಳ್ಳುವಂತೆ ಈ ಸಂಘವು ಮಾದರಿಯಾಗಬೇಕೆಂದು ಭಾಷಣಮಾಡಿ ಸಭಾಂತ್ಯವಾಯಿತು

ಮೂಲ್ಕಿ

ಸ್ಥಳೀಕ ಯೂನಿಯನ್ ಕ್ಲಬ್ಬಿನ ೨೨ನೇ ವಾರ್ಷಿಕ ವರ್ಧಂತ್ಯುತ್ಸವವೂ, ದಿವಂಗತ ಬೋಳ ಶ್ಯಾಮರಾಯರ ಜನ್ಮ ದಿನಾಚರಣೆಯೂ ಇದೇ ತಾ ೧೬-೬-೩೭ನೇ ಬುಧವಾರ ಸಂಜೆ ಘಂಟೆ ೫ಕ್ಕೆ ಪ್ರೊಫೆಸರ್ ಸಿ ಜಿ ಮಾರ್ಟಿನ್, ಕೆ ಎಸ್ ಜಿ ಎಮ್ ಎ ಎಂ ಎಲ್ ಎ ರವರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಜರಗಿತು. ಕ್ಲಬ್ಬಿನ ಅಧ್ಯಕ್ಷ ಡಾ| ಯಂ ಎಸ್ ಕಾಮತರು ಅಧ್ಯಕ್ಷರ ಕೊರಳಿಗೆ ಪುಷ್ಪ ಹಾರವನ್ನು ಹಾಕಿದರು ಶ್ರೀ ಎಚ್. ಗೋಪಾಲಕೃಷ್ಣರಾಯರು ಬೋಳ ಶ್ಯಾಮರಾಯರ ಜನ್ಮ ಚರಿತ್ರೆಯನ್ನು ಓದಿ ಹೇಳಿದರು ಕೆ. ಗೋಪಾಲಕೃಷ್ಣರಾಯರು ಕ್ಲಬ್ಬಿನ ಗತ ವರದಿಯನ್ನು ವಿಸ್ತರಿಸಿ, ಅದರ ಅಭಿವೃದ್ಧಿಯನ್ನು ಕೋರಿದರು ಬಳಿಕ ಸಂಸ್ಥೆಯ ೨೨ನೇ ವಾರ್ಷಿಕ ವರದಿಯು ಕಾರ್ಯದರ್ಶಿಯವರಿಂದ ಸಭಿಕರಿಗೆ ಹಂಚಲ್ಪಟ್ಟಿತು. ಮತ್ತೆ ಕೆಲ ಠರಾವುಗಳು ಚರ್ಚೆಗೆ ಬಂದು ಸರ್ವಾನುಮತದಿಂದ ಪಾಸ್ಯಾತು ಬಂದ ಸಂದೇಶಗಳನ್ನು ಓದಿ ರಿಕಾರ್ಡುಮಾಡಲಾಯಿತು. ನಂತರ ಹಿಂದೀ ಪರೀಕ್ಷೆಯಲ್ಲಿ ಪಾಸಾದವರಿಗೆ ಸರ್ಟಿಫಿಕೇಟ್‌ಗಳನ್ನು ಅಧ್ಯಕ್ಷರ ಕೈಯಿಂದ ಹಂಚಿಸಲ್ಯಾತು. 1937–38ರ ಅಂದಾಜು ಪಟ್ಟಿಯು ಕೆಲವೊಂದು ತಿದ್ದುಪಡಿಗಳಿಂದ ಮಂಜೂರಾಯಿತು ಶ್ರೀ ಬಿ. ಭೋಜರಾಯರನ್ನು ಆಜೀವ ಸದಸ್ಯರನ್ನಾಗಿ ಮಾಡಲಾಯಿತು. ಸ್ಥಳೀಕ ಗ್ರೆಂಡ್ ರೇಸ್ಲ ಕಪ್ಪಿಯವರು ನಿರ್ಧರಿಸಿದ್ದ ಭಂಗಾರದ ಪದಕವು ಅಧ್ಯಕ್ಷರಿಂದ ಶ್ರೀ| ಭೋಜರಾಯರಿಗೆ ಕೊಡಲ್ಪಟ್ಟಿತು ಮುಂದಿನ ವರ್ಷದ ಕಾರ್ಯಕಾರೀ ಸಮಿತಿಯ ನಿರ್ಮಾಣವಾಯಿತು ಕೊನೆಗೆ ಅಧ್ಯಕ್ಷ ಮಹಾಶಯರು ಸೊಗಸಾದ ಭಾಷಣವನ್ನು ಮಾಡಿದರು

ಇಲ್ಲಿ ಕೆಲದಿನಗಳಿಂದ ಅಲ್ಲಲ್ಲಿ ಹರಿಕಥೆಗಳನ್ನು ಮಾಡುತ್ತಿರುವ ಶ್ರೀ| ವಾಲ್ಪಿ, ಎಸ್. ಸಾಮುಗರು ತಾ. ೧೭ನೇ ಗುರುವಾರ ಸಂಜೆ ಘಂಟೆ ೫ಕ್ಕೆ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ 'ಧ್ರುವಚರಿತ್ರೆ' ಎಂಬ ಕಥೆಯನ್ನು ಮಾಡಿದರು. ಕತೆಯು ಚೆನ್ನಾಗಿತ್ತು.

ಬಂಟರ ಯಾನೆ ನಾಡವರ ಸಂಘ ಮುಂಬಾಯಿ

ಸಂಘದ ಆಡಳಿತ ಕಮಿಟಿ ಸಭೆಯು ಇದೇ ಕಳೆದ ತಾ. ೬ರಲ್ಲು ಶ್ರೀಯುತ ಕೆ ವಿಠಲಶೆಟ್ರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಯಿಲೆಯಲ್ಲಿದ್ದು ಊರಿಗೆ ಹೋಗಲು ಧನ ಸಹಾಯ ಕೇಳಿದ ಕುಡೆತ್ತೂರು ಸಾಂತ್ಯಮನೆ ಗಂಗು ಶೆಟ್ರಿಂದ ಬಂದ ಅರ್ಜಿಯನ್ನು ಸಭೆಯಲ್ಲಿ ಓದಿ ಹೇಳಿದ ತರುವಾಯ ಆ ಕುರಿತು ಆಲೋಚಿಸಿ ಅವರಿಗೆ ಊರಿಗೆ ತಲ್ಪುವಷ್ಟರ ಖರ್ಚು ರೂಪಾಯಿ 16—0—0ರನ್ನು ಕೊಡಬೇಕಾಗಿ ಸರ್ವಾನುಮತದಿಂದ ಮಂಜೂರಾಯಿತು. ಮತ್ತು ಬಳ್ಕುಂಜೆ ತುಕ್ರಶೆಟ್ರು ಎಂಬವರು ನಮ್ಮ ಸಂಘಕ್ಕೆ ಮೆಂಬರರಾಗಿದ್ದು ಪ್ರಕೃತ ನಡೆಯುತ್ತಿದ್ದ ಹಿಂದೂ ಮಸಲ್ಮಾನರ ದಂಗೆಯಲ್ಲಿ ಚೂರಿ ಹೊಡೆತದಿಂದ ಮೃತಪಟ್ಟ ಕಾರಣ ಆ ದುಃಖ ಸೂಚನೆ ಸಭೆಯಲ್ಲಿಟ್ಟು ಮೃತರ ಆತ್ಮಕ್ಕೆ ಶ್ರೀಪರಮಾತ್ಮನು ಶಾಂತಿಯನ್ನೀಯಲೆಂದು ಪ್ರಾರ್ಥಿಸಲ್ಪಟ್ಟಲ್ಲದೆ ಅವರ ಕುಟುಂಬದವರಿಗೂ ಈ ದುಃಖ ಸೂಚನೆಯನ್ನು ಪತ್ರಮೂಲಕ ತಿಳಿಸಬೇಕಾಗಿ ನಿಶ್ಚಯಿಸಲಾಯಿತು ಮತ್ತು ಶ್ರೀ ಕೆಮ್ತೂರು ಸಂಕಪ್ಪ ಶೆಟ್ರು ಈ ಸಾರಿ ನಮ್ಮ ಸಂಘದ ಮೇಲ್ಮೆಯನ್ನು ಬಯಸಿ ನಮಗೆ ಅನೇಕ ಹೊಸ ಮೆಂಬರರನ್ನು ಮಾಡಿಕೊಟ್ಟದ್ದರಿಂದ ಅವರಿಗೆ ಧನ್ಯವಾದವನ್ನರ್ಪಿಸಲಾಯಿತು. ಇನ್ನು ಮುಂದೆ ಸೆಕ್ರೆಟರಿಯವರು ಶ್ರೀಯುತ ಕೆ ರಾಮಣ್ಣ ಶೆಟ್ರು. ಶ್ರೀಯುತ ಕೆಮ್ತೂರು ಸಂಕಪ್ಪ ಶೆಟ್ರು. ಶ್ರೀಯುತ ಬ್ರಹ್ಮಾವರ ನಾರಾಯಣಶೆಟ್ರು ಎಗ್ಗೆರೆಯರ ಸಹಾಯಪಡೆಕೊಂಡು ಮುಂಬಾಯಿಯಲ್ಲಿರುವ ಉಪಹಾರ ಗೃಹ ಮಾಲಿಕರಲ್ಲಿ ಹೋಗಿ ಅವರ ಅನುಮತಿ ಪಡೆದು ಸಂಘದ ಹೆಸರಿನ ಧರ್ಮ ಪೆಟ್ಟಿಗೆಗಳನ್ನು ಅಲ್ಲಲ್ಲಿ ಇಡಬೇಕಾಗಿ ನಿರ್ಣಯವಾಯಿತು ಮತ್ತು ನಮ್ಮ ಸಂಘದ ಉಪಾಧ್ಯಕ್ಷರಾದ ಶ್ರೀಯುತ ಬಡಿಲಗುತ್ತು ದೂಮಪ್ಪ ನ್ಯಾಕರು ಮುಂಬಾಯಿಯನ್ನು ಬಿಟ್ಟು ಊರಿಗೆ ಹೋಗುವ ವಿಚಾರದಲ್ಲಿರುವದರಿಂದ, ಅವರು ನಮಗೆ ಸೂಚಿಸುವ ಸಮಯ ವಿಳಂಬವಾಗಿ ಬಂದರೆ ಆ ಸಮಯ ಸೆಕ್ರೆಟರಿಯವರು ಅವರಿಗೆ ವಿದಾಯವೀಯಲು ಒಂದು ಮಹಾಸಭೆಯನ್ನು ಕರೆಯಬೇಕಾಗಿ ಮಂಜೂರಾಯಿತು. ಈ ದಿನ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡು ಎಲ್ಲಾ ಕಾರ್ಯ ಭಾರವನ್ನು ಸಾಂಗವಾಗಿ ನೆರವೇರಿಸಿ ಕೊಟ್ಟ ಶ್ರೀಯುತ ವಿಠಲ ಶೆಟ್ರಿಗೆ ಧನ್ಯವಾದವನ್ನಿತ್ತು ಸಭೆಯು ಕೊನೆಗೊಂಡಿತು. ಕಮಿಟಿಯ ನಿರ್ಣಯದಂತೆ ಮೇಲಿನ ಸಂಘದ ಬಿಲ್ ಕಲೆಕ್ಟರರು ಕೊಡೆತ್ತೂರು ಸಾಂತ್ಯಮನೆ ಗಂಗು ಶೆಟ್ರನ್ನು ಇದೇ ತಾ. ೧೦ರಲ್ಲು ರೈಲ್ವೇ ಸ್ಟೇಷನಿಗೆ ಕರಕೊಂಡು ಹೋಗಿ ಟಿಕೇಟು ತೆಗೆದುಕೊಟ್ಟು ಖರ್ಚಿಗೆ ಹಣವಿತ್ತು ಕಳುಹಿಸಿಕೊಟ್ಟಿರುವರು

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮಧ್ವಭುವನೇಂದ್ರ ಮಹೌಷಧಾಲಯ. ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ—— ಗುಡಪಿಪ್ಪಲಿ (ಲೀವರ್ ರೋಗಕ್ಕೆ) —— ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) —— ಚಂದ್ರಮಸ್ (ಶಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ.

ಪ್ರಾಯಸ್ಥರಿಗೆ ಅಕ್ಷರಾಭ್ಯಾಸ

ಸುಲಭವಾದ ಜನೋಪಕಾರ ಕಾರ್ಯ; ಪ್ರಾಯಸ್ಥರೆಲ್ಲ ಓಟು ಪಡೆಯುವ ಉಪಾಯ

ಲೇಖಕ: ಪಾದೂರು ವಾಸುದೇವ ಉಪಾಧ್ಯಾಯ, ವಕೀಲ್, ಕಾರ್ಕಳ.

ಅಕ್ಷರಾಭ್ಯಾಸದಲ್ಲಿ ನಮ್ಮ ದೇಶದಷ್ಟು ಹಿಂದೆ ಯಾವ ದೇಶದವರೂ ಇರುವುದಿಲ್ಲ. ಮಕ್ಕಳಿಗೆ ಮಾತ್ರ ಅಕ್ಷರಾಭ್ಯಾಸ ಮಾಡಿಸುತ್ತಾ ಹೋದರೆ ಒಂದು ದಿನ ಎಲ್ಲರಿಗೂ ಅಕ್ಷರ ಜ್ಞಾನವು ಬಂದೇ ಬರುತ್ತದೆಂಬ ಮಾತು ನಿಜವಲ್ಲ. ಹಿರಿಯರಿಗೆ ಅಕ್ಷರ ಜ್ಞಾನವಿರುವಲ್ಲಿ ಮಾತ್ರ ಕಿರಿಯರಿಗೆ ಅಕ್ಷರಾಭ್ಯಾಸ ಮಾಡಿಸುವುದು ಸುಲಭವಲ್ಲದೆ ಅಕ್ಷರ ಜ್ಞಾನವಿಲ್ಲದ ಹಿರಿಯರಿರುವಲ್ಲಿ ಕಿರಿಯರಿಗೆ ಅಕ್ಷರ ಜ್ಞಾನ ಕೊಡಬೇಕೆಂಬ ಉತ್ಸಾಹವೇ ಇರುವುದಿಲ್ಲ ಹೀಗಾಗಿ ಹಿರಿಯರಿಗೆ ಅಕ್ಷರಾಭ್ಯಾಸಮಾಡಿಸುವುದೂ ಅತಿ ಅಗತ್ಯವಿದೆ.

ಹೆಚ್ಚಿನ ವಿದ್ಯೆಯುಲ್ಲದಿದ್ದರೂ ಸ್ವಲ್ಪ ಮಟ್ಟಿಗೆ ಓದು ಬರಹ ಎಲ್ಲರಿಗೂ ಇರುವುದು ಅವಶ್ಯವಿದೆ ಎಂದು ಎಲ್ಲರೂ ಒಪ್ಪುತ್ತಾರೆ. ಆದರೆ ಈ ಕಾರ್ಯದಲ್ಲಿ ಯಾರೂ ಹೆಚ್ಚಿನ ಮನಸ್ಸು ಕೊಡುವುದಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ಪ್ರಾಯಸ್ಥರಿಗೆ ಅಕ್ಷರಾಭ್ಯಾಸಮಾಡಿಸುವುದು ಕಷ್ಟದ ಕೆಲಸವಲ್ಲವೆಂದು ಅನೇಕರಿಗೆ ಗೊತ್ತಿಲ್ಲ. ಲೋಕ ವ್ಯವಹಾರದ ಜ್ಞಾನವಿಲ್ಲದ ಬಾಲಕರು ಶಾಲೆಗಳಲ್ಲಿ ಓದು ಬರಹ ಭಾಷೆ ಮತ್ತು ವ್ಯವಹಾರಜ್ಞಾನ ಇವನ್ನೆಲ್ಲಾ ಕಲಿತು ಅಕ್ಷರಜ್ಞರೆಂದು ಎನಿಸಿಕೊಳ್ಳಬೇಕಾದರೆ ಕನಿಷ್ಠ ಪಕ್ಷಕ್ಕೆ ಮೂರು ನಾಲ್ಕು ವರ್ಷಗಳು ಬೇಕಾಗುತ್ತವೆ ಆದರೆ ಕೆಲವು ಮಟ್ಟಿಗೆ ಭಾಷೆ ಮತ್ತು ಲೋಕ ವ್ಯವಹಾರದ ಜ್ಞಾನವಿದ್ದು ಓದು ಬರಹ ಮಾತ್ರ ಕಲಿಯಲಿಚ್ಛಿಸುವ ಪ್ರಾಯಸ್ಥರಿಗೆ ಅದು ಅಷ್ಟು ಕಷ್ಟವಲ್ಲ. ಎರಡನೆಯದಾಗಿ ಈ ಕಾರ್ಯಕ್ಕೆ ಸರಕಾರದ ಪ್ರೋತ್ಸಾಹ ದೊರಕಿದ್ದಾದರೆ ವಿಶೇಷ ಖರ್ಚು ಶ್ರಮವಿಲ್ಲದೆ ಇದು ಸಾಧ್ಯವಾಗುತ್ತಿತ್ತು. ಏಕೆಂದರೆ ಸರಕಾರಿ ಮತ್ತು ಜಿಲ್ಲಾ ಬೋರ್ಡುಗಳ ಶಾಲೆಗಳಲ್ಲಿರುವ ಉಪಾಧ್ಯಾಯರುಗಳಿಗೆ ವರುಷಕ್ಕೆ ಒಂದೆರಡು ತಿಂಗಳು ರಜಾ ಕಾಲವಿರುತ್ತದೆ. ಇವರೆಲ್ಲರೂ ಅಲ್ಪ ಸಂಬಳದಿಂದ ಕಷ್ಟದಲ್ಲಿ ಜೀವನ ಮಾಡುವವರಾದುದರಿಂದ ಸ್ವಲ್ಪ ಧನ ಸಹಾಯ ದೊರೆತರೆ ತಮ್ಮ ರಜಾ ಸಮಯವನ್ನು ಪ್ರಾಯಸ್ಥರಿಗೆ ಅಕ್ಷರಾಭ್ಯಾಸಮಾಡಿಸುವುದರಲ್ಲಿ ಉಪಯೋಗಿಸಲಿಕ್ಕೆ ಅವರು ಸಿದ್ಧರಿದ್ದಾರೆ. ಅವರಾದರೋ ಕೇವಲ ಪರೋಪಕಾರ ಬುದ್ಧಿಯಿಂದಲೇ ಈ ಕಾರ್ಯದಲ್ಲಿ ಪ್ರವರ್ತಿಸುವವರಲ್ಲಿ ಅವರಿಗೆ ಸ್ವಲ್ಪ ಪ್ರೋತ್ಸಾಹ ಮತ್ತು ಧನ ಸಹಾಯ ಕೊಟ್ಟರೆ ರಜಾಕಾಲದಲ್ಲಿ ಜನರಲ್ಲಿರುವ ಅಕ್ಷರ ಜ್ಞಾನದ ಅಭಾವವನ್ನು ತೆಗೆದು ಹಾಕುವುದರಲ್ಲಿ ಅವರು ಸಹಾಯಕರಾದಾರು. ಇದಲ್ಲದೆ ಪ್ರಾಯಸ್ಥರಿಗೆ ಅಕ್ಷರಾಭ್ಯಾಸ ಮಾಡಿಸಲಿಕ್ಕೆ ರಜಾ ಕಾಲದಲ್ಲಿ ಶಾಲಾ ಕಟ್ಟೋಣಗಳನ್ನು ಉಪಯೋಗಿಸಲೂ ಬಹುದು. ಮೂರನೆಯದಾಗಿ ಪ್ರಾಯಸ್ಥರಿಗೆ ಅಕ್ಷರಾಭ್ಯಾಸ ಮಾಡಿಸಲಿಕ್ಕೆ ಚಿಕ್ಕ ಮಕ್ಕಳಿಗಾಗಿ ಬರೆದಿರುವ ಬಾಲ ಶಿಕ್ಷೆಯ ಪುಸ್ತಕಗಳು ಪ್ರಯೋಜನವಿಲ್ಲ ಅವುಗಳು ಮಕ್ಕಳಿಗೆ ವ್ಯವಹಾರ ಜ್ಞಾನವನ್ನು ಕೊಟ್ಟು ಮಕ್ಕಳ ಮೃದು ಮೆದುಳಿಗೆ ತಿಳಿಯುವಂತೆ ಭಾಷೆಯನ್ನು ಸಾವಕಾಶವಾಗಿ ಕಲಿಸುವ ಉದ್ದೇಶದಿಂದ ಬರೆಯಲ್ಪಟ್ಟಿವೆ. ತ್ವರ್ಯದಲ್ಲಿಯೇ ಅಕ್ಷರ ಜ್ಞಾನವನ್ನು ಮಾಡಿಕೊಳ್ಳಬೇಕೆಂಬ ಉತ್ಸಾಹವಿರುವ ಪ್ರಾಯಸ್ಥರು ಆ ಪುಸ್ತಕಗಳಿಂದ ಏನೂ ಪ್ರಯೋಜನ ಹೊಂದಲಾರರು. ಅಕ್ಷರಮಾಲೆಯಲ್ಲಿರುವ ಎಲ್ಲಾ ಅಕ್ಷರಗಳೂ ಪ್ರಾರಂಭದಲ್ಲಿ ಅವಶ್ಯಬೀಳುವುದಿಲ್ಲ. ಸರ್ವಸಾಧಾರಣವಾಗಿ ಕನ್ನಡದಲ್ಲಿ ಮಹಾ ಪ್ರಾಣದ ಅಕ್ಷರಗಳು ಮತ್ತು ಒಂದು ಅಕ್ಷರಕ್ಕೆ ಇನ್ನೊಂದು ಅಕ್ಷರವನ್ನು ಒತ್ತು ಕೊಟ್ಟ ಅಕ್ಷರಗಳು ಇಲ್ಲವಾದುದರಿಂದ ಪ್ರಥಮತಃ ಅಲ್ಪ ಪ್ರಾಣದ ಅಕ್ಷರಗಳನ್ನು ಮತ್ತು ಒಂದು ಅಕ್ಷರಕ್ಕೆ ಅದೇ ಅಕ್ಷರದ ಒತ್ತು ಇರುವ ಅಕ್ಷರಗಳನ್ನು ಉಪಯೋಗಿಸಿದ ಶಬ್ದಗಳನ್ನು ಜೋಡಿಸಿ ಬರೆದ ಪಾಠಗಳಿರುವ ಪುಸ್ತಕಗಳು ಅಗತ್ಯವಾಗಿವೆ. ದಿನಕ್ಕೊಂದು ಪಾಠದಂತೆ ಒಂದೇ ತಿಂಗಳಲ್ಲಿ ಮುಗಿಸುವಂತೆ ಮೂವತ್ತು ಪಾಠಗಳಿರುವ ಪ್ರಾಯಸ್ಥರಿಗೆ ಬೇಕಾದಂತೆ ಬರೆದ ಪಾಠ ಪುಸ್ತಕಗಳನ್ನು ನಾವು ಪ್ರತ್ಯೇಕವಾಗಿ ತಯಾರಿಸಬೇಕು ಮತ್ತು ಕಲಿಸುವಾಗಲೂ ಚಿಕ್ಕ ಮಕ್ಕಳಿಗೆ ಕಲಿಸುವ ರೀತಿ ಪ್ರಾಯಸ್ಥರಿಗೆ ಕಲಿಸಲು ಸಾಧ್ಯವಿಲ್ಲ. ವಿದ್ಯಾರ್ಥಿಗಳೊಂದಿಗೆ ಕುಳಿತು ಭ್ರಾತೃಭಾವದಿಂದ ಕಲಿತು ಕಲಿಸುವ ತಾಳ್ಮೆ ಮತ್ತು ಉತ್ಸಾಹವಿರುವವರು ಮಾತ್ರ ಈ ಕಾರ್ಯದಲ್ಲಿ ಸೇರಬೇಕು ವಿನಾ ಚಿಕ್ಕ ಮಕ್ಕಳಿಗೆ ಕಲಿಸುವ ಉಪಾಧ್ಯಾಯರೆಲ್ಲರೂ ಈ ಕೆಲಸಕ್ಕೂ ಯೋಗ್ಯರೆಂದು ಎಣಿಸಬಾರದು. ನಾಲ್ಕನೆಯದಾಗಿ ಅಕ್ಷರಾಭ್ಯಾಸದ ಉಪಯೋಗದ ವಿಷಯವಾಗಿ ನಮ್ಮಲ್ಲಿಯ ಜನರಲ್ಲಿ ಸಾಕಷ್ಟು ಪ್ರಚಾರ ಕಾರ್ಯವನ್ನು ಮಾಡಬೇಕು. ಅನೇಕರಲ್ಲಿ ಅಕ್ಷರಾಭ್ಯಾಸವಿಲ್ಲದೆ ಇಷ್ಟು ವರುಷ ಕಳೆದು ಹೋಯಿತು. ಇನ್ನು ತಮಗೆ ಏನಾಗಬೇಕೆಂಬ ನಿರುತ್ಸಾಹ ಬುದ್ಧಿಯಿರುತ್ತದೆ. ಪ್ರತಿಯೊಬ್ಬನಿಗೂ ಅಕ್ಷರಾಭ್ಯಾಸವು ಅವಶ್ಯವಿದೆಯೆಂದೂ ಕ್ರಮವಾಗಿ ಮಾಡಿದರೆ ಅದೊಂದು ಪ್ರಯಾಸದ ಕಾರ್ಯವಲ್ಲವೆಂದೂ ಬೋಧಿಸಬೇಕು. ಕೆಲವರಲ್ಲಾದರೂ ಈ ಉತ್ಸಾಹವು ತಲೆದೋರಿದರೆ ನಂತರ ಈ ಕಾರ್ಯವು ಸುಲಭದಲ್ಲಿ ಆಗುವುದು. ಈ ವಿಚಾರದಲ್ಲಿ ಸಾಕಷ್ಟು ಪ್ರಚಾರ ಕಾರ್ಯವು ನಡೆಯದುದರಿಂದಲೇ ನಮ್ಮಲ್ಲಿ ಅಕ್ಷರಜ್ಞಾನದ ಅಭಾವವಿರಲಿಕ್ಕೆ ವಿಶೇಷ ಕಾರಣ.

ಪರೋಪಕಾರ ಮಾಡಬೇಕೆನ್ನುವ ಬುದ್ಧಿಯುಳ್ಳವರು ನಮ್ಮಲ್ಲಿ ಅನೇಕರಿದ್ದಾರೆ. ತಾವು ತಮ್ಮ ಊರಿನ ಜನರಿಗೆ ಯಾವ ರೀತಿಯಿಂದ ಸಹಾಯಮಾಡಬಹುದು ಎಂದು ಗೊತ್ತಿಲ್ಲದೆ ತಮ್ಮ ಸಮಯವನ್ನು ಹಾಳು ಮಾಡುತ್ತಿರುವವರು ಅನೇಕರಿದ್ದಾರೆ. ಇವರೆಲ್ಲರೂ ನಮ್ಮ ಜನರಲ್ಲಿ ಅಕ್ಷರ ಜ್ಞಾನವನ್ನು ಹುಟ್ಟಿಸುವ ಪುಣ್ಯ ಕಾರ್ಯದಲ್ಲಿ ಸಹಭಾಗಿಗಳಾದಾರೆಂಬುದರಲ್ಲಿ ಸಂದೇಹವಿಲ್ಲ. ಒಂದು ಕಡೆಯಲ್ಲಿ ಕೆಲವರು ಪ್ರಾಯಸ್ಥರನ್ನಾದರೂ ಅಕ್ಷರಜ್ಞರಾಗಿ ಮಾಡಿಬಿಟ್ಟದ್ದಾದರೆ ಹಾಗೆ ಅಕ್ಷರಜ್ಞಾನ ಹೊಂದಿದವರು ಇತರರಿಗೆ ಕಲಿಸಿ ಸ್ವಲ್ಪ ಸಮಯದಲ್ಲಿಯೇ ಎಲ್ಲರೂ ಅಕ್ಷರಜ್ಞರಾಗುವ ಸಂಭವ ಉಂಟು. ಇದೇ ರೀತಿಯ ಯೋಜನೆಗಳು ಇತರ ರಾಜ್ಯಗಳಲ್ಲಿ ನಡೆದು ಸ್ವಲ್ಪ ಸಮಯದಲ್ಲಿಯೇ ಯಶಸ್ವಿಯಾಗಿವೆ. ಪ್ರಯತ್ನಿಸಿದರೆ ನಮ್ಮಲ್ಲಿಯೂ ಅದು ಯಶಸ್ವಿಯಾಗದೆ ಇರಲಿಕ್ಕಿಲ್ಲ. ಸ್ವರಾಜ್ಯವು ದೊರೆಯುವ ತನಕ ಈ ಕಾರ್ಯಕ್ಕೆ ಸರಕಾರದವರಿಂದ ಹೆಚ್ಚಿನ ಸಹಾಯವು ಸಿಕ್ಕೀತೆಂದು ಆಶಿಸುವುದು ವ್ಯರ್ಥ. ಆ ವರೆಗೆ ಈ ಕೆಲಸವನ್ನು ಬಾಕಿ ಇಡಲು ಸಾಧ್ಯವಿಲ್ಲ. ಆದುದರಿಂದ ಪರೋಪಕಾರಿಗಳಾದ ಜನರೆಲ್ಲರೂ ಈ ಕಾರ್ಯದಲ್ಲಿ ತ್ವರ್ಯದಲ್ಲಿಯೇ ನಿರತರಾಗಬೇಕು.

ಪ್ರಾಯಸ್ಥರಾದ ಎಲ್ಲರಿಗೂ ವೋಟಿನ ಅಧಿಕಾರಕೊಡಬೇಕೆಂದು ನಾವು ಎಷ್ಟು ಕೇಳಿಕೊಂಡರೂ ಸರಕಾರದವರು ಅದನ್ನು ಕೊಡಲಿಲ್ಲ. ಆದರೆ ನಾವು ಮನಸ್ಸು ಮಾಡುವುದಾದರೆ ಈ ಅಧಿಕಾರವು ಎಲ್ಲರಿಗೂ ಸಿಗುವಂತೆ ಮಾಡಲು ಈಗ ಸಾಧ್ಯವಿದೆ. ಹೇಗೆಂದರೆ ಅಕ್ಷರಜ್ಞರೆಲ್ಲರಿಗೂ ಈಗ ವೋಟಿನ ಅಧಿಕಾರವಿರುತ್ತದೆ. ಮೇಲೆ ಬರೆದಂತೆ ಸ್ವಲ್ಪ ಮಟ್ಟಿಗಾದರೂ ಓದು ಬರಹ ಕಲಿಸುವುದು ಬಹಳ ಸುಲಭವಿದೆ. ಈಗ ಎಲ್ಲರಿಗೂ ತಮ್ಮ ಗ್ರಾಮಗಳನ್ನು ಮುಂದೆ ತರಬೇಕೆಂಬ ಉತ್ಸಾಹವೂ ಸಾಕಷ್ಟು ಇದೆ. ಹೀಗೆ ಬರಹ ಕಲಿತವರು ವರುಷಕ್ಕೊಮ್ಮೆ ದುರಸ್ತಿಯಾಗುತ್ತಿರುವ ಎಸೆಂಬ್ಲಿ ವೋಟರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಿಕೊಳ್ಳಲು ಸಾಧ್ಯವಿದೆ. ಅದಷ್ಟು ಹೆಚ್ಚು ಜನರಿಗೆ ವೋಟಿನ ಅಧಿಕಾರವಿದ್ದರೆ ದೇಶಕ್ಕೆ ಎಷ್ಟರ ಮಟ್ಟಿಗೆ ಪ್ರಯೋಜನವಿದೆ ಎಂದು ಎಲ್ಲರಿಗೂ ಗೊತ್ತಿದೆ. ಆದುದರಿಂದ ಈ ದೃಷ್ಟಿಯಿಂದಲಾದರೂ ನಮ್ಮ ಜನರಲ್ಲಿ ಅಕ್ಷರಜ್ಞಾನವನ್ನು ವರ್ಧಿಸಿ ಬರುವ ಎಸೆಂಬ್ಲಿ ಚುನಾವಣೆಯಲ್ಲಿ ಪ್ರಾಯಸ್ಥರೆಲ್ಲರಿಗೂ ವೋಟಿನ ಅಧಿಕಾರ ದೊರೆಯುವಂತೆ ವಿದ್ಯಾವಂತರೆಲ್ಲರೂ ಮನಃಪೂರ್ವಕ ಪ್ರಯತ್ನಿಸಬೇಕು. ರಾಷ್ಟ್ರೀಯ ಧುರೀಣರೂ ಈ ಕಡೆ ಸ್ವಲ್ಪ ಮನಸ್ಸು ಕೊಡುತ್ತಿದ್ದರೆ ಈ ಕಾರ್ಯವು ಸುಲಭದಲ್ಲಿ ಸಾಗುತ್ತಿತ್ತು.

ನವಯುಗದಲ್ಲೇ
ನಿಮ್ಮ ಜಾಹಿರಾತನ್ನು
ಕೊಡಿರಿ.

ಉಡುಪಿಯ ಆದರ್ಶ ಉಪಹಾರಗೃಹ !

ಶ್ರೀರಾಮಾ ರೆಸ್ಟೋರೆಂಟ್

ಸುಲಭ ದರದಲ್ಲಿ ತಿಂಡಿ ಪಾನೀಯಗಳು ! **ಮಿತ ದರದಲ್ಲಿ ಊಟ ಉಪಚಾರಗಳು !**

ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, **ಅನುಭವಪೂರ್ಣ ಮೇಲ್ವಿಚಾರಣೆ !**

ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.

ಎಚ್. ಗೋಪಾಳ ನಾಯಕ್, ಪ್ರೊಪ್ರೈಟರ್.

ಇದೇ ತಿಂಗಳ ತಾ. **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೆಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

SUKHA NIVAS

Court Road, UDIPI

(Opp:- TALUK OFFICE)

Modern Model! Homely Hotel!

HIGH CLASS SWEETS AND SAVERIES

Coffee, Tea, Cocoa, delicious & fragrant.

VERY NEAR TO GANDHI MAIDAN, TALUK OFFICE, COURT & HIGH SCHOOLS

Our Building enjoys a magnificient site and rooms are well Ventilated and breezy.

THE ONLY PLACE FOR

FASHIONABLE ENTERTAINMENTS AND MEALS.

ORDERS FOR TEA-PARTIES ACCEPTED AT SHORT NOTICE

MODERATE CHARGES

Prop:-H. Vasudeva Nayak & Bros

ಸುಖನಿವಾಸ ಉಡುಪಿ.

ಸುವ್ಯವಸ್ಥೆಯ ಮೇಲ್ವಿಚಾರಣೆ

ಉಚಿತವಾದ ಸುಖದ ತವರುಮನೆ

ನಿರ್ಮಲವಾದ ಊಟದ ಸಲಕರಣೆ

ವಾಯುಸೇವನೆಗೆ ಯೋಗ್ಯಯೋಜನೆ

ಸಕಲಜನ ಮನರಂಜನೆಯ ಸಂಯೋಜನೆ

ಈ ಅನುಕೂಲತೆಗಳಿರುವುದರಿಂದ ವಿದ್ಯಾರ್ಥಿಗಳಿಗೂ ಉದ್ಯೋಗಸ್ಥರಿಗೂ ಪ್ರಯಾಣಿಕರಿಗೂ ಯೋಗ್ಯವಾದ ಹೋಟೆಲೆಂದರೆ

ಸುಖನಿವಾಸವೊಂದೇ.

ಕಾಫಿಗೆ, ತಿಂಡಿಗೆ, ಭೋಜನಕ್ಕೆ, ಉಳಕೊಳ್ಳಲಿಕ್ಕೆ ಸಕ್ಕು ನಲಿಯಲಿಕ್ಕೆ, ಸುಖನಿವಾಸಕ್ಕೆ,

ಸುಖನಿವಾಸವೊಂದೇ

ಜ್ಞಾಪಕದಲ್ಲಿಡಲು ಯೋಗ್ಯವಾಗಿದೆ.

ಸುಖನಿವಾಸವು ಕೋರ್ಟ ಕಚೇರಿಗಳಿಗೂ ಹೈಸ್ಕೂಲುಗಳಿಗೂ ಮಧ್ಯರಂಗದಲ್ಲಿದ್ದು ಅತ್ಯಾಧುನಿಕ ಅನುಕೂಲತೆಗಳಿಂದ ಒಡಗೂಡಿದೆ.

ಸರಿಯಾಗಿ ಗಾಳಿಬೆಳಕುಳ್ಳ ಕೋಣೆಗಳು!

ಟೀಪಾರ್ಟಿಯ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಸುಖನಿವಾಸದ ಭೋಜನ / ಕಾಫಿ, ತಿಂಡಿ

ಮನೋವಿಕಾಸದ ಮೂಲ.

ವ್ಯವಸ್ಥಾಪಕರು:—

ಎಚ್. ವಾಸುದೇವ ನಾಯಕ್, ಎಂಡ್ ಬ್ರದರ್ಸ್.

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!!

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳೆಲ್ಲದರಲ್ಲೂ ಸಾವಿರಗಟ್ಲೆ ಇದ್ದಾಗ್ಯೂ

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ!

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅತ್ಯಾವಶ್ಯಕವಾದುದು.

ಈ ಪುಸ್ತಕವನ್ನು ಓದಬೇಕು! ಮನೋವೈಶಾಲ್ಯವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕ

ಸಂಸಾರ ನಾಕೆಯನ್ನು ನಡೆಸುವವರಿಗೆ ಬೇಕು ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು

ಅವರಿಗೆ ಇವರಿಗೆ ಎನ್ನುವುದೇನು? ಎಲ್ಲರಿಗೂ ಬೇಕು.

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ.

ಉತ್ತಮವಾದ ಹೊಳಪು ಕಾಗದ, ೩೦೦ ಪುಟಗಳು.

ಬೆಲೆ ರೂ. ೧—೮—೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು.

ಮೈಸೂರಿನಲ್ಲಿ ಲ್ಯಾನ್ಸ್ ಡೌನ್, ಬಜಾರ್, ಸ್ಟೇಟ್ ಮಾರ್ಟನಲ್ಲಿ, ಮಂಗಳೂರಲ್ಲಿ ಸ್ಕೂಲ್‌ಬುಕ್ ಕಂಪೆನಿಯಲ್ಲಿ ದೊರಕುತ್ತದೆ

ಟಾಗೂರ್ ಅಂಡ್ ಕೋ, (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ.

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಕ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಿಬೂಟಿ ನಗರಗಳಲ್ಲೂ, ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರು ಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡೆವಳಿಗಳಾವುವು? ಅಲ್ಲಿನ ವೇಶ್ಯಾವಾಟಿಗಳು, ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯನ್ನುನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳ ಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ.

ಅನೇಕ ವೇಶ್ಯೆಯರ ಜೀವನ ಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ. ಮೊದಲಿನ ಕೆಲಸವಾದ ಊಹಾಪೋಹಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಲಹರೀಲಾಲ

ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ಇದೇ ತಾ 25ನೇ ಶುಕ್ರವಾರದಿಂದ ಪ್ರದರ್ಶಿಸಲ್ಪಡುವ ಮಾತಾಡುವ ಚಿತ್ರ

[ಲಹರೀಲಾಲ ಚಿತ್ರದ ಒಂದು ದೃಶ್ಯ]

'ಲಹರೀಲಾಲ' ಕಥಾಸಾರಾಂಶ

ಲಹರೀಲಾಲನೆಂದರೆ ರೂಪನಗರವೆಲ್ಲಾ ಗಡಗುಟ್ಟಿ ನಡಗುವುದು. ಅವನು ಅಷ್ಟೊಂದು ದೊಡ್ಡ ಕಳ್ಳ. ಆದರೆ ಅನುನಿತ್ಯದ ಜೀವನದಲ್ಲಿ ಲಹರೀಲಾಲನೇ ಪ್ರಸಿದ್ಧ ಪತ್ತೇದಾರಿ ಕಾದಂಬರಿಕಾರನಾಗಿ ಸಮಾಜದಲ್ಲಿ ಸನ್ಮಾನ್ಯಗೃಹಸ್ಥನಾದ ಸುಧಾಕರ. ತಷ್ಕೀರುನಡಿಸುವ ಪುನಸ್ಸಾದಲ್ಲಿ ಲಹರೀಲಾಲನಾಗುತ್ತಿದ್ದ. ಈ ರಹಸ್ಯವು ಯಾರಿಗೂ ತಿಳಿಯದು. ಲಹರೀಲಾಲನು ನಿರಾತಂಕವಾಗಿ ತಕ್ಷೀರುಗಳನ್ನು ನಡಿಸುತ್ತಲೇ ಇದ್ದ.

ಲಹರೀಲಾಲನ ಭೀತಿಯಿಂದಾಗಿ ನಗರಶೇರನು ಮನೆ ಬಿಟ್ಟು ಹೋಗುತ್ತಿದ್ದಾಗಲೆಲ್ಲಾ ಮನೆಯನ್ನು ಪತ್ತೇದಾರ ಪ್ರತಾಪರೈಯುಕ್ಕೈಯವಶಬಿಟ್ಟುಹೋಗಬೇಕಾಗಿದ್ದಿತು. ಪ್ರತಾಪರೈಯು ವಿದ್ಯುತ್ ಶಕ್ತಿಯ ಘಂಟೆಗಳನ್ನಿಟ್ಟು ಲಹರೀಲಾಲನನ್ನು ಹಿಡಿಯುವ ಉಪಾಯ ಮಾಡಿದ್ದನು ಆದರೆ ಲಹರೀಲಾಲನು ನಗರ ಶೇರನ ವೇಷ ಹಾಕಿಕೊಂಡೇ ಬಂದು ಅಮೂಲ್ಯಹಾರವನ್ನು ತಿಜೋರಿಯಿಂದ ಕದ್ದೊಯ್ದನು. ಮನೆಗೆ ಪುಟ್ಟುವಷ್ಟರಲ್ಲೇ ಅವನಿಗೊಂದು ಟಲಿಫೋನು ಕರೆಬಂದು ಅವನು ವಿಸ್ಮಿತನಾದ. ಕದ್ದ ಹಾರವನ್ನು ಮೊದಲಿದ್ದಲ್ಲಿಯೇ ಇಟ್ಟುಬಿಡಬೇಕೆಂದು ಆಜ್ಞೆಯಾಯಿತು ಲಹರೀಲಾಲನು ಹಾಗೆಯೇ ಮಾಡುವನು. ಈ ಕುರಿತು ರೂಪನಗರದ ಸಾಹಿತ್ಯಕ್ಲಬ್ಬಿನಲ್ಲಿ ಚರ್ಚೆನಡೆಯುವದು. ಅಮರಸಿಂಹನೆಂಬೊಬ್ಬ ಜಹಗೀರದಾರನು, ಲಹರೀಲಾಲನು ತನ್ನ ಬಂಗ್ಲೆಯಲ್ಲಿ ಕಳವು ಮಾಡಿದರೆ ತಾನು ರೂ. ೨೫,೦೦೦ವನ್ನು ಅನಾಥಾಲಯಕ್ಕೆ ಕೊಡುವೆನೆಂದು ಪಂಥ ಹಾಕುವನು. ಅಮರ ಸಿಂಹನ ಸಹೋದರಿ ಪನ್ನೆಯು ಲಹರೀಲಾಲನ ಪಕ್ಷಹಿಡಿಯುವಳು. ಸುಧಾಕರನನ್ನು ಪ್ರೀತಿಸುವ ನಗರ ಶೇರನ ಪುತ್ರಿ ರಜನಿಯು ಲಹರೀಲಾಲನನ್ನು ದೂಷಿಸುವಳು ಪಣವಾಗುವದು ಸುಧಾಕರನು ಇದೆಲ್ಲವನ್ನೂ ಕೇಳಿ ವಿನೋದಗೊಳ್ಳುವನು.

ಟೆಲಿಫೋನ್ ಮಾಡಿದವಳು ರಜನಿ. ಅವಳೇ ಪುನಹಃ ಧೈರ್ಯವಿದ್ದರೆ ಅಮರ ಸಿಂಹನ ಮನೆಯಲ್ಲಿ ಕಳವು ಮಾಡಬೇಕೆಂದು ಲಹರೀಲಾಲನನ್ನು ಒತ್ತಾಯಮಾಡುವಳು. ಆ ಪ್ರಕಾರ ಅವನು ಕಳವು ಮಾಡಿಯೇ ಬಿಡುವನು. ಅಮರಸಿಂಹನು ಪಣದಂತೆ ರೂ ೨೫,೦೦೦ ಅನಾಥಾಲಯಕ್ಕೆ ಕೊಡುವನು. ಪನ್ನೆಗೆ ಬಹಳ ಆನಂದವಾಗುವುದು. ಲಹರೀಲಾಲನೇ ಸುಧಾಕರನೆಂದು ತಿಳಿಯದೆ ಅವಳು ಲಹರೀಲಾಲನನ್ನು ಬಹಳವಾಗಿ ಪ್ರೀತಿಸುವಳು. ಜಹಗೀರದಾರನ ಮನೆಯಕಳವಿನಿಂದ ರೂಪನಗರದ ರಾಜಕುಮಾರನು ರೇಗಿಬೀಳುವನು. ದರ್ಬಾರ್ ನಡಿಸಿ ಲಹರೀಲಾಲನು ಯಾರೇ ಇರಲಿ ಅವನು ಇನ್ನು ಮುಂದ ಕಳವು ನಡಿಸಬಾರದೆಂದು ಎಚ್ಚರಿಸುವನು. ದರ್ಬಾರಿನಲ್ಲಿ ರಾಜಕುಮಾರನ ಮಾವ ರತ್ನಸಿಂಹನ ಕುತ್ತಿಗೆಯಲ್ಲಿ ಥಳಥಳಿಸುವ ವಜ್ರಹಾರವೊಂದರ ಮೇಲೆ ಸುಧಾಕರನ ಕಣ್ಣುಬೀಳುವುದು. ಅಂದೇ ರಾತ್ರಿ ಅವನದನ್ನು ಕದ್ದೊಯ್ಯುವನು. ಅದರೊಂದಿಗೆ ಸಂಕೇತವಾಗಿ ಏನೋ ಬರೆಯಲ್ಪಟ್ಟಿರುವ ಕಾಗದವೊಂದನ್ನು ಒಯ್ಯುವನು. ರತ್ನಸಿಂಹನು ಆ ಕಾಗದವನ್ನು ಹಿಂಪಡೆಯುವ ಬರಲ್ಲಿ ಜಯಶೀಲನಾಗುವಾಗ, ಮುಸುಕುಹಾಕಿಕೊಂಡಿದ್ದ ಸ್ತ್ರೀವ್ಯಕ್ತಿಯೊಂದು ತಕ್ಕನೆ ರತ್ನಸಿಂಹನಿಂದ ಅದನ್ನು ಕಸಕೊಂಡು ಓಡಿಬಿಡುವುದು. ಇದಾರೆಂದು ತಿಳಿಯಲು ಸುಧಾಕರನು ಮಾಡಿದ ಪ್ರಯತ್ನ ನಿಷ್ಫಲವಾಗುವುದು ಇವನು ಆಮೇಲೆ ತಪ್ಪಿರು ಮಾಡುವುದನ್ನು ನಿಶ್ಚಯಿಸಿಬಿಡುವ ನಿರ್ಧಾರ ಮಾಡುವನು. ಆಗ ಹಠಾತ್ತಾಗಿ ರಜನಿಯ ಉಂಗುರವನ್ನು ಕಳವುಮಾಡಬೇಕೆಂದು ಪುನಃ ಟೆಲಿಫೋನು ಕರೆಬರುವುದು. ಇದು ಪನ್ನೆಯ ಕೆಲಸ. ಅವಳು ರಜನಿಯ ಮೇಲಿನ ಮತ್ಸರದಿಂದ ಹೀಗೆ ಮಾಡುವುದೆಂದು ಲಹರೀಲಾಲನು ಊಹಿಸಿಕೊಳ್ಳುವನು ಆದರೂ ತನ್ನ ಗುಟ್ಟು ಬಯಲಾಗುವ ಭೀತಿಯಿಂದ ರಜನಿಯ ಉಂಗುರ ಕಳವು ಮಾಡಹೋಗಿ ಸಿಕ್ಕಿಬೀಳುವನು ರಜನಿಯು ಅವನನ್ನು ದಾರಿಗೆ ತರುವಳು. ಆತನು ಕಳವುಮಾಡಿದ ವಸ್ತುಗಳನ್ನೆಲ್ಲಾ ಹಿಂವೆ ಕೊಡಿಸುವಳು ಈ ನಡುವೆ ಲಹರೀಲಾಲನು ಬೆಂಕಿಯಲ್ಲಿ ಸಿಕ್ಕಿಬಿದ್ದು ಮೋಟರ್ ಗ್ಯಾರಜಿನಿಂದ ರಜನಿಯು ಅವನನ್ನು ರಕ್ಷಿಸುವಳು. ಆ ಮೇಲೆ ಲಹರೀಲಾಲನು ಕಳ್ಳಾಟಿಕೆಯನ್ನೇ ಬಿಟ್ಟುಬಿಡುವನು.

ಆದರೆ ರಜನಿಯು, ರತ್ನಸಿಂಹನ ಅರಮನೆಯಿಂದ ಕದ್ದೊಯ್ಯಲ್ಪಟ್ಟ ಗುಪ್ತಪತ್ರದ ರಹಸ್ಯವನ್ನರಿತುಕೊಂಡು ಅದರ ಉಳಿದರ್ಧವನ್ನು ಪಡೆಯಲು ಆತುರಗೊಳ್ಳುವಳು. ಆದರೆ ಅಮರಸಿಂಹನು ಅದನ್ನು ತನ್ನ ತಿಜೋರಿಯಲ್ಲಿ ಬಹಳ ಭದ್ರವಾಗಿಟ್ಟಿದ್ದನು. ಅದನ್ನು ಲಹರೀಲಾಲನಲ್ಲದ ಮತ್ತಾರಿಂದಲೂ ಕದ್ದು ತರಲು ಸಾಧ್ಯವಿಲ್ಲ ಹೀಗಾಗಿ ಲಹರೀಲಾಲನು ಸದ್ರಿ ಕಾಗದದ ಚೂರನ್ನು ಕದ್ದು ತರಬೇಕೆಂದು ರಜನಿಯು ಪುನಃ ಟೆಲಿಫೋನು ಮಾಡುವಳು. ಆ ಪ್ರಕಾರ ಲಹರೀಲಾಲನು ಈ ಕಾಗದವನ್ನು ಕಳವುಮಾಡಲೆತ್ನಿಸುವಾಗ ಅಮರಸಿಂಹನಿಂದ ಹಿಡಿಯಲ್ಪಡುವನು. ಈ ಸಂದರ್ಭದಲ್ಲೇ ಸಂಸ್ಥಾನದ ಮುಖ್ಯ ಪತ್ತೇದಾರ ಪ್ರತಾಪ ರೈಯು ವಿಜಯಸಿಂಹನ ಅರಮನೆಯನ್ನು ಜಪ್ತಿ ಮಾಡುವ ವಾರಂಟು ಹಿಡಕೊಂಡು ಬರುವನು. ಪನ್ನೆಯ ಸಹಾಯದಿಂದ ಲಹರೀಲಾಲನು ತಪ್ಪಿಸಿಕೊಳ್ಳುವನು ಗುಪ್ತ ಕಾಗದದ ಉಳಿದರ್ಧವು ಪ್ರತಾಪರೈಗೆ ಸಿಗುವುದು. ರಜನಿಯೂ ಅವನೂ ಅದರಿಂದ ರತ್ನಸಿಂಹನೂ ಅಮರಸಿಂಹನೂ ಸಂಸ್ಥಾನದ ಖಜಾನೆಯನ್ನು ಲುಟಾಯಿಸಲು ನಡಿಸಿದ ಸಂಚನ್ನು ಬಯಲಿಗೆಳೆಯುವರು.

ಲಹರೀಲಾಲನಾರೆಂದು ಕಂಡು ಹಿಡಿಯಲು ಪ್ರಯತ್ನಿಸುತ್ತಿದ್ದ ಪತ್ತೇದಾರಿಗಳಿಬ್ಬರು ಕಟ್ಟಕಡೆಗೆ ರಾಜಕುಮಾರನನ್ನು ಕೊಲೆಮಾಡುವ ಸಂಚೊಂದನ್ನು ಕಂಡು ಹಿಡಿಯುವರು ಲಹರೀಲಾಲನು ಇವರಿಬ್ಬರಿಂದ ಸದ್ರಿ ಸಂಚಿನ ರಹಸ್ಯವನ್ನು ಪಡೆದು ರಾಜಕುಮಾರನ ಪ್ರಾಣರಕ್ಷಣೆ ಮಾಡುವನು ಅಮರಸಿಂಹ ಮತ್ತು ರತ್ನಸಿಂಹರು ತಮ್ಮ ಒಳಸಂಚಿನಿಂದ ತಾವೇ ಸಿಕ್ಕಿಬೀಳುವರು. ದ್ರೋಹಿಗಳಿಗೆ ತಕ್ಕ ದಂಡನೆಯಾಗುವುದು. ಲಹರೀಲಾಲನು ಸುಧಾಕರನಾಗಿ ರಜನಿಯೊಂದಿಗೆ ಸುಖವಾಗಿರುವನು.

ಈ ಚಿತ್ರದಲ್ಲಿ ಸುಪ್ರಸಿದ್ಧ ನಟಿಯಾದ ಮಾಧುರಿಯೂ, ಪ್ರಸಿದ್ಧ ನಟನಾದ ಇ. ಬಿಲ್ಲಿಮೋರಿಯ ಮತ್ತು ವಿಕಟನಟರಾದ ಘೋರಿ, ದೀಕ್ಷಿತ ಮತ್ತು ಚಾರ್ಲಿಯೂ ಭಾಗವಹಿಸಿದವರು

THE

PANGAL NAYAK BANK

LIMITED.

ESTABLISHED 1920.

Paid up Capital: Rs 1 82,100/-

***Head Office*: UDIPI.**

Branches MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc, are discounted at a nominal charge

Current, Savings Bank and Cumulative deposits are accepted at moderate rates of interest

Fixed Deposits are received and interest allowed at 4% on 1 year and at $4\frac{1}{2}$% on 2 years deposits.

Every other description of up to date Banking business is also undertaken

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. [ಸಂ. ನ.]

ಹಣದುಡಿಯುವ ಸಲಭ ಉಪಾಯ

ಮುಂಬಯಿಯು ವ್ಯಾಪಾರಕ್ಕೆ ಹಿಂದೂಸ್ಥಾನದಲ್ಲಿ ಹೆಸರುಗೊಂಡ ಸ್ಥಳವು. ಅಲ್ಲಿ ಹೊಟ್ಟೆತುಂಬಿಸಬಹುದೆಂಬ ಧೈರ್ಯದಿಂದ ಹಲವು ಜನರು ಬೇರೆ ಬೇರೆ ಊರುಗಳಿಂದ ಬಂದು ನೆಲಸಿರುವರು. ಇವರಲ್ಲಿ ಕೆಲವರು ಕಾರ್ಖಾನೆಗಳಲ್ಲಿಯೂ, ಕೆಲ ಜನರು, ಆಫೀಸು ಬ್ಯಾಂಕ್‌ಗಳಲ್ಲಿಯೂ ಇನ್ನೂ ಕೆಲವರು ಹೊಟೇಲುಗಳಲ್ಲಿಯೂ ಕೆಲಸಮಾಡಿ ಜೀವಿಸುವವರು. ಮೇಲಿನ ಎಲ್ಲಾ ತರದ ಜೀವನಗಳಿಗಿಂತಲೂ ಹೋಟೇಲುಗಳಲ್ಲಿ ಬೆಳಗ್ಗೆ ನಾಲ್ಕು ಗಂಟೆಗೆ ಎದ್ದು ರಾತ್ರಿ ಒಂಬತ್ತು ಗಂಟೆಯವರೆಗೆ ಕೆಲಸಮಾಡಿ ಜೀವಿಸುವುದೆಂದರೆ ಬಹು ಕಷ್ಟ. ಹೀಗೆ ಪರಿಶ್ರಮದಿಂದ ದುಡಿದ ಹಣವನ್ನು ಕೂಡಾ ಅಪಹರಿಸಲಿಚ್ಛಿಸುವ ಕ್ರೂರ ಹೃದಯಿಗಳು ಇರುವರೆಂದರೆ ಕರುಣಾಜನಕ ವಿಷಯ. ಉದಾಹರಣೆಗಾಗಿ ಕೆಲವು ದಿವಸಗಳ ಮೊದಲು ಮಹಾಲಕ್ಷ್ಮಿ ಜಂಕ್ಷನಿನಲ್ಲಿ ಎರಡು ಹೋಟೇಲುಗಳ ವ್ಯಾಲಕರಾಗಿಯೂ ಧರ್ಮನಿಷ್ಠರಾಗಿಯೂ ಇರುವ ನರ್ಸು ಸೆಟ್ರು ಭಾವನೆಂಟ ನಾರಾಯಣ ಸೆಟ್ರು ಚೋಳದ ಬೈಕ್ಲ ಶೆಟ್ರಿಂದ ರೂ. 10ಕ್ಕೆ ಒಂದು ರಿಸ್ಟವಾಚು ನ್ನು ಕ್ರಯಕ್ಕೆ ತೆಗೆದುಕೊಂಡು ಮರುದಿನವೇ ರೂ. 60ಕ್ರಯಬಾಳುವ ವಾಚನ್ನು ಸೋಡ್ತಿ ತೆಗೆಯಲಾಗುವುದು. ಟಿಕೇಟು ಒಂದರ 8ಆಣೆ ಮಾತ್ರ, ಎಂದು ಬರೆದ ಹಲವು ಟಿಕೇಟುಗಳನ್ನು ಹೊಟೇಲುಗಳಲ್ಲಿ ಕೆಲಸ ಮಾಡುವ ಬಡ ನೌಕರರಿಗೆ ಮಾರಿ ತಾರೀಕು 15-6-37ನೇ ಮಂಗಳವಾರ ಸೋಡ್ತಿತೆಗೆದಿರುವರು.

ಸಂಲಭರೀತಿಯಲ್ಲಿ ಸಂಪಾದನೆ ಮಾಡುವುದರಲ್ಲಿ ತಾನೇ ಗಟ್ಟಿಗನೆಂದು ಶ್ರೀ. ಸೆಟ್ರು ಹಿಗ್ಗುವುದು ತುಂಬಾ ತಪ್ಪುಭಾವನೆಯು ಮಾತ್ರವಲ್ಲದೆ ಇವರ ಭಾವ ನರ್ಸು ಸೆಟ್ರ ಶ್ರೇಯಸ್ಸಿಗೆ ಕುಂದು. ಇನ್ನು ಮುಂದಕ್ಕಾದರೂ ಶ್ರೀ. ಸೆಟ್ರಗೆ ಇಂತಹ ಬುದ್ಧಿ ಬಾರದಿರಲೆಂದೇ ಹಾರೈಕೆ.

—ಇತಿ ಬಡನೌಕರರಲ್ಲೊಬ್ಬ.

ದಿ. ನೇಶನಲ್ ಕೆನರಾ ನ್ಯೂಸ್ ಏಜನ್ಸಿ ಫೋರ್ಟು ಬೊಂಬಾಯಿ ಬೊಂಬಾಯಿ ಕನ್ನಡಿಗರಲ್ಲಿ ಆಗ್ರಹಪೂರ್ವಕ ವಿನಂತಿ.

1928ನೇ ಇಸ್ವಿಯಿಂದ ಮೇಲಿನ ಏಜನ್ಸಿಯನ್ನು ನಡಿಸಿಕೊಂಡು ಬಂದು ಬೊಂಬಾಯಿಯಲ್ಲಿರುವ ಕನ್ನಡಿಗರೆಲ್ಲಾ ಕನ್ನಡ ಪತ್ರಿಕೆ, ಮತ್ತು ಪುಸ್ತಕಾದಿಗಳನ್ನೊದಗಿಸಿ ನನ್ನಿಂದ ಸಾಧ್ಯವಾದ ಮಟ್ಟಿಗೆ ಕೇವಲ ಭಾಷಾ ಪ್ರಚಾರ ಮತ್ತು ಕನ್ನಡಿಗರ ಏಳಿಗೆಯ ಸೃಷ್ಟಿಯಿಂದ ಎಡೆಬಿಡದೆ ಕೆಲಸ ಮಾಡುತ್ತಾ ಬಂದಿರುವೆನು. ಆದರೆ ನನಗೆ ಸಾಕಷ್ಟು ಪ್ರೋತ್ಸಾಹ ದೊರೆಯಲಿಲ್ಲೆಂಬುದು ವಿಷಾದಕರ. ಕನ್ನಡಿಗರು ತಮ್ಮ ಮಾತೃ ಭಾಷೆಯ ಕುರಿತು ಅಭಿಮಾನವುಳ್ಳವರಿರುವದಿಲ್ಲ. ಈ ರೀತಿಯ ಅವರ ಅಸಡ್ಡೆಯೇ ಕನ್ನಡಿಗರ ಅವನತಿಗೆ ಕಾರಣ. ನಾನು ಮೇಲಿನ ಏಜನ್ಸಿ ನಡಿಸಿ ವರ್ಷವೊಂದರ ರೂ. 75 ನಷ್ಟ ತಾಳಿಕೊಳ್ಳಬೇಕಾಗಿದೆ. ಬೊಂಬಾಯಿ ಕನ್ನಡಿಗರು ತಮ್ಮ ಭಾಷೆ, ಮತ್ತು ಸಂಸ್ಕೃತಿಗಳ ಏಳಿಗೆಯನ್ನು ಬಯಸುವವರಾದರೆ ಕನ್ನಡ ಪತ್ರಿಕೆ ಮತ್ತು ಪುಸ್ತಕಗಳನ್ನಾದರೂ ಓದುವ ಉತ್ಸಾಹವುಳ್ಳವರಾಗಬೇಕು. ಇನ್ನಾದರೂ ಕನ್ನಡಿಗರು ತಮ್ಮ ಮಾತೃಭಾಷೆಯನ್ನು ಕಡೆಗಣಿಸದೆ ಅಭಿಮಾನದಿಂದ ಕನ್ನಡ ಪತ್ರಿಕೆ ಮತ್ತು ಪುಸ್ತಕಗಳಿಗೆ ಪ್ರೋತ್ಸಾಹವಿತ್ತು ನನ್ನ ಏಜನ್ಸಿಯು ಜಯಶೀಲವಾಗುವಂತೆ ನೆರವಾಗಬೇಕೆಂದೇ ನನ್ನ ದೈನ್ಯಪರವಾದ ವಿನಂತಿ.

ವಿ. ಎಸ್. ಶಿಬ್ರೂರ್‌ಕರ್.

ಧರ್ಮಾರ್ಥ ಬಹುಮಾನಗಳು



1—2—0ಗೆ!

—·— ಯಾರಿಗೆ? —·—

ರೂಪಾಯಿ 1–2–0 ಕೊಟ್ಟು 18 ಸೀಸೆ ಒಟ್ಟಿರೋಸ್ಟ್ ಅಥವಾ 18 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

ಇನಾಮುಗಳ ವಿವರ:— 3 ಜೆಮ್ಮಿ ರಿಸ್ಟವಾಚುಗಳು, 1 ರೈಲ್ವೆಟಾಯಿಂ ಡಮ್ಮಿ ಪಾಕೆಟ್ ವಾಚು, 1 ಸೇಪ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಪೌಂಟನ್ ಪೇನು 14 ಕ್ಯಾರಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿ ಮಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶನೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಿಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0 10 0. ಇಂದೇ ಆರ್ಡರು ಕೊಡಿರಿ.

EASTERN TRADING COY.,
Post Box No. 12204, CALCUTTA, (N. Y.)

This is not a Prospectus but a trade advertisement.

ಗೋಕುಲದಾಸ ಫಾರ್ಮ್ಸ್ ಲಿಮಿಟೆಡ್,
ಮಂಗಳೂರು.

ಮಂಗಳೂರು ಮತ್ತು ಉಡುಪಿ ಮಹಾಜನರ ವಿಶೇಷ ಸೌಕರ್ಯಕ್ಕಾಗಿ!

ಪಾಲು ಒಂದರ ಬೆಲೆ ರೂ. ೫ ಮಾತ್ರ!

ಶುದ್ಧವಾದ ಪುಷ್ಟಿಕರವಾದ ಹಾಲು, ಬೆಣ್ಣೆ, ಮೊಸರು ಮೊದಲಾದುವನ್ನು ಸುವ್ಯವಸ್ಥಿತ ಆಧುನಿಕ ರೀತಿಯಲ್ಲಿ ಒದಗಿಸಿಕೊಡುವುದೇ ಈ ನೂತನ ಸಂಸ್ಥೆಯ ಜೀವಾಳ.

ಅಧಿಕ ಲಾಭದಾಯಕವಾದ ಸಾರ್ವಜನಿಕ ಮಿತಜವಾಬ್ದಾರಿಯ ನೆಲೆಯಲ್ಲಿ ಸ್ಥಾಪಿತವಾದ ಈ ನೂತನ ಸಂಸ್ಥೆಯು ಅಖಿಲ ದಕ್ಷಿಣಭಾರತದಲ್ಲೇ ಮೊದಲನೆಯದು.

ಆದುದರಿಂದ ಪ್ರೊಸ್ಪೆಕ್ಟಸ್ ಫೋರ್ಮುಗಳಿಗಾಗಿ ಈಗಲೇ ಬರೆದು ಕಂಪೆನಿಯ ಪಾಲುಗಳನ್ನು ಪಡಕೊಳ್ಳಿರಿ!

ಅಚ್ಚಿನಲ್ಲಿದೆ! ? ಅಚ್ಚಿನಲ್ಲಿದೆ!

ನವಯುವಕರನ್ನು ಮುಗ್ಧಗೊಳಿಸುವ ಮತಾಮಣಿ! — ಮಿಸ್ ಲಲಿತ — ವಾಚಕರ ಮನಸ್ಸನ್ನು ಸೂರೆಮಾಡುವ ಲಲಿತಾರಮಣಿ!

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು ಎತ್ತಿ ತೋರಿಸುವ ಪುಸ್ತಕವು.

ಹೊರಡಲಿರುವ ತಾರೀಕನ್ನು ಗಮನಿಸಿರಿ!

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಬರೆದವರು: ಯಂ. ವಿ. ಪುತ್ರಾನ್

ಕೂಡಲೇ ಬರೆಯಿರಿ. ಬೆಲೆ 0—8—0

ವಿಳಾಸ:— **M. V. Puthran,**
C/o 34, Bomanji Lane, *2nd Floor*, ***Fort, BOMBAY***

THE
MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಯಿ ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವೆಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಮಾಸ] ವಿಶ್ವವಾಣಿ [ಪತ್ರಿಕೆ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ: ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	...	...	...	ರೂ. ೩—೮—೦
,, ,, (೬ ತಿಂಗಳಿಗೆ)	...	...	...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)				ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚಾರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ— ವ್ಯವಸ್ಥಾಪಕ—'ವಿಶ್ವವಾಣಿ,'
'ಅನ್ನಪೂರ್ಣ', ವಿಶ್ವೇಶ್ವರಪುರಂ, ಬೆಂಗಳೂರು ನಗರ.

ಉಡುಪಿ ಏಜೆಂಟರು—ನವಭಾರತ ಬುಕ್ ಡಿಪೊ, ಉಡುಪಿ.

ಪು—ರು—ಷ—ವ—ಧ—!

ಏಕಾಂಕ ಪ್ರಹಸನ

೪ನೇ ನೋಟ

[ನವ ಜವಾನರೆಲ್ಲಾ ಒಟ್ಟು ಸೇರಿ ರಮೇಶನ ಮನೆಯಲ್ಲಿ ರಂಗರಾಯನ ಮದುವೆಯ ವ್ಯವಸ್ಥೆ ಮಾಡುವುದರಲ್ಲಿ ನಿರತರಾಗಿ ಬಹಳ ಉಲ್ಲಾಸದಿಂದ ತಮ್ಮೊಳಗೆ ಮಾತಾಡುತ್ತಿರುವರು.]

ಉಮೇಶ—ರಮೇಶ, ನೀವು ಅವರಿಗೆ ತೋರಿಸಿದ ಹುಡುಗಿ ಯಾವುದದು?

ರಮೇಶ—ಅದೆಲ್ಲಾ ನಿಮಗ್ಯಾಕೆ? ಹೇಗಾದ್ರೂ ನಮ್ಮ ಸಂಘಕ್ಕಷ್ಟು ದುಡ್ಡು ಸಿಕ್ಕಿತೋ ಇಲ್ಲವೋ?

ಉಮೇಶ—ಎಷ್ಟು ದುಡ್ಡು ಸಿಕ್ಕಿತು?

ರಮೇಶ—ಎಷ್ಟು ಕೇಳಿದ್ರೂ ಆ ಮುದುಕಪ್ಪ ಪಾಪ ಕೊಡುತ್ತಿತ್ತು. ಮದುವೆಯ ಮಂಕು ಹಿಡಿದು ಅದರ ಬುದ್ಧಿಯೇ ಭ್ರಂಶವಾಗಿರುವುದು. ನನಗೇನೇ ಹೆಚ್ಚು ತಕ್ಕೊಳ್ಳಲು ಮನಸ್ಸು ಬರಲಿಲ್ಲ. ಚಿನ್ನಾಭರಣಕ್ಕೆ ಒಂದು ಸಾವಿರ ರೂಪಾಯಿ, ಮದುವೆ ಖರ್ಚಿಗೊಂದು ಮುನ್ನೂರು, ಧಾರೆಸೀರೆ ಕುಪ್ಪಸಾದಿಗಳಿಗೊಂದು ನೂರಐವತ್ತು, ನಮ್ಮ ಕ್ಲಬ್ಬಿಗೆ, ವಾಚನಾಲಯಕ್ಕೆ, ಪುಸ್ತಕ ಭಂಡಾರಕ್ಕೆ, ಅದಕ್ಕೆ, ಇದಕ್ಕೆಂದೆಲ್ಲಾ ರೂಪಾಯಿ ಐನೂರು ಪಡಕೊಂಡೆ ಕಾಲದೆ? ಇದೊಂದು ಸಂದರ್ಭ ಸಿಕ್ಕಿದುದಕ್ಕಾಯಿತು; ಇಲ್ಲವಾದರೆ ಆ ಮುದಿ ಪ್ರಾಣಿ ಪ್ರಾಣ ಹೋಗುತ್ತದಂದ್ರೆ ಒಂದು ಕಾಸು ಬಿಚ್ಚುವದಲ್ಲ!

ಸುರೇಶ—ಅನ್ನವಿಲ್ಲದೆ ಸಾಯುತ್ತಿರುವವರಿಗೆ ಕೈಯೆತ್ತಿ ಒಂದು ಪೈ ಕೊಡದವರು, ಎಂತಹ ಜನೋಪಕಾರಿ ಕೆಲಸಕ್ಕಾದರೂ ಚಿಕ್ಕಾಸು ಸಹಾಯ ಮಾಡದವರು, ತಮ್ಮ ಸ್ವಂತ ಸುಖೋಪಭೋಗ, ಪರಲೋಕದ ಪುಣ್ಯಸಂಪಾದನೆಗಾಗಿ ಬೇಕಾದ್ರೆ ಸಾವಿರಗಟ್ಲೆ ವೆಚ್ಚಮಾಡಲು ಮುಂದಾಗುವರು. ಇಂತಹ ಮನೋವೃತ್ತಿಯನ್ನು ನಿರ್ಮೂಲಿಸಬೇಕೆಂದೇ ಗಾಂಧಿಜೀಯರು ನವೀನವಾದೊಂದು ಧರ್ಮ ಸಾರುತ್ತಿದ್ದಾರೆ.

ಸತೀಶ—ಈಗ ಲೋಕದಲ್ಲಿರುವ ಧರ್ಮಗಳು ಮಾಡಿರುವ ಅನಾಹುತ ಸಾಲದುದಕ್ಕೆ ಇನ್ನು ಗಾಂಧಿಯವರದೊಂದೇನು ನವೀನ ಧರ್ಮವೇ? ಲೆಕ್ಕ ಮಿತಿ ಇಲ್ಲದ ದೇವರುಗಳ ಸಂಖ್ಯೆಗೆ ಇನ್ನು ಗಾಂಧಿಯವರೊಂದು ಸೇರಿಬಿಟ್ಟು ಗಾಂಧಿ ಪುರಾಣ, ಗಾಂಧಿ, ಗಾಂಧಿ ಸಮಾಜ ಎಂದೆಲ್ಲಾ ಆಗಿಬಿಟ್ಟರೆ ಕಾಲಕ್ರಮೇಣ ಇವುಗಳ ಹಾಡೂ ಅಷ್ಟೆ!

ಉಮೇಶ—ನನ್ನ ಅಭಿಪ್ರಾಯ ಕೇಳುವುದಾದ್ರೆ ಈಗಿರುವ ಧರ್ಮದೇವರುಗಳನ್ನೆಲ್ಲಾ ನಾಶಮಾಡಿ ಬಿಡುವ, ಸೈತಾನನೊಬ್ಬನು ಅವತರಿಸಬೇಕು. ಆಗ ಲೋಕದ ಜನರೆಲ್ಲಾ ಯಾವ ಭೇದ ವೈಷಮ್ಯವೂ ಇಲ್ಲದೆ ಸೋದರ ಭಾವದಿಂದಿರಲು ಅತ್ಯನುಕೂಲವಾಗುತ್ತಿತ್ತು.

ರಮೇಶ—ಈ ಧರ್ಮದೇವರು ಎಂದೆಲ್ಲಾ ಜನರು ತಲೆ ಬಡಕೊಳ್ಳುತ್ತಾರಲ್ಲ, ಅದೇನು ಅನ್ನ ವಸ್ತ್ರ ಕೊಡುವುದೇ? ಅನೈಕ್ಯ, ಅನರ್ಥಕಾರಿಗಳಾದ ಈ ಧರ್ಮದೇವರುಗಳಿಲ್ಲದಿದ್ದರೆ ಲೋಕವು ಅದೆಷ್ಟು ಒಳ್ಳೇದಾಗುತ್ತಿತ್ತೋ ಏನೊ?

ಸತೀಶ—ಧರ್ಮ ದೇವರೆಂಬುದೆಲ್ಲಾ ಒಬ್ಬೊಬ್ಬರು ಬುದ್ಧಿವಂತರು ತಮ್ಮ ತಮ್ಮ ಕಲ್ಪನೆಯಂತೆ ಕಟ್ಟಿದ ಬಾಬೆಲ್ ಗೋಪುರ. ಅದು ನಮ್ಮ ಗಲಿಬಿಲಿಯನ್ನು ಮತ್ತಷ್ಟು ಹೆಚ್ಚಿಸುತ್ತದೆಯೇ ಹೊರತು ಮತ್ತೇನಿಲ್ಲ. ನಮಗೆ ನವ ಜವಾನರಿಗೆ ಯಾವ ಧರ್ಮ_ದೇವರುಗಳ ಗೊಡವೆಯೂ ಬೇಡ. ನಮ್ಮ ಸರ್ವಸ್ವವೂ ನಮ್ಮ ಜನ್ಮಭೂಮಿ. ಅದರ ಬಂಧವಿಮೋಚನೆಯೇ ನಮ್ಮ ಮಹಾ ಧರ್ಮ.

ಸುರೇಶ—ಸಾಕುಮಾಡಿ, ಸಾಕುಮಾಡಿ! ನಿಮ್ಮ ಕೆಲಸವೇನು? ನೀವೀಗ ಹರಟುತ್ತಿರುವುದೇನು? ಬುದ್ಧಿವಂತರೆಂದು ಮನಬಂದಂತೆ ಒದರಬಾರದು. ಧರ್ಮ ದೇವರುಗಳಿಲ್ಲದಿದ್ದರೆ ಲೋಕ ನಡೆಯುವುದಾದರೂ ಹೇಗೆ? ಗಾಂಧಿಜಿಯವರ ಪ್ರತಿಯೊಂದು ಕೆಲಸಕ್ಕೂ ಧರ್ಮವೇ ಮೂಲ. ಸಾಕ್ಷಾತ್ ಧರ್ಮಾವತಾರಿಯೇ ಆಗಿರುವ ಅವರ ಆತ್ಮಶಕ್ತಿಯ ಪ್ರಕಾಶವು ಇಡೀ ಲೋಕದಲ್ಲೆಲ್ಲಾ ಬೆಳಗುತ್ತಿರುವುದು. ನಾವೆಲ್ಲಾ ಅವರ ತತ್ವಗಳನ್ನನುಸರಿಸಿದರೆ........

ರಮೇಶ—ಸಾಕು, ಸಾಕು ನಿನ್ನ ಗಾಂಧಿತತ್ವ! ನಿನ್ನಂತೆ ಎಲ್ಲರಿಗೂ ಹಿರಿಯರು ಬೇಕಷ್ಟು ಮಾಡಿಟ್ಟಿದ್ದಿದ್ದರೆ ನಾವೂ ಗಾಂಧಿ ತತ್ವಗಳನ್ನು ಚೆನ್ನಾಗಿ ಅನುಸರಿಸಬಹುದು. ಇಲ್ಲವಾದರೆ ಬಿಕ್ಕೆ ಬೇಡಬೇಕಾದೀತು. ಗಾಂಧಿಯವರ ತತ್ವಗಳನ್ನೂ ಅವರಿಗೇನೇ ಅನುಸರಿಸಲು ಕಷ್ಟವಾಗುವುದು. ಮತ್ತುಳಿದವರ ಪಾಡೇನು? ನಮಗೆ ಬೇಕಾದುದು ಗಾಂಧಿಯವರಲ್ಲಪ್ಪ ಈಗ ಪಂಡಿತ ಜವ್ಹಾರಲಾಲರು. ಈ ಧರ್ಮದೇವರುಗಳ ಗೊಡವೆ ಅವರಿಗೆ ಒಂದಿಷ್ಟಾದರೂ ಇರುವುದೇ?

ಉಮೇಶ—ನಿಜವಾದ ರಾಷ್ಟ್ರಪತಿಯೆಂದರೆ ಅವರು. ದೇಶದ ಹೊರತು ಅವರಿಗೆ ಬೇರೆ ದೇವರಿಲ್ಲ, ಜನಹಿತದ ಹೊರತು ಅನ್ಯ ಧರ್ಮವಿಲ್ಲ. ಅವರೇನು ತನ್ನ ಆದರ್ಶಪರ ತತ್ವಗಳನ್ನು ಜನತೆಯ ಮೇಲೆ ಪ್ರಯೋಗಕ್ಕೆ ಹಚ್ಚುವುದಿಲ್ಲ. ಅವರನ್ನು ತನ್ನ ತಕ್ಕಡಿಯಿಂದ ಅಳೆಯುವುದಿಲ್ಲ.

ಸುರೇಶ—ಜವ್ಹಾರಲಾಲರೇ ಗಾಂಧಿಜಿಯವರ ಶಿಷ್ಯರಿರುವಾಗ ಅವರೊಳಗೆ ಭೇದಕಲ್ಪಿಸಿಕೊಂಡು ಜಗಳವೆಬ್ಬಿಸುವ ಅವಿವೇಕಕ್ಕೇನೆನ್ನಬೇಕು?

ಉಮೇಶ—ಲೋಕದಲ್ಲಿ ವಿವೇಕಶಾಲಿಯೆಂದರೆ ಸುರೇಶನೊಬ್ಬನೇ.

ಸುರೇಶ—ವೃಥಾ ನಾವು ನಾವು ಕಚ್ಚಾಡಿ ಫಲವೇನು? ಗಾಂಧಿತತ್ವದಿಂದಾಗಲೀ ಜವ್ಹಾರಲಾಲರಿಂದಾಗಲಿ ನಮ್ಮ ಮಾತೃಭೂಮಿಯ ಬಂಧವಿಮೋಚನೆಯಾಗಬೇಕಾಗಿದೆ ನಮಗೆ ಮೊದಲೀಗ.

ರಮೇಶ—ಈಗ ಎಲ್ಲದಕ್ಕಿಂತಲೂ ಮೊದಲು ಸತೀಶ ಹೆಣ್ಣಾಗಬೇಕಾಗಿದೆ. ರಂಗರಾಯರ ದಿಬ್ಬಣಬರುವ ಹೊತ್ತಾಯಿತು. ಮಾತಿನಲ್ಲೇ ನಾವು ಸಮಯ ಕಳೆದರೆ ಹ್ಯಾಗೆ?

ಉಮೇಶ—ಹೌದೌದು ಸತೀಶ, ಕೂಡಲೆ ನಿನ್ನ ಶೃಂಗಾರವಾಗಬೇಕು. ನೀನು ಹುಡುಗಿಯೆಂದೇ ಭಾವಿಸಿಕೊಂಡು, ಸ್ತ್ರೀ ಸಹಜ ಲಜ್ಜೆ, ವೈಯ್ಯಾರ, ಶೃಂಗಾರದಿಂದೆಲ್ಲಾ ಸ್ತ್ರೀಯನ್ನೂ ಹಿಂದಿಕ್ಕುವ ಸ್ತ್ರೀಯಾಗಿ, ಕಡೆಗಣ್ಣ ನೋಟ, ನಡುನಿತಂಬಗಳ ನಲಿದಾಟ, ಸೀರೆ ಸೆರಗಿನ ಸೆಳೆದಾಟದಿಂದೆಲ್ಲಾ ಹೇಗಾದರೂ ಆ ಮುದುಕಪ್ಪನಿಗೆ ಕೆಲಸಮುಗಿಯುವ ವರೆಗೆ ಮಂಕುಬೂದಿ ಬಳೆದು ಬಿಡಪ್ಪ.

ರಮೇಶ—ಛೆ, ಏನು ಹೇಳುವೆ ಉಮೇಶ! ನಿನಗೆ ಆ ಮುದುಕಪ್ಪನ ಸಂಗತಿಯೇ ತಿಳಿದಿಲ್ಲೆಂದು ತೋರುತ್ತದೆ. ಅವನೊಂದು ಹೆಣ್ಣು ಗೊಂಬೆಯನ್ನಾದರೂ ಒಂದೊಮ್ಮೆ ಮದುವೆಮಾಡಿಯೇ ಕೊಳ್ಳುತ್ತಾನೆ. ಅಷ್ಟೊಂದು ಹುಚ್ಚುತಾಗಿದೆ ಅವನಿಗೆ ಮದುವೆದ್ದು! ಸತೀಶನಿಗೆ ಆ ವಿಷಯದಲ್ಲೇನು ಕಷ್ಟವೇ ಇಲ್ಲ. ಅವನೊಂದು ಸೀರೆ ಉಟ್ಟು ಕುಳಿತುಬಿಟ್ಟರಾಯಿತು.

ಸುರೇಶ—ಸೀರೆಯಾದರೂ ಉಡಬೇಕಲ್ಲ. ನಾವೀಗ ವೃಥಾ ಚರ್ಚಿಸುತ್ತಾ ಕಾಲ ಕಳೆದರೆ ಮತ್ತೆ ನಮ್ಮ ಸಿದ್ಧತೆಯೆಲ್ಲಾ ಆಗುವುದು ಯಾವಾಗ?

ಉಮೇಶ—ಹಾ, ಮೋಸವಾಯಿತೀಗ! ತಲೆಕೂದಲಿಗೇನುಮಾಡುವುದು?

ರಮೇಶ—ಯಾಕೆ ತಲೆಕೂದಲು? 'ಬೋಬ್' ಮಾಡಿದ 'ಅಪ್-ಟು-ಡೇಟ್' ಹುಡುಗಿಯೆಂದರಾಯಿತು.

ಸುರೇಶ—ಅದೇಕೆ? ಫಾರ್ಸಿ ಡ್ರೆಸ್ ಮಾಡಿಬಿಟ್ಟರಾಯಿತು. ಬಾ ಸತೀಶ, ಒಳಗೆ ಹೋಗುವ. ನಾನು ನಿನ್ನನ್ನೆಲ್ಲಾ ಡ್ರೆಸ್‌ಮಾಡಿ ಫಸ್ಟ್‌ಕ್ಲಾಸ್ ಹುಡುಗಿಮಾಡಿ ಬಿಡುತ್ತೇನೆ.

ರಮೇಶ—ಆಯ್ತು. ನೀನು ಅದಾವದೊಂದು ಕೆಲಸಮಾಡು. ನಾವು ಬೇರೆ ಕೆಲಸ ನೋಡುತ್ತೇನೆ ಹೊತ್ತಾಯಿತು. (ಎಲ್ಲರೂ ಬೇರೆ ಬೇರೆ ಕೆಲಸಗಳಲ್ಲಿ ನಿರತರಾಗುವರು.)

೫ನೇ ನೋಟ

[ರಮೇಶನ ಮನೆಯಲ್ಲಿ ಮದುವೆಯು ನಿರ್ವಾಣವಾಗಿ ದಿಬ್ಬಣಿಗರನ್ನೆಲ್ಲಾ ಸಂಭ್ರಮದಿಂದ ಎದುರ್ಗೊಂಡು ಔತಣವಾಗಿ ಸುಮೂರ್ತದಲ್ಲಿ ಶಿವರಾಯನು ಮದುಮಗ ರಂಗರಾಯನನ್ನೂ ರಮೇಶನು ಮದುಮಗಳು ಸತೀಶನನ್ನೂ ಕೈಹಿಡಿದು ಕರೆತಂದು ಧಾರೆಚಪ್ಪರದಲ್ಲಿ ಕೂತುಕೊಳ್ಳಿಸುವರು.]

ರಮೇಶ—(ಮುಖಕ್ಕೆ ಮುಸುಕುಹಾಕಿ ಮರೆಮಾಡಿಕೊಂಡಿದ್ದ ಸತೀಶನಿಗೆ ಚಿವುಟಿ) ಏನೆ ರಮೆ! ಇನ್ನೇಕಿಷ್ಟು ಲಜ್ಜೆ ನಿನಗೆ? ಇನ್ನಾದರೂ ನಿನ್ನ ಗಂಡನನ್ನು ಕಣ್ಣೆತ್ತಿ ನೋಡಬಾರದೇ? ಮಹಾ ಪತಿವ್ರತೆಯಪ್ಪ ಇವಳು, ಮಹಾಪತಿವ್ರತೆ! ಬಹಿರಂಗವಾಗಿ ಪರಪುರುಷರ ಮುಖವಂತಿರಲಿ, ಗಂಡನ ಮುಖ ಸಹ ನೋಡ್ಲಿಕ್ಕಿಲ್ಲನಂತೆ!

ಶಿವ—ನಮ್ಮ ಮದುಮಗರಾಯರೂ ಅಂತರಂಗದಲ್ಲಿ ಹೊರತು ಬಹಿರಂಗವಾಗಿ ತನ್ನ ಪತ್ನಿಯ ಮುಖವನ್ನೂ ಕಣ್ಣೆತ್ತಿ ನೋಡಲಾರದ ಪತ್ನೀವ್ರತರಪ್ಪ ಪತ್ನೀವ್ರತರು!

ರಮೇಶ—ಹಾಗಾದರೆ ಆ ಹುಡುಗನಿಗೆ ಈ ಹುಡುಗಿ ಜತೆ ಸಮ. ಸರ್ಸಿಗೆ ಹೋದ್ರೆ ಇಂತಹ ಜತೆ ಸಿಗಲಿಕ್ಕಿಲ್ಲ. (ವಿವಾಹ ವಿಧಿಯೆಲ್ಲಾ ಮುಗಿದು ನಾಗೋಲಿಯಾಗಿ ದಿಬ್ಬಣಿಗರಿಗೆಲ್ಲಾ ಸಂಭ್ರಮದ ಭೋಜನ ನಡೆಯುವದು. ಆ ಮೇಲೆ ರಂಗರಾಯರು ಮೆಲ್ಲಗೆ ಶಿವರಾಯರನ್ನು ಒಂದೆಡೆ ಕರೆದು)

ರಂಗ—ರಾಯರೆ! ರಾಯರೇ! ನಾನೇನು ಮೋಸ ಹೋದೆನೋ ಏನು?

ಶಿವ—ಏನು, ಏನಾಯಿತು?

ರಂಗ—ಆ ಹುಡುಗಿಯನ್ನೀಗ ಸ್ವಲ್ಪ ಪರೀಕ್ಷಿಸ ಬೇಕಾಯಿತಲ್ಲಾ? ಈಗ ಇಡೀ ದಿನ ಅದು ಮುಖದಿಂದ ವಸ್ತ್ರ ತೆಗೆಯುವುದೇ ಇಲ್ಲ. ಇದರಲ್ಲೇನೋ ಮೋಸ ಇರಬೇಕು

ಶಿವ—ಹ! ಹ!! ಹ!!! (ನಕ್ಕು) ಇನ್ನು ಹುಡುಗಿಯನ್ನು ಪರೀಕ್ಷಿಸುವುದೆ? ಮನೆಗೆ ಹೋಗಿ ನೋಡುವ. ನಿಮಗಿಷ್ಟು ಅವಸರವೇನಪ್ಪ? ಸ್ವಲ್ಪ ಲಜ್ಜಾವತಿ ಹುಡುಗಿಯೆಂತ ಕಾಣುತ್ತದೆ. ಏನಾಯ್ತೀಗ?

ರಂಗ—ಅಲ್ಲ ನೋಡಿ, ನಾನು ಧಾರೆಮಣೆಯಲ್ಲಿ ಕುಳಿತಿದ್ದೇನೆ. ನನಗೆ ಎರಡು ಮೂರು ಸಲ ಚಿವುಟಿತು. ನಾನು ಕುರ್ಚಿಯಲ್ಲೆಲ್ಲಾದರೂ ತಗಣೆಯಿದೆಯೋ ಎಂದು ತಡಕೊಂಡು ಸುಮ್ಮನಿದ್ದೆ. ಮತ್ತೊಮ್ಮೆ ಹೀಗೆ ನೋಡುತ್ತೇನೆ, ಹುಡುಗಿ ಮೆಲ್ಲಗೆ ಕೈ ತರುತ್ತದೆ! ನಾನೇನು ಮಾಡುವುದಪ್ಪ! ಏಳಲಿಕ್ಕೂ ಅಲ್ಲ ಕೂತುಕೊಳ್ಳಲಿಕ್ಕೂ ಅಲ್ಲ, ಒಟ್ಟು ಫಜೀತಿಯಲ್ಲಿ ಬಿದ್ದುಬಿಟ್ಟೆ!

ಶಿವ—(ಗಹಗಹಿಸಿ ನಕ್ಕು) ಓಹೋ ಇಷ್ಟೆಯೋ? ಅದೆಲ್ಲಾ ಪ್ರಾಯದ ಹುಡುಗಿಯರ ಪ್ರೇಮಚೇಷ್ಟೆ. ಹುಡುಗಿ ಸ್ವಲ್ಪ ಪ್ರಾಯದ್ದು ನೋಡಿ. ಆ ವಿನೋದವೆಲ್ಲಾ ನೀರಸ ಮದುಮಗನಾದ ನಿಮಗೇನು ಗೊತ್ತು?

ರಂಗ—ಒಳ್ಳೇ ವಿನೋದವಿದು! ನೀವಾದ್ರೆ ಬೊಬ್ಬೆ ಹಾಕುತ್ತಿದ್ರಿ. ನಾನು ಹ್ಯಾಗಾದ್ರೂ ತಡಕೊಂಡೆ. ನಂತರ ಧಾರೆಗೆ ಕೈಹಿಡಿಯುತ್ತೇನೆ, ನನ್ನ ಕೈ ಗಟ್ಟಿ ಹಿಡಿದು ಬೆರಳುಮುರಿಯಲಿಕ್ಕೆ ನೋಡುತ್ತದೆ ಹುಡುಗಿ. ಏನೆನ್ನಬೇಕು ನಾನು?

ಶಿವ—ಹೀಗೆ ಹುಡುಗಿಗೆ ಹೆದರುವ ನೀವು ಮದುವೆಮಾಡಿಕೊಂಡುದೇಕಪ್ಪ? ಪ್ರೇಮ ವಿನೋದವೆಂದರೆ ನಿಮಗೆ ಗೊತ್ತೇ ಇಲ್ಲ. ಏನೆಲ್ಲಾ ಮಾತಾಡಿ ಇಲ್ಲಿಯೂ ಅಪಹಾಸ್ಯಕ್ಕೊಳಗಾಗಬೇಡಿ. ಜಾಗ್ರತೆ!

೫ನೇ ನೋಟ

ರಂಗ—ಆಮೇಲೆ ಕೈಕೈಹಿಡಿದು ಅಗ್ನಿ ಪ್ರದಕ್ಷಿಣೆಬರುವಾಗ ನನ್ನ ಕೈಯನ್ನು ಹಿಡಿದು ಬಗ್ಗಿಸುವುದರಲ್ಲಿರುವಾಗ ನಾನು, 'ಛೆ! ಛೆ!!' ಎಂದು ತಪ್ಪಿಸಿಕೊಂಡೆ! ಆ ಮೇಲೆ ಕೈಹಿಡಿಯಲೊಪ್ಪಲ್ಲೆ ಇಲ್ಲ. ಇದೆಂತಹ ಹುಡುಗಿಯಪ್ಪ! ಏನನರ್ಥವಿದು!

ಶಿವ—ಹೌವೌದು ಅನರ್ಥ! ಸಾಕುಸಾಕು ಬನ್ನಿಲ್ಲಿ. ದಿಬ್ಬಣ ಹೊರಡುವ ಹೊತ್ತಾಯಿತು. (ಶಿವರಾಯನು ರಂಗರಾಯನನ್ನು ಕೈಹಿಡಿದು ಕರದೊಯ್ಯುವನು. ರಮೇಶನು ವಧುವನ್ನು ವರನಿಗೊಪ್ಪಿಸಿ ಕೊಟ್ಟಮೇಲೆ ದಿಬ್ಬಣ ಹೊರಡುವುದು ಆಗ ರಂಗರಾಯರ ಹತ್ತಿರ ನಿಂತಿದ್ದ ವಧುವು ಸಂದರ್ಭನೋಡಿ ರಂಗರಾಯನ ಕಿಬ್ಬದಿಗೆ ಸರಿ ಚಿವುಟುವಳು. ರಂಗರಾಯನು 'ಆಯ್ಯೋ!' ಎಂದು ಬೊಬ್ಬೆಹಾಕಿ ವಧುವಿನ ಅವಕುಂಠನವನ್ನು ಎಳೆದುಹಾಕುವನು)

ಶಿವ—ಇದೇನು ಈ ಹುಡುಗಿಗೆ ತಲೆಮುಡಿಯಿಲ್ಲ?

ರಂಗ—ಹೌದೌದು, ಏನಿದು! (ಗಡಗಡ ನಡುಗುತ್ತಾ) ನನಗೀ ಹುಡುಗಿ ಬೇಡಪ್ಪ! ನನಗೆ ಬೇಡ! ಈಗಲೇ ಇಷ್ಟು ಮಾಡಿದವಳು ಇವಳು ಇನ್ನು ನನ್ನ ಪ್ರಾಣತೆಗೆದಾಳು! ಧಾರೆಮಣೆಯಲ್ಲೇ ಶುರುವಾಗಿದೆ ನನಗೆ ಇವಳ ಕಾಟ!

ರಮೇಶ—ನಿಮಗೆ ಮುದುಕರಿಗೆ ಈಗಿನ ಹುಡುಗಿಯರ ಸಂಗ್ತಿಯೇ ಗೊತ್ತಿಲ್ಲ ಸ್ವಾಮಿ. ಅವರು ತಲೆಮುಡಿ ಈಗ ಇಟ್ಟುಕೊಳ್ಳುವುದಿಲ್ಲ. ಕೂದಲನ್ನೆಲ್ಲಾ ಸರಿಕತ್ತರಿಸಿ 'ಬೋಬ್' ಮಾಡಿಬಿಡುತ್ತಾರೆ. ಇದೀಗ ಈಗಿನ ಫೆಶನು!

ರಂಗ—ಅಲ್ಲಲ್ಲ! ಅದು ಹು—ಹುಡುಗಿಯಲ್ಲ, ಹು—ಹು—ಹುಡುಗ ಸ್ವಾಮಿ! ನನಗೆ ಬೇಡ ಶಿವರಾಯರೇ, ನಾವಿಲ್ಲಿಂದ ಬೇಗ ಹೊರಟುಹೋಗುವ! ನನ್ನ ಹಣವಾದರೂ ವಾಪಾಸು ಕೊಟ್ಟುಬಿಡಿ. ನಿಮ್ಮ ನೆಂಟಸ್ತಿಕೆ ನಮಗೆ ಬೇಡ. (ಸತೀಶನು ನಸುನಕ್ಕು ತಲೆಗೆ ಸೆರಗೆಳೆದುಕೊಂಡು ರಂಗರಾಯರ ಕೈ ಹಿಡಿಯ ಬರುವನು.) ಆಯ್ಯೋ! ಹುಡುಗಿಯಲ್ಲ ಹುಡುಗ! ಶಿವರಾಯರೇ ಹೋಗುವ, ಇಲ್ಲಿಂದೊಮ್ಮೆ!

ಶಿವ—ಏನಪ್ಪ ಏನಿದು ಪ್ರಮಾದ!

ರಮೇಶ—ಪ್ರಮಾದ ಏನೂ ಇಲ್ಲ. ಮದುವೆ ಮುಗಿಯಿತು. ಇನ್ನು ನಿಮ್ಮ ಹುಡುಗಿಯನ್ನು ನೀವು ಕರಕೊಂಡು ಹೋಗಲೇಬೇಕು. ಕರಕೊಂಡು ಹೋಗದಿದ್ದರೆ ತಿಂಗಳಿಗೆ 50 ರೂಪಾಯಿ ಜೀವನಾಂಶ ಕೊಡಬೇಕಾದೀತು!

ರಂಗ—ಅಯ್ಯಯ್ಯೋ! ಇದು ಹುಡುಗಿಯಲ್ಲ ಸ್ವಾಮಿ ಹುಡುಗ! ಮೂಗಿನಲ್ಲಿ ಬೊಟ್ಟಿಲ್ಲ, ಕಿವಿಯಲ್ಲಿ ಬೆಂಡೋಲೆ ಇಲ್ಲ, ತಲೆಮುಡಿಯಿಲ್ಲ, ಇದೆಂತಹ ಹುಡುಗಿ ಸ್ವಾಮಿ? ಎಂತಹ ತಿಳಿಗೇಡಿತನವಾಯಿತು ಈ ಕೇಡಿಗಳೊಂದಿಗೆ ಕೂಡಿ! ಇವರು ಮತ್ತೆ ಗಾಂಧಿ ಕಡೆಯವರಂತೆ!

ಸತೀಶ—(ಸೀರೆ ಬಿಚ್ಚಿ ಹಾಕಿ) ಕೇಡಿಗಳೆಂದರೆ ಜಾಗ್ರತೆ! 60 ವರ್ಷದ ಹಣ್ಣು ಮುದುಕರು 6-7 ವರ್ಷದ ಎಳೆ ಬಾಲಕಿಯರನ್ನು ಮದುವೆಮಾಡಿಕೊಂಡು ಅವರ ಸಂಸಾರ ಸುಖವನ್ನು ಮಣ್ಣುಗೂಡಿಸಿ ಜೀವನ್ಮೃತರನ್ನಾಗಿ ಮಾಡುವ ನೀವು ಕೇಡಿಗಳಿಗಿಂತಲೂ ಕಡೆಯಲ್ಲವೇ?

ರಮೇಶ—ಪಾಪ, ಮುದುಕನ ಮದುವೆಗೆ ಮುನ್ನೂರು ವಿಘ್ನ! ರಾಯರೇ ಇನ್ನಾದರೂ ನಿಮ್ಮ ಮದುವೆಯ ಹುಚ್ಚು ಹೋಯಿತೇ? ಪಿಂಡ ಹಾಕ್ಲಿಕ್ಕೆ ಗಂಡು ಮಗನೊಬ್ಬ ನಿಮಗೆ ಬೇಕಾದ್ರೆ, ನಾನು ಬರುತ್ತೇನೆ ನಿಮ್ಮ ಮನೆಗೆ.

ರಂಗ—ಆಯ್ತಪ್ಪ ಆಯ್ತು! ನೋಡಿದಿರಾ ಶಿವರಾಯರೇ ಗಾಂಧಿ ಕಡೆಯವರ ಕೆಲಸ?

ಸುರೇಶ—ಯಾರು ಗಾಂಧಿ ಕಡೆಯವರು ಸ್ವಾಮಿ? ಸುಮ್ಮಗೆ ಸಿಕ್ಕಿದವರನ್ನೆಲ್ಲಾ ಗಾಂಧಿ ಕಡೆಯವರು ಗಾಂಧಿ ಕಡೆಯವರೆನ್ನುವುದೇ?

ರಂಗ—ಯಾರಾದ್ರೂ ಆಗಲಿ. ನಮ್ಮ ಹಣ ವಾಪಾಸು ಕೊಟ್ಟುಬಿಡಿ.

ರಮೇಶ—ಯಾರ್ಯಾರಿಂದ ಲಂಚಹೊಡೆದು ಬಡವರ ಕುತ್ತಿಗೆ ಕೊಯ್ದು ಮಾಡಿದ ಹಣವದು! ಒಂದು ಪೈ ಸಿಕ್ಕಲಿಕ್ಕಿಲ್ಲ. ನಮ್ಮ ಚಂದದ ಹುಡುಗಿಯನ್ನು ಒರಟು ಹುಡುಗನನ್ನಾಗಿ ಮಾರ್ಪಡಿಸಿದುದಕ್ಕಾಗಿ ಪರಿಹಾರ ದ್ರವ್ಯ ನೀವು ಕೊಡಬೇಕು ನಮಗೆ!

ರಂಗ—ಶಿವರಾಯರೇ! ನಮ್ಮ ಪ್ರಾಣ ಉಳಿದದ್ದೇ ದೊಡ್ಡದು! ಸಾಕಪ್ಪ ಸಾಕು, ನನಗಿನ್ನು ಮದುವೆಯೇ ಸಾಕು! ಹೋಗುವ ರಾಯರೇ, ಹೋಗುವ! (ಕಣ್ಣೀರಿಡುತ್ತಾ ಹೊರಹೋಗುವನು)

ರಮೇಶ—ಹಣ್ಣು ಮುದುಕರಿಗೆ ಹಿಡಿದ ಮದುವೆಯ ಮಂಕನ್ನು ಬಿಡಿಸುವ ಉಪಾಯವೆಂದರೆ ಈ ಪುರುಷ ವಧು ವಿವಾಹ. ಎಳೆ ಬಾಲಕಿಯರ ಜೀವನವನ್ನು ಮೊಳಕೆಯಲ್ಲೇ ಮುರಿದು ಬಿಡುವ ಪೈಶಾಚಿಕ ಪದ್ಧತಿಯನ್ನು ಹೇಗಾದರೂ ನಿಲ್ಲಿಸುವಂತೆ ಮಾಡುವುದೇ ನಮ್ಮ ಉದ್ದೇಶ. ಮದುವೆಯ ಹುಚ್ಚು ಹಿಡಿದ ಮುದುಕರಿಗೆ ರಂಗರಾಯರೊಂದು ಪಾಠವಾಗಲಿ. ಈ ಸಂತೋಷ ಸಂದರ್ಭವನ್ನು ನಾವು ಇಡೀ ಪಟ್ಟಣದಲ್ಲೆಲ್ಲಾ ಮೆರವಣಿಗೆ ಮತ್ತು ನವಜೀವನ ಕ್ಲಬ್ಬಿನಲ್ಲಿ ಸಭೆನಡಿಸಿ ಆಚರಿಸಬೇಕು. ನಮ್ಮ ಮಾದರಿಯನ್ನು ಇನ್ನಿತರ ಯುವಕರೂ ಅನುಸರಿಸಿ ಸಮಾಜದಲ್ಲಿ ಮುದುಕರ ವಿವಾಹವೇ ನಡೆಯದಂತಾಗಬೇಕು. (ಎಲ್ಲರೂ ಹೋಗುವರು.)

—:— ಸಂಪೂರ್ಣಂ —:—

15 ವರ್ಷಗಳ ಅನುಭವ! ಗ್ಯಾರಂಟೀ ಕೆಲಸ !!

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು

ಪ್ರಸಿದ್ಧರಾಗಿರುವ

ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕಣ್ಣಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು.

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ.

ಗಣಪತಿ ರಾವ್, ಪೈಂಟರ್,
ಸೋದೆ ಮಠದ ಲೇನು - - ಉಡುಪಿ, ದ. ಕ.

ಗ್ರೇಂಡ್ ಸೇಲ್! ಗ್ರೇಂಡ್ ಸೇಲ್!!

ನಮ್ಮಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಯಾವತ್ತೂ ಶಾಲೋಪಕರಣಗಳೂ ಇತರ ಎಲ್ಲಾ ತರದ ಅತ್ಯಾಧುನಿಕ ಮಾದರಿಯ ಸ್ಟೇಶನೆರಿ, ಕಟ್ಲೆರಿ ವಗೈರೆ ನಿತ್ಯೋಪಯುಕ್ತ ಸಾಮಾಗ್ರಿಗಳೂ ಅತ್ಯಂತ ಕಡಿಮೆದರದಲ್ಲಿ ಮಾರಲ್ಪಡುತ್ತವೆ

ಅಲ್ಲದೆ ಜೂನ್ ತಾ. 1ರಿಂದ ತಾ. 30ರ ತನಕ

ನಮ್ಮಲ್ಲಿ ಒಂದೇ ಬಾರಿಗೆ ಎಂಟಾಣೆಗೆ ಮೇಲ್ಪಟ್ಟು ವ್ಯಾಪಾರಮಾಡುವವರಿಗೆ

ಅತ್ಯಮೂಲ್ಯವಾದ ಇನಾಮುಗಳು ಕೊಡಲ್ಪಡುವವು.

ಹೆಚ್ಚಿನ ವಿವರಗಳಿಗೆ ನಮ್ಮ ಪ್ರಕಟನಾಪತ್ರವನ್ನು ನೋಡಿರಿ.

ಎಸ್. ಅನಂತರಾಮಾಚಾರ್,
ಪುಸ್ತಕ ಮತ್ತು ಸ್ಟೇಶನೆರಿ ವ್ಯಾಪಾರಿ, ತಾಲೂಕು ಕಚೇರಿ ಬಳಿ, ಉಡುಪಿ.

Mohini Harmonium Works, Udipi

Single Hand Harmoniums, Portable Hand Harmoniums
Double sets of Hand Harmoniums,
Trible sets of Hand Harmoniums,
Folding leg Harmoniums
Specially Constructed in our Work Shop. Well tuned and fitted.

Repairs of all kinds of Musical instruments undertaken at a very moderate rate to the Complete satisfaction of our customers.

A Trial order is earnestly solicited.

For Further Particulars

Apply to:

M. K. KORAGAPPA, *Proprietor.*

ಗಣಪತಿ ವಿಲಾಸ

ಕೋರ್ಟು ರಸ್ತೆ - - - ಉಡುಪಿ

ಭೋಜನ-ಉಪಹಾರ-ವಿಶ್ರಾಂತಿ ಇವುಗಳಿಗೆ ಆದರ್ಶ ಗೃಹ

ಆರೋಗ್ಯಕರವೂ ಹಿತಕರವೂ ಆದ ಭೋಜನ ಸ್ನಾನ,—ವಸತಿಗಳಿಗೆ ಯೋಗ್ಯ ಸೌಕರ್ಯ—ಟೀಪಾರ್ಟೀ ಇತ್ಯಾದಿಗಳಿಗೆ ಉತ್ಕೃಷ್ಟ ಸಿದ್ಧತೆಗಳು !!!

ಮುನ್ಸಿಫ್ ಕೋರ್ಟು, ಕಚೇರಿ ಮತ್ತು ಶಾಲೆಗಳಿಗೆ ಸಮೀಪದ ಕೇಂದ್ರದಲ್ಲಿದ್ದು ಸರ್ವರಿಗೂ ಅತ್ಯಂತ ಅನುಕೂಲವಾಗಿರುತ್ತದೆ. ವಿದ್ಯಾರ್ಥಿಗಳಿಗೆ ರಿಯಾಯತಿ ದರದಲ್ಲಿ ಉತ್ತಮ ತರದ ವಿಹಾರ ಡುಮಾಡಲಾಗುವುದು.

ಕೆ. ಮಂಜುನಾಥಯ್ಯ, ಪ್ರೊಪ್ರೈಟರ್.

The Combined Booking Agency

AND

The Joint Booking Office

MANGALORE, SOUTH KANARA.

— ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ —

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ—ಚಾರ್ಮಾಡಿ

ಉಜಿರೆ (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ)

ಮಂಗಳೂರು

ಪುತ್ತೂರು

ಮೂಲ್ಕಿ

ಕಾರ್ಕಳ

ಉಡುಪಿ

ಕುಂದಾಪುರ

ಮೂಡಬಿದ್ರೆ

ಗಂಗೊಳ್ಳಿ

ಜಿಲ್ಲೆಯ ಹೊರಗೆ—

ಮಡಿಕೇರಿ, ಮೈಸೂರು, ಸಕಲೇಶಪುರ, ಚಿಕ್ಕಮಗಳೂರು, ಮೂಡಗೆರೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿ ಗೃಹಗಳು ನಿರ್ಮಿಸಲ್ಪಡುವುವು. ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜ್ಯೋಂಟ್ ಮೆನೇಜರರಿಗೆ ತಿಳಿಸಿರಿ.

SUSHEELA & CO., KOLLEGAL. (S. INDIA.)

1000 ರೂಪಾಯಿಗಳ ಬಹುಮಾನ

ಪ್ರತಿ ಎರಡು ಕೂಪನ್‌ಗಳಿಗೂ ಒಂದು ಕೂಪನ್ ಉಚಿತ.

ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ **16-8-1937**. ಫಲಿತಾಂಶವನ್ನು ಪ್ರಕಟಿಸುವ ದಿನ **20-8-1937**.

ಮೂರು ಕೂಪನ್‌ಗಳೂ ಸರಿಯಾಗಿ ಕಳುಹಿಸಿದವರಿಗೆ **500** ರೂಪಾಯಿಗಳು.

ಒಂದು ಕೂಪನ್ ತಪ್ಪುಳ್ಳವರಿಗೆ **200** ರೂಪಾಯಿಗಳು, ಎರಡು ಕೂಪನ್ ತಪ್ಪುಳ್ಳವರಿಗೆ **100** ರೂಪಾಯಿಗಳು.

ಇತರ ಬಹುಮಾನಗಳು.

3 ಕೂಪನ್‌ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ **125** ರೂಪಾಯಿಗಳು ಹೆಚ್ಚಾಗಿ ಕೂಪನ್‌ಗಳು ಕಳುಹಿಸಿದವರಿಗೆ **75** ರೂಪಾಯಿಗಳು.

		17		

ಸುಶೀಲ ಅಂಡ್ ಕೋ., ಕೊಳ್ಳೇಗಾಲ.

ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ.

ಹೆಸರು ______

ವಿಳಾಸ ______

ಪೋಸ್ಟಲ್ ಮಣಿಯಾರ್ಡರ್ ನಂಬರು ______

ಸ್ಟಾಂಪುಗಳು ______ ತಾರೀಕು ______ 1937.

ಉತ್ತರಗಳನ್ನು ಕಂಡುಹಿಡಿಯುವ ಕ್ರಮ:—ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡವಾಗಿ, ಮೂಲೆಗಳಿಂದ 85 ಬರುವಂತೆ, ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಶಾಯಿಯಲ್ಲಿ ಬರೆದು ಕಳುಹಿಸಬೇಕು.

ನಿಬಂಧನೆಗಳು

ಪ್ರವೇಶ ಧನ ಕೂಪನ್‌ಗೆ 0—8—0 ಆಣೆ. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲಿ ಮಣಿಯಾರ್ಡರ್ ಅಥವಾ ಪೋಸ್ಟಲ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು. ಉತ್ತರಗಳು 16–8–1937ರೊಳಗೆ ನಮ್ಮ ಕೈಸೇರಬೇಕು ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಾಸುಮಾಡಲಾಗುವುದಿಲ್ಲ. ಮತ್ತು ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲಾಗುವುದು. ಮೆನೇಜರರ ತೀರ್ಮಾನವೇ ಕಡೇ ತೀರ್ಮಾನ. ಬಹುಮಾನಗಳನ್ನು ಪಡೆದವರ ಹೆಸರುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು ತಮ್ಮ ವಿಳಾಸದೊಡನೆ 0—1—0 ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಶರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್: **ಸುಶೀಲ ಅಂಡ್ ಕೋ., ಕೊಳ್ಳೇಗಾಲ.**

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರಾಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೭ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| **ಸುಮತಿಬಾಯಿ,**

ಬಿ. ಎ ಎಲ್ ಟಿ., ಎಫ್. ೩. ಎಮ್. ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್-

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷದಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

The Coondapoor Bank, Ltd.,

Head Office.- **Coondapoor.** Branch Office.-**Brahmavar.**

Begs to announce that a new Branch has been opened at SHANKRANARAYANA on 4-6-37.

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ, ಇಲ್ಲಿ ಇದೇ ತಾ. 4ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ ಶೆ 4,
ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ 4
6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5%,
1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5½%
2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.
ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈಡಿನಮೇಲೂ ಸಾಲದೊರೆಯುವುದು.
ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತವೆ. ಸಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್ — N. Sheshagiri Rao, ಸೆಕ್ರಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು



ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷವಡುವಿರಿ. ಕ್ರಯ ದಬ್ಬಿ **1 ಕ್ಕೆ 1-8-0.**

ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪೆನಿ,

೩. ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜೆ. ಟಿ. ಮದರಾಸ್.

ಬೋಡು!

ತುಳು ಪುಸ್ತಕಲೆನ್ ಮಾರ್ರೆಗ್
ತುಳುನಾಡ್‌ಡ್ ಅಲ್ಪಲ್ಪ
ಏಜೆಂಟೆರ್ ಬೋಡು.
ಯೋಗ್ಯ ಉಮೇದುವಾರುಲು
ಅರ್ಜಿ ಪಾಡೊಲಿ.

ಎಸ್. ಯು. ಪಣಿಯಾಡಿ
ತುಳು ಸಾಹಿತ್ಯ ಮಾಲೆ
ಉಡುಪಿ

ANNOUNCEMENT

WE ARE GOING TO PUBLISH

MERCHANTS' HANDBOOK

AN INEVITABLE HAND BOOK
FOR MERCHANTS
USEFUL FOR
DAILY REFERENCE

Reserve advertisement pages is this book.

Advertisement Manager
SUPPLY AGENCY LTD.,
UDIPI

USE
SUVASINI AGARBATHIES
(REGISTERED)

SRI BHARATHA VASTU MANDIRA, UDIPI.

Printed by P VENKATARAMANACHARYA for & on behalf of SUPPLY AGENCY LTD, at THULUNAD PRESS, UDIPI and Published by K. H SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು--–ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc.
APPLY TO THE MANAGER

ನವಯುಗ

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣು ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL XVI-NO. 43; 1-7-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
‘ನವಯುಗ’ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧ ಜುಲಾಯಿ, ೧೯೩೭ [ಸಂಚಿಕೆ ೪೩

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I.)

BRANCHES:

1 BOMBAY

2 BANGALORE CITY	17 HUBLI
3 BELGAUM	18 GADAG
4 BYADGI	19 KARWAR
5 BELLARY	20 KUMTA
6 ADONI	21 ANKOLA
7 HOSPET	22 HONAVAR
8 TALIPARAMBA	23 BHATKAL
9 UPPINANGADI	24 BRAHMAVAR
10 KASARGODE	25 HUNGARCUTTA
11 PAYYANUR	26 SIRSI
12 KANHANGAD	27 SAGAR
13 KARKALA	28 COONDAPOOR
14 NANDYAL	29 UDIPI
15 PRODATTUR	30 MANGALORE
16 TADPATRI	31 CANNANORE

BEG TO ANNOUNCE

that the Syndicate has been included in the list of Scheduled Banks under the Reserve Bank of India Act.

Non-Scheduled Banks, other companies and company promoters may take advantage of this for depositing their amounts with the Syndicate under the Indian Companies Act 1936.

Paid up Capital	Rs. 3,48,400
Reserves	„ 1,92,390
Deposits exceed	„ 24 lakhs
Total Working Funds exceed	„ 43 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦**
೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುಸ್ತಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.
ಪತ್ತೆ:—ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

SUSHEELA & CO., KOLLEGAL. (S. INDIA.)

1000 ರೂಪಾಯಿಗಳ ಬಹುಮಾನ

ಪ್ರತಿ ಎರಡು ಕೂಪನ್‌ಗಳಿಗೂ ಒಂದು ಕೂಪನ್ ಉಚಿತ.

ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ **16-8-1937**. ಫಲಿತಾಂಶವನ್ನು ಪ್ರಕಟಿಸುವ ದಿನ **20-8-1937**.

ಮೂರು ಕೂಪನ್‌ಗಳೂ ಸರಿಯಾಗಿ ಕಳುಹಿಸಿದವರಿಗೆ 500 ರೂಪಾಯಿಗಳು.

ಒಂದು ಕೂಪನ್ ತಪ್ಪುಳ್ಳವರಿಗೆ **200** ರೂಪಾಯಿಗಳು, ಎರಡು ಕೂಪನ್ ತಪ್ಪುಳ್ಳವರಿಗೆ **100** ರೂಪಾಯಿಗಳು.

ಇತರ ಬಹುಮಾನಗಳು.

3 ಕೂಪನ್‌ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ **125** ರೂಪಾಯಿಗಳು. ಹೆಚ್ಚಾಗಿ ಕೂಪನ್‌ಗಳು ಕಳುಹಿಸಿದವರಿಗೆ **75** ರೂಪಾಯಿಗಳು.

		17		

ಸುಶೀಲ ಅಂಡ್ ಕೋ., ಕೊಳ್ಳೇಗಾಲ.
ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ.

ಹೆಸರು..

ವಿಳಾಸ..

....

ಪೋಸ್ಟಲ್ ಮಣಿಯಾರ್ಡರ್ ನಂಬರು..

ಸ್ಟಾಂಪುಗಳು.................................... ತಾರೀಕು.................................... 1937.

ಉತ್ತರಗಳನ್ನು ಕಂಡುಹಿಡಿಯುವ ಕ್ರಮ:—ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡವಾಗಿ, ಮೂಲೆಗಳಿಂದ 85 ಬರುವಂತೆ, ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಖಾಯಿಯಲ್ಲಿ ಬರೆದು ಕಳುಹಿಸಬೇಕು.

ನಿಬಂಧನೆಗಳು

ಪ್ರವೇಶ ಧನ ಕೂಪನ್‌ಗೆ 0—8—0 ಆಣೆ. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲಿ ಮಣಿಯಾರ್ಡರ್ ಅಥವಾ ಪೋಸ್ಟಲ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು. ಉತ್ತರಗಳು 16–8–1937ರೊಳಗೆ ನಮ್ಮ ಕೈಸೇರಬೇಕು. ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಾಸುಮಾಡಲಾಗುವುದಿಲ್ಲ. ಮತ್ತು ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲಾಗುವುದು. ಮೆನೇಜರರ ತೀರ್ಮಾನವೇ ಕಡೇ ತೀರ್ಮಾನ. ಬಹುಮಾನಗಳನ್ನು ಪಡೆದವರ ಹೆಸರುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ತನ್ನ ವಿಳಾಸದೊಡನೆ 0—1—0 ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಶರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್: ಸುಶೀಲ ಅಂಡ್ ಕೋ., ಕೊಳ್ಳೇಗಾಲ.

ರಷ್ಯದ ನೂತನ ನಿರ್ಮಾಣ

ಗೃಹ ಮತ್ತು ಕೌಟುಂಬಿಕ ಜೀವನದ ಕುರಿತು ಅಸಡ್ಡೆ; ಮಕ್ಕಳ ರಕ್ಷಣೆಗೆ ಸರಕಾರದ ವ್ಯವಸ್ಥೆ; ಸ್ವಾಭಾವಿಕ ಹಾಗೂ ಸ್ವೇಚ್ಛಾಪರ ವಿವಾಹ; ಅತಿ ಸುಲಭವಾದ ವಿವಾಹ ವಿಚ್ಛೇದ.

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್ ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ'ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.] —ಸಂ. ನ

ರಷ್ಯದ ಸ್ತ್ರೀಯರು ಹಿಂದೆಂದೂ ಇಲ್ಲದ ಸ್ವತಂತ್ರ ಪಡೆದಿರುತ್ತಾರೆ. ಕೆಲವು ವಿಷಯಗಳಲ್ಲಿ ಅವರಷ್ಟು ಸ್ವತಂತ್ರವು ಲೋಕದ ಇನ್ನಾವ ಸ್ತ್ರೀಯರಿಗೂ ಇರುವುದಿಲ್ಲ. ಪುರಾತನ ಕಾಲದಿಂದ ಪುರುಷನು ಸ್ತ್ರೀಯಮೇಲೆ ಹೊರಿಸಿರುವ ಸಂಕಷ್ಟಗಳೆಲ್ಲಾ ಕಾನೂನು ಮೂಲಕವಾಗಿ ತೆಗೆದು ಹಾಕಲ್ಪಟ್ಟಿವೆ. ಪಾತಿವ್ರತ್ಯವು ರಷ್ಯದಲ್ಲೀಗ ಗೌರವ ಮತ್ತು ವೈಭವದ ಹೆಗ್ಗುರುತಾಗಿರುವುದಿಲ್ಲ. ಅದರ ಅಭಾವವು ಅಪಮಾನ ಅಥವಾ ಪೀಡೆಗೆ ಕಾರಣವಾಗುವುದಿಲ್ಲ. ಸ್ತ್ರೀಯರು ತಮ್ಮ ಕೀರ್ತಿ ಅಥವಾ ಗೌರವವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಪೀಡೆಯನ್ನು ತಾಳಿಕೊಳ್ಳಬೇಕೆಂಬುದೇನೂ ಇಲ್ಲ. ಅವರು ತಮ್ಮ ಜೀವನ ವೆಚ್ಚವನ್ನು ತಾವೇ ಸಂಪಾದಿಸಿಕೊಂಡು ಸಾಂಪತ್ತಿಕ ಸ್ವಾತಂತ್ರ್ಯ ಪಡೆಯಲು ಪ್ರೋತ್ಸಾಹವೀಯಲಾಗುತ್ತದೆ. ಸ್ತ್ರೀಯ ಪ್ರವೃತ್ತಿಯು ಅವಳ ಕೌಟುಂಬಿಕ ಜೀವನಕ್ಕೆ ತೊಡಕುಂಟು ಮಾಡುವುದೇ ಎಂಬ ಪ್ರಶ್ನೆಯೇ ರಷ್ಯದಲ್ಲಿಲ್ಲ. ಸ್ತ್ರೀಯು ಸಾಂಪತ್ತಿಕ ಸ್ವಾತಂತ್ರವುಳ್ಳವಳಾಗಿ ಸಮಾಜದ ಅರ್ಜನಾ ಶಕ್ತಿಯನ್ನು ಹೆಚ್ಚಿಸಲು ನೆರವಾಗುವಳು. ಅವಳ ವೈಯಕ್ತಿಕ ಕೀರ್ತಿ ಮತ್ತು ಸಾಮಾಜಿಕ ಉಪಯುಕ್ತತೆಯು ಉತ್ಕೃಷ್ಟ ಸ್ಥಿತಿಯದ್ದಾಗಿರುತ್ತದೆ. ರಷ್ಯದಲ್ಲೀಗ ಸ್ತ್ರೀಯರು ಅತಿ ಹೆಚ್ಚಿನ ಸಾಂಪತ್ತಿಕ ಸ್ವಾತಂತ್ರ್ಯ ಪಡೆಯುತ್ತಿದ್ದಾರೆ. ಇದರಿಂದಾಗಿ ಅವರು ಪ್ರಭಾವಶಾಲಿಗಳಾಗಿ ಹೆಚ್ಚು ಹಕ್ಕು ಬಾಧ್ಯತೆಗಳನ್ನು ಕೇಳುತ್ತಿದ್ದಾರೆ. ಕುಟುಂಬಕ್ಕಾಗಿ ಯಾವ ಅನಾನುಕೂಲತೆಗಳನ್ನಾಗಲಿ ಸಂಕಷ್ಟವನ್ನಾಗಲಿ ಅವರು ಸಹಿಸಿಕೊಳ್ಳುವ ಹಾಗಿಲ್ಲ.

ಇತರ ದೇಶಗಳಲ್ಲಿ ಕೌಟುಂಬಿಕ ಜೀವನದ ಆದರ್ಶವು ಸದಾ ತರುಣರ ದೃಷ್ಟಿಪಥದ ಮುಂದಿರಿಸಲ್ಪಟ್ಟು ಅದು ಅವರ ಉಚ್ಚ ಗುರಿಗಳಲ್ಲೊಂದಾಗಿದೆ. ಎಲ್ಲೆಲ್ಲಿಯೂ ತರುಣ ತರುಣಿಯರು ತಮ್ಮದೇ ಆದ ಕುಟುಂಬವನ್ನು ಸ್ಥಾಪಿಸಿ ಅದಕ್ಕಾಗಿ ಆಸ್ತಿ ಬದುಕನ್ನು ಮಾಡಿಟ್ಟು, ಧನಗಳಿಸಿ, ಅದರೊಂದಿಗೆ ತನ್ನ ಸುಖದುಃಖ, ಜಯಾಪಜಯಗಳನ್ನನುಭವಿಸುವ ಆಕಾಂಕ್ಷೆಯಿಂದ,ಶ್ರಮಿಸಿ ಕಷ್ಟಪಟ್ಟು, ತ್ಯಾಗಮಾಡಿ ನಾನಾಯೋಜನೆಗಳನ್ನು ಕೈಕೊಂಡು, ಉದ್ಯಮಗಳನ್ನು ಸಾಧಿಸುವರು. ಆಧುನಿಕ ನಾಗರಿಕ ಜೀವನದ ಹಲವು ಆಕರ್ಷಣಗಳು, ಕ್ಲಬ್ಬು, ಹೊಟೆಲು, ಸಿನೇಮಾ ಮೊದಲಾದ ಅನುಕೂಲತೆಗಳು ಕೌಟುಂಬಿಕ ಜೀವನಕ್ಕೆ ಎಂತಹ ಹಾನಿಯುಂಟುಮಾಡಿದರೂ ಆ ಆದರ್ಶವೇ ಇನ್ನೂ ಸ್ತ್ರೀಪುರುಷರ ಮನಸ್ಸು ಮತ್ತು ಹೃದಯವನ್ನು ಆಕರ್ಷಿಸುತ್ತದೆ. ರಷ್ಯದಲ್ಲಾದರೆ ಹಾಗಲ್ಲ. ಅಮೇರಿಕದಲ್ಲಿ ಕೌಟುಂಬಿಕ ಜೀವನವೇ ತರುಣನೊಬ್ಬನ ಜೀವನದ ಮುಖ್ಯ ಉದ್ದೇಶವಿರುವುದೆಂದು ನಾನೊಮ್ಮೆ ಸೈಬೇರಿಯದ ಕೆಲವು ವಿದ್ಯಾರ್ಥಿಗಳೊಡನೆ ಹೇಳಿದಾಗ ಅವರು ವಿಸ್ಮಯಗೊಂಡರು ಅದು ಮಾನವನ ವ್ಯಕ್ತಿತ್ವವನ್ನು ಅತ್ಯಂತ ಸಂಕುಚಿತಗೊಳಿಸುವ ಅರ್ಥರಹಿತವಾದ ಉದ್ದೇಶವೆಂದು ಅವರಿಗೆ ತೋರಿತು. ಬಾಲ್ಯಾರಭ್ಯದಿಂದಲೂ,ಗೃಹ ಮತ್ತು ಕುಟುಂಬದ ಯಾವ ಸಂಬಂಧವೂ ಇಲ್ಲದೆ ಕ್ರಾಂತಿಯ ಮಡಿಲಲ್ಲಿ ಬೆಳೆದ ರಷ್ಯದ ತರುಣರಿಗೆ ತಮ್ಮ ಹೊಸ ಸಮಾಜದ ಉದ್ದೇಶಗಳನ್ನು ಸಾಧಿಸುವುದೇ ಜೀವನದ ಅತ್ಯುಚ್ಚ ಗುರಿ

ಕುಟುಂಬ ಮತ್ತು ಮನೆಯನ್ನು ಖಾಸಗಿ ಸೊತ್ತು ಮತ್ತು ಧರ್ಮದಂತೆ ರಷ್ಯನರು ತಿರಸ್ಕರಿಸುವುದಿಲ್ಲ. ಆದರೆ ಮಹತ್ತ್ವದ ಕಾರ್ಯಸಾಧನೆ, ಸಾಹಸ ಮತ್ತು ಕೀರ್ತಿಯು ಗೃಹ ಮತ್ತು ಕುಟುಂಬಗಳ ಸಂಕುಚಿತ ಕ್ಷೇತ್ರದಲ್ಲಿರುವುದಿಲ್ಲ. ಅವಿರುವುದು ಸಾಮೂಹಿಕ ಸಮಾಜದಲ್ಲೆಂಬ ಭಾವನೆಯನ್ನು ರಷ್ಯದ ತರುಣರಲ್ಲಿ ಚಿಕ್ಕಂದಿನಲ್ಲೇ ನೆಲೆಗೊಳಿಸಲಾಗುತ್ತದೆ. ರಷ್ಯದ ತರುಣನು ಸಾಂಪತ್ತಿಕವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿಯೂ ಧಾರ್ಮಿಕವಾಗಿಯೂ, ಕ್ಲಬ್ಬು, ಕಾರ್ಖಾನೆ ಕೂಟ, ಆಟಗಳ ಸಂಘ, ಮಜೂರಸಂಘವೇ ಮೊದಲಾದ ಮನೆಯಿಂದ ಹೊರಗಣ ಹಲವು ವಿಧದ ಸಂಸ್ಥೆಗಳ ಮೇಲೆ ಅವಲಂಬಿಸುವಂತೆ ತರಬೇತಿಹೊಂದುವನು. ಕುಟುಂಬಸುಖಸಾಧನೆಯು ಅವನ ಆದರ್ಶ ಅಥವಾ ಗುರಿಯಾಗಿರುವುದಿಲ್ಲ. ಆದುದರಿಂದ ರಷ್ಯದ ತರುಣರು ಕುಟುಂಬದ ಕುರಿತು ಯಾವ ಗೌರವ ಬುದ್ಧಿಯೂ ಇಲ್ಲದೆ, ಕೌಟುಂಬಿಕ ಜವಾಬ್ದಾರಿಯ ಭಾವನೆಯೇ ಇಲ್ಲದೆ ಬೆಳೆಯುತ್ತಾರೆ. ಇದು ಹೊರತು ಮನೆಯ ಹಲವು ಕೆಲಸಗಳನ್ನೆಲ್ಲಾ ಸಾಮೂಹಿಕವಾಗಿ ನಡೆಸುವ ವ್ಯವಸ್ಥೆ ಮಾಡಲಾಗಿದೆ. ರಷ್ಯದ ಕ್ರಾಂತಿಕಾರನಿಗೆ ಮನೆಯೆಂಬುದು ಸಾಂಪತ್ತಿಕವಾಗಿ ಮಾತ್ರವಲ್ಲದೆ ಸಾಮೂಹಿಕವಾಗಿಯೂ ಅನಾವಶ್ಯಕವಾದೊಂದು ಅನಾಚಾರವಾಗಿದೆ. ಪ್ರತಿಯೊಂದುಮನೆಯಲ್ಲಿ ಗೃಹಿಣಿಯರು ಇಡೀ ದಿನ ಅಡಿಗೆ ಮನೆಯಲ್ಲಿ ಕೆಲಸಮಾಡುತ್ತಾ ನರಳಿಕೊಂಡಿರುವುದಕ್ಕಿಂತ, ಸಾಮೂಹಿಕವಾದ ಅಡಿಗೆಶಾಲೆಗಳಲ್ಲಿ ಪಾಕಶಾಸ್ತ್ರ ನಿಪುಣರು ಭೋಜನ ತಯಾರಿಸುವುದು ಎಷ್ಟೋ ಅಗ್ಗವಾಗಲಾರದೇ ಎಂದು ಅವರ ಪ್ರಶ್ನೆ. ಇದೇ ರೀತಿ ಶಿಶುಸಂಗೋಪನೆಯ ಕುರಿತು ಯಾವ ಜ್ಞಾನವೂ ಇಲ್ಲದ ತಾಯಂದಿರು ಮಕ್ಕಳ ಆರೈಕೆಯಲ್ಲೇ ಕಾಲಕಳೆಯುತ್ತಿರುವ ಬದಲಿಗೆ ಮಕ್ಕಳನ್ನೆಲ್ಲಾ ತಜ್ಞರಾದ ನರ್ಸಮ್ಮಗಳಿಂದ ನಡಿಸಲ್ಪಡುವ ಶಿಶು ಸಂಗೋಪನಾಲಯಗಳ ಮೂಲಕ ಪೋಷಿಸುವ ವ್ಯವಸ್ಥೆಮಾಡುವುದು ಉತ್ತಮವಲ್ಲವೇ? ಹೀಗೆ ಮನೆಗಳಲ್ಲಿ ಸ್ತ್ರೀಯರು ರಾತ್ರಿ ಹಗಲು ಶ್ರಮಿಸಬೇಕಾಗಿರುವ ಕೆಲಸಗಳನ್ನೆಲ್ಲಾ ಸಾಮೂಹಿಕವಾಗಿ ನಡಿಸುವ ಏರ್ಪಾಡು ಮಾಡಿದಲ್ಲಿ ಈ ಸ್ತ್ರೀಯರೆಲ್ಲಾ ಮಾನಸಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಹೊಂದಿ ಸಮಾಜೋಪಕಾರಕ ಕೆಲಸಗಳನ್ನು ಮಾಡುವಂತಾಗುವುದಿಲ್ಲವೇ? "ತನ್ನ ಅರೆವಾಸಿ ಜನಸಂಖ್ಯೆಯು ಅಡಿಗೆಮನೆ ದಾಸ್ಯದಿಂದಿರುವಾಗ ಯಾವ ಜನಾಂಗವಾದರೂ ಸ್ವತಂತ್ರವಾಗಿರಲು ಸಾಧ್ಯವೇ ಇಲ್ಲ" ಎಂದು ಲೆನಿನರು ಹೇಳಿರುವರೆಂದೇ ಕ್ರಾಂತಿಕಾರರ ತರ್ಕ.

ಹೆತ್ತ ತಾಯಂದಿರು ತಮ್ಮ ಮಕ್ಕಳನ್ನೆಲ್ಲಾ ಸರಕಾರದ ಶಿಶು ಸಂರಕ್ಷಣಾಲಯಗಳಲ್ಲಿಯೇ ಇಟ್ಟು ಬೆಳೆಸುವುದರಿಂದ ಮಕ್ಕಳಿಗೇನೇ ಹೆಚ್ಚಿನ ಪ್ರಯೋಜನವಿದೆಯೆಂದು ಕ್ರಾಂತಿಕಾರರ ಅಭಿಮತ. ಈ ವಿಷಯದಲ್ಲಿ ಯಾವ ನಿರ್ಬಂಧವೂ ಇರುವುದಿಲ್ಲ. ಹೆತ್ತವರ ವಿಶೇಷವಾಗಿ ತಾಯಿಯ ಒಪ್ಪಿಗೆ ಮತ್ತು ಸಹಕಾರದಿಂದಲೇ ಮಕ್ಕಳನ್ನು ಸರಕಾರದ ಶಿಶು ರಕ್ಷಣಾಲಯಗಳಲ್ಲಿ ಪೋಷಿಸಲಾಗುತ್ತದೆ. ಶಿಶು ಸಂರಕ್ಷಣಾಲಯವು ತಾಯಂದಿರು ಸಮೀಪವಿರಬೇಕು. ಬಹುತೇಕ ಅವು ಅವರು ವಾಸಿಸುವರಸ್ತೆಗಳಲ್ಲಿಯ ಸಮೀಪವಿರುವುದು. ತಂದೆ ಮತ್ತು ತಾಯಿಯು ತಮ್ಮ ಮಗುವಿನೊಂದಿಗೆ ಸಂಪರ್ಕವುಳ್ಳವರಾಗುವಂತೆ ಪ್ರೋತ್ಸಾಹವೀಯಲಾಗುತ್ತದೆ. ಅದನ್ನವರು ಆಗಾಗ ತಮ್ಮ ಮನೆಗೊಯ್ಯಬಹುದು. ಈ ಶಿಶು ರಕ್ಷಣಾಲಯಗಳಲ್ಲಿ ಪ್ರತಿಯೊಂದು ಮಗುವನ್ನೂ ಅತ್ಯುತ್ತಮ ರೀತಿಯಲ್ಲಿ ಕಾಣಲಾಗುವುದು. ಅತ್ಯಾಧುನಿಕ ವೈಜ್ಞಾನಿಕ ಕ್ರಮಗಳನ್ನನುಸರಿಸಿ ಮಕ್ಕಳನ್ನು ಆರೈಕೆ ಮಾಡಲಾಗುವುದು. ಅವಕ್ಕೆ ಅಸ್ವಸ್ಥವಾದಾಗ ಮಕ್ಕಳ ರೋಗತಜ್ಞನಾದ ಡಾಕ್ಟರನು ಬಂದು ಅವನ್ನು ಪರೀಕ್ಷಿಸಿ ಚಿಕಿತ್ಸೆ ಮಾಡುವನು. ಈ ರಕ್ಷಣಾಲಯಗಳಲ್ಲಿ ಮಕ್ಕಳ ಕುರಿತು ವಿಶೇಷ ಪ್ರೀತಿ ತೋರಿಸಿಯಾಗಲಿ, ಅವನ್ನು ಬೈದು ಭಂಗಿಸಿಯಾಗಲಿ ಕೆಡಿಸುವುದಿಲ್ಲ. ಅವುಗಳ ಸ್ವಾಭಾವಿಕ ಪ್ರವೃತ್ತಿಗಳನ್ನು ತಡೆಗಟ್ಟದೆ ಪ್ರೋತ್ಸಾಹಿಸಿ ಬೆಳೆಸಲಾಗುವುದು. ರಷ್ಯದ ಸೋವಿಯೆಟ್ ಸರಕಾರವು ಮಾಡಿರುವ ಉತ್ಕೃಷ್ಟ ಜನಹಿತ ಸಾಧಕ ಕೆಲಸವೆಂದರೆ ತಮ್ಮ ರಾಜ್ಯದಲ್ಲೆಲ್ಲಾ ಅನೇಕ ಶಿಶುಸಂರಕ್ಷಣಾಲಯಗಳನ್ನು ಸ್ಥಾಪಿಸಿ ಬಡಬಗ್ಗರ ಮಕ್ಕಳನ್ನೆಲ್ಲಾ ಶ್ರೀಮಂತರ ಮಕ್ಕಳಂತೆಯೇ ಪೋಷಿಸುವ ಏರ್ಪಾಡು ಮಾಡಿರುವುದು.

ಹಳೆಯ ರಷ್ಯದ ಪವಿತ್ರಸ್ಥಳವಾಗಿದ್ದ ಕೀವ್ ಪಟ್ಟಣದಲ್ಲಿ ನಿರುದ್ಯೋಗಿಗಳಿಗಾಗಿ ಸ್ಥಾಪಿಸಲ್ಪಟ್ಟಿದ್ದ ಸಮಗಾರ ಕಾರ್ಖಾನೆಯೊಂದನ್ನು ನಾನು ಕಂಡು ಆಶ್ಚರ್ಯಗೊಂಡೆ. ಅದೊಂದು ಚಿಕ್ಕ ಸಮಾಜವೇ ಆಗಿದ್ದಿತು. ಸರಕಾರದ ಸಹಾಯದಿಂದ ಸ್ಥಾಪಿಸಲ್ಪಟ್ಟಿರುವ ಕಾರ್ಖಾನೆಯದು, ಇದರಲ್ಲಿ ಕೆಲಸಮಾಡುವ ಕೋಣೆಗಳು, ಆಫೀಸು, ಕ್ಲಬ್ಬು, ಭೋಜನಾಲಯ ಮೊದಲಾದ ಎಲ್ಲಾ ಅನುಕೂಲತೆಗಳೂ ಇದ್ದುವು. ಈ ಕಾರ್ಖಾನೆಯಕೆಲಸಗಾರರು ತಮಗಾಗಿಯೇ ಒಂದು ಪತ್ರಿಕೆ ಸ್ಥಾಪಿಸಿದ್ದರು. ಇದರಲ್ಲಿ ಕಾರ್ಖಾನೆಯಲ್ಲಿ ನಡೆದ ಸಂಗತಿಗಳೂ ಅಧಿಕಾರಿಗಳ ಕುರಿತಾದ ಟೀಕೆಗಳೂ, ಇದ್ದುವು. ಪುಸ್ತಕಭಂಡಾರ, ಶಾಲೆ, ಬೇಸಗೆಯ ನಿವಾಸಾಲಯ, ವಿನೋದ ಮತ್ತು ವಿಹಾರಸ್ಥಳ ಮೊದಲಾದುವನ್ನೂ ಈ ಕಾರ್ಖಾನೆಯವರೇ ಸ್ಥಾಪಿಸಿದ್ದರು. ಅವರೆಲ್ಲಾ ಹೊರಗಣ ಪಟ್ಟಣಗಳಲ್ಲೇ ವಿಹಾರಕ್ಕಾಗಿ

ಧರ್ಮಾರ್ಥ ಬಹುಮಾನಗಳು



1–2–0ಗೆ!

–·– ಯಾರಿಗೆ? –·–

ರೂಪಾಯಿ 1–2–0 ಕೊಟ್ಟು 18 ಸೀಸೆ ಒಟ್ಟೊರೋಸ್ಟ್ ಅಥವಾ 18 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

ಇನಾಮುಗಳ ವಿವರ:— 3 ಚೆಮ್ಮಿ ರಿಸ್ಟ್‌ವಾಚುಗಳು, 1 ಶ್ಪೈಲ್ಟಿಟಾಯಿಂ ಡಮ್ಮಿ ಪಾಕೆಟ್ ವಾಚು, 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟನ್ ಪೆನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿ ಮಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟೈಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0 10 0. ಇಂದೇ ಆರ್ಡರು ಕೊಡಿರಿ.

EASTERN TRADING COY.,

Post Box No. 12204, CALCUTTA, (N. Y.)

ಹೋಗುತ್ತಿದ್ದರು. ತಮ್ಮೊಳಗೇನೇ ಬೇರೆ ಬೇರೆ ಆಟ ಸ್ಪರ್ಧೆ ನಡೆಸುತ್ತಿದ್ದರು. ಆಗಾಗ ನಾಟಕ ಪ್ರದರ್ಶನ ನಡಿಸುತ್ತಿದ್ದರು ಸಿನೇಮ ಮಂದಿರವೊಂದನ್ನು ಕಟ್ಟಿಕೊಂಡಿದ್ದರು. ರಸ್ಯದಲ್ಲಿ ಕಾರ್ಖಾನೆಗಳು ಕೆಲಸಗಾರನು ಶ್ರಮಿಸುವ ಸ್ಥಳ ಮಾತ್ರವಲ್ಲದೆ, ಆತನ ಮನೆಯೂ, ವಿನೋದಾಲಯವೂ ಆಗಿರುವವು. ರಸ್ಯಾನರೆಲ್ಲಾ ಚಿಕ್ಕಚಿಕ್ಕ ಮನೆಗಳಲ್ಲಿ ವಾಸಮಾಡಬೇಕಾಗಿದೆ. ಅವುಗಳಲ್ಲಿ 2 ಅಥವಾ 3 ಕೋಣೆಗಳು ಮಾತ್ರ ಇರುತ್ತವೆ. ಹೆಚ್ಚೆಂದರೆ 4 ಕೋಣೆಗಳಿರುತ್ತವೆ. ಅದು ಬಹಳ ಅಪೂರ್ವ.

ನವೀನವಾದ ಲೈಂಗಿಕ ಭಾವನೆಯಂತೆ ರಸ್ಯದ ವಿವಾಹ ಸಂಬಂಧವಾಗಿಯೂ ಹೊಸ ಕಾನೂನುಗಳು ದಂಪತಿಗಳ ಮೇಲೆ ಯಾವ ನಿರ್ಬಂಧವನ್ನೂ ಹಾಕುವುದಿಲ್ಲ. ದಂಪತಿಗಳು ತಮ್ಮ ವಿವಾಹವನ್ನು ಕಾನೂನು ಪ್ರಕಾರ ರಿಜಿಸ್ಟ್ರಿ ಸಹ ಮಾಡದೆ ಒಟ್ಟಿಗಿರಬಹುದು. ಸರಕಾರವು ಅವರ ಗೊಡವೆಗೇನೂ ಹೋಗುವುದಿಲ್ಲ ಬಂಧುಮಿತ್ರರು ಅವರ ಮೇಲೆ ಬಹಿಷ್ಕಾರ ಹಾಕುವುದಿಲ್ಲ ಸ್ತ್ರೀ ಪುರುಷರಿಗೆ ದಾಂಪತ್ಯದ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ ಈ ಕುರಿತು ರಸ್ಯಾನರೇನೂ ನಾಚಿಕೆ ಪಡದೆ ಅಭಿಮಾನ ಪಡುತ್ತಾರೆ. ನಿಜವಾದ ಪ್ರೇಮಸಂಬಂಧಕ್ಕೆ ಹೊರಗಣ ಯಾವ ನಿರ್ಬಂಧವೂ ಅವಶ್ಯವಿಲ್ಲೆಂದು ರಸ್ಯಾನರ ಭಾವನೆ. ಸ್ವತಂತ್ರವಾದ ದಾಂಪತ್ಯವು ರಸ್ಯದಲ್ಲಿ ಹೆಚ್ಚಾಗಿ ಜಾರಿಯಲ್ಲಿದೆ ಒಮ್ಮೆ ನಾನು ಅಂತಹ ವಿವಾಹದಿಂದ ವಿಶೇಷವಾಗಿ ಸ್ತ್ರೀಗೆ ಹಾನಿಯಿಲ್ಲವೇ ಎಂದು ಒಬ್ಬ ಇಂಜನೀಯರನ ಒಟ್ಟಿಗೆ ಸ್ವತಂತ್ರ ದಾಂಪತ್ಯದಿಂದಿದ್ದು 2 ಮಕ್ಕಳನ್ನು ಪಡೆದಿರುವ ಸ್ತ್ರೀಯೊರ್ವಳೊಡನೆ ಪ್ರಸ್ತಾಪಿಸಿದಾಗ, "ನೀವು ಅನಾಗರಿಕ ಮನುಷ್ಯರಂತೆ ಮಾತಾಡುವಿರಿ" ಎಂದಳು. ಅವಳಿಗೆ ತನ್ನ ಹೊರತು ಇತರ ವಿಧದ ದಾಂಪತ್ಯವು ಅವಿವೇಕವೆಂದು ತೋರುತ್ತಿತ್ತು.

ರಸ್ಯಾನರಲ್ಲಿ ವಿವಾಹವು ಎಷ್ಟೊಂದು ಸುಲಭ ಹಾಗೂ ಸರಳವಾಗಿರುವುದೋ ವಿವಾಹವಿಚ್ಛೇದವೂ ಅಷ್ಟೇ ಸುಲಭವಾಗಿರುವುದು ಮದುವೆಯ ರಿಜಿಸ್ಟ್ರಿ ಕೂಡ ಆಗದ ದಂಪತಿಗಳು ಪುನಹಃ ಬಿಡುಗಡೆಯನ್ನು ಕೂಡಾ ರಿಜಿಸ್ಟ್ರಿ ಮಾಡುವ ಗೊಡವೆ ಇಲ್ಲದೆ ಪ್ರತ್ಯೇಕವಾಗಬಹುದು. ತಮ್ಮ ಮದುವೆಯನ್ನು ರಿಜಿಸ್ಟ್ರಿ ಮಾಡಿದ್ದ ದಂಪತಿಗಳು ಪುನಹಃ ಹೋಗಿ ಮದುವೆ ರಿಜಿಸ್ಟ್ರಿ ಪುಸ್ತಕದಲ್ಲಿ ತಾವು ಪ್ರತ್ಯೇಕವಾಗಿದ್ದೇವೆಂದು ಬರೆಸಿದರಾಯಿತು. ಹೆಂಡತಿಯಾಗಲಿ ಗಂಡನಾಗಲಿ ತಮ್ಮಿಚ್ಛಾನುಸಾರ ಒಬ್ಬರೊಬ್ಬರ ಒಪ್ಪಿಗೆ ಕೂಡಾ ಇಲ್ಲದೆ ಪ್ರತ್ಯೇಕವಾಗಬಹುದು. ಮೋಸ್ಕೋ ಪಟ್ಟಣದಲ್ಲಿ ನಾನೋರ್ವ ತರುಣಿಯನ್ನು ಕಂಡೆ. ಅವಳು ತನಗೆ ಒಂದಿಷ್ಟು ಪ್ರೀತಿಯಿಲ್ಲದವನೊಬ್ಬನನ್ನು ನಿರ್ವಾಹವಿಲ್ಲದೆ ಮದುವೆಯಾದಳು. ಅವನನ್ನು ಮದುವೆಯಾಗದಿದ್ದರೆ ಒಂದೋ ತನ್ನನ್ನು ತಾನು, ಇಲ್ಲವೆ ಅವಳನ್ನು, ಅಥವಾ ಇಬ್ಬರನ್ನೂ ಕೊಲ್ಲುವೆನೆಂಬ ಬೆದರಿಕೆ ಹಾಕಿದ್ದನು. ಹೀಗಾಗಿ ಅವಳು ಒಪ್ಪಿಗೆ ಕೊಟ್ಟು ಮದುವೆಯಾಯಿತು. ಗಂಡನಿಗೆ ಅತ್ಯಾನಂದವಾಯಿತು. ಆದರೆ ಹೆಂಡತಿಗೆ ಒಂದಿಷ್ಟು ಸಂತೋಷವಿರಲಿಲ್ಲ. ಮದುವೆಯಾದ ಕೆಲವೇ ದಿನಗಳ ನಂತರ ಗಂಡನು ವಿಹಾರಾರ್ಥವಾಗಿ ಕೊಕಸಸಿಗೆ ಹೋದ. ಹೆಂಡತಿಯು ಮದುವೆ ರಿಜಿಸ್ಟ್ರಿಯ ಆಫೀಸಿಗೆ ಹೋಗಿ ತನ್ನ ದಾಂಪತ್ಯವಿಚ್ಛೇದ ಮಾಡಿದಳು. ಗಂಡನಿಗೆ ಈ ಸಂಗತಿಯು ಟಪ್ಪಾಲು ಮೂಲಕ ತಿಳಿಸಲಾಗುವುದು. ರಸ್ಯದಲ್ಲಿ ವಿವಾಹವಿಚ್ಛೇದವೆಂದರೆ ಅಷ್ಟೊಂದು ಸುಲಭ. ಕೋರ್ಟಿಗೆ ಅರ್ಜಿ, ವ್ಯವಹರಣೆ, ವಿಚಾರಣೆ, ಕಾರಣ ಕೊಡುವುದೇ ಮೊದಲಾದ ಯಾವ ತೊಡಕೂ ಇಲ್ಲ. ಮದುವೆ ರಿಜಿಸ್ಟ್ರಿ ಕ್ಲಾರ್ಕನ ಬಳಿಗೆ ಹೋಗಿ ತಿಳಿಸಿಬಿಟ್ಟರಾಯಿತು.

ಮಕ್ಕಳಾದಾಗ ಮಾತ್ರ ಕಾನೂನು ಕೈ ಹಾಕುವುದು. ಮದುವೆಯಾಗಿ ಆಗಲಿ ಆಗದಾಗಲಿ ಹುಟ್ಟುವ ಮಕ್ಕಳೆಲ್ಲಾ ರಸ್ಯದಲ್ಲಿ ನ್ಯಾಯವಾದ ಮಕ್ಕಳೇ. ಅವನ್ನು ಹುಟ್ಟಿಸಿದ ತಂದೆತಾಯಿಗಳು ಅವುಗಳ ರಕ್ಷಣೆಮಾಡಲೇ ಬೇಕು ಸರ್ವಸಾಮಾನ್ಯವಾಗಿ ಮಗುವು ತಾಯಿಯ ಅಧೀನವಿರತಕ್ಕದ್ದು. ತಂದೆಯು ಅದಕ್ಕೆ 18 ವರ್ಷವಾಗುವ ವರೆಗೆ ಅದರ ಪೋಷಣೆಗೆ ತನ್ನ ಸಂಬಳದ ಮೂರನೇ ಒಂದಂಶ ಕೊಡಬೇಕು. ಆದರೆ ಎಷ್ಟು ಮಕ್ಕಳಾದರೂ ಸಂಬಳದ ಅರೆವಾಸಿಗಿಂತ ಹೆಚ್ಚು ಕೊಡಬೇಕಾಗಿಲ್ಲ. ಮಗುವು ತಂದೆಯ ಅಧೀನವಿದ್ದ ಪಕ್ಷದಲ್ಲಿ ತಾಯಿಯು ಅದರ ಪೋಷಣೆಗೆ ತನ್ನ ಸಂಬಳದ ಅಂಶ ಕೊಡತಕ್ಕದ್ದು ಮಕ್ಕಳಾಗದ ಆರೋಗ್ಯವಂತ ದಂಪತಿಗಳು ಪ್ರತ್ಯೇಕವಾಗುವಾಗ ಒಬ್ಬರೊಬ್ಬರಿಗೇನೂ ತೆರಬೇಕಾಗಿಲ್ಲ ಆದರೆ ಹೆಂಡತಿಗೆ ಅನಾರೋಗ್ಯದ ನಿಮಿತ್ತ ಕೆಲಸ ಮಾಡಲಾಗದಿದ್ದರೆ ಅವಳನ್ನು ಬಿಡುವ ಗಂಡನು ಅವಳ ನೆಚ್ಚಕ್ಕಾಗಿ 1 ವರ್ಷದ ವರೆಗೆ ಮಾತ್ರ ತನ್ನ ಸಂಬಳದ ಮೂರನೇ ಒಂದಂಶ ಕೊಡಬೇಕು ಇದೇ ರೀತಿ ಗಂಡನು ರೋಗಿಷ್ಟನಾಗಿದ್ದರೆ ಹೆಂಡತಿ ತೆರಬೇಕು ಇಂತಹ ಪರಿಸ್ಥಿತಿಯಲ್ಲಿ ರಸ್ಯದಲ್ಲಿ ಕೌಟುಂಬಿಕ ಜೀವನದ ಅಳಿಗಾಲವು ದೂರವಿರಲಾರದು. ಖಾಸಗಿ ಸೊತ್ತು ನಿಷೇಧಿಸಲ್ಪಟ್ಟಿರುವಾಗ, ಧರ್ಮವು ನಾಶವಾಗುತ್ತಿರುವಾಗ, ಹಳೆಯ ಲೈಂಗಿಕ ಮತ್ತು ಕೌಟುಂಬಿಕ ಭಾವನೆಗಳು ಮೂಲೆಗುಂಪಾಗಿರುವಾಗ, ಮಿತ ಸಂತತಿ ಮತ್ತು ಗರ್ಭನಾಶವು ಕಾಯಿದೆಶೀರವಾಗಿರುವಾಗ ಮಕ್ಕಳು ಹೆಚ್ಚಿನ ಕೌಟುಂಬಿಕ ಭಾವನೆ ಏನೂ ಇಲ್ಲದೆ ಬೆಳೆಸಲ್ಪಡುವಾಗ ಗೃಹದ ಕೆಲಸಗಳೆಲ್ಲಾ ಸಾಮೂಹಿಕವಾಗಿ ನಡೆಸಲ್ಪಡುವಾಗ ಈ ಮಹತ್ತಾದ ಸಾಮಾಜಿಕ ಶಕ್ತಿಗಳೆಲ್ಲಾ ಪ್ರಾದುರ್ಭಾವ ಹೊಂದುತ್ತಿರುವಾಗ ಗೃಹ ಮತ್ತು ಕೌಟುಂಬಿಕ ಜೀವನವನ್ನು ಭದ್ರವಾಗಿರಿಸುವ ಶಕ್ತಿಯಾದರೂ ಯಾವುದು? ಸ್ತ್ರೀ ಪುರುಷರೊಳಗಣ ಅನುರಾಗ ಮತ್ತು ಮಕ್ಕಳ ಮೇಲಿನ ಪ್ರೇಮವು ಕುಟುಂಬದ ಕಟ್ಟನ್ನು ಸಂಪೂರ್ಣವಾಗಿ ಮುರಿಯದಂತೆ ಮಾಡಬಹುದು. ಆದರೆ ರಸ್ಯದಲ್ಲಿ ಮಕ್ಕಳು ತಮ್ಮ ಪೋಷಣೆ, ವಿದ್ಯೆ ಬುದ್ಧಿ, ವಿನೋದ, ವಿಹಾರ, ಉದ್ಯೋಗ ಸಂಪಾದನೆಗಳಲ್ಲೆಲ್ಲಾ ತಮ್ಮ ತಂದೆ ತಾಯಿಗಳಿಗಿಂತಲೂ ಹೆಚ್ಚಾಗಿ ಹೊಸ ಸಮಾಜದ ಮೇಲೆ ಅವಲಂಬಿಸ ಹತ್ತಿದ್ದಾರೆ. ಇದರಿಂದ ತಂದೆ ತಾಯಿಗಳ ಮೇಲಿನ ಅವರ ಭಕ್ತಿ ವಿಶ್ವಾಸಗಳು ಕಡಿಮೆಯಾಗುತ್ತವೆ. ಅಂದ ಮೇಲೆ ಕುಟುಂಬದ ಕಟ್ಟನ್ನು ಬಲವಾಗಿರಿಸುವ ಒಂದೇ ಒಂದು ಸಂಗತಿಯೆಂದರೆ ಸ್ತ್ರೀ ಪುರುಷರೊಳಗಣ ಪ್ರೇಮ. ಈ ಪ್ರೇಮವು ರಸ್ಯದಲ್ಲಿ ಹೇಗಿದೆಯೆಂಬುದನ್ನು ಮುಂದೆ ಪರಿಶೀಲಿಸೋಣ.

ನವಭಾರತ ಬುಕ್ ಡಿಪೋದಲ್ಲಿ
ನಮೂನೆವಾರು
ಫೌಂಟಿನ್ ಪೆನ್ನುಗಳು
ದೊರೆಯುತ್ತವೆ.
ಸುವಾಸನೆಯುಕ್ತವಾದ
ಊದು ಬತ್ತಿಗಳು
ನಮ್ಮಲ್ಲಿಗೆ ಬಂದಿವೆ. ಅವು ಬೇಕಾದರೆ ನೀವೂ ನಮ್ಮಲ್ಲಿಗೆ ಬನ್ನಿ.
Navabharat Book Depot,
Church Rooad, **UDIPI**

WANTED
Candidates for Telegraph and station Master class. Allowance Rs. 28. Uniform, passage and quarter free. Service essential. Rules and Entrance from on annas eight. Director, Royal Telegraph and Ry. Duties College, Bombay 14.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತದೆ ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧-೦-೦

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇವೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦

'ಕಾಮಶಾಸ್ತ್ರ' ಧರ್ಮಾರ್ಥ ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡು ಹಾಕಿರಿ

ಆತಂಕ ನಿಗ್ರಹ ಫಾರ್ಮಸಿ, ೬೫, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

ರೋಲ್ಡ್ ಗೋಲ್ಡ್, ನಿಕ್ಕಲ್ ಬೆಳ್ಳಿಯ, 9 ಕ್ಯಾರಟಿನ ಗಟ್ಟಿ ಚಿನ್ನದ ರಿಸ್ಟ್‌ವಾಚುಗಳು, ರೈಲ್ವೆ ಟಾಯಿಂ ಪಾಕೆಟ್ ವಾಚು ಮತ್ತು ಟಾಯಿಂಪೀಸು ಗ್ಯಾರಂಟಿ ಇದೆ.
ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ.
The Manager,
The Silver Jubilee Watch Co,
Post Box No 571 BOMBAY

ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್ ರೀಡ್ಸಿನ ಕೈ, ಮತ್ತು ಕಾಲು ಹಾರ್ಮೋನಿಯಮುಗಳು ಬೇಕಾದ ನಮೂನೆಯಲ್ಲಿ ದೊರೆಯುತ್ತವೆ.
ಕ್ರಯದ ಪಟ್ಟಿಗೆ ಬರೆಯಿರಿ.



ಎಲ್ಲಾ ತರದ ಗಾಯನ ಸಾಮಗ್ರಿಗಳನ್ನು ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುತ್ತದೆ.
ವಿಶೇಷ ಮಾಹಿತಿಗೆ ಬರೆಯಿರಿ.

Proprietor: **ATTAVAR BABOO,**
Vasanthi Harmonium Works,
Hampankatta, Mangalore.

ವಿ. ಸೂ. ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪೋ, ಚರ್ಚರೋಡ್, ಉಡುಪಿ. ಇಲ್ಲಿ ಮಾರಲ್ಪಡುತ್ತವೆ

ಸಮಾಚಾರ ಸಂಗ್ರಹ: ಪ್ರತಿ ತಿಂಗಳ ಅಂತ್ಯದ ಆದಿತ್ಯವಾರ ಧ್ವಜ ವಂದನೆ ನಡಿಸಬೇಕು; ರಾಜಕೀಯ ಕೈದಿಗಳ ಬಿಡುಗಡೆಯ

* * ಪ್ರಶ್ನೆ; ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ, ೪ ಮಂದಿಯನ್ನು ಕೊಂದು ಆತ್ಮಹತ್ಯೆ. * *

ಪ್ರತಿತಿಂಗಳ ಅಂತ್ಯದ ಆದಿತ್ಯವಾರ ಧ್ವಜವಂದನೆನಡಿಸಬೇಕು

ಪೂನದಲ್ಲಿ ರಾಜಕೀಯ ಪರಿಷತ್ತು ನಡೆಯುವಾಗ ಸೈನಿಕರು ಕೆಲವರು ರಾಷ್ಟ್ರೀಯ ಧ್ವಜವನ್ನು ಎಳೆದುಹಾಕಿದ್ದರು. ಅದೇ ರೀತಿ ಸಿಮ್ಲಾದ ಸ್ಪಿನ್ನರ್ಸ್ ಎಸೋಸಿಯೇಶನಿನ ಆಫೀಸಿನಿಂದ ರಾಷ್ಟ್ರೀಯ ಧ್ವಜವು ಎಳೆದುಹಾಕಲ್ಪಟ್ಟಿದ್ದಿತು. ಈ ಕುರಿತು ಅಲ್ಲಲ್ಲಿ ನಿಷೇಧ ಸಭೆಗಳು ನಡೆದಿರುವವು. ಸಿಮ್ಲಾದ ಜನರು ಹೆಚ್ಚೆಚ್ಚಾಗಿ ರಾಷ್ಟ್ರೀಯ ಧ್ವಜಗಳನ್ನೇರಿಸಹತ್ತಿರುವರು. ಸಿಮ್ಲಾದಲ್ಲಿ ರಾಷ್ಟ್ರೀಯ ಧ್ವಜವನ್ನು ಎಳೆದು ಹಾಕಿದ ಕುರಿತು ಪಂಜಾಬಿನ ಎಸೆಂಬ್ಲಿ ಸಭೆಯಲ್ಲಿ ಪ್ರಶ್ನೋತ್ತರ ನಡೆದಾಗ ಅಲ್ಲಿಯ ಪ್ರಧಾನ ಮಂತ್ರಿಗಳು ಆ ಕುರಿತು ವಿಚಾರಣೆ ನಡಿಸಿ ತಪ್ಪಿತಸ್ಥರನ್ನು ದಂಡಿಸಲಾಗುವುದೆಂದು ಹೇಳಿದರು. ಪಂಡಿತ ಜವಾಹರಲಾಲರು ಈ ಕುರಿತು ಹೇಳಿಕೆಯೊಂದನ್ನು ಪ್ರಕಟಿಸಿ, ರಾಷ್ಟ್ರೀಯಧ್ವಜವು ಹಿಂದೀಸ್ವಾತಂತ್ರ್ಯದ ಮತ್ತು ಸ್ವಾಭಿಮಾನದ ಚಿಹ್ನೆಯಾಗಿ ಹಿಂದೀಯರಿಗೆಲ್ಲಾ ಅತಿಪ್ರಿಯವಾಗಿದೆ. ಅದನ್ನು ಅಪಮಾನಗೊಳಿಸುವದಾವುದಾದರೂ ಹಿಂದೀಯರಿಗೆ ಸಹನೆಯಾಗದು. ಜನರು ಹೆಚ್ಚೆಚ್ಚಾಗಿ ರಾಷ್ಟ್ರೀಯ ಧ್ವಜವನ್ನು ಉಪಯೋಗಿಸಬೇಕು. ಕಾಂಗ್ರೆಸ್ ಸಂಸ್ಥೆಗಳು ಕೊನೆಯ ಪಕ್ಷ ಪ್ರತಿತಿಂಗಳ ಕೊನೆಯ ಆದಿತ್ಯವಾರ ಕ್ರಮವಾಗಿ ಬೆಳಿಗ್ಗೆ ಧ್ವಜವಂದನೆ ನಡಿಸುವ ಹಳೆಯ ಪದ್ಧತಿಯನ್ನು ಪುನಃ ಆಚರಿಸಬೇಕು. ಇದರ ವರದಿಯನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಆಫೀಸಿಗೆ ಕಳುಹಿಸಬೇಕೆಂದು ಕೇಳಿಕೊಂಡಿರುವರು.

18 ವರ್ಷಗಳ ಸೆರೆಮನೆಯ ನಂತರ ಬಿಡುಗಡೆ

ಬಂಗಾಳ ಸರಕಾರವು ಸುಮಾರು 1000ದ ವರೆಗಿನ ಡಿಟೆನ್ಯೂ ಕೈದಿಗಳನ್ನು ಬಿಡುಗಡೆಮಾಡುವ ನಿರ್ಧಾರ ಮಾಡಿರುವುದು. ಇನ್ನೂ ಸುಮಾರು 1000 ಡಿಟೆನ್ಯೂಗಳು ನಿರ್ಬಂಧದಲ್ಲಿ ಕೊಳೆಯುತ್ತಿರುವರು. ಪಂಜಾಬು ಸರಕಾರವು 1919ರ ಪಂಜಾಬಿನ ಮಾರ್ಶಲ್ ಲೋ ಕೈದಿಗಳನ್ನು ಬಿಡುಗಡೆಮಾಡಹತ್ತಿರುವುದು. ಇದೇ ತಾ. 22ರಲ್ಲು ಮಹಾಶೆ ರತ್ನಚಂದ, ಮುಹಮ್ಮದ್ ಸೂಫಿ ಮತ್ತು ಗಿರಿಧರಲಾಲರೆಂಬ ಮೂವರು ಬಿಡುಗಡೆ ಹೊಂದಿರುವರು. 18 ವರ್ಷಗಳ ನಂತರ ಬಿಡುಗಡೆ ಹೊಂದಿಬಂದ ಈ ಕೈದಿಗಳಿಗೆ ಲಾಹೋರಿನ ಜನರು ಮಾನಪತ್ರವಿತ್ತು ಗೌರವಿಸಿದರು. ಇದೇ ತಾ. 26ರಲ್ಲು ಪುನಃ 3 ಮಂದಿ ಮಾರ್ಶಲ್ ಲೋ ಕೈದಿಗಳು ಮುಲ್ತಾನ ಜೈಲಿನಿಂದ ಬಿಡುಗಡೆ ಹೊಂದಿರುವರು. ಇವರು ಸರ್ದಾರ್ ಮನೋಹರಸಿಂಘ್, ಸಾದಿಕ್ ಪಹಲ್ವಾನ್ ಮತ್ತು ಸರ್ದಾರ್ ಸುಂದರಸಿಂಘರೆಂಬವರು. ಹಲವು ಮಂದಿ ಮುಲ್ತಾನ ಸ್ಟೇಶನಿನಲ್ಲಿ ನೇರಿ ಇವರಿಗೆ ವಿದಾಯವಿತ್ತರು.

ರಾಜಕೀಯ ಕೈದಿಗಳ ಬಿಡುಗಡೆಯ ಪ್ರಶ್ನೆ

ಶ್ರೀ. ಸಚ್ಚಿದಾನಂದಬಕ್ಷಿ ಎಂಬವರು ನೈನಿಜೈಲಿನಲ್ಲಿ, ಇಡೀದೇಶದ ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆಮಾಡಬೇಕೆಂಬ ಛಲದಿಂದ ಈಗ ಹಲವು ದಿವಸಗಳಿಂದ ಉಪವಾಸ ದೀಕ್ಷೆ ಹಿಡಿದಿರುವರು. ಅವರ ತೂಕವು 26 ರಾತ್ಲು ಕಡಿಮೆಯಾಗಿರುವುದು. ಈ ಉಪವಾಸವನ್ನು ನಿಲ್ಲಿಸಬೇಕೆಂದು ಶ್ರೀ. ಸುಭಾಸಚಂದ್ರಭೋಸ್, ಪಂಡಿತ ಜವಾಹರಲಾಲರೇ ಮೊದಲಾದವರು ಕೇಳಿಕೊಂಡರೂ ಶ್ರೀ. ಬಕ್ಷಿಯವರೊಪ್ಪುವುದಿಲ್ಲ. ಅವರಿಗೆ ಬಲಾತ್ಕಾರದಿಂದ ಸ್ವಲ್ಪ ಆಹಾರ ಕೊಡುವುದರಿಂದ ಈ ವರೆಗೆ ಬದುಕಿರುವರು. ಅವರ ಸ್ಥಿತಿಯು ಬಹಳ ಚಿಂತಾಜನಕವಿರುವುದು. ಶ್ರೀ. ಬಕ್ಷಿಯವರು ರಾಜಕೀಯ ಕೈದಿಗಳನ್ನೆಲ್ಲಾ ಬಿಟ್ಟುಬಿಡಬೇಕೆಂದು ಎಲ್ಲಾ ಪ್ರಾಂತಗಳ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿರುವರಾದರೂ ಅದನ್ನು ಜೈಲಿನ ಅಧಿಕಾರಿಗಳು ಕಳುಹಿಸಬಿಡಲಿಲ್ಲ. ರಾಜಕೀಯ ಕೈದಿಗಳ ಬಿಡುಗಡೆಯ ಪ್ರಶ್ನೆಯು ಈಗ ಪ್ರಾಮುಖ್ಯತೆ ಪಡೆದಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೂ ಆ ಕುರಿತು ಆಲೋಚಿಸಲಿದ್ದಾರೆ.

ಪಂಜಾಬಿನಲ್ಲಿ ಮನುಷ್ಯರ ಕಳವು

ಪಂಜಾಬಿನಲ್ಲಿ 1935–36ನೇ ಇಸ್ವಿಯಲ್ಲಿ 603 ಮಂದಿ ಕದ್ದೊಯ್ಯಲ್ಪಟ್ಟಿದ್ದರು. 584 ಮಂದಿ ಬಲತ್ಕಾರದಿಂದೊಯ್ಯಲ್ಪಟ್ಟಿರುವರು. ಇವರಲ್ಲಿ 348 ಮಂದಿ ಸ್ತ್ರೀಯರು. 1937ನೇ ಇಸವಿಯ ಪ್ರಥಮ 4 ತಿಂಗಳುಗಳಲ್ಲಿ 138ಮಂದಿ ಕದ್ದೊಯ್ಯಲ್ಪಟ್ಟಿರುವರು 166ಮಂದಿ ಬಲಾತ್ಕಾರದಿಂದೊಯ್ಯಲ್ಪಟ್ಟಿರುವರು. ಇವರಲ್ಲಿ 190 ಮಂದಿ ಸ್ತ್ರೀಯರು.

ಸಟೆಂಡರಿನ ಮೇಲೆ ಬಂಡಾಯಗಾರರ ದಾಳಿ

ಬಂಡಾಯಗಾರರು ಬಿಲ್ಬಾವೋವನ್ನು ವಶಪಡಿಸಿಕೊಂಡುದಕ್ಕಾಗಿ ಹಿಟ್ಲರ್ ಮತ್ತು ಮುಸಲೋನಿಗಳು ಬಹಳಸಂತೋಷಗೊಂಡು ಜನರಲ್ ಫ್ರೇಂಕೋರವರನ್ನು ಅಭಿನಂದಿಸಿ ತಂತಿ ಕಳುಹಿಸಿರುವರು. ಬಂಡಾಯಗಾರರು ಬಿಲ್ಬಾವೋ ಪಟ್ಟಣದ ಸಮೀಪದ ಕೆಲವು ಹಳ್ಳಿಗಳನ್ನು ವಶಪಡಿಸಿಕೊಂಡು ಸಟೆಂಡರೆಂಬ ಇನ್ನೊಂದು ಪಟ್ಟಣದ ಮೇಲೆ ದಾಳಿಯಿಟ್ಟಿರುವರು. ಈ ಪಟ್ಟಣವನ್ನು ರಕ್ಷಿಸಲು ಅಲ್ಲಿಯ ಸಶಕ್ತ ಜನರೆಲ್ಲಾ ರಾತ್ರಿ ಹಗಲು ಕೆಲಸ ಮಾಡಿ ಕಂದಕಗಳನ್ನು ತೋಡಿ ಸಿದ್ಧತೆ ಮಾಡುತ್ತಿರುವರು. ಕಾರ್ಖಾನೆಗಳು ಮದ್ದುಗುಂಡುಗಳನ್ನು ಎಡೆಬಿಡದೆ ತಯಾರಿಸುತ್ತಿರುವವು. 61,000 ಮಂದಿಯ ಸೇನೆಯೊಂದು ತರಬೇತಿ ಹೊಂದಿ ಸಿದ್ಧವಾಗುತ್ತಿರುವುದು. ಇದು ಹೊರತು ಮಿಲಿಶಿಯ ಸೈನಿಕರು ಸಟೆಂಡರನ್ನು ರಕ್ಷಿಸಲು ತಕ್ಕ ಸನ್ನಾಹ ಮಾಡುತ್ತಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು

ಜುಲಾಯಿ ತಾ. 5ರಲ್ಲಿ, ವಾರ್ಧಾದಲ್ಲಿ ನಡೆಯಲಿರುವುದು. ಇದಕ್ಕೆ ಕಾಂಗ್ರೆಸ್ ಪಕ್ಷೀಯರು ಬಹುಪಕ್ಷವಿರುವ ಪ್ರಾಂತಗಳ ಕಾಂಗ್ರೆಸ್ ಪಕ್ಷದ ಮುಂದಾಳುಗಳೂ ಆಮಂತ್ರಿಸಲ್ಪಟ್ಟಿರುವರು. ಇದು ಹೊರತು ಡಾಕ್ಟರ್ ಖಾನ್ ಸಾಹೇಬರೂ ಶ್ರೀ. ಶರಚ್ಚಂದ್ರ ಭೋಸರೂ ಆಮಂತ್ರಿತರಾಗಿರುವರು. ಶ್ರೀ. ಸುಭಾಸ ಚಂದ್ರಭೋಸರಿಗೆ ಈ ಸಭೆಗೆ ಹಾಜರಾಗಲು ಸಾಧ್ಯವಿಲ್ಲೆಂದು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ ತಂತಿ ಬಂದಿರುವುದು. ವೈಸರಾಯರ ಹೇಳಿಕೆಯ ಕುರಿತು ಕಾಂಗ್ರೆಸ್ ಮುಖಂಡರಾರೂ ತಮ್ಮ ಅಭಿಪ್ರಾಯನಿತ್ತಿರುವುದಿಲ್ಲ.

೪ ಮಂದಿಯನ್ನು ಕೊಂದು ಆತ್ಮಹತ್ಯೆ

ಇದೇ ತಾ. 24ರಲ್ಲು ಹೈದರಾಬಾದಿನ ಟಂಗಿ ಎಂಬ ಹಳ್ಳಿಯಲ್ಲಿ ಶಂಕರನೆಂಬವನಿಗೆ ತನ್ನ ಪತ್ನಿಯ ನಡತೆಯ ಕುರಿತು ಸಂದೇಹ ಹುಟ್ಟಿ ಅವಳನ್ನು ಕೊಲ್ಲುವ ಸಿದ್ಧತೆಮಾಡಿದನು. ಆಗ ಅವನ ತಾಯಿಯು ಹಾಗೆ ಮಾಡಬಾರದೆಂದು ಅಡ್ಡಿಮಾಡಿದಳು. ಶಂಕರನು ಕೋಪಗೊಂಡು ತಾಯಿಯನ್ನೇ ಕೊಂದುಬಿಟ್ಟ. ಆಗ ಅವನ ಮಾವನು ತಾಯಿಯ ಕೊಲೆಯ ಸಂಗತಿಯನ್ನು ವಿಚಾರಿಸಿದಾಗ ಅವನನ್ನೂ ಕೊಂದ. ಇವನು ಸಾಯುವಾಗ ಕೂಗಿದ ಶಬ್ದ ಕೇಳಿ ಶಂಕರನ ಇನ್ನೊಬ್ಬ ಚಿಕ್ಕತಂದೆಯೂ ಹುಡುಗನೂ ಅಲ್ಲಿಗೆ ಓಡಿಬಂದರು. ಶಂಕರನು ಅವರಿಬ್ಬರನ್ನೂ ತಿವಿದು ಕೊಂದು ಉನ್ಮತ್ತನಾಗಿ ಒಂದು ಬಾವಿಗೆ ಹಾರಿ ಆತ್ಮಹತ್ಯೆಮಾಡಿಕೊಂಡ.

ಮಿ. ಸಜ್ಜಾದ್ ಜಾಹೀರರ ದಸ್ತಗಿರಿ

ಲಕ್ನೋ ಚೀಫ್ ಕೋರ್ಟಿನ ಮಾಜಿ ಚೀಫ್ ಜಡ್ಜರಾದ ಸರ್ ಸೈಯ್ಯದ್‌ವಾಜೀರ್ ಹಾಸನರ ಮಗ ಸೈಯದ್ ಸಜ್ಜಾದ್ ಜಾಹೀರರು ಇದೇ ತಾ. 31ರಲ್ಲು ಮಸೋರಿಯಲ್ಲಿ ಕೈದುಮಾಡಲ್ಪಟ್ಟು ಯುನೋವಿಗೆ ಒಯ್ಯಲ್ಪಟ್ಟಿರುವರು. ಇವರು ಅಲಹಾಬಾದ್ ಟೌನ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿರುವರು. ಇವರು ಕಿಸನ್ ಸಭೆಯೊಂದರಲ್ಲಿ ರಾಜದ್ರೋಹಾತ್ಮಕ ಭಾಷಣವಿತ್ತರೆಂಬ ಆರೋಪದಿಂದ ನವಂಬರ ತಾ. 34ರಲ್ಲು ಕೈದುಮಾಡಲ್ಪಟ್ಟು ಇನ್ನು ಮುಂದೆ ಅವರು ರಾಜದ್ರೋಹಾತ್ಮಕ ಭಾಷಣ ಮಾಡುವುದಿಲ್ಲೆಂದು ಮಿ ಜಾಹೀರರ ತಂದೆ ಸರ್ ವಜೀರ್ ಹಸನರು ಜವಾಬ್ದಾರಿ ಹೇಳಿದುದರಿಂದ ಮರುದಿನ ಬಿಡುಗಡೆ ಹೊಂದಿದರು. ಆದರೆ ತನ್ನ ತಂದೆಯು ಕೊಟ್ಟ ಜವಾಬ್ದಾರಿಗೆ ತಾನುಹೊಣೆಯಲ್ಲೆಂದು ಮಿ. ಜಾಹೀರರು ಪ್ರಕಟಗೊಳಿಸಿದ್ದರು.

ಮಾರ್ಶಲ್ ಲೋ ಕೈದಿಗಳಿಗೆ ಪ್ರಚಂಡ ಸ್ವಾಗತ

ತಾ. 24ರಲ್ಲು ಲಾಹೋರಿನಲ್ಲಿ ಮಹಾಶೆ ರತ್ನಚಂದರೇ ಮೊದಲಾದ ಬಿಡುಗಡೆಹೊಂದಿ ಮಾರ್ಶಲ್‌ಲೋ ಕೈದಿಗಳಿಗೆ ಸಂಭ್ರಮದ ಸ್ವಾಗತವೀಯಲಾಯಿತು. ಈ ಸಂಬಂಧ

ಈಗ ತಾನೇ ಪುಸ್ತಕರೂಪದಲ್ಲಿ ಪ್ರಕಟವಾಗಿದೆ.

?

ಕೆ. ಕಾಂತಪ್ಪ ಶೆಟ್ಟಿಯವರಿಂದ ರಚಿತವಾದ

ಹೆಂಡ್ತಿ ಗಂಡನಾದರೆ?

ಹಿಂದು ಸಮಾಜದಲ್ಲೀಗ ಸರ್ವಸಾಮಾನ್ಯವಾಗಿ ಗಂಡನು ಹೆಂಡತಿಯಮೇಲೆ ನಿರಂಕುಶಾಧಿಕಾರ ನಡಿಸುತ್ತಾನೆ. ಹೆಂಡತಿಯು ಅದನ್ನು ಅಸಾಧಾರಣ ತಾಳ್ಮೆಯಿಂದ ಸಹಿಸಿಕೊಳ್ಳುತ್ತಾಳೆ ಗಂಡನಮೇಲೆ ಹೆಂಡತಿಯು ಅದೇರೀತಿ ಅಧಿಕಾರ ನಡಿಸುವಂತಾದರೆ ಗಂಡನಿಗದು ಅತಿ ಅಸಹನೀಯವಾಗುವುದು. ಇದಕ್ಕೇನುಕಾರಣ? ಪುರುಷರಕ್ತದಲ್ಲಿ ಮಿಶ್ರಿತವಾದ ಅದೊಂದು ಹೆಮ್ಮೆ! ಸ್ತ್ರೀಹೃದಯವಾದರೂ ಅಂತರಂಗದಲ್ಲಿ ಮೃದುವಾದುದು. ಆದರ ಅರಿವು ಉದ್ಧಟ ಪುರುಷಹೃದಯಕ್ಕಿಲ್ಲ. ಈ ಗುರಿಯಿಂದ ಬರೆಯಲ್ಪಟ್ಟ ಹಾಸ್ಯರಸ ಪ್ರಧಾನವಾದ ಏಕಾಂಕ ಪ್ರಹಸನ.

ಬೆಲೆ: ೦—೪—೦ ಮಾತ್ರ.

ಪ್ರತಿಗಳಿಗೆ ಇಂದೇ ಬರೆಯಿರಿ.

ಕಾರ್ಯದರ್ಶಿ "ಕಿರಿಯರ ಪ್ರಪಂಚ" ಉಡುಪಿ

ಅಥವಾ

ನವಭಾರತ ಬುಕ್ ಡಿಪ್ಪೊ,
ಚರ್ಚ್‌ರೋಡ್, ಉಡುಪಿ.

ಬೊಂಬಾಯಿಯಲ್ಲಿ ಪ್ರತಿಗಳು ಈ ಕೆಳಗಿನವರಲ್ಲಿ ಸಿಗುತ್ತವೆ.

ವಿ. ಎಸ್. ಸಿಬ್ರೂಕಾರ್

ಜಿ ನೇರಲ್ ಕೆನರಾ ನ್ಯೂಸ್ ಏಜೆನ್ಸಿ, ಫ್ರೋರ್ಟ್, ಬೊಂಬಾಯಿ.

ವಾಗಿ ನಡೆದ ಸಭೆಗೆ ಸುಮಾರು 15,000 ಮಂದಿ ನೆರೆದುಬಂದಿದ್ದರು. ಲಾಲಾ ಧುನಿ ಚಂದರು ಅಧ್ಯಕ್ಷರಾಗಿದ್ದರು ಡಾಕ್ಟರ್ ಸತ್ಯಪಾಲರು ಈ ಸಂದರ್ಭದಲ್ಲಿ ಭಾಷಣ ವೀಯುವಾಗ, ಶ್ರೀ ರತ್ನಚಂದರು ತನ್ನ ಗುರುವು. ತಾನೀಗ ಪಂಜಾಬ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷತನವನ್ನು ಅವರಿಗಾಗಿ ಬಿಟ್ಟುಕೊಡುವೆನು. ಯಾ ಕಂದರೆ ಪಂಜಾಬಿನ ಅದೃಷ್ಟವನ್ನು ರೂಪಿ ಸತಕ್ಕವರೇ ಅವರು. 1919ರಲ್ಲಿ ರಾಮ ನವಮಿ ದಿನದಲ್ಲಿ ಹಿಂದೂ-ಮುಸಲ್ಮಾನರು ಒಂದೇ ಕಪ್ಪಿನಲ್ಲಿ ಕುಡಿಯುವಂತೆ ಮಾಡಿ ದವರವರೆಂದು ಹೇಳಿದನು. 18 ವರ್ಷಗಳ ಕಾರಾಗೃಹವಾಸವು ದೇಶಸೇವೆಯ ತನ್ನ ಆಶೆಯನ್ನೇನೂ ಮುರಿಯಲಿಲ್ಲ. ತಾನಿನ್ನು ಬಾಳಿರುವಷ್ಟು ಕಾಲ ದೇಶಸೇವೆಯಲ್ಲಿ ನಿರ ತನಾಗುವೆನೆಂದು ಶ್ರೀ. ರತ್ನಚಂದರಂದರು.

ಜಾಪಾನಿನ ಪಾಂಚವಾರ್ಷಿಕ ಯೋಜನೆ

ಜಾಪಾನು ತನ್ನ ಕೈಗಾರಿಕೋತ್ಪತ್ತಿಗ ಳನ್ನು ಮೂರರಷ್ಟು ಹೆಚ್ಚಿಸಲು ಪಂಚವಾ ರ್ಷಿಕ ಯೋಜನೆಯೊಂದನ್ನು ಕೈಕೊಳ್ಳಲಿ ರುವುದು. ಇದಕ್ಕೆ 525 ಮಿಲ್ಯ ಪವನು ವ್ಯಯಿಸುವುದು. ದೇಶದ ರಕ್ಷಣೆಗಾಗಿ 611 ಮಿಲ್ಯ ಪವನು ವ್ಯಯಿಸಲ್ಪಡುವುದರಿಂದ ಜಾಪಾನಿನ ಆದಾಯವನ್ನು ಹೆಚ್ಚಿಸಲು ಈ ಕೈಗಾರಿಕಾಭಿವೃದ್ಧಿಯ ಯೋಜನೆಯು ಅವಶ್ಯಬಿದ್ದಿರುವುದೆಂದು ತಿಳಿದುಬರುತ್ತದೆ.

ಆಂಧ್ರ ಪ್ರಾಂತೀಯ ರಾಜಕೀಯ ಪರಿಷತ್ತು

ಇದೇ ತಾ. 21ರಲ್ಲು ನಾಂಡ್ಯಾಲ್ ಎಂಬಲ್ಲಿ ಶ್ರೀ. ಜೆ ಬ್ರಹ್ಮಯ್ಯನವರ ಅಧ್ಯ ಕ್ಷತೆಯಲ್ಲಿ ನಡೆದಾಗ ಶ್ರೀ. ಟಿ. ಪ್ರಕಾಶಂ ರವರು ಗಾಂಧಿಜಿಯವರ ನಾಯಕತ್ವದ ಮೇಲೆ ವಿಶ್ವಾಸವನ್ನು ಸೂಚಿಸುವ ಠರಾವ ನ್ನು ತಂದರು. ಇದನ್ನು ಆಂಧ್ರದ ಸೋ ಸಿಯಲಿಸ್ಟರು ಪ್ರಬಲವಾಗಿ ವಿರೋಧಿಸಿ ತೀವ್ರ ವಾದವಿವಾದ ನಡೆಯಿತು. ಕ ಡೆಗೆ ಸೋಸಿಯಲಿಸ್ಟರ ತಿದ್ದುಪಡಿ ಸೂಚನೆ ಗಳೆಲ್ಲಾ ಬಿದ್ದುಹೋಗಿ 90 ಅನುಕೂಲ ಮತ್ತು 40 ಪ್ರತಿಕೂಲ ಮತಗಳಿಂದ ಶ್ರೀ. ಪ್ರ ಕಾಶನರ ಸೂಚನೆಯೇ ಮಂಜೂರ್ಯಾತು.

ನಂಗಪರ್ವತಾರೋಹಣದ ಅನಾಹುತ

ಹಿಮಾಲಯದನಂಗಪರ್ವತವನ್ನೇರಲು ಹಿಂದೊಮ್ಮೆ ನಡೆಸಲ್ಪಟ್ಟ ಪ್ರಯತ್ನವು ನಿಷ್ಫಲವಾಗಿ ಪರ್ವತಾರೋಹಿಗಳು ಕೆಲವ ರು ಕೊಲ್ಲಲ್ಪಟ್ಟಿದ್ದರು. ಇದೇ ತಾ. ೧೪ ರಲ್ಲು ಪುನಃ ಈ ಪರ್ವತವನ್ನು ಹತ್ತುವ ಸಾಹಸಮಾಡಿದ ಜರ್ಮನರ ಮತ್ತು ಅವ ರ ಸಹಾಯಕರಾದ ಹಿಂದೀ ಕೂಲಿಗಳ ಮೇಲೆ ಹಿಮ ಪ್ರವಾಹವು ಬಿದ್ದು ಡಾಕ್ಟ ರ್ ಲುಫ್ನರ ಹೊರತು ಉಳಿದವರೆಲ್ಲ ಅಂದ ರೆ ಒಟ್ಟು ೧೬ ಮಂದಿ ಕೊಲ್ಲಲ್ಪಟ್ಟಿರುವರು ಈ ಅನಾಹುತದಿಂದ ಜರ್ಮನಿ ಮತ್ತು ಹಿಂದೂದೇಶದಲ್ಲಿ ವಿಷಾದವುಂಟಾಗಿರು ವುದು.

ವಜೀರಿಸ್ಥಾನದ ಪರಿಸ್ಥಿತಿ.

ಇದೇ ತಾ. 20ನೇ ರಾತ್ರಿ ಹಿಂದೀ ಸೈನಿ ಕರು ಬರಮಂಡ್ ಪ್ರದೇಶದ ಮೇಲೆ ಅನಿ ರೀಕ್ಷಿತವಾಗಿ ಮುತ್ತಿಗೆ ಹಾಕಿ 12ಮಂದಿ ಬಂಡಾಯಗಾರರನ್ನು . ಕೈದುಮಾಡಿರುವ ರು. ತಪ್ಪಿಸಿಕೊಳ್ಳಲೆತ್ನಿಸಿದವನೊಬ್ಬನಿಗೆ ಗುಂಡು ಹೊಡೆಯಲಾಯಿತು. ಕೈದುಮಾ ಡಲ್ಪಟ್ಟವರಲ್ಲೊಬ್ಬರು ಇಪ್ಪಿಯ ಫಕೀರ ರಿಗೆ ಮೊದಲು ಆಶ್ರಯ ಕೊಟ್ಟಿದ್ದ ಅರ್ಸಾ ಲ್ ಖಾನರೆಂದು ತಿಳಿದುಬರುತ್ತದೆ. ಬಂ ಡಾಯಗಾರರಿಂದ ಕದ್ದೊಯ್ಯಲ್ಪಟ್ಟ ಇಬ್ಬ ರು ಹಿಂದುಗಳು ಸಿಕ್ಕಿರುತ್ತಾರೆ. ಇದೇ ತಾ. 23ರಲ್ಲು ಹಿಂದೀ ಸೈನಿಕರು ಬಾಲ್ವೆ ಸ್ಟಿ ಎಂಬಲ್ಲಿಂದ ಜೊರ್ವಾರ್ಮ್ ಎಂಬ ಸ್ಥಳ ಕ್ಕೆ ಹೋಗುವಾಗ ಸುಮಾರು 260 ಮಂದಿ ಪಂಗಡಿಗರು ತಡೆಗಟ್ಟಿ ಹೋರಾಟನಡೆದು ಸರಕಾರದ ಸೈನಿಕರಲ್ಲಿ 7 ಮಂದಿ ಕೊಲ್ಲಲ್ಪ ಟ್ಟು 34 ಮಂದಿಗಾಯಗೊಂಡಿರುವರು. ವಜೀರ ಪಂಗಡಿಗರಲ್ಲಿ 24 ಮಂದಿ ಕೊಲ್ಲ ಟ್ಟಿರುವರು.

ಮೇದ್ರಿದಿನ ಮೇಲೆ ಧಾಳಿಯ ಪ್ರಯತ್ನ

ಬಿಲ್ಬಾವೋ ಪಟ್ಟಣವನ್ನು ವಶಪಡಿಸಿ ಕೊಂಡುದರಿಂದ ಉತ್ಸಾಹಗೊಂಡ ಬಂಡಾ ಯಗಾರರು ಮೇದ್ರಿದಿನ ಮೇಲೆ ಧಾಳಿನಡಿ ಸುವ ಪ್ರಬಲಯತ್ನ ನಡಿಸುತ್ತಿದ್ದಾರೆ. ಬಿಸ್ಕೆಕೊಲ್ಲಿಯ ಮಾರ್ಗದಲ್ಲಿ ಅವರು ನಿ ರಾತಂಕವಾಗಿ ಮುಂದೊತ್ತಿ ಹಲವು ಹಳ್ಳಿ ಗಳನ್ನು ವಶಮಾಡಿಕೊಂಡಿದ್ದಾರೆ.

10,000ಕ್ಕಿಂತಲೂ ಮಿಕ್ಕಿದ ಮೂರ್ಸ್ ಮತ್ತು ಅರಬ್ ಸೈನಿಕರೂ, ಇನ್ನಿತರ ಸ್ಪೆ ನಿಶ್ ಸೈನಿಕರು ಕಳೆದ ಕೆಲವು ದಿವಸಗ ಳಲ್ಲಿ ಹಡಗದ ಮೂಲಕ ಆಲ್ಜಿಸೀರಸ್ ಎಂಬಲ್ಲಿಗೆ ತರಲ್ಪಟ್ಟಿದ್ದಾರೆ. ಇಲ್ಲಿಂದ ಅವ ರು ಮಲಾಗ ಮತ್ತು ಕೇಡಿಜಿಗೆ ಕಳುಹಿಸ ಲ್ಪಡುತ್ತಾರೆ. ಬಂಡಾಯಗಾರರೀಗ ಮೇ ದ್ರಿದಿನ ಮೇಲೆ ಪ್ರಬಲ ಧಾಳಿ ನಡಿಸುವ ಸಿದ್ಧತೆಮಾಡುತ್ತಿದ್ದಾರೆ. ಗೊಡಲಜಾರದ ಲ್ಲಿ ಅವರು ನಡಿಸಿದ ಹೋರಾಟವು ನಿರರ್ಥ ಕವಾಗಿರುವುದು

ನೋಟೀಸು

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳನ್ನು ಮರುಪಾವತಿ ಮಾಡದಿರುವುದರಿಂದ ಈ ಮೂಲಕ ಜಾಹೀರುಪಡಿಸುವುದೇನೆಂದರೆ— ಸದ್ರಿ ನಗಗಳು ತಾ. 10–7–'37ನೇ ಶನಿವಾರ ಮಧ್ಯಾಹ್ನ 1 ಘಂಟೆಗೆ ಒಂದನೆ ಐಟಮು ಶ್ರೀ ರಾಮಕೃಷ್ಣ ಬಿಲ್ಡಿಂಗಿನ ಉಡುಪಿ ಲೋಕಲ್ ಆಫೀಸಿನಲ್ಲಿಯೂ ಎರಡನೆ ಐಟಮು ಬ್ರಹ್ಮಾವರ ಬ್ರಾಂಚ್ ಆಫೀಸಿನ ಲ್ಲಿಯೂ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡಲಾಗುವುದು.

ಐಟಮು ನಂಬ್ರ I

ಸಾಲದ ನಂಬ್ರ.	ಹೆಸರು ವೃತ್ತಿ ವಿಳಾಸ.			ಐವಜು
116/34	ಪೆರಂಪಳ್ಳಿ ರಾಘವೇಂದ್ರ ನಾಯಕ್,	ಸಾಹುಕಾರ್,	ಉಡುಪಿ	500/-
133/34	"	"	"	180/-
3/35	"	"	"	300/-
39/36	"	"	"	330/-
109/36	"	"	"	300/-

ಐಟಮು ನಂಬ್ರ II

596/35	ಪಿ. ದಿನಕರ್, ವೇದಮುತ್ತು ಮಗ, ಕಂಬ್ರಗೋಡು–ಬ್ರಹ್ಮಾವರ	90/-

(ಸಹಿ) ಯನ್. ರಾಮಚಂದ್ರ ರಾವ್,
ಏಜಂಟ್.

Mohini Harmonium Works, Udipi

Single Hand Harmoniums, Portable Hand Harmoniums
Double sets of Hand Harmoniums,
Trible sets of Hand Harmoniums,
Folding leg Harmoniums
Specially Constructed in our Work Shop. Well tuned and fitted.

Repairs of all kinds of Musical instruments undertaken at a very moderate rate to the Complete satisfaction of our customers.

A Trial order is earnestly solicited.

For Further Particulars

Apply to:

M. K. KORAGAPPA, *Proprietor.*

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮಧ್ವುವನೇಂದ್ರ ಮಹೌಷಧಾಲಯ.

ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ— ಗುಡಪಿಪ್ಪಲಿ (ಲೀವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ. **ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ** ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಕೊಳ್ಳಿರಿ.

ವಿಚಿತ್ರ ಪ್ರಪಂಚ

ಕಲ್ಲಿನಂತಾಗುವ ಮನುಷ್ಯ

ಪ್ರೇಗ್ ಪಟ್ಟಣದ ಮುನಿಸಿಪಲ್ ಆಸ್ಪತ್ರೆಯಲ್ಲಿ ಒಬ್ಬನ ಶರೀರವು ಕ್ರಮೇಣ ಕಲ್ಲಿನಂತೆ ಗಟ್ಟಿಯಾಗುತ್ತಾ ಬರುತ್ತಿರುವುದು. ಇದನ್ನು ನಿವಾರಿಸಲು ಡಾಕ್ಟರರು ಎಂತಹ ಪ್ರಯತ್ನ ನಡಿಸಿದರೂ ಪ್ರಯೋಜನವಾಗಿರುವುದಿಲ್ಲ. ಈ ರೋಗಿಗೆ 1914ರಲ್ಲಿ ಮುಂಗೈಯಲ್ಲಿ ಪ್ರಥಮವಾಗಿ ವಿಚಿತ್ರ ವೇದನೆಯುಂಟಾಯಿತು. ಆಮೇಲೆ ಅವನ ಇಡೀ ಬಲತೋಳೇ ಗಟ್ಟಿಕಟ್ಟತೊಡಗಿತು. ಈತನನ್ನು ಪರೀಕ್ಷಿಸಿದ ಡಾಕ್ಟರರು ಅವನ ಸ್ನಾಯುಗಳ ನಡುವೆ ಎಲುಬುಗಳು ಬೆಳೆಯುತ್ತಿರುವುದನ್ನು ಕಂಡುಕೊಂಡರು. ಆ ಮೇಲೆ ಅವನ ಎಡತೋಳು, ಕುತ್ತಿಗೆ, ಬೆನ್ನು, ಕಾಲು, ಅಂಗೈಗಳೆಲ್ಲಾ ಗಟ್ಟಿಕಟ್ಟಿದವು. 1925ರಿಂದ ಈ ದುರ್ದೈವಿಯು ಸಜೀವ ಗೊಂಬೆಯಂತಿದ್ದು ಆಸ್ಪತ್ರೆಯಲ್ಲಿರುವನು. ವಿಜ್ಞಾನದ ಮೂಲಕ ಯಾವುದನ್ನೆಲ್ಲಾ ಮಾಡಲು ಸಾಧ್ಯವಿದೆಯೋ ಅದನ್ನೆಲ್ಲಾ ಈತನಿಗೆ ಮಾಡಿ ನಿಷ್ಫಲವಾಗಿದೆ. ಇವನು ಉಸಿರಾಡುವನು. ಆದರೆ ಎಲುಬಿನ ಗೂಡೇನೂ ಉಬ್ಬುವುದಿಲ್ಲ. ಕಲ್ಲಿನ ಎದೆಗೂಡಿನೊಳಗೆ ಹಾಕಿದಂತೆ ತೋರುತ್ತದಂತೆ ಅವನಿಗೆ.

ಚಂದ್ರಬಿಂಬಕ್ಕೆ ಹಾರಿಹೋಗಬಹುದು

ರೊಕೆಟ್ ಎಂಬ ಆಕಾಶಬಾಣದ ಮೂಲಕ ಇನ್ನು 50 ವರ್ಷಗಳೊಳಗೆ ಚಂದ್ರಬಿಂಬಕ್ಕೆ ಹಾರಾಡಬಹುದೆಂದು ಕೆಲಮಂದಿ ವಿಜ್ಞಾನ ಶಾಸ್ತ್ರಜ್ಞರ ಅಭಿಮತವಿರುತ್ತದೆ. ಈ ರೊಕೆಟ್ ವಿಮಾನವು ಸೆಕುಂಡಕ್ಕೆ 7 ಮೈಲಿನ ವೇಗದಿಂದ ಮೇಲಕ್ಕೇರಿದರೆ ಭೂಮಿಯ ಆಕರ್ಷಣವನ್ನು ತಪ್ಪಿಸಿಕೊಳ್ಳಬಹುದಂತೆ. 48 ಘಂಟೆಗಳಲ್ಲಿ ಚಂದ್ರಬಿಂಬಕ್ಕೆ ಹೋಗಿ ಸೇರಬಹುದಂತೆ. ಹೀಗೆ ಪ್ರಯಾಣ ಮಾಡುವಾಗ ಉಸಿರಾಡಲು ವಾಯುವನ್ನೊಯ್ಯುವ ಉಪಕರಣವು ತಯಾರಾಗಿರುವುದು. ಲೋಕದ ಹಲವು ಮಂದಿ ವಿಜ್ಞಾನಶಾಸ್ತ್ರಜ್ಞರು ಚಂದ್ರಬಿಂಬಕ್ಕೆ ಹಾರಾಡುವ ರೊಕೆಟ್ ವಿಮಾನದ ತಯಾರಿಯಲ್ಲಿ ನಿರತರಾಗಿರುವರು. ಅದು ಸಾಧ್ಯವೆಂದು ಪ್ರೊಫೆಸರ್ ಗೊಡಾರ್ಡರು ವಾಯುಬುಟ್ಟಿಯಲ್ಲಿ 12 ಮೈಲು ಮೇಲಕ್ಕೇರಿ ಕೆಲಮಟ್ಟಿಗೆ ಸಿದ್ಧಗೊಳಿಸಿರುವರು. ಪ್ರಸಿದ್ಧ ವೈಮಾನಿಕರಾದ ಕರ್ನೆಲ್ ಲಿಂಡ್‌ಬರ್ಗರೂ ಚಂದ್ರಬಿಂಬಕ್ಕೆ ಹಾರಾಡಬಹುದೆಂಬ ಅಭಿಪ್ರಾಯವುಳ್ಳವರಾಗಿರುವರು.

ಪ್ರೇತದ ವಿಚಿತ್ರ ಪ್ರಭಾವ!

ಮಧುಬನಿ ಎಂಬ ಸ್ಥಳದ ಬಳಿಯ ಹಟಿ ಎಂಬ ಗ್ರಾಮದಲ್ಲಿ ಪ್ರೇತವೊಂದು ವಿಚಿತ್ರ ಕೆಲಸ ಮಾಡುತ್ತಿರುವುದೆಂದು ಪ್ರಕಟವಾಗಿದೆ. ಈ ಹಳ್ಳಿಯ ಬ್ರಾಹ್ಮಣ ಸ್ತ್ರೀಯೋರ್ವಳು ಅಕಸ್ಮಾತ್ತಾಗಿ ತಲೆಗೆಟ್ಟವಳಂತೆ ಏನೇನೊ ಮಾತಾಡತೊಡಗಿದಳು. ಕೆಲವೇ ನಿಮಿಷಗಳಲ್ಲಿ ಇವಳಿಗೆ ಸಂಪೂರ್ಣ ಬೋಧ ತಪ್ಪಿಹೋಯಿತು. ಡಾಕ್ಟರರು ಪರೀಕ್ಷಿಸಿದಾಗ ಕಾರಣವೇನೆಂದು ತಿಳಿದುಕೊಳ್ಳಲಾಗಲಿಲ್ಲ. ಈ ಸ್ತ್ರೀಗೆ ಬೋಧವುಂಟಾಗುವಂತೆ ಪ್ರಯತ್ನಿಸುತ್ತಿದ್ದಾಗ ಅವಳ ದೇಹದಲ್ಲಿದ್ದ ಆಭರಣಗಳೆಲ್ಲಾ ಮಾಯವಾದವು. ಒಂದು ಪೆಟ್ಟಿಗೆಯಲ್ಲಿಟ್ಟಿದ್ದ ರೂ. 60 ಕೂಡಾ ಕಾಣದೆ ಹೋಯಿತು. ಆಗ ನೆರೆಕರೆಯವರೆಲ್ಲಾ ಒಟ್ಟು ಕೂಡಿ ಸ್ತ್ರೀಗೇನೋ ಪ್ರೇತ ಚೇಷ್ಟೆಯುಂಟಾಗಿರಬೇಕೆಂದು ಮಾತನಾಡುತ್ತಿರುವಾಗ ಕಾಣದೆ ಹೋದ ಆಭರಣಗಳೆಲ್ಲಾ ಪುನಃ ತೋರಿಬಂದುವು. ಮಾಯವಾದ ನಾಣ್ಯಗಳು ಕೂಡ ಕೆಲವು ಆಕಾಶದಿಂದ ಕೆಳಕ್ಕೆ ಬೀಳಹತ್ತಿದವು. ಸ್ತ್ರೀಗೆ ಕ್ರಮೇಣವಾಗಿ ಬೋಧೆ ಬಂತು. ಆದರೆ ಬೀಳದುಳಿದ ನಾಣ್ಯಗಳು ಮಾತ್ರ ಏನಾದವೆಂದು ತಿಳಿದಿಲ್ಲ.

೪೦ ವರ್ಷಗಳ ಮೇಲೆ ವಿವಾಹ

ಬ್ರಿಟಿಷರು ಈಗುಪ್ತದ ಸುಡಾನನ್ನು ಗೆದ್ದಮೇಲೆ ಫ್ರೆಂಚ್ ನೌಕಾ ಪಡೆಯೊಂದು ಮೇಜರ್ ಮಾರ್ಚೆಂಡ್ ಎಂಬವರ ನಾಯಕತ್ವದಲ್ಲಿ ಸುಡಾನಿನ ಫೆಶೋಡ ಎಂಬ ಪಟ್ಟಣಕ್ಕೆ ಹೋಗಿ ಅದನ್ನು ಸ್ವಾಧೀನಪಡಿಸಿಕೊಂಡಿತು. ಆಗ ಲೋರ್ಡ್ ಕಿಚನರರು ಮೇಜರ್ ಮರ್ಚೆಂಡರನ್ನು ಕಂಡು ಮಾತಾಡಲು ಕಳುಹಿಸಲ್ಪಟ್ಟರು. ಕಿಚನರರ ಅಂಗರಕ್ಷಕರಾಗಿ ಲೆಫ್ಟಿನೆಂಟ್ ವಿಕ್ಟರ್ ಎನ್ನೋರರೆಂಬವರಿದ್ದರು. ಫ್ರೆಂಚರೊಂದಿಗೆ ಲಿಲ್ಲಿ ಡಿ. ನೆಮೂರಳೆಂಬ ಶ್ರೀಮಂತ ಸ್ತ್ರೀ ಇದ್ದಳು. ಕಿಚನರ್ ಮತ್ತು ಮರ್ಚೆಂಡರೊಳಗೆ ಮಾತು ಕಥೆ ನಡೆಯುತ್ತಿದ್ದಾಗ ಎನ್ನೋರ್ ಮತ್ತು ಲಿಲ್ಲಿ ಇವರು ನೋಟಗಳನ್ನು ಬದಲಾಯಿಸಿ ಕೊಂಡರು. ಇಬ್ಬರಲ್ಲಿಯೂ ಪ್ರಣಯವುಂಟಾಯಿತು. ಆದರೆ ಆಮೇಲೆ ಅವರಿಬ್ಬರೂ ಅಗಲಿದರು. ಅನಂತರ ಯುರೋಪಿನ ಯುದ್ಧವಾಯಿತು. ಎನ್ನೋರನು ಯುದ್ಧದಲ್ಲಿ ಭಾಗಿಯಾದನು. ಲಿಲ್ಲಿಯ ಕುರಿತು ಆಗಾಗ ನೆನೆವರಿಸುತ್ತಿದ್ದನೇ ಹೊರತು ಅವಳನ್ನೆಂದೂ ಸಂಧಿಸಲಿಲ್ಲ. ೪೦ ವರ್ಷಗಳು ಸಂದವು. ಎನ್ನೋರನು ಮದುವೆ ಮಾಡಿಕೊಳ್ಳಲೇ ಇಲ್ಲ. ಅವನಿಗೆ ಆಗಾಗ ಲಿಲ್ಲಿಯ ಸ್ಮರಣೆಯಾಗುತ್ತಿತ್ತು. ಅವನು ಹಳೆಯ ನೆನಹಿನಿಂದ ಪ್ರೇರಿತನಾಗಿ ಸುಡಾನಿನ ಫೆಶೋಡಾ ಪಟ್ಟಣಕ್ಕೆ ಹೋಗಿ ಅಲ್ಲಿ ತಿರುಗಾಡಹತ್ತಿದ. ಹಿಂದಿನ ವಿದ್ಯಮಾನಗಳನ್ನೆಲ್ಲಾ ನೆನೆವರಿಸಿಕೊಂಡ. ಹೀಗೆ ತಿರುಗಾಡುತ್ತಿರುವಾಗ ಒಂದೆಡೆ ನರೆತ ಕೂದಲಿನ ಸ್ತ್ರೀಯೋರ್ವಳನ್ನು ಕಂಡ. ಅವಳೇ ಲಿಲ್ಲಿ ಎಂದು ಗುರುತಿಸಿದ. ಅವಳು ಎನ್ನೋರನನ್ನು ಗುರುತಿಸಿದಳು. 40 ವರ್ಷಗಳಿಂದ ಇಬ್ಬರೂ ಮದುವೆಯಾಗದೆ ತುಸು ಸಮಯದ ದೃಷ್ಟಿಯ ಮಿಲನದಿಂದುಂಟಾದ ಪ್ರೇಮಕ್ಕೆ ವಿಧೇಯರಾಗಿದ್ದರು. ಮದುವೆಯಾಗುವ ಸಂದರ್ಭಗಳು ಬಂದರೂ ಮನಸ್ಸೊಪ್ಪದೆ ಬಿಟ್ಟುಬಿಡುತ್ತಿದ್ದರು. ಇಬ್ಬರೂ ಕಡೆಗೆ ವಿವಾಹದ ಆಶೆಯನ್ನೇ ಬಿಟ್ಟು ಬಿಟ್ಟಿದ್ದರು. ಎನ್ನೋರನಿಗೆ ಫೆಶೋಡಪಟ್ಟಣವನ್ನು ನೋಡುವ ಸ್ಮರಣೆಯುಂಟಾದಂತೆಯೇ ಲಿಲ್ಲಿಗೂ ಆಯಿತು. ಆದನ್ನವಳು ತಡೆಗಟ್ಟಲಾರದೆ ಕಡೆಗೆ ಫೆಶೋಡಕ್ಕೆ ಹೋದಳು. ಈಗ ಇವರಿಬ್ಬರೂ ಮದುವೆಯ ಸಿದ್ಧತೆ ಮಾಡುತ್ತಿದ್ದಾರೆ.

ಭೂಕಂದಾಯ ಕಮಿಟಿ

ಭೂಕಂದಾಯ ಕಮಿಟಿಯ ಅನಧಿಕಾರಿ ಮೆಂಬರರು ಜನರ ಕಂದಾಯದ ಸಂಕಷ್ಟಗಳ ಕುರಿತು ತಮ್ಮ ಸೂಚನೆಗಳನ್ನು ಕಮಿಟಿಗೊಪ್ಪಿಸಿರುವರು. ಈ ಕುರಿತೆಲ್ಲಾ ವಿಚಾರಿಸಲು ಈ ಕಮಿಟಿಯ ಕೊನೆಯ ಸಭೆಯು ಜುಲೈ ತಾ. 3ರಲ್ಲಿ ನಡೆಯಲಿರುವುದು. ಅನಧಿಕಾರಿ ಮೆಂಬರರ ಕೆಲವು ಸೂಚನೆಗಳನ್ನು ಈ ಕೆಳಗೆ ಕೊಡಲಾಗಿದೆ. ಭೂಮಿಯ ಮೇಲಿನ ಕರವು ನ್ಯಾಯವಾದ ಆಧಾರದ ಮೇಲೆ ಹೊರಿಸಲ್ಪಡಬೇಕು. ಸೆಟ್ಲ್‌ಮೆಂಟ್ ಆಫೀಸರರು ನಿಶ್ಚೈಸಿರುವ ಕಂದಾಯ ಪ್ರಮಾಣವು ತಪ್ಪುಗಣನೆಯ ಆಧಾರವುಳ್ಳುದಾಗಿದೆ. ಏಸ್ ಉತ್ಪತ್ತಿಯ ಅರೆವಾಸಿಯ ವರೆಗೆ ಕಂದಾಯ ಹೊರಿಸಬಹುದೆಂಬ ಕಲ್ಪನೆಯು ಕಾರ್ಯದಲ್ಲಿ ಅದಕ್ಕಿಂತಲೂ ಹೆಚ್ಚಿನ ತೀರ್ವೆಯನ್ನು ಕಳತೆಯ ಜಮೀನಿನ ಮೇಲೆ ಹೊರಿಸುವಂತಾಗಿದೆ. ಅದನ್ನು ತೆಗೆದು ಹಾಕಬೇಕು. ಕಂದಾಯವನ್ನು ವಾರ್ಷಿಕ ಉತ್ಪತ್ತಿಯ ಬೆಲೆಯ ನೇಕಡ 25ರಷ್ಟಕ್ಕಿಳಿಸಬೇಕು. ಅಂದರೆ ಉತ್ಪತ್ತಿಯಲ್ಲಿ, ಸಾಗುವಳಿಯ ವೆಚ್ಚ, ಒಕ್ಕಲಿಗನ ಕುಟುಂಬದ ಮಜೂರಿ ಮತ್ತು ಅವನ ಉದ್ಯಮಕ್ಕಾಗಿ ಕೊಡಬೇಕಾದ ಪ್ರತಿಫಲ ಮೊದಲಾದುವನ್ನೆಲ್ಲಾ ಕಳದುಳಿದ ಉತ್ಪತ್ತಿಯ ಬೆಲೆಯ ನಾಲ್ಕನೇ ಒಂದಂಶವನ್ನು ಕಂದಾಯವಾಗಿ ನಿಶ್ಚೈಸಬೇಕು. ಕಡಿಮೆಯೆಂದರೆ 5 ವರ್ಷಗಳೊಳಗಾದರೂ ಕಂದಾಯವನ್ನು ಈ ಪ್ರಮಾಣಕ್ಕೆ ತರಬೇಕು. ಆ ವರೆಗೆ ಕಂದಾಯವನ್ನು ಕ್ರಮೇಣವಾಗಿ ಕಂತುಪ್ರಕಾರ ಕಡಿಮೆಮಾಡುತ್ತಾ ಹೋಗಬೇಕು. ಕ್ರಮವಾದ ಸಾಗುವಳಿಗೊಳಗಾಗದ ಲಾಭರಹಿತವಾದ ಜಮೀನಿನ ಮೇಲೆ ಹೆಸರಿಗೆಮಾತ್ರವಾದ ಕಂದಾಯ ಹೊರಿಸತಕ್ಕದ್ದು. ಎರಡನೇ ಬೆಳೆಯ ತೀರ್ವೆಯು ಒಂದನೇ ಬೆಳೆಯದಕ್ಕಿಂತ ಅರೆವಾಸಿಯಾಗಿರಬೇಕು. ಅದಕ್ಕಿಂತ ಎಂದೂ ಹೆಚ್ಚಾಗಕೂಡದು. ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳಲ್ಲಿ ನೀರಾವರಿ ತೆರಿಗೆಯನ್ನೇ ಹೊರಿಸಬಾರದು. ತರಮ್ ಮೊದಲಾದ ವಿಷಯಗಳುಂಟಾಗಿರುವ ಅನ್ಯಾಯ ಮತ್ತು ತಾರತಮ್ಯವನ್ನು ಕಲೆಕ್ಟರರು ತನ್ನ ಬಳಿಗೆ ಸಂಬಂಧಪಟ್ಟವರ ಅರ್ಜಿ ಬಂದಲ್ಲಿ ನಿರಿಪಡಿಸತಕ್ಕದ್ದು. ನಳ್ಳೀಯ ಉತ್ಪತ್ತಿಗಳ ಬೆಲೆಯನ್ನು ಅದೊಂದು ಮಿತವಾದ ಪ್ರಮಾಣಕ್ಕಿಳಿಸುವಂತೆ ಅಮದು ರಫ್ತುಗಳ ಮೇಲಿನ ಕರವನ್ನು ನಿಯತಗೊಳಿಸಬೇಕು. ಪತಿತವರ್ಗದವರಿಗೆ ಸ್ಥಳಕೊಟ್ಟಿರುವಲ್ಲಿ, ಅವರ ಬೆಲೆಯನ್ನವರು ಕಂತು ಪ್ರಕಾರ ಕೊಟ್ಟು ತೀರಿಸುವವರೆಗೆ ಅದರ ಮೇಲೆ ಕಂದಾಯ ಹೊರಿಸಬಾರದು.

ಮಲಬಾರು ಮತ್ತು ದಕ್ಷಿಣ ಕನ್ನಡ

ಜಿಲ್ಲೆಗಳಲ್ಲಿ ಇತ್ತೀಚೆಗಾಗಿ ರಿಸರ್ವ್ ಫೋರೆಸ್ಟಿಗೆ ಸೇರಿಸಲ್ಪಟ್ಟಿರುವ ರೈತರ ಕಾಡುಗಳನ್ನೆಲ್ಲಾ ಅವರಿಗೆ ಬಿಟ್ಟುಕೊಡಬೇಕು. ರೈತರು ನಡಿಸಿರುವ ಕೃತದಮೇಲೆ ತೀರ್ವೆ ಹೊರಿಸಲೇಬಾರದು. ರೈತರ ಜಮೀನಿಗೆ ಸಂಬಧಿಸುವ ಗುಡ್ಡ ತಟ್ಟಿನ ಬಂಜರು ಸ್ಥಳ, ಪೊದೆಪೊದರುಗಳ ಕಾಡುಗಳನ್ನೆಲ್ಲಾ ಸೆಟ್ಲ್‌ಮೆಂಟಿನ ಹಿಂದಿನಂತೆಯೇ ತೀರ್ವೆಯಿಂದ ವಿಮುಕ್ತವಾಗಬೇಕು. 115 ಹಳ್ಳಿಗಳನ್ನು ಸ್ಪೆಶಲ್ ಗ್ರೂಪಾಗಿಮಾಡಿ ಅವುಗಳ ಮೇಲೆ ಎಕ್ರೆಯೊಂದಕ್ಕೆ ರೂ 1ರಂತೆ ಹೆಚ್ಚಿನ ತೀರ್ವೆಹೊರಿಸುವುದನ್ನು ತೆಗೆದು ಹಾಕಬೇಕು. ತೀರ್ವೆ ಲೆಕ್ಕಕ್ಕೆ ಒಂದು ತರಮ್ ಕಡಿಮೆ ಮಾಡಲ್ಪಟ್ಟಿರುವ 81 ಹಳ್ಳಿಗಳ ಸಾಲಿಗೆ ಅಂತಹ ಇತರ ಹಳ್ಳಿಗಳನ್ನು ಸೇರಿಸಬೇಕು.

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC, ETC.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**— ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ.
ಮಂಗಳೂರು, ದ. ಕ.

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**
ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**
ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.
ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.
ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭರ್ಗೋವಾ ಎಸ್ಕ್ವಾಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.
ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗೆನ್ಯಾಸ್ಟರ್, ನೆಲ್ಲೂರು.
ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು
ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

	ಅ	
ನವಭಾರತ ಬುಕ್ ಡಿಪೊ	ಥ	ಕಾರ್ಯದರ್ಶಿ,
ಉಡುಪಿ	ವಾ	**ಕಿರಿಯರ ಪ್ರಪಂಚ, ಉಡುಪಿ.**

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ
ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯ
ನವರಿಂದ ರಚಿತವಾದ

'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

The Manager, **The National Kanara News Agency,**
No. 58 Mody Street, Fort Bombay

THE

Vijaya Bank, Ltd.

Head Office: MANGALORE. Branch Offices: **Udipi, Kaup & Coondapoor.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½
ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½
6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.
2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ವಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್.
K. Gopalakrishna Shetty. ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ-ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ. ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದಶೀ ಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಾನನಷ್ಟದ ಮೊಕದ್ದಮೆ ದಂಡನೆ ಖಾಯಂ ಮಾಡಲ್ಪಟ್ಟಿತು.

ಉಡುಪಿಯ 'ಶ್ರೀ ಕೃಷ್ಣಸಂದೇಶ'ದ ಪ್ರಚಾರಕರ ಮೇಲೆ ಶ್ರೀ ಏವರಾಮಕಾರಂತರು ಮಾನನಷ್ಟ ಮೊಕದ್ದಮೆಯನ್ನು ಹೂಡಿ ಅದು ಸಬ ಡಿವಿಜನಲ್ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಯಾಗಿ ಪತ್ರಿಕಾ ಪ್ರಚಾರಕರಾದ ಶ್ರೀ| ಯಂ ಜನಾರ್ದನಾಚಾರ್ಯರಿಗೆ ರೂ ೨೦೦ನ್ನು ಅಪರಾಧ ವಿಧಿಸಿದ್ದರ ಮೇಲೆ ಶ್ರೀ| ಆಚಾರ್ಯರು ಸೆಶ್ಯನ್ಸ್ ಕೋರ್ಟಿನಲ್ಲಿ ಅಪೀಲ್ ಮಾಡಿದ್ದರು. ಸೆಶ್ಯನ್ಸ್ ಜಡ್ಜರಾದ ಬಿ. ಯಂ. ವೆಂಕಟರಾಮಯ್ಯನವರು ಈ ಮೊಕದ್ದಮೆಯ ವಿಚಾರಣೆ ನಡೆಸಿ ಕಳೆದ ತಾ. ೨೪ರಲ್ಲಿ ತೀರ್ಪುಕೊಟ್ಟರು. ಪ್ರಕೃತವಾದ ಲೇಖನದಲ್ಲಿ ಆಕ್ಷೇಪಕರವಾದ ಭಾಗಗಳಿದ್ದುವೆಂದು ಅಭಿಪ್ರಾಯಪಟ್ಟರು ಮತ್ತು ಮೊದಲು ವಿಧಿಸಿದ್ದ ರೂ. ೨೦೦ರದಂಡನೆಯನ್ನು ಖಾಯಂ ಮಾಡಿದರು. ಅಪೀಲ್ ಮಾಡಿದವರ ಕಡೆಯಿಂದ ಶ್ರೀಗಳಾದ ಎನ್ ಎನ್ ಸುವರ್ಣರೂ, ಕೆ ಉಗ್ಗಪ್ಪ ಶೆಟ್ಟಿಯವರವಾದಿಸಿದರು ಕಂಪ್ಲೈನೆಂಟ್ ಕಡೆಯಿಂದ ಶ್ರೀ ಜಿ. ಸೋಮಶೇಖರ ರಾಯರು ವಾದಿಸಿದರು, ಸರಕಾರದ ಕಡೆಯಿಂದ ಪಬ್ಲಿಕ್ ಪ್ರಾಸಿಕ್ಯೂಟರರಾದ ಶ್ರೀ. ಕಾರ್ಕಳ ಸದಾಶಿವರಾಯರು ವ್ಯವಹರಿಸಿದರು.

ಕಾಮ್ರೇಡ್ ಯೂಸುಫ್ ಮೆಹರಾಲಿಯವರ ಆಗಮನ

ಮುಂಬಯಿಯ ಪ್ರಸಿದ್ಧ ಸಮತಾವಾದಿ ಪಕ್ಷದ ಧುರೀಣರಾದ ಕಾಮ್ರೇಡ್ ಯೂಸುಫ್ ಮೆಹರಾಲಿಯವರು ಕೇರಳ ಸಮತಾವಾದಿ ಪರಿಷತ್ತಿನ ಅಧ್ಯಕ್ಷತೆ ವಹಿಸಲು ಬಂದವರು ಮಂಗಳೂರನ್ನೂ ಕಳೆದ ತಾ. ೨೪ರಲ್ಲಿ ಸಂದರ್ಶಿಸಿದರು ಅವರನ್ನು ಮಂಗಳೂರಿನ ಕಾಂಗ್ರೆಸ್ ಮುಂದಾಳುಗಳು ಸ್ವಾಗತೀಕರಿಸಿದರು.

ತಾ. ೨೪ನೇ ಸಾಯಂಕಾಲ ಥಿಯಾಸಾಫಿಕಲ್ ಲಾಜಿನಲ್ಲಿ ಅವರ ಭಾಷಣವಿತ್ತು ಶ್ರೀ| ರಾಮರಾಯ ಮಲ್ಯರು ಶ್ರೀ| ಮೆಹರಾಲಿಯವರ ಪರಿಚಯವನ್ನು ಕಿಕ್ಕಿರಿದು ನೆರೆದಿದ್ದ ಸಭಿಕರಿಗೆ ಮಾಡಿಸಿ ಕೊಟ್ಟು ಅವರಿಗೆ ಹೂವಿನ ಹಾರವನ್ನರ್ಪಿಸಿದರು

ಶ್ರೀ| ಮೆಹರಾಲಿಯವರು ಭಾಷಣವನ್ನಾರಂಭಿಸಿ ಮೊದಲನೆಯದಾಗಿ ವೈಸರಾಯರ ಭಾಷಣವನ್ನು ಟೀಕಿಸಿ ಹೀಗೆಂದರು ಕಾಂಗ್ರೆಸಿನವರು ಭರವಸೆಯನ್ನು ಕೇಳಿದ್ದರು. ಆದರೆ ವೈಸರಾಯರು ಆ ವಿಷಯದಲ್ಲಿ ಒಂದು ಅರ್ಥಜನಕ ಮಾತನ್ನಾದರೂ ಹೇಳಲಿಲ್ಲ ಬಹಳ ನಯವಾದ ಮಾತುಗಳಿಂದ ಕಾಂಗ್ರೆಸಿನವರ ಕೇಳಿಕೆಗಳನ್ನು ನಿರಾಕರಿಸಿದ್ದಾರೆ ಆದರೆ ವೈಸರಾಯರ ಈ ವರ್ತನೆಗೆ ಸಮತಾವಾದಿಗಳು ಸ್ವಲ್ಪವೂ ಬೇಸರಪಡುವುದಿಲ್ಲ ಏಕೆಂದರೆ ಕಾಂಗ್ರೆಸಿನ ಧ್ಯೇಯವು ಸುಧಾರಣೆಯನ್ನು ಮುರಿಯುವುದಾದ್ದರಿಂದ ವೈಸರಾಯರ ಪ್ರಕೃತದ ಪ್ರಕಟಣೆಯು ಕಾಂಗ್ರೆಸಿನ ಆ ಉದ್ದೇಶಕ್ಕೆ ಅನುಕೂಲಮಾಡುತ್ತದೆ'

ಸಮತಾವಾದಿ ಪಕ್ಷವೇಕೆಜನ್ಮತಾಳಿತು?

ಸಮತಾವಾದಿಗಳು ಕಾಂಗ್ರೆಸಿನ ಶಕ್ತಿಯನ್ನು ಕಡಿಮೆ ಮಾಡುತ್ತಾರೆಂದು ಹಲವರ ಅಭಿಪ್ರಾಯವಿದೆ. ಅನೇಕ ಕಾಂಗ್ರೆಸ್ ಸದಸ್ಯರೂ ಈ ಪ್ರಶ್ನೆಗಳನ್ನು ಕೇಳುತ್ತಾರೆ ಇದರ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಕಾಂಗ್ರೆಸಿನವರು ಸಿವಿಲ್ ದಿಸ್ಸ ಒಬಿಡಿಯನ್ಸ್ ಕಾಲದಲ್ಲಿ ಜೈಲಿಗೆ ತುಂಬಾ ಸಂಖ್ಯೆಯಲ್ಲಿ ಹೋಗಿದ್ದರು. ಜೈಲಿಂದ ಬಿಡುಗಡೆಯಾದ ಮೇಲೆ ಸದಾ ಕಾಂಗ್ರೆಸ್ ಸೇವೆಗೆ ತನುಮನಗಳನ್ನರ್ಪಿಸಿದವರೇನು ಮಾಡಬೇಕೆಂಬ ಅಭಿಪ್ರಾಯವು ಕೆಲವರಲ್ಲಿ ಹುಟ್ಟಿತು. ಕೂಲಿಗಾರರ, ರೈತರ, ಸಂಕಷ್ಟಗಳನ್ನು ಕಾಂಗ್ರೆಸಿನವರು ತಕ್ಕಷ್ಟು ಜಾಗ್ರತೆಯಿಂದ ನೋಡಿ ತಿಳಿಯಲಿಲ್ಲ. ಈ ಭಾಗದಲ್ಲಿ ಸಮತಾವಾದಿಗಳು ರೈತರ ಸಂಕಷ್ಟಗಳನ್ನು ಸ್ವತಃ ತಿಳಿದುಕೊಂಡು ಅವುಗಳ ನಿವಾರಣೆಗೆ ಯತ್ನಿಸಿದರು ಈಗ ಅವರು ಕಾಂಗ್ರೆಸಿನೊಳಗೆ ತೀವ್ರಗಾಮಿ ಪಕ್ಷವಾಗಿ ಕೆಲಸ ಮಾಡುವರು

ಕಾಂಗ್ರೆಸ್ ನಿಷ್ಠೆಗೆ ವಿರುದ್ಧರಲ್ಲ

ಸಮತಾವಾದಿಗಳೂ, ಇತರರಂತೆಯೇ ಶ್ರದ್ಧೆಯಿರುವ ಕಾಂಗ್ರೆಸ್ ಭಕ್ತರು ದೇಶಾಭಿಮಾನದಲ್ಲಾಗಲಿ, ಕಾಂಗ್ರೆಸ್ ನಿಷ್ಠೆಯಲ್ಲಾಗಲಿ ಇವರು ಬೇರೆ ಕಾಂಗ್ರೆಸ್ ಸಭಿಕರಿಗ ಹಿಂದಲ್ಲ ಆದರೆ ಕಾಂಗ್ರೆಸಿನವರು ಮುಂದಗಾಮಿಗಳು ಈ ಸ್ವಭಾವವು ಕಾಂಗ್ರೆಸಿನಲ್ಲಿ ಮೊದಲಿಂದಲೂ ಇತ್ತು. ಅಧಿಕಾರಿಗಳು ಮತ್ತು ಬಿರುದಾಂಕಿತರು ಒಂದು ಕಾಲದಲ್ಲಿ ಕಾಂಗ್ರೆಸಿನ ನಾಯಕರಾಗಿದ್ದರು. ಲೋಕಮಾನ್ಯ ತಿಲಕರು ಕಾಂಗ್ರೆಸಿನವರಲ್ಲಿ ನವ ಹುರುಪನ್ನು ಹುಟ್ಟಿಸಬೆತ್ನಿಸಿದಾಗ ಹಲವರು ಅವರನ್ನು ಟೀಕಿಸಿ ಅವರು ಕಾಂಗ್ರೆಸನ್ನು ನಾಶಮಾಡುವರೆಂದು ಸಾರಿದರು ಆದರೆ ಲೋಕಮಾನ್ಯ ತಿಲಕರನ್ನು ನಾವು ಇಂದು ಮಹಾಪುರುಷರೆಂದು ಗಣಿಸುತ್ತೇವೆ ಮಹಾತ್ಮಾ ಗಾಂಧಿಯವರು ಸತ್ಯಾಗ್ರಹದ ವಿಚಾರ ಮಾಡಿದಾಗ ಹಲವರು ಅವರನ್ನು ನಿಂದಿಸಿ, ಟೀಕಿಸಿದರು ಆದರೆ ಇಂದು ಮಹಾತ್ಮಾ ಗಾಂಧಿಯವರು ಮಾಡಿದ್ದು ಸರಿಯೆಂದು ಸಾರುತ್ತೇವೆ. ಲೋಕಮಾನ್ಯ ತಿಲಕರೂ, ಮಹಾತ್ಮಾ ಗಾಂಧಿಯವರೂ ಅವರ ಕಾಲದಲ್ಲಿ ಮುಂದಗತಿಯನ್ನು ಹಿಡಿದಿದ್ದ ರಾಷ್ಟ್ರ ಸಭೆಯನ್ನು ಎಚ್ಚರಿಸಿ ಅದು ಚಟುವಟಿಕೆಯಿಂದ ಮುನ್ನಡೆಯುವಂತೆ ಮಾಡಿದರು ಹಾಗೆಯೇ ಇಂದು ಸಮತಾವಾದಿಗಳು ಹೊಸ ರೀತಿಯ ಹೋರಾಟವನ್ನು ಹೂಡುವ ಅಭಿಪ್ರಾಯದಿಂದ ಮುಂದೆ ಬಂದಿದ್ದಾರೆ ಆದ್ದರಿಂದ ಅವರ ಕೆಲಸದಲ್ಲಿ ಅವರಿಗೆ ಬೆಂಬಲಕೊಡಬೇಕಲ್ಲದೆ ಅವರನ್ನು ತಡೆಯುವುದರಿಂದ ದೇಶದ ಅಭ್ಯುದಯವು ಆಗುವ ಹಾಗಿಲ್ಲ ಮತ್ತು ಭವಿಷ್ಯದ ಜನರು ಆದಕ್ಕಾಗಿ ಈಗ ಅಡ್ಡಿಪಡಿಸುವವರನ್ನು ಪುರಸ್ಕರಿಸುವುದೂ ಇಲ್ಲ

ಸಮತಾವಾದಿಗಳ ಪ್ರಕೃತದ ಉದ್ದೇಶ

ಪ್ರಕೃತದಲ್ಲಿ ಸಮತಾವಾದಿಗಳು ಮೂರು ವಿಷಯಗಳಲ್ಲಿ ತಮ್ಮ ಕಾರ್ಯಸಾಧನೆಯನ್ನು ಪ್ರಯೋಗಿಸುವರು. ಜಮೀನ್ದಾರಿ ಪದ್ಧತಿಯನ್ನು ರದ್ದುಪಡಿಸುವುದು, ಕಂದಾಯ ಕಡಿಮೆ ಮಾಡುವುದು, ರೈತರ ಸಾಲದ ಹೊರೆಯನ್ನು ಇಳಿಸುವುದು. ಈ ಕೆಲಸಗಳನ್ನು ಸಾಧಿಸಿ ಆ ಬಗ್ಗೆ ಜನಜಾಗ್ರತಿಯುಂಟಾಗುವಂತೆ ಮಾಡಿ ದೇಶದ ಜನರ ಆರ್ಥಿಕ ಸ್ಥಿತಿಯನ್ನು ವೃದ್ಧಿಗೊಳಿಸಿ ಆ ಅಡಿಗಟ್ಟಿನಮೇಲೆ ಭಾರತದ ಸ್ವಾತಂತ್ರ್ಯವನ್ನು ಸ್ಥಾಪಿಸುವುದೇ ನಮ್ಮ ಧ್ಯೇಯ

ಪ್ರಾರ್ಥನೆ

ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಲ್ಲರೂ ಸಹಕರಿಸಬೇಕು ಆದ್ದರಿಂದ ಸಕಲರೂ ರೈತರಿಗೆ ಬೆಂಬಲ ಕೊಡಬೇಕಲ್ಲದೆ ಅಧಿಕ ಸಂಖ್ಯೆಯಲ್ಲಿ ಕಾಂಗ್ರೆಸ್ ಸದಸ್ಯರಾಗಿಯೂ ಆಗಬೇಕು" ಎಂದರು

ಶ್ರೀ| ರಾಮರಾಯ ಮಲ್ಯರು ದನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು

ಮುಸಲ್ಮಾನರು ಕಾಂಗ್ರೆಸಿಗೆ ಸೇರಬೇಕು ಶ್ರೀ ಮೆಹರಾಲಿಯವರ ಹಿತೋಪದೇಶ

ಥಿಯಾಸಾಫಿಕಲ್ ಲಾಜಿನಲ್ಲಿ ಭಾಷಣ ಮುಗಿದೊಡನೆ ಶ್ರೀ| ಮೆಹರಾಲಿಯವರು "ಮುಸ್ಲಿಂ ವೆಲ ಫೇರ್ ಅಸೋಸಿಯೇಶನ್" ನಲ್ಲಿ ಭಾಷಣ ಮಾಡಲು ಬದರಿಯಾ ಹಾಲಿಗೆ ಚಿತ್ತೈಸಿದರು. ಆ ಸಭೆಯ ಕಾರ್ಯದರ್ಶಿಗಳಾದ ಶ್ರೀ| ಅಮ್ಮದ್‌ರವರು ಶ್ರೀ| ಮೆಹೆರಾಲಿಯವರನ್ನು ಸ್ವಾಗತೀಕರಿಸಿ ಸಭಿಕರಿಗೆ ಅವರ ಪರಿಚಯ ಮಾಡಿಸಿಕೊಟ್ಟರು ಶ್ರೀ| ಮೆಹರಾಲಿಯವರು ತಮ್ಮ ಉರ್ದು ಭಾಷಣದಲ್ಲಿ ಕಾಂಗ್ರೆಸಿನ ಮಹತ್ವವನ್ನೂ, ಅದು ದೇಶದ ಏಳಿಗೆಗ, ಜಾತಿಭೇದ, ಮತಭೇದವಿಲ್ಲದೆ ಹೇಗೆ ಆರ್ವಶತಮಾನದಿಂದಲೂ ಹೋರಾಡುತ್ತಿರುವುದೆಂಬುದನ್ನೂ ಸವಿಸ್ತಾರವಾಗಿ ವಿವರಿಸಿ, ಕಾಂಗ್ರೆಸಿಗೆ ಮುಸಲ್ಮಾನರು ಹೆಚ್ಚು ಸಂಖ್ಯೆಯಲ್ಲಿ ಸೇರಿ ದೇಶದ ಸ್ವಾತಂತ್ರ್ಯಕ್ಕೆ ಹೋರಾಡುವ ಆವಶ್ಯವಿದೆಯೆಂದು ಹೇಳಿದರು

ಬೀಡಿಕೆಲಸಗಾರರಿಗೆ ಹಿತೋಕ್ತಿ

ಅದೇ ರಾತ್ರಿ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಬೀಡಿ ಕೆಲಸಗಾರರ ಸಭೆಯಲ್ಲಿ ಭಾಷಣಮಾಡುತಾ ಭವಿಷ್ಯದ ಅಧಿಕಾರವು ಕೂಲಿಮಾಡುವ ಕೆಲಸಗಾರರದ್ದಿರುವುದೆಂದೂ ಆದ್ದರಿಂದ ಕೆಲಸಗಾರರು ತಮ್ಮ ಸಂಘಗಳನ್ನು ಸ್ಥಾಪಿಸಿ ಅವುಗಳನ್ನು ಬಹಳವಾಗಿ ಬಲಪಡಿಸಬೇಕೆಂದೂ ಹಿತಬೋಧೆಯನ್ನಿತ್ತರು ಶ್ರೀ ಹೈದರರು ಧನ್ಯವಾದಗಳನ್ನರ್ಪಿಸಿದ ಅನಂತರ ಸಭಾಂತ್ಯವಾಯಿತು

ವಿದ್ಯಾರ್ಥಿಗಳ ಸಭೆ

ತಾ. ೨೫ನೇ ಬೆಳಿಗ್ಗೆ ಥಿಯಾಸಾಫಿಕಲ್ ಲಾಜಿನಲ್ಲಿ ವಿದ್ಯಾರ್ಥಿಗಳ ಸಭೆಯಲ್ಲಿ ಶ್ರೀ| ಮೆಹರಾಲಿಯವರು ಭಾಷಣ ಮಾಡಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು ವಹಿಸಬೇಕಾದ ಭಾಗವನ್ನು ವಿವರಿಸಿ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಸಭೆ

ಬರುವ ಜುಲೈ ೩ ನೇ ಸಾಯಂಕಾಲ ಜಿಲ್ಲಾ ಕಾಂಗ್ರೆಸ್ ಕಮಿಟಿಯು ಕಾಂಗ್ರೆಸ್ ಕಚೇರಿಯಲ್ಲಿ ಸೇರುವುದು

ಶ್ರೀ| ಬೋಳಾರ್ ವಿಠಲರಾಯರು ಶ್ರೀ|ನರಸ್ವತೀ ಪ್ರಿಂಟಿಂಗ್ ವರ್ಕ್ಸ್—ಲಿಮಿಟೆಡ್" ಇದರ ಮ್ಯಾನೇಜಿಂಗ್ ಡೈರೆಕ್ಟರ್ ಸ್ಥಾನಕ್ಕೆ ರಾಜಿನಾಮೆಯನ್ನಿತ್ತಿದ್ದರಿಂದ ಅವರ ಸ್ಥಾನಕ್ಕೆ ಶ್ರೀ. ಡಿ ಪುಟ್ಟಸ್ವಾಮಿ, ಬಿ ಎ ಬಿ ಎಲ್ ವಕೀಲ್ ಮಂಗಳೂರು, ಇವರು ನೇಮಿಸಲ್ಪಟ್ಟಿರುವರು

ಮೊತ್ತಮೊದಲು ಮದ್ರಾಸ್ ಯೂನಿವರ್ಸಿಟಿಯ ವಿದ್ಯಾರ್ಥಿಗಳಾಗಿದ್ದು ಅನಂತರ 'ಸಿಡ್ನಿ ಸಸೆಕ್ಸ್ ಕಾಲೇಜಿನಲ್ಲಿ' ಗಣಿತ ಶಾಸ್ತ್ರವನ್ನು ಅಭ್ಯಾಸಮಾಡುತ್ತಿದ್ದ, ಇಲ್ಲಿಯ ಶ್ರೀ| ವಿ ಕೆ. ರಾಯರು ಕೇಂಬ್ರಿಜನ "ಮೆಥಮೆಟಿಕಲ್ ಟ್ರೈಪೋಸ್" ಎಂಬ ಗಣಿತ ಪರೀಕ್ಷೆಯಲ್ಲಿ ಎಲ್ಲರ ಪೈಕಿ, ಗಣನೀಯ ತರಗತಿಯಲ್ಲಿ ಉತ್ತೀರ್ಣರಾಗಿರುವರೆಂದು ತಿಳಿಸಲು ಸಂತೋಷವಾಗುತ್ತದೆ

ಇಲ್ಲಿಂದ ವರ್ಗಾಯಿಸಲ್ಪಟ್ಟ, ಡಿ. ಇ ಒ, ಗಳಾಗಿದ್ದ, ಶ್ರೀ| ಯು ಕಣ್ಣಪ್ಪ ಯಂ. ಎ ಎಲ್, ಟಿ ಯವರು ತಿರುಗಿ ನಮ್ಮ ಜಿಲ್ಲೆಯ, ಡಿ ಇ ಒ. ಗಳಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ

ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಕೆಲಸಗಾರರ ಅವಗಾಹನೆ

ಜಿಲ್ಲೆಯಲ್ಲಿ ಇದುವರೆಗೆ ಸೇರಿದ ಕಾಂಗ್ರೆಸ್ ಸದಸ್ಯರ ತಾಲೂಕವಾರು ಸಂಖ್ಯೆಯನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಕೂಡಲೆ ಕಳುಹಿಸಬೇಕಾಗಿರುವುದರಿಂದ ಆಯಾ ಸ್ಥಳಗಳಲ್ಲಿ ಕಾಂಗ್ರೆಸ್ ಸದಸ್ಯರನ್ನು ಸೇರಿಸುತ್ತಲಿರುವ ಕಾಂಗ್ರೆಸ್ ಕೆಲಸಗಾರರೆಲ್ಲರೂ ಕಳೆದ ಜೂನ್ ತಾರೀಕು ೧೬ವರೆಗೆ ತಾವು ಸೇರಿಸಿದ ಸದಸ್ಯರ ಸಂಖ್ಯೆ, ಊರಿನ ಹೆಸರು, ಮತ್ತು ತಾವು ಈ ಬಗ್ಗೆ, ಉಪಯೋಗಿಸಿದ ಪುಸ್ತಕಗಳ ನಂಬ್ರ ಇಷ್ಟು ಮಾಹಿತಿಯನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ತಪ್ಪದೆ ಕಳುಹಿಸಬೇಕಾಗಿ ಈ ಮೂಲಕ ವಿನಂತಿ

ಹಿ. ರಾ. ಮಲ್ಯ, ಕಾರ್ಯದರ್ಶಿ,
ಜಿಲ್ಲಾ ಕಾಂಗ್ರೆಸ್ ಕಮಿಟಿ.

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut
Car Street, Mangalore	Udipi, S India.	Charni Road, Bombay No 4

INSPECTORATE OFFICE AT:

1. Ottapalam Malabar District. 2 Central Station Road Trivandrum

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs 80,00,000
Life Funds Over	Rs 68,00,000
Premium Income Over	Rs. 22,54,000
Interest Income	Rs 3,16,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE Rs. 4,42,51,200

The Canara Banking Corporation Udipi Ltd.

Estd. (Incorporated in British India) 1906

ANNOUNCEMENT.

We have *great pleasure to inform* the public and our constituents that our name has been included in the Second Schedule of the Reserve Bank of India Act.

Issued & Subscribed Capital	Rs. 350000/-
Paid up Capital	Rs. 288950/-
Reserves	Rs. 363573/-
Deposits	Rs. 3740722/-
TOTAL RESOURCES EXCEED	HALF A CRORE.

V. R. Kamath, B. A., LL.B.
Ag. Manager.

ಉಡುಪಿ, ಗುರುವಾರ, ತಾ. ೧-೭-'೩೭

ಜಾತಿ ವೈಷಮ್ಯ ನಿವಾರಣೆಯ ಪ್ರಯತ್ನ

ಜಾತಿದ್ವೇಷವು ವಿಶೇಷವಾಗಿ ಹಿಂದು ಮುಸಲ್ಮಾನ ವೈಷಮ್ಯವು ದೇಶದ ಒಕ್ಕಟ್ಟು ಮತ್ತು ಸ್ವಾತಂತ್ರ್ಯ ಸಾಧನೆಗೆ ಮಹತ್ತಾದ ಕ್ಷೋಭಕಾಗಿರುವುದಲ್ಲದೆ ರಾಷ್ಟ್ರದ ಹೆಸರಿಗೆ ದೊಡ್ಡ ಕಳಂಕವನ್ನು ತರುವಂತಹದಾಗಿದೆ. ಇತ್ತಲಾಗಿ ದೇಶದ ಹಲವು ಕಡೆಗಳಲ್ಲಿ ಈ ವೈಷಮ್ಯ ಗಲಾಟೆಗಳು ಹೆಚ್ಚಾಗಿ ನಡೆದು ನಿಜವಾದ ರಾಷ್ಟ್ರಹಿತಚಿಂತಕರ ಹೃದಯವನ್ನು ತಳಮಳಗೊಳಿಸಿರುತ್ತವೆ. ವಾಯುವ್ಯ ಗಡಿನಾಡಿನ ಹಿಂದುಗಳಿಗೆ ಸುರಕ್ಷಿತ ಜೀವನವೆಂಬುದೇ ಇಲ್ಲ. ಪಂಜಾಬಿನಲ್ಲಿ ಹಿಂದು-ಮುಸಲ್ಮಾನ ಮತ್ತು ಮುಸಲ್ಮಾನ ಸಿಖ್ಖ ಗಲಾಟೆಗಳು ತಪ್ಪುವದೇ ಇಲ್ಲ. ಸಿಂಧ್ ಪ್ರಾಂತದ ಹಿಂದುಗಳ ಪರಿಸ್ಥಿತಿಯು ಅತ್ಯಂತ ಶೋಚನೀಯವಿದೆ. ಸಂಯುಕ್ತ ಪ್ರಾಂತ ಮತ್ತು ಬಂಗಾಳದಲ್ಲಿಯೂ ಹಿಂದು-ಮುಸಲ್ಮಾನ ವೈಷಮ್ಯವು ಇಲ್ಲವೆಂದಿಲ್ಲ. ಬೊಂಬಾಯಿಯಂತಹ ಅತ್ಯಂತ ಮುಂದುವರಿದ ಹಾಗೂ ಪ್ರಧಾನ ಪಟ್ಟಣದಲ್ಲೂ ಕ್ಷುಲ್ಲಕ ಕಾರಣಗಳಿಂದಾಗಿ ಕಾಡ್ಕಿಚ್ಚಿನಂತೆ ಹಿಂದು ಮುಸಲ್ಮಾನ ಗಲಭೆಯೆದ್ದು ಕೆಲಸಮಯ ಅಲ್ಲಿಯೂ ಜೀವನವು ಅಸ್ಥಿರವಾಗಿ ಪರಿಣಮಿಸುವುದು. ಇತ್ತಲಾಗಿ ದಕ್ಷಿಣ ಹಿಂದುಸ್ಥಾನಕ್ಕೂ ಈ ವಿಷಗಾಳಿ ಬೀಸಹತ್ತಿರುವುದು. ಮದ್ರಾಸ್ ಪಟ್ಟಣದ ಪೆರಂಬೂರಿನಲ್ಲಿ ಇತ್ತೀಚೆಗೆ ನಡೆದ ಗಲಾಟೆಯೇ ಇದಕ್ಕೆ ಸಾಕ್ಷಿ. ಮೈಸೂರು ಸಂಸ್ಥಾನದಲ್ಲಿ ಅಲ್ಲಲ್ಲಿ ಹಿಂದು-ಮುಸಲ್ಮಾನ ಹೊಡೆದಾಟಗಳು ಆಗಾಗ ನಡೆಯುತ್ತಲೇ ಇವೆ

ಹೆಚ್ಚಿನ ಈ ಗಲಾಟೆಗಳಿಗೆ ಕಾರಣವಾದರೂ ಏನು? ಕೇವಲ ಕೆಲಮಂದಿಯೊಳಗಣ ಖಾಸಗಿಜಗಳ, ಮಸೀದಿ ಅಥವಾ ದೇವಸ್ಥಾನದ ಬಳಿ ಭಜನೆ ಮೆರವಣಿಗೆ ಒಯ್ಯುವಿಕೆ, ದುರಾತ್ಮರು ಕೆಲವರು ಸ್ತ್ರೀಯರು ಮಕ್ಕಳನ್ನು ಕದ್ದೊಯ್ಯುವುದು ಅಥವಾ ಸ್ತ್ರೀಯರ ಮೇಲೆ ಅತ್ಯಾಚಾರ ನಡೆಸುವುದೇ ಮೊದಲಾದ ಕ್ಷುದ್ರವಿಷಯಗಳಿಂದಾಗಿ ಹೆಚ್ಚಿನ ಹಿಂದು-ಮುಸಲ್ಮಾನ ಮತ್ತು ಸಿಖ್ಖ ಗಲಾಟೆಗಳು ನಡೆಯುತ್ತಿರುವವು. ಕ್ಷುಲ್ಲಕ ಕಾರಣದ ಕಿಡಿಯೇ ದೊಡ್ಡ ದಾವಾಗ್ನಿಯಾಗಿ ಹಬ್ಬಿ ಹಾವಳಿ ಮಾಡುವುದು. ಅದರಿಂದ ಎಲ್ಲರಿಗೂ ಹಾನಿಯೇ ಹೊರತು ಯಾರಿಗೂ ಯಾವ ವಿಧದ ಪ್ರಯೋಜನವೂ ಇರಲಾರದು. ಈ ಸಂದರ್ಭಗಳಲ್ಲಿ ಹೆಚ್ಚಿನ ಜನರು ಮಾನವ ಸಹಜವಾದ ಒಂದಿಷ್ಟು ವಿಚಾರ ವಿವೇಕವಿಲ್ಲದೆ, ನಾಗರಿಕ ಜೀವನದ ಜವಾಬ್ದಾರಿಯನ್ನೇ ಮರೆತು ಹಿಂಸ್ರ ಪ್ರಾಣಿಗಳಂತೆ ವರ್ತಿಸುವರು. ಜಾತಿದ್ವೇಷದ ಹುಚ್ಚಿನಿಂದ ಎಂತಹ ಪೈಶಾಚಿಕ ಕೃತ್ಯಕ್ಕೂ ಹೇಸರು.

ಇತ್ತಿತ್ತಲಾಗಿ ಈ ಜಾತಿ ವೈಷಮ್ಯ ಮತ್ತು ಗಲಾಟೆಗಳು ಹೆಚ್ಚಲು ಕಾರಣವೇನು? ಎಲ್ಲಕ್ಕಿಂತಲೂ ಮುಖ್ಯವಾಗಿ, ಹಿಂದುಸ್ಥಾನದಲ್ಲಿ ಬೆಳೆದ ತಾವೆಲ್ಲರೂ ಸಹೋದರರು; ಹಿಂದುಗಳಿರಲಿ ಮುಸಲ್ಮಾನರಿರಲಿ,ಸಿಖ್ಖರಿರಲಿ, ಕ್ರೈಸ್ತರಿರಲಿ ಮೊದಲಾಗಿ ತಾವೆಲ್ಲಾ ಒಂದೇ ಮಾತೆಯ ಮಕ್ಕಳು ಒಟ್ಟಿಗೆ ಕಲೆತು ಬೆರತು ಸದಾ ಬಂಧುಪ್ರೇಮದಿಂದ ಒಂದಾಗಿ ಜೀವಿಸತಕ್ಕವರೆಂಬ ಆ ಉಜ್ವಲ ರಾಷ್ಟ್ರೀಯಭಾವನೆಯ ಅಭಾವ. ಹಿಂದುಗಳು ತಾವು ಮೊದಲಾಗಿ ಹಿಂದುಗಳು ಆ ಮೇಲೆ ಹಿಂದೀಯರು. ಎಲ್ಲಕ್ಕಿಂತಲೂ ತಮ್ಮ ಧರ್ಮಶ್ರೇಷ್ಠವಾದುದು ತಾವು ಮೇಲಾದವರೆಂದು ಭಾವಿಸಿಕೊಳ್ಳುವರು. ಮುಸಲ್ಮಾನರಲ್ಲಿ ಈ ಮನೋವೃತ್ತಿಯು ಮತ್ತಷ್ಟು ಉಗ್ರವಾಗಿರುವುದು. ವಿದೇಶೀಯ ಆಳ್ವಿಕೆಯಾದರೂ ಈ ಮನೋವೃತ್ತಿಯನ್ನು ಪ್ರತ್ಯಕ್ಷವಾಗಿಯಲ್ಲದಿದ್ದರೂ ಅಪ್ರತ್ಯಕ್ಷವಾಗಿ ಪ್ರೋತ್ಸಾಹಿಸುವ ರೀತಿಯಲ್ಲಿ ನಡೆಸಲ್ಪಟ್ಟಿರುವುದು. ಸ್ವಪ್ರತಿಷ್ಠಾಂಧರಾದ ಕೆಲಮಂದಿ ಮುಖಂಡರುಗಳು ತಮ್ಮ ಮೂಗಿನ ತುದಿಗಿಂತ ಮುಂಗೆ ನೋಡದೆ ಏನಾದರೂ ಅಲ್ಪ ವಿಷಯವನ್ನು ಮಹತ್ತಾಗಿ ಮಾಡಿ ಮೂಢಜನರನ್ನು ಉತ್ತೇಜಿಸಿ ವೈಷಮ್ಯವನ್ನು ಮತ್ತೂ ಹೆಚ್ಚಿಸುವರು. ಮಾತ್ರವಲ್ಲದೆ ತಾವಾಗಿಯೇ ಅದನ್ನು ಹುಟ್ಟಿಸಿ ಪೋಷಿಸಿ ತಮ್ಮ ಸಮಾಜದ ದೊಡ್ಡ ದೊಡ್ಡ ಮುಖಂಡರಾಗಿ ಮೆರೆದಾಡುವರು. ಜನಸಾಮಾನ್ಯರಿಗಿಂತಲೂ ಇಂತಹ ಸಂಕುಚಿತದೃಷ್ಟಿಯ ದೂರವಿಚಾರವಿಲ್ಲದ ವಿದ್ಯಾವಂತರೆನಿಸುವ ಸ್ವಪ್ರತಿಷ್ಠೆಯ ಮುಖಂಡರೇ ಹೆಚ್ಚಿನ ಗಲಾಟೆಗಳಿಗೆ ಕಾರಣರೆಂದು ಹೇಳಬಹುದು. ಯಾಕೆಂದರೆ ಹಿಂದುಸ್ಥಾನದ ಹಳ್ಳಿ ಮೂಲೆಗಳಲ್ಲಿ ಹಿಂದುಗಳೂ ಮುಸಲ್ಮಾನರೂ ಎಷ್ಟೊಂದು ಬಂಧುಭಾವದಿಂದ ಒಟ್ಟಾಗಿ ಪರಸ್ಪರ ಸಹಕರಿಸಿಕೊಂಡು ಜೀವಿಸಿಕೊಂಡಿರುವುದಿಲ್ಲ?

ಪಂಜಾಬಿನ ಮುಖ್ಯ ಮಂತ್ರಿಗಳಾದ ಸರ್ ಸಿಕಂದರ್ ಹಯತ್ ಖಾನರು ಇತ್ತಲಾಗಿ ಪಂಜಾಬಿನಲ್ಲಿ ನಡೆದ ಜಾತೀಯ ಗಲಾಟೆಗಳಿಂದ ತೀವ್ರ ಸಂತಾಪಗೊಂಡು, ಪಂಜಾಬನ್ನು ಸದಾ ಕಾಡುತ್ತಿರುವ ಜಾತಿದ್ವೇಷದ ಪ್ರೇತವನ್ನು ಉಚ್ಚಾಟನೆ ಮಾಡಲು ಕಟಿಬದ್ಧರಾಗಿರುವುದು ಅತ್ಯಂತ ಅಭಿನಂದನೀಯ ಸಂಗತಿ. ಅವರು ಜೂನ್ ತಾ. ೨೮ರಲ್ಲು ಪಂಜಾಬಿನ ಎಲ್ಲಾ ಸಮಾಜಗಳ ಮುಖಂಡರುಗಳ ಪರಿಷತ್ತೊಂದನ್ನು ಲಾಹೋರಿನಲ್ಲಿ ಕರೆದು ಪಂಜಾಬಿನಿಂದ ಜಾತೀಯತೆಯನ್ನು ನಿರ್ಮೂಲಿಸಲು ಏನು ಮಾಡಬೇಕೆಂದು ವಿಚಾರಿಸುತ್ತಿದ್ದಾರೆ. ದೇಶಾಭಿಮಾನಿಗಳಾದ ಪಂಜಾಬಿಗಳೆಲ್ಲರೂ ತಮ್ಮ ಪ್ರಾಂತದಲ್ಲಿ ನಡೆಯುತ್ತಿರುವ ಶೋಚನೀಯ ವಿದ್ಯಮಾನಗಳಿಂದ ತೀವ್ರ ಸಂತಾಪ ಹಾಗೂ ನಾಚಿಕೆಗೊಳ್ಳದಿರರು. ಎಲ್ಲರೂ ಆಶಿಸುವ ಆದರ್ಶವಾದ ರಾಷ್ಟ್ರೀಯ ಒಕ್ಕಟ್ಟಿಗೆ ಹಿಂದು-ಮುಸಲ್ಮಾನ, ಸಿಖ್ಖ ಮತ್ತು ಕ್ರೈಸ್ತಸಮಾಜಗಳೆಲ್ಲವರೂ ತಮ್ಮ ಉತ್ಕೃಷ್ಟಸೇವೆ ಸಲಿಸುವಂತೆ ಅದಕ್ಕನುಕೂಲವಾದ ವಾತಾವರಣವನ್ನುಂಟುಮಾಡಲು ಪಂಜಾಬಿಗಳೆಲ್ಲರೂ ಭುಜಕ್ಕೆ ಭುಜಕೊಟ್ಟು ನಿಂತು ಪ್ರಯತ್ನಿಸಬೇಕು. ರಾಜಕೀಯ ಕಾರ್ಯಕ್ರಮದಲ್ಲಿ ಭೇದಾಭಿಪ್ರಾಯವಿರಬಹುದು. ಆದರೆ ಇಂತಹ ಜಾತೀಯ ಗಲಾಟೆಗಳು ರಾಷ್ಟ್ರಕ್ಕೆ ದೊಡ್ಡ ನಾಚಿಕೆ. ಅವುಗಳಿಂದ ಯಾರಿಗೂ ಯಾವ ಪ್ರಯೋಜನವೂ ಆಗುವುದಿಲ್ಲ. ಅಂತಹ ಸಂಗತಿಗಳು ಮುಂದೆ ನಡೆಯದಂತೆ ದೇಶಾಭಿಮಾನಿ ಪಂಜಾಬಿಗಳೆಲ್ಲರೂ ಕೂಡಲೆ ಒಂದಾಗಿ ಪ್ರಯತ್ನಿಸಬೇಕು. ಜಾತೀಯ ದ್ವೇಷವೆಬ್ಬಿಸುವ ಕುರುಹುಗಳು ದೇಶದ ವ್ಯಾಪಕ ಹಾಗೂ ಶಾಶ್ವತವಾದ ಹಿತವನ್ನು ಕಡೆಗಣಿಸಿ ಕ್ಷುಲ್ಲಕ ಮತ್ತು ಕ್ಷುದ್ರದೃಷ್ಟಿಯ ಅಗ್ಗವಾದ ಪ್ರಖ್ಯಾತಿ ಪಡೆಯಲೆತ್ನಿಸುವ ಧೂರ್ತತನವನ್ನು ನಿಸ್ಸಂಕೋಚವಾಗಿ ಮತ್ತು ಸಾರ್ವಜನಿಕವಾಗಿ ನಿಷೇಧಿಸಬೇಕು. ಜಾತೀಯ ವೈಷಮ್ಯ ಅಥವಾ ಗಲಾಟೆಯನ್ನೆಬ್ಬಿಸುವವನು ಎಂಥವನೇ ಇರಲಿ, ಆವನು ಪಂಜಾಬಿನ ವೈರಿ. ಆದುದರಿಂದ ಪಂಜಾಬಿನ ಸರಕಾರದ ವೈರಿ. ತಾವು ಅಂಥವರನ್ನು ಅದೇ ರೀತಿ ಕಾಣುವೆವೆಂದು ಸರ್ ಸಿಕಂದರ್ ಹಯತ್ ಖಾನರು ಜಾತೀಯ ಕಲಹವೆಬ್ಬಿಸುವವರನ್ನು ಉಗ್ರವಾಗಿ ನಿಷೇಧಿಸಿರುವರು. ಪಂಜಾಬಿನಲ್ಲಿ ಜಾತೀಯ ಕಲಹಗಳುಂಟಾಗದಂತೆ ನೋಡಲು ಪ್ರಾಂತಿಕ ಮತ್ತು ಬೇರೆ ಬೇರೆ ಸ್ಥಳೀಯಬೋರ್ಡುಗಳು ಸ್ಥಾಪಿಸಲ್ಪಡುವವು. ಇತರ ಪ್ರಾಂತಗಳವರೂ ಸರ್. ಸಿಕಂದರರ ಅನುಕರಣೀಯ ಮಾದರಿಯನ್ನನುಸರಿಸಿದ ಪಕ್ಷದಲ್ಲಿ ದೇಶದ ಶಾಪವಾಗಿ ಪರಿಣಮಿಸಿರುವ ಜಾತೀಯ ವೈಷಮ್ಯ ಮತ್ತು ಗಲಾಟೆಗಳು ನಿವಾರಿಸಲ್ಪಡದಿರದು.

ಮದ್ರಾಸ್ ಗವರ್ನರರ ಆಶ್ವಾಸನೆ

ಜೂನ್ ತಾ. ೨೮ರಲ್ಲು ಕುನ್ನೂರಿನ ಕ್ರೈಸ್ತತರುಣ ಸಂಘದಲ್ಲಿ ಭಾಷಣವೀಯುವಾಗ, 'ಹೊಸ ರಾಜ್ಯಾಂಗರಚನೆಯ ಸರ್ವಸಾಧಾರಣ ವ್ಯವಹಾರದಲ್ಲಿ ರಾಜ್ಯಭಾರದ ಧೋರಣೆಯ ಸ್ವತಂತ್ರವು ನ್ಯಾಯವಾಗಿಯೂ ಮಂತ್ರಿಗಳದಾಗಿರುವುದು. ಮಾತ್ರವಲ್ಲದೆ ಮಂತ್ರಿಗಳು ಕೇವಲ ಪ್ರಾಂತದ ಒಳ್ಳೆಯ ಆಡಳಿತ ಮತ್ತು ಅದರ ಜನರೆಲ್ಲರ ನಿಜವಾದ ಹಿತಸಾಧನೆಯಲ್ಲಿಯೇ ಆಸಕ್ತರಾಗಿರುವ ವರೇಗೆ ಗವರ್ನರರ ವಿಶೇಷಾಧಿಕಾರಿಗಳು ಜ್ಯಾರಿಗೆ ಬರುವಸಂಭವವೇ ಇರಲಾರದು ಎಂದು ಆಶ್ವಾಸನೆ ಇತ್ತಿರುವರು. ಮದ್ರಾಸ್ ಗವರ್ನರರು ಮಂತ್ರಿಗಳೊಡನೆ ತನ್ನ ಸಂಬಂಧದ ಕುರಿತು ಪ್ರಸ್ತಾಪಿಸುತ್ತಾ, ತನಗೂ ತನ್ನ ಮಂತ್ರಿಗಳು ಸಂಪೂರ್ಣ ಒಮ್ಮತದಿಂದ ಕೆಲಸಮಾಡಲಾಗುವುದಿಲ್ಲೆಂದಾದರೆ ಅದು ತನಗೆ ಅತ್ಯಂತ ಖೇದವನ್ನುಂಟುಮಾಡದಿರದು. ಯಾರು ಮಂತ್ರಿಗಳಾದರೂ ಅವರಿಗೆ ತನ್ನಿಂದ ಸಾಧ್ಯವಾದ ಸಹಕಾರವನ್ನೀಯಬೇಕೆಂದೇ ತನ್ನ ಅಪೇಕ್ಷೆ. ಒಂದುವೇಳೆ ಪಾರ್ಲಿಮೆಂಟು ತನಗಿತ್ತ ಜವಾಬ್ದಾರಿಯನ್ನು ನಿರ್ವಹಿಸುವಾಗ ತನಗೂ ಮಂತ್ರಿಗಳಿಗೂ ಭಿನ್ನಾಭಿಪ್ರಾಯವುಂಟಾದರೆ ಇತ್ತಂಡದಲ್ಲಿಯೂ ಸುಮನಸ್ಸಿದ್ದರೆ, ಅದನ್ನು ಪರಸ್ಪರ ಚರ್ಚೆ ಮತ್ತು ತರ್ಕದಿಂದ ನಿವಾರಿಸಿ ಒಡಕುಂಟಾಗದಂತೆ ಮಾಡಲು ಸಾಧ್ಯವಿದೆ. ಮತ್ತು ಹಾಗೆಯೇ ಮಾಡಲಾಗುವುದೆಂದೇ ತನ್ನ ಯಥಾರ್ಥವಾದ ಅಭಿಪ್ರಾಯವೆಂದು ಸ್ಪಷ್ಟಪಡಿಸಿರುವರು.

ಶಿಕ್ಷಣದ ಪುನರ್ಘಟನೆ.

ಶಿಕ್ಷಣ ಕ್ರಮವು ಅದೆಷ್ಟು ದೋಷಯುಕ್ತವಾದುದೆಂಬುದು ಎಲ್ಲರಿಗೂ ತಿಳಿದ ವಿಷಯ. ಅದನ್ನು ಸುಧಾರಿಸುವ ಬಗೆ ಹೇಗೆಂಬುದನ್ನು ಸರಕಾರದವರು ಬಹಳ ಸಮಯದಿಂದ ಆಲೋಚಿಸಿಕೊಂಡಿದ್ದರು. ಈಗ ಅವರು ಆ ಕುರಿತು ಕೆಲವು ಸೂಚನೆಗಳನ್ನು ಪ್ರಕಟಗೊಳಿಸಿರುವರು. ಈಗಣ ಮಿಡ್ಲ್‌ಸ್ಕೂಲುಗಳ ವಿದ್ಯಾಭ್ಯಾಸದ ಅವಧಿಯನ್ನು 3ವರ್ಷದಿಂದ 4ವರ್ಷಕ್ಕೇರಿಸಲಾಗುವುದು. ಅಂದರೆ ಈಗಣ ಹ್ಯಾಸ್ಕೂಲಿನ IVಫೋರ್ಮನ್ನು ಮಿಡ್ಲ್‌ಸ್ಕೂಲಿಗೆ ಸೇರಿಸಿ VII ಫೋರ್ಮೊಂದನ್ನು ಹೆಚ್ಚಿಗೆಯಾಗಿ ಸೇರಿಸಲಾಗುವುದು. ಕೋಲೇಜಿನ ಜೂನಿಯರ್ ಇಂಟರ್ ಮಿಡಿಯೇಟನ್ನು ತೆಗೆದುಹಾಕಿ ಸಿನೀಯರ್ ಇಂಟರ್ ಮಿಡಿಯೇಟನ್ನು ಬಿ.ಎ. ಕ್ಲಾಸಿಗೆ ಸೇರಿಸಿ ಒಂದುಗೂಡಿಸಲಾಗುವುದು. ಮಿಡ್ಲ್‌ಸ್ಕೂಲಿನ IVಫೋರ್ಮಿನಲ್ಲಿ ಸರಕಾರಿಪರೀಕ್ಷೆಯಿರುವುದು. ಹ್ಯಾಸ್ಕೂಲಿನಲ್ಲಿ ಕೋಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೆ ಮತ್ತು ಹ್ಯಾಸ್ಕೂಲಿನಲ್ಲೇ ವಿದ್ಯೆಮುಗಿಸಿ ವೃತ್ತಿ ಶಿಕ್ಷಣಕ್ಕೆ ಕೊಳ್ಳುವವರಿಗೆ ಪ್ರತ್ಯೇಕ ಏರ್ಪಾಡು ಮಾಡಲಾಗುವುದು. ಈಗಣ ಹಾಯರ್ ಎಲಿಮೆಂಟರಿ ಶಾಲೆಗಳು ಮಿಡ್ಲ್ ಸ್ಕೂಲುಗಳೊಂದಿಗೆ ಹೋರಾಟ ನಡಿಸುತ್ತಿರುವುದರಿಂದ ಹಾಯರ್ ಎಲಿಮೆಂಟರಿ ಶಾಲೆಗಳ ಪಾಠಪಟ್ಟಿಯನ್ನೇ ಬದಲಾಯಿಸಲಾಗುವುದು. ಈ ಶಾಲೆಗಳು ವೃತ್ತಿ ಕೈಗಾರಿಕೆಗಳಿಗೂ, ಮಾತೃಭಾಷೆಗೂ ಹೆಚ್ಚಿನ ಪ್ರಾಧಾನ್ಯ ಕೊಡತಕ್ಕದ್ದು. ಎಂಟನೇ ತರಗತಿಯ ಅಂತ್ಯಕ್ಕೆ

ಪಬ್ಲಿಕ್ ಪರೀಕ್ಷೆಯೊಂದಿರಬೇಕು. ಜಿಲ್ಲಾ ಎಜ್ಯುಕೇಶನ್ ಕೌನ್ಸಿಲುಗಳಲ್ಲಿ ಈಗಿರುವಂತಿರಿಸಲೇನೂ ಪ್ರಬಲಕಾರಣಗಳಿರುವುದಿಲ್ಲ. ಅವುಗಳ ರಚನೆಯೇ ಬದಲಾಗಬೇಕು. ಇಲ್ಲವೇ ಅವುಗಳ ಕೆಲಸಮಾಡುವ ಬೇರೆ ರೀತಿಯ ಸಂಸ್ಥೆಗಳನ್ನೇರ್ಪಡಿಸಬೇಕೆಂದೇ ಸರಕಾರದ ಸೂಚನೆಗಳ ಸಾರಾಂಶ. ಈ ಕುರಿತಾದ ವಿವರವನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.

ವಿದೇಶ

ಸ್ಪೈನಿಶ್ ಸರಕಾರದ ಹಡಗು ಮುಳುಗಿತು

ಸ್ಪೈನಿನ ಪರಿಸ್ಥಿತಿಯು ಈಗ ಬಂಡಾಯಗಾರರಿಗೆ ಅನುಕೂಲವಾಗಿರುವುದೆಂದು ಇಟಲಿಯಲ್ಲಿ ಅಭಿಪ್ರಾಯವುಂಟಾಗಿರುವುದು. ಬಂಡಾಯಗಾರರು ಜಯಶೀಲರಾಗಬಹುದೆಂಬ ಭರವಸೆಯು ಹಿಟ್ಲರರಲ್ಲಿಯೂ ಉಂಟಾಗಿದೆ. ಅವರು ಸ್ಪೈನಿನಿಂದ ಕಬ್ಬಿಣದ ಪದರುಗಳನ್ನು ಪಡೆಯುವ ಪ್ರಸ್ತಾಪವೆತ್ತಿರುತ್ತಾರೆ. ಬಿಲ್ಬಾವೋ ಪಟ್ಟಣವು ಬಂಡಾಯಗಾರರ ಅಧೀನವಾಗಿರುವುದರಿಂದ ಅವರೀಗ ೧೪ನಿ.ಲ್ಯಕ್ಕಿಂತಲೂಮಿಕ್ಕಿದ ಜನಸಂಖ್ಯೆಯ ಮೇಲೆ ಅಧಿಕಾರ ನಡೆಸುತ್ತಿರುವರೆಂದೂ ಸರಕಾರದ ಅಧೀನದಲ್ಲಿ ಸುಮಾರು ೮ ಮಿಲ್ಯ ಜನರು ಮಾತ್ರ ಇರುವರೆಂದೂ ಬಂಡಾಯಗಾರರ ಕಡೆಯ ಸುದ್ದಿ. ಬಿಸ್ಕೇ ಪ್ರಾಂತದ ಗಣಿಗಳೆಲ್ಲಾ ಬಂಡಾಯಗಾರರ ವಶವಾಗಿರುವುವಂತೆ. ಅಲ್ಲಿ ಈಗ ಗೊರಿಲ್ಲಾ ಯುದ್ಧಮಾತ್ರ ನಡೆಯುತ್ತಿದೆಯಂತೆ.

ಜೂನ್ ತಾ. ೨೭ರಲ್ಲು ಅಲಿಕಾಂಟೆಯಿಂದ ವೆಲೆನ್ಸಿಯಕ್ಕೆ ಆಹಾರ ಸಾಮಾಗ್ರಿಗಳನ್ನೊಯ್ಯುತ್ತಿದ್ದ ಹಡಗವೊಂದನ್ನು, ಜಲಾಂತರ್ಗಾಮಿ ನಾವೆಯೊಂದು ಒಡೆದು ಮುಳುಗಿಸಿರುವುದು. ೫ ಮಂದಿ ನಾವಿಕರು ಮುಳುಗಿ ಮೃತರಾಗಿರುವರು. ಈ ಹಡಗವು ಮುಳುಗಿದ ಸ್ಥಳದ ಬಳಿ ೫ ಜರ್ಮನ್ ಯುದ್ಧ ನಾವೆಗಳಿದ್ದುವೆಂದೂ, ಜರ್ಮನ್ ಜಲಾಂತರ್ಗಾಮಿ ನಾವೆಯೇ ಅದನ್ನು ಮುಳುಗಿಸಿದುದೆಂದೂ ನಂಬಲಾಗಿದೆ.

ರಷ್ಯದಲ್ಲಿ ಗುಪ್ತ ಚರರು.

ರಷ್ಯದಲ್ಲಿ ಅಂತಃಕಲಹವನ್ನೆಬ್ಬಿಸಲು ಒಳಗಿಂದೊಳಗೆ ಒಳಸಂಚು ನಡೆಸಲ್ಪಡುತ್ತಿದೆಯೆಂದು ನಂಬಲಾಗಿದೆ. ರಷ್ಯದ ಸೇನೆಯನ್ನು ಕೂಡಾ ಕಮ್ಯೂನಿಸ್ಟ್ ತತ್ತ್ವಾಭಿಮಾನಿಯನ್ನಾಗಿಮಾಡುವಂತೆ ಸರ್ವಾಧಿಕಾರಿ ಸ್ಟೈನಿಕರು ಪ್ರಯತ್ನಿಸುತ್ತಿದ್ದಾರೆ. ರಷ್ಯದ ಪೂರ್ವದಲ್ಲಿ ನೆರೆಯ ರಾಜ್ಯವೊಂದರ ಗುಪ್ತಚರರು ಒಳಸಂಚು ನಡಿಸುತ್ತಿರುವುದು ಖಾಬರೋವಸ್ಕ ಎಂಬಲ್ಲಿ ಕಂಡು ಹಿಡಿಯಲ್ಪಟ್ಟು ಅನೇಕ ಮಂದಿ ಕೈದುಮಾಡಲ್ಪಟ್ಟಿರುವರು. ಇವರು ಮಧ್ಯ ರಷ್ಯಾದಿಂದ ಸೈಬೀರಿಯಕ್ಕೆ ಆಹಾರ ಸಾಮಾಗ್ರಿಗಳನ್ನು ತರುವ ಟ್ರೈನುಗಳನ್ನು ಮುರಿದು ಹಾಕುವಪ್ರಯತ್ನದಲ್ಲಿ ನಿರತರಾಗಿದ್ದರಂತೆ.

ಸ್ವದೇಶ

ಬಂಗಾಳ ಡಿಟೆನ್ಯೂ

ಗಳನ್ನೆಲ್ಲಾ ಒಮ್ಮೆಯೇ ಬಿಟ್ಟುಬಿಡಲು ಬಂಗಾಳದ ಮಂತ್ರಿಮಂಡಲವು ನಿರಾಕರಿಸಿರುವುದು. ಮುಖ್ಯ ಮಂತ್ರಿಗಳು ಪ್ರತಿಯೊಬ್ಬ ಡಿಟೆನ್ಯೂ ಕೈದಿಯ ಕುರಿತು ವಿಚಾರಿಸಿ ಆ ಮೇಲೆ ಬಿಡುಗಡೆಮಾಡುವ ಆಲೋಚನೆ ಮಾಡುವರಂತೆ.

ಕಾಂಗ್ರೆಸ್ ಎಸೆಂಬ್ಲಿ ಮೆಂಬರರ ದಸ್ತಗಿರಿ

ಬಿಹಾರ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರಾದ ಡಾಕ್ಟರ್ ಜುಗಲ್ ಕಿಶೋರ್ ನಾರಾಯಣ ಸಿಂಘರು ಜೂನ್ ತಾ. ೨೭ರಲ್ಲು ಅವರ ಹಳ್ಳಿಯ ಮನೆಯಲ್ಲಿ ಕೈದು ಮಾಡಲ್ಪಟ್ಟು ಜಾಮಿನಿನಿಂದ ಬಿಡಲ್ಪಟ್ಟಿರುವರು.

ಶ್ರೀ. ವಿ. ಡಿ. ಸವರ್ಕರರು

ಪೂನೆಗೆ ಹೋದಾಗ ಅಲ್ಲಿಯ ಪುರ ಜನರೆಲ್ಲಾ ಸಾರ್ವಜನಿಕ ಸಭೆ ಸೇರಿಸಿ ಅವರನ್ನು ಸ್ವಾಗತೀಕರಿಸಿದರು. ಜೂನ್ ತಾ. ೨೭ರಲ್ಲು ಇವರು ಬೊಂಬಾಯಿಗೆ ಹೋದಾಗ ಬೊಂಬಾಯಿಯ ನಾಗರಿಕರು ಅವರಿಗೆ ಮಾನಪತ್ರವನ್ನಿತ್ತು ಗೌರವಿಸಿದರು. ೩೦ ಸಂಸ್ಥೆಗಳ ಪರವಾಗಿ ಅವರಿಗೆ ಹೂಮಾಲೆ ಹಾಕಲಾಯಿತು. ಶ್ರೀ. ನರಿಮನ್, ಶ್ರೀ. ಎಮ್. ಎನ್. ರೈ ಮೊದಲಾದವರು ಶ್ರೀ ಸವರ್ಕರರ ದೇಶಭಕ್ತಿ, ತ್ಯಾಗಾದಿಗಳನ್ನು ಪ್ರಶಂಸಿಸಿ ಅವರು ಪುನಃ ಕಾಂಗ್ರೆಸಿಗೆ ಸೇರಿ ಕೆಲಸಮಾಡಬೇಕೆಂದು ಕೇಳಿಕೊಂಡರು. ಶ್ರೀ. ಸವರ್ಕರರು ತಾನು ಹಾಗೆ ಮಾಡಲು ಸಿದ್ಧನಿರುವೆನೆಂದು ಹೇಳಿ ಕಾಂಗ್ರೆಸಿನೊಳಗೆ ಸೋಶಿಯಲಿಸ್ಟ್ ಪಕ್ಷದ ಪ್ರಾದುರ್ಭಾವವು ಶುಭ ಚಿನ್ಹೆಯೆಂದರು.

ಮಿ. ಮೊಹರಾಲಿಯವರ ದಸ್ತಗಿರಿ

ಮಲಬಾರು ಮತ್ತು ಮಂಗಳೂರಲ್ಲಿ ವಿಚಾರಪೂರ್ಣವಾದ ಭಾಷಣವಿತ್ತು ಜನಜಾಗ್ರತಿಯನ್ನುಂಟುಮಾಡಿದ್ದ ಬೊಂಬಾಯಿಯ ತರುಣ ಮುಖಂಡರಲ್ಲೊಬ್ಬರಾದ ಮಿ. ಯೂಸುಫ್ ಮೆಹರಾಲಿಯವರು ಮಂಗಳೂರಿಂದ ತಿರುಗಿ ಕಲ್ಲಿಕೋಟೆಗೆ ಹೋದೊಡನೆಯೇ, ಅವರು ಮಲಬಾರು ಜಿಲ್ಲೆಯಲ್ಲಿ ಶಾಂತಿಭಂಗವುಂಟಾಗುವ ಭಾಷಣ ಕೊಟ್ಟಿರುವರೆಂಬ ಆರೋಪದಿಂದ ಮಲಬಾರು ಜಿಲ್ಲೆಯ ಕಲ್ಲಿಕೋಟೆ, ಎರ್ನಾಡ್, ವಲ್ಲುವನಾಡ್ ಮತ್ತು ಪೊನ್ನಾನಿ ತಾಲೋಕುಗಳಲ್ಲಿ ಒಂದು ತಿಂಗಳ ವರೆಗೆ ಭಾಷಣ ಕೊಡಬಾರದೆಂದು ಜೂನ್ ತಾ. ೨೦ರಲ್ಲು ಅವರ ಮೇಲೆ 144ನೇ ಸೆಕ್ಷನ್ ಜ್ಯಾರಿಮಾಡಲಾಯಿತು. ಮಿ. ಮೆಹರಾಲಿಯವರು ಇದನ್ನುಲ್ಲಂಘಿಸಿ ಕಲ್ಲಿಕೋಟೆಯ ಟೌನು ಹಾಲಿನಲ್ಲಿ ಭಾಷಣವಿತ್ತರು. ಇದನ್ನು ಕೇಳಲು ಸಾವಿರಾರು ಮಂದಿ ನೆರೆದು ಬಂದಿದ್ದರು ಮಿ. ಮೆಹರಾಲಿಯವರು, "ನನ್ನ ಭಾಷಣದಿಂದ ಮಲಬಾರಿನ ಶಾಂತಿಭಂಗವಾಗುವುದೆಂಬುದು ನನಗೊಂದು ಹೆಗ್ಗಳಿಕೆಯ ಸಂಗತಿ. ಒಮ್ಮೆ ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಗವರ್ನರರ ಬಂಗ್ಲೆಯ ಜಮ್ಖಾನಗಳಿಗಾಗಿ ರೂ. ೧೧,೦೦೦ ಮಂಜೂರುಮಾಡಬೇಕೆಂದು ಸರಕಾರವು ಸೂಚನೆ ತಂದಿತ್ತು. ಬಂಗಾಳದ ಕೆಲವು ಜಿಲ್ಲೆಗಳು ಬರಗಾಲ ಪೀಡಿತವಿರುವುದರಿಂದ ಜಮ್ಖಾನಗಳಿಗೆ ಹಣವ್ಯಯಿಸುವುದು ಸರಿಯಲ್ಲೆಂದು ಮೆಂಬರರು ಸದ್ರಿ ಹಣ ಮಂಜೂರು ಮಾಡಲೊಪ್ಪಲಿಲ್ಲ. ಆಗ ಸರಕಾರವು ಅದು ಪ್ರಾಂತದ ಶಾಂತಿರಕ್ಷಣೆಗಾಗಿ ಅಗತ್ಯವೆಂದು ಸರ್ಟಿಫೈ ಮಾಡಿತು. ಇದೇ ರೀತಿಯಾಗಿ ಸರಕಾರದ ಧುಕುಮುಗಳು. ನನ್ನನ್ನು ನೀವು ಗೌರವಿಸುವ ಮನಸ್ಸುಳ್ಳವರಿದ್ದರೆ ನೀವೆಲ್ಲಾ ನಿಮ್ಮೊಳಗಿನ ಜಗಳನ್ನು ನಿವಾರಿಸಿಕೊಂಡು ಒಕ್ಕಟ್ಟಿನಿಂದ ಕಾಂಗ್ರೆಸನ್ನು ಬಲಗೊಳಿಸಬೇಕೆಂದು ಕೇಳಿಕೊಂಡರು. ಆ ವೇಳೆ ಪೋಲೀಸರು ಮಿ. ಮೆಹರಾಲಿಗಳನ್ನು ದಸ್ತಗಿರಿಮಾಡಿ ಮೋಟರ್ ಕಾರಿನಲ್ಲಿ ಕೊಂಡೊಯ್ದರು.

ಉಡುಪಿ

ಮಾಸಿಕ ಸಂಗೀತೋತ್ಸವ

ಶ್ರೀ ಶಾರದಾ ಸಂಗೀತ ಕಲಾ ಶಾಲೆಯ ಮಾಸಿಕ ಸಂಗೀತೋತ್ಸವವು ತಾ ೨೬—೬—೩೭ನೇ ಸಾಯಂಕಾಲ ಘಂಟೆ ೬ಕ್ಕೆ ಸದ್ರಿ ಶಾಲಾ ಭವನದಲ್ಲಿ ಶ್ರೀ ವಕೀಲ್ ವಿಠಲ ಕಾಮತರವರ ಅಧ್ಯಕ್ಷತೆಯಲ್ಲಿ ಜರಗಿತು. ಊರ ಮಹನೀಯರನೇಕರು ನೆರೆದಿದ್ದರು ಶಾಲಾ ಬಾಲಕಿಯರ ಗಾಯನ, ಶಾರದಾ ಪೂಜೆಗಳಾದ ಬಳಿಕ ಧನ್ಯೋಕ್ತಿಯೊಡನೆ ಉತ್ಸವವು ಕೊನೆಗೊಂಡಿತು. ಸದ್ರಿ ಶಾಲೆಯ ಸ್ಥಾಪಕರಾದ ಶ್ರೀ ಕಡಿಯಾಳಿ ಪದ್ಮನಾಭಾಚಾರ್ಯರ ಉತ್ಸಾಹದಿಂದ ಶಾಲೆಯು ತುಂಬಾ ಅಭಿವೃದ್ಧಿಸ್ಥಿತಿಯಲ್ಲಿದೆಯಲ್ಲದೆ ಇನ್ನು ಮುಂದಕ್ಕೆ ಪ್ರತಿ ತಿಂಗಳಿಗೂ ಇತಂಹ ಸಂಗೀತೋತ್ಸವದ ಏರ್ಪಾಟಿದೆಯೆಂದೂ ಕೇಳುತ್ತೇವೆ

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ

ಇದರ ಆರ್ಥಿಕಸ್ಥಿತಿ, ಹಳ್ಳಿಕಮಿಟಿಗಳ ರಚನೆ ಮುಸಲ್ಮಾನರನ್ನು ಕಾಂಗ್ರೆಸಿಗೆ ಸೇರಿಸುವ ಪ್ರಯತ್ನ, ಜಿಲ್ಲಾ ರಾಜಕೀಯ ಪರಿಷತ್ತನ್ನು ಜರಗಿಸುವುದು, ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮುನಿಸಿಪಾಲಿಟಿ ಚುನಾವಣೆಯ ಪ್ರಶ್ನೆಯು ಪುನರ್ವಿಚಾರವೇ ಮೊದಲಾದ ಪ್ರಾಮುಖ್ಯ ಪ್ರಶ್ನೆಗಳನ್ನು ನಡೆಸಲು ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿಶೇಷ ಸಭೆಯೊಂದನ್ನು ಒಂದು ವಾರದೊಳಗೆ ಕರೆಯಬೇಕೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿ ಮೆಂಬರರು ಕೆಲವರು ಅರ್ಜಿಮಾಡಿಕೊಂಡಿರುವರೆಂದೂ ಇದಕ್ಕೆ ಉಡುಪಿಯ ಮೆಂಬರರೆಲ್ಲಾ ಸಹಿಹಾಕಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆಯನ್ನು ಉಡುಪಿಗೆ ಆಮಂತ್ರಿಸಿರುವರೆಂದೂ ತಿಳಿದುಬರುತ್ತದೆ.

ವಿಣಗುಡ್ಡೆ

ಕಳೆದ ಶನಿವಾರ ಇಲ್ಲಿ ಗದ್ದೆಯಲ್ಲಿ ಉಳುತಿದ್ದವನೊಬ್ಬನು ಅಪಸ್ಮಾರ ಪೀಡಿತನಾಗಿ ಮುಖ ಅಡಿಗ ಹಾಕಿ ಕೆಸರಿಗೆಬಿದ್ದು ಉಸಿರುಕಟ್ಟಿ ಸತ್ತು ಹೋಗಿರುವನೆಂದು ತಿಳಿದುಬರುತ್ತದೆ.

ಹರಿಜನ ಲೇಬರ್‌ಲೀಗ್

ಹರಿಜನ ಲೇಬರ್‌ಲೀಗಿನ ಒಂದು ಮಹಾ ಸಭೆಯು ಕಳೆದ ತಿಂಗಳ ತಾ. 20ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 11ಕ್ಕೆ ಉಳ್ಳಾಲ ರಘುನಾಥಯ್ಯ ರೀಡಿಂಗ್ ರೂಮಿನಲ್ಲಿ ಸಂಘದ ಕಾರ್ಯದರ್ಶಿಯವರಾದ ಶ್ರೀ ಕೆ. ಈಶ್ವರ, ಎಮ್. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯ ಮುಂದಿಡಲ್ಪಟ್ಟ ಠರಾವುಗಳ ಪೈಕಿ ಕೆಲವು ಠರಾವು ಮಾತ್ರ ಅಂಗೀಕರಿಸಲ್ಪಟ್ಟವು. ಇದೇ ಬರುವ ತಿಂಗಳ 15ನೇ ತಾರೀಕಿಗೆ ಲೀಗನ್ನು ಸ್ಥಾಪಿಸಿ ಒಂದು ವರ್ಷ ತುಂಬುವುದು. ಆದುದರಿಂದ ಸಂಘದ ಕಡೆಯಿಂದ ತಿಂಗಳ ತಾ. 11ಕ್ಕೆ ಒಂದು ಪರಿಷತ್ ಕರೆಯಬೇಕೆಂದು ಠರಾವುಮಾಡಲಾಯಿತು. ಆ ದಿನದ ಪರಿಷತ್ತಿಗೆ ಶ್ರೀಯುತ ನಾರಾಯಣ ಕಿಲ್ಲೆಯವರನ್ನು ಅಧ್ಯಕ್ಷಸ್ಥಾನಕ್ಕೆ ಕೇಳಿಕೊಳ್ಳಬೇಕೆಂದು ಸೂಚಿಸಲಾಯಿತು. ಸಂಘದ ಎಲ್ಲಾ ಮೆಂಬರರ ಒಂದು ಭಾವಚಿತ್ರವನ್ನು ಸಂಘದ ಕಡೆಯಿಂದಲೇ ತೆಗೆಯಬೇಕೆಂದು ಪಾಸುಮಾಡಲಾಯಿತು. ಆ ದಿನ ನೆರೆದು ಬಂದ ಸಭಿಕರಿಗೆ ಉಪಾಹಾರವನ್ನು ಸಂಘದ ಕಾರ್ಯದರ್ಶಿಯವರು ತನ್ನ ಕೈಯಿಂದ ಕೊಡುತ್ತೇನೆಂದು ಸೂಚಿಸಿ ಸಭೆಯು ಕೊನೆಗೊಂಡಿತು.

ಕಾರ್ಯದರ್ಶಿ

ಕೆ. ಈಶ್ವರ, ಎಮ್, ಎಲ್, ಎ.

(೧೨ನೇ ಪೇಜಿನಿಂದ ಮುಂದರಿದುದು)

ಮೊಗವೀರ ಮಹಾಜನ ಸಂಘವೂ ಕೂಡಾ ತನ್ನ ದೃಷ್ಟಿಯನ್ನು ಈ ಕಡೆಗೆ ತಿರುಗಿಸುವಂತೆ ನಮ್ಮ ವಿಜ್ಞಾಪನೆ.

ಮತ್ತೆ ಸಂಘದ ನೇತೃತ್ವದಲ್ಲಿ ನಡಿಸಿಕೊಂಡು ಬರುವ ಸೇವಾದಳದ ಸ್ಥಾಪನೋತ್ಸವವೂ ಈ ಸಂಘದ ಎರಡನೇ ವಾರ್ಷಿಕೋತ್ಸವವೂ ಇದೇ ತಿಂಗಳ 11ನೇ ತಾರೀಕಿಗೆ ಸರ್; ಕಾವಸ್ಜಿ ಜಹಾಂಗೀರ್ ಹಾಲಿನಲ್ಲಿ ಡಾಕ್ಟರ್, ಟಿ. ಕೆ. ಮೂಲ್ಕಿ ಎಮ್. ಬಿ. ಎಫ್. ಆರ್. ಸಿ. ಎಸ್. ಇವರ ಅಧ್ಯಕ್ಷತೆಯಲ್ಲಿ 2 ಘಂಟೆಗೆ ಜರಗಲಿರುವುದೆಂದು ಈ ಮೂಲಕ ತಿಳಿಸಲು ಸಂತೋಷಪಡುವೆವು. ಬಾಲ್ಯ ವಿವಾಹದ ದುಷ್ಪರಿಣಾಮವನ್ನು ಚೆನ್ನಾಗಿ ಬಯಲಿಗೆ ತರುವಂಥದ್ದಲ್ಲದೆ ಮನೋರಂಜಕವಾದ "ಮಧ್ಯಮ ಮಧ್ಯಲ್"; ಎಂಬ ಶ್ರೀಯುತ ಕಾಂತಾವರ ಸೇಸು ಮಂಡನ್ನಾಯರಿಂದ ಬರೆಯಲ್ಪಟ್ಟ ನಾಟಕವನ್ನು ಈಸಂದರ್ಭದಲ್ಲಿ ಅಭಿನಯಿಸಿ ತೋರಿಸುವೆವು. ಮಹಾಜನರೆಲ್ಲರಿಗೂ ಈ ಮೂಲಕ ನಮ್ಮ ಹೃತ್ಪೂರ್ವಕದ ಆಮಂತ್ರಣವನ್ನೀಯುವೆವು.

ಆಡಳಿತೆ ಕಮಿಟಿಯವರ ಅನುಮತಿಯಿಂದ

ಬೆಂಗರೆ ಗೋಪಾಲ ಕರ್ಕೇರ ಮತ್ತು

ವೀರಪ್ಪ ಸಾಲ್ಯಾನ್

ಗೌರವ ಜೊತೆಕಾರ್ಯದರ್ಶಿಗಳು.

ಕಾಸರಗೋಡು

ಇಲ್ಲಿಯ ಸೆಕೆಂಡರಿ ಶಾಲೆಯ ಕರ್ನಾಟಕ ಪಂಡಿತ ರಾ| ರಾಮನಾಯಕರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ 'ಕರ್ನಾಟಕ ಸಂಘ'ದಲ್ಲಿ ಇದೇ ಕಳೆದ ತಾ. ೨೩ನೇ ಬುಧವಾರ ಸಂಜೆ 'ಭಾಷಾಭಿಮಾನ' ಎಂಬ ವಿಷಯವನ್ನೆತ್ತಿಕೊಂಡು ಶ್ರೀ| ಪಿ. ಯಲ್. ಪುಣಿಚಿತ್ತಾಯರು ಸುರಸವಾಗಿ ಭಾಷಣಕೊಟ್ಟರು. ಮತ್ತೆ ಶ್ರೀ| ರಾಮನಾಯಕರು ಉಪಕಾರ ಸ್ಮರಣೆಯನ್ನು ಹೇಳಿ ಭಾಷಣ ಕರ್ತರಿಗೆ ಹೂಗೊಂಚಲನ್ನಿತ್ತು ಸತ್ಕರಿಸಿದ ನಂತರ ಅಂದಿನ ಸಭಾಂತ್ಯವಾಯಿತು.

ಉದ್ಯಾವರ

ಇತ್ತೀಚೆಗೆ ಕೆಲವು ಉತ್ಸಾಹೀ ತರುಣ ವೃಂದದವರ ಶ್ರಮದಿಂದ ಇಲ್ಲಿ ರಾಷ್ಟ್ರಸೇವಾ ವಾಚನ ಮಂದಿರ ಎಂಬ ಇನ್ನೊಂದು ವಾಚನಾಲಯವು ತೆರೆಯಲ್ಪಟ್ಟಿದೆ ಇದು ಹುಟ್ಟಿ ಕೆಲವೇ ದಿನಗಳಾದರೂ ಏದಾರು ಪತ್ರಿಕೆಗಳನ್ನೂ, ಒಂದು ದೈನಿಕ ಇಂಗ್ಲೀಷ್ ಪತ್ರಿಕೆಯನ್ನೂ ಒದಗಿಸಿ ಕೊಡುವ ತ್ರಾಣ ಉಳ್ಳದ್ದಾಗಿದೆ.

UDIPI

ALL KINDS OF BANKING BUSINESS TRANSACTED

PERSONAL ATTENTION PAID TO ALL ENQUIRIES

ESTD. 1925

ದಕ್ಷಿಣ ಕನ್ನಡ

ಕಾಪು

ಇಲ್ಲಿಯ ಸಂಯುಕ್ತಬೋರ್ಡಿನ ಬಂದರಿನ ಹಳ್ಳಿಯ ಸುಧಾರಣೆಗೆ ಸಾಕಷ್ಟು ಇಲ್ಲವಾದರೂ ಸಂಚಯದ ಹಣವು ಪ್ರಕೃತಕ್ಕೆ ಅತ್ಯಾವಶ್ಯಕವಾದವುಗಳಿಗಾಗಿಯೇ ವಿನಿಯೋಗಿಸಲ್ಪಟ್ಟದು ಸ್ತುತ್ಯ. ನ್ಯೆಬಿಡ ಕಾಲ ರಸ್ತೆಗೆ ನೀರು ಹಾಯಿಸುವುದು, ಅಲ್ಲಲ್ಲಿ ದೀಪ ಉರಿಸುವುದು ಕಾಲುದಾರಿಯ ಸೌಕರ್ಯ ಇವೆಲ್ಲಕ್ಕಿಂತಲೂ ಹಸ್ತೆವಾರು ಮಾರ್ಕೆಟಿನ ಕಟ್ಟಡಗಳನ್ನು ಪರಿಷ್ಕರಿಸಲ್ಪಟ್ಟುದರಿಂದ ಬೋರ್ಡಿನ ಸಂಚಯದ ಹಣದಿಂದ ಖಾಯಂ ಹಟ್ಟಿವಳಯು ಏರಿಸಲ್ಪಟ್ಟಂತಾಯಿತು

ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಏರಿದ್ದರಿಂದ ಸಾಕಷ್ಟು ಸ್ಥಳವು ಇಲ್ಲದೆ ತೊಂದರೆಯಾಗಿತ್ತು ಆ ತೊಂದರೆ ಆಗದಂತೆ ಬೋರ್ಡಿನವರು ಒಂದು ಹೊಸ ಕಟ್ಟಡವನ್ನು ಪ್ರತ್ಯೇಕವಾಗಿ ಕಟ್ಟಿಸಿ ಒದಗಿಸಿದಾಯಿತು ನಂತರ ಅಧ್ಯಾಪಕರ ಸಂಖ್ಯೆಯು ಕಡಿಮೆಯಾದದಕ್ಕೆ ಈಗ ಒಂದು ಹೊಸ ಇಸವನ್ನು ಕೊಡೋಣಾಗಿದೆ

ಇದೇ ತಾ ೧೯ನೇ ದಿನ ಬೋರ್ಡ ಶಾಲೆಯಲ್ಲಿ ಈ ಸೆಂಟರಿನ ಅಧ್ಯಾಪಕರ ಸಭೆಯು ಶ್ರೀ ಶ್ಯಾಮರಾಯ ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಯಿತು ಸಾದೂರು ಶಾಲಾ ಹೆಡ್ಮಾಸ್ತರರು ವಿದ್ಯಾಭ್ಯಾಸ ಪ್ರಚಾರದ ಕುರಿತು ಭಾಷಣಕೊಟ್ಟರು ಈ ಕುರಿತು ಸಭಿಕರ ಸೂಚನೆಯಲ್ಲಿ ಉಚ್ಚಿಲ ಮಿಶನ್ ಶಾಲಾ ಹೆಡ್‌ಮಾಸ್ತರರು ಭಾಷಣವನ್ನು ಪ್ರಶಂಸಿಸುತ್ತಾ ಸ್ತ್ರೀವಿದ್ಯಾಭ್ಯಾಸಕ್ಕಿಂತ ಪುರುಷ ವಿದ್ಯಾಭ್ಯಾಸಕ್ಕೆ ಗಮನಕೊಡುವದು ಪ್ರಶಸ್ತವೆಂಬರ್ಥದ ಸೂಚನೆ ಕೊಟ್ಟುದನ್ನು ಬೋ. ಬಾಲಿಕೆಯರ ಶಾಲಾ ಅಧ್ಯಾಪಕಿಯರಾದ ಮೇರಿಯವರು ಖಂಡಿಸಿ ಚಿಕ್ಕ ಭಾಷಣವನ್ನು ಕೊಟ್ಟರು ಸಭಾ ಯೋಜಿತಕ್ಕೆ ಸರಿಯಾಗಿ ಅಧ್ಯಕ್ಷರು ಭಾಷಣ ಕೊಟ್ಟ ತರುವಾಯ ಸಭೆಯು ಮುಕ್ತಾಯವಾಯಿತು

ಇಲ್ಲಿಯ ಬೋ. ಬಾಲಿಕೆಯರ ಶಾಲೆಯ ಕಡೆಗೆ ಜನ ಪ್ರೀತಿಯು ಕುಂದುತ್ತಿದೆ ಬಾಲಿಕೆಯರು ಆ ಶಾಲೆಗೆ ಹೋಗಲು ಅತಿಯಾಗಿ ವಿರೋಧಿಸುತ್ತಿರುವರ. ಶಾಲೆಯಲ್ಲಿ ಈಗ ೩೦-೪೦ ಬಾಲಿಕೆಯರಿದ್ದರೂ ಅಧ್ಯಾಪಕಿಯರು ಮಾತ್ರ ನಾಲ್ಕು ಮಂದಿ ಇರುತ್ತಾರೆ

ಕುಂದಾಪುರ

ತಾ ೨೦ ೬ ೩೭ರಲ್ಲು ಮೊಳಹಳ್ಳಿಗ್ರಾಮದ ಟಪ್ಪಾಡಿ ಎಂಬಲ್ಲಿ ಒಂದು ಹುಲಿಯು. ಆಹಾರವನ್ನು ಹುಡುಕುತ್ತಾ ಬಂದು, ರಾತ್ರಿ ಸಮಯವಾದುದರಿಂದ ಒಬ್ಬ ಮಾಗೇರ ಜಾತಿಯವನ ಮನೆಯ ಇದಿರಿನಲ್ಲಿರುವ ಬಾವಿಗೆ ಬಿದ್ದು ಮೇಲೆ ಬರಲು ಸಾಧ್ಯವಿಲ್ಲದೆ, ಆ ದಿನ ರಾತ್ರಿ ಗರ್ಜನೆಕೊಡುತ್ತಾ ಇತ್ತು ಮರುದಿನ ಒಳಗೆ ಆ ಮನೆಯ ಯಜಮಾನನು ಆಸ್‌ಪಾಸಿನಲ್ಲಿರುವ ಹತ್ತೆಂಟು ಮಂದಿಗಳಿಂದ ಕೂಡಿ ಹುಲಿಯನ್ನು ಹೊಡೆದು ಕೊಂದಿರುವನು

ಪುತ್ತೂರು

ಈ ತಾಲೂಕಿನ ಎಲಿಮೆಂಟರೀ ಶಾಲಾ ಉಪಾಧ್ಯಾಯರ ಸಂಘದ ಮಹಾ ಸಭೆಯು ಇದೇ ಕಳೆದ ೧೯ನೇ ತಾರೀಕಿಗೆ ಪುತ್ತೂರು ಬೋ. ಹಾ ಎ ಶಾಲಾ ಕಟ್ಟಡದಲ್ಲಿ ಡಿ. ಬೋರ್ಡ ಮೆಂಬರರಾದ ಮ ರಾ ರಾ ಬಿ ಮಂಗೇಶರಾವ್, ಅವರ್ಗಳ್, ವಕೀಲ್, ಇವರ ಅಧ್ಯಕ್ಷತೆಯಲ್ಲಿ ಜರಗಿತು ಈ ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಮ ರಾ ರಾ ಯು ಕೃಷ್ಣರಾವ್, ಅವರ್ಗಳ್, ಬಿ ಎ ಎಲ್ ಟಿ ಯವರೂ ಡಿಸ್ಟ್ರಿಕ್ಟ್ ಬೋರ್ಡ ಮೆಂಬರ್ ಮ ರಾ ರಾ ಯಂ ಸದಾಶಿವರಾವ್, ಅವರ್ಗಳ್, ಬಿ ಎ ಬಿಯಲ್ ಇವರೂ, 72 ಮಂದಿ ಉಪಾಧ್ಯಾಯ ಪ್ರತಿನಿಧಿಗಳೂ ಹಾಜರಿದ್ದರು ತಾಲೂಕು ಸಂಘದ ವರದಿ, ಓಡಿಟ್ ರಿಪೋರ್ಟ್, ಸರ್ಕಲಾದ ಠರಾವುಗಳು ಓದಲ್ಪಟ್ಟು ಮಂಜೂರು ಮಾಡಲ್ಪಟ್ಟನಂತರ ಎಲಿಮೆಂಟರೀ ಶಾಲೆಗಳಲ್ಲಿ ಈಗಿನಂತೆ ವರ್ಷದ ಆರಂಭದ ಮೂರು ತಿಂಗಳಲ್ಲಿಯೂ, ಆ ಮೇಲೆ 6 ತಿಂಗಳ ನಂತರ ಒಮ್ಮೆ ಜನವರಿ ತಿಂಗಳಲ್ಲಿಯೂ ಮಕ್ಕಳನ್ನು ದಾಖಲುಮಾಡಿಕೊಳ್ಳುವಂತಾಗಬೇಕೆಂದು ಕೇಳಿಕೊಳ್ಳುವುದು, ಬೋಯಿಸ್ ಎಲಿಮೆಂಟರೀ ಶಾಲೆಗಳಿಗೆ ಕೂಡುವ ಹುಕುಂಗಳನ್ನೂ, ಎಂಗೋರ್ಸ್ಮೆಂಟುಗಳನ್ನೂ ಕನ್ನಡದಲ್ಲಿ ಕೊಡಬೇಕೆಂದೂ, ಇನ್ಸ್‌ಪೆಕ್ಷನ್ ರಿಮಾರ್ಕನ್ನು ಕನ್ನಡದಲ್ಲೇ ಬರಿಯಬೇಕೆಂದೂ ಕೇಳಿಕೊಳ್ಳುವುದು, ಮಲೇರಿಯಾ ಪ್ರಾಂತ್ಯಗಳಲ್ಲಿ ಕೆಲಸಮಾಡುವ ಉಪಾಧ್ಯಾಯರಿಗೆ ಜ್ವರದ ಬತ್ತೆ ಸಿಗಬೇಕೆಂದು ಕೇಳಿಕೊಳ್ಳುವುದು, ಎಲಿಮೆಂಟರೀ ಶಾಲಾ ಹೆಡ್ ಮಾಸ್ತರರುಗಳಿಗೆ ಡ್ಯೂಟಿ ಎಲೋವೆನ್ಸನ್ನಾಗಲೀ, ಪ್ರತ್ಯೇಕ ಸಂಬಳದ ಸ್ಕೇಲನ್ನಾಗಲೀ ಕೊಡಿಸಬೇಕೆಂದು ಕೇಳಿಕೊಳ್ಳುವುದು, ಉಪಾಧ್ಯಾಯರ ಮಕ್ಕಳಿಗೆ ಬೋರ್ಡ ಶಾಲೆಗಳಲ್ಲಿ ಸೆಕೆಂಡರೀ ವಿದ್ಯಾಭ್ಯಾಸದ ವರೆಗೆ ಮಾಫಿಯಾಗಿ ಸಿಗುವಂತಾಗಬೇಕೆಂದು ಕೇಳಿಕೊಳ್ಳುವುದು, ಉಪಾಧ್ಯಾಯರಿಂದ ಬರೆಯಲ್ಪಟ್ಟು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರು ಮಾಡಲ್ಪಟ್ಟ ಪಠ್ಯಪುಸ್ತಕಗಳಿಗೆ ಶಾಲೆಗಳ ಪಠ್ಯಪುಸ್ತಕ ನೇಮಕವಾಗುವಾಗ ಪ್ರಥಮ ಸ್ಥಾನ ಸಿಗುವಂತೆ ಕೇಳಿಕೊಳ್ಳುವುದು, ಎಲಿಮೆಂಟರೀ ಶಾಲೆಗಳ ಪರವಾಗಿ ಭಾಷಾ ಪ್ರಾಂತ್ಯ ಕಂಬ್ಬನಿಗೆ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಲ್ಲಿ ಪ್ರಾತಿನಿಧ್ಯವು ಸಿಗುವಂತೆ ಕೇಳಿಕೊಳ್ಳುವುದು, ಫೋರ್ಟ್‌ಸ್ಟೆಂಟ್ ಜೋರ್ಜ್ ಗಜೇಟಿನ ಎಜ್ಯುಕೇಶನಲ್ ಸಪ್ಲಿಮೆಂಟನ್ನು ಪ್ರತಿಯೊಂದು ಉಪಾಧ್ಯಾಯರ ಸೆಂಟರಿಗೂ ಕಳುಹಿಸಿಕೊಡುವಂತೆ ಕೇಳಿಕೊಳ್ಳುವುದು, ಪಂಚಾಯ್ತು ಶಾಲೆಗಳಲ್ಲಿ ಕೆಲಸಮಾಡುವ ಎಲ್ಲಾ ತರಬೇತಾದ ಉಪಾಧ್ಯಾಯರನ್ನು ಪ್ರಾವಿಡೆಂಟ್ ಫಂಡಿಗೆ ಸೇರಿಸಿಕೊಳ್ಳುವಂತೆಯೂ ಅವರಿಗೆ ಸ್ಕೇಲು ಜಾರಿಗೆ ತರುವಂತೆಯೂ ಪ್ರಿವಿಲೇಜ್ ರಜೆಯ ಹಕ್ಕಿರುವಂತೆಯೂ ಕೇಳಿಕೊಳ್ಳುವುದು, ಈ ತಾಲೂಕಿನಲ್ಲಿ ಮಾತ್ರ ಬದಲಾವಣೆ ಹೊಂದಿದ ಸೆಂಟರು ಸಂಘಗಳನ್ನು ಮೊದಲಿನಂತೆ ಇರಗೊಡಿಸಬೇಕಾಗಿ ಕೇಳಿಕೊಳ್ಳುವುದು, ಮೊದಲಾದ ೧೫ ಠರಾವುಗಳು ನಿರ್ಣಯ ಹೊಂದಿ, ತಾಲೂಕು ಸಂಘದ ಹೊಸ ಆಡಳಿತೆ ಕಮಿಟಿಯು ರಚನೆಯಾಗಿ, ಅಧ್ಯಕ್ಷರ ಭಾಷಣವಾದ ಮೇಲೆ ದನ್ಯವಾದಗಳು ಅರ್ಪಿಸಲ್ಪಟ್ಟು ಸಭೆಯು ಮುಕ್ತಾಯವಾಯಿತ

ಪ್ರೋಟೆಸ್ಟ ಆರ್ಯಸಮಾಜ

ಮುಂಬಾಯಿ.

ಇದರ ಪ್ರಥಮ ವಾರ್ಷಿಕೋತ್ಸವವು ಕಳೆದ ತಾರೀಕು ೨೦ನೇ ಶನಿವಾರ ಮುಂಬಾಯಿ ಕೋಟೆಯೊಳಗಣ ಸರ್ ಕಾವಸ್ಜಿ ಜಹಾಂಗೀರ್ ಸಾರ್ವಜನಿಕ ಮಂದಿರದಲ್ಲಿ, ಶ್ರೀ ಜಗದ್ಗುರು ಶಂಕರಾಚಾರ್ಯ (ಡಾ ಕುರ್ತಕೋಟಿ) ರವರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು ಸಭಾಕಾರ್ಯವು ಅಪರಾಹ್ನ ಗಂಟೆ ೨ ಕ್ಕೆ ಸರಿಯಾಗಿ, ವೈದಿಕ ಗೀತೆಯೊಡನೆ ಪ್ರಾರಂಭವಾಯಿತು ಪಂಡಿತ ವಿಜಯ ಶಂಕರಜೀಯವರೂ ಶ್ರೀ ಎಮ್. ಚಂದ್ರಶೇಖರರೂ ಅಧ್ಯಕ್ಷರ ಪರಿಚಯವನ್ನು ಸಭಿಕರಿಗೆಮಾಡಿ ಕೊಟ್ಟರಲ್ಲದೆ ಅವರನ್ನು ಅಗ್ರಸ್ಥಾನವನ್ನು ವಹಿಸಿ ಅಂದಿನ ಕಾರ್ಯವನ್ನು ಜಯಶೀಲವಾಗಿ ನೆರವೇರಿಸಿ ಕೊಡುವರೇ ಪ್ರಾರ್ಥಿಸಿದರು ಶ್ರೀ ಸತ್ಯಾರ್ಥ ಸಿದ್ಧಾಂತ ವಿಶಾರದ ಪಂಡಿತ ಭದ್ರದತ್ತ ಶರ್ಮ ಮೊದಲಾದವರು, ಆರ್ಯ ಸಮಾಜದ ಸಿದ್ಧಾಂತ, ಹಿಂದೂ ಸಂಘಟನೆಯ ಆವಶ್ಯಕತೆ, ಆರ್ಯ ಸಮಾಜವು ಮಾನವ ಜಾತಿಯ ಏಳಿಗೆಗಾಗಿ ಕಾರ್ಯರಂಗದಲ್ಲಿ ಕೈಕೊಂಡ ಕೆಲಸ ಮೊದಲಾದ ವಿಷಯಗಳಲ್ಲಿ ಮಾತಾಡಿದರು ಅಧ್ಯಕ್ಷರು ತನ್ನ ಮಹತ್ವಪೂರ್ಣ ಭಾಷಣದಲ್ಲಿ ಮಹರ್ಷಿ ದಯಾನಂದ ಸರಸ್ವತಿಯರು ಯಾಕೆ ಆರ್ಯ ಸಮಾಜವನ್ನು ಸ್ಥಾಪಿಸಿದರೆಂದೂ, ಸ್ವಾಮಿ ಶ್ರದ್ಧಾನಂದ, ಪಂಡಿತ ಲೇಖ ರಾಮಜೀಯವರು ಯಾಕೆ ತಮ್ಮ ಆತ್ಮ ಬಲಿದಾನವನ್ನಿತ್ತರೆಂದೂ ತಿಳಿಸಿ ಆರ್ಯ ದರ್ಮ ಆರ್ಯ ಸಂಸ್ಕೃತಿ ಮತ್ತು ಆರ್ಯ ಸಭ್ಯತೆಗಳನ್ನು ರಕ್ಷಿಸುವುದು ಹಿಂದುಗಳ ಕರ್ತವ್ಯವೆಂದು ಸಾರಿದರು ಸ್ವಾಮಿ ದಯಾನಂದರು ಪಂಜಾಬಕ್ಕೆ ಕಾಲಿಡುತ್ತಿದ್ದಿಲ್ಲವಾದರೆ ಅಲ್ಲಿಯ ಹಿಂದುಗಳೆಲ್ಲ ಮುಸಲ್ಮಾನರಾಗುತ್ತಿದ್ದರು ಉತ್ತರ ಹಿಂದುಸ್ಥಾನದಲ್ಲಿರುವಂತೆ ದಕ್ಷಿಣ ಭಾರತದಲ್ಲಿಯೂ ಆರ್ಯ ಸಮಾಜದ ಚಳವಳವನ್ನು ಹೂಡಬೇಕು ಹಿಂದುಗಳೆಲ್ಲರೂ ಆರ್ಯ ಸಮಾಜದ ಛತ್ರ ಛಾಯೆಯಲ್ಲಿ ಸೇರಿ ತಮ್ಮ ಭೇದಭಾವವನ್ನು ಮರೆಯಬೇಕು ಅಂತೆಯೇ ಹಿಂದುಸ್ಥಾನದ ಇತರ ಮತಸ್ಥರನ್ನು ತಮ್ಮ ಅತಿಥಿಗಳೆಂದು ತಿಳಿದ ಅವರಿಗೆ ಸಲ್ಲತಕ್ಕ ಆದರ ಸತ್ಕಾರಗಳನ್ನು ಸಲ್ಲಿಸಿ, ಅವರ ಅಭಿವೃದ್ಧಿಯನ್ನೂ ಆವೈಕೆಯನ್ನೂ ನೋಡಿಕೊಂಡು ಪ್ರೇಮದಿಂದ ನಡೆಯಬೇಕು ಯಾವ ರೀತಿಯಲ್ಲಿ ಕ್ರಿಶ್ಚನರ ಮತ್ತು ಮುಸಲ್ಮಾನರ ಸಂಸ್ಕೃತಿಗಳ ಪ್ರಚಾರಕ್ಕೆ ಬೇರೆ ಬೇರೆ ದೇಶಗಳಿರುತ್ತವೋ ಹಾಗೆ ಹಿಂದುಸ್ಥಾನವು ಆರ್ಯ ಸಂಸ್ಕೃತಿಯ ರಕ್ಷಣೆಗಾಗಿ ಹಿಂದುಗಳೆಲ್ಲರೂ ಸಂಘ ಶಕ್ತಿಯನ್ನು ಹೆಚ್ಚಿಸಿ ಪ್ರಬಲಗಾದಬೇಕು ತಾನು ಸುಖಿಯಾಗಿ ಇತರರನ್ನು ಸುಖಿಗಳನ್ನಾಗಿ ಮಾಡುವುದು ಪ್ರತಿಯೊಬ್ಬ ಆರ್ಯನ ಕರ್ತವ್ಯವಾಗಿರುತ್ತದೆಂದು ಹೇಳಿದರು

ತದನಂತರ ಶ್ರೀಗಳಾದ ದಾಮೋದರ ಕಾಂಚನರೂ ಬಿ. ಎನ್ ಕಲ್ಯಾಡರೂ ಪ್ರೋಟೆಸ್ಟ ಆರ್ಯಸಮಾಜವು ಇನ್ನು ಮುಂದೆ ಮಾಡಲಿರುವ ಹಲವು ಕಾರ್ಯಗಳನ್ನು ಸೂಚಿಸಿ ದಾನಶೂರ ಮಹಾಶಯರೆಲ್ಲರೂ ಸಮಾಜದ ವೇದ ಪ್ರಚಾರ ಫಂಡಿಗೆ ತಮ್ಮ ಶಕ್ತ್ಯಾನುಸಾರ ಧನ ಸಹಾಯಮಾಡುವರೇ ಪ್ರಾರ್ಥಿಸಿದರು ಕಾರ್ಯಕ್ರಮಾಂತ್ಯದಲ್ಲಿ ಮಂಗಳೂರಿನ ಪ್ರಸಿದ್ಧ ಪ್ರೊಫೆಸರ್ ಎಮ್. ಶೇಷಪ್ಪನವರು ತನ್ನ ಶಿಷ್ಯವೃಂದದೊಡನೆ ಮನೋಹ್ಲಾದಕರವಾದ ವ್ಯಾಯಾಮ ದೇಖಾವೆಯನ್ನು ಪ್ರದರ್ಶಿಸಿದರು.

ಶ್ರೀ ಐ ಕೆ ಕೋಟ್ಯಾನರು ಅಂದಿನ ಸಮಾರಂಭದಲ್ಲಿ ಭಾಗವಹಿಸಿ ಸಹಕರಿಸಿದ ಎಲ್ಲಾ ಮಹೋದಯರಿಗೂ ದನ್ಯವಾದಗಳನ್ನರ್ಪಿಸಿದ ತರುವಾಯ ಸಭೆಯು ವಿಸರ್ಜನೆಯಾಯಿತು

ಜತೆ ಗೌರವಕಾರ್ಯದರ್ಶಿ.

ದಿ ಮೊಗವೀರ ಯುವಕ ಸಂಘ

ಬೊಂಬಾಯಿ

ವರ್ಷದ ಶ್ರಾವಣಮಾಸದ ನವಮೀ ದಿನ (೧೯-೩೪) ಅಲ್ಲದೆ ಶ್ರೀಕೃಷ್ಣ ಜಯಂತಿಯ ಆದೊಂದು ಸುದಿನದಲ್ಲಿ ಸ್ಥಾಪನೋತ್ಸವದಿಂದ ಶೋಭಿಸಿ, ಮೊಗವೀರ ಸಮಾಜದೊಳಗಿರುವ ಅಂಧಶ್ರದ್ಧೆ ಧಾರ್ಮಿಕ ಭ್ರಮೆ ಆರ್ಥಿಕ ದುಂದ ಗಾರಿಕೆ ಇವೇ ಮೊದಲಾದ ಕುಂದು ಕೊರತೆಗಳನ್ನು ಬೇರು ಸಹಿತ ಕಿತ್ತೆಗೆಯುವ ಮತ್ತು ಜಾತಿಯ ಪ್ರಾಮುಖ್ಯ ವೃತ್ತಿಯಾಗಿರುವ ಮತ್ಸ್ಯ ವ್ಯವಸಾಯವನ್ನು ಸುಧಾರಿಸುವ ಸದುದ್ದೇಶಗಳನ್ನಿಟ್ಟುಕೊಂಡು ಇಂದಿಗೆ ಸಾಧಾರಣ ಎರಡೂವರೆ ವರ್ಷಗಳ ಹಿಂದೆ ಜನ್ಮವೆತ್ತಿದ ನಮ್ಮ ಮೇಲಿನ ಸಂಘವನ್ನು ಇಷ್ಟರಲ್ಲೇ ಯಾರೂ ಮರೆಯಲಿಕ್ಕಿಲ್ಲ

ಮೊಗವೀರ ಸಮಾಜದಲ್ಲಿ ವರದಕ್ಷಿಣೆ ಬಾಲ್ಯವಿವಾಹಗಳಂಥ ಅಂಧ ರೂಢಿಗಳು ಇಪ್ಪತ್ತನೇ ಶತಮಾನದ ಈ ಕಾಲದಲ್ಲಿಯೂ ನೆಲೆಸಿಂತಿರುವುದು ಎಷ್ಟೊಂದು ಶೋಚನೀಯವು ಇವುಗಳ ಪ್ರಬಲತೆಗಳನ್ನು ಆದಷ್ಟು ಮಟ್ಟಿಗಾದರೂ ನಿಲ್ಲಿಸಲು ಸಂಘವು ತನ್ನ ಜನ್ಮದಾರಭ್ಯದಿಂದಲೂ ಕರಪತ್ರಗಳ ಮುಖೇನವೋ ಭಾಷಣಗಳಿಂದಲೋ, ನಾಟಕವಾಡಿಸಿಯೋ, ಕೆಲಸ ಮಾಡುತ್ತಿರುವುದೆಂಬುದನ್ನು ಯಾವ ಮೊಗವೀರನೂ ಅಲ್ಲಗಳೆಯನು

ಸಧ್ಯ ಮೊಗವೀರ ಸಾರ್ವಜನಿಕ ಸಂಸ್ಥೆಗಳನ್ನು ಸಮ್ಮಿಲನಗೈಯುವ ಮುಂಬಾಯಿಯ ಮೊಗವೀರ ಮಹಾಜನ ಸಭೆಯ ಯೋಜನೆಗೆ ಕೊಡತಕ್ಕ ಯೋಗ್ಯ ಪ್ರೋತ್ಸಾಹ ಮತ್ತು ಬೆಂಬಲದಲ್ಲಿಯೂ ಸಂಘವು ಹಿಂದೆ ಬೀಳ್ದಿರುವುದಿಲ್ಲವೆಂದು ಧೈರ್ಯದಿಂದ ಹೇಳಬಲ್ಲೆವು ಮೇಲಾಗಿ ಜಾತಿಯ ಹಿತಕ್ಕೆಂದು ಕಂಡುಬಂದಿರುವ ಪ್ರತಿಯೊಂದು ಕಾರ್ಯ ಭಾಗದಲ್ಲಿಯೂ ಸಂಘವು ತನ್ನ ಪಾಲಿನ ಕರ್ತವ್ಯವನ್ನಷ್ಟು ಧೈರ್ಯ ಮತ್ತು ಸಾಹಸದಿಂದಲೇ ಮಾಡಿರುವುದು.

ಜಾತಿಯ ವೃತ್ತಿಯಾದ ಮತ್ಸ್ಯ ವ್ಯವಸಾಯವನ್ನು ಸಲ್ಪ ಮಟ್ಟಿಗಾದರೂ ಸುಧಾರಿಸಿ, ಅದರಿಂದ ಜಾತಿಯು ಹೆಚ್ಚಿನ ಅಭಿವೃದ್ಧಿಯಾಗಬೇಕೆಂದೂ, ಸಮಾಜದ ಶ್ರೇಯಸ್ಸಿಗಾಗಿ ಮೊಗವೀರರನ್ನು ಸಂಘಟೀಕರಿಸುವ ಮುಖ್ಯಧ್ಯೇಯವನ್ನಿಟ್ಟುಕೊಂಡಿರುವ ಈ ಸಂಘಕ್ಕೆ ಜಾತ್ಯಾಭಿಮಾನಿಯಾದ ಪ್ರತಿಯೊಬ್ಬ ಯುವಕನು(ಇಷ್ಟರಲ್ಲೇ ಆಗಿರಲಿಲ್ಲವಾದರೆ ಇನ್ನಾದರೂ) ಸದಸ್ಯನಾಗಿ ಸೇರಿ, ಸಮಾಜಸೇವೆಯ ಈ ಮಹತ್ಕಾರ್ಯದಲ್ಲಿ ತನ್ನ ಸಂಪೂರ್ಣ ಬೆಂಬಲವನ್ನೀಯಬೇಕೆಂದು ಉದಾರಿಗಳಾದಜಾತಿಗೃಹಸ್ಥರು ತಮ್ಮಿಂದ ಸಾಧ್ಯವಾಗುವ ಸಹಾಯ ಮತ್ತು ಸಹಾನುಭೂತಿಯನ್ನೂ ತೋರಿಸಬೇಕೆಂದೂ ನಮ್ರಭಾವದಿಂದ ವಿನಂತಿಸಿಕೊಳ್ಳುತ್ತೇವೆ

ಅಲ್ಲದೆ ವರದಕ್ಷಿಣೆ ಮತ್ತು ಬಾಲ್ಯ ವಿವಾಹಗಳ ಕುರಿತು ಸಂಘದ ಇದೇ ಕಳೆದ ಮಹಾ ಸಭೆಯಲ್ಲಿ ಎರಡು ಠರಾವುಗಳು ಮಂಜೂರಾತಿ ಹೊಂದಿದ್ದವು.

(೧) ವರದಕ್ಷಿಣೆಯ ಪದ್ಧತಿಯನ್ನು ಈ ಸಭೆಯು ತೀರಾ ಖಂಡಿಸುವುದು ಅಂತೆಯೇ ಮೊಗವೀರರು ಅದನ್ನು ಇಂದಿನಿಂದಲೇ ಕಿತ್ತು ಬಿಸಾಟುವಂತೆ ಪ್ರಯತ್ನಿಸತಕ್ಕದ್ದು. ಅಲ್ಲದೆ ಇನಾಮಿನ ರೂಪದಲ್ಲಿ, ನಾಣ್ಯ ವಸ್ತ್ರವಾಗಲೀಇಲ್ಲವೇ ಚಿನ್ನದವಡವೆಗಳಿಂದಾಗಲೀ ಕೊಡುವಂಥಾ ಮೊಬಲಗು ,ರೂ 25ನ್ನು ಮೀರಬಾರದು

(೨) ಬಾಲ್ಯ ವಿವಾಹವನ್ನು ಈ ಸಭೆಯು ತೀರಾ ಖಂಡಿಸುವುದು, ಮತ್ತು ಇನ್ನು ಮದುವೆಯಾಗತಕ್ಕ ವರನ ಪ್ರಾಯವು 20ಕ್ಕೂ ವಧುವಿನ ಪ್ರಾಯವು 14ಕ್ಕೂ ಕಡಿಮೆಯಾಗಕೂಡದು

ಹೆಚ್ಚಿನ ಮದುವೆ ವಗೈರೆಗಳು ನಮ್ಮ ಸ್ವದೇಶದಲ್ಲಿಯೇ ನೆರವೇರುವುದರಿಂದ, ಜಾತಿಯ ಉನ್ನತಿಯನ್ನು ಬಯಸುವ ಪ್ರತಿಯೊಬ್ಬ ಮೊಗವೀರನೂ ಈ ಮೇಲಿನ ನಿರ್ಧಾರಗಳಿಗೆ ಹೆಚ್ಚಿನ ಲಕ್ಷ್ಯಕೊಡಬೇಕಾಗಿಯೂ ವಿನಂತಿಸಿಕೊಳ್ಳುತ್ತೇವೆ ಅಂತೆಯೇ ದಕ್ಷಿಣಕನ್ನಡ

(೧೧ನೇ ಪೇಜಿಗೆ ಮುಂದರಿಯುವುದು)

ನಮ್ಮ ಚಂದಾದಾರರಲ್ಲಿ ವಿನಂತಿ

ತಾವು ಪ್ರೋತ್ಸಾಹಿಸುವಿರೆಂದು ಕಳೆದ ಸಪ್ಟಂಬರ ತಿಂಗಳಿಂದ ಈ ವರೆಗೆ ಸುಮಾರು 10ತಿಂಗಳಿಂದ ತಮಗೆ ನಮ್ಮ ಪತ್ರಿಕೆಯನ್ನು ಕಳುಹಿಸುತ್ತಾ ಬಂದಿದ್ದೇವೆ ಇನ್ನು ಸ್ವಲ್ಪ ಸಮಯದಲ್ಲೇ ನಮ್ಮ ವರ್ಷಾಂತ್ಯವಾಗಲಿರುವುದು ಆದುದರಿಂದ ತಾವು ದಯವಿಟ್ಟು ತಮ್ಮ ಚಾಲ್ತಿವರ್ಷದ ಚಂದಾಹಣವನ್ನು ಮನಿಯಾರ್ಡರು ಮೂಲಕ ಆದಷ್ಟು ಬೇಗನೆ ನಮಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇವೆ ಪ್ರಕೃತದ ಪರಿಸ್ಥಿತಿಯಲ್ಲಿ ಪತ್ರಿಕೆಯನ್ನು ನಡಿಸುವುದು ಅದೆಷ್ಟು ಕಷ್ಟದ ಸಂಗತಿಯೆಂಬುದು ತಮಗೆಲ್ಲರಿಗೂ ವಿದಿತವಿರುವ ವಿಷಯವೆಂದು ನಂಬುತ್ತೇವೆ. ಕಾಗದದ ಬೆಲೆಯು ಈಗ ಸೇಕಡ 50ಕ್ಕೂ ಹೆಚ್ಚಿರುವಾಗಲಂತೂ ಅದರಿಂದ ತುಂಬಾ ಕಷ್ಟ ನಷ್ಟವಾಗುವಂತಾಗಿದೆ ಆದರೂ ನಾವು ಎದೆಗುಂದದೆ ತಮ್ಮೆಲ್ಲರ ಉದಾರ ಪ್ರೋತ್ಸಾಹದ ನಿರೀಕ್ಷೆಯಿಂದ ಪತ್ರಿಕೆಯನ್ನು ನಮ್ಮಿಂದ ಸಾಧ್ಯವಾದಷ್ಟು ಪ್ರಯೋಜನಕರವಾಗಿ ಪ್ರಕಟಿಸುವಂತೆ ಪ್ರಯತ್ನ ನಡಿಸುತ್ತಿರುವೆವು ತಾವೆಲ್ಲರೂ ನಮ್ಮ ದೊಡ್ಡ ಹೊಣೆಗಾರಿಕೆಯ ಸ್ವಲ್ಪ ಸ್ವಲ್ಪ ಪಾಲನ್ನು ವಹಿಕೊಂಡು ವರ್ಷಾವಧಿ ಕೊಡುವ ಚಂದಾ ಹಣವನ್ನು ಆದಷ್ಟು ಬೇಗನೆ ತತ್ತು ನವಯುಗಕ್ಕೆ ಉದಾರಾಶಯವೀಯಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ. ಕಾಗದ ಬರೆಯುವುದು ಅಥವಾ ವಿ. ಪಿ ಮಾಡುವುದು ವೃಥಾ ನಮಗೂ ನಿಮಗೂ ವೆಚ್ಚಕ್ಕೆ ಕಾರಣವಾಗಿರುತ್ತದೆ ನಮ್ಮ ವಿನಂತಿಗೆ ಇಷ್ಟರವರೆಗೆ ತಮ್ಮ ಚಂದಾಹಣ ತೆರದಿರುವ ಚಂದಾದಾರರೆಲ್ಲಾ ಶೀಘ್ರವಾಗಿ ಸಿಗಾಕೊಡುವರೆಂದು ನಂಬುತ್ತೇವೆ

ಮಂಗಳೂರಿನ ಚಂದಾದಾರರು ತಮ್ಮ ಚಂದಾಹಣವನ್ನು ಕೆನರಾ ಪ್ರೆಸ್ಸಿನ ಮೆನೇಜರರೊಡನೆ ಕೊಟ್ಟು ರಶೀದಿಪಡೆಯಬಹುದು. ಉಳಿದವರು ಉಡುಪಿ ಆಫೀಸಿಗೆ ಮನಿಯಾರ್ಡರ್‌ಮಾಡಿ ಕಳುಹಿಸುವುದು

ಮೆನೇಜರ್, ನವಯುಗ, ಉಡುಪಿ.

ON THE EVE OF THE

SILVER JUBILEE OF THE

East & West Insurance Co., Ltd.

MESSRS. PADUBIDRI BROTHERS,

The accredited Chief Agents of the Company invite applications for liberal Agency contracts from Gentlemen of status and influence to cooperate in the production of a record business of Rs. 10,00,000 as a gift in honour of the advent of the auspicious event.

For particulars apply to:

Messrs. Padubidri Bros.,

CHIEF AGENTS.

KARNATAKA & MAHARASTRA,

40, Narayanlal Bansilal Mansion,

Bellasis Road, BOMBAY 8.

ಅಚ್ಚಿನಲ್ಲಿದೆ! ? ಅಚ್ಚಿನಲ್ಲಿದೆ!

ನವಯುವಕರನ್ನು ಮುಗ್ಧಗೊಳಿಸುವ ಮಹಾ ಮಣಿ — **ಮಿಸ್ ಲಲಿತ** — ವಾಚಕರ ಮನಸ್ಸನ್ನು ಸೂರೆಮಾಡುವ ಲಲಿತಾ ರಮಣಿ!

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು ಎತ್ತಿ ತೋರಿಸುವ ಪುಸ್ತಕವು.

ಹೊರಡಲಿರುವ ತಾರೀಕನ್ನು ಗಮನಿಸಿರಿ!

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಬರೆದವರು: ಯಂ. ವಿ. ಪುತ್ರಾನ್

ಕೂಡಲೇ ಬರೆಯಿರಿ. ಬೆಲೆ **0—8—0**

ವಿಳಾಸ:— **M. V. Puthran,**

C/o 34, Bomanji Lane, *2nd Floor*, ***Fort, BOMBAY***

15 ವರ್ಷಗಳ ಅನುಭವ ! ಗ್ಯಾರಂಟೀ ಕೆಲಸ !!

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು

ಪ್ರಸಿದ್ಧರಾಗಿರುವ

ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕಣ್ಣಣಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು.

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ.

ಗಣಪತಿ ರಾವ್, ಪೈಂಟರ್,

ಸೋದೆ ಮಠದ ಲೇನು - - ಉಡುಪಿ, ದ. ಕ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಖು ತೇವಣಾತಿ ಸೇಕಡ 5½ರ ವರಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,

President & Manager, — ಪ್ರಸಿಡೆಂಟ್ ಮತ್ತು ಮೆನೇಜರ್.

ಮಾಸ] **ವಿಶ್ವವಾಣಿ** [ಪತ್ರಿಕೆ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ: ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... ...	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ— ವ್ಯವಸ್ಥಾಪಕ—'ವಿಶ್ವವಾಣಿ,'

'ಅನ್ನಪೂರ್ಣ', ವಿಶ್ವೇಶ್ವರಪುರಂ, ಬೆಂಗಳೂರು ನಗರ

ಉಡುಪಿ ಏಜೆಂಟರು—ನವಭಾರತ ಬುಕ್ ಡಿಪ್ಪೊ, ಉಡುಪಿ.

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. [ಸಂ. ನ.]

ಬಡಜನರ ಗೋಳು

ಅಯ್ಯಾ, ಈ ವರ್ಷ ಗಂಗೊಳ್ಳಿ ಹೊಳೆಗಿಂತ ಉತ್ತರ ದಿಕ್ಕಿನಲ್ಲಿ ಹೊನ್ನಾವರ ಹೊಳೆ ವರೇಗೆ, ಸುಮಾರು ೫೦ ವರ್ಷಗಳಿಗಿಂತ ಈಚೆ ಬಾರದೇ ಇರುವ ಬರಗಾಲ ಬಂದದೆ, ಈಗಲೇ ಅಂಗಡಿಯವರ ಹತ್ತಿರ ಅಕ್ಕಿ ಕೇಳಿದಲ್ಲಿ ಸಿಕ್ಕುವದಿಲ್ಲ. ಕಳೆದ ೧೯೩೧ನೇ ಇಸ್ವಿ ಮಳೆಗಾಲದಲ್ಲಿ, ಅಕ್ಕಿ ಮೂಡಿಗೆ ೧೯ರೂ ೧೦ ೬-೭ರಂತೆ ದರವಾದರೂ ಈ ವರ್ಷದಷ್ಟು ಪ್ರಯಾಸ ಕಾಣಲಿಲ್ಲ. ಯಾಕಂದರೆ ಆ ಕಾಲದಲ್ಲಿ ಜನರ ಹತ್ತಿರ ಹಣ ಇದ್ದಿತು. ಈ ವರ್ಷ ಜನರ ಹತ್ತಿರ ಹಣ ಇಲ್ಲ, ಕಾಳುಕಡ್ಡಿಗಳು ಇಲ್ಲ. ಇಂಥಾ ಪ್ರಯಾಸ ಕಾಲದಲ್ಲಿ, ಬೈಂದೂರು ಪಟ್ಟಣದ ದೊಡ್ಡ ವ್ಯಾಪಾರಿಗಳು ಊರಲ್ಲಿರುವ ಸಾಧಾರಣ ರೈತರಿಂದಲೂ, ಈ ಗಂಗೊಳ್ಳಿ ಬಂದರದಲ್ಲಿರುವ ವ್ಯಾಪಾರಸ್ಥರಿಂದಲೂ, ಕಜಯಿಂದ ಖರೀದಿ ಮಾಡಿ ಪೂರಾ ಅಕ್ಕಿ ಸಾಟೆ ಹೊಡೆದು ದರ ಏರಿಸಿದ್ದಾರೆ. ಈಗಲೇ ದರ ಏರಿಸಿದ್ದಾಗ್ಯೂ ಅಕ್ಕಿ ಸಿಕ್ಕುವದಿಲ್ಲ, ಜನರ ಗೋಳು ಬಹಳವಾಗಿದೆ. ಹೊಸ ಬೆಳೆ ಆಗುವತನಕ, ಈ ಕಡೆಯ ಜನರು ಕಾಲಕ್ಷೇಪ ಮಾಡುವುದು ಬಹಳ ಕಷ್ಟವಾಗಿದೆ. ಇಂಥಾ ಕಷ್ಟಕಾಲದಲ್ಲಾದರೂ ಸರ್ಕಾರದವರು, ಅಂದ್ರೆ, ಸಬ್ ಕಲೆಕ್ಟರವರು ವ. ತಹಶೀಲ್ದಾರರು, ವಗೈರೆಯವರು ಜನರ ಗೋಳು ವಿಚಾರ ಮಾಡುವ ಬದಲಿಗೆ ತೀರ್ವೆ ಹಣ ವಸೂಲ್ ಮಾಡುವ ಬಾಬಿನಲ್ಲಿ, ಬಹಳ ಪರಿಶ್ರಮಪಟ್ಟಿರುತ್ತಾರೆ. ಆದ್ದರಿಂದ ಕೋಂಗ್ರೆಸ್ ಕಟ್ಟೆ ಮುಖಂಡರಾದರೂ ಬಂದು ಜನರ ಗೋಳನ್ನು ವಿಚಾರಿಸದೇ ಇದ್ದರೆ ಮುಂದೆ ಬಹಳ ಅನರ್ಥಕ್ಕೆ ಕಾರಣವಾದೀತು. ಆದ್ದರಿಂದ ಕೋಂಗ್ರೆಸ್ ಲೀಡರೂ ಈ ವಿಷಯದಲ್ಲಿ ಜಾಗ್ರತೆ ತೆಗೆದುಕೊಳ್ಳಬೇಕಾಗಿ ವಿನಂತಿ.

Khambadkone Rama Rau,
President S- Club.

ಇದೇನು ವಿಚಾರವೊ? ಅವಿಚಾರವೊ? ಕುತಂತ್ರವೊ?

ಅಯ್ಯಾ, ನಿಮ್ಮ ೧೭ನೇ ತಾರೀಕಿನ ನವಯುಗದಲ್ಲಿ ಕಾಂಗ್ರೆಸ್ ಸದಸ್ಯರೊಬ್ಬರು ಮಂಗ್ಳೂರು ತಾಲೂಕು ಕಮಿಟಿಯು ಏನು ಮಾಡುತ್ತಿದೆ? ಓಟಿನಲ್ಲಿ ಗೆದ್ದ ಆನಂದದಲ್ಲಿ ಇದೆಯೋ? ಇಲ್ಲವೆ ನಿದ್ದೆಯಲ್ಲಿ ಇದೆಯೋ? ಎಂದು ವಿಚಾರಿಸಿರುವರು. ಆದರೆ ಅವರು ವಿಚಾರಮಾಡಿ ಈ ಪ್ರಶ್ನೆಗಳನ್ನು ಕೇಳಿದಂತೆ ನನಗೆ ತೋರುವುದಿಲ್ಲ. ಇದು ಅವಿಚಾರ ಇಲ್ಲವೆ ಕುತಂತ್ರವನ್ನು ಸೂಚಿಸುವಂತೆ ಕಾಣುತ್ತದೆ. ಮಂಗ್ಳೂರು ತಾಲೂಕು ಕಮಿಟಿಯನ್ನು ಹುಡುಕಾಡಿ ಬೇಸತ್ತು ತಾನು ನಗರ ಕಾಂಗ್ರೆಸ್ ಕಮಿಟಿಯ ಮೆಂಬರನಾದೆ. ಎಂದು ಅವರು ಹೇಳುವರು. ಅಷ್ಟು ಶ್ರದ್ಧೆಯಿಂದ ಊರೆಲ್ಲ ತಿರುಗುವ ಅವಶ್ಯಕತೆಯೇ ಇರಲಿಲ್ಲ. ನಗರ ಕೋಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಅವರು ಕೇಳಿದ್ದರೆ ಮಂಗ್ಳೂರು ತಾಲೂಕು ಕಮಿಟಿಯು ಎಲ್ಲಿದೆ, ಎಂದು ಹೇಳುತ್ತಿದ್ದರಲ್ಲವೆ? ಅವರು ನಗರ ಕೋಂಗ್ರೆಸ್ ಕಮಿಟಿಯವರೊಡನೆ ತಾಲೂಕು ಕಮಿಟಿಯು ಎಲ್ಲಿದೆ ಎಂದು ವಿಚಾರಿಸಿರುವರೆ? ಇಲ್ಲವಾದರೆ ಏಕೆ ವಿಚಾರಿಸಲಿಲ್ಲ? ಅಯ್ಯಾ, ಮಂಗ್ಳೂರು ತಾಲೂಕು ಕೋಂಗ್ರೆಸ್ ಕಮಿಟಿಯು ಬಂಟ್ವಾಳದಲ್ಲಿ ಇದೆ. ಇನ್ನು ಅವರು ಕೋಂಗ್ರೆಸ್ ತತ್ವದ ಕುರಿತು ಹಳ್ಳಿಗಳಲ್ಲಿ ಮಾಡಬೇಕಾದ ಪ್ರಚಾರಕಾರ್ಯದ ಕುರಿತು ಎಚ್ಚರಿಸಿರುವರು. ತಾಲೂಕು ಕೋಂಗ್ರೆಸ್ ಕಮಿಟಿಯು ಪ್ರಚಾರವನ್ನು ಮಾಡುತ್ತದೋ ಇಲ್ಲವೋ ಎಂದು ಇವರಿಗೆ ಗೊತ್ತಿದೆಯೋ? ಗೊತ್ತಿಲ್ಲವಾದರೆ, ೬ನೇ ತಾರೀಕಿನ ಪ್ರಭಾತವನ್ನು ಪಡೆಕೊಂಡು ಓದಿಕೊಳ್ಳುವಂತೆ ಪ್ರಾರ್ಥಿಸುತ್ತೇವೆ. ಇದರಿಂದ ತಾಲೂಕು ಕಮಿಟಿಮಾಡುವ ಕಾರ್ಯದ ಸ್ವಲ್ಪ ಮಟ್ಟಿನ ಅರಿವಾದರೂ ಅವರಿಗೆ ಆಗದೆ ಇರಲಾರದು. ಮಾತ್ರವಲ್ಲ ಇನ್ನು ಮುಂದೆ ಕೂಲಂಕಷ ವಿಚಾರ ಮಾಡದೆ ಈ ಬಗೆಯಾಗಿ ದುಡುಕಬಾರದಾಗಿ ನಾನು ಅವರೊಡನೆ ಪ್ರಾರ್ಥಿಸಿಕೊಳ್ಳುತ್ತೇನೆ.

K. Madhava Pai.
Secretary Mangalore Taluk Congress Committee Bantwal.

ಆರ್ಯಭಜನಾ ಮಂಡಳಿ, ನೀರೇಶ್ವಾಲ್ಯ

ತಾ. ೧೯-೬-೩೭ರ ಸ್ವದೇಶಾಭಿಮಾನಿಯಲ್ಲಿ **ಸಹಾಯಾರ್ಥ**ವೆಂಬಶಿರೋನಾಮೆಯಿಂದ ನೀರೇಶ್ವಾಲ್ಯ ಸಂಗೀತ ನಾಟಕ ಸಭೆಯವರು ತಾ ೬-೬-೩೭ರಲ್ಲು ರುಚಿಕರಿಯೋ ಸೆಕೆಂಡರಿ ಶಾಲೆಯಲ್ಲಿ "ಜನ ಮರ್ಲ್" ಎಂಬ ನಾಟಕವಾಡಿದ ಆಯವ್ಯಯವನ್ನು ಪ್ರಕಟಿಸುವಾಗ ಶ್ರೀ ನೀರೇಶ್ವಾಲ್ಯ ಭಜನಾ ಮಂಡಳಿಯ ಕೆಲವು ಪ್ರೇಮಿ ಮೆಂಬರರು ವಿರೋಧ ನೋಟೀಸನ್ನು ಹೊರಡಿಸಿದ್ದರೂ ನಾಟಕವು ಯಶಸ್ವಿಯಾಯಿತೆಂದು ಒಂದು ಜಂಭವನ್ನು ಪ್ರಕಟಿಸಿರುತ್ತಾರೆ. ತಾ. ೨೯-೫-೩೭ರಲ್ಲಿ ಕೂಡಿದ ಶ್ರೀ ನೀರೇಶ್ವಾಲ್ಯ ಆರ್ಯ ಭಜನಾ ಮಂಡಳಿಯ ಮಹಾಸಭೆಯ ಕಮಿಟಿಯಲ್ಲಿ ಸದ್ರಿ ಸಂಗೀತ ನಾಟಕವನ್ನು ಆಡಬೇಕೆಂಬ ಠರಾವು ತಂದಾಗ ಬಹು ಜನ ಮೆಂಬರರಿಂದ ಭಜನಾ ಮಂಡಳಿಯ ಸಹಾಯಾರ್ಥವಾಗಿ ನಾಟಕವನ್ನು ಆಡುವುದು ಸದ್ಯಕ್ಕೆ ಬೇಡ "ಎಂದು ಠರಾವು ಮಂಜೂರಾದರೂ ಆರ್ಯ ಭಜನಾ ಮಂಡಳಿಯು ತಮ್ಮ ಪಿತ್ರಾರ್ಜಿತವಾದ ಆಸ್ತಿಯೆಂಬಂತೆ ತಮ್ಮ ಬೇಳೆಯನ್ನೇ ಬೇಯಿಸುವ ಉದ್ದಿಶ್ಯ ಸದ್ರಿ ಭಜನಾ ಮಂಡಳಿಯ ಬಹುಮತದವರ ನಿರ್ಣಯವನ್ನು ಮುರಿದು ಸಂಗೀತ ನಾಟಕ ಸಭೆಯ ಮೆನೇಜರರು "ಆರ್ಯ ಭಜನಾ ಮಂಡಳಿಯ ಸಹಾಯಾರ್ಥವಾಗಿ" ಎಂದು ನೋಟೀಸನ್ನು ಛಾಪಿಸಿ ಪ್ರಕಟಿಸಿದ್ದನ್ನು ಕಂಡು ಸದ್ರಿ ಪಾಸಾದ ಠರಾವನ್ನು ಜನತೆಯ ಮುಂದಿಡುವ ಉದ್ದಿಶ್ಯ ಬಹುಜನ ಕಮಿಟಿ ಮೆಂಬರರು ಕರಪತ್ರವನ್ನು ಪ್ರಕಟಿಸಿದರೆ ಅವರು ಕಲಹ ಪ್ರೇಮಿಗಳೇ? ಮಂಡಳಿಯ ನಿರ್ಣಯವನ್ನು ಮುರಿದು ತಮ್ಮ ಕ್ಷುಲ್ಲತೆಯನ್ನು ತೋರಿಸಿ ಆರ್ಯ ಭಜನಾ ಮಂಡಳಿಯಲ್ಲಿ ಒಡಕನ್ನು ತರುವ ಮೆಂಬರರು ಕಲಹ ಪ್ರೇಮಿಗಳೇ? ಎಂದು ವಾಚಕರೇ ತಿಳಿಯಲಿ.

ಕಮಿಟಿಮೆಂಬರ

ನೋಟೀಸ್

ಪೇಟೆ ಶಹರುಗಳಲ್ಲಿರುವ ಉತ್ತಮ ಕಟ್ಟೋಣಗಳ ಅಥವಾ ಯೋಗ್ಯ ಸ್ಥಿರಾಸ್ತಿಗಳ ಭದ್ರತೆಯ ಮೇಲೆ ಪ್ರಥಮ ಜವಾಬ್ದಾರಿಯಾಗಿ ರೂ. 7000 ಸಾಲ ಪಡೆಯಲಿಚ್ಛಿಸುವವರು ಬಡ್ಡಿಯ ದರ, ಆಸ್ತಿಯ ವಿವರ ಮತ್ತು ಆಧಾರ ಪತ್ರಗಳೊಂದಿಗೆ ಇದೇ ಜುಲೈ ತಾ. 10ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು. ಉತ್ತರದ ಬಗ್ಗೆ ತಕ್ಕಷ್ಟು ಅಂಚೇ ಚೀಟನ್ನು ಕಳುಹಿಸತಕ್ಕದ್ದು.

ಕಾರ್ಯದರ್ಶಿ.
ಹಿಂದೂ ವಿದ್ಯಾದಾಯಿನೀ ಸಂಘ,
ಸುರತ್ಕಲ್, ದ ಕ.

---

೧೦ ಮಂದಿ ದೇಶಭಕ್ತರಾರು? ಒಗಟಿನ ಸರಿಯಾದ ಉತ್ತರ.

೧ ಪಂಡಿತ ಜವಾಹಿರಲಾಲ ನೆಹರು.
೨ ಮಹಾತ್ಮಾ ಗಾಂಧಿ.
೩ ಸುಭಾಸ್‌ಚಂದ್ರ ಭೋಸ್.
೪ ಬಾಬೂ ರಾಜೇಂದ್ರ ಪ್ರಸಾದ್.
೫ ಸಿ. ರಾಜಗೋಪಾಲಾಚಾರ್ಯರ್.
೬ ಸರ್ದಾರ್ ವಲ್ಲಭಬಾಯಿ ಪಟೇಲ್.
೭ ಖಾನ್ ಅಬ್ದುಲ್ ಗಫರ್‌ಖಾನ್.
೮ ಶೇಟ್ ಜಮುನಾಲಾಲ್ ಬಜಜ್.
೯ ಸರೋಜಿನೀ ದೇವಿ.
೧೦ ಕೆ. ಎಫ್. ನರಿಮೆನ್.

ಇದಕ್ಕೆ ಯಾರೂ ಸಮರ್ಕವಾದ ಉತ್ತರವನ್ನು ಕೊಡದಿದ್ದುದರಿಂದ ಬಿಚ್ಚುಗರ ಹೆಸರನ್ನು ಪ್ರಕಟಿಸಲಿಲ್ಲ.

ಮೆನೆಜರ್, ನವಯುಗ, ಉಡುಪಿ.

NOTICE.

A competitive examination for the award of the Victoria Jubilee Scholarship to a candidate belonging to any of the Scheduled Classes in the District, failing him to a candidate of the Muslim community and failing him to a candidate of the Christian community will be held in the Government College, Mangalore, on Tuesday the 24th August 1937. 2. Application for the examination in the prescribed form will be received in the District Court till Thursday the 12th August 1937 after which none will be received. 3. Forms of application and copies of the rules regulating the award of the scholarsihp can be had from this office on working days between 11 a. m., and 5 p. m., on payment of one anna and two annas respectively.

(Sd) ***M. Venkatramayya,***
District Judge, and President, Victoria Jubilee Scholarship Fund,
Mangalore.

ಕನ್ನಡ ನುಡಿ ವೆಣ್ಣೆಗೊಂದು

ಪ
ಪ ತ್ರ ಲಾ
ಲಾ

ಕನ್ನಡ ಗಿತ್ತಿಯ ಕಿರುಗಾಣಿಕೆ

ಲೇಖಕಿಯರು:
ಶ್ರೀಮತಿ ಮಟ್ಪಾಡಿ ಕಮಲಾಕ್ಷಿ.

ಸ್ತ್ರೀಯರಿಗೆ ವಿದ್ಯಾಭ್ಯಾಸವಿಲ್ಲದಿರುವುದರ ಪರಿಣಾಮವನ್ನೂ ಸ್ತ್ರೀ-ಪುರುಷ ಹೃದಯಗಳ ಪರಿಚಯವನ್ನೂ ಸೊಗಸಾಗಿ ಚಿತ್ರಿಸಿದ ಸಾಮಾಜಿಕ ಕಾದಂಬರಿ. ಪ್ರತಿಯೊಬ್ಬರೂ ಓದಬೇಕಾದ ಪುಸ್ತಕ.

ಬೆಲೆ: 0-7-3 ಮಾತ್ರ.

೧೨ಕ್ಕಿಂತ ಹೆಚ್ಚು ಪ್ರತಿ ಕೊಳ್ಳುವ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೊ
ಚರ್ಚ್‌ರೋಡ್, ಉಡುಪಿ.

JUST RECEIVED

Look sharp! Hurry up!!

Provincial Autonomy
(BY K. T. SHAH)

Price Re. 1—8—0
(Postage extra)

Book your order for a copy today only.

Navabharat Book Depot
UDIPI

ಈ ವಾರದಿಂದ
ಭಿಕಾರಿಣಿ
ಎಂಬ
ವೇಶ್ಯಾ ಜೀವನದ ಹೃದ್ರಾವಕ ಪರಿಸ್ಥಿತಿಯನ್ನೂ, ಮಾತೃ ಹೃದಯದ ಪ್ರೇಮೋನ್ಮಾದವನ್ನೂ, ದುರಭಿಮಾನಿ ಪುರುಷನ ಪೈಶಾಚಿಕ ಅತ್ಯಾಚಾರಗಳನ್ನೂ ಕಣ್ಣೀರಿಡುವಂತೆ ಚಿತ್ರಿಸುವ ಸಾಮಾಜಿಕ ಕಾದಂಬರಿಯು ಪ್ರಕಟವಾಗುತ್ತಿದೆ.

ಓದಲು ಮರೆಯಬೇಡಿರಿ.

ಬಾತ್ಮೀದಾರರಲ್ಲಿ

ನಾವು ಪ್ರಕಟಿಸತಕ್ಕ ಬಾತ್ಮಿಗಳು ನಮಗೆ ಪ್ರತಿ ಮಂಗಳವಾರದೊಳಗೆ ಸಿಕ್ಕಿದರೆ ಮಾತ್ರ ಆ ವಾರದ ಸಂಚಿಕೆಯಲ್ಲಿ ಮುದ್ರಿಸಲು ಅನುಕೂಲವಾಗುವುದು. ವಿಳಂಬವಾಗಿ ಬಂದಲ್ಲಿ ಪ್ರಕಟಿಸಲು ಸಾಧ್ಯವಾಗಲಾರದೆಂದು ಈ ಮೂಲಕ ತಿಳಿಸಲಾಗಿದೆ.

ಮೆನೇಜರ್, **ನವಯುಗ**
ಉಡುಪಿ.

HOTEL INDIANA
Bar and Restaurant

ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ?

ಹೊಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನ್‌ಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ ಸೌಕರ್ಯಗಳಿಂದ ನಿಮ್ಮನ್ನು ಎದಿರುಗೊಳ್ಳುತ್ತದೆ.

ಹೊಸ ಆಡಳಿತ **ಹೊಸ ವ್ಯವಸ್ಥೆ**

ಎಲ್ಲವೂ ಹೊಸತೇ ಆಗಿ

ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ.

Proprietor,
HOTEL INDIANA
Hampankutta, Mangalore

ಭಿಕಾರಿಣಿ

ಸಾಮಾಜಿಕ ಕಾದಂಬರಿ

ಅಧ್ಯಾಯ ೧

"ಅಮ್ಮಾ, ನನ್ನನ್ನಾ ನರಕಕ್ಕೆಳೆಯಬೇಡ!"

ರಾತ್ರಿ ಸುಮಾರು 9ಘಂಟೆ ಸಮಯ. ಶಿವಪುರದ ಕೋರ್ಟು ರಸ್ತೆಗೆ ತಾಗಿಕೊಂಡಿರುವ ಮಧ್ಯತರಗತಿಯ ಮನೆಯೊಂದರ ಕೋಣೆಯಲ್ಲಿ ಯೌವನದ ಹೊಸ್ತಿಲಿಗೆ ಕಾಲಿಡದೆ ಇನ್ನೂ ಬಾಲಿಕೆಯೇ ಆಗಿರುವ ಹುಡುಗಿಯೊಬ್ಬಳು ಕುರ್ಚಿಯಲ್ಲಿ ಕೂತು ಮೇಜಿಯ ಮೇಲೆ ತಲೆಯಿಟ್ಟು ಗಾಢ ಚಿಂತಾಕ್ರಾಂತಳಾಗಿ ಉಕ್ಕಿ ಉಕ್ಕಿ ಬರುವ ದುಃಖವನ್ನು ನಿಟ್ಟುಸಿರಿಂದಲೇ ನಿವಾರಿಸಲೆತ್ನಿಸುತ್ತಿದ್ದಳು. ಎಷ್ಟು ತಡೆದರೂ ನಿಲ್ಲಲೊಪ್ಪದೆ ಕಣ್ಣೀರು ಒಸರಿ ಬಂದು, ಟೇಬ್ಲ್ ಲೇಂಪಿನ ಸ್ವಚ್ಛ ಬೆಳ್ದಿಂಗಳೋಪಾದಿಯ ಬೆಳಕಿನಲ್ಲಿ ಬಾಲಿಕೆಯ ಮೃದು ಗಲ್ಲಗಳ ತಳದಲ್ಲಿ ಒಂದು ಕ್ಷಣ ಬೆಳ್ಳಿಯ ಬಿಂದುಗಳಾಗಿ ರಾಜಿಸಿ ಆ ಮೇಲೆ ಮೇಜಿಗೆ ಜಾರಿಬಿದ್ದು ಕೊನೆಗೊಳ್ಳುತ್ತಿತ್ತು. ಇಷ್ಟರಲ್ಲಿ "ಲಲಿತಾ, ಮಲಗಬಾರದೇ? ಬೆಳಿಗ್ಗೆ ಬೇಗ ಎದ್ದು ಓದಿದರಾಗುವುದಿಲ್ಲವೇ?" ಎಂದು ಅಡಿಗೆ ಕೋಣೆಯ ಕಡೆಯಿಂದ ಬಂದ ಮಾತುಗಳು ಒಮ್ಮೆಯೇ ಬಾಲಿಕೆಯ ಚಿಂತಾಸರಣಿಯನ್ನು ತಡೆಗಟ್ಟಿಬಿಟ್ಟುವು. ಅವಳು ಅವಸರದಿಂದ ಕಣ್ಣುಗಳನ್ನು ಸೆರಗಿಂದೊರಸಿಕೊಂಡು ಮೂಗಿಂದಿಳಿವ ನೀರನ್ನು ಕೈಬೆರಳಿನಿಂದೊತ್ತಿ ತೆಗೆದು ಒಂದೆಡೆಗೆಸೆದು ಕೈಯ ಪುಸ್ತಕವನ್ನು ತೆರೆಯುವಷ್ಟರಲ್ಲಿ ಲೇಂಪಿನ ಬುರುಡೆಯು ಟಪ್ಪನೆ ಒಡೆದು ಮೇಲ್ಭಾಗವು ತುಂಡಾಗಿ ಬಿದ್ದು ದೀಪವು ದೊಡ್ಡದಾಯಿತು. ಲಲಿತೆಯು ಅದನ್ನು ನೊಂದಿಸಿಬಿಟ್ಟಳು. ಕೂಡಲೆ ಅಡಿಗೆ ಮನೆಯಿಂದ ಪ್ರಾಯ ಮೀರಿದ ಸ್ತ್ರೀಯು ಚಿಮಣಿದೀಪ ಹಿಡಕೊಂಡು ಸರಸರನೆ ಲಲಿತೆಯ ಕೋಣೆಗೆ ಬಂದು, "ಏನೆ ಏನಾಯಿತು ಲಲಿತ? ಮೊನ್ನೆತಾನೆ ತಂದ ಬುರುಡೆ ಇವತ್ತು ಒಡೆದುಹೋಯಿತೇ? ಎರಡು ದಿವಸಕ್ಕೊಂದು ಬುರುಡೆಗೆ ಎಲ್ಲಿಗೆ ಹೋಗುವುದು?" ಎಂದು ಚಿಮಣಿಯನ್ನು ಮೇಜಿಯ ಮೇಲಿಟ್ಟು ಪರೀಕ್ಷಿಸುವಾಗ ಮೇಜಿಯ ಮುಂಭಾಗವು ಕಣ್ಣೀರಿಂದ ಒದ್ದೆಯಾಗಿರುವುದನ್ನು ಕಂಡು ತಳಮಳಗೊಂಡು "ಏನೆ, ಎಂದು ಅತ್ಯಾದರದಿಂದ ಕೇಳಿದಳು. ಲಲಿತ? ಇಷ್ಟರವರೆಗೂ ನೀನು ಕಣ್ಣೀರಿಡುತ್ತಿದ್ದುದೇ?"

ಮೊದಲೇ ಲಲಿತೆಯ ಹೃದಯವು ದುಃಖದಿಂದ ತುಂಬಿ ಹೋಗಿತ್ತು. ಹೊಸ ಬುರುಡೆಯು ಒಡೆದು ಹೋದುದರಿಂದ ಚಿಂತೆ ಬೆದರಿಕೆಗಳೊಂದು ಕೂಡಿ ಅವಳನ್ನು ಪೀಡಿಸಹತ್ತಿದುವು. ವಿಶೇಷವಾಗಿ ಅದೊಂದು ಅಶುಭ ಸೂಚನೆ; ತನ್ನ ಇನ್ನು ಮುಂದಿನ ಜೀವನದ ಮುನ್ನೆರಳೆಂದು ಅವಳು ತಲ್ಲಣಗೊಂಡಳು. ದುಃಖದ ವೇಗವು ಹಿರಿದಾಯಿತು. ಲಲಿತೆಯ ಅಂತರಾಳದಲ್ಲಿ ದೊಡ್ಡ ವಿಪ್ಲವವೆದ್ದಿತು. ಅವಳು ತುಸು ಹೊತ್ತು ಸ್ತ್ರೀ ಸಹಜ ಸ್ಥೈರಣೆಯಿಂದ ಎಲ್ಲವನ್ನೂ ಒತ್ತಿಟ್ಟು, ವಿಸ್ಮಿತ ಮುಖಮುದ್ರೆಯಿಂದ ತನ್ನನ್ನು ದಿಟ್ಟಿಸಿ ನೋಡುವ ತಾಯಿಯ ಮುಖವನ್ನೇ ಕಣ್ಣು ಕಣ್ಣುನೋಡುತ್ತಾ ನಿಂತುಬಿಟ್ಟಳು.

"ಏನಿದು ಲಲಿತ? ಏನೆಂದು ಮನಬಿಚ್ಚಿ ಹೇಳಬಾರದೆ? ಹೀಗೇಕೆ ಕಣ್ಣೀರಿಟ್ಟು ಈ ಎಳೆ ಪ್ರಾಯದಲ್ಲೇ ನಿನ್ನೀದೇಹವನ್ನು ಕರಗಿಸಿಕೊಳ್ಳುವೇ? ಅಂತಹದೇನಾಗಿದೆ ನಿನಗೀಗ?" ಎಂಬ ತನ್ನ ತಾಯಿಯ ತುಸು ಬಿರುಸು ಮಾತುಗಳು ಲಲಿತೆಯ ಕೋಮಲ ಹೃದಯಕ್ಕೆ ಚೆನ್ನಾಗಿ ನಾಟಿದುವು. ದುಃಖಾವೇಗವು ಅವಳನ್ನು ಸಂಪೂರ್ಣವಾಗಿ ವಶಮಾಡಿಕೊಂಡುಬಿಟ್ಟಿತು. "ಅಮ್ಮಾ ನನ್ನನ್ನಾ ನರಕಕ್ಕೆಳೆಯಬೇಡ!" ಎಂದು ಲಲಿತೆಯು ದೊಪ್ಪನೆ ತನ್ನ ತಾಯಿಯ ಕಾಲ ಮೇಲೆ ಬಿದ್ದುಬಿಟ್ಟಳು.

ಮಗಳ ಈ ರೀತಿಯ ಗೋಳಿನಿಂದ ಸರ್ವ ಸಾಮಾನ್ಯ ಮಾತೆಯ ಒಡಲು ಕರಗಿ ನೀರಾಗುತ್ತಿತ್ತು. ಒಡನೆಯೇ ಅವಳು ಮಗಳನ್ನೆತ್ತಿ ತಕ್ಕೈಸಿ ಸಂತೈಸಲೆತ್ನಿಸುತ್ತಿದ್ದಳು. ಆದರೆ ಲಲಿತೆಯ ತಾಯಿ ನಾಗಿಯು ಹಾಗೇನೂ ಮಾಡದೆ ಕ್ರುದ್ಧಳಾಗಿ ಕಾಲಡಿ ಬಿದ್ದಿರುವ ಮಗಳನ್ನು ಕಣ್ಣೆತ್ತಿ ಸಹ ನೋಡದೆ ಚಿಮಣಿಯನ್ನು ಮೇಜಿಯ ಮೇಲಿಟ್ಟು ದಡದಡನೆ ಅಡಿಗೆ ಕೋಣೆಗೆ ನಡೆದುಬಿಟ್ಟಳು. ಅದೇಕೆ? ಇಷ್ಟೊಂದು ಕಠಿಣ ಮನಸ್ಸೇ ಅವಳದು? ಒಬ್ಬಳೇ ಮಗಳಾದ ಲಲಿತೆಯ ಮೇಲೆ ಅವಳಿಗೆ ಪ್ರೀತಿಯಿಲ್ಲವೇ? ಯಾರಾದರೂ ಅತ್ಯಂತ ಕನಿಕರಪಡಬೇಕಾದ ಪರಿಸ್ಥಿತಿಯಲ್ಲಿ ಹಡೆದ ತಾಯಿಯಾದ ನಾಗಿಯು ಇಷ್ಟೊಂದು ನಿಷ್ಠುರಳಾಗಿ ನಡೆಯಲು ಕಾರಣವೇನು?

ಅದೊಂದು ವಿದ್ಯಮಾನವು ಅಡ್ಡಬರುವ ವರೆಗೆ ಲಲಿತೆಯು ನಾಗಿಯ ಪಂಚಪ್ರಾಣವಾಗಿದ್ದಳು. ಒಬ್ಬಳೇ ಮಗಳಾದ ಅವಳಿಗೆ ಒಂದಿಷ್ಟು ತಲೆ ನೋವಾದರೆ, ನೆಗಡಿಯಾಯಿತೆಂದರೆ ನಾಗಿಯ ಪ್ರಾಣವೇ ಹಾರಿಹೋಗುವಂತಾಗುತ್ತಿತ್ತು. ಅವಳೆಲ್ಲಿಯಾದರೂ ಶಾಲೆಯಿಂದ ಬರುವುದು ಸ್ವಲ್ಪ ವಿಳಂಬವಾದರೆ ನಾಗಿಗೆ ಮಾರ್ಗದಲ್ಲಿ ನಿಂತು ಲಲಿತೆಯ ಬರವನ್ನು ಹಾರೈಸಿಕೊಂಡಿರುವುದೊಂದೇ ಕೆಲಸ. ಲಲಿತೆಯು ಎಷ್ಟು ತಿಂದರೂ ಎಷ್ಟು ಉಂಡರೂ ಸಾಲದವಳಿಗೆ. ಅವಳೇನು ಕೇಳಿದರೂ ನಾಗಿಯು ಏನಾದರೂ ಮಾಡಿ ತಂದು ಕೊಡದೆ ಬಿಡಲಾರಳು. ತಾನು ಇಷ್ಟೊಂದು ಅಕ್ಕರೆಯಿಂದ ತನ್ನ ಪ್ರಾಣದ ಪ್ರಾಣವಾಗಿ ಸಾಕಿಕೊಂಡು ಬಂದ ತನ್ನ ಮಗಳು ಇನ್ನೂ ಎಳೆಯವಳಿರುವಾಗಲೆ ನನ್ನ ಮಾತು ಕೇಳಲಿಲ್ಲ. ಮುಂದೆ ಬೆಳೆದಾಗ ಕೇಳುವಳೇ? ನಾನು ಅವಳ ಹಿತಕ್ಕಾಗಿ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧವಿರುವಾಗ ಎಂದಾದರೂ ಅವಳಿಗೆ ಅಹಿತವಾಗುವ ಕೆಲಸಮಾಡುವೆನೇ? ಅವಳ ಹಿತವೇನೆಂದು ಇನ್ನೂ ಲೋಕಾನುಭವವಿಲ್ಲದ ಅವಳಿಗಿಂತಲೂ ನನಗೆ ಹೆಚ್ಚು ಗೊತ್ತಿಲ್ಲವೇ? ಅಂದ ಮೇಲೆ ಲಲಿತೆಯು ನಾನು ಹೇಳಿದಂತೆ ನಡೆಯದೆ ತನ್ನಿಚ್ಛಾನುಸಾರ ನಡೆಯುವ ಛಲತೊಡುವುದೇ? ತನ್ನನ್ನಾ ನರಕಕ್ಕೆಳೆಯಬೇಡಮ್ಮಾ ಎಂದು ನನ್ನ ಕಾಲಿಗೆ ಬಿದ್ದು ಬೇಡಿಕೊಳ್ಳುವುದೇ? ತಾಯಿಯಾದವಳಿಗೆ ಇದಕ್ಕಿಂತ ದೊಡ್ಡ ಅಪಮಾನವಿದೆಯೇ? ಎಂದು ನಾಗಿಯು ಆಗ್ರಹಕ್ಕೆ ಮನಸ್ಸುಕೊಟ್ಟು ತನ್ನ ಮಾತೃತ್ವವನ್ನು ಆ ಸಂದರ್ಭದಲ್ಲಿ ಮರೆತು ನಿರ್ದಯವಾಗಿ ವರ್ತಿಸಿದಳು. ತನ್ನದೇ ಅದೊಂದು ದೃಷ್ಟಿಯಿಂದ ಯಾವುದಾದರೊಂದು ಆಗ್ರಹಕ್ಕೆ ಬಲಿಬಿದ್ದಿರುವ ಅಸಂಸ್ಕೃತ ಮನಸ್ಸಿಗೆ ತನ್ನ ಹೊರತು ಇನ್ನೊಂದು ದೃಷ್ಟಿಯಿದೆಯೆಂದು ತಿಳಿಕೊಳ್ಳುವ ವಿವೇಕವಾದರೂ ಎಲ್ಲಿಂದ ಬರಬೇಕು? ಅದರಲ್ಲೂ ತಾನು ಅತ್ಯಂತ ಪ್ರೀತಿ ಮಮತೆಗಳಿಂದ ಲಾಲಿಸಿ ಪಾಲಿಸಿ ಬೆಳೆಸಿದ ವಸ್ತುವು ನನ್ನ ಕೈಗೆಂಜಿಯಾಗಿ ಕುಣಿಯದೆ ಸ್ವಲ್ಪ ಸ್ವತಂತ್ರ ತೋರಿಸಿದರೆ ಉಂಟಾಗುವ ಆಕ್ರೋಶದ ಪರಿಣಾಮವಾಗಿ ಹಡೆದೊಡಲೇ ಮಕ್ಕಳ ಬದ್ಧ ದ್ವೇಷಿಯಾಗುವುದಿಲ್ಲವೇ? ಒಡಹುಟ್ಟಿದವರೇ ಕಡು ವೈರಿಗಳಾಗುವುದಿಲ್ಲವೇ?

ತುಸು ಹೊತ್ತು ನಾಗಿಯೂ ಕ್ರೋಧಾಧೀನಳಾಗಿ ತನ್ನನ್ನು ತಾನೇ ಮರೆತಿದ್ದಳು. ಆದರೆ ಅಡಿಗೆ ಕೋಣೆಗೆ ಕಾಲಿಟ್ಟೊಡನೆಯೇ ಅವಳ ಮಾತೃತ್ವವು ಕ್ರೋಧವನ್ನು ಹಿಂದಕ್ಕೊತ್ತಿ ಮೇಲೇರಿ ಬಂತು. ಒಮ್ಮೆಯೇ ಅವಳ ಕುತ್ತಿಗೆಯ ನರಗಳು ಬಿಗಿದವು. ಕಣ್ಣೀರು ತುಂಬಿ ಬಂತು "ಛೆ! ನಾನೇನು ಮಾಡಿದೆ?" ಎಂಬ ಮಾತೃ ಹೃದಯ ಸಹಜ ಪಶ್ಚಾತ್ತಾಪವು ಅವಳ ಮನಸ್ಸನ್ನು ಕಡಿಯ ಹತ್ತಿತು. ಅವಳು ತುಸು ಹೊತ್ತು ಯೋಚಿಸಿದಳು. ಅವಳ ಸಂತಾಪವು ಮತ್ತಷ್ಟು ಹೆಚ್ಚಿತು. ಕೂಡಲೇ ಕಣ್ಣೀರೊರಸಿಕೊಂಡು ಲಗುಬಗೆಯಿಂದ ಲಲಿತೆಯ ಕೋಣೆಗೆ ನಡೆದಳು. ಆಗ ಲಲಿತೆಯ ಮುಖವು ಕೆಂಪೇರಿದ್ದಿತು. ಅವಳು ಕೋಣೆಯ ಕಿಟಕಿಯ ಹೊರಗೆ ನೋಡುತ್ತಾ ಗಂಭೀರವಾಗಿ ಅದೇನೋ ಆಲೋಚನಾಮಗ್ನಳಾಗಿದ್ದಳು. ನಾಗಿಯು ಅವಳ ಹತ್ತಿರ ಹೋಗಿ ತುಸು ಹೊತ್ತು ಮೌನವಾಗಿ ನಿಂತುಬಿಟ್ಟಳು. ಚಿಮಣಿಯ ದೀಪವು ಬೆಳಕಿಗಿಂತ ಹೊಗೆಯನ್ನೇ ಹೆಚ್ಚಾಗಿ ಕೋಣೆಯೊಳಗೆ ತುಂಬುತ್ತಿತ್ತು. ಗಾಳಿಯು ಸಾಕಷ್ಟು ಬಲವಾಗಿ ಬೀಸುತ್ತಿದ್ದುದರಿಂದ ಚಿಮಣಿಯ ಬೆಳಕು ತೀವ್ರ ಅಸ್ಥಿರಚಿತ್ತನಂತೆ ತಲ್ಲಣಿಸುತ್ತಿತ್ತು. ಕೋಣೆಯೊಳಗೆ ಬೆಳಕು ಕತ್ತಲೆಗಳು ಜಟ್ಟಿ ಕಾಳಗ ನಡಿಸಿ ಒಂದನ್ನೊಂದು ಅಡಿಗೆ ಹಾಕುತ್ತಾ ಯಾವುದೂ ಸ್ಥಿರವಿಜಯ ಪಡೆಯದೆ ತತ್ತರಿಸುವಂತೆ ತೋರುತ್ತಿತ್ತು. ಲಲಿತೆಗೆ ಇದಾವುದರ ಗೊಡವೆಯೇ ಇಲ್ಲದಿದ್ದರೂ ಅವಳ ಮನಸ್ಸು ಇಂತಹದೇ ಆದ ತೀವ್ರ ದ್ವಂದ್ವದ ರಂಗಸ್ಥಳವಾಗಿತ್ತು. ತಾನು ಮಾತೆಯ ಹಿತದಂತೆ ನಡೆದು ಈ ಎಳೆ ಪ್ರಾಯದಲ್ಲೇ ಮಾನಗೆಟ್ಟು ಶರೀರವನ್ನು ಮಾರಿ ವ್ಯಾಪಾರ ನಡಿಸುವ ಸೂಳೆಯಾಗುವುದೇ? ಅಥವಾ ತನ್ನ ಅಧ್ಯಾಪಕಿಯ ಬೋಧನೆಯಂತೆ ಸ್ಕೂಲು ಫೈನಲಿನ ವರೆಗೆ ಕಲಿತು ಅಧ್ಯಾಪಕಿ ಅಥವಾ ಮಿಡ್ ವೈಫ್ ಆಗುವುದೇ? ಇದರಲ್ಲಾವುದು ಒಳ್ಳೇದೆಂದು ನಿಶ್ಚೈಸುವುದರಲ್ಲೇನೂ ಕಷ್ಟವಿಲ್ಲ. ಅದೊಂದು ಸಮಸ್ಯೆಯೇ ಅಲ್ಲ. ಆದರೆ ನಾಗಿಯ ಛಲದಿಂದಾಗಿ, ಲಲಿತೆಯು ಹುಟ್ಟಿ ಬೆಳೆದ ಪರಿಸ್ಥಿತಿಯಿಂದಾಗಿ ಲಲಿತೆಗೆ ಅದೊಂದು ದೊಡ್ಡ ಸಮಸ್ಯೆಯಾಗಿ ಬಿಟ್ಟಿದ್ದಿತು. ಲಲಿತೆಯು ಇನ್ನೂ ಎಳೆ ಬಾಲೆ. ನಳನಳಿಸ ಎಳೆಲತೆಯಂತಿದ್ದಿತು ಅವಳ ದೇಹ. ಪ್ರಕೃತಿಯು ಅವಳಲ್ಲಿ ಲಾವಣ್ಯದ ನಕಾಶೆಯನ್ನಷ್ಟೇ ಎಳೆದಿದ್ದಿತು. ಅದನ್ನಿನ್ನು ವಿವಿಧ ರೂಪ ರೇಖೆಗಳಿಂದ ಶೋಭಾಯಮಾನವಾಗಿ ಮಾಡುವ ಕೆಲಸ ಮುಂದೆ ನಡೆಯಬೇಕಾಗಿದ್ದಿತು. ಆದರೆ ದುರ್ದೈವದಿಂದ, ಎಳೆ ಬಾಲೆಯಾದರೂ ಸಮಾಜದ ದೃಷ್ಟಿಯಲ್ಲಿ ಪರಿಪಕ್ವಳೆಂಬ ಶರೀರ ಮಾರ್ಪಾಟವನ್ನವಳು ಹೊಂದಿದ್ದಳು. ಆದುದರಿಂದ ಕಾಮುಕ ಜನರ ವಕ್ರ ನೋಟದ ಕಾಟವು ಅವಳಿಗೆ ಆರಂಭವಾಗಿತ್ತು. ನಾಗಿಯೊಡನೆ ಹಲವರು ವಹಿವಾಟಿನ ಪ್ರಸ್ತಾಪ ನಡಿಸಿದ್ದರು. ಅವಳು ಯಾವುದಕ್ಕೂ ಕಿವಿಕೊಡದೆ ತಿರಸ್ಕರಿಸುತ್ತಿದ್ದಳು. ಆದರೆ ಅವಳೂ ಉಭಯ ಸಂಕಟದಲ್ಲಿ ಬೀಳುವ ಪರಿಸ್ಥಿತಿಯೊಂದುಂಟಾಯಿತು. ಅವಳು ತನ್ನ ದೃಷ್ಟಿಯಲ್ಲಿ ಚೆನ್ನಾಗಿ ವಿಚಾರಿಸಿ ಲಲಿತೆಯ ಭಾಗ್ಯೋದಯವಾಗುವ ಸಂದರ್ಭವೆಂಬ ದುರಾಶೆಗೆ ಬಲಿಬಿದ್ದು ಮಾತುಕೊಟ್ಟುಬಿಟ್ಟಳು. ನಾಗಿಯಂಥವಳಿಗದು ಬಡವನಿಗೆ ನಿಧಿ ದೊರೆತಂತಾಗಿದ್ದಿತು. ಲಲಿತೆಯ ಮುಂದಾದ ಅವಳ ಅನುದಿನದ ಚಿಂತನೆಯು ಅನಾಯಾಸವಾಗಿ ನೆರವೇರುವಂತಾಗುವಾಗ ನಾಗಿಯಂಥವಳು ಮತ್ತೇನು ಮಾಡಿಯಾಳು? ಆದರ ನಾಗಿಗೆ ಯಾವುದು ಸ್ವರ್ಗ ಸಮಾನವಾಯಿತೋ ಅದೇ ಲಲಿತೆಗೆ ನರಕವಾಗಿ ತೋರಿತು. ಈ ದೃಷ್ಟಿಭೇದಗಳೊಳಗಣ ತಿಕ್ಕಾಟವು ಈ ತಾಯಿ ಮಗಳ ಮನಸ್ತಾಪಕ್ಕೆ ಕಾರಣವಾಯಿತು.

ನಾಗಿಯು ಗದ್ಗದ ಕಂಠದಿಂದ "ಮಗೂ ಲಲಿತಾ" ಎಂದು ಬೆನ್ನು ಸವರಿದಳು. ಲಲಿತೆಯು ಥಕ್ಕನೆ ಎಚ್ಚೆತ್ತವಳಂತೆ ಕುರ್ಚಿಯಿಂದ ಜಗ್ಗನೆದ್ದು ದೂರ ಸರಿದು ನಿಂತು ಬಿಟ್ಟಳು. "ಕೋಪಿಸಿಕೊಳ್ಳಬೇಡ ಮಗೂ, ಬಾ ಕೂತುಕೋ" ಎಂದು ನಾಗಿಯು ಲಲಿತೆಯನ್ನು ಕೈಹಿಡಿದೆಳೆದು ಕುರ್ಚಿಯಲ್ಲಿ ಕೂತುಕೊಳ್ಳಿಸಿ ತಾನು ಹತ್ತಿರವೇ ಮೇಜಿನ ಮೇಲೆ ಕುಳಿತುಕೊಂಡಳು. "ಅಮ್ಮಾ ಘಂಟೆ ಹತ್ತಾಯಿತು. ಚಿಮಣಿ ದೀಪದ ಹೊಗೆ ಕೋಣೆಯೆಲ್ಲಾ

ತುಂಬಿ ಹೋಯಿತು, ಮಲಗುವ," ಎಂದು ಲಲಿತೆಯು ನಾಗಿಯ ಮುಖ ನೋಡಿದಳು.

ನಾಗಿಗೆ ಲಲಿತೆ ಹೇಳಿದುದೇ ಕೇಳಲಿಲ್ಲ. ಅವಳ ಮನಸ್ಸನ್ನು ಬೇರೊಂದು ಯೋಚನೆಯು ಆಕ್ರಮಿಸಿತ್ತು. "ಚಂದ್ರಾವತಿಯನ್ನು ಬಲ್ಲೆಯಷ್ಟೆ ಮಗು? ಅವಳ ಆ ಸುಖ ವೈಭವಕ್ಕೆ ಕಾರಣವೇನೆಂದು ಬಲ್ಲೆಯಾ? ನೀನೀಗ ಮನಸ್ಸು ಮಾಡಿದರೆ ಅವಳಿಗಿಂತಲೂ ಹೆಚ್ಚಿನ ವೈಭವದಿಂದಿರಬಹುದು. ಮಗೂ, ನಾನು ಮಾತು ಕೊಟ್ಟಾಗಿದೆ. ನೀನೀ ರೀತಿ ಛಲ ಹಿಡಿಯುವುದು ಸರಿಯಲ್ಲ. ನಿನ್ನಾಣೆ, ಮಗೂ ನಿನ್ನ ಭಾಗ್ಯಕ್ಕಿನ್ನು ಕಡಿಮೆಯಿಲ್ಲ. ನಮ್ಮಂಥವರಿಗೆ ಅಂಥ ವರು ದೊರಕುವುದೇ ಅಪರೂಪ. ಏನೋ ಪೂರ್ವ ಪುಣ್ಯದಿಂದ, ನಿನ್ನ ಭಾಗ್ಯ ದಿಂದ" ಎಂದು ನಾಗಿಯು ಮುಖ ತಗ್ಗಿಸಿದ ಲಲಿತೆಯ ಗಲ್ಲ ಹಿಡಿದೆತ್ತಿ ಮಾತು ಮುಂದುವರಿಸುವಷ್ಟರಲ್ಲಿ ಲಲಿತೆಯು ಅವಳ ಕೈ ಹಿಡಿದು, "ಅಮ್ಮಾ! ಮತ್ತೇನು ಬೇಕಾದರೂ ಹೇಳಿ, ಅದೊಂದು ಮಾತ್ರ ಹೇಳಬೇಡಿ. ನನಗೆ ಅದ ರಿಂದ ಎಂತಹ ಸುಖ ದೊರೆತರೂ ನಾನದಕ್ಕೊಪ್ಪಲಾರೆನು. ಅಮ್ಮಾ, ನಿನಗೆ ನನ್ನ ಮೇಲೆ ಒಂದಿಷ್ಟು ಕರುಣೆಯಿಲ್ಲವೇ? ನಾನು ಋತುವಾದರೇನು? ನನ್ನ ವಯಸ್ಸು ಕೇವಲ ಹದಿಮೂರಲ್ಲವೇ? ಕ್ಷಮಿಸಮ್ಮಾ ಕ್ಷಮಿಸು. ನನಗದನ್ನು ನೆನಸಿದರೇನೇ ಭಯವಾಗುವುದು. ಇಡೀ ಶರೀರವೇ ಕಂಪಿಸುವುದು. ಈ ವರೆಗೆ ಎಂದಿಗಾದರೂ ನಿನ್ನ ಮಾತನ್ನು ನಿರಾಕರಿಸಿದವಳೇ ನಾನು? ಈಗ ನಿರ್ವಾಹ ವಿಲ್ಲವಮ್ಮಾ ಹಾಗೆ ಮಾಡದೆ. ನಾನು ನಿನ್ನ ಮಾತಿನಂತೆ ನಡೆದರೆ ನಿಶ್ಚಯ ವಾಗಿಯೂ ನನ್ನ ಸರ್ವ ನಾಶವಾಗುವುದೆಂಬ ಭೀತಿಯಿಂದ ನನ್ನ ಹೃದಯವೇ ತಳಮಳಿಸುತ್ತಿರುವುದಮ್ಮಾ. ಬೇಡ, ಬೇಡ ಅಮ್ಮಾ ನೀನೀ ಛಲ ತೊಟ್ಟು ನನ್ನೀ ಬಾಳನ್ನು ಹಾಳುಮಾಡಬೇಡ." ಎಂದು ಲಲಿತೆಯು ಒಂದೇ ರೀತಿ ಕಣ್ಣೀರಿಡಲು ನಾಗಿಯ ಹೃದಯವು ಕರಗಿದರೂ ಮನಸ್ಸಿನ ನಿರ್ಧಾರ ವೇನೂ ಬದಲಾಗಲಿಲ್ಲ.

"ನೀನೇನು ಮಾಡುವೆ ಮತ್ತೆ?" ಎಂದು ಅವಳು ಸ್ವಲ್ಪ ಸಿಟ್ಟಿನಿಂದಲೇ ಪ್ರಶ್ನಿಸಿದಳು. "ನಾನು ಇನ್ನೊಂದು ವರ್ಷ ಕಲಿತು ಸ್ಕೂಲು ಫೈನಲ್ ಪಾಸಾ ಗುವೆನು. ಆ ಮೇಲೆ ಅಧ್ಯಾಪಕಿ ಅಥವಾ ಮಿಡ್‌ವೈಫ್ ಆಗಲು ನಮ್ಮ ಟೀಚರ್ ಸುಮಿತ್ರಾ ಬಾಯಿಯವರು ಸಹಾಯಮಾಡುವೆನೆಂದು ಮಾತು ಕೊಟ್ಟಿದ್ದಾರಮ್ಮಾ. ನಾನೆಂದರೆ ಅವರಿಗೆ ಬಹಳ ಪ್ರೀತಿ. ಯಾವಾಗಲೂ ಅವರು ನನಗೆ ಬುದ್ಧಿ ಹೇಳುತ್ತಲೇ ಇದ್ದಾರೆ." ಎಂದು ಲಲಿತೆಯು ಉತ್ತರ ವಿತ್ತಳು. "ಹೌದೌದು ಹೇಳಿಕೊಟ್ಟ ಬುದ್ಧಿಯಿದು ನಿನ್ನದು! ನಿನಗೇನು ಲೋಕಾನುಭವವಿದೆ? ಅಧ್ಯಾಪಕಿ ಅಥವಾ ಮಿಡ್‌ವೈಫ್ ಆಗಿ ನೀನು ಹೀಗೆ ಯೇ ಇರುವೆಯಾ? ನಿನ್ನ ಸುಮಿತ್ರಾ ಬಾಯಿಯವರು ಮದುವೆಮಾಡಿಕೊಳ್ಳ ಲಿಲ್ಲವೇ?" ಎಂದು ನಾಗಿಯು ಮತ್ತಷ್ಟು ಸಿಟ್ಟುಗೊಂಡಳು. "ನಾನೂ ಆ ಮೇಲೆ ಮದುವೆಯಾಗುವೆನಮ್ಮಾ. ಮದುವೆಯಾಗಿ ನಾವೆಲ್ಲರೂ ಸುಖವಾ ಗಿರಬಹುದು." ಎಂದು ನಿರ್ಮಲ್ಯವಾಗಿ ಲಲಿತೆಯು ನುಡಿದಳು. ನಾಗಿಯ ಕೋಪ ಮಿತಿಮೀರಿತು. ಅವಳು "ಹೌದೌದು ನೀನು ಮದುವೆಯಾಗುವೆ! ಯಾರನ್ನು? ನೋಡುವ, ನಿನ್ನ ಸುಮಿತ್ರಾ ಬಾಯಿಯವರು ನಿನಗೊಂದು ಯೋಗ್ಯ ಗಂಡನನ್ನೊದಗಿಸಿಕೊಡಲಿ!" ಎಂದು ಹಂಗಿಸಿ ಮಾತಾಡಿದಳು. "ಸಿಟ್ಟುಗೊಳ್ಳಬೇಡಮ್ಮಾ. ನೀನು ಕಲಿ, ಹುಶಾರಾಗು, ನಿನಗೊಬ್ಬ ಯೋಗ್ಯ ವರನನ್ನು ನಾನೊದಗಿಸಿ ಕೊಡುತ್ತೇನೆ"ಎಂದು ಸುಮಿತ್ರಾ ಬಾಯಿಯವರೇ ಹೇಳಿರುತ್ತಾರಮ್ಮಾ. ಅವರು ಬಹಳ ಒಳ್ಳೆಯವರು. ಅವರಿಗೆ ಹೆಣ್ಣು ಮಕ್ಕ ಳಿಲ್ಲ. ನನ್ನನ್ನವರು ತನ್ನ ಮಗಳಂತೆಯೇ ಪ್ರೀತಿಸುತ್ತಿದ್ದಾರೆ." "ಹೌದೌದು ಎಲ್ಲರೂ ಪ್ರೀತಿಸುತ್ತಾರೆ ಸ್ವಲ್ಪ ರೂಪವಿದ್ದರೆ! ಅವರೊಬ್ಬರು ಹೇಳಲಿಕ್ಕೆ, ನೀನು ಕೇಳಲಿಕ್ಕೆ! ನೀನೇನು, ನಿನ್ನ ಕಸುಬೇನು, ನೀನು ಮಾಡತಕ್ಕದ್ದೇ ನೆಂದು ನಿನಗಿನ್ನೂ ತಿಳಿದಿಲ್ಲ. ವಿದ್ಯೆ, ಶಾಲೆ, ಉದ್ಯೋಗ ಇದರಲ್ಲೇ ಬಿದ್ದಿದ್ದಿ ನೀನು." ಎಂದು ನಾಗಿಯು ಬಿರುನುಡಿದಳು.

"ಅಮ್ಮಾ ನನಗೆ ಬೆಳಗ್ಗೆ ಬೇಗ ಏಳಬೇಕು. ಕ್ಲಾಸು ಪರೀಕ್ಷೆಯಿದೆ. ಸ್ವಲ್ಪ ಓದಬೇಕು. ಇನ್ನು ಮಲಗಿದರಾಗದೇ?" ಎಂದು ಲಲಿತೆಯು ವಿನೀತತೆಯಿಂದ ಪುನಃ ನಾಗಿಯ ಮುಖ ನೋಡಿದಳು.

ನಾಗಿ:–'ಆಸ್ವಾಮಿಯ ಜನರು ನನ್ನ ಪ್ರಾಣ ತಿನ್ನುತ್ತಿದ್ದಾರೆ. ನೀನೆಲ್ಲಿ ಅವರ ಕಣ್ಣಿಗೆ ಬಿದ್ದು ಬಿಟ್ಟೆಯೋ? ನಾನು ನಿನ್ನೊಡನೊಂದು ಮಾತು ಕೇಳದೆ ಮಾತುಕೊಟ್ಟು ಸಿಕ್ಕಿಬಿದ್ದೆ. ಅವರು ಬಹಳ ಜೋರಿನವರು.'

ಲಲಿತ:–'ಅಮ್ಮಾ, ನಿನ್ನ ಮಗಳ ಕುರಿತು ನಿನಗೆ ಸ್ವತಂತ್ರವಿಲ್ಲವೇ? ಅವರೆಷ್ಟು ಜೋರಿನವರಾದರೇನು? ನಮ್ಮನ್ನೇನು ಮಾಡುವರು?'

ನಾಗಿ:–'ನಿನಗೇನು ಗೊತ್ತು ಅವರ ಸಂಗತಿ ಲಲಿತ? ನಾನು ಕೊಟ್ಟ ಮಾತಿಗೆ ತಪ್ಪಿದ ಪಕ್ಷದಲ್ಲಿ ನಮ್ಮ ಮನೆಗೆ ಬೆಂಕಿಹಿಡಿಸಲೂ ಹಿಂಜರಿಯರವರು!'

ಲಲಿತ:–'ಎಂತಹ ಸ್ವಾಮಿಯವರಪ್ಪಾ ಅವರು ಅಷ್ಟು ಜೋರಿನವರು!

ನಾಗಿ:–ಒಟ್ಟಾರೆ ನಾನೀಗ ಸಿಕ್ಕಿಬಿದ್ದೆ. ಇನ್ನೇನು ಮಾಡುವುದು? ನಿನಗೆ ಬಂಗ್ಲೆಯಂಥಾ ದೊಡ್ಡ ಮನೆ ಕಟ್ಟಿಸಿಹಾಕಿ, ಖರ್ಚಿಗೆ ಬೇಕಷ್ಟು ಆಸ್ತಿ ಯನ್ನು ನಿನ್ನ ಹೆಸರಲ್ಲೇ ಮಾಡಿ ಮರಣಕಾಲದ ವರೆಗೆ ನಿನ್ನನ್ನೊಬ್ಬಳನ್ನೇ ನೋಡುತ್ತೇನೆಂದು ತನ್ನ ದೇವರಾಣೆಯಿಟ್ಟು ಹೇಳಿದ್ದಾರವರು ಲಲಿತ. ಚಂದ್ರಾವತಿಗಿಂತಲೂ ಹೆಚ್ಚಿನ ವೈಭವದಿಂದ ನೀನಿರಬಹುದಂತೆ.'

ಲಲಿತ:–ಹೇಳಿದ್ದನ್ನೇ ಮತ್ತೂ ಹೇಳಿ ಫಲವೇನಮ್ಮಾ? ಆ ಮಾತು ಬಿಡು. ಮತ್ತೇನಾದರೂ ಮಾತಾಡು.

ನಾಗಿ:–ಎಷ್ಟು ಸುಲಭವಾಗಿ ನಿರ್ವಹಿಸಿಬಿಡುವೆ ನನಗೆ ಪ್ರಾಣಕ್ಕೆ ಬಂದಿ ರುವ ವಿಷಯವನ್ನು ನೀನು!

ಲಲಿತ:–ನಿಮಗೀಗೊಮ್ಮೆ ಪ್ರಾಣಕ್ಕೆ ಬಂದಿರುವುದೆಂದು ನಾನು ನನ್ನ ಪ್ರಾಣವನ್ನೇ ನಿರಂತರವೂ ನಾಶಮಾಡಿಕೊಳ್ಳಲೇ? ಅಮ್ಮಾ ನಿನಗಾಗಿ ಸರ್ವ ಸಾಧಾರಣ ಅಸಾಧ್ಯವಾದ ಕಾರ್ಯವನ್ನೂ ಸಾಧಿಸಲೆತ್ನಿಸುವುದು ನನ್ನ ಕರ್ತವ್ಯ. ಎಂದೆಂದಿಗೂ ತೀರಿಸಲು ಅಸಾಧ್ಯವಾದ ಋಣವಿದೆ ನಿನ್ನದು ನನ್ನ ಮೇಲೆ. ಅಂದ ಮೇಲೆ ನಿನಗೆ ವಿಧೇಯವಾಗಿ ನಡೆಯುವುದು ನನಗೆ ಅದೆಂತಹ ಅಸಹನೀಯ ವೇದನೆಯಿರಬೇಕಮ್ಮಾ! ನಿನಗೆ ಅವಿಧೇಯವಾಗಿ ನಡಿಯುವುದು ನನಗಷ್ಟು ಸುಲಭವೆಂದು ಬಗೆದೆಯಾ? ನಾನು ಅಷ್ಟೊಂದು ಕೃತಘ್ನಳೇ?" ಲಲಿತೆಯ ಕಣ್ಣುಗಳ ಪುನಃ ನೀರು ತುಂಬಿ ಹರಿಯುವುದು. ಅದನ್ನು ಕಂಡೊಡನೆಯೇ ನಾಗಿಯ ಹೃದಯವು ಮೃದುವಾಗಿಹೋಗುವುದು. ಅವಳು ತನ್ನ ಸೆರಗಿಂದ ಲಲಿತೆಯ ಕಣ್ಣೀರೊರಸಿ, "ಅಳಬೇಡ ಮಗೂ ಅಳಬೇಡ. ನಾನೂ ನಿನ್ನ ಒಳ್ಳಿತನ್ನೇ ಬಯಸಿ ಮಾತುಕೊಟ್ಟು ಸಿಕ್ಕಿಬಿದ್ದೆ. ಇನ್ನು ಹೇಗಾದರೂ ತಪ್ಪಿಸಿಕೊಳ್ಳುವಂತೆ ಪ್ರಯತ್ನಿಸುವೆನು. ದೈವೇಚ್ಛೆ ಇದ್ದಂತಾಗುವುದು. ಇನ್ನಾ ಕುರಿತು ಚಿಂತೆ ಕಟ್ಟಿಕೊಳ್ಳಬೇಡ. ಎಳೆ ಹುಡುಗಿ ನೀನು ಯಾವಾಗಲೂ ಕಣ್ಣೀರು ಸುರಿಸುತ್ತಿರಬಾರದು. ಹೋಗು ಮಲಗು. ನಾನೂ ಮಲಗುವೆನು. ನನಗೆ ಅಡಿಗೆಕೋಣೆಯಲ್ಲಿ ಸ್ವಲ್ಪ ಕೆಲಸವಿದೆ" ಎಂದು ಲಲಿತೆಯು ಚಾಪೆಬಿಡಿಸುವ ವರೆಗೆ ಚಿಮುಣಿ ಹಿಡಕೊಂಡು ನಿಂತು ಆ ಮೇಲೆ ಅಡಿಗೆಕೋಣೆಗೆ ಹೋಗುವಳು. ಅಯ್ಯೋ! ಅಯ್ಯೋ! ಅದೇನು ಕೂಗು?

ನವಯುಗಕ್ಕೆ ಇಂದೇ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನವರ ಮತ್ತು ಉಡುಪಿ ಮುನಿಸಿಪಾಲಿಟಿಯವರ ಅಧಿಕಾರಕ್ಕೆ ಒಳಪಟ್ಟ ರಸ್ತೆ ಮಾರ್ಜಿನ ವ ಅವರ ಅಧಿಕಾರಕ್ಕೆ ಒಳಪಟ್ಟ ಇತರ ಸ್ಥಳಗ ಳಲ್ಲಿ ಇರುವ ಸಕಲ ಧೂಪದ ಫಲಗಳನ್ನು ತೆಗೆಯುವ ಸಂಪೂರ್ಣಹಕ್ಕುಗಳನ್ನು ನಾವು ೧೯೩೭-೩೮ನೇ ವರ್ಷಕ್ಕೆ ವ ತದನಂತರ ಮೂರು ವರ್ಷಗಳ ಪರಿಯಂತರ ಕರಕ್ಕೆ ಒಳಪಟ್ಟು ಪಡಕೊಂಡಿರುತ್ತೇವೆ. ಆದ ಕಾರಣ ನಮ್ಮ ಬರಹ ಮೂಲಕ ಅನುಮತಿ ವಿನಹ ಧೂಪದ ಫಲಗಳನ್ನು ತೆಗೆಯಕೂ ಡದು. ಇದಕ್ಕೆ ವಿರೋಧವಾಗಿ ತೆಗೆದಲ್ಲಿ ತಪ್ಪಿತರು ಆಗುತ್ತದೆ ತಿಳಿದಿರಲಿ! ಇತರ ಮಾಹಿತಿ ಬಗ್ಗೆ —ಮೇನೇಜರ್, ಕಲ್ಯಾಣ ಪುರ ಶುಗರ್ ಮಿಲ್ಸ್ ಲಿಮಿಟೆಡ್, ಕಲ್ಯಾ ಣಪುರ, ಇವರಿಗೆ ಬರೆದುಕೊಳ್ಳತಕ್ಕದ್ದು.

For The Kalyanpur Sugar Mills, Ltd.,
(Sd) H. Bhasker Kamath, B. A.
Manager.
Kalyanpur 28—6—37.

ಕೂದಲು ರಂಗು ಹಿಡಿ

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು. ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿ ಯುತ್ತದೆ. ಹಾಗಾಗದಿದ್ದರೆ ಇಮ್ಮಡಿ ಯಷ್ಟು ಬೆಲೆಯನ್ನು ವಾಪಾಸು ಕೊ ಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ. ೧॥, ಅರ್ಧಾಂ ಶಕ್ಕೂ ಮಿಕ್ಕಿ ಬಿಳಿ ಕೂದಲಿದ್ದರೆ ರೂ. ೨॥ ರ ಬಾಟಲಿಗೆ ಬರೆಯಿರಿ.

Bal Kala Stores,
P. O. Kansisimri (*Darbhanga*)

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಜಫರ್ ಪೂರಿನ ತೋಟ ಹೂ ಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆ ಯಿರಿ.

Bihar Nursery,
P. O. Bihar
Nursery (*Darbhanga*) **BIHAR**

ಕಸಿ ಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜ ಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

THE ROYAL SEED CO.,

FLORISTS & SEEDSMEN,
27, Ilpay Thope ULSOOR, BANGLORE.

ವಿ ಪಿ—ತರಕಾರಿಗಳು ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ ೧—೦—೦ ಒಂದಕ್ಕೆ ೦—೨—೦ ಕಮೀಷನ್ ಪಡೆಯುತ್ತೇವೆ. ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು.

ಅತ್ಯುತ್ಕೃಷ್ಟ ಪೆನಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ

'ಕುಶಾ' (ರಿಜಿಸ್ಟರ್ಡ್) ಫೌಂಟನ ಪೆನಿನ 'ಶಾಯಿ'

'ಕುಶಾ' (ರಿಜಿಸ್ಟರ್ಡ್) ಪೊಮೇಡ—ಕೇಶ ಸೌಂದರ್ಯಕ್ಕೆ

ಚೆಲೋ ಸುವಾಸನೆಯಿಂದ ಯುಕ್ತವಾದದ್ದು.

OUR CINEMA PAGE | **SAIGAL** INDIA'S BEST HERO | By Master Venkanna

ನಮ್ಮ ಸಿನೆಮಾ ಪುಟ — ಸೈಗಲ್ — ಜೀವನ ಚರಿತ್ರೆ

ಅಳುವನೇ ಎಂದು ಸಂದೇಹ ಪಡುವದಿದ್ದರೆ ಕಣ್ಣೀರು ಹರಿಯುತ್ತಿಲ್ಲ. ನಗುತ್ತಿರುವನೇ ಎನ್ನಲು ದಂತಪಂಕ್ತಿಗಳು ಮಿನುಗುತ್ತಿಲ್ಲ. ಚಿಂತಾಕ್ರಾಂತನಾಗಿರುವನೆನ್ನಲು ಅದಾವ ಚಿಂತೆಯೂ ಕಾಣಬರುವುದಿಲ್ಲ. ಹಾಗಿದ್ದರೂ ಕೂಡಾ ಅಗಣಿತ ಪ್ರೇಕ್ಷಕರ ಮನವನ್ನು ಕಲುಕಿ, ಅಳಿಸಿ, ನಗಿಸಿ, ನಲಿಯುವಂತೆ ಮಾಡಬಲ್ಲವನೆಂದರೆ ಭರತಖಂಡದ ನಟರಲ್ಲೆಲ್ಲಾ ಸುಪ್ರಖ್ಯಾತನೆಂದು ಪರಿಗಣಿಸಲ್ಪಟ್ಟ ಕೆ. ಯಲ್ ಸೈಗಲ್.

ನೋಡುವವಕ್ಕೇನೋ ವಿಪರೀತ ಜಾಣ್ಮೆಯ ದೆಸೆಯಿಂದಲೋ ಎಂಬಂತೆ ತಲೆಯ ಕೂದಲು ಕಡಿಮೆಯಾದ, ಮೇಧಾವಿ ಎನ್ನಲನುಕೂಲವಾಗುವಂತೆ ವಿಶಾಲ ಹಣೆಯ, ತರುಣನೆನ್ನಲು ಸಹಕಾರಿಯಾಗುವಂತೆ ಬಲಿತ ಎಳೆ ದೇಹದ, ಮುದುಕನೆನ್ನುವರೆ ಅನುಕೂಲವಾಗುವಂತೆ ಹಾಗೆಯೇ ತೋರುವ ಮುಖಭಾವದ-ಮೂರ್ತಿ. ಆದರೆ ಹಾಗೆ ಯಾವ ವಿಧದ ಉಪಾಯಾಂತರದ ಉದಾಹರಣೆಗಳಿಗೂ ಇಲ್ಲಿ ಎಡೆಯಿಲ್ಲ.

ಹೆಸರನ್ನು ಉಚ್ಚರಿಸಿದೊಡನೆ ಎಲ್ಲರೂ ಕಿವಿಗೊಟ್ಟು ಆತನ ವಿಷಯ ಆಲೈಸಲು ಕುತೂಹಲಿಗಳಾಗಿರುವಂತೆ ಮಾಡಬಲ್ಲ ಈತನು 1904ನೇ ಇಸವಿಯ ಎಪ್ರಿಲ್ ತಿಂಗಳ 11ನೇ ತಾರೀಕಿನಲ್ಲಿ ಭರತಖಂಡದ ಉದ್ಯಾನವನವೆಂದು ಹೆಸರಾದ ಸುಂದರ ವನಗಿರಿ ಸರೋವರಗಳಿಂದ ತುಂಬಿದ ಕಾಶ್ಮೀರದಲ್ಲಿ ಜನಿಸಿದನು. ಸುಂದರ ಪ್ರದೇಶದ ರಮ್ಯ ಪ್ರದೇಶಗಳ-ಗಾನಮಯ ಹಕ್ಕಿಗಳ ಗಂಧವು ಇವನಿಗೆ ಅಂಟಿದ್ದರಿಂದಲೋ ಎಂಬಂತೆ ಉತ್ತಮ ಹಾಡುಗಾರನಾಗಿ ಹೋದನು. ಆತನು ಹುಟ್ಟು ಹಾಡುಗಾರನಾಗಿದ್ದನು.

ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ (P. W. D.) ಸಾರ್ವಜನಿಕದ ಕೆಲಸದ ಶಾಖೆಯಲ್ಲಿ ೧ ಲೈನ್ ಇನ್ಸ್‌ಪೆಕ್ಟರನಾಗಿ ಸೇರಿ ಕೆಲಕಾಲ ಕೆಲಸಮಾಡಿದ ತರುವಾಯ ಈತನು ಗಡಿನಾಡಿನ ಬದಿ ಕೆಲಕಾಲ ಕೆಲಸಮಾಡಿದನು. ಇದೂ ಈತನಿಗೆ ಸರಿದೋರಲಿಲ್ಲ. ಇನ್ನೂ ಹಲಮಂದಿಯ ಪರಿಚಯಮಾಡಿಕೊಂಡು ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ ಇವನಲ್ಲಿ ವಿಾಂ ಆತನು ರೆಮಿಂಗ್‌ಟನ್ ಟೈಪ್ ರೈಟರ್ ಕಂಪೆನಿಯಲ್ಲಿ ಕಂಪೆನಿಯ ಯಂತ್ರಗಳನ್ನು ಮಾರುವ ಉದ್ಯೋಗಕ್ಕೆ ಕೈಯಿಕ್ಕಿದನು. ಹೀಗೆ ದೇಹಲಿ ಮತ್ತು ಸಿಮ್ಲಾ ಪ್ರದೇಶಗಳಲ್ಲಿ ಉದ್ಯೋಗದ ಮೂಲಕ ಸಂಚರಿಸಿ ಹಲವರ ಗೆಳೆತನ ಸಂಪಾದಿಸಿದನು.

ಹೀಗಿರಲು ಆತನ ಹುಚ್ಚು ಬುದ್ಧಿ (ಎಪ್ರಿಲ್ ತಿಂಗಳಲ್ಲಿ ಜನಿಸಿದ್ದುದರ ಕಾರಣವಿರಬಹುದು) ಆತನನ್ನು ಬಿಡದೆ ಮೇಲಕ್ಕೆ ತಂದಿತು. ಆತನು ಕಲ್ಕತ್ತದಲ್ಲಿ ಟೀಪಾರ್ಟಿ ಸಮಾರಂಭವೊಂದರಲ್ಲಿ ಭಾಗಿಯಾಗಲು ಹೋಗಿದ್ದಾಗ ಆತನ ಮಿತ್ರರು ಆತನ ಹುಚ್ಚಿಗೆ ತಮ್ಮ ಮಂಕುಬುದ್ಧಿಯನ್ನೂ ಕೂಡಿಸಿ ಆತನನ್ನು ಆಗ್ರಹಪಡಿಸಿದುದರಿಂದ ಆ ಸಮಾರಂಭದಲ್ಲಿ ಸೈಗಲ್ ಹಾಡಬೇಕಾಗಿ ಬಂತು. ಹಾಗೆ ಮಾಡಿದುದೇ ಆತನನ್ನು ಇನ್ನೂ ಇನ್ನೂ ಹಾಡಿ ಆತನ ಮಿತ್ರರಿಗೆ ಮಾತ್ರವೇ ಅಲ್ಲದೆ ಭರತಖಂಡದ ಅನಂತ ಮಂದಿಗೆ ಹಾಡಿನ ಸವಿ ಉಣ್ಣಿಸುವಂತೆ ಮಾಡಿತು. ಆ ಸಮಾರಂಭಕ್ಕೆ ಬಂದಿದ್ದ "ನ್ಯೂಥಿಯೇಟರ್" ಚಲನಚಿತ್ರ ಸಂಸ್ಥೆಯ ಮ್ಯಾನೇಜರಾದ ಬಿ. ಎನ್. ಸರ್ಕಾರ್ ಎಂಬವರು ಸೈಗಲನ ಹಾಡುಗಾರಿಕೆಯಲ್ಲಿ ಉತ್ತಮ ಭವಿಷ್ಯವನ್ನು ಕಂಡು ತನ್ನ ಸಂಸ್ಥೆಯನ್ನು ಸೇರುವಂತೆ ಒತ್ತಾಯಿಸಿ ತನ್ನ ಸಂಸ್ಥೆಗೆ ಸೇರಿಸಿಕೊಂಡರು.

ಹಾಗೆಯೇ ಮೊದಲನೆಯದಾಗಿ ಆತನು 'ಮೊಹಬ್ಬತ್-ಕೇ-ಅನ್ಸುನ್' ಎಂಬ ಚಿತ್ರದಲ್ಲಿ ಅಭಿನಯಿಸಿ ಚಲನಚಿತ್ರ ಪ್ರಪಂಚಕ್ಕೆ ಕಾಲಿಟ್ಟನು. ನಂತರದಲ್ಲಿ 'ಯಹೂದ್-ಕಿ-ಲಡ್ಕಿ' 'ಡಾಕು ಮನ್ಸೂರು' ಚಿತ್ರಗಳು ಅವನನ್ನು ಇನ್ನಷ್ಟು ಪ್ರಖ್ಯಾತಿಗೆ ತಂದುವು. ಅನಂತರದಲ್ಲಿ ಚಂಡಿದಾಸ್ ಚಿತ್ರ. ಇದು ಸೈಗಲನ ಕೀರ್ತಿಗೆ ಸಹಾಯಕವಾಗಿ ಅವನನ್ನು ಇತರ ನಟರೆದುರಿಗೆ ಈತನೂ ಓರ್ವ ನಟನೆಂದೆಣಿಸಿ ತಂದು ನಿಲ್ಲಿಸಿತು. ಆ ಬಳಿಕದ ಭರತಖಂಡದಲ್ಲಿ ಇದು ವರೆಗೆ ತಯಾರಾದ ಚಲನಚಿತ್ರಗಳಲ್ಲೆಲ್ಲಾ ಅತೀವ ಶ್ರೇಷ್ಠವಾದ "ದೇವದಾಸ್" ಚಿತ್ರವು ಆತನನ್ನು ಭರತಖಂಡದ ಸರ್ವಶ್ರೇಷ್ಠ ನಟನನ್ನಾಗಿ ಮಾಡಿತು. 'ಕ್ರೋಧಪತಿ'ಯು ಆತನನ್ನು ಇನ್ನಷ್ಟು ಬೆಳಕಿಗೆ ತಂದು ಪ್ರತಿಯೊಬ್ಬನೂ ಆತನನ್ನು ಪ್ರೀತಿಸುವಂತೆ ಮಾಡಿ ಆತನನ್ನಾರೂ ಮರೆಯದಂತೆ ಮಾಡಿತು.

ಯಾವುದೇ ತರದ ಪಾತ್ರವನ್ನೂ ವಹಿಸಿ ಪ್ರಖ್ಯಾತಿಯನ್ನು ಗಳಿಸಬಲ್ಲ ನಟನೆಂದರೆ ಸೈಗಲ್ ಒಬ್ಬನೇ ಎಂದು ಧೈರ್ಯವಾಗಿ ಹೇಳಬಹುದು. ಚಂಡಿದಾಸ್-ದೇವದಾಸ್ ಚಿತ್ರಗಳಲ್ಲಿ ಹೃದಯ ನಡುಗಿಸುವ ಪಾತ್ರವಹಿಸಿ ಪ್ರೇಕ್ಷಕರ ಮನವನ್ನು ಚುಚ್ಚಿ-ಹೊಡೆದೆಬ್ಬಿಸಿ ಕನಿಕರವನ್ನೂ ಮರುಕವನ್ನೂ ತುಂಬಿದ ಸೈಗಲ್ 'ಕ್ರೋಧಪತಿ' ಚಿತ್ರದಲ್ಲಿ ಅಭಿನಯಿಸಿ ಜನರ ಮನವನ್ನು ಆನಂದಸಾಗರದಲ್ಲಿ ಮುಳುಗಿಸಿದ್ದಾನೆ. ಅದೇ "ಎಕ್ಸ್‌ಕ್ಯೂಸ್ ಮಿ ಸರ್" ಎಂಬ ಹಾಸ್ಯಚಿತ ದಲ್ಲಿ ಜಗತ್ಪ್ರಖ್ಯಾತ ಹಾಸ್ಯಗಾರರಲ್ಲೊಬ್ಬನಾಗಿ ಮೆರೆದಿದ್ದಾನೆ. ಹಾಡುಗಾರಿಕೆಯಲ್ಲೂ ಅದೇ. ಹೃದಯವನ್ನು ಬಿರಿಸಬಲ್ಲ, ಪ್ರೇಮಸುಧೆ ಸುರಿಸಬಲ್ಲ ನಗುವಿನ ಹೊಳೆ ಹರಿಸಲೂ ಬಲ್ಲ. ಅಂತೂ ಸೈಗಲ್ ಸರ್ವಶ್ರೇಷ್ಠ ನಟ. ಅದರಿಂದಲೇ ಭರತಖಂಡದ ಇತರ ನಟರನ್ನೆಲ್ಲಾ ಹಿಮ್ಮೆಟ್ಟಿ ಮುಂದೆ ನಿಂದಿರುವನು. ಎಲ್ಲರ ಮನಹೊಕ್ಕು ಭಾವತಂತಿಯನ್ನು ಮಿಾಂಟಿ ಎಲ್ಲರನ್ನು ತನ್ನವರನ್ನಾಗಿ ಮಾಡಿಕೊಂಡಿರುವನು.

ಇದೀಗ ತನ್ನ ಹೊಚ್ಚ ಹೊಸ ಚಿತ್ರವಾದ ಪೂಜಾರಿಣಿಯಲ್ಲಿ ತನ್ನ ಹಿಂದಿನ ಅಭಿನಯಗಳನ್ನೆಲ್ಲಾ ಮಿಾರುವ ಅಭಿನಯವನ್ನು ತೋರಿದ್ದಾನೆ. ಪ್ರೇಕ್ಷಕರ ಹೃದಯಕ್ಕೆ ಶಕ್ತಿ ಎಂಬುದೊಂದಿದ್ದರೆ ಅದೆಷ್ಟರ ಮಟ್ಟಿಗಿದೆಯೋ ಎಂದು ನೋಡುವ ಹಂಬಲದಿಂದ ಅದನ್ನು ಹಿಂಡುವ ಸಾಹಸಕ್ಕೆ ಕೈ ಹಚ್ಚಿದ್ದಾನೆ. ತಾನು ತನ್ನ ಪಾತ್ರದ ಅಂತರಾಳವನ್ನು ಹೊಕ್ಕು ಅದರಲ್ಲಿ ಹುದುಗಿರುವ ನೈಜಭಾವವನ್ನು ಮಥಿಸಿ ತೆಗೆದು ಜನತೆಗೆ ತೋರುವ ಸಾಹಸದಲ್ಲಿ ಮಿಲಿಯಾಂತರ ಪ್ರೇಕ್ಷಕರ ಹೃದಯಗಳ ಶಕ್ತಿಯನ್ನು ಪರೀಕ್ಷಿಸಿದ್ದಾನೆ. ಮಿಲಿಯಾಂತರ ಮಂದಿಯನ್ನು ತನ್ನವರನ್ನಾಗಿ ಮಾಡಿಕೊಂಡು ಕಲಾದೇವಿಗೆ ಅದಾರಿಂದಲೂ ಸಾಗದ ಅಭಿನಯಕಲಾಶ್ರೇಷ್ಠತೆಯ ಕಾಣಿಕೆಯನ್ನೊಪ್ಪಿಸಿದ್ದಾನೆ.

ಮುಂದಿನವಾರ: ಶಾಂತಾ ಆಪ್ಟೆ.

THE

PANGAL NAYAK BANK

LIMITED.

ESTABLISHED 1920.

Paid up Capital: Rs. 1,82,100/-

***Head Office*: UDIPI.**

Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 25/1937

1. ಶ್ರೀನಿವಾಸ ವೈದ್ಯ, 2. ಸೀತಾರಾಮ ವೈದ್ಯ, ವೆಂಕಟಾಚಲ ವೈದ್ಯನ ಮಕ್ಕಳು, ತೆಕ್ಕಟ್ಟೆ ಗ್ರಾಮ.

ಅರ್ಜಿದಾರರು.

ಮತ್ತು

1. ಶೇಷಗಿರಿ ವೈದ್ಯ, 2. ಕೃಷ್ಣಯ್ಯ ವೈದ್ಯ, ಸದರೀ ವೆಂಕಟಾಚಲ ವೈದ್ಯನ ಮಕ್ಕಳು, ಎದ್ರಿರು.

1ನೇ ಎದ್ರಿಯು ಬೆಂಗಳೂರು ಸಿದ್ದಿಕಟ್ಟೆ ಪೋಲೀಸ್ ರೋಡ್ ನಂಬ್ರ 72ನೇ ಮನೆಯಲ್ಲಿಯೂ, 2ನೇ ಎದ್ರಿಯು ಕನೂರಿನಲ್ಲಿಯೂ, ಇರುತ್ತಾರೆ.

ಇವರೊಳಗೆ

ಎದ್ರಿರಿಗೆ ವ ಯಾವತ್ತೂ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ಅರ್ಜಿದಾರರು ವ ಎದ್ರಿರ ತಂದೆಯವರು 1933ನೇ ಇಸವಿ ಮಾರ್ಚಿ ತಿಂಗಳ ಶುರುವಿನಲ್ಲಿ ತೆಕ್ಕಟ್ಟೆ ಗ್ರಾಮದಲ್ಲಿ ಮೃತಪಡುವ ಮುಂಚೆ ತಾ. 25-2-'33 ರಲ್ಲು ಬರದಿಟ್ಟ ರಿಜಿಸ್ತ್ರೀ ವಿಲು ನಾಮೆಯ ಮೇರೆಗೆ ಅವರ ಹಕ್ಕಿನ ಎಲ್ಲಾ ಹಣಗಳನ್ನೂ ವಸೂಲು ಮಾಡುವ ಹಕ್ಕು ಅರ್ಜಿದಾರರಿಗೆ ಬಂದಿರುವುದರಿಂದ ಆ ಕುರಿತು ತಮಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರರು ದಾಖ್ಲೆ ಮಾಡಿದ ಮೇಲಿನ ಅರ್ಜಿಯನ್ನು ತಾ. 14-7-1937ಕ್ಕೆ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಠನವಿ ಇಟ್ಟಿರುವುದರಿಂದ ಆಕ್ಷೇಪ ಇರುವವರು ಸದರೀ ದಿವಸ ಮೇಲ್ಕಂಡ ಸಮಯಕ್ಕೆ ಮಜ್ಕೂರು ಕೋರ್ಟಿನಲ್ಲಿ ಹ್ಯಾಜೀರುಮಾಡಿಕೊಳ್ಳಬಹುದು ಎಂಬ ಸಂಗ್ತಿಯನ್ನು ಈ ಮೂಲಕ ತಿಳಿಯಪಡಿಸಿಯದೆ.

(*Sd*). **A. V. N. Hebbar,**

Pleader for Petitioner.

Kundapur, 23—6—1937.

ಶಾಲೆಗಳಿಗೆ ಬೇಕಾಗುವ

ಎಲ್ಲಾ ತರದ ರಿಜಿಸ್ಟ್ರಿಗಳೂ, ಫಾರ್ಮುಗಳೂ ನಮ್ಮಲ್ಲಿ ಸುಲಭ ದರದಲ್ಲಿ ದೊರೆಯುತ್ತವೆ.

ನವಭಾರತ ಬುಕ್ ಡಿಪೊ,

ಉಡುಪಿ.

ಅಂಗಸಾಧನೆ

ಲೇಖಕ:
ಶ್ರೀ! ಪಿ. ಶೀನ ಶೆಟ್ಟಿ, ಉಡುಪಿ.

ಆರೋಗ್ಯ ಮತ್ತು ಶಕ್ತಿಯು ಐಹಿಕ ಜೀವನದ ಅಮೂಲ್ಯರತ್ನಗಳು. ಶಾರೀರಕ, ಮಾನಸಿಕ, ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಸಂಪತ್ತುಗಳನ್ನು ಹೊಂದಲು ಒಂದೇ ಒಂದಿರುವ ಸಾಧನವು ಆರೋಗ್ಯ ಬಲವು. ಈ ಸಾಧನವಿಲ್ಲದ ಜೀವನವು, ಮಾನವನಿಗೆ ಹೊರಲಾರದ ಹೊರೆಯಾಗಿ, ಅನುಭವಿಸಲು ಕಹಿಯಾಗಿ ತನ್ನ ಭಾವೀಭಾಗವೇಸಾರ ರಹಿತವಾಗಿ ಪರಿಣಮಿಸುವುದು. ಸುಖಮಯ ಸಂಸಾರವು ಕೂಡ ಯಾತನಾ ತರಂಗಗಳ ಮಧ್ಯೆ ಮುಳುಗೇಳುತ್ತಿರಬೇಕಾಗುವುದು. ಮಹತ್ವವಾದ ಮನೋಗತವು ಜೀವನವು ಸರಳಮಾರ್ಗವನ್ನು ಹೊಂದದೆ ನಡು ನಡುವೆ ತೊಡಕುಗಳ ಮೆಟ್ಟಿಲುಗಳನ್ನು ಹತ್ತಿಳಿಯಬೇಕಾಗುವುದು.

ಮನುಷ್ಯನು ತನ್ನ ಇಹಲೋಕದ ಸುಖಮಯ ಜೀವನದಲ್ಲಿ ಆರೋಗ್ಯಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟರೆ ಮಾತ್ರವೇ ಅವನಿಗೆ ಜೀವನದ ಮೇಲ್ಮೆಯು ತಾನಾಗಿ ತಿಳಿಯುವುದು. ಬಲಿಷ್ಠರಾಗಿ, ಸ್ಥೂಲದೇಹದಿಂದ ಕಷ್ಟಪರಂಪರೆಗಳನ್ನು ಕೆಣಕಿ ತಮ್ಮನ್ನು ತಾವು ಕಾದುಕೊಂಡು ಸ್ವಾಭಿಮಾನಿಗಳಾಗಿ, ಇಂದ್ರಿಯ ದಮನಮಾಡಿ, ಕಳೆಗುಂದದ ಮುಖದಿಂದ ಪ್ರಫುಲ್ಲಿತರಾಗಿ ಸ್ವಾತಂತ್ರ್ಯ ಜೀವನವನ್ನು ಮಾಡುತ್ತಿದ್ದ ನಿರೋಗಿಗಳಾದ ನಮ್ಮ ಹಿರಿಯರು ಎಲ್ಲಿ? ರೋಗಿಷ್ಠರಾಗಿ, ನಿಷ್ಪ್ರಾಣಹೊಂದಿ, ಕಳೆಗುಂದಿದ ಮುಖದಿಂದ ಅಶಕ್ತವಾದ ಜ್ಞಾನತಂತುವಿನಿಂದ, ಮಾತುಮಾತಿಗೆ ಕೋಪ ಬರುವ, ಅಲ್ಪಕಷ್ಟಕ್ಕೆ ಭೀತರಾಗಿ ನಮ್ಮ ತನುಧನಗಳನ್ನು ಕಾಪಾಡಲು ಪರರ ಆಶ್ರಯವನ್ನು ಕಾಯುವ ಪರತಂತ್ರರಾದ ನಾವೆಲ್ಲಿ? ನವಯುಗದ ನವಸುಧಾರಣೆಯ ನವೀನ ಜನಾಂಗಕ್ಕಾದರೋ, ತಮ್ಮ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಅಲ್ಲದೆ ಶಕ್ತಿಯನ್ನು ಸಂಪಾದಿಸಲು ವ್ಯಾಯಾಮವು ಮುಖ್ಯಸಾಧನವಾಗಿರುವುದು.

ಅದಲುಬದಲಾಗಿರುವ ಈಗಿನ ವಾತಾವರಣದಲ್ಲಿ ಮನುಷ್ಯನ ಪರಿಸ್ಥಿತಿಗಳು ದಿನೇ ದಿನೇ ಅಭ್ಯಂತರವನ್ನು ಹೊಂದುತ್ತಿರುವುವು. ಮನುಷ್ಯನ ಜೀವನವು ದಿನ ಹೋದಂತೆ ಕಷ್ಟಪರಂಪರೆಗಳಿಗೆ ಎಡೆಯಾಗುವುದು. ಪಟ್ಟಣದಲ್ಲಿ ಜನತೆಯು ಹೆಚ್ಚಿ ಪ್ರಕೃತಿಯ ನಿಯಮಗಳು ದೂರವಾಗುತ್ತಿರುವುವು. ಮಾನಸಿಕ ಶ್ರಮಗಳು ಹೆಚ್ಚುತ್ತಿರುವುವು. ಸಾವಿರಾರು ಜನರು ತಮ್ಮ ವೃತ್ತಿಗಳನ್ನು ರೋಗಗ್ರಸ್ತರಾಗಿ ಮಾಡುತ್ತಿರುವರು. ಮಾತೃಭೂಮಿಯು ತನ್ನ ಮುಖ್ಯಧ್ಯೇಯವಾದ ಸ್ವಾತಂತ್ರ್ಯವನ್ನು ಕಷ್ಟಪರಂಪರೆಗಳಿಂದ ಪಡೆಯಬೇಕಾಗಿದೆ. ಅವಳ ಪುತ್ರರಾದ ನಾವು ಶಾರೀರಕ ಸಾಧನೆಗಳಿಗಾಗಿ ಯಾವ ಒಂದು ವಿಷಯದಲ್ಲಿಯೂ ಪರಕೀಯರ, ಪರಜನಾಂಗದವರ, ಹಂಗಿಗೊಳಗಾಗಬೇಕೆಂದಿಲ್ಲ. ಮುಖ್ಯವಾಗಿ ನಮ್ಮಲ್ಲಿ ಪ್ರಚಾರವಿರುವ ಸಾಧನಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿತ್ಯಪೂರ್ಣಕ್ರಮದಂತೆ ಸಾಧಿಸಿದರಾಯಿತು.

ನಮ್ಮಲ್ಲಿಯೇ ಜನ್ಮವೆತ್ತಿ, ನಮ್ಮವರೇ ಆಗಿರುವ ನಮ್ಮ ಮಹಾಪುರುಷರುಗಳನ್ನು ಮೆಚ್ಚಿಗೊಳಿಸಿದ ಯೋಗಾಸನವು ತನಗೆ ಸರಿಸಮಾನವಾದ ಸಾಧನವು ಲೋಕದಲ್ಲಿ ಬೇರೊಂದಿಲ್ಲವೆಂದು ಧೈರ್ಯವಾಗಿ ಹೇಳುತ್ತಿರುವುದು. ಇದಕ್ಕೆ ಕುಂಜವನದಲ್ಲಿಸ್ವಾಮಿ ಕುವಲಯಾನಂದರು ಪರೀಕ್ಷಿಸಿ, ಸಾಧಿಸಿ, ಯೋಗಾಸನಗಳ ಮಹತ್ವವನ್ನು ಪ್ರಚಾರಪಡಿಸಿದುದು ಸಿದ್ಧಾಂತವಾಗಿರುವುದು. ಇತ್ತೀಚೆಗೆ ಜನತೆಯಲ್ಲಿ ಶಾರೀರಕ ಬಲವು ಎಷ್ಟು ಕುಗ್ಗಿದ್ದರೂ, ನಮ್ಮ ಹಿಂದೂಸ್ಥಾನದ ಮಲ್ಲಯುದ್ಧಪ್ರವೀಣರು ತಮ್ಮ ಸಾಹಸ ಶಕ್ತಿಗಳಿಂದ ಇಡೀಜಗತ್ತನ್ನೇ ಬೆರಗುಗೊಳಿಸಿರುವರು. ತಮ್ಮ ಆ ಶಾರೀರಕ ಸಾಧನೆಯ ಒಂದಂಗವಾದ ಕುಸ್ತಿಯಾಟದಲ್ಲಿ ಹಿಂದೂಸ್ಥಾನವನ್ನು ಮಿಗಿಲೆನಿಸುವ ದೇಶವು ಬೇರೊಂದಿಲ್ಲವೆಂದು ಸಾಧಿಸಿದ ಆ ಜಗಜಟ್ಟಿಯೆಂಬ ಮಾನ್ಯತೆಯು ಗಾಮನಿಗೆ ಸಲ್ಲಬೇಕಾಗಿದೆ.

ಕಾಂತಿಯುಕ್ತವಾದ ಮುಖ, ಶೋಭಿಸುತ್ತಿರುವ ಕಣ್ಣುಗಳು, ಪುಷ್ಟಿಯಾದ ಕುತ್ತಿಗೆ, ಅಗಲವಾದ ಭುಜಗಳು, ಉಬ್ಬಿರುವ ಎದೆ, ತೆಳುವಾದ ನಡು, ತುಂಬಿದ ತೊಡೆಗಳು, ಬಲವಾದ ಮೀನಖಂಡಗಳು, ಅಲ್ಲದೆ, ತುಂಬಿ ತುಳುಕುತ್ತಿರುವ ರಕ್ತ, ಉಬ್ಬಿ ಶೋಭಿಸುತ್ತಿರುವ ಸ್ನಾಯುಗಳು, ಮತ್ತು ಕೆಲಸದ ಮೇಲಣ ಸ್ಫುರಣೆ ಇವೆಲ್ಲವೂ ಕುಸ್ತಿಯಾಡುವವನಲ್ಲಿರುವ ಗಳಿಸಿದ ವಸ್ತುಗಳು. ಸಮನಾಗಿ ಕ್ರಮನಾಗಿ ಒಬ್ಬ ಪುರುಷನು ದಿನಕ್ಕೆ ಅರ್ಧತಾಸಿನಂತೆ ಜಟ್ಟಿಕಾಳಗವನ್ನು ಮಾಡುತ್ತಾ ಬಂದರೆ, ಅವನಿಗೆ ಅದೊಂದೇ ಸಾಧನೆಯು ಆಯುರಾರೋಗ್ಯವನ್ನು ಕೊಡಲು ಸಾಧ್ಯವಾಗುವುದು. ಅಂತಹ ಮನುಷ್ಯನೇ ತನ್ನ ಜೀವಮಾನವನ್ನು ಆನಂದದಿಂದ ಕಳೆಯುವನು.

ವ್ಯಾಯಾಮದ ಇತರ ಅಂಗಗಳಲ್ಲಿಯೂ ಭಾರತೀಯರು ಹೆಸರನ್ನು ಪಡೆದು ಲೋಕವಿಖ್ಯಾತರಾಗಿರುವರು. ಪ್ರೊ॥ ರಾಮಮೂರ್ತಿ, ಭೀಮಭವಾನಿ, ಗೋಸ್ವಾಮಿ ಮೊದಲಾದವರು ಪ್ರಖ್ಯಾತರು. ಪ್ರೊ. ರಾಮಮೂರ್ತಿಯವರು ತನ್ನ ಎಣೆಯಿಲ್ಲದ ಶಕ್ತಿ ಸಾಹಸಗಳನ್ನು ಇಂಗ್ಲೆಂಡಿನಲ್ಲಿಯೂ ಪ್ರದರ್ಶಿಸಿ ಅಲ್ಲಿಯ ಬಲಿಷ್ಠ ಪುರುಷರ ಮೆಚ್ಚುಗೆಗೆ ಪಾತ್ರರಾಗಿರುವರು.

ಮನುಷ್ಯನು ತನ್ನ ಏಳಿಗೆಗೆ ಅನೇಕ ಕಾರ್ಯಗಳನ್ನು ಸಾಧಿಸಬೇಕಾಗಿದೆ. ಜಗತ್ತಿನಲ್ಲಿ ತನ್ನ ಮೇಲ್ಮೆಯನ್ನು ಒಂದಲ್ಲದಿದ್ದರೊಂದು ಬಲದಿಂದಲೇ ಸಾಧಿಸಬೇಕಾಗಿದೆ. ತನ್ನ ವಿಧ ವಿಧ ಕಾರ್ಯಸಾಧನೆಗಾಗಿ ತನಗನುಕೂಲವಾದ ಅನೇಕ ವಿಧದ ಬಲಗಳನ್ನು ಮಾನವನು ಉಪಯೋಗಿಸುವನು. ಕಾರ್ಯಗಳ ಮರ್ಮವನ್ನರಿತು ತಕ್ಕುದಾದ ಬಲವನ್ನು ಪಯೋಗಿಸಿ ಅಂತ್ಯದಲ್ಲಿ ಶರೀರಬಲವು ಕುಂದಿದರೆ ಆಗ ಮಾತ್ರ ಗಳಿಸಿದ ಹಣವು ಅನ್ಯರ ಪಾಲಾಗಿ ಜೋಳುಮೋರೆಯಾದಂತೆಯೇ ಸರಿ. ಆದುದರಿಂದ ಪ್ರಕೃತಿಯಲ್ಲಿ ಯಾವ ಬಲವೇ ಮೇಲುಗೈಯ್ಯಾಗಿದ್ದರೂ ತಳಹದಿಯು ಮಾತ್ರ ಆರೋಗ್ಯಬಲವಾಗಿರುವುದು. ಅಂದ ಮೇಲೆ ಆರೋಗ್ಯವೆಂದರೇನು? ಆದಾರಲ್ಲಿರಬಹುದು? ತುಂಬಿ ಹರಿಯುತ್ತಿರುವ ಚೈತನ್ಯ, ನಾಡಿ ನಲಿಯುತ್ತಿರುವ ರಕ್ತಚಲನೆ, ಅಳೆಯಲಾರದ ಶಕ್ತಿ, ಲೆಕ್ಕಿಸದಷ್ಟು ಉಲ್ಲಾಸ, ಸತ್ಯದಮೇಲಣ ದೃಢಭಕ್ತಿ, ತಪ್ಪಿಸಲಾರದ ದೀನಭಾವ, ನಿರಹಂಕಾರ, ಉತ್ತಮ ಧ್ಯೇಯ, ತೀಕ್ಷ್ಣಬುದ್ಧಿ, ಘನವಾದ ಸರಸತೆ, ಕೆಲಸದ ಮೇಲಣ ಪ್ರೇಮ, ಮಹತ್ವವಾದ ಗುಣ, ಚಿತ್ತಾಕರ್ಷಕ ಪುರುಷತ್ವ, ದೀರ್ಘಾಯುಷ್ಯ. ಸ್ವಾತಂತ್ರ್ಯಪ್ರೇಮ, ತಾಳ್ಮೆ ಮತ್ತು ಕಷ್ಟಸಹಿಷ್ಣುತೆ ಇವುಗಳೆಲ್ಲವೂ ಆರೋಗ್ಯಶಾಲಿ ಪುರುಷರಲ್ಲಿ ಇರತಕ್ಕ ಕೆಲವು ಗುಣಗಳು.

ಸಮಸ್ತ ಮಾನವಕೋಟಿಯೂ ತಮ್ಮ ನಿತ್ಯಕರ್ಮಗಳಲ್ಲಿ ಅಂಗಸಾಧನೆಯನ್ನೂ ಒಂದು ಕರ್ಮವಾಗಿಟ್ಟುಕೊಂಡು ಭಾವೀ ಜೀವನವನ್ನು ಸುಖಮಯವಾಗಿ ಕಳೆಯಬೇಕೆಂದು ಸಾಧಕನ ಸದುದ್ದೇಶವಾಗಿರುವುದು.

ಸುಸಮಯ! ಹಣ ಸಂಪಾದಿಸಿರಿ!!

ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್
ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೋನೋಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವುದಕ್ಕೆ ನೋಡಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer Dr. D. N. JASANI, Vitalbhai Patel Road, BOMBAY 4

ಕಿರಿಯರ ಪ್ರಪಂಚದ
ಪುಸ್ತಕಗಳು.

೧	ನಾಡಕಥೆಗಳು	೦	೨	೦
೨	ನುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ ...	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಧುವನ ...	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦
೯	ಹೆಂಡ್ತಿ ಗಂಡನಾದರೆ!	೦	೪	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು
ದೊರಿಯದೆ ಪೇಚಾಡುವಿರೇಕೆ?

ಇನ್ಸೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು

ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

ಅಖಿಲ ಕನ್ನಡ ನಾಡಿಗೆ
ಪ್ರೀತಿಯಾಗಿರುವ

ಮಾಸ] ಕಥಾಕುಂಜ [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

CHEAPEST SAFEST INDUSTRIAL
INSURE WITH & REPRESENT
RANJIT
BIMA Co. Ltd. AMRITSAR.
APPLY FOR HONOURABLE JOB & DECENT SALARY.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು ಇನಾಮುಗಳು.

THIS MAN
WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ ತಸಾಮಾನುಗಳು 1 ಆಣೆಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾಮ್ಲಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳ, ಧಾವಳಿ, ನಾಮರ್ಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಮಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ಮಡಲು ಸಾದಾ 16ಮೊಳದ ಶೀರೆ 1ಕ್ಕೆ ರೂ. 16 ರಿಂದ ರೂ. 35ರ ವರೆಗೆ, ಅರೆ ಕಡಿಮೆ 16ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ. 16, ಖಣ 1ಕ್ಕೆ ರೂ. 1¼ರಿಂದ ರೂ 10ರ ವರೆಗೆ, ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ



ಧರ್ಮಾರ್ಥ
ಬಹುಮಾನಗಳು
1-4-0ಗೆ !
--- ಯಾರಿಗೆ? ---

ರೂಪಾಯಿ 1—4—0 ಕೊಟ್ಟು 14 ಸೀಸೆ ಒಟ್ಟೋ ರೋಸ್ಡ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ—3 ಡಮ್ಮಿ ರಿಸ್ಟ್‌ವಾಚುಗಳು; 1 ಕೈಲ್ವೆಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಶ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್; 1 ಜತೆ ಗುಬ್ಬಿ, 1 ಪೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲ್ಯಾಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. ಇಂದೇ ಆರ್ಡರು ಕೊಡಿರಿ.

Bengal Watch Co.,
Post Box No. 12214, CALCUTTA

The Combined Booking Agency
AND
The Joint Booking Office
MANGALORE, SOUTH KANARA.

— ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ —

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ—ಚಾರ್ಮಾಡಿ — ಕಾರ್ಕಳ
ಉಜ್ರೆ (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ) — ಉಡುಪಿ
ಮಂಗಳೂರ್ — ಕುಂದಾಪುರ
ಪುತ್ತೂರು — ಮೂಡಬಿದ್ರೆ
ಮೂಲ್ಕಿ — ಗಂಗೊಳ್ಳಿ

ಜಿಲ್ಲೆಯ ಹೊರಗೆ---

ಮಡಿಕೇರಿ, ಮೈಸೂರು, ಸಕಲೇಶಪುರ, ಚಿಕ್ಕಮಗಳೂರು, ಮೂಡಗೆರೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿ ಗೃಹಗಳು ನಿರ್ಮಿಸಲ್ಪಡುವುವು. ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜ್ಯೋಂಟ್ ಮನೇಜರರಿಗೆ ತಿಳಿಸಿರಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲಾಯಿಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ ಪ್ರೊಸ್ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಅಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| ಸುಮತೀ ಬಾಯಿ,
ಬಿ. ಎ. ಎಲ್. ಟಿ., ಎಫ್. ಓ. ಎಮ್. ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್-

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯಾಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯಾಷಧಗಳು ದೊರೆಯುತ್ತವೆ.
ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

The Coondapoor Bank, Ltd.,

Head Office:- **Coondapoor.** Branch Office.-**Brahmavar.**

Beg to announce that a new Branch has been opened at SHANKARANARAYANA on 4-6-37.

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ ಇಲ್ಲಿ ಜೂನ್ ತಾ. 4ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ.
ಚಾಲ್ತಿ ಠೇವಣಾತಿಗಳು ಸಾ.ಶೆ.2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ.ಶೆ 4,
ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ 4
6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5%,
1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5½%
2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.
ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ ಭಂಗಾರದ ಈದಿನಮೇಲೂ ಸಾಲದೊರೆಯುವುದು.
ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. | N. Sheshagiri Rao, ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೊಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೊಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದ ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪೆನಿ,
೩. ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜಿ. ಟಿ. ಮದರಾಸ್.

ಬೋಡು

ತುಳು ಪುಸ್ತಕಲೆನ್ ಮಾರ್ಪೆರ್ಗ್
ತುಳುನಾಡ್‌ಡ್ ಅಲ್ಪಲ್ಪ
ಏಜೆಂಟೆರ್ ಬೋಡು.
ಯೋಗ್ಯ ಉಮೇದುವಾರುಲು
ಅರ್ಜಿ ಪಾಡೊಲಿ.

ಎಸ್. ಯು. ಪಣಿಯಾಡಿ
ತುಳು ಸಾಹಿತ್ಯ ಮಾಲೆ
ಉಡುಪಿ

ANNOUNCEMENT

WE ARE GOING TO PUBLISH

MERCHANTS' HAND BOOK

AN
INEVITABLE HAND BOOK
FOR MERCHANTS
USEFUL FOR
DAILY REFERENCE

Reserve advertisement pages in this book.

Advertisement Manager
SUPPLY AGENCY LTD.,
UDIPI

USE
SUVASINI AGARBATHIES
(REGISTERED)

SRI BHARATHA VASTU MANDIRA, UDIPI.

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618 ೨೦ ಪುಟ ೨ಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc.
APPLY TO THE MANAGER



ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣು ಮುಂದಿರಿಸಿ
ಸಮಾಜದೇಳಿಗೆಯು
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL. XVI-NO. 44 8-7-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೮ ಜುಲಾಯಿ, ೧೯೩೭ [ಸಂಚಿಕೆ ೪೪

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I.)

BRANCHES:

1 BOMBAY
2 BANGALORE CITY
3 BELGAUM
4 BYADGI
5 BELLARY
6 ADONI
7 HOSPET
8 TALIPARAMBA
9 UPPINANGADI
10 KASARGODE
11 PAYYANUR
12 KANHANGAD
13 KARKALA
14 NANDYAL
15 PRODATTUR
16 TADPATRI
17 HUBLI
18 GADAG
19 KARWAR
20 KUMTA
21 ANKOLA
22 HONAVAR
23 BHATKAL
24 BRAHMAVAR
25 HUNGARCUTTA
26 SIRSI
27 SAGAR
28 COONDAPOOR
29 UDIPI
30 MANGALORE
31 CANNANORE

BEG TO ANNOUNCE

that the Syndicate has been included in the list of Scheduled Banks under the Reserve Bank of India Act.

Non-Scheduled Banks, other companies and company promoters may take advantage of this for depositing their amounts with the Syndicate under the Indian Companies Act 1936.

Paid up Capital	Rs. 3,48,400
Reserves	„ 1,92,390
Deposits exceed	„ 24 lakhs
Total Working Funds exceed	„ 43 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕನಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇವರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦**

೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.
ಪತ್ತೆ:—ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

SUSHEELA & CO., KOLLEGAL. (S. INDIA.)

1000 ರೂಪಾಯಿಗಳ ಬಹುಮಾನ

ಪ್ರತಿ ಎರಡು ಕೂಪನ್‌ಗಳಿಗೂ ಒಂದು ಕೂಪನ್ ಉಚಿತ.

ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ **16-8-1937**. ಫಲಿತಾಂಶವನ್ನು ಪ್ರಕಟಿಸುವ ದಿನ **20-8-1937**.

ಮೂರು ಕೂಪನ್‌ಗಳೂ ಸರಿಯಾಗಿ ಕಳುಹಿಸಿದವರಿಗೆ **500** ರೂಪಾಯಿಗಳು.

ಒಂದು ಕೂಪನ್ ತಪ್ಪುಳ್ಳವರಿಗೆ **200** ರೂಪಾಯಿಗಳು, ಎರಡು ಕೂಪನ್ ತಪ್ಪುಳ್ಳವರಿಗೆ **100** ರೂಪಾಯಿಗಳು.

ಇತರ ಬಹುಮಾನಗಳು.

3 ಕೂಪನ್‌ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ **125** ರೂಪಾಯಿಗಳು. ಹೆಚ್ಚಾಗಿ ಕೂಪನ್‌ಗಳು ಕಳುಹಿಸಿದವರಿಗೆ **75** ರೂಪಾಯಿಗಳು.

		17		

ಸುಶೀಲ ಅಂಡ್ ಕೋ, ಕೊಳ್ಳೇಗಾಲ.
ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ.

ಹೆಸರು..
ವಿಳಾಸ..
....
ಪೋಸ್ಟಲ್ ಮಣಿಯಾರ್ಡರ್ ನಂಬರು..
ಸ್ಟಾಂಪುಗಳು.................... ತಾರೀಕು.................... 1937.

ಉತ್ತರಗಳನ್ನು ಕಂಡುಹಿಡಿಯುವ ಕ್ರಮ:—ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡವಾಗಿ, ಮೂಲೆಗಳಿಂದ 85 ಬರುವಂತೆ, ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಶಾಯಿಯಲ್ಲಿ ಬರೆದು ಕಳುಹಿಸಬೇಕು.

ನಿಬಂಧನೆಗಳು

ಪ್ರವೇಶ ಧನ ಕೂಪನ್‌ಗೆ 0—8—0 ಆಣೆ. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲಿ ಮಣಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು. ಉತ್ತರಗಳು 16-8-1937ರೊಳಗೆ ನಮ್ಮ ಕೈಸೇರಬೇಕು. ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಾಸುಮಾಡಲಾಗುವುದಿಲ್ಲ. ಮತ್ತು ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲಾಗುವುದು. ಮೆನೇಜರರ ತೀರ್ಮಾನವೇ ಕಡೇ ತೀರ್ಮಾನ. ಬಹುಮಾನಗಳನ್ನು ಪಡೆದವರ ಹೆಸರುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ತಮ್ಮ ವಿಳಾಸದೊಡನೆ 0—1—0 ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಶರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್: ಸುಶೀಲ ಅಂಡ್ ಕೋ., ಕೊಳ್ಳೇಗಾಲ.

ರಷ್ಯದ ನೂತನ ನಿರ್ಮಾಣ

ಪ್ರೇಮವು ಕೇವಲ ಶಾರೀರಕ ಸಂಬಂಧವೇ? ಪ್ರೇಮಭಾವ, ಪ್ರೇಮಾದರ್ಶಗಳು ಅಸ್ವಾಭಾವಿಕವಾದುವೇ?

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇದೇ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿಯೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.]

—ಸಂ. ನ

ಸ್ತ್ರೀಪುರುಷರೊಳಗಣ ಪ್ರೇಮಭಾವನೆಯನ್ನು ರಷ್ಯನರೊಪ್ಪುವುದಿಲ್ಲ. ಲಿಂಗ ಸಂಬಂಧಕ್ಕದು ಅವಶ್ಯವೇ ಇಲ್ಲವೆಂದು ಅವರ ಸಿದ್ಧಾಂತ. ಪ್ರೇಮಭಾವವೆಂಬುದು ಕೇವಲ ಕಾಲ್ಪನಿಕವಾದುದು. ಸ್ತ್ರೀಯು ಪುರುಷನ ಮೇಲಿನ ಪರಾವಲಂಬತೆಯ ಹೆಗ್ಗುರುತದು. ಶ್ರೀಮಂತರು ತಮ್ಮ ವಿಲಾಸಕ್ಕಾಗಿ ಸೃಷ್ಟಿಸಿರುವ ದುರಾಚಾರ. ಸ್ತ್ರೀಯು ಎಲ್ಲಾ ವಿಷಯದಲ್ಲಿಯೂ ಸ್ವಾವಲಂಬಿಯಾಗಿ ಸ್ವತಂತ್ರಳಾದಾಗ ಪುರುಷನು ಅವಳ ಮೇಲೆ ಹೊರಿಸಿರುವ ಪ್ರೇಮದಾಸ್ಯವನ್ನವಳು ಸಹಿಸುವ ಹಾಗಿಲ್ಲ. ಅದೇನೂ ನಿಸರ್ಗಸಿದ್ಧವಾದುದಲ್ಲ. ಪುರುಷನು ತನ್ನ ಅನುಕೂಲತೆಗಾಗಿ, ಮನೋರಂಜನೆಗಾಗಿ ವಿಲಾಸಕ್ಕಾಗಿ ಸೃಷ್ಟಿಸಿದ ವಸ್ತು. ಧನಿಕ ಸಮಾಜದ ಅನಾಚಾರವದು. ಅದನ್ನು ಕೊಳಕು ವಸ್ತುವಿನಂತೆ ದೂರೀಕರಿಸಬೇಕೆಂದೇ ರಷ್ಯದ ಕ್ರಾಂತಿಕಾರರ ಅಭಿಮತ. ಪ್ರೇಮವು ಶಾರೀರಕ ಸಂಬಂಧಕ್ಕಿಂತಲೂ ಹೆಚ್ಚಿನದೆಂದು ಭಾವಿಸಿಕೊಳ್ಳುವವರು ಈ ಕ್ರಾಂತಿಕಾರರ ದೃಷ್ಟಿಯಲ್ಲಿ ಅರೆ ಹುಚ್ಚರಾಗಿರುವರು. ರಷ್ಯದ ವಿಶ್ವವಿದ್ಯಾಲಯಗಳ ತರುಣ ವಿದ್ಯಾರ್ಥಿಗಳು ಲೈಂಗಿಕ ಸಂಬಂಧಕ್ಕೆ ಪ್ರೇಮವು ಅವಶ್ಯವೇ ಇಲ್ಲೆಂಬ ಭಾವನೆಯುಳ್ಳವರಿರುತ್ತಾರೆ. ಲೈಂಗಿಕ ಸಂಬಂಧದಲ್ಲಿ ಪ್ರಾಮುಖ್ಯವಾದುದೆಂದರೆ ಸ್ತ್ರೀಯು ಆರೋಗ್ಯವಂತಳಾಗಿಯೂ ರುಚಿಯಾಗಿಯೂ ಇರಬೇಕೆಂಬುದು. ಪ್ರೇಮವು ಕೇವಲ ಶಾರೀರಕ ಉತ್ತೇಜಕತೆಯಲ್ಲದೆ ಅದರಲ್ಲಿ ಭಾವಿಕತೆ ಇರುವುದೆಂಬುದು ಬರೇ ಕಲ್ಪನೆಯೆಂದೇ ರಷ್ಯದ ತರುಣ ವಿದ್ಯಾರ್ಥಿಗಳ ತರ್ಕ. ಪ್ರೇಮಭಾವವನ್ನೇ ನಿರ್ಮೂಲಿಸಿ ಬಿಡಲು ಅವರು ಸೊಂಟಕಟ್ಟಿರುತ್ತಾರೆ.

ಆದರೆ ಇದೆಲ್ಲಾ ರಷ್ಯದ ವಿಶ್ವವಿದ್ಯಾಲಯಗಳ ತರುಣರ ಮನೋವೃತ್ತಿ. ರಷ್ಯದ ಸ್ತ್ರೀಯರು ಇನ್ನೂ ನವೀನ ಭಾವನೆಯ ಪ್ರವಾಹಕ್ಕೆ ಸಿಕ್ಕಿರುವಂತೆ ತೋರುವುದಿಲ್ಲ. ಅವರ ಹೃದಯದಲ್ಲಿ ಪ್ರೇಮಭಾವವು ಸ್ಥಿರವಾಗಿ ನೆಲೆಗೊಂಡಿರುವಂತಿದೆ. ರಷ್ಯನ ಕ್ರಾಂತಿಕಾರರ ಕಾದಂಬರಿಯೊಂದರ ನಾಯಕಿಯಾದ ತಾನ್ಯಳು ಕೆಲವೇ ವರ್ಷಗಳಲ್ಲಿ 22 ವಿವಾಹಗಳನ್ನು ಮಾಡಿಕೊಂಡು ಕೊನೆಗೆ ನಿರಾಶಾಭಂಗದಿಂದ ಆತ್ಮಹತ್ಯೆಮಾಡಿಕೊಳ್ಳುವಾಗ, ಪುಷ್ಟಕಾಯನೂ ಸರಳಸ್ವಭಾವಿಯೂ ಆದ ಒಕ್ಕಲಿಗ ತರುಣನೊಬ್ಬನ ಪ್ರೇಮನಿಷ್ಠೆಯಲ್ಲಿ ಮನಶ್ಶಾಂತಿ ಪಡೆಯುವಳು. ಇನ್ನೊಂದು ಪ್ರಖ್ಯಾತ ಕಾದಂಬರಿಯಲ್ಲಿ ಹಲವು ಹುಡುಗಿಯರು ಆರಂಭದಲ್ಲಿಲ್ಲದಿದ್ದರೂ ಕೊನೆಯಲ್ಲಿ ನಿಜವಾದ ಪ್ರೇಮದ ಪ್ರಯೋಜನವನ್ನೊಪ್ಪುವರು. ಈ ಕಾದಂಬರಿಯ ಹುಡುಗಿಯೊಬ್ಬಳಾದ ವೀರಾ ಓಲ್ಸೋವಳು ವೈದ್ಯಕೀಯ ವಿದ್ಯಾರ್ಥಿನಿಯಿದ್ದು ಯಾವ ತರದ ಸಂಕೋಚವೂ ಇಲ್ಲದೆ, ವೇಶ್ಯೆಯಂತೆ ಯಾವ ಸಮಯದಲ್ಲಾದರೂ ತನ್ನ ಕೋಣೆಗೆ ಗಂಡಸರನ್ನು ಕರೆದು ಮಾತಾಡಿ ಅವರೊಂದಿಗೆ ಸಂಪರ್ಕವುಳ್ಳವಳಾದರೂ ಕಟ್ಟ ಕಡೆಗೆ, "ಹೌದು, ಪ್ರೇಮಕ್ಕಾಗಿ, ಭಾವೋದ್ರೇಕದಿಂದಾಗಿ ನಾನೊಪ್ಪುವೆನು" ಎಂಬ ಉದ್ಗಾರವೆತ್ತುವಳು. ಇವಳ ಗೆಳತಿಯಾದ ತಾನ್ಯಾಳು, ಸ್ತ್ರೀ ಸಹಜ ನಿರ್ಬಂಧಗಳನ್ನೆಲ್ಲಾ ಮೂಲೆಗೊತ್ತಿ ಲಜ್ಜೆ, ನಾಚಿಕೆ, ಪ್ರೇಮಾದರ್ಶವೆಂಬುದಲ್ಲಾ ಅರ್ಥರಹಿತವಾದುದೆಂದು ಅಪಹಾಸ್ಯ ಮಾಡುವವಳು ಕೊನೆಗೆ ತನ್ನ ಜೀವನವು ಅದೆಷ್ಟು ಶೂನ್ಯವೆಂಬುದನ್ನು ಕಂಡುಕೊಳ್ಳುವಳು. ಜೀವನ ಪ್ರೇಮ ಮತ್ತು ಕಾಮದ ಹೆಚ್ಚಿನ ಅನುಭವವೇನೂ ಇಲ್ಲದ ಕಾರ್ಖಾನೆಯ ಕೆಲಸಗಾರಳಾದ ಮರ್ಯಾಷು, ತನ್ನನ್ನು ದಕ್ಷನೂ ಪ್ರಬಲನೂ ಆದ ಮೋರೋ ಮೋರಿಸನು ಪ್ರೀತಿಸುವನೆಂಬುದರಿಂದ ಉದ್ವೇಗಗೊಳ್ಳುವಳು. ಅವನ ಪುರುಷ ಪ್ರೇಮದ ಪ್ರಭಾವವನ್ನು ವಿರೋಧಿಸಲು ಅವಳಿಗೆ ಮನಸ್ಸು ಬರುವುದಿಲ್ಲ. ಕಡೆಗೆ ಅವಳು ಅವನ ಇಚ್ಛೆಗೊಪ್ಪಿದಾಗ, ಒಂದು ದಿನ ಅವನಷ್ಟೇ ಪ್ರಭಾವಶಾಲಿಯೂ ಬುದ್ಧಿಶಾಲಿಯೂ ಆದ ಮಗನೊಬ್ಬನು ತನಗೆ ಹುಟ್ಟುವನೆಂಬ ಕಲ್ಪನೆಯುಳ್ಳವಳಾಗುವಳು. ರಷ್ಯದ ಸ್ತ್ರೀಯರ ಪ್ರೇಮ ಭಾವ, ಪ್ರೇಮಾದರ್ಶವನ್ನೆಲ್ಲಾ ಎತ್ತಿ ಹಿಡಿದು ಬರೆಯುವ ಆಧುನಿಕ ಕಾದಂಬರಿ ಅಥವಾ ನಾಟಕಕಾರರೇ ರಷ್ಯದಲ್ಲಿ ಅತ್ಯಪರೂಪ. ಪ್ರೇಮಭಾವ ಮತ್ತು ಪ್ರೇಮಾದರ್ಶದ ಕುರಿತು ರಷ್ಯದ ತರುಣರಲ್ಲೆದ್ದಿರುವ ಬಿರುಗಾಳಿಯು ಕೇವಲ ಕ್ರಾಂತಿಯ ತಾತ್ಕಾಲಿಕ ಪರಿಣಾಮವೆಂದು ಊಹಿಸಬಹುದು. ಹಳೆಯದೆಲ್ಲವನ್ನೂ ಧ್ವಂಸಿಸಿ ನಾಶಮಾಡಿ ಬಿಡಬೇಕೆಂಬ ಆತುರದ ಕ್ಷಣಿಕ ಪರಿಣಾಮವಿದು. ಕ್ರಾಂತಿಯು ವಿನಾಶಕ ದಾರಿಬಿಟ್ಟು ವಿಧಾಯಕ ಮಾರ್ಗ ಹಿಡಿಯುವಾಗ ಈ ಮನೋವೃತ್ತಿಯು ಬದಲಾಗಿ ಹಳೆಯ ಲೋಕದ ಕೆಲವು ವಿಷಯಗಳನ್ನವರು ಅನುಸರಿಸುವಂತಾಗದಿರದು.

ಕ್ರಾಂತಿಕಾರ ತರುಣರು ಎಂತಹ ಅಭಿಪ್ರಾಯವೆಬ್ಬಿಸಲಿ. ಎಂತಹ ವಿನಾಶಕ ಬುದ್ಧಿ ಬೇಕಾದರೂ ಅವರಲ್ಲಿರಲಿ. ವಿಚಾರವಂತರಾದ ರಷ್ಯದ ಕ್ರಾಂತಿಕಾರರು ಪ್ರೇಮದ ಕುರಿತು ವಿವೇಕ ಪರಿವರ್ತನೆಯುಳ್ಳವರಿರುವರು. ಸಾಮ್ಯವಾದ ಸ್ಥಾಪನಾಚಾರ್ಯರುಗಳಾದ ಲೆನಿನರೇ ಮೊದಲಾದವರು ಪ್ರೇಮವು ಕೇವಲ ಶಾರೀರಕ ಉತ್ತೇಜಕತೆಯೆಂದೇನೂ ಹೇಳಿರುವುದಿಲ್ಲ. ಶರೀರ ಶಾಸ್ತ್ರ ಮತ್ತು ಸಂಸ್ಕೃತಿಯ ಪ್ರತಿರೂಪವಾಗಿ ಲೈಂಗಿಕ ಭಾವ ಉಂಟಾಯಿತೆಂದು ಲೆನಿನರು ಹೇಳುವರು. ಸ್ತ್ರೀಪುರುಷ ಪ್ರೇಮದ ಸೌಂದರ್ಯ ಮತ್ತು ಪ್ರಭಾವದ ಕುರಿತು ಎಂಥವರು ಬಹಳವಾಗಿ ಉತ್ಪ್ರೇಕ್ಷಿಸಿರುವರು. ಪ್ರೇಮವು ಕೇವಲ ಶಾರೀರಕ ಸಂಬಂಧವಾದುದೇ ಅಲ್ಲ. ಅದು ಭಾವಿಕ ಹಾಗೂ ಸಾಮಾಜಿಕ ಪ್ರಾಮುಖ್ಯತೆಯೂ ಇದೆ ಎಂಬುದನ್ನು ಸಾಮ್ಯವಾದ ತತ್ವವೇತ್ತರೆಲ್ಲಾ ಒಪ್ಪಿರುತ್ತಾರೆ. ಅಂತೆಯೇ ರಷ್ಯದ ಕ್ರಾಂತಿಕಾರನೂ ಈಗ ಪ್ರೇಮಭಾವವನ್ನೊಪ್ಪತೊಡಗಿದ್ದಾನೆ. ಆದರೆ ಅದಕ್ಕೆ ಹೊಸರೂಪವನ್ನಿತ್ತಿದ್ದಾನೆ. ಅದು ಅವನ ಜೀವನದ ಗುರಿಯಲ್ಲ, ಅದರಲ್ಲವನು ಜೀವಿತದ ಸಾರ್ಥಕತೆಯನ್ನು ಕಾಣುವುದಿಲ್ಲ. ಪ್ರೇಮ ಧರ್ಮವೆಂಬುದನ್ನವನು ತಿರಸ್ಕರಿಸಿರುವನು. ಆದರೆ ಪ್ರೇಮವು ಮಾನವ ಜೀವಿತದ ಸುಖಸಂಪತ್ತನ್ನು ಹೆಚ್ಚಿಸುತ್ತದೆ. ಅದನ್ನು ಸತ್ವಶಾಲಿಯಾಗಿ ಮಾಡುತ್ತದೆಂಬುದನ್ನವರು ಒಪ್ಪುವರು. ಅದಕ್ಕೆ ಧಾರ್ಮಿಕ ಮತ್ತು ಸಾಮಾಜಿಕ ಸ್ವರೂಪವಿತ್ತು, ಅದರ ಗುಣಗಾನಮಾಡುವುದನ್ನವರು ಒಪ್ಪುವುದಿಲ್ಲ. ಅದು ತನ್ನ ಶಕ್ತಿಗಳ ಬಲದಿಂದಲೇ ಹೊಸ ಹೊಸ ಭಾವ ಮತ್ತು ಸತ್ವ ಪಡೆದು ಹಾರಾಡಲೆಂದೇ ರಷ್ಯದ ಕ್ರಾಂತಿಕಾರನ ಅಭಿಮತ.

ಖಾಸಗಿ ಸೊತ್ತಿನ ಮೇಲಿನ ರಷ್ಯದ ಕ್ರಾಂತಿಕಾರರ ಧಾಳಿಯು ನಿಜವಾದ ಪ್ರೇಮ ಜೀವನಕ್ಕೆ ಸಹಾಯವಾಗುವುದೆಂದೇ ಅವರ ವಾದ. ಸ್ತ್ರೀಯು ಹಿಂದಿನ ಕಾಲದಲ್ಲಿ, ತನಗೆ ರಕ್ಷಣೆಕೊಡಬಲ್ಲ ಪುರುಷನ ಮೇಲೆ ಪ್ರಣಯ ಲೀಲೆ ತೋರಬೇಕಿತ್ತು. ಆ ಮೇಲೆ ಸಮ್ಮಕಾಲದಲ್ಲೀಗ, ಅವಳು, ತನ್ನ ಸಾಂಪತ್ತಿಕ ಸ್ಥಿತಿಯು ಭದ್ರವಾಗಿರುವ ಧನಿಕನನ್ನು ಒಲಿಸಿಕೊಳ್ಳಬೇಕಾಗಿರುವುದು. ಖಾಸಗಿ ಸೊತ್ತೇ ಪ್ರಧಾನವಾಗಿರುವ ಸಮಾಜದಲ್ಲಿ ಧನದ ಆಕರ್ಷಣವು ನಿಜವಾದ ಪ್ರೇಮಕ್ಕೆ ಮೂಡ್ತ ತೊಡಕಾಗಿದೆ. ಶ್ರೀಮಂತಿಕೆಯು ತನಗೀಯುವ ಸ್ಥಾನ, ಮಾನ, ಸುಖಾನುಕೂಲತೆಗಾಗಿ ಎಷ್ಟೊಂದು ಸ್ತ್ರೀಯರು ತಮ್ಮ ಪ್ರೇಮತ್ಯಾಗ ಮಾಡುವುದಿಲ್ಲ! ಅಥವಾ ಎಷ್ಟು ಮಂದಿ ಪುರುಷರು, ಶ್ರೀಮಂತ ಪತ್ನಿಯನ್ನು ಪಡೆಯುವುದಕ್ಕಾಗಿ ತಮ್ಮ ಪ್ರೇಮವನ್ನು ಮೂಲೆಗೊತ್ತುವುದಿಲ್ಲ! ತಂದೆ ತಾಯಿಗಳು ಕೂಡಾ ಧನ ದೌಲತ್ತಿನಿಂದ ಆಕರ್ಷಿತರಾಗಿ ಎಷ್ಟು ವೇಳೆ ತಮ್ಮ ಮಕ್ಕಳ ನಿಜವಾದ ಪ್ರೇಮಾಂಕುರವನ್ನೇ ಮುರಿದು ಬಿಡುವಷ್ಟರ ನಿರ್ಬಂಧವನ್ನುಪಯೋಗಿಸುವುದಿಲ್ಲ! ಧನದಾಶೆಯಿಂದ ಪ್ರಣಯ ಭಗ್ನವಾದ ಕಥೆ, ಕಾದಂಬರಿ, ಕವನ, ನಾಟಕಗಳಿಂದ ಸಾಹಿತ್ಯವು ತುಂಬಿಹೋಗಿರುವುದು. ಆದರೆ ಖಾಸಗಿ ಸೊತ್ತೆಂಬುದೇ ನಾಶವಾಗಿ, ಧನ ಸಂಚಯವು ಪ್ರಯಾಸ ಅಥವಾ ಅಸಾಧ್ಯವಿರುವಾಗ ಹುಡುಗ ಹುಡುಗಿಯರು ಧನ, ಸ್ಥಾನಮಾನದ ಯೋಚನೆಯಲ್ಲದೆ ನಿಜವಾದ ಪ್ರೇಮ ಪ್ರೇರಣೆಯಂತೆ ವಿವಾಹವಾಗಬಹುದು. ಇದು ಹೊರತು ಆಸ್ತಿ ಬದುಕಿನ ಆತಂಗೆ ಎಡೆಯಿಲ್ಲದಿರುವಲ್ಲಿ, ಅಂದರೆ ಪ್ರೇಮವು ಅಂಕುರಿಸಿದಾಗಲೇ ನಡೆಯಲು ಸಹಾಯವಾಗುವುದು. ರಷ್ಯದಲ್ಲಿ ಹೆಚ್ಚಾಗಿ ವಿವಾಹವು ನವತಾರುಣ್ಯದಲ್ಲೇ ಅಂದರೆ 20 ವರ್ಷ ವಯಸ್ಸಾಗುವದರೊಳಗ ನಡೆಯುವುದು. ಇದರಿಂದ ಪ್ರೇಮ ಜೀವನಕ್ಕೆ ಲಾಭವಾಗುವುದೆಂದೇ ರಷ್ಯನರ ವಾದ. ರಷ್ಯದ ಸ್ತ್ರೀಯರು ಸಾಂಪತ್ತಿಕ ಸ್ವಾತಂತ್ರ್ಯದಿಂದಾಗಿ ನಿಜವಾದ ಪ್ರೇಮಕ್ಕೆ ಇನ್ನೊಂದು ವಿಜಯ ದೊರತಿದೆ. ಸ್ತ್ರೀಯು ತನ್ನ ಜೀವನ ನಿರ್ವಾಹಕ್ಕಾಗಿ ಪುರುಷನ ಮೇಲೆ ಹೊಂದಿಕೊಂಡಿದ್ದರೆ ಅವನ ತಿರಸ್ಕಾರ ಹೀಗೆಗಳನ್ನೆಲ್ಲಾ ತಾಳ್ಮೆಯಿಂದ ತಾಳಿಕೊಂಡಿರಬೇಕು. ಆದರೆ ಅವಳು ತನ್ನ ವೆಚ್ಚಕ್ಕೆ ಬೇಕಷ್ಟು ಹಣವನ್ನು ತಾನೇ ಸಂಪಾದಿಸಿಕೊಳ್ಳಬಲ್ಲಳಾದರೆ ಪುರುಷನೊಂದಿಗೆ ಸಮಾನ ಭಾವದಿಂದ ದಾಂಪತ್ಯ ಜೀವನ ನಡಿಸಬಹುದು. ಒಬ್ಬ ಗಂಡನಿಗೂ ತನಗೂ ಸರಿಹೋಗದಿದ್ದರೆ ತನಗನುಕೂಲನಾದ ಇನ್ನೊಬ್ಬ ಗಂಡನನ್ನು ವರಿಸಬಹುದು. ಇಲ್ಲಿ ಸ್ತ್ರೀಯು ಸದಾ ಪುರುಷ ದಾಸಿಯಂತಿರುವ ಅವಶ್ಯವೇ ಇಲ್ಲ. ಇಷ್ಟು ಮಾತ್ರವಲ್ಲದ ಒಬ್ಬ ಗಂಡನಿಗೂ ತನ್ನ ಹೆಂಡತಿಯೊಡನೆ ಜೀವನ ನಡಿಸುವುದು ದೊಡ್ಡ ಪೀಡೆಯಾದರೆ, ಅವನನ್ನು ಬಿಟ್ಟುಬಿಟ್ಟರೆ ಅವಳ ಗತಿ ಏನಾಗುವುದೋ ಎಂಬ ಚಿಂತೆಗೆ ಆಸ್ಪದವಿಲ್ಲ. ಅವನು ನಿಶ್ಚಿಂತೆಯಿಂದ ಅವಳನ್ನು ಬಿಟ್ಟು ಬಿಡಬಹುದು. ಇಂತಹ ಪರಿಸ್ಥಿತಿಯಲ್ಲಿ ನಿಜವಾದ ಪ್ರೇಮವಿರುವ ಸತಿಪತಿಗಳು ಮಾತ್ರವೇ ಸಾಂಪತ್ತಿಕ ಪರಾವಲಂಬನೆಯ ಗೊಡವೆಯಿಲ್ಲದ ದಾಂಪತ್ಯ ನಡಿಸಿ ಸುಖಿಸುವಂತಾಗುವುದು. ಇದು ಪ್ರೇಮದ ನಿಜವಾದ ವಿಜಯವಲ್ಲವೇ?

WANTED

Candidates for Telegraph and station Master class Allowance Rs 28 Uniform, passage and quarter free. Service essential. Rules and Entrance from ou annas eight. Director, Royal Telegraph and Ry Duties College, Bombay 14

ರೋಲ್ಡ್ ಗೋಲ್ಡ್, ನಿಕ್ಕಲ್ ಬೆಳ್ಳಿಯ, ೯ ಕ್ಯಾರಟಿನ ಗಟ್ಟಿ ಚಿನ್ನದ ರಿಸ್ಟ್ ವಾಚುಗಳು, ರೈಲ್ವೆ ಟಾಯಂ ಪಾಕೆಟ್ ವಾಚು ಮತ್ತು ಟಾಯಂಪೀಸು ಗ್ಯಾರಂಟಿ ಇದೆ.

ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ

The Manager

The Silver Jubilee Watch Co,
Post Box No. 571 BOMBAY

ಸಮಾಚಾರ ಸಂಗ್ರಹ : ಎಸೆಂಬ್ಲಿ ಸಭೆ ಕರೆಯಲ್ಪಡುವುದು; ಶ್ರೀ ರಾಜಾಜಿಯವರು ಗವರ್ನರರೊಡನೆ ಮಾತಾಡಿದರು;

* * ೧೫,೦೦೦ ಪವನು ಬೆಲೆಯ ವಜ್ರಹಾರ; ಮಿ. ಮೆಹರಾಲಿಯವರಿಗೆ ಆರು ತಿಂಗಳು ಶಿಕ್ಷೆ. * *

ಎಸೆಂಬ್ಲಿ ಸಭೆ ಕರೆಯಲ್ಪಡುವುದು

ಈ ತಿಂಗಳ ಅಂತ್ಯದೊಳಗೆ ಇಷ್ಟರ ವರೆಗೆ ಕರೆಯಲ್ಪಡದಿದ್ದ ಪ್ರಾಂತಿಕ ಎಸೆಂಬ್ಲಿ ಮತ್ತು ಕೌನ್ಸಿಲು ಸಭೆಗಳೆಲ್ಲಾ ಕರೆಯಲ್ಪಡುವವು. ಮದ್ರಾಸ್ ಪ್ರಾಂತದ ಎಸೆಂಬ್ಲಿ ಮತ್ತು ಕೌನ್ಸಿಲಿನ ಸಭೆಯನ್ನು ಮೊದಲಾಗಿ ಅಂದರೆ ಇದೇ ತಾ. 14ಕ್ಕೆ ಕರೆಯುವ ನಿರ್ಧಾರವನ್ನು ಮದ್ರಾಸ್ ಗವರ್ನರರು ಮಾಡಿರುವರೆಂದು ತಿಳಿದುಬರುತ್ತದೆ. ಪ್ರಥಮದಿನ ಎಸೆಂಬ್ಲಿ ಮತ್ತು ಕೌನ್ಸಿಲು ಮೆಂಬರರು ಪ್ರತಿಜ್ಞೆ ತೆಗೆದುಕೊಳ್ಳುವರು. ಮರುದಿನ ಎಸೆಂಬ್ಲಿಯ ಮತ್ತು ಕೌನ್ಸಿಲಿನ ಅಧ್ಯಕ್ಷ ಉಪಾಧ್ಯಕ್ಷರುಗಳ ಚುನಾವಣೆಯು ನಡೆಯುವುದು. ಅನಂತರದ ಕಾರ್ಯಕ್ರಮವೇನೂ ಇರುವುದಿಲ್ಲ. ಬಿಹಾರ್ ಎಸೆಂಬ್ಲಿ ಮತ್ತು ಕೌನ್ಸಿಲು ಸಭೆಯು ಇದೇ ತಾ. 22 ಮತ್ತು 23ರಲ್ಲು ನಡೆಯುವುದು. ಬೊಂಬಾಯಿ ಎಸೆಂಬ್ಲಿ ಸಭೆಯು ಇದೇ ತಾ. 19ಕ್ಕೂ, ಕೌನ್ಸಿಲುಸಭೆಯು 20ಕ್ಕೂ ಪೂನದಲ್ಲಿ ಕರೆಯಲ್ಪಡುವುದು. ಸಂಯುಕ್ತಪ್ರಾಂತದ ಎಸೆಂಬ್ಲಿ ಮತ್ತು ಕೌನ್ಸಿಲುಸಭೆಯು ಇದೇ ತಾ. 29ಕ್ಕೆ ನೆರೆಸಲ್ಪಡುವುದು.

ಶ್ರೀ ರಾಜಾಜಿಯವರು ಗವರ್ನರರೊಡನೆ ಮಾತಾಡಿದರು

ಜೂನ್ ತಾ. 30ರಲ್ಲು ಶ್ರೀ. ಸಿ ರಾಜಗೋಪಾಲಾಚಾರ್ಯರು ಉಟಕಮಂಡಿಗೆ ಹೋಗಿ ಮಾನ್ಯ ಮದ್ರಾಸ್ ಗವರ್ನರರೊಡನೆ ಒಂದು ಘಂಟೆಯ ವರೆಗೆ ಮಾತಾಡಿದರು. ಅವರನ್ನು ಕರೆದೊಯ್ಯಲು ಮೆಟ್ಟುಪಾಳಯಮಿಗೆ ಸರಕಾರದ ಕಡೆಯ ಮೋಟರ್‌ಕಾರೊಂದು ಹೋಗಿದ್ದುದರಿಂದ ರಾಜಾಜಿಯವರು ಗವರ್ನರರಿಂದ ಆಮಂತ್ರಿತರಾಗಿದ್ದರೆಂದು ಊಹಿಸಬಹುದಾಗಿದೆ. ಈ ಮಾತುಕತೆ ನಡೆದ ಮೇಲೆ ರಾಜಾಜಿಯವರ ಅಪೇಕ್ಷೆ ಮೇರೆಗೆ ಮೋಟರ್‌ಕಾರಿನಿಂದಲೇ ಅವರನ್ನು ಪೋದನೂರಿಗೊಯ್ದು ಬಿಡಲಾಯಿತು. ರಾಜಾಜಿಯವರು ಬಂದುಹೋದ ಸಂಗತಿಯು ಯಾರಿಗೂ ತಿಳಿದಿಲ್ಲ. ಉಟಕಮಾಂಡ್ ಮತ್ತು ಕುನ್ನೂರಿನಲ್ಲಿ ಕಾಂಗ್ರೆಸ್ ಪಕ್ಷೀಯರು ಅವರನ್ನಿದಿರುಗೊಳ್ಳಲು ಸಿದ್ಧರಾಗಿದ್ದರು. ವೈಸರಾಯರ ಮತ್ತು ಗವರ್ನರರುಗಳ ಸ್ಟೇಟ್‌ಮೆಂಟು ಕಾಂಗ್ರೆಸ್ಸಿನವರ ಮೇಲೆ ಎಂತಹ ಪರಿಣಾಮವನ್ನುಂಟುಮಾಡಿರುವುದೆಂದು ತಿಳಿಯಲು ಈ ಮಾತುಕತೆ ನಡೆದುದೆಂದು ನಂಬಲಾಗಿದೆ. ಇದರಿಂದ ಹೊಸ ರಾಜ್ಯಾಂಗರಚನೆಯನ್ನು ಕಾರ್ಯಕ್ಕೆ ಹಚ್ಚುವ ಕುರಿತು ಒಂದು ಪ್ರಾಂತದ ಗವರ್ನರರ ಅಭಿಪ್ರಾಯವೇನೆಂಬುದನ್ನು ಶ್ರೀ ರಾಜಾಜಿಯವರು ಸ್ಪಷ್ಟವಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರಿಗೆ ತಿಳಿಸುವಂತಾಗಿರುವುದು. ಮಂತ್ರಿಗಳು ಮತ್ತು ಗವರ್ನರರು ಎಷ್ಟು ಮಾತ್ರಕ್ಕೂ ಒಮ್ಮತಕ್ಕೆ ಬರಲಾಗದ ಪ್ರಾಮುಖ್ಯ ಸಂಗತಿಯ ಕುರಿತು ಮಾತ್ರವಲ್ಲದೆ ಇತರ ಸರ್ವ ಸಾಮಾನ್ಯ ಆಡಳಿತದ ಕುರಿತು ಗವರ್ನರರು ಕೈಹಾಕಲಾರರೆಂದು ನಂಬಲಾಗಿದೆ.

ಶ್ರೀ ಸಚ್ಚಿದಾನಂದಬಕ್ಷಿಯ ಉಪವಾಸ ದೀಕ್ಷೆ

ಸಂಯುಕ್ತಪ್ರಾಂತದ ನೈನಿತಾಲ್ ಜೈಲಿನಲ್ಲಿ, ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆಮಾಡಬೇಕೆಂದು ಶ್ರೀ ಸಚ್ಚಿದಾನಂದ ಬಕ್ಷಿಯು ಉಪವಾಸ ದೀಕ್ಷೆ ಹಿಡಿದು ಈಗ 30 ದಿವಸ ಮಿಕ್ಕಿರುವುದು. ತನ್ನ ಮಗನು ಉಪವಾಸ ನಿಲ್ಲಿಸದಿದ್ದರೆ ತಾನೂ ಉಪವಾಸ ಹಿಡಿಯಬೇಕಾಗುವುದು. ತಾನು ಸಚಿನನಿಗೆ ತಿಳಿಸಿ ಈ ತಿಂಗಳ ಮಧ್ಯದಲ್ಲಿ ಉಪವಾಸ ಹಿಡಿಯುವೆನು ಎಂದು ಸಚಿನನ 80 ವರುಷದ ತಂದೆ ಶ್ರೀ ಕಾಳಿದಾಸ ಬಕ್ಷಿಯವರು ವಿದಿತಪಡಿಸಿರುವರು. ಈ ಉಪವಾಸದ ಕುರಿತು ಸಂಯುಕ್ತಪ್ರಾಂತದ ಕಾಂಗ್ರೆಸು ಮುಖಂಡರು ಕಳವಳಗೊಂಡಿರುವರು. ಸಚ್ಚಿನನು ತನ್ನ ಉಪವಾಸ ನಿಲ್ಲಿಸುವಂತೆ ತಾನು ತನ್ನಿಂದ ಸಾಧ್ಯವಾದುದನ್ನೆಲ್ಲಾ ಮಾಡುವೆನೆಂದು ಪಂಡಿತ ಜವ್ಹಾರಲಾಲರು ಸಚ್ಚಿನನ ತಂದೆಗೆ ಆಶ್ವಾಸನೆಯಿತ್ತಿರುವರು. ಸಂಯುಕ್ತ ಪ್ರಾಂತದ ಮಂತ್ರಿಮಂಡಳಿಯವರೂ ಈ ಕುರಿತು ಆಲೋಚಿಸಿರುವರು.

ಬಂಡಾಯಗಾರರ ಅತ್ಯಾಚಾರ

ಬಾಸ್ಕ್ ಪ್ರಾಂತದ ಸೆಸ್ಟಾವ್ರೋ ಎಂಬಲ್ಲಿ ಬಂಡಾಯಗಾರರು ಸರಕಾರದ ಪಕ್ಷದ 150 ಮಂದಿಯನ್ನು ಕೊಂದುಹಾಕಿರುವರು. ಕೆಲವರನ್ನು ಸಾರ್ವಜನಿಕ ಉದ್ಯಾನವನದಲ್ಲಿಯೇ ಗುಂಡಿಟ್ಟು ಕೊಲ್ಲಲಾಯಿತು. ಕೆಲವರು ತಪ್ಪಿಸಿಕೊಳ್ಳುವಾಗ ಕೊಲ್ಲಲ್ಪಟ್ಟಿರುವರು. ಪೊರ್ಚುಗಲೀಟ್ ಎಂಬಲ್ಲಿ 100 ಮಂದಿಯನ್ನು ಗುಂಡಿನ ಬಾಯಿಗೆ ಕೊಡಲಾಗಿದೆ. ತಮ್ಮ ಕೈಸಿಕ್ಕಿದ ವೈರಿಸೈನಿಕರನ್ನೆಲ್ಲಾ ಕೊಂದು ಹಾಕುವುದು ಬಂಡಾಯಗಾರ ಪಕ್ಷದ ಮೂರ್ ಸೈನಿಕರ ಪದ್ಧತಿ. ಒಮ್ಮೆ ಇವರು ಒಂದು ಸೈನಿಕವಸತಿ ನುಗ್ಗಿ ಅದರೊಳಗಿದ್ದ ಇಡೀ ಪಟ್ಲಾಮನ್ನೇ ಕೊಂದುಹಾಕಿದ್ದರು.

ಮುದುಕನನ್ನು ಮದುವೆಯಾಗೆನೆಂದು ಹುಡುಗಿಯ ನಿರ್ಧಾರ

ಪಾಟ್ನದಲ್ಲಿ ಎಳೆ ಪ್ರಾಯದ ಹುಡುಗಿಯೊಬ್ಬಳು 60 ವರುಷ ವಿಾರಿದ ಮುದುಕನನ್ನು ಮದುವೆಯಾಗಲು ನಿರಾಕರಿಸುವ ದೃಢನಿರ್ಧಾರವುಳ್ಳವಳಾಗಿ ಮದುವೆಯೇ ನಿಂತುಹೋಗಿರುವುದು. ಹುಡುಗಿಯು ವಿದ್ಯಾವಂತಳು. ಸಂಗೀತದಲ್ಲಿ ಬಲು ಜಾಣೆ. ಒಂದು ಮೆಡಲು ಕೂಡಾ ಪಡೆದಿದ್ದಳು. ಹುಡುಗಿಯ ಸಂಬಂಧಿಕರು ಕೆಲವರೇ ಈ ಮದುವೆಗೆ ವಿರೋಧವಿದ್ದರು. ಮುದುಕನಿಗೆ ಅಷ್ಟು ಚಿಕ್ಕ ಹುಡುಗಿಯನ್ನು ಕೊಟ್ಟು ಮದುವೆಮಾಡಕೂಡದೆಂದು ಸ್ಥಳೀಯ ಸಮಾಜಸುಧಾರಕ ಸಂಘದವರು ಹುಡುಗಿಯ ತಂದೆಗೆ ಬಹಳವಾಗಿ ಹೇಳಿದರೂ ಅವನೊಪ್ಪದೆ ಮದುವೆ ನಿಶ್ಚಯಮಾಡಿಯೇ ಬಿಟ್ಟ. ಬೆನಾರೀಸಿನವನಾದ ಮುದುಕ ವರನು ದಿಬ್ಬಣ ತಂದ. ಆದರೆ ಹುಡುಗಿಯು ಎಷ್ಟು ಮಾತ್ರಕ್ಕೂ ಮದುವೆಯಾಗಲೊಪ್ಪಲಲ್ಲ. ಈ ಸಂಗತಿಯನ್ನು ಪಾಟ್ನದ ಸಿಟಿ ಮೆಜಿಸ್ಟ್ರೇಟರಿಗೆ ತಿಳಿಸಲಾಯಿತು. ಅವರು ಕಡೆಗೆ ಹುಡುಗಿಯ ತಂದೆಗೆ ತಿಳಿಸಿ ಮದುವೆ ನಿಲ್ಲಿಸಿದರು. ಈಗ ಈ ಹುಡುಗಿಯನ್ನು ಯೋಗ್ಯ ವರನಿಗೆ ಕೊಟ್ಟು ವಿವಾಹಮಾಡುವ ಪ್ರಯತ್ನ ನಡೆಯುತ್ತಿದೆ.

ಮಿ. ಮೆಹರಾಲಿಯವರಿಗೆ ಆರು ತಿಂಗಳು ಶಿಕ್ಷೆ

ಬೊಂಬಾಯಿಯ ತರುಣ ಕಾಂಗ್ರೆಸ್ ಮುಖಂಡರಲ್ಲೊಬ್ಬರಾದ ಮಿ. ಮೆಹರಾಲಿಯವರು ಮಲಬಾರಿನ ಕೆಲವು ಸ್ಥಳಗಳಲ್ಲಿ ಭಾಷಣಮಾಡಕೂಡದೆಂದು ಜಿಲ್ಲಾ ಕಲೆಕ್ಟರರು ಅವರ ಮೇಲೆ 144 ಸೆಕ್ಷನನ್ನು ಜ್ಯಾರಿಮಾಡಿದುದನ್ನು ಅವರು ಮುರಿದು ಬಿಟ್ಟು ನಡೆದು ಅವರಿಗೆ 6 ತಿಂಗಳ ಸಾದಾ ಶಿಕ್ಷೆ ವಿಧಿಸಿ ಎ. ಕ್ಲಾಸಿನಲ್ಲಿ ಹಾಕಲಾಗಿದೆ. ಈ ಕುರಿತು ಅಪೀಲು ಮಾಡಲಿರುವರೆಂದು ತಿಳಿದು ಬರುತ್ತದೆ.

ಪಂಜಾಬು ಎಸೆಂಬ್ಲಿ ಮೆಂಬರರು ಹೊರ ನಡೆದರು

ಎಸೆಂಬ್ಲಿ ಮೆಂಬರರ ಅಭಿಪ್ರಾಯವನ್ನೇನೂ ಕೇಳದೆ ಪಂಜಾಬು ಸರಕಾರವು ಎಸೆಂಬ್ಲಿಗೆ ಮಾರ್ಶಲ್ ಎಂಬ ಹೆಸರಿನಿಂದ ಪೋಲೀಸ್ ಅಧಿಕಾರಿಯೊಬ್ಬನನ್ನು ನೇಮಿಸಿದುದನ್ನು ಮತ್ತು ಆ ಸಂಬಂಧವಾದ ಎಸೆಂಬ್ಲಿ ಪ್ರೆಸಿಡೆಂಟರ ವರ್ತನೆಯನ್ನು ನಿಷೇಧಿಸಿ ಜೂನ್ ತಾ. 30ರಲ್ಲು ಪಂಜಾಬಿನ ಕಾಂಗ್ರೆಸ್ ಮತ್ತು ಇತರ ಪಕ್ಷಗಳ 41 ಮಂದಿ ಮೆಂಬರರು ಸಭೆಬಿಟ್ಟು ಹೊರನಡೆದರು. ಎಸೆಂಬ್ಲಿ ಪ್ರೆಸಿಡೆಂಟರು ಮೊದಲು ಮಾರ್ಶಲನ ನೇಮಕದಕುರಿತು ತನಗೇನೂ ತಿಳಿಯದೆಂದು, ಹೇಳಿ ಮೆಂಬರರ ಸೂಚನೆಯಂತೆ ಆತನನ್ನು ತನ್ನ ಪೀಠದ ಬಳಿಯಿಂದ ಎದ್ದು ಹೋಗ ಹೇಳಿದರು. ಆ ಮೇಲೆ ಅವನು ತನ್ನ ಮಾರ್ಶಲ್, ತನಗೆ ಬೇಕಾಗಿ ನೇಮಿಸಲ್ಪಟ್ಟವನೆಂದು ಹೇಳಿ ತಿರುಗಿ ಬಂದು ಕುಳಿತುಕೊಳ್ಳ ಹೇಳಿದರು. ಈ ಕುರಿತು ಮೆಂಬರರಿಗೆ ಮಾತಾಡ ಬಿಡಲಿಲ್ಲ. ಆ ಮೇಲೆ ಪಂಜಾಬಿನ ಪ್ರಧಾನ ಮಂತ್ರಿಗಳಾದ ಸರ್. ಸಿಕಂದರ ಹಯತ್ ಖಾನರು ಮಾರ್ಶಲನು ಪ್ರೆಸಿಡೆಂಟರ ಸೂಚನೆ ಮೇರೆಗೆ ತನ್ನ ಸಮ್ಮತಿಯಿಂದ ನೇಮಿಸಲ್ಪಟ್ಟವನು ಆ ಕುರಿತುತಪ್ಪುಅಭಿಪ್ರಾಯವುಂಟಾಗಿ ಎದುರು ಪಕ್ಷದ ಮೆಂಬರರು ಸಭೆ ಬಿಟ್ಟು ಹೋದುದು ಶೋಚನೀಯ. ಅವನ ಕೆಲಸವೇನೆಂಬುದನ್ನು ಮೆಂಬರರ ಅಭಿಪ್ರಾಯ ಕೇಳಿ ನಿಶ್ಚೈಸಲಾಗುವುದೆಂದರು. ಮತ್ತು ಕಾಂಗ್ರೆಸ್ ಪಕ್ಷದ ನಾಯಕರ ಸೂಚನೆಯಂತೆ ಈಗಣ ಮಾರ್ಶಲನನ್ನು ತೆಗೆದುಹಾಕಿ ನಿವೃತ್ತ ಸೈನ್ಯಾಧಿಕಾರಿಯೊಬ್ಬರನ್ನು ನೇಮಿಸಲೊಪ್ಪಿದರು. ಇದರಿಂದ ಗಲಾಟೆಯು ಶಾಂತವಾಯಿತು.

ಮೂರು ಮಂದಿಯನ್ನು ರಕ್ಷಿಸಿ ತಾನು ಸತ್ತ

ರಾವಳ ಪಿಂಡಿಯ ಪ್ರಮುಖ ಕಾಂಗ್ರೆಸ್ ಮುಖಂಡರಾದ ಲಾಲಾ ಕಾಶಿರಾಮ್ ಸೆಥಿ ಎಂಬವರ ಅಳಿಯ 16 ವರ್ಷ ಪ್ರಾಯದ ಶಾದಿಲಾಲನು ಸಂಗಾತಿಗಳೊಂದಿಗೆ

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
Head Office: UDIPI.
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ಕೆರೆಯೊಂದರಲ್ಲಿ ದೋಣಿಯಲ್ಲಿ ತಿರುಗಾಡ ಹೋದ, ದೋಣಿ ಕವಚಿ ಬಿದ್ದು ಅವನ ಸಂಗಾತಿಗಳೆಲ್ಲರೂ ನೀರಿಗೆ ಬಿದ್ದರು. ಆಗ ಶಾದಿಲಾಲನು ಬಲು ಸಾಹಸದಿಂದ ಮುಳುಗಿದ್ದ 3 ಮಂದಿಯನ್ನು ದಡಕ್ಕೆಳೆದು ತಂದು ಹಾಕಿ ರಕ್ಷಿಸಿದ. ನಾಲ್ಕನೆಯವನನ್ನು ರಕ್ಷಿಸ ಹೋದಾಗ ತಾನೇ ಸೋತು ಮುಳುಗಿ ಹೋದ. ಪ್ರೇಮ ರಾಜನೆಂಬವನು ಶಾದಿಲಾಲನನ್ನು ರಕ್ಷಿಸಲೆತ್ನಿಸಿದರೂ ಪ್ರಯೋಜನವಾಗಲಿಲ್ಲ.

ವಿಮಾನ ಮೂಲಕ ಬ್ರಿಟಿಷ್ ಚಕ್ರವರ್ತಿಗಳಿಗೆ ಮಾವಿನ ಹಣ್ಣು

ಸಂಯುಕ್ತ ಪ್ರಾಂತದ ಸುಪ್ರಸಿದ್ಧ ಲಾಂಗ್ರ ಮಾವಿನ ಹಣ್ಣುಗಳನ್ನು ಜೋರ್ಜ್ ಚಕ್ರವರ್ತಿಗಳು ವಿಮಾನ ಮೂಲಕ ಪಡೆಯುವರು ಇದೇ ತಾ. 2ರಲ್ಲು ಬನಾರಸಿನ ಮಹಾರಾಜರು 20ಸೇರು ಭಾರದ ಮಾವಿನಹಣ್ಣುಗಳ ಪಾರ್ಸೆಲನ್ನು ರೂ136 ಖರ್ಚು ಮಾಡಿ ಕಳುಹಿಸಿರುವರು. ಇವು ಸೋಮವಾರದ ವರೆಗೆ ಹಾಳಾಗದಂತೆ ಸರಿಯಾಗಿ ಕಟ್ಟಿ ಭದ್ರತೆ ಮಾಡುಡಲಾಗಿದೆ.

15,000 ಪವನು ಬೆಲೆಯ ವಜ್ರಹಾರ

ಮೇರಿ ಎಂಟಿಯೊನೆಟ್ಟೆಳೆಂಬ ರಾಣಿಯ ಸುಪ್ರಸಿದ್ಧ ವಜ್ರಹಾರವು ಲಂಡನಿನಲ್ಲಿ ಮಾರಾಟಕ್ಕಿಡಲ್ಪಟ್ಟಾಗ ದರ್ಭಾಂಗದ ಮಹಾರಾಜರು ಅದನ್ನು ತನ್ನ ಪ್ರತಿನಿಧಿಯ ಮೂಲಕ 15,000 ಪವನುಗಳಿಗೆ ಕೊಂಡಿಕೊಂಡಿರುವರು.

ಬೇಡನ್ ಪವೆಲ್ ಚರ್ಚೆ

ಸ್ಕಾಟು ಚಳವಳದ ಸ್ಥಾಪಕರಾದ ಲೋರ್ಡ್ ಬೇಡನ್ ಪವೆಲರು ಹಿಂದೀಯರ ಕುರಿತು ಹೇಳಿದ ಅಪಮಾನಕರ ಮಾತುಗಳಿಂದಾಗಿ ಹಿಂದು ದೇಶದ ಹಲವು ಕಡೆಗಳಲ್ಲಿ ಸ್ಕಾಟು ಚಳವಳವನ್ನೇ ಅವರ ಸಂಘದ ಅಧೀನತೆಯಿಂದ ತಪ್ಪಿಸುವ ಪ್ರಯತ್ನ ನಡೆದಿದೆ. ಬೊಂಬಾಯಿ ಕೊರ್ಪೊರೇಶನಿನಲ್ಲಿ ಈ ಕುರಿತು 8 ಘಂಟೆಗಳ ವರೆಗೆ ತೀವ್ರ ಚರ್ಚೆ ನಡೆದು 44 ಅನುಕೂಲ ಮತ್ತು 14 ಪ್ರತಿಕೂಲ ಮತಗಳಿಂದ, ಕೊರ್ಪರೇಶನಿನ ಸ್ಕಾಟು ಮತ್ತು ಗರ್ಲ್‌ಗೈಡ್ ಸಂಘಗಳನ್ನು ಬೇಡನ್ ಪವೆಲ್ ಸ್ಕಾಟು ಸಂಘದಿಂದ ಪ್ರತ್ಯೇಕಗೊಳಿಸುವ ನಿರ್ಧಾರ ಮಾಡಲಾಗಿದೆ.

ಪೆರಿಸಿನಲ್ಲಿ ಶ್ರೀ ರಾಮಕೃಷ್ಣ ಮಿಶನಿನ ಕೇಂದ್ರ

ಪೆರಿಸಿನಲ್ಲಿ ಕಳದ ಕೆಲವು ವರ್ಷಗಳಿಂದ ಶ್ರೀ ರಾಮಕೃಷ್ಣ ಪರಮ ಹಂಸರ ಕುರಿತು ಪ್ರಚಾರ ನಡೆಯುತ್ತಿತ್ತು. ಈಗ ಅಲ್ಲಿಯ ಹಲವರ ಆಗ್ರಹದ ಮೇರೆಗೆ ಅಲ್ಲಿ ಶ್ರೀ ರಾಮಕೃಷ್ಣ ಮಿಶನಿನ ಒಂದು ಕೇಂದ್ರ ಸ್ಥಾಪಿಸಲು ಸ್ವಾಮಿ ಸಿದ್ದೇಶ್ವರಾನಂದರು ಶ್ರೀ ಸುಬ್ರಮಣ್ಯ ಅಯ್ಯರ್ ಮತ್ತು ಮಿ. ಪೌಲ್ ಬ್ರುಂಟನರೊಂದಿಗೆ ಹೋಗುವರು. ಇವರು 6 ತಿಂಗಳ ವರೆಗೆ ಪೆರಿಸಿನಲ್ಲಿ ನಿಲ್ಲುವರು.

ಪಂಡಿತ ಪಂತರ ಔದಾರ್ಯ

ಸಂಯುಕ್ತ ಪ್ರಾಂತದ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ನಾಯಕರಾದ ಪಂಡಿತ ಗೋವಿಂದ ವಲ್ಲಭ ಪಂತರು ನೈನಿತಾಲಿನಿಂದ 10 ಮೈಲು ದೂರವಿರುವ ನಂಕುಜಿತಲ್ ಎಂಬ ದೊಡ್ಡ ಎಸ್ಟೇಟೊಂದನ್ನು ಶಿಕ್ಷಿತ ನಿರುದ್ಯೋಗಿಗಳಿಗಾಗಿ ಧರ್ಮಾರ್ಥ ಬಿಟ್ಟು ಕೊಟ್ಟಿರುತ್ತಾರೆ. ವಿಶಾಲವಾದ ಈ ಎಸ್ಟೇಟಿನಲ್ಲಿ ಹಲವು ಬಂಗ್ಲೆಗಳಿವೆ. ಕಾಡು ಮತ್ತು ಸಾಗುವಳಿ ಸ್ಥಳ ಬಹಳ ಇದೆ. ಇಲ್ಲಿ ಶಿಕ್ಷಿತ ನಿರುದ್ಯೋಗಿಗಳು, ಹಣ್ಣು ಮತ್ತು ಪುಷ್ಪ ವ್ಯವಸಾಯ, ಕೋಳಿ ಸಾಕುವಿಕೆ, ಗೋಶಾಲೆಯೇ ಮೊದಲಾದುವನ್ನು ಸ್ಥಾಪಿಸಿಕೊಂದು ಜೀವನ ನಿರ್ವಾಹ ಮಾಡಬಹುದು.

ನವಭಾರತ ಬುಕ್ ಡಿಪೋದಲ್ಲಿ
ನಮೂನೆವಾರು
ಫೌಂಟೆನ್ ಪೆನ್ನುಗಳು
ದೊರೆಯುತ್ತವೆ.

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸ್ತಾಫರ್ ಪೋರಿನ ತೋಟಿ ಹೂ ಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

Bihar Nursery,
P. O. Bihar
Nursery (Darbhanga) BIHAR

Mohini Harmonium Works, Udipi

Single Hand Harmoniums, Portable Hand Harmoniums,
Double sets of Hand Harmoniums,
Trible sets of Hand Harmoniums,
Folding leg Harmoniums,
Specially Constructed in our Work Shop. Well tuned and fitted.

Repairs of all kinds of Musical instruments undertaken at a very moderate rate to the Complete satisfaction of our customers.

A Trial order is earnestly solicited.

For Further Particulars
Apply to:

M. K. KORAGAPPA, *Propritor.*

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಿಷ್ಟತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ಪ್ರೇಮ ಮೆಡಿಕಲ್ ಕೋಲೇಜು

ಈ ಕೋಲೇಜಿನ ಹೊಸ ವರ್ಷವು ಇದೇ ಜುಲಾಯಿಯ ೧೬ನೇ ತಾರೀಕಿಗೆ ಪ್ರಾರಂಭವಾಗುವದು. ಎಸ್. ಎಸ್. ಎಲ್. ಸಿ. ಮೆಟ್ರಿಕ್, ಅಪ್ಪರ್ ಸೆಕೆಂಡರಿ, ಮೂಲ್ಕಿ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಅವರವರ ಸರ್ಟಿಫಿಕೇಟ್‌ಗಳಿಗೆ ತಕ್ಕ ಇಂಗ್ಲಿಷ್ ಮತ್ತು ಕನ್ನಡ ಕೋರ್ಸ್‌ಗಳಿವೆ. ಇಲ್ಲಿ ಅಭ್ಯಾಸ ಮಾಡಲಿಚ್ಛಿಸುವವರು ಕೂಡಲೆ "ಪ್ರೊಸ್ಪೆಕ್ಟಸ್"ಗಾಗಿ ೨ ಆಣೆ ಸ್ಟಾಂಪು ಇಟ್ಟು ಬರೆಯಬೇಕು.

ರಿಜಿಸ್ಟ್ರಾರ್:
ತುಂಗಭದ್ರಾ } ಪ್ರೇಮ ವಿದ್ಯಾಪೀಠ
೧೦-೬-೧೯೩೭ }

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ.

ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ— ಗುಡಪಿಪ್ಪಲಿ (ಲಿವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ. ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಹೆಚ್ಚಿನ ಮಾಹಿತಿಗೂ ಸೂಚೀಪತ್ರಿಕೆಗೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ.

ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ
ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್
ರೀಡ್ಡಿನ ಕೈ. ಮತ್ತು ಕಾಲು
ಹಾರ್ಮೋನಿಯಮುಗಳು
ಬೇಕಾದ ನಮೂನೆಯಲ್ಲಿ
ದೊರೆಯುತ್ತವೆ.
ಕ್ರಯದ ಪಟ್ಟಿಗೆ ಬರೆಯಿರಿ.



ಎಲ್ಲಾ ತರದ ಗಾಯನ ಸಾಮಗ್ರಿಗಳನ್ನು
ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ
ಮಾಡಿಕೊಡಲಾಗುತ್ತದೆ.
ವಿಶೇಷ ಮಾಹಿತಿಗೆ ಬರೆಯಿರಿ.

Proprietor: **ATTAVAR BABOO,**
Vasanthi Harmonium Works,
Hampankatta, Mangalore

ವಿ ಸೂ ನಮ್ಮ ಹಾರ್ಮೋನಿಯಮುಗಳು ನವಭಾರತ
ಬುಕ್ ಡಿಪೋ, ಚರ್ಚರೋಡ್, ಉಡುಪಿ ಇಲ್ಲಿ ಮಾರಲ್ಪಡುತ್ತವೆ.

ಅಚ್ಚಿನಲ್ಲಿದೆ! ? ಅಚ್ಚಿನಲ್ಲಿದೆ!

ನವಯುವಕರನ್ನು ಮುಗ್ಧಗೊಳಿಸುವ ಮನಮೋಹಕ... ವಾಚಕರ ಮನಸ್ಸನ್ನು ಸೂರೆಮಾಡುವ

ಮಿಸ್ ಲಲಿತ

ಮನತಾಮಣಿ' ... ಲಲಿತಾ ರಮಣಿ!

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು
ಎತ್ತಿ ತೋರಿಸುವ ಪುಸ್ತಕವು.
ಹೊರಡಲಿರುವ ತಾರೀಕನ್ನು ಗಮನಿಸಿರಿ!
ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.
ಬರೆದವರು: ಯಂ. ವಿ. ಪುತ್ರಾನ್

ಕೂಡಲೇ ಬರೆಯಿರಿ. ಬೆಲೆ **0—3—0**

ವಿಳಾಸ— M. V. Puthran,
C/o 34, Bomanji Lane, *2nd Floor, Fort, BOMBAY*

---

15 ವರ್ಷಗಳ ಅನುಭವ ! **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು
ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು
ಪ್ರಸಿದ್ಧರಾಗಿರುವ

ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು
ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ
ಮಿತದರದಲ್ಲಿ ಮಾಡಿಕೊಡುವರು.

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು
ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ.

ಗಣಪತಿ ರಾವ್, ಪೈಂಟರ್,
ಸೋದೆ ಮಠದ ಲೇನು - - **ಉಡುಪಿ, ದ. ಕ.**

THE
MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ನೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪುಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಮಾಸ] [ಪತ್ರಿಕೆ

ವಿಶ್ವವಾಣಿ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ವಿಶೇಷ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	ರೂ. ೩—೮—೦
,, ,, (೬ ತಿಂಗಳಿಗೆ)	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)	ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚಾರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ— ವ್ಯವಸ್ಥಾಪಕ—'ವಿಶ್ವವಾಣಿ,'
'ಅನ್ನಪೂರ್ಣ', ವಿಶ್ವೇಶ್ವರಪುರಂ, ಬೆಂಗಳೂರು ನಗರ.
ಉಡುಪಿ ಏಜೆಂಟರು—ನವಭಾರತ ಬುಕ್ ಡಿಪೊ, ಉಡುಪಿ.

HOTEL INDIANA
Bar and Restaurant

ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು
ಯೋಚಿಸುವಿರೇಕೆ?

ಹೊಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ ಸೌಕರ್ಯಗಳಿಂದ ನಿಮ್ಮನ್ನು ಎದುರುಗೊಳ್ಳುತ್ತದೆ.

ಹೊಸ ಆಡಳಿತ! ಹೊಸ ವ್ಯವಸ್ಥೆ!

ಎಲ್ಲವೂ ಹೊಸತೇ ಆಗಿ
ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ.

Proprietor,
HOTEL INDIANA
Hampankatta, Mangalore

ಧರ್ಮಾರ್ಥ ಬಹುಮಾನಗಳು



1—0—0ಗೆ!

—·— ಯಾರಿಗೆ ? —·—

ರೂಪಾಯಿ 1-0-0 ಕೊಟ್ಟು 36 ಸೀಸೆ ಒಟ್ಟೊರೋಸ್ಟ್ ಅಥವಾ 36 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡೆಕೊಳ್ಳುವವರಿಗೆ!!

ಇನಾಮುಗಳ ವಿವರ:— 3 ಡಮ್ಮಿ ರಿಸ್ಟ್‌ವಾಚುಗಳು, 1 ರೈಟ್ಟಿಟಾಯಿಂ ಡಮ್ಮಿ ಪಾಕೆಟ್ ವಾಚು, 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿ ಪೆಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡು ಗಿಲ್ಟ್ ಉಂಗುರ, 600 ಅಡಿ ದೂರಕ್ಕೆ ಪ್ರಕಾಶ ನೀಡುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಿಂಪೀಸು (10 ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0 10 0. **ಇಂದೇ ಆರ್ಡರು ಕೊಡಿರಿ.**

EASTERN TRADING COY.,
Post Box No. 12204, CALCUTTA, (N. Y.)

ನಮ್ಮ ಸಿನೆಮಾ ಪುಟ

ಪ್ರೇಮದ ಉಪಾಸಕಳಾದ ಮೋತಿಯು ಮಾಳ್ವ ರಾಜ್ಯದ ಒಂದು ಗ್ರಾಮದ ಗೊಲ್ಲ ಯುವತಿಯರಲ್ಲಿ ಬಲು ಚೆಲುವೆ. ಆ ಹಳ್ಳಿಯ ಒಕ್ಕಲಿಗ ಬಹದೂರನ ಮೊದಲನೇ ಹೆಂಡತಿಯ ಮಗಳು. ಅವಳ ಮಾಧುರ್ಯಮಯ ಸೌಂದರ್ಯವನ್ನು ಕಂಡು ನಾಡ ಹುಡುಗರೆಲ್ಲ ಆಕೆಯನ್ನು ಮದುವೆಯಾಗಲಾಸೆಪಡುತ್ತಿದ್ದರು. ಚೌಧರೀ ವನಾ ಎಂಬ ಯುವಕನಂತೂ ಆಕೆಯನ್ನು ಹೋದಲ್ಲಿ ಹಿಂಬಾಲಿಸುತ್ತಾ ಮದುವೆಯಾಗಲು ಹಂಬಲಿಸುತ್ತಿದ್ದನು. ತನ್ನ ಮಗಳಾದ ಗೋಮತಿಯನ್ನೇ ಚೌಧುರಿಗೆ ಕೊಟ್ಟು ಬಿಡಬೇಕೆಂದು ಬಯಸಿದ್ದ ಬಹದೂರನ ಎರಡನೇ ಹೆಂಡತಿ ಯಮುನೆಗೆ ಅದು ಸರಿಯೆನಿಸಲಿಲ್ಲ ಆಕೆಯೂ ಗೋಮತಿಯೂ ಮೋತಿಯ ಲಾವಣ್ಯಕ್ಕೆ ಅಂತರಂಗದಲ್ಲಿಯೇ ಮತ್ಸರಪಟ್ಟು ಅವಳನ್ನು ಪೀಡಿಸುತ್ತಿದ್ದರು. ಆದರೂ ತನ್ನೆದೆಯ ವೇದನೆಯನ್ನು ಮೋತಿಯು ತನ್ನ ಪ್ರೀತಿಯ ತಂದೆಗೆ ತಿಳಿಸದೆ ಒಳಗೊಳಗೇ ಕೊರಗುತ್ತಿದ್ದಳು.

ಒಂದು ದಿನ ಮಾಳ್ವರಾಜ್ಯದ ಸೇನೆಯು ಆ ಹಳ್ಳಿಗೆ ಬಂದಿತು. ಪ್ರೇಮಲಸ್ವಭಾವದ ಸರದಾರ ಕಿರಣನೂ ಆ ಸೇನೆಯಲ್ಲಿದ್ದನು. ಹಳ್ಳಿಯ ಹುಡುಗಿಯರನ್ನೆಲ್ಲಾ ನೋಡುತ್ತಾ ಮುಂದರಿಯುತ್ತಿದ್ದ. ಅವನ ನೋಟವು ಮೋತಿಯ ಕಡೆಗೆ ಬಿದ್ದಿತು. ಆಗಲೇ ಮೋತಿಯಲ್ಲಿ ಅನುರಕ್ತನಾದ. ಸೇನೆಯನ್ನು ನೋಡಲು ಹುಡುಗಿಯರೆಲ್ಲಾ ಮನೆಯ ಮಾಳಿಗೆಯನ್ನೇರಿದ್ದರು. ಅಕಸ್ಮಾತ್ ಒಬ್ಬ ಹುಡುಗಿಯು ಮಾಳಿಗೆಯಿಂದ ಕೆಳಗುರುಳಿದಳು. ಕೂಡಲೇ ವೀರ ಸರದಾರ ಕಿರಣನು, ಆ ಹುಡುಗಿಯನ್ನು ರಕ್ಷಿಸಿದನು. "ಧನ್ಯ-ಧನ್ಯ"ನೆಂಬೊಂದುಶಬ್ದವು ಮೇಲ್ಮಹಡಿಯಿಂದ ಕೇಳಬಂದಿತು. ಕಿರಣನು ಮೇಲೆ ನೋಡುತ್ತಾನೆ-ಮೋತಿಯ ಮೋಹಕ ಮೂರ್ತಿ! ಕಿರಣನೆದೆಯಲ್ಲಡಗಿದ್ದ ಪ್ರೇಮವು ಜಾಗ್ರತವಾಯಿತು! ಮೋತಿಯೇನೋ ಅವನ ವೀರತ್ವಕ್ಕೆ ಮನಮೆಚ್ಚಿ, ಕೃತಜ್ಞತಾ ದೃಷ್ಟಿಯಿಂದ ನೋಡಿದಾಗಲೆಲ್ಲಾ, ಕಿರಣನು ಅಸಭ್ಯತೆಯ ನಗುವನ್ನು ನಕ್ಕು ಬಿಡುವುದು ಮಾತ್ರ ಆಕೆಗೆ ಸಹನವಾಗಲಿಲ್ಲ.

ಕಿರಣನಿಗೆ ಮೋತಿಯ ನೆನಹು ಸ್ಥಾಯಿಯಾಗಿ ಉಳಿಯಹತ್ತಿತು. ಒಂದುದಿನ ಮೋತಿಯು ಮಾವಿನ ತೋಪಿನ ಬದಿ ವಿಹರಿಸುತ್ತಿದ್ದಳು. ಆಗ ಆಕೆಯನ್ನು ಹಿಡಿದು ಕಿರಣನು ತನ್ನ ಕಾಮದಾಹವನ್ನು ತೀರಿಸ ಬಯಸಿದನು. ಮೋತಿಯು ಧರ್ಮಕ್ಕಾಗಿ ಬೆದರಿ "ಕಿರಣ! ಸಂಭೋಗಕ್ಕಿಂತ ಸಂಯಮವೇ ಮಿಗಿಲಾದುದು!!" ಎಂದು ಉಪದೇಶಿಸಿದಳು. ಆ ಮಾತು ಕಿರಣನ ಹೃದಯದಲ್ಲೊಂದು ಪರಿಣಾಮವನ್ನುಂಟುಮಾಡಿತು. ತಾನು ಆಕೆಯನ್ನು ಮದುವೆಯಾಗ ಬಯಸಿ, ಆಕೆಯ ಅನುಮತಿಯನ್ನು ಕೋರಿದನು. ಅತ್ತ ಚೌಧರಿಯು ಬರುತ್ತಿರುವುದನ್ನು ನೋಡಿ ಮೋತಿಯು ರಾತ್ರಿಗೆ ಉತ್ತರವನ್ನೀಯುವೆನೆಂದು ಹೇಳಿ ಹೊರಟು ಹೋದಳು.

ದಸ್ರಾ ಹಬ್ಬದಲ್ಲಿ ಯಾರಾದರೊಬ್ಬಾಕೆಯನ್ನು ವಿಜಯದೇವಿಯಾಗಿ ಆರಿಸುವುದು; ಅಲ್ಲಿಯ ಯುವಕರೆಲ್ಲಾ ತಮ್ಮ ಕುದುರೆಯನ್ನೇರಿ ಓಟದ ಸ್ಪರ್ಧೆ ನಡಿಸುವುದು; ಗೆದ್ದವನಿಗೆ ವಿಜಯ ದೇವಿಯು ಮಾಲೆಯನ್ನು ಹಾಕುವುದು; ಇದು ಆ ಊರಿನ ಒಂದು ಪದ್ಧತಿ. ಈ ಸಲ ಮೋತಿಯು ವಿಜಯದೇವಿಯಾಗಿ ಆರಿಸಲ್ಪಟ್ಟಳು. ಎಲ್ಲರೂ ಓಟಕ್ಕೆ ತೊಡಗಿದರು. ಗೆಲುವು ಕಿರಣನಿಗೆ-ಮಾಲೆಯೂ ಕಿರಣನಿಗೆ! ಚೌಧರಿಗೆ ಇದು ಸಹನವಾಗಲಿಲ್ಲ. "ಕಿರಣನು ವಿದೇಶೀ ಅವನಿಗೆ ಮಾಲೆತೊಡುವುದರಲ್ಲಿ ಔಚಿತ್ಯವಿಲ್ಲ" ಚೌಧರಿಯು ಹೀಗೆಂದರೂ ಮೋತಿಯು ಕಿರಣನಿಗೇ ಮಾಲೆಯನ್ನೊಪ್ಪಿಸಿದಳು. ಚೌಧರಿ ಸಿಟ್ಟಾದನು. "ಕಿರಣ ನೀನಿನ್ನು ಮೋತಿಯೊಡನೇನಾದರೂ ಸಂಬಂಧವನ್ನಿಟ್ಟುಕೊಂಡರೆ ಕೊಂದು ಬಿಟ್ಟೇನು ತಿಳಿಯಿತೇ?" ಎಂದು ಗದರಿಸಿದನು. "ಮೋತೀ ನೀನೇನಾದರೂ ಕಿರಣನ ಸಹವಾಸದಿಂದ ಭ್ರಷ್ಟೆಯಾದೆಯೆಂದಾದರೆ ನಿನ್ನ ಬೆನ್ನ ಚರ್ಮ ಸುಲಿಯುತ್ತೇನೆ ನೋಡೆ!........ಮತ್ತು ಸೂಳೆಯ ಮನೆಯಲ್ಲಿರಬೇಕಾಗುವುದು." ಎಂದು ತನ್ನ ಚಬುಕನ್ನು ನೆಲಕ್ಕಪ್ಪಳಿಸಿ ಬೆದರಿಸಿದನು ಚೌಧರಿ. ಆ ಊರಲ್ಲಿ ಸೂಳೆಯರಿಗಾಗುವ ಅವಮಾನವು ಭಯಂಕರವಾದುದು. ಇದರಿಂದ ಸ್ವಲ್ಪ ಬೆದರಿದರೂ ಧೈರ್ಯ ತಂದುಕೊಂಡು ಮೋತಿಯು "ನಿನ್ನಿಚ್ಛೆಯಂತೆ ಮಾಡಬಹುದೆ"ಂದು ಹೇಳಿ ಹೊರಟು ಹೋಗಿಬಿಟ್ಟಳು. ಮನೆಯಲ್ಲಿ ತಂದೆಯನ್ನು ಯಮುನೆ ಮತ್ತು ಗೋಮತಿಯು ತಮಗೆ ಬೇಕಾದಂತೆ ಮಾಡಿಕೊಂಡಿದ್ದರು. "ಹೊರಗೆ ಹೋದರೆ ಕಾಲು ಕಡಿದುಬಿಡುವೆನು" ಎಂದು ಮನೆಗೆ ತಲುಪುತ್ತಲೇ ತಂದೆಯಿಂದ ದೊರೆತ ನಲ್ನುಡಿ ಮೋತಿಗೆ! ಮೋತಿಯ ಹೃದಯವು ಅಳಲಿಕ್ಕಿಟ್ಟಿತು. ತಾನು ರಾತ್ರಿ ಸಿಗುವೆನೆಂದು ಕಿರಣನಿಗೆ ಕೊಟ್ಟ ವಚನವು ಆಗ ಜ್ಞಾಪಕಕ್ಕೆ ಬಂದಿತು. ಹೊರಗೆ ಜೋರಾಗಿ ಮಳೆಗರೆಯುತ್ತಿದೆ. ಆದರೂ ಆಕೆ ಮೆಲ್ಲಗೆ ಮನೆಬಿಟ್ಟು ಹೊರಟಳು. ಇದನ್ನು ನೋಡಿ ಆಕೆಯ ಮಲತಾಯಿಯೂ ಗೋಮತಿಯೂ ಮೆಲ್ಲಗೆ ಹೋಗಿ ಚೌಧರಿಗೆ ತಿಳಿಸಿದರು. ಹಾಗೆ ಮಾಡಿದರೆ ಅವನು ಮೋತಿಯನ್ನು ತೊರೆದು ಗೋಮತಿಯನ್ನೇ ಮದುವೆಯಾದಾನೆಂದು ಅವರ ನಂಬುಗೆ. ಆದರೆ ಚೌಧರಿಯೂ ಕೂಡಲೇ ಮೋತಿಯ ಬೆನ್ನು ಹತ್ತಲಿಕ್ಕೆ ಹೊರಟನು.

ಮಾಳ್ವದ ಸೇನೆಯ ಸೈನಿಕರು ರಜಪೂತ ರಮಣಿಯನ್ನೇ ವಿವಾಹವಾಗಬೇಕೆಂದು ಒಂದು ಕಟ್ಟಳೆಯಿದ್ದಿತು. ಕಿರಣನು ಮೋತಿಗಾಗಿ ತನ್ನ ಪದವಿಯನ್ನು ಬಿಡಬಲ್ಲನಾದರೂ ಮೋತಿಗದು ರುಚಿಸಲಿಲ್ಲ. ಅದಕ್ಕಾಗಿ ಆಕೆ ಮದುವೆಯಾಗಲು ತಿರಸ್ಕರಿಸಿ ಹೊರಟು ಬಿಟ್ಟಳು. ಆಕೆ ಹೊರಬರುತ್ತಲೇ "ಸೂಳೆ-ಸೂಳೆ-ಹಿಡಿಯಿರಿ-ಹಿಡಿಯಿರಿ." ಎಂದು ಕೂಗುತ್ತಾ ಚೌಧರಿಯು ತನ್ನ ಚಬುಕಿನಿಂದ ಒಂದೇಟು ಕೊಟ್ಟನು. ಮೋತಿಯು ಜ್ಞಾನಗೆಟ್ಟಳು. ಆ ಮೇಲೆ "ರಂಡೆ! ಕುಲಟೆ!!" ಎಂದು ಬೈದು ಭಂಗಿಸಿದ.

ಇಷ್ಟರಲ್ಲಿ ಯಮುನೆ ಗೋಮತಿಯರು, ಮೋತಿಯು ಕಿರಣನ ಸಂಯೋಗದಿಂದ ಕುಲಕಳಂಕಿನಿಯಾಗಿರುವ ಸಂಗತಿಯನ್ನು ಬಹದೂರನಿಗೆ ತಿಳಿಸುವರು. ಅವನಿಗದು ತಾಳಲಾರದ ವ್ಯಾಕುಲವನ್ನುಂಟುಮಾಡುವುದು. ಯಾಕೆಂದರೆ ತನ್ನ ಪ್ರಿಯ ಪುತ್ರಿ ಮೋತಿಯು ಎಂದೂ ಅಂಥವಳಲ್ಲೆಂದು ಅವನು ಬಗೆದಿದ್ದನು. ಅವನು 'ಮೋತಿ! ನನ್ನ ಮೋತಿ! ಸೂಳೆ! ಹಾ! ಅಲ್ಲ-ಅಲ್ಲ!' ಎಂದು ಉದ್ಗರಿಸಿ ಗೋಡೆಗೆ ತಲೆ ಬಡಕೊಳ್ಳುವನು ಮೋತಿಯುತನ್ನ ಪರಿಶುದ್ಧತೆಯನ್ನು ತಂದೆಗೆ ತಿಳಿಸಲು ಮನೆಗೆ ಧಾವಿಸುವಳು. ಆದರೆ ತಂದೆಯು ಸತ್ತಿರುವುದನ್ನು ಕಂಡು ಕಂಗೆಡುವಳು. ಒಂದೆಡೆ ತಂದೆಯ ಮರಣದ ದುಃಖ, ಇನ್ನೊಂದೆಡೆ ತಾನು ಸೂಳೆಯಾಗುವಭೀತಿ, ಇವುಗಳಿಂದ ಮೋತಿಯುಧೃತಿಗೆಟ್ಟು ಪ್ರಾಣಕಳಕೊಳ್ಳುವ ನಿರ್ಧಾರ ಮಾಡಿ ಅಂದು ರಾತ್ರಿ ಹೊಳೆಗೆ ಧುಮುಕುವಳು. ಯೋಗಿನಿಯೊಬ್ಬಳು ಮೋತಿಯನ್ನು ರಕ್ಷಿಸಿ ತನ್ನ ದೇವಸ್ಥಾನಕ್ಕೊಯ್ಯುವಳು. ಅಲ್ಲಿ ಮೋತಿಯೂ ಯೋಗಿನಿಯಾಗುವಳು.

ಕಿರಣನ ಕಡೆಯ ಜನರು ಚೌಧುರಿಯನ್ನು ಕೈದುಮಾಡುವರು. ಆದರೆ ಅವನು ತಪ್ಪಿಸಿಕೊಂಡು ಕಿರಣನ ವೈರಿಗಳೊಂದಿಗೆ ಸೇರುವನು. ಕಿರಣನಿಗೂ ಅವನ ವೈರಿಗಳಿಗೂ ಯುದ್ಧಪ್ರಾರಂಭವಾಗುವುದು.

ದೈವಗತಿಯಿಂದ ಒಮ್ಮೆ ಕಿರಣನು ಮೋತಿಯು ಯೋಗಿನಿಯಾಗಿರುವ ದೇವಸ್ಥಾನಕ್ಕೆ ಪ್ರಾರ್ಥನೆಗಾಗಿ ಬರುವನು. ಅವನನ್ನು ಕಂಡ ತನ್ನ ಹೃದಯದ ಮೋತಿಯು ಪ್ರೇಮಸ್ಫೂರ್ತಿಯನ್ನು ನಿಗ್ರಹಿಸುವಶಕ್ತಿಯನ್ನು ತನಗೆ ಕರುಣಿಸಬೇಕೆಂದು ಶ್ರೀದೇವಿಯೊಡನೆ ಪ್ರಾರ್ಥನೆ ಮಾಡಿಕೊಳ್ಳುವಳು. ಇಂದು ಮೋತಿಯ ಪಾವಿತ್ರ್ಯದ ಪರೀಕ್ಷೆಯ ದಿನ. ಮುಖ್ಯಯೋಗಿನಿಯು ಸರದಾರನಿಗೆ ಪ್ರಸಾದಕೊಡೆಂದು ಮೋತಿಯೊಡನೆ ಹೇಳುವಳು. ಅದೆಂತಹ ರೋಮಾಂಚಕ ಸಮ್ಮಿಲನ! ಪ್ರೇಮಭರಿತ ಮೃದುಹೃದಯ ಕಿರಣನದು—ಸಂಕಷ್ಟಗಳ ಹೊಡೆತದಿಂದ ಕಠಿಣವಾಗಿ ಹೋಗಿರುವ ಮನಸ್ಸು ಮೋತಿಯದ್ದು. ದೇವಸ್ಥಾನದ ಘಂಟಾರವವು ಯೋಗಿನಿ ಮೋತಿಯನ್ನು ಕರೆಯುವುದು

ಯೋಗಿನಿ ಮೋತಿಯನ್ನು ದೇವಾಲಯದ ಘಂಟೆಗಳು ಕರೆಯುವವೆಂಬುದೇನೂ ನಿಜ. ಆದರೆ ಪ್ರೇಮಿನಿ ಮೋತಿಯನ್ನು ತನ್ನ ಹೃದಯದ ಘಂಟೆಯು ತನ್ನವರನ್ನಾಗಿ ಮಾಡಿಕೊಳ್ಳಲು ಕರೆಯುತ್ತಿದೆ ಎಂದು ಕಿರಣನು ಮೋತಿಯಲ್ಲಿ ಪ್ರೇಮ ಸ್ಫೂರ್ತಿಯನ್ನುಂಟುಮಾಡುವನು. ಮರುದಿನ ರಾತ್ರಿ ಮೋತಿಯನ್ನು ಕಾಣುವೆನೆಂದು ಹೇಳುವನು. ಇದನ್ನೆಲ್ಲಾ ಚೌಧುರಿಯು ಮರೆಯಲ್ಲಿ ನಿಂತು ಕೇಳುವನು. ಮೋತಿಯು ಜೀವಂತಳಿರುವಳೆಂದು ತಿಳಿದು ವಿಸ್ಮಿತನಾಗಿ ಅವಳೆದುರಲ್ಲೇ ಕಿರಣನನ್ನು ಕೊಲ್ಲಬೇಕೆಂದು ಬಗೆದು ಖಡ್ಗವೆತ್ತಿ ಕಡಿಯುವಷ್ಟರಲ್ಲಿ ಮೋತಿಯು ತಡೆದು, ಮೊದಲು ತನ್ನನ್ನು ಕೊಲ್ಲೆಂದು ಅವನೊಡನೆ ಕರಜೋಡಿಸಿ

(೮ನೇ ಪೇಜಿಗೆ ಮುಂದುವರಿಯುವುದು.)

ಪೂಜಾರಿಣಿ

[ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತಾ. 7-7-'37ರಿಂದ ಪ್ರದರ್ಶಿಸಲ್ಪಡುವ ಮೂತನಾಡುವ ಚಲಚಿತ್ರದ ಕಥಾ ಸಾರಾಂಶ. ಇಂಪೀರಿಯಲ್ ಕಂಪೆನಿಯ ಕಲಾಕೃತಿ ಇದು. ಸುಲೋಚನಾ, ಜಿಲ್ಲು, ಡಿ. ಬಿಲ್ಮೋರಿಯಾ ಮುಂತಾದ ಪ್ರಖ್ಯಾತ ನಟರು ಈ ಚಿತ್ರದಲ್ಲಿ ಭಾಗವಹಿಸಿದ್ದಾರೆ.]

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC, ETC.

Miss Shanta Apte
ಶ್ರೀಮತಿ ಶಾಂತಾ ಆಪ್ಟೆ

By Master Venkanna

ಹುಡುಗರಲ್ಲಿ ಹುರುಪು ಹುಟ್ಟಿಸಿ, ಹುಡುಗಿಯರನ್ನು ಹುರಿಗೊಳಿಸಿ, ಅವರಲ್ಲಿ ಹೊಸ ಹುಮ್ಮಸ ಹುಟ್ಟುವಂತೆ ಮಾಡುವ "ಹುಚ್ಚು ಹುಡುಗಿ" ಶಾಂತಾ ಆಪ್ಟೆಯನ್ನು ಅರಿಯದವರಾರು! ಆ ಜಿಂಕೆಯ ತೆರದ ಚಿಗಿದಾಟ, ಮರಿಹುಲ್ಲೆಯ ಹುರುಪು, ಕೋಮಲ ನಯನಗಳ ತಿರುಗಾಟ, ಮುಗುಳು ನಗೆಯ ಮನಸೆಳೆವ ಮಾಟ, ಇವುಗಳಿಗೆ ಸೆರೆಸಿಕ್ಕಿ ಕನಸಿನಲ್ಲೂ ನೆನೆಸುವ ತರುಣರೆಷ್ಟೋ! ಆಕೆಯಂತಾಗಬೇಕೆಂದು ಕುಣಿದಾಡಿ, ಹಾರಿ, ಚಿಗಿದು, ನಲಿದು, ನೈ ಕೈ ನೋವು ತಂದುಕೊಂಡ ಹುಡುಗಿಯರಿಗೂ ಕಡಿಮೆ ಇರಲಾರದು. ಅಂತೂ ದೇಶದ ತರುಣ ಬಿಸಿ ರಕ್ತಕ್ಕೆ ಬಿಸಿಯುಸಿರನ್ನಿತ್ತು ತನ್ನೆಡೆಸೆಳೆದ ಈ ಆದರ್ಶ ಅಭಿನಯೇತ್ರಿಯನ್ನು ಕುರಿತು ಒಂದೆರಡು ಮಾತು ಬರೆದರೆ ಅದೆಲ್ಲರ ಆತ್ಮಕ್ಕೆ ಆನಂದ ನೀಯದಿರದು.

ತನ್ನ ಕೋಮಲ ಪ್ರಕೃತಿಯಿಂದ ಅಭಿನಯಕಲಾ ಶ್ರೇಷ್ಠತೆಯಿಂದ ಮಿಲಿಯಾಂತರ ಮಂದಿಯ ಮನವನ್ನು ಸೂರೆಗೊಳ್ಳಬಲ್ಲ ಶಾಂತೆಯು ಅಂತೆಯೇ ತನ್ನ ಕೋಕಿಲ ಕಂಠದಿಂದ, ಸುಮಧುರ ಗಾಯನದಿಂದ ಅವರಿಗೆ ಗಾನ ಸ್ವರ್ಗವನ್ನೂ ತೋರಬಲ್ಲ ಸಾಹಸಿಯೂ ಆಗಿರುವಳು.

ಮರಾಟ ಹುರುಪನ್ನಾಂತ ಮರಾಟಿ ಬಾಲೆಯಾದಿವಳು ಮೊದಲನೆಯದಾಗಿ ಚಲನಚಿತ್ರ ಪ್ರಪಂಚವನ್ನು ಪ್ರವೇಶಿಸಿದುದು "ರಾಧೆ"ಯಾಗಿ ಪೂನಾದಲ್ಲಿನ ಸರಸ್ವತಿ ಸಿನೆಟೋನ್‌ನವರ ಶ್ಯಾಮಸುಂದರ ಚಿತ್ರದಲ್ಲಿ. 1931ರಲ್ಲಿ ಈಕೆ ರಾಧೆಯ ಪಾತ್ರವನ್ನು ವಹಿಸಿ ಕೃಷ್ಣನನ್ನು ಮಾತ್ರವೇ ಅಲ್ಲದೆ ಚಲನಚಿತ್ರ ಪ್ರೇಕ್ಷಕರೆಲ್ಲರನ್ನೂ ತನ್ನೆಡೆ ಸೆಳೆದು ತಾನು ಬೆಳಕನ್ನು ಕಂಡುದು ಮಾತ್ರವಲ್ಲದೆ ಚಲನಚಿತ್ರ ಪ್ರೇಮಿಗಳೆಲ್ಲರ ಮನಕ್ಕೆ ಆನಂದದ ಬೆಳಕಿತ್ತು ಮೆರೆದಳು.

ಅನಂತರ ಕೆಲಕಾಲ ಅಜ್ಞಾತಳಾಗಿದ್ದು ತನ್ನ ಜೀವನದಲ್ಲಿನ ಅಧಿಕ ಪ್ರಖ್ಯಾತಿಯನ್ನು ಪ್ರಭಾತ ಕಂಪೆನಿಯವರ ಅಮೃತ ಮಂಥನ ಚಿತ್ರದಲ್ಲಿ ಅಧಿಕ ಕಲಾನೈಪುಣ್ಯತೆಯನ್ನು ಬೀರಿ ಪಡೆದಳು. ಅಮೃತ ಮಂಥನದಲ್ಲಿನ ಅವಳ ಅಭಿನಯವು ಅನೇಕರಿಗೆ ಅಮೃತ ಪ್ರಾಯವಾಯಿತು. ಅನಂತರ ಅದೇ ಪ್ರಭಾತ ಕಂಪೆನಿಯ 'ರಜಪೂತ್ ರಮಣಿ' ಚಿತ್ರದಲ್ಲಿ ಪ್ರಾಮುಖ್ಯ ಪಾತ್ರವನ್ನು ವಹಿಸಿ ಸರ್ವಶ್ರೇಷ್ಠ ನಟಿಯೆಂದು ಜನರಿಂದ ಹೊಗಳಿಸಿಕೊಂಡಳು. ಆ ಬಳಿಕ ತನ್ನ ಅನುಪಮ ಗಾನಮಾಧುರ್ಯವನ್ನು ಹಲವರಿಗೆ ಉಣ್ಣಿಸುವ ಇಚ್ಛೆಯಿಂದ ಭರತ ಖಂಡದ ಪ್ರಾಮುಖ್ಯ ಪಟ್ಟಣಗಳ ರಂಗಭೂಮಿಗಳಲ್ಲಿ ತನ್ನ ನರ್ತನ ಕೌಶಲ್ಯವನ್ನೂ ಗಾನ ಮಾಧುರ್ಯವನ್ನೂ ತೋರಿ-ಹಲಕೆಲವು ಪಟ್ಟಣಗಳನ್ನು ಸುತ್ತಿದಳು. ಆ ಮೇಲಿನ ಆಕೆಯ ಕಲಾ ವೈಭವದ ತಾಂಡವ ಅಮರ ಜ್ಯೋತಿಯಲ್ಲಿ.

ಭಾರತಕಲಾ ಸಂಪತ್ತಿಯನ್ನೂ ಶ್ರೇಷ್ಠತೆಯನ್ನೂ ಜಗತ್ತಿಗೆ ತೋರಿದ ಈ ಚಿತ್ರದಲ್ಲಿ ತಾನೊಬ್ಬ ಸರ್ವಶ್ರೇಷ್ಠ ನಟಿಯೆಂದು ಜಗತ್ತಿಗೆ ತೋರಿ ಮೆರೆದಳು. ಅಮರ ಜ್ಯೋತಿಯಲ್ಲಿ-ಹಾಡಿ-ಆಡಿ-ಕುಣಿದಾಡಿ-ಭಾರತದ ತರುಣ ಹೃದಯಗಳಲ್ಲಿ ತಾಂಡವವಾಡಿ, ಪ್ರೇಮ ಬೀಜವನ್ನು ಬಿತ್ತಿ ತಾನು ಅಮರ ಕೀರ್ತಿಯನ್ನು ಗಳಿಸಿದಳು. ಆಕೆಯನ್ನರಿಯದವರು ವಿರಳವಾದರು. ಆಕೆಯ ಹಾಡು ಎಲ್ಲರ ಮನವನ್ನು ಕಲುಕಿ ಎಲ್ಲರ ಮನದಲ್ಲೂ ಪ್ರತಿಧ್ವನಿಸಿಗೊಡಲಾರಂಭಿಸಿತು. ಆಕೆಯ ಹೆಸರು ಎಲ್ಲರ ಮಾತಾಯಿತು ಆಕೆಯ-ಅಭಿನಯ-ಆ ಹಾವಭಾವಗಳು-ಎಲ್ಲಾ ತರುಣಿಯರ ನಿತ್ಯದ ಅಭ್ಯಾಸಗಳಾದುವು.

ಇದೀಗ ಹೊಸದಾಗಿ ಇನ್ನೊಂದು ಚಿತ್ರದಲ್ಲಿ ಆಕೆ ಮಾನವ ಚಿತ್ತಭಿತ್ತಿಯನ್ನು ಸೂರೆಗೊಳ್ಳಲು ಹೊರಟಿರುವಳು. ಅದೂ ಪ್ರಭಾತ ಚಿತ್ರ "ವಹಾಂ" ಅಥವಾ "ಓ ಅಲ್ಲಿ" ಎಂಬುದು.

ಕೊನೆಯದಾಗಿ ಆಕೆಯ ಕುರಿತು ಇಷ್ಟು ಹೇಳಬಹುದು. ಶಾಂತೆಯು ಎಲ್ಲರ ಹುರುಪು. ಕಪಡಿದ ಮನಕ್ಕೆ ಮಂಗಳ ಗೀತವನ್ನು ಹಾಡಿ ಶಾಂತಿಯನ್ನುಂಟುಮಾಡ ಬಲ್ಲಳು. ಅಂತೂ ಶಾಂತೆಯು ಎಲ್ಲರ ಹೃದಯಕ್ಕೆ ಶಾಂತಿಯನ್ನೂ ಆನಂದವನ್ನೂ ತರಬಲ್ಲ ಸುಂದರ ಸುಕೋಮಲ ಸರಳ ಪುಷ್ಪ!

(೭ನೇ ಪೇಜಿನಿಂದ ಮುಂದುವರಿದುದು)

ಬೇಡಿಕೊಳ್ಳುವಳು. ತಾನು ಕಿರಣನನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವುದರಿಂದ ಅವನು ಸತ್ತರೆ ತಾನು ಸತ್ತಂತೆಯೇ ಸರಿಯೆಂದು ತಿಳಿಸುವಳು.

ಇಷ್ಟರಲ್ಲಿ ಚೌಧುರಿಯ ಎತ್ತಿದ ಕೈಯಿಂದ ಖಡ್ಗವು ಜಾರಿ ಬೀಳುವುದು. ಅವನ ಕಣ್ಣುಗಳಲ್ಲಿ ನೀರು ತುಂಬುವುದು. ಪವಿತ್ರ ಪ್ರೇಮವು ಅವನ ದುಷ್ಟ ಹೃದಯವನ್ನು ಕಟ್ಟಕಡೆಗೆ ಮಾರ್ಪಡಿಸಿ ಬಿಡುವುದು. ಅವನು ಕ್ಷಮೆಬೇಡುವನು. ಮೋತಿಯು ಒಡನೆಯೇ ಕ್ಷಮಿಸಿಯಿತ್ತು, ತನ್ನ ಪ್ರಿಯನ ಪ್ರಾಣವನ್ನುಳಿಸಿದುದಕ್ಕಾಗಿ ಕೃತಜ್ಞತೆಯನ್ನರ್ಪಿಸುವಳು. ಚೌಧುರಿಯು ಒಂದು ಶಬ್ದ ಕೂಡಾ ಹೇಳಲಾರದೆ ಸುಮ್ಮನೆ ನಿಂತುಬಿಡುವನು.

'ಅವನು ನಿಜವಾಗಿಯೂ ಮಹತ್ತ್ವದ ವೀರ' ಎನ್ನುವನು ಕಿರಣ.

"ಇಷ್ಟುಮಾತ್ರವಲ್ಲ ಅವನು ದ್ವೇಷಿಸುವಂತೆ ನಟಿಸುತ್ತಿದ್ದರೂ ಈ ವರೆಗೂ ಪ್ರೀತಿಸಿಕೊಂಡಿದ್ದ ಮಹಾಪುರುಷ"ನೆನ್ನುವಳು ಮೋತಿ ಕಿರಣನನ್ನು ಬಿಗಿಹಿಡಿದು ಹೀಗೆ ಈ ಪವಿತ್ರ ಪ್ರೇಮದ ಕತೆಯು ಕೊನೆಗೊಳ್ಳುವುದು.

JUST RECEIVED

Look sharp! Hurry up!!

Provincial Autonomy

(BY K. T. SHAH)

Price Re. 1—8—0

(Postage extra)

Book your order for a copy today only.

Navabharat Book Depot

UDIPI

ನೋಟೀಸು

ಹಾಲಿ ಮದ್ರಾಸು ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿರುವ ಬಡಾನಿಡಿಯೂರು ಸಾರಬಳಿ ರಾಮಕೃಷ್ಣಯ್ಯನವರ ಮಗ ಸುಬ್ರಾಯನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ, ನಾನು ವ ನನ್ನ ತಮ್ಮ ಶಂಕರನಾರಾಯಣ ಕೂಡಾ ಎರಡು ಜನರು ಬಡಾನಿಡಿಯೂರು ಗ್ರಾಮದ ವಾಸುಪಟ್ಟಗೆ ತಾ. ೩-೨-೧೯೩೬ರಲ್ಲು ರೂ. ೭೦೦-೦-೦ಕ್ಕೆ ರಿಜಸ್ಟ್ರನಿಸಿ ಬರಕೊಟ್ಟ ಈದು ದಸ್ತಾವೇಜಿನ ಬಡ್ಡಿ ಆಗಾಗ್ಗೆ ಸಂದದ್ದರ ವಿನಹ ಮಿಕ್ಕ ಅಸಲು ಬಡ್ಡಿ ಹಣಗಳನ್ನು ನಮ್ಮ ಸಮಷ್ಟಿ ಕುಟುಂಬದ ಉತ್ಪತ್ತಿವ ನಾನು ಸದ್ರಿ ಶಂಕರನಾರಾಯಣನಿಗೆ ಕೊಟ್ಟ ಹಣಗಳಿಂದ ಸದ್ರಿ ಧಣಿಗೆ ಸಲಾಯಿಸಿ ಖುಲಾಸುಪಡೆಯದೆ ನನಗೆ ನನ್ನ ಸಮಷ್ಟಿ ಕುಟುಂಬಕ್ಕೆ ಮೋಸ ಮಾಡುವ ಇರಾದೆಯಿಂದ ಸದ್ರಿ ಶಂಕರನಾರಾಯಣನು ತಾ. ೧೯-೯-೧೯೩೬ರಲ್ಲು ತನ್ನ ಹೆಸರಿಗೇನೇ ಸದ್ರಿ ಈದಿನ ಹಕ್ಕನ್ನು ಬಿನಾಮಿಯಾಗಿ ಟ್ರೇನ್ಸ್‌ಫರ್ ಪಡೆದಿರುತ್ತಾನೆ. ಸದ್ರಿ ಟ್ರೇನ್ಸ್‌ಫರ್ ಅಸಿಂಧುವಾದದ್ದು ವ ಪ್ರತಿಫಲವಿಲ್ಲದ್ದು. ವ ತ್ತು ಸಮಷ್ಟಿ ಕುಟುಂಬದಲ್ಲಿರತಕ್ಕ ನನಗೆ ಮೋಸಕೊಡುವ ಇರಾದೆಯಿಂದ ರಿಕಾರ್ಡು ಮಾಡಿಕೊಂಡದ್ದಾಗಿದೆ. ಅಂತಹ ಟ್ರೇನ್ಸ್‌ಫರ್ ಆಧಾರದ ಮೇರೆಗೆ ಸದ್ರಿ ಶಂಕರನಾರಾಯಣನು ತನ್ನ ಟ್ರೇನ್ಸ್‌ಫರ್ ಹಕ್ಕನ್ನು ಬೇರೆಯವರಿಗೆ ಟ್ರೇನ್ಸ್‌ಫರ್ ಕೊಡುವ ಇರಾದೆಯಲ್ಲಿ ಇದ್ದಾನಾಗಿ ಕಂಡುಬರುತ್ತದೆ. ಅಂತಹ ಟ್ರೇನ್ಸ್‌ಫರ್ ಯಾರಾದರೂ ಮಾಡಿಕೊಂಡ ಪಕ್ಷದಲ್ಲಿ ಸದ್ರಿ ಟ್ರೇನ್ಸ್‌ಫರ್ ಸಮಷ್ಟಿ ಕುಟುಂಬದಲ್ಲಿರತಕ್ಕ ನನಗಾಗಲೀ ವ ಸಮಷ್ಟಿ ಕುಟುಂಬಕ್ಕಾಗಲೀ ಬಾಧಿಸತಕ್ಕದ್ದಲ್ಲ ಎಂಬ ಸಂಗತಿ ಸರ್ವಜನರಿಗೆ ಈ ಮೂಲಕ ತಿಳಿಯಪಡಿಸಿದೆ.

B. Subba Rao,
C/o. cosmopolitan Culb
Mount Road, **Madras.**

ಕೂದಲು ರಂಗು ಬಿಡಿ

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು. ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ. ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ. ೭ರ, ಅರ್ಧಾಂಶಕ್ಕೂ ಮಿಕ್ಕ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೆ ಬರೆಯಿರಿ.

Bal Kala Stores,
P. O. Kansisimri *(Darbhanga)*

ಉಡುಪಿಯ ಆದರ್ಶ ಉಪಹಾರಗೃಹ!

ಶ್ರೀ ರಾಮಾ ರೆಸ್ಟೋರೆಂಟ್

ಸುಲಭ ದರದಲ್ಲಿ ತಿಂಡಿ ಪಾನೀಯಗಳು ! ಮಿತ ದರದಲ್ಲಿ ಊಟ ಉಪಚಾರಗಳು !

ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, ಅನುಭವಪೂರ್ಣ ಮೇಲ್ವಿಚಾರಣೆ !

ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.

ಎಚ್. ಗೋಪಾಳ ನಾಯಕ್, ಪ್ರೊಪ್ರೈಟರ್.

ಇದೇ ತಿಂಗಳ ತಾ. **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಜಿಲ್ಲಾ ಬೋರ್ಡು ಸಭೆ

ದ. ಕ. ಜಿಲ್ಲಾ ಬೋರ್ಡು ಸಭೆಯು ಬರುವ ತಾ. ೧೪ಕ್ಕೆ ಮಂಗಳೂರು ಜಿಲ್ಲಾ ಬೋರ್ಡು ಆಫೀಸಿನಲ್ಲಿ ನಡೆಯಲಿರುವುದು.

ವಿದ್ಯಾರ್ಥಿಗಳಿಗೆ ಹಿತೋಪದೇಶ

ಸ್ಥಳೀಯ ಬಿ ಇ ಯಂ. ಹೈಸ್ಕೂಲಿನ ತರ್ಕ ಸಂಘದ ಆಶ್ರಯದಲ್ಲಿ, ಪ್ರೊ ಸಿ. ಜೆ. ಮಾರ್ಕ್, ಯಂ. ಎ.ಯಂ.ಎಲ್.ಎ. ಇವರು ಒಂದು ಉಪನ್ಯಾಸವನ್ನು ಕಳೆದ ತಾ. ೩ರಲ್ಲಿ ಮಾಡಿದರು. ಮಿ। ಫರ್ಟಾಡೋ ಬಿ. ಎ. ಎಲ್. ಟಿ., ಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರೊ. ಮಾರ್ಕ್‌ಯವರು ತಮ್ಮ ಭಾಷಣದಲ್ಲಿ ಜನಾಂಗದ ಸ್ವಾತಂತ್ರ್ಯದ ಹೋರಾಟದಲ್ಲಿ ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ವರ್ತಿಸಬೇಕೆಂಬುದನ್ನು ತಿಳಿಸುತ್ತಾ ದೇಶವನ್ನು ಪಾರತಂತ್ರ್ಯದಿಂದ ವಿಮುಕ್ತವನ್ನಾಗಿ ಮಾಡುವುದು ಪ್ರಧಾನ ಕರ್ತವ್ಯವೆಂದೂ, ಜಾತಿ, ಮತ, ಕೋಮು ಭೇದಗಳನ್ನು ಮೂಲೆಗೊತ್ತಿ ಎಲ್ಲರೂ ಅಣ್ಣ ತಮ್ಮಂದಿರಂತೆ ಸಹಕರಿಸಿ ನಡೆಯಬೇಕೆಂದೂ ಹೇಳಿದ್ದಲ್ಲದೆ, ಇಂತಹ ಸಾರ್ವಜನಿಕ ಶಾಲೆಗಳು ಪರಸ್ಪರ ಐಕಮತ್ಯವನ್ನುಂಟುಮಾಡಲು ಮುಖ್ಯಸಾಧನಗಳಾಗಿವೆಯೆಂದರು.

ಕೊಲೆ ಮಾಡಿದ ಅಪಾದನೆ
ಅಪಾದಿತರು ತಪ್ಪಿತಸ್ಥರಲ್ಲವೆಂದು ಬಿಡುಗಡೆ ಮಾಡಲ್ಪಟ್ಟರು

ಕಳೆದ ತಾ. ೨ರಲ್ಲಿ ಮಂಗಳೂರು ಜಿಲ್ಲಾ ಮತ್ತು ಸೆಶ್ಶನ್ಸ್ ಜಡ್ಜರಾದ ಶ್ರೀ। ಯಂ. ವೆಂಕಟರಾಮಯ್ಯನವರು ಒಂದು ಸೆಶ್ಶನ್ಸ್ ವ್ಯವಹರಣೆಯಲ್ಲಿ ತೀರ್ಪು ಕೊಟ್ಟು, ಅದರ ಕೊಲೆ ಮಾಡಿದ ಅಪಾದನೆಯ ಮತ್ತು ಆ ಕೊಲೆಗೆ ಸಹಾಯ ಮಾಡಿದನೆಂಬ ಅಪಾದನೆಯ ಮೇಲೆ ನ್ಯಾಯಕ್ಕೆ ಗುರಿಪಡಿಸಲ್ಪಟ್ಟಿದ್ದವರನ್ನು ತಪ್ಪಿತಸ್ಥರಲ್ಲವೆಂದು ಬಿಡುಗಡೆ ಮಾಡಿದರು. ಈ ವ್ಯವಹರಣೆಯ ಸಂಕ್ಷೇಪ ವಿವರಣೆ—ತಾ. ೧೪-೨-೩೭ರಲ್ಲಿ ಪಾಣೆ ಮಂಗಳೂರಲ್ಲಿ ಒಂದು ಕಂಬಳ ನಡೆಯಿತು. ಅದಕ್ಕೆ ಹೋದವರಲ್ಲಿ ಮೃತಪಟ್ಟ ಐತಪ್ಪ ಪೂಜಾರಿಯೂ ಅಪಾದಿತನಾದ ಅಮ್ಮಣ್ಣ ಪೂಜಾರಿಯೂ ಇದ್ದರು. ಮೃತನಿಗೂ ಅಮ್ಮಣ್ಣ ಪೂಜಾರಿಗೂ ಮೊದಲಿನಿಂದ ದ್ವೇಷವಿತ್ತು. ಅಮ್ಮಣ್ಣನು ಐತಪ್ಪನ ದವಡೆಗ ದೊಣ್ಣೆಯಿಂದ ಹೊಡೆಯ್ಯಲಾಗಿ ನೆರೆದಿದ್ದವರು ಕೋಪಗೊಂಡು ಅಮ್ಮಣ್ಣ ಪೂಜಾರಿಗೆ ಹೊಡೆದು ಕಳುಹಿಸಿದರು ಅಮ್ಮಣ್ಣನು ತನ್ನ ಸ್ನೇಹಿತರಿಬ್ಬರ ಕೂಡೆ ಕಲ್ಲಡ್ಕ ಗೇಟಿನ ಬದಿಯಲ್ಲಿ ಕಾದಿದ್ದು ಐತಪ್ಪ ಪೂಜಾರಿಯು ಕತ್ತಿನ ಹಿಂಭಾಗಕ್ಕೆ ಚೂರಿಯಿಂದ ತಿವಿದನು ಅದರಿಂದ ಗಾಯಗೊಂಡ ಐತಪ್ಪನು ಬಂಟ್ವಾಳದ ಆಸ್ಪತ್ರೆಗೆ ಸಾಗಿಸಲ್ಪಟ್ಟು ಅಲ್ಲಿ ತಾ ೧೮-೨-೩೭ರಲ್ಲಿ ಮೃತಪಟ್ಟನು, ಎಂದು ಪ್ರಾಸಿಕ್ಯೂಶನಿನವರ ವಾದ. ಕೊಲೆಯ ಅಪಾದನೆಯ ಮೇಲೆ ಅಮ್ಮಣ್ಣನನ್ನು ಐ. ಪಿ. ಸಿ. ಯ ೩೦೨ನೆ ಕಲಂ ಪ್ರಕಾರ ವಿಚಾರಿಸಿದರು. ಅಮ್ಮಣ್ಣನ ಸ್ನೇಹಿತನೊಬ್ಬನು ಕೊಲೆಗೆ ಸಹಾಯಕನೆಂದು ವಿಚಾರಣೆಗೆ ಗುರಿಪಡಿಸಲ್ಪಟ್ಟನು. ಮೂರುಮಂದಿ ಅಸೆಸರರು ಅಪಾದಿತರು ನಿರಪರಾಧಿಗಳೆಂದು ಅಭಿಪ್ರಾಯಪಟ್ಟರು ಸೆಶ್ಶನ್ಸ್ ಜಡ್ಜರು ಅಸೆಸರರ ಅಭಿಪ್ರಾಯವನ್ನು ಅನುಮೋದಿಸಿ ಅಪಾದಿತರನ್ನು ಬಿಟ್ಟರು. ಶ್ರೀ। ಯಂ ಶಂಕರನಾರಾಯಣ ರಾಯರು (ಕೋರ್ಟಿನವರಿಂದ ನೇಮಿಸಲ್ಪಟ್ಟವರು.) ಅಪಾದಿತರ ಪರವಾಗಿಯೂ ಪ್ರಾಸಿಕ್ಯೂಶನ್ ಕಡೆಯಿಂದ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ। ಕೆ. ಸದಾಶಿವರಾಯರೂ ವಾದಿಸಿದರು

ಜಿ. ಕಾಂಗ್ರೆಸ್ ಚುನಾವಣಾ ಸಮಿತಿ

ಬರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸಿನವರು ಭಾಗವಹಿಸಬೇಕೆಂದು ನಿರ್ಧರಿಸಿ ಆ ಬಗ್ಗೆ ಉಮೇದ್ವಾರರನ್ನು ಆರಿಸಲು ಒಂದು ಸಮಿತಿಯನ್ನು ನೇಮಿಸಿದ್ದಾರಷ್ಟೆ. ಆ ಸಮಿತಿಯು ನಿನ್ನೆಯ ದಿನ ಸಾಯಂಕಾಲ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ। ಯಂ. ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ತಾಲೂಕಿನ ಪ್ರತಿನಿಧಿಗಳು ವಿನಾ ಇತರ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಸಮಿತಿಗೆ ಕೆಲವು ಸದಸ್ಯರನ್ನು ನೇಮಕ ಮಾಡಲಾಯಿತು. ಅನಂತರ ಉಮೇದ್ವಾರರು ಅರ್ಜಿ ಕಳುಹಿಸುವಾಗ ರೂ ೫ನ್ನು ಅರ್ಜಿಯೊಂದಿಗೆ ಕಳುಹಿಸಬೇಕೆಂಬ ಸೂಚನೆಯು (ಶ್ರೀ. ಪಿ. ವಿ ಉಪಾಧ್ಯಾಯರ ಸೂಚನೆ) ಮಂಜೂರಾಯಿತು. ಪ್ರತಿಯೊಬ್ಬ ಉಮೇದ್ವಾರನೂ ಹತ್ತು ರೂಪಾಯಿಗಳನ್ನು ಕಾಂಗ್ರೆಸ್ ಸಮಿತಿಗೆ ತನ್ನ ಆಫೀಸಿನಿಂದ ಕೊಡಬೇಕೆಂದೂ ನಿರ್ಧಾರವಾಯಿತು. ಸತತ ಖಾದಿ ಧರಿಸುವವರನ್ನು ಉಮೇದ್ವಾರರಾಗಿ ನೇಮಿಸಬೇಕೆಂಬ ಶ್ರೀ। ಅಧಿಕಾರಿಗಳ ಸೂಚನೆಯು ಅಂಗೀಕರಿಸಲ್ಪಟ್ಟಿತು ಚುನಾವಣೆಯ ಉದ್ಘೋಷಪತ್ರವನ್ನು ಸಿದ್ಧಪಡಿಸಲು ಶ್ರೀ।ಗಳಾದ ಯಂ. ಶಿವರಾಯರು, ಎ. ಬಿ ಶೆಟ್ಟಿಯವರು, ಯಂ ಉಮೇಶರಾಯರು ಮತ್ತು ಬಿ. ವೆಂಕಪ್ಪ ರೈಗಳ ಸದಸ್ಯರಾಗಿರುವ ಒಂದು ಸಮಿತಿಯು ಚುನಾಯಿಸಲ್ಪಟ್ಟಿತು. ಆಗೋಸ್ತು ತಾ. ೧೫ರೊಳಗೆ ಉಮೇದ್ವಾರರು ಅರ್ಜಿಗಳನ್ನು ಕಾಂಗ್ರೆಸ್ ಕಚೇರಿಗೆ ಕಳುಹಿಸಬೇಕೆಂದು ತೀರ್ಮಾನವಾಯಿತು. (ಹರಿಜನರ ಮಟ್ಟಿಗೆ ಫೀಸು ಕೊಡಬೇಕಾಗಿಲ್ಲ.)

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಭೆ

ಚುನಾವಣಾ ಸಮಿತಿಯ ಸಭೆಯು ತೀರಿದೊಡನೆ ಜಿ ಕಾಂಗ್ರೆಸ್ ಸಮಿತಿಯ ಸಭೆ ಸೇರಿತು. ಮೊದಲು ಶ್ರೀ। ರಾಮರಾಯ ಮಲ್ಯರ ರಾಜೀನಾಮೆಯ ಪತ್ರವನ್ನು ಓದಿ ಅವರು ತಮ್ಮ ರಾಜೀನಾಮೆಯನ್ನು ವಾಪಾಸ್ ತೆಗೆದುಕೊಳ್ಳಬೇಕೆಂದು ಎಲ್ಲರೂ ಅಭಿಪ್ರಾಯಪಟ್ಟರು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ನಿಧಿಗೆ ಹಣವನ್ನು ಕೂಡಿಸುವ ವಿಷಯದಲ್ಲಿ ಕೆಲವೊಂದು ಸೂಚನೆಗಳು ಪರ್ಯಾಲೋಚಿಸಲ್ಪಟ್ಟವು. ಕಾಂಗ್ರೆಸ್ ಶಿಸ್ತಿಗೆ ಸರಿಯಾಗಿ ಇನ್ನು ಮುಂದಕ್ಕೆ ನಡೆದುಕೊಳ್ಳುವುದಾಗಿ ಶ್ರೀಮತಿ ಸುಶೀಲಾಬಾಯಿ ಉಡುಪರು ಬರೆದ ಪತ್ರವು ಓದಲಾಯಿತು. ಕಾಂಗ್ರೆಸಿನ ಆಜ್ಞೆಯನ್ನು ಅವರು ಉಲ್ಲಂಘನೆ ಮಾಡಿದ್ದರಿಂದ ಅವರನ್ನು ಕಾಂಗ್ರೆಸ್ ಸದಸ್ಯತನದಿಂದ ತೆಗೆದುಹಾಕಬೇಕೆಂದೂ, ಅವರಿಂದ ವಸೂಲಾದ ೪ ಆಣೆಗಳನ್ನು ಹಿಂದಕ್ಕೆ ಕೊಡಬೇಕೆಂದೂ ಸಭೆಯವರು ಅಭಿಪ್ರಾಯಪಟ್ಟು ಆ ಪ್ರಕಾರ ತೀರ್ಮಾನವಾಯಿತು. ಜಿಲ್ಲಾ ರಾಜಕೀಯ ಪರಿಷತ್ತನ್ನು ಜರಗಿಸುವ ವಿಷಯದಲ್ಲಿ ತಾಲೂಕು ಕಾಂಗ್ರೆಸ್ ಸಮಿತಿಗಳ ಅಭಿಪ್ರಾಯವನ್ನು ತಿಳಿಯಬೇಕೆಂದಾಯಿತು. ಶ್ರೀ ಯು. ಸಿ. ಎಸ್. ಭಟ್ಟರವರ ಆಕ್ಷೇಪಣೆಯ ವಿಚಾರದ ಬಗ್ಗೆ ಡಿ. ಸಿ. ಸಿ. ಯವರು ಶ್ರೀ।ಗಳಾದ ಉಮೇಶರಾವ್ ಕೆ. ಆರ್. ಆಚಾರ್, ಡಾ। ವಿಟ್ಠಲ ಶೆಟ್ಟಿ ಇವರುಗಳಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಿದರು. ಉಡುಪಿಯ ಕಾಂಗ್ರೆಸ್ ಸದಸ್ಯರುಗಳು ಜಿಲ್ಲಾ ಕಾಂಗ್ರೆಸ್ ಸಮಿತಿಯು ಒಂದು ಸಭೆಯನ್ನು ಜರೂರಿನಿಂದ ಸೇರಿಸಬೇಕೆಂದು ಅರ್ಜಿಬರಕೊಂಡ ಮೇರೆಗೆ ಬರುವ ತಾ. ೧೮ನೇ ಭಾನುವಾರ ಮಧ್ಯಾಹ್ನ ೨ ಘಂಟೆಗೆ ಸಭೆಯನ್ನು ಮಂಗಳೂರಲ್ಲಿ ಕರೆಯಬೇಕೆಂದು ನಿರ್ಧಾರವಾಯಿತು. ಇನ್ನಿತರ ಕೆಲವು ವಿಷಯಗಳ ಪರ್ಯಾಲೋಚನೆಯಾದ ಮೇಲೆ ಸಭಾಂತ್ಯವಾಯಿತು

"ಹಿಂದುಸ್ಥಾನದ ಧಾರ್ಮಿಕ ತತ್ವಗಳು"
ಶ್ರೀ ಸ್ವಾಮಿ ಅದ್ವೈತಾನಂದರ ಭಾಷಣ

ನಿನ್ನೆಯ ದಿನ ಸಾಯಂಕಾಲ ೬-೩೦ಕ್ಕೆ ಸರಿಯಾಗಿ ಕಲ್ಕತ್ತದ ಭಾರತ ಸೇವಾ ಸಂಘದ ಶ್ರೀ। ಸ್ವಾಮಿ ಅದ್ವೈತಾನಂದಜೀಯವರು ಸ್ಥಳೀಯ ಥಿಯಸಾಫಿಕಲ್ ಲಾಜಿನಲ್ಲಿ ಮೇಲಿನ ವಿಷಯದಲ್ಲಿ ಉಪನ್ಯಾಸವಿತ್ತರು ಶ್ರೀ। ಡಿ. ಬಿ. ಕೃಷ್ಣಮೂರ್ತಿ ಪಂತಲು ಗಾರು, (ಸಬ್ ಜಡ್ಜರು) ಇವರು ಅಗ್ರಾಸನ ವಹಿಸಿದ್ದರು. ಶ್ರೀ। ಸ್ವಾಮಿಜಿಯವರು ತಮ್ಮ ಭಾಷಣದಲ್ಲಿ ಹೀಗೆಂದರು. "ಹಿಂದೆ ದಕ್ಷಿಣ ಹಿಂದೂ ದೇಶವು ಉತ್ತರ ದೇಶಕ್ಕೆ ಧಾರ್ಮಿಕ ತತ್ವಗಳನ್ನು ಕೊಡುತ್ತಿತ್ತು. ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ, ಶ್ರೀ ಮಧ್ವಾಚಾರ್ಯರೇ ಮೊದಲಾದ ಧರ್ಮಬೋಧಕರು ದಕ್ಷಿಣ ದೇಶದವರು ಅವರು ತಮ್ಮ ತತ್ವಗಳನ್ನು ಉತ್ತರ ಹಿಂದುಸ್ಥಾನದಲ್ಲಿ ಪ್ರಚರಿಸಿದರು ಆದರೆ ಈಗ ಉತ್ತರಹಿಂದುಸ್ಥಾನದವರದಿ ಈಗಿನ ಧರ್ಮ ಪ್ರಚಾರಕರು ಉತ್ತರ ದೇಶದವರೇ ಅಧಿಕ. ರಾಜಾ ರಾಮಮೋಹನ ರ್‍ಯಾ, ಮಹರ್ಷಿದಯಾನಂದ ಸರಸ್ವತಿ, ಶ್ರೀ ರಾಮಕೃಷ್ಣ ಪರಮಹಂಸ-ಇವರೇ ಮೊದಲಾದವರು ಉತ್ತರ ದೇಶೀಯರು ದಕ್ಷಿಣ ದೇಶದ ವರೆಗೆ ತಮ್ಮ ಧರ್ಮಗಳನ್ನು ಪ್ರಚಾರಮಾಡಿದ್ದಾರೆ. ಭಾರತ ಸೇವಾ ಸಂಘವೂ ಸಹ ಒಂದು ಧರ್ಮ ಸಂಸ್ಥೆ.

"ಈ ಕಾಲದಲ್ಲಿ ಜನರು ಧರ್ಮವನ್ನು ಮರೆತು ಬಿಡುತ್ತಿದ್ದಾರೆ. ಪಾಶ್ಚಾತ್ಯ ದೇಶಗಳ ಸಂಪರ್ಕದಿಂದ ನಮ್ಮ ದೇಶೀಯರೂ ಧರ್ಮವನ್ನು ಬಿಡುತ್ತಿದ್ದಾರೆ. ನಮ್ಮ ದೇಶವು ಧರ್ಮದಿಂದ ಹೆಸರುಗೊಂಡಿತ್ತು. ಧರ್ಮದ ಸಂಸ್ಕೃತಿಯಿಂದ ಹೆಸರುವಾಸಿಯಾಯಿತು. ಆದ್ದರಿಂದ ಅಂತಹ ಧರ್ಮವನ್ನು ನಾವು ಮರೆಯತಕ್ಕದ್ದಲ್ಲ. ಆದ್ದರಿಂದ ಧರ್ಮವನ್ನು ಪುನಃ ಪಸರಿಸಬೇಕು ಅದಕ್ಕಾಗಿಯೇ ಭಾರತ ಸೇವಾ ಸಂಘದವರು ಯತ್ನಿಸುತ್ತಿದ್ದಾರೆ.

ಭಾರತ ಸೇವಾ ಸಂಘದ ವಿಷಯವಾಗಿ ಮಾತಾಡುತ್ತಾ ಸ್ವಾಮಿಜೀಯವರು ಹೀಗೆಂದರು. "ಭಾರತ ಸೇವಾ ಸಂಘವು ಪ್ರೌಢ ವಿದ್ಯಾಭ್ಯಾಸವನ್ನು ಹೊಂದುತ್ತಿರುವ ವಿದ್ಯಾರ್ಥಿಗಳಿಗೆ ಮತ ಸಂಬಂಧವಾದ ಶಿಕ್ಷಣವನ್ನು ಕೊಡುತ್ತಿದೆ. ಇತರ ವಿದ್ಯಾರ್ಥಿಗಳ ಆಶ್ರಮಗಳಿವೆ. ಅಲ್ಲದೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೂ, ಗ್ರಾಮಕೈಗಾರಿಕೆಗಳ ಉದ್ಧಾರಕ್ಕೂ, ಸಂಘದವರು ಕೆಲಸಮಾಡುತ್ತಾರೆ ಪ್ರವಾಹದ ಹಾವಳಿಯ ನಿವಾರಣೆ, ಕ್ಷಾಮ ಪೀಡಿತರಿಗೆ ಸಹಾಯ, ಇತ್ಯಾದಿ ಕೆಲಸಗಳನ್ನು ಸಂಘದವರು ಮಾಡುತ್ತಾರೆ.

ಅಧ್ಯಕ್ಷರು ಭಾರತ ಸೇವಾ ಸಂಘದ ಉದ್ದೇಶಗಳನ್ನು ಕೊಂಡಾಡಿ ಧರ್ಮದ ಮಹತ್ವವನ್ನೂ ಅದನ್ನು ವೃದ್ಧಿ ಪಡಿಸುವ ಅಗತ್ಯವನ್ನೂ ಕುರಿತು ಮಾತಾಡಿದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

[ಶ್ರೀ। ಅದ್ವೈತಾನಂದಜೀಯವರೂ ಅವರೊಡನೆ ಇನ್ನು ನಾಲ್ಕು ಮಂದಿ ಸನ್ಯಾಸಿಗಳೂ ಬಂದಿರುವರು. ದಕ್ಷಿಣದೇಶದಲ್ಲಿ ಭಾರತ ಸೇವಾ ಸಂಘದ ಶಾಖೆಗಳನ್ನು ಸ್ಥಾಪಿಸುವುದೇ ಇವರ ಉದ್ದೇಶವೆಂದು ತಿಳಿದುಬರುತ್ತದೆ]

ಹೊಸ ಪುಸ್ತಕ! ಹೊಸ ಪುಸ್ತಕ!!

ಕೆ. ಕಾಂತಪ್ಪ ಶೆಟ್ಟಿಯವರಿಂದ ರಚಿತವಾದ

ಹೆಂಡ್ತಿ ಗಂಡನಾದರೆ?

ಹಾಸ್ಯರಸ ಪ್ರಧಾನವಾದ ಏಕಾಂಕ ಪ್ರಹಸನ. ಸ್ಕೂಲ್ ಡೇ ಮೊದಲಾದ ಸಂದರ್ಭಗಳಲ್ಲಿ ಅಭಿನಯಿಸಲು ಯೋಗ್ಯ ನಾಟಕ.

ಬೆಲೆ. ೦ ೪ ೦ ಮಾತ್ರ

ನವಭಾರತ ಬುಕ್ ಡಿಪೋ ಉಡುಪಿ

ವಿ. ಎಸ್. ಸಿಬ್ರೂಕರ್

ಟಿ ಸೆಂಟ್ರಲ್ ರೆನಿ ಸ್ಟ್ರೀಟ್, ಬೊಂಬಾಯಿ

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S India.	Charni Road, Bombay No. 4.

INSPECTORATE OFFICE AT:

1. Ottapalam, Malabar District. 2. Central Station Road, Trivandrum.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	... ...	Rs. 80,00,000
Life Funds Over	... ...	Rs. 68,00,000
Premium Income Over	...	Rs 22,54,000
Interest Income	... ...	Rs. 3,16,000
Claims Paid ...	... ...	Rs. 5,75,000

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE Rs. 4,42,51,200

The Canara Banking Corporation Udipi Ltd.

(Incorporated in British India)

Estd. 1906

ANNOUNCEMENT.

We have great pleasure to inform the public and our constituents that our name has been included in the Second Schedule of the Reserve Bank of India Act.

Issued & Subscribed Capital	Rs. 350000/-
Paid up Capital	Rs. 288950/-
Reserves	Rs. 363573/-
Deposits	Rs. 3740722/-
TOTAL RESOURCES EXCEED	HALF A CRORE.

V. R. Kamath, B. A., LL.B.
Mg. Manager.

ಉಡುಪಿ, ಗುರುವಾರ, ತಾ. ೮-೭-'೩೭

ತಾಟಸ್ಥ್ಯದ ಫಾರ್ಸು!

ಪರಿಸ್ಥಿತಿಯು ಇದೇ ರೀತಿ ನಡೆದರೆ ಸ್ಪೈನಿನಲ್ಲಿ ಜನರಲ್ ಫ್ರೇಂಕೋರವರು ಜಯಶೀಲರಾಗುವ ದಿನವು ದೂರವಿರಲಾರದೆಂದು ಈಗ ತಾನೆ ಯುರೋಪಿನಿಂದ ಬಂದಿರುವ ಶ್ರೀ. ಭೂಲಭಾಯಿ ದೇಸಾಯಿಯವರಂದಿರುವರು. ಇಟಲಿ, ಪೋರ್ಚುಗೀಸ್ ಮತ್ತು ಜರ್ಮನ್ ಸರಕಾರಗಳು ಪ್ರತ್ಯಕ್ಷವಾಗಿಯೇ ಜನರಲ್ ಫ್ರೇಂಕೋರವರ ಪಕ್ಷ ಹಿಡಿದು ಅವರೇ ವಿಜಯಿಗಳಾಗಬೇಕೆಂಬ ನಿರ್ಧಾರದಿಂದ ಅವರಿಗೆ ಬೇಕಾದ ಸಹಾಯಮಾಡುತ್ತಿದ್ದಾರೆ. ಬಿಲ್ಬಾವೋ ಪಟ್ಟಣವು ಬಂಡಾಯಗಾರರ ವಶವಾದೊಡನೆಯೇ ಮುಸಲೋನಿ ಮತ್ತು ಹಿಟ್ಲರರು ಸಂತೋಷದಿಂದ ಉಬ್ಬಿ ಜನರಲ್ ಫ್ರೇಂಕೋರರನ್ನು ಅಭಿನಂದಿಸಿ ಕೊಟ್ಟ ತಂತಿಗಳು ಅವರ ಇಚ್ಛೆಯೇನಿರುವುದೆಂಬುದನ್ನು ಸ್ಪಷ್ಟಗೊಳಿಸುತ್ತವೆ. ಸ್ಪೈನಿನಲ್ಲಿ ಫೆಸಿಸ್ ರಾಜ್ಯಭಾರವು ಸ್ಥಾಪಿಸಲ್ಪಟ್ಟರೆ ಯುರೋಪಿನಲ್ಲಿ ಫೆಸಿಸ್ಟರ ಕೈಮೇಲಾಗಿ ಅವರ ಪ್ರಭಾವವು ಹೆಚ್ಚಲು ಅತ್ಯನುಕೂಲವಾಗುವದು. ಭೂಮಧ್ಯ ಸಾಗರದ ಮೇಲೆ ಇಟಲಿಯು ಸಂಪೂರ್ಣ ಅಧಿಕಾರ ಸ್ಥಾಪಿಸಲು ದೊಡ್ಡ ಆತಂಕವೇನೂ ಇರಲಾರದು. ಜರ್ಮನಿಯು ತನಗೆ ಪ್ರಾಮುಖ್ಯವಾಗಿ ಬೇಕಾದ ಕೆಲವು ಖನಿಜಗಳನ್ನು ಸ್ಪೈನಿನಿಂದ ಸುಲಭವಾಗಿ ತರಿಸಿಕೊಳ್ಳಬಹುದು. ನೆರೆಯ ಪೋರ್ಚುಗಲ್ಲಿಗಂತೂ ಇದಾವುದಕ್ಕೂ ಅನುಕೂಲವೇ. ಯಾಕೆಂದರೆ ಸ್ಪೈನಿನಲ್ಲಿ ಸಾಮ್ಯವಾದೀ ರಾಜ್ಯಭಾರವು ಸ್ಥಾಪಿತವಾದರೆ ಪೋರ್ಚುಗಲ್ಲಿನಲ್ಲಿ ವಿಪ್ಲವವುಂಟಾಗದಿರಲಾರದು. ಹಾಗೆ ಫೆಸಿಸ್ಟ್ ರಾಜ್ಯಗಳು ಯುರೋಪಿನಲ್ಲಿ ತಮ್ಮ ಕೂಟದ ಬಲವೇ ಹೆಚ್ಚಾಗಬೇಕು, ತಮ್ಮ ವರ್ಚಸ್ಸೇ ಬೆಳೆಯಬೇಕೆಂಬ ದೃಢನಿರ್ಧಾರದಿಂದ ಸ್ಪೈನಿನ ಅಂತಃಕಲಹವನ್ನು ತಮ್ಮ ಸ್ವಾರ್ಥ ಸಾಧನೆಗಾಗಿ ಉಪಯೋಗಿಸುತ್ತಿರುವಾಗ ತಾಟಸ್ಥ್ಯವಾದರೂ ಹೇಗೆ ಸಾಧ್ಯವಿದೆ?

ಸ್ಪೈನಿನ ಅಂತಃಕಲಹಾಗ್ನಿಯು ಇಡೀ ಯುರೋಪಿನ ದಾವಾಗ್ನಿಯಾಗಿ ಪರಿಣಮಿಸಬಾರದು. ಅವರಲ್ಲಿ ಹೊರಗಣವರಾರೂ ಕೈಹಾಕಬಾರದೆಂದು ಯಥಾರ್ಥವಾಗಿ ತಾಟಸ್ಥ್ಯಕ್ಕಾಗಿ ಪ್ರಯತ್ನ ನಡಿಸುವ ಒಂದೇ ಒಂದು ರಾಷ್ಟ್ರವೆಂದರೆ ಇಂಗ್ಲೆಂಡು. ಫ್ರಾನ್ಸು ಕೂಡಾ ಇಂಗ್ಲೆಂಡಿನೊಂದಿಗೆ ಸಹಕರಿಸಿರುವುದು. ತಾಟಸ್ಥ್ಯದ ಪ್ರಯತ್ನವು ಜಯಶೀಲವಾಗಿ ಸ್ಪೈನಿನ ಅಂತಃಕಲಹದಲ್ಲಿ ಇತ್ತಂಡದವರಿಗೂ ಹೊರಗಿನಿಂದ ಯಾವ ಸಹಾಯವೂ ದೊರೆಯದಂತಾದರೆ, ಶೇಕಡ ೭೦ರಷ್ಟು ಪ್ರಜೆಗಳ ಬೆಂಬಲವಿರುವ ಸ್ಪೈನಿಶ್ ಸರಕಾರಕ್ಕೆ ವಿಜಯ ನಿಶ್ಚಯವೆಂದು ಬಗೆದು ರಷ್ಯವು ಇಂಗ್ಲೆಂಡು ಫ್ರಾನ್ಸುಗಳ ಸಾಲಿಗೆ ಸೇರಿದ್ದುದು. ತಾಟಸ್ಥ್ಯದ ಕುಟಿಲೋಪಾಯದಿಂದ ಸ್ಪೈನಿಗೆ ಅತಿ ಸಮೀಪವಿರುವ ಫ್ರಾನ್ಸ್ ಮತ್ತು ಇಂಗ್ಲೆಂಡಿನಿಂದ ಸ್ಪೆನಿಶ್ ಸರಕಾರಕ್ಕಾಗಲಿ, ಬಂಡಾಯಗಾರರಿಗಾಗಲಿ ಯಾವ ಸಹಾಯವೂ ದೊರೆಯದಂತಾದರೆ, ತಾವು ಒಳಗಿಂದೊಳಗೆ ಪೋರ್ಚುಗಲ್ಲಿನ ಮೂಲಕವಾಗಿ ಬಂಡಾಯಗಾರರಿಗೆ ಬೇಕಾದ ಸಹಾಯವಿತ್ತು ಅವರು ಗೆಲ್ಲುವಂತೆಮಾಡಿ ತಮ್ಮ ಬೇಳೆ ಬೇಯಿಸಬಹುದೆಂದೇ ಇಟಲಿ ಜರ್ಮನಿಗಳು ತಾಟಸ್ಥ್ಯದ ನಟನೆಗೊಪ್ಪಿದ್ದುದು.

ನಾವು ಇನ್ನೊಂದೆಡೆ ಕೊಟ್ಟಿರುವ ಕೆಪ್ಟನ್ ಗ್ರಿಫಿತರ ಅಭಿಪ್ರಾಯದಿಂದ ಈ ತಾಟಸ್ಥ್ಯವು ಅದೆಂತಹ ಅಂತರ ರಾಷ್ಟ್ರೀಯ ಫಾರ್ಸೆಂಬುದು ವ್ಯಕ್ತವಾಗುವುದು. ಆದರೆ ಇಂಗ್ಲೆಂಡು, ಯುರೋಪಿನಲ್ಲಿ ಯುದ್ಧವಾಗದಂತೆ ತಡೆಗಟ್ಟಲಾಗುವುದೋ ಎಂಬೊಂದೇ ಅಭಿಪ್ರಾಯದಿಂದ ಈ 'ಫಾರ್ಸ'ನ್ನು ನಡಿಸುತ್ತಿರುವುದು. ಅದನ್ನೂ ಈಗ ಜರ್ಮನಿ, ಇಟಲಿ ಮತ್ತು ಪೋರ್ಚುಗೀಸ್ ಸರಕಾರಗಳು ಮುರಿದು ಇಚ್ಛಾನುಸಾರ ನಡಿಯಹತ್ತಿವೆ. ಸ್ಪೈನಿನ ಸಮುದ್ರ ಕರಾವಳಿಯನ್ನು ತಾಟಸ್ಥ್ಯ ರಾಷ್ಟ್ರಗಳ ಯುದ್ಧ ನಾವೆಗಳು ಕಾಯುತ್ತಿದ್ದು ಆ ಮೂಲಕ ಯುದ್ಧ ಸಾಮಾಗ್ರಿಗಳೇನೂ ಸ್ಪೈನಿಗೆ ಹೋಗದಂತೆ ನೋಡುವ ಏರ್ಪಾಡು ಬಂಡಾಯಗಾರರಿಗೆ ಹಾನಿಕರವಾಗಿದೆ. ಯಾಕೆಂದರೆ ಹೆಚ್ಚಿನ ಸಮುದ್ರ ಕರಾವಳಿ ಪ್ರದೇಶವು ಅವರ ಅಧೀನವಾಗಿದೆ, ಆ ಮೂಲಕವೇ ಅವರು ಹೊರಗಣಿಂದ ತಮಗೆ ಬೇಕಾದ ಸಾಮಗ್ರಿಗಳನ್ನು ಪಡೆಯಬೇಕಾಗಿದೆ. ಇದು ಹೊರತು ಅವರಲ್ಲಿ ಸ್ಪೆನಿಶ್ ಸರಕಾರಕ್ಕಿಂತ ಹೆಚ್ಚಿನ ನೌಕಾ ಪಡೆಯೂ ಇದೆ. ಬಂಡಾಯಗಾರರಿಗೆ ಹಾನಿಯಾಗುವ ಯಾವ ಕೆಲಸವೂ ಜರ್ಮನಿ ಮತ್ತು ಇಟಲಿಗಳಿಗೆ ಸಹನೀಯವಾಗದು. 'ಆದುದರಿಂದ ಅವೀಗ, ಈ ತಾಟಸ್ಥ್ಯ ರಾಜ್ಯಗಳು ಸ್ಪೈನಿನ ಸಮುದ್ರ ಕರಾವಳಿಯನ್ನು ಕಾಯುವ ವ್ಯವಸ್ಥೆಯನ್ನು ತೆಗೆದುಹಾಕಬೇಕೆಂದು ಪ್ರಯತ್ನಿಸುತ್ತವೆ. ಜರ್ಮನಿಯ ಯುದ್ಧನಾವೆಯೊಂದರ ಬಳಿ ಯಾವುದೋ ಒಂದುಜಲಾಂತರ್ಗಾಮಿ ನಾವೆಯ ಟೋಪೆಡೋ ಒಂದು ಹಾದುಹೋಯಿತೆಂಬ ನೆವದಿಂದ ದೊಡ್ಡ ಗಲಾಟೆಯೆಬ್ಬಿಸಿ ಜರ್ಮನಿಯು ನೌಕಾಪಹರೆಯಲ್ಲೇ ಸಹಕರಿಸಲು ಸಾಧ್ಯವಿಲ್ಲೆಂದು ಹಿಂತೆಗೆಯಿತು. ಕೂಡಲೆ ಇಟಲಿ ಪೋರ್ಚುಗಲ್‌ಗಳು ಅದರ ಸಾಲಿಗೆ ಸೇರಿದುವು. ಇದರಿಂದ ತೀವ್ರ ಅತೃಪ್ತಿಗೊಂಡ ಇಂಗ್ಲೆಂಡು, ಇಟಲಿ ಜರ್ಮನಿಗಳು ಹಿಂದೆಗೆದರೂ ಸ್ಪೈನಿನ ಕರಾವಳಿಯಲ್ಲೆಲ್ಲಾ ನೌಕಾಪಹರೆ ನಡಿಸುವ ಕೆಲಸವನ್ನು ಫ್ರಾನ್ಸಿನ ಸಹಾಯ ಪಡೆದು ತಾನೇ ವಹಿಸುವ ಆಲೋಚನೆ ಮಾಡಿರುವುದು. ಆದರೆ ಜರ್ಮನಿ ಇಟಲಿಗಳು ಇದನ್ನು ವಿರೋಧಿಸಿರುವವು. ಯಾಕೆಂದರೆ ನಿಜವಾದ ಯಾವ ಪಹರೆಯೂ ಅವುಗಳಿಗೆ ಬೇಕಾಗಿಲ್ಲ. ಆದರೆ ಇಂಗ್ಲೆಂಡೇನೋ ಈ ಸಲ ತನ್ನ ದೌರ್ಬಲ್ಯ ಬಿಟ್ಟು ನೌಕಾಪಹರೆಗೆ ತಕ್ಕ ಏರ್ಪಾಡು ಮಾಡುವನಿರ್ಧಾರ ಮಾಡಿರುವಂತಿದೆ. ಇಲ್ಲವಾದರೆ ಅಂತರ ರಾಷ್ಟ್ರೀಯ ಫಾರ್ಸನ್ನೇ ಕೊನೆಗೊಳಿಸಿಬಿಡುವ ಬೆದರಿಕೆ ಹಾಕಿದೆ. ಅದಕ್ಕೆ ಜರ್ಮನಿ ಮತ್ತು ಇಟಲಿಯು ಸಿದ್ಧವಿಲ್ಲ. ಅಂತರ ರಾಷ್ಟ್ರೀಯ ತಾಟಸ್ಥ್ಯ ಫಾರ್ಸು ಕೊನೆಗೊಂಡಿತೆಂದರೆ ಅತ್ಯಂತ ಸಮೀಪದ ಫ್ರಾನ್ಸ್ ಮತ್ತು ಇಂಗ್ಲೆಂಡುಗಳಿಂದ ಸ್ಪೈನಿಶ್ ಸರಕಾರವು ಬೇಕಷ್ಟು ಯುದ್ಧೋಪಕರಣಗಳನ್ನು ಸುಲಭವಾಗಿ ಪಡೆಯಬಹುದು. ಆದುದರಿಂದ ಬಂಡಾಯಗಾರರಿಗೆ ಮತ್ತೂ ದೊಡ್ಡ ಹಾನಿಯಾಗುವುದು. ಹೀಗೆ ಜರ್ಮನಿ ಇಟಲಿಗಳು ಉಭಯ ಸಂಕಟದಲ್ಲಿ ಬಿದ್ದು ಏನಾದರೂ ರಾಜಿಯಾಗಬಹುದೆಂಬ ನಿರೀಕ್ಷೆಯಲ್ಲಿವೆ. ಯಾಕೆಂದರೆ ಇಂಗ್ಲೆಂಡಿನ ಮನೋವೃತ್ತಿಯು ಅದಕ್ಕೆ ಗೊತ್ತೇ ಇದೆ!

ಪ್ರೇಮ ವಿದ್ಯಾಪೀಠ.

ವಿಪರೀತ ಹಣ ವೆಚ್ಚಮಾಡಿ, ತಮ್ಮ ಜೀವನ ನಿರ್ವಾಹಕ್ಕಾಗಲಿ, ಜನತೆಯ ಹಿತಸಾಧನೆಗಾಗಲಿ ಉಪಯೋಗಕ್ಕೂ ಬೀಳದ ಆಡಂಬರದ ಡಿಗ್ರಿಗಳನ್ನು ಪಡೆದು ನೌಕರಿಯ ಬೇಟೆಯಲ್ಲೇ ನಿರತವಾಗುವ ಪರಾವಲಂಬಿ, ಪರೋಪಜೀವಿಗಳನ್ನು ಸಹಸ್ರಗಟ್ಟಲೆಯಲ್ಲಿ ತಯಾರಿಸುವ ದುಂದುಗಾರಿಕೆ ನಮ್ಮ ಈಗಣಹೆಚ್ಚಿನ ವಿದ್ಯಾಪೀಠಗಳು ನಡಿಸುತ್ತವೆಂದು ಧೈರ್ಯದಿಂದಹೇಳಬಹುದು. ಇದರಿಂದಾಗಿಯೇ ದೇಶದಲ್ಲೀಗ ಶಿಕ್ಷಿತ ನಿರುದ್ಯೋಗಿ ಸಮಸ್ಯೆಯುಂಟಾಗಿದೆ. ಆದರೆ ಪಂಡಿತ ತಾರಾನಾಥರು ಬಳ್ಳಾರಿ ಜಿಲ್ಲೆಯ ತುಂಗಭದ್ರಾ ತೀರದಲ್ಲಿ ಪ್ರೇಮಾಯತನ ಆಶ್ರಮವನ್ನು ಸ್ಥಾಪಿಸಿ ಅಲ್ಲಿ ನಡಿಸಿಕೊಂಡು ಬರುವ ರೂಢಿಯವಿದ್ಯಾಪೀಠಗಳಿಗಿಂತ ತೀರಾಭಿನ್ನವಾಗಿದ್ದು, ತರುಣರು ಸ್ವತಂತ್ರ ಉದ್ಯೋಗ ನಡಿಸುತ್ತಿರುವಾಗಲೇಜನಸೇವೆಯನ್ನೂ ಮಾಡುವಂತೆ ಅವರನ್ನು ತರಬೇತಿ ಕೊಡುವ ವಿಶಿಷ್ಟತೆಯುಳ್ಳದ್ದಾಗಿದೆ. ಈಗ ಜನಸೇವೆಯ ಹಾಗೂ ಜೀವನ ನಿರ್ವಾಹದ ಅತ್ಯುತ್ತಮ ವೃತ್ತಿಯೆಂದರೆ ವೈದ್ಯಕೀಯ. ಪಂಡಿತ ತಾರಾನಾಥರು ಆಯುರ್ವೇದದಲ್ಲಿ ಅಂತರ ರಾಷ್ಟ್ರೀಯ ಅಧಿಕಾರಿಕ ಪುರುಷರಾಗಿ ಪ್ರಸಿದ್ಧರಾಗಿದ್ದಾರೆ. ಪಾಶ್ಚಿಮಾತ್ಯ ಮತ್ತು ಇತರ ಪೌರ್ವಾತ್ಯ ವೈದ್ಯಕೀಯ ಕ್ರಮಗಳ ಅಸಾಧಾರಣ ಜ್ಞಾನ ಕೂಡಾ ಅವರಿಗಿರುವುದು. ಪ್ರೇಮ ವಿದ್ಯಾಪೀಠದಲ್ಲಿ ಪಂಡಿತರ ಕೈಕೆಳಗೆ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣವೀಯುವ ವ್ಯವಸ್ಥೆಯು ಈಗ 5ವರ್ಷಗಳಿಂದ ಬಹಳ ಚೆನ್ನಾಗಿ ನಡೆದಿದೆ. ಕನ್ನಡದಲ್ಲಿ ಕೇವಲ ಒಂದೇ ವರ್ಷದ ಅಭ್ಯಾಸಮಾಡಿ ಒಬ್ಬನು ಚಿಕಿತ್ಸಕನಾಗಿ ಜೀವನ ನಿರ್ವಾಹ ಹಾಗೂ ಜನಸೇವೆ ಮಾಡಬಹುದು. ಇದಕ್ಕೆ ಹೆಚ್ಚಿನ ವಿದ್ಯೆಕೂಡಾ ಬೇಕಿಲ್ಲ. ಹಾಯರ್ ಎಲಿಮೆಂಟರಿ ಆದರಾಯಿತು. ಇನ್ನು 2ವರ್ಷಗಳ ತರಬೇತು ಪಡೆದು ಆರ್ಯವೇದ ಶಿರೋಮಣಿಯಾಗಬಹುದು. ಆಮೇಲೆ ಒಂದು ವರ್ಷ ಕಲಿತು ಆಯುರ್ವೇದ ಚೂಡಾಮಣಿಯಾಗಬಹುದು. ಕಡೆಗೆ 2ವರ್ಷ ವೈದ್ಯವೃತ್ತಿನಡಿಸಿ ತನ್ನ ವಿಶೇಷ ನೈಪುಣ್ಯತೆಯನ್ನು ಸಿದ್ಧಗೊಳಿಸಲು ಯಾವ ವಿಷಯದಲ್ಲಾದರೂ ಪ್ರಬಂಧವನ್ನೊಪ್ಪಿಸಿ ಆಯುರ್ವೇದ ವಿಶಾರದನಾಗಬಹುದು. ಹೀಗೆಯೇ ಇಂಗ್ಲಿಷಿನಲ್ಲಿ ಭಿಷಗೆಂದು ಕ್ಲಾಸಿರುತ್ತದೆ. ಇದಕ್ಕೆ ಸೇರಬೇಕಾದರೆ ಒಬ್ಬನು ಸ್ಕೂಲ್ ಫೈನಲ್ ಕಲಿತಿರಬೇಕು. ಇದರಲ್ಲಿಯೂ ವೈದ್ಯಭಾನು, ವೈದ್ಯಗುರು ಕೋರ್ಸುಗಳೆಲ್ಲಾ ಇರುತ್ತವೆ. ಅನಾವಶ್ಯಕವಾಗಿ ಹೆಚ್ಚಿನ ಕಾಲವೇನೂ ಕಳೆಯದೆ ಅತ್ಯಂತ ಕಡಿಮೆ ವೆಚ್ಚದಿಂದ ವಿದ್ಯಾರ್ಥಿಗಳು ಪ್ರೇಮವಿದ್ಯಾಪೀಠದಲ್ಲಿ ತಮ್ಮ ಜೀವನ ನಿರ್ವಾಹದ ದಾರಿಯನ್ನು ಕಂಡುಕೊಂಡು ಸಮಾಜದಲ್ಲಿ ಪ್ರಯೋಜನಕಾರಿಗಳಾಗಬಹುದು. ಈ ವಿದ್ಯಾಪೀಠದಿಂದ ಕಲಿತುಹೋದ ಹಲವರು ಜಯಶೀಲರಾಗಿ ಉದ್ಯೋಗ ನಡಿಸುತ್ತಿರುವರು. ಸಮಾಜಸೇವೆಮಾಡಿ ಜನಪ್ರೀತರಾಗಿರುವರು. ವೈದ್ಯಕೀಯದ ಹೊರತು ಪತ್ರಿಕಾ ವ್ಯವಸಾಯದಲ್ಲಿ ತರಬೇತಿಮಾಡುವ ವಿಲೇಖ ಶಿರೋಮಣಿ ಕೋರ್ಸಿರುತ್ತದೆ. ಇದಲ್ಲದೆ ಪ್ರೇಮವಿದ್ಯಾಪೀಠದಲ್ಲಿ ವಿದ್ಯಾರ್ಥಿಗಳು ಸರ್ವ ಸಾಮಾನ್ಯ ತಿಳುವಳಿಕೆ ಪಡೆಯಲು ಎಲ್ಲಾ ಅನುಕೂಲತೆಯಿದೆ. ಕರ್ನಾಟಕದ ವಿಶೇಷವಾಗಿ ದಕ್ಷಿಣಕನ್ನಡದ ವಿದ್ಯಾರ್ಥಿಗಳು ಈ ವಿದ್ಯಾಪೀಠದ ಸದುಪಯೋಗ ಪಡೆದು ಪ್ರಯೋಜನ ಹೊಂದಲು ಮುಂದಾಗಬೇಕೆಂದು ನಮ್ಮ ವಿನಂತಿ.

ಸ್ವದೇಶ

ಅಧಿಕಾರ ಸ್ವೀಕಾರಕ್ಕೆ ಅನುಕೂಲ ವಾತಾವರಣ

ಮಹಾತ್ಮಾ ಗಾಂಧಿಜಿಯವರು ಮತ್ತು ಪಂಡಿತ ನೆಹರುಗಳು, ವೈಸರಾಯರ ಹೇಳಿಕೆಯು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯವನ್ನು ಎಷ್ಟರ ಮಟ್ಟಿಗೆ ಒಪ್ಪುತ್ತದೆಂಬ ಕುರಿತು ಅತಿ ದೀರ್ಘ ಮಾತುಕತೆ ನಡಿಸಿದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸೇರುವ ದಿನ ಸೋಮವಾರವಾದುದರಿಂದ ಆ ದಿನ ತಾನು ಮಾತಾಡಲನುಕೂಲವಾಗುವಂತೆ ಗಾಂಧಿಯವರು ತನ್ನ ಸೋಮವಾರದ ಮೌನವ್ರತವನ್ನು ಬದಲಾವಣೆ ಮಾಡಿರುವರು. ತಾ. ೩ರಲ್ಲು ಬೆಳಗ್ಗೆ ೭ ಘಂಟೆಯಿಂದ ಸಂಜೆ ೬ರ ವರೆಗೆ ಪಂಡಿತ

ಸ್ವದೇಶ — ಕಾಂಗ್ರೆಸ್ ಪಕ್ಷೀಯರು ಮಂತ್ರಿಪದವಿ ಸ್ವೀಕರಿಸುವರೇ? ೨,೫೦೦ ಮಂದಿ ಸಹಭೋಜನ ಮಾಡಿದರು; ಆಯರ್ಲೆಂಡಿನ ಚುನಾವಣೆ; ಸ್ಪೈನಿನ ಯುದ್ಧದ ಪರಿಸ್ಥಿತಿ. — ವಿದೇಶ

ನೆಹರುಗಳು ಗಾಂಧಿಜೀಯವರೊಡನೆ ಮಾತಾಡಿಕೊಂಡಿದ್ದರು. ಪುನಃ ೪ರಲ್ಲಿ ಬೆಳಿಗ್ಗೆ ೭ ಘಂಟೆಯಿಂದ ಸಂಜೆ ೫ರ ವರೆಗೆ ಮಾತಾಡಿದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದಿಡಬೇಕಾದ ಅಧಿಕಾರ ಸ್ವೀಕಾರ ಸಂಬಂಧವಾದ ಠರಾವನ್ನು ಗಾಂಧಿಜೀಯವರು ತಯಾರಿಸುತ್ತಿರುವರೆಂದು ತಿಳಿದು ಬರುತ್ತದೆ. ಈ ಸಲ ಕಾಂಗ್ರೆಸ್ ಮುಖಂಡರೆಲ್ಲಾ ಹತ್ತಿಗದ್ದೆಗಳ ನಡುವೆ ಇರುವ ಶೆಗಾಂವಿಗೆ ಹೋಗಬೇಕಾಗಿದ್ದಿತು. ರಾತ್ರಿ ಮಳೆ ಬಂದುದರಿಂದ ರಸ್ತೆಯು ಕೆಸರಿಂದ ತುಂಬಿ ಎತ್ತಿನ ಗಾಡಿ ಕೂಡಾ ಹೋಗುವುದು ಕಷ್ಟವಾಗಿತ್ತು. ಪಂಡಿತ ನೆಹರುಗಳೂ ಮೌಲಾನ ಆಜದರೂ ಅರ್ಧ ದೂರ ಎತ್ತಿನ ಗಾಡಿಯಲ್ಲಿ ಹೋಗಿ ಆ ಮೇಲೆ ಹೋಗಲಾಗದೆ ಇಳಿದುಹೋದರು. ಆದರೆ ಆಜದರಿಗೆ ನಡೆಯಲು ಬಹಳ ಪ್ರಯಾಸವಾಯಿತು. ಪಂಡಿತರು ಅವರನ್ನು ಕೈಹಿಡಿದೆಳೆದುಕೊಂಡು ಹೋದರು.

ಕಾಂಗ್ರೆಸು ಮಂತ್ರಿಪದವಿ ಸ್ವೀಕರಿಸಬೇಕೆಂದು ದೇಶದ ಎಲ್ಲಾ ಕಡೆಗಳಿಂದಲೂ ವರ್ಕಿಂಗ್ ಕಮಿಟಿ ಮೆಂಬರರಿಗೆ ತಂತಿಗಳು ಬರುತ್ತಿರುವವು. ಎಲ್ಲಾ ಪ್ರಾಂತಗಳವರೂ ಅಧಿಕಾರ ಸ್ವೀಕಾರಕ್ಕೆ ಅನುಕೂಲರಾಗಿಯೇ ಇರುವರು. ವೈಸರಾಯರ ಸ್ಟೇಟ್‌ಮೆಂಟಿನ ಕೆಲವು ವಿಷಯಗಳು ಗಾಂಧಿಜೀ ಮತ್ತು ಪಂಡಿತರ ಮೇಲೆ ಪರಿಣಾಮವನ್ನುಂಟುಮಾಡಿವೆ. ಗವರ್ನರರ ವಿಶೇಷಾಧಿಕಾರಗಳ ಹೊರತು ಇತರ ವಿಷಯಗಳಲ್ಲೆಲ್ಲಾ ಗವರ್ನರರು ಮಂತ್ರಿಗಳ ಅಭಿಪ್ರಾಯದಂತೆ ನಡೆಯಲೇ ಬೇಕು. ವಿಶೇಷಾಧಿಕಾರಗಳ ವಿಷಯದಲ್ಲೂ ಗವರ್ನರರು ಮಂತ್ರಿಗಳ ಅಭಿಪ್ರಾಯ ಕೇಳಿ ಅವರನ್ನು ಸಮಜಾಯಿಸಲೆತ್ನಿಸುವರು. ಎಷ್ಟಕ್ಕೂ ಅದು ಸಾಧ್ಯವಿಲ್ಲದೆ ಅವರು ತನ್ನಿಚ್ಛೆಯಂತೆ ನಡೆದರೆ ಅದರ ಸಂಪೂರ್ಣ ಜವಾಬ್ದಾರಿ ಅವರದು. ಮಂತ್ರಿಗಳು ಆ ಕುರಿತು ಜನತೆಗೆ ತಮ್ಮ ಅಭಿಪ್ರಾಯ ತಿಳಿಸಿ ರಾಜಿನಾಮೆ ಕೊಡಬಹುದೆಂಬ ವೈಸರಾಯರ ಹೇಳಿಕೆಯ ಆಶ್ವಾಸನೆಯು ಕಾಂಗ್ರೆಸಿನ ಕೇಳಿಕೆಯನ್ನು ತಪ್ಪುಪಡಿಸುವಂತಹದಿದೆಯೆಂದು ಗಾಂಧಿಜೀಯವರ ಅಭಿಪ್ರಾಯವಿರುವಂತೆ ತೋರುತ್ತದೆ ಪ್ರಬಲ ಜನಮತದ ವಿರೋಧವಾಗಿ ಪಂಡಿತರು ಅಧಿಕಾರ ಸ್ವೀಕಾರವನ್ನು ವಿರೋಧಿಸಲಾರರೆಂದು ನಂಬಲಾಗಿದೆ

ಶ್ರೀ ಸುಭಾಸಚಂದ್ರಭೋಸ್ ಶ್ರೀ. ಡೌಲತ್‌ರಾಮ್ ಮತ್ತು ಶ್ರೀ ಗೋವಿಂದ ವಲ್ಲಭ ಪಂತರ ಹೊರತು ಉಳಿದ ವರ್ಕಿಂಗ್ ಕಮಿಟಿ ಮೆಂಬರರೆಲ್ಲಾ ಹಾಜರಿದ್ದರು. ಶ್ರೀಸುಭಾಸ್‌ಚಂದ್ರಭೋಸರ ಬದಲಿಗೆ ಶ್ರೀ ಶರಚ್ಚಂದ್ರ ಭೋಸರು ಬಂದಿದ್ದರು. ವರ್ಕಿಂಗ್ ಕಮಿಟಿಯವರು ಅಧಿಕಾರಸ್ವೀಕಾರದ ಪ್ರಶ್ನೆಯನ್ನು ತಾ. ೭ರಲ್ಲು ಚರ್ಚಿಸುವರು. ಈ ಕುರಿತು ಪಂಡಿತ ನೆಹರುಗಳು ಮತ್ತು ಗಾಂಧಿಜೀಯವರು ಒಮ್ಮತದ ನಿರ್ಧಾರಕ್ಕೆ ಬಂದಿರುವರೆಂದೂ ವಾತಾವರಣವು ಅಧಿಕಾರಸ್ವೀಕಾರಕ್ಕೆ ಅನುಕೂಲವಿರುವುದೆಂದೂ ತಿಳಿದುಬರುತ್ತದೆ. ಸರ್ದಾರ್ ವಲ್ಲಭಾಯಿ ಪಟೇಲ್ ಮತ್ತು ಶ್ರೀ ಭೂಲಭಾಯಿ ದೇಸಾಯಿಯವರು ಇದೇ ತಾ. ೪ರಲ್ಲು ಗಾಂಧಿಜೀಯವರೊಡನೆ ಮಾತಾಡಿದರು. ಶ್ರೀ ದೇಸಾಯಿಯವರು ಹಿಂದೀ ರಾಜಕೀಯ ಪರಿಸ್ಥಿತಿಯ ಕುರಿತು ಇಂಗ್ಲೆಂಡಿನ ರಾಜನೀತಿಜ್ಞರ ಅಭಿಪ್ರಾಯವನ್ನವರಿಗೆ ತಿಳಿಸಿದರು. ಸರ್ದಾರ್ ವಲ್ಲಭಾಯಿ, ದೇಸಾಯಿ ಮತ್ತು ಡಾಕ್ಟರ್ ಖಾನರು ಪಂಡಿತ ಜವಾಹರಲಾಲರೊಡನೆ ಮಾತಾಡಿದರು. ಬೊಂಬಾಯಿ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ನಾಯಕತ್ವದ ಕುರಿತು ಶ್ರೀ ನರಿಮನರು ವರ್ಕಿಂಗ್ ಕಮಿಟಿಗೆ ಮಾಡಿಕೊಂಡ ಮನವಿಯೂ ತಾ ೭ರಲ್ಲು ಚರ್ಚಿಸಲ್ಪಡುವುದು. ಶ್ರೀ ನರಿಮನರು ತಾ. ೫ಕ್ಕೆ ವಾರ್ಧಕ್ಕೆ ಬರಬೇಕೆಂದು ಪಂಡಿತ ನೆಹರುಗಳು ಅವರಿಗೆ ತಂತಿ ಬಿಟ್ಟಿರುವರು. ಆದರೆ ಅವರು ತಾ ೬ಕ್ಕೆ ಬರುವೆನೆಂದು ಉತ್ತರವಿತ್ತಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇದೇ ತಾ. ೭ರಲ್ಲು ಪ್ರಾಂತಿಕ ಎಸೆಂಬ್ಲಿ ಕಾಂಗ್ರೆಸ್ ಪಕ್ಷೀಯರು ಮಂತ್ರಿಪದವಿ ಸ್ವೀಕರಿಸಬೇಕೆಂಬ ನಿರ್ಣಯ ಮಾಡಿರುವುದೆಂದು ತಿಳಿದುಬರುತ್ತದೆ.

ತಾ ೫ರಲ್ಲು ವರ್ಕಿಂಗ್ ಕಮಿಟಿ ಸಭೆ ಸೇರಿದಾಗ ಫೈಜಪುರ ಕಾಂಗ್ರೆಸಿನ ಲೆಕ್ಕಪತ್ರವು ಪರಿಶೀಲಿಸಲ್ಪಟ್ಟಿತು. ಅದರಿಂದ ದೊರೆತ ಉಳಿತಾಯವಾದ ರೂ. ೨೪,೬೦೦ರಲ್ಲಿ ಅರೆವಾಸಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೂ ಇನ್ನರೆವಾಸಿ ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೂ ಕೊಡಲಾಗುವುದು.

ಅಂತರ್ಜಾತೀಯ ಭೋಜನ

ಇದೇ ತಾ. ೪ರಲ್ಲಿ ಪೂನದ ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಹಾಲಿನಲ್ಲಿ ಎಲ್ಲಾ ಜಾತಿಯ ೨೫೦೦ ಮಂದಿ ಹಿಂದು ಸ್ತ್ರೀಪುರುಷರು ಹರಿಜನರೊಂದಿಗೆ ಒಟ್ಟುಕೂತು ಸಹಭೋಜನ ನಡಿಸಿದರು. ಈ ಸಂದರ್ಭದಲ್ಲಿ ಇತ್ತಲಾಗಿ ನಿರ್ಬಂಧದಿಂದ ಬಿಡುಗಡೆ ಹೊಂದಿದ ಶ್ರೀ ಸವರ್ಕಾರರು ಮುಖ್ಯ ಅತಿಥಿಗಳಾಗಿದ್ದು ಭಾಷಣ ಮಾಡುತ್ತಾ ಈ ರೀತಿ ನಾವು ಜಾತಿ ಭೇದವನ್ನು ಮುರಿದು ಹಿಂದೂ ಸಮಾಜವನ್ನು ಪುನರ್ಘಟಿಸಿ ಒಕ್ಕಟ್ಟುಂಟುಮಾಡುವೆವೆಂದರು. ಸರಳ ಭೋಜನವು ಆರಂಭವಾದಾಗ. "ಹಿಂದೂ ಧರ್ಮಕೀ ಜೈ" ಎಂದು ಉದ್ಘೋಷಿಸಲಾಯಿತು. ಸುಮಾರು ಒಂದು ಶತಮಾನದ ಮೊದಲು ಕ್ರೈಸ್ತ ಮತಕ್ಕೆ ಮತಾಂತರ ಹೊಂದಿದ್ದ ಬ್ರಾಹ್ಮಣ ಕುಟುಂಬವೊಂದನ್ನು ಈ ಸಂದರ್ಭದಲ್ಲಿ ಹಿಂದು ಮಿಶನಿನವರು ಶ್ರೀ ಸವರ್ಕರರ ಸಮಕ್ಷಮದಲ್ಲಿ ಹಿಂದೂ ಧರ್ಮಕ್ಕೆ ಸೇರಿಸಿ ಹಿಂದೂ ಹೆಸರುಗಳನ್ನಿತ್ತರು.

ವಿದೇಶ

ಆಯರ್ಲೇಂಡಿನ ಚುನಾವಣೆ

ಯಲ್ಲಿ ಮಿ.ಡಿ. ವೆಲೆರಾರವರ ಪಕ್ಷದ ಪ್ರಮುಖರೆಲ್ಲಾ ಹೆಚ್ಚಾಗಿ ಆರಿಸಿಬಂದಿರುವರು. ಆದರೆ ಅವರ ಪಕ್ಷಕ್ಕೇನೇ ಬಹುಮತ ದೊರೆಯುವ ಸಂಭವ ತೋರುವುದಿಲ್ಲ. ಇಷ್ಟರವರೆಗೆ ಡಿ ವೆಲೆರಾಪಕ್ಷಕ್ಕೆ 56, ಕಾಸ್‌ಗ್ರೇವ್ ಪಕ್ಷಕ್ಕೆ 36, ಮಜೂರ ಪಕ್ಷಕ್ಕೆ 11, ಸ್ವತಂತ್ರರು 8 ಮಂದಿ ಆರಿಸಿಬಂದಿರುವರು. ಇನ್ನು 28 ಸೀಟುಗಳ ಫಲಿತಾಂಶ ಈ ವರೆಗೆ ತಿಳಿದಿಲ್ಲ. ಆದರೆ ಇವು ಹೆಚ್ಚಾಗಿ ಡಿ ವೆಲೆರಾ ಪಕ್ಷಕ್ಕೆ ಸಿಕ್ಕುವಂತೆ ತೋರುವುದಿಲ್ಲ.

ಸ್ಪೈನಿನ ಯುದ್ಧದ ಪರಿಸ್ಥಿತಿ

ಕೆಪ್ಟನ್ ಗ್ರಿಫಿಡ್ಸರೆಂಬ ನ್ಯೂಜಿಲೇಂಡಿನ ತರುಣ ವೈಮಾನಿಕರೊಬ್ಬರು ಸ್ಪೆನಿಶ್ ಸರಕಾರದ ಕಡೆಯಿಂದ ಹೋರಾಡುತ್ತಿದ್ದು ಗಾಯಗೊಂಡು ಈಗ 3 ತಿಂಗಳ ರಜೆಯಲ್ಲಿ ತನ್ನ ಊರಿಗೆ ಹೋಗಲಿದ್ದವರು ಸ್ಪೈನಿನ ಪರಿಸ್ಥಿತಿಯ ಕುರಿತು ಈ ಕೆಳಗಣ ಅಭಿಪ್ರಾಯವಿತ್ತಿರುವರು. ಅಂತರರಾಷ್ಟ್ರೀಯ ತಾಟಸ್ಥ್ಯದ ಒಪ್ಪಂದವೆಂಬುದು ಕೇವಲ ಫಾರ್ಸೆಂದು ಕೆಪ್ಟನ್ ಗ್ರಿಫಿಡ್ಸರ ಅಭಿಮತ. ಬಂಡಾಯಗಾರ ವಿಮಾನಗಳೆಲ್ಲಾ ಹೆಚ್ಚಾಗಿ ಇಟೆಲಿ ಮತ್ತು ಜರ್ಮನಿಯಿಂದ ಪೋರ್ತುಗೀಸ್ ರಾಜ್ಯದ ಮೂಲಕ ಕಳುಹಿಸಲ್ಪಟ್ಟವುಗಳಾಗಿವೆ. ಸರಕಾರದ ಕಡೆಯಲ್ಲಿರುವ ಸುಮಾರು 300 ವಿಮಾನಗಳು ರಶ್ಯದವುಗಳಾಗಿವೆ. ಇವುಗಳಿಗಿಂತ ಎರಡು ಪಾಲು ಹೆಚ್ಚು ವಿಮಾನಗಳು ಬಂಡಾಯಗಾರರ ಕಡೆಯಲ್ಲಿವೆ. ರಶ್ಯನ ವೈಮಾನಿಕರು ಚತುರರಿರುತ್ತಾರೆ. ಇಟೆಲಿಯು ವಿಮಾನ ಪಡೆಯೊಂದನ್ನೇ ಸ್ಪೈನಿಗೆ ಕಳುಹಿಸಿರುವುದು. ಸ್ಪೈನಿನ ಜನತೆಯ ಧೈರ್ಯ ಮತ್ತು ಸ್ಥೈರ್ಯವು ವಿಚಿತ್ರವಾಗಿವೆ. ಸೇಕಡ 80 ರಷ್ಟರ ಪ್ರಜೆಗಳು ಸರಕಾರದ ಕಡೆಗಿದ್ದಾರೆ. ಇವರಲ್ಲಿ ಹೆಚ್ಚಿನವರು ಕೆಲಸಗಾರರು. ಸರಕಾರದ ಪಕ್ಷಕ್ಕೆ ರಶ್ಯದಿಂದ ಜನ, ಮದ್ದು, ಗುಂಡು ಮತ್ತು ವಿಮಾನಬಂದಿದೆ. ಆದರೆ ಬಂಡಾಯಗಾರರ ಕಡೆಯಲ್ಲಿ 20,000 ಮಂದಿ ಇಟೆಲಿಯನರು 4000 ದಿಂದ 50 ಸಾವಿರದ ವರೆಗೆ ಜರ್ಮನರಿರುತ್ತಾರೆ.

ಉಡುಪಿ

ಕಳೆದ ವಾರ ಇಲ್ಲಿಂದ ಸುಮಾರು ಇಪ್ಪತ್ತೈದು ಮೈಲು ದೂರದ ಉದ್ಯಾವರದಲ್ಲಿ ಸುಮಾರು ಒಂದು ತಿಂಗಳ ಮೊದಲು ಮದುವೆಯಾಗಿದ್ದ ಕೆಥೋಲಿಕ ತರುಣನೊಬ್ಬನು ೨ ವರ್ಷಗಳ ಮೊದಲು ಮದುವೆಯಾಗಿದ್ದ ತರುಣಿಯೊಂದಿಗೆ ಓಡಿಹೋಗಿರುವನೆಂದೂ, ಈ ಕುರಿತು ಪೋಲೀಸ್ ಫಿರ್ಯಾದಿ ನಡೆದಿರುತ್ತದೆಂದೂ ತಿಳಿದು ಬರುತ್ತದೆ.

ಬರುವ ಸೆಪ್ಟಂಬರ ತಿಂಗಳಲ್ಲಿ ದಕ್ಷಿಣಕನ್ನಡ ಜಿಲ್ಲಾ ಪರಿಷತ್ತನ್ನು ಉಡುಪಿಯಲ್ಲಿ ನಡೆಸಿದರಾದೀತೆಂದು ಕೆಲವರ ಅಭಿಪ್ರಾಯವಿದೆ.

ಕೆಲವು ಪ್ರಾಮುಖ್ಯ ಸಂಗತಿಗಳನ್ನು ವಿಚಾರಿಸಲು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯು ವಿಶೇಷ ಸಭೆಯೊಂದನ್ನು ಕರೆಯಬೇಕೆಂದು ಉಡುಪಿ ತಾಲೋಕು ಕಾಂಗ್ರೆಸ್ ಕಮಿಟಿಯವರ ಅಭಿಪ್ರಾಯವಿದ್ದು ಆ ಮೊದಲು ಯಾವುದನ್ನೂ ನಿರ್ಧರಿಸುವುದು ಸರಿಯಲ್ಲೆಂದು ಅವರು ಬರುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯ ಕುರಿತಾದ ಜಿಲ್ಲಾ ಕಮಿಟಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಲಿಲ್ಲೆಂದು ತಿಳಿದುಬರುತ್ತದೆ.

ಬಂಟರ ಯಾನೆ ನಾಡವರ ಸಂಘ ಬೊಂಬಾಯಿ

ಈ ಸಂಘದ ಕುರಿತು ಶ್ರೀ. ಕೆ. ಪಿ. ಕೆ. ಶೆಟ್ರಿಂದ ಮತ್ತು ಸಂಘದ ಮೆಂಬರರಲ್ಲೊಬ್ಬರಿಂದ ೨ ಬಾತ್ಮಿಗಳು ಬಂದಿರುತ್ತವೆ. ಶ್ರೀ ಕೆ. ಪಿ. ಕೆ. ಶೆಟ್ರು ಸದ್ರಿ ಸಂಘದ ತನ್ನ ಕಾರ್ಯದರ್ಶಿತ್ವಕ್ಕೆ ರಾಜಿನಾಮೆ ಕೊಟ್ಟು, ತಾನು ತಾ. ೧೨-೧೦-೩೬ರ ಸಂಘದ ಮಹಾಸಭೆಯಲ್ಲಿ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರೂ ಸಂಘದ ಯಾವ ರಿಕಾರ್ಡು ವಗೈರೆಗಳನ್ನು ತನ್ನ ವಶಕ್ಕೊಪ್ಪಿಸಲಿಲ್ಲ. ಸಂಘದ ಪರವಾಗಿ ಖರ್ಚಾದ ಹಣದ ತಿಳುವಳಿಕೆ ತನಗಿಲ್ಲ. ಅಖಿಲ ಬಂಟರ ಯಾನೆ ನಾಡವರ ಸಂಘವನ್ನು ಮುಕ್ತಾಯಗೊಳಿಸಿ ತಾನು ಬಂಟರ ಯಾನೆ ನಾಡವರ ಸಂಘಕ್ಕೆ ತಾ. ೧೨-೧೦-೩೬ರಲ್ಲು ಕೊಟ್ಟಿರುವ ೧೫೧-೩-೩ರ ಚೆಕ್ ಮತ್ತು ರಿಕಾರ್ಡುಗಳಿಗೆ ನನಗೆ ಈ ವರೆಗೂ ಪಾವತಿ ಕಳ್ಪಲಿಲ್ಲ. ತಾನು ಸಂಘಕ್ಕೆ ಸೇರಿಸಿದ ಮೆಂಬರರು ಸಂಘದ ಸ್ಥಿತಿಗತಿಯನ್ನು ತನ್ನೊಡನೆ ಕೇಳುವಾಗ, ಅವರಿಗೆ ತಕ್ಕ ಜವಾಬು ಕೊಡಲು ತನ್ನಿಂದ ಸಾಧ್ಯವಾಗದಂತಾಗಿದೆ, ಎಂದು ತನ್ನ ರಾಜಿನಾಮೆಗೆ ಕಾರಣಕೊಟ್ಟು ಸಂಘದ ಆಡಳಿತ ಕಮಿಟಿ ಮೀಟಿಂಗಿಗೆ ತಾನು ಆಮಂತ್ರಿಸಲ್ಪಟ್ಟರೆ ಅಲ್ಲಿ ಕೆಲವು ಸೂಚನೆಗಳನ್ನೀಯುವೆನೆಂದು ತಿಳಿಸಿರುವರು. ಸಂಘದ ಮೆಂಬರರೊಬ್ಬರು, ತಾ. ೬-೬-೩೭ರ ಸಂಘದ ಆಡಳಿತ ಕಮಿಟಿ ಸಭೆಗೆ ಸಂಘದ ಕೋಶಾಧಿಕಾರಿಯಾದ ಶ್ರೀ. ಕೆ. ವಿಟ್ಠಲ ಶೆಟ್ರು ಅಧ್ಯಕ್ಷರಾದುದು ಅಕ್ರಮ. ಆದುದರಿಂದ ಆ ಸಭೆಯಲ್ಲಾದ ನಿರ್ಣಯಗಳು ಸಿಂಧುವಲ್ಲ. ಕೋಶಾಧಿಕಾರಿ ಅಧ್ಯಕ್ಷನಾಗುವ ಕ್ರಮ ಎಲ್ಲಿಯೂ ಇಲ್ಲೆಂದು ತಿಳಿಸುತ್ತಾರೆ.

THE UDIPI BANK LTD.
UDIPI
ALL KINDS OF BANKING BUSINESS TRANSACTED
PERSONAL ATTENTION PAID TO ALL ENQUIRIES
ESTD. 1925

ದಕ್ಷಿಣ ಕನ್ನಡ

ಪೇತ್ರಿ

ಕಳೆದ ತಿಂಗಳ ತಾರೀಕು ೨೮ನೇ ಸೋಮವಾರ ರಾತ್ರಿ ಪೇತ್ರಿಯ ಬಳಿ ಗೊಬ್ಬನಕಟ್ಟೆ ಶ್ರೀಧರ ಪ್ರಭು ಎಂಬವರ ಮನೆಯ ಬಾವಿಯಲ್ಲಿ ಅಕಸ್ಮಾತ್ ಎರಡು ಹುಲಿಗಳು ಬಿದ್ದಿದ್ದವು. ಕಾರಣ ಸುಮಾರು ೧೧ ಘಂಟೆ ಸಮಯ ನಾಯಿಯನ್ನು ಅಟ್ಟಿಕೊಂಡು ಹುಲಿಗಳು ಬಾವಿಯ ಹತ್ತಿರ ಬಂದುವು. ನಾಯಿಯು ಬಾವಿಗೆ ಹಾರಿತು. ಹುಲಿಗಳೂ ಹಾರಿದವು. ಒಂದೇ ಬಾರಿ ಮೂರು ಪ್ರಾಣಿಗಳೂ ನಾಶಹೊಂದಿದುವು ಬೆಳಗ್ಗೆ ನೂರಾರು ಜನರು ಈ ವಿಶೇಷ ಸಮಾಚಾರವನ್ನು ಕೇಳಿ ಬಾವಿಯ ಬಳಿ ಸೇರಿದರು. ಬಾವಿಯಿಂದ ಆ ಹುಲಿಗಳನ್ನು ಬಹಳ ಪ್ರಯತ್ನದಿಂದ ತೆಗೆಯಲಾಯಿತು. ಹುಲಿ ಒಂದು ಗಂಡು, ಒಂದು ಹೆಣ್ಣು, ೨। ಫೀಟು ಎತ್ತರ ೫ ಫೀಟು ಉದ್ದವಾಗಿದ್ದವು.

ಕುಂದಾಪುರದ ಪತ್ರ

ಮದ್ರಾಸು ಸರಕಾರದ ವೇತನ ಪಡೆದು ಗಾಜಿನ ಕೈಗಾರಿಕೆಯನ್ನು ಅಭ್ಯಾಸಿಸಲು ವಿಲಾಯತಿಗೆ ತೆರಳುವ ಶ್ರೀಮಾನ ಬಸರೂರು ಜಗನ್ನಾಥ ಹೆಗ್ಗಡೆಯವರು ಸದ್ರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರಾಗಿ ಶ್ರೀ ಹೆಗ್ಡೇರು ಪಶೀಲ್ಡ್‌ನಿಂದ ಕೇಬಲ್ ಮೂಲಕ ಬಿ ಶಿವರಾಮ ಶೆಟ್ಟಿ ವಕೀಲ್, ಇವರಿಗೆ ತಿಳಿಸಿರುವರಾಗಿ ತಿಳಿದು ಬಂದಿದೆ. ಶ್ರೀ ಹೆಗ್ಡೇರನ್ನು ನಾವು ಅಭಿನಂದಿಸುತ್ತೇವೆ. ಅವರು ತಮ್ಮ ಕೋರ್ಸನ್ನು ಆದಷ್ಟು ಬೇಗ ಪೂರೈಸಿ ಸುಖಸಂತೋಷದಿಂದ ಊರಿಗೆ ಬಂದು ತಮ್ಮ ಬಂಧು ಮಿತ್ರರ ಒಟ್ಟಿಗೆ ಸೇರಲೆಂದು ಶ್ರೀಶನನ್ನು ಪ್ರಾರ್ಥಿಸುತ್ತಿರುವೆವು.

ಇಲ್ಲಿಯ ತಾಲೋಕು ಕಾಂಗ್ರೆಸು ಕಮಿಟಿಯ ಸಭೆಯು ತಾ. ೧-೭-೩೭ರಲ್ಲು ಶ್ರೀ. ಮಹಾಬಲ ಪೊಳ್ಯರ ಆಫೀಸಿನಲ್ಲಿ ಅವರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ನಿರ್ಣಯಗಳು ಸರ್ವಸಮ್ಮತಿಯಿಂದ ಮಂಜೂರುಮಾಡಲ್ಪಟ್ಟವು.

೧. ಡಿಸ್ಟ್ರಿಕ್ಟ್ ಬೋರ್ಡು ಉಮೇದ್ವಾರರನ್ನು ಆರಿಸಿ ನೇಮಕಮಾಡುವ ಜಿಲ್ಲಾ ಕಾಂಗ್ರೆಸು ಕಮಿಟಿಯ ಸಬ್ ಕಮಿಟಿಗೆ ಈ ತಾಲೋಕು ಕಾಂ. ಕಮಿಟಿಯಿಂದ ಶ್ರೀ. ಕೆ. ಕೃಷ್ಣರಾಯ ಶೆಣೈ, ಶ್ರೀ. ಎಂ. ಗೋಪಾಲಕೃಷ್ಣ ಕಾಮತ್, ಶ್ರೀ ಎಚ್ ಕೋಟಿಯಣ್ಣ ಶೆಟ್ಟಿ, ಈ ಮೂವರು ಪ್ರತಿನಿಧಿಗಳನ್ನು ಆರಿಸಲಾಯಿತು

೨ ಈ ವರೆಗೆ ಸುಮಾರು ನೂರು ಮಂದಿ ಕಾಂಗ್ರೆಸ್ ಸದಸ್ಯರನ್ನು ಸೇರಿಸಿಕೊಳ್ಳಲಾಗಿದೆ. (ಶ್ರೀ. ಎನ ಎಸ್ ಕಿಲ್ಲೆಯವರು ಬಂದು ಸೇರಿಸಿದ ಹಲವು ಮೆಂಬರು ಇದರಲ್ಲಿ ಸೇರಿಲ್ಲ) ಇನ್ನೂ ಹೆಚ್ಚಿನ ಸದಸ್ಯರನ್ನು ತ್ವರ್ಯ ಸೇರಿಸಿಕೊಳ್ಳಬೇಕಾಗಿ ನಿರ್ಣಯಿಸಲ್ಪಿತು.

೩ ಶ್ರೀ ಎನ್ ಎಸ್. ಕಿಲ್ಲೆಯವರು. ಈ ತಾಲೋಕಿನಲ್ಲಿ ಸಂಚರಿಸಿ ಅಲ್ಲಲ್ಲಿ ಗ್ರಾಮಕಮಿಟಿಗಳನ್ನು ಸ್ಥಾಪಿಸಿ, ಹಲವು ಕಾಂಗ್ರೆಸ್ ಸದಸ್ಯರನ್ನು ಸೇರಿಸಿದ್ದಲ್ಲದೆ, ಅನೇಕ ಕಡೆಗಳಲ್ಲಿ ಸಭೆ ಜರಗಿಸಿ ಈಗಿನ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣಗಳನ್ನು ಮಾಡಿ ಪ್ರಚಾರ ಪಡಿಸಿದುದಕ್ಕಾಗಿ ಈ ಕಮಿಟಿಯು ಶ್ರೀ. ಕಿಲ್ಲೆಯವರನ್ನು ಅಭಿನಂದಿಸುತ್ತದೆ.

ಬಸರೂರು

ಇಲ್ಲಿಯ ಕಾಂಗ್ರೆಸು ಕಮಿಟಿಯವರೂ ಕಾಂಗ್ರೆಸು ಅನುಯಾಯಿಗಳೂ ಸೇರಿ ಜನರಿಂದ ವಂತಿಗೆ ಪಡೆದು ಹರಿಜನ ಬಡಬಾಲಕರಿಗೆ ಉಡಿಗೆ ತೊಡಿಗೆ ಪುಸ್ತಕಾದಿಗಳನ್ನು ಕೊಟ್ಟು, ಹಿಂದೂ ಹೈಯರ್ ಎಲಿಮೆಂಟರಿ ಶಾಲೆಗೆ ಮಾಸ್ತಿ ಎಂಬ ಬಾಲಕನನ್ನೂ ಬಿ. ಇ. ಎಮ್. ಸ್ಕೂಲಿಗೆ ಬಚ್ಚ ಎಂಬ ಬಾಲಕನನ್ನೂ ಸೇರಿಸಿದರು. ಜನರಲ್ಲಿ ಭಿನ್ನಾಭಿಪ್ರಾಯವಿದ್ದರೂ, ಕಾಂಗ್ರೆಸು ಪಕ್ಷದವರ ಪ್ರಯತ್ನವು ಸ್ತುತ್ಯಕರ.

ಕುಂದಾಪುರ ಶ್ರೀ ಕುಂದೇಶ್ವರ ಛತ್ರದ ಬಳಿಯಲ್ಲಿ ಕಲ್ಪಿಸಿರುವ ನಾಟಕ ಶಾಲೆಯಲ್ಲಿ ಉಡುಪಿ ಶ್ರೀ ಕೃಷ್ಣ ಮಾರುತಿಪ್ರಸಾದಿಕ ಕರ್ನಾಟಕ ನಾಟಕಸಭಾ ಇವರು ಈ ವರೆಗೆ ನಾಲ್ಕಾರು ನಾಟಕಗಳನ್ನು ಅಭಿನಯಿಸಿ ಜನರ ಮೆಚ್ಚಿಗೆಗೆ ಪಾತ್ರರಾಗಿರುವರು; ಇವರಿಗೆ ಜನರ ಆಶ್ರಯ ಪ್ರೋತ್ಸಾಹವು ಇನ್ನೂ ಹೆಚ್ಚಿಗೆ ಲಭಿಸಲೆಂದು ಹಾರೈಸುವೆವು

THE CANARA INDUSTRIAL & BANKING SYNDICATE, LIMITED.

Correct information about the theft in the NANDYAL OFFICE

We have received numerous letters and telgrams from our several friends and clients and our other offices about the theft in our Nandyal office reported in the Press.

While we thank them for their anxious enquiries we have to inform them that the matter being sub judice we are unable to divulge the facts that have been reported to us from our Nandyal office. We however wish to correct the incorrect news given in the Prees. It is only the clerk that is under arrest and not the Agent Mr. R. A. Naimpally as stated therein i. e. in the Indian Express of July 1st.

As a matter of fact it is the Agent that gave the information to the Police the next morning We assure our friends and clientele at Nandyal that there is no loss for the institution except that the incident may disturb the public peace.

While the *management* is aware of the consequences, it is desirous of placing before the public the network of safe guards provided in every branch of the institution.

(1) The Agents are required to keep as little cash as possible with them in safe and have the surplus with other Banks. (2) There is divided responsibility. (3) The keys are with different persons.(4) The cash particulars have to be reported evey day. (5) Agents are all trustwrothy people. (6) The localities are places which make difficult for such incidents. (7) The Agent or some other employee stay at night at the office. (8) There is always a strong board of local influential men to take interest.

We wish to assure the public that we will give more care and attention to even little detalis not only to avoid any recurrence thereof but to infuse more confidence in the public at large.

We request the Indian Express and the other News papers if any that have published the institution by giving to the public the correct version of the news.

Yours faithfully,

T. M. PAI.

Chariman.

ನಮ್ಮ ಚಂದಾದಾರರಲ್ಲಿ ವಿನಂತಿ

ತಾವು ಪ್ರೋತ್ಸಾಹಿಸುವಿರೆಂದು ಕಳೆದ ಸಪ್ಟಂಬರ ತಿಂಗಳಿಂದ ಈ ವರೆಗೆ ಸುಮಾರು 10ತಿಂಗಳಿಂದ ತಮಗೆ ನಮ್ಮ ಪತ್ರಿಕೆಯನ್ನು ಕಳುಹಿಸುತ್ತಾ ಬಂದಿದ್ದೇವೆ. ಇನ್ನು ಸ್ವಲ್ಪ ಸಮಯದಲ್ಲೇ ನಮ್ಮ ವರ್ಷಾಂತ್ಯವಾಗಲಿರುವುದು. ಆದುದರಿಂದ ತಾವು ದಯವಿಟ್ಟು ತಮ್ಮ ಚಾಲ್ತಿವರ್ಷದ ಚಂದಾಹಣವನ್ನು ಮನಿಯಾರ್ಡರು ಮೂಲಕ ಆದಷ್ಟು ಬೇಗನೆ ನಮಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇವೆ. ಪ್ರಕೃತದ ಪರಿಸ್ಥಿತಿಯಲ್ಲಿ ಪತ್ರಿಕೆಯನ್ನು ನಡಿಸುವುದು ಅದೆಷ್ಟು ಕಷ್ಟದ ಸಂಗತಿಯೆಂಬುದು ತಮಗೆಲ್ಲರಿಗೂ ವಿದಿತವಿರುವ ವಿಷಯವೆಂದು ನಂಬುತ್ತೇವೆ. ಕಾಗದದ ಬೆಲೆಯು ಈಗ ನೇಕಡ 50ಕ್ಕೂ ಹೆಚ್ಚಿರುವಾಗಲಂತೂ ಅದರಿಂದ ತುಂಬಾ ಕಷ್ಟ ನಷ್ಟವಾಗುವಂತಾಗಿದೆ. ಆದರೂ ನಾವು ಎದೆಗುಂದದೆ ತಮ್ಮೆಲ್ಲರ ಉದಾರ ಪ್ರೋತ್ಸಾಹದ ನಿರೀಕ್ಷೆಯಿಂದ ಪತ್ರಿಕೆಯನ್ನು ನಮ್ಮಿಂದ ಸಾಧ್ಯವಾದಷ್ಟು ಪ್ರಯೋಜನಕರವಾಗಿ ಪ್ರಕಟಿಸುವಂತೆ ಪ್ರಯತ್ನ ನಡಿಸುತ್ತಿರುವೆವು. ತಾವೆಲ್ಲರೂ ನಮ್ಮ ದೊಡ್ಡ ಹೊಣೆಗಾರಿಕೆಯ ಸ್ವಲ್ಪ ಸ್ವಲ್ಪ ಪಾಲನ್ನು ವಹಿಸಿಕೊಂಡು ವರ್ಷಾವಧಿ ಕೊಡುವ ಚಂದಾಹಣವನ್ನು ಆದಷ್ಟು ಬೇಗನೆ ತೆತ್ತು ನವಯುಗಕ್ಕೆ ಉದಾರಾಶ್ರಯವೀಯಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ. ಕಾರ್ಡು ಬರೆಯುವುದು ಅಥವಾ ವಿ. ಪಿ. ಮಾಡುವುದು ವೃಥಾ ನಮಗೂ ನಿಮಗೂ ವೆಚ್ಚಕ್ಕೆ ಕಾರಣವಾಗಿರುತ್ತದೆ. ನಮ್ಮ ವಿನಂತಿಗೆ ಇಷ್ಟರವರೆಗೆ ತಮ್ಮ ಚಂದಾಹಣ ತೆರದಿರುವ ಚಂದಾದಾರರೆಲ್ಲಾ ಶೀಘ್ರವಾಗಿ ನಿಗಾಕೊಡುವರೆಂದು ನಂಬುತ್ತೇವೆ.

ಮಂಗಳೂರಿನ ಚಂದಾದಾರರು ತಮ್ಮ ಚಂದಾಹಣವನ್ನು ಕೆನರಾ ಪ್ರೆಸ್ಸಿನ ಮೆನೇಜರರೊಡನೆ ಕೊಟ್ಟು ರಶೀದಿಪಡೆಯಬಹುದು. ಉಳಿದವರು ಉಡ್ಪಿ ಆಫೀಸಿಗೆ ಮನಿಯಾರ್ಡರ್‌ಮಾಡಿ ಕಳುಹಿಸುವುದು.

ಮೆನೇಜರ್, ನವಯುಗ, ಉಡುಪಿ.

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ

ಈ ಮೊದಲು ಪ್ರಕಟಿಸಿದಂತೆ ಮೇಲ್ತೋರುವ ಮಂಡಳಿಯ ೩೪ನೇ ವಾರ್ಷಿಕೋತ್ಸವವೂ ಮೊಗವೀರ ಫ್ರೀನೈಟ ಸ್ಕೂಲಿನಪಾರಿತೋಷ ವಿತರಣದ ಸಮಾರಂಭವೂ ಜೂನ್ ತಿಂಗಳ ತಾ ೨೭ರಲ್ಲಿ ಸರ್. ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾಸದನದಲ್ಲಿ ಆಚರಿಸಲ್ಪಟ್ಟಿತು. ಮಂಡಳಿಯ ಅಧ್ಯಕ್ಷರಾದ ಶ್ರೀ. ಟಿ. ದೇವ್ರಜಿಯವರು ಸಭಿಕರನ್ನು ಸ್ವಾಗತೀಕರಿಸಿ, ಶ್ರೀ. ಬಿ ಯಂ. ಭಾರ್ಗವ, ಬಿ.ಎ., ಯಲ್.ಯಲ್ ಬಿ. ಜೆ. ಪಿ. ಯವರನ್ನು ಸಭಾಧ್ಯಕ್ಷತೆಯನ್ನು ಸ್ವೀಕರಿಸಲು ವಿನಂತಿಸಿಕೊಂಡ ಮೇರೆಗೆ ಸಭಿಕರ ಹಸ್ತತಾಡನದೊಂದಿಗೆ ರಾ. ಬಾರ್ಗವನವರು ಅಧ್ಯಕ್ಷತೆಯನ್ನು ವಹಿಸಿದರು. ಸಭೆಗೆ ಹಾಜರಾಗಲು ತಮ್ಮ ಅನಾನುಕೂಲತೆಯನ್ನು ಸೂಚಿಸಿ ಸಭೆಗೆ ಶ್ರೇಯಶಸ್ಸನ್ನೂ ಮಂಡಳಿಗೆ ಶ್ರೇಯೋಭಿವೃದ್ಧಿಯನ್ನೂ ಕೋರಿ ಮಂಡಳಿಯ ಹಿತೇಚ್ಛುಗಳಿಂದ ಬಂದಸ್ವಸ್ತಿ ವಾಚನಾ ಪತ್ರಗಳನ್ನು ರಾ. ಆರ್. ಕೆ. ಕುಂದರರು ಓದಿ ಹೇಳಿದರು ರಾ. ಎಸ್. ಕೆ. ಮೈಂದನ್‌ರು ಮಂಡಳಿಯ ಗತ ೩೪ ವರುಷಗಳಿಂದ ಗೈದ ವಿದ್ಯಾಪ್ರಸಾರ ಕಾರ್ಯಗಳನ್ನೊಳಗೊಂಡ ಸಂಕ್ಷಿಪ್ತ ಚರಿತ್ರೆಯನ್ನು ಓದಿ ಹೇಳಿದರು.

ವರ್ಷಾವಧಿ ಪರೀಕ್ಷೆಯಲ್ಲಿ ಹೆಚ್ಚಿಗೆ ಗುಣಗಳನ್ನು ಪಡೆದವರಿಗೂ ಶಾಲಾ ಪಂದ್ಯಾಟ ಸ್ಪರ್ಧೆಯಲ್ಲಿ ಜಯಶೀಲರಾದ ವಿದ್ಯಾರ್ಥಿಗಳಿಗೂ ಪಾರಿತೋಷಕ ಹಂಚೋಣದ ಕಾರ್ಯಭಾಗವು ಮೊದಲ್ಗೊಂಡು ರಾ|ಗಳಾದ, ಯಮ್.ಯಸ್. ನೊರೋನ (ಜಡ್ಜ್) ಆರ. ಕೆ ಪ್ರಭು, ಡಾ. ಯನ್. ಆರ್. ಸುವರ್ಣ, ಡಾ. ಎಸ್. ಚಂಪ, ರಾಗಳಾದ ಮದನ್‌ಶೆಟ್ಟಿ, ವಾಸುದೇವ ವರಲೀಕಾರ್, ವೈ. ಕೊರಗಪ್ಪ, ಎಫ್. ಎಂ. ಪಿಂಟೋ ಮೊದಲಾದವರು ಮಂಡಳಿಯ ವಿವಿಧ ಕಾರ್ಯಕಲಾಪಗಳನ್ನು ಪ್ರಶಂಸಿಸಿ, ಮಂಡಳಿಗೆ ಉತ್ತರೋತ್ತರ ಶ್ರೇಯಸ್ಸನ್ನು ಕೋರಿ ಮಾತಾಡಿದರು. ಸನ್ಮಾನ್ಯ ಸಭಾಧ್ಯಕ್ಷರು ತಮ್ಮ ಬೋಧಪ್ರದವಾದ ಭಾಷಣದಲ್ಲಿ ಮಂಡಳಿಯ ಕಾರ್ಯಪಟುತ್ವವನ್ನು ಶ್ಲಾಘಿಸಿ ಮಂಡಳಿಯ ಮುಂದಭಿವೃದ್ಧಿಗಾಗಿ ಹಲವು ಸಲಹೆಗಳನ್ನಿತ್ತರು. ಶ್ರೀ. ಬಿ. ಎ. ಕರ್ಕೇರರು ಅಧ್ಯಕ್ಷರಿಗೂ ಸಭಿಕರಿಗೂ ಮಂಡಳಿಯ ಪರವಾಗಿ ಧನ್ಯವಾದಗಳನ್ನರ್ಪಿಸಿದರು. ಮಾಸ್ತರ್ ದೇಜಪ್ಪ ಹಾಗೂ ಪ್ರೊ. ಕಾಮತರವರು ತಮ್ಮ ಮಧುರವಾದ ಗಾಯನದಿಂದ ಸಭಿಕರನ್ನು ಸಂತೋಷಪಡಿಸಿದರು. ಪ್ರೊ. ಶೇಷಪ್ಪನವರ ಶಿಷ್ಯವರ್ಗದವರು ತಮ್ಮ ಅಂಗಸಾಧನೆ ದೇಖಾವೆಯನ್ನು ಪ್ರೇಕ್ಷಕರ ಚಿತ್ತಾಕರ್ಷಕವಾಗುವಂತೆ ಪ್ರದರ್ಶಿಸಿದ ಬಳಿಕ ಸಭೆಯು ಮುಕ್ತಾಯವಾಯಿತು.

ಕರ್ಣಾಟಕ ನೂತನ ಸಂಗೀತ ಸಭಾ ಮುಂಬಯಿ

ದುಃಖಸೂಚನೆ

ಕರ್ಣಾಟಕದ ಸುಪ್ರಸಿದ್ಧ ನಟರು ಹಾಗೂ ಕಲಾಕೋವಿದರಲ್ಲಿ ಅಗ್ರಗಣ್ಯರಾದ ಮಿ. ಮಹಮ್ಮದ್ ಪೀರ್‌ರವರು ತಾ. ೧೮-೬-೩೭ರಲ್ಲು ತನ್ನ ತರುಣಾವಸ್ಥೆಯಲ್ಲೇ ಅಕಾಲ ಮೃತ್ಯುವಿಗೆ ತುತ್ತಾದರೆಂದು ತಿಳಿದು ಈ ಸಭೆಯು ತುಂಬಾ ದುಃಖಪಡುತ್ತದೆ. ಇವರ ನಿಧನದಿಂದಾಗಿ ಕರ್ಣಾಟಕ ರಂಗಭೂಮಿಯ ಉಜ್ವಲ ಜ್ಯೋತಿಯೊಂದು ಮರೆಯಾದುದಲ್ಲದೆ, ಅಖಿಲ ಕರ್ಣಾಟಕ ಕಲಾ ಕೋವಿದ ಹಾಗೂ ಭಾಷಾಸೇವಿಗಳ ದುರೀಣಶ್ರೇಷ್ಠರೊಬ್ಬರು ಕಣ್ಮರೆಯಾದಂತಾಗಿ ಕರ್ಣಾಟಕ ವಾಙ್ಮಯ ಕ್ಷೇತ್ರಕ್ಕೆ ಅಪಾರವಾದ ನಷ್ಟ ಉಂಟಾಗಿರುತ್ತದೆ. ಕಲಾಸೇವಿಗಳಾದ ಇವರ ಪವಿತ್ರ ಆತ್ಮಕ್ಕೆ ಆ ದಯಾಮಯನಾದ ಪರಮಾತ್ಮನು ಚಿರಶಾಂತಿಯನ್ನೀಯಲೆಂದು ಈಸಭೆಯು ಪ್ರಾರ್ಥಿಸುತ್ತದಲ್ಲದೆ, ಅವರ ಸಂಬಂಧಿಕರಿಗುಂಟಾದ ದುಃಖದಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.

ದಿವಂಗತ ಕಾರ್ನಾಡು ಸದಾಶಿವರಾಯರ ಸ್ಮಾರಕನಿಧಿ

ಈ ಕುರಿತು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಮಾಡಿರುವ ನಿರ್ಣಯ ಮತ್ತು ವಿಜ್ಞಾಪನೆಗಳನ್ನು ಈ ಮೊದಲೇ ಪ್ರಕಟಿಸಲಾಗಿದೆ. ಈ ನಿಧಿಯ ಬಗ್ಗೆ ಸೇವಾದಳ ನಾಟಕ ಮಂಡಲಿಯವರು ಮಂಗಳೂರಲ್ಲಿ ಆಡಿದ ನಾಟಕದ ಜಮಾ ಖರ್ಚು ಈ ಕೆಳಗಿನಂತಿದೆ:— ಟಿಕೇಟು ಮಾರಾಟದಿಂದ ಜುಮ್ಲಾ ರೂ. 187 8 0 ಖರ್ಚು ಮುನಿಸಿಪಲ್ ಲೈಸೆನ್ಸ್ ಟೇಕ್ಸು ವಗೈರೆ 10 2 0 ಮುದ್ರಣ ಖರ್ಚು 22 8 0 ಕೆನರಾ ಹೈಸ್ಕೂಲಿಗೆ ಬಾಡಿಗೆ ವಗೈರೆ 17 8 0 ದೀಪ, ಬಣ್ಣ ಖರ್ಚು, ಕೂಲಿ, ಟಿಫಿನ್ ವಗೈರೆ 52 6 10 ಜುಮ್ಲಾ ರೂ. 102 7 10. ಖರ್ಚು ಕಳೆದು ಉಳಿದ ಶಿಲ್ಕು ರೂ. 85 0 2. ಜಿಲ್ಲಾ ಕಮಿಟಿಯ ಹೆಸರಲ್ಲಿ ಪ್ರತ್ಯೇಕ ಸೇವಿಂಗ್ಸ್ ಠೇವಣಾತಿಯಾಗಿ ಇರಿಸಲಾಗಿದೆ.

ಕಿ. ರಾಮರಾಯ ಮಲ್ಯ.

ಕಾರ್ಯದರ್ಶಿ, ದ. ಕ. ಜಿಲ್ಲಾ ಕಮಿಟಿ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ವೋಟರರಲ್ಲಿ

ವಿನಂತಿ.

ಜಿಲ್ಲಾ ಬೋರ್ಡು ಆಕ್ಟಿನಲ್ಲಿ ಹೆಚ್ಚಿನ ಕುಂದು ಕೊರತೆಗಳೂ, ಬೋರ್ಡಿನಲ್ಲಿ ತೀರ್ವೆ ಹಣದ ಅಭಾವವೂ, ನಿಯಮಗಳ ಬಂಧನವೂ ಇರುವುದರಿಂದ ಜಿಲ್ಲಾ ಬೋರ್ಡಿನ ಆಡಳಿತೆಯನ್ನು ಸುಗಮವಾಗಿ ನಡೆಯಿಸುವರೆ, ಲೋಕಲ್ ಬೋರ್ಡು ಆಕ್ಟಿನಲ್ಲಿ ಬದಲಾವಣೆಗಳು ಆಗದ ವಿನಹ ಗಂತ್ಯಂತರವಿಲ್ಲ.

ಈ ಬದಲಾವಣೆಯ ಗುರಿಯನ್ನೇ ಧ್ಯೇಯವಾಗಿಟ್ಟುಕೊಂಡು ಈಗಿರುವ ರಾಜಕೀಯ ಪರಿಸ್ಥಿತಿಯಲ್ಲಿ, ತಕ್ಕಮಟ್ಟಿನ ಸುಧಾರಣೆಯಾದರೂ ಆಗಬೇಕೆಂಬ ಆಶೆಯು ತಮ್ಮಲ್ಲಿದ್ದರೆ, —ತಾನೂ ಒಬ್ಬ ಜಿಲ್ಲಾ ಬೋರ್ಡು ಮೆಂಬರನೆಂಬ ಪೊಳ್ಳು ಗೌರವ ಸಂಪಾದನೆಯ ಅಪೇಕ್ಷೆಯುಳ್ಳವರಿಗೂ ಸ್ವಂತ ಕೆಲಸದ ಹೊರೆಯಿಂದ ತಳಮಳಿಸುತ್ತಿದ್ದು ಸಾರ್ವಜನಿಕ ಕೆಲಸಗಳನ್ನು ಮಾಡುವುದಕ್ಕೆ ಬಿಡುವು ಇಲ್ಲದವರಿಗೂ ತಮ್ಮ ಅಮೂಲ್ಯವಾದ ಮತವನ್ನಿತ್ತು ಅದರ ನಿಜವಾದ ಬೆಲೆಯನ್ನು ದುರುಪಯೋಗ ಪಡಿಸಿಕೊಳ್ಳಬಾರದು.

ಈ ಸಲವೂ ಕಾಂಗ್ರೆಸು, ಇಲೆಕ್ಷನಿಗೆ ಕೈ ಹಾಕುವುದಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯು ನಿರ್ಧರಿಸಿಯದೆ ಕಾಂಗ್ರೆಸಿನವಷ್ಟು ಶಿಸ್ತು ಪರಿಪಾಲನೆಯನ್ನಿಟ್ಟುಕೊಂಡು ಸಾರ್ವಜನಿಕ ಕೆಲಸಗಳನ್ನು ಮಾಡುತ್ತಾ ಜನತೆಯ ಹುಕ್ಕು ಬಾಧ್ಯತೆಗಳಿಗಾಗಿ ಹೋರಾಡುವ ದೊಡ್ಡ ಸಂಸ್ಥೆಯು ಬೇರೊಂದಿಲ್ಲ. ೫೦ವರುಷಗಳಿಂದ ಈ ಸಂಸ್ಥೆಯು ಬಡಬಗ್ಗರ ಹಿತಕ್ಕಾಗಿಯೂ ಪತಿತರ ಉದ್ಧಾರಕ್ಕಾಗಿಯೂ ನಿಸ್ವಾರ್ಥದಿಂದ ಹೋರಾಡುವುದು ತಮಗೆಲ್ಲರಿಗೂ ತಿಳಿದಿರುವ ವಿಷಯವೇ.

ದೇಶೋದ್ಧಾರ ಕಾರ್ಯಗಳೆಲ್ಲ ನೆರವಾಗಬೇಕೆಂಬ ಭಾವನೆಯು ತಮ್ಮಲ್ಲಿದ್ದರೆ, ಕಳೆದ ಸಲ ಎಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸಿನವರನ್ನೇ ಆರಿಸುವುದಕ್ಕೆ ಅನುಕೂಲ ಪಡಿಸಿ ವೋಟಿನ ಬೆಲೆಯನ್ನು ಅರಿತುಕೊಂಡಂತೆ, ಬರುವ ಚುನಾವಣೆಯಲ್ಲಿಯೂ ಕಾಂಗ್ರೆಸಿನ ಪರವಾಗಿ ಆರಿಸಲ್ಪಡುವ ಮೆಂಬರರು ತಮ್ಮ ಜವಾಬ್ದಾರಿಕೆಯನ್ನು ದುರುಪಯೋಗ ಪಡಿಸಲಾರೆಂಬುದಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯು ಭರವಸೆಯನ್ನಿತ್ತರೆ, ತಾವೆಲ್ಲರೂ ಕಾಂಗ್ರೇಸಿಗೆನೇ ಬೆಂಬಲವೀಯಬೇಕೆಂದೂ ಕಾಂಗ್ರೆಸ್ ಸಂಸ್ಥೆಯ ಮೆಂಬರರಾಗಿ ಅದರ ವಿಧಾಯಕ ಕಾರ್ಯಕ್ರಮಗಳಿಗೆ ನೆರವಾಗಿ ಸ್ವರಾಜ್ಯ ಸಾಧನೆಗಾಗಿ ಹೋರಾಡುವ ಕಾಂಗ್ರೇಸಿಗೇನೇ ತಮ್ಮ ವೋಟನ್ನಿತ್ತು ಅದರ ಬಲವನ್ನು ಪುಷ್ಟೀಕರಿಸಬೇಕಾಗಿಯೂ ನನ್ನ ವಿನಂತಿ.

ಈ ಕುರಿತು ನಾನು ಜಿಲ್ಲಾ ಕಾಂಗ್ರೆಸು ಕಮಿಟಿಗೆ ಬರೆದ ಪತ್ರವನ್ನು ಇದರಡಿ ತಮ್ಮ ಅವಗಾಹನೆಗೋಸ್ಕರ ಕೊಟ್ಟಿರುತ್ತೇನೆ.

ಬಿ. ವೆಂಕಪ್ಪ ರೈ
ದ. ಕ. ಜಿಲ್ಲಾ ಬೋರ್ಡುಮೆಂಬರ,
ಉಪ್ಪಿನಂಗಡಿ

ಸ್ವೀಕಾರ ಮತ್ತು ವಿಮರ್ಶೆ

ನರಕದಲ್ಲಿ ನರಸಿಂಹ

ಪಂಡಿತ ತಾರಾನಾಥರಿಂದ ಸ್ಥಾಪಿತವಾಗಿದ್ದ ಪ್ರೇಮವು ಈಗ ಪ್ರತಿ ತಿಂಗಳಿಗೂ ೧೦೦-೧೨೫ ಪುಟಗಳ ಒಂದೊಂದು ಹೊತ್ತಗೆಯನ್ನೊಪ್ಪಿಸುವಂತಹ ಗ್ರಂಥಮಾಲೆಯ ರೂಪದಲ್ಲಿ ಹೊರಡುತ್ತಿದೆ ವಾರ್ಷಿಕ ಚಂದಾ ೪-೦-೦ (ಅಂಚೆವೆಚ್ಚ ಸೇರಿ) ಬಿಡಿ ಪ್ರತಿ ೭ ಆಣೆ ಸಿಗುವ ಸ್ಥಳ, ಪ್ರೇಮಪ್ರಕಟಣಾಲಯ ಧಾರವಾಡ

ಮೇಲ್ಕಂಡ ಪುಸ್ತಕವು ಪ್ರೇಮದ ಪ್ರಥಮ ಪ್ರಕಟಣೆ 'ಶ್ರೀರಂಗ'ರು ಬರೆದ ಅತ್ಯುತ್ತಮ ಸಾಮಾಜಿಕನಾಟಕವಿದು ಒಂದೂವರೆ ದಿನದಲ್ಲಿ ನಡೆದ ಒಂದು ಸನ್ನಿವೇಶವನ್ನು ಭಾವರಸಪೂರಿತ ನಾಟಕವನ್ನಾಗಿ ರಚಿಸಿದ ಶ್ರೀರಂಗರ ಜಾಣ್ಮೆಯು ಮೊಗಸತಕ್ಕದ್ದಿದೆ ಆದರೆ ಒಟ್ಟು ಕತೆಯು ಸಾಮಾನ್ಯ ಜನರಿಗೆ ತಿಳಿಯದಷ್ಟು ಪ್ರೌಢವಿದೆ ಆದರೂ ಅದರಲ್ಲೊಂದು ವೈವಿಧ್ಯವಿದೆ ಪರಿಣಾಮಕಾರಕ ಶಕ್ತಿಯಿದೆ

ಹಳೆಯದನ್ನೆಲ್ಲಾ ಬಂಗಾರವೆಂದು ನಂಬಿರುವ ಇಂದಿನ ಕುರುಡು ಸಂಪ್ರದಾಯ ಶರಣರಿಂದ ನಮ್ಮ ನಿಜವಾದ, ಸಮಾಜರಚನೆಯ ಅಡಿಗಲ್ಲು ಸಡಿಲಾಗುತ್ತಿದೆ-ಮುಂದಕ್ಕೆ ವಿಪ್ಲವವಾಗಿ ಹೋಗುವುದು ಈ ಅಂಶವನ್ನು ದೂರದರ್ಶಿತ್ವದಿಂದರಿತು ಒಂದು ಸಾಮೂಹಿಕ ತೊಂದರೆಯಲ್ಲಿ-ಬಿಡಿಸಲಾಗದ ಸಮಸ್ಯೆಯಲ್ಲಿ ಸಿಲುಕಿ ನರಳುವ ನರಸಿಂಹನ ಮಾತುಗಳು ಸುಪ್ತ ವಿಚಾರಗಳನ್ನು ಹೊಡೆದೆಬ್ಬಿಸುವಂತಿವೆ ಇನ್ನು ಮುದ್ದಾಚಾರಿಯಂತಹ ದಾಂಭಿಕ-ಸ್ವಾರ್ಥಿಗಳನ್ನೂ ವಾಮನ-ಕೃಷ್ಣರಾಯರಂತಹ ನಡುತರಗತಿಯ ಜನರನ್ನೂ ನಾವು ಅನುದಿನವೂ ಕಾಣಬಹುದಾಗಿದೆ. ಸಾಮಾಜಿಕ ನಾಟಕಗಳಲ್ಲಿ ಇದಕ್ಕೊಂದು ವಿಶಿಷ್ಟಸ್ಥಾನವು ಸಲ್ಲಬೇಕಾಗಿದೆ ಪ್ರತಿಯೊಬ್ಬರೂ ಓದಬೇಕಾದ ಉದ್ಗ್ರಂಥವಿದು

ಚಂದ್ರನಾಥ

ಪ್ರೇಮದ ಮೂರನೇ ಪ್ರಕಟಣೆಯಿದು ಇದರ ಮೂಲ ಲೇಖಕರು ವಂಗೋಪನ್ಯಾಸ ಚಕ್ರವರ್ತಿ ಶ್ರೀ ಶರಚ್ಚಂದ್ರ ಚಟರ್ಜೀಯವರು. ಅನುವಾದಕರಾದರೂ ಕನ್ನಡದ ಸೊಗಸನ್ನು ಹಿಂದಿಯೇ ನೊದಲಾದ ಅನ್ಯಭಾಷೆಗಳಿಗೂ, ಅನ್ಯಭಾಷೆಗಳ ಸೊಗಸನ್ನು ಕನ್ನಡಕ್ಕೂ ಅನುವಾದಿಸಿ ದಕ್ಷಿಣ-ಉತ್ತರಗಳ ಭಾಷಾಸಾಂಸ್ಕೃತಿಕ ಸಂಘಟನೆಯನ್ನು ಮಾಡುತ್ತಿರುವ ಶ್ರೀ ಗುರುನಾಥ ಜೋಶಿಯವರು. ಎಂದ ಮೇಲೆ ಇದಕ್ಕೊಂದು ವಿಮರ್ಶೆಯ ಆವಶ್ಯಕತೆಯೇ ಇಲ್ಲ.

ಚಂದ್ರನಾಥ ಸರಯೂಗಳನ್ನು ಓದುಗರ ಹೃದಯದಿಂದ ಎಂದೆಂದಿಗೂ ಮರೆಯಲಾಗದ ರೀತಿಯಲ್ಲಿ ಚಿತ್ರಿಸಿದ ಶರಚ್ಚಂದ್ರರ ಕೈವಾಡವನ್ನಿಲ್ಲಿ ಕಾಣಬಹುದು. ಶೈಲಿಯ ಸೊಬಗು ಕಥಾವಸ್ತುವಿನ ಚಮತ್ಕೃತಿಯು ಗ್ರಂಥದ ಹಿರಿತನಕ್ಕೆ ನಿದರ್ಶನವಾಗಿದೆ

ನಡುಮನೆಯಲ್ಲಿ

ಪ್ರೇಮದ ನಾಲ್ಕನೆಯ ಪ್ರಕಟಣೆ ಶ್ರೀ ಎನ್. ಕೆ. ಕುಲಕರ್ಣಿ, ಬಿ. ಎ.,ಯವರಿಂದ ಬರೆಯಲ್ಪಟ್ಟ ಸೊಗಸಾದ ಎಂಟು ಏಕಾಂಕ ನಾಟಕಗಳ ಸಂಗ್ರಹವಿದು. 'ಪಶ್ಚಾತ್ತಾಪ'ವನ್ನುಳಿದು, ಬೇರೆಯೆಲ್ಲಾ ಧಾರವಾಡ ಕನ್ನಡದಲ್ಲಿ ಬರೆಯಲ್ಪಟ್ಟಿವೆ ಕಥಾವಸ್ತುಗಳಲ್ಲಿ ಹೆಚ್ಚಿನವುಗಳನ್ನು ಬ್ರಹ್ಮಸೃಷ್ಟಿಯಲ್ಲಿ ಸಿಗದ, ಕೇವಲ ಕವಿಸೃಷ್ಟಿಯಲ್ಲಿಂದ ಆರಿಸಿಕೊಂಡಂತಿವೆ ಅಂತೂ ಓದಬೇಕಾದ ಪುಸ್ತಕ

ವಿವರಾವಾಣಿಜ್ಯ.

[ಜನ್ಮದಿನೋತ್ಸವ ಸಂಚಿಕೆ]

ಪುಟಗಳು ೨೦೦. ಬೆಲೆ ೦—೪—೦

ವಿಮಾ, ಬ್ಯಾಂಕ (*Banking*) ವಾಣಿಜ್ಯಗಳ ವ್ಯವಹಾರ ಪ್ರಚಾರದೃಷ್ಟಿಯಿಂದ ಬೆಂಗಳೂರಲ್ಲಿ ಹೊರಡುತ್ತಿರುವ ಒಂದೇ ಒಂದಾದ ಈ ಮಾಸಪತ್ರಿಕೆಯು ಶ್ರೀ ಮೈಸೂರು ಮಹಾರಾಜರ ಜನ್ಮದಿನದ ಶುಭಮುಹೂರ್ತದಲ್ಲಿ ಹೊರಟ ವಾರ್ಷಿಕ ವಿಶೇಷಾಂಕವಿದು

ವಿಮಾ ವಾಣಿಜ್ಯಗಳ ವ್ಯವಹಾರವು ನವ್ಯ ಸಮಾಜರಚನೆಗೆ ಅತ್ಯಾವಶ್ಯಕವಿದೆ ಆದರೆ ನಮ್ಮ ನಾಡಲ್ಲಿ ಅದರ ಜ್ಞಾನವುಳ್ಳವರು ವಿರಳ. ಅಜ್ಞಾನವನ್ನು ಹೆಚ್ಚಿಸಲಿಕ್ಕೆಂದೇ ಜನಿಸಿದ ಪತ್ರಿಕೆಯಿದು ಈಗಿನ ಕಾಲದಲ್ಲಿ ಪತ್ರಿಕೆಗಳನ್ನು ನಡೆಸುವುದು ಅದೆಷ್ಟು ಕಷ್ಟದ ವಿಷಯವೆಂದು ನಾವು ಬೇರೆ ಹೇಳಬೇಕಾಗಿಲ್ಲ ಆದರೂ ಧೈರ್ಯಗುಂದದೆ ಪತ್ರಿಕೆಯ ಪ್ರಚಾರ ಮತ್ತು ಪ್ರಗತಿಯ ದೃಷ್ಟಿಯಿಂದ ಇಂತಹ ವಿಶೇಷ ಸಂಚಿಕೆಯನ್ನು ಹೊರಡಿಸಿದ ಸಂಪಾದಕರ ಸಾಹಸವು ಅಭಿನಂದನೀಯವಾಗಿರುವುದು. ಮೈಸೂರು ದಿವಾನರೇ ಮೊದಲಾದ ಮಹನೀಯರ ಸಂದೇಶಗಳೇ ಈ ಸಂಚಿಕೆಯ ಮಹತ್ವವನ್ನು ಸಾರುತ್ತಿವೆ. ಸರ್ ಎಂ. ವಿಶ್ವೇಶ್ವರಯ್ಯನವರೇ ಮೊದಲಾದ ತಜ್ಞ ಸಾಹಿತಿಗಳ ಪತ್ರಿಕೆಯ ಗುರಿಯನ್ನರಿತ ಕವಿತೆ ಲೇಖನಗಳು ಸಂಚಿಕೆಯ ಗೌರವವನ್ನು ಹೆಚ್ಚಿಸುತ್ತಿವೆ ನಮ್ಮ ನಾಡಿನ ಲೌಕಿಕ ಜ್ಞಾನದ ಅಭಿವೃದ್ಧಿಗಾಗಿ ಹೆಣಗುತ್ತಿರುವ ಈ ಪತ್ರಿಕೆಗೆ ಪ್ರತಿಯೊಬ್ಬ ಕನ್ನಡಿಗನೂ ಸಹಾಯವನ್ನು ಮಾಡತಕ್ಕದ್ದೆಂದು ನಾವು ಹೇಳದಿರೆವು

ವೀರವಾಣಿ

ಕನ್ನಡ ನಾಡಾರಿಗಳ ಗಡಿನಾಡಿನಂತಿಪ್ಪ ಸೋಲಾಪುರದಲ್ಲಿ ಕನ್ನಡ ಸೇವೆಗಾಗಿ ಹೊರಟ ಹೊಸಮಾಸಪತ್ರಿಕೆಯ ಮೊದಲ ಸಂಚಿಕೆಯು ನಮ್ಮ ಕೈಸೇರಿದೆ ಜೈನ ಧರ್ಮದಪ್ರಚಾರ ದೃಷ್ಟಿಯಿಂದ, ಸಾಹಿತ್ಯದ ಸೇವೆಮಾಡುವ ಧೋರಣೆಯಿಂದ ಹೊರಟಂತಿದೆ. ಹಲವು ಉಪಯುಕ್ತ ವಿಷಯಗಳೂ ಇವೆ ವೀರವಾಣಿಗೆ ವಿಜಯವನ್ನು ಕೋರುತ್ತೇವೆ.

"ರಾಮು"

ಕನ್ನಡ ನುಡಿವೆಣ್ಣಗೊಂದು

	ವ	
ವ	ಕ್ತ	ಲಾ
	ಲಾ	

ಕನ್ನಡಗಿತ್ತಿಯ ಕಿರುಗಾಣಿಕೆ
ಲೇಖಕಿಯರು
ಶ್ರೀಮತಿ ಮಟ್ಟಾಡಿ ಕಮಲಾಕ್ಷಿ

ಸ್ತ್ರೀಯರಿಗೆ ವಿದ್ಯಾಭ್ಯಾಸವಿಲ್ಲದಿರುವುದರ ಪರಿಣಾಮವನ್ನೂ ಸ್ತ್ರೀ-ಪುರುಷ ಹೃದಯಗಳ ಪರಿಚಯವನ್ನೂ ಸೊಗಸಾಗಿ ಚಿತ್ರಿಸಿದ ಸಾಮಾಜಿಕ ಕಾದಂಬರಿ. ಪ್ರತಿಯೊಬ್ಬರೂ ಓದಬೇಕಾದ ಪುಸ್ತಕ.

ಬೆಲೆ: 0-7-3 ಮಾತ್ರ.

೧೨ಕ್ಕಿಂತ ಹೆಚ್ಚು ಪ್ರತಿ ಕೊಳ್ಳುವ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪ್ಪೊ
ಚರ್ಚ್‌ರೋಡ್, ಉಡುಪಿ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

"ಗೊನೊಕಿಲರ್"

ಡಾ. ಜಸಾನಿಯವರ
ಜಗತ್ಪ್ರಸಿದ್ಧ

(ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರವಿಸರ್ಜನೆಯಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೆ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೬೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. ೩—೦—೦ (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲಭಾಯಿ ಪಟೇಲ್ ರೋಡ್, ಮುಂಬಯಿ ೪.

Sole Manufacturer Dr. D N. JASANI, Vitalbhai Patel Road, BOMBAY 4

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ.ಕ.

ಜನರಲ್ ಎಶ್ಶೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,

ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಶೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭರ್ಗೋವಾ ಎಸ್ಕ್ವೈಯರ್, ಎಫ್. ಎಸ್. ಎಸ್. (ಲಂಡನ್)

ಜನರಲ್ ಮೆನೇಜರ್, **ಅಜ್ಮೀರ್.**

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, **ಮದ್ರಾಸ್.**

ಸುಪರಿಂಟೆಂಡೆಂಟ್, **ಬಳ್ಳಾರಿ.** ಆರ್ಗನೈಸರ್, **ವೆಲ್ಲೂರು.**

ಚೀಫ್ ಏಜೆಂಟ್ಸ್, **ಮಧುರ, ತ್ರಿಚಿನಾಪಳ್ಳಿ.**

ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಪರಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು

ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

	ಅ	
ನವಭಾರತ ಬುಕ್ ಡಿಪೊ	ಥ	ಕಾರ್ಯದರ್ಶಿ,
ಉಡುಪಿ	ವಾ	**ಕಿರಿಯರ ಪ್ರಪಂಚ, ಉಡುಪಿ.**

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ

ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯ ನವರಿಂದ ರಚಿತವಾದ

'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್‌ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

The Manager, **The National Kanara News Agency,**

No. 58 Mody Street, Fort Bombay

THE

Vijaya Bank, Ltd.

Head Office: MANGALORE. Branch Offices: **Udipi, Kaup & Coondapoor.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: **ಉಡುಪಿ, ಕಾಪು, ಕುಂದಾಪುರ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಸ್ತ್ರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್.

K. Gopalakrishna Shetty. ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ. ಬ್ರದರ್ಸ್,

ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ **ವರ್ಷದ**ಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ **ಆಹಾರ** ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ **ತುಂಬ** ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. **ಗಿಡ**ವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ **ಗಿಡಗಳು** ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ **ಕೆಳಗಣ** ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ **ಎಗ್ರಿಕಲ್ಚರಲ್** ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ **ಎಲ್ಲಾ** ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,

ಪೋಸ್ಟ್ ಕಾಪು, ದ. ಕನ್ನಡ.

ಅಧ್ಯಾಯ ೨

ಭಿ ಕಾ ರಿ ಣಿ

ಸಾಮಾಜಿಕ ಕಾದಂಬರಿ

ಹಿಡಿಯಿರಿ ರಂಡೆಗಳಿಬ್ಬರನ್ನೂ!

ತಾಯಿ ಮಗಳಿಬ್ಬರೇ ಇರುವುದರಿಂದ ಹೊತ್ತುಮುಳುಗಿದ ಕೂಡಲೆ ನಾಗಿಯು ರಸ್ತೆ ಎದುರಿನ ಮನೆಬಾಗಿಲು ಹಾಕಿಬಿಡುತ್ತಿದ್ದಳು. ಎಂಟು ಎಂಟುವರೆ ಘಂಟೆ ರಾತ್ರಿಯಾಗಬಹುದು. "ಅಮ್ಮಾ ಸ್ವಲ್ಪ ಬಾಗಿಲು ತೆರೆಯಿರಿ" ಎಂದು ಕೂಗಿ ಬಾಗಿಲಿಗೆ ಬಡಬಡ ಬಡಿದ ಶಬ್ದವಾಯಿತು. "ಯಾರದು? ಸ್ವಲ್ಪ ಮೆಲ್ಲಗೆ ಬಾಗಿಲು ಬಡಿಯಿರಿ. ಬಾಗಿಲು ಒಡೆದು ಹೋದೀತು ಎಲ್ಲಿಯಾದರೂ" ಎಂದು ನಾಗಿಯು ಸ್ವಲ್ಪ ಸಿಟ್ಟಿನಿಂದ ಬಿರುಸಾಗಿ ಮಾತಾಡಿದಳು. "ನಾನು, ವೆಂಕಟ್ರಮಣ ಅಕ್ಕಾ ಊಟ ಉಂಟೋ ಮುಗಿಯಿತೊ? ಇವತ್ತು ಇಡೀ ದಿನ ಊಟಮಾಡಲಿಲ್ಲವಮ್ಮಾ. ಕಾಫಿ ಕುಡಿಕುಡಿದು ಜೀವಸಂಕಟವಾಗುತ್ತಿದೆ. ಒಂದು ಮುಷ್ಟಿ ಅನ್ನಹಾಕದೆ ನಿರ್ವಾಹವಿಲ್ಲಮ್ಮಾ" ಎಂದಿತು ಹೊರಗಿನ ವ್ಯಕ್ತಿ. ದೀನ ಮತ್ತು ಕ್ಷೀಣ ಸ್ವರದಿಂದ ನಾಗಿಯು "ಓಹೋ ವೆಂಕಟ್ರಮಣನೇ! ಬಹಳ ಅಪರೂಪ?" ಎಂದು ಎಡಗೈಯಲ್ಲಿ ಚಿಮುಣಿ ಹಿಡಕೊಂಡು ಬಲಗೈಯಲ್ಲಿ ಬಾಗಿಲು ತೆರೆದು ಚಿಮುಣಿಯನ್ನು ವೆಂಕಟ್ರಮಣನ ಮುಖಕ್ಕೆದುರಾಗಿ ಹಿಡಿದು ಪರೀಕ್ಷಿಸಿದಳು. ಬೆಳಕು ಕಂಡೊಡನೆಯೇ ವೆಂಕಟ್ರಮಣನ ಕಣ್ಣುಗಳು ಮುಚ್ಚಿಹೋದುವು. ಆದರೆ ಆ ಮೊದಲು ಅವು ತಮ್ಮ ಸ್ವರೂಪವನ್ನು ನಾಗಿಗೆ ಕ್ಷಣಮಾತ್ರದಲ್ಲಿ ವ್ಯಕ್ತಗೊಳಿಸಿಬಿಟ್ಟವು. ಅದೇನೋ ದುರುದ್ದೇಶದಿಂದ ಬಂದುದೆಂದು ವೆಂಕಟ್ರಮಣನ ಹೊಗೆಹಿಡಿದ ಮುಖವು ಎತ್ತಿ ತೋರಿಸುತ್ತಿತ್ತು. ಅವನು ಎದುರು ಚಿಮುಣಿ ಹಿಡಿದು ನಿಂತಿರುವ ನಾಗಿಯನ್ನು ಮುಖವೆತ್ತಿ ಕೂಡಾ ನೋಡದೆ ಅವಳೊಡನೆ ಒಂದು ಮಾತು ಕೂಡಾ ಆಡದೆ, ಟೀಕೆಟಿಲ್ಲದೆ ರೈಲುಬಂಡಿಯೊಳ ನುಗ್ಗುವವರಂತೆ ಫಕ್ಕನೆ ನಾಗಿಯ ಮನೆಯೊಳಕ್ಕೆ ನುಗ್ಗಿಬಿಟ್ಟನು. ಅವನ ಶರೀರದಲ್ಲಿ ಸ್ಥಿರತೆಯಿರಲಿಲ್ಲ. ವರ್ತನೆಯು ನೆಟ್ಟಗಿರಲಿಲ್ಲ. ಇದನ್ನೆಲ್ಲಾ ಕಂಡ ನಾಗಿಯ ಮನಸ್ಸು ಬಹಳ ಸಂದೇಹಕ್ಕೊಳಗಾಯಿತು. ತನ್ನೊಡನೆ ಅತ್ಯಂತ ಸಲುಗೆಯಿಂದ ಮಾತುಮಾತಿಗೆ ಅಮ್ಮಾ, ಅಕ್ಕಾ, ಎಂದು ಕರೆದು ಲಲಿತೆಯನ್ನು ಹಾಗೆ ಮಾಡಬೇಕು ಹೀಗೆ ಮಾಡಬೇಕು ಎಂದು ಹಿತೋಪದೇಶ ವಿತ್ತು, ಬಾಯಿತುಂಬಾಮಾತಾಡಿ, ನಗೆಯ ಚೆಲ್ಲಾಟಮಾಡಿ, ಆರಾಮವಾಗಿ ಕುಳಿತು ವೀಳ್ಯಹಾಕಿ, ಅಲ್ಲಿ ಹಾಗಾಯಿತು, ಇಲ್ಲಿ ಹೀಗಾಯಿತೆಂದು ಪತ್ರಿಕೆಗಳಿಗೂ ಸಿಗದ ಊರು ಪರವೂರುಗಳ ಸುದ್ದಿಗಳ ನಾರದನಾಗಿ ಆತ್ಮೀಯನಂತಿರುತ್ತಿದ್ದ ಆ ವೆಂಕಟ್ರಮಣನೆಲ್ಲಿ? ಮಿತಗೆಟ್ಟು ಕುಡಿದು ಕೆಂಗಣ್ಣನಾಗಿ, ಮುಖವೆತ್ತಿ ಮಾತಾಡಲೂ ಕೂಡಾಸಾಧ್ಯವಾಗದೆ ಬಾಗಿಲು ತೆರೆದೊಡನೆಯೇ ಅಪರಾಧಿಯಂತೆ ಒಳಗೆ ನುಸುಳಿದ ಈ ವೆಂಕಟ್ರಮಣನೆಲ್ಲಿ! ನಾಗಿಯು ಅನುಮಾನ ಪಟ್ಟಳು. ಅವಳ ಮನಸ್ಸು ಸ್ವಲ್ಪ ಪಲ್ಲಟಿಸಿತು. 'ಛೆ ವೆಂಕಟ್ರಮಣನಂಥವನೂ ಹಾಗೇನು ಮಾಡಲಾರ. ಇವತ್ತೇನೋ ಸ್ವಲ್ಪ ಹದತಪ್ಪಿ ಕುಡಿದಿರಬೇಕು. ಯಾರದೋ ಧರ್ಮಕ್ಕೆ ಸಿಕ್ಕಿರಬೇಕು" ಎಂದು ನಾಗಿಯು ತಾನೇ ತನ್ನ ಸಂದೇಹ ನಿವಾರಿಸಿಕೊಂಡಳು. ಆ ಮೇಲೆ ಒಳಗೆ ಹೋಗಿ ನೋಡುವಾಗ ವೆಂಕಟ್ರಮಣನು ಚಾವಡಿಯ ಒಂದು ಮೂಲೆಯಲ್ಲಿ ಗೋಡೆಗೆ ಮುತ್ತಿಟ್ಟೋ ಎಂಬಂತೆ ಮಲಗಿಕೊಂಡಿದ್ದನು. "ವಿಪರೀತ ಕುಡಿದಿರಬೇಕು ಪಾಪ" ಎಂದು ನಾಗಿಯು, "ವೆಂಕಟ್ರಮಣ,! ವೆಂಕಟ್ರಮಣ!! ಒಂದು ತುತ್ತು ಊಟಮಾಡಿ ಮಲಗಪ್ಪ. ರಾತ್ರಿ ಬರಿ ಹೊಟ್ಟೆಯಲ್ಲಿ ಮಲಗಬಾರದು ಮಗ" ಎಂದು ತೋಳು ಹಿಡಿದು ಅಲುಗಿಸಿದಳು. "ಬೇಡಮ್ಮಾ ಬೇಡ. ನನಗೆ ಜೀವಸಂಕಟದಿಂದ ತಲೆಯೆತ್ತಲು ಕೂಡಾ ಸಾಧ್ಯವಿಲ್ಲ, ನಾನು ಸ್ವಲ್ಪ ಮಲಗುತ್ತೇನಮ್ಮಾ, ದೀಪ ಸ್ವಲ್ಪ ಆಚೆಗೆ ಕೊಂಡು ಹೋಗಿ" ಎಂದ ವೆಂಕಟ್ರಮಣ ಕಣ್ಣುನಹ ತೆರೆಯದೆ. "ಅದು ಕೂಡದು ಮಗ, ಊಟಮಾಡದಿದ್ದರೆ ಒಂದಿಷ್ಟು ಹಾಲಾದರೂ ಕುಡಿದು ಮಲಗು, ಏಳು ಏಳು" ಎಂದು ನಾಗಿಯು ಮತ್ತಷ್ಟು ಬಲವಾಗಿ ಮೈ ಕುಲುಕಿದಳು. "ಇಲ್ಲಮ್ಮಾ ಇಲ್ಲ. ನನಗೆ ಬಾಯಾರಿಕೆ ಆಗುವುದಿಲ್ಲ. ನನ್ನನ್ನು ಸ್ವಲ್ಪ ನನ್ನಷ್ಟಕ್ಕೆ ಬಿಡಿ. ಅಷ್ಟುಮಾಡಿ. ಎಲ್ಲಾ ನಾಳೆ ಮಾತಾಡುವ." ಎಂದು ನಾಗಿಯೊಡನೆ ಮಾತಾಡಲೂ ಕೂಡಾ ಮನಸ್ಸಿಲ್ಲದೆ ಬೇಡಿಕೊಳ್ಳುವ ವೆಂಕಟ್ರಮಣನನ್ನು ಕಂಡು ನಾಗಿಯು ಕುಡುಕತನದ ಅವಸ್ಥೆಗಾಗಿ ಬಹಳ ಕನಿಕರಪಟ್ಟು, ಅಯ್ಯೋ ಭಗವಂತ!' ಎಂದು ನಿಟ್ಟುಸಿರಿಟ್ಟು ಜೋಲುಮೋರೆ ಮಾಡಿಕೊಂಡು ಒಳಗೆ ಹೋದಳು. ಮನೆಯ ದಕ್ಷಿಣಭಾಗದ ಒಂದು ಮೂಲೆಯ ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಓದುವುದರಲ್ಲೇ ನಿರತಳಾಗಿದ್ದ ಲಲಿತೆಯ ಜೀವನ ವೃಕ್ಷಕ್ಕೆ ವಜ್ರಘಾತವಾಗಲಿರುವ ಈ ವಿದ್ಯಮಾನದ ಯಾವ ಸಂಗತಿಯೂ ಅವಳಿಗೆ ತಿಳಿಯಲಿಲ್ಲ. ಹೊರಗಿಂದ ಕರೆದು ಬಾಗಿಲು ಬಡೆದ, ನಾಗಿಯು ಬಾಗಿಲು ತೆರೆದು ಮಾತನಾಡಿದ ಶಬ್ದವೆಲ್ಲಾ ಲಲಿತೆಗೆ ಕೇಳಿಸಿತ್ತು. ಆದರೆ ಯಾರೋ ಅಮ್ಮನ ಪರಿಚಯಸ್ಥರು ಊಟಕ್ಕೆ ಬಂದಿರಬೇಕೆಂದವಳು ಅವರ ಒಡನೆಗೇ ಹೋಗಲಿಲ್ಲ. ನಾಗಿಯೂ ಆ ಕುರಿತು ಯಾವ ಸಂಗತಿಯನ್ನೂ ಲಿತೆಗೆ ತಿಳಿಸಲಿಲ್ಲ. ತಿಳಿಸುವ ಅವಶ್ಯವೂ ಇರಲಿಲ್ಲ. ಅಷ್ಟೊಂದು ಅಪ್ರಾಮುಖ್ಯವಾಗಿದ್ದಿತಾಸಂಗತಿ ಆಗ.

ಅಂದಿನ ರಾತ್ರಿ ಅದೇಕೋ ಲಲಿತೆಗೆ ನಿದ್ದೆಯೇ ಬರಲೊಲ್ಲದು. ನಾಗಿಯು ಅಡಿಗೆಮನೆಯ ಕೆಲಸವನ್ನೆಲ್ಲಾ ಮುಗಿಸಿಕೊಂಡು ಕೋಣೆಗೆ ಮಲಗ ಹೋದಾಗ, ಲಲಿತೆಯು ಓದುತ್ತಲೇ ಇದ್ದಳು. ಬೇರೆ ದಿನಗಳಲ್ಲಾದರೆ ಲಲಿತೆಯು ಗಾಢನಿದ್ರಾವಶಳಾಗುವ ಸಮಯವಾಗಿತ್ತು. 'ಅದೇಕೆ ಲಲಿತ, ಇನ್ನೂ ಮಲಗಿಲ್ಲ? ಹತ್ತುಘಂಟೆ ಹೊಡೆಯಿತಲ್ಲ? ಎಷ್ಟು ರಾತ್ರಿ ಓದಿ ಕುಳಿತುಕೊಳ್ಳುವೆ? ಮಲಗು ಮಗು ಮಲಗು" ಎಂದು ನಾಗಿಯು ಒತ್ತಾಯ ಮಾಡಿದಳು. 'ಅಮ್ಮಾ ನನಗಿಂದು ನಿದ್ದೆಯೇ ಬರಲಾರದು. ನಾನು ಇನ್ನೂ ಸ್ವಲ್ಪ ಸಮಯ ಓದಿ ಕುಳಿತುಕೊಳ್ಳಲೇ? 'ವಾಗ್ದೇವಿ' ಎಂಬ ಕತೆಮುಗಿಸಲು ಇನ್ನು ಸ್ವಲ್ಪ ಮಾತ್ರವುಂಟಮ್ಮಾ. ನೀನು ಮಲಗು, ನಾನು ಇನ್ನೊಂದು ಅರ್ಧಘಂಟೆಯಲ್ಲೇ ಅದನ್ನು ಮುಗಿಸಿ ಮಲಗುತ್ತೇನೆ." "ಎಂದಳು ಲಲಿತೆ ಅತಿ ವಿನಯದಿಂದ. ಯಾರುಕೊಟ್ಟರು ನಿನಗಾ ಪುಸ್ತಕವನ್ನು? ಯಾಕೆ ಓದುವುದು ನೀನದನ್ನು? ಸಾಕು ಸಾಕು ಓದಿದುದಿನ್ನು ಮಲಗು ಮಲಗು' ಎಂದು ನಾಗಿಯು ಗದರಿಸಿದಳು. 'ವಾಗ್ದೇವಿಯನ್ನೋದಿದ ನನಗೆ ಮಠ ದೇವಸ್ಥಾನಗಳಲ್ಲಿ ಎಂತಹ ದುಷ್ಕೃತ್ಯಗಳೆಲ್ಲಾ ನಡೆಯುತ್ತಿರುವುದೆಂದು ಚೆನ್ನಾಗಿ ಮನವರಿಕೆಯಾಯಿತಮ್ಮಾ. ಇದು ಹೊರತು, ನಾವು ಸುಮ್ಮನೆ ಏನೇನೋ ಆಶೆ ಕಟ್ಟಿಕೊಂಡು ಅದನ್ನು ನೆರವೇರಿಸಿಕೊಳ್ಳಲು ಎಂತಹ ದುಷ್ಕೃತ್ಯ ಮಾಡಲೂ ಹೇಸದಿರುವುದು. ಅದರ ಪರಿಣಾಮ ಮಾತ್ರ ಪ್ರತಿವಿರುದ್ಧವಾಗುವುದು. ವಾಗ್ದೇವಿಯು ತನ್ನ ಮಗನೊಬ್ಬನನ್ನು ಸನ್ಯಾಸಿ ಪಟ್ಟಕ್ಕೇರಿಸಲು ಏನೆಲ್ಲಾ ಪ್ರಯತ್ನಮಾಡಿದಳಮ್ಮಾ? ಅದರಿಂದಾಗಿ ಎಂತಹ ಅನಾಹುತವಾಯಿತು! ಕೂಡದಮ್ಮಾ ಕೂಡದು, ಎಂದಿಗೂ ದುರಾಶೆಗೆ ಮನಸ್ಸು ಕೊಡಕೂಡದು! ಇದ್ದುದರಲ್ಲೇ ತೃಪ್ತಿ ಹೊಂದಬೇಕು. ಸನ್ಮಾರ್ಗದಲ್ಲಿ ನಡೆಯಬೇಕು'ಎಂದು ಲಲಿತೆಯು ಬಹಳ ಆಗ್ರಹದಿಂದ ತಾಯಿಯೊಡನೆ ಕೇಳಿಕೊಂಡಳು. ಅವಳು ತಾಯಿಗೆ ಬುದ್ಧಿವಾದ ಹೇಳಲು ಎಡೆಗೊಂಡುದು ಇದೇ ಮೊದಲು. ವಾಗ್ದೇವಿಯ ಕತೆಯು ಅವಳ ಮನಸ್ಸನ್ನು ಚೆನ್ನಾಗಿ ಮಥಿಸಿ ಕಲ್ಲೋಲವನ್ನೆಬ್ಬಿಸಿತ್ತು. ತಾಯಿಯ ದುರಾಶೆಯಿಂದಾಗಿ ತನ್ನ ಜೀವನ ಪುಷ್ಪವನ್ನು ಮೊಗ್ಗೆಯಲ್ಲೇ ಅನೀತಿಯ ಕೀಟವು ಕೊರೆದು ಕರುಬಿಸಿ ಬಿಡುವುದೋ ಎಂಬ ಭೀತಿಯು ಅವಳಲ್ಲಿ ಅಂದೇಕೋ ವಿಶೇಷ ಉದ್ವೇಗವನ್ನುಂಟುಮಾಡಿತ್ತು. "ಯಾಕೆ ಓದುವುದು ನೀನದನ್ನು?' ಎಂಬ ತಾಯಿಯ ಸಿಟ್ಟಿನ ಪ್ರಶ್ನೆಯು ಅವಳ ಭೀತಿಯನ್ನು ಮತ್ತಷ್ಟು ಬಲಗೊಳಿಸಿತು. ಆಗ ಅವಳ ಬಾಯಿಯಿಂದ ಒಂದೇ ಸವನೆ ಮೇಲಿನ ಉಪದೇಶ ವಾಕ್ಯಗಳು ಹೊರಬಿದ್ದುವು. ನಾಗಿಯು ಆಶ್ಚರ್ಯಗೊಂಡು ಲಲಿತೆಯ ಮುಖವನ್ನು ದಿಟ್ಟಿಸಿದಳು. ಅವಳ ಮುಖಕಮಲದ ಮೇಲಿಂದ ಬೆವರ ಹನಿಗಳು ಜಾರಿಬೀಳುತ್ತಿದ್ದುವು. ಮನೋಹರವಾಗಿ ಹೊಳೆಯುತ್ತಿರುವ ಹಣೆಯು ಸಂಪೂರ್ಣ ಒದ್ದೆಯಾಗಿ ಹೋಗಿತ್ತು. ಕಣ್ಣುಗಳು ನಿಸ್ತೇಜವಾಗಿದ್ದುವು. "ನನಗೇಕೋ ಇವತ್ತು ಬಹಳವಾಗಿ ಬೆವರುತ್ತದಮ್ಮ" ಎಂದು ಲಲಿತೆಯು ಮೇಜಿಯ ಮೇಲಿನ ಕರವಸ್ತ್ರ ತೆಗೆದು ಮುಖ, ಕುತ್ತಿಗೆ, ಮುಂಗೈಗಳನ್ನೆಲ್ಲಾ ಒರಸಿಕೊಂಡಳು. "ಲಲಿತ, ನೀನೀಗ ನನಗೆ ಬುದ್ಧಿ ಹೇಳುವವಳಾಗಿ ಹೋದೆಯಲ್ಲ? ಈ ವಾಗ್ದೇವಿ ಕತೆಯನ್ನು ನೀನೆಂದಿಗೂ ಓದಬಾರದು. ಯಾರು ಕೊಟ್ಟರಪ್ಪಾ ನಿನಗಾ ಪುಸ್ತಕವನ್ನು! ಬೇರೆ ಯಾವ ಪುಸ್ತಕವೂ ನಿನಗೆ ಸಿಗಲಿಲ್ಲವೇ" ಎಂದು ನಾಗಿಯು ಲಲಿತೆಯ ಕೈಯಿಂದ ಪುಸ್ತಕವನ್ನೆಳೆದು ತೆಗೆದುಕೊಂಡು ಮೇಜಿಯ ಮೂಲೆಗೆ ಬಿಸಾಡಿ, 'ಮಲಗು ಲಲಿತ ಮಲಗು' ಎಂದು ನೈವಡವಿ ಒತ್ತಾಯಮಾಡಿ ಮಲಗುವಂತೆ ಮಾಡಿದಳು.

ಅಂದು ಮಾಘ ಮಾಸದ ಕೃಷ್ಣಪಕ್ಷದ ದ್ವಾದಶಿ ರಾತ್ರಿ. ಶಿವಪುರವು ನಿದ್ರಾಲಿಂಗನಾ ಸುಖದಲ್ಲಿ ಮೈಮರೆತು ಬಿದ್ದಿತ್ತು. ಪ್ರಕೃತಿ ದೇವಿಯು ಭಾರಿ ಚಳಿಯಲ್ಲಿ ಕಾರಿರುಳಿನ ಕರಿಕಂಬಳಿ ಹೊದ್ದು ಮಲಗಿದ್ದಂತೆ ತೋರುತ್ತಿತ್ತು. ಗಂಭೀರ ನೀರವವು ತಾರೆಗಳ ಮಿಣಿಮಿಣಿ ದೀಪಾರತಿ ಪಡೆದು ತಾನೇ ತಾನಾಗಿ ಮೆರೆಯುತ್ತಿತ್ತು. ಬೀದಿಯ ಭಿಕಾರಿ ನಾಯಿಗಳೂ ತಮ್ಮ ಬಗುಳಾಟದ ಮೇಲಾಟ ಬಿಟ್ಟು ಸಿಕ್ಕಿದಷ್ಟು ಬೆಚ್ಚಗಿನ ಮೂಲೆಗೆ ಸೇರಿ ನಿದ್ದೆ ಹೋಗಿದ್ದುವು. ಇಂತಹ ಅಪರ ರಾತ್ರಿಯಲ್ಲಿ ಮೋಟರ್ ಕಾರೊಂದು ನಾಗಿಯ ಮನೆಯ ಮುಂಭಾಗದಲ್ಲಿ ಬಂದು ನಿಂತಿತು. ಕೂಡಲೆ ಅದರ ದೀಪಗಳು ನೊಂದಿಸಲ್ಪಟ್ಟವು. ಅದರಿಂದ ವ್ಯಕ್ತಿಯೊಂದು ಬಾಗಿಲು ತೆರೆದು ಹೊರಬಂದು ನಾಗಿಯ ಮನೆಯ ಹೊರದ್ವಾರಕ್ಕೆ ಬಲವಾದ ಬೆಟ್ಟರಿ ಲೈಟು ಹಾಕಿತು. ಬಾಗಿಲ ಬಳಿ ಹೋಗಿ ಮೆಲ್ಲಗೆ ಬಾಗಿಲು ಬಡಿಯಿತು. ಆ ಮೇಲೆ 'ವೆಂಕಟೋ, ವೆಂಕಟೋ' ಎಂದು ಕೈಬೆರಳುಗಳನ್ನು ಮಡಿಸಿ ಅದನ್ನು ಬಾಗಿಲ ಸಂದಿಗೊತ್ತಿಟ್ಟು ಆ ತೂತಿನೊಳಗಿಂದ ಸಾಕಷ್ಟು ಗಟ್ಟಿಯಾಗಿ ವೆಂಕಟ್ರಮಣನನ್ನು ಕರೆಯಿತು. ಒಳಗಿದ್ದ ವೆಂಕಟ್ರಮಣನು ಎದ್ದು ಕೂತು ತಲೆತುರಿಸಿಕೊಂಡು ಘುಸುಹೊತ್ತು ಯೋಚಿಸತೊಡಗಿದನು. ಎಂದೂ ಅರಿಯದ ಬೇಸರವು ಅಂದು ಅವನ ಮನಸ್ಸನ್ನು ಹಿಡಿದು ಕಾಡುತ್ತಿತ್ತು. ಸುರೆಯ ಅಮಲಿನ ನೆರೆಯೊಳಗಿಂದಲೂ, 'ವಿಶ್ವಾಸ ಘಾತುಕ ಮಾಡಬೇಡ!' ಎಂದು ಅಂತರಂಗವು ಪದೇ ಪದೇ ಕೂಗಿಡುತ್ತಿತ್ತು. ವೆಂಕಟ್ರಮಣನಿಗೆ ನಿದ್ದೆಯೇ ಬಂದಿರಲಿಲ್ಲ. ತಲೆಗೇರಿದ ಅಮಲಿನ ಬಿಗಿತವು ಸಡಿಲಾದೊಡನೆಯೇ ವಿವೇಕವು ಇಣಿಕಹತ್ತಿತು ಅವನಲ್ಲಿ. ಅವನು ಏನೇನೋ ಯೋಚಿಸಿಕೊಂಡು ನೆಲದ ಮೇಲೆ ಹೊರಳಾಡುತ್ತಿದ್ದನು. ಹಣದಾಶೆಯಿಂದ ಕೊಟ್ಟ ಮಾತು, ಮಾತಿಗೆ ತಪ್ಪಿದರೆ ಪರಿಣಾಮ ಏನಾಗುವುದೋ ಎಂಬ ಭೀತಿ ಒಂದೆಡೆ; ತನ್ನ ಮೇಲಿನ ನಾಗಿಯ ಪುತ್ರ ಸಮಾನ ಪ್ರೀತಿ, ಅವಳ ಸಚ್ಚರಿತೆ ಹಾಗೂ

ನಿರ್ಭಾಗ್ಯ ಪುತ್ರಿಗಾಗುವ ಗತಿಯ ಚಿಂತೆ ಇನ್ನೊಂದೆಡೆ. ಹೀಗೆ ವೆಂಕಟ್ರಮಣನ ಮನಸ್ಸೆಂಬುದು ಗಡಿಯಾರದ ಪೆಂಡ್ಯುಲಮಿನಂತೆ ಓಲಾಡುತ್ತಿತ್ತು. ಅದರಿಂದಲೇ ಶರೀರದ ಹೊರಳಾಟವೂ 'ವೆಂಕಟು, ವೆಂಕಟು, ಎಲ್ಲಿ ಸತ್ತುಹೋದೆ! ಬಾಗಿಲು ತೆರೆಯುತ್ತೀಯೋ ಇಲ್ಲವೋ?' ಎಂಬ ನಿಷ್ಠುರೋಕ್ತಿಯು ಎದ್ದು ಕೂತ ವೆಂಕಟ್ರಮಣನ ಮನಸ್ಸಿನ ಓಲಾಟವನ್ನು ಉತ್ತರಕ್ಷಣದಲ್ಲೇ ನಿಲ್ಲಿಸಿಬಿಟ್ಟಿತು. ಅವನು 'ಹೂಂ'–ಎಂದು ದೀರ್ಘ ಶ್ವಾಸಬಿಟ್ಟು ಎದ್ದು ಮೆಲ್ಲಗೆ ಬಾಗಿಲು ತೆರೆದನು. 'ಬೆಟ್ಟರಿ ಲೈಟಿನ' ವ್ಯಕ್ತಿಯು ಕೂಡಲೆ ಒಳಗೆ ಬಂದು ವೆಂಕಟ್ರಮಣನ ಕೈರಟ್ಟೆಯನ್ನು ಬಲವಾಗಿ ಹಿಡಿಯಿತು. ವೆಂಕಟ್ರಮಣನು 'ಅಯ್ಯೋ' ಎಂದು ಗಡಗುಟ್ಟಿ ನಡುಗಿದನು. 'ಮುಚ್ಚುಬಾಯಿ ಮೂರ್ಖ! ನಾವು ಎಷ್ಟು ಹೊತ್ತು ಕಾಯುತ್ತಿರುವುದು ಹೊರಗೆ?' ಎಂದಿತು ವ್ಯಕ್ತಿ ಸಿಟ್ಟಿನ ಪಿಸುಮಾತಿನಿಂದ. 'ನಾನಿನ್ನೇನು ಮಾಡಬೇಕಪ್ಪ ಹೇಳಿ, ಕೈಬಿಡಿ.' ಎಂದು ವೆಂಕಟ್ರಮಣನು ಸ್ವಲ್ಪ ಶಕ್ತಿಯನ್ನುಪಯೋಗಿಸಿ ತೋಳನ್ನು ವ್ಯಕ್ತಿಯ ಸಡಿಲಾದ ಕೈ ಹಿಡಿತದಿಂದ ತಪ್ಪಿಸಿಕೊಂಡನು. 'ಮಠದಲ್ಲಿ ಸ್ವಾಮಿಗಳು ಹೇಳಿದ್ದೆಲ್ಲಾ ಮರೆತುಹೋಯಿತೇ? ಅವರಂದಂತೆ ಮಾಡು. ನನಗೋಸ್ಕರವಾಗಿ ನೀನೇನೂ ಮಾಡಬೇಕಾಗಿಲ್ಲ ತಿಳಿಯಿತೇ?' ಎಂದಿತು ವ್ಯಕ್ತಿ ಕತ್ತು ಹಿಸುಕಿದ ಸಿಟ್ಟಿನ ಕುತ್ತಿಗೆಯೊಳಗಿಂದ. ಸ್ವಾಮಿಯ ಮಾತೆತ್ತಿದೊಡನೆಯೇ ವೆಂಕಟ್ರಮಣನು ಪ್ರತಿ ಮಾತೆತ್ತದೆ ಕೂಡಲೆ ಹೊರಚಾವಡಿಯೊಳಗಿಂದ ಬಾಗಿಲಿಲ್ಲದ ಉಣ್ಣುವ ಕೋಣೆಗೆ ಹೋಗಿ ಅದರ ಎಡಭಾಗದ ನಾಗಿ ಲಲಿತೆಯರು ಮಲಗಿರುವ ಕೋಣೆಯ ಬಾಗಿಲಿಗೆ ಬಡಬಡನೆ ಬಡಿದು, 'ಅಮ್ಮಾ; ಅಮ್ಮಾ! ಬಾಯಾರಿಕೆಯಾಗುತ್ತದೆ, ಎದೆಯೆಲ್ಲಾ ಸುಡುತ್ತಿದೆ, ಕುತ್ತಿಗೆ ಒಣಗಿಹೋಗಿದೆ, ಸ್ವಲ್ಪ ನೀರುಕೊಡಿ, ಅಷ್ಟುಮಾಡಿ' ಎಂದು ಅತಿ ದೈನ್ಯದಿಂದ ಬೇಡಿಕೊಂಡನು. 'ಅಮ್ಮಾ, ಅಮ್ಮಾ! ಅದಾರು? ಅಯ್ಯೋ! ಅಯ್ಯೋ! ಬಾಗಿಲು ತೆರೆಯಬೇಡ! ಯಾರೋ ಮರಾತ್ಮರು........'ಎಂದು ತನ್ನ ಮಾತನ್ನು ಅರ್ಧದಲ್ಲೇ ಮುಗಿಸಿ ಲಲಿತೆಯು ಬೆದರಿ ಕೂಗಿಬಿಟ್ಟಳು. ಮೊದಲೇ ಎಚ್ಚರವಾಗಿದ್ದ ನಾಗಿಯು ದಡಬಡನೆ ಎದ್ದು ಓಡಿಹೋಗಿ ಲಲಿತೆಯನ್ನು ಬಿಗಿಹಿಡಿದು, 'ಹೆದರಬೇಡ ಮಗು ಹೆದರಬೇಡ, ವೆಂಕಟ್ರಮಣನಿಗೆ ಬಾಯಾರಿಕೆಯಾಗುವುದಂತೆ ಪಾಪ! ನಾನು ಆಗಲೇ ಹೇಳಿದೆ ಅವನೊಡನೆ, ಬಾಯಾರಿಕೆಯಾಗಬಹುದು ಹಾಲು ಕುಡಿದು ಮಲಗೆಂದು. ಆಗ ಬಿದ್ದುಕೊಂಡ ಸ್ಮೃತಿಯಿಲ್ಲದೆ. ಈಗ ಎದ್ದು ಕೂಗುತ್ತಿದ್ದಾನೆ. ನೀನು ಸ್ವಸ್ಥ ಮಲಗು ಮಗು, ಯಾವ ಭೀತಿಯೂ ಇಲ್ಲ. ನಾನವನಿಗೆ ಸ್ವಲ್ಪ ನೀರು ಕೊಟ್ಟು ಬರುತ್ತೇನೆ' ಎಂದು ನಾಗಿಯು ಲಲಿತೆಯನ್ನು ಸಮಾಧಾನಪಡಿಸಿ ಮಲಗಿಸಿ ಬೆಂಕಿಕಡ್ಡಿ ಕೀರಿ ಚಿಮಣಿ ಹಚ್ಚಿದಳು. ಆದರೆ ಲಲಿತೆಗೆ ಸಮಾಧಾನವಾಗಲಿಲ್ಲ. ಅವಳ ಎದೆಯು ಬಡಬಡನೆ ಬಡಿಯುತ್ತಿತ್ತು. ಅವಳು ಮಲಗಲಾರದೆ ಎದ್ದು ಕೂತಳು. ನಾಗಿಯು ಕೈಯಲ್ಲಿ ಚಿಮಣಿ ಹಿಡಕೊಂಡು ಬಾಗಿಲು ತೆರೆದೊಡನೆಯೇ ಮೂರು ನಾಲ್ಕು ಮಂದಿ ಒಮ್ಮೆಯೇ ಒಳನುಗ್ಗಿದರು.

'ಅಯ್ಯೋ, ಕಳ್ಳರು! ಕಳ್ಳರು!' ಎಂದು ನಾಗಿಯು ದಿಗಿಲುಗೊಂಡು ಚಿಮಣಿಯ ದೀಪವನ್ನು ದಡಕ್ಕನೆ ಕೆಳಗೆ ಹಾಕಿಬಿಟ್ಟಳು. ಅದು ನೊಂದಿಹೋಯಿತು. ಆಗ 'ಬೆಟ್ಟರಿ ಲೈಟಿನ' ವ್ಯಕ್ತಿಯು ಲೈಟನ್ನು ಚಮಕಿಸಿ 'ಹಿಡಿಯಿರಿ ರಂಡೆಗಳಿಬ್ಬರನ್ನೂ!' ಎಂದು ಗರ್ಜಿಸಿತು. ಒಡನೆಯೇ ಒಬ್ಬನು ನಾಗಿಯ ಇನ್ನೊಬ್ಬನು 'ಅಯ್ಯೋ ಅಮ್ಮಾ!' ಎಂದು ಚಾಪೆಯಿಂದೇಳುವ ಲಲಿತೆಯ ಕುತ್ತಿಗೆಗಳನ್ನೊತ್ತಿಹಿಡಿದರು. ಲಲಿತೆಯು ಮತ್ತೂ 'ಅಯ್ಯೋ' ಎಂದು ಬೊರೆಯಿಡಲು ಅವಳನ್ನು ಹಿಡಿದವನು ತಾನು ಕುತ್ತಿಗೆಗೆ ಸುತ್ತಿದ್ದ ಶಾಲನ್ನೆಳೆದು ಅವಳ ಬಾಯಿಗೆ ತುರುಕಿ ಒತ್ತಿಹಿಡಿದನು. ಅಷ್ಟರಲ್ಲಿ ನಾಗಿಯೂ 'ಅಯ್ಯೋ ಬಿಡಿರಿ!' ಎಂದು ಬೊಬ್ಬೆಹಾಕುವಾಗ 'ಬೆಟ್ಟರಿಲೈಟಿನ' ವ್ಯಕ್ತಿಯು ನಡುಕಟ್ಟಿನಿಂದ ಬಿಚ್ಚುಕತ್ತಿಯನ್ನೆತ್ತಿಹಿಡಿದು, 'ಇದೋ ಜಾಗ್ರತೆ! ಬೊಬ್ಬೆ ಹಾಕಿದರೆ ಕುತ್ತಿಗೆ ಕಡಿದು ಕೊಂದುಹಾಕುವೆನು. ನಾಯಿಯಂತೆ ನಾನು ಹೇಳಿದ ಹಾಗೆ ಕೇಳಿದೆಯಾದರಾಯಿತು' ಎಂದು ಬೆದರಿಸಿತು. ಬಿಚ್ಚುಕತ್ತಿಯನ್ನು ಕಂಡಾಕ್ಷಣ ನಾಗಿಗೆ ದಿಗಿಲುಬಡಿದಂತಾಯಿತು. ತನ್ನನ್ನು ಹಿಡಿದವನ ಕೈಯಿಂದ ಜಾರಿ 'ಬೆಟ್ಟರಿಲೈಟಿ'ನ ವ್ಯಕ್ತಿಯ ಕಾಲಡಿಗೆ ಬಿದ್ದು 'ನರಸಿಂಹ ಭಟ್ಟರೇ, ನನಗೇನು ಬೇಕಾದರೂ ಮಾಡಿ. ನನ್ನ ಕುತ್ತಿಗೆಯನ್ನು ಈಗಲೇ ಬೇಕಾದರೆ ಕಡಿದುಹಾಕಿ. ಆದರೆ....ಆದರೆ ನನ್ನ ಮಗು....ನನ್ನ ಮಗು ಲಲಿತೆ' ಎನ್ನುವಷ್ಟರಲ್ಲಿ ನಾಲಿಗೆಯು ಶಕ್ತಿಕುಂದಿ ಒಳಸರಿಯಿತು. 'ಈಗೇಕೆ ಕಾಲುಹಿಡಿಯುವೆ ರಂಡೆ! ಸ್ವಾಮಿಗಳಿಗೆ ಮಾತುಕೊಟ್ಟು ಆ ಮೇಲೆ ಅದಕ್ಕೆ ತಪ್ಪಿ ಎಷ್ಟು ಸಲ ಜನಕಳುಹಿಸಿದರೂ ಮಠದ ಬಾಗಿಲಿಗೆ ಬಾರದಿರಲು ಎಷ್ಟರ ಪಿತ್ತನೆತ್ತಿಗೇರಿರಬೇಕು ನಿನ್ನ ತಲೆಗೆ! ನಿನ್ನ ಮಗಳೊಬ್ಬಳ ಅಹಂಕಾರವೇ ಅಹಂಕಾರವಂತೆ! ಮಾನವಾಗಿ ಜೀವಿಸಲು ಅವಳು ಸಿದ್ಧಳಿಲ್ಲಂತೆ. ನೋಡಬೇಕು ಬೀದಿಸೂಳೆಯ ಮಾನ ಎಲ್ಲಿವರೆಗೆ ಬರುತ್ತದೆಂತ!' ಎಂದು ನರಸಿಂಹ ಭಟ್ಟನು ತನ್ನ ಮನುಷ್ಯತ್ವವನ್ನು ಮೂಲೆಗೊತ್ತಿ ಸಿಂಹಸ್ವರೂಪಿಯೇ ಆಗಿ ನಾಗಿಯನ್ನು ಕಾಲ್ಚೆಂಡಿನೋಪಾದಿ ತುಳಿದುಬಿಟ್ಟ. ಇಷ್ಟರಲ್ಲಿ ಅದಾವ ಶಕ್ತಿಯಿಂದಲೋ ಲಲಿತೆಯು ತನ್ನನ್ನು ಹಿಡಿದವನ ಕೈಗಳೆರಡನ್ನೂ ಬಿಡಿಸಿ ಜಗ್ಗನೆದ್ದು, 'ಬೀದಿಸೂಳೆ ಯಾರು ಮರಾತ್ಮಾ?' ಎಂದು ಸಿಂಹಿಣಿಯಂತೆ ನರಸಿಂಹನ ಮೇಲೆ ಹಾರುವಷ್ಟರಲ್ಲಿ ಅವಳನ್ನು ಹಿಡಿದಿದ್ದವನು ಅವಳ ನಡುವನ್ನು ಬಿಗಿಯಾಗಿ ಹಿಡಿದು ಹಿಂದಕ್ಕೆಳೆದನು. ಲಲಿತೆಯು, 'ಅಯ್ಯೋ' ಎಂದು ಕೂಗಿ ಬೋಧೆತಪ್ಪಿ ತನ್ನನ್ನು ಹಿಡಿದವನ ಮೇಲೊರಗಿದಳು. ಅವಳ ಅಯೋ ಎಂಬ ಕೂಗು ನೆರೆಕರೆಯವರ ಕರ್ಣಕುಹರಗಳಿಗೆಲ್ಲಾ ಹೊಕ್ಕು ಭಗ್ನ ಮನೋರಥವಾಗಿ, 'ಅಯ್ಯೋ, ಅಯ್ಯೋ, ಅಯ್ಯೋ, ಅಯ್ಯೋ' ಎಂಬ ನಿರಾಶೆಯ ಪ್ರತಿ ಧ್ವನಿಯಿಂದ ವಾತಾವರಣದಲ್ಲಿ ಕ್ಷೀಣ ಕ್ಷೀಣವಾಗುತ್ತಾ ಲೀನವಾಯಿತು. ಲಲಿತೆಯ ನಡುವನ್ನು ಉಕ್ಕಿನ ಕಟ್ಟಿನಂತೆ ಬಿಗಿಹಿಡಿದ ನರ ರಾಕ್ಷಸನು ಅವಳು ಪ್ರಜ್ಞೆಗೆಟ್ಟುದನ್ನು ಕಂಡು ಬೆದರಿ ಕೂಡಲೆ ಹಿಡಿತವನ್ನು ಸಡಿಲಿಸಿ ಅವಳನ್ನು ನೆಲಕ್ಕೊರಗಿಸಿದನು. ನರಸಿಂಹ ಭಟ್ಟನ ತುಳಿತದ ಪೆಟ್ಟು ಬಲವಾಗಿ ಕೋಣೆಯ ಗೋಡೆಯ ಬದಿಯಲ್ಲಿ ಅರೆ ಮರವೆಯಿಂದ ಬಿದ್ದು ಹೊರಳಾಡುತ್ತಿದ್ದ ನಾಗಿಯು ಥಟ್ಟನೆದ್ದು 'ಅಯ್ಯೋ, ಏನಾಯಿತು? ನನ್ನ ಮಗುವಿಗೇನಾಯಿತು? ಅಯ್ಯೋ ದೇವರೆ!' ಎಂದು ತಲೆತಲೆ ಬಡಕೊಂಡಳು. 'ಏನು ನೋಡುತ್ತಿರುವುದು ನೀವು ಕಣ್ಣು ಕಣ್ಣು? ಅವಳು ಬೊಬ್ಬೆಹಾಕುವುದು ಕೇಳುವುದಿಲ್ಲವೇ? ಅವಳನ್ನು ಹಿಡಿದು ವಸ್ತ್ರ ತುರುಕಿ ಬಾಯಿಗೆ! ಕೈಕಾಲು ಕಟ್ಟಿ ಮೋಟರ್‌ಕಾರಿಗೊಯ್ದು ಹಾಕಿ ಮೊದಲು! ಆಮೇಲೆ ಅವಳ ಮಗಳನ್ನೊಯ್ಯಬಹುದು. ಅವರಿಗೆ ಅವಳಿಗೆ ಬೋಧ ಬರುವುದೋ ನೋಡುವ. ಬರದಿದ್ದರೆ ಮಠದಲ್ಲಿ ಬಂದೀತು' ಎಂದು ನರಸಿಂಹನ ಕಟ್ಟಾಜ್ಞೆಯಾಯಿತು. ಕೂಡಲೆ ಇಬ್ಬರು ನಾಗಿಯನ್ನು ಹಿಡಿದು ಅವಳ ಬಾಯಿಗೆ ವಸ್ತ್ರ ತುರುಕ ಹೋಗುವಾಗ, 'ಭಟ್ರೇ! ನೀವು ಹೇಳಿದಂತೆ ಕೇಳುವೆನು. ನೀವು ಎಲ್ಲಿಗೆ ಬರಬೇಕೆಂದು ಹೇಳುವಿರೋ ಅಲ್ಲಿಗೆ ಬರುವೆನು. ಆದರೆ ನನ್ನ ಮಗಳಿಗೊನ್ಮೆ ಬೋಧಬರುವುದೋ ನೋಡಬಿಡಿರಿ. ಸ್ವಲ್ಪ ನೀರು ತಂದು ಅವಳ ಮುಖಕ್ಕೆ ಚಿಮುಕಿಸಬಿಡಿ. ಅವಳ ಪ್ರಾಣ ಹಾರಿಹೋದೀತು! ನಾನು ಮಾಡಿದ ಅಪರಾಧಗಳನ್ನೆಲ್ಲಾ ಕ್ಷಮಿಸಿ ನನಗಷ್ಟೊಂದು ಉಪಕಾರಮಾಡಿ' ಎಂದು ಗೋಳಿಡುತ್ತಾ ನಾಗಿಯು ಪುನಃ ನರಸಿಂಹನ ಕಾಲಿಗೆರಗಿದಳು. 'ಈಗ ಬುದ್ಧಿ ಬಂತೇ? ನಿನ್ನ ಮಗಳೇನೂ ಸತ್ತಿಲ್ಲ. ಆ ಭೀತಿ ಬೇಡ ನಿನಗೆ. ಇದೇ ಬುದ್ಧಿ ಮೊದಲು ಬರುತ್ತಿದ್ದರೆ ಎಷ್ಟು ಮರ್ಯಾದೆಯಿತ್ತು? ಎಷ್ಟು ಸುಖವಿತ್ತು? ನಿನ್ನ ಮಗಳು ಬಹಳ ಹಮ್ಮಿನವಳು. ನಾನು ದುರಾತ್ಮನಂತೆ! ಹುಂ ಸೂಳೆಯಿಂದಲೂ ನಾನಾ ಮಾತು ಕೇಳಬೇಕಾಯಿತು! ಅವಳಿಗೆ ಪ್ರಜ್ಞೆ ಬಂದರೆ ಪುನಃ ಗಲಾಟೆಮಾಡದಿರಲಿಕ್ಕಿಲ್ಲ. ನಾನು ಹೇಳುವಂತೆ ಕೇಳುವಿಯಾದರೆ ನಾಯಿಯಂತೆ ಹೋಗಿ ಮೋಟರ್ ಕಾರಿನಲ್ಲಿ ಕೂತುಕೋ. ನಿನ್ನ ಮಗಳನ್ನು ಬಾಯಿಗೆ ವಸ್ತ್ರ ತುರುಕಿಸಿಟ್ಟು ಕೈಕಾಲು ಕಟ್ಟಿಯೇ ಕೊಂಡೊಯ್ಯಬೇಕು. ಎಲ್ಲಿಯಾದರೂ ಮಧ್ಯ ಮಾರ್ಗದಲ್ಲಿ ಬೋಧಬಂದುಬಿಟ್ಟರೆ ಬೊಬ್ಬೆಹಾಕಿಬಿಟ್ಟಾಳು.' ಎಂದ ನರಸಿಂಹ ಬೋರ್ಗಲ್ಲೇ ಆಗಿರುವ ಕೊಳೆಗಡುಕ ಹೃದಯದಿಂದ. 'ಅಯ್ಯಪ್ಪ ನಿಮ್ಮಿಚ್ಛೆಬಂದಂತೆ ಮಾಡಿ' ಎಂದು ನಾಗಿಯು ಚಲನೆ ಮಾತ್ರವಿರುವ ಶವದಂತೆ ಹೊರಗೆ ನಡೆದಾಗ ಕೈದಿಯಂತೆ ಅವಳ ಎಡಬಲಗಳಲ್ಲಿ ಕೋಣೆಯೊಳಗಿಂದಿಬ್ಬರು ನಡೆದರು. ಮೂರನೆಯವನು ಲಲಿತೆಯ ಬಾಯಿಗೆ ವಸ್ತ್ರ ತುರುಕಿ ಅದರ ಮೇಲೊಂದು ವಸ್ತ್ರವನ್ನು ಬಲವಾಗಿ ಬಿಗಿದು ಹಿಂದೆ ಕುತ್ತಿಗೆಗೆ ಕಟ್ಟಿ ಕೈಕಾಲುಗಳನ್ನು ತಾನು ತಂದಿದ್ದ ಹಗ್ಗದಿಂದ ಗಟ್ಟಿಯಾಗಿ ಬಿಗಿದನು. ಆಗ ಲಲಿತೆಗೆ ಬೋಧೆಯಾಯಿತು. ಕೂಗುವ, ಮತ್ತು ಕೈಕಾಲು ಬಿಡಿಸಿಕೊಳ್ಳುವ ಅವಳ ಪ್ರಯತ್ನವು ನಿಷ್ಫಲವಾಯಿತು.

ಎಷ್ಟು ಪ್ರೈ ಕೊಡಹಿದರೂ ಫಲವಾಗಲಿಲ್ಲ. ಕಡೆಗೆ ಸೋತು ಸುಮ್ಮನೆ ಬಿದ್ದುಬಿಟ್ಟಳು. ಕಂಗಳಲ್ಲಿ ಧಾರೆಕಟ್ಟಿ ನೀರು ಹರಿಯತೊಡಗಿತು. ನಿರ್ಭಾಗ್ಯ ಬಾಲೆಯ ಈ ಕಣ್ಣೀರ ಧಾರೆಯು ಎಂತಹ ಕಠಿಣ ಹೃದಯವನ್ನಾದರೂ ಒಂದೊಮ್ಮೆ ಕರಗಿಸಿ ಬಿಡುತ್ತಿತ್ತು. ಲಲಿತೆಯನ್ನು ಬಿಗಿದು ಕಟ್ಟಿದವನೇ ಅವಳ ಕಣ್ಣೀರನ್ನು ನೋಡಲಾರದೆ ಉಗುಳುವ ನೆವದಿಂದ ಹೊರನಡೆದನು. ಆದರೆ ನರಸಿಂಹ ಭಟ್ಟನು ತನ್ನ ಸಾಹಸಕ್ಕೆ ತಾನೇ ಮೆಚ್ಚಿದ ಸದರ್ಪ ಮುಖ ಮುದ್ರೆಯಿಂದ ಮಂದಸ್ಮಿತನಾಗಿ ಲಲಿತೆಯನ್ನು ನೋಡುತ್ತಾ ನಿಂತನು. ಲಲಿತೆಯ ಕಣ್ಣೀರು, ಕಾವೇರಿ ಕೆಂಡದಂತಾದ ನರಸಿಂಹನ ಹೃದಯ ಕತ್ತಿಯ ಧಾರೆಯನ್ನು ಮತ್ತಷ್ಟು ಗಟ್ಟಿಮಾಡುವ ನೀರಾಗಿ ಪರಿಣಮಿಸಿತು. ಸ್ವಲ್ಪ ಹೊತ್ತಿನಲ್ಲಿ ನಾಗಿಯೊಂದಿಗೆ ಹೋದವರಲ್ಲೊಬ್ಬನೂ ಲಲಿತೆಯನ್ನು ಬಿಗಿದವನೂ ಇಬ್ಬರೂ ತಲೆತಗ್ಗಿಸಿಕೊಂಡು ಒಳಗೆ ಬಂದು ಲಲಿತೆಯನ್ನೆತ್ತಿ ಕೊಂಡೊಯ್ದು ಮೋಟರ್ ಕಾರಲ್ಲಿರಿಸಿದರು. ಅವರ ಹಿಂದೆಯೇ ನಡೆದ ನರಸಿಂಹ ಭಟ್ಟನು ನಾಗಿಯ ಕೋಣೆಯ ಮತ್ತು ಮಾರ್ಗದೆದುರಿನ ಬಾಗಿಲೆಳೆದು, 'ವೆಂಕಟು, ವೆಂಕಟು' ಎಂದು ಕರೆಯುವಾಗ ವೆಂಕಟ್ರಮಣನ ಪತ್ತೆಯಿಲ್ಲ. 'ನಾವು ಕೋಣೆಯೊಳಗೆ ಪ್ರವೇಶಿಸುವಾಗಲೇ ವೆಂಕಟು ಕುಂಡೆಗೆ ಕಾಲು ಕೊಟ್ಟಿರಬೇಕು' ಎಂದ ಉಳಿದ ಮೂರು ಮಂದಿಯಲ್ಲೊಬ್ಬ. 'ಮೂರುಕಾಸಿನವನೆಲ್ಲಿಯೋ! ಇಂತಹ ಭಟಿಂಗರನ್ನು ನಂಬಿಕೊಂಡರಾದೀತು! ಸ್ವಾಮಿಗಳೊಬ್ಬರಿಗೆ ಅಂಥವರೇನಂದರೂ ನಂಬಿಗೆಯೇ. ಹೋಗಲಿ ಅವ, ನೀವು ಜಾಗ್ರತೆಯಿಂದ ಇವರಿಬ್ಬರನ್ನೂ ಗಟ್ಟಿ ಹಿಡಕೊಂಡು ಕೂತುಕೊಳ್ಳಿ' ಎಂದು ತಾನು ಡ್ರೈವರನ ಸೀಟಿನ ಆಚೆಕಡೆ ಕೂತು ಕಾರು ಯಾಕೆ ಹೋಗುವುದಿಲ್ಲೆಂದು ನೋಡುವಾಗ ಸ್ಟೀಯರಿಂಗಿನ ಮೇಲೊರಗಿ ನಿದ್ದೆಮಾಡಿದ ಡ್ರೈವರನಿಗೆ ಈ ಲೋಕದ ಬೋಧೆಯೇ ಇಲ್ಲ! 'ಹ್ಯೋ ಹ್ಯೋ, ಡ್ರೈವರ್

'ನವಯುಗ'ದ ಚಂದಾ ಹಣ ಬಾಕಿ ಇದ್ದರೆ ಒಡನೆ ಕಳುಹಿಸಿಕೊಡಿರಿ.

ಸಾಹೇಬ್ರು! ಇದೇನಯ್ಯಾ?' ಎಂದು ಬೆಟ್ಟರಿ ಲೈಟಿನ ಕಡೆಯನ್ನು ಡ್ರ್ಯಾವರನ ವೈಗೊತ್ತಿ ಎಬ್ಬಿಸಿದನು. ಹಾ.... ...ಎಂದು ಡ್ರ್ಯಾವರನು ಗೇಣುದ್ದ ಬಾಯಿ ಮಾಡಿ ಆಕಳಿಸಿ ಎರಡೂ ಹಸ್ತಗಳನ್ನು ಚಕಚಕ ತಿಕ್ಕಿ ಮುಖ ಸವರಿ, 'ಅಯ್ಯೋ ಸ್ವಾಮಿ, ಹೋಗುವುದೋ?' ಎಂದ. 'ನಮ್ಮ ಕೆಲಸವಾಗಿ ತಾಸು ಅರ್ಧ ವಾಯಿತು. ನೀವು ಎಲ್ಲಿದ್ದೀರೋ ಏನೋ?' ಎಂದು ತಮಾಷೆ ಮಾಡಿದ ನರಸಿಂಹ ಮುಗುಳ್ನಗೆ ನಕ್ಕು. 'ನಾನು ಕೂಡಾ ನೀವು ಯಾವಾಗ ಬರುತ್ತೀರೆಂದು ಸ್ಟೀಯರಿಂಗ್ ಹಿಡಿದೇ ಕಾದಿದ್ದೆ ಸ್ವಾಮಿ. ಹೋಗಬಹುದಲ್ಲ ಈಗ?' ಎಂದ ಡ್ರ್ಯಾವರ. 'ಹ್ಯೂಶ್, ಬೇಗ ಹೋಗುವ ತಡವಾಯಿತು ಸ್ವಾಮಿರು ಇನ್ನೆಷ್ಟು ಬೈಯ್ಯುವರೋ? ನಮ್ಮ ಕಷ್ಟ ಅವರಿಗೇನು ಗೊತ್ತು' ಎಂದು ನರಸಿಂಹ ಭಟ್ಟನು ಮಾತು ಮುಗಿಸುವಷ್ಟರಲ್ಲಿ ಜರ್ಕನೆ ಮೋಟರ್ ಕಾರು ಸ್ಟಾರ್ಟ್‌ಮಾಡಿ ಓಡಿಸಿಯೇ ಬಿಟ್ಟ ಡ್ರ್ಯಾವರ್.

ಅಯ್ಯಯ್ಯೋ! ಸತ್ತೆನು!! ಸತ್ತೆನು!!! ಅ-...ಯ್ಯೋ-...!

ಏನೆಂದು ಮುಂದಿನ ಸಂಚಿಕೆ ನಿರೀಕ್ಷಿಸಿರಿ.

ವಿದ್ಯಾರಣ್ಯರ ಪುಣ್ಯದಿನ

(ಕೆ. ಎಲ್. ಎನ್. ಉಪಾಧ್ಯಾಯ.)

ಮೊನ್ನೆ ಮಂಗಳವಾರ (6ನೇ ತಾರೀಕು) ವಿದ್ಯಾರಣ್ಯರ ಪುಣ್ಯದಿನವು, ಕರ್ಣಾಟಕದ ಎಲ್ಲಾ ಪ್ರಾಂತಗಳಲ್ಲೂ ಆಚರಿಸಲ್ಪಟ್ಟಿತೆನ್ನುವಾಗ ಅವರ ವಿಷಯ ಚಿಕ್ಕದೊಂದುಲೇಖನವು ಅಸಾಂಪ್ರತವಾಗಲಾರದಷ್ಟೆ? ವಿಜಯ ನಗರದ ಸಂಸ್ಥಾನಾಧೀಶ್ವರರಾದ, ಬುಕ್ಕ ಹರಿಹರರ ಕಾಲದಲ್ಲಿ ಅಮಾತ್ಯ ಮಾಧವನೆಂದು ಪ್ರಸಿದ್ಧರಾದವರೇ 'ವಿದ್ಯಾರಣ್ಯ'ರೆಂಬ ಮಹನೀಯರು. ಅಂದರೆ ಇವರ ಕಾಲವು ಸುಮಾರು 14ನೇ ಶತಮಾನದ ಮಧ್ಯಭಾಗವೆಂದು ಹೇಳಬಹುದು. ಇವರು ಪಂಡಿತ ಪ್ರಕಾಂಡರೂ ಮಹಾಸುಭಾವರೂ ಆಗಿದ್ದು, ತಮ್ಮ ಜೀವಿತ ಭಾಗವನ್ನು ಕರ್ಣಾಟಕದ ಏಳಿಗೆಗಾಗಿ ವಿನಿಯೋಗಿಸಿ, ಕರ್ಣಾಟಕ ಸಾಮ್ರಾಜ್ಯ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದನ್ನು ಸಂಪಾದಿಸಿದರು. ಪರಸ್ಪರ ವೈಷಮ್ಯಭಾವದಿಂದ ಕಳೆಗುಂದಿದ ಕನ್ನಡಿಗರಲ್ಲಿ ಒಂದು ಬಗೆಯ ನವಚೈತನ್ಯವು ಈ ಮಹಾತ್ಮರಿಂದಲೇ ತಲೆದೋರಿತು. ಅವರ ಹುರುಪಿನ ಫಲವಾಗಿಯೇ ಇಂದಿಗೂ ಶಿಲ್ಪಕಲಾ ಚಾತುರ್ಯದಿಂದ, ಸಾವಿರಾರು ಕಲಾಪ್ರೇಮಿಗಳನ್ನು ತನ್ನ ಕಡೆಗೆ ಸೆಳೆಯುತ್ತಿರುವ ವಿಜಯನಗರವು ವೈಭವ ಶಿಖರವನ್ನೇರಿತು. ಮುಸಲ್ಮಾನರ ದಬ್ಬಾಳಿಕೆಯು ತಡೆಯಲ್ಪಟ್ಟು ಹಿಂದೂ ರಾಜ್ಯವು ಸ್ಥಾಪಿತವಾಯಿತು.

ವಿದ್ಯಾರಣ್ಯರು ಅನೇಕ ವರ್ಷ ಮಂತ್ರಿ ಪದವಿಯಲ್ಲಿದ್ದು, ಸಾಂಘಿಕ ಶಕ್ತಿಯನ್ನು ಹೆಚ್ಚಿಸಿ, ತನ್ನ ಆತ್ಮಿಕ ಉನ್ನತಿಗಾಗಿ ಶೃಂಗೇರಿ ಜಗದ್ಗುರು ಪೀಠವನ್ನೇರಿದರು. ಆದರೂ ಅವರ ದೃಷ್ಟಿಯು ಕರ್ಣಾಟಕದ ಕಡೆಗೆ ಒಂದಲ್ಲೊಂದು ಬಗೆಯಿಂದ ಹರಿಯುತ್ತಲೇ ಇತ್ತು. ಹೀಗೆ ತನ್ನ ಆಯುರ್ಭಾಗವನ್ನು ತನ್ನ ಜನರಿಗಾಗಿ, ತನ್ನ ದೇಶಕ್ಕಾಗಿ ಸವೆಯಿಸಿ, ಅದೊಂದು ಪುಣ್ಯ ದಿನದಲ್ಲಿ ಸಮಾಧಿಸ್ಥರಾದರು.

ಅವರೂ ವಿಜಯ ನಗರದ ಕೀರ್ತಿಧ್ವಜವು ಅನೇಕ ಕಾಲ ಪರ್ಯಂತ ಹಾರಾಡುತ್ತಲೇ ಇತ್ತು. ಆದರೆ ಇಂದು, ಕಾಲನ ಚಕ್ರಾಟದಿಂದ ವೈಭವಶಿಖರವನ್ನೇರಿದ ವಿಜಯನಗರವು ನೆಲಸಮವಾಗಿದೆ. ಅಲ್ಲಿ ಈಗ ಮುಂಚಿನ ಸಿರಿವೈಭವಗಳಿಲ್ಲ. ಬದಲಿಗೆ ರಣಭೂಮಿಯಂತೆ ನೈತಾಷೀ ಕಳೆಯೊಂದು ಅಲ್ಲಿ ತಾಂಡವವಾಡುತ್ತಿದೆ. ಆದರೆ ಕಲಾಪ್ರೇಮಿಗಳಿಗೆ ಅದೊಂದು ಶ್ವಸುವ ಗೃಹವೆಂದರೂ ಸಲ್ಲುವದು. ಹೆಚ್ಚೇಕೆ? ಅದೊಂದು ಹಿಂದಿನ ಕನ್ನಡಿಗರ ಜಾಣ್ಮೆ ಹಿರಿತನಗಳನ್ನು ಅನಂತ ಕಾಲದ ವರೆಗೆ ತೋರಿಸುವ ಪ್ರದರ್ಶನಾಲಯದಂತಿದೆ. ಅಲ್ಲಿ ಹೋದ ಪ್ರತಿಯೊಬ್ಬ ಪ್ರೇಕ್ಷಕನೂ ಹಿಂದಿನ-ಇಂದಿನ ಸ್ಥಿತಿಗಳ ತುಮುಲದಲ್ಲಿ ಒಂದು ಕರ್ತವ್ಯಸ್ಫೂರ್ತಿಯನ್ನು ಪಡೆಯದಿರನು. ಹೀಗೆ 600 ವರ್ಷಗಳಲ್ಲೂ ಅಚ್ಚಳಿಯದೆ ಉಳಿದ ವಿಜಯ ನಗರದ ಸರ್ವತೋಮುಖ ಕೀರ್ತಿಗೆ 'ವಿದ್ಯಾರಣ್ಯ'ರೇ ಕಾರಣರೆಂದು ಕಂಠೋಕ್ತವಾಗಿ ಹೇಳಬಹುದು. ಆದರೆ ಹಿಂದಿನವರ ಪುಣ್ಯದಿನಗಳನ್ನು ಬರೇ ಹಬ್ಬದಂತಷ್ಟೇ ಆಚರಿಸಿದರೆ ಪ್ರಯೋಜನವಿಲ್ಲ. ಅವರ ಕೃತಿ ಧ್ಯೇಯಗಳನ್ನೇ ನಾವೂ ಆಚರಣೆಯಲ್ಲಿ ತರಬೇಕು. ಹಬ್ಬಗಳನ್ನು ಆಚರಿಸುವುದರ ಗುರಿಯಾದರೂ ಹೀಗೇ ಆಗಿದೆ. ವಿದ್ಯಾರಣ್ಯರ ಚರಿತ್ರೆಯಿಂದ ನಾವು ಕಲಿಯತಕ್ಕ ಅಂಶವಿಷ್ಟು "ಕನ್ನಡಿಗರ ಮೇಲ್ಮೆಗಾಗಿ, ಏಕೀಕರಣಕ್ಕಾಗಿ ಸಾಹಸಪಡಬೇಕು." ಇಷ್ಟುಜ್ಞಾನವು ಪ್ರತಿಯೊಬ್ಬ ಕನ್ನಡಿಗರಿಗೂ ಆದರೆ ಅಲ್ಲಿದೆ ಸಾರ್ಥಕತೆ. ಈ ದೃಷ್ಟಿಯಿಂದ ವಿದ್ಯಾರಣ್ಯರ ಪುಣ್ಯ ದಿನದಲ್ಲಿ ಸಭೆ ಜರಗಿಸಿಯೋ ಇನ್ನಾವ ರೀತಿಯಲ್ಲೋ ಕನ್ನಡಿಗರಲ್ಲಿ ಒಗ್ಗಟ್ಟನ್ನು ಸಾಧಿಸಬೇಕಾಗಿದೆ ಈಗ. ಅಂದರೆ ಕರ್ನಾಟಕ ಏಕೀಕರಣವೇ ಮೊದಲಾದ ಕನ್ನಡಿಗರ ಉನ್ನತಿ ಸಾಧಕ ಕಾರ್ಯಗಳನ್ನು ಸಾಧಿಸಲು ನಮಗೇತರ ಕಷ್ಟವಿದೆ?

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. [ಸಂ. ನ.]

ಕಾಪು ಬೋರ್ಡು ಹುಡುಗಿಯರ ಶಾಲೆಯ ಮೇಲೆ ನೆರೆ ಶಾಲೆಯ ವಕ್ರದೃಷ್ಟಿ ಏಕೆ?

ಕಾಪಿನ ಬೋರ್ಡ್ ಗರ್ಲ್ಸ್‌ಸ್ಕೂಲು ಇಲ್ಲಿಯ ಮುಖ್ಯೋಪಾಧ್ಯಾಪಕಿಯ ಹಾಗೂ ಸಹಾಯಕ ಉಪಾಧ್ಯಾಯಿನಿಯರ ಉತ್ತಮರೀತಿಯ ಕಲಿಸುವಿಕೆಯಿಂದಾಗಿ ಊರವರ ಮನ್ನಣೆಗೆ ಪಾತ್ರವಾಗಿರುತ್ತದೆ ಆದರೆ ನೆರೆಯ ಹುಡುಗರ ಶಾಲೆಯ ಕೆಲವರು ಹಲವು ವಿಧದ ಸಾಚು ವಂಚಿಕೆಗಳಿಂದ ಹೆಮ್ಮಕ್ಕಳ ಶಾಲೆಯ ಸಂಖ್ಯೆಯನ್ನಿಳಿಸಲು ಪ್ರಯತ್ನಿಸುತ್ತಿರುವರು ಹುಡುಗಿಯರ ಶಾಲೆಗೆ ಹೋಗುವ ಬಾಲಕ, ಬಾಲಕಿಯರಿಗೆ ಪೆಪ್ಪರ್ ಮಿಠಾಯಿ, ಪೆನ್ಸಿಲು ಕೊಡತ್ತೇನೆಂತ ಅಲ್ಲದೆ ಅವರ ತಂದೆ ತಾಯಿಗಳ ಹತ್ತಿರ ಹುಡುಗಿಯರಶಾಲೆಯಲ್ಲಿ ಕಲಿಸುವಿಕೆಯುಚೆನ್ನಾಗಿಲ್ಲವೆಂದು ಪ್ರಚಾರ ಮಾಡುವುದೇ ಮೊದಲಾದ ವಂಚಿಕೆಗಳಿಂದ ಆ ಶಾಲೆಗೆ ಬಾಲಕಿಯರು ಹೋಗದಂತೆ ತಡೆಯುತ್ತಿದ್ದಾರೆ ಹುಡುಗಿಯರು ತಾವು ಹೆಮ್ಮಕ್ಕಳ ಶಾಲೆಗೇ ಹೋಗುತ್ತೇವೆಂತ ಕಣ್ಣೀರು ಸುರಿಸಿದರೂ ಕೇಳದೆ, ಮಕ್ಕಳ ತಂದೆ ತಾಯಿಗಳನ್ನು ಒತ್ತಾಯಪಡಿಸಿ ತಮ್ಮ ಶಾಲೆಗೆ ಕಳುಹುವಂತೆ ಪ್ರೇರೇಪಿಸುವುದೇ ಮೊದಲಾದ ಕೆಲಸಗಳು ಮಕ್ಕಳ ಅಭಿವೃದ್ಧಿಯ ದೃಷ್ಟಿಯಿಂದ ಹಾನಿಕರವಲ್ಲವೆ? ಒಂದೇ ಬೋರ್ಡಿನ ಆಡಳಿತೆಗೊಳಪಟ್ಟ ಶಾಲೆಗಳಲ್ಲಿ ಒಂದು ಇನ್ನೊಂದರ ಮೇಲೆ ವಕ್ರದೃಷ್ಟಿಯನ್ನಿಡುವುದು ಎಷ್ಟು ಕ್ರೂರ ನ್ಯಾಯವಲ್ಲ ಕಲಿಸುವಿಕೆಯು ಪರೀಕ್ಷೆಗೆ ಮಕ್ಕಳು ತಾವಾಗಿಯೇ ಆ ಶಾಲೆಗೆ ಹೋಗುತ್ತೇವೆಂದು ಹಠಹಿಡಿಯುವ ಒಂದೇ ದೃಷ್ಟಾಂತವು ಸಾಕು. ಇಂತಹ ಪರಿಸ್ಥಿತಿಯಲ್ಲಾದರೂ ಮಕ್ಕಳ ಸಂಖ್ಯೆಯು ದಿನಂಪ್ರತಿ ೬೦-೬೫ಕ್ಕೆ ಮಿಕ್ಕಿಯೇ ಹಾಜರಿಯಿದೆ. ಮೇಲಿನ ಅನ್ಯಾಯಗಳು ಇನ್ನು ಮುಂದಕ್ಕಾದರೂ ಆಗದಂತೆ ಸಂಬಂಧಪಟ್ಟವರು ನಡತೊಂಡರೆ ಮಕ್ಕಳ ಹಿತದ ಕಡೆಗೆ ದೃಷ್ಟಿಯಿಟ್ಟ ಒಂದು ಮಹಾಪುಣ್ಯವನ್ನು ಅವರು ಕಟ್ಟಿಕೊಳ್ಳಬಹುದು.

—ಊರವ.

ಮಂಚಿಯಿಂದ ಬೋಳಂತೂರಿಗಾಗಿ ಗೋಳ್ತಮಜಲು ರಸ್ತೆಲ್ಯಾನು.

[ಇದು ಪಾಣೆಮಂಗ್ಳೂರು ಆನೆಕಲ್ಲು ರಸ್ತೆಯಿಂದ ಕಲ್ಲಡ್ಕ. ವಿಟ್ಲರಸ್ತೆಗೆ-ಜಂಕ್ಷನ್]

ಆಯ್ಯಾ

ಈ ರಸ್ತೆ ಆಗಬೇಕಾಗಿ ಈಮೊದಲು ಗ್ರಾಮಸ್ಥರು ಅನೇಕ ಅರ್ಜಿಗಳನ್ನು ಬರಕೊಂಡಿದ್ದರು. ಈ ರಸ್ತೆಯ ತನ್ನಿಯ ಕುರಿತು ಡಿಸ್ಟ್ರಿಕ್ಟ್ ಬೋರ್ಡ್‌ವೈಸ್ ಪ್ರೆಸಿಡೆಂಟ್ ಯು. ಸಿ. ಗೋನ್ಸಾಲಿಸ್ ಬಿ. ಎ. ಬಿ. ಯಲ್. ರವರೂ ಮೆಂಬರ್ ಜನಾಬ್ ಬಿ. ಎಲ್. ಅಹಮ್ಮದರವರೂ ತಾ. ೧-೭-೩೭ಕ್ಕೆ ಚಿತ್ತಯಿಸಿ ಈ ರಸ್ತೆಯ ವಿಷಯ ಆಲೋಚಿಸಿ ಕಲ್ಲಡ್ಕ ಪಂಚಾಯತ ಬೋರ್ಡಿನವರ ಅಭಿಪ್ರಾಯ ಕೂಡಾ ತಿಳಿದು ಹೋಗಿರುತ್ತಾರೆ ಈ ರಸ್ತೆಯು ಗ್ರಾಮಸ್ಥರಿಗೆ ಅತೀ ಅಗತ್ಯವಾದದ್ದು ಆದ್ದರಿಂದಲೇ ಈಮೊದಲು ನಾಲ್ಕೈದು ಗ್ರಾಮಸ್ಥರು ಈ ರಸ್ತೆ ಮಾಡಿಸಬೇಕಾಗಿ ಅನೇಕ ದಫೆ ಅರ್ಜಿಬರಕೊಂಡದ್ದು ಮಾತ್ರವಲ್ಲ ರಸ್ತೆಯ ಕೆಲವಂಶ ಈ ಮೊದಲು ಗ್ರಾಮಸ್ಥರ ವಂತಿಗೆಯಿಂದ ಬೋಳಂತೂರು ಪಟೇಲರು ಮಾಡಿಸಿರುತ್ತಾರೆ. ಈಗ ನಾಡುರಸ್ತೆಯಲ್ಲಿ ಉಂಟು ಈ ರಸ್ತೆಯು ಬೋಳಂತೂರು, ಮಂಚಿ ಕೊಳನಾಡು, ಗೋಳ್ತಮಜಲು ಈ ಗ್ರಾಮದವರಿಗೆ ತುಂಬಾ ಪ್ರಯೋಜನ ಈ ರಸ್ತೆಯು ಕೆಲವಂಶ ಕಲ್ಲಡ್ಕ ಪಂಚಾಯತಬೋರ್ಡಿಗೆ ಸೇರಿಯೂ ಕೆಲವಂಶ ಮಂಚಿ ಪಂಚಾಯತ ಬೋರ್ಡಿಗೆ ಸೇರಿಯೂ, ಕೆಲವಂಶ (ಬೋಳಂತೂರು ಗ್ರಾಮದ್ದು) ಸೀದಾ ಡಿ. ಬೋರ್ಡಿಗೆ ಒಳಪಟ್ಟು ಇರುತ್ತದೆ. ಸಾರ್ವಜನಿಕ ಪ್ರಯೋಜನಕಾರಿಗಳಾಗಿರುವ ಈ ಸಂಸ್ಥೆಗಳಾದ ಬೋರ್ಡಿನವರು ತ್ವರಿತಪರವಾಗಿ ಈ ರಸ್ತೆಯನ್ನು ಮಾಡಿಸಿದರೆ ತುಂಬಾ ಉಪಕಾರವಾದೀತು ದಯಾಳು ಡಿಸ್ಟ್ರಿಕ್ಟ್‌ಬೋರ್ಡಿನವರು ಈ ವಿಷಯ ಗಮನಿಸಬೇಕಾಗಿ ಪ್ರಾರ್ಥಿಸುವ.

ಗ್ರಾಮದ ಹಿತಹಿತೈಷಿ.

VACANCY.

Applications are invited from candidates belonging to the Scheduled Classes, possessing Oriental Titles Diploma in Vidwan under regulation 7 A(Sanskrit & Malayalam) for the post of a combined Sanskrit and Malayalam Pandit in Board High School Kasargod on a pay of Rs. 45-2/2 75. The vacancy is a permanent one. Applications with the diploma and certificates in original should reach this Office on or before

31—7—1937.

(*Sd*) A. C. GONSALVES.
For President,
District Board, South Kanara.

ಸುಸಮಯ! ಹಣ ಸಂಪಾದಿಸ್ರಿ!!

ಪ್ರೋಮ್ಸರಿಗಳನ್ನು ಕಂಪೆನಿಯೇ ಬಟವಾಡೆಮಾಡುವುದು.

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚ ಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್

ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.

ಉಪಾಧ್ಯಾಯರುಗಳಿಗೆ ಬೇಕಾದ

ಶಾಲಾ ರಿಜಿಸ್ಟರುಗಳು ನಮ್ಮಲ್ಲಿ ಇವೆ
ನವಭಾರತ ಬುಕ್ ಡಿಪ್ಪೊ, ಉಡುಪಿ

ಅತ್ಯುತ್ತಮ ಪೇನಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ

'ಕುಶಾ' (ರಿಜಿಸ್ಟರ್ಡ್) ಫೌಂಟನ ಪೇನಿನ 'ಶಾಯಿ'

'ಕುಶಾ' (ರಿಜಿಸ್ಟರ್ಡ್) ಚಲೊ ಸುವಾಸನೆಯ 'ಪೊಮೇಡ'

ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ

Sole distributors:—**V. V Kamath & Bros, Mangalore**

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ ೧—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಶ್ರೀ ವೆಂಕಪ್ಪ ರೈಗಳ ಪತ್ರ

ಜಿಲ್ಲಾ ಬೋರ್ಡು ಕಾಂಗ್ರೆಸ್ ಪಕ್ಷದ ದೋಷ; ಮುಂದಿನ ಕಾಂಗ್ರೆಸ್ ಪಕ್ಷವು ಕೈಕೊಳ್ಳ ಬೇಕಾದ ಕಾರ್ಯ

ಪ್ರಕೃತದ ನಮ್ಮ ಪಾರ್ಟಿಯು ಕಾಂಗ್ರೆಸಿನ ಗೌರವವನ್ನೂ ಅಭಿಮಾನವನ್ನೂ ಕಾಪಾಡಲು ಹೆಚ್ಚಿನ ಪರಿಶ್ರಮ ತೆಗೆದುಕೊಳ್ಳಲಿಲ್ಲ. ಚಿಕ್ಕದ ಮೆನಿಫೆಸ್ಟೋದಲ್ಲಿ (ಪ್ರಸಿದ್ಧಿ ಪತ್ರ) ಹೇಳಿದ ಯಾವ ಕಾರ್ಯಗಳನ್ನಾಗಲಿ ಜಾರಿಗೆ ತರುವಂತೆ ಪ್ರಯತ್ನಿಸಲಿಲ್ಲ. ಕಾರ್ಯಕ್ರಮವೊಂದನ್ನು ತಯಾರಿಸಿದ್ದು ಮಾತ್ರ. ಲೋಕಲ್ ಬೋರ್ಡು ಇಲೆಕ್ಷನಿಗೆ ಕೈ ಹಾಕುವಂತೆ ಕಾಂಗ್ರೆಸು ಅದೆ ಇದ್ದುದರ ಮೂಲಕ ಪ್ರಯೋಜನವಾಗ್ಯ ಸಾರ್ವಜನಿಕ ಕೆಲಸಗಳನ್ನು ಮಾಡಲಿಕ್ಕೂ ಕಾಂಗ್ರೆಸಿನ ನಿರ್ಮಾಣಕ ಕಾರ್ಯಕ್ರಮಗಳನ್ನು ಸಾಧ್ಯವಾದ ಮಟ್ಟಿಗೆ ಪ್ರಚಾರಕ್ಕೆ ತಂದು ಜನರ ಮನಸನ್ನು ಕಾಂಗ್ರೆಸಿನ ಕಡೆಗೆ ಸೆಳೆಯಲಿಕ್ಕೂ ಲೋಕಲ್ ಬೋರ್ಡು ಆಕ್ಟುಗಳಲ್ಲಿರುವ ಪ್ರೊಳ್ಳತನವನ್ನು ಪ್ರದರ್ಶಿಸಿ ತಿದ್ದಲಿಕ್ಕೂ—ಎಂದೇ ನನ್ನ ಭಾವನೆ.

ಆದರ ಈ ಕುರಿತು ನಾವೇನೂ ಮಾಡಲಿಲ್ಲ. ಹಾದಿ ಪ್ರಚಾರದ ವಿಷಯದಲ್ಲ ನಾವು ಹೆಚ್ಚಿನ ಶ್ರಮ ತೆಗೆದುಕೊಳ್ಳಲೂ ಇಲ್ಲ. ಡಿಸ್ಟ್ರಿಕ್ಟ್ ಬೋರ್ಡು ಕಾಂಗ್ರೆಸ್ ಪಕ್ಷೀಯರು ಸಭೆಗಳಿಗೆ ಬರುವಾಗಲಾದರೂ ಖಾದಿ ಧರಿಸಬೇಕೆಂದು ಮಾಡಿದ ನಿರ್ಣಯಕ್ಕೆ ಹೆಚ್ಚಿನವರು ಮಾನ್ಯತೆ ಕೂಡಾ ಕೊಡಲಿಲ್ಲ. ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯಲ್ಲಿ ನಮ್ಮ ಪಾರ್ಟಿಯು ಸೋತರೂ ಅನಂತರ ಕಾಂಗ್ರೆಸು ಶಿಸ್ತಿನಿಂದ ಕೆಲಸಮಾಡುತ್ತಿದ್ದರೆ, ಪ್ರಕೃತದ ಸ್ಥಿತಿಗೆ ಬರುತ್ತಿರಲಿಲ್ಲ. ಈಸಲವೂ ಜಿಲ್ಲಾ ಬೋರ್ಡು ಚುನಾವಣೆಗೆ ಕಾಂಗ್ರೆಸ್ ಕೈಯಿಕ್ಕುವುದು ಸರಿಯಷ್ಟೇ! ಆದುದರಿಂದ ಇನ್ನು ಅದಕ್ಕಾಗಿ ತಯಾರಿಸಲಿಕ್ಕಿರುವ ಮೆನಿಫೆಸ್ಟೋಲಿಗೆ ಹೊಸ ವಿಷಯಗಳನ್ನು ಹುಡುಕುವುದಕ್ಕಿಂತ ನನ್ನ ಅನುಭವಕ್ಕೆ ಬಂದ ಈ ಕೆಳಗಿನ ಸೂಚನೆಗಳನ್ನು ಮೆನಿಫೆಸ್ಟೋ ತಯಾರಿಸುವ ಸಮಯ ಸಭೆಯ ಮುಂದಿಡುವಂತೆ ನಿವೇದಿಸಿಕೊಂಡಿರುತ್ತೇನೆ.

ಸೂಚನೆಗಳು

(1) ಮುಂದಿನ ಮೆನಿಫೆಸ್ಟೋ ತಯಾರಿಸುವಾಗ ತಮ್ಮ ಅವಧಿಯಲ್ಲಿ ಕಾರ್ಯರೂಪಕ್ಕೆ ತರುವಷ್ಟು ಸಾಧ್ಯವಿರುವ ಕಾರ್ಯಕ್ರಮಗಳನ್ನು ಮಾತ್ರ ಪ್ರಕಟಿಸಬೇಕಲ್ಲದೆ, ಅವರ ಒತ್ತಿಗಾಗಿ ಅಸಾಧ್ಯವಿರುವವುಗಳನ್ನು ತೋರಿಕೆಗೋಸ್ಕರ ತುಂಬಿಸುವುದು ಪ್ರಯೋಜನವಿಲ್ಲ. (2) ಲೋಕಲ್ ಬೋರ್ಡು ಆಕ್ಟುಗಳಲ್ಲಿರುವ ಕುಂದು ಕೊರತೆಗಳನ್ನು ಹಣದ ಅನಾನುಕೂಲತೆಗಳನ್ನೂ ತೋರಿಸಿಕೊಡುವ ಒಂದು ರಿಪೋರ್ಟು ತಯಾರಿಸಿ ಓಟರರ ಮುಂದಿಡುವುದು ಮತ್ತು ಆ ಕೊರತೆಗಳನ್ನು ನಿವಾರಿಸುವ ಬಗೆ ಪ್ರಯತ್ನಿಸುವುದು (3) ಹಳ್ಳಿಗಳಲ್ಲಿ ಆದಷ್ಟು ಮಟ್ಟಿಗೆ ತೋಡುಗಳಿಗೆ ಕಾಲು ಸಂಕಗಳನ್ನು ಹಾಕಿಸುವುದು. ಹೊಳೆಗಳಿಗೆ ಹೊಸ ಸಂಕಗಳನ್ನು ನಿರ್ಮಿಸುವ ಮೊದಲು ಹಳ್ಳಿಗಳಿಗೆ ಮತ್ತು ತೋಡುಗಳಿಗೆ ಮೋರಿಗಳನ್ನೂ ಸಂಕಗಳನ್ನೂ ಹಾಕಿಸುವಂತೆ ಪ್ರಯತ್ನಿಸುವುದು (4) ಹಾಳಾದ-ಕಲ್ಲಿನ ಮತ್ತು ಮರದ ಮೋರಿಗಳನ್ನು ಪಕ್ಕಾ ಹೊಸತು ಮೋರಿಗಳನ್ನಾಗಿ ಮಾಡಿಸುವುದು. (5) ವರ್ಷಂಪ್ರತಿ ಜಿಲ್ಲಾ ಬೋರ್ಡು ಮಾರ್ಗಗಳನ್ನು ಕಾಪಾಡಲು ಸಾಕಷ್ಟು ಹಣವು ವಿನಿಯೋಗವಾಗುವಂತೆ ಮಾಡುವುದು. (6) ಪಂಚಾಯತು ಮತ್ತು ಜಿಲ್ಲಾ ಬೋರ್ಡುಗಳ ಕೈ ಕೆಳಗಿರುವ ನೀರಾಶ್ರಯ ದೊರೆಯುವ ಬಾವಿಗಳಲ್ಲಿ ಸರಿಯಾಗಿ ನೀರಾಶ್ರಯ ದೊರೆಯುವಂತೆಯೂ ರಿಪೇರಿ ಇಲ್ಲದವುಗಳನ್ನು ದುರಸ್ತಿಮಾಡುವಂತೆಯೂ ಅಗತ್ಯವಿಲ್ಲದವುಗಳನ್ನು ಮುಚ್ಚುವಂತೆಯೂ ಸಿಗಾ ತೆಗೆದುಕೊಳ್ಳುವುದು. (7) ಇನ್ನು ತೋಡಿಸುವ ಬಾವಿಗಳಲ್ಲಿ ಯಾವಾಗಲೂ ನೀರು ಸಿಕ್ಕುವಂತೆ ತೋಡಿಸುವ ಎಚ್ಚರ ತೆಗೆದುಕೊಳ್ಳುವುದು. (8) ಜಿಲ್ಲೆಯ ಯಾವುದಾದರೂ ಕೆಲವು ಶಾಲೆಗಳಲ್ಲಿ ಪರೀಕ್ಷಾರ್ಥವಾಗಿ ಹರಿಜನ ಮಕ್ಕಳಿಗೆ ಒಂದೂಟಕ್ಕಾದರೂ ವ್ಯವಸ್ಥೆ ಮಾಡುವುದು. ಹೊರತು ಎಲ್ಲಾ ಹರಿಜನ ಮಕ್ಕಳಿಗೆ ಸ್ಲೇಟು ಪುಸ್ತಕ ಬಟ್ಟೆಬರೆಗಳನ್ನು ಒದಗಿಸಿಕೊಡುವುದು. (9) ಬಡಮಕ್ಕಳಿಗೆ ಖಡ್ಡಾಯವಾಗಿ ಸಂಬಳ ಮಾಫಿಯಾಗುವಂತೆ ಮಾಡುವುದು. (10) ಹೆಚ್ಚಿನ ಶಾಲಾ ಕಟ್ಟಡಗಳನ್ನು ದುರಸ್ತಿಪಡಿಸುವ ಏರ್ಪಾಡು ಮಾಡುವುದು. (11) ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚಾಗುವಂತೆಯೂ ಅಗತ್ಯವಾಗಿ ಬೇಕಾಗಿರುವ ಸಾಹಿತ್ಯ ಸಾಮಾಗ್ರಿಗಳನ್ನು ಒದಗಿಸಿಕೊಡುವಂತೆಯೂ ಮಾಡುವುದು (12) ಪ್ರಾಥಮಿಕ ಶಾಲೆಗಳ ಖರ್ಚಿಗೆ ಬೇಕಾಗುವ ಹಣವನ್ನು ದೊರಕಿಸಿಕೊಳ್ಳುವ ಏರ್ಪಾಡುಮಾಡುವುದು (13) ಇದ್ದ ಶಾಲೆಗಳು ಯೋಗ್ಯ ರೀತಿಯಿಂದ ನಡೆಯುವಂತೆಯೂ ಅವುಗಳ ಕುರಿತು ವಿನಿಯೋಗವಾಗುವ ಹಣವು ನಿಷ್ಪ್ರಯೋಜನವಾಗಿ ವೆಚ್ಚವಾಗದಂತೆಯೂ ನೋಡಿಕೊಳ್ಳುವುದು (14) ಬೋರ್ಡು ಹೈಸ್ಕೂಲುಗಳಲ್ಲಿ III ಫಾರ್ಮಿನಿಂದ ಹಿಂದೀ ಕಲಿಸುವಂತೆ ಚಳವಳಿಸುವುದು. (15) ಪ್ರತಿ ಮೆಂಬರರೂ ತಮ್ಮ ಸರ್ಕಲಿನ ಎಲ್ಲಾ ಶಾಲೆಗಳನ್ನೂ ಪಂಚಾಯತುಗಳನ್ನೂ ವರ್ಷಕ್ಕೊಮ್ಮೆಯಾದರೂ ಸಂದರ್ಶಿಸುವ ಕ್ರಮಗಳನ್ನಿಟ್ಟುಕೊಳ್ಳುವಂತೆ ಮಾಡುವುದು. (16) ಹೆಚ್ಚಿನ ರೂರಲ್ ಆಸ್ಪತ್ರೆಗಳು—ಸ್ಥಾಪಿತವಾದ ಧ್ಯೇಯದಂತೆ ಧರ್ಮಾರ್ಥವಾಗಿ ಚಿಕಿತ್ಸೆ ನಡಿಸುವಂತೆ ನೋಡುವುದು. ಹೊರತು ಇವುಗಳಿಗೆ ಒದಗಿಸಲ್ಪಡುವ ಮದ್ದುಗಳು ಆದಷ್ಟು ಸುಲಭ ಕ್ರಯದಲ್ಲಿ ದೊರೆಯುವ ಯೋಜನೆ ಮಾಡುವುದು. (17) ಹಳ್ಳಿಗಳಲ್ಲಿ ವರ್ಷಂಪ್ರತಿ ಜ್ವರದ ಹಾವಳಿಯು ವಿಶೇಷವಾಗುತ್ತಾ ಬರುತ್ತಿರುವುದರಿಂದ ಈಗಿರುವುದಕ್ಕಿಂತಲೂ ಸುಧಾರಿತ ರೀತಿಯಲ್ಲಿ ಕ್ವಿನಾಯಿನ್ ಹಂಚುವ ವ್ಯವಸ್ಥೆ ಮಾಡುವುದು. (18) ಇದ್ದ ಪಂಚಾಯತುಗಳನ್ನು ವರ್ಷಂಪ್ರತಿ ಒಡಿಟ್ ಮಾಡಿ, ಅದರ ಕಾರ್ಯಕಲಾಪಗಳೆಲ್ಲಾ ಸರಿಯಾಗಿ ನಡೆಯುವಂತೆ ವ್ಯವಸ್ಥೆ ಮಾಡುವುದು. (19) ಪಂಚಾಯತು ಶಾಲೆಗಳು ಕ್ರಮದಂತೆ ನಡೆಯುವ ಏರ್ಪಾಡುಮಾಡುವುದು. (20) ಪಂಚಾಯತು ಫಂಡು ದುರುಪಯೋಗವಾಗದಂತೆ ನೋಡಿಕೊಳ್ಳುವುದು. ಮತ್ತು ತಮ್ಮ ಮಾರ್ಗಗಳನ್ನು ವರ್ಷಂಪ್ರತಿ ಜಾಗ್ರತೆ ತೆಗೆದುಕೊಳ್ಳುವುದು. (21) ಪಂಚಾಯತು ಕೆಲಸಗಳು ಕ್ರಮದಲ್ಲಿ ನಡೆದುಬರುವಂತೆ ನೋಡಿಕೊಳ್ಳುವ ಸಿಬಂದಿಯನ್ನು ಹೆಚ್ಚಿಸುವುದು. (22) ಬೋರ್ಡು—ಸ್ವದೇಶೀ ವಸ್ತುಗಳನ್ನೇ ಉಪಯೋಗಿಸುವಂತೆಯೂ ಬೋರ್ಡು ನೌಕರರು ಖದ್ದರ್ ಧರಿಸುವಂತೆಯೂ ಪ್ರೇರೇಪಿಸುವುದು (23) ಲೋಕಲ್ ಬೋರ್ಡು ಆಕ್ಟುಗಳನ್ನು ತಿದ್ದುಪಡಿ ಮಾಡುವ ಧ್ಯೇಯವನ್ನೇ ತಮ್ಮ ಗುರಿಯಾಗಿಟ್ಟುಕೊಂಡು ಕಾಂಗ್ರೆಸಿನ ಶಿಸ್ತು ಪರಿಪಾಲನೆಮಾಡುವ ಮೆಂಬರರನ್ನೇ ಆರಿಸುವುದು. (24) ಪಾರ್ಟಿ ಮೆಂಬರರ ಪೈಕಿ ಇಬ್ಬರಾದರೂ ಬೋರ್ಡಿನ ಕಾರ್ಯಕಲಾಪಗಳನ್ನೂ ಆಯಾ ಸರ್ಕಲಿಗೆ ಸಂಬಂಧಪಟ್ಟ ಸಕಲಾನುಭವಗಳನ್ನೂ ಸಂಗ್ರಹಿಸಿ ಕ್ರಮದಂತೆ ಪರಿಶೀಲಿಸುತ್ತಿದ್ದು ಅದರಲ್ಲಾಗಬಹುದಾದ ನ್ಯೂನತೆಗಳನ್ನು ಹೋಗಲಾಡಿಸುವುದಕ್ಕೆ ಪಾರ್ಟಿಯವರು ಪ್ರಯತ್ನಿಸುವುದು. ಮತ್ತು ಇದಕ್ಕಾಗಿ ಬೋರ್ಡಿನ ಮುಂದೆ ಮಾತಾಡುವರೆ ಪಾರ್ಟಿಪರವಾಗಿ ಕೆಲವರನ್ನು ನೇಮಿಸುವುದು. (25) ಪಾರ್ಟಿಯವರು ತಾವು ಮಾಡಿದ ಕೆಲಸಗಳ ಕುರಿತು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ವರ್ಷಾವಧಿಯಲ್ಲಾದರೂ ರಿಪೋರ್ಟುಮಾಡುವುದು. ಮತ್ತು ಪತ್ರಿಕೆಗಳ ಮೂಲಕ ಪ್ರಕಟಿಸುವುದು. (26) ಪಾರ್ಟಿಯವರು ಶಿಸ್ತು ಪರಿಪಾಲನೆಮಾಡುವ ಮತ್ತು ಮೆನಿಫೆಸ್ಟೋದಲ್ಲಿ ನಿವೇದಿಸಿದ ಕಾರ್ಯಗಳನ್ನು ಮಾಡುವ ಕುರಿತು ಮೇಲ್ವಿಚಾರ ತೆಗೆದುಕೊಳ್ಳುವ ಏರ್ಪಾಡು-ಜಿಲ್ಲಾ ಕಾಂಗ್ರೆಸ್ ಕಮಿಟಿಯು ಕೂಡಾ ಮಾಡುವುದು ಅತೀ ಅಗತ್ಯ. ಈ ಜವಾಬ್ದಾರಿತಯನ್ನು ಪ್ರಾಂತೀಯ ಕಾಂಗ್ರೆಸು ಕಮಿಟಿಯವರೂ ಸ್ವಲ್ಪ ಮಟ್ಟಿಗೆ ವಹಿಸಿಕೊಳ್ಳುವುದು ಶ್ರೇಯಸ್ಕರ. (27) ಕಳೆದ ಚುನಾವಣೆ ಸಮಯ ಕಾಂಗ್ರೆಸ್ ಪರವಾಗಿ ಆರಿಸಲ್ಪಟ್ಟ ಕೆಲವು ಮೆಂಬರರು ಇಲೆಕ್ಷನ್ ಸಮಯ ತಾವು ಪರಸ್ಪರ ಸಹಕರಿಸಿಕೊಳ್ಳದೆ, ತಮ್ಮ ಸ್ಥಾನವನ್ನು ಹೇಗಾದರೂ ಲಭಿಸಿಕೊಳ್ಳುವ ಆಶೆಯಿಂದ ಪ್ರತಿಕಕ್ಷಿಗಳೊಡನೆ ಸಹಕರಿಸಿಕೊಂಡು ಕಾಂಗ್ರೆಸು ವಿರೋಧಿಗಳಿಗೆ ಆಶ್ರಯಕೊಟ್ಟಂತೆ ಈಸಲ ಆಗಗೊಡಬಾರದಾಗಿಯೂ ಇಂಥಾ ವಿದ್ಯಮಾನಗಳು ನಡೆದಲ್ಲಿ ಶಿಸ್ತು ನಿಬಂಧನೆಗಳನ್ನು ಜಾರಿಗೆ ತರುವಂತೆಯೂ ಜಿಲ್ಲಾ ಕಾಂಗ್ರೆಸು ಕಮಿಟಿಯು ತಪ್ಪದೆ ಎಚ್ಚರಿಕೆಯಿಂದಿರುವುದು.

ಉಪ್ಪಿನಂಗಡಿ
ತಾ. 23-6-37

ಇತಿ ಬಿ. ವೆಂಕಪ್ಪ ರೈ.
ದ.ಕ ಜಿ. ಬೋ. ಮೆಂಬರ

ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯುತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

THE ROYAL SEED CO.,
FLORISTS & SEEDSMEN,
27, Ilpay Thope ULSOOR, BANGLORE.

ವಿ ಸೂ—ತರಕಾರಿಗಳು ಮಾರ್ಕೇಟ್ ರೇಟಿಗೆ ಸಪ್ಲೈ ಮಾಡಿ ೧—೦—೦ ಒಂದಕ್ಕೆ ೦—೨—೦ ಕಮೀಷನ್ ಪಡಿಯುತ್ತೇವೆ ಆರ್ಡರ್ ಗಿರಾಕಿಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು

NOTICE

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 37/1937

1 ತುಂಗು ಸೆಟ್ಟಿ
2 ಬಾಬು ಸೆಟ್ಟಿ
3 ಪದ್ಮಕ್ಕ ಸೆಟ್ಟಿ
} **ಅರ್ಜಿದಾರರು**

ದಾಬನೆಟ್ಟಿ ತುಂಗುಸೆಟ್ಟಿ ಮಗ ಹಾಲಿ ಮೈಸೂರುಜಿಲ್ಲಾ ಮಂಜರಾಬಾದು ತಾಲೂಕು ಒಸ್ಸೂರು ಎಸ್ಟೇಟಿನಲ್ಲಿರುವವ } **ಎದ್ರಿ**

ಕಾರ್ಕಳ ತಾಲೂಕು ಕಲ್ಯ ಗ್ರಾಮದ ಕುಂಟಾಡಿ ಪಾರಬೆಟ್ಟು ತುಂಗು ಸೆಟ್ಟಿಯ ಮಗ K. P. ಶೀನಯಾನೆ ಶೀನಪ್ಪ ಸೆಟ್ಟಿಯು ತಾ. 18—9—1936ರಲ್ಲಿ ಮೈಸೂರು ಜಿಲ್ಲಾ ಮಂಜರಾಬಾದು ತಾಲೂಕು ಒಸ್ಸೂರು ಎಸ್ಟೇಟಿನಲ್ಲಿ ಮೃತಪಟ್ಟಿರುವುದರಿಂದ, ಆತಗೆ ಬರಬೇಕಾದ ಆವಜುಗಳ ವಸೂಲು ಬಗ್ಗೆ ಆತನ ವಾರೀಸುದಾರರಾದ ಅರ್ಜಿದಾರರ ವ ಎದ್ರಿಯ ಬಗ್ಗೆ ಸದ್ರಿಯವರ ಕುಟುಂಬದ ಮೆನೇಜರಳಾದ 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಈ ಕೋರ್ಟಿಗೆ ಕೊಟ್ಟ ಮೇಲ್ಕಾಣಿಸಿದ ಅರ್ಜಿಯು ತನಿಖೆ ಬಗ್ಗೆ ತಾ 20-7 1937ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಈ ಕುರಿತು ಯಾರಿಗಾದರೂ ಆಕ್ಷೇಪಗಳಿದ್ದರೆ ಅವರು ಸದ್ರಿ ದಿನ ಬೆಳಗ್ಗೆ ೧೦ ಘಂಟೆಗೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳಬಹುದು ಎಂಬದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿಯದೆ

K. Mahabala Hegde,
Pleader for Petitioners.
ಕಾರ್ಕಳ, ತಾ. ೨-೭-೧೯೩೭

ಕಿರಿಯರ ಪ್ರಪಂಚದ
ಪುಸ್ತಕಗಳು.

೧ ನಾಟಕಕಥೆಗಳು ...	೦	೨	೦
೨ ಮುಂದಿನ ದೇವರು ..	೦	೨	೦
೩ ಸ್ವತಂತ್ರ ಜೀವನೋಪಾಯ	೦	೨	೬
೪ ಕುಶ-ಲವ	೦	೪	೦
೫ ಸಂಶಯ ಪಿಶಾಚಿ	೦	೬	೦
೬ ಕಾವ್ಯಸಾಮ್ರಾಜ್ಯ	೦	೧೨	೦
೭ ಮಧುವನ	೧	೮	೦
೮ ವ್ಯಭಿಚಾರಿಣಿ ಯಾರು?	೦	೮	೦
೯ ಹೆಂಡ್ತಿ ಗಂಡನಾದರೆ!	೦	೪	೦
೧೦ ಪುರುಷವಧು!	೦	೪	೦

ಕಿರಿಯರ ಪ್ರಪಂಚ, ಉಡುಪಿ

ಭಾಷಾಂತರಕಾರರು
ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'

C/o **'ಕಿರಿಯರ ಪ್ರಪಂಚ,' ಉಡುಪಿ.**

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಮಾಸ] ಕಥಾಕುಂಜ [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

CHEAPEST SAFEST INDUSTRIAL
INSURE WITH REPRESENT
RANJIT.
BIMA Co. Ltd. AMRITSAR
APPLY FOR HONOURABLE JOB & DECENT SALARY.

'ನವಯುಗ'
ಪ್ರತಿ ಗುರುವಾರ ಹೊರಡುವ ವಾರಪತ್ರಿಕೆ.
ವಾರ್ಷಿಕ ಚಂದಾ ರೂ. ೩—೪—೦

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*
ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕೆದಪಾವಿನ್ನು, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಕ, ಛಾವಳಿ, ನಾಮರ್ದಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಮಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ಮಡಲು ಸಾದಾ 16ಮೊಳದ ಶೀರೆ 1ಕ್ಕೆ ರೂ. 16 ರಿಂದ ರೂ. ೫೫ರ ವರೆಗೆ, ಅರೆ ಕಡಮೆ 16ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ. 16 ಖಣ 1ಕ್ಕೆ ರೂ. 1½ರಿಂದ ರೂ 10ರ ವರೆಗೆ, ಪೋಸ್ಟು ಖರ್ಚು ಪ್ರತ್ಯೇಕ ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ



ಧರ್ಮಾರ್ಥ ಬಹುಮಾನಗಳು
1-4-0ಗೆ !
—·— ಯಾರಿಗೆ ? —·—

ರೂಪಾಯಿ 1—4—0 ಕೊಟ್ಟು 14ಸೀನ ಬಟ್ಟೊ ರೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ.—3ಡಮ್ಮಿ ರಿಸ್ಟ್‌ವಾಚುಗಳು; 1 ಟ್ರೈಪ್ಲಿಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಶ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿ; 1 ಫೌಂಟನ್ ಪೆನ್ನು 14 ಕ್ಯಾರೆಟ್ ನಿಬ್ಬು ಸಮೇತ 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲ್ಯಾಟ್ ಅಥವಾ 1 ಅತ್ಯುತ್ತಮ 'B' ಟೈಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. ಇಂದೇ ಆರ್ಡರುಕೊಡಿರಿ

Bengal Watch Co.,
Post Box No. 12214, CALCUTTA

The Combined Booking Agency
AND
The Joint Booking Office
MANGALORE, SOUTH KANARA.

— ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ —

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ—ಚಾರ್ಮಾಡಿ — ಕಾರ್ಕಳ

ಉಜಿರೆ (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ) — ಉಡುಪಿ

ಮಂಗಳೂರು — ಕುಂದಾಪುರ

ಪುತ್ತೂರು — ಮೂಡಬಿದ್ರೆ

ಮೂಲ್ಕಿ — ಗಂಗೊಳ್ಳಿ

ಜಿಲ್ಲೆಯ ಹೊರಗೆ—

ಮಡಿಕೇರಿ, ಮೈಸೂರು, ಸಕಲೇಶಪುರ, ಚಿಕ್ಕಮಗಳೂರು, ಮೂಡಗೆರೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿಗೃಹಗಳು ನಿರ್ಮಿಸಲ್ಪಡುವುವು. ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜ್ಯೊಂಟ್ ಮೆನೇಜರರಿಗೆ ತಿಳಿಸಿರಿ.

The Coondapoor Bank, Ltd.,

Head Office - **Coondapoor** Branch Office -**Brahmavar**

Beg to announce that a new Branch has been opened at SHANKARANARAYANA on 4-6-37

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ ಇಲ್ಲಿಜೂನ್ ತಾ 1ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ.

ಚಾಲ್ತಿ ಠೇವಣಾತಿಗಳು ಸಾ.ಶೆ 2, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ.ಶೆ 4,

ಕಾಯಂ ಠೇವಣಾತಿಗಳು 3 ತಿಂಗಳ ಬಾಬತು ಸಾ. ಶೆ 4

6 ಮತ್ತು 9 ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5%,

1 ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪ್ಯಾ 5½%.

2 ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ 6% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ

ಬಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ.—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತದೆ. ಫಾರಮುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರೆಕೊಳ್ಳಿರಿ,

Halsnad Soorappayya, ಚೆಯರ್‌ಮೇನ್.

N. Sheshagiri Rao, ಸೆಕ್ರೆಟರಿ

ದಿ ಕುಂದಾಪುರ ಬೇಂಕ್ ಲಿಮಿಟೆಡ್,

ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮಾರ್ಗಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪೆನಿ,

೩. ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜಿ. ಟಿ. ಮದರಾಸ್.

ಇದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಬೆಲೆ ೦—೪—೦

ಪುರುಷವಧು

ನಕ್ಕಷ್ಟೂ ನಗಿಸುವ ಏಕಾಂಕ ಪ್ರಹಸನ. ಕಿರಿಯರ ಪ್ರಪಂಚ, ಉಡುಪಿ



ಸಾಮುದ್ರಿಕ ಲಕ್ಷಣ

ಹಸ್ತ ಸಾಮುದ್ರಿಕ, ಅಂಗ ಲಕ್ಷಣ ಮುಂತಾದ ವಿಷಯಗಳ ಮೇಲೆ ಬರೆಯಲ್ಪಟ್ಟ ಬಲು ಉಪಯೋಗಕರವಾದ ಪ್ರಾಚೀನ ಗ್ರಂಥ. ವಿದ್ವತ್ತಾ ಪೂರ್ಣವಾದ ಮುನ್ನುಡಿಯಿಂದೊಡಗೂಡಿದೆ.

ಬೆಲೆ: ೦ ೮ ೦

ಒಂದು ಪ್ರತಿ ಬೇಕಾದವರು 8 ಆಣೆಯ ಸ್ಟಾಂಪು ಕಳುಹಿಸಿರಿ.

USE

SUVASINI AGARBATHIES

(REGISTERED)

SRI BHARATHA VASTU MANDIRA, UDIPI.

Printed by P. VENKATARAMAN ACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE UDIPI.

Registered No. M. 3018

೨೦ ಪುಟಗಳು--ಒಂದಾಣೆ

NAVAYUGA
Nationalist Kanarese Weekly, UDIPI, S. K.

It will pay you to advertise in 'NAVAYUGA'. The Leading Nationalist Kanarese Weekly of Karnatak

FOR RATES OF ADVT. Etc.
APPLY TO THE MANAGER



ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣ ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL. XVI-NO. 45

15-7-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧೫ ಜುಲಾಯಿ, ೧೯೩೭ [ಸಂಚಿಕೆ ೪೫

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I.)

BRANCHES:

1 BOMBAY
2 BANGALORE CITY
3 BELGAUM
4 BYADGI
5 BELLARY
6 ADONI
7 HOSPET
8 TALIPARAMBA
9 UPPINANGADI
10 KASARGODE
11 PAYYANUR
12 KANHANGAD
13 KARKALA
14 NANDYAL
15 PRODATTUR
16 TADPATRI
17 HUBLI
18 GADAG
19 KARWAR
20 KUMTA
21 ANKOLA
22 HONAVAR
23 BHATKAL
24 BRAHMAVAR
25 HUNGARCUTTA
26 SIRSI
27 SAGAR
28 COONDAPOOR
29 UDIPI
30 MANGALORE
31 CANNANORE

BEG TO ANNOUNCE

that the Syndicate has been included in the list of Scheduled Banks under the Reserve Bank of India Act.

Non-Scheduled Banks, other companies and company promoters may take advantage of this for depositing their amounts with the Syndicate under the Indian Companies Act 1936.

Paid up Capital	Rs. 3,48,400
Reserves	„ 1,92,390
Deposits exceed	„ 24 lakhs
Total Working Funds exceed	„ 43 lakhs

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦**
೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! — ವಜ್ರಗಳು — BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು

"ಯೋಗೀಶ್ವರರ ಶಕ್ತಿಸಾಹಸ"

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:— ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

SUSHEELA & CO., KOLLEGAL. (S. INDIA.)

1000 ರೂಪಾಯಿಗಳ ಬಹುಮಾನ

ಪ್ರತಿ ಎರಡು ಕೂಪನ್‌ಗಳಿಗೂ ಒಂದು ಕೂಪನ್ ಉಚಿತ.

ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ **16-8-1937** ಫಲಿತಾಂಶವನ್ನು ಪ್ರಕಟಿಸುವ ದಿನ **20-8-1937**.

ಮೂರು ಕೂಪನ್‌ಗಳೂ ಸರಿಯಾಗಿ ಕಳುಹಿಸಿದವರಿಗೆ **500** ರೂಪಾಯಿಗಳು.

ಒಂದು ಕೂಪನ್ ತಪ್ಪುಳ್ಳವರಿಗೆ **200** ರೂಪಾಯಿಗಳು, ಎರಡು ಕೂಪನ್ ತಪ್ಪುಳ್ಳವರಿಗೆ **100** ರೂಪಾಯಿಗಳು.

ಇತರ ಬಹುಮಾನಗಳು.

3 ಕೂಪನ್‌ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ **125** ರೂಪಾಯಿಗಳು. ಹೆಚ್ಚಾಗಿ ಕೂಪನ್‌ಗಳು ಕಳುಹಿಸಿದವರಿಗೆ **75** ರೂಪಾಯಿಗಳು.

		17		

ಸುಶೀಲ ಅಂಡ್ ಕೋ, ಕೊಳ್ಳೇಗಾಲ.

ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ.

ಹೆಸರು ____________________

ವಿಳಾಸ ____________________

____

ಪೋಸ್ಟಲ್ ಮಣಿಯಾರ್ಡರ್ ನಂಬರು ____________________

ಸ್ಟಾಂಪುಗಳು ____________________ ತಾರೀಕು ______ 1937.

ಉತ್ತರಗಳನ್ನು ಕಂಡುಹಿಡಿಯುವ ಕ್ರಮಃ—ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡವಾಗಿ, ಮೂಲೆಗಳಿಂದ 85 ಬರುವಂತೆ, ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಖಾಯಿಯಲ್ಲಿ ಬರೆದು ಕಳುಹಿಸಬೇಕು.

ನಿಬಂಧನೆಗಳು

ಪ್ರವೇಶ ಧನ ಕೂಪನ್‌ಗೆ 0—8—0 ಆಣೆ. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲಿ ಮಣಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು. ಉತ್ತರಗಳು 16—8—1937ರೊಳಗೆ ನಮ್ಮ ಕೈಸೇರಬೇಕು ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಾಸುಮಾಡಲಾಗುವುದಿಲ್ಲ ಮತ್ತು ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲಾಗುವುದು. ಮೆನೇಜರರ ತೀರ್ಮಾನವೇ ಕಡೇ ತೀರ್ಮಾನ. ಬಹುಮಾನಗಳನ್ನು ಪಡೆದವರ ಹೆಸರುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು ತಮ್ಮ ವಿಳಾಸದೊಡನೆ 0—1—0 ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಶರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್: ಸುಶೀಲ ಅಂಡ್ ಕೋ., ಕೊಳ್ಳೇಗಾಲ.

— ಅಧಿಕಾರ ಸ್ವೀಕಾರದ ನಿರ್ಣಯ —

ಪ್ರಾಂತದಲ್ಲೆಲ್ಲಾ ಕಾಂಗ್ರೆಸ್ ಮಂತ್ರಿಮಂಡಲಿ ರಚನೆಯ ಸಿದ್ಧತೆ

ವರ್ಕಿಂಗ್ ಕಮಿಟಿಯ ನಿರ್ಣಯ

ಕಾಂಗ್ರೆಸಿನ ಚುನಾವಣೆಯ ಪ್ರಕಟನಾ ಪತ್ರದಲ್ಲಿ ನಿರೂಪಿಸಿರುವಂತೆ, ಒಂದೆಡೆ ಇಂಡಿಯಾ ಆಕ್ಟನ್ನು ವಿರೋಧಿಸುವುದಕ್ಕೂ ಇನ್ನೊಂದೆಡೆ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತುವುದಕ್ಕೂ ಮಂತ್ರಿ ಪದವಿ ಸ್ವೀಕರಿಸಿ ಇಂಡಿಯಾ ಆಕ್ಟಿನ ಮೇರೆಗೆ ಆಡಳಿತ ನಡಿಸಬಹುದೆಂಬ ಮಹತ್ವದ ನಿರ್ಣಯವನ್ನು ಇದೇ ತಾ. 7ರಲ್ಲಿ ವರ್ಕಿಂಗ್ ಕಮಿಟಿಯು ಮಾಡಿರುವುದು.

ವೈಸರಾಯರ ಮತ್ತು ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರ ಹೇಳಿಕೆಗಳು ಕಾಂಗ್ರೆಸಿನ ಕೇಳಿಕೆಯನ್ನು ತೃಪ್ತಿಪಡಿಸುವ ಸಮೀಪಕ್ಕೆ ಬಂದಿರುವವಾದರೂ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ತಮ್ಮ ನಿರ್ಣಯದಲ್ಲಿ ಕೇಳಿರುವ ಆಶ್ವಾಸನೆಗಳನ್ನೀಯುವುದಿಲ್ಲೆಂದು ವರ್ಕಿಂಗ್ ಕಮಿಟಿಯ ಅಭಿಪ್ರಾಯ.

ಆದರೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯದ ನಂತರ ಉಂಟಾದ ವಿದ್ಯಮಾನ ಮತ್ತು ನಡೆದ ಸಂಗತಿಗಳು ಗವರ್ನರರಿಗೆ ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸಲು ಅಷ್ಟೇನೂ ಸುಲಭವಲ್ಲೆಂಬ ನಂಬಿಕೆಗೆಡೆಗೊಡುತ್ತದೆಂದು ಕಮಿಟಿಯು ಭಾವಿಸುತ್ತದೆ.

ಕಮಿಟಿಯವರು, ಎಸೆಂಬ್ಲಿ ಮತ್ತು ಕೌನ್ಸಿಲುಗಳ ಕಾಂಗ್ರೆಸ್ ಮೆಂಬರರ ಮತ್ತು ಸಾಮಾನ್ಯ ಕಾಂಗ್ರೆಸ್ ಪಕ್ಷೀಯರ ಅಭಿಪ್ರಾಯಗಳನ್ನು ತಿಳಿದುಕೊಂಡು ಮಾಡಿರುವ ನಿರ್ಣಯಕ್ಕೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಬೆಂಬಲ ಮತ್ತು ಒಪ್ಪಿಗೆ ದೊರೆಯುವುದೆಂಬ ವಿಶ್ವಾಸವು ಅವರಿಗಿರುತ್ತದೆ.

ಈ ಸಂದರ್ಭದಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯವನ್ನೇ ವರ್ಕಿಂಗ್ ಕಮಿಟಿಯವರು ಸ್ವಾಗತೀಕರಿಸುತ್ತಿದ್ದರು. ಆದರೆ ಈಗಣ ಸ್ಥಿತಿಯಲ್ಲಿ ಅಧಿಕಾರ ಸ್ವೀಕಾರದ ವಿಷಯದಲ್ಲಿ ನಿರ್ಧಾರಕ್ಕೆ ಬರುವುದನ್ನು ವಿಳಂಬಿಸುವುದು ದೇಶಹಿತಕ್ಕೆ ಹಾನಿಕರವಿದ್ದು, ಜರೂರಿಂದ ಕೆಲಸಮಾಡುವ ಅಗತ್ಯವಿರುವ ಪ್ರಕೃತದ ಸಂದರ್ಭದಲ್ಲಿ ಜನತೆಯ ಮನಸ್ಸಿನಲ್ಲಿ ಗೊಂದಲವನ್ನುಂಟುಮಾಡುವುದು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮೇಲಿನ ನಿರ್ಣಯಕ್ಕೆ ಬರುವ ಮೊದಲು ತಾ. 6ರಲ್ಲು ಇಡೀ ದಿನ ತರ್ಕನಡಿಸಿರುವುದು. ಬೇರೆ ಬೇರೆ ಪ್ರಾಂತಗಳ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ಮುಖಂಡರ ಅಭಿಪ್ರಾಯವನ್ನು ಕೇಳಿರುವುದು. ಮದ್ರಾಸಿನ ಕೌನ್ಸಿಲ್ ಮತ್ತು ಎಸೆಂಬ್ಲಿ ಕಾಂಗ್ರೆಸ್ ಮೆಂಬರರಲ್ಲಿ 10 ಮಂದಿ ಮಂತ್ರಿ ಪದವಿ ಸ್ವೀಕಾರದ ಕುರಿತು ಯಾವ ಅಭಿಪ್ರಾಯವನ್ನೂ ಕೊಡಲಿಲ್ಲ. ಉಳಿದವರಲ್ಲಿ 7 ಮಂದಿ ವಿರೋಧಾಭಿಪ್ರಾಯವುಳ್ಳವರಿದ್ದರು. 169 ಮಂದಿ ಅನುಕೂಲಾಭಿಪ್ರಾಯವಿತ್ತಿರುವರು, ಇದೇ ರೀತಿ ಪ್ರತಿ ಪ್ರಾಂತದಲ್ಲೂ

ಹಳ್ಳಿಹಳ್ಳಿಯಲ್ಲಿಯೂ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿ ಬಲಗೊಳಿಸಬೇಕು.

○●○

ಕಾಂಗ್ರೆಸ್ ಕೌನ್ಸಿಲು ಮೆಂಬರರೆಲ್ಲಾ ಮಂತ್ರಿಪದವಿ ಸ್ವೀಕಾರಕ್ಕೆ ಅನುಕೂಲವಾಗಿಯೇ ಇದ್ದರು. ವರ್ಕಿಂಗ್ ಕಮಿಟಿಯ ಸಮತಾವಾದಿ ಮೆಂಬರರು ಕೆಲವರು, ಅಧಿಕಾರ ಸ್ವೀಕಾರದ ಪ್ರಶ್ನೆಯನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ನಿರ್ಧರಿಸತಕ್ಕದ್ದೆಂದರು. ಮಹಾತ್ಮಾಗಾಂಧಿಯವರು ತನ್ನ ಭಾಷಣದಿಂದ ಎಲ್ಲವರನ್ನೂ ಸಮಾಧಾನ ಪಡಿಸಿ ಒಮ್ಮತದಿಂದ ಮೇಲಿನ ನಿರ್ಣಯವು ಮಂಜೂರಾಯಿತು. ಪಂಡಿತ ಜವಾಹರಲಾಲರು ಅಧಿಕಾರ ಸ್ವೀಕಾರಕ್ಕೆ ಬದ್ಧ ವಿರೋಧಿಯಿದ್ದರೂ, ದೇಶದ ಜನಮತವನ್ನು ಮನ್ನಿಸಿ ಮತ್ತು ಆದರಿಂದಾಗಿ ಕಾಂಗ್ರೆಸಿನ ಶಕ್ತಿಯು ಹೆಚ್ಚಿಸಲ್ಪಡುವುದೆಂಬ ಭರವಸೆಯಿಂದ ತನ್ನ ಅಭಿಪ್ರಾಯವನ್ನು ಬದಲಾಯಿಸಿರುವರು. ಪಂಡಿತರನ್ನು ಪರಿವರ್ತಿಸಿದವರು ಮಹಾತ್ಮಾಗಾಂಧಿಯವರು.

ಪ್ರಕೃತದ ಪರಿಸ್ಥಿತಿಯಲ್ಲಿ ಕಾಂಗ್ರೆಸಿನ ನಿರ್ಣಯವು ಅತ್ಯಂತ ವಿವೇಕಪರವಾದುದೆಂಬ ವಿಷಯದಲ್ಲಿ ದೇಶವೆಲ್ಲಾ ಏಕಕಂಠದಿಂದ ಹೊಗಳುತ್ತಿದೆ. ಗಾಂಧಿಜಿಯವರ, ಪ್ರಭಾವ, ಮುತ್ಸದ್ದಿತನ ಮತ್ತು ವಿವೇಚನಾಶಕ್ತಿಯನ್ನು ಎಲ್ಲವರೂ ಬಹಳವಾಗಿ ಪ್ರಶಂಸಿಸಿರುತ್ತಾರೆ. ವರ್ಕಿಂಗ್ ಕಮಿಟಿಯ ನಿರ್ಣಯದಿಂದ ಇಂಡಿಯಾ ಮತ್ತು ಬ್ರಿಟಿಷ್ ಸರಕಾರದವರಿಗೂ ಬಹಳ ಸಂತೋಷವಾಗಿರುವುದು. ಇಂಗ್ಲೆಂಡಿನ ಪತ್ರಿಕೆಗಳೆಲ್ಲಾ ಗಾಂಧಿಜಿಯವರನ್ನು ಹೊಗಳಲಾರಂಭಿಸಿರುವವು. ಕಾಂಗ್ರೆಸಿನವರನ್ನು ತೃಪ್ತಿಪಡಿಸಿ ಅವರು ಮಂತ್ರಿಪದವಿ ಸ್ವೀಕರಿಸುವಂತೆಮಾಡುವುದು ಇಂಗ್ಲೆಂಡಿನ ಈಗಣ ಕನ್‌ಸರ್ವೇಟಿವ್ ಪಕ್ಷದ ಸರಕಾರಕ್ಕೆ ಅಷ್ಟೇನೂ ಇಷ್ಟವಿದ್ದಿಲ್ಲೆಂದೂ, ಈ ವಿಷಯದಲ್ಲಿ ವೈಸರಾಯರಿಗೂ ಬ್ರಿಟಿಷ್ ಸರಕಾರಕ್ಕೂ ಅಭಿಪ್ರಾಯ ಭೇದವುಂಟಾಗಿ ವೈಸರಾಯರು ರಾಜಿನಾಮೆಕೊಡುವುದರಲ್ಲಿದ್ದರೆಂದೂ, ಇದಕ್ಕೆ ಬ್ರಿಟಿಷ್ ಸರಕಾರವೂ ಸಿದ್ಧವಿದ್ದು, ಮುಂದೆ ವೈಸರಾಯರನ್ನಾಗಿ ನೇಮಿಸಲಿಕ್ಕೆಂದೇ ಲೋರ್ಡ್ ಸ್ಟೇನ್ಲೆಯವರನ್ನು ಇಂಡಿಯಾ ಅಂಡರ್ ಸೆಕ್ರೆಟರಿಗಳಾಗಿ ನೇಮಿಸಿದ್ದೆಂದೂ ಸುದ್ದಿಯುಂಟಾಗಿದೆ. ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಿದುದರಿಂದ ವೈಸರಾಯರ ಉದಾರಧೋರಣೆಯು ಜಯಶೀಲವಾಗಿ ಬ್ರಿಟಿಷರ ಮೆಚ್ಚುಗೆ ಪಡೆಯುವಂತಾಯಿತು. ಇದೇ ರೀತಿಯಲ್ಲಿ ಬ್ರಿಟಿಷ್ ಸರಕಾರವು ಉದಾರಧೋರಣೆ ವಹಿಸಿದರೆ, ಹಿಂದೂ ದೇಶವು ಬ್ರಿಟಿಷ್ ಸಾಮ್ರಾಜ್ಯದೊಡನೆ ಕಾದಾಕಾಡಿ ಹೋರಾಡಿ ಸ್ವಾತಂತ್ರ್ಯವನ್ನು ಕಸಕೊಂಡು ಬ್ರಿಟಿಷ್ ಸಾಮ್ರಾಜ್ಯದಿಂದ ಪ್ರತ್ಯೇಕವಾಗುವ ಬದಲಿಗೆ ಕಾಯಿದೇಶೀರ ಚಳವಳದಿಂದಲೇ ಸ್ವರಾಜ್ಯಪಡೆದು ಬ್ರಿಟಿಷ್ ಸಾಮ್ರಾಜ್ಯದೊಡನೆ ಸ್ವೇಚ್ಛೆಯಿಂದ ಸಮಾನ ಸ್ಥಾನಮಾನ ಪಡೆದುಕೊಂಡಿರುವಂತಾಗಬಹುದು.

ಮದ್ರಾಸ್ ಮಂತ್ರಿಮಂಡಲವು ಇದೇ ತಾ. 14ಕ್ಕೆ ರಾಜಿನಾಮೆಕೊಡುವುದು. ಆಗಲೇ ಕಾಂಗ್ರೆಸ್ ಮಂತ್ರಿಮಂಡಲವು ರಚಿಸಲ್ಪಡುವುದು. ಒರಿಸ್ಸಾ ಸಂಯುಕ್ತಪ್ರಾಂತ, ಬಿಹಾರ್ ಮತ್ತು ಮಧ್ಯಪ್ರಾಂತದ ಮಂತ್ರಿಗಳೆಲ್ಲಾ ತಕ್ಕ ಸಮಯದಲ್ಲಿ ರಾಜಿನಾಮೆಕೊಡಲು ಸಿದ್ಧರೇ ಆಗಿರುವರು. ಆದರೆ ಬೊಂಬಾಯಿಯ ಮಂತ್ರಿಮಂಡಲಕ್ಕೆ ಮಾತ್ರ ಎಸೆಂಬ್ಲಿಯಲ್ಲಿ ತಮ್ಮ ಮೇಲೆ ಅವಿಶ್ವಾಸ ಸೂಚನೆಯು ಮಂಜೂರಾಗದೆ ರಾಜಿನಾಮೆ ಕೊಡುವ ಮನಸ್ಸಿಲ್ಲ. ಬೊಂಬಾಯಿಯಲ್ಲಿ ಕಾಂಗ್ರೆಸಿಗೆ ಪ್ರಬಲ ಬಹುಮತವಿಲ್ಲದಿರುವುದರಿಂದ, ಮುಖ್ಯಮಂತ್ರಿ ಸರ್. ಕೂಪರರೂ, ಶ್ರೀ. ಜಮ್ನಾದಾಸ ಮೇಥಾರವರೂ ಮುಸ್ಲಿಮ್‌ಲೀಗ್ ಮತ್ತು ಅಂಬೇಡ್ಕರ ಪಕ್ಷೀಯರ ಬೆಂಬಲ ಪಡೆಯಲು ಬಹಳವಾಗಿ ಪೇಚಾಡುತ್ತಿರುವರು. ಕೆಲಮಂದಿ ಬ್ರಾಹ್ಮಣೇತರರು ಅವರ ಸಹಾಯಕ್ಕೆ ನಿಂತಿರುವರು. ಆದರೆ ಕಾಂಗ್ರೆಸಿಗೆ ದೊಡ್ಡ ಬಹುಪಕ್ಷ ಸಿಕ್ಕುವುದು ನಿಶ್ಚಯವೆಂದು ತಿಳಿದುಬರುತ್ತದೆ. ವಾಯುವ್ಯಗಡಿನಾಡಿನಲ್ಲಿಯೂ ಕಾಂಗ್ರೆಸು ಅಧಿಕಾರಕ್ಕೆ ಬರುವ ಸಂಭವವಿದೆ. ಕಾಂಗ್ರೆಸು ಅಧಿಕಾರಸ್ವೀಕಾರದ ನಿರ್ಧಾರ ಮಾಡಿದೊಡನೆಯೇ ಬಂಗಾಳದ ಮಂತ್ರಿಮಂಡಲದಲ್ಲಿ ತಳಮಳವುಂಟಾದಂತೆ ತೋರುವುದು. ಅಲ್ಲಿಯ ಮುಖ್ಯ ಮಂತ್ರಿಗಳಾದ ಮಿ. ಫಜ್ಲುಲ್ ಹಕ್ಕರು, ಬಂಗಾಳ ಡಿಟೆನ್ಯೂಗಳನ್ನೆಲ್ಲಾ ಒಮ್ಮೆಯೇ ಬಿಡುಗಡೆಮಾಡಲಾಗುವುದಿಲ್ಲೆಂದು ಹೇಳಿದ್ದರು. ಈಗ ಅವರೇ ಅಧ್ಯಕ್ಷರಾಗಿ ನಡೆದ ಬಂಗಾಳ ಪ್ರಜಾಪಕ್ಷದ ಪರಿಷತ್ತಿನಲ್ಲಿ, ಡಿಟೆನ್ಯೂ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡಬೇಕೆಂಬ ನಿರ್ಣಯವಾಗಿರುವುದು.

ಇದೇ ತಾ10ರಲ್ಲು ಶ್ರೀ. ಸಿ. ರಾಜಗೋಪಾಲಾಚಾರ್ಯರು ಹಿಂದು ಪತ್ರಿಕೆಯ ಪ್ರತಿನಿಧಿಯೊಡನೆ ಈ ರೀತಿಯ ವಿನಂತಿ ಮಾಡಿಕೊಂಡಿರುವರು. "ಕಾಂಗ್ರೆಸ್ ಮಂತ್ರಿ ಮಂಡಲವು ಅಧಿಕಾರದ ಜವಾಬ್ದಾರಿ ಹೊತ್ತಾಗ ಪ್ರತಿಯೊಬ್ಬ ಕಾಂಗ್ರೆಸ್ ವಾದಿಯೂ, ತನ್ನ ಮೇಲೆ ಆ ಕೆಲಸದ ಜವಾಬ್ದಾರಿ ಇರುವುದೆಂದು ಭಾವಿಸಿಕೊಳ್ಳಬೇಕು. ಈ ಹೊಸಪ್ರಯೋಗದ ಜಯಾಪಜಯವು ಮಂತ್ರಿಯೊಬ್ಬನ ವೈಯಕ್ತಿಕ ಯೋಗ್ಯತೆಗಿಂತಲೂ ಹೆಚ್ಚಾಗಿ ಪ್ರತಿಯೊಬ್ಬ ಕಾಂಗ್ರೆಸ್‌ವಾದಿಯಲ್ಲುಂಟಾಗುವ ಈ ಭಾವನೆಯ ಮೇಲೆ ಹೊಂದಿಕೊಂಡಿದೆ. ಆಗ ಮಾತ್ರ ಈ ಹೊಸ ಪ್ರಯೋಗವು ಜಯಶೀಲವಾಗಬಹುದು. ಕಾಂಗ್ರೆಸ್ ಪ್ರಾಂತಿಕ ಆಡಳಿತವನ್ನು ವಹಿಸಿದ ಪ್ರಥಮ ಫಲಿತಾಂಶವಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ನಿಜವಾದ ಕೆಲಸ ನಡಿಸುವ ಕಾಂಗ್ರೆಸ್ ಸಭೆಯು ಸ್ಥಾಪಿಸಲ್ಪಡಬೇಕು. ಕಾಂಗ್ರೆಸ್ ಸಭೆಯು ಈಗ ಪ್ರಾಂತಿಕ ಸರಕಾರದ ಅಂಗವಾಗಿರುವುದರಿಂದ ಪ್ರತಿಯೊಂದು ಹಳ್ಳಿಯ ಉತ್ಕೃಷ್ಟ ಜನರು ತಮ್ಮ ತಮ್ಮ ಹಳ್ಳಿ ಕಾಂಗ್ರೆಸ್ ಸಭೆಗಳಿಗೆ ಸೇರಿ ಜನತೆಯ ಹಿತಕ್ಕಾಗಿ ಕೆಲಸಮಾಡಿ, ಹಳ್ಳಿಗಳನ್ನು ಸುಶೀಲರೂ ಪರಿಶ್ರಮಿಗಳೂ, ದೇಶಾಭಿಮಾನಿಗಳೂ ಆದ ಜನರ ಶುದ್ಧ ನಿವಾಸವಾಗಿ ಮಾಡಲು ಇನ್ನೇನೂ ಕಷ್ಟವಿರಲಾರದು. ಅಧಿಕಾರಕ್ಕೆ ಬರುವ ಏಳೆಂಟು ಮಂದಿ ಗೃಹಸ್ಥರು ಮಾತ್ರವೇ ಜವಾಬ್ದಾರಿ ಹೊರುವುದಲ್ಲ. ಕಾಂಗ್ರೆಸ್ ಕೆಲಸಗಾರರ ಇಡೀ ಪಡೆಯೇ ಅದಕ್ಕೆ ತಲೆಕೊಡಬೇಕು. ಜನತೆಯ ಸುಖ ಮತ್ತು ಇಷ್ಟರವರೆಗೆ ಸ್ವಾತಂತ್ರ್ಯ ಸಾಧನೆಗಾಗಿ ಬಹಳವಾಗಿ ಹೋರಾಡಿ ಇನ್ನು ಮುಂದಾದರೂ ದೇಶವನ್ನು ಸಂಪೂರ್ಣ ಸ್ವಾತಂತ್ರ್ಯವುಳ್ಳ ರಾಷ್ಟ್ರದಸ್ಥಾನಕ್ಕೇರಿಸಲು ಹೋರಾಡಬೇಕಾಗಿರುವ ಆ ಮಹಾಸಂಸ್ಥೆಯ ಮೇಲಿನ ತಮ್ಮ ಅಭಿಮಾನವನ್ನು ಹೆಚ್ಚಿಸುವ ಕೆಲಸವನ್ನು ಕಾಂಗ್ರೆಸ್ ಕೆಲಸಗಾರರು ತಮ್ಮೊಳಗೆ ಹಂಚಿಕೊಳ್ಳಬೇಕು."

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಸ್ಮೃತ ಗುಣ ಉಂಟಾಗುವಂತೆ ಮಾಡುತ್ತವೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ: ಡಬ್ಬಿ ೧ಕ್ಕೆ ೧–೦–೦.

ನಾಶೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ವೀರ್ಯವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದೌರ್ಬಲ್ಯ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.

'**ಕಾಮಶಾಸ್ತ್ರ**' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ನವಭಾರತ ಬುಕ್ ಡಿಪೋವಲ್ಲಿ

ನಮೂನೆವಾರು

ಫೌಂಟೆನ್ ಪೆನ್ನುಗಳು

ದೊರೆಯುತ್ತವೆ.

ರಷ್ಯದ ನೂತನ ನಿರ್ಮಾಣ

ವಿವಾಹವು ಮಾನವನಿಗಾಗಿ— ವಿವಾಹಕ್ಕಾಗಿ ಮಾನವನಲ್ಲ.

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ಮೋರಿಸ್ ಹಿಂಡಸ್ ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.] —ಸಂ. ನ

ಸ್ತ್ರೀಯ ಮೇಲೆ ಪುರುಷನು ಹಾಕಿರುವ ನಿರ್ಬಂಧಗಳೆಲ್ಲಾ ಮುರಿದೊಗೆಯಲ್ಪಟ್ಟು ಅವಳು ಯಾವ ರೀತಿಯಲ್ಲಿಯೂ ಪುರುಷನ ಮೇಲೆ ಅವಲಂಬಿಸಿರದೆ ಸ್ವತಂತ್ರಳಾದವೆ ಅದರಿಂದ ಪ್ರೇಮದ ನಿಜವಾದ ವಿಜಯಕ್ಕೆ ಆಸ್ಪದವಾಗುವುದೆಂದೇ ರಷ್ಯದ ಕ್ರಾಂತಿಕಾರರ ವಾದ. ಮಾನಸಿಕ, ಶಾರೀರಿಕ ಅಥವಾ ಇನ್ನೇನಾದರೂ ವೈಷಮ್ಯದಿಂದಾಗಿ ನಿರಾಶೆಯುಂಟಾಗಿ ದಂಪತಿಗಳಿಗೆ ಸರಿಹೋಗದಿದ್ದರೆ ಒಬ್ಬರೊಬ್ಬರನ್ನು ಬಿಟ್ಟು ಬೇರೆಯಾಗಲು ರಷ್ಯದಲ್ಲಿ ಯಾವ ತೊಂದರೆಯೂ ಇರಲಾರದು. ರಷ್ಯದ ಹೊರಗೂ ವಿವಾಹ ಸಂಬಂಧವಾಗಿ ಇಂತಹ ಚಳವಳಗಳು ನಡದೇ ಇರುವವು. ಪರೀಕ್ಷಾರ್ಥವಾದ ವಿವಾಹ, ಸಂಗಾತಿ ವಿವಾಹವೆಂಬುದೆಲ್ಲಾ ಪ್ರೇಮ ವಿನಾಶದ ಸಮಸ್ಯೆಯನ್ನು ನಿವಾರಿಸುವ ಪ್ರಶ್ನೆಯಾಗಿದೆ. ರಷ್ಯದ ಪದ್ಧತಿಯಂತೆ, ಸಂತತಿ ನಿರೋಧ ಮತ್ತು ಇಚ್ಛಾನುಸಾರವಾದ ವಿಯೋಗದಿಂದಾಗಿ ವಿವಾಹಗಳೆಲ್ಲಾ ಪರೀಕ್ಷಾರ್ಥವಾದವುಗಳಾಗಿವೆ. ಮತ್ತು ಸಂಯೋಗವೆಲ್ಲಾ ಸಂಗಾತಿತನವಾಗಿದೆ. ರಷ್ಯದ ವಿಧ್ಯಮಾನಗಳಲ್ಲಿ ಬೇರೆ ತರದ ದಾಂಪತ್ಯವೇ ಸಾಧ್ಯವಿಲ್ಲ. ಇದರಿಂದ ವಿವಾಹ ಸಂಬಂಧವಾದ ಪಾವಿತ್ರ್ಯ ಭಾವನೆಯೇ ನಿರ್ಮೂಲವಾಗಿರುವುದು. ರಷ್ಯದ ಕ್ರಾಂತಿಕಾರನು' ವಿವಾಹ ವಿಷಯದಲ್ಲಿ ಧಾರ್ಮಿಕ ಸಂಬಂಧವನ್ನು ಸಹಿಸಲಾರನು. ವಿವಾಹವು ಮಾನವನಿಗಾಗಿ, ಮಾನವನು ವಿವಾಹಕ್ಕಾಗಿಯಲ್ಲೆಂದೇ ಅವನ ವಾದ. ಸ್ತ್ರೀ ಪುರುಷ ಸಮಾನತೆಯದ್ನು ಮತ್ತು ಪ್ರೇಮದ ಹಕ್ಕನ್ನು ಸಾಧಿಸುವ ದಾರಿಯೇ ಇದೆಂದು ರಸ್ಯಾನರ ತರ್ಕ.

ಪ್ರೇಮವು ವಿಶೇಷವಾಗಿ ಸ್ತ್ರೀಯ ಕ್ಷೇತ್ರ

ಸ್ತ್ರೀಯ ಮೇಲೆ ನಾನಾರೀತಿಯ ನಿರ್ಬಂಧಗಳು ಹಾಕಲ್ಪಟ್ಟಿರುವಲ್ಲಿ ಅವಳು ನಿಜವಾದ ಪ್ರೇಮಸುಖವನ್ನನುಭವಿಸಲು ಆಸ್ಪದವಿಲ್ಲ. ಅವಳ ಪ್ರೇಮಭಾವವನ್ನು ಗಂಡಸರು ಲಕ್ಷಿಸುವುದಿಲ್ಲ. ಅವಳಿಗೆ ತನ್ನ ಪ್ರೇಮಸಂತೃಪ್ತಿಯ ಹಕ್ಕು ಸ್ಥಾಪಿಸಿಕೊಳ್ಳಲು ಶಕ್ತಿಯಿಲ್ಲ. ತನಗೆ ಯಾವ ಸಂಬಂಧವೂ ಇಲ್ಲದ, ತನ್ನ ಭಾವಹೃದಯಗಳನ್ನು ಒಂದಿಷ್ಟು ಗಣಿಸದ ವಿಧ್ಯಮಾನಗಳ ದಾಸಿಯವಳು. ಇಂದಿನ ನಾಗರಿಕತೆಯಲ್ಲಿಯ ದಾಂಪತ್ಯ ಜೀವನದ ಹೆಚ್ಚಿನ ಅಸುಖ ಮತ್ತು ವಿಯೋಗಕ್ಕೆ ಇದೇ ಕಾರಣ. ಇದನ್ನು ಸುಪ್ರಸಿದ್ಧ ದಾಂಪತ್ಯ ವಿಜ್ಞಾನಿಯಾದ ಮಿ. ಹೆವ್‌ಲೊಕ್ ಎಲ್ಲಿಸರು ಈ ರೀತಿ ಸಂಕ್ಷೇಪವಾಗಿ ವಿವರಿಸಿರುವರು.

"ಈಗ ರೂಢಿಯಲ್ಲಿರುವ ನೀತಿಯ ಆಚರಣೆ ಮತ್ತು ಆದರ್ಶಗಳು ಪುರುಷನಿಂದುಂಟಾದುವಾಗಿವೆ. ಸ್ತ್ರೀಯ ಭಾವ ಮತ್ತು ಕಾರ್ಯಗಳನ್ನು ಸಂಪೂರ್ಣ ತನ್ನಾಧೀನವಿರಿಸುವಂತೆ ಅವು ರಚಿತವಾಗಿವೆ. ಬೇರೆ ಯಾವುದಕ್ಕಿಂತಲೂ ವಿಶೇಷವಾಗಿ ಪ್ರೇಮವು ಸ್ತ್ರೀಯ ಕ್ಷೇತ್ರವಾಗಿದೆ. ಆದರೆ ಬೇರೆ ಎಲ್ಲಾ ಕ್ಷೇತ್ರಕ್ಕಿಂತಲೂ ಅದರ ಕಾರ್ಯದಲ್ಲೇ ಸ್ತ್ರೀಯು ವಹಿಸುವ ಭಾಗವು ಅತ್ಯಲ್ಪ. ಅವಳ ಹೃದಯದ ಆಳವಾದ ಭಾವ, ಅವಳ ಲಜ್ಜೆ, ಅವಳ ಮಾತೃತ್ವ, ಅವಳ ಭಕ್ತಿವಿಶ್ವಾಸ, ಅವಳ ಆವೇಶವನ್ನೆಲ್ಲಾ ಪುರುಷನು ಅವಳೇ ವಿರುದ್ಧವಾಗಿಯೇ ಅತ್ಯಂತ ತಂತ್ರದಿಂದ ಉಪಯೋಗಿಸಿ, ಅವಳಾಗಿ ಎಂದೂ ರಚಿಸಿಕೊಳ್ಳಲಿಕ್ಕಿಲ್ಲವಾದ ನೈತಿಕ ಲೋಕವೊಂದನ್ನು ಅವಳ ನಿವಾಸಕ್ಕಾಗಿ ನಿರ್ಮಿಸಿರುವನು. ಪ್ರೇಮಸಂಯೋಗ ಕ್ಷೇತ್ರದಲ್ಲಿ ಸ್ತ್ರೀಯು ಪುರುಷನಿಂದ ನಿರೀಕ್ಷಿಸುವುದೆಂದರೆ, ಕೇವಲ ತಣ್ಣಗೆ ಅಸಡ್ಡೆಯಿಂದಿರುವ ತಳದಿಂದ ತನ್ನನ್ನು, ಸಂಭೋಗದಲ್ಲಿ ಪರಸ್ಪರ ಆಸಕ್ತಿ ಮತ್ತು ಆನಂದವಿರುವ ಉನ್ನತಸ್ಥಾನಕ್ಕೆತ್ತಬೇಕೆಂದು. ಅವಳ ಈ ಮೌನದ ಕೇಳಿಕೆಯು ಸ್ವಭಾವಸಿದ್ಧವಾದುದು. ಸ್ತ್ರೀಯ ಈ ಸಂಯೋಗಸುಖದ ಹಕ್ಕುಗಳ ಕುರಿತು ಸಾರ್ವಜನಿಕವಾಗಿ ಪ್ರತಿಪಾದಿಸಲ್ಪಡುವುದಿಲ್ಲ. ಸ್ತ್ರೀಯರು ಅವನ್ನು ಎಂದಿಗೂ ಪ್ರತಿಪಾದಿಸುವ ಹಾಗಿಲ್ಲ." ಆದರೆ ರಷ್ಯದಂತಹ ಸ್ತ್ರೀಪುರುಷ ಸಮಾನತೆಯ ಸಮಾಜವ್ಯವಸ್ಥೆಯಲ್ಲಿ ಸ್ತ್ರೀಯರು ತಮ್ಮ ಸಂಯೋಗಸುಖದ ಹಕ್ಕನ್ನು ತಾವೇ ಸ್ಥಾಪಿಸಿಕೊಳ್ಳಬಹುದು. ತಮ್ಮ ಅಪೇಕ್ಷೆ ಮತ್ತು ಆವಶ್ಯಕತೆಗಳನ್ನು ಗಂಡಸರು ತೃಪ್ತಿಪಡಿಸುವಂತೆ ಮಾಡಬಹುದು. ಇದು ರಷ್ಯದಲ್ಲೊಂದೇ ರಾಜ್ಯದಲ್ಲಿ ನಡೆಯುವ ಸಂಗತಿಯಲ್ಲ. ಲೋಕದಲ್ಲೆಲ್ಲಾ ಸ್ತ್ರೀಯರಲ್ಲೀಗ ನವಜಾಗ್ರತಿಯುಂಟಾಗಿದೆ. ಅಮೆರಿಕ ಮೊದಲಾದ ಮುಂದುವರಿದ ರಾಷ್ಟ್ರಗಳಲ್ಲಿ ಸ್ತ್ರೀಯರು ತಮ್ಮ ಹಕ್ಕುಗಳನ್ನು ಸ್ಥಾಪಿಸಿಕೊಳ್ಳಹತ್ತಿದ್ದಾರೆ. ಸ್ತ್ರೀಯು ತನ್ನಿಚ್ಛೆಬಂದವನನ್ನು ಮದುವೆಮಾಡಿಕೊಂಡು ತನಗೆ ಸರಿಹೋಗದಿದ್ದಲ್ಲಿ ಬಿಟ್ಟು ಬೇರೆಯಾಗಬಹುದೆಂಬ ರಷ್ಯದ ಸಮಾಜಪದ್ಧತಿಯಲ್ಲಿ ಪುರುಷರು ಸ್ತ್ರೀಯರ ಕುರಿತಾದ ತಮ್ಮ ಮನೋವೃತ್ತಿಯನ್ನು ಬದಲಾಯಿಸಲೇ ಬೇಕು. ಇಲ್ಲವಾದರೆ ಮೂಲೆ ಗುಂಪಾಗಬೇಕೆಂದೇ ರಸ್ಯಾನರ ಅಭಿಮತ. "ಗಂಡಸರನ್ನು ಸಂತೋಷಪಡಿಸಲಿಕ್ಕಾಗಿ ಸ್ತ್ರೀಯರು ತಮ್ಮ ಪ್ರೇಮಜೀವನವನ್ನು ಇನ್ನಷ್ಟು ವಿರೂಪಗೊಳಿಸುವುದನ್ನು ಸಹಿಸಲಾರರು. ನಮ್ಮ ಸಮಾಜದ ಪರಿಸ್ಥಿತಿಗಳಲ್ಲಿ ನಮ್ಮ ಸಂಕಷ್ಟ ಮತ್ತು ವೇದನೆಗಳು ಎಂತಹವೇ ಇರಲಿ, ಪ್ರೇಮವು 'ಇನ್ನು ಮುಂದೆ ತನ್ನ ಶಾರೀರಿಕ ಸ್ವರೂಪದಲ್ಲಿ ಪ್ರಾಮುಖ್ಯವಾಗಿ ಪುರುಷನೊಬ್ಬನ ಕಾಮೋಪಭೋಗಕ್ಕಾಗಿಯೇ ಇರಲಾರದು" ಎಂದು ಮೋಸ್ಕೋ ಪಟ್ಟಣದ ಸ್ತ್ರೀ ಡಾಕ್ಟರರೊಬ್ಬರು ಹೇಳಿರುವರು.

ಲೈಂಗಿಕ ಜ್ಞಾನ ಪ್ರಚಾರ

ರಷ್ಯದ ಕ್ರಾಂತಿಕಾರನು ಲಿಂಗಸಂಬಂಧವಾದ ಗೋಪ್ಯದ ಮುಸುಕನ್ನು ಹರಿದೊಗೆದಿರುವನು. ಭಾಷಣ, ಚಲಚಿತ್ರ, ನಾಟಕ, ಪುಸ್ತಕ, ಕರಪತ್ರ, ಜಾಹೀರು ಪ್ರಕಟಣೆಗಳಿಂದೆಲ್ಲಾ ಅವನು ಲೈಂಗಿಕ ಜ್ಞಾನವನ್ನು ಪ್ರಬಲವಾಗಿ ಪ್ರಚಾರಮಾಡುತ್ತಿರುವನು. ಶಾಲೆಗಳಲ್ಲಿ ಆ ಕುರಿತು ಶಿಕ್ಷಣವೀಯುತ್ತಿರುವನು. ಈ ರೀತಿಯ ಚಳವಳ ಮತ್ತು ಜ್ಞಾನಪ್ರಸಾರದಿಂದ, ಲೈಂಗಿಕ ಸಂಬಂಧವಾದ ಅಜ್ಞಾನದಿಂದ ತರುಣರಲ್ಲಿ ಆ ಕುರಿತಿರುವ ಶಂಕೆ, ತಪ್ಪು ಅಭಿಪ್ರಾಯ, ವಿಸ್ಮೃತತೆಯನ್ನೆಲ್ಲಾ ಕಡಿಮೆ ಮಾಡಿ ಕ್ರಮೇಣ ನಿವಾರಿಸಲೆತ್ನಿಸುವನು. ಇದರಿಂದಲೂ ಲೈಂಗಿಕ ಸಂಬಂಧವಾದ ಮೂಢ ಮತ್ತು ತಪ್ಪುಭಾವನೆಗಳು ತೊಲಗಿ ಶುದ್ಧ ಹಾಗೂ ವಿವೇಕಪರ ತಿಳುವಳಿಕೆಯುಂಟಾಗುತ್ತದೆ.

ಸಮಾನ ಬಂಧುತ್ವ

ಸ್ತ್ರೀಪುರುಷರು ಎಲ್ಲಾ ರೀತಿಯಲ್ಲಿಯೂ ಸರಿಸಮಾನ ಬಂಧುಗಳಾಗಿರಬೇಕೆಂದೇ ರಸ್ಯಾನರ ಪ್ರಯತ್ನ. ಇದರಿಂದಲೇ ಅವರೊಳಗಣ ಪ್ರಣಯಜೀವನವು ಪುಷ್ಟವಾಗಿಯೂ ಆರೋಗ್ಯಶಾಲಿಯಾಗಿಯೂ ಬೆಳೆಯಲನುಕೂಲವಾಗುವುದೆಂದು ಅವರ ನಂಬಿಕೆ. ಬಾಲ್ಯಾರಭ್ಯದಿಂದಲೂ ಶಾಲೆಗಳಲ್ಲೂ ಹೊರಗೂ ರಷ್ಯದಲ್ಲಿ ಹುಡುಗ ಹುಡುಗಿಯರು ಒಟ್ಟಾಗಿ ಜೀವಿಸಿರುವಷ್ಟು ಮತ್ತೆಲ್ಲಿಯೂ ಜೀವಿಸುವುದಿಲ್ಲ. ಅವರು ಒಟ್ಟಿಗೆ ಕಲಿತು ಕಲೆತು, ಆಡಿ ಪಾಡಿ, ವಿಹರಿಸಿ ವಿನೋದಿಸಿ ಯಾವ ತರದಭೇದವೂ ಇಲ್ಲದೆ ಒಂದೇ ರೀತಿಯಾಗಿ ಬೆಳೆಸಲ್ಪಡುತ್ತಾರೆ. ಒಂದೇ ರೀತಿಯ ಭಾವನೆ ಮತ್ತು ಆದರ್ಶವುಳ್ಳವರಿರುತ್ತಾರೆ. ಒಟ್ಟಿಗೆ ಬೆಳೆದು ಅಂಗಡಿ, ಆಫೀಸು ಮತ್ತು ಕಾರ್ಖಾನೆಗಳಲ್ಲಿ ಒಟ್ಟಾಗಿ ಕೆಲಸಮಾಡುತ್ತಾರೆ. ಈ ಹೊಸ ಸಂಬಂಧದ ಉತ್ತೇಜಕತೆಯಿಂದ ಮತ್ತು ಯಾರಿಗೂ ಪ್ರತ್ಯೇಕವಾದ ಹಕ್ಕು ಬಾಧ್ಯತೆಗಳೇನೂ ಇಲ್ಲದಿರುವುದರಿಂದ ಸ್ತ್ರೀಪುರುಷರೊಳಗಣ ಲೈಂಗಿಕ ವೈಷಮ್ಯವು ಕಡಿಮೆಯಾಗುತ್ತಾ ಹೋಗಿ ಅವರು ಪರಸ್ಪರ ವಿವೇಕಪರ ಸಂಬಂಧ ಮತ್ತು ಬಾಂಧವ್ಯವುಳ್ಳವರಾಗಿ ಅವರೊಳಗಣ ಪ್ರೇಮವು ದೃಢಗೊಳ್ಳುವಂತಾಗುವುದೆಂದೇ ರಸ್ಯಾನರ ಮನೋನಿರ್ಧಾರ. ಸ್ತ್ರೀಪುರುಷರಿಬ್ಬರೊಳಗಣ ಲೈಂಗಿಕ ಪ್ರೇಮವು ಎಷ್ಟೊಂದು ಪ್ರಬಲವಾದುದಿರಲಿ, ಅವರೊಡನೆ ಕೇವಲ ವೈಯಕ್ತಿ ಜೀವನದ ಹೋರಾಟದಲ್ಲಿ ಮಾತ್ರವಲ್ಲದೆ ಸಮಾಜದ ವ್ಯಾಪಕ ಕ್ಷೇತ್ರದ ಕಾರ್ಯಕಲಾಪದಲ್ಲಿಯೂ ಪರಸ್ಪರ ನೆರವಾಗುವ ಬಾಂಧವ್ಯದ ಹೊಂದಿಕೆಯಾಗದಿದ್ದರೆ, ಅಂದರೆ ಹಲವು ವಿಧದ ವಿಶಾಲಜೀವನದ ಆಸಕ್ತಿಗಳಿಂದ ಬಲವಾಗದಿದ್ದರೆ, ಅದು ದಿನೇ ದಿನೇ ಕಡಿಮೆಯಾಗಿ ಹೃದಯದಲ್ಲೊಂದು ಬಗೆಯ ಅಭಾವವುಂಟಾಗಿ ಕಡೆಗೆ ದ್ವೇಷದಲ್ಲಿ ಪರಿಣಮಿಸಬಹುದು. ಸ್ತ್ರೀಪುರುಷರೊಳಗಣ ಬಾಂಧವ್ಯವು ಹೆಚ್ಚಾದಂತೆ ಅವರೊಳಗಣ ಪ್ರೇಮವೂ ಬಲಗೊಳ್ಳುವುದೆಂದೇ ರಸ್ಯಾನರ ಅಂಬೋಣ. ರಷ್ಯದ ಹೊಸ ಸಾಹಿತ್ಯ ಚಲಚಿತ್ರಗಳಲ್ಲೆಲ್ಲಾ ಈ ವಿಷಯವು ಪ್ರಧಾನಸ್ಥಾನ ಪಡೆದಿದೆ.

ಪ್ರೇಮ ಮತ್ತು ವಿವಾಹ ಸಂಬಂಧವಾದ ರಷ್ಯದ ಈ ಹೊಸ ರೀತಿಗೆ ಕೆಲವರು ವಿರೋಧವಿದ್ದಾರೆ. ಸ್ತ್ರೀಯ ಜೀವನ ರೀತಿ ಮತ್ತು ಕಾರ್ಯಕ್ಷೇತ್ರವೇ ಬೇರೆ. ಅವಳು ಪುರುಷನೊಡನೆ, ಸರಿಸಮಾನ ಬಾಂಧವ್ಯವುಳ್ಳವಳಾದರೆ ದಾಂಪತ್ಯ ಪ್ರೇಮಮಾಧುರ್ಯವೇ ಇಲ್ಲದಾಗುವುದು. ಪ್ರೇಮೋತ್ತೇಜಕತೆಯು ಅಳಿದುಹೋಗುವುದು. ಅದುದರಿಂದ ಸ್ತ್ರೀಪುರುಷರು ಪ್ರತ್ಯೇಕವಾಗಿಯೇ ಇರಬೇಕು. ನಾರಿಯು ಪೂಜನೀಯಳಾಗಿರಬೇಕು. ಅವಳು ಅದನ್ನು ಬಿಟ್ಟು ಪುರುಷನೊಡನೆ ಸರಿಸಮಾನವಾಗಿ ಕಲೆತು ಕೆಲಸಮಾಡುವುದಾದರೆ, ಒಟ್ಟಿಗೆ ಒಂದೇ ಕ್ಲಾಸಿನಲ್ಲಿ ಕುಳಿತು ಕಲಿತು, ಯಾವಾಗಲೂ ಒಬ್ಬರೊಬ್ಬರನ್ನು ನೋಡಿಕೊಂಡಿದ್ದರೆ ಸ್ತ್ರೀಗೆ ಪ್ರೇಮಾಕರ್ಷಣವೇ

(೬ನೇ ಪೇಜಿಗೆ ಮುಂದರಿಯುವುದು)

ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

THE ROYAL SEED CO.,
FLORISTS & SEEDSMEN,
27, Ilpay Thope ULSOOR, BANGLORE.

ವಿ. ಸೂ—ತರಕಾರಿಗಳು ಮಾರ್ಕೇಟ್ ರೇಟಿಗೆ ಸಪ್ಲೈಮಾಡಿ ೧—೦—೦ ಒಂದಕ್ಕೆ ೦—೨—೦ ಕಮೀಷನ್ ಪಡಿಯುತ್ತೇವೆ. ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು.

ಸಮಾಚಾರ ಸಂಗ್ರಹ : ಚೀನಾ ಜಾಪಾನು ಯುದ್ಧ; ವಜೀರಿ ಸ್ಥಾನದ ಧಾಳಿಗೆ ರೂ. ೩ ಕೋಟಿ ವೆಚ್ಚ; ಸರಕಾರದ ಮೇಲೆ ಮುನಿಸಿಪಾಲಿಟಿಯು ದಾವೆ; ಅಯರ್ಲೇಂಡಿನ ಚುನಾವಣೆ; ನೋದ್ರಿದಿನ ಬಳಿ ಪ್ರಬಲ ಹೋರಾಟ.

ಚೀನಾ ಜಾಪಾನು ಯುದ್ಧ

ನಾನ್ಕಿಂಗಿನಲ್ಲಿ ಯುದ್ಧ ಸಿದ್ಧತೆ

ಇದೇ ತಾ. 8ರಲ್ಲು ಉತ್ತರ ಚೀನದಲ್ಲಿ ಚೀನೀ ಮತ್ತು ಜಪಾನ್ ಸೈನಿಕರೊಳಗೆ ಹೋರಾಟ ನಡೆದು ಹಲವು ಮಂದಿ ಚೀನೀ ಸೈನಿಕರು ಕೊಲ್ಲಲ್ಪಟ್ಟಿರುವರು. ಒಬ್ಬ ಜಾಪಾನ್ ಸೈನ್ಯಾಧಿಕಾರಿಯು ಕೊಲ್ಲಲ್ಪಟ್ಟು ಹಲವು ಸೈನಿಕರು ಗಾಯಗೊಂಡಿರುವರು. ಜಾಪಾನ್ ಸೈನಿಕರು ಫೆಂಗ್‍ಜೈ ಎಂಬಲ್ಲಿ ನಕಲಿ ಯುದ್ಧದಲ್ಲಿ ತೊಡಗಿದ್ದಾಗ ಚೀನೀ ಸೈನಿಕರು ಆ ಕುರಿತು ತಪ್ಪು ಅಭಿಪ್ರಾಯ ಮಾಡಿಕೊಂಡು ಗುಂಡೆಸೆದು ಹೋರಾಟ ಆರಂಭವಾಯಿತೆಂದು ಜಪಾನರ ಅಂಬೋಣ. 6 ಘಂಟೆಯ ವರೆಗೆ ತೀವ್ರ ಹೋರಾಟ ನಡೆದು ರಾಜಿ ಪ್ರಸ್ತಾಪ ನಡಿಸಲಾಯಿತು. 2 ಘಂಟೆಯ ನಂತರ ರಾಜಿಯಾಗದ್ದೆ ಪುನಃ ಯುದ್ಧ ಪ್ರಾರಂಭವಾಯಿತು. ಚೀನೀಯರು ಸೈನಿಕರನ್ನು ಹಿಂದೆ ಕರೆಯಲೊಪ್ಪಲಿಲ್ಲ. ಜಾಪಾನರು ವಾಂಗ್ ಸಿಂಗ್ ಎಂಬ ಚಿಕ್ಕ ಚೀನೀ ಪಟ್ಟಣಕ್ಕೆ ಫಿರಂಗಿ ಗುಂಡೆಸೆದು ಹಲವು ಮನೆಗಳು ನಾಶವಾಗಿರುವವು. 20 ಮಂದಿ ಚೀನೀ ಸೈನಿಕರೂ 10 ಮಂದಿ ನಾಗರಿಕರೂ ಕೊಲ್ಲಲ್ಪಟ್ಟಿರುವರು. ಒಟ್ಟು 200ಕ್ಕಿಂತ ಹೆಚ್ಚಿನ ಚೀನೀ ಸೈನಿಕರು ಗಾಯಗೊಂಡಿರುವರು ಮತ್ತು ಕೊಲ್ಲಲ್ಪಟ್ಟಿರುವರು. ಜೈಂಟ್ಸಿನಿಂದ ಹೆಚ್ಚಿನ ಜಾಪಾನ್ ಸೈನಿಕರೂ ಟಾಂಕಿ, ತೋಪು, ಫಿರಂಗಿಗಳೂ ಕಳುಹಿಸಲ್ಪಟ್ಟಿರುವವು. ಪೈಪಿಂಗಿನಲ್ಲಿ ಮಾರ್ಶಲ್ ಲೋ ಜ್ಯಾರಿಮಾಡಲಾಗಿದೆ ಪೈಪಿಂಗ್ ಹೇಂಕೋ ರೈಲ್ವೆ ಸಂಚಾರವೂ ನಿಲ್ಲಿಸಲ್ಪಟ್ಟಿದೆ. ಚೀನೀಯರು ಪೈಪಿಂಗ್ ವಿಮಾನ ನಿಲಯವನ್ನು ಪ್ರವೇಶಿಸಿ ಪೈಪಿಂಗ್ ಜಾಪಾನ್ ವಿಮಾನಸರ್ವೀಸನ್ನು ನಿಲ್ಲಿಸಿರುವರು. ಇದೇ ತಾ. 9ರಲ್ಲು ಹೋರಾಟವು ನಿಲ್ಲಿಸಲ್ಪಟ್ಟು ಪುನಃ ರಾಜಿ ಪ್ರಸ್ತಾಪ ನಡೆದಿರುವುದು

ಪುನಃ ಹೋರಾಟ

ಉತ್ತರ ಚೀನದ ಮುಖ್ಯ ಪಟ್ಟಣದ ಸಮೀಪದ ವಾಂಗ್‍ಪಿಂಗ್ ಎಂಬಲ್ಲಿ ಪುನಃ ಚೀನೀ ಮತ್ತು ಜಾಪಾನ್ ಸೈನಿಕರೊಳಗೆ ಪ್ರಬಲ ಹೋರಾಟ ಆರಂಭವಾಗಿರುವುದು. ಚೀನೀಯರು ಪುನಃ ವಶಮಾಡಿಕೊಂಡಿರುವ ವಾಂಗ್‍ಪಿಂಗ್ ಪಟ್ಟಣವನ್ನು ವಶಮಾಡಿಕೊಳ್ಳಲು ಜಾಪಾನರು ತೀವ್ರ ಹೋರಾಟ ನಡಿಸುತ್ತಿರುವರು.

ಪೈಪಿಂಗ್ ಪಟ್ಟಣದ ಸಂದು ಕಟ್ಟಿನ ಸ್ಥಳಗಳನ್ನೆಲ್ಲಾ ಹೊಯಿಗೆ ಚೀಲವೇ ಮೊದಲಾದುವುಗಳಿಂದ ತಡೆಗಳನ್ನೇರ್ಪಡಿಸಲಾಗಿದೆ ರಸ್ತೆಗಳಲ್ಲಿ ನಾಗರಿಕರು ತಿರುಗದಂತಾಗಿದೆ. ವಾಹನ ಸಂಚಾರವೆಲ್ಲಾ ನಿಲ್ಲಿಸಲ್ಪಟ್ಟಿದೆ. ಚೀನೀ ಸೈನಿಕರು ಜಪಾನ್ ಸೈನಿಕರು ಬರದಂತೆ ರೈಲ್ವೇ ಲೈನನ್ನು ಕಿತ್ತುಹಾಕಿದ್ದಾರೆ. ಫೆಂಗ್‍ಜೈಯ ಬಳಿಯಲ್ಲಿ ಜಾಪಾನರೂ ಇದೇ ರೀತಿಮಾಡಿದ್ದಾರೆ. ಜಾಪಾನ ಸೈನಿಕರು ಪೈಪಿಂಗಿನಬಳಿಯ ೩ ಪಟ್ಟಣಗಳನ್ನೂ ವಶಪಡಿಸಿಕೊಂಡಿರುವರು.

ಚೀನದ ನಾನ್ಕಿಂಗ್ ಸರಕಾರವು ಯುದ್ಧಸಿದ್ಧತೆ ನಡೆಸುತ್ತಿರುವುದು. ವಿಮಾನಗಳೆಲ್ಲಾ ಸಿದ್ಧವಾಗಿರಬೇಕೆಂದು ಜನರಲ್ ಚ್ಯಾಂಗ್ ಕೈಶೆಕ್ಕರು ಅನುಜ್ಞೆಯಿತ್ತಿರುವರು.

ಪೈಪಿಂಗನ್ನು ಆವರಿಸಲು ಎರಡು ಟ್ರೈನುಗಳಲ್ಲಿ ಜಾಪಾನರು ಟಾಂಕಿ, ಸಶಸ್ತ್ರ ಮೋಟರ್‍ಕಾರು ತೋಪುಗಳನ್ನೆಲ್ಲಾ ಫೆಂಗ್‍ಜೈಗೆ ಕಳುಹಿಸಿರುವರು. ಎರಡನೇ ಸಲ ಪ್ರಬಲ ಹೋರಾಟ ಆರಂಭವಾಗುವ ಮೊದಲು ಚೀನೀ ಸರಕಾರವು, ಹೋರಾಟವನ್ನು ಆರಂಭಿಸಿದುದಕ್ಕಾಗಿ ಕ್ಷಮಾಪಣೆ, ಅದಕ್ಕಾಗಿ ಜವಾಬ್ದಾರರಾದ ಜಾಪಾನ್ ಅಧಿಕಾರಿಗಳ ದಂಡನೆ ಮತ್ತೂ ಅದರಿಂದಾದ ಪ್ರಾಣ ಮತ್ತು ಸೊತ್ತು ನಷ್ಟಕ್ಕೆ ತಕ್ಕ ಪರಿಹಾರ ದೊರೆಯಬೇಕೆಂದು ಜಾಪಾನ್ ಸರಕಾರದೊಡನೆ ಕೇಳಿತು. ಆದರೆ ಇದಕ್ಕೆ ಜಾಪಾನು ಒಪ್ಪದೆ ಪುನಃ ಯುದ್ಧವಾರಂಭವಾಯಿತು

ವಜೀರಿಸ್ಥಾನದ ಧಾಳಿಗೆ ರೂ. 3 ಕೋಟಿ ವೆಚ್ಚ

40,000 ಸೈನಿಕರು ಭಾಗವಹಿಸಿರುವರು

ವಾಯುವ್ಯ ಗಡಿನಾಡಿನ ವಜೀರಿಸ್ಥಾನದ ಗಲಾಟೆಯು ಇನ್ನೂ ಶಾಂತವಾಗಿರುವುದಿಲ್ಲ. ಪಂಗಡಿಗರು ಆಗಾಗ ಸಂದರ್ಭ ನೋಡಿ ಸರಕಾರದ ಸೈನಿಕರ ಮೇಲೆ ಬೀಳುವ ಸಾಹಸ ನಡಿಸುತ್ತಿದ್ದಾರೆ. ಈ ಬಂಡಾಯದ ನಾಯಕರಾದ ಇಪಿಯ ಫಕೀರರು ಇನ್ನೂ ಸ್ವತಂತ್ರರಾಗಿಯೇ ಇರುತ್ತಾರೆ. ಬೇಗನೆ ಸಂಧಾನವಾಗುವ ಸಂಭವವಿದೆಯೆಂದು ತಿಳಿದುಬರುತ್ತದೆ. ಆದರೆ ಬರುವ ಅಕ್ಟೋಬರದ ವರೆಗೆ ಗಲಾಟೆಯು ನಿಲ್ಲುವಂತೆ ತೋರುವುದಿಲ್ಲ. ಆಮೇಲೆ ಚಳಿಗಾಲದ ನಿಮಿತ್ತ ಪಂಗಡಿಗರು ವ್ಯಾಪಾರ ಮತ್ತು ಕೂಲಿ ಕೆಲಸಕ್ಕಾಗಿ ನಾಸು ಭೂಮಿಗೆ ಇಳಿದು ಹೋಗುತ್ತಾರೆ. ಈ ಹೋರಾಟದಲ್ಲಿ ಒಟ್ಟು 40,000 ಸೈನಿಕರು ಭಾಗವಹಿಸಿರುತ್ತಾರೆ. ಇವರಲ್ಲಿ 5500 ಮಂದಿ ಬ್ರಿಟಿಷ್ ಸೈನಿಕರು. ಇನ್ನು 1000 ಮಂದಿ ಶಿಬಿರಾನುಯಾಯಿಗಳಿದ್ದಾರೆ. ಬೋಂಬೆಸೆಯುವ ಕೆಲಸಮಾಡಲು 70 ವಿಮಾನಗಳಿರುತ್ತವೆ. ಇವುಗಳನ್ನು ನಡಿಸುವ ಕೆಲಸದಲ್ಲಿ 700 ಮಂದಿ ವೈಮಾನಿಕರು ನಿರತರಿರುತ್ತಾರೆ. ಈ ಧಾಳಿಯು ಬಹಳ ಮಿತವಾದ ವೆಚ್ಚದಿಂದ ನಡಿಸಲ್ಪಡುತ್ತದಂತೆ. ಆದೂ ದಿನವಹಿ ವೆಚ್ಚಕ್ಕೆ ಸುಮಾರು ಒಂದು ಲಕ್ಷ ರೂ. ಬೇಕಾಗುತ್ತದೆ. ಇನ್ನು ಸೈನಿಕರು ಮತ್ತು ಸಾಮಗ್ರಿಗಳನ್ನೊಯ್ಯುವ ವೆಚ್ಚ ಬೇರೆಯಿದೆ. ಬರುವ ಅಕ್ಟೋಬರದಲ್ಲಿ ಈ ಧಾಳಿಯು ಮುಗಿಯುವಂತಾದರೆ ಕಡಿಮೆಯೆಂದರೆ 3 ಕೋಟಿ ಬೇಕಾಗುವುದು. ಬ್ರಿಟಿಷ್ ಸೇನೆಯಲ್ಲಿ ಜೂನ್ ತಿಂಗಳ ಮಧ್ಯದ ವರೆಗೆ 163 ಮಂದಿ ಕೊಲ್ಲಲ್ಪಟ್ಟು 440 ಮಂದಿ ಗಾಯಗೊಂಡಿರುವರು. ಪಂಗಡಿಗರಲ್ಲಿ 720 ಮಂದಿ ಹತರಾಗಿರುವರು. 660 ಮಂದಿಗೆ ಬಹಳ ಹೆಚ್ಚಿನ ಪೆಟ್ಟಾಗಿರುವುದು. ಇಪಿಯ ಫಕೀರರು ದುರ್ಗಮವಾದೊಂದು ಪ್ರದೇಶದಲ್ಲಿ ತಂಗಿ ಮಸೂದ್ ಮತ್ತು ಬೋರಿಖೆಲ್ ಪಂಗಡಿರ ಪ್ರದೇಶದಲ್ಲಿ ಉಗ್ರಗಾಮಿಗಳನ್ನು ಒಟ್ಟುಕೂಡಿಸುವುದರಲ್ಲಿ ಇನ್ನೂ ನಿರತರಾಗಿರುವರು. ಮಸೂದ್ ಪಂಗಡಿಗರಲ್ಲಿ ಮುಲ್ಲರ್ ಅಲಿಯವರು ಸರಕಾರಕ್ಕೆ ವಿರುದ್ಧವಾಗಿ ಪಂಗಡಿಗರನ್ನು ಎತ್ತಿಕಟ್ಟುತ್ತಿದ್ದಾರೆ. ವಾಯುವ್ಯ ಗಡಿನಾಡಿನಲ್ಲಿ ಹಲವು ವರ್ಷಗಳ ವರೆಗೆ ಶಾಂತಿಯು ನೆಲೆಗೊಳ್ಳುವಂತೆ ಮಾಡುವುದೇ ಬ್ರಿಟಿಷ್ ಸೈನ್ಯಾಧಿಕಾರಿಗಳ ಉದ್ದೇಶವಲ್ಲದೆ ಸೈನಿಕರಿಗೆ ಅತಿ ಪ್ರಯಾಸಕರವಾದ ಧಾಳಿಯನ್ನು ಬೇಕೆಂದು ಮುಂದುವರಿಸಿ ಗಡಿನಾಡಿನ ಪಂಗಡಿಗರನ್ನು ಸದೆಬಡಿಯುವುದಲ್ಲೆಂದು ಸರಕಾರವು ಪ್ರಕಟಣೆ ಹೊರಡಿಸಿರುವುದು.

ಸರಕಾರದ ಮೇಲೆ ಮುನಿಸಿಪಾಲಿಟಿಯು ದಾವೆ

ಕಾಯಿದೆ ಭಂಗ ಚಳವಳದ ಸಂದರ್ಭದಲ್ಲಿ ಸರಕಾರವು ಅಹಮ್ಮದಾಬಾದಿನ ಕಾಂಗ್ರೆಸ್ ಸದನವನ್ನು ವಶಮಾಡಿಕೊಂಡಿತು. ಮುನಿಸಿಪಾಲಿಟಿಯವರು ಈ ಕಟ್ಟೋಣದ ಕರ ಕೇಳಿದಾಗ, ಅದನ್ನು ಗುಜರಾಥ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಕೊಡಬೇಕೇ ಹೊರತು ತಮಗೆ ಕೊಡಲು ಸಾಧ್ಯವಿಲ್ಲೆಂದು ಸರಕಾರವು ತಿಳಿಸಿತು. ಗುಜರಾಥ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಬೇಕಾಯಿದೇಶೀರವಾಗಿ ಮಾಡಲ್ಪಟ್ಟಿರುವುದರಿಂದ ಅದರಿಂದ ಕರ ವಸೂಲು ಮಾಡಲು ಸಾಧ್ಯವಿಲ್ಲ, ಆದುದರಿಂದ ಸರಕಾರವೇ ಕರ ತೆರಬೇಕೆಂದು ಅಹಮ್ಮದಾಬಾದ್ ಮುನಿಸಿಪಾಲಿಟಿಯವರು ತರ್ಕಿಸಿದರು. ಆದರೆ ಸರಕಾರವು ಒಪ್ಪಲಿಲ್ಲ. ಈಗ ಈ ವಿಷಯದಲ್ಲಿ ಸರಕಾರದ ಮೇಲೆ ದಾವೆ ಮಾಡಬೇಕೆಂದು ಇದೇ ತಾ. 5ರಲ್ಲು ಮುನಿಸಿಪಾಲಿಟಿಯವರು ನಿರ್ಧಾರ ಮಾಡಿರುವರು.

ಪುನಃ 22 ಮಂದಿಯ ತಲೆ ಕಡಿಯಲಾಯಿತು

ರಶ್ಯದ ಪೂರ್ವಭಾಗದ ರೈಲ್ವೆಯ ಅಧಿಕಾರಿಗಳಾಗಿದ್ದು ಜಾಪಾನ ಗುಪ್ತಚಾರರ ಹಸ್ತಕರಾಗಿ ರೈಲ್ವೆಯನ್ನು ಮುರಿಯುವ ಪಿತೂರಿ ನಡಿಸಿದರೆಂಬ ಆರೋಪದಿಂದ ವ್ಲಾಡಿವಸ್ಟೋಕ್ ಪಟ್ಟಣದಲ್ಲಿ ಪುನಃ 22 ಮಂದಿಯ ತಲೆ ಕಡಿಯಲಾಯಿತು. ಈ ವರೆಗೆ ಒಟ್ಟು 1153 ಮಂದಿ ರೈಲ್ವೆ ಅಧಿಕಾರಿಗಳು ದಂಡನೆಗೊಳಗಾಗಿರುವರು.

11 ಪೋಲೀಸ್ ಕಾನ್‍ಸ್ಟೇಬ್ಲ್ ಸ್ಥಾನಗಳಿಗೆ 2000 ಅರ್ಜಿ

ಲಾಹೋರಿನಲ್ಲಿ 11 ಸ್ಥಾನಗಳಿಗೆ ಪೋಲೀಸ್ ಕಾನ್‍ಸ್ಟೇಬ್ಲ್‍ಗಳನ್ನು ಆರಿಸಬೇಕಾಯಿತು. ಪೋಲೀಸ್ ಸುಪರಿಂಟೆಂಡೆಂಟರು ಅರ್ಜಿಗಳನ್ನು ಕೇಳಿದ್ದರು. ಆಗ 2000 ಮಂದಿ ತರವಾರು ಅರ್ಜಿ ಹಾಕಿ ಪರೀಕ್ಷೆಗಾಗಿ ಪೋಲೀಸ್ ಲೈನಿಗೆ ಬಂದರು. ಇದರಲ್ಲಿ ಹೆಚ್ಚಿನವರು ವಿದ್ಯಾವಂತರು. ಅನೇಕರು ಮೆಟ್ರಿಕ್ಯುಲೇಶನ್ ಕಲಿತವರು. ಹಲವರು ಕೋಲೇಜ್ ವಿದ್ಯೆ ಪಡೆದವರು. ಕೆಲವರು ವಿಶ್ವವಿದ್ಯಾಲಯದ ಪದವೀಧರರು. ಆರಿಸಲ್ಪಟ್ಟವರಲ್ಲಿ ಒಬ್ಬನು ಬಿ. ಎ. ಪದವೀಧರನು. ಇದರಿಂದ ಪಂಜಾಬಿನಲ್ಲಿ ನಿರುದ್ಯೋಗಿತನವು ಎಷ್ಟೊಂದು ತೀವ್ರವಾಗಿದೆಯೆಂಬುದು ವಿದಿತವಾಗುವುದು.

THE

PANGAL NAYAK BANK

LIMITED.

ESTABLISHED 1920.

Paid up Capital: Rs. 1,82,100/-

Head Office: UDIPI.

Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at $4\frac{1}{2}$% on 2 years deposits.

Every other description of up-to-date Banking business is also undertaken.

ಮತಾಂತರ ಹೊಂದಿದ ಸ್ತ್ರೀಯ ಕುರಿತು ಜಗಳ

3 ಮಂದಿ ಕೊಲ್ಲಲ್ಪಟ್ಟು

11 ಮಂದಿ ಗಾಯಗೊಂಡಿರುವರು

ಹೈದರಾಬಾದ್ ಸಂಸ್ಥಾನದ ಬಿದಾರ್ ಜಿಲ್ಲೆಯ ಹುಸ್ಲಿ ಎಂಬ ಹಳ್ಳಿಯಲ್ಲಿ ಹಿಂದು ಸ್ತ್ರೀಯೊಬ್ಬಳು ಮುಸಲ್ಮಾನಮತಕ್ಕೆ ಸೇರಿಸಲ್ಪಟ್ಟು ಹಮ್ಮುದ್ದೀನನೆಂಬ ಮುಸಲ್ಮಾನನನ್ನು ವಿವಾಹವಾದ ಕುರಿತು ಹಿಂದು-ಮುಸಲ್ಮಾನರೊಳಗೆ ವೈಮನಸ್ಯವುಂಟಾಗಿದ್ದಿತು. ಹಿಂದುಗಳು ಈ ಸ್ತ್ರೀಯನ್ನು ಕದ್ದು ತಂದು ಆರ್ಯಸಮಾಜ ವಿಧಿಪ್ರಕಾರ ಶುದ್ಧಿ ಮಾಡಿ ಅಂಬನಾಮಿ ಎಂಬವನೊಬ್ಬನಿಗೆ ವಿವಾಹ ಮಾಡಿ ಹೈದರಾಬಾದಿಗೊಯ್ದರೆಂದು ತಿಳಿಯಬರುತ್ತದೆ. ಆಗ ಈ ಸ್ತ್ರೀಯ ಮುಸಲ್ಮಾನ ಗಂಡನು ಹಿಂದುಗಳ ಮೇಲೆ ಫಿರ್ಯಾದಿ ಕೊಟ್ಟ. ಈ ನಡುವೆ ಎರಡು ಸಮಾಜಗಳವರೊಳಗೂ ಜಗಳವುಂಟಾಗಿ ಒಬ್ಬರೊಬ್ಬರ ಮೇಲೆ ಕಲ್ಲೆಸೆದುಕೊಳ್ಳುತ್ತಿದ್ದರು. ಜೂನ್ ತಾ. 29ರಲ್ಲಿ ದೊಡ್ಡ ಜಗಳವಾಗಿ 3 ಮಂದಿ ಹಿಂದುಗಳು ಕೊಲ್ಲಲ್ಪಟ್ಟು 11 ಮಂದಿ ಗಾಯಗೊಂಡಿರುವರು. ಕೊಲ್ಲಲ್ಪಟ್ಟವರಲ್ಲಿ ಒಬ್ಬನು ಪೋಲೀಸ್ ಪಟೇಲನು. ಆಮೇಲೆ ಪೋಲೀಸರು ಜಗಳದ ಸ್ಥಳಕ್ಕೆ ಧಾವಿಸಿ ಶಾಂತಿಸ್ಥಾಪನೆ ಮಾಡಿದರು. ಈ ಹಳ್ಳಿಯ 820 ಮಂದಿಯಲ್ಲಿ 664 ಮಂದಿ ಹಿಂದುಗಳು, ಉಳಿದವರು ಮುಸಲ್ಮಾನರು.

ಐರ್ಲೇಂಡಿನ ಚುನಾವಣೆ

ಯಲ್ಲಿ ಡಿ| ವೆಲೆರಾರವರಿಗೆ ಸಂಪೂರ್ಣ ಬಹುಪಕ್ಷ ದೊರೆತಿರುವುದಿಲ್ಲ. ಅವರ ಪಕ್ಷಕ್ಕೆ 69 ಸೀಟು. ಮತ್ತು ಉಳಿದ ಎಲ್ಲಾ ಪಕ್ಷಗಳಿಗೆ 69 ಸೀಟು ದೊರೆತಿರುವುದು. ಡಿ| ವೆಲೆರಾರವರ ಕಡೆಯಿಂದ ಅಧ್ಯಕ್ಷರು ಆರಿಸಲ್ಪಡುವಾಗ ಅವರ ಪಕ್ಷಕ್ಕೆ ಸಂಪೂರ್ಣ ಬಹುಪಕ್ಷ ದೊರೆಯುವುದಿಲ್ಲ, ಆದುದರಿಂದ ಡಿ| ವೆಲೆರಾರವರು ತನ್ನ ಆಡಳಿತವನ್ನು ಸಸೂತ್ರವಾಗಿ ನಡಿಸಬೇಕಾದರೆ 13 ಮಂದಿಯಿರುವ ಮಜೂರ ಪಕ್ಷದೊಡನೆ ಸಹಕರಿಸಬೇಕು. ಆದರೆ ಈ ಪಕ್ಷೀಯರು ಡಿ| ವೆಲೆರಾರವರ ಹೊಸ ರಾಜ್ಯಸೂತ್ರದ ಸಮರ್ಥಕರಲ್ಲ. ಅವರ ಸಹಕಾರ ಪಡೆಯಬೇಕಾದರೆ ಇಡೀ ರಾಜ್ಯಸೂತ್ರದಲ್ಲಿ ತೀವ್ರ ಮಾರ್ಪಾಟುಗಳನ್ನು ಮಾಡಬೇಕಾಗುವುದು. ಆದುದರಿಂದ ಇನ್ನು ಕೆಲವೇ ತಿಂಗಳುಗಳೊಳಗೆ ಇನ್ನೊಂದು ಚುನಾವಣೆ ನಡೆಯುವ ಸಂಭವವಿದೆ ಎಂದು ನಂಬಲಾಗಿದೆ.

ಸೋನ್ಯ ಮಾರುತಿದೇವಸ್ಥಾನ ಜಗಳ

ವನ್ನು ರಾಜಿಯಲ್ಲಿ ತೀರ್ಮಾನಿಸಲು ಮುಂಬಯಿಸರಕಾರವು ಪ್ರಯತ್ನಿಸುತ್ತಿರುವುದು. ಕಳೆದ ವಾರ ಪೂನದ ಕಲೆಕ್ಟರರು ಜಿಲ್ಲೆಯ ಮುಸಲ್ಮಾನರ ಸಭೆಯೊಂದನ್ನು ನಡೆಸಿ ಅವರ ಅಭಿಪ್ರಾಯ ಪಡೆಕೊಂಡರು. ಇದೇ ತಾ. 6ರಲ್ಲಿ ಪೂನದ ಪ್ರಾಮುಖ್ಯ ಹಿಂದೂಮುಖಂಡರ ಅಭಿಪ್ರಾಯ ಕೇಳಿ, ವರದಿಯನ್ನು ಸರಕಾರಕ್ಕೊಪ್ಪಿಸಿರುವರು.

ಮೇದ್ರಿದಿನ ಬಳಿ ಪ್ರಬಲ ಹೋರಾಟ

ಇದೇ ತಾ. 7ರಲ್ಲಿ ಮೇದ್ರಿದಿನ ಪಶ್ಚಿಮದಲ್ಲಿ ಪ್ರಬಲ ಯುದ್ಧ ನಡೆದಿರುವುದು. ಮೇದ್ರಿದಿನಿಂದ 20 ಮೈಲು ದೂರವಿರುವ ಬ್ರುನೆಟ್ ಎಂಬ ಸ್ಥಳವನ್ನು ಸರಕಾರದ ಕಡೆಯ ಸೈನಿಕರು ವಶಪಡಿಸಿಕೊಂಡು ವಿಲ್ಲನೋವ ಎಂಬ ಪ್ರಾಮುಖ್ಯ ಸ್ಥಳವನ್ನಾವರಿಸಿ ಸ್ವಾಧೀನಪಡಿಸಿಕೊಂಡಿರುವರೆಂದು ತಿಳಿದುಬರುತ್ತದೆ. ಮೇದ್ರಿದ್ ಟೊಲೇಡೋ ರಸ್ತೆಯನ್ನು ಕಡಿದು ಕರಬೇಂಚೆಲ್ ಎಂಬ ಪ್ರಾಮುಖ್ಯಸ್ಥಳವನ್ನು ಪ್ರತ್ಯೇಕಿಸಿರುವರು. ಅರಗನ್ ರಣರಂಗದಲ್ಲಿಯೂ ಸರಕಾರದ ಕಡೆಯ ಸೈನಿಕರು ಪ್ರಾಮುಖ್ಯ ಸ್ಥಳಗಳನ್ನು ಗೆದ್ದಿರುವರು. ನೆಲ ಮತ್ತು ಆಕಾಶದ ಮೂಲಕ ಸರಕಾರದ ಸೈನಿಕರ ಮೇಲೆ ಧಾಳಿ ನಡಿಸಿದ ಬಂಡಾಯಗಾರರು ಹಿಂದಕ್ಕಟ್ಟಲ್ಪಟ್ಟಿರುವರು.

ಇದೇ ತಾ. 5ರಲ್ಲಿ ವೆಲೆನ್ಸಿಯಾ ಪಟ್ಟಣದ ಸಮೀಪ ಬಂಡಾಯಗಾರರು 80 ಬೋಂಬುಗಳನ್ನೆಸೆದರು. ಸಾಟಂಡಾರ್ ವಿಭಾಗದ ಬಂಡಾಯಗಾರರು ಮುಂದೊತ್ತುತ್ತಿರುವರು. ಕ್ಯಾಸ್ಟೋಲಿಯನ್ ಎಂಬ ಗುಡ್ಡದಿಂದ ಸರಕಾರದ ಕಡೆಯ ಸೈನಿಕರು ಹಿಂದಕ್ಕಟ್ಟಲ್ಪಟ್ಟು 300 ಮಂದಿ ಹತರಾಗಿ ಮಂದಿ ಸೆರೆಹಿಡಿಯಲ್ಪಟ್ಟರು. ಹೆಚ್ಚಿನ ಯುದ್ಧ ಸಾಮಗ್ರಿಗಳು ಬಂಡಾಯಗಾರರ ವಶವಾಗಿರುವವು. ಮೇದ್ರಿದ್ ರಣರಂಗದಲ್ಲಿಯೂ ಸರಕಾರದ ಧಾಳಿಯನ್ನು ಬಂಡಾಯಗಾರರು ತಡೆದು ಹಿಂದಕ್ಕಟ್ಟಿ 14 ರಸ್ಯನ ಟಾಂಕಿಗಳನ್ನು ವಶಪಡಿಸಿಕೊಂಡಿರುವರೆಂದು ಪ್ರಕಟಗೊಳಿಸಿರುವರು.

(೪ನೇ ಪುಟದಿಂದ ಮುಂದರಿದುದು)

ಇಲ್ಲವಾಗುವುದೆಂದು ಈ ಜನರ ಆಕ್ಷೇಪ. ಸಾಮಾಜಿಕ ಕೆಲಸ, ರಾಜಕೀಯವೆಲ್ಲಾ ಪುರುಷನ ಕೆಲಸ. ಅದರಲ್ಲಿ ಸ್ತ್ರೀಯು ಕೈಹಾಕಬಾರದು. ಕೈಹಾಕಿದರೆ ಅವಳ ಸ್ತ್ರೀತ್ವದ ಆಕರ್ಷಣವೇ ಹೋಗಿಬಿಡುವುದೆಂದು ಈ ಹಳೆಯ ಮನೋವೃತ್ತಿಯವರ ತರ್ಕ. ಪುರುಷನೇ ಅಧಿಕಾರ ನಡಿಸುವ ಯಾವುದಾದರೊಂದು ಕ್ಷೇತ್ರದೊಳಗೆ ಸ್ತ್ರೀಯು ಪ್ರವೇಶಿಸಿದರೆ, ಅವಳು ತನ್ನ ಕೋಮಲತೆಯನ್ನು ತಾನೇ ಕಿತ್ತುಹಾಕುವಂತಾಗುವದೆಂಬ ಆಕ್ಷೇಪವನ್ನು ಈ ಹಳೇ ಮನೋವೃತ್ತಿಯವರು ಮಾಡುತ್ತಲೇ ಇರುವರು. ಸ್ತ್ರೀಯ ಕುರಿತು ಪುರುಷನು ಮಾಡಿರುವ ಈ ಪ್ರೇಮದ ವ್ಯಾಖ್ಯೆಯ ಪ್ರಕಾರ ಗಂಡನು ಗುಪ್ತವಾಗಿಯಾಗಲಿ, ಬಹಿರಂಗವಾಗಿಯಾಗಲಿ ಎಂತಹ ಅಕೃತ್ಯ, ಅನೀತಿ ಬೇಕಾದರೂ ಮಾಡಬಹುದು. ಎಷ್ಟೊಂದು ಸ್ವೇಚ್ಛಾಚಾರಿ ಬೇಕಾದರೂ ಇರಬಹುದು. ಅದರಿಂದಾಗಿ ಅವನ ಆಕರ್ಷಣವೇನೂ ಕಡಿಮೆಯಾಗದು. ಹಾಗೆ ಮಾಡಲು ಅವನಿಗೆ ಹಕ್ಕಿದೆ, ಆ ಅಧಿಕಾರವಿದೆ. ಆದರೆ ಸ್ತ್ರೀಯು ಮಾತ್ರ ತನಗೆ ಪುರುಷನು ಮಾಡಿಟ್ಟ ಗೂಡಿನೊಳಗಿಂದ ಹೊರಗೆ ಕಾಲಿಟ್ಟಾಕ್ಷಣ ಅವಳ ಸ್ತ್ರೀತ್ವವನ್ನೇ ಕಳಕೊಂಡು ಬಿಡುವಳು. ಇಂತಹ ಭಾವನೆಯು ಅರ್ಥರಹಿತ ಮತ್ತು ಅಮಾನುಷವೆಂದು ಪ್ರತ್ಯೇಕ ಹೇಳಬೇಕೇ? ಇಂತಹ ಮನೋವೃತ್ತಿಯು ಅದೆಷ್ಟು ಪೊಳ್ಳಾಗಿರುವುದೆಂಬುದನ್ನು ರಸ್ಯವು ಸಿದ್ಧಗೊಳಿಸಿರುವುದು.

ಹೊಸ ಪರಿಸ್ಥಿತಿಯು ಹೊಸ ರೀತಿ-ನೀತಿಗಳನ್ನುಂಟುಮಾಡುವವು. ಅದು ಸ್ವಾಭಾವಿಕ. ಹೊಸ ಪರಿಸ್ಥಿತಿಗೆ ಹಳೆಯ ರೀತಿನೀತಿಗಳನ್ನು ತಂದು ಜೋಡಿಸಲೆತ್ನಿಸಿದರೆ ಗೊಂದಲವುಂಟಾಗದಿರದು. ಹಳೆಯ ಮನೋವೃತ್ತಿಯವರು, ಸ್ತ್ರೀಯರ ಕುರಿತಾದ ತಮ್ಮ ಹಳೆಯ ಭಾವನಾತಕ್ಕಡಿಯಿಂದಲೇ ಆಧುನಿಕ ಸ್ತ್ರೀಯರನ್ನು ಅಳೆಯಹತ್ತಿದರೆ ಅವರ ದೃಷ್ಟಿಗವರು ಸ್ವೇಚ್ಛಾಚಾರಿಗಳೆಂದು ತೋರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಅದು ಅವರ ದೃಷ್ಟಿಯ ದೋಷ. ಹಿಂದೊಮ್ಮೆ ರಸ್ಯದಲ್ಲಿ ದಪ್ಪಶರೀರದ ತೋರ ನಡುವಿನ, ಉಬ್ಬಿದ ನಿತಂಬದ ಸ್ತ್ರೀಯರು ಪುರುಷನನ್ನು ಆಕರ್ಷಿಸುವ ಸುರೂಪಿಗಳಾಗಿದ್ದರು. ಆಗ ಸ್ತ್ರೀಯರು ಚೆನ್ನಾಗಿ ತಿಂದುತೇಗಿ ಹಿಡಿಂಬಿಗಳಾಗಿ ಬೆಳೆಯಲೆತ್ನಿಸುತ್ತಿದ್ದರು. ಆ ಮೇಲೆ ಬಡ ನಡುವಿನ ನಿಸ್ತೇಜ ಕೃಶಾಂಗಿಯರು ಆಕರ್ಷಕ ರೂಪಿಗಳೆಂದಾಯಿತು. ಆಗ ಸ್ತ್ರೀಯರು ತಮ್ಮನ್ನು ಕೃಶ ಮತ್ತು ನಿಸ್ತೇಜವಾಗಿ ಮಾಡಿಕೊಳ್ಳಲು ಶಾಯಿ ಕುಡಿದುದೂ ಇದೆ. ಭಾವೋದ್ರೇಕವನ್ನುಂಟುಮಾಡಲು ಇಂತಹ ರೂಪ ಲಾವಣ್ಯವೇ ಆಗಬೇಕೆಂದು ಯಾವ ನಿಶ್ಚಯವೂ ಇಲ್ಲ. ಅದು ಆಯಾಕಾಲದ ಅಭಿರುಚಿ ಮತ್ತು ಪದ್ಧತಿಯ ಮೇಲೆ ಹೊಂದಿದೆ.

ಹಳೆಯ ಮನೋವೃತ್ತಿಯವರು ಯಾವ ಭಾವನೆಗಳನ್ನು ಬೇಕಾದರೂ ಅಪ್ಪಿಕೊಳ್ಳಲಿ, ಲೋಕವು ಈಗ ರಸ್ಯವು ಸಾಧಿಸಿರುವ ಗುರಿಯನ್ನನುಸರಿಸಿ ನಡೆಯುತ್ತಿದೆ. ಸ್ತ್ರೀಯರು ಹೆಚ್ಚೆಚ್ಚಾಗಿ ಪುರುಷಸಮಾನತೆಯ ಮಾರ್ಗದಲ್ಲಿ ಮುಂದುವರಿಯುತ್ತಿದ್ದಾರೆ; ಹೆಚ್ಚೆಚ್ಚು ಸಾಂಪತ್ತಿಕಸ್ವಾತಂತ್ರ್ಯ ಪಡೆದು ಸ್ವಾವಲಂಬಿಗಳಾಗುತ್ತಿದ್ದಾರೆ; ಪುರುಷರೊಡನೆ ಅಧಿಕಾಧಿಕವಾದ ಸಹಚರ್ಯೆಯುಳ್ಳವರಾಗುತ್ತಿದ್ದಾರೆ. ವಿವಾಹವಿಚ್ಛೇದವು ಸುಲಭವಾಗುತ್ತಿದೆ. ಲೈಂಗಿಕ ವಿಷಯಕವಾದ ನಿಗೂಢತೆ ಮತ್ತು ಅಂಧಮನೋವೃತ್ತಿಯು ಕಡಿಮೆಯಾಗುತ್ತಿದೆ. ಸ್ತ್ರೀಯರಿಗೊಂದು ಪುರುಷರಿಗೆ ಮತ್ತೊಂದು ನೀತಿಯೆಂಬ ಭಾವನೆಗೆ ಧಕ್ಕೆ ತಗಲಹತ್ತಿದೆ. ರಸ್ಯದಲ್ಲಿ ಕ್ರಾಂತಿಯ ಪ್ರಳಯವು ಹಳೆಯದನ್ನೆಲ್ಲಾ ಒಮ್ಮೆಯೇ ಕೊಚ್ಚಿಕೊಂಡು ಹೋಗಿದೆ. ಅದೀಗ ತನ್ನ ಸಾಮಾಜಿಕ ಶೋಧನಾಲಯದಲ್ಲಿ ನವ ಪ್ರೇಮಭಾವ ಮತ್ತು ಅದರ ಪ್ರದರ್ಶನ ರೀತಿಯನ್ನು ಹುಡುಕುತ್ತಿದೆ.

ಪ್ರೇಮ ಮೆಡಿಕಲ್ ಕೋಲೇಜು

ಈ ಕೋಲೇಜಿನ ಹೊಸ ವರ್ಷವು ಇದೇ ಜುಲಾಯಿಯ ತಿಂಗಳಲ್ಲಿ ಪ್ರಾರಂಭವಾಗುವದು. ಎಸ್. ಎಸ್. ಎಲ್. ಸಿ. ಮೆಟ್ರಿಕ್, ಅಪ್ಪರ್ ಸೆಕೆಂಡರಿ, ಮುಲ್ಕಿ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಅವರವರ ಸರ್ಟಿಫಿಕೇಟ್‌ಗಳಿಗೆ ತಕ್ಕ ಇಂಗ್ಲಿಷ್ ಮತ್ತು ಕನ್ನಡ ಕೋರ್ಸ್‌ಗಳಿವೆ. ಇಲ್ಲಿ ಅಭ್ಯಾಸ ಮಾಡಲಿಚ್ಛಿಸುವವರು ಕೂಡಲೆ "ಪ್ರೊಸ್‌ಪೆಕ್ಟಸ್"ಗಾಗಿ ೨ ಆಣೆ ಸ್ಟಾಂಪು ಇಟ್ಟು ಬರೆಯಬೇಕು.

ರಿಜಿಸ್ಟ್ರಾರ್:
ಪ್ರೇಮ ವಿದ್ಯಾಪೀಠ

ತುಂಗಭದ್ರಾ
೧೦-೭-೧೯೩೭

ಅತ್ಯುತ್ತಮ ಪೆನಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ

'ಕುಶಾ' (ರಿಜಿಸ್ಟರ್ಡ್) ಫೌಂಟನ ಪೆನಿನ 'ಶಾಯಿ'

'ಕುಶಾ' (ರಿಜಿಸ್ಟರ್ಡ್) ಚಲೊ ಸುವಾಸನೆಯ 'ಪೊಮೇಡ'

ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ

Sole distributors:—**V V Kamath & Bros, Mangalore**

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಕೂದಲು ರಂಗು ಬಿಡಿ

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು. ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ. ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ. 5ರ, ಅರ್ಧಾಂಶಕ್ಕೂ ಮಿಕ್ಕಿ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೆ ಬರೆಯಿರಿ.

Bal Kala Stores,
P. O. Kansisimri (*Darbhanga*)

ನಮ್ಮ ಸಿನೆಮಾ ಪುಟ

ಇಂದಿರಾ, ಎಂ. ಎ.

ಶ್ರೇಷ್ಠ ನಟಿ ಸುಲೋಚನೆಯ-ಉತ್ಕೃಷ್ಟ ಚಿತ್ರ.

[ತಾ. 15-7-'37ರಿಂದ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪ್ರದರ್ಶಿಸಲ್ಪಡುತ್ತಿರುವ, ಸುಲೋಚನಾ, ಝಿಲ್ಲೂ, ಬಿಲ್ಮೋರಿಯಾ, ರಾಜಾಸಂಡೋ ಮುಂತಾದ ನಟ ಸಮರ್ಥರಿಂದ ಅಭಿನಯಿಸಲ್ಪಟ್ಟ ಇಂದಿರಾ, ಎಂ. ಎ. ಎಂಬ ವಾಕ್ಚಲಚಿತ್ರದ ಕಥಾ ಸಾರಾಂಶ.]

ಬ್ಯಾರಿಸ್ಟರ್ ಬನ್ಸಿಲಾಲನ ಮಗಳಾದ ಇಂದಿರೆಯು ತನ್ನ ತಂದೆಯೊಂದಿಗೆ ನಾಲ್ಕು ವರ್ಷ ವಿಲಾಯಿತಿಯಲ್ಲಿದ್ದು 'ಆಕ್ಸ್‌ಫರ್ಡ್ ಯೂನಿವರ್ಸಿಟಿ'ಯ ಎಂ. ಎ. ಪದವಿ ಪಡೆದು ಭಾರತಕ್ಕೆ ಬಂದಳು. ಹಿಂದೂ ದೇಶದ ಸ್ತ್ರೀಸಮಾಜದ ಅವನತಿಯನ್ನು ಕಂಡು ಆವಳೆದೆ ಮರುಗಹತ್ತಿತು. ಸ್ವಾತಂತ್ರ್ಯದ ತೂಗುಯ್ಯಾಲೆಯಲ್ಲಿನಲಿದಾಡುವ ಐರೋಪ್ಯ ಯುವತಿಯರೆಲ್ಲಿ? ಕೋಣೆಯಲ್ಲಿ ಕುಳಿತು ಕೈದಿಗಳಂತಿರುವ ಭಾರತೀಯ ಯುವತಿಯರೆಲ್ಲಿ? ಭೋಗಸ್ವಾರ್ಥಿ ಪುರುಷನ ಅಹಂಕಾರಮಯ ಜೀವನಕ್ಕೆ ಏಟುಕೊಡಬೇಕೆಂದೆಣಿಸಿ ಇಂದಿರೆಯು ತನಗೆ ನಿಶ್ಚಿತನಾದ ವರನನ್ನು ತಿರಸ್ಕರಿಸಿದಳು.

ಪ್ರೊಫೆಸರ್ ಕಿಶೋರನೇ ಇಂದಿರೆಗೆ ನಿಶ್ಚಿತನಾಗಿದ್ದ ವರನು! ಆದರೆ ಆತ ಭಾರತೀಯ ಸಂಸ್ಕೃತಿಯಲ್ಲೇ ಅಭಿಮಾನಿಯಾಗಿರುವುದರಿಂದ ಇಂದಿರೆಯು ಆತನನ್ನು ತಿರಸ್ಕರಿಸಲು ಕಾರಣ. ಇದರಿಂದ ಕಿಶೋರನ ಹೃದಯದಲ್ಲಿ ಗೊಂದಲವೆದ್ದಿತು. ಇಂದಿರೆಯ ವರ್ತನೆಯು ಆಕೆಯ ತಾಯಿಯಾದ ಯಮುನೆಗೂ ಸರಿಯೆನಿಸಲಿಲ್ಲ. ಇಂದಿರೆಗೆ ತಂದೆಯು ಬೆಂಬಲವಿದ್ದುದರಿಂದ ಯಮುನೆಯಾಟ ಸಾಗಲಿಲ್ಲ.

ಇಂದಿರೆಯನ್ನು ಸ್ವಾತಂತ್ರ್ಯ ಪ್ರಪಂಚದ ಆದರ್ಶಯುವತಿಯನ್ನಾಗಿಮಾಡಬೇಕೆಂದು ಬ್ಯಾರಿಸ್ಟರ್ ಬನ್ಸಿಲಾಲನ ಆಶೆ. ಅದಕ್ಕಾಗಿ ಅವನು ಇಂದಿರೆಯನ್ನು ಕಾಸ್ಮೋಪೊಲಿಟನ್ ಹೋಟೆಲಿನಲ್ಲಿ ಸ್ವತಂತ್ರೆಯಾಗಿರಲನುಕೂಲ ವ್ಯವಸ್ಥೆಯನ್ನು ಕಲ್ಪಿಸಿದನು. ಮನೆಯಲ್ಲೇ ಬಿಟ್ಟರೆ ಯಮುನೆಯು ಬಾಧೆಯನ್ನೊಡ್ಡಿಯಾಳೆಂಬ ಭಯ!—ಹೋಟೆಲಿನ ಜೀವನ! ತಂದೆಯ ಸಹಾನುಭೂತಿ!! ಮತ್ತೆ ಕೇಳಲೇನು?

ಲೆಫ್ಟಿನೆಂಟ್ ಪ್ಯಾರೇಲಾಲನೆಂಬ ಸೈನ್ಯಾಧಿಕಾರಿ ತರುಣನೊಬ್ಬನೂ ಅದೇ ಹೋಟೆಲಿನಲ್ಲಿ ವಾಸಿಸುತ್ತಿದ್ದನು. ಆತನು ವಿಲಾಯಿತಿಯಲ್ಲಿ ಸೈನ್ಯ ಶಿಕ್ಷಣವನ್ನು ಮುಗಿಸಿ ಇಂದಿರೆಯೊಂದಿಗೆ ಹಿಂದೂ ದೇಶಕ್ಕೆ ಬಂದಿದ್ದನು. ಅವನ ದೃಷ್ಟಿಯು ಇಂದಿರೆಯ ಮೇಲೆ ಬಿದ್ದಿತು. ಆಕೆ ಮೊದಮೊದಲು ಅದನ್ನು ಉಪೇಕ್ಷಿಸಿದಳು. ಆದರೆ ಪ್ಯಾರೇಲಾಲನ ಮೆಲ್ನುಡಿ, ಧೀರೋದಾತ್ತ ಪ್ರಕೃತಿ, ಪ್ರೇಮ ಪ್ರದರ್ಶನಗಳು ಇಂದಿರೆಯನ್ನು ತನ್ನ ಸಿದ್ಧಾಂತದಿಂದ ಚ್ಯುತಳನ್ನಾಗಿ ಮಾಡಿದುವು. ಇಂದಿರೆಯು ಆರಂಭದಲ್ಲಿಯೇ ಎಡವಿ ಬಿದ್ದಳು!— ಪ್ಯಾರೇಲಾಲನ ವಶಳಾಗಿಬಿಟ್ಟಳು!!

ಸ್ತ್ರೀಯಾಗಲಿ, ಪುರುಷನಾಗಲಿ, ನಿಸರ್ಗಸಿದ್ಧವಾದ ಉಭಯ ಜಾತೀಯ ಆಕರ್ಷಣೆಯನ್ನು ಎಂದಿಗೂ ತಡೆಯಲಾರರು. ಇಂದಿರೆಯು ಆದರ್ಶವಾದಿಯೆನೋ ಸಹಜ— ಆದರೆ ಪ್ಯಾರೇಲಾಲನ ಆಕರ್ಷಣದೆದುರು ಆಕೆ ದುರ್ಬಲೆಯಾಗಿಯೇ ಉಳಿದಳು. ಪವಿತ್ರ ಪ್ರೇಮದಿಂದಾಗಿ ಆಕೆ ಪ್ಯಾರೇಲಾಲನೊಂದಿಗೆ ಸಿವಿಲ್ ಮ್ಯಾರೇಜಿಗನುಸಾರವಾಗಿ ಮದುವೆಯಾಗಬಯಸಿದಳು.

ಪ್ಯಾರೇಲಾಲನ ಜೀವನದಲ್ಲಿ ಬನ್ಸೀಲಾಲನಿಗೆ ಜಿಹಾಸೆಯಿತ್ತು. ಅದರಿಂದಾಗಿ ಈ ಮದುವೆಗೆ ಅವನಾತಂಕವನ್ನು ಹೂಡಿದನು. ಆದರೆ ಇಂದಿರೆಯು ಸ್ವಚ್ಛಂದತೆಯ ಶಿಖರವನ್ನೇರಿದ್ದಳು. ತಂದೆಯನ್ನು ಗಣಿಸಲೇ ಇಲ್ಲ! ಆದರೆ ಕಿಶೋರನ ಸಹಾಯವಿಲ್ಲದೆ ಈ ಮದುವೆಯು ಸಾಗದೆಂತಿತ್ತು. ಇಂದಿರೆಯ ಈ ಸಾಹಸದಿಂದ ಕಿಶೋರನ ಎದೆ ಉರಿಯಹತ್ತಿತು. ಆದರೂ ಇಂದಿರೆಯನ್ನು ದುಃಖಿಯನ್ನಾಗಿ ಮಾಡಲು ಆತನಿಗೆ ಇಷ್ಟವಿರಲಿಲ್ಲ. ಅದುದರಿಂದ ಆ ವಿವಾಹಕ್ಕೆ ಅವನಡ್ಡಿಯನ್ನೊಡ್ಡಲಿಲ್ಲ! ಅಲ್ಲದೆ ಪ್ಯಾರೇಲಾಲನನ್ನು ಒಂದು ಆಪತ್ತಿನಿಂದ ರಕ್ಷಿಸಿ 'ಇಂದಿರೆಯನ್ನುಳಿದು ಇತರರನ್ನು ಸೋದರಿಯರಂತೆ ಕಾಣು!' ಎಂದು ಉಪದೇಶಿಸಿದನು. ಇದರಿಂದ ಪ್ಯಾರೇಲಾಲನ ಹೃದಯದಲ್ಲಿ ಒಂದು ತೆರನಾದ ಬೆಳಕು ಮೂಡಿತು. ಆದರೆ ಇಂದಿರೆಯ ವ್ಯಕ್ತಿಯಲ್ಲಿ ಪರಿವರ್ತನೆಯಾಗಲಿಲ್ಲ. ಸ್ವಾತಂತ್ರ್ಯದ ಹೆಮ್ಮೆ ತಲೆಗಡರಿತ್ತಾಕೆಗೆ! ಪ್ಯಾರೇಲಾಲನ ಪ್ರೇಮ— ಐಶ್ವರ್ಯ, ಗೃಹವ್ಯವಹಾರಗಳನ್ನು ಆಕೆ ಹಾಳುಮಾಡುತ್ತಿದ್ದಳು. ಈ ಮಧ್ಯೆ ಪ್ಯಾರೇಲಾಲನ ಪೂರ್ವವೈರಿ 'ಸ್ಮಿತ್'ನು ಇಂದಿರೆಯನ್ನು ಇನ್ನಷ್ಟು ಉನ್ಮತ್ತೆಯನ್ನಾಗಿಮಾಡಿದನು. ಒಂದು ದಿನ ಒಂದು ಸಾಧಾರಣ ಕಾರಣದ ಸಲುವಾಗಿ ಇಂದಿರೆಯು ಪ್ಯಾರೇಲಾಲನ ಹತ್ತಿರಜಗಳವಾಡಿ 'ಸ್ಮಿತ್'ನೊಂದಿಗೆ ನಡೆದು ಬಿಟ್ಟಳು!

ಒಂದು ದಿನ 'ಸ್ಮಿತ್'ನು ಇಂದಿರೆಯ ಮೇಲೆ ಅತ್ಯಾಚಾರ ಮಾಡಹೋದಾಗ ಕುಶಲ ಕಿಶೋರನು ಇಂದಿರೆಯ ಮಾನವನ್ನು ರಕ್ಷಿಸಿದನು. ಸ್ಮಿತ್ ಕಿಶೋರರ ಜಗಳದಲ್ಲಿ 'ಸ್ಮಿತ್'ನು ತನ್ನ ಗುಂಡಿನೇಟಿನಿಂದಲೇ ತಾನು ಸತ್ತನು. ಕೊಲೆಯ ಹೊಣೆಗಾರಿಕೆಯನ್ನು ಕಿಶೋರನೇ ವಹಿಸಿಕೊಂಡನು!

ಸ್ತ್ರೀ ಸ್ವಾತಂತ್ರ್ಯವು ಮಿತಿಮೀರಿದರೆ ಕೊನೆಗೆ ಭೀಷಣ— ಘೋರಪರಿಣಾಮವನ್ನು ಮಾಡುವುದೆಂದು ಇಂದಿರೆಗೆ ಈಗೀಗ ತಿಳಿಯಹತ್ತಿತು. ಪಶ್ಚಾತ್ತಾಪಪಟ್ಟು ತನ್ನ ತಂದೆಯೆಡೆಗೆ ಹೋದಾಗ ಬನ್ಸೀಲಾಲನು ಆಶ್ರಯ ಕೊಡಲು ನಿರಾಕರಿಸಿದನು. ಆದರೆ ಮಮತೆಯ ಮಾತೆಯು ಆಶ್ರಯವನ್ನೀಯುವಳು.

ಸ್ಮಿತ್‌ನ ಕೊಲೆಯ ವಿಚಾರವಾಗಿ ಕೋರ್ಟಿನಲ್ಲಿ ದಾವೆಯು ಹೂಡಲ್ಪಟ್ಟಿತು. ಕಿಶೋರನ ವಕಾಲತ್ತನ್ನು ಬನ್ಸಿಲಾಲನೇ ವಹಿಸಿಕೊಂಡನು. ತನ್ನ ಪುತ್ರಿಯು ಪಿಂಜರಿನಲ್ಲಿ ನಿಂತಾಗ ಬನ್ಸಿಲಾಲನೇ ಹೀಗೆಂದು ಉದ್ಘೋಷಿಸಿದನು:— "ಈ ಹತ್ಯೆಗೆ ಹೇತುವೇ ನಾನು. ಆರ್ಯಸಂಸ್ಕೃತಿಗೆ ತಿಲಾಂಜಲಿಯನ್ನಿತ್ತು ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸಲು ಬಿಟ್ಟುದುದರಿಂದಲೇ ಇಂದಿರೆಯು ಕುಲಗೇಡಿಯಾದವಳು. ಕೊಲೆಯಾಯಿತು! ಆದುದರಿಂದ ಇದರ ಮೂಲಕಾರಣ ನಾನು! ತಪ್ಪುಗಾರ ನಾನು!!" ಹೀಗೆಂದವನೇ ಬನ್ಸೀಲಾಲನು ಮೂರ್ಛಿತರಾದನು!

ಅತ್ತ ಪ್ಯಾರೇಲಾಲನು ಗಡಿನಾಡಿನ ಯುದ್ಧದಲ್ಲಿ ಸಾಯಲು ನಿಶ್ಚಯಿಸಿದನು. ಇದನ್ನು ತಿಳಿದು ಇಂದಿರೆಗೆ ದುಃಖವಾಯಿತು— ಭಾರೀ ದುಃಖ! "ಎಲ್ಲಿ ಪ್ರೇಮವಿದೆಯೋ ಅಲ್ಲಿ ಈ ಸ್ವಾಧೀನತೆಗಿಂತಲೂ ಸುಖಕರದ ಪರಾಧೀನತೆಯಿದೆ." ಎಂಬ ಪಾಠವನ್ನು ಕಲಿತಳಾಕೆ! ಆಕೆ ಕೂಡಲೇ ತನ್ನ ಪತಿಯನ್ನು ಸೇರಲು ಧಾವಿಸಿದಳು. ಆದರೆ ಅದಕ್ಕೆ ಮೊದಲೇ ಪ್ಯಾರೇಲಾಲನು ಮೃತ್ಯುವಿನೆಡೆಗೆ ಓಡಿಬಿಟ್ಟಿದ್ದನು! ಮುಂದೇನಾಗುವುದೆಂಬುದನ್ನು ಚಿತ್ರದಲ್ಲಿ ನೋಡಿರಿ.

ESTD. 1906

CANARA BANK LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC, ETC.

WANTED

Candidates for Telegraph and station Master class. Allowance Rs. 28. Uniform, passage and quarter free. Service essential. Rules and Entrance from on annas eight. Director, Royal Telegraph and Ry. Duties College, Bombay 14.

ರೋಲ್ಡ್‌ಗೋಲ್ಡ್, ನಿಕ್ಕಲ್ ಬೆಳ್ಳಿಯ, 9 ಕ್ಯಾರಟಿನ ಗಟ್ಟಿ ಚಿನ್ನದ ರಿಸ್ಟ್‌ವಾಚುಗಳು, ರೈಲ್ವೆ ಟಾಯಂ ಪಾಕೆಟ್ ವಾಚು ಮತ್ತು ಟಾಯಂಪೀಸು ಗ್ಯಾರಂಟಿ ಇದೆ.
ನಮ್ಮ ಕ್ಯಾಟಲಾಗು ವಿವರಕ್ಕೆ ಬರೆಯಿರಿ.
The Manager,
The Silver Jubilee Watch Co.,
Post Box No. 571, BOMBAY.

ಸುಸಮಯ! ಹಣ ಸಂಪಾದಿಸಿರಿ!!

ಫೋರ್ಮುಗಳನ್ನು ಕಂಪೆನಿಯೇ ಬಟವಾಡೆಮಾಡುವುದು.

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ವೆಚ್ಚಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹನೀಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್
ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು, ಮುಜಫ್ಫರ್ ಪೋರಿನ ತೋಟ ಹೂಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

Bihar Nursery,
P. O. Bihar
Nursery (Darbhanga) BIHAR

ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್ ರೀಡ್ಡಿನ ಕೈ, ಮತ್ತು ಕಾಲು ಹಾರ್ಮೋನಿಯಮುಗಳು ಬೇಕಾದ ನಮೂನೆಯಲ್ಲಿ ದೊರೆಯುತ್ತವೆ.

ಕ್ರಯದ ಪಟ್ಟಿಗೆ ಬರೆಯಿರಿ.



ಎಲ್ಲಾ ತರದ ಗಾಯನ ಸಾಮುಗ್ರಿಗಳನ್ನು ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುತ್ತದೆ.

ವಿಶೇಷ ಮಾಹಿತಿಗೆ ಬರೆಯಿರಿ.

Proprietor: **ATTAVAR BABOO,**
Vasanthi Harmonium Works,
Hampankatta, Mangalore

ವಿ. ಸೂ ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪ್ಪೋ, ಚರ್ಚ್‌ರೋಡ್, ಉಡಪಿ ಇಲ್ಲಿ ಮಾರಲ್ಪಡುತ್ತವೆ

ಅಚ್ಚಿನಲ್ಲಿದೆ! ? ಅಚ್ಚಿನಲ್ಲಿದೆ!

ನವಯುವಕರನ್ನು ಮುಗ್ಧಗೊಳಿಸುವ ಮತ್ತು ವಾಚಕರ ಮನಸ್ಸನ್ನು ಸೂರೆಮಾಡುವ

ಮಿಸ್ ಲಲಿತ

ಮತಾ ವಣಿ ಲಲಿತಾ ರಮಣಿ!

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು ಎತ್ತಿ ತೋರಿಸುವ ಪುಸ್ತಕವು.

ಹೊರಡಲಿರುವ ತಾರೀಕನ್ನು ಗಮನಿಸಿರಿ!

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಬರೆದವರು: ಯಂ. ವಿ. ಪುತ್ರಾನ್

ಕೂಡಲೇ ಬರೆಯಿರಿ. ಬೆಲೆ 0—8—0

ವಿಳಾಸ — M. V. Puthran,
C/o 34, Bomanji Lane, *2nd Floor, Fort, BOMBAY*

---

15 ವರ್ಷಗಳ ಅನುಭವ! ಗ್ಯಾರಂಟೀ ಕೆಲಸ!!

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು ಪ್ರಸಿದ್ಧರಾಗಿರುವ

ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕನ್ನಡಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು

ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ ಕ್ಷ ಮಾತನಾಡಿರಿ

ಗಣಪತಿ ರಾವ್, ಪೈಂಟರ್,
ಸೋದೆ ಮಠದ ಲೇನು - - **ಉಡುಪಿ, ದ. ಕ.**

THE
MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪುಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಮಾಸ] **ವಿಶ್ವವಾಣಿ** [ಪತ್ರಿಕೆ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ: ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... .	ರೂ. ೩—೮—೦
,, ,, (೬ ತಿಂಗಳಿಗೆ)	... .	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ— ವ್ಯವಸ್ಥಾಪಕ—**'ವಿಶ್ವವಾಣಿ,'**
'ಅನ್ನಪೂರ್ಣ', ವಿಶ್ವೇಶ್ವರಪುರಂ, **ಬೆಂಗಳೂರು ನಗರ.**
ಉಡಪಿ ಏಜೆಂಟರು—**ನವಭಾರತ ಬುಕ್ ಡಿಪ್ಪೊ, ಉಡುಪಿ.**

HOTEL INDIANA
Bar and Restaurant

ಮಂಗಳೂರಿಗೆ ಹೋದಲ್ಲಿ ಇಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ?

ಹೋಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನ್‌ಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ ಸೌಕರ್ಯಗಳಿಂದ ನಿಮ್ಮನ್ನಿದಿರುಗೊಳ್ಳುತ್ತವೆ.

ಹೊಸ ಆಡಳಿತ! ಹೊಸ ವ್ಯವಸ್ಥೆ!

ಎಲ್ಲವೂ ಹೊಸತೇ ಆಗಿ

ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ.

Proprietor,
HOTEL INDIANA
Hampankatta, Mangalore

ಧರ್ಮಾರ್ಥ ಬಹುಮಾನಗಳು



1—0—0ಗೆ!

-·- ಯಾರಿಗೆ? -·-

ರೂಪಾಯಿ 1–0–0 ಕೊಟ್ಟು 36 ಸೀಸೆ ಒಟ್ಟೊರೋಸ್ಟ್ ಅಥವಾ 36 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

ಇನಾಮುಗಳ ವಿವರ:— 3 ಚೆಮ್ಮಿ ರಿಸ್ಟ್‌ವಾಚುಗಳು, 1 ರೈಲ್ವೆಟಾಯಂ ಚೆಮ್ಮಿ ಪಾಕೆಟ್ ವಾಚು, 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟನ್ ಪೆನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿ ಮಫ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡು ಗಿಲ್ಟ್ ಉಂಗುರ, 600 ಅಡಿ ದೂರಕ್ಕೆ ಪ್ರಕಾಶ ಬೀರುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (10 ವರುಷ ಗ್ಯಾರಂಟಿ) **ಪ್ಯಾಕಿಂಗ್ ಮತ್ತು ಪೋಸ್ಟೇಜು** 0 10 0. **ಇಂದೇ ಆರ್ಡರು ಕೊಡಿರಿ.**

EASTERN TRADING COY.,
Post Box No. 12204, CALCUTTA, (N. Y.)

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ನಗರಸಭೆ

ಕಳೆದ ತಾ. ೫ರಲ್ಲಿ ಮಂಗಳೂರು ಪೌರ ಸಭೆಯು ಮಾನ್ಯ ಡಾ ಕೆ. ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಪ್ರಶ್ನೋತ್ತರಗಳು ಬಹು ಸ್ವಾರಸ್ಯವಾಗಿದ್ದುವು. ನೀರಿನ ಸರಬರಾಯಿಯ ಯೋಜನೆಯು ಪೂರೈಸುವ ವರೆಗೆ ಇದ್ದ ಸಾರ್ವಜನಿಕ ಬಾವಿಗಳನ್ನು ದುರಸ್ತಿ ಪಡಿಸಿ ಜನರಿಗೆ ನೀರನ್ನೊದಗಿಸುವುದು ಅಗತ್ಯವೆಂದು ಶ್ರೀ|ಶ್ರೇಷ್ಠರ|ಸೂಚನೆಗೆ, ಮಳೆಗಾಲ ಬರುವಾಗ ನೀರಿನ ಪ್ರಶ್ನೆಯನ್ನು ನಗರಸಭೆಯು ಎತ್ತುವುದೆಂದೂ, ನೀರಿಲ್ಲದ ಕಾಲದಲ್ಲಿ ನೀರು ಸರಬರಾಯಿಯ ಆಲೋಚನೆ ಮಾಡುವುದು ಶೋಚನೀಯವೆಂದೂ ಡಾ| ಆಡಪರು ಸೂಚಿಸಿದರು. ಈ ವರ್ಷ ಮಳೆಗಾಲ ಮುಗಿದೊಡನೆ ನೀರಿನ ಸರಬರಾಯಿಯ ಆಲೋಚನೆ ಮಾಡುವುದಾಗಿ ಅಧ್ಯಕ್ಷರು ಹೇಳಿದರು. ದೇಶಭಕ್ತ ಕಾರ್ನಾಡು ಸದಾಶಿವರಾಯರ ಚಿತ್ರವನ್ನಿಡಲು ರೂ ೭೫ನ್ನು ಮಂಜೂರು ಮಾಡಲು ಸರಕಾರವು ನಿರಾಕರಿಸಿದ್ದರಿಂದ ಆ ಪ್ರಶ್ನೆಯನ್ನು ಮುಂದರಿಸಿಡಬೇಕೆಂದಾಯಿತು. ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ಟ್ರಾನ್ಸ್‌ಫರ್ ವಿಷಯದಲ್ಲಿ ಶ್ರೀ| ರಂಗರಾಯರು ಹಲವು ಪ್ರಶ್ನೆಗಳನ್ನು ಹಾಕಿದರು. ಪೆಂಟ್ಲೆಂಡ್ ಪೇಟೆಯ ಶಾಲಾ ಹೆಡ್ ಮಿಸ್ಟ್ರೆಸ್ ಮೇಲೆ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟ್ರೆಸ್ ರಿಮಾರ್ಕು ಬರೆದಿದ್ದರೂ ಆ ಉಪಾಧ್ಯಾಯಿನಿಯನ್ನು ಹಲವು ವರ್ಷಗಳಿಂದಲೂ ಒಂದೇ ಕಡೆ ಇರಿಸಲು ಕಾರಣವೇನೆಂದು ಕೇಳಿದ್ದಕ್ಕೆ ಕಮಿಶನರು ಉತ್ತರ ಕೊಡುತ್ತಾ, ಟ್ರಾನ್ಸ್‌ಫರ್ ಮಾಡಕೂಡದೆಂದು ಸಭೆಯವರ ಅಭಿಪ್ರಾಯ. ಆದ್ದರಿಂದ ಯಾವ ಟ್ರಾನ್ಸ್‌ಫರನ್ನೂ ಮಾಡಲಿಲ್ಲ. ಪ್ರಕೃತ ಆ ಶಾಲೆಯ ಉಪಾಧ್ಯಾಯಿನಿಯರ ವಿಷಯ; ಅಲ್ಲಿ ತಪ್ಪಿತಸ್ಥರಾರೆಂದು ಹೇಳುವುದು ಕಷ್ಟವಾಗಿದೆ. ಆದ್ದರಿಂದ ಎಲ್ಲರನ್ನೂ ಅಲ್ಲಿಂದ ಟ್ರಾನ್ಸ್‌ಫರ್ ಮಾಡುವುದು ಒಂದೇ ಉಪಾಯವೆಂದು ತೋರುತ್ತದೆ, ಎಂದರು. ಅವಿಧೇಯತೆಯ ತಪ್ಪುಕಂಡು ಬಂದಲ್ಲಿ ಮಾತ್ರ ಉಪಾಧ್ಯಾಯರನ್ನು ಟ್ರಾನ್ಸ್‌ಫರ್ ಮಾಡಬೇಕೆಂದೂ, ಉಪಾಧ್ಯಾಯಿನಿಯರನ್ನು ಅವರವರ ಮನೆಗಳ ಹತ್ತಿರದ ಶಾಲೆಗಳಿಗೆ ಟ್ರಾನ್ಸ್‌ಫರ್ ಮಾಡುವುದು ಅಗತ್ಯವೆಂದೂ ಶ್ರೀ| ಶ್ರೇಷ್ಠರು ಹೇಳಿದರು.

ಆನಂತರ ಹೊಯಿಗೆ ಬಜಾರ್ ಮಾರ್ಕೇಟಿಗೆ ತೆಗೆದುಕೊಂಡ(ಅಕ್ವೈಯರ್) ಸ್ಥಳದ ವಿಷಯ ಚರ್ಚೆ ನಡೆಯಿತು. ಮೊದಲು ತೆಗದುಕೊಂಡ ಸ್ಥಳವನ್ನು ಅದರ ಮಾಲೀಕರು ತಮಗೆ ಬೇಕೆಂದು ಹೇಳಿದ್ದರಿಂದ ಅವರಿಗೇನೇ ಕೊಡಬೇಕೆಂದೂ, ಎರಡನೆಯ ಸ್ಥಳವನ್ನು ಶಿಫಾರಸು ಮಾಡುವಂತೆ ಕಲೆಕ್ಟರರನ್ನು ಕೇಳಿಕೊಳ್ಳಬೇಕೆಂದೂ ಕೆಲವರು ಸೂಚಿಸಿದರು. ಅಕ್ವೈಯರ್ ಮಾಡಿ, ಕಂಟ್ರಾಕ್ಟು ಮುಗಿದ ಮೇಲೆ ಅದನ್ನು ಬೇಡವೆನ್ನುವುದಕ್ಕಾಗುವುದಿಲ್ಲವೆಂದು ಶ್ರೀ| ಕಾರಂತರು ಹೇಳಿದರು. ಇದೇ ಅಭಿಪ್ರಾಯವನ್ನು ಶ್ರೀ| ಬಾಳಿಗರೂ ಸೂಚಿಸಿದರು. ಕೊನೆಗೆ ಕಲಕ್ಟರರನ್ನು ನೋಡಿ ವಿಷಯಗಳನ್ನು ಅವರಿಗೆ ತಿಳಿಸಿ, ಅವರ ಅಭಿಪ್ರಾಯವನ್ನು ಬದಲಾಯಿಸುವ ಹಾಗೆ ಮಾಡಲು ಅಧ್ಯಕ್ಷರು, ಉಪಾಧ್ಯಕ್ಷರು, ಮಿ. ಶ್ರೇಷ್ಠರು, ರಾ. ಬಿ. ವೆಂಕಟರಾಯರು ಇಷ್ಟು ಜನರ ಒಂದು ಶಿಷ್ಟ ಮಂಡಲವು ಹೋಗಬೇಕೆಂದು ಮಿ| ಪಯಸರ ಠರಾವು. ಮಿ| ರೇಗೋ (ವಾರ್ಡ್ ಕೌನ್ಸಿಲರ್) ಇದನ್ನು ಪ್ರತಿಭಟಿಸಿದರು. ಮತ ತೆಗೆದುಕೊಳ್ಳಲಾಗಿ ಠರಾವಿಗೆ ೧೧ ಮತಗಳೂ ವಿರೋಧವಾಗಿ ೧೧ ಮತಗಳೂ ಬಿದ್ದುವು. ಅಧ್ಯಕ್ಷರು ಮತಕೊಟ್ಟವರ ಹೆಸರುಗಳನ್ನು ಬರೆಯ ತೊಡಗಿದರು. ಆಗ ಠರಾವಿಗೆ ೧೨ ಮತಗಳು ದೊರೆತವು ಇದಕ್ಕೊ ಶ್ರೀ| ಕಾರಂತರು ನ್ಯಾಯವಲ್ಲವೆಂದು ಹೇಳಿದರು. ಶ್ರೀ ಮಾಧವರಾಯರು ಶ್ರೀ| ಕಾರಂತರಿಗೆ ತಿಳುವಳಿಕೆಯಿಲ್ಲವೆಂದೂ, ತಮ್ಮ ಅಭಿಪ್ರಾಯದಲ್ಲಿ ಮೊದಲು ಓಟು ಕೊಡದವರು ಎರಡನೇ ಸಲ ಕೊಡಬಹುದೆಂದೂ ಕೋಪದಿಂದ ಹೇಳಿದರು. 'ನಿಮ್ಮ ವೈಯಕ್ತಿಕ ಅಭಿಪ್ರಾಯ ಬೇಡ; ನಮಗೂ ವೈಯಕ್ತಿಕ ಅಭಿಪ್ರಾಯವಿದೆ ಅಧ್ಯಕ್ಷರ ನಿರ್ಧಾರವು ಈಗ ಬೇಕು' ಎಂದು ಡಾ| ಆಡಪರು ಹೇಳಿದರು. ಅಧ್ಯಕ್ಷರು ತಾವು ಹೆಸರು ಬರೆಯಲು ಕಾರಣವೇನೆಂಬುದನ್ನು ಸೂಚಿಸಿದರು. ಆದರೆ ಸಭಿಕರು ಅದನ್ನು ಲಕ್ಷಿಸಲಿಲ್ಲ. 'ನಿಮ್ಮ ನಿರ್ಧಾರವೇನೆಂದು' ಡಾ. ಆಡಪರು ಕೇಳಿದರು. ತಮಗೆ ಸಮಯ ಬೇಕೆಂದರು ಅಧ್ಯಕ್ಷರು. ಹಾಗಾದರೆ ಈ ಸಭೆಯ ಕಾರ್ಯವು ಇಲ್ಲಿಗೆ ನಿಲ್ಲಿಸಲ್ಪಡಲಿ ಎಂದು ಡಾ| ಆಡಪರು ಸೂಚಿಸಿದ ಮೇಲೆ ಸಭೆಯು ಬರಖಾಸ್ತಾಯಿತು.

ಬೀಡಿ ಕೆಲಸಗಾರರಿಗೆ ಸ್ಟಡಿ ಕ್ಲಾಸ್

ಕಳೆದ ತಾ. ೪ನೇ ಬಾನುವಾರ ಶ್ರೀಮತಿ ಕಮಲಾದೇವಿಯವರು ಬೀಡಿ ಕೆಲಸಗಾರರ ಬಗ್ಗೆ ಒಂದು ಸ್ಟಡಿ ಕ್ಲಾಸನ್ನು ಆರಂಭ ಮಾಡಿದರು. ಬಂಡವಾಳಸ್ಥರ ಪತನ, ಕೂಲಿಗಾರರ ಸಂಘಟನೆ ಮೊದಲಾದ ವಿಷಯಗಳನ್ನೆತ್ತಿ ಭಾಷಣ ಮಾಡಿದರು. ಪ್ರತಿ ಭಾನುವಾರವೂ ಈ ಕ್ಲಾಸು ನಡೆಯುವುದು.

ಮುಸ್ಲಿಮರೊಡನೆ ಸಂಬಂಧ

ಕಾಂಗ್ರೆಸ್ ಮತ್ತು ಮುಸ್ಲಿಮರೊಡನ ಸಂಬಂಧ ಬೆಳೆಸುವ ಉದ್ದೇಶದಿಂದ ಶ್ರೀ| ಕಮಲಾ ದೇವಿಯವರು ಕೆಲ ಮುಸಲ್ಮಾನ ಮುಂದಾಳುಗಳನ್ನು ಕರೆಸಿ ಅವರೊಡನೆ ಸಂಭಾಷಣೆ ನಡೆಸಿ ಅವರ ಅಭಿಪ್ರಾಯಗಳನ್ನು ತಿಳಿದರು. ಅವರಿಗಿದ್ದ ಸಂಶಯಗಳನ್ನು ತಿಳಿದು ಅವುಗಳನ್ನು ನಿವಾರಿಸಿದರು. ಆನಂತರ ಮುಸಲ್ಮಾನರು ಕಾಂಗ್ರೆಸಿಗೆ ಸೇರಲು ಅಡ್ಡಿಯಿಲ್ಲವೆಂಬ ಅಭಿಪ್ರಾಯವು ತೋರಿಬಂತು. ಇನ್ನು ಮುಸಲ್ಮಾನ ಧುರೀಣರನ್ನು ಈ ಜಿಲ್ಲೆಯಲ್ಲಿ ಪ್ರವಾಸ ಮಾಡುವಹಾಗೆ ಕೇಳಿಕೊಳ್ಳಬೇಕೆಂಬ ಅಭಿಪ್ರಾಯವು ಸಹ ಮಾಡಲ್ಪಟ್ಟಿತು.

ಸಮತಾವಾದಿ ಪಕ್ಷದ ಕಾರ್ಯಕಾರಿ ಮಂಡಲ

ಕಳೆದ ತಾ. ೫ರಲ್ಲಿ ಕಾಂಗ್ರೆಸ್ ಸಮತಾವಾದಿ ಸಂಘದ ಜನರಲ್ ಬಾಡಿ ಸಭೆಯು ಜರಗಿ, ಶ್ರೀ|ಗಳಾದ ಗೋವಿಂದನ್ ಮತ್ತು ವಿಟ್ಠಲ ಹೆಗ್ಗಡೆಯವರುಗಳು ಕಾರ್ಯದರ್ಶಿಗಳಾಗಿಯೂ, ಶ್ರೀ| ಕೇಶವ ಕಾಮತರು ಕೋಶಾಧ್ಯಕ್ಷರಾಗಿಯೂ ಮತ್ತು ೧೧ ಮಂದಿ ಇತರರು ಕಾರ್ಯಕಾರಿ ಮಂಡಲಿಯ ಸದಸ್ಯರಾಗಿಯೂ ಆರಿಸಲ್ಪಟ್ಟರು. ಪ್ರಕೃತ ಆಗಬೇಕಾದ ಕಾರ್ಯಕ್ರಮದ ಕುರಿತು ನಿರ್ಧಾರವಾಯಿತಲ್ಲದೆ, ಒಂದು ಪ್ರಚಾರ ಸಮಿತಿಯೂ ಏರ್ಪಟ್ಟಿತು. ತಿಂಗಳ ಕೊನೆ ಭಾನುವಾರ ಸಭೆಗಳನ್ನು ಜರಗಿಸಬೇಕೆಂದೂ ಒಂದು ಸ್ಟಡಿ ಕ್ಲಾಸ್ ತೆರೆಯಬೇಕೆಂದೂ ನಿರ್ಧಾರಗಳಾದವು.

ಕಾಲೇಜ್ ಯೂನಿಯನಿಗೆ ಚುನಾವಣೆ

ಸ್ಯೆಂಟ ಆಲ್ಯೊಸಿಯಸ್ ಕಾಲೇಜ್ ಯೂನಿಯನಿನ ಕಾರ್ಯದರ್ಶಿ ಮತ್ತು ಉಪಕಾರ್ಯದರ್ಶಿ ಸ್ಥಾನಗಳಿಗೆ ಚುನಾವಣೆಯು ತಾ. ೭ರಲ್ಲಿ ನಡೆಯಿತು. ಕಾಲೇಜಿನಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ "ಪ್ರೋಗ್ರೆಸಿವ್ ಪಾರ್ಟಿ"ಯ ಸ್ಥಾಪಕರೂ, ನಾಯಕರೂ ಆದ ಶ್ರೀ. ಯು. ಜಿ ರಾಯರು ೩೧೯ ಮತಗಳನ್ನು ಪಡೆದು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಇವರ ಪ್ರತಿಸ್ಪರ್ಧಿಗಳಾದ ಮಿ| ಎಸ್. ಜಿ. ರೆಬೆರೊರವರಿಗೆ ೬೯ ಮತಗಳು ದೊರೆತವು. ಉಪಕಾರ್ಯದರ್ಶಿಸ್ಥಾನಕ್ಕೆ ಪ್ರೋಗ್ರೆಸಿವ ಪಕ್ಷದ ಪ್ರತಿನಿಧಿಗಳಾದ ಮಿ| ಸಾಮ್ಯುಲ್ ಕ್ಯಾಸ್ಟಿಲಿನೋರವರು ೩೧೯ ಮತಗಳನ್ನು ಪಡೆದು ಆರಿಸಲ್ಪಟ್ಟರು. ಇವರ ಪ್ರತಿಸ್ಪರ್ಧಿಗಳಾದ ಮಿ| ಭಗವಾನ್ ದಾಸರಿಗೆ ಬರೇ ೫೨ ಮತಗಳು ದೊರೆದುವು. ರಾಜಕೀಯ ತತ್ವಗಳ ಮೇಲೆ ಚುನಾವಣೆ ನಡೆದುದು ಇದೇ ಮೊದಲು. ಎರಡು ಪಕ್ಷಗಳವರೂ ಮತ ಸಂಪಾದನೆಗಾಗಿ ಬಹಳ ಚಳವಳ ಹೂಡಿದ್ದರು. ಬಹುಮತ ಸರಕಾರ ಪದ್ಧತಿಯ ರೀತಿಯಿಂದ ಯೂನಿಯನಿನ ಕೆಲಸ ನಡೆಸಬೇಕೆಂದು ಶ್ರೀ| ರಾಯರ ಪಕ್ಷದವರ ಆಲೋಚನೆ.

ಜಿಲ್ಲಾ ವಿದ್ಯಾರ್ಥಿ ಸಂಘ ಸ್ಥಾಪನೆ

ಪ್ರೊ. ವಿ. ಜಿ. ಜೋಸೆಫ್‌ರವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೭ರಲ್ಲಿ ಮಂಗಳೂರಿನ ಕಾಲೇಜುಗಳ ಮತ್ತು ಹೈಸ್ಕೂಲುಗಳ ವಿದ್ಯಾರ್ಥಿಗಳು ಸಭೆ ಸೇರಿ ಜಿಲ್ಲಾ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸುವ ವಿಷಯವಾಗಿ ಪರ್ಯಾಲೋಚಿಸಲ್ಪಟ್ಟಿತು. ಒಂದು ವಾರದ ವರೆಗೆ ಸದಸ್ಯರನ್ನು ಸೇರಿಸಬೇಕೆಂದೂ, ಸಪ್ಟಂಬರ ತಿಂಗಳಲ್ಲಿ ಜಿಲ್ಲಾ ವಿದ್ಯಾರ್ಥಿ ಸಮ್ಮೇಳನವನ್ನು ಜರಗಿಸಬೇಕೆಂದೂ ನಿರ್ಧಾರವಾಯಿತು. ಈ ಸಭೆಯಲ್ಲಿ ಶ್ರೀಮತಿ ಕಮಲಾದೇವಿಯವರು ಭಾಗ ವಹಿಸಿದ್ದರು.

ಡಿ. ಸಿ ಮಿಶನ್

ಶ್ರೀ| ಅಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಡಿ. ಸಿ. ಮಿಶನಿನ ಸಭೆಯು ತಾ. ೧೦ರಲ್ಲಿ ಜರಗಿತು. ಶ್ರೀ| ಸೂರ್ಯನಾರಾಯಣ ರಾಯರು ಗತ ವರ್ಷದ ವರದಿಯನ್ನೂ, ಲೆಕ್ಕಪತ್ರವನ್ನೂ ಸಭೆಯ ಮುಂದಿರಿಸಿದರು. ಅದು ಸ್ವೀಕರಿಸಲ್ಪಟ್ಟಿತು. ಮುಂದಿನ ವರ್ಷದ ಬಜೆಟ್ ಅಂದಾಜು ಸ್ವೀಕೃತವಾಯಿತು.

ರೈತರ ಸಭೆ

ಬರುವ ತಾ. ೧೮ರಲ್ಲಿ ರೈತರ ಪರವಾಗಿ ಕೆಲಸ ಮಾಡುವವರ ಒಂದು ಸಭೆಯು ಜರಗುವುದೆಂದೂ, ಆ ದಿವಸ ಜಿಲ್ಲಾ ರೈತರ ಸಂಘವನ್ನು ಸ್ಥಾಪಿಸುವ ಉದ್ದೇಶವಿದೆಯೆಂದೂ ಶ್ರೀಮತಿ ಕಮಲಾದೇವಿಯವರು ತಿಳಿಸುತ್ತಾರೆ.

ನಗರ ಕಾಂಗ್ರೆಸ್ ಸಮಿತಿ

ಮಂಗಳೂರು ಟೌನ್ ಕಾಂಗ್ರೆಸ್ ಚುನಾವಣಾ ಕಮಿಟಿಯವರು ತಾ ೮ರಲ್ಲಿ ಸಭೆ ಸೇರಿ ಅರ್ಜಿ ಸ್ವೀಕರಿಸುವ ಸಮಯವನ್ನು ಈ ತಿಂಗಳ ಅಂತ್ಯದ ವರೆಗೆ ಮುಂದರಿಸಿದರು. ಪ್ರತಿಯೊಬ್ಬ ಅರ್ಜಿದಾರನೂ ತನ್ನ ಡಿಪಾಜಿಟಿನಂದು ರೂ ೧೦ನ್ನು (ಆರಿಸಲ್ಪಡದಿದ್ದಲ್ಲಿ ಸಹ) ಸಮಿತಿಗೆ ಕೊಡಬೇಕೆಂದು ನಿರ್ಧಾರವಾಯಿತು. ಸಭೆಗೆ ಓರ್ವ ಮುಸ್ಲಿಂ ಗೃಹಸ್ಥನನ್ನೂ ಇನ್ನಿಬ್ಬರು ಕ್ರೈಸ್ತ ಗೃಹಸ್ಥರನ್ನೂ ಸೇರಿಸಲಾಯಿತು.

ಜಿಲ್ಲಾ ಹಿಂದೀ ಪ್ರಚಾರ ಸಭೆ

ತಾ. ೯ರಲ್ಲಿ ಕೆನರಾ ಹೈಸ್ಕೂಲಿನಲ್ಲಿ, ಮಿ. ಜೆ ಎ. ಸಾಲ್ಡಾನರ ಅಧ್ಯಕ್ಷತೆಯಲ್ಲಿ ಜರಗಿದ ಜಿಲ್ಲಾ ಹಿಂದೀ ಪ್ರಚಾರ ಸಭೆಯಲ್ಲಿ, ಪರೀಕ್ಷೆಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆಗನುಸಾರವಾಗಿ ಪ್ರಚಾರಕರಿಗೆ ವೇತನ ಕೊಡಬೇಕೆಂದೂ, ವರ್ಷಕ್ಕೆ ರೂ. ೨ನ್ನು ತಿಂಗಳೊಂದರ ಆ. ೪ ರಂತೆಯೂ ತರುವ ಎರಡು ತರಗತಿಯ ಸದಸ್ಯರನ್ನು ದಾಖಲು ಮಾಡಬೇಕೆಂದಾಯಿತು. ಅಧ್ಯಕ್ಷರು ಹಿಂದೀ ಪ್ರಚಾರಕ್ಕೆ ಮದ್ರಾಸಿನಲ್ಲಿ ಸ್ವಲ್ಪ ಹಣವನ್ನು ಸೇರಿಸಬೇಕೆಂದೂ ನಿರ್ಧಾರವಾಯಿತು.

ಶೋಚನೀಯ ಮರಣ

ತಾ. ೯ನೇ ದಿನ ರಾತ್ರಿ ಮಂಗಳೂರು ಟೌನ್ ಪೋಲೀಸ್ ಸ್ಟೇಶನಿನ ಬಳಿ ಒಂದು ಮನೆಯ ಗೋಡೆ ಬಿದ್ದು ಇಬ್ಬರು ಮಹಮ್ಮದೀಯರು ಮಡಿದರು. ಒಂದು ಮಗುವಿಗೆ ವಿಪರೀತ ಜಖಂ ಆಗಿ ಆಸ್ಪತ್ರೆಗೊಯ್ಯಲ್ಪಟ್ಟಿದ್ದಾಳೆ.

ಸಂಕುಶೆಟ್ಟಿ ಮರಣದ ಪ್ರತಿಧ್ವನಿ

ಡ್ರೈವರ್ ಸಂಕು ಶೆಟ್ಟಿಯ ಮರಣದ ವಿಚಾರಣೆಯಾಗುವ ವರೆಗೆ ಸ್ಟೇಶನ್ ಹೌಸ್ ಆಫೀಸರರಾದ ಮಿ| ರಾಮನವರು ಸಸ್ಪೆಂಡ್ ಮಾಡಲ್ಪಟ್ಟರು. ತಂತಿ ಮೂಲಕ ಸಸ್ಪೆನ್‌ಶನ್ ಹುಕುಮು. ವಿಚಾರಣೆ ನಡೆಯಿತು. ಡಿಪಾರ್ಟ್‌ಮೆಂಟಲ್ ವಿಚಾರಣ. ಈಗ ಮಿ| ರಾಮನವರು ತಪ್ಪಿತಸ್ಥರಲ್ಲವೆಂದು ಅವರನ್ನು ಪುನಃ ಕೆಲಸಕ್ಕೆ ತೆಗೆದು ಕೊಂಡಿದ್ದಾರೆ ಎಂದು ತಿಳಿದುಬರುತ್ತದೆ.

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India.	Charni Road, Bombay No. 4.

INSPECTORATE OFFICE AT:

1. Ottapalam Malabar District. 2. Central Station Road Trivandrum.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	...	...	Rs. 80,00,000
Life Funds Over	...	...	Rs. 68,00,000
Premium Income Over	...	...	Rs. 22,54,000
Interest Income	...	...	Rs 3,16,000
Claims Paid	...	...	Rs 5,75,000

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE Rs. 4,42,51,200

The Canara Banking Corporation Udipi Ltd.

(Incorporated in British India)

Estd. 1906

ANNOUNCEMENT.

We have great pleasure to inform the public and our constituents that our name has been included in the *Second Schedule of the Reserve Bank of India Act.*

Issued & Subscribed Capital	Rs. 350000/-
Paid up Capital	Rs. 288950/-
Reserves	Rs. 363573/-
Deposits	Rs. 3740722/-
TOTAL RESOURCES EXCEED	HALF A CRORE.

V. R. Kamath, B. A., LL.B.
Ag. Manager.

ಉಡುಪಿ, ಗುರುವಾರ, ತಾ. ೧೫–೭–'೩೭

ಕಾಂಗ್ರೆಸು ಅಧಿಕಾರ ಸ್ವೀಕರಿಸಿದುದೇಕೆ?

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮಂತ್ರಿಪದವಿ ಸ್ವೀಕಾರದಿಂದ ಯಾರಾದರೂ ಸಂತೋಷದಿಂದ ಉಬ್ಬಬೇಕಾಗಿಲ್ಲ. ಯಾಕೆಂದರೆ ಇದು ಹೆಗ್ಗಳಿಕೆಯ ವಿಷಯವಲ್ಲ. ಕಾಂಗ್ರೆಸಿನ ಸ್ವಾತಂತ್ರ್ಯ ಸಮರದ ಆದೊಂದು ಸ್ವರೂಪವಷ್ಟೇಯಲ್ಲದೆ ಅದರಿಂದೇನಾದರೂ ಕಾಂಗ್ರೆಸು ತನ್ನ ಗುರಿಯನ್ನು ಮುಟ್ಟುವಂತಾಗುವುದಿಲ್ಲ. ಇಂದೀಗ ಕಾಂಗ್ರೆಸಿನ ವಿಜಯೋತ್ಸವದ ಸಂದರ್ಭವಲ್ಲ. ಒಂದು ದೃಷ್ಟಿಯಲ್ಲಿ ಅಪಜಯದ, ಆತ್ಮಶೋಧನೆಯ, ಹೊಸ ನಿರ್ಧಾರದ ಸಂದರ್ಭವೆನ್ನಬಹುದು. ಆದರೆ ಈ ಅಪಜಯದ ಸಂದರ್ಭವನ್ನು ಕಾಂಗ್ರೆಸು ವಿಜಯ ಸಾಧನೆಗಾಗಿ ಉಪಯೋಗಿಸುವ ನಿರ್ಧಾರವಮಾಡಿರುವುದಷ್ಟೆ. ವೈರಿಯ ಮತ್ತು ತನ್ನ ಬಲಾಬಲಗಳನ್ನು ಚೆನ್ನಾಗಿ ಪರಿಶೀಲಿಸಿಕೊಂಡು ಮುಂದೊತ್ತುವಷ್ಟೇ ಸಮರ ಚಾತುರ್ಯವು ಆಗತ್ಯ ಬಂದಾಗ ಹಿಂದಡಿಯಿಡುವುದರಲ್ಲಿಯೂ ಇರುವುದು. ಮುಂದಿನ ವಿಜಯ ಸಾಧನೆಯ ದೃಷ್ಟಿಯಿಂದ ಅದು ಅವಶ್ಯವೂ, ಅನಿವಾರ್ಯವೂ ಆಗಿರಬೇಕು ಮಾತ್ರ. ಕಾಂಗ್ರೆಸಿಗೆ ಈಗಣ ದೇಶದ ಪರಿಸ್ಥಿತಿಯಲ್ಲಿ ತನ್ನ ಗುರಿಯಾಗಿರುವ ಸಂಪೂರ್ಣ ಸ್ವಾತಂತ್ರ್ಯ ಸಾಧನೆಗಾಗಿ ಕಾಯದೆ ಭಂಗ ಕರನಿರಾಕರಣವೇ ಮೊದಲಾದ ಉಗ್ರ ಕಾರ್ಯಕ್ರಮವನ್ನು ಕೈಕೊಳ್ಳುವುದು ಅನುಚಿತವೆಂದು ತೋರಿದೆ. ಆದುದರಿಂದ ಅದೀಗ ತನ್ನ ಸೇನೆಯನ್ನು ಸಜ್ಜುಗೊಳಿಸುವುದರಲ್ಲಿ, ಬಲವನ್ನು ಹೆಚ್ಚಿಸುವುದರಲ್ಲಿ ನಿರತವಾಗಬೇಕಾಗಿದೆ. ಅದಕ್ಕಾಗಿಯೇ ಅದು ತನ್ನ ಯುದ್ಧೋಪಾಯವನ್ನು ಬದಲಾಯಿಸಿದೆ. ಯಾವ ರೀತಿಯಿಂದಲಾದರೂ ವೈರಿಯ ಶಕ್ತಿ ಕುಂದಿಸಿ ತನ್ನ ಬಲ ಹೆಚ್ಚಿಸಿಕೊಳ್ಳುತ್ತಾ ಸಂದರ್ಭನೋಡಿ ವೈರಿಯ ಮೇಲೇರಿ ಹೋಗಿ ವಿಜಯ ಸಾಧಿಸುವುದು ಚತುರ ಹಾಗೂ ವಿವೇಕಪರ ಸಮರ ನೀತಿ. ಆದುದರಿಂದಲೇ ಕಾಂಗ್ರೆಸೀಗ ಕೌನ್ಸಿಲುಗಳಿಗೆ ಪ್ರವೇಶಿಸಿ ಆ ಮೂಲಕ ತನ್ನ ಕಾರ್ಯ ಸಾಧಿಸಲು ಕಂಕಣಬದ್ಧವಾಗಿರುವುದೇ ಹೊರತು ಕೌನ್ಸಿಲುಗಳ ಮೂಲಕವೇ ಸ್ವಾತಂತ್ರ್ಯ ಸಾಧಿಸುವ ಹೊಸ ವಿಶ್ವಾಸವುಳ್ಳುದಾಗಿರುವುದಿಲ್ಲ. ಕೆಲ ಮಂದಿ ಮಂದಗಾಮಿಗಳು ಹೆಗ್ಗಳಿಕೆಯಿಂದ ಹೇಳುವಂತೆ ಕಾಂಗ್ರೆಸು ಇಷ್ಟರವರೆಗಣ ತನ್ನ ಆಸಹಕಾರ ಧೋರಣೆಬಿಟ್ಟು ಇನ್ನು ಮುಂದೆ ಸರಕಾರದೊಡನೆ ಸಹಕಾರದ ಸೂತ್ರಬದ್ಧ ಚಳವಳದಲ್ಲಿ ನಿರತವಾಗುವುದೆಂದೇನೂ ಇಲ್ಲ.

ಕಾಂಗ್ರೆಸ್ ಪ್ರೆಸಿಡೆಂಟರು ಇದನ್ನು ಸ್ಪಷ್ಟಗೊಳಿಸಿರುವರು. ಅಧಿಕಾರ ಸ್ವೀಕಾರದಲ್ಲಿ ತತ್ವತಃ ತಪ್ಪೇನೂ ಇರುವುದಿಲ್ಲ. ಕ್ರಾಂತಿವಾದಿ ಮನೋವೃತ್ತಿಯವರು ಕೂಡಾ ಅಧಿಕಾರವನ್ನು ಎಂದಿಗೂ, ಯಾವ ರೀತಿಯಲ್ಲಿಯೂ ಸ್ವೀಕರಿಸಬಾರದೆಂದೇನೂ ಸಾಧಿಸಿರುವುದಿಲ್ಲ. ಅದರಿಂದ ಕಾಂಗ್ರೆಸು ಕೇವಲ ಜನಹಿತಕರವಾದ ಕೆಲವು ಸುಧಾರಣೆಗಳನ್ನು ಮಾಡುವುದೇ ಸರ್ವಸ್ವವೆಂಬ ಮನೋವೃತ್ತಿಗಿಳಿದು ತನ್ನ ಮುಖ್ಯ ಗುರಿಯನ್ನು ಮರೆತುಬಿಡುವಂತಾಗುವುದೆಂದೇ ಅವರ ಆಕ್ಷೇಪವಿದ್ದಿತು. ನಮ್ಮ ಮುಖ್ಯ ಕೆಲಸವು ಕೌನ್ಸಿಲು ಸಭಾಸದನಗಳೊಳಗಲ್ಲ ಹೊರಗಣ ಜನಸಾಮಾನ್ಯರಲ್ಲಿ, ನಮ್ಮ ಉದ್ದೇಶವು ಕೆಲವೊಂದು ಜನಹಿತ ಸಾಧಕ ಕಾರ್ಯವಲ್ಲ, ಸಂಪೂರ್ಣ ಸ್ವರಾಜ್ಯ ಸಾಧನೆಯೆಂಬುದನ್ನು ಸದಾ ನೆನಪಿನಲ್ಲಿಟ್ಟುಕೊಂಡು ಆ ದೃಷ್ಟಿಯಿಂದ ಕೆಲಸಮಾಡಿದರೆ, ಕೌನ್ಸಿಲುಗಳನ್ನೂ ನಮ್ಮ ಉದ್ದೇಶ ಸಾಧನೆಗಾಗಿ ಉಪಯೋಗಿಸಬಹುದೆಂದು ಪಂಡಿತ ಜವಾಹರಲಾಲರು ಕೊಟ್ಟಿರುವ ಅಭಿಪ್ರಾಯ. ಆದುದರಿಂದಲೇ ಒಮ್ಮೆ ಅಧಿಕಾರ ಸ್ವೀಕಾರದ ಬದ್ಧ ವಿರೋಧಿಯಾಗಿದ್ದ ಅವರು ಬಹುಮತದ ಅಭಿಪ್ರಾಯಕ್ಕೆ ತಲೆಬಾಗಿ ತನ್ನ ನಿರ್ಧಾರವನ್ನು ಬದಲಿಸುವ ವಿವೇಕವುಳ್ಳವರಾಗಿರುವರು. ನಮ್ಮ ಸ್ವಾತಂತ್ರ್ಯ ಸಮರದಲ್ಲಿ ಅಧಿಕಾರ ಸ್ವೀಕಾರವು ಅದೊಂದು ಯುಕ್ತಿಯಾಗಿರಬಹುದು. ಆದರೆ ಪ್ರಕೃತದ ರಾಜಕೀಯ ಸೂತ್ರವನ್ನು ಮುರಿದು 'ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿ'ಯ ಮೂಲಕ ನಮ್ಮ ರಾಜ್ಯಸೂತ್ರವನ್ನು ನಾವೆ ರೂಪಿಸುವಂತೆ ಮಾಡುವುದು ನಮ್ಮ ಮುಖ್ಯ ಗುರಿ. ಅಧಿಕಾರ ಸ್ವೀಕಾರವೆಂದಾಕ್ಷಣ ಲವಲೇಶವಾದರೂ ಗುಲಾಮಗಿರಿಯ ರಾಜಕೀಯ ಸೂತ್ರವನ್ನು ಸ್ವೀಕರಿಸಿದಂತಾಗಿಲ್ಲ. ಮುಂದೆ ಬರಲಿರುವ 'ಫೆಡರೇಶನ್ನು' ಶಾಸನ ಸಭೆಗಳ ಒಳಗೂ ಹೊರಗೂ ವಿರೋಧಿಸುವುದೆಂದೇ ಅದರ ಅರ್ಥ. ಬ್ರಿಟಿಷ್ ಸಾಮ್ರಾಜ್ಯದ ವ್ಯಾಪಾರದಲ್ಲಿ ನಾವೇನೂ ಪಾಲುಗಾರರಾಗಲಿ ಸಹಕಾರಿಗಳಾಗಲಿ ಆಗುವ ಹಾಗಿಲ್ಲ. ಬ್ರಿಟಿಷ್ ಸಾಮ್ರಾಜ್ಯಕ್ಕೂ ನಮಗೂ ಇರುವ ವೈಷಮ್ಯವು ಮೊದಲಿನಂತೆಯೇ ಇರುವುದು, ನಮ್ಮ ಗಮ್ಯ ಮತ್ತು ದೃಷ್ಟಿಗಳು ಸಂಪೂರ್ಣ ಭಿನ್ನವಾಗಿರುವವು. ಸರ್ವ ಸಾಮಾನ್ಯ ರೀತಿಯಲ್ಲಿ ರಾಜ್ಯಾಡಳಿತ ನಡಿಸಲು ನಾವು ಕಾಯಿದೆ ಮಂಡಲಿಗಳಿಗೆ ಪ್ರವೇಶಿಸಿರುವುದಿಲ್ಲ. 'ಫೆಡರೇಶನ್' ಬಾರದಂತೆ ತಡೆಯುವುದಕ್ಕಾಗಿ, 'ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಗೆ ದಾರಿಸರಿಮಾಡುವುದಕ್ಕಾಗಿ, ಜನತೆಯ ಶಕ್ತಿಯನ್ನು ಹೆಚ್ಚಿಸಿ, ಸಾಧ್ಯವಾದಷ್ಟು ಅವರಿಗೆ ಸಹಾಯಮಾಡಿ ಕಾಂಗ್ರೆಸಿನ ವರ್ಚಸ್ಸನ್ನು ಹೆಚ್ಚಿಸುವುದಕ್ಕಾಗಿ. ಇದನ್ನು ಪ್ರತಿಯೊಬ್ಬ ಕಾಂಗ್ರೆಸ್ ವಾದಿಯೂ ಸದಾ ಸ್ಮರಣೆಯಲ್ಲಿಟ್ಟುಕೊಳ್ಳಬೇಕೆಂದು ಪಂಡಿತರು ಉಚ್ಚರಿಸಿರುವರು.

ಕಾಂಗ್ರೆಸು ಅಧಿಕಾರ ಸ್ವೀಕಾರದ ಅಭಿಲಾಷೆಯಿಂದ ಕೌನ್ಸಿಲುಗಳಿಗೆ ಪ್ರವೇಶಿಸಿರುವುದಿಲ್ಲೆಂಬುದೀಗ ಲೋಕವಿಶ್ರುತವಾಗಿದೆ. ಹಾಗಾಗಿದ್ದರೆ ಅದು ಈ 4 ತಿಂಗಳ ವರೆಗೆ ಆಳರಸರಿಂದ ಆಶ್ವಾಸನೆ ಪಡೆಯಲು ಚಳವಳಿಸುತ್ತಿದ್ದಿಲ್ಲ. ಕಾಂಗ್ರೆಸ್ ಪಕ್ಷೀಯರ ಕಾಲಡಿಗೆ ಬಂದು ಬಿದ್ದ ಅಧಿಕಾರವನ್ನವರು ದೂಡಿಬಿಟ್ಟಿರುವರು. ಅಧಿಕಾರ ಸ್ವೀಕರಿಸದಿದ್ದರೆ ಕಾಂಗ್ರೆಸಿನೊಳಗೆ ಒಡಕುಂಟಾಗುವುದೆಂಬ ಆಳರಸರ ಆಶೆಯೂ ನಿರಾಶೆಯಾಗಿರುವುದು. ಕಾಂಗ್ರೆಸ್ಸಿನ ಶಿಸ್ತು ಸಂಘಟನೆಯಿದಿರಲ್ಲಿ ತಮ್ಮ ಭೇದನೀತಿಯು ನಡೆಯದೆಂಬುದನ್ನವರೀಗ ಮನಗಂಡಿರುವಂತಿದೆ. ಇಂಡಿಯಾ ಆಕ್ಟು ಹಿಂದೀಯರಿಗೆ ಮಹಾಪ್ರಸಾದವಾಗಿದೆ. ಅದರಿಂದ ಎಲ್ಲರಿಗೂ ತೃಪ್ತಿಯುಂಟಾಗಿದೆಯೆಂಬ ಭಾವನೆಯು ಬರಿಯ ಭ್ರಾಂತಿಯೆಂಬುದೀಗ ಇಡೀ ಲೋಕಕ್ಕೇನೇ ತಿಳಿಯುವಂತಾಗಿದೆ. ಇಷ್ಟನ್ನೆಲ್ಲಾ ಕಾಂಗ್ರೆಸು ಸಾಧಿಸಿ ಈಗ ಹಿಂದೀ ಸ್ವಾತಂತ್ರ್ಯಸಾಧನೆಯ ಹೋರಾಟಕ್ಕಾಗಿ ಜನತೆಯ ಶಕ್ತಿಯನ್ನು ಹೆಚ್ಚಿಸಲು ಮಂತ್ರಿಪದವಿ ಸ್ವೀಕರಿಸುವ ನಿರ್ಧಾರ ಮಾಡಿರುವುದು. ವರ್ಕಿಂಗ್ ಕಮಿಟಿಯ ನಿರ್ಣಯದ ಈ ಉದ್ದೇಶವನ್ನು ಪ್ರತಿಯೊಬ್ಬ ಕಾಂಗ್ರೆಸ್ ವಾದಿಯೂ ಚೆನ್ನಾಗಿ ವಿಚಾರಿಸಿ ತಿಳಿದುಕೊಂಡು ಕೌನ್ಸಿಲುಗಳೊಳಗಣ ಕೆಲಸವನ್ನು ಗೌಣವಾಗಿ ಸಹಾಯಕವಾಗಿ ಪರಿಗಣಿಸಿ ಇನ್ನಷ್ಟು ಹೆಚ್ಚಿನ ಉತ್ಸಾಹದಿಂದ ಹೊರಗೆ ಜನತೆಯಲ್ಲಿ ಕೆಲಸಮಾಡಬೇಕು. ಆದರಿಂದ ಕೌನ್ಸಿಲಿನ ಕೆಲಸಕ್ಕೂ ಬಲಬರುವುದು. ಮುಂದಿನ ಹೋರಾಟಸಿದ್ಧತೆಮಾಡಿದಂತಾಗುವುದು. ಮಂತ್ರಿಪದವಿ ಸ್ವೀಕರಿಸಿದ ಆರೇಳು ಮಂದಿಗಿಂತ ಹೆಚ್ಚಿನ ಜವಾಬ್ದಾರಿಯು ಕಾಂಗ್ರೆಸ್ ಪಕ್ಷೀಯರದ್ದು. ಪ್ರತಿಯೊಂದು ಹಳ್ಳಿಯಲ್ಲಿಯೂ ಕಾಂಗ್ರೆಸ್ ಸಭೆಯು ಸ್ಥಾಪಿಸಲ್ಪಟ್ಟು ನಿಜವಾದ ಜನಹಿತಸಾಧನೆಮಾಡಬೇಕು. ಕಾಂಗ್ರೆಸು ಈಗ ಮಂತ್ರಿಪದವಿ ಸ್ವೀಕರಿಸಿದುದರಿಂದ ಕಾಂಗ್ರೆಸು ಸಂಸ್ಥೆಗಳು ಸರಕಾರದ ಅಂಗವಾಗಿ ಪರಿಣಮಿಸಿವೆ. ಪ್ರತಿಯೊಬ್ಬ ಕಾಂಗ್ರೆಸ್ ಪಕ್ಷೀಯನ ಜವಾಬ್ದಾರಿಯು ಇಂದಾಗಿವೆ ಎಂದು. ಶ್ರೀ. ಸಿ. ರಾಜಗೋಪಾಲಾಚಾರ್ಯರು ಮಾಡಿರುವ ಅರ್ಥವೂ ಇದೇ. ಮುಂದೆ ಎಂತಹ ಪರಿಸ್ಥಿತಿಯುಂಟಾಗುವುದು. ಕಾಂಗ್ರೆಸು ಎಷ್ಟು ಕಾಲ ಅಧಿಕಾರದಲ್ಲಿರುವುದೆಂದು ಹೇಳಬರುವುದಿಲ್ಲ. ಅಗತ್ಯಬಿದ್ದರೆ 6 ತಿಂಗಳೊಳಗೇನೆ ಕಾಂಗ್ರೆಸ್ ಪಕ್ಷೀಯರು ಅಧಿಕಾರ ಬಿಟ್ಟು ಹೊರಬರಬಹುದು. ಆದುದರಿಂದ ಕಾಂಗ್ರೆಸ್ ಪಕ್ಷೀಯರೆಲ್ಲರೂ ಈ ಸುಸಂದರ್ಭವನ್ನು ಕಳಕೊಳ್ಳದೆ ಕಾಂಗ್ರೆಸ್ಸಿನ ಬಲ ಮತ್ತು ವರ್ಚಸ್ಸನ್ನು ಹೆಚ್ಚಿಸುವುದಕ್ಕೆ ಅದನ್ನುಪಯೋಗಿಸಿಕೊಳ್ಳುವುದೊಂದೇ ಅವರ ಕರ್ತವ್ಯವಿರುವುದು.

ಸ್ವದೇಶ

ಪಂಡಿತ ಜವಾಹರಲಾಲರಿಗೆ ಜಖಮ್. ಮೋಟರ್‌ಕಾರಿನ ಮೇಲೆ ಕಲ್ಲೆಸೆತ

ಪಂಡಿತ ಜವಾಹರಲಾಲರು, ಖಾನ್ ಅಬ್ದುಲ್ ಗಾಫರ್‌ಖಾನ, ಡಾಕ್ಟರ್ ಮಹಮ್ಮದ್ ಆಶ್ರಫ್, ಮತ್ತು ಪಂಡಿತಲಾಲ್ ಬಹದೂರು ಶಾಸ್ತ್ರಿಗಳೊಂದಿಗೆ ಇದೇ ತಾ. ೧೧ರಲ್ಲು ಟ್ರೈನಿನಲ್ಲಿ ಕೋನಪುರ ಸ್ಟೇಶನಿಗೆ ಬಂದಾಗ ಅಲ್ಲಿಯ ಹಲವು ಮಂದಿ ಕಾಂಗ್ರೆಸ್ ಪಕ್ಷೀಯರು ಸ್ಟೇಶನಿನಲ್ಲಿ ಅವರನ್ನು ಸ್ವಾಗತೀಕರಿಸಿ ಜಯಘೋಷಮಾಡಿದರು. ಆಗ ರೈಲ್ವೇ, ಪೋಲೀಸ್ ಸಬ್ ಇನ್ಸ್‌ಪೆಕ್ಟರರೊಬ್ಬನು ಕೋನಪುರದ ಕಾಂಗ್ರೆಸ್ ಮುಖಂಡರಾದ ಪಂಡಿತ ಬಾಲಕೃಷ್ಣ ಶರ್ಮರನ್ನು ದಸ್ತಗಿರಿಮಾಡಿ ಪೋಲೀಸ್ ಸ್ಟೇಶನಿಗೊಯ್ದನು. ಪಂಡಿತ ಜವಾಹರಲಾಲರು ಇದನ್ನು ತಿಳಿದು ರೈಲ್ವೇ ಪೋಲೀಸ್ ಸ್ಟೇಶನಿಗೆ ಧಾವಿಸಿ, 'ಇಂಕ್ವಿಲಾಬ್ ಜಿಂದಬಾದ್' ಎಂದು ಐದುಸಲ ಉದ್ಘೋಷಿಸಿ ತಾನೇ ದಸ್ತಗಿರಿಗೆ ಸಿದ್ಧರಾದರು. ಶ್ರೀ. ಶರ್ಮರು ಜಾಮೀನು ಕೊಡಲೊಪ್ಪಲಿಲ್ಲ. ಆ ಮೇಲೆ ಬಿಡಲ್ಪಟ್ಟರು.

ಪಂಡಿತರು ತಾ. ೧೨ರಲ್ಲು ಆಮಿಲ್ ಪುರ ಎಂಬಲ್ಲಿಗೆ ಚುನಾವಣೆಯ ಪ್ರಚಾರಾರ್ಥವಾಗಿ ಡಾಕ್ಟರ್ ಮಹಮ್ಮದರೊಂದಿಗೆ ಹೋಗುತ್ತಿದ್ದಾಗ ಯಾರೋ ಮುಸಲ್ಮಾನಪುಂಡರು ಅವರ ಮೋಟರ್ ಕಾರಿಗೆ ಕಲ್ಲೆಸೆದು ಕಾರಿನ ಕಟ್ಟರಿನ ಕನ್ನಡಿಯೊಡೆದು ಪಂಡಿತರ ಹಣೆಗೆ ಪೆಟ್ಟಾಗಿರುವುದು. ಪಂಡಿತರು, ತನಗೆ ಪೆಟ್ಟಾದುದು ಸಾಲದೆಂದೂ, ಇನ್ನಷ್ಟು ಪೆಟ್ಟಾಗಬೇಕಿತ್ತೆಂದೂ ಹೇಳಿದರು. ಅವರೊಂದಿಗಿದ್ದ ಡಾಕ್ಟರ್ ಮಹಮ್ಮದರ್ 'ನಾಚಿಕೆಕರ'ವೆಂದು ಕೂಗಿದರು. ಪಂಡಿತರು ಈ ಜಖಮನ್ನು ತೃಣೀಕರಿಸಿ ಭರದಿಂದ ಚುನಾವಣಾ ಪ್ರಚಾರಕಾರ್ಯ ನಡಿಸಹತ್ತಿರುವರು. ಇಲ್ಲಿ ಖಾಲಿಬಿದ್ದಿರುವ ಸಂಯುಕ್ತ ಪ್ರಾಂತದ ಎಸೆಂಬ್ಲಿ ಮುಸಲ್ಮಾನ ಸೀಟೊಂದಕ್ಕೆ ಕಾಂಗ್ರೆಸ್ ಕಡೆಯ ಮತ್ತು ಮುಸ್ಲಿಮ್ ಲೀಗಿನ ಉಮೇದ್ವಾರಿಗಳೊಳಗೆ ತೀವ್ರ ಪ್ರತಿಸ್ಪರ್ಧೆ ನಡೆದಿರುವುದು. ಮುಸ್ಲಿಮ್ ಲೀಗಿನವರು ಕಾಂಗ್ರೆಸಿನ ವಿರೋಧವಾಗಿ ಎಲ್ಲಾ ತರದ ಧಾರ್ಮಿಕ ಜಾತೀಯ ಭಾವನೆಗಳನ್ನೆಲ್ಲಾ ಮುಸಲ್ಮಾನರಲ್ಲಿ ಪ್ರಚಾರಮಾಡಿ ಅವರನ್ನು ಹುರಿಗೊಳಿಸಿ ತಮ್ಮ ಬೇಳೆ ಬೇಯಿಸಲೆತ್ನಿಸುತ್ತಿರುವರು.

ಡಾಕ್ಟರ್ ಯು. ರಾಮರಾಯರು

ಮದ್ರಾಸ್ ಕೌನ್ಸಿಲಿನ ಕಾಂಗ್ರೆಸ್ ಪ್ರೆಸಿಡೆಂಟರಾಗಿ ಕಾಂಗ್ರೆಸ್ ಪಕ್ಷದಿಂದ ನೇಮಿಸಲ್ಪಟ್ಟಿರುವುದು ಅಭಿನಂದನೀಯವಿದೆ. ಇದೇ ತಾ. ೧೨ರಲ್ಲು ಮದ್ರಾಸಿನ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ಸಭೆಯಲ್ಲಿ ಮೇಲಿನ ನಿರ್ಣಯವಾಗಿರುವುದು. ಕೌನ್ಸಿಲಿನ ಡೆಪ್ಯೂಟಿ ಪ್ರೆಸಿಡೆಂಟರ ಸ್ಥಾನಕ್ಕೆ ಪಕ್ಷದ ನಾಯಕರಾದ ಶ್ರೀ। ರಾಜಗೋಪಾಲಾಚಾರ್ಯರು ಯಾರನ್ನಾದರೂ ಆರಿಸಬಹುದೆಂದಾಯಿತು. ಪ್ರಾಂತಿಕ ಎಸೆಂಬ್ಲಿಯ ಸ್ಪೀಕರ್ ಮತ್ತು ಡೆಪ್ಯೂಟಿ ಸ್ಪೀಕರಾಗಿ ಶ್ರೀ। ಬುಲುಸು ಸಾಂಬಮೂರ್ತಿ ಮತ್ತು ಶ್ರೀಮತಿ ರುಕ್ಮಿಣಿ ಲಕ್ಷ್ಮೀ ಪತಿಯವರು ಆರಿಸಲ್ಪಟ್ಟಿರುವರು. ಈ ಸಭೆಯಲ್ಲಿ ೧೩೫ ಮಂದಿ ಎಸೆಂಬ್ಲಿ ಮತ್ತು ಕೌನ್ಸಿಲ್ ಮೆಂಬರರು ಭಾಗಿಯಾಗಿದ್ದರು. ಸಭಾರಂಭದಲ್ಲಿ ಶ್ರೀ। ರಾಜಗೋಪಾಲಾಚಾರ್ಯರು ವರ್ಕಿಂಗ್ ಕಮಿಟಿಯ ನಿರ್ಧಾರ ಮತ್ತು ಕಾಂಗ್ರೆಸ್ ಪಕ್ಷದ ಕರ್ತವ್ಯದ ಕುರಿತು ದೀರ್ಘ ಭಾಷಣವಿತ್ತರು. ಯಾರ್‍ಯಾರು ಮಂತ್ರಿಗಳೆಂದು, ಈ ವರೆಗೆ ನಿಶ್ಚಯವಾಗಿರುವುದಿಲ್ಲ.

ಸ್ವದೇಶ — ಪಂಡಿತ ಜವಾಹರಲಾಲರಿಗೆ ಜಖಮ್; ಪಟೇಲ್-ನರಿಮನರ ವಾದ; ಶ್ರೀ ಬಕ್ಷಿಯವರು ಉಪವಾಸ ಬಿಟ್ಟರು; ಚೀನಾ ಜಾಪಾನು ಯುದ್ಧ; ಸ್ಪೈನಿನ ಯುದ್ಧ; ತಾಟಸ್ಥ್ಯದಲ್ಲಿ ಬಿಕ್ಕಟ್ಟು. — ವಿದೇಶ

ಪಟೇಲ್ ನರಿಮನ್ ವಾದ

ಮಿ| ನರಿಮನರು ಬೊಂಬಾಯಿ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ನಾಯಕರಾಗದಂತೆ ಸರ್ದಾರ್ ವಲ್ಲಭಾಯಿ ಪಟೇಲರು ಸೂತ್ರ ಚಾಲನೆ ನಡಿಸಿರುವರೆಂಬ ಆರೋಪದ ವಿಷಯವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ವಿಚಾರಿಸಿ ಗಾಂಧಿಜಿಯವರ ಅಭಿಪ್ರಾಯದಂತೆ ಅಗತ್ಯ ಬಿದ್ದರೆ ಆ ಕುರಿತೊಂದು ವಿಚಾರಣಾ ಕಮಿಟಿಯನ್ನು ನೇಮಿಸುವ ನಿರ್ಧಾರ ಮಾಡಿರುವರು. ಸರ್ದಾರ್ ಪಟೇಲರು ತಾನೇನೂ ಸೂತ್ರ ಚಾಲನೆ ಮಾಡಿಲ್ಲೆಂದೂ, ಶ್ರೀ| ನರಿಮನರು ನಾಯಕನ ಚುನಾವಣೆಯಲ್ಲಿ ತನ್ನೊಡನೆ ಸಹಾಯ ಕೇಳಿದಾಗ ತಾನು ಸಾಧ್ಯವಿಲ್ಲೆಂದು ಮಾತ್ರ ಹೇಳಿದುದೆಂದೂ ವಿದಿತಪಡಿಸಿರುವರು. ಶ್ರೀ| ನರಿಮನರು ತನ್ನ ಆರೋಪವು ಸತ್ಯವೆಂದು ಪ್ರತಿಪಾದಿಸಿರುವರು.

ಶ್ರೀ ಬಕ್ಷಿಯವರು ಉಪವಾಸ ಬಿಟ್ಟರು

ರಾಜಕೀಯ ಕೈದಿಗಳ ಬಿಡುಗಡೆಗಾಗಿ ಸೈನಿ ಜೈಲಲ್ಲಿ ೪೦ ದಿವಸಗಳ ವರೆಗೆ ಉಪವಾಸ ವ್ರತ ಹಿಡಿದ ಶ್ರೀ| ಸಚ್ಚಿದಾನಂದ ಬಕ್ಷಿಯವರು ಇದೇ ತಾ. ೮ರಲ್ಲಿ ತನ್ನ ವ್ರತ ನಿಲ್ಲಿಸಿರುವರು. ಬಾಬು ರಾಜೇಂದ್ರ ಪ್ರಸಾದರು ಇವರ ಬಳಿಗೆ ಹೋಗಿ ಮಾತಾಡಿ, ಕಾಂಗ್ರೆಸ್ ಮಂತ್ರಿಗಳು ರಾಜಕೀಯ ಕೈದಿಗಳ ಬಿಡುಗಡೆಗಾಗಿ ಪ್ರಯತ್ನಿಸುವರೆಂದು ಆಶ್ವಾಸನೆಯಿತ್ತುದೇ ಇದಕ್ಕೆ ಕಾರಣ.

ವಿದೇಶ

ಚೀನಾ ಜಾಪಾನು ಯುದ್ಧ

ಉತ್ತರ ಚೀನದಲ್ಲಿ ಚೀನೀ ಸೈನಿಕರು ಒಪ್ಪಂದದ ಶರ್ತ ಮುರಿದು ಜಾಪಾನ್ ಸೈನಿಕರ ಮೇಲೆ ಗುಂಡೆಸೆದ ನಿಮಿತ್ತ ಎರಡೂ ಕಡೆಯ ಸೈನಿಕರೊಳಗೆ ಇದೇ ತಾ. 11ರಲ್ಲಿ ಭೀಷಣ ಹೋರಾಟವಾಗಿ ಜಾಪಾನೀಯರು ಚೀನೀಯರನ್ನು ಹಿಂದಕ್ಕೋಡಿಸಿರುವರು. 30ಮಂದಿ ಚೀನೀಯರು ಕೊಲ್ಲಲ್ಪಟ್ಟಿರುವರು. ಇಡೀರಾತ್ರಿ ಆಗಾಗ ಹೋರಾಟ ನಡೆಯುತ್ತಲೇ ಇತ್ತು. ಜಾಪಾನರು ವಾಂಗ್ ಪಿಂಗನ್ನು ವಶಪಡಿಸಿಕೊಂಡು ಪೈಪಿಂಗ್ ಎಂಬ ಪ್ರಾಮುಖ್ಯ ಪಟ್ಟಣದ ಗೇಟಿನ ವರೆಗೆ ಮುಂದೊತ್ತಿರುವರು. ಜಾಪಾನರ ಒಪ್ಪಂದದ ಶರ್ತಗಳಿಗೆ ತಾವು ಒಪ್ಪಿರುವುದಿಲ್ಲೆಂದು ಚೀನೀಯರ ಹೇಳಿಕೆ. ಜಾಪಾನು ಹೆಚ್ಚಿನ ಸೇನೆಯನ್ನು ಉತ್ತರ ಚೀನಕ್ಕೆ ಕಳುಹಿಸಿ ದೊಡ್ಡ ಸಮರ ಸಿದ್ಧತೆ ಮಾಡಿರುವುದು. ಹೊಸ ಸೇನಾನಾಯಕರನ್ನು ಕಳುಹಿಸಿರುವುದು. ಚೀನದ ನಾಂಕಿಂಗ್ ಸರಕಾರವು ಜಾಪಾನರ ಧಾಳಿಯನ್ನು ವಿರೋಧಿಸುವ ದೃಢನಿರ್ಧಾರ ಮಾಡಿರುವುದು. ಇನ್ನೊಂದು ಮಂಚೂರಿಯವನ್ನು ಜಾಪಾನು ನಿರ್ಮಿಸಿಕೊಳ್ಳಲು ಎಷ್ಟಕ್ಕೂ ಬಿಡಬಾರದೆಂದೇ ನಾಂಕಿಂಗಿನ ನಿರ್ಧಾರ. ಇದರಿಂದಾಗಿ ಉತ್ತರ ಚೀನದ ಯುದ್ಧವು ಪ್ರಬಲ ಸಮರವಾಗಿ ಮಾರ್ಪಾಟು ಹೊಂದುವ ಸಂಭವ ತೋರುತ್ತದೆ. ಇತ್ತಂಡದವರೂ ಭರದಿಂದ ಸೇನಾ ಸಿದ್ಧತೆ ನಡಿಸುತ್ತಿದ್ದಾರೆ.

ಸ್ಪೈನಿನ ಯುದ್ಧ

ಮೇಡ್ರಿಡಿನ ಪಶ್ಚಿಮ ಮತ್ತು ನೈಋತ್ಯದಲ್ಲಿ ಸರಕಾರವು ಬಂಡಾಯಗಾರರನ್ನು ಹಿಂದಕ್ಕೊತ್ತುತ್ತಿರುವುದು. ಮೇಡ್ರಿಡಿನಿಂದ ೧೫ ಮೈಲು ದೂರವಿರುವ ವಿಲ್ಲನೇವ ಮತ್ತು ಪಾರ್ಡಿಲ್ಲೋ ಎಂಬ ಸ್ಥಳಗಳನ್ನು ಸರಕಾರದ ಕಡೆಯ ಸೈನಿಕರು ಇದೇ ತಾ. ೧೧ರಲ್ಲಿ ವಶಪಡಿಸಿಕೊಂಡು ೬೦೦ ಮಂದಿ ಬಂಡಾಯಗಾರ ಸೈನಿಕರನ್ನು ಸೆರೆ ಹಿಡಿದಿರುವರು. ಬಹಳ ಯುದ್ಧ ಸಾಮಗ್ರಿ ಅವರ ಕೈವಶವಾಗಿರುವುದು.

ತಾಟಸ್ಥ್ಯದಲ್ಲಿ ಬಿಕ್ಕಟ್ಟು

ಸ್ಪೈನಿಗೆ ಹೊರಗಣಿಂದ ಸೈನಿಕರು ಮತ್ತು ಯುದ್ಧ ಸಾಮಗ್ರಿಗಳು ಹೋಗದಂತೆ ಪಹರೆ ನಡಿಸಲು ಅಂತರರಾಷ್ಟ್ರೀಯ ತಾಟಸ್ಥ್ಯ ಕಮಿಟಿಯವರು ಪಹರೆಗಾರರನ್ನು ನೇಮಿಸಿರುವರಷ್ಟೆ. ಇದಕ್ಕೆ ಜರ್ಮನಿ ಮತ್ತು ಇಟೆಲಿಯು ಸಮ್ಮತಿಸದೆ ಪಹರೆಯ ತಮ್ಮ ಯುದ್ಧನಾವೆಗಳನ್ನು ಹಿಂತೆಗೆದಿರುವವು. ಆಗ ಅವರು ಬಿಟ್ಟ ಸ್ಥಳದ ಮೇಲೆ ಇಂಗ್ಲೆಂಡು ಪಹರೆ ನಡಿಸಲು ಸಿದ್ಧತೆ ತೋರಿಸಿತು. ಇದನ್ನು ಫ್ರಾನ್ಸ್ ರಸ್ಯಾ ಮೊದಲಾದ ರಾಷ್ಟ್ರಗಳು ಸಮರ್ಥಿಸಿದರೂ ಜರ್ಮನಿ ಮತ್ತು ಇಟಲಿಗಳು ವಿರೋಧಿಸಿ ಬಿಕ್ಕಟ್ಟುಂಟಾಗಿರುವುದು. ಪೋರ್ಚುಗಲ್ಲೂ ಇಟಲಿ ಜರ್ಮನಿಗಳ ಪಕ್ಷ ಹಿಡಿದಿರುವುದು. ಇಂಗ್ಲೆಂಡಿನ ಸೂಚನೆಗೆ ಇಟಲಿ ಜರ್ಮನಿಗಳು ಒಪ್ಪದಿದ್ದರೆ ತಾವು ತಮ್ಮ ಪಹರೆಯನ್ನು ಹಿಂದೆಗೆಯುವೆವೆಂದು ಫ್ರಾನ್ಸ್ ಎಚ್ಚರಿಸಿರುವುದು. ಈಗ ಈ ಬಿಕ್ಕಟ್ಟನ್ನು ಇತ್ಯರ್ಥ ಪಡಿಸುವ ಸಂಪೂರ್ಣ ಜವಾಬ್ದಾರಿಯನ್ನು ಇಂಗ್ಲೆಂಡಿಗೊಪ್ಪಿಸಲಾಗಿದೆ. ಇದೇ ತಾ. ೧೧ರಲ್ಲಿ ಬ್ರಿಟಿಷ್ ವಿದೇಶ ಮಂತ್ರಿಗಳಾದ ಮಿ| ಈಡನರು ಫ್ರಾನ್ಸಿಗೆ ಹೋಗಿರುವರು. ಫ್ರಾನ್ಸಿನ ಧೋರಣೆಯಿಂದ ಇಟಲಿಯು ಸಿಟ್ಟುಗೊಂಡಿರುವುದು.

ಉಡುಪಿ

ನಗರ ಸಭೆ

ಉಡುಪಿ ಮುನ್ಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯೊಂದು ಕಳೆದ ಗುರುವಾರ ಸಂಜೆ ಮುನ್ಸಿಪಲ್ ಆಫೀಸಿನಲ್ಲಿ, ಶ್ರೀ| ಅರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ನಾಲ್ಕು ಮಂದಿಯನ್ನುಳಿದು ಇತರ ಸದಸ್ಯರು ಹಾಜರಿದ್ದರು. ಇಲ್ಲಿಯ ಬೋರ್ಡ್ ಹೈಸ್ಕೂಲನ್ನು ನಗರ ಸಭೆಯ ಆಡಳಿತಕ್ಕೊಳಪಡಿಸುವ ವಿಚಾರವು ಮುಂದೊತ್ತಲ್ಪಟ್ಟು, ಮುನ್ಸಿಪಲ್ ಎಜ್ಯುಕೇಶನಲ್ ಕಮಿಟಿಯ ವಿಚಾರಕ್ಕೊಪ್ಪಿಸಲಾಯಿತು. ಪೇಜಾವರ ಮಠದವರು ರಸ್ತೆಗೆಂದು ನಗರ ಸಭೆಗೆ ಬಿಟ್ಟುಕೊಟ್ಟಿದ್ದ ಸ್ಥಳದಲ್ಲಿ ರಸ್ತೆಯು ಇನ್ನೂ ಪೂರ್ಣ ಆಗದೇ ಇರುವುದರಿಂದ, ರಸ್ತೆಯನ್ನು ಬಿಟ್ಟುಕೊಟ್ಟ ಶರತ್ತು ರದ್ದಾಗಿದೆಯೆಂದೂ, ಅಲ್ಲಿಯ ಮರಗಳ, ಮತ್ತು ಪಟ್ಟಿಯನ್ನು ಕಿತ್ತು ಹಾಕಿದುದರ ಖರ್ಚನ್ನೂ ಕೊಡಬೇಕೆಂದು ಪೇಜಾವರ ಮಠದವರು ಕೊಟ್ಟ ರಿಜಿಸ್ಟ್ರಿ ನೋಟೀಸಿನ ವಿಚಾರಣೆಯನ್ನು ಮುಂದರಿಸಲಾಯಿತು. ಮುನ್ಸಿಪಾಲಿಟಿಯ ಅನಾವಶ್ಯಕತೆ, ಶಾಲೆಗಳಲ್ಲಿ ರಾಷ್ಟ್ರಗೀತೆಗಳನ್ನು ಹಾಡುವಿಕೆ, ಮೊದಲಾದುವನ್ನು ಬಾಕಿ ಇರಿಸಲಾಯಿತು. ಕಸೆಕಾರು, ಕುಂಜಿಬೆಟ್ಟುಗಳಲ್ಲಿಯ ಮಸಣಗಳಲ್ಲಿ ಪಕ್ಕಾ ಶೆಡ್ಡುಗಳನ್ನು ರಚಿಸಬೇಕೆಂದಾಯಿತು. ನಗರ ಸಭೆಗೊಳಪಟ್ಟ ಶಾಲೆಗಳಲ್ಲಿಯ ಹರಿಜನ ವಿದ್ಯಾರ್ಥಿಗಳಿಗೆ ವರ್ಷಕ್ಕೆ ೧೫ ರೂಪಾಯಿಗಳಿಗೆ ಮೀರದ ಮಿತಿಯಲ್ಲಿ ಸ್ಲೇಟ್-ಪುಸ್ತಕ ಮೊದಲಾದುವನ್ನು ಕೊಡುವರೆ ಮಂಜೂರು ಮಾಡಲಾಯಿತು. ನಗರಸಭೆಯ ಹಿಂದಿನ ಸಂಘಟಿತ ಶ್ರೀ| ಜಿ. ಎಸ್. ಕಾಮತ್‌ರವರು ತಾನು ಜಾಮಿನಿಗಾಗಿ ಕೊಟ್ಟಿದ್ದ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕಿನ ಪಾಸು ಪುಸ್ತಕವನ್ನು ವಾಪಾಸು ಕೇಳಿದ ಅರ್ಜಿಯನ್ನೂ, ಅದಕ್ಕೆ ಸಂಬಂಧಿಸಿದ ಪತ್ರವ್ಯವಹಾರಗಳನ್ನೂ ಓದಿ, ಆ ವಿಷಯ ಹೆಚ್ಚಿಗೆ ಚರ್ಚಿಸಲಾಯಿತು. ಅರ್ಜಿಗೆ ಸಂಬಂಧಿಸಿದ ಪತ್ರಗಳೆಲ್ಲಾ ಕೌನ್ಸಿಲಿನ ಮುಂದೆ ಬಾರದಿರಲು ಕಾರಣ, ಅದರ ರಹಸ್ಯವು ಬಯಲಾದ ಕಾರಣಗಳ ಕುರಿತು ಹಲವರು ಚರ್ಚಿಸಿದರು. ನಗರ ಸಭೆಯವರಿಗೆ ಸರಕಾರದವರು ಸಾಲವಾಗಿ ತೆತ್ತ ೩೦ ಸಾವಿರ ರೂಪಾಯಿಗಳನ್ನು ೧೦ ಕಂತುಗಳಲ್ಲಿ ಸಲಾಯಿಸಬಹುದಾಗಿ ಸರಕಾರದಿಂದ ಬಂದ ಆರ್ಡರನ್ನು ಓದಿ ರಿಕಾರ್ಡು ಮಾಡಲಾಯಿತು. ಉಡುಪಿ ಪಹರಿಗೊಂದು ಪಶು ಆಸ್ಪತ್ರೆಯ ಆವಶ್ಯಕತೆಯ ಕುರಿತು ಸರಕಾರಕ್ಕೆ ಸೂಚಿಸಲಾಯಿತು. ಇನ್ನಿತರ ವಿಷಯಗಳನ್ನು ಚರ್ಚಿಸಿದ ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು.

ಜಿಲ್ಲಾ ರಾಜಕೀಯ ಪರಿಷತ್ತು

ಜಿಲ್ಲಾ ರಾಜಕೀಯ ಪರಿಷತ್ತನ್ನು ಉಡುಪಿಯಲ್ಲಿ ಜರಗಿಸಲು ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯವರು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ತಿಳಿಸಿರುತ್ತಾರೆ.

ಮಂತ್ರಿ ಪದವಿ ಸ್ವೀಕಾರ ದಿನಾಚರಣೆ

ಕಾಂಗ್ರೆಸಿನವರು ಮಂತ್ರಿ ಪದವಿ ಸ್ವೀಕರಿಸಿದುದರ ಸಂತೋಷ ಪ್ರದರ್ಶನಾರ್ಥವಾಗಿ ತಾ. ೧೪ರಲ್ಲಿ ತಮ್ಮ ತಮ್ಮ ಭವನಗಳಲ್ಲೋ ಆಫೀಸುಗಳಲ್ಲೋ ರಾಷ್ಟ್ರಧ್ವಜವನ್ನು ಏರಿಸಬೇಕೆಂದು ಉಡುಪಿ ತಾಲೂಕು ಕಾಂಗ್ರೆಸು ಕಮಿಟಿಯವರು ಡಂಗುರಸಾರಿಸಿರುವರು.

ರಸ್ತೆಬದಿಯ ಹಳ್ಳಗಳಿಂದ ಅಪಾಯ

ರಸ್ತೆ ಬದಿಯಲ್ಲಿ ಮಣ್ಣು ತೆಗೆದ ಆಳವಾದ ಹಳ್ಳಗಳನ್ನು ಮುಚ್ಚದೆ ಹಾಗೆಯೇ ಇರಿಸುವುದು ಎಷ್ಟೊಂದು ಅಪಾಯಕರವಿರುವುದೆಂಬುದು ಕಳೆದ ವಾರ ಕಪ್ಪೆಟ್ಟು ರಸ್ತೆ ಬದಿ ನಡೆದೊಂದು ವಿದ್ಯಮಾನವು ವ್ಯಕ್ತಗೊಳಿಸುತ್ತದೆ. ಕಪ್ಪೆಟ್ಟು ಕೆರೆಗಿಂತ ಸ್ವಲ್ಪ ಮುಂದೆ ರಸ್ತೆಯ ಬದಿಯಲ್ಲೇ ಇದ್ದ ಒಂದು ಹಳ್ಳಕ್ಕೆ ಚಿಕ್ಕ ಹುಡುಗನೊಬ್ಬನು ಬಿದ್ದು ಮುಳುಗಿ ಸಕಾಲದಲ್ಲಿ ರಕ್ಷಿಸಲ್ಪಡದಿದ್ದರೆ ಪ್ರಾಣಾಪಾಯವಾಗುತ್ತಿತ್ತು. ಆದುದರಿಂದ ರಸ್ತೆ ಬದಿಯಲ್ಲಿ ಮಣ್ಣು ತೆಗೆದ ಹಳ್ಳಗಳನ್ನು ಮುಚ್ಚಿಸುವಂತೆ ಮುನಿಸಿಪಾಲಿಟಿಯವರು ಗಮನಕೊಡತಕ್ಕದ್ದು.

ಶ್ರೀಮತಿ ಸುಶೀಲಾಬಾಯಿ ಉಡುಪರ ರಾಜಿನಾಮೆ

ಶ್ರೀಮತಿ ಸುಶೀಲಾಬಾಯಿ ಉಡುಪರು ತನ್ನ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಿಕೆಗೆ ರಾಜಿನಾಮೆ ಕೊಟ್ಟಿರುವರೆಂದು ತಿಳಿದುಬರುತ್ತದೆ. ಶ್ರೀಮತಿಯವರು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಮಾಡಿಕೊಂಡಿರುವ ಅರ್ಜಿಯು ಇದೇ ತಾ. ೧೮ರ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯಲ್ಲಿ ವಿಚಾರಿಸಲ್ಪಡುವುದು.

ದಿವಾನ್ ಬಹದೂರ್ ಹೆಗ್ಡೆಯವರ ಅಭಿನಂದನೀಯ ಪ್ರಯತ್ನ

ದಕ್ಷಿಣ ಕನ್ನಡದ ಫೋರೆಸ್ಟ್ ಸಂಕಷ್ಟಗಳನ್ನು ನಿವಾರಿಸುವರೆ ಮತ್ತು ಭೂಕಂದಾಯವನ್ನಿಳಿಸುವರೆ ಭೂಕಂದಾಯ ಕಮಿಟಿಯವರು ಮಾಡಿರುವ ಸೂಚನೆಗಳನ್ನು ನಾವು ಈ ಮೊದಲೇ ಪ್ರಕಟಗೊಳಿಸಿದುವೆವು. ಈಗ ಗೊಬ್ಬರ, ಗೋಚರಾವು, ಕಟ್ಟಿಗೆಯೇ ಮೊದಲಾದ ಸಾಗುವಳಿಯ ಉಪಯೋಗಕ್ಕಾಗಿ ಮಾಡಿಕೊಂಡ ದರ್ಖಾಸ್ತು ಸ್ಥಳದ ಮೇಲೆ ಹಾಕಿರುವ ಕಂದಾಯವನ್ನು ತೆಗೆದುಹಾಕಬೇಕು. ಕರಿಮೆಣಸು ವೀಳ್ಯ ಮೊದಲಾದ ಬೆಳೆಗಳನ್ನು ಬೆಳೆಸಲು ಉಪಯೋಗಿಸಲ್ಪಡುವ ಪುಂಜಸ್ಥಳದ ಮೇಲೆ ಬಾಗಾಯಿತಿನ ಕಂದಾಯ ಹೊರಿಸದೆ ಪುಂಜದ ದರವನ್ನೇ ಹೊರಿಸಬೇಕೆಂದು ಸೂಚಿಸಿರುವರು. ದಕ್ಷಿಣಕನ್ನಡದ ಈ ರಿಯಾಯಿತಿಗಳಿಗೆ ಬಲುಮಟ್ಟಿಗೆ ದಿವಾನ್ ಬಹದೂರ್ ಹೆಗ್ಡೆಯವರ ಪ್ರಯತ್ನವು ಕಾರಣವೆಂದು ಹೇಳಬಹುದು. ಅದಕ್ಕಾಗಿ ಅವರು ಅಭಿನಂದನೀಯರಿರುತ್ತಾರೆ. ಈಗ ಕಾಂಗ್ರೆಸು ಅಧಿಕಾರಕ್ಕೆ ಬಂದಿರುವುದರಿಂದ ದಕ್ಷಿಣಕನ್ನಡದ ಕಾಂಗ್ರೆಸ್ ಪ್ರತಿನಿಧಿಗಳು ಇದಕ್ಕಿಂತಲೂ ಹೆಚ್ಚಿನ ರಿಯಾಯಿತಿಗಳನ್ನು ದಕ್ಷಿಣಕನ್ನಡವು ಪಡೆಯುವ ಪ್ರಯತ್ನ ಮಾಡದಿರಲಾರರು.

ಕೆನರಾ ಬ್ಯಾಂಕ್ ಲಿಮಿಟೆಡ್ ಮಂಗಳೂರು

ಈ ಬೇಂಕಿನ ಇನ್ನೆರಡು ಶಾಖೆಗಳು ಇದೇ ತಾ. ೨೩ರಲ್ಲಿ ಬೆಳ್ತಂಗಡಿ ಮತ್ತು ಕುಂಬಳೆ ಕೇಂದ್ರಗಳಲ್ಲಿ ತೆರೆಯಲ್ಪಡುವುದಾಗಿ ತಿಳಿಯುತ್ತೇವೆ.

THE UDIPI BANK LTD.
UDIPI
ALL KINDS OF BANKING BUSINESS TRANSACTED
PERSONAL ATTENTION PAID TO ALL ENQUIRIES
ESTD. 1925

ದಕ್ಷಿಣ ಕನ್ನಡ

ಪಡುಬಿದಿರೆ

ಇಲ್ಲಿಯ ಉದಯಾದ್ರಿ ಬಾಲಗೋಪ ಮಿತ್ರಮಂಡಳಿಯವರ ಸಹಕಾರದಿಂದ, ವಿದ್ಯಾರಣ್ಯರ ಪುಣ್ಯದಿನ (ತಾ. ೬-೬-೩೭)ದಲ್ಲಿ ಶ್ರೀ. ಪಿ. ಎಲ್. ರಾಘವೇಂದ್ರರಾಯರು "ವಿದ್ಯಾರಣ್ಯಚರಿತ್ರೆ ಅಥವಾ ಮಾಧವನ ವಾತ್ಸಲ್ಯ" ಎಂಬ ಹರಿಕಥೆಯನ್ನು ಬಹಳ ಚೆನ್ನಾಗಿ ಮಾಡಿರುತ್ತಾರೆ.

ಶಿರ್ವ

ನಮ್ಮ ಶಿರ್ವ, ಕುತ್ಯಾರು, ಕಳತ್ತೂರು, ಪಾದೂರು, ಗ್ರಾಮಗಳಿಗೆ ಉಡುಪಿ ತಾಲೋಕು ಬೋರ್ಡಿನವರು ಒಂದು ಹುಡುಗಿಯರ ಶಾಲೆಯನ್ನು ತೆರೆದಿದ್ದರು. ಶಾಲೆಗೆ ಸರಿಯಾದ ಕಟ್ಟೋಣವು ಇರುತ್ತದೆ. ಈ ಐದು ಗ್ರಾಮಗಳ ಹುಡುಗಿಯರಿಗೆ ಬಹಳ ಅನುಕೂಲವಾಗಿದ್ದರೂ ಇಲ್ಲಿಗೆ ಬರಲು ಮನಸ್ಸಿಲ್ಲದ ಉಪಾಧ್ಯಾಯಿನಿಯರು ವರ್ಗಾಯಿಸಲ್ಪಟ್ಟದ್ದರಿಂದ ಅವರಲ್ಲಿ ಶ್ರದ್ಧೆಯೂ ಇಲ್ಲ. ಅಲ್ಲದೆ ರೋಮನ್ ಕೆಥೋಲಿಕರ ಹುಡುಗಿಯರು ವಿಶೇಷವಾಗಿರುವುದರಿಂದ ಕೆಥೋಲಿಕರ ಜಾತಿಯ ಒಬ್ಬ ಉಪಾಧ್ಯಾಯಿನಿ ಇಲ್ಲದಿರುವುದರಿಂದಲೂ ಕ್ರಮಶಃ ಹುಡುಗಿಯರ ಸಂಖ್ಯೆ ಕಮ್ಮಿಯಾಗಿ ಅಸಿಸ್ಟೆಂಟ್ ಇನ್ಸ್‌ಪೆಕ್ಟ್ರೆಸ್ಸರು ಶಾಲೆಯನ್ನು ಮುಚ್ಚುವಂತೆ ಬರೆದಿರುವರೆಂಬುದು ಇಲ್ಲಿಯ ಜನರಿಗೆ ತಿಳಿದುದರಿಂದ ಎಲ್ಲರೂ ಕೂಡಿ ಬೋರ್ಡಿಗೆ ಅರ್ಜಿ ಮಾಡಿರುವರು. ನಮಗೆ ಅತೀ ಅಗತ್ಯವಾದ ನಮ್ಮ ಹುಡುಗಿಯರ ಶಾಲೆಯನ್ನು ಮುಚ್ಚದೆ, ಪ್ರೋತ್ಸಾಹದಿಂದ ಕೆಲಸಮಾಡುವ ಅಧ್ಯಾಪಕಿಯರನ್ನು ಇಲ್ಲಿಗೆ ಕಳುಹಿಸಿ ಶಾಲೆಯನ್ನು ಬೋರ್ಡಿನಿಂದ ನಡಿಸಿದರೆ ಶಿರ್ವ ಗ್ರಾಮದ ಜನರಿಗೆ ಬಹಳ ಪ್ರಯೋಜನವಾಗುವುದು.

ಗ್ರಾಮಸ್ಥರಲ್ಲಿ ಒಬ್ಬ.

ಮುಂಡ್ಕೂರು

ಇಲ್ಲಿನ ಪಂಚಾಯತ ಕೋರ್ಟಿನಲ್ಲಿ ಇದೇ ಕಳೆದ ತಾರೀಕು ೩—೭—೩೭ರಲ್ಲು ಪ್ರೆಸಿಡೆಂಟರ ಚುನಾವಣೆಯು ನಡೆಯಿತು. ಹಿಂದಿನ ಪ್ರೆಸಿಡೆಂಟರಾದ ಮ. ರಾ. ವೆಂಕಣ್ಣ ಶೆಟ್ಟರವರೇ ಸರ್ವಾನುಮತದಿಂದ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು,

ಕಾಸರಗೋಡು

ಹಲವು ಜನ ಗೃಹಸ್ಥರು ಅಪೇಕ್ಷಿಸುವದರಿಂದ ಶ್ರೀ ಮಹಮ್ಮದ ಶಮ್ನಾಡರು ಬೇಗನೇ ಬರಲಿಕ್ಕಿರುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಒಂದು ಸ್ಥಾನಾರ್ಥಿಯಾಗಿ ನಿಲ್ಲಲಿಕ್ಕೆ ಒಪ್ಪಿರುವರೆಂದು ಬಾತ್ಮಿದಾರರೊಬ್ಬರು ತಿಳಿಸುತ್ತಾರೆ.

ಮೂಡಬಿದುರೆಯ "ನಿವಾಸಿಕ"ರಿಗೆ ಹಿತೋಕ್ತಿ

ಅಯ್ಯಾ 'ನಿವಾಸಿಕರೇ' ತಾವು ಕಳೆದ ೫-೭-೩೭ನೇ 'ರಾಷ್ಟ್ರಬಂಧು'ವಿನಲ್ಲಿ 'ಜಿಲ್ಲಾ ಬೋರ್ಡು ಚುನಾವಣೆಯೂ ಮೂಡಬಿದ್ರೆಯೂ' ಎಂಬ ಶಿರೋನಾಮದ ಕೆಳಗೆ 'ಮರಕಡಗುತ್ತಿನವರು ಮನಸ್ಸುಮಾಡಿದರೆ ಮೂಡಬಿದ್ರೆಯಿಂದ ಪ್ರತಿಸ್ಪರ್ಧಿಗಳಿಲ್ಲದೆ ಯಾರಾದರೊಬ್ಬರು ಜಿಲ್ಲಾ ಬೋರ್ಡು ಸದಸ್ಯರಾಗಿ ಆರಿಸಿ ಬರುವ ಸಂಭವವಿದೆಯೆಂದು ತಮ್ಮ ಅಭಿಪ್ರಾಯವನ್ನು ಸಶಂಕೆಯಿಂದ ಪ್ರಕಟಿಸಿರುವಿರಿ. ಮೂಡಬಿದುರೆ ಸರ್ಕಲಿನ ಆ ಪ್ರತಿನಿಧಿಸ್ಥಾನಕ್ಕೆ 'ಮೂಡಬಿದುರೆ'ಯವರೇ ಆರಿಸಬೇಕೆಂದು ನಿಯಮವಿದೆಯೇ? ಅಲ್ಲದೆ ಮರಕಡಗುತ್ತಿನವರ ಮನಸ್ಸನ್ನು 'ಅರಿಸುವ ತಮ್ಮ ಉದ್ದೇಶವೇನು? ತಮ್ಮ ಹಿಂದೆ ಪರದೆಯ ಮರೆಯಲ್ಲಿ ತಮ್ಮನ್ನು ನಡೆಸುವ ಸೂತ್ರಚಾಲಕನ ಅಭಿಪ್ರಾಯವನ್ನು ತಾವು ಪ್ರಕಟಿಸುವ ಪವ್ಯಾಸವೋ? ಅಥವಾ ತಾವೇ ಒಂದು ನಾಮಧಾರಿ ಪ್ರತಿನಿಧಿಗಳೇ? ಹೀಗಿಲ್ಲವಾದರೆ ತಾವು ವಾರ್ತಾಪತ್ರಿಕೆಗಳ ಮೂಲಕ 'ಗುತ್ತಿನವರ ಮನಸ್ಸ'ನ್ನು ಅಪೇಕ್ಷಿಸಿ ಕಷ್ಟಸಾಧ್ಯವಾದ ಆ ಮೆಂಬರಿಕೆಯ ಭೂಷಣಕ್ಕೆ ಆತುರಪಡುವುದೇಕೆ? ಪ್ರಜಾಹಿತದೃಷ್ಟಿಯಿಂದ ಇದು ಸಮ್ಮತವೇ? ಅಲ್ಲದೆ ಸಾಧ್ಯವೆ? ಪ್ರತಿಸ್ಪರ್ಧಿಯಿಲ್ಲದೆ ತಾವುಗಳು ಮೆಂಬರರಾಗಬೇಕೆಂಬ ಪ್ರಾಮುಖ್ಯ ಉದ್ದೇಶದ ಅಭಿಪ್ರಾಯದಿಂದ ಉಮೇದ್ವಾರನಾಗುವವನು ಆ ಸ್ಥಾನಕ್ಕೆ ಯೋಗ್ಯತೆಯುಳ್ಳವನೆ? ಮೂಡಬಿದ್ರೆಯಿಂದ ಯಾರಾದರೊಬ್ಬರು ಎಂಬುದರ ಗೂಢಾರ್ಥವೇನು? ಅಲ್ಲದೆ ತಮ್ಮ (ನಿವಾಸಿಕರ) ವಿವೇಚನೆ ಇಲ್ಲದ ವಿವೇಕದಂತೆ ಗುತ್ತಿನವರು ಮನಸ್ಸುಮಾಡಿದ್ದರೆ ಅದು ಕಷ್ಟಸಾಧ್ಯವೆಂಬ ಅವಿವೇಕದ ವಿಮೋಚನೆಗೆ ನಗಬೇಕೋ ವ್ಯಸನಪಡಬೇಕೋ ತಿಳಿಯದು. ಯಾಕೆಂದರೆ ನಿವಾಸಿಕರಂತಹ ಸ್ವಾಭಿಮಾನಶೂನ್ಯ ವ್ಯಕ್ತಿಗೆ ಮಾತ್ರ ಕಷ್ಟವೆಂದು ತಿಳಿಯದೆ ಸರ್ಕಲಿನ ಸ್ಥಾನಕ್ಕೆ ಹೋಲಿಸುವುದು ಮೂರ್ಖತನ. ಆದುದರಿಂದ ನಿವಾಸಿಕರೇ ಕಷ್ಟಸಾಧ್ಯವಾದ ಸ್ಥಾನಕ್ಕೆ ಉಮೇದುವಾರರಾಗುವ ಮತ್ತು ಆರಿಸುವ ಕಷ್ಟದ ಹಂಬಲವನ್ನು ಕಟ್ಟಿಕೊಳ್ಳಬೇಡಿರೆಂದೂ ಸುಲಭಸಾಧ್ಯವಾದ ಸ್ಥಾನವು ದೊರಕುವ ವರೆಗೆ ನಿರೀಕ್ಷಿಸಿಕೊಂಡಿರುವಿರೆಂದೂ ನಂಬಿರುವ.

ತಮ್ಮ ಊರ ನಿವಾಸಿಕ.

ದಕ್ಷಿಣ ಕನ್ನಡಿಗರಿಗೊಂದು ಸಂತೋಷ

ದಕ್ಷಿಣ ಕನ್ನಡಕ್ಕೆ ಸೇರಿದವರಾದ ಶ್ರೀಯುತ ಮೂಲ್ಕಿ ಏಕನಾಥ ಟಿ. ದೇವಜಿಯವರನ್ನು ಮುಂಬಾಯಿಯ ಪ್ರಾಮುಖ್ಯ ಫೂಟ್‌ಬೋಲ್ ಆಟದ ಸಂಸ್ಥೆಯಾದ ದಿ ವೆಸ್ಟರ್ನ್ ಇಂಡಿಯಾ ಫೂಟ್‌ಬೋಲ್ ಎಸೋಸಿಯೇಶನಿನ ಕಾರ್ಯನಿರ್ವಾಹಕ ಸಭೆಯ ಸದಸ್ಯರನ್ನಾಗಿ ಆರಿಸಿದ್ದು ನಮ್ಮ ದಕ್ಷಿಣ ಕನ್ನಡಿಗರಿಗೆ ಭೂಷಣವೇ ಸರಿ. ಮುಂಬಾಯಿ ನಗರದಲ್ಲಿ ಕಾಲ್ಚೆಂಡಿನ ಪಂದ್ಯಾಟದಲ್ಲಿ ಈ ವರೆಗೆ ವಿಶೇಷವಾಗಿ ಸ್ಮಿಕರೇ ಶ್ರೇಷ್ಠರೆನಿಸಿಕೊಂಡಿದ್ದರು. ಆದರೆ ಕಳೆದ ಎರಡು ಮೂರು ವರ್ಷಗಳ ಲಾಗಾಯ್ತು ಶ್ರೀ ದೇವಜಿಯರ ಪ್ರೇರೇಪಣೆಯಿಂದ ದಕ್ಷಿಣ ಕನ್ನಡಕ್ಕೆ ಸೇರಿದ ಯುವಕರು ಒಂದು ಟೀಮನ್ನು ಏರ್ಪಡಿಸಿ ಈ ಮೇಲಿನ ಸಂಸ್ಥೆಯ ನೇತೃತ್ವದಲ್ಲಿ ನಡೆಸಲ್ಪಡುವ ಕಪ್ ಪಂದ್ಯಾಟದಲ್ಲಿ ಭಾಗವಹಿಸಿ ಅನೇಕ ಇನಾಮುಗಳನ್ನು ಪಡೆದು ಹಿಂದೀಯರ ಮತ್ತು ಯುರೋಪಿಯನರ ಪ್ರಶಂಸೆಗೆ ಪಾತ್ರರಾಗಿರುವರು. ಮುಂಬಾಯಿ ನಿವಾಸಿಕರಾದ ಹಿಂದೀಯರಲ್ಲಿ ಮುಖ್ಯತಃ ದಕ್ಷಿಣ ಕನ್ನಡ ಜಿಲ್ಲೆಯ ಯುವಕರಲ್ಲಿ ಫೂಟ್ ಬೋಲ್ ಚೆಂಡಾಟದ ಅಭಿರುಚಿಯನ್ನು ಹೆಚ್ಚಿಸುವ ಪ್ರಯತ್ನವು ಶ್ರೀ ದೇವಜಿಯವರಲ್ಲಿ ಬಹಳವಿದೆ. ಇವರ ಯತ್ನವು ಸಫಲವಾಗಿ ಮುಂದಕ್ಕೆ ನಡೆಯಲಿಕ್ಕಿರುವ ಕಪ್ ಪಂದ್ಯಾಟಗಳಲ್ಲಿ ನಮ್ಮ ಜಿಲ್ಲೆಯ ಯುವಕರು ಭಾಗವಹಿಸಿ ಕಪ್ಪನ್ನು ಪಡೆದು ಕೀರ್ತಿಯನ್ನೂ ಯಶಸ್ಸನ್ನೂ ಗಳಿಸುವರೆಂದು ಹಾರೈಸುತ್ತೇನೆ.

ಇದಲ್ಲದೆ ಶ್ರೀ. ಟಿ. ದೇವಜಿಯವರು ಸಮಾಜಸೇವೆಯಲ್ಲಿಯೂ, ನಿರತರಾಗಿರುವರು. ಇಲ್ಲಿಯ ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಮೊಗವೀರ ಜಾತಿಯ ಸಂಸ್ಥೆಯಾದ ಮೊಗವೀರ ವ್ಯವಸ್ಥಾಪಕ ಮಂಡಲಿಯ ಈ ವರುಷದ ಅಧ್ಯಕ್ಷರಾಗಿದ್ದಾರಲ್ಲದೆ ಸದ್ರಿ ಮಂಡಳಿಯ ಆಜೀವ ಮೆಂಬರರಾಗಿರುವರು. ಈ ಮಂಡಳಿಯ ಮೂಲಕ ಶ್ರೀ. ದೇವಜಿಯವರು ಜಾತಿಭೇದವನ್ನಿಡದೆ ಅನೇಕ ವರುಷಗಳಿಂದ ಕನ್ನಡಿಗರ ಸೇವೆಯನ್ನು ಮಾಡುತ್ತಾ ಬಂದಿರುವರು.

ವಿ. ಎಸ್. ಶಿಬ್ರೂರ್‌ಕರ್.

ಬ್ರಹ್ಮಾವರ ಕೇಂದ್ರ ಕಾಂಗ್ರೆಸ್ ಕಮಿಟಿ

ಬ್ರಹ್ಮಾವರ ಕೇಂದ್ರ ಕಾಂಗ್ರೆಸ್ ಕಮಿಟಿಯ ಮೀಟಿಂಗು ತಾರೀಕು ೪—೭—೩೭ನೇ ರವಿವಾರ ರಾಷ್ಟ್ರಭಾಷಾಸಂವರ್ಧಕಸಂಘದ ಮಾಳಿಗೆಯಲ್ಲಿ ಶ್ರೀಯುತ ನಗರ್ಕರ್ ಶ್ರೀನಿವಾಸ ರಾಮಭಾಗರ ಅಧ್ಯಕ್ಷತೆಯಲ್ಲಿ ನಡೆದಾಗ ಶ್ರೀಯುತ ಅಂತಯ್ಯ ಶೆಟ್ಟರು ತಂದ ಠರಾವುಗಳು—

೧ ಈ ಮಾಳಿಗೆಯಲ್ಲಿ ಸದ್ಯದಲ್ಲಿಯೇ ಚರಕಸಪ್ತಾಹವನ್ನು ಜರಗಿಸಿ ನಂತರ ಸದಾ ನೂಲುವ ಏರ್ಪಾಡುಮಾಡಬೇಕು. ೨ ತಾ. ೧೧—೭—೩೭ನೇ ರವಿವಾರ ಮೊದಲುಗೊಂಡು ಪ್ರಾಥಮಿಕ, ಮಾಧ್ಯಮ ಮತ್ತು ರಾಷ್ಟ್ರಭಾಷಾ ಹಿಂದೀ ಕ್ಲಾಸುಗಳನ್ನು ತೆರೆಯುವುದು ೩ ಮೀಟಿಂಗಿಗೆ ಹಾಜರಾಗಲು ಅನಾನುಕೂಲವಾಗುವ ಕಮಿಟಿಮೆಂಬರರ ಸ್ಥಾನಕ್ಕೆ ಹೊಸ ಮೆಂಬರರನ್ನು ಆರಿಸಬೇಕು. ೪ ಪ್ರತಿ ತಿಂಗಳ ೫, ೧೫ ಮತ್ತು ೨೫ನೇ ತಾರೀಕುಗಳಲ್ಲಿ ತಿಂಗಳಿಗೆ ೩ ಮೀಟಿಂಗುಗಳನ್ನು ಜರಗಿಸುವುದು ೫ ಗ್ರಾಮಗಳಲ್ಲಿ ಕಾಂಗ್ರೆಸು ಪ್ರಚಾರಮಾಡುವುದು. ಈ ಠರಾವುಗಳನ್ನು ನೆರೆದ ಮೆಂಬರರು ಚರ್ಚಿಸಲಾಗಿ ಬಹುಮತದಿಂದ ಮಂಜೂರಾಯಿತು. ಅಧ್ಯಕ್ಷರ ಭಾಷಣಾನಂತರ ಕಾರ್ಯದರ್ಶಿಗಳು ವಂದನೆಯನ್ನು ಅರ್ಪಿಸಲಾಗಿ ಸಭಾಂತ್ಯವಾಯಿತು.

ಮುಂಬಾಯಿ ಕರ್ನಾಟಕಸ್ಥರಲ್ಲಿ ವೈದಿಕವಿವಾಹ

ಇದೇ ಕಳೆದ ತಾರೀಕು ೨೭—೬—೩೭ನೇ ಆದಿತ್ಯವಾರ ಘಂಟೆ ೯ಕ್ಕೆ ಅಫಯುನ್ ಬಿಲ್ಡಿಂಗಿನಲ್ಲಿ ಶ್ರೀಯುತ ಮೋಹನಪ್ಪ ಮೈಂದನರವರು ಸೌ, ಮೋಹಿನಿ ಎಂಬ ವಧುವನ್ನು ವೈದಿಕವಿಧಿ ಪ್ರಕಾರ ಬಹು ವಿಷ್ಕಂಭಣೆಯಿಂದ ವಿವಾಹಮಾಡಿಕೊಂಡರು. ವಿವಾಹದಲ್ಲಿ ವಧೂವರರು ಹೇಳುವ ಒಪ್ಪಂದ ಮಾಗ್ಲಾನ ಮಂತ್ರಗಳ ಅರ್ಥಸಹಿತ ವಧೂವರರೇ ಹೇಳಿದುದು ಸಭಿಕರಲ್ಲಿ ಹೆಚ್ಚಿನ ಪ್ರಭಾವ ಬೀಳುವಂತಾಯಿತು. ಶ್ರೀಯುತರುಗಳಾದ ವಿ. ಸತ್ಯಾರ್ಥಿ ಸಿದ್ಧಾಂತ ವಿಶಾರದರು ಮತ್ತು ಯ.ಮ್. ಚಂದ್ರಶೇಖರರು ಸಂಸ್ಕಾರವನ್ನು ನಡಿಸಿ, ತಮ್ಮ ಭಾಷಣದಲ್ಲಿ ವೈದಿಕವಿವಾಹ ಸಂಸ್ಕಾರದಲ್ಲಿರುವ ಮಹತ್ವವನ್ನು ಅರ್ಥಗರ್ಭಿತವಾಗಿ ವಿವರಿಸಿ ಎಲ್ಲರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಬೋಧಿಸಿದರು. ಫೋರ್ಟು ಆರ್ಯಸಮಾಜದ ಕಾರ್ಯದರ್ಶಿಯವರು ಸಮಾಜಕ್ಕೆ ವರನ ಕಡೆಯಿಂದ ದಾನವಾಗಿ ಬಂದ ರೂ. ೪ (ನಾಲ್ಕು) ಸ್ವೀಕರಿಸಿ ಧನ್ಯವಾದದೊಂದಿಗೆ ಮುಂಬಯಿ ಕನ್ನಡಿಗರ ಬೆಂಬಲವನ್ನು ಕೋರಿಕೊಂಡರು.

ಕಬ್ಬಿನಾಲೆ

ಕಾರ್ಕಳ ತಾಲೂಕು ಕಬ್ಬಿನಾಲೆಯಲ್ಲಿ ಕಳೆದ ವರ್ಷದಂತೆ ಈ ವರ್ಷ ಅಡಿಕೆ ಕೊಳೆರೋಗವು ಅಲ್ಲಲ್ಲಿ ತಗಲಿದೆ. ಎಗ್ರಿಕಲ್ಚರ್ ಇಲಾಖೆಯವರಿಂದ ಮಹಾಲಿ ಪಂಪು ತೆಗೆದುಕೊಂಡು ಔಷಧಿ ಹಾಕುವ ಪ್ರಯತ್ನದಲ್ಲಿದ್ದಾರೆ.

ಕಳೆದ ತಿಂಗಳ ೨೬ನೇ ತಾರೀಕಿನ 'ದಿನ ರಾತ್ರಿ' ಸುಮಾರು ೧೦ ಘಂಟೆಗೆ ಇಲ್ಲಿಯ, ಎಡಮಾಡಿ ಬಾಲಕೃಷ್ಣ ಕೆಲ್ಕೂರರು ಭೇದಿಗೆ ತೆಗೆದುಕೊಂಡ ಸವದಿಂದ ಅಕಾಲಮೃತ್ಯುವಶವಾದುದು ಶೋಚನೀಯ.

NOTIFICATION.

It is hereby notified that on account of the dangerous condition of the bridge in mile 31/5 of Mangalore-Mercara Trunk Road the portion of the road covered by this bridge will be closed for all traffic until it is made fit for traffic

A. C. Gonsalves,
Vice-President in Charge.
Mangalore, 9-7-1937.

ಹೊಸಪುಸ್ತಕ! ಹೊಸ ಪುಸ್ತಕ!!
ಕೆ. ಕಾಂತಪ್ಪ ಶೆಟ್ಟಿಯವರಿಂದ ರಚಿತವಾದ
ಹೆಂಡ್ತಿ ಗಂಡನಾದರೆ?
ಹಾಸ್ಯರಸ ಪ್ರಧಾನವಾದ ಏಕಾಂಕ ಪ್ರಹಸನ. ಸ್ಕೂಲ್‌ಡೇ ಮೊದಲಾದ ಸಂದರ್ಭಗಳಲ್ಲಿ ಅಭಿನಯಿಸಲು ಯೋಗ್ಯ ನಾಟಕ.
ಬೆಲೆ. ೦ ೪ ೦ ಮಾತ್ರ
ನವಭಾರತ ಬುಕ್ ಡಿಪೋ ಉಡುಪಿ
ಬೊಂಬಾಯಿಯಲ್ಲಿ
ವಿ. ಎಸ್. ಸಿಬ್ರೂರ್ಕರ್
ದಿ ನೇರನಲ್ ಕೆನರಾ ನ್ಯೂಸ್ ಏಜನ್ಸಿಯಲ್ಲಿ ಪ್ರತಿಗಳು ದೊರೆಯುತ್ತವೆ.

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ. ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ—
ಗುಡಪಿಪ್ಪಲಿ (ಲೀವರ್ ರೋಗಕ್ಕೆ) — ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ) — ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.
ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಕೊಳ್ಳಿರಿ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ಸಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವ್ವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ. ಕ.

ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟ್‌ಬುಕ್‌ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು ಯೋಗ್ಯವಾದ ಹಾಡುಗಳು.

ಪ್ರತಿಗಳು:—ಸಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಬುಕ್ ಡಿಪೊ	ಅ	
	ಥ	ಕಾರ್ಯದರ್ಶಿ,
ಉಡುಪಿ	ವಾ	ಕಿರಿಯರ ಪ್ರಪಂಚ, ಉಡುಪಿ.

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**

ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭರ್ಗೋವಾ ಎಸ್ಕ್ವಾಯರ್, ಎಫ್. ಎಸ್. ಎಸ್. (ಲಂಡನ್)

ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗೆನ್ಯಾಸ್ಟರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ

ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯ ನವರಿಂದ ರಚಿತವಾದ

'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬಹಳ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ಕಾದಿರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

The Manager, The National Kanara News Agency,

No. 58 Mody Street, Fort Bombay.

THE

Vijaya Bank, Ltd.

Head Office: MANGALORE. Branch Offices: Udipi, Kaup & Coondapoor.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: ಉಡುಪಿ, ಕಾಪು, ಕುಂದಾಪುರ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುತ್ತದೆ.

ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ. ಬ್ರದರ್ಸ್,

ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ನನೆ: ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿಸಾವಿರಗಟ್ಟಲೆ ಹಣ್ಣಾಗುವ್ವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವ್ವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಸಕ್ಕರೆ ಪಿಷ್ಟ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ಮರದಲ್ಲಿ ಯಾವಾಗಲೂ ಹಣ್ಣು ಇರುವ್ವದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವ್ವದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದಶೀ ಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋಗಳ ಸ್ಟೋರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ರೆಡ್ಡಿ, ಕೆನರಾ ನರ್ಸರಿ,

ಪೋಸ್ಟ್ ಕಾಪು, ದ. ಕನ್ನಡ

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿ ಇರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. [ಸಂ. ನ.]

ಕಲೆಯ ಕೊಲೆ!

[ಒಂದು ಸಮಸ್ಯೆ]

ಕಲೆ-ಕಲೆಯೆಂದು, ಕಲಾಸೇವಕರೆಂದು ಕಲೆಯ ಕೊಲೆಮಾಡುತ್ತಿರುವ ಭಯಂಕರ ದೃಶ್ಯವನ್ನು ಕಣ್ಣಾರೆ ಕಾಣುತ್ತಿರಲು, ನಿಜವಾದ ಕಲಾಪ್ರೇಮಿಯೊಬ್ಬನು ಸುಮ್ಮನೆ ಮೂಗು ಹಿಡಿದುಕೊಂಡು ಕುಳಿರತಿಲಾರನು. ಕಲಾಸೇವಕನ ಸೋಗು ಹಾಕಿಕೊಂಡು ಸಮಾಜಸೇವೆಯ ಮೂಲಕ ದೇಶಸೇವೆ ಮಾಡುವೆನೆಂದು ಹಾರಿ, ಬೀಗಿಕೊಂಡು ಅನರ್ಥಗಳಿಗೆ ಗುರಿಯಾಗುವುದಕ್ಕಿಂತ ತನ್ನರಿವು ತನಗಾಗುವಂತೆ ಸಾಧಿಸುವುದು ಯುಕ್ತವಲ್ಲವೇ?

x x x

ಕಲಾಸೇವೆಯೆಂದರೆ ಬರಿಯ ಹುಚ್ಚಾಟವಲ್ಲ. ಅತೀ ಮಹತ್ವವಾದುದು. ಸಮಾಜದ ಕೈಗನ್ನಡಿಯಂತಿರುವ ಅಮೂಲ್ಯವಸ್ತುವದು!. ನಮ್ಮ ಸಮಾಜದ ಉನ್ನತಿ ಅವನತಿಗಳಿಗೂ ಅದರಲ್ಲಿರುವ ಸಾಹಿತ್ಯ-ಕಲೆಗಳು ಸಹಾಯವಾಗಿವೆಯೆಂದರೆ ಅದರ ಸ್ಥಾನ ತಾನೇ ತಿಳಿಯುವುದು.

ಪುತ್ತೂರಿನಲ್ಲಿ ಈಗತಾನೆ ಹಲವು ಸಂಘಗಳು ಜನ್ಮವೆತ್ತಿ ತಮ್ಮ "ಪ್ರಚಂಡ" ಕಾರ್ಯಕ್ಕೆ ಟೊಂಕಕಟ್ಟಿ ನಿಂತಿವೆ. ಆದರೆ "ಕಲಾಸೇವೆ"ಯು ಅವರ ಧ್ಯೇಯವಾಗಿರದೆ ವ್ಯಕ್ತಿದ್ವೇಷದ ಪ್ರದರ್ಶನಕ್ಕೆಂತಲೇ ಸಂಘಗಳನ್ನು ಸ್ಥಾಪಿಸಿದುದು ವಿಷಾದಕರ. ಹೀಗಾದರೆ, ಇನ್ನು ಮುಂದೆ ಇಲ್ಲಿ ಎಷ್ಟು ಸಂಘಗಳು ಜನ್ಮವೆತ್ತುವವೋ ಹೇಳಲಸಾಧ್ಯ. ಹೀನಭಾವಗಳನ್ನು ಹೊರಗೆಡಹುವ ಯಂತ್ರಗಳಾಗಿ ಇಂತಹ ಸಂಘಗಳು ಹುಟ್ಟಿರಬಹುದೇ? ಸಂಘವೆಂದರೆ ಅದು ಒಬ್ಬಿಬ್ಬರ ಸೊತ್ತಲ್ಲ. ಒಬ್ಬನಿಗೆ ಮನಬಂದಂತೆ ವರ್ತಿಸಲು ಅಲ್ಲಿ ಅವಕಾಶವಿಲ್ಲ. ಸ್ವೇಚ್ಛಾವರ್ತಿಗಳಾಗಿ ನಿರ್ಮಲ ಹೃದಯದ ಶಾಲಾಬಾಲಕರನ್ನು ಕಲಾಸೇವೆಯ ನೆವದಿಂದ ಕೆಡಿಸುವ ಆತ್ಮದ್ರೋಹಿಗಳಾಗಿಯೇ ಇಂತಹ ಸಂಘಗಳು ಇಲ್ಲಿ ಜನಿಸಿದುವೆನ್ನಲೇ? ಇಲ್ಲವಾದರೆ, ಇಂತಹ ಸಂಘಗಳಲ್ಲಿ ವಿದ್ಯಾವಂತರಾದ ಹಿರಿಯನೂ ತರುಣರೂ ಏಕೆ ಸಮಭಾಗಿಗಳಾಗಲಿಲ್ಲ? ಒಬ್ಬಿಬ್ಬರಾದರೂ ನಮ್ಮಲ್ಲಿ ನುರಿತವರಿಲ್ಲವೇ? ಕಲಾಸೇವೆ ಮಾಡಬೇಕೆಂದಿರುವವರಿಗೆ ನಮ್ಮೂರಲ್ಲಿ ಕೊರತೆಯೇ? ಹೀಗಿದ್ದೂ ಕರ್ನಾಟಕ ಸಂಘ 'ಬಾಲದಿವಾಕರ ನಾಟಕ ಸಭಾ' 'ಜ್ಞಾನೋದಯ ನಾಟಕ ಸಭಾ' ಇವುಗಳಿಗೇಕೆ ವಿದ್ಯಾವಂತರಾದ ಪೋಷಕರಿಲ್ಲ?- ಸಾಹಿತಿಗಳ ನೆರವಿಲ್ಲ? ಕಲಾಸೇವಕರ ಸಹಾಯ ಕಡಿಮೆ?

ಕಾರಣವಿಷ್ಟೆ!

1 ಒಬ್ಬಿಬ್ಬರ ಇಷ್ಟಾರ್ಥಸಾಧನೆಗೆಂದೇ ಹುಟ್ಟಿದ ಸಂಘಗಳಿವು. 2 ಸಂಘದ ಸದಸ್ಯರಿಗೆ ಸಂಘಗಳ ಕುರಿತು ತಿಲಮಾತ್ರವೂ ಅಧಿಕಾರವಿಲ್ಲ. 3 ಬರಿಯ 'ಹೀನಜೀವಿ'ಗಳ 'ಕೂಟ'ವದು, 4 ನಿಜವಾದ 'ಕಲಾಸೇವೆಯು' ಅವರ ಮುಖ್ಯ ಧ್ಯೇಯವಲ್ಲ. 5 ಕೊನೆಯದಾಗಿ ಅದು ಕಲೋಪಾಸನೆಯ ಕೂಟವಲ್ಲ. ಕಲೆಯ ಕೊಲೆಗೆಂದು ಸಿದ್ಧವಾದ ಭಯಂಕರ ಪಡೆ!

ಇದಕ್ಕೆ ಅವರ ನಾಟಕ ಪ್ರದರ್ಶನಗಳೇ ಸಾಕ್ಷಿ! ಕೆಲವು ದಿನಗಳ ಹಿಂದೆ ಇಲ್ಲಿಯ 'ಕರ್ನಾಟಕಸಂಘ'ದವರ 'ವ್ಯಭಿಚಾರಿಣಿಯಾರು ಅಥವಾ ಸಂಸಾರನೌಕ'ವೆಂಬ ನಾಟಕ ಪ್ರದರ್ಶನವಿತ್ತು. ಇದು ಶ್ರೀ| ಕೆ. ಕೆ. ಶೆಟ್ಟರವರ ಸುಪ್ರಸಿದ್ಧ "ವ್ಯಭಿಚಾರಿಣಿಯಾರೋ" ಅಥವಾ ಚಲಚಿತ್ರದ "ಸಂಸಾರನೌಕ"ವೊ? ಅಥವಾ ಅವೆರಡರ ಸಂಮಿಶ್ರಣವೊ? ಹೇಳಲಸಾಧ್ಯ. ಅಂತೂ ಪುತ್ತೂರಿನ ನಾಟಕ ಕರ್ತರು(?) ಮಿಶ್ರಣ ಕಾರ್ಯದಲ್ಲಿ ಸಮಾಜವು ಸಹಿಸಲಾರದ ತಪ್ಪುಮಾಡಿರುವರು. ಅವರು ಸಾಹಿತ್ಯವನ್ನು ಅರಿತವರಲ್ಲ—ನಾಟಕಕಲೆಯ? ಅನುಭವ ಅವರಿಗಿರಬಹುದೆ? ಹಾಗಿದ್ದರೆ ಅವರು ಸಮಾಜದತ್ತ ತನ್ನ ಕಣ್ಣೆತ್ತಿ ನೋಡದೆ ಅಸಂಬದ್ಧ ಬರೆದು ಮನಮುರಿದು ಬಿಟ್ಟಿರಲ್ಲ (?) 'ರಂಗಭೂಮಿಯು ಕಲೆಯ ಕೊಲೆಗೆಂದು ಸಿದ್ಧವಾದ 'ಸಮರಭೂಮಿ'ಯಾಗಿರುತ್ತದೆಂದರೆ ತಪ್ಪಲ್ಲ. ಪಾತ್ರಧಾರಿಗಳು ತಮ್ಮ ಪಾತ್ರವೇನೆಂದು ಅರಿಯದೆ ತಮ್ಮ ಮನಸ್ಸನ್ನು ಎತ್ತಲೋ ಹರಿಯಬಿಟ್ಟು, ಬಾಯಿಗೆ ಬಂದಂತೆ ಒದರಿದಾಗ ನನಗೆ ಶ್ರೀ| ಶಿವರಾಮ ಕಾರಂತ ವಿರಚಿತ "ನಾಟಕವೆಂಬ ನಾಟಕ"ದ ನೆನಪಾಯಿತು. ಸಮಾಜಕ್ಕೆ ಇಂತಹ ಸಂಘಗಳೇನು ಸಹಾಯ ಸೇವೆಮಾಡಿಯಾವು?

ಅಂತೂ ರಂಗಭೂಮಿಯು ತನ್ನ ವಿಪರೀತಾವಸ್ಥೆಗೆ ಬಂದುದು "ಜ್ಞಾನೋದಯ ಸಂಘ"ದವರ ನಾಟಕದಂದು. ಅದು ನಾಟಕಕಲೆಯ ಅಣಕಾಟವಲ್ಲವೇನೊ! ನಾಟಕ ಕರ್ತರಾದ ಶ್ರೀ. ಕೊಂಡೆಯವರು ಅಂತಹ ದೃಶ್ಯವನ್ನು ಎಲ್ಲಿ ಕಂಡರೊ? ಅವರೇ ಬಲ್ಲರು. ಅವರೇ ರಂಗಭೂಮಿಯ ಚಾಲಕರೂ—ವ್ಯಾಲಕರೂ ಆಹದು—ಚಾಲಕರೂ ಮುಖ್ಯ ನಟರೂ ರಂಗಭೂಮಿಯಲ್ಲಿ ಹೇಗೆ ವರ್ತಿಸಬೇಕೆಂದು ತಿಳಿಯದ ಮೇಲೆ ಉಳಿದ ಪಾತ್ರಧಾರಿಗಳ ಪಾಡೇನು?

ಇಂತಹ ಸಂಸ್ಥೆಗಳಿಗೆ ಪ್ರೋತ್ಸಾಹವೀಯಲೇಕೆ? ಅಥವಾ ಚಿಗುರಿನಲ್ಲಿಯೇ ಚಿವುಟಿಬಿಡಬೇಕೇ-ಎಂಬುದನ್ನು ನಮ್ಮೂರಿನ ಕಲಾಸೇವಕರೂ, ನುರಿತವರೂ ಆದ ಹಿರಿಯರು ಯೋಚಿಸಬೇಕಾಗಿ ನನ್ನ ಪ್ರಾರ್ಥನೆ.

"ಕಲಾಸೇವಕ" ಪುತ್ತೂರು.

Mohini Harmonium Works, Udipi

Single Hand Harmoniums, Portable Hand Harmoniums,
Double sets of Hand Harmoniums,
Trible sets of Hand Harmoniums,
Folding leg Harmoniums,
Specially Constructed in our Work Shop. Well tuned and fitted.

Repairs of all kinds of Musical instruments undertaken at a very moderate rate to the Complete satisfaction of our customers.

A Trial order is earnestly solicited.

For Further Particulars

Apply to:

M. K. KORAGAPPA, *Proprietor.*

ಗಿಡಗಳು ಮತ್ತು ಬೀಜಗಳು.

ಮಹನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದಗಿಡಗಳು, ಬೀಜಗಳುನಮ್ಮಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ಗಿಡ ಬೀಜಗಳು ಒಳಗೊಂಡಿರುವ ನಮ್ಮ ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ. ಉಚಿತವಾಗಿ ರವಾನಿಸುತ್ತೇವೆ.

ಡಿ. ಗುರಪ್ಪ ಅಂಡ್ ಸನ್ಸ್,
ಗಿಡ, ಬೀಜ, ಫಲ, ಪುಷ್ಪಗಳ ವ್ಯಾಪಾರಿಗಳು,
ಲಾಲ್‌ಬಾಗ್, ದೊಡ್ಡ ಮಾವಳ್ಳಿ,
ಬೆಂಗಳೂರು ಸಿಟಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

ಜಗತ್ಪ್ರಸಿದ್ಧ

"ಗೊನೊಕಿಲರ್"

(ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer **Dr. D. N. JASANI,** Vitalbhai Patel Road, BOMBAY 4

ಯುವಕರು ವಿಚಾರಿಸತಕ್ಕ ವಿಷಯ

ಲೇಖಕ—ಬಿ. ಕೆ. ಮಾರ್ಳ

[ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡಬೇಕಾಗಿದೆ. ಆದರೆ, ಎಂತಹ ಉದ್ಯೋಗವನ್ನು? ಜನತಾಸೇವೆಯನ್ನು ಮಾಡಲವಕಾಶವುಳ್ಳ ಉದ್ಯೋಗವನ್ನೇ ನಿಜವಾದ ಉದ್ಯೋಗವೆನ್ನಬಹುದು. ಭಾರತದ ಬಡ ಹಳ್ಳಿಗರ ಸೇವೆಯನ್ನೀಗ ಮಾಡಬೇಕಾಗಿದೆ. ಆದರೆ ಬಾಯಿಯಲ್ಲಿ ಹೇಳಿದರಷ್ಟೇ ಕೈಗೂಡದು. ಎಲ್ಲರೂ ಒಂದಾಗಿ ಯತ್ನಿಸಬೇಕು. ವೈದ್ಯರಿಂದ ಜನತಾಸೇವೆಯನ್ನು ಮಾಡಲು ಸಾಧ್ಯವಿದೆ. ಆದರೆ ದೈತ್ಯರೂಪೀ ವೈದ್ಯರಿಂದಲ್ಲ. ವೈದ್ಯನು ಜಾಡ್ಯದ ಮೂಲವನ್ನು ಅರಿತಿರಬೇಕು. ರೋಗದ ಮರ್ಮವನ್ನು ಕಲಿತಿರಬೇಕು. ಬೇನೆಯ ಗುಟ್ಟನ್ನು ತಿಳಿದಿರಬೇಕು. ಪಂಡಿತ ತಾರಾನಾಥರ ಪ್ರೇಮವಿದ್ಯಾಪೀಠದಲ್ಲಿ ಇವನ್ನೆಲ್ಲಾ ಕಲಿಯಲವಕಾಶವುಂಟು. ಸ್ವಪರಸುಖ—ಸ್ವಾತಂತ್ರ್ಯಪ್ರೇಮ—ಜನತಾ ಸೇವೆ—ಜೀವನೋದ್ಯೋಗಗಳು ಇಂದಿನ ಯುವಕರ ಧ್ಯೇಯವಾಗಿರಲಿ!]

●

ಎಲ್ಲಿ ನೋಡಿದರೂ ನಿರುದ್ಯೋಗಿಗಳ ಗೋಳೇ ಗೋಳು. ಅವರಲ್ಲೂ ನಮ್ಮ ದೇಶದ ಅವಸ್ಥೆ ಹೇಳಬೇಕಾಗಿಲ್ಲ. ಇದನ್ನು ಕಂಡು ಬೇಸೆಗೊಂಡು ಹಲವಂದಿ ಪ್ರಮುಖರು ಹಲವು ಮುಖದಿಂದ ನಿವಾರಣೆಯ ಉಪಾಯವನ್ನು ಹುಡುಕುತ್ತಿದ್ದಾರೆ; ಯೋಜನೆಗಳನ್ನು ಹೂಡುತ್ತಿದ್ದಾರೆ.ಆದರೆ ಇದು ಬರೇ ಹಲಕೆಲವರ ಸಾಹಸ ಪ್ರಯತ್ನಗಳಿಂದ ಕೊನೆಗೊಳ್ಳುವ ಕೆಲಸವೇ? ಅಲ್ಲ; ದೇಶವಿಡೀ ಕೈಗೆ ಕೈಗೊಟ್ಟು ನಡೆದು ಒಮ್ಮೊಗದಿಂದ ಸಾಗಬೇಕು.

ಒಂದು ಕಡೆಯಿಂದ—"ತರುಣರು ಉದ್ಯೋಗವಿಲ್ಲೆಂದು ಕೂಗುವುದಲ್ಲ, ಕೂಡುವುದಲ್ಲ, ಭಾರತದ ಜೀವಾಳವಾದ ಬಡ ಹಳ್ಳಿಗೆ ಇಳಿದು ಅರಿಯದ ಜನರ ಸೇವೆ ಮಾಡಬೇಕು"—ಎಂಬ ಹಿರಿಯರ ಉಪದೇಶವಾಕ್ಯಗಳು ಕೇಳಿಬರುತ್ತಿವೆ. ನಿಜ—ಹಳ್ಳಿಯ ರಾಷ್ಟ್ರವೇ ಆದ ಹಿಂದುಸ್ಥಾನದ ಹಳ್ಳಿಗಳು ಹಾಳು ಬಿದ್ದಿರುವುದರಿಂದಲೇ ಹಿಂದುಸ್ಥಾನವು ಹಾಳಾಗಿದೆ ಎಂಬುದೂ, ಆ ಹಳ್ಳಿಗಳ ಅಭಿವೃದ್ಧಿಯಿಂದಲೇ ದೇಶವು ಉದ್ಧಾರವಾಗಬೇಕೆಂಬುದೂ, ಶಿಕ್ಷಿತರು ಆ ಕೆಲಸವನ್ನೇ ಕೈಕೊಂಡು ದುಡಿಯಬೇಕೆಂಬುದೂ ಸರ್ವಥಾ ನಿಜ. ಆದರೆ, ಈ ಶಿಕ್ಷಿತರೆಂಬ ಕೆಲಸವರಿಯದ ತರುಣರು ಹಳ್ಳಿಗಿಳಿದುಮಾಡುವ ಸೇವೆಯೇನು? ಉದ್ಯೋಗವೇನು? ಅರೆಹೊಟ್ಟೆಯಿಂದ ಬಳಲುವ ಅಲ್ಲಿಯ ಬಡಮಂದಿಗೆ ಇವರಿಂದಾಗುವ ನೆರವೇನು? ಅರ್ಥಾತ್ ಇವರು ಹಳ್ಳಿಯ ಜನರಿಗೆ ಉಪಯೋಗವಾಗುವ ಯಾವ ಸಾಧನ ಸಂಪತ್ತಿಗಳನ್ನು ಪಡೆದಿರುವರು? ಕೆಲಸಕ್ಕೆ ಬರುವ ಸಾಧನವಿಲ್ಲದೆ ಆ ಕೆಲಸಕ್ಕೆ ಕೈಹಚ್ಚುವುದು ಹಾನಿಯೇ ಅಲ್ಲವೆ?

ಪ್ರಕೃತ ಮಹಾತ್ಮಾಜಿಯವರು ಕೈಕೊಂಡಿರುವ ಹಳ್ಳಿಯ ಸುಧಾರಣೆಯ ಕಾರ್ಯಕ್ರಮದಲ್ಲಿ ಅವರ ತತ್ವ–ಧ್ಯೇಯಗಳನ್ನು ಜನತೆಗೆ ತಿಳಿಸಿ, ಕಲಿಸಿ, ಎಚ್ಚರಿಸುವುದೂ ಒಂದು ಕರ್ತವ್ಯವಲ್ಲವೆ? ಇದನ್ನು ಈ ತರುಣರು ಮಾಡಬೇಕು; ಇದನ್ನೇ ತಮ್ಮ ಕೆಲಸವಾಗಿಟ್ಟುಕೊಂಡು ದುಡಿಯಬೇಕು—ಎಂದು ಹೇಳಲೂಬಹುದು. ಈ ಮಾತೇನೋ ಒಮ್ಮೆ ಸುಲಭವೂ, ಯೋಗ್ಯವೂ ಆಗಿ ತೋರಬಹುದು. ಆದರೆ, ಈ ಕೆಲಸವನ್ನು ಮಾಡುವವನಿಗೆ ಹೊಟ್ಟೆಹೊರುವ ಉತ್ಪನ್ನ ಎಲ್ಲಿಂದ ಬರಬೇಕು? ಯಾರಾದರೂ ಸಂಗ್ರಹಿಸಿಟ್ಟ ಫಂಡೋ, ಧನಿಕರ ಸಹಾಯವೋ ಬೇಕಲ್ಲವೆ? ಅದು ಇಲ್ಲವಾದರೆ?—

ಇನ್ನೊಂದು ಮಾತು. ಈಗ ಬಂದಿರುವ ಬಡತನದ ಸಂಕಟಗಳನ್ನು ತಂದುಹಾಕಿದವರೇ ಗಾಂಧಿಯವರೆಂದು ಹೇಳುವವರು ಎಷ್ಟು ಜನರಿಲ್ಲ! ಅಂಥವರೆದಿರು ಸರಿಯಾಗಿ ವಾದಿಸಬೇಕಾದರೆ ವಾದಿಸುವವನು ಮಹಾತ್ಮರ ಬರೇ ಚಿತ್ರವನ್ನು ಹೊತ್ತ ಬೊಂಬೆಯಾಗಿರದೆ, ಅವನಲ್ಲಿಯೂ ಒಂದಿಷ್ಟು ಕರ್ತೃತ್ವದ ಕುರುಹು ಬೇಕಲ್ಲವೆ? ಇವನ ವ್ಯಕ್ತಿತ್ವಕ್ಕೇ ಮಾನವಿಲ್ಲದಲ್ಲಿ ಗಾಂಧಿಯವರ ಚಿತ್ರವನ್ನು ಕಂಡು, ಅವನಿಗೆ ಮಾನ ಕೊಡುವರೆ? ಕೆಲಸದ ಅವಸರಕ್ಕಾಗಿ ತೊಡುವ ಈ ವೇಷವು ದೊಡ್ಡವರ ಹೆಸರು ಹೇಳಿ, ಬಡವರು ಬೇಡಿತಿಂದಂತಾಗದೇ? ಇಂಥಾ ಪ್ರಚಾರಕರಿಂದ "ಗಾಂಧಿತತ್ವಕ್ಕೆ" ಮಾನ ಬರುವ ಬದಲು ಹಾನಿ ತಟ್ಟುವುದೆಂದರೆ ತಪ್ಪಾಗಲಿಕ್ಕಿಲ್ಲ.

ಉದ್ಯೋಗವೆಂದರೆ ಅವಸರಕ್ಕಾಗಿ ದಿಕ್ಕುತೋರದೆ ಕೈಗೊಳ್ಳುವ ಒಂದು ಕಾರ್ಯಮಾತ್ರವಲ್ಲ; ಉದ್ಯೋಗವು ತನ್ನ ಬಾಳಿನ ಬೇಗೆ–ಬಗೆಗಳೆರಡಕ್ಕೂ ನೆರವಾಗಬೇಕು; ಎರಡನ್ನೂ ತೀಡಬೇಕು. ಅದರಿಂದ ಇತರರಿಗೂ ಸುಖವಾಗಬೇಕು, ತನಗೂ ಹಿತವಾಗಬೇಕು. ಆದರೆ ಅಂಥಾ ಉದ್ಯೋಗವನ್ನು ಹುಡುಕಿ ಸಾಗಿಸುವ ಶಕ್ತಿಯು ನಮಗಿಲ್ಲದೆ ಹೋಗಿಬಿಟ್ಟಿದೆ. ಬುದ್ಧಿಯು ದಾಸ್ಯದ ಸಂಕೋಲೆಗಳನ್ನು ಭೂಷಣದ ಆಭರಣಗಳೆಂದು ಭಾವಿಸಿ ತೊಟ್ಟುಕೊಂಡದ್ದೇ ಈ ದುರ್ದೈವಕ್ಕೆ ಕಾರಣ. ಆದ್ದರಿಂದ ಈಗ ಕೇಳುವ ನಿರುದ್ಯೋಗತೆಯ ಕೂಗಿಗೆ ವಸ್ತುತಃ ಉದ್ಯೋಗವಿಲ್ಲದುದು ಕಾರಣವಲ್ಲ; ಆಗಲೇ ಕಾದಿರುವ ಉದ್ಯೋಗಗಳನ್ನು ಹುಡುಕಿ ಸಾಗಿಸಲಿಕ್ಕೆ ಬೇಕಾದ ಶಿಸ್ತು-ಶಿಕ್ಷಣಗಳಿಲ್ಲದಿರುವದೇ ಮುಖ್ಯ ಕಾರಣ.

ಇರಲಿ, ಕಾರಣವು ಏನೇ ಇದ್ದರೂ ಇವರೀಗ ಕೆಲಸವಿಲ್ಲದವರೆಂಬುದು ನಿಜವಷ್ಟೆ? ಯಾವುದಾದರೂ ಕೆಲಸವನ್ನು ಹೊಂದುವುದೆ ಇದರ ನಿವಾರಣೆಯ ಹಾದಿಯೆಂಬುದೂ ಸರಿಯಷ್ಟೆ? ಹಾಗಿರುವಾಗ ಇವರು ಕೈಕೊಳ್ಳಬೇಕಾಗಿರುವ ಉದ್ಯೋಗ ಯಾವುದು? ಅವಸರಕ್ಕಾಗಿ ಕೈಕೊಳ್ಳುವ ಕೆಲಸವು ನಿಜವಾದ ಉದ್ಯೋಗವಲ್ಲೆಂದಾಗ ಇಂದಿಗೆ ಮೀಸಲಾಗಿರುವ ನಿಜವಾದ ಉದ್ಯೋಗವು ಬೇರೆ ಯಾವುದು? ಇಂದು ನಮ್ಮ ದೇಶದ ತರುಣರ ಮುಂದೆ ಎದ್ದು ನಿಂತಿರುವ ಕರ್ತವ್ಯಗಳಲ್ಲಿ ಹಳ್ಳಿಯ ಸೇವೆಯು ಒಂದು ಮುಖ್ಯವಾದುದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಹಾಗೆಯೇ ಅದನ್ನು ಸಾಧಿಸುವ ಸಾಧನ-ಸಂಪತ್ತಿಯು ಯುವಕರಲ್ಲಿಲ್ಲವೆಂಬುದನ್ನು ಒಪ್ಪಲೇಬೇಕು.

ಹಳ್ಳಿಗಿಳಿದು ಅಥವಾ ಪಟ್ಟಣದಲ್ಲುಳಿದು ಎಲ್ಲೇ ಆದರೂ ಜನರಲ್ಲಿ ಹೊಂದಿಕೆಯುಳ್ಳವನಾಗಿ ದುಡಿಯಬೇಕೆಂಬವನು, ಅಧ್ಯಾಪಕ, ಉಪದೇಶಕ, ಚಿಕಿತ್ಸಕ ಈ ಮೂರು ಕಸಬುಗಳಲ್ಲಿ ಒಂದನ್ನು ಕೈಕೊಂಡವನಿರಬೇಕೆಂದು ಕೆಲವಂದಿ ತಜ್ಞರ ಮತ. ಆದರೆ ಈಗಿನವರ ಅಧ್ಯಾಪಕವೃತ್ತಿಯು ಹೆಚ್ಚಾಗಿ ಹೊಟ್ಟೆಹೊರುವ ಕೆಲಸವಾಗಿ ಅವಸಾನ ಹೊಂದುತ್ತಿದೆಯೇ ಅಲ್ಲದೆ ಅದು ಜನಸೇವೆಯ ಕಡೆಗೆ ಹರಿಯುವಷ್ಟು ಗಟ್ಟಿಮುಟ್ಟಾಗಿಲ್ಲ. ಅಧ್ಯಾಪಕರಲ್ಲಿ ಹೆಚ್ಚಿನವರಿಗೆ ಅದನ್ನು ಮಾಡುವ ಯೋಗ್ಯತೆಯೂ ಇಲ್ಲ. ಅಷ್ಟೇ ಅಲ್ಲ, ಅದಿದ್ದವರು ಸ್ವೇಚ್ಛೆಯಿಂದ ಮುಂದುವರಿಯುವುದಕ್ಕೆ ಬಿಡದ ಒಂದು ಮೂಗುದಾರವೂ ಅವರಿಗಿದೆ; ಅವರು ಪರತಂತ್ರರಾಗಿದ್ದಾರೆ. ಅಲ್ಲದೆ ಹಳ್ಳಿಯಲ್ಲಿ ಅವರ ಸಂಬಂಧವು ಹೆಚ್ಚಾಗಿ ಪ್ರಾಥಮಿಕ ಶಿಕ್ಷಣವನ್ನು ಹೊಂದುವ ಮಕ್ಕಳೊಡನೆಯಷ್ಟೇ ಇರುವುದು ಇವರಿಗೆ ಒಂದೇ ಹಳ್ಳಿಯಲ್ಲಿ ಇರುವ ನಿಶ್ಚಯವಿಲ್ಲ; ವರ್ಗವಾಗಬಹುದು. ಆದ್ದರಿಂದ ಇವರಿಗೆ ಆ ಹಳ್ಳಿಯ ಹಿರಿಯರ ಸುಖ-ದುಃಖಗಳ ಗೊಡವೆ ಇಲ್ಲ. ಆ ಹಳ್ಳಿಯವರಿಗೆ ಇವರ ಪರಿವೆಯೂ ಇಲ್ಲ. ಇನ್ನು ಉಪದೇಶಕರ ಬರಿಯ ಬಾಯಮಾತುಗಳಿಗೆ ಈಗ ಅಕ್ಷತೆ ಹಾಕುವವರು ಯಾರೂ ಇಲ್ಲ.

ಈಗ ಚಿಕಿತ್ಸಕನು. ಈತನು ಮಾತ್ರ ಇಂದು ಮಾತ್ರವಲ್ಲ. ಎಂದೆಂದೂ, ಎಲ್ಲೆಲ್ಲೂ, ಜನರೊಡನೆ ಕೂಡಿಯಾಡಿಯೇ ಇರತಕ್ಕ ವ್ಯಕ್ತಿಯೆಂಬುದು ಸರ್ವಸಮ್ಮತವಿದೆ. ರೋಗವು ನೆಲೆಸಿರುವ ವರೆಗೆ ಇವನಿಗೆ ಸದಾ ಸ್ವಾಗತವೇ. ಆದರೆ, ಇಂದು ನಮ್ಮ ದೇಶದಲ್ಲಿ ಹಲವು ಚಿಕಿತ್ಸಾ ಪದ್ಧತಿಗಳು ನೆಲಸಿವೆಯಷ್ಟೆ? ಪ್ರತಿಯೊಂದು ಪದ್ಧತಿಯವರೂ ಸಮಾನತೆಯಿಂದ ದುಡಿಯಬಲ್ಲರೆ? ಪರಿಣಾಮ ಮಾಡಬಲ್ಲರೆ? ಇಲ್ಲ. ಎಲ್ಲರೂ ಒಂದೇ ಮಟ್ಟಕ್ಕೆ ಬರಲಾರರು. ಆದರೆ ಪ್ರತಿಯೊಂದು ಪದ್ಧತಿಯಲ್ಲಿಯೂ ಒಂದೊಂದು ವಿಶಿಷ್ಟಗುಣವಿರುವುದು. ಅದು ದೇಶ-ಕಾಲ-ಪರಿಸ್ಥಿತಿಯನ್ನನುಸರಿಸಿ ಒಂದೊಂದು ಕಡೆ ವೈಶಿಷ್ಟ್ಯ ಹೊಂದುವುದು. ಈ ವಿಶಿಷ್ಟಗುಣವು ಎಲ್ಲರಿಗೂ ಗ್ರಾಹ್ಯವೆನ್ನೋಣ. ಆದರೂ ಕಸಬನ್ನು ಮುಂದುವರಿಸುವವನು ಯಾವುದಾದರೊಂದು ಪದ್ಧತಿಯನ್ನು ಸಂಪೂರ್ಣವಾಗಿ ವಹಿಸಿರುವುದು ಅವಶ್ಯವು. ಇದು ಪರಿಸ್ಥಿತಿಯ ವಾತಾವರಣವನ್ನು ಹೊಂದಿಕೊಂಡು ಸುಲಭವೂ ಸಫಲವೂ ಆಗಿ ನಾಗುವ ಸಮರ್ಥತೆಯುಳ್ಳದಾಗಿರಬೇಕು ಇಂಥಾ ಸೌಕರ್ಯವು, ಹಿಂದೀಯ ಬಡ ಜನರ ಸೇವೆಮಾಡುವ ವೈದ್ಯನಿಗೆ ಆಯುರ್ವೇದದಲ್ಲಲ್ಲದೆ ಮತ್ತೊಂದರಲ್ಲಿ ದೊರೆಯದು. ಇದರಿಂದ ಚಿಕಿತ್ಸಕನಿಗೂ ರೋಗಿಗೂ ಒದಗುವ ಸೌಲಭ್ಯ ಸೌಕರ್ಯಗಳು ನಿಕ್ಕಯಾವುದಕ್ಕೂ ಸಿಲುಕವು. ಉದಾಹರಣೆಗಾಗಿ ಆಯುರ್ವೇದವು ನಮ್ಮ ಆಹಾರಕ್ಕೂ ಔಷಧಿಗೂ ಇಟ್ಟಿರುವ ನಿಕಟ ಸಂಬಂಧ, ಸುತ್ತು ಮುತ್ತಲಿನ ಗಿಡಬಳ್ಳಿ, ಕಲ್ಲು, ಮಣ್ಣುಗಳನ್ನು ಔಷಧಿಯೋಜನೆಯಲ್ಲಿ ಹೊಂದಿಸಿದ ಕುಶಲತೆ, ಇವೆಲ್ಲವೂ ಅಪೂರ್ವವಾದುವು. ಅಷ್ಟೇ ಅಲ್ಲ, ಸಾಮಾನ್ಯನಿಗೆ ಸಾಧಾರಣ ರೀತಿಯಿಂದಲೂ, ಅಸಾಧಾರಣನಿಗೆ ಅಸಾಧಾರಣ ರೀತಿಯಿಂದಲೂ ಸಫಲವಾಗಿ ಬಳಸಲಿಕ್ಕೆ ಬರುವಂತೆ ರಚಿಸಿದ ಅದರ ಪ್ರಯೋಗಸೂತ್ರವು ಅನುಪಮವಾದುದೇ ಸರಿ! ಮತ್ತು ಅದರ ತತ್ವಸಿದ್ಧಾಂತಗಳು ಅನ್ಯಪದ್ಧತಿಗಳ ಕಣ್ಣಿಗೂ ನಿಲುಕದ ಉನ್ನತ ಸೀಮೆಯಲ್ಲಿ ನೆಲಸಿವೆ. ಹೆಚ್ಚೇನು ಜಗತ್ತಿಗೆ ಆದರ್ಶವಾಗಿದೆ. ಹಿಂದೀಯ ಚಿಕಿತ್ಸಾಸೇವಕನಿಗೆ ಇದೇ ಸುಗಮವೂ ಶ್ರೇಷ್ಠವೂ ಆದ ಹಾದಿ ಎಂಬುದರಲ್ಲಿ ಸಂದೇಹವಿಲ್ಲ.

ಆದರೆ ವೈದ್ಯನಾಗಬೇಕೆಂದರೆ ವೈದ್ಯವೇಷಧಾರಿಯಾಗಿ ಹಳ್ಳಿಗೆ ನುಗ್ಗಿಬಿಡುವುದೂ ಅಲ್ಲ. ಕೇವಲ ಹಲಕೆಲವು ಜಾಡ್ಯಗಳನ್ನು ಚಿಕಿತ್ಸಿಸಬಲ್ಲ ಭಿಷಕ್ ಆಗಿ ದುಡಿಯುವುದೂ ಅಲ್ಲ. ಅಂಥಾ "ವೈದ್ಯರು" ಈಗ ಎಷ್ಟು ಮಂದಿ ಹಳ್ಳಿಯಲ್ಲಿ ನೆಲಸಿಲ್ಲ? ಅವರಿಂದಾದ ಆಗುತ್ತಿರುವ ಪರಿಣಾಮವೇನು? ಆಯುರ್ವೇದವೂ ಇಂಥವರನ್ನು ವೈದ್ಯರೆನ್ನಲಿಲ್ಲ. ಅದು ನಿರೂಪಿಸಿದ "ವೈದ್ಯ"ನ ವ್ಯಾಖ್ಯೆಯು ಗಹನವಾಗಿದೆ, ವಿಶಾಲವಾಗಿದೆ. ಅದು ಹಾಗಿರಲಿ.

ಇಂದು ನಮ್ಮ ಜನತೆಯಲ್ಲಿ ನೆಲೆಸಿರುವ ಮುಕ್ಕಾಲುಪಾಲು ರೋಗಗಳಿಗೆ ಇಂದಿನ ನಮ್ಮ ದೇಶದ ಆರ್ಥಿಕದುರ್ಗತಿಯೇ ಕಾರಣವೆನ್ನಬಹುದು. ಆದರೆ ಕೋಲೆರಾ, ಸಿಡುಬು, ಪ್ಲೇಗು ಮುಂತಾದ ಅನೈರ್ಮಲ್ಯದಿಂದ ಬರುವ ಸಾಂಕ್ರಾಮಿಕ ರೋಗಗಳೂ ಮಲೇರಿಯಾ, ಉಷ್ಣಭೇದಿ ಮುಂತಾದ ಸ್ಥಳ-ಕಾಲಭೇದದಿಂದ ಬರುವ ರೋಗಗಳೂ, ಅಜೀರ್ಣ, ಅತಿಸಾರ, ಜ್ವರ ಇತ್ಯಾದಿ ಆಹಾರ ದೋಷದಿಂದ ಬರುವ ಜಾಡ್ಯಗಳೂ ಹೆಚ್ಚಾಗಿ ಜನರ ತಿಳಿಗೇಡಿತನದಿಂದಲೇ ಹುಟ್ಟುವವೆಂದು ಕೆಲವರು ಹೇಳುವರು. ಇದರಲ್ಲಿ ಒಂದಿಷ್ಟೇನೂ ನಿಜಾಂಶವಿರಬಹುದು. ಆದರೆ ಜನರ ತಿಳಿಗೇಡಿತನವು ಮುಖ್ಯಕಾರಣವಲ್ಲ. ಏಕೆ ಆ ತಿಳಿಗೇಡಿತನಕ್ಕಾದರೂ ಇಂದಿನ ಆರ್ಥಿಕ ದುರ್ಗತಿಯೇ ಪ್ರಬಲಕಾರಣವಲ್ಲವೆ? ಅರೆ ಹೊಟ್ಟೆ ತುಂಬಿಸಿ ಕೊಳ್ಳುವ ಸಾಧ್ಯವಿಲ್ಲದವನು ಅಮಾವಾಸ್ಯೆ ಹುಣ್ಣಿಮೆಗೊಮ್ಮೆ ದೊರೆತಾಗಲಾದರೂ ಹೊಟ್ಟೆತುಂಬಾ ಉಣ್ಣುವ ಆಸೆಯನ್ನು ಹೇಗೆಂದು ತಡೆದು ಕೊಂಡಾನು? ದಿನದಲ್ಲಿ 18 ತಾಸು ದುಡಿದರೂ ಒಪ್ಪೊತ್ತು ಹೊಟ್ಟೆತುಂಬ ಉಣ್ಣಲಾರದ ಗರೀಬನು ಸ್ವಕೈ ಗುಡಿಸಲನ್ನು ಎಷ್ಟು ನಿರ್ಮಲವಿಟ್ಟುಕೊಂಡಾನು? ಇರಲು ಗುಡಿಸಲು ಹೊದೆಯಲು ಕಂಬಳಿಗೆ ಗತಿ ಇಲ್ಲದವನು ಋತುಕಾಲದ ಪೆಟ್ಟಿನಿಂದ ಹೇಗೆ ತಪ್ಪಿಸಿ ಕೊಂಡಾನು? ಪಾಪ! ಇದು ಅಜ್ಞಾನವೇ, ಅಡಚಣೆಯೇ?

ಇನ್ನೂ ಸ್ವಲ್ಪ ವಿವೇಚಿಸೋಣ—ಮಾನವನಲ್ಲಿ ಹುಟ್ಟುವ ರೋಗಗಳು ಮುಖ್ಯವಾಗಿ ಎರಡುವಿಧ ೧ ಮಾನಸಿಕ, ೨ ಶಾರೀರಕ. ಇವುಗಳ ಪ್ರವೇಶವೂ ಎರಡು ವಿಧ ೧ ಶರೀರದಲ್ಲಿ ಹುಟ್ಟಿ ಮನಸ್ಸನ್ನು ಆವರಿಸುವುದು. ೨ ಮನಸ್ಸಿನಲ್ಲಿ ಪ್ರವೇಶಿಸಿ ಶರೀರದಲ್ಲಿ ಪ್ರಕಟವಾಗುವುದು. ಈ ಎರಡು ವಿಧದ ರೋಗೋತ್ಪತ್ತಿಗೂ ನಮ್ಮಲ್ಲಿ ದಾರಿದ್ರ್ಯವೇ ಬಲವಾದ ಹೇತು. ಹೇಗೆಂದರೆ, ಬಡತನಕ್ಕೆ ತುತ್ತಾದವನಿಗೆ ವ್ಯಸನವು ಬಿಟ್ಟದ್ದಲ್ಲ. ವ್ಯಸನವು ಮನಸ್ಸನ್ನು ಹಿಂಡಿ ಹಿಪ್ಪೆಮಾಡುವುದು. ಮನಸ್ಸು ದುರ್ಬಲ

ವಾದವನಿಗೆ ಶಾರೀರಕ ಚಟುವಟಿಕೆ ಎಲ್ಲಿಂದ ಬರಬೇಕು? ಇದರಿಂದ ಬರಬರುತ್ತಾ ಶಾರೀರಕ ವಿಕಾರಗಳು ಹುಟ್ಟುವವು ಉದಾಹರಣೆಗಾಗಿ ಚಿಂತೆಗೊಳಗಾದವನಿಗೆ ಹಸಿವು ನಿದ್ರೆ ಕೆಡುವುದೂ, ಭಯಗೊಂಡವನಿಗೆ ಅತಿಸಾರ ಶುರುವಾಗುವುದೂ ನಾವು ನೋಡುವುದಿಲ್ಲವೆ? ಹಾಗೆಯೇ ಹೊಟ್ಟೆಗೆ ತಕ್ಕ ಆಹಾರವಿಲ್ಲದೆ ತೊಡಲು ಬಟ್ಟೆ ಇಲ್ಲದೆ ಹಾಗೂ ಮಿಥ್ಯಾಚಾರಗಳೇ ಮುಂತಾದವುಗಳಿಂದ ಬರುವ ಶಾರೀರಕರೋಗಗಳಿಂದ ಬಾಧಿತನಾದವನು ಖಿನ್ನನಾಗಿ ಕ್ರಮೇಣ ಮಾನಸಿಕ ವಿಕಾರ ಹೊಂದುವುದೂ ಸ್ವಾಭಾವಿಕವಷ್ಟೆ. ಆದ್ದರಿಂದ ನಮ್ಮಾ ಜನರನ್ನು ಕಾಡುತ್ತಿರುವ ಭಯಂಕರರೋಗಗಳಿಗೆ ಮುಖ್ಯವಾಗಿ ದಾರಿದ್ರ್ಯವೇ ಕಾರಣವೆಂಬುವನ್ನು ಅಲ್ಲಗಳೆಯುವರಾರು? ರೋಗಹೇತುವು ಹೀಗಿರುವಾಗ ಅದನ್ನರಿಯದೆ ಬರಿಯ ಬಾಹ್ಯಲಕ್ಷಣಗಳನ್ನು ಪರಿಹರಿಸುವ ಹಂಚಿಕೆಯಲ್ಲಿ ಹುರುಳಿದೆಯೆ? ಒಳಗೆ ಕೊಳಕನ್ನಿಟ್ಟು ಹೊರಗೆ ಲೇಪಹಚ್ಚುವುದೆಂಬಂತೆಯೇ ಆಗುವುದಲ್ಲವೆ?

ರೋಗಿಯ ರೋಗನಿವಾರಣೆಯು ವೈದ್ಯನ ಔಷಧಿ ಗುಳಿಗೆಯನ್ನು ಮಾತ್ರ ಹೊಂದಿಲ್ಲ. ಔಷಧಿಯು ಚಿಕಿತ್ಸೆಯ ಹಲವು ಅಂಗಗಳಲ್ಲಿ ಒಂದು. ಔಷಧಿಗಿಂತಲೂ ತಕ್ಕ ಆಹಾರವು ಮುಖ್ಯ. ಅದಕ್ಕಿಂತಲೂ ಮಾನಸಿಕ ತೃಪ್ತಿಯು ಮೇಲು. ಮಾನಸಿಕ ತೃಪ್ತಿ ಇಲ್ಲದಲ್ಲಿ ಆಹಾರವೂ, ತಕ್ಕ ಆಹಾರ ಉಪಚಾರ ವಿಲ್ಲದಲ್ಲಿ ಔಷಧಿಯೂ ಮೈಗೂಡಲಾರದು. ತೃಪ್ತಿಯಂತಿರಲಿ ತಕ್ಕ ಆಹಾರವೇ ಇಲ್ಲದಿರುವಾಗ ಔಷಧಿ ಚಿಕಿತ್ಸೆಯಿಂದಾದೇನು? ಉಣ್ಣಲು ಅಂಬಲಿ ಇಲ್ಲದವನು ಔಷಧಿ ಚಿಕಿತ್ಸೆ ಹೊಂದುವಾಗ-ಆಕಳಹಾಲು ಹಾಗೂ ಗಂಜಿ ಕುಡಿಯ ಬೇಕೆಂದರೆ ಎಲ್ಲಿಂದ ಬರಬೇಕು? ಆದ್ದರಿಂದ ಇಂತಹ ಮಂದಿಯ ಚಿಕಿತ್ಸೆಮಾಡುವ ವೈದ್ಯನಲ್ಲಿ ಇಲ್ಲದ ಸೌಕರ್ಯವನ್ನು ಉಂಟುಮಾಡಲಾಗದಿದ್ದರೂ, ಸ್ವಲ್ಪ ಮಟ್ಟಿಗಾದರೂ ಸುಧಾರಿಸುವ ಕುಶಲತೆಯು ಇರಬೇಕು. ತಮ್ಮ ನಿತ್ಯದ ಜೀವನ ಸಂಕಷ್ಟದಲ್ಲಿ ನೆರವಾಗುವವನಿರುವನೆಂಬ ವಿಶ್ವಾಸವು ಅವರಲ್ಲಿ ಬರಬೇಕು. ಬರಬರುತ್ತಾ ಅವರ ರೋಗಹೇತುವಿನ ಮೂಲವನ್ನೇ ಕಿತ್ತು ಹಾಕುವ ಶಕ್ತಿ-ಸಾಮರ್ಥ್ಯವನ್ನು ವೈದ್ಯನು ಸಾಧಿಸಬೇಕು. ಇಂಥಾ ವೈದ್ಯರೂ, ಸುಧಾರಕರೂ ಇಂದು ಹಿಂದೂಸ್ಥಾನಕ್ಕೆ ಬೇಕಾದುದು, ಇಂಥ ಕಸಬನ್ನೇ ಅರಿತವರು ಹಿಡಿಯಬೇಕಾದುದು.

ಅತಿ ಹೊಟ್ಟೆಯಿಂದ ನರಳುವ ಮಂದಿಗೆ ಬಂದ ಸಾಮಾನ್ಯ ಜಾಡ್ಯಗಳನ್ನು ಪರಿಹರಿಸಿ ಬದುಕಿಸುವುದು ಮತ್ತೂ ನರಳಿಸುವುದೇ ಅಲ್ಲವೆ? ಆ ಜಾಡ್ಯದ ಮೂಲವಾದ ದಾರಿದ್ರ್ಯವನ್ನೇ ಪರಿಹರಿಸುವುದು ಮೇಲಾದುದೂ ಬೇಕಾದುದೂ ಇದೆ. ಆದ್ದರಿಂದ ವೈದ್ಯನು ಈ ಧ್ಯೇಯವನ್ನು ಸಾಧಿಸುವುದಕ್ಕಾಗಿ ಜನರ ಹೊಕ್ಕು ಬಳಕೆಯನ್ನು ಹೊಂದು ವೈದ್ಯಕ್ಕೆ ಚಿಕಿತ್ಸಾ ಪ್ರಯೋಗವನ್ನು ಒಂದು ಸಾಧನವಾಗಿ ಪಡೆದಿರಬೇಕೆಂದರೂ ಹೆಚ್ಚಾಗದು. ಅವನ ಗುರಿಯು ತನ್ನ ಜನರ ಸೇವೆಯ ಮೂಲಕ ನಿತ್ಯಕಾಡುತ್ತಿರುವ ಮಹಾ ಸಂಕಟವನ್ನು ಕಿತ್ತು ಹಾಕುವುದೇ ಆಗಿರಬೇಕು. ಹಾಗಿಲ್ಲದೆ ತನ್ನ ಹೊಟ್ಟೆಯೊಂದನ್ನೇ ಹೊರುವ ಪಾಡಿನ ವೈದ್ಯನನ್ನು ಇಂದಿಗೆ ವೈದ್ಯ ನೆಂಬುದಕ್ಕಿಂತ "ಭೃತ್ಯ"ನೆಂಬುದು ಮೇಲಲ್ಲವೆ?

ಆದರೆ ಇಂಥಾ ಜನಸೇವೆಯ ಗುಣವು ಮನುಷ್ಯನಲ್ಲಿ ತಾನೇ ತಾನಾಗಿ ಹುಟ್ಟುವುದು ಕಷ್ಟಸಾಧ್ಯ. ಈಗ ವೈದ್ಯಕೀ ಕಲಿಯುವವರಲ್ಲಂತೂ ತಮ್ಮ ಸುಖಸಿದ್ಧಿಯೇ ಗಮ್ಯವಾಗಿದೆ. ಕಲಿಸುವ ಶಾಲೆಗಳಂತೂ ಆ ಸದ್ಗುಣವನ್ನು ಹುಟ್ಟಿಸುವಗೋಜಿಗೆ ಹೋಗುವುದಿಲ್ಲ. ಹೆಚ್ಚೇಕೆ ತಮ್ಮಲ್ಲಿ ಕಲಿತ ಕಸಬು ಕಲೆಯ ಜ್ಞಾನವನ್ನು ದೇಶ-ಕಾಲ ಪರಿಸ್ಥಿತಿಗಳನ್ನು ಹೊಂದಿಕೊಂಡು ತಮ್ಮ ಸ್ವಾರ್ಥಸಾಧನೆಯನ್ನಾದರೂ ಹೇಗೆಸಾರ್ಥಕವಾಗಿ ಸಾಧಿಸಬೇಕೆಂಬುದನ್ನು ತೋರಿಸಿ ಕೊಡುವರೆ? ಗ್ರಂಥಪಾಠಗಳನ್ನು ಮಾತ್ರ ಬೋಧಿಸಿ ಪರೀಕ್ಷೆಗಳನ್ನು ಮಾತ್ರ ಗಮ್ಯವಾಗಿ ಇಟ್ಟುಕೊಂಡಿರುವರು. ಹೀಗಿರುವಾಗ ವೈದ್ಯರು ಜನತಾ ಸೇವಕರಾಗಬೇಕು, ದೇಶಾಭಿಮಾನಿಗಳಾಗಬೇಕು ಹಿತಾಲೋಚಕರಾಗಬೇಕೆಂದರೆ ಹೇಗೆ ಸಾಧ್ಯ?

ಈ ಮೇಲಿನ ಮುಗ್ಗಟ್ಟನ್ನು ಮನಗಂಡು ನಿವಾರಿಸುವುದಕ್ಕಾಗಿಯೇ ಪಂಡಿತ ತಾರಾನಾಥರು ಪ್ರೇಮ ವಿದ್ಯಾಪೀಠವನ್ನು ಸ್ಥಾಪಿಸಿರುವರು. ಪಂಡಿತರ ಅಪ್ರತಿಮ ಪಾಂಡಿತ್ಯ ಹಾಗೂ ಅಸಾಧಾರಣ ಕರ್ತೃತ್ವ ಶಕ್ತಿಯು ಜಗತ್ತಿಗೇ ಶ್ರುತವಾದುದು. ಈ ವಿದ್ಯಾಪೀಠದಲ್ಲಿ ಈಗಾಗಲೇ ಹಲವುಮಂದಿ ಉತ್ತೀರ್ಣರಾಗಿ ಅಲ್ಲಲ್ಲಿ ಹಬ್ಬಿ ಮೇಲೆ ತೋರಿಸಿದಂಥಾ ಸ್ವಪರ ಹಿತಸಾಧನವನ್ನು ಮಾಡುತ್ತಿದ್ದಾರೆ. ಪಂಡಿತರ ಈ ಸಾಹಸವು ದೇಶಕ್ಕೇ ಆದರ್ಶವಾದುದೆಂದು ಮಹನೀಯರನೇಕರು ಮುಕ್ತಕಂಠದಿಂದ ಹೊಗಳಿರುವರು. ಆದರೆ ಇದರ ಮೇಲ್ಮೆಯನ್ನು ವ್ಯಕ್ತಪಡಿಸುವುದು ನಮ್ಮ ಧ್ಯೇಯವಲ್ಲ ನಮ್ಮ ಜನರ ಸೇವೆಗಾಗಿ ಹಾರೈಸುತ್ತಿರುವ ಉತ್ಸಾಹೀತರುಣರಿಗೆ ಅವರ ಉತ್ಸಾಹಕ್ಕೆ ತಕ್ಕ ಸಾಧನೆಯ ಹಾದಿಯನ್ನು ತೋರಿಸುವುದೇ ನಮ್ಮ ಉದ್ದೇಶ. ಅಷ್ಟೇ ಅಲ್ಲ, ತಮ್ಮ ಜೀವನೋಪಾಯಕ್ಕೂ ಪ್ರಯೋಗಸಿದ್ಧ ದೇಶ ಸೇವೆಗೂ ಅನುಕೂಲವಾದ ಶಿಕ್ಷಣಸ್ಥಾನವನ್ನು ಮಾತ್ರ ನಾವು ತೋರಿಸುತ್ತೇವೆ ಸ್ವಪರಸುಖ-ಸ್ವಾತಂತ್ರ್ಯ ಜೀವನೋದ್ಯೋಗಗಳು ನವಯುವಕರಿಗೆ ಸುಲಭ ಸಾಧ್ಯವಾಗಲಿ!

ಕನ್ನಡ ನುಡಿವೆಣ್ಣಗೊಂದು

ವ

ವ ತ್ರ ಲಾ

ಲಾ

ಕನ್ನಡಗಿತ್ತಿಯ ಕಿರುಗಾಣಿಕೆ

ಲೇಖಕಿಯರು:
ಶ್ರೀಮತಿ ಮಟ್ಟಾಡಿ ಕಮಲಾಕ್ಷಿ.

ಸ್ತ್ರೀಯರಿಗೆ ವಿದ್ಯಾಭ್ಯಾಸವಿಲ್ಲದಿರುವುದರ ಪರಿಣಾಮವನ್ನೂ ಸ್ತ್ರೀ-ಪುರುಷ ಹೃದಯಗಳ ಪರಿಚಯವನ್ನೂ ಸೊಗಸಾಗಿ ಚಿತ್ರಿಸಿದ ಸಾಮಾಜಿಕ ಕಾದಂಬರಿ. ಪ್ರತಿಯೊಬ್ಬರೂ ಓದಬೇಕಾದ ಪುಸ್ತಕ.

ಬೆಲೆ: 0-7-3 ಮಾತ್ರ.

೧೨ಕ್ಕಿಂತ ಹೆಚ್ಚು ಪ್ರತಿ ಕೊಳ್ಳುವ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೊ
ಚರ್ಚ್‌ರೋಡ್, ಉಡುಪಿ

ON THE EVE OF THE
SILVER JUBILEE OF THE

East & West Insurance Co., Ltd.

MESSRS. PADUBIDRI BROTHERS,

The accredited Chief Agents of the Company invite applications for liberal Agency contracts from Gentlemen of status and influence to cooperate in the production of a record business of Rs. 10,00,000 as a gift in honour of the advent of the auspicious event.

For particulars apply to:

Messrs. Padubidri Bros.,
CHIEF AGENTS.
KARNATAKA & MAHARASTRA.
40, Narayanlal Bansilal Mansion,
Bellasis Road, BOMBAY 8.

ಅಧ್ಯಾಯ ೩

ಭಿ ‖ ಕಾ ‖ ರಿ ‖ ಣಿ

ಸಾ ಮಾ ಜಿ ಕ ಕಾ ದಂ ಬ ರಿ

"ಅಯ್ಯೊಯ್ಯೋ! ಅಯ್ಯೋ!! ಅ....ಯ್ಯೋ.......!"

ಆ ರಾತ್ರಿ ಶಿವಪುರ ಮಠದ ಶಿವಾನಂದ ಸ್ವಾಮಿಗಳಿಗೆ, ಹುಸುಹೊತ್ತು ಹಾಸಿಗೆಯಲ್ಲಿ ಮಲಗಿ, ಆ ಮೇಲೆ ಜಗ್ಗನೆದ್ದು ತೀವ್ರ ಅಸಹಿಷ್ಣುತೆಯಿಂದ ಗಸ್ತೆಬದಿಯ ಕಿಟಿಕಿಯಿಂದ ಇಣಿಕಿಣಿಕಿ ನೋಡುವುದೊಂದೇ ಕೆಲಸ. ಪ್ರತಿ ಹತ್ತು ನಿಮಿಷಕ್ಕೊಮ್ಮೆ ಎಂಬಂತೆ ಈ ಕ್ರಿಯೆಯನ್ನವರು ಯಾಂತ್ರಿಕವಾಗಿ ನಡಿಸುತ್ತಿದ್ದರು. ಅದೊಂದು ಉತ್ತೇಜಕತೆಯು ಅವರ ನರನಾಡಿಗಳಲ್ಲಿ ತುಂಬಿ ಅಮಲೇರಿದವರಿಗಿಂತ ಕಡೆಯಾಗಿ ಮಾಡಿದ್ದಿತು ಅವರನ್ನು. ಮದ ವೇರಿದ ಆನೆಯಂತಾಗಿದ್ದರವರು ಅಂದಿನ ರಾತ್ರಿ. ಅಂದೊಂದು ದಿನ ಶಿವ ಗುಡಿಯಲ್ಲಿ,ಶಿವಪೂಜೆಗೆಂದು ತನ್ನ ಗೆಳತಿಯರೊಂದಿಗೆ ಹೋಗಿದ್ದ ಲಲಿತೆಯನ್ನು ಕಂಡಂದಿನಿಂದ ಶಿವಾನಂದರ ಹೃದಯದಲ್ಲುಂಟಾಗಿದ್ದ ಕಾಮತೃಷೆಯು ಇಂದು ತೃಪ್ತಿಹೊಂದುವ ನಿರೀಕ್ಷೆಯಿಂದ ಮತ್ತಷ್ಟು ಪ್ರಕೋಪಗೊಂಡು ಹೃದಯ ವನ್ನೇ ಸುಡುತ್ತಿತ್ತು. ಅವರು ಮತಿವಿಕಳರಂತೆ ಆಗಾಗ ಏನೇನೋ ತನ್ನಷ್ಟ ಕ್ಕನೇ ಗುಡುಗುಡಿಸುತ್ತಾ, ಕ್ರೋಧೆಗೊಂಡು ಗಡಗಡ ನಡುಗುತ್ತಿದ್ದರು. ಕಿಟಕಿಯಲ್ಲಿ ಇಣಿಕಿಣಿಕಿ ಸಾಕಾಗಿ ಬುಸ್ಸೆಂದು ಬುಸುಗುಟ್ಟುತ್ತಾ, ಹಾಸಿಗೆಯ ಮೇಲೆ ಕೈಕಾಲು ಬಿಟ್ಟು ಮರದ ದಿಂಬಿನಂತೆ ಬಿದ್ದುಬಿಟ್ಟರು. ಇದೇ ರೀತಿ ನಡೆದರೆ ಅವರ ಹೃದಯವೆಲ್ಲಿ ಒಡೆದುಹೋಗುವುದೋ ಎಂದು ಭೀತಿ ಪಡ ಬೇಕಾಗಿತ್ತು.

ಅಷ್ಟರಲ್ಲಿ ಬಡಬಡ ಬಾಗಿಲು ತಟ್ಟಿದ ಶಬ್ದವಾಯಿತು. ಆ ಶಬ್ದವು ಶಿವಾನಂದರ ಕ್ರೋಧೆಯನ್ನೆಲ್ಲಾ ಕ್ಷಣಮಾತ್ರದಲ್ಲಿಳಿಸಿ ಬಿಡುವ ಮಂತ್ರಶಕ್ತಿ ಯಾಯಿತು. ಅವರು ಹೊಸ ಜೀವ ಪಡೆದವರಂತೆ ಅತ್ಯುಲ್ಲಾಸದಿಂದ ತಕ್ಷ ಣವೇ ಹಾಸಿಗೆಯಿಂದೆದ್ದು ಬಾಗಿಲು ತೆರೆದು ಅತ್ಯಂತ ಉತ್ಸುಕತೆಯಿಂದ ಕತ್ತು ನೀಡಿ ಹೊರನೋಡಿದರು. ಆಗ ಎದುರಲ್ಲಿ ನರಸಿಂಹ ನಾಗಿಯರು ಮಾತ್ರ ನಿಂತಿರುವುದನ್ನು ಕಂಡು, ಎಷ್ಟೊಂದು ಉತ್ಸಾಹದಿಂದ ಕತ್ತುನೀಡಿದರೋ ಅಷ್ಟೇ ನಿರುತ್ಸಾಹದಿಂದ ಅದನ್ನೊಳಗೆಳೆದು ಬಿಟ್ಟರು. ಸಿಟ್ಟಿನ ಭರದಲ್ಲಿ ಮಾತಾಡುವುದೇನೆಂದು ಅವರಿಗೆ ತಿಳಿಯಲಿಲ್ಲ. ಉಗ್ರ ನರಸಿಂಹರಾಗಿ, ಗೂಡೊಳಗಣ ಹಸಿದ ಸಿಂಹವು ಇನ್ನೂ ತನಗೆ ತಿನ್ನಸಿಗದೆ ಹೊರಗೆಯೇ ತೂಗಾಡಲ್ಪಟ್ಟಿರುವ ಮಾಂಸವನ್ನು ಕಂಡು ಗೂಡಿನ ಸರಳುಗಳ ನಡುವೆ ಬಾಯಿ ಹಾಕಿ ಅಡ್ಡಬರುವ ಸರಳುಗಳನ್ನು ಕಟಕಟನೆ ಕಡಿವಂತೆ, ತನ್ನ ಇಚ್ಛಾಪೂರ್ತಿಗೆ ದೊಡ್ಡ ತಡೆಯಾಗಿರುವ ಸ್ವಾಮಿತ್ವದ ಬಂಧನವನ್ನೇ ಕಟ ಕಟ ಕಡಿವಂತೆ ಹಲ್ಲು ಕಡಿದರು. ಆ ಮೇಲೆ ಉನ್ಮತ್ತನಂತೆ ನರಸಿಂಹ ಭಟ್ಟನ ಹುಲುಸಾಗಿ ಬೆಳೆದ ಜುಟ್ಟನ್ನು ಗಟ್ಟಿಯಾಗಿ ಹಿಡಿದು ಒಳಗೆಳೆದು, "ಈ ರಂಡೆ ಯಾಕೆ? ಅವಳೆಲ್ಲಿ?" ಎಂದು ಗರ್ಜಿಸಿದರು. ನರಸಿಂಹನ ಕಪಾಲವೇ ಎದ್ದು ಬರುವಂತಾಯಿತು. ಅವನು, "ಕ್ಷ—ಕ್ಷ—ಕ್ಷಮಿಸಬೇಕು ಪರಾಕೆ! ಅ— ಅವಳೂ ಇದ್ದಾಳೆ" ಎಂದು ಮೊರೆಯಿಟ್ಟನು. ನರಸಿಂಹನ ಅವಸ್ಥೆಯನ್ನು ಕಂಡು ಆ ದುಃಖದಲ್ಲಿಯೂ ನಾಗಿಯ ತುಟಿಗಳಲ್ಲಿ ನಗೆಯು ತನ್ನಂತೆ ನೆಗೆದು ಬಂತು. ಅವಳು ಸೆರಗಿನ ತುದಿಯಿಂದ ತುಟಿಗಳನ್ನು ಮರೆಮಾಡಿದಳು. "ಅವಳೂ ಬಂದಿದ್ದಾಳೆ" ಎಂದೊಡನೆಯೇ ನರಸಿಂಹನ ಜುಟ್ಟಿನ ಕೈ ಥಟ್ಟನೆ ಬಿಟ್ಟುಹೋಯಿತು. ಶಿವಾನಂದರ ಉರಿಮುಸಗಿದ ಮುಖಕ್ಕೆ ಫಕ್ಕನೆ ಪನ್ನೀರು ಚೆಲ್ಲಿದಂತಾಯಿತು. ಅವರು ನರಸಿಂಹನ ಕುಂತು ಮೊದಲು ಎಷ್ಟು ಬೇಗ ಉಗ್ರ ಕ್ರೋಧಗೊಂಡಿದ್ದರೂ ಅಷ್ಟೇ ಬೇಗ ಈಗ ಅತ್ಯಂತ ಪ್ರಸನ್ನರಾದರು. "ನೀನು ಹೋದರೆ ಹಾಗೆಯೇ ಹಿಂದೆ ಬರುವುದುಂಟೇ ನರಸಿಂಹ? ಆದರೆ ಅವಳೆಲ್ಲಿ?" ಎಂದು ಬಹಳ ಉತ್ಕಂಠಿತರಾಗಿ ಪ್ರಶ್ನಿಸಿದರು. ನರಸಿಂಹನು ಜುಟ್ಟು ಸರಿಮಾಡಿಕೊಳ್ಳುತ್ತಾ, "ಹೌದೌದು, ಒಮ್ಮೆ ತುಳಿಯುವುದು, ಮು ತ್ತೊಮ್ಮೆ ತಲೆಯ ಮೇಲೆ ಹೊತ್ತುಕೊಳ್ಳುವುದು! ನನಗಿನ್ನು ಈ ಚಾಕರಿಯೇ ಬೇಡ" ಎಂದ ಸ್ವಲ್ಪ ಎದೆಗೊಂಡು. "ಸಾಕು ಸಾಕು ನಿನ್ನ ಅಧಿಕಪ್ರಸಂಗ! ಅವಳೆಲ್ಲಿರುವಳು ಹೇಳು" ಎಂದರು ಸ್ವಾಮಿಗಳು ಪುನಃ ಸಿಟ್ಟಿನ ನಟನೆಯಿಂದ. "ಅವಳೆಲ್ಲಿರುವಳೆಂದು ಅವಳ ತಾಯಿಯೇ ಹೇಳುವಳು. ಅವಳೊಡನೆಯೇ ಕೇಳಿರಿ" ಎಂದು ನರಸಿಂಹನು ನಾಗಿಯನ್ನು ಒಳಕರೆದನು. ನಾಗಿಯು ಒಳ ಬರುವಾಗಲೆ, "ಪರಾಕೆ, ಕ್ಷಮಿಸಬೇಕು ನಾನು ಮಾಡಿದ ಅಪರಾಧವನ್ನು" ಎಂದು ಸ್ವಾಮಿಗಳ ಪವಿತ್ರ ಪಾದಕ್ಕೆ ತನ್ನಂತಹ ಪಾಪಿಯ ನಾಳಿ ಕೂಡಾ ಸೋಕಲಾಗದೆಂದು ದೂರದಲ್ಲೇ ಅಡ್ಡಬಿದ್ದಳು. "ಎಲ್ಲಿ, ನಿನ್ನ ಮಗಳೆಲ್ಲಿ ಹೇಳು!" ಎಂದು ಮತ್ತಷ್ಟು ಸಿಟ್ಟು ನಟಿಸಿ ಕೇಳಿದರು ಸ್ವಾಮಿಗಳು. "ಮೊದಲು ನನಗೆ ಅಭಯಕೊಟ್ಟರೆ ಆಮೇಲೆ ಅವಳನ್ನು ಕರತರುತ್ತೇನೆ ಪರಾಕೆ" ಎಂದು ನಾಗಿಯು ಕಣ್ಣೀರಿಂದ ಮುಖದಡಿಯ ನೆಲವನ್ನೆಲ್ಲಾ ಒದ್ದೆಮಾಡಿಬಿಟ್ಟಳು. "ಹೂಂ, ಏಳು, ಅವಳನ್ನು ಬೇಗ ಕರೆತಾ" ಎಂದರು ಸ್ವಾಮಿಗಳು ಸ್ವಾಮಿತ್ವದ ಗಾಂಭೀರ್ಯದಿಂದ. ನಾಗಿಯು ಎದ್ದು ಅತಿದೈನ್ಯದಿಂದ, "ಪರಾಕೆ ಅವಳು ಬಹಳ ಎಳೆ ಪ್ರಾಯದವಳು. ಇನ್ನೂ ಶಾಲೆಗೆ ಹೋಗುವ ಹುಡುಗಿ. ಅಲ್ಲಿ ಅವಳ ಟೀಚರೊಬ್ಬಳು ಏನೇನೋ ಅವಳ ತಲೆಗೆ ಹಾಕಿ ಮರುಳುಮಾಡಿರು ವಳು. ಅದುವರಿಂದಲೇ ನನಗೆ ಮಾತುಕೊಟ್ಟಂತೆ ನಡೆಯಲಾಗಲಿಲ್ಲ ಬುದ್ಧಿ" ಎಂದು ಹೇಳಿಕೊಂಡಳು. "ಆಯ್ತಾಯ್ತು, ನೀನೀಗ ಹೋಗಿ ಅವಳನ್ನು ಕರಕೊಂಡು ಬಾ ಬೇಗ" ಎಂದರು ಸ್ವಾಮಿಗಳು ಸ್ವಲ್ಪ ಅಸಹನೀಯತೆಯಿಂದ. ಆದರೆ ನಾಗಿಯು ಅದನ್ನರಿತುಕೊಳ್ಳದೆ "ಪರಾಕೆ" ಎಂದು ಇನ್ನೂ ಮಾತಾಡ ಲಾರಂಭಿಸುವಷ್ಟರಲ್ಲಿ ಸ್ವಾಮಿಗಳು ಅದನ್ನು ಅಷ್ಟರಲ್ಲೇ ನಿಲ್ಲಿಸಿ "ಸಾಕಿನ್ನು ನಿನ್ನ ಪರಾಕೆಗಿರಾಕೆಯೆಲ್ಲ! ಕೊಲಗಿಲ್ಲಿಂದ! ನಿನ್ನ ಮಗಳನ್ನು ಕರಕೊಂಡು ಬಾ" ಎಂದು ಅಬ್ಬರಿಸಿದರು. ನಾಗಿಯೂ ಬಹಳ ಭೀತಿಗೊಂಡು ತಲ್ಲಣಿಸಿ, "ಅವಳು ಬರಲಿಕ್ಕೆ ಕೇಳುವುದಿಲ್ಲ ಬುದ್ಧಿ, ಮಠಕ್ಕೂ ಅವಳನ್ನು ಕಟ್ಟಿತಂದುದು. ಹುಡುಗಾಟಿಕೆಯವಳು ಬುದ್ಧಿ, ಕ್ಷಮಿಸಬೇಕು" ಎಂದು ಬಗ್ಗಿ ಕೈಜೋಡಿಸಿ ಬೇಡಿಕೊಂಡಳು. "ಹೂಂ, ಏನು ದಿಮಾಕು ರಂಡೆಗೆ! ಹೌದೋ ನರಸಿಂಹ? ಈಗ ಎಲ್ಲಿದ್ದಾಳವಳು?" ಎಂದು ಪ್ರಶ್ನಿಸಿದರು ಸ್ವಾಮಿಗಳು ಕಣ್ಣು ಕೆರಳಿಸಿ. "ಹೌದು ಪರಾಕೆ, ಅವಳೇನು ಸಾಧಾರಣ ಧಿಮಾಕಿನವಳಲ್ಲ. ಕೈಕಾಲು ಕಟ್ಟಿಯೇ ತಂದುದವಳನ್ನು. ಈಗ ಬೈಠಕು ಕೋಣೆಯಲ್ಲಿದ್ದಾಳೆ" ಎಂದ ನರ ಸಿಂಹ. "ನಾಗಿ, ಸಾಧ್ಯವಿದ್ದರೆ ಕರತಾ ಆ ರಂಡೆಯನ್ನಿಲ್ಲಿ. ಇಲ್ಲವಾದರೆ ನರಸಿಂಹನು ಜುಟ್ಟು ಹಿಡಿದು ಧರಧರನೆ ಎಳೆದು ತರುತ್ತಾನೆ" ಎಂದು ಸಿಡುಕಿ ದರು ಸ್ವಾಮಿಗಳು ಹುಬ್ಬುಗಂಟಿಕ್ಕಿ. ನಾಗಿಯು ಬೆದರಿ, "ಬೇಡ ಬುದ್ಧಿ, ಬೇಡ. ನಾನೇ ಕರತರುತ್ತೇನೆ" ಎಂದಳು. "ಹಾಗಾದರೆ ಹೋಗು! ನರ ಸಿಂಹ, ಅವಳನ್ನು ಕೋಣೆಗೆ ಕರಕೊಂಡು ಹೋಗು" ಎಂದು ಕೈಬೀಸಿ ಕಟ್ಟಾಜ್ಞೆಯಿತ್ತರು ಸ್ವಾಮಿಗಳು.

ನಾಗಿಯೂ ನರಸಿಂಹನೂ ಸ್ವಾಮಿಗಳ ಬೈಠಕು ಕೋಣೆಗೆ ಹೋಗುವಾಗ ನಾಗಿ ಮಧ್ಯೆ ಸ್ವಲ್ಪ ಹೊತ್ತು ನಿಂತು ಆಲೋಚಿಸಿದಳು. ಆಮೇಲೆ ಏನೋ ನರಸಿಂಹನ ಕಿವಿಯಲ್ಲಿ ಹೇಳಿದಳು. ನರಸಿಂಹನು ಕೋಣೆಯ ಸಂಕೋಲೆ ತೆಗೆದು ಅಲ್ಲಿಂದಲೇ ಎಲ್ಲಿಗೋ ಹೋಗಿಬಿಟ್ಟನು. ನಾಗಿಯೊಬ್ಬಳೇ ಕೋಣೆ ಯೊಳಕ್ಕೆ ಪ್ರವೇಶಿಸಿ ಅತ್ಯವಸರದಿಂದ ಲಲಿತೆಯ ಕೈಕಾಲು ಬಿಟ್ಟು ಬಾಯಿಯ ವಸ್ತ್ರವನ್ನೂ ಬಿಚ್ಚಿತೆಗೆದಳು. ಲಲಿತೆಯ ಮುಖವೆಲ್ಲಾ ಕಣ್ಣೀರು ಹರಿ ಹರಿದು ಗಟ್ಟಿಯಾಗಿ ಹೋಗಿತ್ತು. ಅವಳಿಗೆ ಥಕ್ಕನೆ ಏಳಲು ಸಾಧ್ಯವಾಗಲಿಲ್ಲ. ಆಗ ನಾಗಿಯು,"ಮಗು ಮಗೂ, ಏಳು ಏಳು, ನಾವು ಮನೆಗೆ ಹೋಗುವ" ಎಂದು ಕೈಹಿಡಿದೆತ್ತಿದಳು. ಮನೆಗೆ ಹೋಗುವ ಎಂದೊಡನೆಯೇ ಲಲಿತೆಗೆ ಒಮ್ಮೆಯೇ ಹೊಸ ಜೀವ ಬಂದ ಹಾಗಾಯಿತು. "ಹೋಗುವ ಅಮ್ಮಾ, ಬೇಗ ಹೋಗುವ. ಆ ಮಠಾತ್ಮರೆಲ್ಲಿ? ನಮ್ಮನ್ನವರು ಹೋಗ ಬಿಡುವರೇ?" ಎಂದಳು ಲಲಿತೆ ಕಂಗೆಟ್ಟ ಮುಂಹುಲ್ಲೆಯಂತಹ ಭೀತ ದೀನ ದೃಷ್ಟಿಯಿಂದ. ತಾಯಿಯ ಮಾತು ಸತ್ಯವೆಂದೇ ಬಗೆದಿದ್ದಳವಳು. ಒಂದೇಸವನೆ ನಾಗಿಯ ಕಂಗಳಲ್ಲಿ ಧರಧರನೆ ನೀರು ಹರಿಯಹತ್ತಿತು. ಅವಳ ಕಂಠವು ಕಟ್ಟಿಹೋಯಿತು. ಅವಳು ಲಲಿತೆಯನ್ನು ಬಿಗಿದಪ್ಪಿ ಬಾಯ್ಬಿಟ್ಟು ಅಳತೊಡಗಿದಳು. "ಅಮ್ಮಾ, ಅದೇಕೆ ಅಳುವೆ? ಹೋಗುವ ಮನೆಗೆ ಬೇಗ? ಮತ್ತೆ ಆ ದುಷ್ಟರೆಲ್ಲಿಯಾದರೂ ಸೀಡೆಕೊಟ್ಟರೆ?" ಎಂದಳು ಲಲಿತೆ ತಾಯಿಯ ಮರುಕವನ್ನು ಕಂಡು ವಿಸ್ಮಯ ಗೊಂಡು. ಅವಳಿಗೇನು ಗೊತ್ತು ನಾಗಿಯ ಅಂತರಂಗದ ತಳಮಳದ ಸಂಗತಿ? ನಾಗಿಯು ಕೋಣೆಗೆ ಬರುವಾಗ ಮಾಡಿದ ದೃಢನಿರ್ಧಾರವು ಲಲಿತೆಯನ್ನು ಕಂಡೊಡನೆಯೇ ಕರಗಿ ನೀರಾಯಿತು. ಅವಳು ಚಿಕ್ಕ ಮಗುವಿನಂತೆ ಅಳ ತೊಡಗಿದಳು. ಆಮೇಲೆ ಸ್ವಾಮಿಗಳು ಮತ್ತೇನು ಮಾಡುವರೋ ಎಂದು ಭಯವಿಹ್ವಲಳಾಗಿ ದೇವರಿಟ್ಟಂತಾಗುತ್ತದೆಂದು ಒಳಗೊಳಗೇ ಅಂದು "ಹೋಗುವ, ಮಗು ಹೋಗುವ" ಎಂದು ಕಂಬನಿ ತುಂಬಿದ ಕಂಗಳಿಂದ ಲಲಿತೆಯನ್ನ ರಕ್ಷಣ ದಿಟ್ಟಿಸಿ ಕೂಡಲೆ ದೃಷ್ಟಿ ತಿರುಗಿಸಿ ದುಃಖದ ಆವೇಗವನ್ನು ಒತ್ತಿಟ್ಟು ಕೊಂಡಳು. ಮಾತೆಯ ಪ್ರೇಮದ ಕರುಳನ್ನು ಭೀತಿಯು ಕತ್ತರಿಸಿ ಹಾಕಿತು. ಕೈ ಹಿಡಿದು ಲಲಿತೆಯನ್ನು ಕರೆದೊಯ್ದು ಸ್ವಾಮಿಯ ಶಯ್ಯಾಗೃಹದ ಬಳಿಗೆ ಹೋಗಿ ನಿಂತು ಹುಸು ಯೋಚಿಸಿದಳು. ಆ ಮೇಲೆ ದೀರ್ಘ ಶ್ವಾಸ ಬಿಟ್ಟು ಟಪ್ ಟಪ್ ಬಾಗಿಲು ಬಡಿದಳು. ಸಾಸಿವೆ ಬಿದ್ದರೂ ಗಟ್ಟಿಯಾಗಿ ಕೇಳಿ ಜಗ್ಗನೇಳುವಷ್ಟರ ಉತ್ಕಂಠಿತರಾಗಿದ್ದ ಶಿವಾನಂದರು ಒಡನೆಯೇ ಹಾಸಿಗೆ ಯಿಂದ ದಡಬಡನೆ ಎದ್ದು ಓಡಿಹೋಗಿ ಬಾಗಿಲು ತೆರೆದರು. ಅವರೊಂದಿ ಗೇನೇ ದೀಪದ ಬೆಳಕು ಹೊರಚಿಮ್ಮಿತು. ಶಿವಾನಂದರ ಭೀಮಕಾಯವನ್ನು ಕಂಡೊಡನೆಯೇ ಲಲಿತೆಯು ದಿಗಿಲುಗೊಂಡು, "ಅಮ್ಮಾ" ಎಂದು ಚೀರಿ ನಾಗಿ ಯನ್ನಪ್ಪಿ ಹಿಡಿದಳು. ಅಷ್ಟರಲ್ಲಿ ಶಿವಾನಂದರು, ಎತ್ತರದಲ್ಲೆಲ್ಲಿಯೋ ಕಾದಿದ್ದು ಅನುಕೂಲ ಸಂದರ್ಭ ದೊರೆತಾಗ ಒಮ್ಮೆಯೇ ನೆಲಕ್ಕೆರಗಿ ಕೋಳಿಮರಿ ಯನ್ನೆತ್ತಿ ಹಾರುವ ಗಿಡುಗನಂತೆ, ದಟ್ಟ ಪೊದರುಗಳೊಳಗೆ ಅವಿ ತಿದ್ದು ಸಂದರ್ಭ ನೋಡಿ ಥಟ್ಟನೆ ಹುಲ್ಲೆಯ ಮೇಲೆ ಹಾರಿ ಕಚ್ಚಿಕೊಂಡೊ ಯ್ಯುವ ಹಸಿದ ಹುಲಿಯಂತೆ, ಲಲಿತೆಯನ್ನು ರಟ್ಟೆಹಿಡಿದು ಎಳೆದೊಯ್ದು, ನಾಗಿಯು "ಬುದ್ಧಿ! ಪರಾಕೆ!!" ಎನ್ನುವಷ್ಟರಲ್ಲಿ ದಡಕ್ಕನೆ ಬಾಗಿಲು ಹಾಕಿ ಬಿಟ್ಟರು. ನಾಗಿಗೆ ಜೀವ ಹಾರಿದಂತಾಯಿತು. ಅವಳು ಗೋಡೆಗೆ ಕೈಗೊಟ್ಟು ನಿಲ್ಲಲೆತ್ನಿಸಿ ನಿಲ್ಲಲಾರದೆ ಜಾರಿ ನಿಶ್ಚೇತನಳಾಗಿ ಬಿದ್ದುಬಿಟ್ಟಳು. ಹಿಂದಿ ನಿಂದಲೇ ಕತ್ತಲೆಯ ಮರೆಯಲ್ಲಿದ್ದ ಧಾಂಡಿಗ ನರಸಿಂಹನು ಅವಳನ್ನೆಲ್ಲಿಗೋ ಹೊತ್ತುಕೊಂಡು ಹೋದನು.

ಷಡ್ವೈರಿಗಳಲ್ಲಿ ಮತ್ತಾವುದೂ ಕಾಮದಷ್ಟು ವಿಚಾರ ಕುರುಡಲ್ಲ. ಕಾಮೋದ್ರಿಕ್ತ ಮಾನವನು ನರ ಪಿಶಾಚಿಯು. ಎಂತಹ ಭೀಕರ ಕೃತ್ಯ ವನ್ನಾದರೂ ಮಾಡಹೇಸನು. ಇನ್ನೂ ಬಹಳ ಎಳೆ ವಯಸ್ಸಿನವಳಿದ್ದು ನಿರ್ದುಷ್ಟ ನಿರ್ಮಲ ಹೃದಯಳಿರುವ ಬಡ ಹುಡುಗಿ ಲಲಿತೆಗೆ ದಷ್ಟ

ಪುಷ್ಟನಾಗಿ ಕೊಬ್ಬಿ ಬೆಳೆದು ಕಾಮೋನ್ಮತ್ತನಾಗಿದ್ದ ಶಿವಾನಂದನು ಎಂತಹ ಉಪಟಳವನ್ನೆಲ್ಲಾ ಕೊಟ್ಟು, ಯಾವ ರೀತಿಯಲ್ಲಿ ಅವಳನ್ನು ಬಲಾತ್ಕರಿಸಿ ಅವಳ ಮೇಲೆ ಪೈಶಾಚಿಕ ಅತ್ಯಾಚಾರ ನಡಿಸಿದನೆಂಬುದನ್ನೆಲ್ಲಾ ವಿವರಿಸಲು ನಮ್ಮ ಲೇಖನಿಯು ಹೇಸುವುದು. ಅವನು ಲಲಿತೆಯನ್ನೆಳದೊಯ್ದು ಸುಮಾರು ಅರ್ಧ ತಾಸಿನಲ್ಲಿ 'ಅಯ್ಯಯ್ಯೋ! ಅಯ್ಯೋ! ಅ....ಯ್ಯೋ...........!' ಎಂಬ ಹೃದ್ರಾವಕ ಚೀತ್ಕಾರವು ಆ ಕರಾಳ ರಾತ್ರಿಯ ಗುಪ್ತ ಮುಸುಕನ್ನು ಕಿಲವೆಡೆ ಹರಿದುಬಿಟ್ಟಿತು. ನರಸಿಂಹನು ಸ್ವಾಮಿರ ಬೈಠಕು ಖಾನೆಯ ಹೊರಗಣ ಜಗಲಿಯಲ್ಲಿ ಆಗತಾನೆ ಮಲಗಿ ಕಣ್ಣಿಗೆ ಅಮಲು ಹಿಡಿಯುವಷ್ಟರಲ್ಲಿ ಎದ್ದ ಈ ಚೀತ್ಕಾರವು ಅವನನ್ನು ಹೊಡೆದೆಬ್ಬಿಸಿತು. ಸ್ವಾಮಿಗಳಿಗೆ ತನ್ನ ಸಹಾಯ ವೇನಾದರೂ ಬೇಕಾಗುವುದೋ ಎಂದು ಅವನು ಅವರ ಮಲಗುವ ಕೋಣೆಯ ಕಡೆಗೆ ಅವಸರವಸರದಿಂದ ಕಚ್ಚೆ ಕಟ್ಟಿಕೊಂಡು ಧಾವಿಸುವಷ್ಟರಲ್ಲಿ "ಅಯ್ಯೋ! ನುಗ್ಗು, ಲಲಿತ! ಲಲಿತ!! ಏನಾಯಿತು! ಏನಾಯಿತು!! ಹಾ ಪರಮೇಶ್ವರ! ನನ್ನ ಲಲಿತೆಯನ್ನು ಕಾಪಾಡು, ಕಾಪಾಡು!' ಎಂದು ಸ್ವಾಮಿರ ಬೈಠಕು ಕೋಣೆಯೊಳಗಿಂದ ನಾಗಿಯು ಗೋಳಿಟ್ಟಳು. ನರಸಿಂಹನು ಥಟ್ಟನೆ ಹಿಂದಕ್ಕೆ ಸರಿದು ಬೈಠಕು ಕೋಣೆಯ ಸಂಕೋಲೆ ತೆಗೆದು ದಢಲ್ಲನೆ ಬಾಗಿಲು ದೂಡಿದನು. ಬಂದವರು ಸ್ವಾಮಿರೆಂದು ಬಗೆದು ನಾಗಿಯು "ಪರಾಕೆ, ಅಯ್ಯಯ್ಯೋ! ಅಯ್ಯೋ!! ಅಯ್ಯೋ!!!" ಎಂದು ಕೂಗಿದುದಾರು? ಲಲಿತೆಗೇನು ಮಾಡಿದಿರಿ? ಅವಳೆಲ್ಲಿರುವಳು? ದಯಮಾಡಿ ಅವಳನ್ನೊಮ್ಮೆ ನನಗೆ ತೋರಿಸಿ ಬುದ್ಧಿ" ಎಂದು ದೊಪ್ಪನೆ ಬಿದ್ದು ಸಾಷ್ಟಾಂಗ ವಂದನೆಮಾಡಿದಳು. ಆ ಸಂದರ್ಭದಲ್ಲಿ ಶಿವಾನಂದರು, 'ನರಸಿಂಹ! ನರಸಿಂಹ'! ಎಂದು ಗಂಟಲೊಳಗೇನೇ ಕರೆಯುತ್ತಾ ಅಲ್ಲಿಗೋಡಿಬಂದರು, "ಏನಾಯಿತು, ಏನಾಯಿತು ಪರಾಕೆ?" ಎಂದು ಪ್ರಶ್ನಿಸಿದ ನರಸಿಂಹ ದಿಗಿಲುಗೊಂಡು. ಆಗ ನಾಗಿಯು ಎದ್ದು ನಿಂತುದನ್ನು ಕಂಡು ಶಿವಾನಂದರು, ತನ್ನ ಆವೇಗದ ವೇಗಕ್ಕೆ ಥಕ್ಕನೆ ಬ್ರೇಕ್ ಹಾಕಿ, ಏನಿಲ್ಲ, ಲಲಿತೆಗೆ ಚೆನ್ನಾಗಿ ನಿದ್ದೆ ಹತ್ತಿದೆ. ಅವಳು ಬಹಳ ದಣಿದಿರಬೇಕು. ಪಾಪ ನೀವು ಕೊಟ್ಟ ಉಪಟಳದಿಂದ. ಅದಂತಿರಲಿ ಆದಾರು ನರಸಿಂಹ 'ಅಯ್ಯೋ! ಅಯ್ಯೋ!!' ಎಂದುಕೂಗಿದುದು? ಮಠದೊಳಗೋ ಹೊರಗೋ?" ಎಂದು ಉತ್ಸುಕತೆಯ ನಟನೆಯಿಂದ ಕೇಳಿದರು. ಸ್ವಾಮಿರ ಇಂಗಿತವನ್ನು ನರಸಿಂಹನು ಆಕ್ಷಣ ಅರಿತುಕೊಂಡನು. ಅವನ ತುಟಿಗಳ ಮೇಲೆ ಹುಸಿನಗೆ ಎದ್ದು ನಲಿಯತೊಡಗಿತು "ಯಾರೋ ನಿದ್ದೆಯಲ್ಲಿ ಕನಸುಬಿದ್ದು ಕೂಗಿರಬೇಕು ಪರಾಕೆ. ಅದಕ್ಕಾಗಿ ನೀವೇನೂ ತಳಮಳಿಸಬೇಕಾಗಿಲ್ಲ ನೀವು ಹೋಗಿ ಮಲಗಿ ಬುದ್ಧಿ. ಬಹಳ ರಾತ್ರಿಯಾಯಿತು. ನಾಗಿ, ಇನ್ನಾದರೂ ತಿಳಿಯಿತೆ ನಿನ್ನ ಮಗಳು ಸುಖವಾಗಿದ್ದಾಳೆಂದು? ಸ್ವಾಮಿರೇನು ಸುಳ್ಳುಹೇಳಲಿಕ್ಕಿಲ್ಲವಲ್ಲ? ಮಲಗು, ಮಲಗು, ಬೆಳಿಗ್ಗೆ ಐದು ಘಂಟೆಗೇನೇ ಎದ್ದು ಹೋಗಬೇಕು" ಎಂದ ನರಸಿಂಹ ಸ್ವಾಮಿರ ಮುಖದ ಕಡೆಗೆ ಓರೆನೋಟಬೀರಿ, 'ಅಷ್ಟಾದರೆ ಸರಿಯಪ್ಪ ಭಗವಂತ! ಹೋಗಿ ಬುದ್ಧಿ ಮಲಗಿ, ನಾನೂ ಮಲಗುತ್ತೇನೆ. ಆದಷ್ಟು ಬೇಗ ನಮ್ಮನ್ನು ಮನೆಗೆ ಕಳುಹಿಸಿಬಿಡಿ." ಎಂದಳು ನಾಗಿ ಅತಿ ನಮ್ರಭಾವದಿಂದ. ಸ್ವಾಮಿರೂ ನರಸಿಂಹನೂ ಕೂಡಲೆ ಹೊರಗೆ ನಡೆದರು. ನರಸಿಂಹನು ಬೈಠಕು ಕೋಣೆಯ ಬಾಗಿಲೆಳೆದು ಹೊರಗಣ ಸಂಕೋಲೆ ಸಿಕ್ಕಿಸಿದ.

ಅಷ್ಟರಲ್ಲಿ ಜಗಲಿಯ ಒಂದು ಮೂಲೆಗೆ ಸರಿದಿದ್ದ ಸ್ವಾಮಿರು "ಇಲ್ಲಿ ಬಾ ನರಸಿಂಹ, ಬೇಗ ಬಾ" ಎಂದು ದೊಡ್ಡ ಅನಾಹುತವಾಗಿ ಕಂಗೆಟ್ಟ ತಳಮಳ ದಿಂದ ಕರೆದರು. ನರಸಿಂಹನು, "ಪರಾಕೆ, ಏನು, ಏನಾಯಿತು?" ಎನ್ನುವಷ್ಟರಲ್ಲಿ, ಆ ಜಗಲಿ ಬಳಿಯ ಕೋಣೆಯೊಳಗಿಂದ, "ನಾಗವೇಣಿ! ನಾಗವೇಣಿ!! ಯಾರೆ ಅದು 'ಅಯ್ಯೋ! ಅಯ್ಯೋ!!' ಎಂದು ಕೂಗಿದ್ದು? ಶಿವ ಶಿವ, ಈ ಮಠದೊಳಗೆ ಏನೆಲ್ಲಾ ನಡೆಯುತ್ತದೋ ಏನೋ? ದೇವರೇ ಗತಿ!" ಎಂಬ ಮುದುಕಿಯೊಬ್ಬಳ ಮಾತು ಅವರಿಬ್ಬರನ್ನೂ ಮೌನಗೊಳಿಸಿಬಿಟ್ಟಿತು. "ಮಲಗಮ್ಮ ಸುಮ್ಮನೆ ಮಲಗು. ಯಾರೋ ಕನವರಿಸಿ ಕೂಗಿರಬೇಕು" ಎಂದಿತು ಇನ್ನೊಂದು ಹೆಂಗಸು. ಹಾ..........ಎಂದು ಬಾಯಿ ಆಕಳಿಸಿ, "ಶಿವ ಶಿವ, ಶಂಭೋ ಶಂಕರ, ಪರಮೇಶ್ವರ" ಎಂದು ಮಲಗಿತು ಮುದುಕಿ. "ಆ ಮುದುಕಿ ಮತ್ತು ಅವಳ ಮಗಳನ್ನು ನಾಳೆಯೇ ಮಠದಿಂದ ಹೊರಡಿಸಿಬಿಡಬೇಕು ನರಸಿಂಹ! ಬಹಳ ಅಧಿಕಪ್ರಸಂಗಿಯದು" ಎಂದು ಶಿವಾನಂದರು ಮುದುಕಿಯ ಮೇಲೆ ಮುನಿದುಬಿದ್ದರು. "ಆ ಮುದುಕಿಗೆ ಬೆಂಕಿಹಾಕಲಿ ಪರಾಕೆ! ಲಲಿತೆಗೇನಾಯಿತು? ಅವಳೇಕೆ ಕೂಗಿದುದು?" ಎಂದು ಆತುರದಿಂದ ಕೇಳಿದ ನರಸಿಂಹ. "ನರಸಿಂಹ, ಈಕ್ಷಣ ಮೋಟರ್‌ಕಾರಿನಲ್ಲಿ ಹೋಗಿ ಡಾಕ್ಟರ್ ಗಂಗಾಧರರಾಯರನ್ನು ಕರಕೊಂಡು ಬರಬೇಕು. ಅವಳಿಗೆ ಸ್ಮೃತಿತಪ್ಪಿ ಹೋಗಿರುವುದು ನರಸಿಂಹ ನಾನೀಗ ಏನು ಮಾಡವುದು? ಡಾಕ್ಟರರು ಬಂದು ನೋಡಿದರೆ ಹೇಸಿಕೆಯಾಗುವುದಲ್ಲ?' ಒಬ್ಬರಿಗೂ ಈ ಸಂಗತಿ ತಿಳಿಯದಂತಾಗಬೇಕು ನೋಡು. ಅದಕ್ಕಾಗಿ ಎಷ್ಟು ವೆಚ್ಚವಾದರೂ ಚಿಂತೆಯಿಲ್ಲ. ನೀನೀಗ ಏನುಮಾಡುವೆ? ಉಪಾಯವೇನಿದಕ್ಕೆ?" ಎಂದರು ಶಿವಾನಂದರು ಸಂಪೂರ್ಣ ಧೃತಿಗೆಟ್ಟು. ಆ ಚಳಿಯಲ್ಲಿಯೂ ಅವರ ಶರೀರವು ಬೆವರಿಹೋಗಿತ್ತು. ಕೈಕಾಲುಗಳು ಕಂಪಿಸುತ್ತಿದ್ದುವು. ಭೀತಿಯಿಂದ ಕಣ್ಣುಗಳು ಕಳೆಗುಂದಿಹೋಗಿದ್ದುವು. ಮುಖವು ಬಿಳುಪೇರಿಹೋಗಿತ್ತು. "ಹೆದರಬೇಡಿ ಬುದ್ಧಿ ಹೆದರಬೇಡಿ. ಎಲ್ಲಾ ನಾನು ಉಪಾಯಮಾಡುತ್ತೇನೆ. ಮೊದಲು ನಾನವಳನ್ನೊಮ್ಮೆ ಪರೀಕ್ಷಿಸಿಕೊಳ್ಳುತ್ತೇನೆ" ಎಂದ ನರಸಿಂಹ ಒಂದಿಷ್ಟು ಗಲಿಬಿಲಿಗೊಳ್ಳದೆ. "ಬೇಡ ಬೇಡ ನರಸಿಂಹ, ಮೊದಲು ಡಾಕ್ಟರರನ್ನು ಕರಕೊಂಡುಬಾ" ಎಂದರು ಶಿವಾನಂದರು. "ಅಲ್ಲ ಪರಾಕೆ, ನೀವು ಸ್ಮೃತಿ ತಪ್ಪಿದೊಡನೆಯೇ ಬೆದರಿ ಅವಳನ್ನು ಬಿಟ್ಟುಬಂದಿರಿ. ಅದರಲ್ಲೇನೂ ಭೀತಿಯಿಲ್ಲ. ಅವಳಿಗೀಗ ಪ್ರಜ್ಞೆ ಬಂದೀತು. ಇದು ಹೊರತು ಅವಳನ್ನು ನಿಮ್ಮ ಶಯ್ಯಾಗೃಹದಲ್ಲಿರಿಸಿ ಡಾಕ್ಟರರನ್ನು ಅಲ್ಲಿ ಕರತರಲಾಗುವುದೇ? ನಾನವಳನ್ನು ಇನ್ನೊಂದು ಕೋಣೆಗೊಯ್ದು ಆ ಮೇಲೆ ಡಾಕ್ಟರರನ್ನು ಕರತರಲು ಹೋಗುತ್ತೇನೆ ಆಗದೇ?" ಎಂಬ ನರಸಿಂಹನ ಪ್ರಶ್ನೆಯಿಂದ ಶಿವಾನಂದರ ಮನಸ್ಸಿನ ಗೊಂದಲವು ಸ್ವಲ್ಪ ಕಡಿಮೆಯಾಯಿತು. "ಆಯ್ತಾಯ್ತು ನರಸಿಂಹ. ಅಂತೆಯೇ ಮಾಡು. ನಿನ್ನುಪಕಾರ ನಾನೆಂದಿಗೂ ಮರೆಯಲಾರೆ" ಎಂದರವರು ಕೃತಜ್ಞತೆಯ ಪ್ರತಿಮೂರ್ತಿಯೇ ಆಗಿ.

ನರಸಿಂಹನು ಒಡನೆಯೇ ಶಿವಾನಂದರ ಕೋಣೆಯೊಳಗೆ ಧಾವಿಸಿದ. ಹೋಗಿ ನೋಡುವುದೇನನ್ನು! ಶಿವ! ಶಿವ!!' ಎಂದು ಅವನ ಪೈಶಾಚಿಕ ಹೃದಯವೂ ತಲ್ಲಣಿಸಿತು. ಶಿವಾನಂದರ ಹಾಸಿಗೆಯೆಲ್ಲಾ ರಕ್ತಮಯ ವಾಗಿತ್ತು. ಲಲಿತೆಯು ಹೆಣದಂತೆ ಬಿದ್ದಿದ್ದಳು. ಅವನು ತುಸುಹತ್ತಿರ ಹೋಗಿ ನೋಡಿದ. ಅವನಲ್ಲೂ ಜುಗುಪ್ಸೆಯುಂಟಾಯಿತು. ಮತ್ತೂ ಸವಿಮಾಸ ಕೂಡಲೆ ಹೊರ ನಡೆದು ಬಾಗಿಲುಹಾಕಿ ಏನೇನೋಯೋಚಿಸುತ್ತಾ ಶಿವಾನಂದರಬಳಿಗೆ ನಡೆದು, "ಆಗುವುದಿಲ್ಲಪರಾಕೆ. ನನ್ನಿಂದವಳನ್ನು ಎತ್ತಿತರಲು ಸಾಧ್ಯವಿಲ್ಲ. ನಾನೀಗ ಕೂಡಲೆಡಾಕ್ಟರನ್ನು ಕರತರುತ್ತೇನೆ. ಅವರಿಂದ ಸಂಗತಿಯನ್ನು ಮುಚ್ಚುಮರೆ ಮಾಡಿ ಫಲವಿಲ್ಲ. ಹೇಗೂ ಅವರಿಗೆ ತಿಳಿಯದಿರುವುದಿಲ್ಲ. ಈ ರಾತ್ರಿಗೆ ಅವರು ಬರಲೊಪ್ಪುತ್ತಾರೋ ಇಲ್ಲವೋ?' ಎಂದು ನರಸಿಂಹ ಹೊರಡು ವಷ್ಟರಲ್ಲಿ ಶಿವಾನಂದರು "ನಾನು ಹೇಳಿದೆನೆಂದು ಹೇಳು. ಅವರು ಕೇಳಿದಷ್ಟು ಹಣ ಕೊಡಬಹುದು" ಎಂದರು ನರಸಿಂಹನು "ಹೂಂ ಹೂಂ" ಎಂದು, ಬೇಗ ಬೇಗನೆ ಹೊರಟುಹೋದನು.

ಅಮ್ಮಾ ಅದೋ ಸುಮಿತ್ರಾ ಬಾಯಿಯವರು ಬಂದರು. ನನಗೆ ಯಾವಾಗ ಶಾಲೆಗೆ ಹೋಗಲಾಗುವುದಮ್ಮಾ? (ಮುಂದಿನ ಸಂಚಿಕೆ ನಿರೀಕ್ಷಿಸಿರಿ.)

"NAVAYUGA"—is the best medium for—ADVERTISEMENT.

ಉಡುಪಿಯ ಆದರ್ಶ ಉಪಹಾರಗೃಹ !

ಶ್ರೀರಾಮಾ ರೆಸ್ಟೋರೆಂಟ್

ಸುಲಭ ದರದಲ್ಲಿ ತಿಂಡಿ ಪಾನೀಯಗಳು ! ಮಿತ ದರದಲ್ಲಿ ಊಟ ಉಪಚಾರಗಳು !

ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, ಅನುಭವಪೂರ್ಣ ಮೇಲ್ವಿಚಾರಣೆ !

ಸಂಕೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.

ಎಚ್. ಗೋಪಾಳ ನಾಯಕ್, ಪ್ರೊಪ್ರೈಟರ್.

ಜೂನ್ ತಿಂಗಳ ತಾ. 12ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಕಿರಿಯರ ಪ್ರಪಂಚದ ಪುಸ್ತಕಗಳು.

೧	ನಾಟಕಕಥೆಗಳು	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಧುವನ	೧	೮	೦
೮	ವ್ಯಭಿಚಾರಿಣಿ ಯಾರು?	೦	೮	೦
೯	ಹೆಂಡ್ತಿ ಗಂಡನಾದರೆ!	೦	೪	೦
೧೦	ಪುರುಷವಧು!	೦	೪	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು

ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಮಾಸ] ಕಥಾಕುಂಜ [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)
ಜಾಹೀರಾತುಗಳಿಗೆ ಸುವರ್ಣ ಸಂಧಿ
ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

CHEAPEST SAFEST INDUSTRIAL
INSURE WITH & REPRESENT
RANJIT.
BIMA Co. Ltd. AMRITSAR
APPLY FOR HONOURABLE JOB & EXCELLENT SALARY.

'ನವಯುಗ'
ಪ್ರತಿ ಗುರುವಾರ ಹೊರಡುವ ವಾರಪತ್ರಿಕೆ.
ವಾರ್ಷಿಕ ಚಂದಾ ರೂ. ೩—೪—೦

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Chaukhamba, Benares City.***

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆಸೀರೆಗಳೂ, ಖಣ, ಮಡಿ ಕದವಾವಿನ್ನಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಳಿ, ನಾಮರ್ದ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ, ಇನಾಂ. ಈಗಿನ ಹೊಸನಮೂನೆಯ ಮಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ಮಡಲು ಸಾದಾ 16ಮೊಳದ ಶೀರೆ 1ಕ್ಕೆ ರೂ. 16ರಿಂದ ರೂ. 35ರ ವರೆಗೆ. ಅರೆ ಕಡಮೆ 16ಮೊಳ ಕ್ವಾರ್ ಅಂಚು ರೂ. 10½ ಯಿಂದ ರೂ. 16. ಖಣ 1ಕ್ಕೆ ರೂ. 1¼ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬಿನಾರಿಸ್, ಕಾಶಿ



ಧರ್ಮಾರ್ಥ ಬಹುಮಾನಗಳು 1-4-0ಗೆ!

--- ಯಾರಿಗೆ? ---

ರೂಪಾಯಿ 1—4—0 ಕೊಟ್ಟು 14ಸೀನ್ ಒಟ್ಟೊ ರೋಸ್ಡ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3 ಡಮ್ಮಿ ರಿಸ್ಟ್‌ವಾಚುಗಳು; 1 ಕ್ರೈಸ್ಟಿಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಷ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್; 1 ಜತೆ ಗುಬ್ಬಿ; 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಅರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲ್ಯಾಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. ಇಂದೇ ಆರ್ಡರುಕೊಡಿರಿ

Bengal Watch Co.,
Post Box No. 12214, CALCUTTA

The Combined Booking Agency

AND

The Joint Booking Office

MANGALORE, SOUTH KANARA.

ಅತ್ಯಲ್ಪ ಖರ್ಚಿನಿಂದ ! ಅತಿ ಸುಖಕರವಾದ ಪ್ರಯಾಣ !

ಮುಂಬಾಯಿ, ಗೋವಾ, ಕಾರವಾರು ಇತ್ಯಾದಿ ಕಡೆಗಳಿಗೆ
ನಮ್ಮ ಬಸ್ಸುಗಳ ಮೂಲಕ—

ಕಡೂರು ಮಾರ್ಗವಾಗಿ ಮುಂಬಾಯಿಗೂ, ಶಿವಮೊಗ್ಗಾ ಹರಿಹರಕ್ಕಾಗಿ ಹುಬ್ಬಳ್ಳಿ, ಬೆಳಗಾಂ, ಮುಂಬಾಯಿ ಪ್ರಾಂತ್ಯಕ್ಕೂ ಕಾರವಾರ ಮಾರ್ಗವಾಗಿ ಮುಂಬಾಯಿ ಪ್ರಾಂತ್ಯಕ್ಕೂ ಅತ್ಯಲ್ಪ ಖರ್ಚಿನಿಂದ ಅತಿ ಸುಖಕರವಾಗಿ ಪ್ರಯಾಣ ಬೆಳಸಲನುಕೂಲ.

ಊರುಗಳ ಬದಲಾವಣೆ, ನೋಟುಗಳ ಬದಲಾವಣೆ, ಜನತೆಯ ಸಂಪರ್ಕ, ಆಹಾರದ ಅನುಕೂಲ್ಯ, ವಿಶ್ರಾಂತಿ ಗೃಹಗಳ ಏರ್ಪಾಡು, ನೌಕರರ ಸಭ್ಯತೆ, ಇವೆಲ್ಲವೂ ಬಸ್ಸು ಪ್ರಯಾಣದಲ್ಲಿವೆ.

ನೀವು ಕಂಡ ಕುಂದು ಕೊರತೆಗಳ ಬಗ್ಗೆ ನಮ್ಮ ಸಂಸ್ಥೆಯ ಜೋಯಿಂಟ್ ಮೆನೇಜರರಿಗೆ ಬರೆದು ತಿಳಿಸಿರಿ—

ಜೋಯಿಂಟ್ ಮೆನೇಜರ್ಸ್,
ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು,
ಮತ್ತು
ಜೋಯಿಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲ ಬೈಲು.

The Coondapoor Bank, Ltd.,

Head Office:- **Coondapoor.** Branch Office:-**Brahmavar.**

Beg to announce that a new Branch has been opened at SHANKARANARAYANA on 4-6-37

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ ಇಲ್ಲಿಜೂನ್ ತಾ.4ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ.

ಚಾಲ್ತಿ ಠೇವಣಾತಿಗಳು ಸಾ.ಶೆ.2, **ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು**ಸಾ.ಶೆ 4,

ಕಾಯಂ ಠೇವಣಾತಿಗಳು 3 **ತಿಂಗಳ ಬಾಬತು** ಸಾ. ಶೆ 4.

6 **ಮತ್ತು** 9 **ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ** 5%.

1 **ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪಾಯಿ** 5½%.

2 **ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ** 6% **ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.**

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ.
ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. **N. Sheshagiri Rao,** ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ
ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲಿಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ-ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪೆನಿ,
೩. ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜಿ. ಟಿ. ಮದರಾಸ್.

ಇದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಬೆಲೆ ೦—೪—೦

ಪುರುಷವಧು

ನಕ್ಕಷ್ಟು ನಗಿಸುವ ಏಕಾಂಕ ಪ್ರಹಸನ.
ತೀರ್ಥರ ಪ್ರಪಂಚ, ಉಡುಪಿ



ಸಾಮುದ್ರಿಕ ಲಕ್ಷಣ

ಹಸ್ತ ಸಾಮುದ್ರಿಕ, ಅಂಗ ಲಕ್ಷಣ ಮುಂತಾದ ವಿಷಯಗಳ ಮೇಲೆ ಬರೆಯಲ್ಪಟ್ಟ ಬಲು ಉಪಯೋಗಕರವಾದ ಪ್ರಾಚೀನ ಗ್ರಂಥ. ವಿದ್ವತ್ತಾ ಪೂರ್ಣವಾದ ಮುನ್ನುಡಿಯಿಂದೊಡಗೂಡಿದೆ.

ಬೆಲೆ: ೦ ೮ ೦

ಒಂದು ಪ್ರತಿ ಬೇಕಾದವರು 8 ಆಣೆಯ ಸ್ಟ್ಯಾಂಪು ಕಳುಹಿಸಿರಿ.

USE
SUVASINI AGARBATHIES
(REGISTERED)

SRI BHARATHA VASTU MANDIRA, UDIPI.

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY. at "NAVAYUGA" OFFICE, UDIPI.

Registered No. M. 3618 ೧೦ ಪ್ರ ದಾಣೆ

NAVAYUGA
A Nationalist Kanarese Weekly, UDIPI, S. K.

It will pay you
to advertise in
'NAVAYUGA'
The Leading
Nationalist
Kanarese Weekly
of Karnatak
FOR RATES OF ADVT. Etc.
APPLY TO THE MANAGER

ನವಯುಗ

ನಮ್ಮ ಸಮಾಜದ
ಕುಂದು ಕೊರತೆಗಳನ್ನು
ಕಣ್ಣು ಮುಂದಿರಿಸಿ
ಸಮಾಜದೇಳಿಗೆಯ
ಮಾರ್ಗವನ್ನು ಸೂಚಿಸುವ
ಅತ್ಯಾಧುನಿಕ
ಸಾಮಾಜಿಕ ನಾಟಕ
ಸಂಶಯಪಿಶಾಚಿ
ಬೆಲೆ ೦ ೬ ೦
ಕಿರಿಯರ ಪ್ರಪಂಚ, ಉಡುಪಿ.

VOL. XVI-NO 46 22-7-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೨೨ ಜುಲಾಯಿ, ೧೯೩೭ [ಸಂಚಿಕೆ ೪೬

THE

Canara Industrial & Banking SYNDICATE, LIMITED.

ESTD:] [INCORPORATED IN BRITISH INDIA] [1925

Head Office:
"MUKUNDA NIVAS"
UDIPI, (S. I.)

BRANCHES:

1 BOMBAY

2 BANGALORE CITY	17 HUBLI
3 BELGAUM	18 GADAG
4 BYADGI	19 KARWAR
5 BELLARY	20 KUMTA
6 ADONI	21 ANKOLA
7 HOSPET	22 HONAVAR
8 TALIPARAMBA	23 BHATKAL
9 UPPINANGADI	24 BRAHMAVAR
10 KASARGODE	25 HUNGARCUTTA
11 PAYYANUR	26 SIRSI
12 KANHANGAD	27 SAGAR
13 KARKALA	28 COONDAPOOR
14 NANDYAL	29 UDIPI
15 PRODATTUR	30 MANGALORE
16 TADPATRI	31 CANNANORE

BEG TO ANNOUNCE

that the Syndicate has been included in the list of Scheduled Banks under the Reserve Bank of India Act.

Non-Scheduled Banks, other companies and company promoters may take advantage of this for depositing their amounts with the Syndicate under the Indian Companies Act 1936.

Paid up Capital	Rs. **3,49,900**
Reserves	„ **1,92,390**
Deposits exceed	„ **25 lakhs**
Total Working Funds exceed	„ **45 lakhs**

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!
ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ... ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**

೩೦ ಮಾತ್ರೆಗಳು ರೂ. ೩-೦-೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,

ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನಾಯಿತ (first quality, selected) ಎಮ್‌ಸ್ಟ್ರ ನಮ್ಮಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,

ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ

ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ

ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.

ಪರೀಕ್ಷಿಸಲಪೇಕ್ಷಿಸುವವರು

"ಯೋಗೀಶ್ವರರ ಶಕ್ತಿಸಾಹಸ"

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:— ಪಂಡಿತ್ ಎ. ವಿ. ಆರಮುಗ್

ಚಿಕಾಕೋಲ್

Mohini Harmonium Works, Udipi

Single Hand Harmoniums, Portable Hand Harmoniums,
Double sets of Hand Harmoniums,
Trible sets of Hand Harmoniums,
Folding leg Harmoniums,
Specially Constructed in our Work Shop. Well tuned and fitted.

Repairs of all kinds of Musical instruments undertaken at a very moderate rate to the Complete satisfaction of our customers.

A Trial order is earnestly solicited.

For Further Particulars

Apply to.

M. K. KORAGAPPA, *Proprietor.*

ಪ್ರೇಮ ಮೆಡಿಕಲ್ ಕೋಲೇಜು

ಈ ಕೋಲೇಜಿನ ಹೊಸ ವರ್ಷವು ಇದೇ ಜುಲಾಯಿಯ ತಿಂಗಳಲ್ಲಿ ಪ್ರಾರಂಭವಾಗುವದು. ಎಸ್. ಎಸ್. ಎಲ್. ಸಿ. ಮೆಟ್ರಿಕ್, ಅಪ್ಪರ್ ಸೆಕೆಂಡರಿ, ಮುಲ್ಕಿ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಅವರವರ ಸರ್ಟಿಫಿಕೇಟ್‌ಗಳಿಗೆ ತಕ್ಕ ಇಂಗ್ಲಿಷ್ ಮತ್ತು ಕನ್ನಡ ಕೋರ್ಸ್‌ಗಳಿವೆ. ಇಲ್ಲಿ ಅಭ್ಯಾಸ ಮಾಡಲಿಚ್ಛಿಸುವವರು ಕೂಡಲೆ "**ಪ್ರೊಸ್‌ಪೆಕ್ಟಸ್**"ಗಾಗಿ ೨ ಆಣೆ ಸ್ಟಾಂಪು ಇಟ್ಟು ಬರೆಯಬೇಕು.

ರಿಜಿಸ್ಟ್ರಾರ್:

ತುಂಗಭದ್ರಾ } **ಪ್ರೇಮ ವಿದ್ಯಾಪೀಠ**

೧೦–೭–೧೯೩೭

ಉಡುಪಿಯ ಆದರ್ಶ ಉಪಹಾರಗೃಹ !

ಶ್ರೀರಾಮಾ ರೆಸ್ಟೋರೆಂಟ್

ಸುಲಭ ದರದಲ್ಲಿ ತಿಂಡಿ ಪಾನೀಯಗಳು ! ಮಿತ ದರದಲ್ಲಿ ಊಟ ಉಪಚಾರಗಳು !

ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, **ಅನುಭವಪೂರ್ಣ ಮೇಲ್ವಿಚಾರಣೆ !**

ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡು ಮತ್ತು ಕೋಳದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.

ಎಚ್. ಗೋಪಾಳ ನಾಯಕ್, **ಪ್ರೊಪ್ರೈಟರ್.**

ಜೂನ್ ತಿಂಗಳ ತಾ. 1೭ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ನಮ್ಮ ಸಿನೇಮಾ ಪುಟ

ಸಮ್ರಾಟ್ ಅಶೋಕನ ಶಾಸನಕಾಲ!

ಮುದುಕಿಯೊಬ್ಬಳು ತನ್ನ ಮುದ್ದು ಕುವರಿ ಸುಲೇಖೆಯೊಂದಿಗೆ, ಪೇಟೆಗೆ ಬಲು ದೂರದ ಹಳ್ಳಿಯಲ್ಲಿ ವಾಸಿಸುತ್ತಿದ್ದಳು. ಅದೇ ಹಳ್ಳಿಯಲ್ಲಿ ಕುರುಬರ ಹುಡುಗ ಅರೂಪನೂ ವಾಸಿಸುತ್ತಿದ್ದನು. ಅವರಿಬ್ಬರಲ್ಲೂ ಪರಸ್ಪರ ಪ್ರೇಮವಿತ್ತು.

ಬಲು ಪ್ರಯಾಸಪಟ್ಟು ಸುಲೇಖೆಯ ತಾಯಿಯು ಸಮ್ರಾಟನರಮನೆಯಲ್ಲಿ ಒಂದು ಕೆಲಸವನ್ನು ದೊರಕಿಸಿ ಕೊಂಡಳು. ಪೇಟೆಗೆ ಹೋಗುವಾಗ ಸುಂದರಿಯಾದ ಸುಲೇಖೆಯನ್ನು ಹಳ್ಳಿಯಲ್ಲೇ ಬಿಟ್ಟು ಹೋಗಲು ಆಕೆಗೆ ಮನಸ್ಸಿರಲಿಲ್ಲ.

ಸುಲೇಖೆಯ ವಿಯೋಗದಿನವು ಸಮಿಪಿಸಿದಾಗ ಅರೂಪನು, ಸುಲೇಖೆಗೆ ಪೇಟೆಗೆ ಹೋಗಬಾರದಾಗಿ ಹೇಳಿದನು. ಆದರೆ ಪೇಟೆಯ ವಿಲಾಸ ಜೀವನದಲ್ಲಿ ಮರಳಾಗಿದ್ದ ಸುಲೇಖೆಯು ಒಡಂಬಡದೆ ತನ್ನೊಡನೆಯೇ ಅವನನ್ನೂ ಪೇಟೆಗೆ ಕರೆದೊಯ್ಯಲು ಕೋರಿದಳು. ಕೊನೆಗೆ ಸುಲೇಖೆಯೂ ಅರೂಪನೂ ಪೇಟೆಗೆ ಬಂದರು.

ಅರೂಪನಿಗೂ ಅರಮನೆಯಲ್ಲಿ ನೌಕರಿಯು ದೊರೆಯಿತು. ಅಲ್ಲದೆ ತನ್ನ ಜಾಣ್ಮೆಯಿಂದ ಅಶೋಕನ ಗೆಳತನವನ್ನೂ ಅರೂಪನು ಸಂಪಾದಿಸಿಕೊಂಡನು

ಒಂದು ದಿನ ಸಮ್ರಾಟ್ ಅಶೋಕನು ಉಗ್ರಸೇನಾಪತಿಯಾದ ಉಶಿನರನೊಂದಿಗೆ ಬೇಟೆಯಾಡಲು ಹೋದನು. ಕಾಡಿನಲ್ಲಿ ದಾರಿತಪ್ಪಿ ಎಲ್ಲರೂ ಸುತ್ತಾಡತೊಡಗಿದರು.

ಅಶೋಕನು ರಾತ್ರಿಯಲ್ಲಿ ತಿರುಗುತ್ತಾ ಒಂದು ಕುಟೀರದ ಕಡೆಗೆ ತಲುಪಿದನು. ಬಾಗಿಲು ಹಾಕಿತ್ತು, ದೂಡಿದನು; ಒಬ್ಬ ತಪಸ್ವಿಯಾದ ಬ್ರಾಹ್ಮಣನು ಹೊರಕ್ಕೆ ಬಂದನು.

"ನಾನು ಅಶೋಕನ ಕೆಲಸಗಾರ. ಸ್ವಲ್ಪ ಆಶ್ರಯ ಸಿಗಬಹುದೇ?" ಅಶೋಕನು ಕೇಳಿದನು.

"ಇಲ್ಲ! ಇದು ಅಶೋಕನ ರಾಜಧಾನಿಯಲ್ಲ!!" ಬ್ರಾಹ್ಮಣನು ಸ್ಥಳಕೊಡಲು ನಿರಾಕರಿಸಿದನು.

ಒಂದು ದಿನ ರಾಜದರಬಾರದಲ್ಲಿ ಮಹೇಶ್ವರನು ಶೃಂಖಲಾಬದ್ಧನಾಗಿ ತರಲ್ಪಟ್ಟನು. ಆದರೆ ಆ ಬ್ರಾಹ್ಮಣನು, ಅಶೋಕನ ಶಾಸನಕಾಲವು ಲಂಚಪ್ರಪಂಚವೆಂದೂ, ಅನ್ಯಾಯ ಅತ್ಯಾಚಾರಗಳ ಮೂಲವೆಂದೂ ಸಾರಿದನು!

ಅಶೋಕನಿಗೆ ಬ್ರಾಹ್ಮಣನ ಹೇಳಿಕೆಯಲ್ಲಿ ಸತ್ಯಾಂಶವಿದೆಯೆಂದೆನಿಸಿತು. ಆತ ಸ್ವಯಂ ಸುರಾ, ಸುಂದರಿಯರ ಉಪಾಸಕನಿದ್ದನು!! ಅಶೋಕನು ತನ್ನ ಸರಕಾರವನ್ನು ಕಲಂಕಿತ ಸರಕಾರವೆನ್ನುವ ಆ ಬ್ರಾಹ್ಮಣನಿಗೆ 'ಒಂದು ವರುಷದ ಅವಧಿಯೊಳಗೆ ಅನ್ಯಾಯವೇನಾದರೂ ನಡೆದರೆ ನಿನ್ನನ್ನು ಫಾಶಿಗೇರಿಸಲಾಗುವುದೆ'ಂಬ ಶರತದ ಮೇಲೆ ಒಂದು ವರ್ಷ ಕಾಲ ಸಮ್ರಾಟ ಪೀಠವನ್ನು ಕೊಟ್ಟನು.

ಬ್ರಾಹ್ಮಣನೊಪ್ಪಿದ. ಒಂದು ವರುಷದ ವರೆಗೆ ಸಮ್ರಾಟನಾದ.

ಮಹೇಶ್ವರನು ರಾಜ್ಯದ ಹೊರಗೆ ಶಾಂತಿಯನ್ನು ಸ್ಥಾಪಿಸಿದನಾದರೂ ಅರಮನೆಯೊಳಗಡೆ ಒಳಸಂಚು ನಡೆಯುತ್ತಿದ್ದುವು. ಪ್ರಚಂಡನಾದ ಉಶಿನರನು ಸಮ್ರಾಟ್ ಅಶೋಕನನ್ನೇ ಕೊಲೆಗೆಯ್ಯಲು ನಿರ್ಧರಿಸಿದನು. ಅಶೋಕನು ತನ್ನ ಪೂರ್ವಕೃತ್ಯಗಳಲ್ಲಿ ಪಶ್ಚಾತ್ತಾಪಪಟ್ಟು, ಶಾಂತಿಮಯ ಜೀವನದಲ್ಲಿರಬಯಸಿ, ಅರೂಪನನ್ನು ಗೆಳೆಯನನ್ನಾಗಿ ಮಾಡಿಕೊಂಡನು.

ಪ್ರೇಮಪರೀಕ್ಷೆ ಅಥವಾ ರೂಪಲೇಖಾ

[ಕಲ್ಕತ್ತೆಯ ನ್ಯೂ ಥಿಯೇಟರ್ಸ್‌ನವರು ವಾಕ್ಚಲಚಿತ್ರ ನಿರ್ಮಾಣದಲ್ಲಿ ಹೆಸರಾಂತವರು. ಇದೂ ನ್ಯೂ ಥಿಯೇಟರ್ಸ್‌ನವರ ಶ್ರೇಷ್ಠ ಕಲಾಕೃತಿ! ಸೈಗಲ್, ಪಹಾರೀ ಸನ್ಯಾಲ್, ರತ್ನಾಬಾಯಿ ಮುಂತಾದ ನಟನಟಿಯರಿಂದ ನಟಿಸಲ್ಪಟ್ಟು ಉತ್ಪನ್ನವಾದ ಈ ಚಿತ್ರವು ತಾ. ೨೩-೭-'೩೭ರಿಂದ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪ್ರದರ್ಶಿಸಲ್ಪಡುತ್ತದೆ. ಅದರ ಕಥಾ ಸಾರಾಂಶವನ್ನಿಲ್ಲಿ ಕೊಡಲಾಗಿದೆ.]

ಅತ್ತ ಮುದುಕಿಯು ಸುಲೇಖೆಗೆ ಯೋಗ್ಯ ವರನನ್ನು ಹುಡುಕುತ್ತಾ ಉಶಿನರನಿಗೆ ಕೊಡುವುದಾಗಿ ನಿಶ್ಚಯಿಸಿದಳು. ಆದರೆ ಆ ನರಪಿಶಾಚಿಯನ್ನು ಸುಲೇಖೆಯು ತಿರಸ್ಕರಿಸುವಳು.

ಒಂದು ರಾತ್ರೆ ಅಶೋಕನು ಹೊರ ಹೊರಟಿದ್ದನು. ಆಗ ಅರೂಪನ ಹತ್ತಿರ

"ಅರೂಪ! ನನ್ನನ್ನೆಲ್ಲಿಗಾದರೂ ಕೊಂಡು ಹೋಗು." ಸುಲೇಖೆಯು ಹೇಳಿದಳು. ಉಶಿನರ, ತಾಯಿಯರ ಬಲಾತ್ಕಾರವನ್ನು ಹೇಳಿದಳು.

ಇಷ್ಟರಲ್ಲಿ ಕೈಬಡಿತದ ಸಪ್ಪಳವೊಂದು ಅವರನ್ನು ದಂಗು ಬಡಿಸಿತು. ತಿರುಗಿ ನೋಡಿದಾಗ ಉಶಿನರನ ರೌದ್ರ ಮೂರ್ತಿ!

"ನಡೆ ಇಲ್ಲಿಂದ......." ಅಪರೂಪನಿಗೆ ಗೊಂಡೆಯೇಟು ಬಡಿದು ಉಶಿನರನು ನುಡಿದನು. "ನಡೆ ಇಲ್ಲಿಂದ."

ಕೆಲ ಹೊತ್ತು ಮೌನವಾಗಿದ್ದ ಅರೂಪನು ಉಶಿನರನಿಗೂ ಒಂದೇಟು ಬಡಿದ. ಆ ವರಲ್ಲಿ ತೀವ್ರ ಕಲಹವಾಯಿತು. ಉಶಿನರನು ಅರೂಪನನ್ನು ಕತ್ತಿಯಿಂದ ತಿವಿಯ

ಬಯಸಿದಾಗ ಮಹೇಶ್ವರನುಬಂದುಆಪತ್ತಿಯನ್ನೊಡ್ಡಿದನು. ಶಾಂತಿಭಂಗವನ್ನು ಮಾಡಿದ ಕಾರಣ ಮಹೇಶ್ವರನು ಅವರಿಬ್ಬರನ್ನೂ ಕೆಲಸದಿಂದ ತೆಗೆದು ಹಾಕಲು ಆಜ್ಞಾಪಿಸುವನು.

ಒಂದು ದಿನ ಜೇಳಿಗ್ಗೆ ಉಶಿನರನ ಶವವು ರಾಜಪ್ರಾಕಾರದಲ್ಲಿ ಬಿದ್ದಿತ್ತು! ಅರೂಪನ ವಸ್ತ್ರವು ರಕ್ತರಂಜಿತವಾಗಿತ್ತು!!

ಅರೂಪನನ್ನು ಜೀವಂತ ಸುಡಲು ರಾಜಾಜ್ಞೆ!!

ಅಶೋಕನು ತನ್ನ ಕೊಠಡಿಯಲ್ಲಿ ಹೊರಳುತ್ತಿದ್ದಾನೆ. ಮಹೇಶ್ವರನೊಡನೆ ನಿಜವಾದ ಕೊಲೆಗಾರನಾರೆಂದು ಕೇಳಬೇಕೆಂದಿದ್ದ ಸುಲೇಖೆಯು ತಾಯಿಯಿಂದ ಬಂಧಿತಳಾಗಿದ್ದಾಳೆ.

ಅರೂಪನು ವಧ್ಯ ಭೂಮಿಗೆ ಒಯ್ಯಲ್ಪಟ್ಟನು.

ಅರೂಪನು ಮಾತಾಡದೆ ಉರಿಯುವ ಚಿತೆಯಲ್ಲಿ ಹೋಗಿ ಕುಳಿತನು! ಇಷ್ಟರಲ್ಲಿ ಅಶೋಕನು ಧಾವಿಸಿ ಬಂದು ಅರೂಪನನ್ನು ಅಗ್ನಿ ಕುಂಡದಿಂದ ಹೊರಗೆಳೆದು ಹಾಕಿದನು.

ಉಶಿನರನನ್ನು ಕಠಿನತರ ಹೇಳಿದನು. ಅರೂಪನು ಉಶಿನರನ ಕೋಣೆಗೆ ತಲಪಿದಾಗ ಅಲ್ಲಿ ಸುರಾಪಾನ, ಸುಂದರಿಯರ ಗಾನಗಳು ನಡೆಯುತ್ತಿದ್ದುವು. ಉಶಿನರನು ಸಂಗಡಿಗರೊಂದಿಗೆ ಅಶೋಕನನ್ನು ಕೊಲ್ಲಲು ಹವಣಿಸುತ್ತಿರುವುದನ್ನು ಮರೆಯಲ್ಲಿ ನಿಂತು ಕೇಳಿ ಅರೂಪನು ಅಶೋಕನಿಗೆ ತಿಳಿಸಲಿಕ್ಕೆಂದು ಮರಳಿದನು.

ಈ ಮಧ್ಯೆ, ಉಶಿನರನು ತನ್ನ ಭಾವೀ ಪತ್ನಿಯಾದ ಸುಲೇಖೆಗೆ ನರ್ತಿಸಲು ಆಜ್ಞಾಪಿಸಿದ.

ತನ್ನ ಪ್ರೇಮಿಕೆಯು ಕ್ರೂರ ಉಶಿನರನಲ್ಲಿ ನಲಿಯುತ್ತಿರುವುದನ್ನು ನೋಡಿ ಅರೂಪನು ಸಂತಾಪಗೊಂಡು, ಅಶೋಕನ ಹತ್ತಿರ ಬಂದು ತನಗೆಲ್ಲಿಯಾದರೂ ಹೊರಟು ಹೋಗಲು ಅಪ್ಪಣೆಯನ್ನು ಕೇಳಿದನು.

ಅಶೋಕನು ಮಮ್ಮಲ ಮರುಗಿ ಎರಡು ದಿನ ಅವಧಿ ಕೇಳಿದ.

ಸುಲೇಖೆಯು ಮೂರ್ಛಿತಳಾಗಿ ಒಂದು ಮರದಡಿ ಬಿದ್ದಿರುವುದನ್ನು ಅರೂಪನು ನೋಡಿ ಆಕೆಯನ್ನು ತಿಳಿದೇಳುವಂತೆ ಮಾಡಿದನು.

ಸುಲೇಖೆಯೂ ಮಹೇಶ್ವರರೂ ಅಲ್ಲಿಗೆ ಬರುವರು.

"ಬ್ರಾಹ್ಮಣ! ನಾನೇ ತಪ್ಪುಗಾರ. ನನ್ನ ಹೇಡಿತನಕ್ಕೆ ಶಿಕ್ಷೆಯಾಗಲಿ!" ಅಶೋಕನು ಆವೇಶಯುಕ್ತನಾಗಿ ಮಹೇಶ್ವರನಿಗೆ ಹೇಳಿದನು. "ಈ ಹತ್ಯೆಯನ್ನು ಮಾಡಿದವನು ನಾನು. ಆ ರಾತ್ರೆ ಉಶಿನರನು ನನ್ನನ್ನು ಕೊಲೆಗೈಯ್ಯಲು ಹವಣಿಸಿದ್ದನು. ನಮ್ಮೊಳಗಣ ಜಗಳವು ಪ್ರಕೋಪಕ್ಕಿಟ್ಟಿತು. ನಾನು ಬಲವಾಗಿ ಹೊಡೆದೆ. ಅತ-ಸತ್ತ! ಹೆಣವನ್ನು ರಾಜ ದ್ವಾರದಲ್ಲಿಟ್ಟೆ. ಮುಂದಿನ ವಿಚಾರವು ನಿಮಗೇ ತಿಳಿದಿದೆ."

ವಿಚಾರವನ್ನೆಲ್ಲಾ ನಿಧಾನಿಸಿ ಮಹೇಶ್ವರನು ಕೇಳಿದ. ಒಂದು ವಾರದ ಅನಂತರ ಅಶೋಕನಿಗೆ ಪ್ರಾಣ ದಂಡನೆಯ ಆಜ್ಞೆಯನ್ನು ಇತ್ತನು. ರಾಜಧಾನಿಯಲ್ಲೆಲ್ಲಾ ಈ ಸುದ್ದಿಯು ಮಹತ್ತಾದ ಕೋಲಾಹಲವನ್ನೆಬ್ಬಿಸಿತು.

ಅಶೋಕನು ಉರಿವ ಕಂಬದ ಹತ್ತಿರ ಬಂದನು.

"ಇಂದಿಗೆ ಒಂದು ವರುಷವಾದುದರಿಂದ ನನ್ನಾಳ್ವಿಕೆಯು ಕೊನೆಗೊಂಡಿತು. ಅಶೋಕ! ಇಂದಿನಿಂದ ನೀನೇ ಸಮ್ರಾಟನು." ಬ್ರಾಹ್ಮಣನು ಹೇಳಿದ.

ಹರ್ಷೋಲ್ಲಾಸನಾದ-"ಅಶೋಕ ಮಹಾರಾಜಕೀ ಜಯ." ಅಶೋಕನು ಬ್ರಾಹ್ಮಣನನ್ನು ವಂದಿಸಿದನು.

"ವಿಲಾಸಿಯೂ ಉದಾಸೀನನೂ ಆದ ಅಶೋಕನು ಸತ್ತು ಹೋಗಿದ್ದಾನೆ. ಇಂದಿನಿಂದ ನವೀನ ಅಶೋಕನು ನಿಮ್ಮನ್ನಾಳುವನು." ಬ್ರಾಹ್ಮಣನು ಉದ್ಘೋಷಿಸಿದ. ಇಡೀ ರಾಜ್ಯಕ್ಕೆ ಆನಂದವೇ ಆನಂದ! ಬಲು ದೂರದಲ್ಲಿ ಒಂದು ಗಾಡಿ ಹೋಗುತ್ತಿತ್ತು. ಪ್ರಕೃತಿ ಸುಂದರಿಯ ನಿವಾಸಸ್ಥಾನವಾದ ಪರ್ವತದತ್ತ ಆ ಗಾಡಿ ಸಾಗುತ್ತಿತ್ತು.

ಆದರೆ ಆ ಗಾಡಿಯ ಒಳಗೆ..........?

ಅರೂಪನೂ, ಸುಲೇಖೆಯೂ, ಪತಿಪತ್ನಿಯರಂತೆ ದೃಢ ಆಲಿಂಗನ ಪಾಶದಲ್ಲಿ, ಆನಂತ ಪ್ರೇಮಗಾನವನ್ನು ಹಾಡುತ್ತಾ, ಸ್ವರ್ಗೀಯ ಸುಖವನ್ನು ಅನುಭವಿಸುತ್ತಾ ....!!!

ಸುಸಮಯ! ಹಣ ಸಂಪಾದಿಸಿರಿ

ಫೋರ್ಮುಗಳನ್ನು ಕಂಪೆನಿಯೇ ಬಟವಾಡೆ ಮಾಡುವುದು.

ಮದರಿಂಡಿಯಾ ಬೆನೆಫಿಟ್ ಕಂಪೆನಿಯ ನವೀನವಾದ IIನೇ ಸ್ಕೀಮಿನ ಫೋರಮಿಗೆ 1—9—0 ನೆಚ್ಚ ಮಾಡಿ ಸೇರಿ, ಕಂಪೆನಿಯ ನಿಬಂಧನೆಯಂತೆ ವರ್ತಿಸಿದ ಮಹಾಶಯರು ಯಾವಾಗಲೂ ಮನಿಯಾರ್ಡರು ಮೂಲಕ ಹಣ ಪಡೆಯುತ್ತಿರುವರು.

ಹಿಂದುಸ್ಥಾನದ ಪ್ರತಿಗ್ರಾಮ ತಾಲೂಕುಗಳಲ್ಲಿ ಪ್ರಾಮಾಣಿಕತೆಯಿಂದ ಕೆಲಸಮಾಡುವ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ವಿವರ ಕಂಪೆನಿಯಿಂದ ಪಡೆಯಿರಿ

ಮೆನೇಜರ್

ಮದರಿಂಡಿಯಾ ಬೆನೆಫಿಟ್ ಕಂಪೆನಿ, ಹಂಪನ ಕಟ್ಟೆ, ಮಂಗಳೂರು.

ರಸ್ಯದ ನೂತನ ನಿರ್ಮಾಣ

ಸ್ವಾತಂತ್ರ್ಯದ ದುರುಪಯೋಗ.

[ರಸ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಸ್ಯದ ಇಂದಿನ ಪರಿಸ್ಥಿತಿ ಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದನ್ನು 'ನೋರಿಸ್ ಹಿಡಸ್ ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.] —ಸಂ. ನ

ರಸ್ಯದಲ್ಲೀಗ ಪ್ರಾರಿಗೆ ಬಂದಿರುವ ನವೀನ ಲೈಂಗಿಕ ಮತ್ತು ವಿವಾಹ ಸ್ವಾತಂತ್ರ್ಯದ ದುರುಪಯೋಗವು ಆರಂಭದಲ್ಲಿ ಬಹಳವಾಗಿ ನಡೆದಿರುವುದು. ಕೋರ್ಟುಗಳಲ್ಲೆಲ್ಲಾ ಆಕುರಿತಾದ ರಿಕಾರ್ಡುಗಳು ತುಂಬಿ ಹೋಗಿರುವುವು. ಹಲವು ಪಟ್ಟಣಗಳಲ್ಲಿ ಈ ಸ್ವಾತಂತ್ರ್ಯದ ವಿಚಿತ್ರ ರೀತಿಯ ದುರುಪಯೋಗ ನಡೆದಿದೆ. ಕೆಲಸದ ಹುಡುಗಿಯರು ತಮಗೆ ಮಕ್ಕಳು ಹುಟ್ಟಿದಾಗ ಅವುಗಳ ಪಿತೃತ್ವವನ್ನು ತಮ್ಮ ಯಜಮಾನರ ಮೇಲೆ ಹಾಕಿ ಅವರಿಂದ ಹೆಚ್ಚಿನ ಭತ್ತೆ ಪಡೆಯುವ ಉಪಾಯಮಾಡುತ್ತಾರೆ, ಸಣ್ಣ ಸಾಮಾನ್ಯ ಕೆಲಸಗಾರನು ಮಗು ಹುಟ್ಟಿಸಿರುವೆಂದರೆ ಅವನಿಂದ ಹೆಚ್ಚೇನೂ ಭತ್ತೆ ದೊರೆಯಲಾರದು. ಆದುದರಿಂದ ಗಂಡಸರು ಮುದುಕಿಯರನ್ನು ಸೇವಕಿಯರನ್ನಾಗಿ ನೇಮಿಸಲು ಆಶಿಪಡುತ್ತಾರೆ. ಇದರಿಂದ ಭತ್ತೆ ಕೊಡುವ ಕುತಂತ್ರಕ್ಕೊಳಗಾಗುವ ಅಪಾಯವಿರುವುದಿಲ್ಲ. ಆಗಾಗ ಒಬ್ಬ ಸ್ತ್ರೀಯು ತನ್ನ ಮಗು ಇಂಥವನಿಗೇನೇ ಹುಟ್ಟಿದುದೆಂದು ಒಬ್ಬನ ಮೇಲೆ ಖಟ್ಲೆಮಾಡುವಳು. ಆದರೆ, ಅವನು ಸದ್ರಿ ಮಗುವು ತನಗೆ ಹುಟ್ಟಿದುದಲ್ಲೆಂದೂ ಬೇರೆಯವರೂ ಆ ಸ್ತ್ರೀಯ ಸಂಪರ್ಕವುಳ್ಳವರಿದ್ದರೆಂದೂ ಸಿದ್ಧಪಡಿಸುವನು. ಆಗ ನಿಜವಾಗಿ ಮಗುವಿನ ತಂದೆ ಯಾರೆಂಬುದನ್ನು ಕೋರ್ಟಿನವರಿಗೆ ನಿಶ್ಚೈಸಲಾಗದೆ, ಎಲ್ಲರೂ ಮಗುವಿನ ತಂದೆಯರೆಂತ ತೀರ್ಮಾನಿಸಿ ಎಲ್ಲರಿಂದಲೂ ಅದರ ಪೋಷಣೆಗೆ ಭತ್ತೆ ಕೊಡಿಸುವರು. ಹೆಚ್ಚಿಗೆ ಸಂಬಳವಿರುವ ಉದ್ಯೋಗಸ್ಥರನ್ನು ತಮ್ಮ ಬಲೆಗೆಳೆದು ಅವರಿಂದ ಹುಟ್ಟುವ ಮಗುವಿಗೆ ಅವರ ಸಂಬಳದಿಂದ ಹೆಚ್ಚಿಗೆ ಭತ್ತೆ ಪಡೆಯುವ ವ್ಯಾಪಾರವನ್ನೇ ನಡಿಸುವ ಸ್ತ್ರೀಯರು ರಸ್ಯದಲ್ಲಿರುತ್ತಾರೆ. ಹೀಗೆ ಹಲವು ಮಂದಿಯನ್ನು ಸಿಕ್ಕಿಸಿಹಾಕಿ ಅವರಿಂದೆಲ್ಲಾ ಭತ್ತೆ ಪಡೆದು ಬೇಕಷ್ಟು ಆದಾಯ ದೊರೆತಮೇಲೆ ತೊಂದರೆಯಿಲ್ಲದೆ ಸುಖವಾಗಿರುತ್ತಾರೆ. ಇದೇ ರೀತಿ ಹಲವು ಮಂದಿ ಸ್ತ್ರೀಯರನ್ನು ಮದುವೆಯಾಗಿ ಬಿಟ್ಟುಬಿಡುವ ಗಂಡಸರೂ ಇದ್ದಾರೆ. ದಕ್ಷಿಣ ರಸ್ಯದಲ್ಲಿ ಒಬ್ಬನು 31 ವರುಷವಾಗುವುದರೊಳಗೇನೇ 12 ಮಂದಿಯನ್ನು ಮದುವೆಮಾಡಿಕೊಂಡು ಬಿಟ್ಟಿದ್ದನು. ರಸ್ಯದ ಒಂದು ಪಟ್ಟಣದಲ್ಲಿ 3 ಮಂದಿ ಸ್ತ್ರೀಯರನ್ನು ಮದುವೆಮಾಡಿಕೊಂಡು ಒಂದೊಂದು ಮಗುವಾದ ಮೇಲೆ ಪ್ರತಿಯೊಬ್ಬರನ್ನೂ ಬಿಟ್ಟು ಮಗುವಿನ ಪೋಷಣೆಗೆ ಭತ್ತೆ ಕೊಡದುದಕ್ಕಾಗಿ ಒಬ್ಬನ ಮೇಲೆ ಖಟ್ಲೆ ನಡೆಯಿತು. ಅವನು ಕೋರ್ಟಿನ ಮುಂದೆ ಹಾಜರಾದಾಗ ಪ್ರತಿಯೊಬ್ಬ ಪತ್ನಿಗೆ ತಾನು ತನ್ನ ಸಂಬಳದ ಮೂರನೇ ಒಂದಂಶ ಭತ್ತೆಯಾಗಿ ಕೊಡಬೇಕೆಂಬ ಕಾನೂನಿರುವುದರಿಂದ ಹಾಗೆ ಕೊಟ್ಟರೆ ಸಂಬಳದಲ್ಲಿ ತನಗೇನೂ ದೊರೆಯುವುದಿಲ್ಲೆಂದು ತಾನು ಉದ್ಯೋಗವನ್ನೇ ಬಿಟ್ಟುಬಿಟ್ಟನೆಂಬ ಯಥಾರ್ಥಸಂಗತಿ ಹೇಳಿಬಿಟ್ಟನು. ರಸ್ಯದಲ್ಲಿ ಒಬ್ಬನು ಎಷ್ಟು ಮಂದಿಯನ್ನು ಬೇಕಾದರೂ ಮದುವೆಮಾಡಿಕೊಂಡು ಅವರಿಂದ ಎಷ್ಟು ಮಕ್ಕಳನ್ನೇ ಪಡೆಯಲಿ ಅವರಿಗೆಲ್ಲಾ ಕೊಡುವ ಭತ್ತೆಯು ಆತನ ಸಂಬಳದ ಅರೆಪಾಲಿಗಿಂತ ಹೆಚ್ಚಾಗಬಾರದೆಂಬ ಕಾನೂನು ಮಾತ್ರ ಈತನಿಗೆ ತಿಳಿದಿರಲಿಲ್ಲ. ಹಳೆಯ ನಿರ್ಬಂಧ ಪವಿತ್ರಭಾವ, ವಿಧಿನಿಷೇಧ, ಭೀತಿ, ನಾಚಿಕೆಗಳನ್ನೆಲ್ಲಾ ರಸ್ಯಾನರು ಒಮ್ಮೆಯೇ ಆಮೂಲಾಗ್ರವಾಗಿ ಕಿತ್ತು ಹಾಕಿದಾಗ ಉಂಟಾದ ಸ್ವೈರವೃತ್ತಿಯ ಪರಿಣಾಮವಿದು. ಕ್ರಾಂತಿಯು ಪ್ರಥಮವಾಗಿ ಸ್ಥಾಪಿತವಾದಾಗ ರಸ್ಯದ ಪರಿಸ್ಥಿತಿಯೂ ಬಹಳ ಕೆಟ್ಟದಾಗಿತ್ತು. ಭೀಕರ ಜರ್ಮನ್ ಯುದ್ಧದ ಅನಾಹುತ, ಅದರ ಬೆನ್ನಲ್ಲೇ ಕ್ರಾಂತಿಯ ವಿಪ್ಲವದ ಹಾವಳಿ ಅದರೊಂದಿಗೆ ತೀವ್ರ ಬರಗಾಲ ಪೀಡೆ. ಹೀಗೆ ಒಂದಲ್ಲ ಮೂರುವಿಧದ ಮಹಾವಿಪತ್ತಿಗೊಳಗಾಗುವಾಗ ಮಾನವ ಮನಸ್ಸು ಸ್ಥಿರವಾಗಿ ನೀತಿನಿಯಮಬದ್ಧವಾಗಿರುವುದಾದರೂ ಹೇಗೆ? ಇದು ಹೊರತು ನವೀನ ಸ್ವಾತಂತ್ರ್ಯ ಪಡೆದ ಜನರಾದರೂ ವಿದ್ಯೆ ಬುದ್ಧಿಯುಳ್ಳವರೇ? ಜಡ ಮೂಢ ಒಕ್ಕಲಿಗ ಜನರು ಯಾವ ತರದ ಆತ್ಮಗೌರವ ಮತ್ತು ಸಾಮಾಜಿಕ ಜವಾಬ್ದಾರಿಯ ತಿಳಿವೇ ಇಲ್ಲದವರು. ತಲಾಂತರಗಳಿಂದ ಅಜ್ಞಾನಕೂಪದಲ್ಲಿ ನರಳುತ್ತಿದ್ದವರು. ಇಂತಹ ಪಶು ಸ್ವಭಾವದ ಜನರು ಹಠಾತ್ತಾಗಿ ಪಡೆಯುವ ಸ್ವಾತಂತ್ರ್ಯವನ್ನು ಸ್ವೈರವಾಗಿ ಉಪಯೋಗಿಸದಿರುವರೇ? ಆದರೆ ರಸ್ಯವು ವಿದ್ಯೆ, ಸಂಸ್ಕೃತಿ, ನಾಗರಿಕತೆಯಲ್ಲೆಲ್ಲಾ ಮುಂದುವರಿದಂತೆ ಜನತೆಯ ಪಶುವೃತ್ತಿಯು ಕಡಿಮೆಯಾಗಿರುವುದು. ಅದರ ವಿರೋಧವಾಗಿ ಕ್ರಾಂತಿಕಾರರೇ ಪ್ರಬಲ ಪ್ರಚಾರ ನಡಿಸಿರುವರು.

ಕುಟುಂಬ ಮತ್ತು ವಿವಾಹ

ರಸ್ಯದ ಸಮಾಜ ರಚನೆಯಲ್ಲೀಗ ಕುಟುಂಬಸ್ತಂಭವು ಸಂಪೂರ್ಣ ಅಲುಗಾಡಹತ್ತಿದೆ. ಕೆಲವೆಡೆ ಅದನ್ನು ಕಿತ್ತು ಹಾಕಲಾಗಿದೆ. ಹಳ್ಳಿಗಳಲ್ಲಿ ಕುಟುಂಬವು ಇನ್ನೂ ಸ್ಥಿರವಾಗಿ ಉಳಿದಿರುವುದಾದರೂ ಪಟ್ಟಣಗಳಲ್ಲಿ ಅದು ಮೂಲೆಗುಂಪಾಗಿದೆ. ವಿವಾಹಕ್ಕೆ ಯಾವ ತರದ ಪಾವಿತ್ರ್ಯವಾಗಲಿ ಪ್ರಾಮುಖ್ಯತೆಯಾಗಲಿ ಇರುವುದಿಲ್ಲ. ರಸ್ಯದಲ್ಲಿ ಕೌಟುಂಬಿಕ ಸಂಸ್ಥೆಯು ಬಾಳಿಕೊಂಡಿರಬೇಕಾದರೆ ಖಾಸಗಿ ಸೊತ್ತು, ಗೃಹ ಮತ್ತು ಸಂಸ್ಥೆಗಳ ಮೇಲೆ ಅವಲಂಬಿಸಿಕೊಂಡಿರಲು ಸಾಧ್ಯವಿಲ್ಲ. ಅದು ಸ್ತ್ರೀಪುರುಷರೊಳಗಣ ಪ್ರೇಮವನ್ನೇ ಹೊಂದಿಕೊಂಡಿರಬೇಕು. ಈ ಪ್ರೇಮವು ಸೊತ್ತು ಖಾಸಗಿ ಸ್ವಾಧೀನತೆಯಿಂದ ತಪ್ಪಿ ಸಮಾಜದ ಸಮಷ್ಟಿಹಕ್ಕಿನದಾಗಿ ಮಾಡಲ್ಪಟ್ಟರೆ ಮತ್ತೂ ಬಲಗೊಳ್ಳಲನುಕೂಲವಾಗುವುದೆಂದು ಕ್ರಾಂತಿಕಾರರ ಅಭಿಮತ. ಆಗ ಮಾತ್ರ ಈಗಿನಂತೆ ಆಸ್ತಿ ಬದುಕು ಧನಸಂಪತ್ತು ನೋಡಿ ವಿವಾಹವಾಗುವುದು ನಿಂತುಹೋಗಿ ನಿಜವಾಗಿ ಸ್ತ್ರೀಪುರುಷ ಪ್ರೇಮವೇ ಪ್ರಧಾನವಾಗುವುದೆಂದೇ ಅವರ ಪ್ರತಿಪಾದನೆ. ಸ್ತ್ರೀಪುರುಷರಿಗೆ ಚೆನ್ನಾಗಿ ವಿದ್ಯೆಯಿತ್ತು, ಸ್ವಾವಲಂಬಿಗಳಾಗಿ ಜೀವನ ನಡಿಸುವ ಅನುಕೂಲತೆಯಿತ್ತು, ತಮಗೆ ಬೇಕಾದ ಸತಿಪತಿಯನ್ನು ಆರಿಸುವ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟರೆ ಅವರು ನಿಜಪ್ರೇಮ ಪ್ರೇರಿತರಾಗಿ ಒಟ್ಟುಗೂಡಿ ಸುಖದಾಂಪತ್ಯ ನಡಿಸುವರು. ಅವರ ಪ್ರೇಮವು ವಿಚಾರಪ್ರೇರಿತವಾಗುವುದು. ಅವರು ಕೇವಲ ಶಾರೀರಕ ಅಥವಾ ಸಾಂಪತ್ತಿಕ ವಿಷಯಗಳಿಂದ ಆಕರ್ಷಿತರಾಗದೆ ಸಾಮಾಜಿಕ, ಬೌದ್ಧಿಕ, ಚಾರಿತ್ರಿಕ ಮತ್ತು ವೈಯಕ್ತಿಕ ಸಮಾನುಭೂತಿಗಳ ಸಾಮರಸ್ಯದಿಂದ ಪರಸ್ಪರ ಆಕರ್ಷಿತರಾಗುವರು. ಅಂತಹ ಪ್ರೇಮದಲ್ಲಿ ಹೆಚ್ಚಿನ ಬಂಧುಭಾವ ಮತ್ತು ಮಾನವನ ಸಹಚರ್ಯೆಯಿರುವುದು. ಸ್ತ್ರೀಪುರುಷರಿಬ್ಬರೂ ಸ್ವತಂತ್ರ ಜೀವನ ನಡಿಸುವ ಶಕ್ತಿಯುಳ್ಳವರಿರುವುದರಿಂದ ಹಣದ ಸಂಬಂಧವಾಗಿ ಪರಸ್ಪರ ತೊಂದರೆ ತಿಕ್ಕಾಟವುಂಟಾಗಲಿಕ್ಕೆಯಿಲ್ಲ. ಗೃಹಕೃತ್ಯದ ಭಾರ, ಮಕ್ಕಳ ಪೋಷಣೆಯ ಜವಾಬ್ದಾರಿಯೆಲ್ಲಾ ಸ್ತ್ರೀಯು ವಹಿಸಿಕೊಳ್ಳುವ ಅವಶ್ಯವಿಲ್ಲದುದರಿಂದ ಆ ಸಂಬಂಧದಲ್ಲಿಯೂ ವೈಷಮ್ಯವುಂಟಾಗುವ ಹಾಗಿಲ್ಲ. ರಸ್ಯಾನರ ಅಭಿಪ್ರಾಯದಂತೆ ಅವರ ಸಮಾಜದಲ್ಲಿ ಸ್ತ್ರೀಪುರುಷರನ್ನು ಪರಸ್ಪರ ಆಕರ್ಷಿಸಿ ನಿಜವಾದ ಬಂಧುಭಾವ ಮತ್ತು ಸಹಚರ್ಯೆಯಿಂದ ದಾಂಪತ್ಯ ನಡಿಸುವಂತೆ ಮಾಡುವ ಅನುಕೂಲತೆಗಳು ಹಿಂದಿನ ಸಮಾಜಕ್ಕಿಂತ ಇಂದಿನ ಅವರ ಸಮಾಜರಚನೆಯಲ್ಲಿ ಬಹಳ ಹೆಚ್ಚಿರುವವು. ಸತಿಪತಿಗಳಿಗೆ ಸರಿಹೋಗದಿದ್ದರೆ ಅವರು ಒಬ್ಬರೊಬ್ಬರನ್ನು ಬಿಟ್ಟುಬಿಡಲಿ. ನಿರ್ಬಂಧದ ದುಃಖಮಯ ದಾಂಪತ್ಯದಿಂದೇನು? ಎಂದೇ ರಸ್ಯಾನರ ತರ್ಕ.

ಪ್ರಕೃತ ರಸ್ಯದಲ್ಲಿ ಕುಟುಂಬವೇನೂ ನಾಶವಾಗಿರುವುದಿಲ್ಲ. ವಿವಾಹವಿಚ್ಛೇದ ಕೂಡಾ ಅಷ್ಟೊಂದೇನೂ ಅಧಿಕವಾಗಿರುವುದಿಲ್ಲ. ಮೋಸ್ಕೋ ಮೊದಲಾದ ದೊಡ್ಡ ಪಟ್ಟಣಗಳಲ್ಲಿ ಮಾತ್ರ ವಿವಾಹ ವಿಮೋಚನೆಯೇ ಹೆಚ್ಚಿದೆ. ಇವಕ್ಕೆ ಆ ಪಟ್ಟಣಗಳಲ್ಲಿನ ರಾಜಕೀಯ ಅಸ್ಥಿರತೆ, ಜೀವನದ ಪರಿಸ್ಥಿತಿಯೇ ಕಾರಣ. ಆದರೆ ವಿವಾಹವಿಚ್ಛೇದವಾದೊಡನೆಯೇ ಕುಟುಂಬ ವಿಚ್ಛೇದವಾಯಿತೆಂದೇನೂ ಇಲ್ಲ. ವಿವಾಹವಿಚ್ಛೇದವಾದವರು ಪುನಃ ಮದುವೆಯಾಗುತ್ತಾರೆ. ಕೆಲವು ವೇಳೆ ಒಮ್ಮೆ ಬಿಟ್ಟವರೇ ಮತ್ತೊಮ್ಮೆ ಒಟ್ಟುಕೂಡಿ ಕೌಟುಂಬಿಕ ಜೀವನ ನಡಿಸುತ್ತಾರೆ. ಪ್ರೇಮ ಮತ್ತು ಕೌಟುಂಬಿಕಭಾವನೆಯು ಮಾನವ ಸ್ವಭಾವ ಸಹಜವಾದುದು, ಸ್ತ್ರೀಪುರುಷ ಶರೀರಪ್ರಕೃತಿಯಲ್ಲದು ಅಡಕವಾಗಿದೆ. ಏನು ಮಾಡಿದರೂ ಅದನ್ನು ನಾಶಮಾಡಲು ಸಾಧ್ಯವಿಲ್ಲೆಂದೇ ಕೆಲಮಂದಿ ಶರೀರಶಾಸ್ತ್ರಜ್ಞರ ಅಭಿಮತ. ಇದು ನಿಜವೆಂದು ಹೇಳಬಹುದು. ಸ್ತ್ರೀಪುರುಷರು ಒಬ್ಬರೊಬ್ಬರನ್ನು ಕಂಡು ಉತ್ತೇಜಿತರಾಗಿ ಪರಸ್ಪರ ಪ್ರೇಮ, ಸಹಚರ್ಯೆಯನ್ನಾಶಿಸಿದರೆ ಅವರು ಒಂದುಗೂಡಿ ಯಾವುದಾದರೊಂದು ರೀತಿಯ ಕೌಟುಂಬಿಕ ಜೀವನವನ್ನು ನಡಿಸದಿರಲಾರರು. ಪ್ರೇಮವು ಯಾವಾಗಲೂ ಏಕಾಂತವನ್ನಾಶಿಸುವುದು. ಆದುದರಿಂದ ಅದಕ್ಕೆ ಮನೆಯೊಂದು ಅವಶ್ಯವಿರುವುದು. ಇದು ಹೊರತು ಮಾನವನು ಜನಸಂದಣಿಯ ಗಲಾಟೆ, ಗದ್ದಲದಿಂದ ದೂರವಾಗಿ ಶಾಂತಿಯಿಂದ ತನ್ನ ಆತ್ಮೀಯರೊಂದಿಗೆ ಕಾಲಕಳೆಯಲೆಳಸುತ್ತಾನೆ. ತನ್ನ ಮಕ್ಕಳೊಂದಿಗೆ ಆಡಿ ಪಾಡಿ ಆನಂದಿಸಲಿಚ್ಛಿಸುತ್ತಾನೆ. ಪತ್ನಿಯೊಂದಿಗೆ ಪ್ರಣಯವಿನೋದದಲ್ಲಿ ಕಾಲಕಳೆಯಲಾತುರಪಡುತ್ತಾನೆ. ಇದರಿಂದೆಲ್ಲಾ ಕುಟುಂಬ ಮತ್ತು ಮನೆಯು ಅವಶ್ಯವಾಗುತ್ತದೆ.

ರಸ್ಯದ ಕುಟುಂಬವು ನಿಜವಾದ ಪ್ರೇಮಿಗಳಿಬ್ಬರ ಸಂಯೋಗ. ಆ ಸಂಯೋಗ ಸುಖಕ್ಕಾಗಿ ಅವರಿಗೊಂದು ಚಿಕ್ಕ ನಿವಾಸ. ಇದೇ ಅವರ ಗೃಹ. ರಸ್ಯದಲ್ಲಿ ಭವ್ಯ ನಿವಾಸಗಳು ಅವರಿಗೆ ದೊರೆಯಲಾರವು. ಚಿಕ್ಕ ಮನೆಗಳಿಂದಲೇ ತೃಪ್ತಿ ಹೊಂದಬೇಕು. ರಸ್ಯಾನ ಸತಿಪತಿಗಳಿಬ್ಬರೂ ಒಟ್ಟಾಗಿರಲೂ ಬಹುದು. ದೀರ್ಘಕಾಲ ಬೇರೆ ಬೇರೆಯಾಗಿ ತಮ್ಮ ತಮ್ಮ ಕೆಲಸ ಮಾಡುತ್ತಿರಲೂ ಬಹುದು. ಅವರ ಮಕ್ಕಳು ಅಂತ್ರಿಯಲ್ಲ ಅಥವಾ ಅವರಿಗೆ ಬಿಡುವಿರುವಲ್ಲಿ ಅವರೊಂದಿಗಿರಬಹುದು. ಇಲ್ಲವಾದರೆ ಆಗಾಗ ಅವರ ಬಳಿಗೆ ಬಂದು ಹೋಗಬಹುದು. ತಮ್ಮ ತಮ್ಮ ಚಲನವಲನದ ವಿಷಯದಲ್ಲಿ ಗಂಡಹೆಂಡರಿಗೆ ಸಂಪೂರ್ಣ ಸ್ವಾತಂತ್ರ್ಯವಿರುವುದು, ಇದು ಪರಸ್ಪರ ಇಚ್ಛೆ ಮತ್ತು ಭಾವನೆಗಳಿಂದ ಮಾತ್ರ ನಿಯಮವಾಗಿರುವುದು. ಅವರು ಸ್ವತಂತ್ರರಾಗಿ ಸ್ವಾವಲಂಬನೆಯ ಪರಸ್ಪರ ಹೊಂದಿಕೆಯಿಂದ ಜೀವಿಸುವರೇ ಹೊರತು ಒಬ್ಬರೊಬ್ಬರ ಮೇಲೆ ಯಾವ ರೀತಿಯಲ್ಲಿಯೂ ಅವಲಂಬಿಸಿಕೊಂಡಿಲ್ಲ. ಇದೇ ರಸ್ಯದ ಕುಟುಂಬವ್ಯವಸ್ಥೆ. ಕುಟುಂಬವು ಗೃಹದಧಿದೇವತೆಯೊದ ಗೃಹಿಣಿಯು ಗರ್ಭಗುಡಿಯಲ್ಲಿ ಹೊರಗಣ ಲೋಕ ಮತ್ತು ಸಮಾಜದ ಸಂಬಂಧವಿಲ್ಲದೆ, ತಮ್ಮದೇ ಆದ ಸುಖ–ದುಃಖ ಲಾಭ–ನಷ್ಟದಲ್ಲಿ ಮಗ್ನವಾಗಿರುವ ಚಿಕ ಲೋಕವಲ್ಲ. ಸತಿಪತಿ ಸಂತತಿಯದು ಅಭೇದ್ಯಕೋಟೆಯಲ್ಲ. ಅದಕ್ಕೆ ಸಮಾಜದಲ್ಲಿ ಯಾವ ಪವಿತ್ರ ಮತ್ತು ಪ್ರಾಮುಖ್ಯಸ್ಥಾನವಿಲ್ಲ. ದಂಪತಿಗಳ ಏಕಾಂತ ಜೀವನದ ನಿವಾಸವಷ್ಟೆ!

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಜನರಲ್ ಎಶ್ಯೂರೆನ್ಸ್ ಸೊಸ್ಾಯಿಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,
ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.
ಮೂಲಧನವು ರೂ, **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭರ್ಗೋವಾ ಎಸ್ಕ್ವಯರ್, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.
ಅಥವಾ
ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.
ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗೆನೈಸರ್, ವೆಲ್ಲೂರು.
ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಪೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ.

ಮುಗುಳು

ಬೆಲೆ ೦ ೨ ೬

(ಶಾಲೋಪಯೋಗಾರ್ಥವಾಗಿ ಮದ್ರಾಸ್ ಟೆಕ್ಸ್ಟಬುಕ್ ಕಮಿಟಿಯವರಿಂದ ಮಂಜೂರಾಗಿದೆ.

ಅಭಿನಯಿಸಲು, ಕೋಲಾಟವಾಡಲು, ನರ್ತನಮಾಡಲು ಯೋಗ್ಯವಾದ ಹಾಡುಗಳು.

ಪ್ರತಿಗಳು:—ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ,

ನವಭಾರತ ಬುಕ್ ಡಿಪ್ಪೊ
ಉಡುಪಿ

ತ್ವರೆಮಾಡಿರಿ! ತ್ವರೆಮಾಡಿರಿ!! ಬೇಗನೇ ಹೊರಬೀಳುವದು!!!

ಜಾಹೀರಾತುದಾರರಿಗೆ ಒಳ್ಳೇ ಸುಸಂದರ್ಭ
ಕೀರ್ತಿಶೇಷ ಹರಿದಾಸ ಬೋಳಾರ ವಾಸುದೇವಯ್ಯನವರಿಂದ ರಚಿತವಾದ

'ಶ್ರೀ ಭಗವನ್ನಾಮ ಸಂಕೀರ್ತನಾವಳಿ'

ಎಂಬ ಭಜನೆಯ ಪುಸ್ತಕವು ಬೇಗನೇ ಸಿದ್ಧವಾಗುವದು.

ವ್ಯಾಪಾರಸ್ಥರಿಗೆ ಬರ್ಪೂರ್ ಕಮಿಶನ್ ಕೊಡಲಾಗುವದು. ಯಾರು ನಮ್ಮಲ್ಲಿ ನಗದಿ 50 ಪ್ರತಿಗಳಿಗೆ ಓರ್ಡರ್ ಕೊಡುತ್ತಾರೆಯೋ ಅಂಥವರ ಸಂಪೂರ್ಣ ವಿಳಾಸವನ್ನು ಪ್ರಕಟಿಸಲಾಗುವದು. ಪ್ರತಿಗಳನ್ನು ಈಗಾಗಲೇ ತರಿಸಿಕೊಳ್ಳಿರಿ. ಮತ್ತೆ ಸಿಗುವದು ದುರ್ಲಭ. ಪುಸ್ತಕದ ಬೆಲೆ ಪ್ರತಿ ಒಂದಕ್ಕೆ 0—8—0 ಟಪ್ಪಾಲು ಖರ್ಚು ಬೇರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

The Manager, **The National Kanara News Agency,**
No. 58 Mody Street, Fort Bombay.

THE

Vijaya Bank, Ltd.

Head Office: MANGALORE. Branch Offices: **Udipi, Kaup & Coondapoor.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆಗಳು: **ಉಡುಪಿ, ಕಾಪು, ಕುಂದಾಪುರ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. $3\frac{1}{2}$

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. $3\frac{1}{2}$

6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. $5\frac{1}{2}$ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ,

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ 500ರ ವರೆಗೆ ಸಾ. ಶೆ. 7.
501ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 6

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಫಾರುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ. ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದೇಶೀ ಸ್ಟೋರ್ಸ್, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಸೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಸ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

ಪತ್ರವ್ಯವಹಾರ

(ಪತ್ರಿಕಾಕಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಪತ್ರಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿ ಇರತಕ್ಕದ್ದು. ಪತ್ರಿಕಾಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. [ಸಂ. ನ]

ವಿದ್ಯಾ ಇಲಾಖೆಯೂ ಪಠ್ಯಪುಸ್ತಕಗಳೂ

ಶಾಲೆಗಳು ಪ್ರಾರಂಭವಾಗಿ ಈಗಾಗಲೇ ಒಂದು, ಒಂದೂವರೆ, ತಿಂಗಳಾಗಿ ಹೋಯಿತು. ಇನ್ನೂ ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಕೈಗೆ ಸಿಕ್ಕಿಲ್ಲ. ತ್ರೈಮಾಸಿಕ ಪರೀಕ್ಷೆ ಬರುವುದಕ್ಕಾದರೋ, ಬರೇ ಅಲ್ಪಸಮಯ ಉಳಿದಿದೆ. ಈ ಪರೀಕ್ಷೆಗೆ ವಿದ್ಯಾರ್ಥಿಗಳು ಉತ್ತರಿಸುವುದೇನನ್ನು?

ಪಾಠಪಟ್ಟಿಯಲ್ಲಿ ಇಂತಿಷ್ಟು ಪುಟ ಪಾಠವಾಗಲೇ ಬೇಕು, ಎಂದು ಬರೆದು ಬಿಡುತ್ತಾರೆ. ಪಠ್ಯಪುಸ್ತಕಗಳು ಯಾವುವೆಂದು ನಿರ್ಣಯವೇ ಇನ್ನೂ ಆಗಿಲ್ಲ. ಪಾಠಪಟ್ಟಿಯಲ್ಲಿ ಹೇಳಿದಷ್ಟು ಪಾಠಗಳನ್ನು ಉಪಾಧ್ಯಾಯರಿಗೆ ಮಾಡುವ ನಿರ್ವಾಹವಿಲ್ಲ ಹಾಗೆ ಮಾಡಿದರ ವಿದ್ಯಾರ್ಥಿಗಳೇನು ಮಾಡುವುದೇ?

ಬೋರ್ಡು ಹಾಯರ್‌ಎಲಿಮೆಂಟರಿ ಶಾಲೆಗಂತೂ "ಪಬ್ಲಿಕ್ ಗವರ್ನ್‌ಮೆಂಟ್" ಪರೀಕ್ಷೆಯಂತೆ, ಬಡಹುಡುಗರು ಅದಕ್ಕೂ ಫೀಸು ಕಟ್ಟಿ, ತಮ್ಮ ಅದೃಷ್ಟ ಪರೀಕ್ಷೆಯನ್ನು ಮಾಡಿಕೊಳ್ಳಲಿಕ್ಕಿರುವಾಗ ಪಾಠಪಟ್ಟಿಯಲ್ಲಿ ಹೇಳಿದುದೆಲ್ಲವನ್ನೂ ಕಲಿಯಬೇಡವೆ? ಅದನ್ನು ಚೆನ್ನಾಗಿ ಅಧ್ಯಯನ್ನ ಕಲಿಯುವಾ ಎಂದರೆ, ಇನ್ನೂ ಪಠ್ಯಪುಸ್ತಕಗಳ ನಿರ್ಣಯವೇ ಆಗಿಲ್ಲ. ಇನ್ನು ಪಠ್ಯಪುಸ್ತಕಗಳ ನಿರ್ಣಯವಾದ ನಂತರವಾದರೂ ಪಾಠಪಟ್ಟಿಯಲ್ಲಿ ಉಳಿದ ಪುಟಗಳನ್ನು ಅವಸರದಿಂದ ಮಾಡದೆ ನಿರ್ವಾಹವಿಲ್ಲ. ವಿದ್ಯಾ ಇಲಾಖೆಯವರು ಇದೆಲ್ಲವನ್ನೂ ಮೊದಲೇ ಆಲೋಚಿಸಿಕೊಳ್ಳಬೇಡವಾಗಿತ್ತೆ?

ರಜೆಗಳ ದೀರ್ಘ ರಜೆ ಕಳೆದು ಶಾಲೆಯು ಪ್ರಾರಂಭವಾದೊಡನೆಯೇ ಪಾಠಕ್ಕಾರಂಭಿಸುವದಕ್ಕೋಸ್ಕರ ವಿದ್ಯಾ ಇಲಾಖೆಯವರು, ಮೇ ತಿಂಗಳಲ್ಲೇ ಪಠ್ಯ ಪುಸ್ತಕಗಳ ನಿರ್ಣಯವೆಲ್ಲವನ್ನೂ ಮಾಡಬೇಕಿತ್ತು. ಅವರು ಆಗ ದೀರ್ಘ ನಿದ್ರೆಯಲ್ಲಿದ್ದರೋ? ಈಗ ಎಚ್ಚೆತ್ತು ಕೆಲಸಕ್ಕಾರಂಭಿಸಿರುವರಂತೆ ತೋರುತ್ತದೆ. ಬೆಳಿಗ್ಗೆ 5ಗಂಟೆಗೆ ಏಳದೆ, 10ಗಂಟೆಗೆ ಎದ್ದು ಮೊದಲಿನ ಕೆಲಸಗಳನ್ನು ಚಡಪಡಿಸಿಕೊಂಡು ಮಾಡುವುದಕ್ಕಿಂತ, 5ಗಂಟೆಗೇ ಎದ್ದಿದ್ದರೆ ಒಳ್ಳೇದಿತ್ತಲ್ಲ.

ಪ್ರತಿ ದಿವಸವೂ ಕ್ಲಾಸಿನಲ್ಲಿ ಪಾಠವಿಲ್ಲದಿರುವಂತೆ ಮಾಡದಿರಲಿಕ್ಕಾಗಿ, ಮಾನ್ಯ ವಿದ್ಯಾ ಇಲಾಖೆಯವರು, ದಯೆಯಿಟ್ಟು,ಇನ್ನಾದರೂ, ಆದಷ್ಟು ಬೇಗನೆ ಪಠ್ಯ ಪುಸ್ತಕಗಳ ನಿರ್ಣಯದ ವ್ಯವಸ್ಥೆಯ ಕಡೆಗೆ ಗಮನ ಕೊಡಲಾರರೇ?

"ಗೆಳೆಯ"

ಬೇಸಾಯ ಕ್ರಮದಲ್ಲಿ ತರಬೇತಿ

ತಳಿಪರಂಬಾ ಕೃಷಿಕ್ಷೇತ್ರದಲ್ಲಿ ಈ ಕುರಿತಾಗಿ ಅನುಕೂಲತೆಗಳು.

ತಳಿಪರಂಬಾ ವ್ಯವಸಾಯ ಕ್ಷೇತ್ರದಲ್ಲಿ 1937ನೇ ಇಸ್ವಿ ಅಗೋಸ್ತು ತಾರೀಕು 1ರಿಂದ ನಾಗುವಳ್ಳಿ ಕುರಿತಾಗಿ ಅನುಭವವನ್ನು ಕೊಡುವ ಅನುಕೂಲತೆಗಳನ್ನು ಒದಗಿಸುವರು. ನಮ್ಮ ಜಿಲ್ಲೆಯ ರೈತರು ತಮ್ಮಲ್ಲಿ ಓದು ಬರಹ ಗೊತ್ತಿದ್ದ ಒಬ್ಬ ಹದಿನಾರು ವರುಷಕ್ಕೆ ಮಿಕ್ಕಿದ ಪ್ರಾಯದ ಹುಡುಗನನ್ನು ಈ ತರಬೇತಿ ಕ್ಲಾಸಿಗೆ ಕಳುಹಿಸಿಕೊಟ್ಟರೆ ಆತನನ್ನು 10 ತಿಂಗಳೊಳಗಾಗಿ ಬೇಸಾಯಕ್ಕೆ ಸಂಬಂಧಿಸಿದ ಈ ಕೆಳಗೆ ನಮೂದಿಸಿದ ವಿಷಯಗಳ ಕುರಿತು ಸಂಪೂರ್ಣ ತರಬೇತಿಯನ್ನು ಕೊಟ್ಟು ಹಿಂದಕ್ಕೆ ಕಳುಹಿಸುವರು. ಈ ವಿದ್ಯೆಯಿಂದ ಆತನು ತನ್ನ ಸ್ವತಂತ್ರ ಯಾ ಇತರರ ಭೂಮಿಗಳಲ್ಲಿ ಉತ್ತಮ ರೀತಿಯಲ್ಲಿ ಕೃಷಿಕ್ರಮಗಳನ್ನು ನಡಿಸುವರೆ ಯೋಗ್ಯನಾಗುವನು. ತರಬೇತಿ ಕೊಡುವ ವಿಷಯಗಳಾಗುವುವೆಂದರೆ:—

(1) ನಾಗುವಳ್ಳಿ ಪೋಲ್ಮಿಚಾರಣೆ. (2) ಜಾನುವಾರು ಪಾಲನಾ ಪೋಷಣೆ. (3) ಪೈರುಗಳಿಗೂ ಗಿಡಮರಗಳಿಗೂ ಬಾಧಿಸುವ ಹುಳ ಮತ್ತು ಕ್ರಿಮಿರೋಗಗಳ ಕುರಿತು ವಿಚಾರಣೆ. (4) ಗೊಬ್ಬರಗಳು (5) ಪೈರುಗಳ ಸುಧಾರಣಾ ಕೆಲಸ. (6) ಬೀಜ ತಯಾರಿಸುವುದು (7) ತರಕಾರಿ ಹಣ್ಣು ಹಂಪಲು ಹೂವಿನ ತೋಟದ ಕೃಷಿ (8) ಜೇನು ನೊಣಸಾಕುವಿಕೆ. (9) ಕೋಳಿ ಸಾಕುವಿಕೆ (10) ಹಾಲು ಮೊಸರುಗಳಿಗೆ ಸಂಬಂಧಿಸಿದ ಕೈಗಾರಿಕೆ.

ಮೇಲೆ ಹೇಳಿದ ತರಬೇತಿಯನ್ನು ಧರ್ಮಾರ್ಥವಾಗಿ ಕೊಡುವುದು. ಇದಕ್ಕೆ ಸೇರಿದ ಹುಡುಗರಿಗೆ ಉಳಕೊಳ್ಳುವ ಅನುಕೂಲತೆಗಳನ್ನು ಕೊಟ್ಟಾಗ್ಯೂ ಊಟದ ಖರ್ಚು (ರೂಪಾಯಿ 8 ರಿಂದ 12) ಅವರೇ ನೋಡಿಕೊಳ್ಳತಕ್ಕದ್ದು.

ತರಬೇತು ಹೊಂದುವ ಕಾಲದಲ್ಲಿ ಬೆಳಿಗ್ಗೆ 3 ಘಂಟೆ ಸಮಯ ಗದ್ದೆಗಳಲ್ಲಿ ಕೆಲಸವೂ ಮಧ್ಯಾಹ್ನ 3 ಘಂಟೆ ಸಮಯ ಪಾಠ ಹೇಳಿ ಕೊಡುವುದೂ ಆಗಿರುತ್ತದೆ. ಆದುದರಿಂದ ಇದಕ್ಕೆ ಸೇರುವ ಹುಡುಗನು ಗದ್ದೆಗಳಲ್ಲಿ ಕೆಲಸಮಾಡಲು ಶಕ್ತನಾಗಿರಬೇಕು. ಮತ್ತು ಬೇಸಾಯದ ಕುರಿತು ಸ್ವಲ್ಪವಾದರೂ ಅನುಭವವುಳ್ಳವನಾಗಿರಬೇಕು. ಇದಕ್ಕೆ ಸೇರಲು ಬರುವವರು ತರಬೇತಿ ಮುಗಿದ ನಂತರ ನೌಕರಿಯನ್ನು ಅಪೇಕ್ಷಿಸಲಾಗದು.

ಇದಕ್ಕೆ ಸೇರಲು ಕುತೂಹಲವುಳ್ಳವರು ತಮ್ಮ ಅರ್ಜಿಯನ್ನು ದಿ ಡಿಪ್ಯುಟಿ ಡೈರೆಕ್ಟರ್ ಓಫ್ ಎಗ್ರಿಕಲ್ಚರ್ 7ನೇ ಸರ್ಕಲ್ ತಲಚೇರಿ ಎಂಬ ವಿಳಾಸಕ್ಕೆ ಇದೇ ಜುಲಾಯಿ ತಿಂಗಳ ಒಳಗೆ ತಲಪುವಂತೆ ಕಳುಹಿಸಿಕೊಡಬಹುದು.

ಹೆಚ್ಚಿನ ಅನುಭವದ ಕುರಿತಾಗಿಯೂ ಮೇಲಿನ ವಿಳಾಸಕ್ಕಾಗಲೀ ತಮ್ಮ ತಾಲೂಕಿನ ಎಗ್ರಿಕಲ್ಚರಲ್ ಡಿಮೊನ್ ಸ್ಟ್ರೇಟರರ ಕೂಡೆ ವಿಚಾರಿಸಿರಿ.

ಕಸಿಗಿಡಗಳು

ಕಸಿ ಹಣ್ಣಿನ ಗಿಡಗಳು ಹೂವಿನ ಮತ್ತು ತರಕಾರಿ ಬೀಜಗಳು ಈಗ ಹಾಕಲು ಒಳ್ಳೇ ಕಾಲವಾಗಿರುತ್ತೆ. ಗ್ಯಾರಂಟಿಯಾದ ಮಾಲು ಬೇಕಾದರೆ ಮತ್ತು ಬೆಂಗಳೂರಲ್ಲಿ ಬೆಳೆಯತಕ್ಕ ಇಂಗ್ಲಿಷ್ ಮತ್ತು ನಾಡ ತರಕಾರಿ ಅಪೇಕ್ಷಿಸುವವರು ಕೆಳಗೆ ಕಂಡ ಅಡ್ರಸ್ಸಿಗೆ ಬರೆಯಿರಿ.

THE ROYAL SEED CO.,
FLORISTS & SEEDSMEN,
27, Ilpay Thope ULSOOR, BANGLORE.

ವಿ. ಸೂ—ತರಕಾರಿಗಳು ಮಾರ್ಕೇಟ್ ರೇಟಿಗೆ ಸಪ್ಲೈ ಮಾಡಿ ೧—೦—೦ ಒಂದಕ್ಕೆ ೦—೨—೦ ಕಮೀಷನ್ ಪಡಿಯುತ್ತೇವೆ. ಆರ್ಡರ್ ಗಿಡಗಳಿಗೆ, ತರಕಾರಿಗಳಿಗೆ ಪೂರ್ತಿ ಹಣ ಬರಬೇಕು

ಅತ್ಯುತ್ತಮ ಪೆನಿನಲ್ಲಿ ಉಪಯೋಗಿಸಲು ಅತ್ಯುತ್ತಮ ಶಾಯಿ

'ಕುಶಾ' (ರಿಜಿಸ್ಟರ್ಡ್) ಫೌಂಟನ ಪೆನಿನ 'ಶಾಯಿ'

'ಕುಶಾ' (ರಿಜಿಸ್ಟರ್ಡ್) ಚಲೊ ಸುವಾಸನೆಯ 'ಪೊಮೇಡ'

ಕೇಶಸೌಂದರ್ಯಕ್ಕೆ ಅತೀ ಉಪಯೋಗಕರ

Sole disributtors:—**V. V Kamath & Bros, Mangalore.**

ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ನಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer Dr. D N. JASANI, Vitalbhai Patel Road, BOMBAY 4

ಸ್ವದೇಶ

ಕೊಲೆಯಾಗಿದ್ದವನು ಸಜೀವನಾಗಿದ್ದುದು, ಮದ್ರಾಸ್ ಎಸೆಂಬ್ಲಿ ಸಭೆಯು, ರಾಜಕೀಯ ಕೈದಿಗಳ ಬಿಡುಗಡೆ, ಜಾಪಾನಿನ ಶರ್ತ, ಸ್ಪೈನಿನ ಯುದ್ಧ, ಚೀನದ ವಿಷಮ ಪರಿಸ್ಥಿತಿ.

ವಿದೇಶ

ನಿರೀಕ್ಷೆಯಿತ್ತು. ಅದು ಸಫಲವಾಗದಿದ್ದರೂ ನಮ್ಮ ಜಿಲ್ಲೆಯವರಾದ ಡಾಕ್ಟರ್ ಯು. ರಾಮರಾಯರು ಮದ್ರಾಸ್ ಕೌನ್ಸಿಲಿನ ಪ್ರೆಸಿಡೆಂಟರಾಗಿ ಒಮ್ಮತದಿಂದ ಆರಿಸಲ್ಪಟ್ಟುದು ಜಿಲ್ಲೆಗೊಂದು ದೊಡ್ಡ ಗೌರವ. ಶ್ರೀ. ರಾಯರು ಅದೆಷ್ಟು ಜನಪ್ರಿಯರಿರುವರೆಂಬುದು ಇದರಿಂದ ವ್ಯಕ್ತವಾಗುವುದು. ಅವರು ತನ್ನ ಅಧ್ಯಕ್ಷಪದವಿಯನ್ನು ದಕ್ಷತೆಯಿಂದ ನಿರ್ವಹಿಸಿ ಇನ್ನಷ್ಟು ಜನಪ್ರೀತರಾಗಿ ಜಿಲ್ಲೆಗೆ ಕೀರ್ತಿತರಲೆಂದೇ ನಮ್ಮ ಹಾರೈಕೆ. ಇದು ಹೊರತು ನಮ್ಮ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ. ಎ. ಬಿ. ಶೆಟ್ಟಿ, ಶ್ರೀ. ಕೆ. ಆರ್. ಕಾರಂತ್ ಮತ್ತು ಮಿ. ಸಿ. ಜೆ. ವಾರ್ಕಿಯವರು ಪಾರ್ಲಿಮೆಂಟರಿ ಸೆಕ್ರಿಟರಿಗಳಾಗಿ ನೇಮಿಸಲ್ಪಟ್ಟಿರುವುದು ಅತಿ ಸಂತೋಷಕರ. ಇದರಿಂದಾಗಿ ನಮ್ಮ ಜಿಲ್ಲೆಯ ಮತಸಮುದಾಯವು ಈ ಮಹನೀಯರ ಆಸಕ್ತಿಯ ಸೇವೆಯನ್ನು ಕಳಕೊಳ್ಳುವುದಾದರೂ, ವೈಯಕ್ತಿಕವಾಗಿ ಅವರು ಹೆಚ್ಚಿನ ತ್ಯಾಗಮಾಡಿ ಈ ಹೊಸ ಜವಾಬ್ದಾರಿ ವಹಿಸಬೇಕಾದರೂ, ಕರ್ತವ್ಯವು ಎಲ್ಲಕ್ಕಿಂತಲೂ ಮೊದಲೆಂಬ ಭಾವನೆಯಿಂದ ಅವರು ಪಾರ್ಲಿಮೆಂಟರಿ ಸೆಕ್ರಿಟರಿಗಳಾಗಲೊಪ್ಪಿದುದಕ್ಕಾಗಿ ನಂದನಾರ್ಹರು. ಅದಕ್ಕಾಗಿ ಜಿಲ್ಲೆಯು ಅಭಿಮಾನಪಡಬೇಕು. ಈ ಮೂವರು ತಮ್ಮ ಹೊಸ ಜವಾಬ್ದಾರಿಯನ್ನು ಚತುರತೆಯಿಂದ ನಡಿಸಿ ಹೆಸರು ಪಡೆದು ಜನಪ್ರೀತರಾಗಲೆಂದೇ ನಮ್ಮ ಹೃತ್ಪೂರ್ವಕವಾದ ಅಪೇಕ್ಷೆ.

ಸ್ವದೇಶ

ಕೊಲೆಯಾಗಿದ್ದವನು ಸಜೀವನಾಗಿದ್ದುದು

ಸಂಯುಕ್ತ ಪ್ರಾಂತದ ಆತ್ತವ ಎಂಬ ಹಳ್ಳಿಯಲ್ಲಿ ಚಿಟ್ಟೋರಿ ಎಂಬವನೊಬ್ಬನನ್ನು ಆವನ ಭಾವ ಮೈಕು ಎಂಬವನು, ತನ್ನ ತಂಗಿಯನ್ನು ಹಣಪಡೆದು ಇನ್ನೊಬ್ಬನಿಗೆ ಮದುವೆಮಾಡಿ ಕೊಡುವ ದುರಾಶೆಯಿಂದ ಮನೆಗೆ ಕರೆಸಿ ಕುತ್ತಿಗೆ ಹಿಸುಕಿಕೊಂದು ಪೆಟ್ಟಿಗೆಯೊಳಗೆ ಹಾಕಿ ಹತ್ತಿರದ ನದಿಗೆ ಬಿಸಾಡಿದನೆಂದು ಚಿಟ್ಟೋರಿಯ ತಮ್ಮನು ಪೋಲೀಸರಿಗೆ ತಿಳಿಸಿದ. ಪೋಲೀಸರು ನದಿಯಲ್ಲೆಲ್ಲಾ ಹುಡುಕಾಡಿದರು ಶವ ಪೆಟ್ಟಿಗೆ ಸಿಗಲಿಲ್ಲ. ಹಳ್ಳಿಯವರು ಕೆಲವರು ತಾವು ಕೊಲೆ ಮಾಡಿದುದನ್ನು ನೋಡಿರುವೆವೆಂದು ಸಾಕ್ಷಿ ಹೇಳಿದ್ದರು. ಆಗ ಮೈಕು ಮತ್ತು ಇನ್ನು ಕೆಲವರ ದಸ್ತಗಿರಿಗಾಗಿ ವಾರಂಟು ಹೊರಟಿತು. ಆಗ ಚಿಟ್ಟೋರಿಯು ತನ್ನೊಬ್ಬ ಮಿತ್ರನ ಮನೆಯಲ್ಲಿ ಮಲಗಿದ್ದುದನ್ನು ಪೋಲೀಸರು ಪತ್ತೆ ಮಾಡಿದರು. ಈಗ ಪೋಲೀಸರನ್ನು ವಂಚಿಸಿದುದಕ್ಕಾಗಿ ಚಿಟ್ಟೋರಿಯ ತಮ್ಮನ ಮೇಲೆ ಖಟ್ಲೆ ಮಾಡಲಾಗಿದೆ.

ಇದೇ ತಾ. ೧೪ರಲ್ಲಿ ಲಾಹೋರಿನ ಮೋಚಿಗೇಟಿನ ಬಳಿ ಬಸ್ ಮಾರುತ್ತಿದ್ದ ಹಿಂದು ಒಬ್ಬನನ್ನು ಮುಸಲ್ಮಾನ ಯುವಕನೊಬ್ಬನು ಕತ್ತಿಯಿಂದ ತಿವಿದು ಕೊಂದು ಗಲಾಟೆಯಾಯಿತು. ಹಿಂದುಗಳೂ ಮುಸಲ್ಮಾನರೂ ಸೇರಿಬಂದರು. ಆಗ ಪೋಲೀಸರು ಧಾವಿಸಿ ಬಂದು ಕೊಲೆಗಾರನನ್ನು ದಸ್ತಗಿರಿಮಾಡಿ ಜನರನ್ನು ಚೆದರಿಸಿದರು. ಈ ಕೊಲೆಯ ಸ್ಥಳದಲ್ಲಿ ಪೋಲೀಸ್ ಪೌಜೊಂದು ಪಹರೆ ನಡಿಸುತ್ತದೆ.

ಮದ್ರಾಸ್ ಎಸೆಂಬ್ಲಿ ಸಭೆಯು

ಆಗೋಸ್ತು ತಾ. ೧೭ಕ್ಕೆ ನಡೆಯುವುದೆಂದು ಪ್ರಕಟವಾಗಿರುವುದಷ್ಟೆ. ಈಗ ಬರುವ ತಿಂಗಳ ಕೊನೆಯಲ್ಲಿ ನಡೆಸುವ ಆಲೋಚನೆ ನಡೆದಿದೆ. ಇಂಟೆರಿಮ್ ಮಂತ್ರಿಮಂಡಲವು ತಯಾರಿಸುವ ಬಜೆಟನ್ನು ಬದಲಾಯಿಸಲು ಸ್ವಲ್ಪ ಹೆಚ್ಚು ಸಮಯ ಬೇಕಾಗುವುದು ಶ್ರೀ. ರಾಜಗೋಪಾಲಾಚಾರ್ಯರು ರೈತರಿಗೆ ಸಹಾಯನೀಯುವ ವಿಷಯದಲ್ಲಿ ಹೆಚ್ಚಿನ ಉದಾರ ಧೋರಣೆ ವಹಿಸುವ ಆವಶ್ಯಕತೆಯನ್ನು ಕಂಡು ಬಜೆಟನ್ನು ಬದಲಾಯಿಸಲಿರುವರು. ವಿಧಾಯಕ ಕಾರ್ಯಗಳಿಗೂ ಹೆಚ್ಚಿನ ಹಣ ವ್ಯಯಿಸಲಾಗುವುದು, ಎಸೆಂಬ್ಲಿಯ ಅಧಿವೇಶನವನ್ನು ಮುಂದುವರಿಸುವ ಅಧಿಕಾರವು ಸ್ಪೀಕರ್ ಮತ್ತು ಗವರ್ನರರದು. ಶ್ರೀ ರಾಜಗೋಪಾಲಾಚಾರ್ಯರೂ, ಸ್ಪೀಕರರೂ ಇತರ ಮಂತ್ರಿಗಳೂ ಗವರ್ನರರು ಊಟಕ ಮಂಡಿಗೆ ಹೋಗುವ ಮೊದಲು ಅವರೊಡನೆ ಮಾತಾಡಿರುವರು

ರಾಜಕೀಯ ಕೈದಿಗಳ ಬಿಡುಗಡೆ

ಅಂಡಮಾನಿನಲ್ಲಿರುವ, ಬಂಗಾಳದ ಡಿಟೆನ್ಯೂ ಮತ್ತು ಇತರ ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡುವ ವಿಷಯದಲ್ಲಿ ಇಡೀ ಹಿಂದೂದೇಶದಲ್ಲಿ ಸಂಘಟಿತರಾಗಿ ತೀವ್ರ ಚಳವಳ ಮಾಡುವ ಕುರಿತು ಶ್ರೀ ಸುಭಾಷಚಂದ್ರ ಭೋಸರು ಪಂಡಿತ ಜವಾಹರಲಾಲರೊಡನೆ ಪತ್ರ ವ್ಯವಹಾರ ನಡಿಸಿರುವರು.

ವಿದೇಶ

ಸ್ಪೈನಿನ ಯುದ್ಧ

ಸ್ಪೈನಿನ ಯುದ್ಧವಾರಂಭವಾಗಿ ಒಂದು ವರ್ಷವಾಯಿತಷ್ಟೆ. ಈ ವರ್ಷಂತಿಯನ್ನು ಸ್ಪೆನಿಶ್ ಸರಕಾರವು ಇದೇ ತಾ. ೧೯ರಲ್ಲು ವೆಲೆನ್ಸಿಯದಲ್ಲಿ ಸಂಭ್ರಮದಿಂದ ಆಚರಿಸಿತು, ಈ ಸಂದರ್ಭದಲ್ಲಿ ಪ್ರೆಸಿಡೆಂಟ್ ಅಜಾನರವರು ದೊಡ್ಡ ಜನಸಮುದಾಯದ ಮುಂದೆ ಭಾಷಣನೀಯುವಾಗ ಜರ್ಮನರು ಮತ್ತು ಇಟೆಲಿಯಾನರು ಸ್ಪೈನಿನ ಯುದ್ಧದಲ್ಲಿ ಕೈಹಾಕಿರುವುದು ಸ್ಪೆನಿಶ್ ರಿಪಬ್ಲಿಕನ್ನು ಅಪಜಯಗೊಳಿಸಲಿಕ್ಕಲ್ಲ ಇಂಗ್ಲೆಂಡು ಮತ್ತು ಫ್ರಾನ್ಸುಗಳಂತಹ ರಾಷ್ಟ್ರಗಳನ್ನು ತಡೆಗಟ್ಟಲು ಸ್ಪೈನಿನ ಮತ್ತು ನೌಕಾಸ್ಥಲಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ. ತಾಟಸ್ಥ್ಯವೆಂಬುದು ಬರೀ ಫಾರ್ಸು. ಈಗ ಸರಕಾರದ ಸೈನಿಕಬಲವು ಒಳ್ಳೇದಾಗಿದೆ. ಎಷ್ಟಕ್ಕೂ ಪರಾಜಯವಾಗಬಿಡದ ಆರ್ಥಮಿಲ್ಯ ಸೈನಿಕರೀಗ ಸಿದ್ಧರಿದ್ದಾರೆಂದು ಹೇಳಿರುವರು.

ಚೀನದ ವಿಷಮಪರಿಸ್ಥಿತಿ

ಜಾಪಾನಿನ ಶರ್ತ

ಉತ್ತರ ಚೈನದ ಸ್ಥಳೀಯ ಅಧಿಕಾರಿಗಳೊಡನೆ ಜಾಪಾನು ನಡಿಸುವ ಒಪ್ಪಂದವನ್ನು ಕೇಂದ್ರ ಸರಕಾರವು ವಿರೋಧಿಸಬಾರದೆಂದು ಉತ್ತರಕ್ಕೆ ಸೇನೆ ಮತ್ತು ವಿಮಾನಗಳನ್ನು ಕಳುಹಿಸಬಾರದು. ಯುದ್ಧಸಿದ್ಧತೆ ಮಾಡಬಾರದೆಂದು ಎಚ್ಚರಿಸಿರುವುದು. ಇದೇ ತಾ. ೧೯ರೊಳಗೆ ಉತ್ತರವೀಯದಿದ್ದರೆ ಅನಾಹುತ ಪರಿಣಾಮವಾಗುವುದೆಂದು ಬೆದರಿಕೆ ಹಾಕಿರುವುದು. ಈ ಕುರಿತು ಚೀನೀ ಸರಕಾರವು ಈ ವರೆಗೆ ಯಾವ ನಿರ್ಧಾರವನ್ನೂ ಮಾಡಿರುವುದಿಲ್ಲ. ಅಪಮಾನಕರವಾದ ಯಾವ ಶರ್ತವನ್ನೂ ತಾವು ಒಪ್ಪಲಿಕ್ಕಿಲ್ಲೆಂದು ಸೈನಿಕರು ಹಠಹಿಡಿದಿರುವರು. ಎರಡು ಕಡೆಗಳಲ್ಲಿ ಜಾಪಾನ್ ವಿಮಾನಗಳು ಚೀನೀ ಪ್ರಯಾಣಿಕ ಟ್ರೈನುಗಳ ಮೇಲೆ ಬೋಂಬೆಸೆದಿರುವವು. ಈ ಕುರಿತು ಚೀನದ ರಾಯಭಾರಿಯು ತನ್ನ ನಿಷೇಧ ಸೂಚಿಸಿರುವನು. ಜಾಪಾನರ ಎಚ್ಚರಿಕೆಯನ್ನು ಧಿಕ್ಕರಿಸಿ ಚೀನವು ಉತ್ತರದಲ್ಲಿ ಸೇನೆಯನ್ನು ಸಂಗ್ರಹಿಸುತ್ತಿರುವುದು ೩೫,೦೦೦ ಸೈನಿಕರು ಜೆಂಟಂಗ್ ಎಂಬ ಸ್ಥಳಕ್ಕೆ ಮುಟ್ಟಿರುವರು. ಇನ್ನೂ ಸೈನಿಕರು ಉತ್ತರಕ್ಕೆ ಕಳ ಹಿಸಲ್ಪಡುತ್ತಿರುವರು

ಉಡುಪಿ

ಪ್ರಸಿದ್ಧ ವಕೀಲರೊಬ್ಬರ ನಿಧನ

ಇಲ್ಲಿಯ ಜನಪ್ರೀತ ಹಾಗೂ ಸುಪ್ರಸಿದ್ಧ ವಕೀಲರಾದ ಶ್ರೀ ಬಿ ಶ್ರೀನಿವಾಸರಾಯರು ೧೮-೬-'೩೭ರಲ್ಲಿ ತಮ್ಮ ೫೮ನೇ ವಯಸ್ಸಿನಲ್ಲಿ, ದಿವಂಗತರಾದರೆಂದು ತಿಳಿಸಲು ತುಂಬಾ ವಿಷಾದವೆನಿಸುವುದು. ಇವರು ಅಂಧ್ರವಾಯು ಪೀಡಿತರಿದ್ದು ಕೆಲವು ದಿನಗಳ ಹಿಂದೆ ಒಪರೇಶನ್ ಮಾಡಲ್ಪಟ್ಟಿದ್ದರು. ಎರಡು ಮೂರು ದಿನಗಳ ವರೆಗೆ ಹಾಸಿಗೆ ಹಿಡಿದಿದ್ದು ಆಕಸ್ಮಾತ್ತಾಗಿ ಮೃತ್ಯುವಶರಾದರು. ಇವರು ನ್ಯಾಯಪಕ್ಷಪಾತಿಗಳೂ ಸತ್ಯಪ್ರಿಯರೂ ಸರಳ ಸ್ವಭಾವಿಗಳೂ ಆಗಿದ್ದರು. ಮೃತರ ದುಃಖೀಕುಟುಂಬದೊಡನೆ ನಮ್ಮ ಸಹಾನುಭೂತಿಯನ್ನು ಸೂಚಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿಯಿರಲಿ!

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಎಂಬ ಜನಪ್ರಿಯ ಸಂಸ್ಥೆಯು ಈ ಮೊದಲು ರಿಸರ್ವ್ ಬ್ಯಾಂಕ್ ಓಫ್ ಇಂಡಿಯದ ಮೆಂಬರ್ ಆಗಿ ಆರಿಸಲ್ಪಟ್ಟಿತ್ತು. ಈಗ ಬೊಂಬಾಯಿಯ ಕ್ಲಿಯರಿಂಗ್ ಹೌಸ್‌ನ ಮೆಂಬರ್ ಆಗಿಯೂ ಚುನಾಯಿಸಲ್ಪಟ್ಟಿರುವುದು ಅಭಿನಂದನೀಯವೂ ಅಭಿಮಾನಪ್ರದ ವಿಷಯವಿದೆ.

ಶಿಕಾರಿಗಳಿಗೆ ಸುಸಂಧಿ

ಕುಂದಾಪುರ ತಾಲೂಕಿನ ಕೊಗ್ರೆ, ಕಳವಾರ್, ಜಪ್ತಿ, ಮೊಳಹಳ್ಳಿ ಮೊದಲಾದ ಗ್ರಾಮಗಳಲ್ಲಿ ಹುಲಿಗಳನ್ನು ಕೊಲ್ಲುವರೆ ಇದೇ ತಿಂಗಳ ತಾ೨೫ ಮತ್ತು ೨೬ರಲ್ಲಿ ಶಿಕಾರಿಗಳು ಬೇಟೆಯಾಡಬಹುದಾಗಿ ಜಿಲ್ಲಾಕಲೆಕ್ಟರರು ತಿಳಿಸುತ್ತಾರೆ.

ಡಾ। ಯು. ರಾಮರಾಯರಿಗೆ ಸನ್ಮಾನ

ಇವರು ಮದ್ರಾಸು ಕೌನ್ಸಿಲಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಸಂತೋಷ ಸೂಚನಾರ್ಥವಾಗಿ ದ್ರಾವಿಡ ಬ್ರಾಹ್ಮಣ ಸಮಾಜದವರೂ ಉಡುಪಿ ಮಠಾಧಿಪತಿಗಳೂ ಅಭಿನಂದನಾ ತಂತಿಗಳನ್ನು ಕೊಟ್ಟು ಸನ್ಮಾನಿಸಿದರು. ಸ್ಥಳೀಯ ಸಂಸ್ಕೃತ ಕಾಲೇಜು ಸಹ ಈ ಶುಭ ವಾರ್ತೆಯ ಸಂತೋಷ ಪ್ರದರ್ಶನಕ್ಕಾಗಿ ಮುಚ್ಚಲ್ಪಟ್ಟಿತ್ತು.

ತಾ೧4-7-37ರಲ್ಲಿ ಡಾ। ಎನ್. ಶಂಕರ ಅಡ್ಯಂತಾಯ, ಎಲ್ ಎಮ್. ಬಿ.ಎಸ್. ಇವರು ತಮ್ಮದೊಂದು ಡಿಸ್‌ಪೆನ್ಸರಿಯನ್ನು ಕೋಳದ ಪೇಟೆಯಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್, ವಕೀಲ್ ಇವರ ಲಕ್ಷ್ಮೀನಿವಾಸದ ಬಳಿಯ ಕಟ್ಟಡದಲ್ಲಿ ತೆರೆದಿರುತ್ತಾರೆ. ಪ್ರಾರಂಭದ ದಿನ ಹಲವು ಸ್ಥಳೀಕ ಗೃಹಸ್ಥರಿಗೆ ಟೀಪಾರ್ಟಿಯಿದ್ದಿತು. ಈ ತರುಣ ಹೊಸ ಡಾಕ್ಟರರು ತಮ್ಮ ಉದ್ಯಮದಲ್ಲಿ ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದಿ ಜನಪ್ರಿಯರಾಗಲೆಂದು ಹಾರೈಸುತ್ತೇವೆ

ಕೂದಲು ರಂಗು ಬಿಡಿ

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಂತು ಕಪ್ಪಾಗಿ ಬೆಳೆದು ದೀರ್ಘಕಾಲದ ವರೆಗೆ ಉಳಿಯುತ್ತದೆ. ಹಾಗಾಗದಿದ್ದರೆ ಇಮ್ಮಡಿಯಷ್ಟು ಬೆಲೆಯನ್ನು ವಾಪಾಸು ಕೊಡುವ ಗ್ಯಾರಂಟಿ. ಇದರ ನಿಜತ್ವಕ್ಕೆ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿ ಕೂದಲಿದ್ದರೆ ರೂ. ೨೮, ಅರ್ಧಾಂಶಕ್ಕೂ ಮಿಕ್ಕಿ ಬಿಳಿ ಕೂದಲಿದ್ದರೆ ರೂ. ೨೮ ಬಾಟಲಿಗೆ ಬರೆಯಿರಿ.

Bal Kala Stores,

P. O. Kansisinri (Darbhanga)

ಹಣ್ಣು ಹಂಪಲುಗಳು, ದರ್ಭಾಂಗದ ಪ್ರಖ್ಯಾತ ಮಾವಿನ ಕಸಿ ಗಿಡಗಳು ಮುಸ್ತಾಫರ್ ಪೂರಿನ ತೋಟಿ ಹೂಗಿಡಗಳು (Lichen) ಅತ್ಯಲ್ಪ ಬೆಲೆಗೆ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

Bihar Nursery,
P. O. Bihar

Nursery (Darbhanga) **BIHAR**

THE UDIPI BANK LTD.

UDIPI

ALL KINDS OF BANKING BUSINESS TRANSACTED

PERSONAL ATTENTION PAID TO ALL ENQUIRIES

ESTD. 1925

ದಕ್ಷಿಣ ಕನ್ನಡ

ಕುಂದಾಪುರ

ಕಾಂಗ್ರೆಸು ಅಧಿಕಾರವನ್ನು ಸ್ವೀಕರಿಸಿದ ದಿನಾಚರಣೆಯು ಸಲುವಾಗಿ ತಾ ೧೪ ೭ ೩೭ರಂದು ಮುಂಜಾನೆ ಪಟ್ಟಣದ ಎಲ್ಲ ಕಡೆಯಲ್ಲೂ ರಾಷ್ಟ್ರಧ್ವಜವು ಹಾರಾಡುತ್ತಿತ್ತು ಆ ದಿನ ಸಾಯಂಕಾಲ ೫ ಘಂಟೆಗೆ ಶ್ರೀ ಕೋಟಿ ವರ ಕಂಪೌಂಡಿನಿಂದ ತಾಲೂಕು ಕಾಂಗ್ರೆಸ್ ಕಮಿಟಿಯವರ ನೇತೃತ್ವದಲ್ಲಿ ಪ್ರಚಂಡ ಮೆರವಣಿಗೆ ಹೊರಟಿತು ಹಲವು ರಾಷ್ಟ್ರಧ್ವಜಗಳು ಜನರ ಜಯಕಾರ, ಬೆಂಡು ವಾದ್ಯಗಳಿಂದ ಪಟ್ಟಣದ ಮುಖ್ಯ ಬೀದಿಗಳಲ್ಲಿ ಬಂದು, ಸಾಹಿತ್ಯಸಂಘದ ಕಟ್ಟಡದಲ್ಲಿ ಇಲ್ಲಿಯ ಪ್ರಮುಖ ಜವಳಿ ವ್ಯಾಪಾರಿಗಳಾದ ಶ್ರೀ ಚಿಕ್ಕಣ್ಣ ರಮಣ ಪ್ರಭುಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿತು ಜನಸಂದಣಿಯು ಕಿಕ್ಕಿರಿದು ನೆರೆದಿತ್ತು ಇಂದಿನ ಮೆರವಣಿಗೆ ಮತ್ತು ಸಭೆಯ ಉದ್ದೇಶ, ಕಾಂಗ್ರೆಸು ಮಂತ್ರಿಪದವಿ ಸ್ವೀಕರಿಸಲು ಕಾರಣ, ಆಶ್ವಾಸನೆ, ಕಾಂಗ್ರೆಸು ಮತ್ತು ಸರಕಾರಗಳೊಳಗಾದ ಬಿಕ್ಕಟ್ಟು, ಇತ್ತೀಚೆಗೆ ಇತ್ತಂಡದವರಲ್ಲಿ ಉಂಟಾದ ಪರಿವರ್ತನೆ ಕಾಂಗ್ರೆಸು ಸರಕಾರವನ್ನು ನಡಿಸುವ ಉದ್ದೇಶ, ಇದರಿಂದ ದೇಶಕ್ಕಾಗುವ ಪ್ರಯೋಜನ ಇವೇ ಮೊದಲಾದುದುವನ್ನು ವಿವರಿಸಿ, ಕಾಂಗ್ರೆಸು ಸರಕಾರಕ್ಕೆ ಜನತೆಯು ಬೆಂಬಲ ಕೊಡಬೇಕಾದುದು ಕರ್ತವ್ಯವೆಂದೂ ಎಲ್ಲರೂ ಕಾಂಗ್ರೆಸು ಸದಸ್ಯರಾಗಿ ಸೇರಬೇಕೆಂತಲೂ, ವಿನಂತಿಸಿ, ಶ್ರೀಯುತ ಕೆ ಎಲ್ ಭಂಡಾರರು ವಕೀಲ, ಮತ್ತು ಶ್ರೀಯುತ ಎಚ್ ಕೋಟಿಯಣ್ಣ ಶೆಟ್ಟರು ಭಾಷಣವನ್ನಿತ್ತರು. ಅಧ್ಯಕ್ಷರ ಕಾಲೋಚಿತ ಭಾಷಣಾನಂತರ ಜಯಘೋಷದಿಂದ ಸಭೆಯು ಚದರಿತು

ಬಸರೂರು

ಇಲ್ಲಿಯ ಕಾಂಗ್ರೆಸು ಕಮಿಟಿಯವರು ಮೆರವಣಿಗೆ ನಡಿಸಿದುದಲ್ಲದೆ, ಶ್ರೀ ಬಿ ರಘುನಾಥ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು ಶ್ರೀ ಪಿ ರಾಮಣ್ಣ ಹೆಗ್ಡೆಯು, ಬಿ ಎ, ಶ್ರೀ ಎಮ್ ಶ್ರೀಪತಿ ಭಟ್ಟ, ಎಸ್ ಸುಬ್ಬಣ್ಣ ಶೆಟ್ಟಿ, ಬಿ ಎ, ಇವರು ಕಾಂಗ್ರೆಸು ಅಧಿಕಾರ ಸ್ವೀಕರಿಸಿದುದು ದೇಶಕ್ಕೆ ಹಿತಕರವೆಂದೂ, ವರ್ಕಿಂಗ್ ಕಮಿಟಿಯ ನಿರ್ಧಾರವು ಕಾಲೋಚಿತವಾದುದೆಂದೂ ಭಾಷಣವನ್ನಿತ್ತರು. ಅಧ್ಯಕ್ಷರ ಚಿಕ್ಕ ಭಾಷಣಾನಂತರ ಸಭೆಯು ಚೆದರಿತು ಅಂದು ಎಲ್ಲೆಲ್ಲೂ ರಾಷ್ಟ್ರಧ್ವಜ ಹಾರಾಡುತ್ತಿತ್ತು

ಕೋಟ

"ಇಲ್ಲಿನ ಸ್ಥಳೀಯ ವಾಚನಾಲಯದ ವಾರ್ಷಿಕೋತ್ಸವವು ಇದೇ ಜುಲೈ ತಿಂಗಳ ೧೩ನೇ ತಾರೀಕಿನ ದಿನ ಶ್ರೀಯುತ ಡಾ ನಾರಾಯಣ ಶೆಟ್ಟರವರ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ಜರಗಿತು, ನೂರಾರು ೩೫ ಸದಸ್ಯರು ಹಾಜರಿದ್ದರು ಹಾರ್ಮೋನಿಯಂ ಮತ್ತು ತಬ್ಲೆಯಿಂದೊಡಗೂಡಿದ ರಂಗಗಾನ ಮುಂತಾದುವುಗಳು ಸಭಿಕರನ್ನು ಹರ್ಷಗೊಳಿಸಿದುವು ತದನಂತರ ಸದ್ರಿ ಶ್ರೀ ಶಂಕರಿ ವಾಚನಾಲಯದ ಕಾರ್ಯದರ್ಶಿಗಳಾದ ರಾ ಎಚ್ ಶೇಷಗಿರಿ ನಾವುಡರು ವಾಚನಾಲಯದ ವಾರ್ಷಿಕ ವರದಿಯನ್ನು ಸಭೆಯ ಮುಂದಿಟ್ಟು ಈ ಸಂಘದ ಆರ್ಥಿಕ ದುಸ್ಥಿತಿಯನ್ನು ಹೋಗಲಾಡಿಸಿ, ಇದಕ್ಕೆ ದಿನೇ ದಿನೇ ಹೆಚ್ಚು ಮಂದಿ ಸದಸ್ಯರು ಸೇರುವಂತೆ ಎಲ್ಲಾ ಸದಸ್ಯರು ಪ್ರಯತ್ನಿಸಬೇಕಾಗಿ ಕೇಳಿಕೊಂಡರು ಪ್ರಕೃತ ಈ ವಾಚನಾಲಯಕ್ಕೆ ಹಿಂದೂ ದೈನಿಕವೂ ರಾಷ್ಟ್ರಬಂಧು, ನವಯುಗ, ಸ್ವದೇಶಾಭಿಮಾನಿ, ಕಂಠೀರವ ವಗೈರೆ ಹಲವು ಪತ್ರಿಕೆಗಳೂ ಬರುವುದಾದರೂ ಈ ಎಲ್ಲಾ ಪತ್ರಿಕೆಗಳು ನಮ್ಮ ಜಿಲ್ಲೆಯವುಗಳೇ ಆದುದರಿಂದ ಮೈಸೂರಿನಿಂದೊಂದು ಧಾರವಾಡದಿಂದೊಂದು ಹೀಗೆ ಬೇರೆ ಎರಡು ಪತ್ರಿಕೆಗಳನ್ನು ತರಿಸುವುದಾಗಿ ನಿರ್ಣಯವಾಯಿತು

ಬ್ರಹ್ಮಾವರ ಕೇಂದ್ರ ಕಾಂಗ್ರೆಸ್ ಕಮಿಟಿ

ತಾ ೧೪ ೭ ೩೭ನೇ ಗುರುವಾರ ಸಾಯಂಕಾಲ ೬ ಘಂಟೆಗೆ ಬ್ರಹ್ಮಾವರ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಶ್ರೀಯುತ ನಾರಾಯಣ ಶೆಟ್ಟರ (ಕಮಿಟಿಯ ಅಧ್ಯಕ್ಷ) ವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು ಕಮಿಟಿಯ ಮೆಂಬರರು ವಿವಿಧ ಕಾರ್ಯಕ್ರಮಗಳ ಮೇಲೆ ಭಾಷಣವಿತ್ತ ಮೇಲೆ ಸದ್ರಿ ಕಮಿಟಿಯ ಕಾರ್ಯದರ್ಶಿಗಳಾದ ಮ ರಾ ಪಿ ವೈ ರಾಮಸ್ ಗುರುಕ್ಕಳ್ ರವರು ಈ ಕೆಳಗಿನ ಠರಾವುಗಳನ್ನು ಸಭೆಯ ಮುಂದಿರಿಸಿದರು । ಪ್ರಾಂತಿಕ ಎಸೆಂಬ್ಲಿಗಳಲ್ಲಿ ಕಾಂಗ್ರೆಸ್ ಮೆಂಬರರು ಮಂತ್ರಿಪದವಿ ಸ್ವೀಕರಿಸಿದ ಕುರಿತು ಈ ಕಮಿಟಿಯು ಸಂತೋಷಿಸುತ್ತದೆ ೭ ಮುಂದೆ ಬರಲಿರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಭಾಗವಹಿಸಬೇಕು ಆಯಾ ಸರ್ಕಲಿನ ಉಮೇದ್ವಾರರನ್ನು ಚುನಾಯಿಸುವರೇ ಆಯಾ ಸರ್ಕಲಿನ ಕಾಂಗ್ರೆಸ್ ಕಮಿಟಿಗಳಿಗೆ ಪ್ರಥಮ ಅಧಿಕಾರ ಕೊಡಬೇಕಾಗಿ ತಾಲೂಕು ಮತ್ತು ಜಿಲ್ಲಾ ಕಮಿಟಿಯೊಡನೆ ಕೇಳಲಾಗುತ್ತದೆ ೩ ಗ್ರಾಮ ಸುಧಾರಣೆಯ ಕುರಿತು ಪ್ರಚಾರಕಾರ್ಯ ನಡಿಸುವರೆ ಮತ್ತು ಕಾಂಗ್ರೆಸ್ಸಿನೊಡನೆ ಜನತೆಯ ವಿಶ್ವಾಸ, ಪ್ರೇಮ ಬೆಳಸುವರೆ ಹಳ್ಳಿ ತಿರುಗುವ ಅನುಭವಸ್ಥನಾದ ಸ್ವಯಂಸೇವಕನೊಬ್ಬನನ್ನು ನೇಮಿಸುವುದು ೫ ಕಮಿಟಿಯಿಂದಲೇ ಹಿಂದೀ ಕ್ಲಾಸುಗಳನ್ನು ನಡೆಸಬೇಕು ಮತ್ತು ಕ್ಲಾಸಿನಲ್ಲಿ ಎಲ್ಲಾ ಜಾತಿಯವರಿಗೆ ಪ್ರವೇಶವಿರಬೇಕು ೬ ಸಾರ್ವಜನಿಕ ವಾಚನಾಲಯ ಒಂದನ್ನು ಆದಷ್ಟು ಬೇಗ ತೆಗೆಯುವುದು, ಪ್ರಕೃತ ನವಯುಗ ಒಂದು ಪತ್ರಿಕೆಯನ್ನು ತರಿಸುವುದು

ಈ ಠರಾವುಗಳು ಬಹುಮತದಿಂದ ಮಂಜೂರು ಆಗಲಾಗಿ ಅಧ್ಯಕ್ಷರ ಸುರಸಭಾಷಣವಾದ ಮೇಲೆ ಅಧ್ಯಕ್ಷರು ಟೀಪಾರ್ಟಿಯಿಂದ ನೆರೆದ ಮೆಂಬರರನ್ನು ಸತ್ಕರಿಸಲಾಗಿ ವಂದೇ ಮಾತರಂ ಘೋಷದೊಂದಿಗೆ ಸಭಾಂತ್ಯವಾಯಿತು

ಬಾರಕೂರು

ಇಲ್ಲಿಯ ಕಾಂಗ್ರೆಸ್ ಕಮಿಟಿ ಕಾರ್ಯಕಾರಿ ಸಮಿತಿಯು ತಾ ೧೦—೭—೩೭ನೇ ಆದಿತ್ಯವಾರ ಸಾಯಂಕಾಲ ಕಮಿಟಿಯ ಅಧ್ಯಕ್ಷರಾದ ಶ್ರೀ. ಜೋನ್ ಪಿ ಸಿಕೇರರ ಅಧ್ಯಕ್ಷತೆಯಲ್ಲಿ ಜರಗಿತು ಬಾರಕೂರಿನಲ್ಲಿ ಹಿಂದೀ ಪ್ರಚಾರವನ್ನು ಖಾದಿಪ್ರಚಾರವನ್ನು ಸಹಾ ಕಮಿಟಿಯವರು ನಡಿಸಬೇಕಾಗಿಯೂ ಇನ್ನು ಕೆಲವು ನಿರ್ಣಯಗಳಾದ ಬಳಿಕ ಸಭೆಯು ಮುಗಿಯಿತು

ಎರಡನೆಯ ಸಭೆಯು ೨೫—೭—೩೭ನೇ ಆದಿತ್ಯವಾರ ಜರಗುವದು

ಬಾರಕೂರಿನ ಹಿಂದೀ ಪ್ರೇಮಿಗಳ ಸಾರ್ವಜನಿಕ ಸಭೆಯು ಶ್ರೀಯುತ ಅಲ್ತಾರು ರಾಮಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ ೧೫—೭—೩೭ನೇ ಸಾಯಂಕಾಲ ಜರಗಿತು ಹಿಂದೀ ಪ್ರಚಾರದ ಕುರಿತು ಶ್ರೀ ಅಡಿಗರೂ ಮತ್ತು ಕಾಮತರೂ ಮಾತನಾಡಿದ ನಂತರ ಸಭೆಯಲ್ಲಿ 'ಹಿಂದಿ ಪ್ರೇಮಿ ಮಂಡಲ''ವೆಂಬ ಸಂಘವು ಸ್ಥಾಪನೆಯಾಯಿತು ಅದರ ಕಾರ್ಯಕಾರಿ ಮಂಡಲಿಗೆ ಶ್ರೀಯುತ ಜೋನ್ ಪಿ ಸಿಕೇರರು (ಅಧ್ಯಕ್ಷರು) ಬಿ ಲಕ್ಷ್ಮೀನಾರಾಯಣ ಅಡಿಗರು (ಕಾರ್ಯದರ್ಶಿಗಳು) ಬಿ ವೆಂಕಟೇಶ ಕಾಮತ (ಖಜಾನ್ಜಿಗಳು) ಅಲ್ತಾರು ರಾಮಣ್ಣ ಶೆಟ್ಟಿ, ಬಿ ಲಕ್ಷ್ಮೀನಾರಾಯಣರಾವ್, ಬಿ ವಿಟ್ಠ ಶೆಟ್ಟಿ, ರಾಮಣ್ಣ ಶೆಟ್ಟಿ ಇವರನ್ನು ಕಾರ್ಯಕಾರಿ ಮಂಡಲಿಗೆ ಸೇರಿಸಲಾಯಿತು ವಾರ್ಷಿಕ ಚಂದಾ ರೂ ೧—೦—೦ ಮತ್ತು ಆಣೆ ಎರಡೆಂತೆ ನಿರ್ಣಯವಾಯಿತು ಮತ್ತು ಅಧ್ಯಕ್ಷರ ಭಾಷಣವಾದ ಬಳಿಕ ಶಂಕರನಾರಾಯಣರಾಯರು ಧನ್ಯವಾದಗಳನ್ನು ಅರ್ಪಿಸಿದ ನಂತರ ಸಭಾಂತ್ಯವಾಯಿತು ಹಿಂದೀ ಪ್ರೇಮಿ ಮಂಡಲದ ಸದಸ್ಯರಾಗುವವರು ಬಾರಕೂರಿನಲ್ಲಿ ಕರ್ನಾಟಕ ಸ್ಟೋರ್ಸಿನಲ್ಲಿಯೂ ಬ್ರಹ್ಮಾವರ ಬಿ ಲಕ್ಷ್ಮೀನಾರಾಯಣ ಅಡಿಗರಿಂದಲೂ ಪ್ರಿಂಟೆಡ್ ರಶೀತಿಯನ್ನು ಪಡೆಯಬೇಕೆಂದು ನಿರ್ಣಯಿಸಲಾಯಿತು

ರಾಯಚೂರು

ಅಖಿಲ ಕರ್ನಾಟಕ ಪ್ರಾಂತೀಯ ಆಯುರ್ವೇದ ಮಹಾಮಂಡಲ ಮತ್ತು ವಿದ್ಯಾಪೀಠ ಕಾರ್ಯಾಲಯ, ಹುಬ್ಬಳ್ಳಿ. ಈ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ವೈದ್ಯ ಮಹೋಪಾಧ್ಯಾಯ ಶ್ರೀ ಹಲಸೀಕರರು

ಪಂಡಿತ ತಾರಾನಾಥರ ಪ್ರೇಮಾಯತನ ಆಶ್ರಮದಿಂದ ಇಲ್ಲಿಗೆ ಮೊನ್ನೆ ಬಂದರು ಅಖಿಲ ಕರ್ನಾಟಕದ ೯ನೇ ಆಯುರ್ವೇದ ಸಮ್ಮೇಲನವನ್ನು ರಾಯಚೂರಲ್ಲಿ ಕೂಡಿಸುವ ವಿಚಾರವಾಗಿ, ಇಲ್ಲಿಯ ಪ್ರಮುಖ ಡಾಕ್ಟರ್ ಮತ್ತು ವೈದ್ಯಜನರನ್ನು ಭೆಟ್ಟಿಯಾದರು, ಡಾ। ಭೀ ರಘರಾವ್, ದೇಶಪಾಂಡೆ, ಡಾ। ರಾಮಕೃಷ್ಣ, ಡಾ। ಅಗ್ನಿಹೋತ್ರಿ ಮುಂತಾದವರೆಲ್ಲರೂ ಮುಂದು ಬಂದು ಸಹಾಯಮಾಡುವರಾಗಿ ತೋರಿಬಂದಿದೆ ಇದರ ಪರಿಣಾಮವಾಗಿ ಡಾ। ದೇಶಪಾಂಡೆಯವರ ನೇತೃತ್ವದಲ್ಲಿ ಡಾ। ರಾಮಕೃಷ್ಣ ಇವರ ಪ್ರೇಮಾ ಮೆಡಿಕಲ್ ಹಾಲ್‌ನೊಳಗೆ ರಾಯಚೂರ ಸ್ಥಾನಿಕ ವೈದ್ಯ ಹಾಗೂ ಡಾ। ಜನರ ಸಭೆಯೊಂದು ೧೩ –೭—೩೭ನೇ ದಿನ ಸೇರಿತ್ತು ಶ್ರೀಯುತ ವೈದ್ಯ ಮಹೋಪಾಧ್ಯಾಯ ಹಲಸೀಕರರು ರಾಯಚೂರಲ್ಲಿ ಸಮ್ಮೇಲನವನ್ನು ಕರೆಯುವುದರಿಂದ ಆಗುವ ಲಾಭಗಳನ್ನು ವಿವರಿಸಿ ತೋರಿಸಿದರು ಇದರಿಂದ ವೈದ್ಯಕಜ್ಞಾನವೂ, ಸುಲಭಸಾಧ್ಯವಾದದ್ದಾದರೂ ಉತ್ತಮ ಪರಿಣಾಮಕಾರಕವಾದ ಚಿಕಿತ್ಸೆಯ ಪ್ರಚಾರವು ಬೆಳೆದು ಜನತೆಗೆ ಹೇಗೆ ಸುಖಾರೋಗ್ಯಗಳು ದೊರಕಬಹುದೆಂಬುದನ್ನು ವಿವರಿಸಿ ಹೇಳಿದರು ಅಲ್ಲಿಯೇ ಒಂದು ತಾತ್ಪೂರ್ತಿಕ ಮಂಡಲವು ಸ್ಥಾಪನೆಯಾಯಿತು ಜ್ಞಾನವೃದ್ಧರೂ, ಅನುಭವಸ್ಥರೂ, ವಯೋವೃದ್ಧರೂ, ಆದರ ಶ್ರೀ ವಿಟ್ಠಲ ಪಾಸಾದರು ಈ ಮಂಡಲಕ್ಕೆ ಅಧ್ಯಕ್ಷರು

ಈ ಮಂಡಲದ ವತಿಯಿಂದ ಅಧ್ಯಕ್ಷರು ಶ್ರೀ। ಹಲಸೀಕರರವರಿಗೆ ರಾಯಚೂರಲ್ಲಿಯೇ ೯ನೇ ಅಧಿವೇಶನವನ್ನು ಕೂಡಿಸುವದಕ್ಕೋಸ್ಕರ ಆಮಂತ್ರಣವನ್ನು ಕೊಟ್ಟದುದಲ್ಲದೆ, ಈ ವಿಷಯದಲ್ಲಿ ಆಗಾಗ್ಗೆ ಅಗತ್ಯವಾಗಿ ಬೇಕಾಗುವ ಸಲಹೆ ಸೂಚನೆಗಳನ್ನೂ ಕೊಡಬೇಕೆಂದು ಕೇಳಿಕೊಂಡರು ಶ್ರೀ. ಹಲಸೀಕರರು ಈ ವಿಷಯ ಆದರದಿಂದ ಒಪ್ಪಿಕೊಂಡಿರುವುದಾಗಿ ತಿಳಿದುಬಂದಿರುತ್ತದೆ

ಶ್ರೀ। ಪಿ. ಕಿಷನ್ ರಾಯರ ಸಹಾನುಭೂತಿ

ಅನಂತರ ಮೇಲಿನ ವಿಷಯದ ಅಭಿಮಾನಿಗಳೆಲ್ಲರೂ ೧೪—೭—೩೭ನೇ ದಿನ ಇಲ್ಲಿಯ ಮುಖಂಡರೂ, ಮುತ್ಸದ್ದಿಗಳು ಮುಖ್ಯ ವಕೀಲರಾದ ಶ್ರೀ ಕಿಶನ್‌ರಾವ್ ಇವರನ್ನು ಸಂದರ್ಶಿಸಿದರು ಶ್ರೀಯುತ ಕಿಶನ್ ರಾಯರು ಒಂದು ಮಂಡಲಿಯನ್ನು ಆರಿಸಿ ಬರಮಾಡಿಕೊಂಡು, ಇವರಿಗೆ ಸರ್ವವಿಧದಿಂದಲೂ ಸಹಾಯಮಾಡಿ ಯಶಸ್ವಿಯಾಗುವಂತೆ ವ್ಯವಸ್ಥೆ ಮಾಡುತ್ತೇವೆಂದು ವಚನಕೊಟ್ಟಿರುವರಾಗಿ ತಿಳಿದುಬರುತ್ತದೆ ಇವರ ಪ್ರೋತ್ಸಾಹದಿಂದ ರಾಯಚೂರಲ್ಲಿ ಹುರಿಗೊಂಡೇ ತೀರುವುದು ಎಂದು ನಿಸ್ಸಂದೇಹವಾಗಿ ಹೇಳಬಹುದು

ಅಗ್ನಿಗೆ ಆಹುತಿ

ಇದೇ ಕಳೆದ ಸೋಮವಾರ ಸುಳ್ಯದ ಹಳೇ ಗೇಟಿನ ಬಳಿಯಲ್ಲಿ ಒಬ್ಬ ಹುಡುಗನ ತುಂಟತನದಿಂದಾಗಿ ಒಂದು ಬಡಕುಟುಂಬದವರ ಮನೆಗೆ ಬೆಂಕಿ ತಗಲಿತು ಈ ಗಲಾಟೆಯಿಂದಾಗಿ ಹದಿನಾಲ್ಕು ದಿನದ ಒಂದು ಎಳೆ ಗೂಸ ಉರಿಯುತ್ತಿರುವ ಮಾಡಿನ ಕೆಲವು ಶಕ್ತ ವೈಸೇಬಿ ಬಿದ್ದು ಬೆಂದುಹೋಯಿತು ಸಂತಾಪಿತರ ಉರಿಯುವ ಹೃದಯವು ತಣ್ಣಗಾಗಲೆಂದು ದೇವರನ್ನು ಪ್ರಾರ್ಥಿಸುವವು

"ಹಿತಚಿಂತಕ"

LIFE SKETCH OF MR. P. G. MARATHEY

GENERAL MANEGER

The General Assurance Society Limited, Ajmeer.

We announce with great pleasure that Mr P. G Marathey is appointed General Manager of the General Assurance in the place of Mr P D Bhargava who retired on the 15th May 1937. He is the only son of Mr. G S Marathey M. A, A. I. A the eminent Consulting Actuary in this country and was born in 1909.

After passing his matriculation he chose his father's profession and began his studies for the Actuarial Examination straight way. While working in his father's office he obtained valuable experience He also worked in Life offices like the Bombay Life and the New India Assurance In 1934 he went to England for further studies and worked in the London Life Association as an Actuarial Assistant Here he gained valuable experience about office systems of large British life offices and on his way back he studied Insurance conditions in the Continent.

On return to India in 1935 he joined his father's office as an Assistant, and gathered much practical experience. His knowledge of actual conditions in India and abroad is of importance which will make him an asset to any Life office He is qualified having passed the first two parts and section 'A' of part third of the Institute of Actuaries We understand that he has appeared for Section B of the same examination and we hope he soon will be an A. I. A. Mr. P G Marathey was the publisher for three years of Bhadrayu the only Insurance Magazine in Marathey and is also the Joint author of a book on life assurance. While he very well deserves the place of honour which is his Mr P. D Bhargava the retired general manager as well as the Directors and Chairman of the 'General' are to be congratulated on their securing the services of such an experienced and versatile man.

We feel sure that under the able General managership of Mr P.G Marathey the Society is bound to prosper and we hasten to wish him and the Society speedy progress.

ತಾ. 16—7—'37ರಲ್ಲಿ

ಲಕ್ಕಿಟಿಕೇಟುಗಳ ನಂಬರುಗಳ ಮೇಲೆ

--- ಪ್ರೈಜ್ ತೆಗೆದ ಪಟ್ಟಿ ---

ಟಿಕೇಟು ನಂಬ್ರ	ಪ್ರೈಜ್	ಟಿಕೇಟು ನಂಬ್ರ	ಪ್ರೈಜ್	ಟಿಕೇಟು ನಂಬ್ರ	ಪ್ರೈಜ್
1731	1ನೇ	2304	9 ,,	1632	17 ,,
1130	2 ,,	1583	10 ,,	1425	18 ,,
1824	3 ,,	2241	11 ,,	2104	19 ,,
2305	4 ,,	1775	12 ,,	1786	20 ,,
1693	5 ,,	1502	13 ,,	1113	21 ,,
1326	6 ,,	1458	14 ,,	2315	22 ,,
1229	7 ,,	1136	15 ,,	1976	23 ,,
1201	8 ,,	1717	16 ,,	1301	24 ,,
		2359	25 ,,		

ವಿ ಸೂ—ಮೇಲೆ ಕಾಣಿಸಿದ ಲಕ್ಕಿ ಟಿಕೇಟುಗಳುಳ್ಳವರು ತಾ 31 7 37ರ ಒಳಗಾಗಿ ಸದ್ರಿ ಟಿಕೇಟುಗಳನ್ನು ತೋರಿಸಿ ಪ್ರೈಜ್ ಸಾಮಾನು ಪಡಿಯತಕ್ಕದ್ದು

ಎಸ್. ಅನಂತರಾಮಾಚಾರ್

ಪುಸ್ತಕ ಮತ್ತು ಸ್ಟೇಶನರಿ ವ್ಯಾಪಾರಿ, ತಾಲೂಕು ಕಚೇರಿ ಬಳಿ, ಉಡುಪಿ

ಸಮಾಚಾರ ಸಂಗ್ರಹ : ಭೀಕರ ಟ್ರೈನು ಅವಘಡ, ಚೀನದ ವಿಷಮ ಪರಿಸ್ಥಿತಿ ಸ್ಪೈನಿನ ಅಂತಃಕಲಹ, ರಸ್ಯದ ವೈಮಾನಿಕರ ಸಾಹಸ ವಾಯುವ್ಯ ಗಡಿನಾಡಿನ ಗಲಾಟೆ, ಆಯಾ ಪ್ರಾಂತದ ಮಂತ್ರಿಮಂಡಲ, ರಾಷ್ಟ್ರಪತಿಗಳ ಆಶೀರ್ವಾದ.

ಭೀಕರ ಟ್ರೈನು ಅವಘಡ
100ಕ್ಕಿಂತಲೂ ಮಿಕ್ಕಿದ ಮರಣ 150ಕ್ಕೆ ಮಿಕ್ಕಿದವರಿಗೆ ಜಖಮ್.

ಇದೇ ತಾ. 17ರಲ್ಲಿ ಪಾಟ್ನದ ಬಳಿಯುಲ್ಲುಂಟಾದ ಭೀಷಣ ಟ್ರೈನು ಅವಘಡಕ್ಕೆ 300 ಮಂದಿಯ ವರೆಗೆ ಸಿಕ್ಕಿ ಒಂದೋ ಜಖಮ್ ಹೊಂದಿರುವರು, ಇಲ್ಲವೆ ಕೊಲ್ಲಲ್ಪಟ್ಟಿರುವರು. ಬೆಳಿಗ್ಗೆ 4 ಘಂಟೆ ಸಮಯಕ್ಕೆ ಪಂಜಾಬು ಎಕ್ಸ್‌ಪ್ರೆಸ್ ಟ್ರೈನು ಪಾಟ್ನವನ್ನು ಸಮಿಾಪಿಸುತ್ತಿದ್ದಾಗ ಕಂಬಿ ತಪ್ಪಿ ಕೆಳಕ್ಕೆಸೆಯಲ್ಪಟ್ಟು ಈ ಅವಘಡವುಂಟಾಯಿತು. ಇತ್ತಲಾಗಿ ಇಷ್ಟೊಂದು ದೊಡ್ಡ ಅವಘಡವು ನಡೆದುದಿಲ್ಲ. ಟ್ರೈನು ಸಂಪೂರ್ಣವಾಗಿ ಕಂಬಿ ತಪ್ಪಿ ಹಾರಿ ರಸ್ತೆಯಿಂದ ಕೆಳಗುರುಳಿಬಿದ್ದು ಹೆಚ್ಚಿನ ಪ್ರಾಣಹಾನಿಯಾಗಲು ಕಾರಣವಾಯಿತು. 3 ಗಾಡಿಗಳು ಸಂಪೂರ್ಣವಾಗಿ ಛಿನ್ನಭಿನ್ನವಾಗಿಹೋಗಿರುವವು. ಟ್ರೈನು ಮೋರಿಯೊಂದನ್ನು ಅರ್ಧ ದಾಟುವಷ್ಟರಲ್ಲಿ ಕಂಬಿ ತಪ್ಪಿ ಹಾರಿಬಿತ್ತು. ಕೊಲ್ಲಲ್ಪಟ್ಟವರಲ್ಲಿ 6 ಮಂದಿ ಸ್ತ್ರೀಯರು, ಒಂದು 6 ತಿಂಗಳ ಕೂಸು. ಶವಗಳೆಲ್ಲಾ ಚೂರುಚೂರಾಗಿ ಹೋಗಿರುವವು. ಇಡೀ ದೃಶ್ಯವು ಅತ್ಯಂತ ಭೀಷಣವಾಗಿತ್ತು. ಕಾಂಗ್ರೆಸಿನವರೂ,ಸೇವಾಸಮಿತಿ ಸ್ಕೌಟರೂ, ಬ್ವಾ. ಸ್ಕೌಟರೂ, ಪೋಲೀಸರೂ ಇಡೀ ದಿನಸ ಎಡೆಬಿಡದೆ ಪ್ರಯತ್ನಿಸಿ 119 ಶವಗಳನ್ನು ಹೊರತೆಗೆದಿರುವರು. 150ಕ್ಕಿಂತಲೂ ಮಿಕ್ಕಿದ ಜಖಮ್ ಹೊಂದಿದವರು ಹೊರತೆಗೆಯಲ್ಪಟ್ಟಿರುವರು. ಉದ್ದೇಶ ಪೂರ್ವಕವಾಗಿ ಟ್ರೈನನ್ನು ಕಂಬಿ ತಪ್ಪಿಸಿ ಹಾಕಲಾಯಿತೆಂದು ನಂಬಲಾಗಿದೆ. ಗಾಡಿಗಳೆಲ್ಲಾ ನಜ್ಜುಗುಜ್ಜಾಗಿ ಮುರಿದುಬಿದ್ದು ಒಂದರೊಳಗೊಂದು ಸೇರಿಹೋಗಿ ರಕ್ಷಣಾ ಕಾರ್ಯವು ಬಹಳ ಕಷ್ಟವಾಗಿತ್ತು. ಈ ಟ್ರೈನಿನಲ್ಲಿದ್ದ ಹೆಚ್ಚಿನ ಪ್ರಯಾಣಿಕರು ಪಂಜಾಬಿನವರು. ಕೆಲವು ಚಿಕ್ಕ ಮಕ್ಕಳು ಬದುಕಿರುವವು. ಕಾಂಗ್ರೆಸಿನವರ ರಕ್ಷಣಾ ಕೆಲಸವು ಅತ್ಯಂತ ಪ್ರಶಂಸನೀಯವಾಗಿದ್ದಿತು.

ಚೀನದ ವಿಷಮ ಪರಿಸ್ಥಿತಿ

ಉತ್ತರ ಚೀನದಲ್ಲೀಗ ಯುದ್ಧವೇನೂ ನಡೆಯುವುದಿಲ್ಲವಾದರೂ ಬೇಗನೆ ಪ್ರಬಲ ಸಮರವಾಗುವ ಸಂಭವ ತೋರುತ್ತದೆ. ಜಾಪಾನ್ ಸರಕಾರವು ತಮ್ಮ ಶರ್ತಗಳಿಗೆ ಚೀನವು ಒಪ್ಪಲೇಬೇಕೆಂದು ಹಠಹಿಡಿದಿರುವುದು. ಅವುಗಳಿಗೆ ಚೀನೀ ಸರಕಾರವು ಒಪ್ಪುವ ಹಾಗಿಲ್ಲ. ಮಂಚೂರಿಯದಂತೆ ಉತ್ತರ ಚೀನವನ್ನೂ ನುಂಗುವ ಕುತಂತ್ರವನ್ನು ವಿರೋಧಿಸುವ ದೃಢ ನಿರ್ಧಾರದಿಂದ ಚೀನವು ಭರದಿಂದ ಯುದ್ಧಸಿದ್ಧತೆ ನಡಿಸಿರುವುದು. ಆದುದರಿಂದ ಸಂಧಾನದ ಆಶೆಯು ಕಡಿಮೆಯಾಗುತ್ತಾ ಹೋಗುತ್ತಿದೆ. ಜಾಪಾನು ಎಚ್ಚರವಿತ್ತರೂ ಗಣಿಸದೆ ಚೀನೀ ಸರಕಾರವು ಉತ್ತರಕ್ಕೆ ದೊಡ್ಡ ಸೇನೆ ಕಳುಹಿಸಿರುವುದು. ಇದರಿಂದ ಅದು ಯುದ್ಧಕ್ಕೆ ಸಿದ್ಧವಾಗಿರುವುದೆಂದೇ ಹೇಳಬಹುದು. ಚೀನದಲ್ಲಿ ಜಾಪಾನರ ವಿರೋಧ ಭಾವವು ಅತಿ ಪ್ರಬಲವಾಗಹತ್ತಿರುವುದು.

ಸ್ಪೈನಿನ ಅಂತಃಕಲಹ

ಕಳದ ಕೆಲವು ದಿನಗಳಲ್ಲಿ ಸ್ಪೈನಿನಲ್ಲಿ ಪ್ರಬಲ ಹೋರಾಟವೇನೂ ನಡೆದಿರುವಂತೆ ತೋರುವುದಿಲ್ಲ. ಆದರೆ ಇದೇ ತಾ. 16ರಲ್ಲು ಸ್ಪೆನಿಶ್ ಸರಕಾರದ ಪ್ರಬಲ ಸಹಾಯಕರಾದ ಕ್ಯಾಟಲಾನಿನ ಸೈನಿಕರು ಹೂಸ್ಕ ಎಂಬ ಸ್ಥಳದ ಉತ್ತರದಲ್ಲಿ ಬಂಡಾಯಗಾರರ ಮೇಲೆ ಬಿದ್ದು ಮುಂದೊತ್ತಿರುವರು ಈ ಹೋರಾಟದಲ್ಲ 16,000 ಸೈನಿಕರೂ, 30 ಟಾಂಕಿಗಳೂ, 16 ವಿಮಾನಗಳೂ ಭಾಗಿಯಾಗಿದ್ದುವು. ಈ ಧಾಳಿಯು ನಿರರ್ಥಕವಾಗಿರುವುದೆಂದೂ ಇದರಲ್ಲಿ ಸರಕಾರದ ಕಡೆಯ ನೂರಾರು ಮಂದಿ ಕೊಲ್ಲಲ್ಪಟ್ಟಿರುವರೆಂದೂ ಬಂಡಾಯಗಾರರ ಕಡೆಯ ವಾರ್ತೆ. ಮೊನ್ನೆದಿನ ಪಶ್ಚಿಮದ ಸರಕಾರದ ಧಾಳಿಯು ನಿಂತುಹೋಗಿದೆಯಂತೆ. ಇದೇ ತಾ. 17ರಲ್ಲು ಬಂಡಾಯಗಾರರು, ತಾವು ಯುದ್ಧವಾರಂಭಿಸಿ ಪ್ರಥಮ ವಾರ್ಷಿಕೋತ್ಸವವನ್ನು, ಎತ್ತಿನ ಹೋರಾಟವೇ ಮೊದಲಾದ ವಿನೋದಗಳಿಂದ ಸಂಭ್ರಮದಿಂದ ಆಚರಿಸಿರುವರು.

ರಸ್ಯದ ವೈಮಾನಿಕರ ಸಾಹಸ.
ಒಂದೇ ಸವನೆ 6750 ಮೈಲು ಹೋರಾಟ.

ರಸ್ಯದ ವೈಮಾನಿಕರಿಬ್ಬರು ಮೋಸ್ಕೋ ಪಟ್ಟಣದಿಂದ ಹೊರಟು ಎಲ್ಲಿಯೂ ನಿಲ್ಲದೆ ಅಮೆರಿಕದ ಕ್ಯಾಲಿ ಫೋರ್ನಿಯದ ಸೇನ್ ಜೆಸಿಂಟೋ ಎಂಬಲ್ಲಿಗೆ ಬಂದಿಳಿದಿರುವರು. ಅಂದರೆ 60 ಘಂಟೆ 6 ಮಿನಿಟುಗಳ ವರೇಗೆ 6750 ಮೈಲು ಹಾರಾಡಿ, ಒಂದೇ ಸವನೆ ಅತಿ ಹೆಚ್ಚು ದೂರ ಪ್ರಯಾಣದ ಹಿಂದಿನ ದಾಖಲೆಯನ್ನು ಮುರಿದಿರುವರು. 1933ರಲ್ಲಿ ಫ್ರೆಂಚ್ ವೈಮಾನಿಕರಾದ ಕೋಡೋಸ್ ಮತ್ತು ರೋಸಿ ಎಂಬವರು ಒಂದೇ ಸವನೆ 5675ಮೈಲು ಹಾರಾಡಿ ದಾಖಲೆಮಾಡಿದ್ದರು. ಇದಕ್ಕಿಂತ 1000 ಮೈಲು ಹೆಚ್ಚು ಹಾರಾಡಿದಂತಾಯಿತು. ರಸ್ಯಾನರ ವೈಮಾನಿಕರು ಪ್ರೆಸಿಡೆಂಟ್ ರುಸವೆಲ್ಟರು ಈ ವೈಮಾನಿಕರನ್ನು ಅಭಿನಂದಿಸಿರುವರು.

ವಾಯುವ್ಯ ಗಡಿನಾಡಿನ ಗಲಾಟೆಯು

ಇನ್ನೂ ನಿಂತಿಲ್ಲ. ಅಲ್ಲಲ್ಲಿ ಹೋರಾಟಗಳು ನಡೆಯುತ್ತಲೇ ಇರುವವು. ಜುಲಾಯಿ ತಾ. 12–13ರಲ್ಲು ನಡೆದ ಹೋರಾಟದಲ್ಲಿ 6 ಮಂದಿ ಗುರ್ಖಾ ಸೈನ್ಯಾಧಿಕಾರಿಗಳು ಮತ್ತು ಸೈನಿಕರು ಕೊಲ್ಲಲ್ಪಟ್ಟು 10 ಮಂದಿ ಗಾಯಗೊಂಡಿರುವರು. ಪಂಗಡಿಗರು ಬ್ರಿಟಿಷ್ ಸೈನಿಕರ ಶಿಬಿರದ ಮೇಲೆ ಅನಿರೀಕ್ಷಿತವಾಗಿ ಧಾಳಿನಡಿಸಿ ಬೋಂಬು ಮತ್ತು ರೈಫ್ಲುಗಳಿಂದ ಹೋರಾಡಿದರು. ಇದರ ವಿವರವು ಇನ್ನೂ ತಿಳಿದಿಲ್ಲ. ಜುಲೈ 12ರಲ್ಲು ಬ್ರಿಟಿಷ್ ಸೈನಿಕರು ಸಶಸ್ತ್ರ ಮೋಟರ್ ಕಾರು, ಟಾಂಕಿ ಮತ್ತು ವಿಮಾನಗಳ ಸಹಾಯದಿಂದ ಸ್ವಿನ್ವಾಮ್ ಪ್ರದೇಶದ ಮೇಲೆ ಧಾಳಿ ನಡಿಸಿ 15ಮಂದಿಯನ್ನು ದಸ್ತಗಿರಿಮಾಡಿ ಬಂಡಾಯಗಾರರ ಕೋಟೆಯೊಂದನ್ನು ನಾಶಮಾಡಿದರು. ದಕ್ಷಿಣ ವಜೀರಿಸ್ಥಾನವು ಶಾಂತವಾಗಿರುವುದು. ಇಫಿಯ ಫಕೀರರೂ ಮುಲ್ಲಾ ಶರಾಲಿಯವರ ದುರ್ಗಮವಾದ ಪರ್ವತ ಪ್ರದೇಶದಲ್ಲಿದ್ದುಕೊಂಡು ಹೆಚ್ಚೆಚ್ಚಾಗಿ ಅನುಯಾಯಿಗಳನ್ನು ಸೇರಿಸಿ ದಂಗೆ ಏಳಲು ಹುರಿಗೊಳಿಸುತ್ತಿರುವರು. ಆದರೆ ಅವರ ಸಹಾಯಕರೀಗ ಕಡಿಮೆಯಾಗಿರುವರು ಇದೇ ತಾ. 14ನೇ ಮಧ್ಯ ರಾತ್ರಿ 20 ಮಂದಿ ಪುಂಡರು ಧರಖಾನ್ ಎಂಬ ಹಳ್ಳಿಯ ಮೇಲೆ ಧಾಳಿನಡಿಸಿ ರಾಮುಲ್ದಾಸನೆಂಬ ಹಿಂದುವನ್ನು ಕದ್ದೊಯ್ದಿರುವರು. ಬ್ರಿಟಿಷ್ ಸರಕಾರವು ಬಂಡಾಯಗಾರ ಪಂಗಡಿಗರೊಡನೆ ರಾಜಿ ಮಾಡುವ ಕುರಿತು ಆಲೋಚಿಸುತ್ತಿರುವುದು. ಈ ಸಂಬಂಧವಾಗಿ ವಾಯುವ್ಯ ಗಡಿನಾಡಿನ ಗವರ್ನರರು ಸಿಮ್ಲಕ್ಕೆ ಹೋಗಿರುವರು.

ಬೊಂಬಾಯಿಯ ಮಂತ್ರಿ ಮಂಡಲವು

ಬೊಂಬಾಯಿಯ ಪ್ರಧಾನ ಮಂತ್ರಿಗಳಾದ ಶ್ರೀ ಬಿ. ಜಿ. ಖೇರರು ಬೊಂಬಾಯಿಯ ಕೌನ್ಸಿಲಿಗೆ ಗವರ್ನರರು ಮಾಡಿದ ನೇಮಕದ ಕುರಿತು ಗವರ್ನರರಿಗೆ ಅತೃಪ್ತಿ ಸೂಚಿಸಿ ಅವರಿಂದ ಸಮಾಧಾನಕರವಾದ ಉತ್ತರ ಪಡೆದು ಈ ಕೆಳಗಣ ಮಂತ್ರಿಮಂಡಲವನ್ನು ರಚಿಸಿರುವರು. ಶ್ರೀ ಬಿ. ಜಿ. ಖೇರರು ಪ್ರಧಾನಮಂತ್ರಿಗಳು ಶ್ರೀ ಎ. ಬಿ. ಲಠ್ಠೆ, ಡಾಕ್ಟರ್, ಎಮ್. ಬಿ. ಗಿಲ್ಡರ್ ಶ್ರೀ ಕೆ. ಎಮ್. ಮುನ್ಷಿ, ಶ್ರೀ ಎಮ್. ಬಿ. ಪಾಟೀಲ್ ಮತ್ತು ಶ್ರೀ ಮುಲ್ರಾಜ್ ದೇಸಾಯಿಯವರು ಇತರ ಮಂತ್ರಿಗಳು ಮುಸಲ್ಮಾನರೊಬ್ಬರನ್ನು 7ನೇ ಮಂತ್ರಿಗಳಾಗಿ ನೇಮಿಸಲಾಗುವುದು. ಅವರು ಯಾರೆಂದು ಇನ್ನೂ ನಿಶ್ಚಯವಾಗಿರುವುದಿಲ್ಲ. ಶ್ರೀ ನರಿಮೆನರಿಗೆ ಈ ಮಂತ್ರಿ ಮಂಡಲದಲ್ಲಿ ಯಾವ ಸ್ಥಾನವೂ ಇಲ್ಲದಿರುವುದು ಆಶ್ಚರ್ಯಕರವಾಗಿದೆ. ಪ್ರಾಯಶಃ ಅವರೇ ಮಂತ್ರಿಮಂಡಲಿಯಲ್ಲಿರಲು ನಿರಾಕರಿಸಿರಬೇಕು ಮುಸಲ್ಮಾನ ನೇಮಕದ ಕುರಿತು ಮೌಲನಾ ಅಬ್ದುಲ್ ಕಲಮ್ ಅಜದರು ಸರ್ದಾರ್ ವಲ್ಲಭಾಯಿ ಮತ್ತು ಖೇರರು ಆಲೋಚಿಸುತ್ತಿರುವರು. ಶ್ರೀ ಮದ್ಗಾಂಕರರು ಎಸೆಂಬ್ಲಿಯ ಪ್ರಸಿಡೆಂಟರಾಗಿ ನೇಮಿಸಲ್ಪಟ್ಟಿರುವರು. ಇದೇ ತಾ. 19ರಲ್ಲು ಬೊಂಬಾಯಿ ಎಸೆಂಬ್ಲಿ ಸಭೆಯು ಪೂನಾದಲ್ಲಿ ನಡೆಯುವುದು. ಆಗ ಕಾಂಗ್ರೆಸ್ ಎಸೆಂಬ್ಲಿ ಮೆಂಬರರೆಲ್ಲಾ ತಮ್ಮ ಪಕ್ಷದ ಆಫೀಸಿನಲ್ಲಿ ಧ್ವಜವಂದನೆಮಾಡಿ ದೇಶ ಸೇವಿಕೆಯರ ಗಡಣದಿಂದ ಮೆರವಣಿಗೆಯಿಂದ ಸಭಾಸದನಕ್ಕೆ ಹೋಗುವರು.

ಮಂತ್ರಿ ಮತ್ತು ಸೆಕ್ರೆಟರಿಗಳ ಸಂಬಳ

ಮದ್ರಾಸಿನ ಪ್ರಧಾನ ಮಂತ್ರಿಗಳೂ ಇತರ ಮಂತ್ರಿಗಳೂ ತಿಂಗಳಿಗೆ ರೂ. 500 ಸಂಬಳ ಮತ್ತು ರೂ. 150 ಮೋಟರ್ ಕಾರ್ ಮತ್ತು ರೂ. 150 ನಿವಾಸ ಭತ್ತೆ ಪಡೆಯುವರು. ಪಾರ್ಲಿಮೆಂಟರಿ ಸೆಕ್ರೆಟರಿಗಳು ತಿಂಗಳೊಂದರ ರೂ. 250 ಸಂಬಳ ಮತ್ತು ರೂ. 100 ಭತ್ತೆ ಪಡೆಯುವರು. ಸಾಮಾನ್ಯ ಮೆಂಬರರಿಗೆ ಪ್ರಯಾಣ ಭತ್ತೆ ಮತ್ತು ಅವರು ಸಭಾಕಾರ್ಯ ನಿರತರಿರುವಾಗ ದೈನಿಕ ವೆಚ್ಚದ ಭತ್ತೆಕೊಡಲಾಗುವದು ಇದು ಹೊರತು ತಿಂಗಳೊಂದರ ರೂ. 100 ಸಂಬಳ ಕೊಡುವ ಆಲೋಚನೆಯಿದೆಯೆಂದು ತಿಳಿದು ಬರುತ್ತದೆ. ಸೆಕ್ರೆಟರಿಗಳು ಮದ್ರಾಸಿನಲ್ಲೇ ಇದ್ದು ಆಫೀಸಿನಲ್ಲಿ ಕೆಲಸ ಮಾಡಿ ಮಂತ್ರಿಗಳಿಗೆ ಸಹಾಯಮಾಡಬೇಕು. ಅವರು ಮತ್ತು ಮಂತ್ರಿಗಳು ಯಾವ ಯಾವ ವಿಷಯಗಳನ್ನು ನೋಡುತ್ತಿರಬೇಕೆಂದು ನಿರ್ಣೈಯಿಸಲಾಗುವುದು.

ಮಧ್ಯಪ್ರಾಂತೀಯ ಮಂತ್ರಿಮಂಡಲ

ಡಾಕ್ಟರ್ ಖಾರೆಯವರು ಮುಖ್ಯಮಂತ್ರಿಗಳು. ಪೋಲೀಸ್‌ಖಾತೆಯ ಆಡಳಿತ ನೋಡುವವರು. ಪಂಡಿತ ರವಿಶಂಕರ ಶುಕ್ಲರು ಶಿಕ್ಷಣಮಂತ್ರಿಗಳು. ಪಂಡಿತ ದ್ವಾರಕಾಪ್ರಸಾದ ಮಿಶ್ರರವರು ಸ್ಥಳೀಯ ಸ್ವರಾಜ್ಯ ಖಾತೆಯ ಮಂತ್ರಿಗಳು. ಶ್ರೀ. ಆರ್. ಎಮ್. ದೇಶಮುಖರು ಪಬ್ಲಿಕ್ ವರ್ಕ್ಸ್‌ಖಾತೆಯ ಮಂತ್ರಿಗಳು. ಮಿ. ಮಹಮ್ಮದ್ ಯೂಸುಫ್ ಶರೀಫರು ನ್ಯಾಯ ಖಾತೆಯ ಮಂತ್ರಿಗಳು. ಶ್ರೀ. ದುರ್ಗಾಶಂಕರ ಕೃಪಾಶಂಕರಮೇಥಾರವರು ಅರ್ಥ ಸಚಿವರು. ಶ್ರೀ. ಪುರುಷೋತ್ತಮ ಬಲವಂತ ಗೋಳೆಯವರು ಭೂಕಂದಾಯಖಾತೆಯ ಮಂತ್ರಿಗಳು, ಶ್ರೀ. ಘನಶ್ಯಾಮ ಸಿಂಘಗುಪ್ತ ಮತ್ತು ಶ್ರೀಮತಿ ಅನಸೂಯ ಬಾಯಿ ಕಾಳೆಯವರು ಎಸೆಂಬ್ಲಿಯ ಸ್ಪೀಕರ್ ಮತ್ತು ಡಿಪ್ಯೂಟಿ ಸ್ಪೀಕರರಾಗಿ ನೇಮಿಸಲ್ಪಟ್ಟಿರುವರು.

ಉರ್ದುಪತ್ರಿಕೆಗೆ ರಾಷ್ಟ್ರಪತಿಗಳ ಆಶೀರ್ವಾದ

ಲಕ್ನೋಪಟ್ಟಣದ ಹಿಂದುಸ್ಥಾನ ನ್ಯೂಸ್‌ಪೇಪರ್ ಕಂಪೆನಿಯೊಂದು, ಕಾಂಗ್ರೆಸಿನ ಉದ್ದೇಶಗಳನ್ನು ಜನತೆಯಲ್ಲಿ ಪ್ರಚಾರಗೊಳಿಸಿ ಅದಕ್ಕೆ ಹೆಚ್ಚಿನ ಜನಸಮುದಾಯದ ಬೆಂಬಲದೊರೆಯುವಂತೆ ಮಾಡಲು ಉರ್ದು ಪತ್ರಿಕೆಯೊಂದನ್ನು ಪ್ರಕಟಿಸುವ ನಿರ್ಧಾರ ಮಾಡಿರುವುದು. ಇದು ಸ್ತುತ್ಯ ಕೆಲಸ. ಕಾಂಗ್ರೆಸಿನ ಆದರ್ಶಗಳನ್ನು ಜನರಲ್ಲಿ ಪ್ರಚಾರಗೊಳಿಸಿ, ವಿವಿಧ ಜಾತೀಯ ಮನೋವೃತ್ತಿಯನ್ನು ಮೂಲೆಗೊತ್ತಲೆತ್ನಿಸುವ ಪ್ರಯತ್ನವು ಇಂತಹ ಪತ್ರಿಕೆಗಳ ಮೂಲಕ ನಡಿಸಲ್ಪಡಬೇಕು. ಇಂತಹ ಪತ್ರಿಕೆಗಳಿಗೆ ತಾನು ತನ್ನಿಂದಾದ ಸಹಾಯವೀಯುವೆನು ಮತ್ತು ಇತರರೂ ಸಹಾಯ ಮಾಡಬೇಕೆಂದು ಕೇಳಿಕೊಳ್ಳುವೆನೆಂದು ಪಂಡಿತ ಜವಾಹರಲಾಲರು ಈ ಪತ್ರಿಕೆಯನ್ನು ಹರಸಿರುವರು. ಪಂಡಿತ ಗೋವಿಂದವಲ್ಲಭ ಪಂತರು ಮತ್ತು ಮಿ. ರಾಫಿ ಅಹಮ್ಮದ್ ಕಿದ್ವೈಯವರು ಈ ಪತ್ರಿಕಾ ಕಂಪನಿಯ ಡೈರೆಕ್ಟರರಾಗಿರುವರು.

ನಿನ್ನೆಯ ಕೈದಿಗಳು ಇಂದಿನ ಪ್ರಧಾನ ಮಂತ್ರಿಗಳು

— ದೇಶದಲ್ಲೆಲ್ಲಾ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಸ್ವಾಗತ —

ಇಂದೀಗ ಹಿಂದೂದೇಶದ 6 ಪ್ರಾಂತಗಳಲ್ಲಿ ಅಂದರೆ ಮದ್ರಾಸ್, ಬೊಂಬಾಯಿ, ಸಂಯುಕ್ತ ಪ್ರಾಂತ, ಮಧ್ಯ ಪ್ರಾಂತ, ಬಿಹಾರ್ ಮತ್ತು ಒರಿಸ್ಸಗಳಲ್ಲಿ ಕಾಂಗ್ರೆಸ್ಸಿನ ರಾಜ್ಯಭಾರವು ಆರಂಭವಾಗಿರುವುದು. ವಾಯವ್ಯ ಗಡಿನಾಡು, ಬಂಗಾಳ ಮತ್ತು ಅಸ್ಸಾಮ್ ಪ್ರಾಂತಗಳಲ್ಲಿ ಮನಸ್ಸಿದ್ದರೆ ಕಾಂಗ್ರೆಸು ಅಧಿಕಾರಕ್ಕೆ ಬರಲು ಸಾಧ್ಯವಿರುವುದು. ಹಿಂದೂದೇಶದ ರಾಜಕೀಯ ಇತಿಹಾಸದಲ್ಲಿ ಇಂದೀಗ ಪ್ರಥಮವಾಗಿ 6 ಮಂದಿ ಕಾಂಗ್ರೆಸ್ ಮುಖಂಡರು ಪ್ರಧಾನ ಮಂತ್ರಿಗಳಾಗಿ ಪ್ರಾಂತಿಕ ಆಡಳಿತದ ಸೂತ್ರಧಾರರಾಗಿರುವರು. ಇವರೆಲ್ಲರಿಗೂ ಈ ಕೆಲಸವು ಹೊಸತು. ಅವರು ಹಿಂದೆ ಹಲವು ಬಾರಿ ಸೆರೆಮನೆಗೆಹೋದವರು ಸರಕಾರದ ಅಧಿಕಾರಿಗಳೊಡನೆ ಯಾವ ರೀತಿಯಲ್ಲಿಯೂ ಸಹಕರಿಸದೆ ದೂರವಿದ್ದು ಸ್ವಾತಂತ್ರ್ಯದ ಹೋರಾಟ ನಡಿಸಿಕೊಂಡಿದ್ದವರು ಸರಕಾರದ ದಬ್ಬಾಳಿಕೆ, ಪೋಲೀಸರ ವಕ್ರದೃಷ್ಟಿಗೊಳಗಾದವರು ಇಂದೀಗ ಸರಕಾರದಿಂದ ಸನ್ಮಾನಿತರಾಗಿ, ಪೋಲೀಸರಿಂದ ವಂದನೆ ಪಡೆದು ಗೌರವಿಸಲ್ಪಟ್ಟು ರಾಜ್ಯಭಾರ ನಡಿಸುವ ಜವಾಬ್ದಾರಿ ವಹಿಸಿರುವರು. ಒಮ್ಮೆ ರಾಜದ್ರೋಹಿಗಳಾಗಿದ್ದವರು, ತಲೆಹೋಕರೆನಿಸಿಕೊಂಡಿದ್ದವರು, ಒರಟು ಖಾದಿ ಧಾರಿಗಳಾಗಿ ತಿರಸ್ಕೃತರಾಗಿದ್ದವರು ಇಂದು ಸರ್ವರಿಂದಲೂ ಮನ್ನಣೆ ಪಡೆಯುತ್ತಿರುವರು. ಕಾಲಚಕ್ರದ ಉರುಳಾಟವೆಂದರೆ ಹೀಗೆ!

6 ಪ್ರಾಂತಗಳಲ್ಲಿ ಕಾಂಗ್ರೆಸಿನ ಪರವಾಗಿ ಪ್ರಧಾನ ಮಂತ್ರಿತ್ವ ವಹಿಸಿರುವ 6 ಮಂದಿಯೂ ಗಾಂಧಿಜಿಯವರ ಶಿಷ್ಯರಾಗಿ ತರಬೇತಿ ಹೊಂದಿದವರು. ದೇಶದ ಸ್ವಾತಂತ್ರ್ಯ ಸಾಧನೆಗಾಗಿ ತನು, ಮನ, ಧನವರ್ಪಿಸಿರುವ ತ್ಯಾಗ ವೀರರು; ಕಾರ್ಯ ರಂಗದಲ್ಲಿ ಒರೆಗೆ ಹಚ್ಚಲ್ಪಟ್ಟು ನುರಿತ ಕರ್ತವ್ಯದಕ್ಷ ನಾಯಕರು. ಅವರು ಪ್ರಸಿದ್ಧ ವಾಗ್ಮಿಗಳಾಗದಿರಬಹುದು. ಕೌನ್ಸಿಲ್ ಸಭಾ ಕಾರ್ಯಕಲಾಪಗಳಲ್ಲಿ ಚತುರರಾಗದಿರಬಹುದು, ರಾಜತಂತ್ರ ಪ್ರವೀಣರಲ್ಲದಿರಬಹುದು ಆದರೆ ಯಥಾರ್ಥ ಜನಹಿತ ಸಾಧಕರು ನಿಃಸ್ವಾರ್ಥ ದೇಶ ಸೇವಕರು. ಈ ಆರು ಮಂದಿಯಲ್ಲಿ ಅಗ್ರಗಣ್ಯರು ಶ್ರೀ. ಸಿ. ರಾಜಗೋಪಾಲಾಚಾರ್ಯರೆಂಬುದು ದಕ್ಷಿಣಭಾರತಕ್ಕೆ ಅಭಿಮಾನದ ಸಂಗತಿ. ಕಾಂಗ್ರೆಸಿನೊಳಗೆ ಇವರಷ್ಟು, ಬುದ್ಧಿ ಚಾತುರ್ಯ, ಕಾರ್ಯಕುಶಲತೆಯುಳ್ಳವರು ಅತ್ಯಪೂರ್ವ. ಎಲ್ಲರ ಗೌರವ ಮತ್ತು ವಿಶ್ವಾಸಕ್ಕೆ ಪಾತ್ರರಾಗಿರುವರು. ಗಾಂಧಿಜಿಯವರ ಬಲಕೈಯಾಗಿ ಮೆರೆಯುತ್ತಿರುವರು, ಯಾವ ವಿಷಯದಲ್ಲಿಯೂ ಶ್ರೀ ರಾಜಾಜಿಯವರ ಅಭಿಪ್ರಾಯವು ಗಣನೀಯವಿರುವುದು. ಇಂಥವರು ಇಡೀ ಹಿಂದೂ ದೇಶದಲ್ಲೇ ಪ್ರಮುಖಸ್ಥಾನ ಪಡೆದಿರುವ ಮದ್ರಾಸಿನ ಪ್ರಧಾನ ಮಂತ್ರಿಗಳಾದುದು ಅದೊಂದು ಸುದೈವವೆಂದೇ ಹೇಳಬಹುದು. ರಾಜಾಜಿಯವರಷ್ಟು ದೊಡ್ಡ ಹರಿಜನ ಮಿತ್ರರೂ, ಮದ್ಯಪಾನ ನಿಷೇಧಕರೂ ದಕ್ಷಿಣ ಹಿಂದುಸ್ಥಾನದಲ್ಲಾರೂ ಇರಲಾರರು. ಗಾಂಧಿಜಿಯವರು ದಕ್ಷಿಣ ಆಫ್ರಿಕದಿಂದ ಬರುವ ಮೊದಲೇ ರಾಜಾಜಿಯವರು ತೀವ್ರ ಸುಧಾರಕರಾಗಿ ಹರಿಜನರ ಹಕ್ಕುಬಾಧ್ಯತೆಗಳಿಗಾಗಿ ಚಳವಳಿಸಿದವರು. ಅಂದಿನಿಂದ ಈ ವರೆಗೆ ದಿನೇ ದಿನೇ ಅಧಿಕಾಧಿಕವಾದ ನಿಷ್ಠೆಯಿಂದ ಕೆಲಸ ಮಾಡುತ್ತಾ ಬಂದವರು ಇವರ ಪ್ರಾಮಾಣಿಕತೆ ಮತ್ತು ತ್ರಿಕರಣ ಶುದ್ಧತೆಯು ಸುಪ್ರಸಿದ್ಧವಾದುದು. ಎರಡು ಸಲ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ನಿರಾಕರಿಸಿದವರು. ಸಂಯುಕ್ತ ಪ್ರಾಂತದ ಪ್ರಧಾನ ಮಂತ್ರಿ ಪಂಡಿತ ಪಂತರು ನುರಿತ ಕಾಂಗ್ರೆಸ್ ಮುಖಂಡರು. ಅಸಾಧಾರಣ ಕೌನ್ಸಿಲ್ ಸಭಾ ಕಾರ್ಯಜ್ಞರು, ಉಜ್ವಲ ವಾಗ್ಮಿಗಳು. ಡಿಲ್ಲಿ ಎಸೆಂಬ್ಲಿ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ತನ್ನ ವಿದ್ವತ್ತಿಕೆ ವಾಕ್ಪಟುತ್ವ, ರಾಜನೀತಿಜ್ಞತೆ ಮತ್ತು ರಾಜ್ಯಭಾರ ವಿಷಯಾನುಭವದಿಂದ ಸರಕಾರಿ ಪಕ್ಷದ ಎದೆಗೆ ಯಾವಾಗಲೂ ಶೂಲಪ್ರಾಯವಾಗಿ ಹೆಸರು ಮಾಡಿದವರು. ದೊಡ್ಡ ಜಮೀನ್ದಾರರಾದರೂ ಜನ ಸಾಮಾನ್ಯರ ದುಃಖಪರಂಪರೆಗಳಿಗಾಗಿ ಕರುಬುತ್ತಿರುವ ಬಡಜನ ಪಕ್ಷಪಾತಿಯು. ವ್ಯವಸಾಯಗಾರರ ಹಿತಸಾಧನೆಗಾಗಿ ಎಡೆಬಿಡದೆ ಹೋರಾಡುತ್ತಿರುವವರು. ಪಂಡಿತ ಜವಾಹರಲಾಲರ ವಿಧೇಯ ಸಹೋದ್ಯೋಗಿಯಾಗಿ ಅವರೊಂದಿಗೆ ಎರಡು ಸಲ ಸೆರೆಮನೆಗೆ ಹೋದವರು. ಸರಕಾರಿ ಅಧಿಕಾರಿಗಳೊಡನೆಯೂ, ಜಮೀನ್ದಾರ ತಾಲೂಕುದಾರರೊಡನೆಯೂ ಮೈತ್ರಿಯಿಂದ ವ್ಯವಹಾರ ನಡಿಸಬಲ್ಲ ಸಹನೆ ಮತ್ತು ಚಾಣಾಕ್ಷ್ಯಯುಳ್ಳವರು. ಸಂಯುಕ್ತ ಪ್ರಾಂತದಲ್ಲಿ ಪಂಡಿತ ವಲ್ಲಭ ಪಂತರಷ್ಟು ಪೋಲಿಸರ ಪೀಡೆಗೊಳಗಾದವರು ಇನ್ನೊಬ್ಬರಿಲ್ಲವೆನ್ನಬಹುದು. ಸೈಮನ್ ಕಮಿಶನು ಲಕ್ನೋವನ್ನು ಸಂದರ್ಶಿಸಿದಾಗ, ಸ್ವಯಂ ಸೇವಕದಳದೊಂದಿಗೆ ಕರಿಧ್ವಜ ಹಿಡಿದು ಅದರ ವಿರೋಧ ಪ್ರದರ್ಶನ ಮಾಡಿ ಪೋಲೀಸ್ ಸವಾರರ ಲಾತಿಪ್ರಹಾರಕ್ಕೆ ಎದೆಕೊಟ್ಟು ನಿಂತವರು ರಾಷ್ಟ್ರಪತಿ ಪಂಡಿತ ಜವಾಹರಲಾಲರು ಮತ್ತು ಪಂಡಿತ ಪಂತರು. ಸುದೈವದಿಂದ ರಾಷ್ಟ್ರಪತಿಗಳಿಗೆ ಹೆಚ್ಚಿನ ಪೆಟ್ಟೇನೂ ಆಗಲಿಲ್ಲ. ಆದರೆ ಆರು ಅಡಿಗಿಂತಲೂ ಎತ್ತರವಿದ್ದು ದಪ್ಪವಿರುವ ಪಂಡಿತ ಪಂತರಿಗೆ ವಿಶೇಷ ಪೆಟ್ಟಾಯಿತು. ಅನಂತರ ಅವರಿಗೆ ದೀರ್ಘಕಾಲದ ವರೆಗೆ ಬೆನ್ನು ನೆಟ್ಟಗೆ ಮಾಡಲಾಗದೆ ವಿಶ್ರಾಂತಿ ತೆಗೆದುಕೊಳ್ಳಬೇಕಾಯಿತು. ಈಗಲೂ ಅವರಿಗೆ ಆ ನೋವು ಆಗಾಗ ಉಂಟಾಗುವುದು. ಅವರ ಭುಜವೊಂದು ಇನ್ನೊಂದಕ್ಕಿಂತ ಕುಗ್ಗಿ ಹೋಗಿರುವುದು. ಈಗ ಇವರೇ ಪೋಲೀಸರ ಅದೃಷ್ಟ ಚಾಲಕರಾಗಿರುವರು. ಮಧ್ಯಪ್ರಾಂತದ ಪ್ರಧಾನ ಮಂತ್ರಿ ಡಾಕ್ಟರ್ ಖಾರೆಯವರು ನಾಗಪುರದ ಪ್ರಸಿದ್ಧ ಡಾಕ್ಟರರು. ಎಡೆಬಿಡದೆ ಜನಸೇವೆಮಾಡಿ ಜನಪ್ರೀತರಾದವರು. ರಾಷ್ಟ್ರೀಯ ಹೋರಾಟದಲ್ಲಿ ಭಾಗಿಯಾಗಿ ಜನಸೇವೆಮಾಡಿರುವ ಉಜ್ವಲ ದೇಶಭಕ್ತರು. ಬೆರಿಸ್ಟರ್ ಅಭ್ಯಂಕರರ ಶೋಚನೀಯ ಮರಣದ ನಂತರ ಮಧ್ಯಪ್ರಾಂತದ ಕಾಂಗ್ರೆಸ್ ನಾಯಕರಾಗಿ ಡಿಲ್ಲಿ ಎಸೆಂಬ್ಲಿ ಮೆಂಬರರಾಗಿದ್ದವರು. ಬೊಂಬಾಯಿಯ ಡಾಕ್ಟರ್ ಖಾರೆಯವರ ಹೆಸರನ್ನು, ಅವರು ಕಾಂಗ್ರೆಸ್ ಪಕ್ಷದ ನಾಯಕರಾಗಿ ಆರಿಸಲ್ಪಡುವವರೆಗೆ ಹೆಚ್ಚಾಗಿ ಕೇಳಿದವರಿಲ್ಲ. ಶ್ರೀ ನರಿಮನರೇ ಬೊಂಬಾಯಿ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ನಾಯಕರಾಗಿ ಆರಿಸಲ್ಪಡುತ್ತಿದ್ದರೆ ಚೆನ್ನಾಗಿತ್ತು. ಆದರೆ ಹಾಗಾಗದುದು ಶೋಚನೀಯ. ಡಾಕ್ಟರ್ ಖಾರೆಯವರು ಶ್ರೀ ನರಿಮನರ ನಂತರ ನುರಿತ ದೇಶಭಕ್ತರು. ಶಾಂತರೀತಿಯಿಂದ ಕೆಲಸ ಮಾಡುವವರು. ಜಯಶೀಲ ವಕೀಲರು. ಕಾಯಿದೆ ಭಂಗ ಚಳವಳದ ಸಂದರ್ಭದಲ್ಲಿ ತನ್ನ ಮನೆಮಾರು ಕಳಕೊಂಡವರು. ಬೊಂಬಾಯಿಯ ಹೊರವಳಯದಲ್ಲಿ ಹರಿಜನರ ಕೊಲನಿಯೊಂದನ್ನು ನಡಿಸುತ್ತಿರುವರು. ತಾನು ಸಂಪಾದಿಸಿದ ಹೆಚ್ಚಿನ ಭಾಗವನ್ನು ಈ ಪರೋಪಕಾರ್ಯಕ್ಕಾಗಿ ವಿನಿಯೋಗಿಸುತ್ತಿರುವರು. ಯಾವ ಆಡಂಬರವೂ ಇಲ್ಲದೆ ಶಾಂತ ರೀತಿಯಿಂದ ಮತ್ತು ತದೇಕ ನಿಷ್ಠೆಯಿಂದ ಕೆಲಸಮಾಡುವ ದೇಶಭಕ್ತರಲ್ಲೊಬ್ಬರು. ಒರಿಸ್ಸದ ಮುಖ್ಯಮಂತ್ರಿಗಳಾದ ಶ್ರೀ ವಿಶ್ವನಾಥ ದಾಸರು ಮದ್ರಾಸ್ ಕೌನ್ಸಿಲ್ ಮೆಂಬರರಾಗಿಯೂ, ಸ್ಥಳೀಯ ಸಂಸ್ಥೆಗಳ ಸದಸ್ಯರಾಗಿಯೂ ಒಳ್ಳೇ ಕೆಲಸ ಮಾಡಿ ಅನುಭವವುಳ್ಳವರು. ಕಾಯಿದೆ ಭಂಗ ಚಳವಳದಲ್ಲಿ ಭಾಗವಹಿಸಿ ತ್ಯಾಗ ಮಾಡಿದವರು ಬಿಹಾರಿನ ಪ್ರಧಾನ ಮಂತ್ರಿಗಳಾದ ಶ್ರೀ ಕೃಷ್ಣ ಸಿಂಹರು ಬಾಬುರಾಜೇಂದ್ರ ಪ್ರಸಾದರ ವಿಧೇಯ ಶಿಷ್ಯರಲ್ಲೊಬ್ಬರು. ಅವರು ಹೇಳಿದಂತೆ ನಡೆಯುವವರು. ಬಾಬುರಾಜೇಂದ್ರ ಪ್ರಸಾದರಂತೆಯೇ ಅತ್ಯಂತ ಸರಳ ಸ್ವಭಾವದವರು, ನಿರ್ಮಲ ಚರಿತರು.

ಮದ್ರಾಸ್ ಮಂತ್ರಿಮಂಡಲದ ರಚನೆ

ಮದ್ರಾಸ್ ಮಂತ್ರಿಮಂಡಲ

ಶ್ರೀ. ಸಿ. ರಾಜಗೋಪಾಲಾಚಾರ್ಯರು ಮದ್ರಾಸಿನ ಮುಖ್ಯ ಮಂತ್ರಿಗಳು. ಪಬ್ಲಿಕ್ ಅಂದರೆ ಪೋಲೀಸ್ ಮೊದಲಾದ ಖಾತೆಗಳ ಮತ್ತು ಆರ್ಥಿಕ ವಿಷಯದ ಆಡಳಿತವನ್ನು ಇವರು ನಡಿಸುವರು. ಇವರ ವಯಸ್ಸು 58. ಇವರು ಸೇಲಮಿನವರು ಬೆಂಗಳೂರಿನ ಸೆಂಟ್ರಲ್ ಕೋಲೇಜಿನಲ್ಲಿ ಕಲಿತವರು. ಆ ಮೇಲೆ ವಕೀಲರಾಗಿ ಸೇಲಮಿನ ಮುನಿಸಿಪಲ್ ಅಧ್ಯಕ್ಷರಾಗಿದ್ದು ಹರಿಜನರಿಗೆ ನಳ್ಳಿನೀರನ್ನು ಉಪಯೋಗಿಸಬಿಡುವ ವಿಷಯದಲ್ಲಿ ಕಾದಾಡಿದವರು 1920ರಲ್ಲಿ ಅಸಹಕಾರ ಚಳವಳದ ಸಂದರ್ಭದಲ್ಲಿ ವಕೀಲವೃತ್ತಿ ಬಿಟ್ಟು ರಾಜಕೀಯಕ್ಕೆ ಸಂಪೂರ್ಣವಾಗಿ ಜೀವಿತವನ್ನರ್ಪಿಸಿದರು. ನಾಲ್ಕುಸಲಸೆರೆಮನೆಗೆ ಹೋದರು. ಬ್ರಾಹ್ಮಣರಾದರೂ ಮಗಳನ್ನು ಬನ್ಯಜಾತಿಯ ಗಾಂಧಿಜಿಯವರ ಮಗ ಶ್ರೀ. ದೇವದಾಸ ಗಾಂಧಿಜಿಯವರಿಗೆ ವಿವಾಹಮಾಡಿಕೊಟ್ಟರು. ಇವರನ್ನು ದಕ್ಷಿಣ ಭಾರತದ ಗಾಂಧಿಜಿಯವರೆಂದರೂ ತಪ್ಪಾಗದು.

ಶ್ರೀ. ಟಿ. ಪ್ರಕಾಶಮರು ಭೂಕಂದಾಯ ಖಾತೆಯ ಮಂತ್ರಿಗಳು. ಇವರು ಆಂಧ್ರ ದೇಶದ ಟಂಗಟೂರಿನಲ್ಲಿ ಹುಟ್ಟಿದವರು. ಇವರು ಬ್ಯಾರಿಸ್ಟರರಾಗಿ ಹೆಚ್ಚು ಸಂಪಾದನೆ ಮಾಡುತ್ತಿದ್ದರು. ಸ್ವರಾಜ್ಯವೆಂಬ ಇಂಗ್ಲಿಷ್ ದೈನಿಕ ಪತ್ರಿಕೆಯನ್ನು ಸ್ಥಾಪಿಸಿ ಹೆಚ್ಚಿನ ಹಣಕಳಕೊಂಡರು. 1920ರಲ್ಲಿ ಅಸಹಕಾರಕ್ಕೆ ಸೇರಿ ವಕಾಲತು ಬಿಟ್ಟರು. ಕಾಯಿದೆಭಂಗ ಚಳವಳದಲ್ಲಿ ಎರಡು ಸಲ ಜೈಲಿಗೆ ಹೋಗಿರುವರು. ಇವರಿಗೆ ಆಂಧ್ರ ಕೇಸರಿಯೆಂಬ ಹೆಸರಿರುವುದು.

ಡಾಕ್ಟರ್ ಟಿ. ಎಸ್. ಎಸ್. ರಾಜನರು ಆರೋಗ್ಯಖಾತೆಯ ಮಂತ್ರಿಗಳು. ಎಂಡೋಮೆಂಟ್ ಖಾತೆಯೂ ಇವರ ಆಡಳಿತಕ್ಕೆ



ರೂ. 2—12—0ಕ್ಕೆ
ತೀಕ್ಷ್ಣ ದೃಷ್ಟಿಚಕ್ರವುಳ್ಳ
ಬೇಬಿ ಬೋಕ್ಸ್ ಕೆಮರಾ
(1937ನೇ ಡೈರಿ ಉಚಿತ)

ಕಲಿಯಲಿಚ್ಛಿಸುವವರು ಈ ಕೆಮರಾದಿಂದ ಕಾರ್ಡು ಸೈಜು ಪ್ಲೇಟಿನಲ್ಲಿ ಯಾವದರ ಫೋಟೋವನ್ನಾದರೂ ಉತ್ಕೃಷ್ಟವಾಗಿ ಒಂದೇ ಕ್ಷಣದೊಳಗೆ ತೆಗೆಯಬಹುದು. ನಿರುದ್ಯೋಗಿಗಳು ಇದರಿಂದ ದಿನಂಪ್ರತಿ ರೂ. 5/ನ್ನು ಗಳಿಸಬಹುದು. 1 ಡಜನ್ ಪ್ರಿಂಟಿಂಗ್ ಪೇಪರ್ ಚಿತ್ರಗಳನ್ನು ತೋರ್ಪಡಿಸುವ ಉಪಕರಣ ಮತ್ತು ಫೋಟೋ ತೆಗೆವ ವಿಧಾನಗಳನ್ನು ಉಚಿತವಾಗಿ ಕೊಡಲಾಗುವುದು. ಕ್ರಯ 2ನೇ ನಂಬ್ರಕ್ಕೆ ರೂ. 2—12—0; 1ನೇದ್ದಕ್ಕೆ ರೂ. 3—12—0; ಫೋಲ್ಡಿಂಗ್ ಕೆಮರಾಕ್ಕೆ ರೂ. 3/– ಉತ್ತಮ ತರಹದ್ದಕ್ಕೆ ರೂ. 4—5—0. ಪೋಸ್ಟೇಜು ಅಲಾಹಿದಾ.

DUTTA & CO.
15/ 1, Jaymittra Street,
***P. O. Hatkhola* (Calcutta)**

ಶ್ರೀ ಸತ್ಯನಾರಾಯಣ ವ್ರತ

.ವಿಶ್ವಾಸಿಗಳ ಪ್ರಯೋಜನಾರ್ಥಕ್ಕಾಗಿ ನಮ್ಮಲ್ಲಿ ನಡೆಯುತ್ತಿರುವ ಸತ್ಯನಾರಾಯಣ ವ್ರತದ ಮಹತ್ವವನ್ನು ಈ ಕೆಳಗೆ ಕೊಟ್ಟಿರುತ್ತೇನೆ.

ಒಂದು ದಿನ ನಾರದರು ಮಹಾವಿಷ್ಣುವಿನ ಹತ್ತಿರ ಹೋಗಿ ಹೇ ಮಹಾವಿಷ್ಣೋ! ಮರ್ತ್ಯಲೋಕದಲ್ಲಿ ಸಮಸ್ತ ಜನರು ಅನೇಕ ದುಃಖಗಳನ್ನು ಅನುಭವಿಸುತ್ತಿರುವರು ಅಲ್ಪ ಉಪಾಯದಿಂದ ಸಮಸ್ತ ಲೋಕದ ದುಃಖವು ಹೇಗೆ ನಾಶವಾದೀತು.? ಕೃಪೆ ಮಾಡಿ ಹೇಳುವಂಥವನಾಗು—ಎಂದು ನೊರೆಯಿಡಲು ಮಹಾವಿಷ್ಣುವು—ಸತ್ಯನಾರಾಯಣ ದೇವತಾ ವ್ರತಮಾಡಿದರೆ ಮನುಷ್ಯರುಗಳು ಈ ಲೋಕದಲ್ಲಿ ಅಖಂಡ ಸುಖವನ್ನನುಭವಿಸುವಂಥವರಾಗಿ ಪರಲೋಕದಲ್ಲೂ ಸುಖವನ್ನು ಹೊಂದುವಂಥವರಾಗುತ್ತಾರೆ. ಎಂದು ಹೇಳುವಂಥವನಾದನು—ಮತ್ತು ಈ ವ್ರತವು ದುಃಖಶೋಕಾದಿಗಳನ್ನು ನಾಶಮಾಡುವಂಥಾದ್ದು, ಧನ ಧಾನ್ಯಾದಿಗಳನ್ನು ಅಭಿವೃದ್ಧಿ ಮಾಡುವಂಥಾದ್ದು, ಸಮಸ್ತಕಾರ್ಯಗಳನ್ನು ದಿಗ್ವಿಜಯ ಮಾಡುವಂಥಾದ್ದು ಎಂದೂ ಭಗವಂತನು ಹೇಳುವಂಥವನಾದ. ಇದರ ವಿಧಾನ ಹೇಗೆಂದು ನಾರದನು ಕೇಳುವಂತವನಾದಾಗ ಮಹಾವಿಷ್ಣುವು ಈ ಪ್ರಕಾರಹೇಳುವಂಥವನಾದ–ಹೇ ಮುನಿಯೇ! ಸಾಯಾಹ್ನ ಪ್ರದೋಷಕಾಲದಲ್ಲಿ ಸತ್ಯನಾರಾಯಣ ಪೂಜೆಯನ್ನು ಮಾಡಿ ಉತ್ತಮವಾದಂಥಾ ಭಕ್ಷ್ಯಗಳನ್ನು ನಾರಾಯಣನಿಗೆ ಸಮರ್ಪಣೆ ಮಾಡಬೇಕು. ಪಕ್ವವಾದ ಕದಳೀ ಫಲ, ಕ್ಷೀರ, ಘೃತ, ಶರ್ಕರ (ಸಿಕ್ಕದಿದ್ದರೆ ಬೆಲ್ಲವೂ ಆದೀತು) ಗೋಧೂಮಪಿಷ್ಟ (ದೊರೆಯದಿದ್ದರೆ ಅಕ್ಕಿಯ ರವೆಯೂ ಆದೀತು). ಇವುಗಳಿಂದ ಭಕ್ಷ್ಯವನ್ನು ಮಾಡಿ ದೇವರಿಗೆ ಸಮರ್ಪಿಸಿ ಆಪ್ತ ಜನರು ಮಿತ್ರರು ಬಂಧುಗಳು ಕೂಡಿಕೊಂಡು ಕಥಾಶ್ರವಣಮಾಡಿ ಬ್ರಾಹ್ಮಣರಿಗೆ ದಕ್ಷಿಣೆ ತಾಂಬೂಲಾದಿಗಳನ್ನು ಕೊಟ್ಟು ನಂತರ ಭೋಜನ ಮಾಡಬೇಕು. ಈ ಪ್ರಕಾರ ನಾಲ್ಕು ವರ್ಷ ವ್ರತಗಳನ್ನು ಮಾಡಿ ಆದಿ ಮಧ್ಯ ಅಂತ್ಯಗಳಲ್ಲಾದರೂ ಉದ್ಯಾಪನೆಯನ್ನು ಮಾಡಿದರೆ ಪೂರ್ಣ ಫಲ ಪ್ರಾಪ್ತವಾಗುವುದು”.

ಪೂರ್ವದಲ್ಲಿ ಈ ವ್ರತವನ್ನು ಯಾರು ಮಾಡಿದರು ಎಂದು ಪ್ರಶ್ನಿಸಿದಾಗ ಶ್ರೀ ವಿಷ್ಣುವು ಈ ಪ್ರಕಾರ ಹೇಳುವಂಥವನಾದ. ಕಾಶಿಯಲ್ಲಿ ರಮ್ಯನೆಂಬೊಬ್ಬ ಬ್ರಾಹ್ಮಣನು ಭಿಕ್ಷಾಟನೆಗಾಗಿ ಊರೂರು ಸಂಚಾರ ಮಾಡುತ್ತಿರಲು ಭಗವಂತನು ಒಬ್ಬ ವೃದ್ಧ ಬ್ರಾಹ್ಮಣನ ರೂಪದಲ್ಲಿ ಅವನಿಗೆ ತೋರಿಸಿಕೊಂಡು ಅವನ ಕಷ್ಟದ ಪರಿಹಾರಕ್ಕಾಗಿ ಸತ್ಯನಾರಾಯಣನ ಪೂಜೆ ಮಾಡೆಂದು ಅವನಿಗೆ ಉಪದೇಶಿಸಿ ಅದರ ವಿಧಾನಗಳನ್ನೆಲ್ಲಾ ಹೇಳಿಕೊಟ್ಟು ಅದೃಶ್ಯ ನಾಗುವಂಥವನಾದ. ಮರುದಿನ ಆ ಬ್ರಾಹ್ಮಣನು ಸತ್ಯನಾರಾಯಣ ಪೂಜೆ ಮಾಡಬೇಕೆಂದು ಸಂಕಲ್ಪಿಸಿಕೊಂಡು ಭಿಕ್ಷೆಗೆ ಹೊರಡುವಂಥವನಾದಾಗ ಅವನಿಗೆ ಬಹಳ ದ್ರವ್ಯ ದೊರಕುವಂಥಾದ್ದಾಯಿತು. ಆದ್ದರಿಂದ ಆತನು ಸತ್ಯನಾರಾಯಣ ವ್ರತವನ್ನುಮಾಡಿ ಸರ್ವ ದುಃಖದಿಂದ ಮುಕ್ತನಾಗಿ ಸಕಲ ಸಂಪತ್ತಿನಿಂದ ಯುಕ್ತನಾಗಿ ಶ್ರೀಮಂತನಾಗುವವನಾದ, ಮಾತ್ರವಲ್ಲದೆ ಸಮಸ್ತಪಾಪದಿಂದ ವಿಮುಕ್ತನಾಗಿ ಮೋಕ್ಷವನ್ನೂ ಹೊಂದುವಂಥವನಾದ. ಈ ಪ್ರಕಾರ ಮಹಾ ವಿಷ್ಣುವು ನಾರದನಿಗೆ ಹೇಳಿದನೆಂದು ಸೂತಪುರಾಣಿಕರು ಶೌನಕಾದಿ ಮುನಿಗಳಿಗೆ ಹೇಳುವಂಥವರಾದರು ಇದು ಲೋಕದಲ್ಲಿ ಇತರರಿಗೆ ಹೇಗೆ ತಿಳಿಯುವಂತಾಯಿತೆಂದು ಕೇಳಿದ್ದಕ್ಕೆ ಸೂತಪುರಾಣಿಕರು ಈ ಪ್ರಕಾರ ಹೇಳುವಂತವರಾದರು. ಏನೆಂದರೆ ಈ ಬ್ರಾಹ್ಮಣನು ಸತ್ಯನಾರಾಯಣ ಪೂಜೆ ಮಾಡುತ್ತಿರುವಾಗ ಕಟ್ಟಿಗೆ ಹೊರುವವನೊಬ್ಬನು ಅಲ್ಲಿಗೆ ಬಂದು ಆ ಬ್ರಾಹ್ಮಣನಿಗೆ ನಮಸ್ಕಾರಮಾಡಿ ಇದೇನೆಂದು ಕೇಳಿದಾಗ ಬ್ರಾಹ್ಮಣನು ಅವನಿಗೆ ಈ ವ್ರತದ ವಿಧಾನವನ್ನು ಹೇಳುವಂಥವನಾದ. ಅವನಾ ಪೂಜೆ ಮಾಡಬೇಕೆಂದು ನಿಶ್ಚಯಿಸಿ ಕೊಂಡು ಅಲ್ಲಿಂದ ಹೊರಟು ಹೋಗಿ ಕಟ್ಟಿಗೆ ಮಾರುತ್ತಿರುವಾಗ ಅವನಿಗೆ ಒಂದಕ್ಕೆರಡು ಲಾಭದೊರೆಯುವಂತಾಯಿತು, ಆ ದ್ರವ್ಯದಿಂದ ಅವನು ಕದಳೀ ಫಲ ಇತ್ಯಾದಿ ಸಾಮಗ್ರಿಗಳನ್ನು ಕೊಂಡುಕೊಂಡು ಆ ವ್ರತವನ್ನು ಮಾಡಿ ಅತಿಸಂತೋಷದಿಂದ ಈ ಲೋಕದಲ್ಲಿ ಸುಖದಿಂದ ಇದ್ದವನಾಗಿ ನಂತರ ಸತ್ಯಲೋಕಕ್ಕೆ ಹೋಗುವಂಥವನಾದ.

ಇನ್ನೊಂದು ಕಥೆಯನ್ನು ಸೂತಪುರಾಣಿಕರು ಹೇಳುವಂಥವರಾದರು. ಅದೇನೆಂದರೆ, ಪೃಥ್ವೀಪಾಲಕನೆಂಬ ರಾಜನು ತನ್ನ ಪತ್ನಿಯೊಂದಿಗೆ ನದೀ ತೀರದಲ್ಲಿ ಸತ್ಯನಾರಾಯಣ ವ್ರತವನ್ನು ಮಾಡುತ್ತಿರುವುದನ್ನು ಮಧು ಎಂಬ ವೈಶ್ಯನೊಬ್ಬನು ಕಂಡು ರಾಜನಕೂಡೆ ಇದೇನೆಂದು ಪ್ರಶ್ನಿಸಿದಾಗ ತಾನು ಸಂತತಿಗಾಗಿ ಸತ್ಯನಾರಾಯಣ ವ್ರತವನ್ನು ಮಾಡುತ್ತಿದ್ದೇನೆಂದು ರಾಜನು ಹೇಳಿದ್ದನ್ನು ವೈಶ್ಯನು ಕೇಳಿ ತನಗೂ ಸಂತತಿಯಾದರೆ ತಾನು ಕೂಡಾ ಆ ವ್ರತವನ್ನು ಮಾಡುವುದಾಗಿ ಪ್ರಾರ್ಥಿಸುವಂಥವನಾದ. ನಂತರ ಸತ್ಯನಾರಾಯಣನ ಅನುಗ್ರಹದಿಂದ ಅವನಿಗೆ ಕಲಾವತಿ ಎಂಬ ಕನ್ಯೆಯು ಹುಟ್ಟುವಂಥವಳಾದಳು. ಅವಳಿಗೆ ವಿವಾಹ ಮುಗಿದರೂ ಹೇಳಿಕೊಂಡಂಥಾ ವ್ರತವನ್ನು ಮಾಡಲು ಆ ವೈಶ್ಯನು ಮರೆತುಬಿಟ್ಟದ್ದರಿಂದ ಸತ್ಯನಾರಾಯಣನು ಅವನ ಮೇಲೆ ಮಹಾಸಿಟ್ಟುಗೊಂಡು ಅವನಿಗೆ ಭಯಂಕರವಾದ ದುಃಖಪ್ರಾಪ್ತಿಯಾಗಲೆಂದು ಶಾಪಕೊಡುವಂಥವನಾದ. ಅದರ ಫಲವಾಗಿ ಆ ವೈಶ್ಯನು ಕಳ್ಳನೆಂದು ಸೆರೆಹಿಡಿಯಲ್ಪಟ್ಟು ಬಂಧಿಸಲ್ಪಟ್ಟ. ಅವನ ಹೆಂಡತಿಯೂ ವ್ಯಾಧಿಯಿಂದ ಪೀಡಿತಳಾದಳು. ಅವನ ಮಗಳು ಅನ್ನಕ್ಕೋಸ್ಕರ ಅಲ್ಲಲ್ಲಿ ತಿರುಗಾಡುತ್ತಿರಲು ಸತ್ಯನಾರಾಯಣ ಪೂಜೆಮಾಡುತ್ತಿರುವ ಒಂದು ಮನೆಯಲ್ಲಿ ಅವಳಿಗೆ ದೇವರ ಪ್ರಸಾದವು ಸಿಕ್ಕಿತು. ಮನೆಗೆ ಬಂದು ತಾಯಿಯ ಕೂಡೆ ಈ ವರ್ತಮಾನವನ್ನು ಹೇಳಿದಾಗ ತಾಯಿಗೆ ಕೂಡಲೇ ಸತ್ಯನಾರಾಯಣ ಪೂಜೆಯ ನೆನಪಾಗಿ ಅವಳೂ ಪೂಜೆಮಾಡಲು ಅವಳ ಗಂಡನು ಬಂಧ ವಿಮುಕ್ತನಾಗಿ ಮನೆಗೆ ಬಂದು ಸೇರುವಂಥವನಾದ. ನಂತರ ಪ್ರತಿ ಮಾಸದಲ್ಲೂ ಪೌರ್ಣಿಮಾ ಸಂಕ್ರಾಂತಿ ಈ ಪರ್ವ ಕಾಲದಲ್ಲಿ ಸತ್ಯನಾರಾಯಣ ಪೂಜೆಯನ್ನು ಮಾಡುವಂಥವನಾದ. ಈ ಮರ್ತ್ಯ ಲೋಕದಲ್ಲಿ ಸುಖವನ್ನನುಭವಿಸಿ ಅಂತ್ಯ ಕಾಲದಲ್ಲಿ ಸತ್ಯಲೋಕವನ್ನು ಹೊಂದುವಂಥವನಾದ.

ಸೂತಪುರಾಣಿಕರು ಮತ್ತೊಂದು ಕಥೆಯನ್ನು ಹೇಳುವಂಥವರಾದರು. ಅದು ಅಂಗಧ್ವಜನೆಂಬೊಬ್ಬ ರಾಜನು ಸತ್ಯನಾರಾಯಣ ಪ್ರಸಾದವನ್ನು ತ್ಯಾಗಮಾಡಿದುದಕ್ಕಾಗಿ ಅತೀ ದುಃಖವನ್ನು ಹೊಂದಿದ ಕಥೆ. ರಾಜನು ಬೇಟೆಗೆ ಹೋಗಿ ಹಿಂದೆ ಬರುತ್ತಿರಲು ಕೆಲವು ಗೋಪಾಲಕರು ಒಂದು ಕಡೆಯಲ್ಲಿ ಸತ್ಯನಾರಾಯಣ ಪೂಜೆ ಮಾಡಿ ಪ್ರಸಾದವನ್ನು ರಾಜನ ಮುಂದೆ ತಂದಿಡಲು ಆತನು ಪ್ರಸಾದ ಪರಿತ್ಯಾಗ ಮಾಡಿ ಹೊರಟುಹೋದುದರಿಂದ ಅವನ ನೂರು ಮಂದಿ ಮಕ್ಕಳು ನಾಶರಾದರು. ಇದರ ಪರಿಹಾರಾರ್ಥಕ್ಕಾಗಿ ಆತನು ಪೂಜೆಯನ್ನು ಮಾಡಿದ ಕೂಡಲೇ ಅವನು ಪುನಃ ಆ ಮಕ್ಕಳನ್ನು ಹೊಂದಿ ಅಂತ್ಯ ಕಾಲದಲ್ಲಿ ಸಾಕ್ಷಾತ್ ವೈಕುಂಠವನ್ನು ಹೊಂದುವಂಥವನಾದನು.

ಯಾವಾತನು ನಿತ್ಯದಲ್ಲಿ ಈ ಸತ್ಯನಾರಾಯಣ ಕಥೆಯನ್ನು ಪಠನಮಾಡುತ್ತಾನೋ ಯಾವಾತನು ಇದನ್ನು ಶ್ರವಣಮಾಡುತ್ತಾನೋ ಅವನ ಸಮಸ್ತ ದುಃಖವೂ ಪಾಪವೂ ನಾಶಹೊಂದುವಂಥಾದ್ದಾಗಿ ಅವನು ಸುಖದಿಂದ ಇರುವಂಥವನಾಗುತ್ತಾನೆ ಇದರಲ್ಲಿ ಸಂಶಯವಿಲ್ಲ. ಎಂಬುದಾಗಿ ಸೂತ ಪುರಾಣಿಕರು ಶೌನಕಾದಿ ಮುನಿಗಳಿಗೆ ನಿರೂಪಣಮಾಡಿದರೆಂದು ಸ್ಕಂದ ಪುರಾಣದ ರೇವಾಖಂಡದಲ್ಲಿ ಹೇಳುವಂಥಾದ್ದಾಗಿದೆ.

ಲೋಕದಲ್ಲಿ ಜನರು ಬಹಳ ದುಃಖಗಳನ್ನು ಅನುಭವಿಸುತ್ತಿರುವುದನ್ನು ಕಂಡು ಮನನೊಂದು ನಾರದ ಮುನಿಗಳು ಶ್ರೀ ವಿಷ್ಣುವಿನ ಹತ್ತಿರ ಹೋಗಿ ಮನುಷ್ಯರು ಇಹಪರಗಳಲ್ಲಿ ನಿರಂತರ ಸುಖವನ್ನು ಹೊಂದುವ ಈ ಸುಲಭೋಪಾಯವನ್ನು ಆತನಿಂದ ತಿಳಿದುಕೊಂಡರೆಂಬ ವಿಷಯವನ್ನು ಸೂತ ಪುರಾಣಿಕರು ಶೌನಕಾದಿ ಮುನಿಗಳಿಗೆ ಹೇಳುವಂಥವರಾದರು. ಎಲ್ಲೆಲ್ಲಿಯೂ ಈ ಸಾಧನವು ಜನರಿಗೆ ಸುಲಭದಲ್ಲಿ ದೊರೆಯುವಂತೆ ಕೆಲವರು ಮಹಾತ್ಮರು ಅದನ್ನು ಸಣ್ಣ ಪುಸ್ತಕವಾಗಿ ಛಾಪಿಸುವಂಥವರಾದರು. ನಾವೆಲ್ಲರೂ ಅಂತಹ ಪುಸ್ತಕವನ್ನು ಕೊಂಡುಕೊಂಡು ಈ ಸತ್ಯನಾರಾಯಣ ಪೂಜೆಯ ಮಹತ್ವವನ್ನು ಅರಿತವರಾಗಿ ಆಗಾಗ್ಗೆ ಆ ಪೂಜೆಯನ್ನು ಮಾಡಿಸಿದ್ದಾದರೆ ನಮ್ಮ ದೇಶದಲ್ಲಿರುವ ದಾರಿದ್ರ್ಯ ದುಃಖಗಳು ನಾಶವಾಗಿ ನಮ್ಮ ದೇಶದವರೆಲ್ಲರೂ ಕ್ಷಿಪ್ರದಲ್ಲಿಯೇ ಸಾಕ್ಷಾತ್ ವೈಕುಂಠಕ್ಕೆ ಹೋಗುವಂಥವರಾಗಬಹುದು. ಸುಖ ಪ್ರಾಪ್ತಿಯು ಇಷ್ಟು ಸುಲಭದಲ್ಲಿರುವಾಗ ಅದನ್ನು ನಂಬದೆ ಈಗಿನ ಕೆಲವು ತರುಣರು ಪುರಾಣದ ಈ ರೀತಿಯ ಕಥೆಗಳೆಲ್ಲವೂ ಇತರರ ಕಷ್ಟಾರ್ಜಿತ ದ್ರವ್ಯವನ್ನು ಸುಲಭೋಪಾಯದಿಂದ ಅಪಹರಿಸುವುದಕ್ಕಾಗಿ ಕೆಲವರಿಂದ ತಯಾರಿಸಲ್ಪಟ್ಟವುಗಳೆಂದು ಹೇಳುತ್ತಿರುವುದು ಶೋಚನೀಯವಲ್ಲವೇ?

ಪುರಾಣಿಕ.

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
Head Office: UDIPI.
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ನವಭಾರತ ಬುಕ್ ಡಿಪೋದಲ್ಲಿ
ಸಾಮಾನ್ಯ ಯಾವತ್ತೂ
ಕನ್ನಡ ಗ್ರಂಥಗಳು
ದೊರೆಯುತ್ತವೆ.

ಕಾಂಗ್ರೆಸ್ ಮಂತ್ರಿಗಳು ಹೇಗಿರಬೇಕು?

ಗಾಂಧಿಜಿಯವರ ಸೂಚನೆಗಳು.

ಕಳೆದ ವಾರದ ಹರಿಜನ ಪತ್ರಿಕೆಯಲ್ಲಿ ಮಹಾತ್ಮಾ ಗಾಂಧಿಯವರು ಕಾಂಗ್ರೆಸಿನಲ್ಲಿ ಹೇಗೆ ಅಧಿಕಾರ ಸ್ವೀಕರಿಸುವ ಮನೋವೃತ್ತಿಯುಂಟಾಯಿತು? ಕಾಂಗ್ರೆಸ್ ಮಂತ್ರಿಗಳು ಹೇಗಿರಬೇಕು? ಮತ್ತು ಏನು ಮಾಡಬೇಕೆಂಬ ಕುರಿತು ಬರೆದಿರುವ ಲೇಖನದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

ಹಿಂದೂದೇಶದ ಸ್ವಾತಂತ್ರ್ಯ ಸಾಧನೆಗಾಗಿ ಇಂಡಿಯಾ ಆಕ್ಟಿನಿಂದ ಯಾವ ಪ್ರಯೋಜನವೂ ಆಗಲಾರದು. ಅದು ಸಂಪೂರ್ಣವಾಗಿ ಅತೃಪ್ತಿಕರವಿರುವುದು. ಆದರೆ ಎಷ್ಟೊಂದು ದುರ್ಬಲ ಮತ್ತು ನಿಯಮಿತ ರೀತಿಯಲ್ಲಾದರೂ, ಖಡ್ಗದ ಆಳ್ವಿಕೆಯ ಬದಲಿಗೆ ಬಹುಪಕ್ಷದ ರಾಜ್ಯಭಾರವನ್ನು ಸ್ಥಾಪಿಸಲು ಆ ಮೂಲಕ ಯತ್ನನಡೆದಿದೆಯೆಂದು ಅರ್ಥಮಾಡಿಕೊಳ್ಳಬಹುದು. 3 ಕೋಟಿ ಸ್ತ್ರೀಪುರುಷರಿಗೆ ಓಟಿನ ಹಕ್ಕನ್ನಿತ್ತು ಅವರ ಕೈಯಲ್ಲಿ ಹೆಚ್ಚಿನ ಅಧಿಕಾರ ನೀಯುವುದನ್ನು ಬೇರೆ ಹೆಸರಿಂದ ವಿವರಿಸಲು ಸಾಧ್ಯವಿಲ್ಲ. ಆದರೆ ಅದರ ಹಿಂಬದಿಯಲ್ಲಿ, ಇಂಡಿಯಾ ಆಕ್ಟನ್ನು ಸ್ವೀಕರಿಸಿ ತೃಪ್ತಿಗೊಂಡು ಆಳಸರ ಸೂರೆಗೆ ಸಮ್ಮತಿಸಬಹುದೆಂಬ ನಿರೀಕ್ಷೆಯಿದೆ. 30ಮಿಲ್ಯ ಮತದಾರರ ಪ್ರತಿನಿಧಿಗಳು ಇಂಡಿಯಾ ಆಕ್ಟಿನ ಉದ್ದೇಶವನ್ನು ತಡೆಗಟ್ಟಲು ತಮ್ಮ ಕೈವಶವಾಗುವ ಅಧಿಕಾರವನ್ನುಪಯೋಗಿಸುವಷ್ಟರ ಬುದ್ಧಿವಂತಿಕೆ ಮತ್ತು ಆತ್ಮವಿಶ್ವಾಸವುಳ್ಳವರಾದರೆ ಬ್ರಿಟಿಷರ ಈ ಆಶೆ ನಿರಾಶೆಯಾಗುವುದು. ಇಂಡಿಯಾ ಆಕ್ಟನ್ನು ಅವರ ಉದ್ದೇಶಕ್ಕೆ ಪ್ರತಿ ವಿರುದ್ಧವಾಗಿ, ನಮಗೆ ಬೇಕಾದಂತೆ ಉಪಯೋಗಿಸಿದರಾಯಿತು.

ಮಂತ್ರಿಗಳು ಕೂಡಲೆ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರಬಹುದು. ಅಬ್ಕಾರಿ ಆದಾಯದಿಂದ ಶಿಕ್ಷಣಕ್ಕಾಗಿ ಹಣ ತುಂಬಿಸುವ ಬದಲಿಗೆ ಶಿಕ್ಷಣವನ್ನು ಸ್ವಾವಲಂಬಿಯಾಗಿ ಮಾಡಬಹುದು. ಇದು ವಿಸ್ಮಯಕರವಾಗಿ ತೋರಬಹುದು, ಆದರೆ ಅದು ವ್ಯವಹಾರ್ಯ ಮತ್ತು ವಿವೇಕಪರವಾದುದೆಂದೇ ನನ್ನ ಅಭಿಪ್ರಾಯ. ಕಾರಾಗೃಹಗಳನ್ನು ಕಾರ್ಯಾಲಯ ಮತ್ತು ಸುಧಾರಣೆಯ ನಿವಾಸಗಳನ್ನಾಗಿ ಮಾರ್ಪಡಿಸಬಹುದು. ಅವು ಸ್ವಾವಲಂಬಿಯಾಗಿ ವಿದ್ಯಾಪ್ರಚಾರಕವಾಗಬೇಕು. ಗಾಂಧಿ ಅರ್ವಿನ್ ಒಪ್ಪಂದದ ಮೇರೆಗೆ ಬಡವನಿಗೆ ಉಪ್ಪು ಧರ್ಮಾರ್ಥ ಸಿಗುವಂತಾಗಬೇಕು. ಎಲ್ಲದಕ್ಕೂ ಖಾದಿಯನ್ನೇ ತೆಗೆದುಕೊಳ್ಳಬೇಕು. ಪಟ್ಟಣಗಳಿಗಿಂತಲೂ ಹಳ್ಳಿಗಳ ಮತ್ತು ಬೇಸಾಯಗಾರರ ಕುರಿತು ಹೆಚ್ಚಿನ ಲಕ್ಷ್ಯಕೊಡಬೇಕು. ನನ್ನ ಮನಸ್ಸಿಗೆ ಹೊಳೆದಂತೆ ಸೂಚಿಸಿದ ವಿಷಯಗಳಿವು. ಇವನ್ನು ಯಾವ ಆಕ್ಷೇಪವೂ ಇಲ್ಲದೆ ಕೈಕೊಳ್ಳಬಹುದು.

ಮಂತ್ರಿಗಳು ಹೇಗೆ, ನಡೆಯಬೇಕು? ಯಾವ ಮಾದರಿ ಹಾಕಿಕೊಡಬೇಕು? ಅವರ ನಾಯಕರಾದ ಕಾಂಗ್ರೆಸಿನ ಪ್ರೆಸಿಡೆಂಟರು ಮೂರನೇ ತರಗತಿಯಲ್ಲಿ ಪ್ರಯಾಣಮಾಡುತ್ತಿರುವಾಗ ಅವರು ಫಸ್ಟ್ ಕ್ಲಾಸಿನಲ್ಲಿ ತಿರುಗಾಡುವರೇ? ಕಾಂಗ್ರೆಸ್ ಪ್ರೆಸಿಡೆಂಟರು, ಖಾದಿ ಧೋತಿ, ಜಿಬ್ಬ ಮತ್ತು ವೇಸ್ಟ್ ಕೋಟಿನಿಂದ ತೃಪ್ತರಾಗಿರುತ್ತಾರೆ. ಮಂತ್ರಿಗಳಿಗೆ ಪಾಶ್ಚಾತ್ಯ ರೀತಿಯ ವೇಷಭೂಷಣ ವೆಚ್ಚಾದಿಗಳು ಬೇಕೇ? ಕಳೆದ 17ವರ್ಷಗಳಿಂದ ಕಾಂಗ್ರೆಸ್ ಪಕ್ಷೀಯರು ಕಠಿಣ ಸರಳ ಜೀವನ ನಡೆಸಲು ತರಬೇತಿ ಹೊಂದಿರುವರು. ಅಂತಹದೇ ಆದ ಸರಳತನವನ್ನು ಕಾಂಗ್ರೆಸ್ ಮಂತ್ರಿಗಳು ತಮ್ಮ ಆಡಳಿತವಲ್ಲಿ ಜ್ಯಾರಿಗೆ ತರಬೇಕು. ಅದರಿಂದ ಅವರು ನಾಚಿಕೆಪಡಬಾರದು,! ಅಭಿಮಾನಪಡಬೇಕು. ನಾವು ಇಡೀ ಲೋಕದಲ್ಲಿ ಅತ್ಯಂತ ಬಡ ಜನಾಂಗವು. ಹಲವು ಮಿಲ್ಯ ಜನರು ಅರೆ ಹೊಟ್ಟೆಯಲ್ಲಿ ನರಳಿಕೊಂಡಿರಬೇಕಾಗಿರುವುದು. ಪ್ರಜಾ ಪ್ರತಿನಿಧಿಗಳು ತಮ್ಮನ್ನು ಆರಿಸಿದ ಜನರಿಗಿಂತ ತೀರ ಭಿನ್ನವಾದ ರೀತಿಯಲ್ಲಿ ಜೀವಿಸಬಾರದು. ವಿಜಯಿಗಳಾಗಿ ಮತ್ತು ಆಳರಸರಾಗಿ ಬಂದಿರುವ ಆಂಗ್ಲೇಯರು, ತಮ್ಮ ಅಧೀನರಾದ ಜನರ ಅಸಹಾಯಕ ಪರಿಸ್ಥಿತಿಯ ಗೊಡವೆಯೇ ಇಲ್ಲ ಜೀವನ ಪ್ರಮಾಣವನ್ನು ಸ್ಥಾಪಿಸಿದರು. ಕಾಂಗ್ರೆಸ್ ಮಂತ್ರಿಗಳು ಗವರ್ನರರು ಮತ್ತು ಸಿವಿಲ್ ಸರ್ವೀಸಿನವರನ್ನು ಅಣಕಿಸದೆ ಸರಳ ರೀತಿಯ ಜೀವನ ನಡಿಸಿದರೆ ಕಾಂಗ್ರೆಸಿನವರಿಗೂ ಆಳರಸರಿಗೂ ಇರುವ ಮನೋವೃತ್ತಿಯ ಭೇದವನ್ನು ತೋರಿಸಿದಂತಾಗುವುದು. 1920ರಿಂದ ನಡೆದುಬಂದ ಸರಳತನ ಮತ್ತು ಮಿತವ್ಯಯವನ್ನು ಕಾಂಗ್ರೆಸ್ ಮಂತ್ರಿಗಳು ಯಥಾ ಪ್ರಕಾರ ನಡಿಸಿದರೆ ಬಡವರ ಜೀವನದಲ್ಲಿ ಆಶೋದಯವನ್ನುಂಟುಮಾಡಿ ನೌಕರರ ಮನೋವೃತ್ತಿಯನ್ನ ಕೂಡಾ ಬದಲುಮಾಡಲು ಸಾಧ್ಯವಿದೆ.

ಸರಳತನವೆಂದರೆ ಕೊಳಕುತನವಲ್ಲ. ಅದರಲ್ಲಿಯೂ ಒಂದು ಸೌಂದರ್ಯ ಮತ್ತು ಕಲೆಯಿದೆ. ಸರಳವಾಗಿಯೂ, ನಿರ್ಮಲವಾಗಿಯೂ ಗಂಭೀರವಾಗಿಯೂ ಇರಲು ಹಣಬೇಕಾಗಿಲ್ಲ. ಆಡಂಬರ ವಿಜೃಂಭಣೆಗಳು ಹಲವು ವೇಳೆ ಒರಟಾಗಿರುವುವು.

ಹಿಂದೂದೇಶವನ್ನು ಹಿಂದು ಮತ್ತು ಮುಸಲ್ಮಾನರಾಗಿ ವಿಭಾಗಿಸಲು ಆಂಗ್ಲೇಯ ಪತ್ರಿಕೆಗಳು ಪ್ರಯತ್ನಮಾಡಿರುವವು. ಕಾಂಗ್ರೆಸಿಗೆ ಬಹುಪಕ್ಷವಿರುವ ಪ್ರಾಂತಗಳು ಹಿಂದುಗಳವು, ಇತರ ಪ್ರಾಂತಗಳು ಮುಸಲ್ಮಾನರವೆಂದು ಭೇದಮಾಡಲಾಗಿದೆ. ಇದು ತೀರಾಸುಳ್ಳೆಂಬುದರ ಗೊಡವೆಯೇ ಅವರಿಗಿಲ್ಲ. ಇಂತಹ ಸಂಶಯಕ್ಕೇನಾದರೂ ಆಸ್ಪದವು ದೊರೆಯದಂತೆ ಆ ಪ್ರಾಂತಗಳ ಕಾಂಗ್ರೆಸ್ ಮಂತ್ರಿಗಳು ನಡೆಯುವರೆಂದು ನನ್ನ ನಿರೀಕ್ಷೆ. ಹಿಂದು, ಮುಸಲ್ಮಾನ, ಕ್ರೈಸ್ತ ಮತ್ತು ಪಾರ್ಸಿಗಳೆಲ್ಲರೂ ತಮಗೆ ಒಂದೇ ರೀತಿ ಎಂಬುದನ್ನು ಅವರು ತೋರಿಸಬೇಕು. ಉಚ್ಚ ಮತ್ತು ನೀಚ ಜಾತಿಯ ಹಿಂದುಗಳೆಂಬ ಭೇದವು ಅವರಿಗಿರಬಾರದು. ಎಲ್ಲರೂ ಭಾರತಮಾತೆಯ ಪುತ್ರರು; ಅವರಲ್ಲಿ ಮೇಲು ಕೀಳೆಂಬ ಭೇದವಿಲ್ಲೆಂಬುದನ್ನು ಕಾಂಗ್ರೆಸಿನವರು ಸಿದ್ಧಗೊಳಿಸುವಂತಾಗಬೇಕು. ಬಡತನ ಮತ್ತು ಹವಾಗುಣವು ಎಲ್ಲರಿಗೂ ಸರ್ವಸಾಮಾನ್ಯವಾದುದು. ಆಂಗ್ಲೇಯರೀತಿನೀತಿಗಳು ಮಾತ್ರ ನಮಗಿಂತ ತೀರಾಭಿನ್ನವಾದುವು. ಭಿನ್ನವಾದ ಎರಡು ಗುರಿಗಳ ಪ್ರತಿನಿಧಿಗಳೀಗ ಒಟ್ಟು ಸೇರಿ ಕೆಲಸಮಾಡಬೇಕಾಗಿರುವುದು. ತಮ್ಮ ತಮ್ಮ ಚರಿತ್ರೆ, ಗುರಿ ಮತ್ತು ಮನೋವೃತ್ತಿಯಿಂದ ಒಬ್ಬರೊಬ್ಬರನ್ನು ಮತಾಂತರಪಡಿಸಲು ಅವರೀಗಬಟ್ಟಾಗಿರುವರೆಂದೇ ನನ್ನಭಾವನೆ. ಕೂಟಗಳು ಆತ್ಮರಹಿತವಾಗಿವೆ. ಆದರೆ ಅವನ್ನು ನಡಿಸುವವರು ಹಾಗಲ್ಲ. ಆಂಗ್ಲೇಯನು ಅಥವಾ ಆಂಗ್ಲೇಯ ರೀತಿ ನೀತಿಯನ್ನನುಸರಿಸಿರುವ ಹಿಂದೀಯನು, ಹಿಂದೀ ಅಂದರೆ ಕಾಂಗ್ರೆಸಿನ ದೃಷ್ಟಿಯನ್ನರಿತುಕೊಂಡನೆಂದರೆ ಕಾಂಗ್ರೆಸು ಗೆದ್ದಂತಾಯಿತು. ಆಗ ಒಂದು ಬಿಂದು ರಕ್ತವನ್ನೂ ಸುರಿಸದೆ ಸಂಪೂರ್ಣಸ್ವಾತಂತ್ರ್ಯವು ನಮ್ಮ ಬಳಿಗೆ ಬರುವುದು. ನಾನುಹೇಳುವಅಹಿಂಸಾತ್ಮಕರೀತಿ ಎಂದರೆ ಇದೇ. ಇದು ಆದರ್ಶಪರವಿರಬಹುದು. ಅವ್ಯವಹಾರ್ಯವಾಗಿರಬಹುದು. ಆದರೂ ಕಾಂಗ್ರೆಸ್ ಪಕ್ಷೀಯರೂ ಇತರ ಹಿಂದೀಯರೂ ಆಂಗ್ಲೇಯರೂ ಅದನ್ನರಿತುಕೊಳ್ಳುವುದು ಲೇಸು. ಇಂಡಿಯಾ ಆಕ್ಟನ್ನೊಪ್ಪಿ ಅದರಂತೆ ಕೆಲಸಮಾಡಲು ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಿರುವುದಲ್ಲ, ಕಾಂಗ್ರೆಸಿನ ಗುರಿಯಾದ ಸಂಪೂರ್ಣ ಸ್ವರಾಜ್ಯ ಸಾಧನೆಯ ಮಾರ್ಗದಲ್ಲಿ ಇಷ್ಟರವರೆಗೆ ತೆಗೆದುಕೊಳ್ಳದಅದೊಂದುಹೊಸಹೆಜ್ಜೆ. ಇದು ಒಂದೆಡೆ ರಕ್ತಪಾತದ ಕ್ರಾಂತಿ ಮತ್ತು ಇನ್ನೊಂದೆಡೆ ಸಾಮುದಾಯಿಕ ಕಾಯಿದೆ ಭಂಗವನ್ನು ನಿವಾರಿಸಿ ಸಂಪೂರ್ಣ ಸ್ವಾತಂತ್ರ್ಯ ಸಾಧಿಸುವ ಹೊಸ ಪ್ರಯತ್ನ. ಇದಕ್ಕೆ ಭಗವಂತನ ಆಶೀರ್ವಾದದೊರೆಯಲಿ.

ಗಿಡಗಳು ಮತ್ತು ಬೀಜಗಳು

ಡಿ. ಗುರಪ್ಪ ಅಂಡ್ ಸನ್ಸ್
ಗಿಡ,ಬೀಜ, ಫಲ, ಪುಷ್ಪಗಳ ವ್ಯಾಪಾರಿಗಳು,
ಲಾಲ್‌ಬಾಗ್, ದೊಡ್ಡ ಮಾವಳ್ಳಿ,
ಬೆಂಗಳೂರು ಸಿಟಿ.

ಮಹನೀಯರೇ, ತಮಗೆ ಬೇಕಾಗಿರುವ ಎಲ್ಲಾ ತರದ **ಗಿಡಗಳು, ಬೀಜಗಳು ನಮ್ಮಲ್ಲಿ ವಿಕರಿಗೆ ಸಿದ್ಧವಾಗಿವೆ. ಬೇಕಾದವರು** ಗಿಡ ಬೀಜಗಳು ಒಳಗೊಂಡಿರುವ ನಮ್ಮ **ಇಂಗ್ಲಿಷ್ ಕೆಟಲಾಗಿಗೆ ಬರೆಯಿರಿ.** ಉಚಿತವಾಗಿ ರವಾನಿಸುತ್ತೇವೆ.

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ.

ಕಟಪಾಡಿ, ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ--

ಗುಡಪಿಪ್ಪಲಿ (**ಲೀವರ್ ರೋಗಕ್ಕೆ**) — ಗರ್ಭಪಾಲ (**ಗರ್ಭಶೂಲೆ, ಗರ್ಭಸ್ರಾವಕ್ಕೆ**) — ಚಂದ್ರಮಸ್ (**ವಾಂತಿಭೇದಿ, ಅತಿಸಾರಕ್ಕೆ**)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಕೊಳ್ಳಿರಿ.

ಮಂಗಳೂರು

(ನಮ್ಮ ಸ್ವಂತಬಾತ್ಮೀದಾರರಿಂದ)

ದ. ಕ. ಜಿಲ್ಲಾ ಬೋರ್ಡು ಸಭೆ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಅಭಿನಂದನೆ ಬೋರ್ಡು ಆಫೀಸಿನಲ್ಲಿ ರಾಷ್ಟ್ರಧ್ವಜಕ್ಕೆ ಪುರಸ್ಕಾರ

ಕಳೆದ ತಾ ೧೪ನೇ ಬುಧವಾರ ಪೂರ್ವಾಹ್ನ ೧೧ ಘಂಟೆಗೆ ಸರಿಯಾಗಿ ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನ ಸಭೆಯು ಸೇರಿತು ಬೋರ್ಡಿನ ಅಧ್ಯಕ್ಷರಾದ ದಿವಾನ್ ಬಹದ್ದೂರು ಬಿ ಮಹಾಬಲ ಹೆಗ್ಗಡೆಯವರು ಬೋರ್ಡು ಆಫೀಸಿಗೆ ಬಂದಿದ್ದರು ಸಹ, ದೇಹಾಲಸ್ಯವಿದ್ದ ಕಾರಣ ಅಧ್ಯಕ್ಷತೆ ವಹಿಸಲಿಲ್ಲ, ಉಪಾಧ್ಯಕ್ಷರಾದ ಶ್ರೀ ಎ ಸಿ ಗೊನ್ಸಾಲಿಸರು ಅಧ್ಯಕ್ಷತೆವಹಿಸಿದ್ದರು

ಪ್ರಶ್ನೋತ್ತರಗಳು

ಹಿಂದಿನ ಸಭೆಯಲ್ಲಿ ಶ್ರೀ| ಎ ಬಿ ಶೆಟ್ಟಿಯವರು ಕೇಳಿದ್ದ ಕೆಲವು ಪ್ರಶ್ನೆಗಳಿಗೆ ಉತ್ತರಗಳು ಕೊಡಲ್ಪಟ್ಟವು ಬಾರ್ಕೂರಿನ ಸಮೀಪದ ಕಡವಿನ ವಿಷಯದಲ್ಲಿ ಇಂಜಿನಿಯರಿಂಗ್ ಇಲಾಖೆಯವರ ಸೂಚನೆಯಂತೆ ಕಡವಿನ ಕಂಟ್ರಾಕ್ಟನ್ನು ಕೊಟ್ಟಿರುವುದಾಗಿ ಉತ್ತರ ಉಪಾಧ್ಯಾಯರುಗಳ ಟ್ರಾನ್ಸ್‌ಫರ್ ವೆಚ್ಚ ಮೊದಲಾದ ಮತ್ತು ಇನ್ನು ಅನೇಕವಿಷಯಗಳ ಮೇಲೆ ಪ್ರಶ್ನೋತ್ತರಗಳಾದವು

ಠರಾವುಗಳು

ಪ್ರಶ್ನೋತ್ತರಗಳಾದ ಮೇಲೆ ಠರಾವುಗಳ ಪರಿಶೀಲನೆಯಾಗಿ ಮಂಜೂರುಮಾಡಲ್ಪಟ್ಟವು ಉಡುಪಿ ಶ್ರೀಮತಿ ಮನೋರಮಾ ಬಾಯಿಯವರು ಮೊದಲನೆಯದಾಗಿ ಒಂದು ಠರಾವನ್ನು ಸೂಚಿಸಿ ಕಾಂಗ್ರೆಸ್ ಕಾರ್ಯಕಾರಿಮಂಡಲಿಯವರು ಅಧಿಕಾರ ಸ್ವೀಕರಿಸಲು ಅನುಮತಿಕೊಟ್ಟುದಕ್ಕಾಗಿ ಅವರನ್ನು ವಂದಿಸುದಲ್ಲದೆ ಮದ್ರಾಸಿನ ಪ್ರಧಾನ ಮಂತ್ರಿಗಳಾದ ಶ್ರೀ ಸಿ ರಾಜಗೋಪಾಲಾಚಾರ್ಯರೊಡನೆ ಈ ಬೋರ್ಡು ಸಹಕರಿಸಲು ನಿರ್ಧರಿಸುತ್ತದೆ, ಎಂದರು ಡಾ ನಿರಲ ಶೆಟ್ಟಿಯವರು ಈ ಠರಾವನ್ನು ಅನುಮೋದಿಸಿದರು ಸರ್ವಾನುಮತಿಯಿಂದ ಅದು ಮಾನ್ಯವಾಯಿತು ಅದಾದ ಮೇಲೆ ಜಿಲ್ಲಾ ಬೋರ್ಡಿನ ಆಫೀಸಿನ ಶೃಂಗಾರದ ಬಗ್ಗೆ ತ್ರಿವರ್ಣದ ರಾಷ್ಟ್ರಧ್ವಜವನ್ನು ಇಡುವುದಕ್ಕೆ ಈ ಸಭೆಯು ನಿರ್ಧರಿಸುತ್ತದೆಂದು ಮತ್ತೊಂದು ಠರಾವನ್ನು ತಂದರು ಅದೂ ಮಾನ್ಯವಾಯಿತು ಅನಂತರ ಶ್ರೀಮತಿಯವರು ಬೋರ್ಡಿನ ಆಶ್ರಯದಲ್ಲಿರುವ ಸ್ಕೌಟ್ (ಬಾಲಚಮೂ ಮತ್ತು ಗರ್ಲ್ ಗೈಡ) ದಳವನ್ನು ಬೇಡನ್‌ಪವೆಲ ಸಂಸ್ಥೆಯಿಂದ ಪ್ರತ್ಯೇಕಿಸಿ ಅದನ್ನು ಪಂಡಿತ ಹಾಲನೀಯರ ಸೇವಾ ಸಮಿತಿ ಬಾಲಚಮೂಮಂಡಲಕ್ಕೆ ಸೇರಿಸಬೇಕೆಂದು ಠರಾವು ತಂದರು ಶ್ರೀ ಬಿ ವೆಂಕಪ್ಪಶೈಗಳು ಇದೇ ರೀತಿಯ ಠರಾವನ್ನು ತಂದಿದ್ದರು ಒಂದೆರಡು ಸಣ್ಣ ತಿದ್ದುಪಡಿಯೊಂದಿಗೆ ಶ್ರೀ| ಶೈಗಳು ಮೊದಲಿನ ಠರಾವನ್ನು ಅಂಗೀಕರಿಸಿದರು

ಮಿ ಜಫ್ರಿಯವರ ಪ್ರಶ್ನೆ

ಈ ಸಂದರ್ಭದಲ್ಲಿ ಬೋರ್ಡಿನ ಯುರೋಪ್ಯ ಸದಸ್ಯರಾದ ಮಿ| ಜೆಫ್ರಿಯವರು ಚಮೂದಳವನ್ನು ಒಂದು ಸಂಸ್ಥೆಯಿಂದ ತೆಗೆಯುವ ಮತ್ತೊಂದರೊಡನೆ ಸೇರಿಸುವ ಅಧಿಕಾರವು ಬೋರ್ಡಿಗೆ ಇದೆಯೇ? ಎಂದು ಪ್ರಶ್ನಿಸಿದರು ಡಾ ವಿಟ್ಠಲ ಶೆಟ್ಟಿಯವರು ಉತ್ತರಕೊಡುತ್ತ ಚಮೂದಳವನ್ನು ಸ್ಥಾಪಿಸಿ ಅದರ ಶಿಕ್ಷಕರಿಗೆ (ಸ್ಕೌಟ ಮಾಸ್ಟರ್) ತರಬೇತಿ ಕೊಡುವ ಅಧಿಕಾರವು ಬೋರ್ಡಿಗೆ ಇರುವಾಗ ಮತ್ತು ಅದಕ್ಕಾಗಿ ಬೋರ್ಡ್ ಹಣವನ್ನು ವೆಚ್ಚಮಾಡುವಾಗ ಖಂಡಿತವಾಗಿಯೂ ಅದಕ್ಕೆ ಈ ಸಂಘವನ್ನು ಬೇರೆ ಸಂಘಕ್ಕೆ ಸೇರಿಸುವ ಅಧಿಕಾರವಿದೆಯೆಂದರು ಠರಾವು ಮಾನ್ಯವಾಯಿತು

ಉಪಾಧ್ಯಾಯರ ಸಂಬಳದಲ್ಲಿ ಕಡಿತ!

ಪ್ರಾಥಮಿಕ ವಿದ್ಯಾಭ್ಯಾಸದ ಫಂಡಿನಲ್ಲಿ ಹಣವು ಬಹಳ ಕಡಿಮೆಯಿರುವುದರಿಂದಲೂ ಆ ಡಿಫಿಸಿಟನ್ನು ಸಮಾರಣೆ ಮಾಡುವುದಕ್ಕಾಗಿಯೂ ಜಿಲ್ಲಾ ಬೋರ್ಡ್ ವಿದ್ಯಾಧಿಕಾರಿಗಳು ಕೆಲವು ಸೂಚನೆಗಳನ್ನು ಬೋರ್ಡಿನ ಸದಸ್ಯರ ಮುಂದಿರಿಸಿದರು ಅವುಗಳಲ್ಲಿ ಇವು ಕೆಲವು ಉಪಾಧ್ಯಾಯರ ಸಂಬಳದಲ್ಲಿ ಒಂದೂವರೆ ಆಣೆ (ರೂಪಾಯಿಯಲ್ಲಿ)ಯ ಕಡಿತ ಉಪಾಧ್ಯಾಯಿನಿಯರ ಸಂಬಳವನ್ನು ಉಪಾಧ್ಯಾಯರ ಸಂಬಳದ ಸಾಲಿಗೆ ತರುವುದು, ಸಂಚಾರ ಭತ್ತೆ, ಕಟ್ಟಡಗಳ ರಿಪೇರಿ ಮೊದಲಾದವುಗಳಲ್ಲಿ ಹಣಉಳಿಸುವುದು, ಇತ್ಯಾದಿ ಈ ಸೂಚನೆಗಳಿಗೆ ಬೋರ್ಡಿನವರು ಸಮ್ಮತಿ ಇತ್ತರು ಆದರೆ ಒಂದೂವರೆ ಆಣೆ ಕಡಿತದ ಸ್ಥಾನದಲ್ಲಿ ಒಂದಾಣೆ ಕಡಿತ ಮಾತ್ರ ಆಗುವಂತೆ ಮಾಡಲು ಸಾಧ್ಯವಿಲ್ಲವೇ ಎಂಬುದನ್ನು ವಿಚಾರಿಸಬೇಕೆಂದು ಸೂಚಿಸಿದರು

ಜಿ ಬೋ. ನೌಕರರ ಪ್ರಾರ್ಥನೆ ನಿರಾಕರಿಸಲ್ಪಟ್ಟಿತು.

ಜಿಲ್ಲಾ ಬೋರ್ಡ್ ನೌಕರರ ಸಂಘದವರು ಬೋರ್ಡ್ ನೌಕರರ ಪ್ರಾಂತಿಕ ಪರಿಷತ್ತಿಗೆ ಹೋಗುವ ಬಗ್ಗೆ ಇಬ್ಬರು ಪ್ರತಿನಿಧಿಗಳಿಗೆ ಸಂಚಾರ ವೆಚ್ಚವನ್ನು ತೆರಬೇಕೆಂದೂ ನೌಕರರಿಗೆ (ಹೆತ್ತ ಎಲ್ಲ ಟೌನಿಗಳಲ್ಲಿರುವವರಿಗೆ) ವಸತಿ ಇಲ್ಲವೆ ಮನೆ ಬಾಡಿಗೆ ಎಲೋವೆನ್ಸ್ ಕೊಡಬೇಕೆಂದೂ ಪ್ರಾರ್ಥಿಸಿದ್ದರು ಈ ಪ್ರಾರ್ಥನೆಗಳು ನಿರಾಕರಿಸಲ್ಪಟ್ಟವು

ಹಣತೆರದೆ ಇದ್ದುದಕ್ಕೆ ಜವಾಬ್ದಾರರಾರು ?

ಬೋರ್ಡಿನವರು ಓರ್ವ ಕಂಟ್ರಾಕ್ಟರರಿಗೆ ಹಣವನ್ನು ಸ್ಯಾಂಕ್ಷನ್‌ಮಾಡಿ ಅದನ್ನು ತೆರಬೇಕೆಂದು ತಿಳಿಸಿದ್ದರು ಆದರೆ ಇಂಜಿನಿಯರಿಂಗ್ ಇಲಾಖೆಯವರು ಕಾರಣಾಂತರಗಳಿಂದ ಅದನ್ನು ತೆರಲಿಲ್ಲ ಕಂಟ್ರಾಕ್ಟರರು ದಾವೆ ಮಾಡಿ ಬೋರ್ಡಿನಮೇಲೆ ಡಿಕ್ರಿಪಡೆದಿದ್ದಾರೆ ಆದರೆ ಈ ಹಣವನ್ನು ಕೊಡಬೇಕೆಂದು ಬೋರ್ಡು ಸೂಚಿಸಿದ್ದರೂ ಕೊಡದೆ ಬೋರ್ಡಿಗೆ ಈ ನಷ್ಟಬರುವಂತೆ ಮಾಡಿದವರಾರೆಂದು ಕಂಡುಹಿಡಿಯಬೇಕೆಂದೂ ತಪ್ಪಿತಸ್ಥರಿಂದ ಹಣವನ್ನು ವಸೂಲು ಮಾಡಬೇಕೆಂದೂ, ಬೋರ್ಡು ಹಣಕೊಡಲು ಜವಾಬ್ದಾರಿಯಲ್ಲವೆಂದೂ ನಿರ್ಧಾರವಾಯಿತು

ಮೂಲ್ಕಿ ಹೈಸ್ಕೂಲಿಗೆ ಕಟ್ಟಡ

ಮೂಲ್ಕಿ ಹೈಸ್ಕೂಲಿಗೆ ಕಟ್ಟಡದ ಬಗ್ಗೆ ಸರಕಾರದವರಿಗೆ ಪುನಃಬರೆದು ಗ್ರಾಂಟನ್ನು ಕೇಳಬೇಕೆಂದು ತೀರ್ಮಾನವಾಯಿತು

ರಾಷ್ಟ್ರಧ್ವಜವು ಆಫೀಸಿನಲ್ಲಿಡಲ್ಪಟ್ಟಿತು

ಮೇಳಗ್ಗೆ ನಿರ್ಧಾರವಾದ ಮೇರೆಗೆ ಬೋರ್ಡ್ ಆಫೀಸಿನಲ್ಲಿ ರಾಷ್ಟ್ರಧ್ವಜವು ಇಡಲ್ಪಟ್ಟಿತು ಶ್ರೀ| ಎ ಸಿ ಗೊನ್ಸಾಲಿಸರು ಧ್ವಜವನ್ನು ಇಟ್ಟು, ಈ ಧ್ವಜವು ಬಹುಕಾಲ ದೇಶದ ಜನರ ಐಕ್ಯದ ಹೆಗ್ಗುರುತಾಗಿರಬೇಕೆಂದೂ ಭಾರತದ ಸ್ವಾತಂತ್ರ್ಯದ ಚಿಹ್ನೆಯಾಗಲೆಂದೂ ಹರಸಿ ಭಾಷಣಮಾಡಿದರು

ಟೀಪಾರ್ಟಿ ಸತ್ಕಾರ

ಮೂಲ್ಕಿಯ ಮಹಾಜನರ ಅನುಮತಿಯಿಂದ ಬೋರ್ಡಿನ ಸದಸ್ಯರಿಗೆ ಜಿ ಬೋರ್ಡು ಆಫೀಸಿನಲ್ಲಿ ಒಂದು ಟೀಪಾರ್ಟಿ ಸತ್ಕಾರ ನಡೆಯಿತು ಇನ್ನು ಕೆಲ ವಿಷಯಗಳ ಪರ್ಯಾಲೋಚನೆಯಾದ ಬಳಿಕ ಸಭೆ ಸಮಾಪ್ತವಾಯಿತು

ಜಿ ಎಜುಕೇಶನಲ್ ಕೌನ್ಸಿಲ್ ಅಧ್ಯಕ್ಷರು

ಖಾನ್ ಬಹದ್ದೂರ ಮಹಮ್ಮದ್ ಶಂಸ್ದಾರ್ ಸಾಹೇಬ್ ಬಹದೂರ್ ಎಂ ಎಲ ಎ ಇವರು ಜಿಲ್ಲಾ ಎಜುಕೇಶನ ಕಮಿಟಿಯ ಅಧ್ಯಕ್ಷರಾಗಿ ಸೇವೆ ಕೈಕೊಂಡಿರುವರೆಂದು ವಾರ್ತೆ

ಬೀಡಿ ಕೆಲಸಗಾರರ ಅರ್ಧವಾರ್ಷಿಕ ಸಭೆ

ಮಂಗಳೂರಿನ ಬೀಡಿಕೆಲಸಗಾರರ ಸಂಘವು ಸ್ಥಾಪನೆಯಾಗಿ ಆರು ತಿಂಗಳುಗಳು ಕಳೆದು ಹೋದವುದರ ಪ್ರಯುಕ್ತ ಒಂದು ಮಹಾಸಭೆಯು ನಿನ್ನೆಯ ದಿನ (ತಾ ೧೮) ಉಳ್ಳಾಲ ರಘುನಾಥಯ್ಯನವರ ಸ್ಮಾರಕ ಮಂದಿರದಲ್ಲಿ ನಡೆಯಿತು ಶ್ರೀ ರ ಗೋವಿಂದ ತಲಚೇರಿಕರರು ಅಧ್ಯಕ್ಷರಾಗಿದ್ದರು ಕೇರಳದಿಂದ ಬಂದಿದ್ದ ಶ್ರೀ| ಕೃಷ್ಣಪಿಳ್ಳೆಯವರೂ ಶ್ರೀ ಎಸ್ ಎಸ್ ಕಿಲ್ಲೆಯವರೂ ಕೆಲಸಗಾರರ ಸಂಘಗಳ ಆಗತ್ಯ ಸಂಘಟನೆ ರಾಷ್ಟ್ರಸಭೆಗೆ ಸೇರುವ ಆವಶ್ಯಕತೆ ಈ ವಿಷಯಗಳನ್ನು ಕುರಿತು ಕ್ರಮವಾಗಿ ಮಲಯಾಳ,ತುಳು ಭಾಷೆಗಳಲ್ಲಿ ಹೇಳಿದರು ಪ್ರತಿಮೂರುತಿಂಗಳಿಗೊಂದು ಸಾರಿ ಜನರಲ್ ಮೀಟಿಂಗ್ ಕರೆಯಬೇಕೆಂಬ ನಿರ್ಧಾರವು ಆಯಿತು ಅಧ್ಯಕ್ಷರ ಸಮಯೋಚಿತ ಭಾಷಣವಾದ ಮೇಲೆ ಸಭೆ ಮುಕ್ತಾಯವಾಯಿತು

ಇಲ್ಲಿಯ ಮಹಿಳಾ ಸಭೆಯಲ್ಲಿ ಕಲಾಪ್ರೇಮಿ ಮಹಿಳೆಯರ ಉನ್ನತಿಗಾಗಿ, ಮುಂಬಾಯಿಯಲ್ಲಿ ಹಲವು ವರ್ಷಗಳಿಂದಿದ್ದು,ಪ್ರಸಿದ್ಧಿಯನ್ನು ಹೊಂದಿದ ಆರ್ಟ್ ಮಾಸ್ಟರ್ ಶ್ರೀ ಸಜೀಪ್ ಶಿವರಾಯರಿಂದ ಪೈಂಟಿಂಗ್ ಕ್ಲಾಸುಗಳೂ, ಎಂಬ್ರಾಯ್ಡರಿಯಲ್ಲಿ ಅತ್ಯುತ್ತಮ ಶಿಕ್ಷಕಿಯಾದ ಶ್ರೀಮತಿ ಶಾರದಾ ಸೆಟ್ಟಿಯವರಿಂದ ಎಂಬ್ರಾಯ್ಡರಿ ಕ್ಲಾಸುಗಳೂ ನಡೆಸಲ್ಪಡುತ್ತವೆ ಕ್ಲಾಸುಗಳ ವಿವರ —ಪೈಂಟಿಂಗ್ —ಗುರುವಾರ, ಆದಿತ್ಯವಾರ ಸಾಯಂ ೪ರಿಂದ ೬ ಎಂಬ್ರಾಯ್ಡರಿ — ಬುಧವಾರ, ಶನಿವಾರ, ಸಂಜೆ ೪ರಿಂದ ೬ ಎಲ್ಲಾ ಕಲಾಪ್ರೇಮಿ ಮಹಿಳೆಯರಿಗೂ ಶಿಕ್ಷಣವು ಕೊಡಲ್ಪಡುವದು ಎಲ್ಲಾ ವರ್ಗದ ಹಿಂದೀ ಕ್ಲಾಸುಗಳೂ ನಡೆಸಲ್ಪಡುತ್ತವೆ ಎಂದು ಆ ಸಭೆಯ ಅಧಿಕಾರಿಗಳು ತಿಳಿಸುತ್ತಾರೆ

ನಗರ ಸಭೆ

ಮಂಗಳೂರು ನಗರ ಸಭೆಯು ನಿನ್ನೆ ಸಾಯಂಕಾಲ ಪುರಭವನದಲ್ಲಿ ಸೇರಿತು, ಡಾ| ಕೆ ವಿಟ್ಠಲ ಶೆಟ್ಟಿಯವರು ಅಧ್ಯಕ್ಷರಾಗಿದ್ದರು ಶ್ರೀ| ಕಾರಂತರು ತಮ್ಮ ಸದಸ್ಯತನಕ್ಕೆ ರಾಜಿಕೊಟ್ಟ ಪತ್ರವು ಸಭೆಯ ಮುಂದೆ ಓದಲಾಯಿತು ಶ್ರೀ| ಕಾರಂತರು ನಗರ ಸಭೆಯಲ್ಲಿ ಮಾಡಿದ ಕೆಲಸವು ಶ್ಲಾಘನೀಯವೆಂದು ತಿಳಿಸಿ ಅವರ ಕೆಲಸವನ್ನು ಪ್ರಶಂಸಿಸಿ ಒಂದು ಠರಾವನ್ನು ಶ್ರೀ| ಮಾಧವರಾಯರು ತಂದರು ಅದನ್ನು ಶ್ರೀ| ಶ್ರೇಷ್ಠರು ಅನುಮೋದಿಸಿದರು, ಸರ್ವಾನುಮತಿಯಿಂದ ಮಂಜೂರಾಯಿತು

ಹಿಂದಿನ ಮೀಟಿಂಗಿನಲ್ಲಿ ಅಧ್ಯಕ್ಷರು ಕೊಡಬೇಕಾಗಿದ್ದ ನಿರ್ಧಾರವು ನಿನ್ನೆ ಕೊಡಲ್ಪಟ್ಟಿತು ಎರಡನೆಯ ಸಲ ಮತ ತೆಗೆದುಕೊಂಡುದು ನ್ಯಾಯವಿರುದ್ಧವಲ್ಲವೆಂದೂ ಮತವು ಪರವಾಗಿ ೧೨ ವಿರೋಧವಾಗಿ ೧೧ ಎಂದೂ ಅದ್ದರಿಂದ ಠರಾವು ಬಹುಮತದಿಂದ ಅಂಗೀಕೃತವಾಯಿತೆಂದೂ ಹೇಳಿದರು ಶ್ರೀ| ಕೆ ರಾಮುಲು ನಾಯುಡು (ಮೇಯರ್, ಮದರಾಸು) ಇವರ ಅಭಿಪ್ರಾಯವನ್ನು ಸಹ ಅಧ್ಯಕ್ಷರು ಸಭಿಕರ ಮುಂದಿಟ್ಟು ತಮ್ಮ ನಿರ್ಧಾರವು ಸರಿಯೆಂದರು

ರೋಲ್ಡ್‌ಗೋಲ್ಡ್, ನಿಕ್ಕಲ್ ಬೆಳ್ಳಿಯ, 9 ಕ್ಯಾರಟಿನ ಗಟ್ಟಿ ಚಿನ್ನದ ರಿಸ್ಟ್‌ವಾಚುಗಳು, ರೈಲ್ವೆ ಟಾಯಿಂ ಪಾಕೆಟ್ ವಾಚು ಮತ್ತು ಟಾಯಿಂಪೀಸು ಗ್ಯಾರಂಟಿ ಇದೆ. ನಮ್ಮ ಕ್ಯಾಟಲಾಗ್ ಉಚಿತ ಬರೆಯಿರಿ

The Manager
The Silver Jubilee Watch Co
Post Box No 71 BOMBAY

THE BOMBAY LIFE ASSURANCE Co., LTD.
ESTD 1908
Church Gate Street, Fort - - BOMBAY
SPECIAL FEATURES.
1 Rebate on yearly payment of policies
2 Rebate for larger assurances
3. Accident Risk covered on small extra premiums
4. Attractive Bonuses
It pays you to represent this Company
Wanted Agents in unrepresented parts.
Apply to —
KOCHIKAR BROTHERS,
Madras Branch Secretaries

BRANCHES AT

P B 337 Mount Road, Madras	Visweswarapuram Circle Bangalore City	Soumyalayam Puthiyara Calicut
Car Street, Mangalore	Udipi S India	Charni Road Bombay No 4

INSPECTORATE OFFICE AT
1 Ottapalam Malabar District 2 Central Station Road Trivandrum

EVIDENCE OF SECURITY & STABILITY
FIGURES THAT SPEAK FOR THEMSELVES
TOTAL ASSETS Rs. 80,66,600

Summary of 1935 Accounts

Total Assets Over	Rs 80,00,000
Life Funds Over	Rs 68,00,000
Premium Income Over	Rs 22,54,000
Interest Income	Rs 3,16,000
Claims Paid	Rs 5,75,000

Total Claims paid Over Rs 38,50,000
Total Business in Force Over Rs 4,4251,200,
TOTAL BUSINESS IN FORCE Rs. 4,42,51,200

The Canara Banking Corporation Udipi Ltd.

(Incorporated in British India)

Estd. 1906

Member:- RESERVE BANK OF INDIA.

Subscribed Capital	Rs. 3,50,000 0 0
Paid up Capital	Rs. 2,88,950 0 0
Reserves	Rs. 37,22,794 9 5
Deposits	Rs. 3,63,673 5 5

Total Resources exceed Rs. 52,00,000/-

ANNOUNCEMENT.

Branches of the Corporation will be shortly opened at METTUPALAYAM and ERODE

V. R. Kamath, B. A., LL.B.
Ag. Manager.

ಉಡುಪಿ, ಗುರುವಾರ, ತಾ. ೨೨–೭–'೩೭

ಹೊಸ ಮನ್ವಂತರ

ನಾವು ಇನ್ನೊಂದೆಡೆ ಪ್ರಕಟಿಸಿರುವ ಗಾಂಧಿಜಿಯವರ ಲೇಖನವು, ಒಮ್ಮೆ ಕೌನ್ಸಿಲು ಪ್ರವೇಶಕ್ಕೆನೇ ಬದ್ಧ ವಿರೋಧಿಯಿದ್ದವರು ಈಗ ಕಾಂಗ್ರೆಸು ಮಂತ್ರಿಪದವಿ ಕೂಡಾ ಸ್ವೀಕರಿಸಬೇಕೆಂಬ ಮನೋವೃತ್ತಿಯುಳ್ಳವರಾಗಲು ಕಾರಣವೇನೆಂಬುದನ್ನು ವ್ಯಕ್ತಗೊಳಿಸುವುದು. ಕಾಂಗ್ರೆಸಿನ ಏಕಮಾತ್ರ ಗುರಿಯೆಂದರೆ ಸಂಪೂರ್ಣ ಸ್ವಾತಂತ್ರ್ಯಸಾಧನೆ. ಕಾಲಪರಿಸ್ಥಿತಿಗನುಗುಣವಾದ ಧೋರಣೆಯನ್ನು ವಹಿಸಿ ಅದನ್ನು ಆದಷ್ಟು ಶೀಘ್ರವಾಗಿ ಮತ್ತು ಅತ್ಯಂತ ಕಡಿಮೆಯ ಕಷ್ಟನಷ್ಟದಿಂದ ಆ ಗುರಿ ಮುಟ್ಟುವಂತೆ ನೋಡುವುದೇ ಪ್ರತಿಯೊಬ್ಬ ಕಾಂಗ್ರೆಸ್ ಮುಂದಾಳುವಿನ ಕರ್ತವ್ಯ. ಈ ದೃಷ್ಟಿಯಿಂದ ಗಾಂಧಿಜಿಯವರ ಪ್ರೇರಣೆಯಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ವಹಿಸಿರುವ ಧೋರಣೆಯು ಅತ್ಯಂತ ವಿವೇಕಪರವಾಗಿರುವುದಲ್ಲದೆ ಸ್ವಾತಂತ್ರ್ಯ ಸಮರದಲ್ಲಿ ಹೊಸ ಮನ್ವಂತರವೊಂದನ್ನು ಆರಂಭಿಸುವದಿದೆ. ಇಷ್ಟರವರೆಗೆ ಕಾಂಗ್ರೆಸಿನ ಮುಂದಿದ್ದ ಮಾರ್ಗವೆಂದರೆ ರಕ್ತಪಾತದ ಕ್ರಾಂತಿ, ಅಥವಾ ಸಾಮುದಾಯಿಕ ಕಾಯಿದೆ ಭಂಗ. ಇವೆರಡೂ ಅನಿವಾರ್ಯ ಸಂದರ್ಭದ ಶಸ್ತ್ರ. ಅವೆರಡನ್ನೂ ಕೈಕೊಳ್ಳದೆ ಅಂತಹ ಘೋರ ವಿಪ್ಲವಕ್ಕೆ ದೇಶವನ್ನು ಗುರಿಮಾಡದೆ ಬೇರೆಯಾವುದಾದರೂ ಉಪಾಯದಿಂದ ಸ್ವಾತಂತ್ರ್ಯದ ಗುರಿಯನ್ನು ಸೇರುವುದು ಸಾಧ್ಯವೆಂದಾದರೆ ಅದನ್ನು ಒಂದಿಷ್ಟು ಪ್ರತಿಷ್ಠೆಯಿಲ್ಲದೆ ಕಾಂಗ್ರೆಸಿನವರು ಸಂತೋಷದಿಂದ ಸ್ವೀಕರಿಸದಿರಲಾರರು. ಆದುದರಿಂದಲೇ ಗಾಂಧಿಜಿಯವರು ಈ ಅಧಿಕಾರ ಸ್ವೀಕಾರವು ಹೇಗಾದರೂ ಇಂಡಿಯಾ ಆಕ್ಟನ್ನು ಕಾರ್ಯಕ್ಕೆ ಹಚ್ಚಲು ಕೈಕೊಳ್ಳಲ್ಪಟ್ಟಲ್ಲಿ ತನ್ನ ಪೂರ್ಣ ಸ್ವಾತಂತ್ರ್ಯದ ಗುರಿಯನ್ನು ಸಾಧಿಸುವ ಕಾಂಗ್ರೆಸಿನ ಮಾರ್ಗದಲ್ಲಿ ಒಂದೆಡೆ ರಕ್ತಪಾತದ ಕ್ರಾಂತಿ. ಮತ್ತು ಇನ್ನೊಂದೆಡೆ ಸಾಮುದಾಯಿಕ ಕಾಯಿದೆ ಭಂಗವನ್ನು ನಿವಾರಿಸುವ ಯಥಾರ್ಥ ಪ್ರಯತ್ನವದು. ಇಷ್ಟರವರೆಗೆ ಈ ರೀತಿಯ ಪ್ರಯತ್ನವನ್ನು ಕಾಂಗ್ರೆಸ್ ನಡಿಸಿಲ್ಲ ಎಂದು ಗಾಂಧಿಜಿಯವರು ಕಾಂಗ್ರೆಸಿನ ಈ ಹೊಸಯತ್ನಕ್ಕೆ ಜಯವುಂಟಾಗಲೆಂದು ಹರಸಿರುವರು. ಅಂದರೆ ಕಾಂಗ್ರೆಸು ಕೌನ್ಸಿಲುಪ್ರವೇಶ ಮತ್ತು ಅಧಿಕಾರ ಸ್ವೀಕಾರದ ಹೊಸ ಕಾರ್ಯಕ್ರಮದಿಂದ ಸ್ವಾತಂತ್ರ್ಯಸಾಧಿಸಲಾಗುವುದೋ ಎಂದು ನೋಡುವ ಹೊಸ ಪ್ರಯೋಗವನ್ನು ಕೈಕೊಂಡಿರುವುದು. ಹಳೆಯ ಹೋರಾಟವನ್ನು ಹೊಸ ಕ್ಷೇತ್ರದಲ್ಲಿ ಹೊಸರೀತಿಯಲ್ಲಿ ನಡೆಸುವ ನಿರ್ಧಾರಮಾಡಿರುವುದು. ಇವನ್ನು ಆಂಗ್ಲೇಯರೂ ಮನಗಂಡಿರುವರೆಂಬುದು ಇಂಗ್ಲೆಂಡಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ಅಭಿಪ್ರಾಯದಿಂದ ವಿದಿತವಾಗುವುದು. ಹಿಂದೂದೇಶವೇನೇನೂ ತೃಪ್ತಿಗೊಂಡಿರುವುದಿಲ್ಲ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಧಾರದಿಂದ ಹಿಂದೂದೇಶದ ಸಮಸ್ಯೆ ಬಿಡಿಸಲ್ಪಟ್ಟಿತೆಂದು ಯಾರೂ ಭಾವಿಸಕೂಡದು. ಬ್ರಿಟಿಷ್ ಸಾಮ್ರಾಜ್ಯದೊಳಗೆ ಅಥವಾ ಹೊರಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಹಿಂದೂದೇಶವು ಪಡೆಯುವ ವರೆಗೆ ಹಳೆಯ ಹೋರಾಟವು ಹೊಸ ಶಸ್ತ್ರಗಳಿಂದ ನಡೆಸಲ್ಪಡುವುದು. ಕಾಂಗ್ರೆಸು ಮಂತ್ರಿಪದವಿ ವಹಿಸಿ ವಿಧಾಯಕ ಮತ್ತು ಜನಹಿತಸಾಧಕ ಕಾರ್ಯಕ್ರಮವನ್ನು ನಡಿಸುತ್ತಿರುವಾಗಲೇ ಸ್ವಾತಂತ್ರ್ಯಸಾಧನೆಯ ಪ್ರಯತ್ನವನ್ನೂ ನಡಿಸದಿರಲಾರದು. ಅಂದ ಮೇಲೆ ಹಿಂದಿನ ಸಮಸ್ಯೆಯು ಅಂತೆಯೇ ಉಳಿದಿರುವುದು. ಈಗ ಹಿಂದೂದೇಶದ ರಾಜ್ಯಭಾರವು ವಿದೇಶೀಯ ಅಧೀನತೆಯ ಮೇಲೆ ಆಧರಿಸಿದೆ ಆದುದರಿಂದ ಅದು ರಾಷ್ಟ್ರಾಭಿಮಾನಿ ಹಿಂದೀಯರಿಗೆಂದಿಗೂ ಸಹನೀಯವಾಗದು, ವಿದೇಶೀಯ ಅಧೀನತೆಯು ಸಂಪೂರ್ಣವಾಗಿ ನಿರ್ಮೂಲವಾಗುವನಕ ರಾಷ್ಟ್ರಾಭಿಮಾನಿ ಹಿಂದೀಯನು ಹಿಂದುಸ್ಥಾನದ ರಾಜ್ಯಭಾರ ಪದ್ಧತಿಯನ್ನು ತೀವ್ರವಾಗಿ ದ್ವೇಷಿಸಿ ನಿರಂತರವೂ ಅತೃಪ್ತಿಯುಳ್ಳವನಾಗಿಯೇ ಇರುವನು" ಎಂದು ಗಾರ್ಡಿಯನ್ ಪತ್ರಿಕೆಯು ಸ್ಪಷ್ಟಪಡಿಸಿರುವುದು. ಬ್ರಿಟಿಷ್ ಸರಕಾರವಾದರೂ ಈ ಸಲ ಕಾಂಗ್ರೆಸನ್ನು ಕೆಲ ಮಟ್ಟಿಗೆ ಸಮಾಧಾನಪಡಿಸುವ ಮನೋವೃತ್ತಿಯುಳ್ಳದಾಗಿರುವುದು. ಕಾಂಗ್ರೆಸಿನ ಈ ಹೊಸ ಧೋರಣೆಯಿಂದಾಗಿ ಕಾಂಗ್ರೆಸಿನವರೂ ಆಳರಸರೂ ಒಟ್ಟು ಸೇರಿ ಒಂದಾಗಿ ಕೆಲಸಮಾಡಿ ಪರಸ್ಪರ ದೃಷ್ಟಿಭೇದವನ್ನರಿತುಕೊಂಡು, ಕಾಂಗ್ರೆಸಿನ ದೃಷ್ಟಿಕೋನದೊಡನೆ ಸಹಾನುಭೂತಿಯುಂಟಾಗುವಂತಾದರೆ ಕಾಂಗ್ರೆಸಿಗೆ ವಿಜಯದೊರೆತಂತಾಯಿತು. ಆಗ ಒಂದೇ ಒಂದು ಬಿಂದು ರಕ್ತವನ್ನಾದರೂ ಸುರಿಸದೆ ಹಿಂದೀಯರಿಗೆ ಸಂಪೂರ್ಣ ಸ್ವಾತಂತ್ರ್ಯ ದೊರೆಯುವುದೆಂದೇ ಗಾಂಧಿಜಿಯವರ ವಿಶ್ವಾಸ. ಆಳರಸರೂ ಈ ಸುಸಂದರ್ಭದ ಸದುಪಯೋಗ ಪಡೆದು ದೇಶಕ್ಕೆ ಬೇಗನೆ ಪೂರ್ಣ ಆಡಳಿತ ಸ್ವಾತಂತ್ರ್ಯವಿತ್ತರಾದರೆ ಅದೊಂದು ಹೊಸ ಮನ್ವಂತರವೇ ಉದಯವಾಗಿ ಹಿಂದೀಯರ ಮತ್ತು ಬ್ರಿಟಿಷರ ಸಂಬಂಧವು ಕಡಿದು ಹೋಗದೆ, ಹಿಂದೂದೇಶವು ಸ್ವತಂತ್ರ ರಾಷ್ಟ್ರವಾಗಿ ಪರಸ್ಪರ ಹಿತಕ್ಕಾಗಿ ಸಾಮ್ರಾಜ್ಯದೊಳಗೆ ಸರಿಸಮಾನ ಸ್ಥಾನ ಮಾನ ಪಡೆದು ಮೆರೆಯುವಂತಾಗಬಹುದು.

ಕಾಂಗ್ರೆಸ್ ಮತ್ತು ಸರಕಾರಿ ನೌಕರರು.

ಇಷ್ಟರವರೆಗೆ ನಡೆಯುತ್ತಿದ್ದುದು ಬಹುತೇಕ ನೌಕರ ಶಾಹಿಯ ರಾಜ್ಯಭಾರ. ಸರಕಾರದ ಅಧಿಕಾರಿಗಳು ಜನತೆಯ ಮೇಲೆ ತಮ್ಮಿಚ್ಛಾನುಸಾರ ಅಧಿಕಾರ ನಡಿಸುತ್ತಿದ್ದರು. ಜನರದನ್ನು ತಾಳ್ಮೆಯಿಂದ ಸಹಿಸಿಕೊಳ್ಳುತ್ತಿದ್ದರು. ತಾವು ಜನತೆಯ ಮೇಲೆ ಸವಾರಿ ಮಾಡಿ ಅಧಿಕಾರ ಚಾಲುಮಾಡುವವರೆಂಬ ಮನೋವೃತ್ತಿಯು ಸರಕಾರಿ ನೌಕರರಲ್ಲಿಯೂ, ಸರಕಾರಿ ನೌಕರರು ಮಾಡಿದುದನ್ನೆಲ್ಲಾ ತುಟಿಯೆತ್ತದೆ ತಾಳಿಕೊಂಡು ಅಂತೆಯೇ ನಡೆಯದೆ ನಿರ್ವಾಹವಿಲ್ಲೆಂಬ ಮನೋವೃತ್ತಿಯು ಜನ ಸಾಮಾನ್ಯರಲ್ಲಿಯೂ ಇಷ್ಟರ ವರೆಗೆ ನೆಲೆಗೊಂಡಿತ್ತು. ಸಂಯುಕ್ತ ಪ್ರಾಂತದ ಪ್ರಧಾನ ಮಂತ್ರಿಗಳಾದ ಪಂಡಿತ ವಲ್ಲಭ ಪಂತರು ಸರಕಾರಿ ನೌಕರರನ್ನುದ್ದೇಶಿಸಿ ಮಾತಾಡುವಾಗ ಹೇಳಿದಂತೆ ಇನ್ನು ಮುಂದೆ ಈ ಮನೋವೃತ್ತಿಯು ಸಂಪೂರ್ಣ ಮಾರ್ಪಡಬೇಕು. ಈಗಣ ಪ್ರಜಾ ಸತ್ತಾತ್ಮಕ ರಾಜ್ಯಭಾರದಲ್ಲಿ ಜನರು ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಯಜಮಾನರು. ಈ ಪ್ರತಿನಿಧಿಗಳ ಆಡಳಿತಕ್ಕೊಳಗಾಗಿರುವವರು ನೌಕರರು. ಅಂದ ಮೇಲೆ ಜನತೆಯ ಯಾಜಮಾನ್ಯವು ನೌಕರರ ಮೇಲೆಯೂ ಸ್ಥಾಪಿತವಾದಂತಾಯಿತು. ಸರಕಾರಿ ನೌಕರರೂ ಜನತೆಯ ಸೇವಕರಾದರು. ಎಲ್ಲಾ ರೀತಿಯಿಂದಲೂ ಜನತೆಯ ಹಿತಸಾಧನೆ ಮಾಡುವಂತೆ, ಅವರ ಸಂಕಷ್ಟಗಳನ್ನು ನಿವಾರಿಸುವಂತೆ ನೋಡುವುದುಸರಕಾರಿ ನೌಕರರ ಕರ್ತವ್ಯ. ಇನ್ನು ಮುಂದೆ ಪ್ರಜಾಧಿಕಾರದ ಹೊರತು ಬೇರೊಂದು ಸರಕಾರವೆಂಬುದಿರಲಾರದೆಂಬುದನ್ನು ಸರಕಾರಿ ನೌಕರರೂ ಜನ ಸಾಮಾನ್ಯರೂ ಚೆನ್ನಾಗಿ ಮನಗಂಡುಕೊಳ್ಳಬೇಕು. ಸರಕಾರವು ಜನತೆಯದು. ಜನಹಿತವೇ ಅದರ ಜೀವಾಳ, ಆದುದರಿಂದ ಸರಕಾರದ ಅಂಗವಾಗಿರುವ ನೌಕರರು ಜನತೆಯ ಸೇವಕರಾಗಿ ಕೇವಲ ಅವರ ಹಿತಸಾಧನೆಯ ಉಪಕರಣವಾಗಿ ತಮ್ಮ ಕೆಲಸ ಮಾಡಬೇಕು. ಈ ಮನೋವೃತ್ತಿಯ ಮಾರ್ಪಾಟವೇ ಕಾಂಗ್ರೆಸು ಅಧಿಕಾರ ಸ್ವೀಕರಿಸಿರುವುದರಿಂದ ದೇಶಕ್ಕುಂಟಾಗಿರುವ ಮಹತ್ತಾದ ಲಾಭ. ಪಂಡಿತ ಪಂತರು ಸ್ಪಷ್ಟವಾಗಿ ತಿಳಿಸಿದಂತೆ, ಇಷ್ಟರ ವರೆಗೆ ಸರಕಾರಿ ನೌಕರರು ರಾಷ್ಟ್ರೀಯ ಧ್ವಜದ ಮೇಲೆ ವಕ್ರದೃಷ್ಟಿ ಬೀರಿರಬಹುದು. ಕಾಂಗ್ರೆಸ್ ಮುಖಂಡರ ಮೇಲೆ ಪೋಲೀಸರು ಸದಾ ಕಣ್ಣಿಟ್ಟುಕೊಂಡಿರಬೇಕಾಗಿದ್ದಿರಬಹುದು. ಆದರೆ ಇನ್ನು ಮುಂದೆ, ರಾಷ್ಟ್ರದ ಗೌರವ ಸಂಕೇತವಾದ ರಾಷ್ಟ್ರೀಯ ಧ್ವಜವನ್ನವರು ಮಾನಿಸಬೇಕು. ಪೋಲೀಸರು ರಾಜಕೀಯ ಮುಖಂಡರನ್ನು ಕಾಡುವುದನ್ನು ಬಿಟ್ಟು ಜನತೆಗೆ ಸಹಾಯಕರಾಗಬೇಕು. ಶ್ರೀ. ರಾಜಗೋಪಾಲಾಚಾರ್ಯರ ಹೇಳಿಕೆಯಂತೆ, ಕಾಂಗ್ರೆಸ್ ಮಂತ್ರಿಗಳ ಆಡಳಿತದ ಜಯಾಪಜಯವು ನೌಕರರ ಮೇಲೆ ಹೊಂದಿರುತ್ತದೆ. ಅವರು ಸೌಹಾರ್ದದಿಂದ ಸಹಕರಿಸಿದರೆ ಮಾತ್ರ ಆಡಳಿತವನ್ನು ಸಸೂತ್ರವಾಗಿ ನಡೆಸಲು ಸಾಧ್ಯವಿದೆ.

ಸರಕಾರಿ ನೌಕರರು ಹಿಂದೆ ಕಾಂಗ್ರೆಸಿಗೆ ವಿರೋಧವಾಗಿ ಎಂತಹ ಕೆಲಸ ಮಾಡಿದ್ದರೂ ಕಾಂಗ್ರೆಸ್ ಮಂತ್ರಿಗಳದನ್ನು ಗಮನಿಸದೆ, ಅವರನ್ನು ಸಹೋದರರಂತೆಯೇ ಕಾಣುವರೆಂಬುದರಲ್ಲಿ ಸಂದೇಹವೇ ಇರಲಾರದು. ಶ್ರೀ ರಾಜಾಜಿಯವರು ಆ ಕುರಿತಾದ ಭೀತಿಯನ್ನೆಲ್ಲಾ ನಿವಾರಿಸಿರುವರು. ಆದುದರಿಂದ ನೌಕರರು ಕಾಂಗ್ರೆಸ್ ಮಂತ್ರಿಮಂಡಲದೊಡನೆ ಸಂಪೂರ್ಣ ಮನಸ್ಸಿನಿಂದ ಮತ್ತು ನವ ಉತ್ಸಾಹದಿಂದ ಸಹಕರಿಸಿ ಅವರ ಜನಸೇವೆಯು ಸತ್ಫಲದಾಯಕವಾಗುವಂತೆ, ಅವರ ಆಡಳಿತವು ಜಯಶೀಲವಾಗುವಂತೆ ನೆರವಾಗುವರೆಂದು ನಿರೀಕ್ಷಿಸಲಾಗಿದೆ.

ಹಳ್ಳಿಗರ ಭಾಗ್ಯೋದಯ

ಈ ವರೆಗಣ ರಾಜ್ಯಭಾರವು ಬಹುತೇಕ ಪಟ್ಟಣಿಗರ, ಧನಿಕರ ಹಿತಕ್ಕಾಗಿಯೇ ನಡಿಸಲ್ಪಡುತ್ತಿದ್ದಿತೆಂದರೆ ಅತಿಶಯೋಕ್ತಿಯಾಗದು, ಹಳ್ಳಿಗರ ಬಾಳು ದಿನೇದಿನೇ ಕೆಟ್ಟುಹೋಗಿ ಈಗ ಅವರು ತಲೆಯೆತ್ತದಂತಾಗಿದೆ. ಇವನ್ನು ಕಾಂಗ್ರೆಸ್ ಪಕ್ಷೀಯರು ಚೆನ್ನಾಗಿ ಮನಗಂಡಿರುವರು. ಗಾಂಧಿಜಿಯವರು ಹಳ್ಳಿಗರ ಹಿತಸಾಧಕ ಪ್ರವಾದಿಯೇ ಆಗಿರುವರು. ಕಾಂಗ್ರೆಸ್ ಮಂತ್ರಿಗಳು ಹಳ್ಳಿಗರ ಹಿತದ ಕಡೆಗೆ ವಿಶೇಷ ಲಕ್ಷ್ಯಕೊಡಬೇಕೆಂದು ಕೇಳಿಕೊಂಡಿರುವರು. ಮದ್ರಾಸಿನ ಪ್ರಧಾನ ಮಂತ್ರಿಗಳಾದ ಶ್ರೀ. ರಾಜಾಜಿಯವರು ಹಳ್ಳಿಗರ ದೀನಾವಸ್ಥೆಯು ಹೃದ್ರಾವಕವಿರುವುದೆಂದು ವಿವರಿಸಿ, ಅವರಲ್ಲಿ ಒಂದಿಷ್ಟು ನಗುವನ್ನುಂಟು ಮಾಡಲು ಸರಕಾರಿ ನೌಕರರೆಲ್ಲಾ ತನಗೆ ಸಹಾಯಮಾಡಬೇಕೆಂದು ಕೇಳಿಕೊಂಡಿರುವರು. ಸಂಯುಕ್ತ ಪ್ರಾಂತದ ಪ್ರಧಾನ ಮಂತ್ರಿ ಪಂಡಿತ ಪಂತರು, ಹಳ್ಳಿಗಳ ದಾರಿದ್ರ್ಯ ಮತ್ತು ನಿರುದ್ಯೋಗ ನಿವಾರಣೆಯೇ ಕಾಂಗ್ರೆಸಿನ ಪ್ರಥಮ ಪ್ರಯತ್ನವಿರುವುದೆಂದಿರುವರು. ಆದುದರಿಂದ ಕಾಂಗ್ರೆಸು ಈಗ ತಾನೆ ಅಧಿಕಾರ ಸ್ವೀಕರಿಸಿರುವ ಆರು ಪ್ರಾಂತಗಳಲ್ಲಿ ಹಳ್ಳಿಗರ ಹಿತಸಾಧನೆಗೆ ಮಂತ್ರಿಗಳು ಮುಖ್ಯವಾಗಿ ಗಮನ ಕೊಡದಿರಲಾರರು. ಇನ್ನು ಮುಂದಾದರೂ ನಮ್ಮ ಹಳ್ಳಿಗರ ಭಾಗ್ಯೋದಯವಾಗುವುದೆಂದು ಆಶಿಸಬಹುದು.

ಅಭಿನಂದನೆ.

ಈ ಸಲ ದಕ್ಷಿಣಕನ್ನಡಕ್ಕೊಂದು ಮಂತ್ರಿಪದವಿ ದೊರೆಯಬಹುದೆಂದು ಹಲವರ

ಸೇರಿದೆ. ಇವರು ತಿರುಚಿನಾಪಳ್ಳಿಯ ದೊಡ್ಡ ಡಾಕ್ಟರರು. ಸಹಸ್ರಗಟ್ಟಲೆಯಲ್ಲಿ ಸಂಪಾದನೆಮಾಡುವವರು. ಇಂಗ್ಲೆಂಡಿನಲ್ಲಿದ್ದಾಗ ಸುಪ್ರಸಿದ್ಧ ದೇಶಭಕ್ತರಾದ ಶ್ರೀ. ಸಾವರ್ಕರರ ಸಹಪಾಠಿಗಳು. ಒಮ್ಮೆ ಸೆರೆಮನೆಗೆ ಹೋದವರು. ಸನಾತನಿಗಳ ತೀವ್ರ ವಿರೋಧಿಗಳು. ತಮಿಳುನಾಡಿನ ಹರಿಜನ ಸೇವಾಸಂಘದ ಕಾರ್ಯದರ್ಶಿಗಳಾಗಿ ಪ್ರಶಂಸನೀಯ ಕೆಲಸಮಾಡಿದವರು. ಡಿಲ್ಲಿಯ ಎಸೆಂಬ್ಲಿಯ ಮೆಂಬರರಾಗಿ ಆರಿಸಲ್ಪಟ್ಟವರು. ಆ ಮೇಲೆ ತಿರುಚಿನಾಪಳ್ಳಿಯ ಮುನಿಸಿಪಲ್ ಚೆಯರ್ ಮೇನರ ಚುನಾವಣೆಯ ಸಂಬಂಧವಾಗಿ ಉಂಟಾದ ವೈಷಮ್ಯದಲ್ಲಿ ಕಾಂಗ್ರೆಸಿಗೆ ವಿರೋಧವಾಗಿ ನಡೆದು ಎಸೆಂಬ್ಲಿ ಮೆಂಬರಿಕೆ ಮೊದಲಾದುವುಗಳಿಗೆ ರಾಜಿನಾಮೆ ಕೊಟ್ಟರು. ಈ ಸಂಬಂಧವಾಗಿ ಶ್ರೀ. ರಾಜಗೋಪಾಲಾಚಾರ್ಯರಿಗೂ ಇವರಿಗೂ ತೀವ್ರ ಮತಭೇಧವುಂಟಾಗಿದ್ದಿತು. ತಿರುಚಿನಾಪಳ್ಳಿಯ ಮುನಿಸಿಪಲ್ ಚುನಾವಣೆಯು ಶ್ರೀ. ರಾಜಾಜಿಯವರನ್ನೇ ರಾಜಕೀಯದಿಂದ ನಿವೃತ್ತಿಗೊಳಿಸುವಷ್ಟು ಸಂತಾಪವನ್ನುಂಟುಮಾಡಿತ್ತು. ಆ ಮೇಲೆ ರಾಜಾಜಿಯವರು ಪುನಃ ರಾಜಕೀಯ ರಂಗಕ್ಕಿಳಿದು ಜಸ್ಟಿಸ್ ಪಕ್ಷವನ್ನು ಸದೆ ಬಡೆದು ಪ್ರಧಾನಮಂತ್ರಿಗಳಾದರು. ಒಡನೆಯೇ ತನ್ನ ಹಿಂದಿನ ಗೆಳೆಯ ಡಾಕ್ಟರ್ ರಾಜನರನ್ನು ಆರೋಗ್ಯ ಖಾತೆಯ ಮಂತ್ರಿಗಳಾಗಿ ನೇಮಿಸಿ ತಂತಿ ಮೂಲಕ ಅವರ ಒಪ್ಪಿಗೆಪಡೆದರು. ಎಷ್ಟೊಂದು ಭಿನ್ನಾಭಿಪ್ರಾಯವುಂಟಾದರೂ ಇವರ ಪರಸ್ಪರ ಗೌರವವು ಒಂದಿಷ್ಟು ಕಡಿಮೆಯಾಗಲಿಲ್ಲ. ಡಾಕ್ಟರ್ ರಾಜನರು ಎಸೆಂಬ್ಲಿ ಮೆಂಬರರು ಕೂಡಾ ಅಲ್ಲ. ಮದ್ರಾಸ್ ಕೌನ್ಸಿಲಿಗೆ ಗವರ್ನರರಿಂದ ನೇಮಿಸಲ್ಪಟ್ಟಿರುವರು. ಇದು ಅನುಚಿತವಾಯಿತೆಂದು ಕೆಲವರು ಟೀಕಿಸಿರುವರು. ಡಾಕ್ಟರ್ ರಾಜನರು ಕೌನ್ಸಿಲಿನ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆರಿಸಲ್ಪಟ್ಟಿರುವರು. ಇವರು 1875ರಲ್ಲಿ ನಾಗಪಟ್ಟಣದಲ್ಲಿ ಹುಟ್ಟಿದವರು.

ಮಿ. ಯಾಕೂಬ್ ಹಾಸನರು ಪಬ್ಲಿಕ್ ವರ್ಕ್ಸ್ ಖಾತೆಯ ಮಂತ್ರಿಗಳು. ವಿದ್ಯಾಭ್ಯಾಸದ ಮೇಲೆ ಕೆಲಸವಾಯ ಬೆಂಗಳೂರಲ್ಲಿ ವ್ಯಾಪಾರನಡಿಸಿ ಆ ಮೇಲೆ ಮದ್ರಾಸಿಗೆ ಹೋದರು. ಐಗುಪ್ತದ ಹೆಂಗಸೊಬ್ಬಳನ್ನು ಮದುವೆಯಾಗಿರುವರು. ವಯಸ್ಸು 62. ಮಂತ್ರಿಗಳಲ್ಲೆಲ್ಲಾ ಮುದುಕರು. 1921ರಲ್ಲಿ ಎರಡುಸಲ ಸೆರೆಮನೆಗೆ ಹೋದವರು. 1916ರಿಂದ 20ರ ವರೆಗೆ ಮತ್ತು ಆ ಮೇಲೆ 1931ರಿಂದ ಮದ್ರಾಸ್ ಕೌನ್ಸಿಲಿನ ಮೆಂಬರರಾಗಿದ್ದರು. ವಾಗ್ಮಿಗಳು ಮತ್ತು ಗಂಭೀರ ವೃತ್ತಿಯವರು. 1875ರಲ್ಲಿ ನಾಗಪುರದಲ್ಲಿ ಜನಿಸಿ ಆಲಿಘರಿನ ಮುಸಲ್ಮಾನ ಕೋಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದವರು.

ಡಾಕ್ಟರ್. ಪಿ. ಸುಬ್ಬರಾಯನರು ಶಿಕ್ಷಣ ಮತ್ತು ನ್ಯಾಯಖಾತೆಯ ಮಂತ್ರಿಗಳು. 1889ರಲ್ಲಿ ಸೇಲಮ್ ಜಿಲ್ಲೆಯ ಕುಮಾರಮಂಗಲಮಿನಲ್ಲಿ ಹುಟ್ಟಿದವರು ಕುಮಾರ ಮಂಗಲಮ್ ಎಂಬ ಚಿಕ್ಕ ಜಮೀನ್ದಾರಿಯೊಂದು ಇವರಿಗಿರುವುದು. ಮಂಗಳೂರಿನ ಪ್ರಸಿದ್ಧ ಹಂಚಿನ ಕೆಲಸಗಾರರಾಗಿದ್ದ ದಿವಂಗತ ಕೆ. ರಂಗರಾಯರ ಪುತ್ರಿ ಶ್ರೀಮತಿ ರಾಧಾಬಾಯಿಯವರನ್ನು ಮದುವೆಯಾಗಿರುವರು. ಇವರು ಬ್ಯಾರಿಸ್ಟರರು ಮತ್ತು ಎಲ್. ಎಲ್. ಡಿ. ಪದವಿ ಪಡೆದವರು. 1920ರಲ್ಲಿ ಜಸ್ಟಿಸ್ ಪಕ್ಷದ ಕಡೆಯಿಂದ ಮದ್ರಾಸ್ ಕೌನ್ಸಿಲಿಗೆ ಆರಿಸಿಬಂದಿದ್ದರು. 1929–30ರ ವರೆಗೆ ಇಂಡಿಪೆಂಡೆಂಟ್ ಪಕ್ಷ ಸ್ಥಾಪಿಸಿ ಮಂತ್ರಿಮಂಡಲವನ್ನೇರ್ಪಡಿಸಿದ್ದರು. ಆ ಮೇಲೆ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು.

ಶ್ರೀ. ವಿ. ಐ. ಮುನಿಸ್ವಾಮಿ ಪಿಳ್ಳೆ, ಇವರು ವ್ಯವಸಾಯಖಾತೆ ಮತ್ತು ಗ್ರಾಮಾಭಿವೃದ್ಧಿಯ ಮಂತ್ರಿಗಳು. 1889ರಲ್ಲಿ ಹುಟ್ಟಿ ಕೊಯಂಮುತ್ತೂರಲ್ಲಿ ಮೆಟ್ರಿಕ್ಯುಲೇಶನ್ ವರೆಗೆ ಕಲಿತವರು. ಅದೊಂದು ಕಂಪೆನಿಯ ಹೆಡ್‌ಕ್ಲಾರ್ಕ್ ಮತ್ತು ಆ ಮೇಲೆ ಕಂಟ್ರಾಕ್ಟರ್ ಆಗಿದ್ದವರು. 1926ರಲ್ಲಿ ಹರಿಜನರ ಪರವಾಗಿಮದ್ರಾಸ್ ಕೌನ್ಸಿಲಿನ ನೇಮಕಹೊಂದಿದ ಮೆಂಬರರಾಗಿದ್ದರು. ಕೆಲವು ಆದಿದ್ರಾವಿಡ ಮತ್ತು ಹರಿಜನ ಸಂಘಗಳ ಅಧ್ಯಕ್ಷರಾಗಿರುವರು. ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಸೆನೆಟ್ ಮೆಂಬರರಾಗಿರುವರು. ಇತ್ತೀಚಿಗೆ ಕಾಂಗ್ರೆಸ್ ಪಕ್ಷಕ್ಕೆ ಸೇರಿ ತನ್ನ ರಾವ್ ಸಾಹೇಬ್ ಬಿರುದು ಬಿಟ್ಟುಬಿಟ್ಟಿರುವರು.

ಶ್ರೀ. ವಿ. ವಿ. ಗಿರಿಯವರು ಕೈಗಾರಿಕೆ ಮತ್ತು ಮಜೂರ ಖಾತೆಯ ಮಂತ್ರಿಗಳು. 1894ರಲ್ಲಿ ಬರಹಂ ಪುರದಲ್ಲಿ ಹುಟ್ಟಿದವರು. ಪ್ರಸಿದ್ಧ ಕಾಂಗ್ರೆಸ್ ಭಕ್ತರು. ವಿಶೇಷವಾಗಿ ಮಜೂರ ಜನಹಿತ ಸಾಧಕರು. ಡಿಲ್ಲಿ ಎಸೆಂಬ್ಲಿಯ ಮೆಂಬರರಾಗಿ ಆರಿಸಲ್ಪಟ್ಟಿದ್ದರು. ಆ ಮೇಲೆ ಬೊಬ್ಬಿಲಿ ರಾಜರ ಎದುರಾಗಿ ಮದ್ರಾಸ್ ಎಸೆಂಬ್ಲಿ ಚುನಾವಣೆಗೆ ನಿಂತು ಅವರನ್ನು ಗೆದ್ದರು. ಬಂಗಾಳ ನಾಗಪುರ ರೈಲ್ವೆ ಮುಷ್ಕರವನ್ನು ರಾಜಿಮಾಡಿ ಯಶಸ್ಸು ಸಂಪಾದಿಸಿದರು. ಅಯರ್ಲೇಂಡಿನ ಡಬ್ಲಿನ್ ಯುನಿವರ್ಸಿಟಿಯಲ್ಲಿ ಕಲಿತು ಬೆರಿಸ್ಟರರಾದರು. ಗಂಜಾಮಿನಲ್ಲಿ 8 ವರ್ಷಗಳ ವರೆಗೆ ವಕಾಲತು ನಡಿಸಿ ಆ ಮೇಲೆ ವಕಾಲತು ಬಿಟ್ಟು ಮಜೂರ ಜೀವನದ ಸಮಸ್ಯೆಗಳನ್ನರಿತು ಅದನ್ನು ನಿವಾರಿಸುವುದರಲ್ಲಿ ನಿರತರಾದರು. ಹಲವು ಅಂತರ ರಾಷ್ಟ್ರೀಯ ಮಜೂರ ಪರಿಷತ್ತುಗಳಲ್ಲಿ ಭಾಗ ವಹಿಸಿರುವರು. ಇವರ ತಂದೆ ಶ್ರೀ ಜೋಗಯ್ಯನವರು ಮದ್ರಾಸ್ ಕೌನ್ಸಿಲ್ ಮೆಂಬರರಾಗಿರುವರು.

ಶ್ರೀ. ಎಸ್. ರಮಾನಾಥನರು, ಪ್ರಕಟಣಾ ಶಾಖೆಯ ಮಂತ್ರಿಗಳು. ಇವರ ವಯಸ್ಸು 41 ವರ್ಷ. ಮದ್ರಾಸ್ ಯುನಿವರ್ಸಿಟಿಯ ಎಮ್. ಎ. ಬಿ. ಎಲ್. ಇವರು 1920ರಲ್ಲಿ ಅಸಹಕಾರ ಚಳವಳಕ್ಕೆ ಸೇರಿ ಸೆರೆಮನೆಗೆ ಹೋದರು. ತಮಿಳು ನಾಡು ಪ್ರಾಂತಿಕ ಕಾಂಗ್ರೆಸ್ ಕಮಿಟಿ ಮತ್ತು ಆಲ್ ಇಂಡಿಯಾ ಸ್ಪಿನ್ನರ್ಸ್ ಎಸೋಸಿಯೇಶನಿನ ಮದ್ರಾಸ್ ಶಾಖೆಯ ಕಾರ್ಯದರ್ಶಿಗಳಾಗಿದ್ದರು. ಆ ಮೇಲೆ ತಮಿಳು ನಾಡಿನ ಸೆಲ್ಫ್ ರೆಸ್ಪೆಕ್ಟ್ ಚಳವಳಕ್ಕೆ ಸೇರಿ 'ರಿವೋಲ್ಟ್' ಎಂಬ ಸಾಮಾಜಿಕ ಕ್ರಾಂತಿಕಾರಕ ಪತ್ರಿಕೆಯ ಸಂಪಾದಕರಾಗಿದ್ದರು. ಆ ಮೇಲೆ ಅದನ್ನು ಬಿಟ್ಟುಬಿಟ್ಟರು. ಯುರೋಪಿನಲ್ಲೆಲ್ಲಾ ಸಂಚರಿಸಿ ಅನುಭವ ಪಡೆದವರು.

ಶ್ರೀ. ಕೆ. ರಾಮನ್ ಮೆನನರು, ಕೋರ್ಟು ಮತ್ತು ಕಾರಾಗೃಹ ಮಂತ್ರಿಗಳು. ಇವರು ಕಲ್ಲಿಕೋಟೆಯ ವಕೀಲರು. ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. 1930–32ರ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗ ವಹಿಸಿ ಎರಡು ಸಲ ಜೈಲಿಗೆ ಹೋದವರು. ಇವರ ಪ್ರಾಯ 30 ನಿಷ್ಠಾವಂತ ಕಾಂಗ್ರೆಸ್ ಕೆಲಸಗಾರರು.

ಶ್ರೀ. ಬಿ. ಗೋಪಾಲ ರೆಡ್ಡಿ, ಸ್ಥಳೀಯ ಸ್ವರಾಜ್ಯ ಖಾತೆಯ ಮಂತ್ರಿಗಳು. ಇವರು ಮಂತ್ರಿಗಳಲ್ಲೆಲ್ಲಾ ಎಳೆ ಹರೆಯದವರು. ಮೂವತ್ತರೊಳಗಿನ ಪ್ರಾಯ, ಶಾಂತಿನಿಕೇತನದಲ್ಲಿ ವಿದ್ಯಾಭ್ಯಾಸ ಮಾಡಿದವರು. ಒಳ್ಳೇ ತೆಲುಗು ವಿದ್ವಾಂಸರು ಮತ್ತು ಸುಸಂಸ್ಕೃತರು. ಉಪ್ಪಿನ ಸತ್ಯಾಗ್ರಹ ಮತ್ತು ಕಾಯಿದೆ ಭಂಗ ಚಳವಳದಲ್ಲಿ 3 ಸಲ ಜೈಲಿಗೆ ಹೋದವರು. ತನ್ನ ದಾಯಾದಿಯೂ ಕಳೆದ ಮದ್ರಾಸ್ ಕೌನ್ಸಿಲಿನ ಪ್ರೆಸಿಡೆಂಟರೂ ಆದ ದಿವಾನ್ ಬಹದೂರು ರಾಮಚಂದ್ರ ರೆಡ್ಡಿಯವರನ್ನು ಚುನಾವಣೆಯಲ್ಲಿ ಗೆದ್ದವರು.

ಪ್ರತಿಯೊಬ್ಬ ಮಂತ್ರಿಗಳಿಗೆ ಒಬ್ಬೊಬ್ಬ ಪಾರ್ಲಿಮೆಂಟರಿ ಸೆಕ್ರೆಟರಿಗಳು ನೇಮಿಸಲ್ಪಟ್ಟಿರುವರು. ಶ್ರೀ. ಕಾಲೇಶ್ವರ ರಾಯರು ಪ್ರಧಾನ ಮಂತ್ರಿ ಶ್ರೀ. ರಾಜಗೋಪಾಲಾಚಾರ್ಯರ ಸೆಕ್ರಿಟರಿಗಳು, ಶ್ರೀ. ಜಿ. ವಿಶ್ವನಾಥನರು, ಶ್ರೀ. ಜಿ. ಪ್ರಕಾಶಮರ ಸೆಕ್ರೆಟರಿಗಳು. ಶ್ರೀ. ಎ. ಬಿ. ಶೆಟ್ಟಿ ಡಾಕ್ಟರ್, ಟಿ. ಎಸ್. ಎಸ್. ರಾಜನರಿಗೂ, ಶ್ರೀ. ಕೆ. ಆರ್. ಕಾರಂತರು, ಮಿ. ಯಾಕೂಬ್ ಹಾಸನರಿಗೂ ಎ. ಸಿ. ಜೆ. ವಾರ್ಕಿಯವರು ಡಾಕ್ಟರ್ ಸುಬ್ಬರಾಯನರಿಗೂ, ಶ್ರೀ. ಎನ್. ಎಸ್. ವರದಾಚಾರಿಯವರು ಶ್ರೀ. ಮುನಿ ಸ್ವಾಮಿ ಪಿಳ್ಳೆಯವರಿಗೂ, ಶ್ರೀ. ಬಿ. ಎಸ್. ಮೂರ್ತಿಯವರು ಶ್ರೀ. ವಿ. ವಿ. ಗಿರಿಯವರಿಗೂ, ಶ್ರೀ. ಬಾವನೀಡುರವರು ಶ್ರೀ. ರಮಾನಾಥನರಿಗೂ, ಮಿ. ಅಹಮ್ಮದ್ ತಂಬಿ, ಮಹಮ್ಮದ್ ಮೈದೀನ್ ಮರಿಕೇರ್ ಸಾಹೆಬ್ ಬಹದೂರರು ಶ್ರೀ. ರಾಮನ್ ಮೆನನರಿಗೂ ಶ್ರೀ. ಎಮ್. ಭಕ್ತವತ್ಸಲ ಮುದಲಿಯಾರರು ಶ್ರೀ. ಗೋಪಾಲ ರೆಡ್ಡಿಯವರಿಗೂ ಸೆಕ್ರಿಟರಿಗಳಾಗಿ ನೇಮಿಸಲ್ಪಟ್ಟಿರುವರು.

(ಪಡಿಯಚ್ಚು ಕಿರಿಯರ ಪ್ರಪಂಚಪತ್ರಿಕೆಯಿಂದ)

ಮದ್ರಾಸಿನ ಕ್ವೀನ್ ಮೇರೀಸ್ ಕಾಲೇಜಿನ ಕನ್ನಡ ಪಂಡಿತೆಯರಾದ ಶ್ರೀಮತಿ ಮಂದಾಕಿನೀ ಬಾಯಿ, ವಿದುಷೀ, ವಿಶಾರದ ಇವರು ಪಂಜಾಬ್ ಯುನಿವರ್ಸಿಟಿಯ 'ಹಿಂದೀ ಪ್ರಭಾಕರ' ಎಂಬ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈ ಪರೀಕ್ಷೆಯಲ್ಲಿ ಪಾಸಾದವರು ದಕ್ಷಿಣ ಹಿಂದೂಸ್ಥಾನದಲ್ಲಿ ಕೆಲವರೇ ಇರುವರು.

WHAT BUILDS A GREAT BANK

The two vital features of a bank are its financial policy and its service. When for over thirty years a bank has been widely reputed for its SAFETY FIRST POLICY and for its courteous and efficient service it is no wonder that the people's confidence in it continues to grow.

RESOURCES OF A CRORE.

ESTD. 1906

CANARA BANK

LIMITED.

WANTED

Candidates for Telegraph and station Master class. Allowance Rs. 28. Uniform, passage and quarter free. Service essential. Rules and Entrance from on annas eight. Director, Royal Telegraph and Ry. Duties College, Bombay 14.

ವಸಂತಿ ಹಾರ್ಮೋನಿಯಂ ವರ್ಕ್ಸ್, ಹಂಪನಕಟ್ಟೆ, ಮಂಗಳೂರು.

ನಮ್ಮಲ್ಲಿ ಪ್ರಸಿದ್ಧ ಅನುಭವಸ್ಥರಿಂದ
ತಯಾರಿಸಲ್ಪಟ್ಟ ಸಿಂಗಲ್, ಡಬ್ಬಲ್
ರೀಡ್ಸಿನ ಕೈ, ಮತ್ತು ಕಾಲು
ಹಾರ್ಮೋನಿಯಮುಗಳು
ಬೇಕಾದ ನಮೂನೆಯಲ್ಲಿ
ದೊರೆಯುತ್ತವೆ.
ಕ್ರಯದ ಪಟ್ಟಿಗೆ ಬರೆಯಿರಿ.



ಎಲ್ಲಾ ತರದಗಾಯನ ಸಾಮಗ್ರಿಗಳನ್ನು
ಮಿತ ದರದಲ್ಲಿ ತೃಪ್ತಿಕರವಾಗಿ ರಿಪೇರಿ
ಮಾಡಿಕೊಡಲಾಗುತ್ತದೆ.
ವಿಶೇಷ ಮಾಹಿತಿಗೆ ಬರೆಯಿರಿ.

Proprietor: **ATTAVAR BABOO,**
Vasanthi Harmonium Works,
Hampankatta, Mangalore.

ವಿ. ಸೂ. ನಮ್ಮ ಹಾರ್ಮೋನಿಯಮುಗಳು ನವಭಾರತ ಬುಕ್ ಡಿಪೋ, ಚರ್ಚ್‌ರೋಡ್, ಉಡುಪಿ ಇಲ್ಲಿ ಮಾರಲ್ಪಡುತ್ತವೆ.

ಅಚ್ಚಿನಲ್ಲಿದೆ! ? ಅಚ್ಚಿನಲ್ಲಿದೆ!

ನವಯುವಕರನ್ನು ಮುಗ್ಧಗೊಳಿಸುವ ಮುತ್ತಾಮಣಿ! — **ಮಿಸ್ ಲಲಿತ** — ವಾಚಕರ ಮನಸ್ಸನ್ನು ಸೂರೆಮಾಡುವ ಲಲಿತಾ ರಮಣಿ!

ಎಂಬ ಸಾಮಾಜಿಕ ಜೀವನದ ಸಮಸ್ಯೆಯನ್ನು
ಎತ್ತಿ ತೋರಿಸುವ ಪುಸ್ತಕವು.
ಹೊರಡಲಿರುವ ತಾರೀಕನ್ನು ಗಮನಿಸಿರಿ!
ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.
ಬರೆದವರು: ಯಂ. ವಿ. ಪುತ್ರಾನ್

ಕೂಡಲೇ ಬರೆಯಿರಿ. ಬೆಲೆ **0—8—0**

ವಿಳಾಸ — **M. V. Puthran,**
C/o 34, Bomanji Lane, *2nd Floor, Fort,* ~~BOMBAY~~

---

15 ವರ್ಷಗಳ ಅನುಭವ! **ಗ್ಯಾರಂಟೀ ಕೆಲಸ !!**

ಸೀನ್ ಸೀನರಿಗಳು, ಸೈನ್‌ಬೋರ್ಡುಗಳು ಮೊದಲಾದುವನ್ನು
ಬರೆದು ಮೆಡಲು ಮತ್ತು ಶಿಫಾರಸು ಪತ್ರಗಳನ್ನು ಪಡೆದು
ಪ್ರಸಿದ್ಧರಾಗಿರುವ

ಪೈಂಟರ್ ಗಣಪತಿ ರಾವ್

ನಿಮಗೆ ಬೇಕಾದ ಯಾವದೇ ಸೀನ್ ಸೀನರಿಗಳನ್ನು, ಸೈನ್‌ಬೋರ್ಡುಗಳನ್ನು ಕಣ್ಣದಿಯಲ್ಲಿ ಕೆತ್ತನೆ ಕೆಲಸಗಳನ್ನು ತಕ್ಕ ಕಾಲದಲ್ಲಿ ನಾಜೂಕಾಗಿ ಮಿತದರದಲ್ಲಿ ಮಾಡಿಕೊಡುವರು.

ಚೌತಿ ವಿನಾಯಕ ಮೊದಲಾದ ಮಣ್ಣಿನ ಸುಂದರ ವಿಗ್ರಹಗಳನ್ನು ಮಾಡಿಕೊಡುವರು
ಹೆಚ್ಚಿನ ಮಾಹಿತಿಗೆ ಬರೆಯಿರಿ ಯಾ ಸ್ವತಃ ಮಾತನಾಡಿರಿ

ಗಣಪತಿ ರಾವ್, ಪೈಂಟರ್,
ಸೋದೆ ಮಠದ ಲೇನು - - ಉಡುಪಿ, ದ. ಕ.

THE
MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಖು ರೇವನಾತಿ ಸೇಕಡ 5½ರ ವರೆಗಿನ ಬಡ್ಡಿ ಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿ ಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಮಾಸ] **ವಿಶ್ವವಾಣಿ** [ಪತ್ರಿಕೆ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ: ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... ...	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ— ವ್ಯವಸ್ಥಾಪಕ—'ವಿಶ್ವವಾಣಿ,'
'ಅನ್ನಪೂರ್ಣ', ವಿಶ್ವೇಶ್ವರಪುರಂ, ಬೆಂಗಳೂರು ನಗರ.
ಉಡುಪಿ ಏಜೆಂಟರು—ನವಭಾರತ ಬುಕ್ ಡಿಪ್ಪೊ, ಉಡುಪಿ.

HOTEL INDIANA
Bar and Restaurant

ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ?

ಹೊಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನ್‌ಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ ಸೌಕರ್ಯಗಳಿಂದ ಸಿಮ್ಮನ್ನಿದಿರುಗೊಳ್ಳುತ್ತದೆ.

ಹೊಸ ಆಡಳಿತ! **ಹೊಸ ವ್ಯವಸ್ಥೆ!**

ಎಲ್ಲವೂ ಹೊಸತೇ ಆಗಿ
ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ.

Proprietor,
HOTEL INDIANA
Hampankatta, Mangalore

ಧರ್ಮಾರ್ಥ ಬಹುಮಾನಗಳು



1—0—0ಗೆ!

--- **ಯಾರಿಗೆ?** ---

ರೂಪಾಯಿ 1-0-0 ಕೊಟ್ಟು 36 ಸೀಸೆ ಒಟ್ಟೊರೋಸ್ ಅಥವಾ 36 ಡಬ್ಬಿ ಗಜಕರ್ಣ ಮುಲಾಮುಗಳನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ!!

ಇನಾಮುಗಳ ವಿವರ:— 3 ಡಮ್ಮಿ ರಿಸ್ಟ್‌ವಾಚುಗಳು, 1 ಕ್ರೋಮಿಯಂ ಡಮ್ಮಿ ಪಾಕೆಟ್ ವಾಚು, 1 ಸೇಫ್ಟಿರೇಜರ್, 1 ಶೇವಿಂಗ್ ಬ್ರಶ್, 1 ಶೇವಿಂಗ್ ಸೋಪು, 1 ಕನ್ನಡಿ, 1 ಪೌಡರ್, 1 ಜತೆ ಗುಬ್ಬಿಗಳು, 1 ಫೌಂಟನ್ ಪೆನು 14 ಕ್ಯಾರೆಟ್ ನಿಬ್ಬು ಸಮೇತ, 1 ಇಮಿಟೇಶನ್ ಮೋತಿ ಮಫ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡ್ ಗಿಲ್ಟ್ ಉಂಗುರ, 600 ಅಡಿ ದೂರಕ್ಕೆ ಪ್ರಕಾಶ ನೀಡುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (10 ವರ್ಷ ಗ್ಯಾರಂಟಿ) ಪ್ಯಾಕಿಂಗ್ ಮತ್ತು ಪೋಸ್ಟೇಜು 0 10 0. ಇಂದೇ ಆರ್ಡರು ಕೊಡಿರಿ.

EASTERN TRADING COY.,
Post Box No. 12204, CALCUTTA, (N. Y.)

ಅಧ್ಯಾಯ ೪

ಛಿ ಕಾ ರಿ ಣೆ

ಸಾಮಾಜಿಕ ಕಾದಂಬರಿ

"ಅದೋ ಸುಮಿತ್ರಾಬಾಯಿಯವರು ಬಂದರಮ್ಮಾ! ನಾನೇನು ಮಾಡಲಿ!! ನಾ—ನೇ—ನು ಮಾಡಲಿ!!!"

ಸುದ್ದಿಯಷ್ಟು ದೊಡ್ಡ ಮತ್ತು ಶೀಘ್ರ 'ನ್ಯೂಸ್ ಏಜೆನ್ಸಿ'ಯು ಲೋಕದಲ್ಲಿ ಮತ್ತಾವುದೂ ಇಲ್ಲ. ಅದು ಎಷ್ಟೊಂದು ಚಮತ್ಕಾರವಾಗಿ ತನ್ನ ಕೆಲಸವನ್ನು ನಡಿಸಿಬಿಡುವುದು! ಮಾನವನ ಸ್ವಭಾವಸಿದ್ಧ ಉತ್ಸುಕತೆಯೇ ಸುದ್ದಿಯ ರೇಡಿಯೋ ಯಂತ್ರದ ವಿದ್ಯುಚ್ಛಕ್ತಿ. ಯಾವ ಪ್ರತಿಫಲದ ಆಶೆಯೂ ಇಲ್ಲದೆ, ಸಂಬಳಕ್ಕೆ ದುಡಿಯುವವರಿಗಿಂತ ಎಷ್ಟೋ ಹೆಚ್ಚಿನ ಉತ್ಸಾಹ ಮತ್ತು ಚಾತುರ್ಯದಿಂದ ತಾವಾಗಿ ಸುದ್ದಿಯ ವಾರ್ತಾವಾಹಕರು ಕೆಲಸನಡಿಸಿಬಿಡುವರು. ಅವರ ವಿಶಿಷ್ಟತೆಯೆಂದರೆ ಗುಟ್ಟನ್ನು ಗುಟ್ಟಾಗಿಯೇ ಬಯಲು ಮಾಡುವುದು. ಎಂತಹ ನಿಗೂಢವಾಗಿರುವ ರಹಸ್ಯವನ್ನಾದರೂ ಅವರು ಭೇದಿಸಿಬಯಲುಮಾಡಿಬಿಡುವರು. ಕಟ್ಟಕಡೆಗದು ಬಯಲು ರಹಸ್ಯವಾಗುವುದು. ಅಂತೆಯೇ ಶಿವಾನಂದರು ಅತಿ ರಹಸ್ಯವಾಗಿರಿಸಬೇಕೆಂದು ಅಷ್ಟೊಂದು ಚಡಪಡಿಸಿದ್ದ ಗುಟ್ಟು ಮರುದಿನ ಬೆಳಿಗ್ಗೆಯೇ ಶಿವಪುರಿಯಲ್ಲೆಲ್ಲಾ ಗುಜು ಗುಜು ಹಬ್ಬಿತ್ತು. ಎಲ್ಲೆಲ್ಲಿಯೂ ಅದೇ ಸುದ್ದಿ, ಅದೇ ಮಾತು. ಮಠದೊಳಗಣ ಗುಪ್ತ ಕೋಣೆಯೊಳಗೆ ಅಪರ ರಾತ್ರಿಯ ಮುಸುಕಿನಲ್ಲಿ ಅತೀ ಗೋಪ್ಯವಾಗಿ ನಡೆದ ಈ ರಹಸ್ಯವು ಬಯಲಾದ ಬಗೆಯಾದರೂ ಹೇಗೆ?

ನರಸಿಂಹಭಟ್ಟನು ಶಿವಾನಂದರ ಸೂತ್ರದ ಗೊಂಬೆ. ಆ ಗೊಂಬೆ, ಎಂದೆಂದಿಗೂ ಗುಟ್ಟು ಹೊರಗೆ ಬಿಡಲಾರದು. ನರಸಿಂಹನು ಡಾಕ್ಟರರನ್ನು ಕರಕೊಂಡುಬರಲು ಮಠದಿಂದ ಹೊರಬಿದ್ದು ಬೆಟ್ಟರಿಲೈಟ್ ಚಮುಕಿಸಿದೊಡನೆಯೇ ಡ್ರೈವರನು, "ಹಾಂ, ಬನ್ನಿ ಸ್ವಾಮಿ ಇನ್ನೆಲ್ಲಿ ಹೋಗಬೇಕು?" ಎಂದು ಕೂಡಲೆ ಕಾರಿನ ದೀಪ ಬೆಳಗಿಸಿದನು. ಶಿವಾನಂದರ ದುಷ್ಕೃತ್ಯಗಳ ಅತಿ ನಿಪುಣ ಕೈಯಾಗಿದ್ದ ವೆಂಕಟ್ರಮಣನೂ ಆ ಸಂದರ್ಭದಲ್ಲಿ ಅಚಾತುರ್ಯದಿಂದ, "ಡ್ರೈವರ್, ಈಕ್ಷಣ ಹೋಗಬೇಕು ಡಾಕ್ಟರ್ ಗಂಗಾಧರರಾಯರಲ್ಲಿಗೆ! ಸ್ಟಾರ್ಟ್‌ಮಾಡು" ಎಂದು ಮೋಟರಿನ ಬಾಗಿಲು ತೆಗೆದು ಒಳ ಕೂತನು. ಈ ಅಚಾತುರ್ಯವೇ ಸುದ್ದಿಯ ದೂತನನ್ನೆಬ್ಬಿಸಿಬಿಟ್ಟಿತು. ಡ್ರೈವರನು ಮೋಟರ್ ಸ್ಟಾರ್ಟ್ ಮಾಡುವುದನ್ನೇ ಬಿಟ್ಟು "ಯಾಕೆ ಸ್ವಾಮಿ ಈ ರಾತ್ರಿಗೆ ಡಾಕ್ಟರರಲ್ಲಿ ಹೋಗುವುದು? ಏನಾಗಿದೆ ಮಠದಲ್ಲಿ? ಅದಾರು ಸ್ವಾಮಿ 'ಅಯ್ಯೋ! ಅಯ್ಯೋ!' ಎಂದು ಕೂಗಿದುದು? ಬಹಳ ಚಿಕ್ಕವಳು ಪಾಪ ಆ ಹುಡುಗಿ! ನಿಮ್ಮ ಸ್ವಾಮಿರು ದೊಡ್ಡ ದೈತ್ಯ! ಏನಾಯಿತೋ ಪಾಪ! ಎಂದು ಡ್ರೈವರನು ಎಲ್ಲವನ್ನು ತಿಳಿದವನಂತೆ ಹೇಳುವಾಗ ವೆಂಕಟ್ರಮಣನು ವಿಸ್ಮಿತನಾದ. ಮೋಟರ್ ನಿಲ್ಲುವುದೊಂದೇ ತಡ, ಸ್ಟೀಯರಿಂಗಿಗೆ ತಲೆಯಿಟ್ಟು ಗೊರಕೆ ಹೊಡೆಯುವ ಈ ಟೊಣಪ್ಪನಿಗೆ ಇದೆಲ್ಲಾ ಹೇಗೆ ಗೊತ್ತಾಯಿತೆಂದು, ಆಲೋಚಿಸತೊಡಗಿದ. ಆ ಮೇಲೆ ದರ್ಪದ ನಟನೆಯಿಂದ, "ಏನೆಲ್ಲಾ ಹೇಳುತ್ತಿರುವೆಯೋ ಮನಬಂದಂತೆ? ಯಾವ ಹುಡುಗಿ? ಸ್ವಾಮಿರಿಗೆ ಜ್ವರ ಬರತೊಡಗಿ ದಿವಸ ಹತ್ತಾಯಿತು. ಈಗ ಜ್ವರ ತಲೆಗೇರಿ ಬುದ್ಧಿಯೇ ಅವರ ಸ್ವಾಧೀನವಿಲ್ಲ. ಕೂಗಿದುದು ಅವರು, ಜ್ವರದ ಬಾಧೆ ತಡಕೊಳ್ಳಲಾರದೆ. ಅದಕ್ಕಾಗಿಯೇ ನಾನೀಗ ಡಾಕ್ಟರರನ್ನು ಕರತರಹೊರಟುದು ಈ ರಾತ್ರಿಗೆ." ಎಂದ ವೆಂಕಟ್ರಮಣ. "ಹೌದೌದು ಜ್ವರ! ನನಗೆಲ್ಲಾ ಗೊತ್ತಿಲ್ಲೆಂದು ತಿಳಿದಿರಾ? ಸಾಕು ಸಾಕು ಸುಮ್ಮಗಿರಿ" ಎಂದು ಡ್ರೈವರನು ವೆಂಕಟ್ರಮಣನ ಕಡೆಗೊಮ್ಮೆ ಕಳ್ಳನೋಟಬೀರಿ ಮೋಟರ್ ಸ್ಟಾರ್ಟ್‌ಮಾಡಿ ಓಡಿಸಿದ. ವೆಂಕಟ್ರಮಣನು ಡಾಕ್ಟರರನ್ನು ಕರತಂದೊಡನೆಯೇ ಆ ಡ್ರೈವರನನ್ನು ಕಳುಹಿಸಿಬಿಡುವ ನಿರ್ಧಾರಮಾಡಿದ. ಟೇಕ್ಸಿ ಡ್ರೈವರನೊಬ್ಬನು ಸುದ್ದಿಯ ದೂತನಾದನೆಂದರೆ ಮತ್ತೆ ಕೇಳಬೇಕೇ? ಇಲ್ಲವಾದರೆ ಅಷ್ಟು ಬೇಗ ಸುದ್ದಿಯು ತನ್ನ ಕೆಲಸ ಮಾಡುತ್ತಿದ್ದಿಲ್ಲ. ಯಾಕೆಂದರೆ ಡಾಕ್ಟರರಿಂದ ಎಂದೂ ಗುಟ್ಟು ಹೊರಬೀಳುವ ಹಾಗಿಲ್ಲ. ಇದು ಹೊರತು ಸ್ವಾಮಿರು ರೂ. 200 ನಗ್ದಿ ಕೊಟ್ಟು ಗುಟ್ಟು ರಟ್ಟುಮಾಡದೆ ಮಾನವನ್ನುಳಿಸಿಕೊಡಬೇಕೆಂದು ಕೇಳಿಕೊಂಡಿದ್ದರು. ಮನೆಯಜ್ಜಿಯು ತನ್ನ ಮಕ್ಕಳು ಮೊಮ್ಮಕ್ಕಳಿಗೆ ಕಠಿಣ ಕಾಯಿಲೆಯಾದಾಗ ದಿಗಿಲುಗೊಂಡು ಬೇರೆ ಬೇರೆ ಕಡೆಯ ದೈವ ದೇವರುಗಳಿಗೆ ತೀರಿಸಲು ಸಾಧ್ಯವೇ ಇಲ್ಲದ ಹರಿಕೆಗಳನ್ನು ಹೇಳಿಕೊಳ್ಳುವಂತೆ ಶಿವಾನಂದರು ಶೋಕಿನಮನೆ, ಅಮೂಲ್ಯ ಚಿನ್ನಾಭರಣ, ಬೇಕಷ್ಟು ಆಸ್ತಿಪಾಸ್ತಿಯ ಆಶೆಬೀರಿ ನಾಗಿಯನ್ನು ಹೇಗೂ ಸಮಾಧಾನಪಡಿಸಿದರು. ಇದು ಹೊರತು ಆಗಲೇ ರೂಪಾಯಿ ನೂರು ಕೊಟ್ಟರು. ಲಲಿತೆಗೆ ಯಾವ ಅಪಾಯವೂ ಆಗಿಲ್ಲೆಂದು ಡಾಕ್ಟರರಿಂದ ಭರವಸೆ ಹೇಳಿಸಿದರು. ಆ ಮೇಲೆ ಬೆಳಗಾಗಲು ಎರಡು ಮೂರು ಘಂಟೆಯಿರುವಾಗಲೇ ಅರೆಮರವೆಯಲ್ಲಿದ್ದ ಲಲಿತೆಯನ್ನು ನಾಗಿಯೊಂದಿಗೆ ಅವಳ ಮನೆಗೆ ವೆಂಕಟ್ರಮಣನು ಮುಟ್ಟಿಸಿದ್ದನು. ಅದಕ್ಕಾಗಿ ಅವನು ಮೊದಲಿನದನ್ನು ಬಿಟ್ಟು ಬೇರೆಯೇ ಒಂದು ಟೇಕ್ಸಿ ತರಿಸಿದ್ದನು. ಎಲ್ಲವೂ ಅತಿ ರಹಸ್ಯವಾಗಿಯೇ ನಡೆದಿರುವುದು. ಹೊರಗಣ ಜನರಿಗೇನೂ ತಿಳಿದಿಲ್ಲೆಂಬ ಸಮಾಧಾನದಿಂದ ಶಿವಾನಂದರೂ ನರಸಿಂಹನೂ ಆಗಾಗ ಹೃದಯದಲ್ಲೇಳುತ್ತಿದ್ದ ತಳಮಳವನ್ನು ಮೂಲೆಗೊತ್ತುತ್ತಿದ್ದರು. ಆದರೆ ಪಾತಕವು ಒಳಗೊಳಗಿಂದಲೇ ಊರೆಲ್ಲಾ ತುಂಬಿ ನಾನಾ ಉದ್ಗಾರಗಳನ್ನೆಬ್ಬಿಸುತ್ತಿತ್ತು.

ಶಿವಪುರದ ಹೆಮ್ಮಕ್ಕಳ ಟ್ರೈನಿಂಗ್ ಸ್ಕೂಲಿನ ಉಪಾಧ್ಯಾಯಿನಿಯರಲ್ಲೊಬ್ಬರೂ ವಿದ್ಯಾರ್ಥಿನಿಯರಿಗೆ ಪ್ರಿಯರೂ ಅತ್ಯಂತ ಪ್ರಗತಿಪರ ಮನೋವೃತ್ತಿಯವರೂ ಆದ ಶ್ರೀಮತಿ ಸುಮಿತ್ರಾಬಾಯಿಯವರು ಮರುದಿನ ಬೆಳಿಗ್ಗೆ ಶಾಲೆಗೆ ಹೋದಾಗ, ಲಲಿತೆಯ ಸಂಗಾತಿಯರು, "ಇವತ್ತು ಲಲಿತೆ ಶಾಲೆಗೆ ಬರುವುದಿಲ್ಲ ಸುಮಿತ್ರಮ್ಮಾ, ಅವಳಿಗೆ ಪಾಪ ಜ್ವರಬರುತ್ತದೆ; ಇನ್ನವಳು ಶಾಲೆಗೇನೇ ಬರುವುದಿಲ್ಲವಂತೆ; ಜ್ವರ ಗುಣವಾದ ಮೇಲೆ ಬರುತ್ತಾಳಂತೆ," ಎಂದೆಲ್ಲಾ ತಮಗೆ ತಿಳಿದಿರುವುದನ್ನು ಬಹಳ ಉಮೇದಿನಿಂದ ಸುಮಿತ್ರಾಬಾಯಿಯವರಿಗೆ ತಿಳಿಸಿದರು. ಲಲಿತೆಯ ಮೇಲೆ ಅವರಿಗೆಷ್ಟು ಪ್ರೀತಿ ಇರುವುದೆಂಬುದನ್ನವರು ಅರಿತಿದ್ದರು. ಆದುದರಿಂದ ಅವಳ ವಾರ್ತೆಯನ್ನವರಿಗೆ ತಿಳಿಸಿದರೆ ತಮ್ಮ ಮೇಲೆ ಅವರು ಪ್ರಸನ್ನರಾದಾರೆಂದೇ ಹುಡುಗಿಯರು ಅಷ್ಟೊಂದು ಉಮೇದುಗೊಂಡುದು. ಆದರೆ ಅಂದಿನ ಸುಮಿತ್ರಾಬಾಯಿಯೇ ಬೇರೆಯಾಗಿ ಹೋಗಿದ್ದರು. ಎಂದಿನಂತಹ ವಿನೋದ, ಉಲ್ಲಾಸ ಮತ್ತು ಮಾತು ನಗೆಯಚೆಲ್ಲಾಟವೆಲ್ಲಾ ಕುಂದಿ ಮುಖವು ಕಂದಿಹೋಗಿತ್ತು. ಅವರ ಮೃದು ಹೃದಯವನ್ನು ಅದಾವುದೋ ತೀವ್ರ ಚಿಂತೆಯ ಬೇನೆಯು ಸುಡುತ್ತಿತ್ತು. ಹುಡುಗಿಯರೆಲ್ಲಾ ಇದನ್ನು ಕಂಡು ವಿಸ್ಮಿತರಾಗಿ ಸುಮ್ಮನಾದರು. ಅಂದು ಸುಮಿತ್ರಾಬಾಯಿಯವರು ಕ್ಲಾಸಿನಲ್ಲಿ ಹುಡುಗಿಯರನ್ನು ಓದಹೇಳಿ ತಾನು ದೀರ್ಘಕಾಲ ಕುರ್ಚಿಯಲ್ಲೇ ಕೂತು ಗಾಢ ಚಿಂತಾಮಗ್ನರಾಗಿದ್ದರು. ಸ್ವಲ್ಪವೇನಾದರೂ ಪಾಠಮಾಡುವಾಗಲೂ ವಿಮನಸ್ಕರೇ ಆಗಿದ್ದರು. ಅವರು ಶಾಲೆಗೆ ಬಂದೊಡನೆಯೇ ಅವರ ಸಹೋದ್ಯೋಗಿನಿ ಸುಶೀಲೆಯು "ಸುಮಿತ್ರಮ್ಮಾ, ನಿಮ್ಮ ಲಲಿತೆಯ ಗತಿಯೇನಾಯಿತೆಂದು ಗೊತ್ತೇ? ಊರೆಲ್ಲಾ ಹಬ್ಬಿದೆ ಅವಳ ಸುದ್ದಿ" ಎಂದು ಗುಟ್ಟಿನಲ್ಲಿ ಎಲ್ಲಾ ಸಂಗತಿಗಳನ್ನವರಿಗೆ ತಿಳಿಸಿದರು. ಅವರದನ್ನು ಕೇಳಿ ಸ್ತಂಭಿತರಾದರು. ಒಂದು ಶಬ್ದ ಕೂಡಾ ಮಾತಾಡದಾದರು ಅವರ ಕಂಗಳಲ್ಲಿ ನೀರು ತುಂಬಿಬಂತು. "ಸುಶೀಲ ನಾನು ಹೊರಗೆ ಹೋಗಿಬರುತ್ತೇನೆ"ಂದು ಹೇಳಿ ಟೀಚರ್ ರೂಮಿನಿಂದ ಹೊರನಡೆದರು. ವರಾಂಡದ ಒಂದು ಮೂಲೆಗೆ ಹೋಗಿ ಉಕ್ಕಿ ಬರುವ ದುಃಖವನ್ನು ಸಹಿಸಲಾರದೆ ಬಿಕ್ಕಿ ಬಿಕ್ಕಿ ಅತ್ತರು. ಅಷ್ಟು ಕೋಮಲವಾಗಿತ್ತು ಅವರ ಹೃದಯ. ಆಗ ಶಾಲಾರಂಭವಾಗುವ ಘಂಟೆಯಾಯಿತು. ಒಡನೆಯೇ ಅವರ ದುಃಖವನ್ನು ಒತ್ತಿಕೊಂಡು ಕಣ್ಣೀರನ್ನೊರಸಿ ಕ್ಲಾಸ್ ರೂಮಿಗೆ ಹೋದರು. ಆಗ ಹುಡುಗಿಯರು ಮೇಲಿನ ಮಾತುಗಳನ್ನೆಲ್ಲಾ ಅವರೊಡನೆ ಹೇಳಿದರು.

"ಲಲಿತೆಗೆ ಈ ಗತಿಯಾಯಿತೇ? ಆಹ, ಎಷ್ಟು ಒಳ್ಳೆಯ ಹುಡುಗಿ! ಎಂತಹ ಗುಣಸಂಪತ್ತೆಯವಳು! ಅದೆಷ್ಟು ಚುರುಕುಬುದ್ಧಿಯವಳು! ಮೇಲಾಗಿ ಎಷ್ಟೊಂದು ರೂಪವತಿ. ಅಯ್ಯೋ ದೇವರೆ! ಎಂತಹ ರಾಕ್ಷಸರಪ್ಪ ಪುರುಷಜಾತಿ! ಅದರೂ ಶಿವಾನಂದರು ಸರ್ವಬಿಟ್ಟ ಸನ್ಯಾಸಿ! ಸನ್ಮಾನ್ಯ ಯೋಗಿ!! ಸಮಾಜದ ಧರ್ಮಾಧಿಕಾರಿ!!! ಅವರೇ ಇಂತಹ ನರಪಿಶಾಚಿ!!!! ಅಹಹ, ಏನೆನ್ನಬೇಕು ಈ ವಿಪರ್ಯಾಸಕ್ಕೆ! ಇಂತಹ ನರಾಧಮನನ್ನೂ ವಿಚಾರಹೀನ ಸಮಾಜವು ಧರ್ಮಾಧಿಕಾರದ ಪೀಠಕ್ಕೇರಿಸಿ ಪೂಜಿಸುವುದಲ್ಲವೇ? ಅವನನ್ನೂ ಜನರು ಧರ್ಮಗುರುವಾಗಿ ಮಂಗಡಿಸಿ ಪರಾಕೆ, ಬುದ್ಧಿಯೆಂದು ತಲೆಯ ಮೇಲೆ ಹೊತ್ತು ತಿರುಗುವರಲ್ಲವೇ? ಕಾಣಿಕೆ ಉಡುಗೊರೆಗಳಿಂದ ಸತ್ಕರಿಸಿ ಕೊಬ್ಬಿಸುವುದಲ್ಲವೇ? ಛೆ! ಛೆ!! ಇಂತಹ ತುಚ್ಛ ನೀಚ ಧರ್ಮಾಧಿಕಾರಿಗೂ, ವಿವೇಕಹೀನ ಕರ್ತವ್ಯ ಭ್ರಷ್ಟ ಬಡ ಸಮಾಜಕ್ಕೂ ಶತಶಃ ಧಿಕ್ಕಾರವಿರಲಿ! ಅಯ್ಯೋ ಲಲಿತೆ ನಿನ್ನ ಗತಿ ಹೀಗಾಯಿತೇ? ನಿನ್ನ ತಾಯಿಯೇ ನಿನ್ನನ್ನು ಜೀವನ್ಮೃತಳಾಗಿ ಮಾಡಲು ನೆರವಾದಳಲ್ಲವೇ? ಅವಳೇನು ಮಾಡಿಯಾಳು ಮತ್ತೆ! ಅವಳ ಮಗಳು ಅವಳಂತೆಯೇ ಆಗದೆ ಬೇರೆ ರೀತಿಯಾಗಲು ಕ್ರೂರ ಸಮಾಜವು ಬಿಡುವುದೇ? ವೇಶ್ಯೆಯ ಮಗಳು ಎಷ್ಟೊಂದು ಸುಶೀಲೆಯಾದರೂ ವೇಶ್ಯೆಯೇ ಅಲ್ಲವೇ? ಸಮಾಜದ ರೀತಿಯೇ ಹಾಗಲ್ಲವೇ? ರೂಢಿಯ ಗೂಡೊಳಗಣ ಗೊಂಬೆಯಾದ ಅದಕ್ಕೆ ಲಲಿತೆಯ ಹೃದಯದ ಪರಿಯೇನು ಗೊತ್ತು! ಆಹ, ಎಳೆ ಬಾಲೆಯ ಮೇಲೆ ಎಂತಹ ಪೈಶಾಚಿಕ ಅತ್ಯಾಚಾರ! ಮನಸ್ಸಾದರೂ ಹೇಗೆ ಬಂತಪ್ಪಾ ಆ ಪಿಶಾಚಿಗೆ! ನ್ಯಾಯ, ನೀತಿ, ಧರ್ಮ, ದೇವರೆಲ್ಲಿ? ಅವೆಲ್ಲವೂ ಅಂಧರೂಢಿಯ, ಪುರುಷಾಧಿಕಾರದ ಧನ ದೌಲತ್ತಿನ ಕೈಗೊಂಬೆಗಳು! ಹಾಳು ಸಮಾಜ ಹಾಳು ರೀತಿ ನೀತಿ, ಹಾಳು ಧರ್ಮ ದೇವರು, ಎಲ್ಲವೂ ಹಾಳು ಇವೆಲ್ಲಾ ಹಾಳಾಗಿಹೋಗದೆ ಸ್ತ್ರೀಯರಿಗೆಲ್ಲಿ ಒಳ್ಳೇ ಬಾಳು!" ಎಂದೆಲ್ಲಾ ಸುಮಿತ್ರಾಬಾಯಿಯವರಲ್ಲಿ ತರಂಗವಾಗಿ ಭಾವನೆಗಳೆದ್ದು ಹೃದಯದಲ್ಲಿ ಪ್ರಚಂಡ ಕೋಲಾಹಲವನ್ನೆಬ್ಬಿಸಿದವು. ಸ್ತ್ರೀ ಸಮಾಜದ ದುರವಸ್ಥೆಗಾಗಿ ಅನುದಿನವೂ ಪರಿತಪಿಸುತ್ತಿದ್ದ ಸ್ವತಂತ್ರ ವಿಚಾರದ ಮಹಿಳೆಯಿದ್ದರವರು. ಕುರ್ಚಿಯಲ್ಲಿ ಕುಳಿತು ಚಿಂತಾಮಗ್ನರಾಗಿದ್ದ ಅವರಿಗೆ ತಾನೊಂದು ಕ್ಲಾಸು ನಡಿಸುತ್ತಿದ್ದೇನೆಂಬ ಗೋಷ್ಟಿಯೇ ಇರಲಿಲ್ಲ. ಎಳೆ ಬಾಲೆ—ಲಲಿತೆಯ ಚಿತ್ರವೇ ಅವರ ಮನೋದೃಷ್ಟಿಯ ಮುಂದೆ ಕಣ್ಣೀರಿಡುತ್ತಾ ನಿಂತಿದ್ದಿತು. ಅವರೆಷ್ಟು ಪ್ರಯತ್ನಿಸಿದರೂ ಮತ್ತೂ ಅದೇ ಚಿತ್ರ ಕಣ್ಣಮುಂದೆ ಬಂದು ನಿಲ್ಲುವುದು. ಅವಳನ್ನೊಮ್ಮೆ ನೋಡಿಯೇ ಬರಬೇಕೆಂದು ತೋರಿತವರಿಗೆ, ಅಂತೆಯೇ ಅವರು ನಿರ್ಧರಿಸಿದರು.

ಲಲಿತೆಗೆ ಸಂಜ್ಞಾನ ಬಂದಾಗ ಮೊದಲು ಅವಳೆತ್ತಿದ ಉದ್ಗಾರವೆಂದರೆ, "ಅಹೋ ಸುಮಿತ್ರಾಬಾಯಿಯವರು! ನಾನೇನು ಮಾಡಲಮ್ಮಾ!! ನಾನೇನು ಮಾಡಲಿ!!!" ಎಂಬುದು. ನಾಗಿಯು ಯಾವ ರೀತಿಯಲ್ಲಿ ಸಂತೈಸಿದರೂ ಲಲಿತೆಯು ಭ್ರಾಂತಳಂತೆ ಮೇಲಿನ ಉದ್ಗಾರವನ್ನು ಆಗಾಗ ಎತ್ತುತ್ತಲೇ ಇದ್ದಳು. ಆ ಉದ್ಗಾರವೆತ್ತಿದಾಗಲೆಲ್ಲಾ ಅವಳ ಕಣ್ಣುಗಳಿಂದ ಒಂದೇ ರೀತಿ ನೀರಿಳಿದುಬರುತ್ತಿತ್ತು. ಆಗ, "ಅಯ್ಯೋ! ನಾನೇಕಿವಳನ್ನು ಶಾಲೆಗೆ ಕಳುಹಿಸಿದೆನಪ್ಪಾ! ಎಲ್ಲಿಂದೊಬ್ಬರು ಸುಮಿತ್ರಾಬಾಯಿಯವರು ಇವಳಿಗೆ ಸಂಘಟಿಸಿಯಾದರೋ!" ಎಂದು ನಾಗಿಯು ಹಂಬಲಿಸುತ್ತಿದ್ದಳು. ಶಿವಪುರ ಮಠದಲ್ಲಿ ನಡೆದ ವಿದ್ಯಮಾನದ ಮರುದಿನ ಸಂಜೆ ಹಲವು ಬಾರಿ ಲಲಿತೆಯು ಮೇಲಿನ ಉದ್ಗಾರವೆತ್ತಿದ್ದಳು. ನಾಗಿಯು ಅದನ್ನೇನುಮಾಡುವುದೆಂದು ತೋರದೆ ಕಂಗೆಟ್ಟು ಅವಳ ಕಾಲಬುಡದಲ್ಲಿ ಕುಳಿತಿದ್ದಳು. ಆಗ ಸುಮಿತ್ರಾಬಾಯಿಯವರು ಸಾವಿನ ಮನೆಗೆ ಪ್ರವೇಶಿಸುವಂತೆ ಬಹಳ ಶಂಕಿಸಿ ಶಂಕಿಸಿ ನಾಗಿಯ ಮನೆಯ ಒಳಹೊಕ್ಕರು. ರಸ್ತೆಬದಿಯ ಬಾಗಿಲಿಂದ ಒಳಗೆ ಬಂದೊಡನೆಯೇ ತುಸುಹೊತ್ತು ನಿಂತು ಯೋಚಿಸಿದರು. ಆಗ ಒಳಗಿಂದ, "ಅಹೋ ಸುಮಿತ್ರಾಬಾಯಿಯವರು! ನಾನೇನು ಮಾಡಲಮ್ಮಾ! ನಾನೇನು ಮಾಡಲಿ!" ಎಂದು ಲಲಿತೆಯು ಗೋಳಿಡುವುದು ಕೇಳಿಬಂತು. ಅವರು ಚಿತ್ರದಾಗಿ ಗೊಂಬೆಯಂತೆ ಕ್ಷಣಕಾಲನಿಂತು ಉತ್ತರಕ್ಷಣದಲ್ಲೇ ಒಳಗೆ ಲಲಿತೆಯ ಕೋಣೆಗೆ ಹೋಗಿ "ಲಲಿತ! ಲಲಿತ!" ಎಂದು ಕರೆದು ಮುಂದೇನು ಹೇಳುವುದೆಂದು ತೋಚದೆಯೇ ಸಂತಾಪಭರದಲ್ಲಿ ಕುತ್ತಿಗೆಯು ಬಿಗಿದು ಬಂದೊಡನೆ ಸುಮ್ಮನಾದರು. ಲಲಿತೆಯು ದೃಷ್ಟಿ ತಿರುಗಿಸಿ ಸುಮಿತ್ರಾಬಾಯಿಯವರನ್ನು ಕಣ್ಣು ಕಣ್ಣು ನೋಡಿದಳು. ಎವೆಯಿಕ್ಕದೆ ನೋಡಿದಳು. ಪಣಿಸರಿಯುವ ನೋಡಿದಳು. ಧರಧರನೆ ಕಣ್ಣೀರು ಸುರಿಸಿದಳು. ತುಸು ಸಮಯದ ಮೇಲೆ ಮಾತಾಡಲೆತ್ನಿಸಿದಳು. ಆಗಲಿಲ್ಲ. ಬಹಳವಾಗಿ ಪ್ರಯತ್ನಿಸಿದಳು. ನಿಷ್ಫಲ. ಆ ಮೇಲೆ ಕೈಸನ್ನೆಯಿಂದ ಸುಮಿತ್ರಾಬಾಯಿಯವರನ್ನು ಸಮೀಪ ಬರಹೇಳಿ ಅವರ ಅಂಗೈಗಳೆರಡನ್ನೂ ಹಿಡಿದು ಚುಂಬಿಸಿದಳು. ತನ್ನ ಕೈಗಳೆರಡನ್ನೂ ಪ್ರಯಾಸದಿಂದ ಒಟ್ಟುಮಾಡಿ ವಂದಿಸಿದಳು. ಸುಮಿತ್ರಾಬಾಯಿಯವರು ಎಷ್ಟೊಂದು ದೃಢನಿರ್ಧಾರದಿಂದ ಮನಸ್ಸನ್ನು ಕಟ್ಟಿಕೊಂಡರೂ ಪ್ರಯೋಜನವಾಗಲಿಲ್ಲ. ಅದು ಒಮ್ಮೆಯೇ ಕಟ್ಟೊಡೆದು ಹೊರ ಹರಿಯಿತು. ಅವರು, ದೊಪ್ಪನೆ ಲಲಿತೆಯ ಬಳಿ ಕೂತು ಅವಳ ಕೈಗಳೆರಡನ್ನೂ ಹಿಡಿದು ಅತ್ತುಬಿಟ್ಟರು. ಎಷ್ಟೊಂದು ಪ್ರಯತ್ನಿಸಿದರೂ ಒಂದು ಶಬ್ದಗಳೇ ಹೊರಡವು ಅವರ ಬಾಯಿಯಿಂದ. ಇಬ್ಬರೂ ಒಬ್ಬೊಬ್ಬರನ್ನು ನೋಡುತ್ತಾ ಕೆಲಸಮಯ ಕಳೆದರು. ಧಾರೆಕಟ್ಟಿ ಕಣ್ಣೀರು ಸುರಿಸಿದರು. ಆ ಮೌನವಾದರೂ ಅದೆಷ್ಟು ಅರ್ಥ ಪೂರ್ಣ! ಎಷ್ಟೊಂದು ಹೃದ್ರಾವಕ! ಸುಮಿತ್ರಬಾಯಿಯವರೆಂದರೆ ಮುನಿದುಬೀಳುತ್ತಿದ್ದ ನಾಗಿಯ ಮೇಲೂ ಅದು ಪರಿಣಾಮವನ್ನುಂಟುಮಾಡಿತು. ಎಂತಹ ವಜ್ರ ಹೃದಯವನ್ನೂ ಕರಗಿಸಿಬಿಡುವಷ್ಟು ಪ್ರಭಾವದ ಮೌನವದು. ನಾಗಿಯ ಮಾತೇನು ಮತ್ತೆ? ಅವಳೂ ಕಣ್ಣೀರಿಳಿಸಿ ದುಃಖಿಸುತ್ತಾ ಕೂತಳು. ಲಲಿತೆಯು ಏನೋ ಹೇಳಲೆತ್ನಿಸಿ ಗಂಟಲೊತ್ತಿಹಿಡಿದಂತಾಗಿ ಚಡಪಡಿಸಿದಳು. ಆಗ ಸುಮಿತ್ರಾಬಾಯಿಯವರು, "ಅಯ್ಯೋ ಲಲಿತ! ಬೇಡ ಮಗು ಬೇಡ, ಮಾತಾಡಲೆತ್ನಿಸಬೇಡ!" ಎಂದು ಎದೆಯ ಭಾಗವನ್ನು ಪೂಸಿ ಲಲಿತೆಯನ್ನು ಸಮಾಧಾನ ಪಡಿಸಲೆತ್ನಿಸಿದರು. ಅವಳು ಜೀವಸಂಕಟವಾಗಿ ಕಣ್ಣು ಮುಚ್ಚಿದಳು.

"ಅಯ್ಯೋ ಮಗು! ಏನಾಯಿತು!! ಏನಾಯಿತು!!!" ಎಂದು ನಾಗಿಯು ತಲ್ಲಣಗೊಂಡು ಓಡಿಬಂದು ಲಲಿತೆಯ ಗಲ್ಲಹಿಡಿದೆತ್ತಿದಳು. "ಏನಿಲ್ಲ. ಸ್ವಲ್ಪ ಹಾಲುತನ್ನಿ, ಬೇಗತನ್ನಿ!" ಎಂದರು ಸುಮಿತ್ರಾಬಾಯಿಯವರು ಉದ್ವೇಗಗೊಂಡು. ನಾಗಿಯು ಅಡಿಗೆಮನೆಗೋಡಿ ಒಂದು ಕಂಚಿನ ಲೋಟೆಯಲ್ಲಿ ಹಾಲು ಹಿಡಕೊಂಡು ಓಡಿಬಂದಳು. ಅವಳ ಕೈಕಾಲುಗಳು ಕಂಪಿಸುತ್ತಿದ್ದವು. ಹೃದಯವು ದಡಬಡಿಸುತ್ತಿತ್ತು. ಸುಮಿತ್ರಾಬಾಯಿಯವರು. "ಲಲಿತ, ಲಲಿತ! ಇದೋ ಸ್ವಲ್ಪ ಹಾಲುಕುಡಿ ಮಗು" ಎಂದರು. ಲಲಿತೆಯು ಮೆಲ್ಲಗೆ ಬಾಯಿತೆರೆದು ಹಾಲು ಕುಡಿದು ತುಸು ಸಮಯದಲ್ಲಿ ಕಣ್ಣು ತೆರೆದಳು. ಮತ್ತು ಕಣ್ಣೀರು ಹರಿಯತೊಡಗಿತು. ಆಗ ನಾಗಿಯು ತಳಮಳಗೊಂಡು, "ಅಮ್ಮಾ, ನೀವಿನ್ನು ಹೋಗಿ. ಡಾಕ್ಟರರು ಬರುವ ಹೊತ್ತಾಯಿತು. ಯಾರನ್ನೂ ಲಲಿತೆಯ ಹತ್ತಿರ ಬರಬಿಡಕೂಡದೆಂದವರು ಹೇಳಿರುವರು. ಮತ್ತೆ ಸಿಟ್ಟುಗೊಂಡಾರು" ಎಂದಳು. ಸುಮಿತ್ರಾಬಾಯಿಯವರು ತುಸು ಕಠಿಣ ದೃಷ್ಟಿಯನ್ನೊಮ್ಮೆ ನಾಗಿಯ ಕಡೆಗೆ ಬೀರಿ, "ಆಯ್ತಾಯ್ತು ಹೋಗುತ್ತೇನೆ; ಇನ್ನೊಮ್ಮೆ ಬರುತ್ತೇನೆ" ಎಂದರು. "ಯಾಕೆ ಇನ್ನೊಮ್ಮೆ ಬರುವುದಮ್ಮಾ? ಲಲಿತೆಯು ಇನ್ನು ಶಾಲೆಗೆ ಬರುವಹಾಗಿಲ್ಲ. ನಮ್ಮ ಮನೆಗೆಲ್ಲಾ ನೀವು ಯಾಕೆ ಬರುವುದು? ಇನ್ನು ಬರುವುದು ಬೇಡಮ್ಮಾ" ಎಂದುಬಿಟ್ಟಳು ನಿರ್ದಾಕ್ಷಿಣ್ಯವಾಗಿ. ಸುಮಿತ್ರಾಬಾಯಿಯವರನ್ನು ಕಂಡರೆ ಲಲಿತೆಗೆ ಅಸಹನೀಯ ದುಃಖವಾಗುವುದೆಂಬ, ಮತ್ತು ಲಲಿತೆಯನ್ನವರು ಪುನಃ ಎಲ್ಲಿಯಾದರೂ ತನ್ನ ವಶಮಾಡಿಕೊಂಡುಬಿಟ್ಟರೆ ಮತ್ತೇನು ಆಪತ್ತುಂಟಾಗುವುದೋ ಎಂಬ ಭೀತಿ ನಾಗಿಗೆ. ಸುಮಿತ್ರಾಬಾಯಿಯವರಿಗೆ ನಾಗಿಯ ಅಭಿಪ್ರಾಯವೆಲ್ಲಾ ತಿಳಿದುಹೋಯಿತು. ಅವರು ಲಲಿತೆಯನ್ನು ನೋಡಿ ದೀರ್ಘ ನಿಶ್ವಾಸಬಿಟ್ಟರು. "ಲಲಿತ ನಾನು ಹೋಗುತ್ತೇನೆ. ಸಂತಾಪಪಡಬೇಡ." ಎಂದು ಹೇಳುವಾಗಲೆ ಒಮ್ಮೆಯೇ ದುಃಖವು ಏರಿಬರಲು ಅವರು ಸೆರಗಿನ ತುದಿಯನ್ನು ಬಾಯಿಗೊತ್ತಿಟ್ಟು ಕಚ್ಚಿಹಿಡಿದು ಕಣ್ಣೀರಿಳಿಸುತ್ತಾ ಹೊರನಡೆದುಬಿಟ್ಟರು. ಆದರೆ ಲಲಿತೆಯ ಕೋಣೆಬಿಟ್ಟು ಚಾವಡಿಗೆ ಹೋದೊಡನೆಯೇ ಅವರಿಗೆ ಕಾಲೇ ಬಾರದು. ಎಷ್ಟು ಪ್ರಯತ್ನಿಸಿದರೂ ಹೆಜ್ಜೆಯಿಡಲು ಸಾಧ್ಯವಾಗದೆ ಹೋಯಿತು. ಅವರು ತುಸು ಹೊತ್ತು ನಿಂತಲ್ಲೇ ನಿಂತರು. ಆ ಮೇಲೆ ಅದೇನೋ ಬೇರೆ ಯೋಚನೆ ಮಾಡಿ ದೃಢ ನಿರ್ಧಾರ ಮಾಡಿದರು. ಮೆಲ್ಲಗೆ ನಾಗಿಯ ಮನೆಯಿಂದ ಹೊರ ನಡೆದರು. ಅವರು ಮನೆಗೆ ಹೋಗುವಾಗ ಅವರ ಮನಸ್ಸಿನಲ್ಲುಂಟಾದ ಭಾವನೆಗಳನ್ನೆಲ್ಲಾ ನಾವಿಲ್ಲಿ ವಿವರಿಸುವ ಅವಶ್ಯವಿಲ್ಲ. ವಾಚಕರೇ ಅದನ್ನು ಊಹಿಸಿಕೊಳ್ಳಬಹುದು.

ಶರಾಬು! ಶರಾಬು!! ಬೇಡಮ್ಮಾ ಬೇಡ! ನನಗದನ್ನು ಕುಡಿಸಬೇಡ!!

(ಮುಂದಿನ ಸಂಚಿಕೆ ನೋಡಿರಿ)

"NAVAYUGA"—is the best medium for—ADVERTISEMENT.

ವಿದ್ಯಾಭ್ಯಾಸದಲ್ಲಿ ಸುಧಾರಣೆಗಳ ಆವಶ್ಯಕತೆ

(ಲೇಖಕ:— ಗಣೇಶ ಸುಬ್ಬಪ್ಪಯ್ಯ, ಬೆಳ್ಳಾರೆ, ದ. ಕ.)

ನಮ್ಮ ದೇಶದ ವಿದ್ಯಾಭ್ಯಾಸದ ರೀತಿಯು ಬಹಳ ಹೀನಸ್ಥಿತಿಯಲ್ಲಿದೆ. ಅದು ದೇಶದ ಸ್ಥಿತಿಗಳನ್ನನುಸರಿಸಿಕೊಂಡು, ಈ ಕಾಲಕ್ಕೆ ಸರಿಯಾಗಿ ಜೀವನವನ್ನು ನಡೆಸಲು ಅನುಕೂಲವಾಗುವಂತೆ ಇರುವುದಿಲ್ಲ. ನಮ್ಮಲ್ಲಿಯ ವಿದ್ಯಾಭ್ಯಾಸದ ರೀತಿಯು ದೇಶಸ್ಥಿತಿಗಳಿಗೆ ಸರಿಯಾಗಿ, ಮಾರ್ಪಾಡು ಹೊಂದದ ಕಾರಣ, ಇತರ ಪಾಶ್ಚಾತ್ಯ ರಾಷ್ಟ್ರಗಳ ವಿದ್ಯಾಭ್ಯಾಸದ ಕ್ರಮಗಳಿಗಿಂತ ಕೆಳಗಿನ ತರಗತಿ ಬರಲು ಕಾರಣವಾಗಿರುತ್ತದೆ. ಮುಖ್ಯವಾಗಿ ಆರ್ಥಿಕ ದುಸ್ಥಿತಿಯು ಇಡೀ ದೇಶವನ್ನೇ ವ್ಯಾಪಿಸಿರುತ್ತದೆ. ಆದುದರಿಂದ ಪ್ರತಿಒಬ್ಬನಿಗೂ ತನ್ನ ಜೀವನವನ್ನು ಸುಸೂತ್ರವಾಗಿ ಸಾಗಿಸತಕ್ಕ ವಿದ್ಯಾಭ್ಯಾಸದ ಆಗತ್ಯವಿರುತ್ತದೆ.

ಹಿಂದೂ ದೇಶದ ಈಗಿನ ಶಾಲೆ, ಕಾಲೇಜುಗಳಲ್ಲಿ ಬರೇ ನೌಕರಿಗೆ ಬೇಕಾಗುವ ರೀತಿಯ ಶಿಕ್ಷಣವನ್ನು ಮಾತ್ರ ಕೊಡುತ್ತಾರೆ ಅಲ್ಲದೆ, ಪ್ರತಿವರ್ಷದಲ್ಲಿಯೂ ನೌಕರಿಗಳು ಯೋಗ್ಯವುಳ್ಳ ಅನೇಕ ಮಂದಿ ಗಳು ಕಾಲೇಜುಗಳಿಂದ ಉತ್ತೀರ್ಣರಾಗಿ ಬರುತ್ತಿದ್ದಾರೆ. ಅವರು ನೌಕರಿಗಾಗಿ ಬಹಳ ಅಲೆಯಬೇಕಾಗುವುದು. ನಿರುದ್ಯೋಗವು (Unemployment) ದಿನೇ ದಿನೇ ಪ್ರಾಬಲ್ಯ ಹೊಂದುತ್ತಿರಲು ಇಂತಹರಿಗೆ ಉದ್ಯೋಗವು ಹೇಗೆ ದೊರಕಬೇಕು? ನೌಕರಿಯೊಂದಲ್ಲದೆ ಇತರ ಯಾವ ಸ್ವತಂತ್ರವಾದ ವೃತ್ತಿಯನ್ನು ಅವಲಂಬಿಸಲು ಅವರು ದುರ್ಬಲರಾಗಿರುತ್ತಾರೆ.

ಇಂತಹ ನಿರುದ್ಯೋಗವನ್ನು ಕಡಿಮೆ ಮಾಡಬೇಕಾದರೆ, ನಮ್ಮ ದೇಶದ ವಿದ್ಯಾಭ್ಯಾಸದಲ್ಲಿ ಸುಧಾರಣೆಗಳ ಆವಶ್ಯಕತೆಯಿರುತ್ತದೆ. ನಮ್ಮ ಜೀವನವನ್ನು ಸ್ವತಂತ್ರವಾಗಿ ನಡೆಸುವ ವಿಧಾನವನ್ನು ಬೋಧಿಸತಕ್ಕ ಶಿಕ್ಷಣವೂ ನಮಗೆ ಆಗತ್ಯವಿರುತ್ತದೆ. ಅಂತಹ ಶಿಕ್ಷಣವನ್ನು ಅಭ್ಯಾಸಗಳ ಮೂಲಕ (Practically) ಬೋಧಿಸುವ ಏರ್ಪಾಡುಮಾಡಬೇಕು. ನಮಗೆ ಆಗತ್ಯವಿರುವ ಎಲ್ಲಾ ತರದ ಕೃಷಿ, ಕೈಗಾರಿಕೆ, ಮೊದಲಾದುವುಗಳನ್ನು ಕಲಿಸಬೇಕು.

ಕೃಷಿಯ ಅಭ್ಯಾಸವು ಪ್ರಧಾನವಾದುದು. "ಕೃಷಿಕನಿಗೆ ದುರ್ಭಿಕ್ಷವು ಬರಲಾರದು" ಎಂಬ ಗಾದೆಯು ಸತ್ಯ. ಶಾಲೆಯ ವಿದ್ಯಾರ್ಥಿಗಳು ಎಲ್ಲಾ ತರದ ಸಸ್ಯಗಳನ್ನು ವ್ಯವಸಾಯಮಾಡುವ ಕ್ರಮಗಳನ್ನು ಅಭ್ಯಾಸಿಸಬೇಕು. ಸಸ್ಯಗಳನ್ನು ಬೆಳೆಸುವ ಕ್ರಮವನ್ನು ಬೋಧಿಸುವುದರಿಂದ ಮಾತ್ರ ಪ್ರಯೋಜನವು ಸಿಗಲಾರದು. ಪ್ರತಿ ಒಂದು ತೆರನಾದ ಸಸ್ಯಗಳನ್ನು ವಿದ್ಯಾರ್ಥಿಗಳು ಸ್ವತಃ ಬೆಳೆಯಿಸಿ ಅದರ ಅನುಭವ (Experience) ವನ್ನು ಪಡೆಯಬೇಕು. ಹೊಲಗಳಲ್ಲಿ ವಿದ್ಯಾರ್ಥಿಗಳು ಕೆಲಸಮಾಡಬೇಕು. ಉಳುವುದು, ಬಿತ್ತುವುದು, ಪೈರನ್ನು ಶೇಖರಿಸುವುದು ಮೊದಲಾದುವುಗಳನ್ನು ಕಲಿತುಕೊಳ್ಳುವುದು ಅತ್ಯಾವಶ್ಯಕ. ಇಂತಹ ಯೋಜನೆಗಳಿಗೆ ಶಾಲೆಗಳಿಗೆ ಮಾದರಿಗಾಗಿ ಹೊಲಗಳೂ ತೋಟಗಳೂ ಆಗತ್ಯವಿರುತ್ತವೆ. ಪ್ರತಿಯೊಂದು ಶಿಕ್ಷಣವನ್ನು ಶಾಸ್ತ್ರೀಯವಾಗಿ ಕೊಡಬೇಕು.

ಕೃಷಿಯಂತೆ ಕೈಗಾರಿಕೆಯೂ ಪ್ರಧಾನವಾದುದು. ನಮ್ಮ ದೇಶಕ್ಕೆ ಬೇಕಾದ ಸಾಮಗ್ರಿಗಳನ್ನು ನಾವೇ ಒದಗಿಸಿಕೊಳ್ಳುವಷ್ಟು ಸಮರ್ಥರಾಗಬೇಕು. ಎಲ್ಲಾ ತರದ ಕೈಗಾರಿಕೆಗಳ ಶಿಕ್ಷಣವನ್ನು ಕೊಡುವ ಏರ್ಪಾಡು ಆಗತ್ಯವಿದೆ. ಕೈಗಾರಿಕೆಗಳನ್ನು ಸ್ವತಃ ವಿದ್ಯಾರ್ಥಿಗಳಿಂದಲೇ ಮಾಡಿಸಬೇಕು. ಇದಕ್ಕಾಗಿ ವಿದ್ಯಾರ್ಥಿಗಳು ತಮ್ಮ ಪಾಠದಸಮಯದಲ್ಲೇ ಕೈಗಾರಿಕೆಗಳ ಕಾರಖಾನೆಗಳಿಗೆ ಹೋಗಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬೇಕು. ಕಾರಖಾನೆಗಳಿಗೆ ಹೋಗಿ ಅಲ್ಲಿನ ಕೆಲಸಗಾರರೊಡನೆ (workers) ಕಲೆಯುವುದರಿಂದ ಹೆಚ್ಚಿನ ಅನುಭವವುಂಟಾಗಬಹುದು. ಈ ರೀತಿಯ ಏರ್ಪಾಡು ಅಮೇರಿಕಾ ಖಂಡದ ಸಂಯುಕ್ತ ಸಂಸ್ಥಾನ(United States of America)ದಲ್ಲಿದೆ. ಅದರಿಂದ ಅಲ್ಲಿನ ವಿದ್ಯಾರ್ಥಿಗಳು ಹೆಚ್ಚಿನ ಅನುಭವವನ್ನು ಪಡೆಯುತ್ತಿದ್ದಾರೆ. ಇಂತಹ ಕ್ರಮಗಳೆಲ್ಲವು ನಮಗೆ ಮಾತ್ರ ಹೊಸದು. ಇತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ರೀತಿಯ ವಿದ್ಯಾಭ್ಯಾಸವೂ ಆಚರಣೆಯಲ್ಲಿದೆ.

ಇನ್ನು ವ್ಯವಹಾರದ ಕ್ರಮವನ್ನು ಬೋಧಿಸುವುದು ಆಗತ್ಯವಿದೆ. ಸ್ವದೇಶ ಮತ್ತು ವಿದೇಶಗಳಲ್ಲಿ ವ್ಯವಹರಿಸುವ ಕ್ರಮಗಳನ್ನು ವಿದ್ಯಾರ್ಥಿಗಳು ಅರಿತಿರಬೇಕು. ಈರೀತಿಯ ಸುಧಾರಣೆಗಳು ವಿದ್ಯಾಭ್ಯಾಸದ ಕ್ರಮಗಳಲ್ಲಿ ಆಗತ್ಯವಿರುತ್ತದೆ. ಅವುಗಳನ್ನು ಇನ್ನಾದರೂ ಅನುಸರಿಸಿದರೆ ನಮ್ಮಲ್ಲಿನ ವಿದ್ಯಾವಂತ ತರುಣರಿಗೆ ಬರುವ ನಿರುದ್ಯೋಗದ ದುರವಸ್ಥೆಯು ದೂರವಾಗಬಹುದು.

ಕಿರಿಯರ ಪ್ರಪಂಚದ ಪುಸ್ತಕಗಳು

೧ ನಾಟಕಕಥೆಗಳು	೦	೨	೦
೨ ಮುಂದಿನ ದೇವರು	೦	೨	೦
೩ ಸ್ವತಂತ್ರ ಜೀವನೋಪಾಯ	೦	೨	೬
೪ ಕುಶ-ಲವ	೦	೪	೦
೫ ಸಂಶಯ ಪಿಶಾಚಿ	೦	೬	೦
೬ ಕಾವ್ಯಸಾಮ್ರಾಜ್ಯ	೦	೧೨	೦
೭ ಮಧುವನ	೧	೮	೦
೮ ವ್ಯಭಿಚಾರಿಣಿ ಯಾರು?	೦	೮	೦
೯ ಹೆಂಡ್ತಿ ಗಂಡನಾದರೆ!	೦	೪	೦
೧೦ ಪುರುಷಪಥ!	೦	೪	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು

ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಮಾಸ] **ಕಥಾಕುಂಜ** [ಪತ್ರಿಕೆ

ನಯನ ಮನೋಹರವಾಗಿ ಹೊಸಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಹೊರಡುತ್ತಿದೆ. ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ.

ಚಂದಾ ೧—೮—೦ (ಅಂಚೆವೆಚ್ಚ ಬೇರೆ)

ಜಾಹೀರಾತುಗಳಿಗೆ ಸುವರ್ಣ ಸಂಧಿ!

ವಿಶೇಷ ಮಾಹಿತಿಗೆ ಬರೆಯಿರಿ.

ವ್ಯವಸ್ಥಾಪಕ, ಕಥಾಕುಂಜ
ಬೆಳಗಾಂವಿ.

CHEAPEST SAFEST INDUSTRIAL
INSURE WITH REPRESENT
RANJIT
B.M.A. Co. Ltd. AMRITSAR
APPLY FOR HONOURABLE JOB & DECENT SALARY

ವಾರ] 'ನವಯುಗ' [ಪತ್ರಿಕೆ

ವಾರ್ಷಿಕ ಚಂದಾ	ರೂ ೩—೪—೦
೬ ತಿಂಗಳಿಗೆ	ರೂ. ೧—೧೨—೦

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ನೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆಸೀರೆಗಳೂ, ಖಣ, ಮಡಿ ಕದಪಾನ್ನಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲನ್ ಚೌಕ, ಧಾವಳಿ, ನಾಮುಣಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯು ಪದಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ಪಡಲು ಸಾದಾ 16 ಮೊಳದ ಶೀರೆ 1ಕ್ಕೆ ರೂ. 16 ರಿಂದ ರೂ. 35ರ ವರೆಗೆ, ಅರೆ ಕಡಮೆ 16 ಮೊಳ ಕ್ಷವರ್ ಅಂಚು ರೂ. 10½ ಯಿಂದ ರೂ 16, ಖಣ 1ಕ್ಕೆ ರೂ. 1½ರಿಂದ ರೂ 10ರ ವರೆಗೆ ಪೋಸ್ಟು ಖರ್ಚು ಪ್ರತ್ಯೇಕ, ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ



ಧರ್ಮಾರ್ಥ ಬಹುಮಾನಗಳು 1-4-0ಗೆ !

-·- ಯಾರಿಗೆ ? -·-

ರೂಪಾಯಿ 1—4—0 ಕೊಟ್ಟು 14 ಸಿನ್ ಫ಼ಾಟ್ಪೋ ರೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ.—3 ಡಮ್ಮಿ ರಿಸ್ಟ್ ವಾಚುಗಳು; 1 ರೈಲ್ವೆಟೈಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಶ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್ ; 1 ಜತೆ ಗುಬ್ಬಿ, 1 ಫೌಂಟನ್ ಪೆನು 14 ಕ್ಯಾರೆಟ್ ನಿಬ್ಬು ಸಮೇತ 1 ಇಮಿಟೇಶನ್ ಮೋತಿಮಲ್ಲರ್, 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟೈಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0.   ಇಂದೇ ಆರ್ಡರು ಕೊಡಿರಿ

Bengal Watch Co.,
Post Box No. 12214, CALCUTTA

The Combined Booking Agency

AND

The Joint Booking Office

MANGALORE, SOUTH KANARA.

ಅತ್ಯಲ್ಪ ಖರ್ಚಿನಿಂದ !   ಅತಿ ಸುಖಕರವಾದ ಪ್ರಯಾಣ !

ಮುಂಬಾಯಿ, ಗೋವಾ, ಕಾರವಾರು ಇತ್ಯಾದಿ ಕಡೆಗಳಿಗೆ
ನಮ್ಮ ಬಸ್ಸುಗಳ ಮೂಲಕ—

ಕಡೂರು ಮಾರ್ಗವಾಗಿ ಮುಂಬಾಯಿಗೂ, ಶಿವಮೊಗ್ಗಾ ಹರಿಹರಕ್ಕಾಗಿ ಹುಬ್ಬಳ್ಳಿ, ಬೆಳಗಾಂ, ಮುಂಬಾಯಿ ಪ್ರಾಂತ್ಯಕ್ಕೂ ಕಾರವಾರ ಮಾರ್ಗವಾಗಿ ಮುಂಬಾಯಿ ಪ್ರಾಂತ್ಯಕ್ಕೂ ಅತ್ಯಲ್ಪ ಖರ್ಚಿನಿಂದ ಅತಿ ಸುಖಕರವಾಗಿ ಪ್ರಯಾಣ ಬೆಳಸಲನುಕೂಲ.

ಊರುಗಳ ಬದಲಾವಣೆ, ನೋಟುಗಳ ಬದಲಾವಣೆ, ಜನತೆಯ ಸಂಪರ್ಕ, ಆಹಾರದ ಅನುಕೂಲ್ಯ, ವಿಶ್ರಾಂತಿ ಗೃಹಗಳ ಏರ್ಪಾಡು, ನೌಕರರ ಸಭ್ಯತೆ, ಇವೆಲ್ಲವೂ ಬಸ್ಸು ಪ್ರಯಾಣದಲ್ಲಿವೆ.

ನೀವು ಕಂಡ ಕುಂದು ಕೊರತೆಗಳ ಬಗ್ಗೆ ನಮ್ಮ ಸಂಸ್ಥೆಯ ಜ್ಯೊಂಟ್ ಮೆನೇಜರರಿಗೆ ಬರೆದು ತಿಳಿಸಿರಿ—

ಜ್ಯೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು,
ಮತ್ತು
ಜ್ಯೊಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು.

The Coondapoor Bank, Ltd.,

Head Office:- **Coondapoor**. Branch Office:-**Brahmavar**.

Beg to announce that a new Branch has been opened at SHANKARANARAYANA on 4-6-37.

ದಿ ಕುಂದಾಪುರ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ | ಶಾಖೆ: ಬ್ರಹ್ಮಾವರ

ಶಂಕರನಾರಾಯಣ ಇಲ್ಲಿಜೂನ್ ತಾ.4ರಲ್ಲಿ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ.

ಚಾಲ್ತಿ ಠೇವಣಾತಿಗಳು ಸಾ.ಶೆ.2, **ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು**ಸಾ.ಶೆ 4,

ಕಾಯಂ ಠೇವಣಾತಿಗಳು 3 **ತಿಂಗಳ ಬಾಬತು** ಸಾ. ಶೆ. 4.

6 **ಮತ್ತು** 9 **ತಿಂಗಳುಗಳ ಬಾಬತು ಸಾಲಿಯಾನ್ ಶೇಕಡಾ ರೂಪಾಯ** 5%,

1 **ವರುಷದ ಬಾಬತು ಸಾಲಿಯಾನ್ ಶೇಕಡಾ ರೂಪಾಯ** 5½%.

2 **ವರ್ಷದ ಮೇಲಿನವುಗಳ ಬಾಬತು ಸಾಲಿಯಾನ್ ಶೇಕಡಾ** 6% **ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.**

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾತರದ ವ್ಯವಹಾರಗಳು ನಡೆಸಲ್ಪಡುತ್ತವೆ.

ಭಂಗಾರದ ಈಡಿನಮೇಲೂ ಸಾಲದೊರೆಯುವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯ 10 ಸಹಾ ಸಾಲಕೊಡಲಾಗುತ್ತದೆ. ಫಾರುಗಳು ದೊರೆಯುತ್ತವೆ, ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನವಿಳಾಸಕ್ಕೆ ಬರಕೊಳ್ಳಿರಿ.

Halsnad Soorappayya, ಚೆಯರ್‌ಮೇನ್. **N. Sheshagiri Rao**, ಸೆಕ್ರೆಟರಿ.

ದಿ ಕುಂದಾಪುರ ಬೇಂಕ್ ಲಿಮಿಟೆಡ್,
ಕೊಡ್ಗಿ ಬಿಲ್ಡಿಂಗ್, ಕುಂದಾಪುರ.

ಮದನರತಿ ಕಾಮಶಾಸ್ತ್ರ ಎಂಬ ರಹಸ್ಯ ಪುಸ್ತಕ ಕನ್ನಡ ಭಾಷೆಯಲ್ಲಿ ಪ್ರಿಂಟಾಗಿದೆ.

ಇದರಲ್ಲಿ ಚೈನಾ, ಸಿಲೋನ್, ಆಫ್ರಿಕನ್, ಫ್ರೆಂಚ್, ಜರ್ಮನ್, ಮಲೆಯಾಳ ಮೊದಲಾದ ದೇಶದ ಹೆಂಗಸರು ಪ್ರೀತಿಸುವ ಮರ್ಮಗಳು, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು ಇನ್ನೂ ಸ್ತ್ರೀ-ಪುರುಷರ ಲೀಲಾ ವಿನೋದಗಳು ಮಲಗುವ ಮನೆಯ ಪ್ರೀತಿಯ ೩೨ ಫೊಟೋಗಳನ್ನು ನೋಡುತ್ತಾ ಕೂತರೆ ಕನ್ನಡ ಪುಸ್ತಕ ಓದಿ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಇದರ ಸಂಗಡ ೨೦ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೊಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ. **ಕ್ರಯ ರೂ. ೧.**

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧಿಯನ್ನು ತಿಂದು ಗಂಟೆ ಕಾಲ ತಡೆದು ಸ್ತ್ರೀಸುಖಮಾಡಿದರೆ ಬೇಗನೇ ಸ್ಖಲನವಾಗದೆ ಶಕ್ತಿಯನ್ನೂ ಆನಂದವನ್ನೂ ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲಿ ವಿವರವಾಗಿ ತಿಳಿಸಲು ಆಗದು. ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ. **ಕ್ರಯ ಡಬ್ಬಿ 1ಕ್ಕೆ 1-8-0.**

ವಿಳಾಸ—ಎಲ್ಗಿನ್ ಟ್ರೇಡಿಂಗ್ ಕಂಪೆನಿ,

೩. ಕೃಷ್ಣಪ್ಪನಾಯ್ಕನ್ ಟ್ಯಾಂಕ್ ಬೀದಿ, ಜಿ. ಟಿ. ಮದರಾಸ್.

ಇದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಬೆಲೆ ೦—೪—೦

ಪುರುಷವಧು

ನಕ್ಕುಷ್ಟು ನಗಿಸುವ ಏಕಾಂಕ ಪ್ರಹಸನ.
ತಿಂಯರ ಪ್ರಪಂಚ, ಉಡುಪಿ.

SUPPLY AGENCY LTD. UDIPI

ಸಪ್ಲೈ ಏಜೆನ್ಸಿ ಲಿಮಿಟೆಡ್ ಉಡುಪಿ

Authorised Capital Rs. 1,00,000 **Subscribed & Paid up Capital Rs. 29,720**

ಈ ಕೆಳಗಿನ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

3	**ತಿಂಗಳಿಂದ**	6	**ತಿಂಗಳ ವರೆಗೆ**	4½%
7	,,	9	,,	5%
10	,,	12	,,	5½%
13	,,	24	,,	6¼%

ಹೆಚ್ಚಿನ ವಿವರಗಳಿಗೆ ಮುಖತಃ ಬಂದು ಮಾತನಾಡಬಹುದು ಅಥವಾ ಕಾಗದ ಬರೆಯಬಹುದು.

ಎಸ್. ಉಮ. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

USE

SUVASINI AGARBATHIES

(REGISTERED)

SRI BHARATHA VASTU MANDIRA, UDIPI.

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618 ಒಂದಾಣೆ

NAVA...
A Nationalist Kanarese Weekly

It will pay you to advertise in 'NAVAYUGA' The Leading Nationalist Kanarese Weekly of Karnatak

FOR RATES OF ADVT. Etc. APPLY TO THE MANAGER



VOL. XVI-NO. 47

29-7-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ವೊಳಗುತಿದೆ ತುಮುಲನಾದ;

ವಾರಪತ್ರಿಕೆ

ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ವೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೨೯ ಜುಲಾಯಿ, ೧೯೩೭ [ಸಂಚಿಕೆ ೪೭

THE

Canara Industrial & Banking SYNDICATE, LIMITED.

[INCORPORATED IN BRITISH INDIA]

ESTD:] [1925

BRANCHES:

1 BOMBAY
2 MANGALORE
3 UDIPI
4 KARKALA
5 KANHANGAD
6 HUNGARCUTTA
7 BRAHMAVAR
8 COONDAPOOR
9 UPPINANGADI
10 KASARGODE
11 PAYYANUR
12 TALIPARAMBA
13 CANNANORE
14 GADAG
15 HUBLI
16 BANGALORE CITY
17 SAGAR
18 BYADGI
19 KARWAR
20 HONAVAR
21 SIRSI
22 ANKOLA
23 KUMTA
24 BHATKAL
25 NANDYAL
26 PRODATTUR
27 TADPATRI
28 BELGAUM
29 HOSPET
30 ADONI
31 BELLARY

Head Office:
"MUKUNDA NIVAS"
UDIPI, (S. I.)

MEMBER: RESERVE BANK OF INDIA
MEMBER: CLEARING HOUSE, BOMBAY

Authorised & Issued Capital	Rs.	10,00,000
Subscribed Capital	„	7,74,300
Paid up Capital & Reserves	„	5,74,790
Total resources exceed	„	46 lakhs

UDIPI,
19th July 1937.

P. A. Pai Bros,
Managing Agents.

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು ಬೊಂಬಾಯಿಯನ್ನು ಸಂದರ್ಶಿಸುವಾಗ ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ! ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ! ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ. ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಇವರಿಂದ ತಿಳಿಯಿರಿ— ಕೆ. ವಿ. ರಾವ್, ಮೆನೇಜರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

ತಿನ್ನೋಪಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
— ...ಣಿಯ ಟ್ರೇಡ್‌ಮಾರ್ಕಿನ್ಳ ರಿಂಗ್‌ವರ್ಮ್
... ಈ ಕೆಳಗಣಂತೆ ವ್ಯತ್ಯಾಸಮಾಡಲ ಗಿದೆ
... ತ್ರಿವರ್ಣದ 'ರೈಸಿಂಗ್ ಸನ್'
ವ ತ್ಯಾಸದ ಸಂಗತಿ...ನ್ನು
... ...ರೂ ಗಮನಿಸಿಕೊಳ್ಳತಕ್ಕದ್ದು
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**
೩೦ ಮಾತ್ರೆಗಳು ರೂ. ೩-೦-೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.

DIAMONDS! **DIAMONDS!!**

K. Ramachandra Krishna Shet

Near Mission High-School, *Mangalore*

SUPERFINE UP TO DATE CUTTING! **ವಜ್ರಗಳು** **BEST BRILLIANCY!!**

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರ... ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಶಕ್ತಿ:— ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

Mohini Harmonium Works, Udipi

Single Hand Harmoniums, Portable Hand Harmoniums,
Double sets of Hand Harmoniums,
Trible sets of Hand Harmoniums,
Folding leg Harmoniums,
Specially Constructed in our Work Shop. Well tuned and fitted

Repairs of all kinds of Musical instruments undertaken at a very moderate rate to the Complete satisfaction of our customers

A Trial order is earnestly solicited.

For Further Particulars

Apply to

M K. KORAGAPPA, *Proprietor.*

ಪ್ರೇಮ ಮೆಡಿಕಲ್ ಕೋಲೇಜು

ಈ ಕೋಲೇಜಿನ ಹೊಸ ವರ್ಷವು ಇದೇ ಜುಲಾಯಿಯ ತಿಂಗಳಲ್ಲಿ ಪ್ರಾರಂಭವಾಗುವದು. ಎಸ್. ಎಸ್. ಎಲ್. ಸಿ. ಮೆಟ್ರಿಕ್, ಅಪ್ಪರ್ ಸೆಕೆಂಡರಿ, ಮೂಲ್ಕಿ ಪರೀಕ್ಷೆಗಳನ್ನು ಪಾಸ್ ಮಾಡಿದವರಿಗೆ ಅವರವರ ಸರ್ಟಿಫಿಕೇಟ್‌ಗಳಿಗೆ ತಕ್ಕ ಇಂಗ್ಲಿಷ್ ಮತ್ತು ಕನ್ನಡ ಕೋರ್ಸ್‌ಗಳಿವೆ. ಇಲ್ಲಿ ಅಭ್ಯಾಸ ಮಾಡಲಿಚ್ಛಿಸುವವರು ಕೂಡಲೆ "**ಪ್ರೊಸ್‌ಪೆಕ್ಟಸ್**"ಗಾಗಿ ೨ ಆಣೆ ಸ್ಟ್ಯಾಂಪು ಇಟ್ಟು ಬರೆಯಬೇಕು.

ತುಂಗಭದ್ರಾ
೧೦-೭-೧೯೩೭

ರಿಜಿಸ್ಟ್ರಾರ್
ಪ್ರೇಮ ವಿದ್ಯಾಪೀಠ

ಉಡುಪಿಯ ಆದರ್ಶ ಉಪಹಾರಗೃಹ !

ಶ್ರೀರಾಮಾ ರೆಸ್ಟೋರೆಂಟ್

ಸುಲಭ ದರದಲ್ಲಿ ತಿಂಡಿ ಪಾನೀಯಗಳು ! **ಮಿತ ದರದಲ್ಲಿ ಊಟ ಉಪಚಾರಗಳು !**

ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ ! ಇಷ್ಟೇ ಅಲ್ಲ, **ಅನುಭವಪೂರ್ಣ ಮೇಲ್ವಿಚಾರಣೆ !**

ಸಂಕೆಕಟ್ಟೆಯಿಂದ ತೆಂಕ, ಕೋರ್ಟು ರೋಡು ಮತ್ತು ಕೋಳಿದಪೇಟೆ ರೋಡು ಒಟ್ಟು ಸೇರುವಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ದಿವ್ಯ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿದರೆ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದು

ಶಾಲಾ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳಿವೆ. — **ಪ್ರವಾಸಿಕರಿಗೆ ತಕ್ಕ ಸೌಕರ್ಯಗಳಿವೆ.**

ಎಚ್. ಗೋಪಾಳ ನಾಯಕ್, **ಪ್ರೊಪ್ರೈಟರ್.**

ಜೂನ್ ತಿಂಗಳ ತಾ. **12**ರಲ್ಲಿ ಶ್ರೀರಾಮಾ ರೆಸ್ಟೋರೆಂಟಿನ ಶಾಖೆಯೊಂದು ಮಂಗಳೂರಲ್ಲಿ ಹೂ ಮಾರ್ಕೇಟಿನಿಂದ ಹಂಪನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸಿಟಿ ಬಿಸ್ಕುಟ್ ವರ್ಕ್ಸಿನ ಎದುರುಗಡೆಯ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಹಿಂದಿನ ಮತ್ತು ಇಂದಿನ ರಾಜ್ಯಭಾರ

ಜನತೆಯ ಹಿತಸಾಧನೆಗೆ ಬೇಕಷ್ಟು ಸಂದರ್ಭವಿದೆ

ಮಹಾತ್ಮಾ ಗಾಂಧಿಯವರ ಅಭಿಮತ.

ಹಳೆಯ ಮತ್ತು ಇಂದಿನ ಹೊಸರಾಜ್ಯಭಾರ ಕ್ರಮಗಳೊಳಗಿರುವ ಪ್ರಾಮುಖ್ಯ ಅಭ್ಯಂತರವನ್ನು ನಾವು ಒಂದುಕ್ಷಣ ಸಮಾಲೋಚಿಸುವ ಅವಶ್ಯವಿದೆ. ಅದುಚೆನ್ನಾಗಿ ಮನವರಿಕೆಯಾಗಬೇಕಾದರೆ, ನಾವು ಇಂಡಿಯಾ ಆಕ್ಟಿನ ವಿಘಾತುಕದೋಷಗಳನ್ನು ತುಸುಸಮಯ ಮರೆತು ಬಿಡಲೆತ್ನಿಸಬೇಕು. ಕಾಂಗ್ರೆಸು ತನ್ನ ದಾರಿ ಬಿಟ್ಟು ಅತಿದೂರ ಸರಿದು ಅಧಿಕಾರಸ್ವೀಕರಿಸಿರುವದಾದರೂ, ಅದು ಪಡೆದಿರುವ ಅಧಿಕಾರ ಪ್ರತಿಯೊಬ್ಬ ಕಾಂಗ್ರೆಸ್ ವಾದಿಯು ಗಮನಿಸಿಕೊಳ್ಳಲಿ. ಮೊದಲು ಮಂತ್ರಿಗಳು ಗವರ್ನರರ ಅಧೀನರಾಗಿ ನಡೆಯಬೇಕಾಗಿತ್ತು. ಈಗ ಅವರು ಕಾಂಗ್ರೆಸಿನ ಅಧೀನವಿರುವರು ಕಾಂಗ್ರೆಸಿಗೆ ಜವಾಬ್ದಾರರಿರುವರು. ಕಾಂಗ್ರೆಸಿನಿಂದಾಗಿ ಅವರಿಗೆ ಆ ಸ್ಥಾನ ದೊರೆತಿರುವುದು. ಗವರ್ನರರನ್ನೂ ಐ. ಸಿ. ಯಸ್. ಮೊದಲಾದ ಉಚ್ಚ ಅಧಿಕಾರಿಗಳನ್ನೂ ತೆಗೆದು ಹಾಕಲು ಸಾಧ್ಯವಿಲ್ಲವಾದರೂ ಮಂತ್ರಿಗಳಮಾತನ್ನವರು ಮನ್ನಿಸತಕ್ಕದ್ದು. ಅಂದೊಂದು ಪರಿಧಿಯೊಳಗೆ ಮಂತ್ರಿಗಳಿಗೆ ಅವರ ಮೇಲೆ ಸಂಪೂರ್ಣ ಅಧಿಕಾರವಿರುವುದು. ಈ ಅಧಿಕಾರದಿಂದಾಗಿ ಕಾಂಗ್ರೆಸ್ ಮಂತ್ರಿಗಳು ಕಾಂಗ್ರೆಸಿನ ಅಂದರೆ ಜನತೆಯ ಶಕ್ತಿಯನು ಹೆಚ್ಚಿಸಬಹುದು. ಮಂತ್ರಿಗಳ ಕೆಲಸವು ಗವರ್ನರರಿಗೆ ಎಷ್ಟೊಂದು ಅಪ್ರಿಯವಾಗಿ ಇರಲಿ, ಅವರು ಇಂಡಿಯಾ ಆಕ್ಟಿನ ವ್ಯಾಪನೆಯೊಳಗೆ ನಡೆದರೆ ಅವರಕೈಯೇ ಮೇಲಾಗುವುದು ಇದನ್ನೆಲ್ಲಾ ಸರಿಯಾಗಿ ಪರಾಮರ್ಶಿಸಿದಾಗ, ಜನತೆಯು ಅಹಿಂಸಾವಾದಿಗಳಾಗಿರುವ ವರೆಗೆ ರಾಷ್ಟ್ರೀಯ ಜೀವನವನ್ನು ಬೆಳೆಸಲು ಕಾಂಗ್ರೆಸ್ ಮಂತ್ರಿಗಳಿಗೆ ಸಾಕಷ್ಟು ಸ್ವಾತಂತ್ರ್ಯವಿರುವುದು. ಈ ಅಧಿಕಾರವನ್ನು ಫಲಕಾರಿಯಾಗಿ ಉಪಯೋಗಿಸುವುದಕ್ಕಾಗಿ ಜನತೆಯು ಕಾಂಗ್ರೆಸ್ ಮಂತ್ರಿಗಳಿಗೆ ಯಥಾರ್ಥವಾದ ಸಹಾಯವನ್ನೀಯಬೇಕು. ಮಂತ್ರಿಗಳು ತಪ್ಪು ಮಾಡಿದರೆ ಅಥವಾ ಕರ್ತವ್ಯಬಾಹಿರರಾದರೆ ಅದನ್ನು ಯಾರಾದರೂ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಗಳಿಗೆ ತಿಳಿಸಿ ಅವರನ್ನೂ ದಾರಿಗೆ ಹಚ್ಚಬಹುದು. ಆದರೆ ಯಾರಾದರೂ ತಾನೇ ನ್ಯಾಯಕರ್ತನಾಗಿ ಬಿಡಬಾರದು. ಕಾಂಗ್ರೆಸಿನ ಅಧಿಕಾರವನ್ನು ಪ್ರಶ್ನಿಸುವ ರಾಜಕೀಯ ಪಕ್ಷವು ದೇಶದಲ್ಲಿ ಇನ್ನಾವುದೂ ಇಲ್ಲೆಂಬುದನ್ನು ಕಾಂಗ್ರೆಸ್ ಪಕ್ಷೀಯರು ಮನಗಂಡುಕೊಳ್ಳಬೇಕು. ಯಾಕಂದರೆ ಇತರ ಪಕ್ಷಗಳವರು ಹಳ್ಳಿಗಳೊಳಗೆ ಹೋಗಿರಲ್ಲಿಲ್ಲ. ಮತ್ತು ಆ ಕೆಲಸವೇನೂ ಒಂದು ದಿನದಲ್ಲಿ ಮಾಡಿ ಮುಗಿಸುವಂತಹದಲ್ಲ.

ಮಂತ್ರಿಗಳು ಅರೆಹೊಟ್ಟೆ ಬರಿಹೊಟ್ಟೆಯಲ್ಲಿ ನರಳುತ್ತಿರುವ ಮಿಲ್ಯಾಂತರ ಜನರ ನಿಜವಾದ ಕ್ಷೇಮಸಾಧನೆಯ ಕಳಕಳಿಕೆಯುಳ್ಳವರಾಗಿ ನಿಸ್ವಾರ್ಥತೆಯಿಂದಲೂ ಪ್ರಾಮಾಣಿಕತೆಯಿಂದಲೂ ಎಚ್ಚರಿಕೆಯಿಂದಲೂಆಸಕ್ತಿಯಿಂದಲೂಕೆಲಸ ಮಾಡುವ ಮನಸ್ಸುಳ್ಳವರಾದರೆ,ಕಾಂಗ್ರೆಸಿನ ಉದ್ದೇಶವಾದ ಸಂಪೂರ್ಣ ಸ್ವಾತಂತ್ರ್ಯದಧ್ಯೇಯಕ್ಕನುಗುಣವಾಗಿಯೇ ಹೆಚ್ಚಿನ ಕೆಲಸಮಾಡುವ ಸಂದರ್ಭವು ಅವರಿಗಿದೆ. ಇಂಡಿಯಾ ಆಕ್ಟುಮಂತ್ರಿಗಳಿಗೆ ಪ್ರಜಾಹಿತಸಾಧನೆಯ ಕೆಲಸಮಾಡಲುಹಣವೇನನ್ನೂ ಬಿಟ್ಟಿಲ್ಲೆಂಬ ವಾದವು ಸಿಂಧುವಾದುದೇ ಆಗಿದೆ. ಆದರೆ ಅದು ಬಹುತೇಕ ಭ್ರಾಮಕವಾದುದು. ನಿಜವಾದ ಹಣವುಶ್ರಮವಲ್ಲದೆ ಲೋಹವಲ್ಲೆಂಬ ಸರ್ ಡೇನಿಯೆಲ್ ಹೆಮಿಲ್ಟನರ ಅಭಿಪ್ರಾಯವನ್ನು ನಾನೊಪ್ಪುವೆನು. ಹಣಕ್ಕೆ ಶ್ರಮದ ಬೆಂಬಲವು ಶ್ರಮಕ್ಕೆ ಹಣದ ಬೆಂಬಲದಷ್ಟೇ ಉತ್ತಮವಾಗಿದೆ.

ಹಿಂದೂದೇಶದಲ್ಲಿ ದೊಡ್ಡ ಹುದ್ದೆ ಪಡೆದಿದ್ದ ಆಂಗ್ಲೇಯ ಅರ್ಥ ಶಾಸ್ತ್ರಜ್ಞರೊಬ್ಬರು 'ನಾವು ಹಿಂದೂದೇಶಕ್ಕೆ ಪರಂಪರಾಗತವಾಗಿ ಬಿಟ್ಟಿರುವ ಅತಿ ಕೆಟ್ಟ ಸೊತ್ತೆಂದರೆ ವಿಪರೀತ ಸಂಬಳದ ನೌಕರವರ್ಗ ಎಂದು ಹೇಳಿರುತ್ತಾರೆ. ಒಮ್ಮೆ ಮಾಡಿರುವುದನ್ನು ಈಗ ತೆಗೆದು ಹಾಕಲು ಸಾಧ್ಯವಿಲ್ಲ. ಈಗ ನಾನು ಸ್ವತಂತ್ರವಾದುದನ್ನೇ ನಾದರೂ ತೊಡಗಬೇಕು. ಈಗ ಕೇವಲ ಹಣದ ಪ್ರೇರಣೆಯಿಂದ ಏನೆಲ್ಲಮಾಡುತ್ತಮೋ ಅದು ಇನ್ನು ಮುಂದೆ ಸೇವಾ ಪ್ರೇರಿತವಾಗಬೇಕು. ಡಾಕ್ಟರರಿಗೂ ಅಧ್ಯಾಪಕರಿಗೂ ಹೆಚ್ಚಿನ ಸಂಬಳವನ್ನೇಕೆ ತೆರಬೇಕು ಬಹುತೇಕವಾದ ಕೆಲಸವನ್ನೆಲ್ಲಾ ಯಾಕೆ ಸಹಕಾರ ತತ್ವದ ಆಧಾರದಿಂದ ನಡಿಸಬಾರದು? 700 ಮಿಲ್ಯ ಜನರು ಶ್ರಮಿಸಲು ಸಿದ್ಧರಿರುವಾಗ ಭಂಡವಾಳದ ಕುರಿತು ವ್ಯಥೆಪಡಬೇಕೇಕೆ? ಸಹಕಾರ ತತ್ವದ ಆಧಾರದ ಮೇಲೆ ಕೆಲಸ ಮಾಡಿದರೆ, ಇದನ್ನೇ ಬೇರೆ ಶಬ್ದಗಳಿಂದ ಹೇಳುವುದಾದರೆ ಸಮತಾವಾದವನ್ನು ಬದಲಾಯಿಸಿ ಕಾರ್ಯಕ್ಕೆ ಹಚ್ಚಿದರೆ ಯಾವುದಕ್ಕೂ ಹಣವು ಬಹಳವಾಗಿ ಬೇಕಾಗಿಲ್ಲ.

ಚಿಕ್ಕದಾದಶೆಗಾಂವ್ ಹಳ್ಳಿಯಲ್ಲಿ ನನಗಿದು ಪ್ರತ್ಯಕ್ಷ ಅನುಭವಕ್ಕೆ ಬಂದಿದೆ ಶೆಗಾಂವಿನ 400ಮಂದಿ ಪ್ರಾಯಸ್ಥರು ನಾನು ಹೇಳಿದ ಹಾಗೆ ಕೆಲಸ ಮಾಡುವ ಮನಸ್ಸುಳ್ಳವರಾದ ಪಕ್ಷದಲ್ಲಿ ವರ್ಷಕ್ಕೆ 10,000 ರೂಪಾಯಿ ಸಂಪಾದಿಸಬಹುದು. ಆದರೆ ಅವರು ಹಾಗೆ ಮಾಡುವುದಿಲ್ಲ ಅವರಲ್ಲಿ ಸಹಕಾರವಿಲ್ಲ. ಬುದ್ಧಿವಂತಿಕೆಯಿಂದ ಕೆಲಸಮಾಡುವ ಕಲೆಯು ಅವರಿಗೆ ಗೊತ್ತಿಲ್ಲ. ಹೊಸತೇನನ್ನಾದರೂ ಕಲಿಯುವ ಮನಸ್ಸು ಅವರಿಗಿಲ್ಲ. ಅಸ್ಪೃಶ್ಯತೆಯು ದೊಡ್ಡ ತೊಡಕಾಗಿ ನಿಂತಿದೆ. ಯಾರಾದರೊಬ್ಬರು ಅವರಿಗೆ ಒಂದ ಲಕ್ಷರೂ. ಕೊಟ್ಟರೂ ಅವರದನ್ನು ಪೋಲು ವೆಚ್ಚಮಾಡಿ ಬಿಡುವರು. ಈಪರಿಸ್ಥಿತಿಗೆ ಅವರುಜವಾಬ್ದಾರರಲ್ಲ. ನಾವು ಮಧ್ಯತರಗತಿಯವರು. ಶೆಗಾಂವಿನಲ್ಲಿ ಯಾದು ನಿಜವಿವುರುವುದೋ ಅದೇ ಇತರ ಹಳ್ಳಿಗಳ ಅವಸ್ಥೆಯೂ ಆಗಿದೆ. ಒಂದು ಪೈಯೇನಾದರೂ ಹೆಚ್ಚು ವೆಚ್ಚಮಾಡದೆ ಸರಕಾರವು ಈ ವಿಷಯದಲ್ಲಿ ಹೆಚ್ಚಿನ ಕೆಲಸ ಮಾಡಬಹುದು ಸರಕಾರಿ ನೌಕರರು ಜನತೆಯ ಪೀಡಕರಾಗುವ ಬದಲಿಗೆ ಸೇವಕರಾಗಬಹುದು. ಹಳ್ಳಿಗರನ್ನು ಏನನ್ನಾದರೂ ಮಾಡುವಂತೆ ಬಲಾತ್ಕಾರಮಾಡಬಾರದು. ನೈತಿಕವಾಗಿಯೂ, ಶಾರೀರಿಕವಾಗಿಯೂ, ಸಾಂಪತ್ತಿಕವಾಗಿಯೂ, ಅವರ ಉನ್ನತಿ ಸಾಧನೆಯ ಕೆಲಸವನ್ನೇ ಮಾಡುವುದೆಂದು ಅವರಲ್ಲಿ ಜಾಗ್ರುತಿಯನ್ನುಂಟು ಮಾಡಬೇಕು.

ಬೇಕಾಗಿದೆ

ಜಿಲ್ಲೆಯ ಒಳಗೂ ಹೊರಗೂ ಸಂಚರಿಸಿ 'ನವಯುಗ'ದ ಚಂದಾದಾರರಿಂದ ಹಣ ವಸೂಲು ಮಾಡಲಿಕ್ಕೂ ಹೊಸ ಚಂದಾದಾರರನ್ನು ಸೇರಿಸಲಿಕ್ಕೂ ನಂಬಿಗಸ್ಥರಾದ, ಚೆನ್ನಾಗಿ ಇಂಗ್ಲಿಷ್ ಕನ್ನಡ ಬಲ್ಲ ಉತ್ಸಾಹೀ ಪ್ರತಿನಿಧಿಗಳೊಬ್ಬರು ಬೇಕು. ಸಂಬಳ ಮತ್ತು ಪ್ರಯಾಣ ವೆಚ್ಚ ಕೊಡಲಾಗುವುದು. ರೂ. 100/- ಡಿಪೊಜಿಟ್ ಇಡಲು ತಯಾರಿರುವವರು ಹೆಚ್ಚಿನ ಮಾಹಿತಿಗೆ ಬರೆಯಿರಿ; ಯಾ ಸ್ವತಃ ಬಂದು ನೋತನಾಡಿರಿ.

ಮೆನೇಜರ್, ನವಯುಗ, ಉಡುಪಿ.

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India.	Charni Road, Bombay No. 4.

INSPECTORATE OFFICE AT:
1. Ottapalam, Malabar District. 2. Central Station Road, Trivandrum.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over	Rs. 80,00,000
Life Funds Over	Rs. 68,00,000
Premium Income Over ...	Rs. 22,54,000
Interest Income	Rs. 3,16,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs. 4,4251,200,

TOTAL BUSINESS IN FORCE **Rs. 4,42,51,200**

ಸಮಾಚಾರ ಸಂಗ್ರಹಃ ಪ್ರಚಂಡ ವೈಮಾನಿಕ ಯುದ್ಧ, ಶ್ರೀ ಸುಭಾಸ ಚಂದ್ರರ ಪತ್ರಗಳೊಡೆಯಲ್ಪಡುವವು, ಡೊಂಗರೆ ಪುರದಲ್ಲಿ ನೆರೆ ಹಾವಳಿ, ಮೇದ್ರಿದಿನಲ್ಲಿ ಸರಕಾರದ ವಿಜಯ, ಚೀನದಲ್ಲಿ ಯುದ್ಧಾರಂಭ.

ಪ್ರಚಂಡ ವೈಮಾನಿಕಯುದ್ಧ

ಇದೇ ತಾ. ೧೯ರಲ್ಲು ಮೇದ್ರಿದಿನ ವಾಯವ್ಯ ಭಾಗದಲ್ಲಿ ಇತಿಹಾಸದಲ್ಲೇ ಅತಿ ದೊಡ್ಡ ವೈಮಾನಿಕ ಯುದ್ಧವು ನಡೆಯಿತು. ಇದರಲ್ಲಿ ೧೬೦ ವಿಮಾನಗಳು ಭಾಗಿಯಾಗಿದ್ದುವು. ಸ್ಪೈನಿಶ್ ಸರಕಾರದ ಕಡೆಯ ೪ ಮತ್ತು ಬಂಡಾಯಗಾರರ ಕಡೆಯ ೧೮ ವಿಮಾನಗಳು ನಾಶವಾದುವೆಂದು ಸರಕಾರದ ಕಡೆಯ ಸುದ್ದಿ. ಮೇದ್ರಿದಿನ ಪಶ್ಚಿಮದಲ್ಲಿ ಸರಕಾರದಕಡೆಯ ಸೈನಿಕರು ಇತ್ತಲಾಗಿ ವಶಮಾಡಿಕೊಂಡ ೩ ಹಳ್ಳಿಗಳನ್ನು ಪುನಃ ವಶಮಾಡಿ ಕೊಳ್ಳಲು ಬಂಡಾಯಗಾರರು ಪ್ರಬಲ ಹೋರಾಟ ನಡಿಸುತ್ತಿರುವರು. ಆದರೆ ಸರಕಾರದ ಸೈನಿಕರು ಅವರನ್ನು ತಡೆಗಟ್ಟಿದರು.

ಮಾರ್ಕೋನಿಯವರ ಮರಣ

ವ್ಯಾರ್‌ಲೆಸ್ ಯಂತ್ರವನ್ನು ಪ್ರಥಮವಾಗಿ ಕಂಡುಹಿಡಿದು ಆ ಕುರಿತು ಹಲವು ಹೊಸ ಶೋಧನೆಗಳನ್ನು ಮಾಡಿರುವ ಮಾರ್ಕೋನಿಯವರು ಇದೇ ತಾ. ೨೦ರಲ್ಲು ಹೃದಯ ಪಕ್ಷವಾತದಿಂದ ಅಕಸ್ಮಾತ್ತಾಗಿ ಮೃತರಾಗಿರುವರು. ಇವರ ಮರಣದಿಂದ ಇಡೀ ಇಟೆಲಿಯು ಶೋಕಗೊಂಡಿರುವುದು.

ಬಣ್ಣದ ಓಟಿನ ಪೆಟ್ಟಿಗೆ

ಬರುವ ಲೋಕಲ್‌ಬೋರ್ಡ್ ಚುನಾವಣೆಗಳಲ್ಲಿ ಕಳದ ಎಸೆಂಬ್ಲಿ ಚುನಾವಣೆಯಂತೆಯೇ ಬಣ್ಣದ ಪೆಟ್ಟಿಗೆಗಳಲ್ಲಿ ಓಟು ಹಾಕುವ ಕ್ರಮವನ್ನು ಜ್ಯಾರಿಗೆ ತರಬೇಕೆಂದು ಹಲವು ಡಿಸ್ಟ್ರಿಕ್ಟ್‌ಬೋರ್ಡ್ ಮತ್ತುಮುನ್ಸಿಪಾಲಿಟಿಗಳು ಸರಕಾರಕ್ಕೆ ಮನವಿಮಾಡಿಕೊಂಡಿರುವವು. ಇಂಟರಿಮ್ ಮಂತ್ರಿಗಳು ಈ ಕುರಿತು ವಿಚಾರಿಸಿ ಅದು ಕೆಟ್ಟದ್ದೆಂದು ನಿರಾಕರಿಸಿರುವರು. ಕಾಂಗ್ರೆಸ್ ಪಕ್ಷೀಯರೀಗ ಅಧಿಕಾರಕ್ಕೆ ಬಂದಮೇಲೆ ಈ ವಿಷಯವನ್ನು ಪುನಃ ಆಲೋಚಿಸುತ್ತಿರುವರು.

ಶ್ರೀ ಸುಭಾಸಚಂದ್ರರ ಪತ್ರಗಳೊಡೆಯಲ್ಪಡುವವು

ಪಂಜಾಬಿನ ಡೌಲ್‌ಹೌಸಿಯೆಂಬ ಆರೋಗ್ಯನಿವಾಸದಲ್ಲಿರುವ ಶ್ರೀ ಸುಭಾಸ ಚಂದ್ರಭೋಸರ ಆರೋಗ್ಯವು ಈಗ ಸ್ವಲ್ಪ ಸುಧಾರಿಸಿದೆ. ಅವರು ಇನ್ನೂ ಕೆಲಸಮಯ ಇಲ್ಲಿಯೇ ಇರುವರು. ಅವರಿಗೆ ಬರುವ ಪತ್ರಗಳನ್ನೆಲ್ಲಾ ಮೊದಲೇ ಯಾರೋ ಒಡೆದು ನೋಡುತ್ತಾರೆಂದು ತಿಳಿದು ಬಂದಿದೆ. ಶ್ರೀ ಭೋಸರ ಪತ್ರಗಳನ್ನು ಒಡೆದು ನೋಡುವಂಥಾದ್ದು ಮೊದಲಿಂದಲೂ ನಡೆಸಲ್ಪಡುತ್ತಿದ್ದರೂ ಅವು ಬೇಗನೆ ಬಟ್ವಾಡೆ ಮಾಡಲ್ಪಡುತ್ತಿದ್ದವು. ಈಗ ಬಟ್ವಾಡೆ ಕೂಡ ತಡವಾಗುತ್ತಿದೆ. ಶ್ರೀ ಭೋಸರು ಈ ಕುರಿತು ಟಪ್ಪಾಲು ಇಲಾಖೆಯವರಿಗೆ ತಿಳಿಸಿ ಪ್ರಯೋಜನವಿಲ್ಲದಾಗಿದೆ. ಇದೇ ರೀತಿ ಮಂತ್ರಿಗಳ ಪತ್ರಗಳು ಒಡೆದು ನೋಡಲ್ಪಟ್ಟು ವಿಳಂಬವಾಗಿ ತಲುಪಿದರೆ ಹೇಗಾಗುತ್ತಿತ್ತೆಂದು ಶ್ರೀ ಭೋಸರ ಹೇಳಿಕೆ.

ಸಿಮ್ಲಾದ ಮಾರ್ಪಟ್ಟ ಮನೋವೃತ್ತಿ

ಆರು ಪ್ರಾಂತಗಳಲ್ಲಿ ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಿದುದರಿಂದ ಸಿಮ್ಲಾದ ಮನೋವೃತ್ತಿಯು ಕೂಡಲೇ ಮಾರ್ಪಾಟ ಹೊಂದಿದೆ. ಹಿಂದೀ ಜನ ಮತವೆಂಬುದೊಂದಿದೆ; ಅದನ್ನು ಮನ್ನಿಸಿ ನಡೆಯಬೇಕೆಂಬ ಮನೋವೃತ್ತಿಯು ವರಿಷ್ಠ ಸರಕಾರದ ಆಡಳಿತಾಧಿಕಾರಿಗಳಲ್ಲಿ ಉಂಟಾಗಿರುತ್ತದೆ. ವೈಸರಾಯರ ಮಂತ್ರಿಮಂಡಲದ ಹಿಂದೀ ಮೆಂಬರರೆಲ್ಲ ಪ್ರಾಮುಖ್ಯ ಪ್ರಶ್ನೆಗಳ ಕುರಿತು ಒಮ್ಮತದ ಧೋರಣೆವಹಿಸಹತ್ತಿದ್ದಾರೆ.

ಬೇಕಾಯಿದೇಶೀರ ಸಂಸ್ಥೆಗಳು

ಸಂಯುಕ್ತಪ್ರಾಂತದಲ್ಲಿ ಕಾಂಗ್ರೆಸ್ ಮಂತ್ರಿಗಳು ಅಧಿಕಾರ ಸ್ವೀಕರಿಸಿದೊಡನೆಯೇ ಕೆಲಮಂದಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದುದಲ್ಲದೆ ರಾಜಕೀಯ ಕಾರಣಗಳಿಂದ ಪತ್ರಿಕೆಗಳಿಂದ ಪಡಕೊಂಡ ಜಾಮೀನುಗಳನ್ನೆಲ್ಲಾ ಹಿಂದೆಕೊಡುವಂತೆ ಮಾಡಿರುವರು. ಇದು ಹೊರತು ಬೇಕಾಯಿದೇಶೀರವಾಗಿ ಮಾಡಲ್ಪಟ್ಟಿದ್ದ ನವಜವಾನ ಭಾರತ ಸಭೆ, ಹಿಂದುಸ್ಥಾನ ಸೇವಾದಳ, ಯುವಕ ಸಂಘ, ಮಜೂರ ಮತ್ತು ಬೇಸಾಯಗಾರರ ಸಂಘ, ಕಿಸನ್ ಸಭಾ, ಸೇವಾದಳ ಕಿಸನ್ ಸಂಘ, ಮತ್ತು ಮಹಾವೀರದಳ ಇವುಗಳ ಮೇಲಿನ ನಿಷೇಧವನ್ನು ತೆಗೆದು ಹಾಕಿರುವರು.

ಖಾನ್ ಅಬ್ದುಲ್ ಗಾಫರ್ ಖಾನರು

ಪಂಜಾಬಿಗೆ ಪ್ರವೇಶಿಸಬಾರದೆಂಬ ನಿರ್ಬಂಧದ ಹುಕುಮನ್ನು ಪಂಜಾಬಿನ ಪ್ರಧಾನ ಮಂತ್ರಿಗಳು ಇದೇ ತಾ. ೨೦ರಲ್ಲು ತೆಗೆದುಹಾಕಿದರು. ಖಾನರು ಇನ್ನು ಮುಂದೆ ಪಂಜಾಬಿಗೆ ಯಾವ ಅಡ್ಡಿಯೂ ಇಲ್ಲದೆ ಪ್ರವೇಶಿಸಬಹುದು. ಖಾನರು ಕೂಡಲೇ ಪಂಜಾಬಿಗೆ ಬಂದು ಕೆಲಸ ಮಾಡಬೇಕೆಂದು ಡಾಕ್ಟರ್ ಸತ್ಯಪಾಲರು ಆಮಂತ್ರಿಸಿರುವರು.

ಡೊಂಗರ ಪುರದಲ್ಲಿ ನೆರೆಹಾವಳಿ

ಗುಜರಾಥಿನ ಡೊಂಗರ ಪುರಸಂಸ್ಥಾನದಲ್ಲಿ ಇದೇ ತಾ. ೨೧ರಲ್ಲು ಮೂರು ದಿನಗಳಲ್ಲಿ ಎಡೆಬಿಡದೆ ಮಳೆಬಿದ್ದು ಹಾವಳಿಯಾಗಿರುವುದು. ಕೇವಲ ೨೪ ಘಂಟೆಗಳಲ್ಲಿ ೩೨ ಇಂಚು ಮಳೆಬಿದ್ದಿರುವುದು. ಇಡೀ ಹಳ್ಳಿಯೇ ನೆರೆಯಲ್ಲಿ ಮುಳುಗಿ ಹೋಗಿರುವುದು. ಮನೆಮಾರು ರಸ್ತೆಗಳಲ್ಲೆಲ್ಲಾ ೧೦ಅಡಿ ಆಳ ನೀರಿದ್ದಿತು. ಸ್ತ್ರೀಯರು ಪುರುಷರು ಮತ್ತು ಮಕ್ಕಳು ಮರಮಟ್ಟು ಮತ್ತು ಮನೆಮಾಡುಗಳಲ್ಲಿ ಆಶ್ರಯ ಪಡೆಯಬೇಕಾಯಿತು. ಸಬರ್ಮತಿ ನದಿಯ ಶಾಖೆಯೊಂದರಲ್ಲಿ ನೆರೆಯೇರಿ ಪರಿಸ್ಥಿತಿಯನ್ನು ಮತ್ತೂ ಕೆಡಿಸಿರುವುದು. ಡೋಂಗರಪುರಸಂಸ್ಥಾನದ ರಾಜರ ಅರಮನೆಯು ನೆರೆಯಿಂದಾವರಿತವಾಗಿ ಅದರ ನಿವಾಸಿಕರನ್ನು ದೋಣಿ ಮೂಲಕ ಎತ್ತರದ ಗುಡ್ಡಸ್ಥಳಕ್ಕೊಯ್ಯಬೇಕಾಯಿತು. ಅನೇಕ ಮಂದಿ ಹಳ್ಳಿಗರು ದೋಣಿಗಳ ಮೂಲಕ ಗುಡ್ಡದ ತುದಿಗಳಿಗೊಯ್ಯಲ್ಪಟ್ಟಿರುವರು. ನೂರಾರು ಮಂದಿ ಮನೆಮಾರು ಕಳಕೊಂಡಿರುವರು. ಅನೇಕ ಜಾನುವಾರುಗಳು ಮುಳುಗಿಹೋಗಿರುವವು. ಕೆಲವರ ಪ್ರಾಣ ಹಾನಿಯಾಗಿರುವುದು. ಸುಮಾರು ರೂ. ೨ ಲಕ್ಷದಷ್ಟು ನಷ್ಟವುಂಟಾಗಿರುವುದು. ಗುಜರಾಥಿನ ಕೈರ, ನದಿಯಾಡ್, ಮಾಥಾರ್, ತಾರಪುರ ಮೊದಲಾದ ಹಳ್ಳಿಗಳೂ ನೆರೆಯಿಂದ ಆವರಿತವಾಗಿರುವವು.

ಮಿ. ಮೆಹರಾಲಿಗಳ ಬಿಡುಗಡೆ

ಬೊಂಬಾಯಿಯ ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷದ ಮುಖಂಡರಲ್ಲೊಬ್ಬರಾದ ಮಿ. ಮೆಹರಾಲಿಯವರು ಕಳದ ತಿಂಗಳ ತಾ. ೩೦ರಲ್ಲು ಮಲಬಾರಿನಲ್ಲಿ ಭಾಷಣ ಮಾಡಬಾರದೆಂಬ ಕಲೆಕ್ಟರರ ನಿಷೇಧ ಹುಕುಮನ್ನುಲ್ಲಂಘಿಸಿದುದಕ್ಕಾಗಿ 6 ತಿಂಗಳ ಶಿಕ್ಷೆಗೊಳಗಾಗಿದ್ದರಷ್ಟೆ. ಇವರನ್ನು ಇದೇ ತಾ. ೨೧ರಲ್ಲು ಬಿಡುಗಡೆಮಾಡಲಾಗಿದೆ. ಮೆಹರಾಲಿಗಳು ಕಾಂಗ್ರೆಸ್ ಮಂತ್ರಿಗಳು ಅಧಿಕಾರಕ್ಕೆ ಬಂದೊಡನೆಯೇ ಬಿಡುಗಡೆ ಹೊಂದುತ್ತಿದ್ದರು. ಆದರೆ ಅವರು-ಜಿಲ್ಲಾ ಜಡ್ಜರಲ್ಲಿ ಅಪೀಲುಮಾಡಿದ್ದುದರಿಂದ ಅದು ತೀರ್ಮಾನವಾಗುವವರೆಗೆ ಕಾಯಬೇಕಾಯಿತು.

ಗಡಿನಾಡಿನ ಹಿಂದುಗಳ ಅವಸ್ಥೆ

ವಾಯವ್ಯ ಗಡಿನಾಡಿನ ಹಿಂದುಗಳ ಅವಸ್ಥೆಯು ಅತ್ಯಂತ ಶೋಚನೀಯವಾಗಿದೆ. ಅವರ ಜೀವನದಲ್ಲಿ ಸುರಕ್ಷಿತತೆಯಿಲ್ಲವಾಗಿದೆ. ಅಲ್ಲಿಯ ಪಂಗಡಿಗರು ಅವರ ಮೇಲೆ ಯಾವಾಗ ಧಾಳಿನಡಿಸುವರೆಂದು ಹೇಳಬರುವುದಿಲ್ಲ. ಜನರನ್ನು ಹಿಡಿದೊಯ್ದು ಬಂಧನದಲ್ಲಿರಿಸಿ ಪರಿಹಾರ ದ್ರವ್ಯ ಕೇಳುವ ಅನಾಚಾರವು ಹಲವು ಕಡೆ ನಡೆದಿರುತ್ತದೆ. ಹೀಗೆ ಕದ್ದೊಯ್ಯಲ್ಪಟ್ಟ ಇಬ್ಬರು ಹಿಂದುಗಳು ತಮ್ಮ ಪಾಡನ್ನು ಈ ರೀತಿ ವಿದಿತಗೊಳಿಸಿರುವರು. ಪಂಗಡಿಗರು ಇವರಿಬ್ಬರ ಕಣ್ಣುಗಳಿಗೂ ಗಟ್ಟಿಯಾಗಿ ವಸ್ತ್ರ ಬಿಗಿದು ತೋರದಂತೆ ಮಾಡಿದರು. ಕೈಗಳೆರಡನ್ನೂ ಹಿಂದಕ್ಕೆ ಕಟ್ಟಿದರು. ಇವರೆಲ್ಲಿಯಾದರೂ ತಪ್ಪಿಸಿಕೊಂಡು ಹೋಗದಂತೆ ದೊಡ್ಡ ಮರದ ಕೊರಡುಗಳನ್ನು ಕಾಲುಗಳಿಗೆ ಕಟ್ಟುತ್ತಿದ್ದರು. ಜೋಳದ ರೊಟ್ಟಿ ಮತ್ತು ನೀರೇ ಇವರ ಆಹಾರವಾಗಿದ್ದಿತು. ಹೀಗೆ ಹಲವು ತಿಂಗಳ ವರೆಗೆ ಕಷ್ಟಕ್ಕೊಳಗಾಗಿದ್ದರು. ಬರಮುಂಡ್ ಎಂಬ ಪ್ರದೇಶಕ್ಕೆ ಬ್ರಿಟಿಷ್ ಸೈನಿಕರು ಧಾಳಿಯಿಟ್ಟಾಗ ಇವರು ಬಿಡುಗಡೆ ಹೊಂದಿದರು.

ಮೇದ್ರಿದಿನಲ್ಲಿ ಸರಕಾರದ ವಿಜಯ

ಇದೇ ತಾ. 18ರಲ್ಲು ಮೇದ್ರಿದಿನ ಪಶ್ಚಿಮದಲ್ಲಿ ದೊಡ್ಡ ಯುದ್ಧವೊಂದು ನಡೆಯಿತು. ಇದರಲ್ಲಿ 40,000 ಮಂದಿ ಸೈನಿಕರು ಭಾಗಿಯಾಗಿದ್ದರು. 15 ದಿವಸಗಳ ಮೊದಲು ಸರಕಾರದ ಕಡೆಯ ಸೈನಿಕರು ವಶಮಾಡಿಕೊಂಡಿದ್ದ ಪಟ್ಟಣಗಳನ್ನು ಪುನಃ ವಶಮಾಡಿಕೊಳ್ಳಬೇಕೆಂದು ಬಂಡಾಯಗಾರರು ಮಾಡಿದ ಪ್ರಯತ್ನವೆಲ್ಲಾ ನಿರರ್ಥಕವಾಗಿರುವುದು. ಇದರಲ್ಲಿ 2,000 ಮಂದಿ ಬಂಡಾಯಗಾರರು ಕೊಲ್ಲಲ್ಪಟ್ಟರು ವರೆಂದು ಸರಕಾರದ ಕಡೆಯ ಸುದ್ದಿ. ಆದರೆ ಬಂಡಾಯಗಾರರ ಕಡೆಯ ಸುದ್ದಿಯು ಪ್ರಕಾರ ಮೇದ್ರಿದಿನ ಪಶ್ಚಿಮದಲ್ಲಿ ನಡೆದ 2 ದಿವಸಗಳ ಯುದ್ಧದಲ್ಲಿ ಸರಕಾರದ

THE
PANGAL NAYAK BANK
LIMITED.
ESTABLISHED 1920.
Paid up Capital: Rs. 1,82,100/-
Head Office: UDIPI.
Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current and Savings Bank deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ಕಡೆಯ ಸೈನಿಕರು ಹಿಂದಕ್ಕಟ್ಟಲ್ಪಟ್ಟು ೪೦೦೦ ಮಂದಿ ಕೊಲ್ಲಲ್ಪಟ್ಟಿರುವರಂತೆ. ಇದು ಸುಳ್ಳೆಂದೂ ಸರಕಾರದ ಕಡೆಯ ಸೈನಿಕರೇ ಜಯಶೀಲರಾಗಿರುವರೆಂದೂ ರ್ಯೂಟರ್ ಸುದ್ದಿ ಬಂದಿದೆ.

ಚೀನದಲ್ಲಿ ಯುದ್ಧಾರಂಭ

ಇದೇ ತಾ. 20ರಲ್ಲು ಜಾಪಾನ್ ಸೈನಿಕರು ವಾಂಗ್‌ಪಿಂಗಿನ ಮೇಲೆ ತುಪಾಕಿ ಧಾಳಿನಡಿಸಿದರು. ಇಲ್ಲಿರುವ ಚೀನಿಯರ ತುಪಾಕಿಗಳು ಗುಂಡು ಹಾರಿಸದಂತೆ ಮಾಡಿದರು. ಇನ್ನೊಂದು ಕಡೆಯಿರುವ ಚೀನೀ ಸೇನೆಯೊಡನೆ ತುಪಾಕಿಯುದ್ಧ ನಡೆದಿರುವುದು. ಶಾಂಘಾಯಿ ಮತ್ತು ನಾನ್ಕಿಂಗಿನಲ್ಲಿರುವ ಜಾಪಾನರ ಕುಟುಂಬಗಳನ್ನು ಜಾಪಾನಿಗೆ ಕಳುಹಿಸುತ್ತಿರುವರು. ಯುದ್ಧವು 40 ಮಿನಿಟುಗಳ ವರೆಗೆ ನಡೆದು ಆ ಮೇಲೆ ನಿಲ್ಲಿಸಲ್ಪಟ್ಟಿರುವುದು ಜಾಪಾನಿನಿಂದ 35,000 ಸೈನಿಕರು ಉತ್ತರ ಚೀನಕ್ಕೆ ಕಳುಹಿಸಲ್ಪಟ್ಟಿರುವರು ಇಷ್ಟರಲ್ಲೇ ಹಲವು ಸಹಸ್ರ ಸೈನಿಕರು ಕಳುಹಿಸಲ್ಪಟ್ಟಿರುವರು.

ವಾಯುವ್ಯ ಗಡಿನಾಡಿನ ಪರಿಸ್ಥಿತಿ

ಸರಕಾರವು ವಾಯುವ್ಯ ಗಡಿನಾಡಿನ ಪಂಗಡಿಗರೊಡನೆ ಸಂಧಿಮಾಡುವ ಕುರಿತು ಪ್ರಸ್ತಾಪಿಸುತ್ತಿರುವುದಾದರೂ ಗಡಿನಾಡಿನ ಗಲಾಟೆಯೇನೂ ನಿಂತಿರುವುದಿಲ್ಲ. ಆಗಾಗ ಬಂಡಾಯಗಾರರು ಬ್ರಿಟಿಷ್ ಸೈನಿಕರ ಮೇಲೆ ಗುಂಡೆಸೆದು ಹಾವಳಿಮಾಡುತ್ತಿದ್ದಾರೆ. ಇಪ್ಪಿಯ ಫಕೀರರು ದುರ್ಗಮವಾದ ಸ್ಥಳದಲ್ಲಿದ್ದುಕೊಂಡು ಭಿಟನ್ನಿ ಮತ್ತು ಮಾಹ್ಸುದ್ ಪಂಗಡಿಗಳ ಪ್ರದೇಶದ ಎಲ್ಲೆಯಲ್ಲಿ ಸರಕಾರದ ವಿರುದ್ಧವಾಗಿ ಯಥಾ ಪ್ರಕಾರ ಚಳವಳ ನಡಿಸುತ್ತಿದ್ದಾರೆ ತಮ್ಮ ಅತಿಥಿಯಾಗುವ ವೈರಿಯನ್ನಾದರೂ ಸ್ವಾಗತೀಕರಿಸಿ ಅವನಿಗೆ ಆಶ್ರಯವೀಯಬೇಕೆಂದು ಗಡಿನಾಡಿನ ಪಂಗಡಿಗರದೊಂದು ಪದ್ಧತಿ. ಇದು ಇಪ್ಪಿಯ ಫಕೀರರಿಗೆ ಬಹಳ ಅನುಕೂಲವಾಗಿದೆ. ಪಂಗಡಿಗರು ತಮ್ಮ ನಡುವೆ ಇರುವ ಫಕೀರರನ್ನು ಎಷ್ಟು ಮಾತ್ರಕ್ಕೂ ಬ್ರಿಟಿಷ್ ಸರಕಾರಕ್ಕೊಪ್ಪಿಸಲಾರರು.

ಫ್ರೇಂಕೋರವರಿಗೆ ಹಣ ಬೇಕಾಗಿದೆ

ಸ್ಪೈನಿನ ತನ್ನ ಬಂಡಾಯವನ್ನು ಮುಂದುವರಿಸಲು ಜನರಲ್ ಫ್ರೇಂಕೋರವರಿಗೆ ಈಗ ಹಣ ಬೇಕಾಗಿದೆ ಅವರು ಇಂಗ್ಲೆಂಡ್ ಮತ್ತು ಫ್ರಾನ್ಸಿನ ಬೇಂಕರರಿಂದ ಹಣ ಪಡೆಯುವ ಪ್ರಯತ್ನ ನಡಿಸುತ್ತಿದ್ದಾರೆ. ಅವರ ಏಜೆಂಟರು ಲಂಡನ್ ಮತ್ತು ಪೆರಿಸಿಗೆ ಹೋಗಿ 75 ಮಿಲ್ಯ ಪವನು ಸಾಲ ಪಡೆಯಲು ಪ್ರಯತ್ನಿಸಿದರು. ಆದರೆ ಅದಕ್ಕಾರೂ ಕಿವಿಗೊಡಲಿಲ್ಲ. ಲಂಡನಿನಿಂದ 25 ಮಿಲ್ಯ ಮತ್ತು ಪೆರಿಸಿನಿಂದ 50 ಮಿಲ್ಯ ಪವನು ಪಡೆಯಬಹುದೆಂದು ಜನರಲ್ ಫ್ರೇಂಕೋರವರ ಏಜಂಟರ ನಿರೀಕ್ಷೆಯಿತ್ತು. ಆದರೆ ಎಲ್ಲಾ ಬೇಂಕುಗಳವರೂ ಆ ವಿಷಯವನ್ನೇ ಆಲೋಚಿಸಲು ನಿರಾಕರಿಸಿ ಬಿಟ್ಟರು. ಜನರಲ್ ಫ್ರೇಂಕೋರವರಿಗೆ ಹಣ ಕೊಡುವುದೂ ಅದನ್ನು ನೀರಿಗೆ ಹಾಕುವುದೂ ಒಂದೇಯೆಂದು ಈ ಬೇಂಕರರು ಸ್ಪಷ್ಟವಾಗಿ ತಿಳಿಸಿರುವರು. ಫ್ರೇಂಕೋರವರ ಏಜಂಟರು ಲಂಡನಿನಲ್ಲಿ ಹಣ ದೊರೆಯುತ್ತದೆಂದು ಪೆರಿಸಿನಲ್ಲಿಯೂ, ಪೆರಿಸಿನಲ್ಲಿ ಸಿಗುತ್ತದೆಂದು ಲಂಡನಿನಲ್ಲಿಯೂ ಹೇಳಿ ಕುತಂತ್ರದಿಂದ ಹಣ ಪಡೆಯಲೆತ್ನಿಸಿದರೂ ಪ್ರಯೋಜನವಾಗಲಿಲ್ಲ

ಹರಿಜನೋದ್ಧಾರ ಕಾರ್ಯ

ಹರಿಜನೋದ್ಧಾರದ ವಿಷಯದಲ್ಲಿ ಮದ್ರಾಸ ಮಂತ್ರಿ ಮಂಡಲವು ವ್ಯಾಪಕವಾದ ಯೋಜನೆಯೊಂದನ್ನು ಕೈಕೊಳ್ಳಲಿರುವುದು. ಈ ಕುರಿತು ಮಜೂರ, ವ್ಯವಸಾಯ ಮತ್ತು ಸ್ಥಳೀಯ ಸ್ವರಾಜ್ಯ ಖಾತೆಗಳ ಮಂತ್ರಿಗಳೂ ಸೆಕ್ರೆಟರಿಗಳೂ ಇರತ ಕೆಲ ಮಂದಿ ಹರಿಜನೋದ್ಧಾರ ಕಾರ್ಯಾಸಕ್ತ ಮಹನೀಯರೊಂದಿಗೆ ಸಭೆ ನೇರಿ ಆಲೋಚಿಸುತ್ತಿರುವರು.

ಗಡಿನಾಡಿನ ಎಸೆಂಬ್ಲಿ ಮೆಂಬರರ ದಸ್ತಗಿರಿ

ವಾಯುವ್ಯ ಗಡಿನಾಡಿನ ಪಾರ್ಲಿಮೆಂಟರಿ ಬೋರ್ಡಿನ ಸೆಕ್ರೆಟರಿಗಳೂ ಎಸೆಂಬ್ಲಿ ಮೆಂಬರರೂ ಆದ ಮಿ ಅರಬಿ ಅಬ್ದುಲ್ ಗಾಫೂರ್ ಖಾನರು ಇದೇ ತಾ ೨೩ರಲ್ಲು ಪೇಶಾವರದಲ್ಲಿ ರಾಜದ್ರೋಹಾತ್ಮಕ ಭಾಷಣವಿತ್ತ ಆರೋಪದಿಂದ ದಸ್ತಗಿರಿ ಮಾಡಲ್ಪಟ್ಟು ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು.

ಕೇರಳದಲ್ಲಿ ದೇವಸ್ಥಾನ ಪ್ರವೇಶ ಚಳವಳ

ವನ್ನು ಪುನಃ ಭರದಿಂದ ನಡೆಸಬೇಕೆಂದು ಕೇರಳ ಹರಿಜನ ಸಂಘದವರು ಸಬೆಸೇರಿ ನಿರ್ಣಯಮಾಡಿರುವರು. ಅದಕ್ಕಾಗಿ ಮಲಬಾರಿನ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಶ್ರೀ ಕೇಳಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯು ನೇಮಿಸಲ್ಪಟ್ಟಿರುವುದು. ಈ ಕಮಿಟಿಯವರು ಕೇರಳದಲ್ಲೆಲ್ಲಾ ಸಂಚರಿಸಿ ಜನಜಾಗ್ರತಿಯನ್ನುಂಟು ಮಾಡಲಿರುವರು ಮತ್ತು ಬರುವ ಸಪ್ಟಂಬರ ತಿಂಗಳಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ಎಂಡೋಮೆಂಟ್ ಖಾತೆಗಳ ಮಂತ್ರಿಗಳಾದ ಡಾಕ್ಟರ್ ರಾಜನರನ್ನು ಕೇರಳಕ್ಕೆ ಆಮಂತ್ರಿಸಿ ಪರಿಷತ್ತೊಂದನ್ನು ನಡೆಸುವ ಆಲೋಚನೆ ಮಾಡಿರುವರು

ಕನ್ನಡ ನುಡಿವೆಣ್ಣಿಗೊಂದು

ವ
ಪ ತ್ರ ಲಾ
ಲಾ

ಕನ್ನಡಗಿತ್ತಿಯ ಕಿರುಗಾಣಿಕೆ

ಲೇಖಕಿಯರು

ಶ್ರೀಮತಿ ಮಟ್ಪಾಡಿ ಕಮಲಾಕ್ಷ

ಸ್ತ್ರೀಯರಿಗೆ ವಿದ್ಯಾಭ್ಯಾಸವಿಲ್ಲದಿರುವುದರ ಪರಿಣಾಮವನ್ನೂ ಸ್ತ್ರೀ ಪುರುಷ ಹೃದಯಗಳ ಪರಿಚಯವನ್ನೂ ಸೂಕ್ತ ಚಿತ್ರಿಸಿದ ಸಾಮಾಜಿಕ ಕಾದಂಬರಿ ಪ್ರತಿಯೊಬ್ಬರೂ ಓದಬೇಕಾದ ಪುಸ್ತಕ.

ಬೆಲೆ 0-7-3 ಮಾತ್ರ

ಒಂದು ಪ್ರತಿ ಬೇಕಾದವರು ಎಂಟಾಣೆ ಸ್ಟಾಂಪು ಕಳುಹಿಸಬೇಕು

೧೦ಕ್ಕಿಂತ ಹೆಚ್ಚು ಪ್ರತಿ ಕೊಳ್ಳುವ ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೊ

ಚರ್ಚ್‌ರೋಡ್, ಉಡುಪಿ.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ...

ಸ್ಮಾಲ್‌ಕಾಜ ನಂ

ಸ್ವಸ್ತಿ ಶ್ರೀ ಕಾರ್ಕಳ ...

ಲಲಿತಕೀರ್ತಿ ಭಟ್ಟಾರಕಜೀ ...

ವಾದಿಯು

ವ ...

ಮಂಜಮ್ಮ ಹೆಗ್ಗಡ್ತಿ ...

ಪ್ರತಿವಾದಿಯು

...

ಈ ವ್ಯಾಜ್ಯದ 1ನೇ ಪ್ರ ... ಕಾರ್ಕಳ ... ರುವ ಕಾಂತು ಹೆಗ್ಗಡೆ ... ಹೆಗಡ್ತಿರಿಗೆ ಈ ಮೂಲಕ ... ವದೇನೆಂದರೆ —

ಪ್ರತಿವಾದಿರಿ ... ಮಾಡಿಕೊಳ್ಳ ... ನಲ್ಲಿ ... ದಾವೆಯಲ್ಲಿ ... ದಾವೆಯು ... S 19 ... 11 ... ರಾ ... ದಲ್ಲಿ ...

...

ಕಾರ್ಕಳ
ಜೆಂಡಾ ...

ತಾಳದೆ ಇರತಕ್ಕ ಮೂತ್ರ ವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡುಕೊಳ್ಳುವಾಗ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದಲೂ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳಿಂದ ವಿಫಲವಾಗಿದ್ದರೆ ... ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ ಎಷ್ಟೇ ದಿನ ... ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ... ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ... ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ ಹೋಗದಿರುವಿಕೆ, ಧಾತುಸ್ರಾವ, ... ಮೊದಲಾದ ಯಾವತ್ತು ಗೋನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3—0—0 (ಮೂರು) ...

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ...

Sole Manufacturer Dr D N JASANI, Vitalbhai Patel Road ...